ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೧೨

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೨೦೦
ವಿಚಾರ ಸಾಹಿತ್ಯಮಾಲೆ - ೯೮

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೭

# ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

## ಸಂಪುಟ ೧೭

## ಡಾ. ಬಾಬಾಸಾಹೇಬ್ ಅಂಬೇಡ್ಕರ್
## ಹಾಗೂ ಸಮಾನತಾವಾದದಲ್ಲಿ ಅವರು ಮಾಡಿದ ಕ್ರಾಂತಿ
## ಮಾನವ ಹಕ್ಕುಗಳಿಗಾಗಿ ಹೋರಾಟ
## (೧೯೨೧-೧೯೫೬)


**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 17** – Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; First Edition : 2015; Pp. xxxii + 703; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೊದಲ ಮುದ್ರಣ : ೨೦೧೫
ಪುಟಗಳು : xxxii + ೭೦೩
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೩೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ದಿನಾಂಕ: ೦೪.೬.೨೦೧೫

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಮೊದಲ ಮಾತು

ಕರ್ನಾಟಕ ಸರಕಾರವು ಭಾರತರತ್ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಎಲ್ಲ ಬರಹ ಮತ್ತು ಭಾಷಣಗಳ ಸಂಕಲನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಆರಂಭಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಮೊದಲ ಹಂತದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತನ್ನ ವ್ಯಾಪ್ತಿಯಲ್ಲಿ ಈ ಯೋಜನೆಯನ್ನು ನಿರ್ವಹಿಸುತ್ತಿತ್ತು. ಬಳಿಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಕಾರ್ಯನಿರ್ವಹಿಸಲು ಮೊದಲು ಮಾಡಿದಾಗ ಅದರ ಅನುವಾದ ಮತ್ತು ಪ್ರಕಟಣೆಯ ಹೊಣೆಯನ್ನು ವಹಿಸಿತು. ಪ್ರಾಧಿಕಾರವು ಮೊದಲು ಪ್ರಕಟವಾಗಿದ್ದ ಸಂಪುಟಗಳ ಪರಿಷ್ಕರಣ ಮತ್ತು ಉಳಿದ ಸಂಪುಟಗಳ ಅನುವಾದ ಇದೆಲ್ಲ ಕೆಲಸವನ್ನು ಈಗ ಪೂರೈಸಿದೆ. ಇಪ್ಪತ್ತು ಸಂಪುಟಗಳಲ್ಲಿ ಹರಡಿರುವ ಈ ಬರಹಗಳೀಗ ಕನ್ನಡ ಓದುಗರ ಕೈಸೇರಿವೆ. ಒಂದು ಸಂಪುಟ (೧೮) ಬಾಬಾಸಾಹೇಬ್ ಅವರ ಮರಾಠಿ ಬರಹ ಮತ್ತು ಭಾಷಣಗಳ ಸಂಕಲನವಾಗಿದೆ. ಮರಾಠಿಯಿಂದ ನೇರವಾಗಿ ಕನ್ನಡಕ್ಕೆ ಅನುವಾದಗೊಂಡಿದೆ. ಈಗಾಗಲೇ ಹೊರಬಂದಿರುವ ಸಂಪುಟಗಳು ಅಪಾರವಾದ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಮೊದಲ ಹದಿನೈದು ಸಂಪುಟಗಳು ಮರುಮುದ್ರಣಗೊಳ್ಳುತ್ತಿವೆ. ಈ ಸಂಪುಟವು ಮೊದಲ ಬಾರಿಗೆ ಹೊರಬರುತ್ತಿದೆ. ಈ ಸಂಪುಟದ ಬರಹಗಳನ್ನು ಅನುವಾದಿಸಿಕೊಟ್ಟ ಎಲ್ಲರಿಗೂ ನಮ್ಮ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಯೋಜನೆಗೆ ಬೇಕಾದ ಅನುದಾನ, ಆಡಳಿತಾತ್ಮಕ ಒತ್ತಾಸೆಯನ್ನು ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀಮತಿ ಉಮಾಶ್ರೀ ಅವರಿಗೆ, ಸರ್ಕಾರದ ಕಾರ್ಯದರ್ಶಿಗಳಾದ ಡಾ.ಎನ್.ಎಸ್. ಚನ್ನಪ್ಪಗೌಡ ಅವರಿಗೆ, ನಿರ್ದೇಶಕರಾದ ಶ್ರೀ ಕೆ.ವಿ. ದಯಾನಂದ್ ಅವರಿಗೆ ಕೃತಜ್ಞತೆಗಳು. ಪ್ರಾಧಿಕಾರದ ಸಹೋದ್ಯೋಗಿಗಳು ಈ ಕೆಲಸದಲ್ಲಿ ಪೂರ್ಣವಾಗಿ ಸಹಕರಿಸಿದ್ದಾರೆ. ಸಂಪಾದನ ಸಮಿತಿಯ ಸದಸ್ಯರು ಉದ್ದಕ್ಕೂ ಸೂಕ್ತ ಸಲಹೆಗಳನ್ನು ನೀಡುತ್ತ ಈ ಕೆಲಸ ಸರಿದಿಕ್ಕಿನಲ್ಲಿ ನಡೆಯುವಂತೆ ನೋಡಿಕೊಂಡಿದ್ದಾರೆ. ಎಲ್ಲರಿಗೂ ಪ್ರಾಧಿಕಾರದ ಪರವಾಗಿ ನಮಸ್ಕಾರಗಳು.

ಮೆ. ರಾಜಾ ಪ್ರಿಂಟರ್ಸ್ ಅವರು ಈ ಸಂಪುಟಗಳ ಅಚ್ಚು ಕೆಲಸವನ್ನು ಮುಗಿಸಿಕೊಟ್ಟಿದ್ದಾರೆ. ಸಂಪುಟಗಳು ಚಂದವಾಗಿ ಕಾಣಲು ಅವರೆಲ್ಲರ ಶ್ರಮವೂ ಕಾರಣವಾಗಿದೆ. ಅವರಿಗೆ ವಂದನೆಗಳು.

**ಕೆ. ವಿ. ನಾರಾಯಣ**

ಅಧ್ಯಕ್ಷ

ಸಂಪಾದನ ಸಮಿತಿ

ನನ್ನ ಮೂಲ ಉದ್ದೇಶ ಏನೆಂದರೆ ಈಗಿನ ಪರಿಸ್ಥಿತಿಯಲ್ಲಿ ಅಗತ್ಯವಿರುವ ಜನರಲ್ಲಿ ಒಂದು ರಾಷ್ಟ್ರೀಯತೆಯ ಭಾವ ಮೂಡಿಸುವುದು. ಅವರು ಪ್ರಮುಖವಾಗಿ ಭಾರತೀಯರು. ಅನಂತರವಷ್ಟೇ ಅವರು ಹಿಂದೂಗಳು, ಮುಸಲ್ಮಾನರು, ಸಿಂಧಿಗಳು, ಹಾಗೂ ಕಡಲ ತೀರದವರು. ಅವರು ಮೊದಲನೆಯದಾಗಿ ಭಾರತೀಯರು ಹಾಗೂ ಕಡೆಯದಾಗಿಯೂ ಭಾರತೀಯರು. ಇದೇ ನಮ್ಮ ಪ್ರಮುಖ ಧ್ಯೇಯವಾದರೆ, ನಮ್ಮ ದೇಶಭಕ್ತಿ ಹಾಗೂ ಸಾಮಾಜಿಕ ಕಳಕಳಿಯ ಮೇಲೆ ಯಾವ ಅಂಶವೂ ಪ್ರಭಾವ ಬೀರಲಾರದು – (ಪುಟ ೬೪)

**ಡಾ. ಬಿ.ಆರ್. ಅಂಬೇಡ್ಕರ್**

# ಸಂಪಾದಕೀಯ

ಅತ್ಯಂತ ಸಂತಸ ಹಾಗೂ ಹೆಮ್ಮೆಯಿಂದ ಡಾ. ಅಂಬೇಡ್ಕರ್ ಅವರ ಭಾಷಣ ಹಾಗೂ ಬರೆಹಗಳ ೧೭ನೆಯ ಸಂಪುಟವನ್ನು ಭಾರತದ ಹಾಗೂ ಇತರ ದೇಶಗಳ ಜನರ ಮುಂದೆ ಸಮರ್ಪಿಸುತ್ತಿದ್ದೇವೆ. ಎಲ್ಲರೂ ಈ ಹಿಂದೆ ಮಹಾರಾಷ್ಟ್ರ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಪ್ರಕಟಿಸಿದ. 'ಡಾ. ಬಿ.ಆರ್. ಅಂಬೇಡ್ಕರ್ ಬರೆಹಗಳು ಹಾಗೂ ಭಾಷಣಗಳು' ಎಂಬ ಕೃತಿಗಳನ್ನು ಅತ್ಯಂತ ಸಂತಸದಿಂದ ಸ್ವಾಗತಿಸಿದ್ದಾರೆ.

ಈ ಸಂಪುಟದಲ್ಲಿ ಚಾವ್ದಾರ್ ಕೆರೆ ಮಹಾದ್‌ನ ಹೋರಾಟ, ನಾಸಿಕದ ಕಾಲಾರಾಂ ದೇವಸ್ಥಾನ ಪ್ರವೇಶಕ್ಕೆಂದು ನಡೆಸಿದ ಸತ್ಯಾಗ್ರಹ, ದುಂಡು ಮೇಜಿನ ಸಭೆಯಲ್ಲಿ ಡಾ. ಅಂಬೇಡ್ಕರ್ ಮಂಡಿಸಿದ್ದ ಪ್ರಸ್ತಾವನೆಗಳು, ಲಂಡನ್‌ನಲ್ಲಿ ಮಾಡಿದ್ದಂತಹ ಭಾಷಣ. ಪೂನಾ ಒಪ್ಪಂದಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳು ಮುಂತಾದವುಗಳನ್ನು ಒಳಗೊಂಡಿದೆ. ಡಾ. ಅಂಬೇಡ್ಕರ್ ಅವರ ಪ್ರಮುಖ ಭಾಷಣಗಳು ಹೇಳಿಕೆಗಳು ಹಾಗೂ ಪತ್ರಿಕಾ ಸಂದರ್ಶನಗಳು, ಭಾರತ ಹಾಗೂ ವಿದೇಶಗಳಲ್ಲಿ ಹಲವಾರು ವಿಷಯಗಳ ಬಗ್ಗೆ ಅವರು ನೀಡಿದ್ದಂತಹ ಸಂದರ್ಶನಗಳು ಎಲ್ಲವನ್ನೂ ಈ ಸಂಪುಟ ಒಳಗೊಂಡಿದೆ. ಅದಲ್ಲದೇ ಈ ಸಂಪುಟದಲ್ಲಿ ಮತ್ತೊಂದು ವಿಶೇಷತೆ ಇದೆ. ಅದೇನೆಂದರೆ ಹಲವಾರು ರಾಜಕೀಯ ಪಕ್ಷಗಳು ಶೈಕ್ಷಣಿಕ ಸಂಸ್ಥೆಗಳು ಹಾಗು ಇನ್ನೂ ಹಲವಾರು ಸಂಸ್ಥೆಗಳು ಸ್ಥಾಪನೆಯಾದ ಬಗೆಯನ್ನು ವಿವರಿಸಲಾಗಿದೆ.

ಮನು ಕಾನೂನಿನ ಅಡಿಯಲ್ಲಿ ಪರಿಶಿಷ್ಟ ವರ್ಗಗಳಿಗೆ ಕೀಳು ಮಟ್ಟದ ಸ್ಥಾನವನ್ನು ನೀಡಿದ್ದ. ಅಸ್ಪೃಶ್ಯರಿಗೆ ನೀಡಿದ ಕೆಳ ಮಟ್ಟಕ್ಕೆ ಯಾವುದೇ ಕಾರಣ ಇರಲಿಲ್ಲ. ಏಕೆಂದರೆ ವಾಸ್ತವವಾಗಿ ಹಿಂದೂಗಳು ಹಾಗೂ ಕೆಳವರ್ಗದ ಜನರ ನಡುವೆ ಅಂತಹ ವ್ಯತ್ಯಾಸವೇನೂ ಇರಲಿಲ್ಲ. ಆದರೆ ಅವರನ್ನು ಯಾವಾಗಲೂ ಮಲತಾಯಿ ಧೋರಣೆಯಿಂದ ನೋಡಿ, ಅವರನ್ನು ಒಂದು ಮಿತಿಯಲ್ಲೇ ಇರಿಸಲಾಗಿತ್ತು. ಹಿಂದೂ ಸಮಾಜದ ಈ ಮೂಕ ಜನರು ನಿಶ್ಯಬ್ದವಾಗಿ ನೋವನ್ನು ಅನುಭವಿಸುವಂತೆ ಮಾಡಲಾಗಿದೆ. ಕೆಳವರ್ಗದ ಜನರಿಗೆ ಯಾವಾಗಲೂ ಅಪಮಾನ, ಅಸಮಾನತೆ ಹಾಗೂ ದೌರ್ಜನ್ಯ ಎದುರಾಗುತ್ತಿತ್ತು. ೨೦ನೆಯ ಶತಮಾನದ ೨ನೆಯ ದಶಕದ ಪ್ರಾರಂಭದಲ್ಲಿ ಇವರೆಲ್ಲರ ಭರವಸೆಯ ನಾಯಕರಾಗಿ ಡಾ. ಅಂಬೇಡ್ಕರ್ ಬೆಳಕಿಗೆ ಬರಲು ಪ್ರಾರಂಭಿಸಿದ್ದರು. ಹಲವಾರು ಶತಮಾನಗಳಿಂದ ಹಿಂದೂಗಳು ಅಸ್ಪೃಶ್ಯರ ಮೇಲೆ ಮಾಡುತ್ತಿದ್ದ ದೌರ್ಜನ್ಯವನ್ನು ತಡೆದು, ಅವರಿಗೆ ಸಮಾನತೆ ನೀಡಲು ಬಂದಿದ್ದ ವ್ಯಕ್ತಿಯಂತೆಯೇ ಡಾ. ಅಂಬೇಡ್ಕರ್ ಕಂಡುಬಂದಿದ್ದರು. ಕೊಲ್ಹಾಪುರದ ಛತ್ರಪತಿ ಶಾಹು ಮಹಾರಾಜ ಅವರು ೧೯೨೦ ಮಾರ್ಚ್ ೨೧ ರಂದು ಅಸ್ಪೃಶ್ಯರನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರನ್ನು ಕುರಿತಂತೆ ಈ ರೀತಿ ಹೇಳಿದ್ದರು: "ನಿಮ್ಮ ಉದ್ಧಾರಕನನ್ನು ನೀವು ಅಂಬೇಡ್ಕರ್ ಅವರಲ್ಲಿ ಕಂಡಿರುವಿರಿ. ಎಲ್ಲಾ ರೀತಿಯ ಕಟ್ಟು ಪಾಡುಗಳನ್ನು ಆತ ಮುರಿಯುತ್ತಾನೆ ಎಂಬ ಭರವಸೆ ನನಗಿದೆ. ಇದಲ್ಲದೇ ನನ್ನ ಹೃದಯ ನನ್ನ ಮನಸ್ಸಿಗೆ ಒಂದು ವಿಷಯವನ್ನು ಪಿಸುಗುಡುತ್ತಿದೆ. ಅದೇನೆಂದರೆ ಇಡೀ ಭಾರತವೇ ಹೆಮ್ಮೆಪಡುವಂತಹ ಪ್ರಖ್ಯಾತಿಯನ್ನು ಅಂಬೇಡ್ಕರ್ ಗಳಿಸುತ್ತಾರೆ ಮಾತ್ರವಲ್ಲ ಭಾರತದ ಅತ್ಯಂತ ಪ್ರಖ್ಯಾತ ವ್ಯಕ್ತಿಯಾಗಿಯೂ ಈತ ಹೊರ ಹೊಮ್ಮುತ್ತಾರೆ" ಮಹಾತ್ಮ ಜ್ಯೋತಿರಾವ್ ಫುಲೆ ಅವರಿಂದ ಡಾ. ಅಂಬೇಡ್ಕರ್ ಪ್ರಭಾವಿತರಾಗಿದ್ದರು. ಆತನನ್ನು ಅಂಬೇಡ್ಕರ್ ಈ ರೀತಿ ವರ್ಣಿಸಿದ್ದರು. "ನವ ಭಾರತದ ಅತ್ಯಂತ ಪ್ರಖ್ಯಾತ ಶೂದ್ರ ಈತ. ಕೆಳವರ್ಗದವರಿಗೆ

ತಾವು ಮೇಲ್ವರ್ಗದ ಜನರ ಸೇವಕರಾಗಿದ್ದೇವೆ ಎಂಬ ಅರಿವೇ ಇರಲಿಲ್ಲ. ಅದನ್ನು ಮೂಡಿಸಿದವರು ಮಹಾತ್ಮ ಫುಲೆ. ವಿದೇಶೀ ಆಡಳಿತದಿಂದ ಮುಕ್ತವಾಗುವುದಕ್ಕಿಂತ, ಸಾಮಾಜಿಕ ಪ್ರಜಾಪ್ರಭುತ್ವವು ಭಾರತಕ್ಕೆ ಅತ್ಯಂತ ಆವಶ್ಯಕವಾದದ್ದು ಎಂಬ ಸತ್ಯವನ್ನು ಅವರು ಮನಗಾಣಿಸಿದ್ದರು.

೧೯೨೭ರ ಮಹದ್ ಸತ್ಯಾಗ್ರಹ ಹಾಗೂ ಕಾಲಾರಾಂ ದೇವಸ್ಥಾನದ ಪ್ರವೇಶಕ್ಕಾಗಿ ಹೋರಾಟ (೧೯೩೦) ಇವುಗಳ ಮೂಲಕ ಹಿಂದೂಗಳ ಮನಸ್ಥಿತಿಯನ್ನು ಬದಲಿಸಲು ಡಾ. ಅಂಬೇಡ್ಕರ್ ಯತ್ನಿಸಿದ್ದರು. ಮಹದ್ ಸತ್ಯಾಗ್ರಹದ ಮುಖ್ಯ ಧ್ಯೇಯ ಅಡಗಿದ್ದುದೇ ಅದರಲ್ಲಿ. "ಸಮಾನತೆಯ ಬಾವುಟ ಹಾರಿಸುವುದು" ಹಾಗೂ "ಜಾತೀಯತೆಯ ಕಬ್ಬಿಣದ ಸರಳುಗಳನ್ನು" ಮುರಿಯುವುದೇ ಉದ್ದೇಶವಾಗಿತ್ತು. ೧೯೨೭ ಡಿಸೆಂಬರ್ ೨೫ ರಂದು ಸಾಂಕೇತಿಕವಾಗಿ "ಬಹಳ ಪ್ರಮುಖವಾದ ದಿನ" ಎಂದು ಆಚರಿಸಲಾಯಿತು. ಇದರಲ್ಲಿ ಸಾಂಕೇತಿಕವಾಗಿ ಮನುಸ್ಮೃತಿಯನ್ನು ಬೆಂಕಿಗೆ ಆಹುತಿ ನೀಡಲಾಯಿತು. ಸಾಮಾಜಿಕ ಅಸಮಾನತೆಯ ವಿರುದ್ಧ ಯುದ್ಧ ಸಾರಲು ಈ ರೀತಿ ಮಾಡಲಾಯಿತು. ಶೋಷಿತ ವರ್ಗಗಳವರ ಹಿತಾಸಕ್ತಿಯನ್ನು ಮುಸ್ಲಿಂ ಮತ್ತು ಸಿಖ್ಖರಿಗಾಗಿ ಮಾರಾಟಮಾಡುವ ಹಿಂದೂಗಳ ಧೂರ್ತ ಸಂಚಿಗೆ ಡಾ. ಅಂಬೇಡ್ಕರ್ ಅವರು ತಡೆಗಾಲನ್ನೊಡ್ಡಿದ್ದರು. ಹಿಂದೂ ಸಾಮಾಜಿಕ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿ ಹೋಗಿತ್ತು ಸಾಮಾಜಿಕ. ವಿಂಗಡನೆ ಹಾಗೂ ಅಸಮಾನತೆ. ಇದೇ ರೀತಿಯ ಮನಸ್ಥಿತಿಯು ಅಂಟುಜಾಡ್ಯದಂತೆ ಇತರ ಜಾತಿ ಹಾಗು ಉಪಜಾತಿಗಳಿಗೂ ಹಬ್ಬಿತು. ಇದರಿಂದಾಗಿ ವಿವಿಧ ಜಾತಿಗಳ ನಡುವೆ ವೈಮನಸ್ಯ ತಲೆದೋರಿದ್ದು ಮಾತ್ರವಲ್ಲ ಪರಸ್ಪರರ ಬಗ್ಗೆ ದ್ವೇಷದ ಭಾವನೆಯೂ ಉಂಟಾಯಿತು. ಒಟ್ಟಿನಲ್ಲಿ ಹೇಳಬೇಕೆಂದರೆ ಈ ರೀತಿಯ ಸಿದ್ಧಾಂತಗಳು ಸಮಾಜದಲ್ಲಿ ಒಂದು ಅಹಿತ ವಾತಾವರಣ ಉಂಟು ಮಾಡುತ್ತದೆ. ಮಹದ್ ಸತ್ಯಾಗ್ರಹವನ್ನು ಖಂಡಿಸಿದ ಜನರನ್ನು ಅಂಬೇಡ್ಕರ್ ಸ್ವತಃ ಖಂಡಿಸಿದರು ಮಾತ್ರವಲ್ಲ ಈ ಸತ್ಯಾಗ್ರಹವು ಹಿಂದೂಗಳು ಅನುಭವಿಸುತ್ತಿರುವ ವಿಶೇಷ ಸವಲತ್ತುಗಳನ್ನು ಕೊನೆಗಾಣಿಸಲಿವೆ ಎಂದರು. ಬಾಲ ಗಂಗಾಧರ ತಿಲಕ್ ಏನಾದರೂ ಒಂದು ವೇಳೆ ಅಸ್ಪೃಶ್ಯನಾಗಿ ಜನಿಸಿದ್ದಿದ್ದರೆ "ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು" ಎಂದ ಅವರು ಘೋಷಣೆಯನ್ನೇ ಮಾಡುತ್ತಿರಲಿಲ್ಲ ಬದಲಾಗಿ ಮನುಷ್ಯರಿಗೆ ದೊರೆಯಬೇಕಾದ ಕನಿಷ್ಠ ಸೌಲಭ್ಯ ಹಾಗೂ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಪ್ರಯತ್ನಕ್ಕೆ ಕೈ ಹಾಕುತ್ತಿದ್ದರು ಎಂದು ಅಂಬೇಡ್ಕರ್ ಘೋಷಿಸಿದರು. ಒಂದು ವೇಳೆ ಲೆನಿನ್ ಭಾರತದಲ್ಲಿ ಜನಿಸಿದ್ದಿದ್ದರು ಕೂಡ ಮೊದಲು ಅಸ್ಪೃಶ್ಯತೆಯನ್ನು ಕೊನೆಗಾಣಿಸಲು ಪ್ರಯತ್ನಿಸಿ ಅನಂತರವಷ್ಟೇ ಕ್ರಾಂತಿಯ ಹೋರಾಟಕ್ಕೆ ಇಳಿಯುತ್ತಿದ್ದ ಎಂದು ಕೂಡ ಅಂಬೇಡ್ಕರ್ ಪ್ರತಿಪಾದಿಸಿದರು.

ಡಾ. ಅಂಬೇಡ್ಕರ್ ಅವರು ದುಂಡು ಮೇಜಿನ ಸಮಾವೇಶದಲ್ಲಿ ಮಾಡಿದಂತಹ ಭಾಷಣಗಳು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತದೆ. ಅವರಿಗೆ ಈ ವಿಷಯದಲ್ಲಿದ್ದ ಆಳವಾದ ಆಸಕ್ತಿ, ವಿಷಯದ ಬಗ್ಗೆ ಇದ್ದ ಹಿಡಿತ, ಅಪಾರವಾದ ತಿಳುವಳಿಕೆ ನಮಗೆ ಮನವರಿಕೆ ಆಗುತ್ತದೆ. ತಾವು ಹೇಳಬೇಕೆಂದಿರುವ ವಿಷಯವನ್ನು ಅತ್ಯಂತ ಸ್ಪಷ್ಟವಾಗಿ, ನಿಖರವಾಗಿ, ಸ್ಫುಟವಾಗಿ ಮನಕ್ಕೆ ನಾಟುವಂತಹ ರೀತಿಯಲ್ಲಿ ಅವರು ಹೇಳುತ್ತಿದ್ದರು. ದುಂಡು ಮೇಜಿನ ಸಭೆಯಲ್ಲಿ ಆತ ಹುಲಿಯಂತೆ ಘರ್ಜಿಸಿದ್ದರು. ಇದರಿಂದಾಗಿ ಭಾರತ ಹಾಗೂ ಇಂಗ್ಲೆಂಡಿನ ರಾಜಕೀಯ ವಲಯಗಳಲ್ಲಿ ಒಂದು ಹೊಸ ಸಂಚಲನವೇ ಉಂಟಾಯಿತು. ಹಿಂದುಳಿದ ವರ್ಗಗಳು ಹಲವಾರು ಶತಮಾನಗಳಿಂದ ಈ ಸಾಮಾಜಿಕ ವಿಭಜನೆಗೆ, ರಾಜಕೀಯ ಹಕ್ಕುಗಳ ವಂಚನೆಗೆ, ಆರ್ಥಿಕ ಹಿಂದುಳಿಕೆಗೆ ಹಾಗೂ ದೌರ್ಜನ್ಯಕ್ಕೆ ಒಳಗಾಗಿದ್ದ ಬಗೆಯನ್ನು ಅವರು ಆಂಗ್ಲರಿಗೆ ಮನಮುಟ್ಟುವಂತೆ ವಿವರಿಸಿದ್ದರು. ಈತ ಅವರ ಹಕ್ಕುಗಳ ಸ್ಥಾಪನೆಗೆ ಇಷ್ಟೊಂದು ಕಷ್ಟದಿಂದ ಏಕೆ ಹೋರಾಡುತ್ತಿದ್ದಾರೆ ಎಂಬುದು ಆಂಗ್ಲ ಆಡಳಿತಗಾರರಿಗೆ ಮನವರಿಕೆಯಾಯಿತು. ಆದ್ದರಿಂದ ಮುಂದಿನ ದುಂಡು ಮೇಜಿನ ಸಭೆಗೂ ಈತನನ್ನು ನಾಮಕರಣ ಮಾಡಲಾಯಿತು. ಈತ ಹಿಂದುಳಿದ

ವರ್ಗಗಳ ಜನರಿಗೆಂದೇ ವಿಶೇಷ ಚುನಾವಣಾ ಕ್ಷೇತ್ರಗಳಿರಬೇಕು ಎಂಬ ಪ್ರಸ್ತಾವನೆಯನ್ನು ಸರ್ಕಾರದ ಮುಂದೆ ಇರಿಸಿದ್ದರು. ಆದರೆ ಇದನ್ನು ಖಂಡತುಂಡವಾಗಿ ಶ್ರೀ ಮಹಾತ್ಮ ಗಾಂಧಿ ಅವರು ವಿರೋಧಿಸಿದ್ದರು. ಇದರಿಂದಾಗಿ ಶೋಷಣೆಗೆ ಒಳಗಾದ ಜಾತಿಗಳು ತಾವು ಹಿಂದೂ ಸಮಾಜಕ್ಕೆ ಸೇರ್ಪಟಿಲ್ಲ. ನಾವು ಕೂಡ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಪಡೆಯಬೇಕು ಮಾತ್ರವಲ್ಲ ನಮಗೂ ಕೂಡ ಪ್ರತ್ಯೇಕ ಮತಕ್ಷೇತ್ರಗಳು ಬೇಕು ಎಂದು ಪ್ರತಿಪಾದಿಸತೊಡಗಿದರು. ಡಾ. ಅಂಬೇಡ್ಕರ್ ಅವರು ಶೋಷಿತವರ್ಗದ ಜನರ ಹಕ್ಕು ಬಾಧ್ಯತೆಗಳು ತ್ವರಿತವಾಗಿ ಇತ್ಯರ್ಥವಾಗಬೇಕು ಎಂದು ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸತೊಡಗಿದರು. ಇದು ಶೋಷಿತ ವರ್ಗದ ಜನ ರಾಜಕೀಯವಾಗಿ ಬಲಿಷ್ಠರಾಗಲು ಅತ್ಯಗತ್ಯ ಎಂಬುದೇ ಅವರ ಅಭಿಪ್ರಾಯ ಆಗಿತ್ತು. ಅವರು ಕಡ್ಡಾಯವಾಗಿ ಏನಾದರೂ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದರು. ಏಕೆಂದರೆ ಅವರಿಗೆ ಮುಂದೆ ಯಾರೇ ಆಡಳಿತಗಾರರು ಬಂದರು ಕೂಡ ಅವರ ಸಹಾನುಭೂತಿಯ ಆವಶ್ಯಕತೆ ಇರಲಿಲ್ಲ. ಅವರು ಸಮಾನ ಹಕ್ಕುಗಳಿಗಾಗಿ ಹೋರಾಟ ನಡೆಸಿದರೆ ಹೊರತು ಯಾರ ಸಹಾನುಭೂತಿಯನ್ನೂ ಬೇಡಲಿಲ್ಲ.

ಡಾ. ಅಂಬೇಡ್ಕರ್ ಅವರು ದುಂಡು ಮೇಜಿನ ಸಭೆಯಲ್ಲಿ ಮಂಡಿಸಿದ ಪ್ರಸ್ತಾವನೆಗೆ ಕಲಶವಿಟ್ಟಂತೆ ಗ್ರೇಟ್ ಬ್ರಿಟನ್ನಿನ ಆಗಿನ ಪ್ರಧಾನ ಮಂತ್ರಿಯಾಗಿದ್ದ ಜೆ. ರ್ಯಾಮ್ಸೆ ಮ್ಯಾಕ್ ಡೋನಾಲ್ಡ್ ಶೋಷಿತ ವರ್ಗದ ಜನರಿಗಾಗಿಯೇ ವಿಶೇಷ ಮತಕ್ಷೇತ್ರಗಳನ್ನು ಸ್ಥಾಪಿಸಿದರು. ಡಾ. ಅಂಬೇಡ್ಕರ್ ಅವರು ದುಂಡು ಮೇಜಿನ ಸಭೆಯಲ್ಲಿ ಸಲ್ಲಿಸಿದ್ದ ಪ್ರಸ್ತಾವನೆಗಳ ಮೇಲೆ ಅವನ್ನು ನೀಡಲಾಗಿತ್ತು. ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹಾಗೂ ಸಂವಿಧಾನದ ತಿದ್ದುಪಡಿಯಲ್ಲಿ ಶೋಷಿತ ವರ್ಗಗಳ ದೊರೆಯಂತೆ ಡಾ. ಅಂಬೇಡ್ಕರ್ ವಿಜೃಂಭಿಸುತ್ತಿದ್ದರು. ಆದರೆ ಇದಕ್ಕೆ ವಿರೋಧ ವ್ಯಕ್ತಪಡಿಸಿ ಆಮರಣಾಂತ ಉಪವಾಸ ಮಾಡಿದ್ದು ಮಹಾತ್ಮಾಗಾಂಧಿ. ಇದರ ಫಲವಾಗಿ ಉಂಟಾಗಿದ್ದುದೇ 'ಪೂನಾ ಒಪ್ಪಂದ.' ಪೂನಾ ಒಪ್ಪಂದದ ಫಲಶ್ರುತಿ ಎಂದರೆ ಶೋಷಿತ ವರ್ಗದ ಜನರಿಗೆಂದು ಸ್ಥಾಪಿಸಲಾಗಿದ್ದ ವಿಶೇಷ ಮತಕ್ಷೇತ್ರಗಳನ್ನು ಹಿಂತೆಗೆದುಕೊಳ್ಳಲಾಯಿತು. ಮಾತ್ರವಲ್ಲ, ಎಲ್ಲರಿಗೂ ಒಂದೇ ಚುನಾವಣೆ ನಡೆಸುವುದು ಆದರೆ ಶೋಷಿತ ವರ್ಗದ ಜನರಿಗೆಂದು ಇಂತಿಷ್ಟು ಸ್ಥಾನಗಳ ಮೀಸಲಾತಿ ಇರಬೇಕು ಎಂದು ನಿಗದಿಪಡಿಸಲಾಯಿತು. ಇದು ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿ ಕೂಡ ಜಾರಿ ಆಯಿತು. ಆದರೆ ಈ ಪೂನಾ ಒಪ್ಪಂದ ಜಾರಿ ಆಗಲು ಕಾರಣವಾದುದು ಕೂಡ ಡಾ. ಅಂಬೇಡ್ಕರ್ ಅವರ ಹೃದಯವೈಶಾಲ್ಯತೆದಿಂದ. ಆತ ಡಾ. ಮಹಾತ್ಮಾ ಗಾಂಧಿಯವರ ಜೀವ ಉಳಿಸಲು ಈ ರೀತಿ ಮಾಡಿದ್ದರು ಆದರೆ ಇದು ಹಿಂದೂಗಳಿಗೆ ಸಂತಸ ತರಬಹುದಾದ ವಿಷಯವಲ್ಲ ಎಂದು ಕೂಡ ಆತನಿಗೆ ತಿಳಿದೇ ಇತ್ತು.

ಅಧಿಕಾರ ಬದಲಾವಣೆ ಆಗಬೇಕಿದ್ದ ಸಮಯದಲ್ಲಿ ಡಾ. ಅಂಬೇಡ್ಕರ್ ಅವರು ತಳೆದಂತಹ ನಿಲುವು ಶೋಷಿತ ವರ್ಗದ ಜನರ ಮನೋಸ್ಥೈರ್ಯ ಹೆಚ್ಚಿಸಿದ್ದುದು ಮಾತ್ರವಲ್ಲ ಅವರಲ್ಲಿ ಒಂದು ರೀತಿಯ ಧೈರ್ಯವನ್ನು ಕೂಡ ತುಂಬಿತು. ಅವರು ಮತ್ತಷ್ಟು ಉತ್ಸಾಹದಿಂದ ತಮ್ಮ ಹಕ್ಕುಗಳ ಪುನರ್ ಸ್ಥಾಪನೆಗೆ ಹೊಡೆದಾಡಲು ಪಣತೊಟ್ಟರು. ಡಾ. ಅಂಬೇಡ್ಕರ್ ಅವರಿಗೆ ತಾವು ಸಾಗಬೇಕೆಂದಿದ್ದ ದಾರಿಯಲ್ಲಿ ನೂರಾರು ಅಡೆ ತಡೆಗಳಿದ್ದವು. ರಾಜಕೀಯವಾಗಿ ಹಿನ್ನಡೆ ಉಂಟಾಗುತ್ತಿತ್ತು. ಸಾಮಾಜಿಕ ಹಾಗೂ ಸಾಂಸ್ಕೃತಿಕ ಇತಿಮಿತಿಗಳಿದ್ದವು. ಆತನಿಗೆ ನಂಬಿಕಸ್ಥ ಸಹವರ್ತಿಗಳು ಕೂಡ ಕೆಲವೇ ಕೆಲವು ಜನರಿದ್ದರು. ರಾವ್ ಬಹದ್ದೂರ್ ಆರ್. ಶ್ರೀನಿವಾಸ್, ರಾವ್ ಬಹದ್ದೂರ್ ಎನ್ ಶಿವರಾಜ್, ದಾದಾ ಸಾಹೇಬ್ ಬಿ.ಕೆ. ಗಾಯಕ್‌ವಾಡ್, ಜೋಗೇಂದ್ರನಾಥ ಮಂಡರ್, ಹರ್‌ದಾಸ್ ಎಲ್.ಎನ್., ಕುಸ್ರು, ಎ.ಡೆಕ್ಕನ್, ಬಿ.ಎಸ್. ವೆಂಕಟರಾವ್, ಬಿ.ಎಚ್. ಸುಬ್ಬಯ್ಯ, ಎಲಿ ವಡಪಲ್ಲಿ, ನಂದನಾರ್ ಹರಿ, ಜಸ್ಟಿಸ್ ಆರ್.ಆರ್. ಬೋಲೆ, ಬಿ.ಎಚ್. ವರಲೆ, ಡಿ.ಜಿ.ಜಾಧವ್, ಬ್ಯಾರಿಸ್ಟರ್, ಬಿ.ಡಿ. ಕೋಬ್ರಾಗಡೆ, ಬಿ.ಸಿ. ಕಾಂಬ್ಳೆ, ಆರ್.ಡಿ. ಭಂಡಾರೆ, ಸುಬೇದಾರರ್ ಎ.ಎಂ. ಸಾವಡ್ಕರ್, ಎಸ್.ಎ.ಉಪಶ್ಯಾಂ,

ಡಾ.ಪಿ.ಜೆ. ಸೋಲಂಕಿ, ಆರ್.ಡಿ. ಡೋಲಾಸ್, ಜಿ.ಎಂ. ಜಾಧವ್ ಮಡ್ಕೇಬುವಾ, ಡಿ.ಎಲ್. ಪಾಟಿಲ್, ಪಂಡಿತ್ ರೇವಾರಾಂ ಕಾವಡೆ, ಶಾಂತಾಬಾಯಿ ದಾನಿ, ಎಚ್.ಡಿ.ಆವಲೆ, ಡಿ.ಟಿ.ರೂಪವಾಟೆ, ಪ್ಯಾರೇಲಾಲ್ ಕುರೀಲ್, ಜಿಟಿ ಪರಮಾರ್ ಮುಂತಾದವರು ಅವರ ಸಹವರ್ತಿಗಳಾಗಿದ್ದರು. ಇವರು ಕೂಡ ಡಾ. ಅಂಬೇಡ್ಕರ್ ಅವರೊಂದಿಗೆ ಹಿಂದೂ ಸಾಮಾಜಿಕ ಪದ್ಧತಿಯ ವಿರುದ್ಧ ಹೋರಾಡಿದರು. ಸಮಾನತೆ, ಮಾನವರಿಗೆ ಸಿಗಬೇಕಾದ ಗೌರವ, ರಾಜಕೀಯ ಹಾಗೂ ಆರ್ಥಿಕ ಸದೃಢತೆಗಾಗಿ ಅವರು ಹೋರಾಡಿದರು.

ಹಿಂದೂ ಅನುಮೋದನೆಯ ಮುಖಾಂತರ ಹಿಂದೂ ಸಮಾಜದ ಬದಲಾವಣೆಗೆ ಪ್ರಸ್ತಾವನೆಯನ್ನು ಡಾ. ಅಂಬೇಡ್ಕರ್ ಜನರ ಮುಂದೆ ಇರಿಸಿದರು. ಆದರೆ ಇದಕ್ಕೆ ಅತ್ಯಂತ ವಿರೋಧ ವ್ಯಕ್ತಪಡಿಸಿದವರು ಹಿಂದೂ ಸಂಪ್ರದಾಯವಾದಿಗಳು. ಇದರಿಂದ ಒಂದು ವಿಷಯ ಡಾ. ಅಂಬೇಡ್ಕರ್ ಅವರಿಗೆ ಮನವರಿಕೆ ಆಯಿತು. ಸಾವಿರಾರು ವರ್ಷಗಳಿಂದ ಹೆಣೆದುಕೊಂಡು ಬಂದಿರುವ ಹಿಂದೂಗಳ ಮನಸ್ಥಿತಿಯ ಕಗ್ಗಂಟನ್ನು ಬಿಡಿಸುವುದು ಸುಲಭದ ಮಾತೇನೂ ಆಗಿರಲಿಲ್ಲ. ಆದ್ದರಿಂದ ಹಿಂದೂ ಧರ್ಮವನ್ನೇ ತೊರೆದು ಬಿಡುವ ಕಠಿಣ ನಿರ್ಧಾರವನ್ನು ಅವರು ಕೈಗೊಂಡರು. ೧೯೩೫ರಲ್ಲಿ ಈ ರೀತಿ ಶಪಥ ಮಾಡಿಕೊಂಡ ಅವರು ಇದನ್ನು ಪೂರೈಸಿಕೊಂಡಿದ್ದು ೧೯೫೬ರಲ್ಲಿ. ನಾಗಪುರದಲ್ಲಿ ಅವರು ಬೌದ್ಧಧರ್ಮವನ್ನು ಆಲಂಗಿಸಿಕೊಂಡರು. ಇವರೊಂದಿಗೆ ಇವರ ೫ ಲಕ್ಷ ಅನುಯಾಯಿಗಳು ಕೂಡ ಬೌದ್ಧಧರ್ಮಕ್ಕೆ ಸೇರ್ಪಡೆ ಹೊಂದಿದರು. ಈ ಮತಾಂತರ ಆದ ನಂತರ ಡಾ. ಅಂಬೇಡ್ಕರ್ ಈ ರೀತಿ ಪ್ರತಿಕ್ರಿಯಿಸಿದರು. "ನಾನು ಅತ್ಯಂತ ಸಂತಸಗೊಂಡಿದ್ದೇನೆ. ಉತ್ಸಾಹಗೊಂಡಿದ್ದೇನೆ. ನನಗೆ ನರಕದಿಂದ ಮುಕ್ತಿ ಪಡೆದಂತಹ ಅನುಭವ ಉಂಟಾಗುತ್ತಿದೆ". ಡಾ. ಅಂಬೇಡ್ಕರ್ ಬೌದ್ಧಧರ್ಮವನ್ನು ಅಪ್ಪಿಕೊಳ್ಳುವುದಕ್ಕೂ ಕೂಡ ವಿಶೇಷ ಕಾರಣಗಳಿದ್ದವು. ಏಕೆಂದರೆ ಅದು ಕಟ್ಟಲ್ಪಟ್ಟಿದ್ದುದು ಸ್ವಾತಂತ್ರ್ಯ, ಸಮಾನತೆ, ಏಕತೆ, ನೈತಿಕತೆ ಎಂಬ ಅಂಶಗಳ ಮೇಲೆ ಅಷ್ಟು. ಮಾತ್ರ ಅಲ್ಲದೆ ಅದಕ್ಕೆ ವೈಜ್ಞಾನಿಕವಾದ, ತಾರ್ಕಿಕ ಹಾಗೂ ಮಾನವೀಯ ಮುಖಗಳಿದ್ದವು. ಬೌದ್ಧಧರ್ಮದ ಮುಖ್ಯ ಉದ್ದೇಶವೇನೆಂದರೆ ಶೋಷಣೆಗೆ ಯಾವ ಮನುಷ್ಯರೂ ಒಳಗಾಗದಂತೆ ತಡೆಯುವುದು. ಭಗವಾನ್ ಬುದ್ಧ ಸ್ಥಾಪಿಸಿದ್ದ ಈ ಬೌದ್ಧಧರ್ಮದ ವ್ಯಾಪಕವಾದ ಪ್ರಚಾರಕ್ಕೆ ಡಾ. ಅಂಬೇಡ್ಕರ್ ಅವರು ಕ್ರಮಗಳನ್ನು ಕೈಗೊಂಡರು. ಶೋಷಿತ ಜನರನ್ನು ಭೇಟಿ ಮಾಡಿದರು. ಡಾ. ಅಂಬೇಡ್ಕರ್ ಬೌದ್ಧಧರ್ಮಕ್ಕೆ ಮಂತಾತರಗೊಂಡು, ಈ ಧರ್ಮ ಹರಡಲು ಸಹಕರಿಸುವಂತೆ ಅವರು ಮನವಿ ಮಾಡಿದರು. ಇಲ್ಲಿ ಒಂದು ವಿಷಯವನ್ನು ನಾವು ಓದುಗರ ಗಮನಕ್ಕೆ ತರಲೇಬೇಕು. ತಾವೂ ಹಾಗೂ ತಮ್ಮ ಅನುಯಾಯಿಗಳು ಮತಾಂತರಗೊಳ್ಳಲು ಧರ್ಮದ ಆಯ್ಕೆ ಮಾಡುವಾಗ ಕೂಡ "ದೇಶಕ್ಕೆ ಅತಿ ಕಡಿಮೆ ಹಾನಿ ಉಂಟು ಮಾಡುವ ಧರ್ಮವನ್ನು" ಆಯ್ಕೆ ಮಾಡಿಕೊಂಡರು. ಬೌದ್ಧಧರ್ಮಕ್ಕೆ ಮತಾಂತರಗೊಂಡ ನಂತರವೂ ಅಷ್ಟೇ. ಡಾ. ಅಂಬೇಡ್ಕರ್ ಈ ರೀತಿ ನುಡಿದರು. "ಬೌದ್ಧಧರ್ಮಕ್ಕೆ ಸೇರ್ಪಡೆ ಆಗುವ ಮುಖಾಂತರ ನಾನು ದೇಶಕ್ಕೆ ಬಹುದೊಡ್ಡ ಮಟ್ಟದಲ್ಲಿ ಉಪಕಾರ ಮಾಡುತ್ತಿದ್ದೇನೆ. ಏಕೆಂದರೆ ಬೌದ್ಧಧರ್ಮವು ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿದೆ. ನನ್ನ ಮತಾಂತರದಿಂದ ಈ ದೇಶಕ್ಕೆ, ಅದರ ಸಂಸ್ಕೃತಿಗೆ, ಇತಿಹಾಸಕ್ಕೆ, ಆಚರಣೆಗಳಿಗೆ ಯಾವುದೇ ಹಾನಿ ಆಗದಂತೆ ನಾನು ಗಮನ ಹರಿಸಿದ್ದೇನೆ. ಇದರಿಂದ ತಮ್ಮ ನೆಲವನ್ನು ಡಾ. ಅಂಬೇಡ್ಕರ್ ಎಷ್ಟೊಂದು ಪ್ರೀತಿಸುತ್ತಿದ್ದರು ಎಂಬುದು ನಮಗೆ ತಿಳಿದುಬರುತ್ತದೆ. ಮತ್ತೊಂದು ಬಾರಿ ಈ ರೀತಿ ಹೇಳಿದ್ದರು ಎಂಬುದಕ್ಕೆ ಉಲ್ಲೇಖ ಇದೆ 'ಕೆಲ ಅಂಶಗಳಿಂದಾಗಿ ನಾನು ಹಲವು ಬಾರಿ ಹಿಂದೂಗಳೊಂದಿಗೆ ಜಗಳ ಮಾಡಿದ್ದೇನೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಒಂದು ಶಪಥ ಮಾಡುತ್ತೇನೆ ಏನೆಂದರೆ ಈ ದೇಶಕ್ಕಾಗಿ ನಾನು ನನ್ನ ಪ್ರಾಣವನ್ನೇ ಮುಡಪಾಗಿ ಇಡಲು ಸಿದ್ಧವಾಗಿದ್ದೇನೆ.'

ಡಾ. ಅಂಬೇಡ್ಕರ್ ಅವರೊಬ್ಬ ಪುಸ್ತಕಪ್ರೇಮಿ ಆಗಿದ್ದರು. ಆತ ಮುಂಬಯಿಯ ದಾದರ್‌ನಲ್ಲಿ "ರಾಜಗೃಹ"

ಎಂಬ ಮನೆಯನ್ನು ನಿರ್ಮಿಸಿದ್ದರು. ಇದರ ಹಿಂದಿನ ಮುಖ್ಯ ಉದ್ದೇಶವೂ ಕೂಡ ಈ ಪುಸ್ತಕಪ್ರೇಮವೇ ಆಗಿತ್ತು. ಅವರು ಅಪಾರ ಸಂಖ್ಯೆಯಲ್ಲಿ ಕೊಂಡಿದ್ದ ಪುಸ್ತಕಗಳನ್ನು ಇಡಲು ಅವರಿಗೊಂದು ಸೂಕ್ತವಾದ ಸ್ಥಳದ ಆವಶ್ಯಕತೆ ಇತ್ತು. ಆತ ಒಬ್ಬ ಶಿಕ್ಷಣತಜ್ಞರಾಗಿದ್ದರು. ಮಾತ್ರವಲ್ಲ ಅವರೇ ಖುದ್ದು ಪ್ರಾಧ್ಯಾಪಕರೂ ಆಗಿದ್ದರು. ಅವರು ಎಲ್ಲರಿಗೂ ಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಪಟ್ಟಿದ್ದರು. ಶೋಷಿತ ವರ್ಗದ ಜನರಿಂದ ಶತಮಾನಗಳಿಂದಲೂ ಶಿಕ್ಷಣದ ಹಕ್ಕನ್ನು ಕಿತ್ತುಕೊಳ್ಳಲಾಗಿತ್ತು. ಹೀಗೆ ಶಿಕ್ಷಣ ದೊರೆಯದ ಕಾರಣದಿಂದಲೇ ಶೋಷಿತ ವರ್ಗದ ಜನರು ಅಮಾಯಕರಾಗಿಯೇ ಉಳಿದಿದ್ದರು. ಇವರು ಇತರರ ಮೇಲೆ ಅವಲಂಬಿತರಾಗಿದ್ದರು. ದೌರ್ಜನ್ಯಕ್ಕೆ ಒಳಗಾಗುತ್ತಿದ್ದರು, ಕೂಲಿ ಕಾರ್ಮಿಕರಾಗಿದ್ದರು. ಹಾಗೂ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದರು. ಡಾ. ಅಂಬೇಡ್ಕರ್ ಅವರ ಪ್ರಕಾರ ಶಿಕ್ಷಣ ಎನ್ನುವುದು ಪ್ರತಿ ಮನುಷ್ಯನ ಜನ್ಮಸಿದ್ಧ ಹಕ್ಕು ಮಾತ್ರವಲ್ಲ ಅದು ಸಾಮಾಜಿಕ ಬದಲಾವಣೆಗೆ ಅಗತ್ಯ ಇರುವ ಪ್ರಮುಖ ಅಸ್ತ್ರ. ಡಾ. ಅಂಬೇಡ್ಕರ್ ಅವರು ಅಂತಾರಾಷ್ಟ್ರೀಯ ಮಾನ್ಯತೆ ಹೊಂದಿದ್ದ ಒಬ್ಬ ಪ್ರಸಿದ್ಧ ಶಿಕ್ಷಣತಜ್ಞ, ವಾಗ್ಮಿ ಹಾಗೂ ಅತ್ಯುತ್ತಮ ಬರಹಗಾರರು ಕೂಡ ಆಗಿದ್ದರು. ಆತ ಬರೆದಿದ್ದ ಪ್ರಮುಖ ವಿಷಯಗಳೆಂದರೆ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಕಾನೂನು, ಸಂವಿಧಾನ, ರಾಜಕೀಯ ಶಾಸ್ತ್ರ, ಧರ್ಮಶಾಸ್ತ್ರ ಮುಂತಾದವು. ಆತ ಒಬ್ಬ ಅಪರೂಪದ ರಾಜಕಾರಣಿ ಆಗಿದ್ದರು. ಏಕೆಂದರೆ ಅವರೊಬ್ಬ ವಿದ್ಯಾವಂತ ರಾಜಕಾರಣಿ ಆಗಿದ್ದರು. ೧೯೪೫ರಲ್ಲಿ The Peoples Education Society ಎಂಬ ಸಂಸ್ಥೆಯನ್ನು ಡಾ. ಅಂಬೇಡ್ಕರ್ ಸ್ಥಾಪನೆ ಮಾಡಿದರು. ಅನಂತರ ಅದರ ಶಾಖೆಗಳು ಮುಂಬಯಿ, ಔರಂಗಾಬಾದ್, ಮಹದ್, ಶೋಲಾಪುರ, ನಾಂದೇಡ್ ಮುಂತಾದ ಕಡೆಗಳಲ್ಲಿ ತೆರೆಯಲ್ಪಟ್ಟಿತ್ತು. ಇದು ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ್ದಂತಹ ಮಹತ್ತರ ಕೊಡುಗೆಯನ್ನು ವಿವರಿಸುತ್ತದೆ. ಡಾ. ಅಂಬೇಡ್ಕರ್ ಅವರ ದೂರದೃಷ್ಟಿಯಂತೆ ಈ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಇದೀಗ ಕೆಲ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇವರು ಮಾಡಿದಂತಹ ಮತ್ತೊಂದು ಅತ್ಯುನ್ನತ ಸಾಧನೆಯನ್ನು ಇಲ್ಲಿ ವಿವರಿಸಬೇಕು. ಆ ಸಮಯದಲ್ಲಿ ಬ್ರಿಟಿಷ್ ಭಾರತದ ರಾಜ್ಯಪಾಲರಾಗಿದ್ದಂತಹ ಲಾರ್ಡ್ ಲಿನ್‌ಲಿತ್‌ಗೋ ಎಂಬಾತನ ಮನವೊಲಿಸಿ ಕೆಲ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವನ್ನು ಪಡೆದುಕೊಂಡು, ವಿದೇಶದಲ್ಲಿ ವ್ಯಾಸಂಗ ಮಾಡಲು ಅನುಕೂಲ ಮಾಡಿಕೊಟ್ಟಿದ್ದರು. ಶಿಕ್ಷಣದ ಬಗ್ಗೆ ಅವರಿಗೆ ಇದ್ದ ಅಭಿಪ್ರಾಯ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ್ದ ಕೊಡುಗೆಯ ಸ್ಮರಣೆಯೂ ಈ ಸಂಪುಟದಲ್ಲಿ ಸೇರ್ಪಡೆ ಆಗಿದೆ.

ಡಾ. ಅಂಬೇಡ್ಕರ್ ಅವರು ಅಸ್ಪೃಶ್ಯರ ಸಮಸ್ಯೆಯು ಒಂದು ರಾಜಕೀಯ ಸಮಸ್ಯೆ ಎಂಬ ವಿಷಯವನ್ನು ಮನಗಂಡಿದ್ದರು. ಆತನ ಪದಗಳಲ್ಲೇ ಇದನ್ನು ವಿವರಿಸಬೇಕೆಂದರೆ, ಈ ಸಮಸ್ಯೆಯ ಸ್ವರೂಪವೇ ಬೇರೆಯ ರೀತಿಯದು. ಇದು ಸ್ವಾತಂತ್ರ್ಯ ಪಡೆದುಕೊಳ್ಳಲು ಹಾಗೂ ಸಮಾನ ಹಕ್ಕಿಗಾಗಿ ಹೋರಾಡುತ್ತಿರುವವರ ಸಮಸ್ಯೆ. ಈ ಹಕ್ಕಿಗಾಗಿ ಹೋರಾಡುತ್ತಿರುವವರು ಸಮಾಜದ ಅಲ್ಪಸಂಖ್ಯಾತರು. ಅವರು ಹೋರಾಡುತ್ತಿರುವುದು ಬಹು ಸಂಖ್ಯಾತರ ಬಳಿ. ಇವರು ಅಲ್ಪಸಂಖ್ಯಾತರಿಗೆ ಈ ಹಕ್ಕುಗಳ ಆವಶ್ಯಕತೆಯೇ ಇಲ್ಲ ಎಂದು ನಂಬಿರುವ ಜನ. ಈ ದೃಷ್ಟಿಯಲ್ಲಿ ಗಮನಿಸಿದರೆ ಇದೊಂದು ರಾಜಕೀಯ ಸಮಸ್ಯೆ ಎಂಬುದು ಅರ್ಥ ಆಗುತ್ತದೆ"

ತಮ್ಮ ರಾಜಕೀಯ ಗುರಿಯನ್ನು ತಲುಪುವ ಸಲುವಾಗಿ ತಮಗೆ ತಮ್ಮದೇ ಆದ ರಾಜಕೀಯ ಆಡಳಿತ ಇರುವುದು ಅಗತ್ಯ ಎಂಬ ಮನವರಿಕೆ ಆಯಿತು. ಆದ್ದರಿಂದ ಅವರು ಆಗಸ್ಟ್ ೧೫, ೧೯೩೬ರಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷ (Independent Labour Party) ಎಂಬ ಪಕ್ಷವನ್ನು ಹುಟ್ಟು ಹಾಕಿದರು. ಇದರಿಂದಲೇ ಅವರು ಮುಂದಿನ ಚುನಾವಣೆಯಲ್ಲಿಯೂ ಸ್ಪರ್ಧಿಸಿದರು. ಈ ಪಕ್ಷವು ಪಡೆದುಕೊಂಡಂತಹ ಯಶಸ್ಸು ನಿಜವಾಗಿಯೂ ಪ್ರಶಂಸಾರ್ಹ. ಈ ಪಕ್ಷದಿಂದ ಸ್ಪರ್ಧಿಸಿದ ೧೭ ಜನರಲ್ಲಿ ೧೪ ಮಂದಿ ಮುಂಬಯಿಯ ನಗರಪಾಲಿಕೆಗೆ

ಆಯ್ಕೆಯಾದರು. ಅಂತೆಯೇ ಇದೇ ಪಕ್ಷದ ಇನ್ನೂ ಹಲವರು ಇತರ ನಗರಗಳಿಂದಲೂ ಆಯ್ಕೆಯಾದರು. ಈ ಪಕ್ಷದಿಂದ ಆಯ್ಕೆಯಾಗಿ ಬಂದವರೆಂದರೆ ಡಾ. ಬಿ.ಆರ್. ಅಂಬೇಡ್ಕರ್, ಬಿ.ಕೆ. ಗಾಯಕ್‌ವಾಡ್, ಆರ್.ಆರ್. ಭೋಲೆ, ಡಿ.ಜಿ. ಜಾಧವ್, ಬಿ.ಎಚ್. ವರಲೆ, ಜಿ.ಜಿ.ಬಟಾನಕರ್, ಕೆ.ಎಸ್.ಸಾವಂತ್, ಜೆ.ಎಚ್.ಐಡಾಲೆ, ಐ.ಜೆ.ರೋಹಂ, ಪಿ.ಎ.ಗಡ್ಕರಿ, ಎ.ಟಿ.ಚಿತ್ರೆ, ಜಿ.ಆರ್.ಗಾಟ್ಗೆ, ಎಸ್.ವಿ. ಪಾರುಲೇಕರ್, ಡಿ.ಡಬ್ಲ್ಯೂ ರಾವ್ ಮುಂತಾದವರು. ೧೯೪೨ರಲ್ಲಿ ಆತ ಈ ಪಕ್ಷವನ್ನು ಊರ್ಜಿತಗೊಳಿಸಿ "ಅಖಿಲ ಭಾರತ ಪರಿಶಿಷ್ಟ ಜಾತಿ ಸಂಘ" ಎಂಬ ಸಂಘವನ್ನು ಹುಟ್ಟು ಹಾಕಿದರು. ಇದಕ್ಕೆ ರಾವ್ ಬಹದ್ದೂರ್ ಎನ್.ಶಿವರಾಜ್ ಎಂಬುವವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ೧೯೫೭ರ ಪ್ರಾರಂಭದ ಹೊತ್ತಿಗೆ ಎರಡನೆಯ ಮಹಾ ಚುನಾವಣೆಯು ಹತ್ತಿರ ಬರುತ್ತಿದ್ದಂತೆಯೇ ಪ್ರಜಾಪ್ರಭುತ್ವಕ್ಕೆ ಹೋರಾಟ ನಡೆಸುತ್ತಿದ್ದ ಶಕ್ತಿಗಳನ್ನು ಬಡಿದೆಬ್ಬಿಸಬೇಕು ಎಂಬುದು ಅಂಬೇಡ್ಕರ್ ಅವರಿಗೆ ಮನವರಿಕೆ ಆಯಿತು. ಆದ್ದರಿಂದ ೧೯೫೫ರ ಡಿಸೆಂಬರ್ ೧೦ ರಂದು "ಭಾರತೀಯ ರಿಪಬ್ಲಿಕ್‌ನ್ ಪಕ್ಷವನ್ನು ಅವರು ಹುಟ್ಟು ಹಾಕಿದರು. ಇದರ ಮುಖ್ಯ ಉದ್ದೇಶ ಸ್ವಾತಂತ್ರ್ಯ, ಸಮಾನತೆ ಹಾಗೂ ಏಕತೆ ಆಗಿತ್ತು. ಈ ಮೂರು ಅಂಶಗಳಲ್ಲಿ ನಂಬಿಕೆ ಇದ್ದ ಯಾರಿಗೇ ಆದರೂ ಈ ಪಕ್ಷಕ್ಕೆ ಸೇರಲು ಅವಕಾಶ ಇತ್ತು.

ಅತಿ ಶೋಷಣೆಗೆ ಒಳಗಾದ ವ್ಯಕ್ತಿಯೂ ಕೂಡ, ಸರಿಯಾದ ಅವಕಾಶ ದೊರೆತರೆ ಅತ್ಯುನ್ನತ ಸ್ಥಾನಕ್ಕೆ ಏರಬಲ್ಲ ಎಂಬ ಅಂಶವನ್ನು ಸಾಬೀತು ಪಡಿಸಿದವರು ಡಾ. ಅಂಬೇಡ್ಕರ್. ಅವರು ಸಂವಿಧಾನವನ್ನು ಸಿದ್ದಪಡಿಸಿ, ಅತ್ಯುತ್ತಮವಾದ ಸಂವಿಧಾನವನ್ನು ಭಾರತೀಯರಿಗೆ ನೀಡಿ ಭಾರತೀಯರೆಲ್ಲರ ಆಶೋತ್ತರಗಳನ್ನು ಈಡೇರಿಸಿದರು. ಇಷ್ಟಲ್ಲದೇ ಆತ ತಾನೊಬ್ಬ ಸಮರ್ಥ ಆಡಳಿತಗಾರ ಹಾಗೂ ಚಿಂತಕ ಎಂಬುದನ್ನು ಕೂಡ ಸಾಬೀತುಪಡಿಸಿದರು. ಆತನೊಬ್ಬ ಹಲವು ಮುಖಗಳ ವ್ಯಕ್ತಿ, ಒಬ್ಬ ಪ್ರಕಾಂಡ ಪಂಡಿತ, ಹಲವಾರು ದೇಶಗಳನ್ನು ತಿರುಗಿದ ಹಾಗೂ ಒಬ್ಬ ಬುದ್ಧಿವಂತ ಆಡಳಿತಗಾರರಾಗಿದ್ದರು.

ಶೋಷಿತ, ಅಸ್ಪೃಶ್ಯ ಹಾಗೂ ಕೆಳ ವರ್ಗದ ಜನರಿಗೆ ಜ್ಞಾನದ ಬೆಳಕು ಹಾಗು ಸಾಮಾಜಿಕ ಮಾನ್ಯತೆ ತಂದುಕೊಟ್ಟವರೇ ಡಾ. ಅಂಬೇಡ್ಕರ್. ಜಾತಿ ಪದ್ಧತಿಯ ವಿರುದ್ಧ ಈತ ನಡೆಸುತ್ತಿದ್ದ ಹೋರಾಟದಿಂದಾಗಿ ಮೇಲ್ವರ್ಗದ ಜನರ ಕೆಂಗಣ್ಣಿಗೆ ಇವರು ಗುರಿಯಾಗಿದ್ದರು. ಆದರೆ ಇದರಿಂದಾಗಿ ಡಾ. ಅಂಬೇಡ್ಕರ್ ಧೃತಿಗೆಡಲಿಲ್ಲ. ತನ್ನಂತೆ ಕೆಳವರ್ಗದ ಜನರನ್ನು ಶೋಷಣೆಯಿಂದ ಮುಕ್ತಗೊಳಿಸಲು ಈತ ಹೋರಾಟವನ್ನು ಮುಂದುವರೆಸುತ್ತಲೇ ಇದ್ದರು. ಇದರಿಂದಾಗಿ ಇವರು ಹಿಂದೂಗಳನ್ನು ಹಾಗೂ ಜವಹರಲಾಲ ನೆಹರು ಅವರನ್ನು ದುಃಸ್ವಪ್ನವಾಗಿ ಕಾಡತೊಡಗಿದರು. ಹಿಂದೂ ಸಮಾಜದ ಎಲ್ಲಾ ಶೋಷಣೆಯ ವಿರುದ್ಧ ದಂಗೆಯೆದ್ದ ಮೊದಲ ವ್ಯಕ್ತಿಯೆಂದರೆ ಡಾ. ಅಂಬೇಡ್ಕರ್ ಎಂದು ನಂತರ ಜವಹರಲಾಲ ನೆಹರು ಹೇಳಿದರು. ೧೯೩೬ರ ಹೊತ್ತಿಗಾಗಲೇ ಮಹಾತ್ಮ ಗಾಂಧೀಯವರು ಡಾ. ಅಂಬೇಡ್ಕರ್ ಅವರನ್ನು ಕುರಿತು ಈ ರೀತಿ ಹೇಳಿದ್ದರು "ಹಿಂದೂ ಧರ್ಮಕ್ಕೆ ಒಂದು ಸವಾಲು. ಡಾ. ಅಂಬೇಡ್ಕರ್ ಆತ ಮುಂದೆ ಯಾವುದೇ ಕ್ಷೇತ್ರದಲ್ಲಿ ಇದ್ದರೂ ತನ್ನನ್ನು ಮರೆಯಲು ಬಿಡುವಂತಹ ವ್ಯಕ್ತಿಯಲ್ಲ ಡಾ. ಅಂಬೇಡ್ಕರ್"

ಡಾ. ಅಂಬೇಡ್ಕರ್ ಅವರು ಪರಮ ದೇಶಭಕ್ತರಾಗಿದ್ದರು. ಸಂವಿಧಾನ ಸಮಿತಿಯಲ್ಲಿ ಆತ ಹೀಗೆಂದು ಹೇಳಿದರು. "ನಮ್ಮ ರಕ್ತದ ಕಡೆಯ ಹನಿ ತುಣುಕು ಇರುವವರೆಗೂ ನಾವು ನಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ತಯಾರಾಗಿರಬೇಕು". ಡಾ. ಅಂಬೇಡ್ಕರ್ ಅವರು ಎಷ್ಟೇ ಹೋರಾಟ ನಡೆಸಿದರು ಕೂಡ ಆತ ಪ್ರಜಾಪ್ರಭುತ್ವದ ಕಟ್ಟಳೆಯನ್ನು ಎಂದಿಗೂ ಮೀರಲಿಲ್ಲ. ಆತ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವವರ ವಿರುದ್ಧ ಹಾಗೂ ಸಂವಿಧಾನ ವಿರೋಧಿ ನಡವಳಿಕೆಗಾರರ ವಿರುದ್ಧ ಕೆಂಡಕಾರುತ್ತಿದ್ದರು. ಅವರ ಪ್ರಕಾರ "ಸಮಾಜದಲ್ಲಿ ಕ್ರಾಂತಿಕಾರಿ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು, ರಕ್ತಪಾತವಿಲ್ಲದೆಯೇ ತರಬಹುದಾದಂತಹ ಸರ್ಕಾರ

ಎಂದರೆ ಪ್ರಜಾಪ್ರಭುತ್ವದ ಸರ್ಕಾರವೇ". ಆದ್ದರಿಂದ ಹಿಂಸೆಯ ಮಾರ್ಗವನ್ನು ಅನುಸರಿಸುತ್ತಿದ್ದವರಿಂದ ಅವರು ದೂರವೇ ಉಳಿಯುತ್ತಿದ್ದರು. ಅವರ ಪ್ರಕಾರ ಸಂವಿಧಾನವಿರೋಧಿ ನಡವಳಿಕೆಯೂ ಕೂಡ ಸಂವಿಧಾನಬಾಹಿರವೇ "ನಾವು ಸಮಾಜವಿರೋಧಿ, ಸತ್ಯಾಗ್ರಹ ಮುಂತಾದ ಕ್ರಮಗಳನ್ನು ನಿಲ್ಲಿಸಿಬಿಡಬೇಕು. ಆರ್ಥಿಕ ಹಾಗೂ ಸಾಮಾಜಿಕ ಗುರಿಯನ್ನು ತಲುಪಲು ಸಂವಿಧಾನದ ಪ್ರಕಾರವಾಗಿ ಸಾಧ್ಯವಾಗದೇ ಹೋದಾಗ ನಾವು ಇತರ ಕ್ರಮಗಳನ್ನು ಅನುಸರಿಸುವುದು ಅನಿವಾರ್ಯ. ಆದರೆ ಸಂವಿಧಾನದಲ್ಲಿ ಇದಕ್ಕೆ ಪೂರಕವಾದ ಅವಕಾಶಗಳಿದ್ದರೆ ಈ ರೀತಿಯ ಕ್ರಮಗಳನ್ನು ಕೈಗೊಳ್ಳಲು ಯಾವುದೇ ಸಮರ್ಥನೆಯಿಲ್ಲ"

ಆತ ಕೆಲ ವಿಷಯಗಳಲ್ಲಿ ಸ್ಪಷ್ಟ ಅಭಿಪ್ರಾಯಗಳನ್ನು ಹೊಂದಿದ್ದರು. ಸಂವಿಧಾನ ಎನ್ನುವುದು ಕೇವಲ ಒಬ್ಬ ವಕೀಲನ ಕರಾರು ಪತ್ರವಲ್ಲ. ಜೀವನಕ್ಕೆ, ಅದೊಂದು ಆಧಾರವಾದ ಬಂಡಿಯಂತೆ. ಅದರ ಸ್ಫೂರ್ತಿ ಆಯಾ ಕಾಲದ ಜನರಿಗೆ ಸ್ಫೂರ್ತಿಯ ಸೆಲೆಯಾಗುತ್ತದೆ. ಅವರು ತಮ್ಮ ಜೀವನವನ್ನೇ ಶೋಷಿತವರ್ಗದ ಜನರ ಏಳಿಗೆಗಾಗಿ ಮೀಸಲು ಇಟ್ಟುಬಿಟ್ಟಿದ್ದರು.

ಭಾರತೀಯರ ಮನಃಸ್ಥಿತಿಯನ್ನು ಕುರಿತು ಈತ ಅತ್ಯಂತ ಚಿಂತೆಗೆ ಒಳಗಾಗಿದ್ದರು. ಒಂದು ಬಾರಿ ಆಕಾಶವಾಣಿಯಲ್ಲಿ ಮಾತನಾಡುವಾಗ ಆತ ಈ ರೀತಿ ಹೇಳಿದರು "ಎರಡು ರೀತಿಯ ಮನಃಸ್ಥಿತಿಯನ್ನು ಭಾರತೀಯರು ಹೊಂದಿರುತ್ತಾರೆ. ಸಂವಿಧಾನದಲ್ಲಿ ಸ್ವಾತಂತ್ರ್ಯ, ಸಮಾನತೆ ಹಾಗೂ ಏಕತೆಯನ್ನು ಎತ್ತಿಹಿಡಿಯಲಾಗಿದೆ. ಆದರೆ ಅವರು ಒಳಪಟ್ಟಿರುವ ಧರ್ಮ ಅವರು ಆ ರೀತಿ ನಡೆದುಕೊಳ್ಳದಂತೆ ಅವರನ್ನು ತಡೆಯುತ್ತದೆ."

ಭಾರತದ ಸಂವಿಧಾನವು ಅಸ್ಪೃಶ್ಯತೆಯನ್ನು ರದ್ದುಗೊಳಿಸಿದೆ. ಆದರೆ ಅಂಬೇಡ್ಕರ್ ಕನಸು ಕಂಡಿದ್ದಾದರೂ ಏನು? "ಕಾನೂನು ಎನ್ನುವುದು ಜನರ ಹಕ್ಕನ್ನು ನಿರ್ಣಯಿಸಿರುತ್ತದೆ. ಸಾಮಾಜಿಕ ಜಾಗೃತಿ ಈ ಹಕ್ಕುಗಳನ್ನು ಗುರುತು ಹಿಡಿಯುವಷ್ಟರ ಮಟ್ಟಿಗೆ ಇದ್ದರೆ, ಅಷ್ಟರ ಮಟ್ಟಿಗೆ ಈ ಹಕ್ಕುಗಳು ಭದ್ರವಾಗಿರುತ್ತವೆ. ಆದರೆ ಒಂದು ವೇಳೆ ಇದೇ ಹಕ್ಕುಗಳನ್ನು ಈ ಸಮಾಜವೇ ತಿರಸ್ಕರಿಸಿದರೆ, ಯಾವುದೇ ಸಂಸತ್ತು, ಸಂವಿಧಾನ ಅಥವಾ ಕಾನೂನು ಇದರ ರಕ್ಷಣೆಗೆ ನಿಜವಾದ ಅರ್ಥದಲ್ಲಿ ಬರಲಾರದು." ಇದನ್ನು ಇದೀಗ ನಾವು ಅರ್ಥಮಾಡಿಕೊಂಡರೆ ಡಾ. ಅಂಬೇಡ್ಕರ್ ಹೇಳಿದ್ದು ಎಷ್ಟು ಸಮಂಜಸ ಎಂಬ ಅರಿವಾಗುತ್ತದೆ.

ಅವರು ತಮ್ಮ ರಾಷ್ಟ್ರದ ಜನರಿಗೆ ಒಂದು ಎಚ್ಚರಿಕೆಯನ್ನು ನೀಡಿದ್ದರು. "ಒಂದಲ್ಲ ಒಂದು ದಿನ ಒಬ್ಬ ವ್ಯಕ್ತಿಗಿಂತ ರಾಷ್ಟ್ರವೇ ಮುಖ್ಯ ಎಂಬ ಅರಿವು ನಮ್ಮ ಜನರಿಗೆ ಆಗುತ್ತದೆ ಎಂದು ನಾನು ಆಶಿಸುತ್ತೇನೆ." ಈ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಬೇಕೆಂದರೆ ಅದಕ್ಕೆ ಸಾಮಾಜಿಕ ಏಕತೆಯೂ ಬಹಳ ಮುಖ್ಯವೆಂದು ಅವರು ಹೇಳಿದ್ದರು. ಅವರು ಭಾರತೀಯರಿಗೆ ಒಂದು ಎಚ್ಚರಿಕೆಯನ್ನು ಕೂಡ ನೀಡಿದ್ದರು. "ಈ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಎನ್ನುವುದು ಬೇಸಿಗೆಯಲ್ಲಿ ಹುಟ್ಟಿದ ಒಂದು ಗಿಡದಂತೆ. ಸಾಮಾಜಿಕ ಏಕತೆ ಇರದಿದ್ದರೆ ಇದರ ಬೇರನ್ನು ಭದ್ರಪಡಿಸಲು ಸಾಧ್ಯವಿಲ್ಲ. ಈ ಏಕತೆಯನ್ನು ನಾವು ಹೊಂದಲಾರದೇ ಹೋದರೆ, ಈ ಬೇಸಿಗೆಯ ಸಸಿ, ಬೇಸಿಗೆಯ ಗಾಳಿಗೇ ಬುಡಮೇಲಾಗಿ ಹೋಗುತ್ತದೆ. ಅದಲ್ಲದೇ ಆತ ಭಾರತೀಯರಿಗೆ ಒಂದು ಕರೆಯನ್ನು ನೀಡಿದರು "ಪ್ರಜಾಪ್ರಭುತ್ವವೇ ಭಾರತೀಯ ಮಣ್ಣಿಗೆ ಅತ್ಯುತ್ತಮವಾದ ಉಡುಗೆ. ಆದರೆ ಇಲ್ಲಿ ಈಗ ಪ್ರಜಾಪ್ರಭುತ್ವವೇ ಇಲ್ಲ. ನಾವು ಪರಸ್ಪರರೊಂದಿಗೆ ಒಳ್ಳೆಯ ಸಂಪರ್ಕ ಇಟ್ಟುಕೊಳ್ಳಬೇಕು. ಇದರಲ್ಲಿ ಸಹೋದರತ್ವದ ಭಾವ ಅಡಗಿರಬೇಕು. ಇದೇ ನಮ್ಮ ಸಂವಿಧಾನದ ಮೂಲಾಧಾರ. ಆತ ಭಾರತದಲ್ಲಿ ಒಂದು ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವ ಮೂಡಿಸಲು ಹೊಡೆದಾಟ ನಡೆಸಿದರು. ಆತ ಯಾವಾಗಲು ಸಮಾನತೆ ಹಾಗು ನ್ಯಾಯಯುತವಾದ ಸಮಾಜ ಏರ್ಪಡಬೇಕು ಎಂದು ಪ್ರತಿಪಾದಿಸುತ್ತಿದ್ದರು. ಆತನ ಗುರಿ ಎಂದರೆ ಜೀವನದ ಎಲ್ಲಾ ಮಜಲುಗಳಲ್ಲಿ ಎಂದರೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ "ಒಬ್ಬ ಮನುಷ್ಯ ಒಂದು ಧ್ಯೇಯ"

ಆತ ಮತ್ತೊಮ್ಮೆ ಹೇಳಿದರು "ನನ್ನ ಅಭಿಪ್ರಾಯದಲ್ಲಿ ಇದೀಗ ಅತ್ಯಗತ್ಯವಾಗಿರುವುದು ಎಂದರೆ ನಮ್ಮ ರಾಷ್ಟ್ರದ ಜನರಲ್ಲಿ ಒಂದು ಏಕತೆಯ ಭಾವನೆಯನ್ನು ಮೂಡಿಸುವುದು. ಅವರು ಮೊದಲು ಭಾರತೀಯರು, ಅನಂತರವಷ್ಟೇ ಹಿಂದೂಗಳು, ಮುಸಲ್ಮಾನರು, ಸಿಂಧಿಗಳು ಹಾಗೂ ಕರಾವಳಿಯವರು. ಆನಂತರ ಅವರು ಮೊದಲು ಹಾಗೂ ಕಟ್ಟಕಡೆಯದಾಗಿಯೂ ಭಾರತೀಯರು. ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರು ಅಂಬೇಡ್ಕರ್ ಅವರನ್ನು ಒಬ್ಬ "ಕ್ರಿಯಾಶೀಲ ವಿಗ್ರಹಭಂಜಕ" ಎಂದು ಕರೆಯುತ್ತಾರೆ. ಆತನನ್ನು "ಸಂವಿಧಾನ ಶಿಲ್ಪಿ ಹಾಗೂ ಸಂಪ್ರದಾಯಭಂಜಕ" ಎಂದು ಕೂಡ ಕರೆಯುತ್ತಾರೆ. ಅವರೊಬ್ಬ ಅಮೂರ್ತ ಚಿಂತಕರಾಗಿರಲಿಲ್ಲ. ಯಾವಾಗಲೂ ಅವರು ಕಾರ್ಯ ಚಟುವಟಿಕೆಯ ಪ್ರಪಂಚದಲ್ಲಿಯೇ ಮುಳುಗಿರುತ್ತಿದ್ದರು. ಭಾರತದ ಸಮಾಜದ ಬದಲಾವಣೆಯ ಹರಿಕಾರರಾಗಿದ್ದವರಲ್ಲಿ ಪ್ರಮುಖರಾಗಿದ್ದವರು ಡಾ. ಅಂಬೇಡ್ಕರ್ ಅವರು. ಅವರು ಮಾನವೀಯ ಮೌಲ್ಯಗಳನ್ನು ಅತ್ಯಂತ ಗಾಢವಾಗಿ ಮೈಗೂಡಿಸಿಕೊಂಡಿದ್ದರು. ಭಾರತದಲ್ಲಿ ಹೊಸ ಸಮಾಜದ ಸ್ಥಾಪನೆಗೆ ಬಹಳ ಹೊಡೆದಾಡುತ್ತಿದ್ದರು. ಅವರ ಸಹಚರರಿಗೆ ಹೋಲಿಸಿದರೆ ಅವರು ಬಹಳ ವಿದ್ಯಾವಂತರಾಗಿದ್ದರು ಮಾತ್ರವಲ್ಲ ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ಬಹಳ ತೊಡಗಿಸಿಕೊಂಡಿದ್ದರು.

"ನೆಹರೂ ಮಂತ್ರಿಮಂಡಲದ ಅನರ್ಘ್ಯ ರತ್ನ" ಡಾ. ಅಂಬೇಡ್ಕರ್ ಅವರಿಗೆ ಮರಣೋತ್ತರವಾಗಿ "ಭಾರತ ರತ್ನ" ಪ್ರಶಸ್ತಿ ನೀಡಲಾಯಿತು. ಇದು ನಮ್ಮ ಸಂವಿಧಾನದಲ್ಲಿ ಇರುವ ಅತ್ಯಂತ ದೊಡ್ಡ ಪ್ರಶಸ್ತಿ ಆಗಿದೆ. ಆತ ನವ ಭಾರತ ನಿರ್ಮಾಣದ ಹರಿಕಾರ ಆಗಿದ್ದರು.

ಡಾ. ಅಂಬೇಡ್ಕರ್ ಅವರು ಒಬ್ಬ ದಾಖಲೆಗೆ ಅರ್ಹರಾಗಿದ ವ್ಯಕ್ತಿಯಾಗಿದ್ದರು. ಜೀವನದಲ್ಲಿ ಜರುಗಿದ ಪ್ರಮುಖ ಘಟನೆಗಳು, ಭಾಷಣಗಳು, ಸಂದರ್ಶನಗಳು, ಯೋಜನೆಗಳು, ಪ್ರಸ್ತಾವನೆಗಳು ಎಲ್ಲವನ್ನೂ ಈ ಸಂಪುಟದಲ್ಲಿ ಸೇರ್ಪಡೆ ಮಾಡಲಾಗಿದೆ.

ಹಲವಾರು ಸ್ಥಳಗಳಲ್ಲಿ ದೊರೆತ ಸಾಮಗ್ರಿಗಳನ್ನು ನಾವು ಇಲ್ಲಿ ಪುನರ್ ಮುದ್ರಿಸಿದ್ದೇವೆ. ಕೆಲವು ಲೇಖನಗಳು ಮರಾಠಿಯ ಜನತಾ ವಾರಪತ್ರಿಕೆಯಿಂದ ಅನುವಾದಿಸಲ್ಪಟ್ಟಿವೆ. "ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಅಸ್ಪೃಶ್ಯರ ಚಳುವಳಿ ಸಂಪುಟ–೧" ದಿಂದ ಕೂಡ ಕೆಲ ಲೇಖನಗಳನ್ನು ಪಡೆದು ಅನುವಾದ ಮಾಡಲಾಗಿದೆ. ಏಕೆಂದರೆ ಅದನ್ನು ಈ ಸಂಪುಟದಲ್ಲಿ ಸೇರ್ಪಡೆ ಮಾಡುವುದು ಅನಿವಾರ್ಯ ಹಾಗೂ ಸಮಂಜಸ ಎಂದು ಸಂಪಾದಕ ಮಂಡಳಿಯ ಅಭಿಪ್ರಾಯವಾಗಿತ್ತು. ಅಂತೆಯೇ ಇವುಗಳನ್ನು ಎಲ್ಲೆಲ್ಲಿಂದ ಪಡೆದಿದ್ದೇವೆ ಎಂಬ ಪಟ್ಟಿಯನ್ನು ಪುಸ್ತಕದ ಕೊನೆಯಲ್ಲಿ ನೀಡಿದ್ದೇವೆ. ಇವುಗಳ ಮೂಲ ಪ್ರತಿಗಳು ಸಂಪಾದಕ ಮಂಡಲಿಯ ಬಳಿ ಲಭ್ಯವಿದೆ. ಹಲವಾರು ರಾಜಕೀಯ ಪಕ್ಷಗಳ ಸಂಘಟನೆ ಹಾಗೂ ಡಾ. ಅಂಬೇಡ್ಕರ್ ಸ್ಥಾಪಿಸಿದ ಹಲವು ಪಕ್ಷಗಳ ವಿವರಣೆಗಳೂ ಈ ಸಂಪುಟದಲ್ಲಿ ಲಭ್ಯವಿದೆ.

ಡಾ. ಅಂಬೇಡ್ಕರ್ ಅವರ ಕ್ರಾಂತಿಕಾರಿ ಹೋರಾಟದ ಅರಿವು ಜನರಿಗೆ ಆಗಲಿ ಎಂಬುದೇ ನಮ್ಮ ಆಶಯ. ಅಸ್ಪೃಶ್ಯತೆಯನ್ನು ರದ್ದುಗೊಳಿಸುವಿಕೆ, ಪ್ರಜಾಪ್ರಭುತ್ವದ ಆಡಳಿತ ಹಾಗೂ ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತ್ವದ ಮೇಲೆ ನವಭಾರತದ ನಿರ್ಮಾಣಕ್ಕಾಗಿ ಆತ ಎಷ್ಟೊಂದು ಹೋರಾಡಿದ್ದರು ಎಂಬ ಅರಿವು ನಮಗೆ ಆಗುತ್ತದೆ. ಇದಲ್ಲದೇ ಭಾರತದಾದ್ಯಂತ ಅವರು ಬೌದ್ಧ ಧರ್ಮ ಪ್ರಚಾರಕ್ಕಾಗಿಯೂ ಸಾಕಷ್ಟು ಶ್ರಮಿಸಿದ್ದರು.

ಈ ಸಂಪುಟಕ್ಕೆಂದು ಶೇಖರಿಸಿದ ವಿಷಯಗಳ ಸಂಗ್ರಹ ಬಹಳ ದೊಡ್ಡದಾಗಿತ್ತು. ಆದ್ದರಿಂದ ಅದನ್ನು ೩ ಭಾಗಗಳಲ್ಲಿ ವಿಂಗಡಿಸಿ ನಿಮ್ಮ ಮುಂದೆ ಇರಿಸುವ ನಿರ್ಧಾರ ಮಾಡಲಾಯಿತು. ಈ ಸಂಪುಟವು ಈ ಕೆಳಗಿನಂತೆ ವಿಂಗಡಣೆಯಾಗಿದೆ.

ಭಾಗ – I ಮಾನವ ಹಕ್ಕುಗಳಿಗಾಗಿ ಹೋರಾಟ

i) ಮಹದ್ ಸತ್ಯಾಗ್ರಹ

ii) ಡಾ. ಅಂಬೇಡ್ಕರ್  ಮಹಾತ್ಮಾಗಾಂಧೀಜಿ ಭೇಟಿಗಳು

iii) ಅಸ್ಪೃಶ್ಯರನ್ನು ಭಾರತೀಯ ರಾಜಕೀಯಕ್ಕೆ ಪರಿಚಯ ಮಾಡಿಸುವಲ್ಲಿ ಡಾ.ಅಂಬೇಡ್ಕರ್ ಅವರ ಪಾತ್ರ ಹಾಗೂ ಭಾರತದ ಪ್ರಜಾಪ್ರಭುತ್ವಕ್ಕೆ ಅಡಿಪಾಯ ಹಾಕಿದ ಬಗೆ

iv) ಕಾಲಾರಾಂ ದೇವಸ್ಥಾನ ಪ್ರವೇಶಿಸಲು ನಡೆಸಿದ ಸತ್ಯಾಗ್ರಹ, ನಾಸಿಕ್‌ನಲ್ಲಿ ಹಾಗೂ ದೇವಸ್ಥಾನ ಪ್ರವೇಶಿಸಲು ಮಾಡಿದ ಹೋರಾಟ.

v)  ಇತರ ಹೋರಾಟಗಳು

ಭಾಗ–II ರಾಜಕೀಯ ಚಟುವಟಿಕೆಗಳು

i) ಲೇಖನಗಳು ಹಾಗೂ ಟಿಪ್ಪಣಿಗಳು

ii) ಮಂತ್ರಿಮಂಡಳದ ಗುರಿ

iii) ರಾಷ್ಟ್ರದ ಸ್ಥಾಪನೆ ಹಾಗೂ ಪ್ರಜಾಪ್ರಭುತ್ವ

iv) ಸಂಘ ಸಂಸ್ಥೆಗಳು ಹಾಗೂ ಅವುಗಳ ರಚನೆ

ಭಾಗ – III ಭಾಷಣಗಳು

ಈ ವಿಶೇಷವಾದ ಕಾರ್ಯಕ್ಕೆ ಮಹಾರಾಷ್ಟ್ರ ಸರ್ಕಾರವು ತನ್ನ ಸಂಪೂರ್ಣ ಸಹಕಾರವನ್ನು ನೀಡಿದೆ. ಈ ಮೂಲಕ ಡಾ. ಅಂಬೇಡ್ಕರ್ ಅವರ ಧ್ಯೇಯ ಪೂರೈಸಲು ತಾನು ಕಟಿಬದ್ಧವಾಗಿರುವುದನ್ನು ತೋರಿಸಿಕೊಟ್ಟಿದೆ. ಇದುವರೆಗೆ ಪ್ರಕಟಗೊಂಡಿರುವ ಸಾಮಗ್ರಿಯಿಂದ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಮಾತ್ರವಲ್ಲ ಬದಲಾಗಿ ಭಾರತದ ಹಾಗೂ ಇತರ ದೇಶಗಳಲ್ಲಿ ಹರಡಿರುವ ಭಾರತೀಯರ ಸಾಮಾನ್ಯ ಜನರಿಗೂ ಉಪಯುಕ್ತವಾಗಿದೆ ಎಂದು ತಿಳಿಸಲು ನಾವು ಹರ್ಷಿಸುತ್ತೇವೆ.

ವಿಶೇಷ ಅಧಿಕಾರಿ ಹಾಗೂ ಸಂಪಾದಕರು ಆಗಿದ್ದ ವಸಂತ ಮೂನ್ ಅವರ ಅವಧಿಯಲ್ಲಿ ೧೭ನೆಯ ಸಂಪುಟ ಪ್ರಕಟವಾಗಿತ್ತು. ಆದರೆ ಕಾರಣಾಂತರಗಳಿಂದ ಇದರಲ್ಲಿ ಕೆಲ ತಪ್ಪುಗಳು ಸುಳಿದಿದ್ದರಿಂದ ಅವುಗಳ ಹಂಚಿಕೆ  ಮಾಡಲಿಲ್ಲ.

ಈ ತಪ್ಪುಗಳನ್ನು ತಿದ್ದುವ ನಿರ್ಧಾರಕ್ಕೆ ಪ್ರಕಟಣಾ ಸಮಿತಿ ಬಂದಿತು. ಆ ಸಮಯದಲ್ಲಿ ಈ ಸಂಪುಟಕ್ಕೆ ಸಂಬಂಧಿಸಿದಂತೆ ಬಹಳಷ್ಟು ಸಾಮಗ್ರಿ ಇರುವುದು ಅರಿವಾಯಿತು. ಹಳೆಯ ಮೂಲ ವಿಷಯಗಳೊಂದಿಗೆ ಈ  ಹೊಸದಾಗಿ ದೊರೆತ ಸಾಮಗ್ರಿಗಳನ್ನು ಸೂಕ್ತ ಸ್ಥಳಗಳಲ್ಲಿ ಸೇರ್ಪಡೆ ಮಾಡಲಾಗಿದೆ. ಮೊದಲು ಪ್ರಕಟಿಸಿದಂತೆ ಒಂದೇ ಸಂಪುಟದಲ್ಲಿ ಪ್ರಕಟಿಸದೇ ಇದನ್ನು ೩ ಭಾಗಗಳಾಗಿ ವಿಂಗಡಣೆ ಮಾಡಲಾಗಿದೆ. ಹೊಸ ಸ್ವರೂಪದಲ್ಲಿ ಈ ಭಾಗ ನಿಮ್ಮ ಕೈ ಸೇರಿದೆ.

ಶ್ರೀ ಸುಶೀಲ್ ಕುಮಾರ್ ಶಿಂಧೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು, ಶೋಷಿತ ವರ್ಗದ ಜನರ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸುತ್ತಿದ್ದಾರೆ. ಅವರು ಹಲವಾರು ದಶಕಗಳಿಂದ ರಾಜಕೀಯ ಕ್ಷೇತ್ರದಲ್ಲಿ ಇದ್ದಾರೆ. ಹಾಗೆಯೇ ಶೋಷಿತ ವರ್ಗದ ಜನರ ಏಳಿಗೆಗೆ ಬಹಳಷ್ಟು ಕೆಲಸ ಕಾರ್ಯ ಮಾಡಿರುತ್ತಾರೆ. ಸರ್ಕಾರದ ಹಲವಾರು ಏರಿಳಿತಗಳ ನಡುವೆ ಹಾಗೂ ಆಡಳಿತಾತ್ಮಕ ಕೆಲಸಗಳ ಒತ್ತಡದ ನಡುವೆಯೂ ಅವರು ಈ ವಿಶೇಷ ಕೆಲಸದ ಬಗ್ಗೆ

ಅತ್ಯಂತ ಆಸಕ್ತಿ ಹೊಂದಿದ್ದಾರೆ. ಮಾತ್ರವಲ್ಲ, ಕಾಲದಿಂದ ಕಾಲಕ್ಕೆ ಕೆಲಸ ಹೇಗೆ ಮುಂದುವರಿಯುತ್ತಿದೆ ಎಂದು ವಿಚಾರಿಸುತ್ತಾ ಸೂಕ್ತವಾದ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿದ್ದಾರೆ. ಅವರು ನಿಜವಾದ ಅರ್ಥದಲ್ಲಿ ನಮಗೆ ಆಧಾರ ಸ್ತಂಭವಾಗಿದ್ದಾರೆ. ಅವರಿಗೆ ನಾವು ಋಣಿಗಳಾಗಿದ್ದೇವೆ. ಆದ್ದರಿಂದ ಅವರಿಗೆ ನಾವು ಈ ಮೂಲಕ ಅನಂತಾನಂತ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಶ್ರೀ ಛಗನ್ ಭುಜಬಲ ಇವರು ಮಹಾರಾಷ್ಟ್ರದ ಉಪಮುಖ್ಯಮಂತ್ರಿಗಳು. ಅವರು ಕೂಡ ನಮ್ಮ ಈ ಕಾರ್ಯಕ್ಕೆ ತಮ್ಮ ಎಲ್ಲಾ ಸಹಕಾರ ನೀಡಿದ್ದಾರೆ. ಅವರಿಗೂ ನಾವು ಕೃತಜ್ಞತೆ ಸಲ್ಲಿಸುತ್ತೇವೆ.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಂಬಂಧಪಟ್ಟ ಸಾಮಗ್ರಿ ವಸ್ತು ವಿಷಯಗಳ ಸಮಗ್ರ ಪ್ರಕಾಶಕರು ಶ್ರೀ ಲಕ್ಷ್ಮಣರಾವ್ ಢೋಬಲೆ. ಇವರು ಮಹಾರಾಷ್ಟ್ರ ಸರ್ಕಾರದ ಉನ್ನತ ಶಿಕ್ಷಣ ಮಂತ್ರಿಗಳು. ಈ ಕೆಲಸಕ್ಕೆ ಮುಖ್ಯಸ್ಥರಾಗಿರುವ ಇವರು ಈ ಕಾರ್ಯದ ಘನತೆಯನ್ನು ಹೆಚ್ಚಿಸಿರುತ್ತಾರೆ. ಅವರು ಈ ಕಾರ್ಯಕಾರಿ ಸಮಿತಿಯ ಕೈಗೊಳ್ಳಬೇಕಾದ ಕ್ರಮಗಳನ್ನು ಸರಿಯಾದ ರೀತಿಯಲ್ಲಿ ನಡೆಸಲು ನಮಗೆ ಮಾರ್ಗದರ್ಶನ ನೀಡಿರುತ್ತಾರೆ. ಅವರು ಉನ್ನತ ಶಿಕ್ಷಣ ಸಚಿವರೂ ಆಗಿದ್ದುದರಿಂದ ಇದರ ಮಹಾಪೋಷಕತ್ವದ ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತಾರೆ. ಅವರಿಗೆ ಕೂಡ ಈ ಸಂದರ್ಭದಲ್ಲಿ ಅನಂತಾನಂತ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಶ್ರೀ ಅನೀಸ್ ಅಹ್ಮದ್ ಅವರು ಮಹಾರಾಷ್ಟ್ರ ಸರ್ಕಾರದ ಉನ್ನತ ಹಾಗೂ ತಾಂತ್ರಿಕ ಶಿಕ್ಷಣ ರಾಜ್ಯ ಸಚಿವರೂ ಆಗಿದ್ದಾರೆ. ಅವರು ಕೂಡ ಈ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾರೆ. ಅವರು ತಮ್ಮ ಬಿಡುವಿರದ ಕಾರ್ಯ ಕಲಾಪಗಳ ನಡುವೆಯೂ ಈ ಕೆಲಸಕ್ಕೆ ತಮ್ಮ ಸಂಪೂರ್ಣ ಸಹಮತ ನೀಡಿರುತ್ತಾರೆ. ಅವರು ಸಮಿತಿಯ ಎಲ್ಲಾ ಸಭೆಗಳಿಗೂ ಹಾಜರಾಗಿ ಮಹತ್ವ ಪೂರ್ಣವಾದ ಸಲಹೆಗಳನ್ನು ನೀಡಿರುತ್ತಾರೆ. ನಾವು ಅವರಿಗೆ ಕೂಡ ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ರಾಜ್ಯಸಭಾ ಸದಸ್ಯರೂ ಆಗಿರುವಂತಹ ಶ್ರೀ ಆರ್.ಎಸ್. ಗವಾಯಿ ಅವರು ಈ ಸಮಿತಿಯ ಅತ್ಯಂತ ಹಿರಿಯ ಹಾಗೂ ಗೌರವಾನ್ವಿತ ಸದಸ್ಯರು. ಅವರು ಅಂಬೇಡ್ಕರ್ ಅವರ ಎಲ್ಲಾ ಚಳುವಳಿಗಳಲ್ಲೂ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಸರ್ಕಾರವು ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟವರ್ಗದ ಜನರಿಗೆ ಹಲವಾರು ಯೋಜನೆಗಳನ್ನು ಜಾರಿ ಮಾಡುವಲ್ಲಿ ಇವರು ಅತ್ಯಂತ ಪ್ರಮುಖ ಪಾತ್ರ ವಹಿಸಿರುತ್ತಾರೆ. ಅವರಿಗೆ ಸಂಸತ್ತಿಗೆ ಸಂಬಂಧಿಸಿದಂತೆ ಅಗಾಧವಾದ ಅನುಭವ ಇದೆ. ಇವರೊಬ್ಬ ಕಾರ್ಯಶೀಲ ಅದರಿಂದಾಗಿಯೇ ಹಾಗೂ ಕ್ರಾಂತಿಕಾರಿ ರಾಜಕಾರಣಿ. ಆದ್ದರಿಂದ ಇವರು ಎಲ್ಲ ಜನರ ಒಲುಮೆ ಪಡೆದಿದ್ದಾರೆ. ಅವರು ಈ ಸಮಿತಿಯಲ್ಲಿ ಇರುವುದು ಈ ಸಮಿತಿಯ ಗೌರವವನ್ನು ಹೆಚ್ಚಿಸಿದೆ. ಹಲವಾರು ಸಂದರ್ಭಗಳಲ್ಲಿ ಅವರು ಈ ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಅಧ್ಯಕ್ಷರು ತಮ್ಮ ಕಾರ್ಯದಲ್ಲಿ ಬಿಡುವಿಲ್ಲದಂತೆ ತೊಡಗಿದ್ದಾಗ ಅವರು ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿರುತ್ತಾರೆ. ಅವರು ಕೂಡ ಸಂಪಾದಕ ಸಮಿತಿಯ ಸದಸ್ಯರಿಗೆ ಸ್ಫೂರ್ತಿಯಾಗಿರುತ್ತಾರೆ. ಈ ಹಿರಿಯರಿಗೆ ಕೂಡ ನಮ್ಮ ಕೃತಜ್ಞತೆ ಸಲ್ಲುತ್ತದೆ.

ಈ ಸಂಪುಟದ ತಯಾರಿ ಆರಂಭವಾದಾಗಲಿಂದಲೂ ನಮಗೆ ನಿರಂತರವಾಗಿ ಮಾರ್ಗದರ್ಶನ, ಸಹಾಯ ಬೆಂಬಲ ಹಾಗೂ ಸಹಕಾರ ನೀಡುತ್ತಾ ಬಂದಿರುವವರು ಗೌರವಾನ್ವಿತ ಶರದ್ ಪವಾರ್, ಗೌರವಾನ್ವಿತ ವಿಲಾಸರಾವ್ ದೇಶಮುಖ್, ಗೌರವಾನ್ವಿತ ದಿಲಿಪ್ ವಾಲಸೆ ಪಾಟೀಲ್ ಹಾಗೂ ಗೌರವಾನ್ವಿತ ಜಯಂತ್ ಪಾಟಿಲ್. ಇವರಿಗೆ ಕೂಡ ನಮ್ಮ ಕೃತಜ್ಞತೆ ಸಲ್ಲುತ್ತದೆ.

ಶ್ರೀ ಪ್ರಕಾಶ್ ಅಂಬೇಡ್ಕರ್, ಲೋಕಸಭಾ ಸದಸ್ಯರು, ಶ್ರೀ ರಾಂದಾಸ್ ಅಟಾವಲೆ, ಲೋಕಸಭಾ ಸದಸ್ಯರು, ಪ್ರೊ ಜೋಗೇಂದ್ರ ಕಾವಡೆ, ರಾಜ್ಯಸಭಾ ಸದಸ್ಯರು, ಶ್ರೀ ಟಿ.ಎಂ. ಕಾಂಬ್ಲೆ ಹಾಗೂ ಶ್ರೀಮತಿ ಮೀನಾಕ್ಷಿ ವಿ. ಮೂನ್

ಇವರು ಕೂಡ ಸಂಪಾದಕ ಸಮಿತಿಗೆ ನಿರಂತರವಾಗಿ ಪ್ರೋತ್ಸಹವನ್ನು ನೀಡುತ್ತಾ ಬಂದಿದ್ದಾರೆ. ಅವರಿಗೆ ಕೂಡ ನಾವು ಕೃತಜ್ಞರಾಗಿದ್ದೇವೆ.

ಶ್ರೀಮತಿ ಚಂದ್ರಾ ಐಯ್ಯಂಗಾರ್, ಐಎಎಸ್, ಮುಖ್ಯ ಅಧೀಕ್ಷಕರು, ಉನ್ನತ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ, ಮಹಾರಾಷ್ಟ್ರ ಸರ್ಕಾರ, ಅವರು ಕೂಡ ಈ ಸಮಿತಿಗೆ ಸಾಮಗ್ರಿಗಳನ್ನು ಒದಗಿಸಿ ಕೊಟ್ಟು ಎಲ್ಲಾ ರೀತಿಯ ಸಹಕಾರ ನೀಡಿರುತ್ತಾರೆ. ನಾವು ಅವರನ್ನು ಆಗಾಗ್ಗೆ ಸಾಮಗ್ರಿ ಹಾಗೂ ಹಣಕಾಸಿಗಾಗಿ ಭೇಟಿ ಮಾಡುತ್ತಿದ್ದೆವು. ಎಂದಿಗೂ ಅವರು ನಮ್ಮನ್ನು ನಿರಾಸೆಗೊಳಿಸಲಿಲ್ಲ. ಇವರಿಗೂ ನಾವು ಕೃತಜ್ಞತೆ ಸಲ್ಲಿಸಬಯಸುತ್ತೇವೆ. ಇದೇ ರೀತಿಯ ಸಹಕಾರವನ್ನು ಮುಂದೆಯೂ ಕೂಡ ಅವರಿಂದ ಅಪೇಕ್ಷೆ ಪಡುತ್ತೇವೆ.

ಶ್ರೀ ಎಕೆಡಿ ಜಾಧವ್ ಅವರು ಉನ್ನತ ಕಾರ್ಯದರ್ಶಿ, ಹಣಕಾಸು ಇಲಾಖೆ, ಶ್ರೀ ಸುರೇಶ್ ಗಾಯಕ್‌ವಾಡ್, ಸಹ ಕಾರ್ಯದರ್ಶಿ, ಹಣಕಾಸು ಇಲಾಖೆ ಹಾಗೂ ಡಾ. ಸಂಜಯ ಚಾಹಂಡೆ, ಸಹ ಕಾರ್ಯದರ್ಶಿ, ಮುಖ್ಯಮಂತ್ರಿಗಳ ಕಾರ್ಯಾಲಯ, ಇವರೆಲ್ಲರೂ ಈ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸಿರುತ್ತಾರೆ. ಅವರಿಗೆ ಕೂಡ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಡಾ. ಎಸ್.ಎನ್. ಪದಾಣ್, ಉನ್ನತ ಶಿಕ್ಷಣದ ಇಲಾಖೆಯ ಕಾರ್ಯದರ್ಶಿ, ಮಹಾರಾಷ್ಟ್ರಾ ಸರ್ಕಾರ ಅವರ ಹೆಸರನ್ನು ಕೂಡ ಇಲ್ಲಿ ವಿಶೇಷವಾಗಿ ಉಲ್ಲೇಖ ಮಾಡಬೇಕು. ಈ ಸಮತಿ ಹಾಗ ಸಂಪಾದಕ ಸಮಿತಿ ಎಲ್ಲಾ ಸಮುಯದಲ್ಲಿರುವ ಅವರಿಂದ ಅಗತ್ಯ ನೆರವನ್ನು ಪಡೆದುಕೊಂಡಿದೆ ಅವರ ಮುಂದೆ ನಾವು ಇಬ್ಬಂತಹ ಯಾವುದೇ ಬೇಡಿಕೆಗೂ ಅವರು ನಕಾರಾತ್ಮಕವಾಗಿ ಸ್ಪಂದಿಸಲೇ ಇಲ್ಲ. ನಮ್ಮ ವಿಶೇಷ ಕೃತಜ್ಞತೆಗಳು ಅವರಿಗೆ ಕೂಡ ಸಲ್ಲುತ್ತದೆ.

ಶ್ರೀ ಎ.ಡಿ. ಸಾವಂತ್, ಸಹ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಮುಂಬದ್ದು, ಶ್ರೀ ರಾಥೋಡ್ ಸಹಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ ನಾಗ್ಪುರ ಶ್ರೀ ಉತ್ತಮ್ ಸೀನ್‌ವಾನೆ, ಸರ್ಕಾರಿ ಅಚ್ಚು ಕಾರ್ಖಾನೆಯ ಕಾರ್ಯದರ್ಶಿ ಸರ್ಕಾರಿ ಸುದ್ದಿ ಸಂಸ್ಥೆ ಹಾಗು ಜನ ಸಂಪರ್ಕ ಇಲಾಖೆ ಶ್ರೀ ಜಯಂತ್ ಗಾಯಕ್ ವಾಡ್, ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಶ್ರೀ ಆರ್.ಕೆ. ಗಾಯಕ್‌ವಾಡ್ ಉಪಕಾರ್ಯದರ್ಶಿ ಜಿ.ಎ.ಡಿ. ಡಾ. ಹರ್ಷದೀಪ್ ಕಾಂಬ್ಲೆ, ಉಪ ಕಾರ್ಯದರ್ಶಿ ಗೃಹ ಇಲಾಖೆ ಶ್ರೀಮತಿ ಸೋನಲ್ ಸ್ಮಿತ್ ಪಾಟೀಲ್ ಅಧಿಕಾರಿ, ಆರ್ಥಿಕ ಇಲಾಖೆ ಇವರೆಲ್ಲರೂ ನೀಡಿದ ಸಹಕಾರಕ್ಕೆ ನಾವು ಕೃತಜ್ಞರಾಗಿದ್ದೇವೆ.

ಡಾ. ಕೃಷ್ಣ ಎನ್. ಕಾಂಬ್ಳೆ ಹಾಗು ಡಾ. ಸಿದ್ದಾರ್ಥ್ ಜೆ. ಕಾಂಬ್ಳೆ ಅವರು ಹಲವಾರು ದಿನಗಳು ನಮಗೆ ನಿರಂತರವಾಗಿ ಸಹಕಾರ ನೀಡಿರುತ್ತಾರೆ ಅವರಿಗೂ ಕೂಡ ನಾವು ಕೃತಜ್ಞತೆ ಸಲ್ಲಿಸುತ್ತೇವೆ.

ಈ ಸಂಪುಟದ ತಯಾರಿಕೆಗೆ ಸ್ಫೂರ್ತಿ ತುಂಬಿ ಸಲಹೆ ಸೂಚನೆ ನೀಡದಂತಹ ಡಾ. ಶ್ರೀನಿವಾಸ್ ಖಂಡೇಲ್ ವಾಲ್ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

ಶುಭಾಮಣಿ ಎನ್ ಬುಸು, ಸುಂತ ಇಲಾಖೆ ಹಾಗೂ ಪೀಠದ ಅಧಿಕಾರಿ, ಇವರಿಗೆ ಕೂಡ ನಾವು ಕೃತಜ್ಞರಾಗಿದ್ದೇವೆ. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಹಿಂದಿನ ಮುಖ್ಯಸ್ಥರಾಗಿದ್ದ ಶ್ರೀ ಎಂ.ಪಿ.ಗಾಯಕ್‌ವಾಡ್ ಅವರಿಗೂ ನಮ್ಮ ನೆನಕೆಗಳು ಸಲ್ಲುತ್ತವೆ.

ಪ್ರೊ. ಆನಂದ್ ಅರ್ ಗಜ್‌ವೇ, ಡಾ. ಎಂ.ಎಸ್. ವಾಂಖೇಡೆ, ಪ್ರೊ. ಪಾರೀಶ್ ಸಿ.ಭಗತ್, ಪ್ರೊ. ಗೌತಂ ಕೆ.ಕಾಂಬ್ಲೆ, ಅವರುಗಳು ಕೂಡ ನಮಗೆ ಅಮೋಘವಾದ ಸಹಾಯ ನೀಡಿದ್ದಾರೆ. ಅವರಿಗೆ ಕೂಡ ನಮ್ಮ ನೆನಕೆಗಳು ಅಂತೆಯೇ ದಿನೇಶ್ ವಿ. ರಾಮ್‌ಟೇಕೆ, ಪ್ರಮೋದ್ ಎನ್ ಕಾಂಬ್ಲೆ ಹಾಗೂ ನವಲ್ ತೋರಾಟ್ ಅವರಿಗೆ ಕೂಡ ಕೃತಜ್ಞತೆಗಳು.

ಛಾಯಾಚಿತ್ರಗಳನ್ನು ಒದಗಿಸಿಕೊಟ್ಟ ವಿಜಯ್ ಬಿ.ಗಾಯಕವಾಡ್, ಪ್ರದೀಪ್ ಗಾಯಕವಾಡ್ ಹಾಗೂ ವಿನೋದ್ ಆಟೆ ಅವರಿಗೆ ಕೂಡ ಕೃತಜ್ಞತೆಗಳು.

ಈ ಕೆಳಗಿನವರಿಗೆ ಧನ್ಯವಾದ ಅರ್ಪಿಸದಿದ್ದರೆ ನಾವು ನಮ್ಮ ಕಾರ್ಯದಲ್ಲಿ ವಿಫಲರಾಗುತ್ತೇವೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಸಂಶೋಧನ ಕೇಂದ್ರದ ಮುಖ್ಯಸ್ಥರಾಗಿರುವ ವಸಂತಮೂನ್, ಹನುಮಾನ್‌ನಗರ ನಾಗ್ಪುರ, ಆರ್.ಟಿ.ಶಿಂಧೆ, ಆರ್.ಎಸ್. ಖೈನ್, ಡಾ. ಗಂಗಾಧರ ಪಂಟವಾನೆ, ಎ.ಎಸ್.ರಾಣ್ ಪಿಸಿ, ಡಬ್ಲ್ಯೂ ವಿ.ಮೂನ್, ವಿ.ಬಿ.ಕದಂ, ಬಿ.ಬಿ.ಕಾಂಬ್ಳೆ, ಭಗವಾನ್ ದಾಸ್ ಮುಂತಾದವರು ಡಾ. ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಲೇಖನಗಳನ್ನು ನೀಡಿ ಸಹಕರಿಸಿದ್ದಾರೆ.

ನಮ್ಮ ಧನ್ಯವಾದಗಳು ಪ್ರೊ.ಎ.ಎಂ.ಥೋಬ್ರೆ ಹಾಗೂ ಡಾ. ವಿಜಯ್‌ಕವಿ ಮಂಡನ್ ಅವರಿಗೂ ಸಲ್ಲುತ್ತದೆ. ಅವರು ಕೂಡ ಕಾಲಕಾಲಕ್ಕೆ ತಕ್ಕ ಸಹಾಯ ನೀಡಿರುತ್ತಾರೆ. ನಾವು ಈ ಸಮಯದಲ್ಲಿ ಶ್ರೀಮತಿ ಶಲಾಕಾ ಟಂಬೆ ಶ್ರೀಮತಿ ಸುಮಿತ್ರ ನೇವರೇಕರ್, ಶ್ರೀ ಕಮಲಾಕರ್ ನಿಲ್‌ವರ್ಣ, ಶ್ರೀ ಮಾರುತಿ ಪಾವಡೆ ಹಾಗೂ ಶ್ರೀ ವಿಜಯ್ ವೈದ್ಯ ಅವರಿಗೂ ಅವರು ನೀಡಿದ ಸಹಕಾರಕ್ಕಾಗಿ ಕೃತಜ್ಞತೆ ಸಲ್ಲಿಸಬಯಸುತ್ತೇವೆ.

ಸರ್ಕಾರಿ ಅಚ್ಚು ಕೂಟದ ವ್ಯವಸ್ಥಾಪಕರಾದ ಶ್ರೀ ಎಂ.ಎಸ್.ಗಾಯಕವಾಡ್, ಶಿವರಾಜ್ ಮುದ್ರಣಾಲಯ ನಾಗ್ಪುರ ಇದರ ಮಾಲೀಕರಾದ ಶ್ರೀ ಮಿಲಿಂದ್ ಶಿಂಧೆ, ಹಿಂದಿನ ವ್ಯವಸ್ಥಾಪಕರಾಗಿದ್ದಂತಹ ಶ್ರೀ ಆರ್.ಡಿ. ಮೋರೆ, ಅವರ ಸಹ ಕೆಲಸಗಾರರಾಗಿದ್ದಂತಹ ಶ್ರೀ ಎಸ್.ಪಿ. ಮೇಶ್ರಂ ಎಲ್ಲರಿಗೂ ನಮ್ಮ ಅನಂತ ನಮನಗಳು ಸಲ್ಲುತ್ತವೆ. ಇವರೆಲ್ಲರೂ ಆದಷ್ಟು ಶೀಘ್ರವಾಗಿ ಹಾಗೂ ತಪ್ಪುಗಳಿಲ್ಲದಂತೆ ಈ ಸಂಪುಟವನ್ನು ಹೊರತರುವಲ್ಲಿ ಸಹಕರಿಸಿದ್ದಾರೆ.

**ಹರಿ ನಾರ್ಕೆ**
**ಎನ್.ಜಿ.ಕಾಂಬ್ಳೆ**
(ಭಾ.ಪೊ.ಸೇ.) ನಿವೃತ್ತ

**ಡಾ.ಎಂ.ಎಲ್.ಕಾಸರೆ**
**ಪ್ರೊ. ಅಶೋಕ್ ಗೋಡ್‌ಗಾತೆ**

# ಪರಿವಿಡಿ


ಸಂದೇಶಗಳು v

ಮೊದಲಮಾತು x

ಸಂಪಾದಕೀಯ xiii

**ಭಾಗ – I**
**ಮಹದ್ ಸತ್ಯಾಗ್ರಹ** ೧

**ಭಾಗ - II**
**ಡಾ. ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿ ಅವರ ಭೇಟಿಗಳು** ೪೭

**ಭಾಗ – III**
**ಭಾರತೀಯ ರಾಜಕೀಯ ಕ್ಷೇತ್ರಕ್ಕೆ ಅಸ್ಪೃಶ್ಯರನ್ನು ತರುವಲ್ಲಿ**
**ಡಾ. ಅಂಬೇಡ್ಕರ್ ಅವರ ಪಾತ್ರ ಹಾಗೂ ಅವರಿಂದ ಪ್ರಜಾಪ್ರಭುತ್ವಕ್ಕೆ ಅಡಿಪಾಯ** ೫೯

**ಭಾಗ – IV**
**ನಾಸಿಕ್‌ನಲ್ಲಿ ಕಾಲಾರಾಂ ದೇವಸ್ಥಾನದ ಪ್ರವೇಶಕ್ಕಾಗಿ ಸತ್ಯಾಗ್ರಹ ಹಾಗೂ**
**ದೇವಸ್ಥಾನ ಪ್ರವೇಶ ಪ್ರಕ್ರಿಯೆ** ೧೬೫

**ಭಾಗ – V**
**ಇತರ ಹೋರಾಟಗಳು** ೧೯೧

೧ ನಾನೊಬ್ಬ ಸನ್ನಡತೆಯ ವ್ಯಕ್ತಿ ೧೯೩

೨ ಒಂದು ಪ್ರತಿಮೆಯ ಸ್ಥಾಪನೆಗಿಂತ ಒಂದು ಸಾರ್ವಜನಿಕ ಗ್ರಂಥಾಲಯದ ಸ್ಥಾಪನೆ ಮಾಡುವುದೇ ಶ್ರೀ ಮೆಹ್ತಾ ಅವರಿಗೆ ಸೂಕ್ತವಾದ ಸ್ಮರಣೆ ೧೯೯

೩ ಸಾರ್ವಜನಿಕ ಸಂಸ್ಥೆಗಳು ಪ್ರಚಾರಕನಿಗೆ ಸಹಾಯ ನೀಡಬೇಕು ೨೦೨

೪ ಭಾವುರಾವ್ ಪಾಟೀಲ್ ಅವರ ಸಂಸ್ಥೆ ನೆರವು ಪಡೆಯಲು ಅರ್ಹತೆ ಪಡೆದಿದೆ ೨೦೩

೫ ನನ್ನ ವಿರುದ್ಧ ನೀಡಿರುವಂತಹ ದೂರು ಆಧಾರರಹಿತ ೨೦೩

೬ ಸಂಪಾದಕರಿಗೆ ಬರೆದ ಪತ್ರ ೨೦೬

೭ ದೇವಸ್ಥಾನ ಪ್ರವೇಶ ಪಡೆಯುವುದಕ್ಕಿಂತ ಹೆಚ್ಚಿನ ಆದ್ಯತೆಯನ್ನು ಆರ್ಥಿಕ, ಶೈಕ್ಷಣಿಕ ಹಾಗು ಸಾಮಾಜಿಕ ಏಳಿಗೆಗೆ ನೀಡಿ. ೨೦೭

೮ ಜಾತಿ ಪದ್ಧತಿಯ ವಿನಾಶವಲ್ಲದೇ ಬೇರೆ ಯಾವ ಮಾರ್ಗದಿಂದಲೂ ಕೆಳ ಜಾತಿಯವರ ಏಳಿಗೆ ಸಾಧ್ಯವಿಲ್ಲ. ೨೦೯

| | | |
|---|---|---|
| ೯ | ಎರಡನೆಯ ಸದನದ (Second Chambers) ವಿರುದ್ಧ ಶೋಷಿತ ವರ್ಗಗಳು | ೨೧೦ |
| ೧೦ | ಜಾತಿಗೆ ಸ್ಮೃತಿಯ ಆಧಾರವನ್ನು ತೆಗೆದು ಹಾಕಿರಿ | ೨೧೩ |
| ೧೧ | ಶೋಷಿತ ವರ್ಗದ ಜನರ ಮತಾಂತರವನ್ನು ಹಿಂದೂಗಳು ಅಸಡ್ಡೆಯಿಂದ ಕಾಣಬಾರದು | ೨೧೭ |
| ೧೨ | ಮತಾಂತರಗೊಳ್ಳುವುದರಿಂದ ಹಕ್ಕುಗಳಿಗೆ ಯಾವ ರೀತಿಯ ಧಕ್ಕೆಯೂ ಬರುವುದಿಲ್ಲ | ೨೨೧ |
| ೧೩ | ಸ್ವಾರ್ಥದ ಉದ್ದೇಶ ಇರದ ಪರಿವರ್ತನಾ ಚಳುವಳಿ | ೨೨೬ |
| ೧೪ | ಸ್ವತಂತ್ರ ಕಾರ್ಮಿಕರ ಪಕ್ಷ. ಶೋಷಿತ ವರ್ಗದವರ ಏಳಿಗೆಗಾಗಿ ದುಡಿಯುವ ಪಕ್ಷ | ೨೨೯ |
| ೧೫ | ಭಾರತೀಯರ ನಾಗರಿಕ ಹಕ್ಕುಗಳು | ೨೩೦ |
| ೧೬ | ಬೇರೆ ದೇಶದಲ್ಲೇ ಆಗಿದ್ದರೆ ಈ ರೀತಿಯ ಮಂತ್ರಿಯನ್ನು ಕರ್ತವ್ಯದಿಂದ ವಜಾ ಮಾಡಲಾಗುತ್ತಿತ್ತು | ೨೩೧ |
| ೧೭ | ಸಮಾಜವಾದಿಗಳು ಇದೀಗ ನಿಷ್ಕ್ರಿಯರಾಗಿದ್ದಾರೆ | ೨೩೨ |
| ೧೮ | ಈ ರೀತಿಯ ಸಂಸ್ಥೆಗಳು ದೊಡ್ಡ ಗ್ರಂಥಾಲಯಗಳಾಗಿ ಬೆಳೆಯಬೇಕು. | ೨೩೩ |
| ೧೯ | ಹಣ ನೀಡುವಿಕೆಯನ್ನು ನಿಯಂತ್ರಿಸುವ ಹಾಗು ವ್ಯವಸ್ಥಿತಗೊಳಿಸುವ ಮಸೂದೆ | ೨೩೫ |
| ೨೦ | ನಾನು ನನ್ನ ತತ್ವಗಳನ್ನು ಸಮರ್ಥಿಸಿಕೊಳ್ಳುತ್ತೇನೆ ಹಾಗು ಅದಕ್ಕಾಗಿ ಏಕಾಂಗಿಯಾಗಿ ಹೋರಾಟ ನಡೆಸುತ್ತೇನೆ | ೨೫೭ |
| ೨೧ | ಅಧಿಕಾರದ ಅಮಲು ಏರಿರುವಂತೆ ಕಂಡು ಬರುತ್ತಿರುವ ಮಂತ್ರಿಮಂಡಲ | ೨೫೮ |
| ೨೨ | ಭೂಮಿಯನ್ನು ಉಳುವವರಿಗೆ ಅನ್ಯಾಯ | ೨೬೦ |
| ೨೩ | ಗ್ವಯರ್ ತೀರ್ಪಿನ ವಿರುದ್ಧ ದನಿಯೆತ್ತಿದ ಡಾ. ಅಂಬೇಡ್ಕರ್ | ೨೬೧ |
| ೨೪ | ನಾನು ಶ್ರೀ ಜಿನ್ನಾ ಅವರಿಗಿಂತಲೂ ಹೆಚ್ಚು ಕಾತುರನಾಗಿರುವೆ | ೨೭೦ |
| ೨೫ | ಬುದ್ಧ ಪ್ರಾಣಿಬಲಿಯನ್ನು ನಿಲ್ಲಿಸಿದಾಗ, ಹಸುಗಳನ್ನು ಅವರು ಪಾವನಗೊಳಿಸಿದರು | ೨೭೨ |
| ೨೬ | ಮಹಾರ್ ಜನಾಂಗದವರು ಕೆಚ್ಚೆದೆಯ ಜನರು: | ೨೭೬ |
| ೨೭ | ಕೃಷಿಕ ವತನದಾರ ಮಹಾರರು, ಮಾಂಗರು ಇತ್ಯಾದಿ ಜನಾಂಗದವರ ತೊಂದರೆಗಳಿಗೆ ಸಂಬಂಧಿಸಿದ ಅಹವಾಲು | ೨೭೮ |
| ೨೮ | ಹಿಂದೂಗಳಿಗಿಂತ ಬ್ರಿಟಿಷರ ಮೇಲೆ ನಾನು ಅತ್ಯಂತ ಮಾರಕವಾಗಿರುವೆ..... ಒಂದು ವೇಳೆ ಅವರು... | ೩೦೫ |
| ೨೯ | ಶೋಷಿತ ವರ್ಗದವರನ್ನು ವೈಸ್‌ರಾಯ್ ಅವರ ಸಮಿತಿಯಿಂದ ಹೊರಗೆ ಉಳಿಸಿರುವುದು ಅತ್ಯಂತ ಘಾತಕ ಕೃತ್ಯ ಹಾಗು ವಿಶ್ವಾಸದ ಉಲ್ಲಂಘನೆ | ೩೦೬ |
| ೩೦ | ಭಾರತದಾದ್ಯಂತ ಇರುವ ಶೋಷಿತ ವರ್ಗಗಳ ಎಲ್ಲಾ ನಾಯಕರ ಸಭೆ | ೩೦೭ |
| ೩೧ | ಡಾ. ಬಿ.ಆರ್. ಅಂಬೇಡ್ಕರ್ ಹಾಗು ಯಹೂದಿ ಜನರು | ೩೦೮ |
| ೩೨ | ಮಂತ್ರಿಮಂಡಲದ ರಚನೆಯಲ್ಲಿ ನನಗೆ ಸ್ವಲ್ಪವೂ ಆಸಕ್ತಿಯಿಲ್ಲ | ೩೧೧ |
| ೩೩ | ಹಿಂದೂ ಧರ್ಮ ಕೂಡ ಒಂದು ರಾಜಕೀಯ ಸಿದ್ಧಾಂತ ಮತ್ತು ಅದು ಇದರ ಲಕ್ಷಣ ಕೂಡ | ೩೧೨ |
| ೩೪ | ನಾವು ರಾಷ್ಟ್ರೀಯ ಜೀವನದ ಪ್ರತ್ಯೇಕ ಅಂಶ | ೩೧೫ |
| ೩೫ | ಪರಿಶಿಷ್ಟ ಜಾತಿಯ ವಸಾಹತುಗಳನ್ನು ಬಂಟರೊಂದಿಗೆ ಇರಿಸಬೇಕು | ೩೧೭ |

೩೬ ಹಿಂದೂಗಳು ಯಾವಾಗಲೂ ಪರಿಶಿಷ್ಟ ಜಾತಿಯವರನ್ನು ತಮ್ಮ
"ಧರ್ಮದ ಹೊರಗೆ" ಎಂದೇ ಭಾವಿಸಿದ್ದಾರೆ ೩೧೮

೩೭ ಪರಿಶಿಷ್ಟ ಜಾತಿಯವರ ಪ್ರಕರಣವನ್ನು ವಿಶ್ವ ಸಂಸ್ಥೆಯ ಮುಂದಿರಿಸಬೇಕು ೩೨೩

೩೮ ಅಟ್ಲೀ ಅವರ ಹೇಳಿಕೆಯೇ ನನಗೆ ಅರ್ಥವಾಗುವುದಿಲ್ಲ ೩೨೫

೩೯ ಅಸ್ಪೃಶ್ಯರಿಗಾಗಿ ಸಾಕಷ್ಟು ರಕ್ಷಣೆಯನ್ನು ಪಡೆದುಕೊಳ್ಳಬೇಕು ೩೨೬

೪೦ ಭಾರತದ ಜನಗಣತಿ ೩೨೮

೪೧ ಪಾಕಿಸ್ತಾನದ ಪರಿಶಿಷ್ಟ ಜಾತಿಯ ಜನರು ಭಾರತಕ್ಕೆ ಆಗಮಿಸಬೇಕು ೩೨೮

೪೨ ಪರಿಶಿಷ್ಟ ಜಾತಿಯ ನಿರಾಶ್ರಿತರನ್ನು ಕಡೆಗಣಿಸಲಾಗಿದೆ ೩೩೧

೪೩ ಸರ್ಕಾರವು ನಿಷ್ಪಕ್ಷಪಾತವಾಗಿರಬೇಕು ೩೩೭

೪೪ ನೀವೇ ನಿಮ್ಮ ಸ್ವಂತ ಬೆಳಕಾಗಿರಿ ೩೩೯

೪೫ ಭಾರತೀಯ ಸಾಮಾಜಿಕ ಚಿಂತನೆಯಲ್ಲಿ ಹಿಂದುತ್ವ ಇತ್ತೀಚಿನ ಬೆಳವಣಿಗೆ ೩೪೪

೪೬ ಪರಿಶಿಷ್ಟ ಜಾತಿಯವರ ವಿಮೋಚನೆ–ಕರಡು ಪ್ರಣಾಳಿಕೆ ೩೪೫

೪೭ ರಾಜೀನಾಮೆ ನೀಡಿರುವುದು ಅಸ್ವಸ್ಥತೆಯ ಕಾರಣದಿಂದಲ್ಲ ೩೬೧

೪೮ ಯಾವ ಪಕ್ಷದ ಗುರಿಗಳು ಒಕ್ಕೂಟದ ಗುರಿಗಳೊಂದಿಗೆ ವಿರುದ್ಧವಾಗಿಲ್ಲವೋ
ಅಂತಹ ಪಕ್ಷಗಳೊಂದಿಗೆ ಒಡಂಬಡಿಕೆ ೩೬೩

೪೯ ಯಾವುದೇ ವ್ಯಕ್ತಿಯೂ ತನ್ನ ಪ್ರಕರಣಕ್ಕೆ ತಾನೇ ನ್ಯಾಯವಾದಿ ಆಗಬಾರದು ೩೬೪

೫೦ ಚುನಾವಣಾ ತಕರಾರು ಅರ್ಜಿ ೩೬೫

೫೧ ಮಹಾರಾಷ್ಟ್ರದಲ್ಲಿ ಕಮ್ಯುನಿಸ್ಟರು ೩೭೯

೫೨ ಹಸಿದ ಜನರು ಅನ್ನವನ್ನು ಬೇಡುತ್ತಾರೆ ೩೮೦

೫೩ ಬೆಂಗಳೂರಿನಲ್ಲಿ ಪ್ರಾರಂಭವಾಗಲಿರುವ ಬೌದ್ಧ ಧರ್ಮದ ಸಮಾವೇಶ ೩೮೧

೫೪ ಸಾಮಾನ್ಯ ಜನರ ಹಿಂಜರಿಕೆಯ ಮನೋಭಾವದಿಂದ
ಭಾರತದಲ್ಲಿ ಬೌದ್ಧ ಧರ್ಮ ನಶಿಸಿತು ೩೮೨

೫೫ ನಾನು ನಿಮ್ಮ ಜೀವವನ್ನು ರಕ್ಷಿಸಲು ಸಿದ್ಧನಿರುವೆ ಆದರೆ... ೩೮೩

೫೬ ಒಂದು ರಾಜಕೀಯ ಪಕ್ಷ ಅಸ್ತಿತ್ವದಲ್ಲಿ ಇರುವುದು ಕೇವಲ ಚುನಾವಣೆ
ಜಯಿಸಲು ಮಾತ್ರವಲ್ಲ ಬದಲಾಗಿ ಜನರಿಗೆ ಶಿಕ್ಷಣ ನಿಡಲು, ಎಚ್ಚರಿಸಲು
ಹಾಗು ವ್ಯವಸ್ಥಿತಗೊಳಿಸಲು ೩೮೬

೫೭ 'ಬುದ್ಧ ಹಾಗು ಆತನ ಧರ್ಮ' ಪುಸ್ತಕ ಕುರಿತು
ಜವಹರಲಾಲ ನೆಹರು ಅವರಿಗೊಂದು ಪತ್ರ ೩೯೩

೫೮ ಅವನ ಧರ್ಮವನ್ನು ಪ್ರಚಾರ ಮಾಡುವ ಮೂಲಕ ಭಿಕ್ಕುಗಳು
ಬುದ್ಧನ ಸೇವೆ ಮಾಡಬೇಕು ೩೯೫

೫೯ ಬೌದ್ಧ ಮತವನ್ನು ಭಾರತದಲ್ಲಿ ಸ್ಥಾಪಿಸಲು ನನ್ನ ಜನರು ಎಲ್ಲಾ ರೀತಿಯ ತ್ಯಾಗಕ್ಕೆ ಸಿದ್ಧರಿದ್ದಾರೆ ಎಂದು ನಾನು ನಂಬಿದ್ದೇನೆ ೩೯೭

**ಭಾಗ - VI**

**ಲೇಖನಗಳು, ಸಂದೇಶಗಳು, ಮುನ್ನುಡಿಗಳು** **೩೯೯**

೧ ಧರ್ಮ ಮತ್ತು ಪುರೋಹಿತವರ್ಗಗಳ ನಿಯಂತ್ರಣ ೪೦೧

೨ ಬಾಂಬೆ ಪ್ರಾಂತದಲ್ಲಿ ಕಾನೂನು ವಿದ್ಯಾಭ್ಯಾಸದ ಸುಧಾರಣೆಯ ಬಗ್ಗೆ ಕೆಲವು ಆಲೋಚನೆಗಳು ೪೦೩

೩ ಸರ್ ರಾಧಾಕೃಷ್ಣನ್ ಅವರಿಗೆ ಡಾ. ಅಂಬೇಡ್ಕರ್ ಅವರು ನೀಡಿದ ಉತ್ತರ ೪೧೪

೪ ನ್ಯಾಯಾಧೀಶರ ಪೀಠದಿಂದ... ೪೧೫

೫ ಬಾಂಬೆ ನಗರದ ಅಸ್ಪೃಶ್ಯ ಕೆಲಸಗಾರರು ೪೫೪

೬ ಗಾಂಧಿಯವರು ಮಹಾತ್ಮರೇ? ೪೫೫

೭ ಮರಾಠಿ ವಿದ್ವಾಂಸರಿಗೆ ಆರ್ಥಿಕ ನೆರವಿನ ನಿಧಿಗಾಗಿ ಮನವಿ ೪೬೦

೮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಜ್ಞಾನವೇ ಶಕ್ತಿ ೪೬೧

೯ ಕಾಂಗ್ರೆಸ್ ಪಕ್ಷವು ಅಸ್ಪೃಶ್ಯರನ್ನು ಉಪೇಕ್ಷಿಸುವ ಪ್ರಯತ್ನವನ್ನು ಮಾಡುತ್ತಿದೆ ೪೬೨

೧೦ ಸೋಲನ್ನೊಪ್ಪಿಕೊಳ್ಳುವ ಸ್ವಭಾವವು ನನ್ನದಲ್ಲ ೪೬೬

೧೧ ನಮ್ಮ ವಿದ್ಯಾರ್ಥಿಗಳು ಕಲಿತು ಮುಂದಾಳುಗಳಾಗಬೇಕು ೪೬೭

೧೨ ಮರಾಠಾಮಂದಿರಕ್ಕೆ ಡಾ. ಬಾಬಾಸಹೇಬ ಅಂಬೇಡ್ಕರ್ ಅವರ ಸಂದೇಶ ೪೬೯

೧೩ ಅಸ್ಪೃಶ್ಯರು ಮನುಷ್ಯರ ಮಟ್ಟವನ್ನು ಮುಟ್ಟುವವರೆಗೆ ನಿಲ್ಲದೆ ಮುಂದುವರಿಯಬೇಕು ೪೭೧

೧೪ 'ದ ಎಸೆನ್ಸ್ ಆಫ್ ಬುದ್ಧಿಸಂ'ನ ಮೂರನೇ ಆವೃತ್ತಿಗೆ ಬರೆದ ಪೀಠಿಕೆ ೪೭೪

೧೫ ಭಾರತದ ಪ್ರಾಚೀನ ಪರಂಪರೆಯು ನಿರಾಶಾವಾದಕ್ಕೆ ದಾರಿಮಾಡಿಕೊಟ್ಟಿದೆ ೪೭೭

೧೬ 'ಸ್ವೀಕೃತಿ' ಪದದ ಅರ್ಥ ೪೭೮

೧೭ ಬುದ್ಧ ಮತ್ತು ಬೌದ್ಧಧರ್ಮದ ಭವಿಷ್ಯ ೪೮೪

೧೮ ಹಿಂದೂ ಸ್ತ್ರೀಯ ಉನ್ನತಿ ಮತ್ತು ಅವನತಿ – ಅದಕ್ಕೆ ಹೊಣೆಗಾರರು ಯಾರು? ೪೯೫

೧೯ ಸಾಧುಗಳ ಸಾಹಿತ್ಯವು ಮಾನವನನ್ನು ಅವನ ಜೀವನದ ಹೋರಾಟಕ್ಕೆ ಅಣಿಮಾಡಲು ನೈತಿಕವಾಗಿ ಸಹಾಯಮಾಡುತ್ತದೆ ೫೧೨

೨೦ ಇಕ್ಕಟ್ಟಿನಲ್ಲಿರುವ ಜನಾಂಗ – ರೂಪರೇಖೆಗಳು ೫೧೩

೨೧ ಮಹರರು – ಅವರು ಯಾರು? ಅವರು ಅಸ್ಪೃಶ್ಯರಾದದ್ದು ಹೇಗೆ? ೫೧೯

೨೨ ರಿಪಬ್ಲಿಕನ್ ಪಕ್ಷವು ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಮತ್ತು ನ್ಯಾಯಗಳನ್ನು ಪ್ರತಿನಿಧಿಸುತ್ತದೆ ೫೩೧

೨೩ ಬುದ್ಧ ಮತ್ತು ಅವನ ಧರ್ಮ ೫೩೭

೨೪ ರಾಜಕೀಯ ಪ್ರವೇಶದ ತರಬೇತಿಗಾಗಿ ಶಾಲೆ ೫೩೮

**ಭಾಗ - VII**

**ಕ್ಯಾಬಿನೆಟ್ ಮಿಷನ್ ಹಾಗೂ ಅಧಿಕಾರದ ಹಸ್ತಾಂತರದ ಬಗೆಗೆ ೫೪೧**

**ಡಾ. ಬಿ.ಆರ್. ಅಂಬೇಡ್ಕರ್ – ಸಂಪಾದಕೀಯ ನುಡಿ**

೧ ಕಾರ್ಯಾಂಗದ ಪರಿಷತ್ತಿನಲ್ಲಿ ಪರಿಶಿಷ್ಟ ಜಾತಿಗಳವರಿಗೆ ಪ್ರಾತಿನಿಧ್ಯದ ಬಗೆಗೆ ಕಾರ್ಯಸೂಚನೆ ೫೪೫

೨ ಕ್ಯಾಬಿನೆಟ್ ಮಿಷನ್ನಿಗೆ ಸಲ್ಲಿಸಿದ ಜ್ಞಾಪನಾಪತ್ರ ೫೪೯

೩ ಕ್ಯಾಬಿನೆಟ್ ಮಿಷನ್ನಿನೊಂದಿಗೆ ಡಾ. ಅಂಬೇಡ್ಕರ್ ಅವರ ಸಂದರ್ಶನ ೫೬೧

೪ ಡಾ. ಅಂಬೇಡ್ಕರ್ ಮತ್ತು ಫೀಲ್ಡ್ ಮಾರ್ಷಲ್ ವಿಸ್ಕೌಂಟ್ ವೇವೆಲ್ ಅವರ ನಡುವೆ ನಡೆದ ಸಭೆಯ ಮೇಲಿನ ಟಿಪ್ಪಣಿ ೫೬೩

೫ ಅಸ್ಪೃಶ್ಯರಿಗೇ ಪ್ರತ್ಯೇಕವಾದ ನಿವಾಸಸ್ಥಾನಗಳು ೫೬೮

೬ ಕ್ಯಾಬಿನೆಟ್ ಮಿಷನ್ನಿನ ಶಿಫಾರಸುಗಳ ವಿರುದ್ಧದ ಪ್ರತಿಭಟನಾ ಪತ್ರ ೫೬೯

೭ ಕ್ಯಾಬಿನೆಟ್ ಮಿಷನ್ನಿನ ಯೋಜನೆಯ ಬಗೆಗೆ ಎ.ವಿ. ಅಲೆಗ್ಸಾಂಡರ್ ಅವರಿಗೆ ಬರೆದ ಪತ್ರ ೫೭೨

೮ ಕ್ಯಾಬಿನೆಟ್ ಮಿಷನ್ ನೀಡಿದ ಹೇಳಿಕೆಯ ಬಗೆಗೆ ಲಾರ್ಡ್ ಪೆಥಿಕ್ ಲಾರೆನ್ಸ್ ಅವರಿಗೆ ಬರೆದ ಪತ್ರ ೫೭೯

೯ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಲಾರ್ಡ್ ಪೆಥಿಕ್ ಲಾರೆನ್ಸ್ ಅವರು ನೀಡಿದ ಸ್ಪಷ್ಟೀಕರಣ ೫೮೧

೧೦ ಚರ್ಚಿಲ್ಲರನ್ನು ತಮ್ಮ ಸಮರ್ಥಕರನ್ನಾಗಿ ಅಂಬೇಡ್ಕರ್ ಅವರು ಕಾಣುತ್ತಾರೆ ೫೮೨

೧೧ ಬಾಂಬೆಯಲ್ಲಿ ಹಿಂದೂಗಳ ಮತ್ತು ಪರಿಶಿಷ್ಟ ಜಾತಿಗಳವರ ನಡುವೆ ನಡೆದ ಹೊಡೆದಾಟ ೫೮೩

೧೨ ನೇರಕ್ರಮಗಳನ್ನು ತೆಗೆದುಕೊಳ್ಳಲು ಒಕ್ಕೂಟದ ಅಧಿಕಾರಿಗಳಿಂದ ನಿರ್ಧಾರ ೫೮೬

೧೩ ಬ್ರಿಟಿಷ್ ಸಂಪುಟದ ಯೋಜನೆಯ ಬಗ್ಗೆ ಪ್ರತಿಕ್ರಿಯೆಗಳು – ಚರ್ಚಿಲ್ ವಿರುದ್ಧ ಡಾ. ಅಂಬೇಡ್ಕರ್ ಅವರ ಪ್ರತಿಭಟನೆ ೫೯೩

೧೪ ನಾನು ಪರಿಶಿಷ್ಟ ಜಾತಿಗಳವರ ಹಕ್ಕಿಗಾಗಿ ಹೊಡೆದಾಡುತ್ತಿದ್ದೇನೆ ೫೯೪

೧೫ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾರತದ ಅಸ್ಪೃಶ್ಯರನ್ನು ಪ್ರತಿನಿಧಿಸುತ್ತದೆಯೇ? ೫೯೫

೧೬ ಇತರರಿಗಿಂತ ನಾನು ಹೆಚ್ಚಿನ ರಾಷ್ಟ್ರೀಯವಾದಿ ೬೦೬

೧೭ ಡಾ. ಅಂಬೇಡ್ಕರ್ ಅವರಿಗೆ ಅಟ್ಲಿಯವರು ಬರೆದ ಪತ್ರ ೬೧೭

೧೮ ಅಟ್ಲಿಯವರಿಗೆ ಡಾ. ಅಂಬೇಡ್ಕರ್ ಅವರ ಪ್ರತಿಭಟನಾ ಪತ್ರ ೬೧೯

೧೯ ನಮ್ಮನ್ನು ಗೆಲ್ಲಬಹುದು ಆದರೆ ನಾವು ಸೋಲನ್ನೊಪ್ಪಿಕೊಳ್ಳುವುದಿಲ್ಲ ೬೨೨

೨೦ ಲಾರ್ಡ್ ಪೆಥಿಕ್ ಲಾರೆನ್ಸ್ ಅವರು ಪ್ರಧಾನ ಮಂತ್ರಿ ಅಟ್ಲಿಯವರಿಗೆ ಬರೆದ ಪತ್ರ ೬೨೪

೨೧ ಕ್ಯಾಬಿನೆಟ್ ಮಿಷನ್ ಮತ್ತು ಅಸ್ಪೃಶ್ಯರು ೬೨೮

೨೨ ಡಾ. ಅಂಬೇಡ್ಕರ್ ಅವರ ಜ್ಞಾಪನಾಪತ್ರ ೬೪೦

೨೩ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಬೇಡಿಕೆ ೬೪೧

೨೪ ಚರ್ಚಿಲ್ ಮತ್ತು ಅಂಬೇಡ್ಕರ್ ಅವರ ನಡುವಿನ ಮಾತುಕತೆ ೬೪೨

೨೫ ಪ್ರತ್ಯೇಕ ಮತಕ್ಷೇತ್ರಗಳನ್ನು ಪುನಃ ಜಾರಿಗೆ ತನ್ನಿ ೬೪೩

೨೬ ಬ್ರಿಟಿಷರು ನಿಷ್ಪಕ್ಷಪಾತವಾಗಿ ವರ್ತಿಸುತ್ತಾರೆ: ಡಾ. ಅಂಬೇಡ್ಕರ್ ಅವರ ವಿಶ್ವಾಸ ೬೪೪

೨೭ ಅಲ್ಪಸಂಖ್ಯಾತರ ಆಶೆಗಳನ್ನು ತಿಳಿದುಕೊಳ್ಳಿ ೬೪೬

೨೮ ಅಂಬೇಡ್ಕರ್ ಅವರ ಇಂಗ್ಲೆಂಡ್ ರಾಜಕೀಯ ಯಾತ್ರೆಯನ್ನು ಕುರಿತು ಡಾನ್ ಪತ್ರಿಕೆ ೬೪೮

ಅನುಬಂಧ ೬೫೧

ವಿಷಯಸೂಚಿ ೬೮೫

# ಡಾ. ಬಾಬಾಸಾಹೇಬ್ ಅಂಬೇಡ್ಕರ್
# ಹಾಗೂ ಸಮಾನತಾವಾದದಲ್ಲಿ ಅವರು ಮಾಡಿದ ಕ್ರಾಂತಿ
# ಮಾನವ ಹಕ್ಕುಗಳಿಗಾಗಿ ಹೋರಾಟ
# (೧೯೨೧–೧೯೫೬)

# ಭಾಗ – I
# ಮಹದ್ ಸತ್ಯಾಗ್ರಹ

# ಮಹದ್ ಸತ್ಯಾಗ್ರಹ* ನೀರಿಗಾಗಿ ಅಲ್ಲ ಆದರೆ ಮಾನವ ಹಕ್ಕುಗಳ ಸ್ಥಾಪನೆಗಾಗಿ

ಆತ್ಮಗೌರವ ಎನ್ನುವ ಸೂರ್ಯ ಪ್ರಕಾಶಿಸತೊಡಗಿದ್ದ. ಅನ್ಯಾಯ, ದಬ್ಬಾಳಿಕೆಯ ಮೋಡ ಸರಿಯಲು ಪ್ರಾರಂಭವಾಗಿತ್ತು. ದಬ್ಬಾಳಿಕೆಗೆ ಒಳಗಾದ ವರ್ಗಗಳು ಇದೀಗ ಮೇಲೆ ನೋಡಲು ಪ್ರಾರಂಭಿಸಿದ್ದವು. ಈಗ ನಾವು ಕೂಡ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನದ ಪ್ರಮುಖ ಘಟಕ್ಕೆ ಬರುತ್ತೇವೆ. ಆ ಘಟನೆಯೇ ಮಹದ್‌ಗೆ ಕಾಲ್ನಡಿಗೆಯಲ್ಲಿ ತೆರಳಿದ್ದು. ಎಸ್.ಕೆ. ಭೋಲೆ ಅವರು ಮುಂಬಯಿಯ ವಿಧಾನ ಪರಿಷತ್ತಿನಲ್ಲಿ ಪ್ರಮುಖ ಪ್ರಸ್ತಾವನೆಯೊಂದನ್ನು ಸಲ್ಲಿಸಿದ್ದರು. ಇದೇ ಗೊತ್ತುವಳಿಯನ್ನು ೧೯೨೩ರಲ್ಲಿ ಮುಂಬಯಿ ಸರ್ಕಾರ ಅಂಗೀಕರಿಸಿತು ಹಾಗೂ ಇದು ಕೆಲ ಬದಲಾವಣೆಗಳೊಂದಿಗೆ ೧೯೨೬ರಲ್ಲಿ ಜಾರಿಗೆ ಬಂದಿತು. ಮಹದ್ ನಗರದ ನಗರ ಪಾಲಿಕೆಯು ಅಲ್ಲಿಯ ಕೆರೆಗೆ ಪ್ರವೇಶಿಸಲು ಅಸ್ಪೃಶ್ಯರಿಗೆ ಅನುಮತಿ ನೀಡಿತ್ತು. ಅದೇ ಚಾವ್ದಾರ್ ಕೆರೆ. ಆದರೆ ಈ ಪ್ರಸ್ತಾವನೆ ಗೊತ್ತುವಳಿ ಕೇವಲ ಕಾಗದದ ಮೇಲೆ ಅಂಗಿಕಾರ ಆಯಿತೇ ಹೊರತು, ಅದು ನಿಜವಾದ ಅರ್ಥದಲ್ಲಿ ಕಾರ್ಯರೂಪಕ್ಕೆ ಬರಲಿಲ್ಲ. ಏಕೆಂದರೆ ಅಸ್ಪೃಶ್ಯರು ಹಿಂದೂಗಳೆಂದರೆ ಅಷ್ಟೊಂದು ಭಯಪಡುತ್ತಿದ್ದರು.

ಕೊಲಾಬಾ ಜಿಲ್ಲೆಯಲ್ಲಿ ಇದ್ದ ಅಸ್ಪೃಶ್ಯರು, ಶೋಷಿತ ವರ್ಗದ ಜನರು ಒಂದು ನಿರ್ಧಾರಕ್ಕೆ ಬಂದರು. ಏನೆಂದರೆ, ಮಾರ್ಚ್ ೧೯ ಹಾಗೂ ೨೦, ೧೯೨೭ ರಂದು ಮಹದ್ ನಗರದಲ್ಲಿ ಶೋಷಿತ ವರ್ಗದ ಜನರ ಸಮಾವೇಶ ನಡೆಸುವುದೆಂದು ತೀರ್ಮಾನವಾಯಿತು. ಈ ರೀತಿಯ ಸಮಾವೇಶ ನಡೆಯಲಿದೆ ಎಂದು ಅಲ್ಲಿಯ ನಾಯಕರು ಒಂದು ತಿಂಗಳು ಮುಂಚಿತವಾಗಿಯೇ ಡಾ. ಅಂಬೇಡ್ಕರ್ ಅವರಿಗೆ ವಿಷಯವನ್ನು ತಿಳಿಸಿದ್ದರು. ಈ ಸಮಾರಂಭ ಜರುಗಲು ಅಗತ್ಯವಿದ್ದ ಎಲ್ಲಾ ಏರ್ಪಾಟುಗಳ ಉಸ್ತುವಾರಿಯನ್ನು ಸುರೇಂದ್ರನಾಥ ಟಿಪ್ನಿಸ್, ಸುಬೇದಾರ್ ಸಾವಡ್ಕರ್ ಹಾಗೂ ಅನಂತರಾವ್ ಚಿತ್ರೆ ಮಾಡಿದ್ದರು. ಎರಡು ತಿಂಗಳಿನಿಂದ ಮೂಲೆ ಮೂಲೆಯನ್ನು ತಿರುಗಿ, ಶೋಷಿತ ವರ್ಗದ ಜನರನ್ನು ಕಂಡು, ಈ ಸಮಾರಂಭದ ಮಹತ್ವವನ್ನು ತಿಳಿಯ ಹೇಳಿದ್ದರು. ಇದರ ಫಲಶ್ರುತಿ ಎಂಬಂತೆ ಹದಿನೈದು ವರ್ಷದ ಹುಡುಗರಿಂದ ಹಿಡಿದು ೭೦ ವರ್ಷದ ಮುದುಕರ ತನಕ ಎಲ್ಲರೂ ನೂರಾರು ಮೈಲಿಗಳನ್ನು ಕ್ರಮಿಸಿ ಮಹದ್‌ಅನ್ನು ತಲುಪಿದ್ದರು. ಅವರು ತಮ್ಮ ಭುಜದ ಮೇಲೆ ಆಹಾರ ಪದಾರ್ಥಗಳಿದ್ದ ಚೀಲಗಳನ್ನು ನೇತು ಹಾಕಿಕೊಂಡು ಈ ದೂರವನ್ನು ಕ್ರಮಿಸಿದ್ದರು. ಸುಮಾರು ೧೦ ಸಾವಿರ ಆಹ್ವಾನಿತರು, ಕಾರ್ಮಿಕರು, ನಾಯಕರು, ಮಹಾರಾಷ್ಟ್ರ ಹಾಗೂ ಗುಜರಾತಿನ ಎಲ್ಲಾ ಭಾಗಗಳಿಂದಲೂ ಇಲ್ಲಿಗೆ ಆಗಮಿಸಿದ್ದರು.

ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಇಲ್ಲಿ ಕೈಗೊಳ್ಳಲಾಗಿತ್ತು. ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿಕೊಡಲಾಗಿತ್ತು. ಈ ಸಮಾರಂಭ ಯಶಸ್ವಿಯಾಗಲು ಏನೇನು ಆವಶ್ಯಕತೆ ಬೇಕಿತ್ತು ಅವೆಲ್ಲವನ್ನು ನೀಡಲಾಗಿತ್ತು. ೪೦ ರೂಪಾಯಿಗಳಿಗೆ ಕುಡಿಯುವ ನೀರನ್ನು ಹಿಂದೂಗಳಿಂದ ಖರೀದಿಸಿ, ಸಮಾರಂಭದಲ್ಲಿ

---

* ಅನುಬಂಧ ೧, ೨, ಹಾಗೂ ೩ ಗಮನಿಸಿ

ಬಂದವರಿಗೆ ಒದಗಿಸಿಕೊಡಲಾಗಿತ್ತು. ಏಕೆಂದರೆ ಸಮಾರಂಭ ನಡೆಯಬೇಕಿದ್ದ ಸ್ಥಳದಲ್ಲಿ ಅಸ್ಪೃಶ್ಯರಿಗೆ ನೀರು ದೊರಕುತ್ತಲೇ ಇರಲಿಲ್ಲ.

ಅಧ್ಯಕ್ಷ ಭಾಷಣವನ್ನು ಪ್ರಾರಂಭಿಸಲು ಡಾ. ಅಂಬೇಡ್ಕರ್ ಎದ್ದು ನಿಂತರು. ಅರೆ ಬೆತ್ತಲೆಯ, ಸಂಕೋಚ ಸ್ವಭಾವದ, ದೈನ್ಯವೇ ಮೂರ್ತಿವೆತ್ತಂತೆ ನಿಂತಿದ್ದ ಸ್ತ್ರೀ ಪುರುಷರ ಎದುರು ಇವರ ಭಾಷಣ ಆರಂಭವಾಯಿತು. ಆತ ತನ್ನ ಮಾತನ್ನು ಸರಳವಾಗಿ, ಸ್ಪಷ್ಟವಾಗಿ ಹಾಗೂ ಬಲಯುತವಾದ ವಾಕ್ಯಗಳಲ್ಲಿ ಪ್ರಾರಂಭಿಸಿದರು. ಆತ ತನ್ನ ಭಾಷಣದಲ್ಲಿ ಮೊದಲು ಹೇಳಿದ್ದು ದಪೋಲಿ ಎಂಬ ಸ್ಥಳದ ಬಗ್ಗೆ. ಅಲ್ಲಿಯೇ ಇವರ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಗಿತ್ತು. ನಾವು ಎಲ್ಲಿ ನಮ್ಮ ಬಾಲ್ಯ ಕಳೆದಿರುತ್ತೇವೆಯೋ ಆ ಸ್ಥಳಕ್ಕೆ ನಾವು ಆಕರ್ಷಿತರಾಗುವುದು ಸುಲಭ ಎಂದವರು ಹೇಳಿದರು. ಅದರ ಸುತ್ತಮುತ್ತಲೂ ಇರುವಂತಹ ಪ್ರಕೃತಿ ಸೌಂದರ್ಯ ನಮಗೆ ಮತ್ತಷ್ಟು ಆ ಸ್ಥಳದ ಬಗ್ಗೆ ಪ್ರೀತಿ ಮೂಡಿಸುತ್ತದೆ ಎಂದಿದ್ದರು. ಅವರು ತಮ್ಮ ಬಾಲ್ಯದ ದಿನಗಳನ್ನು ನೆನೆಸಿಕೊಳ್ಳುತ್ತಾ ಈ ರೀತಿ ಹೇಳಿದರು. "ಒಂದು ಕಾಲದಲ್ಲಿ ನಮ್ಮನ್ನು ಅಸ್ಪೃಶ್ಯರು ಎಂದು ಜನರು ಹೀಯಾಳಿಸುತ್ತಿದ್ದರು ಆದರೆ ಇದೀಗ ಯಾವುದೇ ಮುಂದುವರಿದ ವರ್ಗಕ್ಕಿಂತ ನಾವು ವಿದ್ಯಾಭ್ಯಾಸದಲ್ಲಿ ಮುಂದಿದ್ದೇವೆ. ಮುಂದಿನ ದಿನಗಳಲ್ಲಿ ನಮ್ಮ ಈ ದೇಶವು ಹಿಂದುಳಿದ ನಮ್ಮ ಆಡಳಿತದಲ್ಲಿ ಮುನ್ನಡೆಯಲಿದೆ ಎಂಬುದಂತೂ ಸತ್ಯ."

ಅನಂತರ ಅತ್ಯಂತ ವಿನಮ್ರತೆ ಹಾಗೂ ಕಾಳಜಿಯಿಂದ ಆತ ತನ್ನ ಜನರಿಗೆ ವಿಶೇಷವಾಗಿ ಕೆಲ ಸಂದೇಶಗಳನ್ನು ನೀಡಿದರು. ಇದು ಮಹಾರಾಷ್ಟ್ರದ ಪ್ರತಿಯೊಂದು ಬೆಟ್ಟಗುಡ್ಡಗಳ ನಡುವೆ, ಹಳ್ಳಿ ಹಳ್ಳಿಗಳ ನಡುವೆ ನಿರಂತರವಾಗಿ ಪ್ರತಿಧ್ವನಿಸಿತು. ಮಿಲಿಟರಿ ಸೇವೆಯಿಂದ ತಮ್ಮ ಜನರನ್ನು ತೆಗೆದದ್ದು ಕೂಡ ತಾವು ಹಿಂದೆ ಉಳಿಯಲು ಪ್ರಮುಖ ಕಾರಣ ಎಂದು ಇವರು ವ್ಯಾಖ್ಯಾನಿಸಿದರು. ಸೇನೆಯ ಆಡಳಿತವು ಜಾರಿಯಲ್ಲಿ ಇದ್ದಂತಹ ಸಮಯದಲ್ಲಿ ನಮಗೆಲ್ಲಾ ಸಮಾನವಾದ ಅವಕಾಶ ದೊರೆತಿತ್ತು. ನಮ್ಮ ಬುದ್ಧಿವಂತಿಕೆ ಹಾಗೂ ಸಾಮರ್ಥ್ಯಗಳ ಪ್ರದರ್ಶನಕ್ಕೆ ಅಲ್ಲಿನ ಅಧಿಕಾರಿಗಳು ನಮಗೆ ವಿಪುಲವಾದ ಅವಕಾಶ ನೀಡಿದ್ದರು. ಅಷ್ಟು ಮಾತ್ರವಲ್ಲ ಅಸ್ಪೃಶ್ಯರು, ಹಿಂದುಳಿದವರು ಎಂದು ಕೀಳಾಗಿ ಕಾಣಲ್ಪಟ್ಟಿದ್ದ ನಮಗೆ ದೊಡ್ಡ ದೊಡ್ಡ ಹುದ್ದೆಗಳನ್ನು ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ನೀಡಿದ್ದರು. ಆ ಸಮಯದಲ್ಲಿ ಅಸ್ಪೃಶ್ಯರು ಮಿಲಿಟರಿ ಶಾಲೆಯ ಮುಖ್ಯೋಪಾಧ್ಯಾಯರಾಗಿ ಇರುತ್ತಿದ್ದರು. ಅಲ್ಲದೇ ಎಲ್ಲರೂ ಸೇನೆಯ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುವುದು ಕಡ್ಡಾಯವಾಗಿತ್ತು. ಇದು ಒಂದು ಅತ್ಯಂತ ಪರಿಣಾಮಕಾರಿಯಾದ ಕ್ರಮವಾಗಿತ್ತು. "ಬ್ರಿಟಿಷರು ನಮಗೆ ಮಾಡಿರುವಂತಹುದು ಮೋಸ ಹಾಗು ನಂಬಿಕೆ ದ್ರೋಹವಲ್ಲದೇ ಮತ್ತೇನೂ ಅಲ್ಲ. ನೆಪೋಲಿಯನ್ನನ ಯುದ್ಧಗಳ ಸಮಯದಲ್ಲಿ ಅವರ ನೆಲವೇ ಫ್ರೆಂಚರ ಕಪಿಮುಷ್ಠಿಯಲ್ಲಿ ಇತ್ತು. ಅಂತಹ ಸಮಯದಲ್ಲಿ ಭಾರತದಲ್ಲಿ ಅವರಿಗೆ ಆಡಳಿತ ಸ್ಥಾಪಿಸಲು ಸಹಾಯ ಮಾಡಿದವರೇ ನಮ್ಮಂತಹ ಅಸ್ಪೃಶ್ಯ ಸೈನಿಕರು ಎಂದು ಅವರು ತಮ್ಮ ಭಾಷಣದಲ್ಲಿ ಹೇಳಿದ್ದರು.

ಅನಂತರ ಅವರು ಉತ್ತೇಜಿಸುವ ದನಿಯಲ್ಲಿ ಹೇಳಿದ್ದರು. "ನಾವು ನಮ್ಮನ್ನು ಮೂರು ಮಟ್ಟಗಳ ಶುದ್ಧೀಕರಣಕ್ಕೆ ಒಳಪಡಿಸಿಕೊಳ್ಳಬೇಕು. ಅದುವರೆಗೆ ನಾವು ಸಾಧಿಸುವ ಯಾವುದೇ ಅಭಿವೃದ್ಧಿಯೂ ದೀರ್ಘಕಾಲ ನಿಲ್ಲುವಂತಹುದಲ್ಲ. ನಾವು ನಮ್ಮ ಮಾತುಕಥೆಗಳನ್ನು ಶುದ್ಧೀಕರಿಸಿಕೊಳ್ಳಬೇಕು. ನಮ್ಮ ಉಚ್ಚಾರಣೆಯನ್ನು ಸ್ಪಷ್ಟಪಡಿಸಿಕೊಳ್ಳಬೇಕು ಹಾಗೂ ನಾವು ನಮ್ಮ ಚಿಂತನೆಯ ಧಾಟಿಯನ್ನೇ ಬದಲಿಸಿಕೊಳ್ಳಬೇಕು. ಆದ್ದರಿಂದ ಈಗಲೇ ನಾವು ನಿಮ್ಮಿಂದ ಒಂದು ಆಶ್ವಾಸನೆ ಪಡೆಯಬಯಸುತ್ತೇನೆ. ಅದೇನೆಂದರೆ ಬೇರೆಯವರು ಬಳಸಿ ಮಿಕ್ಕಂತಹ ಹಳಸಿದ ಪದಾರ್ಥಗಳನ್ನು ನಾವು ಇನ್ನು ಮುಂದೆ ತಿನ್ನಬಾರದು. ನಾವು ಕೀಳು ವರ್ಗದವರು

ಎಂಬ ಭಾವನೆಯನ್ನು ನಮ್ಮ ಮನದಿಂದ ತೊಡೆದು ಹಾಕಿ ಬಿಡಬೇಕು. ಹೊರಗೆ ಎಸೆಯಲ್ಪಟ್ಟ ಪದಾರ್ಥಗಳನ್ನು ಸೇವಿಸುವುದಿಲ್ಲ ಎಂಬ ಶಪಥ ಮಾಡಿ. ನಾವು ಉನ್ನತ ಮಟ್ಟಕ್ಕೆ ಏರಬೇಕೆಂದರೆ ನಮಗೆ ನಾವೇ ಸಹಾಯ ಮಾಡಿಕೊಳ್ಳಬೇಕು ನಮ್ಮ ಗೌರವ ಉಳಿಸಿಕೊಳ್ಳಬೇಕು ಹಾಗೂ ನಮ್ಮ ಜ್ಞಾನ ವೃದ್ಧಿಸಿಕೊಳ್ಳಬೇಕು. ಅಲ್ಲದೇ ಸರ್ಕಾರದ ವಿರುದ್ಧ ಉಗ್ರವಾದ ಹೋರಾಟ ನಡೆಸಬೇಕು ಎಂದು ಕೂಡ ಅವರು ತನ್ನ ಜನರಿಗೆ ಕರೆ ನೀಡಿದರು. ಏಕೆಂದರೆ ಹಿಂದುಳಿದ ವರ್ಗದ ಜನ ಸೇನೆಗೆ ಸೇರ್ಪಡೆ ಆಗುವುದನ್ನು ಈ ಸರ್ಕಾರ ನಿಷೇಧಿಸಿತ್ತು. ಅಲ್ಲದೇ ನೌಕಾದಳ ಹಾಗೂ ಆರಕ್ಷಕ ದಳಕ್ಕೂ ಇವರಿಗೆ ಪ್ರವೇಶ ಇರಲಿಲ್ಲ. ಇದಲ್ಲದೇ ಆತ ತನ್ನ ಜನರಿಗೆ ಶಿಕ್ಷಣ ಹಾಗೂ ಸರ್ಕಾರಿ ನೌಕರಿಯ ಹಿರಿಮೆಯನ್ನು ಗೊತ್ತುಮಾಡಿಕೊಟ್ಟರು. ಇದಲ್ಲದೇ ಮಹಾರ್ ಜಾತಿಯ ಜನ ಕೇಳಿದ ಪ್ರಶ್ನೆಗೆ ಆತ ನೀಡಿದ ಉತ್ತರ ಹೀಗಿತ್ತು. ಆಹಾರದ ಕೆಲ ತುಣುಕುಗಳಿಗಾಗಿ ಮಾನವ ಹಕ್ಕುಗಳನ್ನೇ ಮಾರಿಕೊಳ್ಳುವುದು ಅತ್ಯಂತ ಹೀನಾಯ ವಿಷಯವಾಗಿದೆ. ಈ ಕೆಟ್ಟ ಸಂಪ್ರದಾಯದಿಂದ ಹೊರಬನ್ನಿ. ನಿಮ್ಮ ಮಾಲೀಕರಿಂದ ದೂರವಾಗಿ ಕಾಡಿನ ಸ್ಥಳಗಳಲ್ಲಿ ಹೋಗಿ ಆ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡು ಗೌರವದಿಂದ ಬಾಳ್ವೆ ನಡೆಸಿ ಎಂದರು. ನಿರ್ಣಾಯಕವಾಗಿ ಅತ್ಯಂತ ನೋವಿನ ದನಿಯಲ್ಲಿ ಆತ ಹೀಗೆ ನುಡಿದರು. "ತಮಗಿಂತ ಉನ್ನತ ಮಟ್ಟದಲ್ಲಿ ತಮ್ಮ ಮಕ್ಕಳು ಇರಲಿ ಎಂಬ ಆಸೆ ಪೋಷಕರಿಗೆ ಇರಬೇಕು. ಅದು ಇರದೇ ಹೋದರೆ, ಮನುಷ್ಯರು ಮತ್ತು ಹಾಗೂ ಮೃಗಗಳ ನಡುವೆ ವ್ಯತ್ಯಾಸವೇ ಇರುವುದಿಲ್ಲ."

ಇದಲ್ಲದೇ ಕೆಲ ಮುಖ್ಯ ವಿಷಯಗಳ ಬಗ್ಗೆಯೂ ಈ ಸಭೆಯಲ್ಲಿ ಕೆಲ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಮಾನವ ಹಕ್ಕುಗಳನ್ನು ಮರಳಿ ಪಡೆಯಲು ಹಿಂದುಳಿದ ವರ್ಗದ ಜನರಿಗೆ ಸಹಾಯ ಮಾಡುವಂತೆ ಹಿಂದೂಗಳಿಗೆ ಕರೆ ನೀಡಲಾಯಿತು. ತಮ್ಮ ಕೆಲಸ ಕಾರ್ಯಗಳಿಗೆ ಅವರನ್ನು ಸಹಾಯಕರನ್ನಾಗಿ ನೇಮಕ ಮಾಡಿಕೊಳ್ಳುವಂತೆ ಹಾಗೂ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಆಹಾರ ನೀಡುವಂತೆ ಕೇಳಿಕೊಳ್ಳಲಾಯಿತು. ಅಲ್ಲದೇ ತಮ್ಮ ಮನೆಗಳಲ್ಲಿ ಇದ್ದ ಪ್ರಾಣಿಗಳು ಮೃತಪಟ್ಟರೆ, ಅವುಗಳನ್ನು ಅವರೇ ಹೂಳುವಂತೆ ಅವರಿಗೆ ಹೇಳಲಾಯಿತು. ಅಲ್ಲದೇ ಸರ್ಕಾರದ ಮುಂದೆಯೂ ಈ ಸಭೆ ಕೆಲ ಬೇಡಿಕೆಗಳನ್ನು ಇರಿಸಿತು. ವಿಶೇಷವಾದ ಒಂದು ಕಾನೂನನ್ನು ತಂದು ಅಸ್ಪೃಶ್ಯರು ಬೇರೆಯವರು ತ್ಯಜಿಸಿದ ಹಳಸಿದ ಆಹಾರ ಪದಾರ್ಥಗಳನ್ನು ಸೇವಿಸುವುದನ್ನು ನಿಷೇಧಿಸಬೇಕು ಹಾಗೂ ಪಾನನಿಷೇಧದ ಕಾನೂನು ಜಾರಿ ಆಗುವಂತೆ ಮಾಡಬೇಕು, ಅವರಿಗೆ ಕಡ್ಡಾಯ ಹಾಗು ಉಚಿತವಾದ ಪ್ರಾಥಮಿಕ ಶಿಕ್ಷಣ ನೀಡಬೇಕು, ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡಬೇಕು ಮತ್ತು ಇವೆಲ್ಲವೂ ಜಾರಿ ಮಾಡದೇ ಇರುವಂತಹ ಸ್ಥಳೀಯ ಸಂಸ್ಥೆಗಳ ಮೇಲೆ ಭಾರತೀಯ ದಂಡ ಸಂಹಿತೆ ೧೪೪ನೆಯ ವಿಧಿಯ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಈ ಸಭೆಯು ಆಗ್ರಹಪಡಿಸಿತು.

ಈ ಸಭೆಯು ಮೊದಲನೆಯ ದಿನ, ಸ್ಥಳೀಯ ಹಾಗೂ ಹೊರಗಿನಿಂದ ಬಂದಂತಹ ಕೆಲ ಹಿಂದೂ ವಕ್ತಾರರು ಇವರ ಪರವಾಗಿ ಭಾಷಣಗಳನ್ನು ಮಾಡಿ, ಇವರಿಗೆ ನ್ಯಾಯಯುತವಾದ ಹಕ್ಕುಗಳು ದೊರೆಯಲೇ ಬೇಕು, ಇದಕ್ಕಾಗಿ ಅಗತ್ಯ ಇರುವ ಎಲ್ಲಾ ಸಹಾಯವನ್ನೂ ಮಾಡುವುದಾಗಿ ಘೋಷಿಸಿದರು. ಇದಲ್ಲದೇ ವಿಷಯಗಳ ಸಮಿತಿಯೂ ಅಂದು ರಾತ್ರಿ ಸಭೆ ಸೇರಿ ಯಾವ ಯಾವ ಮೇಲ್ವರ್ಗದ ಜನರು ಸಭೆಯಲ್ಲಿ ಪಾಲ್ಗೊಂಡಿದ್ದರೋ ಅವರ ಅನುಮತಿ ಪಡೆದುಕೊಂಡು, ಒಂದು ಗುಂಪು ಚಾವ್ದಾರ್ ಕೆರೆಗೆ ಹೋಗಿ, ಅಲ್ಲಿಂದ ನೀರು ತೆಗೆದುಕೊಂಡು, ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳಲು ಪರಿಶಿಷ್ಟರಿಗೆ ನೆರವು ನೀಡಬೇಕು ಎಂದು ನಿರ್ಧರಿಸಿತು. ಮಾರನೆಯ ಬೆಳಿಗ್ಗೆ ಸಭೆ ಸೇರಿದ ಈ ಸಮಿತಿಯು ಪುನಃ ಹಿಂದೂ ಪ್ರತಿನಿಧಿಗಳಿಗೆ

ಕರೆ ಕಳುಹಿಸಿತು. ಇವರು ತೆಗೆದುಕೊಂಡಿರುವ ನಿರ್ಣಯಗಳಿಗೆ ಬೆಂಬಲ ಸೂಚಿಸುವಂತೆ ಕೇಳಿಕೊಂಡಿತು. ಅಲ್ಲದೇ ಇವರು ಮೇಲ್ಮಟ್ಟಕ್ಕೆ ಏರಲು ಸಹಾಯಮಾಡಲು ಹಿಂದೂಗಳಿಗೆ ಯಾವ ರೀತಿಯ ಜವಾಬ್ದಾರಿ ಇದೆ ಎಂಬುದನ್ನು ತಿಳಿಸಿಕೊಡಲು ಪ್ರಯತ್ನಿಸಿತು. ಅಂತರ್ ಜಾತೀಯ ವಿವಾಹದ ವಿಷಯವೊಂದನ್ನು ಹೊರತು ಪಡಿಸಿ, ಮಿಕ್ಕೆಲ್ಲಾ ವಿಷಯಗಳಿಗೂ ಎರಡೂ ಪಕ್ಷಗಳವರು ಸಹಿ ಹಾಕಿದರು.

ಈ ನಿರ್ಣಯಕ್ಕೆ ಪೂರಕವಾದಂತಹ ನಿರ್ದೇಶನವೊಂದನ್ನು ಮಹದ್ ನಗರ ಪಾಲಿಕೆಯು ೧೯೨೪ರಲ್ಲಿ ಕೆರೆಯ ನೀರನ್ನು ಇನ್ನು ಮುಂದೆ ಹಿಂದುಳಿದ ವರ್ಗದ ಜನರು ಕೂಡ ಬಳಸಬಹುದು ಎಂದು ನಿರ್ಣಯವನ್ನು ಮಾಡಿತ್ತು. ಇದೀಗ ಅದೇ ಕೆರೆಯಿಂದ ನೀರನ್ನು ತೆಗೆದುಕೊಂಡು, ಅಸ್ಪೃಶ್ಯರು ತಮ್ಮ ಹಕ್ಕುಗಳನ್ನು ಸ್ಥಾಪಿಸಲು ನಿರ್ಧರಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಶಾಂತಿಯಿಂದ ಮೆರವಣಿಗೆಯಲ್ಲಿ ಹೊರಟರು. ಅತ್ಯಂತ ಪರಿಣಾಮಕಾರಿಯಾದ ಘಟನೆಯೊಂದು ಜರುಗುವುದರಲ್ಲಿತ್ತು. ಗುಲಾಮಗರಿಗೆ ವಿರುದ್ಧ, ಜಾತಿಗೆ ವಿರುದ್ಧ, ಹಾಗೂ ಪುರೋಹಿತಶಾಹಿಗೆ ವಿರುದ್ಧವಾದ ಘಟನೆಯೊಂದು ಜರುಗುವುದರಲ್ಲಿತ್ತು. ಈ ಘಟನೆಗೆ ಕಾರಣಕರ್ತರಾದ ಡಾ. ಅಂಬೇಡ್ಕರ್ ಅವರು ಮೆರವಣಿಗೆಯ ಮುಂಭಾಗದಲ್ಲಿ ಸಾಗುತ್ತಿದ್ದರು. ಈ ಕೆರೆಯಿಂದ "ಸ್ಪೃಶ್ಯ" ಹಿಂದೂಗಳು ಎಂದು ಕರೆದುಕೊಳ್ಳುತ್ತಿದ್ದವರ ಜೊತೆಯಲ್ಲಿ ಮುಸ್ಲಿಮರು ಹಾಗೂ ಕ್ರೈಸ್ತರು ಕೂಡ ನೀರನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಇಲ್ಲಿ "ಅಸ್ಪೃಶ್ಯ" ಹಿಂದೂಗಳಿಗೆ ಅವರ ಗಂಟಲು ಬಾಯಾರಿಕೆಯಿಂದ ಒಣಗಿ ಪ್ರಾಣ ಹೋಗುತ್ತಿದ್ದರೂ ಒಂದು ತೊಟ್ಟು ನೀರು ಸಿಗುತ್ತಿರಲಿಲ್ಲ. ಅವರುಗಳು ಕೂಡ ಹಿಂದೂಗಳಂತೆಯೇ ಹಿಂದೂ ದೇವರುಗಳನ್ನು ಆರಾಧಿಸುತ್ತಿದ್ದರೂ ಹಲವಾರು ಯುಗಗಳಿಂದ ಹಿಂದೂ ಧರ್ಮಕ್ಕೆ ಕಟ್ಟುಬಿದ್ದಿದ್ದರೂ ಈ ಕೆರೆಯಿಂದ ಅವರಿಗೆ ಒಂದೇ ಒಂದು ಹನಿ ನೀರು ಅಲ್ಲಿಂದ ಸಿಗುತ್ತಿರಲಿಲ್ಲ.

ಹೀಗಾಗಿ, ಇತಿಹಾಸದಲ್ಲಿ ಮೊದಲ ಬಾರಿಗೆ ತಮ್ಮ ಮಹಾನ್ ನಾಯಕನ ಮುಂದಾಳ್ವತದಲ್ಲಿ ತಮ್ಮದೇ ಆದ ಹಕ್ಕುಗಳನ್ನು ಸ್ಥಾಪಿಸಲು ಈ ಅಸ್ಪೃಶ್ಯರು ಹೊರಟಿದ್ದರು. ಅವರು ಅತ್ಯಂತ ವ್ಯವಸ್ಥಿತವಾಗಿ ಉತ್ತೇಜಿತರಾಗಿ ಹಾಗೂ ಶಕ್ತಿಯುತವಾಗಿ ಹೊರಟಿದ್ದರು. ಈ ಮೆರವಣಿಗೆಯು ಮಹದ್‌ನ ಮುಖ್ಯ ರಸ್ತೆಗಳಲ್ಲಿ ಸಾಗಿ, ಚಾವ್ದಾರ್ ಕೆರೆಯ ಬಳಿ ಕೊನೆಗೊಂಡಿತ್ತು. ಡಾ. ಅಂಬೇಡ್ಕರ್ ತಾವೇ ಖುದ್ದಾಗಿ ಕೆರೆಯ ಏರಿಯ ಮೇಲೆ ನಿಂತಿದ್ದರು. ಅವರು ಜ್ಞಾನಿಗಳಲ್ಲಿ ಜ್ಞಾನಿಯಾದ, ಅತ್ಯಂತ ವಿದ್ಯಾವಂತನಾದ, ಒಳ್ಳೆಯ ದೂರದೃಷ್ಟಿ ಹೊಂದಿದ್ದ ಒಬ್ಬ ಹಿಂದೂ ಆಗಿದ್ದರು. ಆದರೆ ಈತನಿಗೆ ಕೆರೆಯಿಂದ ನೀರು ಕುಡಿಯುವ ಹಕ್ಕಾಗಲೀ, ಇಲ್ಲವೇ ಸಾರ್ವಜನಿಕ ಗ್ರಂಥಾಲಯದಲ್ಲಿ ಓದುವ ಹಕ್ಕಾಗಲೀ ಇರಲಿಲ್ಲ. ಈತ ಹುಟ್ಟಿದ್ದು ಇದೇ ಹಿಂದೂಸ್ಥಾನದಲ್ಲಿ, ನಂಬಿಕೆ ಇದ್ದದ್ದು ಇದೇ ದೇಶದ ಮಣ್ಣಿನಲ್ಲಿ. ಆದರೆ ಕ್ರೂರ ಸವರ್ಣೀಯರ ಅಹಂಕಾರಕ್ಕೆ ಇವರು ಬಲಿಯಾಗಿದ್ದರು. ತಮ್ಮ ಧರ್ಮವು ಪ್ರಾಣಿಗಳನ್ನೂ ಸಹನೆ ಗೌರವಗಳಿಂದ ಕಾಣುತ್ತದೆ ಎಂದು ಹೆಮ್ಮೆಪಡುತ್ತಾ, ತಮ್ಮ ಸಹಧರ್ಮಿಗಳನ್ನು ನಾಯಿ ಬೆಕ್ಕುಗಳಗಿಂತ ಕೀಳಾಗಿಕಾಣುತ್ತಿದ್ದ ಕ್ರೂರ ಸವರ್ಣೀಯರ ಅಹಂಕಾರದ ವಿರುದ್ಧ ಪ್ರತಿಭಟಿಸಲು ಹೊರಟಿದ್ದರು.

ಡಾ. ಅಂಬೇಡ್ಕರ್ ಕೆರೆಯಿಂದ ನೀರನ್ನು ತೆಗೆದುಕೊಂಡು ಕುಡಿದರು. ಇವರ ಹಿಂದೆ ಬಂದಿದ್ದ ಸಾವಿರಾರು ಜನರ ಸೇನೆಯೂ ಅದೇ ರೀತಿ ಮಾಡಿತು. ಆನಂತರ ಅವರು ಬಂದ ರೀತಿಯಲ್ಲಿಯೇ ಶಾಂತವಾಗಿ ತಾವು ಹಾಕಿಕೊಂಡಿದ್ದ ಚಪ್ಪರಕ್ಕೆ ಹಿಂದಿರುಗಿದರು.

ಇದಾದ ಕೇವಲ ಎರಡು ಘಂಟೆಗಳ ಅಂತರದಲ್ಲಿ ಕೆಲ ನೀಚ ಮನಸ್ಸಿನ ಹಿಂದೂಗಳು, ಈ ಅಸ್ಪೃಶ್ಯರು ವೀರೇಶ್ವರ ದೇವಸ್ಥಾನವನ್ನು ಪ್ರವೇಶಿಸುವ ಹುನ್ನಾರ ನಡೆಸಿದ್ದಾರೆ ಎಂಬ ವದಂತಿಯನ್ನು

ಹಬ್ಬಿಸಿದರು. ಇದೇ ಸಾಕು ಎಂಬಂತೆ ಬೊಂಬುಗಳನ್ನು ಹಿಡಿದುಕೊಂಡ ಕೆಲ ಹಿಂದೂ ಜನರು ಪ್ರತಿಯೊಂದು ರಸ್ತೆಯ ಮೂಲೆಯಲ್ಲಿಯೂ ಸೇರತೊಡಗಿದರು. ಮಹದ್‌ನಗರದ ಸಂಪ್ರದಾಯವಾದಿ ಹಿಂದೂಗಳೆಲ್ಲರೂ ಬೊಂಬು, ದೊಣ್ಣೆಗಳನ್ನು ಹಿಡಿದು, ಇಡೀ ನಗರವೇ ರೌಡಿಗಳ ನಗರ ಎಂದು ಭಾಸವಾಗುವಂತೆ ಮಾಡಿದರು. ಅವರು ತಮ್ಮ ಧರ್ಮವೇ ಅಪಾಯದಲ್ಲಿ ಇದೆ ಎಂದು ನುಡಿಯತೊಡಗಿದರು. ಆಶ್ಚರ್ಯ ಎಂಬಂತೆ ತಮ್ಮ ದೇವರು ಕೂಡ ಅಪಾಯದಲ್ಲಿದೆ ಎಂದು ಪ್ರತಿಪಾದಿಸಿದ ಇವರು ತಮ್ಮ ದೇವರನ್ನು ಅಸ್ಪೃಶ್ಯರು ಮುಟ್ಟಿ, ಕಲುಷಿತಗೊಳಿಸಲಿದ್ದಾರೆ ಎಂದು ಕೆಂಡಕಾರತೊಡಗಿದರು. ಅವರ ಹೃದಯ ವೇಗವಾಗಿ ಬಡಿದುಕೊಳ್ಳಲು ಆರಂಭಿಸಿತು. ಅವರ ಕೈಗಳು ನಡುಗಹತ್ತಿದವು. ಅವರ ಮುಖದಲ್ಲಿ ತಾವು ಅಪಮಾನಿತರಾದ ಭಾವನೆ ಎದ್ದು ಕಾಣುತ್ತಿತ್ತು.

ಈ ವದಂತಿಯಿಂದ ಕೆರಳಿದ ಹಾಗೂ ವೀರೇಶ್ವರ ದೇವಸ್ಥಾನ ಕಲುಷಿತವಾಗುತ್ತದೆ ಎಂದು ಭ್ರಮಿಸಿದ ಹಿಂದೂಗಳು, ಹಿಂದುಳಿದ ವರ್ಗದ ಜನರು ನಡೆಸುತ್ತಿದ್ದ ಸಮಾವೇಶದ ಸ್ಥಳದತ್ತ ಮುನ್ನುಗ್ಗಿದರು. ಆ ಸಮಯದಲ್ಲಿ ಈ ಸಮಾವೇಶಕ್ಕೆಂದು ಆಗಮಿಸಿದ್ದ ಪ್ರತಿನಿಧಿಗಳು ಸಣ್ಣ ಸಣ್ಣ ಗುಂಪುಗಳಾಗಿ ನಗರದ ವೀಕ್ಷಣೆಗೆಂದು ತೆರಳಿದ್ದರು. ಕೆಲವರು ಹಿಂದಿರುಗಲು ತಮ್ಮ ಸಾಮಾನು ಸರಂಜಾಮುಗಳನ್ನು ತಯಾರು ಮಾಡಿಕೊಳ್ಳುತ್ತಿದ್ದರೆ, ಇನ್ನುಳಿದ ಕೆಲವರು ತಮ್ಮ ಹಳ್ಳಿಗೆ ತೆರಳುವ ಮೊದಲು ಆಹಾರವನ್ನು ಸೇವಿಸಲು ತೊಡಗಿದ್ದರು. ಈ ಸಮಾವೇಶಕ್ಕೆಂದು ನೆರೆದಿದ್ದ ಬಹುಪಾಲು ಜನರು ಈಗಾಗಲೇ ನಗರದಿಂದ ಹೊರಟು ಹೋಗಿದ್ದರು. ಇಲ್ಲಿ ನುಗ್ಗಿದ ರೌಡಿಗಳು, ಈ ಸ್ಥಳದಲ್ಲಿ ಇದ್ದ ಜನರ ಮೇಲೆ ಏಕಾಏಕಿ ಎರಗಿದರು. ಅವರ ಆಹಾರ ಪದಾರ್ಥಗಳನ್ನು ಮಣ್ಣಿನಲ್ಲಿ ಚೆಲ್ಲಾಡಿದರು. ಸಾಮಾನುಗಳನ್ನು ಎಲ್ಲೆಂದರೆ ಅಲ್ಲಿ ಬಿಸಾಡಿದರು ಹಾಗೂ ಕೆಲವರನ್ನು ಚೆನ್ನಾಗಿ ಥಳಿಸಿದರು. ಏನಾಗುತ್ತಿದೆ ಎಂದು ತಿಳಿಯುವ ಮನ್ನವೇ ಇಷ್ಟೆಲ್ಲಾ ಜರುಗಿ ಹೋಗಿತ್ತು. ಈ ಸ್ಥಳದಲ್ಲಿ ಇದೀಗ ಸಂಪೂರ್ಣ ಅಯೋಮಯ ಸ್ಥಿತಿ ಉಂಟಾಯಿತು. ಇದುವರೆಗೂ ಸಂಪ್ರದಾಯವಾದಿ ಹಿಂದೂಗಳು ತಮ್ಮ ಆತ್ಮಸಾಕ್ಷಿ ಕಳೆದುಕೊಂಡಿದ್ದರು. ಆದರೆ ಇದೀಗ ಅವರು ತಮ್ಮ ಪರಿಜ್ಞಾನವನ್ನೇ ಕಳೆದುಕೊಂಡುಬಿಟ್ಟರು!!

ನಗರದ ರಸ್ತೆಗಳಲ್ಲಿ ಓಡಾಡುತ್ತಿದ್ದ ಅಸ್ಪೃಶ್ಯರ ಮಕ್ಕಳು, ಸ್ತ್ರೀಯರು ಹಾಗೂ ಪುರುಷರು ಈ ಘಟನೆಯಿಂದ ಹೆದರಿದರು. ಅವರಲ್ಲಿ ಕೂಡ ಕೈಗೆ ಸಿಕ್ಕ ಜನರನ್ನು ಬಡಿಯಲಾಯಿತು. ಅವರು ಈ ರೌಡಿಗಳಿಂದ ತಪ್ಪಿಸಿಕೊಳ್ಳಲು ಮುಸಲ್ಮಾನರ ಮನೆಗಳನ್ನು ಹೊಕ್ಕರು ಈ ನಗರಪಾಲಿಕೆಯ ಮುಖ್ಯಸ್ಥರು ಹಾಗೂ ಆರಕ್ಷಕರು ಈ ರೌಡಿಗಳ ಅಟ್ಟಹಾಸ ನಿಯಂತ್ರಿಸುವಲ್ಲಿ ವಿಫಲರಾದರು. ಅವರು ಸಂಜೆ ನಾಲ್ಕು ಗಂಟೆಯ ವೇಳೆಗೆ ಸರ್ಕಾರಿ ಅತಿಥಿ ಗೃಹದಲ್ಲಿ ತಂಗಿದ್ದ ಡಾ. ಅಂಬೇಡ್ಕರ್ ಅವರನ್ನು ಭೇಟಿಯಾದರು. ಈ ಸಮಾವೇಶಕ್ಕೆಂದು ಆಗಮಿಸಿದ್ದ ಡಾ. ಅಂಬೇಡ್ಕರ್ ಹಾಗೂ ಅವರು ಸಹಚರರು ಈ ಅತಿಥಿ ಗೃಹದಲ್ಲಿ ವಾಸ್ತವ್ಯ ಹೂಡಿದ್ದರು. "ನೀವು ಇತರರನ್ನು ನಿಯಂತ್ರಣಕ್ಕೆ ತನ್ನಿ. ನಾನು ನನ್ನ ಜನರನ್ನು ನಿಯಂತ್ರಿಸುತ್ತೇನೆ" ಎಂದು ಡಾ. ಅಂಬೇಡ್ಕರ್ ಅಧಿಕಾರಿಗಳಿಗೆ ಹೇಳಿದರು. ಅವರು ತಮ್ಮ ಇಬ್ಬರು ಮೂವರು ಸಹಚರರೊಂದಿಗೆ ಘಟನೆ ನಡೆಯುತ್ತಿದ್ದ ಸ್ಥಳಕ್ಕೆ ನಡೆದರು. ದಾರಿಯಲ್ಲಿ ಸಾಗುವಾಗ ರೌಡಿಗಳ ಗುಂಪೊಂದು ಇವರನ್ನು ಅಡ್ಡ ಹಾಕಲು ಪ್ರಯತ್ನಪಟ್ಟಿತು. ಆದರೆ ಇವರು ಅತ್ಯಂತ ಶಾಂತವಾಗಿ ದೇವಸ್ಥಾನದ ಅತಿಕ್ರಮ ಪ್ರವೇಶ ಮಾಡುವ ಯಾವುದೇ ಇಚ್ಛೇ ತಮಗೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಅವರು ಮುಂದೆ ಸಾಗಿ ನಡೆಯುತ್ತಿದ್ದ ದೃಶ್ಯಗಳನ್ನು ಕಣ್ಣಾರೆ ಕಂಡು, ಅತಿಥಿ ಗೃಹಕ್ಕೆ ವಾಪಸಾದರು. ಅಷ್ಟು ಹೊತ್ತಿಗೆ ಸುಮಾರು ೨೦ ಜನ ಅಸ್ಪೃಶ್ಯರು ಗಂಭೀರವಾಗಿ ಗಾಯಗೊಂಡಿದ್ದರು. ಒಬ್ಬ ವೈದ್ಯರಿಗೆ ಕರೆ ಕಳುಹಿಸಲಾಯಿತು. ಆತ ಆಗಮಿಸಿದ.

"ಕೆಟ್ಟ ಸಮಯದಲ್ಲಿ ಸಾಹಸಕ್ಕೆ" ಕೈ ಹಾಕಿದ್ದಕ್ಕೆ ಅವರನ್ನು ಶಪಿಸಿ, ಆತ ಅವರ ಗಾಯಗಳಿಗೆ ಮುಲಾಮು ಹಚ್ಚಿದ.

ಅನಂತರ ಈ ರೌಡಿಗಳು ನಗರದ ಎಲ್ಲೆಡೆ ಗಸ್ತು ತಿರುಗತೊಡಗಿದರು. ತಮ್ಮ ಹಳ್ಳಿಗಳಿಗೆ ಹಿಂತಿರುಗುತ್ತಿದ್ದ ಹಿಂದುಳಿದ ವರ್ಗದ ಜನರನ್ನು ಚೆನ್ನಾಗಿ ಥಳಿಸಿದರು. ಆದರೆ ಅತ್ಯಂತ ಖೇದದ ಸಂಗತಿ ಎಂದರೆ ಅವರು ಅಕ್ಕ-ಪಕ್ಕದ ಹಳ್ಳಿಗಳ ತಮ್ಮ ಸಹವರ್ತಿಗಳಿಗೆ ಕೂಡ ಹಿಂದುಳಿದ ವರ್ಗದವರನ್ನು ಥಳಿಸುವಂತೆ ಸಂದೇಶ ರವಾನಿಸಿದರು. ಈ ಸಂದೇಶವನ್ನು ಪಾಲಿಸಿದ ಇತರ ಹಿಂದೂಗಳು ಅನೇಕ ದಲಿತ ಸ್ತ್ರೀ ಪುರುಷರನ್ನು ಅವರ ಹಳ್ಳಿಗಳಲ್ಲಿ ಅಥವಾ ಹಳ್ಳಿಗಳನ್ನು ತಲುಪುವ ಮುನ್ನ ಥಳಿಸಿದರು.

ಇತ್ತ ಸಮ್ಮೇಳನಕ್ಕೆ ಆಗಮಿಸಿದ್ದ ಅತಿಥಿಗಳ ಮೇಲೆ ಆಗುತ್ತಿದ್ದ ಹಲ್ಲೆಯ ವಿಷಯವು ಕಾಳ್ಗಿಚ್ಚಿನಂತೆ ಹರಡಿತು. ಅಂಬೇಡ್ಕರ್ ಅವರು ಅತಿಥಿಗೃಹಕ್ಕೆ ಆಗಮಿಸಿದಾಗ, ನೂರಾರು ಜನರು ಇವರ ಆಗಮನವನ್ನೇ ಎದುರು ನೋಡುತ್ತಿದ್ದರು. ಅವರ ಕಣ್ಣುಗಳಲ್ಲಿ ದ್ವೇಷದ ಕಿಡಿ ಕಾರುತ್ತಿತ್ತು. ತಮ್ಮ ಮೇಲೆ ಹಲ್ಲೆ ನಡೆಸಿದವರ ಮೇಲೆ ಪ್ರತಿಕಾರ ತೆಗೆದುಕೊಳ್ಳಬೇಕು ಎಂಬ ಭಾವನೆ ಎದ್ದು ಕಾಣುತ್ತಿತ್ತು. ಅವರು ಡಾ. ಅಂಬೇಡ್ಕರ್ ಅವರ ಆದೇಶವನ್ನೇ ಎದುರುನೋಡುತ್ತಿದ್ದರು. ಆದರೆ ಇವರ ನಾಯಕರಾಗಿದ್ದ ಅಂಬೇಡ್ಕರ್ ಅವರು ಮಾತ್ರ ಶಾಂತಿ ಹಾಗೂ ಸಂಯಮದಿಂದ ಇರುವಂತೆ ಕೇಳಿಕೊಂಡರು. ಅಲ್ಲಿ ಒಂದು ಕ್ಷಣ ಘೋರವಾದ ನಿಶ್ಯಬ್ದ ಆವರಿಸಿತು. ಅಂಬೇಡ್ಕರ್ ಅವರಿಂದ ಕೇವಲ ಒಂದೇ ಒಂದು ಪದದ ಸಮ್ಮತಿ ದೊರಕಿದ್ದರೆ ಅಂದು ಮಹದ್ ರಣರಂಗವಾಗಿ ಅಲ್ಲಿ ರಕ್ತದ ಕೋಡಿಯೇ ಹರಿದಿರುತ್ತಿತ್ತು. ನಗರದಲ್ಲಿ ಸಮ್ಮೇಳನಕ್ಕೆಂದು ಆಗಮಿಸಿದ್ದ ಅತಿಥಿಗಳ ಹಾಗೂ ಅಲ್ಲಿನ ಇತರ ಶೋಷಿತವರ್ಗದವರ ಸಂಖ್ಯೆ ಆ ರೌಡಿಗಳ ಸಂಖ್ಯೆಗಿಂತ ಹೆಚ್ಚಾಗಿಯೇ ಇತ್ತು. ಅವರು ನಿರಾಯಾಸವಾಗಿ ಆ ಜನರನ್ನು ಬಗ್ಗು ಬಡಿಯಬಹುದಾಗಿತ್ತು. ಆದರೆ ಅವರ್‍ಯಾರು ಈ ರೀತಿ ಮಾಡಲಿಲ್ಲ ಇದಲ್ಲದೇ ನೂರಾರು ಜನ ಅಸ್ಪೃಶ್ಯರಿಗೆ ಮೊದಲನೆಯ ಮಹಾಯುದ್ಧದಲ್ಲಿ ಯುದ್ಧ ಮಾಡಿದ್ದ ಅನುಭವವೂ ಇತ್ತು.

ಆದರೆ ಅವರು ತಮ್ಮ ನಾಯಕನ ಆಜ್ಞೆಯ ಮೇರೆಗೆ ಅತ್ಯಂತ ಸುವ್ಯವಸ್ಥಿತವಾಗಿ ಶಾಂತಿ ಕಾಪಾಡಿಕೊಂಡರು. ದಂಗೆಕೋರರ ವಿರುದ್ಧ ಇವರು ತಮ್ಮ ಮುಖ ತಿರುಗಿಸಿಕೊಂಡರು. ಅವರ ಹೋರಾಟ ಏನೇ ಇದ್ದರೂ ಅದು ಅಹಿಂಸಾತ್ಮಕ ಹಾಗೂ ಸಂವಿಧಾನಬದ್ಧವಾಗಿ ಮಾತ್ರವೇ ಇರಬೇಕು ಎಂದು ತೀರ್ಮಾನಿಸಿದ್ದರು. ಅವರು ಕಾನೂನನ್ನು ಮುರಿಯುವ ಯೋಚನೆಯನ್ನೇ ಮಾಡಲಿಲ್ಲ. ಇದರಿಂದ ಆಗಬಹುದಾಗಿದ್ದ ಮತ್ತೊಂದು ದೊಡ್ಡ ಅಪಘಾತ ಸಂಭವಿಸದಂತೆ ಆಯಿತು. ಸಮ್ಮೇಳನಕ್ಕೆ ಎಂದು ನೆರೆದಿದ್ದ ಗಣ್ಯರೆಲ್ಲರೂ ರಾತ್ರಿಯ ವೇಳೆಗೆ ತಮ್ಮ ತಮ್ಮ ಹಳ್ಳಿಗಳಿಗೆ ತೆರಳಿದರು. ತಮ್ಮ ಸಹವರ್ತಿಯಾದ ಅನಂತರಾವ್ ಚಿತ್ರೆಯೊಂದಿಗೆ ಡಾ. ಅಂಬೇಡ್ಕರ್ ಕೂಡ ಅಲ್ಲಿಂದ ಹೊರಟರು. ಏಕೆಂದರೆ ಅಂದು ಸಾಯಂಕಾಲದಿಂದಲೇ ಆ ಅತಿಥಿಗೃಹವು ಮತ್ತೊಬ್ಬ ಸರ್ಕಾರಿ ಅಧಿಕಾರಿಯ ಹೆಸರಿನಲ್ಲಿ ಕಾಯ್ದಿರಿಸಲಾಗಿತ್ತು. ಅಲ್ಲಿಂದ ಹೊರಟ ಅಂಬೇಡ್ಕರ್ ತಮ್ಮ ಸಹವರ್ತಿಯೊಂದಿಗೆ ಪೊಲೀಸ್ ಠಾಣೆಯ ಕೊಠಡಿಗಳಲ್ಲಿ ಆಶ್ರಯ ಪಡೆದರು. ಈ ದಂಗೆಗೆ ಸಂಬಂಧಿಸಿದ ವಿಚಾರಣೆ ಎಲ್ಲವನ್ನೂ ಮುಗಿಸಿ ಮಾರ್ಚ್ ೨೩ ರಂದು ಅವರು ಮುಂಬೈಗೆ ಹಿಂದಿರುಗಿದರು.

ಎಲ್ಲಾ ಬಿರುಗಾಳಿ ಬೀಸಿ ತಣ್ಣಗಾದ ನಂತರ, ಪೊಲೀಸರು ದೃಶ್ಯಕ್ಕೆ ಆಗಮಿಸಿದರು. ಕಾನೂನು ಉಲ್ಲಂಘಕರು ಎಂಬ ಹಣೆಪಟ್ಟಿ ಕಟ್ಟಿ ಕೆಲ ರೌಡಿಗಳನ್ನು ಅವರು ಬಂಧಿಸಿದರು. ಬಂಧನಕ್ಕೆ ಒಳಗಾದ ಒಂಬತ್ತು ಮಂದಿ ಹಿಂದೂಗಳಲ್ಲಿ ಐವರನ್ನು ತೀವ್ರರಾದ ದಂಗೆಕೋರರು ಎಂದು ಪರಿಗಣಿಸಲಾಯಿತು.

ಅವರಿಗೆ ಜಿಲ್ಲಾ ನ್ಯಾಯಾಲಯವು ೧೯೨೭ರ ಜೂನ್ ೬ ರಂದು ನಾಲ್ಕು ತಿಂಗಳ ಕಠಿಣ ಸಜೆ ವಿಧಿಸಿತು. ಈ ಜಿಲ್ಲೆಯ ಎಲ್ಲಾ ಪ್ರಮುಖ ಆಡಳಿತಗಾರರು ಹಿಂದೂಗಳಾಗಿರಲಿಲ್ಲ. ಆದ್ದರಿಂದಲೇ ಅಸ್ಪೃಶ್ಯರಿಗೆ ನ್ಯಾಯ ದೊರೆಯುವುದು ಸಾಧ್ಯವಾಯಿತು ಎಂದು ಡಾ. ಅಂಬೇಡ್ಕರ್ ಹೇಳಿದರು. ಅವರು ಹೇಳಿದ್ದ ಈ ಮಾತುಗಳು ಸತ್ಯಕ್ಕೆ ಅತ್ಯಂತ ಹತ್ತಿರವಾಗಿತ್ತು. ಇದೇ ಪರಿಸ್ಥಿತಿ ಏನಾದರೂ ಪೇಶ್ವೆಗಳ ಆಡಳಿತದ ಸಮಯದಲ್ಲಿ ಆಗಿದ್ದರೆ, ಆನೆಯೊಂದರ ಕಾಲ್ತುಳಿತಕ್ಕೆ ಒಳಪಡಿಸಿ ತಮ್ಮನ್ನು ಕೊಲ್ಲಲಾಗುತ್ತಿತ್ತು ಎಂದು ಅಂಬೇಡ್ಕರ್ ನುಡಿದರು. ಪೇಶ್ವಗಳ ಆಡಳಿತದಲ್ಲಿಯೇ ಇವರನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳಲಾಗಿತ್ತು. ಏಕೆಂದರೆ ದಿನದಲ್ಲಿ ನಿಗದಿತ ಕೆಲ ಘಂಟೆಗಳ ಕಾಲ ಇವರಿಗೆ ಪೂನಾ ಮುಖ್ಯ ನಗರ ಪ್ರವೇಶಿಸಲು ಅನುಮತಿ ಇರಲಿಲ್ಲ. ಪ್ರವೇಶಿಸಲು ದೊರೆತ ಮೇಲೆ ಕೂಡ ಇವರು ತಮ್ಮ ಕುತ್ತಿಗೆಯಲ್ಲಿ ಮಣ್ಣಿನ ಮಡಕೆಗಳನ್ನು ನೇತು ಹಾಕಿಕೊಳ್ಳುವಂತೆ ಹೇಳಲಾಗುತ್ತಿತ್ತು. ಮೇಲ್ವರ್ಗದ ಜನರು ಅದರಲ್ಲಿ ಉಗಿಯುತ್ತಿದ್ದರು.[೧]

೧ ಕೀರ್ ಪುಟ ೬೯–೭೧, ೭೩–೭೭

# ಮಹದ್ ಸಮ್ಮೇಳನದ ವರದಿ–ಬಾಂಬೆ ಕ್ರಾನಿಕಲ್ ವತಿಯಿಂದ

೧೯೨೭ರ ಮಾರ್ಚ ೧೯ನೆಯ ಹಾಗೂ ೨೦ನೆಯ ತಾರೀಖಿನಂದು ಕೊಲಾಬಾ ಜಿಲ್ಲೆಯ ಹಿಂದುಳಿದ ಹಾಗೂ ಶೋಷಿತ ವರ್ಗದವರ ಸಮ್ಮೇಳನ ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಮಹದ್‌ನಲ್ಲಿ ಜರುಗಿತು. ಸುಮಾರು ೨,೫೦೦ ಜನರು ಅತ್ಯಂತ ಉತ್ಸಾಹಿಗಳಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಆದರೆ ಈ ಸಮ್ಮೇಳನದ ಕಾರ್ಯಕ್ರಮಕ್ಕೆ ಕೆಲ ಹಿಂದೂಗಳಿಂದ ಸಂಪೂರ್ಣವಾಗಿ ಧಕ್ಕೆ ಉಂಟಾಯಿತು. ಇದರ ಜವಾಬ್ದಾರಿಯು ಸಂಪೂರ್ಣವಾಗಿ ಮಹದ್ ನಗರದ ಸವರ್ಣೀಯ ಹಿಂದೂಗಳ ಮೇಲೆ ಇದೆ. ಮೊದಲನೆಯ ದಿನ ಡಾ. ಅಂಬೇಡ್ಕರ್ ಅವರ ಅಧ್ಯಕ್ಷ ಭಾಷಣ ಮುಗಿದ ನಂತರ, ಕೆಲ ಹಿಂದೂ ಪ್ರತಿನಿಧಿಗಳು ವೇದಿಕೆಗೆ ಆಗಮಿಸಿ. ತಾವು ಹಿಂದುಳಿದ ವರ್ಗದವರ ಶ್ರೇಯಸ್ಸಿಗೆ ಶ್ರಮಿಸುವುದಾಗಿ, ಅದಕ್ಕೆ ಅಗತ್ಯ ಬೆಂಬಲ ನೀಡುವುದಾಗಿಯೂ ಘೋಷಿಸಿದರು. ಶೋಷಿತ ವರ್ಗದ ಜನರು ಅನಗತ್ಯವಾಗಿ ಹಿಂದೂಗಳ ಮೇಲೆ ದ್ವೇಷ ಸಾಧಿಸಬಾರದು ಎಂದೂ ಹೇಳಿದರು. ಇದಕ್ಕೆ ಪೂರಕವಾಗುವಂತೆ ಶೋಷಿತ ವರ್ಗದ ಜನರಿಗೆಂದು ಯಾವ ಯಾವ ರೀತಿಯ ಕ್ರಮಗಳನ್ನು ಇವರು ಕೈಗೊಳ್ಳಬಹುದು ಎಂಬ ಒಂದು ಪ್ರಸ್ತಾವನೆಯನ್ನು ವಿಷಯ ಸಮಿತಿಯು ಸಿದ್ಧಪಡಿಸಿತು. ಇದರಲ್ಲಿ ಶೋಷಿತ ವರ್ಗದ ಜನರು ಪ್ರಮುಖವಾಗಿ ಒಂದು ಅಂಶದತ್ತ ವಿಷಯ ಸಮಿತಿಯು ಗಮನ ಸೆಳೆದರು. ಅದೇನೆಂದರೆ ಮಹದ್‌ನಲ್ಲಿ ಶೋಷಿತ ವರ್ಗದ ಜನರು ಕುಡಿಯುವ ನೀರಿಗಾಗಿ ಹಾಹಾಕಾರಪಡುತ್ತಿದ್ದರು. ಅದು ಕೇವಲ ಮಹದ್‌ನಲ್ಲಿ ನೆಲೆಸಿದವರು ಎದುರಿಸುವ ಪರಿಸ್ಥಿತಿ ಮಾತ್ರ ಆಗಿರಲಿಲ್ಲ. ಬದಲಾಗಿ ನೀರಿಗಾಗಿ ಮಹದ್ ನಗರಕ್ಕೆ ಆಗಮಿಸುವ ಇತರ ಹಳ್ಳಿಗಳ ಶೋಷಿತ ಜನರು ಖಾಸಗಿ ಹಾಗೂ ಸರ್ಕಾರಿ ಕಾರ್ಯಗಳಿಗೆಂದು ಮಹದ್ ನಗರಕ್ಕೆ ಆಗಮಿಸುವ ಜನರ ಸ್ಥಿತಿಯೂ ಹಾಗೆಯೆ ಇತ್ತು. ನೀರಿನ ಬವಣೆ ಎಷ್ಟು ಇತ್ತೆಂದರೆ ಸಮ್ಮೇಳನಕ್ಕೆ ಆಗಮಿಸಿದ್ದವರಿಗೆ ಕುಡಿವ ನೀರಿನ ಖರೀದಿಗೆಂದೇ ೧೫ ರೂಪಾಯಿಯನ್ನು ನಿತ್ಯ ವ್ಯಯಿಸಲಾಗುತ್ತಿತ್ತು. ಕೆಲ ದಿನಗಳ ಹಿಂದೆ ಮಹದ್ ನಗರ ಪಾಲಿಕೆಯು ನಗರದ ಕೆರೆಗಳಿಂದ ಎಲ್ಲರೂ ನೀರನ್ನು ತೆಗೆದುಕೊಳ್ಳಬಹುದು ಎಂಬ ನಿರ್ಣಯ ಹೊರಡಿಸಿತ್ತು. ಆದರೆ ಈ ವಿಷಯವಾಗಿ ಅಲ್ಲಿ ಯಾವುದೇ ಫಲಕವನ್ನು ತೂಗು ಹಾಕಿರಲಿಲ್ಲ. ಆದ್ದರಿಂದ ಅಲ್ಲಿಂದ ನೀರು ತೆಗೆದುಕೊಳ್ಳಲು ಅಲ್ಲಿನ ಜನರು ಹೆದರುತ್ತಿದ್ದರು. ಆದ್ದರಿಂದ ಸಮ್ಮೇಳನದ ವಿಷಯ ಸಮಿತಿಯು ಶೋಷಿತ ವರ್ಗದ ಜನರ ಭಯವನ್ನು ದೂರಮಾಡುವ ಸಲುವಾಗಿ ವಿಷಯ ಸಮಿತಿಯ ಸದಸ್ಯರೇ ಕೆರೆಯ ಬಳಿಗೆ ತೆರಳಿ, ನೀರನ್ನು ತೆಗೆದುಕೊಂಡು ಜನರ ಭಯವನ್ನು ಹೋಗಲಾಡಿಸ ಬೇಕೆಂದು ತೀರ್ಮಾನಿಸಿತು.

**"ಒಂದು ಸುಳ್ಳು ವದಂತಿ"**

೨೦ನೆಯ ತಾರೀಖಿನ ಬೆಳಿಗ್ಗೆ ಈ ಸಮ್ಮೇಳನದ ಸದಸ್ಯರು ಭೇಟಿಯಾದಾಗ ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿದರು. ಅದರಲ್ಲಿ ಮೊದಲನೆಯ ಅಂಶವೇ ಶೋಷಿತ ವರ್ಗದ ಜನರಿಗಾಗಿ ಮೇಲ್ವರ್ಗದ ಜನರು ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದಾಗಿತ್ತು. ಶ್ರೀಪುರುಷೋತ್ತಮ ಪ್ರಭಾಕರ ಜೋಷಿ ಹಾಗೂ ಗೋವಿಂದ ನಾರಾಯಣ ಧಾರಿಯ ಮೇಲ್ವರ್ಗದ ಜನರ ಪ್ರತಿನಿಧಿಗಳಾಗಿದ್ದರು. ಈ ಪ್ರಸ್ತಾವನೆಯ ಬಗ್ಗೆ

ಮಾತನಾಡಲು ಇವರನ್ನು ಕೇಳಿಕೊಳ್ಳಲಾಯಿತು. ಈ ಪ್ರಸ್ತಾವನೆಯಲ್ಲಿ ಇದ್ದ ಅಂತರ್ಜಾತೀಯ ವಿವಾಹದ ಬಗೆಗಿನ ಒಂದು ಅಂಶವನ್ನು ಬಿಟ್ಟು ಮಿಕ್ಕೆಲ್ಲಾ ಅಂಶಗಳಿಗೂ ಅವರಿಬ್ಬರು ಸಮ್ಮತಿಸಿದರು. ಇದರಿಂದ ಸಮಿತಿಯು ತನಗೆ ಎಲ್ಲಾ ರೀತಿಯ ಬೆಂಬಲ ಇದೆ ಎಂದು ತೀರ್ಮಾನಿಸಿ. ಖುದ್ದಾಗಿ ಕೆರೆಯ ಬಳಿಗೆ ತೆರಳಿತು. ಈ ಮೆರವಣಿಗೆಯು ಅತ್ಯಂತ ಶಾಂತಿಯುತವಾಗಿತ್ತು. ಆದರೆ ಇದಾದ ಕೇವಲ ಎರಡೇ ಘಂಟೆಗಳ ಅಂತರದಲ್ಲಿ ಕೆಲ ಸಮಾಜಘಾತುಕ ವ್ಯಕ್ತಿಗಳು ಒಂದು ಸುಳ್ಳು ವಂದತಿಯನ್ನು ಹಬ್ಬಿಸಿದರು. ಅದೇನೆಂದರೆ ಶೋಷಿತ ಜಾತಿಯವರು ವಿರೇಶ್ವರ ದೇವಸ್ಥಾನವನ್ನು ಪ್ರವೇಶಿಸಲಿದ್ದಾರೆ ಎಂದು. ಇದರಿಂದ ಕ್ರುದ್ಧರಾದ ಮೇಲ್ವರ್ಗದ ಜನರು, ಬಿದಿರಿನ ಕೋಲುಗಳನ್ನು ಹಿಡಿದು ಜಮಾಯಿಸಿದರು. ಕೆಲವೇ ಘಂಟೆಗಳಲ್ಲಿ ಈ ರೌಡಿಗಳು ತಮ್ಮ ಅಟ್ಟಹಾಸ ಮೆರೆಯತೊಡಗಿದರು ಮಾತ್ರವಲ್ಲ, ಇಡೀ ನಗರದ ವಾತಾವರಣವೇ ಶೋಷಿತ ವರ್ಗದವರ ನೆತ್ತರಿನಿಂದ ತೊಯ್ದು ಹೋಯಿತು.

### "೨೦ ಜನರಿಗೆ ಗಾಯ"

ಈ ಸಮಯದಲ್ಲಿ ಶೋಷಿತ ವರ್ಗದ ಜನರು ತಮ್ಮ ತಮ್ಮ ಊರುಗಳಿಗೆ ತೆರಳುವ ಮುನ್ನ ಆಹಾರ ಸೇವಿಸುತ್ತಿದ್ದರು. ಸಮ್ಮೇಳನಕ್ಕೆ ಆಗಮಿಸಿದ್ದ ಬಹುತೇಕ ಮಂದಿ ಅಷ್ಟು ಹೊತ್ತಿಗಾಗಲೇ ಹೊರಟುಹೋಗಿದ್ದರು. ಇತ್ತ ರೌಡಿಗಳು ಇವರು ಆಹಾರ ಸೇವನೆ ಮಾಡುತ್ತಿದ್ದ ಸ್ಥಳದತ್ತ ನುಗ್ಗಿದರು. ಎಂದಿನಂತೆ ಎರಡೂ ಕಡೆಗಳಿಂದಲೂ ಇಲ್ಲಿ ಹೊಡೆದಾಟ ನಡೆಯಬಹುದಿತ್ತು. ಆದರೆ ಶೋಷಿತ ವರ್ಗದ ಜನರು ತಮ್ಮ ನಾಯಕರುಗಳ ಮಾತಿಗೆ ಬೆಲೆಕೊಟ್ಟು ಶಾಂತಿಯಿಂದ ನಡೆದುಕೊಂಡರು. ಇತ್ತ ರೌಡಿಗಳಿಗೆ ಅಪ್ರಚೋದಿತವಾಗಿ ನಗರದ ಪ್ರತಿಯೊಂದು ರಸ್ತೆಯಲ್ಲೂ ಅಲೆದು ಊರುಗಳಿಗೆ ಹಿಂದಿರುಗುತ್ತಿದ್ದ ಶೋಷಿತ ವರ್ಗದ ಜನರನ್ನು ಹಿಡಿದು ಚಚ್ಚಿದರು. ಶೋಷಿತ ವರ್ಗದ ಜನರ ಮನೆಗಳಿಗೆ ಅತಿಕ್ರಮವಾಗಿ ಪ್ರವೇಶಮಾಡಿ, ಮನಸೋ ಇಚ್ಛೆ ಥಳಿಸಿದರು. ಶೋಷಿತ ವರ್ಗದ ಒಟ್ಟು ೨೦ ಜನರು ಅತ್ಯಂತ ಗಂಭೀರವಾಗಿ ಗಾಯಗೊಂಡಿದ್ದರು. ಈ ವಿಷಯದಲ್ಲಿ ಶೋಷಿತ ವರ್ಗದ ಜನರು ತೋರಿದ ಶಾಂತಿ ಮತ್ತು ಸಹನೆಯು ಅನುಕರಣೀಯವಾದುದು. ಇತ್ತ ಮೇಲ್ವರ್ಗದ ಜನರು ಪ್ರದರ್ಶಿಸಿದ್ದ ನಡತೆ ನಿಜವಾಗಿಯೂ ಹೇಸಿಗೆ ಉಂಟು ಮಾಡುವ ಹಾಗಿತ್ತು. ಶೋಷಿತ ವರ್ಗದ ಜನರ ಸಂಖ್ಯೆ ಅಲ್ಲಿ ಇದ್ದ ಮೇಲ್ವರ್ಗದ ಜನರ ಸಂಖ್ಯೆಗಿಂತ ಬಹಳಷ್ಟು ಹೆಚ್ಚೇ ಇತ್ತು. ಆದರೆ ಅವರ ಎದುರು ಅವರ ನಾಯಕರುಗಳು ಹೇಳಿದ ಗುರಿ ಅತ್ಯಂತ ಸ್ಪಷ್ಟವಾಗಿತ್ತು. ಅದೇನೆಂದರೆ ನಾವು ಯಾವುದೇ ಕ್ರಮ ಕೈಗೊಂಡರೂ ಅದು ಅತ್ಯಂತ ಶಾಂತಿಯುತವಾಗಿ ಹಾಗೂ ಸಂವಿಧಾನಬದ್ಧವಾಗಿ ಇರಬೇಕು ಎಂದು ನುಡಿದಿದ್ದರು. ಅದು ಶೋಷಿತ ವರ್ಗದ ಜನರ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ. ಏಕೆಂದರೆ, ಅವರನ್ನು ಎಷ್ಟೇ ಕೆಣಕಿದರೂ ಅವರು ಅತ್ಯಂತ ತಾಳ್ಮೆಯಿಂದಲೇ ನಡೆದುಕೊಂಡಿದ್ದರು. ಮಹದ್ ಸಮ್ಮೇಳನವು ಒಂದು ವಿಷಯವನ್ನಂತೂ ಸ್ಪಷ್ಟಪಡಿಸಿತ್ತು. ಅದೇನೆಂದರೆ ಮೇಲ್ವರ್ಗದ ಜನರು ಶೋಷಿತ ವರ್ಗದ ಜನರಿಗೆ ಕನಿಷ್ಠ ಹಕ್ಕುಗಳನ್ನು ಕೂಡ ನೀಡಲು ಸಿದ್ಧರಿರಲಿಲ್ಲ. ಬದಲಾಗಿ ಅವರನ್ನು ನೀರು ತೆಗೆದುಕೊಳ್ಳದಂತೆ ತಡೆದಿದ್ದರು.

ಒಂದು ಅತ್ಯಂತ ಹೀನಾಯವಾದ ಸಂಗತಿ ಹಾಗೂ ಅಕ್ಷಮ್ಯವಾದ ಕಾರ್ಯವನ್ನು ಮಹದ್ ನಗರ ಹಾಗೂ ಕೊಲಾಬ ಜಿಲ್ಲೆಯ ಮೇಲ್ವರ್ಗದ ಜನರು ಮಾಡಿದ್ದರು. ಅದೇನೆಂದರೆ ಸುತ್ತಮುತ್ತಲ ಹಳ್ಳಿಯ ಮೇಲ್ವರ್ಗದ ಜನರಿಗೆ ಸಂದೇಶ ಕಳುಹಿಸಿ, ಅವರು ಸಮ್ಮೇಳನದಲ್ಲಿ ಭಾಗಿಯಾಗಿ ಹಿಂದಿರುಗುವ ಜನರನ್ನು ಥಳಿಸುವಂತೆ ಸೂಚಿಸಿದ್ದರು. ಇದರ ಫಲಶ್ರುತಿಯಾಗಿ ಬೇರೆ ಬೇರೆಯ ಸ್ಥಳಗಳಲ್ಲಿ ಹಲವಾರು ಇಂತಹ

ಅಹಿತಕರ ಘಟನೆಗಳು ಜರುಗಿಹೋದವು. ಮಾತ್ರವಲ್ಲ ಶೋಷಿತ ವರ್ಗದ ಜನರ ಸಂಖ್ಯೆಗಿಂತ ಮೇಲ್ವರ್ಗದವರ ಸಂಖ್ಯೆ ಹೆಚ್ಚಾಗಿದ್ದುದರಿಂದ ಶೋಷಿತರು ಅಸಹಾಯಕರಾಗಿದ್ದರು. ಶೋಷಿತ ವರ್ಗದ ಜನರ ನಾಯಕರು, ತಮಗೆ ರಕ್ಷಣೆ ಬೇಕು ಎಂದು ಅಧಿಕಾರಿಗಳನ್ನು ಕೇಳಿಕೊಂಡಿದ್ದಾರೆ. ಪೊಲೀಸ್ ಉಪ ಮಹಾನಿರ್ದೇಶಕರನ್ನು ಒಳಗೊಂಡಂತೆ ಜಿಲ್ಲೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಕೈಗೊಂಡಿದ್ದಾರೆ. ಆದರೆ ಇಲ್ಲಿ ಒಂದು ಅಂಶವನ್ನು ಎಲ್ಲರ ಗಮನಕ್ಕೆ ತರುವ ಆವಶ್ಯಕತೆ ಇದೆ. ಅದೇನೆಂದರೆ ಜಿಲ್ಲಾ ನ್ಯಾಯಾಧೀಶರು ಎರಡು ಘಂಟೆಗಳ ಕಾಲ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಅವರು ತಕ್ಷಣ ಕಾರ್ಯ ಪ್ರವೃತ್ತರಾಗಿದ್ದರೆ, ನಡೆದ ಅನಾಹುತವನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಬಹುದಿತ್ತು.

ಮುಕ್ತವಾಗಿ ನಡೆಯಬೇಕಿದ್ದ ದಲಿತ ವರ್ಗದ ಕಾರ್ಯಕ್ರಮವೊಂದು ಈ ರೀತಿ ಕೊನೆಗೊಂಡಿತು. ಅವರು ಸಾರ್ವಜನಿಕ ಹಕ್ಕು ಸ್ಥಾಪನೆಗೆಂದು ಮಾಡಿದ್ದ ಮೊಟ್ಟ ಮೊದಲ ಪ್ರಯತ್ನ ಈ ರೀತಿ ವಿಫಲವಾಯಿತು. ಆದರೆ ಈ ಸಮ್ಮೇಳನ ನಡೆದುದು ಒಂದು ಐತಿಹಾಸಿಕ ಘಟನೆಯಂತೂ ಆಯಿತು. ಮಾತ್ರವಲ್ಲ ಭಾರತದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಯಿತು. ಈ ಘಟನೆಯ ನಂತರ ಡಾ. ಅಂಬೇಡ್ಕರ್ ಅವರ ಖಾಸಗಿ ಜೀವನ ಹಾಗೂ ಅಂದಿನ ಸಾಮಾಜಿಕ ಮತ್ತು ರಾಷ್ಟ್ರೀಯ ಚಲನೆಯ ದಿಕ್ಕುಗಳಲ್ಲಿ ಮಹತ್ತರ ಬದಲಾವಣೆಗಳು ಉಂಟಾದವು.

ಅವರ ಸಮರ್ಥ ಮುಂದಾಳತ್ವದಲ್ಲಿ ಶೋಷಿತ, ಹಿಂದುಳಿದ ಹಾಗೂ ಅಮಾನವೀಯವಾಗಿ ಕಾಣಲ್ಪಟ್ಟ ಸಾವಿರಾರು ಅಮಾಯಕ ಜನರು, ಭಾರತದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆದರು. ಅವರು ತಲೆತಲಾಂತರದಿಂದ ಬಂದಂತಹ ತಮ್ಮ ಸಮಸ್ಯೆಗಳ ವಿರುದ್ಧ ದನಿಯೇರಿಸುವುದರೊಂದಿಗೆ ಅವುಗಳ ನಿವಾರಣೆಯತ್ತ ತಮ್ಮ ಪ್ರಯತ್ನವನ್ನು. ಬಹಳ ಉತ್ಸಾಹದಿಂದ ಆರಂಭಿಸಿದರು. ಇದೀಗ ಅವರ ಮನಗಳಲ್ಲಿ ತುಸು ಧೈರ್ಯ ತುಂಬಿತ್ತು. ನಾಲ್ಕು ಮಂದಿಯ ಎದುರು ತಲೆಯೆತ್ತಿ ನಿಲ್ಲುತ್ತಿದ್ದರು. ಮಾತ್ರವಲ್ಲ ತಮ್ಮ ಮೈಮುಖಗಳಿಗೆ ಅಂಟಿಕೊಂಡಿದ್ದ ಧೂಳನ್ನು ಕೊಡವಿಕೊಂಡರು.

ಅವರ ನಾಯಕರುಗಳು ಅತ್ಯಂತ ವಿದ್ಯಾವಂತರಾಗಿದ್ದರು. ಅವರೆಲ್ಲರೂ ಸೇರಿ ಈ ಹೋರಾಟವನ್ನು ಹುಟ್ಟು ಹಾಕಿದ್ದರು. ಇದು ಅವರಲ್ಲಿ ಆತ್ಮಾಭಿಮಾನ ಮೂಡಿಸಿದ್ದು ಮಾತ್ರವಲ್ಲ ಅವರು ತಮ್ಮ ದೃಷ್ಟಿಯಲ್ಲಿ ತಾವೇ ಎತ್ತರಕ್ಕೆ ಏರಿದ್ದರು. ಮಹದ್‌ನಲ್ಲಿ ತಮ್ಮ ಜನಾಂಗದವರ ಮೇಲೆ ಜರುಗಿದ ಅತ್ಯಾಚಾರ, ಅಪಮಾನ ಅವರನ್ನು ಕ್ರುದ್ಧಗೊಳಿಸುತ್ತಿತ್ತು. ಇದರ ಪರಿಣಾಮವಾಗಿ ಅಸ್ಪೃಶ್ಯರು ಅಳಿದುಳಿದ ಹಳಸಿದ ಆಹಾರ ತಿನ್ನುವುದನ್ನು ನಿಲ್ಲಿಸಿದರು. ಪ್ರಾಣಿಗಳ ಶವಗಳ ಸಾಗಾಣಿಕೆಯನ್ನು ಹಾಗು ಭಿಕ್ಷೆ ಬೇಡುವುದನ್ನು ನಿಲ್ಲಿಸಿದರು.

ಇತ್ತ ಚಾವ್ದಾರ್ ಕೆರೆಯನ್ನು ಅಸ್ಪೃಶ್ಯರು ಮುಟ್ಟಿದ್ದರಿಂದ ಅದು ಕಲುಷಿತವಾಗಿದೆ ಎಂದು ಘೋಷಿಸಿ ಸಂಪ್ರದಾಯವಾದಿ ಹಿಂದೂಗಳು ವೀರೇಶ್ವರ ದೇವಸ್ಥಾನದಲ್ಲಿ ಸಭೆ ಸೇರಿ, ಇದನ್ನು ಪವಿತ್ರಗೊಳಿಸುವ ಬಗೆಯನ್ನು ಚಿಂತಿಸಿದರು. ಭೂಮಿಯ ಮೇಲೆ ಅಪವಿತ್ರಗೊಂಡ ಯಾವುದೇ ವಸ್ತುವೇ ಆದರೂ ಅದನ್ನು ಶುದ್ಧೀಕರಿಸುವ ಬಗೆ ಅವರಿಗೆ ತಿಳಿದಿತ್ತು. ಗೋಮೂತ್ರ, ಸಗಣಿ, ನೀರು ಹಾಗೂ ಮೊಸರಿನ ಮಿಶ್ರಣದಿಂದ ಯಾವುದೇ ಅಪವಿತ್ರ ವಸ್ತುವನ್ನಾದರೂ ಪವಿತ್ರಗೊಳಿಸಬಹುದು ಎಂದು ಅವರು ತಿಳಿದಿದ್ದರು. ಅಂತೆಯೇ ಈ ಕೆರೆಯಿಂದ ೧೦೮ ಬಿಂದಿಗೆ ನೀರನ್ನು ಹೊರ ತೆಗೆಯಲಾಯಿತು. ಮೊಸರು, ಸಗಣಿ, ನೀರು ಹಾಗೂ ಗೋಮೂತ್ರ ತುಂಬಿದ ಬಿಂದಿಗೆಗಳನ್ನು ಮಂತ್ರಘೋಷಗಳ ನಡುವೆ ಕೆರೆಯ ಮಧ್ಯದಲ್ಲಿ ಬಿಡಲಾಯಿತು. ಈ ಮಂತ್ರಗಳನ್ನು ಬ್ರಾಹ್ಮಣ ಪುರೋಹಿತರು ಹೇಳುತ್ತಿದ್ದರು. ಈ ಕ್ರಿಯೆಗಳು ಪೂರ್ಣಗೊಂಡ ನಂತರ ಹಿಂದೂಗಳ ಉಪಯೋಗಕ್ಕೆ ನೀರು ಪವಿತ್ರವಾಗಿದೆ ಎಂದು ಘೋಷಿಸಲಾಯಿತು. ಮುಸಲ್ಮಾನರು ಹಾಗೂ

ಕ್ರೈಸ್ತರಿಗೆ ಈ ಶುದ್ಧೀಕರಣ ಕ್ರಿಯೆಯಲ್ಲಿ ಯಾವುದೇ ಪಾತ್ರವೂ ಇರಲಿಲ್ಲ. ಅವರು ಯಾವುದೇ ಅಡೆತಡೆಯಿಲ್ಲದೇ ಮೊದಲಿನಂತೆಯೇ ನೀರನ್ನು ಉಪಯೋಗಿಸುತ್ತಿದ್ದರು.*

ಈ ರೀತಿ ಚಾವ್ದಾರ್ ಕೆರೆಯನ್ನು ಪವಿತ್ರಗೊಳಿಸಲಾಗಿದೆ ಎಂಬ ವಿಷಯವು ಶೋಷಿತ ವರ್ಗದ ಜನರಲ್ಲಿ ದುಃಖವನ್ನು ಉಂಟು ಮಾಡಿತು. ಡಾ. ಅಂಬೇಡ್ಕರ್ ಅವರಿಗೆ ಕೂಡ ಇದರಿಂದಾಗಿ ಅತ್ಯಂತ ಖೇದ ಉಂಟಾಯಿತು. ಇದಕ್ಕಾಗಿ ಅವರು ಒಂದು ಸತ್ಯಾಗ್ರಹವನ್ನು ಕೈಗೊಂಡು, ತಮ್ಮ ಜನರ ಹಕ್ಕಿಗಾಗಿ ಹೋರಾಟ ನಡೆಸಲು ನಿರ್ಧಾರ ಮಾಡಿದರು. ಆದರೆ ರೀತಿ "ತಾಳ್ಮೆ ಕಳೆದುಕೊಂಡು" ತೆಗೆದುಕೊಂಡ ಪರಿಹಾರ ಕಾರ್ಯ ಸಮಸ್ಯೆಗಿಂತಲೂ ಗಂಭೀರವಾಗಬಹುದು ಎಂದು ಕೆಲ ಜನರು ಹೆದರಿದರು. ಆದರೆ ನೈತಿಕವಾಗಿ ಕೋಪಗೊಂಡಿದ್ದ ಡಾ. ಅಂಬೇಡ್ಕರ್ ಈ ಖಾಯಿಲೆ ಆಳವಾಗಿ ಬೇರುಬಿಟ್ಟಿದೆ, ಕೇವಲ ಮುಲಾಮು ಹಚ್ಚಿ ಪಟ್ಟಿ ಕಟ್ಟುವುದರಿಂದ ಪ್ರಯೋಜನ ಇಲ್ಲ, ಮಾರಣಾಂತಿಕ ಖಾಯಿಲೆಗಳಿಗೆ ಅತ್ಯಂತ ಕಠಿಣವಾದ ಮದ್ದಿನ ಆವಶ್ಯಕತೆಯೇ ಇದೆ. ಎಂದು ನುಡಿದರು.

೧೯೨೭ರ ಜೂನ ೨೬ ರಂದು "ಬಹಿಷ್ಕೃತ ಭಾರತ"ದಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಲಾಯಿತು. ಮಹದ್ ನಗರದ ಹಿಂದೂಗಳು ಚಾವ್ದಾರ್ ಕೆರೆಯ ಪಾವಿತ್ರ್ಯದ ಕಾರ್ಯವನ್ನು ಕೈಗೊಳ್ಳುವ ಮೂಲಕ ಅಸ್ಪೃಶ್ಯರನ್ನು ಅಪಮಾನಿಸಿದ್ದಾರೆ. ಅಷ್ಟು ಮಾತ್ರವಲ್ಲದೆ, ಸಮಾವೇಶದಲ್ಲಿ ಭಾಗಿಯಾದ ತಮ್ಮ ಜನಾಂಗದ ಜನರ ಮೇಲೆ ಹಲ್ಲೆ ಮಾಡಿದ್ದಾರೆ. ಆದ್ದರಿಂದ ಇವರನ್ನು ಖಂಡಿಸಲು ಬಯಸುವಂತಹವರು ಬಂದು ಮುಂಬಯಿಯಲ್ಲಿ "ಬಹಿಷ್ಕೃತ ಹಿತಕಾರಿಣಿ ಸಭಾ" ಎಂಬ ಹೆಸರಿನಲ್ಲಿ ತೆರೆದಿರುವ ಕಛೇರಿಗೆ ಬಂದು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವಂತೆ ತಿಳಿಸಲಾಯಿತು. ಈ ಮೇಲಿನ ಸಂಸ್ಥೆಯ ಹೆಸರಿನಲ್ಲಿ ಇನ್ನು ಮುಂದೆ ಸತ್ಯಾಗ್ರಹವನ್ನು ಮಾಡಲು ನಿರ್ಧಾರ ಮಾಡಲಾಯಿತು.*

## ಡಾ. ಅಂಬೇಡ್ಕರ್ ಅವರ ಹೋರಾಟ ಕುರಿತು ಪೊಲೀಸರ ವರದಿ:

### I

### ಮಹದ್ ನಗರದ ಶೋಷಿತ ವರ್ಗಗಳು: ಬೊಂಬಾಯಿ ನಗರದ ಅಸ್ಪೃಶ್ಯರು ತಮ್ಮ ಮೇಲೆ ಜರುಗಿದ ದೌರ್ಜನ್ಯ ಖಂಡಿಸುತ್ತಾ........

ಬೊಂಬಾಯಿ ನಗರ ಎಸ್.ಬಿ. ಜುಲೈ ೪, ೧೯೨೭:- ಬಹಿಷ್ಕೃತ ಹಿತಕಾರಿಣಿ ಸಭಾ ಇದರ ಅಡಿಯಲ್ಲಿ ಶೋಷಿತ ವರ್ಗಗಳ ಸಾರ್ವಜನಿಕ ಸಮಾವೇಶವೊಂದು ಜುಲೈ ೩ರ ಸಂಜೆ ಚೊವಾಸ್ಜೀ ಜಹಂಗೀರ ಸಭಾಂಗಣದಲ್ಲಿ ಜರುಗಿತು. ಕೊಲಾಬಾ ಜಿಲ್ಲೆಯ ಮಹದ್ ನಗರದಲ್ಲಿ ತಮ್ಮ ಜನರ ಮೇಲೆ ಜರುಗಿದ ದೌರ್ಜನ್ಯವನ್ನು ಇಲ್ಲಿ ಖಂಡಿಸಲಾಯಿತು. ಇಲ್ಲಿ ಸುಮಾರು ೧೦೦೦ ಜನರು ಸೇರಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ವಕೀಲರಾದ. ಡಾ. ಭೀಮರಾವ್ ರಾವ್‌ಜೀ ಅಂಬೇಡ್ಕರ್ ಅವರು ವಹಿಸಿದ್ದರು.

ಅಧ್ಯಕ್ಷರನ್ನು ಒಳಗೊಂಡಂತೆ ಹಲವಾರು ಜನರು, ಇಲ್ಲಿ ಭಾಷಣ ಮಾಡಿದರು. ರಾಗೋಬಾ

---

* ಅನುಬಂಧ ೧, ೨, ಹಾಗೂ ೩ ಗಮನಿಸಿ
* ೧ ಕೀರ್ ಪುಟ ೭೭, ೭೯, ೮೯-೯೦

ನಾರಾಯಣ, ವನಮಾಲಿ, ಮಹಾದೇವ ಅಬಾಜಿ ಕಾಮ್ಲೀ, ಸೀತಾರಾಂ ನಾಮ್‌ದೇವ್ ಶಿವ್‌ತೌರ್‌ಕರ್, ನಿರ್ಮಲ್ ಲಿಂಬಾಜಿ ಗಂಗ್‌ವಾನೇ, ಗೀತಾನಂದ ಬ್ರಹ್ಮಚಾರಿ, ಹಾಗೂ ಸಮಂತ್ ನಾನ್ಜಿ ಮಾರ್‌ವಾರಿ ಮುಂತಾದವರು ಭಾಷಣಗಳನ್ನು ಮಾಡಿದರು. ಮಹದ್‌ನಲ್ಲಿ ತಮ್ಮ ವರ್ಗದ ಜನರಿಗೆ ಉಂಟಾದ ಅವಮಾನವನ್ನು ಇವರೆಲ್ಲರೂ ಖಂಡಿಸಿದರು. ಈ ರೀತಿಯ ವರ್ತನೆಯ ವಿರುದ್ಧ ಶಾಂತಿಯುತವಾದ ಹೋರಾಟಕ್ಕಾಗಿ ಅವರು ಸ್ವಯಂ ಸೇವಕರು ಹಾಗೂ ಹಣ ಎರಡನ್ನೂ ಕ್ರೋಡೀಕರಿಸಲು ತೀರ್ಮಾನಿಸಿದರು. ಅವರು ಮೊದಲ ಸಮ್ಮೇಳನವನ್ನು ದೀಪಾವಳಿಯ ನಂತರ ಆಯೋಜಿಸಲು ಉದ್ದೇಶಿಸಿದರು. ಆನಂತರ ಭಾರತದ ಪ್ರಜೆಗಳಾಗಿ ತಮ್ಮ ಹಕ್ಕನ್ನು ಪಡೆಯಲು ಸತ್ಯಾಗ್ರಹವನ್ನು ಕೈಗೊಳ್ಳಲು ತೀರ್ಮಾನ ಮಾಡಿದರು. ಈ ನಿಟ್ಟಿನಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಲಾಯಿತು.

ಶೋಷಿತವರ್ಗದವರ ಅಹವಾಲುಗಳನ್ನು ಆಲಿಸಲು ಮದರಾಸಿನಲ್ಲಿ ಇರುವಂತೆ ಪ್ರತ್ಯೇಕ ಇಲಾಖೆಯೊಂದನ್ನು ಸರ್ಕಾರ ಆರಂಭ ಮಾಡಬೇಕು ಎಂಬ ಮತ್ತೊಂದು ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸುವ ನಿರ್ಣಯವನ್ನು ಅಂಗೀಕರಿಸಿದರು.

ದೇಣಿಗೆಗಾಗಿ ಭಾಷಣಕಾರರು ಮನವಿ ಮಾಡಿದಾಗ ಸುಮಾರು ೩೫೦ ರೂಪಾಯಿಗಳಷ್ಟು ಹಣ ಶೇಖರಣೆ ಆಯಿತು. ೧೨ ಜನರು ಸತ್ಯಾಗ್ರಹದ ಸಮಯದಲ್ಲಿ ಸ್ವಯಂ ಸೇವಕರಾಗಿ ಕೆಲಸಮಾಡಲು ಸಮ್ಮತಿಸಿದರು.[೧]

## II
## ಮಹದ್‌ನಲ್ಲಿ ಜರುಗಿದ ಅಸ್ಪೃಶ್ಯರ ಸತ್ಯಾಗ್ರಹ

ಮಹರರು, ಮಾಂಗರು ಹಾಗೂ ಭಾಂಗಿ ಮುಂತಾದ ಜನಾಂಗದ ಜನರು ಕೊಲಬಾ ಜಿಲ್ಲೆಯ ಮಹದ್‌ನಲ್ಲಿ ಮಾರ್ಚ್‌ನಲ್ಲಿ ಜರುಗಿದ ಸಮ್ಮೇಳನದಲ್ಲಿ ಭಾಗಿಯಾಗಿದ್ದರು. ಆ ಸಮಯದಲ್ಲಿ ಸಮ್ಮೇಳನದಲ್ಲಿ ಭಾಗಿಯಾಗಿದ್ದವರಿಗೆ, ಕೆಲ ಸಂಪ್ರದಾಯವಾದಿಗಳು ಕೆರೆಯ ನೀರನ್ನು ಉಪಯೋಗಿಸದಂತೆ ನಿರ್ಬಂಧ ಹೇರಿದ್ದರು. ಈ ರೀತಿ ಕಾನೂನನ್ನು ಕೈಗೆ ತೆಗೆದುಕೊಂಡವರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಲಾಯಿತು. ಈ ಘಟನೆಯ ನಂತರ ಬೊಂಬಾಯಿಯಲ್ಲಿ ಇದ್ದ ಅಸ್ಪೃಶ್ಯರ ಮನದಲ್ಲಿ ಕೆಲಮಟ್ಟಿನ ಉತ್ಸಾಹ ಮೂಡಿತ್ತು. ಇದರ ಮುಂದಾಳತ್ವವನ್ನು ವಕೀಲರಾದ ಡಾ. ಭೀಮರಾವ್ ರಾವಜೀ ಅಂಬೇಡ್ಕರ್, ವಹಿಸಿದ್ದರು.

ಇದಕ್ಕೆ ಸಂಬಂಧಿಸಿದಂತೆ ಸುಮಾರು ೧,೦೦೦ ಜನ ಅಸ್ಪೃಶ್ಯರು ಸರ್ ಕೋವಾಸ್ಜಿ ಜಹಂಗೀರ್ ಸಭಾಂಗಣದಲ್ಲಿ ಅಕ್ಟೋಬರ್ ೩೦ರ ಮಧ್ಯಾಹ್ನ ಸಭೆ ಸೇರಿದರು. ಡಾ. ಅಂಬೇಡ್ಕರ್ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅಧ್ಯಕ್ಷರು ಮಹದ್‌ನಲ್ಲಿ ನಡೆದಂತಹ ಘಟನೆಗಳನ್ನು ವಿವರಿಸಿದರು. ಅಂತೆಯೇ ಅಸ್ಪೃಶ್ಯರು ತಮ್ಮ ಹಕ್ಕಿಗಾಗಿ ಹೋರಾಟ ನಡೆಸಲು ಕಾರಣವಾದ ಘಟನೆಗಳನ್ನು ಕೂಡ ಜನರ ಮುಂದೆ ಇರಿಸಿದರು. ಈ ಸಭೆಯಲ್ಲಿ ಡಿಸೆಂಬರ್ ೨೫ ರಂದು ಪುನಃ ಮಹದ್‌ನಲ್ಲಿ ಸಭೆ ನಡೆಸುವುದೆಂದು ತೀರ್ಮಾನಿಸಲಾಯಿತು. ಅಂತೆಯೇ ಅಲ್ಲಿನ ಸಾರ್ವಜನಿಕ ಕೆರೆಯಲ್ಲಿ ಕುಡಿಯುವ ನೀರನ್ನು ಉಪಯೋಗಿಸಬೇಕು ಎಂದು ತೀರ್ಮಾನ

———

೧ ಬೊಂಬಾಯಿಯ ರಹಸ್ಯ, ದಿನಾಂಕ ೧೬ನೆಯ ಜುಲೈ ೧೯೨೭

ಆಯಿತು. ಒಂದು ವೇಳೆ ಇದಕ್ಕೆ ಏನಾದರೂ ಪ್ರತಿರೋಧ ವ್ಯಕ್ತಿವಾದರೆ, ಅಲ್ಲಿಯೇ ಒಂದು ಸತ್ಯಾಗ್ರಹಕ್ಕೆ ಚಾಲನೆ ಕೊಡಬೇಕು ಎಂದು ಕೂಡ ತೀರ್ಮಾನ ಆಯಿತು. ಈ ಸಭೆಯಲ್ಲಿಯೇ ಸುಮಾರು ೫೭೦/– ರೂಪಾಯಿಗಳು ಶೇಖರಣೆ ಆಯಿತು. ಅದೇ ಸಮಯದಲ್ಲಿ ಅಮರಾವತಿಯ ದೇವಸ್ಥಾನಕ್ಕೆ ಪ್ರವೇಶಪಡೆಯಲು ಕೂಡ ಹೋರಾಟ ನಡೆಸಬೇಕು ಎಂದು ಸಭಿಕರಿಂದ ಒತ್ತಾಯ ಬಂದಿತು.[೧]

**III**

ನಂ. H/೩೪೪೭
ದಿನಾಂಕ : ೨೨ನೆಯ ಡಿಸೆಂಬರ್
೧೯೨೭

ಡೆಪ್ಯುಟಿ ಪೋಲಿಸ್ ಸೂಪರಿಂಟೆಂಡೆಂಟ್
ಕೊಲಾಬಾ, ಅಲಿಭಾಗ್
ಇವರಿಗೆ

ಮಾನ್ಯರೇ,

ಉಲ್ಲೇಖ : B.S.A. ಕರೆಂಟ್‌ನ ಪ್ಯಾರಾ ೮೬೮

ಈ ಮೇಲ್ಕಂಡ ಉದ್ದೇಶಕ್ಕೆ ಸಂಬಂಧಿಸಿದಂತೆ, ಶೋಷಿತ ವರ್ಗದ ಜನರ ಸಭೆಯು ೨೧ನೆಯ ತಾರೀಖಿನ ರಾತ್ರಿ ಜರುಗಿತು. ಸುಮಾರು ೨೫೦ ಜನರಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಡಾ. ಅಂಬೇಡ್ಕರ್ ಅವರು ವಹಿಸಿದ್ದರು. ಅಧ್ಯಕ್ಷರಲ್ಲದೇ, ಸಂಭಾಜೀ ಸಂತೋಜಿ ವಾಗ್ಮಾರೆ, ನಿಮಾಂಡಾರ್ಕರ್, ಕೋಲ್ವಾಡೇಕರ್, ಜನ್ನಾರ್‌ಕರ ಮುಂತಾದವರು ಭಾಷಣಗಳನ್ನು ಮಾಡಿದರು. ಅಸ್ಪೃಶ್ಯರು ಮಹದ್ ಕೆರೆಯ ನೀರನ್ನು ಮುಟ್ಟದಂತೆ ನಿರ್ಬಂಧ ಹೇರಲಾಗಿದೆ. ಆದ್ದರಿಂದ ಇದನ್ನು ವಿರೋಧಿಸಿ ೨೫ ರಂದು ಸತ್ಯಾಗ್ರಹ ನಡೆಯಲಿದ್ದು ಅದರಲ್ಲಿ ಭಾಗವಹಿಸುವಂತೆ ಜನರಿಗೆ ತಿಳಿಸಲಾಗಿದೆ.

(ಸಹಿ)
D.C.P.S.B.
೨೨ನೆಯ ಡಿಸೆಂಬರ್, ೧೯೨೭[೨]

ಇತ್ತ ಮಹದ್ ನಗರಸಭೆಯು ಪುನಃ ೧೯೨೭ರ ಆಗಸ್ಟ್ ೪ ರಂದು ಸಭೆ ಸೇರಿ ಒಂದು ನಿರ್ಣಯವನ್ನು ಕೈಗೊಂಡು ಚಾವ್ದಾರ್ ಕೆರೆಯ ನೀರನ್ನು ಶೋಷಿತ ವರ್ಗದ ಜನರೂ ಉಪಯೋಗಿಸಬಹುದು ಎಂದು ಹಿಂದೆ ತಾನು ೧೯೨೪ರಲ್ಲಿ ತೆಗೆದುಕೊಂಡಿದ್ದ ನಿರ್ಣಯವನ್ನು ರದ್ದುಪಡಿಸಿತು. ಡಾ. ಅಂಬೇಡ್ಕರ್ ಈ ಸವಾಲನ್ನು ಸ್ವೀಕರಿಸಿದರು. ಅಂತೆಯೇ ಸೆಪ್ಟೆಂಬರ್ ೧೧ ರಂದು ಬೊಂಬಾಯಿಯ ದಾಮೋದರ್ ಸಭಾಂಗಣದಲ್ಲಿ ಒಂದು ಸಭೆ ಸೇರಿತು. ಅಲ್ಲಿ ಒಂದು ಸಮಿತಿಯು ರಚನೆ ಆಗಿ ಶೋಷಿತವರ್ಗದವರು

---

೧ ಉಪಯುಕ್ತ ಮಾಹಿತಿ : ಸಂಪುಟ, ೧ ಪುಟ ೧೩

೨. ಉಪಯುಕ್ತ ಮಾಹಿತಿ : ಸಂಪುಟ ೧, ಪುಟ ೧೩–೧೪

ತಮ್ಮ ಹಕ್ಕು ಸ್ಥಾಪನೆಗಾಗಿ ಯಾವ ರೀತಿಯ ಹೋರಾಟ ನಡೆಸಬೇಕು ಎಂಬುದನ್ನು ತೀರ್ಮಾನಿಸಲಾಯಿತು. ಅದರಲ್ಲಿ ಮೊದಲ ಗುರಿ ಮಹದ್ ಕೆರೆಯ ನೀರನ್ನು ಉಪಯೋಗಿಸುವ ತಮ್ಮ ಹಕ್ಕನ್ನು ಮರಳಿಪಡೆಯುವುದು. ಅದಕ್ಕೆಂದು ಒಂದು ದಿನಾಂಕ ಹಾಗು ಎಲ್ಲಾ ವಿವರಗಳನ್ನು ಕಲೆ ಹಾಕುವುದು. ಇದಾದ ನಾಲ್ಕು ದಿನಗಳ ನಂತರ ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಕಚೇರಿಯಲ್ಲಿ ಸಭೆ ಸೇರಿತು. ಡಿಸೆಂಬರ್ ೨೫ ಹಾಗೂ ೨೬ ರಂದು ಸತ್ಯಾಗ್ರಹ ನಡೆಯುತ್ತದೆ ಎಂದು ಘೋಷಿಸಿದರು.

ಮಹದ್‌ನಲ್ಲಿ ನಡೆಯಬೇಕಿದ್ದ ಸತ್ಯಾಗ್ರಹದ ದಿನ ಹತ್ತಿರ ಬರುತ್ತಿತ್ತು. ಮಹದ್‌ನಲ್ಲಿ ಪುನಃ ಸಂಚಲನ ಆರಂಭವಾಗಿತ್ತು. ಡಾ. ಅಂಬೇಡ್ಕರ್ ಅವರು ಹಾಗೂ ಶೋಷಿತ ವರ್ಗದ ಇತರರು ಈ ಕೆರೆಯ ನೀರನ್ನು ಉಪಯೋಗಿಸಲು ಮಾಡಿರುವ ಪ್ರಯತ್ನವನ್ನು ಹೇಗೆ ಭಂಗಗೊಳಿಸುವುದು ಎನ್ನುವುದನ್ನು ತೀರ್ಮಾನಿಸಲು, ಅವರ ವಿರೋಧಿಗಳು ವೀರೇಶ್ವರ ದೇವಸ್ಥಾನದಲ್ಲಿ ೧೯೨೭ರ ನವೆಂಬರ್ ೨೭ರಂದು ಸಭೆನಡೆಸಿದರು. ಆದರೆ ಶೋಷಿತ ವರ್ಗದ ಜನರ ಬೆಂಬಲಿಗರು ಕೆಲವರು ಅಲ್ಲಿ ಇದ್ದುದರಿಂದ ಅವರ ಸಭೆಯು ಗದ್ದಲದಲ್ಲಿ ಕೊನೆಗೊಂಡಿತು. ಪೂನಾದಲ್ಲಿ ಇದ್ದಂತಹ ಕೆಲ ಹಿಂದೂ ನಾಯಕರು ಸವರ್ಣೀಯರ ಕ್ರಮವನ್ನು ಖಂಡಿಸಿ, ಆ ರೀತಿ ನಡೆದುಕೊಳ್ಳದಂತೆ ತಿಳಿಸಲು ಪ್ರಯತ್ನಿಸಿದರಾದರೂ ಅವರ ಪ್ರಯತ್ನ ಕೈಗೂಡಲಿಲ್ಲ.

ಜಿಲ್ಲಾ ನ್ಯಾಯಾಧೀಶರು ಡಿಸೆಂಬರ್ ೭ ರಂದು ಮಹದ್‌ಗೆ ಭೇಟಿ ನೀಡಿದರು. ಎರಡೂ ಕಡೆಯ ನಾಯಕರು ಈ ವಿಷಯದ ಬಗೆಗೆ ಅವರ ಎದುರು ಚರ್ಚಿಸಿದರು. ಅವರು ಹಿಂದೂ ನಾಯಕರಿಗೆ ಕಾನೂನಿನ ಪ್ರಕಾರ ನಡೆದುಕೊಳ್ಳುವಂತೆ ತಿಳಿಸಿದರು. ಮಾತ್ರವಲ್ಲ ಯಾವುದೇ ಕಾರಣಕ್ಕೂ ಶೋಷಿತ ವರ್ಗದ ಜನರಿಗೆ ನೀರನ್ನು ಉಪಯೋಗಿಸದಂತೆ ಬಹಿಷ್ಕಾರ ಹಾಕಲು ಸಾಧ್ಯವೇ ಇಲ್ಲ ಎಂದು ಹೇಳಿದರು. ಇದರಿಂದ ಕೆರಳಿದ ಕೆಲ ಸಂಪ್ರದಾಯವಾದಿ ನಾಯಕರು ಡಾ. ಅಂಬೇಡ್ಕರ್, ಶಿವ್‌ಟಾರ್‌ಕರ್, ಕೃಷ್ಣಾಜಿ ಎಸ್.ಕದರಿ, ಗಣ್ಯಮಾಲು ಚಂಬಾರ್ (ಇವರೆಲ್ಲಾ ಮಹದ್‌ನಗರದ ಶೋಷಿತ ವರ್ಗದ ನಾಯಕರಾಗಿದ್ದವರು) ಮುಂತಾದವರ ಮೇಲೆ ಡಿಸೆಂಬರ್ ೧೨, ೧೯೨೭ ರಂದು ಮೊಕದ್ದಮೆ ದಾಖಲಿಸಿದರು ಮತ್ತು ಒಂದು ತಾತ್ಕಾಲಿಕ ಆಜ್ಞೆಯನ್ನು ನೀಡುವಂತೆ ಕೋರ್ಟನ್ನು ಕೋರಲಾಯಿತು. ಅಂತೆಯೇ ಕೋರ್ಟ ಈ ಮೊಕದ್ದಮೆ ಇತ್ಯರ್ಥ ಆಗುವವರೆಗೂ ಚಾವ್ದಾರ್ ಕೆರೆಗೆ ತೆರಳದಂತೆ ತಾತ್ಕಾಲಿಕ ಆಜ್ಞೆಯನ್ನು ನೀಡಿತು. ಈ ಕುರಿತ ನೋಟಿಸ್‌ಗಳನ್ನು ನ್ಯಾಯಾಲಯ ಕಳುಹಿಸಿ ಕೊಟ್ಟಿತು. ಈ ಸಂಪ್ರದಾಯವಾದಿಗಳು ಎರಡು ನಿಟ್ಟಿನಲ್ಲಿ ಡಾ. ಅಂಬೇಡ್ಕರ್ ಹೋರಾಟ ನಡೆಸುವಂತೆ ಮಾಡಿದರು. ಮೊದಲನೆಯದು ಶೋಷಿತ ವರ್ಗದ ಜನರ ಬಗ್ಗೆ ಕಾಳಜಿಯೇ ಇಲ್ಲದಂತಹ ವಿದೇಶೀ ಸರ್ಕಾರದ ವಿರುದ್ಧ, ಎರಡನೆಯದು ಸಂಪ್ರದಾಯವಾದಿಗಳಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತಿದ್ದ ಬ್ರಾಹ್ಮಣರ ವಿರುದ್ಧ.[೧]

## ಚಾವ್ದಾರ್ ಕೆರೆಯ ಮೊಕದ್ದಮೆಯಲ್ಲಿ ತಾತ್ಕಾಲಿಕ ಆಜ್ಞೆಯ ಪಾಠ

### ಆದೇಶ

ಇದು ಪ್ರತಿವಾದಿಗಳು ಚಾವ್ದಾರ್ ಕೆರೆಗೆ ಹೋಗುವುದನ್ನು ಹಾಗೂ ಅಲ್ಲಿಯ ನೀರನ್ನು

ತೆಗೆದುಕೊಳ್ಳುವುದರ ವಿರುದ್ಧ ಒಂದು ಆಜ್ಞೆಯನ್ನು ಕೋರಿ ಸಲ್ಲಿಸಿರುವ ಅರ್ಜಿ. ೧೯೨೭ರ ಡಿಸೆಂಬರ್ ೧೨ರಂದು ಫಿರ್ಯಾದುದಾರರು ಈ ನ್ಯಾಯಾಲಯದಲ್ಲಿ ೪೦೫ನೆಯ ಸಂಖ್ಯೆಯ ಒಂದು ಸಾಮಾನ್ಯ ಮೊಕದ್ದಮೆಯನ್ನು ಹೂಡಿರುತ್ತಾರೆ. ಅವರ ಪ್ರಕಾರ ಚಾವ್ದಾರ್ ಕೆರೆಯು ಖಾಸಗಿ ಆಸ್ತಿಯಾಗಿದ್ದು ಅದನ್ನು ಉಪಯೋಗಿಸಲು ಅಸ್ಪೃಶ್ಯರಲ್ಲದವರಿಗೆ ಮಾತ್ರ ಅವಕಾಶವಿದ್ದು, ಅಸ್ಪೃಶ್ಯರಿಗೆ ಅದನ್ನು ಉಪಯೋಗಿಸುವ ಯಾವ ಹಕ್ಕುಗಳೂ ಇಲ್ಲವೆಂದು ಹೇಳಿದ್ದಾರೆ. ಅಲ್ಲದೆ ಈ ದಿಸೆಯಲ್ಲಿ ಒಂದು ಶಾಶ್ವತವಾದ ಆಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ.

ಈ ಅರ್ಜಿಯ ವಿಲೇವಾರಿಯಾಗುವುದಕ್ಕೆ ಮೊದಲು ಪ್ರತಿವಾದಿಗಳು ಕೆರೆಯ ಬಳಿಗೆ ಹೋಗದಂತೆ ಮತ್ತು ಅದರಲ್ಲಿಯ ನೀರನ್ನು ಉಪಯೋಗಿಸದಂತೆ ಒಂದು ತಾತ್ಕಾಲಿಕ ಆಜ್ಞೆಯನ್ನು ನೀಡಬೇಕೆಂದು ಫಿರ್ಯಾದುದಾರರು ಪ್ರಾರ್ಥಿಸಿರುತ್ತಾರೆ. ಈ ಕೆರೆಯನ್ನು ನೂರಾರು ವರ್ಷಗಳಿಂದ ಮೇಲ್ವರ್ಗದವರೇ ಪ್ರತ್ಯೇಕವಾಗಿ ಉಪಯೋಗಿಸುತ್ತಾ ಇದ್ದಾರೆ. ೧೯೨೭ರ ಮಾರ್ಚ್ ೧೯ ರಂದು ಪ್ರತಿವಾದಿಗಳ ನೇತೃತ್ವದಲ್ಲಿ ಅಸ್ಪೃಶ್ಯ ಜನಾಂಗಕ್ಕೆ ಸೇರಿದ ಹಲವಾರು ಜನರು ಈ ಕೆರೆಗೆ ಹೋಗಿ ತಮ್ಮ ಮುಖ ಮತ್ತು ಕೈಗಳನ್ನು ತೊಳೆದುಕೊಂಡು ಅಲ್ಲಿಯ ನೀರನ್ನು ಅಪವಿತ್ರಗೊಳಿಸಿದ್ದರು. ಈ ಅಪವಿತ್ರ ಕಾರ್ಯದಿಂದಾಗಿ ಮೇಲ್ವರ್ಗದ ಜನರು ೨೪-೨೫ ಗಂಟೆಗಳ ಕಾಲ, ಅಂದರೆ, ಹಿಂದೂ ಶಾಸ್ತ್ರಗಳಲ್ಲಿ ಹೇಳಿರುವ ರೀತಿಯಲ್ಲಿ ಮತ್ತು ಅಧಿಕ ಹಣವನ್ನು ವ್ಯಯಮಾಡಿ, ಪುಣ್ಯಾಹವಾಚನವನ್ನು ಮಾಡುವವರೆಗೆ, ಸದರಿ ಕೆರೆಯ ನೀರನ್ನು ಉಪಯೋಗಿಸಲು ಸಾಧ್ಯವಾಗಲಿಲ್ಲ ಮತ್ತು ಇದು ಮೇಲ್ವರ್ಗದ ಹಿಂದೂಗಳಿಗೆ ಅಪಾರವಾದ ತೊಂದರೆಯನ್ನುಂಟುಮಾಡಿದೆ. ಅಲ್ಲದೆ, ಈಗ, ಅಸ್ಪೃಶ್ಯವರ್ಗದವರು ಒಂದು ಜಾಹಿರಾತನ್ನು ನೀಡಿ ಮತ್ತೆ ತಾವು ಕೆರೆಗೆ ಹೋಗಿ ಅಲ್ಲಿನ ನೀರನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಅವರು ಹಾಗೆ ಮಾಡಿದ್ದೇ ಆದರೆ, ಮತ್ತು ಈ ಫಿರ್ಯಾದಿನಲ್ಲಿ ಕೋರಿಕೊಂಡಿರುವ ಹಾಗೆ ತಾತ್ಕಾಲಿಕ ಆಜ್ಞೆಯನ್ನು ನೀಡಿ ಅಸ್ಪೃಶ್ಯವರ್ಗಗಳವರು ಅವರು ಉದ್ದೇಶಿಸಿರುವ ಹಾಗೆ ಈ ಕೆರೆಯ ನೀರನ್ನು ಅಪವಿತ್ರಗೊಳಿಸದ ಹಾಗೆ ಮಾಡದೆ ಹೋದರೆ ಶಾಸ್ತ್ರಗಳ ಪ್ರಕಾರ, ಮೇಲ್ವರ್ಗದ ಹಿಂದೂಗಳು ಸದರಿ ಕೆರೆಯ ನೀರನ್ನು ಉಪಯೋಗಿಸಿಕೊಳ್ಳುವ ಹಾಗೆಯೇ ಇರುವುದಿಲ್ಲ ಮತ್ತು ಇದು ಅವರಿಗೆ ಸಂಕಷ್ಟಗಳ ಸರಮಾಲೆಯನ್ನೇ ತಂದೊಡ್ಡುತ್ತದೆ.

a) ಫಿರ್ಯಾದುದಾರರು ಉಲ್ಲೇಖ ಮಾಡಿರುವ ಸ್ವತ್ತಿಗೆ ಹಾಳಾಗುವ, ಅಪಾಯ ಒದಗುವ ಸಂದರ್ಭ ಕಂಡು ಬಂದಲ್ಲಿ ಅಥವಾ b) ಪ್ರತಿವಾದಿಗಳು ತಮ್ಮ ಸಾಲವನ್ನು ತೀರಿಸಲು ಮೇಲ್ಕಂಡ ಸ್ವತ್ತನ್ನು ಮಾರುವ ಅಪಾಯ ಕಂಡುಬಂದಲ್ಲಿ ತಾತ್ಕಾಲಿಕ ತಡೆಯಾಜ್ಞೆ ನೀಡಬಹುದು. ಇಲ್ಲಿ b) ಅಂಶದ ಪ್ರಶ್ನೆಯಂತೂ ಉದ್ಭವವಾಗುವುದಿಲ್ಲ. ಆದರೆ a) ಅಂಶಕ್ಕೆ ಈ ಮೇಲಿನ ಮೊಕದ್ದಮೆ ಸೇರ್ಪಡೆ ಆಗುತ್ತದೆ.

ಇಲ್ಲಿ ನಮ್ಮ ಗಮನ ಇರುವುದು ಒಂದು ಕೆರೆಯ ಬಗ್ಗೆ. ಹಲವಾರು ವರ್ಷಗಳಿಂದ ಮೇಲ್ವರ್ಗದ ಜನರೇ ಇದರ ಉಪಯೋಗವನ್ನು ಅನುಭವಿಸಿಕೊಂಡು ಬಂದಿದ್ದಾರೆ. ಪ್ರತಿವಾದಿಗಳು ಸಲ್ಲಿಸಿರುವ ಅರ್ಜಿಯಿಂದ ತಿಳಿದು ಬರುವ ಅಂಶವೆಂದರೆ ಅಸ್ಪೃಶ್ಯರು ಇದುವರೆಗೂ ತಮಗೆ ಈ ಕೆರೆಯ ಮೇಲೆ ಯಾವುದೇ ಹಕ್ಕು ಇಲ್ಲ ಎಂಬ ತಿಳಿವಳಿಕೆಯಲ್ಲಿ ಇದ್ದರು. ಇದರಿಂದಾಗಿ ಇದುವರೆಗೂ ಈ ಕೆರೆಯ ಉಪಯೋಗವನ್ನು ಮೇಲ್ವರ್ಗದ ಜನರೇ ಅನುಭವಿಸಿಕೊಂಡು ಬಂದಿದ್ದಾರೆ. ಇದೀಗ ಎದುರಿಗಿರುವ ಪ್ರಶ್ನೆ ಎಂದರೆ ನ್ಯಾಯನಿರ್ಧಾರ ಆಗುವವರೆಗೂ ಹಿಂದಿನ ಪರಿಸ್ಥಿತಿಯನ್ನೇ ಮುಂದುವರಿಯಲು ಬಿಡಬೇಕೇ ಅಥವಾ ಬೇಡವೇ ಎಂಬುದು.

ಸಾರ್ವಜನಿಕ ನ್ಯಾಯ ಸಂಹಿತೆಯ ಮೇಲಿನ ಮುಲ್ಲಾ ಅವರ ವ್ಯಾಖ್ಯಾನದ ಎಂಟನೆಯ ಸಂಪುಟದ

೮೯೨ನೆಯ ಪುಟದಲ್ಲಿ ಈ ತಾತ್ಕಾಲಿಕ ತಡೆಯಾಜ್ಞೆ ನೀಡಬೇಕೆಂದರೆ ಪಾಲಿಸಬೇಕಾಗಿರುವ ಅಂಶಗಳನ್ನು ಪಟ್ಟಿ ಮಾಡಲಾಗಿದೆ. ಅದರಲ್ಲಿ ಮುಖ್ಯವಾದ ಅಂಶವೆಂದರೆ ಸಂಬಂಧಿಸಿದ ಎರಡೂ ಪಕ್ಷದವರ ನಡುವೆ ಇರುವ ವ್ಯಾಜ್ಯವು ವಾಸ್ತವಿಕವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ವಿಷಯದಲ್ಲಿ ನನಗೆ ಯಾವುದೇ ಅನುಮಾನವೂ ಇಲ್ಲ. ಎರಡನೆಯ ಅಂಶವೆಂದರೆ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡದೆ ಇದ್ದರೆ, ಸಂಬಂಧಪಟ್ಟ ಎರಡು ಪಕ್ಷಗಳಲ್ಲಿ ಸಂಭವನೀಯ ವಿಜಯಿಗಳಿಗೆ ಆಗಬಹುದಾದ ತೊಂದರೆಗಳನ್ನು ಗಮನದಲ್ಲಿರಿಸಿಕೊಂಡಿರಬೇಕು ಎಂಬುದು. ನನ್ನ ಅಭಿಪ್ರಾಯದಲ್ಲಿ, ತಾತ್ಕಾಲಿಕ ಅಜ್ಞೆಯನ್ನು ನೀಡದೇ ಇದ್ದರೆ ಫಿರ್ಯಾದುದಾರರು ತೀವ್ರವಾದ ತೊಂದರೆಗೆ ಒಳಗಾಗುತ್ತಾರೆ. ಈ ಅಂಶವು ಬಹಳ ಸ್ಪಷ್ಟವಾಗಿದ್ದು, ಇದರ ಬಗೆಗೆ ಹೆಚ್ಚಿನ ವಿಚಾರಮಾಡುವ ಅಗತ್ಯವಿಲ್ಲ.

ಒಂದು ವೇಳೆ ಅರ್ಜಿದಾರರ ಪ್ರತಿವಾದಿಗಳಿಗೆ ಕೆರೆಗೆ ಪ್ರವೇಶವನ್ನು ಕಲ್ಪಿಸಿದರೆ (ಸಂಪ್ರದಾಯವಾದಿಗಳ ಪ್ರಕಾರ) ನೀರು ಕಲುಷಿತವಾಗುತ್ತದೆ. ಆದ್ದರಿಂದ ಬಹಳ ಜನರನ್ನು ತೊಂದರೆಗೆ ಸಿಲುಕಿಸಿದಂತೆ ಆಗುತ್ತದೆ. ಕಲ್ಕತ್ತಾದ ೪೬ನೆಯ ಇಂಡಿಯನ್ ಲಾ ರಿಪೋರ್ಟ್ (ಐ.ಎಲ್.ಆರ್)ನ ೧೦೩೦ನೆಯ ಪುಟದಲ್ಲಿರುವ ಟೀಕೆಯ ಪ್ರಕಾರ, ಫಿರ್ಯಾದುದಾರರು ಕೋರಿರುವ ಪ್ರಕಾರ ಆಜ್ಞೆಯನ್ನು ನೀಡದಿದ್ದ ಪಕ್ಷದಲ್ಲಿ ಮತ್ತು ಕೆರೆಯ ನೀರನ್ನು ಅಪವಿತ್ರಗೊಳಿಸಲು ಅವಕಾಶವನ್ನು ಮಾಡಿಕೊಟ್ಟ ಪಕ್ಷದಲ್ಲಿ, ಫಿರ್ಯಾದುದಾರರಿಗೆ ಪರಿಹಾರಮಾಡಲಾಗದಂತಹ ಸಂಕಷ್ಟಗಳು ಸಂಭವಿಸುತ್ತವೆ. ಅವರ ಧಾರ್ಮಿಕ ಭಾವನೆಗಳನ್ನು ಹಾಗೂ ಸಂಬಂಧಿಸಿದ ಎರಡೂ ಸಮುದಾಯಗಳ ನಡುವೆ ಬಹಳ ಹಿಂದಿನ ಕಾಲದಿಂದಲೂ ಇರುವ ಅಂತರವನ್ನು ಗಮನಿಸಿ ನಾನು ಈ ಭಾವನಾತ್ಮಕ ವಿಷಯಗಳಿಗೆ ಹೆಚ್ಚಿನ ಒತ್ತನ್ನು ನೀಡುತ್ತೇನೆ.

ಈ ಫಿರ್ಯಾದನ್ನು ಮೊದಲನೆಯ ಫಿರ್ಯಾದುದಾರನ ಸಂಗಡ ಇತರರೂ ಬೆಂಬಲಿಸಿದ್ದಾರೆ. ನಗರಸಭೆಯವರು ಇಲ್ಲಿನ ಪ್ರಮಾಣಪತ್ರಕ್ಕೆ ಸಹಿಹಾಕಿರುವವರಲ್ಲಿ ಒಬ್ಬರಾದ ದಿವಾಕರ್ ಜೋಷಿ ಎಂಬುದವರಿಗೆ ಚಾವ್ದಾರ್ ಕೆರೆಯ ಪಕ್ಷದಲ್ಲಿರುವ ಕಲ್ಲಿನ ಕಟ್ಟೆಯನ್ನು ದುರಸ್ತಿಮಾಡುವಂತೆ ನೀಡಿರುವ ಪತ್ರವನ್ನು ಹಾಗೂ ಧರಪ್ ಕುಟುಂಬಕ್ಕೆ ಸೇರಿದ, ಒಂದು ನೂರುವರ್ಷಕ್ಕೂ ಹೆಚ್ಚು ಹಳೆಯದಾದ ಪಾಲುಮಾಡಿಕೊಂಡಿರುವ ಪತ್ರವನ್ನೂ ಈ ಫಿರ್ಯಾದಿಗೆ ನಾಲ್ಕನೆಯ ಅನುಬಂಧವಾಗಿ ಲಗತ್ತಿಸಲಾಗಿದೆ. ಈ ಪತ್ರದಲ್ಲಿ ಪಾಲುಮಾಡಿಕೊಂಡಿರುವ ಆಸ್ತಿಯಲ್ಲಿ ಈ ಕೆರೆಯೂ ಸೇರಿದೆ. ಈ ಎರಡೂ ದಾಖಲೆಗಳು ಸದರಿ ಕೆರೆಯು ಖಾಸಗಿ ಆಸ್ತಿ ಎಂಬುದನ್ನು ಮೇಲುನೋಟಕ್ಕೇ ಸಮರ್ಥಿಸುತ್ತದೆ.

ಈ ಫಿರ್ಯಾದಿನ ಪ್ರಕಾರ ಈಗ ತಾತ್ಕಾಲಿಕ ಆಜ್ಞೆಯನ್ನು ನೀಡಬಹುದೋ ಅಥವಾ ಇಲ್ಲವೋ ಎಂಬುದು ಈಗಿನ ಪ್ರಶ್ನೆ. ತಾತ್ಕಾಲಿಕ ಆಜ್ಞೆಯನ್ನು ನೀಡುವುದಕ್ಕೆ ಸಂಬಂಧಿಸಿದ ಹಾಗೆ ನಿಯಮಗಳನ್ನು ವ್ಯವಹಾರ ಪ್ರಕ್ರಿಯಾ ಸಂಹಿತೆಯ (ಸಿವಿಲ್ ಪ್ರೊಸೀಜ಼ರ್ ಕೋಡ್‌ನ) ೩೯ನೆಯ ಪರಿಚ್ಛೇದದಲ್ಲಿ ನೀಡಿದ್ದಾರೆ.

ಕಾಲಕಳೆದಂತೆ ಜನರು ಸುಶಿಕ್ಷಿತರಾಗುತ್ತಾ ಬಂದಂತೆ, ಈ ಕಂದರ ಸ್ವಲ್ಪ ಮಟ್ಟಿಗೆ ಕಡಿಮೆ ಆಗುತ್ತದೆ ಎಂಬ ವಿಷಯದಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ಅನಂತರ ಎರಡೂ ಜನಾಂಗದವರು ಪರಸ್ಪರ ಪ್ರೀತಿಯಿಂದ – ಸ್ನೇಹದಿಂದ ಬಾಳುತ್ತಾರೆ. ಅಸ್ಪೃಶ್ಯತೆ ಎಂಬುದು ಮರೆಯಾಗಿ ಹೋಗುತ್ತದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಅರ್ಜಿದಾರರ ಭಾವನೆಗಳಿಗೆ ನಾನು ಗೌರವ ನೀಡಲೇಬೇಕಿದೆ. ಅವರು ನೀರು ಕಲುಷಿತವಾಗಲು ಬಿಟ್ಟರೆ ನಮ್ಮ ಗಾಯ ಮಾಯುವುದೇ ಇಲ್ಲ ಎನ್ನುತ್ತಿದ್ದಾರೆ. ಅದನ್ನು ಯಾವುದೇ ರೀತಿಯಿಂದಲೂ ಪರಿಹಾರ ಮಾಡುವುದು ಸಾಧ್ಯವಿಲ್ಲ ಎನ್ನುತ್ತಿದ್ದಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡರೆ ಒಂದು ಅಂಶ ನನಗೆ ಸ್ಪಷ್ಟವಾಗುತ್ತದೆ.

ಅರ್ಜಿದಾರರು ಕೋರಿರುವಂತೆ ತಾತ್ಕಾಲಿಕ ತಡೆಯಾಜ್ಞೆ ನೀಡದೇ ಹೋದರೆ ನಾನು ಕರ್ತವ್ಯಲೋಪ ಎಸಗಿದಂತೆ ಆಗುತ್ತದೆ. ಈ ಕಾರ್ಯವನ್ನು ಮಾಡುವುದು ನನಗೆ ಖಂಡಿತವಾಗಿಯೂ ಅತ್ಯಂತ ದುಃಖವನ್ನು ಉಂಟುಮಾಡುತ್ತಿದ್ದರೂ. ಕರ್ತವ್ಯದಲ್ಲಿ ಇರುವಾಗ ನನಗೆ ಅನ್ಯ ಮಾರ್ಗವೇ ಇಲ್ಲ. ಆದ್ದರಿಂದ ಅರ್ಜಿದಾರರ ಕೋರಿಕೆಯಂತೆ ತಾತ್ಕಾಲಿಕ ತಡೆಯಾಜ್ಞೆ ನಾನು ನೀಡುತ್ತಿದ್ದೇನೆ.

೧೪-೧೨-೨೭ (ಸಹಿ) (ಜಿ.ವಿ.ವೈದ್ಯ)*[೧]

ಇತ್ತ ಶೋಷಿತವರ್ಗದ ಜನರ ನಡುವೆ, ಸಮ್ಮೇಳನ ನಡೆಸಲು ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳಲಾಯಿತು. ಯಾವ ಹಿಂದೂವು ಕೂಡ ತನ್ನ ಜಮೀನನ್ನು ಈ ಕಾರ್ಯಕ್ರಮಕ್ಕೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಿಲ್ಲ. ಆದ್ದರಿಂದ ಅತ್ಯಂತ ಕಷ್ಟದಿಂದ ಒಬ್ಬ ಮುಸಲ್ಮಾನನಿಂದ ಸ್ಥಳವನ್ನು ಪಡೆಯಲಾಯಿತು. ಸ್ಥಳೀಯ ವ್ಯಾಪಾರಿಗಳು ಕೂಡ ಇವರಿಗೆ ಅಗತ್ಯವಿದ್ದ ದವಸ-ಧಾನ್ಯವನ್ನು ಪೂರೈಸಲು ನಿರಾಕರಿಸಿದರು. ಆದ್ದರಿಂದ ಸಮ್ಮೇಳನದ ಆಯೋಜಕರು ಹೊರಗಿನಿಂದಲೇ ಅಗತ್ಯ ವಸ್ತುಗಳನ್ನು ಖರೀದಿಸಬೇಕಾಯಿತು ೧೦ ದಿನಗಳಿಗೆ ಸಾಲುವಷ್ಟು ಸಾಮಗ್ರಿಗಳನ್ನು ಇವರು ಖರೀದಿಸಿದರು. ಅನಂತರಾವ್ ಚಿತ್ರೆ ಎಂಬುವವರು ಅತ್ಯಂತ ಸಮರ್ಥವಾಗಿ ಈ ಕಾರ್ಯವನ್ನು ನಿರ್ವಹಿಸಿದರು. ಸುಬೇದಾರ್ ಘಾಟ್ಗೆ ಎಂಬುವವರಿಗೆ ಆಹಾರ ವ್ಯವಸ್ಥೆ ಹಾಗೂ ಶಿಸ್ತು ಪರಿಪಾಲನೆಯ ಜವಾಬ್ದಾರಿಯನ್ನು ವಹಿಸಿಕೊಡಲಾಗಿತ್ತು. ಸರ್ಕಾರದ ಹಿರಿಯ ಅಧಿಕಾರಿಗಳೆಲ್ಲಾ ಡಿಸೆಂಬರ್ ೧೯ ರಂದು ಮಹದ್‌ನಲ್ಲಿ ಜಮಾಯಿಸಿದರು. ಚಾವ್ದಾರ್ ಕೆರೆಯ ಸುತ್ತಲೂ ಪೋಲಿಸರನ್ನು ನಿಯೋಜಿಸಲಾಯಿತು. ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಡಿಸೆಂಬರ್ ೨೧ ರಿಂದ ತಂಡೋಪತಂಡವಾಗಿ ಮಹದ್‌ಗೆ ಆಗಮಿಸತೊಡಗಿದರು. ಜಿಲ್ಲಾ ನ್ಯಾಯಾಧೀಶರು ನಿತ್ಯವು ಇವರ ಸಮ್ಮೇಳನದ ಸ್ಥಳಕ್ಕೆ ಭೇಟಿ ನೀಡಿ ಸತ್ಯಾಗ್ರಹವನ್ನು ಕೈಗೊಳ್ಳದಂತೆ ಇವರ ಮನವೊಲಿಸಲು ಪ್ರಯತ್ನಪಟ್ಟರು.

ಡಿಸೆಂಬರ್ ೨೪ರ ಬೆಳಿಗ್ಗೆ ಸುಮಾರು ೨೦೦ ಜನ ಪ್ರತಿನಿಧಿಗಳು ಹಾಗೂ ನಾಯಕರೊಂದಿಗೆ ಅಂಬೇಡ್ಕರ್ ಅವರು ಬೊಂಬಾಯಿಯಿಂದ ಹೊರಟರು. ಮರುದಿನ ಮಧ್ಯಾಹ್ನ ಮಹದ್‌ನಿಂದ ೫ ಮೈಲುಗಳ ದೂರದಲ್ಲಿರುವ ದಾಸ್‌ಗಾಂವ್ ಎಂಬ ಸ್ಥಳದಲ್ಲಿ ಬಂದಿಳಿದರು. ಅಲ್ಲಿ ೩೦೦೦ ಜನ ಸತ್ಯಾಗ್ರಹಿಗಳು ತಮ್ಮ ನಾಯಕನ ಆಗಮನವನ್ನೇ ಎದುರು ನೋಡುತ್ತಿದ್ದರು. ಡಾ. ಅಂಬೇಡ್ಕರ್ ಅವರು ಕಣ್ಣಿಗೆ ಬಿದ್ದ ಕೂಡಲೇ ಅವರೆಲ್ಲಾ ಉತ್ಸಾಹಿತರಾಗಿ ಕರತಾಡನದಿಂದ ಅವರನ್ನು ಬರಮಾಡಿಕೊಂಡರು.

ಅವರಿಗೆ ಸ್ವಾಗತವು ದೊರಕಿದ ನಂತರ ಅಂಬೇಡ್ಕರ್ ಅವರನ್ನು ನಗರದ ಪೊಲೀಸ್ ಆಯುಕ್ತರು ಭೇಟಿಯಾಗಿ ಜಿಲ್ಲಾ ನ್ಯಾಯಾಧೀಶರು ನೀಡಿದ್ದ ಪತ್ರವೊಂದನ್ನು ಅವರಿಗೆ ಹಸ್ತಾಂತರಿಸಿದರು. ಅದರಲ್ಲಿ ಅವರು ಕೂಡಲೇ ನ್ಯಾಯಾಧೀಶರನ್ನು ಕಾಣುವಂತೆ ಆದೇಶಿಸಲಾಗಿತ್ತು. ತಮ್ಮ ಸಹವರ್ತಿಗಳಲ್ಲಿ ಒಬ್ಬರಾದಂತಹ ಸಹಸ್ರಬಂಧೆ ಎಂಬುವರೊಂದಿಗೆ ಡಾ. ಅಂಬೇಡ್ಕರ್ ಅವರು ನ್ಯಾಯಾಧೀಶರ ಕಚೇರಿಗೆ ತೆರಳಿದರು. ಇಲ್ಲಿ ನ್ಯಾಯಾಧೀಶರು ಅತ್ಯಂತ ಶಾಂತವಾದ ಆದರೆ ಖಡಾಖಂಡಿತವಾದ ದನಿಯಲ್ಲಿ ಈ ಸಮಾವೇಶವನ್ನು ಮುಂದೂಡುವಂತೆ ಹೇಳಿದರು. ಆದರೆ ಜಿಲ್ಲೆಯ ಅತ್ಯಂತ ಹಿರಿಯ ಅಧಿಕಾರಿಯಾದ ಇವರೊಂದಿಗೆ

---

೧ ಖೈರ್‌ಮೋಡ್ : ಸಂಪುಟ ೩, ಪುಟ ೨೩೪-೨೩೭

ಡಾ. ಅಂಬೇಡ್ಕರ್ ದೃಷ್ಟಿ ಸೇರಿಸಿ ಮಾತನಾಡಲೇ ಇಲ್ಲ. ಆದರೂ ಕಡೆಗೆ ನಡೆದ ಒಪ್ಪಂದದಂತೆ ಅಧ್ಯಕ್ಷರಾಗಿ ಆಗಮಿಸಿದ್ದ ಡಾ. ಅಂಬೇಡ್ಕರ್ ಅವರಿಗೆ (ಸಭೆಯನ್ನು ಉದ್ದೇಶಿಸಿ) ಮಾತನಾಡಲು ಒಂದು ಅವಕಾಶ ನೀಡಬೇಕು ಎಂದು ತಿರ್ಮಾನವಾಯಿತು. ಇತ್ತ ಸಭೆಗೆಂದು ಆಗಮಿಸಿದ್ದ ಪ್ರತಿನಿಧಿಗಳು ಪೋಲಿಸರ ಕಾವಲಿನಲ್ಲಿ ದಾಸ್‌ಗಾಂವ್‌ನಿಂದ ಮಹದ್ ನಗರದತ್ತ ಹೊರಟಿದ್ದರು. ಮಧ್ಯಾಹ್ನ ಸುಮಾರು ೨.೩೦ ಘಂಟೆಯ ಹೊತ್ತಿಗೆ ಅವರು ಮಹದ್ ತಲುಪಿದ್ದರು. ದಾರಿಯುದ್ದಕ್ಕೂ ಅವರು ಹಾಡುಗಳನ್ನು ಹಾಡುತ್ತಿದ್ದರು. ಹಾಗೂ ಆಕಾಶದೆತ್ತರದ ದನಿಯಲ್ಲಿ ಘೋಷಣೆಗಳನ್ನು ಕೂಗುತ್ತಿದ್ದರು. ಈ ದೊಡ್ಡ ಗುಂಪು 'ಶಿವಾಜಿ ಮಹಾರಾಜನಿಗೆ ಜಯವಾಗಲೀ" ಎಂಬ ಘೋಷಣೆಯನ್ನು ಕೂಗುತ್ತಾ ಸಮಾವೇಶದ ಸ್ಥಳ ತಲುಪಿದರು. ಈ ಸಮಾವೇಶದ ಸ್ಥಳದಲ್ಲಿ ಸತ್ಯವನ್ನು ಎತ್ತಿಹಿಡಿಯುವ ಸೂಕ್ತಿಗಳ ಪಠಗಳು ತೂಗಾಡುತ್ತಿದ್ದವು. ಮುಂದಿನ ಬಾಗಿಲಿನ ಮುಂದೆ ಒಂದು ಹಳ್ಳವಿತ್ತು.

ತಮ್ಮ ಸಂದರ್ಶನ ಮುಗಿದ ಕೂಡಲೇ ಡಾ. ಅಂಬೇಡ್ಕರ್ ಅವರು ತರಾತುರಿಯಿಂದ ಸಮಾವೇಶದ ಸ್ಥಳದತ್ತ ತೆರಳಿದರು. ಅಲ್ಲಿ ಅವರು ಸಾಮಾನ್ಯ ಕಾರ್ಯಕರ್ತರೊಂದಿಗೆ ಕುಳಿತು ಆಹಾರ ಸೇವಿಸಿದರು. ವಿಶೇಷ ಆಹಾರವನ್ನು ಅವರು ನಿರಾಕರಿಸಿದರು.

ಈ ಸಮಾವೇಶವು ಸಂಜೆ ೪.೩೦ಕ್ಕೆ ಪ್ರಾರಂಭವಾಯಿತು. ಸತ್ಯಾಗ್ರಹವು ಎಲ್ಲಾ ರೀತಿಯಿಂದಲೂ ಯಶಸ್ವಿ ಆಗಲೀ ಎಂದು ಹಾರೈಸಿ ಹಲವಾರು ಗಣ್ಯರು ಬರೆದಿದ್ದ ಪತ್ರಗಳನ್ನು ಮೊದಲು ಓದಲಾಯಿತು. ಅನಂತರ ಸಮ್ಮೇಳನದ ಅಧ್ಯಕ್ಷರು ಅಧ್ಯಕ್ಷ ಭಾಷಣ ಮಾಡಲು ಎದ್ದರು. ನೆರೆದಿದ್ದ ೧೫ ಸಾವಿರ ಜನರ ಕರತಾಡನ, ಘೋಷಣೆಗಳು ಮುಗಿಲು ಮುಟ್ಟಿತ್ತು. ಅಲ್ಲಿ ನೆರೆದಿದ್ದ ನೂರಾರು ಮಂದಿಗೆ ಬೆನ್ನು ಮುಚ್ಚುವಷ್ಟು ಬಟ್ಟೆಯೂ ಕೂಡ ಇರಲಿಲ್ಲ. ಅವರು ತಲೆಗೆ ಕಟ್ಟಿದ್ದ ಹಳೆಯ ಪೇಟಗಳು ಹರಿದು ಹೋಗಿದ್ದವು. ಕೆನ್ನೆಯ ಮೇಲೆ ಬೆಳೆದಿದ್ದ ಗಡ್ಡದ ಕ್ಷೌರವನ್ನು ಮಾಡಿಕೊಂಡಿರಲಿಲ್ಲ. ಬಿಸಿಲಿನಿಂದ ಸುಟ್ಟಿದ್ದ ಅವರ ಮುಖಗಳಲ್ಲಿ ಯಾವುದೋ ಹೊಸ ಉತ್ಸಾಹ, ಆಸೆ ಎದ್ದು ಕಾಣುತ್ತಿತ್ತು. ನೆರೆದಿದ್ದವರು ಶಾಂತವಾದ ನಂತರ ಡಾ. ಅಂಬೇಡ್ಕರ್ ಅವರು ನಿಧಾನವಾದ ಆದರೆ ಧೃಢವಾದ ಹಾಗೂ ಗಂಭೀರವಾದ ಧ್ವನಿಯಲ್ಲಿ ತಮ್ಮ ಭಾಷಣವನ್ನು ಆರಂಭಿಸಿದರು.

**ಸಾಮಾಜಿಕ ಅಸಮಾನತೆಯ ನಿವಾರಣೆಗಾಗಿ ಡಾ. ಅಂಬೇಡ್ಕರ್ ಅವರ ಮನವಿ:**

೨೫ನೆಯ ಡಿಸೆಂಬರ್ ೧೯೨೭, ಕೊಲಾಬಾ ಜಿಲ್ಲೆ ಮಹದ್‌ನಲ್ಲಿ ಜರುಗಿದ ಸತ್ಯಾಗ್ರಹದ ಅಧ್ಯಕ್ಷರಾಗಿದ್ದ ಡಾ. ಬಿ.ಆರ್.ಅಂಬೇಡ್ಕರ್ (M.A., Phd, DSC, Bar-at-Law MLC) ಇವರ ಭಾಷಣದ ಟಿಪ್ಪಣಿ:

ಸತ್ಯಾಗ್ರಹ ಸಮಿತಿಯ ಪರವಾಗಿ, ಸತ್ಯಾಗ್ರಹಿಗಳನ್ನು ಸ್ವಾಗತಿಸಿದ ಡಾ.ಅಂಬೇಡ್ಕರ್ ಅವರು, ಇದೇ ಸ್ಥಳದಲ್ಲಿ ಮಾರ್ಚ್ ತಿಂಗಳಿನಲ್ಲಿ ಜರುಗಿದ ಸಮಾವೇಶ ದುರಂತದಲ್ಲಿ ಕೊನೆಗೊಂಡ ಬಗೆಯನ್ನು ನೆನೆಸಿಕೊಂಡರು. ಇಲ್ಲಿ ನೆರೆದಿದ್ದ ಹಲವಾರು ಜನರು ಆ ಸಮಯದಲ್ಲಿ ಚಾವ್ದಾರ್ ಕೆರೆಯ ನೀರನ್ನು ಉಪಯೋಗಿಸಿದ್ದರು ಎಂಬ ಕಾರಣಕ್ಕೆ ಹಿಂದೂಗಳ ದಬ್ಬಾಳಿಕೆಗೆ ಒಳಗಾಗಿದ್ದರು. ಚಾವ್ದಾರ್ ಕೆರೆಯಿಂದ ನೀರು ತೆಗೆದುಕೊಳ್ಳಲು ಹೋದ ದಲಿತರಿಗೆ ಯಾರೂ ಅಡ್ಡಿಪಡಿಸಿರಲಿಲ್ಲ ಆದರೆ ಸಮಾವೇಶಕ್ಕೆಂದು ನೆರೆದಿದ್ದ ಜನರಿಗೆ ತೊಂದರೆ ಮಾಡಲು ಕೆಲ ಪುಂಡು ನಾಯಕರು ಮನದಲ್ಲೇ ತೀರ್ಮಾನಮಾಡಿಕೊಂಡಿದ್ದರು. ಸಮಾವೇಶ ಮುಗಿಯುವ ಸಮಯಕ್ಕೆ ಇವರ ಮೇಲೆ ಗುಂಪುಗಳಲ್ಲಿ ಬಂದು ಆಕ್ರಮಣವನ್ನು ಮಾಡಿದ್ದರು. ಹೀಗೆ ಮಾಡಿದ ಕೆಲವರನ್ನು ಬಂಧಿಸಿ ಅವರಿಗೆ ನಾಲ್ಕು ತಿಂಗಳ ಸೆರೆವಾಸವನ್ನು ಸರ್ಕಾರವು ವಿಧಿಸಿತ್ತು.

ಮುಂದುವರಿದ ಡಾ. ಅಂಬೇಡ್ಕರ್ ಹೀಗೆ ಹೇಳಿದರು: ಒಂದು ವೇಳೆ ಹಿಂದೂಗಳೇನಾದರೂ

ಶೋಷಿತ ವರ್ಗದವರಿಗೆ, ಅನುಮತಿ ನೀಡಿದ್ದರೆ ಈ ಸತ್ಯಾಗ್ರಹದ ಆವಶ್ಯಕತೆಯೇ ಇರುತ್ತಿರಲಿಲ್ಲ. ಆದರೆ ದುರದೃಷ್ಟಾವತ್ ಹಿಂದೂ ಜನಾಂಗದವರು ತಮ್ಮ ಅಹಂಕಾರವನ್ನು ಬಿಡುತ್ತಿಲ್ಲ. ಹಿಂದೂಗಳಲ್ಲದವರಿಗೂ ಈ ಕೆರೆಯ ನೀರನ್ನು ಉಪಯೋಗಿಸುವ ಹಕ್ಕು ಇದೆ ಎಂಬುದನ್ನು ಒಪ್ಪಿಕೊಳ್ಳುತ್ತಿಲ್ಲ. ಮಹಮದೀಯರಿಗೆ, ಇತರ ಜಾತಿಗಳವರಿಗೆ ಇಲ್ಲಿಂದ ನೀರು ತೆಗೆದುಕೊಳ್ಳುವ ಅವಕಾಶವಿದೆ. ಆದರೆ ಇಲ್ಲಿ ಅತ್ಯಂತ ದೊಡ್ಡ ವಿಪರ್ಯಾಸವನ್ನು ಗಮನಿಸಿ, ಶೋಷಿತವರ್ಗದ ಜನರು ಸಾಕುವ ಜಾನುವಾರುಗಳಿಗೆ ಈ ಕೆರೆಗೆ ಹೋಗಲು ಅವಕಾಶವಿದೆ. ಆದರೆ ಆ ಪ್ರಾಣಿಗಳ ಯಜಮಾನರಿಗೆ ಮಾತ್ರ ಈ ಅವಕಾಶವಿಲ್ಲ.

ಹಿಂದೂಗಳು ಮಾನವೀಯ ಮೌಲ್ಯಗಳನ್ನು ಉಳ್ಳವರು ಹಾಗೂ ಪ್ರಾಣಿಗಳೆಡೆಗೆ ದಯೆ ಇರುವವರು. ಕೆಲವರಂತೂ ವಿಷಕಾರಿ ಜಂತುಗಳನ್ನು ಕೂಡ ಕೊಲ್ಲುವುದಿಲ್ಲ. ಹಿಂದೂಗಳಲ್ಲಿ 'ಸಾಧು-ಸಂತರ' ದೊಡ್ಡ ಪಡೆಯೇ ಇದೆ. ಅಲ್ಲದೇ ಧೃಡಕಾಯರಾದ ಭಿಕ್ಷುಕರು ಇದ್ದಾರೆ. ಅವರಿಗೆ ಊಟ-ತಿಂಡಿ ಹಣವನ್ನು ನೀಡುವ ಮೂಲಕ ಪುಣ್ಯ ಪಡೆಯಬಹುದು ಎಂದು ಇವರು ಭ್ರಮಿಸಿದ್ದಾರೆ. ಜೀವಂತವಾಗಿ ಇರುವ ಎಲ್ಲಾ ಆತ್ಮಗಳಿಗೂ ಸಮಾನವಾದ ಗೌರವ ನೀಡಬೇಕು ಎಂದೂ ಹಿಂದೂ ಧರ್ಮ ಬೋಧಿಸುತ್ತದೆ. ಭಗವದ್ಗೀತೆಯಲ್ಲಿ ಹಿಂದೂಗಳಿಗೂ ಚಾಂಡಾಲರಿಗೂ ಭೇದ ಭಾವ ಮಾಡಬಾರದು ಎಂದು ಹೇಳಿದೆ.

ಆದ್ದರಿಂದ ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಈ ರೀತಿಯ ಸಂಸ್ಕೃತಿ ಹೊಂದಿರುವ ಅಪಾರವಾದ ದಾನ-ಧರ್ಮಗಳಿಗೆ, ಮಾನವೀಯ ಮೌಲ್ಯಗಳಿಗೆ ಹೆಸರಾಗಿರುವ ಹಿಂದೂಗಳು ತಮ್ಮ ಸೋದರರಂತೆ ಇರುವ ಮನುಷ್ಯರ ವಿಷಯದಲ್ಲಿ ಈ ರೀತಿ ನಡೆದುಕೊಳ್ಳುವುದಾದರೂ ಏತಕ್ಕೆ? ಈ ಪ್ರಶ್ನೆಗೆ ಉತ್ತರ ಹುಡುಕುವುದೇ ಈ ಸಮಾವೇಶದ ಮೂಲ ಉದ್ದೇಶ. ಹಿಂದೂ ಜನಾಂಗವು ಅನಾದಿ ಕಾಲದಿಂದಲೂ ಜಾತೀಯ ವ್ಯವಸ್ಥೆಗೆ ಅಂಟಿಕೊಂಡಿದೆ. ಇದರಲ್ಲಿ ಅದು ಸಾಮಾಜಿಕವಾಗಿ, ಹಕ್ಕು ಬಾಧ್ಯತೆಗಳಿಗೆ ಅನುಗುಣವಾಗಿ ಒಂದು ಜಾತಿ ಮೇಲು, ಒಂದು ಜಾತಿ ಕೀಳು ಎಂಬ ವ್ಯವಸ್ಥೆಗೆ ಒಳಪಟ್ಟಿದೆ. ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಈ ಪದ್ಧತಿಯು ಹೋಗಲಾಡಿಸದಂತೆ ಕೆಲ ಸಮಾಜಘಾತುಕ ಶಕ್ತಿಗಳು ಕಾರ್ಯ ನಿರ್ವಹಿಸುತ್ತಿವೆ.

ಹಿಂದೂ ಜನಾಂಗಕ್ಕೆ ಸೇರಿರುವವರು ಅತ್ಯಂತ ಕಟುವಾಗಿ ಪಂಚಮರನ್ನು (೫ನೆಯ ವರ್ಗಕ್ಕೆ ಸೇರಿದ ಶೋಷಿತ ಜನಾಂಗದವರನ್ನು) ದ್ವೇಷಿಸುತ್ತಾರೆ. ಇವರಿಗೆ ಕೆರೆಯಿಂದ ನೀರು ತೆಗೆದುಕೊಳ್ಳಲು ಅನುಮತಿ ನೀಡುವುದಿಲ್ಲ. ಆದರೆ ಅವರಿಗೆ ಇರುವ ಭಯ ವಾಸ್ತವವಾಗಿ ಕೆರೆ ನೀರು ಬತ್ತಿ ಹೋಗುತ್ತದೆ ಅಥವಾ ಕಲುಷಿತವಾಗುತ್ತದೆ ಎಂಬುದಲ್ಲ. ತಮ್ಮ ಜಾತಿಯ ಮೇಲ್ಮೆಯು ಹೋಗಿಬಿಡುತ್ತದೆ ಎಂಬ ಭಯ ಇವರನ್ನು ಕಾಡುತ್ತಿರುತ್ತದೆ. ಈ ಕೆರೆಯ ನೀರಿನಲ್ಲಿ ಯಾವುದೇ ರೀತಿಯ ಅತ್ಯದ್ಭುತ ಗುಣಗಳೂ ಇಲ್ಲ. ಆದರೆ ನಾವು ಹೋರಾಟ ನಡೆಸುತ್ತಿರುವುದು ಇಲ್ಲಿ ನಮ್ಮ ಹಕ್ಕುಗಳನ್ನು ಸ್ಥಾಪಿಸುವ ಸಲುವಾಗಿ.

### ಸಮಾನತೆಗಾಗಿ ಹೋರಾಟ

ಈ ಸಮಾವೇಶವು ಸಮಾನತೆಯ ಧ್ಯೇಯ ಇರಿಸಿಕೊಂಡೇ ಆರಂಭವಾಯಿತು. ೧೭೮೯ರಲ್ಲಿ ಫ್ರಾನ್ಸ್‌ನಲ್ಲಿ ನಡೆದ ರಾಷ್ಟ್ರೀಯ ಸಮಾವೇಶಕ್ಕೆ ಇದನ್ನು ಹೋಲಿಸಬಹುದು. ಸಾಮಾಜಿಕ, ಧಾರ್ಮಿಕ, ನಾಗರಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಎಲ್ಲಾ ರೀತಿಯ ಸಮಾನತೆಗೆ ನಮ್ಮ ಈ ಸಮಾವೇಶ ಹೋರಾಟ ನಡೆಸಲಿದೆ. ಜಾತಿ ವ್ಯವಸ್ಥೆ ಎಂಬ ಕಬ್ಬಿಣದ ಪಂಜರವನ್ನು ನಾವು ತೊಡೆದು ಹಾಕುವ ನಮ್ಮ ಘೋಷಿತ ಉದ್ದೇಶವನ್ನು ಕಾರ್ಯಗತಗೊಳಿಸುತ್ತೇವೆ.

## ಕೆಳಮಟ್ಟದ ಧ್ಯೇಯವನ್ನು ಇರಿಸಿಕೊಳ್ಳುವುದು ಒಂದು ಅಪರಾಧ

ಈ ಸಮಾವೇಶವು ಕೇವಲ ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರೆ ಸಾಕು ಎಂಬ ಮನೋಭಾವ ಕೆಲವರಿಗೆ ಇತ್ತು. ಜಾತಿಯ ವ್ಯವಸ್ಥೆಯತ್ತ ಇದು ಗಮನ ಹರಿಸುವ ಅಗತ್ಯವೇ ಇರಲಿಲ್ಲ. ಆದರೆ ಜಾತಿಯ ವ್ಯವಸ್ಥೆಯಲ್ಲಿ ತಾಂಡವವಾಡುತ್ತಿರುವ ಅಸಮಾನತೆಯನ್ನು ಬದಿಗೊತ್ತಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪ್ರಯತ್ನಪಡುತ್ತೇವೆ ಎನ್ನುವುದು ಒಂದು ಸೂಕ್ತ ಗುರಿ ಆಗುವುದಿಲ್ಲ. ನಾವು ಒಂದು ಅಂಶವನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. "ವಿಫಲತೆ ದೋಷ ಅಲ್ಲ. ಆದರೆ ಕೆಳಮಟ್ಟದ ಗುರಿಯನ್ನು ಹೊಂದುವುದೇ ಒಂದು ಅಪರಾಧ. ನಾವು ದುಷ್ಕರ್ಮಗಳನ್ನು ಬುಡದಿಂದ ಕಿತ್ತೊಗೆಯುವ ಪ್ರಯತ್ನಪಡೋಣ. ಕೇವಲ ನಮ್ಮನ್ನು ಕಾಡುತ್ತಿರುವ ಸಮಸ್ಯೆಗಳತ್ತ ಮಾತ್ರವೇ ಗಮನ ಹರಿಸುವುದು ಬೇಡ. ಒಂದು ರೋಗದ ಪತ್ತೆ ಸರಿಯಾದ ರೀತಿಯಲ್ಲಿ ಆಗದೇ ಹೋದರೆ, ಅದರ ನಿವಾರಣೆ ಕೂಡ ಸರಿಯಾದ ರೀತಿಯಲ್ಲಿ ಆಗಲು ಸಾಧ್ಯವಿಲ್ಲ. ಹಾಗೂ ಅದರಿಂದ ಗುಣಮುಖವಾಗುವುದನ್ನು ಮುಂದಕ್ಕೆ ಹಾಕಿದಂತೆ ಆಗುತ್ತದೆ.

ಅಸ್ಪೃಶ್ಯತೆ, ಕೆಳವರ್ಗದವರೊಂದಿಗೆ ಸಹಪಂಕ್ತಿ ಭೋಜನ ಮಾಡದಿರುವುದು ಮುಂತಾದವುಗಳನ್ನು ತೆಗೆದು ಹಾಕುವುದು ಮಾತ್ರ ಅಲ್ಲ, ಹಿಂದೂಗಳಲ್ಲಿ ಅಂತರ್ಜಾತೀಯ ವಿವಾಹ ಮಾಡಿಕೊಳ್ಳುವುದು ಕೂಡ ಸರ್ವೇಸಾಮಾನ್ಯ ಸಂಗತಿ ಆಗಬೇಕು. ಇದರಿಂದ ಮಾತ್ರವೇ ನಿಜವಾದ ಅರ್ಥದಲ್ಲಿ ನಾವು ಸಮಾನತೆಯನ್ನು ಸಾಧಿಸುವುದು ಸಾಧ್ಯ. ಒಂದು ವೇಳೆ ಮುಂದಿನ ದಿನಗಳಲ್ಲಿ ನಾವು ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇವೆ ಎಂದುಕೊಂಡರೂ ಈಗಿರುವ ಅಸ್ಪೃಶ್ಯರ ಪಾಡೇನು? ಹೆಚ್ಚೆಂದರೆ ಅವರನ್ನು "ಶೂದ್ರರು" ಎಂದು ಕರೆಯಬಹುದು. ಆದರೆ ಈ ಶೂದ್ರರಿಗೆ ಸಿಗುವಂತಹ ಹಕ್ಕಾದರೂ ಎಂತಹುದು? ಇವರನ್ನು ಹೀನಾಯ ದೃಷ್ಟಿಯಿಂದ ನೋಡುತ್ತಿರುವವರು ಮುಂದೆಯೂ ಅದೇ ದೃಷ್ಟಿಯಿಂದಲೇ ನೋಡುತ್ತಾರೆ. ಆದ್ದರಿಂದ "ಶೂದ್ರರು" ಎಂದು ಪರಿಗಣಿಸಲ್ಪಡಲು ನೀವು ಇಷ್ಟಪಡುತ್ತೀರಾ? ಕೆಳವರ್ಗದವರಾಗಿಯೇ ಇರುವ ಇಚ್ಚೆ ನಿಮಗೆ ಇದೆಯೇ? ನಿಮ್ಮ ಹಣೆಯ ಬರಹವನ್ನು ಮೇಲ್ವರ್ಗದವರ ಸುಪರ್ದಿಗೆ ಒಪ್ಪಿಸಲು ನೀವು ಸಿದ್ಧರಾಗಿದ್ದೀರಾ?

## ಸ್ವಸಹಾಯ

ಸಮಾನತೆಯ ಅಡಿಪಾಯದ ಮೇಲೆ ಹಿಂದು ಸಮಾಜದ ಪುನರ್ನಿರ್ಮಾಣವು ಆಗಬೇಕು ಎಂದರೆ, ಜಾತಿ ವ್ಯವಸ್ಥೆಯು ನಾಶವಾಗಬೇಕು. ಇದರಲ್ಲಿ ಯಾವುದೇ ರೀತಿಯ ಸಂದೇಹವೂ ಇಲ್ಲ. ಅಸ್ಪೃಶ್ಯತೆಯ ಬೇರುಗಳು ಅಡಗಿರುವುದು ಜಾತಿಯ ವ್ಯವಸ್ಥೆಯಲ್ಲಿಯೇ. ಬ್ರಾಹ್ಮಣರು ಜಾತೀಯ ವ್ಯವಸ್ಥೆಯ ವಿರುದ್ಧ ಸಿಡಿದು ಏಳಲಿ ಎಂದು ನಾವು ಆಸೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಈ ಜಾತಿಯ ವ್ಯವಸ್ಥೆಯಿಂದಲೇ ಅವರಿಗೆ ಕೆಲ ವಿಶೇಷವಾದ ಹಾಗೂ ವಿಶಿಷ್ಟವಾದ ಹಕ್ಕುಗಳು ದೊರೆತಿವೆ. ಹಿಂದೂ ಸಮಾಜದಲ್ಲಿ ಅವರಿಗೆ ಅಗ್ರಗಣ್ಯ ಸ್ಥಾನ ನೀಡಲಾಗಿದೆ. ಈ ರೀತಿಯ ವಿಶೇಷ ಸ್ಥಾನವನ್ನು ಬಿಟ್ಟುಕೊಡಲು ಅವರೇಕೆ ಇಚ್ಚಿಸುತ್ತಾರೆ? ಆದರೆ ಇದೇ ಪರಿಸ್ಥಿತಿ ಹಿಂದೆ ಜಪಾನಿನಲ್ಲಿ ಉದ್ಭವಿಸಿದಾಗ "ಸಮುರಾಯಿ" ಗಳು ತಮಗಿದ್ದ ಎಲ್ಲಾ ವಿಶೇಷ ಸವಲತ್ತುಗಳನ್ನು ಹಿಂದಿರುಗಿಸಿದ್ದರು. ಆದರೆ ನಮ್ಮ ದೇಶದ ಬ್ರಾಹ್ಮಣರಿಂದ ನಾವಿದನ್ನು ಅಪೇಕ್ಷಿಸುವುದು ಸಾಧ್ಯವೇ ಇಲ್ಲ. ಇತ್ತ ಬ್ರಾಹ್ಮಣೇತರರ ಮೇಲೂ ನಾವು ಅವಲಂಬಿತರಾಗುವಂತೆ ಇಲ್ಲ. ಇವರೆಲ್ಲಾ ಈಗಲೂ

ಜಾತಿ ವ್ಯವಸ್ಥೆಯ ಕೈಗೊಂಬೆಗಳಾಗಿಯೇ ಇದ್ದಾರೆ ಹಾಗೂ ಬ್ರಾಹ್ಮಣರ ಬಿಗಿಮುಷ್ಠಿಯ ಹಿಡಿತದಲ್ಲಿ ಇದ್ದಾರೆ. ಹೀಗೆ ಬ್ರಾಹ್ಮಣರಿಂದ ತುಳಿತಕ್ಕೆ ಒಳಗಾಗಿರುವವರು. ಅವರನ್ನು ಕೆಳಗೆ ಎಳೆಯುವತ್ತ ಗಮನ ಹರಿಸುತ್ತಿದ್ದಾರೆಯೇ ಹೊರತು ತಾವು ಮೇಲೇಳುವ ಪ್ರಯತ್ನ ಪಡುತ್ತಿಲ್ಲ. ಅವರು ತಮಗಿಂತ ಕೆಳಮಟ್ಟದಲ್ಲಿ ಕೆಲ ಜನರು ಸಮಾಜದಲ್ಲಿ ಇರಲಿ ಎಂದು ಅಪೇಕ್ಷೆ ಪಡುತ್ತಿದ್ದಾರೆ. ಅವರನ್ನು ಕೀಳು ದೃಷ್ಟಿಯಲ್ಲಿ ಕಾಣುವ ಉದ್ದೇಶ ಹೊಂದಿದ್ದಾರೆಯೇ ಹೊರತು, ತಾವು ಮೇಲೆ ಏಳುವ ಪ್ರಯತ್ನ ಪಡುತ್ತಿಲ್ಲ. ಅವರಿಗಿಂತ ಕೆಳಮಟ್ಟದವರನ್ನು ನೋಡಿ ಸಂತೋಷಪಡುವುದರಲ್ಲೇ ತೃಪ್ತರಾಗಿರುತ್ತಾರೆ. ಆಗ ತಾವು ಅತ್ಯಂತ ಕೀಳು ಮಟ್ಟದ ವರ್ಗಕ್ಕೆ ಸೇರಿಲ್ಲ ಎಂಬ ತೃಪ್ತಿ ಅವರದ್ದಾಗುತ್ತದೆ. ಇದರ ಅರ್ಥ ನಮ್ಮ ಹೋರಾಟಗಳಿಗೆ ಇತರರ ಮೇಲೆ ಅವಲಂಬಿತವಾಗದೇ ನಾವೇ ನಡೆಸಬೇಕು. ನಾವು ಈ ದೇಶದ ಅತ್ಯಂತ ಕೆಳ ಮಟ್ಟದ ಜನ. ಸೇನೆ, ಪೋಲಿಸ್ ಇಲಾಖೆ ಹಾಗು ಸಾರ್ವಜನಿಕ ಇಲಾಖೆಯ ಕೆಲಸಗಳೂ ನಮಗೆ ದೊರೆಯುವುದು ದುಸ್ತರವಾದ ಸಂಗತಿಯೇ. ಹಲವಾರು ಕೆಲಸ, ವೃತ್ತಿಗಳಿಂದಲೂ ನಮ್ಮನ್ನು ಹೊರಗೆ ಇಡಲಾಗಿದೆ. ಇದರಿಂದಾಗಿ ನಾವು ಆರ್ಥಿಕ ದುಃಸ್ಥಿತಿಯನ್ನು ತಲುಪಿದ್ದೇವೆ. ಇವೆಲ್ಲದಕ್ಕೂ ಕಾರಣ ಅಸ್ಪೃಶ್ಯತೆ ಹಾಗು ನಮಗೆ ಸಮಾಜದಲ್ಲಿ ಇರುವ ಅತ್ಯಂತ ಕೆಳಮಟ್ಟದ ಸ್ಥಿತಿ. ಮಾನವ ಹಕ್ಕುಗಳು ಹಾಗು ನಾಗರಿಕ ಹಕ್ಕುಗಳಿಗಾಗಿ ನಾವು ಹೋರಾಡದೇ ಇದ್ದರೆ ನಾವು ಎಂದೆಂದಿಗೂ ಇದೇ ಸ್ಥಿತಿಯಲ್ಲಿಯೇ ಇರಬೇಕಾಗುತ್ತದೆ.

### ರಾಷ್ಟ್ರಕ್ಕಾಗಿ ನಾವು ಸಲ್ಲಿಸುವ ಅತ್ಯಂತ ಪ್ರಾಮಾಣಿಕ ಸೇವೆ

ನಮ್ಮ ಹೋರಾಟದ ಗುರಿಯೇ ವಿಭಿನ್ನವಾಗಿದೆ. ಅದನ್ನು ಕೇವಲ ನಮ್ಮಲ್ಲಿ ಇರುವಂತಹ ನ್ಯೂನತೆಗಳನ್ನು ಹೋಗಲಾಡಿಸಲು ಮಾತ್ರ ಅಲ್ಲ; ಬದಲಾಗಿ ಒಂದು ಸಾಮಾಜಿಕ ಕ್ರಾಂತಿಯನ್ನು ಮಾಡುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದೆ. ಈ ಕ್ರಾಂತಿಯು ಮಾನವ ನಿರ್ಮಿತವಾದ ಎಲ್ಲಾ ಅಡೆತಡೆಗಳನ್ನು ತೊಡೆದು ಹಾಕಲಿದೆ; ಜಾತಿ ವ್ಯವಸ್ಥೆಯಿಂದ ಉಂಟಾದ ಭೇದಭಾವವನ್ನು ತೊಡೆದು ಹಾಕಿ, ಎಲ್ಲರಿಗೂ ಸಮಾನವಾದ ಅವಕಾಶಗಳನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿದೆ. ತನ್ನ ಸಾಮರ್ಥ್ಯದಿಂದ ಮಾತ್ರವೇ ಮನುಷ್ಯ ಅತ್ಯಂತ ಉನ್ನತ ಹುದ್ದೆಗೆ ಏರಬಲ್ಲ ಎಂಬುದನ್ನು ತೋರ್ಪಡಿಸಲು ಕಾತರವಾಗಿದೆ. ಸಾಮಾಜಿಕ ಹಕ್ಕಿಗೆ ಯಾವುದೇ ಅಡೆ ತಡೆ ಉಂಟಾಗದಂತೆ ನೋಡಿಕೊಳ್ಳುವ ಉದ್ದೇಶವನ್ನು ಹೊಂದಿದೆ ಒಂದು ವೇಳೆ ನಾವು ಈ ಹೋರಾಟದಲ್ಲಿ ಯಶಸ್ವಿಯಾದರೆ ನಾವು ಇಡೀ ರಾಷ್ಟ್ರಕ್ಕೆ ಅದರಲ್ಲಿಯೂ ಮುಖ್ಯವಾಗಿ ಹಿಂದೂ ಜನಾಂಗಕ್ಕೆ ಅತ್ಯಂತ ಮಹತ್ವಪೂರ್ಣ ಕೊಡುಗೆ ನೀಡಿದಂತೆ ಆಗುತ್ತದೆ. ಈಗಿರುವ ಜಾತಿ ಪದ್ಧತಿಯೇ ಈ ದೇಶಕ್ಕೆ ಅತ್ಯಂತ ದೊಡ್ಡ ಶಾಪವಾಗಿ ಪರಿಣಮಿಸಿದೆ. ನಮ್ಮ ಹೋರಾಟದ ಧ್ಯೇಯೋದ್ದೇಶವೇ ಸ್ವಸಬಲೀಕರಣ. ಏಕತೆ ಅಲ್ಲದೇ ಸಮಾನತೆ, ಸ್ವಾತಂತ್ರ್ಯ ಹಾಗು ಸಮಾನ ಹಕ್ಕುಗಳ ಸ್ಥಾಪನೆ ಕೂಡ ನಮ್ಮ ಧ್ಯೇಯವಾಗಿದೆ. ಅತ್ಯಂತ ಶಾಂತ ರೀತಿಯಲ್ಲಿ ನಾವು ನಮ್ಮ ಹೋರಾಟ ನಡೆಸಲು ಇಚ್ಛಿಸಿದ್ದೇವೆ. ಆದರೆ ಈ ಉದ್ದೇಶದಲ್ಲಿ ನಾವು ಎಷ್ಟರ ಮಟ್ಟಿನ ಅಹಿಂಸಾವಾದಿಗಳಾಗಿ ಮುಂದುವರಿಯತ್ತೇವೆ ಎಂಬುದು ನಮ್ಮ ಶತ್ರುಗಳ ಮೇಲೆ ಅವಲಂಬಿತವಾಗಿದೆ. ನಾವೇನೂ ಅಂತಹ ಹಠವಾದಿಗಳಲ್ಲ. ಆದರೆ ತಲತಲಾಂತರದಿಂದ ನಮ್ಮ ಶತ್ರುಗಳು ನಮ್ಮನ್ನು ಹಠವಾದಿಗಳು ಎಂಬ ಆರೋಪ ಹೊರಿಸುತ್ತಲೇ ಬಂದಿದ್ದಾರೆ ಎನ್ನುವುದೇ ಅತ್ಯಂತ ದೊಡ್ಡ ವಿಪರ್ಯಾಸ. ಹಿಂದಿನ ಕಾಲದಲ್ಲಿ ಕುರುಡು ಕುರುಡಾಗಿ ರಚಿಸಲ್ಪಟ್ಟಿರುವ “ಶಾಸ್ತ್ರಗಳನ್ನು” ನಾವು ನಂಬುವುದಿಲ್ಲ. ನಾವು ಕೇವಲ ಮನುಷ್ಯತ್ವ ಹಾಗು ನ್ಯಾಯಯುತ ನಡತೆಗಾಗಿ ಹೋರಾಡುತ್ತೇವೆ.

ಇದಾದ ನಂತರ ಶ್ರೀ ಜಿ.ಎನ್. ಶಾಸ್ತ್ರಬುದ್ಧೇ ಎಂಬ ಬ್ರಾಹ್ಮಣ, “ಮನುಸ್ಮೃತಿ”ಯಿಂದ ಕೆಲ ಆಯ್ದ

ಭಾಗಗಳನ್ನು ಓದಿದರು. ಶೂದ್ರರನ್ನು ಯಾವ ರೀತಿ ನಡೆಸಿಕೊಳ್ಳಬೇಕು ಎಂಬುದಕ್ಕೆ ಸಂಬಂಧಿಸಿದ್ದ ಬರವಣಿಗೆಗಳು ಆದಾಗಿತ್ತು.

**ಮನುಸ್ಮೃತಿಯನ್ನು ಸುಟ್ಟು ಹಾಕಿರಿ**

ಈ ಹೋರಾಟದಲ್ಲಿ ಕೈಗೊಂಡ ಮೊದಲ ನಿರ್ಣಯ ಕೆಳಗಿನಂತಿತ್ತು.

ಮನುಸ್ಮೃತಿಯಲ್ಲಿ ಹಾಗು ಇತರ ಕೆಲ ಪುಸ್ತಕಗಳಲ್ಲಿ ಆಗಿರುವಂತಹ ಉಲ್ಲೇಖಗಳು ಅತ್ಯಂತ ಹೀನಾಯವಾಗಿವೆ. ಇವುಗಳು ಸ್ಪಷ್ಟವಾಗಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡುತ್ತಿವೆ. ಈ ಸಭೆಯು ಇದನ್ನು ಖಂಡಿಸುತ್ತದೆ ಹಾಗೂ ಹಿಂದೂ ಸಮಾಜದ ನವ ನಿರ್ಮಾಣಕ್ಕಾಗಿ ಇವುಗಳನ್ನು ಸುಟ್ಟು ಹಾಕಬೇಕು ಎಂಬ ನಿರ್ಣಯವನ್ನು ತೆಗೆದುಕೊಂಡಿದೆ.

ಅಲ್ಲದೇ ಈ ನಿರ್ಣಯದಲ್ಲಿ ಮತ್ತೊಂದು ಅಂಶವನ್ನು ಉಲ್ಲೇಖ ಮಾಡಲಾಗಿತ್ತು. ಅದೇನೆಂದರೆ ಎಲ್ಲಾ ಹಿಂದೂಗಳನ್ನು ಒಂದೇ ವರ್ಣಕ್ಕೆ ಸೇರ್ಪಡೆ ಮಾಡಬೇಕು. ಅಂತೆಯೇ ಇದಕ್ಕೆ ಸಂಬಂಧ ಪಟ್ಟಂತೆ ಇರುವ ಕಾನೂನನ್ನು ಕೂಡ ಮಾರ್ಪಾಡು ಮಾಡಬೇಕು. ಬ್ರಾಹ್ಮಣರು, ಕ್ಷತ್ರಿಯರು ಎಂಬ ಪದಗಳ ಪ್ರಯೋಗವನ್ನು ನಿಲ್ಲಿಸಬೇಕು.

ಮತ್ತೊಂದು ನಿರ್ಣಯವನ್ನು ಕೂಡ ಈ ಸಮಯದಲ್ಲಿ ಕೈಗೊಳ್ಳಲಾಯಿತು. ಅದೇನೆಂದರೆ, ಹಿಂದೂ ಪುರೋಹಿತರ ಆಯ್ಕೆಗಾಗಿ ಪರೀಕ್ಷೆಗಳು ನಡೆಯಬೇಕು ಹಾಗು ಅದರಲ್ಲಿ ಉತ್ತೀರ್ಣರಾದವರನ್ನು ಮಾತ್ರವೇ ಆಯ್ಕೆ ಮಾಡಬೇಕು.

ಈ ಭಾಷಣಗಳಲ್ಲಿ ಬ್ರಾಹ್ಮಣರು ಹಾಗು ಬ್ರಾಹ್ಮಣಿಕೆಯನ್ನೇ ಮುಖ್ಯವಾಗಿ ಖಂಡಿಸಲಾಯಿತು. ಆ ಸಮಯದಲ್ಲಿ ಶ್ರೀಯುತ ಮಂಡ್ಲಿಕ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಲು ಅನುಮತಿ ಕೋರಿದರು. ಆದರೆ ಅವರಿಗೆ ಅನುಮತಿ ನಿರಾಕರಿಸಲಾಯಿತು.

ಶ್ರೀ ಡಿ.ವಿ.ಪ್ರಧಾನ್ ಎಂಬ ಸವರ್ಣೀಯ ಹಿಂದು ಕೂಡ ಸ್ಮೃತಿಯನ್ನು ಸುಟ್ಟು ಹಾಕುವುದನ್ನು ಸಮರ್ಥಿಸಿಕೊಂಡರು.

ಮನುಸ್ಮೃತಿಯನ್ನು[*] ಸುಟ್ಟನಂತರ ಸಮಾರಂಭದ ಅಂದಿನ ಕಾರ್ಯಕ್ರಮವು ಮುಕ್ತಾಯಗೊಂಡಿತು.[೧]

ಡಿಸೆಂಬರ್ ೨೫, ೧೯೨೭ರ ದಿನ ನಡೆದ ಮನುಸ್ಮೃತಿಯ ದಹನವು ಇವರ ಹೋರಾಟವು ಯಾವ ರೀತಿಯಲ್ಲಿ ಇರುತ್ತದೆ ಎಂಬುದನ್ನು ತೋರಿಸಿಕೊಟ್ಟಿತ್ತು. ೧೯೩೮ ರಲ್ಲಿ ಟಿ.ವಿ. ಪರ್ವತೆ ಎಂಬುವವರಿಗೆ ಡಾ. ಅಂಬೇಡ್ಕರ್ ಅವರು ಸಂದರ್ಶನವನ್ನು ನೀಡಿ ಮನುಸ್ಮೃತಿಯ ದಹನವನ್ನು ಕುರಿತು ಈ ರೀತಿ ಹೇಳಿದ್ದರು. "ಮನುಸ್ಮೃತಿಯ ದಹನ ಉದ್ದೇಶಪೂರ್ವಕವಾಗಿತ್ತು. ಹಲವಾರು ಶತಮಾನಗಳಿಂದ ಇದರಿಂದ ನಾವು ಶೋಷಣೆಗೆ ಒಳಗಾಗಿದ್ದೆವು. ಅದರ ದ್ಯೋತಕವಾಗಿ ನಾವು ಇಂದು ಇದನ್ನು ದಹಿಸಿದ್ದೇವೆ. ಇದು ಹೇಳಿಕೊಟ್ಟ ಪಾಠಗಳಿಂದಲೇ ಜನರು ನಮ್ಮನ್ನು ಅತಿ ಹೀನಾಯವಾಗಿ ಕಂಡಿದ್ದಾರೆ ಮತ್ತು ನಾವು ನಮ್ಮ ಜೀವನವನ್ನೆಲ್ಲಾ ಕಷ್ಟದಲ್ಲಿಯೇ ಕಳೆದಿದ್ದೇವೆ.[೨]

---

* ಮನುಸ್ಮೃತಿ

೧. ದಿ ಇಂಡಿಯನ್ ನ್ಯಾಷನಲ್ ಹೆರಾಲ್ಡ್ ೧೯೨೭ ರ ಡಿಸೆಂಬರ್ ೩೧

೨. ಪರ್ವತೆ ಪುಟ: ೫೮–೫೯

ಈ ಸಮಾರಂಭದ ಸಮಯದಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಪೋಲಿಸ್ ಆಯುಕ್ತರು ಹಾಗು ೧೦೦ ಜನ ಸಶಸ್ತ್ರ ಪೋಲಿಸರು ಹಾಜರಿದ್ದರು. ರಾತ್ರಿಯಲ್ಲಿ ನಡೆದ "ಹರಿಕಥೆಯು" ಒಬ್ಬ ಅಸ್ಪೃಶ್ಯರಿಂದ ರಚಿತವಾಗಿತ್ತು ಅದರಲ್ಲಿ ಬ್ರಾಹ್ಮಣರನ್ನು ಟೀಕಿಸುತ್ತಿದ್ದ ಭಾಗವನ್ನು ಅತ್ಯುತ್ಸಾಹದಿಂದ ಹಾಡಲಾಯಿತು.

## ಜಿಲ್ಲಾಧಿಕಾರಿಗಳ ಪತ್ರ

ಸಭೆಯ ಎರಡನೆಯ ದಿನದ ಕಾರ್ಯಾಕ್ರಮಗಳು ಡಿಸೆಂಬರ್ ೨೬ರ ಬೆಳಿಗ್ಗೆ ಆರಂಭವಾಯಿತು ಡಾ. ಅಂಬೇಡ್ಕರ್ ಅವರು ಜಿಲ್ಲಾಧಿಕಾರಿಯಿಂದ ಬಂದಿದ್ದಂತಹ ಪತ್ರವನ್ನು ಓದಿದರು. "ಅಸ್ಪೃಶ್ಯರು" ನ್ಯಾಯಾಲಯದ ಆಜ್ಞೆ ಪಾಲಿಸಬೇಕು ಎಂಬುದೇ ಸರ್ಕಾರದ ಆಸೆ ಎಂದು ಅದರಲ್ಲಿ ಹೇಳಲಾಗಿತ್ತು. ಸರ್ಕಾರವು ಅಸ್ಪೃಶ್ಯರ ಹಿತಾಸಕ್ತಿಯನ್ನು ಕುರಿತು ಯಾವಾಗಲೂ ಚಿಂತಿಸುತ್ತಲೇ ಇರುತ್ತದೆ. ಇವರು ತಮ್ಮ ಗುರಿಯತ್ತ ಸಾಗಲು ಸರ್ಕಾರವು ಕೂಡ ಅಗತ್ಯ ನೆರವು ನೀಡಲಿದೆ ಮಾತ್ರವಲ್ಲ ಎಲ್ಲಾ ಸಾರ್ವಜನಿಕ ಆಸ್ತಿಯನ್ನು ಉಪಯೋಗಿಸಲು ಇವರಿಗೆ ಸೌಕರ್ಯ ಕಲ್ಪಿಸಿಕೊಡುವ ಪ್ರಯತ್ನಪಡಲಿದೆ ಎಂದು ಜಿಲ್ಲಾಧಿಕಾರಿಯವರ ಕಾರ್ಯಾಲಯ ತಿಳಿಸಿತ್ತು. ಆದರೆ ಇದಕ್ಕೆ ತಾತ್ಕಾಲಿಕ ತಡೆಯಾಜ್ಞೆ ಬಂದಿದ್ದರಿಂದ ಸರ್ಕಾರವು ಕೂಡ ಅಸಹಾಯಕ ಸ್ಥಿತಿಯಲ್ಲೇ ಇದೆ. ಆದ್ದರಿಂದ ಈ ಸಮಯದಲ್ಲಿ ಸತ್ಯಾಗ್ರಹವನ್ನು ಸದ್ಯಕ್ಕೆ ಕೈಬಿಡುವಂತೆ ಅಸ್ಪೃಶ್ಯರನ್ನು ಕೇಳಿಕೊಳ್ಳಲಾಗಿತ್ತು.

ಇಡೀ ಸಭಾಂಗಣದ ರೂಪರೇಷೆಯೇ ಇದಾದ ನಂತರ ಬದಲಾಗಿ ಹೋಯಿತು ಡಾ. ಅಂಬೇಡ್ಕರ್ ಅವರು ಈಗಿದ್ದ ಪರಿಸ್ಥಿಯ ಅವಲೋಕನವನ್ನು ನಡೆಸಿದರು. ಆಗಮಿಸಿದ್ದ ಪ್ರತಿನಿಧಿಗಳಿಗೆ ಸತ್ಯಾಗ್ರಹವನ್ನು ತಮ್ಮ ಸ್ವ ಇಚ್ಛೆಯಿಂದ ಕೈಗೊಳ್ಳುವಂತೆ ತಿಳಿಸಿದರು. ಆದರೆ ಇದು ಸರ್ಕಾರಿ ಆಜ್ಞೆಗೆ ವಿರುದ್ಧವಾಗಿ ಇದ್ದುದರಿಂದ ಯಾವುದೇ ನಿರ್ಧಾರಕ್ಕೂ ಯೋಚಿಸಿ ಬರುವಂತೆ ತಿಳಿಸಿದ್ದರು. ಏಕೆಂದರೆ ಒಂದು ವೇಳೆ ಪೋಲೀಸರು ಏನಾದರೂ ಸತ್ಯಾಗ್ರಹಿಗಳನ್ನು ಬಂಧಿಸಿದರೆ, ಅದಕ್ಕೆ ಕೂಡ ಸಿದ್ಧರಿರುವಂತೆ ತಿಳಿಸಿದ್ದರು. ಮುಂದೆ ಒದಗಬಹುದಾದ ಪರಿಸ್ಥಿತಿಯನ್ನು ಸಂತೋಷವಾಗಿ ಎದುರಿಸುವುದಾದರೆ ಮಾತ್ರವೇ ಸತ್ಯಾಗ್ರಹಕ್ಕೆ ಮುಂದೆ ಬರುವಂತೆ ತಿಳಿಸಿದರು.

ಆದರೆ ಅಲ್ಲಿ ನೆರೆದಿದ್ದವರೆಲ್ಲರ ಇಚ್ಛೆ ಸತ್ಯಾಗ್ರಹ ಕೈಗೊಳ್ಳಬೇಕು ಎಂಬುದೇ ಆಗಿತ್ತು. ಸತ್ಯಾಗ್ರಹವನ್ನು ಮುಂದೂಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದವರ ಮಾತನ್ನು ಕೇಳಲು ಸತ್ಯಾಗ್ರಹಿಗಳು ಸಿದ್ಧರಿರಲೇ ಇಲ್ಲ.

## ಪ್ರಮಾಣಕ್ಕೆ ಸಹಿ ಹಾಕಿದ ೩೦೦೦ಕ್ಕೂ ಹೆಚ್ಚು ಸ್ವಯಂ ಸೇವಕರು

ತಮ್ಮ ಜನರ ಭಾವತೀವ್ರತೆಯನ್ನು ಅರಿಯುವ ಸಲುವಾಗಿ, ಸತ್ಯಾಗ್ರಹದಲ್ಲಿ ಭಾಗವಹಿಸಲಿಚ್ಛಿಸುವ ಪ್ರತಿನಿಧಿಗಳು ತಮ್ಮ ಒಪ್ಪಿಗೆಯನ್ನು ಬರೆದುಕೊಡಬೇಕೆಂದು ಡಾ. ಅಂಬೇಡ್ಕರ್ ಅವರು ಸೂಚಿಸಿದರು. ಅಂತೆಯೇ ಈ ಸಹಿ ಸಂಗ್ರಹ ಆರಂಭವಾದ ಕೇವಲ ಒಂದು ಘಂಟೆಯಲ್ಲಿಯೇ ೩೮೮೪ ಜನರು ಸತ್ಯಾಗ್ರಹ ಕೈಗೊಳ್ಳಲು ಸಿದ್ಧರಿರುವುದಾಗಿ ಸಹಿ ಹಾಕಿದ್ದರು.

ಅನಂತರ ನೆರೆದಿದ್ದ ಜನರೆಲ್ಲರು ಸತ್ಯಾಗ್ರಹದ ಪರವಾಗಿ ಇದ್ದಾರೆ ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು. ಆಗ ಜಿಲ್ಲಾಧಿಕಾರಿಗಳು ತಾವೇ ಖುದ್ದಾಗಿ ಆಗಮಿಸಿ ಜನರನ್ನು ಉದ್ದೇಶಿಸಿ ಮಾತನಾಡುವುದಾಗಿ ತಿಳಿಸಿದರು.

## ಸಭೆಯನ್ನು ಉದ್ದೇಶಿಸಿ ಜಿಲ್ಲಾಧಿಕಾರಿಗಳ ಭಾಷಣ

ಪುನಃ ಸಂಜೆ ೫.೩೦ಕ್ಕೆ ಸತ್ಯಾಗ್ರಹಿಗಳೆಲ್ಲಾ ಸಭೆಯಲ್ಲಿ ಸೇರಿದ್ದರು. ಆ ಸಮಯಕ್ಕೆ ಜಿಲ್ಲಾಧಿಕಾರಿಯಾಗಿದ್ದ ಶ್ರೀ ಹೂಡ್ ಅವರು ಪೋಲಿಸ್ ವರಿಷ್ಠಾಧಿಕಾರಿಯೊಂದಿಗೆ ಅಲ್ಲಿಗೆ ಆಗಮಿಸಿದರು. ಜಿಲ್ಲಾಧಿಕಾರಿಯವರು ಸಭೆಯನ್ನು ಉದ್ದೇಶಿಸಿ ಮರಾಠಿಯಲ್ಲಿ ಮಾತನಾಡಿದರು. ಶ್ರೀ ಹೂಡ್ ಅವರು "ಈ ಸಭೆಯಲ್ಲಿ ತಾವೆಲ್ಲಾ ಏಕೆ ನೆರೆದಿದ್ದೀರಿ ಎಂದು ನನಗೆ ತಿಳಿದಿದೆ. ಅಲ್ಲದೇ ಸತ್ಯಾಗ್ರಹವನ್ನು ಮುಂದಕ್ಕೆ ಹಾಕಿ ಎಂದು ನಾನು ಹೇಳುವುದು ಕೂಡ ಸಾಧುವಲ್ಲ ಏಕೆಂದರೆ ನೀವೆಲ್ಲರೂ ಈ ಸತ್ಯಾಗ್ರಹಕ್ಕಾಗಿ ೩ ತಿಂಗಳಿನಿಂದ ಕಷ್ಟಪಟ್ಟು ತಯಾರಿ ನಡೆಸಿದ್ದೀರಿ ಎಂಬುದು ತಿಳಿದಿದೆ. ಆದರೆ ಮುಂಬಯಿ ಶಾಸಕಾಂಗ ಪರಿಷತ್ತು ಹೊರಡಿಸಿರುವಂತಹ ಒಂದು ನಿರ್ಣಯ ತಮ್ಮೆಲ್ಲರಿಗೂ ತಿಳಿದಿದೆ. ಅದೇನೆಂದರೆ, ಎಲ್ಲಾ ಸಾರ್ವಜನಿಕ ಶಾಲೆಗಳಿಗೆ ಹಾಗು ಕೆರೆಗಳಿಗೆ ಅಸ್ಪೃಶ್ಯರಿಗೆ ಅವಕಾಶವನ್ನು ಕಲ್ಪಿಸಬೇಕು ಎಂಬುದು. ಅಂತೆಯೇ ಈ ನಿರ್ದೇಶನವನ್ನು ಸರ್ಕಾರದ ವತಿಯಿಂದ ಈ ರಾಜ್ಯದ ಎಲ್ಲಾ ನಗರಸಭೆಗಳಿಗೆ ತಿಳಿಸಲಾಗಿದೆ. ಸರ್ಕಾರ ಕೂಡ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಶೋಷಿತ ವರ್ಗದ ಜನರು ಸಾರ್ವಜನಿಕ ಕರೆಗಳಿಗೆ ಹೋಗಲು ಸರಕಾರವು ಅವಕಾಶ ಮಾಡಿಕೊಟ್ಟಿದೆ. ಆದರೆ ೧೦ ದಿನಗಳ ಹಿಂದೆ ಮೇಲ್ವರ್ಗದವರು ಅಸ್ಪೃಶ್ಯರ ಮೇಲೆ ಮೊಕದ್ದಮೆಯೊಂದನ್ನು ದಾಖಲಿಸಿದ್ದಾರೆ. ಇದರ ಪ್ರಕಾರ ಕೆರೆಯು ಅವರ ಖಾಸಗಿ ಸ್ವತ್ತು. ಇದರ ವಿಚಾರಣೆ ನಡೆಸಿ ನ್ಯಾಯಾಲಯವು ಮೇಲ್ಕಂಡ ಅದೇಶಕ್ಕೆ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿದೆ.

ನಾನು ನಿಮ್ಮ ಬಳಿ ಒಬ್ಬ ಜಿಲ್ಲಾಧಿಕಾರಿಯಾಗಿ ಮಾತನಾಡುತಿದ್ದೇನೆ. ಸರ್ಕಾರದ ಪ್ರತಿನಿಧಿಯಾಗಿ ನಾನು ನಿಮಗೆ ಒಂದು ಆಶ್ವಾಸನೆ ನೀಡಬಯಸುತ್ತೇನೆ. ಅದೇನೆಂದರೆ ಸರ್ಕಾರದ ನಿಲುವು ಕೂಡ "ಅಸ್ಪೃಶ್ಯರ" ಪರವಾಗಿಯೇ ಇದೆ. ಸರ್ಕಾರ ಹಾಗು ನಾನು ನಿಮ್ಮ ಸ್ನೇಹಿತರಾಗಿರುತ್ತೇವೆ. ಆದರೆ ಇಲ್ಲಿ ನಿಮ್ಮಲ್ಲಿ ಕೆಲವರು ನ್ಯಾಯಾಲಯದ ನಿರ್ಣಯದ ವಿರುದ್ಧ ಸತ್ಯಾಗ್ರಹವನ್ನು ಕೈಗೊಳ್ಳುವ ಉದ್ದೇಶ ಹೊಂದಿದ್ದೀರಿ ಎಂಬುದು ನನಗೆ ಕಂಡುಬಂದಿದೆ. ಈ ಕಾರ್ಯ ಸಾಂವಿಧಾನಿಕವಾಗಿ ಮತ್ತು ನ್ಯಾಯದ ದೃಷ್ಟಿಯಿಂದ ಅಪಾಯಕಾರಿ ಎಂದು ನಿಮಗೆ ನಾನು ತಿಳಿಸಬಯಸುತ್ತೇನೆ. ನಾನು ನಿಮ್ಮ ಹೋರಾಟವನ್ನು ನ್ಯಾಯಸಮ್ಮತವಾಗಿ ಹಾಗು ಸಂವಿಧಾನಬದ್ಧವಾಗಿ ಮುಂದುವರಿಸುವಂತೆ ಕೇಳಿಕೊಳ್ಳುತ್ತೇನೆ. ಆಗ ಖಂಡಿತವಾಗಿ ತೀರ್ಪು ನಿಮ್ಮ ಪರವಾಗಿಯೇ ಹೊರಬೀಳುತ್ತದೆ ಎಂಬ ಭರವಸೆ ನನಗೆ ಇದೆ.

ಶ್ರೀ ಜವಳ್ಕರ್ ಅವರು ಕೂಡ ಇಂದು ಬೆಳಿಗ್ಗೆ ಈ ಸಭೆಗೆ ಆಗಮಿಸಿದ್ದರು ಅವರು ಕೂಡ ಅದೇ ಅಭಿಪ್ರಾಯವನ್ನು ತಿಳಿಸಿ ಕೋರ್ಟಿನ ಆದೇಶಕ್ಕೆ ಕಾದು ಅನಂತರ ನೀವು ಸತ್ಯಾಗ್ರಹ ಕೈಗೊಳ್ಳಬೇಕು ಎಂದು ಹೇಳಿಸಿದ್ದಾರೆ.

ಸುಭೇದಾರ್ ಗಾಟ್ಗೆ ಹಾಗು ಇನ್ನಿತರು ತಾವು ಇಲ್ಲಿಗೆ ಬಂದಿರುವುದು ಸ್ಪೃಶ್ಯರ ವಿರುದ್ಧ ಸತ್ಯಾಗ್ರಹ ಮಾಡುವುದಕ್ಕೇ ಹೊರತು ಸರ್ಕಾರದ ವಿರುದ್ಧ ಅಲ್ಲ ಎಂಬ ಅಂಶವನ್ನು ಸ್ಪಷ್ಟ ಪಡಿಸಿದ್ದಾರೆ.

ಅನಂತರ ಈ ಸಭಾಂಗಣದ ಹೊರಗೆ ಜಿಲ್ಲಾಧಿಕಾರಿಯವರನ್ನು ಡಾ. ಅಂಬೇಡ್ಕರ್ ಗೌರವದಿಂದ ಕರೆದುಕೊಂಡು ಹೋದರು. ಸಾಯಂಕಾಲ ೭ ಘಂಟೆಯವರೆಗೂ ಒಬ್ಬರಾದ ನಂತರ ಎಲ್ಲರೂ ಸತ್ಯಾಗ್ರಹ ಕೈಗೊಳ್ಳಬೇಕು ಎಂಬ ಭಾಷಣ ಮಾಡಿದರು. ಇದಕ್ಕೆ ವಿರುದ್ಧವಾಗಿ ಧ್ವನಿ ಎತ್ತುವ ಪ್ರಯತ್ನಪಟ್ಟವರನ್ನು ಹೊಡೆದು ಹೊರದಬ್ಬಲಾಯಿತು. ಅನಂತರ ಮುಂದಿನ ಚರ್ಚೆಯನ್ನು ಡಾ. ಅಂಬೇಡ್ಕರ್ ಮರುದಿನ ಮುಂಜಾನೆಗೆ ಮುಂದೂಡಿದರು.

ಅಂದು ರಾತ್ರಿ ಪ್ರಮುಖರೆಲ್ಲರೂ ಸಭೆ ಸೇರಿ ಚರ್ಚೆಗಳನ್ನು ನಡೆಸಿದರು. ಅನಂತರ ಪ್ರಕರಣವು

ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸತ್ಯಾಗ್ರಹವನ್ನು ಮುಂದೂಡಲು ನಿರ್ಧರಿಸಿದರು. ಆದರೆ ಮುಕ್ತಾಯಗೊಳಿಸುವ ಮುನ್ನ ತಮ್ಮ ಹೋರಾಟದ ದ್ಯೋತಕವಾಗಿ ಕೆರೆಯ ಸುತ್ತಲೂ ಒಂದು ಸುತ್ತು ಮೆರವಣಿಗೆ ಹೋಗಲು ನಿರ್ಧರಿಸಿದರು. ಅಂತೆಯೇ ತಮ್ಮ ಈ ನಿರ್ಧಾರವನ್ನು ಅವರು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಡಿಸೆಂಬರ್ ೨೭ ರ ಬೆಳಿಗ್ಗೆ ಡಾ. ಅಂಬೇಡ್ಕರ್ ಈ ನಿರ್ಧಾರವನ್ನು ಪ್ರಕಟಿಸಲು ಸತ್ಯಾಗ್ರಹದ ಸ್ಥಳಕ್ಕೆ ಆಗಮಿಸಿದರು. ಆ ಸ್ಥಳವು ಕಿಕ್ಕಿರಿದು ತುಂಬಿದ್ದರೂ ಕೂಡ ಅಲ್ಲಿ ನಿಶ್ಯಬ್ದತೆ ಆವರಿಸಿತ್ತು.

ಅಲ್ಲಿ ನೆರೆದಿದ್ದ ಜನರಿಗೆ ಅಂಬೇಡ್ಕರ್ ಅವರು ಸತ್ಯಾಗ್ರಹವನ್ನು ಮುಂದೂಡುವಂತೆ ಕರೆಕೊಟ್ಟರು. ಅವರ ಮನಸ್ಸು ಕೂಡ ಇಬ್ಬಗೆಯಲ್ಲಿ ಸಿಲುಕಿತ್ತು. ಅತ್ಯಂತ ಉತ್ಸಾಹದಿಂದ ನೆರೆದಿದ್ದ ಜನರ ಉತ್ಸಾಹಕ್ಕೆ ತಣ್ಣೀರೆರಚಲು ಅವರಿಗೆ ಬೇಸರವಾಗಿತ್ತು. ಈ ಕ್ಲಿಷ್ಟ ಪರಿಸ್ಥಿಯನ್ನು ಅವರು ಬುದ್ಧಿವಂತಿಕೆಯಿಂದ ನಿಭಾಯಿಸುವ ಪ್ರಯತ್ನ ಪಟ್ಟರು. ಅಷ್ಟು ಹೊತ್ತಿಗಾಗಲೇ ಜನರು ಸಮಾಧಾನಕಳೆದುಕೊಳ್ಳಲು ಆರಂಭಿಸಿದ್ದರು. ಅತ್ಯಂತ ಮೃದುವಾದ ಆದರೆ ಧೃಡವಾದ ಧ್ವನಿಯಲ್ಲಿ ಅಂಬೇಡ್ಕರ್ ಅವರು ತಮ್ಮ ಮಾತುಗಳನ್ನು ಆರಂಭಿಸಿದರು "ನೀವೆಲ್ಲ ಅತ್ಯಂತ ಧೈರ್ಯವಂತರು. ಅಭಿವೃದ್ಧಿಗಾಗಿ ನಮ್ಮ ಜನಾಂಗಕ್ಕೆ ಅಗತ್ಯವಿರುವ ಹಕ್ಕುಗಳನ್ನು ಪಡೆದುಕೊಳ್ಳುವ ಸಲುವಾಗಿ ನಿಮ್ಮ ಜೀವನವನ್ನೇ ನೀವು ಪಣಕ್ಕೆ ಇಟ್ಟಿರುವಿರಿ. ಆದರೆ ಈ ಹೋರಾಟವನ್ನು ನಡೆಸಲು ಈ ಸಮಯ ಸೂಕ್ತವಾಗಿದೆಯೇ ಎಂದು ಒಮ್ಮೆ ಚಿಂತಿಸಿ. ಸತ್ಯಾಗ್ರಹವನ್ನು ಪ್ರಾರಂಭ ಮಾಡಿದವರೇ ಮಹಾತ್ಮ ಗಾಂಧಿ ಎಂದು ತಮ್ಮೆಲ್ಲರಿಗೂ ತಿಳಿದಿದೆ. ಅದಕ್ಕೆ ಸಂಪೂರ್ಣ ಬೆಂಬಲ ನೀಡಿದವರು ಜನರೇ. ವಿದೇಶೀಯರ ವಿರುದ್ಧ ಅವರು ಈ ಹೋರಾಟವನ್ನು ಪ್ರಾರಂಭಿಸಿದ್ದರು. ಆದರೆ, ನಮ್ಮ ಹೋರಾಟ ಇರುವುದು ಹಿಂದೂಗಳ ವಿರುದ್ಧ. ಆದ್ದರಿಂದ ನಮಗಿರುವಂತಹ ಬೆಂಬಲ ಅತ್ಯಂತ ಕಡಿಮೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಯಾವುದೇ ಕಾರಣಕ್ಕೂ ನಾವು ಸರ್ಕಾರದ ವಿರುದ್ಧವಾಗಿ ನಡೆದುಕೊಳ್ಳುವುದು ಸಮಂಜಸವಲ್ಲ, ಅದರಿಂದ ನಮಗೆ ಯಾವುದೇ ರೀತಿಯ ಲಾಭವೂ ಇಲ್ಲ ಎಂದು ನಾನು ಭಾವಿಸುತ್ತೇನೆ.

"ಸತ್ಯಾಗ್ರಹವನ್ನು ಮುಂದೂಡುವುದರಿಂದ ನಾವು ನಮ್ಮ ಗುರಿಯಿಂದ ಹಿಂದಕ್ಕೆ ಸರಿದಿದ್ದೇವೆ ಎಂದು ಯಾವುದೇ ಕಾರಣಕ್ಕೂ ಭಾವಿಸಬೇಡಿ. ಇನ್ನು ನನ್ನ ವಿಷಯಕ್ಕೆ ಬಂದರೆ ನಿಮಗಿಂತ ೩ ಪಟ್ಟು ಅಪಾಯವನ್ನು ಭರಿಸಲು ನಾನು ಸಿದ್ಧನಿದ್ದೇನೆ. ಅವೆಂದರೆ ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ವರ್ತಿಸುವುದು ಒಬ್ಬ ವಕೀಲನಾಗಿ ಸರಕಾರದ ನಿಯಮಗಳನ್ನು ಮುರಿಯುವುದು ಮತ್ತು ಬಂಧನಕ್ಕೆ ಬಳಗಾಗುವ ಸಂಭಾವ್ಯತೆ. ನನ್ನ ಸಹೋದರರೇ, ಯಾವುದೇ ಕಾರಣಕ್ಕೂ ನಾವು ಈ ಹೋರಾಟವನ್ನು ಕೈಬಿಟ್ಟಿದ್ದೇವೆ ಎಂದು ನೀವು ಭಾವಿಸಬೇಡಿ. ಇದನ್ನು ಕೇವಲ ಮುಂದೂಡಿದ್ದೇವೆ ಅಷ್ಟೆ. ಕೆರೆಯ ಮೇಲೆ ನಾವು ನಮ್ಮ ಹಕ್ಕನ್ನು ಸ್ಥಾಪಿಸುವವರೆಗೂ ನಮ್ಮ ಈ ಹೋರಾಟ ಜಾರಿಯಲ್ಲಿ ಇರುತ್ತದೆ."[೨]

**ಮುಂದೂಲ್ಪಟ್ಟ ಸತ್ಯಾಗ್ರಹ**

ಚರ್ಚೆಯ ನಂತರ ಈ ಕೆಳಗಿನಂತೆ ನಿರ್ಧಾರವನ್ನು ಕೈಗೊಳ್ಳಲಾಯಿತು

ಮಹದ್ ನಗರದ ಸ್ಪೃಶ್ಯ ಜನಾಂಗದವರು ಅಸ್ಪೃಶ್ಯರು ಕೆರೆಯನ್ನು ಉಪಯೋಗಿಸುವುದಕ್ಕೆ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆಯನ್ನು ತಂದಿರುತ್ತಾರೆ ಇದನ್ನು ಗಣನೆಗೆ ತೆಗೆದುಕೊಂಡು

---

1. The Indian National Herald dated 31st December, 1927
2. Keer Pp 102-103

ಹಾಗು ಸತ್ಯಾಗ್ರಹದ ಸ್ಥಳಕ್ಕೆ ಆಗಮಿಸಿದ್ದ ಜಿಲ್ಲಾಧಿಕಾರಿಗಳು ತಾವು ಹಾಗು ಸರ್ಕಾರ ಇಬ್ಬರೂ ಕೂಡ ಅಸ್ಪೃಶ್ಯರ ಹಿತಾಸಕ್ತಿ ಕಾಪಾಡಲು ಬದ್ಧರಾಗಿದ್ದೇವೆ ಎಂಬ ವಾಗ್ದಾನ ನೀಡಿರುತ್ತಾರೆ. ಆದ್ದರಿಂದ ನ್ಯಾಯಾಲಯದ ಮುಂದಿನ ತೀರ್ಪು ಹೊರ ಬೀಳುವವರೆಗೂ ಸತ್ಯಾಗ್ರಹವನ್ನು ಮುಂದೂಡಲಾಗಿದೆ.[೧]

ಇದಕ್ಕೆ ನೆರೆದಿದ್ದ ಸಭಿಕರೆಲ್ಲರೂ ಸಮ್ಮತಿಸಿದರು. ಅನಂತರ ಎಲ್ಲರೂ ತಮ್ಮ ತಮ್ಮಲ್ಲೇ ಸಣ್ಣ ಸಣ್ಣ ಗುಂಪುಗಳನ್ನು ಮಾಡಿಕೊಂಡು ಘೋಷಣೆಗಳನ್ನು ಕೂಗುತ್ತಾ ಭಿತ್ತಿ ಪತ್ರಗಳನ್ನು ಹಿಡಿದು ನಿಧಾನವಾಗಿ ಮೆರವಣಿಗೆಯಲ್ಲಿ ಸಾಗಿದರು. ಈ ಮೆರವಣಿಗೆಯು ಕೆರೆಯನ್ನು ತಲುಪಿ ಅದರ ಸುತ್ತು ಮೆರವಣಿಗೆ ಹೋಯಿತು. ಇತ್ತ ಹಿಂದೂಗಳು ಮಾಡುತ್ತಿದ್ದುದ್ದಾದರೂ ಏನು? ರಸ್ತೆಗಳೆಲ್ಲಾ ನಿರ್ಜನವಾಗಿದ್ದವು. ಎಲ್ಲರೂ ತಮ್ಮ ಮನೆಯ ಬಾಗಿಲುಗಳನ್ನು ಹಾಕಿಕೊಂಡುಬಿಟ್ಟಿದ್ದರು. ಸಂಪ್ರದಾಯವಾದಿ ಹಿಂದೂಗಳು ತಮ್ಮ ಹೃದಯದಲ್ಲೆಲ್ಲಾ ವಿಷ ತುಂಬಿಕೊಂಡಿದ್ದರು. ಸುಮಾರು ಒಂದೂವರೆ ಘಂಟೆಗಳ ಕಾಲದ ಬಳಿಕ ಈ ಮೆರವಣಿಗೆಯು ಹಿಂದಿರುಗಿ ಯಾವುದೇ ಅಚಾತುರ್ಯದ ಘಟನೆಗೂ ಅವಕಾಶ ನೀಡದೆ ಹಿಂದಿರು ಬಂದಿತ್ತು.[೨]

**ರಾಯ್ಗರ್‌ನಲ್ಲಿ ಡಾ. ಅಂಬೇಡ್ಕರ್**
**ಗಂಗಾಸಾಗರ ಕೆರೆಯಲ್ಲಿ ಸ್ನಾನ ಮಾಡಿದ ಅಸ್ಪೃಶ್ಯರು**

ಜನವರಿ ೫ ರ "ಕೊಲಾಬಾ ಸಮಾಚಾರ" ಎಂಬ ಪತ್ರಿಕೆಯ ಪ್ರತಿನಿಧಿ ಈ ರೀತಿ ಬರೆದಿದ್ದರು: "ಸತ್ಯಾಗ್ರಹವನ್ನು ಮುಂದೂಡುವ ನಿರ್ಣಯ ಕೈಗೊಂಡ ಬಳಿಕ ಡಾ. ಅಂಬೇಡ್ಕರ್ ಅವರು ರಾಯ್ಗರ್‌ಗೆ ಹೊರಟರು. ಇದೊಂದು ಪ್ರಸಿದ್ಧ ಕೋಟೆಯ ಪ್ರದೇಶ ಹಾಗು ಶಿವಾಜಿಯ ರಾಜಧಾನಿಯಾಗಿತ್ತು. ಇವರೊಂದಿಗೆ ಸುಮಾರು ೧೦೦ ಜನ ಅಸ್ಪೃಶ್ಯರು ಹೊರಟಿದ್ದರು. ರಾಯ್ಗರ್‌ನ ಧರ್ಮಶಾಲೆಯಲ್ಲಿ ಅವರು ತಂಗಿದ್ದರು. ಅಲ್ಲಿಯ ಕಾವಲುಗಾರನಾಗಿದ್ದಂತಹ ಯೇಸು ಶೆಡ್ಜೆ ಎಂಬ ಮರಾಠರವನು ಇವರ ಆತಿಥ್ಯದ ಉಸ್ತುವಾರಿ ವಹಿಸಿಕೊಂಡಿದ್ದನು. ಆತ ಗಂಗಾಸಾಗರ ಕೆರೆಯ ನೀರನ್ನು ಮುಟ್ಟದಂತೆ ಇವರಿಗೆ ಎಚ್ಚರಿಕೆ ನೀಡಿದ್ದ. ಒಂದು ವೇಳೆ ಇವರೇನಾದರೂ ಸ್ನಾನ ಮಾಡಬೇಕೆಂದರೆ, ಬಳಿಯಲ್ಲೇ ಇದ್ದ ಮತ್ತೊಂದು ಕೆರೆಯನ್ನು ಉಪಯೋಗಿಸುವಂತೆ ತಿಳಿಸಿದ್ದ. ಅದನ್ನು ವಿಶೇಷವಾಗಿ ಅಸ್ಪೃಶ್ಯರಿಗೆಂದೇ ನಿರ್ಮಿಸಲಾಗಿತ್ತು. ಆದರೂ ಡಾ. ಅಂಬೇಡ್ಕರ್ ಹಾಗು ಅವರ ಸಹಚರರು ಗಂಗಾಸಾಗರ ಕೆರೆಯನ್ನು "ಮಲಿನ"ಗೊಳಸಿದರು.

ಈ ಘಟನೆಯು ರಾಯ್ಗರ್ ಪ್ರದೇಶದ ಮರಾಠರಲ್ಲಿ ಬಹಳಷ್ಟು ಸಂಚಲನವನ್ನೇ ಉಂಟುಮಾಡಿತು. ಏಕೆಂದರೆ ಅಲ್ಲಿ ಮರಾಠರಲ್ಲಿ ಬಹು ಸಂಖ್ಯೆಯ ಜನರು ಸೇನೆಯಲ್ಲಿ ಸಿಪಾಯಿಗಳಾಗಿದ್ದರು.[೩]

**ಅಭಿಪ್ರಾಯಗಳು**

ಜನವರಿ ೭ರ ಕೊಲಾಬಾ ಸಮಾಚಾರ ಎಂಬ ಪತ್ರಿಕೆಯಲ್ಲಿ ಈ ಘಟನೆಯನ್ನು ಕುರಿತು ಸಂಪಾದಕೀಯ ಪ್ರಕಟವಾಗಿತ್ತು ಇದರಲ್ಲಿ ಡಾ. ಅಂಬೇಡ್ಕರ್ ಅವರು ಅನುಸರಿಸುತ್ತಿರುವ ಮಾರ್ಗ ಸರಿಯಲ್ಲ ಎಂದು ಸರ್ಕಾರವು ಡಾ. ಅಂಬೇಡ್ಕರ್ ಹಾಗು ಅವರ ಸಹಚರರನ್ನು ಬಂಧಿಸುವ ನಿಟ್ಟಿನಲ್ಲಿ ಯೋಚಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿತ್ತು. ಭಾರತೀಯರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ

1. The Indian National Herald dated 31st December, 1927
2. Keer Pp 104
3. The Bombay Chronicle dated 12th January 1928

ನಿಟ್ಟಿನಲ್ಲಿ ತಾವೇ ಕಾರ್ಯಪ್ರವೃತ್ತರಾಗಬೇಕು ಸರ್ಕಾರದ ಕ್ರಮಕ್ಕೆ ಕಾಯಲೇಬಾರದು ಎಂಬ ಅಭಿಪ್ರಾಯಕ್ಕೆ ಸಂಪೂರ್ಣವಾಗಿ ಈ ಪತ್ರಿಕೆ ವಿರೋಧ ವ್ಯಕ್ತ ಪಡಿಸಿತ್ತು.[೧]

### ಮಹಾರಾಷ್ಟ್ರದ ಮನಸ್ಥಿತಿ

ಈ ಸತ್ಯಾಗ್ರಹದ ವಿಷಯವಾಗಿ ಕೆಲ ವಾರಗಳ ಕಾಲ ಕೆಲ ಹಿಂದೂ ಸಂಪ್ರದಾಯವಾದಿಗಳ ಪತ್ರಿಕೆಗಳಲ್ಲಿ ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿತ್ತು. ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕು ಎಂಬುದನ್ನು ಬೆಂಬಲಿಸುತ್ತಿದ್ದ ಮತ್ತಷ್ಟು ಪತ್ರಿಕೆಗಳು ಕೂಡ ಇವರ ಈ ನಡೆಯನ್ನು ಖಂಡಿಸಿದ್ದವು. ಎಲ್ಲಾ ಮರಾಠಿ ಪತ್ರಿಕೆಗಳನ್ನು ಪ್ರಮುಖವಾಗಿ ೩ ಭಾಗಗಳಾಗಿ ವಿಂಗಡಿಸಬಹುದು. N.C.O. ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳುವ ಪತ್ರಿಕೆಗಳು ಹಾಗು ಬ್ರಾಹ್ಮಣ ವಿರೋಧಿ ಪತ್ರಿಕೆಗಳು. ಡಾ. ಅಂಬೇಡ್ಕರ್ ಹಾಗು ಅವರ ಸ್ನೇಹಿತರ ವಿರುದ್ಧ ಬರೆಯುವ ಪತ್ರಿಕೆಗಳಲ್ಲಿ ಪ್ರಮುಖವಾಗಿ ಪ್ರಸ್ತಾಪವಾಗುತ್ತಿದ್ದ ಎರಡು ಅಂಶಗಳು ಎಂದರೆ ೧) ಮನುಸ್ಮೃತಿಯ ದಹನ ಹಾಗು ೨) ಸತ್ಯಾಗ್ರಹವನ್ನು ನಿಲ್ಲಿಸಬೇಕು ಎಂಬ ಕೊಲಾಬಾ ಜಿಲ್ಲಾಧಿಕಾರಿಯವರ ಮಾತಿಗೆ ಒಪ್ಪಿಕೊಂಡು ಸತ್ಯಾಗ್ರಹವನ್ನು ನಿಲ್ಲಿಸಿದ್ದು. ಈ ಇಡೀ ಪ್ರಕರಣದಲ್ಲಿ ಎರಡೂ ಪಕ್ಷಗಳು ಒಬ್ಬರ ವಿರುದ್ಧ ಮತ್ತೊಬ್ಬರು ಬೇಕಾದಷ್ಟು ಆಪಾದನೆಗಳನ್ನು ಮಾಡಿದರು. ಆದರೆ ಅಂತಹ ಗಮನಾರ್ಹ ಸಂಗತಿಗಳು ಯಾವುವೂ ಇರಲಿಲ್ಲ.

ಇದೀಗ ತಮ್ಮ "ಬಹಿಷ್ಕೃತ ಭಾರತ" ಪತ್ರಿಕೆಯುಲ್ಲಿ ಡಾ. ಅಂಬೇಡ್ಕರ್ ಅವರು ಈ ಸಮ್ಮೇಳನದ ಬಗ್ಗೆ ಹಾಗು ತಮ್ಮ ಮೇಲೆ ಮಾಡಲಾಗಿರುವ ಆಪಾದನೆಗಳ ಬಗ್ಗೆ ಸಮರ್ಪಕವಾದ ಉತ್ತರ ನೀಡಿದ್ದಾರೆ. ತಮ್ಮ ಮೇಲೆ ಹೊರೆಸಿರುವಂತಹ ಮೊದಲ ಆಪಾದನೆಯ ಬಗ್ಗೆ ಸಂಕೋಚವನ್ನೇನೂ ಅವರು ಹೊಂದಿಲ್ಲ. ಆದರೆ ಅದಕ್ಕೆ ತಕ್ಕ ಸಮರ್ಥನೆಯನ್ನು ನೀಡಿದ್ದಾರೆ. ಮನುಸ್ಮೃತಿಯನ್ನು ಓದಿಕೊಂಡೇ ಮೇಲ್ವರ್ಗದ ಹಿಂದೂಗಳು ತಮ್ಮಂತಹವರ ಶೋಷಣೆ ಮಾಡಿದ್ದಾರೆ. ಇದೇ ಕೃತಿಯನ್ನು ಆಧರಿಸಿಯೇ ಇಂದಿನ ಹಿಂದೂ ಕಾನೂನುಗಳು ರಚಿಸಲ್ಪಟ್ಟಿವೆ. ಆದ್ದರಿಂದ ಅದನ್ನು ಸುಟ್ಟು ಹಾಕಿರುವುದು ಅತ್ಯಂತ ಸಮಂಜಸ ಎಂಬ ಅಭಿಪ್ರಾಯಪಟ್ಟಿದ್ದಾರೆ. ಎರಡನೆಯ ಆಪಾದನೆಗೆ ಉತ್ತರಿಸುವ ಅಂಬೇಡ್ಕರ್ ಅವರು ಸರ್ಕಾರದ ವತಿಯಿಂದ ಯಾವುದೇ ಅಧಿಕೃತ ಪ್ರಕಟಣೆ ಹೊರಬಿದ್ದಿರಲಿಲ್ಲ. ಆದ್ದರಿಂದ ಯಾವುದೇ ಆದೇಶವನ್ನು ನಿರ್ಲಕ್ಷ್ಯ ಮಾಡಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎನ್ನುತ್ತಾರೆ. ಕೊಲಾಬಾದ ಜಿಲ್ಲಾಧಿಕಾರಿಯ ಇಚ್ಛೆಯಂತೆಯೇ ತಾವು ಸತ್ಯಾಗ್ರಹವನ್ನು ಮುಂದೂಡಿದೆವು ಅಷ್ಟೆ. ಅದರೆ, ಅದನ್ನು ಸತ್ಯಾಗ್ರಹಿಗಳ ಹಾಗು ಅಸ್ಪೃಶ್ಯರ ಹಿತದೃಷ್ಟಿಯನ್ನು ಗಮನದಲ್ಲಿ ಇರಿಸಿಕೊಂಡು ಮಾಡಿದೆ ಎನ್ನುತ್ತಾರೆ. ಇಷ್ಟು ವಿವರಣೆಯನ್ನು ನೀಡುವ ಅವರು ತಮ್ಮ ಟೀಕಾಕಾರರು ತಮ್ಮ ವಿರುದ್ಧ ಟೀಕೆ ಮಾಡಲು ಸ್ವತಂತ್ರರು ಎನ್ನುತ್ತಾರೆ.[೨]

ಹಿಂದೂಗಳು ಹಾಗು ಅಸ್ಪೃಶ್ಯರ ನಡುವೆ ಚಾವ್ದಾರ್ ಕೆರೆಯ ವಿಷಯವಾಗಿ ನಡೆಯುತ್ತಿದ್ದ ಮೊಕದ್ದಮೆಯ ಬಗೆಗೆ ವಿಚಾರಣೆಯು ೧೯೨೮ರ ಜನವರಿ ೧೨ ಕ್ಕೆ ನಿಗದಿಯಾಗಿತ್ತು ಮಹದ್‌ನ ಎರಡನೆಯ ನ್ಯಾಯಾಧೀಶರ ಕಛೇರಿಯಲ್ಲಿ ಇದು ನಡೆಯುವುದು ಎಂದು ನಿರ್ಧಾರವಾಗಿತ್ತು. ಆದ್ದರಿಂದ ಈ ವಿಚಾರಣೆಯಲ್ಲಿ ಅಸ್ಪೃಶ್ಯರ ಪರವಾಗಿ ವಾದವನ್ನು ಮಂಡಿಸಲು ಡಾ. ಅಂಬೇಡ್ಕರ್ ಸಿದ್ಧರಾದರು. ೨೪ ನೆಯ ಜನವರಿ ೧೯೨೮

---

1. Kolatra Samedhar, dated 7th Januvary, 1928
2. The Bombay Chronicle dated 27th January 1928

ರಂದು ಅವರು ಮಾರ್ಕಂಡ ದತ್ತಾತ್ರೇಯ ವೈದ್ಯ ಎಂಬ ವಕೀಲರಿಗೆ ಪತ್ರ ಬರೆದು ಕೆಲ ದಾಖಲೆಗಳನ್ನು ತೆಗೆದುಕೊಂಡು ಕೋರ್ಟಿಗೆ ಹಾಜರಾಗುವಂತೆ ತಿಳಿಸಿದರು. ಅದರಲ್ಲಿ ವಿಶೇಷವಾಗಿ ಆತ ಪಾಂಡುರಂಗ ಭಾಸ್ಕರ ಶಾಸ್ತ್ರಿ ಎಂಬ ಬ್ರಾಹ್ಮಣ ವೈದಿಕ ಸಲ್ಲಿಸಿದ ದಾಖಲೆಯನ್ನು ತರಲು ತಿಳಿಸಿದ್ದರು. ಆತ ಡಾ. ಅಂಬೇಡ್ಕರ್ ಅವರ ಪರವಾಗಿ ಕೆಲ ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಒದಗಿಸಿದ್ದ. ಶಾಸ್ತ್ರ ಗ್ರಂಥಗಳಿಂದ ಆಯ್ದ ಕೆಲ ಭಾಗಗಳನ್ನು ಆತ ಉಲ್ಲೇಖ ಮಾಡಿದ್ದ. ಅವರು ವೈದ್ಯ ಅವರಿಗೆ ಬರೆದಿದ್ದ ಪತ್ರದ ಒಕ್ಕಣೆ ಈ ಕೆಳಗಿಂತಿದೆ:

**ಭೀಮರಾವ್. R. ಅಂಬೇಡ್ಕರ್**
ಎಂ.ಎ, ಪಿ. ಎಚ್.ಡಿ, ಡಿ.ಎಸ್‌ಸಿ
ವಕೀಲರು
ಸದಸ್ಯರು, ವಿಧಾನ ಮಂಡಳ
ಬೊಂಬಾಯಿ

**ದಾಮೋದರ್ ಸಭಾಂಗಣ**
ಪರೇಲ್
ಬೊಂಬಾಯಿ–೧೨
೨೪–೧–೨೮

ನನ್ನ ಪ್ರೀತಿಯ ವೈದ್ಯ ಅವರೇ,

ನೀವು ದಿನಾಂಕ ೧೨ ರಂದು ಬರೆದಿದ್ದ ಪತ್ರ ನನ್ನ ಕೈ ಸೇರಿದೆ. ಕೋರ್ಟು ಈ ವಿಷಯದಲ್ಲಿ ಆದಷ್ಟು ಬೇಗನೇ ಅಂದರೆ ಫೆಬ್ರವರಿ ೫ಕ್ಕೆ ಮೊದಲು ವಿಚಾರಣೆ ನಡೆಸಲು ಉತ್ಸುಕವಾಗಿದೆ ಎಂದು ನಿಮ್ಮ ಪತ್ರದಿಂದ ತಿಳಿದು ಬಂದಿದೆ. ಈ ವಿಷಯದಲ್ಲಿ ವಾದ ಮಂಡಿಸಲು ನಾನು ಫೆಬ್ರವರಿ ೨ರಂದು ಬರಲು ಉದ್ದೇಶಿಸಿದ್ದೇನೆ.

ಇದರೊಂದಿಗೆ ನಾನು ಕೆಲ ದಾಖಲಾತಿಗಳನ್ನು ಕಳುಹಿಸಿ ಕೊಟ್ಟಿದ್ದೇನೆ. ಆ ಸಮಯಕ್ಕೆ ಮೊದಲೆ ತಾವು ಇವುಗಳನ್ನು ಸಿದ್ಧ ಇಟ್ಟಿರುವಿರಿ ಎಂದು ಆಶಿಸುತ್ತೇನೆ. ಆದರೆ ಈ ದಾಖಲೆಗಳಿಗೆ ಸಂಬಂಧಿಸಿದಂತೆ ಅಫಿಡವಿಟ್ಟುಗಳನ್ನು ಸಲ್ಲಿಸಲು ನೀವೊಬ್ಬ ಮೊಹಮದೀಯ ಕಟುಕನನ್ನೇ ಕರೆದು ತರುವುದು (ನಾನು ಬಂದಾಗ ಒಬ್ಬ ಕಟುಕ ಹಾಜರಿರಬೇಕು). ನೀವು ಮಹದ್‌ನ ಪೋಲಿಸ್ ಠಾಣೆಗೆ ಹೋಗಿ ಅಲ್ಲಿಯ ಅಧಿಕಾರಿಯನ್ನು ಕಾಣಿರಿ. ನನ್ನ ಪರವಾಗಿ ವಿನಂತಿಸಿಕೊಂಡರೆ ಅವರು ಆ ಬ್ರಾಹ್ಮಣ ವೈದಿಕರು ನಮ್ಮನ್ನು ಬೆಂಬಲಿಸಿ ಸಲ್ಲಿಸಿರುವ ಅಫಿಡವಿಟ್ಟಿನ ಪ್ರತಿಯನ್ನು ನೀಡುತ್ತಾರೆ. ಅದನ್ನು ನಾವು ಘೋಷಣಾ ಪತ್ರದಂತೆ ಸಹಿಹಾಕಿ ಸಲ್ಲಿಸಬಹುದು.

ಸಂಬಂಧ ಪಟ್ಟವರಿಗೆ ಈ ವಿಷಯವಾಗಿ ಸಾಕಷ್ಟು ಮೊದಲೇ ತಿಳಿಸಿ ಅವರಿಗು ಕೂಡ ಈ ಅಫಿಡವಿಟ್ಟಿನ ಪ್ರತಿಗಳನ್ನು ನೀಡಿ. ಆಗ ಅವರಿಗೆ ದೂರಲು ಯಾವುದೇ ಕಾರಣವೂ ಇರುವುದಿಲ್ಲ. ಸುಭ್ರಾರಿಗೆ ನನ್ನ ಶುಭಾಶಯಗಳನ್ನು ತಿಳಿಸಿ. ನಿಮ್ಮ ಉತ್ತರವನ್ನು ನನಗೆ ೩೦ನೆಯ ಜನವರಿ ಸೋಮವಾರದ ಒಳಗೆ ಕಳುಹಿಸಿ. ಫೆಬ್ರವರಿ ೨ರ ಹೊತ್ತಿಗೆ ಎಲ್ಲವೂ ಸಿದ್ಧವಿರುತ್ತದೆಯೆ ಎಂಬುದನ್ನು ನನಗೆ ತಿಳಿಸಿ.

ನನ್ನ ಶುಭಾಶಯಗಳೊಂದಿಗೆ

ನಿಮ್ಮ
ಬಿ.ಆರ್. ಅಂಬೇಡ್ಕರ್[1] (ಸಹಿ)

---

೧. ಕೈರ್ ಮೋಡೆ: ಸಂಪುಟ ೩, ಪು ೨೩೯, ೨೪೪, ೨೪೫

## ಪಿ.ಆರ್.ಲೇಲೆ ಎಂಬುವವರು ಮಹದ್ ಸತ್ಯಾಗ್ರಹ ಕುರಿತು ಬರೆದಿರುವ ಲೇಖನ: ಅಸ್ಪೃಶ್ಯರು ಸತ್ಯಾಗ್ರಹವನ್ನು ಪುನರಾರಂಭಗೊಳಿಸಲಿದ್ದಾರೆ

ಮಹದ್‌ನ ಸಬ್‌ಜಡ್ಜ್ ಅವರು ಡಾ. ಅಂಬೇಡ್ಕರ್ ಹಾಗೂ ಇತರರು ಚಾವ್ದಾರ್ ಕೆರೆಯ ನೀರನ್ನು ತೆಗೆದುಕೊಳ್ಳಬಾರದೆಂದು ಹೊರಡಿಸಿದ ಆದೇಶದ ಮೇರೆಗೆ, ಈಚೆಗೆ ಹೆಚ್ಚು ಸುದ್ದಿ ಮಾಡಿದ್ದ ಚಾವ್ದಾರ್ ಕೆರೆಯ ಸತ್ತಾಗ್ರಹವನ್ನು ಆರಂಭಿಸಿದ್ದ ಅಸ್ಪೃಶ್ಯರು ತಮ್ಮ ಸತ್ಯಾಗ್ರಹವನ್ನು ಕೈಬಿಡಬೇಕಾಗಿ ಬಂದಿತು. ಆ ಸಮಯದಲ್ಲಿ, ಅಂದರೆ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಅವರು ಒಂದು ಸಮಾವೇಶವನ್ನು ನಡೆಸಿ ಸವರ್ಣೀಯ ಹಿಂದೂಗಳ ಕ್ರೌರ್ಯದ ವಿರುದ್ಧ ತಮ್ಮ ಅತೃಪ್ತಿಯನ್ನು ಮತ್ತು ಕೋಪವನ್ನು ಪ್ರದರ್ಶಿಸುವಷ್ಟಕ್ಕೆ ತೃಪ್ತಿಪಟ್ಟುಕೊಂಡಿದ್ದರು.

ಇದಕ್ಕೆಂದು ನೆರೆದಿದ್ದ ಪ್ರತಿನಿಧಿಗಳು ಹಾಗು ಪ್ರೇಕ್ಷಕರು ಬೃಹತ್ ಆದ ಒಂದು ಮೆರವಣಿಗೆಯನ್ನು ಆಯೋಜಿಸಿ, ತಮ್ಮ ಬಲ ಎಂತಹುದು ಎಂಬುದನ್ನು ತಮ್ಮ ಎದುರಾಳಿಗಳಿಗೆ ತೋರಿಸಿಕೊಟ್ಟಿದ್ದರು. ಅನಂತರ ಆಯ್ದ ಕೆಲ ಜನರೊಂದಿಗೆ ಡಾ. ಅಂಬೇಡ್ಕರ್ ಅವರು ಮಹದ್ ತಾಲೂಕಿನ ಪ್ರವಾಸ ಕೈಗೊಂಡಿದ್ದರು ಹಾಗು ರಾಯ್ಗರ್ ಕೋಟೆಗೆ ಕೂಡ ಭೇಟಿ ನೀಡಿದರು. ಆದರೆ ಅವರ ಈ ರಾಯ್ಗರ್ ಭೇಟಿಯ ಬಗ್ಗೆ ನಾನು ಏನನ್ನು ಹೇಳಲು ಇಚ್ಚಿಸುವುದಿಲ್ಲ. ಕೆಲ ತಪ್ಪು ವರದಿಗಳನ್ನು ನೀಡಿರುವ ಕೆಲ ಪತ್ರಿಕೆಗಳ ಬಗ್ಗೆ ಡಾ. ಅಂಬೇಡ್ಕರ್ ಅವರು ಕಾನೂನು ಪ್ರಕ್ರಿಯೆಗಳನ್ನು ಆರಂಭಿಸಿದ್ದಾರೆ.

ಈ ಜನರ ಮಹದ್ ತಾಲೂಕಿನ ಪ್ರವಾಸವು ಅಲ್ಲಿನ ಜನರಲ್ಲಿ ಒಂದು ಸಂಚಲನವನ್ನೇ ಉಂಟುಮಾಡಿತ್ತು ಇದರಿಂದಾಗಿ ಕೆಲ ತಾಲೂಕುಗಳಲ್ಲಿ ಮುಸಲ್ಮಾನರು ಕೂಡ ಇವರ ವಿರುದ್ಧ ಕೆಲ ವರದಿಗಳನ್ನು ನೀಡಿ ಅಂಬೇಡ್ಕರ್ ಅವರ ಕೆಂಗಣ್ಣಿಗೆ ಗುರಿಯಾಗಿದ್ದರು.

## ಮಧ್ಯಂತರ ತಡೆಯಾಜ್ಞೆಯನ್ನು ಹಿಂಪಡೆಯುವಿಕೆ

ಇದೀಗ ಮಹದ್ ಉಪ ನ್ಯಾಯಾಧಿಶರು ತಾತ್ಕಾಲಿಕ ತಡೆಯಾಜ್ಞೆಯನ್ನು ಹಿಂಪಡೆದಿದ್ದಾರೆ. ಈ ಆಜ್ಞೆಯ ಪ್ರತಿಗಳು ಇನ್ನೂ ನನ್ನ ಕೈಸೇರಿಲ್ಲ. ಆದರೆ ಅದು ಬಹಳಷ್ಟು ದೊಡ್ಡದಾಗಿದೆ ಎಂಬ ವಿಷಯ ನನಗೆ ತಿಳಿದಿದೆ.

ಈ ತೀರ್ಪನ್ನು ನೀಡುವಾಗ ಹೇಳಿರುವ ಒಂದು ಅಂಶವೆಂದರೆ ಈ ಮೊದಲು ತೀರ್ಪನ್ನು ನೀಡುವಾಗ ಅವರಿಗೆ ತಪ್ಪು ತಿಳುವಳಿಕೆಯನ್ನು ನೀಡಲಾಗಿತ್ತು. ಆದ್ದರಿಂದ ಶತಮಾನಗಳಿಂದ ನಡೆದುಕೊಂಡು ಬಂದಂತಹ ಶೋಷಣೆಯನ್ನು ಬೆಂಬಲಿಸಿದುದಕ್ಕಾಗಿ ನನಗೆ ದುಃಖವಾಗಿದೆ ಎಂದು ಅವರು ಹೇಳಿದ್ದಾರೆ. ಆದರೆ ಮೊಕದ್ದಮೆಯು ಇನ್ನೂ ವಿಚಾರಣೆಯ ಹಂತದಲ್ಲಿರುವುದರಿಂದ, ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಲಾಗದು. ಆದರೆ ಈ ವಿಷಯದಲ್ಲಿ ಜಯ ದೊರೆಯಬೇಕೆಂದರೆ ಅದು ದೂರದ ಬೆಟ್ಟವೇ. ಇದೀಗ ಅಸ್ಪೃಶ್ಯರಿಗೆ ದೊರೆಯಬೇಕಾದಂತಹ ಸಾಮಾನ್ಯ ಹಕ್ಕುಗಳನ್ನು ಪಡೆಯಲು ನ್ಯಾಯಾಂಗ ಹಾಗು ಸಂಪ್ರದಾಯವಾದಿಗಳ ನಡುವಿನ ಈ ಪ್ರಕ್ರಿಯೆ ಆವಶ್ಯಕವಿರಲಿಲ್ಲ.

'ಗುರುಕಾ ಭಾಗ್' ಸತ್ಯಾಗ್ರಹದ ವಿಷಯಕ್ಕೆ ಬಂದರೆ ಸಿಖ್ ಸತ್ಯಾಗ್ರಹಿಗಳಿಗೆ ಜನರ ಅನುಕಂಪ ಸಂಪೂರ್ಣವಾಗಿ ದೊರೆತಿತ್ತು. ಆದರೆ, ಮಹದ್ ಸತ್ಯಾಗ್ರಹದ ವಿಷಯದಲ್ಲಿ ಈ ರೀತಿ ಇರಲಿಲ್ಲ. ಸಂಪ್ರದಾಯವಾದಿ ಹಿಂದೂ ನಾಯಕರು ಯಾರ ಮಾತನ್ನೂ ಕೇಳಲು ಸಿದ್ಧರಿರಲಿಲ್ಲ. ಪೂನಾದಲ್ಲಿ ಇದ್ದ ಅವರ ಗುರುಗಳ ಮಾತುಗಳನ್ನೂ ಇವರು ಕೇಳಲು ಸಿದ್ಧರಿರಲಿಲ್ಲ. ಇವರ್‍ಯಾರು ಮಹದ್ ಸತ್ಯಾಗ್ರಹಿಗಳ

ವಿಷಯದಲ್ಲಿ ಸದ್ಭಾವನೆ ಹೊಂದಿರಲಿಲ್ಲ. ಮುಂದೂಡಲ್ಪಟ್ಟಿದ್ದ ಸತ್ಯಾಗ್ರಹವನ್ನು ಕೈಗೊಳ್ಳಲು ಸಮಯ ಇದೀಗ ಸೂಕ್ತವಾಗಿತ್ತು.

**ಮುಂದಿನ ಹೋರಾಟ:**

ಇದೀಗ ಸತ್ಯಾಗ್ರಹವನ್ನು ನಾವು ಪುನರಾರಂಭಮಾಡಲಿದ್ದೇವೆ. ಈ ಬಾರಿ ಅಪಾಯ ಕಡಿಮೆ ಇರುತ್ತದೆ ಹಾಗು ಯಶಸ್ಸಿನ ಸಾಧ್ಯತೆಗಳು ಹೆಚ್ಚಿರುತ್ತದೆ. ಬಜೆಟ್ ಮೇಲೆ ಮನೋಜ್ಞವಾಗಿ ಟೀಕೆಯನ್ನು ಮಾಡಿದ ಡಾ. ಅಂಬೇಡ್ಕರ್ ಅವರು ಮಹದ್‌ಗೆ ಹೋಗಿ ಅಲ್ಲಿನ ದಾಮೋದರ್ ಥ್ಯಾಕರ್ಸೆ ಸಭಾಂಗಣದಲ್ಲಿ ೨೬ನೆಯ ದಿನಾಂಕ, ಭಾನುವಾರದಂದು ಸಾರ್ವಜನಿಕ ಸಭೆಯನ್ನು ನಡೆಸಿದರು.

ಡಾ. ಅಂಬೇಡ್ಕರ್ ಅವರು ಅತ್ಯಂತ ಸರಳಭಾಷೆಯಲ್ಲಿ ಭಾಷಣವನ್ನು ಮಾಡಿ ತಮ್ಮ ಹಿಂಬಾಲಕರಿಗೆ ಅಂದಿನ ದಿನದವರೆಗಿನ ಪರಿಸ್ಥಿತಿಯನ್ನು ವಿವರಿಸಿದರು ಮಾತ್ರವಲ್ಲ, ಈ ಹೋರಾಟವನ್ನು ಪುನರಾರಂಭ ಮಾಡಲು ಸೂಕ್ತ ದಿನಾಂಕವನ್ನು ನಿಗದಿ ಮಾಡುವಂತೆ ತಮ್ಮ ಸಹಚರರಿಗೆ ತಿಳಿಸಿದರು ಈ ಸಮ್ಮೇಳನದಲ್ಲಿ ಸುಮಾರು ೧,೦೦೦ ಕ್ಕೂ ಹೆಚ್ಚು ಶೋಷಿತರು ಪಾಲ್ಗೊಂಡಿದ್ದರು ಇಡೀ ಸಭಾಂಗಣವೇ ಕಿಕ್ಕಿರಿದು ತುಂಬಿ ಹೋಗಿತ್ತು. ವೇದಿಕೆಯ ಮೇಲೆ "ಅಸ್ಪೃಶ್ಯರ" ಸ್ನೇಹಿತರಾದ ಮೇಲ್ವರ್ಗದ ಕೆಲ ಜನರು ಕೂಡ ಆಸೀನರಾಗಿದ್ದರು ಅಲ್ಲಿ ಆಸೀನರಾಗಿದ್ದ ಇತರರಲ್ಲಿ ಬಹಳಷ್ಟು ಮಂದಿ ಶೋಷಿತ ವರ್ಗದವರೇ ಆಗಿದ್ದರು

ಇವರಲ್ಲಿ ಭಾಷಣ ಮಾಡಿದ ಬಹಳಷ್ಟು ಮಂದಿ ತಮ್ಮ ನಾಯಕರಾದಂತಹ ಅಂಬೇಡ್ಕರ್ ಅವರ ವಿಷಯದಲ್ಲಿ ಅತ್ಯಂತ ಗೌರವದಿಂದ ಹಾಗು ಅಭಿಮಾನದಿಂದ ಮಾತನಾಡಿದ್ದರು. ಅವರಲ್ಲಿ ಒಬ್ಬರಂತೂ ಈ ವಿಷಯದಲ್ಲಿ ಮನಮುಟ್ಟುವಂತೆ ಮಾತನಾಡಿದ್ದರು. ಏಕೆಂದರೆ ಅವರು ಮೊತ್ತ ಮೊದಲ ಬಾರಿಗೆ ಚಾವ್ದಾರ್ ಕೆರೆಯಿಂದ ನೀರು ತೆಗೆದುಕೊಳ್ಳಲು ಹೋದಾಗ ಹಿಂದೂ ಜನಾಂಗದವರಿಂದ ಥಳಿತಕ್ಕೆ ಒಳಗಾಗಿದ್ದರು.

ಆ ಸಮಯದಲ್ಲಿ ಈ ವಿಷಯದಲ್ಲಿ ಬೇರೆಯದೇ ಕಥೆ ಚಲಾವಣೆ ಆಗಿತ್ತು. ಅದೇನೆಂದರೆ, ಈತ ವೃತ್ತಿಯಿಂದ ಒಬ್ಬ ಚಮ್ಮಾರನೆಂದೂ, ಕೆರೆಯಲ್ಲಿ ಚರ್ಮವನ್ನು ತೊಳೆಯುತ್ತಿದ್ದನೆಂದು ಆರೋಪ ಹೊರಸಿ ಅವನ ಮೇಲೆ ಆಕ್ರಮಣವನ್ನು ಮಾಡಲಾಗಿತ್ತು. ಮತ್ತೊಬ್ಬ ಭಾಷಣಕಾರ ಇನ್ನೊಂದು ಅಂಶವನ್ನು ಬಹಿರಂಗ ಮಾಡಿದ್ದರು. ಅದೇನೆಂದರೆ ನೀರು ತೆಗೆದುಕೊಂಡವನು ಒಬ್ಬನಾದರೇ ಥಳಿತಕ್ಕೆ ಒಳಗಾದವರು ಮತ್ತೊಬ್ಬರು, ಈತನ ಹೆಸರು ರಾಜ ಭೋಜ ಎಂದು. ಆದರೆ ತಮಾಷೆಗಾಗಿ ಈತನನ್ನು ಎಲ್ಲರೂ ಭೋಜರಾಜ ಎನ್ನುತ್ತಿದ್ದರು. ಕಳೆದ ಭಾನುವಾರ ನಡೆದ ಸಭೆ ಲವಲವಿಕೆಯಿಂದ ಕೂಡಿತ್ತು ಎನ್ನುವುದು ಎಲ್ಲರಿಗೂ ತಿಳಿಯುವಂತೆ ಇತ್ತು.

**ಒಂದು ತಿಂಗಳ ಒಳಗಾಗಿ**

ಅವರನ್ನು ನೋಡಿದಂತಹ ಯಾರಿಗೇ ಆದರೂ ಅವರನ್ನು ಅಸ್ಪೃಶ್ಯರು ಎನ್ನಲು ಸಾಧ್ಯವಿರಲಿಲ್ಲ. ಆದರೆ ಸಂಪ್ರದಾಯವಾದಿ ಹಿಂದೂಗಳ ದೃಷ್ಟಿಯಲ್ಲಿ ಮಾತ್ರ ಅವರು ಅಸ್ಪೃಶ್ಯರಾಗಿದ್ದರು. ಅವರು ತಮ್ಮ ಮೇಲಿನಿಂದ ಅಸ್ಪೃಶ್ಯತೆಯ ಹಣೆಪಟ್ಟಿಯನ್ನು ಹೋಗಲಾಡಿಸಿಕೊಳ್ಳುವುದು ಮಾತ್ರವಲ್ಲ, ಬದಲಾಗಿ ಹಿಂದೂಗಳ ಮನಃ ಪರಿವರ್ತನೆಯನ್ನು ಕೂಡ ಮಾಡಬೇಕಿತ್ತು. ಆದ್ದರಿಂದ ಅವರ ಹೋರಾಟ ದೇಶಭಕ್ತಿ ಹಾಗು ಮಾನವ ಹಕ್ಕುಗಳನ್ನು ಪಡೆಯುವ ಉದ್ದೇಶ ಎರಡರ ಮಿಶ್ರಣವೂ ಆಗಿತ್ತು.

ಇಷ್ಟೊಂದು ದೊಡ್ಡ ಶಾಪ ಇರುವಾಗ ಯಾವುದೇ ದೇಶ ಅಭಿವೃದ್ಧಿ ಆಗುವುದು ಸಾಧ್ಯವಿರಲಿಲ್ಲ.

ಎಲ್ಲಿಯವರೆಗೂ ಇವರಿಗೆ ಸಮಾನ ಹಕ್ಕುಗಳು ದೊರೆಯುವುದಿಲ್ಲವೋ ಅಲ್ಲಿಯವರೆಗೂ ಹಿಂದೂ ಸಮಾಜವು ಕೋಳಗಳಿಂದ ಬಂಧಿತವಾಗಿಯೇ ಇರುತ್ತದೆ. ಈ ಜನ ತಮ್ಮ ಹಕ್ಕುಗಳನ್ನು ಪಡೆಯಲು ಹೋರಾಡುತ್ತಾ ಹಿಂದೂಗಳ ಹಾಗು ಇಡೀ ದೇಶದ ಅಭಿವೃದ್ಧಿಗಾಗಿ ದುಡಿಯುತ್ತಿದ್ದಾರೆ. ಡಾ. ಅಂಬೇಡ್ಕರ್ ಅವರು ಇದೀಗ ಮುಂದಿನ ಹೋರಾಟದ ರೂಪುರೇಷೆಯ ತಯಾರಿಯಲ್ಲಿ ತೊಡಗಿದ್ದಾರೆ. ಅದು ಬಹುಶಃ ಇನ್ನು ಒಂದು ತಿಂಗಳಿನಲ್ಲಿ ಆರಂಭವಾಗಲಿದೆ. ಹಿಂದೂಗಳ ಹೊಸ ವರುಷದ ಹಬ್ಬದ ದಿನದಂದು ಅವರೆಲ್ಲಾ ತಮ್ಮ ಮನೆಯ ಮೇಲೆ ಬಾವುಟಗಳನ್ನು ಹಾರಿಸುತ್ತಾರೆ. ಅಂದೇ ಡಾ. ಅಂಬೇಡ್ಕರ್ ಅವರು ಈ ಹೋರಾಟ ಆರಂಭಿಸಲಿದ್ದಾರೆ. ಶೋಷಿತ ವರ್ಗದ ನಾಯಕರು "ಎಲ್ಲರಿಗೂ ಸಮಾನ ಮಾನವ ಹಕ್ಕುಗಳ" ಬಾವುಟವನ್ನು ಹಾರಿಸಲಿದ್ದಾರೆ. ಆ ದಿನ ದೇವರ ಇಚ್ಛೆಯಿದ್ದರೆ ಅವರ ಈ ಆಸೆ ನೆರವೇರುತ್ತದೆ.[೧]

ಈ ಕೆಳಗಿನ ಮಹಾಡ್ ಸತ್ಯಾಗ್ರಹ ಕುರಿತ ಲೇಖನವನ್ನು ಶ್ರೀ ಡಿ.ವಿ. ಪ್ರಧಾನ್ ಎಂಬುವವರು ಬರೆದಿದ್ದಾರೆ

**ನ್ಯಾಯದ ವಿಜಯ**

ಕಳೆದ ಮಾರ್ಚಿ ತಿಂಗಳಿನಲ್ಲಿ ಡಾ. ಅಂಬೇಡ್ಕರ್ ಅವರು ಅಸ್ಪೃಶ್ಯರನ್ನು ಚಾವ್ದಾರ್ ಕೆರೆಗೆ ಮೆರವಣಿಗೆಯಲ್ಲಿ ಕರೆದೊಯ್ದಿದ್ದರು. ಇದರಿಂದಾಗಿ ಸಂಪ್ರದಾಯವಾದಿ ಹಿಂದೂಗಳು ತಮ್ಮ ಶಾಂತಿಯನ್ನು ಕಳೆದುಕೊಂಡರು, ನಿದ್ರೆ ಆಹಾರವನ್ನು ತೊರೆದರು. ಕೆರೆಯನ್ನು ಅಪವಿತ್ರ ಮಾಡಿದ ಅಸ್ಪೃಶ್ಯರ ಮೇಲೆ ಹರಿಹಾಯ್ದರು. ಕೆರೆಯಿಂದ ಹಿಂದಿರುಗುತ್ತಿದ್ದ ವೇಳೆ ಅವರ ಮೇಲೆ ಹಲ್ಲೆ ನಡೆಸಿದರು, ಅನಂತರ ಇವರ ಮೇಲೆ ಸಾರ್ವಜನಿಕ ಶಾಂತಿಗೆ ಭಂಗ ತಂದರು ಎಂಬ ಆರೋಪವನ್ನು ಹೊರೆಸಿ ಮೊಕದ್ದಮೆ ದಾಖಲಿಸಿ ಆ ರೌಡಿಗಳಿಗೆ ಶಿಕ್ಷೆಯನ್ನು ವಿಧಿಸಲಾಯಿತು. ಈ "ರಕ್ಷಕರು" ಅಸ್ಪೃಶ್ಯರು ಕೆರೆಯ ಬಳಿಗೆ ಸುಳಿಯದಂತೆ ಮಾಡಲು ತಮ್ಮ ಕೈಲಾದ ಪ್ರಯತ್ನಪಟ್ಟರು. ಅವರ ಬೆಂಬಲಕ್ಕೆ ನಿಂತವರೆಂದರೆ ಸಂಪ್ರದಾಯವಾದಿ ಮಾಧ್ಯಮದವರು. ತಾವು ಕೂಡ ಜನ ಸಾಮಾನ್ಯರ ಹಕ್ಕುಗಳನ್ನು ಪಡೆಯುವ ಸಲುವಾಗಿ ಅಸ್ಪೃಶ್ಯರು ಈ ಸತ್ಯಾಗ್ರಹವನ್ನು ಕೈಗೊಂಡರು. ಕಳೆದ ಡಿಸೆಂಬರ್ ತಿಂಗಳಿನಲ್ಲಿ ಆರಂಭವಾದ ಈ ಸತ್ಯಾಗ್ರಹಕ್ಕೆ ಮೊದಲ ದಿನವೇ ೧೦,೦೦೦ ಜನ ಸೇರಿದ್ದರು. ಎಲ್ಲರೂ ಸೇರಿ ಚಾವ್ದಾರ್ ಕೆರೆಯ ಬಳಿಗೆ ತೆರಳುವ ನಿರ್ಧಾರ ಕೈಗೊಂಡರು. ಆದರೆ ಇದರ ವಾಸನೆಯ ಸುಳಿವನ್ನು ಹಿಡಿದ ಸಂಪ್ರದಾಯವಾದಿ ಹಿಂದೂಗಳು ಇದಕ್ಕೆ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ತಂದರು. ಅವರು ಈ ಕೆರೆಯು ಶ್ರೀ ಚೌಧುರಿ ಎಂಬುವವರ ಖಾಸಗಿ ಸ್ವತ್ತು ಹಾಗು ಅದು ಕೇವಲ ಮೇಲ್ವರ್ಗದ ಜನರಿಗೆ ಮಾತ್ರ ಸೇರಿದ್ದು ಎಂದು ವಾದಿಸಿದ್ದರು. ಈ ವಿಷಯದಲ್ಲಿ ಮೇಲ್ವರ್ಗದ ಜನರು ತಾವು ಸರ್ಕಾರ ಹಾಗು ಅಸ್ಪೃಶ್ಯರ ವಿರುದ್ಧ ಜಯಗಳಿಸಿದ್ದೇವೆ ಎಂದು ಬೀಗಿದರು. ಡಾ ಅಂಬೇಡ್ಕರ್ ಅವರಿಗೆ ಇವರ ಅಟ್ಟಹಾಸದ ಪರಿಚಯ ಇದ್ದುದರಿಂದ ಅವರು ಈ ನ್ಯಾಯಾಲಯದ ಕಟ್ಟಳೆ ಇತ್ಯರ್ಥ ಆಗುವವರೆಗೂ ಈ ಸತ್ಯಾಗ್ರಹವನ್ನು ಮಂದೂಡಲು ನಿರ್ಧರಿಸಿದರು. ಈ ಮೊಕದ್ದಮೆಯು ೧೯೨೮ನೆಯ ಫೆಬ್ರವರಿ ೨೩ ರಂದು ಮಹಾಡ್‌ನ ಮುಖ್ಯ ನ್ಯಾಯಾಧೀಶರಾದ ವೈದ್ಯ ಎಂಬುವವರ ಬಳಿ ವಿಚಾರಣೆಗೆ ಬಂದಿತು. ತಮ್ಮ ಅತ್ಯಂತ ಪ್ರಬಲ ವಾದದೊಂದಿಗೆ ಡಾ. ಅಂಬೇಡ್ಕರ್ ಅವರು ಈ ತಡೆಯಾಜ್ಞೆಯನ್ನು ರದ್ದುಗೊಳಿಸುವಂತೆ ಮಾಡಿದ್ದು ಮಾತ್ರವಲ್ಲ ನ್ಯಾಯಾಧೀಶರ ಮನವೊಲಿಸಿ ಕೆರೆಯನ್ನು ಅಸ್ಪೃಶ್ಯರೂ ಉಪಯೋಗಿಸುವಂತೆ ಅನುಮತಿ ಪಡೆದುಕೊಂಡರು. ಇದೀಗ ಆ ತಡೆಯಾಜ್ಞೆಯು ರದ್ದಾಗಿದೆ ಹಾಗು

---

1. The Indian National Horald dated 28th Febryary, 1928

ಸಾರ್ವಜನಿಕ ಉಪಯೋಗಕ್ಕೆ ಕೆರೆಯು ಮುಕ್ತವಾಗಿದೆ. ಅದು ಬೊಂಬಾಯಿ ನಗರ ಸಭೆಯ ಆದೇಶದ ಪ್ರಕಾರವೇ ಆಯಿತು.

**ಪುನರಾರಂಭವಾಗಲಿರುವ ಸತ್ಯಾಗ್ರಹ**

ಭಾನುವಾರ ಫೆಬ್ರವರಿ ೨೬ ರಂದು ಒಂದು ಸಾರ್ವಜನಿಕ ಸಭೆಯು ಬೊಂಬಾಯಿಯಲ್ಲಿ ನಡೆಯಿತು. ಅದರಲ್ಲಿ ಸುಮಾರು ೨೦೦೦ ಮಂದಿ ಪಾಲ್ಗೊಂಡಿದ್ದರು. ಆ ಸಭೆಯಲ್ಲಿ ಮಹದ್‌ನಲ್ಲಿ ಸತ್ಯಾಗ್ರಹವನ್ನು ಪುನರಾರಂಭ ಮಾಡಬೇಕು ಎಂಬ ನಿರ್ಧಾರಕ್ಕೆ ಬರಲಾಯಿತು. ಸತ್ಯಾಗ್ರಹ ಸಮಿತಿಯು ಇಷ್ಟರಲ್ಲಿಯೇ ಸಭೆ ಸೇರಲಿದೆ ಹಾಗು ಆಗ ಪುನರಾರಂಭದ ದಿನವನ್ನು ತಿಳಿಸಲಾಗುವುದು ಎಂದರು.

ಈ ಭಾಗದಲ್ಲಿ ನಡೆಯುತ್ತಿದ್ದ ಅಸ್ಪೃಶ್ಯತಾ ವಿರೋಧಿ ಚಳುವಳಿಗಳನ್ನು ಗಮನಿಸುತ್ತಾ ಬಂದಿರುವವರು ಒಂದು ವಿಷಯವನ್ನಂತೂ ಖಡಾಖಂಡಿತವಾಗಿ ಹೇಳಬಲ್ಲರು. ಅದೇನೆಂದರೆ ಡಾ. ಅಂಬೇಡ್ಕರ್ ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಎಲ್ಲಾ ಚಳುವಳಿಗಳೂ ಜಾತ್ಯತೀತವಾಗಿದ್ದವು. ಇದು ಕೇವಲ ಚಾವ್ದಾರ್ ಕೆರೆಯ ಉಪಯೋಗದ ಹಕ್ಕನ್ನು ಪಡೆದುಕೊಳ್ಳಲು ಮಾತ್ರ ಸೀಮಿತವಾಗಿರಲಿಲ್ಲ. ಅದರ ಜೊತೆಗೆ ಪ್ರಜೆಗಳ ಸಾಮಾನ್ಯ ಹಕ್ಕು, ಸೌಲಭ್ಯಗಳನ್ನು ಸಮರ್ಥಿಸಿಕೊಳ್ಳಲು ನಡೆಸಿದ್ದ ರಾಷ್ಟ್ರೀಯ ಚಳವಳಿಗೆ ದಾರಿಯನ್ನು ಮಾಡಿಕೊಟ್ಟಿತ್ತು. ಈಗ ಕೆಲದಿನಗಳ ಹಿಂದಷ್ಟೇ ಡಾ. ಅಂಬೇಡ್ಕರ್ ಅವರು ಮತ್ತೊಂದು ಪ್ರಮುಖ ನಿರ್ಧಾರ ಪ್ರಕಟಿಸಿದ್ದರು. ಅದೇನಂದರೆ ಗಾಂಧೀಜಿಯವರ ಆಶೀರ್ವಾದದೊಂದಿಗೆ ಅಸ್ಪೃಶ್ಯರಿಗೆಂದೇ ಕೆಲ ಖಾದಿ ಕೇಂದ್ರಗಳನ್ನು ತೆರೆಯಲು ಅವರು ನಿರ್ಧರಿಸಿದ್ದರು. ಶರೀರದ ಮೇಲೆ ಖಾದಿಯನ್ನು ಧರಿಸಿ ಮನಸ್ಸಿನಲ್ಲಿ ಸತ್ಯಾಗ್ರಹದ ಜಪವನ್ನು ಮಾಡುತ್ತಾ ಕಾರ್ಯವನ್ನು ಮಾಡಿದರೆ ಅದರಲ್ಲಿ ಯಶಸ್ಸು ದೊರೆಯುವುದಂತೂ ಖಂಡಿತ ಎಂಬುದು ಅವರ ಅನಿಸಿಕೆಯಾಗಿತ್ತು.

ಆದರೆ ಒಂದು ವಿಷಯವನ್ನು ನಾನು ನಿಮಗೆ ತಿಳಿಸಲೇ ಬೇಕು. ಮಿತ್ರರೇ, ಅದೇನೆಂದರೆ ಯಾವುದೇ ಸತ್ಕಾರ್ಯಕ್ಕಾದರೂ ನೂರಾರು ವಿಘ್ನಗಳು ಬರುವುದು ಸಹಜ. ಆದ್ದರಿಂದ ಈ ಸತ್ಯಾಗ್ರಹವು ಕೂಡ ಬಹಳಷ್ಟು ವಿಘ್ನಗಳನ್ನು ಎದುರಿಸಬೇಕಾಗುತ್ತದೆ. ನಿಜವಾದ ಶತ್ರುಗಳಿಗಿಂತ ಸ್ನೇಹಿತರ ಸೋಗಿನಲ್ಲಿ ಇರುವ ಶತ್ರುಗಳಿಂದ ಒದಗಿ ಬರುವಂತಹ ವಿಘ್ನಗಳು ಅತ್ಯಂತ ಅಪಾಯಕಾರಿ ಆಗಿರುತ್ತದೆ. ಆದರೆ ಕಡೆಯಲ್ಲಿ ವಿಜಯೋತ್ಸಾಹ ನಮ್ಮದಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ನನ್ನ ಸ್ನೇಹಿತರಲ್ಲಿ ನನ್ನದು ಕೇವಲ ಒಂದೇ ಒಂದು ವಿನಂತಿ. ಅವರು ತಮ್ಮ ಸ್ನೇಹಿತರಿಂದ ಶತ್ರುಗಳಿಂದ ಯಾವುದೇ ರೀತಿಯ ವಿಘ್ನಗಳನ್ನು ಎದುರಿಸಿದರೂ ಕೂಡ ಧೈರ್ಯಗೆಡಬಾರದು; ತಾಳ್ಮೆಗೆಡಬಾರದು, ಗುರಿಯನ್ನು ಮರೆಯಬಾರದು, ತಮ್ಮ ಹೋರಾಟ ಜಾರಿಯಲ್ಲಿ ಇರಿಸಬೇಕು, ಆದರೆ ಅಹಿಂಸಾ ಮಾರ್ಗ ಹಾಗು ತಾಳ್ಮೆಯನ್ನು ಮಾತ್ರ ಬಿಟ್ಟುಕೊಡಲೇ ಬಾರದು. ನನ್ನ ಎಲ್ಲಾ ಸಹೋದರರಿಗೂ ದೇವರು ಈ ನೋವನ್ನು ಭರಿಸುವ ಶಕ್ತಿಯನ್ನು ನೀಡಲಿ ಹಾಗು ಹಿಂದೂಗಳಿಗೆ ಜ್ಞಾನೋದಯ ಆಗುವಂತೆ ಮಾಡಲಿ"[೧]

ಮಹದ್ ನ್ಯಾಯಾಲಯ ಉಪನ್ಯಾಯಾಧೀಶರು ತಾತ್ಕಾಲಿಕ ತಡೆಯಾಜ್ಞೆಯನ್ನು ರದ್ದು ಮಾಡಿದರು.

**ಚಾವ್ದಾರ್ ಕೆರೆ–ಇದು ಖಾಸಗಿ ಸ್ವತ್ತಲ್ಲ – ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದಕ್ಕೆ ವಿಷಾದಿಸಿದ ನ್ಯಾಯಾಧೀಶರು:**

"ಈ ಆದೇಶ ರದ್ದತಿಯನ್ನು ನೀಡುವ ಮೊದಲು ನಾನು ನನ್ನ ವಿಷಾದವನ್ನು ವ್ಯಕ್ತಪಡಿಸದೇ ಇರಲಾರೆ. ನಾನು ನೀಡಿದ್ದಂತಹ ತಡೆಯಾಜ್ಞೆಯಿಂದ ಅರ್ಜಿದಾರರು ಎಷ್ಟೊಂದು ನೋವನ್ನು ಅನುಭವಿಸಿದರು

---

೧. ದಿ ಇಂಡಿಯನ್ ನ್ಯಾಷನಲ್ ಹೆರಾಲ್ಡ್, ೩ನೆಯ ಮಾರ್ಚ್ ೧೯೨೮

ಎಂಬುದಕ್ಕಾಗಿ ನನಗೆ ವಿಷಾದವೆನಿಸುತ್ತಿದೆ. ಅದು ತಾತ್ಕಾಲಿಕವೇ ಆಗಿದ್ದರೂ ಈ ಸಮುದಾಯದ ಮೇಲೆ ಮತ್ತೊಂದು ಘೋರ ಪಾತಕವನ್ನು ಎಸಗುವ ತಪ್ಪನ್ನು ನಾನು ಮಾಡಿದ್ದೆ. ಮಾತ್ರವಲ್ಲ, ಇದಾಗಲೇ ಸಾಮಾಜಿಕ ಅಸಮಾನತೆಯಿಂದ ಬಳಲುತ್ತಿದ್ದ ಈ ಸಮುದಾಯಕ್ಕೆ ಮತ್ತಷ್ಟು ತೊಂದರೆ ಉಂಟು ಮಾಡಿದ್ದೆ" ಡಾ. ಅಂಬೇಡ್ಕರ್ ಹಾಗು ಇತರರ ಮೇಲೆ ಹೊರಿಸಿದ್ದಂತಹ ಆರೋಪಗಳಿಂದ ಅವರನ್ನು ಮುಕ್ತಗೊಳಿಸುವ ಮುನ್ನ ಈ ಮೇಲಿನಂತೆ ನ್ಯಾಯಾಧೀಶರು ನುಡಿದಿದ್ದರು.

ಡಾ. ಅಂಬೇಡ್ಕರ್ ಹಾಗು ಅವರ ಸಹಚರರು ಚಾವ್ದಾರ್ ಕೆರೆಗೆ ತೆರಳಿ ನೀರನ್ನು ತೆಗೆದುಕೊಳ್ಳಲು ಅನುವು ಮಾಡಿ ಕೊಡದಿದ್ದುದೇ ಈ ತಡೆಯಾಜ್ಞೆ ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ಈ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿದ್ದವರು ಶ್ರೀ ಜಿ.ವಿ. ವೈದ್ಯ ಎಂಬ ಉಪನ್ಯಾಯಾಧೀಶರು. ಇದಕ್ಕೆ ಅರ್ಜಿ ಸಲ್ಲಿಸಿದ್ದವರು ಶ್ರೀ ಪಾಂಡುರಂಗ ರಘುನಾಥ ಧಾರಪ ಹಾಗು ಇತರರು ಅವರು ಈ ಕೆರೆಯು ತಮ್ಮ ಖಾಸಗಿ ಸ್ವತ್ತು ಎಂದು ವಾದಿಸುತ್ತಿದ್ದರು. ಡಾ. ಅಂಬೇಡ್ಕರ್ ಹಾಗು ಅವರ ಕೆಲ ಸಹಚರರು ಪುನಃ ಸತ್ಯಾಗ್ರಹವನ್ನು ಪ್ರಾರಂಭಿಸಲು ಆಸಕ್ತಿ ಹೊಂದಿದ್ದಾರೆ ಮಾತ್ರವಲ್ಲ ಇವರೊಂದಿಗೆ ಕೈಜೋಡಿಸಲು ಕೆಲ ಹಿಂದೂಗಳು ಕೂಡ ತಯಾರಿದ್ದರು. ಅವರು ಬಹುಶಃ ಈ ಹೋರಾಟವನ್ನು ಹಿಂದೂಗಳ ಹೊಸ ವರ್ಷದ ಮೊದಲನೆಯ ದಿನ ಪ್ರಾರಂಭಿಸಬಹುದು, ಅಂದರೆ, ಇನ್ನು ಮೂರು ವಾರಗಳ ನಂತರ. ಏಕೆಂದರೆ ಇದೀಗ ಇವರ ಮೇಲೆ ಇದ್ದಂತಹ ತಾತ್ಕಾಲಿಕ ತಡೆಯಾಜ್ಞೆಯು ರದ್ದಾಗಿದೆ ಹಾಗು ಕೆರೆಯು "ಸರ್ಕಾರದ ಹಾಗು ನಗರ ಪಾಲಿಕೆಯ" ಆಸ್ತಿ ಎಂದು ಘೋಷಿಸಲ್ಪಟ್ಟಿದೆ.

## ತಾತ್ಕಾಲಿಕ ಆಜ್ಞೆ ನೀಡಿದ್ದಾದರು ಏಕೆ?

ಫೆಬ್ರವರಿ ೨೩ ರಂದು ತೀರ್ಪನ್ನು ನೀಡುತ್ತಾ ನ್ಯಾಯಾಧೀಶರು ಈ ಕೆಳಗಿನಂತೆ ಹೇಳಿದ್ದರು "ಎದುರಿಗಿದ್ದ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ಈ ಮೇಲಿನ ಆಜ್ಞೆಯನ್ನು ನೀಡಲಾಗಿತ್ತು. ಅದರಂತೆ ಚಾವ್ದಾರ್ ಕೆರೆಯು ಸಾರ್ವಜನಿಕ ಸ್ವತ್ತಲ್ಲ, ಖಾಸಗಿ ಸ್ವತ್ತು ಎಂದು ಮೇಲ್ನೋಟಕ್ಕೆ ಕಾಣುತ್ತಿತ್ತು. ಇದೀಗ ಪ್ರತಿವಾದಿಗಳು ನೀಡಿರುವ ಸಾಕ್ಷ್ಯಾಧಾರಗಳನ್ನು ಆಧರಿಸಿ ಅವರ ಹೇಳಿಕೆ ಎಷ್ಟರ ಮಟ್ಟಿಗೆ ನಿಜ ಎಂದು ನಾನು ಪರಿಗಣಿಸಬೇಕಿದೆ ನನ್ನ ಅಭಿಪ್ರಾಯದಲ್ಲಿ ಈ ಸಾಕ್ಷ್ಯಾಧಾರಗಳಿಗೆ ವಿರುದ್ಧವಾದ ಸಾಕ್ಷ್ಯಗಳನ್ನು ಪ್ರತಿಕಕ್ಷಿಗಳು ನೀಡಿದ್ದಾರೆ"

ಸಾಕ್ಷ್ಯಾಧಾರಗಳನ್ನು ಪರೀಕ್ಷಿಸುವ ಸಮಯದಲ್ಲಿ ಉಪ ನ್ಯಾಯಮೂರ್ತಿಗಳು ಕಂದಾಯ ಇಲಾಖೆಗೆ ಕಂದಾಯವನ್ನು ಪಾವತಿಸಿರುವ ದಾಖಲೆಗಳನ್ನು ಗಮನಿಸಿದ್ದರು. ಇದಲ್ಲದೇ ಇತರ ಕೆಲ ಜನರು ಕೂಡ ನಗರ ಪಾಲಿಕೆಗೆ ಈ ಕೆರೆಯ ನೀರನ್ನು ಉಪಯೋಗಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರು. ಈ ಎಲ್ಲಾ ದಾಖಲೆಗಳನ್ನು ಪರಿಗಣಿಸಿ ನ್ಯಾಯಮೂರ್ತಿಗಳು ಈ ಕೆಳಗಿನಂತೆ ತೀರ್ಪು ನೀಡಿದರು "ಈ ಎಲ್ಲಾ ದಾಖಲೆಗಳಿಂದ ವಿವಾದಿತ ಚಾವ್ದಾರ್ ಕೆರೆಯು ಸರ್ಕಾರಿ ಆಸ್ತಿಯಾಗಿದ್ದು ನಗರ ಪಾಲಿಕೆಯವರ ಉಸ್ತುವಾರಿಯಲ್ಲಿ ಇರುತ್ತದೆ ಪಿರ್ಯಾದುದಾರರು ಹೇಳುವಂತೆ ಇದು ಖಾಸಗಿ ಸ್ವತ್ತಲ್ಲ ಎಂಬುದು ಸ್ಪಷ್ಟವಾಗುತ್ತದೆ."

## ನಿರ್ಣಾಯಕ ಸಾಕ್ಷಿ

ಮುಂದುವರೆದು ನ್ಯಾಯಮೂರ್ತಿಗಳು ಈ ರೀತಿ ಹೇಳುತ್ತಾರೆ: ಈ ಕೆರೆಯು ಸಾರ್ವಜನಿಕ ಆಸ್ತಿ ಎನ್ನಲು ಕೆರೆಗೆ ಕಟ್ಟಿರುವಂತಹ ಏರಿಯ ಎರಡು ಕಡೆಯಲ್ಲಿ ಕಲ್ಲಿನ ಮೇಲೆ ನಗರ ಪಾಲಿಕೆಯ ಚಿಹ್ನೆಯನ್ನು

ಕೆತ್ತಲಾಗಿರುವುದು ಮತ್ತಷ್ಟು ಬೆಂಬಲವನ್ನು ಕೊಡುತ್ತದೆ. ಅರ್ಜಿದಾರರ ಕೋರಿಕೆಯಂತೆ ಇದನ್ನು ಪರೀಕ್ಷಿಸಲು ಇಬ್ಬರೂ ಅಹವಾಲುದಾರರೊಂದಿಗೆ ನ್ಯಾಯಾಲಯದಿಂದ ಒಂದು ತಂಡವು ತೆರಳಿತ್ತು. ಅವರೆಲ್ಲರೂ ಈ ಕೆತ್ತನೆಯು ನಗರ ಸಭೆಯ ಚಿಹ್ನೆಯೇ ಎಂದು ಸ್ಪಷ್ಟಪಡಿಸಿರುತ್ತಾರೆ. ಇದು ನ್ಯಾಯಾಲಯದ ಪ್ರತಿನಿಧಿಗಳು, ಫಿರ್ಯಾದುದಾರರ ಪ್ರತಿನಿಧಿಗಳಾದ ಜೋಷಿ ಹಾಗು ಸಾಠೆ ಹಾಗು ಪ್ರತಿವಾದಿಗಳ ಪ್ರತಿನಿಧಿಗಳಾದ ಶ್ರೀ ವೈದ್ಯ ಅವರ ಎದುರು ಜರುಗಿರುತ್ತದೆ. ಎರಡನೆಯ ಕಲ್ಲಿನ ಚಪ್ಪಡಿಯ ಮೇಲೆ ೧೮೯೫ ನೆಯ ಇಸವಿ, ಮಹದ್ ನಗರಸಭೆ" ಎಂಬ ಕೆತ್ತನೆ ಅತ್ಯಂತ ಸ್ಪಷ್ಟವಾಗಿದೆ. ಮೊದಲನೆಯ ಚಪ್ಪಡಿಯ ಮೇಲೆ ಕೆಲ ಅಕ್ಷರಗಳು ಸ್ಪಷ್ಟವಾಗಿವೆ ಮತ್ತೆ ಕೆಲ ಅಕ್ಷರಗಳು ಹಾನಿಗೆ ಒಳಗಾಗಿವೆ. ಆ ಹಾನಿಯು ಕೂಡ ಇತ್ತೀಚೆಗಷ್ಟೇ ನಡೆದಿರುವಂತಹುದು ಎಂದು ತೋರುತ್ತದೆ.

## ಅಹವಾಲುದಾರರ ದುರ್ಬಲ ಮೊಕದ್ದಮೆ

ಈ ಮೇಲಿನ ಎಲ್ಲಾ ಸಾಕ್ಷ್ಯಗಳಿಗೆ ವಿರುದ್ಧವಾಗಿ ಅಹವಾಲುದಾರರು ಕೇವಲ ಧರಪ್ ಕುಟುಂಬದವರ ಆಸ್ತಿ ಹಂಚಿಕೆಯ ಪತ್ರದ ಮೇಲೆ ತಮ್ಮ ವಾದವನ್ನು ನಿಲ್ಲಿಸಿದ್ದಾರೆ. ಈ ಎಲ್ಲಾ ಮೇಲ್ಕಂಡ ಸಾಕ್ಷ್ಯಗಳ ಎದುರು ಈ ಆಸ್ತಿ ಹಂಚಿಕೆಯ ಪತ್ರ ಅಂತಹ ಬಲವಾದ ಸಾಕ್ಷ್ಯವನ್ನೇನೂ ಒದಗಿಸುವುದಿಲ್ಲ. ಹಲವಾರು ವರ್ಷಗಳ ಕೆಳಗೆ ಧರಪ್ ಕುಟುಂಬಸ್ಥರೆಲ್ಲ ಸೇರಿ ಅವರ ಮನೆಯ ಎದುರು ಹಾನಿಗೆ ಒಳಗಾಗಿರುವ ಕಟ್ಟೆಯನ್ನು ಸರಿಪಡಿಸಿಕೊಳ್ಳಲು ಮಾಡಿಕೊಂಡಿರುವ ಒಪ್ಪಂದ ಇದಾಗಿರುತ್ತದೆ. ಇವರಿಗೆ ನಗರ ಪಾಲಿಕೆಯಿಂದಲೂ ಒಂದು ಆದೇಶ ಬಂದಿರುತ್ತದೆ. ಅದರ ಅನುಸಾರ ದಿವಾಕರ ಜೋಷಿ ಎಂಬುವವರಿಗೆ ತಮ್ಮ ಮನೆಯ ಮುಂದೆ ಇರುವ ಕಟ್ಟೆಯನ್ನು ದುರಸ್ತಿಗೊಳಿಸುವಂತೆ ತಿಳಿಸಲಾಗಿರುತ್ತದೆ. ಈ ಹಾನಿಗೆ ಒಳಗಾಗಿರುವ ಕಟ್ಟೆಯಿಂದ ಮಲಿನಗೊಂಡ ನೀರೆಲ್ಲಾ ಕೆರೆಯನ್ನು ಸೇರಿ ಕೆರೆಯನ್ನು ಕಲುಷಿತಗೊಳಿಸುತ್ತಿದೆ ಎಂಬ ಆಪಾದನೆ ಮಾಡಲಾಗಿರುತ್ತದೆ. ಆದ್ದರಿಂದ ತ್ವರಿತವಾಗಿ ಅವರಿಗೆ ಕಟ್ಟೆಯನ್ನು ದುರಸ್ತಿಗೊಳಿಸುವಂತೆ ತಿಳಿಸಲಾಗಿರುತ್ತದೆ. ಆದರೆ ಯಾವುದೇ ಕಾರಣದಿಂದಲೂ ಈ ದಾಖಲೆಗಳಿಂದ ಕೆರೆಯು ಇವರ ಖಾಸಗಿ ಆಸ್ತಿ ಎಂದು ಹೇಳಲು ಬರುವುದಿಲ್ಲ ಇದನ್ನು ಅಂತಹ ಬಲವಾದ ಸಾಕ್ಷ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ.

## ಯಾವುದೇ ವಿಶೇಷ ಪರಿಗಣನೆ ಇಲ್ಲ

ಈ ಮೊಕದ್ದಮೆಯ ಬಗ್ಗೆ ಕಟ್ಟಕಡೆಯ ತೀರ್ಪು ಯಾವುದೇ ರೀತಿ ಬರಲಿ. ಈ ಪರಿಸ್ಥಿತಿಯಲ್ಲಿ ನಾನು ನೀಡಿರುವ ತೀರ್ಪಿನಿಂದ ನನಗೆ ಬಹಳಷ್ಟು ಸಮಾಧಾನವಿದೆ. ಚಾವ್ದಾರ್ ಕೆರೆಯು ಅರ್ಜಿದಾರರು ಹೇಳುತ್ತಿರುವಂತೆ ಖಾಸಗಿ ಸ್ವತ್ತಲ್ಲ. ಬದಲಾಗಿ ಸರ್ಕಾರದ ಆಸ್ತಿ ಎಂದು ಮನವರಿಕೆ ಆಗಿದೆ. ಈಗ ಇರುವ ಪ್ರಶ್ನೆ ಈ ಅರ್ಜಿದಾರರಿಗೆ ಅಸ್ಪೃಶ್ಯರನ್ನು ಕೆರೆಯಿಂದ ದೂರವಿಡುವ ಹಕ್ಕಿದೆಯೇ ಎಂಬುದು. ಉತ್ತರ ಖಂಡಿತವಾಗಿಯೂ "ಇಲ್ಲ" ಎಂಬುದೇ. ಈ ರೀತಿಯ ಸಾರ್ವಜನಿಕ ಆಸ್ತಿಯ ವಿಷಯಕ್ಕೆ ಬಂದರೆ ಎಂದಿಗೂ ಅದು ಯಾವುದೇ ಒಂದು ಜಾತಿಗೆ ಅಥವಾ ಕೋಮಿಗೆ ಮೀಸಲಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ ಎಲ್ಲರಿಗೂ ಅದನ್ನು ಅನುಭವಿಸುವ ಸಂಪೂರ್ಣವಾದ ಹಕ್ಕು ಇರುತ್ತದೆ ಮತ್ತು ಇದರಿಂದ ತುಂಬಲಾರದ ನಷ್ಟವು ಯಾರಿಗೂ ಆಗುವುದಿಲ್ಲ. ಯಾರೂ ಅವರನ್ನು ತಡೆಯುವ ಹಕ್ಕನ್ನು ಹೊಂದಿರುವುದಿಲ್ಲ. ಒಂದು ವೇಳೆ ಅಂತಹ ಪ್ರಯತ್ನವೇನಾದರೂ ನಡೆದರೆ ಅದು ಸಂಪೂರ್ಣವಾಗಿ ಕಾನೂನುಬಾಹಿರ

ಎಂದೆನಿಸಿಕೊಳ್ಳುತ್ತದೆ. ಕೆಳವರ್ಗದವರು ಈ ಹಕ್ಕು ಪಡೆಯುವುದರಿಂದ ಮೇಲ್ವರ್ಗದ ಜನರಿಗೆ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ.

### ಫಿರ್ಯಾದುದಾರರ ಕಡೆಯ ವಕೀಲರ ಹುರುಳಿಲ್ಲದ ವಾದ

ಫಿರ್ಯಾದುದಾರರ ಕಡೆಯ ವಕೀಲರಾದ ಮಾನ್ಯ ಶ್ರೀ ವೀರ್ಕರ್ ಅವರೇ ಒಪ್ಪಿಕೊಳ್ಳುವಂತೆ ಈ ಕೆರೆಯ ಹಕ್ಕಿಗಾಗಿ ಹೋರಾಟ ನಡೆಸುತ್ತಿರುವ ಅರ್ಜಿದಾರರು ಈ ಕೆರೆಯನ್ನು ಅನುಭವಿಸಿಯೇ ಇಲ್ಲ. ಆದರೆ ಇದೀಗ ಕೆರೆಯು ಯಾರದ್ದೇ ಖಾಸಗಿ ಸ್ವತ್ತಲ್ಲ, ಬದಲಾಗಿ ಸರ್ಕಾರಿ ಸ್ವತ್ತು ಎಂದು ಸಾಬೀತಾಗಿದೆ ಎಷ್ಟೇ ವರ್ಷಗಳಿಂದಲೂ ಈ ಕೆರೆಯನ್ನು ಉಪಯೋಗಿಸದೇ ಇದ್ದರೂ ಆ ಹಕ್ಕಿನಿಂದ ಯಾವುದೇ ಕಾರಣಕ್ಕೂ ಅವರನ್ನು ವಂಚಿತಗೊಳಿಸಲು ಸಾಧ್ಯವಿಲ್ಲ. ನನಗೆ ಒದಗಿಸಿರುವ ದಾಖಲೆಗಳಿಂದ ಒಂದು ಅಂಶವಂತೂ ಸ್ಪಷ್ಟವಾಗಿದೆ. ಅದೇನೆಂದರೆ ಫಿರ್ಯಾದುದಾರರು ಹೇಳುತ್ತಿರುವಂತೆ ವಿವಾದಿತ ಕೆರೆಯು ಅವರ ಖಾಸಗಿ ಸ್ವತ್ತಲ್ಲ, ಬದಲಾಗಿ ಸರ್ಕಾರದ ಆಸ್ತಿ. ಎಲ್ಲರಂತೆ ಕೆಳವರ್ಗದ ಜನರಿಗೂ ಈ ಕೆರೆಯ ಮೇಲೆ ಫಿರ್ಯಾದುದಾರರಿಗೆ ಇರುವಷ್ಟೇ ಹಕ್ಕು ಇರುತ್ತದೆ. ಯಾರಾದರೂ ಇದನ್ನು ತಡೆಯಲು ಪ್ರಯತ್ನ ಪಟ್ಟರೇ ಅದು ಕಾನೂನುಬಾಹಿರವಾಗುತ್ತದೆ.

ಆದರೆ ಈ ಆದೇಶವನ್ನು ಒಂದು ಮಾತು ಹೇಳದೇ ನಾನು ಕೊನೆಗೊಳಿಸಲಾರೆ. ನಾನು ನೀಡಿದ್ದ ಮಧ್ಯಂತರ ತಡೆಯಾಜ್ಞೆಯಿಂದ ಕೆಳವರ್ಗದ ಜನರಿಗೆ ಆದಂತಹ ತೊಂದರೆಗೆ ನಾನು ಬಹಳ ವಿಷಾದಿಸುತ್ತೇನೆ. ಅದು ತಾತ್ಕಾಲಿಕವೇ ಆದರೂ ಅದು ಈಗಾಗಲೇ ಹಲವಾರು ರೀತಿಯ ದಬ್ಬಾಳಿಕೆಗೆ ಒಳಗಾದ ವರ್ಗಗಳ ಮೇಲೆ ನೀಡಿದ್ದ ಮತ್ತೊಂದು ಹೊಡೆತವಾಗಿತ್ತು. ಆದ್ದರಿಂದ ನಾನು ನೀಡಿದ್ದಂತಹ ತಾತ್ಕಾಲಿಕ ತಡೆಯಾಜ್ಞೆಯನ್ನು ರದ್ದು ಮಾಡುತ್ತಿದ್ದೇನೆ"[೧]

### ಆಜ್ಞೆ ರದ್ದಾದ ನಂತರ ಬೊಂಬಾಯಿಯಲ್ಲಿ ನಡೆದ ಸಭೆಯ ವರದಿ; ಅಸ್ಪೃಶ್ಯರು ಹಾಗು ಮಹದ್ ಸತ್ಯಾಗ್ರಹ

ಫೆಬ್ರವರಿ ೨೬ ರಂದು ಬೊಂಬಾಯಿಯ ದಾಮೋದರ್ ಠಾಕರ್ಸೇ ಸಭಾಂಗಣದಲ್ಲಿ ಕೆಳವರ್ಗದ ಜನರ ಸಭೆಯೊಂದು ಜರುಗಿತು. ಸುಮಾರು ೫೦೦ ಮಂದಿ ಸೇರಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಜಿ.ಎನ್ ಸಹಸ್ರಬುಧೆ ವಹಿಸಿದ್ದರು.

ಡಾ. ಬಿ. ಆರ್ ಅಂಬೇಡ್ಕರ್ ತಮ್ಮ ವಿರುದ್ಧ ಹಾಗು ಸತ್ಯಾಗ್ರಹಿಗಳ ವಿರುದ್ಧ ಇದ್ದ ಆರೋಪವು ಸುಳ್ಳು ಎಂದು ಹೇಳಿ ಮಹದ್ ನ್ಯಾಯಾಲಯದ ಉಪನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ ಎಂಬ ವಿಷಯವನ್ನು ತಿಳಿಸಿದರು. ಅದಲ್ಲದೇ ತಾತ್ಕಾಲಿಕ ತಡೆಯಾಜ್ಞೆಯನ್ನು ಕೂಡ ರದ್ದು ಮಾಡಿದ್ದಾರೆ ಎಂದು ಹೇಳಿದರು. ಸತ್ಯಾಗ್ರಹ ಪುನರಾರಂಭಿಸುವುದನ್ನು ಬೊಂಬಾಯಿಯಲ್ಲಿ ಇರುವ ಸತ್ಯಾಗ್ರಹ ಸಭೆಯ ನಿರ್ಧಾರಕ್ಕೆ ಬಿಟ್ಟಿರುವುದಾಗಿ ನುಡಿದರು.

"ಇಂಡಿಯನ್ ನ್ಯಾಷನಲ್ ಹೆರಾಲ್ಡ್" ಎಂಬ ಪತ್ರಿಕೆಯು ಆಜ್ಞೆಯ ರದ್ದತಿಯ ನಂತರ ವ್ಯಕ್ತ ಪಡಿಸಿದ ಅಭಿಪ್ರಾಯ:

---

೧. ದಿ ಇಂಡಿಯನ್ ನ್ಯಾಷನಲ್ ಹೆರಾಲ್ಡ್, ೬ನೆಯ ಮಾರ್ಚ್ ೧೯೨೮

**ಸಾಮಾನ್ಯ ಮಾನವ ಹಕ್ಕುಗಳು:**

ಮಹದ್ ನ್ಯಾಯಾಲಯದ ಉಪನ್ಯಾಯಾಧೀಶರು ತಾವು ಹಿಂದೆ ನೀಡಿದ್ದ ತಾತ್ಕಾಲಿಕ ಆಜ್ಞೆಯನ್ನು ರದ್ದು ಮಾಡಿದ್ದಾರೆ. ಡಾ. ಅಂಬೇಡ್ಕರ್ ಹಾಗು ಇತರರ ಮೇಲೆ ಇದ್ದ ಮೊಕದ್ದಮೆ ಕೂಡ ರದ್ದಾಗಿದೆ. ಇದೀಗ ಸಾರ್ವಜನಿಕ ಕೆರೆಯಿಂದ ನೀರನ್ನು ಉಪಯೋಗಿಸುವ ಹಕ್ಕನ್ನು ಸಮರ್ಥಿಸಿಕೊಳ್ಳಲು ಅಸ್ಪೃಶ್ಯರು ನಿರ್ಧರಿಸಿದ್ದಾರೆ ಎಂದು ತಿಳಿದು ಬಂದಿದೆ. ಕಳೆದ ಮಾರ್ಚಿ ತಿಂಗಳಿನಲ್ಲಿ ಮಹದ್‌ನಲ್ಲಿ ಸಭೆ ಸೇರಿದ್ದ ಶೋಷಿತ ವರ್ಗದ ಜನರು ಕೆರೆಯ ಬಳಿಗೆ ಹೋಗುವ ಪ್ರಯತ್ನಪಟ್ಟಿದ್ದರು. ಆದರೆ ಅವರನ್ನು ಆ ಸಮಯದಲ್ಲಿ ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳಲಾಗಿತ್ತು. ಇದರಿಂದಾಗಿ ಕೆಲ ಚಮ್ಮಾರರಿಗೆ ಗಾಯಗಳು ಕೂಡ ಆಗಿದ್ದವು. ಅನಂತರ ಈ ಮೇಲ್ವರ್ಗದ ಜನರ ನಾಯಕರು ಶೋಷಿತ ವರ್ಗದವರು ಕೆರೆಯ ಬಳಿಗೆ ಬರದಂತೆ ತಾತ್ಕಾಲಿಕ ತಡೆಯಾಜ್ಞೆ ತಂದಿದ್ದರು. ಭಾರತೀಯ ನೀತಿ ಸಂಹಿತೆ ಸಂಖ್ಯೆ ೧೪೪ ಅಡಿಯಲ್ಲಿ ಜಿಲ್ಲಾಧಿಕಾರಿಗಳಿಂದ ತಡೆಯಾಜ್ಞೆ ತರಲಾಗಿತ್ತು. ಹಳೆಯ ಕಾಲದಿಂದಲೂ ಸಂಪ್ರದಾಯದಂತೆ ದಲಿತ ವರ್ಗದ ಜನರನ್ನು ಈ ಕೆರೆಯಿಂದ ನಿರ್ಬಂಧಿಸಲಾಗಿದೆ, ಒಂದು ವೇಳೆ ಈಗ ಈ ನಿರ್ಬಂಧವನ್ನು ತೆಗೆದುಬಿಟ್ಟರೆ ಅದು ಸಾರ್ವಜನಿಕ ಶಾಂತಿಗೆ ಭಂಗ ತರುವ ಅಪಾಯವಿದೆ ಎಂಬ ಕಾರಣವನ್ನು ನೀಡಿದ್ದರು.

ಆದರೆ ಜಿಲ್ಲಾಧಿಕಾರಿಗಳು ಈ ವಿಷಯದಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳಲು ನಿರಾಕರಿಸಿಬಿಟ್ಟರು. ಅನಂತರ ಅವರು ಉಪನ್ಯಾಯಮೂರ್ತಿಗಳ ಬಳಿಗೆ ತೆರಳಿ ಅವರಿಂದ ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಇದರಿಂದಾಗಿ ಶೋಷಿತ ವರ್ಗದ ನಾಯಕರ ಮೇಲೆ ನಿರ್ಬಂಧ ಹೇರಿದಂತಾಗಿತ್ತು. ಇದೆಲ್ಲದರ ಫಲವಾಗಿ ಅವರು ಸತ್ಯಾಗ್ರಹವನ್ನು ಮುಂದೂಡುವಂತೆ ಆಗಿತ್ತು. ಇದೀಗ ಇದೇ ಉಪನ್ಯಾಯಾಧೀಶರು ತಮ್ಮ ಆಜ್ಞೆಯನ್ನು ರದ್ದುಮಾಡಿದ್ದಾರೆ. ಅವರು ತಮಗೆ ದೊರೆತಿರುವ ಸಾಕ್ಷ್ಯಗಳಿಂದ ತಾವು ತೃಪ್ತರಾಗಿರುವುದಾಗಿ ತಿಳಿಸಿದ್ದರು "ಈ ರೀತಿಯ ಹಕ್ಕುಗಳಿಂದ ಯಾರನ್ನೇ ಆದರೂ ವಂಚಿತಗೊಳಿಸುವುದು ಸಂಪೂರ್ಣವಾಗಿ ಕಾನೂನು ಬಾಹಿರವಾಗುತ್ತದೆ" ಇದೀಗ "ಮೇಲ್ವರ್ಗ" ಎಂದು ಕರೆದುಕೊಳ್ಳುವ ಜನರು, ಆ ಕೆರೆಯಿಂದ ನೀರನ್ನು ತೆಗೆದುಕೊಳ್ಳದಂತೆ ಯಾರನ್ನೂ ತಡೆಯಲಾರರು. ಏಕೆಂದರೆ, ಅದು ಯಾರ ಖಾಸಗಿ ಸ್ವತ್ತೂ ಅಲ್ಲ. ಅವರು ಕೂಡ ಅದು ನಗರ ಪಾಲಿಕೆಗೆ ಸೇರಿದ ಆಸ್ತಿ ಎಂಬುದನ್ನು ಅರಿತುಕೊಳ್ಳಬೇಕು. ಅದನ್ನು ಯಾರು ಬೇಕಾದರೂ ಉಪಯೋಗಿಸಬಹುದು. ಜಾತಿವಾದದಿಂದ ಆತ ಕುರುಡಾಗಿರಬಾರದು ಅಷ್ಟೆ. ಈ ವಿಷಯದಲ್ಲಿ ಸ್ಥಳೀಯ ನಗರ ಸಭೆಯವರಿಗೆ ಯಾವುದೇ ರೀತಿಯ ಸಂದೇಹ ಇದ್ದರೂ ಅವರು ೧೯೨೭ ರಲ್ಲಿ ಬೊಂಬಾಯಿ ನಗರಪಾಲಿಕೆಯಿಂದ ಹೊರಡಿಸಲ್ಪಟ್ಟಿರುವ ಆದೇಶವನ್ನು ಗಮನಿಸಬಹುದು. ಅದರ ಅನುಸಾರ ನಗರಸಭೆಗೆ ಸೇರಿರುವ ಎಲ್ಲಾ ಕೆರೆಗಳು ಬಾವಿಗಳು ಹಾಗು ಧರ್ಮಶಾಲೆಗಳನ್ನು ಎಲ್ಲ ಜಾತಿಯ ಜನರೂ ಉಪಯೋಗಿಸಬಹುದು. ಇದರಲ್ಲಿ ಯಾವುದೇ ರೀತಿಯ ಭೇದಭಾವ ಇರಬಾರದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಯಾರೇ ಆದರೂ ತಮ್ಮ ಸ್ವಂತ ನಂಬಿಕೆಗೆ ಕಟ್ಟುಬಿದ್ದು ಬೇರೆ ಯಾವುದೇ ವರ್ಗದವರ ಮೇಲೆ ಈ ರೀತಿಯ ನಿರ್ಬಂಧ ಹೇರುವ ಪ್ರಯತ್ನ ಪಟ್ಟರೆ ಅದು ಸಂಪೂರ್ಣವಾಗಿ ಕಾನೂನು ಬಾಹಿರವಾಗುತ್ತದೆ. ಈ ರೀತಿಯ ಭಾವನೆಯನ್ನು ಜನರ ಮನಸ್ಸಿನಿಂದ ತೊಡೆದು ಹಾಕಬೇಕು. ಅದು ಕೇವಲ ಕೆಳವರ್ಗದ ಜನರ ಹಿತದೃಷ್ಟಿಯಿಂದ ಮಾತ್ರವಲ್ಲ ಬದಲಾಗಿ ಇನ್ನೂ ಅನೇಕ ಕಾರಣಗಳಿಂದ ಒಟ್ಟಾರೆ ಹೇಳುವುದೆಂದರೆ, ಮೇಲ್ವರ್ಗದ ಜನರ ಹಿತದೃಷ್ಟಿಯಿಂದಲೂ ಇದು ಅತ್ಯಂತ ಮುಖ್ಯ ಎನಿಸುತ್ತದೆ. ಕೆಳವರ್ಗದ ಜನರನ್ನು ಅವರು ನೋಡುವ ಈ ರೀತಿ ಅನ್ಯಾಯವಾದುದಷ್ಟೇ ಅಲ್ಲದೆ, ಅಸಮರ್ಥನೀಯವೂ ಆಗಿರುತ್ತದೆ. ಇದು ಒಂದು ದಿನ ಮೇಲ್ವರ್ಗದ ಜನರಿಗೇ ಶಾಪವಾಗಿ

ಪರಿಣಮಿಸುತ್ತದೆ. ಶೋಷಿತ ವರ್ಗದ ಜನರು ತಮ್ಮ ಸಾರ್ವಜನಿಕ, ಮಾನವೀಯ ಹಾಗು ರಾಜಕೀಯ ಹಕ್ಕುಗಳನ್ನು ಪಡೆದುಕೊಳ್ಳುತ್ತಾರೆ. ಹಲವು ವರ್ಷಗಳಿಂದಲೂ ಈ ಎಲ್ಲಾ ಹಕ್ಕುಗಳಿಂದ ವಂಚಿತರಾಗಿರುವ ಅವರು ನಂತರ ತಮ್ಮ ವಿರೋಧಿಗಳ ಮೇಲೆ ಪ್ರತೀಕಾರವನ್ನು ತೀರಿಸಿಕೊಳ್ಳಬಹುದು.

ಈ ರೀತಿಯ ಸತ್ಯಾಗ್ರಹವನ್ನು ಕೈಗೊಂಡಿರುವ ಶೋಷಿತ ವರ್ಗದ ಈ ನಡೆಯು ಒಂದು ರಾಷ್ಟ್ರೀಯ ಭಾವನೆಯಿಂದ ದೂರಹೋಗುತ್ತಿದೆ. ಇದು ಈಗಿನ ಕೆಟ್ಟ ಪರಿಸ್ಥಿತಿಗೆ ಹಿಡಿದಂತಹ ಕನ್ನಡಿಯಾಗಿದೆ. ಇನ್ನು ಕೆಲದಿನಗಳಲ್ಲಿಯೇ ಡಾ. ಅಂಬೇಡ್ಕರ್ ಅವರು ಹಾಗು ಅವರ ಸಹಚರರು ಮಹದ್‌ಗೆ ತೆರಳಿ, ಚಾವ್ದಾರ್ ಕೆರೆಯಿಂದ ನೀರನ್ನು ಉಪಯೋಗಿಸಿ ತಮ್ಮ ಹಕ್ಕನ್ನು ಪ್ರತಿಪಾದಿಸಲಿ ಎಂದು ಆಶಿಸೋಣ. ಆಗ ಅವರಿಗೆ ಯಾವುದೇ ರೀತಿಯ ವಿರೋಧವೂ ವ್ಯಕ್ತವಾಗುವುದಿಲ್ಲವಷ್ಟೇ ಅಲ್ಲದೆ ಅಲ್ಲಿ ಅವರಿಗೆ ಸವರ್ಣೀಯರಿಂದ ಹೃತ್ಪೂರ್ವಕವಾದ ಸ್ವಾಗತ ದೊರೆಯಲಿ. ಈ ರೀತಿಯ ಮಿಲನದಿಂದ ಹಿಂದೂಗಳು ಕೆಳವರ್ಗದ ಜನರಿಗೆ ಇಲ್ಲಿಯವರೆಗೆ ಉಂಟುಮಾಡಿರುವಂತಹ ನೋವನ್ನು ಸ್ವಲ್ಪ ಮಟ್ಟಿಗೆ ಅವರು ಮರೆಯುವಂತೆ ಮಾಡಬಹುದು.

ಮಹದ್ ಸತ್ಯಾಗ್ರಹವು ಕೆಲ ಹಿಂದೂಗಳ ಸಾಮಾಜಿಕ ಚಿಂತನೆಯಲ್ಲಿ ಕೆಲ ಬದಲಾವಣೆಗಳನ್ನು ತಂದಿತ್ತು. ಈ ಕೆಳಗಿನದು ಇದಕ್ಕೆ ಒಂದು ಉದಾಹರಣೆ.

## "ಜಾತಿಯನ್ನು ಕಿತ್ತೊಗೆಯಿರಿ"
## ಬೊಂಬಾಯಿಯಲ್ಲಿ ಸರ್ವಧರ್ಮೀಯರ ಔತಣ ಕೂಟ[೧]

ಸರ್ವಧರ್ಮೀಯರ ಔತಣ ಕೂಟವೊಂದು ಸಮಾಜ ಸಮತಾ ಸಂಘದ ವತಿಯಿಂದ ಬೊಂಬಾಯಿಯ ದಾಮೋದರ ಥ್ಯಾಕರ್ಸೇ ಸಭಾಂಗಣದಲ್ಲಿ ಇದೇ ತಿಂಗಳ ೫ ನೆಯ ತಾರೀಖಿನಂದು ಆಯೋಜಿಸಲ್ಪಟ್ಟಿತ್ತು.

ಇದರಲ್ಲಿ ವಿವಿಧ ಧರ್ಮಗಳಿಗೆ ಸೇರಿದ್ದ ಸುಮಾರು ೧೫೦ ಜನರು ಪಾಲ್ಗೊಂಡಿದ್ದರು. ಅದರಲ್ಲಿ ಸುಮಾರು ೫೦ ಮಂದಿ "ಅಸ್ಪೃಶ್ಯರು" ಎಂಬ ಹಣೆಪಟ್ಟಿ ಪಡೆದವರು ಕೂಡ ಇದ್ದರು. ಬ್ರಾಹ್ಮಣರು ಬ್ರಾಹ್ಮಣೇತರರು ಎಂಬ ಪುಸ್ತಕದ ಸಂಪಾದಕರಾದ ಶ್ರೀ ಡಿ.ವಿ. ನಾಯಕ್ ಅವರು ಈ ಸಂಘದ ಉಪಾಧ್ಯಕ್ಷರಾಗಿದ್ದರು. ಅವರೇ ಈ ಔತಣಕೂಟದಲ್ಲಿ ಸ್ವಾಗತ ಭಾಷಣವನ್ನು ಮಾಡಿದರು. ರಾಷ್ಟ್ರವನ್ನು ಅದರಲ್ಲಿಯೂ ವಿಶೇಷವಾಗಿ ಹಿಂದೂ ಸಮಾಜವನ್ನು ಛಿದ್ರಗೊಳಿಸಿರುವುದೇ ಈ ಜಾತಿ ಪದ್ಧತಿ, ಆದ್ದರಿಂದ ಇದನ್ನು ತೊಡೆದು ಹಾಕುವ ಪ್ರಯತ್ನವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು. ಸ್ವಚ್ಛಂದವಾಗಿ ಬೆರೆಯುವುದರಿಂದ ಹಾಗು ಸಂಕೋಚವನ್ನು ಬಿಟ್ಟು ಪರಸ್ಪರರೊಂದಿಗೆ ಕುಳಿತು ಆಹಾರ ಸೇವಿಸುವುದರಿಂದ ಈ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಬಹುದಾಗಿದೆ. ಇದರಿಂದ ಸಮಾನ ಸ್ಥಾನಮಾನವಿರುವ ಹೊಸ ಸಮಾಜದ ನಿರ್ಮಾಣ ಆಗಲಿದೆ ಎಂದರು. ಮತ್ತೆ ಮುಂದುವರೆದು, ನೀವೆಲ್ಲ ಇಲ್ಲಿ ನೆರೆದಿರುವುದು ಆಪದ್ಧರ್ಮದ ಕಾರಣದಿಂದಲ್ಲ. ಬದಲಾಗಿ ಸಮಾಜದಲ್ಲಿ ಪರಸ್ಪರ ಪ್ರೀತಿ ಹಾಗು ಸೋದರತ್ವಗಳನ್ನು ವಿಭಜನೆಗೆ ಗುರಿಮಾಡಿ ಬೇರೆ ಬೇರೆ ಸೆರೆಮನೆಗೆ ಕೂಡಿರುವ ಈ ಜಾತಿಪದ್ಧತಿಯನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ.

ಈ ಸಂಘವು ಅತ್ಯಂತ ದಕ್ಷರೂ ಹಾಗು ಸಮರ್ಥರೂ ಆಗಿರುವ ಅಂಬೇಡ್ಕರ್ ಅವರ ಅಧ್ಯಕ್ಷತೆಯನ್ನು ಹೊಂದಿದೆ. ಆದ್ದರಿಂದ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡುವ ದೃಢ ಸಂಕಲ್ಪ ಹಾಗು ಧೈರ್ಯ

---

೧. ದಿ ಇಂಡಿಯನ್ ನ್ಯಾಷನಲ್ ಹೆರಾಲ್ಡ್, ೬ನೆಯ ಮಾರ್ಚ್ ೧೯೨೮

ಹೊಂದಿರುವವರನ್ನು ಈ ಸಂಘವು ಆದರಿಂದ ಬರಮಾಡಿಕೊಳ್ಳುತ್ತದೆ. ತಮ್ಮನ್ನು ಹಾಗು ರಾಷ್ಟ್ರವನ್ನು ಈ ಅನಿಷ್ಟದಿಂದ ಪಾರುಮಾಡುವ ಉದ್ದೇಶವನ್ನು ಹೊಂದಿರುವವರನ್ನು ಈ ಸಂಘವು ಸ್ವಾಗತಿಸುತ್ತದೆ.

'ಸಂದೇಶ' ಎಂಬ ಪತ್ರಿಕೆಯ ಸಂಪಾದಕ ಶ್ರೀ ಎ.ಬಿ. ಕೊಲ್ಹಾಟ್ಕರ್ ಅವರು ಈ ಸಂಘದ ಕಾರ್ಯಕ್ರಮಗಳನ್ನು ಹೊಗಳಿದರು. ಹಿಂದೂ ಸಮಾಜ ಎಂದರೆ ಒಂದು ಮರಳಿನ ಗಡಿಯಾರ ಇದ್ದಂತೆ ಅದರಲ್ಲಿ ಇಲ್ಲಿಯವರೆಗೂ ಬ್ರಾಹ್ಮಣರೇ ಮೇಲುಗೈ ಹೊಂದಿದ್ದರು. ಇದೀಗ ಅವರು ಗೊಣಗದೇ, ಅಸಮಾಧಾನಗೊಳ್ಳದೇ ಇತರರಿಗೆ ಅವಕಾಶ ಮಾಡಿಕೊಡಬಾಕಾದಂತಹ ಸಂದರ್ಭ ಬಂದಿದೆ, ಅದರಲ್ಲಿಯೂ ವಿಶೇಷವಾಗಿ ಅವರು ಅಸ್ಪೃಶ್ಯರಿಗೆ ಅವಕಾಶಗಳನ್ನು ಕಲ್ಪಿಸಿಕೊಡಬೇಕಿದೆ ಎಂದರು. ಅದಲ್ಲದೇ ಅವರು ಮತ್ತೊಂದು ವಿಷಯವನ್ನೂ ಹೇಳಿದರು. ಇದೀಗ ಕೆಳವರ್ಗದ ಜನರ ಮೇಲೆ ನಡೆಯುತ್ತಿರುವಂತಹ ಶೋಷಣೆ ನಿಲ್ಲಬೇಕೆಂದರೆ ಅದು ರಾಜಕೀಯ, ಸಾಮಾಜಿಕ ಅಥವಾ ಧಾರ್ಮಿಕ ಶೋಷಣೆ ಇರಬಹುದು, ಅಸ್ಪೃಶ್ಯರ ನಡುವೆಯೇ ಮತ್ತೊಬ್ಬ ಶಿವಾಜಿಯ ಜನನ ಆಗಬೇಕಿದೆ. ಅಂತಹವನಿಂದ ಮಾತ್ರವೇ ಈ ರೀತಿಯ ಶೋಷಣೆಯನ್ನು ನಿಲ್ಲಿಸಲು ಸಾಧ್ಯ.

ಬೊಂಬಾಯಿ ಮಹಾರಾಷ್ಟ್ರ ಯುವ ಮಂಡಳಿಯ ಕಾರ್ಯದರ್ಶಿ ಶ್ರೀ ವಿ.ಬಿ. ಕಾರ್ಣಿಕ್ ಅವರು ತಮ್ಮ ಸಂಘ ಕೈಗೊಂಡಿದ್ದಂತಹ ಒಂದು ನಿರ್ಣಯದ ಕಡೆಗೆ ಎಲ್ಲರ ಗಮನ ಸೆಳೆದರು. ಅದೇನೆಂದರೆ ಜಾತಿ ಪದ್ಧತಿಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ತಮ್ಮ ಸಂಘವು ಕೂಡ ಪ್ರಯತ್ನವನ್ನು ಕೈಗೊಂಡಿದ್ದು ಅಂತರ್ಜಾತಿ ಔತಣ ಕೂಟಗಳನ್ನು ಆಯೋಜಿಸುತ್ತಿದೆ. ಮಾತ್ರವಲ್ಲ ಅಂತರ್ಜಾತಿ ವಿವಾಹಗಳಿಗೂ ಪ್ರೋತ್ಸಾಹನೀಡುತ್ತಾ ಬಂದಿದೆ. ಹೀಗೆ ನಮ್ಮ ಸಂಘವು ಕೂಡ ಈ ನಿಟ್ಟಿನಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಿಗೂ ಪ್ರೋತ್ಸಾಹ ನೀಡಲಿದೆ. ಈ ರಾಷ್ಟ್ರೀಯ ಹಿತಾಸಕ್ತಿ ಕೆಲಸದಲ್ಲಿ ನಮ್ಮ ಸಂಘವು ಈಗಾಗಲೇ ಕಾರ್ಯನಿರತವಾಗಿದೆ ಎಂದರು.

ಶ್ರೀಯುತ ಎಂ. ಆರ್. ಮೆನನ್ ಎಂಬುವವರು ಇಲ್ಲಿಗೆ ತಾವು ಆಗಮಿಸಿರುವುದು ಡಾ. ಅಂಬೇಡ್ಕರ್ ಅವರಿಗೆ ಶುಭ ಕೋರಲು ಎಂದು ತಿಳಿಸಿದರು. ಅವರು ಕೈಗೊಂಡಿರುವುದು ಅತ್ಯಂತ ಪುಣ್ಯದ ಕೆಲಸ ಅತ್ಯಂತ ಕನಿಷ್ಠ ಮಾನವೀಯ ಹಕ್ಕಾದ ಸಾರ್ವಜನಿಕ ಕೆರೆಯೊಂದರಿಂದ ಅಸ್ಪೃಶ್ಯರಿಗೆ ಕುಡಿಯುವ ನೀರು ತೆಗೆದುಕೊಳ್ಳುವ ಅಧಿಕಾರ ಕೊಡಿಸಲು ಅಂಬೇಡ್ಕರ್ ಅವರು ಹೊರಟಿದ್ದರು.

"ಸರ್ಕಾರಿ ಆದೇಶ ಹೊರಬಿದ್ದನಂತರವೂ ಅಸ್ಪೃಶ್ಯರಿಗೆ ೧೯೩೭ ರಲ್ಲಿ ಈ ಚಾವ್ದಾರ್ ಕೆರೆಯ ನೀರನ್ನು ಉಪಯೋಗಿಸಲು ಅನುಮತಿ ನೀಡಿರಲಿಲ್ಲ. ಇದಾದ ನಂತರ ಬೊಂಬಾಯಿ ಸರ್ಕಾರವು ಶ್ರೀ ಸೈಮಿಂಗ್‌ಟನ್ ಎಂಬ ಭಾರತೀಯ ಸಮಾಜ ಸೇವೆಯ ಅಧಿಕಾರಿ ಹಾಗು ಝಕೇರಿಯಾ ಮನಿಯಾರ್ ಎಂಬ ಇಬ್ಬರನ್ನು ನೇಮಿಸಿ ನಾಸಿಕ್ ಜಿಲ್ಲೆಯಲ್ಲಿದ್ದ ಶೋಷಿತ ವರ್ಗದವರ ಪರಿಸ್ಥಿತಿಯ ಅಧ್ಯಯನ ನಡೆಸಲು ತಿಳಿಸಿತು. ಇವರ ಪ್ರಕಾರ, ಒಂದು ಜಿಲ್ಲೆಯಲ್ಲಿ ನಗರ ಸಭೆಗೆ ಸೇರಿದ್ದ ೧೧೦೦ ಬಾವಿಗಳನ್ನು ಮುಟ್ಟಲು ಅಸ್ಪೃಶ್ಯರಿಗೆ ಅನುಮತಿ ಇರಲಿಲ್ಲ. ೧೯೨೩ ರಲ್ಲಿ ಈ ನಿಟ್ಟಿನಲ್ಲಿ ಸರ್ಕಾರಿ ಆದೇಶ ಹೊರಬಿದ್ದಿದ್ದರೂ ಕೂಡ ಅವರಿಗೆ ಈ ಅನುಮತಿ ಇರಲಿಲ್ಲ.

ಇದೇ ಸಮಯದಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ಹಿಂದೂಗಳು ಹಾಗು ಶೋಷಿತ ವರ್ಗದವರ

---

೧. ದಿ ಇಂಡಿಯನ್ ನ್ಯಾಷನಲ್ ಹೆರಾಲ್ಡ್, ೧೫ನೆಯ ಮಾರ್ಚ ೧೯೨೮

೨. ಕೀರ್ ಪುಟ ೧೯೭

ನಡುವೆ ಹಲವಾರು ಮೊಕದ್ದಮ್ಮೆಗಳ ವಿಚಾರಣೆ ನೆಡೆಯುತ್ತಿತ್ತು. ಈ ಅವುಗಳಲ್ಲಿ ಒಂದು ಉದಾಹರಣೆಯನ್ನು ಕೆಳಗೆ ನೀಡಲಾಗಿದೆ.

**ಥಾನೆ ಜಿಲ್ಲೆಯ ನ್ಯಾಯಾಲಯದಲ್ಲಿ ಕೇಳಿ ಬಂದ ಅಹವಾಲು**

ಥಾನೆ, ಮಾರ್ಚ ೨೦

ಶ್ರೀ ಬಿ.ಎನ್ ಸಂಜನ, ಜಿಲ್ಲಾ ನ್ಯಾಯಾಧಿಶರು, ಥಾನೆ, ಅವರು ಇಂದು ಪಾಂಡುರಂಗ ವಾಮನ ಧರಪ್ ಎಂಬುವವರು ಹಾಗು ಮಹದ್‌ನ ಇತರ ಕೆಲವರು ಸಲ್ಲಿಸಿದ ಮೇಲ್ಮನವಿ ಆಲಿಸಿದರು. ಇವರು ಮಹದ್ ನಗರದ ನ್ಯಾಯಾಲಯದ ಉಪ ನ್ಯಾಯಾಧೀಶರಾದ ಶ್ರೀ ವೈದ್ಯ ಅವರ ತೀರ್ಪಿನ ವಿರುದ್ಧ ಅಹವಾಲನ್ನು ಸಲ್ಲಿಸಿದ್ದಾರೆ. ವೈದ್ಯ ಅವರು ಚಾವ್ದಾರ್ ಕೆರೆಯನ್ನು ಅಸ್ಪೃಶ್ಯರು ಬಳಸದಂತೆ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿದ್ದರು. ಇದೀಗ ಅವರೇ ಈ ತಡೆಯಾಜ್ಞೆಯನ್ನು ರದ್ದು ಮಾಡಿ ಆದೇಶ ಹೊರಡಿಸಿದ್ದಾರೆ. ಇದರ ವಿರುದ್ಧ ಮೇಲ್ಕಂಡವರು ಅಹವಾಲು ಸಲ್ಲಿಸಿದ್ದಾರೆ.

ಜಿಲ್ಲಾ ನ್ಯಾಯಾಧೀಶರು ತಾತ್ಕಾಲಿಕ ತಡೆಯಾಜ್ಞೆಯನ್ನು ಎತ್ತಿ ಹಿಡಿದಿದ್ದಾರೆ. ಆದ್ದರಿಂದ ಮಹದ್ ನ್ಯಾಯಾಲಯದಲ್ಲಿ ಮೇಲ್ವರ್ಗದ ಜನರು ತಾತ್ಕಾಲಿಕ ಜಯ ಪಡೆದಿದ್ದಾರೆ.[೧]

ಕೊಲಾಬಾ–ಮಾರ್ಚ ೩: ಮಾರ್ಚ ೨೮ ದಿ ಬಾಂಬೆ ಕ್ರಾನಿಕಲ್ ಎಂಬ ಪತ್ರಿಕೆಯಲ್ಲಿ ಈ ಕೆಳಗಿನಂತೆ ಪ್ರಕಟವಾಗಿದೆ. ಫೆಬ್ರವರಿ ೨೬ರ ಭಾನುವಾರ ಬೊಂಬಾಯಿಯಲ್ಲಿ ಒಂದು ಸಭೆ ನಡೆಯಿತು. ಇದರಲ್ಲಿ ೨,೦೦೦ ಜನರು ಭಾಗವಹಿಸಿದ್ದರು ಮಹದ್‌ನಲ್ಲಿ ಮತ್ತೊಮ್ಮೆ ಸತ್ಯಾಗ್ರಹ ನಡೆಸಲು ಈ ಸಭೆಯಲ್ಲಿ ನಿರ್ಧರಿಸಲಾಗಿದೆ. ಇಷ್ಟರಲ್ಲಿಯೇ ಸತ್ಯಾಗ್ರಹ ಸಮಿತಿಯು ಭೇಟಿ ಆಗಿ ಮುಂದಿನ ಸತ್ಯಾಗ್ರಹದ ದಿನಾಂಕವನ್ನು ನಿರ್ಧರಿಸಲಿದೆ.[೨]

ಮಹದ್‌ನ ಸತ್ಯಾಗ್ರಹ.................ದ ಪುನರಾರಂಭ.

೩೮೯ನೆಯ ಪ್ಯಾರಾವನ್ನು ನೋಡಿ: ಪ್ರಕಾರ ಕೊಲಾಬಾ ಮಾರ್ಚ ೧೭– ಮಾರ್ಚ ೨೨ ರಂದು ಸತ್ಯಾಗ್ರಹ ಪುನರಾರಂಭ ಆಗಲಿದೆ ಎಂದು ಹಲವಾರು ವರದಿಗಳು ಪ್ರಕಟವಾಗಿವೆ. ಆದರೆ ಈ ವರದಿಗಳನ್ನು ಖುದ್ದು ಡಾ. ಅಂಬೇಡ್ಕರ್ ಅವರೇ ಅಲ್ಲಗೆಳದಿದ್ದಾರೆ ಅವರು ಸತ್ಯಾಗ್ರಹ ಪ್ರಾರಂಭವಾಗುವ ೨ ವಾರಗಳ ಮೊದಲೇ ತಿಳಿಸುವುದಾಗಿ ವಾಗ್ದಾನ ನೀಡಿದ್ದಾರೆ.[೩]

೪೮೮. ಪ್ಯಾರಾ ೫೨: ಕೊಲಾಬಾ ಮಾರ್ಚ ೧೭: ಮಹದ್ ನ್ಯಾಯಾಲಯದ ಉಪನ್ಯಾಯ ಮೂರ್ತಿಗಳ ತೀರ್ಪಿಗೆ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿತ್ತು ಥಾನೆಯ ಜಿಲ್ಲಾ ನ್ಯಾಯಾಲಯದಲ್ಲಿ ಇದರ ವಿಷಯವಾಗಿ ವಿಚಾರಣೆ ಜರುಗಿತು ಥಾನೆಯು ಜಿಲ್ಲಾ ನ್ಯಾಯಾಲಯ ಈ ಪ್ರಕರಣದಲ್ಲಿ ಅಂತಿಮ ತೀರ್ಪು ಹೊರಬೀಳುವವರೆಗೆ ಅಸ್ಪೃಶ್ಯರು ಚಾವ್ದಾರ್ ಕೆರೆಯನ್ನು ಪ್ರವೇಶಿಸದಂತೆ ತಡೆಯಾಜ್ಞೆಯನ್ನು ನೀಡಿದ್ದಾರೆ.

ಮಹದ್ ನ್ಯಾಯಾಲಯದ ಉಪ ನ್ಯಾಯಾಧೀಶರಾದ ಶ್ರೀಯುತ ವಿ. ಆರ್ ಸರಾಫ್ ಅವರು ಪ್ರತಿವಾದಿಗಳಾದ ಡಾ. ಬಿ. ಆರ್ ಅಂಬೇಡ್ಕರ್ ಹಾಗು ಅವರ ಸಹಚರರ ಪರವಾಗಿ ೧೯೩೧ ರ ಜೂನ್

೧. ದಿ ಇಂಡಿಯನ್ ನ್ಯಾಷನಲ್ ಹೆರಾಲ್ಡ್ ೨೨ ನೆಯ ಮಾರ್ಚ ೧೯೨೮

೨. ಬಾಂಬೆ ಸೀಕ್ರೆಟ್ ಅಬ್‌ಸ್ಟ್ರಾಕ್ಟ್ ೧೭ ನೆಯ ಮಾರ್ಚ ೧೯೨೮, ಪುಟ ೩೮೯

೩. ಬಾಂಬೆ ಸೀಕ್ರೆಟ್ ಅಬ್‌ಸ್ಟ್ರಾಕ್ಟ್ ೩೧ನೆಯ ಮಾರ್ಚ ೧೯೨೮, ಪುಟ ೪೨೮

೪. ಬಾಂಬೆ ಸೀಕ್ರೆಟ್ ಅಬ್‌ಸ್ಟ್ರಾಕ್ಟ್ ೭ ನೆಯ ಏಪ್ರಿಲ್ ೧೯೨೮

೮ ರಂದು ತೀರ್ಪು ನೀಡಿದ್ದಾರೆ. ಸವರ್ಣೀಯ ಹಿಂದೂಗಳು ಕೆರೆ ತಮ್ಮ ಖಾಸಗಿ ಸ್ವತ್ತು ಎಂದು ಸಾಬೀತು ಪಡಿಸುವಲ್ಲಿ ವಿಫಲರಾಗಿರುವುದರಿಂದ ಈ ತೀರ್ಪು ಈ ರೀತಿ ಹೊರಬಿದ್ದಿದೆ. ಆದ್ದರಿಂದ ಚಾವ್ದಾರ್ ಕೆರೆಯನ್ನು ಸಾರ್ವಜನಿಕ ಆಸ್ತಿ ಎಂದು ಘೋಷಿಸಿ ಅಸ್ಪೃಶ್ಯರಿಗೆ ಕೂಡ ಅದನ್ನು ಉಪಯೋಗಿಸುವ ಅನುಮತಿ ನೀಡಲಾಗಿದೆ.

ಸವರ್ಣೀಯ ಹಿಂದೂಗಳು ಥಾನೆಯ ಜಿಲ್ಲಾ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ನಿರ್ಧರಿಸಿದರು. ಎರಡನೆಯ ಜಿಲ್ಲಾ ನ್ಯಾಯಾಧೀಶರಾದ ಎಸ್. ಎಂ. ಕೊಕಣಿ ಅವರು ಡಾ. ಅಂಬೇಡ್ಕರ್ ಹಾಗು ಅವರ ಸಹಚರರ ಪರವಾಗಿಯೇ ೧೯೩೩ ರ ಜನವರಿ ೩೦ ರಂದು ತೀರ್ಪು ನೀಡಿದರು.

ಇದಾದ ನಂತರ ಹಿಂದೂ ಫಿರ್ಯಾದುದಾರರು ಬೊಂಬಾಯಿಯ ರಾಜ್ಯ ಮುಖ್ಯ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದರು. ಅಲ್ಲಿ ಈ ಮೊಕದ್ದಮೆಯು ನಾಲ್ಕು ವರ್ಷಗಳ ಕಾಲ ಎಳೆದಾಡಿತು ಕಡೆಗೆ ನ್ಯಾಯಾಧೀಶರುಗಳಾದ ಬ್ರೂಮ್ ಫೀಲ್ಡ್ ಹಾಗು ನ್ಯಾಯಮೂರ್ತಿ ವಾಡಿಯ ಈ ಕೇಸನ್ನು ಅನೂರ್ಜಿತಗೊಳಿಸಿದರು. ೧೯೩೭ ನೆಯ ಮಾರ್ಚಿ ೧೭ ರಂದು ಹಿಂದೂಗಳ ವಿರುದ್ಧ ತೀರ್ಪು ಹೊರ ಬಿದ್ದಿತು. ಈ ಕೆರೆಯು ತಮ್ಮ ಖಾಸಗಿ ಸ್ವತ್ತು ಎಂದು ಸಾಬೀತು ಪಡಿಸುವಲ್ಲಿ ಸವರ್ಣೀಯರು ವಿಫಲರಾಗಿದ್ದರು.

ಬೊಂಬಾಯಿ ಮುಖ್ಯ ನ್ಯಾಯಾಲಯದ ಅಂತಿಮ ತೀರ್ಪು ಈ ಕೆಳಗಿನಂತಿದೆ:

**೧೯೩೩ ಮೇಲ್ಮನವಿಯ ಮೇಲಿನ ತೀರ್ಪು ನೀಡಿದ್ದ ತೀರ್ಪಿನಿಂದ ಆಯ್ದ ಮೇಲ್ಮನವಿ ಸಂಖ್ಯೆ ೪೬೨:**

ನರಹರಿ ದಾಮೋದರ ವೈದ್ಯ ಹಾಗು ಇತರರು ಪ್ರಮುಖ ಫಿರ್ಯಾದುದಾರರು–ಸಂಖ್ಯೆ ೨ ರಿಂದ ೬........ ಅರ್ಜಿದಾರರು.

ವಿರುದ್ಧ:

ಡಾ. ಭಿಮರಾವ್ ರಾಮ್‌ಜೀ ಅಂಬೇಡ್ಕರ್, ಸದಸ್ಯರು, ಜಂಟಿ ಸಂಸದೀಯ ಮಂಡಳಿ, ಲಂಡನ್ ಹಾಗು ಇತರರು

ಮೂಲ ಪ್ರತಿವಾದಿಗಳು

ಪ್ರತಿವಾದಿಗಳು

ಶ್ರೀ ಎಸ್.ಎಂ. ಕಾಯ್ಕಿಣಿ, ಥಾಣೆ ನ್ಯಾಯಾಲಯದ ಎರಡನೆಯ ನ್ಯಾಯಾಧೀಶರು, ಇವರ ಬಳಿ ಸಲ್ಲಿಸಿದ್ದ ೧೯೩೧ರ ೩೨ನೆಯ ಮೇಲ್ಮನವಿಯ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ.

ಶ್ರೀ ವಿ.ಬಿ. ವೀರ್‌ಕರ್ ಅವರು ಅರ್ಜಿದಾರರ ಪರವಾಗಿ

ನ್ಯಾಯವಾದಿ ಶ್ರೀ ಎಸ್. ವಿ ಗುಪ್ತೆ ಪ್ರತಿವಾದಿಗಳ ಪರವಾಗಿ. ಇವರೊಂದಿಗೆ ಶ್ರೀ ಬಿ.ಜಿ. ಮೋದಕ್ ಪ್ರತಿವಾದಿ ಸಂಖ್ಯೆ ೧ ರ ಪರವಾಗಿ

೧೭ನೆಯ ಮಾರ್ಚಿ ೧೯೩೭.

ಕೋರಂ: ಬ್ರೂಮ್ ಫೀಲ್ಡ್ ಎನ್. ಜೆ ಹಾಗು ವಾಡಿಯಾ ಜೆ.ಜೆ

ವಾಚಕ ತೀರ್ಪು. ಬ್ರೂಮ್ ಫೀಲ್ಡ್ ಎನ್.ಜೆ

ಮಹದ್ ನಗರದ ಕೆಲ ಸವರ್ಣೀಯ ಹಿಂದೂಗಳ ಪರವಾಗಿ ಪ್ರತಿವಾದಿಗಳ ವಿರುದ್ಧ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ ಪ್ರತಿವಾದಿಗಳು ಎಂದರೆ "ಅಸ್ಪೃಶ್ಯರು" ಎಂಬ ಹಣೆ ಪಟ್ಟಿ ಪಡೆದಿರುವವರು.

ಇವರ ಪ್ರಕಾರ ನಗರದ ಬಳಿ ಇರುವಂತಹ ಚಾವ್ದಾರ್ ಕೆರೆಯು ಅವರಿಗೆ ಸೇರಿರುವಂತಹ ಖಾಸಗಿ ಸ್ವತ್ತಾಗಿರುತ್ತದೆ, ಪ್ರತಿವಾದಿಗಳಿಗೆ ಅದನ್ನು ಬಳಸುವ ಹಕ್ಕು ಇರುವುದಿಲ್ಲ. ಇವರು ಆ ಕೆರೆಯನ್ನು ಉಪಯೋಗಿಸದಂತೆ ಮಾಡಲು ಅವರ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆ ಕೋರಿರುತ್ತಾರೆ. ಇದೀಗ ಇವರು ಇದನ್ನು ತಮ್ಮ ಖಾಸಗಿ ಸ್ವತ್ತು ಎಂದು ಹೇಳಿಕೊಳ್ಳುವುದರಲ್ಲಿ ಅರ್ಥವಿಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಮಾತ್ರವಲ್ಲ ಕೆಳ ನ್ಯಾಯಾಲಯದಲ್ಲಿ ಸಾಬೀತು ಆಗಿರುವಂತೆ ಸೆಕ್ಷನ್ ೩೭ ಹಾಗು ಭೂಮಿ ಒಡೆತನದ ಕಾನೂನಿನ ಪ್ರಕಾರ ಅದು ಸರ್ಕಾರಕ್ಕೆ ಸೇರಿರುವ ಸ್ವತ್ತಾಗಿರುತ್ತದೆ ಹಾಗು ಸೆಕ್ಷನ್ ೫೦ರ ಪ್ರಕಾರ ಮಹದ್ ನಗರಪಾಲಿಕೆಯ ಆಡಳಿತಕ್ಕೆ ಒಳಪಟ್ಟಿರುತ್ತದೆ. ಇದರಿಂದ ಈ ಕೆರೆಯನ್ನು ಹಿಂದೂಗಳು ಹೇಳಿಕೊಳ್ಳುವಂತೆ ಅವರೊಂದಿಗೆ ಮಹಮದೀಯರು ಕೂಡ ಇದನ್ನು ಬಳಸಬಹುದು ಹಾಗು ಬಳಸುತ್ತಿದ್ದಾರೆ ಎಂದು ತೀರ್ಪಿನಲ್ಲಿ ಗಮನಿಸಲಾಗಿದೆ. ಆದರೂ, ಅರ್ಜಿದಾರರು, ಬಹಳ ಹಿಂದಿನ ಕಾಲದಿಂದಲೂ ಈ ಕೆರೆಯನ್ನು ಪರಂಪರಾಗತವಾಗಿ ಮೇಲ್ವರ್ಗದ ಹಿಂದೂಗಳೇ ಬಳಸುತ್ತಿರುವುದರಿಂದ, ಅವರೇ ಈ ಕೆರೆಯ ಮೇಲೆ ತಮ್ಮ ಹಕ್ಕನ್ನು ಹೊಂದಿರುವುದಾಗಿ ತಿಳಿಸಿ, ಅಸ್ಪೃಶ್ಯರು ಇದನ್ನು ಉಪಯೋಗಿಸಬಾರದು ಎಂಬ ಆಜ್ಞೆಯನ್ನು ನೀಡುವಂತೆ ಅರ್ಜಿದಾರರು ಕೋರಿದ್ದಾರೆ.

ಪ್ರಾಚೀನ ಕಾಲದಿಂದ ಅಲ್ಲದಿದ್ದರೂ ಪಾರಂಪರಿಕವಾಗಿ ಈ ಕೆರೆಯನ್ನು ತಾವು ಉಪಯೋಗಿಸುತ್ತಿದ್ದೇವೆಂದು ಹಾಗೂ ಅಸ್ಪೃಶ್ಯರು ಇದರ ನೀರನ್ನು ಉಪಯೋಗಿಸದಂತೆ ನಿರ್ಬಂಧವನ್ನು ಮುಂದುವರಿಸಿಕೊಂಡು ಬಂದಿದ್ದಾರೆ ಎಂದು ಅಹವಾಲುದಾರರು ಸಾಬೀತು ಪಡಿಸಿದ್ದಾರೆ. ಆದರೆ ಇದೊಂದು ಸಂಪ್ರದಾಯಬದ್ಧವಾದ ಆಚರಣೆಯೇ ಹೊರತು ಸಂಪೂರ್ಣವಾಗಿ ಕಾನೂನಿನ ಪ್ರಕಾರ ಅಹವಾಲುದಾರರಿಗೆ ಈ ಕೆರೆಯ ಮೇಲೆ ಸಂಪೂರ್ಣ ಹಕ್ಕನ್ನು ನೀಡುವುದಿಲ್ಲ. ಒಂದು ಸಾರ್ವಜನಿಕ ಕೆರೆಯನ್ನು ಒಂದು ಧರ್ಮದ ಜನರೇ ಬಹಳ ಕಾಲದಿಂದಲೂ ಉಪಯೋಗಿಸುತ್ತಾ ಬಂದಿರುವುದಷ್ಟೇ ಅವರಿಗೆ ಅದರ ಮೇಲೆ ಅವರ ಹಕ್ಕನ್ನು ನೀಡುವುದಿಲ್ಲ (ಕಾನೂನಿನ ದೃಷ್ಟಿಯಲ್ಲಿ). ಇವರ ದಾವೆಯ ವಿಚಾರಣೆಯನ್ನು ಆಲಿಸಿದ ಕೆಳನ್ಯಾಯಾಲಯದ ಉಪನ್ಯಾಯಾಧೀಶರು "ಅಸ್ಪೃಶ್ಯರನ್ನು" ಈ ಕೆರೆಯನ್ನು ಉಪಯೋಗಿಸದಂತೆ ಹೊರಗಿಡಲು ಹಿಂದೂಗಳಿಗೆ ಯಾವುದೇ ರೀತಿಯ ಹಕ್ಕಿಲ್ಲ ಎಂದು ಹೇಳಿದ್ದಾರೆ. ಈ ತೀರ್ಪನ್ನು ನೀಡುವಾಗ ಅವರು ಶ್ರೀ ಸದಾಶಿವ ಅಯ್ಯರ್ ವಿ. ವೈದಿಲಿಂಗ ಅವರ ತೀರ್ಪನ್ನು ಗಮನಕ್ಕೆ ತೆಗೆದುಕೊಂಡಿರುತ್ತಾರೆ ಈ ತೀರ್ಪು ಅಧಿಕೃತವಾಗಿ ವರದಿಯಾಗದಿದ್ದರೂ ೧೯೧೩ರ ಮದರಾಸು ಡಬ್ಲೂ.ಎನ್ ೨೪೭ ಮತ್ತು ಭಾರತೀಯ ಮೊಕದ್ದಮೆ ೯೧೯ರಲ್ಲಿ ಇದನ್ನು ನೋಡಬಹುದು. ಆದರೆ ಅವರು ಈ ತೀರ್ಪನ್ನು ನೀಡಲು ಮುಖ್ಯ ಆಧಾರವೆಂದರೆ. ಈ ಸಂಪ್ರದಾಯವು ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದಿದೆ ಎಂಬುದನ್ನು ಸಾಬೀತುಪಡಿಸಿಲ್ಲ ಎನ್ನುವುದು.

ಚಾವ್ದಾರ್ ಕೆರೆಯು ಒಂದು ಸಣ್ಣ ಕೆರೆ ಅಥವಾ ದೊಡ್ಡ ಕಟ್ಟೆ. ಅದರ ವಿಸ್ತೀರ್ಣ ನಾಲ್ಕರಿಂದ ಐದು ಎಕರೆ ಇದ್ದು ಅದು ನಗರದ ಹೊರ ವಲಯದಲ್ಲಿದೆ. ಅದರ ಸುತ್ತಲೂ ನಗರ ಪಾಲಿಕೆಯವರು ನಿರ್ಮಿಸಿರುವ ರಸ್ತೆಯಿದ್ದು ಅದರ ಆಚೆಗೆ ಹಿಂದೂಗಳು ವಾಸವಾಗಿದ್ದಾರೆ (ಇವರಲ್ಲಿ ಕೆಲವೇ ಕೆಲವು ಮಹಮದೀಯರೂ ಇದ್ದಾರೆ). ಈ ಮನೆಯ ಮಾಲೀಕರು ಕೆರೆಯ ಸುತ್ತ ಮುತ್ತಲಿರುವಂತಹ ಭೂಮಿಯನ್ನು ಕೊಂಡಿರುತ್ತಾರೆ ಹಾಗೆಯೇ ನೀರನ್ನು ತೆಗೆದುಕೊಳ್ಳಲು ಅನುಕೂಲವಾಗಲು ಕೆರೆಗೆ ಮೆಟ್ಟಿಲುಗಳನ್ನು ನಿರ್ಮಿಸಿಕೊಂಡಿರುತ್ತಾರೆ ಇದರ ಸುತ್ತ ಮುತ್ತಲು ಎಲ್ಲೂ ಅಸ್ಪೃಶ್ಯರ ಮನೆಗಳಿಲ್ಲ. ಈ ಕೆರೆಯು ಎಷ್ಟು ಪುರಾತನವಾದುದು ಎಂಬುದು ಯಾರಿಗೂ ನಿಖರವಾಗಿ ತಿಳಿದಿಲ್ಲ ಆದರೆ ಸುಮಾರು ೨೫೦ ವರ್ಷ ಹಳೆಯ ಕೆರೆ ಎಂಬುದು ತಿಳಿಯಬರುತ್ತದೆ.

ಆದರೆ ಈ ಬಗ್ಗೆ ಯಾರಿಗೂ ಪುರಾವೆ ಇಲ್ಲ. ಇದು ಪ್ರಾಕೃತಿಕವೋ ಇಲ್ಲ ಕೃತಕವೋ ಎಂಬ ಮಾಹಿತಿಯೂ ಇಲ್ಲ. ಆದರೆ ಈ ದಾವೆಯನ್ನು ಆಲಿಸಿದ ನ್ಯಾಯಾಧೀಶರು ಇದು ಭೂಮಿಯಲ್ಲಿ ಪಾಕೃತಿಕವಾಗಿಯೇ ನಿರ್ಮಿತವಾಗಿರುವಂತಹುದು. ಆದರೆ ಕ್ರಮೇಣ ಮನುಷ್ಯರು ತಮ್ಮ ಅನುಕೂಲಕ್ಕೆ ತಕ್ಕಂತೆ ಇದನ್ನು ಮಾರ್ಪಡಿಸಿಕೊಂಡಿರುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಂದು ವೇಳೆ, ವಿಷಯ ಹೀಗಿದ್ದರೆ ಈ ವಿಷಯವನ್ನು ಅಲ್ಲಗಳೆಯಲು ಸಾಧ್ಯವಾಗದಿದ್ದರೆ ಇದು ಬಹುಶಃ ಶತಮಾನಗಳಷ್ಟೇ ಹಳೆಯದು ಎಂದು ಹೇಳಬಹುದು. ಈ ಕೆರೆಗೆ ನೀರು ಬರುವುದು ಮುಂಗಾರಿನ ಮಳೆಯ ಮೂಲಕ ಹಾಗು ಕೆಲ ನೀರಿನ ಝುರಿಗಳ ಮೂಲಕ. ಮಹದ್ ನಗರದ ಜನಸಂಖ್ಯೆಯು ೭ ಸಾವಿರದಿಂದ ಎಂಟು ಸಾವಿರದಷ್ಟಿದೆ. ಇದರಲ್ಲಿ ಸುಮಾರು ೪೦೦ ಜನ ಅಸ್ಪೃಶ್ಯರು. ಮಹದ್ ನಗರ ಪಾಲಿಕೆಯು ಅಸ್ತಿತ್ವಕ್ಕೆ ಬಂದದ್ದು ೧೮೬೫ ರಲ್ಲಿ. ಈ ದಾವೆಯ ವಿಚಾರಣೆ ನಡೆಸುವಾಗ ಈ ನಗರ ಎಷ್ಟು ವರ್ಷ ಹಳೆಯದು, ಯಾವಾಗಲಿಂದ ಇಲ್ಲಿ ಜನರು ವಾಸವಾಗಿದ್ದಾರೆ ಎಂಬುದಕ್ಕೆ ಸ್ಪಷ್ಟ ಮಾಹಿತಿ ಸಿಗುವುದಿಲ್ಲ.

ಆದರೆ ಅರ್ಜಿದಾರರು ಈ ವಿಷಯವಾಗಿ ಹಲವಾರು ಸಾಕ್ಷಿಗಳನ್ನು ಕರೆತಂದಿದ್ದಾರೆ. ಇವರಲ್ಲಿ ಅನೇಕರು ಈ ಊರಿನಲ್ಲಿ ಬಹಳ ಕಾಲದಿಂದಲೂ ವಾಸವಾಗಿರುವವರು. ಅವರು ನೀಡಿದ ಸಾಕ್ಷ್ಯದ ಪ್ರಕಾರ ಅವರು ತಮ್ಮ ನೆನಪಿಗೆ ಬರುವಂತೆ ಈ ಕೆರೆಯನ್ನು ಅಸ್ಪೃಶ್ಯರು ಉಪಯೋಗಿಸಿರುವುದನ್ನೇ ನೋಡಿಲ್ಲ. ಕೇವಲ ಹಿಂದೂಗಳು ಹಾಗು ಕೆಲವೇ ಕೆಲವು ಮಹಮದೀಯರು ಈ ಕೆರೆಯನ್ನು ಉಪಯೋಗಿಸುತ್ತಾ ಬಂದಿದ್ದಾರೆ. ಇದನ್ನು ಎಂದಿಗೂ ಅಸ್ಪೃಶ್ಯರು ಉಪಯೋಗಿಸಿಲ್ಲ. ಇತ್ತೀಚಿನವರೆಗೂ, ಅಂದರೆ ಮೊದಲನೆಯ ಪ್ರತಿವಾದಿಗಳು 'ಅಸ್ಪೃಶ್ಯತೆ'ಯ ಆಚರಣೆಯ ವಿರುದ್ಧ ಚಳವಳಿಯನ್ನು ೧೯೨೭ರಲ್ಲಿ ಪ್ರಾರಂಭಿಸುವರೆಗೂ ಮತ್ತು ಕೆಲವು ಅಸ್ಪೃಶ್ಯರು ತಮ್ಮ ಈ ಪದ್ಧತಿಗೆ ತಮ್ಮ ವಿರೋಧವನ್ನು ದಾಖಲಿಸಲೆಂದೇ ಕೆರೆಗೆ ಹೋಗಿ ಅಲ್ಲಿಯ ನೀರನ್ನು ಕುಡಿಯುವವರೆಗೂ, ಅಸ್ಪೃಶ್ಯರು ಈ ಕೆರೆಯ ನೀರನ್ನು ಉಪಯೋಗಿಸುತ್ತಿರಲಿಲ್ಲ. ಆದರೆ ಆ ಸಂದರ್ಭದಲ್ಲಿ ಅವರೆಲ್ಲರ ಮೇಲೆ ಮೇಲ್ವರ್ಗದ ಹಿಂದೂಗಳು ಮಾರಣಾಂತಿಕವಾದ ಹಲ್ಲೆ ನಡೆಸಿದ್ದರು ಹಾಗು ಇವರನ್ನು ಅಪರಾಧಿಗಳು ಎಂದು ಪ್ರತಿಪಾದಿಸಿ ಇವರ ಮೇಲೆ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದರು. ಆ ದಾವೆಯ ಮೇಲೆಯೇ ಇಂದಿನ ಮೊಕದ್ದಮೆಯು ಕೂಡ ದಾಖಲಾಗಿದೆ. ಆದರೆ ಇದರ ಮೊದಲು ಅಸ್ಪೃಶ್ಯರು ಈ ಕೆರೆಯನ್ನು ಪ್ರವೇಶಿಸುವ ಪ್ರಯತ್ನ ಪಟ್ಟಿರುವುದಕ್ಕೆ ಯಾವುದೇ ರೀತಿಯ ಸಾಕ್ಷಿ, ಆಧಾರಗಳು ಸಿಗುವುದಿಲ್ಲವಾದ್ದರಿಂದ ಅವರನ್ನು ಈ ಕೆರೆಯ ನೀರನ್ನು ಉಪಯೋಗಿಸದಂತೆ ನಿರ್ಬಂಧಿಸುವ ಪ್ರಮೇಯವು ಇದ್ದಿತೆಂಬುದಕ್ಕೆ ಆಧಾರವಿಲ್ಲ. ಈ ಕೆರೆಯ ಉಪಯೋಗವನ್ನು ಇಲ್ಲಿಯವರೆಗೆ ಪಡೆಯುತ್ತಿದ್ದವರು ಹಾಗೂ ಈ ಕೆರೆಯ ಉಪಯೋಗವನ್ನು ಇಲ್ಲಿಯವರೆಗೆ ಪಡೆಯದೆ ಇದ್ದವರ ನಡುವಿನ ಹಕ್ಕಿನ ಪ್ರಕರಣವಾಗಿದೆ ಇದು. ಅಪವಾದಗಳನ್ನು ಹೊರತುಪಡಿಸಿದರೆ ಈ ಎರಡೂ ಪಕ್ಷದವರ ನಡುವೆ ಇರುವ 'ಅಸ್ಪೃಶ್ಯತೆ'ಯನ್ನು ಇದುವರೆಗೆ ಯಾರೂ ಬಹಿರಂಗವಾಗಿ ಪ್ರಶ್ನಿಸದೆ ಪರಸ್ಪರ ಒಪ್ಪಿಗೆಯಿಂದಲೇ ಇದನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ.

ಆದರೆ ಮಾನ್ಯ ಉಪನ್ಯಾಯಾಧೀಶರೊಬ್ಬರು ಮತ್ತೊಂದು ಅಂಶವನ್ನು ಎತ್ತಿ ಹಿಡಿದಿದ್ದರು. ಅದೇನೆಂದರೆ ಬ್ರಿಟಿಷರ ಪೂರ್ವದಲ್ಲಿ ಅಸ್ಪೃಶ್ಯರನ್ನು ಈ ಕೆರೆಯ ಉಪಯೋಗದಿಂದ ಹೊರಗೆ ಉಳಿಸಿದ್ದುದಕ್ಕೆ ಯಾವುದೇ ಪುರಾವೆ ಇಲ್ಲ. ಅಂತೆಯೇ ಮರಾಠರ ಆಡಳಿತದ ಕಾಲದಲ್ಲಿ ಹಾಗು ಮುಸಲ್ಮಾನರ ಆಡಳಿತದ ಕಾಲದಲ್ಲಿ ಕೂಡ ಈ ರೀತಿಯ ನಿರ್ಬಂದ ಇದ್ದ ಬಗೆಗೂ ಯಾವುದೇ ಸಾಕ್ಷ್ಯ ಇಲ್ಲ. ಆದರೆ ಜೀವಂತ ಇರುವ ವ್ಯಕ್ತಿಗಳ ನೆನಪಿನ ಆಧಾರದ ಮೇಲೆ ಮಾತ್ರ ಇರುವ ಘಟನೆಗಳನ್ನು ಸಾಕ್ಷ್ಯ ಎಂದು ಪರಿಗಣಿಸಲು

ಆಗುವುದಿಲ್ಲ. ಆದರೆ ಈ ರೀತಿಯ ಘಟನೆಗಳು ಜರುಗಿದ ಅಲ್ಪಕಾಲದವರೆಗೆ ಇತರ ಸಾಕ್ಷ್ಯಗಳು ಲಭ್ಯವಿಲ್ಲದಿದ್ದಲ್ಲಿ ನ್ಯಾಯಾಲಯಗಳು ಸ್ವಲ್ಪ ಮಟ್ಟಿಗೆ ಇವುಗಳನ್ನು ಸಾಕ್ಷ್ಯಗಳು ಎಂದು ಪರಿಗಣಿಸುತ್ತವೆ. ಸದರಿ ಕೆರೆಯನ್ನು ಸವರ್ಣೀಯ ಹಿಂದೂಗಳು ಅನುಭೋಗಿಸುತ್ತಿದ್ದರು ಎಂಬುದರ ಬಗೆಗೆ ವಿರೋಧವಿಲ್ಲದಿರುವರಿಂದ ಅಸ್ಪೃಶ್ಯತೆಯು ಇರುವವರೆಗೆ, ಅದನ್ನು ಒಪ್ಪಿಕೊಂಡಿರುವವರೆಗೆ, ಇದೇ ಪರಿಸ್ಥಿತಿಯು ಮುಂದುವರೆಯುತ್ತಿರುತ್ತದೆ. ಜೀವಂತ ಇರುವ ವ್ಯಕ್ತಿಗಳ ನೆನಪಿನ ಆಧಾರದ ಮೇಲೆ ನಿರ್ಧಾರವಾಗಿರುವ ಪ್ರಕರಣವು, ಆ ನೆನಪಿನ ಕಾಲದ ಹಿಂದಿನಿಂದಲೂ ಮುಂದುವರಿದುಕೊಂಡು ಬಂದಿದೆ ಎಂದು ಭಾವಿಸಬಹುದು. ಹಾಗೆಯೇ ಇದನ್ನು ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದಿರಬಹುದು ಎಂದೂ ಪರಿಗಣಿಸಬಹುದು. ಈ ಮಟ್ಟದಲ್ಲಿಯೇ ಅರ್ಜಿದಾರರ ದಾವೆಯು ತನ್ನ ಬಲವನ್ನು ಕಳೆದುಕೊಳ್ಳುವುದು ಈ ಎಲ್ಲಾ ಮೇಲ್ಕಂಡ ಪರಿಸ್ಥಿತಿಗಳು ಒಂದೇ ತೆರನಾಗಿದ್ದು ಹಿಂದೂಗಳ ಮನೆಗಳೇ ಕೆರೆಯ ಸುತ್ತಲೂ ಆವರಿಸಿಕೊಂಡಿದ್ದು (ಇದೇನೂ ಬಹಳ ದೊಡ್ಡ ಮಟ್ಟದಲ್ಲಿ ಇರಲಿಲ್ಲ ಏಕೆಂದರೆ ಕೆರೆಯೇ ನಗರದ ಹೊರವಲಯದಲ್ಲಿತ್ತು. ನಗರ ಪ್ರದೇಶವು ಗಣನೀಯವಾಗಿ ಬೆಳೆದ ನಂತರವಷ್ಟೇ ಈ ಪ್ರದೇಶಗಳು ಜನಾವೃತವಾಗಿದ್ದು) ಎಂದು ಸಾಬೀತು ಮಾಡಿದರೆ ರೀತಿಯ ಪದ್ಧತಿಯೇ ಜಾರಿಯಲ್ಲಿ ಇತ್ತೆಂದು ನಾವು ಭಾವಿಸಬಹುದು. ಆದರೆ ಪುರಾತನ ಕಾಲದಿಂದಲೂ ಈ ಸಮಾಜದಲ್ಲಿ ಇದೇ ಪದ್ಧತಿ ಜಾರಿಯಲ್ಲಿ ಇತ್ತೆಂದು ಹೇಳಲು ಈ ಪ್ರಕರಣದಲ್ಲಿ ಯಾವ ರೀತಿಯ ಸಾಕ್ಷಿ ಆಧಾರಗಳೂ ಇರಲಿಲ್ಲ. ಕೊಂಕಣದ ಇತಿಹಾಸವೇ ಒಂದು ರೀತಿಯ ಗೋಜಲು ಗೋಜಲಾಗಿದೆ. ಈ ಇತ್ತೀಚಿನ ಕಾಲದಲ್ಲಿ ಕೂಡ. ಈ ಪ್ರಾಕೃತಿಕ ಕೆರೆಯ ಮೇಲೆ ಅನಾದಿ ಕಾಲದಿಂದಲೂ ಸವರ್ಣೀಯ ಹಿಂದೂಗಳೇ ಹಕ್ಕನ್ನು ಹೊಂದಿದ್ದರು ಎಂದು ಯಾವ ಕಾರಣದಿಂದಲೂ ಹೇಳಲು ಬರುವುದಿಲ್ಲ.

ಈ ನಿಟ್ಟಿನಲ್ಲಿ ಶ್ರೀ ಸದಾಶಿವ ಅಯ್ಯರ್ ಹಾಗು ಮರಿಯಪ್ಪ ವಿ. ವೈದಿಲಿಂಗ ಅವರು ಗಮನಿಸಿರುವ ಸಂಗತಿಗಳು ಹಲವಾರು ಪ್ರಮುಖ ಅಂಶಗಳ ಮೇಲೆ ಬೆಳಕು ಬೀರುತ್ತವೆ. ಮನು ಅವರ ಹೇಳಿಕೆಯನ್ನು ಅವರು ಇಲ್ಲಿ ಉಲ್ಲೇಖ ಮಾಡುತ್ತಾರೆ "ಒಂದು ಹಸು ಒಂದು ಕೆರೆಗೆ ತನ್ನ ಬಾಯಾರಿಕೆಯನ್ನು ನೀಗಿಸಿಕೊಳ್ಳಲು ಹೋದರೆ, ಅದರ ವಾಸನೆ, ಬಣ್ಣ ಹಾಗು ರುಚಿ ಚೆನ್ನಾಗಿದ್ದರೆ ಅದು ಪವಿತ್ರವಾಗಿದೆಯೆ" ಪರಿಗಣಿತವಾಗುತ್ತದೆ. ಶಾಸ್ತ್ರೀಯ ಬರವಣಿಗೆಗಳಲ್ಲಿ ಬಂದಿರುವಂತಹ ಒಂದು ಅಂಶವನ್ನೂ ಇಲ್ಲಿ ಗಮನಕ್ಕೆ ತರುತ್ತಾರೆ "ನದಿಗಳು, ಕೆರೆಗಳು ಹಾಗು ಇತರ ಕೆರೆ ಕಟ್ಟೆಗಳ ನಡುವೆ ಇರುವ ವ್ಯತ್ಯಾಸಗಳನ್ನು ಗಮನಿಸಿ ಅವುಗಳು ಬಹಳ ಬೇಗನೇ ಅಪವಿತ್ರವಾಗುತ್ತವೆ, ಸಮಯ ಹಾಗು ಪಾಕೃತಿಕ ಹವಾಗುಣಗಳಿಂದ ಇವುಗಳು ಮತ್ತೆ ಪವಿತ್ರವಾಗುವುದು ಕಷ್ಟದ ಸಂಗತಿಯೇ". ಈ ಮಾನ್ಯ ನ್ಯಾಯಾಧೀಶರು ಅದೇನೆಂದರೆ ಹಿಂದೂ ಧರ್ಮದ ಅನುಸಾರ ಒಂದು ಕೆರೆಯಲ್ಲಿ ನೀರು ಮಲಿನವಾದರೆ ಅಂತಹ ದೊಡ್ಡ ಶುದ್ಧೀಕರಣದ ಕಾರ್ಯದ ಆವಶ್ಯಕತೆಯೇನೂ ಇರುವುದಿಲ್ಲ ಎಂದಿದ್ದರು. ಈ ದಾವೆಯಲ್ಲಿ ಪ್ರಶ್ನಿಸಲಾಗಿದ್ದ ಕೆರೆಯು ಮಹದ್‌ನಲ್ಲಿ ಇರುವ ಚಾವ್ದಾರ್ ಕೆರೆಗಿಂತ ಸಣ್ಣದು. ಆದ್ದರಿಂದ "ಅಸ್ಪೃಶ್ಯತೆಯನ್ನು" ಕುರಿತು ಅರ್ಜಿದಾರರು ಮಾಡಿರುವ ವಾದವು ಇಲ್ಲಿ ಅತ್ಯಂತ ಬಲವಾಗಿ ನಿಲ್ಲುವುದಿಲ್ಲ. ಸವರ್ಣೀಯರ ಮನೆಗಳು ಕೆರೆಯ ಬಳಿ ನಿರ್ಮಿಸಲ್ಪಡುವ ಮೊದಲು ಪ್ರತ್ಯೇಕವಾಗಿ ಕೆರೆಯು ಉಪಯೋಗಿಸಲ್ಪಡುತ್ತೆಂಬುದು ಕೂಡ ಸಾಬೀತಾಗಿಲ್ಲ.

ಈ ಒಂದು ದಾವೆಯಲ್ಲಿ ಮಾತ್ರವೇ ನಮ್ಮ ಗಮನವನ್ನು ನೀರಿನ ಉಪಯೋಗದ ಕಡೆಗೆ ಸೆಳೆದು. "ಅಸ್ಪೃಶ್ಯ"ರನ್ನು ಈ ಕೆರೆಯನ್ನು ಉಪಯೋಗಿಸದಂತೆ ನಿರ್ಬಂಧಿಸಲು ಕೋರಲಾಗಿದೆ. ದೇವಸ್ಥಾನ ಅತಿಕ್ರಮ ಪ್ರವೇಶದ ದಾವೆಗಳು ಉದಾ: ಇವೆಲ್ಲವೂ ನೀರಿಗೆ ಸಂಬಂಧ ಪಟ್ಟಂತಹ ದಾವೆಗಳಾಗಿರಲಿಲ್ಲ. ಆನಂದರಾವ್

ವಿ. ಶಂಕರ್ (೧೮೮೩) ILR ೩೧ ಮದರಾಸು ೨೩೬. ಈ ರೀತಿಯ ಘಟನೆಗಳಲ್ಲಿ ಯಾವುದೇ ಒಂದು ದೇವಸ್ಥಾನವನ್ನು ಯಾವುದೇ ಒಂದು ಧರ್ಮದವರು ಬಹಳಷ್ಟು ಸಮಯದಿಂದ ಉಪಯೋಗಿಸುತ್ತಾ ಬಂದಿದ್ದರೆ ಅದರ ಮೇಲೆ ಅವರದ್ದೇ ಹಕ್ಕು ಇರುವಂತೆ ಅವರು ವರ್ತಿಸಲು ಆರಂಭಿಸುತ್ತಾರೆ. ಕೆಳವರ್ಗದ ಜನರು ಅವುಗಳನ್ನು ತಾವೂ ಉಪಯೋಗಿಸಬೇಕು ಎಂದು ವಾದಿಸಿದರೆ ಆ ದೇವಸ್ಥಾನಗಳಲ್ಲಿ ತಾವೂ ಪೂಜೆ ಮಾಡಬಹುದು ಎಂದು ಶೋಷಿತ ವರ್ಗದವರೇ ಸಾಬೀತಿನ ಮೂಲಕ ಸಮರ್ಥಿಸಿಕೊಳ್ಳಬೇಕು. ಆದರೆ, ಪ್ರತಿ ಪ್ರಕರಣದಲ್ಲಿ ಇಂತಹ ಸಂಪ್ರದಾಯವಿದೆಯೆಂಬುದರ ಪ್ರಶ್ನೆಯೇ ಏಳುವುದಿಲ್ಲ.

ಈ ಮೇಲ್ಕಂಡ ದಾವೆಯ ವಿಷಯದಲ್ಲಿ ನಾವು ಸನ್ಮಾನ್ಯ ನ್ಯಾಯಮೂರ್ತಿಗಳ ಅಭಿಪ್ರಾಯಕ್ಕೆ ಮನ್ನಣೆ ನೀಡಲೇ ಬೇಕಾಗುತ್ತದೆ. ಇದು ಇತ್ತೀಚೆಗಷ್ಟೇ ಪ್ರಾರಂಭವಾಗಿರುವ ಸಂಪ್ರದಾಯವೇ ಹೊರತು ಇದಕ್ಕೆ ಪ್ರಾಚೀನ ಇತಿಹಾಸವಿದೆ ಎಂಬ ಅಂಶವನ್ನು ಅಹವಾಲುದಾರರು ಸಾಬೀತುಪಡಿಸಿಲ್ಲ. ಅವರೇನಾದರೂ ಈ ವಿಷಯವನ್ನು ಸಾಬೀತುಪಡಿಸುವಲ್ಲಿ ಯಶಸ್ವಿಯಾಗಿದ್ದಿದ್ದರೆ ಇದು ನ್ಯಾಯಯುತವಾದ ಸಂಪ್ರದಾಯವೇ ಅಥವಾ ಸಮಾಜ ವಿರೋಧಿಸಂಪ್ರದಾಯವೇ ಎಂದು ನಾವು ಚಿಂತಿಸಬಹುದಾಗಿತ್ತು (ಆದರೆ ಇದನ್ನು ನಾವು ಸರಿಯಾಗಿ ಗಮನಿಸಿದರೆ ಕೆಳ ಮಟ್ಟದ ನ್ಯಾಯಾಲಯಗಳಲ್ಲಿ ಇಂತಹ ವಾದಗಳನ್ನು ಮಂಡಿಸಿರಲೇ ಇಲ್ಲ. ಆದರೆ ಚಾವ್ದಾರ್ ಕೆರೆಯನ್ನು ನಗರ ಪಾಲಿಕೆಯ ಸುಪರ್ದಿಗೆ ಒಪ್ಪಿಸುವುದನ್ನು ಕುರಿತು ಚರ್ಚಿಸುವುದು ಸರಿಯಾದ ಕ್ರಮವಾಗುತ್ತದೆ. ಈ ಪ್ರಕರಣದಲ್ಲಿ ಈ ಕೆರೆಯ ನ್ಯಾಯಾವಾದ ಒಡೆಯರು ನೇರವಾಗಿ ಈ ವಿವಾದದಲ್ಲಿ ಭಾಗವಹಿಸದೆ ಇರುವುದರಿಂದ, ಇಲ್ಲಿನ ಅರ್ಜಿದಾರರು ಒಡೆತನದ ಸಂಬಂಧದಲ್ಲಿ ಯಾವುದಾದರೂ ಪರಿಹಾರಕ್ಕೆ ಅರ್ಹರಾಗುತ್ತಾರೆಯೇ ಎಂಬುದನ್ನೂ ಚಿಂತಿಸಬಹುದು. ಆದರೆ ಈ ದಾವೆಯನ್ನು ಇತ್ಯರ್ಥ ಮಾಡುವಾಗ ಮೇಲಿನ ಯಾವ ಅಂಶಗಳನ್ನೂ ಪರಿಗಣಿಸುವ ಅಗತ್ಯವಿಲ್ಲ ಹಾಗು ಯಾವುದೇ ಪ್ರಶ್ನೆಗೂ ಉತ್ತರ ನೀಡುವ ಅಗತ್ಯವಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಾವು ಯಾವುದೇ ಅಭಿಪ್ರಾಯವನ್ನೂ ವ್ಯಕ್ತ ಪಡಿಸುವುದಿಲ್ಲ.

ಈ ದಾವೆಯನ್ನು ವಜಾಗೊಳಿಸಲಾಗಿದೆ

| | |
|---|---|
| ಮುಖ್ಯ ನ್ಯಾಯಾಲಯ | ನ್ಯಾಯಾಲಯದ ಆದೇಶದ ಮೇರೆಗೆ |
| ಬೊಂಬಾಯಿ | ಸಹಿ/ ಆರ್.ಎಸ್. ಬಾವ್ಡೇಕರ್ |
| ಇದರ ಮೊಹರು | ರಿಜಿಸ್ಟ್ರಾರ್ |

| | |
|---|---|
| ಉಚ್ಚ ಮೇಲ್ಮನವಿ ನ್ಯಾಯಾಲಯ | ಸಹಿ |
| ಪ್ರಮಾಣೀಕೃತ ಪ್ರತಿ | ಉಪ ರಿಜಿಸ್ಟ್ರಾರ್ ಅವರ ಪರವಾಗಿ |
| ಬೊಂಬಾಯಿ | ೨೮ನೆಯ ಜೂನ್ ೧೯೬೦ |

"ಕಳದುಕೊಂಡ ಹಕ್ಕುಗಳನ್ನು ಬೇಡಿ ಅಥವಾ ಕಸಿದುಕೊಂಡವರ ಅಂತಸಾಕ್ಷಿಯನ್ನು ಬಡಿದೆಬ್ಬಿಸಿ ಪಡೆದುಕೊಳ್ಳಲು ಪ್ರಯತ್ನಿಸಬಾರದು. ಬದಲಾಗಿ ನಿರಂತರವಾದ ಹೋರಾಟದ ಮೂಲಕ ಪಡೆಯಬೇಕು" ಇದು ಅಂಬೇಡ್ಕರ್ ಅವರ ಮಾತುಗಳು. ಈ ಮಾತುಗಳು ಸತ್ಯ ಎಂಬುದನ್ನು ಮಹದ್ ಸತ್ಯಾಗ್ರಹವು ಸಾಬೀತು ಪಡಿಸುತ್ತದೆ – ಸಂಪಾದಕರು.

# ವಿಭಾಗ II
# ಡಾ. ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧಿ ಇವರ ನಡುವಿನ ಭೇಟಿಗಳು

# ೧
# ನನಗೆ ಯಾವುದೇ ತಾಯ್ನಾಡಿಲ್ಲ

೧೯೩೧ರ ಜುಲೈ ೩ನೆಯ ವಾರದಲ್ಲಿ, ಎರಡನೆಯ ದುಂಡು ಮೇಜಿನ ಸಭೆಗೆ ಹೋಗಲಿರುವ ಗಣ್ಯರ ಪಟ್ಟಿಯು ಬಿಡುಗಡೆಯಾಯಿತು. ಡಾ. ಅಂಬೇಡ್ಕರ್ ಹಾಗು ಮಹಾತ್ಮ ಗಾಂಧಿಯವರಿಗೆ ಲಂಡನ್ನಿನಲ್ಲಿ ನಡೆಯಲಿದ್ದ ಈ ಸಭೆಗೆ ಆಹ್ವಾನ ನೀಡಲಾಗಿತ್ತು. ಆದರೆ ಮಹಾತ್ಮಗಾಂಧಿಯವರು ಈ ಸಭೆಯಲ್ಲಿ ಪಾಲ್ಗೊಳ್ಳುತ್ತಾರೆಯೇ ಎಂಬುದು ತಿಳಿದುಬಂದಿರಲಿಲ್ಲ. ಆದ್ದರಿಂದ ಸ್ವಾಭಾವಿಕವಾಗಿಯೇ ಎಲ್ಲರ ಕಣ್ಣುಗಳೂ ಬೊಂಬಾಯಿಯಲ್ಲಿ ಗಾಂಧೀಜಿಯವರು ತಂಗಿದ್ದ 'ಮನಿಭುವನ್' ಎಂಬ ಸ್ಥಳದ ಮೇಲೆ ನೆಟ್ಟಿದ್ದವು. ತಮ್ಮ ಬೇಡಿಕೆಗಳೇನು ಎಂಬುದನ್ನು ಗಾಂಧೀಜಿಯವರು ಡಾ. ಅಂಬೇಡ್ಕರ್ ಅವರಿಗೆ ತಿಳಿಸಲು ಬಯಸಿದ್ದರು ಆದ್ದರಿಂದ ಡಾ.ಅಂಬೇಡ್ಕರ್ ಅವರಿಗೆ ಈ ಕೆಳಗಿನಂತೆ ಪತ್ರವನ್ನು ಗಾಂಧೀಜಿಯವರು ಬರೆದರು.

"ಡಾ. ಅಂಬೇಡ್ಕರ್ ಅವರೆ;

ಇಂದು ರಾತ್ರಿ ೮ ಘಂಟೆಗೆ ನಾನು ನಿಮ್ಮನ್ನು ಭೇಟಿಯಾಗಬಯಸುತ್ತೇನೆ ನಿಮಗೆ ಆ ವೇಳೆ ಸೂಕ್ತ ಎಂದು ಭಾವಿಸುತ್ತೇನೆ. ಒಂದು ವೇಳೆ ನಿಮಗೆ ನನ್ನಲ್ಲಿಗೆ ಬರಲು ತೊಡಕುಗಳಿದ್ದರೆ, ನಾನೇ ಸಂತಸದಿಂದ ನಿಮ್ಮನ್ನು ಬಂದು ಕಾಣುತ್ತೇನೆ.

ಬೊಂಬಾಯಿ — ನಿಮ್ಮ ನಿಷ್ಠೆಯ

೬–೮–೩೧ — ಎಂ.ಕೆ. ಗಾಂಧಿ

ಆಗಷ್ಟೇ ಡಾ. ಅಂಬೇಡ್ಕರ್ ಅವರು ಸಾಂಗ್ಲಿಯಿಂದ ಆಗಮಿಸಿದ್ದರು ಹಾಗು ಜ್ವರದಿಂದ ಬಳಲುತ್ತಿದ್ದರು. ಆದರೂ ಗಾಂಧೀಜಿಯವರ ಪತ್ರಕ್ಕೆ ಉತ್ತರಿಸಿ ತಾವೇ ಅವರನ್ನು ಅಂದು ರಾತ್ರಿ ೮ ಘಂಟೆಗೆ ಭೇಟಿಯಾಗಲು ಬರುವುದಾಗಿ ತಿಳಿಸಿದರು. ಆದರೆ ಸಂಜೆಯ ವೇಳೆಗೆ ಅವರ ಜ್ವರ ೧೦೬ಕ್ಕೆ ಏರಿತ್ತು. ಆದ್ದರಿಂದ ಜ್ವರವು ಬಿಟ್ಟನಂತರ ಬಂದು ಕಾಣುವುದಾಗಿ ಪತ್ರ ಬರೆದರು.

ಅಂತೆಯೇ ಆಗಸ್ಟ್ ೧೪ ರಂದು ಗಾಂಧೀಜಿಯವರನ್ನು ಭೇಟಿಯಾಗಲು ಡಾ. ಅಂಬೇಡ್ಕರ್ ಹೋದರು. ಮಧ್ಯಾಹ್ನ ಎರಡು ಘಂಟೆಯ ವೇಳೆಗೆ ಅವರು ಮನಿಭುವನ್ ತಲುಪಿದರು. ಅವರೊಂದಿಗೆ ಅವರ ಆಪ್ತರಾದ ದೇವ್‌ರಾವ್ ನಾಯಕ್, ಶಿವ್‌ಟಾರ್ಕರ್, ಪ್ರಧಾನ್, ಭಾವುರಾವ್ ಗಾಯಕ್‌ವಾಡ್ ಕಾಡ್ರೇಕರ್ ಅವರುಗಳೂ ತೆರಳಿದ್ದರು ಅಂಬೇಡ್ಕರ್. ಅವರನ್ನು ಮೂರನೆಯ ಮಹಡಿಗೆ ಕರೆತರಲಾಯಿತು. ಆ ಸಮಯದಲ್ಲಿ ಗಾಂಧೀಜಿಯವರು ತಮ್ಮ ಪಾರ್ಟಿಯ ಕೆಲ ಜನರೊಂದಿಗೆ ಚರ್ಚಿಸುತ್ತಾ ಹಣ್ಣುಗಳನ್ನು ಸೇವಿಸುತ್ತಿದ್ದರು. ಡಾ. ಅಂಬೇಡ್ಕರ್ ಹಾಗು ಅವರ ಸಹಚರರು ಗಾಂಧಿಜಿಯವರಿಗೆ ವಂದಿಸಿ, ಅಲ್ಲಿ ಹಾಸಲಾಗಿದ್ದ ಒಂದು ಕಂಬಳಿಯ ಮೇಲೆ ಕುಳಿತರು.

ಗಾಂಧೀಜಿಯವರು ಮುಸಲ್ಮಾನೇತರ ಹಾಗು ಯೂರೋಪೇತರ ನಾಯಕರೊಂದಿಗೆ ವರ್ತಿಸುವಂತೆಯೇ ಡಾ. ಅಂಬೇಡ್ಕರ್ ಅವರೊಂದಿಗೆ ವರ್ತಿಸಿದರು. ಕೆಲ ಕಾಲ ಅವರು ಡಾ. ಅಂಬೇಡ್ಕರ್ ಅವರತ್ತ ತಿರುಗಿಯೂ ನೋಡಲಿಲ್ಲ. ಕುಮಾರಿ ಸ್ಲೇಡ್ ಹಾಗು ಇತರರೊಂದಿಗೆ ತಮ್ಮ ಸಂವಾದವನ್ನು ಮುಂದುವರೆಸಿದ್ದರು ಗಾಂಧೀಜಿಯವರ ಈ ವರ್ತನೆಯನ್ನು ಕಂಡ ಡಾ. ಅಂಬೇಡ್ಕರ್ ಅವರ ಸಹಚರರು ಗಾಂಧಿ ಹಾಗೂ

ಅಂಬೇಡ್ಕರ್ ಅವರ ನಡುವೆ ಘರ್ಷಣೆಯು ನಡೆಯಲಿದೆ ಎಂದು ಯೋಚಿಸುತ್ತಿದ್ದರು. ಆಗ ಗಾಂಧೀಜಿಯವರು ಡಾ. ಅಂಬೇಡ್ಕರ್ ಅವರತ್ತ ತಿರುಗಿದರು. ಕೆಲ ಕುಶಲ ಪ್ರಶ್ನೆಗಳ ನಂತರ ನೇರವಾಗಿ ಅವರು ವಿಷಯಕ್ಕೆ ಬಂದರು.

ಗಾಂಧೀ: ಸರಿ, ಡಾಕ್ಟರ್ ಅವರೇ, ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?

ಅಂಬೇಡ್ಕರ್ ನೀವು ಇಲ್ಲಿಗೆ ನನ್ನನ್ನು ಕರೆದಿರುವುದು ತಮ್ಮ ಅಭಿಪ್ರಾಯ ತಿಳಿಸಲು. ನೀವು ಏನನ್ನು ಹೇಳಬೇಕು ಎಂದು ಇಚ್ಛಿಸುತ್ತೀರೋ ದಯಮಾಡಿ ಅದನ್ನು ತಿಳಿಸಿ ಅಥವಾ ನನಗೆ ನಿಮ್ಮ ಪ್ರಶ್ನೆಗಳನ್ನು ಕೇಳಿ, ನಾನು ಅದಕ್ಕೆ ಉತ್ತರಿಸುತ್ತೇನೆ.

ಗಾಂಧೀ: (ಡಾ. ಅಂಬೇಡ್ಕರ್ ಅವರನ್ನು ದಿಟ್ಟಿಸಿ ನೋಡುತ್ತಾ) ನನ್ನ ಹಾಗು ಕಾಂಗ್ರೆಸ್ ಪಕ್ಷದ ವಿರುದ್ಧ ನಿಮಗೆ ಸ್ವಲ್ಪ ಅಸಮಾಧಾನವಿದೆ ಎಂದು ನಾನು ಕೇಳಿದ್ದೇನೆ. ಆದರೆ ಅಸ್ಪೃಶ್ಯರನ್ನು ಕುರಿತು ನಾನು ನನ್ನ ಶಾಲೆಯ ದಿನಗಳಿಂದಲೂ ಚಿಂತಿಸುತ್ತಾ ಬಂದಿದ್ದೇನೆ ಎಂದು ನಾನು ನಿನಗೆ ತಿಳಿಸಬಯಸುತ್ತೇನೆ ಆಗ ತಾವಿನ್ನೂ ಜನಿಸಿರಲೇ ಇಲ್ಲ, ಕಾಂಗ್ರೆಸ್ ಪಕ್ಷದ ಹೋರಾಟದಲ್ಲಿ ಈ ಸಮಸ್ಯೆಯನ್ನು ಸೇರ್ಪಡೆಗೊಳಿಸಲು ನಾನೆಷ್ಟು ಕಷ್ಟ ಪಟ್ಟಿರುವೆ ಎಂದು ನಿಮಗೆ ತಿಳಿದಿರಬಹುದು. ಕಾಂಗ್ರೆಸ್ ಪಕ್ಷದ ವೇದಿಕೆಯಲ್ಲಿ ಈ ಸಮಸ್ಯೆಗೆ ನಾನು ಸ್ಥಾನವನ್ನು ಒದಗಿಸಿಕೊಟ್ಟಿರುವೆ. ಇದಕ್ಕೆ ಕಾಂಗ್ರೆಸ್‌ನ ಕೆಲ ನಾಯಕರು ವಿರೋಧ ವ್ಯಕ್ತಪಡಿಸಿದ್ದರು ಇದೊಂದು ಧಾರ್ಮಿಕ ಹಾಗು ಸಾಮಾಜಿಕ ಪಿಡುಗು. ಇದನ್ನು ರಾಜಕೀಯ ಸಮಸ್ಯೆಗಳೊಂದಿಗೆ ಬೆರೆಸಬಾರದು ಎಂದಿದ್ದರು. ಇಷ್ಟೇ ಅಲ್ಲ ಅಸ್ಪೃಶ್ಯರ ಏಳಿಗೆಗಾಗಿ ಕಾಂಗ್ರೆಸ್ ಪಕ್ಷವು ೨೦ ಲಕ್ಷಕ್ಕಿಂತಲೂ ಅಧಿಕ ಮೊತ್ತ ವ್ಯಯಿಸಿದೆ. ಆದರೂ ನಿಮ್ಮಂತಹ ಕೆಲವರು ನನ್ನ ವಿರುದ್ಧ ಹಾಗೂ ಕಾಂಗ್ರೆಸ್ ವಿರುದ್ಧ ಬಂಡಾಯ ಎದ್ದಿರುವುದು ನನಗೆ ಅತ್ಯಂತ ಆಶ್ಚರ್ಯ ಉಂಟುಮಾಡಿದೆ. ನೀವು ನಿಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಏನನ್ನಾದರೂ ಹೇಳಲು ಇಚ್ಛಿಸಿದರೆ ಹೇಳಬಹುದು.

ಅಂಬೇಡ್ಕರ್: ನೀವು ನಾನು ಜನಿಸುವುದಕ್ಕೂ ಮೊದಲ್ಲಿನಿಂದಲೂ ಅಸ್ಪೃಶ್ಯರನ್ನು ಕುರಿತು ಚಿಂತಿಸುತ್ತಿದ್ದೀರಿ ಎಂಬುದು ಸತ್ಯವೇ ಮಹಾತ್ಮಾ ಜೀ. ಎಲ್ಲಾ ಹಿರಿಯರೂ ನಮ್ಮ ಮುಂದೆ ತಮ್ಮ ವಯಸ್ಸಿನ ಹಿರಿಮೆಯನ್ನು ಒತ್ತಿ ಹೇಳುತ್ತಾರೆ. ನಿಮ್ಮ ಹೋರಾಟದಿಂದಲೇ ಕಾಂಗ್ರೆಸ್ ಪಕ್ಷವು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವುದೂ ಸತ್ಯವೇ. ಆದರೆ ಇದಕ್ಕೆ ಅಧಿಕೃತ ಮುದ್ರೆ ಒತ್ತಿರುವುದನ್ನು ಹೊರತುಪಡಿಸಿದರೆ, ಈ ಸಮಸ್ಯೆ ನಿವಾರಣೆಗಾಗಿ ಕಾಂಗ್ರೆಸ್ ಪಕ್ಷವು ಪೂರ್ಣಪ್ರಮಾಣದ ಪ್ರಯತ್ನವನ್ನೇನೂ ಮಾಡಿಲ್ಲ. ನೀವು ಅಸ್ಪೃಶ್ಯರ ಏಳಿಗೆಗೆ ಕಾಂಗ್ರೆಸ್ ಪಕ್ಷ ೨೦ ಲಕ್ಷ ವೆಚ್ಚ ಮಾಡಿದೆ ಎಂದಿರುವಿರಿ. ಆದರೆ ಅದೆಲ್ಲಾ ವ್ಯರ್ಥ ಎಂದು ನಾನು ಹೇಳುತ್ತೇನೆ. ಇಷ್ಟೊಂದು ಬೆಂಬಲವು ನನ್ನ ಬಳಿ ಇದ್ದರೆ ನಾನು ನನ್ನ ಜನರ ದೃಷ್ಟಿಯನ್ನು ಮತ್ತು ಆರ್ಥಿಕ ಪರಿಸ್ಥಿತಿಯನ್ನು ಬದಲಿಸಿರುತ್ತಿದ್ದೆ. ಆ ರೀತಿಯ ಒಂದು ವ್ಯವಸ್ಥೆ ಆಗಿದ್ದಿದ್ದರೆ, ನೀವು ಈ ಮೊದಲೇ ನನ್ನನ್ನು ನೋಡಿರುತ್ತಿದ್ದಿರಿ. ಆದರೆ ಒಂದು ವಿಷಯನ್ನು ನಾನು ನಿಮಗೆ ತಿಳಿಸಲು ಇಚ್ಛಿಸುತ್ತೇನೆ. ಅದೇನೆಂದರೆ ಕಾಂಗ್ರೆಸ್ ಪಕ್ಷಕ್ಕೆ ಈ ನಿಟ್ಟಿನಲ್ಲಿ ಸಾಕಷ್ಟು ನಿಷ್ಠೆಯಿಲ್ಲ. ಒಂದು ವೇಳೆ ಅದಕ್ಕೆ ನಿಷ್ಠೆ ಇದ್ದಿದ್ದರೆ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಖಾದಿ ತೊಡುವುದನ್ನು ಈ ಪಕ್ಷ ಕಡ್ಡಾಯಗೊಳಿಸಿದಂತೆ. ಇಷ್ಟು ಹೊತ್ತಿಗಾಗಲೇ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದನ್ನು ತನ್ನ ನಿಯಮಗಳಲ್ಲಿ ಒಂದು ಎಂದು ಅದು ಪರಿಭಾವಿಸುತ್ತಿತ್ತು. ಯಾರು ಅಸ್ಪೃಶ್ಯರನ್ನು ಮನೆಯಲ್ಲಿ ಕೆಲಸಕ್ಕೆ ಇರಿಸಿಕೊಳ್ಳುವುದಿಲ್ಲವೋ ಇಲ್ಲವೇ ಅಸ್ಪೃಶ್ಯರ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಿಲ್ಲವೊ ಮತ್ತು ವಾರಕ್ಕೊಮ್ಮೆಯಾದರೂ ಅಸ್ಪೃಶ್ಯರ ಮನೆಯಲ್ಲಿ ಊಟವನ್ನು ಮಾಡುವುದಿಲ್ಲವೋ ಅಂತಹವರಿಗೆ ಕಾಂಗ್ರೆಸ್ ಪಕ್ಷದ ಸದಸ್ಯತ್ವವನ್ನೇ ನೀಡಬಾರದು. ಒಂದು

ವೇಳೆ ನೀವು ಈ ರೀತಿ ಮಾಡಿದ್ದಿದ್ದರೆ ಇಂದು ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರೊಬ್ಬರು ಇಂದು ಒಬ್ಬ ಅಸ್ಪೃಶ್ಯನನ್ನು ದೇವಸ್ಥಾನದ ಒಳಗೆ ಪ್ರವೇಶಿಸದಂತೆ ಹೇಗೆ ತಡೆಯುತ್ತಿದ್ದರು?

ಕಾಂಗ್ರೆಸ್‌ಗೆ ಈಗ ಅಗತ್ಯ ಇರುವುದು ಜನಬಲ. ಆದ್ದರಿಂದ ಈ ರೀತಿಯ ನಿಯಮ ಹೇರುವುದು ಅಸಾಧ್ಯ ಎಂದು ನೀವು ವಾದಿಸಬಹುದು. ಆಗ ಕಾಂಗ್ರೆಸ್‌ನಲ್ಲಿ ನೀತಿ–ನಿಯಮಗಳಿಗಿಂತ ಜನಬಲಕ್ಕೇ ಹೆಚ್ಚು ಮನ್ನಣೆ ನೀಡುಲಾಗುತ್ತಿದೆ ಎಂದು ನಾನು ಹೇಳಬೇಕಾಗುತ್ತದೆ. ಕಾಂಗ್ರೆಸ್ ಹಾಗೂ ನಿಮ್ಮ ವಿರುದ್ಧ ನನ್ನ ಆರೋಪ ಇದುವೇ. ಬ್ರಿಟಿಷರು ಹೃದಯವಂತರಾಗಿ ವರ್ತಿಸುವುದಿಲ್ಲ ಎಂದು ನೀವು ಹೇಳುತ್ತೀರಿ. ಆದರೆ ಹಿಂದೂಗಳು ಕೂಡ ನಮ್ಮ ಸಮಸ್ಯೆಗೆ ಹೃದಯವಂತರಾಗಿ ವರ್ತಿಸಿಲ್ಲ ಎಂದು ನಾನು ಹೇಳುತ್ತೇನೆ. ಅವರು ಹೀಗೆ ಎಷ್ಟು ದಿನ ನಿಷ್ಠುರವಾಗಿ ವರ್ತಿಸುವವರೋ, ಅಲ್ಲಿಯವರೆಗೂ ನಾವು ಕಾಂಗ್ರೆಸ್ ಪಕ್ಷವನ್ನಾಗಲೀ, ಹಿಂದೂಗಳನ್ನಾಗಲೀ ನಂಬುವುದಿಲ್ಲ. ನಾವು ಆತ್ಮಗೌರವ ಹಾಗು ಸ್ವಸಹಾಯದಲ್ಲಿ ನಂಬಿಕೆ ಇಡುತ್ತೇವೆ. ನಾವು ಕೇವಲ ಮಹಾನಾಯಕರಲ್ಲಿ ಅಥವಾ ಮಹಾತ್ಮರಲ್ಲಿ ನಂಬಿಕೆ ಇಡುವುದಿಲ್ಲ. ಈ ಅಂಶವನ್ನು ನಾನು ಅತ್ಯಂತ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇತಿಹಾಸ ನನಗೆ ಒಂದು ವಿಷಯವನ್ನು ಚೆನ್ನಾಗಿ ತಿಳಿಸಿದೆ. ಅದೇನೆಂದರೆ ತಮ್ಮನ್ನು ತಾವು ಮಹಾತ್ಮರು ಎಂದು ಕರೆದುಕೊಳ್ಳುವರು ಜೋರಾಗಿ ಧೂಳನ್ನು ಎಬ್ಬಿಸುತ್ತಾರೆ. ಅಷ್ಟೇ. ಆದರೆ ಅದರಿಂದ ಯಾವ ಸಮಸ್ಯೆಗೂ ಪರಿಹಾರ ಸಿಗುವುದಿಲ್ಲ. ಕಾಂಗ್ರೆಸ್ಸಿಗರು ನಮ್ಮ ಹೋರಾಟವನ್ನು ವಿರೋಧಿಸುವುದಕ್ಕೆ ನನ್ನನ್ನು ಒಬ್ಬ ದೇಶದ್ರೋಹಿ ಎಂದು ಕರೆಯುವುದೇಕೆ?

ಡಾ. ಅಂಬೇಡ್ಕರ್ ಅವರು ಇದೀಗ ಮತ್ತಷ್ಟು ಉತ್ತೇಜಿತರಾಗಿದ್ದರು. ಅವರ ಕಣ್ಣುಗಳು ಕೆಂಡ ಕಾರುತ್ತಿತ್ತು ಹಾಗೂ ಮುಖ ಬೆಳಗುತ್ತಿತ್ತು. ಒಂದು ಕ್ಷಣ ಸುಮ್ಮನಾದ ಅವರು, ಅತ್ಯಂತ ಕಹಿಯಾದ ಹಾಗೂ ನಿಷ್ಠುರವಾದ ದನಿಯಲ್ಲಿ ತಮ್ಮ ಮಾತುಗಳನ್ನು ಮುಂದುವರಿಸಿದರು.

ಅಂಬೇಡ್ಕರ್ : ಗಾಂಧೀಜಿಯವರೇ, ನನಗೆ ಯಾವುದೇ ತಾಯ್ನಾಡಿಲ್ಲ.

ಗಾಂಧೀ : (ಆಶ್ಚರ್ಯದಿಂದ ಅವರನ್ನು ದಿಟ್ಟಿಸುತ್ತಾ ಅವರ ಮಾತನ್ನು ತುಂಡರಿಸುತ್ತ) : ನಿಮಗೆ ಖಂಡಿತವಾಗಿಯೂ ತಾಯ್ನಾಡಿದೆ. ನೀವು ದುಂಡು ಮೇಜಿನ ಸಮ್ಮೇಳನದಲ್ಲಿ ಕೈಗೊಂಡ ಕಾರ್ಯಗಳ ಬಗ್ಗೆ ನನಗೆ ವರದಿಯಿದೆ. ನೀವೊಬ್ಬ ಮಹಾನ್ ದೇಶಭಕ್ತ ಎಂಬ ಅರಿವು ನನಗಿದೆ.

ಅಂಬೇಡ್ಕರ್ : ನೀವು ನನಗೆ ತಾಯ್ನಾಡಿದೆ ಎನ್ನುತ್ತೀರಿ. ಆದರೆ ನಾನು ಪುನಃ ನನಗೆ ತಾಯ್ನಾಡಿಲ್ಲ ಎನ್ನುತ್ತೇನೆ. ಈ ನೆಲವನ್ನು ನಾನು ನನ್ನ ತಾಯ್ನಾಡು ಎಂದು ಕರೆಯುವುದಾದರೂ ಹೇಗೆ? ಈ ಧರ್ಮವನ್ನು ನನ್ನದೆಂದು ಕರೆಯುವುದಾದರೂ ಹೇಗೆ? ಅದು ನಮ್ಮನ್ನು ನಾಯಿಬೆಕ್ಕುಗಳಿಗಿಂತ ಕಡೆಯಾಗಿ ಕಾಣುತ್ತದೆ. ಇಲ್ಲಿ ನಮಗೆ ಕುಡಿಯಲು ನೀರು ಕೂಡ ಸಿಗುವುದಿಲ್ಲ. ಆತ್ಮಗೌರವ ಇರುವ ಯಾವುದೇ ಅಸ್ಪೃಶ್ಯನೂ ಇದು ತನ್ನ ನಾಡು ಎಂದು ಹೆಮ್ಮೆಪಡುವುದಿಲ್ಲ. ಈ ದೇಶ ನಮಗೆ ನೀಡಿರುವಂತಹ ನೋವು, ಅನ್ಯಾಯ ಎಷ್ಟೊಂದು ಇದೆಯೆಂದರೆ, ಅರಿವಿದ್ದೊ ಅಥವಾ ಅರಿವಿಲ್ಲದೆಯೋ ನಾವು ದೇಶದ್ರೋಹಿಗಳಾಗಿ ಬಿಡುತ್ತೇವೆ. ಆದರೆ ಇದರ ಹೊಣೆ ಕೇವಲ ತಾಯ್ನಾಡಿನದೇ ಆಗಿರುತ್ತದೆ. ನನಗೆ ದೇಶದ್ರೋಹಿ ಎಂಬ ಬಿರುದು ದೊರೆತಿರುವುದಕ್ಕೆ ನಾನು ಬೇಸರಪಡುವುದಿಲ್ಲ. ಏಕೆಂದರೆ ನನ್ನನ್ನು ದೇಶದ್ರೋಹಿಯನ್ನಾಗಿ ಮಾಡಿರುವುದು ಕೂಡ ಇದೇ ದೇಶವೇ. ನೀವು ಹೇಳುವಂತೆ ನಾನು ಈ ದೇಶಕ್ಕೆ ಉಪಯೋಗ ಆಗುವಂತಹ ಯಾವುದೇ ಸೇವೆಯನ್ನಾದರೂ ಮಾಡಿದ್ದರೆ, ಅದು ನಿಷ್ಕಳಂಕವಾದ ಮನಸ್ಸಿನಿಂದ ಮಾಡಿರುವುದೇ ಹೊರತು, ಈ ದೇಶದ ಮೇಲೆ ಇರುವ ಭಕ್ತಿಯಿಂದಲ್ಲ. ನನ್ನ ಜನರು ನೂರಾರು ವರ್ಷಗಳಿಂದ ದಬ್ಬಾಳಿಕೆಗೆ ಒಳಗಾಗಿದ್ದಾರೆ, ಅವರಿಗೆ ಕನಿಷ್ಠ ಮಾನವ ಹಕ್ಕುಗಳನ್ನು ದೊರಕಿಸಿಕೊಡಲು ನಾನು ಹೋರಾಡುತ್ತಿದ್ದೇನೆ.

ಒಂದು ವೇಳೆ ಈ ದೇಶಕ್ಕೆ ನಾನೇನಾದರೂ ಕೆಡುಕನ್ನು ಉಂಟುಮಾಡಿದರೆ, ಅದು ಪಾಪವೆಸಗಿದಂತೆ ಅಲ್ಲ. ಅಂತೆಯೇ ನನ್ನಿಂದ ಈ ದೇಶಕ್ಕೆ ಉಪಯೋಗ ಆಗುವಂತಹ ಕೆಲಸ ನಡೆದರೂ ಅದು ನನ್ನ ಮನಸ್ಸಾಕ್ಷಿಗೆ ಅನುಗುಣವಾಗಿ ನಡೆದಿರುತ್ತದೆ. ನನ್ನ ಮನಃಸಾಕ್ಷಿಯ ಕರೆಗೆ ಓಗೊಟ್ಟು ಮಾತ್ರವೇ ನಾನು ನನ್ನ ಜನರ ಹಕ್ಕಿಗಾಗಿ ಹೋರಾಡುತ್ತಿದ್ದೇನೆ. ಆದರೆ ಇದರಿಂದ ಈ ದೇಶಕ್ಕೆ ಯಾವುದೇ ಕೆಡಕು ಬಾರದಂತೆ ಗಮನವಹಿಸುತ್ತೇನೆ.

ಆಗ ಅಲ್ಲಿನ ವಾತಾವರಣದಲ್ಲಿ ಬಹಳಷ್ಟು ಬಿಗುವು ಉಂಟಾಯಿತು. ಮುಖಗಳ ಬಣ್ಣವೇ ಬದಲಾಯಿತು. ಗಾಂಧೀಜಿಯವರು ಅಸಮಾಧಾನಗೊಳ್ಳುತ್ತಿದ್ದರು. ಅವರು ಅಂಬೇಡ್ಕರ್ ಅವರ ಮಾತುಗಳಿಗೆ ಪ್ರತ್ಯುತ್ತರ ನೀಡ ಬಯಸುತ್ತಿದ್ದರು. ಅಷ್ಟರಲ್ಲಿಯೇ ಈ ಸಂದರ್ಶನದ ಅತ್ಯಂತ ನಿಷ್ಠುರವಾದ ಪ್ರಶ್ನೆಯನ್ನು ಡಾ. ಅಂಬೇಡ್ಕರ್ ಕೇಳಿದರು.

ಅಂಬೇಡ್ಕರ್ : ಎಲ್ಲರಿಗೂ ತಿಳಿದಿರುವಂತೆ ಮುಸಲ್ಮಾನರು ಸಿಖ್ಖರು–ಅಸ್ಪೃಶ್ಯರಿಗಿಂತ ಸಾಮಾಜಿಕವಾಗಿ ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಮುಂದುವರಿದಿದ್ದಾರೆ. ದುಂಡು ಮೇಜಿನ ಮೊದಲನೆಯ ಸಮಾವೇಶವು ಮುಸಲ್ಮಾನರ ಬೇಡಿಕೆಗಳಿಗೆ ಮಾನ್ಯತೆ ನೀಡಿದೆ ಹಾಗೂ ಅವರ ರಾಜಕೀಯ ರಕ್ಷಣೆಗಾಗಿ ಕ್ರಮಗಳನ್ನು ಕೈಗೊಂಡಿದೆ. ಕಾಂಗ್ರೆಸ್ ಕೂಡ ಅವರ ಈ ಬೇಡಿಕೆಗಳಿಗೆ ಸಮ್ಮತಿಸಿದೆ. ಈ ಮೊದಲನೆಯ ಸಮಾವೇಶವು ಶೋಷಿತ ವರ್ಗದವರ ರಾಜಕೀಯ ಹಕ್ಕುಗಳನ್ನು ಎತ್ತಿಹಿಡಿದಿದೆ ಹಾಗೂ ಅವರಿಗೆ ರಾಜಕೀಯ ಕ್ಷೇತ್ರದಲ್ಲಿ ರಕ್ಷಣೆ ನೀಡಿದೆ ಮತ್ತು ಸಾಕಷ್ಟು ಪ್ರಾತಿನಿಧ್ಯವನ್ನು ನೀಡಿದೆ. ನಿಮ್ಮ ಅನುಸಾರ ಶೋಷಿತ ವರ್ಗದ ಜನರಿಗೆ ಈ ಕ್ರಮ ಲಾಭಧಾಯಕವಾಗಿದೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಗಾಂಧೀಜಿ : ರಾಜಕೀಯವಾಗಿ ಅಸ್ಪೃಶ್ಯರನ್ನು ಹಿಂದೂಗಳಿಂದ ಬೇರ್ಪಡಿಸುವುದನ್ನು ನಾನು ವಿರೋಧಿಸುತ್ತೇನೆ. ಅದೊಂದು ಆತ್ಮಹತ್ಯೆಯ ಕ್ರಮವಾಗುತ್ತದೆ.

ಅಂಬೇಡ್ಕರ್ (ಎದ್ದು ನಿಲ್ಲುತ್ತಾ) : ನಿಮ್ಮ ಸ್ಪಷ್ಟ ನಿಲುವಿಗಾಗಿ ನಾನು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಪ್ರಮುಖ ಸಮಸ್ಯೆಯ ಬಗೆಗೆ ತಮ್ಮ ನಿಲುವು ಏನು ಎಂದು ತಿಳಿದುಕೊಂಡಂತೆ ಆಗಿದೆ. ನಾನು ಇಲ್ಲಿಂದ ಹೊರಡುತ್ತಿದ್ದೇನೆ.*

ಡಾ. ಅಂಬೇಡ್ಕರ್ ಅವರು ಆ ಸಭಾಂಗಣದಿಂದ ಹೊರಬಿದ್ದರು. ಅವರ ಮುಖದಲ್ಲಿ ಜ್ವಾಲಾಗ್ನಿಯಿತ್ತು. ಶೋಷಿತ ವರ್ಗದ ಜನರಿಗಾಗಿ ಹೋರಾಡಿ, ಅವರಿಗೆ ನ್ಯಾಯ ದೊರಕಿಸಿಕೊಡುವ ದೃಢಸಂಕಲ್ಪವನ್ನು ತೊಟ್ಟಿದ್ದರು.

ಹೀಗೆ ಬಿಗುವಾದ ವಾತಾವರಣದಲ್ಲಿ ಈ ಸಂದರ್ಶನ ಮುಕ್ತಾಯಗೊಂಡಿತು. ಗಾಂಧೀಜಿಯವರು ಭಾರತದ ರಾಜಕೀಯದ ನಾಯಕರಾಗಿದ್ದರು. ಸರ್ವಾಧಿಕಾರಿಯಾಗಿದ್ದರು. ಇವರ ಮಾತುಗಳನ್ನು ಯಾವುದೇ ಪ್ರಶ್ನೆ ಎದುರಿಗೆ ಇಡದೇ ಸಾವಿರಾರು ಜನರು ಕೇಳುತ್ತಿದ್ದರು. ಇವರ ಕಾರ್ಯವೈಖರಿಯನ್ನು ಜನರು ಆಶ್ಚರ್ಯದಿಂದ ಗಮನಿಸುತ್ತಿದ್ದರು. ಒಂದು ವೇಳೆ ಗಾಂಧೀಜಿಯವರಿಗೆ ಎದುರುವಾದಿಸಿದರೆ ಅದು ಶಾಶ್ವತವಾಗಿ ಜನರ ಅಸಮಾಧಾನಕ್ಕೆ ಗುರಿಯಾದಂತೆ ಹಾಗೂ ಅವರ ಬಾಂಧವ್ಯ ಕಹಿ ಮಾಡಿಕೊಂಡಂತೆ ಆಗುತ್ತಿತ್ತು. ಅದರಲ್ಲಿಯೂ ಒಬ್ಬ ಹಿಂದೂ ನಾಯಕನ ಈ ತೆರನಾದ ವರ್ತನೆ ಗಾಂಧೀಜಿಯವರ ಕಲ್ಪನೆಗೆ ಮೀರಿದಂತಹ ವಿಷಯವಾಗಿತ್ತು. ಆದರೆ ಇದೀಗ ಗುರಿಯು ನಿಗದಿಯಾಗಿ ಹೋಗಿತ್ತು. ವಿರೋಧತ್ವದ

---

* The Navyug- Ambedkar Special Number 13th April 1947.

ಕಿಚ್ಚು ಉರಿಯಲು ಆರಂಭವಾಗಿತ್ತು. ಈ ಸಂದರ್ಶನವು ಗಾಂಧೀ ಹಾಗೂ ಅಂಬೇಡ್ಕರ್ ಅವರ ನಡುವೆ ಮುಂದೆ ಜರುಗಲಿದ್ದ ಮಹಾನ್ ಯುದ್ಧಕ್ಕೆ ನಾಂದಿ ಹಾಡಿತ್ತು.

ಆದರೆ ಇಲ್ಲಿ ಮತ್ತೊಂದು ಆಶ್ಚರ್ಯಕರ ಸಂಗತಿ ಇದೆ. ಅಂಬೇಡ್ಕರ್ ಹರಿಜನ ವರ್ಗಕ್ಕೆ ಸೇರಿದವರಲ್ಲ ಎಂದೇ ಗಾಂಧೀಜಿ ಭಾವಿಸಿದ್ದರು. ಲಂಡನ್ನಿಗೆ ತೆರಳುವವರೆಗೂ ಆತ ಹರಿಜನರ ಹಿತೈಷಿಯಾದ ಒಬ್ಬ ಬ್ರಾಹ್ಮಣ ಆದ್ದರಿಂದಲೇ ಮುಂದಾಲೋಚನೆ ಇಲ್ಲದೇ ಹೀಗೆ ಮಾತನಾಡುತ್ತಿದ್ದಾನೆ ಎಂದೇ ಗಾಂಧೀಜಿ ಭಾವಿಸಿದ್ದರು.**

ಈ ಸಮಾವೇಶದ ಪತ್ರಿಕಾ ವರದಿಯನ್ನು ಈ ಕೆಳಗೆ ನೀಡಲಾಗಿದೆ.

## ಶ್ರೀ ಗಾಂಧೀಯವರನ್ನು ಭೇಟಿಯಾದ ಡಾ. ಅಂಬೇಡ್ಕರ್

ಶೋಷಿತ ವರ್ಗದ ಜನರ ನಾಯಕರಾದಂತಹ ಡಾ. ಅಂಬೇಡ್ಕರ್ ಅವರು ಶುಕ್ರವಾರ ಮಧ್ಯಾಹ್ನ ಗಾಂಧೀಜಿಯವರನ್ನು ಭೇಟಿಯಾದರು. ಅವರು ಗಾಂಧೀಜಿಯವರಿಗೆ ಇದುವರೆಗೂ ಕಾಂಗ್ರೆಸ್ ಪಕ್ಷವು ಯಾವುದೇ ರೀತಿಯ ಸಹಾಯವನ್ನು ಶೋಷಿತರಿಗೆ ಮಾಡಿಲ್ಲ ಎಂದು ತಿಳಿಸಿಕೊಡುವ ಪ್ರಯತ್ನಪಟ್ಟರು. ತಾವು ಭ್ರಮಿಸಿರುವಂತೆ ಶೋಷಿತ ವರ್ಗದವರು ತಮ್ಮ ಬೆಂಬಲಕ್ಕೆ ಅಖಂಡವಾಗಿ ನಿಂತಿಲ್ಲವೆಂಬುದು ಗಾಂಧಿಯವರಿಗೆ ಅರಿವಾಯಿತು. ಆದರೂ ಕಾಂಗ್ರೆಸ್ ಏನೂ ಮಾಡುತ್ತಿಲ್ಲ ಎಂದು ಗಾಂಧೀಜಿಯವರು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಕಡೆಗೆ ತಮ್ಮ ನಿಲುವನ್ನು ಗಾಂಧೀಜಿಯವರಿಗೆ ಮನವರಿಕೆ ಮಾಡಿಕೊಡದೇ ಹಾಗೂ ಗಾಂಧೀಜಿಯವರ ನಿಲುವನ್ನು ತಾವು ಮನವರಿಕೆ ಮಾಡಿಕೊಳ್ಳದೇ ಅಂಬೇಡ್ಕರ್ ಅವರು ಅಲ್ಲಿಂದ ಹೊರಟರು.[೧]

## ಗಾಂಧೀಜಿಯವರ ತಪ್ಪನ್ನು ಕುರಿತು ಡಾ. ಅಂಬೇಡ್ಕರ್

'ದಿ ಟೈಂಸ್ ಆಫ್ ಇಂಡಿಯಾ' ಪತ್ರಿಕೆಯ ಪ್ರತಿನಿಧಿಯು ಶೋಷಿತ ವರ್ಗದವರ ನಾಯಕರಾದಂತಹ ಡಾ. ಅಂಬೇಡ್ಕರ್ ಅವರನ್ನು ಸಂದರ್ಶಿಸಿದರು. ಅದಕ್ಕೆ ಹಿಂದಿನ ದಿನವಷ್ಟೇ ಡಾ. ಅಂಬೇಡ್ಕರ್ ಅವರು ಗಾಂಧೀಜಿಯವರನ್ನು ಭೇಟಿಯಾಗಿ ಶೋಷಿತವರ್ಗದವರ ಕುರಿತ ಅವರ ಧೋರಣೆಯನ್ನು ಖಂಡಿಸಿ ಬಂದಿದ್ದರು. "ಬರ್ದೋಲಿಯ ಸಮಸ್ಯೆ ಭಾರತದ ಸಮಸ್ಯೆಗಿಂತ ದೊಡ್ಡದು ಎಂದು ಬಿಂಬಿಸುವುದು, ಇದರಿಂದಾಗಿ ಇಂಗ್ಲೆಂಡಿಗೆ ತೆರಳಿ ದುಂಡು ಮೇಜಿನ ಸಮಾವೇಶದಲ್ಲಿ ಭಾಗವಹಿಸದೇ ಇರುವುದು ನನಗೆ ಮೂರ್ಖತನದ ಪರಮಾವಧಿ ಎಂದೆನಿಸುತ್ತದೆ. ಹಳ್ಳಿಯ ಗುಮಾಸ್ತರ ಸಣ್ಣಪುಟ್ಟ ಗೊಂದಲಗಳಿಗೆ ಬೆಲೆಕೊಟ್ಟು ದೊಡ್ಡ ಸಮಸ್ಯೆಗಳನ್ನು ಕಡೆಗಣಿಸುವುದು ಅತ್ಯಂತ ಅಸಮಂಜಸ. ಈ ದೊಡ್ಡ ದೊಡ್ಡ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರಿಂದ ಈ ಅಧಿಕಾರಿಗಳ ಮೇಲೆ ಹಿಡಿತ ಸಾಧಿಸಿದಂತೆಯೇ ಆಗುತ್ತದೆ. ಇವರಿಗೆ ಇದೇಕೆ ಅರ್ಥ ಆಗುವುದಿಲ್ಲ ಎಂಬುದು ನನಗೆ ತಿಳಿಯುವುದಿಲ್ಲ" ಎಂದು ಅಂಬೇಡ್ಕರ್ ಹೇಳಿದ್ದರು.

ಇದರ ಮುನ್ನಾ ದಿನ ಗಾಂಧೀಜಿಯವರನ್ನು ಸಂದರ್ಶಿಸಿದ್ದ ಅಂಬೇಡ್ಕರ್ ಅವರಿಗೆ ಗಾಂಧೀಜಿ ನೀಡಿದ್ದ ಉತ್ತರದ ಊಹೆ ಇತ್ತು. ದುಂಡು ಮೇಜಿನ ಸಮಾವೇಶಕ್ಕೆ ತೆರಳುವ ಮೊದಲು, ಶೋಷಿತ

---

** ಮಹಾದೇವ ದೇಸಾಯಿ ಅವರ ದಿನಚರಿ ಸಂಪುಟ ೧. ಪು ೫೨ ನವಜೀವನ ಪಬ್ಲಿಷಿಂಗ್ ಹೌಸ್

೧. The Times of India, dated 15th August 1931.

ವರ್ಗದವರನ್ನು ಕುರಿತು, ಅಲ್ಲಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಅವರಿಗೆ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಸಮಾನ ಅವಕಾಶ ನೀಡಬೇಕು ಎನ್ನುವ ನಿರ್ಧಾರಕ್ಕೆ ಗಾಂಧೀಜಿಯವರ ಸಮ್ಮತಿ ಇದೆಯೇ ಎಂದು ತಿಳಿಯಬಯಸಿದ್ದರು. ಆದರೆ ಗಾಂಧೀಜಿಯವರು ಈ ಅಭಿಪ್ರಾಯಕ್ಕೆ ಸಮ್ಮತಿಸುವಲ್ಲಿ ವಿಫಲರಾದರು ಎಂದು ಡಾ. ಅಂಬೇಡ್ಕರ್ ದೂರಿದ್ದರು. ಗಾಂಧಿಯವರು ದುಂಡುಮೇಜಿನ ಪರಿಷತ್ತಿನ ಸಭೆಗೆ ಹೋದರೆ, ತಮ್ಮ ಅಭಿಮತವು ಈ ವಿಷಯದಲ್ಲಿ ನಕಾರಾತ್ಮಕವಾಗಿದೆ ಮತ್ತು ಪರಿಷತ್ತು ತಮಗೆ ಅನಿಸಿದುದನ್ನು ಮಾಡಬಹುದು ಎಂದು ಹೇಳುತ್ತಾರೆ. ಆದರೆ ಇಂತಹ ಅಭಿಪ್ರಾಯಗಳು ಶೋಷಿತವರ್ಗಗಳವರಿಗೆ ಖಂಡಿತವಾಗಿಯೂ ಆತ್ಮಹತ್ಯಾಕಾರಿಯಾಗಿರುತ್ತದೆ ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು.

* * * * *

## ೨

## ನಾನೇಕೆ ಆ ಧರ್ಮದ ಬಗ್ಗೆ ಹೆಮ್ಮೆ ಪಡಬೇಕು....

ಬ್ಯಾಲಾರ್ಡ್‌ನಲ್ಲಿ ಇದ್ದಂತಹ ಸಮಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಬಂದ ತಂತಿಯ ಸಂದೇಶವೊಂದರಲ್ಲಿ ತಮ್ಮನ್ನು ಎರವಾಡ ಜೈಲಿನಲ್ಲಿ ಬಂದು ಭೇಟಿಯಾಗುವಂತೆ ಗಾಂಧೀಜಿಯವರು ತಿಳಿಸಿದ್ದರು. ಮರುತಂತಿ ಕಳುಹಿಸಿದ ಡಾ. ಅಂಬೇಡ್ಕರ್ ದೆಹಲಿಯಿಂದ ಹಿಂದಿರುಗುವಾಗ ಬಂದು ಕಾಣುವುದಾಗಿ ತಿಳಿಸಿದರು. ಮಾರನೆಯ ದಿನವೇ ರಂಗೂನ್‌ನ ಡಾ. ಬಾ.ಮಾವ್ ಅವರಿಂದ ಅಂಬೇಡ್ಕರ್‌ಗೆ ಒಂದು ತಂತಿಯ ಸಂದೇಶ ಬಂದಿತು. "ಬರ್ಮಾದೇಶದ ಶೋಷಿತ ವರ್ಗದ ಹೋರಾಟಗಾರರು ಮುಂದಿನ ವಾರ ಶಾಸಕಾಂಗದ ಅಧಿವೇಶನದ ಸಮಯದಲ್ಲಿ ಭಾರತದ ನಾಯಕರನ್ನು ಭೇಟಿಯಾಗಲು ದೆಹಲಿಗೆ ಬರುತ್ತಿದ್ದಾರೆ. ಬರ್ಮಾದ ಸಂವಿಧಾನದ ಬಗ್ಗೆ ನಿಮ್ಮೊಂದಿಗೆ ಹಾಗೂ ಇತರ ನಾಯಕರೊಂದಿಗೆ ಚರ್ಚಿಸಲು ಅವರು ಕಾತುರರಾಗಿದ್ದಾರೆ. ಆದ್ದರಿಂದ ಫೆಬ್ರವರಿ ೪ ಹಾಗೂ ೫ ರಂದು ಈ ತಂಡವನ್ನು ಭೇಟಿಯಾಗಬೇಕೆಂದು ನಾನು ನಿಮ್ಮನ್ನು ವಿನಂತಿಸುತ್ತೇನೆ. ದಯವಿಟ್ಟು ನಿಮ್ಮ ದೆಹಲಿಯ ವಿಳಾಸವನ್ನು ತಿಳಿಸಿ. ನಮಗೆ ತಂತಿಯ ಸಂದೇಶ ರವಾನಿಸಿ ಮತ್ತು ಚಿಟ್ ಹ್ಯಾಂಗ್ ಹಾಗೂ ಡಾ. ಬಾ.ಮೈ ಇವರಿಗೆ ಸಂದೇಶವನ್ನು ತಲುಪಿಸಿ. ಇದಾದ ನಂತರ ಹಲವಾರು ಅಭಿನಂದನೆಯ ಕರೆಗಳು ದೇಶದ ಎಲ್ಲಾ ಭಾಗಗಳಿಂದ ಬಂದು ಅಂಬೇಡ್ಕರ್ ಅವರ ಕಛೇರಿ ತಲುಪಿತು. ಅದರಲ್ಲಿ ಒಂದು ಎರ್ನಾಕುಲಂನಿಂದ ಬಂದಿದ್ದಂತಹ ಥಿಯಾ ಯುವ ಜನ ಸಮಾಜದ ಸಂದೇಶ. ಅವರು ತಮ್ಮ ಈ ಮಹಾನಾಯಕನಿಗೆ ದುಂಡು ಮೇಜಿನ ಸಮಾವೇಶದಲ್ಲಿ ಯಶಸ್ವಿಯಾಗಿ ಶೋಷಿತವರ್ಗದವರ ಸಮಸ್ಯೆಯನ್ನು ಬಿಂಬಿಸಿದುದಕ್ಕಾಗಿ ಅಭಿನಂದಿಸಿದ್ದರು.

ತತ್‌ಕ್ಷಣವೇ ಮುಂಬಯಿಯಿಂದ ದೆಹಲಿಯತ್ತ ಡಾ. ಅಂಬೇಡ್ಕರ್ ಹೊರಟರು. ದೆಹಲಿಯ ವೈಸ್‌ರಾಯ್ ಅವರು ದುಂಡು ಮೇಜಿನ ಸಮಾವೇಶದಲ್ಲಿ ಭಾಗವಹಿಸಲಿರುವ ಸದಸ್ಯರ ಗೌರವಾರ್ಥವಾಗಿ ಔತಣಕೂಟ ಏರ್ಪಡಿಸಿದ್ದರು. ಅವರು ದೆಹಲಿಯಿಂದ ಹಿಂದಿರುಗಿದ ನಂತರ ಗಾಂಧೀಜಿಯವರಿಗೆ ಸಂದೇಶ ರವಾನಿಸಿ. ಫೆಬ್ರವರಿ ೪ ರಂದು ಭೇಟಿಯಾಗುವುದಾಗಿ ತಿಳಿಸಿದರು. ಮರುತಂತಿ ಕಳುಹಿಸಿದ ಗಾಂಧೀ ಫೆಬ್ರವರಿ ೩ರಂದು ಅಂಬೇಡ್ಕರ್ ಅವರಿಗೆ "ಇದೀಗ ತಾನೇ ತಂತಿ ಸಂದೇಶ ತಲುಪಿದೆ. ನಾಳೆ ಅಪರಾಹ್ನ ೧೨.೩೦ಕ್ಕೆ ಭೇಟಿಯಾಗೋಣ" ಎಂದು ಮರುತಂತಿ ಕಳುಹಿಸಿದರು. ೧೯೩೩ರ ಫೆಬ್ರವರಿ ೪ ರಂದು ಎರವಾಡ ಜೈಲಿನಲ್ಲಿ ಗಾಂಧೀಜಿಯವರನ್ನು ಡಾ. ಅಂಬೇಡ್ಕರ್ ಭೇಟಿಯಾಗಬೇಕಿದ್ದರಿಂದ ಬರ್ಮಾದ ಪ್ರತಿನಿಧಿಗಳನ್ನು ಭೇಟಿಯಾಗಲು ಅವರಿಗೆ ಸಾಧ್ಯವಾಗಲಿಲ್ಲ.

ಎಸ್.ಎನ್. ಶಿವಟಾರ್ಕರ್, ಡೋಲಾಸ್, ಉಪಾಶಂ, ಕೌಲೀ, ಘೋರ್ಪಡೆ ಹಾಗೂ ಕೇಶವ ರಾವ್ ಜೆಡೆಯವರೊಂದಿಗೆ ಫೆಬ್ರವರಿ ೪ರ ಅಪರಾಹ್ನ ೧೨.೩೦ಕ್ಕೆ ಎರವಾಡ ಜೈಲನ್ನು ಅಂಬೇಡ್ಕರ್ ಪ್ರವೇಶಿಸಿದರು. ಅತ್ಯಂತ ಸಂತಸದಿಂದಲೇ ಗಾಂಧೀಜಿಯವರು ಎದ್ದು, ಬಂದವರೆಲ್ಲರನ್ನು ಸ್ವಾಗತಿಸಿದರು. ಸ್ವಲ್ಪ ಸಮಯದ ನಂತರ ಇವರ ಚರ್ಚೆ ದೇವಸ್ಥಾನದ ಪ್ರವೇಶದ ಕಡೆಗೆ ತಿರುಗಿತು. ಡಾ. ಸುಬ್ಬರಾಯನ್ ಅವರ ಹಾಗೂ ರಂಗಾ ಅಯ್ಯರ್ ಅವರ ಮಸೂದೆಗೆ ಬೆಂಬಲ ಬೆಲೆ ಕೊಡುವಂತೆ ಡಾ. ಅಂಬೇಡ್ಕರ್ ಅವರನ್ನು ವಿನಂತಿಸಿಕೊಂಡರು. ಆದರೆ ಈ ವಿನಂತಿಯನ್ನು ಡಾ. ಅಂಬೇಡ್ಕರ್ ಅವರು ಖಡಾಖಂಡಿತವಾಗಿ ನಿರಾಕರಿಸಿಬಿಟ್ಟರು. ಏಕೆಂದರೆ ಸುಬ್ಬರಾಯನ್ ಅವರ ಮಸೂದೆಯಲ್ಲಿ ಅಸ್ಪೃಶ್ಯತೆಯ ಖಂಡನೆಯಿರಲಿಲ್ಲ. ಅದನ್ನು ಪಾಪವೆಂದು ಅದರಲ್ಲಿ ಖಂಡಿಸಿರಲಿಲ್ಲ. ಅದು ಹೇಳಿದ್ದೆನೆಂದರೆ ಜನರು ಅಸ್ಪೃಶ್ಯರನ್ನು ದೇವಸ್ಥಾನದ ಒಳಗೆ ಬಿಡಬೇಕೆಂಬ ಪ್ರಸ್ತಾವನೆಗೆ ಜನಾಭಿಪ್ರಾಯವು ಒಪ್ಪಿಗೆ ನೀಡಿದರೆ ಅದನ್ನು ಜಾರಿಗೆ ತರಬಹುದು

ಎಂದು ಹೇಳಿತ್ತಷ್ಟೇ. ಆದರೆ ಇದು ಅಸ್ಪೃಶ್ಯರ ಹಾಗೂ ಶೋಷಿತರ ಹಕ್ಕು ಎಂದೇನೂ ಅದರಲ್ಲಿ ಪ್ರತಿಪಾದಿಸಿರಲಿಲ್ಲ.

ಅವರು ಒಂದು ವಿಷಯವನ್ನು ಗಾಂಧೀಜಿಯವರಿಗೆ ಸ್ಪಷ್ಟಪಡಿಸಿದ್ದರು. ಅದೇನೆಂದರೆ ಶೋಷಿತ ವರ್ಗದವರು ಶೂದ್ರರು ಎಂಬ ಹಣೆಪಟ್ಟಿ ಪಡೆಯಲು ಇಷ್ಟಪಟ್ಟಿಲ್ಲ. ಪ್ರಾಮಾಣಿಕವಾಗಿ ತಮ್ಮನ್ನು ಹಿಂದೂ ಎಂದು ಕರೆದುಕೊಳ್ಳಲು ತಾವು ಇಷ್ಟ ಪಡುವುದಿಲ್ಲ. ಏಕೆಂದರೆ ತಮ್ಮನ್ನು ನಿಕೃಷ್ಟವಾಗಿ ಕಾಣುವ ಹಿಂದೂ ಧರ್ಮಕ್ಕೆ ತಾನು ಏಕೆ ಸೇರ್ಪಡೆಯಾಗಬೇಕು ಎಂಬುದು ಅವರ ಮತವಾಗಿತ್ತು. ಪದ್ಧತಿ ಹೀಗೆಯೇ ಮುಂದುವರಿದರೆ, ದೇವಸ್ಥಾನದ ಒಳಗೆ ಪ್ರವೇಶಿಸಲು ಅನುಮತಿ ಪಡೆದೂ ಪ್ರಯೋಜನ ಇರುವುದಿಲ್ಲ ಎಂದರು.

ಗಾಂಧೀಯವರ ಪ್ರಕಾರ ಈ ಜಾತಿಯ ಪದ್ಧತಿಯು ಅಂತಹ ಕೆಟ್ಟ ಪದ್ಧತಿಯೇನಲ್ಲ. ಗಾಂಧಿ ಮುಂದುವರೆದು "ಸ್ಪೃಶ್ಯ ಹಿಂದೂಗಳು ತಮ್ಮ ಪಾಪವನ್ನು ತೊಳೆದುಕೊಳ್ಳುವ ಹಾಗೂ ಹಿಂದೂತ್ವವನ್ನು ಶುದ್ಧೀಕರಿಸಿಕೊಳ್ಳುವ ಕಾರ್ಯಕ್ಕೈಗೊಳ್ಳಲಿ. ಈ ಪ್ರಶ್ನೆಯನ್ನು ಹಗುರವಾಗಿ ಪರಿಗಣಿಸಬೇಡಿ. ಹಾಗೆ ಮಾಡಿದರೆ ಸಂಪ್ರದಾಯವಾದಿಗಳು ಹಾಗೂ ಸರ್ಕಾರಗಳು ಇದರಿಂದ ಲಾಭ ಪಡೆಯುತ್ತವೆ. ಈ ಸುಧಾರಣೆಗಳು ಜಾರಿಗೆ ಬಂದರೆ ಅಸ್ಪೃಶ್ಯರು ಈ ಸಮಾಜದಲ್ಲಿ ಮೇಲೇಳುತ್ತಾರೆ" ಎಂದರು.

ಈ ವಿಷಯದಲ್ಲಿ ಡಾ. ಅಂಬೇಡ್ಕರ್ ಅವರು ಗಾಂಧೀಯ ಅಭಿಪ್ರಾಯಕ್ಕೆ ಸಮ್ಮತಿಸಲಿಲ್ಲ. ಅಸ್ಪೃಶ್ಯರಿಗೆ ಸಮಾನವಾದ ರಾಜಕೀಯ, ಶೈಕ್ಷಣಿಕ ಹಾಗೂ ಆರ್ಥಿಕ ಅವಕಾಶಗಳು ದೊರೆತರೆ, ದೇವಸ್ಥಾನಕ್ಕೆ ಪ್ರವೇಶ ತಾನಾಗಿಯೇ ದೊರೆಯುತ್ತದೆ ಎಂಬುದರ ಬಗೆಗೆ ಅವರಿಗೆ ಮನವರಿಕೆ ಆಗಿತ್ತು.

೩

### ಸಂಪ್ರದಾಯವಾದಿಗಳಿಂದ ಇದಕ್ಕಿಂತ ಹೆಚ್ಚಿನದೇನನ್ನು ಗಾಂಧೀಜಿ ನಿರೀಕ್ಷಿಸಿದ್ದರು?

ಮುಂಬರುವ ಭಾರತದ ಸಂವಿಧಾನದ ದೃಷ್ಟಿಯಿಂದ ಅಭ್ಯರ್ಥಿಗಳ ಪಟ್ಟಿ ಹಾಗೂ ಪ್ರಾಥಮಿಕ ಚುನಾವಣೆಗಳ ಬಗ್ಗೆ ಗಾಂಧಿಯವರಿಗೆ ಕೆಲ ಸೂಚನೆಗಳನ್ನು ನೀಡಲು ಡಾ. ಅಂಬೇಡ್ಕರ್ ಅವರು ತೀರ್ಮಾನಿಸಿದ್ದರು. ಅವರು ಲಂಡನ್ನಿಗೆ ತೆರಳಬೇಕಾಗಿದ್ದುದರಿಂದ ಅದರ ತರಾತುರಿಯಲ್ಲಿ ಇದ್ದರು. ಆದರೂ ಕೂಡ ಅವರು ಹಲವಾರು ಸಭೆಗಳಲ್ಲಿ ಭಾಗಿಯಾಗಬೇಕಾಗಿತ್ತು. ಸಂಸಾರದ ಕಡೆ ಗಮನ ನೀಡಬೇಕಾಗುತ್ತಿತ್ತು ಹಾಗೂ ಓದಲು ತೆಗೆದುಕೊಂಡು ಹೋಗಬೇಕಾದ ಪುಸ್ತಕಗಳನ್ನು ಕೊಳ್ಳುವುದಿತ್ತು. ಏಪ್ರಿಲ್ ೨೩, ೧೯೩೩ರಂದು ಇವರು ಮೋರೆ, ಗಾಯಕ್‌ವಾಡ್, ಶಿಂಧೆ, ಚವ್ಹಾಣ್ ಮುಂತಾದವರೊಂದಿಗೆ ತೆರಳಿ ಪುಣೆಯ ಎರವಾಡ ಜೈಲಿನಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿದರು. ಒಂದು ಮಾವಿನ ಮರದ ನೆರಳಿನಲ್ಲಿ ಗಾಂಧೀಜಿ ಹಾಗೂ ಅಂಬೇಡ್ಕರ್ ಕುಳಿತರು. ಪಕ್ಕದಲ್ಲಿಯೇ ಮಹದೇವ ದೇಸಾಯಿ ಒಂದು ಪುಸ್ತಕ ಹಾಗೂ ಪೆನ್ಸಿಲ್ ಹಿಡಿದು ಕುಳಿತರು.

ಪರಿಶಿಷ್ಟ ಜಾತಿಗಳವರ ಒಂದು ಪಟ್ಟಿಯನ್ನು ಆಯ್ಕೆ ಮಾಡುವುದು ಸ್ವಲ್ಪ ದುಬಾರಿ ಆಗಬಹುದು ಎಂದು ಗಾಂಧೀಜಿಯವರಿಗೆ ಅಂಬೇಡ್ಕರ್ ತಿಳಿಸಿದರು. ಸಾಮಾನ್ಯ ಚುನಾವಣೆಯಲ್ಲಿ ದಲಿತ ವರ್ಗದವರನ್ನು ಪ್ರತಿನಿಧಿಸುವವರು ಮೊದಲ ಹಂತದ ಚುನಾವಣೆಯಲ್ಲಿ ಶೇ. ಇಪ್ಪತ್ತೈದರಷ್ಟು ಮತಗಳನ್ನಾದರೂ ಪಡೆದಿರಬೇಕು ಎಂಬು ನಿಯಮವು ಇರಬೇಕೆಂದರು ಡಾ. ಅಂಬೇಡ್ಕರ್. ಗಾಂಧೀ ಈ ವಿಷಯವನ್ನು ಕುರಿತು ಚಿಂತಿಸುವುದಾಗಿ ತಿಳಿಸಿದರು ಹಾಗೂ ಲಂಡನ್ನಿನಲ್ಲಿ ತಾವು ನೀಡುವ ಭಾಷಣದಲ್ಲಿ ತಮ್ಮ ಅಭಿಪ್ರಾಯ ತಿಳಿಸುವುದಾಗಿ ಹೇಳಿದರು. ಅನಂತರ ಗಾಂಧೀಜಿಯವರು ಅಂಬೇಡ್ಕರ್ ಅವರಿಗೆ ಒಂದು ಹೂ ಗುಚ್ಛವನ್ನು ನೀಡಿದರು. ಹಾಗೂ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ವಿಷಯದಲ್ಲಿ ಮಾತುಕತೆಯನ್ನು ಪ್ರಾರಂಭಿಸಿದರು. ಸಂಪ್ರದಾಯವಾದಿಗಳು ತಮ್ಮನ್ನು (ಗಾಂಧೀ) ರಾಕ್ಷಸನಂತೆ ಕಾಣುತ್ತಿರುವುದಾಗಿ ಗಾಂಧೀ ತಿಳಿಸಿದರು. ಅದರೆ ಇವರಿಂದ ತಾವು ಮತ್ತೇನನ್ನಾದರೂ ಅಪೇಕ್ಷಿಸಲು ಸಾಧ್ಯವೇ? ಎಂದು ವ್ಯಂಗ್ಯವಾಡಿದರು ಡಾ. ಅಂಬೇಡ್ಕರ್!! ಆಗ ಗಾಂಧೀಜಿಯವರು ಡಾ. ಅಂಬೇಡ್ಕರ್ ಅವರ ಮಾತಿನ ಜಾಡನ್ನು ಜಾಣ್ಮೆಯಿಂದ ಹಿಡಿದು, ತಾವು ಕೂಡ ಶೋಷಿತ ವರ್ಗದ ನಾಯಕರಾಗಿ ನನ್ನ ಕಾರ್ಯದಿಂದ ತೃಪ್ತರಾಗಿಲ್ಲ ಎಂದು ಹೇಳಿದರು. ಲಂಡನ್ನಿನಿಂದ ಹಿಂದಿರುಗುವ ದಿನಾಂಕವನ್ನು ಡಾ. ಅಂಬೇಡ್ಕರ್ ಅವರಿಂದ ಗಾಂಧೀ ಕೇಳಿ ತಿಳಿದುಕೊಂಡರು. ಅದಕ್ಕೆ ಡಾ. ಅಂಬೇಡ್ಕರ್ ಅವರು ೧೯೩೩ರ ಆಗಸ್ಟ್ ತಿಂಗಳಿನಲ್ಲಿ ಹಿಂದಿರುಗುವುದಾಗಿ ತಿಳಿಸಿದರು. ಶುಭ ವಿದಾಯವನ್ನು ಡಾ. ಅಂಬೇಡ್ಕರ್ ಅವರಿಗೆ ಗಾಂಧೀಜಿ ಕೋರಿದರು. ಈ ಸಂದರ್ಶನ ಹೀಗೆ ಕೊನೆಗೊಂಡಿತು.[೧]

**ಅಸ್ಪೃಶ್ಯರನ್ನು ಶೋಷಣೆಗೆ ಒಳಪಡಿಸುತ್ತಿದ್ದ ಸವರ್ಣೀಯ ಹಿಂದೂಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಚಿಂತನೆ:**

ಡಾ. ಅಂಬೇಡ್ಕರ್ ಅವರೊಂದಿಗೆ ಮಾತುಕತೆ:

ಶನಿವಾರದಂದು ಮನುಭವನದಲ್ಲಿ ಡಾ. ಅಂಬೇಡ್ಕರ್ ಹಾಗೂ ಅವರ ಕೆಲ ಸಹಚರರು ೧೯೩೪ರ ಜೂನ್ ೧೬ರಂದು ಗಾಂಧೀಜಿಯವರೊಂದಿಗೆ ದೀರ್ಘವಾದ ಸಮಾಲೋಚನೆಯಲ್ಲಿ ತೊಡಗಿದರು.

---

1. Keer Pp 238.

ಗಾಂಧೀಜಿಯವರು ಅಸ್ಪೃಶ್ಯತೆಯ ವಿರುದ್ಧ ಸಮರ ಸಾರಿದಾಗಿನಿಂದ ಇಲ್ಲಿಯವರೆಗೆ ಹರಿಜನರ ಹೋರಾಟ ಎಷ್ಟು ಮುಂದುವರೆದಿದೆ ಎಂಬುದರ ಬಗೆಗೆ ಈ ಸಮಾಲೋಚನೆ ಜರುಗಿತ್ತು.

ಈ ಸಮಾಲೋಚನೆಯಲ್ಲಿ ಭಾಗಿ ಆಗಿದ್ದವರಿಗೆ ಗಾಂಧಿಯವರು ತಾವು ಸಂಚರಿಸಿದ ಸುಮಾರು ೨೦೦ ಹಳ್ಳಿಗಳಲ್ಲಿ ಈ ಹೋರಾಟ ಸಾಕಷ್ಟು ಪ್ರಗತಿಯನ್ನು ಕಂಡಿದೆ ಮಾತ್ರವಲ್ಲ ಈ ಪಿಡುಗು ಕೂಡ ನಿಧಾನವಾಗಿ ನಶಿಸಿ ಹೋಗುತ್ತಿದೆ ಎಂದರು.

ಆದರೆ ಈ ವಿಷಯದಲ್ಲಿ ಡಾ. ಅಂಬೇಡ್ಕರ್ ಅವರ ಅಭಿಪ್ರಾಯ ಬೇರೆಯಾಗಿತ್ತು. ಏನೆಂದರೆ ಗಾಂಧೀಜಿಯವರು ಯಾವುದೇ ಹಳ್ಳಿಗೆ ಭೇಟಿ ನೀಡಿದರೆ ಅಲ್ಲಿನ ವಾತಾವರಣವೇ ಬದಲಾಗುತ್ತದೆ. ತಾತ್ಕಾಲಿಕವಾಗಿ ಜನರು ತಮ್ಮೊಳಗಿನ ಭೇಧವನ್ನು ಮರೆಯುತ್ತಾರೆ. ಸಾಧು ಸಂತರ ಎದುರು ನಡೆದುಕೊಳ್ಳುವಂತೆ ಅಲ್ಲಿನ ಜನರು ನಡೆದುಕೊಳ್ಳುತ್ತಾರೆ. ಆದ್ದರಿಂದ ಗಾಂಧೀಜಿಯವರಿಗೆ ಅಲ್ಲಿನ ಪರಿಸ್ಥಿತಿಯನ್ನು ಸರಿಯಾಗಿ ಅರಿಯಲು ಸಾಧ್ಯವಾಗುವುದಿಲ್ಲ ಎಂದರು.

ತಮ್ಮನ್ನು ಶೋಷಿಸುತ್ತಿರುವ ಸವರ್ಣೀಯ ಹಿಂದೂಗಳ ವಿರುದ್ಧ ಪರಿಶಿಷ್ಟ ವರ್ಗದರು ಕಾನೂನು ಕ್ರಮವನ್ನು ಜರುಗಿಸಲು ಅನುವಾಗುವಂತೆ ಹರಿಜನರ ಮಂಡಲಿಯು ಅವರಿಗೆ ಧನಸಹಾಯವನ್ನು ನೀಡಬೇಕು ಎಂಬ ಸಲಹೆಯನ್ನು ಡಾ. ಅಂಬೇಡ್ಕರ್ ಅವರು ಗಾಂಧೀಜಿಯವರಿಗೆ ನೀಡಿದರು.

ಅದಕ್ಕೆ ಉತ್ತರವಾಗಿ ಗಾಂಧೀಜಿ ಜನರ ಮನವೊಲಿಕೆಯಿಂದ ಈ ಪಿಡುಗನ್ನು ತೊಲಗಿಸುವುದೇ ಉತ್ತಮ ಮಾರ್ಗವೆಂದೂ ಮತ್ತು ಒಂದು ವೇಳೆ ಕಾನೂನಿನ ಸಹಾಯದ ಆವಶ್ಯಕತೆಯಿದ್ದರೆ ಅದನ್ನು ಕುರಿತು ಮಂಡಲಿಯು ಚಿಂತಿಸಬೇಕಾಗುತ್ತದೆ ಎಂದು ಹೇಳಿದರು.

ಆದರೆ ಆಗಮಿಸಿದ್ದವರಲ್ಲಿ ಒಬ್ಬರು ಗಾಂಧೀಜಿಯವರಿಗೆ ಆಗಸ್ಟ್ ೭ರ ನಂತರ ಈ ಹರಿಜನ ಮಂಡಳಿ ಅಸ್ತಿತ್ವದಲ್ಲಿ ಇರತ್ತದೆಯೇ ಎಂಬ ಪ್ರಶ್ನೆಯನ್ನು ಕೇಳಿದರು. ಆ ಸಮಯದವರೆಗೆ ಮಾತ್ರ ಗಾಂಧೀಜಿಯವರು ರಾಜಕೀಯೇತರ ಚಟುವಟಿಕೆಗಳಲ್ಲಿ ಮಾತ್ರ ಭಾಗವಹಿಸುವವರಿದ್ದರು. ಮತ್ತೆ ಮುಂದುವರಿದು, ಈ ಹಿಂದೆ ಪ್ರಶ್ನೆ ಕೇಳಿದ್ದ ವ್ಯಕ್ತಿಯೇ ಗಾಂಧೀಜಿಯವರಿಗೆ ತಮಗೇ ಮುಂದಿನ ಕಾರ್ಯಗಳಿಗೆ ದೈವಪ್ರೇರಣೆ ಏನಾದರೂ ದೊರೆತಿದೆಯೇ ಎಂಬ ಪ್ರಶ್ನೆಯನ್ನು ಕೇಳಿದರು.

ಇದುವರೆಗೂ ತಮಗೆ ಆ ರೀತಿಯ ಅನುಭವ ಆಗಿಲ್ಲ ಎಂದು ನುಡಿದ ಗಾಂಧೀಜಿ "ನಿಮಗೆ ಇಷ್ಟ ಬಂದರೆ ನೀವು ಕೂಡ ದೇವರಿಂದ ಪ್ರೇರಣೆ ಪಡೆಯಬಹುದು" ಎಂದರು.

**ಅಂಬೇಡ್ಕರ್ ಅವರ ನಿಯೋಗ**

ಶನಿವಾರ ಡಾ. ಅಂಬೇಡ್ಕರ್ ಅವರೊಂದಿಗೆ ಗಾಂಧೀಜಿಯವರನ್ನು ಭೇಟಿ ಮಾಡಿದ್ದ ನಿಯೋಗದಲ್ಲಿ ಇದ್ದ ಸದಸ್ಯರು ಎಂದರೆ

ಶ್ರೀ ಜಿ.ವಿ.ನಾಯಕ್, ಶ್ರೀ ಅಮೃತರಾವ್ ಕಾಂಬೆ, ಡಾ. ಪಿ.ಜಿ. ಸೋಲಂಕಿ ಹಾಗೂ ಶ್ರೀ ಬಾಬುರಾವ್ ಗಾಯಕ್‌ವಾಡ್.[೧]

---

೧. ದಿ. ಬಾಂಬೆ ಕ್ರಾನಿಕಲ್ ೧೭ನೆಯ ಜೂನ್ ೧೯೩೪

# ವಿಭಾಗ – III

# ಭಾರತದ ರಾಜಕೀಯ ಕ್ಷೇತ್ರಕ್ಕೆ ಅಸ್ಪೃಶ್ಯರನ್ನು ತರುವಲ್ಲಿ ಡಾ. ಅಂಬೇಡ್ಕರ್ ಅವರ ಪಾತ್ರ ಹಾಗೂ ಡಾ. ಅಂಬೇಡ್ಕರ್ ಅವರಿಂದ ಪ್ರಜಾಪ್ರಭುತ್ವಕ್ಕೆ ಅಡಿಪಾಯ

# ಭಾರತದ ರಾಜಕೀಯಕ್ಷೇತ್ರಕ್ಕೆ ಅಸ್ಪೃಶ್ಯರನ್ನು ತರುವಲ್ಲಿ ಡಾ. ಅಂಬೇಡ್ಕರ್ ಅವರ ಪಾತ್ರ ಹಾಗೂ ಡಾ. ಅಂಬೇಡ್ಕರ್ ಅವರಿಂದ ಪ್ರಜಾಪ್ರಭುತ್ವಕ್ಕೆ ಅಡಿಪಾಯ

೧೯೧೯ರ ಭಾರತೀಯ ಸರ್ಕಾರಿ ಕಾನೂನಿನ ಪರಿಧಿಯಲ್ಲಿನ ಒಂದು ವಿಧಿಯ ಪ್ರಕಾರ ಸರ್ಕಾರವು ಆ ಸಮಯಕ್ಕೆ ತಕ್ಕಂತೆ ಸಂವಿಧಾನದ ಕಾರ್ಯವೈಖರಿಯನ್ನು ಗಮನಿಸಿ; ಅದರಲ್ಲಿ ಮಾಡಬಹುದಾದಂತಹ ಬದಲಾವಣೆಗಳನ್ನು ಸರ್ಕಾರದ ಗಮನಕ್ಕೆ ತರಲು ಆಯೋಗವೊಂದನ್ನು ರಚಿಸಬೇಕಾಗಿತ್ತು. ಅಂತೆಯೇ ೧೯೨೮ರಲ್ಲಿ ಇಂತಹ ಒಂದು ರಾಯಲ್ ನಿಯೋಗವನ್ನು ರಚಿಸಿ ಸರ್ ಜಾನ್ ಸೈಮನ್ ಅವರನ್ನು ಇದರ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಭಾರತೀಯರು ಈ ನಿಯೋಗದಲ್ಲಿ ಎಲ್ಲಾ ವರ್ಗದ ಜನರಿಗೂ ಪ್ರಾತಿನಿಧ್ಯ ದೊರೆಯಲಿದೆ ಎಂದುಕೊಂಡರು. ಆದರೆ ಈ ಸಮಯದಲ್ಲಿ ಭಾರತದಲ್ಲಿ ರಾಯಭಾರಿ ಆಗಿದ್ದಂತಹ ಲಾರ್ಡ್ ಬರ್ಕಿನ್ ಹೆಡ್ ಎಂಬಾತ ಈ ನಿಯೋಗದಲ್ಲಿ ಭಾರತೀಯರು ಸೇರ್ಪಡೆಯಾಗದಂತೆ ಮಾಡಿದ. ಅದು ಒಂದು ಸಂಪೂರ್ಣವಾಗಿ ಸಂಸತ್ತಿನ ಸದಸ್ಯರ ಆಯೋಗವಾಗಿರುವಂತೆ ಮಾಡಿದ. ಆತನ ಈ ವರ್ತನೆಗೆ ಹಾಗೂ ನಿರ್ಧಾರಕ್ಕೆ ಕಾಂಗ್ರೆಸ್ ಹಾಗೂ ಸ್ವತಂತ್ರ ಪಕ್ಷದವರು ಆಕ್ಷೇಪ ವ್ಯಕ್ತಪಡಿಸಿ ಅದನ್ನು ತಮಗೆ ಆದ ಅವಮಾನ ಎಂದೇ ಭಾವಿಸಿದರು. ಅವರು ಈ ನಿಯೋಗವನ್ನೇ ಬಹಿಷ್ಕರಿಸಿ ಅದರ ವಿರುದ್ಧ ಒಂದು ಭಾರಿ ಹೋರಾಟವನ್ನೇ ಆರಂಭಿಸಿದರು. ಈ ವಿರೋಧವನ್ನು ಶಮನಗೊಳಿಸುವ ಸಲುವಾಗಿ ಮಹಾಪ್ರಭುಗಳ ಸರ್ಕಾರವು ಒಂದು ನಿರ್ಧಾರವನ್ನು ಪ್ರಕಟಿಸಿತು. ಈ ನಿಯೋಗದ ಕಾರ್ಯವು ಪೂರ್ಣಗೊಂಡ ನಂತರ, ಭಾರತೀಯ ಪ್ರತಿನಿಧಿಗಳನ್ನು ಕರೆಯಲಾಗುವುದು. ಅನಂತರವಷ್ಟೇ ಸಂವಿಧಾನವನ್ನು ಅಂತಿಮಗೊಳಿಸಲಾಗುವುದು ಎಂದು ಹೇಳಲಾಯಿತು. ಇದರಂತೆ ಆಯ್ದ ಭಾರತೀಯ ಪ್ರತಿನಿಧಿಗಳನ್ನು ಲಂಡನ್ನಿನಲ್ಲಿ ಜರುಗುತ್ತಿದ್ದಂತಹ ದುಂಡು ಮೇಜಿನ ಸಭೆಗೆ ಆಹ್ವಾನಿಸಲಾಯಿತು.[೧]

'ಭಾರತದಲ್ಲಿ ಉಂಟಾಗಿರುವ ಕೋಲಾಹಲದ ಪರಿಸ್ಥಿತಿಯನ್ನು ತಿಳಿಗೊಳಿಸುವ ಸಲುವಾಗಿ ಬ್ರಿಟಿಷರ ಸರ್ಕಾರವು ತನ್ನ ೧೯೧೯ನೆಯ ಕಾಯ್ದೆಯನ್ನು ಪುನರ್ವಿಮರ್ಶಿಸಲು ನಿರ್ಧರಿಸಿತು. ಆದ್ದರಿಂದ ಇದಕ್ಕೆಂದು ಒಂದು ವಿಧಿಬದ್ಧವಾದ ಭಾರತೀಯ ನಿಯೋಗವನ್ನು ರಚಿಸಿತು. ಇದಕ್ಕೆ ಸೈಮನ್ ನಿಯೋಗ ಎಂಬ ಹೆಸರನ್ನು ನೀಡಿತು. ಇದರ ಅಧ್ಯಕ್ಷರಾಗಿರುವವರು ಸರ್. ಜಾನ್ ಸೈಮನ್. ಈ ಆಯೋಗಕ್ಕೆ 'ಸೈಮನ್ ಅವರ ಅಡಿಯಲ್ಲಿ ಕೆಲಸ ಮಾಡಲು ಇಬ್ಬರು ಪರಿಷ್ಠ ವರ್ಗದ ಸದಸ್ಯರನ್ನೂ ಮತ್ತು ನಾಲ್ಕು ಜನ ಸಾಮಾನ್ಯ ವರ್ಗದ ಸದಸ್ಯರನ್ನು ನೇಮಿಸಲಾಗಿತ್ತು. ಸರ್ ಜಾನ್ ಸೈಮನ್ ಅವರೊಬ್ಬ ಮಹಾನ್ ಸಂಸದರಾಗಿದ್ದರು. ಈ ಆಯೋಗದಿಂದ ಬರುವ ಸಲಹೆಗಳನ್ನು ವೆಸ್ಟ್ ಮಿನಿಸ್ಟರ್‌ನಲ್ಲಿ ಜರುಗಲಿರುವ ಜಂಟಿ ಸದಸ್ಯ ಸಮಿತಿಯ ಭೇಟಿಯ ಸಮಯದಲ್ಲಿ ಚರ್ಚಿಸಲಾಗುವುದು ಮತ್ತು ಅಲ್ಲಿ ಭಾರತೀಯ ಸದಸ್ಯರೊಂದಿಗೆ ಜಂಟಿ ಆಯ್ಕೆ ಸಮಿತಿಯಲ್ಲಿ ಚರ್ಚಿಸಲಾಗುವುದು ಎಂದು ಘೋಷಿಸಲಾಗಿತ್ತು.

1. Writings and Speeches, Vol. 9 Pp. 40

ಡಾ. ಸೈಮನ್ ನಿಯೋಗವು ಭಾರತಕ್ಕೆ ತನ್ನ ಮೊದಲ ಭೇಟಿಗಾಗಿ ೧೯೨೮ರ ಫೆಬ್ರವರಿ ೩ರಂದು ೧೯೧೯ರ ಕಾಯ್ದೆಯಲ್ಲಿ ಹೇಳಿರುವ ಪ್ರಕಾರ ಭಾರತದ ಸಮಸ್ಯೆಯನ್ನು ಪುನರ್ವಿಮರ್ಶಿಸಲು ಬೊಂಬಾಯಿಗೆ ಆಗಮಿಸಿತು. ಅದು ಭಾರತೀಯೇತರ ಆಯೋಗವಾಗಿದ್ದುದರಿಂದ ಭಾರತದ ಎಲ್ಲಾ ರಾಜಕೀಯ ಪಕ್ಷಗಳ ವಿರೋಧವನ್ನು ಅದು ಎದುರಿಸಬೇಕಾಯಿತು. ಕಾಂಗ್ರೆಸ್ ಪಕ್ಷವಂತೂ ಎಲ್ಲಾ ಹಂತದಲ್ಲಿಯೂ ಎಲ್ಲಾ ರೀತಿಯಲ್ಲಿಯೂ ಈ ಆಯೋಗವನ್ನು ಬಹಿಷ್ಕರಿಸುವ ಗಟ್ಟಿಯಾದ ನಿರ್ಧಾರ ಮಾಡಿತು. ಆದ್ದರಿಂದ ಆಗಮಿಸಿದ ಕೂಡಲೇ ಸೈಮನ್ ಆಯೋಗಕ್ಕೆ ಕಪ್ಪು ಬಾವುಟದ, ವಿರೋಧಿ ಘೋಷಣೆಗಳ ಸ್ವಾಗತ ದೊರೆಯಿತು. "ಹಿಂದಿರುಗಿ ಹೋಗು ಸೈಮನ್" ಎಂಬ ಫಲಕಗಳು ಎಲ್ಲೆಡೆ ರಾರಾಜಿಸುತ್ತಿದ್ದವು. ಕಾಂಗ್ರೆಸ್ಸಿಗರು ದೇಶದಾದ್ಯಂತ ಪ್ರತಿಭಟನೆಗಳನ್ನು ಪ್ರಾರಂಭಿಸಿದ್ದರು. ಕೆಲವೊಂದು ಪ್ರದೇಶಗಳಲ್ಲಿ ಪೋಲಿಸರು ಗುಂಡು ಹಾರಿಸಬೇಕಾಯಿತು. ಇದೇ ರೀತಿಯ ಸ್ವಾಗತ ಈ ಆಯೋಗಕ್ಕೆ ಅದರ ಎರಡನೆಯ ಭೇಟಿಗೆಂದು ೧೯೨೮-೨೯ರ ಚಳಿಗಾಲದಲ್ಲಿ ಆಗಮಿಸಿದಾಗಲೂ ದೊರಕಿತು.

ಕಾಂಗ್ರೆಸ್ ಪಕ್ಷವು ಸರ್ವ ಪಕ್ಷಗಳ ಸಭೆಯನ್ನು ಮೊದಲ ಬಾರಿಗೆ ೧೯೨೮ರ ಫೆಬ್ರವರಿಯಲ್ಲಿ ಹಾಗೂ ಎರಡನೆಯ ಬಾರಿಗೆ ಮೇ ತಿಂಗಳಿನಲ್ಲಿ ನಡೆಸಿತು. ಮೋತಿಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಿ ಭಾರತಕ್ಕೆ ಸ್ವರಾಜ್ಯದ ಸಂವಿಧಾನವನ್ನು ರಚಿಸುವಂತೆ ತಿಳಿಸಲಾಯಿತು. ನೆಹರೂ ಸಮಿತಿಯು ೧೯೨೮ರ ಜೂನ್ ತಿಂಗಳಿನಿಂದ ಆಗಸ್ಟ್ ತಿಂಗಳವರೆಗೂ ಕಾರ್ಯ ನಿರ್ವಹಿಸಿ ಒಂದು ಸಂವಿಧಾನವನ್ನು ಸಿದ್ಧಪಡಿಸಿತು.*

ಅದು ಕೇವಲ ಮುಸಲ್ಮಾನರ ಕೊರತೆಗಳನ್ನು ತುಂಬಿತ್ತು. ಇನ್ನುಳಿದಂತೆ ಶೋಷಿತ ವರ್ಗದವರ ವಿಷಯವಾಗಿ ನೆಹರೂ ವರದಿಯು, ಈ ಕೆಳಗಿನಂತೆ ಹೇಳಿತ್ತು "ನಾವು ರಚಿಸಿರುವ ಸಂವಿಧಾನದಲ್ಲಿ ಶೋಷಿತವರ್ಗದವರಿಗೆ ಶಾಸನ ಸಭೆಯಲ್ಲಿನ ಪ್ರಾತಿನಿಧ್ಯಕ್ಕೆಂದು ವಿಶೇಷವಾದ ಸವಲತ್ತುಗಳನ್ನು ಯಾವುದೂ ಕಲ್ಪಿಸಿಲ್ಲ. ಇದನ್ನು ಮಾಡಬೇಕೆಂದರೆ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಬೇಕಾಗುತ್ತದೆ. ಇಲ್ಲವೇ ಜನರನ್ನು ನಾಮಕರಣಮಾಡಬೇಕಾಗುತ್ತದೆ." ಆದರೆ ಇವೆರಡೂ ವಿಧಾನಗಳು ಅಪಾಯಕಾರಿ ಆಗಿರುವುದರಿಂದ ಸಮಿತಿಯು ತಾನು ಈ ನಿರ್ಧಾರದ ಪರವಾಗಿಲ್ಲ ಎಂದು ತಿಳಿಸಿತ್ತು. ಹಕ್ಕುಗಳ ಘೋಷಣೆಯು ಅವರ ಎಲ್ಲಾ ಸಮಸ್ಯೆಗಳಿಗೂ ರಾಮಬಾಣವಾಗಬಲ್ಲುದು ಎಂದು ಸಮಿತಿಯು ಅಭಿಪ್ರಾಯಪಟ್ಟಿತ್ತು. ಶೋಷಿತ ವರ್ಗದ ಜನರ ಬಗ್ಗೆ ಕಾಂಗ್ರೆಸ್ ಪಕ್ಷವು ಎಷ್ಟು ಕಾಳಜಿ ಹೊಂದಿತ್ತು ಎಂಬುದು ಒಂದು ಅಂಶದಿಂದ ಸ್ಪಷ್ಟವಾಗುತ್ತದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತನ್ನ ಕಾರ್ಯಕ್ರಮಗಳಿಗೆ ಎಲ್ಲಾ ಪ್ರಮುಖ ಮುಸಲ್ಮಾನ, ಪಾರ್ಸಿ, ಕ್ರೈಸ್ತ, ಸಿಖ್ ಹಾಗೂ ಬ್ರಾಹ್ಮಣೇತರ ಸಂಘಗಳಿಗೆ ಆಮಂತ್ರಣ ನೀಡಿತು. ಆದರೆ ಡಾ. ಅಂಬೇಡ್ಕರ್ ಅವರ ಮುಂದಾಳತ್ವದಲ್ಲಿ ಇದ್ದಂತಹ ಶೋಷಿತ ವರ್ಗಗಳ ಸಂಘಕ್ಕಾಗಲೀ ಅಥವಾ ಶೋಷಿತ ವರ್ಗದವರ ಸಂಸ್ಥೆಗೂ ಆಮಂತ್ರಣ ನೀಡಲಿಲ್ಲ. ಈ ವಿಷಯವನ್ನು ಡಾ. ಅಂಬೇಡ್ಕರ್ ಅವರು ೧೦ ವರ್ಷಗಳ ಮೊದಲೇ ಸೌತ್‌ಬರೋ ನಿಗಮದ ಎದುರು ತಿಳಿಸಿದ್ದರು ಎಂಬುದನ್ನು ನಾವು ಗಮನಿಸಬಹುದಾಗಿದೆ.

---

* ಡಾ. ಬಿ.ಆರ್. ಅಂಬೇಡ್ಕರ್ ಅವರ ಅಭಿಪ್ರಾಯಕ್ಕಾಗಿ 'ಬಹಿಷ್ಕೃತ ಭಾರತ' ೧೯೨೯ರ ಜನವರಿ ೧೮ರ ಸಂಪಾದಕೀಯವನ್ನು ಗಮನಿಸಿ. -ಸಂಪಾದಕರು.

** ಸರ್ವಪಕ್ಷಗಳ ನಿಯೋಗದ ವರದಿ ೧೯೨೯ರ ಪುಟ ೫೯-೬೦

ಸೈಮನ್ ಆಯೋಗದೊಂದಿಗೆ ಸಹಕರಿಸಲು ಒಂದು ಹೊಸ ಸಮಿತಿಯನ್ನು ಕೇಂದ್ರ ಸರ್ಕಾರವು ರಚಿಸಿತು. ಪ್ರತಿಯೊಂದು ಶಾಸನಸಭೆಯೂ ತನ್ನದೊಂದು ತಂಡವನ್ನು ಸೈಮನ್ ಸಮಿತಿಯೊಂದಿಗೆ ಕಾರ್ಯ ನಿರ್ವಹಿಸಲು ಚುನಾಯಿಸಿತು. ಬೊಂಬಾಯಿಯ ಪ್ರಾಂತ್ಯದ ಶಾಸನ ಸಭೆಯು ಡಾ. ಅಂಬೇಡ್ಕರ್ ಹಾಗೂ ಇತರ ಸದಸ್ಯರನ್ನು ೧೯೨೮ರ ಆಗಸ್ಟ್ ೩ರಂದು ಆಯ್ಕೆ ಮಾಡಿತು.

ಸೈಮನ್ ಸಮಿತಿಯ ಕಾರ್ಯ ವೈಖರಿಯು ಭಾರತೀಯ ರಾಜಕೀಯ ಇತಿಹಾಸದ ಪಥವನ್ನೇ ಬದಲಿಸಿತು. ಇದರೊಂದಿಗೆ ಇಡೀ ದೇಶಕ್ಕೆ ಡಾ. ಅಂಬೇಡ್ಕರ್ ಅವರ ಬುದ್ಧಿಶಕ್ತಿ ಮತ್ತು ಚೈತನ್ಯಗಳ ಪರಿಚಯವನ್ನು ಮಾಡಿಸಿತು.

೧೮ ಶೋಷಿತ ವರ್ಗದ ಸಂಘಗಳು ಈ ಸಮಿತಿಯ ಮುಂದೆ ತಮ್ಮ ಅಹವಾಲನ್ನು ಇರಿಸಿದವು. ಅದರಲ್ಲಿ ೧೬ ಸಂಘಗಳು ಶೋಷಿತ ವರ್ಗಗಳಿಗೆಂದೇ ಬೇರೆಯ ಚುನಾವಣಾ ಕಣ ಇರಬೇಕೆಂದು ಕೇಳಿಕೊಂಡವು. ಬಹಿಷ್ಕೃತ ಹಿತಕಾರಿಣಿ ಸಭೆಯ ಪರವಾಗಿ ಸೈಮನ್ ಸಮಿತಿಗೆ ಡಾ. ಅಂಬೇಡ್ಕರ್ ಪ್ರಸ್ತಾವನೆ ಸಲ್ಲಿಸಿ ಜಂಟಿ ಮತಕ್ಷೇತ್ರಗಳಿದ್ದು ಶೋಷಿತ ವರ್ಗದ ಪ್ರತಿನಿಧಿಗಳಿಗೆಂದು ಸ್ಥಾನಗಳನ್ನು ಮೀಸಲಾತಿ ನೀಡಲಿ ಎಂಬ ಮನವಿ ಸಲ್ಲಿಸಿದ್ದರು.*

ಮದರಾಸಿನ ಕೇಂದ್ರೀಯ ಆದಿ ದ್ರಾವಿಡ ಮಹಾಜನ ಸಭೆಯು ಶೋಷಿತ ವರ್ಗದ ಪ್ರತಿನಿಧಿಗಳನ್ನು ಸರ್ಕಾರ ನಾಮಕರಣ ಮಾಡಲಿ ಎಂದು ಒತ್ತಾಯಿಸಿತು. ಬೊಂಬಾಯಿ ಪ್ರಾಂತ್ಯದ ಬ್ರಾಹ್ಮಣೇತರ ಸಂಘವು ತನ್ನ ಮನವಿಯಲ್ಲಿ ಶೋಷಿತ ವರ್ಗದವರಿಗೆಂದೇ ಪ್ರತ್ಯೇಕ ಚುನಾವಣಾ ಕ್ಷೇತ್ರ ಹಾಗೂ ಮೀಸಲು ಸ್ಥಾನಗಳನ್ನು ನೀಡಬೇಕು ಎಂದು ಒತ್ತಾಯ ಮಾಡಿತ್ತು. ಇತ್ತ ಮುಸಲ್ಮಾನ ಸಂಘವು ಪ್ರತ್ಯೇಕ ಸಿಂಧ್ ರಾಜ್ಯಕ್ಕೆ ಬೇಡಿಕೆ ಇಟ್ಟಿತ್ತು. ಹೊಸ ವಾಯವ್ಯ ರಾಜ್ಯಕ್ಕಾಗಿ ರಾಜ್ಯವನ್ನು ಹಾಗೂ ಚುನಾವಣಾ ಕ್ಷೇತ್ರವನ್ನು ಮುಸಲ್ಮಾನರಿಗೆ ಮೀಸಲು ಇರಿಸಬೇಕು ಎಂದೂ ಅದು ಒತ್ತಾಯಿಸಿತ್ತು. ಇದಲ್ಲದೇ ಸಂವಿಧಾನ ರಚನಾ ಸಮಿತಿಯಲ್ಲಿಯೂ ತಮಗೆ ಪ್ರಾತಿನಿಧ್ಯ ಇರಬೇಕು ಎಂದು ಅದು ಹೇಳತೊಡಗಿತ್ತು.

೧೯೨೮ರ ಅಕ್ಟೋಬರ್ ೨೩ರಂದು, ಸೈಮನ್ ಸಮಿತಿಯ ಬೊಂಬಾಯಿಯ ಸ್ಥಳೀಯ ಸಮಿತಿ ಹಾಗೂ ಕೇಂದ್ರ ಸಮಿತಿಯು ಪುಣೆಯಲ್ಲಿ ಡಾ. ಅಂಬೇಡ್ಕರ್ ಅವರನ್ನು ಭೇಟಿಯಾಯಿತು.**

ಬ್ರಿಟಿಷರ ಕಾರ್ಮಿಕ ಮುಂಖಡರಾದ ಹಾಗೂ ನಂತರದಲ್ಲಿ ಬ್ರಿಟನ್ನಿನ ಪ್ರಧಾನ ಮಂತ್ರಿಯಾದ ಮೇಜರ್ ಆ್ಯಟ್ಲಿ ಎಂಬುವವರು ಸೈಮನ್ ಸಮಿತಿಯ ಸದಸ್ಯರಾಗಿದ್ದರು. ಡಾ. ಅಂಬೇಡ್ಕರ್ ಅವರಿಗೆ ಕೆಲ ಪ್ರಶ್ನೆಗಳನ್ನು ಡಾ. ಆ್ಯಟ್ಲಿ ಕೇಳಿದರು.

ಸೈಮನ್ ಸಮಿತಿಯ ಸಭೆಯು ಛಳಿಗಾಲದವರೆಗೂ ಮುಂದುವರೆಯಿತು. ಇತ್ತ ಇತರ ಸ್ಥಳೀಯ ಸಮಿತಿಗಳು ಕೂಡ ತಮ್ಮ ವರದಿಯನ್ನು ಸಿದ್ಧಗೊಳಿಸತೊಡಗಿದ್ದವು. ಬೊಂಬಾಯಿಯ ಶಾಸಕಾಂಗ ಸಭೆಯು ಸೈಮನ್ ಸಮಿತಿಗೆ ಎಲ್ಲ ರೀತಿಯ ಸಹಕಾರವನ್ನು ನೀಡಲು ರಚಿಸಿದ್ದ ಸಮಿತಿಯು ಅಧಿಕೃತವಾಗಿ ಹಾಗೂ ಅನಧಿಕೃತವಾಗಿ ಸಂವಿಧಾನ ರಚನೆಯ ಕುರಿತು ಎಲ್ಲಾ ಸಾಕ್ಷ್ಯಗಳನ್ನೂ ವಿಚಾರಿಸಿ ತನ್ನ ವರದಿಯನ್ನು ೧೯೨೯ರ ಮೇ ೭ ರಂದು ಸಲ್ಲಿಸಿತು.

---

* ಬರಹಗಳು ಹಾಗೂ ಭಾಷಣಗಳು ಸಂಪುಟ ೨ ಪುಟ ೪೨೯–೪೫೮

** Ibid ಪುಟ ೪೫೯–೮೯

ಈ ಸಮಿತಿಯ ವರದಿಗೆ ಸಹಮತ ಇರದಿದ್ದರಿಂದ ಡಾ. ಅಂಬೇಡ್ಕರ್ ಆ ವರದಿಗೆ ಸಹಿ ಹಾಕಲಿಲ್ಲ. ಅವರು ತಮ್ಮ ಅಭಿಪ್ರಾಯದಂತೆ ಮತ್ತೊಂದು ವರದಿಯನ್ನು ತಯಾರಿಸಿ ೧೯೨೯ರ ಮೇ ೧೭ರಂದು* ಸರ್ಕಾರಕ್ಕೆ ಸಲ್ಲಿಸಿದರು. ಕರ್ನಾಟಕವನ್ನು ಬೊಂಬಾಯಿಯಿಂದ ಬೇರ್ಪಡಿಸಬೇಕು ಎಂಬ ವರದಿಯನ್ನು ಸೈಮನ್ ಸಮಿತಿ ಸಲ್ಲಿಸಿತ್ತು. ಇದಕ್ಕೆ ವಿರೋಧ ವ್ಯಕ್ತಪಡಿಸಿ ಡಾ. ಅಂಬೇಡ್ಕರ್ ವರದಿ ಸಲ್ಲಿಸಿದ್ದರು. "ಒಂದು ರಾಜ್ಯ ಒಂದು ಭಾಷೆ" ಎಂಬ ನಿಯಮಕ್ಕೆ ಬದ್ಧರಾಗಿರಲು ನಮ್ಮ ದೇಶ ಸೂಕ್ತವಲ್ಲ. ಈ ನಿಯಮವನ್ನು ಅನಸರಿಸಿ ನಾವು ಹಲವಾರು ಚಿಕ್ಕ ಚಿಕ್ಕ ರಾಜ್ಯಗಳನ್ನು ಅಸ್ತಿತ್ವಕ್ಕೆ ತರುವುದು ಕಾರ್ಯಸಾಧುವಾಗುವುದಿಲ್ಲ ಎಂಬುದು ತಮ್ಮ ಅಭಿಪ್ರಾಯ ಎಂದು ತಿಳಿಸಿದ್ದರು.

"ನನ್ನ ಅಭಿಪ್ರಾಯ ಏನೆಂದರೆ ಮೊದಲು ನಮ್ಮ ಜನರಲ್ಲಿ ರಾಷ್ಟ್ರೀಯತೆಯ ಭಾವವನ್ನು ಹುಟ್ಟುಹಾಕಬೇಕು. ಅವರು ಮೊದಲು ಭಾರತೀಯರು ಅನಂತರವಷ್ಟೇ ಹಿಂದೂಗಳು, ಮುಸಲ್ಮಾನರು, ಸಿಂಧಿಗಳು ಹಾಗೂ ಕನ್ನಡದವರು. ಅವರು ಮೊದಲಿಗೆ ಹಾಗೂ ಕಡೆಯದಾಗಿ ಭಾರತೀಯರಷ್ಟೇ. ಅದೇ ನಮ್ಮ ಧ್ಯೇಯವಾಗಿರಬೇಕು. ಹಾಗೆ ಮಾಡಿದರೆ ಸ್ಥಳೀಯ ಗುಂಪುಗಳನ್ನು ಪ್ರಾದೇಶಿಕತೆಗಳನ್ನು ಬಲಪಡಿಸಬೇಕಾದ ಅಗತ್ಯಬರುವುದಿಲ್ಲ.

ಇನ್ನು ಆ ದಿನಗಳಲ್ಲಿ ಸಿಂಧ್ ಪ್ರಾಂತ್ಯ ಪ್ರತ್ಯೇಕವಾಗಬೇಕು ಎಂಬ ಕೂಗು ವ್ಯಾಪಕವಾಗಿ ಇತ್ತು. ಆದರೆ ಅದೊಂದು ಪ್ರಾಂತೀಯ ಬೇಡಿಕೆ ಮಾತ್ರ ಎಂದು ಅಂಬೇಡ್ಕರ್ ಅವರ ಅಭಿಪ್ರಾಯವಾಗಿತ್ತು. ಇಂದು ಮುಸಲ್ಮಾನರು ಐದು ಪ್ರಾಂತಗಳಲ್ಲಿ ತಮ್ಮ ಮಹತ್ವವನ್ನು ಹೆಚ್ಚಿಸಿಕೊಳ್ಳಲು ಇಡುತ್ತಿರುವಂತಹ ಬೇಡಿಕೆ ಎಂಬುದು ಅವರ ವ್ಯಾಖ್ಯಾನವಾಗಿತ್ತು. "ಈ ತಂತ್ರ ಅದು ಕಾಣುವಷ್ಟು ಆಮಾಯಕವೂ ಅಲ್ಲ ಅಥವಾ ಮೇಲೆ ಕಾಣುವಂತೆ ಸರಳವೂ ಅಲ್ಲ. ಈ ನಿಯಮದ ಹಿಂದೆ ಇರುವಂತಹ ಧ್ಯೇಯ ಅಪಾಯಕಾರಿ. ಇದರಿಂದ ಶಾಂತಿ ಹಾಗೂ ಸುವ್ಯವಸ್ಥೆಗೆ ಭಂಗ ಬರುವುದಂತೂ ಶತಃಸಿದ್ಧ. ಇಂತಹ ಪರಿಸ್ಥಿತಿಗೆ ಸಿದ್ಧರಾಗುವುದು ಎಂದರೆ ಯುದ್ಧಕ್ಕೆ ಸಿದ್ಧರಾದಂತೆಯೇ" ಎಂದು ಹೇಳಿದರು. ತಮ್ಮ ಈ ನಿರ್ಣಯವನ್ನು ಸಮರ್ಥಿಸಿಕೊಳ್ಳಲು ಅವರು ಕೊಲ್ಕತ್ತಾದಲ್ಲಿ ಗಾಂಧಿವಾದಿಯಾದಂತಹ ಮೌಲಾನಾ ಅಬ್ದುಲ್ ಆಜಾದ್ ಅವರು ಮುಸಲ್ಮಾನರ ಸಭೆಯಲ್ಲಿ ಮಾಡಿದ್ದ ಭಾಷಣವನ್ನು ಉದಾಹರಿಸಿದರು. ಆ ಭಾಷಣದಲ್ಲಿ ಆಜಾದ್ ಅವರು "ಒಂಬತ್ತು ಹಿಂದೂ ಜಿಲ್ಲೆಗಳು ಇರುವಂತೆ ಐದು ಮುಸಲ್ಮಾನರ ಜಿಲ್ಲೆಗಳು ಇರಲಿವೆ. ಈ ಒಂಬತ್ತು ಹಿಂದೂ ಜಿಲ್ಲೆಗಳಲ್ಲಿ ಮುಸಲ್ಮಾನರನ್ನು ಯಾವ ರೀತಿ ನೋಡಿಕೊಳ್ಳಲಾಗುವುದೊ ಅದೇ ರೀತಿಯಲ್ಲಿ ಮುಸಲ್ಮಾನ ರಾಜ್ಯಗಳಲ್ಲಿ ಹಿಂದೂಗಳನ್ನು ನೋಡಿಕೊಳ್ಳಲಾಗುವುದು. ಇದೊಂದು ದೊಡ್ಡ ಲಾಭವಲ್ಲವೇ? ಮುಸಲ್ಮಾನರ ಹಕ್ಕುಗಳಿಗಾಗಿ ಹೋರಾಡಲು ಇದರಿಂದ ಹೊಸ ಅಸ್ತ್ರ ಸಿಕ್ಕಿದಂತಾಗುವುದಿಲ್ಲವೇ?" ಎಂದಿದ್ದರು. ಗಾಂಧೀವಾದಿಗಳೆಂದು ಕರೆದುಕೊಳ್ಳುವ ಕೆಲ ರಾಷ್ಟ್ರೀಯ ನಾಯಕರ ಧೋರಣೆಯನ್ನು ಇದು ತೋರಿಸುತ್ತದೆ ಅಷ್ಟೆ.

ಪ್ರತ್ಯೇಕ ಚುನಾವಣಾ ಕ್ಷೇತ್ರಗಳಿಗೆ ಮುಸಲ್ಮಾನರು ಬೇಡಿಕೆ ಇಟ್ಟಿದ್ದರು. ಆನಂತರ ಡಾ. ಅಂಬೇಡ್ಕರ್ ಅವರು ಆ ವಿಷಯ ಎತ್ತಿಕೊಂಡರು. ಯುರೋಪ್ ಖಂಡದಾದ್ಯಂತ ಯಾವ ಪ್ರತ್ಯೇಕ ಚುನಾವಣಾ ಕ್ಷೇತ್ರಗಳೂ ಇರಲಿಲ್ಲ. ಆದರೂ ಹೇಗೆ ಎಲ್ಲರೂ ಒಗ್ಗಟ್ಟಿನಿಂದ ವಾಸಿಸುತ್ತಿದ್ದರು ಎಂದು ಅವರ ಬಣ್ಣಿಸಿದರು. ಮುಂದುವರೆದು ಅವರು ನುಡಿದರು. "ಕೇವಲ ಭಾರತ ದೇಶದಲ್ಲಿ ಮಾತ್ರ ಮುಸಲ್ಮಾನರು ಅಲ್ಪಸಂಖ್ಯಾತರಲ್ಲ. ಬೇರೆ ದೇಶಗಳಲ್ಲಿಯೂ ಕೂಡ ಇದೇ ಪರಿಸ್ಥಿತಿ ಇದೆ. ಅಲ್ಬೇನಿಯಾದಲ್ಲಿ ಮುಸಲ್ಮಾನರು ಅತ್ಯಂತ

---

* ಬರಹಗಳು ಹಾಗೂ ಭಾಷಣಗಳು ಸಂಪುಟ – ೨ ಪುಟ ೩೧೫–೪೦೧

ದೊಡ್ಡ ಸಂಖ್ಯೆಯಲ್ಲಿದ್ದಾರೆ. ಬಲ್ಗೇರಿಯಾ, ಗ್ರೀಸ್ ಹಾಗೂ ರೂಮಾನಿಯಾ ದೇಶದಲ್ಲಿ ಅವರು ಅಲ್ಪಸಂಖ್ಯಾತರಾಗಿದ್ದಾರೆ. ಯುಗೋಸ್ಲೋವಿಯಾ ಹಾಗೂ ರಷಿಯಾದಲ್ಲಿ ಅವರು ಬಹುಸಂಖ್ಯಾತರೇ. ಅಲ್ಲಿರುವ ಮುಸಲ್ಮಾನರು ತಮಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳು ಬೇಕೆಂದು ಕೇಳಿದ್ದಾರೆಯೇ? ರಾಜಕೀಯ ಇತಿಹಾಸವನ್ನು ಓದಿರುವ ಎಲ್ಲಾ ವಿದ್ಯಾರ್ಥಿಗಳು ತಿಳಿದಿರುವಂತೆ ಅವರು ಅಲ್ಲಿ ಯಾವುದೇ ಮೀಸಲಾತಿಯನ್ನು ಪಡೆದುಕೊಂಡಿಲ್ಲ. ಆದ್ದರಿಂದ ಭಾರತದಲ್ಲಿ ಇರುವಂತಹ ಮುಸಲ್ಮಾನರು ಇಡುತ್ತಿರುವಂತಹ ಬೇಡಿಕೆಗೆ ಯಾವುದೇ ರೀತಿಯ ಸಮರ್ಥನೆಯಿಲ್ಲ. ಈ ರೀತಿಯ ಕೋಮುವಾದಿ ಭಾವನೆಯ ಬೇಡಿಕೆಗಳು ಬಹಳ ತಪ್ಪು. ಇದನ್ನು ನಾವು ಗಮನಿಸಬೇಕು. ಇದಕ್ಕೆ ನಾವೀಗ ಬಾಗಿದರೆ ಅದೊಂದು ಪಾಪಕೃತ್ಯ ಎಸಗಿದಂತೆ ಎಂದರು.

ಮುಂದುವರೆದು ಡಾ. ಅಂಬೇಡ್ಕರ್ ಅವರು ಈ ರೀತಿ ಹೇಳಿದರು. "ನಾವು ಕೆಲ ವರ್ಗಗಳಿಗೆ ಮೀಸಲಾತಿಯನ್ನು ಕೇಳಿರುವುದು ನಿಜ. ಆದರೆ ಪ್ರತ್ಯೇಕ ಚುನಾವಣಾ ಕಣಗಳು ಬೇಕು ಎಂಬ ಬೇಡಿಕೆ ಇಟ್ಟಿಲ್ಲ. ಪ್ರಾಂತೀಯ ಚುನಾವಣಾ ಕ್ಷೇತ್ರಗಳು ಹಾಗೂ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ನಾವು ಆದಷ್ಟೂ ದೂರ ಇಡಬೇಕು. ಏಕೆಂದರೆ ಈ ರೀತಿಯ ಪ್ರತ್ಯೇಕತೆಯು ಯಾವುದೇ ರೀತಿಯಲ್ಲಿಯೂ ಪ್ರಜಾಪ್ರಭುತ್ವಕ್ಕೆ ಒಳ್ಳೆಯದನ್ನು ಮಾಡುವುದಿಲ್ಲ. ಅತ್ಯಂತ ಉತ್ತಮ ಪದ್ಧತಿ ಎಂದರೆ ಸಾಮಾನ್ಯ ಚುನಾವಣಾ ಕ್ಷೇತ್ರವನ್ನು ಹೊಂದಿ ಸ್ಥಾನಗಳಿಗೆ ಮೀಸಲಾತಿಯನ್ನು ಇಡುವುದು. ಅದಕ್ಕಿಂತ ಕಡಿಮೆಯ ಕ್ರಮಗಳನ್ನು ತೆಗೆದುಕೊಂಡರೆ ಅದರಿಂದ ಪ್ರಯೋಜನ ಇರುವುದಿಲ್ಲ. ಅದಕ್ಕಿಂತ ಹೆಚ್ಚಿನ ಕ್ರಮ ಕೈಗೊಂಡರೆ, ಅದೊಂದು ಒಳ್ಳೆಯ ಸರ್ಕಾರ ಎಂದು ಕರೆಸಿಕೊಳ್ಳುವುದಿಲ್ಲ.

ಈ ವರದಿಯನ್ನು ಗಮನಿಸಿದರೆ, ಅಂದಿನ ಸಂದರ್ಭದಲ್ಲಿ ಹಾಗೂ ಆಗ ಮಂಡಿಸಲ್ಪಡುತ್ತಿದ್ದ ವಾದಗಳ ದೃಷ್ಟಿಯಲ್ಲಿ ಅದು ರಾಷ್ಟ್ರೀಯತೆಯ ಹಾಗೂ ಅತ್ಯಂತ ಒಳ್ಳೆಯ ವಾದ ಎಂದು ನಮಗೆ ಮನವರಿಕೆ ಆಗುತ್ತದೆ. ಅದು ಸಮತೋಲನವನ್ನು ಹೊಂದಿದೆ. ಆದರೆ ಈ ವರದಿಯು ಪ್ರಕಟವಾದಾಗ, ಅಂಬೇಡ್ಕರ್ ಅವರ ಶತ್ರುಗಳಿಂದ, ಅವರ ಟೀಕಾಕಾರರಿಂದ ಹಾಗೂ ಮಾಧ್ಯಮದವರಿಂದ ವ್ಯಾಪಕ ಹೊಗಳಿಕೆಯು ಬಂದಿತು. ರಾತ್ರೋರಾತ್ರಿ ಅವರೊಬ್ಬ ಮಹಾನ್ ರಾಜಕೀಯ ಮುಖಂಡ, ಒಬ್ಬ ದೇಶಭಕ್ತ, ಅಸ್ಪೃಶ್ಯತೆಯೆಂಬ ಇಜ್ಜಲ ಗಣಿಯಲ್ಲಿ ಹುದುಗಿದ್ದ ವಜ್ರ ಎಂದು ಖ್ಯಾತರಾದರು. ಈತನೊಬ್ಬ ಅಪ್ರತಿಮ ಮುತ್ಸದ್ಧಿ ಎಂಬುದು ಕೂಡ ಸಾಬೀತಾಯಿತು. ಅವರೊಬ್ಬ ನಕ್ಷತ್ರದಂತೆ ಹೊಳೆಯುವ ರಾಜಕೀಯ ವ್ಯಕ್ತಿಯಾಗಿ ಆ ಸಮಯದಲ್ಲಿ ಗೋಚರಿಸತೊಡಗಿದರು. ಆದ್ದರಿಂದ ಈ ವರದಿಯು ಹೊರಬಿದ್ದ ನಂತರ ಅವರು ತಮ್ಮ ದೇಶದ ಹಣೆಬರಹ ಬರೆಯುವ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾದರು. ಇದು ಇತಿಹಾಸ ಅಭ್ಯಸಿಸುವವರಿಗೆ ಒಂದು ಒಳ್ಳೆಯ ಮಾರ್ಗದರ್ಶಿಯಾಗಬಹುದು.

ಈ ಮೇಲೆ ಹೇಳಿದಂತೆ ಡಾ. ಅಂಬೇಡ್ಕರ್ ಅವರು ತಮ್ಮ ನಿಲುವು ಮತ್ತು ಸ್ವಂತ ಅಭಿಪ್ರಾಯಗಳನ್ನು ಹೊಂದಿದ್ದ ಪ್ರತ್ಯೇಕ ವರದಿಯನ್ನು ಸಲ್ಲಿಸಿದ್ದರು. ಈ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

---

1. Keer Pp 114-114 and 121-23.

## ಶಿಫಾರಸುಗಳ ಸಾರಾಂಶ

### ವಿಭಾಗ – I

ಬೊಂಬಾಯಿ ರಾಜ್ಯಾಡಳಿತದಿಂದ ಕರ್ನಾಟಕ ಅಥವಾ ಸಿಂಧ್ ಅನ್ನು ಬೇರ್ಪಡಿಸಬಾರದು.

### ವಿಭಾಗ – II

ಅಧ್ಯಾಯ – ೧ : ಪ್ರಾಂತೀಯ ಶಾಸಕಾಂಗಕ್ಕೆ ಸಂಪೂರ್ಣ ಹೊಣೆಗಾರಿಕೆ ಇರಬೇಕು. ಆದರೆ ಶಾಸಕಾಂಗದ ಸದಸ್ಯರು ಈ ವಿಷಯವು ಮೀಸಲುವಿಷಯವಾಗಿ ಇರಬೇಕೆಂದು ತೀರ್ಮಾನಿಸಿದರೆ, ಅವರ ನಿರ್ಣಯವನ್ನು ಕಾರ್ಯಾಗತಗೊಳಿಸುವ ಅವಕಾಶವಿರಬೇಕು.

ಅಧ್ಯಾಯ – ೨ : ಯಾವುದೇ ಪರಿಸ್ಥಿತಿಯಲ್ಲಿಯೂ ಈ ಕ್ಷೇತ್ರಮಟ್ಟದ ಆಡಳಿತವನ್ನು ಶಾಶ್ವತಗೊಳಿಸಬಾರದು. ಇದರಲ್ಲಿ ಯಾವುದೇ ರೀತಿಯ ಕೋಮು ಪ್ರಾತಿನಿಧ್ಯ ಇರಬಾರದು. ಯಾವುದೇ ಮಂತ್ರಿಯು ತಪ್ಪನ್ನು ಎಸಗಿದರು ಸಹ ನ್ಯಾಯಾಲಯ ಅವರನ್ನು ಪ್ರಶ್ನಿಸಬಹುದು. ಸಂವಿಧಾನದಲ್ಲಿ ಮಂತ್ರಿಗಳನ್ನು ವಾಗ್ದಂಡನೆಗೆ ಗುರಿಪಡಿಸಲು ಅವಕಾಶ ಕಲ್ಪಿಸಿರಬೇಕು. ಆಡಳಿತದಲ್ಲಿ ಸಾಮೂಹಿಕ ಜವಾಬ್ದಾರಿಯನ್ನು ಹೊರಬೇಕು. ಈ ಆಡಳಿತಕ್ಕೆ ಮುಖ್ಯಸ್ಥರಾಗಿ ಪ್ರಧಾನಿ ಮಂತ್ರಿಯವರು ಇರಬೇಕೇ ಹೊರತು ರಾಜ್ಯಪಾಲರಲ್ಲ.

ಅಧ್ಯಾಯ – ೩ : ರಾಜ್ಯಪಾಲರು ಸಂವಿಧಾನಬದ್ಧವಾದ ನಾಯಕರಾಗಿ ನೇಮಕಗೊಳ್ಳಬೇಕು. ತುರ್ತು ನಿರ್ಧಾರವನ್ನು ಕೈಗೊಳ್ಳುವ ಅಧಿಕಾರ ಅವರಿಗೆ ಇರಬಾರದು.

### ವಿಭಾಗ – III

ಅಧ್ಯಾಯ – ೧ : ವಯಸ್ಕ ಮತದಾನ ಜಾರಿಯಲ್ಲಿರಬೇಕು.

ಅಧ್ಯಾಯ – ೨ : ಇಡೀ ಶಾಸಕಾಂಗ ಚುನಾಯಿತವಾಗಿರಬೇಕು. ಯುರೋಪ್ ಜನಾಂಗದವರನ್ನು ಹೊರತುಪಡಿಸಿ. ಎಲ್ಲ ರೀತಿಯ ವರ್ಗೀಯ ಹಾಗೂ ಕೋಮು ಚುನಾವಣಾ ಕ್ಷೇತ್ರಗಳನ್ನು ರದ್ದುಗೊಳಿಸಬೇಕು.

ಅಧ್ಯಾಯ – ೩ : ಶಾಸಕಾಂಗದಲ್ಲಿ ೧೪೦ ಸದಸ್ಯರು ಇರಬೇಕು. ಅವರಲ್ಲಿ ೩೩ ಜನರು ಮುಸಲ್ಮಾನರು ೧೫ ಶೋಷಿತ ವರ್ಗದ ಸದಸ್ಯರು ಇರಬೇಕು. ಜನಸಂಖ್ಯೆಯ ಆಧಾರದ ಮೇಲೆ ಜಿಲ್ಲೆಗಳ ಪ್ರಾತಿನಿಧ್ಯ ನಿರ್ಧರಿಸಬೇಕು. ಯಾವುದೇ ಜಿಲ್ಲೆಗೆ ಅತಿಯಾದ ಪ್ರಾತಿನಿಧ್ಯ ಅಥವಾ ಅತಿ ಕಡಿಮೆಯ ಪ್ರಾತಿನಿಧ್ಯ ಇರಬಾರದು. ವಿವಿಧ ವರ್ಗಗಳಿಗೆ ಎಷ್ಟೆಷ್ಟು ಸ್ಥಾನಗಳನ್ನು ನೀಡಬೇಕು ಎಂದು ನಿರ್ಧರಿಸಲು ಒಂದು ಸಮಿತಿ ಇರಬೇಕು. ಯಾವುದೇ ಅಭ್ಯರ್ಥಿಯಾದರೂ ಆ ದೇಶದ ಪ್ರಜೆ ಆಗಿರಲೇಬೇಕು ಎಂಬ ನಿಯಮವನ್ನು ತೊಡೆದು ಹಾಕಬೇಕು.

ಅಧ್ಯಾಯ – ೪ : ಲಕ್ನೋ ಒಪ್ಪಂದವು ಶಾಶ್ವತವಾದ ಒಪ್ಪಂದ ಅಲ್ಲ. ಅದರಿಂದ ಭವಿಷ್ಯದಲ್ಲಿ ಉಂಟಾಗಬಹುದಾದ ಸಮಸ್ಯೆಗಳನ್ನು ಪರಿಗಣಿಸುವ ಅಧಿಕಾರವನ್ನು ಈ ಒಪ್ಪಂದವು ತಪ್ಪಿಸಬಾರದು.

ಅಧ್ಯಾಯ – ೫ : ಯಾವುದೇ ಪ್ರಾಂತದಲ್ಲಿ ಎರಡನೆಯ ಸದನವು ಇರಬಾರದು.

ಅಧ್ಯಾಯ – ೬ : "ಶಾಸಕಾಂಗಕ್ಕೆ ತನ್ನ ಅಧ್ಯಕ್ಷನನ್ನು ಆರಿಸಿಕೊಳ್ಳುವ ಮತ್ತು ತೆಗೆದುಹಾಕುವ, ತನ್ನ ಹಕ್ಕುಭಾಧ್ಯತೆಗಳನ್ನು ರೂಪಿಸಿಕೊಳ್ಳುವ ಹಾಗೂ ತನ್ನ ಕಾರ್ಯಕ್ರಮಗಳನ್ನು ನಿಯಂತ್ರಿಸುವ ಅಧಿಕಾರಗಳಿರಬೇಕು. ಭಾರತ ಸರಕಾರದ ಅಧಿನಿಯಮದಿಂದ ೭೨ಡಿ ಮತ್ತು ೮೦ಸಿ ಪರಿಚ್ಛೇದಗಳನ್ನು ತೆಗೆದುಹಾಕಬೇಕು. 'ಅವಿಶ್ವಾಸ ನಿಲುವಳಿ'ಯನ್ನು ಮಂಡಿಸುವ ಅಧಿಕಾರವನ್ನು ಶಾಸಕಾಂಗವು ಹೊಂದಿರಬೇಕು. ಕೆಲವೊಂದು ನಿಬಂಧನೆಗಳಿಗೆ ಒಳಪಟ್ಟು ಸಂವಿಧಾನವನ್ನು ತಿದ್ದುಪಡಿಮಾಡುವ ಅಧಿಕಾರವು ಶಾಸಕಾಂಗಕ್ಕೆ ಇರಬೇಕು.

**ವಿಭಾಗ – IV**

ಅಧ್ಯಾಯ – ೧ : ಪ್ರಾಂತ್ಯಗಳಿಗೆ ಸಂಪೂರ್ಣ ಸ್ವಾಯತ್ತತೆ ಇರಬೇಕು. ಸದ್ಯದಲ್ಲಿ ಕೇಂದ್ರಸರಕಾರವು ತಾನು ಮೊದಲು ಅನುಮತಿಯನ್ನು ನೀಡಿ, ನಂತರ ಅದನ್ನು ಹಿಂತೆಗೆದುಕೊಳ್ಳುವ ವ್ಯವಸ್ಥೆಯನ್ನು ತೆಗೆದುಹಾಕಿ. ಕೇಂದ್ರ ಪ್ರಾಂತ್ಯಗಳ ನಡುವೆ ಅವುಗಳ ಕಾರ್ಯಕ್ಷೇತ್ರಗಳ ವಿಭಜನೆ ಮಾಡುವುದನ್ನು ಪರಿಗಣಿಸಬೇಕು.

ಅಧ್ಯಾಯ – ೨ : ಪ್ರಾಂತೀಯ ಸರಕಾರಕ್ಕೆ ನಿಗದಿಗೊಳಿಸಲಾದ ಮಿತಿಗೆ ಒಳಪಟ್ಟು, ಆ ಸರಕಾರ ಮತ್ತು ದೇಶೀ ಸರಕಾರಗಳ ನಡುವಿನ ವ್ಯವಹಾರಗಳು ನಡೆಯಲು ಕೇಂದ್ರ ಸರಕಾರದ ಆವಶ್ಯಕತೆಯಿಲ್ಲದೆ ನೇರವಾಗಿ ನಡೆಯಬೇಕು. ಭಾರತದ ಆಡಳಿತದಲ್ಲಿ ಮಹಾಪ್ರಭುಗಳ ಸ್ಥಾನವನ್ನು ಮಸುಕುಗೊಳಿಸುವ ಭಾರತ ಸರಕಾರದ ಅಧಿನಿಯಮದ ೨ನೆಯ ಪರಿಚ್ಛೇದವನ್ನು ತೆಗೆದುಹಾಕಬೇಕು.

**ವಿಭಾಗ – V**

ಪ್ರಾಂತ್ಯಗಳಲ್ಲಿ ಪ್ರತ್ಯೇಕವಾದ ಲೋಕಸೇವಾ ಆಯೋಗಗಳು ಇರಬೇಕು ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಆಡಳಿತ ಸೇವೆಗಳಿಗೆ ನೇಮಕಾತಿಯನ್ನು ಮಾಡುವುದನ್ನು ನಿಲ್ಲಿಸಬೇಕು. ಅವರ ಕಾರ್ಯಗಳು ಪ್ರಾಂತೀಯ ಲೋಕಸೇವಾ ಆಯೋಗ ಅಥವಾ ಲೋಕಸೇವಾ ಆಯೋಗದೊಂದಿಗೆ ಕೆಲಸ ನಿರ್ವಹಿಸುವ ಒಬ್ಬ ಅಧಿಕಾರಿಯ ಮೂಲಕ ನಡೆಯಬೇಕು. ಆಡಳಿತ ಸೇವೆಯಲ್ಲಿ ಭಾರತೀಕರಣವು ಶೀಘ್ರವಾಗಿ ನೆರವೇರಬೇಕು. ಪ್ರತಿಯೊಂದು ಲೋಕಾಸೇವಾ ಆಯೋಗಗಳ ಕಾರ್ಯದ ವೇಗವು ಆಯಾ ಪ್ರಾಂತದಲ್ಲಿರುವ ವಿವಿಧ ಇಲಾಖೆಗಳ ಅಗತ್ಯಗಳಿಗುಣವಾಗಿ ಇರತಕ್ಕದ್ದು. ಭಾರತೀಕರಣದ ಜೊತೆಯಲ್ಲಿಯೇ ತಾರತಮ್ಯಸಹಿತವಾದ ವೇತನ ಶ್ರೇಣಿಗಳು ನಿಗದಿತವಾಗಬೇಕು. ಆಡಳಿತ ಸೇವೆಯ ವ್ಯವಸ್ಥೆಯನ್ನೂ ಭಾರತೀಕರಣಗೊಳಿಸುವಾಗ ಹಿಂದುಳಿದ ವರ್ಗಗಳವರ ಬೇಡಿಕೆಗಳನ್ನು ಪೂರೈಸಬೇಕು.[೧]

೧೭ನೆಯ ಮೇ ೧೯೨೯ ಡಾ. ಬಿ.ಆರ್. ಅಂಬೇಡ್ಕರ್

ಸೈಮನ್ ಆಯೋಗವು ತನ್ನ ಅಂತಿಮ ವರದಿಯನ್ನು ೧೯೩೦ರ ಮೇ ತಿಂಗಳಿನಲ್ಲಿ ನೀಡಿತು. ಭಾರತದ ರಾಷ್ಟ್ರೀಯತೆಯ ಉದ್ದೇಶ ಮತ್ತು ಅದರ ಸಾಮರ್ಥ್ಯಗಳಿಗೆ ಅದು ಮಹತ್ವವನ್ನು ನೀಡಿರಲಿಲ್ಲ. ಭಾರತದ ರಾಜಕೀಯ ಪಕ್ಷಗಳಲ್ಲಿ ಒಮ್ಮತವು ಮೂಡದಿರುವುದರಿಂದ, ಪ್ರತ್ಯೇಕ ಮತಕ್ಷೇತ್ರಗಳನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಅದು ತನ್ನ ಶಿಫಾರಸ್ಸಿನಲ್ಲಿ ಹೇಳಿತ್ತು. ನೆಹರೂ ವರದಿಯು ಸರ್ವಸಮ್ಮತವಾದ ಪರಿಹಾರವಲ್ಲ ಎಂಬುದು ಆಯೋಗದ ಅಭಿಪ್ರಾಯವಾಗಿತ್ತು.[೨]

---

೧ ಬರಹಗಳು ಮತ್ತು ಭಾಷಣಗಳು

೨ Keer Pp 139

ಭಾರತದ ಭವಿಷ್ಯ ಸಂವಿಧಾನದ ಬಗೆಗೆ ಚರ್ಚಿಸುವ ಸಲುವಾಗಿ ಸರ್ಕಾರವು ಲಂಡನ್ನಿನಲ್ಲಿ ದುಂಡು ಮೇಜಿನ ಸಭೆಯನ್ನು ಆಯೋಜಿಸಿತ್ತು. ಇಂತಹ ಒಂದು ಪ್ರಮುಖ ಸಮಯದಲ್ಲಿ ಶೋಷಿತ ವರ್ಗದ ಜನರು ತಮ್ಮ ಅಹವಾಲನ್ನು ಮಂಡಿಸುವುದು ಅತ್ಯಂತ ಮುಖ್ಯವಾದ ಅಗತ್ಯವಾಗಿತ್ತು. ಶೋಷಿತ ವರ್ಗದ ಜನರಿಗೆ, ಅವರಿಗೆ ನ್ಯಾಯಯುತವಾಗಿ ಸಿಗಬೇಕಾದಂತಹ ಹಕ್ಕನ್ನು ಕೊಡಮಾಡುವ ಸಂವಿಧಾನಕ್ಕೆ ಅಧಿಕಾರ ನೀಡಬೇಕು ಎಂಬುದನ್ನು ಅವರು ಸ್ಪಷ್ಟಗೊಳಿಸಬೇಕಿತ್ತು. ಈ ಒಂದು ದೃಷ್ಟಿಕೋನದೊಂದಿಗೆ ಡಾ. ಅಂಬೇಡ್ಕರ್ ಅವರೊಂದಿಗೆ ಚರ್ಚಿಸಿದ ನಂತರ ಶೋಷಿತ ವರ್ಗದ ಜನರ ಹಕ್ಕುಗಳನ್ನು ಚರ್ಚಿಸುವ ಸಲುವಾಗಿ ಭಾರತದ ಎಲ್ಲಾ ಕಡೆಗಳಿಂದ ಪ್ರತಿನಿಧಿಗಳನ್ನು ಸಮಾವೇಶಗೊಳಿಸಬೇಕು ಎಂಬ ತೀರ್ಮಾನಕ್ಕೆ ಬರಲಾಯಿತು. ಇದರಂತೆಯೇ ಅಖಿಲ ಭಾರತ ಶೋಷಿತ ವರ್ಗದವರ ಸಮಾವೇಶವು ೧೯೩೦ನೆಯ ಆಗಸ್ಟ್ ೮ ಹಾಗೂ ೯ ರಂದು ನಾಗ್ಪುರದಲ್ಲಿ ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ೮ನೆಯ ದಿನಾಂಕದಂದು ಡಾ. ಅಂಬೇಡ್ಕರ್ ಅವರು ಬ್ರಿಟಿಷ್ ಸಾರ್ವಭೌಮತ್ವ ಅಥವಾ ವಿಶ್ವವ್ಯವಹಾರಗಳ ಸಂಧರ್ಭದಲ್ಲಿ, ಮುಂಬರುವ ಭಾರತದ ಸಂವಿಧಾನದಲ್ಲಿ ಶೋಷಿತ ವರ್ಗಗಳವರಿಗೆ ನೀಡಬೇಕಾಗಿರುವ ರಕ್ಷಣೆಗಳು ಮತ್ತು ಭರವಸೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಭಾರತದ ಸಮಸ್ಯೆಯ ಬಗೆಗೆ ಮಾತನಾಡಿದರು.

"ಈ ಮೊದಲೇ ಘೋಷಿಸಿದಂತೆ ಭಾರತೀಯ ಪ್ರಜೆಗಳನ್ನು ತೃಪ್ತಿಪಡಿಸುವಂತಹ ಒಂದು ಸಂವಿಧಾನವನ್ನು ರಚಿಸಲು ಬ್ರಿಟಿಷ್ ಸರ್ಕಾರವು ಲಂಡನ್ನಿನಲ್ಲಿ ದುಂಡು ಮೇಜಿನ ಸಭೆಯನ್ನು ಆಯೋಜಿಸಿದೆ. ಅದರಲ್ಲಿ ಭಾರತೀಯ ಪ್ರತಿನಿಧಿಗಳು, ಬ್ರಿಟನ್ನಿನ ಸರ್ಕಾರದ ಪ್ರತಿನಿಧಿಗಳು ಹಾಗೂ ಬ್ರಿಟನ್ನಿನ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ."

ಈ ದುಂಡು ಮೇಜಿನ ಸಭೆಯಲ್ಲಿ ೮೯ ಜನ ಸದಸ್ಯರು ಭಾಗಿಯಾಗಿದ್ದರು. ಇದರಲ್ಲಿ ೧೬ ಜನರು ಬ್ರಿಟನ್ನಿನ ಮೂರು ರಾಜಕೀಯ ಪಕ್ಷಗಳ ಪ್ರತಿನಿಧಿಗಳಾಗಿದ್ದರು. ೫೩ ಜನರು ೨೦ ಭಾರತೀಯ ರಾಜ್ಯಗಳಿಂದ ಬಂದಂತಹ ಪ್ರತಿನಿಧಿಗಳಾಗಿದ್ದರು. ಆದರೆ ಈ ಸಮಾವೇಶಕ್ಕೆ ಬೆಂಬಲ ನೀಡದಿದ್ದಂತಹ ಕಾಂಗ್ರೆಸ್‌ನ ಒಬ್ಬ ಪ್ರತಿನಿಧಿಯೂ ಇರಲಿಲ್ಲ. ಹೀಗೆ ಆಹ್ವಾನಿತರಾದವರಲ್ಲಿ ೧೩ ಜನ ಹಿಂದೂ ಸ್ವತಂತ್ರ ಚಿಂತಕರಾಗಿದ್ದರು. ಅವರಲ್ಲಿ ಪ್ರಮುಖರೆಂದರೆ ಸರ್. ತೇಜ ಬಹದ್ದೂರ್ ಸಪ್ರು, ಎಂ.ಆರ್. ಜಯಕರ್, ಸರ್ ಚಿಮನ್ ಲಾಲ್ ಸೆಟಲ್‌ವಾಡ್, ಶ್ರೀನಿವಾಸ ಶಾಸ್ತ್ರಿ ಹಾಗೂ ಸಿ.ವೈ.ಚಿಂತಾಮಣಿ, ಮುಸಲ್ಮಾನ ಪ್ರತಿನಿಧಿಗಳೆಂದರೆ ಹೆಚ್‌ಹೆಚ್, ಅಘಾಖಾನ್, ಸರ್.ಮೊಹಮದ್ ಶಫಿ, ಮೊಹಮದ್ ಅಲಿ ಜಿನ್ನಾ, ಫ಼ಜಲುಲ್ ಹಕ್, ಸರದಾರ್ ಉಜ್ವಲ್ ಸಿಂಘ ಎನ್ನುವವರು ಸಿಖ್ಖರ ಪ್ರತಿನಿಧಿಯಾಗಿದ್ದರೆ ಬಿ.ಎಸ್. ಮೂಂಜೆ ಎಂಬುವವರು ಹಿಂದೂ ಮಹಾಸಭೆಯನ್ನು ಪ್ರತಿನಿಧಿಸಿದ್ದರು. ಕೆ.ಟಿ.ಪಾಲ್ ಎಂಬುವವರು ಕ್ರೈಸ್ತರ ಪ್ರತಿನಿಧಿಯಾಗಿದ್ದರು, ಆಲ್ವಾರ್, ಬರೋಡ, ಭೋಪಾಲ್, ಬಿಕನೇರ್, ಕಾಶ್ಮೀರ, ಪಾಟೀಯಾಲಗಳ ರಾಜರು, ಸರ್ ಅಕ್ಬರ್ ಹೈದರಿ, ಸರ್.ಸಿ.ಪಿ.ರಾಮಸ್ವಾಮಿ ಅಯ್ಯರ್, ಸರ್ ಮಿರ್ಜಾ ಇಸ್ಮಾಯಿಲ್ ಮುಂತಾದವರು ಭಾರತದ ವಿವಿಧ ರಾಜ್ಯಗಳನ್ನು ಪ್ರತಿನಿಧಿಸಿದ್ದರು. ಸರ್.ಎ.ಪಿ. ಪಾತ್ರೋ ಹಾಗೂ ಭಾಸ್ಕರ್‌ರಾವ್, ವಿ.ಜಾಧವ್ ಇತರ ಹಿತಾಸಕ್ತಿಗಳ ಪ್ರತಿನಿಧಿಗಳಾಗಿದ್ದರು. ಡಾ. ಅಂಬೇಡ್ಕರ್ ಹಾಗೂ ರಾವ್ ಬಹದ್ದೂರ್ ಶ್ರೀನಿವಾಸನ್ ಶೋಷಿತ ವರ್ಗದ ಪ್ರತಿನಿಧಿಗಳಾಗಿದ್ದರು. ಡಾ. ಅಂಬೇಡ್ಕರ್ ಅವರಿಗೆ ಸೆಪ್ಟೆಂಬರ್ ೬, ೧೯೩೦ರಂದು ವೈಸ್‌ರಾಯ್ ಅವರು ಆಹ್ವಾನವನ್ನು ನೀಡಿದ್ದರು. ಈ ದುಂಡು ಮೇಜಿನ ಸಮಾವೇಶವು ಭಾರತ ಹಾಗೂ ಇಂಗ್ಲೆಂಡ್‌ಗಳಿಗೆ ಒಂದು ಮಹತ್ತರ ಐತಿಹಾಸಿಕ ಘಟನೆಯೇ ಆಗಿತ್ತು. ಆದರೆ ಅದು ಅಸ್ಪೃಶ್ಯರಿಗಂತೂ ಒಂದು ಮೈಲಿಗಲ್ಲು ಎಂದೇ ಪರಿಗಣಿಸಲಾಗಿತ್ತು. ಏಕೆಂದರೆ ಈ ಸಮಾವೇಶದಲ್ಲಿ ಮೊತ್ತ ಮೊದಲ ಬಾರಿಗೆ

ಅವರಿಗೆ ಇತರ ಭಾರತೀಯರೊಂದಿಗೆ ಸಂವಿಧಾನ ರಚನೆಯಂತಹ ಮಹತ್ತರ ವಿಷಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸುವ ಅವಕಾಶ ನೀಡಲಾಗಿತ್ತು. ಇವರ ಧ್ವನಿಯು ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ, ಅದು ಕೂಡ ತನ್ನ ತಾಯ್ನಾಡಿನ ಆಡಳಿತಕ್ಕೆ ಸಂಬಂಧಿಸಿದಂತೆ, ಕೇಳಿ ಬರುವುದರಲ್ಲಿತ್ತು.

SS. Viceroy of India ಎಂಬ ಹಡಗಿನಲ್ಲಿ ಡಾ. ಅಂಬೇಡ್ಕರ್ ೧೯೩೦ರ ಅಕ್ಟೋಬರ್ ೪ ರಂದು ಲಂಡನ್ನಿಗೆ ತೆರಳಲು ಮುಂಬಯಿಯಿಂದ ಹೊರಟರು. ಆಗ ಇವರ ಪ್ರಯಾಣಕ್ಕೆ ಭಾರತದಲ್ಲಿನ ವಾತಾವರಣ ಅಷ್ಟೊಂದು ಉತ್ಸಾಹದಾಯಕವಾಗಿಯೇನೂ ಇರಲಿಲ್ಲ. ಇಡೀ ದೇಶವೇ ಕ್ಷುಬ್ಧ ಪರಿಸ್ಥಿತಿಯಲ್ಲಿತ್ತು. ಕಾಂಗ್ರೆಸ್ಸಿಗರಂತೂ ಬ್ರಿಟಿಷರೊಂದಿಗೆ ಕೈ ಜೋಡಿಸಿ, ಭಾರತದ ಸಮಸ್ಯೆಗಳಿಗೆ ಅವರದೇ ಆದ ಪ್ರಾಮಾಣಿಕ ರೀತಿಯಲ್ಲಿ ಪರಿಹಾರವನ್ನು ಕಂಡು ಹಿಡಿಯುವ ಪ್ರಯತ್ನವನ್ನು ಪಡುತ್ತಿದ್ದವರ ಮೇಲೆ ಕೆಂಡವನ್ನು ಕಾರುತ್ತಿದ್ದರು. ಇಂತಹ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಅಕ್ಟೋಬರ್ ೮ ರಂದು ಆ್ಯಡೆನ್‌ನಿಂದ ಅಂಬೇಡ್ಕರ್ ಅವರು ತಮ್ಮ ಅತ್ಯಂತ ನಂಬಿಕಸ್ಥ ಕಾರ್ಯದರ್ಶಿಗೆ ಪತ್ರ ಬರೆದು. ತಮ್ಮ ಜನರ ರಕ್ಷಣೆಯ ಬಗ್ಗೆಯೇ ಭಯ ಇರುವುದಾಗಿ ಹೇಳಿಕೊಂಡಿದ್ದರು. ತಮ್ಮ ಎಚ್ಚರಿಕೆಯಲ್ಲಿ ತಾವಿರುವಂತೆ ಹಾಗೂ ರಾತ್ರಿಯ ವೇಳೆ ಕೆಲಸ ಮಾಡದಂತೆ ಸೂಚಿಸಿದ್ದರು. ಕಛೇರಿಯ ಬಾಗಿಲಿಗೆ ದಪ್ಪನಾದ ಕಬ್ಬಿಣದ ಸರಳುಗಳನ್ನು ಹಾಕಿ, ಅದಕ್ಕೆ ಬೀಗ ಹಾಕುವಂತೆ ಸೂಚನೆ ನೀಡಿದ್ದರು. ತಮ್ಮ ಸಂಘದೊಂದಿಗೆ ವೈರತ್ವ ಹೊಂದಿದ್ದ ಮತ್ತೊಬ್ಬ ಶೋಷಿತ ವರ್ಗದ ನಾಯಕನ ಚಲನವಲನದ ಬಗ್ಗೆ ಗಮನ ನೀಡುವಂತೆ ಹೇಳಿದ್ದರು.

ಇತ್ತ ಇಂಗ್ಲೆಂಡಿನಲ್ಲಿ ರಾಜಕೀಯ ಪರಿಸ್ಥಿತಿ ಶೋಷಿತ ವರ್ಗದ ಸಮಸ್ಯೆಗಳ ಬಗೆಗೆ ಅನುಕಂಪವನ್ನು ಹೊಂದಿರುವಂತೆ ಡಾ. ಅಂಬೇಡ್ಕರ್ ಅವರಿಗೆ ತೋರುತ್ತಿತ್ತು. ಅವರು ಇಂಗ್ಲೆಂಡ್ ತಲುಪಿದ ಕೂಡಲೇ ಅಲ್ಲಿನ ವಿವಿಧ ಪಕ್ಷಗಳ ರಾಜಕೀಯ ಮುಖಂಡರನ್ನು ಶೋಷಿತರ ಸಮಸ್ಯೆಯ ಬಗೆಗೆ ಚರ್ಚಿಸುವ ಸಲುವಾಗಿ ಸಂಪರ್ಕಿಸಲು ಪ್ರಾರಂಭಿಸಿದರು. ಇತ್ತ ಬೊಂಬಾಯಿಯ ಶಾಸಕಾಂಗ ಸಭೆಗೆ ಹೊಸದಾಗಿ ಯಾವ ಸದಸ್ಯರು ನೇಮಗೊಂಡಿದ್ದಾರೆ ಎಂದು ತಿಳಿಯುವ ಕುತೂಹಲ ಅವರಿಗಿತ್ತು. ಇದಲ್ಲದೇ ಚಾವ್ದಾರ್ ಕೆರೆಯ ವಿಷಯದಲ್ಲಿ ನ್ಯಾಯಾಲಯ ಯಾವ ತೀರ್ಮಾನ ಕೈಗೊಂಡಿದೆ ಎಂಬುದನ್ನು ತಿಳಿಯುವ ಕುತೂಹಲವೂ ಇತ್ತು.

೧೯೩೦ರ ನವಂಬರ್ ೧೨, ರಂದು ಲಂಡನ್ನಿನಲ್ಲಿ ಕಾರ್ಯಕ್ರಮವು ಪ್ರಾರಂಭವಾಯಿತು. ದುಂಡು ಮೇಜಿನ ಸಮಾವೇಶದ ಪ್ರಾರಂಭ ಮಾಡುವಲ್ಲಿ ಬ್ರಿಟಿಷರು ಬಹಳಷ್ಟು ಆಸಕ್ತಿ ತೋರಿದರು. ಹೌಸ್ ಆಫ್ ಲಾರ್ಡ್ಸ್, ಹಾಗೂ ಸಮಾವೇಶದ ಸ್ಥಳಕ್ಕೆ ಹೋಗುವ ದಾರಿಯ ಇಕ್ಕೆಲಗಳಲ್ಲಿ ಜನರು ಕಿಕ್ಕಿರಿದು ತುಂಬಿದ್ದರು. ಸ್ವಲ್ಪ ಸಮಯದ ನಂತರ ಇಂಗ್ಲೆಂಡಿನ ಮಹಾರಾಜರು ಆಗಮಿಸಿದರು. ಸಮಾವೇಶವನ್ನು ಉದ್ಘಾಟನೆ ಮಾಡುತ್ತಾ ಅವರು ಈ ರೀತಿ ನುಡಿದರು : ಹಲವಾರು ಬಾರಿ ನಮ್ಮ ಪ್ರಭುತ್ವವು ಹಲವಾರು ಐತಿಹಾಸಿಕ ಸಮಾವೇಶಗಳನ್ನು ಭಾರತದಲ್ಲಿ ಆಯೋಜಿಸಿತ್ತು. ಯಾವಾಗಲೂ ಬ್ರಿಟನ್ ಹಾಗೂ ಭಾರತೀಯ ಅಧಿಕಾರಿಗಳ ಭೇಟಿಯಾಗಿಲ್ಲ. ಅಲ್ಲದೇ ವಿವಿಧ ರಾಜ್ಯಗಳ ರಾಜರುಗಳ ಭೇಟಿಯೂ ಆಗಿಲ್ಲ. ಇದೀಗ ದಂಡು ಮೇಜಿನ ಸಮಾವೇಶದಲ್ಲಿ ನೀವೆಲ್ಲ ಭೇಟಿ ಆಗುತ್ತಿರುವಿರಿ. ಭಾರತದ ಮುಂದಿನ ಆಡಳಿತ ವ್ಯವಸ್ಥೆಯನ್ನು ಕುರಿತು ಹಾಗೂ ನಮ್ಮ ಸರಕಾರವು ಈ ದಿಸೆಯಲ್ಲಿ ತೆಗೆದುಕೊಳ್ಳಬೇಕಾಗಿರುವ ಕ್ರಮಗಳನ್ನು ಕುರಿತು ಸಲಹೆಯನ್ನು ಪಡೆಯಲು ಬ್ರಿಟಿಷ್ ಮತ್ತು ಭಾರತೀಯ ಮುತ್ಸದ್ಧಿಗಳ, ಭಾರತದ ರಾಜ್ಯಗಳ ರಾಜರ ಸಮಾವೇಶವನ್ನು ಈ ವರೆಗೂ ನಡೆಸಿರಲಿಲ್ಲ." ಅವರು ತಮ್ಮ ಭಾಷಣವನ್ನು ಮುಗಿಸುವಾಗ ತಮ್ಮ ಭರವಸೆಯನ್ನು ಈ ರೀತಿ

ವ್ಯಕ್ತಪಡಿಸಿದ್ದರು. "ಭಾರತಕ್ಕೆ ಅತ್ಯಂತ ಒಳ್ಳೆಯ ಸೇವೆಯನ್ನು ಮಾಡಿದ ಜನರು ಎಂದು ನಿಮ್ಮೆಲ್ಲರ ಹೆಸರುಗಳು ಇತಿಹಾಸದಲ್ಲಿ ದಾಖಲಾಗಲಿ". ಮಹಾರಾಜರು ಈ ಸಮಾವೇಶದ ಸ್ಥಳದಿಂದ ಹೊರಟು ಹೋದನಂತರ ರ್‍ಯಾಮಸೇ ಮ್ಯಾಕ್‌ಡೋನಾಲ್ಸ್ ಈ ಸಮಾವೇಶದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು. ಈತ ಕಾರ್ಮಿಕ ಮುಖಂಡರಾಗಿದ್ದರು ಮಾತ್ರಲ್ಲ "Government of India" ಎಂಬ ಪುಸ್ತಕದ ಲೇಖಕರೂ ಆಗಿದ್ದರು. ಅವರು ಬ್ರಿಟನ್ ಸರ್ಕಾರವು ಭಾರತ ಸರ್ಕಾರದ ಸಮಸ್ಯೆ ಬಗೆಹರಿಸಲು ಕಟಿಬದ್ಧವಾಗಿದೆ ಮತ್ತು ಒಂದು ಹೊಸ ಇತಿಹಾಸದ ಜನನಕ್ಕೆ ನಾವು ಕಾರಣರಾಗುತ್ತಿದ್ದೇವೆ ಎಂದು ಹೇಳಿದರು.

ಈ ದುಂಡು ಮೇಜಿನ ಸಮಾವೇಶವು ಭಾರತದ ಸಂವಿಧಾನ ರಚನೆಗೆಂದು ಚುನಾಯಿತವಾಗಿದ್ದ ಸಂವಿಧಾನ ರಚನಾ ಸಮಿತಿಯಲ್ಲ. ಅದು ಬ್ರಿಟಿಷ್ ಹಾಗೂ ಭಾರತದ ಆಡಳಿತಗಾರರ ಸಮಾಗಮವಾಗಿದ್ದು ಅದಕ್ಕೆ ಮತದಾನದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಯಾವುದೇ ಅಧಿಕಾರವೂ ಇರಲಿಲ್ಲ. ಈ ಸಮಾವೇಶದಲ್ಲಿ ಚರ್ಚೆ ಆಗಬೇಕಿರುವ ವಿಷಯಗಳನ್ನು ನಿರ್ಧರಿಸಿ, ಗುರುತು ಮಾಡಿಕೊಳ್ಳುವುದಷ್ಟೆ ಆಗಿದ್ದಿತು.

ಈ ಸಮಾವೇಶದ ಸ್ಥಳವು ಅನಂತರ ಸಂತ ಜೇಮ್ಸ್ ಅರಮನೆಗೆ ಸ್ಥಳಾಂತರಗೊಂಡಿತು. ೧೭ನೆಯ ನವೆಂಬರ್‌ದಿಂದ ೨೧ನೆಯ ನವಂಬರದವರೆಗೂ ಬಹಳಷ್ಟು ಚರ್ಚೆಗಳು ನಡೆದವು. ಆ ಸಮಯದಲ್ಲಿ ಸಪ್ರು, ಜಯಕರ್, ಮೂಂಜೆ, ಜಿನ್ನಾ, ಬಿಕನೇರ್‌ನ ಮಹಾರಾಜ ಹಾಗೂ ಡಾ. ಅಂಬೇಡ್ಕರ್ ಅವರು ಅತ್ಯಂತ ಒಳ್ಳೆಯ ಭಾಷಣಗಳನ್ನು ಮಾಡಿದ್ದರು. ಈ ಸಮಾವೇಶದ ಅತ್ಯಂತ ಬುದ್ಧಿವಂತ ಸದಸ್ಯರಲ್ಲಿ ಒಬ್ಬರು ಎಂದು ಪರಿಗಣಿಸಲಾಗಿದ್ದ ಸಪ್ರು (ಸರ್ ತೇಜ್ ಬಹದ್ದೂರ್ ಸಪ್ರು) ಅತ್ಯಂತ ಒಳ್ಳೆಯ ಶೈಲಿಯಲ್ಲಿ ಈ ರೀತಿ ಹೇಳಿದ್ದರು. "ಭಾರತಕ್ಕೆ ಬೇಕಿರುವುದು ಹಾಗೂ ಸಾಧಿಸ ಹೊರಟಿರುವುದು ಪ್ರಮುಖವಾಗಿ ಒಂದು ಅಂಶ. ಅದೇನೆಂದರೆ, ಸಮಾನತೆ. ಬ್ರಿಟಿಷ್ ಸಾಮಾನ್ಯ ಸಭೆಯ ಇತರ ಮೂರು ಸದಸ್ಯರಂತೆ ಭಾರತಕ್ಕೆ ಕೂಡ ಸ್ಥಾನಮಾನ ನೀಡಬೇಕಿದೆ. ಇದರಿಂದಾಗಿ ಭಾರತದ ಸರ್ಕಾರವು ಸಾಮಾನ್ಯ ಜನತೆಗೆ ಸ್ಪಂದಿಸುವುದಷ್ಟೇ ಅಲ್ಲದೆ ಅದಕ್ಕೆ ಜವಾಬ್ದಾರವೂ ಆಗಿರಬೇಕು."

ಬಿಕನೇರನ ಮಹಾರಾಜರು ಮೊದಲು ತಮ್ಮ ಪರಿಚಯ ಮಾಡಿಕೊಟ್ಟರು. ಅನಂತರ ಮಹಾರಾಜರಿಗೆ ಬ್ರಿಟಿಷರ ಸರ್ಕಾರದ ಬಗೆಗೆ ಇರುವ ಆಶೋತ್ತರಗಳೇನು ಎಂದು ವಿವರಿಸಿದರು. ಆನಂತರ ತಮ್ಮ ಅಶೋತ್ತರಗಳು ಈಡೇರಿಸುವುದಾದರೆ ಬ್ರಿಟಿಷ್ ಭಾರತದ ಒಕ್ಕೂಟಕ್ಕೆ ಎಲ್ಲಾ ರಾಜರ ಒಕ್ಕೂಟವೂ ಸ್ವೇಚ್ಛೆಯಿಂದ ಸೇರುತ್ತದೆ ಎಂದರು. ಇದು ಎಲ್ಲರಿಗೆ ಆಶ್ಚರ್ಯ ಉಂಟುಮಾಡಿತು. ಈ ನಿರ್ಧಾರಕ್ಕೆ ಪಾಟಿಯಾಲದ ಮಹಾರಾಜರು ಹಾಗೂ ಭೋಪಾಲಿನ ನವಾಬರು ಕೂಡ ತಮ್ಮ ಸಹಮತ ವ್ಯಕ್ತಪಡಿಸಿದರು.

ಭಾರತದ ಒಕ್ಕೂಟ ಆಡಳಿತ ವ್ಯವಸ್ಥೆಯನ್ನು ಮುಸಲ್ಮಾನ ಸದಸ್ಯರು ಸ್ವಾಗತಿಸಿದರು. ಆದರೆ ಅವರು ಒಂದು ಅಂಶವನ್ನು ಒತ್ತಿ ಹೇಳಿದರು. ಇತರ ಪ್ರಾಂತ್ಯಗಳಿಗೆ ನೀಡಿರುವ ಮಾನ್ಯತೆಯನ್ನು ಭಾರತದ ವಾಯುವ್ಯ ಪ್ರಾಂತ್ಯಗಳಿಗೂ ಬ್ರಿಟಿಷರ ಸರ್ಕಾರ ನೀಡಬೇಕೆಂದು ಒತ್ತಾಯಿಸಿದರು. ಇದಲ್ಲದೇ ಸಿಂಧ್ ಪ್ರಾಂತ್ಯವನ್ನು ಪ್ರತ್ಯೇಕಿಸಬೇಕು. ಎಂದರು.

ಜಯಕರ್ ಅವರು ತಮ್ಮ ಮೃದುವಾದ ದನಿಯಲ್ಲಿ ಪೂರ್ಣಾಧಿಕಾರದ ಸರಕಾರವನ್ನು ಭಾರತೀಯರಿಗೆ ನೀಡುವಂತೆ ಕೇಳಿಕೊಂಡರು. "ಭಾರತಕ್ಕೆ ಅಂತಹ ಸರಕಾರವನ್ನು ನೀವು ನೀಡಿದರೆ, ಹಲವೇ ಹಲವು ತಿಂಗಳುಗಳಲ್ಲಿ ಸ್ವಾತಂತ್ರ್ಯದ ಕೂಗೇ ಸತ್ತು ಹೋಗುತ್ತದೆ. ಅದೇ ವೇಳೆ ನಾವು ಈ ಸಮಾವೇಶದಿಂದ

ಬರಿಗೈಯಲ್ಲಿ ಹಿಂದಿರುಗಿದರೆ, ಖಂಡಿತವಾಗಿಯೂ ಸ್ವಾತಂತ್ರ್ಯದ ಕೂಗು ಇನ್ನೂ ಜೋರಾಗಿ ಮೊಳಗುತ್ತದೆ."

ಪಾಟಿಯಾಲದ ಮಹಾರಾಜರ ಅಭಿಪ್ರಾಯವನ್ನೇ ಡಾ.ಮೂಂಜೆಯವರು ಪ್ರತಿಧ್ವನಿಸಿದ್ದರು. ಅವರು ಲಾರ್ಡ್ ಪೀಲ್ ಅವರ ಎಲ್ಲಾ ಅಭಿಪ್ರಾಯಗಳನ್ನು ಖಂಡಿಸಿದ್ದರು. ಬ್ರಿಟಿಷ್ ಸರ್ಕಾರ ಯಾವ ರೀತಿಯಲ್ಲಿ ಭಾರತದ ಹಡಗಿನ ಉದ್ಯಮವನ್ನು, ಹತ್ತಿಯ ಹಾಗೂ ಇತರ ಉದ್ಯಮಗಳನ್ನು ಸಂಪೂರ್ಣವಾಗಿ ನಾಶಮಾಡಿದೆ ಎಂದು ತಿಳಿಸಿದರು. ಸ್ವಾತಂತ್ರ್ಯದ ಹೋರಾಟಗಾರರ ಬಲವನ್ನು ತೊಡೆದು ಹಾಕಲು ತಮ್ಮ ಬಲ ಪ್ರಯೋಗ ಮಾಡುವುದಾಗಿ ನೀಡಿದ್ದ ಬ್ರಿಟನ್ನಿನ ಸರ್ಕಾರದ ಹೇಳಿಕೆಯು ದೋಷಯುಕ್ತವಾಗಿದೆ ಮತ್ತು ಅಂತಹ ಸಮಯ ಹೋಗಿ ಯಾವುದೋ ಕಾಲ ಆಗಿ ಹೋಗಿದೆ ಎಂದು ಹೇಳಿದರು.

ಕಾರ್ಮಿಕರಿಗಾಗಿ ಹೆಚ್ಚಿನ ಹಕ್ಕುಗಳು ಇರಬೇಕು ಎಂದು ಎಸ್.ಎಂ.ಜೋಷಿ ಪ್ರತಿಪಾದಿಸಿದರು. ಸರ್ ಮಿರ್ಜಾ ಇಸ್ಮಾಯಿಲ್ ಅವರು ಒಕ್ಕೂಟ ವ್ಯವಸ್ಥೆಗೆ ಮುಂದಿನ ಸಂವಿಧಾನ ಗಮನ ನೀಡಬೇಕು ಎಂದು ಒತ್ತಿ ಹೇಳಿದರು. ಸರ್.ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರು ಇದೀಗ ತಯಾರಾಗುವ ಸಂವಿಧಾನವು ಆಡಳಿತ ನಡೆಸಲು ಯೋಗ್ಯವಾಗಿರಬೇಕು ಎಂದರು. ಇನ್ನೂ ೨-೩ ಜನರ ಭಾಷಣವಾದ ನಂತರ ಅತ್ಯಂತ ಧೃಢಕಾಯದ ಆತ್ಮವಿಶ್ವಾಸ ಸೂಸುತ್ತಿದ್ದ ವ್ಯಕ್ತಿಯೋರ್ವರು ಎದ್ದು ನಿಂತರು. ಅತ್ಯಂತ ಪ್ರಜ್ವಲ ಕಣ್ಣುಗಳು ಹಾಗೂ ಬಿಗಿಯಾದ ತುಟಿಯನ್ನು ಅವರು ಹೊಂದಿದ್ದರು. ಕೇವಲ ತನ್ನ ಸ್ವಸಾಮರ್ಥ್ಯದಿಂದಲೇ ಇಂತಹ ಒಂದು ಸ್ಥಾನಕ್ಕೆ ಈ ವ್ಯಕ್ತಿ ಅತ್ಯಂತ ಕೆಳಮಟ್ಟದಿಂದ ಏರಿ ರಾಜರು, ರಾಜಕೀಯ ಮುಖಂಡರು ಕಾನೂನು ವಿಷಯದಲ್ಲಿ ಪ್ರಕಾಂಡ ಪಂಡಿತರು, ಅತ್ಯಂತ ದೊಡ್ಡ ರಾಜ್ಯಗಳ ರಾಜರು, ಜಹಗೀರುದಾರರು, ಸಂಸ್ಥೆಗಳ ಪ್ರತಿನಿಧಿಗಳು ಇವರೆಲ್ಲರ ಮಧ್ಯದಲ್ಲಿ ಕುಳಿತಿದ್ದರು. ಅವರು ಭಾರತದ ಅತ್ಯಂತ ಬಡಜನರ ಪ್ರತಿನಿಧಿಯಾಗಿದ್ದರು. ಅರೆ ಹೊಟ್ಟೆ, ಅರೆ ಬಟ್ಟೆ ಹಾಗೂ ಅರೆ ಮೂಕ ಜನರ ಪ್ರತಿನಿಧಿಯಾಗಿದ್ದರು. ಅವರಿಗ ಹೇಳ ಹೊರಟಿರುವುದಾದರೂ ಏನು? ಯಾವ ರೀತಿಯಲ್ಲಿ ಹೇಳುತ್ತಾರೆ? ಇವರ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತಿದ್ದ ರಾಜರೂ ಕೂಡ ಈ ಸಮಾವೇಶದಲ್ಲಿ ಕುಳಿತಿದ್ದರು, ಅವರ ಶಾಲೆಯ ಗುರುವೊಬ್ಬರು ಕೂಡ ಅಲ್ಲಿ ಉಪಸ್ಥಿತರಿದ್ದರು. ಇದೀಗ ಭಾಷಣ ನೀಡಲು ಎದ್ದು ನಿಂತ ವ್ಯಕ್ತಿಯ ಮೇಲೆ ಎಲ್ಲರ ಕಂಗಳು ಕೇಂದ್ರೀಕೃತವಾಗಿದ್ದವು. ಆದರೆ ಅವರಲ್ಲಿ ಯಾವ ತೊಳಲಾಟವೂ ಇರಲಿಲ್ಲ. ಅವರಿಗೆ ತಮ್ಮ ಮನದಲ್ಲಿ ಇರುವುದೇನು ಎಂದು ಸ್ಪಷ್ಟವಾಗಿ ತಿಳಿದಿತ್ತು. ಏನು ಹೇಳಬೇಕು ಹಾಗೂ ಹೇಗೆ ಹೇಳಬೇಕು ಎಂಬುದನ್ನು ಅರಿತಿದ್ದರು. ಅವರು ಹಾಗೂ ಜೋಷಿ ಎಂಬ ಇಬ್ಬರನ್ನು ಹೊರತುಪಡಿದರೆ ಆ ಸಭೆಯಲ್ಲಿ ಉಪಸ್ಥಿತರಿದ್ದ ಯಾರೂ ಬಡತನವನ್ನು ಅಷ್ಟೊಂದು ಕ್ರೂರ ರೂಪದಲ್ಲಿ ನೋಡಿರಲಿಲ್ಲ. ಇಡೀ ಸಮಾವೇಶದಲ್ಲಿ ಎಲ್ಲರ ಗಮನವನ್ನು ಸೆಳೆದಂತಹ ಹಲವು ಪಂಡಿತರು, ಸಾಹಿತಿಗಳು ಇದ್ದರು. ಆದರೆ ಅವರಲ್ಲೆಲ್ಲಾ ಅತ್ಯಂತ ವಿದ್ಯಾವಂತ ವ್ಯಕ್ತಿ ಇವರೇ ಆಗಿದ್ದರು. ಅವರಿಗೆ ವಿಜ್ಞಾನದ ವಿಷಯದಲ್ಲಿ ಡಾಕ್ಟರೇಟ್ ಪದವಿ ದಕ್ಕಿತ್ತು. ಈತನೇ ಡಾ. ಅಂಬೇಡ್ಕರ್, ಭಾರತದ ಶೋಷಿತ ವರ್ಗದ ಜನರ ನಾಯಕ.

ಮಾತನ್ನು ಪ್ರಾರಂಭಿಸುತ್ತಲೇ ಡಾ. ಅಂಬೇಡ್ಕರ್ ಅವರು ಒಂದು ವಿಷಯವನ್ನು ಸ್ಪಷ್ಟಗೊಳಿಸಿದರು. ಬ್ರಿಟಿಷರ ಆಳ್ವಿಕೆಯ ಭಾರತದ ೫ನೆಯ ಒಂದು ಭಾಗದ ಜನರ ಅಭಿಪ್ರಾಯವನ್ನು ಸಭೆಯ ಮುಂದೆ ಇಡುತ್ತಿದ್ದೇನೆ ಎಂದು ಅವರು ಹೇಳಿದರು. ಈ ಜನಸಂಖ್ಯೆ ಇಡೀ ಇಂಗ್ಲೆಂಡ್ ಅಥವಾ ಫ್ರಾನ್ಸ್‌ನ ಜನಸಂಖ್ಯೆಗೆ ಸಮಾನವಾಗಿತ್ತು. ಇಷ್ಟೊಂದು ಸಂಖ್ಯೆಯ ಜನರು ಗುಲಾಮರಿಗಿಂತ ಹೀನಾಯ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದರು. ಮತ್ತೊಂದು ಎಲ್ಲರಿಗೆ ಆಶ್ಚರ್ಯ ಉಂಟುಮಾಡುವ ಸಂಗತಿ ಹೇಳಿದ್ದರು. ಅದೇನೆಂದರೆ ಭಾರತದಲ್ಲಿ ಇರುವ ಅಸ್ಪೃಶ್ಯರು ಹೋರಾಟ ನಡೆಸಿ, ಈಗಿರುವ ಸರ್ಕಾರದ ಬದಲಿಗೆ ಜನರಿಗಾಗಿ ಹಾಗೂ

ಜನರಿಂದ ನಡೆಯುವ ಸರ್ಕಾರದ ಬಗೆಗೆ ಚಿಂತನೆ ನಡೆಸಿದ್ದಾರೆ ಎಂದರು. ಆದರೆ ಬ್ರಿಟಿಷರ ಆಳ್ವಿಕೆಯ ಭಾರತದಲ್ಲಿ ಅಸ್ಪೃಶ್ಯರ ಈ ಮನಸ್ಥಿತಿ ಆಶ್ಚರ್ಯಕರ ಹಾಗೂ ತಾತ್ಕಾಲಿಕ ಎಂದು ಕೂಡ ಅವರು ನುಡಿದರು. ಆದರೆ ಅವರ ಈ ಅಭಿಪ್ರಾಯವನ್ನು ನಮರ್ಥಿಸಿಕೊಳ್ಳುತ್ತಾ ತಮ್ಮ ದನಿಯನ್ನು ಎತ್ತರಿಸಿ, ಕಣ್ಣಲ್ಲಿ ಮಿಂಚನ್ನು ಸೂಸುತ್ತ ಈ ರೀತಿ ಹೇಳಿದರು. "ಬ್ರಿಟಿಷರು ಭಾರತಕ್ಕೆ ಆಗಮಿಸುವ ಮೊದಲು ಹಾಗೂ ಸದ್ಯದಲ್ಲಿನ ನಮ್ಮ ಪರಿಸ್ಥಿತಿಯನ್ನು ನಾವು ಅವಲೋಕಿಸಿದರೆ, ನಮಗೆ ಒಂದು ಅಂಶ ಗಮನಕ್ಕೆ ಬರುತ್ತದೆ. ನಾವು ಮುನ್ನಡೆಯುವ ಬದಲು, ಸಮಯಕ್ಕಾಗಿ ಕಾಯುತಿದ್ದೇವೆ. ಬ್ರಿಟಿಷರು ಆಗಮಿಸುವ ಮೊದಲು ಅಸ್ಪೃಶ್ಯತೆಯ ಕಾರಣದಿಂದಾಗಿ ನಾವು ಹೀನಾಯ ಸ್ಥಿತಿಯಲ್ಲಿದ್ದೆವು. ಇದನ್ನು ತೊಡೆದು ಹಾಕಲು ಬ್ರಿಟಿಷ್ ಸರ್ಕಾರ ಯಾವ ಕ್ರಮವನ್ನಾದರೂ ಕೈಗೊಂಡಿದೆಯೇ? ಬ್ರಿಟಿಷರು ಆಗಮಿಸುವ ಮುನ್ನ ಕೂಡ ನಾವು ಹಳ್ಳಿಯ ಬಾವಿಗಳಿಂದ ನೀರು ತೆಗೆದುಕೊಳ್ಳುವಂತಿರಲಿಲ್ಲ. ಬ್ರಿಟಿಷರು ಬಂದ ನಂತರ ಇದಕ್ಕೆ ಯಾವುದಾದರೂ ಕ್ರಮ ಕೈಗೊಂಡಿದ್ದಾರೆಯೇ? ಬ್ರಿಟಿಷರು ಆಗಮಿಸುವ ಮೊದಲು ನಾವು ದೇವಸ್ಥಾನವನ್ನು ಪ್ರವೇಶಿಸುವಂತಿರಲಿಲ್ಲ. ಈಗ ಪ್ರವೇಶಿಸಲು ಸಾಧ್ಯವೇ? ಬ್ರಿಟಿಷರ ಆಗಮನದ ಮೊದಲು ನಾವು ಆರಕ್ಷಕ ಸೇವೆಗೆ ಸೇರ್ಪಡೆ ಆಗುವಂತೆ ಇರಲಿಲ್ಲ. ಇವರು ನಮ್ಮನ್ನು ಆ ಸೇವೆಗೆ ಸೇರ್ಪಡೆ ಮಾಡಿಕೊಳ್ಳುತ್ತಿದ್ದಾರೆಯೇ? ಬ್ರಿಟಿಷರ ಆಗಮನದ ಮೊದಲು ನಾವು ಸೇನೆಗೆ ಸೇರ್ಪಡೆ ಆಗುವಂತಿರಲಿಲ್ಲ. ಇದೀಗ ಅದು ಸಾಧ್ಯವೇ? ಈ ಮೇಲಿನ ಯಾವ ಪ್ರಶ್ನೆಗೂ ನಮಗೆ ಸಕಾರಾತ್ಮಕವಾದ ಉತ್ತರ ಸಿಗುವುದಿಲ್ಲ. ನಮ್ಮ ಮೇಲೆ ಎಸಗಿರುವಂತಹ ಅನ್ಯಾಯಗಳು ಎಲ್ಲರಿಗೂ ಕಾಣುವಂತೆ ಇದೆ. ಆದರೆ ಅದನ್ನು ಸರಿಪಡಿಸುವ ಪ್ರಯತ್ನವನ್ನು ಯಾರೂ ಮಾಡಿಲ್ಲ. ನಮ್ಮ ಗಾಯಗಳು ಮಾಯಲಿಲ್ಲ. ಹೀಗೆಯೇ ಬ್ರಿಟಿಷರ ಆಳ್ವಿಕೆಯ ೧೫೦ ವರ್ಷಗಳು ಸರಿದು ಹೋಗಿವೆ.

ಈ ರೀತಿಯ ಸರ್ಕಾರ ಯಾರ ಒಳಿತಿಗಾಗಿ? ಎಂದು ಅವರು ಸಮಾವೇಶವನ್ನು ಪ್ರಶ್ನಿಸಿದರು. ಈ ಪ್ರಶ್ನೆಯನ್ನು ಕೇಳಿದ ಕೂಡಲೇ ಬ್ರಿಟಿಷರ ಪ್ರತಿನಿಧಿಗಳು ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡರು. ಭಾರತೀಯ ಪ್ರತಿನಿಧಿಗಳಲ್ಲಿ ಕೂಡ ಸಂಚಲನವುಂಟಾಯಿತು. ಉದ್ಯಮಿಗಳು ತಮ್ಮ ಕಾರ್ಮಿಕರಿಗೆ ಕನಿಷ್ಠ ವೇತನವನ್ನೂ ನೀಡುತ್ತಿಲ್ಲ ಎಂಬ ವಿಷಯ ಈ ಸರ್ಕಾರಕ್ಕೆ ತಿಳಿದಿತ್ತು. ಅವರ ಕನಿಷ್ಠ ಅಗತ್ಯಗಳನ್ನು ಪೂರೈಸಲಾಗುತ್ತಿಲ್ಲ. ಭೂಮಿಯ ಒಡೆಯರಂತೂ ಬಡ ಜನರಿಂದ ಕೆಲಸ ಮಾಡಿಸಿಕೊಂಡು ಅವರನ್ನು ಶೋಷಿಸುತ್ತಿದ್ದಾರೆ. ಹಾಗಿದ್ದರೂ ಕೂಡ ಇಂತಹ ಸಮಾಜಘಾತುಕ ಪಿಡುಗುಗಳನ್ನು ಹೋಗಲಾಡಿಸಲು ಸಾಧ್ಯವೇ ಆಗಲಿಲ್ಲವೇ? ಮುಂದುವರೆದ ಅವರು "ಅವರಿಗೆ ಈ ಪಿಡುಗನ್ನು ಹೋಗಲಾಡಿಸಲು ಕಾನೂನಿನ ಬಲ ಇತ್ತು. ಆದರೆ ಅದು ಈಗಿರುವ ಕಾನೂನನ್ನು ಶೋಷಿತ ವರ್ಗಕ್ಕೆ ಪೂರಕವಾಗಿ ಮಾರ್ಪಾಡು ಮಾಡಬಹುದಾಗಿತ್ತು. ಆದರೆ ಹೀಗೆ ಮಾಡುವುದರಿಂದ ಸಮಾಜದಲ್ಲಿ ಉಂಟಾಗಬಹುದಾಗಿದ್ದ ಪ್ರತಿರೋಧದ ಬಗ್ಗೆ ಅವರಿಗೆ ಭಯ ಇತ್ತು. ನಮಗೆ ಯಾವ ರೀತಿಯ ಸರ್ಕಾರ ಬೇಕೆಂದರೆ ಅಧಿಕಾರದಲ್ಲಿ ಇರುವವರು ಯಾವ ರೀತಿಯ ಬೇಧಭಾವ ಮಾಡದೇ ರಾಷ್ಟ್ರದ ಒಳಿತನ್ನು ಮಾತ್ರ ಯೋಚಿಸಿ ಕ್ರಮ ಕೈಗೊಳ್ಳಬೇಕು. ಅಧಿಕಾರದಲ್ಲಿ ಇರುವ ಜನರು ಈ ಕ್ರಮಗಳನ್ನು ಕೈಗೊಂಡ ಕೂಡಲೇ ಸಮಾಜದಲ್ಲಿ ವಿರೋಧವನ್ನು ಎದುರಿಸಲು ಹೆದರಬಾರದು. ಅದಕ್ಕೆ ಹೆದರಿ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗೆ ಗಮನ ನೀಡದೇ ಇರಬಾರದು. ಈ ಕೂಡಲೇ ಭಾರತಕ್ಕೆ ಅಗತ್ಯವಿರುವುದು ಇದು.

ಡಾ. ಅಂಬೇಡ್ಕರ್ ಅವರು ಸಾರ್ವಭೌಮ ಸರಕಾರದ ಅಗತ್ಯವನ್ನು ಒತ್ತಿ ಹೇಳಿದರು. ಆದರೆ ಇದರಿಂದ ಶೋಷಿತ ವರ್ಗದವರಿಗೆ ಎಷ್ಟರ ಮಟ್ಟಿಗೆ ಅಧಿಕಾರ ಸಿಗಬಹುದು ಎಂಬುದರ ಬಗ್ಗೆ ಅವರಿಗೆ ತಮ್ಮದೇ ಆದ ಅನುಮಾನವಿತ್ತು. ಅದಕ್ಕಾಗಿ ವಿಶೇಷವಾದ ಸಂವಿಧಾನದ ಅಗತ್ಯ ಇದೆ. ಈ ಸಂವಿಧಾನವನ್ನು

ರಚಿಸುವಾಗ ಮುಖ್ಯವಾಗಿ ಭಾರತದ ಸಾಮಾಜಿಕ ಪರಿಸ್ಥಿತಿ ಯಾವ ರೀತಿ ಇದೆ ಎಂಬುದರತ್ತ ಗಮನ ಹರಿಸಬೇಕು ಎಂದರು. ಅಲ್ಲಿ ಜಾತಿಯ ಆಧಾರದ ಮೇಲೆಯೇ ಎಲ್ಲವೂ ನಿರ್ಧಾರವಾಗುತ್ತಿತ್ತು. ಸಮಾನತೆ ಹಾಗೂ ಜಾತ್ಯತೀತತೆಗೆ ಅವಕಾಶವೇ ಇರಲಿಲ್ಲ. ಮೇಲ್ವರ್ಗಕ್ಕೆ ಸೇರಿದ ಬುದ್ಧಿವಂತ ಜನರೇ ರಾಜಕೀಯದ ಚುಕ್ಕಾಣಿ ಹಿಡಿದಿದ್ದಾರೆ ಮತ್ತು ಅವರು ತಮ್ಮ ಜಾತಿ ಪ್ರಜ್ಞೆಯಿಂದ ಹೊರ ಬಂದಿಲ್ಲ. ಆದ್ದರಿಂದ "ನಮ್ಮ ಸಮಸ್ಯೆಗೆ ನಾವು ಪರಿಹಾರವನ್ನು ಸೂಚಿಸಬಹುದಾದಷ್ಟು ಸರಿಯಾಗಿ ಮತ್ತೆ ಯಾರೂ ಸೂಚಿಸಲಾರರು. ಹೀಗೆ ಆಗಬೇಕೆಂದರೆ ನಮಗೆ ರಾಜಕೀಯ ಅಧಿಕಾರ ದೊರೆಯಬೇಕು. ಶೋಷಿತ ವರ್ಗದವರು ಈ ರೀತಿಯ ಬದಲಾವಣೆಯಾಗಲು ಅಗತ್ಯಕ್ಕಿಂತ ಹೆಚ್ಚು ಕಾಲ ಕಾದಿದ್ದಾರೆ ಎಂದು ಹೇಳಬೇಕಾಗುತ್ತದೆ ಎಂದು ಹೇಳಿದರು.

ಭಾರತದ ಬಿಕ್ಕಟ್ಟಿನ ಬಗೆಗೆ ಮಾತನಾಡುತ್ತಾ, ರಾಜಕೀಯ ತತ್ವಶಾಸ್ತ್ರದ ಗುರುವೆಂದೇ ಪ್ರಪಂಚದಾದ್ಯಂತ ಪರಿಗಣಿಸಲಾಗಿದ್ದ ಎಡ್ಮಂಡ್ ಬ್ರೂಕ್ ಅವರ ಮಾತನ್ನು ಉದ್ಧರಿಸಿದರು. "ಬಲ ಪ್ರಯೋಗ ಕೇವಲ ತಾತ್ಕಾಲಿಕವಾಗಿರುತ್ತದೆ". ಅವರು ತಮ್ಮ ಅಮೋಘವಾದ ಭಾಷಣವನ್ನು ಕೊನೆಗೊಳಿಸುತ್ತ, ಬ್ರಿಟಿಷರ ಸರ್ಕಾರಕ್ಕೆ ಹಾಗೂ ಬುದ್ಧಿವಂತಿಕೆಯ ತಂತ್ರಗಳನ್ನು ಉಪಯೋಗಿಸುತ್ತಿದ್ದವರಿಗೆ ಎಚ್ಚರಿಕೆಯ ಘಂಟೆಯನ್ನು ಮೊಳಗಿಸಿದ್ದರು. "ನನಗೆ ಒಂದು ಭಯವಿದೆ. ಏನೆಂದರೆ ಭಾರತದ ಈಗಿನ ಪರಿಸ್ಥಿತಿಯ ವಿಶ್ಲೇಷಣೆಯು ಸರಿಯಾದ ರೀತಿಯಲ್ಲಿ ಆಗಿಲ್ಲ. ಹೆಚ್ಚಿನ ಸಂಖ್ಯೆಯ ಜನರು ಒಪ್ಪಿಕೊಳ್ಳದೇ ಹೋದರೆ ಯಾವ ಸಂವಿಧಾನವೇ ಆದರೂ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯ ಇಲ್ಲ. ನೀವು ಆಯ್ಕೆ ಮಾಡಿ ಭಾರತ ಒಪ್ಪಿಕೊಳ್ಳುತ್ತಿದ್ದ ಪರಿಸ್ಥಿತಿ ಇದೀಗ ಹೊರಟು ಹೋಗಿದೆ. ಅದು ಮತ್ತೆಂದೂ ಬರಲಾರದು ಕೂಡ ಆದ್ದರಿಂದ ಸಂವಿಧಾನವನ್ನು ರಚಿಸುವಾಗ ನೀವು ಜನರ ಒಪ್ಪಿಗೆ ಪಡೆಯುವುದು ಬಹಳ ಮುಖ್ಯವಾಗು. ಅದು ಆಚರಣೆಗೆ ಬರಬೇಕು ಎಂಬ ಆಸೆ ನಿಮಗಿದ್ದರೆ.*

ಇವರ ನಿರ್ಭೀತ ಧ್ವನಿ ಹಾಗು ಕೊಚ್ಚಿದೆಯ ಟೀಕೆ ಈ ಸಮಾಜದ ಮೇಲೆ ಅಗಾಧವಾದ ಪರಿಣಾಮ ಬೀರಿತು. ಡಾ. ಅಂಬೇಡ್ಕರ್ ಅವರು ಸಮಾವೇಶದ ಸದಸ್ಯರ ಎದುರು ನೈಜ ಪರಿಸ್ಥಿತಿಯನ್ನು ಎಳೆ ಎಳೆಯಾಗಿ ಹಾಗು ಅತ್ಯಂತ ಸ್ಪಷ್ಟವಾಗಿ ಬಿಡಿಸಿಟ್ಟಿದ್ದರು. ಇದರಿಂದ ಅಲ್ಲಿ ಆಗಮಿಸಿದ್ದ ಪ್ರತಿನಿಧಿಗಳ ಅಪಾರವಾಗಿ ಸಂತಸಗೊಂಡು ಅವರ ಅಮೋಘವಾದ ಭಾಷಣಕ್ಕೆ ಶುಭಾಶಯ ಕೋರಿದ್ದರು ಅದು ಬ್ರಿಟಿಷರ ರಾಜ ಪ್ರತಿನಿಧಿಗಳ ಮೇಲೆ ಕೂಡ ಒಳ್ಳೆಯ ಪ್ರಭಾವ ಬೀರಿತ್ತು. The Indian Daily Mail ಪತ್ರಿಕೆಯು ಇವರ ಭಾಷಣವನ್ನು ಸಮಾವೇಶದಲ್ಲಿಯೇ ಅತ್ಯುತ್ತಮ ಎಂದು ಬಣ್ಣಿಸಿತು. ಈ ಸಮಾವೇಶದಲ್ಲಿ ನೆರೆದಿದ್ದವರಲ್ಲಿ ಒಬ್ಬರಂತೂ ಇದರಿಂದ ಅತ್ಯಂತ ಸಂತಸಗೊಂಡಿದ್ದರು. ಅವರು ತಮ್ಮ ಅರಮನೆಗೆ ಹಿಂದಿರುಗಿದಾಗ ಡಾ. ಅಂಬೇಡ್ಕರ್ ಅವರ ವಿಷಯದಲ್ಲಿ ಇದ್ದ ಗೌರವ ಮತ್ತಷ್ಟು ಹೆಚ್ಚಾಗಿತ್ತು. ಅವರ ಕಣ್ಣುಗಳಲ್ಲಿ ಆನಂದಭಾಷ್ಪ ಇತ್ತು. ಅವರು ಇವರ ಮೇಲೆ ಹೂಡಿದ್ದಂತಹ ಹಣವೆಲ್ಲಾ ಹಿಂದಿರುಗಿ ಬಂದಿದೆ ಎಂದು ತಮ್ಮ ಪತ್ನಿಯ ಬಳಿ ಸಂತಸದಿಂದ ಹೇಳಿಕೊಂಡಿದ್ದರು. ಇದೊಂದು ಅತ್ಯಂತ ಅದ್ಭುತ ಸಾಧನೆ ಎಂದೇ ಬಣ್ಣಿಸಿದ್ದರು. ಈ ರೀತಿ ಅವರನ್ನು ಹೊಗಳಿದವರು ಮತ್ಯಾರು ಅಲ್ಲ ಖುದ್ದು ಬರೋಡದ ಮಹಾರಾಜರೇ ಆಗಿದ್ದರು. ಅವರ ಮಿತ್ರರು ತಮಗೆ ಲಂಡನ್ನಿನಲ್ಲಿ ಆಯೋಜಿಸಿದ್ದ ಔತಣ ಕೂಟಕ್ಕೆ ಕೂಡ ಅಂಬೇಡ್ಕರ್ ಅವರನ್ನು ಕರೆದೊಯ್ದಿದ್ದರು. ಹಲವಾರು ವರ್ಷಗಳ ನಂತರ ಇಂತಹ ಒಂದು ಭಾವನಾತ್ಮಕ ಸನ್ನಿವೇಶದಲ್ಲಿ ಡಾ. ಅಂಬೇಡ್ಕರ್ ಹಾಗೂ ಗಾಯಕ್‌ವಾಡ್ ಅವರು ಭೇಟಿಯಾಗಿದ್ದು ವಿಧಿಯ ಲೀಲೆಯೇ ಆಗಿತ್ತು.

ಅವರ ಈ ರೀತಿಯ ಅಮೋಘವಾದ ಭಾಷಣ ಮಾಧ್ಯಮದ ಜನರ ಮೇಲೂ ಅಪಾರ ಪ್ರಭಾವ ಬೀರಿತ್ತು. ಆಂಗ್ಲ ದಿನಪತ್ರಿಕೆಯವರಂತೂ ಡಾ. ಅಂಬೇಡ್ಕರ್ ಅವರ ಎಲ್ಲಾ ವಿಷಯಗಳನ್ನು ಅಚ್ಚು ಹಾಕಲು ಪ್ರಾರಂಭಿಸಿದರು. ಇದಕ್ಕೆ ಮೊದಲು Spectator ಎಂಬ ಪತ್ರಿಕೆಯಲ್ಲಿ ಡಾ. ಅಂಬೇಡ್ಕರ್ ಅವರ ಭಾಷಣವನ್ನು ಕಟುವಾಗಿ ಟೀಕಿಸಿ ಲಾರ್ಡ್‌ಸೈಡೆನ್ ಹ್ಯಾವ್ ಓಡೆಯರ್ ಮುಂತಾದವರು ಲೇಖನಗಳನ್ನು ಬರೆದಿದ್ದರು. ಇದೀಗ ಅಂಬೇಡ್ಕರ್ ಅವರು ರಾಷ್ಟ್ರವಾದಿಗಳು ಎಂಬುದು ಅವರಿಗೆ ಮನವರಿಕೆ ಆಗಿತ್ತು. ಇದೀಗ ಅವರು ತಮ್ಮ ತಮ್ಮಲ್ಲೇ ಇವರು ಭಾರತದ ಅತ್ಯಂತ ಕ್ರಾಂತಿಕಾರಿ ನಾಯಕರು ಎಂದು ಮಾತನಾಡತೊಡಗಿದ್ದರು. ಕೆಲ ಆಂಗ್ಲ ನಾಯಕರು ಡಾ. ಲತ್ತೇ ಅವರನ್ನು ಸಂಪರ್ಕಿಸಿ ಡಾ. ಅಂಬೇಡ್ಕರ್ ಅವರೇನಾದರೂ ಕ್ರಾಂತಿಕಾರಿ ಸಂಘಟನೆಯ ಸದಸ್ಯರೇ ಎಂದು ತಿಳಿಯುವ ಪ್ರಯತ್ನಪಟ್ಟರು. ಅವರ ಈ ರೀತಿಯ ವರ್ತನೆಗಳು ಅನಿರೀಕ್ಷಿತವೇನೂ ಆಗಿರಲಿಲ್ಲ. ಬ್ರಿಟಿಷರ ಪೋಲಿಸರು ೧೯೧೭ರಲ್ಲಿ ಡಾ. ಅಂಬೇಡ್ಕರ್ ಅವರು ಅಮೇರಿಕಾದಿಂದ ಬ್ರಿಟನ್ನಿಗೆ ಆಗಮಿಸಿದಾಗ ಅವರ ಸಂಪೂರ್ಣ ತಪಾಸಣೆ ನಡೆಸಿದ್ದರು ಎಂಬುದನ್ನು ನಾವಿಲ್ಲಿ ನೆನೆಸಿಕೊಳ್ಳಬಹುದು.

ಸಮಾವೇಶ ಪ್ರಾರಂಭವಾದ ಕೂಡಲೇ ಉದಾರವಾದಿಗಳಾದ ಸಪ್ರು, ಶಾಸ್ತ್ರಿ, ಸತಲ್‌ವಾಡ್ ಮುಂತಾದವರು ಮುಸಲ್ಮಾನ ನಾಯಕರೊಂದಿಗೆ ಕೋಮು ಸಮಸ್ಯೆಯನ್ನು ಕುರಿತಂತೆ ಒಂದು ಒಡಂಬಡಿಕೆಗೆ ಬರುವ ಪ್ರಯತ್ನಪಟ್ಟಿದ್ದರು. ಇದೇ ವಿಷಯವಾಗಿ ಹಿಂದೂ ನಾಯಕರು ಸರ್ ಕೋವಾಸ್ಜಿ ಜಹಂಗೀರ್ ಅವರ ನಿವಾಸದಲ್ಲಿ ಸಭೆ ಸೇರಿ ಈ ರೀತಿಯ ಒಡಂಬಡಿಕೆಗೆ ಬರುವುದು ಹೇಗೆ ಎಂದು ಚರ್ಚಿಸಿದ್ದರು. ಈ ರೀತಿಯ ಒಡಂಬಡಿಕೆ ಸಾಧ್ಯವಾಗಬೇಕೆಂದರೆ ಸ್ವರಾಜ್ಯದ ಹಕ್ಕು ದೊರೆತ ನಂತರ ಮಾತ್ರವೇ ಸಾಧ್ಯ ಎಂದು ಮೂಂಜೆ ಹಾಗೂ ಜಯಕರ್ ಅಭಿಪ್ರಾಯಪಟ್ಟಿದ್ದರು. ಸ್ವತಂತ್ರ ಚಿಂತಕರಾದ ಮೂಂಜೆ, ಜಯಕರ್, ಅಂಬೇಡ್ಕರ್ ಮುಂತಾದವರು ಭೋಪಾಲ್‌ನ ಮಹಾರಾಜ, ಆಘಾಖಾನ್, ಜಿನ್ನಾ ಮುಂತಾದವರೊಂದಿಗೆ ಭೋಪಾಲದ ನವಾಬರ ಅರಮನೆಯಲ್ಲಿ ಚರ್ಚೆಗಳನ್ನು ನಡೆಸಿದ್ದರು. ಆದರೆ ಇವರ ಮಾತುಕತೆಗಳು ಫಲಪ್ರದವಾಗಲೇ ಇಲ್ಲ. ಏಕೆಂದರೆ ಪ್ರತ್ಯೇಕ ಸಿಂಧ್ ರಾಜ್ಯಬೇಕೆಂಬ ತಮ್ಮ ಬೇಡಿಕೆಗೆ ಮುಸಲ್ಮಾನ ನಾಯಕರು ಅಂಟಿಕೊಂಡಿದ್ದರು. ಇದಕ್ಕೆ ಮೂಂಜೆ ಹಾಗೂ ಜಯಕರ್ ಪ್ರಬಲವಾದ ವಿರೋಧ ವ್ಯಕ್ತಪಡಿಸಿದ್ದರು. ತಮಗೆ ಇತರ ಪ್ರಾಂತಗಳಲ್ಲಿ ದೊರೆತಷ್ಟೇ ಮಿಸಲಾತಿ ಸೌಲಭ್ಯಗಳನ್ನು, ತಾವು ಪ್ರಬಲರಾಗಿರುವ ಪ್ರಾಂತ್ಯಗಳಲ್ಲಿ, ಹಿಂದೂಗಳಿಗೆ ಹಾಗೂ ಸಿಖ್‌ರಿಗೆ ನೀಡಲು ಮುಸಲ್ಮಾನರು ಸಿದ್ಧಿರಿರಲಿಲ್ಲ.

ಹೀಗೆ ಯಾವ ತರಹದಲ್ಲಿ ಮುಂದುವರಿಯಬೇಕು ಎಂದು ತೀರ್ಮಾನವಾದ ನಂತರ, ಸಮಾವೇಶವು ೯ ಉಪ ಸಮಿತಿಗಳನ್ನು ನೇಮಕ ಮಾಡಿತು. ಡಾ. ಅಂಬೇಡ್ಕರ್ ಅವರು ಸರಿ ಸುಮಾರು ಎಲ್ಲಾ ಸಮಿತಿಗಳಿಗೂ ಸದಸ್ಯರಾಗಿ ನೇಮಿಸಲ್ಪಟ್ಟಿದ್ದರು. ಒಕ್ಕೂಟ ರಚನಾ ಸಮಿತಿಯೊಂದನ್ನು ಹೊರತುಪಡಿಸಿ. ಅಲ್ಪಸಂಖ್ಯಾತರ ಉಪಸಮಿತಿ, ಪ್ರಾಂತೀಯ ಉಪಸಮಿತಿ, ಮುಂತಾದ ಸಮಿತಿಗಳಲ್ಲಿಯೂ ಇಂಗ್ಲೆಂಡ್ ಹಾಗೂ ಭಾರತದ ಘಟಾನುಘಟಿಗಳೊಂದಿಗೆ ಕಾರ್ಯ ನಿರ್ವಹಿಸಲು ಅವರು ಸಿದ್ಧರಾದರು. ರಾಜ್ಯ ಸರ್ಕಾರಿ ಉಪಸಮಿತಿಯ ಚರ್ಚೆಯ ಸಮಯದಲ್ಲಿ ಅವರು ಚಿಂತಾಮಣಿಯವರ ಅಭಿಪ್ರಾಯಕ್ಕೆ ಸಮ್ಮತಿ ಸೂಚಿಸಿ, ಯಾವುದೇ ಕಾರಣದಿಂದಲೂ ಒಂದು ರಾಜ್ಯದಲ್ಲಿಯೂ ಎರಡನೆಯ ಸದನವು ಇರಬಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ರಕ್ಷಣಾ ಸಮಿತಿಯ ವರದಿಯ ಚರ್ಚೆಯಲ್ಲಿ. ಭಾರತೀಯ ಸೇನೆಯಲ್ಲಿ ಎಲ್ಲಾ ಧರ್ಮದ ಜನರ ನೇಮಕಾತಿಗೂ ಅವಕಾಶ ನೀಡಬೇಕು ಎಂದು ಅಂಬೇಡ್ಕರ್ ಅವರು ಕೇಳಿಕೊಂಡರು. ಕೇವಲ ಅವರ

ಸ್ವಸಾಮರ್ಥ್ಯ ಹಾಗೂ ಶೈಕ್ಷಣಿಕ ಅರ್ಹತೆಯ ಮೇಲೆ ಮಾತ್ರ ನೇಮಕಾತಿ ಆಗಬೇಕೆಂದರು.

ತಮ್ಮ ಗುರಿಯನ್ನು ಸಾಧಿಸುವಲ್ಲಿ ಡಾ. ಅಂಬೇಡ್ಕರ್ ಅವರು ಇಟ್ಟ ಮುಖ್ಯವಾದ ಹೆಜ್ಜೆಯೆಂದರೆ ಮೂಲಭೂತ ಹಕ್ಕುಗಳ ಪಟ್ಟಿಯನ್ನು ಅವರು ತಯಾರು ಮಾಡಿ ಅದರಲ್ಲಿ ಭಾರತದ ಸಾಂಸ್ಕೃತಿಕ, ಧಾರ್ಮಿಕ ಭಾವನೆಗಳಿಗೆ ಸ್ಥಾನವನ್ನು ಕೊಟ್ಟಿದ್ದರು. ಅಲ್ಲದೆ ಶೋಷಿತ ವರ್ಗದ ಜನರ ಆರ್ಥಿಕ ಹಕ್ಕುಗಳನ್ನು ಕಾಯ್ದಿರಿಸಲು ಪ್ರಯತ್ನ ಪಟ್ಟಿದ್ದರು. ಅತ್ಯಂತ ಕಷ್ಟದಿಂದ ಹಾಗೂ ಮುಂದಾಲೋಚನೆಯಿಂದ ಅವರು ಈ ವರದಿ ಸಿದ್ಧಪಡಿಸಿದ್ದರು. ಅಲ್ಪಸಂಖ್ಯಾತರ ಉಪ ಸಮಿತಿಗೆ ಅವರು ಈ ವರದಿಯನ್ನು ಒಪ್ಪಿಸಿದ್ದರು. ಮುಂದೆ ಇದನ್ನು ಭಾರತದ ಸಂವಿಧಾನದಲ್ಲಿ ಸೇರ್ಪಡೆ ಮಾಡುವಂತೆ ಹೇಳಿದ್ದರು. ಈ ವರದಿಗೆ ಸ್ವಯಂ ಆಡಳಿತ ನಡಸಲಿರುವ ಭಾರತ ಸಂವಿಧಾನ ತಯಾರಿಕೆಯಲ್ಲಿ ಶೋಷಿತ ವರ್ಗದವರ ರಾಜಕೀಯ ಹಕ್ಕುಗಳ ರಕ್ಷಣೆ ಎಂಬ ಹೆಸರನ್ನು ನೀಡಿದ್ದರು.[೧]

ಈ ವರದಿಯ ಸಾರಾಂಶ ಕೆಳಗಿನಂತಿದೆ. ಸಂಪಾದಕರು:

"೧೯೩೦ರ ನವೆಂಬರ್ ೧೨ ರಂದು ಮಹಾರಾಜ ೫ನೆಯ ಜಾರ್ಜ್ ಅವರು ವಿಧ್ಯುಕ್ತವಾಗಿ ದುಂಡು ಮೇಜಿನ ಸಮಾವೇಶವನ್ನು ಉದ್ಘಾಟಿಸಿದರು. ಭಾರತೀಯರ ದೃಷ್ಟಿಕೋನದಿಂದ ಗಮನಿಸಿದರೆ ಇದೊಂದು ಮಹತ್ತರವಾದ ಘಟನೆಯಾಗಿತ್ತು. ಭಾರತದ ಸಂವಿಧಾನದ ರಚನೆಯಲ್ಲಿ ಭಾರತೀಯರ ಅಭಿಪ್ರಾಯವನ್ನು ಪರಿಗಣಿಸಬೇಕು ಎಂದು ಮಹಾರಾಜರು ಅಭಿಪ್ರಾಯಪಟ್ಟಿದ್ದದ್ದು ಅತ್ಯಂತ ಮಹತ್ವ ಪಡೆಯಿತು. ಅಸ್ಪೃಶ್ಯರಿಗಂತೂ ಇದೊಂದು ಐತಿಹಾಸಿಕ ಮೈಲಿಗಲ್ಲಾಗಿತ್ತು. ಅಸ್ಪೃಶ್ಯರ ಪ್ರತಿನಿಧಿಗಳಾಗಿ ಈ ಸಮಾವೇಶಕ್ಕೆ ಮೊತ್ತ ಮೊದಲ ಬಾರಿಗೆ ಇಬ್ಬರು ಪ್ರತಿನಿಧಿಗಳು ಎಂದರೆ ನಾನು ಹಾಗೂ ದಿವಾನ್ ಬಹದ್ದೂರ್ ಆರ್ ಶ್ರೀನಿವಾಸನ್ ಅವರು. ಇದರ ಅರ್ಥ ಅಸ್ಪೃಶ್ಯರನ್ನು ಹಿಂದೂಗಳ ಒಂದು ವಿಭಾಗ ಎಂದು ಪರಿಗಣಿಸಿಲ್ಲ ಬದಲಾಗಿ ಅವರಿಗೆ ಕೂಡ ಭಾರತದ ಸಂವಿಧಾನ ರಚನೆಯಲ್ಲಿ ಅಭಿಪ್ರಾಯ ಮಂಡಿಸುವ ಅವಕಾಶ ನೀಡಲಾಗಿದೆ.

ಈ ಸಮಿತಿಯ ಕಾರ್ಯವನ್ನು ಒಂಬತ್ತು ಉಪಸಮಿತಿಗಳಿಗೆ ಹಂಚಿಕೆ ಮಾಡಲಾಗಿತ್ತು. ಇದರಲ್ಲಿ ಒಂದು ಉಪಸಮಿತಿಯೇ ಅಲ್ಪಸಂಖ್ಯಾತರ ಉಪಸಮಿತಿ. ಇದಕ್ಕೆ ಅತ್ಯಂತ ಕಠಿಣವಾದ ಕೆಲಸ ಎಂದರೆ ಕೋಮು ಸಮಸ್ಯೆಗಳಿಗೆ ಪರಿಹಾರ ಹುಡುಕುವ ಕೆಲಸವನ್ನು ನೀಡಲಾಗಿತ್ತು. ಇದು ಅತ್ಯಂತ ಕಠಿಣ ಕೆಲಸ ಎಂಬ ಅರಿವು ಇದ್ದುದರಿಂದಲೇ ಪ್ರಧಾನ ಮಂತ್ರಿ ಲ್ಯಾಮ್ಸೇ ಮ್ಯಾಕ್ ಡೋನಾಲ್ಡ್ ಅವರೇ ಅದರ ಅಧ್ಯಕ್ಷರಾಗಿದ್ದರು. ಇಲ್ಲಿ ಜರುಗುವ ಘಟನೆಗಳು ಅಸ್ಪೃಶ್ಯರ ವಿಷಯದಲ್ಲಿ ಅತ್ಯಂತ ಮಹತ್ವ ವಹಿಸುವುದರಲ್ಲಿದ್ದವು. ಕಾಂಗ್ರೆಸ್ ಹಾಗೂ ಅಸ್ಪೃಶ್ಯರ ನಡುವೆ ಏನು ಜರುಗಿತ್ತು, ಹಾಗೂ ಅವರಿಬ್ಬರ ನಡುವೆ ಕಹಿ ಭಾವನೆ ಮೂಡಲು ಏನು ಕಾರಣವಾಗಿತ್ತು ಎಂಬುದು ಸಮಿತಿಯ ನಡಾವಳಿಯಲ್ಲಿ ದಾಖಲಾಗಿದೆ.

ದುಂಡು ಮೇಜಿನ ಸಮಾವೇಶದಲ್ಲಿ ಎಲ್ಲಾ ಧರ್ಮಗಳ ರಾಜಕೀಯ ವಿಚಾರಗಳು ಚರ್ಚೆಗೆ ಬರುವ ಮೊದಲೇ ಶೋಷಿತರ ಸಮಸ್ಯೆಯನ್ನು ಬಿಟ್ಟು ಉಳಿದ ಸಮುದಾಯದವರ ರಾಜಕೀಯ ಬೇಡಿಕೆಗಳು ಎಲ್ಲರಿಗೂ ತಿಳಿದಿತ್ತು. ೧೯೧೯ರಲ್ಲಿ ರಚಿತವಾದ ಸಂವಿಧಾನವು ಅವರನ್ನು ಸಂವಿಧಾನಬದ್ಧ ಅಲ್ಪಸಂಖ್ಯಾತರು ಎಂದು ಗುರುತಿಸಿತ್ತು. ಅವರ ರಕ್ಷಣೆಯ ಹೊಣೆಗೆ ಈ ಸಂವಿಧಾನದಲ್ಲಿ ಸೂಕ್ತ ಕ್ರಮಗಳನ್ನು ಒದಗಿಸಿತ್ತು. ಈ ವಿಷಯಗಳನ್ನು ವಿಸ್ತರಿಸುವುದು ಅಥವಾ ಬದಲಾಯಿಸುವುದು ಈಗಿನ ಪ್ರಶ್ನೆಯಾಗಿತ್ತು. ಆದರೆ ಶೋಷಿತ

---

೧. ಕೀರ್ ಪುಟ ೧೪೪–೧೫೩

ವರ್ಗದವರ ವಿಷಯಕ್ಕೆ ಬಂದರೆ ಪರಿಸ್ಥಿತಿಯೇ ಬೇರೆಯಿತ್ತು. ಈ ಸಂವಿಧಾನದ ರಚನೆಗಿಂತ ಮೊದಲೇ ಮೋಂಟ್ಯಾಗೋ ಚೆಲಮ್ಸ್‌ಫೋರ್ಡ್ ವರದಿಯು ಬಂದಿತ್ತು. ಇದರಲ್ಲಿ ಅವರು ಸಂವಿಧಾನದಲ್ಲಿ ಅಸ್ಪೃಶ್ಯರ ರಕ್ಷಣೆಗೆ ಸೂಕ್ತವಾದ ಅವಕಾಶ ಕಲ್ಪಿಸಿರಲೇಬೇಕು ಎಂದು ಸ್ಪಷ್ಟವಾಗಿ ಹೇಳಿದ್ದರು. ಆದರೆ ದುರದೃಷ್ಟವಶಾತ್ ಆ ಸಂವಿಧಾನವು ರಚನೆಯಾದಾಗ ಭಾರತ ಸರ್ಕಾರ ಈ ನಿಟ್ಟಿನಲ್ಲಿ ಹೆಚ್ಚೇನೂ ಮಾಡಲಿಲ್ಲ. ಕೇವಲ ಅವರಿಗೆ ಮಂತ್ರಿಮಂಡಲದಲ್ಲಿ ನಾಮಕರಣದ ಮೂಲಕ ಶಾಸನಸಭೆಗೆ ಕೆಲವು ಸ್ಥಾನಗಳನ್ನು ಮೀಸಲಿಟ್ಟಿತ್ತು ಅಷ್ಟೆ. ಆದರೆ ಅಸ್ಪೃಶ್ಯರಿಗೆ ಇದಕ್ಕಿಂತ ಮಿಗಿಲಾದ ಅಗತ್ಯ ಇದ್ದುದು ಪಾಶವೀ ಸ್ವಭಾವದ ಹಿಂದೂಗಳಿಂದ ರಕ್ಷಣೆ. ಈ ವಿಷಯವನ್ನೇ ಒತ್ತಿ ಹೇಳಿ ನಾನು ಇದೀಗ ದುಂಡು ಮೇಜಿನ ಸಮಾವೇಶದಲ್ಲಿ ಅಲ್ಪಸಂಖ್ಯಾತ ಉಪಸಮಿತಿಗೆ ವರದಿ ಸಲ್ಲಿಸಿರುವೆ. ನಾನು ಅಲ್ಪ ಸಂಖ್ಯಾತರ ರಕ್ಷಣೆಗೆಂದು ಮಾಡಿರುವ ಕೆಲ ಅಂಶಗಳನ್ನು ಈ ಕೆಳಗೆ ವಿವರಿಸಿದ್ದೇನೆ.

**ಸ್ವಯಂ ಆಡಳಿತ ನಡೆಸಲಿರುವ ಭಾರತದ ಸಂವಿಧಾನ ತಯಾರಿಕೆಯಲ್ಲಿ ಶೋಷಿತ ಹಾಗೂ ಅಲ್ಪಸಂಖ್ಯಾತರ ರಾಜಕೀಯ ಹಕ್ಕುಗಳ ರಕ್ಷಣೆ ದುಂಡು ಮೇಜಿನ ಸಮಾವೇಶದಲ್ಲಿ ಸಲ್ಲಿಸಲಾದ ವರದಿ:**

ಈ ಕೆಳಗಿನ ಶರತ್ತುಗಳಿಗೆ ಒಪ್ಪಿಗೆ ಸಲ್ಲಿಸಿದರೆ, ಅಲ್ಪಸಂಖ್ಯಾತರು ಭಾರತದ ಬಹುಸಂಖ್ಯಾತರ ಆಡಳಿತಕ್ಕೆ ಒಪ್ಪಿಗೆ ನೀಡುತ್ತಾರೆ.

## ಷರತ್ತು ಸಂಖ್ಯೆ – I
## ಸಮಾನ ಪೌರತನ

ಈಗಿರುವಂತೆ ವಂಶಪಾರಂಪರ್ಯವಾದ ಗುಲಾಮಗಿರಿಯು ಮುಂದುವರಿದರೆ, ಶೋಷಿತ ವರ್ಗದ ಜನರು ಬಹುಸಂಖ್ಯಾತರ ಆಡಳಿತಕ್ಕೆ ಒಪ್ಪಿಗೆ ನೀಡುವುದಿಲ್ಲ. ಬಹುಸಂಖ್ಯಾತರ ಆಡಳಿತ ಏರ್ಪಡುವ ಮೊದಲು ಅಸ್ಪೃಶ್ಯತೆಯ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ನಾಮ ಮಾಡಬೇಕು. ಬಹುಸಂಖ್ಯಾತರ ಇಷ್ಟಕ್ಕೆ ಇದನ್ನು ಬಿಡಬಾರದು. ಶೋಷಿತವರ್ಗದವರನ್ನು ಸ್ವತಂತ್ರ ಪೌರರೆಂದು ಪರಿಗಣಿಸಿ ಸಮಾನ ಸ್ವಾತಂತ್ರ್ಯ ನೀಡಿ ಇತರ ಎಲ್ಲಾ ನಾಗರಿಕರಂತೆ ಅವರಿಗೂ ಸಮಾನವಾದ ಹಕ್ಕುಗಳನ್ನು ನೀಡಬೇಕು.

**(A) ಅಸ್ಪೃಶ್ಯತೆಯ ಪದ್ಧತಿಯ ಸಂಪೂರ್ಣ ನಿರ್ನಾಮಕ್ಕೆ ಹಾಗು ಸಮಾನವಾದ ಪೌರತ್ವದ ಸ್ಥಾಪನೆಗೆ, ಈ ಕೆಳಗಿನ ಹಕ್ಕನ್ನು ಭಾರತದ ಸಂವಿಧಾನದ ಒಂದು ಭಾಗವಾಗಿ ಮಾಡಬೇಕು.**

### ಮೂಲ ಭೂತ ಹಕ್ಕು

ಭಾರತದ ಸರಕಾರದ ಎಲ್ಲಾ ಪ್ರಜೆಗಳೂ ಕಾನೂನಿನ ದೃಷ್ಟಿಯಲ್ಲಿ ಸಮಾನರು ಹಾಗೂ ಎಲ್ಲರಿಗೂ ಸಮಾನ ನಾಗರಿಕ ಹಕ್ಕುಗಳಿವೆ. ಅಸ್ಪೃಶ್ಯತೆಯ ಆಚರಣೆಯ ದೃಷ್ಟಿಯಿಂದ ಯಾವುದೇ ದಂಡವಿಧಿಸುವ, ಹಕ್ಕುಗಳಿಂದ ವಂಚಿತಗೊಳಿಸುವ ಯಾವುದಾದರೂ ಕಾನೂನು, ನಿಯಮ ಆಚರಣೆ, ವ್ಯವಸ್ಥೆಗಳು ಇದ್ದರೆ, ಅವು ಈ ಸಂವಿಧಾನವು ಜಾರಿಗೆ ಬಂದ ದಿನದಿಂದಲೇ ರದ್ದಾಗಬೇಕು.

(U.S.A. ಸಂವಿಧಾನ ತಿದ್ದುಪಡಿ XIV ಹಾಗೂ ಐರ್‌ಲ್ಯಾಂಡ್ ಸರ್ಕಾರದ ಅಧಿನಿಯಮ ೧೯೨೦, (೧೦, II Geo V Ch 67 Sec (2))

(B) ೧೯೧೯ರ ಭಾರತ ಸರ್ಕಾರ ಕಾಯ್ದೆಯ ವಿಭಾಗ ೧೧೦ ಹಾಗೂ ೧೧೧ರ ಪ್ರಕಾರ ಅಧಿಕಾರಿಗಳು ಈಗ ಅನುಭವಿಸುತ್ತಿರುವ ಎಲ್ಲಾ ಸವಲತ್ತುಗಳೂ ರದ್ದಾಗಬೇಕು. ಅವರು ಶಾಸಕಾಂಗಕ್ಕೆ ಬ್ರಿಟಿಷ್ ಸಂವಿಧಾನದಲ್ಲಿರುವಂತೆಯೇ, ಜವಾಬ್ದಾರರಾಗಿರಬೇಕು.

## ಷರತ್ತು – II

## ಸಮಾನ ಹಕ್ಕುಗಳ ಮುಕ್ತ ಅನುಭೋಗ

ಶೋಷಿತ ವರ್ಗದವರಿಗೆ ಸಮಾನ ಹಕ್ಕುಗಳನ್ನು ನೀಡಿದ್ದೇವೆ ಎಂಬ ಘೋಷಣೆಯಿಂದ ಏನೂ ಆಗುವುದಿಲ್ಲ. ಅವರೊಂದು ವೇಳೆ ಈ ಸಮಾನ ಪೌರತ್ವದ ಹಕ್ಕುಗಳನ್ನು ಅನುಭವಿಸಲು ಪ್ರಯತ್ನಪಟ್ಟರೆ ಸಂಪ್ರದಾಯವಾದಿಗಳ ಕೆಂಗಣ್ಣನ್ನು ಎದುರಿಸುವುದಂತೂ ನಿಜ. ಆದ್ದರಿಂದ ಕೇವಲ ಇದರ ಘೋಷಣೆಯಾಗದೆ ಇದನ್ನು ಅವರು ಅನುಭವಿಸಬೇಕಾದರೆ ಅವರಿಗೆ ಅವರ ಮೇಲೆ ಜರುಗುವ ಕ್ರೌರ್ಯಗಳ ವಿರುದ್ಧ ರಕ್ಷಣೆ ದೊರೆಯಬೇಕು.

**(A) ಅಪರಾಧ, ದಂಡ ಮೊದಲಾದ ಪ್ರಕ್ರಿಯೆಗಳಿಗೆ ಸಂಬಂಧಿಸಿರುವ ೧೯೧೯ರ ಭಾರತದ ಸರ್ಕಾರಿ ಕಾಯ್ದೆಯ ೧೯೧೯ರಲ್ಲಿ ವಿಭಾಗ XI ರಲ್ಲಿ ಈ ಕೆಳಗಿನ ವಿಭಾಗಗಳು ಸೇರ್ಪಡೆ ಆಗಬೇಕೆಂದು ಶೋಷಿತ ವರ್ಗದವರು ಉದ್ದೇಶಿಸಿದ್ದಾರೆ.**

**i) ಪೌರತ್ವದ ಉಲ್ಲಂಘನೆಯ ಅಪರಾಧ.**

ಎಲ್ಲ ವರ್ಗಗಳವರಿಗೂ ಅನ್ವಯವಾಗುವ ಕಾನೂನುಗಳ ಕಾರಣಗಳನ್ನು ಹೊರತುಪಡಿಸಿ, ಹಾಗೂ ಈ ಹಿಂದೆ ಅಸ್ಪೃಶ್ಯತೆಯ ಬಗೆಗೆ ಇದ್ದ ಪರಿಸ್ಥಿತಿಯು ಯಾವುದೇ ರೀತಿಯಲ್ಲಿ ಇದ್ದಿರಬಹುದಾದರೂ, ವಸತಿಗಳು, ಸಾಮಾಜಿಕ ಅನುಕೂಲಗಳು, ಸೌಲಭ್ಯಗಳು, ಖಾನಾವಳಿಗಳು, ರಸ್ತೆ, ಜಲ ಅಥವಾ ವಾಯು ಮಾರ್ಗಗಳಲ್ಲಿನ ಸಂಚಾರ, ರಂಗಭೂಮಿಗಳು ಅಥವಾ ಇನ್ನಿತರ ಸಾರ್ವಜನಿಕ ಮನರಂಜನಾಶಾಲೆಗಳು ಅಥವಾ ರೆಸಾರ್ಟ್‌ಗಳು ಮೊದಲಾದವುಗಳನ್ನು ಅನುಭವಿಸುವಲ್ಲಿ ಇತರರಿಗೆ ತೊಡಕು, ತೊಂದರೆಯನ್ನು ಉಂಟುಮಾಡಿದರೆ ಹಾಗೆ ತೊಡಕು ಅಥವಾ ತೊಂದರೆಯನ್ನುಂಟುಮಾಡಿದ ವ್ಯಕ್ತಿಗೆ ಐದು ವರ್ಷಗಳ ವರೆಗೆ ವಿಸ್ತರಿಸಬಹುದಾದ ಸೆರೆಮನೆವಾಸ ಹಾಗೂ ದಂಡಗಳನ್ನು ವಿಧಿಸಬಹುದಾಗಿದೆ.

(B) ತಮ್ಮ ಹಕ್ಕುಗಳನ್ನು ಸಂಪೂರ್ಣವಾಗಿ ಅನುಭವಿಸಲು ಕೇವಲ ಸಂಪ್ರದಾಯವಾದಿ ಹಿಂದೂಗಳಿಂದ ಮಾತ್ರ ಶೋಷಿತ ವರ್ಗದವರಿಗೆ ಅಡಚಣೆ ಇರಲಿಲ್ಲ. ಅದಕ್ಕಿಂತ ಮುಖ್ಯವಾಗಿ ಅವರಿಗೆ ಸಾಮಾಜಿಕವಾಗಿ ಬಹಿಷ್ಕಾರಕ್ಕೆ ಒಳಗಾಗುವ ಭಯವಿತ್ತು. ಇದು ಸಂಪ್ರದಾಯವಾದಿಗಳ ಕೈಯಲ್ಲಿದ್ದಂತಹ ಅತ್ಯಂತ ಪ್ರಬಲವಾದ ಅಸ್ತ್ರ ಎಂದೇ ಹೇಳಬಹುದು. ಒಂದು ವೇಳೆ ಅವರಿಗೆ ಅಸಮಾಧಾನ ಉಂಟು ಮಾಡುವ ಕಾರ್ಯಕ್ಕೆ ಶೋಷಿತ ವರ್ಗದವರು ಪ್ರಯತ್ನಿಸಿದರೆ, ಅವರು ಈ ಅಸ್ತ್ರವನ್ನು ಪ್ರಯೋಗಿಸಲು ಸಿದ್ಧರಿದ್ದರು. ಇದು ಯಾವ ರೀತಿಯಲ್ಲಿ ಕಾರ್ಯ ಎಸಗುತ್ತದೆ ಹಾಗೂ ಯಾವ ಪರಿಸ್ಥಿತಿಯಲ್ಲಿ ಇದರ ಪ್ರಯೋಗ ಆಗುತ್ತದೆ ಎಂಬುದನ್ನು ೧೯೨೮ರಲ್ಲಿ ಬೊಂಬಾಯಿ ಸರ್ಕಾರದಿಂದ ನೇಮಕಗೊಂಡಿದ್ದ ಸಮಿತಿ ವರದಿ ತಿಳಿಸುತ್ತದೆ. “ಶೋಷಿತ ವರ್ಗಗಳ ಹಾಗೂ ಶೋಷಿತ ಪಂಗಡಗಳ ಶೈಕ್ಷಣಿಕ ಆರ್ಥಿಕ ಹಾಗೂ ಸಾಮಾಜಿಕ ದುಃಸ್ಥಿತಿಯ ಅಧ್ಯಯನ ಹಾಗೂ ಪರಿಸ್ಥಿತಿಯ ಸುಧಾರಣೆಗೆ ಕೈಗೊಳ್ಳಬೇಕಾದಂತಹ ಕ್ರಮಗಳು” ಎಂಬ ಈ ವರದಿಯ ಇದರ ಆಯ್ದ ಭಾಗಗಳನ್ನು ಈ ಕೆಳಗೆ ನೀಡಲಾಗಿದೆ.

## ಶೋಷಿತ ವರ್ಗಗಳು ಹಾಗೂ ಸಾಮಾಜಿಕ ಬಹಿಷ್ಕಾರ

೧೦೨. ಶೋಷಿತ ವರ್ಗಗಳ ಜನರಿಗಾಗಿ ನಾವು ಈಗಾಗಲೇ ಹಲವಾರು ಪರಿಹಾರಗಳನ್ನು ಸೂಚಿಸಿದ್ದರೂ ಅವರು ಈ ಸಮಾಜದಲ್ಲಿ ಇರುವಂತಹ ಎಲ್ಲಾ ಸಾರ್ವಜನಿಕ ಸ್ವತ್ತುಗಳನ್ನು ಉಪಯೋಗಿಸುವಲ್ಲಿ ಅವರಿಗೆ ಹಲವಾರು ಅಡ್ಡಿ ಆತಂಕಗಳು ಎದುರಾಗುತ್ತಿವೆ. ಮೊದಲ ಹಾಗೂ ಅತ್ಯಂತ ಕಠಿಣವಾದ ಸವಾಲು ಎಂದರೆ ಸಂಪ್ರದಾಯವಾದಿ ವರ್ಗದಿಂದ ಎದುರಾಗಬಹುದಾದ ಕ್ರೌರ್ಯ. ಶೋಷಿತ ವರ್ಗದವರು

ಪ್ರತಿಯೊಂದು ಹಳ್ಳಿಯಲ್ಲಿಯೂ ಅಲ್ಪಸಂಖ್ಯಾತರೇ. ಇದಕ್ಕೆ ತದ್ವಿರುದ್ಧವಾಗಿ ಸಂಪ್ರದಾಯವಾದಿ ವರ್ಗದ ಜನರು ಬಹುಸಂಖ್ಯಾತರಾಗಿರುತ್ತಾರೆ. ಇವರು ಶೋಷಿತವರ್ಗದ ಜನರು ತಮ್ಮ ಹಕ್ಕು ಸ್ಥಾಪಿಸಿದಂತೆ ಮಾಡಲು ಯಾವ ಮಟ್ಟಕ್ಕಾದರೂ ಹೋಗಲು ಸಿದ್ಧರಿರುತ್ತಾರೆ. ಆದರೆ ಇಲ್ಲಿ ಇರುವ ಮುಖ್ಯ ಅಂಶವೆಂದರೆ ಪೋಲಿಸರು ಹಾಗೂ ಕಾನೂನಿನ ಭಯದಿಂದಾಗಿ ಅವರು ಕ್ರೌರ್ಯದ ವಿರುದ್ಧ ಮೊರೆ ಹೋಗಲಾರರು.

ಎರಡನೆಯ ತೊಂದರೆ ಎದುರಾಗುವುದು ಶೋಷಿತ ವರ್ಗದವರ ಇಂದಿನ ಆರ್ಥಿಕ ಸ್ಥಿತಿಯಿಂದ. ಈ ದೇಶದ ಬಹುತೇಕ ಭಾಗಗಳಲ್ಲಿ ಶೋಷಿತ ವರ್ಗದವರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲವೇ ಇಲ್ಲ. ಕೆಲವು ಜನ ಶೋಷಿತ ವರ್ಗದವರು, ಸಂಪ್ರದಾಯವಾದಿ ಜನರ ಹೊಲಗಳಲ್ಲಿ ಉಳುಮೆಯನ್ನು ಮಾಡುತ್ತಾರೆ. ಇನ್ನೂ ಕೆಲಜನರು ಇದೇ ಹೊಲದಲ್ಲಿ ಕೂಲಿನಾಲಿ ಮಾಡಿಕೊಂಡು ತಮ್ಮಹೊಟ್ಟೆ ಹೊರೆದುಕೊಂಡರೆ, ಮತ್ತೆ ಕೆಲವರು ಸಂಪ್ರದಾಯವಾದಿಗಳು ತಾವು ಮಾಡಿದ ಪೌರಕಾರ್ಮಿಕ ಸೇವೆಗಳಿಗೆ ಬದಲಾಗಿ ನೀಡುವ ಧಾನ್ಯಗಳಿಂದ ಜೀವನವನ್ನು ಸಾಗಿಸುತ್ತಾರೆ. ನಾವು ಈ ನಿಟ್ಟಿನಲ್ಲಿ ಲೆಕ್ಕಕ್ಕೆ ಸಿಗದಷ್ಟು ಉದಾಹರಣೆಗಳನ್ನು ಕೇಳಿದ್ದೇವೆ. ಶೋಷಿತ ವರ್ಗದವರ ಆರ್ಥಿಕ ಹಿಂದುಳಿತದಿಂದಾಗಿ ಸಂಪ್ರದಾಯವಾದಿಗಳು ಇವರ ಮೇಲೆ ಅವ್ಯಾಹತವಾಗಿ ಶೋಷಣೆ ನಡೆಸುತ್ತಾರೆ. ಒಂದು ವೇಳೆ ಇವರೇನಾದರೂ ತಮ್ಮ ಹಕ್ಕನ್ನು ಸ್ಥಾಪಿಸುವ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟರೆ ಕೂಡಲೇ ಸಂಪ್ರದಾಯವಾದಿಗಳು ತಾವು ನೀಡಿದ್ದ ಕೆಲಸದಿಂದ ಇವರನ್ನು ತೆಗೆದುಹಾಕಿಬಿಡುತ್ತಾರೆ. ಇವರು ಆ ಭಯದಿಂದಾಗಿ ತಮ್ಮ ಹಕ್ಕನ್ನು ಸ್ಥಾಪಿಸುವ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದಿಡಲು ಕೂಡ ಹೆದರುತ್ತಾರೆ. ಇದನ್ನೇ ಒಂದು ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡು ಎಲ್ಲಾ ಹಳ್ಳಿಗಳಲ್ಲಿಯೂ ಮೇಲ್ವರ್ಗದ ಜನರು ಶೋಷಿತರು ಸಾರ್ವಜನಿಕ ರಸ್ತೆಗಳನ್ನು ಉಪಯೋಗಿಸದಂತೆ, ಅವರಿಗೆ ಅಗತ್ಯ ಸಾಮಾನುಗಳು ದೊರೆಯದಂತೆ ಮಾಡುತ್ತಾರೆ. ನಮಗೆ ಇದುವರೆಗೂ ಸಿಕ್ಕಿರುವ ಹಲವಾರು ಸಾಕ್ಷ್ಯಗಳ ಪ್ರಕಾರ ಶೋಷಿತರ ಒಂದೇ ಒಂದು ಸಣ್ಣ ತಪ್ಪು ಇವರ ಸಾಮಾಜಿಕ ಬಹಿಷ್ಕಾರಕ್ಕೆ ನಾಂದಿ ಹಾಡುತ್ತಿತ್ತು. ಇಂತಹ ಸಣ್ಣ ತಪ್ಪುಗಳೆಂದರೆ ಸಾರ್ವಜನಿಕ ಬಾವಿಯನ್ನು ಶೋಷಿತ ವರ್ಗದವರು ಉಪಯೋಗಿಸುವ ಪ್ರಯತ್ನ ಮಾಡುವುದು, ಪವಿತ್ರವಾದ ಜನಿವಾರವನ್ನು ಇವರು ಧರಿಸಿದರೆ, ಒಂದು ಸಣ್ಣ ತುಂಡು ಭೂಮಿಕೊಂಡರೆ, ಒಳ್ಳೆಯ ಬಟ್ಟೆ ಇಲ್ಲವೇ ಆಭರಣಗಳನ್ನು ತೊಟ್ಟರೆ, ಇಲ್ಲ ಮದುವೆಯ ಮೆರವಣಿಗೆಯಲ್ಲಿ ಮದುಮಗನನ್ನು ಕುದುರೆಯ ಮೇಲೆ ಕುಳ್ಳಿರಿಸಿ ಸಾರ್ವಜನಿಕ ರಸ್ತೆಯಲ್ಲಿ ಕರೆದೊಯ್ದರೆ ಇವರು ಮೇಲ್ವರ್ಗದವರ ಕೋಪಕ್ಕೆ ಗುರಿಯಾಗುತ್ತಾರೆ.

"ಶೋಷಿತ ವರ್ಗದವರ ವಿರುದ್ಧ ಸಾಮಾಜಿಕ ಬಹಿಷ್ಕಾರಕ್ಕಿಂತ ಪ್ರಬಲವಾದ ಅಸ್ತ್ರವಿರುವುದು ನಮಗೆ ತಿಳಿದುಬಂದಿಲ್ಲ. ಎಂತಹ ಕ್ರೌರ್ಯವು ಕೂಡ ಇದರ ಎದುರು ಪೇಲವ ಆಗಿ ಹೋಗುತ್ತದೆ. ಇದೊಂದು ಕಾನೂನು ಬಾಹಿರವಾದ ಕ್ರಮ ಎಂದು ಕೂಡ ಪರಿಗಣಿಸಲ್ಪಡುವುದಿಲ್ಲ. ಈ ರೀತಿಯ ಶೋಷಣೆಯನ್ನು ಎಲ್ಲಾ ಶಕ್ತಿಯನ್ನೂ ಉಪಯೋಗಿಸಿ ಅದುಮಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಇದರಿಂದ ಮಾತ್ರವೇ ಶೋಷಿತವರ್ಗದವರಿಗೆ ವಾಕ್ ಸ್ವಾತಂತ್ರ್ಯ ಹಾಗೂ ತಮ್ಮ ಏಳಿಗೆಗಾಗಿ ಬೇಕಾದ ಮಾರ್ಗಗಳನ್ನು ಅನುಸರಿಸುವ ಸ್ವಾತಂತ್ರ್ಯ ದೊರಕುತ್ತದೆ.

ಆದರೆ ಶೋಷಿತ ವರ್ಗದವರ ಪ್ರಕಾರ ಅವರ ಏಳಿಗೆಯಾಗಬೇಕಾದರೆ ಈ ರೀತಿಯ ಸಾಮಾಜಿಕ ಬಹಿಷ್ಕಾರವನ್ನು ಕೂಡ ಕಾನೂನಿನ ಅಡಿಯಲ್ಲಿ ಅಪರಾಧ ಎಂದು ಪರಿಗಣಿಸಲ್ಪಡಬೇಕು. ಆದರಿಂದ ೧೯೧೯ರ ಭಾರತ ಸರ್ಕಾರದ ಕಾಯ್ದೆಯ ವಿಭಾಗ Xರಲ್ಲಿ ಈ ಕೆಲ ಅಂಶಗಳನ್ನು ಸೇರ್ಪಡೆ ಮಾಡಬೇಕು ಎಂದು ಹೇಳುತ್ತಾರೆ.

**೧. ಬಹಿಷ್ಕಾರ ಎಂಬುದು ಅಪರಾಧ : ಇದರ ವಿವರಣೆ.**

i) ಒಬ್ಬ ಮತ್ತೊಬ್ಬನನ್ನು ಬಹಿಷ್ಕರಿಸಿದ್ದಾನೆ ಎಂದು ಪರಿಗಣಿಸಬೇಕೆಂದರೆ ಆತ ಈ ಕೆಳಕಂಡ ಅಪರಾಧಗಳನ್ನೆಸಗಿರಬೇಕು.

(ಈ ಅಂಶ ಹಾಗೂ ಕೆಳಗಿನ ಕೆಲ ಕಾನೂನು ವಿಷಯಗಳನ್ನು ಬರ್ಮಾ ದೇಶದ ೧೯೨೨ರ ಬಹಿಷ್ಕಾರ ವಿರೋಧಿ ಕಾಯ್ದೆಯಿಂದ ಆಯ್ದುಕೊಳ್ಳಲಾಗಿದೆ. ಆದರೆ ಸಂದರ್ಭಕ್ಕೆ ತಕ್ಕಂತೆ ಇಲ್ಲಿ ಕೆಲ ಬದಲಾವಣೆಗಳನ್ನು ಮಾಡಲಾಗಿದೆ.)

a) ಯಾವುದೆ ಮನೆ ಅಥವಾ ಭೂಮಿಯನ್ನು ಉಪಯೋಗಿಸುವ ಅನುಮತಿ ನೀಡದೇ ಇರುವುದು. ಅಥವಾ ಆತನೊಂದಿಗೆ ಯಾವುದೇ ರೀತಿಯ ಸಂಪರ್ಕ ಕಡಿತಗೊಳಿಸುವುದು ಕೆಲಸಕ್ಕೆ ತೆಗೆದುಕೊಳ್ಳದೇ ಇರುವುದು, ಆತನಿಂದ ಯಾವುದೇ ಕೆಲಸ, ಅಥವಾ ಸೇವೆಯನ್ನು ಸ್ವೀಕರಿಸದೇ ಇರುವುದು, ವ್ಯಾಪಾರದಲ್ಲಿ ಇತರ ಜನರೊಂದಿಗೆ ಯಾವ ರೀತಿಯ ವ್ಯವಹಾರ ಇಟ್ಟುಕೊಂಡಿರುತ್ತಾರೋ ಆ ರೀತಿಯ ವ್ಯವಹಾರವನ್ನು ಇಟ್ಟುಕೊಳ್ಳದೇ ಇರುವುದು.

ಅಥವಾ

b) ಸಾಮಾಜಿಕ, ವ್ಯಾವಹಾರಿಕ ಹಾಗೂ ವ್ಯಾಪಾರ ಸಂಬಂಧಿ ಸಂಪರ್ಕ ಹೊಂದುವುದರಿಂದ ಹಿಂದೆ ಸರಿಯುವುದು, ಈ ರೀತಿಯ ಸಾಮಾಜಿಕ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವುದು. ಸಂವಿಧಾನವು ಇವರಿಗೆ ನೀಡಿರುವಂತಹ ಸಾಮಾನ್ಯ ನಾಗರಿಕ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನಮಾಡುವುದು.

ಅಥವಾ

c) ಸಾಮಾಜಿಕ ಹಕ್ಕನ್ನು ಪ್ರತಿಪಾದಿಸಲು ಪ್ರಯತ್ನಿಸುವ ವ್ಯಕ್ತಿಗೆ ಯಾವುದೇ ರೀತಿಯ ಅಪಾಯವನ್ನು ಉಂಟುಮಾಡುವುದು.

**II ಬಹಿಷ್ಕಾರಕ್ಕೆ ಒದಗಬಹುದಾದ ಶಿಕ್ಷೆ.**

ನ್ಯಾಯಬದ್ಧವಾಗಿ ಒಬ್ಬ ವ್ಯಕ್ತಿ ಮಾಡಬೇಕಾಗಿರುವ ಯಾವುದಾದರೂ ಕಾರ್ಯವನ್ನು ಮಾಡಿದ್ದರ ಪರಿಣಾಮವಾಗಿ, ನ್ಯಾಯಬದ್ಧವಾಗಿ ಮಾಡಬಾರದಾಗಿರುವ ಯಾವುದಾದರೂ ಕಾರ್ಯವನ್ನು ಮಾಡದಿದ್ದರ ಪರಿಣಾಮವಾಗಿ ಅಥವಾ ಆ ವ್ಯಕ್ತಿ ನ್ಯಾಯಬದ್ಧವಾಗಿ ಮಾಡಬಾರದ ಕಾರ್ಯವನ್ನು ಅವನಿಗೆ ತೊಂದರೆಯನ್ನುಂಟುಮಾಡುವ ಉದ್ದೇಶದಿಂದ ಅವನಿಂದ ಬಲವಂತವಾಗಿ ಮಾಡಿಸುವ ಮೂಲಕ ಅಥವಾ ಮಾಡಬೇಕಾದ ಕಾರ್ಯವನ್ನು ಮಾಡದ ಹಾಗೆ ಮಾಡುವುದರ ಮೂಲಕ, ಆ ವ್ಯಕ್ತಿಗೆ ವೈಯಕ್ತಿಕವಾಗಿ, ಮಾನಸಿಕವಾಗಿ ಅಥವಾ ಅವನ ಹೆಸರಿಗೆ ಅಪಕೀರ್ತಿಯನ್ನು ತರುವ ಉದ್ದೇಶದಿಂದಗಲೀ, ಅವನ ಜೀವಿತದ ಮಾರ್ಗವನ್ನು ಹಾಳುಮಾಡುವುದಕ್ಕಾಗಲೀ, ಅವನನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರೆ, ಹಾಗೆ ಬಹಿಷ್ಕರಿಸಿದ ವ್ಯಕ್ತಿಯನ್ನು ದಂಡದೊಂದಿಗೆ ಅಥವಾ ದಂಡವಿಲ್ಲದೆ ಏಳು ವರ್ಷಗಳವರೆಗೆ ಸೆರೆಮನೆವಾಸಕ್ಕೆ ಗುರಿಮಾಡಬಹುದು.

ಈ ರೀತಿಯ ಯಾವುದೇ ತೆರನಾದ ಕಾನೂನು ಬಾಹಿರ ಕೃತ್ಯದಲ್ಲಿ ಆ ಆಪಾದಿತ ವ್ಯಕ್ತಿ ಭಾಗಿಯಾಗಿಲ್ಲ ಎಂಬ ಅಂಶ ನ್ಯಾಯಾಲಯಕ್ಕೆ ಮನವರಿಕೆ ಆದ ಪಕ್ಷದಲ್ಲಿ ಆತನನ್ನು ನಿರಪರಾಧಿ ಎಂದು ಪರಿಗಣಿಸಬೇಕಾಗುತ್ತದೆ.

**III ಬಹಿಷ್ಕಾರಕ್ಕೆ ಪ್ರಚೋದಿಸಿದರೆ ಅಥವಾ ಬೆಂಬಲ ನೀಡಿದರೆ ದೊರೆಯಬಹುದಾದ ಶಿಕ್ಷೆ**

ಯಾರೇ ಆದರೂ

a) ಸಾರ್ವಜನಿಕವಾಗಿ ಬಹಿಷ್ಕಾರವನ್ನು ಕುರಿತು ಪ್ರಕಟಣೆ ಹೊರಡಿಸಿದರೆ,

b) ಬಹಿಷ್ಕಾರಕ್ಕೆ ಕಾರಣವಾಗಬಹುದಾದ ವರದಿ, ಘೋಷಣೆ ಅಥವಾ ವದಂತಿಯನ್ನು ಹಬ್ಬಿಸಿದರೆ

c) ಬಹಿಷ್ಕಾರ ಮಾಡಲು ಇಚ್ಛಿಸುತ್ತಿರುವ ವ್ಯಕ್ತಿ ಅಥವಾ ವರ್ಗಕ್ಕೆ ಬೆಂಬಲ ಸೂಚಿಸಿದರೆ, ಅಂತಹವರಿಗೆ ಐದು ವರ್ಷಗಳವರೆಗೆ ಕಾರಾಗೃಹ ಶಿಕ್ಷೆಯನ್ನು ಅಥವಾ ದಂಡವನ್ನು ಅಥವಾ ಎರಡನ್ನೂ ವಿಧಿಸಲಾಗುತ್ತದೆ.

ವಿವರಣೆ : ಅಪರಾಧ ಎಂದು ಪರಿಗಣಿಸಲ್ಪಡುವ ಯಾವುದೇ ವ್ಯಕ್ತಿಗೆ ಅಥವಾ ವರ್ಗಕ್ಕೆ ಬೆಂಬಲ ನೀಡಿದರೆ, ಆತ ಕಾನೂನಿನ ಪರಿಧಿಯಲ್ಲಿ ಯಾವ ರೀತಿ ವರ್ತಿಸಬೇಕು ಎಂದು ಈ ವಿಭಾಗದ ಕೊನೆಯಲ್ಲಿ ಹೇಳಿರುವ ರೀತಿ ವರ್ತಿಸದಿದ್ದರೆ. ಆತ ಅಪರಾಧವನ್ನೆಸಗಿದ್ದಾನೆ ಎಂದು ಈ ಪರಿಚ್ಛೇದದ ಅಡಿಯಲ್ಲಿ ಪರಿಗಣಿಸಬಹುದು.

**IV ಬಹಿಷ್ಕಾರದ ಬೆದರಿಕೆ ಒಡ್ಡಿದರೆ ಒದಗಬಹುದಾದ ಶಿಕ್ಷೆ**

ಯಾರೇ ಆದರೂ, ಯಾವುದೇ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಕಾನೂನು ರೀತ್ಯಾ ಮಾಡಬೇಕಾದ ಕಾರ್ಯ ಮಾಡದೇಹೋದರೆ ಅಥವಾ ಕಾನೂನಿನ ಅನ್ವಯ ಕೈಗೊಳ್ಳಬಾರದು ಎಂದು ಉಲ್ಲೇಖಿಸಿರುವ ಕಾರ್ಯವನ್ನು, ಕಾನೂನು ಬಾಹಿರವಾಗಿರುವಂತಹ ಕಾರ್ಯವನ್ನು, ಕೈಗೊಳ್ಳಲು ಉತ್ತೇಜಿಸಿದರೆ ಅಥವಾ ಕಾನೂನಿನ ಅನ್ವಯ ಮಾಡಬೇಕಾದ ಕಾರ್ಯವನ್ನು ಮಾಡದಿರುವಂತೆ ಉತ್ತೇಜಿಸಿದರೆ ಅಥವಾ ಯಾವುದೇ ವ್ಯಕ್ತಿಗೆ ಬಹಿಷ್ಕಾರ ಒಡ್ಡುವುದಾಗಿ ಬೆದರಿಸಿದರೆ ಅಂತಹ ವ್ಯಕ್ತಿಗೆ ಐದು ವರ್ಷಗಳವರೆಗೆ ಕಾರಾಗೃಹ ಶಿಕ್ಷೆಯನ್ನು ಅಥವಾ ದಂಡವನ್ನು ಅಥವಾ ಎರಡನ್ನೂ ವಿಧಿಸಬಹುದಾಗಿರುತ್ತದೆ.

ಬಹಿಷ್ಕಾರ ಎಂದು ಪರಿಗಣಿಸಲ್ಪಡದೇ ಇರುವುದು.

i) ಕಾರ್ಮಿಕ ಸಂಘಟನೆಗಳಿಗೆ ಸಂಬಂಧಿಸಿದ ನ್ಯಾಯಬದ್ಧ ಕಾರ್ಯಗಳು

ii) ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಸ್ಪರ್ಧಾತ್ಮಕ ನಡಾವಳಿಗಳು

ಮೇಲಿನ ಎಲ್ಲಾ ಅಪರಾಧಗಳನ್ನು ಕಾನೂನು ಕ್ರಮ ತೆಗೆದುಕೊಳ್ಳಬಹುದಾದ ಅಪರಾಧಗಳು ಎಂದು ಪರಿಗಣಿಸಬಹುದು.

**ಷರತ್ತು ಸಂಖ್ಯೆ – III**

**ತಾರತಮ್ಯದ ವಿರುದ್ಧ ರಕ್ಷಣೆ**

ಶೋಷಿತ ವರ್ಗದವರ ಮನದಲ್ಲಿ ಒಂದು ರೀತಿಯ ಭಯ ಇದ್ದೇ ಇರುತ್ತದೆ. ಅದೇನೆಂದರೆ ಭವಿಷ್ಯದಲ್ಲಿ ಕಾನೂನಿನಲ್ಲಿ ಇಲ್ಲವೇ ಆಡಳಿತಾತ್ಮಕ ಆದೇಶಗಳಲ್ಲಿ ತಮ್ಮ ವಿರುದ್ಧ ಮಲತಾಯಿ ಧೋರಣೆ ತೋರುವ ಸಾಧ್ಯತೆ ಬರುತ್ತದೆ ಎಂಬ ಭಯ. ಆದ್ದರಿಂದ ಈ ರೀತಿ ಆಗುವುದಿಲ್ಲ ಎಂಬ ಆಶ್ವಾಸನೆ ಅವರಿಗೆ ಕಾನೂನಿನ ಮೂಲಕವೇ ಬರಬೇಕು. ಅಲ್ಲಿಯವರೆಗೆ ಅವರು ಬಹುಸಂಖ್ಯಾತರ ಆಡಳಿತಕ್ಕೆ ಒಳಪಡಲು ಸಮ್ಮತಿ ಸೂಚಿಸಲು ಸಾಧ್ಯವಿಲ್ಲ.

ಆದ್ದರಿಂದ ಈ ಕೆಳಗಿನ ನಿಬಂಧನೆಗಳನ್ನು ಭಾರತೀಯ ಸಂವಿಧಾನದಲ್ಲಿ ಸೇರ್ಪಡೆ ಮಾಡತಕ್ಕದ್ದು ಎಂಬ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

"ಭಾರತದ ಯಾವುದೇ ಭಾಗದಲ್ಲಿ ಯಾವ ಮಂತ್ರಿಮಂಡಲ ಅಥವಾ ಅಧಿಕಾರಿಗಳೇ ಆಗಲಿ, ಈ ನಿಟ್ಟಿನಲ್ಲಿ ಯಾವುದೇ ರೀತಿಯ ಕಾನೂನು ಅಥವಾ ಆದೇಶವನ್ನು, ಇಲ್ಲವೇ ನಿಯಮ ಅಥವಾ ನಿಬಂಧನೆಗಳನ್ನು ಆ ರಾಜ್ಯದ ಪ್ರಜೆಗಳಿಗೆ ಸಂಬಂಧಿಸಿದಂತೆ ಹೊರಡಿಸುವ ಅಧಿಕಾರ ಹೊಂದಿರುವುದಿಲ್ಲ. ಈ ಮೊದಲೇ ಅಲ್ಲಿ ಅಸ್ಪೃಶ್ಯತೆ ಇದ್ದರೂ ಕೂಡ ಭಾರತದ ಕೇಂದ್ರ ಸರ್ಕಾರ ಮಾತ್ರವೇ ಈ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ."

ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತಹ ನಿರ್ಧಾರಗಳನ್ನು ಕೂಡ ಕೇಂದ್ರ ಸರ್ಕಾರವೇ ತೆಗೆದುಕೊಳ್ಳತಕ್ಕದ್ದು.

(೧) ಯಾವುದೇ ಕರಾರನ್ನು ಮಾಡುವುದು ಇಲ್ಲವೇ ಜಾರಿಗೆ ತರುವುದು, ಕೇಸನ್ನು ದಾಖಲಿಸುವುದು, ಒಪ್ಪಂದಕ್ಕೆ ಒಳಪಡುವುದು ಸಾಕ್ಷ್ಯ ನೀಡುವುದು, ಕೊಳ್ಳುವುದು, ಮಾರುವುದು ಅಥವಾ ಯಾರಿಗೆ ಸಂಬಂಧಿಸಿದ ಆಸ್ತಿಯನ್ನೇ ಆದರೂ ಒತ್ತೆ ಇಟ್ಟುಕೊಳ್ಳುವುದು.

(೨) ಭಾರತ ಸರ್ಕಾರದ ಇಲ್ಲವೇ ಸೇನೆಯ ಕೆಲಸಗಳಿಗೆ ಸೇರಬೇಕೆಂದರೆ ಅಗತ್ಯವಿರುವ ಅರ್ಹತೆಯನ್ನು ನಿರ್ಧರಿಸುವುದು ಹಾಗು ಎಲ್ಲಾ ವಿದ್ಯಾಸಂಸ್ಥೆಗಳಿಗೆ ಸೇರ್ಪಡೆಯಾಗಬೇಕೆಂದರೆ ಅಗತ್ಯವಿರುವ ಅರ್ಹತೆಗಳನ್ನು ನಿರ್ಧರಿಸುವುದು, ಅದಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ವರ್ಗದ ಜನರಿಗೆ ಸಮಾನವಾದ ಹಕ್ಕುಗಳನ್ನು ನೀಡುವುದು.

(೩) ಎಲ್ಲ ರೀತಿಯ ಸವಲತ್ತುಗಳನ್ನು ಉಪಯೋಗಿಸಲು ಸಮಾನವಾದ ಹಕ್ಕನ್ನು ಎಲ್ಲಾ ವರ್ಗಗಳಿಗೂ ನೀಡುವುದು ಎಂದರೆ ಎಲ್ಲ ರೀತಿಯ ವಸತಿ ಸಮುಚ್ಚಯಗಳಲ್ಲಿ ವಾಸಿಸುವ, ಸವಲತ್ತುಗಳನ್ನು ಉಪಯೋಗಿಸುವ, ಎಲ್ಲಾ ಶಿಕ್ಷಣಸಂಸ್ಥೆಗಳಿಗೆ ಸೇರ್ಪಡೆ ಆಗುವ, ಉಪಹಾರಗೃಹಗಳಿಗೆ ಹೋಗುವ, ನದಿ, ಬಾವಿ, ಕೆರೆ ಕಟ್ಟೆಗಳನ್ನು ಬಳಸುವ, ಎಲ್ಲಾ ರಸ್ತೆಗಳನ್ನು ಉಪಯೋಗಿಸುವ, ರಸ್ತೆಯ ಮೇಲೆ ಚಲಿಸುವ ಎಲ್ಲಾ ವಾಹನಗಳನ್ನು ಬಳಸುವ ಹಡಗು ವಿಮಾನಗಳನ್ನು ಬಳಸುವ, ಸಿನಿಮಾ ಗೃಹಗಳು ಹಾಗೂ ಉದ್ಯಾನವನಗಳನ್ನು ಬಳಸುವ ಹಕ್ಕು ಎಲ್ಲರಿಗೂ ಸಮಾನವಾಗಿ ಇರಬೇಕು. ಒಂದು ವೇಳೆ ಇದರ ನಿಷೇಧ ಅನ್ವಯ ಆಗುವುದಾದರೆ ಎಲ್ಲಾ ಜಾತಿ ವರ್ಗಗಳಿಗೂ ಅದು ಸಮಾನವಾಗಿ ಅನ್ವಯ ಆಗಬೇಕು.

(೪) ಧಾರ್ಮಿಕ ಇಲಾಖೆಗೆ ಸಂಬಂಧಿಸಿದ ಹಾಗೂ ಎಲ್ಲ ವರ್ಗದ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತಹ ಎಲ್ಲಾ ರೀತಿಯ ಸವಲತ್ತುಗಳನ್ನು ಪಡೆದುಕೊಳ್ಳಲು ಅವಕಾಶವನ್ನು ಯಾವ ತಾರತಮ್ಯವೂ ಇಲ್ಲದಂತೆ ಕಲ್ಪಿಸಿಕೊಡುವುದು.

(೫) ಈ ಮೊದಲು ಅಸ್ಪೃಶ್ಯತೆಗೆ ಒಳಗಾಗಿದ್ದರೂ ಕೂಡ, ತನ್ನ ವೈಯಕ್ತಿಕ ಹಾಗು ಆಸ್ತಿಪಾಸ್ತಿಯ ರಕ್ಷಣೆಗೆ ಸಂಪೂರ್ಣ ಅವಕಾಶ ಪಡೆದುಕೊಳ್ಳುವುದು. ಅಲ್ಲದೇ ಮೇಲ್ವರ್ಗದ ಜನರಿಗೆ ದೊರೆಯುವಂತಹ ಶಿಕ್ಷೆ, ತೊಂದರೆ ಹಾಗೂ ದಂಡವೇ ಅಸ್ಪೃಶ್ಯರಿಗೂ ಅನ್ವಯವಾಗುವಂತೆ ಮಾಡುವುದು.

## ಷರತ್ತು ಸಂಖ್ಯೆ IV
## ಮಂತ್ರಿಮಂಡಲದಲ್ಲಿ ಸಾಕಷ್ಟು ಪ್ರಾತಿನಿಧ್ಯ

ಶೋಷಿತ ವರ್ಗದ ಜನರಿಗೆ ರಾಜಕೀಯ ನಿರ್ಧಾರಗಳ ಮೇಲೆ ಪ್ರಭಾವ ಬೀರುವಷ್ಟು ಶಕ್ತಿಯನ್ನು ಇವರುಗಳು ಹೊಂದಿರುವುದಕ್ಕೆ ಸಹಾಯ ಮಾಡಲು ಅವರಿಗೆ ರಾಜಕೀಯ ಬಲವನ್ನು ನೀಡಬೇಕು. ಈ ಕಾರಣದಿಂದ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಕೆಲ ಸವಲತ್ತುಗಳಿಗಾಗಿ ಅವರು ಒತ್ತಾಯಿಸುತ್ತಿದ್ದಾರೆ.

೧) ಕೇಂದ್ರ ಹಾಗೂ ಪ್ರಾಂತ್ಯದ ರಾಜ್ಯಮಟ್ಟದಲ್ಲಿ ಶೋಷಿತವರ್ಗದವರಿಗೆ ಸಾಕಷ್ಟು ಪ್ರಾತಿನಿಧ್ಯ

೨) ತಮ್ಮ ಪ್ರತಿನಿಧಿಗಳನ್ನು ತಾವೇ ಆಯ್ಕೆ ಮಾಡುವ ಸ್ವಾತಂತ್ರ್ಯ

a) ವಯಸ್ಕ ಮತದಾನದ ಮೂಲಕ ಅಥವಾ

b) ಮೊದಲ ಹತ್ತು ವರ್ಷ ಪ್ರತ್ಯೇಕ ಮತಕ್ಷೇತ್ರದ ವ್ಯವಸ್ಥೆ ಹಾಗೂ ನಂತರ ಜಂಟಿ ಮತಕ್ಷೇತ್ರಗಳ

ಮೂಲಕ ಮತ್ತು ನಂತರ ಮೀಸಲು ಸ್ಥಾನಗಳ ಮೂಲಕ. ಶೋಷಿತ ವರ್ಗದವರ ಮೇಲೆ ಮಾಮೂಲಿನ ಚುನಾವಣೆಯನ್ನು ಬಲವಂತವಾಗಿ ಹೇರಬಾರದು.

ವಿಶೇಷ ಸೂಚನೆ : ಬೇರೆಯ ವರ್ಗದವರಿಗೆ ಎಷ್ಟು ಸ್ಥಾನಗಳಿವೆ ಎಂದು ನಿರ್ಧಾರ ಆಗುವವರೆಗು ಶೋಷಿತ ವರ್ಗದವರಿಗೆ ನೀಡುವಂತಹ ಸ್ಥಾನಗಳ ಸಂಖ್ಯೆಯನ್ನು ನಿರ್ಧರಿಸಬಾರದು. ಆದರೆ ತಮಗಿಂತ ಉತ್ತಮ ಸ್ಥಾನ ಇತರರಿಗೆ ಜನರಿಗೆ ದೊರೆಯುವುದನ್ನು ಯಾವುದೇ ಕಾರಣದಿಂದಲೂ ಶೋಷಿತ ವರ್ಗದ ಜನ ಒಪ್ಪಿಕೊಳ್ಳುವುದಿಲ್ಲ. ಅಂತೆಯೇ ಬೊಂಬಾಯಿ ಹಾಗೂ ಮದರಾಸಿನಲ್ಲಿ ಶೋಷಿತ ಜನಸಂಖ್ಯೆ ಹೆಚ್ಚಾಗಿ ಇರುವುದರಿಂದ ಅದಕ್ಕೆ ಅನುಗುಣವಾಗಿಯೇ ಇಲ್ಲಿ ಇವರಿಗೆ ಹೆಚ್ಚಿನ ಸ್ಥಾನಗಳು ಸಿಗಬೇಕು. ಬೇರೆಯ ಪ್ರಾಂತ್ಯಗಳಲ್ಲಿ ಇತರ ಅಲ್ಪಸಂಖ್ಯಾತರಿಗೆ ದೊರೆಯುವ ಪ್ರಾತಿನಿಧ್ಯವು ಇದರ ಮೇಲೆ ಯಾವುದೇ ಪರಿಣಾಮವನ್ನು ಬೀರಬಾರದು.

## ಷರತ್ತು ಸಂಖ್ಯೆ V
## ಸಾರ್ವಜನಿಕ ಸೇವೆಯಲ್ಲಿ ಅಲ್ಪಸಂಖ್ಯಾತರಿಗೆ ಸಾಕಷ್ಟು ಪ್ರಾತಿನಿಧ್ಯ

ಈಗಾಗಲೇ ಮೇಲ್ವರ್ಗದ ಜನರ ಕೆಳಗೆ ಶೋಷಿತ ವರ್ಗದ ಜನರು ಸಾಕಷ್ಟು ಶೋಷಣೆಯನ್ನು ಅನುಭವಿಸಿದ್ದಾರೆ. ಏಕೆಂದರೆ ಸಾರ್ವಜನಿಕ ಸೇವೆಯಲ್ಲಿ ಮೇಲ್ವರ್ಗದ ಜನರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಆ ಕ್ಷೇತ್ರದಲ್ಲಿ ತಮ್ಮ ಏಕಸ್ವಾಮ್ಯವನ್ನು ಸ್ಥಾಪಿಸಿದ್ದಾರೆ. ಈ ವಿಷಯದಲ್ಲಿ ಹಿಂದೂಗಳು ಯಾವುದೇ ನ್ಯಾಯ ಸಮಾನತೆ ಅಥವಾ ಮನಃಸಾಕ್ಷಿಗೆ ಬೆಲೆಕೊಟ್ಟಿಲ್ಲ. ಈ ರೀತಿಯ ಕಾನೂನು ಬಾಹಿರವಾದ ಕೃತ್ಯವನ್ನು ತಡೆಯಬೇಕೆಂದರೆ ಸಾರ್ವಜನಿಕ ಸೇವೆಯಲ್ಲಿ ಹಿಂದೂ ಏಕಸ್ವಾಮ್ಯವನ್ನು ಮುರಿಯಲೇಬೇಕಾಗುತ್ತದೆ. ಅಲ್ಲದೇ ಶೋಷಿತ ವರ್ಗದವರು ಸಾಕಷ್ಟು ಸ್ಥಾನವನ್ನು ದಕ್ಕಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸಂವಿಧಾನಾತ್ಮಕ ಕಾನೂನಿನಲ್ಲಿ ಈ ಕೆಳಗಿನ ನಿಯಮಗಳನ್ನು ಸೇರ್ಪಡೆ ಮಾಡಬೇಕು ಎಂಬ ಪ್ರಸ್ತಾವನೆಯನ್ನು ಶೋಷಿತವರ್ಗದ ಜನರು ಸಲ್ಲಿಸುತ್ತಿದ್ದಾರೆ.

೧) ಕೇಂದ್ರದಲ್ಲಿ ಹಾಗೂ ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಒಂದೊಂದು ಲೋಕಸೇವಾ ಆಯೋಗವನ್ನು ರಚಿಸಬೇಕು. ಈ ಆಯೋಗದ ಮುಖಾಂತರವೇ ಸಾರ್ವಜನಿಕ ಸೇವೆಗಳಿಗೆ ಸೇರ್ಪಡೆಯನ್ನು ಮಾಡಬೇಕು.

೨) ಲೋಕಸೇವಾ ಆಯೋಗದ ಯಾವುದೇ ಸದಸ್ಯರನ್ನೂ ವಜಾ ಮಾಡುವ ಹಾಗಿಲ್ಲ. ಹಾಗೆ ಮಾಡುವ ಅಧಿಕಾರ ಶಾಸನಸಭೆಗೆ ಮಾತ್ರ ಇರಬೇಕು. ಅಂತೆಯೇ ನಿವೃತ್ತಿಯ ನಂತರ ಆ ಸದಸ್ಯರನ್ನು ಮಹಾಪ್ರಭುಗಳ ಸರಕಾರವು ಬೇರಾವುದೇ ಹುದ್ದೆಗೆ ನೇಮಿಸಬಾರದು.

೩) ಸಾಮರ್ಥ್ಯದ ಪರೀಕ್ಷೆಗಳ ಫಲಿತಾಂಶವನ್ನು ಅವಲಂಬಿಸಿ ಲೋಕಸೇವಾ ಆಯೋಗವು ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬೇಕು.

a) ಎಲ್ಲಾ ಸಮುದಾಯಗಳ ಅಭ್ಯರ್ಥಿಗಳಿಗೆ ಸಮಾನ ಅವಕಾಶ ನೀಡಿ ವಿವಿಧ ಸೇವೆಗಳಿಗೆ ನೇಮಕಾತಿ ಮತ್ತು

b) ಪ್ರತಿಯೊಂದು ಸೇವಾವರ್ಗದಲ್ಲಿಯೂ ಸದ್ಯದಲ್ಲಿ ಜಾರಿಯಲ್ಲಿರುವ ವಿವಿಧ ಸಮುದಾಯಗಳ ಪ್ರಾತಿನಿಧ್ಯದ ಪ್ರಮಾಣವನ್ನು ಕಾಯ್ದುಕೊಂಡು ಹೋಗುವುದು.

## ಷರತ್ತು ಸಂಖ್ಯೆ VI

### ಪಕ್ಷಪಾತ ಧೋರಣೆಯ ಅಥವಾ ಒಂದು ವರ್ಗದ ಹಿತಾಸಕ್ತಿಯ ಕಡೆಗಣನೆಯ ವಿರುದ್ಧ ಕ್ರಮ

ಮುಂಬರುವ ದಿನಗಳಲ್ಲಿ ರಾಷ್ಟ್ರದ ಆಡಳಿತವು ಬಹುಸಂಖ್ಯಾತರ ಕೈಗಳಲ್ಲಿ ಇರುವುದರಲ್ಲಿ ಯಾವುದೇ ಅನುಮಾನ ಇಲ್ಲ. ಇದರಿಂದಾಗಿ ತಮ್ಮ ಹಿತಾಸಕ್ತಿಯ ಕಡೆಗಣನೆ ಆಗುತ್ತದೆ, ಹಾಗೂ ಅವರು ತಮ್ಮೆಡೆಗೆ ಅನುಕಂಪದ ನೋಟ ಬೀರುವುದಿಲ್ಲ ಎಂಬ ಭಯ ಸಹಜವಾಗಿ ಅಲ್ಪಸಂಖ್ಯಾತರಲ್ಲಿ ಇದೆ. ಅವರು ತಮ್ಮ ಮೂಲಭೂತ ಅಗತ್ಯಗಳ ಕಡೆಗೆ ಗಮನ ನೀಡದೇ ಇರಬಹುದು ಎಂಬ ಭಯ ಸಹಜವಾದುದೇ.

ಎಷ್ಟೇ ಮಟ್ಟದ ಮೀಸಲಾತಿಯನ್ನು ನೀಡಿದರೂ ಕೂಡ ಶೋಷಿತ ವರ್ಗದವರು ಮಂತ್ರಿಮಂಡಲದಲ್ಲಿ ಅಲ್ಪಸಂಖ್ಯಾತರೇ ಆಗಿರುತ್ತಾರೆ. ಆದ್ದರಿಂದ ಅವರಿಗೆ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಷ್ಟು ರಕ್ಷಣೆಯನ್ನು ಒದಗಿಸಬೇಕು. ತಮಗೆ ಪರಿಹಾರವನ್ನು ಒದಗಿಸಲು ಸಂವಿಧಾನದಲ್ಲಿ ಅವಕಾಶಗಳನ್ನು ಕಲ್ಪಿಸಬೇಕು ಎಂಬ ಬೇಡಿಕೆಯನ್ನು ಅವರು ಮುಂದಿಟ್ಟಿದ್ದಾರೆ. ಆದ್ದರಿಂದ ಈ ಕೆಳಗಿನ ವಿಶೇಷ ಸವಲತ್ತುಗಳನ್ನು ಸಂವಿಧಾನದಲ್ಲಿ ಕಲ್ಪಿಸಬೇಕು ಎಂಬುದು ಇವರ ಪ್ರಸ್ತಾವನೆ.

೧) ಭಾರತದ ಎಲ್ಲಾ ಪ್ರಾಂತಗಳಲ್ಲಿ ಹಾಗೂ ಕೇಂದ್ರದಲ್ಲಿ ಶಾಸನ ಸಭೆ ಮಂತ್ರಿಮಂಡಲ ಅಥವಾ ಇನ್ನಾವುದೇ ಪ್ರಾಧಿಕಾರ ಇವು ಶೋಷಿತ ವರ್ಗದವರಿಗೆ ಶಿಕ್ಷಣ, ಶೌಚಾಲಯ ವ್ಯವಸ್ಥೆ, ಸಾರ್ವಜನಿಕ ಕೆಲಸಕ್ಕೆ ನೇಮಕಾತಿ ಹಾಗೂ ಇತರ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ವಿಶೇಷ ಸವಲತ್ತುಗಳನ್ನು ಕಲ್ಪಿಸಬೇಕು. ಇದಕ್ಕೆ ವ್ಯತಿರಿಕ್ತವಾದಂತಹ ಯಾವುದೇ ನಿರ್ಧಾರವನ್ನು ಕೈಗೊಳ್ಳಬಾರದು. (ಬ್ರಿಟಿಷ್ ಉತ್ತರ ಅಮೇರಿಕಾ ಕಾಯ್ದೆ ೧೮೬೭, ವಿಭಾಗ ೯೩)

೨) ಯಾವುದೇ ಪ್ರಾಂತ್ಯದಲ್ಲಿಯೇ ಆಗಲೀ ಇಲ್ಲವೇ ಕೇಂದ್ರದಲ್ಲಿಯೇ ಆಗಲೀ ಒಂದು ವೇಳೆ ಈ ಸವಲತ್ತನ್ನು ಕಿತ್ತುಕೊಳ್ಳುವ ಪ್ರಯತ್ನವಾದರೆ ಶೋಷಿತರು ಗವರ್ನರ್ ಜನರಲ್ ಅವರಿಗೆ ದೂರು ನೀಡಬಹುದು. ಇಲ್ಲವೇ ಉನ್ನತ ಮಟ್ಟದ ಅಧಿಕಾರಿಗಳಿಗೆ ದೂರು ನೀಡಿ, ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಬಹುದು.

೩) ಯಾವುದೇ ಈ ರೀತಿಯ ಪ್ರಕರಣದಲ್ಲಿ ಗವರ್ನರ್ ಜನರಲ್ ಇಲ್ಲವೇ ಸೆಕ್ರೆಟರಿ. ಹಿರಿಯ ಅಧಿಕಾರಿಗಳು, ಪ್ರಾಂತೀಯ ಅಧಿಕಾರಿಗಳು ಅಥವಾ ಕೇಂದ್ರೀಯ ಅಧಿಕಾರಿಗಳು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳದೇ ಹೋದರೆ, ಅಂತಹ ಪ್ರಕರಣಗಳಲ್ಲಿ ಆ ಪ್ರಕರಣದ ಗಂಭೀರತೆಯನ್ನು ಅನುಸರಿಸಿ, ಆ ವಿಭಾಗದ ಹಿರಿಯ ಅಧಿಕಾರಿಗಳು ಇದರ ಅನುಷ್ಠಾನಕ್ಕೆ ಕ್ರಮಗಳನ್ನು ಕೈಗೊಳ್ಳಲು ಆದೇಶಿಸಬಹುದಾಗಿದೆ.

## ಷರತ್ತು ಸಂಖ್ಯೆ VII

### ವಿಶೇಷ ನಿಗಾ

ಶೋಷಿತ ವರ್ಗದವರ ಅಸಹಾಯಕ ಹಾಗೂ ಚಿಂತಾಜನಕ ಪರಿಸ್ಥಿತಿಗೆ ಸಂಪ್ರದಾಯಬದ್ಧ ಮೇಲ್ವರ್ಗದ ಜನರನ್ನು ನಾವು ಸಂಪೂರ್ಣ ಹೊಣೆಗಾರನ್ನಾಗಿಸಬಹುದು. ಇವರು ಶೋಷಿತ ವರ್ಗದವರಿಗೆ ಸಮಾನವಾದ ಸಾಮಾಜಿಕ ಸ್ಥಾನಮಾನ ಅಥವಾ ಒಳ್ಳೆಯ ಅವಕಾಶಗಳನ್ನು ಪಡೆಯುವ ಆಸ್ಪದವನ್ನೇ ನೀಡಲಿಲ್ಲ. ಇನ್ನು ಅವರ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಬೇಕೆಂದರೆ, ಅವರು ಅತ್ಯಂತ ಕಡುಬಡವರಾಗಿದ್ದಾರೆ ಅಥವಾ ಅವರ ಬಳಿ ಉಳುಮೆ ಮಾಡಲು ಭೂಮಿಯಿಲ್ಲ ಎಂದರೆ ಸಾಕಾಗುವುದಿಲ್ಲ. ಇವೆರಡೂ ವಿಷಯಗಳೂ ಸತ್ಯವೇ. ಅವರು ಈ ಪರಿಸ್ಥಿತಿಗೆ ಬರಲು ಅವರ ಇಂದಿನ ಸಾಮಾಜಿಕ ಸ್ಥಿತಿಯೇ ಕಾರಣ. ಅವರಿಗೆ

ದುಡಿಮೆಗೆ ಸಾಕಷ್ಟು ಅವಕಾಶಗಳು ದೊರೆಯದಂತಾಗಿದೆ. ಬೇರೆಯ ವರ್ಗದ ಕೂಲಿಕಾರರು ಹಾಗೂ ಶೋಷಿತ ವರ್ಗದ ಕೂಲಿಕಾರರ ನಡುವೆ ಇದೇ ಪ್ರಮುಖ ವ್ಯತ್ಯಾಸವಾಗಿದೆ. ಇದಲ್ಲದೇ ಶೋಷಿತ ವರ್ಗದ ಜನರ ಸಮಸ್ಯೆಗೆ ಇದೇ ಮೂಲವಾಗಿದೆ. ಇದರಿಂದ ರಕ್ಷಣೆ ಪಡೆಯುವಷ್ಟು ಶಕ್ತಿಯಾಗಲೀ ಅಥವಾ ಬಲವಾಗಲೀ ಶೋಷಿತ ವರ್ಗದವರ ಬಳಿ ಇಲ್ಲ. ಈ ನಿಟ್ಟಿನಲ್ಲಿ ಭಾರತದಾದ್ಯಂತ ಇರುವ ವಾಸ್ತವ ಪರಿಸ್ಥಿತಿಯನ್ನು ಮದರಾಸು ಸರ್ಕಾರದ ಹಣಕಾಸು ಇಲಾಖೆಯ ಅಧಿಕಾರಿಗಳ ಸಮಾವೇಶದಲ್ಲಿ ೧೮೯೨ರ ನವೆಂಬರ್ ೫ ರಂದು ಮಂಡಿಸಲಾದ ವರದಿಯಲ್ಲಿ ಸಂಖ್ಯೆ ೭೨೩ರಲ್ಲಿ ವಿವರಿಸಲಾಗಿದೆ. ಇದರ ಆಯ್ದ ಭಾಗಗಳು ಈ ಕೆಳಗಿನಂತಿದೆ.

೧೩೪, ಇಲ್ಲಿಯವರೆಗೂ ಮೇಲೆ ಮೇಲೆ ಗುರುತಿಸಿರುವ ತುಳಿತದ ರೀತಿಗಳು ಬಹಳಷ್ಟು ಇವೆ. ಪರೈಯಾಗಳನ್ನು ಶಿಕ್ಷಿಸಲು ಅವರ ಯಜಮಾನರು.

a) ಹಳ್ಳಿಯ ನ್ಯಾಯಾಲಯಗಳಲ್ಲಿ ಅಥವಾ ಜಿಲ್ಲೆಯ ನ್ಯಾಯಾಲಯಗಳಲ್ಲಿ ಕಾರಣವಿಲ್ಲದೆಯೇ ಮೊಕದ್ದಮೆಗಳನ್ನು ಹೂಡುತ್ತಾರೆ.

b) ಹಳ್ಳಿಗಳ ಸುತ್ತಮುತ್ತಲಿರುವ ಬರಡು ಭೂಮಿಯನ್ನು ಸರಕಾರದಿಂದ ಪಡೆದು ಶೋಷಿತ ವರ್ಗದವರ ಜಾನುವಾರುಗಳ ಓಡಾಟಕ್ಕೆ ಅಡ್ಡಿ ಉಂಟುಮಾಡುವುದು ಹಾಗೂ ಅವರು ತಮ್ಮ ದೇವಸ್ಥಾನಗಳಿಗೆ ಹೋಗದಂತೆ ತಡೆಯೊಡ್ಡುವುದು.

c) ತಪ್ಪು ತಪ್ಪು ಹೆಸರುಗಳನ್ನು ಸರ್ಕಾರಿ ದಾಖಲೆಗಳಲಿ ಸೇರ್ಪಡೆ ಮಾಡಿಸುವುದು.

d) ಶೋಷಿತ ವರ್ಗದವರ ಗುಡಿಸಲುಗಳನ್ನು ಕೆಡಹುವುದು ಅಥವಾ ಮನೆಯ ಹಿತ್ತಲಿನಲ್ಲಿ ಅವರು ಬೆಳೆದಿರುವ ಬೆಳೆಯನ್ನು ನಾಶ ಮಾಡುವುದು.

e) ಯಾವುದಾದರೂ ಸ್ಥಳವನ್ನು ಅವರು ಬಾಡಿಗೆಗೆ ಪಡೆಯಲು ಇಚ್ಛಿಸಿದರೆ ಅದನ್ನು ನಿರಾಕರಿಸುವುದು.

f) ಬಲವಂತದಿಂದ ಶೋಷಿತ ವರ್ಗದವರ ಬೆಳೆಯನ್ನು ನಾಶ ಮಾಡವುದು. ಒಂದು ವೇಳೆ ಅವರೇನಾದರೂ ತಡೆಯುವ ಪ್ರಯತ್ನಮಾಡಿದರೆ ಅವರ ಮೇಲೆ ಕಳ್ಳತನ ಹಾಗೂ ಗಲಭೆಯ ಆರೋಪ ಹೊರಿಸುವುದು.

g) ಅವರ ಬಳಿ ಸುಳ್ಳನ್ನು ಹೇಳಿ, ಅವರ ಭವಿಷ್ಯಕ್ಕೆ ಕುತ್ತು ತರಬಹುದಾದಂತಹ ದಾಖಲೆಗಳಿಗೆ ಸಹಿ ಹಾಕಿಸಿಕೊಳ್ಳುವುದು.

h) ಅವರ ಜಮೀನುಗಳಿಗೆ ನೀರಿನ ಸಂಪರ್ಕ ಕಡಿತಗೊಳಿಸುವುದು.

i) ಅವರಿಗೆ ನ್ಯಾಯವಾಗಿ ನೋಟೀಸನ್ನು ಅವರ ಸಾಲ ಮರುಪಾವತಿಗಾಗಿ ಅವರ ಭೂಮಿಯನ್ನು ಆಕ್ರಮಿಸಿಕೊಳ್ಳುವುದು.

೧೩೫. ಈ ರೀತಿಯ ದೂರುಗಳನ್ನು ಆಲಿಸಲು ಸಿವಿಲ್ ನ್ಯಾಯಾಲಯ ಹಾಗೂ ಆಪರಾಧಿಕ ನ್ಯಾಯಾಲಯಗಳು ಇರುತ್ತವೆ ಎಂಬುದೇನೋ ನಿಜ. ಆದರೆ ಈ ವಿಷಯದಲ್ಲಿ ಹಳ್ಳಿಯ ಜನರು ಪ್ರತಿಭಟಿಸಲಾರರು. ಅಲ್ಲಿನ ಜನರುಗಳಿಗೆ ನ್ಯಾಯಾಲಯಗಳ ಮೊರೆ ಹೋಗುವ ಧೈರ್ಯವೂ ಇರಬೇಕು. ವಕೀಲರುಗಳನ್ನು ನೇಮಕ ಮಾಡಿಕೊಳ್ಳುವ ಹಾಗೂ ಈ ಮೊಕದ್ದಮೆ ಜರುಗುವಾಗ ಜೀವನ ನಡೆಸುವಷ್ಟು ಧೈರ್ಯ ಹಾಗೂ ಆರ್ಥಿಕ ಶಕ್ತಿ ಇರಬೇಕು. ಇದಲ್ಲದೇ ಸರಿಸುಮಾರು ಎಲ್ಲಾ ಮೊಕದ್ದಮೆಗಳನ್ನು ಕೆಳ ನ್ಯಾಯಾಲಯವೇ ನಿರ್ಧರಿಸುತ್ತದೆ. ಇಂತಹ ನ್ಯಾಯಾಲಯಗಳಲ್ಲಿರುವ ಕುಳಿತಿರುವಂತಹ ಅಧಿಕಾರಿಗಳು ಭ್ರಷ್ಟರಾಗಿರುತ್ತಾರೆ. ಅವರು ಯಾವಾಗಲೂ ಶ್ರೀಮಂತರು ಹಾಗೂ ಭೂಮಿಯ ಒಡೆಯರುಗಳ ಕಡೆಯೇ

ಪಕ್ಷಪಾತ ಮಾಡುತ್ತಿರುತ್ತಾರೆ. ಏಕೆಂದರೆ ಅವರು ಕೂಡ ಅದೇ ವರ್ಗಕ್ಕೆ ಸೇರಿದವರಾಗಿರುತ್ತಾರೆ.

೧೩೬. ಶ್ರೀಮಂತ ವರ್ಗದವರ ಹಾಗೂ ಅಧಿಕಾರಿಗಳ ಸಂಬಂಧವನ್ನು ಉತ್ಪ್ರೇಕ್ಷಿಸಬೇಕಾದ ಅಗತ್ಯವಿಲ್ಲ. ಅವರು ಅಲ್ಲಿನ ಸ್ಥಳೀಯರೊಂದಿಗೆ ಹಾಗೂ ಪಾಶ್ಚಾತ್ಯರೊಂದಿಗೆ ಅತ್ಯಂತ ಸ್ನೇಹದಿಂದ ಬೆರೆಯುತ್ತಿರುತ್ತಾರೆ. ಪ್ರತಿಯೊಂದು ಇಲಾಖೆಯಲ್ಲಿಯೂ ದೊಡ್ಡ ದೊಡ್ಡ ಅಧಿಕಾರಿಗಳಿಂದ ಪ್ರಾರಂಭಿಸಿ ಸಣ್ಣ ಸಣ್ಣ ಅಧಿಕಾರಿಗಳವರೆಗೆ ಎಲ್ಲರೂ ಇವರ ಪ್ರತಿನಿಧಿಗಳೇ ಆಗಿರುತ್ತಾರೆ. ಆದ್ದರಿಂದ ಇವರ ಪ್ರಸ್ತಾವನೆ ಎಲ್ಲಿಯೂ ಅನೂರ್ಜಿತವಾಗುವ ಸಾಧ್ಯತೆ ಕಡಿಮೆಯೇ. ಅಧಿಕಾರಿಗಳು ಶ್ರೀಮಂತರಿಗೆ ಪ್ರತಿಯೊಂದು ಹಂತದಲ್ಲಿಯೂ ಸಹಾಯ ಮಾಡುವ ಇಚ್ಛೆಯನ್ನು ಹೊಂದಿರುತ್ತಾರೆ.

ಈ ರೀತಿಯ ಪರಿಸ್ಥಿತಿ ಇರುವ ಹಿನ್ನಲೆಯಲ್ಲಿ ಹಿಂದುಳಿದ ವರ್ಗದ ಜನರು ಮೇಲೆ ಬರುತ್ತಾರೆ ಎನ್ನುವ ಆಶಯವನ್ನು ಹೊಂದುವುದು ಕನಸಿನ ಮಾತೇ ಸರಿ. ಅವರ ಏಳಿಗೆಗಾಗಿ ಶ್ರಮಿಸುವುದನ್ನು ಸರ್ಕಾರದ ಕಾರ್ಯಕಲಾಪಗಳ ಪ್ರಮುಖ ಉದ್ದೇಶವನ್ನಾಗಿಸಬೇಕಾಗುತ್ತದೆ. ಎಲ್ಲರಿಗೂ ಸಮಾನ ಅವಕಾಶ ದೊರಕಿಸಿಕೊಡುತ್ತೇವೆ ಎನ್ನುವುದು ಕೇವಲ ಒಂದು ಕಾನೂನು ಆಗಿರದೇ ಅದರ ಆಚರಣೆಗೆ ಹಾಗೂ ಪಾಲನೆಗೆ ಒತ್ತು ನೀಡಬೇಕಾಗುತ್ತದೆ. ಈ ಕಾರ್ಯವನ್ನು ಸರ್ಕಾರವೇ ಮಾಡಬೇಕು. "ಈ ನಿಯಮ ಜಾರಿ ಆಗುವಂತೆ ಮಾಡಲು ಸಂವಿಧಾನದಲ್ಲಿ ಭಾರತ ಸರ್ಕಾರ ಸೂಕ್ತ ಪರಿಚ್ಛೇದವನ್ನು ಸೇರಿಸಬೇಕಾಗುತ್ತದೆ. ಅದು ಹೀಗಿರಬೇಕು.

೧. ಈ ಸಂವಿಧಾನವನ್ನು ಭಾರತ ಸರ್ಕಾರ ಜಾರಿಗೊಳಿಸುವಾಗಲೇ ಶೋಷಿತರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಅವರ ಅಭಿವೃದ್ಧಿಯನ್ನು ಗಮನಿಸಲು. ಭಾರತ ಸರ್ಕಾರದಲ್ಲಿ ಒಬ್ಬ ಮಂತ್ರಿಯ ಕೈಕೆಳಗೆ ಒಂದು ಇಲಾಖೆಯನ್ನು ತೆರೆಯತಕ್ಕದ್ದು.

೨. ಎಲ್ಲಿಯವರೆಗೂ ಕೇಂದ್ರ ಶಾಸನ ಸಭೆಯ ವಿಶ್ವಾಸವನ್ನು ಉಳಿಸಿಕೊಂಡಿರುವನೋ ಅಲ್ಲಿಯವರೆಗೂ ಆ ಮಂತ್ರಿ ಆ ಇಲಾಖೆಯಲ್ಲಿ ಕಾರ್ಯನಿರ್ವಹಿಸಬಲ್ಲವನಾಗಿರುತ್ತಾನೆ.

೩. ಕಾನೂನಿನ ಅನ್ವಯ ತನಗೆ ನೀಡಲಾಗಿರುವ ಎಲ್ಲಾ ಅಧಿಕಾರ ಹಾಗೂ ಕರ್ತವ್ಯವನ್ನು ಈ ಮಂತ್ರಿ ಚಾಚು ತಪ್ಪದೇ ನಿರ್ವಹಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನೂ ಕೈಗೊಂಡು, ಸಾಮಾಜಿಕ ಅನ್ಯಾಯ ಆಗದಂತೆ ತಡೆದು, ಹಿಂದುಳಿದ ವರ್ಗದವರ ಶೋಷಣೆ ಆಗದಂತೆ ತಡೆಯುವುದು ಈತನ ಆದ್ಯಕರ್ತವ್ಯವಾಗಿರುತ್ತದೆ.

೪. ಗವರ್ನರ್ ಜನರಲ್ ಅವರು ಕಾನೂನಿನ ರೀತಿ ಈ ಕೆಳಗಿನ ಕಾರ್ಯವನ್ನು ನಿರ್ವಹಿಸಬಲ್ಲವರಾಗಿರುತ್ತಾರೆ.

a) ಹಿಂದುಳಿದ ವರ್ಗದವರಿಗೆ ಸಂಬಂಧಿಸಿದ ಎಲ್ಲಾ ಅಥವಾ ಕೆಲವು ಶೈಕ್ಷಣಿಕ ಹಾಗೂ ಆರೋಗ್ಯ ಸಂಬಂಧಿ ಅಧಿಕಾರವನ್ನು ಆ ಇಲಾಖೆಯ ಮಂತ್ರಿಗೆ ವರ್ಗಾಯಿಸುವುದು.

b) ಪ್ರತಿಯೊಂದು ಪ್ರಾಂತದಲ್ಲಿ ಒಂದೊಂದು ಹಿಂದುಳಿದ ವರ್ಗಗಳ ಹಿತರಕ್ಷಣ ಕಚೇರಿಯನ್ನು ತೆರೆಯತಕ್ಕದ್ದು. ಇವು ಆ ಮಂತ್ರಿಗೆ ಹಾಗೂ ಆ ಇಲಾಖೆಗೆ ಹೊಂದಿಕೊಂಡಂತೆ ಕಾರ್ಯನಿರ್ವಹಿಸತಕ್ಕದ್ದು.

## ಪುರವಣಿ ಸಂಖ್ಯೆ VIII

### ಹಿಂದುಳಿದ ವರ್ಗ ಹಾಗು ಸಚಿವ ಸಂಪುಟ

ಶೋಷಿತ ವರ್ಗಗಳವರು ಸರಕಾರದ ಕೆಲಸ ಕಾರ್ಯಗಳಲ್ಲಿ ಪ್ರಭಾವವನ್ನು ಬೀರಲು ಶಾಸನ

ಸಭೆಗಳಲ್ಲಿ ಸ್ಥಾನವನ್ನು ಹೊಂದುವುದು ಅಗತ್ಯವಾಗಿರುವಂತೆಯೇ, ಈ ವರ್ಗಗಳವರು ಸರಕಾರದ ಸಾಮಾನ್ಯ ನೀತಿಗಳನ್ನು ರೂಪಿಸುವಲ್ಲಿ ಕೂಡ ಅವಕಾಶವನ್ನು ಹೊಂದಿರುವುದು ಕೂಡ ಅಗತ್ಯವಾಗಿದೆ. ಸಚಿವ ಸಂಪುಟದಲ್ಲಿ ಸ್ಥಾನವನ್ನು ಪಡೆದುಕೊಂಡರೆ ಮಾತ್ರ ಇದು ಸಾಧ್ಯವಾಗುತ್ತದೆ. ಇತರ ಅಲ್ಪಸಂಖ್ಯಾತ ವರ್ಗಗಳವರಿಗೆ ಇರುವಂತೆಯೇ ತಮಗೂ ಸಚಿವ ಸಂಪುಟದಲ್ಲಿ ಸ್ಥಾನವನ್ನು ಪಡೆಯುವ ನೈತಿಕ ಹಕ್ಕು ಇದೆಯೆಂದು ಶೋಷಿತರು ವಾದಿಸುತ್ತಾರೆ. ಇದನ್ನು ದೃಷ್ಟಿಯಲ್ಲಿರಿಸಿಕೊಂಡು, ವಿಧಿಬದ್ಧ ಸೂಚನಾಪತ್ರದಲ್ಲಿ ತಮ್ಮ ಸಚಿವ ಸಂಪುಟದಲ್ಲಿ ಶೋಷಿತವರ್ಗಗಳವರಿಗೆ ಪ್ರಾತಿನಿಧ್ಯವನ್ನು ಕಲ್ಪಿಸುವ ಹೊಣೆಯನ್ನು ರಾಜ್ಯಪಾಲರು ಹಾಗೂ ಗವರ್ನರ್ ಜನರಲ್ ಅವರಿಗೆ ವಹಿಸಬೇಕು ಎಂಬ ಪ್ರಸ್ತಾವನೆಯನ್ನು ಶೋಷಿತ ವರ್ಗಗಳವರು ಮುಂದಿಡುತ್ತಿದ್ದಾರೆ.[೧]

ಡಾ. ಅಂಬೇಡ್ಕರ್ ಅವರು ಮೂಲಭೂತ ಹಕ್ಕುಗಳ ಘೋಷಣೆಯ ಪ್ರತಿಗಳನ್ನು ಭಾರತದಲ್ಲಿನ ತಮ್ಮ ಅನುಯಾಯಿಗಳಿಗೆ ಕಳುಹಿಸಿ, ವಿವಿಧ ನಗರಗಳಲ್ಲಿ ಸಭೆಗಳನ್ನು ಕರೆದು ಅಲ್ಪಸಂಖ್ಯಾತರ ಉಪ–ಸಮಿತಿಗೆ ಸಲ್ಲಿಸಿದ ಈ ಬೇಡಿಕೆಗಳನ್ನು ಬೆಂಬಲಿಸಬೇಕೆಂದೂ ಮತ್ತು ಹಾಗೆ ಬೆಂಬಲ ಸೂಚಿಸಲು ತೆಗೆದುಕೊಂಡ ನಿರ್ಣಯಗಳ ಪ್ರತಿಗಳನ್ನು ರ್‍ಯಾಮ್‌ಸೆ ಮ್ಯಾಕ್‌ಡೊನಾಲ್ಡ್ ಅವರಿಗೆ ಕಳುಹಿಸಬೇಕೆಂದು ಸೂಚಿಸಿದ್ದರು. ಅಲ್ಲದೆ, ಈ ಬೇಡಿಕೆಗಳು ಅತ್ಯಂತ ಕನಿಷ್ಠ ಬೇಡಿಕೆಗಳಾಗಿದ್ದು ಇವುಗಳಲ್ಲಿ ಕಡಿಮೆ ಮಾಡಿದರೆ ಶೋಷಿತ ವರ್ಗಗಳವರ ಸಹಕಾರವು ದೊರೆಯುವುದಿಲ್ಲವೆಂಬ ಅಂಶವನ್ನೂ ಮತ್ತು ಸ್ವಯಮಾಡಳಿತದ ಸಂವಿಧಾನಕ್ಕೆ ತಮ್ಮ ಒಪ್ಪಿಗೆಯನ್ನು ನೀಡುವುದಿಲ್ಲ ಎನ್ನುವುದನ್ನೂ ತಿಳಿಸುವಂತೆ ಅವರು ಸೂಚಿಸಿದ್ದರು.[೨]

ಕೋಮು ಸಮಸ್ಯೆಯನ್ನು ಪರಿಹರಿಸಲು ಅಗತ್ಯವಾದ ವಿಧಿಗಳನ್ನು ಸೂಚಿಸಿ ಮುಸ್ಲಿಮರು, ಶೋಷಿತ ವರ್ಗಗಳವರು, ಭಾರತೀಯ ಕ್ರಿಶ್ಚಿಯನ್ನರು, ಆಂಗ್ಲೋ ಇಂಡಿಯನ್ನರು ಒಂದು ಜಂಟಿ ವಿಜ್ಞಾಪನಾ ಪತ್ರವನ್ನು ಅಲ್ಪಸಂಖ್ಯಾತರ ಸಮಿತಿಗೆ ಸಲ್ಲಿಸಿದರು. ಈ ವಿಜ್ಞಾಪನಾ ಪತ್ರದ ಪಾಠವು ಕೆಳಕಂಡಂತೆ ಇದೆ. – ಸಂಪಾದಕರು.

**ಕೋಮುಸಮಸ್ಯೆಗಳನ್ನು ತಡೆಗಟ್ಟಲು ಜಂಟಿಯಾಗಿ ಮುಸಲ್ಮಾನರು ಹಿಂದುಳಿದ ವರ್ಗದವರು ಭಾರತದ ಕ್ರೈಸ್ತರು, ಆ್ಯಂಗ್ಲೋ ಇಂಡಿಯನ್ನರು ಹಾಗೂ ಯುರೋಪಿಯನ್ನರು ಜಂಟಿಯಾಗಿ ನೀಡಿರುವ ಪ್ರಸ್ತಾಪ.**

**ಅಲ್ಪಸಂಖ್ಯಾತ ಸಮುದಾಯಗಳ ಹಕ್ಕುಗಳು**

೧ ಯಾವುದೇ ವ್ಯಕ್ತಿಯು ತನ್ನ ಮೂಲ ಧರ್ಮ, ಜಾತಿ ಅಥವಾ ಪಂಗಡದ ಕಾರಣದಿಂದ ಸರ್ಕಾರಿ ಸೇವೆಯಿಂದ, ಅಧಿಕಾರದಿಂದ, ಸಾರ್ವಜನಿಕ ಹಕ್ಕುಗಳನ್ನು ಪಡೆದುಕೊಳ್ಳುವುದರಿಂದ ಅಥವಾ ವ್ಯಾಪಾರ ವ್ಯವಹಾರದಲ್ಲಿ ತೊಡಗುವುದರಿಂದ ವಂಚಿತನಾಗುವಂತಿಲ್ಲ.

೨ ಶಾಸನ ವಿಧಿಸಿದ ರಕ್ಷಣೆಯ ನಿಯಮಗಳನ್ನು ಕಡ್ಡಾಯವಾಗಿ ಸಂವಿಧಾನದಲ್ಲಿ ಸೇರ್ಪಡೆಗೊಳಿಸಬೇಕಾಗುತ್ತದೆ. ಇದರಿಂದಾಗಿ ಮುಂದೆ ಮಂತ್ರಿಮಂಡಲವು ತನ್ನ ಅಧಿಕಾರ ದುರುಪಯೋಗದಿಂದ ಹಿಂದುಳಿದ ವರ್ಗದವರ ಶೋಷಣೆಯನ್ನು ಮಾಡುವುದನ್ನು ತಡೆಯಬಹುದಾಗಿದೆ.

೩ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ಎಂದರೆ ಧರ್ಮವನ್ನು ನಂಬುವ, ದೇವರನ್ನು ಪೂಜಿಸುವ, ಧರ್ಮಪ್ರಚಾರ ಕೈಗೊಳ್ಳುವ, ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ, ಧಾರ್ಮಿಕ ಶಿಕ್ಷಣ ನೀಡುವ ಅಧಿಕಾರಗಳು ಎಲ್ಲ ಧರ್ಮದವರಿಗೂ ಸಿಗಬೇಕು. ಆದರೆ ಹೀಗೆ ಮಾಡುವಾಗ ಸಾಮಾಜಿಕ

ವ್ಯವಸ್ಥೆ ಕಾಪಾಡಿಕೊಳ್ಳಬೇಕು.

ಯಾವುದೇ ವ್ಯಕ್ತಿಯು ತನ್ನ ಧರ್ಮವನ್ನು ಬದಲಾಯಿಸಿದರೆ ಆತನು ತನ್ನ ಸಾಮಾಜಿಕ ಹಕ್ಕುಗಳನ್ನು ಕಳೆದುಕೊಳ್ಳುವುದಿಲ್ಲ. ಇಲ್ಲವೇ ಇಂತಹ ಪ್ರಕರಣಗಳಲ್ಲಿ ಆತನಿಗೆ ಯಾವುದೇ ದಂಡ ವಿಧಿಸುವಂತಿಲ್ಲ.

೪. ಯಾವುದೇ ಒಂದು ಧರ್ಮದವರು ತಮ್ಮ ಧರ್ಮಕ್ಕೆ ಸಂಬಂಧಿಸಿದಂತೆ, ತಮ್ಮದೇ ಹಣಕಾಸಿನಿಂದ ಒಂದು ಶಿಕ್ಷಣ ಸಂಸ್ಥೆ, ಧಾರ್ಮಿಕ ಸಂಸ್ಥೆ, ಅಥವಾ ಸಮಾಜ ಸೇವಾ ಸಂಸ್ಥೆಯನ್ನು ಸ್ಥಾಪಿಸುವ ಅಧಿಕಾರ ಹೊಂದಿರುತ್ತಾರೆ. ಅದರಲ್ಲಿ ಅವರು ತಮ್ಮ ಧರ್ಮ ಪ್ರಚಾರ ಕೈಗೊಳ್ಳುವ ಅಧಿಕಾರ ಹೊಂದಿರುತ್ತಾರೆ.

೫. ಅಲ್ಪಸಂಖ್ಯಾತರ ಧಾರ್ಮಿಕ ರಕ್ಷಣೆ, ಸಾಂಸ್ಕೃತಿಕ ಹಾಗೂ ಖಾಸಗಿ ಕಾನೂನಿನ ರಕ್ಷಣೆಗೆ ಅಗತ್ಯವಾದ ವಿಧಿಗಳನ್ನು ಸಂವಿಧಾನದಲ್ಲಿ ಅಳವಡಿಸಬೇಕು. ಅಂತೆಯೇ ಶಿಕ್ಷಣ, ಭಾಷೆ ಹಾಗೂ ಸಮಾಜ ಸೇವೆಯ ಅಭಿವೃದ್ಧಿಗೂ ಆ ವಿಧಿಗಳಲ್ಲಿ ಅವಕಾಶ ನೀಡಬೇಕಾಗುತ್ತದೆ. ಸರ್ಕಾರದಿಂದ ಅಲ್ಪಸಂಖ್ಯಾತ ವರ್ಗದವರ ಅಭಿವೃದ್ಧಿಗಾಗಿ ಅನುದಾನವನ್ನು ಬಿಡುಗಡೆ ಮಾಡಬೇಕಾಗುತ್ತದೆ.

೬. ಎಲ್ಲರಿಗೂ ಮೂಲಭೂತ ಹಕ್ಕುಗಳನ್ನು ಅನುಭವಿಸುವ ಸಮಾನ ಅವಕಾಶವನ್ನು ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಯಾರಾದರೂ ಅವರ ಅನುಭೋಗವನ್ನು ತಡೆಯಲು ಅಥವಾ ಅದಕ್ಕೆ ತೊಂದರೆ ಉಂಟುಮಾಡಲು ಪ್ರಯತ್ನಪಟ್ಟರೆ ಅದನ್ನು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಬೇಕು.

೭ ಕೇಂದ್ರ ಸಂಪುಟ ಹಾಗೂ ರಾಜ್ಯ ಸಂಪುಟಗಳು ರಚನೆ ಆಗುವ ಸಂದರ್ಭದಲ್ಲಿ ಮುಸಲ್ಮಾನ ಪಂಗಡ ಹಾಗೂ ಇತರ ಅಲ್ಪಸಂಖ್ಯಾತ ಪಂಗಡಗಳಿಗೆ ಸೇರಿದವರಿಗೆ ಸಾಕಷ್ಟು ಮೀಸಲು ಸ್ಥಾನ ನೀಡುವ ಪರಂಪರೆಯನ್ನು ಬೆಳೆಸಬೇಕು.

೮. ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳ ವ್ಯಾಪ್ತಿಯಲ್ಲಿ ಶಾಸನಬದ್ಧ ಇಲಾಖೆಗಳು ಅಸ್ತಿತ್ವಕ್ಕೆ ಬರಬೇಕು.

೯. ಪ್ರಕೃತ ನಾಮಕರಣದ ಮೂಲಕ ಅಥವಾ ಚುನಾವಣೆಯ ಮೂಲಕ ಯಾವುದೇ ಶಾಸನ ಸಭೆಯಲ್ಲಿ ಪ್ರಾತಿನಿಧ್ಯವನ್ನು ಪಡೆಯುವ ಹಕ್ಕನ್ನು ಹೊಂದಿರುವ ಎಲ್ಲಾ ಸಮುದಾಯದವರೂ, ಇನ್ನು ಮುಂದೆ ಶಾಸನ ಸಭೆಯಲ್ಲಿನ ಪ್ರಾತಿನಿಧ್ಯವನ್ನು ಪ್ರತ್ಯೇಕ ಮತಕ್ಷೇತ್ರಗಳಲ್ಲಿನ ಚುನಾವಣೆಯ ಮೂಲಕ ಪಡೆಯತಕ್ಕದ್ದು ಮತ್ತು ಅಲ್ಪಸಂಖ್ಯಾತರು ಪಡೆಯಬಹುದಾದ ಪ್ರಾತಿನಿಧ್ಯವು ಸದ್ಯದಲ್ಲಿ ಅನುಬಂಧದಲ್ಲಿ ಸೂಚಿಸಿರುವುದಕ್ಕಿಂದ ಕಡಿಮೆ ಅನುಪಾತದಲ್ಲಿ ಇರತಕ್ಕದ್ದಲ್ಲ. ಹಾಗೂ ಬಹುಸಂಖ್ಯಾತರ ಸಂಖ್ಯೆಯನ್ನೂ ಅಲ್ಪಸಂಖ್ಯಾತರ ಮಟ್ಟಕ್ಕೆ ಇಳಿಸುವ ಹಾಗಿಲ್ಲ ಅಥವಾ ಅಲ್ಪಸಂಖ್ಯಾತರ ಮಟ್ಟಕ್ಕಿಂತ ಕಡಿಮೆ ಮಾಡುವ ಹಾಗಿಲ್ಲ. ಹತ್ತು ವರ್ಷಗಳ ನಂತರ ಪಂಜಾಬ್ ಮತ್ತು ಬಂಗಾಳದಲ್ಲಿರುವ ಮುಸ್ಲಿಮರು ಅಥವಾ ಇತರ ಪ್ರಾಂತ್ಯಗಳಲ್ಲಿರುವ ಇತರ ಅಲ್ಪಸಂಖ್ಯಾತರು ತಮಗಾಗಿ ಜಂಟಿ ಮತಕ್ಷೇತ್ರಗಳಿಗೆ ಅಥವಾ ಅದರ ಜೊತೆಗೆ ಮೀಸಲು ಸ್ಥಾನಗಳಿಗೆ ಸಮ್ಮತಿಯನ್ನು ಸೂಚಿಸುವ ಮುಕ್ತ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಹಾಗೆಯೇ, ಹತ್ತು ವರ್ಷಗಳ ನಂತರ ಕೇಂದ್ರ ಶಾಸನ ಸಭೆಗಳಲ್ಲಿನ ಸ್ಥಾನಗಳಿಗೆ ಜಂಟಿ ಮತಕ್ಷೇತ್ರ ಹಾಗೂ ಮೀಸಲು ಸ್ಥಾನಗಳಿಗೆ ಅಥವಾ ಇವೆರಡಕ್ಕೂ ಸಮ್ಮತಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ.

ಹೀಗೆ ಶೋಷಿತ ವರ್ಗದವರಿಗೆ ಸಂಬಂಧಿಸಿದಂತೆ ಜಂಟಿ ಮತದಾನದಲ್ಲಿ ಅಥವಾ ಮೀಸಲಾತಿಯಲ್ಲಿ

ಬದಲಾವಣೆಗೆ ಇನ್ನು ೨೦ ವರ್ಷಗಳವರೆಗೂ, ಈ ಪಂಗಡದಲ್ಲಿ ವಯಸ್ಕ ಮತದಾನದ ವ್ಯವಸ್ಥೆಯನ್ನು ಜಾರಿಗೆ ತರುವವರೆಗೂ, ಅವಕಾಶವನ್ನು ನೀಡಬಾರದು.

೧೦. ದೇಶದ ಪ್ರತಿಯೊಂದು ಪ್ರಾಂತ್ಯದಲ್ಲಿ ಕೇಂದ್ರ ಸರ್ಕಾರದ ಕೆಳಗೆ ಒಂದು ಲೋಕ ಸೇವಾ ಆಯೋಗವನ್ನು ರಚಿಸಬೇಕು. ಗವರ್ನರ್ ಜನರಲ್ ಅಥವಾ ರಾಜ್ಯಪಾಲರಿಂದ ನಾಮಕರಣ ಮಾಡಬೇಕಾದ ಸಂದರ್ಭಗಳನ್ನು ಬಿಟ್ಟು ಉಳಿದ ಸೇವೆಗಳಿಗೆ ನೇಮಕಾತಿಗಳನ್ನು ಈ ಲೋಕಸೇವಾ ಆಯೋಗಗಳೇ ಮಾಡಬೇಕು. ಹೀಗೆ ಮಾಡಬೇಕಾದಾಗ ಎಲ್ಲಾ ಸಮುದಾಯಗಳವರಿಗೆ ಅವರವರ ವಿದ್ಯಾರ್ಹತೆ ಹಾಗೂ ಸಾಮರ್ಥ್ಯಗಳನ್ನು ಮಾನದಂಡವಾಗಿಟ್ಟುಕೊಂಡಿರಬೇಕು. ಈ ನಿಟ್ಟಿನಲ್ಲಿ ರಾಜ್ಯಪಾಲರು ಮತ್ತು ಗವರ್ನರ್ ಜನರಲ್ ಅವರು ತೆಗೆದುಕೊಳ್ಳಬೇಕಾದಂತಹ ಎಲ್ಲಾ ಎಚ್ಚರಿಕೆಗಳು ಹಾಗೂ ನಿಯಮಗಳನ್ನು ವಿಧಿಬದ್ಧ ಸೂಚನಾ ಪತ್ರದಲ್ಲಿ ಅಳವಡಿಸಿರಬೇಕು. ಕಾಲದಿಂದ ಕಾಲಕ್ಕೆ ವಿವಿಧ ಸೇವೆಗಳಲ್ಲಿರುವ ವಿವಿಧ ವರ್ಗಗಳವರ ಅನುಪಾತವನ್ನು ಪುನರ್ವಿಮರ್ಶಿಸುತ್ತಿರಬೇಕು.

೧೧. ಅಂಗೀಕೃತವಾದ ಕರಡು ಮಸೂದೆಯೊಂದು ಯಾವುದಾದರೂ ಸಮುದಾಯದ ಮೂರನೆಯ ಎರಡರಷ್ಟು ಸದಸ್ಯರ ಅಭಿಪ್ರಾಯದಲ್ಲಿ ತಮ್ಮ ಧರ್ಮ, ಧರ್ಮವನ್ನುವಲಂಬಿಸಿದ ಸಾಮಾಜಿಕ ಪದ್ಧತಿಗೆ ಬಾಧಕವಾಗಿದೆ ಅಥವಾ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದಾದರೆ, ಆ ಸಮುದಾಯದ ಮೂರನೆಯ ಎರಡರಷ್ಟಕ್ಕೆ ಕಡಿಮೆ ಇಲ್ಲದಷ್ಟು ಸದಸ್ಯರು, ಮಸೂದೆಯು ಅಂಗೀಕೃತವಾದ ಒಂದು ತಿಂಗಳಿನ ಒಳಗೆ ಸದನದ ಅಧ್ಯಕ್ಷರಿಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬಹುದು. ಈ ಆಕ್ಷೇಪಣೆಯನ್ನು ಸದನದ ಅಧ್ಯಕ್ಷರು ಗವರ್ನರ್ ಜನರಲ್ ಅಥವಾ ರಾಜ್ಯಪಾಲರಿಗೆ ಕಳುಹಿಸಬೇಕು. ಈ ಆಕ್ಷೇಪಣೆಯನ್ನು ಅನುಸರಿಸಿ ಗವರ್ನರ್ ಜನರಲ್ ಅಥವಾ ರಾಜ್ಯಪಾಲರು ವಿವಾದಾಸ್ಪದವಾಗಿರುವ ಈ ಅಧಿನಿಯಮವನ್ನು ಒಂದುವರ್ಷಗಳ ಕಾಲ ಅಮಾನತ್ತಿನಲ್ಲಿ ಇಟ್ಟು ನಂತರ ಅದನ್ನು ಮರುಪರಿಶೀಲನೆಗೆ ಶಾಸನಸಭೆಗೆ ಕಳುಹಿಸಿಬೇಕು.ಇದನ್ನು ಮರುಪರಿಶೀಲಿಸಿದ ಶಾಸನಸಭೆಯು ಅದಕ್ಕೆ ತಿದ್ದುಪಡಿಗಳನ್ನು ಮಾಡಲು ಸಮ್ಮತಿಸದಿದ್ದರೆ ಗವರ್ನರದ ಜನರಲ್ ಅಥವಾ ರಾಜ್ಯಪಾಲರು ಶಾಸನ ಸಭೆಯು ಕಳುಹಿಸಿದ ಅಧಿನಿಯಮಕ್ಕೆ ತಮ್ಮ ವಿವೇಚನಾನುಸಾರವಾಗಿ ಒಪ್ಪಿಗೆಯನ್ನು ಸೂಸಿಸಬಹುದು ಅಥವಾ ನಿರಾಕರಿಸಬಹುದು. ಆದರೆ, ಈ ಮಸೂದೆಯು ರಾಜ್ಯಪಾಲರ ಒಪ್ಪಿಗೆಯನ್ನು ಪಡೆದುಕೊಂಡರೆ, ಸದರಿ ಮಸೂದೆಯಿಂದ ಬಾಧೆಗೆ ಈಡಾಗಿದ್ದೇವೆಂದು ಹೇಳುವ ಸಮುದಾಯದ ಕನಿಷ್ಠ ಇಬ್ಬರು ಸದಸ್ಯರು ಸದರಿ ಮಸೂದೆಯು ಅದು ತಮ್ಮ ಮೂಲಭೂತ ಹಕ್ಕುಗಳಿಗೆ ಧಕ್ಕೆ ತರುತ್ತದೆ ಎಂಬ ಕಾರಣದಿಂದ ಅದನ್ನು ಸರ್ವೋಚ್ಚ ನ್ಯಾಯಾಲದಲ್ಲಿ ಪ್ರಶ್ನಿಸಬಹುದು.

**ವಿಶೇಷ ಹಕ್ಕುಗಳಿಗಾಗಿ ಮುಸಲ್ಮಾನರ ಪ್ರಸ್ತಾವನೆ :**

A) ವಾಯವ್ಯ ಪ್ರಾಂತ್ಯಗಳನ್ನು ರಾಜ್ಯಪಾಲರ ಆಡಳಿತದ ಅಡಿಯಲ್ಲಿ ಒಂದು ಪ್ರಾಂತ್ಯವನ್ನಾಗಿ ರೂಪಿಸಬೇಕು ಗಡಿರಕ್ಷಣೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.
ಪ್ರಾಂತದ ಶಾಸನಸಭೆಯಲ್ಲಿ ನಾಮಕರಣ ಪಡೆದ ಸದಸ್ಯರ ಸಂಖ್ಯೆಯು ಒಟ್ಟು ಸದಸ್ಯರ ಸಂಖ್ಯೆಯ ಶೇ ೧೦ ರಷ್ಟನ್ನು ಮೀರಬಾರದು.

B) ಸಿಂಧ್ ಪ್ರಾಂತ್ಯವನ್ನು ಬೊಂಬಾಯಿಯಿಂದ ಬೇರ್ಪಡಿಸಬೇಕು. ಅದನ್ನು ಕೂಡ ಇತರ ಪ್ರಾಂತ್ಯಗಳಂತೆ ರಾಜ್ಯಪಾಲರ ಆಳ್ವಿಕೆಯ ಒಂದು ಪ್ರಾಂತ್ಯವನ್ನಾಗಿಸಬೇಕು.

C) ಕೇಂದ್ರೀಯ ಮಂತ್ರಿಮಂಡಲದಲ್ಲಿ ಮುಸಲ್ಮಾನರ ಪ್ರಾತಿನಿಧ್ಯ ಒಟ್ಟು ಸದಸ್ಯರ ೩ನೆಯ ೧

ಭಾಗದಷ್ಟು ಇರಬೇಕು. ಅವರ ಪ್ರಾತಿನಿಧ್ಯವು ಅನುಬಂಧದಲ್ಲಿ ತಿಳಿಸಿರುವ ಅನುಪಾತಕ್ಕಿಂತ ಕಡಿಮೆ ಇರಕೂಡದು.

**ವಿಶೇಷ ಹಕ್ಕುಗಳಿಗಾಗಿ ಶೋಷಿತ ವರ್ಗದವರ ಪ್ರಸ್ತಾವನೆ**

A) ಅಸ್ಪೃಶ್ಯತೆಯ ಹೆಸರಿನಲ್ಲಿ ತಾರತಮ್ಯವನ್ನು ಆಚರಣೆಗೆ ತಂದು, ಆ ವರ್ಗದವರು ತಮ್ಮ ಮೂಲಭೂತ ಹಕ್ಕುಗಳನ್ನು ಅನುಭವಿಸಲು ಯತ್ನಿಸಿದಾಗ ದಂಡವನ್ನು ವಿಧಿಸುವ, ಅಸೌಕರ್ಯವನ್ನು ಉಂಟುಮಾಡುವ, ಯಾವುದೇ ಆಚರಣೆ, ಸಂಪ್ರದಾಯಗಳನ್ನು ಅನುಸರಿಸಬಾರದಂತಹವುಗಳೆಂದು, ಅಸಿಂಧುವೆಂದು ಸಂವಿಧಾನವು ಘೋಷಿಸಿಬೇಕು.

B) ಶೋಷಿತ ವರ್ಗದವರಿಗೆ ಸಾರ್ವಜನಿಕ ಸೇವೆಯ ನೇಮಕಾತಿಯಲ್ಲಿ ವಿಶೇಷ ಪ್ರಾತಿನಿಧ್ಯವನ್ನು ನೀಡಬೇಕು. ಆರಕ್ಷಕ ಹಾಗೂ ಸೇನೆಯ ನೇಮಕಾತಿಯಲ್ಲಿ ಅವರಿಗೆ ಅವಕಾಶವಿರಬೇಕು.

C) ಪಂಜಾಬ್ ಭೂ ವಿಲೇವಾರಿ ಅಧಿನಿಯಮದ ಲಾಭವು ಪಂಜಾಬ್ ಪ್ರಾಂತ್ಯದ ಶೋಷಿತ ವರ್ಗದ ಜನರಿಗೂ ದೊರೆಯುವಂತೆ, ಈ ಅಧಿನಿಯಮದ ನಿಯಮವನ್ನು ವಿಸ್ತರಿಸಬೇಕು.

D) ಯಾವುದೇ ಅಧಿಕಾರಿಯು ಇವರ ವಿರುದ್ದ ಪಕ್ಷಪಾತದಿಂದ ವರ್ತಿಸಿದರೆ ಅಂತಹ ಅಧಿಕಾರಿಯ ವಿರುದ್ಧ ದೂರು ಸಲ್ಲಿಸುವ ಅಧಿಕಾರವು ಇವರಿಗೆ ಇರಬೇಕು. ಆ ದೂರನ್ನು ರಾಜ್ಯಪಾಲರಿಗೆ ಸಲ್ಲಿಸುವಂತೆ ಇರಬೇಕು.

E) ಅನುಬಂಧದಲ್ಲಿ ಹೇಳಿರುವಷ್ಟಾದರೂ ಪ್ರಾತಿನಿಧ್ಯವು ಶೋಷಿತ ವರ್ಗದವರಿಗೆ ದೊರೆಯಲೇಬೇಕು.

**ವಿಶೇಷ ಹಕ್ಕುಗಳಿಗಾಗಿ ಆ್ಯಂಗ್ಲೋ ಇಂಡಿಯನ್ ಧರ್ಮೀಯರ ಪ್ರತಿಪಾದನೆ**

A. ಈಗಾಗಲೇ ಉಪ ಸಮಿತಿ ಸಂಖ್ಯೆ VIII (ಕಾರ್ಯ ಸಮಿತಿ)ರ ಮೂಲಕ ಒಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅದರ ಪ್ರಕಾರವಾಗಿ ಎಲ್ಲಾ ಸಾರ್ವಜನಿಕ ನೇಮಕಾತಿಗಳಲ್ಲಿ ಇವರಿಗೆ ವಿಶೇಷವಾದ ಪರಿಗಣನೆಯನ್ನು ನೀಡುವುದು ಅಗತ್ಯ. ಏಕೆಂದರೆ ಒಂದು ಕನಿಷ್ಠ ಮಟ್ಟದ ಜೀವನ ನಡೆಸಲು ಸೂಕ್ತ ಉದ್ಯೋಗದ ಅಗತ್ಯ ಈ ಜನರಿಗೆ ಇರುತ್ತದೆ.

B. ತಮ್ಮದೇ ಆದ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಯುರೋಪ್ ರೀತಿಯ ಶಿಕ್ಷಣವನ್ನು ನೀಡಲು ಅವಕಾಶವನ್ನು ನೀಡುವುದು ಕೂಡ ಶಿಕ್ಷಣ ಮಂತ್ರಿಯ ಅಧೀನಕ್ಕೆ ಮಾತ್ರ ಒಳಪಟ್ಟಿರುತ್ತದೆ. ಇದೀಗ ದೊರೆತಿರುವ ಅನುದಾನದ ಜೊತೆಗೆ ಮತ್ತಷ್ಟು ಅನುದಾನಗಳನ್ನು ಹಾಗೂ ವಿದ್ಯಾರ್ಥಿ ವೇತನಗಳನ್ನು ಸರಕಾರವು ನೀಡಬೇಕು.

C. ಕಾನೂನಿನ ಹಕ್ಕುಗಳು ಇತರ ಧರ್ಮೀಯರಿಗೆ ದೊರೆಯುವಂತೆಯೇ ಇವರಿಗೂ ದೊರೆಯಬೇಕು. ಇವರಿಗೆಂದೇ ವಿಶೇಷವಾದ ನ್ಯಾಯಾಧಿಕಾರಿ (ಆತ ಯುರೋಪಿನವನಾದರೂ ಆಗಬಹುದು ಇಲ್ಲವೇ ಭಾರತೀಯನೇ ಆಗಬಹುದು) ನೇಮಕವಾಗಬೇಕು.

**ವಿಶೇಷ ಹಕ್ಕುಗಳಿಗಾಗಿ ಯುರೋಪಿಯನ್ನರ ಪ್ರತಿಪಾದನೆ**

A. ಎಲ್ಲಾ ವ್ಯಾಪಾರಿ ಹಾಗೂ ಉದ್ಯಮಗಳಲ್ಲಿ ಭಾರತೀಯರಿಗೆ ಇರುವಷ್ಟೇ ಸಮಾನವಾದ ಹಕ್ಕುಗಳು ಭಾರತ ಸಂಜಾತ ಯೂರೋಪಿಯನ್ನರಿಗೂ ಇರತಕ್ಕದ್ದು.

B. ಅಪರಾಧಿಗಳಿಗೆ ಸಂಬಂಧಿಸಿದಂತೆ ಈಗ ಜಾರಿಯಲ್ಲಿ ಇರುವ ಪದ್ಧತಿಯನ್ನೇ ಮುಂದುವರೆಸಿಕೊಂಡು ಹೋಗಬೇಕು. ಈಗಿರುವ ಕಾನೂನನ್ನು ಬದಲಿಸಲು ಮಂಡಿಸಲಾಗುವ ಮಸೂದೆಗೆ ರಾಜ್ಯಪಾಲರಿಂದ ಅನುಮತಿ ದೊರೆಯಬೇಕು.

## ಅನುಬಂಧ

### ಶಾಸಕಾಂಗದಲ್ಲಿ ಪ್ರಾತಿನಿಧ್ಯ

ಆವರಣದಲ್ಲಿ ಇರುವ ಸಂಖ್ಯೆ : ೧೯೩೧ರ ಗಣತಿಯ ಪ್ರಕಾರ ಜನಸಂಖ್ಯೆ ಹಾಗು ಸೈಮನ್ ವರದಿಯ ಪ್ರಕಾರ ಶೋಷಿತರ ಶೇಕಡಾವಾರು

| ಜನಗಣತಿ ಭಾರತ (೧೯೩೧) | ಮಂತ್ರಿಮಂಡಲದ ಸಂಖ್ಯೆ | ಹಿಂದೂಗಳು ಜಾತಿ | ಹಿಂದೂಗಳು ಶೋಷಿತರು | ಹಿಂದೂಗಳು ಒಟ್ಟು | ಮುಸಲ್ಮಾನರು | ಕ್ರೈಸ್ತರು | ಸಿಖ್‌ರು | ಆಂಗ್ಲೋ ಇಂಡಿಯನ್ನರು | ಬುಡಕಟ್ಟು ಜನಾಂಗದವರು | ಯೂರೋಪಿಯನ್ನರು |
|---|---|---|---|---|---|---|---|---|---|---|
| | | (೪೭.೫) | (೧೯)* | (೬೬.೫) | (೨೧.೫) | | | | | |
| ಮೇಲ್ಮನೆ | ೨೦೦ | ೧೦೦ | ೨೦ | ೧೨೧ | ೬೭ | ೧ | ೬ | ೧ | – | ೪ |
| ಕೆಳಮನೆ | ೩೦೦ | ೧೨೩ | ೪೫ | ೧೬೮ | ೧೦೦ | ೭ | ೧೦ | ೩ | – | ೧೨ |
| ಅಸ್ಸಾಂ | | (೪೮.೯) | (೧೩.೪) | (೬೨.೩) | (೩೪.೮) | | | | | |
| | ೧೦೦+ | ೩೮ | ೧೩ | ೫೧ | ೩೫ | ೩ | – | ೧ | – | ೧೦ |
| ಬೆಂಗಾಳ | | (೧೮.೩) | (೨೪.೭) | (೪೩) | (೫೪.೯) | | | | | |
| | ೨೦೦ | ೩೮ | ೩೫ | ೭೩ | ೧೦೨ | ೨ | – | ೩ | – | ೨೦ |
| ಬಿಹಾರ ಹಾಗೂ | | (೬೭.೮) | (೧೪.೫) | (೮೨.೩) | (೧೧.೩) | | | | | |
| ಒರಿಸ್ಸಾ | ೧೦೦ | ೫೧ | ೧೪ | ೬೫ | ೨೫ | ೧ | – | ೧ | ೩ | ೫ |
| ಬೊಂಬಾಯಿ | | (೬೮) | (೮) | (೭೬) | (೨೦) | | | | | |
| | ೨೦೦ | ೮೮ | ೨೮ | ೧೧೬ | ೬೬ | ೨ | – | ೩ | – | ೧೩ |
| ಸಿ.ಪಿ. | | (೬೩.೧) | (೨೩.೭) | (೮೬.೮) | (೪೪) | | | | | |
| | ೧೦೦ | ೫೮ | ೨೦ | ೭೮ | ೧೫ | ೧ | – | ೨ | ೨ | ೨ |
| ಮದರಾಸು | | (೭೧.೩) | (೧೫.೪) | (೮೬.೭) | (೭.೧) | (೩.೭) | | | | |
| | ೨೦೦ | ೧೦೨ | ೪೦ | ೧೪೨ | ೩೦ | ೧೪ | – | ೪ | ೨ | ೮ |
| ಪಂಜಾಬ | | (೧೫.೧) | (೧೩.೫) | (೨೮.೬) | (೫೬.೫) | | (೧೩) | | | |
| | ೧೦೦ | ೧೪ | ೧೦ | ೨೪ | ೫೧ | ೧.೫ | ೨೦ | ೧.೫ | – | ೨ |
| ಯುಪಿ** | | (೫೮.೧) | (೨೬.೪) | (೮೪.೫) | (೧೪.೮) | | | | | |
| | ೧೦೦ | ೪೪ | ೨೦ | ೬೪ | ೩೦ | ೧ | – | ೨ | – | ೩ |

* ರಾಜ್ಯಪಾಲರ ಆಡಳತಕ್ಕೆ ಒಳಪಟ್ಟಿರುವ ಪ್ರಾಂತ್ಯಗಳ

* ಈ ಜನಸಂಖ್ಯೆ ಬುಡಕಟ್ಟು ಜನಾಂಗದವರನ್ನು ಹೊರುತಪಡಿಸಿ

** ಸಿಂಧ್ ಹಾಗೂ NWFP ಯಲ್ಲಿ ಮುಸಲ್ಮಾನರು ಎಲ್ಲಾ ರೀತಿಯ ಹಕ್ಕುಗಳನ್ನು ಅನುಭವಿಸುತ್ತಾರೆ.ಸ

ಇದಕ್ಕೆ ಒಪ್ಪಿಗೆ ಸೂಚಿಸಿದವರು.

ಗೌರವಾನ್ವಿತರಾದಂತಹ ಅಘಾಖಾನ್ (ಮುಸಲ್ಮಾನರು)

ಡಾ. ಅಂಬೇಡ್ಕರ್ (ಶೋಷಿತ ವರ್ಗ)

ರಾವ್ ಬಹದ್ದೂರ್ ಪನ್ನೀರ್ ಸೆಲ್ವಂ (ಭಾರತದ ಕ್ರೈಸ್ತರು)

ಸರ್.ಹೆನ್ರಿ ಗಿಡ್ನಿ (ಆ್ಯಂಗ್ಲೋ ಇಂಡಿಯನ್ಸ್)

ಸರ್ ಹೂಬರ್ಟ್ ಕಾರ್ (ಯುರೋಪಿಯನ್ನರು)

**ಮೇಲೆ ನೀಡಿರುವ ವಿಜ್ಞಾಪನಾ ಪತ್ರಕ್ಕೆ ವಿವರಣೆ ನೀಡುವ ಮತ್ತೊಂದು ವಿಜ್ಞಾಪನಾಪತ್ರ**

೧. ಮೇಲೆ ಹೇಳಿರುವ ಮಂತ್ರಿಮಂಡಲದ ಪ್ರಾತಿನಿಧ್ಯದ ಮೀಸಲಾತಿಯ ಸಲಹೆಗೆ ಹಿಂದೂಗಳು ಹಾಗು ಸಿಖ್ಖರು ಒಪ್ಪಿಗೆ ನಿಡಿಲ್ಲ. ಆದರೆ ಕೇಂದ್ರ ಮಂತ್ರಿಮಂಡಲದಲ್ಲಿ ಸಿಖ್ಖರು ಎಷ್ಟು ಮೀಸಲಾತಿಯನ್ನು ಕೇಳಿದ್ದರೋ ಅಷ್ಟನ್ನೂ ಒದಗಿಸಲಾಗಿದೆ.

೨. ಮೇಲೆ ಹೇಳಿರುವ ಶೋಷಿತ ವರ್ಗಗಳ ಪ್ರಾತಿನಿಧ್ಯ ಕುರಿತ ವರದಿಯು ಒಂದು ಯೋಜನೆಯ ಪೂರ್ಣ ಸ್ವರೂಪವಾಗಿದೆ. ಅದರಲ್ಲಿ ಅಂತರ್ಗತವಾಗಿರುವ ಪ್ರಸ್ತಾಪಗಳಲ್ಲಿ ಒಂದರಿಂದ ಮತ್ತೊಂದನ್ನೂ ಬೇರ್ಪಡಿಸಲು ಸಾಧ್ಯವಿಲ್ಲ.

೩. ಸ್ಥಾನಗಳ ಮೀಸಲಾತಿಗೆ ಒಂದು ನಿಯಮ ಅನುಸರಿಸಲಾಗುತ್ತದೆ. ಯಾವುದೇ ಸಂದರ್ಭದಲ್ಲಿಯೂ ಬಹುಸಂಖ್ಯಾತರ ಪಂಗಡವನ್ನು ಅಲ್ಪಸಂಖ್ಯಾತರ ಪಂಗಡದ ಮಟ್ಟಕ್ಕೆ ಅಥವಾ ಅದಕ್ಕಿಂತಲೂ ಕೆಳಮಟ್ಟಕ್ಕೆ ಇಳಿಸುವಂತಿಲ್ಲ.

೪. ಉದ್ಯಮ, ಭೂಮಿಯ ಒಡೆತನ, ವ್ಯಾಪಾರ, ಕಾರ್ಮಿಕ ಇಲಾಖೆ, ಮುಂತಾದವುಗಳಿಗೆ ಸಂಬಂಧಿಸಿದಂತೆ ಯಾವುದೇ ಮೀಸಲು ಪ್ರಾತಿನಿಧ್ಯ ಸಂಖ್ಯೆಯನ್ನೂ ನಿರ್ಧರಿಸಲಾಗಿಲ್ಲ. ಈ ಎಲ್ಲಾ ಸ್ಥಾನಗಳೂ ಅವರವರ ಕೋಮುಗಳಲ್ಲಿನ ಜನಸಂಖ್ಯೆಯನ್ನು ಅವಲಂಬಿಸಿ ಮೀಸಲಾತಿಯನ್ನು ಪಡೆಯುವಂತೆ ಸೂಚಿಸಲಾಗಿದೆ.

೫. ೩೩೨ ಶೇಕಡ ಮೀಸಲಾತಿಯನ್ನು ಮುಸಲ್ಮಾನರಿಗೆ ನೀಡುವಲ್ಲಿ ಶೇಕಡ ೨೬ ಭಾಗ ಮುಸಲ್ಮಾನರು ಬ್ರಿಟಿಷ್ ಆಡಳಿತದ ಭಾರತದಿಂದ ಹಾಗು ಶೇಕಡ ೭ ರಷ್ಟು ಮುಸಲ್ಮಾನರು ಭಾರತದ ಇತರ ಪ್ರಾಂತ್ಯಗಳಿಂದ ಎಂದು ಪರಿಗಣಿಸಲಾಗಿದೆ.

೬. ಪಂಜಾಬ್ ಪ್ರಾಂತ್ಯದಲ್ಲಿ ಮುಸಲ್ಮಾನರು ಹಿಂದೂಗಳು ಹಾಗು ಶೋಷಿತ ವರ್ಗದವರ ಸಮ್ಮತಿಯಿಂದ ಸಿಖ್ಖರಿಗೆ ಶೇಕಡ ೩೪ರಷ್ಟು ಮೀಸಲಾತಿ ನೀಡುವುದರಿಂದ ಸಮ್ಮತಿನೀಡಿರುವ ಸಮುದಾಯವವರಿಗೆ ಶಾಸನಸಭೆಯಲ್ಲಿ ೨೦ ರಷ್ಟು ಮೀಸಲಾತಿ ನಿಗದಿಗೊಳಿಸಬೇಕು.

೭. ಈ ಮೇಲಿನ ಎಲ್ಲಾ ಪ್ರಸ್ತಾಪಗಳಿಗೂ ಭಾರತದ ಜನಸಂಖ್ಯೆಯ ಶೇಕಡ ೪೬ರಷ್ಟಿರುವ* ೧೧೫ ಮಿಲಿಯನ್ನು ಜನರ ಒಪ್ಪಿಗೆಯಿದೆ ಎಂದು ಪರಿಗಣಿಸಬಹುದು.

ಬ್ರಿಟಿಷ್ ಪ್ರಧಾನಿಯವರು ಈ ಮೇಲಿನ ಎಲ್ಲಾ ಪ್ರಸ್ತಾಪಗಳಿಗೆ ಭಾರತದ ಪ್ರತಿನಿಧಿಗಳಿಂದ ಒಮ್ಮತದ ಒಪ್ಪಿಗೆಯನ್ನು ಪಡೆಯಲು ಪ್ರಯತ್ನಿಸಿದರು. ಅವರ ಮಗಳು ಕೆಲ ಪ್ರತಿನಿಧಿಗಳಿಗೆ ಔತಣ ಕೂಟ ಏರ್ಪಡಿಸಿದ್ದಳು.

---

* ಇದು ಒಕ್ಕೂಟ ವ್ಯವಸ್ಥೆಯ ಸಮಿತಿ ಹಾಗೂ ಅಲ್ಪಸಂಖ್ಯಾತರ ಸಮಿತಿಯ ಮೂಲ ನಡಾವಳಿಗಳಲ್ಲಿ ಮೂರನೆಯ ಅನುಬಂಧವಾಗಿತ್ತು.

ಬರೋಡದ ಮಹಾರಾಜ. ಸರ್ ಮಿರ್ಜಾ ಇಸ್ಮಾಯಿಲ್, ಜಿನ್ನಾ, ಟಂಬೇ ಹಾಗೂ ಇತರ ಕೆಲವರು ಇದರಲ್ಲಿ ಪಾಲ್ಗೊಂಡರು. ಈ ಬ್ರಿಟಿಷ್ ಪ್ರಧಾನಿಯವರು 'ಚೆಕರ್ಸ್" ಎಂಬಲ್ಲಿದ್ದ ತನ್ನ ತೋಟದ ಮನೆಗೆ ಕೆಲ ಪ್ರತಿನಿಧಿಗಳನ್ನು ಕರೆದೊಯ್ದಿದ್ದರು. ಅಲ್ಲಿ ಅವರು ಭಾರತದ ಕೆಲ ಸಮಸ್ಯೆಗಳನ್ನು ಕುರಿತು ಚರ್ಚಿಸಿದರಾದರೂ, ಯಾವುದೇ ಅಂತಿಮ ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲ.

ಅಲ್ಪಸಂಖ್ಯಾತರ ಉಪಸಮಿತಿಯು ತನ್ನ ವರದಿಯನ್ನು ಸಮಾವೇಶದಲ್ಲಿ ಮಂಡಿಸಿತು. ಆ ವರದಿಯ ಕಡೆಯ ಪ್ಯಾರಾದಲ್ಲಿ ಈ ಕೆಳಗಿನಂತೆ ನಮೂದಿಸಲಾಗಿತ್ತು. "ಶೋಷಿತ ವರ್ಗದವರು ಹಾಗೂ ಅಲ್ಪಸಂಖ್ಯಾತರು ತಮ್ಮ ಪ್ರತಿಪಾದನೆಗಳಲ್ಲಿ ಸ್ಪಷ್ಟತೆ ಹೊಂದಿದ್ದಾರೆ. ಅವರ ನ್ಯಾಯ ಸಮ್ಮತ ಬೇಡಿಕೆಗಳು ಪೂರೈಕೆ ಆಗುವವರೆಗೆ ಅವರು ಸ್ವರಾಜ್ಯ ಸರ್ಕಾರಕ್ಕೆ ಸಮ್ಮತಿ ಸೂಚಿಸುವುದು ಸಾಧ್ಯವಿಲ್ಲ."

ಜೋಷಿ, ಜಾಧವ್ ಹಾಗು ಪಾಲ್‌ರಂತೆ ಅಂಬೇಡ್ಕರ್ ಕೂಡ ಈ ಮೇಲಿನ ಪ್ರಸ್ತಾವನೆಗೆ ಸಮ್ಮತಿ ಸೂಚಿಸಿರಲಿಲ್ಲ. ಏಕೆಂದರೆ ಅವರಿಗೆ ಈ ಮೇಲಿನ ಪ್ರಸ್ತಾವನೆಯಲ್ಲಿ ನೀಡಿರುವ ಅವಕಾಶಗಳು ಸಂಪೂರ್ಣವಾಗಿಲ್ಲ ಎಂದು ತಿಳಿದಿತ್ತು. ಈ ಕೂಡಲೇ ವಯಸ್ಕರ ಮತದಾನಕ್ಕೆ ಅವಕಾಶ ಮಾಡಿಕೊಡುವಂತೆ ಅಂಬೇಡ್ಕರ್ ಕೇಳಿಕೊಂಡರು. ಶೋಷಿತವರ್ಗದವರ ಬಗೆಗೆ ಕಾಳಜಿ ಇಲ್ಲದವರಿಗೆ ಮಾತ್ರ ಮತದಾನದ ಹಕ್ಕನ್ನು ನೀಡಿ ಅವರ ದಯೆಯ ಅಡಿಯಲ್ಲಿ ಶೋಷಿತರು ಬದುಕುವಂತೆ ಮಾಡಿದರೆ, ಅದು ಶೋಷಿತವರ್ಗವನ್ನು ವಂಚಿಸಿದ ಹಾಗೆ ಆಗುತ್ತದೆ ಎಂದು ಅವರು ಎಚ್ಚರಿಕೆಯನ್ನು ನೀಡಿದರು.

ಇಷ್ಟು ಆಳವಾದ ಆಸಕ್ತಿ ಹಾಗೂ ಕಾಳಜಿಯಿಂದ ಡಾ. ಅಂಬೇಡ್ಕರ್ ಹಗಲು ರಾತ್ರಿಯನ್ನದೆ ತನ್ನ ವರ್ಗದ ಜನರಿಗಾಗಿ ಕೆಲಸ ಮಾಡುತ್ತಿದ್ದರು. ಅವರು ಹಲವಾರು ಸಂದರ್ಶನಗಳನ್ನು ಪಡೆಯುತ್ತಿದ್ದರು. ಹಲವಾರು ಸಂದರ್ಶನಗಳನ್ನು ನೀಡುತ್ತಿದ್ದರು. ಮಾಹಿತಿಗಳನ್ನು ನೀಡುತ್ತಿದ್ದರು. ಇದಲ್ಲದೇ ಬ್ರಿಟಿಷರ ಸಂಸತ್ ಸದಸ್ಯರನ್ನು ಒಮ್ಮೆ ಉದ್ದೇಶಿಸಿ ಮಾತನಾಡಿ, ಅಸ್ಪೃಶ್ಯರ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟಿದ್ದರು. ಅವರು ವಿದೇಶಿ ಪತ್ರಿಕೆಗಳಿಗೆ ಲೇಖನ ಬರೆಯುವ ಒಂದೇ ಒಂದು ಅವಕಾಶವನ್ನೂ ಕಳೆದುಕೊಳ್ಳುತ್ತಿರಲಿಲ್ಲ. ಇದಲ್ಲದೇ ವಿದೇಶಿ ಪತ್ರಕರ್ತರಿಗೆ ಹೇಳಿಕೆಗಳನ್ನು ಕೊಡುತ್ತಿದ್ದರು ಹಾಗೂ ಲಂಡನ್ನಿನಲ್ಲಿ ಹಲವಾರು ಸಂದರ್ಶನಗಳನ್ನು ನೀಡಿದ್ದರು. ಇವರ ಒಂದೇ ಗುರಿಯೆಂದರೆ ಹಲವಾರು ದಶಕಗಳಿಂದ ಭಾರತದಲ್ಲಿ ಅಸ್ಪೃಶ್ಯರ ಹೀನಾಯ ಸ್ಥಿತಿಯನ್ನು ಜಗತ್ತಿಗೆ ಮನವರಿಕೆ ಮಾಡಿಕೊಡುವುದಾಗಿತ್ತು. ಹಲವಾರು ಬಾರಿ ಅವರು ಮಾಧ್ಯಮಗಳ ಮೂಲಕ ಒಂದು ಮನವಿ ಮಾಡಿದ್ದರು. ಅದೇನೆಂದರೆ ಅಸ್ಪೃಶ್ಯರ ಈ ಹೋರಾಟಕ್ಕೆ ಹೊರಜಗತ್ತು ಬೆಂಬಲ ನೀಡಬೇಕು ಎಂಬುದು. ಮಾನವೀಯತೆಯ ಆಧಾರದ ಮೇಲೆ ಜನರು ಇದಕ್ಕೆ ಬೆಂಬಲ ಸೂಚಿಸಬೇಕೆಂದು ಅವರು ಕೇಳಿಕೊಳ್ಳುತ್ತಿದ್ದರು.

ಇದರ ಪರಿಣಾಮವೆಂದರೆ ಭಾರತದಲ್ಲಿ ಅಸ್ಪೃಶ್ಯರ ಪರಿಸ್ಥಿತಿ ಅಮೇರಿಕಾದಲ್ಲಿ ನಿಗ್ರೋಗಳ ಪರಿಸ್ಥಿತಿಗಿಂತಲೂ ಹೀನಾಯವಾಗಿದೆ ಎಂಬ ವಿಷಯ ಮೊತ್ತ ಮೊದಲ ಬಾರಿಗೆ ಹೊರ ಜಗತ್ತಿಗೆ ಮನವರಿಕೆ ಆಯಿತು. ಇವರ ಈ ಮನವಿ ಹಲವಾರು ಬ್ರಿಟಿಷ್ ನಾಯಕರ ಕಿವಿ ತಲುಪಿತು. ಬ್ರಿಟನ್ನಿನ ಸಂಸತ್ತಿನ ಸದಸ್ಯರಾದ ಕುಮಾರಿ ಇಲೆನಾರ್, ನಾರ್ಮಿನ್, ಆ್ಯಂಗಲ್ ಹಾಗೂ ಇನ್ನು ಕೆಲವು ಇವರ ಬೆಂಬಲಕ್ಕೆ ನಿಂತರು ಅಸ್ಪೃಶ್ಯರ ಪರಿಸ್ಥಿತಿ ಸುಧಾರಣೆ ಆಗಬೇಕೆಂದರೆ ಅವರಿಗೆ ಮತದಾನದ ಹಕ್ಕನ್ನು ನೀಡಲೇಬೇಕು ಎಂದು ಲಾರ್ಡ್‌ಸ್ಯಾಂಕಿಯವರನ್ನು ಒತ್ತಾಯಿಸಿದರು. ಲಾರ್ಡ್ ಸ್ಯಾಂಕಿ ಈ ನಿಟ್ಟಿನಲ್ಲಿ ತಾವು ತರಬೇಕೆಂದಿರುವ ಭಾರತದ ರಾಜಕೀಯ ಬದಲಾವಣೆಯಲ್ಲಿ ಅಸ್ಪೃಶ್ಯ ನಾಯಕರಿಗೆ ಸಾಕಷ್ಟು ಅವಕಾಶ ನೀಡುವ ಭರವಸೆ ನೀಡಿದರು. ಆದರೆ ಕೆಲ ಬ್ರಿಟಿಷ್ ದಿನಪತ್ರಿಕೆಗಳು ಡಾ. ಅಂಬೇಡ್ಕರ್ ಅವರ "ಸಾಮಂತ

ರಾಜ್ಯದ ಪ್ರಸ್ತಾವನೆಗೆ ನಾನೇನೂ ವಿರೋಧ ವ್ಯಕ್ತಪಡಿಸುತ್ತಿಲ್ಲ"* ಎಂಬ ಹೇಳಿಕೆಗಾಗಿ ಅವರನ್ನು ಟೀಕಿಸಿದ್ದವು. ಪತ್ರಿಕೆಗಳ ಈ ಮಲತಾಯಿ ಧೋರಣೆಯನ್ನು ತಾವು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು.

ಡಾ. ಅಂಬೇಡ್ಕರ್ ಅವರ ಆಳವಾದ ಅಧ್ಯಯನ, ಅವರ ಬುದ್ಧಿಕ್ಷಮತೆ ಪ್ರತಿನಿಧಿಗಳ ಹಾಗೂ ಬ್ರಿಟಿಷ್ ಮುತ್ಸದ್ಧಿಗಳ ಮೇಲೆ ಅಪಾರ ಪರಿಣಾಮವನ್ನು ಬೀರಿದವು. ಕೆಲ ಜನರು ಅವರ ಬಗ್ಗೆ ಅತಿಯಾದ ಗೌರವ ಹೊಂದಿದರೆ ಮತ್ತೆ ಕೆಲವರು ಅವರನ್ನು ದ್ವೇಷಿಸತೊಡಗಿದರು. The Indian Daily Mail ಎಂಬ ಪತ್ರಿಕೆಯ ವರದಿಗಾರನ ವಿಶ್ಲೇಷಣೆ ಈ ಕೆಳಗಿನಂತಿತ್ತು. "ಡಾ. ಅಂಬೇಡ್ಕರ್ ಅವರ ಧ್ಯೇಯ ಸ್ಪಷ್ಟವಾಗಿದೆ. ಎಲ್ಲಾ ವರ್ಗದ ಜನರ ಪ್ರಾತಿನಿಧ್ಯವಿರುವ ಸರ್ಕಾರದ ಹೊರತು ಅವರು ಬೇರೆ ಯಾವುದೇ ಸರ್ಕಾರದ ರಚನೆ ಆಗಲು ಆಸ್ಪದ ನೀಡುವುದಿಲ್ಲ. ಈಗ ರಚನೆಯಾಗಬೇಕೆಂದಿರುವ ಸರ್ಕಾರ ಕೇವಲ ಬಹುಸಂಖ್ಯಾತ ಜನರ ಪ್ರತಿನಿಧಿಗಳ ಸರ್ಕಾರ. ಅವರ ಈ ವಿರೋಧಕ್ಕೆ ಬ್ರಿಟನ್ನಿನ ಕಾರ್ಮಿಕ ಸಂಘಗಳು ಹಾಗು ಕೆಲ ಸ್ವತಂತ್ರ ಪಕ್ಷಗಳು ಸಹಮತ ವ್ಯಕ್ತಪಡಿಸಿದವು."

ಎಲ್ಲಾ ಉಪ ಸಮಿತಿಗಳ ವರದಿಗಳನ್ನು ಗಮನಿಸಿದ ನಂತರ ದುಂಡು ಮೇಜಿನ ಸಮಾವೇಶವು ೧೯೩೧ರ ಜನವರಿ ೧೯ರಂದು ಮುಂದೂಡಲ್ಪಟ್ಟಿತು. ಅದಾದ ನಂತರ ಭಾರತದ ಪರಿಸ್ಥಿತಿಯನ್ನು ಕುರಿತು ಹೌಸ್ ಆಫ್ ಕಾಮನ್ಸ್‌ನಲ್ಲಿ ಚರ್ಚಿಸಲಾಯಿತು. ಈ ಚರ್ಚೆಯ ಸಮಯದಲ್ಲಿ ಓರ್ವ ಪ್ರತಿನಿಧಿ ಶೋಷಿತ ವರ್ಗದವರ ಸಮಸ್ಯೆಗಳನ್ನು ಸದನದ ಮುಂದಿರಿಸಿದ. ಐಸ್ಯಾಕ್ ಘುಟ್ ಎಂಬಾತ ಇವರ ವಿಷಯದಲ್ಲಿ ಅನುಕಂಪದ ಧೋರಣೆಯನ್ನು ಹೊಂದಿದ್ದ. ಆತ ಅಸ್ಪೃಶ್ಯರ ಸ್ಥಿತಿಯನ್ನು ಕುರಿತು ಈ ರೀತಿ ಹೇಳಿದ. "ಅವರ ರಕ್ಷಣೆಗೆ ನಾವು ಸೂಕ್ತ ಕ್ರಮಗಳನ್ನು ಕೈಗೊಳ್ಳದೇ ಹೋದರೆ, ಅವರ ಜೀವಗಳು ನಮ್ಮನ್ನು ಶಪಿಸುತ್ತವೆ. ಒಂದು ವೇಳೆ ಮುಂಬರುವ ರಾಜ್ಯಪಾಲರೊಂದಿಗೆ ಮಾತನಾಡುವ ಅವಕಾಶ ನನಗೆ ದೊರೆತರೆ ಅವರಿಗೆ ಮೊದಲು "ನಿಮ್ಮ ಗಮನ ಈ ವರ್ಗದ ಜನರ ಮೇಲೆ ಇರಲಿ" ಎಂದು ಹೇಳುತ್ತೇನೆ. ಅವರೀಗ ಅಸಹಾಯಕರಾಗಿ ಇರಬಹುದು. ಆದರೆ ಮುಂದೊಂದು ದಿನ ಅವರು ಅತ್ಯಂತ ಬಲಿಷ್ಠರಾಗಿ ಹೊರಹೊಮ್ಮುತ್ತಾರೆ. ಈ ಭೂಮಿಯ ಮೇಲೆ ನ್ಯಾಯ ಎಂಬುದು ಇನ್ನೂ ಇದೆ. ಆದ್ದರಿಂದ ಅವರ ಶೋಷಣೆ ಒಂದಲ್ಲ ಒಂದು ದಿನ ಕೊನೆಗೊಳ್ಳಲೇಬೇಕು. ಇದಾದ ಇಪ್ಪತ್ತು ವರ್ಷಗಳ ನಂತರ ಭಾರತದ ಅಭಿವೃದ್ಧಿಯನ್ನು ಕುರಿತು ಉದ್ಭವಿಸುವ ಪ್ರಶ್ನೆಯೆಂದರೆ ಈ ಜನರಿಗಾಗಿ ನೀವೇನು ಮಾಡಿದಿರಿ ಎಂಬುದು" ಈ ಭಾಷಣ ಡಾ. ಅಂಬೇಡ್ಕರ್ ಅವರು ಈ ಕ್ಷೇತ್ರದಲ್ಲಿ ಮಾಡಿದ್ದಂತಹ ಕಾರ್ಯಕ್ಕೆ ನೀಡಿದ ಅಭಿನಂದನೆಯಂತೆ ಇತ್ತು.

ಲಂಡನ್ನಿನಿಂದ ಹೊರಡುವ ಮುನ್ನ ಡಾ. ಅಂಬೇಡ್ಕರ್ ಅವರು ತಮ್ಮ ಕಾರ್ಯದರ್ಶಿ ಶಿವತಾರ್ಕರ್ ಅವರಿಗೆ ಬರೆದ ಪತ್ರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅವರಿಗೆ ಈ ಸಮ್ಮೇಳನದ ಪರಿಣಾಮವನ್ನು ಕುರಿತು ಸಂಶಯವು ಇತ್ತು. ಆದರೆ ಇದು ಭಾರತದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯ ನಿಟ್ಟಿನಲ್ಲಿ ನಾವು ಇಟ್ಟಿರುವ ಧೃಢವಾದ ಹೆಜ್ಜೆ ಎಂದು ತಿಳಿಸಿದ್ದರು. ಈ ದೃಷ್ಟಿಯಿಂದ ನೋಡಿದರೆ ಈ ಸಮ್ಮೇಳನ ಯಶಸ್ವಿ ಎಂದೇ ಹೇಳಬೇಕು. ಆದರೆ ಮತ್ತೊಂದು ದೃಷ್ಟಿಯಿಂದ ವೀಕ್ಷಿಸಿದರೆ ಈ ಅಡಿಪಾಯದಲ್ಲಿ ಗಟ್ಟಿಯಾದ

---

* ೧೯೩೦ರ ಡಿಸೆಂಬರ್ ೧೯ ರಂದು ಡಾ. ಅಂಬೇಡ್ಕರ್ ಅವರು ಬರೆದ ಪತ್ರ.

ಗಾರೆಗಿಂತ ಪೊಳ್ಳಾದ ಮರಳು ತುಂಬಿರುವುದೇ ಹೆಚ್ಚು ಎಂದವರಿಗೆ ತಿಳಿದಿತ್ತು.* ಆದ್ದರಿಂದ ಈ ಅಡಿಪಾಯ ಅಪೇಕ್ಷಿಸಿದಷ್ಟು ಗಟ್ಟಿಯಿಲ್ಲ ಎಂದು ಅವರಿಗೆ ತಿಳಿದಿತ್ತು. ಶೋಷಿತ ವರ್ಗದವರ ಹಕ್ಕುಗಳಿಗೆ ಸಂಬಂಧಿಸಿದಂತೆ ಈ ಸಮ್ಮೇಳನವೂ ಅತ್ಯಂತ ಯಶಸ್ವಿ ಪ್ರಯತ್ನವಾಯಿತು ಎಂದು ಅವರು ಹೇಳಿದರು.

ಆದರೆ ಈ ದುಂಡು ಮೇಜಿನ ಸಮಾವೇಶವು ಭಾರತದ ರಾಜಕೀಯದ ಮೇಲೆ ಬೀರಿದ ಪರಿಣಾಮ ಎಂದರೆ 'ಅಖಂಡ ಭಾರತದ' ಪರಿಕಲ್ಪನೆ. ಮತ್ತೊಂದು ಅತ್ಯುತ್ತಮ ನಡೆಯೆಂದರೆ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಶೋಷಿತ ವರ್ಗದವರ ಪ್ರಾತಿನಿಧ್ಯದ ಕುರುಹುಗಳು ಸ್ಪಷ್ಟವಾಗತೊಡಗಿದವು. ಇದಕ್ಕಿಂತ ಅತ್ಯುತ್ತಮ ಅಂಶವೆಂದರೆ ಡಾ. ಅಂಬೇಡ್ಕರ್ ಅವರು ಇಡೀ ಪ್ರಪಂಚದ ಮುಂದೆ ಶೋಷಿತವರ್ಗದ ಜನರ ಬವಣೆಯನ್ನು ಮನಮುಟ್ಟುವಂತೆ ಬಿಚ್ಚಿಟ್ಟಿದ್ದರು. ಉದ್ದೇಶಿತ ಶಾಸನಸಭೆಗಳಲ್ಲಿ ವಿವಿಧ ಸಮುದಾಯಗಳಿಗೆ ದೊರಕಬೇಕಾದ ಸ್ಥಾನಗಳ ಬಗೆಗೆ ಹಾಗೂ ಚುನಾವಣಾ ವ್ಯವಸ್ಥೆಯಲ್ಲಿ ಜಂಟಿಮತಕ್ಷೇತ್ರಗಳು ಮತ್ತು ಸ್ಥಾನಗಳ ಮೀಸಲಾತಿ ಇರಬೇಕೆಂಬುದರ ಬಗೆಗೆ ಭಿನ್ನಾಭಿಪ್ರಾಯವು ತಲೆದೋರಿದ್ದರಿಂದ, ಸಮಾವೇಶವು ಮುಂದೂಡಲ್ಪಟ್ಟಿತು. ಅಲ್ಲದೆ ಈ ಸಮಾವೇಶದಲ್ಲಿ ಕಾಂಗ್ರೆಸ್ ಭಾಗವಹಿಸದೆ ಇದ್ದುದರಿಂದ ಇಂತಹ ಒಂದು ಪ್ರಮುಖ ನಿರ್ಧಾರವನ್ನು ತೆಗೆದುಕೊಳ್ಳುವುದು ಸರಿಯಲ್ಲವೆಂದೂ ನಿರ್ಧರಿಸಲಾಯಿತು. ಫೆಬ್ರವರಿ ೧೩, ೧೯೩೧ರಂದು ಮಾರ್ಸೆಲ್ಲಿಸ್‌ನಿಂದ ಭಾರತದ ಕಡೆಗೆ ಡಾ. ಅಂಬೇಡ್ಕರ್ ತಮ್ಮ ಪಯಣ ಆರಂಭಿಸಿದರು.[೧]

**ಶೋಷಿತ ವರ್ಗಗಳು ಹಾಗೂ ಭವಿಷ್ಯದ ಸಂವಿಧಾನ**

೧೯೩೧ರ ಫೆಬ್ರವರಿ ೨೭ರ ಬೆಳಿಗ್ಗೆ ಡಾ. ಅಂಬೇಡ್ಕರ್ ಅವರು ಬೊಂಬಾಯಿಗೆ ಆಗಮಿಸಿದರು. ಅಂಬೇಡ್ಕರ್ ಸೇವಾದಳದ ಕೆಲ ಸದಸ್ಯರು ಅಲ್ಲಿ ಹಾಜರಿದ್ದು, ಅವರಿಗೆ ಅಭೂತಪೂರ್ವವಾದ ಸ್ವಾಗತ ಕೋರಿದರು. 'ಟೈಂಸ್ ಆಫ್ ಇಂಡಿಯಾ' ಪತ್ರಿಕೆಯ ಪತ್ರಕರ್ತನೋರ್ವನಿಗೆ ಅವರು ಈ ಕೆಳಗಿನಂತೆ ಸಂದರ್ಶನ ನೀಡಿದರು. 'ದುಂಡು ಮೇಜಿನ ಸಮಾವೇಶ' ನನ್ನ ಅನಿಸಿಕೆಯಂತೆ ಮತ್ಸದ್ಧಿತನಕ್ಕೆ ದೊರೆತ ಒಂದು ದೊಡ್ಡ ವಿಜಯ. ಸಂವಿಧಾನದಲ್ಲಿ ನ್ಯೂನತೆಗಳೇ ಇಲ್ಲ ಎಂದು ಹೇಳುವುದು ಸುಳ್ಳಾಗುತ್ತದೆ. ಆದರೆ ನನ್ನ ಅಭಿಪ್ರಾಯದಲ್ಲಿ ಅವುಗಳು ಬಹಳ ದೊಡ್ಡ ನ್ಯೂನತೆಗಳೇನೂ ಅಲ್ಲ. ಇದರಲ್ಲಿ ಹೇಳಿರುವುದಕ್ಕೆಲ್ಲ ವಿರುದ್ಧವಾದ ಅಂಶಗಳನ್ನೆ ನಿಜ ಎಂದು ನಂಬುವುದಾದರೇ ಶಾಂತಿಯಿಂದಲೇ ಸಮಸ್ಯೆಯನ್ನು ಪರಿಹರಿಸಬಯಸುವವರು ಬಂದು ಭಾರತದ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಲಿ. ಆದರೆ ನನಗೆ ಆದ ಒಂದು ಅತ್ಯಂತ ದೊಡ್ಡ ಅಸಮಾಧಾನವೆಂದರೆ ಸಮಾವೇಶದಲ್ಲಿ ಹೇಳಿದಂತೆ ಸಂವಿಧಾನದ ರಚನೆಯಾದರೆ, ಅದು ಕೇವಲ ಒಂದು ಸೀಮಿತ ವರ್ಗಕ್ಕೆ ಮಾತ್ರ ಮತದಾನದ ಹಕ್ಕನ್ನು ನೀಡಿರುವುದರಿಂದ ಅದು ಪ್ರಜಾಪ್ರಭುತ್ವ ವಿರೋಧಿಯಾಗಿ ನನಗೆ ಕಂಡು ಬರುತ್ತದೆ. ಅವರು ಯಾವ ಯಾವ ಅಂಶಗಳಿಗೆ ಒತ್ತು ನೀಡುತ್ತಿದ್ದಾರೊ ಆ ಅಂಶಗಳು ನನ್ನ ದೃಷ್ಟಿಯಲ್ಲಿ ಅತ್ಯಂತ ಸಣ್ಣ ಹಾಗೂ ನಗಣ್ಯ ವಿಷಯಗಳಾಗಿವೆ. ಆದರೆ ಶೋಷಿತ ವರ್ಗಗಳು ಮತ್ತು ಕಾರ್ಮಿಕರನ್ನು ಪ್ರತಿನಿಧಿಸಿದ ನಾವು ವಯಸ್ಕ ಮತದಾನಕ್ಕಾಗಿ ಹೋರಾಡಿ ಸೋತೆವು. ಏಕೆಂದರೆ ಅಲ್ಲಿ ಪ್ರತಿನಿಧಿಸಿದವರೆಲ್ಲ ನೆಹರೂ ವರದಿಯನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದರು. ಆದರೆ ನನಗೆ ನಮ್ಮ ದೃಷ್ಟಿಕೋನವನ್ನು ಗಾಂಧೀಜಿಯವರು ಅರಿತುಕೊಳ್ಳುತ್ತಾರೆ ಹಾಗೂ ಇದರಿಂದ ಪ್ರಜಾಪ್ರಭುತ್ವದ ಪರವಾದ ಸಂವಿಧಾನ ರಚನೆ ಆಗುತ್ತದೆ ಎಂಬ ಆಸೆಯಿದೆ.

---

* ಡಾ. ಅಂಬೇಡ್ಕರ್‌ರವರ ೧೯೩೧ರ ಜನವರಿ ೨೧ರ ಪತ್ರ

1. Keer Pp 154-157.

ಭಾರತದ ಸಾಮಾನ್ಯ ಪುರುಷರು ಹಾಗೂ ಸ್ತ್ರೀಯರಿಗೆ ಭಾರತದ ರಾಜಕೀಯದಲ್ಲಿ ಭಾಗಿಯಾಗುವ ಅವಕಾಶವನ್ನು ಗಾಂಧೀಜಿಯವರು ಕಲ್ಪಿಸಿಕೊಡುವಲ್ಲಿ ವಿಫಲರಾದರೆ ಅವರ ಈ ಕಾರ್ಯವನ್ನು ಅತ್ಯಂತ ನಂಬಿಕೆದ್ರೋಹದ ಕಾರ್ಯ ಎಂದು ಕರೆಯುವುದಕ್ಕೆ ಹಾಗೂ ಅವರ ಅಸಹಕಾರ ಚಳವಳಿಯು ಅವರನ್ನು ನಂಬಿರುವಂತಹ ಲಕ್ಷಾಂತರ ಜನರಿಗೆ ಅವರು ಮಾಡಿದ ಮೋಸದಂತೆ ಆಗುತ್ತದೆ ಎಂದು ಹೇಳಲು ಹಿಂಜರಿಯುವುದಿಲ್ಲ. ಅವರ ಹಿಂಬಾಲಕರು ಎಂದು ಕರೆದುಕೊಳ್ಳುತ್ತಿರುವ ಹಲವರಿಗೆ ಅವರು ವಯಸ್ಕ ಮತಾಧಿಕಾರದ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಹೊಂದಿದ್ದಾರೆ ಎಂಬುದೇ ತಿಳಿದಿಲ್ಲ. ಆದ್ದರಿಂದ ಅವರಿಗೆ ತಮ್ಮ ಬೆಂಬಲವನ್ನು ಮುಂದುವರಿಸುವ ಮೊದಲು, ಅವರ ಈ ದೃಷ್ಟಿಕೋನದ ಬಗ್ಗೆ ಸ್ಪಷ್ಟ ತಿಳುವಳಿಕೆಯನ್ನು ಅವರಿಂದ ಪಡೆದುಕೊಳ್ಳುವುದು ಒಳಿತು ಎಂದು ನಾನು ಹೇಳಲು ಇಚ್ಛಿಸುತ್ತೇನೆ.

## ಅಲ್ಪಸಂಖ್ಯಾತರ ಸಮಸ್ಯೆ

ಈಗಿನ ಪರಿಸ್ಥಿತಿಯಲ್ಲಿ ಇರುವಂತಹ ಅತ್ಯಂತ ಪ್ರಮುಖ ಸಮಸ್ಯೆ ಎಂದರೆ ಖಂಡಿತವಾಗಿಯೂ ಅಲ್ಪಸಂಖ್ಯಾತರ ಸಮಸ್ಯೆ. ಈ ಸಮಸ್ಯೆಗೆ ಒಂದು ಸಮಾಧಾನ ಸಿಗದೇ ಹೋದರೆ ಖಂಡಿತ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದು ಸಾಧ್ಯವಿಲ್ಲ. ಆದರೆ ದುರಾದೃಷ್ಟವಶಾತ್ ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಈ ಸಮಾವೇಶವು ಅಸಫಲವಾಗಿದೆ. ಆದರೆ ರಾಜಕೀಯ ಸುಧಾರಣೆಯನ್ನು ತರುವ ಮುಂಚೆ ಈ ನಿಟ್ಟಿನಲ್ಲಿ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಆದರೆ ಅಲ್ಪಸಂಖ್ಯಾತರ ಪ್ರತಿನಿಧಿಯಾಗಿ ಈ ಸಮಾವೇಶಕ್ಕೆ ಹೋಗಿದ್ದವರೆಂದರೆ ನಾನು ಹಾಗೂ ಶ್ರೀ ಆರ್.ಎಂ.ಶ್ರೀನಿವಾಸನ್. ಒಂದು ವಿಷಯಕ್ಕೆ ನಾವು ಸಂತಸಪಡುತ್ತೇವೆ. ಅದೇನೆಂದರೆ ಅಲ್ಪಸಂಖ್ಯಾತರ ಸ್ಥಾನವು ಮುಂಬರುವ ಸಂವಿಧಾನದಲ್ಲಿ ಭದ್ರವಾಗಿದೆ ಹಾಗೂ ಅವರ ಸಮಸ್ಯೆಗಳು ಇಲ್ಲವಾಗಲಿವೆ.[೧]

ಸರಿ ಸುಮಾರು ಇದೇ ಸಮಯಕ್ಕೆ ಎಂದರೆ ಜುಲೈ ೩ನೆಯ ವಾರದ ಹೊತ್ತಿಗೆ ಎರಡನೆಯ ಸಮಾವೇಶಕ್ಕೆ ತೆರಳುವ ಪ್ರತಿನಿಧಿಗಳ ಹೆಸರುಗಳನ್ನು ಪ್ರಕಟಣೆ ಮಾಡಲಾಯಿತು. ಡಾ. ಅಂಬೇಡ್ಕರ್, ಶಾಸ್ತ್ರಿ, ಸಪ್ರು, ಜಯಕರ್, ಸೆಟಲ್ವಾಡ್, ಮಾಲವೀಯ, ಸರೋಜಿನಿ ನಾಯ್ಡು, ಗಾಂಧಿ, ಮಿರ್ಜಾ ಇಸ್ಮಾಯಿಲ್, ಜಿನ್ನಾ ಹಾಗೂ ರಾಮಸ್ವಾಮಿ ಮೊದಲಿಯಾರ್ ಮುಂತಾದವರನ್ನು ಲಂಡನ್ನಿನಲ್ಲಿ ನಡೆಯುವ ಸಮಾವೇಶಕ್ಕೆ ಆಹ್ವಾನಿಸಲಾಯಿತು. ಮೊದಲನೆಯ ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ ಒಕ್ಕೂಟ ರಚನಾ ಸಮಿತಿಯಿಂದ ಡಾ. ಅಂಬೇಡ್ಕರ್ ಅವರನ್ನು ಉದ್ದೇಶ ಪೂರ್ವಕವಾಗಿಯೇ ಹೊರಗೆ ಇರಿಸಲಾಗಿತ್ತು. ಅವರ ದೇಶಭಕ್ತ ಮನಸ್ಸು ಹಾಗೂ ಸಾಮಾನ್ಯ ಜನರ ಸಮಸ್ಯೆಗಳನ್ನು ನಿರ್ಭಯವಾಗಿ ಚರ್ಚಿಸುವ ಸ್ವಭಾವ ಬ್ರಿಟಿಷರಿಗೆ ಇಷ್ಟವಾಗಿರಲಿಲ್ಲ. ಆದರೆ ಎರಡನೆಯ ಸುತ್ತಿನಲ್ಲಿ ಒಕ್ಕೂಟ ರಚನಾ ಸಮಿತಿಗೆ ಅವರನ್ನು ಆಹ್ವಾನಿಸಲಾಯಿತು. ಅನಂತರ ಭಾರತದ ಸಂವಿಧಾನ ರಚನೆಯಲ್ಲಿ ಇವರು ಮಹತ್ವದ ಪಾತ್ರ ವಹಿಸಿದರು.

ಇದಕ್ಕೆ ಭಾರತದ ಎಲ್ಲೆಡೆಗಳಿಂದ ಹಾಗೂ ಇಂಗ್ಲೆಂಡಿನಿಂದ ಕೂಡ ಡಾ. ಅಂಬೇಡ್ಕರ್ ಅವರಿಗೆ ಅಭಿನಂದನಾ ಪತ್ರಗಳು ಬಂದವು. ಇವರ ವಿರೋಧಿ ವಾರಪತ್ರಿಕೆ, ದಿನಪತ್ರಿಕೆಗಳು ಕೂಡ ಇವರ ದೇಶಭಕ್ತಿಯನ್ನು ಮೆಚ್ಚಿ ಬರೆಯತೊಡಗಿದವು. ಇವರಿಗೆ ಪ್ರಜಾಪ್ರಭುತ್ವದ ಕಡೆಗಿದ್ದ ಆಸಕ್ತಿ, ಸಾಮಾನ್ಯ ಜನರ ಸಮಸ್ಯೆಗಳಿಗೆ ನೀಡುತ್ತಿದ್ದ ಸ್ಪಂದನಗಳನ್ನು ಮೆಚ್ಚಿದವು. 'ಕೊಲಾಬಾ ಸಮಾಚಾರ' ಎಂಬ ಪತ್ರಿಕೆಯು ಯಾವಾಗಲೂ ಇವರನ್ನು ತೆಗಳಿ, ಇವರ ವಿರುದ್ಧವೇ ಬರೆಯುತ್ತಿತ್ತು. ಅಂತಹುದರಲ್ಲಿ ಅದು ಕೂಡ ಇವರ ಸಾಮಾಜಿಕ

1. The fimes of India, dated 2nd February 1931.

ಬದಲಾವಣೆಯ ಕಳಕಳಿಯನ್ನು ಹೊಗಳಿ ಬರೆಯತೊಡಗಿತು. ಜಿಯರ್ ವಿಚಾರಣೆಯ ವೇಳೆ ಇವರು ನೀಡಿದ್ದ ಕೊಡುಗೆಯನ್ನು ಆ ಪತ್ರಿಕೆ ವಿಶೇಷವಾಗಿ ಹೊಗಳಿತ್ತು. ಸೈಮನ್ ಸಮಿತಿಯ ಭೇಟಿಯ ಸಮಯದಲ್ಲಿ ಇವರ ಕೊಡುಗೆ ಹಾಗೂ ಮೊದಲ ದುಂಡು ಮೇಜಿನ ಸಮಾವೇಶದಲ್ಲಿ ಇವರ ಕೊಡುಗೆಯನ್ನು ವಿಶೇಷವಾಗಿ ಸ್ಮರಿಸಿತ್ತು. ಅದಲ್ಲದೇ ಅಂಬೇಡ್ಕರ್ ಅವರೊಬ್ಬ ನಿಜವಾದ ದೇಶಭಕ್ತ, ಅವರು ದೇಶಕ್ಕೆ ತೊಡಿಸಿರುವ ಸಂಕೋಲೆಯನ್ನು ಮುರಿಯಲು ಹೋರಾಡುತ್ತಾರೆ ಮತ್ತು ಎರಡನೆಯ ದುಂಡುಮೇಜಿನ ಸಮಾವೇಶದಲ್ಲಿ ಹಾಗೆ ಹೋರಾಡಲು ಇತರರಿಗೆ ಸಹಾಯ ಮಾಡುತ್ತಾರೆ ಎಂದು ಬರೆದಿತ್ತು.[೧]

The Indian Daily Mail ಎಂಬ ಪತ್ರಿಕೆಯು ಕೂಡ ತನ್ನ ೧೯೩೧ರ ಜುಲೈ ೩ರ ಸಂಚಿಕೆಯಲ್ಲಿ ಡಾ. ಅಂಬೇಡ್ಕರ್ ಅವರಿಗೆ ಒಕ್ಕೂಟ ರಚನಾ ಸಮಿತಿಗೆ ನೇಮಕವಾದುದಕ್ಕಾಗಿ ಅಭಿನಂದನೆ ಸಲ್ಲಿಸಿತು. ಆ ಪತ್ರಿಕೆಯಲ್ಲಿ ಈ ಕೆಳಗಿನಂತೆ ವರದಿಯಾಯಿತು.

ಡಾ. ಅಂಬೇಡ್ಕರ್ ಅವರಿಗೆ ಆಮಂತ್ರಣ ಬಂದಿರುವುದಕ್ಕೆ ಅವರನ್ನು ಪತ್ರಿಕೆ ಅಭಿನಂದಿಸುತ್ತದೆ. ಆ ಸಮಾವೇಶದಲ್ಲಿನ ಎಲ್ಲಾ ಭಾಷಣಗಳಲ್ಲಿ ಡಾ. ಅಂಬೇಡ್ಕರ್ ಅವರ ಭಾಷಣ ಹೆಚ್ಚಿನ ಪ್ರಚಾರವನ್ನು ಪಡೆಯಿತು. ಏಕೆಂದರೆ ಅವರು ಮಾಡಿದ ಭಾಷಣವು ಅಷ್ಟೊಂದು ಅದ್ಭುತವಾಗಿತ್ತು. ಸ್ಯಾಂಕಿ ವರದಿಯ ಮೇಲೆ ಅವರು "ಅದನ್ನು ಒಪ್ಪುವುದೂ ಇಲ್ಲ, ಆಕ್ಷೇಪಿಸುವುದೂ ಎಲ್ಲ" ಎಂದು ಹೇಳಿದುದು ಅವರ ನಿಲುವನ್ನು ತೋರಿಸುತ್ತದೆ. ಪ್ರಾತಿನಿಧಿಕವಲ್ಲದ ಸರಕಾರವು ನಿಜವಾದ ಸರಕಾರವಾಗಲಾರದು ಎಂದು ಅವರು ಹೇಳಿದ್ದಾರೆ. ಅವರು ತಮ್ಮ ಮನದಲ್ಲಿ ಇದ್ದ ಭಯವನ್ನು ಹೊರ ಹಾಕಿದ್ದರು. ಅದೇನೆಂದರೆ ಇದೀಗ ಎಲ್ಲರೂ ಬಯಸುತ್ತಿರುವ ಸರ್ಕಾರ ಬಹುಸಂಖ್ಯಾತ ವರ್ಗಗಳ ಸರ್ಕಾರ ಆಗಬಹುದು ಎಂಬುದು. ಅವರ ಈ ವಿರೋಧಕ್ಕೆ ಬೆಂಬಲ ಸಿಕ್ಕಿದ್ದು ಗ್ರೇಟ್ ಬ್ರಿಟನ್ನಿನ ಕಾರ್ಮಿಕ ಹಾಗೂ ಸ್ವತಂತ್ರ ಪಕ್ಷದಿಂದ. ಅವರು ಹಳೆಯ ವಿಷಯವಾಗಿರುವ ಅಲ್ಪಸಂಖ್ಯಾತರ ವಿಷಯವನ್ನು ಮಾತ್ರ ಹಿಡಿದು ಕೂರಲಿಲ್ಲ. ಡಾ. ಅಂಬೇಡ್ಕರ್ ಅವರೊಬ್ಬ ದೇಶಭಕ್ತ ಹಾಗೂ ನಿಜವಾದ ಅರ್ಥದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸುತ್ತಿದ್ದಾರೆ. ಮುಂದಿನ ಸುತ್ತಿನ ಚರ್ಚೆಯಲ್ಲಿ ಪ್ರಮುಖವಾಗಿ ಮತದಾನದ ಹಕ್ಕಿನ ವಿಷಯ ಮತ್ತು ಕೇಂದ್ರ ಶಾಸನಸಭೆಯ ವಿಷಯಗಳು ಇರುತ್ತವೆ. ಈ ಚರ್ಚೆಗಳಲ್ಲಿಯೂ ಕೂಡ ಶೋಷಿತ ವರ್ಗದ ಈ ಪ್ರತಿನಿಧಿ ಅತ್ಯಂತ ಪ್ರಮುಖ ಪಾತ್ರ ವಹಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.[೨]

೨೧ ಜುಲೈ ೧೯೩೧ರ The Sunday Chronicle ಎಂಬ ಪತ್ರಿಕೆಯಲ್ಲಿ A.T.T. ಎಂಬ ಪತ್ರಕರ್ತ ಈ ರೀತಿ ಬರೆದು, ಅಂಬೇಡ್ಕರ್ ಅವರೊಬ್ಬ ನಿಜವಾದ ದೇಶಭಕ್ತ ಎಂದು ಶ್ಲಾಘಿಸಿದ್ದ. "ಸ್ವತಂತ್ರ ಸಲಹಾ ಸಮಿತಿಗೆ ನೇಮಕವಾಗಿರುವ ಸದಸ್ಯರಲ್ಲಿ ನನ್ನ ಮಿತ್ರ ಡಾ. ಅಂಬೇಡ್ಕರ್ ಅವರು ಕೂಡ ಒಬ್ಬರು. ಅವರನ್ನು ಹೋದ ವರ್ಷ ಲಂಡನ್ನಿನಲ್ಲಿ ಜರುಗಿದ ದುಂಡು ಮೇಜಿನ ಸಮಾವೇಶದಲ್ಲಿ ಭೇಟಿಯಾಗಿದ್ದೆ. ನನಗೆ ಆಗಲೇ ಅವರ ಬುದ್ಧಿಮತ್ತೆಯ ಅರಿವಾಗಿತ್ತು. ಆತ ಹೃದಯಾಂತರಾಳದಿಂದ ಒಬ್ಬ ದೇಶಭಕ್ತನಾಗಿದ್ದಾನೆ. ಬ್ರಿಟಿಷ್ ಕಟ್ಟಾವಾದಿಗಳು ಇವನ ಮನವನ್ನು ಬದಲಿಸಲು ಬಹಳ ಶ್ರಮಿಸಿದರೂ ಆತ ಅವರ ಪ್ರಯತ್ನವನ್ನು ವಿಫಲಗೊಳಿಸಿದ್ದ. ಅವರು ಈ ಬ್ರಿಟಿಷರ ಒತ್ತಡಕ್ಕೆ ಒಳಗಾಗಬಾರದು ಎಂದು ಕಷ್ಟಪಡುತ್ತಿದ್ದರು. ಅಂತೆಯೇ ಅವರಿಗಿದ್ದ ಮತ್ತೊಂದು ಸಮಸ್ಯೆ ಎಂದರೆ ಅವರೊಂದಿಗೆ ಆಗಮಿಸಿದ್ದ ಮತ್ತೊಬ್ಬ ಸದಸ್ಯರಾದ ರಾವ್

---

1. Keer P. 163

೨. Reprented, Gdnvir ಅಂಬೇಡ್ಕರ್–ಗಾಂಧೀ – Teen Mulakhati (ಮರಾಠಿ) PP 6-7

ಬಹದ್ದೂರ್ ಶ್ರೀನಿವಾಸನ್ ಅವರನ್ನು ಕೂಡ ಇಂತಹ ಒತ್ತಡಕ್ಕೆ ಒಳಗಾಗದಂತೆ ಕಾಯ್ದುಕೊಳ್ಳಬೇಕಿತ್ತು. ಚೆಸ್ಟರ್ ಫೀಲ್ಡ್ ಉದ್ಯಾನವನದಲ್ಲಿ ಶ್ರೀನಿವಾಸನ್ ಅವರು ಅಂಬೇಡ್ಕರ್ ಬಳಿಗೆ ಒಂದು ದೂರನ್ನು ತಂದಿದ್ದರು. ಅದೇನೆಂದರೆ ಸರ್ ತೇಜ್ ಬಹದ್ದೂರ್ ಅವರು ಭಾರತದ ರಾಜರುಗಳಿಗೆ ಅಗತ್ಯಕ್ಕಿಂತ ಹೆಚ್ಚಿನ ಪ್ರಾಮುಖ್ಯವನ್ನು ನೀಡುತ್ತಿದ್ದಾರೆ ಎಂಬುದು. ಆದರೆ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಸರ್ ತೇಜ್ ಬಹದ್ದೂರ್ ನಿರ್ವಹಿಸುತ್ತಿದ್ದಾರೆ ಎಂಬ ಸತ್ಯ ಅಂಬೇಡ್ಕರ್ ಅವರಿಗೆ ತಿಳಿದಿತ್ತು.[೧]

ಡಾ. ಅಂಬೇಡ್ಕರ್ ಅವರ ನೇಮಕಾತಿಯನ್ನು ಕುರಿತು ಕೇಸರಿ ಹಾಗೂ ಇನ್ನಿತರ ಕೆಲ ಪತ್ರಿಕೆಗಳು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದ್ದವು. ಡಾ. ಅಂಬೇಡ್ಕರ್ ಹಾಗೂ ಡಾ. ಎನ್. ಎಂ. ಜೋಷಿ ಅವರನ್ನು ಅಭಿನಂದಿಸುತ್ತಾ The Journal of Servants of India Society ಈ ರೀತಿ ಬರೆಯಿತು. "ಸಮಾಜದ ಅತ್ಯಂತ ಕೆಳಮಟ್ಟದಿಂದ ಬಂದಿರುವಂತಹ ಈ ಇಬ್ಬರು ಗಣ್ಯರಿಗೆ ಪತ್ರಿಕೆ ಶುಭಾಶಯ ಕೋರುತ್ತದೆ. ಒಬ್ಬರು ಕಾರ್ಮಿಕ ವರ್ಗದ ಪ್ರತಿನಿಧಿಯಾದರೆ ಮತ್ತೊಬ್ಬರು ಶೋಷಿತ ವರ್ಗದ ಪ್ರತಿನಿಧಿ. ಈ ರೀತಿಯ ಉನ್ನತ ಮಟ್ಟದ ರಾಜಕೀಯಕ್ಕೆ ಇಬ್ಬರೂ ಅಪರಿಚಿತರು. ಅವರು ತಾವು ಪ್ರತಿನಿಧಿಸುವ ಜನತೆಯ ಮೇಲೆ ವಿಶ್ವಾಸವನ್ನಿರಿಸಿಕೊಂಡಿದ್ದಾರೆ. ಅದಕ್ಕಾಗಿಯೇ ಇದುವರೆಗೂ ಹೋರಾಡಿದ್ದಾರೆ. ಆದ್ದರಿಂದ ಉನ್ನತ ಮಟ್ಟದ ಜನರ ಕುಹಕವನ್ನು ಕಂಡು ಅವರು ಎದೆಗುಂದುವುದಿಲ್ಲ. ಅವರು ಕಾಗದಕ್ಕೆ ಮಾತ್ರವೇ ಸೀಮಿತವಾಗಿರುವ ಕೆಲ ನಿಯಮಗಳನ್ನು ಕಡ್ಡಾಯವಾಗಿ ಅನುಷ್ಠಾನವಾಗುವಂತೆ ಮಾಡಲು ಕಟಿಬದ್ಧರಾಗಿದ್ದಾರೆ." ಇದಕ್ಕಿಂತ ಕೆಲ ದಿನಗಳ ಮೊದಲ Free Press Journal ಎಂಬ ಮುಂಬಯಿ ಪತ್ರಿಕೆಯ ಲಂಡನ್ನಿನ ಪ್ರತಿನಿಧಿಯೊಬ್ಬನು ಮಿಸ್ ಮೇಯೋ ಅವರ ಪ್ರಶ್ನೆಗೆ ಸಮರ್ಪಕವಾದ ಉತ್ತರ ನೀಡಿದ್ದ. ದುಂಡು ಮೇಜಿನ ಸಮಾವೇಶದ ಮೊದಲ ಸುತ್ತಿನ ಚರ್ಚೆಗಳಲ್ಲಿ ಆತ ಅಂಬೇಡ್ಕರ್ ಅವರನ್ನು ಗಮನಿಸಿದ್ದ. ಅವನಿಗೆ ಅಂಬೇಡ್ಕರ್ ಅವರೊಬ್ಬ ನಿರ್ಭೀತ, ಸ್ವತಂತ್ರ ಹಾಗೂ ದೇಶಭಕ್ತ ನಾಯಕನಂತೆ ಕಂಡುಬಂದಿದ್ದರು. ಈತನ ನಿರ್ಭೀತ ನಡೆ ಹಿಂದೂ ಹಾಗೂ ಮುಸಲ್ಮಾನರಿಬ್ಬರಿಗೂ ನುಂಗಲಾರದ ತುತ್ತಿನಂತೆ ಪರಿಣಮಿಸಿತ್ತು. ಈತ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಮಾಡಿದ ಭಾಷಣ ಇಡೀ ಸಮಾವೇಶದಲ್ಲಿಯೇ ಅತ್ಯುತ್ತಮ ಭಾಷಣವಾಗಿತ್ತು.

ಮಹಾತ್ಮ ಗಾಂಧೀಜಿಯವರು ಈ ಸಮಾವೇಶದಲ್ಲಿ ಭಾಗಿಯಾಗುವರೋ ಇಲ್ಲವೋ ಎಂಬುದು ಅದುವರೆಗೂ ನಿರ್ಧಾರ ಆಗಿರಲಿಲ್ಲ. ಆದ್ದರಿಂದ ಎಲ್ಲ ದೃಷ್ಟಿಯೂ ಬೊಂಬಾಯಿನ ಮಲಬಾರ್‌ಹಿಲ್ ಪ್ರದೇಶದ ಮನಿಭುವನದ ಮೇಲೆ ನೆಟ್ಟಿತ್ತು. ಏಕೆಂದರೆ ಆ ರೀತಿಯ ನಿಗೂಢವಾದ ಕುತೂಹಲವನ್ನು ಗಾಂಧೀಜಿಯವರು ಜನರ ಮನದಲ್ಲಿ ಬಿತ್ತಿದ್ದರು. ಈ ಗಡಿಬಿಡಿಯಲ್ಲಿಯೇ ಗಾಂಧೀಜಿಯವರು ಅಂಬೇಡ್ಕರ್ ಅವರಿಗೆ ಒಂದು ಪತ್ರ ಬರೆದರು. ಅಂಬೇಡ್ಕರ್ ಅವರಿಗೆ ತಮ್ಮ ಬೇಡಿಕೆಗಳ ಬಗ್ಗೆ ಕೆಲವಂಶವನ್ನು ಸೂಚಿಸಿದ್ದರು. ಆಗಸ್ಟ್ ೬, ೧೯೩೧ರಲ್ಲಿ ಬರೆದ ಈ ಪತ್ರದಲ್ಲಿ ಗಾಂಧೀಜಿಯವರು ಆ ರಾತ್ರಿ ೮ ಘಂಟೆಗೆ ತಾವು ಬಂದು ಅಂಬೇಡ್ಕರ್ ಅವರನ್ನು, ಅವರು ಬಿಡುವಾಗಿದ್ದರೆ, ಭೇಟಿಯಾಗುವುದಾಗಿ ತಿಳಿಸಿದ್ದರು. ಆದರೆ ಅವರಿಗೆ ಅನನುಕೂಲ ಮಾಡಲು ಇಚ್ಛಿಸದೇ ಅಂಬೇಡ್ಕರ್ ಅವರು ತಾವೇ ಗಾಂಧಿಯವರ ನಿವಾಸಕ್ಕೆ ಬರುವುದಾಗಿ ತಿಳಿಸಿದರು.

ಅಂತೆಯೇ ಅಂಬೇಡ್ಕರ್ ಹಾಗೂ ಗಾಂಧೀಜಿಯವರು ಭೇಟಿಯು ೧೯೩೧ರ ಆಗಸ್ಟ್ ೧೪ ರಂದು ಮಧ್ಯಾಹ್ನ ಎರಡು ಘಂಟೆಗೆ ಮನಿಭುವನದಲ್ಲಿ ಜರುಗಿತು.

---

೧. Ibid, PP 78

## ಅಸ್ಪೃಶ್ಯರನ್ನು ಬೇರ್ಪಡಿಸುವಿಕೆ

ಮೂಲ್‌ಟನ್‌ನಲ್ಲಿ ಲಂಡನ್ ದುಂಡು ಮೇಜಿನ ಸಮಾವೇಶಕ್ಕೆ ತೆರಳುವ ಮೊದಲು ಶೋಷಿತ ವರ್ಗಗಳ ನಾಯಕರಾದಂತಹ ಡಾ. ಅಂಬೇಡ್ಕರ್ ಅವರು ಗಾಂಧೀಜಿಯವರನ್ನು ಭೇಟಿಯಾದರು. ಶೋಷಿತ ವರ್ಗಗಳ ಕೆಲ ದಿನನಿತ್ಯದ ಸಮಸ್ಯೆಗಳ ಬಗ್ಗೆ ಕಾಂಗ್ರೆಸ್ ಆಡಳಿತ ತೋರುತ್ತಿದ್ದ ನಿರಾಸಕ್ತಿಯನ್ನು ಡಾ. ಅಂಬೇಡ್ಕರ್ ಅವರು ಮಹಾತ್ಮಾ ಗಾಂಧೀಜಿಯವರಿಗೆ ಮನವರಿಕೆ ಮಾಡಿಕೊಡಬಯಸಿದ್ದರು. ಇಡೀ ದೇಶವೇ ಅಸ್ಪೃಶ್ಯತೆಯ ಬಗ್ಗೆ ನಂಬಿಕೆ ಹೊಂದಿರುವಾಗ ಒಬ್ಬ ಬಡ ಮಹಾತ್ಮಗಾಂಧಿ ಏನು ತಾನೇ ಮಾಡಲು ಸಾಧ್ಯ?[1]

ಮರುದಿನ ಎಂದರೆ ೧೯೩೧ರ ಆಗಸ್ಟ್ ೧೫ ಶನಿವಾರ, ಆಗಿತ್ತು. ದುಂಡು ಮೇಜಿನ ಸಮಾವೇಶಕ್ಕೆ ಆಗಮಿಸಿದ್ದ ಗಣ್ಯರೆಲ್ಲಾ S.S. Mooltan ಎಂಬ ಹಡಗಿನಲ್ಲಿ ಅಂದು ಲಂಡನ್ನಿಗೆ ಪ್ರಯಾಣ ಮಾಡಲು ತಯಾರಾಗಿದ್ದರು. ಬೊಂಬಾಯಿಯಲ್ಲಿನ The Ballard Pier ಎಂಬ ಸ್ಥಳ ಅಂದು ಅತ್ಯಂತ ವರ್ಣರಂಜಿತವಾಗಿತ್ತು. Pier ನಲ್ಲಿ ಅಂದು ಭಿಕಾರಿಗಳಿಂದ ಹಿಡಿದು ರಾಜಕುಮಾರರವರೆಗೆ ಎಲ್ಲರೂ ಉಪಸ್ಥಿತರಿದ್ದರು. ಸ್ನೇಹಿತರು, ಆರಾಧಕರು, ಬೆಂಬಲಿಗರು ಎಲ್ಲರೂ ಅಂದು ಆ ಬಂದರಿನಲ್ಲಿ ಸೇರಿ, ತಮ್ಮ ನಾಯಕರಿಗೆ ಶುಭಾಶಯ ಕೋರಲು ತಯಾರಾಗಿದ್ದರು. ತಮ್ಮ ವಾಹನದಿಂದ ಕೆಳಗೆ ಇಳಿಯುತ್ತಿದ್ದಂತೆಯೇ ಅಭೂತವಾದ ಸ್ವಾಗತವನ್ನು ಜನರು ಡಾ. ಅಂಬೇಡ್ಕರ್ ಅವರಿಗೆ ನೀಡಿದರು. ಮೋಲ್ ನಿಲ್ದಾಣದಲ್ಲಿ ಸುಮಾರು ಎರಡು ಸಾವಿರ ಜನರು ಸೇರಿ, 'ಡಾ. ಅಂಬೇಡ್ಕರ್ ಅವರಿಗೆ ಜಯವಾಗಲಿ', 'ಡಾ. ಅಂಬೇಡ್ಕರ್ ಚಿರಾಯುವಾಗಲೀ' ಮುಂತಾದ ಘೋಷಣೆಗಳನ್ನು ಕೂಗುತ್ತಿದ್ದರು.[2]

ಹಡಗನ್ನು ಏರಿದ ನಂತರ ಶ್ರೀ ಪ್ರಭಾಶಂಕರ ಪಟ್ಟಾಣಿ ಅವರನ್ನು ಡಾ. ಅಂಬೇಡ್ಕರ್ ಭೇಟಿಯಾದರು. ಪಟ್ಟಾಣಿಯವರು ಡಾ. ಅಂಬೇಡ್ಕರ್ ಅವರ ಹಾಗು ಗಾಂಧೀಜಿಯವರ ಭೇಟಿಯ ಪ್ರತಿಫಲ ಏನಾಯಿತು ಎಂದು ವಿಚಾರಿಸಿದರು. ತಾವು ಅದರ ಭೇಟಿಯ ಮಧ್ಯೆಯೇ ಆ ಸಭಾಂಗಣದಿಂದ ನಿರ್ಗಮಿಸಬೇಕಾದದ್ದರಿಂದ ಈ ಭೇಟಿಯಲ್ಲಿ ಕಡೆಯ ನಿರ್ಧಾರ ಏನಾಯಿತು ಎಂದು ತಮಗೆ ಅರಿವಿಲ್ಲ ಎಂದರು. ಆದರೆ ಇವರ ಧ್ವನಿಯಲ್ಲಿ ಇದ್ದಂತಹ ವ್ಯಂಗವು ಡಾ. ಅಂಬೇಡ್ಕರ್ ಅವರ ಗಮನಕ್ಕೆ ಬಂದಿತು. ಆದ್ದರಿಂದಲೇ ಡಾ. ಅಂಬೇಡ್ಕರ್ ಅವರು ತಾವು ಚರ್ಚೆಯ ಮಧ್ಯೆ ಸಭಾಂಗಣವನ್ನು ಬಿಟ್ಟು ತೆರಳಿದ್ದಾದರೂ ಏಕೆ ಎಂದು ಅವರನ್ನು ಪ್ರಶ್ನಿಸಿದರು.

ಹಿಂದೂ ಧರ್ಮಗ್ರಂಥಗಳ ಪ್ರಕಾರ ಹೀನಾಯವಾದ ಮಾತುಗಳನ್ನು ಆಡುತ್ತಿರುವವರನ್ನು ಕೇಳುಗ ತಡೆಯಬೇಕು. ಒಂದು ವೇಳೆ ಅದು ಸಾಧ್ಯವಾಗದೇ ಹೋದರೆ ಆತ ಆ ಸ್ಥಳದಿಂದ ಹೊರಟು ಹೋಗಬೇಕು ಎಂಬ ನಿಯಮವಿದೆ. ಆದ್ದರಿಂದ ತಾವು ಆ ಸ್ಥಳವನ್ನು ಬಿಟ್ಟು ತೆರಳಿದುದಾಗಿ ಡಾ. ಅಂಬೇಡ್ಕರ್ ಅವರಿಗೆ ಪಟ್ಟಾಣಿಯವರು ತಿಳಿಸಿದರು. ಇದರಿಂದ ಡಾ. ಅಂಬೇಡ್ಕರ್ ಅವರಿಗೆ ಮತ್ತಷ್ಟು ಅಸಹನೆ ಉಂಟಾಯಿತು. ಆದರೆ ಅವರು ತಮ್ಮ ಮುಖದಲ್ಲಿ ಯಾವ ಭಾವನೆಯನ್ನು ವ್ಯಕ್ತಪಡಿಸಲಿಲ್ಲ. ಆದರೆ ಹಿಂದೂ ಗ್ರಂಥಗಳ ಪ್ರಕಾರ ಒಬ್ಬ ವ್ಯಂಗ್ಯಕಾರನಿಗೆ ಹಾಗೂ ಹೊಗಳುಭಟ್ಟನಿಗೆ ಯಾವ ಶಿಕ್ಷೆ ನೀಡಬೇಕು ಎಂದು ಪ್ರಶ್ನಿಸಿದರು. ಈ ರೀತಿಯ ಪ್ರಶ್ನೆಯಿಂದಾಗಿ ಪಟ್ಟಾಣಿ ಅವರಿಗೆ ಬಹಳ ಕೋಪ ಬಂದಿತು. ನಿಮ್ಮ ಮಾತಿನ ಅರ್ಥವೇನು ಎಂದು ನೇರವಾಗಿ ಡಾ. ಅಂಬೇಡ್ಕರ್ ಅವರನ್ನು ಪ್ರಶ್ನಿಸಿದರು. ತಾವು ಯಾವ ರೀತಿ ಅರ್ಥ

1. Tunes of India 18th Aug 1931
2. Keer : pp 168-169

ಮಾಡಿಕೊಂಡಿದ್ದಿರೋ ಅದೇ ನನ್ನ ಮಾತಿನ ಅರ್ಥ ಎಂದು ತಿಳಿಸಿದ ಅಂಬೇಡ್ಕರ್, ನಿಮ್ಮಂತಹ ಹೊಗಳು ಭಟ್ಟರಿಂದ ಗಾಂಧೀಜಿ ದೂರ ಉಳಿಯಬೇಕು ಎಂದುಬಿಟ್ಟರು. ಅಷ್ಟರಲ್ಲಿ ಪೊಲೀಸ್ ಮುಖ್ಯಾಧಿಕಾರಿಯಾದಂತಹ ವಿಲ್ಸನ್ ಇವರಿಬ್ಬರ ಬಳಿಗೆ ಬಂದು ಈ ಚರ್ಚೆ ಮತ್ತಷ್ಟು ಬಿಸಿಯಾಗುವುದನ್ನು ತಡೆದರು. ಇದಾದ ನಂತರ ಪಟ್ವಾಣಿ ಸ್ವಲ್ಪ ಮಟ್ಟಿಗೆ ಬುದ್ಧಿ ಬಂದಿರಬೇಕು. ಮಹಾನ್ ನಾಯಕರೆಲ್ಲಾ ಇಂತಹ ಹೊಗಳುಭಟ್ಟರಿಂದ ತುಸು ದೂರ ಉಳಿದರೆ ನಿಜವಾಗಿಯೂ ಪ್ರಪಂಚಕ್ಕೆ ಒಳ್ಳೆಯದಾಗಬಹುದೇನೋ!

ಸರೋಜಿನಿ ನಾಯ್ಡು ಹಾಗೂ, ಮಾಲವೀಯಾ ಕೂಡ ಇದೇ ಹಡಗಿನಲ್ಲಿ ಹೊರಟಿದ್ದರು. ಆದರೆ ಮಹಾತ್ಮಾಗಾಂಧಿಯವರು ಯಾವುದೇ ನಿರ್ಧಾರ ಕೈಗೊಳ್ಳದ ಕಾರಣ ಇವರು ಕೂಡ ತಮ್ಮ ಪ್ರಯಾಣ ರದ್ದುಗೊಳಿಸಿದರು. ಹಡಗಿನಲ್ಲಿ ನೀಡಿದ ಸಂದರ್ಶನದಲ್ಲಿ ಡಾ. ಅಂಬೇಡ್ಕರ್ ಅವರು ಗಾಂಧೀಜಿಯವರ ಈ ನಿರ್ಧಾರವನ್ನು ಕಟುವಾಗಿ ಟೀಕಿಸಿದ್ದರು. ಬರ್ಡೋಲಿಯ ಚಿಂತನೆಗೆ ದೇಶದ ಚಿಂತನೆಗಿಂತ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಕ್ಕೆ ಅವರು ಗಾಂಧೀಜಿಯವರನ್ನು ಟೀಕಿಸಿದರು. ಅವರು ಸಣ್ಣ ಸಣ್ಣ ಸಮಸ್ಯೆಗಳತ್ತ ಹೆಚ್ಚಿನ ಗಮನ ನೀಡುತ್ತಿದ್ದಾರೆ, ಆದರೆ ಪ್ರಮುಖ ಸಮಸ್ಯೆಗಳನ್ನು ಕಡೆಗಣಿಸುತ್ತಿದ್ದಾರೆ. ಆದರೆ ಈ ಕಠಿಣವಾದ ಸಮಸ್ಯೆಗಳನ್ನು ಪರಿಹರಿಸುವುದರಿಂದ ಅವರು ಎಲ್ಲಾ ಅಧಿಕಾರಿಗಳ ಮೇಲೆ ಹಿಡಿತ ಸಾಧಿಸಬಹುದು ಎಂಬ ವಿಷಯ ಮರೆತಿದ್ದಾರೆ. ಅವರ ವಿಷಯವೇ ನನಗೆ ಅರ್ಥ ಆಗುತ್ತಿಲ್ಲ ಎಂದಿದ್ದರು.

ತಮ್ಮ ಬೇಡಿಕೆಗಳನ್ನು ವಿರೋಧಿಸುವ ಹಿಂದೆ ಗಾಂಧೀಜಿಯವರ ಯಾವ ಧ್ಯೇಯ ಇದೆ ಎಂದು ಡಾ. ಅಂಬೇಡ್ಕರ್ ಚಿಂತಿಸತೊಡಗಿದರು. ಅವರು ತಮ್ಮ ಕಾರ್ಯದರ್ಶಿಯ ಮೂಲಕ ಭಾರತದಲ್ಲಿದ್ದ ತಮ್ಮ ಬೆಂಬಲಿಗರಿಗೆ ಸಂದೇಶ ಕಳುಹಿಸಿದರು. ಗಾಂಧೀಜಿಯವರ ನಿಲುವನ್ನು ಖಂಡಿಬೇಕು ಎಂದು ಅವರು ತಿಳಿಸಿದ್ದರು. ತಮ್ಮ ಕಾರ್ಯದರ್ಶಿ ಶಿವಾಟಾರ್ಕರ್ ಅವರಿಗೆ ಅಂಬೇಡ್ಕರ್ ಅವರು ಸ್ಯೂಝ್‌ನಿಂದ ಪತ್ರ ಬರೆದು. ದುಂಡು ಮೇಜಿನ ಸಮಾವೇಶದ ಮೊದಲನೆಯ ಸುತ್ತಿನ ಚರ್ಚೆಗಳಲ್ಲಿ ತಾವು ಅಲ್ಪಸಂಖ್ಯಾತರ ಉಪಸಮಿತಿಗೆ ಸಲ್ಲಿಸಿದ್ದ ಪ್ರಸ್ತಾವನೆಯ ಪ್ರತಿಗಳನ್ನು ತಮಗೆ ಕಳುಹಿಸಿಕೊಡುವಂತೆ ಕೇಳಿದರು. ಅಲ್ಲದೇ ತಾವು ಒಂದು ಚರ್ಮದ ಚೀಲವನ್ನು ಬಿಟ್ಟು ಬಂದಿದ್ದೇನೆ ಅದ್ನನು ಕೂಡ ರಾವ ಬಹದ್ದೂರ್ ಆರ್. ಶ್ರೀನಿವಾಸನ್ ಅವರ ಬಳಿ ಕಳುಹಿಸುವಂತೆ ಹೇಳಿದರು.

ಹಡಗಿನಲ್ಲಿ ರೇವಾದ ಮಹಾರಾಜರು ಜಯಕರ್ ಹಾಗೂ ಇನ್ನಿತರ ಮುಖಂಡರು ಶೋಷಿತ ವರ್ಗದವರ ಸಮತಾ ಸೇವಾ ದಳದ ಕಾರ್ಯ ವೈಖರಿಯ ಬಗ್ಗೆ ತೃಪ್ತಿವ್ಯಕ್ತಪಡಿಸಿದರು. ಶೌಕತ್ ಅಲಿ ಕೂಡ ಸಂತಸಪಟ್ಟಿದ್ದರು. ಡಾ. ಮೂಂಜೇ ಕೂಡ ತೃಪ್ತರಾಗಿದ್ದರು. ಹಿಂದೂ ಮಹಾಸಭೆಯು ಕೂಡ ಈ ರೀತಿಯ ಪರಿಣಾಮ ಬೀರುವಲ್ಲಿ ವಿಫಲವಾಗಿತ್ತು. ಇಂತಹ ಜವಾಬ್ದಾರಿಯುತ ಬೆಂಬಲಿಗರನ್ನು ಕೂಡ ಅದು ಹೊಂದಿರಲಿಲ್ಲ. ಅಂತಹ ಸಂದರ್ಭದಲ್ಲಿ ಮುಸಲ್ಮಾನ ಬೆಂಬಲಿಗರ ವ್ಯವಸ್ಥಿತ ಹೋರಾಟಕ್ಕೆ ಸರಿಸಮನಾಗಿ ನಿಲ್ಲಬಲ್ಲ ಮತ್ತೊಂದು ಗುಂಪನ್ನು ಅಂಬೇಡ್ಕರ್ ಹುಟ್ಟುಹಾಕಿದ್ದರು! ಅಸ್ಪೃಶ್ಯರ ನಾಯಕರಾಗಿರುವುದಕ್ಕೆ ಡಾ. ಅಂಬೇಡ್ಕರ್ ಅವರಿಗೆ ಮೂಂಜೆಯವರು ಅಭಿನಂದನೆಯನ್ನು ಕೂಡ ಸಲ್ಲಿಸಿದರು. ಅಸ್ಪೃಶ್ಯರು ನಿಮ್ಮ ಸೇವೆಯನ್ನು ಗಮನಿಸುತ್ತಿದ್ದಾರೆ. ಅವರು ತಮ್ಮ ಬಗೆಗೆ ಕೃತಜ್ಞತೆ ಕೂಡ ಹೊಂದಿದ್ದಾರೆ. ಹಿಂದೂಗಳಂತೆ ನಿರ್ಲಿಪ್ತರೂ, ಕೃತಜ್ಞರೂ ಆಗಿಲ್ಲ ಎಂದು ಕೂಡ ತಿಳಿಸಿದ್ದರು.

ಆಗಸ್ಟ್ ೨೯ ರಂದು ಲಂಡನ್ ತಲುಪಿದಾಗ ಡಾ. ಅಂಬೇಡ್ಕರ್ ಅವರು ಶೀತ ಬಾಧೆಯಿಂದ ನರಳುತ್ತಿದ್ದರು. ಅವರಿಗೆ ಜ್ವರದೊಂದಿಗೆ ವಾಂತಿ–ಭೇಧಿ ಕೂಡ ಆರಂಭವಾಗಿತ್ತು. ಅವರ ಈ ಅನಾರೋಗ್ಯ ಅವರ ಶಕ್ತಿಯನ್ನು ಉಡುಗಿಸಿತ್ತು. ಇದರಿಂದಾಗಿ ಆತ ಶಿವ್‌ಟಾರ್ಕರ್ ಅವರಿಗೆ ಪತ್ರಬರೆದು ತಮ್ಮ ಆರೋಗ್ಯ

ತೀರ ಕೆಟ್ಟಿದೆ ಎಂದು ತಿಳಿಸಿದರು. ಆದರೆ ಸೆಪ್ಟೆಂಬರ್ ೭ರ ಸೋಮವಾರದಿಂದ ಅವರು ಸ್ವಲ್ಪ ಚೇತರಿಸಿಕೊಂಡರು. ಆದರೂ ಅವರಿಗೆ ಇನ್ನೂ ನಿತ್ರಾಣ ಇತ್ತು. ಆದರೆ ಅವರು ಶಿವ್‌ಟಾರ್ಕರ್ ಅವರಿಗೆ ತಮ್ಮ ಪತ್ನಿಗೆ ತಮ್ಮ ಅನಾರೋಗ್ಯವನ್ನು ಕುರಿತು ಹೇಳಬಾರದು ಎಂದು ಹೇಳಿದ್ದರು. ಒಂದು ವಿಷಯ ಅವರನ್ನು ಮನದಲ್ಲಿಯೇ ಕೊರೆಯುತ್ತಿತ್ತು. ಅದೇನೆಂದರೆ ಉಪ–ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅವರು ಮಹದ್ ಕೇಸಿನಲ್ಲಿ ಸೋತಿದ್ದ ಮೇಲ್ವರ್ಗದವರು ಠಾಣೆಯಲ್ಲಿ ಇರುವ ಜಿಲ್ಲಾ ನ್ಯಾಯಾಲಯದಲ್ಲಿ ಅವರು ಮೊಕದ್ದಮೆಹೂಡಿದ್ದರು. ಇದರ ತೀರ್ಪು ಹೊರ ಬರುವುದು ಬಾಕಿಯಿತ್ತು. ಅದು ಹೊರಬಿದ್ದ ಕೂಡಲೇ ತೀರ್ಪನ್ನು ತಮಗೆ ತಿಳಿಸುವಂತೆ ಶಿವ್‌ಟಾರ್ಕರ್ ಅವರನ್ನು ಕೋರಿದ್ದರು.

ಇತ್ತ ಮಹಾತ್ಮಾಗಾಂಧೀ, ವಲಭಭಾಯಿ ಪಟೇಲ್, ಜವಹರಲಾಲ ನೆಹರು ಹಾಗೂ ಶ್ರೀಯುತ ಪ್ರಭಾಶಂಕರ ಪಟ್ಟಾಣಿ ಅವರು ಶಿಮ್ಲಾದಲ್ಲಿ ವೈಸ್‌ರಾಯ್ ಅವರನ್ನು ಭೇಟಿಯಾಗಿ ಉದ್ಭವಿಸಿದ್ದ ಸಮಸ್ಯೆಗೆ ಪರಿಹಾರ ಕಂಡುಕೊಂಡರು. ಅನಂತರ ತಕ್ಷಣವೇ ಬೊಂಬಾಯಿಗೆ ಹೊರಟ ಗಾಂಧೀ, ಲಂಡನ್ನಿಗೆ ತೆರಳಲಿರುವ ಮುಂದಿನ ಹಡಗಿನಲ್ಲಿ ಹೊರಡಲು ತಯಾರಿ ನಡೆಸಿದರು. ಸರೋಜಿನಿ ನಾಯ್ಡು, ಪಂಡಿತ್ ಮಾಳವೀಯ ಹಾಗೂ ಇತರ ಕೆಲವರೊಂದಿಗೆ ಮಹಾತ್ಮಾ ಗಾಂಧೀಜಿಯವರು ಆಗಸ್ಟ್ ೨೯ ರಂದು ಹೊರಟು, ೧೯೩೧ರ ಸೆಪ್ಟೆಂಬರ್ ೧೨ ರಂದು ಲಂಡನ್ನನ್ನು ತಲುಪಿದರು.

ದುಂಡು ಮೇಜಿನ ಸಮಾವೇಶದ ಎರಡನೆಯ ಸುತ್ತು ೧೯೩೧ರ ಸೆಪ್ಟೆಂಬರ್ ೭ ರಂದು ಪ್ರಾರಂಭವಾಗಿತ್ತು. ಈ ಭಾರಿ ಭಾಗವಹಿಸುತ್ತಿದ್ದಂತಹ ಪ್ರತಿನಿಧಿಗಳ ಸಂಖ್ಯೆಯೂ ಹೆಚ್ಚಿತ್ತು. ಮುಸ್ಲಿಂ ಸಂಘಟನೆಯ ನಾಯಕರಾದ ಸರ್ ಮಹಮದ್ ಇಕ್ಬಾಲ್, ಕ್ರೈಸ್ತರ ಪ್ರತಿನಿಧಿಯಾಗಿದ್ದ ಸರ್. ಎಸ್.ಕೆ.ದತ್ತ, ಹಣಕಾಸು ವ್ಯವಹಾರಸ್ಥರಾಗಿದ್ದಂತಹ ಜೆ.ಟಿ.ಬರ್ಲಾ, ಸನಾತನಿ ಸುಧಾರಕರಾಗಿದ್ದ ಪಂಡಿತ್ ಮಾಳವೀಯಾ, ಭಾರತದ ಕೋಗಿಲೆ ಎಂದೇ ಪ್ರಸಿದ್ಧಿಯಾಗಿದ್ದ ಶ್ರೀಮತಿ ಸರೋಜಿನಿ ನಾಯ್ಡು ಹಾಗೂ ಸರ್ ಅಲಿ ಇಮಾಂ ಮುಂತಾದವರು ಭಾಗವಹಿಸಿದ್ದರು. ಈ ಸಮಾವೇಶದ ಮುಖ್ಯ ಅಂಶವೆಂದರೆ ನಿಗೂಢ ವ್ಯಕ್ತಿತ್ವದ ಶ್ರೀ ಮಹಾತ್ಮಗಾಂಧೀಜಿಯವರ ಭಾಗವಹಿಸುವಿಕೆ. ಆದರೆ ದುಂಡು ಮೇಜಿನ ಮೊದಲನೆಯ ಸಮಾವೇಶದ ಭಾಗ ಡೆನ್ಮಾರ್ಕನ ರಾಜಕುಮಾರನ ಅನುಪಸ್ಥಿತಿಯಿಂದಾಗಿ ಒಡೆಯನಿಲ್ಲದ ಮನೆಯಂತಾಗಿತ್ತು.

ಈ ಸಮಾವೇಶ ಆರಂಭ ಆಗುವ ಕೆಲ ದಿನಗಳ ಮೊದಲು ಬ್ರಿಟನ್ನಿನಲ್ಲಿ ಆದ ಬದಲಾವಣೆಯಲ್ಲಿ ಕಾರ್ಮಿಕ ಪಕ್ಷದ ಸರ್ಕಾರ ಕೊನೆಗೊಂಡು, ರಾಷ್ಟ್ರೀಯ ಸರ್ಕಾರದ ಆಡಳಿತ ಆರಂಭವಾಗಿತ್ತು. ಆದರೆ ಪ್ರಧಾನ ಮಂತ್ರಿಯಾಗಿದ್ದ ರ‍್ಯಾಮ್ಸೇ ಮ್ಯಾಕ್‌ಡೊನಾಲ್ಡ್, ಅವರೇ ಅಧಿಕಾರದಲ್ಲಿ ಮುಂದುವರಿದ್ದಿದ್ದರು. ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ವೆಡ್ಜವುಡ್‌ಬೆನ್ ಅವರನ್ನು ಬದಲಿಸಿ ಸರ್. ಸ್ಯಾಮುಯಲ್ ಹೋರ್ ಅವರನ್ನು ನೇಮಕ ಮಾಡಲಾಗಿತ್ತು. ಕನ್ಸರ್ವೇಟಿವ್ ಪಕ್ಷದ ನಾಯಕರಾದ ಚರ್ಚಿಲ್ ಮುಂತಾದವರು ಭಾರತಕ್ಕೆ ಅಧಿಕಾರ ಹಸ್ತಾಂತರ ಮಾಡುವುದನ್ನು ತೀವ್ರವಾಗಿ ವಿರೋಧಿಸಿದ್ದರು.

ಈ ಸಮಾವೇಶದ ಪ್ರಮುಖ ಕಾರ್ಯವೆಂದರೆ ಒಕ್ಕೂಟ ರಚನಾ ಸಮಿತಿ ಹಾಗೂ ಅಲ್ಪಸಂಖ್ಯಾತರ ಸಮಿತಿಯ ಕೆಲಸಗಳನ್ನು ಪೂರ್ಣಗೊಳಿಸುವುದಾಗಿತ್ತು. ಆಯಾ ಸಮಿತಿಗಳು ತಯಾರಿಸಿದ್ದ ವರದಿಯ ಪರಿಷ್ಕರಣೆಯನ್ನು ಮಾಡುವುದು ಈ ಸಮಾವೇಶದ ಮೊದಲನೆಯ ಸುತ್ತಿನ ಕಾರ್ಯವಾಗಿತ್ತು. ಸೆಪ್ಟೆಂಬರ್ ೧೫, ೧೯೩೧ರಂದು ಮಹಾತ್ಮ ಗಾಂಧಿಯವರು ತಮ್ಮ ಮೊತ್ತ ಮೊದಲನೆಯ ಭಾಷಣವನ್ನು ಒಕ್ಕೂಟ ರಚನಾ ಸಮಿತಿಯ ಎದುರು ನೀಡಿದ್ದರು. ಭಾರತದ ಎಲ್ಲಾ ವರ್ಗದ ಜನರ ಹಿತಾಸಕ್ತಿಯನ್ನು ಗಮನದಲ್ಲಿ ಇರಿಸಿಕೊಂಡಿರುವುದೇ ಕಾಂಗ್ರೆಸ್ ಎಂದು ಅವರು ಒತ್ತಿ ಒತ್ತಿ ಹೇಳಿದರು. ಅದರಲ್ಲಿ ಮುಸಲ್ಮಾನರು ಕೂಡ

ಸೇರಿದ್ದಾರೆ ಎಂದವರು ಹೇಳಿದರು. ಏಕೆಂದರೆ ಅದರ ಕೆಲ ಅಧ್ಯಕ್ಷರು ಮುಸಲ್ಮಾನರಾಗಿದ್ದಾರೆ ಹಾಗೂ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಕೂಡ ಮುಸಲ್ಮಾನರಿದ್ದಾರೆ ಎಂಬ ಅಂಶವನ್ನು ಒತ್ತಿ ಒತ್ತಿ ಹೇಳಿದರು. ಅದು ಹಿಂದುಳಿದ ವರ್ಗಗಳ ಹಿತಾಸಕ್ತಿಯ ಬಗ್ಗೆಯೂ ಗಮನ ಹರಿಸಿದೆ. ಏಕೆಂದರೆ ಅಸ್ಪೃಶ್ಯತೆಯನ್ನು ತೊಡೆದು ಹಾಕುವುದು ಕೂಡ ಅದರ ರಾಜಕೀಯ ಉದ್ದೇಶದಲ್ಲಿ ಇದೆ ಎಂದು ನುಡಿದರು. "ಈಗಲೂ ಕೂಡ ರಾಜರ ಆಡಳಿತಕ್ಕೆ ಒಳಪಟ್ಟಿರುವ ರಾಜ್ಯಗಳ ಆಂತರಿಕ ಹಾಗೂ ಆಡಳಿತದ ವಿಷಯಗಳಲ್ಲಿ ಕಾಂಗ್ರೆಸ್ ಹಸ್ತಕ್ಷೇಪ ಮಾಡುತ್ತಿಲ್ಲ" ಆದ್ದರಿಂದ ಅದು ಆ ರಾಜರುಗಳ ಹಿತಾಸಕ್ತಿಯ ಬಗ್ಗೆಯೂ ಗಮನ ಹರಿಸುತ್ತಿದೆ ಎಂದು ಅವರು ಅಲ್ಲಿನ ರಾಜರುಗಳಿಗೆ ತಿಳಿಸಿದರು. ಅದು ಮಹಿಳೆಯರಿಗೂ ಸಮಾನ ಆದ್ಯತೆ ನೀಡುತ್ತದೆ. ಏಕೆಂದರೆ ಡಾ. ಆ್ಯನಿ ಬೆಸೆಂಟ್ ಹಾಗು ಸರೋಜಿನಿ ನಾಯ್ಡು ಅವರು ಕೂಡ ಅದರ ಅಧ್ಯಕ್ಷರುಗಳಾಗಿದ್ದರು ಎಂಬ ಅಂಶವನ್ನು ಅವರು ಹೇಳಿದರು. ಇಂತಹ ಪರಿಸ್ಥಿತಿಯಲ್ಲಿ ತಾವು ಕಾಂಗ್ರೆಸ್ ಪಕ್ಷದ ಏಕೈಕ ಪ್ರತಿನಿಧಿಯಾಗಿರುವುದರಿಂದ ತಾವೇ ಇಡೀ ಭಾರತ ದೇಶದ ಏಕೈಕ ಪ್ರತಿನಿಧಿಯೆಂದೂ ಹೇಳಿದರು.

ಗಾಂಧೀಯವರ ಈ ಭಾಷಣವನ್ನು ಆಲಿಸಿದ ಅಂಬೇಡ್ಕರ್ ಅವರಿಗೆ ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿದೆ ಎಂಬುದರ ಅರಿವಾಗಿ ಹೋಗಿತ್ತು. ಒಕ್ಕೂಟ ರಚನಾ ಸಮಿತಿಯ ಸಭೆಯಲ್ಲಿ ಅಂದೇ ಡಾ. ಅಂಬೇಡ್ಕರ್ ಅವರೂ ತಮ್ಮ ಮೊತ್ತ ಮೊದಲನೆಯ ಭಾಷಣ ಮಾಡಿದರು. ಅಲ್ಲದೆ, ರಾಜರಿಗೆ ಹಾಗೂ ಯುವರಾಜರಿಗೆ ಅವರವರ ರಾಜ್ಯಗಳಲ್ಲಿ ಅವರು ಮನಬಂದಂತೆ ಆಡಳಿತ ನಡೆಸಲು ತಾವು ಬಿಡುವುದಿಲ್ಲ ಎಂಬ ಅಂಶ ಸ್ಪಷ್ಟಪಡಿಸಿದರು. ಇದರಿಂದ ಬಿಕನೆರ್‌ನ ಮಹಾರಾಜ ಕೆರಳಿ ಹಾಗಾದರೆ ರಾಜ್ಯಗಳು ಕೂಡ ಖಾಲಿ ಚೆಕ್ಕುಗಳಿಗೆ ಸಹಿ ಹಾಕಲು ಸಾಧ್ಯವಿಲ್ಲ ಎಂದರು. ಆದರೆ ಈ ಸಮಿತಿಗೆ ಸೇರ್ಪಡೆ ಆಗುವ ಮೊದಲು ರಾಜ್ಯಗಳು ತನ್ನ ಎಲ್ಲ ಪ್ರಜೆಗಳಿಗೆ ಒಂದು ಒಳ್ಳೆ ಜೀವನ ನಡೆಸಲು ಸಾಕಾಗುವಷ್ಟು ಹಣಕಾಸಿನ ಬಲ ತನ್ನ ಬಳಿ ಇರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು ಎಂಬ ನಿಯಮವನ್ನು ಅಂಬೇಡ್ಕರ್ ಪ್ರಸ್ತಾಪಿಸಿದರು. ಅದಕ್ಕಿಂತ ಪ್ರಮುಖವಾದ ಷರತ್ತು ಒಂದನ್ನು ಈ ರಾಜ್ಯಗಳ ಮುಂದೆ ಡಾ. ಅಂಬೇಡ್ಕರ್ ಇರಿಸಿದರು. ಶಾಸನ ಸಭೆಗಳಿಗೆ ನಾಮಕರಣಗೊಳ್ಳುವ ಸದಸ್ಯರು ಜವಾಬ್ದಾರಿಯುತವಾಗಿ ನಡೆದುಕೊಳ್ಳಲಾರರು ಎಂಬುದು ಅವರ ನಂಬಿಕೆ ಆಗಿತ್ತು. ಬಹುಸಂಖ್ಯಾತ ಸದಸ್ಯರ ಆಡಳಿತವು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂಬ ಸುಳ್ಳು ಅಭಿಪ್ರಾಯವನ್ನು ಅದು ಹೊರಜಗತ್ತಿಗೆ ನೀಡುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ನೇಮಕಾತಿ ಮಾಡುವ ಪ್ರಕ್ರಿಯೆಯಿಂದ ಒಂದು ಜವಾಬ್ದಾರಿಯುತವಾದ ಸರ್ಕಾರದ ರಚನೆ ಸಾಧ್ಯವಿಲ್ಲ ಎಂದೂ ಹೇಳಿದರು. ಅಂತೆಯೇ ಭೂ ಮಾಲೀಕರು ಕೂಡ ತಮಗೆ ವಿಶೇಷವಾದ ಪ್ರಾತಿನಿಧ್ಯ ನೀಡಬೇಕು ಎಂಬ ಬೇಡಿಕೆ ಸಲ್ಲಿಸಿದ್ದುದನ್ನು ಪ್ರಸ್ತಾಪಿಸಿ ಅಂತಹ ಪ್ರಾತಿನಿಧ್ಯವನ್ನು ಕೂಡ ಅಂಬೇಡ್ಕರ್ ವಿರೋಧಿಸಿದರು. ಏಕೆಂದರೆ ಭೂಮಾಲೀಕರು ಸಂಪ್ರದಾಯವಾದಿಗಳ ಪರ ನಿಲ್ಲುತ್ತಿದ್ದಾರೆ ಹಾಗೂ ಅದರಿಂದ ಸ್ವತಂತ್ರ ಹಾಗು ಅಭಿವೃದ್ಧಿಯ ನಿಟ್ಟಿನಲ್ಲಿ ಸಾಗುವ ರಾಷ್ಟ್ರಕ್ಕೆ ಹಿನ್ನಡೆ ಉಂಟು ಮಾಡುತ್ತಾರೆ ಎಂದವರು ಭಾವಿಸಿದ್ದರು. ಎಲ್ಲರಿಗೂ ತಿಳಿದಂತೆ ದೇಶದ ಜನರ ಹಕ್ಕೊತ್ತಾಯಕ್ಕಾಗಿ ನಡೆದ ಮೊದಲ ಹಾಗೂ ಅತ್ಯುತ್ತಮ ಭಾಷಣ ಇದಾಗಿತ್ತು.

ಇವರ ಈ ರೀತಿಯ ಬಲವಾದ ದೃಷ್ಟಿಕೋನ ರಾಜರುಗಳಿಗೆ ನುಂಗಲಾರದ ತುತ್ತಾಯಿತು. ಅಂತೆಯೇ ಭೂಮಾಲೀಕರು ಹಾಗೂ ಅವರ ಬೆಂಬಲಿಗರಿಗೆ ಕೂಡ ಇದು ಅತ್ಯಂತ ದೊಡ್ಡ ಅಘಾತವಾಯಿತು. ಏಕೆಂದರೆ ಅವರು ಒಕ್ಕೂಟ ರಚನಾ ಸಮಿತಿಗೆ ನೇಮಕಾತಿಯ ಮೂಲಕ ಪ್ರತಿನಿಧಿಗಳನ್ನು ಆಯ್ಕೆ

ಮಾಡಲು ಉತ್ಸುಕರಾಗಿದ್ದರು. ಡಾ. ಅಂಬೇಡ್ಕರ್ ಅವರ ಭಾಷಣದ ನಂತರ ಆದ ಪರಿಣಾಮ ಎಂದರೆ ಪ್ರತಿಯೋರ್ವ ಭಾಷಣಕಾರನೂ, ಇವರ ಭಾಷಣವನ್ನು ಬೆಂಬಲಿಸಿ ಅಥವಾ ಖಂಡಿಸಿ ಮಾತನಾಡಿದರು. ಹಲವರು ಅಂಬೇಡ್ಕರ್ ಅವರ ದೃಷ್ಟಿ ಅತ್ಯಂತ ಕ್ರಾಂತಿಕಾರಿ ಹಾಗು ಮೂಲಭೂತ ಬದಲಾವಣೆಯನ್ನು ತರುವಂತಹುದು ಎಂದು ಅಭಿಪ್ರಾಯಪಟ್ಟರು.

ಮಾರನೆಯ ದಿನ ಗಾಂಧಿಯವರು ತಮ್ಮ ದೃಷ್ಟಿಯಲ್ಲಿ ಇಲ್ಲಿಗೆ ಆಗಮಿಸಿರುವ ಪ್ರತಿನಿಧಿಗಳು ದೇಶದ ಜನರಿಂದ ಆಯ್ಕೆ ಆದವರಲ್ಲ ಬದಲಾಗಿ ಬ್ರಿಟಿಷ್ ಸರ್ಕಾರದ ಆಯ್ಕೆ ಎಂಬ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಲಂಡನ್ನಿಗೆ ತೆರಳುವ ಮುನ್ನ ಈ ವಿಷಯ ಗಾಂಧಿಯವರಿಗೆ ತಿಳಿದಿರಲಿಲ್ಲ ಎಂದೇನೂ ಅಲ್ಲ. ಆದರೆ ಇದೀಗ ಅವರು ಎಲ್ಲ ಸದಸ್ಯರನ್ನು ಛೇಡಿಸಲು ಆರಂಭಿಸಿದರು. ಇನ್ನೂ ಒಕ್ಕೂಟದ ಪ್ರಾತಿನಿಧ್ಯದ ವಿಷಯಕ್ಕೆ ಬಂದರೆ ಅವರು ಅಂಬೇಡ್ಕರ್ ಅವರು ಹೇಳಿರುವ ಪ್ರಸ್ತಾಪಕ್ಕೆ ತನ್ನ ಸಹಾನುಭೂತಿ ಸೂಚಿಸಿದರು. ಆದರೆ ತಮ್ಮ ಒಪ್ಪಿಗೆ ಇದ್ದದ್ದು ಮಾತ್ರ ಗೆವಿನ್ ಜೋನ್ಸ್ ಹಾಗೂ ಸರ್ ಸುಲ್ತಾನ್ ಅಹ್ಮದ್ ಅವರ ಅಭಿಪ್ರಾಯಕ್ಕೆ ಎಂದು ಅವರು ಹೇಳಿದರು. ಅವರು ರಾಜರ ಆಡಳಿತಕ್ಕೆ ತಮ್ಮ ಬೆಂಬಲ ಸೂಚಿಸಿದ್ದರು. ಒಕ್ಕೂಟದ ಪ್ರಸ್ತಾಪಕ್ಕೆ ಗಾಂಧೀಯವರು ತಮ್ಮ ಬೆಂಬಲ ವ್ಯಕ್ತಪಡಿಸಿದರೂ ಅವರು ರಾಜರುಗಳ ಅಭಿಪ್ರಾಯಕ್ಕೆ ಬೆಂಬಲ ವ್ಯಕ್ತಪಡಿಸಿದರೇ ಹೊರತು ಸಾಮಾನ್ಯ ಜನರ ಆಡಳಿತಕ್ಕಲ್ಲ. ಅದಕ್ಕೆ ಅವರು ನೀಡಿದ ಕಾರಣ ಈ ಕೆಳಗಿನಂತೆ ಇತ್ತು "ವಿನಯಪೂರ್ವಕವಾಗಿ ಹೇಳಬೇಕೆಂದರೆ ಅವರು ತಮ್ಮ ತಮ್ಮ ರಾಜ್ಯಕ್ಕೆ ಏನು ಮಾಡಬೇಕು, ಏನು ಮಾಡಬಾರದು ಎಂದು ಹೇಳುವ ಯಾವುದೇ ಅಧಿಕಾರ ನಮಗಿಲ್ಲ" ಎಂದರು.

ಇನ್ನೂ ಗಾಂಧಿ ಗಮನ ಹರಿಸಿದ್ದು ಸದಸ್ಯರೆಲ್ಲರನ್ನು ಕಾಡುತ್ತಿದ್ದ ಅತಿ ಪ್ರಮುಖವಾದ ಸಮಸ್ಯೆಯತ್ತ. ಅನೇಕ ಸಮುದಾಯಗಳು ತಮಗೆ ವಿಶೇಷ ಪ್ರಾತಿನಿಧ್ಯ ನೀಡಬೇಕು ಎಂಬ ಬೇಡಿಕೆ ಸಲ್ಲಿಸಿದ್ದವು. ಅವರು ಅದಕ್ಕೆ ಈ ರೀತಿ ಪ್ರತಿಕ್ರಿಯಿಸಿದರು. "ಹಿಂದೂ ಮುಸಲ್ಮಾನ–ಸಿಖ್ಖರ–ಸಮಸ್ಯೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ತನ್ನದೇ ಆದ ನಿಲುವನ್ನು ಸ್ಪಷ್ಟವಾಗಿ ತಳೆದಿದೆ. ಇದಕ್ಕೆ ಅದರದೇ ಆದ ಐತಿಹಾಸಿಕ ಕಾರಣಗಳಿವೆ. ಆದರೆ ಈ ಕಾರಣಗಳಿಗಾಗಿ ತನ್ನ ಸಿದ್ಧಾಂತಗಳನ್ನು ಬೇರೆಯಾರಿಗೂ ಅದನ್ನು ವಿಸ್ತರಿಸಲು ಕಾಂಗ್ರೆಸ್ ಸಿದ್ಧವಿಲ್ಲ. ಅವರ ವಿಶೇಷ ಬೇಡಿಕೆಗಳಿಗೂ ನಾವು ಕಿವಿಗೊಟ್ಟಿದ್ದೇವೆ. ಇನ್ನು ಅಸ್ಪೃಶ್ಯರ ವಿಷಯಕ್ಕೆ ಬಂದರೆ ಡಾ. ಅಂಬೇಡ್ಕರ್ ಯಾವ ವಿಷಯವನ್ನು ಮನವರಿಕೆ ಮಾಡಿಕೊಡಲು ಹೊರಟಿದ್ದಾರೆ ಎಂಬುದೇ ನನಗೆ ಸ್ಪಷ್ಟವಾಗುತ್ತಿಲ್ಲ. ಆದರೆ ಅಸ್ಪೃಶ್ಯರ ಹಿತಾಸಕ್ತಿ ಸಂಬಂಧಿಸಿದಂತೆ ಅದು ಎಂದೆಂದಿಗೂ ಡಾ. ಅಂಬೇಡ್ಕರ್ ಅವರೊಂದಿಗೆ ಇರುತ್ತದೆ. ಭಾರತ ದೇಶದ ಉದ್ದಗಲಕ್ಕೆ ಇರುವ ಎಲ್ಲಾ ಜನರ ಹಿತಾಸಕ್ತಿಯ ಬಗೆಗೆ ಇರುವಷ್ಟೆ ಕಾಳಜಿಯನ್ನು ಅಸ್ಪೃಶ್ಯರ ಹಿತಾಸಕ್ತಿಯ ಬಗ್ಗೆಯೂ ಕಾಂಗ್ರೆಸ್ ಹೊಂದಿದೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಆದ್ದರಿಂದ ಯಾವುದೇ ರೀತಿಯ ವಿಶೇಷ ಪ್ರಾತಿನಿಧ್ಯವನ್ನು ನಾನು ವಿರೋಧಿಸುತ್ತೇನೆ."

ಇದು ಮತ್ತೇನೂ ಆಗಿರದೇ ಒಂದು ಯುದ್ಧದ ಘೋಷಣೆಯನ್ನೇ ಮಾಡಿದಂತಾಯಿತು. ಇದು ಗಾಂಧೀ ಹಾಗೂ ಕಾಂಗ್ರೆಸ್ ಪಕ್ಷ ಅಸ್ಪೃಶ್ಯರ ವಿರುದ್ಧ ಘೋಷಿಸಿರುವ ಯುದ್ಧ ಎಂದೇ ಅಂಬೇಡ್ಕರ್ ಭಾವಿಸಿದರು. "ಗಾಂಧೀಯವರ ಈ ಘೋಷಣೆಯಿಂದ ನಾನು ಅಂದುಕೊಂಡಂತೆಯೇ ಆಗಿದೆ. ಅಲ್ಪಸಂಖ್ಯಾತರ ಸಮಿತಿಯಲ್ಲಿ ಚರ್ಚಿಸಲಾಗುವ ಅತ್ಯಂತ ಪ್ರಮುಖ ಪ್ರಶ್ನೆಗೆ ಗಾಂಧಿಯವರು ಯಾವ ರೀತಿಯ ಉತ್ತರ ನೀಡುತ್ತಾರೆ ಎಂದು ನಾನು ಆಗಲೇ ಊಹಿಸಿದ್ದೆ. ಇದೀಗ ನನ್ನ ಊಹೆ ನಿಜವಾಗಿದೆ" ಎಂದರು.

ಸೆಪ್ಟೆಂಬರ್ ೧೮ರಂದು ಒಕ್ಕೂಟ ರಚನಾ ಸಮಿತಿಯ ಸಭೆಯಲ್ಲಿ ಎದ್ದು ನಿಂತ ಅಂಬೇಡ್ಕರ್ ನೇರವಾಗಿ ಗಾಂಧೀಯವರಿಗೆ ಇದುವರೆಗೂ ತಾವು ಸೂಚಿಸಿರುವ ಅಭಿಪ್ರಾಯ ತಮ್ಮ ಸ್ವಂತದ್ದೋ

ಅಥವಾ ಇಡೀ ಕಾಂಗ್ರೆಸ್ ಪಕ್ಷದ್ದೋ ಎಂದು ಅವರು ಪ್ರಶ್ನಿಸಿದರು. ದಿವಾನ ಬಹದ್ದೂರ್ ರಾಮಸ್ವಾಮಿ ಮೊದಲಿಯಾರ್ ಅವರು ಭಾರತದಾದ್ಯಂತ ಇರುವ ಎಲ್ಲಾ ಸಾರ್ವಜನಿಕ ನೌಕರರೂ, ರಾಜಕೀಯ ಇಲಾಖೆಗಳಲ್ಲಿ ಇರುವವರು, ಎಲ್ಲರೂ ಕೂಡ ನ್ಯಾಯ ಸಮ್ಮತವಾಗಿಯೇ ನಡೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು. ತತ್‌ಕ್ಷಣ ಎದ್ದು ನಿಂತ ಅಂಬೇಡ್ಕರ್ ಹಾಗಿದ್ದ ಪಕ್ಷದಲ್ಲಿ ತಾವು ಜವಾಬ್ದಾರಿಯು ಸರ್ಕಾರಕ್ಕೆ ಬೇಡಿಕೆ ಸಲ್ಲಿಸುತ್ತಿರುವುದಾದರೂ ಏಕೆ ಎಂದು ಪ್ರಶ್ನಿಸಿದರು. ತಮ್ಮ ಭಾಷಣದಲ್ಲಿ ಮಾಳವೀಯ ಅವರು ಎಲ್ಲರು ತಾಳ್ಮೆಯಿಂದ ಇರುವಂತೆ ಮನವಿ ಮಾಡಿದರು. ಮಾತ್ರವಲ್ಲ ರಾಜರಿಗೆ ನೀಡಬೇಕಾದ ಗೌರವಕ್ಕೆ ಚ್ಯುತಿ ಮಾಡಬಾರದು ಎಂದರು. ಒಂದುವೇಳೆ ಸರ್ಕಾರಗಳು ಜವಾಬ್ದಾರಿಯುತವಾಗಿ ನಡೆದುಕೊಂಡು, ಅಗತ್ಯವಿದ್ದಷ್ಟು ಹಣವನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ವ್ಯಯಿಸಿದ್ದಿದ್ದರೆ, ಈ ವೇಳೆಗೆ ಶೋಷಿತ ವರ್ಗ ಎಂಬುದೇ ಇರುತ್ತಿರಲಿಲ್ಲ ಎಂದು ನುಡಿದರು. ಆಗ ಎದ್ದು ನಿಂತ ಅಂಬೇಡ್ಕರ್ ಖುದ್ದು ತಮ್ಮ ಉದಾಹರಣೆ ನೀಡಿ ತಾನು ಎಷ್ಟೇ ವಿದ್ಯಾವಂತನಾಗಿದ್ದರೂ ಇನ್ನೂ ಅಸ್ಪೃಶ್ಯನಾಗಿಯೇ ಉಳಿದಿರುವುದಾಗಿ ಹೇಳಿದರು. ಡಾ. ಅಂಬೇಡ್ಕರ್ ಅವರಿಗೆ ಉತ್ತರಿಸುತ್ತಾ ತಮ್ಮ ಭಾಷಣದಲ್ಲಿ ಸರ್. ಅಕ್ಬರ್ ಹೈದರಿ ಈ ರೀತಿ ನುಡಿದರು. "ಡಾ. ಅಂಬೇಡ್ಕರ್ ಅವರ ಭಾಷಣಗಳು ನೈಜ ಪರಿಸ್ಥಿತಿಯನ್ನು ಅವಲೋಕಿಸುವಲ್ಲಿ ವಿಫಲವಾಗಿವೆ" ಇದಕ್ಕೆ ತಟ್ಟನೇ ಅಂಬೇಡ್ಕರ್ ಮಾರುತ್ತರ ನೀಡಿದರು. "ನಾನು ಎಂದಿಗೂ ನೈಜ ಪರಿಸ್ಥಿತಿಯನ್ನು ಅವಲೋಕಿಸದಿರುವ ತಪ್ಪು ಮಾಡಿಲ್ಲ".

ಒಕ್ಕೂಟ ಸಂವಿಧಾನದ ರಚನೆಯ ಬಗೆಗೆ ಚರ್ಚೆ ಮಾಡುವಾಗ ಯಾರೂ ಕೂಡ ಈ ಒಕ್ಕೂಟ ಸಮಿತಿಯ ರಚನೆಗೆ ಕಾಲಮಿತಿಯ ನಿಗದಿಯನ್ನು ಕುರಿತು ಮಾತನಾಡಲಿಲ್ಲ. ಆ ವಿಷಯವನ್ನು ಕೂಡ ಡಾ. ಅಂಬೇಡ್ಕರ್ ಅವರೇ ಪ್ರಸ್ತಾಪಿಸಿದರು. "ಭಾರತದ ಸ್ವತಂತ್ರ ಸರ್ಕಾರದ ರಚನೆಗೆ ಒಳಪಡಲು ಎಲ್ಲ ರಾಜರುಗಳು ಆಸಕ್ತಿ ತೋರುವವರೆಗೂ ಈ ಪ್ರಸ್ತಾವನೆ ಶೀತ ಪೆಟ್ಟಿಗೆಯಲ್ಲೇ ಇಡಬೇಕು ಎಂದು ಯಾವ ಭಾರತೀಯನೂ ಬಯಸುವುದಿಲ್ಲ" ಎಂದು ಡಾ. ಅಂಬೇಡ್ಕರ್ ನುಡಿದರು.

ಈ ಚರ್ಚೆಗಳು ನಡೆಯುವ ಸಮಯದಲ್ಲಿ ಸಾಕಷ್ಟು ವಾಗ್ವಾದಗಳು, ಹಲವಾರು ಅಭಿಪ್ರಾಯಗಳು ಬದಲಾವಣೆಗಳು ಎಲ್ಲವೂ ನಡೆದವು. ಅಂತೆಯೇ ಇಡೀ ವಿಶ್ವದ ಸಂವಿಧಾನಗಳ ಚರಿತ್ರೆಯ ಪರಿಶೀಲನೆ ಹಾಗೂ ಸ್ವತಂತ್ರ ಭಾರತದ ಪರಿಕಲ್ಪನೆ ಕೂಡ ನಡೆಯಿತು. ಈ ವಿಷಯಗಳಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣಗಳಲ್ಲಿ ಬಹಳಷ್ಟು ವಿಷಯಗಳು, ಆಸಕ್ತಿಕರ ಅಂಶಗಳು ಹಾಗೂ ಅತ್ಯಮೂಲ್ಯ ಸಲಹೆಗಳು ತುಂಬಿದ್ದವು. ಒಬ್ಬ ರಾಜಕೀಯ ವ್ಯಕ್ತಿ, ಒಬ್ಬ ವಕೀಲ, ಒಬ್ಬ ಸಂವಿಧಾನ ಶಿಲ್ಪಿ, ಒಬ್ಬ ಪ್ರಾಧ್ಯಾಪಕ, ಕೆಳವರ್ಗದ ಜನರ ಪರ ವಾದಿಸುವವನು ಹೀಗೆ ವ್ಯಕ್ತಿತ್ವದ ಹಲವು ಮಜಲುಗಳ ಈ ವ್ಯಕ್ತಿ ತಮ್ಮ ಪರಿಚಯವನ್ನು ಸಮಾವೇಶದಲ್ಲಿ ನೆರೆದಿದ್ದ ಗಣ್ಯರಿಗೆ ಮಾಡಿಕೊಟ್ಟಿದ್ದರು.

ಈ ಹೊತ್ತಿಗೆ ೧೯೩೧ರ ಸೆಪ್ಟೆಂಬರ್ ತಿಂಗಳಿನ ೩ನೆಯ ವಾರವು ಕೂಡ ಮುಗಿದಿತ್ತು. ಅಲ್ಪಸಂಖ್ಯಾತರ ಸಮಿತಿಯು ಸೆಪ್ಟೆಂಬರ್ ೨೮ ರಂದು ತನ್ನ ಕಾರ್ಯಾರಂಭ ಮಾಡಲು ಉದ್ದೇಶಿಸಿತ್ತು. ಈ ದಿನದ ಹಿಂದಿನ ಮುಸ್ಸಂಜೆ ಗಾಂಧೀಜಿಯವರ ಪುತ್ರನಾದಂತಹ ದೇವದಾಸ್ ಗಾಂಧೀ, ಡಾ. ಅಂಬೇಡ್ಕರ್ ಅವರನ್ನು ಭೇಟಿ ಮಾಡುವ ಸಲುವಾಗಿ ಅವರ ನಿವಾಸಕ್ಕೆ ಬಂದರು. ಮಹಾತ್ಮ ಹಾಗೂ ಅಂಬೇಡ್ಕರ್ ನಡುವಿನ ಭೇಟಿಯ ಮಾರನೆಯ ಬೆಳಿಗ್ಗೆ ೯ ರಿಂದ ೧೨ ಘಂಟೆಯವರೆಗೆ ಸರೋಜಿನಿ ನಾಯ್ಡು ಅವರ ನಿವಾಸದಲ್ಲಿ ನಿಗದಿಯಾಯಿತು. ಅಂತೆಯೇ ಮಾರನೆಯ ಬೆಳಿಗ್ಗೆ ಡಾ. ಅಂಬೇಡ್ಕರ್ ಅವರು ಗಾಂಧೀಯವರನ್ನು ಭೇಟಿಯಾಗಿ ಅವರ ಮುಂದೆ ತಮ್ಮ ಬೇಡಿಕೆಗಳನ್ನು ಇರಿಸಿದರು. ಆದರೆ ಈ ಬೇಡಿಕೆಗಳಿಗೆ ಮುಕ್ತವಾಗಿ

ಸ್ಪಂದಿಸಲು ಗಾಂಧೀ ಸಿದ್ದರಿರಲಿಲ್ಲ. ಡಾ. ಅಂಬೇಡ್ಕರ್ ಅವರ ಬೇಡಿಕೆಗಳಿಗೆ ಇತರರು ಒಪ್ಪಿಗೆ ಸೂಚಿಸಿದರೆ, ತಾವು ಕೂಡ ಒಪ್ಪುವುದಾಗಿ ಗಾಂಧೀ ನುಡಿದರು.

ಸೆಪ್ಟೆಂಬರ್ ೨೮, ೧೯೩೧ರಂದು ಅಲ್ಪಸಂಖ್ಯಾತರ ಉಪಸಮಿತಿಯು ಮೊದಲ ಬಾರಿಗೆ ಸಭೆಸೇರಿತು. ಇದರ ಅಧ್ಯಕ್ಷರು "ಅಲ್ಪಸಂಖ್ಯಾತರು ಭಾರತದಲ್ಲಿ ಎದುರಿಸುತ್ತಿರುವ ಸಮಸ್ಯೆ ನಮ್ಮನ್ನೆಲ್ಲಾ ದಂಗು ಬಡಿಸಿದೆ. ಆದ್ದರಿಂದ ಸರ್ಕಾರವು ತನ್ನದೇ ಆದ ನಿರ್ಧಾರ ಕೈಗೊಳ್ಳಬೇಕು. ಏಕೆಂದರೆ ಕೆಲ ಪ್ರತಿನಿಧಿಗಳು ಯಾವ ನಿರ್ಧಾರಕ್ಕೂ ಒಪ್ಪುತ್ತಿಲ್ಲ ಎಂದು ಕೆಲವರು ಸೂಚಿಸಿದ್ದಾರೆ. ಆದರೆ ಸರ್ಕಾರದ ಮಧ್ಯಸ್ಥಿಕೆ ಕೂಡ ಕೆಲವರಿಗೆ ಒಪ್ಪಿಗೆ ಆಗದೇ ಇರಬಹುದು" ಎಂದರು. ಆಗ ಮಧ್ಯಪ್ರವೇಶ ಮಾಡಿದ ಆಘಾಖಾನ್ 'ಈ ರಾತ್ರಿ ಮಹಾತ್ಮಾ ಗಾಂಧೀಯವರು ಮುಸ್ಲಿಂ ಸಮುದಾಯದ ನಾಯಕರನ್ನು ಭೇಟಿ ಮಾಡಲಿದ್ದಾರೆ. ಆದ್ದರಿಂದ ನಾಳೆಗೆ ಈ ಚರ್ಚೆಯನ್ನು ಮುಂದೂಡಿ' ಎಂದು ಕೋರಿದರು. ಇದಕ್ಕೆ ಬೆಂಬಲ ವ್ಯಕ್ತಪಡಿಸಿದ ಮಾಲವೀಯರು ಅಲ್ಲಿಯವರೆಗೆ ಸಭೆಯನ್ನು ಮುಂದೂಡಬೇಕು ಎಂದರು.

ಆದರೆ ಗಾಂಧೀ ಹಾಗೂ ಮುಸ್ಲಿಂ ನಾಯಕರ ನಡುವೆ ರಹಸ್ಯ ಒಪ್ಪಂದಗಳು ನಡೆಯುತ್ತಿರುವುದು ಡಾ. ಅಂಬೇಡ್ಕರ್ ಅವರಿಗೆ ತಿಳಿದಿತ್ತು. ಆದ್ದರಿಂದ ಚರ್ಚೆಯನ್ನು ಮುಂದೂಡುವ ಪ್ರಸ್ತಾಪ ಬಂದಾಗ ಅವರೆಂದರು "ಅಲ್ಪಸಂಖ್ಯಾತರ ವಿಷಯಕ್ಕೆ ಬಂದರೆ ಈಗಾಗಲೇ ನಾವು ನಮ್ಮ ಪ್ರಸ್ತಾಪ ಹಾಗೂ ಬೇಡಿಕೆಗಳನ್ನು ಅಲ್ಪಸಂಖ್ಯಾತರ ಸಮಿತಿಯ ಮುಂದಿರಿಸಿದ್ದೇವೆ. ಇನ್ನೂ ಉಳಿದಿರುವುದೆಂದರೆ ಯಾವ ಯಾವ ಶಾಸನ ಸಭೆಯಲ್ಲಿ ಎಷ್ಟು ಸ್ಥಾನಗಳ ಪ್ರಾತಿನಿಧ್ಯ ದೊರೆಯಬೇಕು ಎಂಬುದರ ಬಗ್ಗೆ ಒಂದು ಸಂಕ್ಷಿಪ್ತ ಹೇಳಿಕೆಯನ್ನು ಸಲ್ಲಿಸುವುದು ಮಾತ್ರವೇ."

"ಇನ್ನು ಮುಂದಿನ ಚರ್ಚೆಗಳು ನಡೆಯುವುದು ಎಂದರೆ ಕೋಮು ಸಮಸ್ಯೆಗಳ ಪರಿಹಾರ ಕುರಿತು ಮಾತ್ರವೇ. ಆದರೆ ಈ ಚರ್ಚೆ ಪ್ರಾರಂಭ ಆಗುವ ಮೊದಲೇ ಒಂದು ವಿಷಯ ಸ್ಪಷ್ಟಪಡಿಸುತ್ತೇನೆ. ಯಾರು ಈ ವಿಷಯದಲ್ಲಿ ಚರ್ಚೆಗೆ ಬರಲಿದ್ದಾರೋ ಅವರ ನಿರ್ಣಯವೇ ಅಂತಿಮವಾಗಲು ಸಾಧ್ಯವಿಲ್ಲ ಅಂತೆಯೇ ಗಾಂಧೀಜಿ ಹಾಗೂ ಕಾಂಗ್ರೆಸ್ ಪಕ್ಷಗಳ ಪ್ರಾತಿನಿಧಿಕ ಸ್ವರೂಪವು ಏನೇ ಇರಲಿ, ಅವರು ಅದರಿಂದ ನಮ್ಮನ್ನು ಕಟ್ಟಿ ಹಾಕಲು ಸಾಧ್ಯವಿಲ್ಲ. ಈ ಸಭೆಯಲ್ಲಿ ಅದನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ". ತಮ್ಮ ಭಾಷಣವನ್ನು ಪೂರ್ಣಗೊಳಿಸುವ ಮುನ್ನ ಅವರು ಎಚ್ಚರಿಕೆಯ ದನಿಯಲ್ಲಿ ಹೀಗೆ ನುಡಿದರು. "ಅತ್ಯಂತ ಸ್ಪಷ್ಟತೆಯಿಂದ ಒಂದು ಅಂಶವನ್ನು ತಿಳಿಸುವೆ. ಯಾರು ತಮ್ಮ ಮಹತ್ವವನ್ನು ಹೇಳಿಕೊಳ್ಳುತ್ತಾ ಏನನ್ನೇ ಕೊಡಲಿ, ಬೇರೆ ಯಾರು ಏನನನ್ನೇ ಪಡೆದುಕೊಳ್ಳಲಿ, ಅವರು ನನ್ನ ಪಾಲಿಗೆ ಬಂದದನ್ನು ನೀಡಲಾರರು, ಅಥವಾ ಪಡೆಯಲಾರರು. ಇದಕ್ಕೆ ಪ್ರತ್ಯುತ್ತರವಾಗಿ ಅಂದಿನ ಸಭೆಯ ಅಧ್ಯಕ್ಷರಾದ ಮ್ಯಾಕ್‌ಡೋನಾಲ್ಡ್ ಹೇಳಿದರು. "ಎಂದಿನಂತೆ ಅತಿ ಅದ್ಭುತವಾದ ಶೈಲಿಯಲ್ಲಿ ಡಾ. ಅಂಬೇಡ್ಕರ್ ಅವರು ತಮ್ಮ ನಿಲುವನ್ನು ಸ್ಪಷ್ಟಗೊಳಿಸಿದ್ದಾರೆ. ನಮಗೆ ಈ ವಿಷಯದಲ್ಲಿ ಅಲ್ಪ ಸಂದೇಹವನ್ನೂ ಅವರು ಉಳಿಸಿಲ್ಲ".*

ಅಕ್ಟೋಬರ್ ೧ ರಂದು ಮಹಾತ್ಮ ಗಾಂಧೀಯವರು ಪುನಃ ೧ ವಾರ ಸಮಿತಿಯ ಸಭೆಯನ್ನು ಮುಂದೂಡುವಂತೆ ಕೋರಿದರು. ಹಲವಾರು ಮುಸ್ಲಿಂ ನಾಯಕರು ತಮ್ಮನ್ನು ಭೇಟಿಯಾಗಿ ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಿದ್ದಾರೆ ಎಂಬ ಕಾರಣವನ್ನು ನೀಡಿದರು. ಇದಕ್ಕೆ ಪ್ರತಿಯಾಗಿ ಡಾ. ಅಂಬೇಡ್ಕರ್ ಎದ್ದುನಿಂತು, "ಯಾವುದಾದರೂ ಒಂದು ಇತ್ಯರ್ಥಕ್ಕೆ ಬರಲು ತಾವು ಯಾವುದೇ ತೆರನಾದ ಅಡ್ಡಿ ಮಾಡುವುದಿಲ್ಲ.

---

* Proceedings of Federal Structural Committee & Morities Committee pp 527

ಆದರೆ ಈ ಸಮಿತಿಯಲ್ಲಿ ಶೋಷಿತ ವರ್ಗದವರಿಗೆ ಪ್ರಾತಿನಿಧ್ಯ ಸಿಗಲಿದೆಯೇ ಇಲ್ಲವೇ ಎಂದು ತಿಳಿಯಬಯಸುತ್ತೇನೆ" ಎಂದರು. ಇದಕ್ಕೆ ಸಕಾರತ್ಮಕವಾಗಿ ಗಾಂಧೀಯವರು ಪ್ರತಿಕ್ರಿಯೆ ನೀಡಿದರು. ಇದಕ್ಕೆ ಗಾಂಧೀಯವರಿಗೆ ವಂದನೆ ಸಲ್ಲಿಸಿದ ಅಂಬೇಡ್ಕರ್ ಸದಸ್ಯರತ್ತ ತಿರುಗಿ ಈ ರೀತಿ ಹೇಳಿದರು. ಒಕ್ಕೂಟ ರಚನಾ ಸಮಿತಿಯ ಮೊಟ್ಟ ಮೊದಲ ಸಭೆಯಲ್ಲಿ ಭಾಷಣ ಮಾಡುತ್ತಾ ಗಾಂಧೀಯವರು "ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಮುಸಲ್ಮಾನರು ಹಾಗು ಸಿಖ್ಖರನ್ನು ಹೊರತುಪಡಿಸಿ ಮತ್ಯಾವ ಸಮುದಾಯದವರಿಗೂ ರಾಜಕೀಯ ಮಾನ್ಯತೆಯನ್ನು ನೀಡುವುದಿಲ್ಲ ಎಂದು ತಿಳಿಸಿದ್ದರು ಅವರು ಆ್ಯಂಗ್ಲೋ ಇಂಡಿಯನ್ನರನ್ನಾಗಲೀ ಶೋಷಿತ ವರ್ಗದವರನ್ನಾಗಲೀ ಅಥವಾ ಕ್ರೈಸ್ತರನ್ನಾಗಲೀ ಈ ಪಟ್ಟಿಗೆ ಸೇರ್ಪಡೆ ಮಾಡಲು ಇಚ್ಛಿಸಿರಲಿಲ್ಲ. ನಾನು ನನ್ನ ಸಭ್ಯತೆಯ ಎಲ್ಲೆಯನ್ನು ಮೀರುತ್ತಿಲ್ಲ ಎಂಬ ಖಾತ್ರಿಯೊಂದಿಗೆ ಒಂದು ವಿಷಯ ತಿಳಿಸಲು ಬಯಸುತ್ತೇನೆ. ಒಂದು ವಾರದ ಕೆಳಗೆ ಗಾಂಧೀ ಅವರನ್ನು ಭೇಟಿ ಮಾಡುವ ಸುಸಂದರ್ಭ ಒದಗಿ ಬಂದಿತ್ತು. ಆಗಲೂ ಕೂಡ ನಾನು ಶೋಷಿತ ವರ್ಗದವರ ಸಮಸ್ಯೆಯನ್ನು ಅವರ ಮುಂದಿರಿಸಿದ್ದೆ. ಪುನಃ ನಿನ್ನೆಯ ದಿನ ಕೂಡ ಅವರನ್ನು ಭೇಟಿಯಾಗಿ ನಾನು ಹಾಗೂ ಇತರ ಅಲ್ಪಸಂಖ್ಯಾತ ವರ್ಗದವರು ಈ ವಿಷಯ ಅವರ ಮುಂದಿಟ್ಟೆವು. ಆಗ ಅವರು ತಾವು ತಳೆದಿರುವ ನಿಲುವು ಬಹಳ ಚಿಂತನೆಯ ನಂತರವೇ ತೆಗೆದುಕೊಂಡಿರುವ ನಿಲುವು ಎಂದು ಹೇಳಿದರು.

ಅನಂತರ "ಒಂದು ವೇಳೆ ಅಲ್ಪಸಂಖ್ಯಾತ ಸಮಿತಿಯ ಮೊದಲನೆಯ ಸಮಾವೇಶದಲ್ಲಿ ಆದ ಹಾಗೆ ಮುಂಬರುವ ಭಾರತದ ಸಂವಿಧಾನದಲ್ಲಿ ಶೋಷಿತ ವರ್ಗದವರಿಗೆ ವಿಶೇಷತೆ ನೀಡದೇ ಹೋದರೆ, ನಾನು ಈ ಸಮಿತಿಗೆ ಸೇರ್ಪಡೆ ಆಗುವುದೇ ಇಲ್ಲ" ಎಂದು ಡಾ. ಅಂಬೇಡ್ಕರ್ ಗುಡುಗಿದರು. ಸರ್ ಹರ್ಬರ್ಟ್ ಕಾರ್ ಹಾಗೂ ಡಾ. ದತ್ತ ಕೂಡ ಇವರ ಈ ನಿಲುವುನ್ನು ಶ್ಲಾಘಿಸಿದರು.

ಮುಸಲ್ಮಾನ ನಾಯಕರು ಹಾಗೂ ಗಾಂಧೀಯವರ ನಡುವಿನ ಚರ್ಚೆಗಳು ಒಂದು ವಾರದವರೆಗೂ ಜರುಗಿದವು. ಇತ್ತ ದಿನಪತ್ರಿಕೆಗಳು ಚರ್ಚೆಗಳು ನಿರ್ಣಾಯಕ ಹಂತ ತಲುಪುತ್ತಿದೆ ಎಂಬ ವರದಿಗಳನ್ನು ನೀಡಿದವು. ಗಾಂಧೀಯವರು ಮುಸಲ್ಮಾನರ ೧೪ ಬೇಡಿಕೆಗಳಿಗೆ ಒಪ್ಪಿದ್ದಾರೆ ಎಂಬ ವದಂತಿಗಳು ಹಬ್ಬಿದ್ದವು. ಸ್ವತಂತ್ರ ರಾಜ್ಯಗಳಲ್ಲಿ ಉಳಿದಿರುವ ಸ್ಥಾನಗಳಿಗೆ ಮುಸಲ್ಮಾನರ ನೇಮಕಾತಿಗೆ, ಪಂಜಾಬ್ ಹಾಗೂ ಬಂಗಾಲ ರಾಜ್ಯಗಳಲ್ಲಿ ಮುಸಲ್ಮಾನರ ಆಡಳಿತಕ್ಕೆ ಒಪ್ಪಿಗೆ ಸೂಚಿಸಿದ್ದಾರೆ ಹಾಗೂ ಕಾಂಗ್ರೆಸ್ ಪರವಾಗಿ ಮುಸಲ್ಮಾನರಿಗೆ ಮುಕ್ತ ಒಪ್ಪಿಗೆಯನ್ನು ನೀಡಿದ್ದಾರೆ ಎಂಬ ವದಂತಿ ಹರಡಿತು. ಇತ್ತ ಸಿಖ್ಖರು ಹಾಗೂ ಮುಸಲ್ಮಾನರ ಸಮಸ್ಯೆಯನ್ನು ಕುರಿತ ಮಾತುಕತೆ ವಿಫಲವಾಗಿತ್ತು.

ಅಕ್ಟೋಬರ್ ೮ ರಂದು ಅತ್ಯಂತ ದುಃಖದಿಂದ ಅಲ್ಪಸಂಖ್ಯಾತ ಸಮಿತಿಯ ಸಭೆಯಲ್ಲಿ ಗಾಂಧೀಯವರು ಒಂದು ವಿಷಯವನ್ನು ಹೊರಹಾಕಿದರು. ಇದುವರೆಗೂ ನಡೆದ ಚರ್ಚೆಗಳಲ್ಲಿ ವಿವಿಧ ಕೋಮುಗಳ ಮುಖಂಡರು ಭಾಗಿಯಾಗಿದ್ದರು. ಆದರೂ ಸಮಸ್ಯೆಗಳಿಗೆ ನಿಖರವಾದ ಪರಿಹಾರ ಹೊರಬರಲು ಸಾಧ್ಯವಾಗಲಿಲ್ಲ ಎಂದರು. ಇದಕ್ಕೆ ಕಾರಣಗಳು ಕೂಡ ಸ್ಪಷ್ಟವಾಗಿತ್ತು. ಭಾರತ ದೇಶದಿಂದ ಬಂದಂತಹ ಪ್ರತಿನಿಧಿಗಳ ತಂಡವೇ ಆ ರೀತಿ ಇತ್ತು. ಅವರು ಯಾರೂ ಚುನಾಯಿತ ಪ್ರತಿನಿಧಿಗಳಾಗಿರಲಿಲ್ಲ. ಅಥವಾ ಅವರು ನಿರ್ಣಯ ತೆಗೆದುಕೊಳ್ಳುವಂತಹ ಪ್ರತಿನಿಧಿಗಳು ಕೂಡ ಆಗಿರಲಿಲ್ಲ. ಆದ್ದರಿಂದ ಅನಿರ್ದಿಷ್ಟ ಕಾಲದವರೆಗೂ ಈ ಸಭೆಯನ್ನು ಮುಂದೂಡುವಂತೆ ಅವರು ಕೋರಿದರು. ಆದರೆ ಇದನ್ನು ಒಂದು ಸವಾಲಾಗಿ ಪರಿಣಿಸಿದ ಅಂಬೇಡ್ಕರ್ ಗಾಂಧೀಗೆ ಉತ್ತರ ನೀಡಿ, ಗಾಂಧಿಯವರು ಸಮಸ್ಯೆಯನ್ನು ಅರ್ಥೈಸಿಕೊಳ್ಳಲು ವಿಫಲರಾಗಿದ್ದಾರೆ ಎಂದರು. ಏಕೆಂದರೆ ಹಿಂದಿನ ರಾತ್ರಿ ಈ ಸಮಸ್ಯೆಯನ್ನು ಯಾವ

ಪ್ರತಿನಿಧಿಗಳು ಯಾರೊಂದಿಗೂ ಚರ್ಚಿಸಬಾರದು ಎಂದು ನಿರ್ಧರಿಸಲಾಗಿತ್ತು. ಈ ನಿಯಮವನ್ನು ಕೂಡ ಗಾಂಧೀಯವರು ಮುರಿದಿದ್ದಾರೆ ಎಂದರು.

ಡಾ. ಅಂಬೇಡ್ಕರ್ ಅವರ ಧ್ವನಿಯು ಭಾವೋದ್ವೇಗದಿಂದ ಏರತೊಡಗಿತು. ಅವರು ಗುಡುಗಿದರು. "ನನಗೆ ಒಂದು ವಿಷಯ ಬಹಳ ಬೇಸರ ಮೂಡಿಸುತ್ತಿದೆ. ಅದೇನೆಂದರೆ ಗಾಂಧೀಯವರು ಕೇವಲ ಈ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವ ಪ್ರಸ್ತಾವನೆಗೆ ಮಾತ್ರ ಅಂಟಿಕೊಳ್ಳಬೇಕಿತ್ತು. ಅದರ ಬದಲು ಇಲ್ಲಿ ನೆರೆದಿರುವ ವಿವಿಧ ಧಾರ್ಮಿಕ ಮುಖಂಡರುಗಳ ಅರ್ಹತೆಯನ್ನು ಅವರು ಪ್ರಶ್ನಿಸಿದ್ದಾರೆ. ಅವರು ಇಲ್ಲಿ ನೆರೆದಿರುವ ಗಣ್ಯರನ್ನು ಸರ್ಕಾರದ ಪ್ರತಿನಿಧಿಗಳು ಎಂದಿದ್ದಾರೆ. ಹಾಗೂ ತಾವು ಯಾವ ಧರ್ಮಕ್ಕೆ ಸೇರಿದ್ದಾರೋ ಆ ಧರ್ಮವನ್ನು ಪ್ರತಿನಿಧಿಸುವಲ್ಲಿ ಅವರು ವಿಫಲರಾಗಿದ್ದಾರೆ ಎಂದಿದ್ದಾರೆ. ನಾವು ಸರ್ಕಾರದಿಂದ ನೇಮಕಗೊಂಡಿರುವವರು ಎಂಬ ಅಂಶವನ್ನು ನಾವು ಅಲ್ಲಗೆಳೆಯಲು ಆಗುವುದಿಲ್ಲ. ಆದರೆ ನನ್ನ ವಿಷಯಕ್ಕೆ ಬಂದರೆ, ಒಂದು ವೇಳೆ ಶೋಷಿತ ವರ್ಗದ ಪ್ರತಿನಿಧಿಯ ಆಯ್ಕೆಗೆ ಚುನಾವಣೆ ಜರುಗಿದ್ದರು ಕೂಡ ಈಗಿರುವ ಸ್ಥಾನದಲ್ಲಿಯೇ ನಾನಿರುತ್ತಿದ್ದೆ ಎಂಬ ಖಾತ್ರಿ ನನಗಿದೆ. ಆದ್ದರಿಂದ ನಾನು ನೇಮಕಗೊಂಡಿರುವ ಅಭ್ಯರ್ಥಿಯಾಗಿರಲಿ ಅಥವಾ ಇಲ್ಲದಿರಲಿ ನನ್ನ ವರ್ಗದ ಜನರನ್ನು ನಾನು ಪ್ರತಿನಿಧಿಸುತ್ತಿದ್ದೇನೆ. ಅಹವಾಲನ್ನು ಪೂರ್ಣವಾಗಿ ಸಭೆಯ ಮುಂದೆ ಇರಿಸಿದ್ದೇನೆ. ಈ ವಿಷಯದಲ್ಲಿ ಯಾರೂ ಎಳ್ಳಷ್ಟು ಸಂದೇಹ ಹೊಂದುವುದು ಬೇಡವೇ ಬೇಡ."

ಡಾ. ಅಂಬೇಡ್ಕರ್ ಮುಂದುವರಿದು "ಮಹಾತ್ಮ ಅವರು ಕಾಂಗ್ರೆಸ್ ಪಕ್ಷವು ಶೋಷಿತ ವರ್ಗದವರ ಹಿತಾಸಕ್ತಿಯ ಬಗೆಗೆ ಕಾಳಜಿಯನ್ನು ವಹಿಸುತ್ತಿದೆ ಎನ್ನುತ್ತಾರೆ. ಅಂತೆಯೇ ನನ್ನ ಹಾಗೂ ನನ್ನ ಬೆಂಬಲಿಗರಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಕಾಂಗ್ರೆಸ್ ಶೋಷಿತ ವರ್ಗಗಳ ಪ್ರತಿನಿಧಿ ಆಗಿದೆ ಎನ್ನುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹೇಳುತ್ತಿರುವ ಹಲವಾರು ಸುಳ್ಳುಗಳಲ್ಲಿ ಇದೂ ಕೂಡ ಒಂದು ಎಂದು ನಾನು ಹೇಳಬಯಸುತ್ತೇನೆ. ಈ ರೀತಿಯ ಸುಳ್ಳುಗಳನ್ನು ಬೇಜವಾಬ್ದಾರಿಯುತ ಜನರು ಹೇಳುತ್ತಲೇ ಬಂದಿದ್ದಾರೆ. ಇದಕ್ಕೆ ಸಂಬಂಧಿಸಿದ ಜನರು ಇದನ್ನು ಅಲ್ಲಗಳೆಯುತ್ತಲೇ ಬಂದಿದ್ದಾರೆ. ಅನಂತರ ಭಾರತದ ಮೂಲೆ ಮೂಲೆಗಳಿಂದ ಬಂದಿರುವ ತಂತಿಗಳನ್ನು ಅವರು ಸಭೆಯ ಮುಂದಿಟ್ಟರು. ಆತ ಎಂದಿಗೂ ಭೇಟಿಯೇ ಆಗಿರದಿದ್ದ ಸ್ಥಳಗಳಿಂದ ಭೇಟಿ ಆಗಿರದಿದ್ದ ಜನರಿಂದ, ಭಾರತದ ಮೂಲೆ ಮೂಲೆಗಳಿಂದ ಅವರನ್ನು ಬೆಂಬಲಿಸಿ ತಂತಿಗಳು ಬಂದಿದ್ದವು. ಅನಂತರ ಅವರು ಸಮಿತಿಯ ಮುಂದೆ ಎರಡು ಆಯ್ಕೆಗಳನ್ನು ಇಟ್ಟರು. ಒಂದು ಈ ಸಮಸ್ಯೆಗಳನ್ನು ಈ ಸಮಿತಿ ಬಗೆಹರಿಸಬೇಕು ಇಲ್ಲವೇ ಈ ಸಮಸ್ಯೆಯನ್ನು ಪರಿಹರಿಸುವ ಜವಾಬ್ದಾರಿಯನ್ನು ಬ್ರಿಟಿಷ್ ಸರ್ಕಾರಕ್ಕೆ ನೀಡಬೇಕು. ಅವರು ಅತ್ಯಂತ ಹತಾಶರಾಗಿದ್ದರು ಹಾಗೂ ಭಯಗೊಂಡಿದ್ದರು. ಇಂತಹ ಸಂದರ್ಭದಲ್ಲಿ ಆಡಳಿತದ ವರ್ಗಾವಣೆಗೆ ಕಾತರರಾಗಿಲ್ಲ. ಆದರೆ ಒಂದು ವೇಳೆ ಸರ್ಕಾರವು ಅಧಿಕಾರದ ವರ್ಗಾವಣೆ ಆಗಲೇಬೇಕೆಂದು ನಿರ್ಧರಿಸಿದರೆ, ಅದು ಯಾವುದೇ ಮೋಸಗಾರರ, ಧರ್ಮಾಂಧರ ಕೈಗಳಿಗೆ ಸಿಗಬಾರದು ಅಥವಾ ಮುಸಲ್ಮಾನರು ಹಾಗೂ ಹಿಂದೂ ಗುಂಪುಗಳಿಗೂ ಸಿಗಬಾರದು ಎಂದರು. ಈ ಸಮಸ್ಯೆಗೆ ಪರಿಹಾರ ಎಂದರೆ ಎಲ್ಲ ವರ್ಗಗಳಿಗೂ ಸಮಾನವಾಗಿ ಅಧಿಕಾರವು ಹಂಚಲ್ಪಡಬೇಕು ಎಂದರು.

ಆದರೆ ನೆರೆದಿದ್ದ ಎಲ್ಲಾ ಸದಸ್ಯರಿಗೆ ಪ್ರಧಾನಮಂತ್ರಿ ಅವರು ಈ ಕಾರಣಗಳಿಗೆಲ್ಲ ಯಾರೂ ತಮ್ಮನ್ನು ತಾವು ಜವಾಬ್ದಾರರಾಗಿಸಿಕೊಳ್ಳಬಾರದು ಎಂದು ಮನವಿ ಮಾಡಿದರು. ನೈಜ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾಗಿರುವಂತೆ ಎಲ್ಲರಿಗೂ ಕರೆ ಕೊಟ್ಟರು. ಹಾಗೂ ಭಾರತದಲ್ಲಿ ನಿಜವಾಗಿಯೂ ಈ ರೀತಿಯ

ಪರಿಸ್ಥಿತಿ ಇದೆಯೇ ಎಂದು ಪ್ರಶ್ನಿಸಿದರು. ಪ್ರಧಾನಿಯವರ ಈ ಭಾಷಣವು ಪಕ್ಷಪಾತ ಧೋರಣೆ ಹೊಂದಿತ್ತು ಎಂದು ಎಲ್ಲರಿಗೂ ಅರಿವಾಯಿತು ಮಾತ್ರವಲ್ಲ ಕೆಲವರು ಅದನ್ನು ಅತ್ಯಂತ ಕೃತಘ್ನ ಭಾಷಣ ಎಂದು ಕರೆದರು. ಅದರಲ್ಲಿ ಗಾಂಧೀಜಿಯವರ ವಿರುದ್ಧ ಕಹಿಯಾದ ಭಾವನೆ ತುಂಬಿತ್ತು ಎಂಬುದು ಎಲ್ಲರ ಗಮನಕ್ಕೆ ಬಂದಿತ್ತು.

ಆದರೆ ಡಾ. ಅಂಬೇಡ್ಕರ್ ಅವರು ಸಮಸ್ಯೆಯನ್ನು ಚರ್ಚಿಸುವುದನ್ನು ಇಲ್ಲಿಗೇ ನಿಲ್ಲಿಸಲಿಲ್ಲ. ಈ ಘಟನೆಯನ್ನು ವಿವರಿಸಿ ವಿಸ್ತೃತವಾದ ಪತ್ರವೊಂದನ್ನು ಅವರು ಲಂಡನ್ನಿನಿಂದ ಅಕ್ಟೋಬರ್ ೧೨ ರಂದು ಟೈಂಸ್ ಆಫ್ ಇಂಡಿಯಾ ಪತ್ರಿಕೆಗೆ ಬರೆದರು. 'ನಮಗೆ ನಂಬಲರ್ಹ ಮೂಲಗಳಿಂದ ತಿಳಿದು ಬಂದಿರುವ ಪ್ರಕಾರ ಗಾಂಧೀಯವರು ಮುಸಲ್ಮಾನ ನಾಯಕರನ್ನು ಭೇಟಿಯಾದಾಗ ಅವರ ೧೪ ಬೇಡಿಕೆಗಳಿಗೆ ಒಪ್ಪಿಗೆ ಸೂಚಿಸಲು ಮುಸಲ್ಮಾನ ನಾಯಕರು ಶೋಷಿತ ವರ್ಗದ ಹಾಗೂ ಹಿಂದುಳಿದ ವರ್ಗದ ಜನರ ಬೇಡಿಕೆಗಳನ್ನು ನಿರಾಕರಿಸಬೇಕು ಎಂಬ ಷರತ್ತನ್ನು ಅವರ ಮುಂದಿಟ್ಟರು. ಅತ್ಯಂತ ಕಠಿಣ ದನಿಯಲ್ಲಿ ಮುಂದುರಿಸಿದ ಅವರು "ಎಲ್ಲರೂ ಒಪ್ಪಿದರೆ ನಾನೂ ಕೂಡ ಒಪ್ಪಿಗೆ ಸೂಚಿಸುತ್ತೇನೆ" ಅನಂತರ ನಾನು ಖಾಸಗಿಯಾಗಿ ಈ ನಿಟ್ಟಿನಲ್ಲಿ ಅವರೊಡನೆ ಚರ್ಚಿಸುತ್ತೇನೆ ಎಂದಿದ್ದರು. ಆದರೆ ಖಾಸಗಿ ಸಭೆಯಲ್ಲಿ ಎಲ್ಲರನ್ನೂ ಶೋಷಿತರ ಬೇಡಿಕೆಯ ವಿರುದ್ಧ ತಿರುಗಿಸಿದರು. ಈ ರೀತಿ ವರ್ತಿಸುವುದು ಒಬ್ಬ ಮಹಾತ್ಮನ ವರ್ತನೆ ಅಲ್ಲ. ಇದು ಕೇವಲ ಧೈರ್ಯಗೇಡಿ, ಶೋಷಿತ ವರ್ಗಗಳ ವಿರೋಧಿಯ ನಡೆ ಎಂದೇ ನಾನು ವಿಶ್ಲೇಷಿಸುತ್ತೇನೆ. ಶ್ರೀ ಗಾಂಧಿಯವರು ಇಲ್ಲಿ ಶೋಷಿತ ವರ್ಗಗಳ ಮಿತ್ರನೋರ್ವನ ಪಾತ್ರ ನಿರ್ವಹಿಸುತ್ತಿಲ್ಲ. ದುಃಖದ ಸಂಗತಿ ಎಂದರೆ ಅವರೊಬ್ಬ ಸತ್ಯವಂತ ಶತ್ರುವಾಗಿಯೂ ಉಳಿದಿಲ್ಲ".

ಅವರು ತಮ್ಮ ಮನೆಗೆ ಬರೆದ ಪತ್ರದಲ್ಲಿ ಈ ದುಂಡು ಮೇಜಿನ ಸಮಾವೇಶ ವಿಫಲವಾಗುತ್ತದೆ ಎಂದು ಬರೆದಿದ್ದರು. ಇದಕ್ಕೆ ನೇರ ಜವಾಬ್ದಾರಿಯನ್ನು ಅವರು ಗಾಂಧಿಯ ಮೇಲೆ ಹೊರಿಸಿದ್ದರು. ಡಾ. ಅಂಬೇಡ್ಕರ್ ಅವರ ಅಭಿಪ್ರಾಯದಲ್ಲಿ ಗಾಂಧೀಜಿಯವರ ಪಕ್ಷಪಾತ ಧೋರಣೆ, ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಪರಿಹರಿಸುವತ್ತ ಅವರಿಗಿದ್ದ ನಿರಾಸಕ್ತಿ, ಅವರ ಮೋಸದಿಂದ ತುಂಬಿದ ಮಾತುಗಳು, ಇತರ ಪ್ರತಿನಿಧಿಗಳ ಅಭಿಪ್ರಾಯಗಳ ಬಗ್ಗೆ ಅವರಿಗಿದ್ದ ಅಗೌರವ, ಅವರನ್ನು ಅವರು ಅಪಮಾನಿಸುತ್ತಿದ್ದ ಬಗೆ ಈ ಎಲ್ಲಾ ಕಾರಣಗಳಿಂದ ಅವರಿಗೆ ಸಮಸ್ಯೆಯ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿರಲಿಲ್ಲ. ಇದೀಗ ಮತ್ತೊಂದು ಅಂಶವು ಕೂಡ ಅಂಬೇಡ್ಕರ್ ಅವರಿಗೆ ಸ್ಪಷ್ಟವಾಗಿತ್ತು. ಅದೇನೆಂದರೆ ಗಾಂಧೀಜಿಯವರು ಒಂದು ವರ್ಗದ ಜನರನ್ನು ಮತ್ತೊಂದು ವರ್ಗದ ಜನರ ವಿರುದ್ಧ ಎತ್ತಿ ಕಟ್ಟುತ್ತಿದ್ದರು. ಅವರದ್ದು ಪ್ರಜಾಪ್ರಭುತ್ವ ವಿರೋಧಿ ಮನಸ್ಥಿತಿ ಆಗಿತ್ತು. ಇದರಿಂದ ಹ್ಯಾರೋಲ್ಡ್ ಲಸ್ಕಿ ಅವರು ಆಘಾತಗೊಂಡಿದ್ದರು. ವಿಠ್ಠಲಬಾಯಿ ಪಟೇಲ್ ಮುಂತಾದ ಕಾಂಗ್ರೆಸ್ ನಾಯಕರು ಗಾಂಧೀಯವರು ಈ ಸಮಸ್ಯೆಗೆ ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಿಲ್ಲ ಎಂದು ಗೊಣಗಾಡಲು ತೊಡಗಿದ್ದರು.

ಡಾ. ಅಂಬೇಡ್ಕರ್ ಅವರ ಬೇಡಿಕೆಗಳಿಗೆ ಗಾಂಧಿ ತೋರಿದ್ದ ವಿರೋಧದಿಂದ ದೊಡ್ಡ ಮಟ್ಟದಲ್ಲಿ ಪ್ರತಿಕೂಲ ಪರಿಣಾಮ ಉಂಟಾಯಿತು. ಭಾರತದ ಎಲ್ಲ ಕಡೆಯಲ್ಲಿದ್ದ ಅಸ್ಪೃಶ್ಯರಿಂದ ಇದಕ್ಕೆ ಪ್ರತಿಭಟನೆ ಉಂಟಾಯಿತು. ರಾವ್ ಬಹದ್ದೂರ್ ಎಂ.ಸಿ.ರಾಜ ಅವರ ಅಧ್ಯಕ್ಷತೆಯಲ್ಲಿ ಗುರ್‌ಗಾಂವ್‌ನಲ್ಲಿ ಜರುಗುತ್ತಿದ್ದ ಅಖಿಲ ಭಾರತ ಶೋಷಿತ ವರ್ಗದವರ ಸಭೆಯಲ್ಲಿ ಗಾಂಧಿಯವರ ನಿಲುವನ್ನು ಖಂಡಿಸಲಾಯಿತು. ಅಸ್ಪೃಶ್ಯರ ಸಮಸ್ಯೆಯನ್ನು ತಪ್ಪು ಅರ್ಥದಲ್ಲಿ ಗಾಂಧಿ ಬಿಂಬಿಸುತ್ತಿದ್ದಾರೆ ಎಂದು ಅಲ್ಲಿ ಹೇಳಲಾಯಿತು. ಕಾಂಗ್ರೆಸ್ ಸರ್ಕಾರವು ಮೊದಲಿನಿಂದಲೂ ಅಸ್ಪೃಶ್ಯರ ಸಮಸ್ಯೆಗಳತ್ತ ಗಮನ ಹರಿಸಿದೆ ಎಂದು ಹೇಳಿದ್ದ

ಗಾಂಧೀಯವರ ಮಾತುಗಳನ್ನು ಕಟುವಾಗಿ ಟೀಕಿಸಲಾಯಿತು. "ಈ ಎಲ್ಲಾ ಮಾತುಗಳೂ ಸತ್ಯಕ್ಕೆ ದೂರವಾದವು" ಎಂದು ರಾಜಾ ಘೋಷಿಸಿದರು.

ಡಾ. ಅಂಬೇಡ್ಕರ್ ಅವರು ಇರಿಸಿದ್ದಂತಹ ಬೇಡಿಕೆಗಳಿಗೆ ಈ ಸಮಾವೇಶ ಬೆಂಬಲ ಸೂಚಿಸಿತ್ತು. ಯಾವ ಸಂವಿಧಾನದಲ್ಲಿ ಶೋಷಿತ ವರ್ಗದ ಜನರಿಗೆ ಪ್ರತ್ಯೇಕ ಚುನಾವಣಾಧಿಕಾರ ನೀಡಲಾಗುವುದಿಲ್ಲವೋ, ಅಂತಹ ಸಂವಿಧಾನವನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ ಎಂದು ಘೋಷಿಸಿತು. ಭಾರತದ ಎಲ್ಲ ಮೂಲೆಗಳಿಂದ ಶೋಷಿತ ವರ್ಗದ ಜನರ ಸಂದೇಶಗಳು ಡಾ. ಅಂಬೇಡ್ಕರ್ ಅವರನ್ನು ಬಂದು ತಲುಪತೊಡಗಿತ್ತು. ಯಾವುದೇ ಕಾರಣಕ್ಕೂ ಅಂಬೇಡ್ಕರ್ ಅವರು ಮಹಾತ್ಮಾಗಾಂಧೀಯವರನ್ನು ಹಾಗೂ ಕಾಂಗ್ರೆಸ್ ಪಕ್ಷವನ್ನು ನಂಬಬಾರದು ಎಂದು ಟಿನ್ನೆವೇಲಿ ಅವರು ಹೇಳಿದ್ದರು. ರಾಬರ್ಟ್‌ಸನ್ (ಮದರಾಸು), ಲಯಾಲ್‌ಪುರ, ಕರ್ನಾಲ್, ಚಿದಂಬರಂ, ಕ್ಯಾಲಿಕಟ್, ಬನಾರಸ್, ಕೊಲ್ಲಾಪುರ, ಯೋಟ್ಮಲ್, ನಾಗ್ಪುರ, ಕಾಂಡಾ, ಕಾನ್ಪುರ, ಕಾಂಪ್ಟೀ, ಬೆಳಗಾವಿ, ಧಾರವಾಡ, ನಾಸಿಕ್, ಹುಬ್ಬಳ್ಳಿ, ಅಹ್ಮದಾಬಾದ್, ಟುಟ್ಟಿಕಾರನ್, ಕೋಲಂಬೋ ಹಾಗೂ ಇನ್ನಿತರ ಸ್ಥಳಗಳಲ್ಲಿ ನಡೆದ ಸಮಾವೇಶಗಳಿಂದ ಕೂಡ ಇಂತಹುದೇ ಸಂದೇಶಗಳು ಬಂದಿದ್ದವು.

ಹೀಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸುತ್ತ ಬಂದ ತಂತಿಗಳು ನಿಜವಾಗಿಯೂ ಯಾರು ಶೋಷಿತ ವರ್ಗಗಳ ಪ್ರತಿನಿಧಿ ಎಂಬುದನ್ನು ಸಾಬೀತು ಪಡಿಸಿದ್ದವು. ಗಾಂಧಿಗೆ ಕೂಡ ಕೆಲ ತಂತಿಗಳು ಬಂದಿದ್ದವು ನಿಜ. ಆದರೆ ಅವರಿಗೆ ಲಂಡನ್ನಿನ ವಿವಿಧ ಸ್ಥಳಗಳಲ್ಲಿ ಜನರು ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರವನ್ನು ನೀಡುವಷ್ಟು ಸಂಖ್ಯೆಯಲ್ಲಿ ಇರಲಿಲ್ಲ. ಹೀಗೆ ಅತ್ಯಂತ ಗಾಢವಾದ ಪರಿಣಾಮವನ್ನು ಅಂಬೇಡ್ಕರ್ ಅವರ ಮಾತುಗಳು ಮಾಡಿದ್ದವು. ಇದರಿಂದ ಗಾಂಧಿಯವರಿಗೆ ದಿಗ್ಭ್ರಮೆಯಾಗಿತ್ತು. ಅವರು ತಮ್ಮನ್ನು ತಾವು ಅಸ್ಪೃಶ್ಯರ ರಕ್ಷಕ ಎಂದು ಕರೆದುಕೊಳ್ಳುತ್ತಿದ್ದದ್ದು ಎಷ್ಟರ ಮಟ್ಟಿಗೆ ನಿಜ ಎಂಬುದು ಇದರಿಂದ ಸಾಬೀತಾಗಿತ್ತು ಅಷ್ಟೇ!!

ಈ ವಾಸ್ತವ ಸಂಗತಿಯು ಭಾರತದಲ್ಲಿ ಮತ್ತಷ್ಟು ಪ್ರಚಾರ ಪಡೆಯಲು ಕಾರಣವಾಗಿದ್ದು ನಾಸಿಕ್ ಹಾಗೂ ಗುರುವಾಯೂರು ನಗರಗಳಲ್ಲಿ ನಡೆದ ದೇವಸ್ಥಾನ ಪ್ರವೇಶದ ಚಳುವಳಿಯಲ್ಲಿ. ನಾಸಿಕ್‌ನಲ್ಲಿ ಪುನರಾರಂಭವಾದ ಚಳವಳಿಯು ಅಭೂತಪೂರ್ವವಾಗಿ ಮುನ್ನಡೆಯಿತು. ೫ ಸಾವಿರ ಜನ ಸ್ವಯಂ ಸೇವಕರು ನಾಸಿಕ್ ನಗರಕ್ಕೆ ಬಂದರು. ಡಾ. ಅಂಬೇಡ್ಕರ್ ಅವರ ಅತ್ಯಂತ ನಂಬಿಕಸ್ತ ಸಹಚರರಾದ ಬಾವ್‌ರಾವ್ ಗಾಯಕ್‌ವಾಡ ಹಾಗೂ ಶೋಷಿತ ವರ್ಗಗಳ ನಾಯಕರುಗಳಾದ ರಣಕಂಬೆ, ಪತಿತಪಾವನ ದಾಸ, ಹಾಗೂ ದೇವರಾವ್ ನಾಯಕ ಮುಂತಾದವರು ಈ ಹೋರಾಟದಲ್ಲಿ ಭಾಗಿಯಾದರು. ಇವರು ಸಂಪ್ರದಾಯವಾದಿ ಹಿಂದುಗಳ ಹಾಗೂ ಡಾಂಬಿಕ ನಾಯಕರ ನೈಜ ಬಣ್ಣವನ್ನು ಬಯಲಿಗೆ ಎಳೆದಿದ್ದರು. ಇದು ಎಷ್ಟರ ಮಟ್ಟಿಗೆ ಪರಿಣಾಮ ಬೀರಿತು ಎಂದರೆ ಲಂಡನ್ನಿನಿಂದ ಡಾ. ಮುಂಜೆಯವರು ಭಾರತದ ಸಂಪ್ರದಾಯವಾದಿ ನಾಯಕರುಗಳಿಗೆ ಸಂದೇಶ ಕಳುಹಿಸಿ, ಅವರು ಈ ಹಕ್ಕುಗಳನ್ನು ಅಸ್ಪೃಶ್ಯರಿಗೆ ನಿರಾಕರಿಸಿದರೆ, ಅವರೇ ತಮ್ಮ ವಿನಾಶಕ್ಕೆ ದಾರಿ ಮಾಡಿಕೊಂಡಂತೆ ಆಗುತ್ತದೆ ಎಂದು ಎಚ್ಚರಿಸಿದ್ದರು. ಈ ಮೊದಲಿನ ಸತ್ಯಾಗ್ರಹದಲ್ಲಿ ಮಾಡಿದಂತೆಯೇ ಕಾಲಾರಾಂ ದೇವಸ್ಥಾನದ ಬಾಗಿಲುಗಳನ್ನು ಮುಚ್ಚಲಾಯಿತು.

ತಮ್ಮ ಜನರ ಈ ವರ್ತನೆಯಿಂದ ಡಾ. ಅಂಬೇಡ್ಕರ್ ಸಂತಸಗೊಂಡಿದ್ದರು. ಇದರಿಂದ ಹಿಂದೂ ನಾಯಕರ ವರ್ತನೆಯನ್ನು ಇಡೀ ಪ್ರಪಂಚಕ್ಕೆ ತಿಳಿಯುವಂತೆ ಮಾಡಿದಂತಾಗಿತ್ತು. ಅವರು ಕೂಡ ತಮ್ಮ ಜನರಿಗೆ ಲಂಡನ್ನಿನಿಂದ ಸಂದೇಶ ಕಳುಹಿಸಿದರು.*

ನಾಸಿಕ್‌ನ ಸತ್ಯಾಗ್ರಹವನ್ನು ಕೂಡ ಅತ್ಯುತ್ಸಾಹದಿಂದಲೇ ಪ್ರಾರಂಭಿಸಲಾಯಿತು. ದೊಡ್ಡ ದೊಡ್ಡ ಸಭೆಗಳನ್ನು ರ್ಪಡಿಸಲಾಯಿತು. ದೊಡ್ಡದೊಡ್ಡ ಮೆರವಣಿಗೆಗಳನ್ನು ನಡೆಸಲಾಯಿತು. ಹಲವಾರು ನಾಯಕರು ಹಾಗೂ ಸ್ವಯಂ ಸೇವಕರನ್ನು ಬಂಧಿಸಲಾಯಿತು. ಅವರು ಯಾರೂ ಧೈರ್ಯಗೆಡದೇ ಜೈಲುವಾಸವನ್ನು ಅನುಭವಿಸಿದರು. ಲಂಡನ್ನಿನ ಪತ್ರಿಕೆಗಳು ಕೂಡ ಈ ಸತ್ಯಾಗ್ರಹ ಹಾಗೂ ನಡೆದಂತಹ ಬಂಧನಗಳನ್ನು ವರದಿಮಾಡಿತು. ಇದು ಅಂಬೇಡ್ಕರ್ ಅವರ ಮಾತುಗಳಿಗೆ ಮತ್ತಷ್ಟು ಬಲ ನೀಡಿತು.

ಗಾಂಧೀಜಿಯವರೊಂದಿಗೆ ಘರ್ಷಣೆ ಮಾಡಿಕೊಂಡ ನಂತರ ಅಂಬೇಡ್ಕರ್ ಅವರು ಆರ್ಥಿಕ ಸಮಿತಿಯ ಸಭೆಯಲ್ಲಿ ಭಾಗಿಯಾದರು. ಒಕ್ಕೂಟ ಸರ್ಕಾರದ ಉಪಸಮಿತಿಯು ಈ ಸಭೆಗೆ ಕರೆ ನೀಡಿತ್ತು. ಆ ಸಭೆಯಲ್ಲಿ ಅವರು ಭಾರತದ ಸ್ವತಂತ್ರ ನ್ಯಾಯಾಲಯಗಳನ್ನು ಕುರಿತು, ಅವುಗಳ ರಚನೆಯನ್ನು ಕುರಿತು ಚಿಂತನೆಗೆ ಹಚ್ಚುವ ಭಾಷಣಗಳನ್ನು ಮಾಡಿದರು. ಈ ಸಭೆಯಲ್ಲಿ ಜಿನ್ನಾ, ಜಯಕರ್, ಲಾರ್ಡ್ ಸ್ಯಾಂಕಿ, ಲಾರ್ಡ್ ಲೋಥಿಯನ್ ಮುಂತಾದವರು ಭಾಗಿಯಾಗಿದ್ದರು ಹಾಗೂ ಅತ್ಯಂತ ಆಸಕ್ತಿಯನ್ನು ವಹಿಸಿದ್ದರು. ಅಂಬೇಡ್ಕರ್ ಅವರು ಹೇಳಿದ್ದ ಕೆಲ ಅಂಶಗಳಿಗೆ ಅವರು ವಿವರಣೆ ಕೇಳಿದರು ಕೂಡ.

ತಮ್ಮ ಬಿಡುವಿಲ್ಲದ ಕೆಲಸ ಕಾರ್ಯಗಳ ನಡುವೆಯೂ ಡಾ. ಅಂಬೇಡ್ಕರ್ ಅವರು ಕೆಲ ಖಾಸಗಿ ಸಂದರ್ಶನಗಳು ಹಾಗೂ ವಿವರಣೆಗಳನ್ನು ನೀಡತೊಡಗಿದರು. ಅವರು ಹಲವಾರು ಹೇಳಿಕೆಗಳನ್ನು ಹಾಗೂ ಪ್ರತಿ ಹೇಳಿಕೆಗಳನ್ನೂ ನೀಡುತ್ತಿದ್ದರು. ಇದಲ್ಲದೇ ಲಂಡನ್ನಿನ ಹಲವಾರು ಸಂಸ್ಥೆಗಳಲ್ಲಿ ಭಾಷಣಗಳನ್ನು ಮಾಡುತ್ತಿದ್ದರು. ಅಲ್ಲಿಯೂ ಕೂಡ ಅವರು ತಾವು ಲಂಡನ್ನಿನ ದುಂಡು ಮೇಜಿನ ಸಮಾವೇಶದಲ್ಲಿ ವ್ಯಕ್ತಪಡಿಸಿದ್ದ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಅಂತಾರಾಷ್ಟ್ರೀಯ ವ್ಯವಹಾರಗಳ ಸಂಸ್ಥೆಯಲ್ಲಿ ಅವರು ನೀಡಿದ ಭಾಷಣವು ಅತ್ಯಂತ ಪರಿಣಾಮಕಾರಿಯಾಗಿದ್ದು ಗಾಂಧೀಯವರ ನಿಲುವಿನ ತಳಪಾಯವನ್ನೇ ಅಲುಗಾಡಿಸಿತ್ತು. ಗಾಂಧೀಯವರ ಈ ರೀತಿಯ ವಿರೋಧದಿಂದ ಆಶ್ಚರ್ಯಪಟ್ಟಿದ್ದವರು ನೈಜ ಸಂಗತಿ ಏನೆಂದು ತಿಳಿದುಕೊಳ್ಳಲು ಡಾ. ಅಂಬೇಡ್ಕರ್ ಅವರ ಬಳಿ ಧಾವಿಸಿಬರುತ್ತಿದ್ದರು. ಈ ಸಮಯದಲ್ಲಿ ಮಿಸ್ ಮುರಿಯಲ್ ಲೆಸ್ಟರ್ ಎಂಬ ಮಹಿಳೆಯ ಮನೆಯಲ್ಲಿ ಗಾಂಧೀಯವರು ತಂಗಿದ್ದರು. ಅವರು ಕೂಡ ಡಾ. ಅಂಬೇಡ್ಕರ್ ಅವರನ್ನು ಭೇಟಿಯಾಗಿ ಅವರ ನಿಲುವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಟ್ಟರು. ಗಾಂಧೀ ಹಾಗೂ ಅಂಬೇಡ್ಕರ್ ಇವರಿಬ್ಬರಿಗೂ ಸಾಮಾನ್ಯ ಸ್ನೇಹಿತರಾಗಿದ್ದ ಒಬ್ಬರು ಇವರಿಬ್ಬರನ್ನು ಚಹಾಕೂಟಕ್ಕೆ ಆಹ್ವಾನಿಸಿ ಅವರಿಬ್ಬರಿಗೂ ಸಮಾಧಾನ ಪಡಿಸುವ ಪ್ರಯತ್ನಪಟ್ಟರು. ಅಸ್ಪೃಶ್ಯರ ಏಳಿಗೆಗೆ ಗಾಂಧಿ ಹೋರಾಡಿದ್ದಾರೆ ಹಾಗೂ ಮಾನವೀಯತೆಯ ದೃಷ್ಟಿಯಿಂದ ಬಹಳಷ್ಟು ಕೆಲಸ ಮಾಡಿದ್ದಾರೆ ಅಸ್ಪೃಶ್ಯತೆಯ ನಿರ್ಮೂಲನಕ್ಕೆ ಪ್ರಯತ್ನ ಪಡುತ್ತಿದ್ದಾರೆ ಎಂಬುದನ್ನು ಅಂಬೇಡ್ಕರ್ ಒಪ್ಪಿಕೊಂಡರು. ಆದರೆ, ಈ ವಿಷಯದಲ್ಲಿ ಮೂಲಭೂತ ವ್ಯತ್ಯಾಸಗಳಿದ್ದವು.

೧೯೩೧ರ ಅಕ್ಟೋಬರ್ ಕಡೆಯ ವೇಳೆಗೆ ಬ್ರಿಟನ್ನಿನಲ್ಲಿ ಚುನಾವಣೆಗಳು ಜರುಗಿ ಅಲ್ಲಿ ಟೋರಿಸ್ ಸರ್ಕಾರವು ಅಧಿಕಾರಕ್ಕೆ ಬಂದಿತ್ತು. ಕಾರ್ಮಿಕ ಸರ್ಕಾರವು ಸೋಲಲು ಕಾರಣ ಎಂದರೆ ಅವರ ನಿಲುವುಗಳೆಲ್ಲಾ ಅತಿಯಾಗಿ ವೈಜ್ಞಾನಿಕವಾಗಿತ್ತು ಹಾಗೂ ಸಾಮಾನ್ಯ ಜನರ ಚಿಂತನೆಗೆ ಮೀರಿದವಾಗಿದ್ದವು ಎಂದು ಡಾ. ಅಂಬೇಡ್ಕರ್ ವಿಶ್ಲೇಷಿಸಿದರು. ತಮ್ಮ ಒಂದು ಪತ್ರದಲ್ಲಿ ಡಾ. ಅಂಬೇಡ್ಕರ್ ಅವರು ಗಾಂಧಿಯನ್ನು ಬೆಂಬಲಿಸುತ್ತಿರುವ ಕೆಲ ಹಿಂದುಳಿದ ವರ್ಗಗಳ ನಾಯಕರು ಒಂದು ಅಂಶವನ್ನು ಅರ್ಥಮಾಡಿಕೊಳ್ಳುತ್ತಿಲ್ಲ.

---

* See PP 192-193 of this part

ಗಾಂಧೀಯವರು ವಿಶೇಷ ಚುನಾವಣಾಧಿಕಾರವನ್ನು ಮಾತ್ರ ವಿರೋಧಿಸುತ್ತಿಲ್ಲ, ಬದಲಿಗೆ ಶೋಷಿತ ವರ್ಗಗಳ ಜನರಿಗೆ ವಿಶೇಷ ಪ್ರಾತಿನಿಧ್ಯ ದೊರೆಯಬೇಕು ಎಂಬ ಅಂಶವನ್ನೇ ವಿರೋಧಿಸುತ್ತಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಇವರು ಈ ಅಂಶವನ್ನು ಅರ್ಥಮಾಡಿಕೊಂಡಿದ್ದಿದ್ದರೆ ಈ ಸಮಸ್ಯೆ ಎಂದೋ ನಿವಾರಣೆ ಆಗಿರುತ್ತಿತ್ತು ಎಂದರು.[೧]

ಅಲ್ಪಸಂಖ್ಯಾತರ ಉಪಸಮಿತಿಗೆ ಮೊದಲ ಅಧಿವೇಶನದಲ್ಲಿ ವಿಜ್ಞಾಪನಾ ಪತ್ರವನ್ನು ಸಲ್ಲಿಸಲಾಗಿತ್ತು. ಆದರೆ ೧೯೩೧ರ ನವೆಂಬರ ನಾಲ್ಕರಂದು ಮತ್ತೊಂದು ವಿಜ್ಞಾಪನಾ ಪತ್ರವನ್ನು ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ರಾವ್ ಬಹದ್ದೂರ್ ಆರ್. ಶ್ರೀನಿವಾಸನ್ ಅವರು ಜಂಟಿಯಾಗಿ ಸಲ್ಲಿಸಿದರು. ಆ ಪೂರಕ ವಿಜ್ಞಾಪನಾ ಪತ್ರದ ಸಾರಾಂಶ ಇಂತಿದೆ:– ಸಂಪಾದಕರು.

**"ಶೋಷಿತ ವರ್ಗಗಳು ವಿಶೇಷ ಪ್ರಾತಿನಿಧ್ಯಕ್ಕಾಗಿ ಸಲ್ಲಿಸಿರುವ ಪೂರಕ ವಿಜ್ಞಾಪನಾ ಪತ್ರ"**

ಡಾ. ಭೀಮರಾವ್ ಆರ್. ಅಂಬೇಡ್ಕರ್ ಹಾಗೂ ರಾವ್ ಬಹದ್ದೂರ್ ಆರ್. ಶ್ರೀನಿವಾಸನ್ ಅವರಿಂದ ಸಲ್ಲಿಕೆ.

ಸ್ವಯಂ ಆಡಳಿತವನ್ನು ಹೊಂದಲಿರುವ ಭಾರತದ ಸಂವಿಧಾನದಲ್ಲಿಯೇ ಶೋಷಿತ ವರ್ಗಗಳವರಿಗೆ ರಕ್ಷಣೆಗಳನ್ನು ಕಲ್ಪಿಸಬೇಕೆಂದು ಕಳೆದ ವರ್ಷ ನಾವು ಸಲ್ಲಿಸಿದ್ದ ಹಾಗೂ ಮುದ್ರಿತ ನಡಾವಳಿಯಲ್ಲಿ ಮೂರನೆಯ ಅನುಬಂಧವಾಗಿರುವ ನಮ್ಮ ವಿಜ್ಞಾಪನಾ ಪತ್ರದಲ್ಲಿ ಶೋಷಿತರಿಗೆ ವಿಶೇಷ ಪ್ರಾತಿನಿಧ್ಯದ ಸೌಲಭ್ಯವು ಅವರ ರಕ್ಷಣಾ ತಂತ್ರದ ಭಾಗವಾಗಿರಬೇಕೆಂದು ಚರ್ಚೆಗೆ ಬರುವಷ್ಟರಲ್ಲಿ ಅಲ್ಪಸಂಖ್ಯಾತರ ಉಪಸಮಿತಿಯು ಈ ವರ್ಷ ಈ ಪ್ರಶ್ನೆಯ ಚರ್ಚೆಯನ್ನು ಕೈಗೆತ್ತಿಕೊಂಡರೆ, ಪರಿಶೀಲನೆಗಾಗಿ ನಾವು ಈಗ ಒಂದು ಪೂರಕ ವಿಜ್ಞಾಪನಾ ಪತ್ರವನ್ನು ಎಲ್ಲಾ ವಿವರಗಳೊಂದಿಗೆ ಸಲ್ಲಿಸುತ್ತಿದ್ದೇವೆ.

**I. ವಿಶೇಷ ಪ್ರಾತಿನಿಧ್ಯದ ಮಿತಿ :**

A. ಪ್ರಾಂತೀಯ ಶಾಸನ ಸಭೆಯಲ್ಲಿ ವಿಶೇಷ ಪ್ರಾತಿನಿಧ್ಯ:

i) ಬಂಗಾಳದಲ್ಲಿ, ಕೇಂದ್ರ ಪ್ರಾಂತ್ಯಗಳಲ್ಲಿ, ಅಸ್ಸಾಂ, ಬಿಹಾರ, ಒರಿಸ್ಸಾ, ಪಂಜಾಬ್, ರಾಜ್ಯಗಳಲ್ಲಿ ಹಾಗೂ ಒಕ್ಕೂಟಗಳ ರಾಜ್ಯಗಳಲ್ಲಿ ಶೋಷಿತ ವರ್ಗಗಳ ಜನಸಂಖ್ಯೆಗೆ ತಕ್ಕಂತೆ ಅವರಿಗೆ ಪ್ರಾತಿನಿಧ್ಯ ನೀಡಬೇಕು. ಇವರ ಜನಸಂಖ್ಯೆಯನ್ನು ಸೈಮನ್ ಪೀಠ ಹಾಗೂ ಕೇಂದ್ರಿಯ ಸಮಿತಿಯ ಜನಗಣತಿಯ ಆಧಾರದ ಮೇಲೆ ನಿರ್ಧರಿಸಬೇಕು.

ii) ಮದರಾಸಿನಲ್ಲಿ ಶೋಷಿತ ವರ್ಗಗಳ ಜನರಿಗೆ ಶೇಕಡ ೨೨ ರಷ್ಟು ಪ್ರಾತಿನಿಧ್ಯ ದೊರೆಯಬೇಕು.

iii) ಬೊಂಬಾಯಿಯಲ್ಲಿ

a) ಒಂದು ವೇಳೆ ಸಿಂಧ್ ಪ್ರಾಂತ್ಯವು ಬೊಂಬಾಯಿಯ ಒಂದು ಭಾಗವಾಗಿಯೇ ಮುಂದುವರಿಯುವುದಾದರೆ ಶೋಷಿತ ವರ್ಗದ ಜನರಿಗೆ ಶೇಕಡ ೧೬ ಪ್ರಾತಿನಿಧ್ಯ ದೊರೆಯಬೇಕು.

b) ಒಂದು ವೇಳೆ ಸಿಂಧ್ ಪ್ರಾಂತ್ಯವು ಬೊಂಬಾಯಿಯಿಂದ ಬೇರ್ಪಟ್ಟರೆ ಮುಸಲ್ಮಾನರಿಗೆ ದೊರೆಯುವಷ್ಟೇ ಪ್ರಾತಿನಿಧ್ಯ ಶೋಷಿತವರ್ಗದವರಿಗೆ ದೊರೆಯಬೇಕು. ಏಕೆಂದರೆ ಇವರಿಬ್ಬರ ಜನಸಂಖ್ಯೆಯೂ ಸಮವಾಗಿದೆ.

---

*Keer, Pp. 169-181.

B. ಕೇಂದ್ರ ಶಾಸನ ಸಭೆಯಲ್ಲಿ ವಿಶೇಷ ಪ್ರಾತಿನಿಧ್ಯ

ಕೇಂದ್ರ ಶಾಸನಸಭೆಯ ಎರಡೂ ಸದನಗಳಲ್ಲಿ ಶೋಷಿತವರ್ಗದವರು ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯವನ್ನು ನೀಡಬೇಕು.

**ಮೀಸಲಾತಿ :**

ಶಾಸನ ಸಭೆಗಳಲ್ಲಿನ ಮೀಸಲಾತಿಯನ್ನು ಈ ಮುಂದಿನ ಪರಿಗಣನೆಗಳ ಪ್ರಕಾರ ನಿಗದಿಪಡಿಸಲಾಗಿದೆ.

೧) ಸೈಮನ್ ಸಮಿತಿ ಹಾಗೂ ಕೇಂದ್ರ ಸಮಿತಿಯ ಶೋಷಿತ ವರ್ಗದ ಜನರ ಸಂಖ್ಯೆಯನ್ನು ಸರಿಯಾಗಿ ಗಣತಿ ಮಾಡಿದೆ ಎಂದು ಭಾವಿಸಿ ಅದರ ಆಧಾರದ ಮೇರೆಗೆ ವಿಶೇಷ ಪ್ರಾತಿನಿಧ್ಯವನ್ನು ನಿಗದಿ ಮಾಡುತ್ತೇವೆ.

೨) ಸ್ವತಂತ್ರ ಶಾಸನ ಸಭೆಯು ಇಡೀ ಭಾರತದ ವ್ಯಾಪ್ತಿಯನ್ನು ಹೊಂದಿರುತ್ತದೆ ಎಂದು ನಾವು ಭಾವಿಸುತ್ತೇವೆ. ಈ ಸಂದರ್ಭದಲ್ಲಿ ಭಾರತದ ರಾಜ್ಯಗಳಲ್ಲಿ, ಶೋಷಿತ ವರ್ಗದ ಜನರ ಸಂಖ್ಯೆ, ರಾಜ್ಯಪಾಲರ ಆಡಳಿತದಲ್ಲಿ ರಾಜ್ಯಗಳಲ್ಲಿ ಇವರ ಸಂಖ್ಯೆ ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಪ್ರಾತಿನಿಧ್ಯವನ್ನು ನಿರ್ಧರಿಸಬೇಕಾಗುತ್ತದೆ.

೩) ಬ್ರಿಟಿಷ್ ಭಾರತದ ರಾಜ್ಯಗಳಲ್ಲಿ ಅಧಿಕಾರದ ವ್ಯಾಪ್ತಿ ಪ್ರದೇಶದಲ್ಲಿ ಬದಲಾವಣೆ ಆಗುವುದಿಲ್ಲ ಎಂದು ನಾವು ಭಾವಿಸಿದ್ದೇವೆ.

ಆದರೆ ಜನಸಂಖ್ಯೆ ಕುರಿತು ವಿರೋಧವನ್ನು ಯಾರಾದರೂ ವ್ಯಕ್ತಪಡಿಸುವುದಾದರೆ, ಈಗಾಗಲೇ ಕೆಲ ಪಕ್ಷಗಳು ಬೆದರಿಕೆ ಒಡ್ಡಿರುವಂತೆ, ಶೋಷಿತ ವರ್ಗದವರಿಗೆ ಯಾವುದೇ ಹಿಡಿತ ಇರದಿರುವ ಗಣತಿಯನ್ನು ನಡೆಸಿದರೆ ಗಣತಿಯಲ್ಲಿ. ಒಂದು ವೇಳೆ ಶೋಷಿತ ವರ್ಗದವರ ಜನಸಂಖ್ಯೆ ಕಡಿಮೆ ಇದ್ದರೆ ಅಥವಾ ಆಡಳಿತದ ಪ್ರದೇಶಗಳಲ್ಲಿ ಬದಲಾವಣೆ ಉಂಟಾದರೆ ಆಗ ಈ ಪ್ರಾತಿನಿಧ್ಯದ ಪ್ರಮಾಣವನ್ನು ಬದಲಿಸುವ ಅಧಿಕಾರ ಶೋಷಿತವರ್ಗದ ಜನರಿಗೆ ಇರುತ್ತದೆ. ಈ ವಿಷಯದಲ್ಲಿ ಬೇಕಿರುವ ಸವಲತ್ತುಗಳನ್ನು ಪಡೆಯುವ ಅಧಿಕಾರವೂ ಇರುತ್ತದೆ. ಅಂತೆಯೇ ಅಖಿಲ ಭಾರತ ಸಂಸ್ಥೆಯು ಒಂದು ವೇಳೆ ಅಸ್ತಿತ್ವಕ್ಕೆ ಬರದೇ ಹೋದರೆ ಅವರು ಒಂದು ಮರು ಹೊಂದಾಣಿಕೆಗೆ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಅವರು ಸಿದ್ಧವಿರುತ್ತಾರೆ.

**II ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಬಗ್ಗೆ**

೧. ಶೋಷಿತ ವರ್ಗದ ಜನರಿಗೆ ಕೇಂದ್ರ ಹಾಗೂ ಪ್ರಾಂತೀಯ ಶಾಸನ ಸಭೆಗಳಿಗೆ ತಮ್ಮ ಪ್ರತಿನಿಧಿಗಳನ್ನು ತಮಗೆಂದೇ ಇರುವ ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಮೂಲಕ ಆಯ್ಕೆ ಮಾಡುವ ಹಕ್ಕು ಇರುತ್ತದೆ.

ಪ್ರಾಂತೀಯ ಅಥವಾ ಕೇಂದ್ರೀಯ ಶಾಸನ ಸಭೆಯ ಮೇಲ್ಮನೆಯ ಪ್ರಾತಿನಿಧ್ಯಕ್ಕೆ ನೇರವಲ್ಲದ ಚುನಾವಣೆ ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ಇದರಲ್ಲಿ ಕೇವಲ ಪ್ರಾಂತೀಯ ಶಾಸನ ಸಭೆಯ ಸದಸ್ಯರು ಮಾತ್ರವೇ ಮತ ನೀಡಬಹುದು. ಮೇಲ್ಮನೆಯಲ್ಲಿನ ಪ್ರಾತಿನಿಧ್ಯದ ವಿಷಯದಲ್ಲಿ ಮಾತ್ರ ತಮ್ಮ ಪ್ರತ್ಯೇಕ ಮತಕ್ಷೇತ್ರಗಳ ಹಕ್ಕನ್ನು ಬಿಟ್ಟು ಕೊಡಲು ಶೋಷಿತ ವರ್ಗಗಳ ಜನರು ಸಿದ್ಧರಿದ್ದಾರೆ. ಆದರೆ ಇದಕ್ಕೆ ಅವರೊಂದು ಷರತ್ತು ವಿಧಿಸಿದ್ದಾರೆ. ಅದೇನೆಂದರೆ ಈ ರೀತಿ ಅವರು ಚುನಾವಣೆಗೆ ಒಪ್ಪಿಗೆ ಸೂಚಿಸಿದರೆ ಅವರಿಗೆ ನಿಗದಿಯಾಗಿರುವಷ್ಟು ಸ್ಥಾನಗಳನ್ನು ನೀಡಬೇಕು ಎಂಬುದು.

೨. ಶೋಷಿತ ವರ್ಗದ ಜನರ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ಸಾಮಾನ್ಯ ಚುನಾವಣಾ

ಕ್ಷೇತ್ರಗಳೊಡನೆ ಹಾಗೂ ಮೀಸಲು ಕ್ಷೇತ್ರದೊಡನೆ ಸೇರಿಸಬಾರದು. ಈ ರೀತಿ ಮಾಡಲೇಬೇಕಾದಂತಹ ಪರಿಸ್ಥಿತಿ ಏನಾದರೂ ಒದಗಿ ಬಂದರೆ ಕೆಳಗಿನ ನಿಬಂಧನೆಗಳನ್ನು ಪೂರ್ಣಗೊಳಿಸಬೇಕು

೧) ಸಂಬಂಧಪಟ್ಟ ಶಾಸನ ಸಭೆಯಲ್ಲಿನ ಸದಸ್ಯರು ಬಹುಮತದಿಂದ ತೀರ್ಮಾನಿಸಿ, ಜನಾಭಿಪ್ರಾಯವನ್ನು ನಡೆಸಬೇಕು. ಹಾಗೆ ಮಾಡುವಲ್ಲಿ ಆ ಕ್ಷೇತ್ರದಲ್ಲಿನ ಶೋಷಿತವರ್ಗದ ಬಹುಮಂದಿಗೆ ಮತದಾನದ ಹಕ್ಕು ಇರತಕ್ಕದ್ದು.

೨) ವಯಸ್ಕರ ಮತದಾನದ ಹಕ್ಕು ಸರಿಯಾಗಿ ಜಾರಿ ಆಗುವವರೆಗೆ ಮತ್ತು ಇನ್ನು ಕನಿಷ್ಠ ೨೦ ವರ್ಷಗಳವರೆಗೆ ಈ ನಿಯಮವನ್ನು ಬದಲಿಸಬಾರದು.

**III ಶೋಷಿತ ವರ್ಗವನ್ನು ವಿವರಿಸುವ ಅಗತ್ಯ**

ಈ ಹಿಂದೆ, ಶೋಷಿತ ವರ್ಗಗಳ ಪ್ರಾತಿನಿಧ್ಯವನ್ನು ಬಹಳಷ್ಟು ದುರುಪಯೋಗಪಡಿಸಿಕೊಳ್ಳಲಾಗಿತ್ತು. ಶೋಷಿತ ವರ್ಗಗಳಿಗೆ ಸೇರದವರನ್ನು ಪ್ರಾಂತೀಯ ಶಾಸನ ಸಭೆಗಳಿಗೆ ಅವರ ಪ್ರತಿನಿಧಿಗಳನ್ನಾಗಿ ನಾಮಕರಣಮಾಡಲಾಗುತ್ತಿತ್ತು ಹಾಗೂ ತಾವು ಶೋಷಿತ ವರ್ಗದವರ ಪ್ರತಿನಿಧಿಗಳೆಂದು ಆ ವರ್ಗಗಳಿಗೆ ಸೇರದವರು ಚುನಾಯಿತರಾಗುತ್ತಿದ್ದಂತಹ ಪ್ರಕರಣಗಳಿಗೇನೂ ಕಡಿಮೆಯಿರಲಿಲ್ಲ. ಇದಕ್ಕೆ ಇದ್ದ ಕಾರಣವೆಂದರೆ, ರಾಜ್ಯಪಾಲರಿಗೆ ಈ ವರ್ಗದವರ ಪ್ರತಿನಿಧಿಗಳನ್ನು ನಾಮಕರಣಮಾಡುವ ಅಧಿಕಾರವನ್ನು ನೀಡಿದ್ದರೂ, ರಾಜ್ಯಪಾಲರು ಶೋಷಿತವರ್ಗದವರನ್ನೇ ಅವರ ಪ್ರತಿನಿಧಿಗಳನ್ನಾಗಿ ಆಯಬೇಕೆಂಬ ವಿಧಿಯೇನೂ ಇರಲಿಲ್ಲ. ಭವಿಷ್ಯದ ಸಂವಿಧಾನದಲ್ಲಿ ನಾಮಕರಣಗೊಂಡ ಸದಸ್ಯರು ನಂತರ ಚುನಾವಣೆಗಳಲ್ಲಿ ಸ್ಪರ್ಧಿಸಿ ಆಯ್ಕೆಯಾಗಬೇಕೆಂಬ ನಿಯಮವನ್ನು ಅಳವಡಿಸುತ್ತಿರುವುದರಿಂದ ಇಂತಹ ದುರುಪಯೋಗವು ನಡೆಯುವುದಕ್ಕೆ ಆಸ್ಪದವಿರುವುದಿಲ್ಲ. ಆದರೂ, ಇನ್ನು ಮುಂದೆ ಶೋಷಿತವರ್ಗದವರಿಗೆ ನೀಡಲಾಗುವ ವಿಶೇಷ ಪ್ರಾತಿನಿಧ್ಯದಲ್ಲಿ ಯಾವುದೇ ರೀತಿಯಲ್ಲಿಯೂ ಇಂತಹ ದುರುಪಯೋಗವಾಗಿ, ಮೂಲ ಉದ್ದೇಶಕ್ಕೆ ಭಂಗವೊದಗಬಾರದೆಂಬ ದೃಷ್ಟಿಯಿಂದ ಈ ಕೆಳಗಿನ ನಿಯಮವನ್ನು ಅಳವಡಿಸಬೇಕೆಂದು ನಾವು ಸೂಚಿಸುತ್ತೇವೆ:

೧. ಶೋಷಿತ ವರ್ಗಗಳವರು ಪ್ರತ್ಯೇಕ ಮತಕ್ಷೇತ್ರಗಳನ್ನು ಹೊಂದಿರುವುದಷ್ಟೇ ಅಲ್ಲದೆ, ತಮ್ಮ ವರ್ಗಕ್ಕೆ ಸೇರಿದವರನ್ನು ಮಾತ್ರ ತಮ್ಮ ಪ್ರತಿನಿಧಿಯನ್ನಾಗಿ ಚುನಾಯಿಸಬೇಕು.

೨. ಈ ವ್ಯವಸ್ಥೆಯು ಶೋಷಿತ ವರ್ಗ ಎನ್ನುವ ವರ್ಗವನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರೆಂದು ಆಯಾ ಪ್ರಾಂತ್ಯಗಳಲ್ಲಿ ಪರಿಗಣಿಸಲಾಗಿರುವವರೆಗೆ ಮಾತ್ರ ಇರಬೇಕು ಮತ್ತು ಅ ವರ್ಗಗಳು ಚುನಾವಣಾ ಉದ್ದೇಶಕ್ಕಾಗಿ ಸಿದ್ಧಪಡಿಸಿರುವ ಪಟ್ಟಿಯಲ್ಲಿ ನಮೂದಿಸಿರುವ ಅಸ್ಪೃಶ್ಯವರ್ಗದಲ್ಲಿ ಒಂದಾಗಿರಬೇಕು.

**IV ನಾಮಕರಣ ವ್ಯವಸ್ಥೆ :**

ಈ ವಿಷಯದಲ್ಲಿ ನಾವು ಒಂದು ಅಂಶವನ್ನು ಗಮನಕ್ಕೆ ತರಲು ಬಯಸುತ್ತೇವೆ. ಅದೇನೆಂದರೆ ಇದೀಗ ಜಾರಿಯಲ್ಲಿ ಇರುವ ಶೋಷಿತ ವರ್ಗಗಳ ನಾಮಕರಣ ವ್ಯವಸ್ಥೆಯು ಸೂಕ್ತವಲ್ಲ ಎಂಬುದು ಶೋಷಿತ ವರ್ಗಗಳ ಕೆಲ ನಾಯಕರು ಹಾಗೂ ಹಿತಚಿಂತಕರ ಅಭಿಪ್ರಾಯ. ಅದು ಅತ್ಯಂತ ಅಪಮಾನಕಾರಿ ಹಾಗೂ ಕೆಳಮಟ್ಟದ ಚಿಂತನೆಯಾಗಿದೆ. ಹೊಸ ಸಂವಿಧಾನ ರಚನೆಯಲ್ಲಿ ಇದನ್ನು ಸೂಕ್ತವಾಗಿ ಬದಲಿಸುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ಇದರಿಂದ ಅಧಿಕೃತವಾಗಿ ಈಗ ಚಾಲ್ತಿಯಲ್ಲಿ ಇರುವ ನಾಮಾವಳಿಯನ್ನು

ಬದಲಿಸಬಹುದು. ನಾವು ಅವರನ್ನು "ಜಾತಿಗೆ ಸೇರದ ಹಿಂದೂಗಳು" ಎಂದು ಕರೆಯಬಹುದು. ಇಲ್ಲವೇ "ಶೋಷಿತ ವರ್ಗಗಳವರು' ಎನ್ನುವದಕ್ಕೆ ಬದಲಾಗಿ "ಸುಧಾರಣಾವಾದಿ ಹಿಂದೂಗಳೂ" ಅಥವಾ "ರೂಢಿವಿರೋಧಿ ಹಿಂದೂಗಳು" ಎಂದು ಕರೆಯಬಹುದು. ಯಾವುದೇ ಒಂದು ನಿರ್ದಿಷ್ಟ ರೀತಿಯ ಹೆಸರನ್ನೇ ನೀಡಬೇಕು ಎಂಬ ಬೇಡಿಕೆ ಸಲ್ಲಿಸುವ ಅಧಿಕಾರ ನಮಗಿಲ್ಲ. ನಾವು ಕೇವಲ ಸೂಚಿಸಬಹುದಷ್ಟೇ. ಈ ರೀತಿಯ ಸಲಹೆಗಳನ್ನು ನಾವು ಸರಿಯಾಗಿ ವಿವರಿಸಿದರೆ ಅವುಗಳಲ್ಲಿ ಸೂಕ್ತವಾದುದನ್ನು ಶೋಷಿತ ವರ್ಗದ ಜನರು ಅತ್ಯಂತ ಸಂತಸದಿಂದ ಹಾಗೂ ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತಾರೆ ಎಂಬ ಖಾತ್ರಿ ನಮಗಿದೆ.

ಈ ವಿಜ್ಞಾಪನಾ ಪತ್ರದಲ್ಲಿ ಸಲ್ಲಿಸಿರುವ ಮನವಿಗಳನ್ನು ಬೆಂಬಲಿಸುತ್ತಾ ಭಾರತದ ಉದ್ದಗಲದಿಂದ ನಮಗೆ ತಂತಿಯ ಸಂದೇಶಗಳು ಬಂದಿವೆ.*

ಈ ಸಮಾವೇಶ ಜಾರಿಯಲ್ಲಿ ಇದ್ದ ಸಂದರ್ಭದಲ್ಲಿಯೇ ಚಕ್ರವರ್ತಿಗಳು ಭಾರತದಿಂದ ಆಗಮಿಸಿದ್ದ ಗಣ್ಯರಿಗೆ ನವಂಬರ ೫ ರಂದು ಔತಣಕೂಟವೊಂದನ್ನು ಏರ್ಪಡಿಸಿದ್ದರು. ಈ ಔತಣಕೂಟದಲ್ಲಿ ಆಯ್ದ ಕೆಲ ಸದಸ್ಯರು ಮಾತನಾಡಬೇಕು ಎಂದು ನಿಗದಿಯಾಗಿತ್ತು. ಈ ಸಮಯದಲ್ಲಿ ಗಾಂಧೀಯವರು ತಲೆಗೆ ಟೋಪಿಯನ್ನೇನೂ ಹಾಕಿಕೊಂಡಿರಲಿಲ್ಲ. ಆತ ಎಂದಿನಂತೆ ತಮ್ಮ ಸಾಂಪ್ರದಾಯಿಕ ಹತ್ತಿಯ ಬಟ್ಟೆ ತೊಟ್ಟು ಚಪ್ಪಲಿಗಳನ್ನು ಧರಿಸಿದ್ದರು. ಆ ಸಂದರ್ಭದಲ್ಲಿಯೇ ಚಕ್ರವರ್ತಿಗಳು ಡಾ. ಅಂಬೇಡ್ಕರ್ ಅವರಿಗೆ ಭಾರತದಲ್ಲಿ ಅಸ್ಪೃಶ್ಯರ ಪರಿಸ್ಥಿತಿಯನ್ನು ವಿವರಿಸುವಂತೆ ಕೇಳಿಕೊಂಡರು. ಡಾ. ಅಂಬೇಡ್ಕರ್ ಅವರು ತಮ್ಮ ಎಂದಿನ ಹೃದಯ ತುಂಬಿದ ಭಾವನೆಗಳಿಂದ, ಭಾವನೆ ಸೂಸುವ ಕಣ್ಣುಗಳಿಂದ ಹಾಗೂ ಉದ್ವೇಗ ಸೂಸುವ ಮುಖಚರ್ಯೆಯಿಂದ ಅವರ ಪರಿಸ್ಥಿತಿಯನ್ನು ವಿವರಿಸಿದರು. ಇದನ್ನು ಅತ್ಯಂತ ಆಸಕ್ತಿಯಿಂದ ಆಲಿಸಿದ ಚಕ್ರವರ್ತಿಗಳು ನಡುಗಿ ಹೋದರು. ಅನಂತರ ಡಾ. ಅಂಬೇಡ್ಕರ್ ಅವರೊಂದಿಗೆ ಸಾಮಾನ್ಯ ವಿಷಯಗಳನ್ನು ಕುರಿತು ಮಾತನಾಡಿದ ಚಕ್ರವರ್ತಿಗಳು ಅವರ ತಂದೆಯನ್ನು ಕುರಿತು ಸೌಜನ್ಯದಿಂದ ವಿಚಾರಿಸಿದರು. ಆತ ಯಾವ ಸ್ಥಳದಲ್ಲಿ ಶಿಕ್ಷಣ ಮುಗಿಸಿದ ಇಷ್ಟೊಂದು ಮೇಲ್ಮಟ್ಟದ ಶಿಕ್ಷಣ ಪಡೆಯಲು ಹೇಗೆ ಸಾಧ್ಯವಾಯಿತು ಎಂದು ವಿವರವಾಗಿ ಕೇಳಿ ತಿಳಿದುಕೊಂಡರು.[೧]

ಒಂದು ವಿಷಯ ಬ್ರಿಟನ್ನಿನ ಪ್ರಧಾನಿಯವರಿಗೆ ಮನವರಿಕೆ ಆಯಿತು. ಅದೇನೆಂದರೆ ಅಲ್ಪಸಂಖ್ಯಾತರ ಈ ಸಮಸ್ಯೆಗೆ ಯಾವುದೇ ಒಮ್ಮತದ ಪರಿಹಾರ ಇರಲಿಲ್ಲ. ಆಗ ಆತ ಅಲ್ಪಸಂಖ್ಯಾತರ ಉಪ ಸಮಿತಿಯ ಸದಸ್ಯರೆಲ್ಲರಿಗೂ ಈ ಕೋಮು ಸಮಸ್ಯೆಯನ್ನು ಪರಿಹರಿಸುವ ಸಂಪೂರ್ಣ ಅಧಿಕಾರವನ್ನು ತಮಗೆ ನೀಡುವಂತೆ ಮತ್ತು ಎಲ್ಲರೂ ತಮ್ಮ ನಿರ್ಧಾರಕ್ಕೆ ಬದ್ಧರಾಗಿ ಇರುವುದಾಗಿ ಬರೆದುಕೊಟ್ಟು ಅದಕ್ಕೆ ಸಹಿಹಾಕುವಂತೆ ಹೇಳಿದರು. ಈ ಪತ್ರಕ್ಕೆ ಇತರರೊಂದಿಗೆ ಮಹಾತ್ಮಾಗಾಂಧಿಯವರು ಕೂಡ ಸಹಿ ಹಾಕಿದರು. ಆದರೆ ಈ ಪತ್ರಕ್ಕೆ ಅಂಬೇಡ್ಕರ್ ಸಹಿ ಹಾಕಲಿಲ್ಲ ಏಕೆಂದರೆ ತಮ್ಮ ಬೇಡಿಕೆಗಳು ನ್ಯಾಯಸಮ್ಮತವಾದವು ಎಂಬ ನಂಬಿಕೆ ಅವರಿಗಿತ್ತು. ಅನಂತರ ಪ್ರಧಾನ ಮಂತ್ರಿಯವರು ಈ ಸಮಾವೇಶವನ್ನು ಡಿಸೆಂಬರ್ ೧ಕ್ಕೆ ಮುಂದೂಡಿದರು. ಈ ಮನವಿ ಪತ್ರ ಹೊರ ಬರುವ ಮುನ್ನ ಸರ್ ಮಿರ್ಜಾ ಇಸ್ಮಾಯಿಲ್ ಅವರ ನಿವಾಸದಲ್ಲಿ ಗಾಂಧೀಯವರನ್ನು

---

* For previous Memorandaum see apendix to proceedings of the Minorities Sub Committee of the first sesion of the Conference. This suppementary memorandurm dated 4th Nov 1931 is printed Appendix VII in the orginal proceedings a Pp 1409-11

1. Keer P 181

ಭೇಟಿಯಾಗಿ ಡಾ. ಅಂಬೇಡ್ಕರ್ ಚರ್ಚಿಸಿದ್ದರು. ಅಂಬೇಡ್ಕರ್ ಅವರ ಬೆಂಬಲ ಪಡೆಯಲು ಗಾಂಧೀಯವರು ಒಂದು ನವೀನ ರೀತಿಯನ್ನು ಆಲೋಚಿಸಿದ್ದರು. ಅವರು ಹೇಳಿದ್ದೇನೆಂದರೆ ಒಂದು ವೇಳೆ ಮೀಸಲಾತಿ ಇಲ್ಲದೆ ಮಹಾ ಚುನಾವಣೆಯನ್ನು ಗೆಲ್ಲಲು ಶೋಷಿತ ವರ್ಗದ ಪ್ರತಿನಿಧಿಗಳು ವಿಫಲರಾದರೆ ಅವರು ಅರ್ಹ ಅಭ್ಯರ್ಥಿ ಎಂದು ಶೋಷಿತ ವರ್ಗದವರು ನ್ಯಾಯಾಲಯದಲ್ಲಿ ಸಾಬೀತು ಪಡಿಸಬೇಕು.[೧]

೨ನೆಯ ಸುತ್ತಿನ ದುಂಡು ಮೇಜಿನ ಸಮಾವೇಶವು ಮುಂದೂಡಲ್ಪಟ್ಟ ನಂತರ ಹಲವಾರು ಜನರು ಹಾಗೂ ಹಲವಾರು ಪತ್ರಿಕೆಗಳು ಬೇರೆ ಬೇರೆಯ ರೀತಿಯ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದವು. ಅವುಗಳಲ್ಲಿ ಆಯ್ದ ಕೆಲವನ್ನು ಇಲ್ಲಿ ನೀಡಲಾಗಿದೆ.

"ಶ್ರೀ ಟಿ.ಎ. ರಾಮನ್ ಎಂಬುವವರು ಭಾರತದ ಒಬ್ಬ ಪ್ರಖ್ಯಾತ ಪತ್ರಕರ್ತರು, ಈತ ಭಾರತಕ್ಕೆ ಹಿಂದಿರುಗುತ್ತಿದ್ದರು. ಆಗ ಸಹಪ್ರಯಾಣಿಕನೊಬ್ಬ ಅವರಿಗೆ ಈ ರೀತಿ ಹೇಳಿದ್ದ "ನಾನು ಯಾರನ್ನಾದರೂ ಕೊಲೆ ಮಾಡಬಯಸಿದೆನೆಂದರೆ ಅದು ಡಾ. ಅಂಬೇಡ್ಕರ್ ಅವರನ್ನು"[೨] "ಸುಬೋಧ ಪತ್ರಿಕಾ" ಎಂಬ ವಾರಪತ್ರಿಕೆ ತನ್ನ ೧೯೩೧ರ ೧೫ನೆಯ ನವೆಂಬರ್ ಪ್ರಕಟಣೆಯಲ್ಲಿ ಈ ರೀತಿ ಬರೆದಿತ್ತು :

ಶೋಷಿತ ವರ್ಗದ ಜನರ ಬೇಡಿಕೆಗಳಿಗೆ ಮಹಾತ್ಮ ಗಾಂಧೀಯವರ ನಿಲುವು ಏನೆಂದು ಅರ್ಥವೇ ಆಗುತ್ತಿಲ್ಲ. ಎಷ್ಟೇ ಕಡಿಮೆ ಹೇಳಬೇಕೆಂದರೆ ಅವರ ಈ ವಿರೋಧ ಅಕಾರಣ ಹಾಗೂ ಕಿರಿಕಿರಿಯನ್ನುಂಟು ಮಾಡುತ್ತವೆ. ಯಾವುದೇ ಒಂದು ಸಮುದಾಯಕ್ಕೆ ಸಂಪೂರ್ಣ ರಕ್ಷಣೆಯ ಅಗತ್ಯ ಇದೆ ಎಂದರೆ ಅದು ಅಸ್ಪೃಶ್ಯರ ವರ್ಗ. ಮುಸಲ್ಮಾನರು ಹಾಗೂ ಸಿಖ್ಖರು ಒಳ್ಳೆಯ ರಕ್ಷಣೆ ಪಡೆದಿದ್ದಾರೆ. ಆದರೆ ಕಾಮನ್‌ವೆಲ್ತ್ ಕೂಟದಲ್ಲಿ ಸಹಾನುಭೂತಿ ಪಡೆಯಲು ಅವರು ಭಯದ ಮುಖವಾಡವನ್ನು ಧರಿಸಿದ್ದಾರೆ. ಈಗ ನಾವು ಕೇಳುತ್ತೇವೆ. ಇಂತಹ ಬಲಿಷ್ಠ ಪಂಗಡಗಳ ಬೇಡಿಕೆಗಳಿಗೆ ಮಹಾತ್ಮ ಗಾಂಧೀಯವರು ತಲೆದೂಗುವುದು ಎಷ್ಟು ಸೂಕ್ತ? ಅಂತೆಯೇ ಬಲಹೀನ ಅಸ್ಪೃಶ್ಯ ಪಂಗಡದವರ ಬೇಡಿಕೆಗಳನ್ನು ನಿರಾಕರಿಸುವುದು ಎಷ್ಟು ಸೂಕ್ತ? ಇದನ್ನು ಎಳೆದಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಇದುವರೆಗೂ ಈ ಕೋಮು ಸಮಸ್ಯೆಯನ್ನು ಪರಿಹರಿಸುವಲ್ಲಿ ಮಹಾತ್ಮಗಾಂಧೀ ವಿಫಲರಾಗಿದ್ದರೆ. ಅದಕ್ಕೆ ನಾವು ಅವರನ್ನೇ ಹೊಣೆಗಾರನ್ನಾಗಿಸಬೇಕಾಗುತ್ತದೆ. ಡಾ. ಅಂಬೇಡ್ಕರ್ ಅವರ ಮಾತುಗಳು ಅಸಹನೆಯಿಂದ ಕೂಡಿರುತ್ತದೆ, ನಿಜ. ಆದರೆ ಅದರ ಹಿಂದೆ ಬಲವಾದ ಕಾರಣಗಳಿವೆ. ಅದನ್ನು ಅವರು ಮುಂದಿಡುವ ರೀತಿ ಸರಿಯಿಲ್ಲ ಅಷ್ಟೇ. ಆದರೆ ಅವರ ಮಾತುಗಳೆಲ್ಲಾ ಬುದ್ಧಿವಂತಿಕೆಯಿಂದ ತುಂಬಿರುತ್ತವೆ. ಕಾಂಗ್ರೆಸ್‌ನ ಆಶ್ರಯವನ್ನು ಪಡೆಯುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಅದರ ಸಿದ್ಧಾಂತಗಳು ಗಾಂಧಿಯವರ ಇಚ್ಛೆಯಂತೆ ಬದಲಾಗುತ್ತದೆ. ಕಾಂಗ್ರೆಸ್ ಪಕ್ಷವು ಅಸ್ಪೃಶ್ಯತೆಯನ್ನು ತೊಡೆದು ಹಾಕುವಲ್ಲಿ ಅಡ್ಡಾದಿಡ್ಡಿಯ ನೀತಿಯನ್ನು ಅನುಸರಿಸುತ್ತಿದೆ ಎಂದು ನಮಗೆ ಎನಿಸುತ್ತಿದೆ. ಇಲ್ಲದಿದ್ದರೆ ನೆಹರೂ ಸಮಿತಿಯಲ್ಲಿ ಶೋಷಿತ ವರ್ಗಗಳ ಸದಸ್ಯರು ಏಕಿರಲಿಲ್ಲ ಎಂದು ನಾವು ಪ್ರಶ್ನಿಸಬೇಕಾಗುತ್ತದೆ.

ಅಲ್ಪಸಂಖ್ಯಾತರ ಸಮಸ್ಯೆ ಬಗೆಹರಿಯಲು ಸ್ವಲ್ಪ ಸಮಯ ಹಿಡಿದು ಅದರಿಂದ ಅವರಿಗೆ ಸ್ವಾತಂತ್ರ್ಯ ದೊರೆಯಲು ತಡವಾಗಬಹುದು ಎನ್ನುವುದಾರೆ, ಅಲ್ಲಿಯವರೆಗೂ ಪ್ರಾಂತೀಯ ಸ್ವಾಯತ್ತತೆಯನ್ನು ಒಪ್ಪಿಕೊಳ್ಳಬಹುದು. ಹೀಗೆಂದು ಯಾರ ಬಳಿಯೂ ಸಮಾಲೋಚಿಸದೇ ಗಾಂಧೀಜಿ ಅವರು ತಮ್ಮ ಒಪ್ಪಿಗೆಯನ್ನು ಬ್ರಿಟನ್ನಿನ ಪ್ರಧಾನ ಮಂತ್ರಿಗೆ ನೀಡಿದ್ದರು. ಈ ಖಾಸಗಿ ಸಂವಾದವು ಇತರರಿಗೆ ಗೊತ್ತಾದ

1. Keer Pp. 190-191
2. Keer P. 183

ನಂತರ ಇತರ ಗಣ್ಯರಲ್ಲಿ ಕೋಲಾಹಲ ಉಂಟು ಮಾಡಿತು. ಮುಂದುವರಿದ ಹಿಂದೂಗಳ ಪ್ರತಿನಿಧಿಗಳಾಗಿದ್ದ ಡಾ. ಸಪ್ರು, ಜಯಕರ್ ಹಾಗೂ ಡಾ. ಮುಂಜೆ, ಮಾಳವೀಯಾ ಮುಂತಾದವರು ಕೂಡ ದಂಗುಬಡಿದು ಹೋದರು. ಅವರು ಕೂಡ ಗಾಂಧೀಜಿ ಈ ರೀತಿ ಹೇಳಿರುವುದು ಸತ್ಯವೇ ಎಂದು ತಿಳಿಯುವ ಪ್ರಯತ್ನಪಟ್ಟರು. ಇಂದೂಲಾಲ ಯಾಜ್ಞಿಕ್ ಎಂಬ ಬ್ರಾಹ್ಮಣ ಬಹಳ ವರ್ಷಗಳಿಂದಲೂ ಗಾಂಧೀಜಿಯವರ ಸಹವರ್ತಿಯಾಗಿದ್ದರು. ಅವರು 'ದಿ ಸಂಡೇ ಅಡ್ವೋಕೇಟ್' ಎಂಬ ಪತ್ರಿಕೆಯ ವರದಿಗಾರರಾಗಿ ಲಂಡನ್ನಿಗೆ ತೆರಳಿದ್ದರು. ಆ ಪತ್ರಿಕೆಯ ೧೯೩೧ರ ಡಿಸೆಂಬರ ೬ರ ಸಂಚಿಕೆಯಲ್ಲಿ ಅವರು ಈ ರೀತಿ ಬರೆದಿದ್ದರು:

'ಪ್ರಾಂತೀಯ ಸ್ವಾಯತ್ತತೆಗೆ ಗಾಂಧೀಯವರು ಒಪ್ಪಿಗೆ ಸರ್ಕಾರಕ್ಕೆ ಸೂಚಿಸಿದ್ದಾರೆ. ಆದರೆ ನಾನು ಒಂದು ಅಂಶ ಸ್ಪಷ್ಟಪಡಿಸುತ್ತೇನೆ. ಅದೇನೆಂದರೆ ಈಗಾಗಲೇ ಗಾಂಧೀಯವರು ತಮ್ಮನ್ನು ತಾವು ಸಂಪೂರ್ಣವಾಗಿ ಬ್ರಿಟಿಷ್ ಆಡಳಿತಕ್ಕೆ ಸಮರ್ಪಿಸಿಕೊಂಡು ಬಿಟ್ಟಿದ್ದಾರೆ. ಲಾರ್ಡ್ ಲೋಧಿಯನ್ ಅವರೊಂದಿಗೆ ಗಾಂಧೀಯವರು ರಹಸ್ಯ ಒಪ್ಪಂದ ಮಾಡಿಕೊಂಡಿರುವ ಸುಳಿವು ನನಗೆ ಹೋದ ವಾರವೇ ದೊರೆತಿತ್ತು. ಪ್ರಜಾಪ್ರಭುತ್ವದತ್ತ ನೋಡುತ್ತಿರುವ ಭಾರತ ಸರ್ಕಾರದ ಮೊತ್ತಮೊದಲನೆಯ ಹೆಜ್ಜೆಯಾಗಿ ಪ್ರಾಂತೀಯ ಸ್ವಾಯತ್ತತೆಗೆ ಗಾಂಧಿಯವರು ಒಪ್ಪಿಗೆ ಸೂಚಿಸಿದ್ದರು. ಆದರೆ ಈ ಒಪ್ಪಂದಕ್ಕೆ ಗಾಂಧೀಯವರೇನೂ ಸುಮ್ಮನೆ ಒಳಪಟ್ಟಿರಲಿಲ್ಲ. ಈ ಪ್ರಾಂತೀಯ ಸರ್ಕಾರಗಳು ಆನಂತರ ಶಾಸಕಾಂಗ ಸಭೆಗಳಾಗಿ ಮಾರ್ಪಾಡು ಆಗಬೇಕು ಹಾಗೂ ಪ್ರಾಂತ್ಯಗಳು ಭಾರತದ ಸಂವಿಧಾನದ ರಚನೆಯಲ್ಲಿ ಪಾತ್ರ ವಹಿಸಬೇಕು ಎಂಬುದನ್ನು ಸ್ಪಷ್ಟಪಡಿಸಿದ್ದರು. ಆದರೆ ಸರ್ಕಾರ ಈ ಷರತ್ತಿಗೆ ಒಪ್ಪಿಗೆ ನೀಡಿರಲಿಲ್ಲ. ಆದರೆ ಗಾಂಧೀಜಿಯವರ ಈ ಚರ್ಚೆಯನ್ನೇ ಸರಕಾರವು ದಾಳವನ್ನಾಗಿ ಮಾಡಿಕೊಂಡುಬಿಟ್ಟಿತು. ಹಾಗೂ ಅದಕ್ಕೆ ವ್ಯಾಪಕವಾದ ಪ್ರಚಾರವನ್ನು ನೀಡಿದರು. ಸೌಮ್ಯವಾದಿ ರಾಜಕಾರಣಿಗಳಾಗಿದ್ದಂತಹ ತೇಜ ಬಹದ್ದೂರ ಸಪ್ರು, ಜಯಕರ್ ಮುಂತಾದವರು ಇದರಿಂದ ಬಹಳಷ್ಟು ಕೋಪಗೊಂಡಿದ್ದರು, ಹಾಗು ಗಾಂಧೀಯವರೊಂದಿಗೆ ವಾಗ್ವಾದಕ್ಕೆ ಇಳಿದಿದ್ದರು. ಶ್ರೀ ಜಯಕರ್ ಅವರಂತೂ ಗಾಂಧೀಯವರು ಕಾಂಗ್ರೆಸ್ ಮೇಲೆ ಸಾಧಿಸಹೊರಟಿದ್ದ ಈ ರೀತಿಯ ಏಕಸ್ವಾಮ್ಯವನ್ನು ಕಂಡು ಕೆಂಡಾಮಂಡಲವಾಗಿದ್ದರು. ಅದಕ್ಕೆ ಗಾಂಧಿಯವರು ಕೂಡ ಅಷ್ಟೇ ಹಠಮಾರಿತನದಿಂದ ತಮ್ಮ ಇಷ್ಟಕ್ಕೆ ತಕ್ಕಂತೆ ನಡೆದುಕೊಳ್ಳುವುದಾಗಿ ನುಡಿದರು. ಅದಲ್ಲದೇ ಕಾಂಗ್ರೆಸ್ ಪಕ್ಷ ಕೂಡ ತಮ್ಮ ನಡೆಗೆ ವಿರೋಧಿಸುವುದಿಲ್ಲ ಎಂಬುದು ಅವರಿಗೆ ತಿಳಿದಿತ್ತು. ಎಲ್ಲರ ಕೈಮೀರಿ ಈ ರಹಸ್ಯವು ಮಾಧ್ಯಮದವರಿಗೆ ತಿಳಿದುಬಿಟ್ಟಿದ್ದರಿಂದ ಗಾಂಧೀಯವರು ಜನರ ಮನವೊಲಿಸುವ ವ್ಯರ್ಥ ಪ್ರಯತ್ನವನ್ನು ಆರಂಭಿಸಿದರು. ಅವರು ಅಂತಹ ಯಾವುದೇ ಸರ್ಕಾರದ ಷರತ್ತಿಗೆ ತಾನು ಒಪ್ಪಿಗೆ ಸೂಚಿಸಿಲ್ಲ ಎಂದರು. ಆದರೆ News Chronicle ಎಂಬ ಪತ್ರಿಕೆಗೆ ಗಾಂಧಿಯವರು ನೀಡಿರುವ ಸಂದರ್ಶವನ್ನು ಗಮನಿಸಿದರೆ 'ಸಂಪೂರ್ಣ ಸ್ವಾತಂತ್ರ್ಯ' ಇಷ್ಟರಲ್ಲಿಯೇ ಭಾರತಕ್ಕೆ ದೊರೆಯಬೇಕೆಂದರೆ, ಬ್ರಿಟಿಷರ ಸರ್ಕಾರದೊಂದಿಗೆ ಒಡಂಬಡಿಕೆ ಅತ್ಯಗತ್ಯ ಎಂದು ಗಾಂಧಿಯವರಿಗೆ ಮನವರಿಕೆ ಆಗಿರುವುದು ತಿಳಿಯುತ್ತಿತ್ತು. ಅವರು ಭಾರತದಲ್ಲಿ ತತ್‌ಕ್ಷಣವೇ ಸ್ವತಂತ್ರ ಸಂವಿಧಾನವೇನಾದರೂ ಜಾರಿಗೆ ತಂದರೆ ಆಗುವ ತೊಂದರೆಗಳನ್ನು ಮನಗಂಡು, ಬ್ರಿಟಿಷರ ಸರ್ಕಾರದೊಂದಿಗೆ ಒಡಂಬಡಿಕೆ ಒಳಪಟ್ಟಿರುವುದು ಖಾತ್ರಿ ಆಗುತ್ತಿತ್ತು.[೧]

ಡಾ. ಅಂಬೇಡ್ಕರ್ ಅವರು ಲಂಡನ್‌ನನ್ನು ಬಿಟ್ಟು ೧೯೩೨ರ ಜನವರಿ ೧೫ರಂದು ಮಾರ್ಸಿಯೆಲ್ಲಸ್‌ನಿಂದ ಹಡಗಿನಲ್ಲಿ ಹೊರಟರು. ಜನವರಿ ೨೯ ರಂದು ಅವರು ಬೊಂಬಾಯಿ ತಲುಪಿದರು.

---

1. Ganvir, Ambedkar Gandhi: teen Mulakhati Pp. 22-23.

ಹಲವಾರು ಸಮಿತಿಗಳು ಅವರಿಗೆ ನೀಡಿದ್ದ ಪ್ರಶ್ನೆಗಳಿಗೆ ಡಾ. ಅಂಬೇಡ್ಕರ್ ಅವರು ಉತ್ತರವನ್ನು ಸಿದ್ಧಪಡಿಸಿ ಇವುಗಳ ಪ್ರತಿಗಳನ್ನು ಹಲವಾರು ವ್ಯಕ್ತಿಗಳಿಗೆ ಹಾಗೂ ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ಶೋಷಿತ ವರ್ಗಗಳ ಸಂಘ ಸಂಸ್ಥೆಗಳವರಿಗೆ ಹಂಚಲಾಯಿತು. ಪ್ರತಿಯೊಂದು ಪ್ಯಾರಾದ ಮೊದಲಿಗೆ ಖಾಲಿ ಸ್ಥಳವನ್ನು ಬಿಡಲಾಗಿತ್ತು. ಅಲ್ಲಿ ಆ ಸಂಸ್ಥೆಯ ಹೆಸರು ಅಥವಾ ವ್ಯಕ್ತಿಗಳ ಹೆಸರನ್ನು ನಮೂದಿಸಬೇಕೆಂದು ಸೂಚಿಸಲಾಯಿತು.

**ಒಂದೇ ರೀತಿಯ ಉತ್ತರಗಳು**

ಈ ರೀತಿ ಹಂಚಲ್ಪಟ್ಟ ಪ್ರಶ್ನೆಗಳ ಪಟ್ಟಿಗೆ ದೊರೆತ ನೂರಾರು ಉತ್ತರಗಳು ಈ ರೀತಿ ಇದ್ದವು:

ಸಾಮಾನ್ಯ ಚುನಾವಣಾ ಕ್ಷೇತ್ರಗಳಲ್ಲಿ ಶೋಷಿತ ವರ್ಗಗಳು ಸಾಕಷ್ಟು ಪ್ರಾತಿನಿಧ್ಯ ಪಡೆಯಲಾರದು ಎಂಬ ಅಭಿಪ್ರಾಯವನ್ನು_______(ಇಲ್ಲಿ ಸಂಘ ಸಂಸ್ಥೆ ಅಥವಾ ವ್ಯಕ್ತಿಯ ಹೆಸರು ಬರುತ್ತದೆ) ಹೊಂದಿದೆ. ಅದಲ್ಲದೇ ಪ್ರತಿನಿಧಿಗಳ ವಿಜಯವು ಮತ್ತಷ್ಟು ಕಷ್ಟಸಾಧ್ಯ. ಒಂದು ವೇಳೆ ವಯಸ್ಕ ಮತದಾನದ ಅಧಿಕಾರ ದೊರೆತರೂ ಇದು ಸಾಧ್ಯವಿಲ್ಲ. ಅದಕ್ಕೆ ಕಾರಣಗಳು ಕೆಳಗಿನಂತಿವೆ.

೧) ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲಿಯೂ ಶೋಷಿತ ವರ್ಗದ ಜನರು ಅಲ್ಪಸಂಖ್ಯಾತರಾಗಿದ್ದಾರೆ. ಆದ್ದರಿಂದ ಅವರ ಮತಗಳಿಂದ ಅವರ ವರ್ಗದ ಅಭ್ಯರ್ಥಿ ಗೆದ್ದು ಬರಲು ಸಾಧ್ಯವೇ ಇಲ್ಲ.

೨) ಸಾಮಾಜಿಕ ವ್ಯವಸ್ಥೆಯಲ್ಲಿನ ಪೂರ್ವಗ್ರಹದಿಂದಾಗಿ ಮೇಲ್ವರ್ಗದ ಯಾವುದೇ ವ್ಯಕ್ತಿ ಶೋಷಿತ ವರ್ಗದ ಅಭ್ಯರ್ಥಿಗಳಿಗೆ ಮತ ಹಾಕುವುದಿಲ್ಲ.

೩) ಮತ್ತೊಂದೆಡೆ ಸಮಾಜವು ಆರ್ಥಿಕವಾಗಿ ಮೇಲ್ವರ್ಗದ ಜನರ ಮೇಲೆ, ಅಲ್ಲದೆ. ಧಾರ್ಮಿಕ ಹಾಗೂ ಸಾಮಾಜಿಕ ಪ್ರಭಾವಗಳ ಮೇಲೂ ಅವಲಂಬಿತರಾಗಿರುವುದರಿಂದ ಮತದಾರರು ಮೇಲ್ವರ್ಗದ ಅಭ್ಯರ್ಥಿಗೇ ಮತ ಹಾಕುವ ಸಾಧ್ಯತೆಯೂ ಸಾಕಷ್ಟು ಇರುತ್ತದೆ. ಇದುವರೆಗೂ ಮೇಲ್ವರ್ಗದ ಜನರ ಮತವನ್ನು ಪಡೆದು ಯಾವುದೇ ಹಿಂದುಳಿದ ವರ್ಗದ ಅಭ್ಯರ್ಥಿಯೂ ಆಯ್ಕೆಆಗಿಲ್ಲ.[೧]

ಇದಾದ ನಂತರ ಡಾ. ಅಂಬೇಡ್ಕರ್ ಅವರು ತಕ್ಷಣವೇ ದೆಹಲಿಗೆ ತೆರಳಿದರು. ಮತಾಧಿಕಾರ ಸಮಿತಿಯ ಸಭೆಯು ಲಾರ್ಡ್ ಲೋಧಿಯಾನ್ ಅವರ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ನಿಗದಿಯಾಗಿತ್ತು. ಆತ ದೆಹಲಿಗೆ ತೆರಳುವ ಮಾರ್ಗದಲ್ಲಿ ಪ್ರತಿಯೊಂದು ನಿಲ್ದಾಣದಲ್ಲಿಯೂ ಶೋಷಿತ ವರ್ಗದ ಜನರು ಇವರನ್ನು ಅತ್ಯುತ್ಸಾಹದಿಂದ ಸ್ವಾಗತಿಸಿದರು. ಅದರಲ್ಲಿಯೂ ನಾಸಿಕ್, ಇಘತ್ ಪುರಿ, ದಿಯೋಲಾಲಿ, ಮನ್ಮಾಡ್, ಬುಸಾವಲ್ ಹಾಗೂ ಝಾನ್ಸಿ ಪಟ್ಟಣಗಳಲ್ಲಿ ನಡೆದಂತಹ ಸಮಾರಂಭಗಳಂತೂ ಅತ್ಯದ್ಭುತವಾಗಿತ್ತು.

ಫೆಬ್ರವರಿಯ ಆರಂಭದಲ್ಲಿ ಈ ಮತಾಧಿಕಾರ ಸಮಿತಿಯು ಬಿಹಾರ್ ರಾಜ್ಯಕ್ಕೆ ಭೇಟಿ ನೀಡಿತು. ಅಲ್ಲಿಯೂ ಕೂಡ ಪ್ರತಿಯೊಂದು ನಗರದಲ್ಲಿಯೂ ಶೋಷಿತ ವರ್ಗದವರು ಡಾ. ಅಂಬೇಡ್ಕರ್ ಅವರಿಗೆ ಅಭೂತಪೂರ್ವ ಸ್ವಾಗತ ಕೋರಿದರು. ಅನಂತರ ಈ ಸಮಿತಿಯು ಪಾಟ್ನಾನಗರದ ಮೂಲಕ ಕೋಲ್ಕತ್ತಾ ತಲುಪಿತು. ಇಲ್ಲಿ ಎಲ್ಲ ಕಡೆಯಲ್ಲಿಯೂ ಶೋಷಿತ ವರ್ಗದ ನಾಯಕರು ಸಮಿತಿಯ ಮುಂದೆ ಒಂದೇ ಅಭಿಪ್ರಾಯ ಮಂಡಿಸಿದರು. ಅದೇನೆಂದರೆ ಪ್ರತ್ಯೇಕ ಚುನಾವಣೆಗಳ ಅಗತ್ಯ ಶೋಷಿತ ವರ್ಗಗಳ ಜನರಿಗೆ ಇದೆ. ಒಂದು ವೇಳೆ ಸಾಮಾನ್ಯ ಚುನಾವಣೆಗಳಲ್ಲಿಯೇ ಇವರಿಗೆ ಮೀಸಲಾತಿ ನೀಡಿದರೂ ಅಲ್ಲಿಯೂ ಇವರು ಬಹುಸಂಖ್ಯಾತರ ಮರ್ಜಿಗೆ ಬೀಳುತ್ತಾರೆ. ಅವರ ಮತ ಪಡೆಯಲು ಇವರು ನಾಚಿಕೆ ಬದಿಗಿಟ್ಟು

1. The Bombay Chronicle 23rd Feb 1932

ಯಾಚಿಸಬೇಕಾಗುತ್ತದೆ. ಇದರಿಂದಾಗಿ ಬಹಳಷ್ಟು ಸ್ಥಾನಗಳು ಮೇಲ್ವರ್ಗದವರ ಪಾಲಾಗುವ ಭಯ ಇರುತ್ತದೆ. ಒಂದು ವೇಳೆ ಈ ಚುನಾವಣಾ ಕ್ರಮ ಯಶಸ್ವಿ ಆಗಲೇಬೇಕೆಂದರೆ ಬಹುಸಂಖ್ಯಾತರು ನಿಜವಾಗಿಯೂ ಬಹಳ ದೊಡ್ಡ ಮನಸ್ಸನ್ನು ಹೊಂದಿರಬೇಕಾಗುತ್ತದೆ. ಆದರೆ ಈ ರೀತಿಯ ಒಂದು ಒಳ್ಳೆಯ ವಾತಾವರಣ ಆ ಸಂದರ್ಭದಲ್ಲಿ ಕಂಡು ಬರುತ್ತಿರಲಿಲ್ಲ.[೧]

**ಶ್ರೀ ಗವಾಯಿ ಅವರಿಗೊಂದು ಪತ್ರ :**

ಇದೇ ಸಮಯದಲ್ಲಿ ಇದೇ ವಿಷಯವಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಜಿ.ಎ. ಗವಾಯಿ ಅವರಿಗೊಂದು ಪತ್ರ ಬರೆದರು. ಜಿ.ಎ. ಗವಾಯಿಯವರು ಅಖಿತ ಭಾರತ ಶೋಷಿತ ವರ್ಗಗಳ ಕಾರ್ಯಕಾರಿ ಅಧ್ಯಕ್ಷರಾಗಿದ್ದರು. ಆ ಪತ್ರದ ಸಾರಾಂಶ ಈ ಕೆಳಗಿನಂತಿದೆ:–

ಪಾಟ್ನಾ, ಫೆಬ್ರವರಿ ೧೩

ನಾನು ನಿಮ್ಮ ಬರುವಿಕೆಯನ್ನು ಪಾಟ್ನಾ ಹಾಗೂ ಲಖನೌ ಎರಡೂ ಸ್ಥಳಗಳಲ್ಲಿಯೂ ಎದುರು ನೋಡುತ್ತಿದ್ದೆ. ತಾವೇಕೆ ಆಗಮಿಸಿಲ್ಲ ಎಂದು ನಾನು ಚಿಂತಿಸುತ್ತಲೇ ಇದ್ದೆ, ತಮ್ಮ ಪತ್ರ ನನಗೆ ಬಂದು ತಲುಪುವವರೆಗೂ. ನಿಮಗೆ ಆರೋಗ್ಯ ಸರಿಯಿಲ್ಲದಿರುವುದು ತಿಳಿದು ನನಗೆ ಬೇಸರವಾಗಿದೆ.

ನನ್ನ ಅಭಿಪ್ರಾಯ ವ್ಯಕ್ತಪಡಿಸಿರುವ ವಿಜ್ಞಾಪನಾ ಪತ್ರವನ್ನು ನಾನು ತಮ್ಮ ಅಭಿಪ್ರಾಯಕ್ಕಾಗಿ ಕಳುಹಿಸಿಕೊಡುತ್ತಿದ್ದೇನೆ. ಕಡೆಯ ಪ್ಯಾರಾವನ್ನು ಗಮನಿಸಿದರೆ ನಮ್ಮ ಸಮಿತಿ ಆಗಲೀ ನಿಮ್ಮ ಸಮಿತಿಯಾಗಲೀ ಕೋಮು ವಿಷಯಗಳನ್ನು ಚರ್ಚಿಸುವಂತಿಲ್ಲ ಎಂದು ತಮಗೆ ತಿಳಿದುಬರುತ್ತದೆ. ಪ್ರಧಾನ ಮಂತ್ರಿಯವರ ಪತ್ರ ಹಾಗೂ ಪ್ರಶ್ನೋತ್ತರ ಮಾಲಿಕೆಯಿಂದ ಇದು ಅತ್ಯಂತ ಸ್ಪಷ್ಟ ಆಗುತ್ತದೆ. ಅದರಂತೆಯೇ ನಮ್ಮ ಸಮಿತಿಯ ಅಧ್ಯಕ್ಷರು ಕೂಡ ಈ ನಿಯಮಕ್ಕೆ ಬದ್ಧರಾಗಿಯೇ ದೆಹಲಿ ಹಾಗೂ ಲಕ್ನೋಗಳಲ್ಲಿ ಸಭೆಯನ್ನು ನಡೆಸಿದ್ದಾರೆ. ಆದ್ದರಿಂದ ನೀವು ಕೂಡ ನಿಮ್ಮ ಸಮಿತಿಗೆ ಇದೇ ರೀತಿ ಹೇಳಬೇಕು. ಒಂದು ವೇಳೆ ಅವರೇನಾದರೂ ಕೋಮು ವಿಷಯಗಳ ಚರ್ಚೆ ಪ್ರಾರಂಭಿಸಿದರೆ ನೀವು ಅದನ್ನು ಉತ್ತೇಜಿಸಬಾರದು ಹಾಗೂ ಚರ್ಚೆ ಮುಂದುವರೆಸಲು ನಿರಾಕರಿಸಬೇಕು.

**ನಿಲುವಿನಲ್ಲಿ ಬದಲಾವಣೆಗಳು**

ಪ್ರತ್ಯೇಕ ಹಾಗೂ ಜಂಟಿ ಚುನಾವಣೆಯನ್ನು ಕುರಿತ ಸಭೆಯ ಚರ್ಚೆಯ ನಡಾವಳಿಯಲ್ಲಿ ಈ ಚರ್ಚೆಯನ್ನು ನೀವು ಮಾಡಲು ನಿರಾಕರಿಸಿರುವುದನ್ನು ದಾಖಲುಮಾಡಬೇಕು. ಏಕೆಂದರೆ ಈ ಚರ್ಚೆಯು ಸಮಿತಿಯ ಪರಿಧಿಯೊಳಗೆ ಬರುವುದಿಲ್ಲ. ನಿಮ್ಮ ಎಲ್ಲ ಸಂಘ ಸಂಸ್ಥೆಗಳ ಬಳಿಯೂ ಪ್ರಶ್ನಾವಳಿ ಇದೆ ಎಂದು ನನಗೆ ತಿಳಿದಿದೆ. ಆದರೂ ಕೂಡ ಒಂದು ಅಂಶವನ್ನು ನಾನು ತಿಳಿಸುತ್ತೇನೆ. ಅದೇನೆಂದರೆ ರಾಜಾ ಅವರು ಇದ್ದಕ್ಕಿದ್ದಂತೆಯೇ ತಮ್ಮ ಅಭಿಪ್ರಾಯ ಬದಲಿಸಿ ಇದೀಗ ಜಂಟಿ ಚುನಾವಣೆಯತ್ತ ಒಲವು ತೋರುತ್ತಿದ್ದಾರೆ. ಇದು ಆಘಾತಕಾರಿಯಾಗಿದೆ. ಆದರೆ ಅವರ ಈ ಅಭಿಪ್ರಾಯಕ್ಕೆ ನಿಮ್ಮ ಸಂಘ ತಲೆಬಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇದು ನಾವಾಗಿಯೇ ಮಾಡಿಕೊಳ್ಳುವ ಆತ್ಮಹತ್ಯೆ ಆಗುತ್ತದೆ. ಒಂದು ವೇಳೆ ಹೀಗೇನಾದರೂ ಆದರೆ, ನಮ್ಮಿಬ್ಬರ ನಡುವಿನ ಬಾಂಧವ್ಯ ಶಾಶ್ವತವಾಗಿ ಮುರಿದುಬಿದ್ದಂತೆಯೇ

1. Keer Pp 194-195

ಎಂದು ಭಾವಿಸಬೇಕು. ಅದು ನಮ್ಮಿಬ್ಬರ ನಡುವೆ ಯುದ್ಧವು ಘೋಷಿತವಾದಂತೆ ಆಗುತ್ತದೆ. ಹಾಗೆ ಆಗುವುದು ನನಗೆ ಯಾವುದೇ ಕಾರಣಕ್ಕೂ ಇಷ್ಟವಿಲ್ಲ. ಆದ್ದರಿಂದ ಹಾಗೆ ಆಗದಂತೆ ನೋಡಿಕೊಳ್ಳಿ. ನನ್ನ ಅರಿವಿಗೆ ತಾರದೇ ಹಾಗೂ ನನ್ನ ಸಮ್ಮತಿ ಇಲ್ಲದೇ ತಾವು ಯಾವುದೇ ಹೆಜ್ಜೆಯನ್ನು ಇಡುವುದಿಲ್ಲ ಎಂಬ ಆಶ್ವಾಸನೆ ತಾವು ನೀಡುವಿರಿ ಎಂದು ತಮ್ಮ ಮೇಲೆ ನನಗೆ ಭರವಸೆ ಇದೆ. ಪ್ರಶ್ನಾವಳಿಗೆ ನೀಡಬೇಕಿರುವ ವಿವರವಾದ ಉತ್ತರಗಳನ್ನು ನಾನು ಸಿದ್ಧಪಡಿಸಿರುವೆ. ಅದರ ಪ್ರತಿಗಳು ಲಭ್ಯವಾದ ತಕ್ಷಣವೇ ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ.

ಪ್ರಶ್ನಾವಳಿಗೆ ನೀಡಬೇಕಿರುವ ಉತ್ತರಗಳನ್ನು ಹಾಗೂ ಪರಿಷ್ಕೃತ ಪ್ರಶ್ನಾವಳಿಯ ಪ್ರತಿಯನ್ನೂ ನಾನು ನಿಮಗೆ ಕಳುಹಿಸುತ್ತಿದ್ದೇನೆ. ಕೋಮು ಸಂಬಂಧೀ ಪ್ರಶ್ನೆಗಳನ್ನು ನಾನು ಸಂಪೂರ್ಣವಾಗಿ ತೆಗೆದು ಹಾಕಿರುವುದನ್ನು ನೀವು ಗಮನಿಸಬಹುದು.[೧]

ಇದಿಗ ಡಾ. ಅಂಬೇಡ್ಕರ್ ಅವರೆದುರು ಹೊಸದೊಂದು ಸಮಸ್ಯೆ ಉದ್ಭವಿಸಿತ್ತು. ಡಾ. ಮೂಂಜೆ ಹಾಗೂ ಎಂ.ಸಿ.ರಾಜ ಅವರಿಬ್ಬರು ಕೂಡ ಮೀಸಲು ಸ್ಥಾನಗಳು ಹಾಗೂ ಜಂಟಿ ಮತಗಟ್ಟೆಗಳ ಬಗ್ಗೆ ಒಂದು ಒಪ್ಪಂದಕ್ಕೆ ಬಂದಿದ್ದರು. ರಾಜಾ ಅವರು ಬ್ರಿಟಿಷ್ ಪ್ರಧಾನಿಗೆ ತಂತಿಯ ಮೂಲಕ ಈ ಒಪ್ಪಂದದ ವಿವರಗಳನ್ನು ಕಳುಹಿಸಿಕೊಟ್ಟಿದ್ದರು. ಈ ಒಪ್ಪಂದದಿಂದ ಡಾ. ಅಂಬೇಡ್ಕರ್ ಅವರು ಮುಜುಗರದ ಪರಿಸ್ಥಿತಿಗೆ ಸಿಲುಕಿದರು. ಈ ಹಿಂದಿನ ವಿಷಯಗಳನ್ನು ನಾವು ನೆನೆಯುವುದಾದರೆ ರಾಜಾ ಅವರೇ ಅಂಬೇಡ್ಕರ್ ಅವರಿಗೆ ತಂತಿಯ ಸಂದೇಶವನ್ನು ಕಳುಹಿಸಿ, ಪ್ರತ್ಯೇಕ ಮತದಾರ ಮಂಡಳಿ ಇರಬೇಕೆಂದು ಬಲವಂತಪಡಿಸಿದ್ದರು. ಏಕೆಂದರೆ ಗಾಂಧಿಯವರಿಗೆ ತಮ್ಮ ತೊಂದರೆಗಳು ಅರ್ಥವೇ ಆಗುವುದಿಲ್ಲ, ಆದ್ದರಿಂದಲೇ ಅವರು ಜಂಟಿ ಮತದಾರ, ಮಂಡಳಿಗಳಿಗೆ ಒತ್ತು ನೀಡುತ್ತಿದ್ದಾರೆ ಮತ್ತು ಇದು ಶೋಷಿತ ವರ್ಗಗಳ ಜನರಿಗೆ ಅವರು ಬಲವಂತದಿಂದ ಉಣಬಡಿಸುತ್ತಿರುವ ಭೋಜನ ಎಂದರು. ಮೊದಮೊದಲು ರಾಜಾ ಅವರ ಪಕ್ಷದವರು ಮೀಸಲು ಸ್ಥಾನಗಳಿರುವ ಜಂಟಿ ಮತದಾರ ಮಂಡಳಿಗಳಿಗೆ ಒತ್ತು ನೀಡಿದ್ದರು. ಆದರೆ ಇದೀಗ ಅವರು ತಮ್ಮ ಅಭಿಪ್ರಾಯಗಳನ್ನು ಬದಲಿಸಿದ್ದರು. ಶೋಷಿತ ವರ್ಗದವರ ಏಕೈಕ ಪ್ರತಿನಿಧಿಯಾಗಿ ಕೇಂದ್ರ ಸಂಪುಟದಲ್ಲಿ ಉಳಿದಿದ್ದು ರಾಜಾ ಅವರು ಮಾತ್ರವೇ. ಅವರಿಗೆ ದುಂಡು ಮೇಜಿನ ಸಮಾವೇಶಕ್ಕೆ ಆಹ್ವಾನವಿರಲಿಲ್ಲ. ಅವರಿಗೆ ಈ ವಿಷಯವಾಗಿ ಕೋಪಬಂದು ಅವರು ತಮ್ಮ ಅಭಿಪ್ರಾಯವನ್ನು ಬದಲಿಸಿರಬಹುದು ಅಥವಾ ಗಾಂಧಿಯವರು ತಾವು ಶೋಷಿತ ವರ್ಗಗಳನ್ನು ಪ್ರತಿನಿಧಿಸುತ್ತೇನೆಂದು ಘೋಷಿಸುತ್ತಿರುವುದರಿಂದ ಬೇಸತ್ತು ಅವರು ಹೀಗೆ ಹೇಳಿರಬಹುದು. ಪ್ರತ್ಯೇಕ ಮತದಾರ ಮಂಡಳಿ ಬೇಕು ಎನ್ನುವುದನ್ನು ಬಿಟ್ಟು ಜಂಟಿ ಮಂಡಳಿಗೆ ಒತ್ತು ನೀಡಲು ಪ್ರಾರಂಭಿಸಿದ್ದಾರೆ. ಇದೀಗ ಅವರು ತಮ್ಮ ಹಿಂದಿನ ಬೇಡಿಕೆಗೇ ಮರಳಿದ್ದಾರೆ.[೨]

**ದಾರಿ ತಪ್ಪಿಸುವ ಮಾಹಿತಿಗಳು**

ಮಿ.ಗವಾಯಿ ಅವರು ಈ ಸಂದರ್ಭದಲ್ಲಿ ತಕ್ಷಣವೇ ತಮ್ಮ ಹೇಳಿಕೆಗಳನ್ನು ನೀಡಿದರು. ನಿಮಗೆಲ್ಲಾ ಕೆಲ ದಾರಿ ತಪ್ಪಿಸುವ ಮಾಹಿತಿಗಳು ಬರುತ್ತಿದೆ. ಅದೇನೆಂದರೆ ಭಾರತೀಯ ಮತಾಧಿಕಾರ ಸಮಿತಿಯು ಮತಕ್ಷೇತ್ರಗಳ ಬಗ್ಗೆ ಈ ಸಮಿತಿಗೆ ವಿಜ್ಞಾಪನಾ ಪತ್ರವನ್ನು ಸಲ್ಲಿಸುತ್ತಿರುವ ಇತರ ವ್ಯಕ್ತಿಗಳೊಡನೆ ಅಥವಾ

---

1. The Bombay Chronicle Datre 7th April 1932
2. Keer Pp 195-196

ಸಂಘಗಳೊಡನೆ ಚರ್ಚಿಸಬಾರದು. ಇದು ದಾರಿ ತಪ್ಪಿಸುವಂತಹುದು. ಏಕೆಂದರೆ ಎಲ್ಲಾ ಸಂಸ್ಥೆಗಳಿಗೆ ಕಳುಹಿಸಿರುವಂತಹ ಪ್ರಶ್ನಾವಳಿಗಳಲ್ಲಿ ನಿರ್ದಿಷ್ಟ ಪ್ರಸ್ತಾಪಗಳು ಶಾಸನಸಭೆಗಳಲ್ಲಿ ಪರಿಶಿಷ್ಟ ವರ್ಗಗಳವರಿಗೆ ಸ್ಥಾನವನ್ನು ಹೇಗೆ ಪಡೆಯುವುದು ಎನ್ನುವುದನ್ನು ತಿಳಿಸುತ್ತದೆ.

**ಮಾದರಿ ಉತ್ತರಗಳು**

ಅದಲ್ಲದೇ ನಾನು ಮತ್ತೊಂದು ಸೂಚನೆಯನ್ನು ನೀಡಬಯಸುತ್ತೇನೆ. ಅದೇನೆಂದರೆ ನಮ್ಮ ಸಂಘ ಸಂಸ್ಥೆಗಳು ಇತರರ ಮಾದರಿ ಉತ್ತರಗಳನ್ನು ಪರಿಗಣಿಸದೇ, ನಮ್ಮ ನಮ್ಮ ಪ್ರದೇಶದ ಪರಿಸ್ಥಿತಿಗೆ ಅನುಗುಣವಾಗಿ ಉತ್ತರಗಳನ್ನು ನೀಡುವುದು ಸರಿಯಾದ ಕ್ರಮವಾಗುತ್ತದೆ. ಬ್ರಿಟಿಷ್ ಪ್ರಧಾನ ಮಂತ್ರಿಯವರ ೧೯೩೧ರ ಡಿಸೆಂಬರದ ೧೦ ಹೇಳಿಕೆಯ ಪ್ರಕಾರ ಭಾರತದ ಸಂವಿಧಾನದಲ್ಲಿ ದೊಡ್ಡ ಮಟ್ಟದ ಮಾರ್ಪಾಟುಗಳು ಆಗಲಿವೆ. ಪ್ರತಿಯೊಂದು ಪ್ರಾಂತ್ಯಕ್ಕೂ ಸಂಪೂರ್ಣ ಸ್ವಾಯತ್ತತೆ, ಲಭಿಸಲಿದೆ. ಆದ್ದರಿಂದ ನಮ್ಮ ಸಮುದಾಯವು ಕೂಡ ಬದಲಾಗುತ್ತಿರುವ ಪರಿಸ್ಥಿತಿಗೆ ತಕ್ಕಂತೆ ಬದಲಾಗಬೇಕು. ಆ ಕಾರಣಕ್ಕಾಗಿ ನಾವು ಈ ಹಿಂದೆ ನೀಡಿರುವಂತಹ ಹೇಳಿಕೆಗಳನ್ನೆಲ್ಲಾ ಮರುವಿಮರ್ಶಿಸಬೇಕು.[೧]

"ಈ ಮತಾಧಿಕಾರದ ಸಮಿತಿಯು ವೈಸ್‌ರೀಗಲ್ ಅತಿಥಿ ಗೃಹದಲ್ಲಿ ಸಭೆ ಸೇರಿತು. ಶೋಷಿತ ವರ್ಗದ ಜನರ ಪರವಾಗಿ ಡಾ. ಅಂಬೇಡ್ಕರ್ ಅವರು ಒಂದು ವೇಳೆ ಶೋಷಿತ ವರ್ಗದವರ ವಿರುದ್ಧ ಬಹಿಷ್ಕಾರ ಮಾಡಿದರೆ ಅಥವಾ ಮಾಡಲು ಪ್ರೇರೇಪಿಸಿದರೆ ಆಗುವ ಶಿಕ್ಷೆಯನ್ನು ಸ್ಪಷ್ಟವಾಗಿ ತಿಳಿಸುವ ಪರಿಚ್ಛೇದಗಳನ್ನು ಭಾರತೀಯ ದಂಡ ಸಂಹಿತೆಯಲ್ಲಿ ಅಥವಾ ಮುಂಬರುವ ಸಂವಿಧಾನದಲ್ಲಿ ಅಳವಡಿಸಬೇಕು ಎಂದು ವಾದಿಸಿದರು. ಅವರು ಕೂಡ ಸಾಮಾನ್ಯ ಪ್ರಜೆಗಳಂತೆ ಎಲ್ಲಾ ಹಕ್ಕುಗಳನ್ನು ಅನುಭವಿಸಬೇಕು ಎಂದರು. ಈ ಸಮಿತಿಯು ಪೂರ್ಣವಾಗಿ ಈ ಸಲಹೆಯನ್ನು ಅಂಗೀಕರಿಸಿತು.

ರಾಜಾ ಹಾಗೂ ಮೂಂಜೆ ಅವರ ರಹಸ್ಯ ಒಪ್ಪಂದವು ಬಹಿರಂಗವಾದಾಗ ಅಸ್ಸಾಂ ಹಾಗೂ ಬಂಗಾಲದ ಶೋಷಿತ ವರ್ಗಗಳ ಸಂಘ ಸಂಸ್ಥೆಗಳು ರಾಜಾ ಅವರು ತಮ್ಮ ನಿಲುವನ್ನು ಬದಲಿಸಿಕೊಂಡಿದ್ದಕ್ಕಾಗಿ ಅವರನ್ನು ಖಂಡಿಸಿದರು. ಡಾ. ಅಂಬೇಡ್ಕರ್ ಅವರು ಇಟ್ಟಿರುವ ಬೇಡಿಕೆಗಳನ್ನು ಅವು ಬೆಂಬಲಿಸಿದವು. ಎಂ.ಬಿ.ಮಾಲೀಕ್ ಎಂ.ಎಲ್.ಎ ಹಾಗೂ ಬಂಗಾಳದ ಶೋಷಿತ ವರ್ಗಗಳ ಸಂಘದ ಅಧ್ಯಕ್ಷರು, ಉತ್ತರ ಪ್ರದೇಶದ ಆದಿ ಹಿಂದೂ ಸಂಘದ ಅಧ್ಯಕ್ಷರು, ಅಖಂಡ ಅಸ್ಸಾಂ ರಾಜ್ಯದ ಶೋಷಿತ ವರ್ಗದ ಸಂಘದ ಅಧ್ಯಕ್ಷರು, ಆದಿ–ಧರ್ಮ ಮಂಡಳಿಯ ಅಧ್ಯಕ್ಷರು ಪಂಜಾಬ್, ಶೋಷಿತ ವರ್ಗಗಳ ಸಹಾಯಕ ಸಂಘದ ಅಧ್ಯಕ್ಷರು ನವದೆಹಲಿ, ಎಲ್ಲರೂ ರಾಜಾ ಅವರನ್ನು ಖಂಡಿಸಿದರು ಹಾಗೂ ಡಾ. ಅಂಬೇಡ್ಕರ್ ಅವರ ಬೇಡಿಕೆಗಳಿಗೆ ಬೆಂಬಲ ಸೂಚಿಸಿದರು.

೧೯೩೨ರ ಏಪ್ರಿಲ್‌ನಲ್ಲಿ ನಾಸಿಕ್ ಸತ್ಯಾಗ್ರಹವು ತನ್ನ ಮೂರನೆಯ ಹಂತವನ್ನು ತಲುಪಿತ್ತು. ಅದರ ನಾಯಕರಾದ ಬಾವುರಾವ್ ಗಾಯಕ್‌ವಾಡ್ ಹಾಗೂ ರಣಕಂಬೆ ಅವರ ಬಂಧನವಾಗಿತ್ತು. ಅಂದಿನ ದಿನವೇ ಎಂದರೆ ೧೯೩೨ರ ಏಪ್ರಿಲ್ ೧೪ರಂದು ಇವರ ಬಂಧನದ ಸುದ್ದಿಯು ಡಾ. ಅಂಬೇಡ್ಕರ್ ಅವರಿಗೆ ತಂತಿಯ ಮೂಲಕ ತಲುಪಿತು. ಇದ್ದ ಹಿಂದೂ ಸದಸ್ಯರಾದ ಚಿಂತಾಮಣಿ, ಬಖಲೆ ಹಾಗೂ ಟಂಬೆ ಅವರು ಶೋಷಿತ ವರ್ಗಗಳ ಜನರ ಬೇಡಿಕೆಯಾದ ಪ್ರತ್ಯೇಕ ಮತಕ್ಷೇತ್ರಗಳಿಗೆ ಸಂಪೂರ್ಣವಾದ

1. The Bombay chronich, dated, 27th February 1932.

ವಿರೋಧವನ್ನು ವ್ಯಕ್ತಪಡಿಸಿದ್ದರು. ಇದರಿಂದ ಅವರುಗಳು ಹಾಗೂ ಅಂಬೇಡ್ಕರ್ ಅವರ ನಡುವೆ ತೀವ್ರವಾದ ವೈಮನಸ್ಯ ಉಂಟಾಗಿತ್ತು. ಅವರು ಡಾ. ಅಂಬೇಡ್ಕರ್ ಅವರೊಂದಿಗೆ ಮಾತನಾಡುವ ಸ್ಥಿತಿಯಲ್ಲಿ ಕೂಡ ಇರಲಿಲ್ಲ. ಈ ರೀತಿಯ ಸಂದರ್ಭದಲ್ಲಿ ಅಂಬೇಡ್ಕರ್ ಅವರು ತಮ್ಮ ಕಾರ್ಯದರ್ಶಿಯನ್ನು ಕರೆದು ತಮಗೆ ಒಂದೇ ಸಮಯದಲ್ಲಿ ಎರಡೆರಡು ಪರಿಸ್ಥಿತಿ ನಿಭಾಯಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. ಅವರ ಅಭಿಪ್ರಾಯದಲ್ಲಿ ರಾಜಕೀಯ ಹಕ್ಕುಗಳನ್ನು ಪಡೆಯುವುದು ದೇವಾಲಯಕ್ಕೆ ಪ್ರವೇಶ ಪಡೆಯುವುದಕ್ಕಿಂತ ಮುಖ್ಯವಾಗಿತ್ತು. ಆದ್ದರಿಂದ ತಮ್ಮನ್ನು ತಾವು ಹೃದಯಪೂರ್ವಕವಾಗಿ ತೊಡಗಿಸಿಕೊಂಡಿರುವ ಕಾರ್ಯದಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿದರು.

ಸಿಮ್ಲಾದಿಂದ ಬರೆದ ಪತ್ರದಲ್ಲಿ ಡಾ. ಅಂಬೇಡ್ಕರ್ ಅವರು ಬ್ರಿಟನ್ನಿನ ಪ್ರಧಾನಿಯವರನ್ನು ಕೋಮು ವಿಚಾರದಲ್ಲಿ ಅವರು ತಮ್ಮ ನಿರ್ಧಾರ ಪ್ರಕಟಿಸುವ ಮುನ್ನ ಅವರನ್ನು ಭೇಟಿ ಮಾಡಲೇಬೇಕು ಎಂದಿದ್ದರು. ತಮ್ಮ ಪ್ರಯಾಣದ ಉದ್ದೇಶವನ್ನು ತಿಳಿಸದೆ ಈ ಪ್ರಯಾಣಕ್ಕೆ ಅಗತ್ಯ ಇರುವಷ್ಟು ಹಣ ಹೊಂದಿಸಲು ಸಾಧ್ಯವೇ ನೋಡಿ ಎಂದು ಅವರು ತಮ್ಮ ನಂಬಿಕಸ್ಥ ಬೆಂಬಲಿಗರಿಗೆ ಹೇಳಿದ್ದರು. ಅದಲ್ಲದೇ ಅವರು ಲಂಡನ್ನಿನಲ್ಲಿ ಇದ್ದ ಆಘಾಖಾನ್ ಅವರಿಗೂ ಪತ್ರ ಬರೆದು ಈ ವಿಷಯದಲ್ಲಿ ಅವರ ಸಲಹೆಯನ್ನು ಕೇಳಿದರು ಮತ್ತು ಪ್ರಧಾನ ಮಂತ್ರಿಯವರು ಈ ವಿಷಯದಲ್ಲಿ ಎಂದು ತಿರ್ಮಾನವನ್ನು ಕೈಗೊಳ್ಳಲಿದ್ದಾರೆ ಎಂಬುದನ್ನು ತಿಳಿಸಲು ಸಾಧ್ಯವೇ ಎಂದು ಕೇಳಿದ್ದರು. ಮತ್ತೆ ಅದೇ ವಾರ ಬರೆದ ಪತ್ರದಲ್ಲಿ ಅವರು ಮತಾಧಿಕಾರದ ಸಮಿತಿಯಲ್ಲಿ ಇದ್ದಂತಹ ಹಿಂದೂ ನಾಯಕರ ವಿರುದ್ಧ ಜಗುಪ್ಸೆಯನ್ನು ವ್ಯಕ್ತಪಡಿಸಿದ್ದರು. 'ಅವರ ಮನಸ್ಥಿತಿಯನ್ನು ನಾನು ದ್ವೇಷಿಸುತ್ತೇನೆ, ಅವರು ಸಮಿತಿಯಲ್ಲಿ ಇರುವಾಗ ಅತ್ಯಂತ ಸ್ವಾರ್ಥದಿಂದ ಹಾಗೂ ಉದ್ರೇಕಿತರಾಗಿ ವರ್ತಿಸುತ್ತಾರೆ' ಎಂದರು. ಅವರ ಈ ರೀತಿಯ ವರ್ತನೆಯಿಂದ ತನಗೆ ಹೇಸಿಗೆ ಉಂಟಾಗಿದೆ. ಆದ್ದರಿಂದ ಹಿಂದೂ ಸಮಾಜದಿಂದಲೇ ದೂರ ಉಳಿಯುವ ಪ್ರಯತ್ನ ಪಡುವೆ ಎಂದರು. ಅವರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಬಳಲಿದ ಸ್ಥಿತಿಯಲ್ಲಿ ಕೆಲಸ ಮುಂದುವರಿಸಿದರು. ಇದು ಸಾಲದೆಂಬಂತೆ ಅವರನ್ನು ಅತಿಸಾರದ ಬಾಧೆಯೂ ಕಾಡುತ್ತಿತ್ತು.

ಏಪ್ರಿಲ್ ೧೪ರಂದು ಬಂಗಾಳದ ನಾಮಶೂದ್ರ ಸಂಸ್ಥೆಯು ತನ್ನ ವಾರ್ಷಿಕ ಸಭೆಯನ್ನು ಡಾ. ಕಾಲಿಚರಣ ಮಂಡಲ್ ಅವರ ಅಧ್ಯಕ್ಷತೆಯಲ್ಲಿ ಕೋಲ್ಕತ್ತಾದ ಆಲ್ಬರ್ಟ್ ಸಂಸ್ಥೆಯ ಸಭಾಂಗಣದಲ್ಲಿ ಹಮ್ಮಿಕೊಂಡಿತ್ತು. ಈ ಸಭೆಯು ಸರ್ವಾನುಮತದಿಂದ ಡಾ. ಅಂಬೇಡ್ಕರ್ ಅವರ ಬೇಡಿಕೆಗೆ ಸಮ್ಮತಿ ಸೂಚಿಸಿತು. ವಿನಾಕಾರಣವಾಗಿ ಡಾ. ಅಂಬೇಡ್ಕರ್ ಅವರನ್ನು ದೂಷಿಸುತ್ತಿದ್ದ ದಿನಪತ್ರಿಕೆಗಳನ್ನು ಹೀಗಳೆಯಿತು. ಕಾಂಗ್ರೆಸ್ ಪಕ್ಷವು ಈ ವಿಷಯದಲ್ಲಿ ತಳೆದಿರುವ ನಿಲುವು ಅನುಕಂಪರಹಿತವಾದುದು ಎಂದು ಖಂಡಿಸಿತು.

ಆದರೆ ಮತಾಧಿಕಾರದ ಸಮಿತಿಯ ೧೯೩೨ರ ಮೇ ೧ ರಂದು ತನ್ನ ಕಾರ್ಯ ಚಟುವಟಿಕೆಗಳನ್ನು ಪೂರ್ಣಗೊಳಿಸಿತು. ಆದರೆ ಲಾರ್ಡ್ ಲೋಥಿಯನ್ ಅವರು ಕೆಲ ಅಂಶಗಳ ಬಗ್ಗೆ ಡಾ. ಅಂಬೇಡ್ಕರ್ ಅವರಿಂದ ಸ್ಪಷ್ಟೀಕರಣ ಬಯಸಿದ್ದರು. ಆದ್ದರಿಂದ ಡಾ. ಅಂಬೇಡ್ಕರ್ ಅವರು ಅಲ್ಲಿಯೇ ಇನ್ನೂ ಒಂದೆರಡು ದಿನಗಳ ಕಾಲ ಉಳಿದುಕೊಂಡರು. ಸಮಿತಿಯ ಹಿಂದೂ ಸದಸ್ಯರ ಅಭಿಪ್ರಾಯ ಹಾಗೂ ಅಂಬೇಡ್ಕರ್ ಅವರ ಅಭಿಪ್ರಾಯಗಳಲ್ಲಿ ಭೇದವಿದ್ದುದರಿಂದ ಅವರು ಪ್ರತ್ಯೇಕ ವರದಿಯನ್ನು ಸಲ್ಲಿಸಿದರು. ಈ ಸಮಿತಿಯ ಅತ್ಯಂತ ಪ್ರಮುಖ ನಿರ್ಣಯ ಎಂದರೆ ಶೋಷಿತ ವರ್ಗ ಎಂಬ ಪದಕ್ಕೆ ಸೂಕ್ತವಾದ ವಿವರಣೆಯನ್ನು ನೀಡುವುದು. ೧೯೧೬ರ ಭಾರತೀಯ ಶಾಸಕಾಂಗ ಸಮಿತಿ, ಭಾರತ ಸರ್ಕಾರದ ವಿದ್ಯಾ ಇಲಾಖೆಯ ಆಯುಕ್ತರಾದ ಸರ್ ಹೆನ್ರಿ ಶಾರ್ಪ್ ಅವರು ಎಲ್ಲ ಶೋಷಿತ ವರ್ಗದ ಜನರನ್ನು ಗುಡ್ಡಗಾಡು ಪ್ರದೇಶದ

ಜನರು ಅಥವಾ ಆದಿವಾಸಿಗಳು ಅಥವಾ ಅಪರಾಧಿ ಜನಾಂಗಗಳ ಗುಂಪಿಗೆ ಸೇರಿಸಿದ್ದರು. ಆದರೆ ಈಗ ಲೋಧಿಯನ್ ಸಮಿತಿಯ ಶೋಷಿತ ವರ್ಗ ಎಂಬ ಪದದ ಬಳಕೆಯ ಕೇವಲ ಅಸ್ಪೃಶ್ಯರಿಗೆ ಮಾತ್ರವೇ ಸೀಮಿತವಾಗಬೇಕು ಎಂದರು. ಇದು ಖಂಡಿತವಾಗಿಯೂ ಡಾ. ಅಂಬೇಡ್ಕರ್ ಅವರಿಗೆ ದೊರೆತ ಸ್ಪಷ್ಟ ವಿಜಯವಾಗಿತ್ತು. ಏಕೆಂದರೆ ಡಾ. ಅಂಬೇಡ್ಕರ್ ಅವರ ಬೇಡಿಕೆಯೂ ಇದೇ ಆಗಿತ್ತು.[೧]

ಮೇ ೨೬ ರಂದು ಪುನಃ ಲಂಡನ್ನಿಗೆ ಡಾ. ಅಂಬೇಡ್ಕರ್ ಅವರು ಪಯಣ ಬೆಳೆಸಿದರು. ಕೋಮು ವಿಷಯದ ಬಗ್ಗೆ ನಿರ್ಧಾರ ಕೈಗೊಳ್ಳುವ ಮುನ್ನ ಅವರು ಬ್ರಿಟಿಷ್ ಪ್ರಧಾನ ಮಂತ್ರಿ ಹಾಗೂ ಇತರ ಮಂತ್ರಿಗಳನ್ನು ಭೇಟಿ ಮಾಡುವ ಉದ್ದೇಶವನ್ನು ಹೊಂದಿದ್ದರು. ಇಟಲಿಯ ಹಡಗು SS. Conte. Roso ಎಂಬ ಹಡಗಿನಲ್ಲಿ ಅವರು ಪಯಣ ಬೆಳೆಸಿದರು. ಅವರ ಪ್ರಯಾಣದ ವಿಷಯವನ್ನು ಅತ್ಯಂತ ರಹಸ್ಯವಾಗಿ ಇಡಲಾಗಿತ್ತು. ಅವರು ತಮ್ಮ ಪ್ರಯಾಣದ ವಿಷಯವನ್ನು ಗುಟ್ಟಾಗಿ ಇಡುವಂತೆ ತಮ್ಮವರಿಗೆ ಹೇಳಿದ್ದರೂ ಅದು ಹೇಗೋ ಬಾಂಬೆ ಕ್ರಾನಿನಕಲ್ ಪತ್ರಿಕೆಯ ವರದಿಗಾರನಿಗೆ ಇದರ ಸುಳಿವು ದೊರೆತು ಅಂಬೇಡ್ಕರ್ ಅವರ ಹೊಸ ನಡೆಯ ಬಗ್ಗೆ ಆತ ವರದಿ ಮಾಡಿಬಿಟ್ಟ. ಡಾ.ಅಂಬೇಡ್ಕರ್ ಅವರು ಮೊದಲ ದರ್ಜೆಯಲ್ಲಿ ಪ್ರಯಣ ಬೆಳೆಸಿದರು ಹಾಗು ತಮ್ಮೊಂದಿಗೆ ಅತಿ ಕಡಿಮೆ ಸಾಮಾನುಗಳನ್ನು ಒಯ್ದಿದ್ದರು. ೧೯೩೨ರ ಆಗಸ್ಟ್ ಕಡೆಯ ಹೊತ್ತಿಗೆ ಅವರು ಹಿಂದಿರುಗಲು ಉದ್ದೇಶಿಸಿದ್ದರು.

ರಾಜಾ ಅವರ ನಿಲುವಿನಲ್ಲಿ ಒಮ್ಮಲೇ ಉಂಟಾದ ಬದಲಾವಣೆಯಿಂದ ಡಾ. ಅಂಬೇಡ್ಕರ್ ಯೋಚನೆ ಗೀಡಾಗಿದ್ದುದು ನಿಜ. ಲೊಧಿಯನ್ ಸಮಿತಿಯ ವರದಿಗಳು ಕೂಡ ಇವರಿಗೇನೂ ಉತ್ತೇಜನಕಾರಿಯಾಗಿ ಇರಲಿಲ್ಲ. ಈ ರೀತಿಯ ಸಂದರ್ಭಗಳು ಯಾವಾಗಲಾದರೂ ಒಮ್ಮೊಮ್ಮೆ ಬರುತ್ತದೆ ಎಂದು ಅವರಿಗೆ ತಿಳಿದಿತ್ತು. ಆದ್ದರಿಂದ ತಮ್ಮೆಲ್ಲವನ್ನು ಈ ಸಂದರ್ಭದಲ್ಲಿ ಅವರು ಅರ್ಪಿಸಲು ಸಿದ್ಧರಿದ್ದರು. ತಾವೇ ಖುದ್ದಾಗಿ ಲಂಡನ್ನಿಗೆ ತೆರಳಿದರೆ ತಮ್ಮ ಬೇಡಿಕೆಗಳಿಗೆ ಒಂದು ಬೆಲೆ ಸಿಕ್ಕೇ ಸಿಗುತ್ತದೆ. ಎಂಬ ವಿಶ್ವಾಸ ಅವರಿಗಿತ್ತು. ಅವರು ಮಾರ್ಗಮಧ್ಯದಲ್ಲಿ ಭಾರತಕ್ಕೆ ಬರೆದ ಪತ್ರಗಳಲ್ಲಿ ತಮ್ಮ ವಿರೋಧಿಗಳಾದ ಸಂಪ್ರದಾಯವಾದಿ ಹಿಂದೂಗಳು ಹಾಗೂ ಕಾಂಗ್ರೆಸ್ ಪಕ್ಷ ತಮ್ಮ ಮುದ್ರಣಾಲಯವನ್ನು ಹಾಳು ಮಾಡಬಹುದು ಎಂಬ ಆತಂಕವನ್ನು ವ್ಯಕ್ತಪಡಿಸಿದ್ದರು. ಶಿವ್‌ಟಾರ್ಕರ್ ಅವರಿಗೆ ಅಲ್ಲಿಂದಲೇ ಒಂದು ಸೂಚನೆ ನೀಡಿದರು. ಒಂದು ಹೊಸ ಕೋಣೆಯನ್ನು ಬಾಡಿಗೆಗೆ ಪಡೆದು ಅಲ್ಲಿಗೆ ತಮ್ಮ ಎಲ್ಲಾ ಕಡತಗಳು ಹಾಗೂ ಪುಸ್ತಕಗಳನ್ನು ಸ್ಥಳಾಂತರಿಸಿ ಸುರಕ್ಷಿತವಾಗಿ ಇಡುವಂತೆ ಅವರು ಹೇಳಿದರು. ಅವರಿಗೆ ಯಾವಾಗಲೂ ಅವರ ಪುಸ್ತಕಗಳ ಸುರಕ್ಷತೆಯ ಬಗೆಯೇ ಚಿಂತೆ ಇರುತ್ತಿತ್ತು. ೧೯೩೨ರ ಜೂನ್ ೭ ರಂದು ಲಂಡನ್ನನ್ನು ಡಾ. ಅಂಬೇಡ್ಕರ್ ತಲುಪಿದರು. ಒಂದು ವಾರದ ಒಳಗೇ ಅವರು ಬ್ರಿಟನ್ನಿನ ದೊಡ್ಡ ದೊಡ್ಡ ಅಧಿಕಾರಿಗಳು ಹಾಗು ಎಲ್ಲಾ ಮಂತ್ರಿಗಳನ್ನೂ ಭೇಟಿಯಾದರು. ತಮ್ಮ ಸಮಸ್ಯೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಅವರ ಮುಂದೆ ಬಿಂಬಿಸಿದರು. ಬ್ರಿಟಿಷರ ಮಂತ್ರಿ ಮಂಡಲದ ಎದುರು ೨೨ ಪುಟಗಳ ಮನವಿ ಪತ್ರವನ್ನು ಅವರು ಸಲ್ಲಿಸಿದರು. ಆದರೆ ಆ ಸಮಯದಲ್ಲಿ ಇದರ ಪ್ರತಿಫಲ ಯಾವ ರೀತಿ ದೊರಕಲಿದೆ ಎಂದು ಅವರು ಹೇಳಲಾರದೇ ಹೋದರು. ಅವರು ಚರ್ಚೆಗಳು ಜಾರಿಯಲ್ಲಿವೆ ಹಾಗು ಉನ್ನತ ಮಟ್ಟದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಮಾತ್ರವೇ ಹೇಳಿದರು. ಬೊಂಬಾಯಿ, ಮದರಾಸು ಹಾಗೂ ಕೇಂದ್ರೀಯ ಪ್ರಾಂತ್ಯಗಳಿಗೆ ಪ್ರತ್ಯೇಕ ಮತದಾನ ಮಂಡಲಿ ಸಿಗಲಿದೆ ಎಂಬ ವದಂತಿಗಳು ಹರಿದಾಡ ತೊಡಗಿದ್ದವು.

---

1. Keer Pp 196-198

ಜೂನ್ ೧೪ ರ ಹೊತ್ತಿಗೆ ಅವರು ತಮ್ಮ ಕಡೆಯಿಂದ ಸಾಧ್ಯವಾಗಬಹುದಾದ ಎಲ್ಲಾ ಪ್ರಯತ್ನಗಳನ್ನೂ ಮಾಡಿ ಹಿಂದಿರುಗಲು ಸಿದ್ಧರಾದರು. ಆದರೆ ಅವರ ಕೆಲ ಬೆಂಬಲಿಗರು ಅವರನ್ನು ಮತ್ತಷ್ಟು ದಿನ ಅಲ್ಲಿಯೇ ಉಳಿಯುವಂತೆ ಬಲವಂತ ಪಡಿಸಿದರು. ಆದ್ದರಿಂದ ಅವರು ಮತ್ತೊಂದು ತಿಂಗಳ ಕಾಲ ಅವರ ಪ್ರಯಾಣ ಮುಂದೂಡಲು ನಿರ್ಧರಿಸಿ, ಪ್ರೆಸಡೆನ್‌ನಲ್ಲಿ ಡಾ. ಮೋಳರ್ ಅವರ ಜರ್ಮನ್ ಆರೋಗ್ಯ ಧಾಮದಲ್ಲಿ ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಲು ನಿರ್ಧಾರಿಸಿದರು. ಒಂದು ವೇಳೆ ಅಗತ್ಯಬಿದ್ದರೆ ಅವರು ಅಲ್ಲಿಂದ ಲಂಡನ್ನಿಗೆ ತುರ್ತಾಗಿ ತೆರಳುವುದು ಸುಲಭವಾಗಿತ್ತು. ಈ ಸಮಯದಲ್ಲಿ ಡಾ. ಅಂಬೇಡ್ಕರ್ ಅವರಿಗೆ ಹಣದ ಆವಶ್ಯಕತೆ ಇತ್ತು. ಅವರು ಈ ರೀತಿ ನಿರ್ದಿಷ್ಟ ಕಾಲದ ವರೆಗೆ ತಮ್ಮ ಪಯಣ ಮುಂದೂಡಿದ್ದ ಇದೀಗ ತಮ್ಮ ಆರೋಗ್ಯ ಹಾಗೂ ಹಣದ ಬಗ್ಗೆ ಚಿಂತೆ ಆಗುತ್ತಿತ್ತು. ಆದ್ದರಿಂದ ಶಿವಟಾರ್ಕರ್ ಅವರಿಗೆ ಸ್ವಲ್ಪ ಹಣದ ವ್ಯವಸ್ಥೆ ಮಾಡುವಂತೆ ಅವರು ತಿಳಿಸಿದರು.

ಜುಲೈ ಮಧ್ಯಭಾಗದ ಹೊತ್ತಿಗೆ ಡಾ. ಅಂಬೇಡ್ಕರ್ ಅವರ ಆರೋಗ್ಯ ಸಾಕಷ್ಟು ಸುಧಾರಿಸಿತ್ತು. ಆತ ಪ್ರೆಸ್‌ಡೆನ್‌ನಿಂದ ಹೊರಟು ಒಂದು ವಾರ ಬರ್ಲಿನ್‌ನಲ್ಲಿ ತಂಗಿದ್ದರು. ಆ ಸಮಯದಲ್ಲಿ ಬರ್ಲಿನ್ ನಗರದಲ್ಲಿ ಹಿಟ್ಲರ್‌ನ ಉದಯವಾಗುತ್ತಿತ್ತು. ಬರ್ಲಿನ್ನಿನಿಂದ ವಿಯನ್ನಾಗೆ ತೆರಳಿ ಅಲ್ಲಿಂದ ಅವರು ವೆನಿಸ್‌ಗೆ ತೆರಳಿ ಅಲ್ಲಿಂದ ಗ್ಯಾಂಗೀ ಎಂಬ ಹಡಗಿನಲ್ಲಿ ಪಯಣಿಸಲಿದ್ದೇನೆಂದು ಪತ್ರವನ್ನು ಬರೆದಿದ್ದರು. ಆದರೆ ಈ ಬಾರಿ ತಮಗೆ ಯಾವ ರೀತಿಯ ಸ್ವಾಗತ ದೊರೆಯಲಿದೆ ಎಂಬುದರ ಬಗೆಗೆ ತಾವು ಚಿಂತಿಸುವುದಿಲ್ಲ ಎಂದರು. ಮನುಷ್ಯರ ಸ್ವಭಾವವೇ ಅಂತಹುದು. ತಮ್ಮ ಬಳಿ ಏನು ಇರುವುದಿಲ್ಲವೋ ಅದಕ್ಕಾಗಿಯೇ ಆತ ಆಸೆ ಪಡುತ್ತಾನೆ. ವಿದ್ಯಾರ್ಥಿಯ ದಿಸೆಯಲ್ಲಿ ಡಾ. ಅಂಬೇಡ್ಕರ್ ಅವರು ವಿದೇಶಕ್ಕೆ ತೆರಳುವಾಗ ಯಾರೂ ಅವರು ಹೋಗುವುದನ್ನು ಅಥವಾ ಬರುವುದನ್ನು ಗಮನಿಸಿರಲಿಲ್ಲ. ಆದರೆ ದುಂಡು ಮೇಜಿನ ಸಮಾವೇಶಕ್ಕೆ ತೆರಳುವ ಸಮಯದಿಂದ ಈಚೆಗೆ ಇವರ ಆಗಮನ ಹಾಗು ನಿರ್ಗಮನ ಒಂದು ಸಾರ್ವಜನಿಕ ಕಾರ್ಯಕ್ರಮವಾಗಿ ಹೋಗಿತ್ತು. ಅಲ್ಲಿ ಇವರ ಸಾವಿರಾರು ಬೆಂಬಲಿಗರ ಹಾಗು ನೂರಾರು ಪತ್ರಿಕಾ ವರದಿಗಾರರ ಹಾಜರಾತಿ ಇರುತ್ತಿತ್ತು. ಆಗಸ್ಟ್ ೧೭ ರಂದು ಡಾ. ಅಂಬೇಡ್ಕರ್ ಬೊಂಬಾಯಿಗೆ ಆಗಮಿಸಿದರು.[೧]

೧೯೩೨ರ ಆಗಸ್ಟ್ ೧೭ ರಂದು ಬ್ರಿಟಿಷರ ಪ್ರಧಾನ ಮಂತ್ರಿಯವರ ಧಾರ್ಮಿಕ ಪ್ರಶ್ನೆಯ ಬಗ್ಗೆ ತಮ್ಮ ನಿರ್ಧಾರವನ್ನು ಪ್ರಕಟಿಸಿದರು. ಅಸ್ಪೃಶ್ಯರಿಗೆ ಸಂಬಂಧಪಟ್ಟಂತಹ ನಿರ್ಧಾರದ ಅಂಶಗಳು ಈ ಕೆಳಗಿನಂತಿವೆ:–

**ಕೋಮು ವಿಷಯದ ಬಗ್ಗೆ ಪ್ರಧಾನಿಯವರ ಸರ್ಕಾರದ ನಿರ್ಧಾರ ೧೯೩೨**

೧. ಡಿಸೆಂಬರ್ ಒಂದರಂದು ತಮ್ಮ ಸರ್ಕಾರದ ಪರವಾಗಿ ಪ್ರಧಾನ ಮಂತ್ರಿಯವರು ಒಂದು ನಿರ್ಧಾರವನ್ನು ಪ್ರಕಟಿಸಿದ್ದರು. ದುಂಡು ಮೇಜಿನ ಸಮಾವೇಶದ ಎರಡನೆಯ ಸುತ್ತಿನ ಮುಕ್ತಾಯದ ವೇಳೆಗೆ ಈ ನಿರ್ಧಾರ ಪ್ರಕಟ ಆಗಿತ್ತು. ಅನಂತರ ಈ ನಿರ್ಧಾರಕ್ಕೆ ಸಂಸತ್ತಿನ ಎರಡೂ ಸದನಗಳು ಒಪ್ಪಿಗೆಯ ಮುದ್ರೆಯನ್ನು ಒತ್ತಿದ್ದವು. ಭಾರತದಲ್ಲಿನ ಕೋಮುಗಳು ಎಲ್ಲಾ ಪಕ್ಷಗಳಿಗೂ ಒಪ್ಪಿಗೆ ಆಗುವಂತಹ ಒಂದು ಒಪ್ಪಂದಕ್ಕೆ ಬರಲಾರದೇ ಹೋದರೆ, ಈ ಒಂದು ವಿಷಯದ ಪರಿಹಾರಕ್ಕೆ ದೊರಕದಿರುವ ಕಾರಣದಿಂದ ಸಂವಿಧಾನ ರಚನೆಯ ಕಾರ್ಯವು ಸ್ಥಗಿತಗೊಳ್ಳಬಾರದು ಮತ್ತು ಹಾಗೆ ಆ ಕಾರ್ಯವನ್ನು ಮುಂದುವರಿಸಲು ಅನುವಾಗುವಂತೆ, ಮಹಾಪ್ರಭುಗಳ ಸರಕಾರವು ತಾನೇ ಒಂದು ನೀತಿಯನ್ನು ರೂಪಿಸಿ ಸಂವಿಧಾನದಲ್ಲಿ ಸೇರಿಸುತ್ತದೆ ಎಂದು ಪ್ರಧಾನ ಮಂತ್ರಿಗಳು ಪ್ರಕಟಿಸಿದ ನಿರ್ಧಾರವು ತಿಳಿಸಿತ್ತು.

1. Keer Pp 202-204

೨. ಕೋಮು ವಿವಾದದಕ್ಕೆ ಸಂಬಂಧಿಸಿದಂತೆ ವಿವಿಧ ಸಮುದಾಯಗಳು ಒಮ್ಮತಕ್ಕೆ ಬರುವುದರಲ್ಲಿ ವಿಫಲವಾಗಿವೆ ಹಾಗೂ ಇದರಿಂದ ಹೊಸ ಸಂವಿಧಾನ ರಚನೆಗೆ ತಡೆಯಾಗುತ್ತಿದೆ ಎಂದು ತಿಳಿದ ಮಹಾಪ್ರಭುಗಳ ಸರಕಾರವು ಈ ಗಹನವಾದ ಸಮಸ್ಯೆಯನ್ನು ಪರಿಹರಿಸುವುದನ್ನು ಎಚ್ಚರಿಕೆಯಿಂದ ಪುನರ್ವಿಮರ್ಶೆಮಾಡುತ್ತಿದೆ ಎಂದು ಪ್ರಕಟಿಸಿತು. ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಕೆಲ ಸಮಸ್ಯೆಗಳಿಗೆ ಪರಿಹಾರವನ್ನು ಸಂವಿಧಾನವು ಸೂಚಿಸದಿದ್ದರೆ ಹೊಸ ಸಂವಿಧಾನದ ರಚನೆಯಲ್ಲಿ ಮುಂದುವರಿಕೆ ಉಂಟಾಗುವುದು ಸಾಧ್ಯವೇ ಇಲ್ಲ ಎಂದರು.

೩. ಆದ್ದರಿಂದ ಮಹಾಪ್ರಭುಗಳ ಸರಕಾರವು ಈ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಕೆಳಗೆ ಹೇಳಿರುವ ಕೆಲ ನಿಬಂಧನೆಗಳನ್ನು ಮಂತ್ರಿ ಮಂಡಲದ ಮುಂದೆ ಇರಿಸಲಿದೆ. ಈ ಯೋಜನೆಯ ಅಡಿಯಲ್ಲಿ ಪ್ರಾಂತೀಯ ಶಾಸನ ಸಭೆಯ ಸದಸ್ಯತ್ವದಲ್ಲಿ ಬ್ರಿಟನ್ನಿನ ಭಾರತೀಯರಿಗೆ ಕೆಲ ಸ್ಥಾನಗಳನ್ನು ಮೀಸಲಿರಿಸಲಾಗುತ್ತದೆ. ಕೇಂದ್ರೀಯ ಶಾಸನ ಸಭೆಯಲ್ಲಿ ಈ ರೀತಿಯ ಯಾವುದೇ ಮಾರ್ಪಾಟುಗಳನ್ನು ಮಾಡುವುದನ್ನು ಈ ಕೆಳಗಿನ ೨೦ನೆಯ ಪ್ಯಾರಾದಲ್ಲಿ ವಿವರಿಸಿರುವ ಕಾರಣಗಳಿಗಾಗಿ ಮುಂದೂಡಲಾಗಿದೆ. ಹೀಗೆ ಯೋಜನೆಯ ವ್ಯಾಪ್ತಿಯನ್ನು ಸೀಮಿತಗೊಳಿಸುವುದರಿಂದ ಅಲ್ಪಸಂಖ್ಯಾತರಿಗೆ ಮುಖ್ಯವಾದ ಹಲವು ಸಮಸ್ಯೆಗಳ ಬಗೆಗೆ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಸಂವಿಧಾನ ರಚನೆಯ ಪ್ರಕ್ರಿಯೆಯು ಅನಿವಾರ್ಯವನ್ನಾಗಿಸುತ್ತದೆ ಎಂಬುದನ್ನು ಅರಿತುಕೊಳ್ಳಲು ವಿಫಲವಾಗಿದೆ ಎಂದು ತಿಳಿಯುವ ಆವಶ್ಯಕತೆಯಿಲ್ಲ. ಆದರೆ, ಒಮ್ಮೆ ವಿವಿಧ ಸಮುದಾಯಗಳವರಿಗೆ ನೀಡುವ ಪ್ರಾತಿನಿಧ್ಯದ ಅನುಪಾತ ಮತ್ತು ವಿಧಾನಗಳ ಮೂಲಭೂತ ಪ್ರಶ್ನೆಯ ಬಗೆಗೆ ಒಂದು ನಿರ್ಧಾರವನ್ನು ಪ್ರಕಟಿಸಿದರೆ ಅದು ಇಲ್ಲಿಯವರೆಗೆ ಪರಿಶೀಲಿಸಿರುವ ಕೋಮು ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿವಿಧ ಸಮುದಾಯಗಳು ಒಂದು ಒಮ್ಮತಕ್ಕೆ ಬರಲು ಸಾಧ್ಯವಾಗುವ ಮಾರ್ಗವನ್ನು ತಾವೇ ರೂಪಿಸಿಕೊಳ್ಳುವಲ್ಲಿ ಸಹಾಯಮಾಡುತ್ತದೆ ಎಂಬ ನಂಬಿಕೆಯನ್ನು ತಾನು ಹೊಂದಿರುವುದಾಗಿ ಸರಕಾರವು ತಿಳಿಸಿತು.

೪. ಸಂಬಂಧಪಟ್ಟ ಎಲ್ಲಾ ಪಕ್ಷಗಳವರೂ ಬೆಂಬಲಿಸದಿದ್ದರೆ, ತನ್ನ ನಿರ್ಣಯವನ್ನು ಪುನರ್ವಿಮರ್ಶಿಸಲು ಕೆಲವು ಪಕ್ಷಗಳು ನಡೆಸುವ ಚರ್ಚೆಗಳಲ್ಲಿ ತಾನು ಭಾಗಿಯಾಗುವುದಿಲ್ಲ ಮತ್ತು ತನ್ನ ನಿರ್ಣಯವನ್ನು ಮರು–ಪರಿಶೀಲಿಸುವಂತೆ ಆ ಪಕ್ಷಗಳು ನೀಡುವ ಯಾವುದೇ ಮನವಿಗೂ ತಾನು ಗಮನವನ್ನು ನೀಡುವುದಿಲ್ಲ ಎಂಬುದನ್ನು ಸಂಬಂಧಪಟ್ಟವರು ಅರಿತುಕೊಂಡಿರಬೇಕು ಎಂದು ಮಹಾಪ್ರಭುಗಳ ಸರಕಾರವು ತಿಳಿಸಿದೆ. ಆದರೆ ಸರ್ವಪಕ್ಷಗಳೂ ಒಮ್ಮತಕ್ಕೆ ಬರುವಂತಹ ಸಂತೋಷದ ಸಂದರ್ಭವನ್ನು ಸರಕಾರವು ಸ್ವಾಗತಿಸುತ್ತದೆ. ಆದ್ದರಿಂದ ಭಾರತ ಸರಕಾರದ ಅಧಿನಿಯಮವು ಜಾರಿಗೆ ಬರುವ ಮೊದಲು ಸಂಬಂಧಪಟ್ಟ ಸಮುದಾಯಗಳವರು ಒಂದು ಅಥವಾ ಒಂದಕ್ಕಿಂತ ಹೆಚ್ಚು ಪ್ರಾಂತ್ಯಗಳಿಗೆ ಅಥವಾ ಇಡೀ ಬ್ರಿಟಿಷ್ ಭಾರತಕ್ಕೆ ಅನ್ವಯವಾಗುವಂತೆ ಕಾರ್ಯಸಾಧುವಾದ ಪರ್ಯಾಯ ಯೋಜನೆಗೆ ಒಮ್ಮತವನ್ನು ಸೂಚಿಸಿದರೆ, ಈಗಿರುವ ನಿರ್ಣಯಕ್ಕೆ ಬದಲಾಗಿ ಈ ಹೊಸ ಸೂತ್ರವನ್ನು ಅಳವಡಿಸಿಕೊಳ್ಳುವಂತೆ ಸರಕಾರವು ಸಂಸತ್ತಿಗೆ ಶಿಫಾರಸ್ಸನ್ನು ಮಾಡುತ್ತದೆ.

೫. ಶೋಷಿತ ವರ್ಗದವರಲ್ಲಿ ಮತವನ್ನು ಚಲಾಯಿಸುವ ಅಧಿಕಾರ ಹೊಂದಿರುವವರು ಸಾಮಾನ್ಯ ಮತಕ್ಷೇತ್ರದಲ್ಲಿ ಮತಚಲಾವಣೆ ಮಾಡುತ್ತಾರೆ. ಏಕೆಂದರೆ, ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಬಹಳ ಕಾಲದವರೆಗೆ ಇವರಿಗೆ ಮಂತ್ರಿಮಂಡಲದಲ್ಲಿ ಇವರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆಯಲಾರದು. ಆದರೆ ಮುಂದಿನ ತಃಖ್ತೆಯಲ್ಲಿ ತೋರಿಸಲಾಗಿರುವಂತೆ ಇವರುಗಳಿಗೆ ಸಾಕಷ್ಟು ಸ್ಥಾನಗಳನ್ನು ಮೀಸಲಾಗಿಡಲಾಗುವುದು.

ಈ ಸ್ಥಾನಗಳನ್ನು ತುಂಬಲು ವಿಶೇಷ ಮತಕ್ಷೇತ್ರಗಳಲ್ಲಿ ನಡೆಸಲಾಗುವ ಚುನಾವಣೆಗಳಲ್ಲಿ ಶೋಷಿತ ವರ್ಗಗಳ ಅಧಿಕೃತ ಮತದಾರರು ಮತ ಚಲಾಯಿಸುವರು. ಈ ವಿಶೇಷ ಮತಗಟ್ಟೆಯಲ್ಲಿ ಮತ ಚಲಾಯಿಸುವ ಅಭ್ಯರ್ಥಿಗಳು ಸಾಮಾನ್ಯ ಮತಗಟ್ಟೆಯಲ್ಲಿ ಕೂಡ ಮತ ಚಲಾಯಿಸಬಹುದು. ಈ ರೀತಿಯ ಮತಗಟ್ಟೆಗಳನ್ನು ಮದರಾಸಿನಲ್ಲಿ ಮದ್ರಾಸು ಪ್ರಾಂತ್ಯವೊಂದನ್ನು ಹೊರತುಪಡಿಸಿ ಅಲ್ಪಸಂಖ್ಯಾತರು ಹೆಚ್ಚಾಗಿ ಇರುವ ಸ್ಥಳಗಳಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ. ಮದರಾಸಿನಲ್ಲಿ ಮಾತ್ರ ಇಡೀ ಪ್ರಾಂತ್ಯಕ್ಕೆ ಈ ನಿಯಮ ಅನ್ವಯವಾಗಲಿದೆ.

ಬಂಗಾಳದ ವಿಷಯಕ್ಕೆ ಬಂದರೆ, ಕೆಲ ಸಾಮಾನ್ಯ ಮತಗಟ್ಟೆಗಳಲ್ಲಿ ಶೋಷಿತ ವರ್ಗಗಳಿಗೆ ಸೇರಿರುವ ಜನರು ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಆದ್ದರಿಂದ ಶೋಷಿತ ವರ್ಗಗಳವರಿಗೆ ಎಷ್ಟು ಸ್ಥಾನಗಳನ್ನು ನೀಡಬೇಕು ಎಂಬುದರ ಬಗೆಗೆ ಇನ್ನೂ ಪರಿಶೀಲನೆ ನಡೆಯಬೇಕಿದೆ. ಆದರೆ ಕನಿಷ್ಠವೆಂದರೂ ೧೦ ಸ್ಥಾನಗಳನ್ನಾದರೂ ಬಂಗಾಳ ಶಾಸನಸಭೆಯಲ್ಲಿ ಶೋಷಿತ ವರ್ಗಗಳ ಜನರಿಗೆ ನೀಡುವ ಇಚ್ಛೆ ಇದೆ.

ಎಲ್ಲಾ ಪ್ರಾಂತ್ಯಗಳಲ್ಲಿನ ವಿಶೇಷ ಮತಗಟ್ಟೆಗಳಲ್ಲಿ ಮತದಾನ ಮಾಡುವವರು ಯಾರುಯಾರು ಎಂಬುದಕ್ಕೆ ಖಚಿತವಾದ ವಿವರಣೆಯನ್ನು ಇನ್ನೂ ರೂಪಿಸಬೇಕಾಗಿದೆ. ಅದು ಮತಾಧಿಕಾರದ ಸಮಿತಿಯ ನಿಯಮಗಳಂತೆ ನಿರ್ಧಾರವಾಗಲಿದೆ. ಆದರೆ ಇದಕ್ಕೆ ಉತ್ತರ ಭಾರತದ ಕೆಲ ರಾಜ್ಯಗಳು ಅಪವಾದ ಆಗಬಹುದಾಗಿದೆ. ಏಕೆಂದರೆ ಆ ರಾಜ್ಯಗಳ ಪರಿಸ್ಥಿತಿಗೆ ಅನುಗುಣವಾಗಿ ಅಸ್ಪೃಶ್ಯರ ವಿವರಣೆ ಅಲ್ಲಿ ಸ್ವಲ್ಪ ಬದಲಾಗಿದೆ. ಮಹಾಪ್ರಭುಗಳ ಸರಕಾರವು, ಈ ವಿಶೇಷ ಮತಕ್ಷೇತ್ರಗಳು ನಿರ್ದಿಷ್ಟ ಅವಧಿಯ ನಂತರ ಮುಂದುವರಿಯಬಾರದು ಎಂಬ ಆಶಯವನ್ನು ಹೊಂದಿದೆ. ಚುನಾವಣಾ ಸಂಹಿತೆಯ ೬ನೆಯ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ೨೦ ವರ್ಷಗಳ ಒಳಗೆ ವಿಶೇಷ ಮತಕ್ಷೇತ್ರಗಳು ರದ್ದಾಗದಿದ್ದರೆ, ೨೦ ವರ್ಷಗಳ ನಂತರ ಅವು ರದ್ದಾಗಬೇಕು ಎಂಬ ಅಪೇಕ್ಷೆಯನ್ನು ಸರಕಾರವು ಹೊಂದಿದೆ.[೧]

ಈ ನಿಯಮದಂತೆ ಶೋಷಿತ ವರ್ಗದವರಿಗೆ ಪ್ರಾಂತೀಯ ಶಾಸನ ಸಭೆಗಳಲ್ಲಿ ಪ್ರತ್ಯೇಕ ಸ್ಥಾನಗಳನ್ನು ಹಾಗೂ ಅವರಿಗೆ ಎರಡೆರಡು ಬಾರಿ ಮತ ಚಲಾಯಿಸುವ ಅಧಿಕಾರವನ್ನು ನೀಡಲಾಯಿತು. ಅದರ ಪ್ರಕಾರ ವಿಶೇಷ ಮತಕ್ಷೇತ್ರಗಳೇ ಅಲ್ಲದೇ ಸಾಮಾನ್ಯ ಮತಕ್ಷೇತ್ರಗಳಲ್ಲಿಯೂ ಇವರಿಗೆ ಮತದಾನದ ಹಕ್ಕು ದೊರೆಯಿತು.

ಮಾರನೆಯ ದಿನ, ಎಂದರೆ ಅಂಬೇಡ್ಕರ್ ಅವರು ಹಿಂದಿರುಗಿದ ನಂತರ ಸರ್ ಸ್ಯಾಮುಯಲ್ ಹೋರೆ ಅವರಿಗೆ ಆತ ಬಹುಮುಖ್ಯವಾದ ಪತ್ರವೊಂದನ್ನು ಬರೆದು. ಅವರ ನಿರ್ಣಯದ ೯ನೆಯ ಪ್ಯಾರಾದಲ್ಲಿನ ಕಡೆಯ ಭಾಗದ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿದ್ದರು. ಏಕೆಂದರೆ ಈಗಲೂ ಶೋಷಿತ ವರ್ಗದ ಜನರಿಗೆ ಈ ಅಂಶ ಸ್ಪಷ್ಟವಾಗಿರಲಿಲ್ಲ. ಮುಂದುವರಿಯುತ್ತಾ ಅವರು ಈ ಅಂಶಕ್ಕೆ ಸ್ಪಷ್ಟೀಕರಣ ನೀಡದ ಹೊರತು ಇದಕ್ಕೆ ಶೋಷಿತ ವರ್ಗಗಳ ಜನರ ಒಪ್ಪಿಗೆ ಪಡೆಯುವುದು ದುಸ್ಸಾಧ್ಯ ಎಂದರು. ತಮ್ಮ ಪತ್ರವನ್ನು ಮುಗಿಸುತ್ತಾ ನಿಮ್ಮ ಉತ್ತರವು ಬರುವವರೆಗೆ ಶೋಷಿತ ವರ್ಗಗಳ ಜನರ ಕೋಪ ತಾಪಗಳ ಬಿರುಗಾಳಿಯನ್ನು ಹಿಡಿದು ಇಡುವ ಪ್ರಯತ್ನ ಪಡುತ್ತೇನೆ ಎಂದಿದ್ದರು.[೧]

"ಈ ಧಾರ್ಮಿಕ ನಿರ್ಧಾರವೂ ಎಲ್ಲರಿಗೂ ಎಲ್ಲ ರೀತಿಯಿಂದ ಒಪ್ಪಿಗೆಯಾಗುತ್ತದೆ ಎಂದು ಯಾರೂ ಕಲ್ಪಿಸಿಕೊಂಡಿರಲಿಲ್ಲ. ನಾನು ಹಾಗೂ ನನ್ನ ಸಹವರ್ತಿಯಾದ ರಾವ್ ಬಹದ್ದೂರ್ ಶ್ರೀನಿವಾಸನ್ ಅವರು ದುಂಡು ಮೇಜಿನ ಸಮಾವೇಶದಲ್ಲಿ ಮಂಡಿಸಿದ್ದಂತಹ ಪ್ರಸ್ತಾವನೆಗಳಲ್ಲಿ ಕೂಡ ಬದಲಾವಣೆ ತರಲು ನಾನು ಸಿದ್ಧನಿದ್ದೆ. ಆದರೆ ಈ ಕೋಮು ನಿರ್ಣಯವು ಅತ್ಯಂತ ಕ್ರೂರವಾಗಿ ಶಾಸನ ಸಭೆಗಳ ಶೋಷಿತವರ್ಗಗಳವರ

---

1. Writings & Speeches Vol P Pp 79-82

ಪ್ರಾತಿನಿಧ್ಯವನ್ನು ಮೊಟಕುಗೊಳಿಸಿದೆ. ಇದರ ಪರಿಣಾಮ ಎಂದರೆ ಶೋಷಿತ ವರ್ಗಗಳ ಜನರಿಗೆ ಅಗತ್ಯ ಪ್ರಾತಿನಿಧ್ಯ ನೀಡದೆ ಅವರಲ್ಲಿ ನಿರಾಶೆಯನ್ನು ಮೂಡಿಸಿದೆ.

ಈ ಪ್ರಮಾದಕ್ಕೆ ನನಗೆ ಯಾವುದೇ ರೀತಿಯ ಸಮರ್ಥನೆಯೂ ಕಂಡು ಬರುವುದಿಲ್ಲ. ಎಂದರೆ ಪಂಜಾಬ್ ರಾಜ್ಯದಲ್ಲಿ ಅವರಿಗೆ ಪ್ರಾತಿನಿಧ್ಯ ನೀಡದೇ ಇರುವುದು ನನಗೆ ಬಹಳ ಆಘಾತ ಉಂಟುಮಾಡಿದೆ. ಆದರೆ ನನಗೆ ತಿಳಿದ ಮಟ್ಟಿಗೆ ಆ ಪ್ರಾಂತ್ಯದಲ್ಲಿ ಶೋಷಿತ ವರ್ಗದ ಜನರ ಸ್ಥಿತಿಯು ಉತ್ತರ ಭಾರತದ ಇತರ ಪ್ರಾಂತ್ಯಗಳಲ್ಲಿ ಶೋಷಿತರ ಸ್ಥಿತಿಗೆ ಹೋಲಿಸಿದರೆ ನಿಜವಾಗಿಯೂ ಶೋಚನೀಯವಾಗಿದೆ. ಆದ್ದರಿಂದ ವಿಶೇಷ ಪ್ರಾತಿನಿಧ್ಯಕ್ಕಾಗಿ ಅವರು ಸಲ್ಲಿಸಿದ್ದ ಅಹವಾಲಿನಲ್ಲಿ ಖಂಡಿತವಾಗಿಯೂ ಅರ್ಥವಿದೆ.

ನ್ಯಾಯಯುತವಾಗಿ ಇವರಿಗೆ ದೊರೆಯಬೇಕಾಗಿದ್ದ ಸ್ಥಾನವನ್ನು ಪಡೆಯಲು ಎಲ್ಲಾ ರೀತಿಯಿಂದಲೂ ಅರ್ಹವಾಗಿರುವ ವರ್ಗಗಳವರು ತಮ್ಮ ಸ್ಥಾನಗಳಿಂದ ವಂಚಿತವಾಗುವಂತೆ ಮಹಾಪ್ರಭುಗಳ ಸರಕಾರವು ಮಾಡಿರುವುದು ಆ ಪ್ರಾಂತದಲ್ಲಿ ದೊಡ್ಡ ಗಂಟಲಿನಿಂದ ಹುಯಿಲೆಬ್ಬಿಸುವ ವರ್ಗಗಳವರನ್ನು ತೃಪ್ತಿಗೊಳಿಸುವುದಕ್ಕೆ ಅಲ್ಲದಿದ್ದರೆ, ಅದರ ಹಿಂದೆ ಇರುವ ಕಾರಣವು ನನಗೆ ತಿಳಿಯುತ್ತಿಲ್ಲ. ದಲಿತ ವರ್ಗಗಳವರ ಸಂಖ್ಯೆಯ ಹತ್ತನೆಯ ಒಂದು ಭಾಗದಷ್ಟೂ ಇಲ್ಲದ ಹಾಗೂ ಯಾವುದೇ ಸಾಮಾಜಿಕ ಕೊರತೆಗಳನ್ನೂ ಕಾಣದ ಭಾರತೀಯ ಕ್ರೈಸ್ತರು ಮತ್ತು ಆಂಗ್ಲೋ ಇಂಡಿಯನ್ನರಿಗೆ ಕ್ರಮವಾಗಿ ಎರಡು ಮತ್ತು ಒಂದು ವಿಶೇಷ ಸ್ಥಾನಗಳನ್ನು ನೀಡಿರುವುದರ ಹಿನ್ನೆಲೆಯಲ್ಲಿ ನೋಡಿದಾಗ, (ದಲಿತರಿಗೆ ಮಾಡಿರುವ) ಈ ಅನ್ಯಾಯವು ಕಣ್ಣಿಗೆ ರಾಚುವಂತೆ ಕಾಣಿಸುತ್ತದೆ. ಈ ಅನ್ಯಾಯಗಳು ಅಖಿಲ ಭಾರತ ದಲಿತ ವರ್ಗಗಳವರ ಸಂಘಗಳ ಒಕ್ಕೂಟವು ಸರಕಾರದ ನಿರ್ಣಯಕ್ಕೆ ತನ್ನ ಒಪ್ಪಿಗೆಯನ್ನು ನೀಡದಂತೆ ಮಾಡುತ್ತವೆ ಎಂದು ನನಗೆ ಅನಿಸುತ್ತದೆ.[೧]

ಭಾರತಕ್ಕೆ ಹಿಂದಿರುಗಿದ ಗಾಂಧೀಯವರನ್ನು ಜನವರಿ ೪ ರಂದು ಬಂಧಿಸಲಾಯಿತು. ಅಸ್ಪೃಶ್ಯ ಹಿಂದೂಗಳನ್ನು ರಾಜಕೀಯವಾಗಿ ಹಿಂದೂ ಸವರ್ಣೀಯರೊಂದಿಗೇ ಬೆಸೆಯುವ ಪ್ರಯತ್ನವನ್ನು ಗಾಂಧಿಯವರು ಇನ್ನೂ ಕೈಬಿಟ್ಟಿರಲೇ ಇಲ್ಲ. ಮಾರ್ಚ ತಿಂಗಳಿನಲ್ಲಿ ಅವರು ಯೆರವಾಡ ಕಾರಾಗೃಹದಿಂದ ಬ್ರಿಟಿಷ್ ಮಂತ್ರಿಮಂಡಲಕ್ಕೆ ಪತ್ರವನ್ನು ಬರೆದು. ತಮ್ಮ ಜೀವ ಇರುವವರೆಗೂ ಹಿಂದೂ ಅಸ್ಪೃಶ್ಯರನ್ನು ಸವರ್ಣೀಯ ಹಿಂದೂಗಳಿಂದ ಬೇರೆ ಮಾಡಲು ಬಿಡುವುದಿಲ್ಲ ಎಂದು ತಿಳಿಸಿದ್ದರು. ಅಸ್ಪೃಶ್ಯರಿಗೆ ಪ್ರತ್ಯೇಕ ಮತ ಕ್ಷೇತ್ರಗಳಿಗೆ ಅನುಮತಿ ನೀಡುವ ಕೋಮುವಾದೀ ನಿರ್ಣಯವು ಘೋಷಣೆ ಆದಾಗ ಅವರು ಇದನ್ನು ರದ್ದುಪಡಿಸದೇ ಹೋದರೆ ಆಮರಣಾಂತ ಉಪವಾಸ ಕೈಗೊಳ್ಳುವುದಾಗಿ ತೀರ್ಮಾನಿಸಿದರು. ಆದರೆ ಸಿಖ್ಖರು, ಮುಸಲ್ಮಾನರು ಹಾಗೂ ಕ್ರೈಸ್ತರಿಗೆ ಕೂಡ ಘೋಷಿಸಲಾಗಿದ್ದ ವಿಶೇಷ ಮತ ಕ್ಷೇತ್ರಗಳ ಬಗೆಗೆ ಅವರು ಏನನ್ನೂ ಹೇಳಲಿಲ್ಲ. ಇದನ್ನು ಗಮನಿಸಿದರೆ ಶೋಷಿತ ವರ್ಗದವರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವುದರ ವಿರುದ್ಧ ಗಾಂಧೀಯವರು ಮಾಡಲು ಉಪಕ್ರಮಿಸಿದ್ದ ಆಮರಣಾಂತ ಉಪವಾಸವು ಸಮರ್ಥನೀಯವಾಗಿರಲಿಲ್ಲ.

ಈ ವಿಷಯಕ್ಕೆ ಸಂಬಂಧಿಸಿದಂತೆ ಡಾ. ಅಂಬೇಡ್ಕರ್ ಹೀಗೆ ಹೇಳಿದರು:

"ಗಾಂಧೀಯವರಿಗೆ ತಮ್ಮ ಬೆದರಿಕೆ ಯಾವುದೇ ಪರಿಣಾಮ ಉಂಟುಮಾಡಿಲ್ಲ ಎಂಬುದು ಅರಿವಾಗಿದೆ. ಮಧ್ಯಸ್ಥಿಕೆ ಮಾಡುವಂತೆ ಪ್ರಧಾನಿಯವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ತಮ್ಮ ಸಹಿ ಇದೆ ಎನ್ನುವುದನ್ನು

1 Keer P. 204
1. The Free Press Journal 24th Agu. 1932

ಅವರು ಮರೆತಂತಿದೆ. ಸಹಿ ಹಾಕಿದ ನಂತರ ಯಾವುದೇ ನಿರ್ಣಯವು ಬಂದರೂ ಅದನ್ನು ಒಪ್ಪಿಕೊಳ್ಳಬೇಕು ಎಂಬ ಅಂಶವನ್ನೇ ಅವರು ಮರೆತ್ತಿದ್ದಾರೆ. ಪ್ರಧಾನಿಯವರ ಕ್ರಮವನ್ನು ಅವರು ಬದಲಿಸಲು ಪ್ರಯತ್ನಪಟ್ಟರು. ಕೋಮುವಾದೀ ನಿರ್ಣಯದ ಷರತ್ತುಗಳನ್ನು ಪಡೆದುಕೊಂಡರು. ಅಂತೆಯೇ ಈ ಕೆಳಗಿನ ಪತ್ರವನ್ನು ಅವರು ಪ್ರಧಾನ ಮಂತ್ರಿಗಳಿಗೆ ಬರೆದರು:–

ಯೆರವಾಡ ಕೇಂದ್ರ ಕಾರಾಗೃಹ
ಆಗಸ್ಟ್ ೧೮, ೧೯೩೨

ಪ್ರೀತಿಯ ಮಿತ್ರರೇ,

ಸರ್ ಸ್ಯಾಮುಯಲ್ ಹೋರೆಯವರು ನಾನು ಶೋಷಿತ ವರ್ಗಗಳ ಜನರ ಪ್ರಾತಿನಿಧ್ಯ ಕುರಿತು ಬರೆದಿರುವ ಪತ್ರವನ್ನು ತಮಗೂ ತಮ್ಮ ಮಂತ್ರಿಮಂಡಲಕ್ಕೂ ತೋರಿಸಿದ್ದಾರೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ. ಈ ಪತ್ರವನ್ನು ಆ ಪತ್ರದ ಒಂದು ಭಾಗವಾಗಿ ಪರಿಗಣಿಸಬೇಕು ಹಾಗೂ ಎರಡನ್ನೂ ಒಟ್ಟಿಗೇ ಪರಿಗಣಿಸಬೇಕು ಎಂದು ನಾನು ಮನವಿ ಮಾಡುತ್ತೇನೆ.

ಬ್ರಿಟಿಷ್ ಸರ್ಕಾರವು ಅಲ್ಪಸಂಖ್ಯಾತರ ಪ್ರಾತಿನಿಧ್ಯವನ್ನು ಕುರಿತು ತಳೆದಿರುವ ನಿರ್ಧಾರದ ಬಗ್ಗೆ ನಾನು ಓದಿದ್ದೇನೆ. ಮಾತ್ರವಲ್ಲ ಸಾಕಷ್ಟು ಚಿಂತನೆಯನ್ನು ನಡೆಸಿದ್ದೇನೆ. ಸರ್ ಸ್ಯಾಮುಯಲ್ ಹೋರೆಯವರಿಗೆ ನಾನು ಬರೆದಿರುವ ಪತ್ರದಲ್ಲಿ ತಿಳಿಸಿದಂತೆ ಹಾಗೂ ಸೈಂಟ್ ಜೇಮ್ಸ್ ಅರಮನೆಯಲ್ಲಿ ೧೯೩೧ರ ನವೆಂಬರ್ ೧೩ ರಂದು ನಡೆದ ದುಂಡು ಮೇಜಿನ ಸಮಾವೇಶದ ಅಲ್ಪಸಂಖ್ಯಾತರ ಸಮಿತಿಯ ಸಭೆಯಲ್ಲಿ ತಿಳಿಸಿದಂತೆ ನನ್ನ ಜೀವವನ್ನು ಪಣಕ್ಕಿಟ್ಟು ನಾನು ನಿಮ್ಮ ಈ ನಿರ್ಧಾರವನ್ನು ವಿರೋಧಿಸುತ್ತೇನೆ. ಈ ನನ್ನ ನಿರ್ಧಾರಕ್ಕೆ ನಾನು ಅಂಟಿಕೊಳ್ಳಲು ಇರುವ ಏಕೈಕ ಮಾರ್ಗ ಎಂದರೆ ನಾನು ಅನ್ನ ಹಾಗೂ ಆಹಾರ ಸಂಪೂರ್ಣವಾಗಿ ತ್ಯಜಿಸಿ, ಉಪ್ಪು ಮತು ಸೋಡಾಗಳೊಡನೆ ಅಥವಾ ಅವೂ ಇಲ್ಲದೆ ಕೇವಲ ನೀರನ್ನು ಮಾತ್ರ ಸೇವಿಸುತ್ತಾ ಉಪವಾಸಕ್ಕೈಗೊಳ್ಳುವುದು. ಬ್ರಿಟಿಷ್ ಸರಕಾರವು ತಾನಾಗಿಯೇ ಅಥವಾ ಸಾರ್ವಜನಿಕರ ಒತ್ತಡಕ್ಕೆ ಮಣಿದು. ಕೋಮುವಾರು ಮತಕ್ಷೇತ್ರಗಳ ಬಗೆಗೆ ತೆಗೆದುಕೊಂಡಿರುವ ತನ್ನ ನಿರ್ಣಯವನ್ನು ಬದಲಿಸಿದರೆ ಅಥವಾ ಹಿಂತೆಗೆದುಕೊಂಡರೆ, ನನ್ನ ಈ ಉಪವಾಸವು ಕೊನೆಗೊಳ್ಳುತ್ತದೆ. ಈ ಕ್ಷೇತ್ರಗಳ ಪ್ರತಿನಿಧಿಗಳು ಮತಕ್ಷೇತ್ರವು ಎಷ್ಟೇ ದೊಡ್ಡದಿದ್ದರೂ, ಸಾಮಾನ್ಯ ಪ್ರತಿನಿಧಿಗಳೊಂದಿಗೆ ಸ್ಪರ್ಧಿಸಿ ಆಯ್ಕೆಯಾಗಿ ಬರಬೇಕು.

ಮೇಲೆ ಹೇಳಿರುವಂತೆ ತಾವು ತಮ್ಮ ನಿರ್ಣಯವನ್ನು ಬದಲಿಸದೆ ಇದ್ದರೆ ನನ್ನ ಉದ್ದೇಶಿತ ಉಪವಾಸವನ್ನು ಅರಂಭಿಸಲು ನಾನು ಸೆಪ್ಟೆಂಬರ್ ೨೦ರ ಮಧ್ಯಾಹ್ನವನ್ನು ನಿಗದಿ ಪಡಿಸಿರುವೆ.

ಇಲ್ಲಿರುವ ಅಧಿಕಾರಿಗಳಿಗೆ ನಾನು ತಂತಿಯ ಮೂಲಕ ಈ ಪತ್ರವನ್ನು ನಿಮಗೆ ತಲುಪಿಸುವಂತೆ ಕೋರಿಕೊಂಡಿದ್ದೇನೆ. ಹೀಗೆ ಮಾಡಿರುವುರಿಂದ ತಮಗೆ ಸಾಕಷ್ಟು ಸಮಯಾವಕಾಶವನ್ನು ನೀಡುತ್ತಿದ್ದೇನೆ. ಅಲ್ಲದೆ, ಈ ಪತ್ರವು ನಿಮಗೆ ತಲುಪಲು ಹೆಚ್ಚು ಕಾಲಾವಕಾಶ ತೆಗೆದುಕೊಳ್ಳಬಹುದೆಂಬ ದೃಷ್ಟಿಯಿಂದ ಸಾಕಷ್ಟು ಸಮಯಾವಕಾಶವನ್ನು ಕೊಟ್ಟು ಮುಂಚಿತವಾಗಿಯೇ ಇದನ್ನು ತಮಗೆ ರವಾನಿಸುತ್ತಿದ್ದೇನೆ.

ಅಲ್ಲದೇ ನನ್ನ ಈ ಪತ್ರ ಹಾಗು ಸರ್ ಸ್ಯಾಮೂಯಲ್ ಹೋರೆಯವರಿಗೆ ಬರೆದಿರುವ ಪತ್ರವನ್ನು ಪ್ರಕಟಿಸುವಂತೆ ನಾನು ಕೇಳಿಕೊಳ್ಳುತ್ತೇನೆ. ಆದಷ್ಟು ಬೇಗನೇ ಈ ಕೆಲಸ ಆಗಬೇಕು. ಆದರೆ ನಾನು ಕಾರಾಗೃಹದ ಎಲ್ಲಾ ನಿಯಮಗಳಿಗೆ ಬದ್ಧನಾಗಿ ಈ ಎರಡೂ ಪತ್ರಗಳ ಸಾರಾಂಶವನ್ನು ಯಾರಿಗೂ

ತಿಳಿಸಿಲ್ಲ. ಕೇವಲ ಇಬ್ಬರು ಸಹವರ್ತಿಗಳಾದ ಸರದಾರ ವಲ್ಲಭ ಭಾಯಿ ಪಟೇಲರು ಹಾಗೂ ಶ್ರೀ ಮಹದೇವ ದೇಸಾಯಿ ಅವರಿಗೆ ಮಾತ್ರ ಇದು ತಿಳಿದಿದೆ. ಆದರೆ ನನ್ನ ಪತ್ರಗಳಿಗೆ ಸಾರ್ವಜನಿಕ ಅಭಿಪ್ರಾಯ ಪಡೆಯುವುದು ನನಗೆ ಅತ್ಯಂತ ಮುಖ್ಯವಾಗಿದೆ. ಆದ್ದರಿಂದ ಶೀಘ್ರವೇ ಇದನ್ನು ಪ್ರಕಟಿಸಬೇಕು ಎಂದು ಆಗ್ರಹಿಸುತ್ತೇನೆ.

ನಾನು ಕೈಗೊಂಡಿರುವ ನಿರ್ಧಾರದ ಬಗ್ಗೆ ನನಗೆ ಖೇದವಿದೆ. ಆದರೆ ಒಬ್ಬ ಧಾರ್ಮಿಕ ವ್ಯಕ್ತಿಯಾಗಿರುವ ನನಗೆ ಇದನ್ನು ಹೊರತುಪಡಿಸಿದರೆ ಅನ್ಯಮಾರ್ಗವಿರಲಿಲ್ಲ. ನಾನು ಸ್ಯಾಮುಯಲ್ ಹೋರೆಯವರಿಗೆ ಬರೆದಿರುವ ಪತ್ರದಲ್ಲಿ ಮತ್ತೊಂದು ಅಂಶವನ್ನು ಸ್ಪಷ್ಟಗೊಳಿಸಿದ್ದೇನೆ. ಒಂದು ವೇಳೆ ಸರ್ಕಾರ ತನಗೆ ಆಗಬಹುದಾದ ಅವಮಾನವನ್ನು ತಪ್ಪಿಸಲು ನನ್ನನ್ನು ಕಾರಾಗೃಹದಿಂದ ಬಿಡುಗಡೆ ಮಾಡಿದರು ಕೂಡ ನನ್ನ ಈ ಉಪವಾಸ ಮುಂದುವರೆಯುತ್ತದೆ. ಏಕೆಂದರೆ ಈ ನಿರ್ಧಾರ ಬದಲಾಗುವಂತೆ ಮಾಡಲು ನನಗೆ ಅನ್ಯಮಾರ್ಗವಿಲ್ಲ. ನನ್ನ ಬಿಡುಗಡೆಯು ಕೂಡ ಅತ್ಯಂತ ಗೌರವ ಪೂರ್ವಕವಾಗಿ ಆಗಬೇಕು ಎಂಬುದೇ ನನ್ನ ಇಚ್ಛೆ.

ನನ್ನ ಈ ನಿರ್ಧಾರ ಏಕಪಕ್ಷೀಯವಾಗಿದೆ ಎಂದು ಕೆಲವರಿಗೆ ಅನಿಸಬಹುದು. ವಿಶೇಷ ಮತಕ್ಷೇತ್ರಗಳು ಶೋಷಿತ ವರ್ಗಗಳವರಿಗೆಂದೇ ಪ್ರತ್ಯೇಕವಾಗಿ ಇರಬಾರದು ಎಂಬ ನನ್ನ ಹಠವು ಶೋಷಿತ ವರ್ಗಗಳವರಿಗೆ ಹಾಗೂ ಹಿಂದೂ ಧರ್ಮಕ್ಕೆ ಮಾರಕ ಆಗಬಹುದು ಎಂದು ಕೂಡ ಕೆಲವರು ಹೇಳಬಹುದು. ಒಂದು ವೇಳೆ ಹಾಗಾಗುವುದಾದರೆ, ನನ್ನ ಜೀವನದಲ್ಲಿ ನಾನು ಅಳವಡಿಸಿಕೊಂಡಿರುವ ಇತರ ತತ್ತ್ವಗಳು ತಪ್ಪಾಗಿರಬೇಕು. ಹಾಗಾದರೆ ಉಪವಾಸ ಮಾಡುವ ಮೂಲಕ ಆಮರಣ ನನ್ನ ತಪ್ಪಿಗೆ ನನಗೆ ದೊರೆಯುವ ಶಿಕ್ಷೆಯಾಗುತ್ತದೆ ಮತ್ತು ನನ್ನ ಚಿಂತನೆಯಲ್ಲಿ ಮುಗ್ಧವಾಗಿ ನಂಬಿಕೆ ಇಟ್ಟಿರುವ ಇನ್ನೂ ಹಲವು ಜನರ ಮೇಲಿನಿಂದ ಒಂದು ಭಾರವನ್ನು ಇಳಿಸಿದಂತೆ ಆಗುತ್ತದೆ. ಆದರೆ ನನಗೆ ನಿಶ್ಚಿತವಾಗಿಯೂ ತಿಳಿದಿರುವಂತೆ ಒಂದು ವೇಳೆ ನನ್ನ ನಿರ್ಧಾರ ಸರಿಯಾಗಿದ್ದರೆ ನಾನು ಕಾಲು ಶತಮಾನದಿಂದ ಸಾಧಿಸಲು ಹೋರಾಡುತ್ತಿರುವ ಉದ್ದೇಶವನ್ನು ಸಾಧಿಸುವುದಕ್ಕೆ ಈಗ ನಾನು ತೆಗೆದುಕೊಂಡಿರುವ ಕ್ರಮ ಮತ್ತೊಂದು ಹೆಜ್ಜೆಯಾಗಿರುತ್ತದೆ. ನನ್ನ ಉದ್ದೇಶ ಸರಿಯಾಗಿಯೇ ಇದೆ ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ಎಂದೆಂದಿಗೂ

ನಿಮ್ಮ ವಿಶ್ವಾಸನೀಯ ಮಿತ್ರ

ಎಂ.ಕೆ.ಗಾಂಧೀ.[೧]

ಈ ಪತ್ರವನ್ನು ಓದಿದರೆ ಮಹಾತ್ಮಾ ಗಾಂಧೀಯವರಲ್ಲಿ ಶೋಷಿತ ವರ್ಗದವರ ಸಮಸ್ಯೆಯ ಬಗೆಗೆ ಇದ್ದ ವಿರೋಧಾಭಾಸಗಳು ತಿಳಿಯುತ್ತದೆ.

ಇತ್ತ ೧೯೩೨ರ ಸೆಪ್ಟೆಂಬರ್ ೬ ರಂದು ಸರ್ದಾರ ವಲ್ಲಭ ಭಾಯಿ ಪಟೇಲ್ ಅವರು ಗಾಂಧೀಜಿಯವರನ್ನು ಪುಣೆಯ ಯೆರವಾಡ ಜೈಲಿನಲ್ಲಿ ಭೇಟಿಯಾದರು ಹಾಗೂ ಈ ವಿಷಯವನ್ನು ಅವರೊಂದಿಗೆ ಚರ್ಚಿಸಿದರು.

ಸ್ವಾಭಾವಿಕವಾಗಿ ಗಾಂಧೀಜಿಯವರ ಈ ಘೋಷಣೆಯಿಂದ ದೇಶದಲ್ಲಿ ಅಲ್ಲೋಲಕಲ್ಲೋಲ ಉಂಟಾಯಿತು. ಸಾರ್ವಜನಿಕರು ಸರ್ಕಾರಕ್ಕೆ ಹಾಗೂ ಗಾಂಧೀಜಿಯವರಿಗೆ ವಿನಂತಿಗಳನ್ನು ಸಲ್ಲಿಸಿದರು.

1. Writings & Speeches, Vol-9 Pp 82-83

ಪತ್ರಿಕೆಗಳಿಗೆ ಹೇಳಿಕೆಗಳನ್ನು ನೀಡಿದರು ಹಾಗೂ ಹಲವಾರು ಜನರು ವಿವಿಧೆಡೆಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು. ರಾಜೇಂದ್ರ ಪ್ರಸಾದ ಮುಂತಾದ ನಾಯಕರು ಹಿಂದೂ ಧರ್ಮಕ್ಕೆ ಇದು ಪರೀಕ್ಷೆಯ ಕಾಲ ಎಂದರು. ಹಿಂದೂಗಳ ಎಲ್ಲಾ ಪಂಗಡಗಳಲ್ಲಿಯೂ ಒಂದು ಅಯೋಮಯತೆ ಇತ್ತು. ಆದರೆ ಶೋಷಿತ ವರ್ಗದವರ ಪರವಾಗಿ ತಮ್ಮ ವರ್ಗವು ನಡೆಸುತ್ತಿರುವ ಕಾರ್ಯವನ್ನು ಕುರಿತು ಅವರಿಗೆ ನಾಚಿಕೆಯೆನಿಸಲಿಲ್ಲ. ಅವರ ರಾಜಕೀಯ ನಾಯಕ, ರಾಜಕೀಯ ಗುರುವಿನ ಜೀವ ಅಪಾಯದಲ್ಲಿದೆ ಎಂಬ ಚಿಂತೆ ಮಾತ್ರ ಅವರಲ್ಲಿತ್ತು. ಹಿಂದೂ ಧರ್ಮದವರಲ್ಲಿ ಸಾಂಪ್ರದಾಯಿಕವಾಗಿ ಇದ್ದ ಕ್ರೂರ ಸ್ವಭಾವವು ಮೇಲುಗೈ ಪಡೆದು, ಅವರೆಲ್ಲ ಗಾಬರಿಗೊಂಡಿದ್ದರು.

ಪಂಡಿತ್ ಮಾಲವೀಯ ಶಿಮ್ಲಾ ನಗರದಿಂದ ಒಂದು ಘೋಷಣೆ ಮಾಡಿದರು. ಅವರು ಈ ಬಿಕ್ಕಟ್ಟನ್ನು ಪರಿಹರಿಸಿ ಮಹಾತ್ಮರ ಜೀವವನ್ನು ಉಳಿಸಲು. ಸೆಪ್ಟೆಂಬರ್ ೧೯ ರಂದು ಹಿಂದೂ ನಾಯಕರ ಸಮಾವೇಶವನ್ನು ಬೊಂಬಾಯಿಯಲ್ಲಿ ನಡೆಸಲು ನಿರ್ಧರಿಸಿದ್ದರು. ಈ ವಿಷಯವನ್ನು ತಂತಿಯ ಮೂಲಕ ಅಂಬೇಡ್ಕರ್ ಅವರಿಗೂ ತಿಳಿಸಿದ್ದರು. ಈ ಮಹಾತ್ಮನ ಜೀವ ಉಳಿಸಲು ಬ್ರಿಟಿಷರ ಉನ್ನತಾಧಿಕಾರಿಯ ಆದೇಶವನ್ನು ಬದಲಾಯಿಸುವುದು ಅನಿವಾರ್ಯವಾಗಿತ್ತು. ಇದನ್ನು ಬದಲಾವಣೆ ಮಾಡಲು ಡಾ. ಅಂಬೇಡ್ಕರ್ ಅವರ ಅನುಮತಿಯ ಅಗತ್ಯವಿತ್ತು. ಏಕೆಂದರೆ ಇಡೀ ಶೋಷಿತ ವರ್ಗಕ್ಕೆ ಅವರೇ ನಿರ್ಧಾರ ಕೈಗೊಳ್ಳುವ ಪ್ರತಿನಿಧಿಯಾಗಿದ್ದರು. ಆದ್ದರಿಂದ ಈ ಸಮಯದ ಪ್ರಮುಖ ವ್ಯಕ್ತಿಯಾದ ಅಂಬೇಡ್ಕರ್ ಅವರತ್ತ ಇದೀಗ ಎಲ್ಲರ ದೃಷ್ಟಿನೆಟ್ಟಿತ್ತು. ವಿಪರ್ಯಾಸ ಸಂಗತಿಯೆಂದರೆ ಇದುವರೆಗೂ ಇವರೇ ಶೋಷಿತ ವರ್ಗದ ಪ್ರತಿನಿಧಿ ಎಂದು ಒಪ್ಪಿಕೊಳ್ಳಲು ಸಿದ್ಧವಿರದ ಮಾಧ್ಯಮ ಇದೀಗ ಅನ್ಯ ಮಾರ್ಗವಿಲ್ಲದೇ ಇದನ್ನು ಒಪ್ಪಿಕೊಳ್ಳುವಂತಾಯಿತು. ಅವರ ಒಂದೊಂದು ಹೇಳಿಕೆಗೆ ಮಾಧ್ಯಮದವರು ಚಾತಕ ಪಕ್ಷಿಯಂತೆ ಕಾಯತೊಡಗಿದರು. ಇದೀಗ ಇಡೀ ದೇಶದ ಕಣ್ಮಣಿಯಾಗಿ ಡಾ. ಅಂಬೇಡ್ಕರ್ ಪ್ರಾಮುಖ್ಯವನ್ನು ಪಡೆದುಕೊಂಡರು.

ಗಾಂಧೀಯವರು ಒಡ್ಡಿರುವ ಆಮರಣಾಂತ ಉಪವಾಸದ ಬೆದರಿಕೆಯ ಪ್ರಾಮುಖ್ಯವು ಹಾಗೂ ಅದರಿಂದ ಆಗಬಹುದಾದ ಪರಿಣಾಮಗಳನ್ನು ಡಾ. ಅಂಬೇಡ್ಕರ್ ಊಹಿಸಿದ್ದರು. ಗಾಂಧೀಯವರು ಅತ್ಯಂತ ಅಪಾಯಕಾರಿಯಾದ ಜೀವ ಬೆದರಿಕೆಯ ಅಸ್ತ್ರವನ್ನು ಅವರ ಮೇಲೆ ಪ್ರಯೋಗಿಸಿದ್ದರು. ಆ ಅಸ್ತ್ರವನ್ನು ಗಾಂಧಿಗೆ ಹಿಂದಿರುಗಿಸಲು ಅಂಬೇಡ್ಕರ್ ಸನ್ನದ್ಧರಾದರು. ಬೊಂಬಾಯಿಯ ರಾಜ್ಯಪಾಲರನ್ನು ಪುಣೆಯಲ್ಲಿ ಸಂದರ್ಶಿಸುವವರಿದ್ದರು.[೧]

ಮಹಾತ್ಮ ಗಾಂಧಿಯವರ ಜೀವವನ್ನು ಉಳಿಸುವ ಸಲುವಾಗಿ ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಯನ್ನು ಕೈಬಿಡುವಂತೆ ಒತ್ತಾಯಿಸಲು ಕರೆದಿರುವ ಸಮಾವೇಶದ ಹಿಂದಿನ ದಿನ ಶೋಷಿತ ವರ್ಗಗಳ ಪ್ರತಿನಿಧಿ ಹಾಗೂ ಪ್ರತ್ಯೇಕ ಮತಕ್ಷೇತ್ರಗಳ ಪ್ರತಿಪಾದಕರಾದ ಡಾ. ಅಂಬೇಡ್ಕರ್ ಅವರು ತರಾತುರಿಯಲ್ಲಿ ರಾಜ್ಯಪಾಲರನ್ನು ಭೇಟಿಮಾಡಲು ಬಾಂಬೆಯಿಂದ ಪುಣೆಗೆ ಹೊರಟಿದ್ದುದು ನಗರಾದ್ಯಂತ ಊಹಾಪೋಹಗಳಿಗೆ ಕಾರಣವಾಗಿತ್ತು.

ಮುಂಜಾನೆ ಪೂನಾಗೆ ಹೋದ ಡಾ. ಅಂಬೇಡ್ಕರ್ ಅವರು ರಾಜ್ಯಪಾಲರೊಂದಿಗೆ ನಡೆಸಿದ ವಿಸ್ತೃತ

---

1. Keer Pp 205-206

ಚರ್ಚೆಯ ನಂತರ ಬೊಂಬಾಯಿಗೆ ಸಂಜೆ ವಾಪಸಾದರು.

"ನೀವು ನಾಳೆಯ ಸಮಾವೇಶದಲ್ಲಿ ಭಾಗಿಯಾಗುವಿರಾ?" ಎಂಬ ಪ್ರಶ್ನೆಯನ್ನು ನಮ್ಮ ಪ್ರತಿನಿಧಿ ಕೇಳಿದರು.

ಅದಕ್ಕೆ ಡಾ. ಅಂಬೇಡ್ಕರ್ ಉತ್ತರಿಸಿ ಮಾಳವಿಯ ಅವರಿಂದ ತಂತಿಯ ಮೂಲಕ ಸಂದೇಶ ಬಂದಿದ್ದನ್ನು ಹೊರತು ಪಡಿಸಿದರೆ, ತಮಗೆ ಮತ್ತ್ಯಾವ ಸಂದೇಶವಾಗಲೀ ಅಥವಾ ಆಹ್ವಾನವಾಗಲೀ ಬಂದಿಲ್ಲ. ಒಂದು ವೇಳೆ ಬಂದರೆ ತಾವು ಖಂಡಿತವಾಗಿಯೂ ಹೋಗುವುದಾಗಿ ಹೇಳಿದರು.

೧೯೩೨ರ ಸೆಪ್ಟೆಂಬರ್ ೧೧ ಭಾನುವಾರ ಸಂಜೆ ಡಾ. ಅಂಬೇಡ್ಕರ್ ಅವರು ಪ್ರತ್ಯೇಕ ಮತಗಟ್ಟೆಗಳಿಂದ ಶೋಷಿತ ವರ್ಗಗಳ ಜನರ ಹಿತಾಸಕ್ತಿಯು ಸಾಧಿತವಾಗುತ್ತದೆ ಎಂಬ ತಮ್ಮ ನಿಶ್ಚಿತಾಭಿಪ್ರಾಯವನ್ನು ಪುನರುಚ್ಚರಿಸಿದರು. ಅದಕ್ಕೆ ಗಾಂಧಿಯವರು ಪರ್ಯಾಯವಾದುದೇನನ್ನಾದರೂ ಸೂಚಿಸಿ ನಂತರ ತಮ್ಮ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು.[೧]

"ಈ ರಾಜಕೀಯ ನಾಟಕಗಳಿಗೆ ನಾನು ಯಾವುದೇ ಬೆಲೆಯನ್ನು ನೀಡುವುದಿಲ್ಲ" ಎಂದರು.

"ಗಾಂಧೀಯವರು ಉಪವಾಸದ ಮೂಲಕ ಪ್ರಾಣತ್ಯಾಗ ಮಾಡುವ ಬೆದರಿಕೆ ಒಡ್ಡುತ್ತಿದ್ದಾರೆ. ಇದು ಯಾವುದೇ ರೀತಿಯ ನೈತಿಕ ಹೋರಾಟವಲ್ಲ. ಬದಲಾಗಿ ಇದೊಂದು ರಾಜಕೀಯ ನಾಟಕ. ರಾಜಕೀಯದಲ್ಲಿ ತನ್ನ ಪ್ರತಿಸ್ಪರ್ಧಿಯೊಂದಿಗೆ ಸ್ಪರ್ಧೆಗೆ ಬಿದ್ದು ಆತನಿಗೂ ಸಮಾನವಾದ ಅವಕಾಶ ನೀಡುವವರನ್ನು ನಾನು ಗೌರವಿಸುತ್ತೇನೆ. ಆದರೆ ಈ ರೀತಿಯ ಕ್ರಮಗಳನ್ನು ಕೈಗೊಂಡು ನನ್ನನ್ನು ಬೆದರಿಸಲು ಸಾಧ್ಯವಿಲ್ಲ".

"ನನ್ನ ನಿರ್ಧಾರ ಅಚಲ. ಹಿಂದೂಗಳ ಹಿತರಕ್ಷಣೆಗಾಗಿ ಗಾಂಧಿಯವರು ತಮ್ಮ ಜೀವವನ್ನು ಮುಡಿಪಾಗಿಟ್ಟು ಹೋರಾಡಲು ಸಿದ್ಧರಿದ್ದರೆ ಶೋಷಿತ ವರ್ಗದ ಜನರು ಕೂಡ ತಮ್ಮ ಹಿತರಕ್ಷಣೆಗಾಗಿ ತಮ್ಮ ಜೀವವನ್ನು ಪಣವಿಟ್ಟು ಹೋರಾಡಲು ಸಿದ್ಧರಿದ್ದಾರೆ.

ಡಾ. ಎಂ.ಸಿ.ರಾಜಾ ಅವರು ಒಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅದೇನೆಂದರೆ ಒಂದು ವೇಳೆ ಅಂಬೇಡ್ಕರ್ ಅವರು ಪ್ರತ್ಯೇಕ ಮತಕ್ಷೇತ್ರದ ಬೇಡಿಕೆಯನ್ನು ಕೈಬಿಟ್ಟು ಮೀಸಲಾತಿ ಇರುವ ಸಾಮಾನ್ಯ ಮತಕ್ಷೇತ್ರಗಳಿಗೆ ಒಪ್ಪಿಗೆ ನೀಡಲು ಸಿದ್ಧರಿದ್ದರೆ, ಈ ಪರಿಸ್ಥಿತಿಯನ್ನು ಸುಧಾರಿಸಬಹುದು. ಆದರೆ ಈ ರೀತಿಯ ಒಡಂಬಡಿಕೆಗೆ ತಾವು ಒಪ್ಪುವುದಿಲ್ಲ ಎಂದು ಅಂಬೇಡ್ಕರ್ ಅವರು ಹೇಳಿದರು.[೨]

ಶ್ರೀ ಗಾಂಧಿಯವರು ೧೯೩೨ರ ಸೆಪ್ಟೆಂಬರ್ ೧೫ ರಂದು ಬೊಂಬಾಯಿಯ ಸರ್ಕಾರಕ್ಕೆ ಪತ್ರವನ್ನು ಬರೆದು. ಅದರಲ್ಲಿ ತಾವು ಆಮರಣಾಂತ ಉಪವಾಸ ಕೈಗೊಂಡಿರುವುದಕ್ಕೆ ಕಾರಣಗಳನ್ನು ತಿಳಿಸಿದ್ದರು. ಈ ಪತ್ರವು ೧೯೩೨ರ ಮಾರ್ಚ್ ೨೧ ರಂದು ಪ್ರಕಟಣೆಗೆ ಹೋಯಿತು. ಈ ಪತ್ರದ ಒಕ್ಕಣೆಯೆಂದರೆ

"ನನ್ನ ಉಪವಾಸದ ಧ್ಯೇಯ ಸೀಮಿತವಾಗಿದೆ. ಶೋಷಿತ ವರ್ಗಗಳವರ ಪ್ರಶ್ನೆಯ ಮುಖ್ಯವಾಗಿ ಧಾರ್ಮಿಕ ಹಿನ್ನೆಲೆಯದ್ದಾಗಿದೆ. ನನ್ನ ಜೀವನ ಪರ್ಯಂತ ಅದಕ್ಕಾಗಿ ಹೋರಾಡುತ್ತಿರುವುದರಿಂದ ಅದು ನನಗೆ ಆಪ್ತವಾಗಿದೆ, ಧ್ಯೇಯವೂ ಆಗಿದೆ. ಅದು ಅತ್ಯಂತ ವೈಯಕ್ತಿಕ ಹಾಗೂ ವಿಶ್ವಾಸದ ವಿಷಯವಾಗಿರುವುದರಿಂದ ನಾನು ಅದರಿಂದ ಹಿಂದೆಗೆಯುವುದಿಲ್ಲ.[೩]

---

1. The Bombay Chronicle date 11th September 1932 (Issue may be of 12th Sept 1932 Editors)
2. The Bombay Chronicle dated 14th September 1932
3. Kharir mode Vol-5, P. 26

ಈ ಪತ್ರಕ್ಕೆ ಉತ್ತರವೆಂಬಂತೆ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾ ಟೈಂಸ್ ಆಫ್ ಇಂಡಿಯಾಗೆ ಅಂಬೇಡ್ಕರ್ ಅವರು ಈ ಮುಂದಿನ ಪತ್ರ ಬರೆದರು:–

ಮಾನ್ಯರೇ,

ಶೋಷಿತ ವರ್ಗಗಳವರಿಗೆ ಸಂಬಂಧಿಸಿದಂತೆ ತನ್ನ ನಿಲುವನ್ನು ಬದಲಿಸಿಕೊಳ್ಳುವಂತೆ ಬ್ರಿಟಿಷ್ ಸರ್ಕಾರ ಮೇಲೆ ಒತ್ತಡ ತರಲು ನಗರ ಎಂಟು ಸ್ಥಳಗಳಲ್ಲಿ ತುರ್ತು ಸಭೆಯನ್ನು ಕರೆಯಲಾಗಿದೆ ಎಂಬುದನ್ನು ಇಂದಿನ ಪತ್ರಿಕೆಯನ್ನು ಓದಿ ಆಶ್ಚರ್ಯವಾಯಿತು. ಶೋಷಿತ ವರ್ಗಗಳಿಗೆ ಪ್ರಾತಿನಿಧ್ಯವನ್ನು ಒದಗಿಸಲು ಅವಕಾಶವನ್ನು ಕಲ್ಪಿಸಿರುವ ಪ್ರಧಾನ ಮಂತ್ರಿಗಳ ನಿರ್ಣಯದ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸುವುದು ಈ ಸಭೆಗಳ ಉದ್ದೇಶವಾಗಿದೆ ಎಂಬುದು ಸ್ಪಷ್ಟವಾಗಿದೆ.

ಈ ಉದ್ದೇಶಕ್ಕಾಗಿ ಮಹಾತ್ಮ ಗಾಂಧೀಯವರು ತಮ್ಮ ಪ್ರಾಣವನ್ನು ಒತ್ತೆಯಿಟ್ಟು ಹೋರಾಡಲು ಸಿದ್ಧರಿದ್ದಾರೆ ಎಂಬ ಘೋಷಣೆ ಆಗಿದೆ. ಈ ಹಿನ್ನೆಲೆಯಲ್ಲಿ ನನ್ನ ಹಾಗು ಹಲವು ಪ್ರಮುಖ ಹಿಂದೂ ಮುಖಂಡರ ನಡುವೆ ಚರ್ಚೆಗಳು ನಡೆಯುತ್ತಿವೆ. ಅಂತೆಯೇ ನಿನ್ನೆ ಸಂಜೆ ತುರ್ತು ಸಮಿತಿಯ ಸಭೆಗೆ ಆಗಮಿಸಬೇಕು ಎಂದು ನನಗೆ ಆಹ್ವಾನ ನೀಡಲಾಗಿತ್ತು. ಅದನ್ನು ಮನ್ನಿಸಿ ನಾನು ಹೋಗಿಬಂದೆ ಕೂಡ. ಆ ಸಮಯದಲ್ಲಿ ಸಾರ್ವಜನಿಕರೆದುರು ಈ ಪ್ರಶ್ನೆಯನ್ನು ಇಡುವ ಯಾವುದೇ ಪ್ರಸ್ತಾಪವೂ ಬರಲಿಲ್ಲ. ಈ ರೀತಿಯ ಪ್ರಸ್ತಾವನೆಯ ಹಸ್ತಪ್ರತಿಯೇನಾದರೂ ನನಗೆ ದೊರೆತಿದ್ದಿದ್ದರೆ, ನಾನು ಆ ಪ್ರಸ್ತಾವನೆಯ ಭಾಷೆಯಷ್ಟನ್ನೇ ಅಲ್ಲ, ಮಾತುಕತೆಗಳು ನಡೆಯುತ್ತಿರುವಾಗ ಈ ವಿಷಯವನ್ನು ಸಾರ್ವಜನಿಕ ಸಭೆಯ ಮುಂದಿಡುವುದನ್ನೂ ಖಂಡಿಸುತ್ತಿದ್ದೆ. ವಾಸ್ತವವವಾಗಿ, ಯಾವುದೇ ರೀತಿಯ ಪ್ರಚಾರವನ್ನೂ ಎರಡೂ ಪಕ್ಷದವರು ಮಾಡಬಾರದು ಎಂಬುದರ ಬಗ್ಗೆ ಒಪ್ಪಂದವಾಗಿತ್ತು. ಈ ಕಾರಣದಿಂದ ನಾನು ಕೂಡ ಯಾವುದೇ ಸಭೆಗಳಿಗೆ ಕರೆ ನೀಡಲಿಲ್ಲ. ಈ ನಿಟ್ಟಿನಲ್ಲಿ ನನ್ನ ಸಹವರ್ತಿಗಳಿಂದ ನನಗೆ ಸಾಕಷ್ಟು ಒತ್ತಡವಿದ್ದರೂ ನಾನದಕ್ಕೆ ತಲೆಬಾಗಲಿಲ್ಲ.

ತುರ್ತು ಸಮಿತಿಯು ಈ ರೀತಿಯಾಗಿ ಸಾರ್ವಜನಿಕ ಸಭೆಗಳನ್ನು ನಡೆಸುವ ಮೂಲಕ ನನ್ನನ್ನು ಹಾಗು ನನ್ನ ಪಕ್ಷವನ್ನು ಕೆಟ್ಟ ಹಠದ ದಾರಿಗೆ ಪ್ರೇರೇಪಿಸುತ್ತಿದೆ. ನನ್ನೊಂದಿಗೆ ಒಡಂಬಡಿಕೆಗೆ ಪ್ರಯತ್ನಿಸುತ್ತಿರುವವರು ನನ್ನ ವಿರುದ್ಧ ಯಾವುದೇ ರೀತಿಯ ಪ್ರಚಾರ ಮಾಡಲಾರರು. ಅದೇ ಸಮಯಕ್ಕೆ ಯಾವುದಾದರೂ ಸಮಾಧಾನಕರವಾದ ಒಪ್ಪಂದಕ್ಕೆ ಬರಲು ಕೂಡ ಪ್ರಯತ್ನಿಸುತ್ತಿದ್ದಾರೆ. ಅದು ಒಡಂಬಡಿಕೆಯ ಮೂಲಕ ಆಗಬೇಕು. ಇಲ್ಲವೇ ನೇರವಾದ ಸ್ಪರ್ಧೆಯ ಮೂಲಕ ಆಗಬೇಕು. ಎರಡೂ ಒಟ್ಟಿಗೆ ಆಗಲು ಸಾಧ್ಯವಿಲ್ಲ. ಒಂದು ವೇಳೆ ಎದುರಾಳಿ ಪಕ್ಷದವರು ನನ್ನ ವಿರುದ್ಧ ಅಪಪ್ರಚಾರಕ್ಕೆ ಇಳಿದರೆ, ಅದಕ್ಕೆ ಪ್ರತಿಯಾಗಿ ನನ್ನ ಪಕ್ಷದವರು ಕೂಡ ಇಂತಹುದೇ ಪ್ರಚಾರಕ್ಕೆ ಇಳಿದರೆ, ಎದುರು ಪಕ್ಷದವರು ನನ್ನ ಮೇಲೆ ಯಾವುದೇ ಆರೋಪವನ್ನೂ ಮಾಡುವಹಾಗಿಲ್ಲ.

ಬಿ.ಆರ್. ಅಂಬೇಡ್ಕರ್.

ಬೊಂಬಾಯಿ, ಸೆಪ್ಟೆಂಬರ್ ೧೮, ೧೯೩೨.[1]

---

1. The Times of India 19 September 1932

ಹಿಂದೂ ನಾಯಕರು ನಡೆಸಲು ಉದ್ದೇಶಿಸಿದ್ದಂತಹ ಸಮಾವೇಶದ ಮುನ್ನಾದಿನ ಸಂಜೆ ಮಾಧ್ಯಮಗಳಿಗೆ ಒಂದು ಹೇಳಿಕೆಯನ್ನು ಡಾ. ಅಂಬೇಡ್ಕರ್ ಬಿಡುಗಡೆ ಮಾಡಿದರು. ಅದರ ಒಕ್ಕಣೆ : ನನ್ನ ವಿಷಯಕ್ಕೆ ಸಂಬಂಧಿಸಿದಂತೆ ನಾನು ಹೇಳುವುದೇನೆಂದರೆ ನಾನು ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲು ಸಿದ್ಧನಿದ್ದೇನೆ. ಆದರೆ ಶೋಷಿತ ವರ್ಗದವರ ಹಿತಾಸಕ್ತಿ ಕಡೆಗಣಿಸಲು ಸಿದ್ಧನಿಲ್ಲ. ಯಾವುದೇ ರೀತಿಯ ಅಯೋಮಯ ಮನಸ್ಥಿತಿಯಲ್ಲಿ ಸಮಾವೇಶ ನಡೆಸುವುದು ಸೂಕ್ತವಲ್ಲ. ಒಂದು ನಿರ್ದಿಷ್ಟ ಅಭಿಪ್ರಾಯ ಇಲ್ಲದೆ ಯಾವುದೇ ವಿಷಯದ ಚರ್ಚೆ ನಡೆಸುವುದು ಕೂಡ ವ್ಯರ್ಥವೇ" ಅಹ್ಮದಾಬಾದಿನಿಂದ ಆಗಮಿಸಿದ್ದ ಶೋಷಿತ ವರ್ಗಗಳ ಪ್ರತಿನಿಧಿಗಳ ಗುಂಪಿನ ಎದುರು ಕೂಡ ಅವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅಲ್ಲದೆಯೇ ಭಾರತದ ಆಗರ್ಭ ಶ್ರೀಮಂತರಾದಂತಹ ಸೇಠ್ ವಾಲ್ ಚಂದ್ ಹೀರಾಚಂದ್ ಅವರೆದುರು ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಗಾಂಧೀಯವರು ಬ್ರಿಟನ್ನಿನ ಪ್ರಧಾನ ಮಂತ್ರಿಯವರ ಎದುರು ಚರ್ಚಿಸಬಹುದಿತ್ತು. ಎಂದು ಹೇಳಿದರು. ಆದರೆ ಆತ ಯಾವುದೇ ಪ್ರಸ್ತಾಪವನ್ನು ಯಾರ ಮುಂದೆಯೂ ಇಟ್ಟಿರಲಿಲ್ಲ. ಆದ್ದರಿಂದ ಇಂದಿನ ಪರಿಸ್ಥಿತಿಗೆ ಅವರೇ ಸಂಪೂರ್ಣವಾಗಿ ಹೊಣೆ ಎಂದರು.

ಹೊರ ಊರಿನಿಂದ ಬಂದ ಪ್ರತಿನಿಧಿಗಳು ಸ್ನೇಹಿತರು ನೆಂಟರು ಎಲ್ಲರೂ ಡಾ. ಅಂಬೇಡ್ಕರ್ ಅವರನ್ನು ಭೇಟಿ ಮಾಡಿದರು. ಈ ರೀತಿ ಆಗಮಿಸಿದವರಲ್ಲಿ ಮೊದಲಿಗರು ಎಂದರೆ ಟಕ್ಕರ್ ಎಂಬಾತ. ಈತ ರಾಜ್ಯ ಸಮಿತಿಯಲ್ಲಿ ಡಾ. ಅಂಬೇಡ್ಕರ್ ಅವರೊಂದಿಗೆ ಕೆಲಸ ಮಾಡಿದ್ದರು. ಆತ ಕೂಡ ಈ ಚರ್ಚೆಯನ್ನು ಮಾಡಲು ಬಂದಿದ್ದರು. ಡಾ. ಅಂಬೇಡ್ಕರ್ ಅವರು ಸಮಯಕ್ಕೆ ಬಹಳ ಮಹತ್ವ ನೀಡುತ್ತಿದ್ದರು. ಆದ್ದರಿಂದ ಅವರು ಟಕ್ಕರ್ ಅವರಿಗೆ ತಾವು ಯಾವುದೋ ಕ್ರಿಮಿನಲ್ ಮೊಕದ್ದಮೆಯನ್ನು ಅಭ್ಯಸಿಸುತ್ತಿರುವುದಾಗಿ ತಿಳಿಸಿ. ಅವರಿಗೆ ಎಷ್ಟು ಸಮಯ ಬೇಕಾಗಬಹುದು ಎಂದು ಕೇಳಿದರು. ಟಕ್ಕರ್ ಅವರು ತಮಗೆ ಒಂದು ಗಂಟೆ ಸಮಯ ನೀಡುವಂತೆ ಅಂಬೇಡ್ಕರ್ ಅವರನ್ನು ಕೇಳಿಕೊಂಡರು. ಅಂಬೇಡ್ಕರ್ ಅವರು ಅವರಿಗೆ ಐದು ನಿಮಿಷಗಳ ಕಾಲವಕಾಶ ನೀಡುವುದಾಗಿ ಹೇಳಿದರು. ಟಕ್ಕರ್ ಅವರು ಮತ್ತಷ್ಟು ಸಮಯ ನೀಡುವಂತೆ ಕೇಳಿಕೊಂಡರು. ಅತ್ಯಂತ ತರಾತುರಿಯಲ್ಲಿ ಈ ಭೇಟಿ ಕೊನೆಗೊಂಡಿತು. ಹಾಗೂ ಡಾ. ಅಂಬೇಡ್ಕರ್ ಅವರು ಒಳನಡೆದರು. ಟಕ್ಕರ್ ಪುನಃ ಮರುದಿನ ಬಂದು ಅಂಬೇಡ್ಕರ್ ಅವರನ್ನು ಭೇಟಿಯಾದರು. ಅದಾದನಂತರ ಅತ್ಯಂತ ಕೋಪೋದ್ರೇಕದ ಪ್ರತಿಭಟನೆಯು ಡಾ. ಅಂಬೇಡ್ಕರ್ ಅವರ ವಿರುದ್ಧ ಆರಂಭಗೊಂಡಿತು.[೧]

ಹಿಂದೂ ಸಮಾವೇಶದ ಹಿಂದಿನ ದಿನ ಸಂಜೆ ಡಾ. ಅಂಬೇಡ್ಕರ್ ಅವರು ಮಾಧ್ಯಮಗಳಿಗೆ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದರು. ಅದರ ಸಂಪೂರ್ಣ ಒಕ್ಕಣೆ ಈ ಕೆಳಗಿನಂತಿದೆ:
ಸಂಪಾಕದರು

"ಮಹಾತ್ಮಗಾಂಧಿ, ಸರ್. ಸ್ಯಾಮುಯಲ್ ಹೋರೆ ಹಾಗೂ ಪ್ರಧಾನಮಂತ್ರಿಯವರ ನಡುವಿನ ಸಂವಾದವನ್ನು ಓದಿ ನಾನು ಪರಮಾಶ್ಚರ್ಯಗೊಂಡಿರುವೆ. ಇದು ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಬ್ರಿಟಿಷ್ ಸರಕಾರವು ತಾನಾಗಿಯೋ ಅಥವಾ ಸಾರ್ವಜನಿಕ ಅಭಿಪ್ರಾಯಕ್ಕೆ ಮಣಿದೋ ಶೋಷಿತವರ್ಗದ ಜನರಿಗೆ ಪ್ರತ್ಯೇಕ ಮತಗಟ್ಟೆಗಳನ್ನು ನೀಡುವ ತಮ್ಮ ನಿರ್ಣಯವನ್ನು ಹಿಂತೆಗೆದುಕೊಳ್ಳುವವರೆಗೂ ತಾವು ಆಮರಣಾಂತ ಉಪವಾಸವನ್ನು ಕೈಗೊಳ್ಳುವುದಾಗಿ ಗಾಂಧಿಯವರು ಹೇಳಿದ್ದಾರೆ. ಈ ರೀತಿ ಮಾಡುವುದರಿಂದ

1. Keer Pp 206-207
* Writings & Speeches Vol-9 Pp 77-87

ಗಾಂಧೀಯವರು ನನ್ನನ್ನು ಯಾವ ರೀತಿಯ ಸ್ಥಾನಕ್ಕೆ ತಳ್ಳಿದ್ದಾರೆ ಎಂಬ ಕಲ್ಪನೆಯೂ ಅವರಿಗಿಲ್ಲ.

ಆದರೆ ದುಂಡು ಮೇಜಿನ ಸಮಾವೇಶದಲ್ಲಿ ಈ ವಿಷಯ ಅತ್ಯಂತ ಸಣ್ಣದ್ದು ಹಾಗೂ ಮಹತ್ವ ನೀಡುವ ಅಗತ್ಯವೇ ಇಲ್ಲ ಎಂದಿದ್ದರು. ಆದರೆ ಈಗ ಅದಕ್ಕಾಗಿ ತಮ್ಮ ಜೀವವನ್ನೇ ಒತ್ತೆಯಿಟ್ಟು ಏಕೆ ಹೋರಾಡುತ್ತಿದ್ದಾರೆ ಎಂಬುದು ನನ್ನ ಬುದ್ಧಿಗೆ ಹೊಳೆಯುತ್ತಿಲ್ಲ. ಗಾಂಧೀಯವರು ಹಿಡಿದಂತಿರುವ ಈ ಉದ್ದೇಶ ಸಂವಿಧಾನದ ರಚನೆಯಲ್ಲಿ ಕೂಡ ಮುಖ್ಯ ಪಾತ್ರ ವಹಿಸಲಾರದು. ಅದನ್ನು ಸಂವಿಧಾನದ ಪರಿಶಿಷ್ಟದಲ್ಲಿ ಸೇರಿಸಲಾಗಿದೆ. ಈ ರೀತಿಯ ಸತ್ಯಾಗ್ರಹವನ್ನು ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವ ಸಮಯದಲ್ಲಿ ಅವರು ಕೈಗೊಂಡಿದ್ದರೆ ಅದಕ್ಕೊಂದು ಅರ್ಥವಾದರೂ ಇರುತ್ತಿತ್ತು. ಆದರೆ ಇದೇ ವಿಷಯವನ್ನು ಅವರು ದುಂಡು ಮೇಜಿನ ಸಮಾವೇಶದಲ್ಲಿ ಚರ್ಚಿಸಬೇಕೆಂದು ಒತ್ತಾಯಿಸುತ್ತಿದ್ದರು. ಈ ವಿಷಯಕ್ಕೆ ತಮ್ಮ ಜೀವವನ್ನೇ ಅವರು ಪಣಕ್ಕೆ ಇಟ್ಟಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಪ್ರತ್ಯೇಕ ಮತಗಟ್ಟೆಗಳನ್ನು ಕೇವಲ ಶೋಷಿತ ವರ್ಗಗಳವರಿಗೆ ಮಾತ್ರ ನೀಡದೇ ಭಾರತೀಯ ಕ್ರೈಸ್ತರು, ಆ್ಯಂಗ್ಲೋ ಇಂಡಿಯನ್ನರು, ಯುರೋಪಿಯನ್ನರು, ಮುಸಲ್ಮಾನರು ಮತ್ತು ಸಿಖ್ಖರಿಗೂ ನೀಡಲಾಗಿದೆ. ಅಲ್ಲದೆ ಭೂಮಿಯೊಡೆಯರು, ವ್ಯಾಪಾರಸ್ಥರು ಹಾಗೂ ಕಾರ್ಮಿಕರಿಗೆ ಕೂಡ ಪ್ರತ್ಯೇಕ ಮತಕ್ಷೇತ್ರಗಳನ್ನು ಕೊಡಲಾಗಿದೆ. ಆದರೆ ಈ ರೀತಿ ಮತಕ್ಷೇತ್ರವನ್ನು ಮೊಹಮಡನ್ನರು ಹಾಗೂ ಸಿಖ್ಖರಿಗೆ ಹೊರತುಪಡಿಸಿ ಮತ್ಯಾರಿಗಾದರೂ ನೀಡುವುದನ್ನು ವಿರೋಧಿಸಿದ್ದರು. ಆದರೆ ಇದೀಗ ಶೋಷಿತ ವರ್ಗದವರನ್ನು ಹೊರತುಪಡಿಸಿ ಮಿಕ್ಕೆಲ್ಲರಿಗೂ ಪ್ರತ್ಯೇಕ ಮತಕ್ಷೇತ್ರ ನೀಡಲು ಗಾಂಧೀಯವರು ಒಪ್ಪಿದ್ದಾರೆ.

ಶೋಷಿತ ವರ್ಗದವರಿಗೆ ಪ್ರತ್ಯೇಕ ಮತಕ್ಷೇತ್ರ ನೀಡಿದರೆ ಉಂಟಾಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ಕುರಿತು ಗಾಂಧೀಯವರು ವ್ಯಕ್ತಪಡಿಸಿರುವ ಆತಂಕಗಳು ನನ್ನ ದೃಷ್ಟಿಯಲ್ಲಿ ಕೇವಲ ಕಾಲ್ಪನಿಕ. ಸಿಖ್ಖರು ಹಾಗೂ ಮಹಮದೀಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವುದರಿಂದ ದೇಶ ವಿಭಜನೆ ಆಗದಿದ್ದ ಮೇಲೆ, ಶೋಷಿತ ವರ್ಗದವರಿಗೆ ಪ್ರತ್ಯೇಕ ಮತಕ್ಷೇತ್ರ ನೀಡುವುದರಿಂದ, ಹಿಂದೂ ಸಮಾಜ ಹೇಗೆ ವಿಭಜನೆ ಆಗುತ್ತದೆ? ಶೋಷಿತ ವರ್ಗಗಳನ್ನು ಬಿಟ್ಟು ಕೆಲವರ್ಗ ಮತ್ತು ಸಮುದಾಯಗಳವರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡಿದರೆ, ಅದು ಅವರ ಮನಸ್ಸಾಕ್ಷಿಯನ್ನು ಚುಚ್ಚುವುದಿಲ್ಲ.

ಸ್ವತಂತ್ರ ಭಾರತದ ಸಂವಿಧಾನದಲ್ಲಿ ಮೇಲ್ವರ್ಗದ ಜನರಿಂದ ರಕ್ಷಣೆ ಪಡೆದುಕೊಳ್ಳಲು, ತಮ್ಮ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಬೇಕಾಗಿರುವ ಹೆಚ್ಚಿನ ಅಗತ್ಯ ಇರುವುದು ಶೋಷಿತ ವರ್ಗಗಳಿಗೆ ಎಂಬುದು ಬಹಳಷ್ಟು ಜನರ ಅಭಿಪ್ರಾಯವೂ ಆಗಿರುತ್ತದೆ. ತೀವ್ರ ಹೋರಾಟ ನಡೆಸದೆ ಈ ವರ್ಗ ತನ್ನ ಅಸ್ತಿತ್ವ ಉಳಿಸಿಕೊಳ್ಳುವುದು ಅಸಾಧ್ಯವಾಗಿದೆ. ಅವರು ಸೇರ್ಪಟ್ಟಿರುವ ಧರ್ಮವು ಅವರಿಗೆ ಗೌರವ ನೀಡುವುದಿರಲಿ ಕನಿಷ್ಠ ಅವರನ್ನು ಕುಷ್ಠರೋಗಿಗಳಂತೆ ನೋಡಿ ಇತರರೊಂದಿಗೆ ಬೆರೆಯಲು ಕೂಡ ಬಿಡುತ್ತಿಲ್ಲ. ಆರ್ಥಿಕವಾಗಿ ಈ ವರ್ಗವು ಸಂಪೂರ್ಣವಾಗಿ ಮೇಲ್ವರ್ಗದ ಹಿಂದೂಗಳನ್ನು ಅವಲಂಬಿಸಿದೆ. ಅದು ತನ್ನ ದಿನನಿತ್ಯದ ಅನ್ನಾಹಾರಕ್ಕಾಗಿ ಕೂಡ ಇವರನ್ನೇ ಅವಲಂಬಿಸಿದೆ. ಯಾವುದೇ ರೀತಿಯ ಸ್ವತಂತ್ರ ದುಡಿಮೆ ಮಾಡುವ ಅವಕಾಶ ಅವರಿಗಿಲ್ಲ. ಅವರು ಮುಂದುವರೆಯಲು ತೆರೆದಿಟ್ಟಿರಬೇಕಾದಂತಹ ಎಲ್ಲಾ ಬಾಗಿಲುಗಳನ್ನು ಹಿಂದೂ ಸಮಾಜ ಮುಚ್ಚಿ ಅವರು ಸಾಮಾಜಿಕವಾಗಿ ಮೇಲೇಳದಂತೆ ಮಾಡಿದೆ. ಒಂದು ವಿಷಯ ತಮಗೆ ತಿಳಿಸಿದರೆ ಅದು ಅತಿಶಯೋಕ್ತಿಯಲ್ಲ. ಅದೇನೆಂದರೆ ಒಂದು ಹಳ್ಳಿಯಲ್ಲಿ ಹಿಂದೂ ಸಮಾಜವು ತನ್ನೊಳಗೆ ಎಷ್ಟೇ ಬಿರುಕುಗಳನ್ನು ಹೊಂದಿದ್ದರು ಕೂಡ, ಶೋಷಿತ ವರ್ಗಗಳ ಜನರನ್ನು ಮೇಲೇಳದಂತೆ ಮಾಡುವ ಪರಿಸ್ಥಿತಿ ಬಂದಾಗ, ಒಗ್ಗಟ್ಟಾಗಿ ಇವರ ವಿರುದ್ಧ ಹುನ್ನಾರ ಹುಟ್ಟುಹಾಕಿ ಅವರನ್ನು ಭಾರತದ ಸಾಮಾನ್ಯ

ಪ್ರಜೆಯಂತೆ ಬಾಳುವುದಕ್ಕೆ ಅವಕಾಶವನ್ನು ನೀಡುವುದಿಲ್ಲ.

ಈ ಪರಿಸ್ಥಿತಿಯಲ್ಲಿ ಅವರು ತಮ್ಮ ಜೀವನ ಹೋರಾಟದಲ್ಲಿ ಯಶಸ್ಸನ್ನು ಗಳಿಸಲು ಮತ್ತು ವ್ಯವಸ್ಥಿತವಾಗಿ ತಮ್ಮನ್ನು ಕ್ರೂರವಾಗಿ ನಡೆಸಿಕೊಳ್ಳುವವರಿಂದ ರಕ್ಷಿಸಿಕೊಳ್ಳಲು ಈ ದುರ್ಬಲವಾಗಿರುವ ಸಮುದಾಯಕ್ಕೆ ಕೆಲವೊಂದು ಸಾಂವಿಧಾನಿಕ ರಾಜಕೀಯ ಬಲವನ್ನು ನೀಡುವುದು ಸರಿಯಾದ ಕ್ರಮವಾಗಿದೆ ಎಂದು ಎಲ್ಲಾ ವಿಚಾರವಂತರೂ ಒಪ್ಪುತ್ತಾರೆ.

ಹೊಸ ಸಂವಿಧಾನದಲ್ಲಿ ಇವರಿಗೆ ಅಗತ್ಯವಿರುವಷ್ಟು ಹಕ್ಕನ್ನು ಕೊಡಮಾಡಿಸಲು ಈ ವರ್ಗದವರ ಹಿತಚಿಂತಕನು ಹೋರಾಡುತ್ತಾನೆ ಎಂದು ನಾನು ತಿಳಿದಿದ್ದೆ. ಆದರೆ ಮಹಾತ್ಮ ಗಾಂಧೀಯವರ ಚಿಂತನೆಯ ಧಾಟಿಯೇ ವಿಚಿತ್ರವಾಗಿದೆ, ಹಾಗೂ ನನ್ನ ಕಲ್ಪನೆಗೆ ಮೀರಿದ್ದಾಗಿದೆ. ಅವರಿಗೆ ದಕ್ಕಿರುವ ಅಲ್ಪಮಟ್ಟದ ಪ್ರಾತಿನಿಧ್ಯಕ್ಕೂ ಈತ ಅಡ್ಡಿಪಡಿಸಲು ಯತ್ನಿಸುತ್ತಿದ್ದಾರೆ. ಮಾತ್ರವಲ್ಲ, ಅವರಿಗೆ ಈಗ ದೊರೆತಿರುವ ಅಲ್ಪ ಪ್ರಮಾಣದ ಅವಕಾಶಗಳನ್ನು ಕಿತ್ತುಕೊಳ್ಳಲು ತಮ್ಮ ಪ್ರಾಣವನ್ನೇ ಪಣಕ್ಕೆ ಇಟ್ಟಿದ್ದಾರೆ. ರಾಜಕೀಯ ಕ್ಷೇತ್ರದಿಂದ ಶೋಷಿತರನ್ನು ಸಂಪೂರ್ಣವಾಗಿ ಹೊರಗೆ ಉಳಿಯುವಂತೆ ಮಾಡಲು ಅವರು ನಡೆಸುತ್ತಿರುವ ಈ ಪ್ರಯತ್ನ ಮೊದಲನೆಯದಲ್ಲ. ಅಲ್ಪಸಂಖ್ಯಾತರ ಒಪ್ಪಂದ ಜಾರಿಯಾಗುವ ಮೊದಲೇ ಮುಸ್ಲಿಂರೊಂದಿಗೆ ಮಹಾತ್ಮರು ಒಡಂಬಡಿಕೆಗೆ ಮಾಡಿಕೊಂಡು ಶೋಷಿತ ವರ್ಗದ ಜನರ ಯಾವುದೇ ಬೇಡಿಕೆ ಈಡೇರದಂತೆ ಮಾಡಿದ್ದರು. ಮುಸಲ್ಮಾನರು ಸಲ್ಲಿಸಿದ್ದ ಎಲ್ಲಾ ೧೪ ಬೇಡಿಕೆಗಳಿಗೂ ಅವರು ಒಪ್ಪಿಗೆ ನೀಡಿದ್ದರು ಅದಕ್ಕೆ ಪ್ರತಿಯಾಗಿ ಮುಸಲ್ಮಾನರು ಶೋಷಿತ ವರ್ಗಗಳವರ ಸಾಮಾಜಿಕ ಬೇಡಿಕೆಯ ವಿರುದ್ಧ ತಾವು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡುವಂತೆ ಕೇಳಿಕೊಂಡಿದ್ದರು.

ಆದರೆ ಮುಸಲ್ಮಾನ ನಾಯಕರ ಸಾಮಾಜಿಕ ಚಿಂತನೆಯನ್ನು ನಾವಿಲ್ಲಿ ಮೆಚ್ಚಲೇ ಬೇಕು. ಅವರು ಈ ರೀತಿಯ ತಪ್ಪು ಹಾದಿಯ ಒಡಂಬಡಿಕೆಗೆ ಸಮ್ಮತಿ ಸೂಚಿಸದೆ, ಶೋಷಿತ ವರ್ಗದವರನ್ನು ದೊಡ್ಡ ಆಘಾತದಿಂದ ಪಾರಾಗುವಂತೆ ಮಾಡಿದ್ದರು. ಒಂದು ವೇಳೆ ಇವರೇನಾದರೂ ಮಹಾತ್ಮ ಗಾಂಧಿಯವರೊಂದಿಗೆ ಕೈಗೂಡಿಸಿದ್ದರೆ, ಶೋಷಿತ ವರ್ಗದವರ ಸ್ಥಿತಿ ಇನ್ನೂ ಹೀನಾಯವಾಗಿರುತ್ತಿತ್ತು.

ಈ ರೀತಿಯ ಪ್ರತ್ಯೇಕ ಮತಕ್ಷೇತ್ರಕ್ಕೆ ಇಷ್ಟೊಂದು ವಿರೋಧವನ್ನು ಗಾಂಧೀಯವರು ಏಕೆ ವ್ಯಕ್ತಪಡಿಸುತ್ತಿದ್ದಾರೆ ಎಂದು ನನಗೆ ತಿಳಿಯುವುದಿಲ್ಲ. ಈ ನಿರ್ಣಯವು ಹಿಂದೂ ಸಮುದಾಯವನ್ನು ಒಡೆದಿದೆ ಎಂದವರು ಭಾವಿಸಿದ್ದಾರೆ. ಇತ್ತ ಮತ್ತೊಂದೆಡೆ ಹಿಂದೂಸಮಾಜದ ಮುಂದಾಳು ಹಾಗೂ ಅದರ ಹಿತಾಸಕ್ತಿಗಳ ಪ್ರಬಲ ಪ್ರತಿನಿಧಿಯಾದ ಮೂಂಜೆ ಅವರು ಬೇರೆಯೇ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಾರೆ. ಲಂಡನ್ನಿನಿಂದ ಆಗಮಿಸಿದ ನಂತರ ಡಾ.ಮೂಂಜೆ ಅವರು ಹಲವಾರು ಕಡೆ ಭಾಷಣಗಳನ್ನು ನೀಡಿ. ಈ ರೀತಿಯ ಪ್ರತ್ಯೇಕ ಅಧಿಕಾರವನ್ನು ನೀಡಿದರೆ ಹಿಂದೂ ಸಮಾಜದಿಂದ ಶೋಷಿತ ವರ್ಗವನ್ನು ಬೇರ್ಪಡಿಸಿದಂತೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಅಲ್ಲದೇ ಈ ಎರಡೂ ವರ್ಗಗಳನ್ನು ಬೇರ್ಪಡಿಸುವ ಪ್ರಯತ್ನದಲ್ಲಿ ನನ್ನನ್ನು ಸೋಲಿಸಿರುವುದಾಗಿ ಅವರು ಹೇಳುತ್ತಾರೆ. ಒಂದು ವಿಷಯದಲ್ಲಿ ಮೂಂಜೆ ಅವರ ಅಭಿಪ್ರಾಯ ನಿಜವೇ ಆಗಿದೆ. ಆದರೆ ಎಲ್ಲಾ ರೀತಿಯ ಗೌರವವನ್ನೂ ಡಾ. ಮೂಂಜೆ ಅವರೇ ಹೇಗೆ ತೆಗೆದುಕೊಳ್ಳಲು ಸಾಧ್ಯ ಎಂಬುದೇ ನನ್ನ ಪ್ರಶ್ನೆ. ಆದ್ದರಿಂದ ರಾಷ್ಟ್ರೀಯವಾದಿಯಾಗಿರುವ ಹಾಗೂ ಜಾತಿವಾದಿಯಲ್ಲದ ಗಾಂಧಿಯಂತಹವರು ಡಾ. ಮೂಂಜೆಯವರಂತಹ ಜಾತಿವಾದಿಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಶೋಷಿತವರ್ಗಗಳ ಪರವಾಗಿ ನೀಡಿರುವ ಈ ನಿರ್ಣಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಪ್ರತ್ಯೇಕ ಮತಕ್ಷೇತ್ರಗಳಿಂದಾಗಿ ಹಿಂದೂ ಸಮಾಜ ಒಡೆಯುವುದಿಲ್ಲ ಎಂದು ಡಾ. ಮೂಂಜೆಯವರಿಗೆ ಅನಿಸಿದರೆ, ಅದು ಗಾಂಧಿಯವರಿಗೂ

ತೃಪ್ತಿಯನ್ನು ನೀಡಬೇಕು.

ನನ್ನ ಅಭಿಪ್ರಾಯದಲ್ಲಿ ಈ ರೀತಿಯ ಹಕ್ಕನ್ನು ನೀಡುವುದರಿಂದ ಕೇವಲ ಹಿಂದೂಗಳು ಮಾತ್ರವಲ್ಲ ಆದರೆ ಶೋಷಿತ ವರ್ಗಗಳ ಮುಖಂಡರುಗಳಾದ ರಾವ್ ಬಹದ್ದೂರ್ ರಾಜ, ಬಾಲೂ, ಗವಾಯಿ ಮುಂತಾದವರಿಗೂ ತೃಪ್ತಿ ತರುತ್ತದೆ. ಇವರು ಕೂಡ ಜಂಟಿಯಾದ ಮತಕ್ಷೇತ್ರಗಳ ಪರವಾಗಿಯೇ ಮಾತನಾಡುತ್ತಾ ಬಂದಿದ್ದಾರೆ. ವಿಧಾನ ಸಭೆಯಲ್ಲಿನ ಶ್ರೀ ರಾಜ ಅವರ ಆರ್ಭಟ ನನ್ನನ್ನು ನಗುವಂತೆ ಮಾಡಿದೆ. ಈತ ಮೊದಲು ಜಂಟಿ ಮತಕ್ಷೇತ್ರ ಹೊಂದುವ ಅಭಿಪ್ರಾಯಕ್ಕೆ ವಿರೋಧವಾಗಿದ್ದರು ಮತ್ತು ಜಾತೀಯ ಹಿಂದೂಗಳು ಮಾಡುತ್ತಿರುವ ಶೋಷಣೆಯ ವಿರುದ್ಧ ಸಿಡಿದೇಳುವುದರಲ್ಲಿ ಮೊದಲಿಗರಾಗಿದ್ದರು. ಈಗ ಇವರೇ ಜಂಟಿ ಮತಕ್ಷೇತ್ರಗಳು ಇರಬೇಕೆಂದು ಹೇಳುತ್ತಿದ್ದಾರೆ ಮಾತ್ರವಲ್ಲ ಹಿಂದೂಗಳ ಬಗೆಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಈತ ಏಕೆ ಹೀಗೆ ಮಾಡುತ್ತಿದ್ದಾರೆಂದು ವಿಶ್ಲೇಷಿಸಿದರೆ, ಈತನನ್ನು ದುಂಡು ಮೇಜಿನ ಸಮಾವೇಶದ ಪ್ರಾತಿನಿಧ್ಯದಿಂದ ಹೊರಗಿಡಲಾಗಿತ್ತು. ಅದರಲ್ಲಿ ಭಾಗಿಯಾಗುವುದು ಈತನ ಸ್ವಾಭಾವಿಕ ಆಸೆಯಾಗಿದೆಯೋ ಅಥವಾ ನಿಜವಾಗಿಯೂ ಈತನ ನಂಬಿಕೆಗಳು ಬದಲಾಗಿವೆಯೋ ಎಂಬುದನ್ನು ವಿಶ್ಲೇಷಿಸುವುದು ಕಷ್ಟ. ಇದನ್ನು ಚರ್ಚಿಸುವ ಇಚ್ಛೆಯೂ ನನಗಿಲ್ಲ.

ಎರಡು ಅಂಶಗಳನ್ನು ಈ ಹಕ್ಕಿಗೆ ವಿರುದ್ಧವಾಗಿ ಶ್ರೀ ರಾಜಾ ಅವರು ಎತ್ತಿಹಿಡಿಯುತ್ತಿದ್ದಾರೆ. ಮೊದಲನೆಯದು ಎಂದರೆ ಜನಸಂಖ್ಯೆಗೆ ಅನುಗುಣವಾಗಿ ಶೋಷಿತ ವರ್ಗದವರಿಗೆ ಸಿಗಬೇಕಾದಷ್ಟು ಸಂಖ್ಯೆಗಿಂತ ಕಡಿಮೆ ಸಂಖ್ಯೆಯಲ್ಲಿ ಸ್ಥಾನಗಳು ಅವರಿಗೆ ಸಿಕ್ಕಿವೆ ಎಂದು ಹಾಗೂ ಎರಡನೆಯದು ಹಿಂದೂಗಳಿಂದ ಶೋಷಿತ ವರ್ಗದವರು ಬೇರೆ ಆಗಿದ್ದಾರೆ ಎಂಬುದು.

ಇವರ ಮೊದಲನೆಯ ಅಂಶಕ್ಕೆ ನಾನು ಕೂಡ ಒಪ್ಪಿಗೆ ಸೂಚಿಸುತ್ತೇನೆ. ಆದರೆ ದುಂಡು ಮೇಜಿನ ಸಮಾವೇಶದಲ್ಲಿ ಶೋಷಿತ ವರ್ಗಗಳ ಪ್ರತಿನಿಧಿಗಳು ತಮ್ಮ ಹಕ್ಕುಗಳನ್ನು ಮಾರಿಕೊಂಡಿದ್ದಾರೆ ಎಂದು ರಾಜ ಅವರು ಆಪಾದನೆ ಮಾಡಿರುವುದರಿಂದ ಭಾರತೀಯ ಕೇಂದ್ರೀಯ ಮಂಡಳಿಯ ಸದಸ್ಯರಾಗಿದ್ದ ಸಂದರ್ಭದಲ್ಲಿ ರಾಜ ಅವರು ಯಾವ ಕಾರ್ಯವನ್ನು ಮಾಡಿದ್ದಾರೆ ಎಂದು ನಾನು ತಿಳಿಸಬಯಸುವೆ. ಆ ಸಮಿತಿಯ ವರದಿಯ ಪ್ರಕಾರ ಮದರಾಸಿನಲ್ಲಿ ಇದ್ದಂತಹ ೧೫೦ ಸ್ಥಾನಗಳಲ್ಲಿ ೧೦ ಸ್ಥಾನಗಳನ್ನು ಶೋಷಿತ ವರ್ಗದವರಿಗೆ ನೀಡಲಾಗಿತ್ತು. ಬೊಂಬಾಯಿಯಲ್ಲಿ ೧೧೪ರಲ್ಲಿ ೮ ಸ್ಥಾನಗಳನ್ನು; ಬಂಗಾಳದಲ್ಲಿ ೨೦೦ ರಲ್ಲಿ ೮ ಸ್ಥಾನಗಳನ್ನು, ಉ.ಪ್ರ.ದಲ್ಲಿ ೧೫೨ರಲ್ಲಿ ೮ ಸ್ಥಾನಗಳನ್ನು, ಪಂಜಾಬ್‌ದಲ್ಲಿ ೧೫೦ ರಲ್ಲಿ ೬ ಸ್ಥಾನಗಳನ್ನು, ಬಿಹಾರ ಹಾಗೂ ಒರಿಸ್ಸಾಗಳಲ್ಲಿ ೧೫೦ರಲ್ಲಿ ೬ ಸ್ಥಾನಗಳನ್ನು, ಮಧ್ಯ ಪ್ರಾಂತ್ಯಗಳಲ್ಲಿ ೧೨೫ರಲ್ಲಿ ೮ ಸ್ಥಾನಗಳನ್ನು ಮತ್ತು ಅಸ್ಸಾಂನಲ್ಲಿನ ಒಟ್ಟು ೭೫ ಸ್ಥಾನಗಳಲ್ಲಿ ಶೋಷಿತ ವರ್ಗಗಳಿವರಿಗೆ ಹಾಗೂ ಸ್ಥಳೀಯ ಮತ್ತು ಹಿಂದುಳಿದ ಜನಾಂಗದವರಿಗೆ ೯ ಸ್ಥಾನಗಳನ್ನು ನೀಡಲಾಗಿದೆ. ಆದರೆ ಇದು ಜನಸಂಖ್ಯೆಗೆ ಹೇಗೆ ಅನುಗುಣವಾಗಿದೆ ಎಂಬ ಚರ್ಚೆಗೆ ನಾನೀಗ ಇಳಿಯಲಾರೆ. ಆದರೆ ಶೋಷಿತ ವರ್ಗಗಳವರಿಗೆ ಸಿಕ್ಕಂತಹ ಅತ್ಯಂತ ಕಡಿಮೆ ಪ್ರಾತಿನಿಧ್ಯ ಎಂದು ನಾನು ಖಡಾಖಂಡಿತವಾಗಿ ಹೇಳಬಲ್ಲೆ. ಆ ರೀತಿ ಸ್ಥಾನಗಳ ಹಂಚಿಕೆಯಾಗಲು ರಾಜಾ ಕೂಡ ಕಾರಣಕರ್ತರು. ಆದ್ದರಿಂದ ಈಗ ಯಾರನ್ನೇ ಆಗಲೀ ಖಂಡಿಸುವ ಮೊದಲು ರಾಜಾ ಅವರು ಈ ಅಂಶವನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. ಈ ರೀತಿಯ ಸ್ಥಾನಗಳ ಹಂಚಿಕೆಯಾದ ಸಂದರ್ಭದಲ್ಲಿ ಅವರು ಯಾವುದೇ ರೀತಿಯ ಪ್ರತಿರೋಧ ವ್ಯಕ್ತಪಡಿಸದೇ ಇದನ್ನು ಒಪ್ಪಿಕೊಂಡಿದ್ದರು. ಆಗ ಕೇಂದ್ರೀಯ ಮಂಡಳಿಯಲ್ಲಿ ಶೋಷಿತ ವರ್ಗಗಳ ಪ್ರತಿನಿಧಿಯೂ ಇವರೇ ಆಗಿದ್ದರು ಎಂಬುದು ಗಮನಾರ್ಹ ಅಂಶ. ಜನಸಂಖ್ಯೆಗೆ ಅನುಗುಣವಾಗಿ ಸ್ಥಾನ

ಸಿಗಬೇಕು ಎಂಬುದು ಜನ್ಮಸಿದ್ಧ ಹಕ್ಕು ಎಂದು ಪ್ರತಿಪಾದಿಸುವ ರಾಜಾ ಅವರು ತಮಗೆ ಅವಕಾಶ ಇದ್ದಾಗ ಸುಮ್ಮನಿದ್ದುದಾದರು ಏತಕ್ಕೆ?

ಇದೀಗ ಈ ಹಕ್ಕನ್ನು ನೀಡುವುದರಿಂದ ಶೋಷಿತ ವರ್ಗದವರನ್ನು ಹಿಂದೂಗಳಿಂದ ಬೇರ್ಪಡಿಸಿದಂತಾಗುತ್ತದೆ ಎಂದು ವಾದಿಸುವ ಇವರ ಈ ಅಭಿಪ್ರಾಯಕ್ಕೆ ನನ್ನಿಂದ ಯಾವುದೇ ಮನ್ನಣೆ ಸಿಗುವುದಿಲ್ಲ. ಅವರಿಗೆ ಪ್ರತ್ಯೇಕ ಮತಕ್ಷೇತ್ರದ ಅಗತ್ಯ ಕಂಡು ಬರದಿದ್ದರೆ ಅವರು ಈ ಮತಕ್ಷೇತ್ರದಿಂದ ಸ್ಪರ್ಧಿಸುವ ಅಗತ್ಯವಿಲ್ಲ. ಜಂಟಿ ಮತಕ್ಷೇತ್ರದ ಅಭ್ಯರ್ಥಿಯಾಗಿಯೇ ಚುನಾವಣೆಯಲ್ಲಿ ಸ್ಪರ್ಧಿಸಿ, ಅಲ್ಲಿಯೇ ತಮ್ಮ ಮತ ಚಲಾಯಿಸಿ ಬರಲು ರಾಜಾ ಅವರಿಗೆ ಯಾರೂ ಅಡ್ಡಪಡಿಸುವುದಿಲ್ಲ. ಅದೇನೆಂದರೆ ಶೋಷಿತ ವರ್ಗದವರ ವಿಷಯದಲ್ಲಿ ಹಿಂದೂಗಳ ಅಭಿಪ್ರಾಯ ಬದಲಾಗಿದೆ ಎಂದು ಶ್ರೀ ರಾಜ ಅವರು ಜೋರಾಗಿ ಘೋಷಣೆ ಮಾಡುತ್ತಿದ್ದಾರೆ. ಈ ವಿಷಯವನ್ನು ಶೋಷಿತ ವರ್ಗದ ಜನರ ಮನಕ್ಕೆ ತೃಪ್ತಿ ಆಗುವಂತೆ ತಿಳಿಸುವ ಅವಕಾಶವೂ ಅವರಿಗೆ ಒದಗಿ ಬರಲಿದೆ. ಏಕೆಂದರೆ ಅವರನ್ನು ಸಾಮಾನ್ಯ ಮತಕ್ಷೇತ್ರದಿಂದ ಆಯ್ಕೆ ಮಾಡಿಕಳುಹಿಸಲು ಶೋಷಿತ ವರ್ಗದ ಜನರು ಸಿದ್ಧರಿಲ್ಲ. ಅಲ್ಲದೇ ರಾಜಾ ಅವರನ್ನು ಮಂತ್ರಿಮಂಡಲಕ್ಕೆ ಆಯ್ಕೆ ಮಾಡುವ ಮೂಲಕ. ಶೋಷಿತ ವರ್ಗದ ಜನರ ವಿಷಯದಲ್ಲಿರುವ ತಮ್ಮ ಪ್ರೀತಿಯನ್ನು ಪ್ರಕಟಿಪಡಿಸಲು ಅವಕಾಶ ಕೂಡ ಹಿಂದೂಗಳಿಗೆ ಒದಗಿ ಬರಲಿದೆ.

ನನ್ನ ಅಭಿಪ್ರಾಯದಲ್ಲಿ, ಈಗ ನೀಡಿರುವ ನಿರ್ಣಯವು ಪ್ರತ್ಯೇಕ ಮತಕ್ಷೇತ್ರಗಳ ಪರವಾಗಿರುವರಿಗೆ ಅಷ್ಟೇ ಅಲ್ಲದೆ, ಜಂಟಿಕ್ಷೇತ್ರಗಳಿಗಾಗಿ ವಾದಿಸುತ್ತಿರುವವರಿಗೂ ತೃಪ್ತಿಯನ್ನು ತಂದಿದೆ. ಈ ಅರ್ಥದಲ್ಲಿ ಈ ನಿರ್ಣಯವು ಎರಡೂ ಪಕ್ಷದವರ ನಡುವೆ ಆಗಿರುವ ಸಮನ್ವಯ ಸಂಧಾನವಾಗಿದೆ ಮತ್ತು ನಾವು ಅದು ಈಗ ಇರುವ ರೀತಿಯಲ್ಲಿಯೇ ಅದನ್ನು ಒಪ್ಪಿಕೊಳ್ಳಬೇಕು. ಇನ್ನು ಮಹಾತ್ಮ ಅವರ ವಿಷಯಕ್ಕೆ ಬಂದರೆ ಅವರಿಗೆ ಏನು ಬೇಕು ಎಂಬುದೇ ನನಗೆ ತಿಳಿಯುತ್ತಿಲ್ಲ. ಪ್ರತ್ಯೇಕ ಮತಕ್ಷೇತ್ರ ಹೊಂದುವುದಕ್ಕೆ ಮಹಾತ್ಮರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ಜಂಟಿ ಮತಕ್ಷೇತ್ರ ಹಾಗೂ ಮೀಸಲು ಸ್ಥಾನಗಳ ಬಗೆಗೆ ಅವರು ಯಾವ ವಿರೋಧವನ್ನೂ ಹೊಂದಿಲ್ಲ ಎಂದೆನಿಸುತ್ತದೆ. ಇದು ದೊಡ್ಡ ತಪ್ಪು. ಇಂದು ಅವರ ಅಭಿಪ್ರಾಯ ಏನೇ ಆಗಿರಲೀ, ಲಂಡನ್ನಿನಲ್ಲಿ ಅವರಿದ್ದಾಗ ಅವರು ಪ್ರತ್ಯೇಕ ಮತಕ್ಷೇತ್ರ ಇಲ್ಲವೇ ಸಾಮಾನ್ಯ ಮತಕ್ಷೇತ್ರದ ಮೂಲಕ ಶೋಷಿತ ವರ್ಗಗಳಿಗೆ ವಿಶೇಷ ಪ್ರಾತಿನಿಧ್ಯವನ್ನು ನೀಡುವುದರ ಬಗೆಗೆ ಅವರಿಗೆ ವಿರೋಧವಿತ್ತು. ತಮ್ಮ ಪ್ರತಿನಿಧಿಯನ್ನು ಚುನಾಯಿಸಲು ವಯಸ್ಕ ಮತದಾನದ ಅಧಿಕಾರ ಎಲ್ಲರಿಗೂ ಸಿಕ್ಕಂತೆಯೇ ಶೋಷಿತ ವರ್ಗದ ಜನರಿಗೂ ಸಿಗಬೇಕು ಆದರೆ ಇದಕ್ಕಿಂತ ಹೆಚ್ಚಿನ ಯಾವುದೇ ರೀತಿಯ ವಿಶೇಷತೆಯನ್ನು ನೀಡುವುದಕ್ಕೆ ಅವರು ಸಿದ್ಧರಿಲಿಲ್ಲ. ಇದು ಅವರು ಮೊದಲ ನಿಲುವಾಗಿತ್ತು, ದುಂಡು ಮೇಜಿನ ಪರಿಷತ್ತಿನ ಅಂತ್ಯದ ಸಮಯದಲ್ಲಿ ಅವರು ತಾವು ಮತ್ತೊಂದು ಯೋಜನೆಯನ್ನು ಒಪ್ಪಲು ಸಿದ್ಧವಿರುವುದಾಗಿ ನನಗೆ ತಿಳಿಸಿದರು. ಅವರ ಯೋಜನೆಯು ಸಾಂಪ್ರದಾಯಿಕವಾಗಿದ್ದು ಅದಕ್ಕೆ ಸಂವಿಧಾನದ ಕಟ್ಟಳೆಗಳ ಹೊರಗಿತ್ತು. ಅದರ ಪ್ರಕಾರ ಶೋಷಿತ ವರ್ಗದವರಿಗಾಗಿ ಒಂದೇ ಒಂದು ಸ್ಥಾನವನ್ನೂ ಚುನಾವಣಾ ಕಾನೂನಿನಲ್ಲಿ ಅಳವಡಿಸುವಂತೆ ಇರಲಿಲ್ಲ.

**ಈ ಯೋಜನೆ ಈ ರೀತಿಯಲ್ಲಿತ್ತು**

ಮೇಲು ವರ್ಗದ ಹಿಂದೂಗಳ ವಿರುದ್ಧ ಶೋಷಿತ ವರ್ಗದ ಅಭ್ಯರ್ಥಿಗಳು ಕೂಡ ಸಾಮಾನ್ಯ ಮತಕ್ಷೇತ್ರದಿಂದ ಚುನಾವಣೆಗಳಿಗೆ ಸ್ಪರ್ಧಿಸಬೇಕು. ಈ ಚುನಾವಣೆಯಲ್ಲಿ ಯಾವುದೇ ಶೋಷಿತ ವರ್ಗದ

ಅಭ್ಯರ್ಥಿ ಸೋತರೆ, ಆತ ಒಂದು ಚುನಾವಣಾ ಮನವಿಯನ್ನು ಸಲ್ಲಿಸಿ ಆತ ಅಸ್ಪೃಶ್ಯನಾಗಿರುವುದರಿಂದ ಈ ಚುನಾವಣೆ ಸೋತಿದ್ದಾನೆ ಎಂಬ ತೀರ್ಪು ಪಡೆಯಬೇಕು. ಈ ರೀತಿಯ ನಿರ್ಧಾರವು ಹೊರಬಂದರೆ, ಕೆಲ ಹಿಂದೂಗಳ ಮನವೊಲಿಸಿ ಒಂದು ಸ್ಥಾನಕ್ಕೆ ರಾಜೀನಾಮೆ ಪಡೆದುಕೊಂಡು, ಅಸ್ಪೃಶ್ಯರಿಗೆ ಅವಕಾಶ ಕಲ್ಪಿಸಿಕೊಡುವುದಾಗಿ ಮಹಾತ್ಮ ವಾಗ್ದಾನ ನೀಡಿದ್ದರು. ಮತ್ತೊಂದು ಚುನಾವಣೆಯನ್ನು ನಡೆಸಿ, ಹಿಂದೂ ಅಭ್ಯರ್ಥಿಯ ಎದುರು ಈ ಅಸ್ಪೃಶ್ಯ ವರ್ಗದವರು ಸ್ಪರ್ಧಿಸಲು ಅವಕಾಶ ಕಲ್ಪಿಸಲಾಗುವುದು. ಇಲ್ಲಿ ಮತ್ತೊಮ್ಮೆ ಆತ ತನ್ನ ಅದೃಷ್ಟ ಪರೀಕ್ಷೆ ನಡೆಸಬಹುದು. ಮತ್ತೊಮ್ಮೆ ಆತ ಸೋಲನ್ನು ಉಂಡರೆ, ಅಸ್ಪೃಶ್ಯನಾಗಿರುವ ಕಾರಣಕ್ಕೆ ಈ ರೀತಿ ಆಯಿತೆಂದು ಆತ ಮತ್ತೊಮ್ಮೆ ಮನವಿ ಸಲ್ಲಿಸಬೇಕಾಗುತ್ತದೆ. ಇದು ಪ್ರತಿಬಾರಿ ಶೋಷಿತ ವರ್ಗದ ಅಭ್ಯರ್ಥಿ ಸೋತಾಗಲೂ ನಿರಂತರ ನಡೆಯುವ ಪ್ರಕ್ರಿಯೆಯಾಗುತ್ತದೆ. ನಾನು ಈ ಎಲ್ಲಾ ಅಂಶಗಳನ್ನು ಸಾರ್ವಜನಿಕವಾಗಿ ತೆರೆದಿಡುವುದಕ್ಕೆ ಒಂದು ಕಾರಣವಿದೆ. ಏಕೆಂದರೆ ಕೆಲವರು ಜಂಟಿ ಮತಕ್ಷೇತ್ರಗಳು ಹಾಗೂ ಮೀಸಲು ಸ್ಥಾನಗಳು ಮಹಾತ್ಮರ ಮನವನ್ನು ತಣಿಸುತ್ತದೆ ಎಂಬ ಭಾವನೆಯಲ್ಲಿದ್ದಾರೆ. ಆದ್ದರಿಂದ ಮಹಾತ್ಮರ ಯೋಜನೆಗಳನ್ನು ಮುಂದಿಡುವ ಮೊದಲು ಇದನ್ನು ನಾವು ಚರ್ಚಿಸುವುದು ಅತ್ಯಗತ್ಯವಾಗಿದೆ.

ಆದರೆ ಒಂದು ಅಂಶವನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ. ಅದೇನೆಂದರೆ ನನಗೆ ಮಹಾತ್ಮ ಹಾಗೂ ಕಾಂಗ್ರೆಸ್ ಪಕ್ಷ ನೀಡುತ್ತಿರುವ ಯಾವುದೇ ರೀತಿಯ ವಾಗ್ದಾನದಲ್ಲಿ ಭರವಸೆಯಿಲ್ಲ. ನನ್ನ ಜನರ ರಕ್ಷಣೆಯ ಈ ವಿಷಯವನ್ನು ಯಾವುದೇ ತೆರನಾದ ಭರವಸೆಗಳಿಗೆ ಹಾಗೂ ಒಡಂಬಡಿಕೆಗಳಿಗೆ ಬಿಡಲು ನಾನು ಸಿದ್ಧನಿಲ್ಲ. ಮಹಾತ್ಮರು ಅಮರ ವ್ಯಕ್ತಿಯಲ್ಲ ಅಥವಾ ಕಾಂಗ್ರೆಸ್ ಪಕ್ಷವನ್ನು ಉಪದ್ರವಕಾರಿಯಲ್ಲವೆಂದು ಭಾವಿಸಿದರೂ, ಅದೇನೂ ಶಾಶ್ವತವಾದ ಪಕ್ಷವಲ್ಲ. ಅದಕ್ಕೂ ಕೂಡ ಎಲ್ಲರಂತೆ ಕಾಲಮಿತಿಯಿದೆ. ಭಾರತದಲ್ಲಿ ಇದುವರೆಗೆ ಬಹಳಷ್ಟು ಮಹಾತ್ಮರಿದ್ದಾರೆ. ಅವರೆಲ್ಲರ ಏಕೈಕ ಧ್ಯೇಯ ಎಂದರೆ ಅಸ್ಪೃಶ್ಯತೆಯನ್ನು ತೊಲಗಿಸುವುದು ಅಲ್ಲದೇ ಶೋಷಿತ ವರ್ಗದವರ ಏಳ್ಗೆ ಹಾಗೂ ಅವರಿಗೆ ಸಾಮಾಜಿಕ ನ್ಯಾಯವನ್ನು ದೂರಕಿಸಿಕೊಡುವುದು. ಆದರೆ ಎಲ್ಲರೂ ತಮ್ಮ ಪ್ರಯತ್ನಗಳಲ್ಲಿ ವಿಫಲರಾಗಿದ್ದಾರೆ. ಅನೇಕ ಮಹಾತ್ಮರು ಬಂದಿದ್ದಾರೆ. ಎಲ್ಲಾ ಮಹಾತ್ಮರೂ ಈ ಲೋಕದಿಂದ ಹೋಗಿದ್ದಾರೆ. ಆದರೆ ಅಸ್ಪೃಶ್ಯರು ಮಾತ್ರ ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ.

ಹಿಂದೂ ಸಮಾಜ ಪರಿವರ್ತನೆಯಲ್ಲಿನ ವೇಗ ಹಾಗೂ ಸಮಾಜದ ಉದ್ಧಾರಕರ ಧ್ಯೇಯೋದ್ದೇಶಗಳಲ್ಲಿನ ಭಿನ್ನಾಭಿಪಾಯಗಳು ಮಹದ್ ಹಾಗೂ ನಾಸಿಕ್‌ನಲ್ಲಿ ನಡೆದ ಸತ್ಯಾಗ್ರಹಗಳಲ್ಲಿ ಕಾಣಿಸಿಕೊಂಡವು. ಅಲ್ಲಿ ನನಗೆ ಸಾಕಷ್ಟು ಅನುಭವವಾಗಿದೆ. ಇದರಿಂದಾಗಿ ಶೋಷಿತ ವರ್ಗಗಳ ಹಿತಾಸಕ್ತಿಯ ಬಗ್ಗೆ ಚಿಂತೆ ಇರುವವರು ಯಾರೇ ಆಗಲೀ ಅವರ ಹೆಗಲ ಮೇಲೆ ಶೋಷಿತರ ಏಳಿಗೆಯ ಹೊರೆಯನ್ನು ಹೊರಿಸಲು ನಾನು ಸಿದ್ಧನಿಲ್ಲ. ಬಿಕ್ಕಟ್ಟಿನ ಸಮಯದಲ್ಲಿ ತಮ್ಮವರ ಲಾಭಕ್ಕಾಗಿ ಸಮಾಜಸುಧಾರಕರು ತಮ್ಮ ಅಭಿಪ್ರಾಯವನ್ನು ತ್ಯಾಗಮಾಡಲು ಸಿದ್ಧರಿರುತ್ತಾರೆ. ಇಂತಹ ವ್ಯಕ್ತಿಗಳಿಂದ ಶೋಷಿತ ವರ್ಗದವರಿಗೆ ಯಾವುದೇ ರೀತಿಯ ಉಪಯೋಗವಿಲ್ಲ.

ಆದ್ದರಿಂದ ನನ್ನ ಜನರ ರಕ್ಷಣೆಗಾಗಿ ಯಾವುದಾದರೂ ಗಟ್ಟಿಯಾದ ನಿರ್ಧಾರ ಆಗಲೇಬೇಕು ಎಂಬುದು ನನ್ನವಾದ. ಪ್ರತ್ಯೇಕ ಮತಕ್ಷೇತ್ರದ ವಿಷಯದಲ್ಲಿ ನೀಡಿರುವ ತೀರ್ಪನಲ್ಲಿ ಮಾರ್ಪಾಟುಗಳನ್ನು ಮಾಡಬೇಕು ಎಂಬ ಉದ್ದೇಶ ಗಾಂಧೀಯವರಿಗೆ ಇದ್ದರೆ, ಅವರು ತಮ್ಮ ಮನವಿಯನ್ನು ಸಲ್ಲಿಸಬಹುದು ಮತ್ತು ಈ ನಿರ್ಣಯವು ನಮಗೆ ನೀಡಿರುವ ಪ್ರಯೋಜನಗಳಿಗಿಂತ ಹೆಚ್ಚಿನ ಪ್ರಯೋಜನ ಅದು ದೊರಕಿಸಿಕೊಡುತ್ತದೆ ಎಂಬುದನ್ನು ಸಾಧಿಸಿ ತೋರಿಸಬೇಕು.

ಆದ್ದರಿಂದ ತಾವು ಹೇಳುತ್ತಿರುವಂತಹ ಈ ಅತ್ಯಂತ ಅಪಾಯಕಾರಿ ಕ್ರಮದಿಂದ ಅವರು ಹಿಂದೆ ಸರಿಯುತ್ತಾರೆ ಎಂದು ನಾನು ಆಶಿಸುತ್ತೇನೆ. ಪ್ರತ್ಯೇಕ ಮತಕ್ಷೇತ್ರಕ್ಕೆ ಬೇಡಿಕೆ ಸಲ್ಲಿಸುವ ಮೂಲಕ ಹಿಂದೂ ಧರ್ಮಕ್ಕೆ ಯಾವುದೇ ಅಪಾಯ ಉಂಟುಮಾಡುವ ಉದ್ದೇಶ ನಮಗಿಲ್ಲ. ಈ ರೀತಿಯ ಮತ ಕ್ಷೇತ್ರಕ್ಕೆ ಬೇಡಿಕೆ ಸಲ್ಲಿಸುವುದರ ಉದ್ದೇಶ ನಮ್ಮ ಹಣೆಯ ಬರಹವನ್ನು ನಿರ್ಧರಿಸಲು ಹಿಂದೂಗಳ ಮರ್ಜಿಯನ್ನು ತಡೆಯುವುದು. ಅವರಂತೆಯೇ ನಾವು ಕೂಡ ತಪ್ಪನ್ನು ಎಸಗುವ ಅಧಿಕಾರವನ್ನು ಹೊಂದಿದ್ದೇವೆ. ಆ ಹಕ್ಕಿನಿಂದ ನಮ್ಮನ್ನು ವಂಚಿತಗೊಳಿಸಬಾರದು ಎಂದು ನಾವು ಅವರನ್ನು ಕೇಳಿಕೊಳ್ಳುತ್ತೇವೆ. ಅವರು ಆಮರಣಾಂತ ಉಪವಾಸದ ನಿರ್ಧಾರವನ್ನು ಮತ್ಯಾವುದಾದರೂ ಉತ್ತಮ ಕಾರ್ಯದ ವಿಷಯದಲ್ಲಿ ಕೈಗೊಳ್ಳುವುದು ಲೇಸು. ಅವರು ಈ ರೀತಿಯ ಉಪವಾಸವನ್ನು ಹಿಂದೂ ಮುಸ್ಲಿಮರ ನಡುವಿನ ಜಗಳವನ್ನು ತಡೆಯಲು ಅಥವಾ ಶೋಷಿತ ವರ್ಗದವರು ಹಾಗೂ ಹಿಂದೂಗಳ ನಡುವಿನ ಜಗಳವನ್ನು ತಡೆಯಲು ಅಥವಾ ಇನ್ಯಾವುದಾದರೂ ರಾಷ್ಟ್ರೀಯ ಸಮಸ್ಯೆಯ ಪರಿಹಾರಕ್ಕಾಗಿ ಬಳಸಿದ್ದರೆ ಅವರ ಉದ್ದೇಶ ಹೊಗಳಿಕೆಗೆ ಅರ್ಹವಾಗಿರುತ್ತಿತ್ತು. ಅವರ ಈಗಿನ ಕ್ರಮದಿಂದ ಶೋಷಿತ ವರ್ಗಗಳ ಜನರಿಗೆ ಯಾವುದೇ ರೀತಿಯ ಪ್ರಯೋಜನವೂ ಇಲ್ಲ. ಅವರಿಗೆ ತಿಳಿದೋ ತಿಳಿಯದೆಯೋ ಮಹಾತ್ಮ ಅವರ ಹಿಂಬಾಲಕರು ರಾಷ್ಟ್ರದಾದ್ಯಂತ ಶೋಷಿತವರ್ಗಗಳವರ ವಿರುದ್ಧ ಒಂದು ರೀತಿಯ ಭಯೋತ್ಪಾದನೆಯನ್ನು ಉಂಟು ಮಾಡುತ್ತಿದ್ದಾರೆ.

ಶೋಷಿತ ವರ್ಗದವರು ಹಿಂದೂಧರ್ಮದಿಂದ ಸಿಡಿದು ಹೊರನಡೆಯ ಬಯಸಿದರೆ, ಗಾಂಧಿಯವರು ಈಗ ಕೈಗೊಂಡಿರುವಂತಹ ಬಲವಂತದ ಕಾರ್ಯಕ್ರಮಗಳ ಮೂಲಕ ಅವರನ್ನು ಹಿಂದೂಧರ್ಮದ ತೆಕ್ಕೆಯೊಳಗೇ ಇಟ್ಟುಕೊಳ್ಳುವುದು ಸಾಧ್ಯವಾಗಲಾರದ ಕೆಲಸ. ಒಂದು ವೇಳೆ ಹಿಂದೂ ಧರ್ಮ ಹಾಗೂ ರಾಜಕೀಯ ಅಧಿಕಾರ ಎರಡರಲ್ಲೂ ಒಂದನ್ನು ಆಯ್ಕೆ ಮಾಡಿ ಎನ್ನುವ ಪ್ರಶ್ನೆ ಶೋಷಿತ ವರ್ಗದವರ ಮುಂದೆ ಇಟ್ಟರೆ. ಖಂಡಿತವಾಗಿಯೂ ಅವರು ಆಯ್ಕೆ ಮಾಡಿಕೊಳ್ಳುವುದು ರಾಜಕೀಯ ಅಧಿಕಾರವನ್ನು. ಈ ಮೂಲಕ ಅವರು ಗಾಂಧಿಯವರನ್ನು ಪ್ರಾಣಾಪಾಯದಿಂದ ಪಾರು ಮಾಡಲಿದ್ದಾರೆ. ಗಾಂಧೀಯವರು ಸಮಚಿತ್ತತೆಯಿಂದ ತಮ್ಮ ಈ ನಿರ್ಧಾರದ ಬಗ್ಗೆ ಚಿಂತನೆ ನಡೆಸಿದರೆ, ಅವರು ಗಳಿಸಬಹುದಾದ ಜಯವು ಅವರ ಕ್ರಮಕ್ಕೆ ಅರ್ಹವಾದಷ್ಟು ದೊಡ್ಡದಲ್ಲ ಎಂಬುದು ಅವರಿಗೆ ಮನವರಿಕೆಯಾಗುತ್ತದೆ. ಆದರೆ ನಾವು ಗಮನಿಸಬೇಕಿರುವ ಮತ್ತೊಂದು ಪ್ರಮುಖ ಅಂಶ ಎಂದರೆ ಮಹಾತ್ಮ ಅವರು ಕೆಲ ಪ್ರತಿಗಾಮಿ ಶಕ್ತಿಗಳಿಗೆ ಪ್ರಚೋದನೆ ನೀಡುತ್ತಿದ್ದಾರೆ ಎಂಬುದು. ಅದು ಹಿಂದೂ ಧರ್ಮ ಹಾಗೂ ಶೋಷಿತ ವರ್ಗಗಳ ನಡುವಿನ ವೈರತ್ವವನ್ನು ಹೆಚ್ಚು ಮಾಡುತ್ತದೆ. ಈ ಕ್ರಮದಿಂದ ಅವರ ನಡುವೆ ಇರುವಂತಹ ಕಂದಕ ಮತ್ತಷ್ಟು ಆಳವಾಗಲಿದೆ. ನಾನು ಗಾಂಧೀಯವರ ವಿರುದ್ಧ ದುಂಡು ಮೇಜಿನ ಸಮಾವೇಶದಲ್ಲಿ ಅಭಿಪ್ರಾಯ ಮಂಡಿಸಿದಾಗ ರಾಷ್ಟ್ರದಾದ್ಯಂತ ನನ್ನ ವಿರುದ್ಧ ಕೂಗು ಕೇಳಿಬಂದಿತ್ತು. ಮಾಧ್ಯಮಗಳು ನನ್ನನ್ನು ಒಬ್ಬ ರಾಷ್ಟ್ರವಿರೋಧಿಯಂತೆ ಚಿತ್ರಿಸಿದ್ದವು. ನನ್ನ ಕಡೆಯಿಂದ ಬರುತ್ತಿದ್ದ ಎಲ್ಲಾ ವಿವರಣೆಗಳನ್ನು ಮರೆಮಾಚಲಾಯಿತು. ನನ್ನ ಪಕ್ಷದ ವಿರುದ್ಧ ಹುನ್ನಾರ ಮಾಡಲಾಯಿತು. ಚರ್ಚೆಗಳು ಹಾಗೂ ಭೇಟಿಗಳ ವಿಷಯವನ್ನು ದೊಡ್ಡದು ಮಾಡಿ ಹೇಳಲಾಯಿತು. ಅವರು ಹೇಳಿದ ಎಷ್ಟೋ ಭೇಟಿಗಳು ಸಮಾವೇಶಗಳು ನಡೆದೇ ಇರಲಿಲ್ಲ. "ಅತಿರಂಜಿತವಾದ ವರದಿಗಳನ್ನು" ಪ್ರಕಟಿಸಿ ಶೋಷಿತ ವರ್ಗದವರಲ್ಲಿ ಸಾಕಷ್ಟು ಭೇದಭಾವ ಉಂಟು ಮಾಡಲಾಯಿತು. ಇದರಿಂದಾಗಿ ನಡೆದ ಕೆಲ ಕಲಹಗಳು ಹಿಂಸೆಗಳಲ್ಲಿ ಕೊನೆಗೊಂಡವು.

ಈ ರೀತಿಯ ಘಟನೆಗಳು ಇನ್ನೂ ದೊಡ್ಡ ಮಟ್ಟದಲ್ಲಿ ಜರುಗಬಾರದು ಎಂದರೆ ಮಹಾತ್ಮರು

ತಮ್ಮ ನಿರ್ಧಾರವನ್ನು ಪುನಃ ಪರಿಶೀಲನೆ ಮಾಡಲಿ ಹಾಗೂ ಮುಂದೆ ನಡೆಯಬಹುದಾದ ಅಪಘಾತಗಳನ್ನು ತಪ್ಪಿಸಲಿ. ಈ ರೀತಿಯ ಘಟನೆಗಳು ಜರುಗದಿರಲಿ ಎಂಬುದೇ ಮಹಾತ್ಮ ಅವರ ಆಶಯವೂ ಆಗಿದೆ ಎಂದು ನಾನು ನಂಬಿದ್ದೇನೆ. ಅವರು ಇದೀಗ ಎಚ್ಚೆತ್ತುಕೊಂಡು ತಮ್ಮ ನಿರ್ಧಾರ ಬದಲಿಸಿಕೊಳ್ಳದಿದ್ದರೆ, ಬೆಳಗನ್ನು ರಾತ್ರಿ ಹಿಂಬಾಲಿಸುವಂತೆ, ಈ ಅಹಿತಕರ ಘಟನೆಗಳು ಜರುಗಿಯೇ ಜರುಗುತ್ತವೆ.

ಈ ನನ್ನ ಹೇಳಿಕೆಯನ್ನು ಕೊನೆಗೊಳಿಸುವ ಮುನ್ನ ಸಾರ್ವಜನಿಕರಿಗೆ ಒಂದು ವಿಷಯದ ಬಗೆಗೆ ಆಶ್ವಾಸನೆಯನ್ನು ನೀಡಬಯಸುವೆ. ಅದೇನೆಂದರೆ ನನ್ನ ಮಟ್ಟಿಗೆ ಈ ಪ್ರಶ್ನೆಯ ಬಗೆಗಿನ ಚರ್ಚೆ ಮುಕ್ತಾಯವಾಗಿದೆ. ಆದರೆ ಮಹಾತ್ಮ ಅವರ ಪ್ರಸ್ತಾವನೆಯನ್ನು ನಾನು ಪರಿಗಣಿಸಲು ನಾನು ಸಿದ್ಧನಿದ್ದೇನೆ. ಆದರೆ ನನ್ನ ಜನರ ಹಕ್ಕು ಹಾಗೂ ಮಹಾತ್ಮ ಅದರ ಜೀವನ ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡುವ ಸ್ಥಿತಿಗೆ ಮಹಾತ್ಮ ಅವರು ನನ್ನನ್ನು ತಳ್ಳುವುದಿಲ್ಲ ಎಂದು ನಂಬಿದ್ದೇನೆ. ಏಕೆಂದರೆ ಇನ್ನೂ ಹಲವು ಶತಮಾನಗಳವರೆಗೆ ಹಿಂದೂಗಳ ಅಡಿಯಾಳಾಗಿ ನನ್ನ ಜನರು ಮುಂದುವರಿಯುವುದನ್ನು ನಾನು ಇಚ್ಛಿಸುವುದಿಲ್ಲ.[೧]

ಗಾಂಧೀಯವರ ಅಮರಣಾಂತ ಉಪವಾಸದ ನಿರ್ಧಾರದಿಂದ ಆಗಿರುವಂತಹ ಒಂದು ಪ್ರಯೋಜನ ಎಂದರೆ ಜನರಿಗೆ ಅಸ್ಪೃಶ್ಯರ ಹೀನಾಯ ಸ್ಥಿತಿಯ ಅರಿವಾಗಿದೆ. ಅಸ್ಪೃಶ್ಯರು ಹಲವಾರು ದಿನಗಳಿಂದ ಅದುಮಿಟ್ಟುಕೊಂಡಂತಹ ಬಯಕೆಗಳು ಇದೀಗ ಎಲ್ಲರ ದೃಷ್ಟಿಗೆ ಬಿದ್ದಿದೆ. ಜನರಿಗೆ, ಮಾಧ್ಯಮದವರಿಗೆ ಹಾಗೂ ದೇಶಭಕ್ತರಿಗೆ ಒಂದು ಅಂಶದ ಅರಿವಂತೂ ಆಗಿದೆ. ಅದೇನೆಂದರೆ ಈ ಜನರು ಸಮಾಜಕ್ಕೆ ಒಂದು ಕಪ್ಪು ಚುಕ್ಕೆಯಂತಿದ್ದಾರೆ ಎಂಬುದು. ಡಾ. ಅಂಬೇಡ್ಕರ್ ಅವರ ವಿಷಯವಂತೂ ಎಲ್ಲಾ ರಾಜಕೀಯ ಪಕ್ಷಗಳಲ್ಲಿಯೂ ಬಹಳಷ್ಟು ಚರ್ಚೆಗೆ ಗ್ರಾಸವಾಗಿದೆ. ಇದಲ್ಲದೇ ಪ್ರತಿಯೊಂದು ಸಾಮಾಜಿಕ ಸಭೆಯಲ್ಲಿ ಹಾಗೂ ಧಾರ್ಮಿಕ ಸಭೆಯಲ್ಲಿಯೂ ಇವರ ಬಗ್ಗೆಯೇ ಚರ್ಚೆಗಳಾಗಿವೆ. ಅವರಿಗೆ ತಂತಿಗಳು ಹಾಗು ಕಾಗದ ಪತ್ರಗಳ ಮಹಾಪೂರವೇ ಹರಿದು ಬರುತ್ತಿವೆ. ಕೆಲವು ಕಾಗದಗಳಲ್ಲಿಯಂತೂ ಇವರ ಜೀವಕ್ಕೆ ಬೆದರಿಕೆ ಹಾಕಿದ್ದರು. ಕೆಲವರು ತಮ್ಮ ಮನಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವಂತೆ ತಿಳಿಸಿದ್ದರು. ಮತ್ತೆ ಕೆಲ ಪತ್ರಗಳಲ್ಲಿ ಜನರು ಇವರಿಗೆ ಬೆಂಬಲವನ್ನು ಕೂಡ ವ್ಯಕ್ತಪಡಿಸಿದ್ದರು.

ಮೇಲೆ ಹೇಳಿದ್ದಂತೆಯೇ ಹಿಂದೂ ನಾಯಕರ ಸಮಾವೇಶವು ಅತ್ಯಂತ ಉದ್ವಿಗ್ನ ವಾತಾವರಣದಲ್ಲಿ ಭಾರತೀಯ ವ್ಯಾಪಾರಿಗಳ ಸಭಾಂಗಣದ ವಿಶಾಲ ಸಭಾಂಗಣದಲ್ಲಿ ೧೯೩೨ರ ಸೆಪ್ಟೆಂಬರ್ ೧೯ ರಂದು ಪಂಡಿತ್ ಮದನ ಮೋಹನ್ ಮಾಳವಿಯಾ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಡಾ. ಅಂಬೇಡ್ಕರ್ ಹಾಗೂ ಡಾ. ಸೋಲಂಕಿ ಅವರು ಅಧ್ಯಕ್ಷರ ಪಕ್ಕದಲ್ಲಿಯೇ ಆಸೀನರಾಗಿದ್ದರು. ರಾಜ ಹಾಗೂ ಮೂಂಜೆ ಅವರು ಪರಸ್ಪರ ಕೈಹಿಡಿದಕೊಂಡು ಸಭಾಂಗಣಕ್ಕೆ ಬಂದರು.[೨]

ಅಲ್ಲಿ ಹಾಜರಿದ್ದ ಇತರ ಕೆಲ ಗಣ್ಯರು ಎಂದರೆ : ರಾಜೇಂದ್ರ ಪ್ರಸಾದ್, ಸಿ.ರಾಜಗೋಪಾಲಚಾರಿ, ಪಂಡಿತ್ ಕುಂಜಾರು, ಟಿ.ಪ್ರಕಾಶಂ, ಡಾ.ಚೌತಿ ರಾಂ, ಸ್ವಾಮಿ ಸತ್ಯಾನಂದ, ಆ್ಯನೆ, ಜಿ.ಎ. ಗವಾಯಿ, ಶಿವರಾಜ, ಜಗನ್ನಾಥನ್, ಧರ್ಮಲಿಂಗಂ, ಮಂಡಲ್, ಚುನ್ನೀಲಾಲ್, ಹೀರಾಚಂದ್ ವಾಲ್ಚಂದ್, ಸರ್. ಸೆಟಲ್‌ವಾಡ್ ಸರ್ ಮುಡಗಾಂವಕರ್, ಸರ್ ಪುರುಷೋತ್ತಮುದಾಸ್, ದೇವಧರ್,

1. Janata, Dated 24th Sept 1932
2. Keer P. 208

ನಟರಾಜನ್, ರಾವ್ ಬಹದ್ದೂರ್ ವೈದ್ಯ, ಡಾ. ದೇಶಮುಖ್, ದಲ್ವಿ, ಸುಬೇದಾರ್, ಸೇಠ್ ಬಿರ್ಲಾ, ಕರಂಡಿಕರ್, ಡಾ. ಸಾವರ್ಕರ್, ಶಿವಟರ್ಕರ್, ಪಿ.ಬಾಲು ನಿಕಾಲ್ಜೆ, ಕಮಲಾ ನೆಹರೂ, ಪ್ರೇರಣಿ ಕ್ಯಾಪ್ಟನ್, ಮೋಹ್ಯಾನ್ ಕ್ಯಾಪ್ಟನ್, ಸೌ. ಅವಂತಿಕಾಬಾಯಿ ಗೋಖಲೆ, ಅನ್ನಪೂರ್ಣ ಬಾಯಿ ದೇಶಮುಖ್, ರತ್ನಾಬೆನ್ ಮೆಹ್ತಾ, ನಟರಾಜನ್ ಮುಂತಾದವರು.

ಗಾಂಧೀಜಿಯವರ ಜೀವ ಉಳಿಸುವ ಸಲುವಾಗಿ ಎರಡೂ ಪಕ್ಷದವರಿಗೆ ಒಪ್ಪಿಗೆಯಾಗುವಂತಹ ಒಂದು ಒಪ್ಪಂದಕ್ಕೆ ಬರಬೇಕು ಎಂದು ಸಭಾಧ್ಯಕ್ಷರಾದ ಪಂಡಿತ ಮದನ್ ಮೋಹನ್ ಮಾಲವಿಯಾ ಅವರು ನುಡಿದರು.

ಪಂಡಿತ್ ಮಾಲವಿಯಾ ಅವರ ಕೋರಿಕೆಯ ಮೇರೆಗೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಮಾತನಾಡಲು ಎದ್ದು ನಿಂತರು. ಅವರು ತಮ್ಮ ಅಭಿಪ್ರಾಯಗಳನ್ನು ಅತ್ಯಂತ ಸ್ಪಷ್ಟವಾಗಿ ತಿಳಿಸಿದರು. ಅವರ ಭಾಷಣ ಈ ಕೆಳಗಿನಂತಿತ್ತು:

ಈ ಸಮಾವೇಶದ ಮೂಲ ಉದ್ದೇಶವನ್ನು ಗಮನಿಸಿದರೆ, ಈ ಸಮಾವೇಶವನ್ನು ಕರೆಯುವ ಅಗತ್ಯವೇ ಇರಲಿಲ್ಲ ಎಂಬುದೇ ನನ್ನ ಅನಿಸಿಕೆ. ನಮ್ಮ ಬೇಡಿಕೆಗಳಿಗೆ ವಿರೋಧ ವ್ಯಕ್ತಪಡಿಸುವ ಏಕೈಕ ಉದ್ದೇಶದಿಂದಲೇ ಮಹಾತ್ಮ ಗಾಂಧೀಯವರು ಆಮರಣಾಂತ ಉಪವಾಸ ಆರಂಭಿಸಿದ್ದಾರೆ. ಮಹಾತ್ಮ ಗಾಂಧೀಯವರ ಪ್ರಾಣ ಉಳಿಸಲು ಎಲ್ಲರೂ ಹೋರಾಡುತ್ತಿರುವುದು ಅತ್ಯಂತ ಸಹಜವೇ ಆಗಿದೆ. ಆದರೆ ತಮ್ಮ ಜೀವವನ್ನು ಒತ್ತೆ ಇಡುವ ಮುನ್ನ ಗಾಂಧೀಯವರು ಇದಕ್ಕೆ ಪರ್ಯಾಯವಾದ ಮಾರ್ಗವನ್ನು ಸೂಚಿಸಬೇಕಿತ್ತು. ಆದರೆ ಈಗಿನ ಪರಿಸ್ಥಿತಿಯನ್ನು ಗಮನಿಸಿದರೆ, ಗಾಂಧೀಯವರಿಂದ ಯಾವುದೇ ರೀತಿಯ ಸರಿಯಾದ ಪರ್ಯಾಯ ಮಾರ್ಗದ ಸೂಚನೆ ಇಲ್ಲದೇ ಹೋದರೆ ಎಲ್ಲಾ ರೀತಿಯ ಮಾತುಕತೆಯೂ ವ್ಯರ್ಥವೇ. ಇನ್ನು ನೇರವಾಗಿ ಹೇಳಬೇಕೆಂದರೆ ನಿರ್ಧರಿಸಲು ಈಗ ಏನೂ ಉಳಿದಿಲ್ಲ. ಗಾಂಧೀಯವರ ಮನದ ಇಂಗಿತ ಏನು ಎಂಬುದು ತಿಳಿಯುವವರೆಗೂ ಮಾತುಕತೆಗಳು ಯಾವ ರೀತಿಯ ಪ್ರಯತ್ನವೂ ಫಲ ನೀಡಲಾರವು. ಈ ಸಮಾವೇಶದಲ್ಲಿ ಎಷ್ಟೇ ಸಂಧಾನ ಕಾರ್ಯಗಳು ನಡೆದರೂ ಗಾಂಧೀಯವರ ಮನದಲ್ಲಿ ಏನಿದೆ ಎಂದು ತಿಳಿಯುವವರೆಗೂ ಈ ಸಮಸ್ಯೆಯ ಪರಿಹಾರದ ಬಗೆಗೆ ನಾನೇನೂ ಹೇಳಲಾರೆ. ಆದರೆ ಒಂದು ವಿಷಯವನ್ನು ನಾನು ಸ್ಪಷ್ಟವಾಗಿ ತಿಳಿಸುತ್ತೇನೆ. ಈ ಸಮಾವೇಶವನ್ನು ಸಂಚಾಲನೆ ಮಾಡಿರುವವರಿಂದ ಬರುವಂತಹ ಅಭಿಪ್ರಾಯಗಳಿಗೆ ನಾನು ಯಾವುದೇ ಬೆಲೆ ನೀಡುವುದಿಲ್ಲ. ನಾನು ಪರಿಗಣಿಸುವುದು ಕೇವಲ ಮಹಾತ್ಮ ಗಾಂಧೀಯವರ ಅಭಿಪ್ರಾಯ ಮಾತ್ರ. ಆದ್ದರಿಂದ ಅದರ ಪ್ರಸ್ತಾಪ ಏನೆಂದು ತಿಳಿಯದೇ ನಾನು ಯಾವ ರೀತಿ ಅಭಿಪ್ರಾಯ ಸೂಚಿಸಲು ಸಾಧ್ಯ? ಮೊದಲು ಅವರ ಪ್ರಸ್ತಾಪ ನನ್ನ ಮುಂದಿಡಿ. ಆನಂತರ ಅದನ್ನು ಪರಿಶೀಲಿಸುತ್ತೇನೆ. ಒಂದು ವಿಷಯನ್ನಂತೂ ನಾನೀಗಲೇ ಸ್ಪಷ್ಟಪಡಿಸುತ್ತೇನೆ. ಗಾಂಧೀಯವರ ಪ್ರಸ್ತಾಪವನ್ನು ನನ್ನ ಬಳಿಗೆ ತರುವವರು ಹಿಂದೂ ಧರ್ಮದ ಸವರ್ಣೀಯರಾಗಿರಬೇಕು. ಗಾಂಧೀಯವರ ಪ್ರಸ್ತಾಪವನ್ನು ಅವರ ಪರವಾಗಿ ಯಾವುದೇ ಅಸ್ಪೃಶ್ಯ ಜಾತಿಯ ಮನುಷ್ಯ ನನ್ನ ಬಳಿಗೆ ತರಬಾರದು. ಕೇವಲ ಗಾಂಧೀಯವರಿಗೆ ಜೀವದಾನ ಮಾಡುವ ಸಲುವಾಗಿ ನಾನು ನನ್ನ ಜನರ ಹಕ್ಕನ್ನು ಬಲಿಗೊಡ ಬಯಸುವುದಿಲ್ಲ.[೧]

ಇಲ್ಲಿಗೆ ಇಂದಿನ ಸಮಾವೇಶವು ಕೊನೆಗೊಂಡಿತು.

---

1. Janata, Dated 24th Sept 1932

೧೯೩೨ರ ಸೆಪ್ಟೆಂಬರ್ ೨೦ ರಂದು ಮಧ್ಯಾಹ್ನ ೧೨ ಘಂಟೆಗೆ ಗಾಂಧೀಯವರು ತಮ್ಮ ಆಮರಣಾಂತ ಉಪವಾಸ ಆರಂಭಿಸಿದರು. ಈ ವಿಷಯದಲ್ಲಿ ಸಂಧಾನವನ್ನು ನಡೆಸುವ ಸಲುವಾಗಿಯೇ ಒಂದು ಸಮಿತಿಯನ್ನು ಏರ್ಪಡಿಸಲಾಯಿತು. ಈ ಸಮಿತಿಯಲ್ಲಿ ಇದ್ದ ಸದಸ್ಯರೆಂದರೆ ಸರ್ ತೇಜ ಬಹದ್ದೂರ್ ಸಪ್ರು, ಬರ್ ಜಯಕರ್, ಪಂಡಿತ ಮದನ್ ಮೋಹನ್ ಮಾಳವಿಯಾ ಹಾಗೂ ಮಾಥೂರ್‌ದಾಸ್ ವಾಸನ್ ಜೀ ಅವರು ಮೇಲ್ವರ್ಗದ ಹಿಂದೂಗಳ ಪ್ರತಿನಿಧಿಗಳಾಗಿದ್ದರು. ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸಮಾವೇಶಕ್ಕೆ ಆಹ್ವಾನಿಸಲಾಯಿತು. ಈ ಚರ್ಚೆಯಲ್ಲಿ ಮಹಾತ್ಮ ಗಾಂಧೀಯವರ ಅಭಿಪ್ರಾಯಗಳನ್ನು ಸಭೆಯ ಮುಂದೆ ಇಟ್ಟವರು ಸರ್ ಚುನ್ನೀಲಾಲ್, ಅದರಲ್ಲಿದ್ದ ಅಂಶಗಳು ಎಂದರೆ :

೧) ಪ್ರತ್ಯೇಕ ಮತಕ್ಷೇತ್ರಗಳನ್ನು ಅಸ್ಪೃಶ್ಯರಿಗೆ ನೀಡುವುದನ್ನು ಮಹಾತ್ಮ ಗಾಂಧೀಯವರು ವಿರೋಧಿಸುತ್ತಾರೆ.

೨) ಇದಲ್ಲದೇ ಜಂಟಿ ಚುನಾವಣಾ ಕ್ಷೇತ್ರಗಳು ಮತ್ತು ಮೀಸಲು ಸ್ಥಾನಗಳಿಗೆ ಕೂಡ ಅವರು ಸಂಪೂರ್ಣ ಸಹಮತ ಸೂಚಿಸಿಲ್ಲ. ಆದರೆ ಮುಂಬಯಿಯಲ್ಲಿ ನಡೆಯುವ ಸರ್ವ ಹಿಂದೂ ಸಮಾವೇಶದಲ್ಲಿ ಈ ಮೀಸಲು ಸ್ಥಾನಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ಧಾರ ಕೈಗೊಳ್ಳಬಹುದು. ಆದರೆ ಅವರು ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾರೆ ಎಂಬುದು ಇದರ ಅರ್ಥವಲ್ಲ.

ಮಹಾತ್ಮ ಗಾಂಧೀಯವರ ಪ್ರಸ್ತಾವನೆಗಳನ್ನು ತಿಳಿದುಕೊಂಡ ನಂತರ ಡಾ. ಅಂಬೇಡ್ಕರ್ ಅವರು ಮಾತನಾಡಲು ಎದ್ದು ನಿಂತರು. ಅವರ ಮಾತುಗಳು ಅತ್ಯಂತ ಪ್ರಭಾವಶಾಲಿ ಆಗಿದ್ದವು ಹಾಗೂ ಹೃದಯಾಂತರಾಳದಿಂದ ಬಂದಿದ್ದವು. ಅವರು ಹೇಳಿದರು:

ಅತ್ಯಂತ ಕಷ್ಟಕರವಾಗಿರುವ ಇಂದಿನ ಈ ಸಂಧಾನದ ಸಭೆಯಲ್ಲಿ ಇತರರಿಗಿಂತ ವಿಭಿನ್ನವಾದ ಸ್ಥಿತಿಯಲ್ಲಿ ನಾನಿದ್ದೇನೆ. ನನ್ನ ಜನರ ನ್ಯಾಯಯುತ ಬೇಡಿಕೆಗಳ ಪರವಾಗಿ ಹೋರಾಡುತ್ತಿರುವ ನಾನು ಒಬ್ಬ ಖಳನಾಯಕನಂತೆ ಕಾಣುತ್ತಿದ್ದೇನೆ. ಆದರೆ ನನ್ನ ಜನರ ಬೇಡಿಕೆಗಳ ಪೂರೈಕೆಗಾಗಿ ನಾನು ಯಾವ ಮಟ್ಟಕ್ಕಾದರೂ ಹೋರಾಡಲು ಸಿದ್ಧನಿದ್ದೇನೆ.

ನಾನು ಒಂದಂಶ ಸ್ಪಷ್ಟಪಡಿಸುತ್ತೇನೆ ಅದೇನೆಂದರೆ ನಾನು ಈ ಪವಿತ್ರ ಕಾರ್ಯದಿಂದ ಹಿಂದೆ ಸರಿಯುವುದಿಲ್ಲ ನನ್ನ ಜನರ ನ್ಯಾಯಯುತ ಹಿತಾಸಕ್ತಿಗೆ ವಿರುದ್ಧವಾಗಿ ನಾನು ನಡೆಯುವುದಿಲ್ಲ. ಈ ಕಾರಣಕ್ಕಾಗಿ ನನ್ನನ್ನು ದೀಪದ ಕಂಬಕ್ಕೆ ನೇತು ಹಾಕಿದರು ಕೂಡ ನಾನು ಹಿಂದೆ ಸರಿಯುವುದಿಲ್ಲ. ಇಂದಿನ ದಿನ ಉದ್ಭವಿಸಿರುವ ಈ ಪ್ರಶ್ನೆಯು ಭಾವನಾತ್ಮಕವಾದ ನಿರ್ಧಾರದಿಂದ ತೀರ್ಮಾನವಾಗುವಂತಹುದಲ್ಲ. ಬದಲಿಗೆ, ಸಂವಿಧಾನಬದ್ಧವಾಗಿ ಇದರ ತೀರ್ಮಾನ ಆಗಬೇಕಿದೆ. ಹಲವಾರು ದಶಕಗಳಿಂದ ಅಡಿಯಾಳಾಗಿರುವ ಜನರ ಜೀವನದೊಂದಿಗೆ ಬೆಸೆದುಕೊಂಡಿದೆ. ಕೇವಲ ಕೆಲವರ ಮನಸ್ಸಾಕ್ಷಿಗೇ ಅಂಟಿಕೊಳ್ಳುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಗಾಂಧೀಯವರ ಪ್ರಸ್ತಾವನೆಯ ಸ್ವರೂಪ ಗಮನಿಸಿದರೇ, ಇದಕ್ಕೆ ಚಿಂತನೆ ನಡೆಸಲು ಮತ್ತಷ್ಟು ಸಮಯಾವಕಾಶ ಬೇಕಿದೆ. ಆದರೆ ಈ ಸಮಾವೇಶವು ಗಾಂಧೀ ಅವರಿಗೆ ತಮ್ಮ ಸತ್ಯಾಗ್ರಹವನ್ನು ೧೦–೧೨ ದಿನಗಳವರೆಗೆ ಮುಂದೂಡುವಂತೆ ತಿಳಿಸಬೇಕು.

ಆದರೆ ಅಧ್ಯಕ್ಷರಾದಂತಹ ಪಂಡಿತ ಮದನ ಮೋಹನ್ ಮಾಳವೀಯ ಅವರು ಈ ರೀತಿ ಆಗುವುದು ಯಾವ ರೀತಿಯಲ್ಲೂ ಸಾಧ್ಯವಿಲ್ಲ ಎಂದರು. ಅದಕ್ಕೆ ತಮ್ಮ ಜಾತಿ ಆಧಾರದ ಹಕ್ಕನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಲು ಸಾಧ್ಯವಿಲ್ಲ ಎಂದು ಡಾ. ಅಂಬೇಡ್ಕರ್ ಅವರು ತಿಳಿಸಿದರು.[೧]

---

1. Janata, Dated 24th Sept 1932

ಸಮಾವೇಶವನ್ನು ಮಾರನೆಯ ದಿನದ ಮಧ್ಯಾಹ್ನ ೨ಕ್ಕೆ ಮುಂದೂಡಲಾಯಿತು. ಆದರೆ ತತ್‌ಕ್ಷಣವೇ ಈ ಸಮಾವೇಶದ ಜನರು ಪ್ರಮುಖರೆಲ್ಲಾ ಬಿರ್ಲಾ ಹೌಸ್‌ನತ್ತ ಧಾವಿಸಿದರು. ಅಲ್ಲಿ ಶ್ರೀ ತೇಜಬಹದ್ದೂರ್ ಸಪ್ರು ಅವರು ಮೀಸಲು ಸ್ಥಾನಗಳಿಗೆ ಪ್ರಾಥಮಿಕ ಹಾಗೂ ದ್ವಿತೀಯ ಹಂತಗಳ ಚುನಾವಣೆಯ ಪ್ರಸ್ತಾಪನೆಯನ್ನು ಮುಂದಿಟ್ಟರು. ಇದರ ಅನುಸಾರ ಶೋಷಿತ ವರ್ಗದ ಜನರು ಪ್ರತಿಯೊಂದು ಸ್ಥಾನಕ್ಕೂ ತಮ್ಮ ಮೂವರು ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದಾಗಿತ್ತು. ಈ ಮೂವರಲ್ಲಿ ಒಬ್ಬರನ್ನು ಸವರ್ಣೀಯ ಹಿಂದೂಗಳು ಮತ್ತು ಶೋಷಿತ ವರ್ಗದವರು ಜಂಟಿ ಮತಕ್ಷೇತ್ರದದಲ್ಲಿ ಚುನಾಯಿಸಬೇಕು ಎಂದು ಹೇಳಲಾಗಿತ್ತು.[1]

ವಿಸ್ತೃತವಾದ ಚರ್ಚೆಯ ನಂತರ ಡಾ. ಅಂಬೇಡ್ಕರ್ ಅವರು ಈಗಾಗಲೇ ಬಂದಿರುವ ನಿರ್ಣಯವನ್ನು ಕೈಬಿಡುವುದರಿಂದ ಶೋಷಿತ ವರ್ಗಗಳಿಗೆ ಆಗುವ ಹಾನಿಯನ್ನು ಹೊಸ ನಿರ್ಣಯವು ತುಂಬಿಕೊಡುವುದಾದರೆ ಅಂತಹ ಒಪ್ಪಂದಕ್ಕೆ ತಾವು ಒಪ್ಪುವುದಾಗಿ ಹೇಳಿದರು. ಈ ವಿಷಯವಾಗಿ ಚಿಂತಿಸುವುದಾಗಿ ಕಾಂಗ್ರೆಸ್‌ನ ವಕ್ತಾರರು ಅವರಿಗೆ ಆಶ್ವಾಸನೆ ನೀಡಿದರು. ಈ ನಿಟ್ಟಿನಲ್ಲಿ ಒಂದು ಸಣ್ಣ ಸಮಿತಿ ರಚನೆ ಮಾಡಬೇಕೆಂದು ಪಂಡಿತ್ ಮಾಳವಿಯಾ ಅವರು ಸೂಚಿಸಿದರು. ಅಂತೆಯೇ ತೇಜ್ ಬಹದ್ದೂರ್ ಸಪ್ರು, ಬ್ಯಾರಿಸ್ಟರ್ ಜಯಕರ್, ಪಂಡಿತ್ ಮಾಳವಿಯಾ ಮಾಥೂರ್‌ದಾಸ್ ವಾಸನ್ ಜೀ ಹಾಗೂ ಡಾ. ಅಂಬೇಡ್ಕರ್ ಅವರನ್ನು ಒಳಗೊಂಡ ಒಂದು ಸಮಿತಿ ರಚನೆ ಆಯಿತು. ಈ ಹೆಸರುಗಳನ್ನು ಸಮಾವೇಶದ ಸದಸ್ಯರುಗಳಿಗೆ ತಿಳಿಸಲಾಯಿತು.

ಅಂತೆಯೇ ಡಾ. ಅಂಬೇಡ್ಕರ್ ಅವರು ತಮ್ಮ ಬೇಡಿಕೆಗಳ ಪಟ್ಟಿಯನ್ನು ತಯಾರಿಸಿ, ೨೦ನೆಯ ಸೆಪ್ಟೆಂಬರ್‌ರ ಬೆಳಿಗ್ಗೆ ೧೦ ಘಂಟೆಗೆ ಸಮಿತಿಯ ಮುಂದಿರಿಸಿದರು. ಅದರ ವಿವರ ಈ ಕೆಳಗಿನಂತಿದೆ.[2]

**ಮಹಾತ್ಮ ಗಾಂಧೀಯವರ ಅಮರಣಾಂತ ಉಪವಾಸದ ಮುನ್ನಾದಿನ ಸಂಜೆ ಸಲ್ಲಿಸಲಾದ ಬೇಡಿಕೆಗಳ ಪಟ್ಟಿ :**

**ಭಾಗ ಒಂದು: ವಿಧಾನ ಮಂಡಲದಲ್ಲಿ ಪ್ರಾತಿನಿಧ್ಯ**

A) ಪ್ರಾಂತೀಯ ವಿಧಾನ ಮಂಡಲಗಳಲ್ಲಿ ಶೋಷಿತ ವರ್ಗಗಳಿಗೆ ಈ ಕೆಳಗಿನಂತೆ ಪ್ರಾತಿನಿಧ್ಯವನ್ನು ನೀಡಬೇಕು.

| | | ಬೇಡಿಕೆಯಂತೆ |
|---|---|---|
| ಮದರಾಸು | ೨೧೫ರಲ್ಲಿ ೩೦ | ೧೮ |
| ಬೊಂಬಾಯಿ | ೨೦೦ರಲ್ಲಿ ೧೬ | ೧೦ |
| ಬಂಗಾಳ | ೨೫೦ರಲ್ಲಿ ೫೦ | ೧೦ |
| ಪಂಜಾಬ | ೧೭೫ರಲ್ಲಿ ೧೦ | ೯ |
| ಯುನೈಟೆಡ್ ಪ್ರಾವಿನ್ಸಸ್ | ೨೨೮ರಲ್ಲಿ ೪೦ | ೧೨ |
| ಬಿಹಾರ ಹಾಗೂ ಒರಿಸ್ಸಾ | ೧೭೫ರಲ್ಲಿ ೨೦ | ೭ |
| ಕೇಂದ್ರ ಪ್ರಾಂತ್ಯ | ೧೧೨ರಲ್ಲಿ ೨೦ | ೧೦ |

1. Keer P. 209
2. Janata, Dated 24th Sept 1932

| | | |
|---|---|---|
| ಹಾಗೂ ಬೇರಾರ್ | | |
| ಅಸ್ಸಾಂ | ೧೦೮ರಲ್ಲಿ ೧೧ | ೪ |

B) ಈ ಮೇಲಿನ ಸ್ಥಾನಗಳಿಗೆ ಚುನಾವಣೆಗಳು ಮಿಾಸಲುಸ್ಥಾನಗಳಿಗೆ ನಡೆಯುವ ಜಂಟಿ ಚುನಾವಣೆಗಳಾಗಿರುತ್ತವೆ, ಮಿಾಸಲಾತಿಯ ಅಡಿಯಲ್ಲಿ ಮೊದಲ ಹತ್ತು ವರ್ಷಗಳು ಮದರಾಸಿನಲ್ಲಿ ೧೮ ಒಂಟಿ ಮತಕ್ಷೇತ್ರಗಳಿರುತ್ತವೆ ಹಾಗೂ ಬೊಂಬಾಯಿಯಲ್ಲಿ ೧೦ ಒಂಟಿ ಮತಕ್ಷೇತ್ರಗಳೂ ಕೇಂದ್ರೀಯ ಪ್ರಾಂತ್ಯ ಹಾಗೂ ಬಂಗಾಳದಲ್ಲಿ ಕೂಡ ೧೦ ಒಂಟಿ ಮತ ಕ್ಷೇತ್ರಗಳು ಇರುತ್ತವೆ. ಅಸ್ಸಾಂನಲ್ಲಿ ೪ ಒಂಟಿ ಮತಕ್ಷೇತ್ರಗಳು ಇದ್ದರೆ ಬಿಹಾರಿನಲ್ಲಿ ಹಾಗೂ ಒರಿಸ್ಸಾದಲ್ಲಿ ೭ ಮತಕ್ಷೇತ್ರಗಳೂ, ಪಂಜಾಬಿನಲ್ಲಿ ೫ ಒಂಟಿ ಮತಕ್ಷೇತ್ರಗಳೂ ಹಾಗೂ ಉತ್ತರಪ್ರದೇಶದಲ್ಲಿ ೧೨ ಒಂಟಿ ಮತಕ್ಷೇತ್ರಗಳೂ ಇರತಕ್ಕದ್ದು. ಮುಖ್ಯ ಚುನಾವಣೆಗೆ ಮುನ್ನ ಪ್ರಾಥಮಿಕ ಚುನಾವಣೆ ನಡೆದು ಅದರಲ್ಲಿ ಆಯ್ಕೆಯಾದ ಒಬ್ಬರು ಶೋಷಿತ ವರ್ಗದ ಅಭ್ಯರ್ಥಿಗಳು ಆಯ್ಕೆಯಾಗಿ, ನಂತರ ಅವರೂ ಸೇರಿದಂತೆ ಇಬ್ಬರು ಮುಖ್ಯ ಚುನಾವಣೆಗೆ ಸ್ಪರ್ಧಿಸಬೇಕು.

**೧೦ ವರ್ಷಗಳ ನಂತರ**

C) ಮೊದಲ ೧೦ ವರ್ಷದ ನಂತರ ಈ ಪ್ರಾಥಮಿಕ ಚುನಾವಣೆಯ ಕ್ರಮವನ್ನು ನಿಲ್ಲಿಸತಕ್ಕದ್ದು. ನಂತರ ಜಂಟಿ ಮತಕ್ಷೇತ್ರಗಳು ಮತ್ತು ಮೀಸಲು ಸ್ಥಾನಗಳ ಆಧಾರದ ಮೇಲೆ ಚುನಾವಣೆಗಳು ನಡೆಯುತ್ತವೆ.

D) ಶೋಷಿತ ವರ್ಗದ ಜನರ ಪ್ರಾತಿನಿಧ್ಯವು ವಿಶೇಷ ಮೀಸಲಾತಿ ಹಾಗೂ ಜಂಟಿ ಮತಕ್ಷೇತ್ರಗಳ ಮೂಲಕ ಮುಂದಿನ ೧೫ ವರ್ಷಗಳವರೆಗೆ ಜಾರಿಯಲ್ಲಿ ಇರತಕ್ಕದ್ದು. ತದನಂತರ ಶೋಷಿತವರ್ಗಗಳ ಮತದಾರರ ಅಭಿಪ್ರಾಯವನ್ನು ಆಧರಿಸಿ ತೀರ್ಮಾನವನ್ನು ತೆಗೆದುಕೊಳ್ಳಬೇಕು.

E) ಕೇಂದ್ರ ಸರಕಾರದ ಎರಡೂ ಸದನಗಳಿಗೆ ಈಗ ಪ್ರಾಂತೀಯ ಸದನಗಳಿಗಿರುವಂತೆಯೇ ಜನಸಂಖ್ಯೆಯ ಆಧಾರದ ಮೇಲೆ ಶೋಷಿತ ವರ್ಗಗಳವರಿಗೆ ವಿಶೇಷ ಪ್ರಾತಿನಿಧ್ಯವನ್ನು ನೀಡತಕ್ಕದ್ದು.

F) ಕನಿಷ್ಠ ಶೋಷಿತ ವರ್ಗಗಳ ಜನರಿಗಾದರೂ ವಯಸ್ಕ ಮತದಾನ ಪದ್ಧತಿ ಜಾರಿಯಲ್ಲಿ ಇರತಕ್ಕದ್ದು ಶೋಷಿತವರ್ಗಗಳವರ ಮತದಾನದ ಹಕ್ಕು ಕೇಂದ್ರ ಹಾಗೂ ಪ್ರಾಂತೀಯ ಚುನಾವಣೆಗಳಲ್ಲಿ ಒಂದೇ ರೀತಿಯಿಂದ ಇರತಕ್ಕದ್ದು.

## ಭಾಗ – ಎರಡು

## ಸ್ಥಳೀಯ ಮಂಡಲಿಗಳು

೧. ಶೋಷಿತ ವರ್ಗದವರ ಪ್ರಾತಿನಿಧ್ಯವು ಎಲ್ಲಾ ನಗರ ಪಾಲಿಕೆಗಳು ಹಾಗೂ ಎಲ್ಲಾ ಪ್ರಾಂತೀಯ ಮಂಡಲಿಗಳು ಸ್ಥಳೀಯ ಮಂಡಲಿಗಳು, ಜಿಲ್ಲಾ ಆಡಳಿತ, ತಾಲ್ಲೂಕು ಆಡಳಿತ, ಹಳ್ಳಿಯ ಸಂಘಗಳು, ಪಂಚಾಯಿತಿಯ ಶಾಲೆಗಳ ಆಡಳಿತ ಮಂಡಲಿಗಳು, ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಇರಬೇಕು. ಪ್ರಾತಿನಿಧ್ಯವು ಅವರ ಜನಸಂಖ್ಯೆಯನ್ನು ಅವಲಂಬಿಸಿರುತ್ತದೆ.

೨. ನಿಗದಿಗೊಳಿಸಿರುವ ವಿದ್ಯಾರ್ಹತೆಗಳಿಗೆ ಒಳಪಟ್ಟು, ಶೋಷಿತವರ್ಗಗಳವರಿಗೆ ಕೇಂದ್ರ ಹಾಗೂ ಸ್ಥಳೀಯ ಸಾರ್ವಜನಿಕ ಸೇವೆಗಳಲ್ಲಿ, ಅವರ ಜನಸಂಖ್ಯೆಗನುಗುಣವಾಗಿ ಸ್ಥಾನಗಳ ಮೀಸಲಾತಿಯನ್ನು ನೀಡತಕ್ಕದ್ದು. ವಿದ್ಯಾರ್ಹತೆಯೊಂದನ್ನು ಉಳಿದು ಇತರ ಅರ್ಹತಾ ವಿಧಿಗಳನ್ನು ಸೂಕ್ತವಾಗಿ ಬದಲಾಯಿಸಲು ಅವಕಾಶವನ್ನು ನಿಯಮಗಳಲ್ಲಿ ಅಳವಡಿಸತಕ್ಕದ್ದು.

೩. ಪ್ರತಿಯೊಂದು ಪ್ರಾಂತ್ಯಕ್ಕೂ ಶೈಕ್ಷಣಿಕ ಕಾರ್ಯಕ್ಕಾಗಿ ನಿರ್ದಿಷ್ಟಗೊಳಿಸಿದ ಹಣದಲ್ಲಿ ಆ ಪ್ರಾಂತ್ಯದಲ್ಲಿ ಇರುವಂತಹ ಶೋಷಿತ ವರ್ಗದ ಜನರ ಸಂಖ್ಯೆಗೆ ಅನುಗುಣವಾದ ಭಾಗವನ್ನಾದರೂ

ಆ ವರ್ಗದ ಜನರ ವಿದ್ಯಾಭಾಸದ ಉದ್ದೇಶಕ್ಕಾಗಿಯೇ ಬಳಸಬೇಕು.

೪. ಕೆನಡಾ ಮುಂತಾದ ದೇಶಗಳಲ್ಲಿ ಜಾರಿಯಲ್ಲಿರುವಂತೆ ಶಿಕ್ಷಣ, ಶೌಚಾಲಯ ವ್ಯವಸ್ಥೆ, ಸಾರ್ವಜನಿಕ ಸೇವೆಗಾಗಿ ಆಯ್ಕೆ ಮುಂತಾದ ಕ್ಷೇತ್ರದಲ್ಲಿ ಶೋಷಿತ ವರ್ಗದ ಜನರನ್ನು ಕಡೆಗಣಿಸಿದರೆ, ಅವರು ತಮ್ಮ ಅಹವಾಲನ್ನು ರಾಜ್ಯಪಾಲರಿಗೇ ಇಲ್ಲವೇ ಸೇನಾಧಿಕಾರಿಗಳಿಗೆ ಸಲ್ಲಿಸಬಹುದಾದ ವ್ಯವಸ್ಥೆಯನ್ನು ಭಾರತದ ಸಂವಿಧಾನದಲ್ಲಿಯೂ ಅಳವಡಿಸತಕ್ಕದ್ದು.[೧]

ಸರ್‌ತೇಜ್ ಬಹದ್ದೂರ್ ಸಪ್ರು ಅವರು ಪ್ರಾಥಮಿಕ ಹಾಗು ಪ್ರೌಢ ಚುನಾವಣೆಗಳಿಗಾಗಿ ಒಂದು ಹೊಸ ಯೋಜನೆಯನ್ನು ರೂಪಿಸಿದರು. ತದನಂತರ ಅಂಬೇಡ್ಕರ್ ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಎರಡು ಘಂಟೆಯ ಒಳಗಾಗಿ ಹಿಂದಿರುಗುವುದಾಗಿ ತಿಳಿಸಿದರು. ಡಾ. ಅಂಬೇಡ್ಕರ್ ಅವರು ರಾತ್ರಿ ಹಿಂದಿರುಗಿ ಬಂದು ಈ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿರುವುದಾಗಿ ನುಡಿದರು. ಆದರೆ ಬ್ರಿಟಿಷ್ ಪ್ರಧಾನ ಮಂತ್ರಿಗಳು ನೀಡಿರುವ ಸ್ಥಾನಗಳಿಗಿಂತ ಹೆಚ್ಚು ಸ್ಥಾನ ನೀಡಬೇಕೆಂಬ ಬೇಡಿಕೆಯನ್ನು ಅವರ ಮುಂದಿಟ್ಟರು.

ಮುಖಂಡರೆಲ್ಲರೂ ಇವರ ಸಲಹೆಗೆ ಒಪ್ಪಿಗೆ ಸೂಚಿಸಿದರು. ಜಯಕರ ಸಪ್ರು, ಬಿರ್ಲಾ, ರಾಜಗೋಪಾಲಾಚಾರಿ ಹಾಗೂ ಡಾ. ರಾಜೇಂದ್ರ ಪ್ರಸಾದ್ ಅವರು ಮಧ್ಯರಾತ್ರಿಯ ರೈಲು ಗಾಡಿಯ ಮೂಲಕ ಪೂನಾ ನಗರಕ್ಕೆ ಹೊರಟರು.

ಸೆಪ್ಟೆಂಬರ್ ೨೧ ರಂದು ಯೆರವಾಡ ಜೈಲಿನ ಪ್ರವೇಶದ ದ್ವಾರದ ಬಳಿಯೇ ಇರುವ ಅಂಗಳಕ್ಕೆ ಗಾಂಧೀಯವರನ್ನು ಮಧ್ಯಾಹ್ನದ ಹೊತ್ತಿಗೆ ಕರೆತರಲಾಯಿತು. ಸರ್ದಾರ ಪಟೇಲ್ ಹಾಗೂ ಗಾಂಧೀಜಿಯವರ ಕಾರ್ಯದರ್ಶಿಯಾದ ಪ್ಯಾರೇಲಾಲ್ ಅವರಿಗೆ ಅವರ ಮಂಚದ ಬಳಿ ಕುಳಿತುಕೊಳ್ಳಲು ಅನುಮತಿ ನೀಡಲಾಯಿತು. ಮಧ್ಯಾಹ್ನದ ಸುಮಾರಿಗೆ ಡಾ. ಅಂಬೇಡ್ಕರ್ ಅವರನ್ನು ದೂರವಾಣಿಯ ಮೂಲಕ ಸಂಪರ್ಕಿಸಿದ ಸಪ್ರು, ಕೂಡಲೇ ಪೂನಾಗೆ ಹೊರಟು ಬರುವಂತೆ ತಿಳಿಸಿದರು.[೧]

೧೯೩೨ ಸೆಪ್ಟೆಂಬರ್ ೨೧ ರಂದು ಪೂನಾಗೆ ಹೊರಡುವ ಮುನ್ನ ಡಾ. ಅಂಬೇಡ್ಕರ್ ಅವರು The Times of India ದಿನ ಪತ್ರಿಕೆಗೆ ಸಂದರ್ಶನ ನೀಡಿದರು. "ನನಗೆ ಈಗಷ್ಟೇ ಪೂನಾದಿಂದ ಒಂದು ಸಂದೇಶ ಬಂದಿದೆ. ಗಾಂಧೀಯವರು ನನ್ನನ್ನು ಹಾಗೂ ರಾಜಾ ಅವರನ್ನು ಕಾಣಬಯಸುತ್ತಾರೆ. ನಿನ್ನೆ ರಾತ್ರಿ ಸಮಾವೇಶಕ್ಕೆ ನಾನು ನೀಡಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಭೇಟಿಯನ್ನು ಕರೆಯಲಾಗಿದೆ.

"ನಾನು ಈ ಆಮಂತ್ರಣವನ್ನು ಒಪ್ಪಿಕೊಂಡಿದ್ದೇನೆ. ಆದರೆ ಒಂದು ವಿಷಯವನ್ನು ನಾನು ಸ್ಪಷ್ಟಪಡಿಸಿದ್ದೇನೆ. ಅದೇನೆಂದರೆ ರಾಜಾ ಹಾಗೂ ಅವರ ಪಕ್ಷದವರ ಸಂಗಡ ಗಾಂಧಿಯವರು ನಡೆಸುವ ಸಂಧಾನವು ನನಗೆ ಸಂಬಂಧಿಸಿದುದಲ್ಲ. ಗಾಂಧಿಯವರೇನಾದರೂ ರಾಜಾ ಅವರನ್ನು ಭೇಟಿ ಮಾಡಿ ಮಾತನಾಡಬಯಸಿದರೆ, ಅದನ್ನು ಅವರು ಪ್ರತ್ಯೇಕವಾಗಿ ಮಾಡಬೇಕು. ನಾನು ಈ ಅಂಶವನ್ನು ಸ್ಪಷ್ಟವಾಗಿ ಹೇಳುತ್ತಿರುವುದಕ್ಕೆ ಕಾರಣ ಏನೆಂದರೆ ನಿಜವಾದ ಅರ್ಥದಲ್ಲಿ ವ್ಯಾಜ್ಯ ಇರುವುದು ಗಾಂಧೀ ಮತ್ತು ಅವರ ಪಕ್ಷ ಹಾಗೂ ನನ್ನ ಹಾಗೂ ನನ್ನ ಪಕ್ಷದ ನಡುವೆ.

ಇದಲ್ಲದೇ ಮತ್ತೊಂದು ವಿಷಯದಲ್ಲಿ ನಾನು ನನ್ನ ಅಸಮ್ಮತಿಯನ್ನು ಖಂಡಿತವಾದ ಮಾತುಗಳಲ್ಲಿ ತಿಳಿಸಬಯಸುತ್ತೇನೆ. ಅದೇನೆಂದರೆ ಕಾಂಗ್ರೆಸ್ ಹಾಗೂ ಹಿಂದೂ ಮಹಾಸಭೆಯು ತಮ್ಮ ಇಷ್ಟದಂತೆ ತಮಗೆ ಅನುಕೂಲ ಆಗುವ ರೀತಿಯಲ್ಲಿ ಶೋಷಿತ ವರ್ಗಗಳ ನಾಯಕರುಗಳನ್ನು ಸೃಷ್ಟಿಸುತ್ತದೆ. ನಂತರ

---

1. Janata, Dated 24th Sept 1932

ಆ ನಾಯಕರನ್ನು ಶೋಷಿತ ವರ್ಗಗಳವರ ಮೇಲೆ ಹೇರುತ್ತಾರೆ. ಇದರಲ್ಲಿ ನನಗೆ ರಾಜಾ ಅವರ ವಿರುದ್ಧ ಯಾವ ರೀತಿಯ ವ್ಯಕ್ತಿಗತವಾದ ದ್ವೇಷವೂ ಇಲ್ಲ. ಇಂದು ರಾತ್ರಿ ನಾನು ಪೂನಾಗೆ ಹೊರಡುತ್ತಿದ್ದೇನೆ.”

**ಯೆರವಾಡ ಕಾರಾಗೃಹಕ್ಕೆ ಮತ್ತೊಂದು ಭೇಟಿ.**

ಸರ್ ತೇಜ ಬಹದ್ದೂರ್ ಸಪ್ರು ಹಾಗೂ ಶ್ರೀ ಜಯಕರ್ ಅವರು ಪೂನಾಗೆ ರೈಲಿನ ಮೂಲಕ ಆಗಮಿಸಿ ಬುಧವಾರ ಬೆಳಿಗ್ಗೆ ೭.೩೦ರ ಸುಮಾರಿಗೆ ಗಾಂಧೀಯವರನ್ನು ಕಾರಾಗೃಹದಲ್ಲಿ ಭೇಟಿ ಮಾಡಿದರು. ಆನಂತರ ಅವರೊಂದಿಗೆ ಸಮಾವೇಶದಲ್ಲಿ ೧೦ ಘಂಟೆಯವರೆಗೂ ಇದ್ದರು. ಹೊರಡುವ ಮುನ್ನ ಪುನಃ ಮಾರನೆಯ ಬೆಳಿಗ್ಗೆ ಹಿಂದಿರುಗುವುದಾಗಿ ಅವರು ನುಡಿದರು.

ಸಂದರ್ಶನದ ನಂತರ ಹೊರಬಿದ್ದ ಹೇಳಿಕೆ ಈ ಕೆಳಗಿನಂತಿದೆ:–

ಸರ್ ತೇಜ್ ಬಹದ್ದೂರ್ ಸಪ್ರು, ಶ್ರೀ ಜಯಕರ್, ಶ್ರೀ ರಾಜಗೋಪಾಲಚಾರಿ, ಬಾಬು ರಾಜೇಂದ್ರ ಪ್ರಸಾದ್ ಹಾಗೂ ಶ್ರೀ ಜಿ.ಡಿ.ಬಿರ್ಲಾ ಅವರನ್ನು ಒಳಗೊಂಡ ಸದಸ್ಯರ ಸಮಿತಿಯು ಇಂದು ಗಾಂಧೀ ಅವರನ್ನು ಭೇಟಿಯಾಗಿ ದೀರ್ಘವಾದ ಸಮಾಲೋಚನೆ ನಡೆಸಿತು. ನಿನ್ನೆಯ ಸಮಾಲೋಚನೆಯಲ್ಲಿ ಬಂದ ಪ್ರಸ್ತಾಪವನ್ನು ಅವರು ಗಾಂಧೀಯವರಿಗೆ ವಿವರಿಸಿದರು. ಈ ಸಂದರ್ಶನವು ಸ್ವಲ್ಪ ಮಟ್ಟಿಗೆ ಆಶಾದಾಯಕವಾಗಿತ್ತು. ಆದರೆ ಗಾಂಧಿಯವರು ತಮ್ಮ ಸ್ನೇಹಿತರುಗಳಾದ ಶ್ರೀ ಬಿ.ಆರ್. ಅಂಬೇಡ್ಕರ್ ಅವರು ಹಾಗೂ ಶ್ರೀ ಎಂ.ಸಿ.ರಾಜಾ ಅವರೊಂದಿಗೆ ಚರ್ಚಿಸಿ ನಿರ್ಧಾರವನ್ನು ತಿಳಿಸುವುದಾಗಿ ಹೇಳಿದರು.

ಆದ್ದರಿಂದ ಈ ಮೇಲ್ಕಂಡ ಸದಸ್ಯರು ಮತ್ತೊಂದು ದಿನ ಪೂನಾದಲ್ಲಿ ಉಳಿಯುವಂತಾಯಿತು. ಸರ್. ಟಿ.ಬಿ.ಸಪ್ರು ಈ ಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅದು ಗಾಂಧಿಯವರಿಗೆ ಒಪ್ಪಿಗೆ ಆಗಿಯೇ ಆಗುತ್ತದೆ ಮತ್ತು ಈ ಸಮಸ್ಯೆಗೆ ಒಂದು ಪರಿಹಾರ ಸಿಕ್ಕೇ ತೀರುತ್ತದೆ ಎಂಬ ಭರವಸೆ ಅವರಲ್ಲಿ ಇದ್ದಿತು. ಈ ಸದಸ್ಯ ಸಮಿತಿಯವರ ಪ್ರಕಾರ ಗಾಂಧೀಯವರು ಆರೋಗ್ಯವಂತರಾಗಿ ಹಾಗೂ ಉಲ್ಲಾಸದಿಂದ ಇದ್ದರು.[೧]

ಡಾ. ಅಂಬೇಡ್ಕರ್ ಅವರು ಮಧ್ಯರಾತ್ರಿಯ ರೈಲಿನಲ್ಲಿ ಪಯಣಿಸಿದರು. ಅಂದೇ ರಾಜಾ ಹಾಗೂ ಮಾಳವಿಯಾ ಅವರು ಕೂಡ ಬೊಂಬಾಯಿಯಿಂದ ಪುಣೆಯತ್ತ ಹೊರಟರು.

ಗುರುವಾರ ಎಂದರೆ ೧೯೩೨ರ ೨೨ನೆಯ ಸೆಪ್ಟೆಂಬರ್‌ನಂದು ಗಾಂಧೀಯವರು ಡಾ. ರಾಜೇಂದ್ರ ಪ್ರಸಾದ ಹಾಗೂ ರಾಜಗೋಪಾಲಚಾರಿ ಅವರೊಂದಿಗೆ ಸಮಾಲೋಚನೆ ನಡೆಸಿದರು. ಅವರು ಕೆಲವು ಕ್ಷೇತ್ರಗಳಲ್ಲಿ ಎರಡು ಹಂತಗಳ ಚುನಾವಣೆ ಮತ್ತು ಕೆಲವು ಕ್ಷೇತ್ರಗಳಲ್ಲಿ ಒಂದೇ ಹಂತದ ಚುನಾವಣೆಗಳು ನಡೆಯುವುದು ತಮಗೆ ಸರಿದೋರದು ಎಂಬುದನ್ನು ತಿಳಿಸಿದರು. ಎಲ್ಲಾ ಚುನಾವಣೆಗಳು ಎರಡು ಹಂತಗಳ ಚುನಾವಣೆಗಳಾಗಿರಬೇಕು ಎಂದು ಅಭಿಪ್ರಾಯಪಟ್ಟರು. ಇದನ್ನು ನ್ಯಾಷನಲ್ ಹೋಟೆಲ್‌ನಲ್ಲಿ ಬೀಡು ಬಿಟ್ಟಿದ್ದ ಅಂಬೇಡ್ಕರ್ ಅವರಿಗೆ ಸಂಬಂಧಿಸಿದಂತೆ ಹೇಳಿದ್ದರು. ಮತ್ತೊಮ್ಮೆ ವಾತಾವರಣ ಕಾವೇರತೊಡಗಿತು. ಇತ್ತ ಬ್ರಿಟನ್ನಿನ ಪ್ರಧಾನ ಮಂತ್ರಿಗೆ ಒಂದು ತಂತಿ ಸಂದೇಶವನ್ನು ಕಳುಹಿಸಿ ಅಸ್ಪೃಶ್ಯರಿಗೆಂದು ಇದ್ದ ಪ್ರತ್ಯೇಕ ಮತಕ್ಷೇತ್ರಗಳನ್ನು ರದ್ದುಪಡಿಸುವಂತೆ ಕೇಳಬೇಕು ಎಂದು ಕೆಲವು ಮುಖಂಡರು ಸೂಚಿಸಿದರು.[೨]

ಅದೇ ದಿನ ಮುಂಜಾನೆ ೯ ಘಂಟೆಗೆ ಸರ್ ತೇಜ್ ಬಹದ್ದೂರ್ ಸಪ್ರು ಹಾಗೂ ಜಯಕರ್ ಅವರು

---

1. The Times of India date 22nd Sep 1932
2. Keer P. 210

ಅಂಬೇಡ್ಕರ್ ಅವರನ್ನು ನ್ಯಾಷನಲ್ ಹೋಟೇಲ್‌ನಲ್ಲಿ ಭೇಟಿಯಾಗಿ ಅವರಿಗೆ ಈ ಸಂಗತಿಗಳನ್ನು ತಿಳಿಸಿದರು.[೧]

ಆದಕ್ಕೆ ಪ್ರತಿಕ್ರಿಯಿಸುತ್ತಾ ಡಾ. ಅಂಬೇಡ್ಕರ್ "ತಮಗೆ ಸೂಕ್ತವಾದ ಬದಲಿ ವ್ಯವಸ್ಥೆಯನ್ನು ಸ್ಪಷ್ಟರೂಪದಲ್ಲಿ ನೀಡುವುದಾದರೆ ಬ್ರಿಟಿಷ್ ಪ್ರಧಾನಿಯವರು ನೀಡಿರುವ ಪ್ರತ್ಯೇಕ ಮತ ಕ್ಷೇತ್ರಗಳನ್ನು ಕೈಬಿಡುವುದಾಗಿ" ಸ್ಪಷ್ಟವಾಗಿ ತಿಳಿಸಿದರು ಯಾವುದೋ ಕಾಲ್ಪನಿಕ ಭರವಸೆಯ ಹಿಂದೆ ಓಡುವ ವ್ಯಕ್ತಿ ನಾನಲ್ಲ ಎಂದವರು ತಿಳಿಸಿದರು. ಇದುವರೆಗೂ ಕಳೆಗುಂದಿದ್ದ ವಾತಾವರಣ ಬದಲಾಗಿ ಅಲ್ಲಿ ಆತಂಕದ ಸ್ಥಿತಿ ನಿಧಾನವಾಗಿ ಏರ್ಪಡಲು ಪ್ರಾರಂಭವಾಗಿತ್ತು. ಮಧ್ಯಾಹ್ನದ ಸುಮಾರಿಗೆ ಜಯಕರ್ ಸಪ್ರು ಹಾಗೂ ಮಾಳವಿಯಾ ಅವರು ಗಾಂಧಿಯವರನ್ನು ಕಾರಾಗೃಹದಲ್ಲಿ ಭೇಟಿಯಾದರು. ಅವರ ನಂತರ ಆಗಮಿಸಿದ ಪಿ.ಬಾಲು ಹಾಗೂ ರಾಜಾ ಅವರು ಗಾಂಧೀಯವರಿಗೆ ಸಮಾಧಾನ ಆಗುವಂತಹ ಒಡಂಬಡಿಕೆಯನ್ನು ಮಾಡಿಸುವುದಾಗಿ ಆಶ್ವಾಸನೆಯನ್ನು ನೀಡಿ ಅಲ್ಲಿಂದ ತೆರಳಿದರು.

ಇಳಿ ಸಂಜೆಯಲ್ಲಿ ಡಾ. ಅಂಬೇಡ್ಕರ್ ಅವರು ತಮ್ಮ ಸಹಚರರಾದ ಜಯಕರ್, ಬಿರ್ಲಾ, ಚುನೀಲಾಲ್ ಮೆಹ್ತಾ ಹಾಗೂ ರಾಜಗೋಪಾಲಚಾರಿ ಅವರೊಂದಿಗೆ ಗಾಂಧೀಯವರನ್ನು ಕಾರಾಗೃಹದಲ್ಲಿ ಭೇಟಿಯಾಗಲು ಹೊರಟರು. ಅದು ಅತ್ಯಂತ ಗಂಭೀರವಾದ ರಾಜಕೀಯ ಸಮಸ್ಯೆ ಆಗಿತ್ತು. ಇವರು ಕಾರಾಗೃಹವನ್ನು ತಲುಪಿದಾಗ, ಜೈಲಿನ ಹಾಸಿಗೆಯನ್ನು ಹಾಸಿದ್ದ ಬಿಳಿಯ ಬಣ್ಣದ ಕಬ್ಬಿಣದ ಮಂಚದ ಮೇಲೆ ಗಾಂಧಿಯವರು ಮಲಗಿದ್ದರು ಮಾವಿನ ಮರದ ನೆರಳು ಅವರ ಮೇಲೆ ಬಿದ್ದಿತ್ತು. ಸರ್ದಾರ ಪಟೇಲ್ ಹಾಗೂ ಸರೋಜಿನಿ ನಾಯ್ಡು ಅವರು ಗಾಂಧೀಯವರ ಬಳಿ ಕುಳಿತಿದ್ದರು. ಮಂಚದ ಬಳಿ ನೀರು, ಸೋಡಾ ಹಾಗೂ ಉಪ್ಪಿನ ಡಬ್ಬಿಗಳಿದ್ದವು.

ಡಾ. ಅಂಬೇಡ್ಕರ್ ಅವರು ಮಂಚದ ಬಳಿಗೆ ಹೋಗುತ್ತಿದ್ದಂತೆ ಅಲ್ಲಿ ಅತ್ಯಂತ ಗಾಢವಾದ ನಿಶ್ಯಬ್ಧವಿತ್ತು. ಹಾಗೂ ಎಲ್ಲರ ಕಣ್ಣುಗಳಲ್ಲಿ ಆತಂಕ ಎದ್ದು ಕಾಣುತ್ತಿತ್ತು. ಈ ರೀತಿಯ ನಿಶ್ಯಬ್ದತೆಯಿಂದ ಅಂಬೇಡ್ಕರ್ ಅವರು ಕರಗುವವರೇ? ಗಾಂಧೀಯವರನ್ನು ಕಂಡ ಕೂಡಲೇ ಅಂಬೇಡ್ಕರ್ ಅವರು ತಮ್ಮ ಹಠವನ್ನು ಬಿಟ್ಟುಬಿಡುತ್ತಾರೆ ಎಂದು ಜಯಕರ್ ಅವರು ಮೊದಲೇ ಹೇಳಿದ್ದರು. ಈ ರೀತಿಯ ದುಃಖಭರಿತ ನಿಶ್ಯಬ್ದತೆಯನ್ನು ಡಾ. ಅಂಬೇಡ್ಕರ್ ಅವರು ಕೊನೆಗೊಳಿಸುವ ಮನಸ್ಸು ಮಾಡುವವರೇ? ಇದೀಗ ಡಾ. ಅಂಬೇಡ್ಕರ್ ಅವರು ಅತ್ಯಂತ ಗಣ್ಯವ್ಯಕ್ತಿಯಾದ ಮಹಾತ್ಮಾ ಗಾಂಧೀಯವರ ಎದುರಿನಲ್ಲಿ ನಿಂತಿದ್ದರು. ಈತ ಎಂತೆಂತಹ ದೊಡ್ಡ ದೊಡ್ಡ ವ್ಯಕ್ತಿಗಳನ್ನೆಲ್ಲಾ ತಮ್ಮ ಆಯಸ್ಕಾಂತದಂತಹ ವ್ಯಕ್ತಿತ್ವದ ಪ್ರವಾಹಕ್ಕೆ ಆಕರ್ಷಿಸಿ ಅದರಲ್ಲಿ ಅವರನ್ನು ಮುಳುಗಿಸಿಸಿದ್ದರು. ಜೈಲಿನ ಹೊರಗೆ ಅತ್ಯಂತ ಆತಂಕಮಯವಾದ ವಾತಾವರಣ ಏರ್ಪಟ್ಟಿದ್ದಿತು. ಜೈಲಿನ ಒಳಗೆ ನೀರವ ಮೌನವಿತ್ತು. ಅಂತಹುದರಲ್ಲಿ ಡಾ. ಅಂಬೇಡ್ಕರ್ ಅವರು ಸ್ವಲ್ಪವೂ ವಿಚಲಿತರಾಗದೆಯೇ ತಮ್ಮ ಮನಃಸ್ಥಿತಿ ಕಾಯ್ದುಕೊಂಡಿದ್ದರು. ಇಂತಹ ಪರಿಸ್ಥಿತಿಯನ್ನು ಸ್ವಲ್ಪ ಕಡಿಮೆ ಧೈರ್ಯದ ವ್ಯಕ್ತಿಯೇನಾದರೂ ಎದುರಿಸುವಂತಿದ್ದರೆ, ಆ ವ್ಯಕ್ತಿ ಈ ಬಿರುಗಾಳಿಯಲ್ಲಿ ಮುಳುಗಿಯೇ ಹೋಗಿರುತ್ತಿದ್ದ. ಡಾ. ಅಂಬೇಡ್ಕರ್ ಅವರು ತಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ತಮ್ಮ ಜನರನ್ನು ಪ್ರೀತಿಸುತ್ತಿದ್ದರು ಹಾಗೂ ತಮ್ಮ ಸಂತೋಷಕ್ಕಿಂತ ಅವರು ತಮ್ಮ ಜನರ ಸಂತಸಕ್ಕಾಗಿ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು.

ಇತ್ತ ಗಾಂಧೀ ನಿತ್ರಾಣಗೊಂಡಿದ್ದರು. ಅವರು ತಮ್ಮ ಹಾಸಿಗೆಯ ಮೇಲೆ ಮಲಗಿದ್ದರು. ಮಾತುಕತೆ ಆರಂಭ ಆಯಿತು. ಸಪ್ರು ಅವರು ಗಾಂಧೀಯವರಿಗೆ ಇಡೀ ಕಥೆಯನ್ನು ವಿವರಿಸಿದರು. ಮಾಳವಿಯಾ ಅವರು ಹಿಂದೂಗಳ ದೃಷ್ಟಿಕೋನ ವಿವರಿಸಿದರು. ಡಾ. ಅಂಬೇಡ್ಕರ್ ಅವರು ಅತ್ಯಂತ ಮೆಲುವಾದ ಆದರೆ ಸ್ಪಷ್ಟ ಹಾಗೂ ಅಡೆತಡೆ ಇಲ್ಲದ ಸ್ವರದಲ್ಲಿ ಮಾತನಾಡಲು ಆರಂಭಿಸಿದರು.

"ಮಹಾತ್ಮಾಜಿ ಅವರೇ, ನೀವು ನಮ್ಮ ವಿಷಯದಲ್ಲಿ ಬಹಳ ಅನ್ಯಾಯದಿಂದ ನಡೆದುಕೊಂಡಿರುವಿರಿ" "ನಾನು ಯಾವಾಗಲೂ ಅನ್ಯಾಯದಿಂದ ನಡೆದುಕೊಳ್ಳುವ ಹಾಗೆ ಕಾಣಿಸುತ್ತದೆ. ಅದು ನನ್ನ ದುರ್ವಿಧಿ. ಈ ವಿಷಯದಲ್ಲಿ ನಾನು ಅಸಹಾಯಕ".

ಈ ಸಂಭಾಷಣೆಯು ದೀರ್ಘವಾಗಿ ಸಾಗಿತ್ತು. ಡಾ. ಅಂಬೇಡ್ಕರ್ ಅವರೇ ಬಹುಪಾಲು ಮಾತುಕತೆ ಆಡಿದ್ದರು. ಇತ್ತ ಗಾಂಧಿಯವರು ನಿತ್ರಾಣಗೊಂಡು ಹಾಸಿಗೆಯ ಮೇಲೆ ಮಲಗಿದ್ದರು. "ನನಗೆ ಪರಿಹಾರ ಬೇಕು" ಡಾ. ಅಂಬೇಡ್ಕರ್ ಹೇಳಿದರು. "ನಾನು ನೀವು ಹೇಳುವ ಬಹಳಷ್ಟು ವಿಷಯಗಳಲ್ಲಿ ನಿಮ್ಮ ಪರವಾಗಿದ್ದೇನೆ. ನೀವು ನನ್ನ ಜೀವದ ಬಗ್ಗೆ ಆಸಕ್ತಿ ಹೊಂದಿರುವಿರಿ ಎಂದು ಭಾವಿಸಿದ್ದೇನೆ".

ಡಾ. ಅಂಬೇಡ್ಕರ್ ಅವರು "ಹೌದು ಮಹಾತ್ಮಾಜಿ ನನಗೆ ಅದರಲ್ಲಿ ಆಸಕ್ತಿ ಇದೆ. ನೀವು ಒಂದು ವೇಳೆ ಶೋಷಿತ ವರ್ಗದ ಜನರ ಏಳಿಗೆಗಾಗಿ ನಿಮ್ಮ ಜೀವನ ಮುಡಿಪು ಇಡುವುದಾದರೇ, ನೀವು ನಮ್ಮ ನಾಯಕರಾಗಿ ಹೊರಹೊಮ್ಮುವುದರಲ್ಲಿ ಸಂದೇಹ ಇಲ್ಲ."

ಗಾಂಧಿ :– ಅದು ಸರಿಯೇ, ನೀವು ನನ್ನ ಜೀವದ ಬಗ್ಗೆ ನಿಜವಾಗಿ ಆಸಕ್ತಿ ಹೊಂದಿದ್ದರೆ, ನನ್ನ ಜೀವನ್ನು ಉಳಿಸಲು ನೀವು ಏನು ಮಾಡಬೇಕು ಎಂಬುದು ನಿಮಗೆ ತಿಳಿದಿದೆ. ನೀವು ಹೇಳುವಂತೆ ನಿಮ್ಮ ನಿಲವು ಹೀಗಿದೆ. ಬ್ರಿಟಿಷರ ಪ್ರಧಾನಿಯಿಂದ ನೀವು ಪಡೆದುಕೊಂಡಿರುವ ಸವಲತ್ತಿನಿಂದ ಹಿಂದೆ ಸರಿಯಲು ನೀವು ಸೂಕ್ತ ಪರ್ಯಾಯ ವ್ಯವಸ್ಥೆ ಕೇಳುತ್ತಿರುವಿರಿ. ಎರಡು ಹಂತದ ಮತದಾನದ ಮೂಲಕ ಇತರ ಪಕ್ಷಗಳಿಗೂ ಮೇಲಕ್ಕೆ ಏರುವ ಅವಕಾಶ ಕಲ್ಪಿಸಬಹುದು ಎಂದು ನೀವು ಹೇಳುತ್ತೀರಿ. ಇತ್ತ ಸಮಿತಿಯ ವತಿಯಿಂದ ಮೀಸಲು ಇರಿಸಿರುವ ಸ್ಥಾನಗಳು ಕೂಡ ನಿಮ್ಮ ಗುಂಪಿನ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಸಹಾಯ ಮಾಡಲಿವೆ ಎನ್ನುವಿರಿ. ಆದರೆ ನನ್ನನ್ನು ಚಿಂತೆಗೆ ಈಡು ಮಾಡಿರುರುವುದು ಇದೇ ವಿಷಯವೇ. ಇದನ್ನು ಕೇವಲ ಕೆಲವೇ ಸ್ಥಾನಗಳಿಗೆ ಮಾತ್ರ ನೀವೇಕೆ ಬಯಸುತ್ತೀರಿ? ಎಲ್ಲಾ ಸ್ಥಾನಗಳಿಗೂ ಇದನ್ನೇ ಅನ್ವಯಿಸಬಹುದಲ್ಲವೆ? ಒಂದು ಗುಂಪಿಗೆ ಈ ವಿಧಾನ ಒಳಿತಾಗುವುದಾದರೆ, ಅದರಿಂದ ಇಡೀ ಶೋಷಿತ ವರ್ಗಕ್ಕೆ ಏಕೆ ಒಳ್ಳೆಯದಾಗುವುದಿಲ್ಲ? ಈ ಪ್ರಶ್ನೆಯನ್ನು ಇದೇ ರೀತಿ ನಾನು ನೋಡುತ್ತೇನೆ. ನೀವು ಹುಟ್ಟಿನಿಂದಲೇ "ಅಸ್ಪೃಶ್ಯರು". ಆದರೆ ಇದೀಗ ನಾನು ಹೇಳಹೊರಟಿರುವ ವಿಷಯ ನಿಮಗೆ ಆಶ್ಚರ್ಯ ಉಂಟುಮಾಡಬಹುದು. ಅದು ಹೇಗೆ ಈ ಸ್ಥಾನದಲ್ಲಿರುವ ವ್ಯಕ್ತಿ ಈ ರೀತಿ ಮಾತನಾಡಲು ಸಾಧ್ಯ ಎಂದು ನೀವು ಚಿಂತಿಸಬಹುದು. ನಾನು ಕೂಡ ಸ್ವೀಕರಣದ ಮೂಲಕ ಅಸ್ಪೃಶ್ಯನೇ ಆಗಿದ್ದೇನೆ. ಮನಸ್ಸಿನಿಂದ ನಿಮಗಿಂತಲೂ ಹೆಚ್ಚು 'ಅಸ್ಪೃಶ್ಯ'. ಯಾವುದೇ ಯೋಜನೆ ಒಳ್ಳೆಯದಾಗಿದ್ದರೇ ಒಂದು ಗುಂಪಿಗೆ ಮಾತ್ರವೇ ಅದು ಸೀಮಿತವಾಗಬಾರದು ಬದಲಾಗಿ ಇಡೀ ವರ್ಗಕ್ಕೆ ಅದು ಅನ್ವಯವಾಗಬೇಕು. ಈ ಮಾನದಂಡದಿಂದಲೇ ನಾನು ಆ ಯೋಜನೆಯ ಒಳಿತು ಕೆಡಕನ್ನು ನಿರ್ಧರಿಸುತ್ತೇನೆ. ನಾನು ಮೊತ್ತಮೊದಲು ನಿಮಗೆ ನೀಡುವ ಸಲಹೆ ಎಂದರೆ ಈ ಯೋಜನೆಯು ಒಂದು ವರ್ಗಕ್ಕೆ ಒಳ್ಳೆಯದಾಗಿದ್ದರೆ ನೀವು ಅದನ್ನು ಶೋಷಿತರ ಎಲ್ಲಾ ವರ್ಗಗಳವರಿಗೂ ಅನ್ವಯವಾಗುವಂತೆ ಮಾಡಬೇಕು. ವಾದಕ್ಕಾಗಿಯಾಗಲೀ ಅಥವಾ ಆಚರಣೆಯಲ್ಲಾಗಲೀ ನಿಮ್ಮ ವರ್ಗದವರನ್ನು ನಮ್ಮಿಂದ ಬೇರ್ಪಡಿಸುವುದನ್ನು ನಾನು ಯಾವುದೇ ಕಾರಣಕ್ಕೂ ಸಹಿಸಲಾರೆ. ನಾವೆಲ್ಲರೂ ಒಗ್ಗಟ್ಟಾಗಿ ಇರಬೇಕು ಹಾಗೂ ಬೇರ್ಪಡಿಸಲಸಾಧ್ಯವಾಗಿರಬೇಕು. ನಾನು ನಿಮ್ಮ ಇತರ ಮಿತ್ರರಿಗೆ ಹೇಳಿರುವಂತೆ, ಕೆಲ ಸ್ಥಾನಗಳಿಗೆ ಸೀಮಿತವಾದ ನಿಮ್ಮ ಯೋಜನೆಯನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿರುವೆ. ಆದರೆ ಎಲ್ಲಾ ಸ್ಥಾನಗಳಿಗೂ ಈ ಯೋಜನೆ ಅನ್ವಯ ಆಗುವಂತೆ ನೀವು ಮಾಡಬೇಕೆಂದು ಕೋರುತ್ತೇನೆ. ಆದರೆ ಈ ಯೋಜನೆಯ ಬಗ್ಗೆ ಒಳ್ಳೆಯ ಅಭಿಪ್ರಾಯವಂತೂ ನನಗಿಲ್ಲ ಎಂಬುದನ್ನು

ನಾನು ಒಪ್ಪಿಕೊಳ್ಳಬೇಕು. ಇದು ನಿಮ್ಮ ವರ್ಗವನ್ನು ಒಡೆಯಲಿದೆ. ಈಗ ಹೇಗೆ ನಾನು ಹಿಂದೂ ಸಮುದಾಯ ಒಡೆಯಲು ಪ್ರಯತ್ನಿಸುತ್ತಿರುವವರ ವಿರುದ್ಧ ಜೀವ ನೀಡಲು ಸಿದ್ಧನಿದ್ದೇನೋ ಹಾಗೆಯೇ ಇದನ್ನು ತಡೆಯಲು ಕೂಡ ನಾನು ನನ್ನ ಜೀವ ನೀಡಲು ಸಿದ್ದನಿರುವೆ. (Epic Fast Pp 209-210)[1]

ಡಾ. ಅಂಬೇಡ್ಕರ್ ಅವರು ಗಾಂಧೀಯವರ ಸಲಹೆಗೆ ಒಪ್ಪಿಗೆ ನೀಡಿದರು. ಸಂದರ್ಶನ ಇಲ್ಲಿಗೆ ಕೊನೆಗೊಂಡಿತು. ನಂತರ ಸಮಿತಿಯ ಸದಸ್ಯರು ಯಾರು, ಎಷ್ಟು ಸ್ಥಾನಗಳು ಸ್ಥಳೀಯ ಸಭೆಗಳಿಗೆ ನೀಡಬೇಕು, ಈ ಯೋಜನೆಯ ಕಾಲಾವಕಾಶ ಎಷ್ಟು, ಎಷ್ಟು ಕಾಲಾವಕಾಶ ಈ ಮೀಸಲು ಸ್ಥಾನಗಳಿಗೆ ಸಿಗಲಿದೆ. ಹಾಗೂ ಸ್ಥಾನಗಳ ಹಂಚಿಕೆ ಮುಂತಾದವುಗಳತ್ತ ಮುಖಂಡರು ಗಮನಹರಿಸಿದರು.* (The Epic First, Pp 209-10)

ಡಾ. ಅಂಬೇಡ್ಕರ್ ಹಾಗೂ ಡಾ. ಸೋಲಂಕಿ ಅವರು ಗಾಂಧಿ ಅವರನ್ನು ಭೇಟಿ ಆಗುವಾಗ ಪುನಾದಲ್ಲಿ ಇದ್ದಂತಹ ನಾಯಕರಲ್ಲಿ ಬಹುತೇಕರು ಅವರ ಜೊತೆಯಿದ್ದರು.

೨೩ನೆಯ ಸೆಪ್ಟೆಂಬರ್ ಶುಕ್ರವಾರ ಬೆಳಗಾಯಿತು. ಈ ಯೋಜನಾ ಸಮಿತಿಯಲ್ಲಿ ಎಷ್ಟು ಸದಸ್ಯರು ಇರಬೇಕು ಎಂಬ ಚರ್ಚೆ ಹಲವಾರು ಘಂಟೆಗಳ ಕಾಲ ನಡೆಯಿತು. ಅನಂತರ ಸ್ಥಾನಗಳ ಪ್ರಶ್ನೆ ಎದುರಾಯಿತು. ಡಾ. ಅಂಬೇಡ್ಕರ್ ಅವರು ಪ್ರಾಂತೀಯ ಸಭೆಯಲ್ಲಿ ೧೯೭ ಸ್ಥಾನಗಳಿಗೆ ಬೇಡಿಕೆಯಿತ್ತರು. ಆದರೆ ಸದಸ್ಯರು ಈ ಸಂಖ್ಯೆಯನ್ನು ೧೨೬ಕ್ಕೆ ಇಳಿಸಿದರು. ಹಗ್ಗಜಗ್ಗಾಟ ಮುಂದುವರೆಯಲು ಹೀಗೆ ಹಲವಾರು ಘಂಟೆಗಳು ಕಳೆದು ಹೋದವು. ೧೦ ಘಂಟೆಗಳ ನಂತರ ಈ ಕೆಲ ಅಂಶಗಳನ್ನು ಗಾಂಧೀಯವರ ಎದುರು ಇರಿಸಲಾಯಿತು. ಗಾಂಧೀಯವರು ಅಂಬೇಡ್ಕರ್ ಅವರ ಸಲಹೆಗಳಿಗೆ ಸಮ್ಮತಿಸಿದರು. ಆದರೆ ಕೆಲ ಅಂಶಗಳಿಗೆ ಸಂಬಂಧಿಸಿದಂತೆ ಮಾತುಕತೆಗಳು ಮುರಿದು ಬೀಳುವಂತೆ ಕಾಣುತ್ತಿದ್ದವು. ಅದರಲ್ಲಿ ಮುಖ್ಯ ಅಂಶಗಳು ಎಂದರೆ ಪ್ರಾಥಮಿಕ ಚುನಾವಣೆ ಹಾಗೂ ಸ್ಥಾನಗಳ ಕಾಲಾವಧಿ ಪ್ರಮುಖ ಪ್ರಶ್ನೆ ಆಗಿತ್ತು. ಡಾ. ಅಂಬೇಡ್ಕರ್ ಅವರು ಈ ಮಾದರಿಯ ಚುನಾವಣೆ ೧೦ ವರ್ಷಗಳ ನಂತರ ರದ್ದಾಗಬೇಕು ಎಂದರು. ಆದರೆ ಸ್ಥಾನಗಳ ಕಾಯ್ದಿರಿಸುವಿಕೆಯ ಬಗ್ಗೆ ೧೫ ವರ್ಷಗಳ ನಂತರ ಜನಾಭಿಪ್ರಾಯವನ್ನು ಸಂಗ್ರಹಿಸಿ ನಿರ್ಧಾರ ಕೈಗೊಳ್ಳಬೇಕು ಎಂದರು. ಆದರೆ ಶೋಷಿತ ವರ್ಗದವರ ನಿರ್ಧಾರಕ್ಕೆ ಈ ವಿಷಯವನ್ನು ಬಿಟ್ಟರೇ, ಅದು ನಿರಂತರವಾಗಿ ಮುಂದುವರಿಯಬೇಕೆಂಬ ಪರಿಸ್ಥಿತಿ ಎದುರಾಗಬಹುದು. ಈ ಯೋಜನೆಯನ್ನು ೨೫ ವರ್ಷಗಳ ವರೆಗೆ ಜಾರಿಯಲ್ಲಿ ಇರಿಸಬೇಕು ಎಂಬ ಬೇಡಿಕೆಗೆ ಹಿಂದೂ ವರ್ಗದ ನಾಯಕರಿಂದ ದೊಡ್ಡ ಮಟ್ಟದಲ್ಲಿ ಆಕ್ರೋಶ ವ್ಯಕ್ತವಾಯಿತು. ಆದರೆ ಡಾ. ಅಂಬೇಡ್ಕರ್ ಅವರು ಅವರೆಲ್ಲರಿಗೂ ಒಂದು ಅಂಶವನ್ನು ಸ್ಪಷ್ಟವಾಗಿ ತಿಳಿಸಿದರು. ಅದೇನೆಂದರೆ ತಾವು ಯಾವುದೇ ಕಾರಣಕ್ಕೂ ಇನ್ನೂ ೨೫ ವರ್ಷಗಳಲ್ಲಿ ಅಸ್ಪೃಶ್ಯತೆ ಸಂಪೂರ್ಣವಾಗಿ ತೊಡೆದು ಹೋಗಿರುತ್ತದೆ ಎಂದು ನಂಬಲು ಸಾಧ್ಯವಿಲ್ಲ. ಆದ್ದರಿಂದ ತೂಗುಕತ್ತಿಯನ್ನು ಹಿಂದೂಗಳ ತಲೆಯ ಮೇಲೆ ತೂಗಿ ಬಿಟ್ಟರೆ ಹಿಂದೂಗಳು ತಮ್ಮ ಪ್ರವೃತ್ತಿ ಬದಲಿಸಿಕೊಳ್ಳಬಹುದು ಎಂದರು.[೨]

ಡಾ. ಅಂಬೇಡ್ಕರ್ ಅವರಿಗೆ ಗಾಂಧೀಯವರು ತಮ್ಮ ೧೦ ವರ್ಷಗಳ ಯೋಜನೆಯ ಪ್ರಸ್ತಾವನೆಗೆ ಹಸಿರು ನಿಶಾನೆ ತೋರಲಿ ಎಂಬ ಆಸೆಯಿತ್ತು. ಗಾಂಧೀಯವರು ಇದೀಗ ಸ್ವಲ್ಪ ಸುಧಾರಿಸಿಕೊಂಡಿದ್ದರು.

1. Reprinted Khairmode Vol 5 Pp 45-46
* Keer P 210
2. Keer Pp 212-213

ಅವರು ಮೆಲುವಾಗಿ ಆದರೆ ವಿವೇಚನಾಯುಕ್ತರಾಗಿ ಮಾತನಾಡಲು ಆರಂಭಿಸಿದರು. "ನಿಮ್ಮ ತರ್ಕವನ್ನು ಅಲ್ಲಗಳೆಯಲಾಗುವುದಿಲ್ಲ. ಈ ರೀತಿಯ ಯೋಜನೆಗಳು ಐದು ವರ್ಷಗಳಿಗೊಮ್ಮೆ ಪುನಃ ಪರಿಶೀಲನೆಗೆ ಒಳಗಾಗಲೀ, ೫ ವರ್ಷಗಳಲ್ಲಿ ಖಂಡಿತವಾಗಿಯೂ ಹಿಂದೂಗಳ ಸಾಚಾತನವನ್ನು ನಾವು ಅರಿಯಬಹುದು. ಆದರೆ ಇದಕ್ಕಿಂತ ಹೆಚ್ಚಿನ ವರ್ಷಗಳು ನೀವು ಈ ಯೋಜನೆ ಮುಂದುವರಿಸಲು ನಿರ್ಧರಿಸಿದರೇ ನಿಮ್ಮ ಆಸಕ್ತಿ ಸವರ್ಣೀಯರ ಸಾಚಾತನವನ್ನು ಅರಿಯುವುದರ ಬದಲಿಗೆ ಈ ಜನಾಭಿಪ್ರಾಯದ ದಿಕ್ಕನ್ನು ಬದಲಾಯಿಸುವ ಉದ್ದೇಶ ನಿಮ್ಮಲ್ಲಿದೆ ಎಂದು ಭಾವಿಸಬೇಕಾಗುತ್ತದೆ." ಆತ ನಾವು ಪರಸ್ಪರರನ್ನು ನಂಬಬೇಕು, ವಿಶ್ವಾಸವಿಡಬೇಕು ಹಾಗೂ ಒಳ್ಳೆಯ ಅಭಿಪ್ರಾಯವನ್ನು ಹೊಂದಿರಬೇಕು ಎಂದರು. ಆತ ಹೇಗೆ ತಾವು ತಮ್ಮ ೧೨ ವರ್ಷ ವಯಸ್ಸಿನಿಂದಲೇ ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಾ ಬಂದಿದ್ದೇನೆ ಎಂದು ವರ್ಣಿಸಿದರು. ಆಗಿನಿಂದಲೂ ನಿರಂತರವಾಗಿ ಈ ಕೆಡುಕಿನ ವಿರುದ್ಧ ಹೋರಾಡುತ್ತಾ ಬಂದಿರುವುದಾಗಿ ತಿಳಿಸಿದರು. "ನಿಮ್ಮ ರಕ್ಷಣೆಗಾಗಿ ಸಂವಿಧಾನದಲ್ಲಿ ಸೂಕ್ತ ಅವಕಾಶಗಳನ್ನು ಅಳವಡಿಸಬೇಕೆಂದು ಒತ್ತಾಯಿಸುವ ಹಕ್ಕು ಖಂಡಿತವಾಗಿಯೂ ನಿಮಗಿದೆ". ಎಂದು ಅವರು ಡಾ. ಅಂಬೇಡ್ಕರ್ ಅವರಿಗೆ ತಿಳಿಸಿದರು. "ಆದರೆ ನಾನು ಈಗಿರುವ ಪರಿಸ್ಥಿತಿಯಲ್ಲಿ ಹೇಳುವುದೆಂದರೆ ನೀವು ದಯವಿಟ್ಟು ಈ ಹಕ್ಕಿಗಾಗಿ ಒತ್ತಾಯ ಮಾಡಬೇಡಿ. ಇಂದೂ ಸವರ್ಣೀಯ ಹಿಂದೂಗಳ ಪರವಾಗಿ ನಾನು ನಿಮ್ಮಲ್ಲಿ ಕಾಲವಕಾಶಕ್ಕಾಗಿ ಕೋರುತ್ತಿದ್ದೇನೆ. ದೇವರ ದಯಯಿಂದ ಅವರ ಮನಃಸಾಕ್ಷಿಯು ಜಾಗೃತವಾಗಿದೆ. ಈ ಸಮಯದಲ್ಲಿ ನೀವು ಪೂರ್ಣ ಹಕ್ಕಿಗಾಗಿ ಒತ್ತಾಯ ಮಾಡಿದರೆ, ಈಗ ನಡೆಯುತ್ತಿರುವ ಅವರ ಪ್ರಾಯಶ್ಚಿತ್ತ ಪ್ರಕ್ರಿಯೆಯಿಂದ ನೀವೇ ಅವರನ್ನು ತಪ್ಪಿಸಿದಂತೆ ಆಗುತ್ತದೆ. ಅವರ ಮನಃಸಾಕ್ಷಿಯು ಇದೀಗ ಜಾಗೃತವಾಗಿ ಅವರು ತಮ್ಮ ನಡತೆ ಬದಲಿಸಿಕೊಳ್ಳಲು ಇಚ್ಛಿಸುತ್ತಿದ್ದಾರೆ. ಅದಕ್ಕೆ ತಡೆಯುಂಟಾದರೆ ತಾತ್ಕಾಲಿಕವಾಗಿ ನಾವು ಶೋಷಿತರಿಗೆ ನ್ಯಾಯವನ್ನು ಒದಗಿಸಬಹುದಾದರೂ ಹಿಂದೂ ಧರ್ಮದ ಮೇಲೆ ಬಂದಿರುವ ಕಳಂಕವನ್ನು ನಾವು ಹೋಗಲಾಡಿಸಲು ಸಾಧ್ಯವಾಗದು. ಅಸ್ಪೃಶ್ಯತೆ ಆಳವಾಗಿ ಬೇರೂರಿರುವ ಒಂದು ಸಾಮಾಜಿಕ ಕಳಂಕ. ಇದನ್ನು ಹಿಂದುತ್ವದಿಂದ ಸಂಪೂರ್ಣವಾಗಿ ಹೊರಹಾಕದಿದ್ದರೆ ಇದು ವಿವಿಧ ರೀತಿಯಲ್ಲಿ ಪುನಃ ಪುನಃ ತನ್ನ ತಲೆಯನ್ನು ಎತ್ತುತ್ತಲೇ ಇರುತ್ತದೆ. ಇದರಿಂದ ನಮ್ಮ ಇಡೀ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆ ಅಲುಗಾಡಿ ಹೋಗುತ್ತದೆ. ಆದ್ದರಿಂದ ತಮ್ಮ ಪಾಪವನ್ನು ತೊಳೆದುಕೊಳ್ಳುವ ಕಡೆಯ ಅವಕಾಶವನ್ನು ಹಿಂದೂಗಳಿಂದ ಕಿತ್ತುಕೊಳ್ಳಬೇಡಿ ಎಂದು ನಾವು ನಿಮ್ಮಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಸವರ್ಣೀಯರ ನಡುವೆ ಕೆಲಸ ಮಾಡುವ ಅವಕಾಶ ನನಗೆ ನೀಡಿ. ಇದು ನ್ಯಾಯಯುತವಾದ ತೀರ್ಮಾನ. ಆದರೆ ನೀವು ೧೫ ವರ್ಷ ಕಾಲಾವಕಾಶ ಕೇಳಿದರೆ ನಾವೆಣಿಸಿದ ಬದಲಾವಣೆಯು ಸಂಭವಿಸುವುದೇ ಇಲ್ಲ. ಅಷ್ಟರಲ್ಲಿ ಅದು ಸಾಧ್ಯವಾಗದಿದ್ದರೆ ಮುಂದೆ ಎಷ್ಟೇ ಕಾಲಾವಕಾಶನೀಡಿದರೂ ಅದು ಸಾಧ್ಯವಾಗದು. ಹಿಂದೂಗಳ ಪ್ರಾಮಾಣಿಕತೆಯನ್ನು ನೀವು ಮುಂಬರುವ ಐದು ವರ್ಷಗಳಲ್ಲಿ ಕಾಣಲಿದ್ದೀರಿ. ಆದ್ದರಿಂದ ನನ್ನ ಮನಃಸಾಕ್ಷಿಯ ಪ್ರಕಾರ ಐದು ವರ್ಷಗಳ ಕಾಲಮಿತಿ ಅತ್ಯಂತ ಸೂಕ್ತ. ಈ ವಿಷಯದಲ್ಲಿ ನಾನು ಅತ್ಯಂತ ಕಟ್ಟುನಿಟ್ಟಾಗಿರುವೆ ಎಂದು ನಿಮ್ಮ ಸ್ನೇಹಿತರಿಗೆ ತಿಳಿಸಿಬಿಡಿ. ನಾನೊಬ್ಬ ಹಠಮಾರಿ. ನಾನು ತಿರಸ್ಕರಣೀಯ ಮನುಷ್ಯನಿರಬಹುದು, ಆದರೆ ಸತ್ಯದ ವಿಷಕ್ಕೆ ಬಂದರೆ ನನ್ನನ್ನು ಯಾರೂ ಎದುರಿಸಲಾರರು. (Epic Fast, Pp 211-212) [1]

ಈ ಸಂದರ್ಶನವು ಕೊನೆಗೊಂಡಿತು. ಮುಖಂಡರು ಇನ್ನುಳಿದ ವಿಷಯಗಳ ಬಗ್ಗೆ ಚರ್ಚೆ

1. Reprinted Kairmode Vol 5 Pp 47-48

ಮುಂದುವರೆಸಿದರು. ಸಮಿತಿಯಲ್ಲಿ ಎಷ್ಟು ಜನ ಸದಸ್ಯರು ಇರಬೇಕು. ಪ್ರಾಂತೀಯ ಸಭೆಯಲ್ಲಿ ಮೀಸಲಿರಿಸಬೇಕಾದ ಸ್ಥಾನಗಳೆಷ್ಟು, ಸ್ಥಾನಗಳಿಗೆ ಎಷ್ಟು ಕಾಲಾವಕಾಶ ನೀಡಬೇಕು, ಯಾವ ರೀತಿಯಲ್ಲಿ ಸ್ಥಾನಗಳ ಹಂಚಿಕೆ ಆಗಬೇಕು ಮುಂತಾದವುಗಳ ಬಗ್ಗೆ ಚರ್ಚೆ ಆರಂಭ ಆಯಿತು. ಈ ಚರ್ಚೆಯ ರಾಜಬಹದ್ದೂರ್ ಶಿವಲಾಲ್ ಮೋತಿಲಾಲ್ ಅವರ ನಿವಾಸದಲ್ಲಿ ಜರುಗಿತು.

ಸಂಜೆ ಸುಮಾರು ೪ ಘಂಟೆಯ ಸುಮಾರಿಗೆ ಗಾಂಧೀಯವರ ಆರೋಗ್ಯ ಹದಗೆಡುತ್ತಿದೆ ಮತ್ತು ಅವರು ಬಹಳ ನಿತ್ರಾಣರಾಗಿದ್ದಾರೆ ಎಂಬ ವಾರ್ತೆ ಬರತೊಡಗಿತು. ಗಾಂಧಿಯವರ ಪುತ್ರ ದೇವದಾಸ ಗಾಂಧಿಯು ಕಣ್ಣೀರುಗೆರೆಯುತ್ತಾ ಡಾ. ಅಂಬೇಡ್ಕರ್ ಬಳಿಗೆ ಬಂದು. ಈ ಪರಿಸ್ಥಿತಿಯನ್ನು ಅವರಿಗೆ ತಿಳಿಸಿ ಜನಾಭಿಪ್ರಾಯದ ವಿಷಯದಲ್ಲಿ ಹಠಮಾಡದಂತೆ ಬೇಡಿಕೊಂಡನು. ಕಡೆಗೆ ಈ ವಿಷಯವನ್ನು ಗಾಂಧೀಯವರ ಬಳಿಗೇ ಕೊಂಡೊಯ್ಯುವುದು ಎಂದು ನಿರ್ಧರಿಸಲಾಯಿತು. ಕೆಲ ಆಯ್ದ ನಾಯಕರೊಂದಿಗೆ ರಾತ್ರಿ ೯ ಗಂಟೆಗೆ ಅಂಬೇಡ್ಕರ್ ಅವರು ಗಾಂಧೀಯನ್ನು ಜೈಲಿನಲ್ಲಿ ಭೇಟಿ ಆದರು. ಗಾಂಧೀಯವರು ಅಂಬೇಡ್ಕರ್ ಸೂಚಿಸಿದ ಸಲಹೆಯನ್ನು ಒಪ್ಪಿದರು. ಆದರೆ ಈ ಜನಮತಗಣೆಯು ಐದು ವರ್ಷಗಳ ನಂತರ ನಡೆಯಬೇಕು. ಎಂದರು. ಗಾಂಧೀಯವರ ದನಿ ಇದೀಗ ಪಿಸುಗುಡುವಷ್ಟು ಮೆಲುವಾಗಿ ಹೋಗಿತ್ತು. ಜೈಲಿನ ವೈದ್ಯರು ಮಧ್ಯಪ್ರವೇಶಿಸಿ ಮಾತನಾಡದಂತೆ ಸೂಚಿಸಿದರು. ಇದೀಗ ಅಲ್ಲಿ ನಿಶ್ಯಬ್ದ ವಾತಾವರಣ ಆವರಿಸಿತ್ತು. ಬಂದಿದ್ದ ಸಂದರ್ಶಕರು ಹಿಂದಿರುಗಬೇಕಾಯಿತು. ಆದರೆ ಡಾ. ಅಂಬೇಡ್ಕರ್ ಅವರು ತಮ್ಮ ಹಠಬಿಡಲು ಸಿದ್ಧರಿರಲಿಲ್ಲ. ಆತನ ಇಚ್ಛಾಶಕ್ತಿಯ ಮೇಲೆ ಬಹಳಷ್ಟು ಹೊರೆ ಇತ್ತು. ಆತನ ಜೀವಕ್ಕೆ ಬೆದರಿಕೆ ಒಡ್ಡುವ ಪತ್ರಗಳು ಅಸಂಖ್ಯವೆನ್ನುವಷ್ಟು ಬಂದವು.[೧]

ಆ ರೀತಿ ಬಂದಂತಹ ಪತ್ರಗಳಲ್ಲಿ ಒಂದನ್ನು ಇಲ್ಲಿ ನೀಡಲಾಗಿದೆ.

"ಡಾ. ಅಂಬೇಡ್ಕರ್

ನೀವು ಮಹಾತ್ಮ ಅವರ ಬೇಡಿಕೆಗೆ ನಾಲ್ಕು ದಿನಗಳ ಒಳಗೆ ಒಪ್ಪಿಗೆ ಸೂಚಿಸದೇ ಹೋದಲ್ಲಿ, ನಿಮ್ಮ ಜೀವಕ್ಕೆ ಅಪಾಯ ಇರುತ್ತದೆ. ನಿಮಗೆ ನಿಮ್ಮ ಜೀವದ ಮೇಲೆ ಆಸೆ ಇದ್ದರೆ ಈ ಕೂಡಲೇ ಅವರ ಬೇಡಿಕೆಗೆ ಒಪ್ಪಿಗೆ ನೀಡಿ ಅವರ ಉಪವಾಸ ಅಂತ್ಯಗೊಳಿಸಿ. ಇದು ನಿಮಗೆ ನಾವು ನೀಡುತ್ತಿರುವ ಒಂದು ಎಚ್ಚರಿಕೆ. ಹಗೆತನದ ನಿಮ್ಮ ನಡತೆಯನ್ನು ನೀವು ಬಿಡದಿದ್ದಲ್ಲಿ ನಿಮ್ಮನ್ನು ಕೊಲ್ಲಲಾಗುವುದು.

ಸಹಿ

ಹರಿಭಾಯಿ ಕೆ.ಭಟ್

ಸದಸ್ಯರು ಹಾಗೂ ಕಾರ್ಯಕರ್ತರು.

BPEE[2]

ಈತ ರಸ್ತೆಯಲ್ಲಿ ನಡೆದು ಹೋಗುತ್ತಿದ್ದರೆ ಅವರನ್ನು ಕೊಲ್ಲುವಂತೆ ನೋಡಲಾಗುತ್ತಿತ್ತು ಹಾಗೂ ಕೆಲವು ಮುಖಂಡರು ಅವರ ಹಿಂದೆ ಅವರನ್ನು ಹುಚ್ಚುಹುಚ್ಚಾಗಿ ಬಯ್ಯಲಾರಂಭಿಸಿದ್ದರು.

ಇನ್ನು ಪೂನಾದ ಮೇಲ್ವರ್ಗದ ಒಬ್ಬ ಯುವಕ ಅಂಬೇಡ್ಕರ್ ಅವರನ್ನು ಕೊಲ್ಲುವ ರಹಸ್ಯ ಸಂಚು ರೂಪಿಸಿದ್ದನೆಂದು ಜನತಾ ಪತ್ರಿಕೆಯು ವರದಿ ಮಾಡಿತ್ತು. (೨೪-೯-೩೨, ಪು. ೮)

ವರದಿಯು ಹೀಗಿತ್ತು :

1. Keer P 213
2. Jamata dated 1st Oct 1932

"ಡಾ. ಅಂಬೇಡ್ಕರ್ ಅವರ ಜೀವಕ್ಕೆ ಅಪಾಯ!"

"ಡಾ. ಅಂಬೇಡ್ಕರ್ ಅವರ ಕೊಲೆಗೆ ಸಂಚು ರೂಪಿಸಲು ಪೂನಾದಲ್ಲಿ ವಿದ್ಯಾರ್ಥಿಗಳ ರಹಸ್ಯ ಭೇಟಿ"

ಪೂನಾ ದಿನಾಂಕ ೨೩–೯–೩೨ ೮ ಘಂಟೆ ರಾತ್ರಿ (ಜನತಾಪತ್ರಿಕೆಯ ವಿಶೇಷ ವರದಿಗಾರರಿಂದ)

ಎರಡು ದಿನಗಳು ಕಳೆದಿವೆ. ಮಾತುಕತೆಗಳು ಜರುಗುತ್ತಲೇ ಇದೆ. ಡಾ. ಅಂಬೇಡ್ಕರ್ ಅವರ ಮೇಲೆ ಒತ್ತಡ ಹೇರುವಂತಹ ಪ್ರಯತ್ನಗಳು ನಡೆಯುತ್ತಲೇ ಇದೆ. ರಾಜ್ಯಪಾಲರ ಮೇಲೆ ಗುಂಡು ಹಾರಿಸಿದ್ದಂತಹ ವಿದ್ಯಾರ್ಥಿಗಳ ಗುಂಪು ಡಾ.ಅಂಬೇಡ್ಕರ್ ಅವರನ್ನು ಕೊಲೆಗೈಯುವ ರಹಸ್ಯ ಮಾತುಕತೆಗಳಲ್ಲಿ ತೊಡಗಿದೆ. ಅಂಬೇಡ್ಕರ್ ಅವರನ್ನು ಈ ಕಾರ್ಯರಂಗದಿಂದ ಹೊರಗಿಟ್ಟರೆ ಎಲ್ಲಾ ಸಮಸ್ಯೆಗಳೂ ಇತ್ಯರ್ಥವಾಗುತ್ತದೆ ಹಾಗೂ ಗಾಂಧೀಜಿ ಅವರ ಜೀವವೂ ಉಳಿಯುತ್ತದೆ ಎಂಬುದೇ ಇವರ ಚಿಂತನೆ ಆಗಿದೆ. ಡಾ. ಅಂಬೇಡ್ಕರ್ ಅವರಿಗೆ ಈ ವಿಷಯ ತಿಳಿಸಿದಾಗ ಅವರು ನಕ್ಕುಬಿಟ್ಟರು. ಅವರ ಈ ನಿರ್ಭೀತ ನಗೆಯು ಅವರಿಗೆ ಈ ರೀತಿಯ ಸಾವಿನ ಬಗ್ಗೆ ಭಯವಿರಲಿಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಆದರೆ ಸ್ಥಳೀಯ ಅಸ್ಪೃಶ್ಯರ ವರ್ಗವು ಅಂಬೇಡ್ಕರ್ ಅವರ ರಕ್ಷಣೆಯ ಬಗ್ಗೆ ಎಚ್ಚರಿಕೆಯನ್ನು ವಹಿಸಿದೆ ಹಾಗೂ ಅತ್ಯಂತ ಸೂಕ್ಷ್ಮವಾಗಿ ಗಮನಿಸುತ್ತಿದೆ. ಒಂದು ವೇಳೆ ಡಾ. ಅಂಬೇಡ್ಕರ್ ಅವರಿಗೆ ಸಣ್ಣ ಮಟ್ಟದ ತೊಂದರೆ ಆದರೂ ಕೂಡ, ಅಲ್ಲಿ ಪರಿಸ್ಥಿತಿ ಗಂಭೀರವಾಗುತ್ತದೆ. ಸಾವಿವಾರು ಅಸ್ಪೃಶ್ಯ ಯುವಕರು ಅವರಿಗಾಗಿ ಯಾವುದೇ ತ್ಯಾಗಮಾಡಲೂ ಸಿದ್ಧರಿರುತ್ತಾರೆ. ಎಲ್ಲರ ಮನದಲ್ಲಿ ಇರುವುದು ಒಂದೇ ಇಚ್ಛೇ, ಏನೆಂದರೆ ಗಾಂಧೀಯವರ ಈ ಆಸೆಗೆ ಕ್ರೂರವಾದ ಅಂತ್ಯ ಇರಬಾರದು. ಎಂಬುದು.[೧]

ರಾತ್ರಿ ೯.೩೦ಕ್ಕೆ ಗಾಂಧೀಯವರನ್ನು ಭೇಟಿ ಮಾಡಲು ತೆರಳಿದ ನಾಯಕರೆಲ್ಲಾ ಬಹಳ ಬೇಗನೇ ಹಿಂದಿರುಗಿ ಬಂದರು. ಅವರೆಲ್ಲರೂ ಉಲ್ಲಸಿತರಾಗಿದ್ದರು ಆದರೆ ನಿತ್ರಾಣಗೊಂಡಿದ್ದರು. ಡಾ. ಅಂಬೇಡ್ಕರ್ ಅವರು ಈ ರೀತಿ ಹೇಳಿದ್ದು ಕೇಳಿ ಬಂದಿತು. "ಗಾಂಧೀಯವರು ನನ್ನ ಪರವಾಗಿಯೇ ಇದ್ದಾರೆ".

ನಾಯಕರೆಲ್ಲಾ ಪುನಃ ಶನಿವಾರ ಬೆಳಿಗ್ಗೆ ೮ ಘಂಟೆಗೆ ಭೇಟಿ ಆಗಲಿದ್ದಾರೆ. ಆನಂತರ ಕೆಲ ಹೊತ್ತಿನಲ್ಲಿಯೇ ಗಾಂಧೀಜಿ ಅವರ ಭೇಟಿಗೆ ತೆರಳಲಿದ್ದಾರೆ. ಈ ಸಮಸ್ಯೆಗೆ ಸಂಪೂರ್ಣ ಪರಿಹಾರ ಸಿಗಲಿದೆ ಎನ್ನುವ ಅಭಿಪ್ರಾಯವೂ ಕೇಳಿಬರುತ್ತಿದೆ. ಯಾವುದೋ ದುರದೃಷ್ಟಕರ ಶಕ್ತಿಯಿಂದ ನಡೆಯಬಾರದ ಘಟನೆ ಘಟಿಸದೇ ಹೋದರೆ ಶನಿವಾರ ಮಧ್ಯಾಹ್ನದ ಹೊತ್ತಿಗೆ ಪೂನಾದಿಂದ ಸಿಹಿಸುದ್ದಿ ಹೊರ ಬೀಳಲಿದೆ.

ಮುಖ್ಯ ವಿಷಯಗಳ ಬಗ್ಗೆ ನಾಯಕರಲ್ಲಿದ್ದ ಅಭಿಪ್ರಾಯಭೇದವು ನಿವಾರಣೆಯಾಗಿತ್ತು. ಈ ಜನಮತ ಗಣನೆಯ ವಿಷಯದಲ್ಲಿ ಕೂಡ ಅದೇ ರೀತಿ ಆಗಿತ್ತು. ಇದನ್ನು ೧೦ ವರ್ಷಗಳ ನಂತರ ಜಾರಿಗೆ ತರುವ ಸಾಧ್ಯತೆಗಳು ಕಾಣುತ್ತಿವೆ.

ಒಪ್ಪಿಗೆ ದೊರೆತಿರುವ ಅಂಶಗಳು:

೧. ಪ್ರತಿಯೊಂದು ಸ್ಥಾನಕ್ಕೆ ಆಯ್ಕೆ ಮಾಡಲು ೪ ಸದಸ್ಯರ ಸಮಿತಿ.

೨. ಪ್ರತಿಯೊಬ್ಬರಿಗೂ ಒಂದೇ ಒಂದು ಮತ.

೩. ಮೊದಲ ಒಪ್ಪಂದದಂತೆ ಪ್ರಾಂತೀಯ ಶಾಸನ ಸಭೆಯಲ್ಲಿ ಶೋಷಿತ ವರ್ಗದ ಜನರಿಗೆಂದು ನಿಗದಿಗೊಳಿಸಿದ್ದ ೭೧ ಸ್ಥಾನಗಳ ಬದಲು ೧೫೦ ರಿಂದ ೧೫೫ ಸ್ಥಾನಗಳ ನೀಡಿಕೆ.

---

1. Janata date 24th Sept 1932

ಈ ಸಮಾವೇಶವು ಪಂಡಿತ್ ಮಾಳವಿಯಾ ಅವರ ನಿವಾಸದಲ್ಲಿ ಬೆಳಗಿನ ಜಾವ ಆರಂಭವಾಗಿತ್ತು. ೧೩ ಘಂಟೆಗಳ ನಿರಂತರ ಚರ್ಚೆಯ ನಂತರ ರಾತ್ರಿ ೯.೩೦ಕ್ಕೆ ಕೊನೆಗೊಂಡಿತು. ಇದಾದ ನಂತರ ಪಂಡಿತ್ ಮಾಳವಿಯಾ, ಶ್ರೀ ಸಿ. ರಾಜಗೋಪಾಲಚಾರಿ, ಮಿ.ಜಯಕರ್, ಡಾ. ಸಪ್ರು, ಡಾ. ಅಂಬೇಡ್ಕರ್ ಮುಂತಾದವರು ತರಾತುರಿಯಿಂದ ಯೆರವಾಡ ಜೈಲಿನತ್ತ ತೆರಳಿದರು.

ಈ ಚರ್ಚೆಯ ಕುರಿತು ಜನರಲ್ಲಿ ಕೂಡ ಬಹಳ ಕುತೂಹಲ ಮನೆಮಾಡಿತ್ತು. ಆದ್ದರಿಂದ ಅವರ ಮನೆಯ ಮುಂದೆ ಸಾಕಷ್ಟು ಜನರು ನೆರೆದಿದ್ದರು. ನಾಯಕರು ಚರ್ಚೆಯ ನಂತರ ರಾತ್ರಿ ೯.೩೦ಕ್ಕೆ ಎದ್ದಾಗ ಕೂಡ, ಸಮಸ್ಯೆಯ ಪರಿಹಾರ ಕುರಿತು ಯಾವುದೇ ಆಶ್ವಾಸನೆ ಇರಲಿಲ್ಲ.

ಕಾಲದೊಂದಿಗೆ ಸ್ಪರ್ಧೆಗೆ ಇಳಿದಂತೆ ನಾಯಕರು ವರ್ತಿಸುತ್ತಿದ್ದರು. ಊಟದ ನಂತರ, ರಾತ್ರಿಯ ಭೋಜನದ ನಂತರ ಚರ್ಚೆ ಅವ್ಯಾಹತವಾಗಿ ಮುಂದುರೆದಿತ್ತು.

ಬೆಳಿಗ್ಗೆ ಎಲ್ಲರೂ ಗಂಭೀರವಾಗಿ ಹಾಗೂ ತನ್ಮಯರಾಗಿ ಇದ್ದಂತೆ ಕಂಡು ಬಂದಿದ್ದರೆ, ಅದೇ ಸಂಜೆಯ ವೇಳೆಗೆ ಜೋರು ನಗೆಯು ಹೊರಹೊಮ್ಮುವುದು ಕೇಳಿಬರುತ್ತಿತ್ತು.

ಮರುದಿನ ಬೆಳಿಗ್ಗೆ ೯ಘಂಟೆಗೆ ಶೋಷಿತ ವರ್ಗದ ನಾಯಕರು ಹಾಗೂ ಸವರ್ಣೀಯ ಹಿಂದೂ ನಾಯಕರ ನಡುವಿನ ಚರ್ಚೆಯು ಮುಚ್ಚಿದ ಬಾಗಿಲುಗಳ ಹಿಂದೆ ಪಂಡಿತ್ ಮಾಳವಿಯಾ ಅವರ ನಿವಾಸದಲ್ಲಿ ಆರಂಭ ಆಯಿತು. ಈ ಚರ್ಚೆಯಲ್ಲಿ ಚುನಾವಣಾ ಸಮಿತಿಯ ಸದಸ್ಯರು, ಯುನೈಟೆಡ್ ಪ್ರಾಂತ್ಯಗಳನ್ನು ಹೊರತುಪಡಿಸಿ ಇತರ ಪ್ರಾಂತಗಳ ಚುನಾವಣೆ ಮುಂತಾದ ವಿಷಯಗಳ ಬಗ್ಗೆ ಒಮ್ಮತಕ್ಕೆ ಬಂದರು. ಆದರೂ ಅಂತಿಮ ನಿರ್ಣಯದ ವಿಷಯದಲ್ಲಿ ಯಾರೂ ಹೊರಗೆ ಮಾತನಾಡಲಿಲ್ಲ.

ಇನ್ನು ಸಮಿತಿಯ ವಿಷಯಕ್ಕೆ ಬಂದರೆ ಸದಸ್ಯರ ಸಂಖ್ಯೆಯನ್ನು ೫ಕ್ಕೇ ಮಿತಿಗೊಳಿಸಲಾಗಿದೆ ಎಂದು ತಿಳಿದುಬಂದಿದೆ. ಡಾ. ಅಂಬೇಡ್ಕರ್ ಅವರು ಇಬ್ಬರು ಸದಸ್ಯರು ಇರಬೇಕು ಎಂದಿದ್ದರೆ ಗಾಂಧೀಯವರು ಸದಸ್ಯರ ಸಂಖ್ಯೆ ಐದು ಇರಬೇಕು ಎಂದು ಹೇಳಿದ್ದರು.

ಅತ್ಯಂತ ಕಾತರತೆಯಿಂದ ಕಾಯುತ್ತಿದ್ದ ಮಾಧ್ಯಮದವರಿಗೆ ಸಪ್ರು ಅವರು ಇಳಿಸಂಜೆಯಲ್ಲಿ ಈ ಹೇಳಿಕೆಯನ್ನು ಕೊಟ್ಟರು : ಇದುವರೆಗೂ ನಡೆದ ಚರ್ಚೆಯು ಸಮಾಧಾನಕರವಾಗಿದೆ. ಇದನ್ನು ಇಡೀ ರಾತ್ರಿ ಮುಂದುವರೆಸುವ ಆಶಯವನ್ನು ಹೊಂದಿದ್ದೇವೆ. ಸಮಾವೇಶದ ನಂತರ ಡಾ. ಅಂಬೇಡ್ಕರ್ ಅವರು "ಪರಿಸ್ಥಿತಿ ಆಶಾದಾಯಕವಾಗಿದೆ. ಪ್ರಮುಖ ವಿಷಯಗಳಲ್ಲಿನ ಭಿನ್ನಾಭಿಪ್ರಾಯಗಳು ಕಡಿಮೆಯಾಗಿವೆ. ಎಲ್ಲಾ ವಿಷಯಗಳಲ್ಲಿ ಒಮ್ಮತ ಮೂಡುವ ಭರವಸೆ ಇದೆ. ಗಾಂಧೀಯವರು ಉಪವಾಸದ ಕಾರಣದಿಂದ ನಿತ್ರಾಣರಾಗಿದ್ದಾರೆ. ಆದರೂ ಅವರು ನಮ್ಮೊಂದಿಗೆ ೧೫ ನಿಮಿಷಕ್ಕೂ ಹೆಚ್ಚು ಕಾಲ ಚರ್ಚಿಸಿದರು.[1]

ಶನಿವಾರ ಬೆಳಿಗ್ಗೆ ಚರ್ಚೆಗಳು ಪುನರಾರಂಭಗೊಂಡವು. ಪ್ರಾಂತೀಯ ಸಭೆಗಳಲ್ಲಿ ೧೪೮ ಸ್ಥಾನಗಳನ್ನು ನೀಡುವುದರ ಮೂಲಕ ಆ ಸಮಸ್ಯೆಯನ್ನು ಪರಿಹಾರ ಮಾಡಲಾಗಿತ್ತು. ಅದಲ್ಲದೇ ಬ್ರಿಟಿಷರ ಭಾರತದಲ್ಲಿನ ಕೇಂದ್ರೀಯ ಶಾಸನಸಭೆಯಲ್ಲಿನ ಹಿಂದೂಗಳ ಒಟ್ಟು ಸ್ಥಾನಗಳಲ್ಲಿ ಶೇ ೧೦ ರಷ್ಟನ್ನು ಶೋಷಿತ ವರ್ಗದವರಿಗೆ ಕೊಡಬೇಕೆಂದು ನಿರ್ಧರಿಸಲಾಯಿತು. ಅನಂತರ ಜನಮತಗಣನೆಯ ಬಗ್ಗೆ ಹಲವಾರು ಘಂಟೆಗಳ ಕಾಲ ಚರ್ಚೆ ನಡೆಯಿತು. ಆದರೆ ಇದಕ್ಕೆ ಎಂದಿನಂತೆ ಈಗಲೂ ಯಾವ ಪರಿಹಾರವೂ ಸಿಗಲೇ ಇಲ್ಲ. ಯಾರೂ ಕೂಡಾ ಡಾ. ಅಂಬೇಡ್ಕರ್ ಅವರ ಬೇಡಿಕೆಗೆ ಸ್ಪಂದಿಸಲು ಸಿದ್ಧರಿರಲಿಲ್ಲ. ಆದ್ದರಿಂದ ಗಾಂಧಿ ಅವರನ್ನು

1. The Free Press Journal Date 24th Sept 1932

ಮತ್ತೊಮ್ಮೆ ಈ ವಿಷಯದಲ್ಲಿ ಭೇಟಿಮಾಡಬೇಕು ಎಂದು ಡಾ. ಅಂಬೇಡ್ಕರ್ ಯೋಚಿಸಿದರು. ಆದ್ದರಿಂದ ಅವರು ಡಾ. ಸೋಲಂಕಿ ಹಾಗೂ ರಾಜಗೋಪಾಲಚಾರಿ ಅವರೊಂದಿಗೆ ಪುನಃ ಗಾಂಧೀ ಅವರನ್ನು ಭೇಟಿ ಮಾಡಲು ತೆರಳಿದರು. ನಿಮ್ಮ ವಾದವನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಆದರೆ ಕೇವಲ ಕಾನೂನಿನ ಬಲದಿಂದ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ ಎಂದು ಗಾಂಧಿಯವರು ಅಂಬೇಡ್ಕರ್ ಅವರಿಗೆ ತಿಳಿಸಿದರು. ಆದ್ದರಿಂದ ತಮ್ಮ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಕಡೆಯ ಬಾರಿಗೆ ಹಿಂದೂಗಳಿಗೆ ಅವಕಾಶ ನೀಡುವಂತೆ ಕೇಳಿಕೊಂಡರು. ಜನಮತಗಣನೆಯು ಇರಬೇಕು. ಜನಮತಗಣನೆಯು ಐದು ವರ್ಷಗಳ ನಂತರ ನಡೆಯಬೇಕು. ಆದರೆ ಇದಕ್ಕಿಂತ ಹೆಚ್ಚು ಕಾಲಾವಕಾಶ ನೀಡುವುದರಲ್ಲಿ ಅರ್ಥವಿಲ್ಲ ಎಂದರು. "ಐದು ವರ್ಷಗಳು, ಇಲ್ಲವೇ ನನ್ನ ಜೀವ" ಎಂಬ ನಿರ್ಧಾರದ ಧ್ವನಿಯಲ್ಲಿ ಗಾಂಧೀ ನುಡಿದರು.

ಆದರೆ ಪುನಃ ಚರ್ಚೆಯ ಸ್ಥಳಕ್ಕೆ ಹಿಂದಿರುಗಿದ ಡಾ. ಅಂಬೇಡ್ಕರ್ ಅವರು ೧೦ ವರ್ಷಗಳ ಕಾಲ ನಂತರವೇ ಜನಮತಗಣನೆ ನಡೆಯಬೇಕು ಎಂಬ ತಮ್ಮ ನಿಲುವಿಗೆ ಅಂಟಿಕೊಂಡಿದ್ದರು. ಒಂದು ಘಂಟೆಯ ಚರ್ಚೆಯ ನಂತರ ಈ ಜನಮತಗಣನೆಯ ವಿಷಯವೊಂದನ್ನು ಹೊರತುಪಡಿಸಿ ಮಿಕ್ಕ ಅಂಶಗಳ ಬಗ್ಗೆ ಒಂದು ಒಪ್ಪಂದಕ್ಕೆ ಬರಲು ತೀರ್ಮಾನಿಸಲಾಯಿತು. ಜೈಲಿನ ಒಳಗೆ ಇದ್ದ ಗಾಂಧೀಜಿ ಅವರಿಗೆ ರಾಜಗೋಪಾಲಚಾರಿ ಅವರು ಇದರ ವಿವರಣೆಯನ್ನು ಮಧ್ಯಾಹ್ನ ೩ ಘಂಟೆಯ ಸುಮಾರಿಗೆ ನೀಡಿದರು. ಅತ್ಯಂತ ಸೂಕ್ತವಾಗಿದೆ ಎಂದು ಪ್ರಶಂಸಿಸಿದ ಗಾಂಧೀಯವರು ಇದಕ್ಕೆ ತಮ್ಮ ಒಪ್ಪಿಗೆ ಸೂಚಿಸಿದರು. ಅನಂತರ ರಾಜಗೋಪಾಲಚಾರಿ ಅವರು ತರಾತುರಿಯಿಂದ ೧, ರಾಮಕೃಷ್ಣ ಭಂಡಾರ್ಕರ್ ರಸ್ತೆಯನ್ನು ತಲುಪಿದರು. ಅದು ಶಿವಲಾಲ್ ಮೋತಿಲಾಲ್ ಅವರ ಬಂಗಲೆಯಾಗಿತ್ತು. ಸಂತಸ ಹಾಗೂ ಉತ್ಸಾಹದ ನಡುವೆ ಗಾಂಧೀಯವರು ಸಮ್ಮತಿ ಸೂಚಿಸಿದ ವಿಷಯ ತಿಳಿಸಿದರು. ಕೆಲವೇ ಹೊತ್ತಿನಲ್ಲಿ ಅವರು ಒಪ್ಪಂದ ಪತ್ರ ಸಿದ್ಧಪಡಿಸಿದರು. ಸೆಪ್ಟೆಂಬರ್ ೨೪ರಂದು ಉತ್ಸಾಹ, ಸಂತಸ ಹಾಗೂ ಹೊಸತನದ ವಾತಾವರಣದ ನಡುವೆ ಸಂಜೆ ೫ ಘಂಟೆಯ ಸುಮಾರಿಗೆ ಈ ಒಪ್ಪಂದ ಪತ್ರಕ್ಕೆ ಸಹಿ ಹಾಕಲಾಯಿತು. ಇತಿಹಾಸದಲ್ಲಿ ಇದು ಪೂನಾ ಒಪ್ಪಂದ ಎಂದು ದಾಖಲಾಯಿತು.

ಶೋಷಿತ ವರ್ಗದವರ ಪರವಾಗಿ ಅದಕ್ಕೆ ಅಂಬೇಡ್ಕರ್, ಸವರ್ಣೀಯ ಹಿಂದೂಗಳ ಪರವಾಗಿ ಪಂಡಿತ ಮದನ ಮೋಹನ ಮಾಳವಿಯಾ ಅವರು ಸಹಿ ಹಾಕಿದರು.[೨]

**ಪೂನಾ ಒಪ್ಪಂದದ ಒಕ್ಕಣೆ**

ಪೂನಾ ಒಪ್ಪಂದದ ಒಟ್ಟು ಸಾರಾಂಶ ಇಂತಿದೆ:

೧) ಪ್ರಾಂತೀಯ ಶಾಸನ ಸಭೆಯ ಸಾಮಾನ್ಯ ಮತಕ್ಷೇತ್ರಗಳಲ್ಲಿ, ಶೋಷಿತ ವರ್ಗದ ಜನರಿಗೆ ಮೀಸಲಾಗಿರಿಸುವ ಸ್ಥಾನಗಳ ಪ್ರಮಾಣ ಈ ಕೆಳಗಿನಂತಿದೆ.

ಮದರಾಸು ೩೦, ಸಿಂಧ್‌ನ್ನು ಒಳಗೊಂಡಂತೆ ಬೊಂಬಾಯಿ ೧೫, ಪಂಜಾಬ್ ೮, ಬಿಹಾರ ಹಾಗು ಒರಿಸ್ಸಾ ೧೮, ಕೇಂದ್ರ ಪ್ರಾಂತ್ಯ ೨೦, ಅಸ್ಸಾಂ ೭, ಬಂಗಾಳ ೩೦, ಒಕ್ಕೂಟ ಪ್ರಾಂತ್ಯ ೨೦, ಒಟ್ಟು ೧೪೮.

ಇದನ್ನು ಪ್ರಧಾನ ಮಂತ್ರಿಗಳು ಪ್ರಕಟಿಸಿದ ಪ್ರಾಂತೀಯ ಶಾಸನ ಸಭಾ ಸದಸ್ಯರ ಸಂಖ್ಯೆಯ ಆಧಾರದ ಮೇಲೆ ನಿರ್ಧರಿಸಲಾಗಿದೆ.

---

1. Keer Pp 213-214

೨) ಮತಕ್ಷೇತ್ರಗಳಲ್ಲಿ ಸಾಮಾನ್ಯ ಮತದಾರರ ಪಟ್ಟಿಯಲ್ಲಿ ನೊಂದಾಯಿತರಾದ ಶೋಷಿತ ವರ್ಗದ ಎಲ್ಲಾ ಸದಸ್ಯರೂ ಆ ಕ್ಷೇತ್ರದ ಮತದಾರರ ಸಮುದಾಯದಲ್ಲಿ ಸೇರಿರುತ್ತಾರೆ. 'ಒಬ್ಬ ವ್ಯಕ್ತಿ ಒಂದು ಮತ' ಎಂಬ ನಿಯಮದ ಪ್ರಕಾರ ಮೀಸಲು ಕ್ಷೇತ್ರದಲ್ಲಿನ ಈ ಮತದಾರರು ಶೋಷಿತ ವರ್ಗದ ನಾಲ್ಕು ಸದಸ್ಯರನ್ನು ಚುನಾಯಿಸುತ್ತಾರೆ. ಪ್ರಾಥಮಿಕ ಹಂತದಲ್ಲಿ ಅತಿ ಹೆಚ್ಚು ಮತಗಳನ್ನು ಪಡೆದ ಈ ನಾಲ್ವರು ಅಭ್ಯರ್ಥಿಗಳಲ್ಲಿ ಒಬ್ಬರು ಎರಡನೆಯ ಹಂತದ ಚುನಾವಣೆಯಲ್ಲಿ ಸಮಗ್ರ ಮತದಾರರಿಂದ ಚುನಾಯಿಸಲ್ಪಡುತ್ತಾರೆ.

೩) ಕೇಂದ್ರೀಯ ಶಾಸನ ಸಭೆಯಲ್ಲಿನ ಶೋಷಿತ ವರ್ಗಗಳವರ ಪ್ರತಿನಿಧಿಗಳು ಜಂಟಿ ಮತಕ್ಷೇತ್ರಗಳ ಮೂಲಕ ಆಯ್ಕೆಯಾಗತಕ್ಕದ್ದು. ಈ ಪ್ರತಿನಿಧಿಗಳು ಮೀಸಲುಕ್ಷೇತ್ರದ ಸ್ಥಾನಕ್ಕಾಗಿ ಮೊದಲು ಪ್ರಾಂತೀಯ ಶಾಸನ ಸಭೆಗಾಗಿ ಮೇಲಿನ ೨ನೆಯ ನಿಯಮದಲ್ಲಿ ಹೇಳಿರುವ ಹಾಗೆ ಪ್ರಾಥಮಿಕ ಚುನಾವಣೆಯ ಮೂಲಕ ಆಯ್ಕೆಯಾಗಬೇಕು.

೪) ಕೇಂದ್ರೀಯ ಶಾಸನ ಸಭೆಯಲ್ಲಿ ಬ್ರಿಟಿಷ್ ಭಾರತಕ್ಕೆ ನಿಗದಿಗೊಳಿಸಿರುವ ಸ್ಥಾನಗಳಲ್ಲಿ ಶೇ. ೧೮ರಷ್ಟು ಸ್ಥಾನಗಳನ್ನು ಶೋಷಿತ ವರ್ಗಗಳವರಿಗೆ ಮೀಸಲಾಗಿರಿಸತಕ್ಕದ್ದು.

೫) ಮೇಲೆ ಹೇಳಿರುವ ಕೇಂದ್ರೀಯ ಹಾಗೂ ಪ್ರಾಂತೀಯ ಶಾಸನ ಸಭೆಗಳಿಗೆ ಸಂಬಂಧಿಸಿದಂತೆ ನಡೆಯಬೇಕಾಗಿರುವ ಪ್ರಾಥಮಿಕ ಚುನಾವಣೆಯ ವ್ಯವಸ್ಥೆಯು ೧೦ ವರ್ಷಗಳ ನಂತರ ಮುಂದೆ ಹೇಳಿರುವ ೬ನೆಯ ನಿಯಮದ ಪ್ರಕಾರ ೧೦ ವರ್ಷಕ್ಕೂ ಮೊದಲೇ ರದ್ದಾಗದೆ ಇದ್ದರೆ ತಾನಾಗಿಯೇ ಕೊನೆಗೊಳ್ಳುತ್ತದೆ.

೬) ಮೇಲೆ ಹೇಳಿರುವಂತೆ ಕೇಂದ್ರೀಯ ಹಾಗೂ ಪ್ರಾಂತೀಯ ಶಾಸನ ಸಭೆಗಳಲ್ಲಿ ಶೋಷಿತ ವರ್ಗದವರಿಗೆ ಮೀಸಲಿರುವ ಸ್ಥಾನಗಳು ಸಂಬಂಧಪಟ್ಟ ಎರಡೂ ಪಕ್ಷಗಳು ಒಮ್ಮತದಿಂದ ರದ್ದು ಮಾಡುವವರೆಗೂ ಮುಂದುವರೆಯತಕ್ಕದ್ದು.

೭) ಕೇಂದ್ರೀಯ ಹಾಗೂ ಪ್ರಾಂತೀಯ ಸಭೆಗೆ ಮತದಾನದ ಹಕ್ಕುಗಳು ಲೋಥಿಯನ್ ಸಮಿತಿಯ ವರದಿಯ ಪ್ರಕಾರವಿರತಕ್ಕದ್ದು.

೮) ಸಾರ್ವಜನಿಕ ಸೇವೆಯ ಸೇರ್ಪಡೆಗೇ ಆಗಲೀ ಇಲ್ಲವೇ ಸ್ಥಳೀಯ ಸಂಸ್ಥೆಗಳ ಚುನಾವಣೆಗೇ ಆಗಲೀ ಶೋಷಿತ ವರ್ಗದವರಿಗೆ ಯಾವುದೇ ರೀತಿಯ ಅನರ್ಹತೆಯನ್ನೂ ಹಚ್ಚತಕ್ಕದ್ದಲ್ಲ. ಶೈಕ್ಷಣಿಕ ಅರ್ಹತೆಯ ನಿಯಮಕ್ಕೆ ಒಳಪಟ್ಟಂತೆ, ಈ ವರ್ಗಗಳವರಿಗೆ ನ್ಯಾಯಯುತವಾದ ಪ್ರಾತಿನಿಧ್ಯ ದೊರಕುವಂತೆ ಮಾಡಲು ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

೯) ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಶಿಕ್ಷಣ ನಿಧಿಯಿಂದ ಶೋಷಿತ ವರ್ಗದವರ ಶಿಕ್ಷಣಕ್ಕೆಂದು ಸಾಕಷ್ಟು ಹಣವನ್ನು ಪ್ರತ್ಯೇಕವಾಗಿ ಎತ್ತಿಡತಕ್ಕದ್ದು.[೧]

ಮದರಾಸಿನಿಂದ ಆಗಮಿಸಿದ್ದ ಶೋಷಿತ ವರ್ಗದ ಪ್ರತಿನಿಧಿಗಳು ಈ ಒಪ್ಪಂದಕ್ಕೆ ರಾವ್ ಬಹದ್ದೂರ್ ರಾಜಾ ಹಾಗೂ ಅವರ ಬೆಂಬಲಿಗರು ಸಹಿ ಹಾಕದಂತೆ ಒತ್ತಾಯಸಿದರು. ಒಂದು ವೇಳೆ ಅವರೇನಾದರೂ ಸಹಿ ಹಾಕಿದರೆ. ಅಂಬೇಡ್ಕರ್ ಹಾಗೂ ಅವರ ಬೆಂಬಲಿಗರು ಇದಕ್ಕೆ ಸಹಿ ಹಾಕಬಾರದೆಂದು ಪೀಡಿಸಿದರು. ಆದರೂ ಅಂಬೇಡ್ಕರ್ ಹಾಗೂ ಅವರ ಬೆಂಬಲಿಗರು ಈ ಒಪ್ಪಂದಕ್ಕೆ ಸಹಿ ಹಾಕಿದರು. ರಾಜಾ ಹಾಗೂ ಅವರ ಬೆಂಬಲಿಗರ ಸಹಿಯನ್ನು ಪಡೆಯುವ ಜವಾಬ್ದಾರಿಯನ್ನು ಕೂಡ ಡಾ. ಅಂಬೇಡ್ಕರ್ ಅವರಿಗೇ ವಹಿಸಲಾಯಿತು. ಹಲವು ಸುತ್ತಿನ ಚರ್ಚೆಯ ಬಳಿಕ, ಅವರು ತಮ್ಮ ವೈಯಕ್ತಿಕ ನೆಲೆಯಲ್ಲಿ ಈ ಒಪ್ಪಂದಕ್ಕೆ

1. Writings & Speeches Vol 9 Pp 88-89

ಸಹಿ ಹಾಕಬೇಕೆಂದು ತೀರ್ಮಾನ ಮಾಡಲಾಯಿತು. ಅಂತೆಯೇ ಅವರೆಲ್ಲರೂ ಸಹಿ ಹಾಕಿದರು. ಆದರೆ ಎಲ್ಲರಿಗೂ ಆಶ್ಚರ್ಯ ಉಂಟಾಗುವಂತಹ ಒಂದು ಸಂಗತಿ ಜರುಗಿತು. ಕಟ್ಟ ಕಡೆಯಲ್ಲಿ ಸಹಿ ಮಾಡಬೇಕಿದ್ದ ರಾಜಾ ಅವರು ತಮ್ಮ ಸಹಿಯನ್ನು ಜಯಕರ್ ಹಾಗೂ ಸಪ್ರು ಅವರ ಸಹಿಯ ನಡುವೆ ಹಾಕಿದ್ದರು.[೧]

ಪೂನಾ ಒಪ್ಪಂದಕ್ಕೆ ಸಹಿ ಹಾಕಿರುವವರು

(೨೪–೯–೧೯೩೨)

(EPIC FAST Pp 153-154)

೧) ಮದನ್ ಮೋಹನ್ ಮಾಳವಿಯಾ
೨) ತೇಜ ಬಹದ್ದೂರ್ ಸಪ್ರು
೩) ಎಂ.ಆರ್. ಜಯಕರ್
೪) ಬಿ.ಆರ್. ಅಂಬೇಡ್ಕರ್
೫) ಶ್ರೀನಿವಾಸನ್
೬) ಎಂ.ಸಿ.ರಾಜಾ
೭) ಸಿ.ವಿ.ಮೆಹ್ತಾ
೮) ಸಿ.ರಾಜಗೋಪಾಲಚಾರಿ
೯) ರಾಜೇಂದ್ರ ಪ್ರಸಾದ್
೧೦) ಜಿ.ಡಿ.ಬಿರ್ಲಾ
೧೧) ರಾಮೇಶ್ವರ ದಾಸ ಬಿರ್ಲಾ
೧೨) ಬಿ.ಎಸ್. ಕಾಮತ್
೧೩) ಜಿ.ಕೆ. ದೇವಧರ್
೧೪) ಎ.ವಿ.ಟಕ್ಕರ್
೧೫) ಆರ್.ಆರ್. ಬಕಾಲೆ
೧೬) ಪಿ.ಜಿ. ಸೋಲಂಕಿ
೧೭) ಪಿ.ಬಾಲು
೧೮) ಗೋವಿಂದ ಮಾಳವಿಯಾ
೧೯) ದೇವದಾಸ ಗಾಂಧೀ
೨೦) ಬಿಸ್ವಾಸ್
೨೧) ಪಿ.ಎನ್. ರಾಜಭೋಜ್
೨೨) ಗವಾಯ್ ಜಿ.ಎ.
೨೩) ಶಂಕರಲಾಲ್ ಬಂಕಾರ್

ಈ ಒಪ್ಪಂದಕ್ಕೆ ಸಹಿ ಹಾಕುವ ಸಮಯದಲ್ಲಿ ರಾಜಗೋಪಾಲಚಾರಿ ಎಷ್ಟೊಂದು ಸಂತಸಪಟ್ಟರು ಎಂದರೆ ಅವರು ತಮ್ಮ ಲೇಖನಿಯನ್ನು ಡಾ. ಅಂಬೇಡ್ಕರ್ ಅವರೊಂದಿಗೆ ಬದಲಿಸಿಕೊಂಡರು.

---

1. Janata Dated 1st Oct 1932

ಬೊಂಬಾಯಿಯಲ್ಲಿ ಹಿಂದೂ ಸಮಾವೇಶದ ಕಡೆಯ ಭೇಟಿಯಲ್ಲಿ ಎಂದರೆ ಸೆಪ್ಟೆಂಬರ್ ೨೫ ರಂದು ಈ ಮುಂದೆ ಹೇಳಲ್ಪಟ್ಟಿರುವವರು ಸಹಿ ಹಾಕಿದರು.

೧) ಲಲ್ಲೂಬಾಯಿ ಸಮಾಲದಾಸ್
೨) ಹನ್ಸಾ ಮೆಹ್ತಾ
೩) ಕೆ.ನಟರಾಜನ್
೪) ಕಾಮಕೋಟಿ ನಟರಾಜನ್
೫) ಪುರುಷೋತ್ತಮದಾಸ್ ಠಾಕೂರ್ ದಾಸ್
೬) ಮಾಥುರ್‌ದಾಸ್ ವಾಸನ್‌ಜೀ
೭) ವಾಲ್ಚಂದ್ ಹೀರಾಚಂದ್
೮) ಹೆಚ್.ಎನ್.ಕುನ್ರೂ
೯) ಕೆ.ಜಿ.ಲಿಮಯೆ
೧೦) ಪಿ.ಕೋದಂಡರಾವ್
೧೧) ಎನ್.ವಿ. ಗಾಡ್ಗಿಲ್
೧೨) ಮನು ಸುಭೇದಾರ್
೧೩) ಅವಂತಿಕಾಬಾಯಿ ಗೋಖಲೆ
೧೪) ಕೆ.ಜಿ.ಚಿತಾಲಿಯಾ
೧೫) ರಾಧಾಕಾಂತ್ ಮಾಳವಿಯಾ
೧೬) ಎ.ಆರ್. ಭಟ್
೧೭) ಕೋಲಂ
೧೮) ಪ್ರಧಾನ್[೧]

ತತ್‌ಕ್ಷಣವೇ ಈ ಒಪ್ಪಂದದ ಪ್ರತಿಯನ್ನು ತಂತಿಯ ಮೂಲಕ ಬ್ರಿಟಿಷ್ ಸರ್ಕಾರಕ್ಕೆ ಕಳುಹಿಸಿಕೊಡಲಾಯಿತು. ವೈಸ್‌ರಾಯ್ ಅವರಿಗೆ ಹಾಗೂ ಬೊಂಬಾಯಿ ರಾಜ್ಯಪಾಲರ ಕಾರ್ಯದರ್ಶಿಯವರಿಗೂ ಕಳುಹಿಸಿಕೊಡಲಾಯಿತು. ಪ್ರತಿಯೊಂದು ಪಕ್ಷವು ಬೇರೆ ಬೇರೆಯಾಗಿ ಪ್ರತಿಗಳನ್ನು ಕಳುಹಿಸಿಕೊಟ್ಟವು. ಈ ಒಪ್ಪಂದವನ್ನು ಔಪಚಾರಿಕವಾಗಿ ಅನುಮೋದಿಸಲು ಮರುದಿನ ಬೆಳಿಗ್ಗೆ ಬೊಂಬಾಯಿಗೆ ನಾಯಕರುಗಳು ಹಿಂದಿರುಗಿ. ಭಾರತೀಯ ವರ್ತಕರ ಸಮಿತಿಯ ಸಭಾಂಗಣದಲ್ಲಿ ಎರಡು ಘಂಟೆಗೆ ಸಭೆ ಸೇರಿದರು.

"ಪಂಡಿತ್ ಮದನ ಮೋಹನ ಮಾಳವೀಯಾ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಈ ಒಪ್ಪಂದದ ಜಾರಿ ಆಗಲು ಕಾರಣರಾದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು. ಅವರು ವಿಶೇಷವಾಗಿ ಡಾ. ಅಂಬೇಡ್ಕರ್ ಅವರಿಗೆ ಧನ್ಯವಾದ ಅರ್ಪಿಸಿದರು. ಅವರಿರದೇ ಹೋಗಿದ್ದರೆ. ಈ ಒಪ್ಪಂದ ಜಾರಿ ಆಗುವುದು ಸಾಧ್ಯವೇ ಆಗುತ್ತಿರಲಿಲ್ಲ ಎಂದರು. ಇದೀಗ ಈ ಒಪ್ಪಂದದ ಅಂಶಗಳನ್ನು ಆಚರಣೆಗೆ ತರುವುದು ಹಿಂದೂಗಳ ಮೇಲೆ ಇರುವ ಜವಾಬ್ದಾರಿ ಎಂದರು." ಎಂದು ಪೂನಾ ಒಪ್ಪಂದವನ್ನು ಅನುಮೋದಿಸಿದ ಬಗೆಗೆ ವರದಿ ಮಾಡಿದ ಬಾಂಬೆ ಕ್ರಾನಿಕಲ್ ಪತ್ರಿಕೆಯು ತಿಳಿಸಿದೆ.

---

1. Reprinted Khairmode Vol 5 Pp 56-57

ಸರ್. ತೇಜ್ ಬಹದ್ದೂರ್ ಸಪ್ರು, ರಾಜಗೋಪಾಲಚಾರಿ ಅವರಿಬ್ಬರೂ ಈ ಸಂದರ್ಭದಲ್ಲಿ ಮಾತನಾಡಿದರು. ಈ ಒಪ್ಪಂದಕ್ಕೆ ಒಪ್ಪಿಗೆಯನ್ನು ವಿಧ್ಯುಕ್ತವಾಗಿ ಸೂಚಿಸುವ ಕಾರ್ಯಮಾಡಿದವರು ಮಾಥೂರ್‌ದಾಸ್ ಹಾಗೂ ವಿಸ್ಸೋನ್ಜಿಕಿಮ್ಜಿ ಅವರು.

ಪೂನಾ ಒಪ್ಪಂದದ ಠರಾವನ್ನು ಮಾಥುರ್‌ದಾಸ್ ವಿಸ್ಸೋನ್ಜಿಕಿಮ್ಜಿ ಅವರು ಸಭೆಯ ಮುಂದೆ ಇಟ್ಟರು.

ಈ ಸಭೆಯಲ್ಲಿ ಈ ಕೆಳಗಿನ ಠರಾವನ್ನು ಅಂಗೀಕರಿಸಲಾಯಿತು.

ಈ ಸಮಾವೇಶವು ೧೯೩೨, ಸೆಪ್ಟೆಂಬರ್ ೨೪ ರಂದು ಹಿಂದೂ ನಾಯಕರು ಹಾಗು ಅಸ್ಪೃಶ್ಯ ನಾಯಕರ ನಡುವೆ ಆಗಿರುವ ಒಪ್ಪಂದವನ್ನು ಅನುಮೋದಿಸುತ್ತದೆ. ಹಿಂದೂ ಸಮಾಜದೊಳಗೇ ಪ್ರತ್ಯೇಕ ಮತಕ್ಷೇತ್ರಗಳನ್ನು ಸೃಷ್ಟಿಸುವ ತನ್ನ ನಿರ್ಣಯವನ್ನು ಬ್ರಿಟಿಷ್ ಸರಕಾರವು ಹಿಂದಕ್ಕೆ ಪಡೆಯುತ್ತದೆ ಎಂಬ ವಿಶ್ವಾಸವನ್ನು ಈ ಸಮಾವೇಶವು ಹೊಂದಿದೆ. ಇದರಿಂದಾಗಿ ಗಾಂಧೀಯವರು ತಮ್ಮ ನಿರಶನವನ್ನು ಅಂತ್ಯಗೊಳಿಸಲು ಈ ಸಮಾವೇಶವು ಸರ್ಕಾರಕ್ಕೆ ಈ ಕೂಡಲೇ ಈ ಒಪ್ಪಂದವನ್ನು ಜಾರಿ ಮಾಡುವಂತೆ ಒತ್ತಾಯಿಸುತ್ತದೆ. ತಡವಾಗುವ ಮುನ್ನವೇ ಈ ನಿಟ್ಟಿನಲ್ಲಿ ಕಾರ್ಯಕೈಗೊಳ್ಳುವುದು ಒಳಿತು. ಈ ಒಪ್ಪಂದದ ಗಾಂಭೀರ್ಯ ಗಮನಿಸಿ, ಇದು ಸಂಪೂರ್ಣ ಆಚರಣೆಗೆ ಬರುವಂತೆ ಮಾಡಬೇಕು ಎಂದು ಈ ಸಮಾವೇಶವು ಸಂಬಂಧಪಟ್ಟ ಎಲ್ಲಾ ನಾಯಕರಿಗೂ ಕಳಿಕಳಿಯ ವಿನಂತಿಯನ್ನು ಮಾಡುತ್ತದೆ.

ಹಿಂದೂಗಳ ನಡುವೆ ಯಾರನ್ನೇ ಆದರೂ ಹುಟ್ಟಿನಿಂದ ಅಸ್ಪೃಶ್ಯರು ಎಂದು ಪರಿಗಣಿಸುವಂತಿಲ್ಲ. ಇದುವರೆಗೂ ಅಸ್ಪೃಶ್ಯರು ಎಂದು ಪರಿಗಣಿಸಲ್ಪಟ್ಟರುವವರನ್ನು ಇನ್ನು ಮುಂದೆ ಇತರ ಹಿಂದೂಗಳೆಂದೇ ಪರಿಗಣಿಸಲಾಗುವುದು ಮತ್ತು ಅವರಿಗೂ ಇತರ ಹಿಂದೂಗಳಿಗಿರುವ ಹಕ್ಕುಗಳಿಗೆ ಸಮಾನವಾದ ಹಕ್ಕುಗಳು ದೊರೆಯುವಂತೆ ಮಾಡಲಾಗುವುದು. ಅವರಿಗೆ ಸಾರ್ವಜನಿಕ ಬಾವಿ, ಶಾಲೆ, ರಸ್ತೆಗಳು ಹಾಗೂ ಇತರೆ ಸಾರ್ವಜನಿಕ ಆಸ್ತಿಗಳನ್ನು ಉಪಯೋಗಿಸುವ ಅವಕಾಶ ಕಲ್ಪಿಸಲಾಗುವುದು. ಈ ಹಕ್ಕನ್ನು ಶಾಸನಬದ್ಧವಾದ ಅಧಿಕಾರ ಎಂದೇ ಪರಿಗಣಿಸಲಾಗುವುದು. ಇದಕ್ಕಿಂತ ಮೊದಲು ಈ ಕಾನೂನು ಜಾರಿಗೆ ಬರದೇ ಇದ್ದಲ್ಲಿ, ಸ್ವತಂತ್ರಭಾರತವು ಹೊರಡಿಸಬಹುದಾದ ಕಾನೂನುಗಳಲ್ಲಿ ಇದು ಆದ್ಯತೆಯನ್ನು ಹೊಂದಿರುತ್ತದೆ ಎಂಬ ನಿರ್ಣಯವನ್ನು ಸಮಾವೇಶವು ಅಂಗೀಕರಿಸಿತು.

"ಈಗ ಸಂಪ್ರದಾಯವು 'ಅಸ್ಪೃಶ್ಯರು' ಎಂದು ಕರೆಯಲ್ಪಡುತ್ತಿರುವವರ ಮೇಲೆ ಹೇರಿರುವ ಸಾಮಾಜಿಕ ಅನರ್ಹತೆಗಳನ್ನು ಶೀಘ್ರವಾಗಿ ನ್ಯಾಯಯುತವಾದ ಹಾಗು ಶಾಂತಿಯುತ ಮಾರ್ಗಗಳಲ್ಲಿ ನಿವಾರಿಸಲು ಹಿಂದೂ ಮುಖಂಡರು ಪ್ರಯತ್ನಪಡಬೇಕು. ನಿವಾರಣೆಯಾಗಬೇಕಾಗಿರುವ ಅನರ್ಹತೆಗಳಲ್ಲಿ ದೇವಾಲಯದ ಪ್ರವೇಶದ ಹಕ್ಕೂ ಸೇರಿರುತ್ತದೆ" ಎಂಬ ನಿರ್ಣಯವನ್ನು ಕೂಡ ಸಮಾವೇಶದಲ್ಲಿ ತೆಗೆದುಕೊಳ್ಳಲಾಯಿತು.[೧]

"ಡಾ. ಅಂಬೇಡ್ಕರ್ ಅವರು ತಮ್ಮ ಧರ್ಮದ ಜನರ ಹಕ್ಕಿಗಾಗಿ ಸತತವಾಗಿ ಹೋರಾಡಿದರು. ಮುಂದೆ ಭಾರತದ ಭವಿಷ್ಯದಲ್ಲಿ ಅವರು ಒಬ್ಬ ಒಳ್ಳೆಯ ಹೋರಾಟಗಾರರಾಗುವ ಎಲ್ಲಾ ಲಕ್ಷಣಗಳನ್ನು ತೋರಿಸಿದ್ದಾರೆ". ಎಂದು ಡಾ.ಸಪ್ರು ನುಡಿದರು.

ಪೂನ ಒಪ್ಪಂದದ ವಿಷಯದಲ್ಲಿ ಹೊರಡಿಸಿದ್ದ ಠರಾವನ್ನು ಅನುಮೋದಿಸಲು ಡಾ. ಅಂಬೇಡ್ಕರ್ ಅವರು ಮಾತನಾಡಲು ಎದ್ದು ನಿಂತಾಗ ಅವರಿಗೆ ಅಭೂತಪೂರ್ವವಾದ ಚಪ್ಪಾಳೆಗಳ ಮೂಲಕ ಬೆಂಬಲವನ್ನು

---

೧. ಬರವಣಿಗೆ ಹಾಗೂ ಭಾಷಣಗಳು ಸಂಪುಟ ೯ ಪು. ೧೦೩

ಜನರು ವ್ಯಕ್ತಪಡಿಸಿದರು.

"ಈಗಷ್ಟೇ ಕೆಲ ದಿನಗಳಲ್ಲಿ ನನಗಿಂತ ಹೆಚ್ಚಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಮತ್ತೊಬ್ಬ ಮನುಷ್ಯ ಇದ್ದಿರಲಾರ ಎಂದರೆ ಅದು ಅತಿಶಯೋಕ್ತಿ ಆಗುವುದೇ ಇಲ್ಲ. ನನ್ನ ಎದುರಿಗೆ ಇದ್ದದ್ದು ಒಂದು ಅತ್ಯಂತ ಕಠಿಣ ಪರಿಸ್ಥಿತಿ; ನನಗಿದ್ದ ಎರಡು ಆಯ್ಕೆಗಳು ಕೂಡ ಅಷ್ಟೇ ಕಠಿಣವಾಗಿದ್ದವು.

ಭಾರತದ ಒಬ್ಬ ಅತ್ಯಂತ ಮಹತ್ವದ ವ್ಯಕ್ತಿಯ ಪ್ರಾಣವನ್ನು ನಾನು ಉಳಿಸಬೇಕಿತ್ತು. ನನ್ನ ಪಂಗಡದವರ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಜವಾಬ್ದಾರಿಯು ಕೂಡ ನನ್ನ ಮೇಲೆಯೇ ಇತ್ತು. ದುಂಡು ಮೇಜಿನ ಸಮಾವೇಶದಲ್ಲಿ ಕೂಡ ನಾನು ಇದೇ ಪ್ರಯತ್ನದಲ್ಲಿ ನಿರತನಾಗಿದ್ದೆ. ನಾನು ಅತ್ಯಂತ ಸಂತಸದಿಂದ ಒಂದು ವಿಷಯವನ್ನು ತಿಳಿಸಲು ಇಚ್ಛಿಸುತ್ತೇನೆ. ಅದೇನೆಂದರೆ ಎಲ್ಲರ ಸಹಕಾರದಿಂದಾಗಿ ನಮ್ಮ ಪಂಗಡದವರ ಹಿತಾಸಕ್ತಿಯನ್ನು ಬಲಿಗೊಡದೇ ಮಹಾತ್ಮ ಅವರ ಜೀವವನ್ನು ಉಳಿಸಲು ಸಾಧ್ಯವಾಗಿದೆ. ಈ ಎಲ್ಲಾ ಮಾತುಕತೆಗಳಲ್ಲಿ ನಾವು ಬಹಳಮಟ್ಟಿನ ಶ್ರೇಯಸ್ಸನ್ನು ಗಾಂಧೀಜಿಯವರಿಗೆ ನೀಡಬೇಕು. ಅವರನ್ನು ಭೇಟಿ ಮಾಡಿದಾಗ ಸಮಾನವಾದ ಎಷ್ಟೊಂದು ಅಂಶಗಳು ನಮ್ಮಿಬ್ಬರ ನಡುವೆ ಇದೆ ಎಂದು ತಿಳಿದುಬಂದು ನಾನು ಅತ್ಯಂತ ಸಂತಸಗೊಂಡೆ.

ತೇಜ ಬಹದ್ದೂರ್ ಸಪ್ರು ಅವರು ಒಂದು ವಿಷಯವನ್ನು ತಮ್ಮೆಲ್ಲರಿಗೂ ತಿಳಿಸಿದ್ದಾರೆ ಅದೇನೆಂದರೆ ಯಾವುದಾದರೂ ಒಂದು ವಿಷಯದಲ್ಲಿ ಗಾಂಧೀಯವರ ಬಳಿಗೆ ಅತ್ಯಂತ ಕಠಿಣ ಸಮಸ್ಯೆಗಳನ್ನು ಮಾತ್ರ ಕೊಂಡೊಯ್ಯಲಾಗುತ್ತಿತ್ತು. ನನ್ನ ಹಾಗು ಗಾಂಧೀಯವರ ಚಿಂತನೆಗಳಲ್ಲಿ ಅಜಗಜಾಂತರ ವ್ಯತ್ಯಾಸವಿತ್ತು ಎಂದು ನನಗೆ ದುಂಡು ಮೇಜಿನ ಸಮಾವೇಶದಲ್ಲಿಯೇ ತಿಳಿದಿತ್ತು. ಆದರೆ ಅವರು ನನ್ನ ಎದುರಾಳಿಯ ಬೆಂಬಲಕ್ಕೆ ನಿಲ್ಲದೇ ನನ್ನ ಬೆಂಬಲಕ್ಕೆ ನಿಂತಿರುವುದು ತಿಳಿದು ನನಗೆ ಬಹಳಷ್ಟು ಆಶ್ಚರ್ಯವಾಗಿತ್ತು. ಅತ್ಯಂತ ಕಠಿಣವಾದ ಪರಿಸ್ಥಿತಿಯಿಂದ ನನ್ನನ್ನು ಪಾರು ಮಾಡಿದಕ್ಕಾಗಿ ನಾನು ಗಾಂಧೀಜಿಯವರಿಗೆ ಆಭಾರಿ ಆಗಿರುತ್ತೇನೆ.

ನನಗೆ ಒಂದೇ ಒಂದು ದುಃಖಕರವಾದ ಸಂಗತಿ ಎಂದರೆ ಮಹಾತ್ಮ ಅವರು ಈ ನಿಲುವನ್ನು ದುಂಡು ಮೇಜಿನ ಸಮಾವೇಶದಲ್ಲಿ ಏಕೆ ತಳೆಯಲಿಲ್ಲ ಎಂಬುದು. ಒಂದು ವೇಳೆ, ಮಹಾತ್ಮ ಅವರು ಈಗ ತಳೆದಿರುವ ನಿಲುವನ್ನು ಆ ಸಮಯದಲ್ಲಿ ವ್ಯಕ್ತಪಡಿಸಿದಿದ್ದರೆ, ಇಂದು ಈ ಪರಿಸ್ಥಿತಿ ಉದ್ಭವವಾಗುತ್ತಲೇ ಇರಲಿಲ್ಲ. ಆದರೆ ಇದೆಲ್ಲಾ ಈಗ ಮುಗಿದು ಹೋದ ಕಥೆಯಾಗಿದೆ. ಈಗ ಈ ಠರಾವಿಗೆ ನಾನು ಬೆಂಬಲವನ್ನು ಅತ್ಯಂತ ಸಂತಸದಿಂದ ಸೂಚಿಸುತ್ತಿದ್ದೇನೆ.

ಈ ಒಪ್ಪಂದಕ್ಕೆ ಇಡೀ ಶೋಷಿತ ವರ್ಗದ ಜನರ ಒಪ್ಪಿಗೆ ಇದೆಯೇ ಎಂಬ ಸಂದೇಹವನ್ನು ಕೆಲವು ಪತ್ರಿಕೆಗಳು ಮುಂದೆ ಇಟ್ಟಿವೆ. ಆದರೆ ಒಂದು ವಿಷಯವನ್ನು ನಾನು ಸ್ಪಷ್ಟಪಡಿಸಲು ಇಚ್ಛಿಸುವೆ. ಅದೇನೆಂದರೆ ನಾನು, ನಾನು ಪ್ರತಿನಿಧಿಸುವ ಪಕ್ಷ ಹಾಗೂ ಇಲ್ಲಿರುವ ನನ್ನ ಇತರ ಎಲ್ಲಾ ಮಿತ್ರರೂ ಕೂಡ ಈ ಒಪ್ಪಂದಕ್ಕೆ ಬದ್ಧರಾಗಿದ್ದೇವೆ. ಈ ವಿಷಯದಲ್ಲಿ ಯಾವುದೇ ಸಂದೇಹ ಬೇಡ.

ನಮಗೆ ಇರುವಂತಹ ಸಂದೇಹವೆಂದರೆ ಹಿಂದೂ ಸಮಾಜವು ಈ ಒಪ್ಪಂದವನ್ನು ಆಚರಣೆಗೆ ತರುವುದೇ ಎಂಬುದು. (ಧ್ವನಿ : ಓ ಖಂಡಿತ, ನಾವು ತರತ್ತೇವೆ) ಆದರೆ ಅತ್ಯಂತ ದುಃಖದಿಂದ ಒಂದು ಸಂಗತಿ ತಿಳಿಸಬಯಸುತ್ತೇನೆ. ಹಿಂದೂ ಸಮಾಜ ಇಡಿಯಾಗಿ ಒಂದು ಸಮಾಜವಲ್ಲ. ಬದಲಾಗಿ ಅದು ಹಲವು ಪುಟ್ಟ ಪುಟ್ಟ ಸಮಾಜಗಳ ಒಕ್ಕೂಟ. ಆದರೆ ಹಿಂದೂ ಧರ್ಮದ ಮುಖಂಡರು ಇದನ್ನು ಒಂದು ಪವಿತ್ರ ಕಾರ್ಯದಂತೆ ಪರಿಗಣಿಸಿ ಆಚರಣೆಗೆ ತರುತ್ತಾರೆ ಎಂದು ನಂಬಿದ್ದೇನೆ.

ಒಂದೇ ಒಂದು ವಿಷಯವನ್ನು ನಾನು ತಿಳಿಸಲು ಇಚ್ಛಿಸುತ್ತೇನೆ. ಈ ಒಪ್ಪಂದಕ್ಕೆ ಸಂಬಂಧಿಸಿದ

ಮಾತುಕತೆಯಲ್ಲಿ ಭಾಗಿಯಾದಂತಹ ಎಲ್ಲಾ ಮಿತ್ರರಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರಲ್ಲಿಯೂ ವಿಶೇಷವಾಗಿ ಸರ್ ತೇಜ್ ಬಹದ್ದೂರ್ ಸಪ್ರು ಹಾಗೂ ಸಿ. ರಾಜಗೋಪಾಲಚಾರಿ ಅವರನ್ನು ಅಭಿನಂದಿಸುತ್ತೇನೆ. ತೇಜ ಬಹದ್ದೂರ್ ಅವರು ಇರದೇ ಹೋಗಿದ್ದರೇ, ಇಷ್ಟೊಂದು ಅಂಶಗಳ ಬಗ್ಗೆ ಒಮ್ಮತವನ್ನು ಮೂಡಿಸಲು ಸಾಧ್ಯ ಆಗುತ್ತಿರಲಿಲ್ಲ. ಕಳೆದ ಎರಡು ವರ್ಷಗಳಿಂದ ಇವರೊಡನೆ ಇರುವ ಒಡನಾಟದ ಬಲದಿಂದ ಹೇಳಬೇಕೆಂದರೆ ಭಾರತದಲ್ಲಿ ಒಬ್ಬ ಜಾತ್ಯತೀನಾದ ಮನುಷ್ಯನಿದ್ದಾನೆಂದರೆ ಆತ ತೇಜ ಬಹದ್ದೂರ್ ಅವರೇ. ಅವರ ನ್ಯಾಯಸಮ್ಮತ ಹಾಗೂ ನಿಷ್ಪಕ್ಷಪಾತ ಧೋರಣೆಯು ಇಂತಹ ರಕ್ಷಣೆಗೆ ಹಾತೊರೆಯುತ್ತಿರುವ ಹಿಂದುಳಿದ ವರ್ಗಗಳ ಜನರ ಆಶಾಕಿರಣವಾಗಿದೆ. ಇದು ಸಂವಿಧಾನದಲ್ಲಿ ಕೂಡ ರಕ್ಷಣೆ ಆಗುವುದು ಖಚಿತವಾಗಿದೆ.

ನಾನು ನನ್ನ ಸ್ನೇಹಿತರಾದಂತಹ ರಾಜಗೋಪಾಲಚಾರಿ ಅವರ ಬಗ್ಗೆಯೂ ಹೇಳಲೇ ಬೇಕು. ಸಂಧಾನವು ಮುರಿದು ಬೀಳಬಹುದಾತಂಹ ಕಷ್ಟದ ಪರಿಸ್ಥಿತಿಯಲ್ಲಿ ಇದ್ದಾಗ ಇವರು ನಮ್ಮ ರಕ್ಷಣೆಗೆ ಧಾವಿಸಿದ್ದರು. ಒಂದು ವೇಳೆ ಅವರು ಆಸಕ್ತಿ ವಹಿಸಿ ಕಾರ್ಯನಿರ್ವಹಣೆ ಮಾಡದೇ ಹೋಗಿದ್ದರೆ ಈ ಒಪ್ಪಂದ ಇಂದು ಜಾರಿ ಆಗುತ್ತಲೇ ಇರಲಿಲ್ಲ. ಕಟುತರವಾದ ವಾದವಿವಾದಗಳು ತೀವ್ರವಾಗಿ ನಡೆಯುತ್ತಿದ್ದಾಗ ತೋರಿದ ತಾಳ್ಮೆ ಹಾಗೂ ಸೌಜನ್ಯಕ್ಕಾಗಿ ನಾನು ಪಂಡಿತ್ ಮದನ ಮೋಹನ್ ಮಾಳವೀಯ ಅವರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆ ಬರಬಾರದು ಎಂದ ಈ ಜಾತ್ಯಾಧಾರಿತ ನಿರ್ಣಯದಲ್ಲಿ ಭಾರತದ ಏಕತೆಯ ದೃಷ್ಟಿಯಿಂದ ಕೆಲವು ಬದಲಾವಣೆಗಳನ್ನು ತರಲಾಗಿದೆ. ಆದರೆ ಆ ವಾದಕ್ಕೆ ನನ್ನ ಸಂಪೂರ್ಣ ಸಹಮತಿ ಇಲ್ಲ. ಬಹುಸಂಖ್ಯಾತ ಜನರ ವಿಷಯದಲ್ಲಿ ಈ ಪ್ರತ್ಯೇಕ ಮತಕ್ಷೇತ್ರಗಳು ಹಾನಿ ಉಂಟುಮಾಡಬಹುದೇ ಹೊರತು ಅಲ್ಪಸಂಖ್ಯಾತರ ವಿಷಯದಲ್ಲಿ ಈ ರೀತಿ ಆಗಲು ಸಾಧ್ಯವಿಲ್ಲ.

ಹಿಂದೂ ಧರ್ಮದೊಳಕ್ಕೆ "ಶೋಷಿತ" ವರ್ಗದವರು ಸಂಪೂರ್ಣವಾಗಿ ಸೇರ್ಪಡೆ ಆಗಲು ಇರುವ ಸಮಸ್ಯೆಗೆ ಜಂಟಿ ಮತಕ್ಷೇತ್ರಗಳು ಪರಿಹಾರ ಅಲ್ಲ ಎಂಬುದು ನನ್ನ ಭಾವನೆ.

ಯಾವುದೇ ಒಂದು ಚುನಾವಣಾ ವ್ಯವಸ್ಥೆಯು ಒಂದು ಸಾಮಾಜಿಕ ಸಮಸ್ಯೆಗೆ ಪರಿಹಾರ ಆಗಲು ಸಾಧ್ಯವಿಲ್ಲ. ಅದಕ್ಕೆ ರಾಜಕೀಯ ವ್ಯವಸ್ಥೆಗಿಂತ ಬೇರೆಯಾದ ಮಾರ್ಗವನ್ನು ನಾವು ಹುಡುಕಬೇಕಾಗುತ್ತದೆ. ನೀವೆಲ್ಲರೂ ಇಂದು ನಾವು ಮಾಡಿಕೊಂಡಿರುವ ವ್ಯವಸ್ಥೆಯನ್ನು ಮೀರಿ ಅಸ್ಪೃಶ್ಯರ ಈ ಸಮಸ್ಯೆಯನ್ನು ಸಮಾಜದಿಂದ ತೊಡೆದು ಹಾಕಲೇಬೇಕು. ಅಸ್ಪೃಶ್ಯರು ಕೇವಲ ಹಿಂದೂ ಧರ್ಮದ ಒಂದು ಭಾಗವಷ್ಟೇ ಆಗಬಾರದು. ಬದಲಿಗೆ ಅವರಿಗೆ ಒಂದು ಗೌರವಯುತ ಸ್ಥಾನವನ್ನು ನಾವು ನೀಡಬೇಕು, ಸಮಾಜದಲ್ಲಿ ಸಮಾನವಾದ ಸ್ಥಾನಮಾನ ಸಿಗುವಂತೆ ಮಾಡಬೇಕು.

ಎಲ್ಲಿಯವರೆಗೂ ಅಸ್ಪೃಶ್ಯರು ಅಜ್ಞಾನವನ್ನು ಹೊಂದಿದ್ದರೋ, ಅವರಿಗೆ ಆತ್ಮಸಮ್ಮಾನ ಇರಲಿಲ್ಲವೋ ಅಲ್ಲಿಯವರೆಗೂ ಅವರು ಹಿಂದೂ ಧರ್ಮವು ಅವರಿಗೆ ನೀಡಿದ್ದಂತಹ ಸ್ಥಾನಮಾನ ಒಪ್ಪಿಕೊಂಡಿದ್ದರು. ಆದರೆ ಅವರಿಗೆ ವಿದ್ಯಾಭ್ಯಾಸ ದೊರೆಯುತ್ತಿದ್ದಂತೆಯೇ ಅವರು ಎಚ್ಚೆತ್ತುಕೊಳ್ಳುತ್ತಿದ್ದಾರೆ ಮತ್ತು ಅವರು ತಮಗೆ ದೊರೆಯದಿರುವ ಸಾಮಾಜಿಕ ನ್ಯಾಯದ ವಿಷಯದಲ್ಲಿ ಕುದಿಯಲಾರಂಭಿಸಿದ್ದಾರೆ. ಇದು ಅವರನ್ನು ಹಿಂದೂ ಧರ್ಮದಿಂದ ಸಿಡಿದು ಹೊರ ಹೋಗುವ ಅಪಾಯವಿದೆ. ತಾವೆಲ್ಲರೂ ಈ ಅಂಶವನ್ನು ಗಮನದಲ್ಲಿ ಇರಿಸಿಕೊಂಡು ಈ ವಿಷಯದಲ್ಲಿ ಅಗತ್ಯಕ್ರಮಗಳನ್ನು ಕೈಗೊಳ್ಳುವಿರಿ ಎಂದು ಆಶಿಸುತ್ತೇನೆ."

ರಾವ್ ಬಹದ್ದೂರ್ ಎಂ.ಸಿ.ರಾಜ ಅವರು ಕೂಡ ಈ ಠರಾವಿಗೆ ಬೆಂಬಲ ಸೂಚಿಸಿದರು. ತಾವು

ಹಿಂದೂಗಳ ಹೃದಯಲ್ಲಿ ಆಗಿರುವ ಬದಲಾವಣೆ ಗಮನಿಸಿ ಈ ಒಪ್ಪಂದಕ್ಕೆ ತಮ್ಮ ಒಪ್ಪಿಗೆ ಸೂಚಿಸಿದೆ ಎಂದರು. ಈ ಒಪ್ಪಂದಕ್ಕೆ ದೇಶದ ಎಲ್ಲಾ ಮೂಲೆಗಳಿಂದಲೂ ಅಸ್ಪೃಶ್ಯರ ಬೆಂಬಲ ಸಿಗಲಿದೆ ಎಂದರು.

ಶ್ರೀ ಸಿ.ರಾಜಗೋಪಾಲಚಾರಿ ಅವರು ಅಧ್ಯಕ್ಷರಿಗೆ ವಂದನಾರ್ಪಣೆ ಸಲ್ಲಿಸಿದರು.

ಪಂಡಿತ ಮಾಳವಿಯಾ ಅವರು ಮಹಾತ್ಮ ಗಾಂಧೀ ಅವರಿಗೆ ಸಾರ್ಜೆಂಟ ಕೆಲ್ಲಪ್ಪನ್ ಅವರು ಮಲಬಾರ್ ಪ್ರದೇಶದಲ್ಲಿ ಇರುವ ಗುರುವಾಯೂರು ದೇವಸ್ಥಾನವನ್ನು ಪ್ರವೇಶಿಸಲು ಅಸ್ಪೃಶ್ಯರಿಗೆ ಅನುಮತಿ ನೀಡಬೇಕು ಎಂದು ಆಗ್ರಹಿಸಿ ಉಪವಾಸ ಆರಂಭಿಸಲು ನಿರ್ಧರಿಸಿರುವುದನ್ನು ತಿಳಿಸುವುದಾಗಿ ಹೇಳಿದರು.

ಭಾನುವಾರ ಜರುಗಿದಂತಹ ಹಿಂದೂ ನಾಯಕರ ಸಮಾವೇಶದಲ್ಲಿ ಭಾಗಿಯಾಗಿದ್ದವರೆಂದರೆ : ಸರ್ ತೇಜ್ ಬಹದ್ದೂರ್ ಸಪ್ರು, ಸರ್. ಲಲ್ಲೂಬಾಯಿ ಸಮಲದಾಸ್, ಸರ್. ಪುರುಷೋತ್ತಮದಾಸ್ ಠಾಕೂರ್‌ದಾಸ್, ಶ್ರೀ ಚುನ್ನಿಲಾಲ್ ಮೆಹ್ತಾ, ಸರ್ ಗೋವಿಂದ ಮಡಗಾಂವಕರ್, ಶ್ರೀ ಎಂ.ಆರ್. ಜಯಕರ್, ಪಂಡಿತ ಹೃದಯನಾಥ್ ಕುನ್ಝ್ರೂ, ಶ್ರೀ ಜಿ.ಕೆ. ದೇವದರ್, ಶ್ರೀ ಬಿ.ಎನ್. ಕರಂಜಿಯಾ, ಶ್ರೀ ಕೆ.ನಟರಾಜನ್, ರಾವ್ ಬಹದ್ದೂರ್ ಎಂ.ಸಿ.ರಾಜಾ, ಡಾ. ಅಂಬೇಡ್ಕರ್, ಶ್ರೀ ಪಿ.ಬಾಲು. ಶ್ರೀ ಡಿ.ಜಿ.ದಲ್ವಿ, ಶ್ರೀ ಕುಮಾರಿ ನಟರಾಜನ್, ಶ್ರೀಮತಿ ಹನ್ಸಾಮೆಹ್ತಾ, ಶ್ರೀಮತಿ ಅವಂತಿಕಾ ಭಾಯಿ ಗೋಖಲೆ, ಶ್ರೀ ಬಿ.ಎಸ್.ಕಾಮತ್, ಶ್ರೀ ಮನು ಸುಭೇದಾರ್, ಶ್ರೀ ಜಿ.ಡಿ.ಬಿರ್ಲಾ, ಶ್ರೀ ಡಿ.ಪಿ. ಖೈತಾನ್, ಶ್ರೀ ಬಿ.ಎಫ್. ಬರೂಚ, ಡಾ.ಸೋಲಂಕಿ, ಡಾ. ಚೋಯಿತ್‌ರಾಮ್ ಗಿಡ್ವಾನಿ, ಶ್ರೀಮತಿ ಚಿಮನ್‌ಲಾಲ್ ಸ್ವೆಲ್‌ವಾಡ್, ಶ್ರೀ ವಾಲ್‌ಚಂದ್ ಹೀರಾಚಂದ್, ಶ್ರೀ ಬಿ.ಜೆ. ಧಿಯೋರುಕರ್, ಶ್ರೀ ಸಿ.ರಾಜಗೋಪಾಲಚಾರಿ, ಶ್ರೀ ದೇವದಾಸ ಗಾಂಧೀ, ಶ್ರೀ ಟಿ.ಪ್ರಕಾಶಂ, ಹಾಗೂ ಬಾಬು ರಾಜೇಂದ್ರ ಪ್ರಸಾದ್.[೧]

ಮಹಾಪ್ರಭುಗಳ ಸರ್ಕಾರವು ೧೯೩೨ರ ಸೆಪ್ಟೆಂಬರ್ ೨೬ ರಂದು ಅಧಿಕೃತ ಪ್ರಕಟಣೆ ಹೊರಡಿಸಿ ಮಂತ್ರಿಮಂಡಲಕ್ಕೆ ಪೂನಾ ಒಪ್ಪಂದವನ್ನು ಒಪ್ಪಿಕೊಳ್ಳಲು ಶಿಫಾರಸ್ಸು ಮಾಡುವುದಾಗಿ ತಿಳಿಸಿತು.

೧೯೩೨ರ ಸೆಪ್ಟೆಂಬರ್ ೨೬ರ ಸೋಮವಾರದಂದು ಗೌರವಾನ್ವಿತ ಗೃಹಮಂತ್ರಿ ಶ್ರೀ ಹೆಚ್.ಜಿ. ಹೇಗ್, ಅವರು ಕೇಂದ್ರ ಶಾಸನಸಭೆಯಲ್ಲಿ ಈ ಕೆಳಕಂಡ ಹೇಳಿಕೆಯನ್ನು ನೀಡಿದರು.

**ವಿಷಯ – ಜಾತ್ಯಾಧಾರಿತ ನಿರ್ಣಯ**

ಮೇಲ್ಮನೆಯ ನಾಯಕರಾದ ಗೌರವಾನ್ವಿತ ಶ್ರೀ ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರೇ ಸರ್, ಈ ಪ್ರಶ್ನೋತ್ತರ ಚರ್ಚೆಯ ಸಮಯದಲ್ಲಿ ಬೇರೆಯ ವಿಷಯವನ್ನು ತುಸು ಹೊತ್ತು ಮಾತನಾಡಲು ತಾವು ಅನುಮತಿ ನೀಡಬೇಕೆಂದು ಕೋರುವೆ. ಏಕೆಂದರೆ ನನ್ನ ಗೌರವಾನ್ವಿತ ಸಹದ್ಯೋಗಿಯಾದ ಗೃಹ ಸದಸ್ಯರು ಒಂದು ಅತ್ಯಂತ ಮುಖ್ಯ ವಿಷಯವನ್ನು ಸದನಕ್ಕೆ ತಿಳಿಸಬೇಕಿದೆ. ಕಾರ್ಯಕ್ರಮದಲ್ಲಿನ ಈ ಬದಲಾವಣೆಗೆ ಎಲ್ಲರೂ ಒಪ್ಪಿಗೆ ಸೂಚಿಸುತ್ತಾರೆ ಎಂಬ ನಂಬಿಕೆ ನನಗಿದೆ. ನೀವು ಈ ರೀತಿ ಮಾಡಲು ನನಗೆ ಅನುಮತಿ ನೀಡುವಿರಾ?

ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಇಬ್ರಾಹಿಂ ರಹೀಂತುಲ್ : ಏನು ಆ ವಿಷಯ?

ಗೌರವಾನ್ವಿತ ಶ್ರೀ ರಾಮಸ್ವಾಮಿ ಅಯ್ಯರ್ : ಈ ಸದನದ ಸದಸ್ಯರು ಜಾತ್ಯಾಧಾರಿತ ನಿರ್ಣಯವನ್ನು ಕುರಿತು ಹೇಳಿಕೆಯನ್ನು ಹಾಗೂ ಮಹಾಪ್ರಭುಗಳ ಸರ್ಕಾರವು ದಲಿತರ ವಿಷಯದಲ್ಲಿ ಕೈಗೊಂಡಿರುವ ನಿರ್ಧಾರ ತಿಳಿಸಬಯಸುತ್ತಾರೆ.

---

1. The Bombay Chronicle 26th Sept 1932

ಮಾನ್ಯ ಅಧ್ಯಕ್ಷರು : (ಗೌರವಾನ್ವಿತ ಶ್ರೀ ಇಬ್ರಾಹಿಂ ರಹೀಂ ತುಲ್) : ಇದನ್ನು ವಿಶೇಷ ಕೋರಿಕೆ ಎಂದು ಪರಿಗಣಿಸಿ ಈ ಪ್ರಶ್ನೋತ್ತರದ ಅವಧಿಯಲ್ಲಿ ಇದರ ಮೇಲಿನ ಚರ್ಚೆಗೆ ಅವಕಾಶ ನೀಡುತ್ತಿದ್ದೇನೆ.

ಗೌರವಾನ್ವಿತ ಶ್ರೀ ಹೆಚ್.ಜಿ. ಹೇಗ್ (ಸದಸ್ಯರು) ನಿಮ್ಮ ಅನುಮತಿಯೊಂದಿಗೆ, ಮಹಾಪ್ರಭುಗಳ ಸರ್ಕಾರವು ಇಂದು ಬೆಳಿಗ್ಗೆ ಹೊರಡಿಸಿರುವ ನಿರ್ಧಾರವನ್ನು ನಿಮ್ಮ ಮುಂದೆ ಇರಿಸುತ್ತಿದ್ದೇನೆ. ಪೂನಾ ಒಪ್ಪಂದಕ್ಕೆ ಸಂಬಂಧಿಸಿದಂತೆ ಶೋಷಿತ ವರ್ಗದ ಮುಖಂಡರು ಹಾಗೂ ಇತರ ವರ್ಗದ ಹಿಂದೂ ಮುಖಂಡರು ಹೊಸ ಶಾಸನಸಭೆಯಲ್ಲಿ ಶೋಷಿತವರ್ಗಗಳವರ ಪ್ರಾತಿನಿಧ್ಯ ಹಾಗೂ ಇತರ ಕೆಲವು ವಿಷಯಗಳಲ್ಲಿ ಕಳೆದ ಶನಿವಾರ ಒಂದು ಒಪ್ಪಂದಕ್ಕೆ ಬಂದಿದ್ದಾರೆ ಎಂಬುದನ್ನು ತಿಳಿದು ಮಹಾಪ್ರಭುಗಳ ಸರಕಾರವು ಹರ್ಷಗೊಂಡಿದೆ.ಆಗಸ್ಟ್ ೪ರ ಜಾತ್ಯಾಧಾರಿತ ನಿರ್ಣಯದ ಪ್ರಕಾರ ಇದ್ದ ಸಾಮಾನ್ಯ ಮತಕ್ಷೇತ್ರಗಳು ಹಾಗೂ ಶೋಷಿತ ವರ್ಗಗಳವರ ವಿಶೇಷ ಮತಕ್ಷೇತ್ರಗಳ ಬದಲಿಗೆ ಈಗ ಇವೆಲ್ಲವನ್ನೂ ಸಾಮಾನ್ಯ ಮತಕ್ಷೇತ್ರಗಳೆಂದೇ ಪರಿಗಣಿಸಿ ಅವುಗಳಲ್ಲಿ ಕೆಲವನ್ನು ಶೋಷಿತವರ್ಗಗಳವರಿಗೆಂದೇ ಮೀಸಲಿಡಲಾಗಿದೆ. ಮೀಸಲು ಕ್ಷೇತ್ರಗಳಲ್ಲಿ ಕೆಲವೊಂದು ನಿಯಮಗಳಿಗೆ ಅನುಗುಣವಾಗಿ ಅಭ್ಯರ್ಥಿಗಳು ಚುನಾಯಿತರಾಗುತ್ತಾರೆ. ಸಂಬಂಧ ಪಟ್ಟ ವರ್ಗಗಳವರಲ್ಲಿ ಒಂದು ಒಡಂಬಡಿಕೆ ಮೂಡದೆ ಇದ್ದುದರಿಂದ ಸರಕಾರವು ಶೋಷಿತವರ್ಗಗಳ ಹಿತಾಸಕ್ತಿ ರಕ್ಷಣೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಈ ಹಿಂದೆ ತನ್ನ ನಿರ್ಣಯವನ್ನು ತೆಗೆದುಕೊಂಡಿತ್ತು. ಆದರೆ ಈ ಹೊಸ ಒಪ್ಪಂದಕ್ಕೆ ಶೋಷಿತ ವರ್ಗದ ಹಾಗೂ ಹಿಂದೂ ವರ್ಗದ ಪ್ರತಿನಿಧಿಗಳು ತಮ್ಮ ಸಹಮತ ವ್ಯಕ್ತಪಡಿಸಿರುವುದರಿಂದ ಈ ಒಪ್ಪಂದವನ್ನು ಸರಕಾರವು ಒಪ್ಪಂದದ ೪ ಪ್ಯಾರಾದಲ್ಲಿ ಉಲ್ಲೇಖವಾಗಿರುವಂತೆ ಸಂಸತ್ತಿನ ಮುಂದೆ ಸದ್ಯದಲ್ಲಿಯೇ ಮಂಡಿಸಲಿದೆ. (ಕರತಾಡನ).

ಈ ಒಪ್ಪಂದದ ಪ್ರಕಾರ ಈಗಿನ ಒಟ್ಟುಸ್ಥಾನಗಳ ಅಂದರೆ ಸಾಮಾನ್ಯ ಹಾಗೂ ಮೀಸಲು ಸ್ಥಾನಗಳ ಸಂಖ್ಯೆ ಈ ಹಿಂದೆ ಮಹಾಪ್ರಭುಗಳು ನೀಡಿದ್ದ ಜಾತ್ಯಾಧಾರಿತ ನಿರ್ಣಯಗಳಲ್ಲಿ ಸೂಚಿಸದ ಸಾಮಾನ್ಯ ಹಾಗೂ ವಿಶೇಷ ಕ್ಷೇತ್ರಗಳ ಒಟ್ಟು ಸಂಖ್ಯೆಯಷ್ಟೇ ಇರುತ್ತದೆ ಎಂಬುದನ್ನು ಗಮನಿಸಬೇಕು.

ಇದಲ್ಲದೇ ಆಗಸ್ಟ್ ೪ ರಂದು ನಡೆಸಿರುವ ಒಪ್ಪಂದಕ್ಕೆ ಹೊರತಾಗಿಯೂ ಕೆಲ ಅಂಶಗಳ ರಾಜ್ಯ ಸರ್ಕಾರದ ಆದೇಶದಲ್ಲಿ ಸೇರ್ಪಡೆ ಆಗಿದೆ. ಅಂಶ ೮ ಹಾಗೂ ೯ ಸಾಮಾನ್ಯ ವಿಷಯಗಳ ಪ್ರಸ್ತಾಪ ಮಾಡುತ್ತದೆ. ಇದು ಸಂವಿಧಾನದ ಕಾರ್ಯನಿರ್ವಹಣೆಗೆ ಸಂಬಂಧಿಸಿರುವಂತಹದ್ದಾಗಿರುತ್ತದೆ. ಆದರೆ ಇದು ಹಿಂದೂಗಳ ಅಸ್ಪೃಶ್ಯರ ವಿಷಯದಲ್ಲಿ ತಳೆದಿರುವಂತಹ ನಿಲುವು ಎಂಬ ಅಂಶವನ್ನು ರಾಜ್ಯ ಸರ್ಕಾರ ಗಮನಿಸಬೇಕಾಗುತ್ತದೆ.

ಹಿಂದಿನ ನಿರ್ಣಯದಲ್ಲಿ ಸೇರ್ಪಡೆ ಆಗದಿದ್ದ ಕೆಲವು ಅಂಶಗಳು ಹೊಸ ನಿರ್ಣಯದಲ್ಲಿ ಸೇರ್ಪಡೆಯಾಗಿರುವುದನ್ನು ಮಹಾಪ್ರಭುಗಳ ಸರಕಾರವು ಗಮನಿಸಿದೆ.

ಅವರ ನಿರ್ಣಯದಿಂದ ಹೊರತಾದ ಎರಡು ವಿಷಯಗಳಿವೆ: (೧) ಶೋಷಿತ ವರ್ಗಗಳಿಗೆ ಇರಬೇಕಾದ ಮತದಾನದ ಹಕ್ಕುಗಳು ಲಾರ್ಡ್ ಲೋಥಿಯಾನ್ ಸಮಿತಿಯಲ್ಲಿ ಸೂಚಿಸಿರುವಂತೆಯೇ ಇರಬೇಕು ಎಂದು ಈ ನಿರ್ಣಯದಲ್ಲಿ ಉದ್ದೇಶಿಸಲಾಗಿದೆ. ಶೋಷಿತ ವರ್ಗಗಳವರ ಮತದಾನದ ಹಕ್ಕುಗಳು, (ಅಥವಾ ಇಡೀ ಹಿಂದೂಸಮುದಾಯದವರ ಹಕ್ಕುಗಳು) ಇತರ ಸಮುದಾಯಗಳವರಿಗೆ ನೀಡಿರುವ ಹಕ್ಕುಗಳಷ್ಟೇ ಇರಬೇಕೆಂಬುದು ಸ್ಪಷ್ಟವಾಗಿದೆ ಮತ್ತು ಈ ವಿಷಯವು ಮಹಾಪ್ರಭುಗಳ ಸರಕಾರದ ಪರಿಶೀಲನೆಯಲ್ಲಿದೆ: (೨) ಅವರ ನಿರ್ಣಯವು ಶೋಷಿತ ವರ್ಗಗಳವರ ಪ್ರತಿನಿಧಿಗಳನ್ನು ಶಾಸನಸಭೆಗಳಿಗೆ ಆಯ್ಕೆಮಾಡುವಲ್ಲಿ ಒಂದು ನಿರ್ದಿಷ್ಟ ಕ್ರಮವನ್ನು ಸೂಚಿಸಿದೆ. ಈ ವಿಷಯವು ಸದರಿ ನಿರ್ಣಯದ

ವ್ಯಾಪ್ತಿಯ ಹೊರಗೆ ಇರಬೇಕಾಗಿದ್ದು, ಶಾಸನಸಭೆಯ ಇಡೀ ಚುನಾವಣೆಯ ಅಂಗವಾಗಿರಬೇಕೆಂಬುದರ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಮತ್ತು ಇದಕ್ಕೆ ಅಸಮಗ್ರವಾದ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸಬಾರದು. ಹೀಗೆ ಹೇಳಿರುವುದರ ಅರ್ಥ, ಮಹಾಪ್ರಭುಗಳ ಸರಕಾರವು ಸದರಿ ನಿರ್ಣಯದ ವಿರುದ್ಧವಾಗಿದೆಯೆಂದಲ್ಲ, ಬದಲಿಗೆ ಈ ಪ್ರಶ್ನೆಗಳು ಪರಿಶೀಲನೆಯಲ್ಲಿವೆ ಎಂಬುದನ್ನು ತಿಳಿಸುವುದಷ್ಟೆ. ಯಾವುದೇ ತಪ್ಪು ಭಾವನೆಗಳು ಮೂಡದಿರಬಾರದೆಂಬ ದೃಷ್ಟಿಯಿಂದ, ಕೇಂದ್ರದಲ್ಲಿ ಬ್ರಿಟಿಷ್ ಭಾರತಕ್ಕೆ ನೀಡಿರುವ ಶೇ ೧೮ರಷ್ಟು ಸಾಮಾನ್ಯ ವರ್ಗದ ಸ್ಥಾನಗಳನ್ನು ಶೋಷಿತವರ್ಗಗಳಿಗೆ ಮೀಸಲಾಗಿಡಬೇಕೆಂಬ ವಿಷಯವನ್ನು ಅವರ ಮತ್ತು ಹಿಂದೂಗಳ ನಡುವೆ ತೆಗೆದುಕೊಳ್ಳುವ ನಿರ್ಣಯಕ್ಕೆ ಬಿಡಲಾಗಿದೆ. (ಚಪ್ಪಾಳೆ)[೧*]

ಸಂಜೆ, ಪ್ರಾರ್ಥನೆಯನ್ನು ಕಾರಾಗೃಹದ ಅಂಗಳದಲ್ಲಿ ನಡೆಸಲಾಯಿತು. ಅನಂತರ ಸಂಜೆ ೫.೩೦ರ ಸುಮಾರಿನಲ್ಲಿ ಕಸ್ತೂರಬಾ ಅವರು ಗಾಂಧೀಜಿ ಅವರಿಗೆ ಕಿತ್ತಳೆಯ ರಸವನ್ನು ನೀಡಿ, ಉಪವಾಸವನ್ನು ಕೊನೆಗೊಳಿಸಿದರು. ಗಾಂಧಿಯವರ ೨೦೦ ಅಭಿಮಾನಿಗಳು ಬೆಂಬಲಿಗರು ನೆರೆದಿದ್ದರು. ತಮ್ಮ ಉಪಸ್ಥಿತಿಯಿಂದ ಗಮನ ಸೆಳೆದಿದ್ದ ಗಣ್ಯರೆಂದರೆ ಕವಿ ಟ್ಯಾಗೋರ್, ಸರೋಜಿನಿ ನಾಯ್ಡು, ಸರ್ದಾರ್ ಪಟೇಲ್, ಸ್ವರೂಪ ರಾಣಿ ನೆಹರು.[೧]

**ನಾನು ಮಾನವೀಯತೆಯ ಕೂಗಿಗೆ ಓಗೊಟ್ಟು ಗಾಂಧೀಯವರ ಜೀವ ಉಳಿಸಿದೆ**

ಈ ವಿಷಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಹೇಳುವುದು ಏನೆಂದರೆ :

ಈ ವಿಷಯದಲ್ಲಿ ವಾಸ್ತವಾಂಶವನ್ನು ಶ್ರೀ ಪ್ಯಾರೇಲಾಲ್ ಅವರು "ಒಂದು ಐತಿಹಾಸಿಕ ಉಪವಾಸ (The Epic Fast) ಎಂಬ ಗ್ರಂಥದಲ್ಲಿ ಅತ್ಯಂತ ರಸವತ್ತಾಗಿ ಚಿತ್ರಿಸಿದ್ದಾರೆ. ಈ ವಿಷಯದಲ್ಲಿ ಕುತೂಹಲವುಳ್ಳವರು ಆ ಪುಸ್ತಕವನ್ನು ಓದಬಹುದು. ಆದರೆ ಇದನ್ನು ಬರೆದಿರುವವರು ಅವರ ಒಬ್ಬ ಆರಾಧಕ ಹಾಗೂ ಇದು ಕೇವಲ ಅವರ ದೃಷ್ಟಿಕೋನ ಮಾತ್ರವೇ ಆಗಿರುತ್ತದೆ. ಇದಕ್ಕೆ ತದ್ವಿರುದ್ಧವಾದ ಮತ್ತೊಂದು ಮುಖವಿದೆ. ಆದರೆ ಅದನ್ನು ಈಗ ಹೇಳಲು ಇಲ್ಲಿ ಸಮಯವಾಗಲೀ ಅವಕಾಶವಾಗಲೀ ಇಲ್ಲ. ನಾನು ಇಲ್ಲಿ ಮಾಡಬಹುದಾದುದು ಏನೆಂದರೆ ಈ ವಿಷಯದಲ್ಲಿ ಗಾಂಧಿಯವರ ಉಪವಾಸದ ಮುನ್ನಾದಿನ ಅವರ ತಂತ್ರದ ಬಗೆಗೆ ನಾನು ನೀಡಿದ್ದ ಹೇಳಿಕೆಯನ್ನು ಪುನರುಚ್ಚರಿಸುವುದು[*]

ಅವರ ಮುಖವಾಡವನ್ನು ಜನರ ಎದುರು ಕಳಚಿ ಇಡುವ ಪ್ರಯತ್ನ ಪಟ್ಟಿದ್ದೇವೆ. ಅವರು ಅದನ್ನು ಅಮರಣಾಂತ ಉಪವಾಸ ಎಂದು ಕರೆದಿದ್ದರು. ಆದರೆ ಗಾಂಧಿ ಅವರಿಗೆ ಸಾಯುವ ಇಚ್ಛೆ ಇರಲಿಲ್ಲ. ಅವರಿಗೆ ಬದುಕಬೇಕು ಎನ್ನುವ ಆಸೆಯು ಅಗಾಧವಾಗಿತ್ತು.

ಆದರೆ ಈ ಉಪವಾಸದಿಂದ ಹಲವು ಸಮಸ್ಯೆಗಳು ಉದ್ಭವವಾದವು. ಅದರಲ್ಲಿ ಮುಖ್ಯವಾದ ಸಮಸ್ಯೆ ಎಂದರೆ ಗಾಂಧೀಯವರನ್ನು ಉಳಿಸುವ ಬಗೆಯಾದರೂ ಎಂತು ಎಂಬುದು. ಅವರ ಜೀವ ಉಳಿಸಲು ಇರುವ ಒಂದೇ ವಿಧಾನ ಎಂದರೆ ಜಾತ್ಯಾಧಾರಿತ ಒಪ್ಪಂದವನ್ನು ಬದಲಿಸುವುದು. ಅದು ತಮ್ಮ ಮನಃಸಾಕ್ಷಿಗೆ ಅಪಾರವಾದ ನೋವನ್ನು ಉಂಟುಮಾಡಿದೆ ಎಂದು ಗಾಂಧಿ ಹೇಳುತ್ತಿದ್ದರು. ಬ್ರಿಟನ್ನಿನ

---

೧. (ಶಾಸನಸಭೆಯಲ್ಲಿನ ಚರ್ಚೆ – ಅಧಿಕೃತ ವರದಿ – ಸಂ. ೫, ೧೯೩೨, ಪುಟಗಳು ೧೩೦೭–೧೩೦೮, ೧೬೩೨ರ ಸೆಪ್ಟೆಂಬರ್ ೨೬, ಸೋಮವಾರ).

* ದುಂಡುಮೇಜಿನ ಸಭೆಯ ಹಾಗೂ ಪೂನಾ ಒಪ್ಪಂದದ ಮೇಲಿನ ಟಿಪ್ಪಣಿಗಳಿಗೆ ಅನುಬಂಧ ೫ನ್ನು ನೋಡಿ.

1. Keer P 215

* See Pp. 143-150 of this Part Editors

ಪ್ರಧಾನ ಮಂತ್ರಿ ಅವರು ಯಾವುದೇ ಸಂದರ್ಭದಲ್ಲಿಯೂ ಇದನ್ನು ನಾನು ಬದಲಿಸುವ ಸಾಧ್ಯತೆ ಇಲ್ಲ ಎಂದು ಬಹಳ ಸ್ಪಷ್ಟವಾಗಿಯೇ ನುಡಿದಿದ್ದರು. ಆದರೆ ಎರಡೂ ಪಂಗಡದವರಿಗೆ ಒಪ್ಪಿಗೆ ಆಗುವ ಅನ್ಯ ಮಾರ್ಗಕ್ಕೆ ತಾವು ಸಮ್ಮತಿ ಸೂಚಿಸಲು ಸಿದ್ಧರಿದ್ದೇವೆ ಎಂದಿದ್ದರು. ನಾನು ಅದೃಷ್ಟವಶಾತ್ ದುಂಡು ಮೇಜಿನ ಸಮಾವೇಶದಲ್ಲಿ ಅಸ್ಪೃಶ್ಯರ ಪ್ರತಿನಿಧಿ ಆಗಿದ್ದೆ. ಆದ್ದರಿಂದ ಅವರ ಯಾವುದೇ ನಿರ್ಧಾರವು ನನ್ನ ಮೇಲೆ ಅವಲಂಬಿತವಾಗಿರುತ್ತದೆ ಎಂದೇ ಜನರು ನಂಬಿದ್ದರು. ಆದರೆ ಅತ್ಯಂತ ಆಶ್ಚರ್ಯಕರ ಅಂಶ ಎಂದರೇ ನಾನೇ ಅಸ್ಪೃಶ್ಯರ ನಾಯಕ ಎಂಬ ಅಂಶವನ್ನು ಯಾರೂ ಪ್ರಶ್ನಿಸಿರಲಿಲ್ಲ. ಮಾತ್ರವಲ್ಲ ಅದನ್ನು ಕಾಂಗ್ರೆಸ್ಸಿಗರೂ ಒಪ್ಪಿಕೊಂಡಿದ್ದರು. ಆದ್ದರಿಂದ ಸ್ವಾಭಾವಿಕವಾಗಿಯೇ ಎಲ್ಲರ ಕಣ್ಣುಗಳು ನನ್ನ ಮೇಲೆ ನೆಟ್ಟಿದ್ದವು. ಎಲ್ಲರೂ ನನ್ನನ್ನು ಖಳನಾಯಕನಂತೆ ನೋಡುತ್ತಿದ್ದರು.

ಆದರೆ ನನ್ನ ವಿಷಯಕ್ಕೆ ಬಂದರೆ ನನಗಿಂತಲೂ ಹೆಚ್ಚಿನ ಅಯೋಮಯ ಮನಃಸ್ಥಿತಿಯಲ್ಲಿ ಬೇರೆ ಯಾರು ಇರಲಿಲ್ಲ. ಇದೊಂದು ಅತ್ಯಂತ ಕಠಿಣವಾದ ಪರಿಸ್ಥಿತಿಯಾಗಿತ್ತು. ಎರಡು ಆಯ್ಕೆಗಳ ನಡುವೆ ಒಂದನ್ನು ನಾನು ಆಯ್ದುಕೊಳ್ಳಬೇಕಿತ್ತು. ನನ್ನೆದುರಿಗೆ ಇದ್ದ ಮಾನವೀಯ ಕರ್ತವ್ಯ ಗಾಂಧೀಯವರನ್ನು ಸಾವಿನಿಂದ ಪಾರುಮಾಡುವುದು. ಮತ್ತೊಂದು ಆಯ್ಕೆ ಎಂದರೆ ಅಸ್ಪೃಶ್ಯರಿಗೆ ಪ್ರಧಾನಮಂತ್ರಿ ಅವರು ನೀಡಿರುವ ಹಕ್ಕನ್ನು ಕೂಡ ಉಳಿಸಿಕೊಳ್ಳುವುದು. ನಾನು ಮಾನವೀಯ ಮೌಲ್ಯಗಳ ಕರೆಗೆ ಓಗೊಟ್ಟು ಗಾಂಧೀಯವರು ಬಯಸಿದ ಹಾಗೆ ಜಾತ್ಯಾಧಾರಿತ ನಾನು ಕೂಡ ಸಮ್ಮತಿಸಿದೆ. ಈ ಒಪ್ಪಂದವೇ ಪೂನಾ ಒಪ್ಪಂದ.

ಈ ಒಪ್ಪಂದದ ಎಲ್ಲಾ ಅಂಶಗಳಿಗೂ ಗಾಂಧಿ ಅವರು ಒಪ್ಪಿಗೆ ಸೂಚಿಸಿದ್ದರು. ಅದನ್ನು ಸರ್ಕಾರವು ಕೂಡ ಒಪ್ಪಿಕೊಂಡು ಭಾರತ ಸರ್ಕಾರದ ಕಾಯ್ದೆಯ ಅಡಿ ಜಾರಿಗೆ ತಂದಿತ್ತು. ಪೂನಾ ಒಪ್ಪಂದಕ್ಕೆ ಹಲವಾರು ಕಡೆಯಿಂದ ಹಲವು ಬಗೆಯ ಪ್ರತಿಕ್ರಿಯೆಗಳು ಕೇಳಿ ಬಂದವು. ಅಸ್ಪೃಶ್ಯರು ದುಃಖಿತರಾಗಿದ್ದರು. ಹಾಗಾಗಲು ಅವರಿಗೆ ಎಲ್ಲಾ ಕಾರಣಗಳೂ ಇದ್ದವು. ಆದರೆ ಹಲವಾರು ಜನರು ಇದನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಒಂದು ವಿಷಯವನ್ನು ಅವರು ಸರಿಯಾಗಿ ಗುರುತಿಸಿದ್ದರು. ಅದೇನೆಂದರೆ ಪ್ರಧಾನಮಂತ್ರಿ ಅವರ ಜಾತ್ಯಾಧಾರಿತ ನಿರ್ಣಯದಲ್ಲಿ ದೊರೆತದ್ದಕ್ಕಿಂತ ಹೆಚ್ಚಿನ ಸ್ಥಾನಗಳು ಪೂನಾ ಒಪ್ಪಂದದ ಪ್ರಕಾರ ಇವರಿಗೆ ದೊರೆತಿತ್ತು. ಪ್ರಧಾನಿಯವರ ನಿರ್ಣಯವು ಇವರಿಗೆ ಕೇವಲ ೭೮ ಸ್ಥಾನಗಳನ್ನು ನೀಡಿದ್ದರೆ ಪೂನಾ ಕಾಯ್ದೆಯು ಇವರಿಗೆ ೧೪೮ ಸ್ಥಾನಗಳನ್ನು ಕೊಡಮಾಡಿತ್ತು. ಆದರೆ ಇದರಿಂದ ನಾವು ಅಸ್ಪೃಶ್ಯರಿಗೆ ಬಹಳಷ್ಟು ಲಾಭವಾಗಿದೆ ಎಂದು ಹೇಳಿದರೆ, ಜಾತ್ಯಾಧಾರಿತ ನಿರ್ಣಯವು ಅವರಿಗೆ ನೀಡಿದ್ದುದನ್ನು ಕಡೆಗಣಿಸಿದಂತಾಗುತ್ತದೆ.

ಜಾತ್ಯಾಧಾರಿತ ನಿರ್ಣಯವು ಶೋಷಿತವರ್ಗದವರಿಗೆ ಎರಡು ಅನುಕೂಲಗಳನ್ನು ಒದಗಿಸಿತ್ತು:

೧. ತಮಗಾಗಿ ಇರುವ ಹಾಗೂ ತಮ್ಮ ವರ್ಗಗಳವರೇ ಆಯ್ಕೆಯಾಗಬೇಕಾಗಿರುವ ಪ್ರತ್ಯೇಕ ಮತಕ್ಷೇತ್ರಗಳಲ್ಲಿ ನಿರ್ದಿಷ್ಟ ಸಂಖ್ಯೆಯ ಸ್ಥಾನಗಳನ್ನು ಶೋಷಿತವರ್ಗಗಳವರಿಗಾಗಿ ನೀಡಲಾಗಿತ್ತು; ಮತ್ತು

೨. ಪ್ರತ್ಯೇಕ ಮತಕ್ಷೇತ್ರ ಹಾಗೂ ಸಾಮಾನ್ಯ ಮತಕ್ಷೇತ್ರ – ಎರಡೂ ಕಡೆಗಳಲ್ಲಿ ಅವರಿಗೆ ಮತಚಲಾಯಿಸುವ ಅವಕಾಶವನ್ನು ನೀಡಲಾಗಿತ್ತು.

ಈಗ ಪೂನಾ ಕಾಯ್ದೆಯಿಂದ ಇವರ ಸ್ಥಾನಗಳೇನೋ ಹೆಚ್ಚಾದವು. ಆದರೆ ಎರಡು ಬಾರಿ ಮತದಾನದ ಹಕ್ಕನ್ನು ಇವರಿಂದ ಕಸಿದುಕೊಳ್ಳಲಾಗಿದೆ. ಇದು ಹೆಚ್ಚುವರಿ ಸ್ಥಾನಗಳ ನೀಡಿಕೆಯಿಂದ ತುಂಬಬಹುದಾದಂತಹ ನಷ್ಟವಲ್ಲ. ಜಾತ್ಯಾಧಾರಿತ ನಿರ್ಣಯವು ನೀಡಿದ್ದ ಎರಡನೆಯ ಮತವು ಹೆಚ್ಚು ಅತ್ಯಂತ ಅಮೂಲ್ಯವಾಗಿತ್ತು.

ರಾಜಕೀಯ ವ್ಯವಸ್ಥೆಯ ಒಂದು ಸಾಧನವಾಗಿದ್ದ ಅದರ ಬೆಲೆಯನ್ನು ಊಹಿಸಲೂ ಸಾಧ್ಯವಿಲ್ಲ. ಇದು ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಸ್ಪೃಶ್ಯರ ಮತದಾನದ ಸಂಖ್ಯೆಯಲ್ಲಿ ಹತ್ತರಲ್ಲಿ ಒಂದು ಭಾಗ. ಇದನ್ನು ಒಂದು ವೇಳೆ ಹಿಂದೂಗಳ ಚುನಾವಣೆಯಲ್ಲಿ ಬಳಸುವಂತಾಗಿದ್ದರೆ, ಅಸ್ಪೃಶ್ಯರು ಚುನಾವಣಾ ವಿಷಯದಲ್ಲಿ ನಿರ್ಣಾಯಿಕ ಪತ್ರವನ್ನು ವಹಿಸಬಹುದಿತ್ತು. ಯಾವ ಹಿಂದೂ ಧರ್ಮದ ವ್ಯಕ್ತಿಯು ತನ್ನ ಕ್ಷೇತ್ರದಲ್ಲಿನ ಅಸ್ಪೃಶ್ಯರನ್ನು ಕಡೆಗಣಿಸಲು ಅಥವಾ ಅವರನ್ನು ಎದುರು ಹಾಕಿಕೊಳ್ಳಲು ಸಾಧ್ಯವೇ ಆಗುತ್ತಿರಲಿಲ್ಲ. ಅವರು ಅಸ್ಪೃಶ್ಯರ ಮತಗಳ ಮೇಲೆಯೇ ಅವಲಂಬಿತರಾಗುವಂತಿರುತ್ತಿತ್ತು. ಆದರೆ ಇಂದು ಅಂತಹ ಅತ್ಯಮೂಲ್ಯ ಹಕ್ಕನ್ನೇ ಅವರಿಂದ ಕಿತ್ತುಕೊಂಡಂತಾಗಿದೆ ಹಿಂದಿನ ಜಾತ್ಯಾಧಾರಿತ ನಿರ್ಣಯದಲ್ಲಿ ನೀಡಿದ್ದುದಕ್ಕಿಂತ ಹೆಚ್ಚಿನ ಸ್ಥಾನಗಳು ಅವರಿಗೆ ದಕ್ಕಿವೆ ಅಷ್ಟೆ. ಇದರಿಂದ ಅರ್ಧದಷ್ಟು ಜನರು ಉದಾಸೀನನಾಗಿದ್ದಾರೆ. ಆದರೆ ಒಂದು ವೇಳೆ ಜಾತ್ಯಾಧಾರಿತ ನಿರ್ಣಯವು ಜಾರಿಯಲ್ಲಿ ಉಳಿಯುವಂತಾಗಿದ್ದರೆ ಕೆಲ ಸ್ಥಾನಗಳೇನೋ ಕಡಿಮೆ ಆಗುತ್ತಿದ್ದವು ಆದರೆ ಎರಡು ಬಾರಿ ಮತದಾನದ ಹಕ್ಕಿನಿಂದಾಗಿ ಪ್ರತಿಯೋರ್ವ ಅಸ್ಪೃಶ್ಯನೂ ಹೆಚ್ಚಿನ ಪ್ರಾಶಸ್ತ್ಯವನ್ನು ಹೊಂದಿರುತ್ತಿದ್ದನು. ಇದಕ್ಕೆ ಹೋಲಿಸಿದರೆ ಇವರಿಗೆ ದೊರೆತಿರುವ ಸೌಲಭ್ಯ ಅತ್ಯಂತ ಲಾಭಕರವಾದುದೇನೂ ಅಲ್ಲ. ಪೂನಾ ಕಾಯ್ದೆಯನ್ನು ಹಿಂದೂಗಳು ಒಪ್ಪಿಕೊಂಡರಾದರೂ ಅವರಿಗೂ ಅದರಿಂದ ತೃಪ್ತಿಯಾಗಿಲ್ಲ. ಈ ಪರಿಸ್ಥಿತಿಯಲ್ಲಿ ಅವರುಗಳಿಗೆ ಗಾಂಧೀಯವರ ಜೀವ ಉಳಿಸುವುದೇ ಅತ್ಯಂತ ಮುಖ್ಯವಾಗಿತ್ತು. ಆದ್ದರಿಂದ ಈ ಒಪ್ಪಂದದಲ್ಲಿ ಇರುವ ಕೆಲ ಅಂಶಗಳಿಂದ ಬೇಸರವಾಗಿದ್ದರೂ ಕೂಡ, ಅವರಲ್ಲಿ ಅದನ್ನು ತಿರಸ್ಕರಿಸುವ ಶಕ್ತಿ ಇರಲಿಲ್ಲ. ಹಿಂದೂಗಳ ಅತೃಪ್ತಿ ಹಾಗೂ ಅಸ್ಪೃಶ್ಯರ ಅಸಮಾಧಾನದ ನಡುವೆಯೇ ಒಪ್ಪಿಗೆ ಪಡೆದುಕೊಂಡ ಪೂನಾ ಕಾಯ್ದೆಯು ಭಾರತ ಸರ್ಕಾರದ ಕಾಯ್ದೆಗಳ ಕೆಳಗೆ ಪಟ್ಟಿಯಾಗಿ ಹೋಯಿತು.[೧]

ಪೂನಾ ಕಾಯ್ದೆಯ ನಂತರ ೩ನೆಯ ಸುತ್ತಿನ ದುಂಡು ಮೇಜಿನ ಸಮಾವೇಶವು ಇಂಗ್ಲೆಂಡಿನಲ್ಲಿ ಜರುಗಿತು. ಅದರಲ್ಲಿ ಭಾಗಿಯಾಗಲು ಡಾ. ಅಂಬೇಡ್ಕರ್ ಅವರು ೧೯೩೨ರ ನವೆಂಬರ್ ೭ ರಂದು ಭಾರತದಿಂದ ಹೊರಟರು. ಗಾಂಧೀಯವರ ಉಪವಾಸ ಹಾಗೂ ಪೂನಾ ಒಪ್ಪಂದ ಎಲ್ಲೆಡೆ ಚರ್ಚೆಯ ವಿಷಯ ಆಗಿದ್ದವು. ಡಾ. ಅಂಬೇಡ್ಕರ್ ಅವರ ವಿಷಯವಾಗಿ ಹೊರಬಿದ್ದ ಒಂದು ಅಭಿಪ್ರಾಯ ಈ ರೀತಿ ಇದೆ :

"ಭಾರತವನ್ನು ನಡುಗಿಸಿಬಿಟ್ಟ ಮಹಾತ್ಮಾ ಗಾಂಧಿ ಅವರ ಉಪವಾಸ ಹಾಗೂ ಪೂನಾ ಒಪ್ಪಂದವನ್ನು ಕುರಿತು ಹಡಗಿನಲ್ಲಿ ಹಲವು ಪ್ರಮುಖ ಪ್ರಯಾಣಿಕರು ಮಾತನಾಡುತ್ತಿದ್ದರು. ಗಾಂಧಿಯವರ ಉಪವಾಸ ಅವರ ಮೇಲೆ ಅಪಾರ ಪ್ರಭಾವ ಬೀರಿತ್ತು ಒಬ್ಬ ಯುರೋಪಿನ ಪ್ರಯಾಣಿಕ ಅಂಬೇಡ್ಕರ್ ಅವರನ್ನು ತೋರಿಸಿ ತನ್ನ ಸ್ನೇಹಿತನಿಗೆ ಈ ರೀತಿ ಹೇಳುತ್ತಿದ್ದ: ಈ ಯುವಕನೇ ಭಾರತದ ಇತಿಹಾಸದಲ್ಲಿ ಹೊಸ ಪುಟಗಳನ್ನು ಬರೆಯುತ್ತಿದ್ದಾನೆ."[೨]

---

೧. ಬರೆಹಗಳು ಮತ್ತು ಭಾಷಣಗಳು ಸಂ. ೯ ಪುಟಗಳು ೮೭–೯೦
೨. ಖೇರ್ ಪು. ೨೨೦.

# ವಿಭಾಗ – IV

## ನಾಸಿಕ್‌ನಲ್ಲಿ ಕಾಲಾರಾಂ ದೇವಸ್ಥಾನದ ಪ್ರವೇಶಕ್ಕಾಗಿ ಸತ್ಯಾಗ್ರಹ ಹಾಗೂ ದೇವಸ್ಥಾನ ಪ್ರವೇಶ ಚಳವಳಿ

# ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಶಕ್ತಿ ಹಾಗೂ ಸಾಮರ್ಥ್ಯದ ಉಪಯೋಗ

ಭಾರತದ ಇತಿಹಾಸದಲ್ಲಿ ೧೯೩೦ನೆಯ ಇಸವಿಯು ಕ್ರಿಯೆ ಹಾಗೂ ಪ್ರತಿಕ್ರಿಯೆಗಳ ವರ್ಷವಾಗಿತ್ತು. ಅದು ಹೊಸ ರೀತಿಯ ಚಿಂತನೆ ಹಾಗೂ ಹೊಸ ದೃಷ್ಟಿಕೋನಗಳು ಹಾಗೂ ತುಳಿತದ ಹೊಸ ವಿಧಾನಗಳ ಮತ್ತು ಮರುಮೈತ್ರಿಗಳ ವರ್ಷವಾಗಿತ್ತು. ಅದಕ್ಕಿಂತ ಮಿಗಿಲಾಗಿ ಅದು "ಸತ್ಯಾಗ್ರಹಗಳ ಯುಗ'ವಾಗಿತ್ತು. ಈ ವರ್ಷವೇ ಮಹಾತ್ಮಾಗಾಂಧೀಯವರು ಕಾಂಗ್ರೆಸ್ಸಿನ ಮುಂದಾಳತ್ವ ವಹಿಸಿ ಸ್ವಾತಂತ್ರ್ಯ ಹೋರಾಟದ ಕೆಚ್ಚನ್ನು ೧೯೩೦ರ ಮಾರ್ಚ ೧೨ರಂದು ಹುಟ್ಟು ಹಾಕಿದ್ದರು. ಇಡೀ ದೇಶದಲ್ಲಿ ಅಶ್ವದಳದ ಪೋಲಿಸರ ಗುಂಡಿನ ಸುರಿಮಳೆ, ಕಾರಾಗೃಹ ವಾಸಗಳ ಪರಿಣಾಮವನ್ನೂ ಲೆಕ್ಕಿಸದೆ ಅಹಿಂಸಾತ್ಮಕವಾಗಿ ಅವುಗಳನ್ನು ಎದುರಿಸುವ ರಂಗವನ್ನು ನಿರ್ಮಿಸಿದ್ದರು.

ಗಾಂಧೀಯವರ ದಂಡಿ ಯಾತ್ರೆ ಪ್ರಾರಂಭ ಆಗುವ ೧೦ ದಿನಗಳ ಮೊದಲು, ಭಾರತ ಸಾಮಾಜಿಕ ಚಳವಳಿಯ ಜನಕರಾದಂತಹ ಅಂಬೇಡ್ಕರ್ ಅವರು ನಾಸಿಕ್‌ನಲ್ಲಿ ದೇವಸ್ಥಾನ ಪ್ರವೇಶ ಚಳುವಳಿಯನ್ನು ಪ್ರಾರಂಭಿಸಿದರು. ಈ ಚಳುವಳಿಗೆ ಕಳೆದ ಮೂರು ತಿಂಗಳುಗಳಿಂದ ತಯಾರಿ ನಡೆದಿತ್ತು. ಬೊಂಬಾಯಿಯಲ್ಲಿ ಕುಳಿತುಕೊಂಡೇ ಡಾ. ಅಂಬೇಡ್ಕರ್ ಅವರು ತಮ್ಮ ಪತ್ರಗಳ ಹಾಗೂ ನಂಬಿಕಸ್ತ ಸಹವರ್ತಿಗಳ ಮೂಲಕ ಈ ಸತ್ಯಾಗ್ರಹಕ್ಕೆ ಎಲ್ಲಾ ರೀತಿಯ ಮುಂದಾಳತ್ವ, ಪ್ರೋತ್ಸಾಹವನ್ನು ನೀಡಿ ಚಳವಳಿಯನ್ನು ಸಂಘಟಿಸಿದ್ದರು. ನಾಸಿಕ್ ನಗರದ ಶೋಷಿತ ವರ್ಗಗಳ ಜನರು ಒಂದು ಸತ್ಯಾಗ್ರಹ ಸಮಿತಿಯನ್ನು ಮಾಡಿಕೊಂಡು. ಕಾರ್ಯದರ್ಶಿ ಬಾಬು ರಾವ್ ಗಾಯಕ್‌ವಾಡ್ ಅವರ ಮೂಲಕ ಕಾಲಾರಾಂ ದೇವಸ್ಥಾನದ ಆಡಳಿತ ಮಂಡಳಿಯವರಿಗೆ ಒಂದು ನಿಗದಿತ ದಿನಾಂಕದ ಒಳಗೆ ಈ ದೇವಸ್ಥಾನದ ಒಳಕ್ಕೆ ಪ್ರವೇಶಿಸಲು ಅಸ್ಪೃಶ್ಯರಿಗೆ ಅವಕಾಶ ಕಲ್ಪಿಸದೇ ಹೋದರೆ, ಸತ್ಯಾಗ್ರಹ ಹೂಡುವುದಾಗಿ ತಿಳಿಸಿದ್ದರು. ನಾಸಿಕ್‌ಗೆ ಆಗಮಿಸಿ, ಈ ದೇವಸ್ಥಾನದಲ್ಲಿದ್ದ ರಾಮನನ್ನು ಪೂಜಿಸುವ ತಮ್ಮ ಹಕ್ಕನ್ನು ಕಾಯ್ದುಕೊಳ್ಳಲು ಮತ್ತೊಂದು ಕರೆಯೂ ಅಸ್ಪೃಶ್ಯರಿಗೆ ರವಾನೆಯಾಗಿತ್ತು. ಸತ್ಯಾಗ್ರಹ ಸಮಿತಿಯ ಈ ಕರೆಗೆ ಓಗೊಟ್ಟು ಇದಕ್ಕೆಂದೇ ವಿಶೇಷ ಚಪ್ಪರವನ್ನು ನಿರ್ಮಿಸಿದ್ದ ಸ್ಥಳದಲ್ಲಿ ೧೫,೦೦೦ ಜನ ಸ್ವಯಂಸೇವಕರು ಮತ್ತು ಅಸ್ಪೃಶ್ಯ ಸದಸ್ಯರು ನೆರೆದರು. ನೆರೆದಿದ್ದವರಲ್ಲಿ ಪ್ರಮುಖರು ಎಂದರೆ ದೇವರಾವ್ ನಾಯಕ್, ರಾಜ್‌ಭೋಜ್, ಪ್ರಧಾನ್, ಶಿವಟಾರ್ಕರ್, ಪತಿತಪಾವನ ದಾಸ್ ಹಾಗೂ ಬಿ.ಜಿ. ಖೇರ್.

ಕಡೆಗೂ ಎಲ್ಲರೂ ಎದುರು ನೋಡುತ್ತಿದ್ದ ದಿನ ಬಂದ್ದಿತು. ಅಂದು ೧೯೩೦ ಮಾರ್ಚ ೨ ಭಾನುವಾರ ಬೆಳಿಗ್ಗೆ ೧೦ ಘಂಟೆಗೆ ಅಲ್ಲಿನ ಪರಿಸ್ಥಿತಿ ಅವಲೋಕಿಸಿ ಯಾವ ರೀತಿ ಸತ್ಯಾಗ್ರಹ ಕೈಗೊಳ್ಳಬೇಕು ಎಂದು ನಿರ್ಧಾರತೆಗೆದುಕೊಳ್ಳಲು ಡಾ. ಬಿ.ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಸಮಾವೇಶ ಆರಂಭವಾಯಿತು[೧].

---

1. Keer P 136

ಕಾಲಾರಾಂ ದೇವಸ್ಥಾನದ ಪ್ರವೇಶ ಕುರಿತು ಆಲೋಚನೆಯನ್ನು ಪ್ರಚೋದಿಸುವಂತಹ ಭಾಷಣವನ್ನು ಅಂಬೇಡ್ಕರ್ ಅವರು ಮಾಡಿದರು. "ಇಂದು ನಾವು ಇನ್ನೇನು ದೇವಸ್ಥಾನ ಪ್ರವೇಶಿಸಲಿದ್ದೇವೆ' ಎಂದು ಅವರು ಪ್ರಾರಂಭಿಸಿದರು. "ಆದರೆ ಕೇವಲ ದೇವಸ್ಥಾನವನ್ನು ಪ್ರವೇಶಿಸುವುದಿಂದ ನಮ್ಮ ಸಮಸ್ಯೆ ಬಗೆ ಹರಿಯುವುದಿಲ್ಲ. ನಮ್ಮ ಸಮಸ್ಯೆ ಇದಕ್ಕಿಂತ ಅಗಾಧವಾದುದು. ಅದು ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳನ್ನು ವ್ಯಾಪಿಸಿಕೊಂಡಿದೆ. ಕಾಲಾರಾಂ ದೇವಸ್ಥಾನದ ಪ್ರವೇಶ ಹಿಂದೂಗಳ ಮನದಲ್ಲಿ ಒಂದು ಭಾವನೆ ಬಿತ್ತುವ ಸಲುವಾಗಿ ಆಗುತ್ತಿದೆ. ಮೇಲ್ಜಾತಿಯ ಹಿಂದೂಗಳು ಹಲವಾರು ಯುಗಗಳಿಂದ ನಮಗೆ ಅನ್ಯಾಯ ಮಾಡುತ್ತಾ ಬಂದಿದ್ದಾರೆ. ಇದೇ ಹಿಂದೂಗಳು ಮಾನವೀಯತೆಯ ಆಧಾರದ ಮೇಲೆ ನಮಗೆ ನಮ್ಮ ಹಕ್ಕನ್ನು ನೀಡುವವರೇ ಎಂದು ತಿಳಿಯಲು ಈ ಪ್ರಯತ್ನ ಮಾಡುತ್ತಿದ್ದೇವೆ. ಈ ಪ್ರಶ್ನೆಗೆ ಸತ್ಯಾಗ್ರಹದ ಮೂಲಕ ಉತ್ತರ ಪಡೆಯುವ ಪ್ರಯತ್ನ ಪಡುತ್ತಿದ್ದೇವೆ. ಮೇಲ್ಜಾತಿಯ ಹಿಂದೂಗಳು ನಮ್ಮನ್ನು ಅತ್ಯಂತ ಕೀಳಾಗಿ ಕಂಡರು ಹಾಗೂ ನಾಯಿ ಬೆಕ್ಕುಗಳಿಗಿಂತ ಕಡೆಯಾಗಿ ನಮ್ಮನ್ನು ಕಂಡರು. ಇವರು ನಮ್ಮನ್ನು ಮನಷ್ಯರಂತೆ ಕಾಣುವವರೇ ಅಥವಾ ಇಲ್ಲವೇ ಎಂಬುದನ್ನು ತಿಳಿಯುವ ಪ್ರಯತ್ನ ನಮ್ಮದು. ಸತ್ಯಾಗ್ರಹವು ಈ ಪ್ರಶ್ನೆಗೆ ಉತ್ತರ ನೀಡಲಿದೆ. ಇದರಿಂದ ಹಿಂದೂಗಳ ಮನದಲ್ಲಿ ಒಂದು ಬದಲಾವಣೆ ತರುವ ಪ್ರಯತ್ನ ನಮ್ಮದು. ಆದ್ದರಿಂದ ಈ ಸತ್ಯಾಗ್ರಹದ ಯಶಸ್ಸು ಹಿಂದೂಗಳ ಮನಸ್ಥಿತಿಯನ್ನು ಅವಲಂಬಿಸಿರುತ್ತದೆ.

ನಮ್ಮ ನಿಜವಾದ ಸಮಸ್ಯೆ ಕಾಲಾರಾಂ ದೇವಸ್ಥಾನದ ಪ್ರವೇಶದಿಂದ ಕೊನೆಗೊಳ್ಳುವುದಿಲ್ಲ. ಅದು ನಮ್ಮ ಜೀವನದಲ್ಲಿ ಯಾವುದೇ ಬದಲಾವಣೆಯನ್ನು ತರುವುದಿಲ್ಲ. ಆದರೆ ಮೇಲ್ಜಾತಿಯ ಹಿಂದೂಗಳ ಮನಸ್ಥಿತಿಯ ಪರೀಕ್ಷೆ ಇದು. ಹೊಸ ಯುಗದ ಹೊಸ ಚಿಂತನೆಗಳನ್ನು ಒಪ್ಪಿಕೊಳ್ಳುವ ಇಚ್ಛೆ ಹಿಂದೂಗಳಿಗೆ ಇದೆಯೋ ಎಂಬುದರ ಪರೀಕ್ಷೆ ಇದು. "ಮನುಷ್ಯನನ್ನು ಮನುಷ್ಯನಂತೆ ಕಾಣಬೇಕು. ಆತನಿಗೆ ಎಲ್ಲಾ ರೀತಿಯ ಮಾನವೀಯ ಅಧಿಕಾರವನ್ನು ನೀಡಬೇಕು. ಮನುಷ್ಯನ ಗೌರವವನ್ನು ಕಾಪಾಡಬೇಕು. ಈ ವಿಷಯಗಳ ಪರೀಕ್ಷೆ ಆಗಲಿದೆ. ಈ ಗುರಿಯನ್ನು ಕಾಣಲೆಂದೇ ನಾವು ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದೇವೆ. ಇಲ್ಲಿರುವ ಪ್ರಶ್ನೆಯೆಂದರೆ ಮೇಲ್ವರ್ಗದ ಹಿಂದೂಗಳು ಅದೇ ರೀತಿ ನಡೆದುಕೊಂಡು ಈ ಸಮಾಜದಲ್ಲಿ ಜಾರಿ ಆಗುವಂತೆ ಮಾಡುವವರೇ ಎಂಬುದು ಮುಖ್ಯ ಪ್ರಶ್ನೆ.

ಈ ದೇವಸ್ಥಾನದಲ್ಲಿ ಕಲ್ಲಿನ ದೇವ ಮೂರ್ತಿ ಇರುವುದು ನಮಗೆ ತಿಳಿದಿದೆ. ಅದನ್ನು ಕಾಣುವುದರಿಂದ ಇಲ್ಲವೇ ಪ್ರಾರ್ಥನೆ ಮಾಡುವುದರಿಂದ ನಮ್ಮ ಸಮಸ್ಯೆ ಪರಿಹಾರ ಆಗುವುದಿಲ್ಲ. ಈ ದೇವಸ್ಥಾನ ಇದುವರೆಗೆ ಲಕ್ಷಗಟ್ಟಲೇ ಜನರು ಭೇಟಿ ಕೊಟ್ಟಿರಬಹುದು ಹಾಗೂ ದೇವರನ್ನು ಕಂಡಿರಬಹುದು. ಅವರೆಲ್ಲರ ಸಮಸ್ಯೆ ಪರಿಹಾರವಾಗಿ ಹೋಗಿದೆ ಎಂದು ಇದರ ಅರ್ಥವೇ? ನಮಗೆ ಇದು ತಿಳಿದಿದೆ. ಆದರೆ ಇಂದು ನಾವು ಹಮ್ಮಿಕೊಂಡಿರುವ ಸತ್ಯಾಗ್ರಹವು ಹಿಂದೂಗಳ ಮನಃಸ್ಥಿತಿಯಲ್ಲಿ ಬದಲಾವಣೆ ತರುವ ಸಲುವಾಗಿ ಈ ಒಂದು ನಿಯಮ ಉಳಿಸಿಕೊಂಡು ನಾವು ಇಂದಿನ ಸತ್ಯಾಗ್ರಹ ಪ್ರಾರಂಭ ಮಾಡುತ್ತಿದ್ದೇವೆ.[೧]

ಮಧ್ಯಾಹ್ನಕ್ಕೆ ಈ ಸಮಾವೇಶವನ್ನು ಮುಂದೂಡಲಾಯಿತು. ಪುನಃ ೧.೩೦ ಘಂಟೆಗೆ ಆರಂಭಗೊಂಡಿತು.

ಮಧ್ಯಾಹ್ನ ೩ ಘಂಟೆಗೆ ಜಮಾಯಿಸಿದ್ದ ಜನರೆಲ್ಲರೂ ೪ ವಿಭಾಗಗಳಾಗಿ ತಮ್ಮನ್ನು ವಿಂಗಡಿಸಿಕೊಂಡರು

---

1. Dr. Babasaheb Ambedkarachi Patre (Marathi) Shankar Rao Kharat Pp. 46-47 Englisg Translation by Editors.

ಹಾಗು ೧ ಮೈಲಿ ಉದ್ದ ಮೆರವಣಿಗೆ ಕೈಗೊಂಡರು. ನಾಸಿಕ್ ನಗರದ ಇತಿಹಾಸದಲ್ಲಿ ಇದು ಅತ್ಯಂತ ದೊಡ್ಡ ಮೆರವಣಿಗೆ ಆಗಿತ್ತು. ಮೆರವಣಿಗೆಯ ಮುಂದೆ ಸೇನೆಯ ರೀತಿಯಲ್ಲಿ ವಾದ್ಯಗೋಷ್ಠಿ ಸಾಗುತ್ತಿತ್ತು. ಇದು ಅನೇಕ ಶೋಷಿತ ವರ್ಗದ ಜನರು ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ದ್ಯೋತಕವಾಗಿತ್ತು. ಅದರ ಹಿಂದೆ "ಸ್ಕೌಟ್ಸ್"ನ ಒಂದು ಪಡೆ ಸಾಗುತ್ತಿತ್ತು. ಇವರ ಹಿಂದೆ ಸುಮಾರು ೫೦೦ ಜನ ಸ್ತ್ರೀ ಸತ್ಯಾಗ್ರಹಿಗಳು ಸಾಗಿ ಬರುತ್ತಿದ್ದರು. ಇದು ಸಮಾಜದಲ್ಲಿ ಆಗುತ್ತಿದ್ದ ಕ್ರಾಂತಿಕಾರಿ ಬದಲಾವಣೆಯ ದ್ಯೋತಕವಾಗಿತ್ತು. ಅವರ ಹಿಂದೆ ಬರುತ್ತಿದ್ದದ್ದು ಲೆಕ್ಕಕ್ಕೆ ಸಿಗಲಾರದಷ್ಟು ಸತ್ಯಾಗ್ರಹಿಗಳು. ಅತ್ಯಂತ ಉತ್ಸಾಹ, ಶ್ರದ್ಧೆ ಹಾಗೂ ಹುಮ್ಮಸ್ಸಿನಿಂದ ಸಾಗುತ್ತಿದ್ದ ಇವರಲ್ಲಿ, ಗುರಿ ತಲುಪುವ ಅದಮ್ಯ ಬಯಕೆ ಎದ್ದು ಕಾಣುತ್ತಿತ್ತು. ಈ ಮೆರವಣಿಗೆಯು ಸಾಗಿ ಬಂದು ದೇವಸ್ಥಾನದ ಪೂರ್ವ ಭಾಗದ ಬಾಗಿಲನ್ನು ತಲುಪಿತು. ಆ ಸಮಯಕ್ಕೆ ಜಿಲ್ಲೆ ನ್ಯಾಯಾಧೀಶರು, ಪೋಲಿಸ್ ಸೂಪರಿಂಟೆಂಡೆಂಟ್ ಅವರು ಹಾಗೂ ನಗರದ ಉಚ್ಚ ನ್ಯಾಯಾಧೀಶರು ದೇವಸ್ಥಾನದ ಬಾಗಿಲ ಬಳಿ ನಿಂತಿದ್ದರು. ದೇವಸ್ಥಾನದ ಎಲ್ಲಾ ದ್ವಾರಗಳನ್ನೂ ಮುಚ್ಚಲಾಗಿತ್ತಾದ್ದರಿಂದ ಗೋದಾವರಿ ಘಾಟ್‌ನತ್ತ ಈ ಮೆರವಣಿಗೆಯು ಸಾಗಿತು. ಅಲ್ಲಿ ಅದು ಒಂದು ಸಮಾವೇಶದ ರೂಪ ಪಡೆಯಿತು.

ಪುನಃ ರಾತ್ರಿ ೧೧ ಘಂಟೆಯವರೆಗೂ ಮುಖಂಡರೆಲ್ಲರೂ ಚರ್ಚಿಸಿ ದೇವಸ್ಥಾನದ ಬಾಗಿಲು ತೆರೆಯುವವರೆಗೂ ದ್ವಾರದ ಎದುರು ಅಹಿಂಸಾತ್ಮಕ ಚಳುವಳಿ ಕೈಗೊಳ್ಳುವ ನಿರ್ಧಾರವನ್ನು ಕೈಗೊಂಡರು. ಹೀಗೆ ಐತಿಹಾಸಿಕ ಹೋರಾಟವೊಂದು ೧೯೩೦ರ ಮಾರ್ಚಿ ೩ರಂದು ಆರಂಭವಾಯಿತು. ದೇವಸ್ಥಾನದ ದ್ವಾರದ ಎದುರು ಮೊದಲು ಸರದಿಯ ಅನುಸಾರ ೧೨೫ ಪುರುಷರು ಹಾಗೂ ೨೫ ಸ್ತ್ರೀಯರು ಧರಣಿ ಕೈಗೊಂಡರು. ಇವರು ದೇವಸ್ಥಾನದ ನಾಲ್ಕೂ ದ್ವಾರಗಳಲ್ಲಿ ಕುಳಿತಿದ್ದರು. ಇನ್ನೂ ಸುಮಾರು ೮,೦೦೦ ಸತ್ಯಾಗ್ರಹಿಗಳು ತಮ್ಮ ಸರತಿಗಾಗಿ ಕಾಯ್ದುಕುಳಿತಿದ್ದರು. ಆದರೆ ದೇವಸ್ಥಾನದ ಗೋಡೆಗಳಿಗೆ ಅಡ್ಡಲಾಗಿ ತಡೆಗಳನ್ನು ನಿರ್ಮಿಸಿ ದ್ವಾರಗಳನ್ನು ಮುಚ್ಚಲಾಗಿತ್ತು. ಸತ್ಯಾಗ್ರಹಿಗಳು ಹೊರಗೆ ಕುಕ್ಕರಗಾಲಿನಲ್ಲಿ ಕುಳಿತರು ಭಜನೆ ಹಾಗೂ ಚುಟುಕು ಪದ್ಯಗಳನ್ನು ಹಾಡುತ್ತಿದ್ದರು. ಇವರ ಸುತ್ತಲೂ ಇನ್ನು ೩,೦೦೦ ಜನರು ಜಮಾಯಿಸತೊಡಗಿದ್ದರು. ಆದರೆ ಪೋಲಿಸರು ಅತ್ಯಂತ ಎಚ್ಚರಿಕೆಯಿಂದ ಇದ್ದರು ಹಾಗೂ ಅವರೆಲ್ಲರ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು. ಪ್ರತಿಯೊಂದು ದ್ವಾರದಲ್ಲಿಯೂ ಶಸ್ತ್ರಸಜ್ಜಿತ ಪೋಲಿಸರನ್ನು ಕಾವಲು ಇರಿಸಲಾಗಿತ್ತು. ಇಬ್ಬರು ಮೊದಲ ದರ್ಜೆ ಮ್ಯಾಜಿಸ್ಟ್ರೇಟ್‌ರನ್ನು ತುರ್ತು ಸಂದರ್ಭದ ನಿರ್ವಹಣೆಗಾಗಿ ನಿಯೋಜನೆ ಮಾಡಲಾಗಿತ್ತು. ಪೋಲಿಸ್ ಆಯುಕ್ತರಾದ ರೇನಾಲ್ಸ್ ಎಂಬುವವರು ತಮ್ಮ ಕಚೇರಿಯನ್ನು ದೇವಸ್ಥಾನದ ಹೊರಗೆ ಒಂದು ಟೆಂಟಿಗೆ ಬದಲಾಯಿಸಿಕೊಂಡುಬಿಟ್ಟಿದ್ದರು.

ಇತ್ತ ದ್ವಾರಗಳನ್ನು ಮುಚ್ಚಿತ್ತಾದ್ದರಿಂದ ಸ್ಪೃಶ್ಯರಿಗೂ ಪ್ರವೇಶ ಇಲ್ಲದಂತೆ ಆಗಿತ್ತು. ಈ ಸಮಸ್ಯೆಗೆ ಯಾವ ರೀತಿ ಪರಿಹಾರ ಕಂಡು ಹಿಡಿಯುವುದು ಎಂದು ಅವರ ನಾಯಕರು ಮುಚ್ಚಿದ ದ್ವಾರದ ಒಳಗೆ ತಮ್ಮ ತಮ್ಮಲ್ಲಿಯೇ ಚರ್ಚೆ ಮಾಡುತ್ತಿದ್ದರು. ಒಂದು ವೇಳೆ ಹಿಂದೂಗಳಿಗೆ ಎಂದು ದ್ವಾರಗಳನ್ನು ತೆಗೆದು ಇರಿಸಿದಿದ್ದರೆ, ಕಷ್ಟಕರವಾದ ಪರಿಸ್ಥಿತಿ ಉದ್ಭವ ಆಗುವ ಸಾಧ್ಯತೆಯಿತ್ತು.

ಅಂದು ರಾತ್ರಿ ನಾಸಿಕ್ ನಗರದ ಸಾರ್ವಜನಿಕರ ಸಭೆ ನಡೆಸಲಾಯಿತು. ಇದರ ಅಧ್ಯಕ್ಷತೆಯನ್ನು ಶಂಕರಾಚಾರ್ಯರಾದ ಡಾ. ಕುರ್ತಕೋಟಿ ವಹಿಸಿದ್ದರು. ಆದರೆ ಇದು ಕೂಡ ಅಯೋಮಯತೆಯಲ್ಲಿಯೇ ಮುಕ್ತಾಯವಾಯಿತು. ಏಕೆಂದರೆ ಸಂಪ್ರದಾಯವಾದಿ ಹಿಂದೂಗಳೇ ಈ ಚರ್ಚೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸನಾತನಿಗಳು ಈ ಹೊತ್ತಿಗಾಗಲೇ ಬಹಳ ಹೆದರಿ ರೌಡಿಗಳಂತೆ ವರ್ತಿಸತೊಡಗಿದ್ದರು.

ಅವರು ಈ ಚರ್ಚೆ ನಡೆಸುತ್ತಿದ್ದವರ ಮೇಲೆ ಕಲ್ಲುಗಳನ್ನು ಹಾಗೂ ಪಾದರಕ್ಷೆಗಳನ್ನು ಎಸೆಯತೊಡಗಿದರು. ಒಂದು ವೇಳೆ ಅಸ್ಪೃಶ್ಯರಿಗೆ ದೇವಾಲಯದ ಬಾಗಿಲುಗಳನ್ನು ತೆರೆದರೆ ಶ್ರೀರಾಮನನ್ನೂ ಹೊರಗೆ ಎಸೆದುಬಿಡುವರು ಎಂಬಂತೆ ಕಾಣುತ್ತಿತ್ತು.

ಈ ಸತ್ಯಾಗ್ರಹವು ಸುಮಾರು ಒಂದು ತಿಂಗಳವರೆಗೂ ನಿರಂತರವಾಗಿ ಮುಂದುವರೆಯಿತು. ಏಪ್ರಿಲ್ ೯ರ ಬೆಳಗಾಯಿತು. ಅಂದು ರಾಮೋತ್ಸವದ ದಿನವಾಗಿತ್ತು. ಈ ಸಮಯಕ್ಕೆ ಹಿಂದೂಗಳು ಹಾಗು ಅಸ್ಪೃಶ್ಯರು ಒಂದು ಒಪ್ಪಂದಕ್ಕೆ ಬಂದಿದ್ದರು.ಎರಡೂ ಕಡೆಯ ಬಲಿಷ್ಠ ವ್ಯಕ್ತಿಗಳು ರಥವನ್ನು ಎಳೆಯುವುದು ಎಂದು ನಿರ್ಧಾರವಾಗಿತ್ತು. ಈ ದೃಶ್ಯವನ್ನು ಕಾಣಲು ಮಧ್ಯಾಹ್ನದ ಹೊತ್ತಿಗೆ ನೂರಾರು ಜನರು ದೇವಸ್ಥಾನದ ಮುಂಭಾಗದಲ್ಲಿ ನೆರೆದಿದ್ದರು ಡಾ. ಅಂಬೇಡ್ಕರ್ ಅವರು ತಮ್ಮ ಕಡೆಯ ಆಯ್ದ ಬಲಿಷ್ಠ ಜನರೊಂದಿಗೆ ದ್ವಾರದ ಬಳಿ ನಿಂತಿದ್ದರು. ಆದರೆ ಅವರು ರಥ ಎಳೆಯುವಷ್ಟರಲ್ಲಿಯೇ ಹಿಂದೂ ಧರ್ಮದ ಕೆಲ ಸಮಾಜಘಾತುಕ ಶಕ್ತಿಗಳ ಜೊತೆ ಅವರು ವಾದ ವಿವಾದಗಳಲ್ಲಿ ತೊಡಗಿಕೊಳ್ಳಲೇಬೇಕಾಯಿತು. ಅನಂತರ ರಥವನ್ನು ಹಿಂದೂಗಳು ಮೊದಲೇ ಯೋಜನೆ ಮಾಡಿದ್ದಂತೆ ಒಂದು ಕಿರಿದಾದ ಮುಳ್ಳುಗಳಿಂದ ತುಂಬಿದ್ದ ರಸ್ತೆಯಲ್ಲಿ ಎಳೆದುಕೊಂಡು ಓಡಿ ಹೋಗಿಬಿಟ್ಟರು. ಇದರ ಇಕ್ಕೆಲಗಳಲ್ಲಿಯೂ ಪೋಲಿಸರ ಕಾವಲು ಇತ್ತು. ಆದರೂ ಕರ್ಡೇಕರ್ ಎಂಬ ಧೈರ್ಯಶಾಲಿ ಭಂಡಾರಿ ಯುವಕ ಪೋಲಿಸರ ಸರ್ಪಗಾವಲನ್ನು ಭೇಧಿಸಿ ಹೋಗಿ ರಥವನ್ನು ಮುಟ್ಟಿದ್ದ. ಪೊಲಿಸರು ಗುಂಡನ್ನು ಹಾರಿಸಲು ಅನುಮತಿಗಾಗಿ ಕಾಯುತ್ತಿದ್ದರು. ಅಷ್ಟರಲ್ಲಿಯೇ ಅಸ್ಪೃಶ್ಯರ ಒಂದು ಗುಂಪು, ಕಲ್ಲು ಗುಂಡುಗಳ ಮಳೆಯ ನಡುವೆಯೇ ರಥವನ್ನು ಎಳೆಯಲು ಪ್ರಾರಂಭಿಸಿದರು. ಕರ್ಡೇಕರ್‌ಗೆ ತೀವ್ರಗಾಯಗಳಾಗಿ ಆತ ರಕ್ತದ ಮಡುವಿನಲ್ಲಿ ಬಿದ್ದಿದ್ದ. ಡಾ. ಅಂಬೇಡ್ಕರ್ ಅವರನ್ನು ಅವರ ಸುತ್ತಲಿದ್ದ ಜನರು ರಕ್ಷಿಸಿದರು. ಆದರೆ ಅವರು ತಮ್ಮ ರಕ್ಷಣೆಗೆಂದು ಉಪಯೋಗಿಸಿದ್ದ ಛತ್ರಿಗಳು ಕೂಡ ಛಿದ್ರವಾದ ನಂತರ ಅಂಬೇಡ್ಕರ್ ಅವರಿಗೆ ಕೂಡ ಸಣ್ಣಪುಟ್ಟ ಗಾಯಗಳಾದವು. ನಗರದಾದ್ಯಂತ ಅಸ್ಪೃಶ್ಯರು ಹಾಗೂ ಹಿಂದೂಗಳ ನಡುವೆ ಹೊಡೆದಾಟಗಳು ಮುಕ್ತವಾಗಿ ನಡೆದವು.

ಈ ಸತ್ಯಾಗ್ರಹದಿಂದ ಇದೇ ಜಿಲ್ಲೆಯಲ್ಲಿನ ಸಂಪ್ರದಾಯವಾದಿ ಹಿಂದೂಗಳ ಮನದಲ್ಲಿ ಅಸ್ಪೃಶ್ಯರನ್ನು ಕುರಿತು ಮತ್ತಷ್ಟು ಕಹಿ ಭಾವನೆ ಉಂಟಾಯಿತು. ಈ ಕಾರಣದಿಂದ ಅಸ್ಪೃಶ್ಯರ ಮಕ್ಕಳನ್ನು ಶಾಲೆಗಳಿಂದ ಹೊರದಬ್ಬಲಾಯಿತು. ಅವರಿಗೆ ರಸ್ತೆಗಳನ್ನು ಮುಚ್ಚಲಾಯಿತು. ಅಲ್ಲದೇ ಅವರು ಹಿಂದೂಗಳಂತೆ ಸಮಾನ ಹಕ್ಕುಗಳನ್ನು ಕೇಳುತ್ತಿದ್ದದರಿಂದ ಮಾರುಕಟ್ಟೆಯಲ್ಲಿ ಅವರಿಗೆ ಅಗತ್ಯ ಸಾಮಾನುಗಳು ಕೂಡ ದೊರೆಯದಂತಹ ಪರಿಸ್ಥಿತಿ ಏರ್ಪಟ್ಟಿತು ಹಲವಾರು ಹಳ್ಳಿಗಳಲ್ಲಿ ಅಸ್ಪೃಶ್ಯರನ್ನು ಅತ್ಯಂತ ಹೀನಾಯವಾಗಿ ಕಾಣಲಾಯಿತು. ಈ ಎಲ್ಲಾ ಆಘಾತಗಳ ನಡುವೆಯೂ ನಾಸಿಕ್‌ನಲ್ಲಿಯ ಸತ್ಯಾಗ್ರಹ ಮುಂದುವರೆಯಿತು. ಎರಡೂ ಪಂಗಡದವರನ್ನು ಒಮ್ಮತಕ್ಕೆ ತರುವ ಪ್ರಯತ್ನಗಳನ್ನು ಮಾಡಲಾಯಿತು. ಡಾ. ಮೂಂಜೆ ಹಾಗೂ ಶಂಕರಾಚಾರ್ಯರಾದ ಡಾ. ಕುರ್ತುಕೋಟಿ ಅವರು ಒಂದು ಒಮ್ಮತದ ತೀರ್ಮಾನಕ್ಕೆ ಬರಲು ಪ್ರಯತ್ನಪಡುತ್ತಿದ್ದರು. ಅತ್ಯಂತ ಗಣ್ಯವ್ಯಕ್ತಿ ಎನಿಸಿಕೊಂಡ ಅತ್ಯಂತ ಶ್ರೀಮಂತ ಬಿರ್ಲಾ ಅವರು ಕೂಡ ಡಾ. ಅಂಬೇಡ್ಕರ್ ಅವರನ್ನು ೧೯೩೦ರ ಏಪ್ರಿಲ್ ಮಧ್ಯಭಾಗದಲ್ಲಿ ಭೇಟಿ ಮಾಡುವ ಪ್ರಯತ್ನಪಟ್ಟರು. ಈ ಸತ್ಯಾಗ್ರಹದ ವಿಷಯದಲ್ಲಿ ಅಸ್ಪೃಶ್ಯರ ಮನೋಸ್ಥೈರ್ಯ ಯಾವ ಮಟ್ಟಕ್ಕೆ ಇತ್ತು ಎಂದರೆ ಈ ಪ್ರಖ್ಯಾತ ದೇವಸ್ಥಾನವನ್ನು ಸಂಪ್ರದಾಯವಾದಿ ಹಿಂದೂಗಳು ಒಂದು ವರ್ಷಕಾಲ ಮುಚ್ಚಿದ್ದರು. ಏಕೆಂದರೆ

1. Keer Pp. 137-138

ಅಲ್ಲಿಯವರೆಗೂ ಈ ಸತ್ಯಾಗ್ರಹ ಮುಂದುವರೆದಿತ್ತು.[೧]

ಡಾ. ಅಂಬೇಡ್ಕರ್ ಅವರು ಬೊಂಬಾಯಿಯ ಗಣ್ಯ ರಾಜ್ಯಪಾಲರಿಗೆ ಅಧಿಕಾರಶಾಹಿಯು ಸೃಷ್ಟಿಸಿದ್ದ ಈ ಸಮಸ್ಯೆಯನ್ನು ಕುರಿತು ಎರಡು ಪತ್ರಗಳನ್ನು ಬರೆದಿದ್ದರು. ಆ ಪತ್ರಗಳ ಟಿಪ್ಪಣಿ ಈ ರೀತಿ ಇದೆ. (ಸಂಪಾದಕರು)

ಭೀಮರಾವ್ ಆರ್. ಅಂಬೇಡ್ಕರ್
MA., Ph.D., DSc

ದಾಮೋದರ್ ಸಭಾಂಗಣ

ಬ್ಯಾರಿಸ್ಟರ್–ಅಟ್–ಲಾ, ಪರೇಲ್
ಸದಸ್ಯರು, ಶಾಸನ ಸಭೆ, ಬೊಂಬಾಯಿ–೧೨
ಬೊಂಬಾಯಿ ೨೪ನೆಯ ಮಾರ್ಚಿ ೧೯೩೦

ತಮ್ಮ ಗಮನಕ್ಕೆ ಗೌರವಾನ್ವಿತರೇ,

ಮಹಾಪ್ರಭುಗಳೇ, ನೀವು ನನಗೆ ೧೯೩೦ರ ಮಾರ್ಚಿ ೧೩ರಂದು ಬರೆದಿರುವ ಪತ್ರಕ್ಕೆ ನಾನು ಆಭಾರಿಯಾಗಿದ್ದೇನೆ. ನೀವು ನನ್ನ ತಂತಿಯ ಸಂದೇಶಕ್ಕೆ ಉತ್ತರವನ್ನು ನೀಡಿ ಸ್ಪೃಶ್ಯರು ಹಾಗೂ ಅಸ್ಪೃಶ್ಯರ ನಡುವೆ ಇರುವ ಸಮಸ್ಯೆಯನ್ನು ಪಕ್ಷಪಾತರಹಿತವಾಗಿ ಬಗೆಹರಿಸುವುದಾಗಿ ನನಗೆ ಭರವಸೆ ನೀಡಿರುವಿರಿ. ಈ ಸಮಸ್ಯೆಯ ಮೂಲ ಕಾಲಾರಾಂ ದೇವಸ್ಥಾನದ ಪ್ರವೇಶಕ್ಕಾಗಿ ನಾಸಿಕ ನಗರದಲ್ಲಿ ನಡೆಯುತ್ತಿರುವ ಸತ್ಯಾಗ್ರಹವಾಗಿದೆ. ನಿಮ್ಮ ಗಮನಕ್ಕೆ ಒಂದು ವಿಷಯ ತರುವ ಗೌರವ ನನ್ನದಾಗಿದೆ. ಈ ಸಂದರ್ಭದಲ್ಲಿ ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸಿರುವ ಪರಿಸ್ಥಿತಿಯನ್ನು ನಿಮಗೆ ತಿಳಿಸಬಯಸುತ್ತೇನೆ. ಸತ್ಯಾಗ್ರಹವನ್ನು ನಾವು ಪ್ರಾರಂಭಿಸಿದ ದಿನ ಉದ್ದೇಶಪೂರ್ವಕವಾಗಿಯೇ ನಾವು ಪೂಜಾರಿ ಅವರ ಮನೆಗೆ ಹೋಗುವ ರಸ್ತೆಯನ್ನು ಮುಚ್ಚಿರಲಿಲ್ಲ ಆ ರಸ್ತೆಯ ಮೂಲಕ ಜನರು ದೇವರದರ್ಶನ ಪಡೆಯಲು ಉಪಯೋಗಿಸುವುದಿಲ್ಲ ಎಂಬುದು ನಮ್ಮ ನಂಬಿಕೆಯಾಗಿತ್ತು. ಆದರೆ ಇತ್ತೀಚೆಗೆ ಇದೇ ಮಾರ್ಗವಾಗಿ ಜನರು ದೇವಸ್ಥಾನದ ಒಳಕ್ಕೆ ಪ್ರವೇಶ ಮಾಡುತ್ತಿದ್ದಾರೆ. ಇದನ್ನು ಹೀಗೆ ಮುಂದುವರೆಯಲು ಬಿಟ್ಟರೇ ಸತ್ಯಾಗ್ರಹದ ಉದ್ದೇಶವೇ ನಾಶವಾಗುತ್ತದೆ. ಇದನ್ನು ನಿಲ್ಲಿಸಲೆಂದೇ ಸತ್ಯಾಗ್ರಹ ಸಮಿತಿಯು ಜಿಲ್ಲಾ ಮ್ಯಾಜಿಸ್ಟ್ರೇಟ್‌ರನ್ನು ಹಾಗೂ ಪೋಲಿಸ್ ಸೂಪರಿಂಟೆಂಡೆಂಟ್ ಭೇಟಿ ಮಾಡಿ ಈ ರಸ್ತೆಯ ಮೂಲಕ ಸಾರ್ವಜನಿಕರು ಒಳಹೋಗದಂತೆ ತಡೆಯಬೇಕು ಹಾಗೂ ಕೇವಲ ಅವರ ಕುಟುಂಬವರ್ಗದವರಿಗೆ ಮಾತ್ರವೇ ಅಲ್ಲಿ ಓಡಾಡಲು ಅನುಮತಿ ನೀಡಬೇಕು ಎಂಬ ಕೋರಿಕೆಯನ್ನು ಸಲ್ಲಿಸಬೇಕೆಂದ್ದಿತು. ಆದರೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು ಸತ್ಯಾಗ್ರಹ ಸಮಿತಿಯ ಸದಸ್ಯರನ್ನು ಭೇಟಿಯಾಗಲು ನಿರಾಕರಿಸಿಬಿಟ್ಟರು. ಅವರು ಸತ್ಯಾಗ್ರಹಿಗಳಿಗೆ ಒಂದು ಚೀಟಿಯಲ್ಲಿ ಪೂಜಾರಿ ಅವರ ನಿವಾಸದ ಎದುರು ಸತ್ಯಾಗ್ರಹ ಮಾಡುವವರನ್ನು ಬಲವಂತವಾಗಿ ಹೊರದೂಡುವುದಾಗಿ ಬೆದರಿಸಿ ಸಂದೇಶವನ್ನು ಕಳುಹಿಸಿದರು. ಜಿಲ್ಲಾ ಮಟ್ಟದ ಅಧಿಕಾರಿಯೊಬ್ಬರ ಈ ರೀತಿಯ ವರ್ತನೆ ಸರಿಯೇ ಅಲ್ಲವೇ ಎಂಬುದನ್ನು ನಾನು ಹೇಳುವುದಿಲ್ಲ. ಒಂದು ವೇಳೆ ಅವರ ಈ ರೀತಿಯ ವರ್ತನೆಯು ಮುಂದುವರಿದರೆ ಅಸ್ಪೃಶ್ಯರ ಹಾಗೂ ಸರ್ಕಾರದ ನಡುವೆ ಒಂದು ಸಂಘರ್ಷ ಆರಂಭವಾಗುತ್ತದೆ. ನಮಗೆ ನಿಜವಾದ ಸಮಸ್ಯೆ ಇರುವುದು ಸ್ಪೃಶ್ಯ ಹಿಂದೂಗಳ ವಿಷಯದಲ್ಲಿ ಮಾತ್ರ. ಅವರನ್ನು ಬಿಟ್ಟು ಈ ಸಂಘರ್ಷವನ್ನು ಸರ್ಕಾರದ

ಮೇಲೆ ಸಾರಲು ನಾನು ಇಷ್ಟಪಡುವುದಿಲ್ಲ. ಈ ಉದ್ದೇಶವಿದ್ದಿದ್ದರೆ, ಅದನ್ನು ನಾನು ಮೊದಲನೆಯ ದಿನವೇ ಮಾಡಬಹುದಾಗಿತ್ತು. ಪೋಲಿಸರ ಆಜ್ಞೆಯನ್ನು ಉಲ್ಲಂಘಿಸಿ ನಾವು ತಡೆಗಳನ್ನು ದಾಟಿ ಬಲವಂತದಿಂದ ದೇವಸ್ಥಾನದ ಆವರಣ ಪ್ರವೇಶ ಮಾಡಬಹುದಾಗಿತ್ತು. ಇದನ್ನು ನಾವು ಮಾಡಲಿಲ್ಲ. ಏಕೆಂದರೆ ಈ ಸಮರವನ್ನು ನಾವು ಸರ್ಕಾರದ ವಿರುದ್ಧ ಸಾರಲು ಸಿದ್ದರಿರಲಿಲ್ಲ. ಆದರೆ ಸರಕಾರವು ಪಕ್ಷಪಾತದಿಂದ ವರ್ತಿಸಿದರೆ. ನಮಗೆ ಅನ್ಯಮಾರ್ಗವು ಇಲ್ಲದಂತೆ ಆಗುತ್ತದೆ. ಯಾವುದೇ ಸಂದರ್ಭದಲ್ಲಿಯೂ ನಾವು ನಮ್ಮ ಸತ್ಯಾಗ್ರಹದ ಉದ್ದೇಶವನ್ನು ಹಾಳುಮಾಡುವ ಪೂಜಾರಿಯ ಈ ತಂತ್ರವನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲ. ಇದನ್ನು ತಡೆಯಲು ಒಂದು ವೇಳೆ ನಾವು ಸರ್ಕಾರವನ್ನು ಎದುರು ಹಾಕಿಕೊಳ್ಳಬೇಕು ಎಂದರೆ ನಾವು ಅದಕ್ಕೂ ಸಿದ್ದರಿದ್ದೇವೆ. ನಾನು ಈ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಲು ಈ ಪತ್ರವನ್ನು ಮಹಾಪ್ರಭುಗಳಿಗೆ ಬರೆದಿರುವೆ. ಇದರೊಂದಿಗೆ ತಾವು ಜಿಲ್ಲಾ ಮ್ಯಾಜಿಸ್ಟ್ರೇಟರ ವರ್ತನೆಯ ಬಗ್ಗೆಯೂ ಗಮನ ಹರಿಸಬೇಕು ಎಂದು ಕೋರುತ್ತೇನೆ. ಇದರೊಂದಿಗೆ ಸತ್ಯಾಗ್ರಹ ಸಮಿತಿಯವರಿಗೆ ಅವರು ನೀಡಿದ್ದ ಚೀಟಿಯನ್ನು ಕೂಡ ತಮ್ಮ ಪರಿಶೀಲನೆಗೆ ಇಟ್ಟಿರುವೆ. ತಮ್ಮ ಭೇಟಿಗೆಂದು ತೆರಳಿದ ಸದಸ್ಯರಿಗೆ ಅವರು ಭೇಟಿಯನ್ನು ನಿರಾಕರಿಸಿ ಈ ಚೀಟಿಯನ್ನು ನೀಡಿದ್ದರು.

ನಾನು ಖುದ್ದಾಗಿ ಈ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ಸತ್ಯಾಗ್ರಹ ಸಮಿತಿಯವರು ವ್ಯಕ್ತಪಡಿಸಿರುವ ಭಯದಲ್ಲಿ ವಾಸ್ತವಾಂಶವು ಇರುವುದುನ್ನು ಅಲ್ಲಗೆಳೆಯಲಾಗುವುದಿಲ್ಲ.

ಎಂದಿಗೂ
ಮಹಾಪ್ರಭುಗಳ ವಿನಮ್ರ ಸೇವಕನಾಗಿರಲು ಬಯಸುವ
ಬಿ.ಆರ್. ಅಂಬೇಡ್ಕರ್ [೧]
(ಸಹಿ)

---

1. Khairmode Vol 3 Pp. 321-323

ಎರಡನೆಯ ಪತ್ರ :–

ಭೀಮರಾವ್ ಆರ್. ಅಂಬೇಡ್ಕರ್
MA., Ph.D., DSc

ದಾಮೋದರ್ ಸಭಾಂಗಣ
ಪರೇಲ್
೧೧ನೆಯ ಏಪ್ರಿಲ್ ೧೯೩೦

ಬ್ಯಾರಿಸ್ಟರ್–ಅಟ್–ಲಾ,
ಸದಸ್ಯರು, ಶಾಸನ ಸಭೆ
ಬೊಂಬಾಯಿ

ಇವರಿಗೆ
ಗೌರವಾನ್ವಿತ ಮಹಾಪ್ರಭುಗಳು
ಫ್ರೆಡರಿಕ್ ಸ್ಕೈಸ್ P.C., G.C.,I.E
GBE KCB CMG
ಬೊಂಬಾಯಿ ರಾಜ್ಯಪಾಲರು
ಬೊಂಬಾಯಿ

ಮಹಾಪ್ರಭುಗಳ ವಿಶೇಷ ಗಮನಕ್ಕೆ

ನಾಸಿಕ್ ನಗರದ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ತಮಗೆ ಕಳೆದ ೯ ರಂದು ಅಲ್ಲಿನ ಸ್ಪೃಶ್ಯರು ಹಾಗೂ ಅಸ್ಪೃಶ್ಯರ ನಡುವೆ ನಡೆದ ಗಲಭೆಯ ಬಗೆಗೆ ವರದಿಯು ಬೊಂಬಾಯಿ ಸರಕಾರಕ್ಕೆ ಬಂದಿರಬಹುದು. ನನ್ನ ದೃಷ್ಟಿಕೋನದಿಂದ ಈ ಗಲಭೆಯ ವಿಷಯವನ್ನು ತಮಗೆ ತಿಳಿಸಲು ಇಚ್ಛಿಸುವೆ.

ಗಲಭೆಯ ಪ್ರಾರಂಭ :– ನಾಸಿಕ್‌ನಲ್ಲಿರುವ ಕಾಲಾರಾಂ ದೇವಸ್ಥಾನದ ಸಂಪ್ರದಾಯದಂತೆ ದೇವಸ್ಥಾನದ ರಥವನ್ನು ನಗರದಲ್ಲಿ ಮೆರವಣಿಗೆಯಲ್ಲಿ ಒಯ್ಯಬೇಕಿತ್ತು. ದೇವಸ್ಥಾನದ ಕಾರ್ಯವನ್ನು ವಹಿಸಿಕೊಂಡಿದ್ದ ಪೋಲಿಸ್ ಇನ್ಸ್‌ಪೆಕ್ಟರ್ ಆದ ಕಾರ್ಣಿಕ ಅವರು ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಕೇಳಿದ್ದರು. ಅಸ್ಪೃಶ್ಯರಿಗೆ ಸಮಾನ ಗೌರವ ದೊರೆಯವುದಾದರೆ ರಥದ ಮೆರವಣಿಗೆ ಮಾಡಲು ನಮ್ಮ ಅಭ್ಯಂತರವೇನೂ ಇಲ್ಲ ಎಂದು ನಾನು ತಿಳಿಸಿದ್ದೆ. ಸಮಾನತೆ ಎಂದರೆ ನನ್ನ ದೃಷ್ಟಿಯಲ್ಲಿ ಏನು ಎಂಬುದನ್ನು ಕೂಡ ನಾನು ಅವರಿಗೆ ಸ್ಪಷ್ಟವಾಗಿ ತಿಳಿಸಿದ್ದೆ. ಕೆಳಗಿನ ಎರಡು ವಿಷಯದ ಕಡೆಗೆ ತಾವು ಕಡ್ಡಾಯವಾಗಿ ಗಮನ ಹರಿಸತಕ್ಕದ್ದು ಎಂದು ನಾನು ಅವರನ್ನು ಕೋರಿದ್ದೆ.–

೧) ಸ್ಪೃಶ್ಯರೊಂದಿಗೆ ಅಸ್ಪೃಶ್ಯರು ಕೂಡ ರಥ ಎಳೆಯುವಿಕೆಯಲ್ಲಿ ಭಾಗಿಯಾಗುತ್ತಾರೆ.

೨) ರಥದಲ್ಲಿ ಇರುವ ದೇವರಿಗೆ ಅಸ್ಪೃಶ್ಯರು ಕೂಡ ಪೂಜೆ ಸಲ್ಲಿಸುತ್ತಾರೆ.

ಶ್ರೀ ಕಾರ್ಣಿಕ್ ಅವರು ಅಲ್ಲಿಂದ ತೆರಳಿ ಪುನಃ ಜಿಲ್ಲಾ ಮ್ಯಾಜಿಸ್ಟ್ರೇಟ್‌ರೊಂದಿಗೆ ಆಗಮಿಸಿದರು. ಜಿಲ್ಲಾ ಮ್ಯಾಜಿಸ್ಟ್ರೇಟರು ನನಗೆ ಸ್ಪೃಶ್ಯ ಹಿಂದೂಗಳು ನಿಮ್ಮ ಷರತ್ತಿಗೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ತಿಳಿಸಿದರು. ದೇವಸ್ಥಾನದ ಮುಖ್ಯದ್ವಾರದವರೆಗೆ ಸ್ಪೃಶ್ಯ ಹಿಂದೂಗಳು ರಥವನ್ನು ಎಳೆದು ತರುತ್ತಾರೆ. ಅನಂತರ ೧೦ ಅಡಿ ಸಾಗಿದ ನಂತರ ಅಸ್ಪೃಶ್ಯರು ಈ ರಥಕ್ಕೆ ಕಟ್ಟಿರುವ ಹಗ್ಗವನ್ನು ಹಿಂದೂಗಳೊಂದಿಗೆ ಹಿಡಿದುಕೊಂಡು ಹೋಗಬಹುದು ಎಂದು ತಿಳಿಸಿದರು ಇದಕ್ಕೆ ನಿಮ್ಮ ಅಭ್ಯಂತರವೇನಾದರೂ ಇದೆಯೇ

ಎಂದು ನನ್ನನ್ನು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ನಾನು "ಏನೂ ಇಲ್ಲ" ಎಂದು ನುಡಿದೆ. ಶಾಂತಿಯನ್ನು ಕಾಪಾಡುವ ಏಕೈಕ ಕಾರಣದಿಂದ ನಾನು ೫,೦೦೦ ಅಸ್ಪೃಶ್ಯರಲ್ಲಿ ಕೇವಲ ೫೦ ಜನರನ್ನು ಈ ಕಾರ್ಯಕ್ಕೆ ಆಯ್ಕೆ ಮಾಡಿದೆ ಹಾಗೂ ಈ ರಥ ಎಳೆಯುವಿಕೆಯಲ್ಲಿ ಇವರುಗಳು ಮಾತ್ರವೇ ಪಾಲ್ಗೊಳ್ಳಬಹುದು ಎಂದು ನುಡಿದೆ. ಅಂತೆಯೇ ದೇವಸ್ಥಾನದ ಹೊರಗಿನವರೆಗೆ ಹಿಂದೂಗಳೇ ರಥವನ್ನು ಎಳೆದುತಂದರು. ಈಗ ಸ್ಪೃಶ್ಯರು ಅಸ್ಪೃಶ್ಯರು ಹಾಗೂ ಪೋಲಿಸರು ಇಬ್ಬರನ್ನು ವಂಚಿಸುವ ಹುನ್ನಾರ ನಡೆಸಿದರು. ಇದಕ್ಕಾಗಿ ಅವರು, ಎರಡು ತಂತ್ರಗಳನ್ನು ಮಾಡಿದರು. ೧) ಅವರು ಹಗ್ಗವನ್ನು ಎಷ್ಟು ಪಕ್ಕಪಕ್ಕದಲ್ಲಿ ನಿಂತು ಹಿಡಿದ್ದಿರು ಎಂದರೆ, ಅಲ್ಲಿ ನುಸುಳಲು ಅಸ್ಪೃಶ್ಯರಿಗೆ ಸ್ಥಳವೇ ಇರಲಿಲ್ಲ. ೨) ಈ ಮೊದಲೇ ಒಪ್ಪಿಕೊಂಡಂತೆ ದೇವಸ್ಥಾನದ ಬಾಗಿಲಲ್ಲಿ ರಥವನ್ನು ನಿಲ್ಲಿಸುವ ಬದಲು ಸ್ಪೃಶ್ಯರು ಅದನ್ನು ಎಳೆದುಕೊಂಡು ಓಡಲು ಪ್ರಾರಂಭಿಸಿದರು. ಇದರಿಂದಾಗಿ ಅಸ್ಪೃಶ್ಯರಿಗೆ ಅದನ್ನು ಹಿಡಿದುಕೊಳ್ಳುವ ಅವಕಾಶ ಸಿಗಲೇ ಇಲ್ಲ. ಈ ರೀತಿ ಮೊದಲು ಒಪ್ಪಿಕೊಂಡ ನಿಬಂಧನೆಯನ್ನು ಮುರಿದುದು ಸ್ವಾಭಾವಿಕವಾಗಿಯೇ ಅಸ್ಪೃಶ್ಯರ ಕೋಪಕ್ಕೆ ಕಾರಣವಾಯಿತು. ಆದರೆ ಗಲಭೆ ಆರಂಭವಾದುದು ಸವರ್ಣೀಯ ಹಿಂದೂಗಳೇ ಆಗಿದ್ದ ಕೆಲ ಪೋಲಿಸ್ ಸಿಪಾಯಿಗಳು ವಿನಾಕಾರಣ ಅಸ್ಪೃಶ್ಯರ ಮೇಲೆ ಹಲ್ಲೆ ಮಾಡಿದ್ದರಿಂದ. ಅಸ್ಪೃಶ್ಯರು ಕೇವಲ ಆ ಹಗ್ಗ ಹಿಡಿಯುವ ಪ್ರಯತ್ನ ಮಾಡುತ್ತಿದ್ದರು ಅಷ್ಟೆ. ಈ ಗಲಭೆ ಆಗಲು ಕಾರಣವೆಂದರೆ ಹಿಂದೂ ಪೋಲಿಸರು. ಏಕೆಂದರೆ, ಅವರು ಪಕ್ಷಪಾತಿಗಳಾಗಿ ಸವರ್ಣೀಯ ಹಿಂದೂಗಳ ಪರವಹಿಸಿದ್ದರು.

ಆದ್ದರಿಂದ ಈ ೫೦ ಜನ ಅಸ್ಪೃಶ್ಯರ ಗುಂಪು ಎರಡೂ ಕಡೆಗಳಿಂದ ದಾಳಿಗೆ ಒಳಪಟ್ಟಿತು. ರಥದ ಹಗ್ಗವನ್ನು ಹಿಡಿದಿದ್ದ ಹಿಂದೂಗಳು ಇವರಿಗೆ ಹಗ್ಗದ ಬಳಿ ಸುಳಿಯಲು ಕೂಡ ಬಿಡದೆ ಇವರನ್ನು ನೂಕುತ್ತಿದ್ದರು. ಇತ್ತ ಪೋಲಿಸರು ತಮ್ಮ ಲಾಠಿಯಿಂದ ಇವರ ಮೇಲೆ ಪ್ರಹಾರ ಮಾಡುತ್ತಿದ್ದರು. ಹಾಗೂ ಬಂದೂಕುಗಳ ಹಿಂಬದಿಯಿಂದ ಇವರನ್ನು ಗುದ್ದುತ್ತಿದ್ದರು.

ಈ ರೀತಿ ತಮ್ಮ ಜನರ ಮೇಲೆ ದಾಳಿ ಆದದ್ದನ್ನು ಗಮನಿಸಿದ ಅಸ್ಪೃಶ್ಯರು ವೇಗವಾಗಿ ಸಾಗುತ್ತಿದ್ದ ರಥದ ಕಡೆ ಧಾವಿಸಿದರು. ಇದನ್ನು ಕಂಡು ರಥವನ್ನು ಎಳೆದುಕೊಂಡು ಹೋಗುತ್ತಿದ್ದ ಹಿಂದೂಗಳು, ರಥವನ್ನು ಅರ್ಧದಲ್ಲಿ ಬಿಟ್ಟು ಅಕ್ಕಪಕ್ಕದ ಹೊಲಗಳತ್ತ ಹೋಗಿ ದಾರಿಯಲ್ಲಿ ನಿಂತಿದ್ದ ಅಸ್ಪೃಶ್ಯರ ಕಡೆಗೆ ಕಲ್ಲುಗಳನ್ನು ತೂರತೊಡಗಿದರು.

ಈ ರಸ್ತೆಯ ಒಂದು ಬದಿಯಲ್ಲಿ ಮುಳ್ಳಿನ ತಂತಿ ಇದ್ದರೆ ಮತ್ತೊಂದು ಕಡೆಗೆ ಕಳ್ಳಿಯ ಗಿಡಗಳಿದ್ದವು. ಆದ್ದರಿಂದ ಈ ಕಲ್ಲುಗಳ ಹೊಡೆತದಿಂದ ತಪ್ಪಿಸಿಕೊಳ್ಳಲು ಅಸ್ಪೃಶ್ಯರಿಗೆ ಸಾಧ್ಯವಾಗಲಿಲಲ್ಲ. ಈ ಕಾರಣದಿಂದ ಬಹಳಷ್ಟು ಮಂದಿ ಅಸ್ಪೃಶ್ಯರು ಗಾಯಗೊಂಡರು. ಅಸ್ಪೃಶ್ಯರು ಅತ್ಯಂತ ಶಾಂತಿಯುತ ವರ್ತನೆ ತೋರಿದ್ದರು ಎಂಬುದಕ್ಕೆ ಸಾಕ್ಷಿ ಎಂದರೆ ಸವರ್ಣೀಯ ಹಿಂದೂಗಳಲ್ಲಿ ಒಬ್ಬನಿಗೂ ಗಾಯಗಳಾದ ವರದಿಯಾಗಿಲ್ಲ.

**ಹಿಂದೂಗಳ ದುಷ್ಟತನ:**

ಕಲ್ಲುಗಳನ್ನು ಹೊಲಗಳಿಂದ ಅಸ್ಪೃಶ್ಯರತ್ತ ತೂರಿದ ನಂತರ ಹಿಂದೂಗಳು ಸತ್ಯಾಗ್ರಹ ಸಮಿತಿ ಕುಳಿತುಕೊಳ್ಳುತ್ತಿದ್ದ ಸ್ಥಳದತ್ತ ಹೋದರು. ಅಲ್ಲಿ ಅವರು ಟೆಂಟುಗಳನ್ನು ಕಿತ್ತುಹಾಕಿದರು. ಸ್ವಯಂ ಸೇವಕರ ಸೈಕಲ್ಲುಗಳಿಗೆ ಹಾನಿ ಮಾಡಿದರು. ಸಮಿತಿಯ ಸದಸ್ಯರೋರ್ವರಿಗೆ ಸೇರಿದ್ದ ಮೋಟಾರು ವಾಹನದ ಮೇಲೆ ಕಲ್ಲು ತೂರಿದರು. ಅಡುಗೆಯ ಮನೆಯಲ್ಲಿದ್ದ ಹೆಂಗಸರ ಮೇಲೂ ಕಲ್ಲು ತೂರಿ ಹೊರಗೆ ಆಟ ಅಡುತ್ತಿದ್ದ ಮಕ್ಕಳ ಮೇಲೂ ದಾಳಿ ಮಾಡಿದರು. ಅಲ್ಲಿಂದ ಈ ಗುಂಪು ನೇರವಾಗಿ ನದಿಯ ತೀರಕ್ಕೆ

ಸಾಗಿತು. ಅಲ್ಲಿ ಕೆಲ ಅಸ್ಪೃಶ್ಯ ಪುರುಷರು ಸ್ತ್ರೀಯರು ಹಾಗೂ ಮಕ್ಕಳು ಇದ್ದರು. ಇವರು ನದಿ ತೀರವನ್ನು ಬಿಟ್ಟು ಹೋಗಿ ಇತರ ಅಸ್ಪೃಶ್ಯರೊಂದಿಗೆ ಸೇರ್ಪಡೆ ಆಗಿರಲಿಲ್ಲ. ಏಕೆಂದರೆ ಇವರ ಎತ್ತಿನ ಗಾಡಿಗಳನ್ನು ನೋಡಿಕೊಳ್ಳಲು ಬೇರೆ ಜನರು ಇರಲಿಲ್ಲ. ಇವರೆಲ್ಲರ ಮೇಲೆ ಬಹಳ ದೊಡ್ಡ ಪ್ರಮಾಣದ ದಾಳಿಯನ್ನೇ ಹಿಂದೂಗಳು ಮಾಡಿದರು. ಅವರ ಸಾಮಾನು ಸರಂಜಾಮುಗಳನ್ನು ಸುಟ್ಟರು. ಇಲ್ಲವೇ ನದಿಯೊಳಕ್ಕೆ ಎಸೆದರು.

ನನಗೆ ದೊರೆತ ಒಂದು ವರದಿಯ ಪ್ರಕಾರ ಈ ದಾಳಿಗೆ ಒಬ್ಬ ಅಸ್ಪೃಶ್ಯ ವ್ಯಕ್ತಿ ತನ್ನ ಜೀವ ತೆರಬೇಕಾಯಿತು. ನದಿಯ ತೀರದ ಮೇಲೆ ದಾಳಿಗೆ ಒಳಗಾದ ಈ ಅಸ್ಪೃಶ್ಯರಿಗೆ ಯಾವ ನೆರವೂ ನೀಡಲಿಲ್ಲ. ಅಸ್ಪೃಶ್ಯರ ಮುಖ್ಯ ಗುಂಪು ಪೋಲಿಸರಿಂದ ಸುತ್ತುವರಿಯಲ್ಪಟ್ಟಿದ್ದು ನದಿಯತ್ತ ಹೋಗಲು ಅಲ್ಲಿದ್ದವರಿಗೆ ಸಾಧ್ಯವಾಗಲಿಲ್ಲ. ಅಲ್ಲಿಂದ ಕೆಲವೇ ಕೆಲವು ಅಸ್ಪೃಶ್ಯರು ಮಾತ್ರ ನದಿಯ ದಂಡೆಯ ಕಡೆಗೆ ಹೋದರು.

**ಪೋಲಿಸರ ವರ್ತನೆ :**

ನಾನು ಪೋಲಿಸರನ್ನು ಗಲಭೆಗಾಗಿ ದೂಷಿಸುತ್ತೇನೆ ಎಂದು ಯಾರಾದರೂ ಭಾವಿಸಿದ್ದರೆ ಅದು ತಪ್ಪು. ಅವರು ಚತು ತಪ್ಪದೇ ಮಾಡಿದ್ದಾರೆ ಎಂದು ನಾನು ಹೇಳಬಯಸುವೆ. ಅದರಲ್ಲಿ ಕೂಡ ನಾನು ಕೆಲ ಪೋಲಿಸರ ವಿಶೇಷ ಉಲ್ಲೇಖ ಮಾಡಬಯಸುವೆ, ಶೆಲ್ಕೆ, ನಗರ್‌ಕರ್ ಹಾಗೂ ಕರ್ಕಾ ಅವರುಗಳು ಆ ಕಠಿಣ ಪರಿಸ್ಥಿತಿಯಲ್ಲಿ ತಮ್ಮ ಕಾರ್ಯವನ್ನು ಅತ್ಯುತ್ತಮವಾಗಿ ನಿರ್ವಹಿಸಿದ್ದಾರೆ.

ನನ್ನ ದೂರು ಇರುವುದು ಕೇವಲ ಕೆಲ ಸಿಪಾಯಿಗಳ ಮೇಲೆ ಅವರು ಪಕ್ಷಪಾತ ಧೋರಣೆಯಿಂದ ನಡೆದುಕೊಂಡು ಅತ್ಯಂತ ಗೌರವಯುತವಾಗಿ ವರ್ತಿಸುತ್ತಿದ್ದ ಅಸ್ಪೃಶ್ಯರಿಗೆ ಹೊಡೆದಿದ್ದಾರೆ. ಅದು ಅತ್ಯಂತ ಕ್ರೂರದ ನಡತೆ. ಅವರ ಹೆಸರುಗಳನ್ನು ಅವರ ಮೇಲಾಧಿಕಾರಿಗಳಿಗೆ ಇಷ್ಟರಲ್ಲೇ ಕಳುಹಿಸಿ ಕೊಡಲಾಗುವುದು. ಅವರ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ತಾವು ದಯಮಾಡಿ ಆದೇಶಿಸಬೇಕು.

**ಜಿಲ್ಲಾ ಮ್ಯಾಜಿಸ್ಟ್ರೇಟ್ ಧೋರಣೆ :**

ಅತ್ಯಂತ ವಿಷಾದದಿಂದ ನಾನು ತಮಗೆ ತಿಳಿಯಪಡಿಸುವುದೇನೆಂದರೆ ಅಸ್ಪೃಶ್ಯರ ಸತ್ಯಾಗ್ರಹದ ವಿಷಯದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರು ತಳೆದ ಧೋರಣೆಯಿಂದ ನನಗೆ ಸ್ವಲ್ಪವೂ ಸಮಾಧಾನವಾಗಿಲ್ಲ. ನನ್ನ ಹಿಂದಿನ ಪತ್ರದಲ್ಲಿ ಹೇಗೆ ಪೂಜಾರಿ ಅವರ ಖಾಸಗಿ ನಿವಾಸದ ದ್ವಾರವನ್ನು ಸಾರ್ವಜನಿಕರು ದೇವಸ್ಥಾನ ಪ್ರವೇಶ ಮಾಡಲು ಬಳಸುತ್ತಿದ್ದಾರೆ ಮತ್ತು ಹೇಗೆ ನಮ್ಮ ಸತ್ಯಾಗ್ರಹವನ್ನು ನಿಷ್ಫಲಗೊಳಿಸಲಾಯಿತು ಎಂಬುದರ ಬಗೆಗೆ ನಾನು ನಿಮಗೆ ವಿವರಣೆ ನೀಡಿದ್ದೆ.

ಜಿಲ್ಲಾ ನ್ಯಾಯಾಧೀಶರು ನಮ್ಮ ಅಹವಾಲಿಗೆ ಯಾವುದೇ ರೀತಿಯ ಬೆಲೆಯನ್ನೂ ನೀಡಲಿಲ್ಲ. ರಾಮನವಮಿ ದಿನದಂದು ಪೂಜಾರಿ ಅವರ ಖಾಸಗಿ ನಿವಾಸದಿಂದ ದೇವಸ್ಥಾನದ ಪ್ರವೇಶಕ್ಕೆ ಅನುಮತಿ ನೀಡಿದ್ದು ಮಾತ್ರವಲ್ಲ ಸತ್ಯಾಗ್ರಹಿಗಳು ನಿತ್ಯವು ಕೂಡುತ್ತಿದ್ದ ಸ್ಥಳದಿಂದ ಅವರನ್ನು ಎಬ್ಬಿಸಿ ಸ್ಪೃಶ್ಯ ಹಿಂದೂಗಳು ದೇವಸ್ಥಾನದಿಂದ ನಿರ್ಗಮಿಸಲು ಅವಕಾಶವನ್ನು ಮಾಡಿಕೊಟ್ಟಿದ್ದರು. ರಾಮನವಮಿಯ ದಿನ ಸತ್ಯಾಗ್ರಹ ಕುಳಿತ ೩೦೦ ಮಂದಿಯಲ್ಲಿ ೧೮ ಜನರನ್ನು ಬಂಧಿಸಲಾಯಿತು.

೯ನೆಯ ತಾರೀಖು ಜರುಗಿದ ಗುಂಪುಘರ್ಷಣೆಯ ನಂತರ, ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ನನಗೆ ಈ ಸತ್ಯಾಗ್ರಹ ನಿಲ್ಲಿಸಬೇಕು, ಇಲ್ಲದೇ ಹೋದ ಪಕ್ಷದಲ್ಲಿ ಪೋಲಿಸರ ಪಡೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಿ ತಿಳಿಸಿದರು. ಇವರ ಪ್ರಸ್ತಾವನೆಯನ್ನು ಸತ್ಯಾಗ್ರಹ ಸಮಿತಿ ಪರಿಶೀಲಿಸಿ ನಿರಾಕರಿಸಿತು. ಅದು ಸರಿಯಾದ ನಿರ್ಧಾರವೇ ಎಂಬುದು ನನ್ನ ಅನಿಸಿಕೆ. ಸತ್ಯಾಗ್ರಹವನ್ನು ಈ ಹಂತದಲ್ಲಿ ನಿಲ್ಲಿಸುವುದಕ್ಕಿಂತ ಹೆಚ್ಚಿನ ಹಾನಿ

ಮತ್ತೇನೂ ಇರುತ್ತಿರಲಿಲ್ಲ. ನಾವು ಹಾಗೆ ಮಾಡಿದ್ದಿದ್ದರೆ ಸ್ವಲ್ಪ ಬಲಪ್ರಯೋಗ ಮಾಡಿದರೆ ಸಾಕು ಇವರ ಹುಟ್ಟು ಅಡಗಿಸಬಹುದು ಎಂಬ ಭಾವನೆ ಸ್ಪೃಶ್ಯ ಹಿಂದೂಗಳಲ್ಲಿ ಮೂಡಿಸಿದಂತಾಗುತ್ತಿತ್ತು.

ನಾನಾಗಲೀ ಸತ್ಯಾಗ್ರಹ ಸಮಿತಿಯಾಗಲೀ ಈ ರೀತಿಯ ಅಭಿಪ್ರಾಯಕ್ಕೆ ಚಾಲನೆಯನ್ನು ನೀಡುವುದು ಸಾಧ್ಯವಿರಲಿಲ್ಲ. ಇನ್ನು ಆರಕ್ಷಕಪಡೆಯನ್ನು ಹಿಂದಕ್ಕೆ ಕರೆಸಿಕೊಳ್ಳುತ್ತಿರುವುದರ ಪರಿಣಾಮದ ಬಗೆಗೆ ಬೊಂಬಾಯಿಯ ಸರಕಾರವು ಯೋಚಿಸಬೇಕು ಎಂದು ನಾನು ಭಾವಿಸುತ್ತೇನೆ.

ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವವರಿಗೆ ನೆರವುನೀಡಲು, ತನ್ನ ವ್ಯಾಪ್ತಿಯಲ್ಲಿರುವ ಅಧಿಕಾರವನ್ನು ಬಳಸಿಕೊಳ್ಳಲು ಸರಕಾರ ಮನಸ್ಸು ಮಾಡುತ್ತಿಲ್ಲ ಎಂದು ನನಗೆ ತೋರುತ್ತಿದೆ. ಇಂತಹ ಅಧಿಕಾರದಿಂದ ಯಾರಿಗೂ ಒಳಿತಾಗುವುದಿಲ್ಲ. ಬದಲಾವಣೆಗಾಗಿ ಹೋರಾಡುತ್ತಿರುವರೊಡನೆ ಅಸ್ಪೃಶ್ಯರು, ಇಂತಹ ಸಂದರ್ಭದಲ್ಲಿ, ಕೈಜೋಡಿಸುವುದು ಸಮರ್ಥನೀಯವೇ ಆಗಿರುತ್ತದೆ. ಈ ವಿಷಯದಲ್ಲಿ ಜಿಲ್ಲಾ ನ್ಯಾಯಾಧೀಶರಿಗೆ ಸೂಕ್ತವಾದ ಆದೇಶವನ್ನು ಬೊಂಬಾಯಿ ಸರ್ಕಾರ ರವಾನಿಸುತ್ತದೆ ಎಂದು ನಾನು ನಂಬಿದ್ದೇನೆ.

ಇಂದಿನ ಟೈಂಸ್ ಆಫ್ ಇಂಡಿಯಾ ದಿನಪತ್ರಿಕೆಯಿಂದ ನನಗೆ ತಿಳಿದು ಬಂದಿರುವ ವಿಷಯ ಏನೆಂದರೆ ಜಿಲ್ಲಾ ಮ್ಯಾಜಿಸ್ಟ್ರೇಟರು ಕಾನೂನು ಕಾಯ್ದೆ ೧೪೪ರ ಪ್ರಕಾರ ಆದೇಶ ಹೊರಡಿಸಿ ಯಾರೇ ಆಗಲೀ ಕಾಲಾರಾಂ ದೇವಸ್ಥಾನದ ಬಳಿ ಬರಬಾರದು ಎಂಬುದು ಹೇಳಿದ್ದಾರೆ. ಆದರೆ ದೇವಸ್ಥಾನದ ಬಾಗಿಲ ಬಳಿ ಸತ್ಯಾಗ್ರಹಕ್ಕೆ ಕುಳಿತಿರುವ ನಮ್ಮ ಸತ್ಯಾಗ್ರಹಿಗಳಿಗೂ ಇದು ಅನ್ವಯ ಆಗುತ್ತದೆಯೇ ಎಂದು ನನಗೆ ತಿಳಿದಿಲ್ಲ.

ಈ ಆದೇಶವನ್ನು ಪಾಲಿಸಲು ನಾವು ಕೇವಲ ಒಂದೇ ಒಂದು ಷರತ್ತಿನ ಮೇಲೆ (ಸಾಧ್ಯವಿದೆ) ಎಂದು ಹೇಳಬಯಸುತ್ತೇನೆ. (ಮಹಾಪ್ರಭುಗಳೇ ಇದು ನನ್ನ ವೈಯಕ್ತಿಕ ಅಭಿಪ್ರಾಯವೇ ಹೊರತು ಸತ್ಯಾಗ್ರಹಿಗಳದ್ದಲ್ಲ) ಆ ಷರತ್ತು ಏನೆಂದರೆ ಪೂಜಾರಿ ಅವರ ಮನೆಯ ದ್ವಾರವನ್ನು ದೇವಸ್ಥಾನ ಪ್ರವೇಶ ಮಾಡಲು ಸಾರ್ವಜನಿಕರು ಬಳಸಬಾರದು. ಹಾಗೂ ಈ ಅವಧಿಯಲ್ಲಿ ದೇವಸ್ಥಾನದೊಳಕ್ಕೆ ಸಾರ್ವಜನಿಕರು ಪ್ರವೇಶಿಸದಂತೆ ಅದರ ಎಲ್ಲಾ ಬಾಗಿಲುಗಳನ್ನೂ ಮುಚ್ಚಿರಬೇಕು. ಈ ಆದೇಶ ಜಾರಿಯಲ್ಲಿ ಇರುವವರೆಗೂ ಈ ನಿಯಮ ಜಾರಿ ಇರಬೇಕು.

ಸಂಘರ್ಷ ಇರುವುದು ಸ್ಪೃಶ್ಯರು ಹಾಗೂ ಅಸ್ಪೃಶ್ಯರ ನಡುವೆ. ಇದರಲ್ಲಿ ಸರ್ಕಾರವನ್ನು ಎಳೆದು ತರುವ ಯಾವುದೇ ಇಚ್ಛೆ ನನಗಿಲ್ಲ ಎಂದು ನಾನು ನನ್ನ ಹಿಂದಿನ ಪತ್ರದಲ್ಲಿ ಸ್ಪಷ್ಟ ಪಡಿಸಿರುವೆ.

ತಮ್ಮನ್ನು ಖಾಸಗಿಯಾಗಿ ಭೇಟಿ ಮಾಡಲು ನಾನು ಇಚ್ಛಿಸುವೆ. ಏಕೆಂದರೆ ನಾನು ಭೇಟಿಯಾಗಿ ತಮಗೆ ಸಂದರ್ಭವನ್ನು ಮುಖತಃ ವಿವರಿಸಲು ಇಚ್ಛಿಸುವೆ. ನಿಮಗೆ ಇಚ್ಛೆ ಇದ್ದರೆ ನಾಳೆ ಮಧ್ಯಾಹ್ನ ೨ ಘಂಟೆಯವರೆಗೂ ನಾನು ಬಿಡುವಾಗಿ ಇರುತ್ತೇನೆ.

ಮಹಾಪ್ರಭುಗಳ ಶೀಘ್ರ ಉತ್ತರದ ನಿರೀಕ್ಷೆಯಲ್ಲಿ

ಎಂದೆಂದಿಗೂ
ನಿಮ್ಮ ವಿನಮ್ರ ಸೇವಕನಾಗಿ
ಉಳಿಯಬಯಸುವ
ಬಿ.ಆರ್. ಅಂಬೇಡ್ಕರ್ (ಸಹಿ)

## "ಕೇವಲ ನಿಮ್ಮ ಹೋರಟದಿಂದ ಮಾತ್ರವೇ ಸ್ವಾತಂತ್ರ ಪಡೆಯಿರಿ

ತ್ರಿಚೂರಿನ ಜನರಿಗೆ ಡಾ. ಅಂಬೇಡ್ಕರ್ ಅವರ ಸಂದೇಶ

ಕ್ಯಾಲಿಕಟ್
ಜೂನ್ ೧೭, ೧೯೩೧

ದೇವಸ್ಥಾನದ ಪ್ರವೇಶವನ್ನು ಕುರಿತು ತ್ರಿಚೂರಿನಲ್ಲಿ ಸತ್ಯಾಗಹವನ್ನು ನಡೆಸುತ್ತಿರುವ ಸಮಿತಿಯ ಅಧ್ಯಕ್ಷರಿಗೆ ಸಲಹೆಯನ್ನು ನೀಡುತ್ತಾ ಬೊಂಬಾಯಿಯ ಡಾ. ಅಂಬೇಡ್ಕರ್ ಅವರು ಈ ರೀತಿ ಹೇಳುತ್ತಾರೆ.

"ಕಾಂಗ್ರೆಸ್ ಸಹಾಯದ ಮೇಲೆ ಅವಲಂಬಿಸಬೇಡಿ ಎಂದು ನಾನು ನಿಮಗೆ ತಿಳಿಸಬಯಸುತ್ತೇನೆ. ಈ ವಿಷಯದಲ್ಲಿ ಅವರಿಂದ ನಿಮಗೆ ಯಾವುದೇ ಸಹಾಯವೂ ದೊರೆಯಲಾರದು. ಅವರ ಸಹಾಯ ನಿಮಗೆ ಯಾವ ರೀತಿಯ ಒಳ್ಳೆಯ ಹೆಸರನ್ನೂ ತಂದು ಕೊಡುವುದಿಲ್ಲ. ನಮ್ಮ ಜನ ತಮ್ಮ ಸಾಮರ್ಥ್ಯದಿಂದ, ತಮ್ಮ ಹೋರಾಟದಿಂದಲೇ ಸ್ವಾತಂತ್ರ್ಯ ಪಡೆಯಬೇಕು.

### ಡಾ. ಅಂಬೇಡ್ಕರ್ ಅವರ ಸಲಹೆ

ತ್ರಿಚೂರಿನ ಸತ್ಯಾಗ್ರಹ ಸಮಿತಿಯ ಅಧ್ಯಕ್ಷರಿಗೆ ಕಾಂಗ್ರೆಸಿಗರ ಸಹಾಯ ಪಡೆಯಬೇಡಿ ಎಂದು ಹೇಳಿದ್ದ ಡಾ. ಅಂಬೇಡ್ಕರ್ ಅವರ ಮಾತಿನಲ್ಲಿ ಅಸಹಜವಾದುದೇನೂ ಇರಲಿಲ್ಲ. ಇಲ್ಲವಾದರೆ ಕಾಂಗ್ರೆಸ್ ಇದುವರೆಗೂ ಮಾಡಿರುವ ಅನ್ಯಾಯವನ್ನು ಎತ್ತಿ ತೋರಿಸುವುದು ಕಷ್ಟಸಾಧ್ಯವಾದ ವಿಷಯವೇ ಆಗಿರಲಿಲ್ಲ. ಎರಡನೆಯದಾಗಿ ಯಾರೇ ಆದರೂ ತಮ್ಮ ಮೂಲೋದ್ದೇಶವನ್ನು ಇತರರ ಮೇಲೆ ಹೇರಬಾರದು. ಡಾ. ಅಂಬೇಡ್ಕರ್ ಅವರ ಪತ್ರವು ತಮ್ಮ ಅಸ್ತಿತ್ವಕ್ಕಾಗಿ ಹೋರಾಟದ ದ್ಯೋತಕವೇ ಆಗಿದೆ.

### ನಾಸಿಕ್‌ನ ಸತ್ಯಾಗ್ರಹಿಗಳಿಗೆ ಲಂಡನ್ನಿನಿಂದ ಶುಭಾಶಯಗಳು ಹಾಗು ಆಶೀರ್ವಾದ

ನಾಸಿಕ್ ದೇವಸ್ಥಾನ ಪ್ರವೇಶ ಸತ್ಯಾಗ್ರಹ ಸಮಿತಿಯ ಅಧ್ಯಕ್ಷರಿಗೆ ಲಂಡನ್ನಿನಿಂದ ಡಾ. ಅಂಬೇಡ್ಕರ್ ಅವರು ಕಳುಹಿಸಿದ ಸಂದೇಶ ಈ ರೀತಿ ಇದೆ.

ಈ ಕೆಲದಿನಗಳ ಹಿಂದೆ ಆಯುಕ್ತರೊಂದಿಗೆ ತಮ್ಮ ಭೇಟಿ ಕುರಿತು ನೀವು ನನಗೆ ಪತ್ರ ಬರೆದಿದ್ದಿರಿ. ಅದಕ್ಕೆ ಉತ್ತರ ನೀಡಿರದಿದ್ದುದಕ್ಕಾಗಿ ನಾನು ವಿಷಾದಿಸುತ್ತೇನೆ. ಅಲ್ಪಸಂಖ್ಯಾತರ ವಿಷಯವು ಮಹಾತ್ಮಾ ಗಾಂಧಿಯವರಿಂದಾಗಿ ಇದು ಮತ್ತಷ್ಟು ಜಟಿಲ ಆಗಿದೆ. ಅದನ್ನು ಬಿಡಿಸುವುದರಲ್ಲಿ ತೊಡಗಿರುವ ನನಗೆ ಒಂದು ನಿಮಿಷದ ಬಿಡುವು ಕೂಡ ದೊರೆಯುತ್ತಿಲ್ಲ.

### ಸರ್ಕಾರದ ಮೇಲೆ ನಾವು ಸಾಕಷ್ಟು ಕಾಲ ಭರವಸೆ ಇರಿಸಿದ್ದೆವು:

ಅಸ್ಪೃಶ್ಯತೆಯನ್ನು ಸರ್ಕಾರವೇ ತೊಡೆದು ಹಾಕುತ್ತದೆ ಎಂದು ನಾವು ಸಾಕಷ್ಟು ಕಾಲ ನಿರೀಕ್ಷಿಸಿದ್ದೆವು. ಆದರೆ ಈ ವಿಷಯದಲ್ಲಿ ಅದು ಏನನ್ನೂ ಮಾಡಿಲ್ಲ. ಆದ್ದರಿಂದ ಸತ್ಯಾಗ್ರಹ ನಿಲ್ಲಿಸುವಂತೆ ನಮಗೆ ಹೇಳಲು ಅದಕ್ಕೆ ಯಾವುದೇ ನೈತಿಕ ಅಧಿಕಾರ ಇಲ್ಲ. ಆದ್ದರಿಂದ ಈ ಭಾರವನ್ನು ನಾವೇ ನಮ್ಮ ಭುಜದ ಮೇಲೆ ಹೊರಬೇಕು ಹಾಗು ಆದಷ್ಟು ಬೇಗನೇ ಈ ಶಾಪದಿಂದ ಹೊರಬರುವ ಮಾರ್ಗ ಕಂಡುಕೊಳ್ಳಬೇಕು.

ಸರ್ಕಾರ ನಮಗೆ ಸಹಾಯ ಮಾಡಲು ಸಿದ್ಧವಿರದಿದ್ದರೂ ನಮ್ಮ ನ್ಯಾಯಯುತವಾದ ಹೋರಾಟಕ್ಕೆ ಅದು ಅಡ್ಡಿಪಡಿಸಬಾರದು. ಎರಡೂ ಪಂಗಡಗಳ ನಡುವೆ ದ್ವೇಷ ಭಾವನೆ ಹುಟ್ಟುಹಾಕಬಾರದು ಎಂದು ನಮಗೆ ಹೇಳುವುದರಲ್ಲಿ ಅರ್ಥವಿಲ್ಲ. ಈ ಆದೇಶವನ್ನು ಸರ್ಕಾರವು ಕೇವಲ ಅಲ್ಪಸಂಖ್ಯಾತರಿಗೆ ಬದಲಾಗಿ ಎಲ್ಲ ಸಮುದಾಯದವರಿಗೂ ರವಾನಿಸಬೇಕು. ಅದರಲ್ಲಿಯೂ ಈ ವಿಷಯದಲ್ಲಿ ತಪ್ಪನ್ನು ಎಸಗುತ್ತಿರುವ ಹಾಗೂ ಪಾಪವನ್ನು ಮಾಡುತ್ತಿರುವ ಪಂಗಡಗಳಿಗೆ ತಿಳಿಯಹೇಳಬೇಕು.

## "ನನ್ನ ಜನರಿಗೆ ನನ್ನ ಅವಶ್ಯಕತೆ ಇಲ್ಲ"

ನನ್ನ ಸಂದೇಶಗಳನ್ನು ನೀವು ಅನುವಾದ ಮಾಡಿ ಭಿತ್ತಿ ಪತ್ರಗಳ ಮೂಲಕ ಅಥವಾ ಬೇರೆ ಮಾರ್ಗಗಳ ಮೂಲಕ ನನ್ನ ಜನರಿಗೆ ತಿಳಿಯಪಡಿಸಬಹುದು. ಮುಖೇಡ್‌ನಲ್ಲಿ ನಮ್ಮ ಜನರ ಹಾಗು ಉಚ್ಚಜಾತಿಯ ಜನರ ನಡುವೆ ನಡೆಯುತ್ತಿರುವ ಗಲಭೆಗಳ ಮಾಹಿತಿಯು ನನಗೆ ಹಲವು ತಂತಿಗಳ ಮೂಲಕ ದೊರಕಿದೆ. ಆದರೆ ಈ ಹೋರಾಟವನ್ನು ಯಶಸ್ವಿಗೊಳಿಸಲು ನಮ್ಮ ಜನರು ಯಾವುದೇ ತ್ಯಾಗಕ್ಕೂ ಸಿದ್ಧರಾಗಿದ್ದಾರೆ ಎಂದು ತಿಳಿದು ನನಗೆ ಸಂತಸ ಉಂಟಾಗಿದೆ. ಅವರ ಈ ನಿರ್ಧಾರಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸಬಯಸುತ್ತೇನೆ. ನೀವು ಸತ್ಯಾಗ್ರಹವನ್ನು ನವೆಂಬರ್ ೫ ರಂದು ಪ್ರಾರಂಭ ಮಾಡಲು ಯೋಚಿಸಿದ್ದೀರಿ ಎಂದು ನನಗೆ ತಿಳಿದುಬಂದಿದೆ. ನೀವು ಈ ಸತ್ಯಾಗ್ರಹಕ್ಕೆ ಅಗತ್ಯ ಇರುವ ಎಲ್ಲಾ ತಯಾರಿಯನ್ನು ಅತ್ಯುತ್ತಮವಾಗಿ ಮಾಡಿದ್ದೀರಿ ಎಂದು ನಾನು ನಂಬಿದ್ದೇನೆ ನಿಮ್ಮ ಸಹಾಯಕ್ಕೆ ನಿಲ್ಲಲು ನಾನು ಅಲ್ಲಿ ಇಲ್ಲ. ಆದರೆ ನಮ್ಮ ಜನರು ತಮ್ಮ ಸಮಸ್ಯೆಯ ಬಗ್ಗೆ ಜಾಗೃತರಾಗಿದ್ದಾರೆ ಎಂದು ನಾನು ನಂಬಿದ್ದೇನೆ. ಪ್ರತಿಯೊಂದು ಹಂತದಲ್ಲಿಯೂ ಅವರಿಗೆ ನನ್ನ ಅಗತ್ಯ ಇಲ್ಲ ಎಂಬುದು ನನಗೆ ತಿಳಿದಿದೆ.

- A.P[1]

ಸತ್ಯಾಗ್ರಹದ ಸಮಯದಲ್ಲಿ ನಾಸಿಕ್‌ನಲ್ಲಿ ಯಾವ ರೀತಿ ಪರಿಸ್ಥಿತಿ ಇತ್ತು ಎನ್ನುವುದನ್ನು ಟೈಂಸ್ ಆಫ್ ಇಂಡಿಯಾ ಪತ್ರಿಕೆಯು ಈ ಕೆಳಗಿನಂತೆ ವರದಿ ಮಾಡಿತ್ತು. (ಸಂಪಾದಕರು)

"ಪವಿತ್ರ ಕುಂಡಗಳಲ್ಲಿ ಸ್ನಾನ ಮಾಡುವ ಹಕ್ಕಿಲ್ಲ" ಅಸ್ಪೃಶ್ಯರ ವಿರುದ್ಧ ನಾಸಿಕ್‌ನಲ್ಲಿ ನಿರ್ಧಾರ (ನಮ್ಮ ಪ್ರತಿನಿಧಿಯಿಂದ)

ಒಟ್ಟಿನಲ್ಲಿ ಹೇಳಬೇಕೆಂದರೆ ಅಸ್ಪೃಶ್ಯರಿಗೆ ಈ ನಾಲ್ಕು ಕುಂಡಗಳ ಬಳಿ ಸುಳಿಯುವ ಅಥವಾ ಸ್ನಾನ ಮಾಡುವ ಅನುಮತಿ ಇಲ್ಲ. ಆದ್ದರಿಂದ ಭಾರತೀಯ ಕಾನೂನು ಸಂಹಿತೆ ೧೪೭(ಎ)ರ ಪ್ರಕಾರ ಎಲ್ಲಾ ಅಸ್ಪೃಶ್ಯರು ಎಂದರೆ – ಮಹರರು, ಮಾಂಗರು, ಚಮ್ಮಾರರು, ದೇಢರು, ಭಂಗಿಗಳು, ಹಾಗು ಇತರ ಅಸ್ಪೃಶ್ಯರಿಗೆ ಈ ನಾಲ್ಕು ಕುಂಡಗಳೂ ಎಂದರೆ, ಲಕ್ಷಣ, ಧನುಷ್ಯ, ರಾಮ ಹಾಗು ಸೀತಾ ಕುಂಡಗಳ ಬಳಿ ಸುಳಿಯದಂತೆ ನಿಷೇಧಿಸಿದ್ದೇನೆ. ಇದರ ವಿರುದ್ಧ ಅವರು ನಗರದ ನ್ಯಾಯಾಲಯದಿಂದ ತಡೆಯಾಜ್ಞೆ ತರುವ ತನಕವೂ ಈ ನಿಷೇಧ ಜಾರಿಯಲ್ಲಿ ಇರುತ್ತದೆ." ಈ ರೀತಿ ನಾಸಿಕ್‌ನ ಜಿಲ್ಲಾ ಮ್ಯಾಜಿಸ್ಟ್ರೇಟ್ L.N. ಬ್ರೌನ್ ಅವರು ಇಂದು ಆದೇಶ ಹೊರಡಿಸಿದ್ದಾರೆ. ಇದು ಸನಾತನಿಗಳೂ ಹಾಗು ಅಸ್ಪೃಶ್ಯರ ನಡುವೆ ನಡೆಯುತ್ತಿರುವ ವಿವಾದವನ್ನು ಕುರಿತು ಅವರು ಹೊರಡಿಸಿರುವ ಆದೇಶವಾಗಿದೆ. ಅಸ್ಪೃಶ್ಯರು ಈ ಕುಂಡಗಳಲ್ಲಿ ಸ್ನಾನ ಮಾಡುವ ಹಕ್ಕು ತಮಗೂ ಇದೆ ಎಂದು ವಾದಿಸುತ್ತಿದ್ದಾರೆ.

---

1. The Bombay Charanicle Dated 3rd Nov. 1931

ಇನ್ನು ಐರಿಷ್ ಸಾಂದ್ವಾ ಸೇತುವೆಯ ಪ್ರಶ್ನೆಗೆ ಬಂದರೆ, ಅದು ರಾಮ ಕುಂಡದ ಬಳಿ ಇದೆ. ಮ್ಯಾಜಿಸ್ಟ್ರೇಟರ ಪ್ರಕಾರ ಈ ಸೇತುವೆಯನ್ನು ಜನರು, ಪವಿತ್ರ ಕುಂಡಗಳ ಪ್ರದಕ್ಷಿಣೆ ಹಾಕಲು ಬಳಸುತ್ತಾರೆ ಮಿಕ್ಕಂತೆ ಇದರ ಬಳಕೆಯು ಇಲ್ಲಿ ನಗಣ್ಯ. ಆದರೆ ಇಲ್ಲಿ ಗಮನಿಸಬೇಕಾದ ಅಂಶ ಎಂದರೆ ಗೌರವಯುತವಾಗಿ ಬಟ್ಟೆ ಬರೆಗಳನ್ನು ತೊಟ್ಟಿರುವ ಕ್ರೈಸ್ತರು ಹಾಗು ಮುಸಲ್ಮಾನರಿಗೆ ಈ ಸೇತುವೆಯನ್ನು ಹಾದು ಹೋಗಲು ಅನುಮತಿ ಇದೆ. ಆದರೆ ಈ ಸಾಕ್ಷ್ಯವು ಪ್ರಸಕ್ತಪ್ರಕರಣಕ್ಕೆ ಸಂಬಂಧಪಟ್ಟಿಲ್ಲ. ಹಿಂದೂ ಅಸ್ಪೃಶ್ಯರು ಈ ಸಾಂಧ್ವಾ ಸೇತುವೆಯನ್ನು ಬಳಸುತ್ತಿದ್ದರು ಎಂಬುದು ರುಜುವಾತಾಗಿಲ್ಲ.[೧]

ದೇವಸ್ಥಾನದ ಪ್ರವೇಶ ಕುರಿತು ಸತ್ಯಾಗ್ರಹ ನಡೆಯುತ್ತಿದ್ದ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ಇದನ್ನು ಆಧಿಕೃತಗೊಳಿಸಲು ಪ್ರಯತ್ನ ಮಾಡಲಾಯಿತು. ಈ ವಿಷಯದ ಹಿನ್ನೆಲೆ ಈ ಕೆಳಗಿನಂತಿದೆ:

ಭಾರತದಲ್ಲಿ, ಅಸ್ಪೃಶ್ಯರು ದೇವಸ್ಥಾನದ ಒಳಗೆ ಪ್ರವೇಶ ಮಾಡುವುದು ನಮ್ಮ ಸಂಪ್ರದಾಯಕ್ಕೆ ವಿರುದ್ಧ ಎಂದು ನ್ಯಾಯಾಲಯ ತೀರ್ಮಾನ ಮಾಡಿದ್ದಾಗ ದೇವಸ್ಥಾನ ಪ್ರವೇಶ ಪ್ರಕ್ರಿಯೆಯು ಒಂದು ಹಂತದಲ್ಲಿ ಸೋಲನ್ನು ಕಂಡಿತ್ತು. ಈ ರೀತಿಯ ನ್ಯಾಯಾಲಯದ ತೀರ್ಮಾನಗಳು, ಗಾಂಧೀಜಿ ಅವರ ಸಮಾಜ ಸುಧಾರಣೆಯ ನಿಟ್ಟಿನಲ್ಲಿ ಅಡ್ಡಗಾಲು ಹಾಕಿದ್ದವು. ಈ ಹಿನ್ನೆಲೆಯಲ್ಲಿ ಇದರ ನಿವಾರಣೆಗಾಗಿ ಶಾಸನವನ್ನು ಜಾರಿಗೆ ತರುವ ಪ್ರಯತ್ನವನ್ನು ಮಾಡಲಾಯಿತು. ಆದ್ದರಿಂದ ಹಲವಾರು ಪ್ರಸ್ತಾವನೆಗಳು ಸ್ಥಳಿಯ ಹಾಗು ಕೇಂದ್ರೀಯ ಶಾಸನ ಸಭೆಗಳ ಮುಂದೆಬಂದವು. ಈ ಪ್ರಸ್ತಾವನೆಗಳಲೆಲ್ಲಾ ಹೆಸರಿಸ ಬಹುದಾದಂತಹ ಪ್ರಮುಖವಾದವುಗಳೆಂದರೆ ಎಂದರೆ ಡಾ.ಸುಬ್ಬರಾಯನ್ ಅವರ ದೇವಸ್ಥಾನ ಪ್ರವೇಶ ಮಸೂದೆ ಹಾಗು ರಂಗ ಅಯ್ಯರ್ ಅವರ ಅಸ್ಪೃಶತಾ ನಿವಾರಣಾ ಮಸೂದೆ.

ನ್ಯಾಯಾಲಯದ ನಿರ್ಣಯದಿಂದಾದ ಅನ್ಯಾಯವನ್ನು ಸರಿಪಡಿಸುವುದು ಹಾಗು ಮದರಾಸು ದತ್ತಿ ಕಾಯ್ದೆಯಲ್ಲಿ ಬದಲಾವಣೆ ತರುವುದು ಡಾ.ಸುಬ್ಬರಾಯನ್ ಮಸೂದೆಯ ಉದ್ದೇಶವಾಗಿತ್ತು. ಈ ಮಸೂದೆಗೆ ಪಂಡಿತ ಮದನ ಮೋಹನ ಮಾಳವಿಯಾ, ಕೊಂಡ ವೆಂಕಟಪ್ಪಯ್ಯ ಹಾಗು ಶ್ರೀ ಎಸ್. ಟಿ. ರಾಮಾನುಜ ಐಯ್ಯಂಗಾರ್ ಹಾಗು ಶ್ರೀನಿವಾಸ ಅಯ್ಯಂಗಾರ್ ಅವರು ಮೊದಲಾದ ಸನಾತನಿ ಹಿಂದೂಗಳು ತಮ್ಮ ಸಮ್ಮತಿಯನ್ನು ಸೂಚಿಸಿದ್ದರು. ಆದರೆ ಈ ಮಸೂದೆಯು ದೂರಗಾಮಿ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂಬ ಕಾರಣವನ್ನೊಡ್ಡಿ ಮದರಾಸು ಸಂಪುಟವು ಸುಬ್ಬರಾಯನ್ ಅವರ 'ದೇವಸ್ಥಾನ ಪ್ರವೇಶ ಮಸೂದೆಯನ್ನು ತಿರಸ್ಕರಿಸಿತು. ಅನಂತರ ರಂಗಾ ಅಯ್ಯರ್ ಅವರು ಸುಬ್ಬರಾಯನ್ ಅವರ ಮಸೂದೆಯನ್ನೇ ಅನುಸರಿಸಿ ಎರಡನೆಯ ಮಸೂದೆಯನ್ನು ಬರೆದಿದ್ದರು. ಅದನ್ನು ಕೇಂದ್ರೀಯ ಶಾಸಕಾಂಗದಲ್ಲಿ ಪ್ರಸ್ತಾವನೆ ಮಾಡುವಂತೆ ಕೋರಿದರು. ಇದಕ್ಕೆ ವೈಸ್‌ರಾಯ್ ಅವರಿಂದ ಕೆಲ ಷರತ್ತುಗಳ ಮೇಲೆ ಒಪ್ಪಿಗೆಯೂ ದೊರಕಿತು.

ವೈಸ್‌ರಾಯ್ ಲಾರ್ಡ್ ಮಿಲ್ಲಿಂಗ್ಟನ್ ಅವರು ಅದನ್ನು ಕೇಂದ್ರೀಯ ಮಂತ್ರಿಮಂಡಲದಲ್ಲಿ ಪ್ರಸ್ತಾವನೆಗೆ ತರಲು ಕೆಲ ಷರತ್ತುಗಳನ್ನು ಇರಿಸಿದರು. ಅವರ ಪ್ರಕಾರ ಭಾರತ ಸರ್ಕಾರ ಈ ಮಸೂದೆಗೆ ಒಪ್ಪಿಗೆ ಸೂಚಿಸಿಯೇ ತೀರುತ್ತದೆ ಎಂದು ಖಚಿತತೆಯನ್ನು ತಾವು ನೀಡಲು ಸಾಧ್ಯವಿಲ್ಲ ಎಂದೂ ಹಾಗು ಹಿಂದೂ ಜನಾಂಗದ ಪ್ರತಿಯೊಂದು ಉಪಪಂಗಡದವರ ಅಭಿಪ್ರಾಯವನ್ನು ಈ ಮಸೂದೆಯ ಬಗ್ಗೆ ಪರಿಗಣಿಸಲಾಗುವುದು ಎಂದು ಹೇಳಿದರು. ಮಹಾತ್ಮ ಗಾಂಧಿಯವರು ವೈಸ್‌ರಾಯ್ ಅವರಿಗೆ ೧೯೩೩ರ ಫೆಬ್ರವರಿ ೧ ರಂದು ಪತ್ರವನ್ನು ಬರೆದು, ಈ ಎರಡು ಮಸೂದೆಯಗಳಲ್ಲಿರುವ ಅಂಶಗಳು ೧೯೩೨ರ

---

1. The Times of India, 7.6.7932, Reprinted, Khairmode Vil. 3, Pp. 351-352

ಸೆಪ್ಟೆಂಬರ್ ೨೫ರಂದು ಸವರ್ಣೀಯ ಹಿಂದೂಗಳು ತೆಗೆದುಕೊಂಡ, ಪೂನಾ ಒಪ್ಪಂದದ ಭಾಗವಾಗಿರುವ, ನಿರ್ಣಯದ ಪ್ರಕಾರವೇ ಇರುವುದರಿಂದ, ಈ ಮಸೂದೆಗಳಿಗೆ ಮಾನ್ಯತೆಯನ್ನು ನೀಡುವುದು ಭಾರತ ಸರ್ಕಾರದ ಕರ್ತವ್ಯವಾಗಿದೆ ಎಂದು ತಿಳಿಸಿದರು.

ರಂಗಾ ಅಯ್ಯರ್ ಅವರ ಮಸೂದೆಯನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಎಂಬುದೇ ಮಹಾತ್ಮ ಗಾಂಧಿ ಅವರ ಆಶಯವಾಗಿತ್ತು. ಅವರು ಶಾಸಕಾಂಗ ಸಭೆಯ ಹಿಂದೂ ಸದಸ್ಯರಿಗೆ ಈ ಕುರಿತು ಕೋರಿಕೆಯನ್ನು ಕಳುಹಿಸಿಕೊಟ್ಟರು. ಅವರು ಈ ಕಾರ್ಯಕ್ಕಾಗಿ ಸಿ. ರಾಜಗೋಪಾಲ್‌ಚಾರಿ ಅವರ ಸೇವೆಯನ್ನು ಬಳಸಿಕೊಂಡರು. ಏಕೆಂದರೆ ಮಸೂದೆಗೆ ಒಪ್ಪಿಗೆಯನ್ನು ಪಡೆದುಕೊಳ್ಳಲು ಇವರು ಅತ್ಯಂತ ಸೂಕ್ತ ವ್ಯಕ್ತಿ ಎಂಬುದು ಅವರ ನಂಬಿಕೆ ಆಗಿತ್ತು. ಡಾ.ಅಂಬೇಡ್ಕರ್ ಅವರ ಉದ್ವೇಗ ಹಾಗು ಸರ್ಕಾರದ ನಿರ್ಧಾರ ಅಥವಾ ಮಾಳವಿಯಾ ಅವರ ವಿರೋಧ ಮನಸ್ಸಿಗೆ ಹಚ್ಚಿಕೊಳ್ಳಬಾರದು ಎಂದು ಅವರು ನುಡಿದರು. ಜಿ.ಡಿ. ಬಿರ್ಲಾ ಹಾಗು ದೇವದಾಸ ಗಾಂಧಿ ಅವರನ್ನು ಮಸೂದೆಯ ಪರವಾಗಿ ಪ್ರಚಾರಮಾಡಲು ನೇಮಿಸಿದರು. ಇನ್ನೇನು ಮಸೂದೆಯ ಅಂಗೀಕಾರ ಆಗಬೇಕು ಎಂಬ ಹಂತಕ್ಕೆ ಬಂದಾಗ ಬ್ರಿಟಿಷ್ ಸರ್ಕಾರವು ಶಾಸನಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಆದೇಶ ನೀಡಿತು. ಮತದಾರರ ಮುಂದೆ ಹೋಗಬೇಕಾಗಿ ಬಂದಿದ್ದರಿಂದ ಮಸೂದೆಗೆ ಬೆಂಬಲ ಸೂಚಿಸಿದ್ದ ಎಲ್ಲಾ ನಾಯಕರುಗಳು ಉಲ್ಟಾಹೊಡೆದರು. ಈ ಮಸೂದೆಯ ಒಪ್ಪಿಗೆಗೆ ಶ್ರಮಿಸಿದ್ದ ರಂಗಾ ಅಯ್ಯರ್ ಅವರು ಬಹಳ ನೊಂದುಕೊಂಡರು ಹಾಗು ಸಿ. ರಾಜಗೋಪಾಲಚಾರಿ ಅವರ ಮೇಲೆ ಹರಿಹಾಯ್ದರು ಅವರು ಒಂದು "ಏಡಿಯಂತೆ" ಹೆದರಿ ಹಿಂದೆ ಸರಿದರು ಎಂದು ಮೂದಲಿಸಿದರು "ಒಂದು ವೇಳೆ ಅವರು ದೇವಸ್ಥಾನ ಪ್ರವೇಶ ಮಸೂದೆ ಅಥವಾ ಅಸ್ಪೃಶ್ಯತಾ ನಿರ್ಮೂಲನಾ ಮಸೂದೆಯನ್ನು ಬೆಂಬಲಿಸಿದ್ದಿದ್ದರೆ ಅವರು ಹಲವಾರು ಮತಗಳನ್ನು ಕಳೆದುಕೊಳ್ಳುತ್ತಿದ್ದರು. ತಾವು ಹೆಚ್ಚಿನ ಸಂಖ್ಯೆಯಲ್ಲಿ ಶಾಸನ ಸಭೆಗೆ ಆರಿಸಿಬರಬೇಕೆಂಬ ದೃಷ್ಟಿಯಿಂದ ಎಲ್ಲಾ ಬಗೆಯ ತಂತ್ರಗಾರಿಕೆಯನ್ನು ಆಶ್ರಯಿಸಿದರು" ಎಂದೂ ಹೇಳಿದರು.

ಈ ಹಿನ್ನೆಲೆಯಲ್ಲಿ ಇಬ್ಬರು ಮಹಾ ವ್ಯಕ್ತಿಗಳಾದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಹಾಗು ಮಹಾತ್ಮ ಗಾಂಧೀಜಿ ಅವರು ೧೯೩೩ರ ಫೆಬ್ರವರಿ ೪ರಂದು ಎರವಾಡ ಜೈಲಿನಲ್ಲಿ ಭೇಟಿಯಾದರು.

(ಈ ಭೇಟಿಯ ವಿವರಗಳನ್ನು ಪಡೆಯಲು ಡಾ. ಅಂಬೇಡ್ಕರ್ ಹಾಗು "ಮಹಾತ್ಮಾ ಗಾಂಧೀಜಿಯವರ ಭೇಟಿಗಳು" ವಿಭಾಗ ೨ನ್ನು ನೋಡಿ: ಸಂಪಾದಕರು)

ಈ ಭೇಟಿಯ ನಂತರ ಡಾ. ಅಂಬೇಡ್ಕರ್ ಅವರು ದೇವಸ್ಥಾನ ಪ್ರವೇಶ ಮಸೂದೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅವರು ನೀಡಿದ್ದ ಹೇಳಿಕೆ ಈ ಕೆಳಗಿನಂತಿದೆ:

### ದೇವಸ್ಥಾನ ಪ್ರವೇಶ ಮಸೂದೆ ಕುರಿತು ಹೇಳಿಕೆ–೧೪ನೆಯ ಫೆಬ್ರವರಿ ೧೯೩೩

ದೇವಸ್ಥಾನ ಪ್ರವೇಶ ಮಸೂದೆಯನ್ನು ಕುರಿತು ಅಸ್ಪೃಶ್ಯರು ಯಾವ ರೀತಿಯ ಅಭಿಪ್ರಾಯ ಹೊಂದಿದ್ದಾರೆ? ಎಂದು ಕೇಳಿದ ಗಾಂಧಿಯವರು ತಮ್ಮ ಈ ಹೋರಾಟಕ್ಕೆ ನನ್ನ ಬೆಂಬಲವನ್ನು ಸೂಚಿಸುವಂತೆ ತಿಳಿಸಿದರು ಆದರೆ ಅದನ್ನು ನಾನು ನಿರಾಕರಿಸಿದೆ. ನನ್ನ ಓದುಗರಿಗೆ ನಾನು ಈ ವಿಷಯದಲ್ಲಿ ಈ ತೆರನಾದ ಅಭಿಪ್ರಾಯವನ್ನು ಏಕೆ ಪಡೆದಿರುವೆ ಎಂದು ತಿಳಿಸಲು ಮಾಧ್ಯಮದ ಮೂಲಕ ಒಂದು ಹೇಳಿಕೆಯನ್ನು ನೀಡಿದ್ದೇನೆ. ನಾನು ನೀಡಿರುವ ಹೇಳಿಕೆಯು ಈ ಕೆಳಗಿನಂತಿದೆ.

ದೇವಸ್ಥಾನ ಪ್ರವೇಶದ ವಿವಾದವು ಸನಾತನಿಗಳಿಗೆ ಹಾಗು ಮಹಾತ್ಮಾ ಗಾಂಧಿಯವರಿಗೆ

ಸಂಬಂಧಿಸಿದುದೇ ಆಗಿದ್ದರು ಕೂಡ, ಶೋಷಿತ ವರ್ಗದ ಜನರು ಇದರಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಲಿದ್ದಾರೆ. ಏಕೆಂದರೆ ಇವರ ಅಭಿಪ್ರಾಯ ಕೂಡ ನಿರ್ಣಾಯಕವಾಗಿ ಗಣನೆಗೆ ಬರಲಿದೆ. ಅದು ಗಣನೆಗೆ ಬರಲೇ ಬೇಕು ಕೂಡ. ಏಕೆಂದರೆ, ಅದರಲ್ಲಿ ಯಾವುದೇ ಸಂದೇಹವೂ ಇರಕೂಡದು.

ಆದರೆ ರಂಗಾ ಅಯ್ಯರ್ ಅವರು ಇದೀಗ ರಚಿಸಿರುವ ದೇವಸ್ಥಾನ ಪ್ರವೇಶ ಮಸೂದೆಗೆ ಅಸ್ಪೃಶ್ಯರು ತಮ್ಮ ಬೆಂಬಲ ಸೂಚಿಸಲು ಸಾಧ್ಯವಿಲ್ಲ. ಈ ಮಸೂದೆಯ ಪ್ರಕಾರ ನಗರಪಾಲಿಕೆ ಹಾಗು ಸ್ಥಳೀಯ ಸಂಸ್ಥೆಗಳ ಮತದಾರರು, ಆ ಪ್ರವೇಶದಲ್ಲಿ ಇರುವವರು ಆ ಪ್ರವೇಶದ ದೇವಸ್ಥಾನಕ್ಕೆ ಶೋಷಿತ ವರ್ಗದವರು ಹೋಗಬೇಕೇ ಬೇಡವೆ ಎಂಬುದನ್ನು ಬಹುಮತದ ಆಧಾರದ ಮೇಲೆ ನಿರ್ಧರಿಸುತ್ತಾರೆ. ಈ ತಂತ್ರವು ಬಹುಮತ ಸಾಬೀತನ ಹಳೆಯ ತಂತ್ರವಾಗಿದೆ ಆದ್ದರಿಂದ ಈ ಮಸೂದೆಯಲ್ಲಿ ಯಾವುದೇ ಕ್ರಾಂತಿಕಾರಿ ಅಂಶವೂ ಕಂಡು ಬರುತ್ತಿಲ್ಲ. ಇದರಿಂದಾಗಿ ಒಂದು ವೇಳೆ ಸನಾತನಿಗಳು ಬುದ್ಧಿವಂತರೇ ಆಗಿದ್ದರೇ ಅವರು ಯಾವುದೇ ತಕರಾರುಗಳೆಲ್ಲದೆ ಈ ಮಸೂದೆಗೆ ಒಪ್ಪಿಗೆ ಸೂಚಿಸುತ್ತಾರೆ.

ಆದರೆ ಈ ಮಸೂದೆಗೆ ಶೋಷಿತ ವರ್ಗದವರು ಒಪ್ಪಿಗೆ ಸೂಚಿಸದಿರುವುದಕ್ಕೆ ಪ್ರಮುಖವಾಗಿ ಎರಡು ಕಾರಗಣಗಳು ಇವೆ. ಮೊದಲ ಕಾರಣ, ಈ ಮಸೂದೆಯು ತ್ವರಿತವಾಗಿ ಶೋಷಿತವರ್ಗದವರಿಗೆ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾರದು. ಈ ಮಸೂದೆಯ ಪ್ರಕಾರ ಶೋಷಿತ ವರ್ಗದವರಿಗೆ ದೇವಾಲಯ ಪ್ರವೇಶವನ್ನು ನೀಡುವ ಆಡಳಿತ ಮಂಡಳಿಯ ವಿರುದ್ಧ ಬಹುಸಂಖ್ಯಾತರು ನ್ಯಾಯಾಲಯದಿಂದ ಆಜ್ಞೆಯನ್ನು ತರಲಾಗದ ಹಾಗೆ ನಿಯಮಗಳಿವೆ ಎಂಬುದು ನಿಜ. ಆದರೆ ಈ ವಿಷಯದಲ್ಲಿ ತೃಪ್ತಿಪಟ್ಟುಕೊಳ್ಳುವ ಹಾಗೂ ಈ ಮಸೂದೆಯ ಕರ್ತೃವನ್ನು ಅಭಿನಂದಿಸುವ ಮೊದಲು ಈ ಮಸೂದೆಯನ್ನು ಮತಕ್ಕೆ ಹಾಕುವ ಸಮಯದಲ್ಲಿ ಬಹುಸಂಖ್ಯಾತರು ಇದನ್ನು ಬೆಂಬಲಿಸುತ್ತಾರೆ ಎಂಬ ಭರವಸೆ ಇರಬೇಕು. ಈ ಮಸೂದೆಯನ್ನು ಬಹುಸಂಖ್ಯಾತರು ಬೆಂಬಲಿಸುತ್ತಾರೆಂಬ ಆಸೆಯನ್ನು ಯಾವ ಭ್ರಮಾರಹಿತನೂ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಶಂಕರಾಚಾರ್ಯರೊಂದಿಗಿನ ತಮ್ಮ ಪತ್ರ-ವ್ಯವಹಾರದಲ್ಲಿ ತಿಳಿಸಿರುವ ಹಾಗೆ ಈ ಮಸೂದೆಯನ್ನು ಬಹುಸಂಖ್ಯಾತರು ಒಪ್ಪಿಕೊಳ್ಳುತ್ತಾರೆ ಎಂಬ ನಂಬಿಕೆ ಮಸೂದೆಯ ಕರ್ತೃವಿಗೇ ಇಲ್ಲ.

ಈ ಮಸೂದೆಯು ಬಹುಮತದಿಂದ ಅಂಗೀಕರಿಸಲ್ಪಟ್ಟರೂ ನಂತರ ಅದರಿಂದ ಏನಾಗುತ್ತದೆ? ನನಗೆ ಇದರಿಂದ ಯಾವುದೇ ಬದಲಾವಣೆಯಾಗುತ್ತದೆ ಎಂದೆನಿಸುವುದಿಲ್ಲ. ಆದರೆ ನನಗೆ ಈ ಸಮಯದಲ್ಲಿ ನೆನಪಿಗೆ ಬರುವುದು ಗುರುವಾಯೂರು ದೇವಸ್ಥಾನದ ವಿಷಯ. ಆದರೆ ಈ ಮಸೂದೆಯ ಪ್ರಾಮುಖ್ಯಕ್ಕಿಂತ ಗಾಂಧೀಜಿಯವರ ಅಮೂಲ್ಯ ಜೀವಕ್ಕೆ ಪ್ರಾಮುಖ್ಯ ನೀಡುತ್ತೇವೆ. ಅಂತಹ ಪರಿಸ್ಥಿತಿಯು ಇನ್ನು ಮುಂದೆ ನಾವು ಉದ್ಭವಿಸಲು ಅವಕಾಶವನ್ನೇ ನೀಡಬಾರದು.

ಎರಡನೆಯದಾಗಿ, ಈ ಮಸೂದೆಯು ದೇವಸ್ಥಾನದಲ್ಲಿ ಅಸ್ಪೃಶ್ಯತೆಯನ್ನು ಪಾಪಕೃತ್ಯ ಎಂದೇನೂ ಪರಿಗಣಿಸುವುದಿಲ್ಲ. ಅದು ಅಸ್ಪೃಶ್ಯತೆಯನ್ನು ಒಂದು ಸಾಮಾಜಿಕ ಪಿಡುಗು ಎಂದು ಪರಿಗಣಿಸುತ್ತದೆ ಹಾಗು ಅವಕ್ಕಿಂತ ದೊಡ್ಡ ದೊಡ್ಡ ಪಿಡುಗುಗಳೂ ಇವೆ ಎನ್ನುತ್ತದೆ. ಅಸ್ಪೃಶ್ಯತೆಯನ್ನು ಅದು ಕಾನೂನು ಬಾಹಿರ ಎಂದೆಂದೂ ಪರಿಗಣಿಸುವುದಿಲ್ಲ. ಅದರ ಬಲ ಕಡಿಮೆ ಆಗುವುದೇ ಬಹಳ ಮಂದಿ ಅದನ್ನು ವಿರೋಧಿಸಿದಾಗ ಮಾತ್ರ. ಪಾಪ ಕಾರ್ಯಗಳನ್ನು ಮಾಡುವುದು ಹಾಗು ಅಮರರಾಗಿ ಉಳಿಯುವುದನ್ನು ಬಹಳ ಮಂದಿ ಆಚರಣೆಯಲ್ಲಿ ಇರಿಸಿಕೊಂಡಿದ್ದಾರೆ ಎಂದ ಮಾತ್ರಕ್ಕೆ ನಾವು ಅದನ್ನು ತಡೆದುಕೊಳ್ಳಬೇಕು ಎಂದೇನೂ ನಿಯಮವಿಲ್ಲ. ಅಸ್ಪೃಶ್ಯತೆಯು ಪಾಪ ಹಾಗು ಅನೈತಿಕ ಸಂಪ್ರದಾಯ ಆಗಿದ್ದರೆ ನಾವು ಯಾವುದೇ ಯೋಚನೆ ಮಾಡದೇ ಅದನ್ನು ತೊಡೆದು ಹಾಕಬೇಕು. ಬಹಳಷ್ಟು ಜನರ ಬೆಂಬಲ ಅದಕ್ಕೆ ಇದ್ದರೂ ಕೂಡ ನಾವು

ಅದನ್ನು ಪರಿಗಣಿಸಬಾರದು ಅಂತಹ ಪದ್ಧತಿಗಳು ಅನೈತಿಕ ಹಾಗೂ ಸಮಾಜವಿರೋಧಿ ಎಂದು ಕಂಡು ಬಂದರೆ ನ್ಯಾಯಾಲಯಗಳು ಇಂತಹ ನಿಲುವನ್ನೇ ತೆಗೆದುಕೊಳ್ಳುತ್ತವೆ.

ಆದರೆ ಈ ಮಸೂದೆಯು ಅಂತಹ ಕಾರ್ಯವನ್ನು ಮಾಡುವುದಿಲ್ಲ. ಮದ್ಯಪಾನದ ಚಟವನ್ನು ತಪ್ಪಿಸಲು ಬೋಧನೆಯನ್ನು ಮಾಡುವ ಸಂಯಮ ಮಂಡಲಿಯ ಸದಸ್ಯನಿಗಿಂತ, ಹೆಚ್ಚಿನದೇನನ್ನೂ ಈ ಮಸೂದೆಯ ಕರ್ತೃಗಳು ಮಾಡಿಲ್ಲ. ಈ ವಿಷಯದಲ್ಲಿ ಎಷ್ಟೊಂದು ಸಾಮ್ಯತೆಯನ್ನು ಇದೆ ಎಂದರೆ, ದುಶ್ಚಟವನ್ನು ಹೊರದಬ್ಬಲು ಯಾವ ನಿಯಮ ಪಾಲಿಸಲಾಗುತ್ತಿದ್ದೆಯೋ ಅದೇ ನಿಯಮವನ್ನು ಇಲ್ಲಿಯೂ ಕೂಡ ಅನುಸರಿಸಲಾಗುತ್ತಿದೆ. ಆದರೆ ಅಸ್ಪೃಶ್ಯತೆಯನ್ನು ಕುಡಿತಕ್ಕಿಂತ ಹೆಚ್ಚಿನ ಕೆಡುಕೇನೂ ಅಲ್ಲ ಎಂದು ಭಾವಿಸಿರುವ ಈ ಶೋಷಿತವರ್ಗಗಳ ಮಿತ್ರನಿಗೆ ಎಲ್ಲರೂ ಋಣಿಯಾಗಿರಬೇಕಿಲ್ಲ. ರಂಗಾ ಅಯ್ಯರ್ ಅವರಿಗೆ ಈಗ್ಗೆ ಕೆಲವು ತಿಂಗಳುಗಳ ಹಿಂದೆ ಮಹಾತ್ಮಾ ಗಾಂಧಿ ಅವರು ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಅಮರಣಾಂತ ಉಪವಾಸ ಕೈಗೊಂಡಿದ್ದ ವಿಷಯ ನೆನಪಿನಲ್ಲಿ ಉಳಿದಿರದ್ದರೆ. ಆತ ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಅದನ್ನು ಬೇರು ಸಮೇತ ಕಿತ್ತೊಗೆಯುಲು ಶತಾಯಗತಾಯ ಪಣವನ್ನು ತೊಡುತ್ತಿದ್ದರು. ಆದರೆ ಇದರ ನ್ಯೂನತೆಗಳು ಏನಾದರೂ ಆಗಲೀ ಶೋಷಿತ ವರ್ಗದವರು ಅಪೇಕ್ಷಿಸುವುದು ಏನೆಂದರೆ, ಕಡೆಗೆ ಅಸ್ಪೃಶ್ಯತೆಯನ್ನು ಒಂದು ಶಾಪ ಎಂದಾದರೂ ಒಪ್ಪಿಕೊಳ್ಳಬೇಕು ಎಂಬುದು.

ಅಸ್ಪೃಶ್ಯತೆಯನ್ನು ಒಂದು ಶಾಪ ಎಂದು ಹೇಳುತ್ತಲೇ ಬಂದಿರುವ ಮಹಾತ್ಮಗಾಂಧಿ ಅವರು ಈ ಮಸೂದೆಯಿಂದ ಹೇಗೆ ತೃಪ್ತಗಾಗಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ಅದು ಖಂಡಿತ ಶೋಷಿತ ವರ್ಗದವರಿಗೆ ತೃಪ್ತಿ ನೀಡಿಲ್ಲ. ಆದರೆ ಈ ಮಸೂದೆಯು ಒಳ್ಳೆಯದೋ ಕೆಟ್ಟದ್ದೋ, ತೃಪ್ತಿಕರವೋ ಅತೃಪ್ತಿಕರವೋ ಎಂಬುದು ಅಷ್ಟೇನೂ ದೊಡ್ಡ ವಿಷಯವಲ್ಲ.

ಆದರೆ ಅಲ್ಲಿ ಉದ್ಭವಿರುವ ಮುಖ್ಯ ಪ್ರಶ್ನೆ ಎಂದರೆ ಶೋಷಿತ ವರ್ಗದವರು ದೇವಸ್ಥಾನಕ್ಕೆ ಪ್ರವೇಶ ಅಪೇಕ್ಷಿಸುತ್ತಾರೋ ಇಲ್ಲವೋ? ಈ ಮುಖ್ಯ ಪ್ರಶ್ನೆಯನ್ನು ಶೋಷಿತ ವರ್ಗದವರು ಎರಡು ದೃಷ್ಟಿಕೋನದಿಂದ ನೋಡುತ್ತಾರೆ. ಒಂದು ಭೌತಿಕವಾದ ದೃಷ್ಟಿಕೋನದಿಂದ ನೋಡುವುದು. ಆ ದೃಷ್ಟಿಯಿಂದ ಶೋಷಿತ ವರ್ಗದವರು ತಮ್ಮ ಅಭಿವೃದ್ಧಿಗೆ ವಿದ್ಯಾಭ್ಯಾಸ, ಉದ್ಯೋಗಾವಕಾಶ ಮತ್ತು ಉತ್ತಮ ಜೀವನಮಟ್ಟ ಅಗತ್ಯವೆಂದು ನಂಬಿದ್ದಾರೆ. ಅವರು ಸಾಮಾಜಿಕವಾಗಿ ಉತ್ತಮಸ್ಥಾನ ಪಡೆದುಕೊಂಡಾಗ, ಗೌರವವು ಕೂಡ ತಾನಾಗಿಯೇ ಅವರನ್ನು ಹುಡುಕಿಕೊಂಡು ಬರುತ್ತದೆ. ಅವರು ಗೌರವ ಪಡೆದುಕೊಂಡ ನಂತರ, ಅವರ ಬಗ್ಗೆ ಇರುವಂತಹ ಸಾಂಪ್ರದಾಯಿಕ ನಂಬಿಕೆಗಳು ಬದಲಾಗುತ್ತದೆ. ಹಾಗಾಗದೇ ಹೋದರೂ ಕೂಡ, ಅದು ಅವರ ಜೀವನದ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮವನ್ನೂ ಬೀರಲಾರದು. ಈ ವಿಷಯಗಳನ್ನೇ ಪ್ರಮುಖವಾಗಿ ಪರಿಗಣಿಸುವ ಶೋಷಿತವರ್ಗದವರು ದೇವಸ್ಥಾನ ಪ್ರವೇಶ ಮುಂತಾದ ಸಣ್ಣ ವಿಷಯಗಳ ಬಗ್ಗೆ ಹೆಚ್ಚಿನ ಗಮನವನ್ನು ನೀಡುವುದಿಲ್ಲ. ಇದು ಅಲ್ಲದೇ ಮತ್ತೊಂದು ಕಾರಣದಿಂದಲೂ ಅವರು ಈ ವಿಷಯಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡುವುದಿಲ್ಲ. ಅವರ ಎದುರಿಗಿರುವ ಪ್ರಶ್ನೆ ಎಂದರೆ ಅವರ ಆತ್ಮಾಭಿಮಾನ.

ಇತ್ತೀಚಿನವರೆಗೂ ಯುರೋಪಿಯನ್ನರು ನಡೆಸುತ್ತಿದ್ದ ಸಂಘ ಸಂಸ್ಥೆಗಳ ಬಾಗಿಲುಗಳ ಮೇಲೆ ಒಂದು ಚೀಟಿ ಅಂಟಿಸಲ್ಪಟ್ಟಿರುತ್ತಿತ್ತು. ಅದರಲ್ಲಿ "ನಾಯಿಗಳಿಗೆ ಹಾಗೂ ಭಾರತೀಯರಿಗೆ ಪ್ರವೇಶವಿಲ್ಲ" ಎಂದು ಬರೆದಿರುತ್ತಿದ್ದರು. ಅಂತಹ ಫಲಕಗಳನ್ನೇ ಇಂದು ನಾವು ಹಿಂದೂ ದೇವಸ್ಥಾನಗಳ ಮೇಲೆ ಕಾಣಬಹುದಾಗಿದೆ. ಅದರಲ್ಲಿ "ಎಲ್ಲ ಹಿಂದುಗಳು ಹಾಗು ನಾಯಿಗಳನ್ನೂ ಒಳಗೊಂಡಂತೆ ಎಲ್ಲಾ ಪ್ರಾಣಿಗಳಿಗೆ ಒಳಗೆ ಬರುವ ಅನುಮತಿ ಇದೆ. ಆದರೆ ಅಸ್ಪೃಶ್ಯರಿಗೆ ಮಾತ್ರ ಅನುಮತಿ ಇಲ್ಲ." ಈ ಎರಡೂ ಕಡೆ

ಗಮನಿಸಿದರೆ, ವಿಶಿಷ್ಟವಾದ ಸಂಗತಿ ಎಂದರೆ ಅಂತಹ ಪ್ರಮುಖ ವ್ಯತ್ಯಾಸವೇನೂ ಕಂಡು ಬರುವುದಿಲ್ಲ. ಆದರೆ ಯುರೋಪಿಯನ್ನರು ಇಟ್ಟಿದ್ದ ಸಂಘಗಳಿಗೆ ಪ್ರವೇಶ ಪಡೆಯಲು ಹಿಂದುಗಳೇನೂ ಬೇಡಿಕೊಂಡಿರಲಿಲ್ಲ. ಅದರಲ್ಲಿ ಯುರೋಪಿಯನ್ನರ ದರ್ಪ ಅಡಗಿತ್ತು. ಹಾಗೆಯೇ, ತಮಗೆ ಪ್ರವೇಶವನ್ನು ನಿರಾಕರಿಸಿರುವ ಸ್ಥಳಗಳಲ್ಲಿ ತಮಗೂ ಪ್ರವೇಶವಿರಬೇಕೆಂದು ಹಿಂದೂಗಳನ್ನು ಅಸ್ಪೃಶ್ಯರು ಏಕೆ ಬೇಡಿಕೊಳ್ಳಬೇಕು? ಇಂತಹ ಪ್ರಶ್ನೆಯನ್ನು ಜೀವನದ ಬಗ್ಗೆ ಆಸಕ್ತಿ ಹೊಂದಿರುವ ಶೋಷಿತವರ್ಗದವರು ಕೇಳುತ್ತಿದ್ದಾರೆ. "ನೀವು ದೇವಸ್ಥಾನದ ಪ್ರವೇಶಕ್ಕೆ ನಮಗೆ ಅನುಮತಿ ನೀಡುವುದು ಇಲ್ಲವೇ ನೀಡದೇ ಇರುವುದರ ಬಗೆಗೆ ನಮಗೆ ಕಾಳಜಿಯಿಲ್ಲ. ಮನುಷ್ಯನ ಸನ್ನಡತೆಯನ್ನು ಗೌರವಿಸದೇ ಇರುವುದು ಕೆಟ್ಟ ವಿಷಯ ಎನ್ನುವುದು ನಿಮ್ಮ ಅನಿಸಿಕೆ ಎಂದರೆ ನೀವು ನಿಮ್ಮ ದೇವಸ್ಥಾನದ ಪ್ರವೇಶವನ್ನು ಮುಕ್ತಗೊಳಿಸಿ ಮರ್ಯಾದಸ್ತರಾಗಿ. ನೀವು ಹಾಗೆ ಆಗಲು ಬಯಸದೇ ಹಿಂದೂಗಳಾಗಿಯೇ ಉಳಿಯುವ ಇಚ್ಛೆ ಇದ್ದರೆ, ಬಾಗಿಲುಗಳನ್ನು ಮುಚ್ಚಿಕೊಳ್ಳಿರಿ. ನಾನು ಅಲ್ಲಿಗೆ ಬರಬೇಕೆಂದು ಎಂದಿಗೂ ಹಂಬಲಿಸುವುದಿಲ್ಲ."

ನನ್ನ ವಾದವನ್ನು ಈ ರೀತಿಯಲ್ಲಿ ಮುಂದಿಡುವುದು ಅಗತ್ಯ ಎಂದು ನನಗೆ ಅನಿಸಿತು. ಏಕೆಂದರೆ ಪಂಡಿತ ಮದನ ಮೋಹನ ಮಾಳವಿಯಾ ಮುಂತಾದವರ ಭ್ರಮೆಯನ್ನು ನಾನು ದೂರ ಮಾಡುವುದು ಬಹಳ ಅಗತ್ಯವಾಗಿತ್ತು. ಅವರು ತಮ್ಮ ಅನುಗ್ರಹಕ್ಕಾಗಿ ಶೋಷಿತವರ್ಗದವರು ಚಾತಕ ಪಕ್ಷಿಯಂತೆ ಕಾಯುತ್ತಾ ಕುಳಿತಿರುತ್ತಾರೆ ಎಂಬ ಭ್ರಮೆಯಲ್ಲಿದ್ದಾರೆ.

ಇನ್ನು ಎರಡನೆಯ ಕಾರಣಕ್ಕೆ ಬರುವುದಾದರೆ ಅದು ಸಂಪೂರ್ಣ ದೈವಿಕಗುಣಗಳ ದೃಷ್ಟಿಯಿಂದ ಅಸ್ಪೃಶ್ಯರಿಗೆ ದೇವಸ್ಥಾನಕ್ಕೆ ಪ್ರವೇಶ ನೀಡಬೇಕೆ ಇಲ್ಲವೇ ಎಂಬ ವಿಷಯವನ್ನು ಕುರಿತದ್ದಾಗಿದೆ. ಈ ದೃಷ್ಟಿಯಿಂದ ನೋಡಿದರೆ ಅವರಿಗೂ ಹಿಂದೂಗಳಿಗೂ ಯಾವುದೇ ಹೆಚ್ಚಿನ ವ್ಯತ್ಯಾಸವಿಲ್ಲ. ಆದರೆ ಅವರ ನಿರ್ಣಾಯಕ ಉತ್ತರವು ಮಹಾತ್ಮಗಾಂಧಿ ಹಾಗು ಹಿಂದೂಗಳು ನೀಡುವ ಉತ್ತರವನ್ನು ಅವಲಂಬಿಸಿರುತ್ತದೆ. "ಈ ದೇವಸ್ಥಾನ ಪ್ರವೇಶಕ್ಕೆ ಹೋರಾಟ ನಡೆಯುತ್ತಿರುವುದರ ಹಿಂದೆ ಇರುವ ಅವರ ಉದ್ದೇಶವೇನು? ಹಿಂದೂ ಸಮಾಜದಲ್ಲಿ ಸಮಾನ ಸ್ಥಾನ ಮಾನ ದೊರೆಯಬೇಕು ಎಂದಿದ್ದರೆ ಇದು ಅವರ ಅಂತಿಮ ಗುರಿಯೇ? ದೇವಸ್ಥಾನ ಪ್ರವೇಶವೇ ಅವರ ಅಂತಿಮ ಗುರಿ ಎಂದಾದರೆ ಅದನ್ನು ಶೋಷಿತ ವರ್ಗದವರು ಎಂದಿಗೂ ಒಪ್ಪಲಾರರು. ಅವರು ಇದನ್ನು ಸಾರಾಸಗಟಾಗಿ ನಿರಾಕರಿಸುವುದು ಮಾತ್ರವಲ್ಲ, ತಮಗೆ ಹಿಂದೂ ಸಮಾಜದ ಸಹವಾಸವೇ ಬೇಡ ಎಂದು ತಮ್ಮದೇ ಆದ ದಾರಿ ಕಂಡುಕೊಳ್ಳುವ ಪ್ರಯತ್ನಪಡಬಹುದು. ಅದಕ್ಕೆ ಬದಲಾಗಿ ಈ ನಿಟ್ಟಿನಲ್ಲಿ ಇದು ಮೊದಲ ಹೆಜ್ಜೆ ಎನ್ನುವುದಾದರೆ, ಶೋಷಿತವರ್ಗದವರು ಇದನ್ನು ಬೆಂಬಲಿಸಬಹುದು. ಆಗ ಭಾರತೀಯ ರಾಜಕೀಯ ಕ್ಷೇತ್ರದ ಇಂದಿನ ಪರಿಸ್ಥಿತಿಗೆ ಅದು ಪೂರಕವಾಗಿರಬಹುದು. ಎಲ್ಲಾ ಭಾರತೀಯರು ಭಾರತವು ಸಾಮಂತ ರಾಷ್ಟ್ರವಾಗಬೇಕು ಎಂದು ಹೇಳುತ್ತಿದ್ದಾರೆ ಆದರೆ ನಿಜವಾದ ಅರ್ಥದಲ್ಲಿ ಸಂವಿಧಾನವು ಈ ಸಾಮಂತ ರಾಷ್ಟ್ರದ ಸಂವಿಧಾನ ಆಗಲಾರದು ಆದರೂ ಬಹುತೇಕ ಭಾರತೀಯರು ಇದನ್ನು ಒಪ್ಪಿಕೊಳ್ಳುತ್ತಾರೆ. ಏಕೆ? ಇದಕ್ಕೆ ಉತ್ತರ ಎಂದರೆ ಗುರಿಯನ್ನು ನಿರ್ಧರಿಸಿ ಆಗಿದೆ. ಇನ್ನು ಅದನ್ನು ತಲುಪುವುದು ಹಲವಾರು ಹಂತಗಳಲ್ಲಿಯೋ ಅಥವಾ ಒಂದೇ ನೆಗೆತದಲ್ಲಿಯೋ ಎಂಬುದು ನಗಣ್ಯ ವಿಷಯವಾಗುತ್ತದೆ. ಒಂದು ವೇಳೆ ಬ್ರಿಟಿಷ್‌ರೇನಾದರೂ ಈ ಸಾಮಂತ ರಾಜ್ಯದ ಕೂಗಿಗೆ ಒಪ್ಪಿಗೆ ಸೂಚಿಸದೇ ಹೋಗಿದ್ದಿದ್ದರೆ, ಯಾರೂ ಈಗಿನ ಪರಿಸ್ಥಿತಿಯಲ್ಲಿ ಭಾಗಶಃ ಬದಲಾವಣೆಗಳಿಗೆ ಒಪ್ಪಿಗೆ ನೀಡುತ್ತಲೇ ಇರಲಿಲ್ಲ. ಅದೇ ರೀತಿ ಮಹಾತ್ಮಾಗಾಂಧಿ ಹಾಗು ಸಾಮಾಜಿಕ ಬದಲಾವಣೆಯ ಇತರ ಹರಿಕಾರರು, ಸಮಾಜದಲ್ಲಿ ದಲಿತರ ಏಳಿಗೆಯ ವಿಷಯದಲ್ಲಿ ತಮ್ಮ ಎದುರಿಗೆ ಇರಿಸಿಕೊಂಡಿರುವಂತಹ

ಗುರಿಯನ್ನು ಹಾಗು ಶೋಷಿತವರ್ಗದವರನ್ನು ಹಿಂದೂ ಸಮಾಜದ ಒಂದು ಭಾಗ ಎಂದು ಪರಿಗಣಿಸುವ ಬಗ್ಗೆ ವಿವರಿಸಿದರೆ, ದೇವಸ್ಥಾನದ ಕುರಿತು ಶೋಷಿತ ವರ್ಗದವರು ತಮ್ಮ ನಿಲುವನ್ನು ತಿಳಿಸಲು ಸುಲಭವಾಗುತ್ತಿತ್ತು. ಶೋಷಿತ ವರ್ಗದ ಜನರ ಗುರಿ ಏನು ಎಂಬುದನ್ನು ಇಲ್ಲಿ ವಿವರವಾಗಿ ಹೇಳಬಹುದು. ಶೋಷಿತವರ್ಗದವರಿಗೆ ಧರ್ಮವೆಂದರೆ ತಮ್ಮನ್ನು ಇತರರೊಂದಿಗೆ ಸಮಾನವಾಗಿ ನಡೆಸಿಕೊಳ್ಳುವ ಧರ್ಮ. ಯಾವುದೇ ಅಪಾರ್ಥವನ್ನು ತಡೆಯಲು ಒಂದು ವಿಷಯವನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ. ಜಾತ್ಯತೀತ ವಿಷಯಗಳಿಂದ ಸಮಾಜದಲ್ಲಿ ಉಂಟಾಗಿರುವ ಸಾಮಾಜಿಕ ಪಿಡುಗುಗಳು ಹಾಗು ಧಾರ್ಮಿಕ ಆಧಾರದ ಮೇಲೆ ಉಂಟಾಗಿರುವ ಸಾಮಾಜಿಕ ಪಿಡುಗುಗಳು ಈ ಎರಡರಲ್ಲಿ ಇರುವ ವ್ಯತ್ಯಾಸವನ್ನು ನಾನು ತಿಳಿಸಬಯಸುವೆ. ಯಾವುದೇ ರೀತಿಯಿಂದ ಉಂಟಾದರೂ ಸರಿಯೇ ನಾಗರಿಕ ಸಮಾಜದಲ್ಲಿ ಯಾವ ಸಾಮಾಜಿಕ ಪಿಡುಗುಗಳಿಗೂ ನೀವು ಅವಕಾಶ ನೀಡಬಾರದು. ಆದರೆ ಧಾರ್ಮಿಕ ಕಾರಣಗಳನ್ನು ಮುಂದಿಟ್ಟುಕೊಂಡು ಈ ಸಾಮಾಜಿಕ ಪಿಡುಗುಗಳನ್ನು ಸರಿ ಎಂದು ವಾದಿಸುವುದರಷ್ಟು ಅಸಹ್ಯಕರವಾದುದು ಮತ್ತೊಂದಿಲ್ಲ. ತಾವು ಒಳಗಾಗುತ್ತಿರುವ ಶೋಷಣೆಯಿಂದ ತಕ್ಷಣವೇ ಶೋಷಿತವರ್ಗದವರಿಗೆ ಮುಕ್ತಿ ದೊರೆಯದೇ ಇರಬಹುದು. ಆದರೆ ಈ ರೀತಿಯ ಶೋಷಣೆಯನ್ನು ಪ್ರೋತ್ಸಾಹಿಸುವ ಧರ್ಮವನ್ನು ಬೆಂಬಲಿಸಬಾರದು ಎಂಬುದೇ ಅವರೆಲ್ಲರ ನಿರ್ಧಾರವಾಗಿದೆ.

ಒಂದು ವೇಳೆ ಹಿಂದೂ ಧರ್ಮವೇ ಅವರ ಧರ್ಮ ಆಗಬೇಕು ಎನ್ನುವುದಾದರೆ, ಅದು ಸಾಮಾಜಿಕ ಸಮಾನತೆಯ ಧರ್ಮ ಆಗಬೇಕು. ಕೇವಲ ಹಿಂದೂ ಧರ್ಮದ ನಡೆಯಲ್ಲಿ ಬದಲಾವಣೆ ಆಗಬೇಕು ಎನ್ನುವುದರಿಂದ ಅಥವಾ ಶೋಷಿತ ವರ್ಗದ ಜನರಿಗೆ ದೇವಸ್ಥಾನಕ್ಕೆ ಪ್ರವೇಶ ನೀಡಿದ್ದೇವೆ ಎನ್ನುವುದರಿಂದ ಹಿಂದೂ ಧರ್ಮ ಸಾಮಾಜಿಕ ಸಮಾನತೆಯ ಧರ್ಮ ಆಗುವುದಿಲ್ಲ. ಅದು ಶೋಷಿತ ವರ್ಗದ ಜನರನ್ನು ಕೂಡ ಈ ರಾಷ್ಟ್ರದ ಪ್ರಜೆಗಳಂತೆ ಪರಿಗಣಿಸಬೇಕು ಹಾಗು ಹೊರಗಿನವರು ಎಂದು ಭಾವಿಸಬಾರದು. ಈ ಪದಗಳನ್ನು ಏಕೆ ಬಳಸುತ್ತಿದ್ದೇನೆ ಎಂದರೆ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಈ ಪದಗಳ ಬಳಕೆ ಸರ್ವೇ ಸಾಮಾನ್ಯವಾಗಿದೆ. ಆದರೆ ಈ ರೀತಿಯಿಂದ ಅವರು ಎಲ್ಲಾ ರೀತಿಯ ಶೋಷಣೆಯಿಂದ ಮುಕ್ತರಾಗಿ ಬಿಡುತ್ತಾರೆ ಎಂದು ಅರ್ಥವಲ್ಲ. ಏಕೆಂದರೆ ಹಿಂದೂ ಸಮಾಜವು ಅಸಮಾನತೆಯ ಧರ್ಮವಾಗಿದೆ. ಅದು ಜಾತಿಗಳನ್ನು ವರ್ಗೀಕರಣ ಮಾಡುತ್ತಾ ಮತ್ತಷ್ಟು ಅಸಮಾನತೆಯನ್ನು ಉಂಟು ಮಾಡುತ್ತಿದೆ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಹಾಗು ಶೂದ್ರರು ಎಂದು ವರ್ಗೀಕರಣ ಮಾಡಿ ಪರಸ್ಪರರಲ್ಲಿ ನಾನು ಹೆಚ್ಚು ನೀನು ಕಡಿಮೆ ಎಂಬ ಭಾವನೆ ಬರುವಂತೆ ಮಾಡುತ್ತಿದೆ. ಒಂದು ವೇಳೆ ಹಿಂದೂ ಧರ್ಮವು ಸಾಮಾಜಿಕ ಸಮಾನತೆಯ ಧರ್ಮ ಎಂದು ಪರಿಗಣಿಸಲ್ಪಡಬೇಕು ಎನ್ನುವುದಾದರೆ ಕೇವಲ ಅದು ದೇವಸ್ಥಾನಕ್ಕೆ ಪ್ರವೇಶ ಕಲ್ಪಿಸಿದರೆ ಮಾತ್ರ ಸಾಲದು. ಅಗತ್ಯ ಇರುವುದು ತನ್ನ ಚಾತುರ್ವರ್ಣದ ನೀತಿಯನ್ನು ಅದು ಬದಲಿಸಬೇಕು. ಇದು ಎಲ್ಲಾ ರೀತಿಯ ಅಸಮಾನತೆಗೆ ಮೂಲ ಕಾರಣ ಹಾಗು ಜಾತಿಗಳ ಅಸ್ತಿತ್ವ. ಆದ್ದರಿಂದ ಹಿಂದೂ ಧರ್ಮವು ಚಾತುರ್ವರ್ಣವನ್ನು ತ್ಯಜಿಸುವವರೆಗೂ ಅಸ್ಪೃಶ್ಯರು ದೇವಸ್ಥಾನ ಪ್ರವೇಶವನ್ನು ಮಾತ್ರವಲ್ಲ ಹಿಂದೂ ಧರ್ಮವನ್ನೇ ತಮ್ಮ ಧರ್ಮ ಎಂದು ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ. ಚಾತುರ್ವರ್ಣ ಹಾಗು ಜಾತಿಪದ್ಧತಿ ಎರಡೂ ಅಸ್ಪೃಶ್ಯರ ಆತ್ಮಗೌರವಕ್ಕೆ ಅನುಗುಣವಾಗಿಲ್ಲ. ಎಲ್ಲಿಯವರೆಗೆ ಈ ನೀತಿಯನ್ನು ಅಸ್ಪೃಶ್ಯರು ಒಪ್ಪಿಕೊಂಡು ನಡೆಯುತ್ತಿರುತ್ತಾರೆಯೋ ಅಲ್ಲಿಯವರೆಗೂ ಅವರು ಕೀಳಾಗಿಯೇ ನೋಡಲ್ಪಡುತ್ತಾರೆ.

ಚಾರ್ತುವರ್ಣ ನೀತಿ ಹಾಗು ಜಾತಿ ಪದ್ಧತಿಗಳನ್ನು ಹಿಂದೂ ಧರ್ಮವು ತ್ಯಜಿಸಲ್ಪಟ್ಟ ಮೇಲೆ ಮಾತ್ರವೇ ಶೋಷಿತ ವರ್ಗದ ಜನರು ತಾವು ಹಿಂದೂ ಧರ್ಮಕ್ಕೆ ಸೇರಿದವರೆಂದು ಹೇಳಿಕೊಳ್ಳಲು ಸಾಧ್ಯ.

ಮಹಾತ್ಮಾಗಾಂಧಿ ಹಾಗು ಹಿಂದೂ ಸಮಾಜದ ಇತರ ಸುಧಾರಕರು ಇದನ್ನೇ ತಮ್ಮ ಗುರಿ ಎಂದು ಒಪ್ಪಿಕೊಳ್ಳಲು ಸಿದ್ಧರಿದ್ದಾರೆಯೇ ಹಾಗು ಈ ನಿಟ್ಟಿನಲ್ಲಿ ಹೋರಾಡುವ ಧೈರ್ಯ ತೋರುವವರೇ? ಈ ವಿಷಯದಲ್ಲಿ ಅವರು ನೀಡುವ ಹೇಳಿಕೆಯನ್ನು ನಾನು ಎದುರು ನೋಡುತ್ತೇನೆ. ಅನಂತರವೇ ನಾನು ನನ್ನ ಅಂತಿಮ ನಿರ್ಧಾರವನ್ನು ಪ್ರಕಟಿಸುತ್ತೇನೆ. ಇದಕ್ಕೆ ಮಹಾತ್ಮಾ ಗಾಂಧಿ ಹಾಗು ಇತರರು ತಯಾರಿದ್ದಾರೋ ಇಲ್ಲವೋ, ಆದರೆ ಅಸ್ಪೃಶ್ಯರು ಇದಕ್ಕಿಂತ ಯಾವ ಕಡಿಮೆಯ ಮಟ್ಟದ ಪರಿಹಾರವನ್ನೂ ಒಪ್ಪಿಕೊಳ್ಳಲು ಸಿದ್ಧರಿಲ್ಲ. ಇದಕ್ಕಾಗಿ ಅವರು ದೇವಸ್ಥಾನದ ಪ್ರವೇಶವನ್ನು ಕೂಡ ನಿರಾಕರಿಸಿದ್ದಾರೆ. ದೇವಸ್ಥಾನ ಪ್ರವೇಶವನ್ನು ಒಪ್ಪಿಕೊಂಡು ಅಷ್ಟಕ್ಕೇ ತೃಪ್ತಿಪಟ್ಟುಕೊಂಡರೆ ತಮ್ಮ ಗೌರವವನ್ನು ದೇವಾಲಯದ ಪ್ರವೇಶಕ್ಕಾಗಿ ಮಾರಿಕೊಂಡ ಹಾಗಾಗುತ್ತದೆ.

ಆದರೆ ಮಹಾತ್ಮಾ ಗಾಂಧಿಯವರೂ ಸೇರಿದಂತೆ ಇತರ ಹಿಂದೂ ಸಮಾಜ ಸುಧಾರಕರು ನನ್ನ ನಿಲುವಿನ ವಿರುದ್ಧ ಬೇರೆಯ ಒಂದು ವಾದವನ್ನು ಮಂಡಿಸಬಹುದು. ಅದೇನೆಂದರೆ “ಇದೀಗ ದೇವಸ್ಥಾನ ಪ್ರವೇಶದ ಅನುಮತಿಯನ್ನು ಶೋಷಿತ ವರ್ಗದ ಜನರು ಒಪ್ಪಿಕೊಂಡ ಮಾತ್ರಕ್ಕೆ, ನಾವು ಚಾತುರ್ವರ್ಣ ಹಾಗು ಜಾತಿಯ ವ್ಯವಸ್ಥೆಯ ನಿಷೇಧಕ್ಕಾಗಿ ಹೋರಾಡುವುದನ್ನು ತಪ್ಪಿಸುವುದಿಲ್ಲ. ಅದು ಒಂದು ವೇಳೆ ಅವರ ಚಿಂತನೆಯ ದಿಕ್ಕೇನಾದರೂ ಈ ರೀತಿಯಿದ್ದರೆ ನಾನದಕ್ಕೆ ದಾರಿ ಮಾಡಿಕೊಡುತ್ತೇನೆ. ಇದರಿಂದ ಮುಂದಿನ ಅಭಿವೃದ್ಧಿಗೆ ಅಡ್ಡಗಾಲು ಆಗಬಾರದು ಎಂಬುದೇ ನನ್ನ ಇಚ್ಛೆ. ನನ್ನ ಉತ್ತರ ಏನೆಂದರೆ ಚಾತುರ್ವರ್ಣ ನೀತಿ ಹಾಗು ಜಾತಿ ವ್ಯವಸ್ಥೆಯ ನಿಷೇಧಕ್ಕೆ ನೀವು ಹೋರಾಟ ನಿಲ್ಲಿಸುವುದಿಲ್ಲ ನಿಜ. ಆದರೆ, ಈ ಪ್ರಶ್ನೆ ಎದುರಾದಾಗ ಮಹಾತ್ಮ ಗಾಂಧೀಜಿಯವರು ಯಾರ ಪಕ್ಷವನ್ನು ವಹಿಸುತ್ತಾರೆ? ಅವರೇನಾದರೂ ನನ್ನ ಎದುರಾಳಿಗಳ ಪಕ್ಷ ವಹಿಸಿದರೆ ನಾನು ಅವರ ಪಕ್ಷದಲ್ಲಿ ಇರುವುದು ಸಾಧ್ಯವಿಲ್ಲ ಎಂದು ಈಗಲೇ ಸ್ಪಷ್ಟಪಡಿಸುತ್ತೇನೆ. ಅವರೇನಾದರೂ ನನ್ನ ಪರವಾಗಿ ಇರುವುದಾದರೇ, ಅವರು ನನ್ನ ಪಕ್ಷಕ್ಕೆ ಈಗಲೇ ಸೇರಿಕೊಳ್ಳಬೇಕು.

**ಬಿ.ಆರ್. ಅಂಬೇಡ್ಕರ್**

ಡಾ. ಅಂಬೇಡ್ಕರ್ ಅವರ ಮನವೊಲಿಕೆಯ ನಂತರ ಬಹಳಷ್ಟು ಜನ ಶೋಷಿತ ವರ್ಗದ ನಾಯಕರುಗಳು ಅವರ ಈ ಅಭಿಪ್ರಾಯಕ್ಕೆ ತಮ್ಮ ಒಪ್ಪಿಗೆ ಸೂಚಿಸಿದರು. ಶ್ರೀನಿವಾಸನ್, ಪ್ರೇಮ್‌ತಾಯಿ ಹಾಗು ಮಲಿಕ್ ಅವರು ತಮ್ಮ ನಾಯಕನ ಈ ಅಭಿಪ್ರಾಯವನ್ನು ಎತ್ತಿ ಹಿಡಿದರು.

ಇದಕ್ಕೆ ಉತ್ತರವಾಗಿ ಗಾಂಧೀಜಿಯವರು ಕೂಡ ತಮ್ಮ ಹೇಳಿಕೆಯನ್ನು ಬಿಡುಗಡೆ ಮಾಡಿದರು ‘ನಾನು ಒಬ್ಬ ಹಿಂದೂ ಆಗಿರುವುದು ಕೇವಲ ನನ್ನ ಹುಟ್ಟಿನಿಂದಲ್ಲ, ಬದಲಿಗೆ ನನ್ನ ಅಚಲ ವಿಶ್ವಾಸದಿಂದ ಮತ್ತು ಸ್ವಂತ ಇಚ್ಛೆಯಿಂದ. ನನ್ನ ಕಲ್ಪನೆಯ ಹಿಂದೂ ಧರ್ಮದಲ್ಲಿ ಯಾವುದೇ ರೀತಿಯ ಮೇಲು ಅಥವಾ ಕೀಳುಗಳಿಲ್ಲ. ಆದರೆ ಡಾ. ಅಂಬೇಡ್ಕರ್ ಅವರು ಚಾತುರ್ವರ್ಣ ನೀತಿಯ ವಿರುದ್ಧ ಹೋರಾಡಬೇಕು ಎಂದರೆ ನಾನು ಅವರ ಪರವಾಗಿ ಇರಲಾರೆ. ಏಕೆಂದರೆ, ಈ ಚಾತುರ್ವರ್ಣ ನೀತಿಯು ಹಿಂದೂ ಧರ್ಮದ ಒಂದು ಅವಿಭಾಜ್ಯ ಅಂಗ”[೧*]

ಮೇಲೆ ಹೇಳಿದ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಡಾ. ಅಂಬೇಡ್ಕರ್ ಅವರು ಬಾವುರಾವ್ ಗಾಯಕ್‌ವಾಡ್ ಅವರಿಗೆ ಬರೆದ ಪತ್ರದಲ್ಲಿ ತಮ್ಮ ನಿಲುವನ್ನು ತಿಳಿಸಿದ್ದರು.

1. Keer P. 230

* ದೇವಸ್ಥಾನ ಪ್ರವೇಶ ಪ್ರಕ್ರಿಯೆ ಕುರಿತ ಪ್ರತಿಕ್ರಿಯೆ

ಭೀಮರಾವ್. ಆರ್. ಅಂಬೇಡ್ಕರ್
MA Ph.d D.SC
ಬಾರಿಸ್ಟರ್ ಅಟ್‌ಲಾ ಜೆ.ಪಿ
ಸದಸ್ಯರು, ರಾಜ್ಯಸಭಾ ಸದಸ್ಯರು

ರಾಜಗೃಹ ಬಡಾವಣೆ
ದಾದರ್
ಬೊಂಬಾಯಿ–೧೪
೩–೩–೧೯೩೪.

ಪ್ರೀತಿಯ ಬಾವುರಾವ್ ಅವರೆ,

೨೩ನೆಯ ಫೆಬ್ರವರಿಯಂದು ತಾವು ಬರೆದ ಪತ್ರವು ನನಗೆ ತಲುಪಿದೆ. ನಾಸಿಕ್‌ನ ಕಾಲಾರಾಂ ದೇವಸ್ಥಾನದ ಮುಂಭಾಗದಲ್ಲಿ ಮುಂದಿನ ರಾಮನವಮಿಯ ದಿನದಂದು ಸತ್ಯಾಗ್ರಹ ಕೈಗೊಳ್ಳಲು ಶೋಷಿತ ವರ್ಗದವರು ನಿರ್ಧರಿಸಿರುವ ಬಗೆಗೆ ನೀವು ನನ್ನ ಅಭಿಪ್ರಾಯ ಕೇಳಿರುವುದಕ್ಕೆ ನಾನು ಋಣಿಯಾಗಿದ್ದೇನೆ. ಆದರೆ ಈ ರೀತಿಯ ನಡೆಯ ಆವಶ್ಯಕತೆ ಇರಲಿಲ್ಲ ಮತ್ತು ಇದನ್ನು ಕೇವಲ ಮುಂದೂಡಬೇಕು ಮಾತ್ರವಲ್ಲ ಬದಲಾಗಿ ನಿಷೇಧಿಸಬೇಕು ಎಂದು ಹೇಳುವ ಸ್ಥಿತಿಯಲ್ಲಿ ನಾನು ಖಂಡಿತವಾಗಿಯೂ ಇಲ್ಲ. ನೀವು **"ಸತ್ಯಾಗ್ರಹ"** ದ ಆದ್ಯರಾಗಿರುವರಿಂದ ಈ ರೀತಿಯ ಅಭಿಪ್ರಾಯ ನಿಮ್ಮಿಂದ ಬಂದಿರುವುದು ಖಂಡಿತವಾಗಿಯೂ ಆಶ್ಚರ್ಯ ಉಂಟುಮಾಡುವಂತಹ ಸಂಗತಿಯೇ. ಇದನ್ನು ದಿಕ್ಪರಿವರ್ತನೆ ಎಂದು ಕರೆಯದೇ ನನಗೆ ಅನ್ಯಮಾಗವಿಲ್ಲ. ಇಲ್ಲಿಯವರೆಗೂ ಮೂರ್ತಿಪೂಜೆಯನ್ನು ಮಾಡುವದರಿಂದ ವಂಚಿತರಾಗಿದ್ದ ಶೋಷಿತವರ್ಗದವರು ದೈವಭಕ್ತರಾಗಬೇಕೆಂದಾಗಲೀ, ಅಥವಾ ದೇವಾಲಯದ ಪ್ರವೇಶಕ್ಕೆ ಅವಕಾಶ ದೊರೆತಷ್ಟರಿಂದಲೇ ಅವರು ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗುತ್ತಾರೆ ಎಂದಾಗಲೀ ನಾನು ದೇವಸ್ಥಾನದ ಪ್ರವೇಶಕ್ಕಾಗಿ ಸತ್ಯಾಗ್ರಹವನ್ನು ಪ್ರಾರಂಭಿಸಲಿಲ್ಲ. ಇಡೀ ಹಿಂದೂ ಧರ್ಮವನ್ನು ಆಮೂಲಾಗ್ರವಾಗಿ ಪರಿಷ್ಕರಿಸಿದ ನಂತರವಷ್ಟೆ ತಾವು ಈ ಧರ್ಮದ ಒಂದು ಅವಿಭಾಜ್ಯ ಅಂಗ ಎಂದು ಒಪ್ಪಿಕೊಳ್ಳಬೇಕು ಎಂದು ನಾನು ಶೋಷಿತ ವರ್ಗಗಳವರಿಗೆ ಸೂಚಿಸಬಯಸುತ್ತೇನೆ. ನಾನು ದೇವಾಲಯದ ಪ್ರವೇಶದ ಈ ಸತ್ಯಾಗ್ರಹದ ಮೂಲಕ ಅವರಲ್ಲಿ ಶಕ್ತಿಯನ್ನು ತುಂಬಲು ಬಯಸಿದೆ. ಈ ಕಾರ್ಯದಲ್ಲಿ ನಾನು ಯಶಸ್ವಿಯಾಗಿದ್ದೇನೆ. ಇದರ ಹೊರತಾಗಿ ದೇವಾಲಯವನ್ನು ಪ್ರವೇಶಿಸುವುದರಲ್ಲಿ ನನಗೆ ಯಾವುದೇ ಪ್ರಯೋಜನವೂ ಇಲ್ಲ. ಇದೀಗ ಶೋಷಿತ ವರ್ಗದ ಜನರು ತಮ್ಮ ಉತ್ಸಾಹ ಹಾಗು ಗಮನವನ್ನೆಲ್ಲಾ ರಾಜಕೀಯ ಹಾಗು ಶಿಕ್ಷಣ ಕ್ಷೇತ್ರದ ಕಡೆಗೆ ಹರಿಸಬೇಕು ಎಂಬುದು ನನ್ನ ಇಚ್ಛೆ. ಈ ಎರಡರ ಮಹತ್ವವನ್ನೂ ಬಹಳ ಬೇಗನೇ ಅವರು ಅರಿತುಕೊಳ್ಳುತ್ತಾರೆ ಎಂದು ನಾನು ಆಶಿಸುತ್ತೇನೆ.

ಇಂತಿ ನಿಮ್ಮ ವಿಶ್ವಾಸದ
ಬಿ.ಆರ್. ಅಂಬೇಡ್ಕರ್[1]
(ಸಹಿ)

ಅಂತೆಯೇ ಕೂಡಲೇ ಸತ್ಯಾಗ್ರಹವನ್ನು ನಿಲ್ಲಿಸಲಾಯಿತು–ಸಂಪಾದಕರು.

## ನಾಸಿಕ ದೇವಸ್ಥಾನ ಪ್ರವೇಶದ ಸತ್ಯಾಗ್ರಹವನ್ನು ಏಕೆ ಕೈ ಬಿಡಲಾಯಿತು? ಇನ್ನು ಮುಂದೆ ಇದರ ಆವಶ್ಯಕತೆ ಇಲ್ಲ

ನಾಸಿಕ, ನವೆಂಬರ್ ೧೯, ೧೯೩೪

೧೫,೦೦೦ದಷ್ಟು ದೊಡ್ಡ ಗುಂಪು, ದಿವಂಗತ ದೋಂಡಿಬಾ ರುಂಕಾಂಬೆ ಅವರ ೧೧ನೆಯ ದಿನದ ಪುಣ್ಯತಿಥಿಯ ಅಂಗವಾಗಿ ವಿಂಚೂರ್ ಎಂಬ ನಗರದ ಬಳಿ ಜಮಾಯಿಸಿತ್ತು. ಈ ಸಂದರ್ಭದಲ್ಲಿ ಡಾ.ಅಂಬೇಡ್ಕರ್ ಅವರು ಅತ್ಯಂತ ಪ್ರಮುಖ ರಾಜಕೀಯ ಪ್ರಕಟಣೆಯೊಂದನ್ನು ಬಿಡುಗಡೆ ಮಾಡಿದರು. ಕಳೆದ ಎರಡು ವರ್ಷಗಳಿಂದ ಈಚೆಗೆ ಕಾಲಾರಾಂ ದೇವಸ್ಥಾನದ ಪ್ರವೇಶದ ಹೋರಾಟವು ಸ್ಥಬ್ಧ ಗೊಂಡಿರುವುದಕ್ಕೆ ಹಲವಾರು ಜನರು ಕಾರಣ ಕೇಳುತ್ತಿದ್ದಾರೆ. ಅದಕ್ಕೆ ಇರುವ ಏಕೈಕ ಕಾರಣ ಎಂದರೆ ಆ ಹೋರಾಟದ ಅಗತ್ಯ ಈಗ ಕಂಡು ಬರುತ್ತಿಲ್ಲ. ಖುದ್ದು 'ಸತ್ಯಾಗ್ರಹವನ್ನು' ಆರಂಭಿಸಿದವರಿಂದ ಈ ರೀತಿಯ ಪ್ರತಿಕ್ರಿಯೆ ಬರುತ್ತಿರುವುದು ಬಹಳ ಆಶ್ಚರ್ಯ ಎಂದು ತಮಗೆ ಅನ್ನಿಸಿಬಹುದು.

ಈ ದೇವಸ್ಥಾನ ಪ್ರವೇಶಕ್ಕಾಗಿ ಹೋರಾಟವು ಶೋಷಿತವರ್ಗದ ಜನರನ್ನು ಹುರಿದುಂಬಿಸಲು ಹಾಗೂ ತಮ್ಮ ಸ್ಥಾನಮಾನವನ್ನು ಅವರು ಅರಿತುಕೊಳ್ಳಲಿ ಎಂದು ಆರಂಭಿಸಿದ್ದು. ಈ ಉದ್ದೇಶ ನೆರವೇರಿರುವುದರಿಂದ ಇದರ ಅಗತ್ಯ ಈಗ ಇಲ್ಲ.

ಅದರ ಬದಲು ಶೋಷಿತ ವರ್ಗದ ಜನರು ಇದೀಗ ತಮ್ಮ ಗಮನವನ್ನೆಲ್ಲಾ ರಾಜಕೀಯದ ಮೇಲೆ ಹರಿಸಲಿ ಎಂಬುದೇ ಅವರ ಇಚ್ಛೆ ಆಗಿತ್ತು. ಏಕೆಂದರೆ ಅದರಿಂದ ಮುಂದೆ ಬರುವ ಬದಲಾವಣೆಗಳಲ್ಲಿ ಅವರು ಮಹತ್ತರವಾದ ಪಾತ್ರ ವಹಿಸುವ ಅವಕಾಶ ದೊರೆಯುತ್ತದೆ.

ಕಡೆಯದಾಗಿ, ಈ ದೇವಸ್ಥಾನ ಪ್ರವೇಶದ ಹೋರಾಟದ ಸತ್ಯಾಗ್ರಹದಲ್ಲಿ ಭಾಗವಹಿಸಿದ ಎಲ್ಲರಿಗೂ ಅವರು ತಮ್ಮ ಧನ್ಯವಾದಗಳನ್ನು ವ್ಯಕ್ತಪಡಿಸಿದ್ದರು. ಈ ಮೂಲಕ ಅವರು ತಮ್ಮ ಸಹೋದರರಲ್ಲಿ ಜಾಗೃತಿಯನ್ನು ಮೂಡಿಸಿದುದು ಮಾತ್ರವಲ್ಲ, ಹಿಂದೂ ಸಮಾಜದಲ್ಲಿ ತಮ್ಮ ನಿಜವಾದ ಸ್ಥಾನ ಏನೆಂದು ತಿಳಿಯಲು ಸಹಾಯಮಾಡಿದ್ದಾರೆ ಎಂದರು. ಇದಲ್ಲದೇ ಪ್ರಪಂಚದಾದ್ಯಂತ ಇವರ ಪರಿಸ್ಥಿತಿಯ ಅರಿವು ನಾಗರಿಕ ಸಮಾಜಕ್ಕೆ ಆಗಿದೆ ಎಂದರು. ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಅಗತ್ಯತೆಯ ಬಗ್ಗೆಯೂ ಅವರು ಒತ್ತಿ ಹೇಳಿದರು.[೨]

**'ಕಾಂಗ್ರೆಸ್ ಪಕ್ಷ ಹಾಗು ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯರ ಏಳಿಗೆಗೆ ಏನು ಮಾಡಿದ್ದಾರೆ' ಎಂಬ ಪುಸ್ತಕದಲ್ಲಿ ಕೂಡ ಡಾ.ಅಂಬೇಡ್ಕರ್ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಿ ಅವರು ಈ ರೀತಿ ಉಲ್ಲೇಖಿಸುತ್ತಾರೆ.**

"ಈಗ ತಮ್ಮ ಅಸ್ಪೃಶ್ಯತಾ ವಿರೋಧಿ ಹೋರಾಟವನ್ನು ತೀವ್ರಗೊಳಿಸುವ ಅವಕಾಶವು ಗಾಂಧೀಜಿಯವರ ಎದುರಿಗಿತ್ತು. ಅವರು ಒಂದು ಷರತ್ತನ್ನು ಹಿಂದೂಗಳ ಎದುರು ಇರಿಸಬಹುದಾಗಿತ್ತು. ಅದೇನೆಂದರೆ ಕಾಂಗ್ರೆಸ್ ಪಕ್ಷದ ಸದಸ್ಯತ್ವವನ್ನು ಬಯಸಿದ ಹಿಂದೂಗಳಿಗೆ ಅವರು ಅಸ್ಪೃಶ್ಯತೆಯ ಆಚರಣೆ ಮಾಡುತ್ತಿಲ್ಲ ಎಂದು ಸಾಬೀತು ಪಡಿಸಬೇಕು. ಇದಕ್ಕೆ ಪೂರಕವಾಗಿ ಅಸ್ಪೃಶ್ಯ ಜನಾಂಗಕ್ಕೆ ಸೇರಿದ ಒಬ್ಬ ವ್ಯಕ್ತಿಗೆ ಆತ ತನ್ನ ಮನೆಯಲ್ಲಿ ಕೆಲಸ ನೀಡಿರಬೇಕು. ಇದರ ಹೊರತಾದ ಯಾವ ಸಾಕ್ಷ್ಯವನ್ನೂ ಪಕ್ಷ ಒಪ್ಪುವುದಿಲ್ಲ ಎಂದವರು ಹೇಳಬಹುದಾಗಿತ್ತು. ಈ ರೀತಿಯ ಪ್ರಸ್ತಾಪವನ್ನು ಜಾರಿಗೆ ತರುವುದು ಕಷ್ಟಸಾಧ್ಯವೇನೂ ಆಗಿರಲಿಲ್ಲ. ಏಕೆಂದರೆ ಉನ್ನತ ವರ್ಗದ ಹಿಂದೂ ಎಂದು ಕರೆದುಕೊಳ್ಳುವಾತ ಖಂಡಿತವಾಗಿಯೂ ತನ್ನ ಮನೆಯಲ್ಲಿ ಒಬ್ಬರಿಗಿಂತ ಹೆಚ್ಚು ನೌಕರರನ್ನು ಹೊಂದಿಯೇ ಇರುತ್ತಾನೆ. ಆದ್ದರಿಂದ ಈ ರೀತಿಯ ಷರತ್ತನ್ನು

ಗಾಂಧೀಜಿಯವರು ಜಾರಿಗೆ ತಂದು, ಪಕ್ಷದ ಸದಸ್ಯತ್ವ ಪಡೆಯಲು ಇದನ್ನೂ ಒಂದು ಅರ್ಹತೆ ಎಂದು ಹೇಳಬಹುದಾಗಿತ್ತು. ನೂಲುವುದನ್ನು ಕಡ್ಡಾಯ ಮಾಡಿದ್ದುದನ್ನು ಒಪ್ಪಿಕೊಂಡ ಸದಸ್ಯರು ಇದನ್ನೂ ಒಪ್ಪಿಕೊಳ್ಳುತ್ತಿದ್ದರು. ಆದರೆ ಅವರು ಈ ರೀತಿ ಮಾಡಲಿಲ್ಲ.

೧೯೨೪ರ ನಂತರ ೧೯೩೦ರವರೆಗೂ ಈ ವಿಷಯದಲ್ಲಿ ಯಾವುದೇ ರೀತಿಯ ಕ್ರಮವನ್ನು ಕೈಗೊಳ್ಳಲಿಲ್ಲ. ಶ್ರೀಗಾಂಧಿಯವರು ಅಸ್ಪೃಶ್ಯತಾ ನಿವಾರಣೆಯ ಕಡೆಗೆ ಯಾವುದೇ ರೀತಿಯ ರಚನಾತ್ಮಕ ಕ್ರಮವನ್ನು ಕೈಗೊಂಡಿಲ್ಲ. ಅಸ್ಪೃಶ್ಯರಿಗೆ ಲಾಭ ಉಂಟುಮಾಡುವಂತಹ ಯಾವುದಾರೂ ಕ್ರಮವನ್ನು ಕೈಗೊಳ್ಳಲು ಇವರಿಗೆ ಆಸಕ್ತಿ ಇರುವಂತೆ ಕಾಣುತ್ತಿಲ್ಲ. ಗಾಂಧೀಯವರು ಈ ರೀತಿ ಕಾರ್ಯತತ್ಪರರಾಗಿರದೇ ಇದ್ದ ಸಂದರ್ಭದಲ್ಲಿ ಅಸ್ಪೃಶ್ಯರು ತಮ್ಮ "ಸತ್ಯಾಗ್ರಹ"ದ ಹೋರಾಟವನ್ನು ಪ್ರಾರಂಭಿಸಿದ್ದರು. ಈ ಹೋರಾಟದ ಉದ್ದೇಶ ಏನಾಗಿತ್ತೆಂದರೆ ಸಾರ್ವಜನಿಕ ಬಾವಿಗಳಿಂದ ತಾವು ಕೂಡ ನೀರು ತೆಗೆದುಕೊಳ್ಳುವ ಅವಕಾಶ ಪಡೆಯುವುದು ಮತ್ತು ಸಾರ್ವಜನಿಕ ದೇವಾಲಯಗಳನ್ನು ಪ್ರವೇಶಿಸುವುದು.

ಸಾರ್ವಜನಿಕ ಸ್ಥಳಗಳಿಂದ ನೀರನ್ನು ತೆಗೆದುಕೊಳ್ಳುವ ತಮ್ಮ ಹಕ್ಕನ್ನು ಸ್ಥಾಪಿಸಲು ಅಸ್ಪೃಶ್ಯರು ಬಾಂಬೆ ಪ್ರಾಂತದ ಕೊಲಾಬಾ ಜಿಲ್ಲೆಯಲ್ಲಿನ ನಗರವಾದ ಮಹದ್‌ನಲ್ಲಿರುವ ಚಾವ್ದಾರ್ ಕೆರೆಯ ಬಳಿ ಸತ್ಯಾಗ್ರಹವನ್ನು ವ್ಯವಸ್ಥೆಮಾಡಿದ್ದರು. ನಾಸಿಕ್‌ನಲ್ಲಿದ್ದ ಕಾಲಾರಾಮ್ ದೇವಾಲಯದ ಬಳಿ, ದೇವಾಲಯದ ಪ್ರವೇಶದ ಹಕ್ಕನ್ನು ಸ್ಥಾಪಿಸಲು ಮತ್ತೊಂದು ಸತ್ಯಾಗ್ರಹವನ್ನು ವ್ಯವಸ್ಥೆಗೊಳಿಸಲಾಗಿತ್ತು. ಇವಲ್ಲದೆ ಇನ್ನೂ ಹಲವು ಸಣ್ಣಪುಟ್ಟ ಸತ್ಯಾಗ್ರಹಗಳನ್ನೂ ವ್ಯವಸ್ಥೆಗೊಳಿಸಲಾಗಿತ್ತು. ಆದರೆ ಇವೆರಡು ಮುಖ್ಯ ಸತ್ಯಾಗ್ರಹಗಳಲ್ಲಿ ಅಸ್ಪೃಶ್ಯರ ಹಾಗೂ ಅವರ ಎದುರಾಳಿಗಳಾದ ಸವರ್ಣೀಯ ಹಿಂದೂಗಳ ಬಲಗಳು ಪೂರ್ಣಪ್ರಮಾಣದಲ್ಲಿ ಕೇಂದ್ರೀಕೃತವಾಗಿದ್ದವು. ಅವುಗಳು ಸೃಷ್ಟಿಮಾಡಿದ್ದ ಕೋಲಾಹಲ ಹಾಗೂ ಸದ್ದು ಭಾರತದ ಎಲ್ಲೆಡೆ ಕೇಳಿಸುತ್ತಿತ್ತು. ಈ ಸತ್ಯಾಗ್ರಹಗಳಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದ್ದ ಸಾವಿರಾರು ಪುರುಷರು ಮತ್ತು ಸ್ತ್ರೀಯರು ಭಾಗವಹಿಸಿದ್ದರು. ಹಾಗೆ ಭಾಗವಹಿಸಿದ್ದ ಪುರುಷರು ಮತ್ತು ಸ್ತ್ರೀಯರನ್ನು ಹಿಂದೂಗಳು ಅವಮಾನಗೊಳಿಸಿ, ಥಳಿಸಿದ್ದರು. ಹಲವರು ಗಾಯಗೊಂಡಿದ್ದರೆ, ಮತ್ತೆ ಹಲವರನ್ನು ಸರಕಾರವು ಶಾಂತಿಭಂಗದ ಆಪಾದನೆಯ ಮೇಲೆ ಬಂಧಿಸಿತ್ತು. ಈ ಸತ್ಯಾಗ್ರಹ ಚಳವಳಿಯು ನಿರಂತರವಾಗಿ ಆರು ವರ್ಷಗಳವರೆಗೆ ನಡೆದು, ದುರಹಂಕಾರವಾದಿಗಳಾದ ಹಿಂದುಗಳು ತಮಗೆ ಸಮಾನ ಸಾಮಾಜಿಕ ಹಕ್ಕುಗಳನ್ನು ನೀಡಲು ನಿರಾಕರಿಸುವುದನ್ನು ಮುಂದುವರಿಸುತ್ತಲೇ ಇದ್ದಾಗ, ನಾಸಿಕ್ ಜಿಲ್ಲೆಯ ಯೋಲ ಎಂಬ ಸ್ಥಳದಲ್ಲಿ ೧೯೩೫ರಲ್ಲಿ ಸಮಾವೇಶಗೊಂಡಿದ್ದ ಅಸ್ಪೃಶ್ಯರು ಹಿಂದೂಧರ್ಮವನ್ನು ತೊರೆದುಹೋಗುವ ನಿರ್ಧಾರವನ್ನು ತೆಗೆದುಕೊಂಡು ತಮ್ಮ ಸತ್ಯಾಗ್ರಹವನ್ನು ನಿಲ್ಲಿಸಿದರು. ಈ ಸತ್ಯಾಗ್ರಹಕ್ಕೂ ಕಾಂಗ್ರೆಸ್‌ಗೂ ಯಾವುದೇ ಸಂಬಂಧವೂ ಇರಲಿಲ್ಲ. ಇದು ಅಸ್ಪೃಶ್ಯರಿಂದಲೇ ವ್ಯವಸ್ಥಿತಗೊಂಡಿತ್ತು. ಅವರೇ ಅದಕ್ಕೆ ಅಗತ್ಯವಾದ ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದರು ಮತ್ತು ಅವರೇ ಅದನ್ನು ಮುನ್ನಡೆಸಿದರು. ಇಷ್ಟಾದರೂ ಅಸ್ಪೃಶ್ಯರು ಗಾಂಧಿಯವರಿಂದ ನೈತಿಕ ಬೆಂಬಲವನ್ನು ಪಡೆಯುವ ಆಶಾಭಾವನೆಯನ್ನು ಹೊಂದಿದ್ದರು. ವಾಸ್ತವವಾಗಿ ಗಾಂಧಿಯಯವರು ತಮ್ಮ ಬೆಂಬಲವನ್ನು ನೀಡಲು ಇದು ಅತ್ಯುತ್ತಮ ವೇದಿಕೆಯಾಗಿತ್ತು. ಎದುರುಪಕ್ಷದವರ ಹೃದಯವನ್ನು ಮೆದುವನ್ನಾಗಿಸುವ ಅಸ್ತ್ರವಾದ ಸತ್ಯಾಗ್ರಹವನ್ನು ಗಾಂಧಿಯವರೇ ರೂಪಿಸಿ ಅದನ್ನು ಸ್ವರಾಜ್ಯವನ್ನು ಗಳಿಸುವುದಕ್ಕಾಗಿ ಬ್ರಿಟಿಷರ ಮೇಲೆ ಪ್ರಯೋಗಿಸಿದ್ದರು. ಆದ್ದರಿಂದ ಗಾಂಧೀಜಿಯವರ ಬೆಂಬಲವನ್ನು ತಮ್ಮ ಹಕ್ಕನ್ನು ಸ್ಥಾಪಿಸುವ ಚಳವಳಿಗೆ ಸತ್ಯಾಗ್ರಹಿಗಳು ಅಪೇಕ್ಷಿಸುವುದು ಸ್ವಾಭಾವಿಕವೇ ಆಗಿತ್ತು. ಆದರೆ ಸತ್ಯಾಗ್ರಹಕ್ಕೆ ಗಾಂಧೀಯವರು ತಮ್ಮ ಬೆಂಬಲ ಸೂಚಿಸಲೇ ಇಲ್ಲ. ಬೆಂಬಲ ಸೂಚಿಸದಿರುವುದು ಮಾತ್ರವಲ್ಲ ಅವರು

ಅದನ್ನು ಕಟುವಾದ ಶಬ್ದಗಳಲ್ಲಿ ಟೀಕಿಸಿದರು ಕೂಡ.

ಈ ಸಂದರ್ಭದಲ್ಲಿ ನಾವು, ಮನುಷ್ಯರು ಎಸಗಬಹುದಾದ ಎರಡು ತಪ್ಪುಗಳನ್ನು ಎತ್ತಿ ಹಿಡಿಯಬಹುದು. ಶ್ರೀ ಗಾಂಧಿ ಅವರು ಇವರನ್ನು ತಿದ್ದಿರುವುದಾಗಿ ತಾವೇ ಎಲ್ಲಾ ಹಿರಿಮೆಯನ್ನೂ ಪಡೆಯಬಯಸುತ್ತಾರೆ. ಮೊದಲನೆಯದು ಸತ್ಯಾಗ್ರಹ – ಹಲವಾರು ಬಾರಿ ಶ್ರೀ ಗಾಂಧಿಯವರು ಬ್ರಿಟಿಷರ ಸರ್ಕಾರದ ವಿರುದ್ಧ ಈ ಅಸ್ತ್ರವನ್ನು ಪ್ರಯೋಗಿಸಿದ್ದಾರೆ – ರಾಜಕೀಯ ಲಾಭ ಪಡೆಯಲು. ಆದರೆ ಸಾರ್ವಜನಿಕ ಕೆರೆ ಕಟ್ಟೆಗಳನ್ನು ಉಪಯೋಗಿಸುವ ಅವಕಾಶ ಅಸ್ಪೃಶ್ಯರಿಗೂ ದೊರೆಯಬೇಕು ಎಂಬ ವಿಷಯಕ್ಕೆ ಬಂದಾಗ ಗಾಂಧೀಯವರು ಈ ಅಸ್ತ್ರವನ್ನು ಎಂದೂ ಪ್ರಯೋಗಿಸಿಲ್ಲ. ಉಪವಾಸ ಮಾಡುವುದು ಶ್ರೀ ಗಾಂಧೀಯವರ ಎರಡನೆಯ ಅಸ್ತ್ರ. ಎಲ್ಲರೂ ಹೇಳುವಂತೆ ಇದುವರೆಗೂ ಶ್ರೀ ಗಾಂಧೀಯವರು ೨೧ ಬಾರಿ ಉಪವಾಸವನ್ನು ವಿವಿಧ ಕಾರಣಗಳಿಗಾಗಿ ಮಾಡಿದ್ದಾರೆ. ಒಂದೊಂದು ಬಾರಿ ಇದು ಹಿಂದೂ ಮುಸ್ಲಿಮರ ಒಗ್ಗಟ್ಟಿಗೆ ಎಂದು ಕೈಗೊಂಡರೆ, ಕೆಲವೊಂದು ಬಾರಿ ತಮ್ಮ ಆಶ್ರಮದ ವಾಸಿಗಳು ಎಸಗಿದ ಅನ್ಯಾಯಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಉಪವಾಸ ಕೈಗೊಂಡಿದ್ದಾರೆ. ಒಂದು ಬಾರಿ ಕೈದಿಯಾಗಿದ್ದ ಶ್ರೀ ಪಟವರ್ಧನ್ ಅವರು ಕಾರಾಗೃಹದಲ್ಲಿ ತಾವು ಶೌಚಾಲಯವನ್ನು ಶುಚಿಗೊಳಿಸುವ ಕಾರ್ಯವನ್ನು ಮಾಡುವ ಇಂಗಿತ ವ್ಯಕ್ತಪಡಿಸಿದ್ದರು. ಆದರೆ ಬೊಂಬಾಯಿ ಸರ್ಕಾರ ಶ್ರೀ ಪಟವರ್ಧನ್ ಅವರಿಗೆ ಈ ಅವಕಾಶ ನಿರಾಕರಿಸಿತ್ತು. ಇದರ ವಿರುದ್ಧ ಗಾಂಧೀಯವರು ಉಪವಾಸ ಕೈಗೊಂಡಿದ್ದರು. ಆದರೆ ಇವರು ಕೈಗೊಂಡ ೨೧ ಉಪವಾಸಗಳಲ್ಲಿ ಒಂದು ಕೂಡ ಅಸ್ಪೃಶ್ಯತಾ ನಿವಾರಣೆಗೆಂದು ಮಾಡಿದ ಉಪವಾಸವಿರಲಿಲ್ಲ. ಇದು ಅತ್ಯಂತ ಗಮನಾರ್ಹ ವಿಷಯ. ಈ ಸಂದರ್ಭದಲ್ಲಿ ಎರಡು ನವೀನ ಅಸ್ತ್ರಗಳ ವಿಷಯವನ್ನು ಪ್ರಸ್ತಾಪಿಸಬೇಕು. ಇವೆರಡರ ಯಶಸ್ಸಿನ ಕೀರ್ತಿಗಳೂ ಗಾಂಧಿಯವರು ತಮ್ಮ ಪಾಲಿಗೇ ಇರಬೇಕೆಂದು ಬಯಸುತ್ತಾರೆ. ೧೯೩೦ರಲ್ಲಿ ದುಂಡುಮೇಜಿನ ಸಮಾವೇಶವು ಆರಂಭವಾಯಿತು. ೧೯೩೧ರಲ್ಲಿ ಗಾಂಧೀಜಿಯವರು ಈ ಸಮಾವೇಶದ ಸದಸ್ಯರಾಗಿ ಸೇರ್ಪಡೆಯಾದರು. ಈ ಸಮಾವೇಶದ ಎದುರಿಗಿದ್ದ ಪ್ರಮುಖ ಗುರಿಯೆಂದರೆ ಸ್ವರಾಜ್ಯವನ್ನು ಗಳಿಸಲಿದ್ದ ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸುವುದು. ಒಂದು ವೇಳೆ ಭಾರತವು ಸ್ವಯಂ ಆಡಳಿತದ ರಾಷ್ಟ್ರವಾಗಬೇಕು ಎಂದರೆ, ಅಲ್ಲಿನ ಸರ್ಕಾರವು ಜನರಿಂದ, ಜನರಿಗೆ ಹಾಗೂ ಸಾಮಾನ್ಯ ಜನರ ಸರ್ಕಾರವಾಗಬೇಕು ಎಂಬ ದೃಷ್ಟಿಯು ಸರ್ವಾನುಮತದಿಂದ ಒಪ್ಪಿಗೆಯನ್ನು ಪಡೆದಿತ್ತು. ಒಂದು ಸರ್ಕಾರ ನಿಜವಾದ ಅರ್ಥದಲ್ಲಿ ಸರ್ಕಾರವಾಗಬೇಕು ಎಂದರೆ ಆ ಸರ್ಕಾರವನ್ನು ಜನರೇ ಜನರಿಗಾಗಿ ನಡೆಸಬೇಕು. ಆದರೆ ಈ ದೇಶದಲ್ಲಿ ಎಷ್ಟೊಂದು ಜಾತಿ ಧರ್ಮಗಳಿವೆ. ಎಷ್ಟೊಂದು ಬಗೆಯ ಅಲ್ಪಸಂಖ್ಯಾತ ಹಾಗೂ ಬಹುಸಂಖ್ಯಾತ ಭೇದಭಾವಗಳಿವೆ. ದೇಶದಲ್ಲಿನ ಜನರು ಕೇವಲ ಸಾಮಾಜಿಕ ಸ್ಥಾನಮಾನಗಳಿಂದ ಮಾತ್ರ ಬೇರ್ಪಟ್ಟಿರಲಿಲ್ಲ. ಬದಲಾಗಿ, ಅವರ ನಡುವಿನ ಕಂದಕವು ಅಗಾಧವಾಗಿದ್ದಿತು. ಈ ಅಂಶವನ್ನು ಗಮನದಲ್ಲಿರಿಸಿಕೊಂಡು, ಎಲ್ಲಾ ಧರ್ಮಗಳ ಪ್ರಾತಿನಿಧ್ಯವು ಶಾಸಕಾಂಗದಲ್ಲಿ ಇದ್ದರೆ ಮಾತ್ರವೇ ಈ ರೀತಿಯ ಸರ್ಕಾರ ರಚನೆಯಾಗುವುದು ಸಾಧ್ಯ ಎಂಬ ನಿರ್ಣಯಕ್ಕೆ ಸಮಾವೇಶವು ಬಂದಿತ್ತು.

ಈ ಸಮಾವೇಶದಲ್ಲಿಯೂ ಅಸ್ಪೃಶ್ಯತೆಯ ಸಮಸ್ಯೆಯು ಚರ್ಚೆಯ ಮುಖ್ಯವಿಷಯವಾಗಿತ್ತು. ಅದು ಒಂದು ಹೊಸ ರೂಪವನ್ನೇ ಪಡೆಯಿತು. ಆದರೆ, ಈಗ ಎಲ್ಲರ ಎದುರು ಇದ್ದ ಪ್ರಶ್ನೆಯೆಂದರೆ ಹಿಂದೂಗಳ ಅಡಿಯಾಳುಗಳಾಗಿಯೇ ಉಳಿಯಲು ಅಸ್ಪೃಶ್ಯರನ್ನು ಬಿಡಬೇಕೇ ಅಥವಾ ಅವರಿಗೆ ಹೊಸದಾಗಿ ರಚನೆಯಾಗಲಿರುವ ಶಾಸಕಾಂಗದಲ್ಲಿ ಜಾತಿಯ ಆಧಾರದ ಮೇಲೆ ಪ್ರಾತಿನಿಧ್ಯವನ್ನು ನೀಡಬೇಕೆ ಎಂಬುದು. ಅಲ್ಪಸಂಖ್ಯಾತರು ಹಿಂದೂಗಳ ಅಡಿಯಾಳುಗಳಾಗಿ ಉಳಿಯಲು ಸಾರಾಸಗಟಾಗಿ ನಿರಾಕರಿಸಿ, ಇತರ

ಅಲ್ಪಸಂಖ್ಯಾತರಿಗೆ ನೀಡಿರುವ ರಕ್ಷಣೆಯನ್ನು ತಮಗೂ ನೀಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟರು. ಅಲ್ಪಸಂಖ್ಯಾತರ ಈ ಬೇಡಿಕೆಗೆ ಎಲ್ಲರಿಂದಲೂ ಅನುಮತಿ ದೊರೆಯಿತು. ಅದು ತರ್ಕಬದ್ಧ ಹಾಗೂ ನ್ಯಾಯಸಮ್ಮತವಾಗಿತ್ತು. ಹಿಂದೂಗಳು ಮತ್ತು ಸಿಖ್ಖರು ಹಾಗೂ ಹಿಂದೂಗಳು ಮತ್ತು ಕ್ರೈಸ್ತರ ನಡುವೆ ಇರುವ ವ್ಯತ್ಯಾಸಗಳು ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ಇರುವ ವ್ಯತ್ಯಾಸಗಳಿಗೆ ಹೋಲಿಸಲ್ಪಟ್ಟರೆ, ಅವು ನಗಣ್ಯವಾಗಿರುತ್ತವೆ ಎಂದು ಅವರು ಹೇಳಿದರು. ಹಿಂದೂಗಳು ಹಾಗೂ ಮುಸ್ಲಿಮರ ನಡುವೆ ಇರುವ ಅಂತರವು ಧಾರ್ಮಿಕವೇ ಹೊರತು ಸಾಮಾಜಿಕವಲ್ಲ. ಆದರೆ ಹಿಂದೂಗಳು ಹಾಗೂ ಅಸ್ಪೃಶ್ಯರ ನಡುವೆ ಇರುವ ಭೇದಭಾವವು ಸಾಮಾಜಿಕ ಮತ್ತು ಧಾರ್ಮಿಕ ಸ್ವರೂಪದ್ದಾಗಿವೆ. ಹಿಂದೂಗಳು ಹಾಗೂ ಮುಸಲ್ಮಾನರ ನಡುವೆ ಇರುವ ಅಂತರವು ರಾಜಕೀಯವಾಗಿ ಮುಸಲ್ಮಾನರ ಮೇಲೆ ಯಾವುದೇ ಹಾನಿಯನ್ನೂ ಉಂಟುಮಾಡದು. ಏಕೆಂದರೆ ಅವರಿಬ್ಬರ ನಡುವೆ ಒಡೆಯ–ಆಳಿನ ಸಂಬಂಧ ಇಲ್ಲ. ಅದು ಕೇವಲ ಒಂದು ಧಾರ್ಮಿಕ ಅಂತರ ಮಾತ್ರ. ಆದರೆ, ಹಿಂದೂಗಳು ಮತ್ತು ಅಸ್ಪೃಶ್ಯರ ನಡುವಿನ ಅಂತರವು ರಾಜಕೀಯವಾಗಿ ಅಸ್ಪೃಶ್ಯರಿಗೆ ಹಾನಿಕಾರಕವಾಗಿರುತ್ತದೆ. ಈ ಸಾಮಾಜಿಕ ಅಂತರವನ್ನು ಕಡಿಮೆಗೊಳಿಸಲು ಹಲವು ದಶಕಗಳಿಂದ ಪ್ರಯತ್ನಿಸಿದರೂ, ಎಲ್ಲಾ ಮಾರ್ಗಗಳೂ ವಿಫಲವಾಗಿವೆ. ಈಗ ಸಫಲವಾಗುತ್ತವೆ ಎಂಬ ಭರವಸೆಯೂ ಇಲ್ಲ. ಇಂತಹ ಸಂದರ್ಭದಲ್ಲಿ ಹಿಂದೂಗಳ ಕೈಗೆ ರಾಜಕೀಯ ವ್ಯವಸ್ಥೆಯು ದಕ್ಕಿದರೆ, ತಮಗೆ ರಕ್ಷಣೆ ದೊರೆಯದಂತಾಗುತ್ತದೆಯಾದ್ದರಿಂದ ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರಿಗೆ ದೊರೆತ ಹಾಗೆ ತಮಗೂ ಸಾಂವಿಧಾನಿಕ ರಕ್ಷಣೆ ದೊರೆಯಬೇಕು ಎಂಬ ಬೇಡಿಕೆಯನ್ನು ಇರಿಸಿದ್ದರು.

ಅಸ್ಪೃಶ್ಯರಿಗೆ ತಮ್ಮ ಬೆಂಬಲವನ್ನು ಸೂಚಿಸುವ ಅವಕಾಶವು ಗಾಂಧೀಜಿಯವರ ಎದುರಿಗೆ ಈಗ ನಿಚ್ಚಳವಾಗಿ ತೆರೆದಿತ್ತು. ಅವರು ಅಸ್ಪೃಶ್ಯರ ಬೇಡಿಕೆಗಳಿಗೆ ತಮ್ಮ ಬೆಂಬಲವನ್ನು ಸೂಚಿಸಬಹುದಿತ್ತು ಹಾಗೂ ಹಿಂದೂಗಳ ಹಿಡಿತ ಹಾಗೂ ಕ್ರೌರ್ಯದಿಂದ ಅಸ್ಪೃಶ್ಯರನ್ನು ಬಿಡುಗಡೆ ಮಾಡಬಹುದಾಗಿತ್ತು. ಆದರೆ ಇವರಿಗೆ ತಮ್ಮ ಸಹಾನುಭೂತಿಯನ್ನು ಸೂಚಿಸುವ ಬದಲಾಗಿ ಅವರು ತಮ್ಮ ಅನ್ಯಾಯದ ಮಾರ್ಗಗಳಿಂದ ಅಸ್ಪೃಶ್ಯರು ಸೋಲನ್ನು ಕಾಣುವಂತೆ ಮಾಡಿದರು. ಆದರೆ ಕಾಲಕ್ರಮೇಣ ಮುಸಲ್ಮಾನರ ಬೆಂಬಲವನ್ನು ಹಿಡಿದಿಟ್ಟುಕೊಳ್ಳಲಾಗದೆ ಇದ್ದಾಗ, ಇತರ ಅಲ್ಪಸಂಖ್ಯಾತರಿಗೆ ನೀಡಿರುವ ಸೌಲಭ್ಯಗಳನ್ನು ಅಸ್ಪೃಶ್ಯರಿಗೂ ನೀಡಿದ ಬ್ರಿಟಿಷ್ ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹವನ್ನು ಮಾಡತೊಡಗಿದರು. ಆದರೆ ಉಪವಾಸ ಸತ್ಯಾಗ್ರಹವೂ ವಿಫಲವಾದಾಗ ಗಾಂಧೀಜಿಯವರು 'ಪೂನಾ ಒಪ್ಪಂದ'ಕ್ಕೆ ಒಪ್ಪಿದರು. ಒಪ್ಪಂದದಲ್ಲಿದ್ದ ಅಲ್ಪಸಂಖ್ಯಾತರ ಎಲ್ಲಾ ರಾಜಕೀಯ ಬೇಡಿಕೆಗಳಿಗೂ ಅವರು ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಆದರೆ, ಇದಕ್ಕೆ ಪ್ರತೀಕಾರವಾಗಿ ಮುಂದಿನ ಚುನಾವಣೆಗಳಲ್ಲಿ ಅಸ್ಪೃಶ್ಯರಿಗೆ ನೀಡಿದ್ದ ರಾಜಕೀಯ ಸೌಲಭ್ಯಗಳನ್ನು ನಿರರ್ಥಕಗೊಳಿಸಲು ಸಾಧ್ಯವಿರುವ ಕುತಂತ್ರಗಳನ್ನೆಲ್ಲಾ ಬಳಸಿಕೊಳ್ಳುವಂತೆ ಕಾಂಗ್ರೆಸ್ ಪಕ್ಷಕ್ಕೆ ತಾಕೀತು ಮಾಡಿದರು.

# ವಿಭಾಗ – V
# ಇತರ ಹೋರಾಟಗಳು

# ೧
# ನಾನೊಬ್ಬ ಸನ್ನಡತೆಯ ವ್ಯಕ್ತಿ

ಭೀಮ್‌ರಾವ್ ಅಂಬೇಡ್ಕರ್ ಅವರ ತಂದೆ ಸುಭೇದಾರ್ ರಾಂಚೀ ಮಾಲೋಜಿ ಅವರು, ಫೆಬ್ರವರಿ ೨, ೧೯೧೩ರಲ್ಲಿ ವಿಧಿವಶರಾದರು. ಆಗ ಭೀಮ್‌ರಾವ್ ಅವರು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕಾದಂತಹ ಪರಿಸ್ಥಿತಿ ಎದುರಾಯಿತು. ಆದರೆ ಅವರಲ್ಲಿದ್ದ ಜ್ಞಾನದಾಹ ಹಾಗು ಅವರ ಕನಸುಗಳು ಅವರನ್ನು ಒಂದು ಕ್ಷಣವೂ ಸುಮ್ಮನೆ ಕೂರಲು ಬಿಡುತ್ತಿರಲಿಲ್ಲ. ಅವರ ತಂದೆಯವರ ನಿಧನದ ನಂತರ ಅವರು ಬರೋಡಾದಲ್ಲಿ ಇದ್ದಂತಹ ತಮ್ಮ ಹಳೆಯ ನೌಕರಿಗೆ ಹಿಂದಿರುಗಲು ಸಿದ್ಧರಿರಲಿಲ್ಲ. ಅವರು ಅಲ್ಲಿ ಕಳೆದ ಅಲ್ಪ ಸಮಯ ಸಂತೋಷಮಯವಾಗಿರಲಿಲ್ಲ. ಕಡೆಗೆ ಜೂನ್ ೧೯೧೩ರಲ್ಲಿ ಅವರಿಗೆ ಮತ್ತೊಂದು ಅವಕಾಶ ದೊರಕಿತ್ತು ಆ ಸಮಯದಲ್ಲಿ ಬರೋಡ ನಗರದ ಮಹಾರಾಜರು ಕೆಲ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಕಳುಹಿಸಿಕೊಡುವ ಆಲೋಚನೆಯಲ್ಲಿದ್ದರು.[೧]*

ಮಹಾಪ್ರಭು ಮಹಾರಾಜ ಅವರು ಬೊಂಬಾಯಿಯಲ್ಲಿ ತಂಗಿದ್ದಾಗ ಅವರನ್ನು ಭೀಮರಾವ್ ಅವರು ಮಲಬಾರ್ ಹಿಲ್ ಪ್ರದೇಶದ ಅವರ ಅರಮನೆಯಲ್ಲಿ ಭೇಟಿಯಾಗಿದ್ದರು. ಬರೋಡಾದಲ್ಲಿ ಇದ್ದಾಗ ತಾವು ಕೆಲಸ ನಿರ್ವಹಿಸುವ ಕಡೆ ಹಾಗು ವಸತಿಯ ವಿಷಯದಲ್ಲಿ ಇದ್ದಂತಹ ಕೆಲ ಅನನುಕೂಲಗಳನ್ನು ವಿವರಿಸಿದರು. ಅಷ್ಟು ಹೊತ್ತಿಗಾಗಲೇ ಮಹಾಪ್ರಭುಗಳು ಭೀಮ್‌ರಾವ್ ಅವರ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿದುಕೊಂಡಿದ್ದರು. ಆದರೆ ಭೀಮ್‌ರಾವ್ ಅವರು ಎದುರಿಸುತ್ತಿದ್ದಂತಹ ಅನನುಕೂಲಗಳ ವಿಷಯವನ್ನು ಹೊರತುಪಡಿಸಿ ಬಹಳಷ್ಟು ವಿಷಯಗಳನ್ನು ಅಂಬೇಡ್ಕರ್ ಅವರ ಜೊತೆ ಮಹಾರಾಜರು ಚರ್ಚಿಸಿದರು. ಮಹಾರಾಜ ಅವರು ಕೇಳಿದ ಹಲವಾರು ಪ್ರಶ್ನೆಗಳಿಗೆ ಭೀಮ್‌ರಾವ್ ಅವರು ಯಾವುದೇ ಮುಚ್ಚುಮರೆ ಇಲ್ಲದೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಸುಮಾರು ಅರ್ಧ ಘಂಟೆಯ ಕಾಲ ಇದೇ ರೀತಿಯ ಚರ್ಚೆಗಳಾದ ನಂತರ ಮಾರನೆಯ ದಿನ ಸುಮಾರು ಇದೇ ಸಮಯಕ್ಕೆ ಬರುವಂತೆ ಮಹಾರಾಜ ಅವರಿಗೆ ತಿಳಿಸಿ ಕಳುಹಿಸಿ ಕೊಟ್ಟರು. ತಮ್ಮ ಅನನುಕೂಲಗಳ ಬಗ್ಗೆ ಮಹಾರಾಜರು ಏನನ್ನೂ ಹೇಳದ ಕಾರಣ ಅಂಬೇಡ್ಕರ್ ಅವರು ಅಲ್ಲಿಂದ ಅಸಮಾಧಾನದಿಂದಲೇ ನಿರ್ಗಮಿಸಿದರು.

ಮಾರನೆಯ ದಿನ ಮಹಾರಾಜರ ಭೇಟಿಗೆಂದು ಅಂಬೇಡ್ಕರ್ ತೆರಳಿದಾಗ ಯಾವ ವಿಷಯದಲ್ಲಿ ಅಧ್ಯಯನವನ್ನು ಮುಂದುವರೆಸುವ ಆಸಕ್ತಿ ಇದೆಯೆಂದು ಅಂಬೇಡ್ಕರ್ ಅವರನ್ನು ಮಹಾರಾಜರು ಪ್ರಶ್ನಿಸಿದರು ಸಮಾಜ ಶಾಸ್ತ್ರ ಆರ್ಥಿಕ ಶಾಸ್ತ್ರ ಅದರಲ್ಲಿಯೂ ಸಾರ್ವಜನಿಕ ಹಣಕಾಸಿನ ವಿಷಯದಲ್ಲಿ ಅಧ್ಯಯನ ಮಾಡುವ ಆಸಕ್ತಿ ಇರುವುದಾಗಿ ಅಂಬೇಡ್ಕರ್ ತಿಳಿಸಿದರು.

---

* "ಮಹಾಪ್ರಭುಗಳಾದ ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್ ಅವರು ೧೮೬೩ ಮಾಚ್ ೧ ರಂದು ಜನಿಸಿದ್ದರು. ಅವರು ೧೮೮೧ ರ ಡಿಸೆಂಬರ ೨೮ ರಂದು ಮಹಾರಾಜನ ಪಟ್ಟಕ್ಕೆ ಏರಿದರು. ೧೯೩೯ರ ಫೆಬ್ರವರಿ ೬ ರಂದು ಈತ ಬೊಂಬಾಯಿಯ ಜಯಮಹಲ್ ಅರಮನೆಯಲ್ಲಿ ಕೊನೆಯುಸಿರು ಎಳೆದರು

1. Keg pp 24-26

ಮಹಾರಾಜ: ಈ ವಿಷಯಗಳ ಅಧ್ಯಯನ ಮಾಡಿ ಮುಂದೇನು ಮಾಡುವೆ?

ಭೀಮ್‌ರಾವ್: ಈ ವಿಷಯಗಳನ್ನು ಅಧ್ಯಯನ ಮಾಡುವ ಮೂಲಕ ನನ್ನ ಶೋಷಿತ ಸಮಾಜದ ಸುಧಾರಣೆ ಯಾವ ರೀತಿ ಮಾಡಬಹುದು ಎಂಬುದು ನನಗೆ ತಿಳಿಯುತ್ತದೆ ಅದನ್ನು ಅನುಸರಿಸಿ ಸಮಾಜ ಸುಧಾರಣೆಗೆ ನಾನು ಪ್ರಯತ್ನಿಸುತ್ತೇನೆ.

ಮಹಾರಾಜ: (ನಗುತ್ತಾ) ಆದರೆ ನೀನು ನಮಗೆ ಸೇವೆ ಮಾಡುತ್ತೀಯಾ ಅಲ್ಲವೇ? ಹಾಗಾದರೆ ಓದುತ್ತಾ ನೀನು ನಮಗೆ ಸೇವೆ ಮಾಡುತ್ತಾ ಸಮಾಜ ಸೇವೆಯನ್ನೂ ಮಾಡಲು ಸಾಧ್ಯವೆ?

ಭೀಮ್‌ರಾವ್: ಮಹಾಪ್ರಭುಗಳು ನನಗೆ ಸೂಕ್ತ ಅವಕಾಶವನ್ನು ನೀಡಿದರೆ ನಾನು ಎಲ್ಲಾ ಜವಾಬ್ದಾರಿಯನ್ನು ನಿಭಾಯಿಸುವೆ.

ಮಹಾರಾಜ: ನಾನು ಕೂಡ ಇದೇ ನಿಟ್ಟಿನಲ್ಲಿಯೇ ಚಿಂತಿಸುತ್ತಿರುವೆ. ನಾನು ನಿನ್ನನ್ನು ಅಮೆರಿಕಾಗೆ ಕಳುಹಿಸಬೇಕೆಂದಿರುವೆ ಹೋಗುವೆಯಾ?

ಭೀಮ್‌ರಾಮ್: ಆಗಬಹುದು ಮಹಾಪ್ರಭು.

ಮಹಾರಾಜ: ನೀನೀಗ ಹೊರಡಬಹುದು. ವಿದ್ಯಾ ಇಲಾಖೆಯ ಅಧಿಕಾರಿಗಳಿಗೆ ನೀವು ವಿದೇಶ ಅಧ್ಯಯನಕ್ಕೆ ಹೋಗುತ್ತಿರುವುದಾಗಿ ಒಂದು ಅರ್ಜಿ ನೀಡಿ ಅದಕ್ಕೆ ಅಗತ್ಯ ಇರುವ ವಿದ್ಯಾರ್ಥಿ ವೇತನವನ್ನು ನೀಡಬೇಕೆಂದು ಕೋರಿಕೊಳ್ಳಿ. ಅನಂತರ ನನಗೆ ವಿಷಯ ತಿಳಿಸಿ[೧]

ಸರ್ಕಾರ ನೀಡುತ್ತಿದ್ದಂತಹ ಒಂದು ವಿದ್ಯಾರ್ಥಿ ವೇತನಕ್ಕೆ ಅರ್ಜಿ ನೀಡುವಂತೆ ಅವರು ಅಂಬೇಡ್ಕರ್ ಅವರಿಗೆ ತಿಳಿಸಿದರು. ಅಂಬೇಡ್ಕರ್ ಅದರಂತೆಯೇ ಮಾಡಿದರು ಕೂಡ ಮಹಾರಾಜ ಅವರು ಅಂಬೇಡ್ಕರ್ ಹಾಗು ಅವರೊಂದಿಗೆ ಇತರ ಮೂವರು ವಿದ್ಯಾರ್ಥಿಗಳನ್ನು ಅಮೆರಿಕಾಗೆ ಉನ್ನತ ಅಧ್ಯಯನಕ್ಕೆ ಕಳುಹಿಸಲು ನಿರ್ಧರಿಸಿದರು. ಭೀಮ್‌ರಾವ್ ಅವರನ್ನು ಬರೋಡಾಗೆ ಕರೆಸಿಕೊಳ್ಳಲಾಯಿತು. ಅನಂತರ ೧೯೧೩, ಜೂನ್ ೪ ರಂದು ಬರೋಡಾ ರಾಜ್ಯದ ಸಹಾಯಕ ವಿದ್ಯಾಮಂತ್ರಿಯವರ ಸಮ್ಮುಖದಲ್ಲಿ ಒಪ್ಪಂದವೊಂದಕ್ಕೆ ಸಹಿ ಹಾಕಿದರು. ಅದರಲ್ಲಿ ಅವರು ಮೇಲೆ ಹೇಳಿದ ವಿಷಯಗಳ ಅಧ್ಯಯನವನ್ನು ಅಮೆರಿಕಾದಲ್ಲಿ ಪೂರೈಸಿ ಅನಂತರ ೧೦ ವರ್ಷಗಳು ಬರೋಡಾ ಸರ್ಕಾರಕ್ಕೆ ಸೇವೆ ಸಲ್ಲಿಸುವುದಕ್ಕೆ ಒಪ್ಪಿಗೆಯನ್ನು ಸೂಚಿಸಿದ್ದರು.[೨]

ಈ ಒಪ್ಪಂದದ ಲಿಖಿತ ದಾಖಲೆ ಈ ಕೆಳಗಿನಂತಿದೆ:

೧೯೧೩ ರ ಜೂನ್ ೪ ರಂದು ಮಾಡಿರುವ ಲಿಖಿತ ದಾಖಲೆ: ಈ ದಾಖಲೆಯ ಬರೋಡದ ಮಹಾಪ್ರಭುಗಳಾದ ಗಾಯಕವಾಡ್ ಅವರ ಸರ್ಕಾರ ಹಾಗು ಶ್ರೀ ಭೀಮ್‌ರಾವ್ ಆರ್. ಅಂಬೇಡ್ಕರ್ ಬಿ.ಎ. ಬರೋಡಾದ ನಿವಾಸಿ*, ಇವರ ನಡುವೆ ನಡೆದ ಒಪ್ಪಂದವನ್ನು ಒಳಗೊಂಡಿದೆ.

ಮಹಾರಾಜ ಗಾಯಕ್‌ವಾಡ್ ಅವರ ಸರಕಾರ ಹಾಗು ಭೀಮ್‌ರಾವ್ ಅಂಬೇಡ್ಕರ್ ಅವರ ನಡುವೆ ಏರ್ಪಟ್ಟಿರುವ ಒಪ್ಪಂದವು ಈ ಕೆಳಗಿನಂತಿದೆ:

೧) ಶ್ರೀ ಅಂಬೇಡ್ಕರ್ ಭೀಮರ್‌ರಾವ್ ಆರ್. ಅವರು ಅಮೆರಿಕಾದಲ್ಲಿ ಉನ್ನತ ವ್ಯಾಸಾಂಗಕ್ಕೆಂದು ತೆರಳುತ್ತಿದ್ದಾರೆ. ಅವರು ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ

---

1. Kanirmode Vol. 1, Pp. 63-64
2. Keg P. 26
* ಇದು ಬೊಂಬಾಯಿ ಎಂದಾಗಬೇಕು. ಇದಕ್ಕಾಗಿ ಅನುಬಂಧ ೮ ಗಮಿನಸಿ.

ಹಾಗು ಆರ್ಥಿಕ ಶಾಸ್ತ್ರದ ಅಧ್ಯಯನ ನಡೆಸಲಿದ್ದಾರೆ. ಇದಲ್ಲದೇ ಆರ್ಥಿಕ ಶಾಸ್ತ್ರದಲ್ಲಿ ಅವರು ಸ್ನಾತಕೋತ್ತರ ಪದವಿಯನ್ನು ಪಡೆಯಲಿದ್ದಾರೆ. ಇದಕ್ಕಾಗಿ ಅವರು ಅಲ್ಲಿ ಎರಡು ವರ್ಷಗಳ ಕಾಲ ಅಥವಾ ಅಧ್ಯಯನಕ್ಕೆ ಅಗತ್ಯ ಇರುವಷ್ಟು ದಿನ ತಂಗಲಿದ್ದಾರೆ. ಅವರು ಅಮೆರಿಕಾದಲ್ಲಿ ತಂಗಲಿರುವ ಸಮಯದಲ್ಲಿ ಅವರು ಡಾ. ಹೆಚ್. ಸಿ. ಪಂಪಸ್ ಅವರ ಮೇಲ್ವಿಚಾರಣೆಯಲ್ಲಿ ಇರುತ್ತಾರೆ.

೨) ಮೇಲೆ ಹೇಳಿರುವ ವಿಷಯಗಳ ಅಧ್ಯಯನಕ್ಕೆ ಅಡ್ಡಿಯನ್ನು ಉಂಟುಮಾಡುವ ಬೇರೆ ಯಾವುದೇ ವಿಷಯವನ್ನು ಅವರು ಅಧ್ಯಯನ ಮಾಡಬಾರದು. ಇದಲ್ಲದೇ ಬೇರೆ ಯಾವುದಾದರೂ ವಿಷಯದಲ್ಲಿ ಅಧ್ಯಯನ ನಡೆಸಬೇಕಾದರೆ ಅದಕ್ಕೆ ಅವರು ಮಹಾರಾಜರ ಅನುಮತಿಯನ್ನು ಪಡೆಯಬೇಕು.

೩) ಅವರು ತಮ್ಮ ಅಧ್ಯಯನದ ಪ್ರಗತಿಯನ್ನು ಕುರಿತು ಹಾಗು ತಮ್ಮ ನಡತೆಯನ್ನು ಕುರಿತು ಬರೋಡಾ ರಾಜ್ಯದ ಶಿಕ್ಷಣ ಮಂತ್ರಿಯವರಿಗೆ ತ್ರೈಮಾಸಿಕ ವರದಿಯನ್ನು ಕಳುಹಿಸತಕ್ಕದ್ದು. ಇದನ್ನು ಅವರು ತಾವು ಓದುತ್ತಿರುವ ಶಿಕ್ಷಣ ಇಲಾಖೆಯ ಅಧಿಕಾರಿಗಳ ಮೂಲಕ, ಇಲ್ಲವೇ ಡಾ. ಹೆಚ್.ಸಿ. ಪಂಪಸ್ ಅವರ ಮೂಲಕ ಕಳುಹಿಸತಕ್ಕದ್ದು. ಅಲ್ಲದೆ ಕಾಲದಿಂದ ಕಾಲಕ್ಕೆ ಅವರಿಗೆ ನೀಡಲಾಗುವ ಎಲ್ಲಾ ನಿರ್ದೇಶನಗಳನ್ನೂ ಅವರು ಪಾಲಿಸತಕ್ಕದ್ದು.

೪) ಅವರು ಅಮೆರಿಕಾಗೆ ತೆರಳುವ ಮುನ್ನಾ ೫೦೦/- ರೂಪಾಯಿಗಳ ಸಹಾಯಧನವನ್ನು ಉಡುಗೆ ತೊಡುಗೆಗೆಂದು ಪಡೆಯಲಿದ್ದಾರೆ.

೫) ಬೊಂಬಾಯಿಯಿಂದ ಅಮೆರಿಕಾಗೆ ಇವರು ಹೋಗಲು ಮಹಾರಾಜರ ಸರ್ಕಾರವು ಇವರಿಗೆ ಎರಡನೆ ದರ್ಜೆಯ ಟಿಕೇಟನ್ನು ಫ್ರೆಂಚ್ ಅಥವಾ ಜರ್ಮನಿ ದೇಶದ ಹಡಗಿನಲ್ಲಿ ಖರೀದಿಸಿಕೊಡುತ್ತದೆ. ಇದೇ ರೀತಿಯ ಟಿಕೇಟನ್ನು ಇವರು ಹಿಂದಿರುಗುವಾಗ ಕೂಡ ಸರ್ಕಾರ ಖರೀದಿಸಿಕೊಡುತ್ತದೆ. ಒಂದು ವೇಳೆ ಅನಾರೋಗ್ಯದ ಕಾರಣ ಇವರು ಭಾರತಕ್ಕೆ ಹಿಂದಿರುಗುವಂತಾದರೆ, ಅದಕ್ಕೆ ಸಮರ್ಪಕವಾದ ವೈದ್ಯಕೀಯ ಸಾಕ್ಷ್ಯಾಧಾರಗಳನ್ನು ನೀಡಿದರೆ, ಇವರಿಗೆ ಟಿಕೆಟ್‌ನ್ನು ವ್ಯವಸ್ಥೆಮಾಡಲಾಗುತ್ತದೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಇವರು ಮತ್ತೆ ಯಾವುದೇ ಪ್ರಯಾಣ ಕೈಗೊಳ್ಳಬೇಕೆಂದರೂ ಇವರಿಗೆ ಎರಡನೆಯ ದರ್ಜೆಯ ರೈಲು ಅಥವಾ ಹಡಗಿನ ಟಿಕೆಟನ್ನು ಒದಗಿಸಲಾಗುತ್ತದೆ.

೬) ಬೊಂಬಾಯಿಯಿಂದ ಹೊರಟ ದಿನದಿಂದ ಅವರು ಹಿಂದಿರುಗುವವರೆಗೂ ಡಾ. ಅಂಬೇಡ್ಕರ್ ಅವರಿಗೆ ಸರ್ಕಾರವು ವಾರ್ಷಿಕ ೨೩೦ ಪೌಂಡುಗಳಷ್ಟು ವಿದ್ಯಾರ್ಥಿವೇತನವನ್ನು ನೀಡುತ್ತದೆ. ಇದಲ್ಲದೇ ಅಧ್ಯಯನ ಸಮಯದಲ್ಲಿ ಅವರ ಎಲ್ಲಾ ಖರ್ಚು ವೆಚ್ಚಗಳನ್ನು ಸರ್ಕಾರ ಭರಿಸುತ್ತದೆ.

(ಅಪೂರ್ಣ) ಒಂದು ಹಾಳೆ ಕಾಣೆಯಾಗಿದೆ

ಎ.ಸಿ. ಜೋಷಿ

ಭೀಮ್‌ರಾವ್. ಆರ್. ಅಂಬೇಡ್ಕರ್

(ಎಂಟು ಆಣೆ ಕಾಗದದ ಮೇಲೆ)

ನನ್ನ ಸಮ್ಮುಖದಲ್ಲಿ ಸಹಿ ಹಾಕಿ ಪ್ರಮಾಣಿಸಿದ್ದಾರೆ.
೪ನೆಯ ಜೂನ್ ೧೯೧೩

ಜೆ.ಎಂ ಷಾ
ಸಹ ಶಿಕ್ಷಣ ಮಂತ್ರಿ
ಬರೋಡಾ ಸರ್ಕಾರ
"ಸರ್ಕಾರದ ಪರವಾಗಿ"[೨]

**ಡಾ. ಅಂಬೇಡ್ಕರ್ ಅವರ ಖರ್ಚು ವೆಚ್ಚ ವರದಿ"***
**ಅಮೆರಿಕಾದಲ್ಲಿ**

| ರೂಪಾಯಿ | ಆಣೆ-ಕಾಸು | ಉಡುಗೆ, ೧೫-೬-೧೩ ರಿಂದ ೩ ತಿಂಗಳ |
|---|---|---|
| ೧,೩೭೩ | ೧೨.೦ | ವಿದ್ಯಾರ್ಥಿ ವೇತನ |
| ೫೯೦೦.೦ | | ಬರೋಡಾ ನಗರದಿಂದ ರೈಲಿನ ವೆಚ್ಚ ಪ್ಯಾಸೇಜ್ |
| ೩,೮೨೮ | ೦ | ೧೫-೯-೧೩ ರಿಂದ ೧೪-೬-೧೪ ರವರೆಗಿನ ವಿದ್ಯಾರ್ಥಿ ವೇತನ, ಪುಸ್ತಕಗಳು ಶುಲ್ಕ ಇತ್ಯಾದಿ ಬಿಲ್ ಸಂಖ್ಯೆ: ೮೪೩/೨೫-೪-೧೪ |
| ೬೯೧೨ | ೩-೭ | ೧೫-೬-೧೪ ರಿಂದ ೧೪-೯-೧೫ರವರೆಗಿನ ವಿದ್ಯಾರ್ಥಿ ವೇತನ, ಪುಸ್ತಕ ಶುಲ್ಕ ಇತ್ಯಾದಿ ಬಿಲ್ ಸಂಖ್ಯೆ ೮೯೮/೨೮-೭-೧೬ |
| ೩೬೫೧ | ೭-೧೦ | ೧೫-೯-೧೫ರಿಂದ ೧೪-೬-೧೬ರವರೆಗಿನ ವಿದ್ಯಾರ್ಥಿ ವೇತನ, ಪುಸ್ತಕ, ಶುಲ್ಕ ಇತ್ಯಾದಿ ಬಿಲ್ ಸಂಖ್ಯೆ ೧೮೩೧/ ೩೧-೩-೧೮ |

ಇಂಗ್ಲೆಂಡಿನಲ್ಲಿ

1. Khairmode Vol. 1 Pp 63-64
೨ ರಟ್ಟು: ಅಂಬೇಡ್ಕರ್ ಅವರ ಬಗ್ಗೆ ತಿಳಿಯದ ಸತ್ಯಗಳು ಪುಟ-೨೨೭-೨೨೮
* ಇತರ ವಿವರಗಳಿಗಾಗಿ ಅನುಬಂಧ VII, VIII ಹಾಗು IX ಗಮನಿಸಿ.

| | | |
|---|---|---|
| ೪,೦೭೮ | ೯-೮ | ೧೫-೬-೧೬ ರಿಂದ ೧೪-೬-೧೭ರವರೆಗಿನ ವಿದ್ಯಾರ್ಥಿ ವೇತನ ಹಾಗು ಶೈಕ್ಷಣಿಕ ವೆಚ್ಚ ಬಿಲ್ ಸಂಖ್ಯೆ-೧೮೩ / ಬಿ.ಎಸ್ ಪ್ಯಾಸೇಜ್ |

**ಒಟ್ಟು ೨೦,೪೩೪-೦-೬**[೧]

ಬರೋಡಾ ಸರ್ಕಾರದ ಅಧಿಕಾರಿಗಳು ತಮ್ಮ ಆಡಳಿತದ ಅತ್ಯುತ್ಸಾಹದಲ್ಲಿ ಹಾಗು ಸರ್ಕಾರದ ಖರ್ಚು ವೆಚ್ಚಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕೆಲ ಕ್ರಮಗಳನ್ನು ಕೈಗೊಂಡಿದ್ದರು. ಅವರು ಡಾ. ಅಂಬೇಡ್ಕರ್ ಅವರು ಪಡೆದಿದ್ದ ತಹ ೨೦,೪೩೪ ರೂಪಾಯಿಗಳ ವಿದ್ಯಾರ್ಥಿ ವೇತನವನ್ನು ಹಿಂದಿರುಗಿಸುವಂತೆ ಈ ವಿಷಯವನ್ನು ಮಹಾರಾಜ ಅವರ ಗಮನಕ್ಕೆ ತಾರದೇ ಪಟ್ಟು ಹಿಡಿದರು.

ಡಾ. ಅಂಬೇಡ್ಕರ್ ಅವರು ಸರ್ಕಾರವು ತಮ್ಮ ಶಿಕ್ಷಣಕ್ಕೆ ಎಂದು ವ್ಯಯಸಿದ್ದ ಹಣವನ್ನು ಹಿಂದಿರುಗಿಸಲು ಸಿದ್ಧರಾಗಿದ್ದರು ಆದರೆ ಅವರು ಆಗಿದ್ದ ಸ್ಥಿತಿಯಲ್ಲಿ ಅವರ ದಿನನಿತ್ಯದ ಖರ್ಚು ವೆಚ್ಚಗಳನ್ನು ತೂಗಿಸಲು ಅವರ ಬಳಿ ಹಣವಿತ್ತೇ ಹೊರತು ಸಾಲವನ್ನು ಮರುಪಾವತಿಸುವಷ್ಟು ಹಣ ಇರಲಿಲ್ಲ. ಈ ಪರಿಸ್ಥಿತಿಯಲ್ಲಿ ಅವರು ಸರ್ಕಾರಕ್ಕೆ ತಮ್ಮ ಅಸಹಾಯಕತೆಯನ್ನು ತಿಳಿಸಿ ಪತ್ರ ಬರೆದರು. ತಾವು ಸಾಲದ ಹಣವನ್ನು ಮರುಪಾವತಿ ಮಾಡುವಷ್ಟು ಸಮರ್ಥರಾಗುವತನಕ ಕಾಲಾವಕಾಶವನ್ನು ನೀಡುವಂತೆ ಸರ್ಕಾರವನ್ನು ಕೋರಿಕೊಂಡರು.

ಬರೋಡಾ ಸರ್ಕಾರವು ಇವರು ಹಣ ಹಿಂದಿರುಗಿಸಿಲಿಲ್ಲ ಎಂದು ಕೇಸು ದಾಖಲಿಸುವ ಪ್ರಯತ್ನದಲ್ಲಿದ್ದ ಆ ಸಮಯದಲ್ಲಿ ಸರ್ಕಾರದ ಪ್ರತಿನಿಧಿಯಾದ ಶ್ರೀ ಪಂಡಿತ್ ಅವರಿಗೆ ಅಂಬೇಡ್ಕರ್ ಅವರು ಬರೆದ ಪತ್ರವನ್ನು ಈ ಕೆಳಗೆ ನೀಡಲಾಗಿದೆ. ತಮ್ಮದೇ ಆದಂತ ವೈಭವಯುತ ಶೈಲಿಯಲ್ಲಿ ಡಾ. ಅಂಬೇಡ್ಕರ್ ಅವರು ಈ ಪತ್ರವನ್ನು ಬರೆದಿದ್ದಾರೆ. ಇದನ್ನು ಓದುವುದು ನಿಜವಾಗಿಯೂ ಕುತೂಹಲಕಾರಿಯಾಗಿದೆ. ಆ ಪತ್ರವನ್ನು ಪದಶಃ ಕೆಳಗೆ ನೀಡಲಾಗಿದೆ.

ಖಾಸಗಿ ದಾಮೋದರ್ ಸಭಾಂಗಣ
ಬಿ.ಆರ್. ಅಂಬೇಡ್ಕರ್ ಪಾರೇಶ್, ಬೊಂಬಾಯಿ
೯-೧೨-೧೯೨೪

ಪ್ರೀತಿಯ ಶ್ರೀ ಪಂಡಿತ್

೬ನೆಯ ತಾರೀಖಿನಂದು ತಾವು ಬರೆದಿರುವ ಪತ್ರಕ್ಕೆ ಧನ್ಯವಾದಗಳು. ನಾನು ಅತ್ಯಂತ ಎಚ್ಚರಿಕೆಯಿಂದ ಈ ಪತ್ರದ ಸಾರಾಂಶವನ್ನು ಗಮನಿಸಿದ್ದೇನೆ. ನೀವು ನನ್ನ ಹಾಗು ಬರೋಡಾ ಸರ್ಕಾರದ ನಡುವೆ ಈ ಮೊದಲು ನಡೆದ ಪತ್ರಗಳ ಸಾರಾಂಶವನ್ನು ಗಮನಿಸಿದ್ದಿದ್ದರೆ ನೀವು ನನಗೆ ಈ ಪತ್ರವನ್ನು ಬರೆಯುವ

---

೧. ಎರಡೂ ಸಂಖ್ಯೆಗಳ ನಡುವೆ ಸ್ವಲ್ಪ ವ್ಯತ್ಯಾಸವಿದೆ.

ಆವಶ್ಯಕತೆಯೇ ಇರುತ್ತಿರಲಿಲ್ಲ. ನನ್ನ ಮೇಲೆ ಸರ್ಕಾರದ ಋಣಬಾರ ಎಷ್ಟಿದೆ ಎಂದು ನೀವು ನನಗೆ ನೆನಪಿಸುವ ಅಗತ್ಯವೂ ಇಲ್ಲ. ನಾನು ಅವರಿಗೆ ಪತ್ರ ಮುಖೇನ ಹಲವಾರು ಬಾರಿ ಸ್ಪಷ್ಟವಾಗಿ ತಿಳಿಸಿದ್ದೇನೆ. ಬರೋಡಾ ಸರ್ಕಾರ ನನ್ನ ಶಿಕ್ಷಣಕ್ಕೆಂದು ವೆಚ್ಚ ಮಾಡಿರುವ ಅಷ್ಟೂ ಹಣವನ್ನು ನಾನು ಹಿಂದಿರುಗಿಸಲು ಕರ್ತವ್ಯಬದ್ಧನಾಗಿದ್ದೇನೆ. ಒಂದು ವೇಳೆ ಈ ಸಾಲವನ್ನು ತೀರಿಸುವಷ್ಟು ಹಣ ನನ್ನ ಬಳಿ ಇದ್ದಿದ್ದರೆ, ಒಂದು ಕ್ಷಣವೂ ತಡೆ ಮಾಡದೇ ನಾನು ಈ ಹಂಗಿನಿಂದ ಮುಕ್ತನಾಗುತ್ತಿದ್ದೆ, ಇದನ್ನು ನೀವು ನಂಬಲೇಬೇಕು. ಏಕೆಂದರೆ ಹೀಗೆ ಮಾಡುವುದರಿಂದ ಇದುವರೆಗೂ ಬರೋಡ ಸರ್ಕಾರವು ನನ್ನನ್ನು ನಡೆಸಿಕೊಂಡಿರುವ ರೀತಿಯನ್ನು ಇಡೀ ಪ್ರಪಂಚಕ್ಕೆ ತಿಳಿಸಲು ನಾನು ಸ್ವತಂತ್ರನಾಗುತ್ತಿದ್ದೆ. ಏಕೆಂದರೆ ಬರೋಡ ಸರ್ಕಾರವು ನನ್ನನ್ನು ಯಾವ ರೀತಿ ನೆಡೆಸಿಕೊಂಡಿದೆ ಎಂಬ ಕಲ್ಪನೆಯೂ ನಿಮಗೆ ಇರಲಾರದು. ಆದರೆ ನಾನು ಈಗಿರುವ ಪರಿಸ್ಥಿತಿಯಲ್ಲಿ ನನ್ನ ಜೀವನ ನಡೆಸುವುದೇ ದುಸ್ತರವಾಗಿವಾಗಿದ್ದು ಸಾಲ ಪಾವತಿ ಮಾಡುವುದಂತೂ ದುಸ್ತರವಾದ ಮಾತೇ... ಆದರೆ ನೀವು, ನಾನು ಇದೀಗ ಬೊಂಬಾಯಿಯಲ್ಲಿ ನೆಲೆ ನಿಂತಿರುವುದರಿಂದ ಸಾಲ ಪಾವತಿ ಮಾಡುವುದು ಕಷ್ಟವಲ್ಲ ಎಂದು ಭಾವಿಸಬಹುದು. ತಾವು "ನೆಲೆನಿಂತಿರುವುದು" ಎಂಬ ಪದ ಬಳಕೆಯನ್ನು ಯಾವ ಅರ್ಥದಲ್ಲಿ ಬಳಸಿದ್ದೀರಿ ಎಂಬುದು ನನಗೆ ತಿಳಿಯುತ್ತಿಲ್ಲ. ನೀವು ಒಂದು ವೇಳೆ ನಾನು ಬೆಟ್ಟದಷ್ಟು ಹಣ ಸಂಪಾದನೆ ಮಾಡುತ್ತಿರುವೆ ಎಂದು ನಂಬಿರುವುದಾದರೇ, ನಿಮ್ಮದು ತಪ್ಪು ಕಲ್ಪನೆ ಎಂದು ತಿಳಿಸಲು ನಾನು ಬಯಸುತ್ತೇನೆ. ನಾನು ಕೇವಲ ಒಬ್ಬ ವಕೀಲ, ಅದೂ ಕೆಲಸಕ್ಕಾಗಿ ಹಂಬಲಿಸುತ್ತಿರುವ ವಕೀಲ ಎಂದು ಸ್ಪಷ್ಟ ಪಡಿಸುತ್ತೇನೆ. ಇದರಲ್ಲಿ ಇರುವ ನಿಜಾಂಶ ಎಂದರೆ ನಾನು ಕೆಲಸವನ್ನು ಆರಂಭಿಸಿ ಕೇವಲ ಒಂದೇ ಒಂದು ವರ್ಷ ಕಳೆದಿದೆ. ಎರಡನೆಯದಾಗಿ ಈ ವೃತ್ತಿಯಲ್ಲಿ ಕೂಡ ಜಾತಿಯ ಭೇದ ಆಗಾಧವಾಗಿದೆ. ನನ್ನ ಮುನ್ನಡೆಯ ಪ್ರತಿ ಹಂತದಲ್ಲಿಯೂ ನಾನು ಇದನ್ನು ಎದುರಿಸಿಕೊಂಡು ಸಾಗುತ್ತಿದ್ದೇನೆ. ನನ್ನ ಈಗಿನ ಹೋರಾಟ ಅತ್ಯಂತ ಕಷ್ಟಕರವಾಗಿದೆ. ಆದರೂ ನಾನು ಎಲ್ಲಾ ವಿಷಯಗಳನ್ನು ಶಾಂತ ಚಿತ್ತನಾಗಿ ಎದುರಿಸುತ್ತಿದ್ದೇನೆ. ಈಗಿನ ಪರಿಸ್ಥಿತಿಯಲ್ಲಿ ನಾನು ಹಣವನ್ನು ಹಿಂದಿರುಗಿಸುವ ಆಶಯ ಹೊಂದಿರುವೆನಾದರೂ ಹಾಗೆ ಮಾಡಲಾಗದ ಸ್ಥಿತಿಯಲ್ಲಿ ಇದ್ದೇನೆ. ಒಂದು ವೇಳೆ ಸರ್ಕಾರ ನನ್ನ ಅಸಹಾಯಕ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೇ ನನಗೆ ಹಣ ಹಿಂದಿರುಗಿಸುವ ಆಶಯ ಇಲ್ಲ ಎಂದು ತಪ್ಪಾಗಿ ಭಾವಿಸುವುದಾರೆ ಅದರ ಎದುರು ಈಗಿರುವ ಮಾರ್ಗವೆಂದರೆ ನನ್ನ ವಿರುದ್ಧ ನ್ಯಾಯಾಲಯಕ್ಕೆ ಮೊರೆ ಹೋಗಿ ಯಾವ ಶಿಕ್ಷೆಯನ್ನು ನ್ಯಾಯಾಲಯ ನಿಗದಿ ಪಡಿಸುತ್ತದೆಯೋ ಅದನ್ನು ನನಗೆ ನೀಡುವಂತೆ ಮಾಡುವುದು. ಅದು ನಿಜವಾಗಿಯೂ ಅವರಿಗೆ ಲಾಭದಾಯಕ ಎನ್ನುವುದಾದರೆ ಅವರು ಅದೇ ರೀತಿಯೇ ಮಾಡಲಿ. ಅವರು ನ್ಯಾಯಾಲಯದ ಮೆಟ್ಟಲು ಹತ್ತಿದರೆ, ನನ್ನ ಜಾತಿಗೆ ಅದು ಒಂದು ಕಪ್ಪು ಚುಕ್ಕೆಯಂತೆ ಆಗುತ್ತದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ, ನನ್ನ ಧರ್ಮದವರು ಸರ್ಕಾರ ನನ್ನನ್ನು ಯಾವ ರೀತಿ ನಡೆಸಿಕೊಂಡಿತು ಎಂಬುದನ್ನು ಅರಿತರೆ ಧರ್ಮಕ್ಕೆ ನನ್ನಿಂದ ಅವಮಾನವೇನೂ ಆಗಿಲ್ಲ ಎಂದು ಖಾತ್ರಿ ಪಟ್ಟುಕೊಳ್ಳುತ್ತಾರೆ. ಮತ್ತೊಂದೆಡೆಯಿಂದ ನೋಡಿದರೆ ಈ ರೀತಿ ಮಾಡುವುದರಿಂದ ಸ್ವಲ್ಪ ಮಟ್ಟಿನ ಅವಮಾನ ಹಾಗು ಹೇಸಿಗೆ ಸರ್ಕಾರ ಹಾಗು ಮಹಾಪ್ರಭುಗಳಿಗೂ ಉಂಟಾಗುವುದು ನಿಶ್ಚಿತ.

ಆದ್ದರಿಂದ ಈ ರೀತಿ ಆಗದಂತೆ ತಡೆಯುವುದೆ ಈ ಸಮಯದಲ್ಲಿ ಬುದ್ಧಿವಂತಿಕೆ. ಆದರೆ ಇನ್ನು ತಡೆಯಲು ಇರುವ ಒಂದೇ ಮಾರ್ಗವೆಂದರೆ, ಬರೋಡಾ ಸರ್ಕಾರವು ನಾನು ಈ ಹಣವನ್ನು ಪಾವತಿಸಲು ಸಾಧ್ಯವಾಗುವ ತನಕ ನನಗೆ ಕಾಲಾವಕಾಶವನ್ನು ನೀಡಬೇಕು. ಈಗಲೂ ಬರೋಡ ಸರ್ಕಾರಕ್ಕೆ ನಾನು ಯಾವ ರೀತಿಯ ವ್ಯಕ್ತಿ ಎಂದು ತಿಳಿದಿರುವಂತಿಲ್ಲ. ನಾನು ಸನ್ನಡತೆಯ ವ್ಯಕ್ತಿ ಎಂದು ಈಗಾಗಲೇ ಅವರ

ಮುಂದೆ ಒಮ್ಮೆ ನಾನು ತೋರಿಸಿದ್ದೇನೆ. ಒಂದು ವೇಳೆ ನಾನು ಸದ್ಗುಣಿಯಾಗಿರದೇ ಹೋಗಿದ್ದರೆ, ನಾನು ಬರೋಡಾಗೆ ಹಿಂದಿರುಗುತ್ತಲೇ ಇರಲಿಲ್ಲ. ಬ್ರಿಟಿಷ್ ಸರ್ಕಾರದಿಂದ ನನಗೆ ಬಹಳಷ್ಟು ಅವಕಾಶಗಳು ಅರಸಿ ಬಂದಿದ್ದವು. ಸಚ್ಚಾರಿತ್ರ್ಯವಿಲ್ಲದ ಯಾವುದೇ ವ್ಯಕ್ತಿಯೂ ಅಂತಹ ಅವಕಾಶವನ್ನು ಕಳೆದುಕೊಳ್ಳುತ್ತಿರಲಿಲ್ಲ. ಅವರು ನನ್ನನ್ನು ಕೇವಲ ಒಬ್ಬ ಸ್ವತಂತ್ರ ವ್ಯಕ್ತಿಯಂತೆ ಕಾಣುತ್ತಿದ್ದಾರೆ. ಆದರೆ ಒಬ್ಬ ಸದ್ಗುಣವಂತ ವ್ಯಕ್ತಿ ಮಾತ್ರವೇ ಈ ರೀತಿ ಸ್ವತಂತ್ರನಾಗಿರಲು ಸಾಧ್ಯ ಎಂಬುದನ್ನು ಅವರು ಮರೆತಿದ್ದಾರೆ.

ಆದರೆ ಈ ಪರಿಸ್ಥಿತಿಯಲ್ಲಿ ಒಂದು ಅಂಶವನ್ನಂತೂ ಸ್ಪಷ್ಟಪಡಿಸುವೆ. ಅದೇನೆಂದರೆ ಖಂಡಿತವಾಗಿಯೂ ಸರ್ಕಾರದ ಈ ಹಂಗಿನಿಂದ ಹೊರಬರುವ ಉದ್ದೇಶವನ್ನು ನಾನು ಹೊಂದಿದ್ದೇನೆ. ಇದರಲ್ಲಿ ಯಾವುದೇ ಅನುಮಾನವೇ ಬೇಡ. ಆದರೆ ಈಗಿನ ನನ್ನ ಪರಿಸ್ಥಿತಿ ಅತ್ಯಂತ ಕಷ್ಟಕರ ಆಗಿರುವುದರಿಂದ ಹಾಗೆ ಮಾಡಲು ಸಾಧ್ಯವಾಗುತ್ತಿಲ್ಲ. ಯಾವ ಘಳಿಗೆಯಲ್ಲಿ ನನ್ನ ಪರಿಸ್ಥಿತಿ ಸುಧಾರಿಸುತ್ತದೆಯೇ ಆ ಘಳಿಗೆಯೇ ನಾನು ಈ ಹಣವನ್ನು ಹಿಂದಿರುಗಿಸುತ್ತೇನೆ. ಬೊಂಬಾಯಿಯ ವಿಶ್ವವಿದ್ಯಾನಿಲಯದಲ್ಲಿ ಶೋಷಿತ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸ್ಥಾಪಿಸಿಬೇಕೆಂದಿರುವೆ. ಅದು ಕೂಡ ಬರೋಡಾದ ಮಹಾರಾಜರ ಹೆಸರಿನಲ್ಲಿ. ಆ ಹಣವನ್ನು ಶೋಷಿತ ವರ್ಗದವನಾದ ನನ್ನ ಮೇಲೆ ಸರ್ಕಾರ ವ್ಯಯಿಸಿತ್ತು. ಆದ್ದರಿಂದ ಆ ಹಣ ರಾಜ್ಯದ ಬೇರೆ ಯಾವುದೋ ಕಾರ್ಯಕ್ಕೆ ಉಪಯೋಗವಾಗದೇ ನನ್ನಂತೆಯೇ ಶೋಷಿತ ವರ್ಗದ ಬಡವಿದ್ಯಾರ್ಥಿಗಳಿಗೆ ಸಿಗುವಂತಾಗಲೀ ಎನ್ನುವುದೆ ನನ್ನ ಇಚ್ಛೆ. ಆದರೆ ಇಷ್ಟೊಂದು ವ್ಯಾಪಾರೀ ಮನೋಭಾವದಿಂದ ವರ್ತಿಸುತ್ತಿರುವ ಈ ಸರ್ಕಾರ ಇದಕ್ಕೆ ಒಪ್ಪುತ್ತದೆ ಎಂಬ ಭರವಸೆ ನನಗಿಲ್ಲ.

ಇದರೊಂದಿಗೆ ನನ್ನ ಹಾಗು ಸರ್ಕಾರದ ನಡುವಿನ ವಿವಾದದ ಬಗ್ಗೆ ನೀವೇ ನಿರ್ಧರಿಸಿ ಎಂದು ನಾನು ಹೇಳಬಯಸುವೆ.

ನೀವು ಬರೆದಿರುವ ಆಶಯವನ್ನು ನಾನು ಅಪಾರ್ಥ ಮಾಡಿಕೊಂಡಿಲ್ಲ. ಅಂತೆಯೇ ನನ್ನ ಪತ್ರದ ಆಶಯವನ್ನು ನೀವು ಅಪಾರ್ಥ ಮಾಡಿಕೊಳ್ಳುವುದಿಲ್ಲ ಎಂದು ಆಶಿಸುತ್ತೇನೆ.

ಒಮ್ಮೆ ನಿಮ್ಮ ಪತ್ರದ ನಿರೀಕ್ಷೆಯಲ್ಲಿ ಇರುತ್ತೇನೆ.

ನಾನು
ನಿಮ್ಮ ವಿಶ್ವಾಸದ
(ಬಿ.ಆರ್.ಅಂಬೇಡ್ಕರ್)[೧]

## ೨

## ಒಂದು ಪ್ರತಿಮೆಯ ಸ್ಥಾಪನೆಗಿಂತ ಒಂದು ಸಾರ್ವಜನಿಕ ಗ್ರಂಥಾಲಯದ ಸ್ಥಾಪನೆ ಮಾಡುವುದೇ ಶ್ರೀ ಮೆಹ್ತಾ ಅವರಿಗೆ ಸೂಕ್ತವಾದ ಸ್ಮರಣೆ.

ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ೧೯೧೬ರಲ್ಲಿ ಅಂಬೇಡ್ಕರ್ ಅವರು ವಿದ್ಯಾರ್ಥಿಯಾಗಿದ್ದಾಗ ಬರೆದಿದ್ದಂತಹ ಮೊತ್ತ ಮೊದಲ ಪತ್ರಗಳಲ್ಲಿ ಇದೊಂದು. ಶ್ರೀ ಫೀರೋಜ್ ಷಾ ಮೆಹ್ತಾ ಅವರ ಪ್ರತಿಮೆಯನ್ನು ಆತನ ಸ್ಮರಣಾರ್ಥ ಮುಂಬಾಯಿ ನಗರ ಪಾಲಿಕೆಯ ಮುಂದೆ ಸ್ಥಾಪಿಸಬೇಕು

1. Rattu Little Knowsfacts of Ambedkar Pp 21-24

ಎಂಬ ಪ್ರಸ್ತಾವನೆ ಸರ್ಕಾರದ ಎದುರಿಗಿತ್ತು. ಇದು ದಿನ ಪತ್ರಿಕೆಗಳ ಮೂಲಕ ಡಾ. ಅಂಬೇಡ್ಕರ್ ಅವರಿಗೆ ತಿಳಿಯಿತು. ಒಬ್ಬ ಮಹಾನ್ ವ್ಯಕ್ತಿಯನ್ನು ಈ ರೀತಿ ಕ್ಷುಲ್ಲಕವಾಗಿ ನೆನಪಿಸಿಕೊಳ್ಳಬೇಕೆ ಎಂಬ ಜಿಜ್ಞಾಸೆ ಅಂಬೇಡ್ಕರ್ ಅವರಿಗೆ ಉಂಟಾಯಿತು. ಅವರ ಪ್ರಕಾರ ಒಬ್ಬ ವ್ಯಕ್ತಿಯ ಸ್ಮರಣಾರ್ಥ ಏನಾದರೂ ಸ್ಥಾಪನೆಯಾಗಬೇಕು ಎಂದರೆ ಅದರಿಂದ ಸಮಾಜಕ್ಕೆ ಪ್ರಯೋಜನವಾಗಬೇಕು ಅದರಲ್ಲಿಯೂ ಜ್ಞಾನಪ್ರಸಾರಕ್ಕೆ ಸಹಾಯಕವಾಗಿರುವಂತಹುದಾಗಿರಬೇಕು. ಆದ್ದರಿಂದ ಫಿರೋಜ್ಷ್ ಷಾ ಮೆಹ್ತಾ ಅವರ ಸ್ಮರಣಾರ್ಥ ಒಂದು ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಬೇಕು ಎಂಬ ಪ್ರಸ್ತಾವನೆಯನ್ನು ಸರ್ಕಾರದ ಮುಂದೆ ಇರಿಸಿದರು. ಆದರ್ಶಪುರುಷರ ಪ್ರತಿಮೆಯ ಸ್ಥಾಪನೆಯ ಹುಚ್ಚು ಹಿಡಿದಿರುವ ಭಾರತೀಯರಿಗೆ ಅಂಬೇಡ್ಕರ್ ಅವರು ಅಂದು ಬರೆದ ಪತ್ರವು ಇಂದಿಗೂಕೂಡ ಮಾರ್ಗದರ್ಶಕವಾಗಿದೆ.

**ದಿವಂಗತ ಶ್ರೀ ಫಿರೋಜ್ ಷಾ ಮೆಹ್ತಾ**

ಇವರಿಗೆ
ಸಂಪಾದಕರು
The Chronicle ಪತ್ರಿಕೆ

ಮಾನ್ಯರೇ,

ಭಾರತ ದೇಶವು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗು ರಾಜಕೀಯವಾಗಿ ಅತ್ಯಂತ ಹಿಂದುಳಿದಿದೆ ಎಂದು ನಾನು ಹೇಳಿದರೆ, ನೀವು ಖಂಡಿತವಾಗಿಯೂ ಒಪ್ಪುವಿರಿ. ಈಗಿನ ಪರಿಸ್ಥಿತಿಯಲ್ಲಿ ಅಗತ್ಯವಾಗಿರುವುದು ಎಂದರೆ ಸಮಾಜವನ್ನು ಪುನಶ್ಚೇತನಗೊಳಿಸುವಂತಹ ಪ್ರಾಮಾಣಿಕ ರಾಜಕೀಯ ನಾಯಕರು. ಇಂತಹ ನಾಯಕರನ್ನು ನಾವು ದಿವಂಗತ ಗೋಖಲೆ ಹಾಗು ಪಿ.ಎಂ. ಮೆಹ್ತಾ ಅವರಲ್ಲಿ ಕಾಣಬಹುದಾಗಿತ್ತು. ಸಮಾಜಕ್ಕಾಗಿ ಸರ್ವ ತ್ಯಾಗಗಳ ಮೂಲಕ ಅವರು ನಮ್ಮನ್ನು ಪ್ರತಿನಿಧಿಸುತ್ತಿದ್ದರು. ಅವರು ಜನರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದ ಬಗೆಯನ್ನು ಕಂಡರೆ ಮತ್ತು ಜನರು ಅವರಲ್ಲಿ ಇರಿಸಿದ್ದ ನಂಬಿಕೆಯನ್ನು ನೋಡಿದರೆ ಇವರ ಅಕಾಲಿಕ ಮರಣವು ಪ್ರಕೃತಿಯು ಜನರೊಂದಿಗೆ ಆಡಿದ ಆಟವೇನೂ ಎನಿಸುತ್ತಿತ್ತು.

ಅವರು ನಮ್ಮ ಹಲವಾರು ಸಮಸ್ಯೆಗಳ ಪರಿಹಾರಕ್ಕೆ ಕೊನೆಯ ಉಸಿರು ಇರುವವರೆಗೂ ಹೋರಾಡಿದ್ದರು ಎಂಬ ಹಿರಿಮೆಯನ್ನು ಅವರಿಗೆ ನಾವು ನೀಡಲೇ ಬೇಕು. ಕೆಲವೊಂದು ಸಮಸ್ಯೆಗಳನ್ನು ಅವರು ಪರಿಹರಿಸಿದರು. ಕೆಲವೊಂದು ಸಮಸ್ಯೆಗಳನ್ನು ನಾವು ಎದುರಿಸಲು ಬಿಟ್ಟು ಹೋದರು. ಆದರೆ ಅವರು ಮಾಡಿರುವಂತಹ ಕಾರ್ಯಗಳ ಬಗೆಗೆ ನಾವು ಎಷ್ಟು ಭಾವೋದ್ರೇಕಕ್ಕೆ ಒಳಗಾಗುತ್ತೇವೆ ಎಂದರೆ ನಾವು ನಮ್ಮೆದುರು ಅವರು ಬಿಟ್ಟು ಹೋಗಿರುವ ಕಾರ್ಯವನ್ನು ಕೂಡ ಮರೆತುಬಿಟ್ಟಿದ್ದೇವೆ. ನಾವು ಅಷ್ಟರ ಮಟ್ಟಿಗೆ ಅವರ ಭಕ್ತರಾಗಿ ಹೋಗಿದ್ದೇವೆ. ಆದ್ದರಿಂದ ನಾವು ದಿನನಿತ್ಯವೂ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ಪಟ್ಟಂತಹ ಮಹಾನುಭಾವರ ಪ್ರತಿಮೆಯನ್ನು ಸ್ಥಾಪಿಸಲು ಹಂಬಲಿಸುವುದು ಕೂಡ ಅತ್ಯಂತ ಸ್ವಾಭಾವಿಕವೇ.

ಭಾರತೀಯ ಪತ್ರಿಕೆಗಳು ಇವರಿಬ್ಬರ ಹೆಸರಿನಲ್ಲಿ ಆಗಬೇಕಾದಂತಹ ಸ್ಮರಣಾರ್ಥಗಳ ಬಗ್ಗೆ ಎರಡು ರೀತಿಯ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ನೀಡುತ್ತಾ ಬಂದಿದೆ. ಗೋಖಲೆಯವರ ಸ್ಮರಣಾರ್ಥವಾಗಿ "ಸರ್ವೆಂಟ್ಸ್

ಆಫ್ ಇಂಡಿಯಾ"ದ ಶಾಖೆಗಳನ್ನು ವಿವಿಧ ನಗರಗಳಲ್ಲಿ ತೆರೆಯುವ ಯೋಜನೆ ಪ್ರಸ್ತಾಪಿಸಿದರೇ ಇಂದು ಸರ್. ಪಿ.ಎಂ. ಮೆಹ್ತಾ ಅವರ ಸ್ಮರಣಾರ್ಥ ಬೊಂಬಾಯಿ ನಗರ ಪಾಲಿಕೆಯ ಕಛೇರಿಯ ಎದುರು ಪ್ರತಿಮೆಯನ್ನು ಸ್ಥಾಪಿಸಬೇಕು ಎಂಬ ಪ್ರಸ್ತಾಪ ಮುಂದಿಡುತ್ತಿದ್ದಾರೆ.

ಆದರೆ ಒಂದು ವಿಷಯವನ್ನು ನಾನು ಎಲ್ಲರ ಮುಂದೆ ಇರಿಸಲು ಅನುಮತಿ ಕೋರುತ್ತೇನೆ. ಅದೇನೆಂದರೆ ಶ್ರೀ ಪಿ.ಎಂ ಮೆಹ್ತಾ ಅವರನ್ನು ಈ ರೀತಿ ಸ್ಮರಿಸಿಕೊಳ್ಳುವುದು ನಾವು ಅವರಿಗೆ ಎಸಗುವ ಅಪಮಾನ ಎಂದೇ ನನ್ನ ಅನಿಸಿಕೆ.

ಅವರ ಸ್ಮರಣಾರ್ಥ ಮಾಡುವ ಕೆಲಸವು ನಿಜವಾದ ಅರ್ಥದಲ್ಲಿ ಸ್ಮಾರಕವಾಗುವುದರೊಂದಿಗೆ ನಂತರದ ತಲೆಮಾರಿನವರಿಗೆ ಉಪಯುಕ್ತವೂ ಆಗಿರಬೇಕು ಎಂಬುದನ್ನು ಯೋಚಿಸಬಾರದೇಕೆ?

ಈ ಎರಡು ಉದ್ದೇಶಗಳನ್ನೂ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಬೊಂಬಾಯಿಯಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಿ ಅದನ್ನು "ಶ್ರೀ ಫಿರೋಜ್ಷಾ ಷಾ ಮೆಹ್ತಾ ಗ್ರಂಥಾಲಯ" ಎಂದು ಕರೆಯಬೇಕು.

ಏಕೆಂದರೆ ಗ್ರಂಥಾಲಯದ ಮಹತ್ವವನ್ನು ನಾವು ಇದುವರೆಗೂ ಅರಿತುಕೊಳ್ಳದೇ ಇರುವುದು. ವಿಪರ್ಯಾಸದ ಸಂಗತಿ. ಒಂದು ಸಮಾಜದ ಬೆಳವಣಿಗೆ ಹಾಗು ಅಭಿವೃದ್ಧಿಗೆ ಪೂರಕವಾಗಿ ಒಂದು ಗ್ರಂಥಾಲಯವನ್ನು ನಾವು ಉಪಯೋಗಿಸಿಕೊಳ್ಳಬಹುದು ಎಂಬ ಅರಿವೇ ನಮಗಿಲ್ಲ. ಆದರೆ ಅದರ ಹಿರಿಮೆಯ ಬಗ್ಗೆ ಮಾತನಾಡಲು ಇದು ಸೂಕ್ತ ಸಂದರ್ಭವೂ ಅಲ್ಲ. ಬೊಂಬಾಯಿಯಲ್ಲಿ ಇರುವಂತಹ ಪ್ರಜ್ಞಾವಂತ ನಾಗರಿಕರು ಒಂದು ಒಳ್ಳೆಯ ಸಾರ್ವಜನಿಕ ಗ್ರಂಥಾಲಯದ ಕೊರತೆಯನ್ನು ಅನುಭವಿಸುತ್ತಿದ್ದಾರೆ ಎಂದರೆ ಅದಕ್ಕಿಂತ ಹೆಚ್ಚಿನ ಅಪಮಾನ ಸಂಗತಿಯೇ ಇನ್ನಿಲ್ಲ. ಈ ತಪ್ಪನ್ನು ಆದಷ್ಟು ಬೇಗನೇ ಸುಧಾರಿಸಿಕೊಳ್ಳುವುದೇ ಒಳಿತು.

ಬೊಂಬಾಯಿಯಲ್ಲಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುವಂತಹ ಕೆಲ ಖಾಸಗಿ ಗ್ರಂಥಾಲಯಗಳಿವೆ. ಸರ್.ಪಿ.ಎಂ.ಮೆಹ್ತಾ ಅವರ ಸ್ಮರಣಾರ್ಥ ಒಂದು ಕಟ್ಟಡವನ್ನು ನಿರ್ಮಾಣ ಮಾಡಿ ಅಲ್ಲಿಗೆ ಈ ಎಲ್ಲಾ ಗ್ರಂಥಾಲಯಗಳನ್ನು ಸ್ಥಳಾಂತರಿಸಬಹುದು. ಇದರಿಂದ ಈ ಗ್ರಂಥಾಲಯಗಳ ಸೂಕ್ತ ನಿರ್ವಹಣೆಯೂ ಆಗುತ್ತದೆ ಅಂತೆಯೇ ಅವರ ಸ್ಮರಣಾರ್ಥದ ಕಾರ್ಯವೂ ಆಗುತ್ತದೆ. ಇನ್ನು ಈ ಗ್ರಂಥಾಲಯಗಳ ನಿರ್ವಹಣೆ ಹಾಗು ಹೊಸ ಪುಸ್ತಕಗಳ ಖರೀದಿಗೆ ಆಗುವ ವೆಚ್ಚವನ್ನು ಭರಿಸಲು ಬೊಂಬಾಯಿಯಲ್ಲಿ ಕೆಲ ಧಾರಾಳ ನಾಗರಿಕರಂತೂ ಇದ್ದೇ ಇರುತ್ತಾರೆ.

ಅಮೆರಿಕಾದ ಹೆಸರಾಂತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿರುವ ನನಗೆ ಒಂದು ಸಮಾಜ ರೂಪುಗೊಳ್ಳುವಲ್ಲಿ ಗ್ರಂಥಾಲಯ ಯಾವ ರೀತಿಯ ಮಹತ್ತರವಾದ ಪಾತ್ರ ವಹಿಸುತ್ತದೆ ಎಂಬ ಅರಿವು ಇದೆ. ಆದರೆ ಬೊಂಬಾಯಿಯ ನಗರದಲ್ಲಿ ಈ ಕೊರತೆಯಿದೆ ಎಂಬುದು ಅತ್ಯಂತ ದುಃಖದ ಹಾಗು ನೋವಿನ ಸಂಗತಿ. ಆದ್ದರಿಂದ ಈ ರೀತಿಯಿಂದ ಗ್ರಂಥಾಲಯವನ್ನು ನಿರ್ಮಿಸುವುದು ಆಧುನಿಕ ಭಾರತದ ಮಹಾನ್ ವ್ಯಕ್ತಿಯೋರ್ವರಿಗೆ ನಾವು ನೀಡಬಹುದಾದಂತಹ ಅತ್ಯಂತ ಸೂಕ್ತ ಸ್ಮಾರಕವಾಗಿರುತ್ತದೆ.

ಭಾರತದಿಂದ ೧೦,೦೦೦ ಮೈಲಿಗಳ ದೂರದಲ್ಲಿ ನಾನಿದ್ದೇನೆ. ಆದ್ದರಿಂದ ನಮ್ಮ ದೇಶದ ಸುದ್ದಿ ನನಗೆ ತಲುಪುವುದು ಸ್ವಲ್ಪ ತಡವಾಗುತ್ತದೆ. ಆದ್ದರಿಂದ ಈ ಪ್ರಸ್ತಾಪವನ್ನು ಸಲ್ಲಿಸಲು ಕೂಡ ತುಸು ತಡವಾಯಿತು. ಆದರೆ ಯಾವುದೇ ಪ್ರಸ್ತಾಪವನ್ನು ಸಲ್ಲಿಸದೇ ಇರುವುದಕ್ಕಿಂತ ತಡವಾಗಿಯಾದರೂ ಸಲ್ಲಿಸುವುದೇ ಒಳಿತು ಎಂದೇ ನನ್ನ ಅನಿಸಿಕೆ.

ನಿಮ್ಮವನೇ ಆದ
ಭೀಮರಾವ್. ಆರ್. ಅಂಬೇಡ್ಕರ್
ಲಿವಿಂಗ್‌ಸ್ಟನ್ ಸಭಾಂಗಣ
ಕೊಲಂಬಿಯಾ ವಿಶ್ವವಿದ್ಯಾನಿಲಯ
ನ್ಯೂಯಾರ್ಕ್ ನಗರ
ಅಮೆರಿಕಾ ಸಂಯುಕ್ತ ಸಂಸ್ಥಾನ[1]

* * * * *

**೩**

**ಸಾರ್ವಜನಿಕ ಸಂಸ್ಥೆಗಳು ಪ್ರಚಾರಕನಿಗೆ ಸಹಾಯ ನೀಡಬೇಕು**

ಪ್ರಚಾರಕನೋರ್ವನಿಗೆ ಡಾ.ಅಂಬೇಡ್ಕರ್ ಅವರು ನೀಡಿದ್ದಂತಹ ಅಧಿಕಾರ ಪತ್ರ – ಸಂಪಾದಕರು

**"ಜೈ ಭವಾನಿ"**

ಭೀಮರಾವ್. ಆರ್. ಅಂಬೇಡ್ಕರ್
M.S, Phd, D.S.C
ಉಚ್ಚ ನ್ಯಾಯಾಲಯದ ವಕೀಲರು
ಸದಸ್ಯರು, ವಿಧಾನ ಮಂಡಲ
ಬೊಂಬಾಯಿ

ದಾಮೋದರ ಸಭಾಂಗಣ
ಪಾರೇಲ್, ಬೊಂಬಾಯಿ
೪–೭–೧೯೨೭

ಈ ಪತ್ರವನ್ನು ಹೊಂದಿರುವಂತಹ ಶಂಕರದಾಸ ನಾರಾಯಣದಾಸ ಬಾರ್ವೆ ಅವರು ಬಹಿಷ್ಕೃತ ಹಿತಕಾರಿಣಿ ಸಭೆಯ ಸದಸ್ಯರು ಎಂದು ಪ್ರಮಾಣೀಕರಿಸುತ್ತೇನೆ. ಈ ಬಹಿಷ್ಕೃತ ಹಿತಕಾರಿಣಿ ಸಭೆಯು ಶೋಷಿತ ವರ್ಗದ ಜನರ ಏಳಿಗೆಗೆ ಶ್ರಮಿಸುತ್ತಿರುವ ಸಂಸ್ಥೆಯಾಗಿದೆ. ಈತ 'ಬಹಿಷ್ಕೃತ ಭಾರತ' ಎಂಬ ಪತ್ರಿಕೆಯ ಪ್ರಚಾರಕ ಕೂಡ. ಈ ಪತ್ರಿಕೆಯು ಕೂಡ ಶೋಷಿತ ವರ್ಗದ ಜನರ ಹಿತಾಸಕ್ತಿಗೆ ಹೋರಾಡುತ್ತಿರುವಂತಹ ಪತ್ರಿಕೆಯಾಗಿದೆ.

ಈತನ ಕಾರ್ಯವೆಂದರೆ ಈ ರಾಜ್ಯದಲ್ಲಿ ಸ್ಥಳದಿಂದ ಸ್ಥಳಕ್ಕೆ ಪ್ರವಾಸ ಕೈಗೊಂಡು ಭಾಷಣಗಳ ಮೂಲಕ ಶೋಷಿತ ವರ್ಗದ ಜನರ ಏಳಿಗೆಗೆ ಶ್ರಮಿಸುವಂತೆ ಪ್ರೇರೇಪಿಸುವುದು. ಆದ್ದರಿಂದ ಸಾರ್ವಜನಿಕ ಸಂಸ್ಥೆಗಳು ತಮ್ಮಿಂದ ಸಾಧ್ಯವಾದ ನೆರವನ್ನು ಈತನಿಗೆ ನೀಡಬೇಕು ಎಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಸಹಿ
ಬಿ.ಆರ್. ಆಂಬೇಡ್ಕರ್[2]

---

1. Bombay chronide L Tuesday, 28th March, 1916. Reprinted in Lokrajya : Dr. Babasaheb Ambedkar Special Nuinber April 16, 1981. Pp. 33-34
2. Khairmode Samputa 6 Pp 217-218.

## ೪
## ಭಾವುರವ್ ಪಾಟೀಲ್ ಅವರ ಸಂಸ್ಥೆ ನೆರವು ಪಡೆಯಲು ಅರ್ಹತೆ ಪಡೆದಿದೆ

*(ಈ ಅಭಿಪ್ರಾಯವನ್ನು ಡಾ. ಅಂಬೇಡ್ಕರ್ ಅವರು ಪ್ರವಾಸಿಗರ ಟಿಪ್ಪಣಿ ಪುಸ್ತಕದಲ್ಲಿ ದಾಖಲಿಸಿದ್ದರು ಒಬ್ಬ ಮಹಾನ್ ಸಮಾಜ ಸುಧಾರಕರೂ, ಶಿಕ್ಷಣ ತಜ್ಞರೂ ಆಗಿದ್ದಂತಹ ಕರಂವೀರ್ ಭಾವುರಾವ್ ಪಾಟೀಲ್ ಅವರು ಸತಾರದಲ್ಲಿ ಸ್ಥಾಪಿಸಿದ್ದ ವಿದ್ಯಾರ್ಥಿನಿಲಯಕ್ಕೆ ಭೇಟಿಯನ್ನು ಇತ್ತ ಸಂದರ್ಭದಲ್ಲಿ: ಸಂಪಾದಕರು.)

ಈ ವಿದ್ಯಾರ್ಥಿನಿಲಯಕ್ಕೆ ನೀಡಿರುವ ಭೇಟಿ ನನಗೆ ಅಪಾರ ಸಂತಸವನ್ನು ತಂದಿದೆ. ಇದೊಂದು ವಿಶೇಷ ಸಂಸ್ಥೆಯಾಗಿದೆ ಸಮಾಜದ ಬಗ್ಗೆ ಕಾಳಜಿ ಇರುವಂತಹ ಯಾವುದೇ ವ್ಯಕ್ತಿಯೇ ಆಗಲಿ ಈ ಸಂಸ್ಥೆಗೆ ಉದಾರವಾದ ದೇಣಿಗೆ ನೀಡಬೇಕಾಗಿದೆ. ನನ್ನ ಸ್ನೇಹಿತ ಭಾವುರಾವ್ ಪಾಟೀಲರು ಎಲ್ಲಾ ಮನ್ನಣೆಗೂ ಅರ್ಹರಾದ ವ್ಯಕ್ತಿ. ನಾನು ಈ ಸಂಸ್ಥೆಗೆ ೨೦/– ರೂಪಾಯಿಗಳನ್ನು ನೀಡುತ್ತಿದ್ದೇನೆ.

ಸತಾರ
೨೭–೦೭–೧೯೨೮

ಸಹಿ
ಡಾ. ಬಿ.ಆರ್. ಅಂಬೇಡ್ಕರ್[1]

## ೫
## ನನ್ನ ವಿರುದ್ಧ ನೀಡಿರುವಂತಹ ದೂರು ಆಧಾರರಹಿತ

### “ಸಮಿತಿಯ ಮುಂದೆ ನೀಡಿದ್ದರೆಂದು ಹೇಳಲಾಗಿರುವ ಹೇಳಿಕೆಯನ್ನು ಈಗ ನಿರಾಕರಿಸುತ್ತಿದ್ದಾರೆ”

ಡಾ. ಬಿ.ಆರ್. ಅಂಬೇಡ್ಕರ್ ಅವರು ನಮಗೆ ಅತ್ಯಂತ ದೀರ್ಘವಾದ ವಿವರಣೆಯನ್ನು ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿನ ಕೆಲ ಮುಖ್ಯ ಅಂಶಗಳನ್ನು ನಾವಿಲ್ಲಿ ಪ್ರಕಟಿಸುತ್ತಿದ್ದೇವೆ:

ತಮ್ಮ ಪತ್ರಿಕೆಯ ೬ನೆಯ ದಿನಾಂಕದ ಸಂಚಿಕೆಯಲ್ಲಿ ಪ್ರಕಟವಾಗಿರುವ ಷೋಲಾಪುರದ ನಗರಸಭೆಯ ಅಧ್ಯಕ್ಷರು ನನ್ನ ಹೇಳಿಕೆಯೊಂದಕ್ಕೆ ನೀಡಿರುವ ಪ್ರತಿಕ್ರಿಯೆಯತ್ತ ನನ್ನ ಗಮನವು ಹರಿದಿದೆ. ಅದರಲ್ಲಿ, ನಗರಸಭೆಯ ಅಧ್ಯಕ್ಷರು ಷೋಲಾಪುರದಲ್ಲಿನ ಶೋಷಿತ ವರ್ಗಗಳ ವಿದ್ಯಾರ್ಥಿನಿಲಯಕ್ಕೆ ನೀಡಲಾಗುತ್ತಿರುವ ಸಹಾಯಧನವನ್ನು ಹಿಂದೂ ಮತ್ತು ಮುಸ್ಲಿಮರ ನಡುವೆ ನಡೆದ ಗಲಭೆಯ ಕಾರಣದಿಂದಾಗಿ ನಿಲ್ಲಿಸಲಾಗಿದೆ. ಇತ್ಯಾದಿಯಾಗಿ ನಾನು ನೀಡಿದೆನೆನ್ನಲಾದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದು ಆಪಾದಿಸಿ ಅದನ್ನು ಖಂಡಿಸಿದ್ದಾರೆ.

೧೯೨೫ರಲ್ಲಿ ನಡೆದ ಹಿಂದೂ–ಮುಸ್ಲಿಮ್ ಗಲಭೆಯ ಸಂದರ್ಭದಲ್ಲಿ ಷೋಲಾಪುರದ ಶೋಷಿತವರ್ಗಗಳವರು ಮೇಲ್ಜಾತಿಯ ಹಿಂದೂಗಳಿಗೆ ಬೆಂಬಲವನ್ನು ನೀಡದ ಕಾರಣಕ್ಕಾಗಿ ನಗರಸಭೆಯು ತಾನು ಶೋಷಿತವರ್ಗಗಳವರ ವಿದ್ಯಾರ್ಥಿನಿಲಯಕ್ಕೆ ನೀಡುತ್ತಿದ್ದ ಅನುದಾನವನ್ನು ನಿಲ್ಲಿಸಿದೆ ಎಂದೂ ನಾನು ಸೈಮನ್ ಸಮಿತಿಯ ಮುಂದೆ ಸಾಕ್ಷ್ಯ ನೀಡಿದ್ದೇನೆಂದು ಆಪಾದಿಸಲಾಗಿದೆ. ಈ ಹೇಳಿಕೆಯು ಸಂಪೂರ್ಣವಾಗಿ ಸುಳ್ಳು.

---

1. Khaimode Samputa 4 P 14

ನಗರಸಭೆಯ ಈ ಮೇಲ್ಕಂಡ ಹೇಳಿಕೆಗೆ ಉತ್ತರವಾಗಿ ನಾನು 'ಇದು ಸಂಪೂರ್ಣವಾಗಿ ಆಧಾರರಹಿತವಾದದ್ದು ಮತ್ತು ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡಿರುವುದರ ಪರಿಣಾಮ' ಎಂದು ಹೇಳುತ್ತೇನೆ.

ಪೂರ್ವಗ್ರಹಪೀಡಿತರಲ್ಲದ ಯಾರೇ ಆದರೂ, ನನ್ನ ಹೇಳಿಕೆಯಲ್ಲಿ 'ಹಿಂದೂ–ಮುಸ್ಲಿಂ ಸಮುದಾಯಗಳವರ ನಡುವೆ ನಡೆದ ಗಲಭೆಯಿಂದಾಗಿ ಶೋಷಿತವರ್ಗಗಳವರಿಗೆ ನೀಡುತ್ತಿರುವ ಅನುದಾನವನ್ನು ನಿಲ್ಲಿಸಲಾಗಿದೆ' ಎಂದು ಹೇಳಿದ್ದೇನೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಮೇಲಿನ ಆಪಾದನೆಗೆ ವಿರುದ್ಧವಾಗಿ ನಾನು 'ಅನುದಾನವನ್ನು ನಿಲ್ಲಿಸಿರುವುದರ ಕಾರಣವು ನನಗೆ ತಿಳಿಯದು' ಎಂದಷ್ಟೇ ಹೇಳಿದ್ದೆ.

ಸಮಿತಿಯ ಮುಂದೆ ಸಾಕ್ಷ್ಯವನ್ನು ಹೇಳುವ ಸಂದರ್ಭದಲ್ಲಿ ನಾನು ನೀಡಿದೆನೆನ್ನಲಾದ ಹೇಳಿಕೆಯಿಂದ ಪರಿಣಾಮಗಳ ಬಗೆಗೆ ಇನ್ನಾದರೂ ನಗರಸಭೆಯು ನನ್ನ ಚಾರಿತ್ರ್ಯವಧೆ ಮಾಡುವುದನ್ನು ನಿಲ್ಲಿಸಬೇಕೆಂದು ನಾನು ಬಯಸುತ್ತೇನೆ. ಆದರೆ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಿದ್ಯಾರ್ಥಿನಿಲಯಕ್ಕೆ ಅನುದಾನವನ್ನು ನಿಲ್ಲಿಸಲು ತಾವು ಸತ್ಯವೆಂದು ಭಾವಿಸಿರುವ ಕಾರಣವನ್ನು ವಿವರಿಸುತ್ತಾರೆ. ಈ ಹೇಳಿಕೆಯಲ್ಲಿ "ನಗರಸಭೆಯ ಅಧ್ಯಕ್ಷರು ಹಣಕಾಸಿನ ವಿಷಯದಲ್ಲಿ ಗಂಭೀರವಾದ ಅವ್ಯವಹಾರಗಳನ್ನು ಗಮನಿಸಿದರು. ಆದ್ದರಿಂದ ಹಣಕಾಸಿನ ಲೆಕ್ಕಾಚಾರದ ಪಟ್ಟಿಯನ್ನು ಕೇಳಿದರು. ಆದರೆ ಈ ಸಂಸ್ಥೆಯ ಸದಸ್ಯರು ಇದನ್ನು ನೀಡಲು ನಿರಾಕರಿಸಿದರು. ಅದಕ್ಕಾಗಿಯೇ ಅನುದಾನವನ್ನು ತಡೆಹಿಡಿಯಲಾಗಿದೆ" ಎಂದು ಹೇಳಲಾಗಿದೆ. ಕಠಿಣವಾದ ಪದಗಳನ್ನು ಪ್ರಯೋಗಿಸುತ್ತಿರುವುದಕ್ಕೆ ನಾನು ಕ್ಷಮೆ ಯಾಚಿಸುತ್ತೇನೆ. ಈ ಮೇಲಿನ ಎಲ್ಲಾ ಹೇಳಿಕೆಗಳೂ ಸತ್ಯಕ್ಕೆ ದೂರವಾಗಿದೆ ಹಾಗು ಆಧಾರರಹಿತವಾಗಿದೆ.

ಇನ್ನು ವಾಸ್ತವದ ಸಂಗತಿಗಳು ಈ ಕೆಳಗಿನಂತಿವೆ. ಶೋಲಾಪುರದ ವಿದ್ಯಾರ್ಥಿ ನಿಲಯವು ೧೯೨೫ರಲ್ಲಿ ಕಾರ್ಯಾರಂಭ ಮಾಡಿತು. ಈ ವಿದ್ಯಾರ್ಥಿನಿಲಯವು ಆರಂಭವಾದಾಗಿನಿಂದ ನಗರಸಭೆಯು ಅನುದಾನವನ್ನು ನೀಡುತ್ತಿತ್ತು. ಎರಡು ವರ್ಷಗಳ ಕಾಲ ಎಂದರೆ ೧೯೨೫ ಹಾಗು ೧೯೨೬ರಲ್ಲಿ ಯಾವುದೇ ತೊಂದರೆ ಇಲ್ಲದೇ ಈ ಅನುದಾನವು ದೊರೆಯಿತು. ಆ ಸಮಯದಲ್ಲಿ ಯಾವುದೇ ತಪಾಸಣೆ ಜರುಗಲಿಲ್ಲ ಹಾಗು ಹಣಕಾಸಿನ ವೆಚ್ಚದ ಲೆಕ್ಕವನ್ನು ಕೂಡ ಯಾರೂ ಪರೀಕ್ಷಿಸಲಿಲ್ಲ. ಲೆಕ್ಕ ಪರಿಶೋಧಕರು ನೀಡಿದ ವರದಿಯಿಂದ ನಗರಸಭೆಯು ತೃಪ್ತವಾಗಿತ್ತು. ಆದರೆ ೧೯೨೭ರ ಚುನಾವಣೆಯ ನಂತರ ಡಾ. ವಿ.ವಿ. ಮುಳೆ ಅವರು ಅಧ್ಯಕ್ಷರಾದ ನಂತರ ನಗರಸಭೆಯ ದೃಷ್ಟಿಯೇ ಬದಲಾಯಿತು. ಆ ವರ್ಷದ ಆರಂಭದಲ್ಲಿ ಎಂದರೆ ೧೯೨೭ರ ಆರಂಭದಲ್ಲಿ ಶಾಲಾ ಸಮಿತಿಯ ಅಧ್ಯಕ್ಷರು ಈ ವಿದ್ಯಾರ್ಥಿ ನಿಲಯಕ್ಕೆ ಭೇಟಿ ಇತ್ತು ಹಣಕಾಸಿನ ಲೆಕ್ಕಗಳನ್ನು ಪರೀಕ್ಷಿಸಿದರು. ಎಂದಿನಂತೆಯೇ ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಆಡಳಿತ ನಡೆಯುತ್ತಿದೆ ಎಂದು ಹೇಳಿ ಅವರು ತಮ್ಮ ಅಭಿಪ್ರಾಯವನ್ನು ಅವರು ಸಂದರ್ಶಕರ ಟಿಪ್ಪಣಿ ಪುಸ್ತಕದಲ್ಲಿ ಬರೆದಿಟ್ಟರು. ಇದರ ಒಂದು ಪ್ರತಿಯನ್ನು ವಿದ್ಯಾರ್ಥಿನಿಲಯದ ಮೇಲ್ವಿಚಾರಕರು ನಗರಸಭೆಯ ಅಧ್ಯಕ್ಷರಿಗೆ ಕಳುಹಿಸಿಕೊಟ್ಟರು.

ಆದರೆ ಅಧ್ಯಕ್ಷರು ಈ ರೀತಿಯ ಅಭಿಪ್ರಾಯವನ್ನು ಓದಿ ಸಂತಸಪಡುವುದನ್ನು ಬಿಟ್ಟು ಅಸೂಯೆಗೆ ಒಳಪಟ್ಟವರಂತೆ ವರ್ತಿಸಿದರು. ಈ ರೀತಿ ಅಧ್ಯಕ್ಷರು ನೀಡಿರುವ ಪ್ರಶಂಸೆಯಿಂದ ಮುಂದಿನ ತಮ್ಮ ತಂತ್ರಗಳೆಲ್ಲಾ ವಿಫಲವಾಗಬಹುದು ಎಂದು ಹೆದರಿದರು. ಏಕೆಂದರೆ ಈ ಅಭಿಪ್ರಾಯವನ್ನು ಓದಿದ ತತ್‌ಕ್ಷಣವೇ ಅವರು ವಿದ್ಯಾರ್ಥಿನಿಲಯದ ಮೇಲ್ವಿಚಾರಕರಿಗೆ ೧೯೨೫ ಹಾಗು ೧೯೨೬ನೆಯ ಇಸವಿಯ ಹಣಕಾಸಿನ ಲೆಕ್ಕ ಪತ್ರಗಳನ್ನು ತಮಗೆ ನೀಡುವಂತೆ ತಿಳಿಸಿದರು. ಅದಕ್ಕೆ ಉತ್ತರವಾಗಿ ವಿದ್ಯಾರ್ಥಿನಿಲಯದ ಮೇಲ್ವಿಚಾರಕರು ಲೆಕ್ಕ ಪತ್ರದ ಕಡತಗಳನ್ನೆಲ್ಲಾ ಬೊಂಬಾಯಿಯಲ್ಲಿ ಇರುವ ಮುಖ್ಯ ಕಛೇರಿಗೆ ಕಳುಹಿಸಿಕೊಡಲಾಗಿತ್ತು.

ಆ ವರ್ಷ ಮುಕ್ತಾಯವಾದ ನಂತರ ಅವುಗಳನ್ನೆಲ್ಲಾ ನಾಶ ಮಾಡಲಾಗಿದೆ. ಆದರೆ ಪ್ರಸಕ್ತ ವರ್ಷದ ಲೆಕ್ಕ ಪತ್ರಗಳು ಲಭ್ಯವಿದೆ ಎಂದು ಅವುಗಳನ್ನೆ ಅಧ್ಯಕ್ಷರ ಅವಗಾಹನೆಗೆ ಕಳುಹಿಸಿಕೊಟ್ಟರು.

ಇದೇ ಸಮಯದಲ್ಲಿ ನಗರ ಪಾಲಿಕೆಯವರು ಉಪಸಮಿತಿಯೊಂದನ್ನು ರಚಿಸಿ, ವಿದ್ಯಾರ್ಥಿನಿಲಯದ ಲೆಕ್ಕಪತ್ರ ಪರಿಶೀಲನೆಯಲ್ಲಿ ತೊಡಗುವಂತೆ ಆದೇಶಿಸಿತು. ಆ ಸಮಿತಿಯ ಸದಸ್ಯರಾಗಿ ಶ್ರೀಬುವಾಲಾಲ್ ವಕೀಲ್, ಶಾಲಾ ಸಮಿತಿಯ ಉಪಾಧ್ಯಕ್ಷರು ಹಾಗು ಶ್ರೀ ಶಿವಲಾಲ್ ಅಪ್ಪಾ ದೇಶಮುಖ್, ಶಾಲಾ ಸಮಿತಿಯ ಸದಸ್ಯರು, ಇವರಿಬ್ಬರೂ ನೇಮಕವಾದರು. ಈ ಸಮಿತಿಯಲ್ಲಿ ಇದ್ದವರಿಬ್ಬರೂ ಅಧ್ಯಕ್ಷರ ಕಡೆಯವರೇ ಆಗಿದ್ದರು. ಮಾತ್ರವಲ್ಲ ವಿದ್ಯಾರ್ಥಿನಿಲಯದ ಕಾರ್ಯನಿರ್ವಹಣೆಯ ಆಗು ಹೋಗುಗಳ ಬಗ್ಗೆ ಅವರಿಗೆ ಯಾವುದೇ ಅರಿವಿರಲಿಲ್ಲ. ಆದರೆ ಇವರು ಕೂಡ ಲೆಕ್ಕ ಪತ್ರಗಳನ್ನು ಪರೀಕ್ಷಿಸಿ ಇವುಗಳು ಅತ್ಯಂತ ಸೂಕ್ತ ರೀತಿಯಲ್ಲಿ ಇಡಲ್ಪಟ್ಟಿವೆ ಎಂದದ್ದು ಮಾತ್ರವಲ್ಲದೇ, ವಿದ್ಯಾರ್ಥಿ ನಿಲಯದ ವಿರುದ್ಧವಾಗಿ ಏನನ್ನು ಹೇಳಲು ಸಾಧ್ಯವಿಲ್ಲ ಎಂದುಬಿಟ್ಟರು. ಈ ವರದಿಯನ್ನು ನಗರಸಭೆಗೆ ಸಲ್ಲಿಸಲಾಯಿತು.

ಈ ರೀತಿ ತನ್ನ ಕಡೆಯವರಿಂದಲೇ ವಿದ್ಯಾರ್ಥಿನಿಲಯದ ಪರವಾಗಿ ವರದಿ ಬಂದದ್ದನ್ನು ಕಂಡ ನಗರಪಾಲಿಕೆಯ ಅಧ್ಯಕ್ಷರು ಬಸವಳಿದು ಹೋದರು. ವಿದ್ಯಾರ್ಥಿನಿಲಯದ ಆಡಳಿತ ಮಂಡಳಿಯ ಬಗ್ಗೆ ತಮಗೆ ಇದ್ದ ಅಭಿಪ್ರಾಯವನ್ನು ಬದಲಿಸಿಕೊಳ್ಳುವ ಬದಲಾಗಿ ಇವರು ಅದರ ವಿರುದ್ಧ ಮತ್ತಷ್ಟು ಕೆಂಡಕಾರತೊಡಗಿದರು. ೧೯೨೫ ಹಾಗು ೧೯೨೬ರ ಲೆಖ್ಖ ಪತ್ರಗಳನ್ನು ನೀಡುವಂತೆ ಮತ್ತೊಮ್ಮೆ ಪಟ್ಟು ಹಿಡಿದರು. ಆದರೆ ಮತ್ತೊಮ್ಮೆ ಮುಖ್ಯ ಕಛೇರಿಯಿಂದ ಅವರಿಗೆ ಅದೇ ಉತ್ತರ ಬಂದಿತ್ತು. ಏನೆಂದರೆ ೧೯೨೫ ಹಾಗು ೧೯೨೬ರ ಲೆಕ್ಕ ಪತ್ರಗಳನ್ನು ಪರಿಶೀಲನೆಯನಂತರ ನಾಶಗೊಳಿಸಲಾಗಿದೆ. ಆದರೆ ಅವೆಲ್ಲಾ ಸೂಕ್ತ ರೀತಿಯಲ್ಲಿ ಇದ್ದವು ಎಂಬ ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ ತಮ್ಮ ಬಳಿ ಇದೆ. ಅದನ್ನು ಬೇಕಾದರೆ ನಗರ ಪಾಲಿಕೆಗೆ ಕಳುಹಿಸಿಕೊಡಲಾಗುವುದು. ಆದರೆ ಲೆಕ್ಕ ಪತ್ರಗಳ ಕಡತಗಳು ಲಭ್ಯವಿಲ್ಲ. ಪ್ರಸಕ್ತ ಸಾಲಿನ ಲೆಕ್ಕಪತ್ರಗಳು ವಿದ್ಯಾರ್ಥಿನಿಲಯದಲ್ಲಿ ಪರಿಶೀಲನೆಗೆ ಲಭ್ಯವಿದೆ ಎಂದು ಹೇಳಿದರು. ಯಾವುದೇ ಸಮಯದಲ್ಲಿ ಆದರೂ ಅದನ್ನು ಪರೀಕ್ಷಿಸಬಹುದು ಎಂದು ತಿಳಿಸಿದರು. ಅನಂತರ ನಗರ ಪಾಲಿಕೆಯ ಆಡಳಿತ ಅಧಿಕಾರಿಯವರು ವಿದ್ಯಾರ್ಥಿ ನಿಲಯದ ಕಡತಗಳನ್ನು ಪರೀಕ್ಷಿಸಿ ಎಲ್ಲವೂ ಸಮರ್ಪಕವಾಗಿದೆ ಎಂಬ ವರದಿಯನ್ನು ನೀಡಿದರು. ಇದಾದ ನಂತರ ಅಧ್ಯಕ್ಷರು ಬಹಳ ಅಪಮಾನಿತರಾಗಿ ಹೋದರು. ಆನಂತರ ಅವರು ಹಿಂದಿನ ವರ್ಷಗಳ ಪುಸ್ತಕಗಳನ್ನು ಕೇಳುವುದನ್ನು ನಿಲ್ಲಿಸಿದರು. ಪ್ರಸಕ್ತ ವರ್ಷದ ಪುಸ್ತಕಗಳಿದ್ದರೆ ಸಾಕು ಎನ್ನತೊಡಗಿದರು. ಈ ಕಡತಗಳನ್ನು ಅವರ ಬಳಿಗೆ ಕಳುಹಿಸಿಕೊಡಲಾಯಿತು. ನಾನು ಅತ್ಯಂತ ಸಂತಸದಿಂದ ಹೇಳಬಯಸುವ ಸಂಗತಿ ಎಂದರೆ ಅಧ್ಯಕ್ಷರಿಗೆ ಸಂಸ್ಥೆಯಲ್ಲಿ ಯಾವುದೇ ದೋಷಗಳು ಕಂಡುಬರಲಿಲ್ಲ. ಆದ್ದರಿಂದ ಪ್ರತಿಯೊಂದು ಹಂತದಲ್ಲಿಯೂ ಅಧ್ಯಕ್ಷರಿಗೆ ನಿರಾಸೆಯೇ ಎದುರಾಗಿತ್ತು. ಇದಾದ ನಂತರ ನಡೆದ ನಗರಸಭೆಯ ಸಭೆಯಲ್ಲಿ ವಿದ್ಯಾರ್ಥಿ ನಿಲಯಕ್ಕೆ ನೀಡುತ್ತಿದ್ದ ಅನುದಾನ ನಿಲ್ಲಿಸುವಂತೆ ಸೂಚಿಸಿದರು. ಆದರೆ ಇವರು ವಿದ್ಯಾರ್ಥಿ ನಿಲಯದ ಬಗ್ಗೆ ಮಾಡುತ್ತಿರುವಂತಹ ಆರೋಪಗಳೆಲ್ಲವೂ ಕಪೋಲಕಲ್ಪಿತ ಎಂದು ನಗರಪಾಲಿಕೆಯ ಸದಸ್ಯರೆಲ್ಲರಿಗೂ ತಿಳಿದಿತ್ತು. ಆದ್ದರಿಂದ ಅವರು ಇದನ್ನು ಅತ್ಯಂತ ಕಟುವಾಗಿ ಟೀಕಿಸಿದರು...... ಒಬ್ಬರೇ ಒಬ್ಬ ಸದಸ್ಯರನ್ನು ಹೊರತು ಪಡಿಸಿ ಮಿಕ್ಕವರೆಲ್ಲರೂ ಈ ವಿದ್ಯಾರ್ಥಿ ನಿಲಯಕ್ಕೆ ಅನುದಾನ ನಿಲ್ಲಿಸಬಾರದು ಎಂದು ಅಧ್ಯಕ್ಷರ ವಿರುದ್ಧವೇ ಸೆಟೆದು ನಿಂತರು. ಇದರ ಪರಿಣಾಮವಾಗಿ ಅನುದಾನವನ್ನು ತಡೆ ಹಿಡಿಯುವುದು ಅವರಿಂದ ಸಾಧ್ಯವಾಗದೇ ನಂತರ ಅವರು ಈ ಸಂಸ್ಥೆಯ ಲೆಕ್ಕಪತ್ರಗಳ ನಿರ್ವಹಣೆ ಸಮರ್ಪಕವಾಗಿಲ್ಲ ಎಂಬ ಕಾರಣ ನೀಡಿ

ಅನುದಾನವನ್ನು ತಡೆ ಹಿಡಿದರು.

ಇದೀಗ ಯಾವ ಕಾರಣದಿಂದ ಸಂಸ್ಥೆಯ ಉತ್ತರವು ಸಮರ್ಪಕವಾಗಿಲ್ಲ ಎಂದು ಅವರು ಹೇಳುತ್ತಿದ್ದಾರೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಯಾವಾಗಲೇ ಆದರೂ ಪ್ರಸಕ್ತ ಸಾಲಿನ ಹಣಕಾಸಿನ ವೆಚ್ಚದ ಪರಿಶೀಲನೆಗೆ ಕಡತವನ್ನು ನೀಡಲು ಈ ವಿದ್ಯಾರ್ಥಿ ನಿಲಯದ ಆಡಳಿತ ಮಂಡಳಿ ಸಿದ್ಧವಾಗಿಯೇ ಇದೆ. ಇನ್ನು ಕಳೆದ ವರ್ಷಗಳ ದಾಖಲೆಗೆ ಸಂಬಂಧಿಸಿದಂತೆ ಯಾವ ರೀತಿಯ ಉತ್ತರ ನೀಡುವುದು ಸಾಧ್ಯವೋ ಅದನ್ನು ನೀಡಿಯಾಗಿದೆ. ಯಾರು ತಾನೇ ಹಳೆಯ ಸಾಲಿನ ಲೆಕ್ಕ ಪತ್ರಗಳನ್ನು ನೀಡಲು ಸಾಧ್ಯ? ಈ ರೀತಿಯ ಬೇಡಿಕೆಯು ಅಕಾರಣ ಮಾತ್ರವಲ್ಲ ಹಟಮಾರಿತನದ ಪರಮಾವಧಿ. ಯಾವುದೇ ಸಂಸ್ಥೆಯೂ ಈ ತೆರನಾದ ಬೇಡಿಕೆಗಳನ್ನು ಪೂರೈಸುವುದು ಸಾಧ್ಯವಿಲ್ಲ. ಆದ್ದರಿಂದ ನ್ಯಾಯಯುತವಾಗಿ ನಡೆದುಕೊಳ್ಳುವ ಯಾವುದೇ ವ್ಯಕ್ತಿಯಾದರೂ ನಗರಪಾಲಿಕೆಯ ಅಧ್ಯಕ್ಷರು ಯಾವ ರೀತಿಯ ಸುಳ್ಳು ಸರಪಳಿಯನ್ನು ಹೆಣೆದು, ಈ ಸಂದರ್ಭದಲ್ಲಿ ಎಲ್ಲರ ದಿಕ್ಕು ತಪ್ಪಿಸಲು ಪ್ರಯತ್ನಿಸಿದರು ಎಂಬುದನ್ನು ತಿಳಿಯಬಹುದು......

ದಾಮೋದರ ಸಭಾಂಗಣ
ಪರೇಲ್ ಡಾ. ಬಿ.ಆರ್. ಅಂಬೇಡ್ಕರ್[೧]
ಡಿಸೆಂಬರ್ ೮, ೧೯೨೮

## ೬
## ಸಂಪಾದಕರಿಗೆ ಬರೆದ ಪತ್ರ

ಭೀಮ್‌ರಾವ ಆರ್. ಅಂಬೇಡ್ಕರ್ ರಾಜಗೃಹ
ಎಂ.ಎ, Ph.D, D.sc ನವ ದಾದರ್
ಬ್ಯಾರಿಸ್ಟರ್-ಅಟ್-ಲಾ ಬೊಂಬಾಯಿ-೧೪
ಜೆ.ಪಿ. ವಿಧಾನ ಮಂಡಲದ ಸದಸ್ಯರು

ಮಾನ್ಯರೆ,

ಜಂಟಿ ಸಂಸತ್ತಿನ ಸಮಿತಿಯು ಭಾರತದಲ್ಲಿ ಆಗುತ್ತಿರುವ ಸುಧಾರಣೆಗಳನ್ನು ಕುರಿತು ಸಲ್ಲಿಸಿರುವ ವರದಿಯ ಬಗ್ಗೆ ನನ್ನ ಅಭಿಪ್ರಾಯವನ್ನು ಸೂಚಿಸಲು ಭಾರತದಲ್ಲಿರುವ ನಿಮ್ಮ ಪತ್ರಿಕೆಯ ವಿಶೇಷ ಪ್ರತಿನಿಧಿಯವರು ನನಗೆ ಪತ್ರ ಬರೆದಿದ್ದರು. ಅದನ್ನು 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ತಿಳಿಸಿದರು. ಆದ್ದರಿಂದ ಈ ಪತ್ರದೊಂದಿಗೆ ನನ್ನ ಅಭಿಪ್ರಾಯಗಳಿರುವ ಲೇಖನವನ್ನು ಕಳುಹಿಸಿ ಕೊಡುತ್ತಿದ್ದೇನೆ. ದಯವಿಟ್ಟು ಕ್ಷಮಿಸಿ ತಾವು ಹೇಳಿರುವಂತೆ ನನಗೆ ಈ ಲೇಖನವನ್ನು ೧೨೦೦ ಪದಗಳಿಗೆ ಸೀಮಿತಗೊಳಿಸುವುದು ಸಾಧ್ಯವಾಗಲಿಲ್ಲ. ಸುಮಾರು ೩೦೦ ಪದಗಳಷ್ಟು ಹೆಚ್ಚಿನ ಬಳಕೆಯಾಗಿದೆ ಆದರೆ ವಿಷಯದ ಗಂಭೀರತೆಯನ್ನು ಅರಿತು ಹಾಗು ಸ್ಪಷ್ಟತೆಯನ್ನು ತರುವ ನಿಟ್ಟಿನಲ್ಲಿ ನೀವು ಇದಕ್ಕೆ ಅವಕಾಶ ನೀಡುವಿರೆಂಬ ನಂಬಿಕೆ ನನಗಿದೆ.

1. The Indain Nation Herald Dated 10th Dec. 1928

ನನ್ನ ವಿಶೇಷ ಮನವಿ ಏನಂದರೆ, ಯಾವುದೇ ರೀತಿಯಲ್ಲಿ ಸಂಕುಚಿತಗೊಳಿಸದೆ ಈ ಲೇಖನವನ್ನು ಪೂರ್ಣ ಪ್ರಮಾಣದಲ್ಲಿ ಪ್ರಕಟಿಸಿ ಎಂದು ಕೇಳಿಕೊಳ್ಳುವೆ.

ಇದಕ್ಕಾಗಿ ನಾನು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಎಂದೆಂದಿಗೂ ನಿಮ್ಮ ವಿಶ್ವಾಸಿ

ಬಿ.ಆರ್. ಅಂಬೇಡ್ಕರ್

ಇವರಿಗೆ

ಸಂಪಾದಕರು

ಮ್ಯಾಂಚೆಸ್ಟರ್ ಗಾರ್ಡಿಯನ್

ಸುರ್ವಾಡೆ ಸಂಪುಟ, ಪುಟ ೧೪೬-೪೭

ದಿನಾಂಕ ಲಭ್ಯವಾಗಿಲ್ಲ.

* * * *

೭

## ದೇವಸ್ಥಾನದ ಪ್ರವೇಶವನ್ನು ಪಡೆಯುವುದಕ್ಕಿಂತ ಹೆಚ್ಚಿನ ಆದ್ಯತೆಯನ್ನು ಆರ್ಥಿಕ, ಶೈಕ್ಷಣಿಕ ಹಾಗು ಸಾಮಾಜಿಕ ಮುನ್ನಡೆಗೆ ನೀಡಿ.

ಪೂನಾ, ಅಕ್ಟೋಬರ್ ೧೮, ೧೯೩೨

ಡಾ.ಬಿ.ಆರ್. ಅಂಬೇಡ್ಕರ್ ಅವರು ನಿನ್ನೆಯ ದಿನವೇ ಪೂನಾಗೆ ಆಗಮಿಸಿದರು ಹಾಗು ವಿಧಾನ ಮಂಡಲದಲ್ಲಿ ಸ್ವಲ್ಪ ಸಮಯವನ್ನು ಕಳೆದರು. ಆದರೆ ತಾವು ಎರವಾಡ ಜೈಲಿನಲ್ಲಿ ಇರುವ ಗಾಂಧೀಜಿಯವರನ್ನು ಭೇಟಿ ಮಾಡುವ ವಿಷಯವನ್ನು ಯಾರ ಬಳಿಯೂ ಅವರು ಹೇಳಲಿಲ್ಲ. ಆದರೆ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಅವರು ಸಂಜೆ ಸುಮಾರು ೧ ೧/೨ ಘಂಟೆಗಳ ಕಾಲವನ್ನು ಗಾಂಧಿಯವರೊಂದಿಗೆ ಜೈಲಿನಲ್ಲಿ ಕಳೆದರು. ಅನಂತರ ತಮ್ಮ ಕಾರ್ಯನಿಮಿತ್ತ ಅವರು ಸಾವಂತವಾಡಿಗೆ ತೆರಳಿದರು. ಅವರು ಅಕ್ಟೋಬರ್ ೬ರಂದು ಬೊಂಬಾಯಿಗೆ ಹಿಂದಿರುಗುವವರು ಹಾಗು ನವೆಂಬರ್ ೭ರಂದು ಇಂಗ್ಲೆಂಡಿಗೆ ತೆರಳುವ ನಿರೀಕ್ಷೆಯಲ್ಲಿ ಇದ್ದಾರೆ.

ಆದರೆ ಡಾ. ಅಂಬೇಡ್ಕರ್ ಅವರ ಅಭಿಪ್ರಾಯದಲ್ಲಿ ದುಂಡು ಮೇಜಿನ ಸಮಾವೇಶವು ನವೆಂಬರ್ ೨೨ ರ ಮುನ್ನ ಆರಂಭ ಆಗುವುದು ಸಾಧ್ಯವೇ ಇಲ್ಲ. ಏಕೆಂದರೆ ಹಲವಾರು ಗಣ್ಯರು ನವೆಂಬರ್ ೧೨ ರ ಹೊತ್ತಿಗೆ ಲಂಡನ್ನನ್ನು ತಲುಪುವ ಸಾಧ್ಯತೆ ಕಡಿಮೆ. ಈಗಿನ ಪರಿಸ್ಥಿತಿಯಲ್ಲಿ ಹಿಂದೂಗಳು ಹಾಗು ಶೋಷಿತ ವರ್ಗದ ಜನರ ವಿಷಯದಲ್ಲಿ ರಾಜಕೀಯ ಹಾಗು ಸಮಾಜ ಕಲ್ಯಾಣಗಳ ನಡುವೆ ಗೆರೆಯೆಳೆದು ಬೇರ್ಪಡಿಸುವುದು ಕಷ್ಟ. ಇಂತಹ ಸಂದರ್ಭದಲ್ಲಿ ಸರಿಯಾದ ರಾಜಕೀಯಕ್ಕೆ ಇಲ್ಲಿ ಅವಕಾಶವಿಲ್ಲವಾದುದರಿಂದ ಪೂನಾ ಒಪ್ಪಂದವು ಸರಿಯಾಗಿ ನಿರ್ವಹಿಸಲ್ಪಡಲಿಲ್ಲವೆಂದು ಮಾತ್ರ ಹೇಳಬಹುದು.

ಡಾ. ಅಂಬೇಡ್ಕರ್ ಅವರು ಗಾಂಧೀಜಿಯವರ ಬಳಿ ಅಸ್ಪೃಶ್ಯತಾ ವಿರೋಧಿ ಲೀಗಿನ ಭವಿಷ್ಯದ ಸಂವಿಧಾನದ ರಚನೆ, ಅದರ ಜಿಲ್ಲಾ ಹಾಗು ತಾಲ್ಲೂಕು ಮಟ್ಟದ ಸಮಿತಿಗಳ ಅಭಿವೃದ್ಧಿ ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದರು. ಅವರು ಸಮಿತಿಯ ಸದಸ್ಯರ ನೇಮಕಾತಿಯ ವಿಷಯವನ್ನು ಚರ್ಚಿಸುತ್ತಾ ಈ ಸಮಿತಿಗಳ ಸದಸ್ಯರಲ್ಲಿ ಹೆಚ್ಚಿನವರು ಶೋಷಿತ ವರ್ಗದವರೇ ಇರಬೇಕು ಎಂದು ಗಾಂಧೀಜಿಯವರಿಗೆ ಸ್ಪಷ್ಟವಾಗಿ ತಿಳಿಸಿದರು. ಅವರ ಅಭಿಪ್ರಾಯದಲ್ಲಿ ಈ ಶೋಷಿತ ವರ್ಗದ ಜನರ ಕೂಗು ಎತ್ತರದಲ್ಲಿ ಕೇಳಿಸಬೇಕು. ಇದನ್ನು ಪಕ್ಕಕ್ಕೆ ಸರಿಸಲು ಯಾವುದೇ ಪ್ರಯತ್ನಗಳೂ ನಡೆಯಬಾರದು ಎಂದರು. ಅವರ ಏಳಿಗೆಯ ಕಾರ್ಯ ಸಮಾಧಾನಕರವಾಗಿ ಆಗಬೇಕಾದರೆ ತಾವು ಶೋಷಣೆಯಿಂದ ಮುಕ್ತರಾಗುವ ದಾರಿಯನ್ನು ಅವರೇ ಕಂಡುಕೊಳ್ಳಬೇಕು. ಎಲ್ಲ ರೀತಿಯಲ್ಲಿಯೂ ಅವರು ಹಿಂದೂ ಧರ್ಮವನ್ನೇ ಮಾದರಿಯಾಗಿ ಅನುಸರಿಸುವಂತೆ ಹೇಳಬಾರದು ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

## ವಿಶೇಷ ಜನಗಣತಿ

ಈ ಸಮಿತಿಯ ಕೆಲ ಸದಸ್ಯರು ಶೋಷಿತ ವರ್ಗದ ಜನರಿಗೆಂದೇ ವಿಶೇಷ ಜನಗಣತಿಯನ್ನು ಕೈಗೊಳ್ಳಬೇಕು ಎಂಬ ಪ್ರಸ್ತಾಪವನ್ನು ನೀಡಿದ್ದರು ಈ ರೀತಿಯ ಕಾರ್ಯ ಕೈಗೊಳ್ಳುವುದು ಅನಾವಶ್ಯಕ ಎಂದು ಅಂಬೇಡ್ಕರ್ ಅವರು ಗಾಂಧೀಜಿಯವರಿಗೆ ಹೇಳಿದರು.

ಈ ಭೇಟಿಯ ಸಮಯದಲ್ಲಿ ಶ್ರೀಮತಿ ಸರೋಜಿನಿ ನಾಯ್ಡು ಅವರು ಉಪಸ್ಥಿತರಿದ್ದರು. ಶ್ರೀ ಗಾಂಧಿ ಹಾಗು ಶ್ರೀ ಅಂಬೇಡ್ಕರ್ ಅವರ ಭೇಟಿಯ ನಂತರ ಇವರಿಬ್ಬರನ್ನೂ ಭೇಟಿಯಾದ ಕೆಲವರಿಗೆ, ಗಾಂಧೀಜಿ ಅವರು ಅಸ್ಪೃಶ್ಯತಾ ವಿರೋಧಿ ಸಮಿತಿಯ ಸದಸ್ಯರ ನೇಮಕಾತಿಯ ವಿಷಯದಲ್ಲಿ, ಅಂಬೇಡ್ಕರ್ ಅವರು ತಳೆದಿರುವ ನಿಲುವನ್ನು ಬೆಂಬಲಿಸುತ್ತಿದ್ದಾರೆ ಎಂದೆನಿಸಿತು.

ಗಾಂಧೀಜಿಯವರು "ಅತ್ಯಂತ ಆರೋಗ್ಯವಂತ" ರಾಗಿದ್ದಾರೆ ಎಂದು ಎರವಾಡ ಜೈಲಿನಿಂದ ಬಂದಂತಹ ಇತ್ತೀಚಿನ ಸುದ್ದಿಗಳು ತಿಳಿಸುತ್ತದೆ. ಡಾ. ಅಂಬೇಡ್ಕರ್ ಅವರು ಕೂಡ ಇದೇ ರೀತಿ ತಮ್ಮ ಸ್ನೇಹಿತರ ಬಳಿ ಹೇಳಿದ್ದರು. ಗಾಂಧೀಜಿಯವರು ಇದೀಗ ಸಂಪೂರ್ಣ ಆರೋಗ್ಯವಂತರಾಗಿದ್ದಾರೆ ಹಾಗು ಅತ್ಯಂತ ಜೀವನೋತ್ಸಾಹದಿಂದಿದ್ದಾರೆ ಎಂದಿದ್ದರು.

## ಆರ್ಥಿಕ ಅಸಮಾನತೆ
## ತಮ್ಮ ಜಾತಿಯ ಜನರಿಗೆ ಡಾ. ಅಂಬೇಡ್ಕರ್ ಅವರ ಸಲಹೆ

"ಅಸ್ಪೃಶ್ಯತಾ ವಿರೋಧಿ ಚಳುವಳಿಯು ತನ್ನ ಕಾವನ್ನು ಕಳೆಯಕೊಳ್ಳುತ್ತಿದೆ ಎಂದು ನನ್ನ ಅಭಿಪ್ರಾಯ" ಎಂದು ಡಾ. ಅಂಬೇಡ್ಕರ್ ಅವರು ಒಂದು ಸಂದರ್ಶನದಲ್ಲಿ ಹೇಳಿದ್ದರು. ಈ ಹೋರಾಟವು ಕೇವಲ ದೇವಸ್ಥಾನದ ಪ್ರವೇಶ ಪಡೆಯಲು ಹಾಗು ಸಹಪಂಕ್ತಿ ಭೋಜನ ಮಾಡಲು ಮಾತ್ರವೇ ಸೀಮಿತವಾಗಿದೆ. ಈ ಅಂಶ ನನ್ನನ್ನು ಚಿಂತೆಗೆ ಈಡು ಮಾಡಿದೆ. ಇದರಿಂದ ಎರಡೂ ವರ್ಗಗಳವರ ನಡುವಿನ ದ್ವೇಷವು ಹೆಚ್ಚಾಯಿತೇ ವಿನಃ ಹೇಳಿಕೊಳ್ಳುವಂತಹ ಲಾಭವೇನೂ ದೊರೆಯಲಿಲ್ಲ.

ಕೇವಲ ದೇವಸ್ಥಾನದ ಪ್ರವೇಶ ಪಡೆಯುವ ಅಥವಾ ಸಹ ಪಂಕ್ತಿ ಭೋಜನ ಮಾಡುವಷ್ಟಕ್ಕೆ ಮಾತ್ರ ಸೀಮಿತಗೊಳಿಸದೆ ಇವರು ತಮ್ಮ ಗಮನವನ್ನು ಶೋಷಿತ ಜನರ ಆರ್ಥಿಕ, ಸಾಮಾಜಿಕ ಹಾಗು ಶೈಕ್ಷಣಿಕ

ಏಳಿಗೆಯತ್ತಲೂ ನೀಡಬೇಕು. ಆದ್ದರಿಂದ ಅವರು ಸಾರ್ವಜನಿಕ ಪ್ರಕಟಣೆಗಳನ್ನು ನೀಡಿ ಸಾರ್ವಜನಿಕ ಕೆರೆ ಬಾವಿಗಳಿಗೆ ಹಾಗು ಶಾಲೆಗಳಿಗೆ ಅಸ್ಪೃಶ್ಯರಿಗೂ ಪ್ರವೇಶದ ಅವಕಾಶಸಿಗುವಂತೆ ಮಾಡಬೇಕು"

ಇನ್ನು ಬೆಳಗಾವಿ ಜಿಲ್ಲೆಯ ವಿಷಯಕ್ಕೆ ಬಂದರೆ, ಅಲ್ಲಿನ ಶೋಷಿತ ವರ್ಗದ ಜನರು ತಮ್ಮ ಉಪಯೋಗಕ್ಕೆಂದೇ ಪ್ರತ್ಯೇಕ ಬಾವಿಯೊಂದರ ನಿರ್ಮಾಣ ಆಗಬೇಕು ಎಂಬ ಬೇಡಿಕೆಯನ್ನು ಇರಿಸಿದ್ದಾರೆ ಯಾವುದೇ ಕಾರಣಕ್ಕೂ ಈ ರೀತಿಯ ಬೇಡಿಕೆಗೆ ಮಾನ್ಯತೆ ನೀಡಬಾರದು. ಅಸ್ಪೃಶ್ಯರು ಕೆರೆ ಸಾರ್ವಜನಿಕ ಕೆರೆ ಬಾವಿಗಳಿಂದ ನೀರು ಪಡೆಯುವ ಹಕ್ಕಿಗೆ ಒತ್ತಾಯಿಸಬೇಕು. ಈ ವಿಷಯದಲ್ಲಿ ಕಾಣದ ಕೈಗಳ ಕೈವಾಡವಿದೆ ಎಂಬ ಶಂಕೆ ಅವರಿಗಿತ್ತು.[೧]

* * * * *

## ೮
## ಜಾತಿ ಪದ್ಧತಿಯ ವಿನಾಶವಲ್ಲದೇ ಬೇರೆ ಯಾವ ಮಾರ್ಗದಿಂದಲೂ ಕೆಳ ಜಾತಿಯವರ ಏಳಿಗೆ ಸಾಧ್ಯವಿಲ್ಲ.

"ಅಸ್ಪೃಶ್ಯರ ಹೋರಾಟಕ್ಕೆ ಸಹಾಯ ಆಗಲೆಂದು ೧೯೩೩ ರ ಫೆಬ್ರವರಿ ೧೧ ರಂದು ಗಾಂಧೀಜಿಯವರು 'ಹರಿಜನ' ಎಂಬ ಪತ್ರಿಕೆಯನ್ನು ಆರಂಭಿಸಿದ್ದರು. ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಅವರು ಹೀಗೆ ಹೇಳಿದರು.[೨]

"ನಾನೀಗ ಯಾವ ಸಂದೇಶವನ್ನು ನೀಡುವುದಿಲ್ಲ"[೩]

"ಜಾತಿಭ್ರಷ್ಟನಾಗುವುದು ಜಾತಿ ವ್ಯವಸ್ಥೆ ಜಾರಿಯಲ್ಲಿ ಇರುವುದರ ಪರಿಣಾಮ. ಜಾತಿಪದ್ಧತಿ ಜಾರಿಯಲ್ಲಿ ಇರುವವರೆಗೂ ಈ ಜಾತಿಭ್ರಷ್ಟತೆ ಜಾರಿಯಲ್ಲಿ ಇರುತ್ತದೆ. ಈ ಜಾತಿಭ್ರಷ್ಟತೆ ನಾಶವಾಗಬೇಕು ಎನ್ನುವುದಾದರೆ ಜಾತಿಯ ವ್ಯವಸ್ಥೆಯೇ ನಾಶವಾಗಬೇಕು. ಮುಂಬರುತ್ತಿರುವ ಹೋರಾಟದಲ್ಲಿ ಹಿಂದೂಗಳನ್ನು ಯಾರೂ ರಕ್ಷಿಸಲು ಸಾಧ್ಯವಿಲ್ಲ. ಅವರು ಈ ರೀತಿಯ ತಮ್ಮ ಕೆಟ್ಟ ನೀತಿಯನ್ನು ಹೊರಹಾಕಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗುತ್ತದೆ" ಇದಕ್ಕೆ ಉತ್ತರವಾಗಿ ಗಾಂಧೀಜಿಯವರು ಹಲವಾರು ವಿದ್ಯಾವಂತ ಹಿಂದೂಗಳು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ.[೪]" ಅಸ್ಪೃಶ್ಯತೆ ಎನ್ನುವುದು ಜಾತಿ ವ್ಯವಸ್ಥೆಯಿಂದ ಉಂಟಾಗಿರುವಂತಹದ್ದಲ್ಲ. ಆದರೆ ಮೇಲು ಕೀಳಿನ ಭಾವನೆಯಿಂದ ಬಂದಿರುವಂತಹುದು. ಇದು ಹಿಂದೂ ಧರ್ಮದೊಳಗೆ ನುಸುಳಿ ಅದನ್ನು ವಿನಾಶದತ್ತ ಕೊಂಡೊಯ್ಯುತ್ತಿದೆ. ಅಸ್ಪೃಶ್ಯತೆಯ ಮೇಲಿನ ದಾಳಿ ಈ ಮೇಲು ಕೀಳುಗಳ ಮೇಲಿನ ದಾಳಿಯೇ ಆಗಿದೆ.[೫]

* * * * *

---

೧. ಟೈಂಸ್ ಆಫ್ ಇಂಡಿಯಾ
ದಿನಾಂಕ ೧೯ ಅಕ್ಟೋಬರ್ ೧೯೩೨.
೨. Kcg ಪುಟ ೨೨೭
೩. ಕುಬೇರ್, ಬಿ.ಆರ್. ಅಂಬೇಡ್ಕರ್ ಪುಟ ೪೭
೪. ಕೀರ್ ಪುಟ ೨೨೭
೫. ಕುಬೇರ್ ಬಿ.ಆರ್. ಅಂಬೇಡ್ಕರ್ ಪುಟ ೪೭

## ೬

## ಎರಡನೆಯ ಸದನದ (Second Chambers) ವಿರುದ್ಧ ಶೋಷಿತ ವರ್ಗಗಳು

ಪ್ರಾತಿನಿಧ್ಯ ಹೆಜ್ಜಳ ಕುರಿತ ಜಂಟಿ ಸಂವಿಧಾನ ಸಭೆಯ ವರದಿಯ ಬಗ್ಗೆ ಡಾ. ಅಂಬೇಡ್ಕರ್ ಅವರ ಅಭಿಪ್ರಾಯ.

"ಜಂಟಿ ಸಂವಿಧಾನ ಸಮಿತಿಯು ಯಾವುದೇ ರೀತಿಯಲ್ಲಿಯೂ ಪೂನಾ ಒಪ್ಪಂದವನ್ನು ಬದಲಿಸಿಲ್ಲ ಎನ್ನುವುದು ನನಗೆ ಹಾಗು ಇಡೀ ಶೋಷಿತ ವರ್ಗಕ್ಕೆ ಸಮಾಧಾನಕರವಾದ ಸಂಗತಿ. ಸ್ಥಳೀಯವಾಗಿ ದ್ವಿತೀಯ ಸದನದಲ್ಲಿನ ಹಾಗೂ ಕೇಂದ್ರದಲ್ಲಿನ ಮೇಲ್ಮನೆಯಲ್ಲಿನ ಪ್ರಾತಿನಿಧ್ಯದ ವಿಷಯದಲ್ಲಿ ಜಂಟಿ ಸಂಸದೀಯ ಸಮಿತಿಯು ಶೋಷಿತವರ್ಗದವರಿಗೆ ಅನ್ಯಾಯಮಾಡಿದೆ ಎಂದು ಡಾ. ಅಂಬೇಡ್ಕರ್ ಅವರು ಜಂಟಿ ಸಂಸದೀಯ ಸಮಿತಿಯ ಬಗ್ಗೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮುಂದುವೆಯುತ್ತಾ ಡಾ. ಅಂಬೇಡ್ಕರ್ ಈ ರೀತಿ ಹೇಳುತ್ತಾರೆ. ಸ್ಥಳೀಯ ಮಟ್ಟದಲ್ಲಿ ಎರಡನೆಯ ಸದನವನ್ನು ಶೋಷಿತ ವರ್ಗದ ಜನರು ವಿರೋಧಿಸಿದ್ದರು. ಏಕೆಂದರೆ ಮಾಂಟೆಗ್ಯೂ ಚೆಲಮ್ಸ್ ಫೋರ್ಡ್ಸ್ ಸುಧಾರಣಾ ವರದಿಯು ಕೂಡ ಇದು ಅನಗತ್ಯ ಎಂದು ಹೇಳಿತ್ತು. ಸೈಮನ್ ಸಮಿತಿಯ ವರದಿಯು ಕೂಡ ಇದನ್ನು ಶಿಫಾರಸ್ಸು ಮಾಡಿರಲಿಲ್ಲ. ಭಾರತದಾದ್ಯಂತ ಇರುವಂತಹ ಎಲ್ಲಾ ರಾಜಕೀಯ ಸಂಘ ಸಂಸ್ಥೆಗಳೂ ಇದನ್ನು ಖಂಡಿಸಿದ್ದವು. ಇನ್ನು ಶೋಷಿತ ವರ್ಗದ ಜನರ ಅಭಿಪ್ರಾಯದಲ್ಲಿ ಇದು ಪ್ರತಿಗಾಮಿ ಹೆಜ್ಜೆ ಮತ್ತು ಇದು ದೇಶದ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಲಿದೆ.

### ರಚನೆ

ಇನ್ನು ಶೋಷಿತ ವರ್ಗದ ಜನರು ಈ ಎರಡನೆಯ ಸಭೆಯನ್ನು ವಿರೋಧಿಸುತ್ತಿರುವುದಕ್ಕೆ ಎರಡನೆಯ ಕಾರಣವೆಂದರೆ ಇದರ ರಚನೆ. ಕೆಲ ಪ್ರಾಂತ್ಯಗಳಲ್ಲಿ ಈಗಾಗಲೇ ಈ ಎರಡನೆಯ ಸದನಗಳ ರಚನೆಯಾಗಿವೆಯಾದರೂ ಅವುಗಳಲ್ಲಿ ಶೋಷಿತ ವರ್ಗದವರಿಗೆಂದು ಸ್ಥಾನಗಳು ಮೀಸಲಾಗಿಡಲಾಗಿದೆಯೆ? ಈ ಎರಡನೆಯ ಸದನಗಳಲ್ಲಿ ಮುಸಲ್ಮಾನರಿಗೆ, ಯುರೋಪಿಯನ್ನರಿಗೆ ಹಾಗು ಭಾರತದಲ್ಲಿ ಇರುವ ಕ್ರೈಸ್ತರಿಗೆ ವಿಶೇಷ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಆದರೆ ಯಾವುದೇ ಪ್ರಾಂತದಲ್ಲಿಯೂ ಶೋಷಿತ ವರ್ಗದವರಿಗೆಂದು ಮೀಸಲಾತಿಯನ್ನು ನೀಡಲಾಗಿಲ್ಲ. ಬೊಂಬಾಯಿ, ಮದರಾಸು ಹಾಗು ಇತರ ಪ್ರಾಂತಗಳಲ್ಲಿ ಇರುವ ಶೋಷಿತ ವರ್ಗದವರು ಹಿಂದೂಗಳ ಎದುರು ಚುನಾವಣೆಗೆ ನಿಂತು ಸಾಮಾನ್ಯ ಕ್ಷೇತ್ರಗಳಲ್ಲಿ ಗೆಲ್ಲುವುದರಿಂದ ಮಾತ್ರ ಈ ಸಭೆಯಲ್ಲಿ ಸ್ಥಾನ ಪಡೆಯಲು ಸಾಧ್ಯ.

ಒಂದು ವೇಳೆ ಮೇಲ್ವರ್ಗದ ಹಿಂದೂಗಳ ಎದುರು ಸ್ಪರ್ಧಿಸಿ ಅಸ್ಪೃಶ್ಯರು ಚುನಾವಣೆಯಲ್ಲಿ ಗೆಲ್ಲುವಷ್ಟು ಸಮರ್ಥರಾಗಿದ್ದಿದ್ದರೆ ಪೂನ ಒಪ್ಪಂದದ ಅಗತ್ಯವೇ ಇರುತ್ತಿರಲಿಲ್ಲ. ಆದ್ದರಿಂದ ಈ ಪ್ರಾಂತಗಳ ಎರಡನೆಯ ಸದನದಲ್ಲಿ ಶೋಷಿತ ವರ್ಗದವರ ಪ್ರಾತಿನಿಧ್ಯವೇ ಇರುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಬೆಂಗಾಲ್ ಹಾಗು ಬಿಹಾರದಲ್ಲಿ ಈ ಸಂಖ್ಯೆಯು ನಿಗದಿ ಮಾಡಲ್ಪಟ್ಟಿದೆ. ೬೫ ಸ್ಥಾನಗಳಲ್ಲಿ ೨೭ ಸ್ಥಾನಗಳು ಬಂಗಾಳದಲ್ಲಿ ಹಾಗು ೩೦ ಸ್ಥಾನಗಳಲ್ಲಿ ೧೨ ಸ್ಥಾನಗಳು ಬಿಹಾರದಲ್ಲಿ ಶೋಷಿತ ವರ್ಗದವರಿಗೆಂದು ಮೀಸಲಿರಿಸಲಾಗಿದೆ. ಇಲ್ಲಿ ಪ್ರಾಂತೀಯ ಕೆಳಮನೆಯ ಸದಸ್ಯರ ವರ್ಗಾಯಿಸಲ್ಪಡಬಹುದಾದ ಮತಗಳಿಂದ ಶೋಷಿತರು ಆಯ್ಕೆಯಾಗಬಹುದಾಗಿದೆ.

### ಸಾಕಷ್ಟು ಇರದ ಸ್ಥಾನಗಳು

ಇದರಿಂದಾಗಿ ಎರಡನೆಯ ಸಭೆಯಲ್ಲಿ ಸಾಕಷ್ಟು ಸ್ಥಾನಗಳು ಪಡೆಯಲು ಶೋಷಿತ ವರ್ಗಗಳಿಗೆ ಅವಕಾಶ ಕಲ್ಪಿಸಿದಂತೆ ಆಗಿದೆ ಎಂಬಂತೆ ಭಾಸವಾಗುತ್ತದೆ. ಆದರೆ ವಾಸ್ತವ ಸ್ಥಿತಿಯನ್ನು ಸ್ವಲ್ಪ ಹತ್ತಿರದಿಂದ ಗಮನಿಸಿದರೆ, ಬಿಹಾರದಲ್ಲಿ ಇವರಿಗೆ ಅಗತ್ಯ ಇರುವಷ್ಟು ಸ್ಥಾನಗಳು ಸಿಕ್ಕಿಯೇ ಇಲ್ಲ. ಏಕೆಂದರೆ ೧೫೨ ಸ್ಥಾನಗಳಲ್ಲಿ ಕೇವಲ ೧೫ ಸ್ಥಾನಗಳನ್ನು ಮಾತ್ರವೇ ಶೋಷಿತ ವರ್ಗದ ಜನರಿಗೆ ಎಂದು ಮೀಸಲಿರಿಸಲಾಗಿದೆ. ಇನ್ನು ಬಂಗಾಳದಲ್ಲಿ ೨೫೦ ಸ್ಥಾನಗಳಲ್ಲಿ ಕೇವಲ ೩೦ ಸ್ಥಾನಗಳು ಮಾತ್ರವೇ ಇವರಿಗೆ ದೊರೆತಿದೆ. ಇದು ಯಾವ ರೀತಿಯಿಂದಲೂ ಸಾಕಾಗುವಷ್ಟು ಅಲ್ಲವೇ ಅಲ್ಲ.

ಹಲವು ಪ್ರಾಂತಗಳಲ್ಲಿ ಇವರಿಗೆ ಸ್ಥಾನಗಳು ದೊರಕದೆ ಇರುವುದು ಮಾತ್ರ ಅಲ್ಲ, ಅವರು ಚುನಾವಣೆಯಲ್ಲಿ ಯಾವುದೇ ರೀತಿಯ ಪ್ರಭಾವವನ್ನೂ ಬೀರಲಾರರು.

### ಮೀಸಲು ಸ್ಥಾನಗಳ ಅಗತ್ಯ

ಶೋಷಿತವರ್ಗಗಳವರಿಗೆ ಸ್ಥಾನಗಳನ್ನು ಮೀಸಲಿರಿಸುವ ಬಗೆಗಿನ ತನ್ನ ಧೋರಣೆಯಿಂದ ಉಂಟಾಗಬಹುದಾದ ಪರಿಣಾಮಗಳನ್ನು ಜಂಟಿ ಸಂಸದೀಯ ಸಮಿತಿಯು ಪರಿಗಣಿಸಿದ ಹಾಗೆ ಕಾಣುವುದಿಲ್ಲ. ಮತಾಧಿಕಾರದ ಬಗ್ಗೆ ವಿವಿಧ ಪ್ರಸ್ತಾಪಗಳನ್ನು ನೀಡುವಾಗ, ಈ ಸಮಿತಿಯು ಈ ಕೆಳಗಿನಂತೆ ಹೇಳಿಕೆ ನೀಡಿತ್ತು. "ಮೇಲೆ ಹೇಳಿರುವ ಅರ್ಹತೆಗಳು ಎಲ್ಲಾ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ. ಆದರೆ ಸ್ತ್ರೀಯರಿಗೆ ಹಾಗು ಶೋಷಿತ ವರ್ಗಗಳ ಜನರಿಗೆ ಸಂಬಂಧಿಸಿದಂತೆ ಅರ್ಹತೆಯ ವಿಶೇಷ ಪಟ್ಟಿಯನ್ನು ತಯಾರು ಮಾಡುವ ಅಗತ್ಯ ಕಂಡುಬರಬಹುದು. ಈ ರೀತಿಯ ವಿಶೇಷ ಅರ್ಹತೆಯ ಅಗತ್ಯವಿದೆ ಎಂಬುದರಲ್ಲಿ ಯಾವುದೇ ಸಂದೇಹವೂ ಉಳಿದಿಲ್ಲ. ಆದರೆ ನಾನು ಹೇಳುವುದೆಂದರೆ ಶೋಷಿತ ವರ್ಗಗಳ ಅಭ್ಯರ್ಥಿಗಳಿಗೆ ಬೇರೆಯ ಅರ್ಹತಾ ಪಟ್ಟಿ ಮಾಡಿ ಮತದಾರ ಅರ್ಹತೆಯನ್ನು ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯವಾಗುವಂತೆ ಮಾಡಿದರೆ ಅದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಅವರಿಗೆ ಕೆಲ ಸ್ಥಾನಗಳನ್ನಾದರೂ ಮೀಸಲು ಇರಿಸದೇ ಇದ್ದರೆ. ಅಂತೆಯೇ ಶೋಷಿತವರ್ಗದ ಅಭ್ಯರ್ಥಿಗಳಿಗೆ ವಿಶೇಷ ಅರ್ಹತಾ ಪಟ್ಟಿಯ ನೆರವಿನಿಂದ ಅವರು ಚುನಾವಣೆ ಗೆಲ್ಲಲು ಸಾಧ್ಯವಿಲ್ಲ.

ಇನ್ನು ಕೇಂದ್ರದ ಮೇಲ್ಮನೆಯಲ್ಲಿ ಶೋಷಿತ ವರ್ಗಗಳ ಜನರಿಗಾಗಿ ಇದ್ದಂತಹ ಮೀಸಲಾತಿಯು ಕೂಡ ಸಂಪೂರ್ಣವಾಗಿ ಬದಲಾವಣೆಗೊಂಡು ಶೋಷಿತರಿಗೆ ಹಾನಿಯಾಗುವಂತೆ ಇದೆ. ಈ ಮೊದಲು ಇದ್ದಂತಹ ಶ್ವೇತಪತ್ರದಲ್ಲಿನ ಪ್ರಸ್ತಾಪಗಳ ಅನುಸಾರ ಕೇಂದ್ರದ ಮೇಲ್ಮನೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆಮಾಡಬೇಕಾದವರು ಪ್ರಾಂತಗಳ ಕೆಳಮನೆಯ ಸದಸ್ಯರು ಮತ್ತು ಅವರ ಮತಗಳು ಅವರು ಪ್ರತಿನಿಧಿಸುವ ಜನಗಳ ಅನುಪಾತದಲ್ಲಿ ಮೌಲ್ಯಗಳನ್ನು ಪಡೆದುಕೊಳ್ಳುತ್ತಿದ್ದವು ಮತ್ತು ಇದರಲ್ಲಿ ಮತವರ್ಗಾವಣೆಗೆ ಅವಕಾಶ ಕೂಡ ಇತ್ತು. ಕೆಳಮನೆಯಲ್ಲಿ ಈ ಪದ್ಧತಿಯನ್ನು ಅನುಸರಿಸುತ್ತಿದ್ದಾಗ ಸಾಕಷ್ಟು ಶೋಷಿತ ವರ್ಗದ ಪ್ರತಿನಿಧಿಗಳು ಕೂಡ ಇದ್ದರು. ಎಂಟು ಅಥವಾ ಒಂಭತ್ತು ಪ್ರತಿನಿಧಿಗಳನ್ನು ಅವರು ಚುನಾಯಿಸಬಹುದಿತ್ತು. ಈಗ ಜಂಟಿ ಸಂವಿಧಾನ ಸಮಿತಿಯ ಸಲಹೆಯ ಪ್ರಕಾರ ಈ ಅವಕಾಶವು ಸಂಪೂರ್ಣವಾಗಿ ನಿರರ್ಥಕವಾಗಿದೆ.

### ಮತದಾರರ ಕ್ಷೇತ್ರಗಳು

ನಾನಾಗಲೇ ಹೇಳಿದಂತೆ, ದ್ವಿಸದನಗಳು ಅಸ್ತಿತ್ವದಲ್ಲಿರುವ ಪ್ರಾಂತಗಳಲ್ಲಿ, ಕೇಂದ್ರದ ಮೇಲ್ಮನೆಗೆ

ನಡೆಯುವ ಚುನಾವಣೆಗಳ ಮತದಾರಕ್ಷೇತ್ರವಾಗಿರುವ ಎರಡನೆಯ ಸದನದಲ್ಲಿ ಶೋಷಿತ ವರ್ಗಗಳವರಿಗೆ ಪ್ರಾತಿನಿಧ್ಯವಿಲ್ಲ. ಇನ್ನು ಏಕಸದನಗಳಿರುವ ಪ್ರಾಂತಗಳ ವಿಷಯವನ್ನು ವಿಶ್ಲೇಷಿಸಿದರೆ, ಅಲ್ಲಿ ಸಿಖ್ಖರಿಗೆ ಮತ್ತು ಮುಸ್ಲಿಮರಿಗೆ ಪ್ರಾತಿನಿಧ್ಯವಿದ್ದರೂ ಶೋಷಿತವರ್ಗಗಳವರಿಗೆ ವಿಶೇಷ ಮತದಾರಕ್ಷೇತ್ರಗಳಿಲ್ಲ, ಅಥವಾ ಭಾರತೀಯ ಕ್ರೈಸ್ತರಿಗೆ, ಆಂಗ್ಲೋ–ಇಂಡಿಯನ್ನರಿಗೆ ಮತ್ತು ಯೂರೋಪಿಯನ್ನರಿಗೆ ನೀಡಿರುವ ವಿಶೇಷ ಅವಕಾಶಗಳನ್ನೂ ಶೋಷಿತವರ್ಗಗಳವರಿಗೆ ನೀಡಿಲ್ಲ.

ಇನ್ನು ಏಕಸದನದ ವಿಧಾನ ಮಂಡಲಗಳು ಇರುವ ಜಿಲ್ಲೆಯ ಚುನಾವಣಾ ಕ್ಷೇತ್ರಗಳ ವಿಷಯಕ್ಕೆ ಬಂದರೆ ಸಮಿತಿಯು ಈ ರೀತಿಯ ವರದಿಯನ್ನು ನೀಡಿದೆ. “ಸಾಮಾನ್ಯ ಸ್ಥಾನಗಳಿಗಾಗಿ ಶೋಷಿತ ವರ್ಗದ ಅಭ್ಯರ್ಥಿಗಳಿಗೆ ವಿಶೇಷವಾದ ಪ್ರಾತಿನಿಧ್ಯ ಕಲ್ಪಿಸಬೇಕು ಎಂದಾದರೆ ಕೇಂದ್ರಿಯ ಚುನಾವಣಾಗಣಗಳನ್ನು ಕೂಡ ಗಮನದಲ್ಲಿ ಇರಿಸಿಕೊಂಡು ಈ ನಿರ್ಧಾರ ಕೈಗೊಳ್ಳಬೇಕಿದೆ”

ಇನ್ನು ಕೇಂದ್ರೀಯ ಪ್ರಾಂತಗಳಲ್ಲಿ ಶೋಷಿತ ವರ್ಗದ ಅಭ್ಯರ್ಥಿಗಳಿಗೆ ವಿಶೇಷ ಪ್ರಾತಿನಿಧ್ಯ ಕಲ್ಪಿಸಬೇಕು ಎನ್ನುವುದಾದರೆ, ಏಕ ಸದನ ವಿಧಾನ ಮಂಡಲವಿರುವ ಇತರ ಪ್ರಾಂತಗಳಲ್ಲಿ ಇದರ ಆವಶ್ಯಕತೆ ಏಕಿಲ್ಲ? ಏಕ ಸದನದ ವಿಧಾನ ಮಂಡಲದಲ್ಲಿ ಇವರ ಅಭ್ಯರ್ಥಿಗಳಿಗೆ ವಿಶೇಷ ಪ್ರಾತಿನಿಧ್ಯದ ಅಗತ್ಯ ಇದೆ ಎಂದಾದರೆ ಎರಡು ಸದನಗಳಿರುವ ವಿಧಾನಮಂಡಲದಲ್ಲಿ ಏಕಿಲ್ಲ? ಶೋಷಿತ ವರ್ಗದವರ ಸ್ಥಿತಿ ಇಡೀ ದೇಶದಾದ್ಯಂತ ಅತ್ಯಂತ ಹೀನಾಯವಾಗಿದೆ. ಕೇಂದ್ರೀಯ ಪ್ರಾಂತಗಳಲ್ಲಿ ಮಾತ್ರ ಇವರ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ ಎಂದು ಹೇಳುವಂತೆ ಖಂಡಿತವಾಗಿಯೂ ಇಲ್ಲ.

## ಇವರ ಮೂಲಭೂತ ಹಿತಾಸಕ್ತಿಗೆ ವಿರುದ್ಧವಾಗಿ

ಶೋಷಿತವರ್ಗಗಳವರಿಗೆ ಈ ರೀತಿಯ ವಿಶೇಷ ಪ್ರಾತಿನಿಧ್ಯವನ್ನು ಕಲ್ಪಿಸಿಕೊಡದೇ ಜಂಟಿ ಸಂಸತ್ತಿನ ಸಮಿತಿಯು ಅವರ ಮೂಲಭೂತ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡಿದೆಯೇ? ಒಂದು ವಿಷಯವನ್ನು ನಾನು ಮಹಾಪ್ರಭುಗಳ ಸರಕಾರದ ಗಮನಕ್ಕೆ ತರಬಯಸುವೆ. ಅದೇನೆಂದರೆ, ಭಾರತೀಯರಿಗೆ ಬ್ರಿಟಿಷರಿಂದ ಅಧಿಕಾರ ಹಸ್ತಾಂತರಿಸಲು ನಾನು ಒಂದು ಷರತ್ತಿನ ಮೇಲೆ ಒಪ್ಪಿಗೆ ಸೂಚಿಸಿದ್ದೆ. ಅದೇನೆಂದರೆ ಹೊಸ ಸಂವಿಧಾನದಲ್ಲಿ ಶೋಷಿತ ವರ್ಗದ ಜನರಿಗೆ ವಿಶೇಷ ಪ್ರಾತಿನಿಧ್ಯ ಕಲ್ಪಿಸಬೇಕು ಎಂಬುದು. ಇದನ್ನು ದುಂಡು ಮೇಜಿನ ಸಮಾವೇಶಕ್ಕೆ ನಾನು ಪ್ರತಿನಿಧಿಯಾಗಿ ಅಲ್ಲಿಗೆ ಹೋಗಿದ್ದಾಗ ಅತ್ಯಂತ ಸ್ಪಷ್ಟವಾಗಿ ಹೇಳಿದ್ದೆ. ಆದ್ದರಿಂದ ಈಗ ಮೇಲ್ಮನೆಯಲ್ಲಿಯೇ ಆಗಲೀ ಕೆಳಮನೆಯಲ್ಲಿಯೇ ಆಗಲೀ ಅವರಿಗೆ ವಿಶೇಷ ಪ್ರಾತಿನಿಧ್ಯವನ್ನು ನೀಡದೇ ಇರುವುದರಿಂದ ಅವರ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗುವಂತೆ ಮಾಡಿರುವುದು ಎಲ್ಲರಿಗೂ ತಿಳಿದಂತಹ ವಿಷಯವಾಗಿದೆ.

ಇನ್ನು ಪ್ರಧಾನ ಮಂತ್ರಿಯವರು ಶೋಷಿತ ವರ್ಗಗಳ ಜನರ ಸಮಸ್ಯೆಯನ್ನು ಅರ್ಥಮಾಡಿಕೊಂಡು ಸಮಸ್ಯೆಗಳ ನಿವಾರಣೆಗೆ ಯತ್ನಿಸಿದ್ದರೂ ಸಹ, ಅವರ ಭಾವನೆಗಳನ್ನೆಲ್ಲಾ ಇಲ್ಲಿ ಕಡೆಗಣಿಸಲಾಗಿದೆ. ಶೋಷಿತ ವರ್ಗದ ಜನರು ಕೂಡ ಈ ಪ್ರಧಾನ ಮಂತ್ರಿಯವರ ಮೇಲೆ ತಮ್ಮ ಭರವಸೆಯನ್ನು ಇರಿಸಿದ್ದರು. ಆದರೆ ಜಂಟಿ ಸಂಸತ್ತು ಸಮಿತಿಯು ಈ ಪ್ರಧಾನ ಮಂತ್ರಿಯವರ ಪ್ರಸ್ತಾಪಗಳನ್ನು ಕಡೆಗಣಿಸಿದೆ. ಇದರ ಪರಿಣಾಮ ಎಂದರೆ ಮೇಲ್ಮನೆಯಲ್ಲಿ ಶೋಷಿತ ವರ್ಗದವರಿಗೆ ಪ್ರಾತಿನಿಧ್ಯ ದೊರೆಯದೇ ಅವರ ಹಿತಾಸಕ್ತಿಗೇ ಧಕ್ಕೆಯುಂಟಾಗಿದೆ. ಆದ್ದರಿಂದ ಇವರು ನೀಡುತ್ತಿರುವಂತಹ ಯಾವುದೇ ಪ್ರಸ್ತಾಪಗಳಿಗೂ ಶೋಷಿತ ವರ್ಗದ ಜನರ ಬೆಂಬಲ ದೊರೆಯುವುದು ಸಾಧ್ಯವೇ ಇಲ್ಲ. ಆದ್ದರಿಂದ ಜಂಟಿ ಸಂಸತ್ತು ಸಮಿತಿಯು

ನೀಡಿರುವ ಎಲ್ಲಾ ಪ್ರಸ್ತಾಪಗಳನ್ನು ಮಹಾಪ್ರಭುಗಳವರು ಮತ್ತೊಮ್ಮೆ ಪರಿಶೀಲಿಸಬೇಕು ಎಂದು ಕೇಳಿಕೊಳ್ಳುತ್ತೇವೆ. ಈ ಮೂಲಕ ಶೋಷಿತರಿಗೆ ಎಲ್ಲಾ ಸದನಗಳಲ್ಲಿಯೂ ಪ್ರಾತಿನಿಧ್ಯ ಕಲ್ಪಿಸಿಕೊಡಬೇಕು ಎಂದು ಮಹಾಪ್ರಭುಗಳ ಸರಕಾರವನ್ನು ಕೋರುತ್ತೇನೆ. ಆದರೆ ಒಂದು ವೇಳೆ ಮೇಲಿನ ಪ್ರಸ್ತಾಪಗಳಲ್ಲಿ ಯಾವುದೇ ಬದಲಾವಣೆಯು ಕಾಣದೇ ಹೋದರೆ ಈ ಪ್ರಸ್ತಾಪಗಳಿಗೆ ಶೋಷಿತ ವರ್ಗದ ಜನರ ಬೆಂಬಲ ದೊರೆಯುವುದಿಲ್ಲ ಎಂದು ಅತ್ಯಂತ ಖೇದದಿಂದ ತಿಳಿಸಬಯಸುತ್ತೇನೆ.

* * * * *

## ೧೦
## ಜಾತಿಗೆ ಸ್ಮೃತಿಯ ಆಧಾರವನ್ನು ತೆಗೆದು ಹಾಕಿರಿ

ನಾಸಿಕ್, ನವೆಂಬರ್ ೨೮

"ಮತಾಧಿಕಾರದ ಅರ್ಹತೆಯನ್ನು ಕಡಿಮೆ ಮಾಡಿರುವುದರಿಂದ ಹಿಂದುಗಳು ಹೊಸ ಸಂವಿಧಾನದಲ್ಲಿ ಹೆಚ್ಚಿನ ಅಧಿಕಾರವನ್ನು ಪಡೆಯಲಿದ್ದಾರೆ. ಅವರಿಗೆ ಸಾಮಾಜಿಕ ಬದಲಾವಣೆಯಲ್ಲಿ ಯಾವುದೇ ಆಸಕ್ತಿ ಇಲ್ಲ. ಆದ್ದರಿಂದ ಇದೀಗ ಜಾರಿಯಲ್ಲಿ ಇರುವ ಪದ್ಧತಿಯನ್ನು ಬದಲಿಸಲು ಅವರು ಯಾವುದೇ ತೆರನಾದ ಆಸಕ್ತಿ ತೋರುವುದಿಲ್ಲ. ನನ್ನ ದೂರು ಇರುವುದು ಇಂತಹ ಮನಸ್ಥಿತಿಯ ಜನರ ವಿರುದ್ಧವೇ ಹೊರತು ಸಮಾಜ ಸುಧಾರಕರ ವಿರುದ್ಧ ಅಲ್ಲ. ಅಸ್ಪೃಶ್ಯತೆಯನ್ನು ನಿಷೇಧಗೊಳಿಸುವುದಾಗಿ ಹೇಳಿಕೆ ನೀಡಿ ಚುನಾವಣೆಯನ್ನು ಎದುರಿಸಿದ ಮಾತ್ರಕ್ಕೆ, ಕಾಂಗ್ರೆಸ್ ಅಭ್ಯರ್ಥಿಗಳು ಈ ಚುನಾವಣೆಯಲ್ಲಿ ಗೆಲ್ಲುವುದು ಸಾಧ್ಯವಿಲ್ಲ. ಈ ರೀತಿಯ ವಾಗ್ದಾನವನ್ನು ನೀಡಿ ಚುನಾವಣೆ ಗೆಲ್ಲಿರಿ ಎಂದು ನಾನು ಅವರಿಗೆ ಸಾರ್ವಜನಿಕವಾಗಿ ಸವಾಲನ್ನು ಒಡ್ಡುತ್ತೇನೆ."

ಈ ಮೇಲಿನ ವಾಕ್ಯಗಳು ಅಂಬೇಡ್ಕರ್ ಅವರು ನೀಡಿದ್ದ ಸಂದರ್ಶನವೊಂದರ ತಾತ್ಪರ್ಯ. ೧೯೩೫ರ ಅಕ್ಟೋಬರ್ ೨೬ ರಂದು ಆಧುನಿಕ ದೃಷ್ಟಿಕೋನದ ಹಿಂದುಗಳ ಸಮಾವೇಶದಲ್ಲಿ ಅವರು ಈ ಮೇಲಿನಂತೆ ಹೇಳಿದ್ದರು.

ನಾಸಿಕ್‌ನ ಆಧುನಿಕ ದೃಷ್ಟಿಕೋನದ ಹಿಂದೂಗಳ ಸಂಘವು ಈ ಸಂದರ್ಶನದ ಅಧಿಕೃತ ಪಾಠವನ್ನು ಪ್ರಕಟಿಸಿದೆ.

ಐವರು ಜನ ಸದಸ್ಯರಿದ್ದ ಈ ಸಮಿತಿಯಲ್ಲಿ ಶ್ರೀ ಆರ್.ಜಿ. ಪ್ರಧಾನ್ (ಮಾಜಿ ಸದಸ್ಯರು, ವಿಧಾನ ಮಂಡಲ) ಇವರು ಮುಂದಾಳತ್ವವನ್ನು ವಹಿಸಿಕೊಂಡಿದ್ದರು. ಇವರು ನವೆಂಬರ್ ೧೦ ರಂದು ಅಂಬೇಡ್ಕರ್ ಅವರ ನಿವಾಸಕ್ಕೆ, ಅವರ ಭೇಟಿಗೆಂದು ತೆರಳಿದ್ದರು, ಈ ಸಂದರ್ಶನವು ಅತ್ಯಂತ ಸೌಹಾರ್ದಯುತ ಸ್ನೇಹಮಯ ಹಾಗು ನೇರವಾಗಿತ್ತು ಹಾಗು ೩ ಘಂಟೆಗಳ ಕಾಲ ನಡೆಯಿತು. ಡಾ॥ ಕುರ್ತಕೋಟಿ (ಶ್ರೀ ಶಂಕರಾಚಾರ್ಯ) ಅವರ ಅಧ್ಯಕ್ಷತೆಯಲ್ಲಿ ನಾಸಿಕದಲ್ಲಿ ನಡೆದ ನಾಸಿಕ್ ಹಿಂದೂ ಪ್ರಗತಿಪರರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಮುಂದೆ ಇಟ್ಟಿತು.

A) ಸಾರ್ವಜನಿಕ ದೇವಾಲಯಗಳು, ಸಾರ್ವಜನಿಕ ಸ್ಥಳಗಳು, ತೀರ್ಥಕ್ಷೇತ್ರಗಳು, ಪವಿತ್ರ ತೀರ್ಥಗಳು ಅತ್ಯಂತ ವಿವಾದಾತ್ಮಕ ವಿಷಯಗಳಾಗಿವೆ. ತತ್‌ಕ್ಷಣದಲ್ಲಿ ಯಾವುದೇ ರೀತಿಯ ಬದಲಾವಣೆಗಳನ್ನು

ಈ ವಿಷಯಕ್ಕೆ ಸಂಬಂಧಿಸಿದಂತೆ ತರುವುದು ಸಾಧ್ಯವಿರದ ಮಾತು. ಆದ್ದರಿಂದ ಮೇಲಿನ ವಿಷಯಗಳಲ್ಲಿ ಸಾರ್ವಜನಿಕರ ಅಭಿಪ್ರಾಯವು ಬದಲಾಗುವಂತೆ ಪ್ರಯತ್ನಿಸುವುದು ನಮ್ಮಿಂದ ಈ ಕೂಡಲೇ ಪ್ರಾರಂಭವಾಗಬೇಕಿರುವ ಕಾರ್ಯ.

B) ಜನರ ಹೃದಯ ಪರಿವರ್ತನೆಯನ್ನುಳಿದಂತೆ ಮೇಲಿನ ಪ್ರಶ್ನೆಯನ್ನು ಬಿಟ್ಟು, ಹರಿಜನರು ಇತರ ಹಿಂದೂಗಳು ವಾಸಿಸುವ ಸ್ಥಳಗಳಲ್ಲಿ ವಾಸಿಸಲು ಅನುಕೂಲ ಮಾಡಿಕೊಡಲು, ಈ ಮೂಲಕ ಅಸ್ಪೃಶ್ಯತೆಯನ್ನು ನಿವಾರಿಸಲು ಸಾರ್ವಜನಿಕ ಭಾವಿ, ಶಾಲೆ, ಧರ್ಮಶಾಲೆ, ಹೋಟಲ್‌ಗಳು ಮೊದಲಾದವುಗಳನ್ನು ಅಸ್ಪೃಶ್ಯರೂ ಬಳಸುವಂತೆ ಮಾಡಲು ನಾವೆಲ್ಲರೂ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ನಮ್ಮೆಲ್ಲಾ ಪ್ರಯತ್ನಗಳನ್ನೂ ತೊಡಗಿಸಬೇಕು.

ತಮಗೆ ಅಂಬೇಡ್ಕರ್ ಅವರ ಬಗ್ಗೆ ಸಮಿತಿಯ ಸದಸ್ಯರಿಗೆ ಇರುವ ಅಪಾರವಾದ ಪ್ರೀತಿ ಹಾಗು ಗೌರವವಿದೆ ಎಂದು ಶ್ರೀ ಪ್ರಧಾನ್ ಹೇಳಿದರು. ಡಾ. ಅಂಬೇಡ್ಕರ್ ಅವರು ಯಾವೋಲಾದಲ್ಲಿ ನೀಡಿದಂತಹ ಭಾಷಣದಿಂದ ಬಹಳ ಸಮಸ್ಯೆಗಳು ತಲೆದೋರಿವೆ. ಈ ನಿಟ್ಟಿನಲ್ಲಿ ಅವರ ಸಹಕಾರದೊಂದಿಗೆ ಹಾಗು ಸಮಾಲೋಚನೆಯೊಂದಿಗೆ ಈ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವುದಾಗಿ ತಿಳಿಸಿದರು.

ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನೇ ತ್ಯಜಿಸುವ ನಿಟ್ಟಿನಲ್ಲಿ ಚಿಂತಿಸಬಾರದು ಎಂದು ಶ್ರೀ ಪ್ರಧಾನ್ ಅವರು ಹೇಳಿದರು. ಶ್ರೀ ಶಂಕರಾಚಾರ್ಯ ಅವರು ಅಂಬೇಡ್ಕರ್ ಬಗ್ಗೆ ಅಪಾರವಾದ ಪ್ರೀತಿಯನ್ನು ಹೊಂದಿದ್ದಾರೆ ಎಂದು ಕೂಡ ಪ್ರಧಾನ್ ಅವರು ತಿಳಿಸಿದರು.

## ಜಾತಿಗೆ ಸ್ಮೃತಿಯನ್ನು ಆಧಾರವಾಗಿರಿಸಿಕೊಳ್ಳುವುದನ್ನು ನಿಲ್ಲಿಸಿ.

### ಡಾ. ಅಂಬೇಡ್ಕರ್ ಅವರ ಬೇಡಿಕೆ

ಈ ಸಂದರ್ಶನವು ಸುಮಾರು ೩ ಘಂಟೆಗಳ ಕಾಲ ನಿರಂತರವಾಗಿ ಜರುಗಿತು. ಅದರಲ್ಲಿ ಡಾ.ಅಂಬೇಡ್ಕರ್ ಅವರು ಹೀಗೆ ಹೇಳಿದರು. ಒಂದು ಧರ್ಮದ ತತ್ವಮೀಮಾಂಸೆ ಏನೇ ಇರಬಹುದು. ಆದರೆ ಆ ಧರ್ಮವು ಯಾವ ರೀತಿಯ ಆಚರಣೆಗಳನ್ನು ನಂಬಿಕೊಂಡಿದೆ ಹಾಗು ಆ ಧರ್ಮದ ಅನುಯಾಯಿಗಳೂ ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬುದು ಆ ಧರ್ಮದ ನೆಲೆಗಟ್ಟನ್ನು ತಿಳಿಸುತ್ತದೆ. ಹಿಂದೂ ಧರ್ಮವು "ಪರಿಪೂರ್ಣ ಬ್ರಹ್ಮ" ಎಂಬ ಕಲ್ಪನೆಯ ಮೇಲೆ ಅವಲಂಬಿತವಾಗಿದೆ. ಆದರೆ ಇಡೀ ಹಿಂದೂ ಆಚರಣೆಗಳು ಮನುಸ್ಮೃತಿಯ" ತತ್ವಗಳ ಮೇಲೆ ಅವಲಂಬಿತವಾಗಿವೆ. ಅದು ಕೇವಲ ಅಸಮಾನತೆಯನ್ನೇ ಬೋಧಿಸುತ್ತದೆ. ಕೆಲ ಜನರು ಧರ್ಮವು ಸಮಾಜಕ್ಕೆ ಆವಶ್ಯಕ ಎಂಬುದನ್ನು ಒಪ್ಪುವುದಿಲ್ಲ, ಅವರ ಅಭಿಪ್ರಾಯವನ್ನು ಪುರಸ್ಕರಿಸುವುದಿಲ್ಲ. ಸಮಾಜದಲ್ಲಿನ ಜೀವನ ಮತ್ತು ಆಚರಣೆಗಳೂ ಧರ್ಮದ ಅಡಿಪಾಯವಾಗಿರಬೇಕು. ಹಿಂದೂ ಸಮಾಜವು ತನ್ನ ವ್ಯವಸ್ಥೆಯ ತಳಪಾಯವಾಗಿ ಮನುಸ್ಮೃತಿಯು ಹೇಳುವ ಧರ್ಮವನ್ನು ಇಟ್ಟುಕೊಂಡಿದೆ. ವಸ್ತುಸ್ಥಿತಿಯು ಹೀಗಿರುವಾಗ ಸ್ಮೃತಿಯ ಆಧಾರವನ್ನು ಕಿತ್ತುಹಾಕಿ ಬೇರೊಂದು ಉತ್ತಮ ಅಡಿಪಾಯವನ್ನು ಹಾಕಿಕೊಳ್ಳದೆ ಇದ್ದರೆ, ಹಿಂದೂ ಸಮಾಜದಲ್ಲಿರುವ ಅಸಮಾನತೆಯನ್ನು ತೆಗೆದುಹಾಕುವುದು ಸಾಧ್ಯವಿಲ್ಲದ ಮಾತು. ಆದರೆ ಹಿಂದೂ ಸಮಾಜವು ಅಂತಹ ಒಂದು ಉತ್ತಮ ಅಡಿಪಾಯದ ಮೇಲೆ ನಿಲ್ಲುತ್ತದೆನ್ನುವ ನಂಬಿಕೆ ನನಗಿಲ್ಲ.

ಮುಂದೆ ಜಾರಿಗೆ ಬರುವ ಸಂವಿಧಾನದಲ್ಲಿ ಹರಿಜನರ ಸ್ಥಾನವನ್ನು ಕುರಿತು ಡಾ. ಅಂಬೇಡ್ಕರ್ ಅವರು 'ಹೊಸ ಸಂವಿಧಾನದಲ್ಲಿ ಶಾಸನಗಳ ಬಲದಿಂದ ಅಸ್ಪೃಶ್ಯತೆಯನ್ನು ನಿವಾರಿಸುವ ಮತ್ತು ಸಮಾಜ ಸುಧಾರಣೆಯನ್ನು ಮಾಡುವ ಪ್ರಯತ್ನಗಳು ಬಹಳ ದೂರ ಹೋಗುವುದಿಲ್ಲ' ಎಂದು ಹೇಳಿದರು.

ಇನ್ನು ಹಿಂದು ಧರ್ಮವನ್ನು ತ್ಯಜಿಸುತ್ತಿರುವುದನ್ನು ಕುರಿತು ಡಾ. ಅಂಬೇಡ್ಕರ್ ಅವರು ಈ ರೀತಿ ಘೋಷಿಸಿದರು. ವೈಯಕ್ತಿಕವಾಗಿ ನನ್ನ ಧರ್ಮವನ್ನು ಬದಲಿಸುವ ಬಗ್ಗೆ ನಾನು ನಿರ್ಧಾರ ಕೈಗೊಂಡಾಗಿದೆ. ಆದರೆ ಬೇರೆ ಯಾವ ಧರ್ಮಕ್ಕೆ ನಾನು ಸೇರ್ಪಡೆ ಆಗುತ್ತಿದ್ದೇನೆ ಎಂದು ಹೇಳುವ ಪರಿಸ್ಥಿತಿಯಲ್ಲಿ ಇಂದು ನಾನಿಲ್ಲ. ಆದರೆ ಈ ರೀತಿಯ ಧರ್ಮದ ಬದಲಾವಣೆಯನ್ನು ನಾನು ಯಾವುದೇ ವೈಯಕ್ತಿಕ ಲಾಭಕ್ಕಾಗಿ ಮಾಡುತ್ತಿಲ್ಲ. ಇದು ವ್ಯಕ್ತಿಗತ ಪ್ರಶ್ನೆಯೂ ಅಲ್ಲ; ನಾನು ನನ್ನೊಂದಿಗೆ ಇಡೀ ಅಸ್ಪೃಶ್ಯ ಸಮಾಜವನ್ನೇ ಕೊಂಡೊಯ್ಯುತ್ತಿದ್ದೇನೆ. ಏನೇ ಆದರೂ, ಬಹುಸಂಖ್ಯೆಯ ಅಸ್ಪೃಶ್ಯರನ್ನು ನನ್ನ ಜೊತೆ ಕೊಂಡೊಯ್ಯತ್ತೇನೆ. ಒಬ್ಬರು ಒಂದು ಧರ್ಮಕ್ಕೆ ಸೇರ್ಪಡೆ ಆಗುವುದು ಮತ್ತೊಬ್ಬರು ಮತ್ತೊಂದು ಧರ್ಮಕ್ಕೆ ಸೇರ್ಪಡೆ ಆಗುವುದು ನನಗೆ ಇಷ್ಟವಿಲ್ಲ. ಈ ರೀತಿ ಈ ಪಂಗಡವನ್ನು ವಿಭಜಿಸುವುದು ನನ್ನ ಆಶಯವೂ ಅಲ್ಲ. ನನ್ನ ಧರ್ಮದ ಹಿತಾಸಕ್ತಿಯ ದೃಷ್ಟಿಯಿಂದ ಒಗ್ಗಟ್ಟಾಗಿರುವುದು ಮತ್ತು ಬಲಶಾಲಿಯಾಗಿರುವ ಆ ಧರ್ಮಕ್ಕೆ ಸೇರ್ಪಡೆ ಆಗುವುದು ಅತ್ಯಂತ ಮುಖ್ಯ. ನನ್ನ ಈ ಧರ್ಮಾಂತರದ ಹೋರಾಟವು ಇಡೀ ಭಾರತಕ್ಕೆ ಅನ್ವಯಿಸಬೇಕು ಎಂಬುದೇ ನನ್ನ ಇಚ್ಛೆ. ಒಂದು ವೇಳೆ ನನ್ನ ಸಹ ಧರ್ಮಿಯರು ನನ್ನೊಂದಿಗೆ ಸೇರ್ಪಡೆಯಾಗದೇ ಹೋದರೆ, ನಾನೊಬ್ಬನೇ ಏಕಾಂಗಿಯಾಗಿ ಧರ್ಮವನ್ನು ಬದಲಿಸುವೆ. ಇದು ಇನ್ನೂ ೪–೫ ವರ್ಷಗಳಷ್ಟು ಕಾಲಾವಕಾಶ ತೆಗೆದುಕೊಳ್ಳಬಹುದು. ಈ ಸಮಯದಲ್ಲಿ ನೀವು ನಿಮಗೇನು ಇಷ್ಟ ಬರುತ್ತದೆಯೋ ಅದನ್ನು ಮಾಡಲು ಸ್ವತಂತ್ರರಾಗಿ ಇರುವಿರಿ. ಕಡೆಯ ನಿರ್ಧಾರ ಮಾಡುವ ಮುನ್ನ ನಿಮ್ಮ ಹೋರಾಟದ ಎಲ್ಲಾ ಅಂಶಗಳನ್ನು ಪರಿಗಣಿಸುತ್ತೇನೆ. ನಿಮ್ಮ ಎದುರಿಗೆ ಇರುವ ಕಾರ್ಯ ಬಹಳ ತ್ರಾಸದಾಯಕ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದನ್ನು ಆಚರಣೆಗೆ ತರಲು ಬಹಳ ಕಾಲ ಬೇಕು ಎನ್ನುವುದಾದರೆ ಅಷ್ಟೊಂದು ದಿನ ಕಾಯುವ ತಾಳ್ಮೆ ನಮಗಿಲ್ಲ."

## ಹೊಸ ಪಂಗಡ

ಡಾ. ಕುರ್ತುಕೋಟಿ ಅವರು ಅಂಬೇಡ್ಕರ್ ಅವರೆದುರು ಒಂದು ಪ್ರಸ್ತಾಪವನ್ನು ಇರಿಸಿದ್ದರು. ಅದೇನೆಂದರೆ ಹೊಸ ಪಂಗಡವೊಂದನ್ನು ಪ್ರಾರಂಭಿಸಿ ಅದನ್ನು ಅಸ್ಪೃಶ್ಯರಿಗೆ ಇತರರಂತೆ ಸಮಾನ ಅವಕಾಶಗಳನ್ನು ನೀಡುವುದು. ಆದರೆ ಇದಕ್ಕೆ ಪ್ರತಿಕ್ರಿಯಿಸುತ್ತಾ ಡಾ. ಅಂಬೇಡ್ಕರ್ ಅವರು ಈ ರೀತಿ ಹೇಳಿದರು. "ನಾನು ಯಾವುದೇ ಹೊಸ ಪಂಗಡವನ್ನು ಆರಂಭಿಸುವ ಜವಾಬ್ದಾರಿ ಹೊರುವುದಿಲ್ಲ. ಅಲ್ಲದೇ ನನ್ನ ಸಹ ಧರ್ಮೀಯರಿಗೆ ಈ ಹೊಸ ಪಂಗಡಕ್ಕೆ ಸೇರ್ಪಡೆ ಆಗುವಂತೆಯೂ ಹೇಳುವುದಿಲ್ಲ. ಡಾ.ಕುರ್ತುಕೋಟಿಯವರೇ ತಮಗೆ ಆಸಕ್ತಿಯಿದ್ದರೆ ಹೊಸ ಪಂಗಡವನ್ನು ಆರಂಭಿಸಲಿ, ಹಾಗು "ಸ್ಪೃಶ್ಯರು" ಅದಕ್ಕೆ ಸೇರ್ಪಡೆಯಾಗುವಂತೆ ಮಾಡಲಿ. ಅನಂತರ ನಾವು ಆ ಬಗ್ಗೆ ಚಿಂತಿಸೋಣ. ಒಂದು ವೇಳೆ ಈ ರೀತಿ ಹೊಸದಾಗಿ ಪಂಗಡ ಆರಂಭ ಆಯಿತೆಂದರೆ ಆ ಬಗ್ಗೆ ಹರಿಜನರು ಯಾವ ರೀತಿ ಚಿಂತಿಸುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಅದನ್ನು ಸೇರುವುದೋ ಇಲ್ಲವೋ ಎಂಬ ನಿರ್ಧಾರ ನಾವು ಅನಂತರ ತಿಳಿಸುತ್ತೇವೆ. ಆದರೆ ನಾವು ಸೇರ್ಪಡೆ ಆಗುವ ಧರ್ಮವು ಒಂದು ಜೀವಂತ ಧರ್ಮವಾಗಿರಬೇಕು.

ನಾವು "ಬೌದ್ಧ" ಧರ್ಮವನ್ನು ಸೇರ್ಪಡೆ ಆಗಲು ಕೆಲ ತೊಂದರೆಗಳು ಇವೆ. ಯಾವುದಾದರೂ

ಒಂದು ಬಲಿಷ್ಠ ಪಂಗಡಕ್ಕೆ ಹರಿಜನ ಸಮುದಾಯ ಸಂಪೂರ್ಣವಾಗಿ ಸೇರ್ಪಡೆ ಆಗಬೇಕು. ಆರ್ಯ ಸಮಾಜಕ್ಕೆ ಸೇರ್ಪಡೆ ಆಗಬಾರದು ಎಂಬ ನಿರ್ಧಾರವನ್ನು ಈಗಾಗಲೇ ಕೈಗೊಳ್ಳಲಾಗಿದೆ. ಇನ್ನು ಸಿಖ್ಖರ ಸಮುದಾಯಕ್ಕೆ ನಾವು ಸೇರ್ಪಡೆ ಆಗುವ ಸಾಧ್ಯತೆಯ ಬಗೆಗೆ ಯೋಚಿಸಬಹುದು.

"ಹರಿಜನ ಸೇವಕ ಸಂಘ'ದ ಬಗೆಗೆ ಹರಿಜನರ ಅಭಿಪ್ರಾಯವನ್ನು ಕುರಿತು ಹೇಳುತ್ತಾ ಡಾ. ಅಂಬೇಡ್ಕರ್ ಅವರು ಹರಿಜನ ಸೇವಕ ಸಂಘವು ಅಸ್ಪೃಶ್ಯತೆಯನ್ನು ನಿಷೇಧಿಸುವ ನಿಟ್ಟಿನಲ್ಲಿ ಹೆಚ್ಚಿನದೇನನ್ನೂ ಸಾಧಿಸಲಾರದು. ಕಾಂಗ್ರೆಸ್ ಪಕ್ಷದ ಅಂಗ ಸಂಸ್ಥೆಯಷ್ಟೇ ಅದು".

ಮುಂದುವರೆಯುತ್ತಾ ಡಾ. ಅಂಬೇಡ್ಕರ್ ಈ ರೀತಿ ಹೇಳಿದರು. "ಪ್ರಜಾಪ್ರಭುತ್ವವು ಭಾರತ ದೇಶಕ್ಕೆ ತಕ್ಕದಾದುದಲ್ಲ. ಜನಪ್ರಿಯ ಸರ್ಕಾರ ಈ ದೇಶಕ್ಕೆ ಒಗ್ಗುವುದಿಲ್ಲ. ಭಾರತಕ್ಕೆ ಅವಶ್ಯಕತೆ ಇರುವುದು ಕಮಾಲ್ ಪಾಷಾ ಅಥವಾ ಮುಸೋಲಿನಿಯಂತೆ ಒಬ್ಬ ಸರ್ವಾಧಿಕಾರಿ. ಶ್ರೀ ಗಾಂಧೀಯವರು ಇದೇ ರೀತಿಯ ಸರ್ವಾಧಿಕಾರಿ ಆಗುತ್ತಾರೆ ಎಂಬ ಭಾವನೆ ನನ್ನಲ್ಲಿತ್ತು. ಆದರೆ ನಾನೀಗ ನಿರಾಶೆ ಹೊಂದಿದ್ದೇನೆ. ನನ್ನ ದೂರು ಇರುವುದು ಗಾಂಧೀಯವರು ಸರ್ವಾಧಿಕಾರಿ ಆಗಲಿಲ್ಲ ಎಂದಲ್ಲ. ಅವರು ಸರ್ವಾಧಿಕಾರಿಯಲ್ಲ ಎಂಬುದು. ನಾನು ಕಮಲ್ ಪಾಷಾ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತೇನೆ. ಅವರು ತುರ್ಕಿಸ್ಥಾನವನ್ನು ಅತ್ಯಂತ ಬಲಿಷ್ಠ ರಾಷ್ಟ್ರವನ್ನಾಗಿಸಿದರು. ಯಾರದ್ದಾದರೂ ಧಾರ್ಮಿಕ ಭಾವನೆಗಳೊಂದಿಗೆ ಚೆಲ್ಲಾಟ ಆಡಲು ನಾವು ಸಾವಿರ ಬಾರಿ ಚಿಂತಿಸಬೇಕು ಎನ್ನುವುದಾರೆ ಅದು ಮುಸಲ್ಮಾನರದು. ಆದರೆ ಈ ಕಾರ್ಯವನ್ನೇ ಕಮಲ್ ಪಾಷಾ ಅವರು ಅತ್ಯಂತ ಯಶಸ್ವಿಯಾಗಿ ಮಾಡಿದ್ದಾರೆ. ಕಮಲ್ ಪಾಷಾನಂತಹ ಒಬ್ಬ ನಾಯಕ ಇರದ ಹೊರತು ಭಾರತಕ್ಕೆ ಮುಕ್ತಿಯಿಲ್ಲ. ಆದರೆ ಈಗಿರುವ ಪರಿಸ್ಥಿತಿಯಲ್ಲಿ ಸಾಮಾಜಿಕ ಹಾಗು ಧಾರ್ಮಿಕ ವಿಷಯಗಳಲ್ಲಿ ಈ ರೀತಿಯ ಸರ್ವಾಧಿಕಾರಿಯನ್ನು ಪಡೆಯುವುದು ಸಾಧ್ಯವಿಲ್ಲ. ಆದ್ದರಿಂದ ಭಾರತದ ಭವಿಷ್ಯ ಕುರಿತು ನನಗೆ ಬಹಳ ಚಿಂತೆಯಾಗಿದೆ.

## ಯುವ ಜನಾಂಗ

ಯುವಜನಾಂಗ ಹಾಗು ಹರಿಜನರ ದೃಷ್ಟಿಕೋನವನ್ನು ವಿವರಿಸುತ್ತಾ ಡಾ. ಅಂಬೇಡ್ಕರ್ ಅವರು ಈ ರೀತಿ ನುಡಿಯುತ್ತಾರೆ. 'ನನಗೆ ಇಂದಿನ ಯುವ ಜನಾಂಗದ ಬಗ್ಗೆ ಹೆಚ್ಚಿನ ಆಸೆ–ಆಕಾಂಕ್ಷೆಗಳಿಲ್ಲ. ಏಕೆಂದರೆ ಅವರು ಕೇವಲ ಮೋಜು ಮಸ್ತಿಯಲ್ಲಿ ನಿರತರಾಗಿದ್ದಾರೆ ಹಾಗು ಅವರಿಗೆ ಯಾವುದೇ ರೀತಿಯ ಸಿದ್ಧಾಂತಗಳಿಲ್ಲ. ಆದ್ದರಿಂದ ಈ ಜನಾಂಗವು ಯಾವುದೇ ರೀತಿಯ ಆದರ್ಶ ಪುರುಷರನ್ನು ಎಂದರೆ ರಾನಡೆ, ಗೋಖಲೆ, ತಿಲಕ್ ಮುಂತಾದ ಮಹಾಪುರುಷರನ್ನು ಸೃಷ್ಟಿಸುವುದು ಸಾಧ್ಯವಿಲ್ಲ. ಇದು ಕೂಡ ನನ್ನನ್ನು ಚಿಂತೆಗೆ ಈಡು ಮಾಡುತ್ತದೆ.

"ಇನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಅಸ್ಪೃಶ್ಯನಾಗಿ ಹುಟ್ಟಿರುವುದರಿಂದ, ನನ್ನ ಆದ್ಯ ಕರ್ತವ್ಯ ಎಂದರೆ ಅಸ್ಪೃಶ್ಯರ ಏಳಿಗೆಗೆ ಹೋರಾಡುವುದು. ಭಾರತದ ಏಳಿಗೆಗೆ ಹೋರಾಡುವುದು ನಂತರದ ಆದ್ಯತೆಯನ್ನು ಪಡೆಯುತ್ತದೆ. ನನ್ನ ಧರ್ಮದ ಚಿಂತನೆಯ ಅನುಸಾರ ನನ್ನಲ್ಲಿ ಧಾರ್ಮಿಕ ಭಾವನೆಗಳು ಅತ್ಯಂತ ಆಳವಾಗಿ ಬೇರೂರಿದೆ. ನನಗೆ ಹಿಂದೂ ಧರ್ಮದಲ್ಲಿ ಯಾವುದೇ ನಂಬಿಕೆ ಉಳಿದಿಲ್ಲ ಹಾಗು ಡಾಂಬಿಕತೆಯನ್ನು ಕಂಡರೆ ನನಗೆ ದ್ವೇಷ ಉಂಟಾಗುತ್ತದೆ. ಆದ್ದರಿಂದ ಹಿಂದೂ ಧರ್ಮವನ್ನು ತ್ಯಜಿಸಲು ನಿರ್ಧರಿಸಿದ್ದೇನೆ. ಆದರೆ ತತ್‌ಕ್ಷಣವೇ ಈ ನಿರ್ಧಾರವನ್ನು ನಾನು ಜಾರಿಗೆ ತರುವುದಿಲ್ಲ. ಏಕೆಂದರೆ ನಾನು ನನ್ನೊಂದಿಗೆ ನನ್ನ ಸಹಧರ್ಮೀಯರನ್ನು ಕೂಡ ಕರೆದುಕೊಂಡು ಹೋಗಬೇಕಿದೆ. ಹರಿಜನರು ಈಗಲೇ ನನ್ನೊಂದಿಗೆ ಹೆಜ್ಜೆ

ಹಾಕಲು ಸಿದ್ಧರಿಲ್ಲ. ಅವರು ಒಂದು ಸೂಕ್ತ ಅವಕಾಶವನ್ನು ಎದುರು ನೋಡುತ್ತಿದ್ದಾರೆ. ಅಷ್ಟರಲ್ಲಿ 'ಸ್ಪೃಶ್ಯರು' ನೀವು ಹಾಕಿಕೊಟ್ಟಿರುವ ಹೆಜ್ಜೆಯ ಗುರುತಿನಲ್ಲಿ ಸಾಗುವ ಪ್ರಯತ್ನ ಕೈಗೊಳ್ಳಬಹುದು".[೧]

* * * * *

## ೧೧
## ಶೋಷಿತ ವರ್ಗದ ಜನರ ಮತಾಂತರವನ್ನು ಹಿಂದೂಗಳು ಅಸಡ್ಡೆಯಿಂದ ಕಾಣಬಾರದು

ಮತಾಂತರವನ್ನು ಕುರಿತು ಡಾ. ಅಂಬೇಡ್ಕರ್ ಅವರು ಹಲವಾರು ಪ್ರಾಂತಗಳಲ್ಲಿ ಇದ್ದಂತಹ ತಮ್ಮ ಸಹವರ್ತಿಗಳನ್ನು ಸಂಪರ್ಕಿಸಿದ್ದರು. ಯಾವ ಮತಕ್ಕೆ ಸೇರ್ಪಡೆ ಆಗುವುದು ಸೂಕ್ತ ಎಂದು ಅವರ ಅಭಿಪ್ರಾಯವನ್ನು ಕೇಳುತ್ತಿದ್ದರು. ಇದೀಗ ಸಿಖ್ ಧರ್ಮಕ್ಕೆ ಸೇರ್ಪಡೆ ಅಗುವುದು ಎಂದು ಅವರು ನಿರ್ಧರಿಸಿದ್ದರು. ಇವರು ಸಿಖ್ ಧರ್ಮಕ್ಕೆ ಮತಾಂತರಗೊಳ್ಳುವ ಸಮಯದಲ್ಲಿ ಹಿಂದೂ ಸಭೆಯ ನಾಯಕರ ಬೆಂಬಲವನ್ನು ಪಡೆಯಬೇಕು ಎಂದು ಅಂಬೇಡ್ಕರ್ ಅವರ ಸ್ನೇಹಿತರು ಅವರಿಗೆ ಸಲಹೆ ನೀಡಿದರು. ಏಕೆಂದರೆ ಹಿಂದೂ ಸಭೆಯ ನಾಯಕರಿಗೆ ಸಿಖ್ ಧರ್ಮವು ಅನ್ಯ ಧರ್ಮ ಎಂಬ ಭಾವನೆಯೇನೂ ಇರಲಿಲ್ಲ. ಇದು ಹಿಂದೂ ಧರ್ಮದ ಒಡಹುಟ್ಟಿದ ಧರ್ಮ ಎಂಬಂತಿತ್ತು ಮತ್ತು ಎರಡೂ ಧರ್ಮಗಳ ನಡುವೆ ಅಂತರಧರ್ಮೀಯ ವಿವಾಹವು ಒಪ್ಪಿಕೊಳ್ಳಲ್ಪಟ್ಟಿತ್ತು. ಅಂತೆಯೇ ಹಿಂದೂ ಮಹಾಸಭೆಯ ಸದಸ್ಯರಲ್ಲಿ ಸಿಖ್ ಸದಸ್ಯರು ಕೂಡ ಇದ್ದರು.

ಅದರಂತೆ ಹಿಂದೂ ಮಹಾಸಭೆಯ ವಕ್ತಾರರಾಗಿದ್ದಂತಹ ಡಾ. ಮೂಂಜೆ ಅವರನ್ನು ಬೊಂಬಾಯಿಗೆ ಕರೆಸಿಕೊಳ್ಳಲಾಯಿತು. ೧೯೩೬ರ ಜೂನ್ ೧೮ರ, ರಾತ್ರಿ ೭.೩೦ರ ಸುಮಾರಿಗೆ ಇನ್ನು ಇಬ್ಬರು ಸ್ನೇಹಿತರ ಸಮ್ಮುಖದಲ್ಲಿ ಡಾ. ಅಂಬೇಡ್ಕರ್ ಅವರು ಡಾ. ಮೂಂಜೆ ಅವರೊಂದಿಗೆ ರಾಜಗೃಹದಲ್ಲಿ ಮಾತುಕತೆಯನ್ನು ನಡೆಸಿದರು. ಮಾರನೆಯ ದಿನ ಡಾ. ಅಂಬೇಡ್ಕರ್ ಅವರ ಅಭಿಪ್ರಾಯದ ಸಾರಾಂಶಕ್ಕೆ ಡಾ. ಮಾಂಜೆ ಅವರ ಒಪ್ಪಿಗೆ ಪಡೆಯಲಾಯಿತು.

**ಅಂಬೇಡ್ಕರ್ ಅವರು ನೀಡಿದ ಹೇಳಿಕೆ ಈ ಕೆಳಗಿನಂತಿದೆ:–**

ಶೋಷಿತ ವರ್ಗದ ಜನರಲ್ಲಿ ಪ್ರಚಾರವನ್ನು ಪಡೆಯುತ್ತಿರುವಂತಹ ಈ ಮತಾಂತರವನ್ನು ಹಿಂದೂಗಳು ಅಸಡ್ಡೆಯಿಂದ ಕಾಣುವುದು ಸರಿಯಿಲ್ಲ. ಶೋಷಿತ ವರ್ಗದ ಜನರು ಮತಾಂತರಗೊಳ್ಳದಂತೆ ತಡೆಯುವುದು ಹಿಂದೂ ಧರ್ಮದ ಹಿತದೃಷ್ಟಿಯಿಂದ ಅತ್ಯಂತ ಸೂಕ್ತವಾದ ಕ್ರಮ ಆಗಿರುತ್ತದೆ. ಇದು ಒಂದು ವೇಳೆ ಸಾಧ್ಯವಾಗದೇ ಹೋದರೆ, ಶೋಷಿತ ವರ್ಗದ ಜನರು ಮುಂದೆ ಯಾವ ಕ್ರಮವನ್ನು ಅನುಸರಿಸಲಿದ್ದಾರೆ ಎಂಬುದನ್ನು ಹಿಂದೂಗಳು ಗಮನಿಸುವುದು ಒಳಿತು. ಏಕೆಂದರೆ ಇವರ ಈ ನಡೆಯು ಭಾರತ ದೇಶದ ಭವಿಷ್ಯದ ಮೇಲೆ ಅಪಾರ ಪರಿಣಾಮ ಬೀರಲಿದೆ. ಒಂದು ವೇಳೆ ಇವರನ್ನು ಹಿಂದೂ ಧರ್ಮದಲ್ಲಿ ಉಳಿಸಿಕೊಳ್ಳಲು ಹಿಂದೂಗಳು ಯಶಸ್ವಿ ಆಗದೇ ಹೋದರೆ ಯಾವ ಧರ್ಮಕ್ಕೆ ಅವರು ಮತಾಂತರಗೊಂಡರೆ

---

೧. ದಿ ಟೈಂಸ್ ಆಫ್ ಇಂಡಿಯಾ
ದಿನಾಂಕ ೩೦ ನವೆಂಬರ್ ೧೯೩೫

ಹಿಂದೂ ಧರ್ಮಕ್ಕೆ ಹಾಗು ಈ ದೇಶಕ್ಕೆ ಅತ್ಯಂತ ಕಡಿಮೆ ಹಾನಿಯಾಗುವುದೋ, ಆ ಧರ್ಮಕ್ಕೆ ಅವರು ಮತಾಂತರ ಆಗುವಂತೆ ಮಾಡಬೇಕು.

ಒಂದು ಹೊಸ ಧರ್ಮವನ್ನು ಶೋಷಿತ ವರ್ಗವೇ ಹುಟ್ಟುಹಾಕುವ ಸಾಧ್ಯತೆಯಂತೂ ತೀರಾಕಡಿಮೆ. ಅಸ್ತಿತ್ವದಲ್ಲಿ ಇರುವ ಯಾವುದಾದರೂ ಧರ್ಮಕ್ಕೆ ಅವರು ಸೇರ್ಪಡೆ ಆಗುವುದು ಖಾತ್ರಿ. ಈ ರೀತಿಯ ಊಹೆಯೊಂದಿಗೇ ಹಿಂದೂಗಳು ಮುಂದುವರೆಯಬಹುದು. ಆದರೆ ಇಲ್ಲಿ ಎದುರಾಗುವ ಮೊದಲ ಪ್ರಶ್ನೆ ಎಂದರೆ ಶೋಷಿತವರ್ಗದವರು ಸೇರ್ಪಡೆಯಾಗಲು ನಿರ್ಧರಿಸಿರುವ ಧರ್ಮ ಯಾವುದು? ಯಾವುದರಿಂದ ಅವರಿಗೆ ಹೆಚ್ಚು ಉಪಯೋಗವಿದೆಯೋ ಅವರು ಆ ಧರ್ಮವನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬುದು ಸ್ಪಷ್ಟವಾಗಿರುತ್ತದೆ.

ಈತ ಶೋಷಿತ ವರ್ಗದ ಜನರ ಮುಂದಿರುವ ಆಯ್ಕೆಗಳು ೩. ಅವುಗಳೆಂದರೆ ೧) ಇಸ್ಲಾಂ ಧರ್ಮ ೨) ಕ್ರೈಸ್ತ ಧರ್ಮ ೩) ಸಿಖ್ ಧರ್ಮ. ಈ ಮೂರು ಧರ್ಮಗಳನ್ನು ಪರಸ್ಪರ ಹೋಲಿಸಿದರೆ ಶೋಷಿತ ವರ್ಗದ ಜನರಿಗೆ ಅಗತ್ಯ ಇರುವುದನ್ನೆಲ್ಲಾ ನೀಡುವುದು ಇಸ್ಲಾಂಧರ್ಮ. ಇನ್ನು ಆರ್ಥಿಕವಾಗಿ ಕೂಡ ಇಸ್ಲಾಂ ಧರ್ಮ ಅತ್ಯಂತ ಸುಭದ್ರವಾಗಿದೆ. ಸಾಮಾಜಿಕ ದೃಷ್ಟಿಯಿಂದ ನೋಡಿದರೆ ಮುಸಲ್ಮಾನರು ಭಾರತದಾದ್ಯಂತ ಹರಡಿಕೊಂಡಿದ್ದಾರೆ. ಪ್ರತಿಯೊಂದು ಪ್ರಾಂತದಲ್ಲಿಯೂ ಮಹಮದೀಯರು ಇದ್ದಾರೆ. ಅವರು ಹೊಸದಾಗಿ ತಮ್ಮ ಧರ್ಮಕ್ಕೆ ಸೇರ್ಪಡೆ ಆಗಿರುವ ಶೋಷಿತ ವರ್ಗದ ಜನರ ಬೇಕು ಬೇಡಗಳನ್ನು ಖುದ್ದಾಗಿ ಪರೀಕ್ಷಿಸಬಹುದು. ರಾಜಕೀಯವಾಗಿ ಶೋಷಿತ ವರ್ಗದ ಜನರು ತಾವು ಅಪೇಕ್ಷಿಸುತ್ತಿರುವ ಹಕ್ಕುಗಳನ್ನೆಲ್ಲಾ ಪಡೆದುಕೊಳ್ಳುತ್ತಾರೆ. ಇಸ್ಲಾಂ ಧರ್ಮಕ್ಕೆ ಸೇರ್ಪಡೆ ಆಗುವುದರಿಂದ ರಾಜಕೀಯ ಹಕ್ಕುಗಳನ್ನು ಇವರು ಕಳೆದುಕೊಳ್ಳುವುದಿಲ್ಲ. ಬದಲಾಗಿ, ಎಲ್ಲಾ ಹಕ್ಕುಗಳನ್ನೂ ಇವರು ಪಡೆಯುತ್ತಾರೆ. ಕ್ರೈಸ್ತ ಧರ್ಮವು ಕೂಡ ಇಷ್ಟೇ ಆಸಕ್ತಿಕರವಾಗಿದೆ. ಭಾರತೀಯ ಕ್ರೈಸ್ತರು ಮತಾಂತರಗೊಂಡವರಿಗೆ ಹಣ ಸಹಾಯ ಮಾಡಲು ಅಶಕ್ತರಾಗಿರಬಹುದು. ಆದರೆ ಇವರು ಮತಾಂತರ ಹೊಂದುತ್ತಾರೆ ಎಂಬುದು ತಿಳಿದುಬಂದರೆ ಅಮೇರಿಕಾ ಹಾಗು ಇಂಗ್ಲೆಂಡ್ ಮುಂತಾದ ಆರ್ಥಿಕ ಸದೃಢ ದೇಶಗಳು ಮುಂದೆ ಬಂದು ಅಗತ್ಯವಿರುವ ಹಣವನ್ನು ಪೂರೈಸುತ್ತವೆ. ಸಾಮಾಜಿಕವಾಗಿ ಇವರಿಗೆ ಸಹಾಯ ಮಾಡುವಷ್ಟು ಈ ಕ್ರೈಸ್ತ ಧರ್ಮ ಬಲಿಷ್ಠವಾಗಿಲ್ಲ. ಏಕೆಂದರೆ ಇವರ ಸಂಖ್ಯೆ ಈ ಸಮಾಜದಲ್ಲಿ ಬಹಳ ಕಡಿಮೆಯಿದೆ. ಆದರೆ ಸರ್ಕಾರ ಇವರಿಗೆ ಬೆಂಬಲವಾಗಿ ನಿಲ್ಲುತ್ತದೆ. ಇನ್ನು ರಾಜಕೀಯ ದೃಷ್ಟಿಯಿಂದ ಗಮನಿಸಿದರೆ ಇಸ್ಲಾಂ ಧರ್ಮವು ಇವರಿಗೆ ಯಾವ ಯಾವ ಹಕ್ಕುಗಳನ್ನು ಕೊಡುತ್ತಿತ್ತೋ ಆ ಎಲ್ಲ ಹಕ್ಕುಗಳೂ ಕ್ರೈಸ್ತ ಧರ್ಮದಿಂದಲೂ ಇವರಿಗೆ ದೊರೆಯುತ್ತದೆ. ಮುಸಲ್ಮಾನರಿಗೆ ಇರುವಂತೆ ಭಾರತೀಯ ಕ್ರೈಸ್ತರಿಗೂ ಎಲ್ಲಾ ಕ್ಷೇತ್ರಗಳಲ್ಲಿಯೂ ವಿಶೇಷ ಮೀಸಲಾತಿ ಇರುತ್ತದೆ. ಇನ್ನು ಕ್ರೈಸ್ತ ಧರ್ಮ ಹಾಗು ಇಸ್ಲಾಂ ಧರ್ಮಕ್ಕೆ ಹೋಲಿಸಿದರೆ ಸಿಖ್ ಧರ್ಮವು ಅಷ್ಟೊಂದು ಆಕರ್ಷಕವಾಗಿಲ್ಲ. ಕೇವಲ ಈ ಧರ್ಮದಲ್ಲಿ ೪೦ ಲಕ್ಷ ಜನರು ಮಾತ್ರವೇ ಇರುವುದರಿಂದ ಶೋಷಿತರಿಗೆ ಯಾವುದೇ ರೀತಿಯ ಆರ್ಥಿಕ ಸಹಾಯ ದೊರೆಯುವುದು ಸಾಧ್ಯವಿಲ್ಲ. ಇನ್ನು ಅವರು ಕೇಂದ್ರೀಕೃತವಾಗಿರುವುದು ಪಂಜಾಬ್ ರಾಜ್ಯದಲ್ಲಿ ಮಾತ್ರವೇ ಆದ್ದರಿಂದ ಇವರಿಗೆ ಸಾಮಾಜಿಕವಾಗಿಯೂ ಯಾವುದೇ ರೀತಿಯ ಬೆಂಬಲ ದೊರೆಯುವ ಸಾಧ್ಯತೆಗಳು ಕಡಿಮೆ. ಇನ್ನು ರಾಜಕೀಯವಾಗಿ ಈ ಪಂಗಡಕ್ಕೆ ಸೇರ್ಪಡೆಯಾಗುವುದು ಅಂತಹ ಲಾಭದಾಯಕವಲ್ಲ. ಪಂಜಾಬ್ ರಾಜ್ಯದ ಹೊರಗೆ ಬಂದರೆ ಇವರಿಗೆ ಯಾವುದೇ ವಿಶೇಷ ಪ್ರಾತಿನಿಧ್ಯ ದೊರೆಯುವುದಿಲ್ಲ.

ಇನ್ನು ಹಿಂದೂಗಳ ದೃಷ್ಟಿಯಿಂದ ನೋಡಿದರೆ ಈ ಮೂರು ಧರ್ಮಗಳಲ್ಲಿ ಯಾವುದಕ್ಕೆ ಸೇರ್ಪಡೆ

ಆಗುವುದು ಸೂಕ್ತವೆಂದು ಎನಿಸುತ್ತದೆ? ಇಸ್ಲಾಂ ಧರ್ಮವೋ, ಕ್ರೈಸ್ತ ಧರ್ಮವೋ ಇಲ್ಲ ಸಿಖ್ ಧರ್ಮವೋ? ಸಿಖ್ ಧರ್ಮವೇ ಅತ್ಯಂತ ಸೂಕ್ತ. ಒಂದು ವೇಳೆ ಶೋಷಿತ ವರ್ಗದವರು ಇಸ್ಲಾಂ ಧರ್ಮ ಇಲ್ಲವೇ ಕ್ರೈಸ್ತ ಧರ್ಮಕ್ಕೆ ಸೇರ್ಪಡೆಯಾದರೆ, ಅವರು ಈ ಹಿಂದೂ ಧರ್ಮದಿಂದ ಹೊರಹೋಗುವುದು ಮಾತ್ರವಲ್ಲ ಹಿಂದೂ ಸಂಸ್ಕೃತಿಯಿಂದಲೇ ದೂರ ಹೋಗುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಸಿಖ್‌ಧರ್ಮಕ್ಕೆ ಸೇರ್ಪಡೆಯಾದರೆ, ಅವರೊಂದಿಗೆ ಹಿಂದೂ ಸಂಸ್ಕೃತಿ ಉಳಿದುಕೊಳ್ಳುತ್ತದೆ. ಹಿಂದೂಗಳು ಈ ಅಂಶವನ್ನು ಉಪೇಕ್ಷಿಸುವಂತೆಯಂತೂ ಇಲ್ಲ.

ಇನ್ನು ಈ ರೀತಿಯ ಮತಾಂತರದಿಂದ ಭಾರತದ ಭವಿಷ್ಯದ ಮೇಲೆ ಉಂಟಾಗುವ ಪರಿಣಾಮವಾದರೂ ಎಂತಹುದು. ಇದನ್ನು ನಾವು ಗಮನದಲ್ಲಿ ಇರಿಸಿಕೊಳ್ಳುವುದು ಒಳಿತು. ಕ್ರೈಸ್ತ ಧರ್ಮಕ್ಕೆ ಇಲ್ಲವೇ ಇಸ್ಲಾಂ ಧರ್ಮಕ್ಕೆ ಮತಾಂತರವಾದರೆ ಅದು ಶೋಷಿತ ವರ್ಗವನ್ನು ರಾಷ್ಟ್ರ ವಿರೋಧಿಗಳನ್ನಾಗಿಸುತ್ತದೆ. ಒಂದು ವೇಳೆ ಇವರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರೆ, ಮುಸಲ್ಮಾನರ ಸಂಖ್ಯೆ ದ್ವಿಗುಣವಾಗುತ್ತದೆ ಹಾಗು ಅವರು ಅಧಿಕಾರ ಚಲಾಯಿಸಲು ಆರಂಭಿಸುತ್ತಾರೆ. ಒಂದು ವೇಳೆ ಅವರು ಕ್ರೈಸ್ತ ಧರ್ಮಕ್ಕೆ ಸೇರ್ಪಡೆಯಾದರೆ ಕ್ರೈಸ್ತರ ಸಂಖ್ಯೆ ೫ ರಿಂದ ೬ ಕೋಟಿಯಷ್ಟು ಆಗುತ್ತದೆ. ಇದರಿಂದ ಈ ದೇಶದ ಮೇಲೆ ಕ್ರೈಸ್ತರ ಹಿಡಿತ ಮತ್ತಷ್ಟು ಬಲಗೊಳ್ಳುತ್ತದೆ. ಆದರೆ ಅವರು ಸಿಖ್ ಧರ್ಮಕ್ಕೆ ಸೇರ್ಪಡೆಯಾದರೆ ಆದರೆ ಅದು ಭಾರತದ ಭವಿಷ್ಯದ ಮೇಲೆ ಯಾವುದೇ ರೀತಿಯ ಪರಿಣಾಮವನ್ನೂ ಬೀರುವುದಿಲ್ಲ. ಆಗ ಅವರ ಮತಾಂತರದಿಂದ ಅವರ ಧರ್ಮವು ಅರಾಷ್ಟ್ರೀಕೃತವೂ ಆಗುವುದಿಲ್ಲ. ಬದಲಾಗಿ ಅದು ದೇಶದ ರಾಜಕೀಯ ಭವಿಷ್ಯಕ್ಕೆ ಒಳ್ಳೆಯದನ್ನು ಮಾಡುತ್ತದೆ. ಆದ್ದರಿಂದ ದೇಶದ ಹಿತದೃಷ್ಟಿಯಿಂದ ಶೋಷಿತ ವರ್ಗದ ಜನರು ಸಿಖ್ಖರಾಗಿ ಮತಾಂತರಗೊಳ್ಳುವುದೇ ಸೂಕ್ತ.

ಇನ್ನು ನಮ್ಮೆದುರು ನಿಲ್ಲುವ ಮೂರನೆಯ ಪ್ರಶ್ನೆ ಎಂದರೆ ಹಿಂದೂಗಳ ಹಿತದೃಷ್ಟಿಯಿಂದ ಶೋಷಿತ ವರ್ಗದ ಜನರು ಸಿಖ್ಖರಾಗಿ ಮತಾಂತರಗೊಂಡರೆ, ಸಿಖ್ ಧರ್ಮವನ್ನು ಇಸ್ಲಾಂ ಹಾಗು ಕ್ರೈಸ್ತ ಧರ್ಮದಷ್ಟೇ ಪ್ರಯೋಜನಕಾರಿಯಾಗಿ ಮಾಡಲು ಇವರು ಸಿದ್ಧರಿದ್ದಾರೆಯೇ? ಇಲ್ಲಿರುವ ಕೊರತೆ ಆರ್ಥಿಕ, ಸಾಮಾಜಿಕ ಹಾಗು ರಾಜಕೀಯ ಎಂದು ಮೂರೂ ತೆರನಾಗಿ ಇದೆ. ಸಿಖ್ಖರಿಗೆ ಸಹಾಯಮಾಡಿ ಸಾಮಾಜಿಕ ಕೊರತೆಯನ್ನು ತುಂಬಲು ಹಿಂದೂಗಳಿಗೆ ಸಾಧ್ಯವಿಲ್ಲ. ಆದರೆ ಅವರ ಆರ್ಥಿಕ ಮತ್ತು ರಾಜಕೀಯ ಕೊರತೆಗಳನ್ನು ಹಿಂದೂಗಳು ನೀಗಿಸಬಲ್ಲರು. ಆದರೆ ಈಗ ತುರ್ತಾಗಿ ತೆಗೆದು ಹಾಕಬೇಕಿರುವುದು ರಾಜಕೀಯ ಕ್ಷೇತ್ರದ ಕೊರತೆ. ಏಕೆಂದರೆ, ಸಿಖ್ಖರ ಏಳಿಗೆಯುಲ್ಲಿ ಇದೇ ಪ್ರಮುಖ ಅಡ್ಡಗಾಲಾಗಿರುವುದು. ಈ ಸಮಸ್ಯೆಗೆ ಪರಿಹಾರ ಅದೃಷ್ಟವಶಾತ್ ಅತ್ಯಂತ ಸರಳವಾಗಿದೆ. ಈಗ ಏನು ಮಾಡಬೇಕೆಂದರೆ ಪ್ರತಿ ಪ್ರಾಂತದಲ್ಲಿಯೂ ಪರಿಶಿಷ್ಟ ಜಾತಿಯ ಪಟ್ಟಿಯನ್ನು ತಯಾರು ಮಾಡುವುದು (ಪಂಜಾಬ್ ರಾಜ್ಯವನ್ನು ಹೊರತುಪಡಿಸಿ). ಇನ್ನು ಶೋಷಿತ ವರ್ಗದಿಂದ ಮತಾಂತರಗೊಂಡವರ ಹೆಸರಿನ ಮುಂದೆ ಸಿಖ್ ಎಂದು ಸೇರಿಸುವುದು ಹಾಗೆ "ಸಿಖ್" ಎಂದು ಕರೆಯಲ್ಪಡುವವರು ಯಾವುದೇ ರಾಜಕೀಯ ಲಾಭದಿಂದ ವಂಚಿತವಾಗುವುದಿಲ್ಲ. ಈಗ ಆಗಿರುವ ಜಾತ್ಯಾಧಾರಿತ ಒಪ್ಪದಂದ ಪ್ರಕಾರ ತಮ್ಮ ಮತವನ್ನು ಬದಲಾಯಿಸಿಕೊಳ್ಳಲು ಅವಕಾಶವಿದೆ.

ಸುಲಭವಾಗಿ ಈ ರೀತಿಯ ಬದಲಾವಣೆ ತರಲು ಹಿಂದೂಗಳು ಹಾಗು ಶೋಷಿತ ವರ್ಗದವರು ಪರಸ್ಪರ ಒಪ್ಪಂದಕ್ಕೆ ಬರಬೇಕು. ಇದಕ್ಕಾಗಿ ಪೂನಾ ಒಪ್ಪಂದದಲ್ಲಿ ಯಾವ ಬದಲಾವಣೆಯನ್ನೂ ಮಾಡಬೇಕಿಲ್ಲ. ಈ ಒಪ್ಪಂದದ ಕೆಳಗೆ ಶೋಷಿತ ವರ್ಗದ ಜನರಿಗೆ ನೀಡಲಾಗಿರುವ ಸ್ಥಾನಗಳ ಸಂಖ್ಯೆಯಲ್ಲಿ ಯಾವುದೇ

ಬದಲಾವಣೆಯೂ ಆಗುವುದಿಲ್ಲ. ತರಲಾಗುವ ಒಂದೇ ಒಂದು ಬದಲಾವಣೆಯೆಂದರೆ ಸಿಖ್ಖರಲ್ಲದ ಶೋಷಿತ ವರ್ಗದವರು ಹಾಗು ಸಿಖ್ ಧರ್ಮಕ್ಕೆ ಮತಾಂತರ ಹೊಂದಿರುವ ಶೋಷಿತ ವರ್ಗದವರು ಇಬ್ಬರೂ ಚುನಾವಣೆಯಲ್ಲಿ ಸ್ಪರ್ಧಿಸಲು ಸ್ವತಂತ್ರರಾಗಿರುತ್ತಾರೆ. ಇದರಿಂದ ಸಿಖ್ ಧರ್ಮಕ್ಕೆ ಮತಾಂತರವಾಗುವ ಶೋಷಿತ ವರ್ಗದ ಜನರಿಗೆ ಆಗಬಹುದಾಗಿದ್ದ ಒಂದು ತೊಂದರೆಯನ್ನು ತಪ್ಪಿಸಿದಂತೆ ಆಗುತ್ತದೆ.

**ಯಾವ ಹಿಂದೂಗಳು ಈ ಪ್ರಸ್ತಾಪಕ್ಕೆ ವಿರೋಧ ವ್ಯಕ್ತಪಡಿಸುತ್ತಾರೋ ಅವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಿ:**

೧) ಪೂನಾ ಒಪ್ಪಂದದ ಅಡಿಯಲ್ಲಿ ಶೋಷಿತ ವರ್ಗಗಳ ಜನರಿಗೆ ಎಂದು ಮೀಸಲಿರಿಸಿರುವ ಸ್ಥಾನಗಳು ಹಿಂದೂಗಳಿಗೆ ಮರಳಿ ದಕ್ಕುವುದಿಲ್ಲ. ಅದು ಶೋಷಿತ ವರ್ಗದ ಜನರು ಯಾವ ಧರ್ಮಕ್ಕೆ ಮತಾಂತರ ಹೊಂದುವರೋ, ಆ ಧರ್ಮಕ್ಕೆ ಹೋಗುತ್ತದೆ ಎಂದರೆ ಒಂದು ವೇಳೆ ಶೋಷಿತ ವರ್ಗದ ಜನರು ಕ್ರೈಸ್ತರಾಗಿಯೋ ಮುಸಲ್ಮಾನರಾಗಿಯೋ ಮತಾಂತರ ಹೊಂದಿದರೆ, ಆ ಸ್ಥಾನಗಳು ಕ್ರೈಸ್ತ ಧರ್ಮ ಇಲ್ಲವೇ ಇಸ್ಲಾಂ ಧರ್ಮಕ್ಕೆ ಸೇರುತ್ತದೆ ಇವರು ಮತಾಂತರ ಹೊಂದಿದ ನಂತರ ಆ ಧರ್ಮದ ಜನ ಸಂಖ್ಯೆ ಹೆಚ್ಚಾಗುತ್ತದೆ. ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಅವರು ಪ್ರಾತಿನಿಧ್ಯವನ್ನು ಕೇಳಿಯೇ ಕೇಳುತ್ತಾರೆ. ಆದ್ದರಿಂದ ಈ ಸ್ಥಾನಗಳನ್ನು ಸಿಖ್ಖರಿಗೆ ನೀಡುವುದೇ ಬುದ್ಧಿವಂತಿಕೆ.

೨) ಸಂವಿಧಾನದ ಅಡಿಯಲ್ಲಿ ಶೋಷಿತ ವರ್ಗದವರು ಮುಸಲ್ಮಾರಾಗಿಯೋ ಕ್ರೈಸ್ತರಾಗಿಯೋ ಮತಾಂತರ ಹೊಂದಿದರೆ ಅವರಿಗೆ ರಾಜಕೀಯವಾಗಿ ಹಲವಾರು ಸೌಲಭ್ಯಗಳು ದೊರೆಯುತ್ತವೆ. ಸಿಖ್ ಧರ್ಮಕ್ಕೆ ಮತಾಂತರ ಹೊಂದಿದ ಮಾತ್ರಕ್ಕೆ ಆಗುವಂತೆ ಹೇಳಿ ಅವರನ್ನು ರಾಜಕೀಯ ಸೌಲಭ್ಯಗಳಿಂದ ವಂಚಿತರಾಗುವಂತೆ ಮಾಡಬೇಕೇ? ಇದು ಕ್ರೈಸ್ತ ಧರ್ಮ ಅಥವಾ ಇಸ್ಲಾಂ ಧರ್ಮಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಸಿಖ್ ಧರ್ಮಕ್ಕೆ ಶೋಷಿತ ವರ್ಗದವರನ್ನು ದೂಡಿದಂತೆ ಅಲ್ಲವೇ? ಈ ರೀತಿ ಮಾಡುವುದರಿಂದ ಹಿಂದೂ ಧರ್ಮದ ಹಿತಾಸಕ್ತಿಗೆ ಧಕ್ಕೆ ಆದಂತಲ್ಲವೇ?

೩) ಇನ್ನು ಸಿಖ್ ಧರ್ಮಕ್ಕೆ ಮತಾಂತರ ಆಗುವ ಶೋಷಿತ ವರ್ಗದವರು ತಮ್ಮ ರಾಜಕೀಯ ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಏಕೆಂದರೆ ಪೂನಾ ಒಪ್ಪಂದದ ಪ್ರಕಾರ, ಎಷ್ಟು ಜನಸಂಖ್ಯೆ ಇದೆ ಎನ್ನುವ ಆಧಾರದ ಮೇಲೆ ಅವರ ಪ್ರಾತಿನಿಧ್ಯ ನಿರ್ಧಾರವಾಗುತ್ತದೆ. ಇದಕ್ಕೂ ಧರ್ಮಕ್ಕೂ ಯಾವುದೇ ರೀತಿಯ ಸಂಬಂಧವೂ ಇಲ್ಲ. ಆದ್ದರಿಂದ ಸಿಖ್ಖರಿಗೂ ಹಾಗು ಹಿಂದೂಗಳಿಗೂ ವೈಮನಸ್ಯ ಏಕೆ ಉಂಟು ಮಾಡಬೇಕು?

೪) ಸಿಖ್ ಧರ್ಮವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಿ ಅವರಿಗೂ ಕೂಡ ವಿವಿಧ ಸೌಲಭ್ಯಗಳನ್ನು ನೀಡಬೇಕು ಎಂಬ ಪ್ರಸ್ತಾಪವಿದೆ. ಅದು ಅಂತಹ ಗಟ್ಟಿಯಾದ ಪ್ರಸ್ತಾಪವೇನೂ ಅಲ್ಲ. ಇನ್ನೂ ಈ ರೀತಿಯ ಸೌಲಭ್ಯವನ್ನು ನೀಡದೇ ಇರುವುದು ಸ್ವಲ್ಪ ಆಶ್ಚರ್ಯವೇ ಆಗಿದೆ.

ಪಂಜಾಬ್ ರಾಜ್ಯದ ಸಿಖ್ಖರಿಗೆ ಈ ರೀತಿಯ ರಾಜಕೀಯ ಸೌಲಭ್ಯಗಳನ್ನು ನೀಡಬೇಕು ಎನ್ನುವುದಾದರೆ, ಬೇರೆಯ ಸ್ಥಳಗಳಲ್ಲಿ ಇರುವ ಸಿಖ್ಖರಿಗೆ ಈ ಸೌಲಭ್ಯಗಳೇಕೆ ದೊರೆಯಬಾರದು?

ಇನ್ನು ಪಂಜಾಬ್ ರಾಜ್ಯದ ಶೋಷಿತವರ್ಗದ ಜನರು ಈ ರೀತಿಯ ಸೌಲಭ್ಯಗಳಿಂದ ವಂಚಿತರಾಗದೇ ಇರುವುದಾದರೆ, ಇತರ ಕಡೆಯಲ್ಲಿ ಇರುವ ಸಿಖ್ಖರು ಹೇಗೆ ಭಿನ್ನರಾಗುತ್ತಾರೆ?

* * * * *

## ೧೨
## ಮತಾಂತರಗೊಳ್ಳುವುದರಿಂದ ಹಕ್ಕುಗಳಿಗೆ ಯಾವ ರೀತಿಯ ಧಕ್ಕೆಯೂ ಬರುವುದಿಲ್ಲ

ಒಂದು ವೇಳೆ ಹಿಂದೂ ಧರ್ಮದಿಂದ ಬೇರೆಯ ಧರ್ಮಕ್ಕೆ ಮತಾಂತರ ಹೊಂದಿದರೆ ಪೂನಾ ಒಪ್ಪಂದದ ಪ್ರಕಾರ ಶೋಷಿತ ವರ್ಗದವರು ರಾಜಕೀಯ ಸೌಲಭ್ಯಗಳಿಂದ ವಂಚಿತರಾಗಬೇಕಾಗುತ್ತದೆ ಎಂಬುದು ಆಧಾರವಿಲ್ಲದ ಭಯ ಎಂದು ಡಾ. ಅಂಬೇಡ್ಕರ್ ಅವರು ವಿವರಿಸುತ್ತಾರೆ. ಇದು ಇವರ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡಲು ಹಾಗು ತಮ್ಮನ್ನು ಬೆದರಿಸಲು ಕಾಂಗ್ರೆಸ್ ಪಕ್ಷವು ಅನುಸರಿಸುತ್ತಿರುವ ತಂತ್ರ ಎಂದು ಅಭಿಪ್ರಾಯಪಡುತ್ತಾರೆ.

"ನಾವು ಹಿಂದೂ ಧರ್ಮದಲ್ಲಿಯೇ ಉಳಿಯುವಂತೆ ಮಾಡಲು ಹಾಗು ಚುನಾವಣೆಯಲ್ಲಿ ಸ್ಪರ್ಧಿಸದಂತೆ ನನ್ನನ್ನು ಮತ್ತು ನನ್ನ ಪಕ್ಷದವರನ್ನು ಹೆದರಿಸಲು ಇದು ಕಾಂಗ್ರೆಸ್ ಪಕ್ಷ ಅನುಸರಿಸುತ್ತಿರುವ ತಂತ್ರ ಎಂದು ಹೇಳಲು ಪೂರಕವಾದ ಸಾಕ್ಷ್ಯಗಳು ನನ್ನ ವಶದಲ್ಲಿದೆ."

ಯವೋಲದಲ್ಲಿ ಮಾಡಿದ ಭಾಷಣ ಹಾಗು ಬೊಂಬಾಯಿಯಲ್ಲಿ ನಡೆದ ಶೋಷಿತ ವರ್ಗಗಳವರ ಸಮಾವೇಶಗಳಲ್ಲಿ ಮಾಡಿದ ಭಾಷಣಗಳಿಗೆ ಹಾಗೂ ಹಿಂದೂ ಧರ್ಮವನ್ನು ತ್ಯಜಿಸಲು ಡಾ. ಅಂಬೇಡ್ಕರ್ ಅವರು ತೆಗೆದುಕೊಂಡಿರುವ ನಿರ್ಧಾರದ ವಿರುದ್ಧ ಬರುತ್ತಿದ್ದ ಪ್ರತಿಕ್ರಿಯೆಗಳಿಗೆ ಅಂಬೇಡ್ಕರ್ ಅವರು ನೀಡಿದ್ದ ಪ್ರತಿಕ್ರಿಯೆ ಮೇಲಿನಂತಿತ್ತು. ಪೂನಾ ಒಪ್ಪಂದದಲ್ಲಿ ಬರೆದಿರುವಂತೆ ಎಲ್ಲಾ ಹಕ್ಕುಗಳನ್ನೂ ಅನುಭವಿಸಲು ಇವರಿಗೆ ಹಿಂದೂ ಧರ್ಮದ ನಾಯಕರು ಅವಕಾಶ ನೀಡುತ್ತಿಲ್ಲವೆಂಬ ನೇರವಾದ ಆಪಾದನೆಯನ್ನು ಅಂಬೇಡ್ಕರ್ ಅವರು ಮಾಡಿದ್ದರು.

ಡಾ. ಅಂಬೇಡ್ಕರ್ ದಿನ ನಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ವರದಿಗಳನ್ನು ಕಂಡು ನಗುತ್ತಿದ್ದರು. ಏಕೆಂದರೆ ಹಾಗೆ ಹೇಳುವವರಿಗೆ ಒಪ್ಪಂದವನ್ನು ಅಳವಡಿಸಿಕೊಂಡು ನೀಡಿರುವ ಜಾತ್ಯಾಧಾರಿತ ನಿರ್ಣಯದ ಬಗೆಗೆ ಯಾವುದೇ ಅರಿವಿಲ್ಲ ಎಂದು ಅವರು ಹೇಳಿದರು.

ಜಾತ್ಯಾಧಾರಿತ ನಿರ್ಣಯದ ಈ ಮೊದಲು ಶೋಷಿತ ವರ್ಗದ ಜನರು ಕೂಡ ಸಾಮಾನ್ಯ ಮತಕ್ಷೇತ್ರದಲ್ಲಿಯೇ ತಮ್ಮ ಮತಗಳನ್ನು ಚಲಾಯಿಸಬಹುದಾಗಿತ್ತು. ಆದರೆ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯ ದೊರಕಿಸಿಕೊಡಬೇಕು ಎಂಬ ದೃಷ್ಟಿಯಿಂದ ಅವರಿಗೇ ಪ್ರತ್ಯೇಕ ಮತಕ್ಷೇತ್ರಗಳನ್ನು ಗುರುತಿಸಲಾಯಿತು.

ಪೂನಾ ಒಪ್ಪಂದದ ಪ್ರಕಾರ ಜಂಟಿ ಮತಕ್ಷೇತ್ರಗಳ ಬದಲಾಗಿ ಶೋಷಿತ ವರ್ಗದವರಿಗಾಗಿ ಸ್ಥಾನಗಳನ್ನು ಮೀಸಲಾಗಿಸಲಾಯಿತು. ಇನ್ನು ಶೋಷಿತ ವರ್ಗದ ಜನರ ಮನದಲ್ಲಿ ವಿಶ್ವಾಸವನ್ನು ತುಂಬಲು ಸಾಮಾನ್ಯ ಚುನಾವಣೆಗೆ ಮೊದಲು ಇವರ ವರ್ಗಗಳ ಒಳಗೇ ಆಂತರಿಕ ಚುನಾವಣೆಯನ್ನು ನಡೆಸಲು ತೀರ್ಮಾನಿಸಲಾಯಿತು. ಹೀಗೆ ಚುನಾಯಿಸಿದ ನಾಲ್ಕು ಅಭ್ಯರ್ಥಿಗಳಲ್ಲಿ ಜಂಟಿ ಹಿಂದೂ ಮತಕ್ಷೇತ್ರದ ಮತದಾರರು ಒಬ್ಬರನ್ನು ಆಯ್ಕೆ ಮಾಡಬೇಕು.

### ಪೂನಾ ಒಪ್ಪಂದ : ಹಿಂದೂಗಳ ವಾದ

ಪೂನಾ ಒಪ್ಪಂದವು ರಚಿಸಲ್ಪಟ್ಟ ಸಂದರ್ಭದಲ್ಲಿ ಶೋಷಿತ ವರ್ಗವು ಹಿಂದೂ ಸಮುದಾಯದ ಒಂದು ಅವಿಭಾಜ್ಯ ಅಂಗವೇ ಆಗಿರುತ್ತದೆ ಎಂಬುದು ನಿಸ್ಸಂಶಯವಾಗಿ ಹಿಂದೂಗಳ ಮನಸ್ಸಿನಲ್ಲಿ ಇತ್ತು. ಶೋಷಿತವರ್ಗಗಳವರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡಿದರೆ ಅದು ಹಿಂದು ಸಮಾಜದ ವಿಘಟನೆಗೆ

ಕಾರಣವಾಗುತ್ತದೆ ಎಂಬ ಹೆದರಿಕೆಯಿಂದಾಗಿ, ಅದನ್ನು ತಡೆಯಲು ಗಾಂಧಿಯವರು ತಮ್ಮ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಇದು ಪೂನಾ ಒಪ್ಪಂದವು ರೂಪುಗೊಳ್ಳುವುದಕ್ಕೆ ಮುಖ್ಯಕಾರಣವಾಗಿತ್ತು.

ಪೂನಾ ಒಪ್ಪಂದವನ್ನು ಜಾರಿಗೆ ತರಲು ಹಿಂದೂ ಸಮುದಾಯವು ಸಾಕಷ್ಟು ತ್ಯಾಗವನ್ನು ಮಾಡಿದೆ ಎಂದು ವಾದಿಸಲಾಗುತ್ತಿದೆ. ಹಿಂದೂ ಸಮುದಾಯವು ತನಗೆ ಈ ಮೊದಲಿನ ಜಾತ್ಯಾಧಾರಿತ ನಿರ್ಣಯದ ಪ್ರಕಾರ ಮೀಸಲು ಇರಿಸಿದ್ದ ಸ್ಥಾನಗಳಲ್ಲಿ ಕೆಲವನ್ನು ಶೋಷಿತ ವರ್ಗಗಳಿಗೆ ತನ್ನ ಬಗೆಗೆ ಶೋಷಿತ ವರ್ಗಗಳವರಲ್ಲಿದ್ದ ಭಯವನ್ನು ನಿವಾರಿಸಲು ಬಿಟ್ಟುಕೊಟ್ಟಿದೆ ಮತ್ತು ಈ ಮೂಲಕ ಅವರನ್ನು ಹಿಂದೂ ಸಮಾಜದ ಮಡಿಲಿನಲ್ಲಿಯೇ ಇರಿಸಿಕೊಳ್ಳುವ ಉದ್ದೇಶವನ್ನು ಹೊಂದಿತ್ತು.

ಅಲ್ಲಿಂದೀಚೆಗೆ ಶೋಷಿತ ವರ್ಗದ ಒಂದು ಸಮುದಾಯವು ಡಾ. ಅಂಬೇಡ್ಕರ್ ಅವರ ಮುಂದಾಳತ್ವದಲ್ಲಿ ಹಿಂದೂ ಧರ್ಮವನ್ನು ತ್ಯಜಿಸಲು ನಿರ್ಧರಿಸಿದೆ. ಬೊಂಬಾಯಿಯ ಮಹಾರ್ ಸಮ್ಮೇಳನವು ಸುದೀರ್ಘ ಸಮಾಲೋಚನೆಯ ನಂತರ ಕೆಳಕಂಡ ಈ ನಿರ್ಧಾರಗಳನ್ನು ಕೈಗೊಂಡಿದೆ.

a) ಧರ್ಮದ ಬದಲಾವಣೆಯೊಂದೇ ಮಹರ್ ಜನಾಂಗಕ್ಕೆ ಸಮಾನತೆಯನ್ನು ಪಡೆಯಲು ಮತ್ತು ಸ್ವಾತಂತ್ರ್ಯವನ್ನು ಪಡೆಯಲು ಉಳಿದಿರುವ ದಾರಿ.

b) ಅವರ ನಾಯಕರಾದಂತಹ ಬಿ.ಆರ್. ಅಂಬೇಡ್ಕರ್ ಅವರಿಗೆ ಇಡೀ ಜನಾಂಗವೇ ಮತಾಂತರಕ್ಕೆ ಸಿದ್ಧವಾಗಿದೆ ಎಂಬ ಆಶ್ವಾಸನೆಯನ್ನು ನೀಡುತ್ತಾರೆ.

c) ಇದಕ್ಕೆ ಮೊದಲ ಹಂತದ ಕ್ರಮವಾಗಿ ಹಿಂದೂ ದೇವತೆಗಳ ಆರಾಧನೆಯನ್ನು ತತ್‌ಕ್ಷಣದಿಂದಲೇ ನಿಲ್ಲಿಸಬೇಕು ಹಾಗು ಹಿಂದೂ ಹಬ್ಬಗಳ ಆಚರಣೆ ಹಾಗು ಪವಿತ್ರ ಸ್ಥಳಗಳ ಭೇಟಿಯನ್ನು ನಿಲ್ಲಿಸಬೇಕು ಎಂದು ಸಮಾವೇಶವು ಮಹರ್ ಜನಾಂಗದವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತದೆ.

## ಸಂಪ್ರದಾಯವಾದಿ ಅಭಿಪ್ರಾಯ

ಈ ನಿರ್ಣಯದಿಂದಾಗಿ ಹಿಂದೂ ಸಮಾಜದ ವಿಷಯದಲ್ಲಿ ಮಹರರ ಉದ್ದೇಶದ ಬಗೆಗೆ ಯಾವುದೇ ಅನುಮಾನವೂ ಉಳಿದಿಲ್ಲ ಮತ್ತು ಈ ಕಾರಣದಿಂದಾಗಿ ಮಹರರು ಹಿಂದೂ ಸಮಾಜದಲ್ಲಿಯೇ ಉಳಿಯುತ್ತಾರೆ ಎಂಬ ತಿಳಿವಳಿಕೆಯಿಂದ ಅವರಿಗೆ ನೀಡಿದ್ದ ಸ್ಥಾನಗಳನ್ನು ಅವರು ಕಳೆದುಕೊಂಡರೆ ಅದಕ್ಕಾಗಿ ಯಾರನ್ನೂ ದೂರುವ ಹಾಗಿಲ್ಲ ಎಂಬುದು ಸಂಪ್ರದಾಯವಾದಿ ಹಿಂದೂಗಳ ಅಭಿಪ್ರಾಯ.

ಬೇರೆಯ ರೀತಿಯಲ್ಲಿ ಹೇಳಬೇಕೆಂದರೆ, ಇತ್ತೀಚೆಗೆ ಒಬ್ಬರು ಕಾಂಗ್ರೆಸ್ ನಾಯಕರು ಹೇಳಿದಂತೆ 'ಎರಡೂ ಕಡೆಗಳಿಂದ ಅವರು ಸೌಲಭ್ಯ ಪಡೆದುಕೊಳ್ಳಲು ಸಾಧ್ಯವಿಲ್ಲ. ಒಂದೋ ಅವರು ಹಿಂದೂಗಳಾಗಿ ಪೂನಾ ಒಪ್ಪಂದದ ಪ್ರಕಾರ ಸೌಲಭ್ಯಗಳನ್ನು ಅನುಭವಿಸಬಹುದು ಇಲ್ಲವೇ ಅವರು ಹಿಂದೂ ಧರ್ಮವನ್ನು ತ್ಯಜಿಸುವುದರೊಂದಿಗೆ ಈ ಸೌಲಭ್ಯಗಳನ್ನೂ ತ್ಯಜಿಸಬೇಕಾಗುತ್ತದೆ."

ಈ ಸಂಬಂದವಾಗಿ ಅಂಬೇಡ್ಕರ್ ಅವರ ಅಭಿಪ್ರಾಯವೇನು ಎಂದು ಕೇಳಿದ ಸಂದರ್ಭದಲ್ಲಿ ಅವರು The Times of India ಪತ್ರಿಕೆಯ ವಿಶೇಷ ವರದಿಗಾರರೊಂದಿಗೆ ನೀಡಿದ ಪ್ರತ್ಯೇಕ ಸಂದರ್ಶನದಲ್ಲಿ ಹಿಂದೂಗಳು ಶೋಷಿತ ವರ್ಗದವರಿಗಾಗಿ ತ್ಯಾಗವನ್ನು ಮಾಡಿದ್ದಾರೆ ಎಂಬ ಅಂಶವನ್ನು ಅವರು ಸ್ಪಷ್ಟವಾಗಿ ಖಂಡಿಸಿದ್ದರು.

"ಸಂಪ್ರದಾಯವಾದಿ ಹಿಂದೂಗಳು ತಮ್ಮ ಪಾಲಿನ ಸ್ಥಾನಗಳನ್ನು ಶೋಷಿತ ವರ್ಗದವರಿಗಾಗಿ ಬಿಟ್ಟುಕೊಟ್ಟಿದ್ದಾರೆ ಎಂಬ ಮಾತಿನಲ್ಲಿ ಸತ್ಯವಿಲ್ಲ. ನಿಜ ಹೇಳಬೇಕೆಂದರೆ ಪ್ರತ್ಯೇಕವಾಗಿ ಹಿಂದೂಗಳ ಸ್ಥಾನ

ಅಥವಾ ಹಿಂದೂಗಳ ಮತಕ್ಷೇತ್ರ ಎಂಬವು ಇಲ್ಲವೆ ಇಲ್ಲ. ಇರುವುದು ಸಾಮಾನ್ಯ ಮತಕ್ಷೇತ್ರ ಮಾತ್ರ." ಎಂದು ಅವರು ಹೇಳಿದರು.

ಅಂಬೇಡ್ಕರ್ ಅವರ ಪ್ರಕಾರ ಸಂವಿಧಾನವು ಯಾವುದೇ ಕ್ಷೇತ್ರವನ್ನು ಹಿಂದೂ ಮತಕ್ಷೇತ್ರವೆಂದು ಗುರುತಿಸುವುದಿಲ್ಲ. ಮುಸಲ್ಮಾನರಿಗೆ, ಯುರೋಪಿಯನ್ನರಿಗೆ, ಆಂಗ್ಲೋ ಇಂಡಿಯನ್ನರಿಗೆ, ಪಂಜಾಬಿನಲ್ಲಿ ಸಿಖ್ಖರಿಗೆ ಪ್ರತ್ಯೇಕ ಮತಕ್ಷೇತ್ರಗಳಿವೆ. ಆದರೆ ಸಾಮಾನ್ಯ ಮತಕ್ಷೇತ್ರಗಳಲ್ಲಿ ಹಿಂದೂಗಳು ಮಾತ್ರವಲ್ಲದೇ ಪಾರ್ಸಿಗಳು, ಯಹೂದ್ಯರು, ಜೈನರು, ಬೌದ್ಧ ಧರ್ಮೀಯರು ಹಾಗು ಇತರ ಹಲವಾರು ಪಂಗಡದವರು ಇರುತ್ತಾರೆ. ಇನ್ನು ಪೂನಾ ಒಪ್ಪಂದದಲ್ಲಿ ಏನಾದರೂ ಹೆಚ್ಚಿನ ಸೌಲಭ್ಯಗಳು ಪರಿಶಿಷ್ಟ ಜಾತಿಯವರಿಗೆ ದೊರಕಿದೆ ಎನ್ನುವುದಾದರೆ ಅದು ಸಾಮಾನ್ಯ ಚುನಾವಣಾ ಕ್ಷೇತ್ರಗಳಲ್ಲಿ ನೀಡಲಾಗಿದೆಯೇ ಹೊರತು ಹಿಂದೂ ಮತಕ್ಷೇತ್ರದಿಂದಲ್ಲ ಏಕೆಂದರೆ. ಆ ರೀತಿಯ ಮತಕ್ಷೇತ್ರವು ಅಸ್ತಿತ್ವದಲ್ಲಿಯೇ ಇಲ್ಲ. ಅದು ಪೂನಾ ಒಪ್ಪಂದದಲ್ಲಿ ಆಗಲೀ, ಜಾತ್ಯಾಧಾರಿತ ನಿರ್ಣಯದಲ್ಲಿ ಆಗಲಿ ಅಥವಾ ಮತದಾರರ ಹಕ್ಕು ಹಾಗೂ ಚುನಾವಣಾ ಪ್ರಕ್ರಿಯೆಗಳನ್ನು ನಿಯಂತ್ರಿಸುವ ೧೯೩೫ರ ಭಾರತ ಸರ್ಕಾರದ ಕಾಯ್ದೆಯಲ್ಲಿ ಆಗಲೀ ಇದರ ಉಲ್ಲೇಖವಿಲ್ಲ.

### ಮತಕ್ಷೇತ್ರಗಳ ವಿಂಗಡಣೆ

ಭಾರತ ಸರ್ಕಾರದ ಕಾಯ್ದೆಯ ಪ್ರಕಾರ ಮಾಡಿರುವ ಮತಕ್ಷೇತ್ರಗಳ ವಿಂಗಡನೆಯ ಬಗ್ಗೆ ಚರ್ಚಿಸಲು ಈಗ ಕಾಲಮಿಂಚಿದೆ ಎಂದು ಡಾ. ಅಂಬೇಡ್ಕರ್ ವಾದಿಸಿದರು.

"ಅದು ಈಗಾಗಲೇ ನಿರ್ಧಾರವಾಗಿ ಹೋಗಿರುವ ವಿಷಯವಾಗಿದೆ, ಹಾಗು ನಾವು ಇದೀಗ ಅದರ ಪ್ರಕಾರವೇ ನಡೆದುಕೊಳ್ಳಬೇಕು. ಪಂಜಾಬ್‌ನಲ್ಲಿ ಮುಸಲ್ಮಾನರು ಬಹುಸಂಖ್ಯಾತರಾಗಿದ್ದಾರೆ ಹಾಗು ಹಿಂದೂಗಳು ಅಲ್ಪ ಸಂಖ್ಯಾತರಾಗಿದ್ದಾರೆ. ಮುಸಲ್ಮಾನರಿಗೆ ಅಲ್ಲಿ ಪ್ರತ್ಯೇಕ ಮತಕ್ಷೇತ್ರವಿದೆ. ಆದರೆ ಹಿಂದೂಗಳು ಅಲ್ಲಿ ಸಾಮಾನ್ಯ ಮತಕ್ಷೇತ್ರಕ್ಕೆ ಸೇರ್ಪಡೆಯಾಗುತ್ತಾರೆ" ಎಂದವರು ನುಡಿದರು.

ಡಾ. ಅಂಬೇಡ್ಕರ್ ಅವರು ಮುಂದುವರೆಯುತ್ತಾ "ಹಿಂದೂಗಳು ಬಹಳಷ್ಟು ತ್ಯಾಗವನ್ನು ಮಾಡಿದ್ದಾರೆ ಎಂದು ಸಾಧಿಸುವುದು ತಪ್ಪಾಗುತ್ತದೆ. ಏಕೆಂದರೆ ಸಾಮಾನ್ಯ ಮತಕ್ಷೇತ್ರದಲ್ಲಿ ಹಿಂದೂಗಳು ಮಾತ್ರವಲ್ಲದೇ ಇನ್ನೂ ಹಲವಾರು ಧರ್ಮದವರು ಇದ್ದಾರೆ. ಆದ್ದರಿಂದ ಶೋಷಿತ ವರ್ಗದವರಿಗೆ ಏನಾದರೂ ಸೌಲಭ್ಯಗಳು ದೊರೆತಿದೆ ಎಂದಾದರೆ ಅದಕ್ಕೆ ಹಿಂದೂಗಳು ಮಾತ್ರ ಕಾರಣವಲ್ಲ.

ರಾಜಕೀಯ ಸೌಲಭ್ಯಗಳಿಗೂ ಜಾತಿಗೂ ಯಾವುದೇ ಸಂಬಂಧವಿಲ್ಲ ಎಂಬ ಮತ್ತೊಂದು ಪ್ರಮುಖ ಅಂಶವನ್ನು ಡಾ. ಅಂಬೇಡ್ಕರ್ ಅವರು ಉಲ್ಲೇಖಮಾಡಿದ್ದರು. ಯುರೋಪಿಯನ್ನರ ಮತಕ್ಷೇತ್ರ ಎಂದರೆ ಅದರಲ್ಲಿ ಕೇವಲ ಯುರೋಪಿನ್ನರು ಮಾತ್ರ ಇರುತ್ತಾರೆ ಅಂತೆಯೇ ಆ್ಯಂಗ್ಲೋ ಇಂಡಿಯನ್ನರದ್ದು ಕೂಡ. ಅವರು ಯಾವ ಧರ್ಮವನ್ನು ನಿಜವಾದ ಅರ್ಥದಲ್ಲಿ ಅನುಸರಿಸುತ್ತಾರೆ ಎಂಬುದು ಬೇರೆಯ ವಿಷಯ. ಮುಸಲ್ಮಾನರ ಧರ್ಮದಲ್ಲಿ ಮಾತ್ರವೇ ಜಾತಿಯ ಅನುಸಾರವಾಗಿ ವಿಂಗಡನೆ ಮಾಡಲಾಗಿದೆ. ಸಾಮಾನ್ಯ ಮತಕ್ಷೇತ್ರದಲ್ಲಿ ಯಾವುದೇ ರೀತಿಯ ಜಾತಿ ಬೇಧವಿಲ್ಲದೆ ಆ ಕ್ಷೇತ್ರದಲ್ಲಿ ಇರುವವರೆಲ್ಲರೂ ಚುನಾವಣೆಯಲ್ಲಿನ ಹಕ್ಕುಗಳನ್ನು ಅನುಭವಿಸುತ್ತಾರೆ.

## ಮತಾದಾನದ ಹಕ್ಕಿನ ಹೊಂದಾಣಿಕೆ

ಇದನ್ನು ಬೇರೆಯ ಪದಗಳಲ್ಲಿ ವಿವರಿಸಬೇಕೆಂದರೆ ಮತದಾನದ ಹಕ್ಕಿನ ಹೊಂದಾಣಿಕೆಯು ಸಮುದಾಯದ ಸದಸ್ಯತ್ವದಿಂದ ಬರುತ್ತದೆಯೇ ಹೊರತು ಅವರು ಯಾವ ಧರ್ಮಕ್ಕೆ ಸೇರಿದವರು ಎಂಬುದರಿಂದ ಅಲ್ಲ. ಈ ಮೊದಲು "ಶೋಷಿತ ವರ್ಗ" ಎಂದು ವರ್ಗೀಕರಿಸಲ್ಪಟ್ಟಿದ್ದ ಜಾತಿಯನ್ನು ಬದಲಾಯಿಸಿ "ಪರಿಶಿಷ್ಟ ಜಾತಿ" ಎಂದು ಕರೆಯಲಾಗಿದೆ. ಇದು ಒಂದು ಸಮುದಾಯದ ಒಂದು ಭಾಗಕ್ಕೆ ಮಾತ್ರವೇ ಅನ್ವಯಿಸುತ್ತದೆ. ಅದು ಕೂಡ ಸಾಮಾಜಿಕ ಹಾಗು ಆರ್ಥಿಕ ದೃಷ್ಟಿಯಿಂದ ಮಾಡಿರುವುದೇ ಹೊರತು ಧರ್ಮದ ದೃಷ್ಟಿಯಿಂದಲ್ಲ.

ಇನ್ನು ವಾದ ಮಾಡುವ ಸಲುವಾಗಿ ಈ ವಿಂಗಡನೆಯಲ್ಲಿ ಧಾರ್ಮಿಕ ಅಂಶವಿದೆ ಎಂದು ಪರಿಗಣಿಸಿದರೂ ಒಂದು ಧರ್ಮವನ್ನು ಅನುಸರಿಸದೇ ಹೋಗುವುದರಿಂದ ಆ ಧರ್ಮದಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವುದರಿಂದ ಯಾರೂ ತಮ್ಮ ರಾಜಕೀಯ ಹಕ್ಕುಗಳನ್ನು ಕಳೆದುಕೊಳ್ಳುವುದಿಲ್ಲ.

ಒಂದುವೇಳೆ ಶೋಷಿತ ವರ್ಗದ ಒಬ್ಬ ವ್ಯಕ್ತಿ ಹಿಂದೂ ಧರ್ಮವನ್ನು ತ್ಯಜಿಸಿ, ಇಸ್ಲಾಂ ಅಥವಾ ಕ್ರೈಸ್ತ ಧರ್ಮವನ್ನು ಆಯ್ಕೆ ಮಾಡಿಕೊಂಡರೆ ಅದು ಈ ಹಕ್ಕಿಗೆ ಸಂಬಂಧಿಸದ ಪ್ರಶ್ನೆ.

ಆಗ ಒಂದು ವಿಧ್ಯುಕ್ತವಾದ ಮತಾಂತರದ ಪ್ರಕ್ರಿಯೆಯ ನಂತರವಷ್ಟೇ ಆ ಧರ್ಮಕ್ಕೆ ದೊರೆಯುವ ಸೌಲಭ್ಯಗಳನ್ನು ಆತ ಅನುಭವಿಸಬಹುದು. ಅನಂತರಷ್ಟೇ ಹಿಂದೂ ಧರ್ಮದಲ್ಲಿ ಇದ್ದುದರಿಂದಾಗಿ ಆತ ಪಡೆದಿದ್ದ ಸೌಲಭ್ಯಗಳನ್ನು ಹಿಂದಿರುಗಿಸುವಂತೆ ಹೇಳಬಹುದು.

ಒಬ್ಬ ಹಿಂದೂ ಧರ್ಮೀಯ ವೇದಗಳನ್ನು ನಂಬದಿದ್ದರೆ ಏನಾಗುತ್ತದೆ? ಎಂದು ಡಾ. ಅಂಬೇಡ್ಕರ್ ಪ್ರಶ್ನಿಸುತ್ತಾರೆ. ಈಗ ಭಾರತದಲ್ಲಿ ಅಸಂಖ್ಯ ಹಿಂದೂಗಳು ಕೇವಲ ಹೆಸರಿಗಷ್ಟೇ ಹಿಂದೂಗಳಾಗಿದ್ದಾರೆ. ಆದರೆ ಅವರು ಆ ಧರ್ಮವು ವಿಧಿಸಿರುವಂತಹ ಆಚರಣೆಗಳನ್ನು ಮಾಡುವುದೇ ಇಲ್ಲ. ಆದ್ದರಿಂದ ಅವರನ್ನು ಹಿಂದೂಗಳಲ್ಲ ಎಂದು ಹೇಳಲು ಸಾಧ್ಯವೇ? ಇನ್ನು ಯಾವ ರೀತಿಯ ಮಾಪಕದಿಂದ ಒಬ್ಬ ವ್ಯಕ್ತಿ ಎಷ್ಟರಮಟ್ಟಿಗೆ ಹಿಂದೂ ಎಂದು ನಾವು ಅಳೆಯಲು ಸಾಧ್ಯ?

## ಹಕ್ಕೊತ್ತಾಯ

ಯಾವುದೇ ಒಬ್ಬ ವ್ಯಕ್ತಿಯು ತಾನು ಸೇರಿರುವಂತಹ ಧರ್ಮದ ಆಚರಣೆಗಳ ಬಗ್ಗೆ ನಿರಾಸೆಯಿಂದ ಅಥವಾ ಅಲ್ಲಿ ಅನ್ಯಾಯಗಳಿಂದ ಬೇಸತ್ತು ಆ ಧರ್ಮದಿಂದ ದೂರ ಉಳಿದರೆ ಆತ ಆ ಧರ್ಮದೊಂದಿಗಿನ ಎಲ್ಲಾ ಸಂಬಂಧಗಳನ್ನೂ ಕಳೆದುಕೊಂಡಿದ್ದಾನೆ ಎಂದು ನಿರ್ಧರಿಸುವುದು ಸೂಕ್ತವಲ್ಲ.

"ನಿಜವಾಗಿ ಹೇಳಬೇಕೆಂದರೆ ಇಂದಿನ ಎಲ್ಲಾ ಕ್ರೈಸ್ತ ಮತಸ್ಥರು ನಿಜವಾದ ಅರ್ಥದಲ್ಲಿ ಕ್ರೈಸ್ತರಾಗಿರುವುದಿಲ್ಲ. ಆದರೆ ಯುರೋಪ್ ಖಂಡದಲ್ಲಿ ಜರುಗುವ ಭಾನುವಾರದ ಪ್ರಾರ್ಥನಾ ಸಭೆಗಳ ಸಮಯದಲ್ಲಿ ಕ್ರೈಸ್ತ ಧರ್ಮದಲ್ಲಿ ನಂಬಿಕೆ ಇರದವರು, ಅಸಡ್ಡೆ ತೋರುವವರು ಹಾಗು ವಿಚಾರವಾದಿಗಳು ಚರ್ಚುಗಳ ಮುಂದೆ ಹಾಜರಾಗಿ ಪ್ರತಿಭಟಿಸುತ್ತಾರೆ. ಆದರೆ ಅವರು ಕೂಡ ಸರ್ಕಾರದ ದೃಷ್ಟಿಯಲ್ಲಿ ಕ್ರೈಸ್ತರೇ".

ನೀವು ಬೇಕಿದ್ದರೆ ನನ್ನನ್ನು "ಶಾಸನವಿಹಿತ" ಹಿಂದೂ ಎಂದು ಕರೆಯಬಹುದು ಎಂದು ಡಾ. ಅಂಬೇಡ್ಕರ್ ಅವರು ನಗೆಯ ಚಟಾಕಿಯನ್ನು ಹಾರಿಸುತ್ತಾ ಹೇಳಿದ್ದರು. "ಧರ್ಮದ ಬಗೆಗಿನ ನನ್ನ ನಂಬಿಕೆ ಎಷ್ಟು ಆಳವಾಗಿ ಆದರೂ ಇರಲಿ, ನಾನು ನನ್ನ ರಾಜಕೀಯ ಹಕ್ಕುಗಳಿಗಾಗಿ ಒತ್ತಾಯಿಸುತ್ತೇನೆ."

ಅವರ ವಾದವನ್ನು ಗಟ್ಟಿಗೊಳಿಸುವ ಸಲುವಾಗಿ ಅಂಬೇಡ್ಕರ್ ಅವರು ಪಂಜಾಬ್ ರಾಜ್ಯದ ಎರಡು

ಉದಾಹರಣೆಗಳನ್ನು ನೀಡುತ್ತಾರೆ. ಇಲ್ಲಿ ಶೋಷಿತ ವರ್ಗದ ಎರಡು ಪಂಗಡಗಳವರನ್ನು "ಪರಿಶಿಷ್ಟ ಜಾತಿ" ಎಂದು ಕರೆಯಲಾಯಿತು", ಅದು ಕೂಡ ಅವರು ಹಿಂದೂಗಳಲ್ಲ ಎಂದು ತಿಳಿದ ನಂತರವೂ. ಈಗ ನೀಡುತ್ತಿರುವ ಉದಾಹರಣೆಗಳು ಆದ್ ಧರ್ಮಿಗಳು ಹಾಗು ರಾಮದಾಸಿಯರದ್ದು. ಮೊದಲನೆಯ ಪಂಗಡದವರು ವಿಧ್ಯುಕ್ತವಾಗಿಯೇ ಹಿಂದೂ ಧರ್ಮದಿಂದ ಹೊರ ಹೋಗಿದ್ದಾರೆ ಹಾಗು ಈ ವಿಷಯವನ್ನು ಸರ್ಕಾರಕ್ಕೂ ತಿಳಿಸಿದ್ದಾರೆ. ಹೀಗಿದ್ದರೂ ಕೂಡ ಇವರನ್ನು ಸಾಮಾನ್ಯ ಮತಕ್ಷೇತ್ರದಲ್ಲಿಯೇ ಇರಿಸಿ, "ಪರಿಶಿಷ್ಟ ಜಾತಿ" ಎಂಬ ವರ್ಗಕ್ಕೆ ಸೇರ್ಪಡೆ ಮಾಡಲಾಗಿದೆ.

### ೧೯೩೧ರ ಪಂಜಾಬ್ ರಾಜ್ಯದ ಜನಗಣತಿಯ ವರದಿಯ ಈ ರೀತಿ ಹೇಳುತ್ತದೆ

ಈ ಜನಗಣತಿಯಿಂದ ನಾವು ಅತ್ಯಂತ ಮುಖ್ಯವಾಗಿ ಗಮನಿಸಬೇಕು ಎಂದಿರುವ ವಿಷಯವೆಂದರೆ 'ಆದ್ ಧರ್ಮಿ" ಎಂಬ ಹೊಸ ಪದ ಪ್ರಯೋಗ. ಇದನ್ನು ಅಸಂಖ್ಯಾತ ಚಮ್ಮಾರರ, ಶೂದ್ರರ ಹಾಗು ಇತರ ಅಸ್ಪೃಶ್ಯರ ವಿಷಯದಲ್ಲಿ ಬಳಕೆ ಮಾಡಲಾಗುತ್ತಿದೆ. ಅದೇನೆಂದರೆ 'ಯಾರದಾರೂ ಆದ್ ಧರ್ಮಿ' ಎಂದು ಸಮೂದಿಸಿದರೆ ಅದನ್ನು ಹಾಗೆಯೆ ದಾಖಲಿಸಬೇಕು ಎಂಬ ಹೊಸ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಪಂಜಾಬ್ ರಾಜ್ಯದ ಆದ್ ಧರ್ಮಮಂಡಲವು ೧೯೩೦ರಲ್ಲಿ ಪಂಜಾಬ್ ಸರಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿ ಶೋಷಿತ ವರ್ಗದ ಜನರಲ್ಲಿ ಆದ್ ಧರ್ಮಿ ಜಾತಿಯೆಂದು ತಮ್ಮ ಧರ್ಮದ ಬಗ್ಗೆ ಜನಗಣತಿಯಲ್ಲಿ ನಿರೂಪಿಸುವವರಿಗೆ ಆ ಅವಕಾಶವನ್ನು ನೀಡಬೇಕು. ಏಕೆಂದರೆ ಅವರು ಭಾರತ ದೇಶದ ಮೂಲ ನಿವಾಸಿಗಳು ಇದರಿಂದಾಗಿ ಹಿಂದೂಗಳು ಅವರನ್ನು ಸಾಕಷ್ಟು ದೂರದಲ್ಲಿ ಇರಿಸಿದ್ದರು. ಆದ್ ಧರ್ಮದವರು ಹಿಂದೂ ಧರ್ಮದಲ್ಲಿ ತಮ್ಮ ನಂಬಿಕೆಯನ್ನು ಕಳೆದುಕೊಂಡಿದ್ದಾರೆ ಎಂದು ಕೇಳಿಕೊಂಡಿದ್ದರು. ಈ ರೀತಿಯ ಒಂದು ಆದೇಶವನ್ನು ಜನಗಣತಿ ಸಭೆಗೆ ಸರ್ಕಾರವು ಈಗಾಗಲೇ ನೀಡಿದೆ ಎಂದು ಆದ್ ಧರ್ಮ ಮಂಡಳಿಯ ಅಧ್ಯಕ್ಷರಿಗೆ ಸರ್ಕಾರವು ತಿಳಿಸಿತು. "ಆದ್ ಧರ್ಮ" ಎಂದರೆ ''ಪುರಾತನ ಧರ್ಮ" ಅಥವಾ ಮೂಲ ಧರ್ಮ ಎಂದು ಅರ್ಥ.

### ನಕಾರಾತ್ಮಕ ಧೋರಣೆ

ಡಾ. ಅಂಬೇಡ್ಕರ್ ಅವರು ಹೇಳುವಂತೆ, ಆದ್ ಧರ್ಮಿ ಕುರಿತಾದ ವಿವಾದ ಎಷ್ಟು ಗಂಭೀರವಾಯಿತು ಎಂದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಕೊಲೆಗಳು ಜರುಗಿದವು. ಅದೇನೆ ಆದರೂ ಆದ್ ಧರ್ಮಿಯರನ್ನು ತಾವು ಹಿಂದೂಗಳಲ್ಲ ಎಂಬ ಅವರ ಒಕ್ಕೊರಲಿನ ಕೂಗಿನ ಹೊರತಾಗಿಯೂ ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಿ ಅವರನ್ನು ಸಾಮಾನ್ಯ ಚುನಾವಣಾ ಕ್ಷೇತ್ರದಲ್ಲಿಯೇ ಉಳಿಸಿಕೊಳ್ಳಲಾಗಿದೆ.

ಇನ್ನು ಅವರ ಹಾಗು ಅವರ ಬೆಂಗಲಿಗರಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಹಿಂದೂ ಧರ್ಮದೆಡೆಗೆ ಇವರು ಅತ್ಯಂತ ನಕಾರಾತ್ಮಕ ಧೋರಣೆಯನ್ನು ಹೊಂದಿದ್ದಾರೆ, ಹಾಗೂ ಇನ್ನೂ ಯಾವ ಧರ್ಮದ ಸೇರ್ಪಡೆಯ ಕಡೆಗೂ ಸಕಾರಾತ್ಮಕ ಧೋರಣೆ ತಳೆಯುವುದು ಅವರಿಗೆ ಸಾಧ್ಯವಾಗಿಲ್ಲ.

ಈ ರೀತಿಯೇ "ರಾಮದಾಸಿ'ಗಳು ಜಾತಿಯಿಂದ ಸಿಖ್ಖರು. ಆದರೆ ಅವರನ್ನು ಕೂಡ ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರ್ಪಡೆ ಮಾಡಿ ಅವರನ್ನು ಸಾಮಾನ್ಯ ಮತಕ್ಷೇತ್ರದಲ್ಲಿಯೇ ಉಳಿಸಿಕೊಳ್ಳಲಾಗಿದೆ. ಇದರಿಂದ ಮತಕ್ಷೇತ್ರ ವಿಂಗಡಣೆಯ ಸಂದರ್ಭದಲ್ಲಿ ಜಾತಿಯು ಮಹತ್ತರ ಪಾತ್ರ ವಹಿಸುವುದೇ ಇಲ್ಲ

ಎಂದು ನಮಗೆ ತಿಳಿಯುತ್ತದೆ ಎಂದು ಡಾ. ಅಂಬೇಡ್ಕರ್ ಹೇಳುತ್ತಾರೆ. ಏಕೆಂದರೆ ಇದು ಜಾತಿಯ ಆಧಾರದ ವಿಂಗಡಣೆಗೆ ತದ್ವಿರುದ್ಧವಾಗಿದೆ ಎಂದು ತಿಳಿಯುತ್ತಿದೆ.

ಆದ್ದರಿಂದ ಪೂನಾ ಒಪ್ಪಂದದ ದೃಷ್ಟಿಕೋನದಿಂದ ಗಮನಿಸಿದರೂ ಕೂಡ ಹಿಂದೂಗಳು ಅಸ್ಪೃಶ್ಯರಿಗಾಗಿ ಯಾವುದೇ ರೀತಿಯ ತ್ಯಾಗವನ್ನು ಮಾಡಿಲ್ಲ. ಆದ್ದರಿಂದ ಅಸ್ಪೃಶ್ಯರು ಹಿಂದೂ ಧರ್ಮವನ್ನು ತೊರೆದರೂ ಅವರ ಧಾರ್ಮಿಕ ಹಾಗು ರಾಜಕೀಯ ಹಕ್ಕುಗಳ ಮೇಲೆ ಯಾವುದೇ ರೀತಿಯ ಪರಿಣಾಮವೂ ಬೀರುವುದಿಲ್ಲ ಎಂದು ಅಂಬೇಡ್ಕರ್ ಅವರು ಹೇಳುತ್ತಾರೆ.[೧]

* * * * *

## ೧೩
## ಸ್ವಾರ್ಥದ ಉದ್ದೇಶ ಇರದ ಪರಿವರ್ತನಾ ಚಳುವಳಿ

ಅಸ್ಪೃಶ್ಯರ ಮತಾಂತರಕ್ಕೆ ವಿರುದ್ಧವಾಗಿ ರಾವ್‌ಬಹದ್ದೂರ್ ಎಂ.ಸಿ.ರಾಜಾ ಅವರು ನೀಡಿದ್ದ ಹೇಳಿಕೆಗೆ ಡಾ.ಅಂಬೇಡ್ಕರ್ ಅವರ ಪ್ರತಿಕ್ರಿಯೆ.

ಹೊರನೋಟದಲ್ಲಿ ಒಂದು ವಿಷಯವನ್ನು ಹೇಳಬೇಕೆಂದರೆ ಈ ಹೇಳಿಕೆಯನ್ನು ಪ್ರಕಟಣೆಗೆ ಎಂದು ದಿನಪತ್ರಿಕೆಗಳಿಗೆ ಕಳುಹಿಸಿಕೊಟ್ಟಿರುವುದು ಶ್ರೀ ರಾಜಾ ಅವರು ಮಾಡಿರುವಂತಹ ಅಸಭ್ಯವರ್ತನೆ. ಏಕೆಂದರೆ, ಮತಾಂತರ ಕುರಿತು ಅಂತಿಮ ನಿರ್ಧಾರ ಆಗುವವರೆಗೂ ಈ ಪತ್ರವನ್ನು ಅತ್ಯಂತ ಖಾಸಗಿ ಹಾಗು ರಹಸ್ಯವಾಗಿ ಪರಿಗಣಿಸಬೇಕು ಎಂದು ಡಾ. ಮೂಂಜೆ ಅವರು ಅತ್ಯಂತ ಸ್ಪಷ್ಟವಾಗಿ ತಮ್ಮ ಪತ್ರದಲ್ಲಿ ಹೇಳಿದ್ದರು. ಈ ವಿಷಯವು ರಾಜ ಅವರ ಗಮನಕ್ಕೆ ಬಂದಿಲ್ಲ ಎಂದರೆ ಅದು ನಂಬಲಾಗದಂತಹ ವಿಷಯ. ಈ ವಿಷಯವನ್ನು ಮಾಧ್ಯಮದವರಿಗೆ ಬಿಡುಗಡೆ ಮಾಡುವ ಮುನ್ನ ರಾಜ ಅವರು ಡಾ. ಮೂಂಜೆ ಅವರ ಅನುಮತಿಯನ್ನು ಪಡೆದುಕೊಳ್ಳಬೇಕಿತ್ತು. ರಾಜಾ ಅವರ ಈ ರೀತಿಯ ವರ್ತನೆ ಒಬ್ಬ ಸಭ್ಯ ವ್ಯಕ್ತಿಗೆ ಸೂಕ್ತವಾದ ವರ್ತನೆ ಅಲ್ಲ.

ಅಸ್ಪೃಶ್ಯರು ಮತಾಂತರಗೊಳ್ಳಲು ಸಿಖ್ ಧರ್ಮವನ್ನು ಆಯ್ಕೆ ಮಾಡಿಕೊಳ್ಳಬಹುದು. ಈ ವಿಷಯವು ನನ್ನ ಹಲವಾರು ಹಿಂದೂ ಮಿತ್ರರು ಹಾಗೂ ಅಸ್ಪೃಶ್ಯರ ಮತಾಂತರದ ವಿಷಯದಲ್ಲಿ ಆಸಕ್ತಿ ವಹಿಸಿರುವ ಅಸ್ಪೃಶ್ಯವರ್ಗದ ಸದಸ್ಯರಿಗೂ ತಿಳಿದಿದೆ.

ಅಸ್ಪೃಶ್ಯರು ಸಿಖ್ ಧರ್ಮಕ್ಕೆ ಮತಾಂತರ ಆಗುವುದನ್ನು ಕುರಿತು ರಾವ್ ಬಹದ್ದೂರ್ ಎಂ.ಸಿ. ರಾಜಾ ಹಾಗು ಡಾ. ಮೂಂಜೆ ಅವರ ನಡುವೆ ನಡೆದಂತಹ ಪತ್ರವ್ಯವಹಾರವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅದನ್ನು ನಾನು ಗಮನಿಸಿದ್ದೇನೆ ಕೂಡ.

ರಾಜಾ ಅವರು ಡಾ.ಅಂಬೇಡ್ಕರ್ ಅವರ ಅತಿ ದೊಡ್ಡ ರಹಸ್ಯವನ್ನು ಜನತೆಯೆದುರು ಬಯಲು ಮಾಡಿದ್ದೇನೆ ಎಂದು ಬೀಗುವ ಅಗತ್ಯವೂ ಇಲ್ಲ. ರಾಜಾ ಅವರ ಪತ್ರಗಳಿಗೆ ನಾನು ಯಾವುದೇ ಪ್ರಾಮುಖ್ಯವನ್ನೂ ನೀಡುವುದಿಲ್ಲ. ನನ್ನ ದೃಷ್ಟಿಯಲ್ಲಿ ಅಸ್ಪೃಶ್ಯರ ಗುಂಪಿನಲ್ಲಿ ರಾಜಾ ಅವರನ್ನು ಗೌರವದಿಂದ ಕಾಣಲಾಗುತ್ತಿಲ್ಲ ಮತ್ತು ಅವರ ಅಭಿಪ್ರಾಯವು ಇಲ್ಲಿ ಯಾವುದೇ ಮಹತ್ವವನ್ನೂ ಪಡೆಯುವುದಿಲ್ಲ. ಒಂದು ವೇಳೆ ಅವರ

---

1. The Times of India dated 24th Jylu 1936

ಅಭಿಪ್ರಾಯಕ್ಕೆ ಸ್ವಲ್ಪವಾದರೂ ಬೆಲೆಯನ್ನು ನೀಡಬೇಕು ಎಂದು ನನಗೆ ಎನಿಸಿದ್ದರೆ ಅವರ ಮನಃಪರಿವರ್ತನೆ ಮಾಡುವ ಪ್ರಯತ್ನವನ್ನು ನಾನು ಖಂಡಿತವಾಗಿಯೂ ಮಾಡುತ್ತಿದ್ದೆ.

ರಾವ್ ಬಹದ್ದೂರ್ ರಾಜಾ ಅವರನ್ನು ಕಡೆಗಣಿಸಿ ರಾವ್ ಬಹದ್ದೂರ್ ಶ್ರೀನಿವಾಸನ್ ಹಾಗು ನನ್ನನ್ನು ಅಸ್ಪೃಶ್ಯರ ಪ್ರತಿನಿಧಿಗಳಾಗಿ ದುಂಡು ಮೇಜಿನ ಸಮಾವೇಶಕ್ಕೆ ಆಹ್ವಾನಿಸಲಾಗಿತ್ತು. ಇದರಿಂದ ರಾಜಾ ಅವರಿಗೆ ನನ್ನ ಬಗ್ಗೆ ಅಸೂಯೆ ಉಂಟಾಗಿ ಅವರು ನಿರಂತರವಾಗಿ ನನ್ನನ್ನು ಟೀಕಿಸುತ್ತಿದ್ದಾರೆ ಹಾಗು ವಿರೋಧಿಸುತ್ತಿದ್ದಾರೆ.

ನಾನು ನನ್ನ ಜನರ ಸೇವೆ ಮಾಡಲು ಪ್ರಯತ್ನಿಸುತ್ತಿದ್ದೇನೆ. ಆದರೆ ರಾಜಾ ಅವರು ನನ್ನನ್ನು ವಿರೋಧಿಸುತ್ತಿದ್ದಾರೆ ಹಾಗು ನಿರಂತರವಾಗಿ ನನ್ನಲ್ಲಿ ತಪ್ಪು ಹುಡುಕುವ ಪ್ರಯತ್ನಪಡುತ್ತಿದ್ದಾರೆ. ಅದೇ ಸಮಯದಲ್ಲಿ ಪತ್ರಿಕೆಗಳ ಮೂಲಕ ಸ್ವಯಂ ಪ್ರಚಾರವನ್ನು ಮಾಡಿಕೊಳ್ಳುವ ಕಲೆಯನ್ನು ಇವರು ಕರಗತ ಮಾಡಿಕೊಂಡಿದ್ದಾರೆ. ಆದರೆ ಈ ವಿಷಯಕ್ಕೆ ನಾನು ಅಷ್ಟಾಗಿ ಪ್ರಾಮುಖ್ಯ ನೀಡುವುದಿಲ್ಲ. ಆದರೆ ಹಿಂದುತ್ವವನ್ನು ತೊರೆದು ಬೇರೆಯ ಮತವನ್ನು ಆಲಿಂಗಿಸಿಕೊಳ್ಳಬೇಕು ಎಂಬ ಅಸ್ಪೃಶ್ಯರ ಹೋರಾಟವು ರಾಜಾ ಅವರಿಗೆ ಏಕೆ ನೋವನ್ನು ಉಂಟು ಮಾಡುತ್ತಿದೆ ಎಂದು ನನಗೆ ತಿಳಿಯುತ್ತಿಲ್ಲ. ಒಂದು ವೇಳೆ ರಾಜ ಅವರು ಹಿಂದೂ ಧರ್ಮವನ್ನು ತೊರೆಯಲು ಸಿದ್ಧರಿಲ್ಲದೇ ಹೋದರೇ, ಯಾರೂ ಅವರನ್ನು ಬಲವಂತ ಪಡಿಸುವುದಿಲ್ಲ. ಆದರೆ ಇತರರ ಈ ವಿಷಯದಲ್ಲಿ ಅಭಿಪ್ರಾಯವನ್ನು ಮಂಡಿಸುವ ಅಧಿಕಾರವು ಅವರಿಗಿಲ್ಲ. ರಾಜಾ ಅವರು ಹೇಳುತ್ತಾರೆ "ನಾನೊಬ್ಬ ಹಿಂದೂ ಆಗಿಯೇ ಬದುಕಿರುತ್ತೇನೆ ಮತ್ತು ಹಿಂದೂ ಆಗಿಯೇ ಸಾಯುತ್ತೇನೆ." ಆ ರೀತಿ ಮಾಡಲು ಅವರು ಸ್ವತಂತ್ರರು ಕೂಡ. ಆದರೆ ಅವರಿಗೆ ಒಂದು ವಿಷಯವನ್ನು ತಿಳಿಸಲು ಇಚ್ಛಿಸುತ್ತೇನೆ. ಅವರು ಈ ರೀತಿ ಪತ್ರಿಕೆಗಳಿಗೆ ಹೇಳಿಕೆ ನೀಡುವುದರ ಮೂಲಕ ತಮಗೆ ಹಿಂದೂ ಧರ್ಮದ ಬಗ್ಗೆ ಇರುವ ಪ್ರೀತಿಯನ್ನು ಅವರು ವ್ಯಕ್ತಪಡಿಸುತ್ತಿದ್ದಾರೆ. ಆದರೆ ಅವರು ಬೇರೆ ಯಾವುದಾದರೂ ಮತಕ್ಕೆ ಮತಾಂತರ ಆಗುವವರೆಗೂ 'ಪರೈಯಾ' ಆಗಿಯೇ ಜೀವಿಸುತ್ತಾರೆ ಹಾಗು 'ಪರೈಯಾ' ಆಗಿಯೇ ಸಾಯುತ್ತಾರೆ. ಅವರು ಒಂದು ವಿಷಯವನ್ನು ನೆನಪಿನಲ್ಲಿ ಇಡಬೇಕು. ಹಿಂದೂ ಧರ್ಮೀಯರ ಜೊತೆ ಇರುವುದರಿಂದ, ಹಿಂದೂ ಧರ್ಮದ ಸಹವರ್ತಿಗಳನ್ನು ಪಡೆಯುವಷ್ಟರಿಂದ ಅಸ್ಪೃಶ್ಯರಾಗಿ ಹುಟ್ಟಿರುವ ಅವರು ಆ ಶಾಪದಿಂದ ಮುಕ್ತರಾಗುವುದು ಸಾಧ್ಯವಿಲ್ಲ. ಕೇವಲ ಧಾರ್ಮಿಕ ಕಾರಣಗಳಿಗಾಗಿ ಮಾತ್ರವೇ ಮತಾಂತರ ಆಗಬೇಕು ಎಂದವರು ಹೇಳುವುದರಲ್ಲಿ ಯಾವುದೇ ಅರ್ಥವಿಲ್ಲ. ಈ 'ಧಾರ್ಮಿಕ' ಕಾರಣಕ್ಕಾಗಿ ಮಾತ್ರವೇ ಅವರು ಹಿಂದೂ ಧರ್ಮದಲ್ಲಿ ಉಳಿಯಲು ಇಚ್ಛಿಸುತ್ತಾರೆಯೇ ಎಂದು ನಾನು ಅವರನ್ನು ಕೇಳಬಯಸುತ್ತೇನೆ. ಒಂದು ವೇಳೆ ಅವರು ಕೇವಲ ಧಾರ್ಮಿಕ ಕಾರಣಕ್ಕಾಗಿ ಮಾತ್ರವೇ ಹಿಂದೂ ಧರ್ಮದಲ್ಲಿ ಉಳಿಯ ಬಯಸುತ್ತಾರೆ ಎಂದರೆ ಅವರಿಗೆ ಮೀಸಲು ಸ್ಥಾನಗಳ ಬಗ್ಗೆ ಚಿಂತೆ ಏಕೆ? ಒಂದು ವೇಳೆ ಅವರು ಹಿಂದೂ ಆಗಿಯೇ ಜೀವಿಸಿ ಹಿಂದೂ ಆಗಿಯೇ ಮೃತರಾಗಬೇಕು ಎಂದಾದರೇ ಅವರು ಮೀಸಲು ಸ್ಥಾನಗಳನ್ನು ಏಕೆ ಅಪೇಕ್ಷಿಸುತ್ತಾರೆ?

ಶ್ರೀ ಗಾಂಧಿ ಹಾಗು ಶ್ರೀ ಮಾಳವಿಯ ಅವರಿಗೆ ಅಸ್ಪೃಶ್ಯರು ಮತಾಂತರ ಆಗುತ್ತಿರುವುದನ್ನು ಕುರಿತು ಮಾತನಾಡುವ ಯಾವುದೇ ನೈತಿಕ ಅಧಿಕಾರವಿಲ್ಲ. ಪೂನಾ ಒಪ್ಪಂದದ ಸಮಯದಲ್ಲಿ ಅವರು ನೀಡಿದ್ದ ಭರವಸೆಗಳನ್ನು ಪೂರೈಸುವಲ್ಲಿ ಅವರು ಸಂಪೂರ್ಣ ವಿಫಲರಾಗಿದ್ದಾರೆ.

ಶ್ರೀ ಗಾಂಧಿ ಅವರು ತಮಗೆ ನನ್ನ ನಿಲುವೇ ಅರ್ಥವಾಗುತ್ತಿಲ್ಲ ಎನ್ನುತ್ತಿದ್ದಾರೆ. ನನಗೂ ಕೂಡ ಅವರ ಭಾಷೆ ಹಾಗು ಕಾರ್ಯವನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತಿದೆ. ಅವರ ಪ್ರಕಾರ 'ಅಸ್ಪೃಶ್ಯರ

ಏಳಿಗೆಯ ಪ್ರಶ್ನೆಯು ಪ್ರತ್ಯೇಕ ಪ್ರಶ್ನೆಯಾಗಿದೆ' ಗಾಂಧಿಯವರು ಇತರ ಸಾಧುಸಂತರೊಂದಿಗೆ ಈ ಭಾಷೆಯನ್ನು ಬಳಸಬಹುದು. ಆದರೆ ನನಗೆ ಅದನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತದೆ. ನನ್ನಂತಹ ಒಬ್ಬ ಸಾಮಾನ್ಯ ಜೀವಿ, ಸಾಮಾನ್ಯ ಜೀವನ ನಡೆಸುತ್ತಿರುವವ, ಹಾಗು ಸಮಾಜದಲ್ಲಿ ಸಾಮಾನ್ಯನಂತೆ ಜೀವಿಸುತ್ತಿರುವವ ಗಾಂಧಿಯಂತಹ ಮಹಾತ್ಮರ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಗಾಂಧಿಯವರು ಕೊಡುಕೊಳ್ಳುವಿಕೆಯನ್ನು ಮಾಡಲು ಧರ್ಮ ಎಂಬುದು ಒಂದು 'ಸರಕು' ಅಲ್ಲ ಎನ್ನುತ್ತಾರೆ. ಈ ರೀತಿಯ ಅಭಿಪ್ರಾಯವನ್ನು ಮಹಾತ್ಮಾ ಗಾಂಧಿಯವರು ಇಷ್ಟೊಂದು ತಡವಾಗಿ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಪೂನಾ ಒಪ್ಪಂದದ ಸಮಯದಲ್ಲಿ ಈ ರೀತಿಯ ಕೊಡುಕೊಳ್ಳುವಿಕೆಗೆ ಸ್ವತಃ ಗಾಂಧಿಯವರೇ ಒಪ್ಪಿಕೊಂಡಿದ್ದರು. ಒಂದು ಕಾಲದಲ್ಲಿ ಒಬ್ಬ ಮನಷ್ಯನಿಗೆ ಜೀವಿಸಲು ಸೂರು ನೀಡಿ, ಹಸಿವು, ನೀರಡಿಕೆಯಂತಹ ಸಮಸ್ಯೆಗಳು ಎದುರಾಗದಂತೆ ನೋಡಿಕೊಂಡರೆ ಸಾಕು ಆತ ತೃಪ್ತನಾಗುತ್ತಿದ್ದ. ಆದರೆ ಆ ರೀತಿಯ ದಿನಗಳು ಈಗಿಲ್ಲ. ಈ ಕೇವಲ ಧಾರ್ಮಿಕ ಶಾಂತಿಯನ್ನು ಮಾತ್ರವೇ ಜನರು ಬಯಸುವುದಿಲ್ಲ.

ಗಾಂಧೀಜಿಯವರು, ಅಸ್ಪೃಶ್ಯರು ತಮ್ಮ ಜಾತಿಯನ್ನು ಮಾರಿಕೊಳ್ಳುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಅವರು ಒಂದು ವಿಷಯದತ್ತ ಗಮನ ಹರಿಸಬೇಕು ಅಸ್ಪೃಶ್ಯರು ಮತಾಂತರಗೊಳ್ಳುತ್ತಿರುವುದು ಯಾವುದೇ ಸ್ವಾರ್ಥದ ಉದ್ದೇಶಕ್ಕಾಗಿ ಅಲ್ಲ. ಗಾಂಧೀಜಿ ಅವರ ಪ್ರಕಾರ 'ಹಿಂದೂಗಳು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಹಾಗು ಖುದ್ದು ತಾವಾಗಿಯೇ ಮುಂದೆ ಬಂದು ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಪ್ರಯತ್ನ ಪಡಬೇಕು. ಆಗ ಅಸ್ಪೃಶ್ಯರು ಅಸ್ಪೃಶ್ಯತಾ ನಿವಾರಣೆಗೆ ಅಥವಾ ಅವರ ಏಳಿಗೆಗೆ ಪ್ರಯತ್ನ ಪಡಬೇಕಾಗಿಲ್ಲ. ಆಗ ಅಸ್ಪೃಶ್ಯರು ಕೈ ಮುಗಿದು ಕುಳಿತುಕೊಂಡು ಕೇವಲ ಪ್ರಾರ್ಥನೆಯನ್ನು ಮಾತ್ರವೇ ಮಾಡಬಹುದು. ದೇವರೇ... ಹಿಂದೂಗಳಿಗೆ ಬುದ್ಧಿ ಕೊಡು, ಧೈರ್ಯ ಕೊಡು, ಅವರು ಈ ಹಿಂದೆ ಮಾಡಿರುವ ಪಾಪಗಳನ್ನೆಲ್ಲಾ ಮನ್ನಿಸು. ಅವರಿಗೆ ತಮ್ಮ ಸಮಾಜವನ್ನು ಸುಧಾರಿಸುವಂತಹ ಶಕ್ತಿಯನ್ನು ನೀಡು. ಇದು ಗಾಂಧೀಜಿಯವರು ಅಸ್ಪೃಶ್ಯರಿಗೆ ನೀಡಿರುವ ಪವಿತ್ರವಾದ ಸಲಹೆ. ಈ ರೀತಿಯ ಪವಿತ್ರ ಬೋಧನೆಗಳು ಯಾರಿಗೂ ಯಾವುದೇ ರೀತಿಯ ಒಳ್ಳೆಯದನ್ನೂ ಮಾಡಲಾರದು ಅಥವಾ ಯಾವ ಸಮಸ್ಯೆಗೂ ಪರಿಹಾರ ನೀಡಲಾರದು. ಯಾವ ಬುದ್ಧಿವಂತ ಪುರುಷನೂ ಈ ರೀತಿಯ ಸಲಹೆಗೆ ಒಪ್ಪಲಾರ. ಇದು ಪ್ಲೇಗ್ ಮಾರಿ ಎಂಬ ಭೀಕರ ಹರಡುವ ಖಾಯಿಲೆ ಇರುವ ಸ್ಥಳದಲ್ಲಿ ಜನರಿಗೆ ನೀಡಿರುವ ಸಲಹೆಯಂತಿದೆ. "ಸಹೋದರರೇ, ನಿಲ್ಲಿರಿ ಹಾಗು ನನಗೆ ಕಿವಿಗೊಟ್ಟು ಕೇಳಿರಿ. ಈ ಖಾಯಿಲೆಗೆ ಯಾರೂ ಬೆದರುವ ಅಗತ್ಯವಿಲ್ಲ. ನಗರಸಭೆಯ ಸದಸ್ಯರು ತಮ್ಮ ಅಸಡ್ಡೆಗಾಗಿ ಒಂದು ದಿನ ಪಶ್ಚಾತ್ತಾಪ ಪಡುತ್ತಾರೆ. ಈ ಸಮಸ್ಯೆಯ ನಿವಾರಣೆಗೆ ಯಾವುದಾದರೂ ಒಂದು ಪರಿಹಾರವನ್ನು ಮಾಡಲಾಗುತ್ತದೆ. ಆದರೆ ನೀವು ಅದನ್ನು ಕಾದು ನೋಡಬೇಕು. ನೀವು ಈ ಮನೆಯನ್ನು ತೊರೆದು ಹೊರಡಲು ಅವಸರಿಸಬೇಡಿರಿ." ಈ ಮೇಲಿನ ಬೋಧನೆಯಲ್ಲಿ ಯಾವ ರೀತಿಯ ಜ್ಞಾನವನ್ನು ನೀವು ಪಡೆದುಕೊಂಡಿರೋ ಅದೇ ಜ್ಞಾನವೇ ಗಾಂಧೀಜಿಯವರ ಬೋಧನೆಯಲ್ಲಿ ಕೂಡ ದೊರೆಯುವುದು.

ಶ್ರೀ ರಾಜಗೋಪಾಲಾಚಾರಿ ಅವರು ಮತ್ತೊಬ್ಬ ಮುಂಗೋಪಿ. ವಯಸ್ಸಾದ ಈ ಮನೆಯ ಹಿರಿಯನಿಗೆ ಅತಿಯಾದ ಮಾತ್ರೆಗಳ ಸೇವನೆಯಿಂದ ಅಜೀರ್ಣವಾದಂತಿದೆ. ಈತ ವ್ಯಂಗದ ಮಾತುಗಳನ್ನು ಆಡುವ ಅಭ್ಯಾಸ ಮಾಡಿಕೊಂಡುಬಿಟ್ಟಿದ್ದಾರೆ. ಈ ಮತಾಂತರದ ಹೋರಾಟವನ್ನು ಅವರು "ಸೈತಾನಿ" ಕೃತ್ಯ ಎಂದು ಬಣ್ಣಿಸಿದ್ದಾರೆ.

ಅಸ್ಪೃಶ್ಯರು ಗಂಭೀರವಾಗಿ ಸಿಖ್ ಧರ್ಮಕ್ಕೆ ಮತಾಂತರ ಹೊಂದುವ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದಾರೆ ಎಂದರೆ, ಈ ಒಂದು ಹೆಜ್ಜೆ ನಿಜವಾಗಿಯೂ ರಾಕ್ಷಸರ ಹೆಜ್ಜೆಯೇ ಎಂದು ಹಿಂದೂಗಳು ಯೋಚಿಸಬೇಕು. ಹಿಂದೂ ಧರ್ಮದ ಭವಿಷ್ಯದ ಬಗ್ಗೆ ಚಿಂತಿಸುವ ಹಿಂದೂಗಳು ಒಂದು ವಿಷಯವನ್ನು ಯೋಚಿಸಬೇಕು. ಈ ಮಹಾನ್ ಬ್ರಾಹ್ಮಣ ಎಂದು ಭಾವಿಸಲ್ಪಟ್ಟಿರುವ ರಾಜಗೋಪಾಲಾಚಾರಿ ಎಂಬಾತ ಸಿಖ್ ಧರ್ಮಕ್ಕೆ ಮತಾಂತರವಾಗುವುದನ್ನು 'ಸೈತಾನಿ' ಎಂದು ಕರೆಯುತ್ತಾರೆ. ಈತನ ಬುದ್ಧಿ ನಿಜವಾಗಿಯೂ ಸ್ಥಿಮಿತದಲ್ಲಿದೆಯೇ?

ನಿಜ ಹೇಳಬೇಕೆಂದರೆ ಈ 'ಸೈತಾನಿ' ಪದ ಪ್ರಯೋಗವನ್ನು ನಾವು ಯಾರ ಮೇಲೆ ಬೇಕಾದರೂ ಪ್ರಯೋಗ ಮಾಡಬಹುದು. ಡಾ. ಮೂಂಜೆ ಅವರದ್ದು ಇಲ್ಲಿ ಪ್ರಮುಖ ತಪ್ಪು. ಏಕೆಂದರೆ ಅವರೇ ಈ ರಹಸ್ಯವಾದ ಸಂಭಾಷಣೆಯನ್ನು ಮಾಧ್ಯಮದ ಜನರಿಗೆ ಬಿಡುಗಡೆ ಮಾಡಿದ್ದು. ಈ ವಿಷಯದಲ್ಲಿ ಮತ್ತೇನೂ ನಾನು ಹೇಳಬಯಸುವುದಿಲ್ಲ.

ಶಂಕರಾಚಾರ್ಯ ಡಾ.ಕುರ್ತಕೋಟಿ, ಹಾಗು ಇತರ ಪ್ರಮುಖ ಹಿಂದೂ ನಾಯಕರು ಅಸ್ಪೃಶ್ಯರು ಸಿಖ್ ಧರ್ಮವನ್ನು ಆಲಂಗಿಸಿಕೊಳ್ಳುವ ಪರವಾಗಿದ್ದಾರೆ. ವಾಸ್ತವವಾಗಿ ಅಸ್ಪೃಶ್ಯರು ಸಿಖ್ ಧರ್ಮಕ್ಕೆ ಮತಾಂತರಗೊಳ್ಳಬೇಕು ಎಂಬ ಸೂಚನೆಯ ಪ್ರಸ್ತಾಪವನ್ನು ಮಾಡಿದವರು ಇವರೇ. ನನಗೂ ಈ ಧರ್ಮಕ್ಕೆ ಮತಾಂತರಗೊಳ್ಳಬೇಕು ಎಂದು ಬಲವಂತಮಾಡುತ್ತಿದ್ದಾರೆ. ನಾನು ಕೂಡ ಇವರ ಸಲಹೆಗೆ ಒಪ್ಪಿಕೊಂಡೆ. ಏಕೆಂದರೆ ಹಿಂದೂ ಧರ್ಮದ ಕಡೆಗೆ ನನ್ನದೂ ಕೂಡ ಜವಾಬ್ದಾರಿ ಇದೆಯೆಂದು ನಾನು ಭಾವಿಸಿದ್ದೇನೆ. ಇದೀಗ ಪತ್ರಿಕೆಯಲ್ಲಿ ನನ್ನ ಅಭಿಪ್ರಾಯವನ್ನು ಹಿಂದೂಗಳು ಓದಿದ್ದಾರೆ. ಶ್ರೀ ರಾಜಾ, ಶ್ರೀ ಗಾಂಧೀ ಹಾಗೂ ಶ್ರೀ ರಾಜಗೋಪಾಲಾಚಾರಿ ಅವರು ಸಲಹೆ ನೀಡಿರುವುದನ್ನೂ ಗಮನಿಸಿರಬಹುದು. ಆದ್ದರಿಂದ ಇದೀಗ ನೀವೇ ನಿರ್ಧಾರ ಮಾಡಿರಿ ಸಿಖ್ ಧರ್ಮಕ್ಕೆ ಅಸ್ಪೃಶ್ಯರು ಮತಾಂತರ ಹೊಂದುವುದು ಹಿಂದೂ ಧರ್ಮಕ್ಕೆ ಒಳ್ಳೆಯದೋ ಇಲ್ಲವೋ ಎಂಬುದನ್ನು.

* * * * *

## ೧೪
## ಸ್ವತಂತ್ರ ಕಾರ್ಮಿಕರ ಪಕ್ಷ. ಶೋಷಿತ ವರ್ಗದವರ ಏಳಿಗೆಗಾಗಿ ದುಡಿಯುವ ಪಕ್ಷ

೧೯೩೭ ಜನವರಿ ೧೪ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಬೊಂಬಾಯಿ ಲಂಡನ್ನಿನಿಂದ ಆಗಮಿಸಿದರು. ಅಂದು ದಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಪತ್ರಕರ್ತ ಅಂಬೇಡ್ಕರ್ ಅವರನ್ನು ಸಂದರ್ಶಿಸಿದ. ಆ ಸಂದರ್ಶನವನ್ನು ಕೆಳಗೆ ನೀಡಲಾಗಿದೆ: ಸಂಪಾದಕರು.

ಯುರೋಪ್ ಪ್ರವಾಸಕ್ಕೆ ತಾವು ತೆರಳಿದ್ದು ಕೇವಲ ಆರೋಗ್ಯದ ದೃಷ್ಟಿಯಿಂದ ಮಾತ್ರ ಹಾಗು ಬಹಳಷ್ಟು ಸಮಯವನ್ನು ವಿಯೆನ್ನಾ ಹಾಗು ಬರ್ಲಿನ್‌ನಲ್ಲಿ ಕಳೆದೆ. ಲಂಡನ್ನಿನಲ್ಲಿ ಇದ್ದದು ಕೇವಲ ೧ ವಾರ ಮಾತ್ರವೇ ರಾಜಕೀಯಕ್ಕೆ ಸಂಬಂಧಿಸಿದಂತಹ ಯಾವ ರೀತಿಯ ಮಾತುಕತೆಯನ್ನು ತಾವು ಯಾರೊಂದಿಗೂ ನಡೆಸಲಿಲ್ಲ ಎಂದು ಅವರು ತಿಳಿಸಿದರು.

ಹಿಂದೂ ಧರ್ಮವನ್ನು ತೊರೆಯುವ ಕುರಿತಾಗಿ ಯಾವುದಾದರೂ ನಿರ್ಧಾರಕ್ಕೆ ಬಂದಿದ್ದೀರಾ ಎಂದು ಪ್ರಶ್ನಿಸಿದಾಗ, ಅವರು ಈ ನಿರ್ಧಾರವನ್ನು ಮಾಡಿಯಾಗಿದೆ, ಆದರೆ ಯಾವ ಧರ್ಮವನ್ನು ಸೇರಬೇಕು ಎಂದು ಇನ್ನೂ ನಿರ್ಧಾರ ಮಾಡಿಲ್ಲ ಎಂದರು.

ಡಾ. ಅಂಬೇಡ್ಕರ್ ಅವರು ಇದೀಗ ತಾವು ಗಮನ ನೀಡುವುದು ಬೊಂಬಾಯಿಯ ಶಾಸನ ಸಭೆಯ ಚುನಾವಣೆಯ ಕಡೆಗೆ ಎಂದರು. ಈಗ ತಮ್ಮನ್ನು ತಾವು ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಳ್ಳುವುದಾಗಿ ನುಡಿದರು. ಹುಟ್ಟುಹಾಕಿದ ಸ್ವತಂತ್ರ ಕಾರ್ಮಿಕರ ಪಕ್ಷವು ಶಾಸನ ಸಭೆಯಲ್ಲಿ ಶೋಷಿತ ವರ್ಗದವರ ರಾಜಕೀಯ ಹಾಗು ಸಾಮಾಜಿಕ ಏಳಿಗೆಗೆ ಹೋರಾಡಲು ಪಣ ತೊಟ್ಟಿದೆ. ಈ ಪಕ್ಷವನ್ನು ಪ್ರತಿನಿಧಿಸುವ ಎಲ್ಲಾ ಅಭ್ಯರ್ಥಿಗಳೂ ಚುನಾವಣೆಯಲ್ಲಿ ಯಶಸ್ವಿಯಾಗಿ ಹೊರ ಹೊಮ್ಮುತ್ತಾರೆ ಎಂಬ ಭರವಸೆಯನ್ನು ಅವರು ವ್ಯಕ್ತಪಡಿಸಿದರು.

ಅವರು ಬೊಂಬಾಯಿಗೆ ಆಗಮಿಸಿದಾಗ ಡಾ.ಅಂಬೇಡ್ಕರ್ ಅವರಿಗೆ ಅಭೂತಪೂರ್ವವಾದ ಸ್ವಾಗತವನ್ನು ಕೋರಲಾಯಿತು. ಖಾಕಿ ಬಟ್ಟೆಯನ್ನು ಧರಿಸಿದ್ದ ಸಾಮಾಜಿಕ ಸಮಾನತಾ ಗುಂಪಿನ ಸುಮಾರು ೧,೦೦೦ ಕಾರ್ಯಕರ್ತರು ಬಿಲ್ಲಾರ್ಡ್ ಪಯಿರ್ ನಿಲ್ದಾಣದಿಂದ ಅಲೆಗ್ಸಾಂಡ್ರ ಡಾಕ್ ಸಂಖ್ಯೆ ೧೮ರ ವರೆಗೆ ಸಾಲಾಗಿ ನಿಂತು ಅಂಬೇಡ್ಕರ್ ಅವರಿಗೆ ಜೈಕಾರ ಕೂಗುತ್ತಿದ್ದರು.

ಕಾರ್ಮಿಕ ಪಕ್ಷದಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳಲ್ಲಿ ಹಲವರು ಅಂಬೇಡ್ಕರ್ ಅವರನ್ನು ಸ್ವಾಗತಿಸಲು ಬಂದರಿನಲ್ಲಿ ನೆರೆದಿದ್ದರು. ಅವರಲ್ಲಿ ಪ್ರಮುಖರು ಎಂದರೆ ಬಿ.ಕೆ. ಗಾಯಕ್‌ವಾಡ್ (ನಾಸಿಕ್ ಜಿಲ್ಲೆ), ಶ್ರೀ ಪ್ರಭಾಕರ ರೋಹಂ (ಅಹ್ಮದ್ ನಗರ್) ಶ್ರೀ. ಬಿ.ಎಚ್.ವರಲೆ (ಬೆಳಗಾವಿ), ಶ್ರೀ ಆರ್. ಆರ್. ಭೋಲೆ (ಪೂನ) ಶ್ರೀ ಬಿ.ಜೆ. ಸಾವಡ್ಕರ್, ಶ್ರೀ ಎಸ್.ಜಿ. ಟಿಪ್ನಿಸ್ (ಕೋಲಾಬಾ) ಶ್ರೀ ಜಿ.ಆರ್. ಗಾಟ್ಗೆ (ರತ್ನಗಿರಿ), ಶ್ರೀ ಆರ್. ಈ ಭಟ್ನಾಗರ್ (ಥಾನಾ) ಹಾಗು ಶ್ರೀ. ವಿ.ಎ. ಗಡ್ಕರಿ.[೧]

* * * *

## ೧೫

## ಭಾರತೀಯರ ನಾಗರಿಕ ಹಕ್ಕುಗಳು

ಅಸ್ಪೃಶ್ಯತೆ ಹಾಗು ಶೋಷಣೆಯನ್ನು ಕೂಡ ಡಾ. ಅಂಬೇಡ್ಕರ್ ಅವರು ನಾಗರಿಕ ಹಕ್ಕುಗಳ ಉಲ್ಲಂಘನೆ ಎಂದೇ ಭಾವಿಸಿದ್ದರು. ಏಕೆಂದರೆ ಇಡೀ ಸಮುದಾಯಕ್ಕೆ ನೀಡುವಂತಹ ಅಗೌರವ ಅದಾಗಿತ್ತು. ನಾಗರಿಕ ಹಕ್ಕುಗಳ ಒಕ್ಕೂಟದ ಕಾರ್ಯಾಧ್ಯಕ್ಷರಾದಂತಹ ಡಾ. ಕೆ.ಬಿ. ಮೆನನ್ ಅವರಿಗೆ ಜೂನ್ ೧೯೩೭ರಲ್ಲಿ ಅವರು ಬರೆದ ಪತ್ರವು ಅತ್ಯಂತ ಅರ್ಥಪೂರ್ಣವಾಗಿದೆ.

ಭೀಮ್‌ರಾವ್ ಆರ್. ಅಂಬೇಡ್ಕರ್<br>M.A Phd, D.S.C<br>ಬ್ಯಾರಿಸ್ಟರ್–ಅಟ್–ಲಾ

ರಾಜಗೃಹ<br>ದಾದರ್, ಬೊಂಬಾಯಿ–೧೪<br>೮ನೆಯ ಜೂನ್, ೧೯೩೭

ಪ್ರೀತಿಯ ಶ್ರೀ ಮೆನನ್,

---

೧. ದಿ ಟೈಂಸ್ ಆಫ್ ಇಂಡಿಯಾ<br>೧೫ ಜನವರಿ ೧೯೩೭<br>Khaimode ಸಂ. ೭ ಪು. ೫೭–೫೯ರಲ್ಲಿ ಪುನಮರ್ಯದ್ರಿತ.

ತಾವು ೧೯ನೆಯ ಮೇ ೧೯೩೭ ರಂದು ಬರೆದ ಪತ್ರ (ಸಂಖ್ಯೆ ೯೮೮) ನನಗೆ ಬಂದು ತಲುಪಿದೆ. ಅದರಲ್ಲಿ ತಾವು ತಮ್ಮ ಪಕ್ಷದ ಘೋಷಣೆಗೆ ಭಾರತೀಯ ನಾಗರಿಕ ಹಕ್ಕುಗಳ ಕಾಯ್ದೆಯ ಒಕ್ಕೂಟದ ಪರವಾಗಿ ಸಹಿ ಹಾಕುವಂತೆ ಹೇಳಿದ್ದೀರಿ. ಈ ಪತ್ರ ಬಂದಿರುವ ವಿಷಯ ನನಗೆ ಬೊಂಬಾಯಿ ತಲುಪುವವರೆಗೂ ಎಂದರೆ ೨೫ನೆಯ ಮೇ ವರೆಗೂ ತಿಳಿದಿರಲಿಲ್ಲ. ಆದ್ದರಿಂದ ಈ ಮೊದಲು ಉತ್ತರಿಸಲು ಸಾಧ್ಯವಾಗಲಿಲ್ಲ.

ನಾನು ನಿಮ್ಮ ಪಕ್ಷದ ಘೋಷಣೆಯನ್ನು ಓದಿರುವೆ. ಆದರೆ ಕ್ಷಮಿಸಿ, ನನಗೆ ಇದು ಸಮಾಧಾನ ನೀಡಿಲ್ಲ. ಭಾರತ ಸರ್ಕಾರದ ಗಡಿ ಕಾಯ್ದೆಯನ್ನು ನೀವು ಖಂಡಿಸಿದ್ದೀರಿ. ಇದು ಭಾರತೀಯ ನಾಗರಿಕರ ಹಕ್ಕುಗಳ ಅಡಿಯಲ್ಲಿ ಹೇಗೆ ಬರುತ್ತದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇತ್ತ ವ್ಯವಸ್ಥಿತವಾಗಿ ಶೋಷಿತ ವರ್ಗದ ಜನರ ಮೇಲೆ ಹಿಂದೂಗಳು ಮಾಡುತ್ತಿರುವ ಶೋಷಣೆಯ ಬಗ್ಗೆ ನೀವು ಉಲ್ಲೇಖವನ್ನೇ ಮಾಡಿಲ್ಲ. ಇದು ಖಂಡಿತವಾಗಿಯೂ ಭಾರತೀಯ ಪೌರ ಸ್ವಾತಂತ್ರದ ಹಕ್ಕು.

ತಮ್ಮ ವಿಶ್ವಾಸಿ
ಬಿ.ಆರ್. ಅಂಬೇಡ್ಕರ್[೧]

* * * *

## ೧೬
## ಬೇರೆ ಯಾವ ದೇಶದಲ್ಲೇ ಆಗಿದ್ದರೆ ಈ ರೀತಿಯ ಮಂತ್ರಿಯನ್ನು ಕರ್ತವ್ಯದಿಂದ ವಜಾ ಮಾಡಲಾಗುತ್ತಿತ್ತು

ಸಂಪಾದಕರು,
ಟೈಂಸ್ ಆಫ್ ಇಂಡಿಯ
ಮಾನ್ಯರೇ,

ಇಬ್ಬರು ಜೂಜುಕೋರ ವ್ಯಕ್ತಿಗಳ ವಿರುದ್ಧ ಬೊಂಬಾಯಿ ನ್ಯಾಯಾಲಯವು ತೀರ್ಪು ನೀಡಿತ್ತು. ಆದರೆ ನ್ಯಾಯಾಲಯವು ನೀಡಿದ್ದ ಶಿಕ್ಷೆಯನ್ನು ಅನೂರ್ಜಿತಗೊಳಿಸಿ ಆದೇಶವನ್ನು ಮಾನ್ಯ ಗೃಹ ಮಂತ್ರಿಗಳು ಹೊರಡಿಸಿದ್ದಾರೆ. ಇದರೊಂದಿಗೆ ಕೇಂದ್ರೀಯ ಪ್ರಾಂತಗಳ ಮಂತ್ರಿಯೋರ್ವರ ಕಾರ್ಯದ ಬಗ್ಗೆಯೂ ಸುದ್ದಿ ಬಂದಿದೆ. ಜಾಫರ್ ಹಸನ್ ಎಂಬ ವ್ಯಕ್ತಿಗೆ ೧೪ ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿರುವುದರಿಂದ ३ ವರ್ಷಗಳ ಕಠಿಣ ಸಜೆಯನ್ನು ನ್ಯಾಯಾಲಯ ನೀಡಿತ್ತು. ಈ ತೀರ್ಪು ಹೊರಬಿದ್ದದ್ದು ೧೯೩೬ರಲ್ಲಿ. ಈ ಪ್ರಕರಣದಲ್ಲಿಯೂ ಅಪರಾಧಿಯನ್ನು ಮಂತ್ರಿಗಳು ಬಿಡುಗಡೆಗೊಳಿಸಿದ್ದಾರೆ ಮತ್ತು ನ್ಯಾಯಾಲಯದ ಶಿಕ್ಷೆಯನ್ನು ಅನೂರ್ಜಿತಗೊಳಿಸಿದ್ದಾರೆ. ಆ ಮೇಲ್ಕಂಡ ವ್ಯಕ್ತಿಯು ಕೇವಲ ೧ ವರ್ಷದ ಸಜೆಯನ್ನು ಮಾತ್ರವೇ ಅನುಭವಿಸಿದ್ದ. ಆದ್ದರಿಂದ ಆತನಿಗೆ ಎರಡು ವರ್ಷ ಮೊದಲೇ ಬಿಡುಗಡೆ ಆದಂತೆ ಆಯಿತು.

ಕೇಂದ್ರ, ಪ್ರಾಂತಗಳ ಮಂತ್ರಿಯವರ ಇಂತಹ ಕಾರ್ಯ ಅತ್ಯಂತ ನಾಚಿಕೆಗೇಡಿನ ಸಂಗತಿ. ಇದಕ್ಕೆ

---

೧. ನ್ಯಾಯಮೂರ್ತಿ ವಿ.ಆರ್. ಕೃಷ್ಣಅಯ್ಯರ್: ಪೀಠಿಕೆ ಪು VII
ದಿ. ಟೈಂಸ್ ಆಫ್ ಇಂಡಿಯಾ ದಿನಾಂಕ ೧೯ ಮಾರ್ಚ್ ೧೯३೮

ಸರಿಸಮನಾದ ಅಪಮಾನದ ಸಂಗತಿಯನ್ನು ಯೋಚಿಸುವುದು ಕೂಡ ನನ್ನಿಂದ ಸಾಧ್ಯವಾಗುತ್ತಿಲ್ಲ. ಕುರುಡರಂತೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಿರುವ ಹಿಂದೂಗಳು ಇದಕ್ಕೆ ಯಾವ ವಿವರಣೆ ನೀಡುತ್ತಾರೆ? ಒಂದು ವೇಳೆ ಈ ಮೇಲ್ಕಂಡ ವಿಷಯವು ಕೇವಲ ಹಿಂದೂ ಧರ್ಮಕ್ಕೆ ಸಂಬಂಧಿಸಿದುದ್ದಾದರೆ ನಾನು ನಿಮಗೆ ಈ ಪತ್ರ ಬರೆಯುವ ತೊಂದರೆಯನ್ನೇ ತೆಗೆದುಕೊಳ್ಳುತ್ತಿರಲಿಲ್ಲ. ಇದರಲ್ಲಿ ಅತ್ಯಾಚಾರಕ್ಕೆ ಒಳಗಾದ ಬಾಲಕಿಯು ಹಿಂದೂ ಧರ್ಮಕ್ಕೆ ಸೇರಿದ್ದಾಕೆ ಎಂಬುದು ಕೂಡ ಮುಖ್ಯವಲ್ಲ. ಆದರೆ ಕಾಂಗ್ರೆಸ್ ಪಕ್ಷದ ಕಡೆಗೆ ಹಾಗು ಮಹಾತ್ಮಾ ಗಾಂಧೀಯವರ ಕಡೆಗೆ ಹಿಂದೂಗಳು ಕುರುಡು ಪ್ರೀತಿಯನ್ನು ಬೆಳಸಿಕೊಂಡು ಬಿಟ್ಟಿದ್ದಾರೆ. ಅವರು ಕೇವಲ ಒಂದೇ ಪಕ್ಷದ ಮೇಲೆ ತಮ್ಮ ನಂಬಿಕೆಯನ್ನು ಇರಿಸಿಕೊಂಡು ಬಿಟ್ಟಿದ್ದಾರೆ. ಹಾಗು ಯಾರ ಮೇಲೆ ಅವರು ನಂಬಿಕೆ ಇಟ್ಟಿದ್ದಾರೆಯೋ ಅವರು ಮಾಡಿರುವ ಕೃತ್ಯ ಯಾವ ರೀತಿಯದ್ದು ಎಂದು ಚಿಂತಿಸಲು ಕೂಡ ಅವರು ತಯಾರಿಲ್ಲ. ಒಂದು ವೇಳೆ ಅವರು ಇದರಿಂದ ದುಃಖಿತರಾದರೆ ಅದು ಅವರ ತಪ್ಪು, ಆದರೆ ಇವರಿಗೆ ಒಂದು ತಪ್ಪು ತಿಳುವಳಿಕೆ ಇದೆ. ಅದೇನೆಂದರೆ ಅತ್ಯಾಚಾರಕ್ಕೆ ಒಳಗಾದ ಯುವತಿ ಹಿಂದೂ ಧರ್ಮಕ್ಕೆ ಸೇರಿಲ್ಲ. ಬದಲಾಗಿ ಶೋಷಿತ ವರ್ಗದ ಯುವತಿ ಈಕೆ. 'ಚಂಬಾರ' ಜಾತಿಗೆ ಈಕೆ ಸೇರಿದ್ದಾಳೆ. ಇದರಿಂದಲೇ ನಾನು ಚಿಂತೆಗೆ ಒಳಗಾಗಿರುವುದು ಏಕೆಂದರೆ ಅಲ್ಪಸಂಖ್ಯಾತರಾದ ನಾವು ಕೇವಲ ಖಂಡಿಸಬಹುದು, ಆದರೆ ಎಂದಿಗೂ ನಾವು ಇದನ್ನು ನಮ್ಮ ಹಿಡಿತದಲ್ಲಿ ಇರಿಸಿಕೊಳ್ಳಲು ಸಾಧ್ಯವಿಲ್ಲ.

ಈ ರೀತಿಯ ಕೃತ್ಯಗಳನ್ನು ಗೃಹ ಮಂತ್ರಿಯವರು ಮಾಡುತ್ತಾ ಹೋದರೆ ಹಾಗು ಅದನ್ನು ಹಿಂದೂ ಧರ್ಮೀಯರು ಖಂಡಿಸದೆ ಹೋದರೆ ಶೋಷಿತ ವರ್ಗದವರು ನ್ಯಾಯವನ್ನು ಅಪೇಕ್ಷಿಸುವುದಾದರೂ ಹೇಗೆ? ಗೃಹಮಂತ್ರಿಯವರ ಈ ಕಾರ್ಯವನ್ನು ಪ್ರಧಾನ ಮಂತ್ರಿಗಳು ಬೆಂಬಲಿಸಿದ್ದಾರೆ ಹಾಗು ಮಹಾತ್ಮಾ ಗಾಂಧೀಯವರು ಉಪೇಕ್ಷಿಸಿದ್ದಾರೆ. ಯಾವುದಾರೂ ಬೇರೆ ದೇಶದ ಗೃಹ ಮಂತ್ರಿ ಇದೇ ರೀತಿ ನಡೆದುಕೊಂಡಿದ್ದರೆ, ಆತನನ್ನು ಆ ಕ್ಷಣವೇ ವಜಾಮಾಡಲಾಗುತ್ತಿತ್ತು. ಆದರೆ ಭಾರತದಲ್ಲಿ ಇದನ್ನು ನಾವು ನಿರೀಕ್ಷಿಸಲೂ ಸಾಧ್ಯವಿಲ್ಲ. ಗೃಹಮಂತ್ರಿಯವರ ಈ ಕೃತ್ಯವನ್ನು ತಾವು ಬೆಂಬಲಿಸಿದುದ್ದಾದರೂ ಹೇಗೆ ಎಂಬುದರ ಬಗ್ಗೆ ಮಹಾತ್ಮಾ ಹಾಗು ಪ್ರಧಾನ ಮಂತ್ರಿಯವರು ಶೋಷಿತ ವರ್ಗದವರಿಗೆ ವಿವರಣೆ ನೀಡಬೇಕು.

ಬೊಂಬಾಯಿ

ಬಿ.ಆರ್. ಅಂಬೇಡ್ಕರ್

* * * * *

## ೧೭

## ಸಮಾಜವಾದಿಗಳು ಇದೀಗ ನಿಷ್ಕ್ರಿಯರಾಗಿದ್ದಾರೆ

೧೯೩೮ ಮೇ ೨೧ ರಂದು ಅಂಬೇಡ್ಕರ್ ಅವರು ಬೊಂಬಾಯಿಗೆ ಆಗಮಿಸಿದರು. ಅವರು ಸಂದರ್ಶನವೊಂದನ್ನು ನೀಡುತ್ತಾ, ಜನರು ತಮಗೆ ಹಾಗು ತಮ್ಮ ಪಕ್ಷಕ್ಕೆ ಅಭೂತ ಪೂರ್ವವಾದ ಬೆಂಬಲವನ್ನು ನೀಡುತ್ತಿರುವುದು ತಮಗೆ ಸಂತಸ ತಂದಿದೆ ಎಂದರು. ಶೋಷಿತ ವರ್ಗದ ಜನರ ಜೀತಗಾರಿಕೆಯನ್ನು ಕೊನೆಗಾಣಿಸುವ ಪ್ರಯತ್ನಕ್ಕೆ ಬೆಂಬಲ ವ್ಯಕ್ತಪಡಿಸುತ್ತಿರುವುದಕ್ಕೆ ಅವರು ಜನತೆಗೆ ಕೃತಜ್ಞತೆ ವ್ಯಕ್ತಪಡಿಸಿದರು.

ಚುನಾವಣಾ ಸಮಯದಲ್ಲಿ ಮಾಡಿರುವಂತಹ ಭರವಸೆಗಳನ್ನು ಈಡೇರಿಸಲು ಸ್ವತಂತ್ರ ಕಾರ್ಮಿಕ

ಪಕ್ಷವು ಪ್ರಯತ್ನಿಸುತ್ತಿದೆ ಎಂದರು. ಆದರೆ ಸಂವಿಧಾನಬದ್ಧವಾಗಿ ಇವರಿಗೆ ಹಕ್ಕುಗಳನ್ನು ನೀಡಲು ಕಾಂಗ್ರೆಸ್ ಪಕ್ಷವು ನಿರಾಕರಿಸಿದರೆ ತಾವು ಅನ್ಯಮಾರ್ಗಗಳನ್ನು ಅನುಸರಿಸಬೇಕಾಗುತ್ತದೆಯೆಂದರು. ಆದರೆ ಸಮಾಜವಾದಿಗಳ ಧೋರಣೆ ತಮಗೆ ಆಶ್ಚರ್ಯ ಉಂಟು ಮಾಡಿದೆ ಎಂದರು. ಏಕೆಂದರೆ ಇಷ್ಟು ವರ್ಷವೂ ಜಮೀನ್ದಾರಿ ಭೂಮಿಯನ್ನು ರದ್ದು ಮಾಡಬೇಕು ಎಂದು ಇವರು ಜೋರಾಗಿ ಕೂಗುತ್ತಿದ್ದರು. ಬಂಡವಾಳಶಾಹಿ ಪದ್ಧತಿಯ ರದ್ಧತಿಗಾಗಿ ಹೋರಾಡುತ್ತಿದ್ದರು. ಆದರೆ ಇದನ್ನೆಲ್ಲಾ ಸಂವಿಧಾನಾತ್ಮಕವಾಗಿ ರದ್ದು ಮಾಡುವ ಕಾಲ ಬಂದಿರುವಾಗ ಇವರೆಲ್ಲಾ ನಿಷ್ಕ್ರಿಯರಾಗಿದ್ದಾರೆ.

* * * * *

## ೧೮
## ಈ ರೀತಿಯ ಸಂಸ್ಥೆಗಳು ದೊಡ್ಡ ಗ್ರಂಥಾಲಯಗಳಾಗಿ ಬೆಳೆಯಲಿ

ರಾಜವಾಡೆ ಸಂಶೋಧನಾ ಮಂಡಳಿ, ಧುಲಿಯಾ (ಮಹಾರಾಷ್ಟ್ರ) ಇಲ್ಲಿಗೆ ೧೮ನೆಯ ಜೂನ್ ೧೯೩೮ ರಂದು ಡಾ.ಅಂಬೇಡ್ಕರ್ ಅವರು ಭೇಟಿ ನೀಡಿದರು. ಆ ಸಂದರ್ಭದಲ್ಲಿ ಅವರು ಸಂದರ್ಶಕರ ಪುಸ್ತಕದಲ್ಲಿ ಈ ಕೆಳಗಿನಂತೆ ಬರೆದಿದ್ದರು:

ಯೂರೋಪ್ ಹಾಗು ಅಮೇರಿಕಾ ದೇಶಗಳಲ್ಲಿ, ಸುಮಾರು ೬–೭ ವರ್ಷಗಳ ಕಾಲ ನಾನು ಹಲವಾರು ಗ್ರಂಥಾಲಯಗಳನ್ನು ಸಂದರ್ಶಿಸಿದ್ದೇನೆ. ರಾಜವಾಡೆ ಸಂಶೋಧನಾ ಮಂಡಳಿಯ ಗ್ರಂಥಾಲಯದಲ್ಲಿ ಸಂಗ್ರಹಿಸಿಟ್ಟಿರುವ ಹಸ್ತಪ್ರತಿಗಳನ್ನೂ ಹಾಗು ಚಿತ್ರಗಳನ್ನು ನೋಡಿ ನನಗೆ ಅಪಾರ ಸಂತಸ ಉಂಟಾಗಿದೆ. ಯುರೋಪಿನ ಗ್ರಂಥಾಲಯಗಳಿಗೆ ಹೋಲಿಸಿದರೆ ಇದು ಖಂಡಿತವಾಗಿಯೂ ಅತ್ಯಂತ ಸಣ್ಣ ಸ್ಥಳ. ಇನ್ನು ಈ ಸಂಸ್ಥೆಯನ್ನು ಹುಟ್ಟು ಹಾಕಿರುವವರ ಮೇಲೆ ಮುಂದಿನ ಜವಾಬ್ದಾರಿ ಉಳಿದಿಲ್ಲ. ಹೊಸದಾಗಿ ಬಂದಿರುವ ಸರ್ಕಾರವು ಅಗತ್ಯ ಗಮನವನ್ನು ಇತ್ತ ಹರಿಸಿ ಇದು ದೊಡ್ಡ ಗ್ರಂಥಾಲಯವಾಗುವಂತೆ ಮಾಡಲು ಶ್ರಮಿಸಬೇಕು. ಈ ಸಂಸ್ಥೆಗೆ ಎಲ್ಲಾ ರೀತಿಯ ಯಶಸ್ಸನ್ನು ನಾನು ಕೋರುತ್ತೇನೆ.

ಸಹಿ

೧೮–೬–೧೯೩೮ ಬಿ.ಆರ್. ಅಂಬೇಡ್ಕರ್

* * * * *

೧೯

# ಹಣ ನೀಡುವಿಕೆಯನ್ನು ನಿಯಂತ್ರಿಸುವ ಹಾಗು ವ್ಯವಸ್ಥಿತಗೊಳಿಸುವ ಮಸೂದೆ


ಲೇಖಕರು

**ಡಾ.ಬಿ.ಆರ್. ಅಂಬೇಡ್ಕರ್**

M.A Phd, D.S.C

ವಕೀಲರು, ರಾಜ್ಯದ ಮುಖ್ಯ ನ್ಯಾಯಾಲಯ



**ಸ್ವತಂತ್ರ ಕಾರ್ಮಿಕ ಪಕ್ಷದ ಪ್ರಕಟಣೆ**
**ಸಂಖ್ಯೆ ೨**

೧೯೩೮ ಬೆಲೆ: ೧ ಆಣೆ

೧೯೩೮ನೆಯ ಇಸವಿಯ ಮಸೂದೆ ಸಂಖ್ಯೆ

# ಹಣ ನೀಡುವಿಕೆಯನ್ನು ನಿಯಂತ್ರಿಸುವ ಹಾಗು ವ್ಯವಸ್ಥಿತಗೊಳಿಸುವ ಮಸೂದೆ

**ವಿಷಯ ಸೂಚಿ**

**ಅಧ್ಯಾಯ I**

**ಪೀಠಿಕೆ**

ವಿಭಾಗ ೧ : ಸಂಕ್ಷಿಪ್ತ ನಾಮ, ವ್ಯಾಪ್ತಿ ಹಾಗು ಪ್ರಾರಂಭ.

ವಿಭಾಗ ೨ : ವಿವರಣೆ.

ವಿಭಾಗ ೩ : ಕಾನೂನು ಸುಂಕ ಹಾಗು ಒಪ್ಪಂದಗಳ ಕಾನೂನಿಗೆ ಒಳಗಾಗದ ಮಸೂದೆಗಳು.

**ಅಧ್ಯಾಯ II**

**ಲೇವಾದೇವಿಗಾರರಿಗೆ ಪರವಾನಗಿ.**

ವಿಭಾಗ ೪ : ಪರವಾನಗಿ ಇಲ್ಲದೆಯೇ ಲೇವಾದೇವಿ ಮಾಡಲು ನಿಷೇಧ.

ವಿಭಾಗ ೫ : ಯಾರ ಹೆಸರಿನಲ್ಲಿ ಪರವಾನಗಿ ಪಡೆಯಬೇಕು.

ವಿಭಾಗ ೬ : ಪರವಾನಗಿಯಲ್ಲಿ ನೀಡಬೇಕಿರುವ ವಿವರಗಳು.

ವಿಭಾಗ ೭ : ಪರವಾನಗಿ ಪಡೆಯಲು ಅಗತ್ಯವಿರುವ ಪ್ರಮಾಣ ಪತ್ರಗಳು.

ವಿಭಾಗ ೮ : ಪ್ರಮಾಣ ಪತ್ರಗಳಲ್ಲಿ ನೀಡಬೇಕಿರುವ ವಿವರಗಳು.

ವಿಭಾಗ ೯ : ಪ್ರಮಾಣ ಪತ್ರ ನೀಡಬಹುದಾದ ಅಧಿಕಾರಿಗಳು.

ವಿಭಾಗ ೧೦ : ಪ್ರಮಾಣ ಪತ್ರ ನೀಡಲು ನಿರಾಕರಿಸಬಹುದಾದ ಕಾರಣಗಳು.

ವಿಭಾಗ ೧೧ : ಪ್ರಮಾಣ ಪತ್ರ ನಿರಾಕರಣೆ ಮಾಡಿದಕ್ಕೆ ಕಾರಣಗಳನ್ನು ನೀಡುವಿಕೆ.

ವಿಭಾಗ ೧೨ : ನಿರಾಕರಣೆಯ ವಿರುದ್ಧ ಅಪೀಲು.

ವಿಭಾಗ ೧೩ : ಪರವಾನಗಿ ನೀಡಬಹುದಾದ ಅಧಿಕಾರಿ.

ವಿಭಾಗ ೧೪ : ಪರವಾನಗಿಯ ಅವಧಿ.

ವಿಭಾಗ ೧೫ : ಪರವಾನಗಿಯ ಶುಲ್ಕ.

ವಿಭಾಗ ೧೬ : ಪರವಾನಗಿಯಲ್ಲಿನ ನಿಯಮಗಳನ್ನು ಉಲ್ಲಂಘಿಸಿದರೆ ತೆರಬೇಕಾದ ದಂಡ.

**ವಿಭಾಗ – II**

**ಪರವಾನಗಿಯ ನಿಲಂಬನ ಹಾಗು ವಾಪಸಾತಿ**

ವಿಭಾಗ ೧೭ : ಅಪರಾಧ ನಿರ್ಣಯದ ನಂತರ ಪರವಾನಗಿಯ ನಿಲಂಬನ.

ವಿಭಾಗ ೧೮ : ನಿಲಂಬನ ಹಾಗು ರದ್ದಿಯಾತಿ ಆದೇಶದ ವಿರುದ್ಧ ಮನವಿ.

ವಿಭಾಗ ೧೯ : ನ್ಯಾಯಾಲಯ ಸೂಚಿಸಿದಾಗ ಪರವಾನಗಿಯನ್ನು ಹಾಜರುಪಡಿಸುವುದು.

## ಅಧ್ಯಾಯ – IV
## ವ್ಯವಹಾರ ನಡೆಸಬೇಕಾದ ಬಗೆ

ವಿಭಾಗ ೨೦ : ಲೇವಾದೇವಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಜಾಹೀರಾತುಗಳ ನಿಷೇಧ.
ವಿಭಾಗ ೨೧ : ಏಜೆಂಟರು ಅಥವಾ ಕಾರ್ಯಕರ್ತರನ್ನು ಕೆಲಸಕ್ಕೆ ಬಳಸಿಕೊಳ್ಳುವುದರ ವಿರುದ್ಧ ನಿಷೇಧ.
ವಿಭಾಗ ೨೨ : ಪರಿಚ್ಛೇದ ೨೦ ಹಾಗು ೨೧ ರ ಉಲ್ಲಂಘನೆಗೆ ದಂಡ.
ವಿಭಾಗ ೨೩ : ಸಾಲಗಾರರಿಂದ ಶುಲ್ಕ ಇತರ ಖರ್ಚುಗಳ ಪಾವತಿ ಬಗ್ಗೆ ಒಪ್ಪಂದವು ಅಸಿಂಧು.

## ಅಧ್ಯಾಯ V
## ಲೇವಾದೇವಿಗಾರನ ಕರ್ತವ್ಯ

ವಿಭಾಗ ೨೪ : ಎಲ್ಲಾ ವ್ಯವಹಾರಗಳ ಲಿಖಿತ ರೂಪದ ದಾಖಲೆ.
ವಿಭಾಗ ೨೫ : ಸಾಲಗಾರನಿಗೆ ಜ್ಞಾಪಕ ಪತ್ರದ ಪ್ರತಿ ನೀಡುವಿಕೆ.
ವಿಭಾಗ ೨೬ : ಪರಿಚ್ಛೇದ ೨೪ ಅಥವಾ ೨೫ ರಂತೆ ವ್ಯವಹರಿಸದೆ ಇದ್ದರೆ ಅಸಿಂಧು
ವಿಭಾಗ ೨೭ : ಚಕ್ರಬಡ್ಡಿಯನ್ನು ನೀಡಲು ಒಪ್ಪಿಗೆ ಪತ್ರವು ಅಸಿಂಧು.

## ಅಧ್ಯಾಯ VI
## ಲೆಕ್ಕಾಚಾರಗಳ ದಾಖಲೆ ಇರಿಸಬೇಕಾದ ಕ್ರಮ:

ವಿಭಾಗ ೨೮ : ಸಾಲಗಾರನಿಗೆ ಲೇವಾದೇವಿಗಾರ ನೀಡಬೇಕಾಗಿರುವ ಪಾಸ್ ಬುಕ್.
ವಿಭಾಗ ೨೯ : ಸಾಲಗಾರನಿಗೆ ಆತನ ವಾರ್ಷಿಕ ಲೆಕ್ಕಾಚಾರದ ವಿವರವನ್ನು ಲೇವಾದೇವಿಗಾರ ನೀಡಬೇಕು.
ವಿಭಾಗ ೩೦ : ಸಾಲ ಮರುವಾಪಸಾತಿಯಲ್ಲಿ ವಿಫಲವಾದರೆ ಲೆವಾದೇವಿಗಾರ ಫಿರ್ಯಾದು ಮಾಡಲಾಗದು.
ವಿಭಾಗ ೩೧ : ಸಾಲ ಮರುಪಾವತಿ ಮಾಡಲಾಗದುದಕ್ಕೆ ವಿಧಿಸಬಹುದಾದ ದಂಡ.
ವಿಭಾಗ ೩೨ : ಸರ್ಕಾರದಿಂದ ಪಡೆದ ಪುಸ್ತಕಗಳಲ್ಲಿ ಇಡಬೇಕಾದ ಲೆಕ್ಕಾಚಾರಗಳು.
ವಿಭಾಗ ೩೩ : ಧೃಡೀಕರಣ ಪಡೆಯಲು ವರ್ಷದ ಲೆಕ್ಕಾಚಾರ ಪುಸ್ತಕಗಳನ್ನು ಸರ್ಕಾರಕ್ಕೆ ಸಲ್ಲಿಸುವಿಕೆ.
ವಿಭಾಗ ೩೪ : ಪರಿಚ್ಛೇದ ೩೨ ಹಾಗು ೩೩ರಂತೆ ಇಟ್ಟಿರದ ಲೆಕ್ಕಾಚಾರದ ಪುಸ್ತಕಗಳನ್ನು ಸಾಕ್ಷ್ಯವಾಗಿ ಪರಿಗಣಿಸಲಾಗುವುದಿಲ್ಲ.

## ಅಧ್ಯಾಯ – VII
## ಕಾನೂನು ಪ್ರಕ್ರಿಯೆ ಹಾಗು ಕ್ರಮಗಳು

ವಿಭಾಗ ೩೫ : ಸಣ್ಣ ಅಪರಾಧಗಳ ನ್ಯಾಯಾಲಯಗಳನ್ನು ವ್ಯಾಪ್ತಿಯಿಂದ ಹೊರಗಿಡುವುದು.
ವಿಭಾಗ ೩೬ : ದೋಷಾರೋಪದ ಸಂದರ್ಭದಲ್ಲಿ ನೀಡಬಹುದಾದ ಪರವಾನಗಿ.
ವಿಭಾಗ ೩೭ : ಲೇವಾದೇವಿಗಾರನಿಗೆ ನೀಡಬೇಕಾದ ವಿಚಾರಣೆಯ ವಿವರ.
ವಿಭಾಗ ೩೮ : ಮುಚ್ಚಿ ಹೋಗಿರುವ ಕೆಲ ವ್ಯವಹಾರಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಲು

ನ್ಯಾಯಾಲಯಕ್ಕೆ ಇರುವ ಅಧಿಕಾರ.

ವಿಭಾಗ ೩೯ : ಪುನರ್ ಪರಿಶೀಲನೆಗೆ ಒಳಪಡಬಾರದ ಕೆಲ ವ್ಯವಹಾರಗಳು.

ವಿಭಾಗ ೪೦ : ಬಡ್ಡಿ ದರ ಅತ್ಯಂತ ದುಬಾರಿ ಎಂದು ಕಂಡು ಬರುವ ಸಂದರ್ಭ.

ವಿಭಾಗ ೪೧ : ಲೆಕ್ಕಾಚಾರ ಪಡೆಯುವ ಕ್ರಮ.

ವಿಭಾಗ ೪೨ : ಅಡಮಾನದ ಸಾಲಗಳ ವಾಪಸಾತಿಯನ್ನು ಕಂತುಗಳಲ್ಲಿ ಹಣ ಪಾವತಿಸಲು ತೀರ್ಮಾನ ನೀಡುವ ಅಧಿಕಾರ

ವಿಭಾಗ ೪೩ : ಅಡಮಾನದ ಸಾಲಗಳನ್ನು ಕಂತುಗಳಲ್ಲಿ ಹಣ ಪಾವತಿಸುವ ಹಾಗೆ ತೀರ್ಪನ್ನು ನೀಡಲು ಕಾಯ್ದೆ

ವಿಭಾಗ ೪೪ : ಸಾಲಗಾರನ ಆಸ್ತಿಯ ಮೌಲ್ಯವನ್ನು ನ್ಯಾಯಾಲಯಗಳು ನಿರ್ಧರಿಸಬೇಕು.

ವಿಭಾಗ ೪೫ : ಸಾಲ ವಾಪಸಾತಿಗೆ ಅಗತ್ಯವಿರುವಷ್ಟು ಆಸ್ತಿಯನ್ನು ಮಾತ್ರವೇ ಮಾರಾಟಮಾಡಬೇಕು.

ವಿಭಾಗ ೪೬ : ದುಬಾರಿ ಬಡ್ಡಿ ವಿಧಿಸಿರುವ ಸಂದರ್ಭದಲ್ಲಿ ನ್ಯಾಯಾಲಯದ ಅಧಿಕಾರ.

ವಿಭಾಗ ೪೭ : ಪ್ರಾಂತದ ಹೊರಗೆ ಹಣ ಪಾವತಿಸುವ ಅವಕಾಶ.

ವಿಭಾಗ ೪೮ : ಬಡ್ಡಿಯ ಬಾಕಿಯನ್ನು ಪಾವತಿಸಲು ಮಾಡಿಕೊಳ್ಳುವ ಒಪ್ಪಂದವು ಅಸಿಂಧು.

## ಅಧ್ಯಾಯ VIII
## ಅಪರಾಧದ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಕ್ರಮಗಳು

ವಿಭಾಗ ೪೯ : ಎಲ್ಲಾ ಅಪರಾಧಗಳೂ ವಿಚಾರಣಾರ್ಹ.

ವಿಭಾಗ ೫೦ : ಅಪರಾಧ ನಿರ್ಣಯ ಹಾಗು ವಿಮೋಚನೆಯ ಸಂದರ್ಭದಲ್ಲಿ ಸಲ್ಲಿಸಬಹುದಾದ ಮನವಿ.

## ಅಧ್ಯಾಯ IX
## ಅನುಬಂಧ
## ಕಾನೂನು ಮಾಡುವ ಅಧಿಕಾರ
## ವಿಭಾಗ ೫೧ :

೧೯೩೮ರ ಮಸೂದೆಯ ಸಂಖ್ಯೆ

# ಲೇವಾದೇವಿಯ ವ್ಯವಹಾರವನ್ನು ನಿಯಂತ್ರಿಸುವ ಹಾಗು ವ್ಯವಸ್ಥಿತಗೊಳಿಸುವ ಮಸೂದೆ

ಹಣಕಾಸು ಲೇವಾದೇವಿಗಾರರಾಗಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಅವರ ಕರ್ತವ್ಯಗಳು ಹಾಗು ಜವಾಬ್ದಾರಿಗಳನ್ನು ನಿರ್ದಿಷ್ಟಗೊಳಿಸಿ ಅವರ ವ್ಯವಹಾರವನ್ನು ನಿಯಂತ್ರಿಸಿ ಹಾಗೂ ವ್ಯವಸ್ಥಿತಗೊಳಿಸುವ ಅಗತ್ಯದಿಂದಾಗಿ–

## ಅಧ್ಯಾಯ ೧

## ಪ್ರಾಸ್ತಾವಿಕ

ಸಂಕ್ಷಿಪ್ತ ನಾಮ, ವ್ಯಾಪ್ತಿ ಹಾಗು ಪ್ರಾರಂಭ

೧. ೧) ಈ ಕಾಯ್ದೆಯನ್ನು ಬೊಂಬಾಯಿ ಲೇವಾದೇವಿದಾರರ ಕಾಯ್ದೆ ೧೯೩೮ ಎಂದು ಕರೆಯಬಹುದು.

೨) ಇದು ಇಡೀ ಬೊಂಬಾಯಿ ರಾಜ್ಯಕ್ಕೆ ಅನ್ವಯಿಸುತ್ತದೆ. ಇದು ಈ ಮಸೂದೆಯು ಜಾರಿಯಾಗಬೇಕು ಎಂದು ಸರ್ಕಾರ ಅಧಿಕೃತ ಪ್ರಕಟಣೆ ಹೊರಡಿಸಿದ ದಿನದಿಂದ ಜಾರಿಗೆಬರುತ್ತದೆ. ಆದರೆ ಈ ಮಸೂದೆಯು ಅಂಗೀಕೃತವಾದ ಒಂದು ತಿಂಗಳಿನ ಒಳಗೆ ಅಂತಹ ಪ್ರಕಟನೆಯನ್ನು ಹೊರಡಿಸಬೇಕು.

ವಿವರಣೆ:

೨) ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರೋಧವಾಗದಿದ್ದ ಪಕ್ಷದಲ್ಲಿ, ಈ ಮಸೂದೆಯಲ್ಲಿನ

i) "ಅಧಿಕೃತ ಹೆಸರು" ಹಾಗು "ಅಧಿಕೃತ ವಿಳಾಸ" ಎಂದರೆ ಯಾರ ಹೆಸರಿನಲ್ಲಿ ಮತ್ತು ಯಾವ ವಿಳಾಸದಲ್ಲಿ ಇವರಿಗೆ ವ್ಯವಹಾರ ನಡೆಸಲು ಅನುಮತಿ ನೀಡಲಾಗಿದೆಯೋ ಅವರ ಹೆಸರು ಮತ್ತು ವಿಳಾಸ.

ii) "ವ್ಯವಹಾರ ನಾಮ" ಎಂದರೆ ವ್ಯವಹಾರವನ್ನು ಲೇವಾದೇವಿಗಾರರು ಪಾಲುದಾರಿಕೆ ಅಥವಾ ಇನ್ನಾವುದೇ ರೀತಿಯ ಸಂಸ್ಥೆಯ ಹೆಸರು.

iii) "ಸಾಲಗಾರ" ಎಂದರೆ ಈ ಲೇವಾದೇವಿಗಾರನಿಂದ ಪಡೆದ ಸಾಲವನ್ನು ಲೇವಾದೇವಿಗಾರನಿಗೆ ಹಿಂದಿರುಗಿಸಬೇಕಾಗಿರುವ ವ್ಯಕ್ತಿ

iv) "ಬಡ್ಡಿ" ಎಂದರೆ ಸಾಲಗಾರನು ಲೇವಾದೇವಿಗಾರನಿಗೆ ತಾನು ಪಡೆದ ಸಾಲದ ಮೊತ್ತಕ್ಕಿಂತ ಅಧಿಕವಾಗಿ ನೀಡಬೇಕಾಗಿರುವ ಹಣ, ಸೇವೆ ಅಥವಾ ಇಂತಹ ಯಾವುದೇ ರೀತಿಯ ಹಣದ ಮೌಲ್ಯವಿರುವ ವಸ್ತು.

v) "ಸಾಲ" ಎಂದರೆ ಬಡ್ಡಿಗಾಗಿ ನೀಡಿರುವ ಹಣ ಅಥವಾ ಹಣದ ಮೌಲ್ಯವುಳ್ಳ ವಸ್ತು. ಹಿಂದಿನ ಸಾಲಕ್ಕಾಗಿ ಬರೆದುಕೊಟ್ಟ ಒಪ್ಪಂದವನ್ನೂ ಸಾಲವೆಂದು ಪರಿಗಣಿಸತಕ್ಕದ್ದು.

vi) "ಹಣ ನೀಡುವವ" ಎಂದರೆ ಯಾವ ವ್ಯಕ್ತಿ ಲೇವಾದೇವಿಯ ವ್ಯವಹಾರ ಕೈಗೊಳ್ಳುತ್ತಾನೋ, ಈ ನಿಟ್ಟಿನಲ್ಲಿ ಜಾಹೀರಾತುಗಳನ್ನು ನೀಡುತ್ತಾನೆಯೋ. ಅಥವಾ ಇದನ್ನು ಕೈಗೊಳ್ಳಲು ಗಿರವಿ ಇಟ್ಟುಕೊಳ್ಳುವ ವ್ಯವಹಾರವನ್ನು ನಡೆಸುತ್ತಾನೆಯೋ ಆತ. ಆದರೆ ಈ ಕೆಳಗಿನವರನ್ನು ಇದರಲ್ಲಿ ಸೇರ್ಪಡೆ ಮಾಡಲಾಗುವುದಿಲ್ಲ.

a) ಸಹಕಾರ ಸಂಘಗಳ ಕಾಯ್ದೆ ೧೯೧೨ ಹಾಗು ಸಹಕಾರ ಸಂಘಗಳ ವಿಮಾ ಕಾಯ್ದೆಯಡಿ ನೋಂದಣಿ ಆಗಿರುವ ಯಾವುದೇ ಸಂಸ್ಥೆ.

b) ಯಾವುದಾದರೂ ವಿಶೇಷ ಕಾಯ್ದೆಯ ಪ್ರಕಾರ ಹಣವನ್ನು ಸಾಲವಾಗಿ ನೀಡುವ ಉದ್ದೇಶಕ್ಕಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆ.

c) ಸರ್ಕಾರ ಅಥವಾ ಸಾಲನೀಡುವ ಉದ್ದೇಶಕ್ಕಾಗಿ ಸರ್ಕಾರದಿಂದ ಮತ್ತು ಸರ್ಕಾರ ಪರವಾಗಿ ನೇಮಕಗೊಂಡಿರುವ ವ್ಯಕ್ತಿ.

d) ತನ್ನ ಸಹಜ ವ್ಯವಹಾರದಲ್ಲಿ ತನ್ನ ವ್ಯವಹಾರದ ಉದ್ದೇಶಕ್ಕಾಗಿ ಸಾಲನೀಡುವ ವ್ಯಕ್ತಿ.

i) ಬ್ಯಾಂಕ್ ಅಥವಾ ವಿಮಾ ಸಂಸ್ಥೆ.

ii) ಸಾಲನೀಡುವುದನ್ನು ತನ್ನ ಪ್ರಾಥಮಿಕ ಹಾಗೂ ಮುಖ್ಯ ವ್ಯವಹಾರವನ್ನಾಗಿ ಮಾಡಿಕೊಳ್ಳದಿರುವ ವ್ಯಕ್ತಿ ಅಥವಾ ಸಂಸ್ಥೆ.

vii) "ಹಣ ಸಂದಾಯ" ಅಥವಾ "ವಾಪಸಾತಿ" ಎಂದರೆ ಹಣವನ್ನು ನಗದು, ಸೇವೆ, ಉಡುಗೊರೆ ಅಥವಾ ಇತರ ಯಾವುದೇ ರೀತಿಯಲ್ಲಿ ಪಾವತಿಸುವುದು.

viii) ವ್ಯಕ್ತಿ ಎಂದರೆ ಯಾವುದೇ ಸಂಸ್ಥೆ ಅಥವಾ ಸಂಘವೂ ಆಗಿರಬಹುದು.

ವಿವರಣೆ ೧ : ಒಬ್ಬ ಲೇವಾದೇವಿಗಾರನ ಕರ್ತವ್ಯ ಹಾಗು ಜವಾಬ್ದಾರಿಗಳನ್ನು ವಿವರಿಸುವ ಸಂದರ್ಭದಲ್ಲಿ 'ಸಂಸ್ಥೆ' ಎಂದರೆ ಅದರ ಕಾರ್ಯ ನಿರ್ವಾಹಕರು, ವ್ಯವಸ್ಥಾಪಕ ಸೇರಿರುತ್ತಾರೆ ಇನ್ನು ಪಾಲುದಾರಿಕೆ ಸಂಸ್ಥೆ ಎಂದರೆ ಅದರಲ್ಲಿ ಇರುವ ಎಲ್ಲಾ ಪಾಲುದಾರರೂ ಸೇರಿರುತ್ತಾರೆ.

ವಿವರಣೆ ೨ : ಇನ್ನು ಲೇವಾದೇವಿಯ ಸಂಸ್ಥೆಯಲ್ಲಿ ಯಾವುದೇ ಒಬ್ಬ ಅಪ್ರಾಪ್ತ ವಯಸ್ಕನಿದ್ದರೆ ಅಥವಾ ಸಂಸ್ಥೆಯು ವ್ಯವಹಾರಗಳ ಜವಾಬ್ದಾರಿಯುನ್ನು ನಿರ್ವಹಿಸಲು ಅಸಮರ್ಥನಾಗಿರುವವನಿದ್ದರೆ "ವ್ಯಕ್ತಿ" ಎನ್ನುವ ಸಂಭೋಧನೆಯು ಆ ವ್ಯಕ್ತಿಯ ಜವಾಬ್ದಾರಿಯನ್ನು ಹೊರುತ್ತಿರುವನನ್ನು ಒಳಗೊಳ್ಳುತ್ತದೆ.

ix) "ವಿಧಿಸಿದ" ಎಂದರೆ ಈ ಕಾಯ್ದೆಯಡಿಯಲ್ಲಿ ವಿಧಿಸಲಾಗಿರುವ ಎಂದು ಅರ್ಥ.

x) "ಮೂಲ ಮೊಬಲಗು" ಎಂದರೆ ಮೊದಲು ಸಾಲಗಾರನಿಗೆ ನೀಡಲಾಗಿರುವ ಅಥವ ಸಾಲದಂತೆ ನೀಡಲಾಗಿರುವ ಮೊತ್ತ.

xi) 'ಸುರಕ್ಷಿತ ಸಾಲ' ಎಂದರೆ ಯಾವುದಾದರೂ ಆಸ್ತಿಯನ್ನು ಒತ್ತೆಯಿಟ್ಟು ಪಡೆಯಲಾಗಿರುವ ಸಾಲ.

xii) "ಅಸುರಕ್ಷಿತ ಸಾಲ" ಎಂದರೆ ಸುರಕ್ಷಿತ ಸಾಲವನ್ನು ಹೊರತು ಪಡಿಸಿ ಬೇರೆಲ್ಲ ಸಾಲಗಳು.

ವಿವರಣೆ ೩. ಇದು ಬೇರೆ ಕಾಯ್ದೆ, ಸಂಪ್ರದಾಯ ಅಥವಾ ಒಪ್ಪಂದಗಳಿಂದ ನಿರಾಬಾಧಿತವಾಗಿ ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲಿಯೂ ಅನ್ವಯವಾಗುತ್ತದೆ.

## ಅಧ್ಯಾಯ – II
## ಲೇವಾದೇವಿಗಾರರಿಗೆ ಪರವಾನಗಿ

೪. ಯಾವುದೇ ವ್ಯಕ್ತಿ ವೈಯಕ್ತಿಕವಾಗಿ ಅಥವಾ ಬೇರೆಯ ರೀತಿಯಲ್ಲಿ ಅಥವಾ ಸ್ವಂತಕ್ಕಾಗಿ ಅಥವಾ ಇತರರಿಗಾಗಿ ಅಥವಾ ಸ್ವಂತಕ್ಕಾಗಿ ಮತ್ತು ಇತರರಿಗಾಗಿ ಲೇವಾದೇವಿಯ ವ್ಯವಹಾರವನ್ನು ತಾನು ನಡೆಸುವ ವ್ಯವಹಾರವನ್ನು ನಡೆಸುವ ಪ್ರತಿಯೊಂದು ವಿಳಾಸಕ್ಕೂ ಪ್ರತ್ಯೇಕವಾಗಿ ವಾರ್ಷಿಕ ಪರವಾನಗಿಯನ್ನು ಪಡೆಯದೆ ವ್ಯವಹಾರವನ್ನು ನಡೆಸುವಂತಿಲ್ಲ. ಈ ಕಾಯ್ದೆಯಲ್ಲಿ ಈ ಪರವಾನಗಿಯನ್ನು "ಪರವಾನಗಿ' ಎಂದು ಹೇಳಲಾಗಿದೆ.

### ಪರವಾನಗಿ ಪಡೆಯಬೇಕಾದವರ ಹೆಸರು:

೫. ಯಾರು ಲೇವಾದೇವಿಯ ವ್ಯವಹಾರವನ್ನು ನಡೆಸುತ್ತಾರೋ ಅವರ ಹೆಸರಿನಲ್ಲಿಯೇ ಪರವಾನಗಿಯನ್ನು ಪಡೆಯಬೇಕು. ಒಂದು ವೇಳೆ ಬೇರೆಯವರ ಹೆಸರಿನಲ್ಲಿ ಆ ಪರವಾನಗಿಯನ್ನು ಪಡೆದರೆ ಅದು ಅಸಿಂಧುವಾಗುತ್ತದೆ.

ಒಂದು ವೇಳೆ ಒಬ್ಬ ವ್ಯಕ್ತಿ ಒಂದು ವ್ಯಾವಹಾರಿಕ ಹೆಸರಿನಲ್ಲಿ ಈ ಹಣಕಾಸಿನ ವ್ಯವಹಾರ ನಡೆಸುತ್ತಿದ್ದರೆ. ಅಲ್ಲದೆ, ಲೇವಾದೇವಿಯನ್ನು ತನ್ನ ಹೆಸರಿನಲ್ಲಿ ನಡೆಸದೆ ಒಂದು ಸಂಸ್ಥೆಯ ಹೆಸರಿನಲ್ಲಿ ನಡೆಸುತ್ತಿದ್ದರೆ, ಪರವಾನಗಿಯನ್ನು ಆ ಸಂಸ್ಥೆಯ ಹೆಸರಿನಲ್ಲಿಯೇ ಪಡೆಯಬೇಕು ಅಥವಾ ಅಪ್ರಾಪ್ತವಯಸ್ಕನ ಅಥವಾ ಯಾವುದೇ ರೀತಿಯಿಂದ ವ್ಯವಹಾರವನ್ನು ನಡೆಸಲಾಗದ ವ್ಯಕ್ತಿಯ ಪರವಾಗಿ ವ್ಯವಹಾರವನ್ನು ನಡೆಸುತ್ತಿದ್ದರೆ ಅಂತಹ ವ್ಯಕ್ತಿಯ ಹೆಸರಿನಲ್ಲಿಯೇ ಪರವಾನಗಿಯನ್ನು ಪಡೆಯತಕ್ಕದ್ದು.

### ಪರವಾನಗಿಯಲ್ಲಿ ನೀಡಬೇಕಿರುವ ವಿವರಗಳು:

೬. (೧) ಒಂದು ವೇಳೆ ಪಾಲುದಾರಿಕೆ ಸಂಸ್ಥೆಯಾಗಿದ್ದರೆ. ಪರವಾನಗಿಯಲ್ಲಿ ಎಲ್ಲಾ ಪಾಲುದಾರರ ಹೆಸರು ನಮೂದಿಸಲ್ಪಟ್ಟಿರಬೇಕು. ಒಂದು ವೇಳೆ ಸಂಸ್ಥೆಯಾಗಿದ್ದರೆ ಕಾರ್ಯನಿರ್ವಾಹಕ ವ್ಯಕ್ತಿ ಅಥವಾ ವ್ಯವಸ್ಥಾಪಕ ನಿರ್ದೇಶಕರ ಹೆಸರು ನಮೂದಿಸಿರಬೇಕು. ಒಂದು ವೇಳೆ ಅಪ್ರಾಪ್ತ ವಯಸ್ಕನ ಪರವಾಗಿ ಬೇರೆಯ ವ್ಯಕ್ತಿ ಕಾರ್ಯ ನಿರ್ವಹಿಸುತ್ತಿದ್ದರೆ ಆತನ ಜವಾಬ್ದಾರಿಯನ್ನು ಹೊತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಹೆಸರು ನಮೂದಿಸಲ್ಪಟ್ಟಿರಬೇಕು.
(೨) ಈ ಪರವಾನಗಿಯಲ್ಲಿ ಅಧಿಕೃತ ವಿಳಾಸವೂ ನಮೂದಿತವಾಗಿರಬೇಕು.

### ಪರವಾನಗಿ ಪಡೆಯಲು ಧೃಢೀಕರಣ ಪತ್ರದ ಆವಶ್ಯಕತೆ

೭. (೧) ಯಾವುದೇ ವ್ಯಕ್ತಿಯು ಕಾಯ್ದೆಯಲ್ಲಿ ಹೇಳಿರುವ ಧೃಢೀಕರಣ ಪತ್ರ ಹೊಂದಿರದಿದ್ದರೆ ಆತ ಪರವಾನಗಿ ಪಡೆಯಲು ಅನರ್ಹನಾಗುತ್ತಾನೆ. ಕಾಯ್ದೆಯಲ್ಲಿ ನಮೂದಿಸಿರುವಂತೆ ಧೃಢೀಕರಣ ಪತ್ರ ಹೊಂದಿರದೇ ಹೋದರೇ ಆತನಿಗೆ ಪರವಾನಗಿಯನ್ನು ನೀಡತಕ್ಕದ್ದಲ್ಲ.
(೨) ಪ್ರತಿಯೊಂದು ಪರವಾನಗಿಗೂ ಪ್ರತ್ಯೇಕ ಧೃಢೀಕರಣ ಪತ್ರದ ಆವಶ್ಯಕತೆ ಇರುತ್ತದೆ.

**ಪ್ರಮಾಣಪತ್ರದಲ್ಲಿ ಹೇಳಬೇಕಾಗಿರುವ ವಿವರಗಳು:**

೮. ಒಬ್ಬ ವ್ಯಕ್ತಿ ತನಗಾಗಿ ಅಥವಾ ಇತರರಿಗಾಗಿ ಅಥವಾ ತನಗಾಗಿ ಮತ್ತು ಇತರರಿಗಾಗಿ ಅಥವಾ ಒಂದು ಸಂಸ್ಥೆಗಾಗಿ ಪ್ರಮಾಣಪತ್ರವನ್ನು ಉಪಯೋಗಿಸಬಯಸಿದರೂ, ಆತ ತನ್ನ ಪ್ರಮಾಣ ಪತ್ರದಲ್ಲಿ ತನ್ನ ಹೆಸರು ಹಾಗೂ ತನ್ನ ವ್ಯವಹಾರವನ್ನು ನಡೆಸಲು ಉದ್ದೇಶಿಸಿರುವ ಸ್ಥಳದ ವಿಳಾಸವನ್ನು ನಮೂದಿಸಿರತಕ್ಕದ್ದು.

**ಧೃಢೀಕರಣ ಪತ್ರ ನೀಡುವ ಅಧಿಕಾರ ಇರುವ ಅಧಿಕಾರಿಗಳು**

೯. ೧) ಲೇವಾದೇವಿಗಾರನು ತನ್ನ ವ್ಯವಹಾರವನ್ನು ನಡೆಸಬೇಕೆಂದಿರುವ ಸ್ಥಳದ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರಾಗಲೀ ಅಥವಾ ಈ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಯಾವ ಒಬ್ಬ ಅಧಿಕಾರಿಯಾಗಲೀ, ತನಗೆ ಅಂತಹ ದೃಢೀಕರಣ ಪತ್ರಕ್ಕಾಗಿ ನಮೂದಿತ ನಮೂನೆಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ದೃಢೀಕರಣ ಪತ್ರವನ್ನು ನೀಡಬಹುದು.

೨) ಈ ಧೃಢೀಕರಣ ಪತ್ರ ಪಡೆಯಲು ಅರ್ಜಿ ಪಡೆದ ಕೂಡಲೇ ಆ ಅಧಿಕಾರಿಯ ಇದರ ಸಂಪೂರ್ಣ ಪ್ರತಿಯನ್ನು, ತನ್ನ ಕಛೇರಿಯಲ್ಲಿ ಎಲ್ಲರಿಗೂ ಕಾಣುವಂತಹ ಸ್ಥಳದಲ್ಲಿ ಪ್ರದರ್ಶಿಸತಕ್ಕದು. ಈ ರೀತಿ ಮಾಡಿದ ೧೫ ದಿನಗಳವರೆಗೆ ಆತ ಮುಂದಿನ ಕ್ರಮ ಕೈಗೊಳ್ಳಕೂಡದು.

೩) ಸದರಿ ವ್ಯಕ್ತಿಗೆ ದೃಢೀಕರಣ ಪತ್ರವನ್ನು ನೀಡುವುದರ ವಿರುದ್ಧ ಯಾವುದೇ ವ್ಯಕ್ತಿಯು ದೂರು ಸಲ್ಲಿಸಬಹುದು ಹಾಗು ವಿರೋಧಿಸಬಹುದು. ಒಂದು ವೇಳೆ ಈ ರೀತಿಯಾಗಿ ವಿರೋಧವೇನಾದರೂ ಬಂದರೆ, ಈ ಬಗೆಗೆ ಒಂದು ವಿಚಾರಣೆ ಕೈಗೊಂಡು ದೃಢೀಕರಣ ಪತ್ರವನ್ನು ನೀಡುವ ಅಥವಾ ನಿರಾಕರಿಸುವ ವಿಷಯವನ್ನು ನಿರ್ಧರಿಸಬೇಕು.

೪) ಒಂದು ವೇಳೆ ಯಾವುದೇ ವಿರೋಧ ಬರದೇ ಹೋದರೂ ಅರ್ಜಿಯನ್ನು ತಿರಸ್ಕರಿಸುವ ಅಧಿಕಾರವನ್ನು ಮೇಲಿನ ಪರಿಚ್ಛೇದವು ಮೊಟಕುಗೊಳಿಸುವುದಿಲ್ಲ.

**ಧೃಢೀಕರಣ ಪತ್ರವನ್ನು ನಿರಾಕರಿಸಲು ಕಾರಣಗಳು**

೧೦. ಈ ಕೆಳಗೆ ನಮೂದಿಸಿರುವುಗಳಲ್ಲಿ ಒಂದು ಅಥವಾ ಹೆಚ್ಚಿನ ಕಾರಣಗಳು ಇದ್ದರೆ ಮಾತ್ರವೇ ಧೃಢೀಕರಣ ಪತ್ರವನ್ನು ತಿರಸ್ಕರಿಸಬೇಕು.

i) ಆ ವ್ಯಕ್ತಿಯ ತನ್ನ ಸಚ್ಚರಿತೆಯನ್ನು ಸ್ಥಾಪಿಸುವಂತಹ ದಾಖಲೆಗಳನ್ನು ಒದಗಿಸದೆ ಇರುವುದು.

ii) ಆ ವ್ಯಕ್ತಿಯು ಅಥವಾ ಒಂದು ವೇಳೆ ಅಪ್ರಾಪ್ತನಾಗಿದ್ದರೆ ಅವನ ಪರವಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯು ಈ ವ್ಯವಹಾರವನ್ನು ನಡೆಸಲು ಅರ್ಹನಲ್ಲ ಎಂದು ಬೇರೆಯವರ ಮೂಲಕ ತಿಳಿದು ಬರುವುದು.

iii) ಅರ್ಜಿದಾರ ಅಥವಾ ಈ ಜವಾಬ್ದಾರಿಯನ್ನು ನಿರ್ವಹಿಸಲಿರುವ ಯಾವುದೇ ವ್ಯಕ್ತಿ ನ್ಯಾಯಾಲಯದಿಂದ ಈ ಪರವಾನಗಿ ಪಡೆಯಲು ಅನರ್ಹ ಎಂದು ತೀರ್ಮಾನವಾಗಿರುವುದು.

iv) ಯಾವುದೇ ವ್ಯಕ್ತಿ ಈ ಕಾಯ್ದೆಯ ಪ್ರಕಾರ ದೃಢೀಕರಣ ಪತ್ರವನ್ನು ಪಡೆಯಲು ಅಗತ್ಯವಾದ ನಿಯಮಗಳನ್ನು ಪಾಲಿಸದೇ ಇರುವುದು.

**ತಿರಸ್ಕರಿಸಲು ಕಾರಣಗಳ ದಾಖಲಾತಿ**

೧೧. ಯಾವುದೇ ವ್ಯಕ್ತಿಯೇ ಆಗಲೀ, ಆತ ಪರವಾನಗಿಯನ್ನು ನೀಡುವ ಅಧಿಕಾರ ಹೊಂದಿದ್ದು, ಅರ್ಜಿಯನ್ನು ತಿರಸ್ಕರಿಸಿದರೆ, ತಾನು ತಿರಸ್ಕರಿಸಿದುದ್ದಕ್ಕೆ ಕಾರಣಗಳನ್ನು ಆತ ಲಿಖಿತವಾಗಿ ದಾಖಲಿಸಬೇಕು.

**ಅರ್ಜಿ ನಿರಾಕರಣೆಯ ವಿರುದ್ಧ ಮನವಿ**

೧೨. ಯಾವುದೇ ವ್ಯಕ್ತಿಯು ತನ್ನ ಅರ್ಜಿ ತಿರಸ್ಕಾರದ ವಿರುದ್ಧ ಮನವಿ ಸಲ್ಲಿಸಬೇಕಾದರೆ ಆತ ತನ್ನ ಮನವಿಯನ್ನು ಸೆಷನ್ಸ್ ನ್ಯಾಯಾಧೀಶರ ಎದುರು ಸಲ್ಲಿಸಬಹುದು. ಈ ವಿಷಯದಲ್ಲಿ ಸೆಷನ್ಸ್ ನ್ಯಾಯಾಧೀಶರ ನಿರ್ಣಯವೇ ಅಂತಿಮವಾಗಿರುತ್ತದೆ.

**ಪರವಾನಗಿ ನೀಡಲು ಅಧಿಕಾರ ಇರುವವರು**

೧೩. ಈ ಮಸೂದೆಯಲ್ಲಿ ನೀಡಲಾಗಿರುವ ಅಂಗೀಕಾರದಂತೆ, ಸರ್ಕಾರದಿಂದ ಅಧಿಕೃತವಾಗಿ ನೇಮಿಸಲ್ಪಟ್ಟ ಯಾವುದೇ ಅಧಿಕಾರಿ, ಈ ನಿಟ್ಟಿನಲ್ಲಿ ನಿರ್ದಿಷ್ಟ ನಮೂನೆಯಲ್ಲಿ ಅರ್ಜಿಯು ಸ್ವೀಕೃತವಾಗಿದ್ದರೆ. ಶುಲ್ಕ ಪಾವತಿಯಾಗಿದ್ದರೆ ಈ ಕಾಯ್ದೆಗೆ ಒಳಪಟ್ಟು ಪರವಾನಗಿಯನ್ನು ದೃಢೀಕರಣ ಪತ್ರವನ್ನು ಹೊಂದಿರುವವರಿಗೆ ನೀಡಬಹುದು.

**ಪರವಾನಗಿಯ ಅವಧಿ**

೧೪. ಪ್ರತಿ ವರ್ಷದ ಡಿಸೆಂಬರ್ ೩೧ ರಂದು ಪರವಾನಗಿಯು ಅನೂರ್ಜಿತಗೊಳ್ಳುತ್ತದೆ.

**ಪರವಾನಗಿ ಪಡೆಯಲು ಶುಲ್ಕ**

೧೫. ಲೇವಾದೇವಿಗಾರನ ವ್ಯವಹಾರ ನಡೆಸಲು ಪಡೆಯುವ ಪರವಾನಗಿಯ ಶುಲ್ಕವನ್ನು ೫೦/– ರೂಗಳೆಂದು ನಿಗದಿಪಡಿಸಲಾಗಿದೆ. ಕೇವಲ ೬ ತಿಂಗಳ ಅವಧಿಗೆ ಈ ಪರವಾನಗಿಯನ್ನು ಪಡೆಯಲು ಇಚ್ಛಿಸಿದರೆ ಅದಕ್ಕೆ ೩೦/– ರೂಗಳ ಶುಲ್ಕವನ್ನು ನಿಗದಿಪಡಿಸಲಾಗಿದೆ.

**ಪರವಾನಗಿಯ ವಿಷಯದಲ್ಲಿ ಕಾನೂನಿನ ನಿಯಮಗಳ ಉಲ್ಲಂಘನೆಯಾದರೆ ತಗಲುವ ದಂಡ**

೧೬. ಯಾರೇ ಆದರೂ:

a. ತನ್ನ ಹೆಸರನ್ನು ಹೊರತು ಪಡಿಸಿ ಬೇರೆಯವರ ಹೆಸರಿನಲ್ಲಿ ಪರವಾನಗಿ ಪಡೆಯಲು ಪ್ರಯತ್ನಿಸಿದರೆ, ಅಥವಾ

b. ಅಧಿಕೃತ ಪರವಾನಗಿ ಇಲ್ಲದೆಯೇ ಹಣಕಾಸು ವ್ಯವಹಾರವನ್ನು ನಡೆಸುತ್ತಿದ್ದರೆ.

c. ಲೇವಾದೇವಿಯ ಪರವಾನಗಿಯನ್ನು ಪಡೆದುಕೊಂಡು ಪರವಾನಗಿಯಲ್ಲಿ ನಮೂದಿಸಿರದ

ಹೆಸರಿನಲ್ಲಿ ಅಥವ ಪರವಾನಗಿಯಲ್ಲಿ ನಮೂದಿಸಲಾಗಿರುವ ವಿಳಾಸವನ್ನು ಹೊರತುಪಡಿಸಿ ಬೇರೆ ಯಾವುದೋ ವಿಳಾಸದಲ್ಲಿ ಈ ವ್ಯವಹಾರವನ್ನು ನಡೆಸುತ್ತಿದ್ದರೆ.

d. ತನ್ನ ಅಧಿಕೃತ ಹೆಸರನ್ನು ಉಳಿದಂತೆ ಬೇರೆಯವರ ಹೆಸರಿನಲ್ಲಿ, ಇತರರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವುದು, ಸಾಲಕ್ಕೆ ಆಧಾರವಾಗಿ ಒತ್ತೆಯನ್ನು ಸ್ವೀಕರಿಸುವುದು, –ಇವುಗಳನ್ನು ತನ್ನ ವ್ಯವಹಾರವನ್ನು ನಡೆಸುವಾಗ ಮಾಡಿದರೆ, ಆತನಿಗೆ ೧೦೦ರೂಗಳಿಗೆ ಕಡಿಮೆಯಿಲ್ಲದ ದಂಡವನ್ನು ವಿಧಿಸಬಹುದು.

ಒಂದು ವೇಳೆ ಮೇಲ್ಕಂಡ ಅಪರಾಧಗಳನ್ನು ಎರಡಕ್ಕಿಂತ ಹೆಚ್ಚು ಬಾರಿ ಮಾಡಿದರೆ, ಮೇಲ್ಕಂಡ ಜುಲ್ಮಾನೆ ವಿಧಿಸುವುದರೊಂದಿಗೆ, ೩ ತಿಂಗಳಿಗೆ ಮೀರದಂತಹ ಸೆರೆವಾಸವನ್ನು ಕೂಡ ವಿಧಿಸಬಹುದು.

## ಅಧ್ಯಾಯ–III
## ಪರವಾನಗಿಯ ಅಮಾನತ್ತು ಮತ್ತು ರದ್ಧತಿ

೧೭. ಮೇಲ್ಕಂಡ ಕಾಯ್ದೆಯ ಪ್ರಕಾರ ಒಂದು ವೇಳೆ ಒಬ್ಬ ವ್ಯಕ್ತಿಯ ಅಪರಾಧ ಸಾಬೀತುಗೊಂಡರೆ:

i) a) ನ್ಯಾಯಾಲಯವು ಆ ವ್ಯಕ್ತಿಯ ಪರವಾನಗಿಯನ್ನು ಒಂದು ನಿರ್ದಿಷ್ಟ ಅವಧಿಯವರೆಗೆ ಅಮಾನತ್ತಿನಲ್ಲಿಡಬಹುದು ಅಥವಾ ಪರವಾನಗಿಯನ್ನು ರದ್ದುಮಾಡಬಹುದು.

b) ಒಂದು ನಿರ್ದಿಷ್ಟ ಅವಧಿಯವರೆಗೆ ಪರವಾನಗಿ ಪಡೆಯಲು ಈ ವ್ಯಕ್ತಿ ಅನರ್ಹ ಎಂದು ಘೋಷಿಸುವುದು.

ii) ಅಪರಾಧ ಸಾಬೀತಾದ ವಿಷಯದ ವಿವರಗಳನ್ನು ಸದರಿ ವ್ಯಕ್ತಿಯು ಹೊಂದಿರತಕ್ಕ ಎಲ್ಲಾ ಪರವಾನಗಿಗಳ ಮೇಲೆ ನಮೂದಿಸುವುದು.

iii) ಯಾರು ಈ ವ್ಯಕ್ತಿಗೆ ಪರವಾನಗಿಯನ್ನು ನೀಡಿದ್ದರೋ ಆ ಅಧಿಕಾರಿಗೆ ಮತ್ತು ದೃಢೀಕರಣ ಪತ್ರವನ್ನು ನೀಡಿದ ಅಧಿಕಾರಿಗೆ ಈ ಎಲ್ಲಾ ವಿವರಗಳನ್ನು ತಿಳಿಸುವಂತೆ ನ್ಯಾಯಾಲಯವು ನಿರ್ದೇಶವನ್ನು ನೀಡಬಹುದು.

### ಅಮಾನತು ಹಾಗೂ ರದ್ದತಿಯ ಆದೇಶದ ವಿರುದ್ಧ ಮನವಿ

೧೮. ನ್ಯಾಯಾಲಯದ ಆದೇಶದ ಮೇರೆಗೆ ಯಾವುದೇ ವ್ಯಕ್ತಿಯ ಪರವಾನಗಿ ಅಮಾನತ್ತಿನಲ್ಲಿ ಇಡಲ್ಪಟ್ಟಿದ್ದರೆ ಅಥವಾ ರದ್ದಾಗಿದ್ದರೆ ಆ ವ್ಯಕ್ತಿಯು ಪರವಾನಗಿ ಹೊಂದಲು ಅನರ್ಹ ಎಂದು ಘೋಷಿತವಾಗಿದ್ದರೆ ಆ ವ್ಯಕ್ತಿ ಆ ಆದೇಶದ ವಿರುದ್ಧ ಮೇಲಿನ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಬಹುದು. ವಿಚಾರಣೆಯು ಪೂರ್ಣಗೊಳ್ಳುವ ಮೊದಲೇ ಮೇಲ್ಮನವಿಯ ನ್ಯಾಯಾಲಯವು, ತನಗೆ ಸರಿಯೆನಿಸಿದರೆ, ಹಿಂದಿನ ಆಜ್ಞೆಗೆ ತಡೆಯಾಜ್ಞೆಯನ್ನು ನೀಡಬಹುದು.

### ನ್ಯಾಯಾಲಯ ಆದೇಶಿಸಿದಾಗ ಪರವಾನಗಿಯನ್ನು ಹಾಜರುಪಡಿಸುವಿಕೆ

೧೯. ೧) ಯಾವುದೇ ಪರವಾನಗಿಯಾದರೂ, ಕಾಯ್ದೆಯ ಪ್ರಕಾರ ನ್ಯಾಯಾಲಯವು ಅದರ ಮೇಲೆ ಷರಾಬರೆಯಬೇಕು ಎಂದು ಆದೇಶಿಸಿದರೆ, ನ್ಯಾಯಾಲಯವು ನಿಗದಿ ಪಡಿಸಿರುವ ಸಮಯದಲ್ಲಿ, ಅದನ್ನು ಸಂಬಂಧಿಸಿದ ವ್ಯಕ್ತಿ ಹಾಜರುಪಡಿಸಬೇಕು.

೨) ಒಂದು ವೇಳೆ ಸಕಾರಣವಿಲ್ಲದೆಯೇ ಆ ವ್ಯಕ್ತಿಯು ಪರವಾನಗಿಯನ್ನು ಹಾಜರುಪಡಿಸಲು ವಿಫಲನಾದರೆ, ಅದನ್ನು ಕೂಡ ಅಪರಾಧ ಎಂದು ಪರಿಗಣಿಸಿ ದಿನವೊಂದಕ್ಕೆ ಐದು ರೂಪಾಯಿಗಳಂತೆ ಆತನ್ನು ಪರವಾನಗಿಯನ್ನು ಹಾಜರುಪಡಿಸದೇ ಇರುವಷ್ಟು ದಿನಗಳಿಗೆ ದಂಡವನ್ನು ವಿಧಿಸಬಹುದು.

## ಅಧ್ಯಾಯ IV
## ವ್ಯವಹಾರ ಮುಂದುವರೆಸಿಕೊಂಡು ಹೋಗುವ ವಿಧಾನ

ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಜಾಹೀರಾತು ನೀಡಿಕೆ ಹಾಗು ಸುತ್ತೋಲೆಯನ್ನು ಹಂಚುವಿಕೆಯ ನಿಷೇಧ:

೨೦. ೧) ಹಣಕಾಸು ವ್ಯವಹಾರಗಾರ ತನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕವಾಗಿ ಯಾವುದೇ ಜಾಹೀರಾತು, ಸುತ್ತೋಲೆ ವ್ಯವಹಾರ ಪತ್ರ ಅಥವಾ ಮತ್ತೆ ಯಾವುದೇ ಪ್ರಕಟಣೆಯನ್ನು ನೀಡುವ ಮತ್ತು

a. ಹಣ ಪಡೆಯುವಂತೆ ಆಹ್ವಾನವನ್ನೊಳಗೊಂಡ

b. ಅಥವಾ ತಾನು ಈ ವ್ಯವಹಾರ ನಡೆಸುತ್ತಿರುವ ವಿಷಯವನ್ನು ಪ್ರಚಾರ ಮಾಡುವಂತಹ ಪತ್ರ ಇತ್ಯಾದಿಗಳನ್ನು ನೀಡುವಂತಿಲ್ಲ.

೨) ಮೇಲ್ಕಂಡ ಪರಿಚ್ಛೇದವನ್ನು (೨೦.೧) ಉಲ್ಲಂಘಿಸುವ ವ್ಯಕ್ತಿಯು ಶಿಕ್ಷೆಗೆ ಅರ್ಹನಾಗುತ್ತಾನೆ. ಆತನಿಗೆ ೧೦೦/–ರೂ.ಗಳವರೆಗಿನ ದಂಡವನ್ನು ಪ್ರತಿ ಅಪರಾಧಕ್ಕೂ ವಿಧಿಸಬಹುದಾಗಿರುತ್ತದೆ.

**ಕಾರ್ಯಕರ್ತರನ್ನು ನೇಮಿಸುವುದರ ವಿರುದ್ಧ ನಿಷೇಧ:**

೨೧. ೧) ಯಾವುದೇ ಲೇವಾದೇವಿಗಾರನೂ ಅಥವಾ ಆತನ ಪರವಾಗಿ ಬೇರೆ ಯಾವ ವ್ಯಕ್ತಿಯೂ, ತನ್ನೊಂದಿಗೆ ವ್ಯವಹಾರ ನಡೆಸಲು ಆಹ್ವಾನ ನೀಡುವುದಕ್ಕಾಗಲೀ ಸಾಲ ಪಡೆಯುವಂತೆ ತಿಳಿಸುವುದಕ್ಕಾಗಲಿ ತನ್ನ ವ್ಯವಹಾರದ ಜಾಹೀರಾತಿಗಾಗಿ ಯಾವುದೇ ವ್ಯಕ್ತಿಯನ್ನು ನೇಮಿಸಿಕೊಳ್ಳಬಾರದು. ಹಾಗೆಯೇ ಯಾವುದೇ ವ್ಯಕ್ತಿಯೂ ಇಂತಹ ಕಾರ್ಯವನ್ನು ನಿರ್ವಹಿಸಬಾರದು ಮತ್ತು ಅಂತಹ ಕೆಲಸ ಮಾಡಿದುದ್ದಕ್ಕಾಗಿ ನಗದು ರೂಪದಲ್ಲಿ ಅಥವಾ ಬೇರೆ ಯಾವುದೇ ರೂಪದಲ್ಲಿ ಹಣವನ್ನಾಗಲೀ ಅಥವಾ ಇನ್ನಾವುದೇ ರೂಪದ ಪ್ರತಿಫಲನವನ್ನಾಗಲೀ ಪಡೆಯಬಾರದು.

೨) ಮೇಲ್ಕಂಡ ಪರಿಚ್ಛೇದ (೨೧.೧)ನ್ನು ಉಲ್ಲಂಘಿಸಿದವರು ೩ ತಿಂಗಳಿಗೆ ಮೀರದ ಸರಳ ಸೆರೆವಾಸಕ್ಕೆ ಹಾಗು ೧೦೦ ರೂಪಾಯಿಗಳ ದಂಡಕ್ಕೆ ಗುರಿಯಾಗುತ್ತಾರೆ.

**ಪರಿಚ್ಛೇದ ೨೦ ಹಾಗೂ ೨೧ ಎರಡನ್ನು ಉಲ್ಲಂಘಿಸಿದರೆ ದಂಡ:**

೨೨. ಪರಿಚ್ಛೇದ ೧೯ ಹಾಗು ೨೦ನ್ನು* ಉಲ್ಲಂಘಿಸಿ ಯಾವುದೇ ವ್ಯವಹಾರವು ನಡೆದಿದೆ ಎಂದು ತಿಳಿದು ಬಂದು, ಆ ಹಣಕಾಸು ವ್ಯವಹಾರಗಾರ ಈ ವ್ಯವಹಾರವು ತನ್ನ ಅರಿವಿಗೆ ಬಾರದೇ ನಡೆದಿದೆ ಎಂದು ಸಾಬೀತು ಪಡಿಸದೆ ಇದ್ದರೆ. ಆ ವ್ಯವಹಾರಗಾರನಿಗೆ ಅಧಿಕೃತ ಪರವಾನಗಿ ನೀಡಿದ್ದರೂ ಆ ವ್ಯವಹಾರವು ಅಸಿಂಧುವಾಗುತ್ತದೆ.

೨೩. ಲೇವಾದೇವಿಗಾರನಿಂದ ಸಾಲವನ್ನು ಪಡೆಯಲು, ಸಾಲವನ್ನು ಪಡೆದಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಂದರ್ಭಿಕ ವೆಚ್ಚವನ್ನು ಸಾಲಗಾರನು ಅಥವಾ ಭಾವೀ ಸಾಲಗಾರನು ಲೇವಾದೇವಿಗಾರನಿಗೆ ನೀಡಬೇಕೆಂದು ಮಾಡಿಕೊಳ್ಳುವ ಯಾವುದೇ ಒಪ್ಪಂದವೂ ಅಸಿಂಧುವಾಗಿರುತ್ತದೆ. ಮತ್ತು ಇಂತಹ ಯಾವುದೇ ವೆಚ್ಚವನ್ನು ಈಗಾಗಲೇ ಸಾಲಗಾರನು ಲೇವಾದೇವಿಗಾರನಿಗೆ ನೀಡಿದ್ದೇ ಆಗಿದ್ದರೆ, ಅಂತಹ ಮೊತ್ತವನ್ನು ಸಾಲಗಾರನು ಲೇವಾದೇವಿಗಾರನಿಗೆ ಮರುಪಾವತಿಮಾಡಬೇಕಾಗಿರುವ ಮೊತ್ತದಲ್ಲಿ ಕಳೆಯಲಾಗುವುದು ಅಥವಾ ಸಾಲಗಾರನು ಸಾಲದ ಮೊತ್ತವನ್ನು ನೀಡಬೇಕಾಗಿದ್ದ ಬಡ್ಡಿಯೊಂದಿಗೆ ಸಂಪೂರ್ಣವಾಗಿ ಹಿಂದಿರುಗಿಸಿದ್ದರೆ ಮೇಲೆ ಹೇಳಿದ ಮೊತ್ತವನ್ನು ಲೇವಾದೇವಿಗಾರನು ಸಾಲಗಾರನಿಗೆ ಮರುಪಾವತಿಮಾಡಬೇಕಾಗಿರುವ ಸಾಲವೆಂದು ಪರಿಗಣಿಸಲಾಗುವುದು.

ಆದರೆ, ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ನೀಡಬೇಕಾಗಿರುವ ಸ್ಟಾಂಪ್ ತೆರಿಗೆ ಹಾಗೂ ನೊಂದಾವಣಿಯ ಶುಲ್ಕಗಳ ಒಟ್ಟು ಮೊತ್ತದ ಅರ್ಧಕ್ಕೆ ಮೀರದಷ್ಟು ಮೊಬಲಗನ್ನು ಲೇವಾದೇವಿಗಾರನು ಸಾಲಗಾರನಿಂದ ವಸೂಲುಮಾಡಿಕೊಳ್ಳುವುದು ಅಥವಾ ಅದನ್ನು ನೀಡಿರುವ ಸಾಲದ ಲೆಕ್ಕಕ್ಕೆ ಸೇರಿಸುವುದು ನ್ಯಾಯವಿರುದ್ಧವಾಗಿರುವುದಿಲ್ಲ.

## ಅಧ್ಯಾಯ – V

## ಲೇವಾದೇವಿಗಾರನ ಕರ್ತವ್ಯ

### ವ್ಯವಹಾರವು ಲಿಖಿತ ರೂಪದಲ್ಲಿ ಇರತಕ್ಕದ್ದು

೨೪. ೧) ಈ ಮಸೂದೆಯು ಜಾರಿಗೆ ಬಂದ ನಂತರ ಸಾಲದ ಮರುಪಾವತಿಗೆ, ಅಥವಾ ಅಥವಾ ಬಡ್ಡಿಯ ಪಾವತಿಗೆ ಹಾಗೂ ಸಾಲಕ್ಕಾಗಿ ನೀಡಿರುವ ಭದ್ರತೆಗೆ ಮಾಡಿಕೊಂಡಿರುವ ಒಪ್ಪಂದವು ಲಿಖಿತ ದಾಖಲೆಯ ರೂಪದಲ್ಲಿ ಇರಬೇಕು ಮತ್ತು ಇದಕ್ಕೆ ಸಾಲಗಾರ ಖುದ್ದಾಗಿ ಸಹಿ ಹಾಕಿರಬೇಕು.

೨) ಈ ಲಿಖಿತ ದಾಖಲೆಯು ನಿರ್ದಿಷ್ಟ ನಮೂನೆಯಲ್ಲಿದ್ದು ಒಪ್ಪಂದದ ಎಲ್ಲಾ ಷರತ್ತುಗಳನ್ನೂ, ಅದರಲ್ಲಿಯೂ ಈ ಕೆಳಕಂಡ ವಿವರಗಳನ್ನು, ಒಳಗೊಂಡಿರತಕ್ಕದ್ದು.

a) ಸಾಲ ನೀಡಲಾದ ದಿನಾಂಕ

b) ಸಾಲದ ಮೊತ್ತ

c) ಸಾಲಕ್ಕಾಗಿ ನೀಡಬೇಕಾಗಿರುವ ಪ್ರತಿಫಲ

---

* ಈ ಎರಡು ಪದಚ್ಛೇದಗಳ ಸಂಖ್ಯೆ ೨೦ ಮತ್ತು ೨೧ ಎಂದಿರಬಹುದು –ಸಂಪಾದಕರು.

d) ಬಡ್ಡಿಯ ದರ

e) ಪಡೆಯಲಾಗಿರುವ ಭದ್ರತೆಯ ವಿವರಗಳು

f) ಸದರಿ ಸಾಲದ ಮೊತ್ತವು ಹಿಂದೆ ಸದರಿ ಸಾಲಗಾರನು ಪಡೆದು, ಮರುಪಾವತಿ ಮಾಡಬೇಕಾಗಿದ್ದ ಸಾಲದ ಬಾಬ್ತಿಗಾಗಿ ನೀಡಿದ್ದೇ ಆಗಿದ್ದರೆ, ಹಳೆಯ ಸಾಲದ ವಿವರಗಳು ಮತ್ತು ಅದಕ್ಕೆ ಪಡೆದಿದ್ದ ಭದ್ರತೆಯ ವಿವರಗಳು.

**ಸಾಲಗಾರನಿಗೆ ನೀಡಬೇಕಾದ ಲಿಖಿತ ದಾಖಲೆಯ ಪ್ರತಿ**

೨೫ ಸಾಲ ಪಡೆದ ಏಳು ದಿನಗಳ ಒಳಗಾಗಿ ಈ ಲಿಖಿತ ದಾಖಲೆಯ ಪ್ರತಿಯನ್ನು ಸಾಲ ನೀಡಿರುವಾತ ಸಾಲಗಾರನಿಗೆ ತಲುಪಿಸಬೇಕು. ಪರಿಚ್ಛೇದ ೨೪ ಹಾಗು ೨೫ರ ಉಲ್ಲಂಘನೆ ಮಾಡಿರುವ ವ್ಯವಹಾರವು ಅಸಿಂಧುವಾಗುತ್ತದೆ.

೨೬. ಯಾವುದೇ ಒಪ್ಪಂದವು ಸಾಲಗಾರನಿಂದ ಸಾಲ ನೀಡುವ ಮುನ್ನ ಅಥವಾ ಭದ್ರತೆ ಪಡೆಯುವ ಮುನ್ನ ಸಹಿ ಮಾಡಲ್ಪಟ್ಟಿಲ್ಲವೆಂದು, ಲಿಖಿತ ದಾಖಲೆಯ ಪ್ರತಿಯನ್ನು ಪರಿಚ್ಛೇದ* ೨೪ನ್ನು ಉಲ್ಲಂಘಿಸಿ ಏಳು ದಿನಗಳ ಒಳಗಾಗಿ ಸಾಲಗಾರರಿಗೆ ನೀಡಲ್ಲವೆಂದು ಸಾಬೀತಾದರೆ ಈ ವ್ಯವಹಾರವನ್ನೇ ಅಸಿಂಧು ಎಂದು ಪರಿಗಣಿಸಲಾಗುವುದು.

**ಒಪ್ಪಂದಕ್ಕಿಂತ ಹೆಚ್ಚಿನ ಬಡ್ಡಿಯನ್ನು ಪಡೆದರೆ ವ್ಯವಹಾರ ಅಸಿಂಧುವಾಗುತ್ತದೆ.**

೨೭. ಈ ಕಾಯ್ದೆಯು ಜಾರಿಗೆ ಬಂದ ನಂತರ, ಮಾಡಿಕೊಂಡ ಒಪ್ಪಂದದಲ್ಲಿ ಚಕ್ರಬಡ್ಡಿಯನ್ನು ವಿಧಿಸಿರುವ ಷರತ್ತು ಪ್ರತ್ಯಕ್ಷವಾಗಿಯಾಗಲೀ ಅಪ್ರತ್ಯಕ್ಷವಾಗಿಯಾಗಲೀ ಸೇರಿಸಿದ್ದರೆ ಅಥವಾ ಮರುಪಾವತಿ ಮಾಡದ ಹಣದ ಮೇಲೆ ಅಧಿಕ ದರದಲ್ಲಿ ಬಡ್ಡಿಯನ್ನು ವಿಧಿಸುವ ಷರತ್ತುಗಳಿದ್ದರೆ, ಆ ಒಪ್ಪಂದವು ಅಸಿಂಧುವಾಗುತ್ತದೆ ಹಾಗು ಲೇವಾದೇವಿಗಾರನು ಅಂತಹ ಯಾವುದೇ ಬಡ್ಡಿಯನ್ನು ಪಡೆಯಲು ಅರ್ಹನಾಗಿರುವುದಿಲ್ಲ.

ಒಂದು ವೇಳೆ ಒಪ್ಪಂದದ ಪ್ರಕಾರ ಸಾಲಗಾರನು ಅಸಲನ್ನಾಗಲೀ ಅಥವಾ ಬಡ್ಡಿಯನಾಗಲೀ ಸಮಯಕ್ಕೆ ಸರಿಯಾಗಿ ಪಾವತಿಸದೇ ಹೋದರೆ, ಆತ ಬಡ್ಡಿಯನ್ನು ಪಾವತಿಸಬೇಕಾಗಿದ್ದ ದಿನಾಂಕದಿಂದ ಅಂತಹ ಅಸಲಿನ ಮೇಲೆ ಹಾಗೂ ಬಡ್ಡಿಯ ಮೇಲೆ ಸರಳ ಬಡ್ಡಿಯನ್ನು ಮೂಲ ಒಪ್ಪಂದದಲ್ಲಿ ನಮೂದಿಸಿರುವ ಬಡ್ಡಿಯನ್ನು ಮೀರದ ದರದಲ್ಲಿ ಲೇವಾದೇವಿಗಾರನು ವಿಧಿಸಬಹುದು. ಮತ್ತು ಹಾಗೆ ವಿಧಿಸಿದ ಬಡ್ಡಿಯು ಈ ಕಾಯ್ದೆಯಲ್ಲಿ ಹೇಳಲ್ಪಟ್ಟಿರುವ ಬಡ್ಡಿಗೆ ಹೊರತಾದುದು ಎಂದು ಪರಿಗಣಿಸಲಾಗುತ್ತದೆ.

---

* 'ಪರಿಚ್ಛೇದ ೨೩ ಅಥವಾ' – ಎಂಬುದನ್ನು ಸೇರಿಸಿಕೊಳ್ಳಬೇಕು –ಸಂಪಾದಕರು.

# ಅಧ್ಯಾಯ – VII
# ಲೆಕ್ಕ ಪತ್ರಗಳ ದಾಖಲಾತಿ

**ಲೇವಾದೇವಿಗಾರ ಸಾಲಗಾರನಿಗೆ ಪಾಸ್ ಬುಕ್ ನೀಡಬೇಕು.**

೨೮. ಪ್ರತಿಯೋರ್ವ ಲೇವಾದೇವಿಗಾರನೂ ತನ್ನ ಸಾಲಗಾರನಿಗೆ ಸರ್ಕಾರವು ನಮೂದಿಸಿರುವ ಪಾಸ್ ಬುಕ್‌ನ್ನು ನೀಡತಕ್ಕದ್ದು. ಸಾಲಗಾರನು ಪಡೆದ ಸಾಲ, ಸಾಲಗಾರನು ಲೇವಾದೇವಿಗಾರನಿಗೆ ಹಿಂದಿರುಗಿಸಿದ ಹಣದ ವಿವರ ಮೊದಲಾದವನ್ನು ನಮೂದಿಸಿ. ಅವುಗಳನ್ನು ದೃಢೀಕರಿಸುವುದಕ್ಕಾಗಿ ಆ ನಮೂದುಗಳ ಮುಂದೆ ಲೇವಾದೇವಿಗಾರನು ತನ್ನ ಸಹಿಯನ್ನು ಮಾಡಿರತಕ್ಕದ್ದು.

**ಸಾಲಗಾರನಿಗೆ ಲೇವಾದೇವಿಗಾರ ವಾರ್ಷಿಕ ಹಣಕಾಸು ವ್ಯವಹಾರದ ವಿವರ ನೀಡಬೇಕು.**

೨೯. ತನ್ನ ಸಾಲಗಾರನಿಗೆ ಅಥವಾ ಆತನ ಪರವಾಗಿ ತನ್ನ ಹಣವನ್ನು ತನಗೆ ಹಿಂದಿರುಗಿಸುವ ಜವಾಬ್ದಾರಿಯನ್ನು ಹೊತ್ತಿರುವ ವ್ಯಕ್ತಿಗೆ ಲೇವಾದೇವಿಗಾರನು ಪ್ರತಿ ವರ್ಷ ಜನವರಿ ೩೧ರ ಒಳಗೆ ಹಿಂದಿನ ವರ್ಷದ ಸದರಿ ಸಾಲದ ಲೆಕ್ಕದ ವಿವರವನ್ನು ಸಲ್ಲಿಸಬೇಕು. ಇದರ ಧೃಢೀಕರಣಕ್ಕೆ ತನ್ನ ಸಹಿ ಹಾಕಬೇಕು.

**ಹಣ ಪಾವತಿ ತಡವಾದ ಸಂದರ್ಭದಲ್ಲಿ ಲೇವಾದೇವಿಗಾರ ಸಾಲಗಾರನ ಮೇಲೆ ಕಾನೂನು ಕ್ರಮ ಜರುಗಿಸುವಂತಿಲ್ಲ.**

೩೦. ಲೇವಾದೇವಿಗಾರನು ಮೇಲಿನ ಪರಿಚ್ಛೇದ ೨೮ರ ಪ್ರಕಾರ ನಡೆದುಕೊಳ್ಳದಿದ್ದರೆ, ಮರುಪಾವತಿ ಮಾಡಬೇಕಾಗಿದ್ದ ಅಸಲು ಮತ್ತು ಬಡ್ಡಿಯ ಮೊಬಲಗು ಪಾವತಿಯಾಗುವವರೆಗೂ ಸದರಿ ಮೊಬಲಗನ್ನು ವಸೂಲು ಮಾಡಲು ನ್ಯಾಯಾಲಯದಲ್ಲಿ ಕ್ರಮ ಜರುಗಿಸುವಂತಿಲ್ಲ, ಹಾಗೂ ಅಂತಹ ಅವಧಿಯಲ್ಲಿ ಪಾವತಿಯಾಗಬೇಕಿದ್ದ ಹಣದ ಮೇಲೆ ಬಡ್ಡಿಯನ್ನೂ ವಿಧಿಸುವಂತಿಲ್ಲ.

**ಉಲ್ಲಂಘನೆಗೆ ದಂಡ**

೩೧. ಮೇಲಿನ ೨೮ ಮತ್ತು ೨೯ನೆಯ ಪರಿಚ್ಛೇದಗಳನ್ನು ಉಲ್ಲಂಘಿಸಿದ ಲೇವಾದೇವಿಗಾರನ ಮೇಲೆ ರೂಪಾಯಿ ೧೦೦/ರವರೆಗಿನ ದಂಡವನ್ನು ವಿಧಿಸಬಹುದು.

**ಲೆಕ್ಕ ಪತ್ರಗಳನ್ನು ಸರ್ಕಾರದಿಂದ ಪಡೆದ ಪುಸ್ತಕಗಳಲ್ಲಿಯೇ ದಾಖಲಿಸತಕ್ಕದ್ದು**

೩೨. ಪ್ರತಿಯೋರ್ವ ಲೇವಾದೇವಿಗಾರನೂ ನಿಗದಿತ ಶುಲ್ಕ ಪಾವತಿಸಿ ಸರ್ಕಾರದಿಂದ ತನ್ನ ವ್ಯವಹಾರದ ದಾಖಲಾತಿಗಾಗಿ ನಿಗದಿತ ಪುಸ್ತಕಗಳನ್ನು ಪಡೆಯಬೇಕು ಹಾಗು ಅದರಲ್ಲಿ ಮಾತ್ರವೇ ತನ್ನ ವ್ಯವಹಾರವನ್ನು ದಾಖಲಿಸಬೇಕು. ತಾನು ನೀಡಿರುವ ಸಾಲ, ಅದಕ್ಕಾಗಿ ಪಡೆದಿರುವ ಭದ್ರತೆ ಎಲ್ಲವನ್ನೂ ಆ ಪುಸ್ತಕದಲ್ಲಿ ಲೇವಾದೇವಿಗಾರನು. ಸರ್ಕಾರವು ಸೂಚಿಸಿರುವ ಅಥವಾ ಕಾಲದಿಂದ ಕಾಲಕ್ಕೆ ಸೂಚಿಸುವ ಭಾಷೆಯಲ್ಲಿ ಶಾಯಿಯಲ್ಲೇ ದಾಖಲಿಸಬೇಕು.

**ಪ್ರತಿ ವರ್ಷವೂ ಸರ್ಕಾರಕ್ಕೆ ಈ ಹಣಕಾಸು ವ್ಯವಹಾರದ ಪುಸ್ತಕವನ್ನು ಧೃಡೀಕರಣಕ್ಕಾಗಿ ಸಲ್ಲಿಸಬೇಕು.**

೩೩. ೧) ಜನವರಿ ೩೧ ರಂದು ಅಥವಾ ಅದಕ್ಕೆ ಮೊದಲು ಪ್ರತಿಯೋರ್ವ ಲೇವಾದೇವಿಗಾರನೂ ಪರವಾನಗಿ ನೀಡುವ ಅಧಿಕಾರಿಯ ಎದುರು ಕಳೆದ ವರ್ಷದ ತನ್ನ ಎಲ್ಲಾ ಹಣಕಾಸು ವ್ಯವಹಾರಗಳ ಪುಸ್ತಕಗಳನ್ನು ಹಾಜರುಪಡಿಸಬೇಕು.

೨) ಪರವಾನಗಿ ಅಧಿಕಾರಿಯು ತಾನು ಪರೀಕ್ಷಿಸಿದಂತಹ ಎಲ್ಲಾ ಚಾಲ್ತಿ ಲೆಕ್ಕಗಳ ಮೊದಲ ಹಾಗು ಕಡೆಯ ದಾಖಲಾತಿಗಳ ಮೇಲೆ ಸಹಿ ಹಾಕತಕ್ಕದ್ದು. ಒಂದು ವೇಳೆ ಯಾವುದಾರೂ ಪುಸ್ತಕ ಮುಂದಿನ ವರ್ಷಕ್ಕೂ ಮುಂದುವರಿಯುವುದಾದರೇ, ಆ ಪುಸ್ತಕದ ಮೊದಲ ದಾಖಲಾತಿ ಹಾಗು ಕಡೆಯ ದಾಖಲಾತಿಯ ಪಕ್ಕ ಸಹಿ ಹಾಕಿ, ದಿನಾಂಕವನ್ನು ನಮೂದಿಸತಕ್ಕದ್ದು.

೩) ಚಾಲ್ತಿ ಲೆಕ್ಕಗಳ ಪುಸ್ತಕದಲ್ಲಿ ಪರವಾನಗಿ ನೀಡುವ ಅಧಿಕಾರಿಯು, ಆ ಪುಸ್ತಕದ ಕಡೆಯ ದಾಖಲಾತಿಯ ನಂತರ, ಈ ಹಿಂದೆ ತಾನು ಲೇವಾದೇವಿಗಾರನಿಗೆ ನೀಡಿದ್ದು, ಆತನು ಹಿಂದಿನ ವರ್ಷ ಬಳಸದೇ ಇರುವ ಪುಸ್ತಕಗಳ ವಿವರಗಳನ್ನು ದಾಖಲಿಸತಕ್ಕದ್ದು.

**ಪರಿಚ್ಛೇದ ೩೧ ಹಾಗೂ ೩೨ ರಂತೆ ಪುಸ್ತಕದಲ್ಲಿ ನಮೂದಿತವಾಗಿರದೇ ಹೋದರೆ ಅದನ್ನು ಸಾಕ್ಷಿ ಎಂದು ಪರಿಗಣಿಸಲಾಗುವುದಿಲ್ಲ.**

೩೪. ಭಾರತೀಯ ಸಾಕ್ಷಿ ಅಧಿನಿಯಮದಲ್ಲಿ ಏನನ್ನೇ ಹೇಳಿದ್ದರೂ, ಲೇವಾದೇವಿಗಾರನು ತನ್ನ ಹಣಕಾಸಿನ ವ್ಯವಹಾರವನ್ನು ಈ ಹಿಂದೆ ೩೨ನೆಯ ಪರಿಚ್ಛೇದದಲ್ಲಿ ಸೂಚಿಸಿರುವ ನಮೂನೆಯ ಪುಸ್ತಕಗಳಲ್ಲಿ ಹಾಗೂ ಅದೇ ಪರಿಚ್ಛೇದದಲ್ಲಿ ಸೂಚಿಸಿರುವ ರೀತಿಯಲ್ಲಿ ದಾಖಲಿಸದೇ ಇದ್ದರೆ ಮತ್ತು ೩೩ನೆಯ ಪರಿಚ್ಛೇದದಲ್ಲಿ ಸೂಚಿಸಿರುವ ರೀತಿಯಲ್ಲಿ ಲೆಕ್ಕಪತ್ರಗಳ ದಾಖಲಾತಿಗಳು ಸಂಬಂಧಪಟ್ಟ ಅಧಿಕಾರಿಯಿಂದ ದೃಢೀಕರಣಗೊಳ್ಳದಿದ್ದರೆ, ಆ ಪುಸ್ತಕಗಳಲ್ಲಿರುವ ದಾಖಲಾತಿಗಳನ್ನು ಸಾಕ್ಷ್ಯವೆಂದು ಪರಿಗಣಿಸಲಾಗುವುದಿಲ್ಲ.

## ಅಧ್ಯಾಯ – VII
## ಮೊಕದ್ದಮೆಗಳು ಹಾಗು ಕಾನೂನು ಪ್ರಕ್ರಿಯೆಗಳು

### ಸಣ್ಣ ಅಪರಾಧಗಳ ನ್ಯಾಯಾಲಯಗಳ ನ್ಯಾಯ ನಿರ್ವಹಣೆಯ ವ್ಯಾಪ್ತಿಯ ಹೊರಗೆ

೩೫. ಪ್ರಾಂತೀಯ ಅಥವಾ ಕೇಂದ್ರೀಯ ಸಣ್ಣ ಅಪರಾಧಗಳ ನ್ಯಾಯಾಲಯಗಳ ಅಧಿನಿಯಮದಲ್ಲಿ ಏನನ್ನೇ ಹೇಳಿದ್ದರೂ, ಲೇವಾದೇವಿಗಾರನ ಪರವಾಗಿಯಾಗಲೀ ಅಥವಾ ಆತನ ವಿರುದ್ಧವಾಗಲೀ ಯಾವುದೇ ಪ್ರಕರಣಗಳ ವಿಚಾರಣೆಯನ್ನು ಕೈಗೆತ್ತಿಕೊಳ್ಳಕೂಡದು. ಆದರೆ ಒಂದು ವೇಳೆ ಪ್ರಕೃತ ಮೊಕದ್ದಮೆಯು ಪ್ರತ್ಯೇಕವಾಗಿ ಒಂದೇ ಪ್ರಕರಣಕ್ಕೆ ಸಂಬಂಧಿಸಿದ್ದು, ಪ್ರತ್ಯೇಕವಾಗಿ ಅಥವಾ ಅಪ್ರತ್ಯಕ್ಷವಾಗಿ ಮೊಕದ್ದಮೆಗೆ ಸಂಬಂಧಿಸಿದ ಹಿಂದಿನ ಯಾವುದಾದರೂ

---

ಈ ಪರಿಚ್ಛೇದಗಳ ಸಂಖ್ಯೆ ೩೨ ಮತ್ತು ೩೩ ಎಂದಿರಬಹುದು – ಸಂಪಾದಕರು

ಒಂದು ಪ್ರಕರಣಕ್ಕೆ ಸಂಬಂಧಿಸಲ್ಪಡದೆ ಇದ್ದರೆ ಮಾತ್ರ ಈ ನ್ಯಾಯಾಲಯಗಳು ಈ ಮೊಕದ್ದಮೆಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಬಹುದು.

**ಮನವಿಯಲ್ಲಿ ನೀಡಬೇಕಿರುವ ಪರವಾನಗಿಯ ವಿವರಗಳು:**

೩೬ ೧) ಸದರಿ ವ್ಯವಹಾರವು ಪ್ರಾರಂಭವಾದಾಗ ಆತನು ಹೊಂದಿದ್ದ ಪರವಾನಗಿಯ ವಿವರಗಳನ್ನು ಮನವಿ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.

೨) ಒಂದು ವೇಳೆ ಲೇವಾದೇವಿಗಾರನು ಮೇಲೆ ಹೇಳಿರುವಂತೆ ತನ್ನ ಮನವಿ ಪತ್ರದಲ್ಲಿ ಸಲ್ಲಿಸಲು ಕಾನೂನಿಗೆ ಸಮ್ಮತವಾದ ಕಾರಣಗಳನ್ನು ಸಲ್ಲಿಸಲು ವಿಫಲನಾದರೇ, ಪ್ರತಿವಾದಿಯು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಡಿರುವ ಖರ್ಚನ್ನು ಪಾವತಿ ಮಾಡುವಂತೆ ನ್ಯಾಯಾಲಯವು ಆತನಿಗೆ ಆದೇಶಿಸಬಹುದಾಗಿರುತ್ತದೆ.

**ಲೇವಾದೇವಿಗಾರನಿಂದ ವಿಚಾರಣೆಯ ವಿವರಗಳನ್ನು ಪಡೆಯುವುದು**

೩೭. ೧) ಯಾವುದೇ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಹಣದ ಅಥವಾ ಮುಂಗಡ ನೀಡಿರುವ ಹಣದ ಮರುಪಾವತಿಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿ ಸಾಲ ನೀಡಿದ ವ್ಯಕ್ತಿಯು ತಾನಲ್ಲವೆಂದು ತಿಳಿಸಿದರೆ, ನ್ಯಾಯಾಲಯವು ಈ ಕೆಳಗಿನ ಕಾರಣಗಳಿಗೆ ಆತನನ್ನು ವಾಸ್ತವಾಂಶಗಳನ್ನು ತಿಳಿದುಕೊಳ್ಳುವ ಸಲುವಾಗಿ ಆತನಿಗೆ ಈ ಮುಂದಿನ ಪ್ರಶ್ನೆಗಳನ್ನು ಕೇಳಬಹುದು.

a) ಈ ಪ್ರಕರಣ ದಾಖಲಾಗುವ ಮುನ್ನ ಆತ ವೈಯಕ್ತಿಕವಾಗಿ ಅಥವಾ ಬೇರೆ ಯಾವುದಾದರೂ ವ್ಯಕ್ತಿಯೊಂದಿಗೆ ಸೇರಿಕೊಂಡು, ಅಥವಾ ಯಾವುದಾದರೂ ಸಂಸ್ಥೆಯೊಂದಿಗೆ ಸೇರಿಕೊಂಡು ಪ್ರತಿವಾದಿ ವ್ಯಕ್ತಿಗೆ ಅಥವ ಸಂಸ್ಥೆಗೆ ಸಾಲದ ರೂಪದಲ್ಲಿ ಇಲ್ಲವೇ ಮುಂಗಡವಾಗಿ ಹಣ ನಿಡಿದ್ದಾನೆ ಮತ್ತು ಎಷ್ಟು ಹಣವನ್ನು ಈ ಮೊಕದ್ದಮೆಯು ದಾಖಲಾಗುವುದಕ್ಕೆ ಮೊದಲು ನೀಡಿದ್ದಾನೆ ಎಂದು ಕೇಳಬಹುದು.

b) ಆತ/ಆಕೆ ಯಾವುದಾದರೂ ಸಂದರ್ಭದಲ್ಲಿ ಇಲ್ಲವೇ ಸಂದರ್ಭಗಳಲ್ಲಿ ಹಣವನ್ನು ಸಾಲದ ರೂಪದಲ್ಲಿ ಇಲ್ಲವೇ ಮುಂಗಡವಾಗಿ ಬೇರೆ ಯಾರದ್ದಾದರೂ ಹೆಸರಿನಲ್ಲಿ ನೀಡಿದ್ದರೆ. ಅದರ ವಿವರಗಳನ್ನು ಕೇಳಬಹುದು.

c) ಆತ ತನ್ನ ಹೆಸರಿನಲ್ಲಿ ಲೇವಾದೇವಿ ವ್ಯವಹಾರವನ್ನು ನಡೆಸಲು ಪರವಾನಗಿ ಪಡೆದಿದ್ದಾನೆಯೇ ಇಲ್ಲವೇ ಬೇರೆ ಯಾರ ಹೆಸರಿನಲ್ಲಿಯಾದರೂ ಪಡೆದಿದ್ದರೆ ಆ ಪರವಾನಗಿಯ ವಿವರ ಹಾಗೂ ಪಡೆದಿರುವ ದಿನಾಂಕಗಳನ್ನು ಕೇಳಬಹುದು.

d) ಈ ಎಲ್ಲಾ ವಿಚಾರಣೆಗಳಿಗೂ ೧೯೦೮ರ ಸಿವಿಲ್ ಪ್ರೊಸೀಜರ್ ಕೋಡ್‌ನ ೧೧ನೆಯ ನಿಯಮವು ಅನ್ವಯವಾಗುತ್ತದೆ.

**ಕೆಲ ನಿರ್ದಿಷ್ಟ ವ್ಯವಹಾರಗಳನ್ನು ಪುನರ್ ಪರಿಶೀಲಿಸುವ ನ್ಯಾಯಾಲಯದ ಅಧಿಕಾರ :**

೩೮. ದಾಖಲಾದ ಪ್ರಕರಣಗಳಲ್ಲಿ ಈ ಮೇಲ್ಕಂಡ ಕಾಯ್ದೆಯು ಕೆಲ ಸಂದರ್ಭಗಳಲ್ಲಿ ಮಾತ್ರವೇ ಜಾರಿಗೆ ಬರುತ್ತದೆ. ಒಂದು ವೇಳೆ ನಡೆದಿರುವಂತಹ ಈ ವ್ಯವಹಾರದಲ್ಲಿ:–

a) ವಿಧಿಸಿರುವ ಬಡ್ಡಿ ಅತ್ಯಧಿಕ ಎಂದು ಕಂಡು ಬಂದರೆ,

b) ಎರಡು ಪಕ್ಷಗಳ ನಡುವೆ ನಡೆದಿರುವ ವ್ಯವಹಾರವು ಸಂಬಂಧಪಟ್ಟ ವ್ಯಕ್ತಿಗಳ ಅರಿವಿಗೆ ಬಾರದೆ ನಡೆದಿದೆ ಎಂದು ಕಂಡುಬಂದರೆ,

ನ್ಯಾಯಾಲಯವು ಈ ಕೆಳಗಿನ ಯಾವುದಾದರೂ ಒಂದು ಅಧಿಕಾರವನ್ನು ಚಲಾಯಿಸಬಹುದಾಗಿರುತ್ತದೆ.

i) ವ್ಯವಹಾರವನ್ನು ಪುನರ್ ಪರಿಶೀಲನೆಗೆ ಒಳಪಡಿಸಿ ಎರಡೂ ಪಕ್ಷಗಳ ನಡುವಿನ ವ್ಯವಹಾರದ ಬಗೆಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಸಾಲಗಾರನನ್ನು ಅಧಿಕ ಬಡ್ಡಿಯ ಋಣದಿಂದ ಮುಕ್ತಗೊಳಿಸುವುದು.

ii) ಹಿಂದಿನ ವ್ಯವಹಾರವನ್ನು ಮುಚ್ಚಿ ಹೊಸ ವ್ಯವಹಾರವನ್ನು ಪ್ರಾರಂಭಿಸುವ ಬಗೆಗೆ, ಮಾಡಿಕೊಂಡಿರುವ ಒಪ್ಪಂದಗಳಲ್ಲಿ ಅವರ ನಡುವೆ ಈ ಹಿಂದೆ ನಡೆದಿರುವ ಯಾವುದೇ ವ್ಯವಹಾರವನ್ನು ಪುನಃ ಪರಿಶೀಲಿಸಿ, ಒಂದು ವೇಳೆ ಅಧಿಕ ಬಡ್ಡಿಯ ಋಣದಿಂದ ಆ ಸಾಲಗಾರನನ್ನು ಮುಕ್ತಗೊಳಿಸುವುದು ಅಥವಾ ಅಂತಹ ಬಡ್ಡಿಯನ್ನು ಸಾಲಗಾರನು ಪಾವತಿಸಿದ್ದರೆ. ಅಥವಾ ಈ ವೇಳೆಗಾಗಲೇ ಸಾಲಗಾರನು ಅಧಿಕ ಬಡ್ಡಿಯನ್ನು ಪಾವತಿ ಮಾಡಿದ್ದಲ್ಲಿ, ಆ ಹಣವನ್ನು ಹಿಂದಿರುಗಿಸುವಂತೆ ಸಾಲ ನೀಡಿದಾತನಿಗೆ ಆದೇಶವನ್ನು ನೀಡುವುದು.

iii) ಸಂಬಂಧಿಸಿದ ಒಪ್ಪಂದವನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಬದಲಿಸುವುದು ಹಾಗು ಸಾಲಕ್ಕೆ ಪೂರಕವಾಗಿ ನೀಡಿರುವ ಭದ್ರತೆಯನ್ನು ಲೇವಾದೇವಿಗಾರನು ವಿಲೇವಾರಿ ಮಾಡಿದ್ದರೆ ಆತನು ಸಾಲಗಾರನಿಗೆ ಸೂಕ್ತ ಪರಿಹಾರವನ್ನು ನೀಡುವಂತೆ ಆದೇಶಿಸುವುದು.

## ಪುನರ್ ಪರಿಶೀಲನೆಗೆ ಒಳಪಡಿಸಲಾರದಂತಹ ಕೆಲ ವ್ಯವಹಾರಗಳು

೩೯. ಪರಿಚ್ಛೇದ ೩೮ರಲ್ಲಿ ನೀಡಿರುವ ಅಧಿಕಾರದ ಅನ್ವಯ ಪುನರ್ ಪರಿಶೀಲನೆಗೆ ಅವಕಾಶ ಇಲ್ಲದ ಸಂದರ್ಭಗಳು ಎಂದರೆ.

i) ವ್ಯವಹಾರವು ನಡೆದ ೨೦ ವರ್ಷಗಳ ನಂತರ ಆ ವ್ಯವಹಾರದ ಬಗೆಗೆ ಹೊಸ ಋಣವನ್ನು ಸೃಷ್ಟಿಸಿ ಹಳೆಯ ಋಣವನ್ನು ಮುಚ್ಚಲು ಸಂಬಂಧಿಸಿದ ವ್ಯಕ್ತಿಗಳು ಒಪ್ಪಂದ ಮಾಡಿಕೊಂಡಿದ್ದರೆ, ಹಿಂದೆ ಮುಚ್ಚಿಹಾಕಲ್ಪಟ್ಟ ಋಣದ ವ್ಯವಹಾರವನ್ನು ನ್ಯಾಯಾಲಯವು ಮತ್ತೆ ಪರಿಶೀಲಿಸಲು ಅವಕಾಶವಿರುವುದಿಲ್ಲ.

ii) ನ್ಯಾಯಾಲಯದ ಬೇರೆ ಯಾವ ಆದೇಶವನ್ನು ಉಲ್ಲಂಘಿಸುವಂತಹ ಯಾವುದೇ ಕ್ರಮ ಕೈಗೊಳ್ಳುವಂತಿಲ್ಲ.

**ವಿವರಣೆ:** ಮೇಲಿನ ೩೮ನೆಯ ಪರಿಚ್ಛೇದದ ಅಡಿಯಲ್ಲಿ ಪರಿಶೀಲಿಸಬೇಕಾದ ಮೊಕದ್ದಮೆಗಳಲ್ಲಿ ಹಲವಾರು ವ್ಯವಹಾರಗಳು ಒಳಗೊಳ್ಳಲ್ಪಟ್ಟಿದ್ದರೆ. 'ವ್ಯವಹಾರ' ಎನ್ನುವುದು ಮೊದಲನೆಯ ವ್ಯವಹಾರಕ್ಕೆ ಮಾತ್ರವೇ ಅನ್ವಯವಾಗುತ್ತದೆ.

## ಬಡ್ಡಿ ಅಧಿಕ ಎಂದು ಕಂಡು ಬಂದ ಸಂದರ್ಭಗಳು

೪೦. ಪರಿಚ್ಛೇದ ೩೭ರ ಉದ್ದೇಶಕ್ಕಾಗಿ ಎಂದು ಕೆಳಕಂಡ ಸಂದರ್ಭಗಳಲ್ಲಿ ಬಡ್ಡಿಯನ್ನು ಅಧಿಕ ಎಂದು ಪರಿಗಣಿಸಲಾಗುವುದು.

i) ಅಸುರಕ್ಷಿತ ಸಾಲಗಳ ವಿಷಯದಲ್ಲಿ ಮೂರುಪಟ್ಟಿಗೂ ಹೆಚ್ಚಿನ ದರದಲ್ಲಿ ಬಡ್ಡಿಯನ್ನು ವಿಧಿಸಿದ್ದರೆ:

ii) ಸಾಲವು ಎರಡನೆಯ ಅಥವಾ ಮೂರನೆಯ ಅಡಮಾನದಿಂದ ಸುರಕ್ಷಿತವಾಗಿದ್ದರೆ, ಮತ್ತು/ಅಥವಾ ಎರಡೂವರೆ ಪಟ್ಟಿಗೂ ಹೆಚ್ಚಿನ ದರದಲ್ಲಿ ಬಡ್ಡಿಯನ್ನು ವಿಧಿಸಿದ್ದರೆ:

iii) ಸಾಲವು ಮೊದಲನೆಯ ಅಡಮಾನದಿಂದ ಸುರಕ್ಷಿತವಾಗಿದ್ದರೆ, ಒಂದೂವರೆ ಪಟ್ಟಿಗೂ ಹೆಚ್ಚಿನ ದರದಲ್ಲಿ ಬಡ್ಡಿಯನ್ನು ವಿಧಿಸಿದ್ದರೆ.

**ಲೆಕ್ಕಪತ್ರ ವಿಧಾನ :**

ಮೇಲಿನ ೩೭ನೆಯ ವಿಧಿಗನುಸಾರವಾಗಿ, ಕೆಳಕಂಡ ನಿಯಮಗಳನ್ನು ಅನುಸರಿಸಿ ಲೆಕ್ಕಪತ್ರಗಳನ್ನು ಇಟ್ಟಿರತಕ್ಕದ್ದು.

i) ಬಡ್ಡಿ ಹಾಗು ಅಸಲು ಎರಡಕ್ಕೂ ಪ್ರತ್ಯೇಕ ಲೆಕ್ಕಾಚಾರ ಇಟ್ಟಿರಬೇಕು.

ii) ಅಸಲಿಗೆ ಸಂಬಂಧಿಸಿದಂತೆ ಸಾಲಗಾರ ಕಾಲದಿಂದ ಕಾಲಕ್ಕೆ ಲೇವಾದೇವಿಗಾರನಿಂದ ಪಡೆದ ಹಣವನ್ನು, ಅಂತೆಯೇ ಹಣದ ಬದಲು ಆತ ಲೇವಾದೇವಿಗಾರನಿಂದ ಯಾವುದಾದರೂ ವಸ್ತುಗಳನ್ನು ಪಡೆದಿದ್ದರೆ ಅದನ್ನು ದಾಖಲೆಯಲ್ಲಿ ನಮೂದಿಸಿರಬೇಕು.

iii) ಒಂದು ವೇಳೆ ಸಾಲಗಾರನ ಲೆಕ್ಕದಲ್ಲಿ ಪಾವತಿಯಾಗದೆ ಉಳಿದಿರುವ ಬಡ್ಡಿಯನ್ನು ಅಸಲಾಗಿ ಪರಿವರ್ತಿಸಿ ಆ ಮೊತ್ತವನ್ನು ಅಸಲಿನ ಲೆಕ್ಕಕ್ಕೆ ಜಮಾ ಮಾಡಬಾರದು.

iv) ಬಡ್ಡಿಯ ಲೆಕ್ಕದಲ್ಲಿ ಪ್ರತಿ ತಿಂಗಳೂ ಸರಳ ಬಡ್ಡಿಯ ದರದಂತೆ ಪರಿಚ್ಛೇದ ವಿಭಾಗ ೩೮ ರಲ್ಲಿ ಹೇಳಿರುವುದಕ್ಕಿಂತ ಹೆಚ್ಚಿಲ್ಲದಂತೆ ಉಳಿಕೆ ಅಸಲಿನ ಮೇಲೆ ಬೀಳುವ ಬಡ್ಡಿಯ ಮೊಬಲಗನ್ನು ಋಣದ ಕಾಲಂನಲ್ಲಿ ನಮೂದಿಸತಕ್ಕದ್ದು.

v) ಸಾಲಗಾರನಿಂದ ಲೇವಾದೇವಿಗಾರನು ಸ್ವೀಕರಿಸಿದ ಹಣ, ಹಣದ ಮೌಲ್ಯವಿರುವ ಯಾವುದೇ ವಸ್ತು, ಸೇವೆ ಮೊದಲಾದವುಗಳ ಮೌಲ್ಯವನ್ನು ಮೊದಲು ತನಗೆ ಬರಬೇಕಾಗಿದ್ದ ಬಡ್ಡಿಯ ಲೆಕ್ಕಕ್ಕೆ ಜಮಾ ಮಾಡಿ, ಬಡ್ಡಿಯ ಲೆಕ್ಕವು ಸಂಪೂರ್ಣವಾಗಿ ಚುಕ್ತಾಗೊಂಡು, ಸ್ವೀಕರಿಸಲ್ಪಟ್ಟ ಮೊತ್ತದಲ್ಲಿ ಇನ್ನೂ ಉಳಿದಿರುವ ಹಣವನ್ನು ಅಸಲಿನ ಲೆಕ್ಕಕ್ಕೆ ಜಮಾ ಮಾಡತಕ್ಕದ್ದು.

ವಿವರಣೆ: ಸಾಲಾಗಾರನಿಂದ ಸ್ವೀಕೃತವಾದ ಮೊಬಲಗುಗಳನ್ನು ಲೆಕ್ಕಹಾಕುವಾಗ ಸ್ವೀಕೃತವಾದ ಹಣ ಲಾಭ, ಸೇವೆ ತಾನು ಅಡವಿಟ್ಟುಕೊಂಡಿರುವ ವಸ್ತುಗಳಿಂದ ತನಗೆ ದೊರೆತ ಬಾಡಿಗೆ ಹಾಗೂ ಇನ್ನಿತರ ಉಪಯೋಗ ಎಲ್ಲವನ್ನೂ ಹಣದ ಮೌಲ್ಯದಲ್ಲಿಯೇ ನಮೂದಿಸುವುದು ಅಗತ್ಯ. ಹೀಗೆ ಮೌಲ್ಯವನ್ನು ನಿರ್ಧರಿಸುವಾಗ ಎಲ್ಲವನ್ನೂ ಮಾರುಕಟ್ಟೆಯ ದರದಲ್ಲಿ, ನ್ಯಾಯಾಲಯವು ನೇಮಕ ಮಾಡಿರುವ ಮೌಲ್ಯಮಾಪಕರ ಸಹಾಯದಿಂದ ಅಥವಾ ನ್ಯಾಯಾಲಯವು ತನ್ನ ನಿರ್ದೇಶನದಲ್ಲಿ ಸೂಚಿಸಿರುವ ಕ್ರಮದಲ್ಲಿ ಮೌಲ್ಯಮಾಪನ ಮಾಡತಕ್ಕದ್ದು.

vi) ಮೊಕದ್ದಮೆಯನ್ನು ದಾಖಲು ಮಾಡುವ ದಿನದಂದು ಸಾಲಗಾರನಿಂದ ಬರಬೇಕಾಗಿರುವ ಅಸಲು ಮತ್ತು ಬಡ್ಡಿಯನ್ನು ಲೆಕ್ಕಹಾಕಿ ಅವೆರಡೂ ಬಾಬ್ತಿನಿಂದ ಬರಬೇಕಾದ ಒಟ್ಟು ಹಣವನ್ನು ಸಾಲಗಾರನು ಲೇವಾದೇವಿಗಾರನಿಗೆ ಆ ದಿನದಂದು ಪಾವತಿಸಬೇಕಾದ ಹಣವೆಂದು ಪರಿಗಣಿಸತಕ್ಕದ್ದು. ಒಂದುವೇಳೆ, ಸಾಲಗಾರನು ಪಾವತಿಸಬೇಕಾದ ಬಡ್ಡಿಯ

ಮೊತ್ತವು ಅಸಲಿನ ಮೊತ್ತಕ್ಕಿಂತ ಅಧಿಕವಾಗಿದ್ದರೆ, ಅಸಲಿನ ಎರಡಷ್ಟು ಮೊಬಲಗನ್ನು ಮಾತ್ರ ಸಾಲಗಾರನಿಂದ ಬರಬೇಕಾಗಿರುವ ಮೊಬಲಗು ಎಂದು ಪರಿಗಣಿಸಬೇಕು.

**ಗಿರವಿ ಇಟ್ಟಿರುವ ಪದಾರ್ಥಗಳ ಮೇಲಿನ ಸಾಲವನ್ನು ಕಂತುಗಳಲ್ಲಿ ಪಾವತಿಸುವ ಅಧಿಕಾರ**

೪೨. ಸಾಲಗಾರನ ಮನವಿಯ ಮೇರೆಗೆ, ಹಣವನ್ನು ನ್ಯಾಯಾಲಯದ ಆದೇಶದ ಮೇರೆಗೆ ಪಡೆಯಬಹುದಾಗಿರುವವನಿಗೆ ತಾನು ಸೂಕ್ತ ಸೂಚನೆಯನ್ನು ನೀಡಿದ ನಂತರ, ಸಾಲಗಾರನು ನೀಡಬೇಕಾಗಿರುವ ಮೊಬಲಗನ್ನು ತನಗೆ ಸರಿಯೆಂದು ತೋರಿದ ಪ್ರಕಾರ, ಇಂತಿಷ್ಟು ಕಂತುಗಳಲ್ಲಿ ಹಾಗೂ ತಾನು ನಿರ್ದೇಶಿಸಿದ ದಿನಾಂಕಗಳಂದೇ ಪಾವತಿಮಾಡಬೇಕೆಂದು ನ್ಯಾಯಾಲಯವು ಆದೇಶಿಸಬಹುದು.

**ಭದ್ರತೆಗಾಗಿ ನೀಡಿರುವ ವಸ್ತುಗಳಿಗೆ ಸಂಬಂಧಿಸಿದ ಸಾಲವನ್ನು ಕಂತುಗಳಲ್ಲಿ ಪಾವತಿಸಲು ನೀಡಬಹುದಾದ ಆದೇಶ**

೪೩. ಯಾವುದೇ ಸಾಲವು ಅಡಮಾನದಿಂದ ಸುರಕ್ಷಿತವಾಗಿದ್ದು ಅಂತಹ ಅಡಮಾನದ ಬಗೆಗೆ ತೀರ್ಮಾನವನ್ನು ಮಾಡಬೇಕಾದ ನ್ಯಾಯಾಲಯವು ಪಾವತಿಮಾಡಬೇಕೆಂದು ನಿರ್ದೇಶಿಸಿರುವ ಮೊಬಲಗನ್ನು ಸಂಬಂಧಪಟ್ಟ ಪಕ್ಷಗಳವರ ಒಪ್ಪಂದದಲ್ಲಿ ಯಾವುದೇ ಷರತ್ತುಗಳಿದ್ದರೂ ಸಹ, ಕಂತುಗಳಲ್ಲಿ ಪಾವತಿಸಬಹುದು ಎಂದು ಸದರಿ ನ್ಯಾಯಾಲಯವು ಆದೇಶಿಸಬಹುದು.

**ನ್ಯಾಯಾಲಯವು ಸಾಲಗಾರನ ಆಸ್ತಿಯ ಮೌಲ್ಯವನ್ನು ನಿರ್ಧಾರ ಮಾಡತಕ್ಕದ್ದು**

೪೪. ಒಂದು ವೇಳೆ ಸಾಲಗಾರನ ಆಸ್ತಿಯನ್ನು ಮಾರಾಟಮಾಡಬೇಕು ಎಂದು ಆದೇಶಿಸಿದ ನ್ಯಾಯಾಲಯದ ತೀರ್ಪಿನ ವಿರುದ್ಧ ಸಾಲಗಾರನು ಮನವಿಯನ್ನು ಸಲ್ಲಿಸಿದರೆ, ೧೯೦೮ರ ಸಿವಿಲ್ ಪ್ರೊಸೀಜರ್ ಕೋಡ್‌ನಲ್ಲಿ ಏನೇ ಹೇಳಿದ್ದರೂ ಎರಡೂ ಕಡೆಯವರ ವಾದವನ್ನು ಆಲಿಸಿ, ಆ ಆಸ್ತಿಯ ಮೌಲ್ಯವನ್ನು ನಿರ್ಧರಿಸತಕ್ಕದ್ದು. ಸಾಲದ ಮರುಪಾವತಿಗೆ ಅಗತ್ಯವಾದಷ್ಟು ಆಸ್ತಿಯನ್ನು ಮಾತ್ರ ಮಾರಲು ನ್ಯಾಯಾಲಯವು ಆದೇಶಿಸತಕ್ಕದ್ದು.

**ಸಾಲಗಾರನ ಆಸ್ತಿಯ ಅಗತ್ಯವಿರುವಷ್ಟು ಭಾಗವನ್ನು ಮಾತ್ರವೇ ಮಾರಬೇಕು.**

೪೫. ೧೯೦೮ರ ಸಿವಿಲ್ ಪ್ರೊಸೀಜ಼ರ್ ಕೋಡ್‌ನಲ್ಲಿ ಏನೇ ಹೇಳಿದ್ದರೂ, ಸಾಲದ ತೀರುವಳಿಗೆ ಸಾಕಾಗುವಷ್ಟು ಆಸ್ತಿಯನ್ನು ಮಾತ್ರ ಮಾರಾಟದಲ್ಲಿ ಸೇರಿಸಬೇಕಾಗಿರುತ್ತದೆ. ಅಲ್ಲದೇ ನ್ಯಾಯಾಲಯವು ನಿಗದಿ ಮಾಡಿರುವುದಕ್ಕಿಂತ ಕಡಿಮೆ ಬೆಲೆಗೂ ಅದನ್ನು ಮಾರಾಟ ಮಾಡುವಂತೆ ಇಲ್ಲ.

**ದುಬಾರಿ ಬಡ್ಡಿಯ ಸಾಲ ಕುರಿತು ನ್ಯಾಯಾಲಯದ ಅಧಿಕಾರ:**

೪೬. ಈ ಅಧಿನಿಯಮದಲ್ಲಿ ಸೂಚಿಸಲ್ಪಡದೇ ಇದ್ದರೆ. ಇದರಲ್ಲಿರುವ ಯಾವ ನಿಯಮವೂ ೧೯೦೮ ಅಧಿಕ ಬಡ್ಡಿಯ ಮೇಲಿನ ಸಾಲಗಳ ಅಧಿನಿಯಮದಲ್ಲಿ ನ್ಯಾಯಾಲಯಕ್ಕೆ ನೀಡಿರುವ ಯಾವುದೇ ಅಧಿಕಾರವನ್ನೂ ಮೊಟಕುಗೊಳಿಸುವುದಿಲ್ಲ.

**ಪ್ರಾಂತದ ಹೊರಗೆ ಪಾವತಿಸಬೇಕೆಂದು ಮಾಡಿಕೊಳ್ಳುವ ಒಪ್ಪಂದವು ಅಸಿಂಧು**

೪೭. ಈ ಕಾಯ್ದೆಯ ಜಾರಿಗೆ ಮುನ್ನ ಸಾಲಗಾರ ಹಾಗು ಲೇವಾದೇವಿಗಾರನ ನಡುವಿನ ಒಪ್ಪಂದದಲ್ಲಿ, ಬಾಂಬೆ ಪ್ರಾಂತದ ಹೊರಗೆ ಪಾವತಿ ಮಾಡಬೇಕೆಂದು ಮಾಡಿಕೊಳ್ಳುವ ಒಪ್ಪಂದವು ಅಸಿಂಧುವಾಗಿರುತ್ತದೆ.

**ಬಡ್ಡಿಯ ಬಾಕಿಯನ್ನು ಪಾವತಿಮಾಡುವಂತೆ ಮಾಡಿಕೊಳ್ಳುವ ಒಪ್ಪಂದವು ಅಸಿಂಧು**

೪೮. ಸಾಲಗಾರನು ಕೊಡಬೇಕಾದ ಬಡ್ಡಿಯ ಬಾಕಿಯನ್ನು ತೀರಿಸುವುದಾಗಿ ಮಾಡಿಕೊಳ್ಳುವ ಒಪ್ಪಂದವು ಅಸಿಂಧುವಾಗುತ್ತದೆ.

## ಅಧ್ಯಾಯ viii
## ಅಪರಾಧಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳು

**ಎಲ್ಲಾ ಅಪರಾಧಗಳು ವಿಚಾರಣಾರ್ಹವಾದವುಗಳು**

೪೯. ಈ ಕಾಯ್ದೆಯ ಅಡಿಯಲ್ಲಿ ಎಲ್ಲಾ ಅಪರಾಧಗಳೂ ವಿಚಾರಣಾರ್ಹವಾಗಿರುತ್ತವೆ ಹಾಗು ಅವುಗಳು ಜಿಲ್ಲಾ ನ್ಯಾಯಧೀಶರು ಮಾಡುವ ವಿಚಾರಣೆಗೆ ಒಳಪಡುತ್ತವೆ.

**ಅಪರಾಧ ನಿರ್ಣಯ ಹಾಗು ಖುಲಾಸೆಯನ್ನು ಕುರಿತ ಮನವಿ:**

೫೦. ಈ ಕಾಯ್ದೆಯ ಅಡಿಯಲ್ಲಿ ಅಪರಾಧ ನಿರ್ಣಯ ಹಾಗು ಖುಲಾಸೆಯನ್ನು ಕುರಿತ ಯಾವುದೇ ತೀರ್ಪನ್ನು ೧೮೯೮ರ ಸಿವಿಲ್ ಪ್ರೊಸೀಜರ್ ಕೋಡಿನ ಅಡಿಯಲ್ಲಿ ನೀಡಿದ ತೀರ್ಪನಂತೆಯೇ ಪ್ರಶ್ನಿಸಬಹುದಾಗಿರುತ್ತದೆ.

## ಅಧ್ಯಾಯ ix
## ಅನುಬಂಧ

**ನಿಯಮಗಳನ್ನು ಮಾಡುವ ಅಧಿಕಾರ**

೫೧. ಸರ್ಕಾರವು ಕೆಳಕಂಡ ನಿಯಮಗಳನ್ನು ಮಾಡುವುದು ಕಾನೂನುಬದ್ಧವಾಗಿರುತ್ತದೆ.

a) ಲೇವಾದೇವಿಗಾರನಿಗೆ ನೀಡುವ ಪ್ರಮಾಣಪತ್ರ ಹಾಗು ಪರವಾನಗಿಯ ಅರ್ಜಿ.
b) ಈ ಪ್ರಮಾಣ ಪತ್ರ ಹಾಗು ಪರವಾನಗಿಯನ್ನು ನೀಡುವಾಗ ಅನುಸರಿಸಬೇಕಾದಂತಹ ಕ್ರಮ.
c) ಯಾವ ಯಾವ ಅಧಿಕಾರಿಗಳಿಗೆ ಪರವಾನಗಿ ನಿಡುವ, ಧೃಢೀಕರಣ ಪತ್ರ ನೀಡುವ, ಲೆಕ್ಕಾಚಾರದ ಪುಸ್ತಕಗಳನ್ನು ನೀಡುವ, ಪಾಸ್ ಬುಕ್ಕುಗಳನ್ನು ನೀಡುವ ಹಾಗು ಅರ್ಜಿಯನ್ನು ನೀಡುವ ಅಧಿಕಾರ ಇರುತ್ತದೆ ಎಂಬುದನ್ನು ತೀರ್ಮಾನಿಸುವುದು.
d) ಈ ಕಾಯ್ದೆಯ ಅಡಿಯಲ್ಲಿ ನೀಡಲಾಗಿರುವ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸುವ ಕ್ರಮ
e) ಲೆಕ್ಕಪತ್ರದ ಪುಸ್ತಕಗಳು, ಪಾಸ್ ಬುಕ್ಕುಗಳು ಹಾಗು ಅವುಗಳ ಧೃಢೀಕರಣದ ಕ್ರಮ.

f) ಸಾಲಗಾರನಿಗೆ ಲೇವಾದೇವಿಗಾರನು ನೀಡಬೇಕಿರುವ ವಾರ್ಷಿಕ ಲೆಕ್ಕದ ವಿವರಗಳ ಮಾದರಿ.

g) ಲೆಕ್ಕಾಚಾರದ ಪುಸ್ತಕ, ಪಾಸ್ ಪುಸ್ತಕ ಮುಂತಾದವುಗಳಿಗೆ ಸಲ್ಲಿಸಬೇಕಿರುವ ಶುಲ್ಕ.

h) ಸಾಲದ ವಿಷಯದಲ್ಲಿ ಸಾಲಗಾರನು ಲೇವಾದೇವಿಗಾರನಿಗೆ ನೀಡಬೇಕಾದ ಮೊಬಲಗು.

೨) ಈ ಪರಿಚ್ಛೇದದ ಅಡಿಯಲ್ಲಿ ಯಾವುದೇ ನಿಯಮವನ್ನು ಮಾಡುವಾಗಲೂ ಅದರ ಕರಡು ಮಸೂದೆಯನ್ನು ಸಂಸತ್ತಿನ ಉಭಯ ಸದನಗಳು ಮುಂದೆ ಸಮಾವೇಶ ನಡೆಯುವಾಗ ೨೧ ದಿನಗಳ ಕಾಲ ಇರಿಸಬೇಕು. ಒಂದು ವೇಳೆ ಈ ೨೧ ದಿನಗಳೊಳಗೆ ಇದರ ವಿರುದ್ಧ ಯಾವುದಾದರೂ ಸದನವು ಆಕ್ಷೇಪವನ್ನು ವ್ಯಕ್ತಪಡಿಸಿದರೆ ಅಥವಾ ೨೧ ದಿನಗಳ ಅವಧಿಯ ಒಳಗೇ ಒಂದು ನಿರ್ಣಯವನ್ನು ತೆಗೆದುಕೊಂಡು ಕರಡು ಮಸೂದೆಯನ್ನು ವಿರೋಧಿಸಿದರೆ ಕರಡು ಮಸೂದೆಯು ವಜಾಗೊಳ್ಳುತ್ತದೆ. ಆದರೆ ಸದರಿ ಕರಡನ್ನು ಪುನಃ ಪರಿಶೀಲನೆ ನಡೆಸಿ ಸದನದ ಮುಂದೆ ಇರಿಸಬಹುದು.

**ಉದ್ದೇಶಗಳು ಹಾಗು ಕಾರಣಗಳ ಹೇಳಿಕೆಗಳು:**

ಈ ಮಸೂದೆಯು ಹಣಕಾಸಿನ ವ್ಯವಹಾರವನ್ನು ವ್ಯವಸ್ಥಿತ ಹಾಗು ನಿಯಮಿತಗೊಳಿಸುವ ಉದ್ದೇಶವನ್ನು ಹೊಂದಿದೆ. ಈ ಕಾರಣಕ್ಕಾಗಿ ಇದು ಕೆಳಗಿನ ನಿಯಮಗಳನ್ನು ಮಾಡುತ್ತದೆ.

ಮೊದಲನೆಯದಾಗಿ

i) ಯಾವುದೇ ವ್ಯಕ್ತಿಯೂ ಸರ್ಕಾರದ ಪರವಾನಗಿ ಇಲ್ಲದೆಯೆ ಲೇವಾದೇವಿಯ ವ್ಯವಹಾರವನ್ನು ಮಾಡಬಾರದು. ಆ ಪರವಾನಗಿಯನ್ನು ಸಚ್ಚಾರಿತ್ರ್ಯದ ದೃಢೀಕರಣ ಪತ್ರವನ್ನು ಹೊಂದಿಲ್ಲದವನಿಗೆ ನೀಡಲಾಗದು.

ii) ಯಾವುದೇ ವ್ಯಕ್ತಿಯು ಈ ಕಾಯ್ದೆಯ ಕೆಳಗೆ ಜಾರಿಗೆ ತರಲಾಗಿರುವ ನಿಯಮಗಳನ್ನು ಉಲ್ಲಂಘಿಸುವ ಅಪರಾಧವನ್ನು ಮಾಡಿದರೆ ಅಂತಹ ವ್ಯಕ್ತಿಯ ಪರವಾನಗಿಯನ್ನು ಅಮಾನತ್ತುಗೊಳಿಸುವ ಅಥವಾ ರದ್ದುಮಾಡುವ ಅವಕಾಶವಿರುತ್ತದೆ.

ಎರಡನೆಯದಾಗಿ

i) ಲೇವಾದೇವಿಗಾರನು ಸಾಲಗಾರನಿಗೆ ನೀಡುವ ಸಾಲವು 'ಸುರಕ್ಷಿತ ಸಾಲ'ವಾಗಿರಲಿ ಅಥವಾ 'ಅಸುರಕ್ಷಿತ ಸಾಲ'ವಾಗಿರಲಿ, ಅದನ್ನು ಲಿಖಿತದ ಮೂಲಕ ದಾಖಲು ಮಾಡಿ ಅದಕ್ಕೆ ಸಾಲಗಾರನ ಸಹಿಯನ್ನು ಹಾಕಿಸಿರಬೇಕು ಎಂದು ಶಾಸನವು ವಿಧಿಸುತ್ತದೆ.

ii) ಸಾಲ ನೀಡುವಾತ ಸಾಲಗಾರನಿಗೆ ಒಂದು ಪಾಸ್ ಬುಕ್ಕನ್ನು ನೀಡಬೇಕು. ಅವರಿಬ್ಬರ ನಡುವೆ ನಡೆಯುವಂತಹ ಎಲ್ಲಾ ವ್ಯವಹಾರವನ್ನು ಅವನು ಇದರಲ್ಲಿ ದಾಖಲಿಸಬೇಕು.

iii) ಪ್ರತಿ ವರ್ಷವೂ ಲೇವಾದೇವಿಗಾರನು ಸಾಲಗಾರನೊಂದಿಗಿನ ತನ್ನ ವ್ಯವಹಾರದ ವಿವರಗಳನ್ನು ಸಾಲಗಾರನಿಗೆ ಒದಗಿಸಿಬೇಕು.

iv) ಚಕ್ರಬಡ್ಡಿಯನ್ನು ವಸೂಲಿ ಮಾಡುವುದು ಹಾಗು ಇತರ ಶುಲ್ಕಗಳನ್ನು ವಸೂಲಿ ಮಾಡುವುದು ಕಾನೂನುಬಾಹಿರ.

ಮೂರನೆಯದಾಗಿ: ಈ ಕಾಯ್ದೆಯು ಲೇವಾದೇವಿಗಾರ ಯಾವ ರೀತಿಯಲ್ಲಿ ಹಣಕಾಸಿನ ದಾಖಲೆಗಳನ್ನು ಇರಿಸಬೇಕು ಎಂಬುದನ್ನು ಸೂಚಿಸುತ್ತದೆ. ಅದರಂತೆ

i) ಸರ್ಕಾರದಿಂದ ಪಡೆದುಕೊಂಡ ಪುಸ್ತಕಗಳಲ್ಲಿಯೇ ಲೇವಾದೇವಿಗಾರ ತನ್ನ ಲೆಕ್ಕಪತ್ರಗಳನ್ನು ಇಡಬೇಕು.

ii) ಪ್ರತಿ ವರ್ಷದ ಕಡೆಯಲ್ಲಿಯೂ ಈತ ಇದಕ್ಕಾಗಿ ನೇಮಿಸಲ್ಪಟ್ಟ ಸರ್ಕಾರಿ ಅಧಿಕಾರಿಯ ಎದುರು ಈ ಪುಸ್ತಕಗಳನ್ನು ಹಾಜರುಪಡಿಸಬೇಕು. ಆ ಅಧಿಕಾರಿಯು ಇದರ ಮೊದಲ ಹಾಗು ಕಡೆಯ ದಾಖಲಾತಿಯ ಪಕ್ಕದಲ್ಲಿ ಸಹಿಹಾಕುತ್ತಾನೆ.

iii) ಈ ಮೇಲಿನ ನಿಯಮಗಳನ್ನು ಪಾಲಿಸದ ದಾಖಲೆ ಪುಸ್ತಕಗಳನ್ನು ಯಾವುದೇ ಸಂದರ್ಭದಲ್ಲಿಯೂ ಯಾವ ವಿಚಾರಣೆಯಲ್ಲೂ ಸಾಕ್ಷಿ ಎಂದು ಪರಿಗಣಿಸಲು ಸಾಧ್ಯವಿಲ್ಲ.

ನಾಲ್ಕನೆಯದಾಗಿ: ಇದರಲ್ಲಿ ಲೇವಾದೇವಿಗಾರ ಹಾಗು ಸಾಲಗಾರನ ನಡುವೆ ನ್ಯಾಯಾಲಯದಲ್ಲಿ ಹೂಡಬಹುದಾದ ಮೊಕದ್ದಮೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಕೂಡ ರೂಪಿಸಲಾಗಿದೆ: ಅದರ ಪ್ರಕಾರ.

i) ಒಂದೇ ಒಂದು ವ್ಯವಹಾರಕ್ಕೆ ಸಂಬಂಧಿಸಿಲ್ಲದಿದ್ದರೆ ಆ ಪ್ರಕರಣವನ್ನು ಸಣ್ಣ ಮೊಕದ್ದಮೆಗಳ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲಾಗುವುದಿಲ್ಲ.

ii) ಒಂದು ವೇಳೆ ಬಡ್ಡಿ ಅಧಿಕ ಎಂದು ಕಂಡು ಬಂದರೆ, ಅಥವಾ ಸಂಬಂಧಪಟ್ಟವರ ಅರಿವಿಗೆ ಬರದೇ ನಡೆದಿದೆ ಎಂದಾದರೆ ನ್ಯಾಯಾಲಯ ಯಾವುದೇ ಪ್ರಕರಣವನ್ನು ಪುನರ್ ಪರಿಶೀಲನೆಗೆ ಒಳಪಡಿಸಬಹುದು.

iii) ಬ್ಯಾಂಕ್ ನಿಗದಿಪಡಿಸಿರುವುದಕ್ಕಿಂತ ಸಾಪೇಕ್ಷವಾಗಿ ಹೆಚ್ಚಿನ ಬಡ್ಡಿಯನ್ನು ವಿಧಿಸಿದರೆ ಅದನ್ನು ಅಧಿಕ ಬಡ್ಡಿ ಎಂದು ಪರಿಗಣಿಸಲಾಗುವುದು.

iv) D.A.R ಕಾಯ್ದೆಯಲ್ಲಿ ನಮೂದಿಸಿರುವಂತೆ ಲೇವಾದೇವಿಗಾರ ಹಾಗು ಸಾಲಗಾರನ ಹಣಕಾಸಿನ ಲೆಕ್ಕಾಚಾರವನ್ನು ಪರಿಗಣಿಸಲಾಗುವುದು.

v) ಒಂದು ವೇಳೆ ನ್ಯಾಯಾಲಯದಲ್ಲಿ ಸಾಲಗಾರನ ವಿರುದ್ಧ ತೀರ್ಪು ಪ್ರಕಟವಾದರೆ, ಆತನಿಗೆ ಕಂತುಗಳಲ್ಲಿ ಸಾಲವನ್ನು ಹಿಂದಿರುಗಿಸುವ ಅವಕಾಶ ನ್ಯಾಯಾಲಯವು ನೀಡಬಹುದು ಮತ್ತು ಸಾಲವನ್ನು ತೀರಿಸಲು ಅಗತ್ಯವಿರುವಷ್ಟು ಆಸ್ತಿಯನ್ನು ಮಾತ್ರ ಮಾರತಕ್ಕದ್ದು.

ಐದನೆಯದಾಗಿ: ಒಂದು ವೇಳೆ ಬೊಂಬಾಯಿ ಪ್ರಾಂತದ ಹೊರಗೆ ಹಣವನ್ನು ಪಾವತಿಸಬೇಕು ಎಂದು ಒಪ್ಪಂದವನ್ನು ಮಾಡಿಕೊಂಡರೆ, ಅಂತಹ ಒಪ್ಪಂದವು ಅಸಿಂಧುವಾಗುತ್ತದೆ ಎಂದು ಈ ಮಸೂದೆಯು ಸೂಚಿಸುತ್ತದೆ. ಇದರ ಹಿಂದಿರುವ ಉದ್ದೇಶವೆಂದರೆ, ಲೇವಾದೇವಿಗಾರನು ಅಂತಹ ಸಂದರ್ಭವನ್ನು ತನ್ನ ಅನುಕೂಲಕ್ಕಾಗಿ ಬಳಸಿಕೊಂಡು ಈ ಮಸೂದೆಯ ಮೂಲ ಉದ್ದೇಶಕ್ಕೆ ಭಂಗ ತರಬಾರದು ಎಂಬುದು.

**ಬಿ.ಆರ್. ಅಂಬೇಡ್ಕರ್**

* * * * *

---

ಬಾಂಬೆಯ ಠಾಕೂರ್‌ದ್ವಾರ್‌ನ ೩೬೪ನೆಯ ಸಂಖ್ಯೆಯ ವಿಳಾಸದಲ್ಲಿ ಶ್ರೀ ಲಕ್ಷ್ಮೀನಾರಾಯಣ ಪ್ರೆಸ್‌ನಲ್ಲಿ ಪುನರ್ಮುದ್ರಿತವಾದ ಕಿರುಹೊತ್ತಿಗೆ.

## ೨೦

## ನಾನು ನನ್ನ ತತ್ವಗಳನ್ನು ಸಮರ್ಥಿಸಿಕೊಳ್ಳುತ್ತೇನೆ ಹಾಗು ಅದಕ್ಕಾಗಿ ಏಕಾಂಗಿಯಾಗಿ ಹೋರಾಟ ನಡೆಸುತ್ತೇನೆ

ಅಹ್ಮದಾಬಾದ್, ಅಕ್ಟೋಬರ ೨೨ ೧೯೩೮.

ವ್ಯಾಪಾರೀ ವಿವಾದಗಳು ಅಥವಾ ಬಾಡಿಗೆದಾರರ ಕರಡು ಮಸೂದೆಯನ್ನು ಮಂಡಿಸುವ ಮೂಲಕ ಬೊಂಬಾಯಿಯ ಕಾಂಗ್ರೆಸ್ ಮಂತ್ರಿಮಂಡಲವು ಯಾವುದೇ ಅಭಿವೃದ್ಧಿಯನ್ನು ಸಾಧಿಸಿಲ್ಲ ಎಂಬುದು ನನ್ನ ನಂಬಿಕೆ. ಕಾಂಗ್ರೆಸ್ ಪಕ್ಷದೊಂದಿಗೆ ನಮಗೆ ಹಲವಾರು ವರ್ಷಗಳಿಂದಲೂ ಕೆಲವೊಂದು ಮೂಲಭೂತ ಭಿನ್ನಮತಗಳಿವೆ. ನಾವು ಹೋರಾಡುವುದು ಪ್ರಾಂತದಲ್ಲಿನ ಅಧಿಕಾರಕ್ಕಾಗಿ ಅಲ್ಲ ಬದಲಿಗೆ ನಮ್ಮ ಹಕ್ಕುಗಳಿಗಾಗಿ.

ಇಂದು ಬೆಳಿಗ್ಗೆ ಪತ್ರಿಕಾ ಸಂದರ್ಶಕನೋರ್ವನೊಂದಿಗೆ ಅಂಬೇಡ್ಕರ್ ಅವರು ಹಂಚಿಕೊಂಡ ವಿಷಯಗಳು ಮೇಲಿನಂತಿತ್ತು.

ಮುಂದುವರೆಯುತ್ತಾ ಅವರು ನುಡಿದರು. "ನಾನು ಇಂದು ಕಾಂಗ್ರೆಸ್ ಪಕ್ಷದೊಂದಿಗೆ ಕೈಜೋಡಿಸಿದರೆ, ನನಗೆ ಏನು ಬೇಕೋ ಅದೆಲ್ಲವೂ ದೊರೆಯುತ್ತವೆ. ಆದರೆ ನಮ್ಮ ವಿಷಯ ಸಂಪೂರ್ಣವಾಗಿ ಭಿನ್ನ. ನನ್ನ ಇಡೀ ಸಮುದಾಯ ನನ್ನ ಚಿಂತನೆಗೆ ಸಹಮತ ವ್ಯಕ್ತಪಡಿಸದಿದ್ದರೂ ನನಗೆ ಚಿಂತೆಯಿಲ್ಲ. ಅವರು ಕಾಂಗ್ರೆಸ್ ಪಕ್ಷದೊಂದಿಗೆ ಕೈಜೋಡಿಸಿದರೂ ನನಗೆ ಚಿಂತೆಯಿಲ್ಲ, ಆದರೆ ನಾನು ನನ್ನ ತತ್ವಕ್ಕೆ ಬದ್ಧನಾಗಿರುವೆ ಹಾಗು ಏಕಾಂಗಿಯಾಗಿಯೇ ಆದರೂ ಹೋರಾಡುವೆ."

ಜಿನ್ನಾ ಅವರ ವಿಷಯಕ್ಕೆ ಸಂಬಂಧಿಸಿದಂತೆ ಅವರು ಹೀಗೆ ನುಡಿದರು: "ಮುಸಲ್ಮಾನರನ್ನು ಸಂಪೂರ್ಣ ತಪ್ಪು ಹಾದಿಯಲ್ಲಿ ಜಿನ್ನಾ ಅವರು ಕೊಂಡೊಯುತ್ತಿದ್ದಾರೆ. ಅವರಿಗೆ ಕಾಂಗ್ರೆಸ್ ಪಕ್ಷದೊಂದಿಗೆ ಯಾವ ರೀತಿಯ ಭಿನ್ನಮತ ಇದೆ ಎಂಬುದು ನನಗೆ ತಿಳಿದಿಲ್ಲ. ಒಂದು ವೇಳೆ ಆ ಪಕ್ಷ ಅಲ್ಪಸಂಖ್ಯಾತರ ಹಿತ ಚಿಂತನೆ ಮಾಡುವ ಆಸಕ್ತಿಯನ್ನು ಹೊಂದಿದ್ದರೆ, ಜಿನ್ನಾ ಅವರು ಕಾಂಗ್ರೆಸ್‌ಗಿಂತ ವಿಭಿನ್ನ ನಿಲುವನ್ನು ಹೊಂದಿರುವರ ಪಕ್ಷಗಳ ಜೊತೆ ಕೈ ಜೋಡಿಸುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ನನ್ನ ಪ್ರಕಾರ ಮುಸ್ಲಿಮ್ ಲೀಗ್ ಚುನಾವಣೆಗಳಲ್ಲಿ ಗೆಲ್ಲಲು ಹಾಗು ಮಂತ್ರಿ ಮಂಡಲದಲ್ಲಿ ಸ್ಥಾನ ಪಡೆಯಲು ಹೋರಾಡುತ್ತಿದೆ.

ಶ್ರೀ ಜಿನ್ನಾ ಅವರು ಒಂದು ಕಡೆ ಕಾಂಗ್ರೆಸ್‌ನೊಂದಿಗೆ ಜಗಳ ಆಡುತ್ತಿದ್ದಾರೆ ಮತ್ತೊಂದು ಕಡೆ ಅವರೊಂದಿಗೆ ಒಪ್ಪಂದಕ್ಕೆ ಒಳಪಡುವ ಸನ್ನಾಹದಲ್ಲಿದ್ದಾರೆ. ಇದು ಸಂಪೂರ್ಣವಾಗಿ ಅರ್ಥಹೀನ ಪೂನಾ ಒಪ್ಪಂದದಿಂದ ಪಾಠ ಕಲಿಯುವಂತೆ ನಾನು ಅವರನ್ನು ಆಗ್ರಹಪಡಿಸುತ್ತೇನೆ.

*    *    *    *

## ೨೧
## ಅಧಿಕಾರದ ಅಮಲಿನಲ್ಲಿ ಇರುವಂತೆ ಕಂಡು ಬರುತ್ತಿರುವ ಮಂತ್ರಿಮಂಡಲ

ಬೊಂಬಾಯಿ, ಗುರುವಾರ*

ಬೊಂಬಾಯಿಯ ಕಾರ್ಮಿಕ ವರ್ಗದ ಜನರ ಪರವಾಗಿ, ಕಾನೂನು ಹಾಗು ಸುವ್ಯವಸ್ಥೆಯ ಪರವಾಗಿ, ಹಾಗು ಒಂದು ವ್ಯವಸ್ಥಿತ ಆಡಳಿತ ಬಯಸುವ ಪ್ರಜೆಗಳ ಪರವಾಗಿ, ಮುಷ್ಕರ ನಿರತರನ್ನು ಅತ್ಯಂತ ಹೀನಾಯವಾಗಿ ಮಾನ್ಯ ಶ್ರೀ ಮುನ್ಷಿಯವರ ನೇತೃತ್ವದಲ್ಲಿ ನಡೆಸಿಕೊಳ್ಳಲಾದುದರ ಬಗ್ಗೆ ನಾನೊಂದು ನಿಷ್ಪಕ್ಷಪಾತ ಹಾಗು ಸಾರ್ವಜನಿಕ ವಿಚಾರಣೆಗೆ ಬೇಡಿಕೆ ಸಲ್ಲಿಸುತ್ತೇನೆ. ಪೋಲಿಸರು ಆ ಸಮಯದಲ್ಲಿ ಲಾಠಿ ಚಾರ್ಜ್ ನಡೆಸಿ, ವಿನಾಕಾರಣ ಹಲವು ಸುತ್ತು ಗುಂಡುಗಳನ್ನು ಹಾರಿಸಿದರು. ಇದರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ಆಗಲೇಬೇಕು ಎಂದು ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಮಾಧ್ಯಮದವರ ಎದುರು ಹೇಳಿದ್ದಾರೆ.[೧]

ಕಾಂಗ್ರೆಸ್ ಮಂತ್ರಿ ಮಂಡಲಕ್ಕೆ ಏನಾಗಿದೆ? ಒಂದು ದಿನದ ಮುಷ್ಕರವನ್ನು ಈ ರೀತಿಯ ಅಮಾನುಷ ಕ್ರಮ ಕೈಗೊಳ್ಳದೇ ತಡೆಯಲು ಅವರಿಗೆ ಸಾಮರ್ಥ್ಯವಿಲ್ಲವೇ? ಎಂದು ಡಾ. ಅಂಬೇಡ್ಕರ್ ಕೇಳಿದರು.

"ಈ ರೀತಿ ಕೆಲವು ಮುಷ್ಕರಗಳು ಹಲವಾರು ದಿನಗಳು, ವಾರಗಳು ಹಾಗು ತಿಂಗಳುಗಳವರೆಗೆ ನಡೆದ ನಿದರ್ಶನಗಳು ನಮ್ಮ ಮುಂದಿದೆ. ಒಂದು ಮುಷ್ಕರವಂತೂ ನಿರಂತವಾಗಿ ಏಳೂವರೆ ತಿಂಗಳುಗಳ ಕಾಲ ನಡೆಯಿತು. ಆಗ ಪ್ರತಿ ನಿತ್ಯವೂ ಮೆರವಣಿಗೆಗಳು, ಸಭೆಗಳು ಹಾಗು ಪ್ರದರ್ಶನಗಳು ಇರುತ್ತಿದ್ದವು. ಆದರೆ ಆ ಸಮಯದಲ್ಲಿ ಪೋಲಿಸರು ಗುಂಡುಗಳನ್ನು ಹಾರಿಸದ್ದಾಗಲೀ ಇಲ್ಲವೇ ಲಾಠಿ ಪ್ರಹಾರವನ್ನು ನಡೆಸಿದ್ದಾಗಲಿ ಇರಲಿಲ್ಲ" ಆದರೆ ಇಂದು ಈ ಕಾಂಗ್ರೆಸ್ ರಾಜ್ಯದಲ್ಲಿ ಭಯೋತ್ಪಾದನೆಯ ಮಾರ್ಗದಿಂದಲೇ ಎಲ್ಲಾ ಮುಷ್ಕರಗಳನ್ನು ಅದುಮಿ ಇಡಲಾಗುತ್ತಿದೆ. ಈ ಮಟ್ಟಕ್ಕೆ ಕಾಂಗ್ರೆಸ್ ಇಂದು ಕುಸಿದಿದೆ."

### ಪತ್ರಿಕೆಗಳು

ಇನ್ನು ಪತ್ರಿಕೆಗಳ ಸ್ಥಿತಿಯೇನು? ಈ ಮೊದಲು ಕಾಂಗ್ರೆಸ್ ಪಕ್ಷಕ್ಕೆ ಪತ್ರಿಕೆಗಳ ಬೆಂಬಲದ ಅಗತ್ಯವಿರದವರೆಗೂ ಕಾರ್ಮಿಕರ ಸ್ವಾತಂತ್ರ್ಯ ಹಾಗು ಹಕ್ಕುಗಳಿಗಾಗಿ ಪತ್ರಿಕೆಗಳು ಹೋರಾಡುತ್ತಿದ್ದವು.

ಆದರೆ ಇಂದು ಪತ್ರಿಕೆಗಳು ಕೇವಲ ಸುಳ್ಳು ಹಾಗು ತೋರುಗಾಣಿಕೆಗಳನ್ನು ಅವಲಂಬಿಸಿವೆ, ನಿಜ ಸಂಗತಿಗಳನ್ನು ಮುಚ್ಚಿಡುತ್ತಿವೆ. ಈ ಪತ್ರಿಕೆಗಳ ಕ್ರಮಗಳನ್ನು ನೋಡಿದರೆ ಬ್ರಿಟಿಷ್ ಹಾಗು ಆ್ಯಂಗ್ಲೋ ಇಂಡಿಯನ್ ಪತ್ರಿಕೆಗಳೂ ನಾಚಿಕೆಯಿಂದ ಕುಸಿದು ಹೋಗುತ್ತವೆ.

ಮುಷ್ಕರವು ವಿಫಲವಾಯಿತು ಎಂದು ಖಂಡಿಸಲಾಗುತ್ತಿದೆ. ಅದೊಂದು ಅವಮಾನಕರವಾದ ವೈಫಲ್ಯ, ಕಾರ್ಮಿಕರು ತಮ್ಮ ನಾಯಕರ ಮಾತುಗಳನ್ನೇ ಕೇಳಲಿಲ್ಲ ಎಂದೆಲ್ಲಾ ಹೇಳಲಾಗುತ್ತಿದೆ. ಮುಷ್ಕರದಲ್ಲಿ ನಿರತರಾಗಿದ್ದವರನ್ನು ಬೆದರಿಸಲಾಗಿತ್ತು, 'ಭಯೋತ್ಪಾದನೆಗೆ ಒಳಪಡಿಸಲಾಗಿತ್ತು, ಹಿಂಸೆ ಮಾಡಲಾಗಿತ್ತು',

---

1. Free Press Journal, dated 9th November 1928, is Wednesday
* The 3rd November 1938.

'ಒತ್ತಾಯಿಸಲಾಗಿತ್ತು' ಎಂದೆಲ್ಲಾ ಹೇಳಲಾಗುತ್ತಿದೆ.

ಜನರಿಗೆ ಈ ಪದಪ್ರಯೋಗಳೇನೂ ಹೊಸದಲ್ಲ. ಏಕೆಂದರೆ, ಇದುವರೆಗೂ ಪತ್ರಿಕೆಗಳ ರಾಷ್ಟ್ರವಿರೋಧಿ ಧೋರಣೆ ಅವರಿಗೆ ಅಭ್ಯಾಸವಾಗಿಹೋಗಿತ್ತು. ಆದರೆ ಇಂದು ಅವರು ಕಾಂಗ್ರೆಸ್ ಪಕ್ಷದಿಂದ ಹಾಗು ಆ ಪಕ್ಷದ ಪರವಾಗಿರುವ ಪತ್ರಿಕೆಗಳಿಂದ ಇದೇ ಧೋರಣೆಯು ಅವರಿಗೆ ಕಂಡುಬರುತ್ತಿದೆ. ಇದೇ ಅತ್ಯಂತ ವಿಪರ್ಯಾಸದ ಸಂಗತಿ. ನಾವು ಎದುರಿಸಬೇಕಿರುವ ಅತ್ಯಂತ ಗಂಭೀರವಾದ ವಾಸ್ತವ ಸ್ಥಿತಿ ಇದು.

ನಾನು ಈ ಪತ್ರಿಕೆಗಳನ್ನು ನಿಮ್ಮ ಸತ್ಯಸಂಧತೆ ಹಾಗು ಅಹಿಂಸೆಯ ತತ್ವಗಳು ಏನಾದವು, ನಿಮ್ಮ ಸಾಮಾನ್ಯ ಸಭ್ಯತೆಯ ಎಲ್ಲಿ ಮಾಯವಾಯಿತು ಎಂದು ಕೇಳುತ್ತೇನೆ.

ಇನ್ನು ಕಾರ್ಮಿಕರ ವಿಷಯಕ್ಕೆ ಬಂದರೆ, ಈ ರೀತಿ ಮಾಡುವುದರಿಂದ ಅವರನ್ನು ತಪ್ಪು ದಾರಿಗೆ ಎಳೆದೊಯ್ಯಲು ಸಾಧ್ಯವಿಲ್ಲ. ವ್ಯಾಪಾರ ವಿವಾದದ ಕಾಯ್ದೆಯ ವಿರುದ್ಧ ನಡೆದ ಬೃಹತ್ ಮುಷ್ಕರಕ್ಕೆ ಇವರೆಲ್ಲರೂ ಸಾಕ್ಷಿಗಳಾಗಿದ್ದಾರೆ. ಈ ಮುಷ್ಕರ ಎಷ್ಟು ದೊಡ್ಡ ಯಶಸ್ಸನ್ನು ಗಳಿಸಿದೆ ಎಂಬುದು ಅವರಿಗೆಲ್ಲಾ ತಿಳಿದಿದೆ.

## ಮಂತ್ರಿ ಮಂಡಲಕ್ಕೆ ಎಚ್ಚರಿಕೆ

ಕಾಂಗ್ರೆಸ್ ಮುಖಂಡರು ಹಾಗು ಕಾಂಗ್ರೆಸ್ ಮಂತ್ರಿ ಮಂಡಲವು ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲಿ. ಕಾರ್ಮಿಕರ ಮೇಲೆ ಬಿದ್ದಿರುವ ಪ್ರತಿಯೊಂದು ಲಾಠಿಯ ಹೊಡತ, ಕಾರ್ಮಿಕ ವರ್ಗದ ಜನರ ಮೇಲೆ ಹಾರಿರುವಂತಹ ಪ್ರತಿಯೊಂದು ಗುಂಡು, ಬರುವ ಹಲವು ತಿಂಗಳುಗಳವರೆಗೆ ಈ ನಗರದಲ್ಲಿ, ಈ ಪ್ರಾಂತದಲ್ಲಿ ಪ್ರತಿಧ್ವನಿಸುತ್ತಲೇ ಇರುತ್ತವೆ. ಈ ಲಾಠಿಯ ಏಟುಗಳು ಹಾಗು ಗುಂಡಿನ ಸದ್ದುಗಳ ಮೊರೆತ ಬರುವ ನಗರಪಾಲಿಕೆಯ ಚುನಾವಣೆಗಳಲ್ಲಿ ನೂರಾರು ವೇದಿಕೆಗಳಿಂದ ನೂರಾರು ಸಮಾವೇಶಗಳ ಮೂಲಕ ಪ್ರತಿಧ್ವನಿಸಲಿವೆ. ಕಾಂಗ್ರೆಸ್ ಪಕ್ಷದ ನಾಯಕರು ಇಂದು ತಿಳಿದಿರುವುದಕ್ಕಿಂತ ಹೆಚ್ಚು ದುಬಾರಿಯಾಗಿ ಈ ಲಾಠಿಯ ಏಟುಗಳು ಹಾಗು ಗುಂಡುಗಳು ಅವರ ಪಕ್ಷಕ್ಕೆ ಮಾರಕವಾಗಿ ಪರಿಣಮಿಸಲಿದೆ.

ನಮ್ಮ ಹಕ್ಕುಗಳ ಮೇಲೆ, ಸ್ವಾತಂತ್ರ್ಯದ ಮೇಲೆ ಬಿದ್ದಿರುವಂತಹ ಈ ಪ್ರಹಾರವು ಈ ಪ್ರಾಂತದ ದೂರದೂರದ ಹಳ್ಳಿಗಾಡುಗಳಲ್ಲಿಯೂ ಪ್ರತಿಧ್ವನಿಸಲಿದೆ.

ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಅಧಿಕಾರದ ಅಮಲು ಏರಿರುವಂತಿದೆ. ಅವರ ಸಾಧನೆಗಳೆಲ್ಲಾ ರಾತ್ರಿ ಬೆಳಗಾಗುವುದರೊಳಗೆ ಅವರು ಇಟ್ಟಂತಹ ಒಂದೇ ಒಂದು ತಪ್ಪು ಹೆಜ್ಜೆಯಿಂದ ನಶಿಸಿ ಹೋಗುತ್ತವೆ ಎಂಬ ಪ್ರಜಾಪ್ರಭುತ್ವದ ಒಂದು ದೊಡ್ಡ ಸತ್ಯವನ್ನು ಅವರು ಮರೆತಂತೆ ಕಾಣಿಸುತ್ತಿದೆ. ಇದು ಬೊಂಬಾಯಿಯ ನಗರಸಭೆಯ ಮುಂದಿನ ಚುನಾವಣೆಯಲ್ಲಿ ಅವರ ಅನುಭವಕ್ಕೆ ಬರಲಿದೆ.

ಅವರ ಈ ತಪ್ಪು ನಡೆಯು ಅವರಿಗೆ ಮಾರಣಾಂತಿಕವಾಗಿ ಪರಿಣಮಿಸಲಿದೆ ಎಂಬುದರಲ್ಲಿ ನನಗೆ ಯಾವುದೇ ಸಂದೇಹವೂ ಉಳಿದಿಲ್ಲ.

* * * * *

# ೨೨

# ಭೂಮಿಯನ್ನು ಉಳುವವರಿಗೆ ಅನ್ಯಾಯ

## ಪ್ರಕಾಶಂ ಸಮಿತಿಯ ಶಿಫಾರಸ್ಸುಗಳ ವಿಶ್ಲೇಷಣೆ

ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:

ಜಮೀನ್ದಾರಿ ಪ್ರದೇಶಗಳನ್ನು ಕುರಿತು ಪ್ರಕಾಶಂ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ನಾನು ಗಮನಿಸಿದ್ದೇನೆ. ಜಮೀನಿನಿಂದ ಬರುವ ಆದಾಯಕ್ಕೆ ಜಮೀನುದಾರರೇ ಹಕ್ಕುದಾರರು ಎಂಬ ಅವರ ನಿಲುವು ಸಮರ್ಥನೀಯವಾದರೂ, ರೈತರಿಗೆ ಭೂಮಾಲೀಕತ್ವದ ಹಕ್ಕು ದೊರೆಯದು ಎಂಬ ಸಮಿತಿಯ ವಾದವು ಕಾನೂನಿನ ದೃಷ್ಟಿಯಿಂದ ಸರಿಯಾದುದಲ್ಲ ಮತ್ತು ರೈತರಿಗೆ ನ್ಯಾಯವನ್ನು ಒದಗಿಸುವಂತಹುದೂ ಅಲ್ಲ ಅಥವಾ ಕೃಷಿ ಆರ್ಥಿಕತೆಯ ಅಭಿವೃದ್ಧಿಗೆ ಇಂಬುಕೊಡುವಂತಹುದೂ ಅಲ್ಲ.

ಇದು ಕಾನೂನುಬಾಹಿರ ಕೂಡ. ಏಕೆಂದರೆ ಭೂಮಾಲೀಕತ್ವದ ಹಕ್ಕುಗಳು ಕಳೆದ ಶತಮಾನದಿಂದಲೂ ಎಲ್ಲಾ ಕಾನೂನುಗಳಲ್ಲಿಯೂ ಮಾನ್ಯತೆ ಪಡೆದುಕೊಂಡಿವೆ. ಆದರೆ ಅದು ಉಳುವವನಿಗೆ ಕೂಡ ಅನ್ಯಾಯ ಮಾಡಿದಂತೆ. ಏಕೆಂದರೆ ಆತನಿಗೆ ಅತ್ಯಂತ ಕಡಿಮೆ ಗುತ್ತಿಗೆಯನ್ನು ನಿರ್ಧಾರ ಮಾಡಿದರೆ, ಆತ ತನ್ನ ದಿನನಿತ್ಯದ ಜೀವನವನ್ನು ನಡೆಸಲು ಅನುಕೂಲವಾಗುತ್ತದೆ ಮತ್ತು ಇದರಿಂದ ಜಮೀನನ್ನು ಉತ್ತಮ ಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ಸಣ್ಣ ಸಣ್ಣ ಜಮೀನ್ದಾರರು ಕೂಡ ಉಳುಮೆದಾರರ ಶ್ರಮದಿಂದ ಅತಿಯಾಗಿ ಲಾಭವನ್ನು ಪಡೆದುಕೊಳ್ಳುವುದು ತಪ್ಪುತ್ತದೆ.

ಇದು ಕೃಷಿಯ ವಿಷಯಕ್ಕೂ ಹಿತಕರವಾಗಿ ಇರುವುದಿಲ್ಲ. ಏಕೆಂದರೆ, ಮಾಲೀಕತ್ವದ ಹಕ್ಕುಗಳಿಂದ ಒಂದು ಭೂಮಿಯನ್ನು ಒಂದು ಆಸ್ತಿಯಂತೆ ಪರಿಗಣಿಸಿ ಅದರಿಂದ ಅತಿಯಾದ ಲಾಭವನ್ನು ನಿರೀಕ್ಷಿಸುವಂತೆ ಆಗಬಾರದು. ಅನಂತರ ಅದನ್ನು ಕೃಷಿಯ ಉದ್ದೇಶಗಳಿಗೆ ಸಂರಕ್ಷಿಸುವುದಕ್ಕೂ ಅದು ವಿರುದ್ಧವಾಗಿರುತ್ತದೆ.

ಆದ್ದರಿಂದ ಪ್ರಕಾಶಂ ಸಮಿತಿಯ ವರದಿಗೆ ಹೆಚ್ಚಿನ ಮಹತ್ವ ನೀಡುವ ಅಗತ್ಯವೇ ಇಲ್ಲ. ಅದು ಕೇವಲ ಉಳುಮೆದಾರರಿಂದ ಪಡೆಯುವ ಗುತ್ತಿಗೆಯನ್ನು ಮೇಲ್ವರ್ಗದವರಲ್ಲಿ ಹೇಗೆ ಹಂಚಬೇಕೆಂಬುದರ ಪರಿಗಣನೆ ಮಾತ್ರ ಆಗಿರುತ್ತದೆ.

ಶ್ರೀ ಪ್ರಕಾಶಂ ಅವರಿಗೆ ಇತ್ತೀಚೆಗೆ ಸದನದಲ್ಲಿ ಪ್ರಶ್ನೆಯೊಂದಕ್ಕೆ ನೀಡಿದ ಉತ್ತರ. ಈ ಹಿಡುವಳಿ ಹಕ್ಕುಗಳ ಕಾನೂನನ್ನು ರೈತವಾರಿ ಪ್ರದೇಶಗಳಲ್ಲಿ ಜಾರಿಗೆ ತರುವುದು ಸಾಧ್ಯವಿಲ್ಲ. ಏಕೆಂದರೆ ರೈತವಾರಿ ಪ್ರದೇಶದ ಭೂಮಿಯ ಒಡೆತನವು ಜಮೀನುದಾರರದ್ದಾಗಿರುತ್ತದೆ. ಇದರಿಂದ ರೈತರು ಕಾಂಗ್ರೆಸ್ ಪಕ್ಷದಿಂದ ತಮಗೇನಾದರೂ ಒಳ್ಳೆಯದು ಆಗಬಹುದು ಎಂಬದರ ಆಸೆಯನ್ನೇ ಕೈಬಿಟ್ಟಿದ್ದಾರೆ.

ಇನ್ನು ಮದರಾಸಿನ ಪರಿಶಿಷ್ಟ ಜಾತಿಯ ಜನರು ಮಾಲೀಕತ್ವದ ಹಕ್ಕನ್ನು ಜಮೀನುದಾರರಿಗೆ ನೀಡುವಂತಹ ಯಾವುದೇ ಶಾಸನದ ಪರವಾಗಿಯೂ ಇರುವುದಿಲ್ಲ ಎಂಬ ನಂಬಿಕೆ ನನಗಿದೆ. ನನ್ನ ಅಭಿಪ್ರಾಯದಲ್ಲಿ ಈ ರೀತಿಯ ಶಾಸನಕ್ಕೆ ಅವರು ನೀಡುವ ಯಾವುದೇ ಬೆಂಬಲವು ಅವರು ಉಳುವವನಿಗೆ ಮಾಡುವ ಅನ್ಯಾಯವೇ ಆಗಿರುತ್ತದೆ.[೧]

---

೧. ದ ಬಾಂಬೆ ಕ್ರಾನಿಕಲ್ : ದಿ. ೧೯೪೭ರ ಜನವರಿ ೧೮.

## ೨೩

## ಗ್ವಯರ್ ತೀರ್ಪಿನ ವಿರುದ್ಧ ದನಿಯೆತ್ತಿದ ಡಾ. ಅಂಬೇಡ್ಕರ್

ರಾಜಕೋಟ್ ರಾಜ್ಯದಲ್ಲಿ ೧೯೩೯ ಫೆಬ್ರವರಿಯಿಂದಲೂ ರಾಜಕೀಯ ಸುಧಾರಣೆಗಾಗಿ ಒಳಗುದಿ ಕುದಿಯುತ್ತಲೇ ಇದೆ. ಸುಭಾಷ್ ಬೋಸ್‌ರವರು ಚುನಾವಣೆಯಲ್ಲಿ ಆಯ್ಕೆಯಾದ ನಂತರ ಗಾಂಧೀಜಿಯವರು ಸೋಲಿನಿಂದ ನಿರುತ್ಸಾಹಗೊಂಡು ರಾಜ್‌ಕೋಟ್ ರಾಜ್ಯದ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ರಾಜ್‌ಕೋಟ್‌ನತ್ತ ಧಾವಿಸಿದ್ದಾರೆ. ಆದರೆ ಅವರ ಮನದಲ್ಲಿ ಇರುವ ಇಂಗಿತವೇ ಬೇರೆ. ತ್ರಿಪುರಾ ಕಾಂಗ್ರೆಸ್ ಸಮಾವೇಶವು ಸುಭಾಷ್‌ಬೋಸ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು. ಅಧಿವೇಶನಕ್ಕೆ ಮುನ್ನ ಇಲ್ಲಿ ಸಮಸ್ಯೆಯನ್ನು ಸೃಷ್ಟಿಸುವ ಸಲುವಾಗಿ ಅವರು ರಾಜ್‌ಕೋಟ್‌ಗೆ ಬಂದಿದ್ದಾರೆ. ರಾಜ್ಯ ಸರ್ಕಾರವು ನೇಮಕ ಮಾಡಿದ್ದ ಸುಧಾರಣಾ ಸಮಿತಿಯಿಂದ ತಮ್ಮನ್ನು ಹೊರಗೆ ಇರಿಸಲಾಗಿದ್ದುರಿಂದ ಅಲ್ಲಿಯ ಪರಿಶಿಷ್ಟ ವರ್ಗದ ಜನರು ಡಾ. ಅಂಬೇಡ್ಕರ್ ಅವರನ್ನು ಅಲ್ಲಿಗೆ ತುರ್ತಾಗಿ ಆಗಮಿಸುವಂತೆ ಕೇಳಿಕೊಂಡಿದ್ದರು. ಏಪ್ರಿಲ್ ೧೮ರ ಸಂಜೆ ಡಾ. ಅಂಬೇಡ್ಕರ್ ಅವರು ವಿಮಾನದ ಮೂಲಕ ರಾಜ್‌ಕೋಟ್‌ಗೆ ತೆರಳಿ ಅಲ್ಲಿಯ ರಾಜ ಠಾಕೂರ್ ಸಾಹೇಬ್ ಅವರನ್ನು ಭೇಟಿಯಾದರು. ಅಂದು ರಾತ್ರಿಯೇ ಪರಿಶಿಷ್ಟಜನರ ಒಂದು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿ, ರಾಜಕೀಯ ಹಕ್ಕುಗಳಿಗಾಗಿ ಅವರು ನಡೆಸುತ್ತಿರುವ ಹೊರಾಟವನ್ನು ಮುಂದುವರಿಸಿಕೊಂಡು ಹೋಗುವಂತೆ ಒತ್ತಾಯಪಡಿಸಿದರು.

ಮರುದಿನ ಬೆಳಿಗ್ಗೆ ಅವರು ಮಹಾತ್ಮಾ ಗಾಂಧೀಯವರೊಂದಿಗೆ ಸುಮಾರು ೪೫ ನಿಮಿಷಗಳ ಕಾಲ ಸಮಾಲೋಚನೆಯಲ್ಲಿ ತೊಡಗಿದ್ದರು. ಸುಧಾರಣಾ ಸಮಿತಿಯಲ್ಲಿ ಹರಿಜನರ ಸೇರ್ಪಡೆ ಕುರಿತು ಇಬ್ಬರೂ ಚರ್ಚೆ ನಡೆಸಿದರು. ಅವರು ನಂತರ ರಾಜ್‌ಕೋಟ್‌ನಲ್ಲಿ ನೀಡಿದ ಸಂದರ್ಶನದಲ್ಲಿ, ತಾವು ವಿವರವಾಗಿ ಗಾಂಧೀಜಿಯವರೊಂದಿಗೆ ಚರ್ಚೆ ನಡೆಸಲು ಸಾಧ್ಯವಾಗಲಿಲ್ಲ. ಏಕೆಂದರೆ ಇದ್ದಕ್ಕಿದ್ದಂತೆಯೇ ಮಹಾತ್ಮಾ ಅವರಿಗೆ ಜ್ವರ ಆರಂಭವಾಯಿತು ಎಂದು ತಿಳಿಸಿದರು. ಆದರೆ ಸಂವಿಧಾನದ ಪರಿಣಿತತಜ್ಞರಾದಂತಹ ತೇಜ್ ಬಹದ್ದೂರ್ ಸಪ್ರು ಅವರಿಗೆ ತಮ್ಮ ಪರ್ಯಾಯ ಸಲಹೆಯನ್ನು ಸಲ್ಲಿಸುವಂತೆ ಹೇಳಿದಾಗ ಗಾಂಧೀಜಿ ಅವರು ಸಮ್ಮತಿಸಲಿಲ್ಲ ಎಂದು ಡಾ. ಅಂಬೇಡ್ಕರ್ ಅವರು ತಿಳಿಸಿದರು. ಕಡೆಗೆ ತಮ್ಮ ಅಹಿಂಸಾ ಮಾರ್ಗದಿಂದ ಜನರಲ್ಲಿ ಪರಿವರ್ತನೆ ತರಲು ವಿಫಲರಾದ್ದರಿಂದ ಗಾಂಧೀಜಿ ಅವರು ವೈಸ್‌ರಾಯ್ ಅವರ ನೆರವನ್ನು ಕೇಳಿದ್ದಾರೆ ಎಂದರು. ತಮ್ಮ ಅಹಿಂಸಾ ತತ್ವದಿಂದಲೇ ಎಲ್ಲರ ಮನಃ ಪರಿವರ್ತಿಸುವುದಾಗಿ ಹೇಳಿಕೊಳ್ಳುತ್ತಿದ್ದ ಗಾಂಧಿಯವರು ಇದೀಗ ಸಾರ್ವಜನಿಕವಾಗಿ ಸೋಲನ್ನು ಒಪ್ಪಿಕೊಂಡಿದ್ದರು. ಆನಂತರ ತಮ್ಮ ಈ ಮಾರ್ಗ ಇನ್ನೂ ಎಲ್ಲರ ಮನ ಗೆಲ್ಲುವಷ್ಟು ಪ್ರಬುದ್ಧವಾಗಿಲ್ಲ ಎಂದು ಸಾರ್ವಜನಿಕವಾಗಿ ಒಪ್ಪಿಕೊಂಡರು. ಅವರು ರಾಜ್‌ಕೋಟ್‌ನಿಂದ ಹಿಂದಿರುಗಿದರು. ಅವರ ಮಾತುಗಳಲ್ಲೇ ಹೇಳಬೇಕೆಂದರೆ "ಭರವಸೆಗಳು ಅಂತ್ಯಗೊಂಡವು ಹಾಗು ದೇಹ ಛಿದ್ರವಾಯಿತು."

ಅಂತೆಯೇ ಕೆಲದಿನಗಳ ನಂತರ ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಗೌರವಾನ್ವಿತ ಶ್ರೀ ಮಾರಿಸ್‌ಗ್ವಯರ್ ರಾಜ್‌ಕೋಟ್ ರಾಜ್ಯದಲ್ಲಿನ ವಿವಾದಗಳ ಬಗೆಗೆ ತೀರ್ಪನ್ನು ನೀಡಿದರು. ಆಗ ಗ್ವಯರ್ ಅವರು "ಶಿಫಾರಸ್ಸು" ಎಂಬ ಪದವನ್ನು ಬಳಕೆ ಮಾಡಿದ್ದರು. ಅದನ್ನು ಡಾ. ಅಂಬೇಡ್ಕರ್ ಪ್ರಶ್ನಿಸಿದರು. "ಈ ರೀತಿಯ ತೀರ್ಪನ್ನು ನೀಡುವುದಕ್ಕೆ ಯಾವುದೇ ಪೂರ್ವಪ್ರಸಂಗಗಳಿಲ್ಲ" ಎಂಬುದು ಡಾ. ಅಂಬೇಡ್ಕರ್ ಅವರ ವಾದವಾಗಿತ್ತು. ತಮ್ಮ ಈ ಹೇಳಿಕೆಗೆ ಬೆಂಬಲ ವ್ಯಕ್ತಪಡಿಸಲು ಅವರು ಹಿಂದಿನ

ಎರಡು ಪ್ರಕರಣಗಳಲ್ಲಿನ ತೀರ್ಪನ್ನು ಉಲ್ಲೇಖಿಸಿದ್ದರು. ಆ ಪ್ರಕರಣಗಳೆಂದರೆ "Knolt Vs Cottee" (ಕಾಟಿ ವಿರುದ್ಧ ನೋಟ್ ಅವರ ಪ್ರಕರಣ) ಹಾಗೂ "Johnson Vs. Rowlands (ರೋಲ್ಯಾಂಡ್ಸ್ ವಿರುದ್ಧ ಜಾನ್ಸನ್ ಅವರ ಪ್ರಕರಣ)"[೧] ನಂತರದ ಬೆಳವಣಿಗೆಯಲ್ಲಿನ ಹಂತ ಹಂತದ ವಿವರಗಳು ಈ ಕೆಳಗಿನಂತಿವೆ: ಸಂಪಾದಕರು.

## I

## ಸಮಿತಿಯಲ್ಲಿ ಹರಿಜನರ ಪ್ರಾತಿನಿಧ್ಯ

## ಗಾಂಧೀಜಿಯವರಿಗೆ ಅಂಬೇಡ್ಕರ್ ಅವರ ತಂತಿಯ ಸಂದೇಶ

ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ. ಅಂಬೇಡ್ಕರ್ ಅವರು ಗಾಂಧೀಜಿಯವರಿಗೆ ಈ ಕೆಳಗಿನಂತೆ ತಂತಿಯ ಸಂದೇಶ ರವಾನಿಸಿದ್ದಾರೆ:–

"ಸುಧಾರಣಾ ಸಮಿತಿಯಲ್ಲಿ ರಾಜ್‌ಕೋಟ್ ರಾಜ್ಯದ ಪರಿಶಿಷ್ಟ ಜಾತಿಯ ಜನರಿಗೆ ಪ್ರಾತಿನಿಧ್ಯ ದೊರೆಯಲಿದೆಯೇ ಎಂದು ತಿಳಿಯ ಬಯಸುತ್ತೇನೆ.

## II

## ಸ್ಥಾನಕ್ಕಾಗಿ ಮತ್ತೊಂದು ಮನವಿ

## ಮೀರಾವಾಲ ಅವರಿಗೆ ಡಾ.ಅಂಬೇಡ್ಕರ್ ಅವರ ತಂತಿಯ ಸಂದೇಶ

ಮಾತುಕತೆಗಳು ಮುರಿದುಬಿದ್ದಿವೆ ಎಂಬ ವದಂತಿಯನ್ನು ಮುಸ್ಲಿಂ ಪ್ರತಿನಿಧಿಗಳು ಅಲ್ಲಗಳೆದು ಇಂದು ರಾತ್ರಿ ಪುನಃ ಗಾಂಧೀಜಿ ಅವರನ್ನು ಭೇಟಿ ಆಗುವುದಾಗಿ ತಿಳಿಸಿದ್ದಾರೆ. ಅಲ್ಲದೆ ಬೊಂಬಾಯಿಯಲ್ಲಿ ಇರುವ ತಮ್ಮ ಸಮುದಾಯದ ಪ್ರಮುಖ ನಾಯಕರೊಬ್ಬರ ಮಾರ್ಗದರ್ಶನಕ್ಕಾಗಿ ಅವರೊಡನೆ ಸಂಪರ್ಕದಲ್ಲಿದ್ದಾರೆ.

ತಮಗೆ ಸುಧಾರಣಾ ಸಮಿತಿಯಲ್ಲಿ ಪ್ರಾತಿನಿಧ್ಯ ದೊರೆಯದ ಕಾರಣ ಗಿರಾಸ್ಯರು ಹಾಗೂ ಭಯಾತ್‌ರು ತಮ್ಮ ಠಾಕೂರ್ ಸಾಹೇಬ್ ಅವರನ್ನು ಇಂದು ರಾತ್ರಿ ಭೇಟಿಮಾಡಲು ತಮ್ಮ ನಿಯೋಗದೊಂದಿಗೆ ಕಾಯುತ್ತಿದ್ದಾರೆ.

ಇನ್ನು ಇದರಲ್ಲಿ ಪ್ರಾತಿನಿಧ್ಯಕ್ಕಾಗಿ ಇತ್ತೀಚೆಗೆ ಮನವಿ ಸಲ್ಲಿಸಿದವರೆಂದರೆ ರಾಜ್‌ಕೋಟ್ ರಾಜ್ಯದ ಪರಿಶಿಷ್ಟ ವರ್ಗದ ಸದಸ್ಯರು. ಡಾ. ಅಂಬೇಡ್ಕರ್ "ನೀವು ಆಶ್ವಾಸನೆ ನೀಡಿರುವಂತೆ ಈ ರಾಜ್ಯ ಸಮಿತಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಪ್ರಾತಿನಿಧ್ಯ ನೀಡುವುದನ್ನು ಮರೆಯುವುದಿಲ್ಲವೆಂದು ಭಾವಿಸಿದ್ದೇನೆ" ಎಂಬ ತಂತಿ ಸಂದೇಶವನ್ನು ದರ್ಬಾರ್ ವೀರಾವಾಲ್ ಅವರಿಗೆ ಕಳುಹಿಸಿದ್ದಾರೆ.

ರಾಜಕೋಟ್ ಪಾಲಿಕೆಯ ಪ್ರಧಾನ ಸದಸ್ಯರು ಈ ತಂತಿಯನ್ನು ಗಾಂಧೀಜಿಯವರಿಗೆ ತಲುಪಿಸಿದ್ದಾರೆ.

ಠಾಕೂರ್ ಸಾಹೇಬ್ ಅವರ ಪರವಾಗಿ ದರ್ಬಾರ್ ವೀರಾವಾಲಾ ಅವರು ಕೆಳಗಿನ ತಂತಿಯ ಸಂದೇಶವನ್ನು ಅಂಬೇಡ್ಕರ್ ಅವರಿಗೆ ರವಾನಿಸಿದ್ದಾರೆ. "ನಿಮ್ಮ ತಂತಿಯ ಸಂದೇಶವನ್ನು ಮಹಾಪ್ರಭುಗಳಿಗೆ ತಲುಪಿಸಲಾಗಿದೆ. ಮಹಾಪ್ರಭುಗಳಿಗೆ ಪರಿಶಿಷ್ಟ ಜಾತಿಯ ಪ್ರತಿನಿಧಿಗಳನ್ನು ಈ ಸಮಿತಿಗೆ ನೇಮಕ ಮಾಡಬೇಕು ಎಂಬ ಆಶಯವಿದ್ದರೂ ಶ್ರೀ ಪಟೇಲ್ ಅವರು ಈ ರೀತಿ ಮಾಡುವ ಸಾಧ್ಯತೆ ಇಲ್ಲ ಎಂದು ತಿಳಿಸುವಂತೆ

1 Keer Pp 322-323

ನನಗೆ ಆದೇಶ ನೀಡಲಾಗಿದೆ. ಇನ್ನು ನಿಮಗೆ ಇಚ್ಛೆಯಿದ್ದರೆ ಪರಿಶಿಷ್ಟ ಜಾತಿಯವರಿಗೆ ಯಾವ ರೀತಿ ಸಹಾಯ ಮಾಡಬಹುದು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಮಹಾಪ್ರಭುಗಳು ತಮ್ಮೊಂದಿಗೆ ಚರ್ಚಿಸಲು ಆಸಕ್ತರಾಗಿದ್ದಾರೆ.[೧]

## III

## ರಾಜ್ಯ ಸರ್ಕಾರದ ಅತಿಥಿಯಾಗಿ ಡಾ.ಅಂಬೇಡ್ಕರ್

**(ನಮ್ಮ ಪ್ರತಿನಿಧಿಯಿಂದ)**

ರಾಜ್‌ಕೋಟ್

ಏಪ್ರಿಲ್ ೧೮

ಡಾ. ಅಂಬೇಡ್ಕರ್ ಅವರು ಬೊಂಬಾಯಿಂದ ಇಂದು ಬೆಳಿಗ್ಗೆ ವಿಮಾನದ ಮೂಲಕ ಆಗಮಿಸಿದರು. ಗಿರಾಸ್ಯ ಜನಾಂಗದ ಕೆಲವರು ವಿಮಾನ ನಿಲ್ದಾಣದಲಿ ಹಾಜರಿದ್ದು ಅವರನ್ನು ಬರಮಾಡಿಕೊಂಡರು. ಅವರನ್ನು ರಾಜ್ಯ ಸರ್ಕಾರ ವಾಹನದಲ್ಲಿ ಸರ್ಕಾರದ ಅತಿಥಿ ಗೃಹಕ್ಕೆ ಕರೆದುಕೊಂಡು ಹೋಗಲಾಯಿತು.

ಡಾ. ಅಂಬೇಡ್ಕರ್ ಅವರೊಂದಿಗೆ ಬಂದ ಖ್ವಾಜಿ ಹಸನ್ ನಿಜ್ಹಾಮಿ ಅವರನ್ನು ಆನಂದಕುಂಜ್‌ನಲ್ಲಿ ಇಂದು ಬೆಳಿಗ್ಗೆ ಬರಮಾಡಿಕೊಂಡ ಮಹಾತ್ಮ ಅವರು, ಅವರೊಂದಿಗೆ ಒಂದು ಘಂಟೆ ಕಾಲ ಸಮಾಲೋಚನೆ ನಡೆಸಿದರು.[೨]

## IV

## ಠಾಕೋರ್ ಅವರನ್ನು ಭೇಟಿ ಮಾಡಿದ ಡಾ. ಅಂಬೇಡ್ಕರ್

(ನಮ್ಮ ಪ್ರತಿನಿಧಿಯಿಂದ)

ರಾಜಕೋಟ್

ಏಪ್ರಿಲ್ – ೧೮

ಹರಿಜನರ ಸಮಸ್ಯೆಗಳ ಬಗೆಗೆ ಅಧ್ಯಯನ ನಡೆಸಲು ಇಂದು ಬೆಳಿಗ್ಗೆ ಇಲ್ಲಿಗೆ ಆಗಮಿಸಿದ್ದ ಡಾ. ಅಂಬೇಡ್ಕರ್ ಅವರು ನಾಳೆ ಬೊಂಬಾಯಿಗೆ ಹಿಂದಿರುಗಲಿದ್ದಾರೆ. ಇವರು ಇಂದು ರಾತ್ರಿ ಠಾಕೂರ್ ಸಾಹೇಬ್ ಅವರನ್ನು ಭೇಟಿಮಾಡಿದರು ಹಾಗು ನಾಳೆ ಬೆಳಿಗ್ಗೆ ಗಾಂಧೀಜಿ ಅವರನ್ನು ಭೇಟಿ ಮಾಡಲಿದ್ದಾರೆ.

ಇಂದು ಸಂಜೆ ಪ್ರಮುಖ ಮುಸಲ್ಮಾನ ನಾಯಕರು ಅವರನ್ನು ಭೇಟಿಯಾದರು ಇವರೊಂದಿಗೆ ಕೆಲ ಬಯೂತ ಪ್ರತಿನಿಧಿಗಳು ಕೂಡ ಇದ್ದರು ಆಗ ಯಾವ ರೀತಿ ತಮ್ಮ ಹಾಗು ಮಹಾತ್ಮಾ ಗಾಂಧೀಜಿಯವರ ನಡುವಿನ ಮಾತುಕತೆ ಮುರಿದುಬಿತ್ತು ಎಂಬುದನ್ನು ಅವರು ಡಾ. ಅಂಬೇಡ್ಕರ್ ಅವರಿಗೆ ವಿವರಿಸಿದರು.

ಇಂದು ಸಂಜೆ ಶ್ರೀ ವೀರಾವಾಲ ಅವರನ್ನು ಕೂಡ ಡಾ. ಅಂಬೇಡ್ಕರ್ ಅವರು ಭೇಟಿಯಾದರು.

ಹಲವು ರಾಜಕೋಟ್‌ನಲ್ಲಿ ಪ್ರತಿನಿಧಿಗಳನ್ನು ಭೇಟಿ ಮಾಡಿದ ನಂತರ ಡಾ. ಅಂಬೇಡ್ಕರ್ ಅವರು ತಮ್ಮ ಹೇಳಿಕೆಯನ್ನು ಬಿಡುಗಡೆ ಮಾಡಲಿದ್ದಾರೆ.[೩]

---

1. The Bombay Chronide dated 15th April 1939.
2. The Bombay Chronide dated 19th April 1939.
3. The Bombay Chronide dated 19th April 1939.

## V

## ಡಾ. ಅಂಬೇಡ್ಕರ್ ಅವರ ಪರ್ಯಾಯ ಮಾರ್ಗ

ರಾಜಕೋಟ್, ಏಪ್ರಿಲ್–೧೯

"ಯುನೈಟೆಡ್ ಪ್ರೆಸ್‌ಗೆ ನೀಡಿದ ಸಂದರ್ಶನದಲ್ಲಿ ಡಾ. ಅಂಬೇಡ್ಕರ್ ಅವರು ತಾವು ಇಲ್ಲಿಗೆ ರಾಜ್‌ಕೋಟ್‌ನ ಆಸ್ಥಾನದ ಆಹ್ವಾನದ ಮೇರೆಗೆ ಬರಲಿಲ್ಲವೆಂದೂ, ಬದಲಿಗೆ ರಾಜ ಸುಧಾರಣಾ ಸಮಿತಿಯಲ್ಲಿ ತಮ್ಮ ಪ್ರಾತಿನಿಧ್ಯದ ವಿಷಯದಲ್ಲಿ ಇಲ್ಲಿಗೆ ಪರಿಶಿಷ್ಟ ವರ್ಗದವರು ಬರಬೇಕೆಂದು ಕೇಳಿಕೊಂಡಿದ್ದಕ್ಕಾಗಿ ತಾವು ಬಂದವೆಂದು ಹೇಳಿದರು.

ಇಲ್ಲಿಗೆ ಆಗಮಿಸಿದ ನಂತರ ತಾವು ಮಾಡಿದ ಮೊತ್ತ ಮೊದಲ ಕಾರ್ಯವೆಂದರೆ, ಪರಿಶಿಷ್ಟ ವರ್ಗದ ಜನರ ಪ್ರತಿನಿಧಿಯಾಗಿ ಕಂಡುಕೊಂಡಿರುವ ಸೂಕ್ತ ವ್ಯಕ್ತಿಯೊಬ್ಬನನ್ನು ಸಮಿತಿಯಲ್ಲಿ ಸೇರಿಸಿಕೊಳ್ಳುವ ಇಚ್ಛೆ ಅವರಲ್ಲಿದೆಯೇ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದೆ ಎಂದು ಡಾ. ಅಂಬೇಡ್ಕರ್ ನುಡಿದರು.

### ಪರ್ಯಾಯ ಪ್ರಸ್ತಾಪ

"ನಾನು ಇಂದು ಬೆಳಿಗ್ಗೆ ೧೧.೩೦ರ ಸುಮಾರಿಗೆ ಗಾಂಧೀಜಿ ಅವರನ್ನು ಭೇಟಿ ಮಾಡಿದೆ. ಆದರೆ ದುರದೃಷ್ಟಾವಶತ್ ಅವರಿಗೆ ಇದ್ದಕ್ಕಿದ್ದಂತೆಯೇ ಜ್ವರವು ಪ್ರಾರಂಭವಾದದ್ದರಿಂದ, ನನಗೆ ಅವರೊಂದಿಗೆ ಯಾವ ಚರ್ಚೆಯನ್ನು ವಿವರವಾಗಿ ಚರ್ಚಿಸಲು ಸಾಧ್ಯವಾಗಲಿಲ್ಲ. ಆದರೆ, ಎಲ್ಲಾ ಸಮುದಾಯದವರೂ ತಮ್ಮ ತಮ್ಮ ಬೇಡಿಕೆಗಳನ್ನು ಮುಂದಿಡುವ ಮೊದಲು ಹೊಸ ಸಂವಿಧಾನವನ್ನು ಕುರಿತಾದ ನನ್ನ ಪರ್ಯಾಯ ಪ್ರಸ್ತಾಪವನ್ನು ಸರ್ ತೇಜ್ ಬಹಾದೂರ್ ಸಪ್ರು ಅಥವಾ ಸರ್ ಶಿವಸ್ವಾಮಿ ಅಯ್ಯರ್ ಅವರ ಮುಂದೆ ಅಥವಾ ಅವರಂತಹ ಇನ್ನಾರಾದರೂ ಸಂವಿಧಾನತಜ್ಞರ ಮುಂದೆ ಮಂಡಿಸುವ ವಿಷಯವನ್ನು ನಾನು ಗಾಂಧಿಯವರೊಂದಿಗೆ ಚರ್ಚಿಸಿದೆ. ಗಾಂಧೀಜಿಯವರು ಇದಕ್ಕೆ ಒಪ್ಪಿಗೆ ಸೂಚಿಸಲಿಲ್ಲ. ಅವರ ವಾದವೆಂದರೆ ಇದೀಗ ಬಂದಿರುವ ವರದಿಯೇ ಅಂತಿಮ ಎಂದು.

ಡಾ. ಅಂಬೇಡ್ಕರ್ ಅವರು ರೈಲಿನ ಮೂಲಕ ಇಂದು ಸಂಜೆ ಬೊಂಬಾಯಿಗೆ ತೆರಳಿದರು.

– ಯುನೈಟೆಡ್ ಪ್ರೆಸ್[1]

## VI

## ಗ್ವಯರ್ ಅವರ ತೀರ್ಪನ್ನು ಪ್ರಶ್ನಿಸಿದ ಡಾ. ಅಂಬೇಡ್ಕರ್

### "ಶಿಫಾರಸ್ಸು" ಎಂಬುದು ಕಟ್ಟ ಕಡೆಯ ಆದೇಶವಲ್ಲ ಎಂದು ಹಲವಾರು ಪ್ರಕರಣಗಳ ಉದಾಹರಣೆ

ಗ್ವಯರ್ ಅವರ ತೀರ್ಪನ್ನು ಕಾನೂನಿನ ದೃಷ್ಟಿಯಲ್ಲಿ ವಿಶ್ಲೇಷಿಸುತ್ತಾ ಡಾ.ಬಿ.ಆರ್. ಅಂಬೇಡ್ಕರ್ ಅವರು ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ:–

ರಾಜಕೋಟ್‌ನ ಠಾಕೋರ್ ಸಾಹೇಬ್ ಹಾಗು ಶ್ರೀ ವಲ್ಲಭಭಾಯಿ ಪಟೇಲ್ ಅವರ ನಡುವೆ "ಶಿಫಾರಸ್ಸು" ಎಂಬ ಪದಕ್ಕೆ ಸಂಬಂಧಪಟ್ಟಂತೆ ಭಿನ್ನಾಭಿಪ್ರಾಯ ಏರ್ಪಟ್ಟಿದ್ದು, ಇದು ಭಿನ್ನಾಭಿಪ್ರಾಯಕ್ಕೆ

---

1. Bombay Chronide dated 20th April 1939.

ಕಾರಣವಾಗಿರುವ ಪಕ್ಷಗಳಿಗೆ ಅಥವಾ ಧರ್ಮಗಳಿಗೆ ಮಾತ್ರವಲ್ಲ, ಸಾಮಾನ್ಯ ಜನರಿಗೂ ಕೂಡ ಅತಿ ಮುಖ್ಯವಾದ ವಿಷಯವಾಗಿದೆ.

ಸಂಬಂಧಪಟ್ಟ ವ್ಯಕ್ತಿಗಳ ಪಕ್ಷದವರು ಈ ನಿರ್ಣಯಕ್ಕೆ ಒಳಪಟ್ಟಿರುತ್ತಾರೆ. ಆದರೆ ಅದರಲ್ಲಿನ ಅರ್ಥವಿವರಣೆಯು ತಪ್ಪೋ ಅಥವಾ ಸರಿಯೋ ಎನ್ನುವುದು ಮುಖ್ಯವಲ್ಲ. ಆದರೆ ಸಾರ್ವಜನಿಕರ ವಿಷಯದಲ್ಲಿ ನಾವು ಈ ರೀತಿ ಹೇಳುವಂತಿಲ್ಲ. ಅವರು ಈ ಪ್ರಶ್ನೆಯಲ್ಲಿ ಇನ್ನೂ ಸಂಪೂರ್ಣವಾಗಿ ಆಸಕ್ತಿಯನ್ನು ಹೊಂದಿದ್ದಾರೆ. ಈ ತೀರ್ಪು ನ್ಯಾಯಾಲಯದ ತೀರ್ಪು ಅಲ್ಲ ಎನ್ನುವುದು ನಿಜ. ಆದರೆ ಇದರ ಹಿಂದೆ ಇರುವುದು ಮಹಾನ್ ವ್ಯಕ್ತಿಯಾದಂತಹ ಸರ್ ಮಾರಿಸ್ ಗ್ವಯರ್ ಅವರ ಹೆಸರು.

## ಸರ್ದಾರ್ ಅವರ ತೀರ್ಮಾನವೇ ಅಂತಿಮ

ಈ ನೀತಿಗಳನ್ನು ವಿಶ್ಲೇಷಿಸಬೇಕಾದರೆ ಸರ್. ಠಾಕೂರ್ ಸಾಹೇಬ್ ಅವರ ವಾದ ಏನಿತ್ತು ಹಾಗು ಅದನ್ನು ಯಾವ ರೀತಿಯಲ್ಲಿ ಸರ್ ಮಾರಿಸ್ ಗ್ವಯರ್ ಅವರು ತಳ್ಳಿಹಾಕಿದರು ಎಂಬುದನ್ನು ನಾವು ಗಮನಿಸಬೇಕು.

ಸರ್ ಮಾರಿಸ್ ಗ್ವಯರ್ ಅವರು ಅದನ್ನು ಈ ರೀತಿ ಹೇಳುತ್ತಾರೆ. ಠಾಕೂರ್ ಸಾಹೇಬ್ ಅವರ ವಾದದ ಸಾರಾಂಶವನ್ನು ಕೆಳಗಿನ ಪಂಕ್ತಿಯಲ್ಲಿ ವಿವರಿಸಲಾಗಿದೆ. ಅವರ ಪರವಾಗಿ ಅವರ ವಾದವನ್ನು ಹೀಗೆ ಮುಂದಿಡಲಾಗಿತ್ತು. "ಶಿಫಾರಸ್ಸು" ಎಂಬ ಪದವು ಸ್ಪಷ್ಟವಾಗಿ ಆದೇಶವನ್ನು ಸೂಚಿಸುತ್ತದೆ. ಠಾಕೂರ್ ಸಾಹೇಬ್ ಅವರು ಯಾರನ್ನೇ ಆದರೂ ಆತ ಅನರ್ಹ, ಅಸಮರ್ಥ ಎಂದು ಆ ವ್ಯಕ್ತಿಯನ್ನು ನಿರಾಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಈ ವಾದವನ್ನು ಸರ್, ಮಾರಿಸ್ ಗ್ವಯರ್ ಅವರು ಎತ್ತಿಹಿಡಿಯಲಿಲ್ಲ.

ಅವರು ಹೇಳುತ್ತಾರೆ "ನನ್ನ ಅಭಿಪ್ರಾಯದಲ್ಲಿ ಅ ಪದದ ನಿಜವಾದ ಅರ್ಥವು ಶ್ರೀ ಠಾಕೂರ್ ಸಾಹೇಬ್ ಅವರು ಶ್ರೀ ವಲ್ಲಭಭಾಯಿ ಪಟೇಲ ಅವರು ಶಿಫಾರಸ್ಸು ಮಾಡುವ ವ್ಯಕ್ತಿಗಳನ್ನು ನೇಮಿಸುತ್ತಾರೆ ಎಂದಾಗುತ್ತದೆ. ಅಲ್ಲದೆ, ಶ್ರೀ ಪಟೇಲರು ಶಿಫಾರಸ್ಸು ಮಾಡಿದ ಹೆಸರುಗಳಲ್ಲಿ ಯಾವುದನ್ನೂ ತಿರಸ್ಕರಿಸುವ ಹಕ್ಕನ್ನು ಅವರು ಹೊಂದಿಲ್ಲ. ಅವರು ಶಿಫಾರಸ್ಸಾಗಿ ಬಂದಿರುವ ವ್ಯಕ್ತಿಗಳ ಹೆಸರನ್ನು ಟೀಕಿಸುವ ಅಧಿಕಾರ ಹೊಂದಿರುತ್ತಾರೆ ಹಾಗು ಅದನ್ನು ಪುನರ್ ಪರಿಶೀಲಿಸುವಂತೆ ಒತ್ತಾಯಿಸುವ ಹಕ್ಕನ್ನು ಹೊಂದಿರುತ್ತಾರೆ. ಆದರೆ ವಲ್ಲಭಭಾಯಿ ಪಟೇಲ ಅವರು ಶಿಫಾರಸ್ಸು ಮಾಡಿರುವ ವ್ಯಕ್ತಿ ಈ ರಾಜ್ಯದ ವಾಸಿಯಲ್ಲ ಹಾಗು ಈ ರಾಜ್ಯ ಸರ್ಕಾರದ ಸೇವೆಯಲ್ಲಿ ಇಲ್ಲ ಎಂದು ಸಾಬೀತಾಗದ ಹೊರತು, ಈ ವಿಷಯದಲ್ಲಿ ವಲ್ಲಭಭಾಯಿ ಪಾಟೀಲರ ತೀರ್ಮಾನವೇ "ಅಂತಿಮವಾಗಿರುತ್ತದೆ.

## ಎರಡು ಆಕ್ಷೇಪಣೆಗಳು

ಸರ್ ಮಾರಿಸ್ ಗ್ವಯರ್ ಅವರು ಠಾಕೂರ್ ಸಾಹೇಬ ಅವರು ವಾದವನ್ನು ತಳ್ಳಿಹಾಕುವುದಕ್ಕೆ ಎರಡು ಕಾರಣಗಳಿವೆ. ಇದನ್ನು ಮಾರಿಸ್ ಗ್ವಯರ್ ಅವರ ಮಾತುಗಳಲ್ಲಿಯೇ ಹೇಳಬೇಕೆಂದರೆ ಮೊದಲ ಕಾರಣ "ಇದು ಕೇವಲ ಒಂದು ಪದ ಪ್ರಯೋಗದಿಂದ ಉದ್ಭವಿಸಿರುವಂತಹ ಸಮಸ್ಯೆಯಾಗಿದೆ. ಕೇವಲ "ಶಿಫಾರಸ್ಸು" ಎಂಬ ಒಂದು ಪದದ ಪ್ರಯೋಗವು ಯಾವುದೇ ವಿಶೇಷ ಅರ್ಥವನ್ನೂ ಈ ಸಂದರ್ಭದಲ್ಲಿ ಹೊಂದಿಲ್ಲ. ಏಕೆಂದರೆ ಎಲ್ಲಾ ಸಂದರ್ಭದಲ್ಲಿಯೂ ಈ ಪದವು ಒಂದೇ ಅರ್ಥವನ್ನು ನೀಡುವುದಿಲ್ಲ. ಅದು ಸಂದರ್ಭಕ್ಕೆ ತಕ್ಕಂತೆ ಅರ್ಥ ಬದಲಾವಣೆಯನ್ನು ಹೊಂದುತ್ತದೆ. ಆದ್ದರಿಂದ ಎಲ್ಲಾ ಸಂದರ್ಭಗಳನ್ನು

ನಾವು ಗಮನದಲ್ಲಿ ಇರಿಸಿಕೊಂಡಿರಬೇಕು.

ಎರಡನೆಯ ಕಾರಣ ಎಂದರೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಠಾಕೂರ್ ಸಾಹೇಬ್ ಅವರು ಈ ವಿಷಯದಲ್ಲಿ ಯಾವ ಅಧಿಕಾರವನ್ನು ತಮಗಾಗಿ ಇಟ್ಟುಕೊಂಡಿಲ್ಲ. ಆದ್ದರಿಂದ ವಲ್ಲಭಭಾಯಿ ಪಟೇಲ ಅವರು ಸೂಚಿಸಿರುವ ವ್ಯಕ್ತಿಯ ಹೆಸರನ್ನು ತಿರಸ್ಕರಿಸುವ ಅಧಿಕಾರವನ್ನೂ ಅವರು ಹೊಂದಿಲ್ಲ. ರೆಕ್ಸ್ ವಿರುದ್ಧ ಕ್ರೈಸ್ಟ್ ಆಸ್ಪತ್ರೆಯ ಪಾಲಕರ ಪ್ರಕರಣವನ್ನು (೧೯೧೭) ಗ್ವೆಯರ್ ಅವರು ಉದ್ಧರಿಸುತ್ತಾರೆ. ಆದರೆ ಅದನ್ನೇ ಅವರು ಸಂಪೂರ್ಣವಾಗಿ ಅವಲಂಬಿಸಲು ಇಚ್ಚಿಸುವುದಿಲ್ಲ. ಅದರ ವಿಷಯವನ್ನು ತಾವು ಏಕೆ ಉದ್ಧರಿಸುತ್ತಿದ್ದೇವೆ ಎಂಬುದಕ್ಕೆ ಕೂಡ ಅವರು ಸ್ಪಷ್ಟ ಕಾರಣವನ್ನು ನೀಡುತ್ತಾರೆ. ಅವರು ಹೇಳುತ್ತಾರೆ. ನಾನು ಈ ವಿಷಯದ ಉದಾಹರಣೆ ಕೊಡಲು ಕಾರಣ ಏನೆಂದರೆ, ಇಂತಹ ಸಂದರ್ಭದಲ್ಲಿ ನಾವು ಒಂದೇ ತಂತ್ರಕ್ಕೆ ಅಂಟಿಕೊಳ್ಳಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿ ಶಿಫಾರಸ್ಸು ಮಾಡಿ ಮತ್ತೊಬ್ಬ ವ್ಯಕ್ತಿ ನೇಮಕ ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಈ ಪ್ರಸಕ್ತ ವಿಷಯ ಕುರಿತಂತೆ ತಿರ್ಮಾನವನ್ನು ನೀಡಲು ಪೂರ್ವನಿದರ್ಶನಗಳು ಇಲ್ಲ.

## ಪೂರ್ವನಿರ್ದಶನ ಮತ್ತು ತತ್ವ

ಆ ವಿಷಯದಲ್ಲಿ ಸರಿಯಾಗಿಯೇ ಭಿನ್ನಾಭಿಪ್ರಾಯವನ್ನುಳ್ಳ ನಾನು ಒಂದು ವಿಷಯವನ್ನು ಹೇಳಬಯಸುತ್ತೇನೆ. ಈ ವಿಷಯದಲ್ಲಿ ನೀತಿಯನ್ನು ಸುಷ್ಟುವಾಗಿ ನಿರೂಪಿಸಲ್ಪಟ್ಟಿರುವ ಒಂದು ಪೂರ್ವಪ್ರಕರಣವಿದೆ. ಅದನ್ನು ಈ ಪ್ರಕರಣದಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ. ನಾಟ್ ಹಾಗು ಕೋಟಿ ಇವರ ಪೂರ್ವನಿದರ್ಶನವೇ ಈಗ ನನ್ನ ಮನದಲ್ಲಿರುವುದು. ಈ ಪ್ರಕರಣದ ವಿವರಗಳು ಈ ರೀತಿ ಇವೆ.

'A' ಎಂಬ ವ್ಯಕ್ತಿ ಒಂದು ಉಯಿಲನ್ನು ಬರೆದು ತನ್ನ ಮಡದಿ ಹಾಗು ಶ್ರೀ ಕೋಟಿ ಮತ್ತು ಶ್ರೀ ಇಬ್ರೆಟ್‌ಸನ್ ಒಟ್ಟು ಮೂವರನ್ನು ತನ್ನ ಉಯಿಲಿನ ನಿರ್ವಹಣಾಕಾರರನ್ನಾಗಿ ಹಾಗು ತನ್ನ ಮಕ್ಕಳ ಪಾಲಕರನ್ನಾಗಿ ನೇಮಕ ಮಾಡುತ್ತಾನೆ. ಮುಂದುವರೆದು ಒಂದು ಪಕ್ಷ, ತನ್ನ ಮಗ ೨೧ ವರ್ಷದವನಾಗುವುದಕ್ಕೆ ಮುಂಚೆ ಅಥವಾ ತನ್ನ ಹೆಣ್ಣುಮಕ್ಕಳು ೨೧ ವರ್ಷದವರಾಗುವುದಕ್ಕೆ ಅಥವಾ ಮದುವೆಯಾಗುವುದಕ್ಕೆ ಮೊದಲು ತನ್ನ ಪತ್ನಿಯು ಮೃತಳಾದರೆ, ಉಳಿದಿರುವ ಪಾಲಕ/ಪಾಲಕರು, ತನ್ನ ಮಕ್ಕಳನ್ನು ಅಥವಾ ಆ ಸಮಯದಲ್ಲಿ ತನ್ನ ಮಕ್ಕಳಲ್ಲಿ ಪ್ರಾಪ್ತಪಯಸ್ಕರಾಗದೇ ಇರುವವರನ್ನು ತನ್ನ ದಾಯಾದಿ ಮೇರಿ ಪ್ರೈಯರ್‌ಳ ಪಾಲನೆಗೆ ಒಪ್ಪಿಸಬೇಕು ಎಂದು 'A' ಉಯಿಲಿನಲ್ಲಿ ಹೇಳುತ್ತಾನೆ. 'A'ನ ಪತ್ನಿ ಮೃತಪಡುತ್ತಾಳೆ ಹಾಗು ಮಕ್ಕಳನ್ನು ಶ್ರೀ ಕೋಟಿ ಅವರು ಮೇರಿ ಪ್ರೈಯರ್ ಅವರ ಸುಪರ್ದಿಗೆ ಒಪ್ಪಿಸುತ್ತಾರೆ. ಉಳಿದಿರುವ ಪಾಲಕ ಶ್ರೀ ಕೋಟಿಯವರು ಮೇರಿ ಪ್ರೈಯರ್ ಅವರ ಪಾಲನೆಗೆ ಮಕ್ಕಳನ್ನು ಒಪ್ಪಿಸಬೇಕು ಎಂದು 'ಶಿಫಾರಸ್ಸು' ಎಂಬ ಪದವು ನಿರ್ದೇಶನಾತ್ಮಕವಾಗಿ ಉಪಯೋಗಿಸಲ್ಪಟ್ಟಿದೆಯೆಂಬ ಗ್ರಹಿಕೆಯ ಮೇರೆಗೇ ಈ ಪ್ರಕರಣವು ಸಾಗುತ್ತದೆ.

### ಅಂತರ್ನಿಹಿತ ಅಧಿಕಾರ:

ಇಲ್ಲಿನ ಪ್ರಶ್ನೆ 'A' ಅವರ ಶಿಫಾರಸ್ಸು ಪಾಲಕರಾಗಿ ನೇಮಕವಾಗಿದ್ದ ಶ್ರೀ ಕೋಟಿ ಅವರಿಂದ ಎಲ್ಲಾ ಅಧಿಕಾರವನ್ನು ಕಿತ್ತುಕೊಂಡಿತೇ ಎಂಬುದು. ಈ ವಿಷಯದಲ್ಲಿ ನಿರ್ಧಾರ ಕೈಗೊಳ್ಳುತ್ತಾ ಲಾರ್ಡ್ ಚಾನ್ಸಲರ್ (ಲಾರ್ಡ್ ಡೆನ್ಮಾನ್) ಅವರು ಈ ಕೆಳಗಿನಂತೆ ಹೇಳುತ್ತಾರೆ..... ಈ ಶಿಫಾರಸ್ಸು ಎಂಬ ಪದದ ಅರ್ಥವನ್ನು

ಗಮನಿಸುವ ಹಲವಾರು ಸಂದರ್ಭಗಳು ನನಗೆ ಎದುರಾಗಿವೆ. ಇತ್ತೀಚಿಗೆ ಇದೇ ರೀತಿಯ ಒಂದು ಮೊಕದ್ದಮೆಯು ನಮ್ಮ ನ್ಯಾಯಾಲಯದಲ್ಲಿ ಕೂಡ ಬಂದಿತ್ತು. ಅದರಲ್ಲಿ ಉಯಿಲನ್ನು ಬರೆದವನು ಆ ಉಯಿಲಿನಲ್ಲಿ ತನ್ನ ಆಸ್ತಿಯು ಇನ್ನೊಬ್ಬ ವ್ಯಕ್ತಿಗೆ ಸೇರಲೆಂದು ಶಿಫಾರಸ್ಸನ್ನು ಮಾಡಿದ್ದೇನೆ ಎಂದಿರುವಲ್ಲಿ ಹಾಗೆ ನೇಮಕವಾದ ವ್ಯಕ್ತಿಗೆ ಆ 'ಶಿಫಾರಸ್ಸು' ಎಂಬ ಪದವು ಅಗತ್ಯವಾದ ಕಾನೂನಿನ ಹಕ್ಕುಗಳನ್ನು ನೀಡುತ್ತದೆಯೇ ಎಂಬ ಪ್ರಶ್ನೆ ಎದುರಾಗಿತ್ತು.

ಮತ್ತೊಂದು ಪ್ರಕರಣ ಶಾ ಹಾಗು ಲಾಲೆಸ್ ಅವರಿಗೆ ಸಂಬಂಧಪಟ್ಟಂತೆ ಇತ್ತು. ಇಲ್ಲಿ House of Lords ಒಂದು ನಿಯಮ ಜಾರಿಗೆ ತಂದಿದ್ದರು. ಅವರ ಪ್ರಕಾರ ಶಿಫಾರಸ್ಸು ಎಂಬ ಪದಕ್ಕೆ ಇಲ್ಲಿ ಯಾವುದೇ ಕಟ್ಟುನಿಟ್ಟಾದ ಅರ್ಥ ಇರಲಿಲ್ಲ. ಉಯಿಲಿನ ಮುಖ್ಯ ಉದ್ದೇಶಕ್ಕೆ ವಿರುದ್ಧವಾಗದಿದ್ದ ಪಕ್ಷದಲ್ಲಿ ಶಿಫಾರಸ್ಸು ಎಂಬ ಪದವನ್ನು ನಿರ್ದೇಶನ ಎಂಬ ಅರ್ಥದಲ್ಲಿ ಬಳಸಬಹುದು. ಹಾಗಿಲ್ಲದಿದ್ದರೆ. ಅದನ್ನು 'ಶಿಫಾರಸ್ಸು' ಎಂಬ ಸೀಮಿತಾರ್ಥದಲ್ಲಿಯೇ ಬಳಸಬೇಕು – ಈ ನಿರ್ದೇಶನವನ್ನೇ ನಾನು ಅನುಸರಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಇದೆಯೆಂದು ಭಾವಿಸಬಹುದಾದ ಅಧಿಕಾರಕ್ಕೂ, ಧರ್ಮದರ್ಶಿಗಳ ಅಧಿಕಾರಕ್ಕೂ ಪರಸ್ಪರ ಸೇರುವೆಯಾಗುತ್ತಿರಲಿಲ್ಲ. ಉಯಲಿನ ಈ ಎರಡೂ ವಿಧಿಗಳು ಕೂಡಿ ನಡೆಯದಾದಾಗ, ಅನಿರ್ದಿಷ್ಟವಾದುದರ ಬದಲಿಗೆ ನಿರ್ದಿಷ್ಟ ಅರ್ಥವುಳ್ಳ ಪದವನ್ನು ಉಳಿಸಿಕೊಂಡು ಮುಂದುವರಿಯಬೇಕೆಂದು ತೀರ್ಮಾನಿಸಲಾಗಿತ್ತು. ಶಿಫಾರಸ್ಸಿನ ಆನ್ವಯಿಕತೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲು ಸಾಧ್ಯವಿಲ್ಲದಿದ್ದರೂ ಶ್ರೀ ಕಾಟಿಯವರ ಉಯಿಲಿನ ಪ್ರಕಾರ ಮಕ್ಕಳ ಪಾಲಕತ್ವದ ಮೇಲೆ ಅವರಿಗಿರುವ ಅಧಿಕಾರವನ್ನು ಅವರಿಂದ ಕಿತ್ತುಕೊಳ್ಳಲಿಲ್ಲ.

## ಯಾವುದೇ ನಿರ್ದಿಷ್ಟ ನಿರ್ದೇಶನವಿಲ್ಲ

ಮೇಲಿನ ಪ್ರಕರಣವು ನಂಬಿಕೆಯ ಮೇಲೆ ಅವಲಂಬಿತವಾಗಿರುವುದು ಸ್ಪಷ್ಟವಾಗಿದೆ. ಈ ನಂಬಿಕೆಯು ಕಾನೂನಿನ ಬಾಧ್ಯತೆಗೆ ಇರುವ ಇನ್ನೊಂದು ಹೆಸರು. ಇದರಲ್ಲಿ ಶಿಫಾರಸ್ಸು ಮತ್ತು ಕಾನೂನಿನ ಬಾಧ್ಯತೆ ಇವೆರಡೂ ಒಂದೆ. ಇಲ್ಲಿನ ಶಿಫಾರಸ್ಸು ಎಂಬ ಪದ ವಿವರಣೆಯ ದೃಷ್ಟಿಯಿಂದ ಈ ಪ್ರಕರಣವು ಮಹತ್ವ ಪಡೆದುಕೊಂಡಿದೆ. ಲಾರ್ಡ್ ಡೆನ್ಮ್ಯಾನ್ ಅವರ ನಿರ್ಣಯದಲ್ಲಿನ ಈ ಅಂಶವನ್ನು ಗಮನಿಸಬೇಕು 'ಶಿಫಾರಸ್ಸು' ಎಂಬ ಪದವು ಉಯಿಲಿನ ಇತರ ವಿಧಿಗಳೊಡನೆ ಸುಸಂಗತವಾಗಿ ಹೊಂದಿಕೊಳ್ಳದಿದ್ದರೆ ಅದು ಬೇರೆ ಯಾವ ಮಾರ್ಗವೂ ಇಲ್ಲದೆ, ಅನಿವಾರ್ಯವಾಗಿ ಒಪ್ಪಿಕೊಳ್ಳಲೇ ಬೇಕಾದ ನಿರ್ದೇಶವಲ್ಲ.

ಇನ್ನು ಠಾಕೂರ್ ಸಾಹೇಬ ಹಾಗು ವಲ್ಲಭಭಾಯಿ ಅವರ ವಿಷಯಕ್ಕೆ ಬಂದರೆ ಠಾಕೂರ್ ಸಾಹೇಬ ಅವರ ಪರಿಸ್ಥಿತಿಯೂ ಕಾಟಿ ಅವರ ಪರಿಸ್ಥಿತಿಯಂತೆಯೇ ಇದೆಯೆಂದು ಹೇಳಲಾಗುವುದಿಲ್ಲವೆ? ಮುಂದುವರೆಯುತ್ತಾ ಶ್ರೀ ಕಾಟಿ ಅವರಂತೆ ಠಾಕೂರ್ ಸಾಹೇಬ ಅವರಿಗೂ ತಾವು ರಾಜರಾಗಿ ಇರುವುದರಿಂದ ಅಧಿಕಾರಗಳು ಇರುತ್ತವೆ ಎಂದರೆ ತಪ್ಪಾಗುತ್ತದೆಯೇ? ಇವರಿಗೆ ಯಾವುದೇ ಸ್ಥಾನಕ್ಕೆ ಯಾವುದೇ ವ್ಯಕ್ತಿಯನ್ನು ನೇಮಕ ಮಾಡುವ, ತೆಗೆದು ಹಾಕುವ ಠಾಕೂರ್ ಪ್ರಕರಣ ಸಾಹೇಬ್ ಮತ್ತು ಶ್ರೀಕಾಟಿಯವರ ಪ್ರಕರಣವು ಒಂದೇ ರೀತಿಯದಲ್ಲ ಎಂದರೆ ವಲ್ಲಬ್ ಭಾಯಿ ಮತ್ತು ಠಾಕೂರ್ ಸಾಹೇಬ್ ಅವರ ಪ್ರಕರಣವನ್ನು ನಾಟ್ ಹಾಗೂ ಕಾಟೀ ಅವರ ಪ್ರಕರಣಕ್ಕೆ ಹೇಗೆ ಹೋಲಿಸಬಹುದು?

## ಮತ್ತೊಂದು ಅಧಿಕಾರಯುತ ಪ್ರಕರಣ

ಈ ಸಂದರ್ಭಕ್ಕೆ ಅನುಗುಣವಾಗಿ ನಾವು ಗಮನಿಸಬಹುದಾದ ಮತ್ತೊಂದು ಅಧಿಕಾರಯುತ ಪ್ರಕರಣವಿದೆ. ಅದೆಂದರೆ ಜಾನ್ಸನ್ ಮತ್ತು ರೋಲ್ಯಾಂಡ್ಸ್ ಅವರ ನಡುವಿನ ಪ್ರಕರಣ. ಇಲ್ಲಿಯ ಉಯಿಲಿನಲ್ಲಿ

ಕೂಡ "ಶಿಫಾರಸ್ಸು" ಎಂಬ ಪದದ ಅರ್ಥವಿವರಣೆಗೆ ಮಹತ್ವ ನೀಡಲಾಗಿದೆ. ಒಬ್ಬ ಮರಣಶಾಸನಕರ್ತ ತನ್ನ ಉಯಿಲಿನಲ್ಲಿ ಈ ರೀತಿ ಹೇಳುತ್ತಾನೆ "ನಾನು ಅವಳಿಗೆ ಒಂದು ನಿರ್ದಿಷ್ಟ ಮೊತ್ತದ ಹಣವನ್ನು ಅವಳಿಗೆ ಸೂಕ್ತ ಎನಿಸುವಂತೆ ಖರ್ಚು ಮಾಡಿಕೊಳ್ಳಲು ನೀಡಿದ್ದೇನೆ. ಆದರೆ ಅದರಲ್ಲಿ ಅರ್ಧ ಭಾಗವನ್ನು ತನ್ನ ಸಂಬಂಧಿಗಳಿಗೇ ನೀಡುವಂತೆ ಅವಳಿಗೆ ನಾನು ಶಿಫಾರಸ್ಸು ಮಾಡುತ್ತೇನೆ". ಈ ರೀತಿ ಬರೆದಿದ್ದರು ಕೂಡ ಆಸ್ತಿ ಪಡೆದವಳು ಮರಣಶಾಸನ ಕರ್ತನ ಶಿಫಾರಸ್ಸಿನಂತೆ ಅರ್ಧ ಭಾಗವನ್ನು ತನ್ನ ಸಂಬಂಧಿಗಳಿಗೆ ನೀಡಲಿಲ್ಲ. ಇಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ, ಆಕೆ ಈ ಶಿಫಾರಸ್ಸಿಗೆ ವಿರುದ್ಧವಾಗಿ ನಡೆದುಕೊಳ್ಳಬಹುದೇ ಎಂಬುದು. ಆಕೆ ಹಾಗೆ ನಡೆದುಕೊಳ್ಳಬಹುದು ಎಂಬ ತೀರ್ಪನ್ನು ನ್ಯಾಯಾಲಯ ನೀಡಿತ್ತು. ನ್ಯಾಯಾಲಯದ ಪ್ರಕಾರ "ಶಿಫಾರಸ್ಸು" ಎಂದರೆ ನಿರ್ದೇಶನ ಎಂದು ಆಗಬಹುದು. ಆದರೆ ಒಂದು ವೇಳೆ ಸಂದರ್ಭವು ಸ್ಪಷ್ಟತೆಯನ್ನು ಕಾಣದ ಸಂದರ್ಭದಲ್ಲಿ ಇದನ್ನು ನಾವು ನಿರ್ದೇಶನ ಎಂದು ಪರಿಗಣಿಸಲು ಬರುವುದಿಲ್ಲ. ಆಗ ಆಸ್ತಿ ಪಡೆದುಕೊಂಡವರು, ಉಯಿಲಿನ ನಿರ್ದೇಶನದಂತೆ ನಡೆದುಕೊಳ್ಳದಿರಲು ಅವಕಾಶ ಇರುತ್ತದೆ.

ಆದರೆ ಮೇಲಿನ ಪ್ರಕರಣದ ಭಾಷೆಗೂ ಠಾಕೂರ್ ಸಾಹೇಬರು ಬರೆದಿರುವ ಪತ್ರದ ಭಾಷೆಗೂ ಹೋಲಿಕೆಮಾಡುವ ಹಾಗಿಲ್ಲ ಎಂಬುದು ನಿಜ. ಆದರೆ ಒಂದು ವೇಳೆ ವಲ್ಲಭಭಾಯಿ ಪಟೇಲರಿಗೆ "ನಮಗೆ ಇಷ್ಟ ಬಂದಂತೆ ಸಮಿತಿಯನ್ನು ರಚಿಸುವ ಅಧಿಕಾರ ನಮಗಿದೆ. ಆದರೆ ಈ ಸಮಿತಿಯಲ್ಲಿ ಇರಬೇಕಾದ ಏಳು ಜನರ ಹೆಸರನ್ನು ನೀವು ನಮಗೆ ಶಿಫಾರಸ್ಸು ಮಾಡಬಹುದು ಹಾಗು ನಾವು ಅವರನ್ನು ನೇಮಕ ಮಾಡುತ್ತೇವೆ." ಎಂದು ಪತ್ರ ಬರೆದಿದ್ದಿದ್ದರೆ ಉದ್ದೇಶ ಸ್ಪಷ್ಟವಾಗಿರುತ್ತಿತ್ತು ಎಂದು ನನಗೆ ಅನಿಸುತ್ತದೆ. ಇಲ್ಲಿ ಠಾಕೂರ್ ಹಾಗು ವಲ್ಲಭಭಾಯಿ ಪಟೇಲರ ನಡುವೆ ಒಪ್ಪಂದ ಏರ್ಪಟ್ಟಿದೆ. ಆದರೆ ಜಾನ್ಸನ್ ಹಾಗು ರೋಲ್ಯಾಂಡ್ ಪ್ರಕರಣದಲ್ಲಿ ಈ ರೀತಿಯ ಯಾವುದೇ ಒಪ್ಪಂದ ನಮಗೆ ಕಂಡು ಬರುವುದಿಲ್ಲ. ಆದರೆ ಈ ಒಪ್ಪಂದವು ಠಾಕೂರ್ ಸಾಹೇಬರಿಗೆ ರಾಜರಾಗಿ ಹೀಗೆಯೇ ನಡೆದುಕೊಳ್ಳಬೇಕೆಂದು ನಿರ್ದೇಶಿಸುತ್ತಿದೆಯೇ ಎಂಬ ಪ್ರಶ್ನೆಯನ್ನು ನಾವು ಪರಿಗಣಿಸುತ್ತಿಲ್ಲ. ಅದು ಬೇರೆಯದೇ ಪ್ರಶ್ನೆಯಾಗುತ್ತದೆ ಹಾಗು ಪ್ರಮುಖ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ.

## ಕಾಣೆಯಾಗಿರುವ ಪದಗುಚ್ಛ

ಇಲ್ಲಿ ನಮ್ಮೆದುರು ಇರುವಂತಹ ಮೂಲಭೂತ ಪ್ರಶ್ನೆ ಎಂದರೆ 'ಶಿಫಾರಸ್ಸು' ಎಂಬುದರ ಅರ್ಥವೇನು ಎಂಬುದು. ಇಲ್ಲಿ ಜಾನ್ಸನ್ ಹಾಗು ರೋಲ್ಯಾಂಡ್ ಪ್ರಕರಣ ಹಾಗು ಠಾಕೂರ್ ಸಾಹೇಬ್ ವಲ್ಲಭಭಾಯಿ ಪ್ರಕರಣವು ಎಲ್ಲಾ ರೀತಿಯ ಅರ್ಥವನ್ನು ನೀಡುತ್ತದೆ. "ನಮಗೆ ಇಷ್ಟಬಂದಂತೆ ಸಮಿತಿಯನ್ನು ರಚಿಸುವ ಅಧಿಕಾರವನ್ನು ನಾವು ಹೊಂದಿರುತ್ತೇವೆ." ಎಂಬ ವಾಕ್ಯಖಂಡವು ಇಲ್ಲದಿರುವುದು ಯಾವ ವ್ಯತ್ಯಾಸವನ್ನು ಉಂಟುಮಾಡುವುದಿಲ್ಲ. ಅಂತಹ ಬಳಕೆ ರಾಜ್‌ಕೋಟ್‌ನ ಪತ್ರವ್ಯವಹಾರಗಳಲ್ಲಿ ಇದ್ದಿರಬಹುದು. ಆದರೆ ಅಂತಹ ಪತ್ರಗಳಲ್ಲಿ ಠಾಕೂರ್ ಸಾಹೇಬರು ಈ ರೀತಿಯ ಉಲ್ಲೇಖ ಮಾಡಿಲ್ಲದಿದ್ದ ಮಾತ್ರಕ್ಕೆ ರಾಜರಾಗಿ ಅಧಿಕಾರ ಚಲಾವಣೆಯನ್ನು ಮಾಡುವ ಅವರ ಅಧಿಕಾರಕ್ಕೆ ಕುಂದೂ ಇರುವುದಿಲ್ಲ ಅಥವಾ ವಲ್ಲಭಾಯಿ ಅವರಿಗೆ ಬರೆದಿರುವ ಪತ್ರದಲ್ಲಿ ಹಾಗೆ ಹೇಳಲಿಲ್ಲ ಎಂದರೆ ಠಾಕೂರ್ ಸಾಹೇಬ್ ಅವರು ಅಂತಹ ಅಧಿಕಾರವನ್ನು ಬಿಟ್ಟುಕೊಟ್ಟಿದ್ದಾರೆ ಎಂದೇನೂ ಅರ್ಥವಾಗುವುದಿಲ್ಲ.

ಇಲ್ಲಿರುವ ಪ್ರಶ್ನೆಯೆಂದರೆ ನಿರಾಕರಣೆಯ ಅಧಿಕಾರವನ್ನು ಠಾಕೂರ್ ಸಾಹೇಬರು ತಮ್ಮ ಬಳಿಯಲ್ಲಿ ಇರಿಸಿಕೊಂಡಿದ್ದಾರೆಯೇ ಎಂಬುದಲ್ಲ. ಇಲ್ಲಿ "ಶಿಫಾರಸ್ಸು' ಎಂಬ ಪದ ಅವರಿಗೆ ಸಹಜವಾಗಿ ದತ್ತವಾಗಿರುವ

ನಿರಾಕರಣೆಯ ಹಕ್ಕನ್ನು ಅವರಿಂದ ಕಸಿದುಕೊಳ್ಳುತ್ತದೆಯೇ ಎಂಬುದು. ಅದು ಒಂದು ವೇಳೆ ಮೇಲಿನಂತೆ ಅರ್ಥ ಕೊಡುವಂತಿದ್ದರೆ ನಾವು ಈ ಹಿಂದೆ ನೋಡಿದ ಎರಡು ಪ್ರಕರಣಗಳಲ್ಲಿನ ಅರ್ಥಕ್ಕಿಂತ ಬೇರೆಯಾದ ಅರ್ಥವನ್ನು ಈ ಪ್ರಕರಣದಲ್ಲಿ ಹಚ್ಚಲು ಸಾಧ್ಯವಿಲ್ಲ.

### ಸಕಾರಾತ್ಮಕ/ಧನಾತ್ಮಕ ಅಧಿಕಾರ

ಮೇಲೆ ನೋಡಿದ ಎರಡು ಪ್ರಕರಣಗಳಂತೆಯೇ ಠಾಕೂರ್ ಸಾಹೇಬ್ ಅವರ ಪ್ರಕರಣದಲ್ಲಿ ಕೂಡ, ಒಂದು ಕಡೆ ಠಾಕೂರ್ ಸಾಹೇಬರ ಬದಲಾಯಿಸಲಾಗದ ನಿರ್ದಿಷ್ಟವಾಗಿರುವ ಆಧಿಕಾರಿಕ ಹಕ್ಕುಗಳು ಹಾಗೂ ಮತ್ತೊಂದು ಕಡೆ, ಸಂದರ್ಭಕ್ಕೆ ತಕ್ಕಂತೆ ಅರ್ಥದ ಛಾಯೆಗಳನ್ನು ಪಡೆಯುವ 'ಶಿಫಾರಸ್ಸು' ಎಂಬ ಪದ – ಇವೆ. ನಿಯಮದ ಪ್ರಕಾರ ನಿರ್ದಿಷ್ಟ ಅರ್ಥವಿರದ ಪದವು ನಿರ್ದಿಷ್ಟ ಅರ್ಥವಿರುವ ಪದದ ಅಧಿಕಾರಕ್ಕೆ, ತಲೆಬಾಗಬೇಕಾಗುತ್ತದೆ. ಅಂದರೆ 'ಶಿಫಾರಸ್ಸು' ಎಂಬ ಪದವು ನಿರ್ದೇಶನ ಎಂಬ ಅರ್ಥವನ್ನು ಹೊಂದಲು ಸಾಧ್ಯವಿಲ್ಲ.

ಆದರೆ ಮಾರಿಸ್ ಗ್ವಯರ್ ಅವರಿಗೆ ಸಂಬಂಧಿಸಿದ ಪ್ರಕರಣವು (1917) 1KB19 ಮೇಲಿನ ಎರಡು ಪ್ರಕರಣಗಳಿಗಿಂತ ಭಿನ್ನವಾಗಿದೆ. ಆದರೆ ಸ್ವಲ್ಪ ಹತ್ತಿರದಿಂದ ಗಮನಿಸಿದರೆ, ಎರಡೂ ಪ್ರಕರಣಗಳಲ್ಲಿ ಯಾವುದೇ ವಿರೋಧವಿಲ್ಲ ಹಾಗು ಸುಲಭವಾಗಿ ಬೇರ್ಪಡಿಸಬಹುದಾದಂತಹುದಾಗಿದೆ. (1917 1KB19) ಪ್ರಕರಣದಲ್ಲಿ, ನೇಮಕಾತಿಯ ಅಧಿಕಾರವು ಕೇವಲ ನೇಮಕಾತಿಯ ಅಧಿಕಾರ ಮಾತ್ರವೇ ಆಗಿತ್ತು. ಆದರೆ "ಶಿಫಾರಸ್ಸು" ಎನ್ನುವ ಪದವನ್ನು ನಿರ್ದೇಶಾತ್ಮಕ ಎಂದು ಭಾವಿಸಿದ್ದಿದ್ದರೆ ಅಲ್ಲಿ ಅಪಾಯಕ್ಕೆ ಒಳಗಾಗುವ ಯಾವ ಸಕಾರಾತ್ಮಕ ಹಕ್ಕು ಇರಲಿಲ್ಲ.

ಸ್ವತಂತ್ರವಾಗಿ ಚಲಾಯಿಸಲ್ಪಡಬಹುದಾದ ಹಕ್ಕುಗಳು ಇರುವಲ್ಲಿ ಶಿಫಾರಸ್ಸು ಎಂಬ ಪದಕ್ಕೆ ನಿರ್ದೇಶಾತ್ಮಕ ಅಧಿಕಾರವು ಇರುವುದಿಲ್ಲ ಮತ್ತು ಹಕ್ಕುಗಳು ಸ್ವತಂತ್ರವಾಗಿ ಚಲಾಯಿಸಲಾಗದವಾಗಿದ್ದರೆ, ಶಿಫಾರಸ್ಸು ಎಂಬ ಪದಕ್ಕೆ ಅಂತಹ ಅಧಿಕಾರಾತ್ಮಕ ಅರ್ಥವು ಬರುತ್ತದೆ ಎಂಬುದು ನಾನು ಮೇಲೆ ಉದ್ಧರಿಸಿದ ಪ್ರಕರಣಗಳಿಂದ ತಿಳಿದುಬರುತ್ತದೆ.

ಆದರೆ ಸರ್ ಮಾರಿಸ್ ಗ್ವಯರ್ ಅವರು ಉದ್ಧರಿಸಿದ್ದ ಪ್ರಕರಣದಲ್ಲಿ ಯಾವ ಸಕಾರಾತ್ಮಕ ಅಧಿಕಾರವು ಇರಲಿಲ್ಲ. ಆದ್ದರಿಂದ ಶಿಫಾರಸ್ಸು ಎನ್ನುವ ಪದ ನಿರ್ದೇಶನವೇ ಆಗಿತ್ತು. ಠಾಕೂರ್ ಸಾಹೇಬ್ ಹಾಗು ವಲ್ಲಭಭಾಯಿ ಅವರ ಪ್ರಕರಣವು ನನ್ನ ಅಭಿಪ್ರಾಯದಂತೆ ನಾನು ಉದ್ದೇಶಿಸಿದ ಎರಡು ಪ್ರಕರಣಗಳ ವರ್ಗಕ್ಕೆ ಸೇರುತ್ತದೆ. ಇದು (1917 1KB19)ರಲ್ಲಿ ವರದಿಯಾಗಿರುವ ವರ್ಗಕ್ಕೆ ಸೇರುವುದಿಲ್ಲ.

* * * * *

## ೨೪
## ನಾನು ಶ್ರೀ ಜಿನ್ನಾ ಅವರಿಗಿಂತಲೂ ಹೆಚ್ಚು ಕಾತುರನಾಗಿರುವೆ

ಡಾ. ಅಂಬೇಡ್ಕರ್ ಅವರು ಮುಸಲ್ಮಾನರ ಮುಕ್ತಿ ದಿನಾಚರಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ" ಇದಕ್ಕೆ ಬಹಳಷ್ಟು ಪಾರ್ಸಿಗಳ ಬೆಂಬಲ ದೊರಕಿದೆ.

ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ. ಬಿ.ಆರ್. ಅಂಬೇಡ್ಕರ್, ಇವರು ಮುಂದಿನ ಶುಕ್ರವಾರ ಜರುಗಲಿರುವ ಮುಸಲ್ಮಾನರ "ಮುಕ್ತಿ ದಿನಾಚರಣೆಯಲ್ಲಿ" ಭಾಗಿಯಾಗಲು ನಿರ್ಧರಿಸಿದ್ದಾರೆ.

ಈಗಾಗಲೇ ಹಲವಾರು ಪಾರ್ಸಿ ಜನಾಂಗದ ಜನ, ಇದಕ್ಕೆ ತಮ್ಮ ಬೆಂಬಲವನ್ನು ವ್ಯಕ್ತ ಪಡಿಸಿದ್ದಾರೆ. ಈ ದಿನಾಚರಣೆಯನ್ನು ಯಶಸ್ವಿಯನ್ನಾಗಿಸಲು ಅವರೆಲ್ಲಾ ಅಖಿಲಭಾರತ ಮುಸಲ್ಮಾನ ಒಕ್ಕೂಟದ ನಾಯಕರಾದಂತಹ ಶ್ರೀ ಜಿನ್ನಾ ಅವರೊಂದಿಗೆ ಸಹಕರಿಸಲಿದ್ದಾರೆ.

ಈಗ್ಗೆ ಕೆಲ ತಿಂಗಳ ಹಿಂದೆ ಸರ್. ಕೋವಾಸ್ಜಿ ಜಹಾಂಗೀರ್ ಸಭಾಂಗಣದಲ್ಲಿ ನಡೆದ ಸಮಾವೇಶವೊಂದರಲ್ಲಿ ಕಾಂಗ್ರೆಸ್‌ನ ಕೆಲ ನೀತಿಗಳ ವಿರುದ್ಧ ಪ್ರತಿಭಟನೆ ಮಾಡಲು ಒಂದು ಸಮಿತಿಯು ರಚನೆಯಾಯಿತು. "ಸಮರ್ಪಣಾ ದಿನಾಚರಣೆಗೆ" ತಮಗೆ ಬಂದಿರುವ ಆಹ್ವಾನವನ್ನು ಕುರಿತ ನಿರ್ಧಾರವನ್ನು ಈ ಸಮಿತಿಯು ಈ ಮುಂದಿನ ಮಂಗಳವಾರ ಕೈಗೊಳ್ಳಲಿದೆ. ಈ ಉಪ ಸಮಿತಿಯಲ್ಲಿ ಪಾರ್ಸಿ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಎಂ.ಪಿ.ಖಾರೇಗಾಟ್, ಸರ್. ಕೋವಾಸ್ಜಿ ಜಹಂಗೀರ್, ಸರ್. ಎಚ್.ಪಿ.ಮೋದಿ, ಹಾಗು ಶ್ರೀ ಬೈರಾಂಜೀ ಜೀಜೀಭೋಯ್ ಮೊದಲಾದ ಪ್ರಖ್ಯಾತ ಪಾರ್ಸಿ ಪ್ರಮುಖರಿದ್ದಾರೆ.

ಈ ಪತ್ರಿಕೆಯ ವರದಿಗಾರರೊಂದಿಗೆ ಸೋಮವಾರ ಮಾತನಾಡಿದ ಶ್ರೀ ಅಂಬೇಡ್ಕರ್ ಅವರು ಈ ರೀತಿ ಹೇಳಿದರು.

ಕಳೆದವಾರ ಟೈಂಸ್ ಆಫ್ ಇಂಡಿಯಾ ಪತ್ರಿಕೆಯು, ನಾನು ಈ ಸಮರ್ಪಣಾ ದಿನಾಚರಣೆಯ ಆಚರಣೆಯಲ್ಲಿ ಶ್ರೀ ಜಿನ್ನಾ ಅವರಿಗೆ ಬೆಂಬಲ ಸೂಚಿಸುತ್ತಿದ್ದೇನೆ ಎಂಬ ವಿಷಯವನ್ನು ಪ್ರಕಟಿಸಿತ್ತು. ಅಂದಿನಿಂದ ನನ್ನ ಮಿತ್ರರು ಹಾಗು ಶತ್ರುಗಳಿಂದ ನಾನು ನೂರಾರು ಪ್ರಶ್ನೆಗಳನ್ನು ಎದುರಿಸುವಂತಾಗಿದೆ. ನನ್ನ ಮಾತಿನ ಅರ್ಥ ವಿವರಿಸುವುದು ನನ್ನ ಕರ್ತವ್ಯವಾಗಿದೆ.

ನಾನು ಜಿನ್ನಾ ಅವರ ಹೇಳಿಕೆಯನ್ನು ಓದಿದ ನಂತರ ನಾಚಿಕೆಯಿಂದ ತಲೆ ತಗ್ಗಿಸುವಂತಾಯಿತು. ಅವರು ನನ್ನ ಮಾತುಗಳನ್ನು, ನನ್ನ ಭಾವನೆಗಳನ್ನೇ ಪ್ರಯೋಗ ಮಾಡಿದಂತಿದೆ ಅದನ್ನು ಪ್ರಯೋಗಿಸುವ ಅಧಿಕಾರ ಶ್ರೀ ಜಿನ್ನಾ ಅವರಿಗಿಂತ ನನಗೆ ಇದೆ.

### ಹರಿಜನರ ಸ್ಥಾನ:

ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಮುಸಲ್ಮಾನರು ತಾವು ಹಿಂದೂಗಳಿಂದ ಶೋಷಣೆಗೆ ಒಳಗಾಗುತ್ತಾ ಬಂದಿರುವುದನ್ನು, ವಿಧವಿಧವಾಗಿ ಬಣ್ಣಿಸಬಹುದು. ಆದರೆ ಈ ಕಾಂಗ್ರೆಸ್ ರಾಜ್ಯದಲ್ಲಿ ಅಸ್ಪೃಶ್ಯರು ಎಷ್ಟು ಶೋಷಣೆಗೆ ಒಳಗಾಗಿದ್ದಾರೆ ಎಂಬ ವಿಷಯವನ್ನು ಯಾರೂ ಸಂದೇಹಿಸಲು ಸಾಧ್ಯವಿಲ್ಲ. ಅದನ್ನು ಬೇರೆ ಯಾವ ಧರ್ಮದ ಜನರೊಂದಿಗೆ ಹೋಲಿಕೆ ಮಾಡುವುದು ಕೂಡ ಅಸಾಧ್ಯ. ಶ್ರೀ ಜಿನ್ನಾ ಹಾಗು ಇತರ ಮುಸಲ್ಮಾನರು ೧೦೦ರಲ್ಲಿ ೫ ಪ್ರಕರಣಗಳಲ್ಲಿ ಮುಸಲ್ಮಾನರು ಶೋಷಣೆಗೆ ಒಳಗಾಗಿದ್ದಾರೆ ಎಂದು ಸಾಬೀತು ಪಡಿಸಲು ಸಾಧ್ಯವಾದರೇ ನಾನು ೧೦೦ ರಲ್ಲಿ ೧೦೦ ಪ್ರಕರಣಗಳಲ್ಲಿ ಹರಿಜನರು ಶೋಷಣೆಗೆ

ಒಳಪಟ್ಟಿರುವುದನ್ನು ಸಾಬೀತು ಪಡಿಸಬಲ್ಲೆ. ಆದ್ದರಿಂದ, ಕಾಂಗ್ರೆಸ್ ಸರಕಾರದ ದಮನಕಾರಿ ಆಡಳಿತದ ಬಗೆಗೆ ತನಿಖೆ ನಡೆಸಲು 'ರಾಯಲ್' ಸಮತಿಯನ್ನು ರಚಿಸುವುದನ್ನು ನಾನು ಜಿನ್ನಾ ಅವರಿಗಿಂತ ಹೆಚ್ಚಿನ ಕಾತರದಿಂದ ನಿರೀಕ್ಷಿಸುತ್ತಿದ್ದೇನೆ.

"ಇದುವರೆಗೂ ಹರಿಜನರ ಶೋಷಣೆಯನ್ನು ಮಾಡಿರುವುದು ಹಿಂದೂಗಳೇ. ಆದರೆ ನಾನು ಒಂದು ಅಂಶವನ್ನು ನನ್ನ ಹಿಂದೂ ಸ್ನೇಹಿತರಿಗೆ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಅದೇನೆಂದರೆ ಇದು ಖಂಡಿತ ಹಿಂದೂ ವಿರೋಧಿ ಚಳುವಳಿ ಅಲ್ಲ. ಇದು ಕಾಂಗ್ರೆಸ್ ವಿರೋಧಿ ಚಳುವಳಿ. ಇದು ಸಂಪೂರ್ಣವಾಗಿ ರಾಜಕೀಯ ಚಳುವಳಿ. ಒಂದು ವೇಳೆ ಕಾಂಗ್ರೆಸ್ ಮೇಲಿನ ದಾಳಿಯನ್ನು ತಮ್ಮ ಮೇಲಿನ ದಾಳಿ ಎಂದು ಹಿಂದೂಗಳು ಪರಿಗಣಿಸುವುದಾದರೇ, ಮುಂದೆ ಎದುರಾಗುವ ಸಂದರ್ಭವೂ ಅವರ ಸೃಷ್ಟಿಯೇ ಆಗಿರುತ್ತದೆ. ಅದು ಎರಡು ವಿಷಯಗಳನ್ನು ಸಾಬೀತು ಪಡಿಸುತ್ತದೆ. ಕಾಂಗ್ರೆಸ್ ಒಂದು ಹಿಂದೂ ಪಕ್ಷ ಹಾಗು ಎರಡನೆಯದಾಗಿ ಹಿಂದೂಗಳು ಕಾಂಗ್ರೆಸ್ ಪಕ್ಷದೊಡನೆ ನಿಕಟವಾಗಿ ಸೇರಿಕೊಂಡಿದ್ದಾರೆ, ಮತ್ತು ಅದನ್ನು ನಿಕಷಕ್ಕೆ ಒಡ್ಡಿ ಪರೀಕ್ಷಿಸಲು ಅವರು ಸಿದ್ಧರಿಲ್ಲ.

* * * * *

## ೨೫

## ಬುದ್ಧ ಪ್ರಾಣಿ ಬಲಿಯನ್ನು ನಿಲ್ಲಿಸಿದಾಗ, ಹಸುಗಳನ್ನು ಅವರು ಪಾವನಗೊಳಿಸಿದರು ಬೌದ್ಧ ಧರ್ಮಕ್ಕೆ ಅಂಟಿಕೊಂಡಿರುವುದಕ್ಕೆ ಅಸ್ಪೃಶ್ಯತೆ ಅವರಿಗೆ ದೊರೆತ ಶಿಕ್ಷೆ: ಬ್ರಾಹ್ಮಣರ ಅನಿಸಿಕೆ

ನಮ್ಮ ಪ್ರತಿನಿಧಿಯೊಂದಿಗೆ ಸಂಭಾಷಣೆ ಮಾಡುವ ಸಂದರ್ಭದಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷದ ಮುಖಂಡರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಅಸ್ಪೃಶ್ಯತೆಯು ಹುಟ್ಟಿಕೊಂಡ ಬಗೆಗೆ ಒಂದು ನವೀನ ವಾದವನ್ನು ಮುಂದಿಟ್ಟರು.

ಅಸ್ಪೃಶ್ಯತೆ, ನಿಜ ಹೇಳಬೇಕೆಂದರೆ ಭಾರತದಲ್ಲಿ ಮಾತ್ರವೇ ಇರುವಂತಹ ಒಂದು ಸಾಮಾಜಿಕ ವ್ಯವಸ್ಥೆ. ಪ್ರಪಂಚದ ಯಾವ ಭಾಗದಲ್ಲಿಯೂ ಇದರ ಅಸ್ತಿತ್ವವನ್ನು ನಾವು ಕಾಣುವುದಿಲ್ಲ. ಒಂದಕ್ಕಿಂತ ಹೆಚ್ಚು ಕಾರಣಗಳಿಂದ, ಇದೊಂದು ಸಮಾಜಕ್ಕೆ ಮಾರಕವಾದ ಆಚರಣೆ. ಏಕೆಂದರೆ ಇದು ಮಾನಸಿಕವಾಗಿ ಹಾಗೂ ಸಾಮಾಜಿಕವಾಗಿ ನಮ್ಮಲ್ಲಿರುವ ಒಂದು ಪ್ರಗತಿವಿರೊಧಿ ಆಚರಣೆ. ಮಾನಸಿಕವಾಗಿ ಹಾಗೂ ಸಾಮಾಜಿಕವಾದ ಅಂಶಗಳನ್ನೆಲ್ಲಾ ತುಳಿದು ಈ ಆಚರಣೆಯು ಅನುಸರಣೆಯಲ್ಲಿರಬೇಕಾದರೆ ಅದರ ಹಿಂದಿರುವ ಕಾರಣವು ಕೂಡ ಬಲವತ್ತರವಾದುದೇ ಆಗಿರಬೇಕು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಕಾರ ಅಸ್ಪೃಶ್ಯತೆಯು ಇತ್ತೀಚಿಗಷ್ಟೇ ಹುಟ್ಟಿಕೊಂಡಿರುವಂತಹ ಒಂದು ಆಚರಣೆ. ಇದು ವೇದಗಳ ಕಾಲದಲ್ಲಿ ಅಥವಾ ಅದರ ನಂತರದ ಹಲವು ಶತಮಾನಗಳಲ್ಲಿ ಅಸ್ತಿತ್ವದಲ್ಲಿ ಇದ್ದಂತೆ ಕಾಣುವುದಿಲ್ಲ. ವೇದಗಳಲ್ಲಿ ಎಲ್ಲಿಯೂ ನಮಗೆ ಅಸ್ಪೃಶ್ಯತೆಯ ಉಲ್ಲೇಖ ಕಂಡು ಬರುವುದಿಲ್ಲ. ಹಾಗಾದರೆ ಅದು ಅಸ್ತಿತ್ವಕ್ಕೆ ಬಂದದ್ದಾದರೂ ಹೇಗೆ?

### ಅರೆ ಬುಡಕಟ್ಟು ಜನಾಂಗದ ಸ್ಥಿತಿ

ಡಾ. ಬಿ.ಆರ್. ಅಂಬೇಡ್ಕರ್ ಅವರು ಕೆಲಕಾಲದ ಹಿಂದಿನ ಜೀವನವನ್ನು ಚಿತ್ರಣ ಕಟ್ಟಿಕೊಡುತ್ತಾರೆ. ಆಗ ಕೆಲವು ಜನರು ಕೃಷಿಕರ ಜೀವನಕ್ಕೆ ಒಗ್ಗಿಕೊಂಡಿದ್ದರು ಮತ್ತು ಉಳಿದವರು ಅಲೆಮಾರಿಗಳಂತೆ ತಮ್ಮ ಜಾನುವಾರುಗಳೊಂದಿಗೆ ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿದ್ದರು.

ಕೃಷಿಕರ ಜೀವನಕ್ಕೆ ಒಗ್ಗಿಕೊಳ್ಳುತ್ತಿದ್ದ ಜನರು ಕೃಷಿಭೂಮಿ ಬೆಳೆ, ಮನೆಗಳು ಮುಂತಾದ ಆಸ್ತಿಗಳ ಮಾಲೀಕತ್ವವನ್ನು ಪಡೆದಿದ್ದು. ಅವರು ಅಲೆಮಾರಿಗಳಿಗಿಂತ ಮೇಲ್ಮಟ್ಟದ ಜೀವನವನ್ನು ನಡೆಸುತ್ತಿದ್ದರು. ಆದ್ದರಿಂದ ಸ್ವಾಭಾವಿಕವಾಗಿಯೇ ತಮ್ಮ ಶಾಂತ ಜೀವನಕ್ಕೆ ಈ ಅಲೆಮಾರಿ ಜನರು ಭಂಗ ತರುವುದು ಅವರಿಗೆ ಇಷ್ಟವಿರಲಿಲ್ಲ. ಇವರಿಗೂ ಅಲೆಮಾರಿಗಳಿಗೂ ಯಾವ ತೆರನಾದ ಹೋಲಿಕೆಯೂ ಇರಲಿಲ್ಲ. ಏಕೆಂದರೆ ಅಲೆಮಾರಿಗಳಿಗೆ ಯಾವುದೇ ಆಸ್ತಿಪಾಸ್ತಿಯ ಚಿಂತೆ ಇರಲಿಲ್ಲ ಹಾಗೂ ಅವರು ಈ ಕೃಷಿಕರಿಗಿಂತ ದೃಢಕಾಯರಾಗಿದ್ದರು ಹಾಗು ಅವರ ದೇಹದಾರ್ಢ್ಯವನ್ನು ಇವರಿಗೆ ಹೋಲಿಸುವಂತೆಯೇ ಇರಲಿಲ್ಲ.

ಕೃಷಿಕರಿಗೆ ಈ ಅಲೆಮಾರಿಗಳಿಂದ ತಮ್ಮ ಭೂಮಿಯನ್ನು ಬೆಳೆಯನ್ನು ರಕ್ಷಿಸಿಕೊಳ್ಳುವ ಅಗತ್ಯವಿತ್ತು. ಇತ್ತ ಅಲೆಮಾರಿಗಳು ತಮ್ಮ ತಮ್ಮಲ್ಲೇ ಒಳಜಗಳಗಳನ್ನು ಮಾಡಿಕೊಂಡು ಬೇರೆ ಬೇರೆ ಗುಂಪುಗಳಾಗಿ ವಿಂಗಡಣೆಯಾಗಿದ್ದರು. ಆದ್ದರಿಂದ ಈ ಕೃಷಿಕಜನರು, ಯಾವ ಗುಂಪಿನ ಅಲೆಮಾರಿಗಳು ತಮ್ಮ ಒಳಜಗಳದಿಂದ ಮುಖ್ಯ ಗುಂಪಿನಿಂದ ಬೇರ್ಪಟ್ಟಿದ್ದರೋ ಅವರ ಸೇವೆಯನ್ನು ತಮ್ಮ ಭೂಮಿಯ ರಕ್ಷಣೆಗಾಗಿ ಬಳಸಿಕೊಂಡರು. ಈ ಜನರಿಗೆ ಸ್ವಲ್ಪ ಭೂಮಿ ಹಾಗು ಮನೆಗಳನ್ನು ಹಳ್ಳಿಗಳ ಹೊರವಲಯದಲ್ಲಿ ನೀಡಿದರು. ಇವರ

ಮುಖ್ಯಕಾರ್ಯವೆಂದರೆ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಾಗಿತ್ತು.

ಅಲೆಮಾರಿಗಳ ದಾಳಿಯಿಂದ ಹಳ್ಳಿಗಳನ್ನು ರಕ್ಷಿಸುವ ಕಾರ್ಯವನ್ನು ಅವರು ಯಶಸ್ವಿಯಾಗಿ ಹಲವಾರು ತಲೆಮಾರುಗಳ ಕಾಲ ನಿರ್ವಹಿಸಿದರು. ಇತ್ತ ಊರ ಹೊರಗೆ ಇರುವ ಈ ಜನರ ಹಾಗು ಊರಒಳಗೆ ಇರುವ ಕೃಷಿಕರ ಒಡನಾಟವು ಬಹಳ ಸಹಜವಾಗಿಯೇ ಇತ್ತು. ಇಲ್ಲಿ ಅಸ್ಪೃಶ್ಯತೆಯ ಸೋಂಕೇ ಇರಲಿಲ್ಲ. ಆದರೆ ಅದು ಅಸ್ತಿತ್ವಕ್ಕೆ ಬಂದಿದ್ದಾದರೂ ಹೇಗೆ?

ಅದನ್ನು ನಾವು ಕಂಡು ಹಿಡಿಯಬೇಕೆಂದರೆ, ಭಾರತದಲ್ಲಿ ಬೌದ್ಧ ಮತದ ವಿಕಾಸವನ್ನು ಗಮನಿಸಬೇಕಾಗುತ್ತದೆ.

ಡಾ.ಅಂಬೇಡ್ಕರ್ ಅವರ ಪ್ರಕಾರ, ಬೌದ್ಧಮತವು, ಯಾವುದೇ ಆಕ್ರಮಣಕಾರನೂ ಇದುವರೆಗೂ ಆಕ್ರಮಿಸಿಕೊಳ್ಳದಷ್ಟು ವೇಗವಾಗಿ ಭಾರತವನ್ನು ಆಕ್ರಮಿಸಿಕೊಂಡಿತು. ಕೆಲವೇ ತಲೆಮಾರುಗಳಲ್ಲಿ ಹಿಂಡು ಹಿಂಡು ಜನರು, ಅದರಲ್ಲಿಯೂ ವ್ಯಾಪಾರಸ್ಥ ವರ್ಗದ ಜನರು, ಬೌದ್ಧ ಮತಕ್ಕೆ ಪರಿವರ್ತನೆಯಾದರು.

ಬ್ರಾಹ್ಮಣತ್ವವು ಮರಣ ಹೊಂದುವ ಭೀತಿಗೆ ಒಳಗಾಗಿತ್ತು. ನಿಜ ಹೇಳಬೇಕೆಂದರೆ, ಬ್ರಾಹ್ಮಣರ ಹೊಂದಾದಣಿಕೆಯ ಸ್ವಭಾವ ಇಲ್ಲದೇ ಹೋಗಿದ್ದರೆ ಅದು ಅಷ್ಟು ಹೊತ್ತಿಗೆ ಅಳಸಿಯೇ ಹೋಗಿರುತ್ತಿತ್ತು. ತಮ್ಮ ಜಾತಿಯ ಉಳಿವಿಗಾಗಿ ಬ್ರಾಹ್ಮಣರು ಎಲ್ಲಾ ಸಾಮಾಜಿಕ ಹಾಗು ಧಾರ್ಮಿಕ ಆಚರಣೆಗಳನ್ನು ಸಂಪೂರ್ಣವಾಗಿ ತ್ಯಜಿಸಲು ಸಿದ್ಧರಾದರು. ಹಾಗಾದರೆ ಬ್ರಾಹ್ಮಣರು ಮಾಡಿದ್ದಾದರೂ ಏನು??

## ಸಮಾಜದಲ್ಲಿ ಬೌದ್ಧಧರ್ಮದ ಬಗೆಗಿನ ಆಕರ್ಷಣೆ

ಬುದ್ಧನ ಮೂರು ಬೋಧನೆಗಳು ಜನರನ್ನು ಆಕರ್ಷಿಸಿದ್ದವು. ಸಾಮಾಜಿಕ ಸಮಾನತೆಯ ವಿಷಯದಲ್ಲಿ ಅವನ ಬೋಧನೆ, ಸುವಾರ್ತೆ, ಚಾತುರ್ವರ್ಣ ನಿಷೇಧ ಹಾಗು ಅಹಿಂಸಾ ವಿರೋಧಿ ಧೋರಣೆ ಮತ್ತು ಧಾರ್ಮಿಕ ಆಚರಣೆಯ ಹೆಸರಿನಲ್ಲಿ ಕೊಡುವ ಬಲಿಗಳ ಖಂಡನೆ. ಅವನ ಈ ಎಲ್ಲಾ ಬೋಧನೆಗಳು ಜನರಿಗೆ ಅತ್ಯಂತ ಪ್ರಮುಖ ಆಕರ್ಷಣೆ ಆಗಿದ್ದವು ಮತ್ತು ತಮ್ಮನ್ನು ಬಡತನದ ಕೂಪಕ್ಕೆ ತಳ್ಳಿದ್ದ ಹಿಂದಿನ ವ್ಯವಸ್ಥೆಯ ಬಗೆಗೆ ಅವರಿಗೆ ತಿರಸ್ಕಾರವಿತ್ತು.

ಡಾ. ಅಂಬೇಡ್ಕರ್ ಅವರ ಪ್ರಕಾರ ಈ ಕಾಲದ ಬ್ರಾಹ್ಮಣರು ಸಸ್ಯಾಹಾರಿಗಳಾಗಿರಲೇ ಇಲ್ಲ. ಅವರು ಮಾಂಸಹಾರಿಗಳಾಗಿದ್ದರು. ದೇವರ ಹೆಸರಿನಲ್ಲಿ ಅವರು ಪ್ರಾಣಿಬಲಿಯನ್ನು ನೀಡುತ್ತಿದ್ದರು. ಆದರೆ ವಾಸ್ತವವಾಗಿ ಮಾಂಸವನ್ನು ತಿನ್ನುವ ತಮ್ಮ ಆಸೆಯನ್ನು ತಣಿಸಿಕೊಳ್ಳುವುದಕ್ಕಾಗಿ ಅವರು ಹಾಗೆ ಮಾಡುತ್ತಿದ್ದರು.

## ವೈದಿಕ ಬಲಿಗಳ ಹಿಂದಿನ ಸತ್ಯ:

ಬ್ರಾಹ್ಮಣರು ಮಾಂಸ ದಾಹ ಎಷ್ಟು ಮಿತಿಮೀರಿತ್ತು ಎಂದರೆ, ಇದರಿಂದ ಕೃಷಿಕರಿಗೆ ಬಹಳ ತೊಂದರೆ ಆಗತೊಡಗಿತ್ತು. ಕೃಷಿಕರು ಹಾಲು ಹಾಗು ಅದರ ಉತ್ಪನ್ನಗಳಿಗಾಗಿ ಹಸುಗಳನ್ನು ಅವಲಂಬಿಸಿದ್ದರು. ಆದರೆ ಯಜ್ಞಯಾಗಗಳ ಕಾರಣದಿಂದ ಇವರ ಜೀವನದ ಮೂಲಾಧಾರವಾಗಿದ ಹಸುಗಳು ಬ್ರಾಹಣರ ಮಾಂಸದ ದಾಹಕ್ಕೆ ಬಲಿಯಾಗುತ್ತಿದ್ದವು.

ಇದಕ್ಕೆ ಇಂದಿಗೂ ಕೂಡ ನಾವು ಸಾಕ್ಷ್ಯಾಧಾರಗಳನ್ನು ವೇದಗಳಲ್ಲಿ ಗಮನಿಸಬಹುದಾಗಿದೆ. ಅಲ್ಲಿ ವಿವರಣೆಯಾಗುವ ಧಾರ್ಮಿಕ ಆಚರಣೆಗಳಲ್ಲಿ ಮಾನವೀಯತೆಗೆ ಬೆಲೆ ಇರುವುದನ್ನೇ ನಾವು ಕಾಣುವುದಿಲ್ಲ. ಬುದ್ಧನ ಬೋಧನೆಗಳು ಇದಕ್ಕೆ ವಿರುದ್ಧವಾಗಿದ್ದುದರಿಂದ ಸ್ವಾಭಾವಿಕವಾಗಿಯೇ ಅದು ಕೃಷಿಕರಿಗೆ

ಅಪ್ಯಾಯಮಾನವಾಗಿತ್ತು. ಅವರಿಗೆ ಇದು ಭಾವನಾತ್ಮಕವಾಗಿ ಹಾಗು ಆರ್ಥಿಕವಾಗಿ ಎರಡೂ ನಿಟ್ಟಿನಿಂದ ಲಾಭದಾಯಕ ಎನಿಸತೊಡಗಿತು. ಆದ್ದರಿಂದ ಅವರು ಬ್ರಾಹ್ಮಣತ್ವದ ಬೋಧನೆಗಳಿಂದ ದೂರ ಸರಿಯತೊಡಗಿದ್ದರು.

ಹಾಗಾದರೇ ಬಹಳ ಜೋರಾಗಿದ್ದ ಬೌದ್ಧಧರ್ಮದ ಅಲೆಯಿಂದ ಬ್ರಾಹ್ಮಣತ್ವವು ಉಳಿಗಾಲವನ್ನು ಕಂಡದ್ದಾದರೂ ಹೇಗೆ? ಹಿಂದೂ ಧರ್ಮದ ಒಂದು ಭಾಗವಾಗಿದ್ದ ಪ್ರಾಣಿಬಲಿಯನ್ನು ಬ್ರಾಹ್ಮಣರು ನಿಲ್ಲಿಸಿಬಿಟ್ಟರು. ಇದುವರೆಗೂ ಹಸುವಿನ ಮಾಂಸವನ್ನು ತಿನ್ನುತ್ತಿದ್ದ ಜನರು, ಬುದ್ಧನನ್ನು ಮೆಟ್ಟಿನಿಲ್ಲುವ ಸಲುವಾಗಿ, ಅದನ್ನು ಪೂಜಿಸತೊಡಗಿದರು.

ಮಾಂಸಾಹಾರಿ ಬ್ರಾಹ್ಮಣ ಈಗ ಶುದ್ಧ ಸಸ್ಯಾಹಾರಿಯಾದ. ಸೋಮಪಾನವು ನಿಂತು ಹೋಯಿತು. ಹಿಂದೂ ಧರ್ಮವು ಅತ್ಯಂತ ಮಡಿವಂತಿಕೆಯ ಧರ್ಮವಾಯಿತು.

### ಕ್ಷತ್ರಿಯರೊಂದಿಗೆ ಹೊಂದಾಣಿಕೆ

ಇನ್ನು ಕ್ಷತ್ರಿಯರು ಬೌದ್ಧಧರ್ಮಕ್ಕೆ ಪರಿವರ್ತನೆ ಆಗುವುದನ್ನು ತಡೆಯುವ ಸಲುವಾಗಿ ಬ್ರಾಹ್ಮಣರು, ಅವರಿಗು ತಮ್ಮ ಸ್ಥಾನಮಾನಗಳನ್ನು ನೀಡಿ ಸಮಾನತೆಯನ್ನು ಘೋಷಿಸಿದರು. ಬೇಕಾದಷ್ಟು ಸಾಕ್ಷ್ಯಗಳು ನಮಗೆ ಈ ನಿಟ್ಟಿನಲ್ಲಿ ದೊರಕುತ್ತವೆ. ಆದರೆ ಅದರಲ್ಲಿ ಒಂದು ಪುಸ್ತಕದ ಉದಾಹರಣೆಯನ್ನು ಮಾತ್ರ ವಿಶೇಷವಾಗಿ ಅಂಬೇಡ್ಕರ್ ಅವರು ಉಲ್ಲೇಖ ಮಾಡುತ್ತಾರೆ. ಅದೇನೆಂದರೆ, ಒಬ್ಬ ಖೈದಿಯನ್ನು ಹಿಡಿದಿಡುವ ಸಲುವಾಗಿ ಪೋಲೀಸಿನವರು ಹೇಗೆ ಎರಡು ಬದಿಯಲ್ಲೂ ನಿಲ್ಲಬೇಕೋ, ಅಂತೆಯೇ ವೈಶ್ಯರು ಹಾಗು ಶೂದ್ರರು ಕೈತಪ್ಪಿ ಹೋಗುವುದನ್ನು ತಪ್ಪಿಸಲು ಬ್ರಾಹ್ಮಣರು ಹಾಗು ಕ್ಷತ್ರಿಯರು ಒಂದಾಗಬೇಕು ಎಂದು ಅದರಲ್ಲಿ ಹೇಳಲಾಗಿದೆ.

### ಹಸು ಹೇಗೆ ಪವಿತ್ರ ಸ್ಥಾನ ಪಡೆದುಕೊಂಡಿತು

ಹಸುಗಳಿಗೆ ಅತ್ಯಂತ ಪವಿತ್ರ ಸ್ಥಾನವನ್ನು ನೀಡಲಾಯಿತು. ಬಲಿಕೊಡುವ ಆಚರಣೆಗಳು ನಿಂತುಹೋದವು. ಬೌದ್ಧಧರ್ಮದ ಹಲವಾರು ಬೋಧನೆಗಳನ್ನು ಹಿಂದೂಧರ್ಮ ತನ್ನಲ್ಲಿ ಆಚರಣೆಗೆ ಅಳವಡಿಸಿಕೊಂಡಿತು. ಇದರಿಂದ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ್ದವರನ್ನು ನಿಧಾನವಾಗಿ ಹಿಂದೂ ಧರ್ಮಕ್ಕೆ ಕರೆತರಲಾಯಿತು. ಬುದ್ಧನ ಒಂದು ಅತ್ಯಂತ ಮುಖ್ಯವಾದ ಬೋಧನೆಯಾಗಿದ್ದ "ಚಾತುರ್ವರ್ಣ ನೀತಿಯ" ನಿಷೇಧ ಹಾಗು ಸಾಮಾಜಿಕ ಸಮಾನತೆಯನ್ನು ಅವರು ಒಪ್ಪಿಕೊಳ್ಳಲಿಲ್ಲ. ಅವರು ಈ ಸಮಯದಲ್ಲಿ ಕ್ಷತ್ರಿಯರನ್ನು ಹಾಗು ತಮ್ಮನ್ನು ಒಂದೇ ಸ್ಥಾನದಲ್ಲಿ ಇರಿಸಿಕೊಂಡರು. ಬ್ರಾಹ್ಮಣ ದೇವರನ್ನು ಹಿಂದಕ್ಕೆ ತಳ್ಳಿ ಕ್ಷತ್ರಿಯರ ದೇವರುಗಳ ಆರಾಧನೆಯನ್ನು ಮಾಡುವ ಮೂಲಕ ಕ್ಷತ್ರಿಯರೊಂದಿಗೆ ಹೊಂದಾಣಿಕೆ ಮಾಡಿಕೊಂಡರು.

### ಅನಿರೀಕ್ಷಿತ ಬೆಳವಣಿಗೆ

ಈ ರೀತಿ ಹೊಂದಾಣಿಕೆಯ ತಂತ್ರದಲ್ಲಿ ತೊಡಗಿಕೊಂಡ ಬ್ರಾಹ್ಮಣರಿಂದ ಬುದ್ಧ ನಿರೀಕ್ಷಿಸಿರದಿದ್ದ ಬೆಳವಣಿಗೆಗಳು ಉಂಟಾದವು. ಬುದ್ಧ ಹಸುಗಳ ಬಲಿಯನ್ನು ಸಂಪೂರ್ಣವಾಗಿ ನಿಲ್ಲಿಸಿದ. ಅನಂತರ ಪ್ರಾಣಿಗಳಿಗೆ ಪವಿತ್ರ ಸ್ಥಾನವನ್ನು ಬ್ರಾಹ್ಮಣರು ನೀಡಿದರು. ಹಿಂದೂ ಧರ್ಮವು ಹಸುವನ್ನು ಪವಿತ್ರ ಎಂದು ಪರಿಗಣಿಸಿ, ಅದರ ಬಲಿಯನ್ನು ಸಂಪೂರ್ಣ ನಿಲ್ಲಿಸಿಬಿಟ್ಟಿತು. ಅದೇ ಕ್ರಮವನ್ನು ಅಂದಿನ ಅಸ್ಪೃಶ್ಯರೂ

ಕೈಗೊಂಡರು, ಆದರೆ ಅತ್ಯಂತ ಬಡವರಾಗಿದ್ದ ಅಸ್ಪೃಶ್ಯರಿಗೆ ಇತರ ಪ್ರಾಣಿಗಳ ಮಾಂಸವನ್ನು ಕೊಳ್ಳುವ ಶಕ್ತಿ ಇರಲಿಲ್ಲ. ಆದ್ದರಿಂದ ಅವರು ಸತ್ತ ಹಸುವಿನ ಮಾಂಸದ ಭಕ್ಷಣೆಯನ್ನು ಆರಂಭಿಸಿದರು.

ಬುದ್ಧನಾಗಲೀ, ಬ್ರಾಹ್ಮಣರಾಗಲಿ ಸತ್ತ ಹಸುವಿನ ಮಾಂಸ ತಿನ್ನಬಾರದು ಎಂದು ಎಲ್ಲಿಯೂ ನಿಷೇಧಿಸಿರಲಿಲ್ಲ. ಅವರು ನಿಷೇಧ ಮಾಡಿದ್ದದ್ದು, ಕೇವಲ ಜೀವಂತ ಹಸುವಿನ ಬಲಿಯನ್ನು ಮಾತ್ರ. ಆದರೆ ಅಂದಿನ ಕಾಲದ ಅಸ್ಪೃಶ್ಯರು ಒಂದು ಘೋರ ಅಪರಾಧವನ್ನು ಎಸಗಿದರು. ಅತ್ಯಂತ ಬಡವರೂ ಹಾಗೂ ಸಾಮಾಜಿಕ ನಿಶ್ರೇಣಿಯಲ್ಲಿ ಕಟ್ಟಕಡೆಯ ಹಂತದಲ್ಲಿದ್ದ ಅವರು ಬೌದ್ಧಧರ್ಮದಲ್ಲಿ ಬಹಳ ಕಾಲದವರೆಗೆ ನೆಲೆನಿಂತರು. ಅವರನ್ನು ಅಲ್ಲಿಂದ ಹೊರತರಲು ಅತ್ಯಂತ ಬಲಯುತವಾದ ವಾದವನ್ನು ಹೇರಬೇಕಾಗಿತ್ತು. ಬೇರೆ ಎಲ್ಲಾ ವಿಧಾನಗಳೂ ವಿಫಲವಾದಾಗ, ಬಹಿಷ್ಕಾರ ಹಾಗೂ ಅಸ್ಪೃಶ್ಯತೆಯನ್ನು ಅವರ ಮೇಲೆ ಹೇರಲಾಯಿತು.

ಅವರ ಸತ್ತ ಹಸುವಿನ ಮಾಂಸದ ಭಕ್ಷಣೆಯೇ ಅವರ ಶೋಷಣೆಗೆ ಮೂಲವಾಯಿತು. ಈ ವಿಷಯವು ಹಿಂದೂಗಳ ಸಹಾಯಕ್ಕೆ ಬಂದಿತ್ತು. ಇದು ಬ್ರಾಹ್ಮಣರಿಗೆ ಅತ್ಯಂತ ಹೀನಾಯವಾದ ವಿಷಯ. ಆದ್ದರಿಂದ ಈ ವಿಷಯವನ್ನು ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಳ್ಳಲು ಬ್ರಾಹ್ಮಣರಿಗೆ ಸುಲಭವಾಯಿತು. ಇಡೀ ವರ್ಗದ ಮೇಲೆ ಅಸ್ಪೃಶ್ಯತೆಯನ್ನು ಹೇರಲಾಯಿತು. ಇತರರು ಬೌದ್ಧಧರ್ಮವನ್ನು ತೊರೆದು ಹೋದಾಗ ಈ ವರ್ಗ ಅದಕ್ಕೆ ಅಂಟಿಕೊಂಡದ್ದಕ್ಕಾಗಿ ಅದು ಬಹಳ ದೊಡ್ಡ ಬೆಲೆಯನ್ನೇ ತೆರುವಂತಾಯಿತು. ಆದ್ದರಿಂದ ಇಂದಿಗೂ ಅಸ್ಪೃಶ್ಯತೆ ಮುಂದುವರೆದುಕೊಂಡೇ ಬಂದಿದೆ. ಎಲ್ಲರೂ ಸುಶಿಕ್ಷಿತರಾಗಿದ್ದು, ಆಧುನಿಕ ವಿಷಯಗಳು, ಸ್ವಾತಂತ್ರ್ಯ ಹಾಗು ಸಾಮಾಜಿಕ ಸಮಾನತೆಯನ್ನು ಕುರಿತು ಚಿಂತನೆಗಳ ಹೊರತೂ, ಅಸ್ಪೃಶ್ಯತೆಯು ಮುಂದುವರಿದುಕೊಂಡೇ ಬರುತ್ತಿದೆ.[೧]

* * * * *

೧. Bombay Chronide dated 24th February 1940

## ೨೬
## ಮಹಾರ್ ಜನಾಂಗದವರು ಕೆಚ್ಚದೆಯ ಜನರು:

ಮಹಾರ್ ಜನಾಂಗದವರು ಯೋಧ ವರ್ಗಕ್ಕೆ ಸೇರಿದ ಜನರು. ಈಸ್ಟ್ ಇಂಡಿಯಾ ಕಂಪನಿಯವರು ಪೇಶ್ವಾ ಸೇನೆಯ ವಿರುದ್ಧ ಹೋರಾಡಿ ವಿಜಯಿಯಾಗಿದ್ದರು. ಆ ಸೇನೆಯಲ್ಲಿ ಇದ್ದಂತಹ ಬಹಳಷ್ಟು ಜನರು ಮಹಾರ್ ಜನಾಂಗದವರು. ಬ್ರಿಟಿಷರು ಹಾಗು ಪೇಶ್ವೆಗಳ ನಡುವಿನ ಕಡೆಯ ಯುದ್ಧವು ಪೂನಾ ಜಿಲ್ಲೆಯ ಕೋರೆಗಾಂವ್‌ನಲ್ಲಿ ಜರುಗಿತ್ತು. ಈ ಯುದ್ಧದಲ್ಲಿನ ವಿಜಯವನ್ನು ಆಚರಿಸಲು ಬ್ರಿಟಿಷರು ಅಲ್ಲಿ ಒಂದು ಎತ್ತರದ ಸ್ಥಂಭ ಸ್ಥಾಪನೆ ಮಾಡಿದ್ದಾರೆ. ಈ ಕಂಬದ ಮೇಲೆ ಬ್ರಿಟಿಷರ ಪರವಾಗಿ ಹೋರಾಡಿ ಮಡಿದ ಜನರ ಹೆಸರುಗಳನ್ನು ಕೆತ್ತಲಾಗಿದೆ. ಅದರಲ್ಲಿ ಇರುವ ೧೦ ಹೆಸರಲ್ಲಿ ೯ ಹೆಸರು ಮಹಾರರದ್ದಾಗಿದೆ. ೧೮೯೨ರ ವರೆಗೂ ಮಹಾರರನ್ನು ಸೇನೆಗೆ ಸೇರ್ಪಡೆ ಮಾಡಿಕೊಳ್ಳುವ ಕಾರ್ಯವು ಮುಂದುವರೆಯಿತು. ಎಲ್ಲಾ ಯುದ್ಧಗಳಲ್ಲಿಯೂ ಮಹಾರರು ತಮ್ಮ ಪರಾಕ್ರಮವನ್ನು ಮೆರೆದಿದ್ದಾರೆ. ೧೮೯೨ರಲ್ಲಿ ಇದಕ್ಕಿದ್ದಂತೆ ಸೇನೆಗೆ ಮಹಾರರ ಸೇರ್ಪಡೆಯ ಕಾರ್ಯವು ಸ್ಥಗಿತವಾಯಿತು. ಇದನ್ನು ಕೃತಘ್ನತೆಯ ನಡೆಯೆಂದು ಭಾವಿಸಿದ ಮಹಾರ್ ಜನಾಂಗದವರು ಅಂದಿನಿಂದಲೂ ಬ್ರಿಟಿಷರ ವಿರುದ್ಧ ಹರಿಹಾಯುತ್ತ ಬಂದಿದ್ದಾರೆ. ಇದು ಖಂಡಿತವಾಗಿಯೂ ಅಸಮಂಜಸವಾದ ನಡೆಯಾಗಿದೆ. ಏಕೆಂದರೆ ಅಸ್ಪೃಶ್ಯರ ಬೆಂಬಲ ಇರದೇ ಹೋಗಿದ್ದರೆ ಖಂಡಿತವಾಗಿಯೂ ಬ್ರಿಟಿಷರಿಗೆ ಭಾರತವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಅಸಾಧ್ಯವಾಗಿರುತ್ತಿತ್ತು.

ಸೇನೆಗೆ ತಮ್ಮ ಸೇರ್ಪಡೆಯನ್ನು ನಿಲ್ಲಿಸಿದ್ದನ್ನು ಖಂಡಿಸುತ್ತಾ, ದೊಡ್ಡ ಪ್ರತಿಭಟನೆಯನ್ನೇ ಮಹಾರರು ಮಾಡಿದರು. ಆದರೆ ಇದೇನೂ ಪಲಪ್ರದವಾಗಲಿಲ್ಲ. ೧೯೧೪ರ ಯುದ್ಧದ ಸಮಯದಲ್ಲಿ, ಯುದ್ಧಕ್ಕೆ ಸೈನಿಕರ ಅಗತ್ಯ ಬಹಳ ಇತ್ತಾದ್ದರಿಂದ, ಬ್ರಿಟಿಷರು ಮಹಾರರ ಮೇಲೆ ಹೇರಿದ್ದ ನಿಷೇಧವನ್ನು ತೆಗೆದು ಹಾಕಿದರು. ಅದು ಕೂಡ, ಯುದ್ಧದ ಕಟ್ಟಕಡೆಯ ಹಂತದಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಯಿತಾದ್ದರಿಂದ, ಮಹಾರರಿಗೆ ತಮ್ಮ ಸಾಮರ್ಥ್ಯವನ್ನು ಪ್ರಕಟಪಡಿಸುವ ಅವಕಾಶ ಒದಗಿಬರಲಿಲ್ಲ. ಈ ಸೇನೆಯನ್ನು ಪಶ್ಚಿಮೋತ್ತರ ಭಾಗವಾದ ವಜ್ಹೀರಿಸ್ಥಾನದ ಬಳಿ ಇರಿಸಲಾಗಿತ್ತು. ಆ ಸ್ಥಳದಲ್ಲಿ ನಿಂತಿದ್ದ ಎಲ್ಲಾ ಸೇನಾ ತುಕಡಿಗಳು ಬಂದೂಕುಗಳು ಹಾಗು ಶಸ್ತ್ರಾಸ್ತ್ರಗಳನ್ನು ಪಠಾಣರಿಗೆ ಕಳೆದುಕೊಂಡಿತ್ತು. ಪಠಾಣರು ತಮ್ಮ ಆಯುಧಗಳ ಆವಶ್ಯಕತೆಗಾಗಿ ದಾಳಿಮಾಡುತ್ತಿದ್ದರು. ಆದರೆ ಮಹಾರರ ಸೇನೆಯಿಂದ ಒಂದೇ ಒಂದು ಬಂದೂಕನ್ನು ಕೂಡ ಅವರು ಕಸಿದುಕೊಳ್ಳಲು ಸಾಧ್ಯವಾಗಲಿಲ್ಲ. ಇದರಿಂದ ಬ್ರಿಟಿಷರ ಸರ್ಕಾರವು ಸಂತಸಗೊಂಡಿದೆ ಮತ್ತು ಮತ್ತಷ್ಟು ಮಹಾರರನ್ನು ಸೇನೆಗೆ ಸೇರ್ಪಡೆ ಮಾಡಿಕೊಳ್ಳಲಿದೆ ಎಂಬ ನಿರೀಕ್ಷೆಯಲ್ಲಿ ಮಹಾರರು ಇದ್ದರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಬ್ರಿಟಿಷರ ಸರ್ಕಾರ ಆರ್ಥಿಕ ಕಾರಣವನ್ನು ನೀಡುತ್ತಾ ಮಹಾರರ ಸೇನೆಯನ್ನೇ ನಿಷ್ಕ್ರಿಯಗೊಳಿಸಿಬಿಟ್ಟಿತು. ಇದರಿಂದ ಮಹಾರ್ ಜನಾಂಗದವರ ಮನದಲ್ಲಿ ಅತ್ಯಂತ ಕಹಿ ಭಾವನೆ ಮೂಡಿತು. ಪ್ರಸಕ್ತ ಯುದ್ಧ ಎದುರಾದಾಗ ಮಹಾರರು ತಮಗೆ ಇದೀಗ ತಮ್ಮ ಸಾಮರ್ಥ್ಯವನ್ನು ತೋರ್ಪಡಿಸುವ ಕಾಲ ಬಂದಿದೆ ಎಂದುಕೊಂಡರು. ಆದರೆ ಯುದ್ಧದ ಮೊದಲ ಹಂತಗಳಲ್ಲಿ ಬ್ರಿಟಿಷರ ಸರ್ಕಾರದ ಕ್ರಮವು ಇವರ ಗಾಯದ ಮೇಲೆ ಉಪ್ಪನ್ನು ಸವರಿತು. ಮಹಾರ್ ಜನಾಂಗದವರನ್ನು ಕೇವಲ ಕೆಳಮಟ್ಟದ ಕಾರ್ಮಿಕರಾಗಿ ಸೇನೆಯಲ್ಲಿ ಸೇರ್ಪಡೆ ಮಾಡಿಕೊಳ್ಳಲಾಗುತ್ತಿತ್ತು. ಒಳ್ಳೆಯ ದರ್ಜೆಯ ಅಧಿಕಾರಿಗಳಾಗಿ ಅವರನ್ನು ಸೇರ್ಪಡೆ ಮಾಡಿಕೊಳ್ಳುತ್ತಿರಲಿಲ್ಲ. ಆದರೆ ಹೋರಾಟದ

ದರ್ಜೆಯ ಅಧಿಕಾರಗಳಿಗಿಂತ ಕೆಳ ಹಂತದಲ್ಲಿ ಇರುವುದು ಸೇನೆಯಲ್ಲಿ ಕಡಿಮೆ ಅಪಾಯಕಾರಿ ಎಂದು ಪರಿಗಣಿಸಲಾಗುತ್ತಿತ್ತು. ಆದರೆ ಮಹಾರ್ ಜನಾಂಗದವರಿಗೆ ಹೋರಾಟದ ದರ್ಜೆಯೇ ಬೇಕಾಗಿತ್ತು.

ಒಂದು ಅತ್ಯಂತ ಕೆಟ್ಟ ಕ್ರಮವನ್ನು ಬ್ರಿಟಿಷರ ಸರ್ಕಾರ ಭಾರತದಲ್ಲಿ ಜಾರಿಯಲ್ಲಿ ಇಟ್ಟಿತ್ತು. ಅದೆಂದರೆ ಯುದ್ಧೋತ್ಸಾಹಿ ವರ್ಗ ಹಾಗು ಇತರ ವರ್ಗಗಳನ್ನು ತನ್ನ ಸೇನೆಯಲ್ಲಿ ಪ್ರತ್ಯೇಕವಾಗಿ ಇಟ್ಟಿರುವಿಕೆ. ಇದಕ್ಕಿಂತ ಕೆಟ್ಟ ಕ್ರಮ ಮತ್ತೆ ಯಾವುದೂ ಇರಲು ಸಾಧ್ಯವಿರಲಿಲ್ಲ. ಇಂತಹ ಒಂದು ಕ್ರಮವನ್ನು ಕೈಬಿಡಬೇಕೆಂಬ ಅರಿವನ್ನು ಬ್ರಿಟಿಷರ ಸರ್ಕಾರಕ್ಕೆ ಮೂಡಿಸಲು ಯುದ್ಧವು ಅಗತ್ಯವಾಗಿತ್ತು. ಎಂಬುದು ಅತ್ಯಂತ ದುಃಖಕರವಾದ ಸಂಗತಿ. ಬ್ರಿಟಿಷ್ ಸರ್ಕಾರವು ಮಹಾರ್ ಸೈನಿಕರ ಒಂದು ತುಕಡಿಯನ್ನು ಸಜ್ಜುಗೊಳಿಸುವ ಕ್ರಿಯೆಗೆ ಮುಂದಾಯಿತು. ಇದರ ಶ್ರೇಯಸ್ಸು ಗೌರವಾನ್ವಿತ ಬೊಂಬಾಯಿಯ ರಾಜ್ಯಪಾಲರಿಗೆ ಸಲ್ಲಬೇಕು. ನಾನು ಅವರೆದುರು ಉಲ್ಲೇಖಿಸಿದಾಗ ಅವರು ಅದನ್ನು ಕೇಂದ್ರ ಸರ್ಕಾರದೊಂದಿಗೆ ಪ್ರಸ್ತಾಪಿಸಿ, ಅದನ್ನು ಯಶಸ್ವಿಯಾಗಿ ಪರಿಹರಿಸಿದರು. ತಮ್ಮ ಹಾಗೂ ದೇಶದ ಒಳಿತಿಗಾಗಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮಹರ್ ಜನಂಗದವರಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲದೇ ಮಹರ್ ಜನಾಂಗದವರ ಮೇಲೆ ನಂಬಿಕೆ ಇಡಬೇಕು ಮತ್ತು ಯುದ್ಧದ ನಂತರ ಅವರನ್ನು ಸೇನೆಯಿಂದ ತೆಗೆದುಹಾಕಬಾರದು ಎಂದು ಬ್ರಿಟಿಷ್ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಬೊಂಬಾಯಿ ಡಾ.ಬಿ.ಆರ್. ಅಂಬೇಡ್ಕರ್

* * * * *

## ೨೭

## ಕೃಷಿಕ ವತನದಾರ ಮಹಾರರು, ಮಾಂಗರು ಇತ್ಯಾದಿ ಜನಾಂಗದವರ ತೊಂದರೆಗಳಿಗೆ ಸಂಬಂಧಿಸಿದ ಅಹವಾಲು:

ಬೊಂಬಾಯಿ ಸರ್ಕಾರವು ಮಹರ್‌ವತನದಾರರ ಮೇಲೆ ಅಧಿಕ ತೆರಿಗೆಯನ್ನು ವಿಧಿಸಿತ್ತು. ಈ ಸಮಸ್ಯೆಯ ವಿರುದ್ಧ ೧೯೨೭ರಿಂದಲೂ ಡಾ.ಅಂಬೇಡ್ಕರ್ ಅವರು ಹೋರಾಡುತ್ತಲೇ ಬಂದಿದ್ದಾರೆ. ಇದೀಗ ಊಳಿಗಮಾನ್ಯ ಪದ್ಧತಿಯಿಂದ ಬಡವರನ್ನು ಬಿಡುಗಡೆ ಮಾಡುವ ಬದಲು ಅಧಿಕ ತೆರಿಗೆಯನ್ನು ವಿಧಿಸಿ, ಅವರ ಗಾಯದ ಮೇಲೆ ಉಪ್ಪನ್ನು ಸವರಿದೆ. ಇದರ ಸಲುವಾಗಿ ಮಹಾರಾಷ್ಟ್ರ ಹಾಗು ಕರ್ನಾಟಕದ ಮಹಾರರು, ಮಾಂಗರು ಹಾಗು ವೇದಿಯರು ಅಹ್ಮದ್ ನಗರ ಜಿಲ್ಲೆಯ ಹಾರೇಗಾಂವ್ ಎಂಬ ಹಳ್ಳಿಯಲ್ಲಿ ೧೯೩೯ರ ಡಿಸೆಂಬರ್ ತಿಂಗಳಿನಲ್ಲಿ ತಮ್ಮ ಕಷ್ಟಗಳಿಗೆ ದನಿಯನ್ನು ಕೊಡಲು ಡಾ.ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಸಭೆಸೇರಿದರು.[೨]

೧೯೩೯ರ ಡಿಸೆಂಬರ ೧೬ರಂದು ೨೦,೦೦೦ ಜನರ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ, ಡಾ.ಅಂಬೇಡ್ಕರ್ ಅವರು ಮಾಂಗರು, ಮಹಾರರು ಹಾಗು ವೇಧಿಯರಿಗೆ ತಾವು ಅವರ ಸಮಸ್ಯೆಯನ್ನು ಸರ್ಕಾರದ ಎದುರಿಗೆ ಇರಿಸುವ ಭರವಸೆ ನೀಡಿದರು. ಅಂತೆಯೇ ಈ ಅಹವಾಲನ್ನು ಸಿದ್ಧಮಾಡಿ ೧೯೪೧ರ ಜುಲೈ ೧೪ರಂದು ಸರ್ಕಾರದ ಎದುರು ಇರಿಸಿದರು. ಅದನ್ನು ಈ ಕೆಳಗೆ ನೀಡಲಾಗಿದೆ:– ಸಂಪಾದಕರು.

ಇವರಿಗೆ,

ಗೌರವಾನ್ವಿತ ಮಹಾಪ್ರಭುಗಳಾದ ಸರ್ ರೋಜರ್ ಲಮ್ಲೇ
G.C.S/O/E/ T.D, ಬೊಂಬಾಯಿ ರಾಜ್ಯಪಾಲರು

ಗೌರವಾನ್ವಿತ ರಾಜ್ಯಪಾಲರ ಗಮನಕ್ಕೆ

ನಾನು ಈ ಕೆಳಗಿನ ದೂರನ್ನು ಕೃಷಿಕ ಮಹಾರರು, ಮಾಂಗರು ಹಾಗು ವೇಧಿಯರ ಪರವಾಗಿ, ಅವರೆಲ್ಲರ ಪ್ರತಿನಿಧಿಯಾಗಿ ನಿಮ್ಮೆದುರು ಇರಿಸುತ್ತಿದ್ದೇನೆ. ಇವರೆಲ್ಲರನ್ನೂ ಕೀಳುಮಟ್ಟದ ಹಳ್ಳಿಯ ಕೆಲಸಗಾರರಂತೆ ನೋಡಲಾಗುತ್ತಿದೆ, ತಮ್ಮ ರಾಜ್ಯದಲ್ಲಿ ದಯವಿಟ್ಟು ಈ ನಿಟ್ಟಿನಲ್ಲಿ ಮಹಾಪ್ರಭುಗಳು ತಮ್ಮ ಗಮನವನ್ನು ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ವಿನಂತಿಸುವೆ.

೧. ತಮ್ಮ ಪ್ರಾಂತದಲ್ಲಿ ಕೀಳುಮಟ್ಟದ ಹಳ್ಳಿಯ ಕೆಲಸಗಾರರಂತೆ ನೋಡಲ್ಪಡುತ್ತಿರುವ ವತನದಾರ ಮಹಾರರು, ಮಾಂಗರು ಮತ್ತು ವೇಧಿಯರ ಪರವಾಗಿ ನಾನು ಈ ಅಹವಾಲನ್ನು ಅವಗಾಹನೆಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ ನಿಮ್ಮ ಮುಂದೆ ಇರಿಸುತ್ತಿದ್ದೇನೆ.
    (i) ಅವರ ಸಂಬಳದಲ್ಲಿ ಗಮನಾರ್ಹ ಇಳಿಕೆ ಹಾಗು
    (ii) ಅವರ ಕೆಲಸದಲ್ಲಿ ಬಹಳಷ್ಟು ಹೆಚ್ಚಳ

೨. ಅವರಿಗೆ ದೊರೆಯುತ್ತಿದ್ದ ಸಂಬಳಕ್ಕೆ ಸಂಬಂಧಿಸಿದಂತೆ, ಈ ಹೊಸ ನೀತಿಯು, ಇದುವರೆಗೂ ಅವರಿಗೆ ದೊರೆಯುತ್ತಿದ್ದ ಭತ್ಯೆಯು ಅತ್ಯಧಿಕ ಎಂದು ಪರಿಗಣಿಸಿ. ಇದನ್ನು ಕಡಿತಗೊಳ್ಳಿಸಬೇಕು ಎಂದು ಹೇಳುತ್ತದೆ. ಇದನ್ನು ಇದುವರೆಗೆ ತೆರಿಗೆ ಇರದಿದ್ದ ಇನಾಮು ಭೂಮಿಯ ಮೇಲೆ ತೆರಿಗೆ ವಿಧಿಸುವುದು ಮತ್ತು ಈಗಾಗಲೆ ತೆರಿಗೆ ವಿಧಿಸಲ್ಪಟ್ಟಿದ್ದರೆ ಅದನ್ನು ಹೆಚ್ಚಿಸುವುದು.

೩. ಅವರ ಕರ್ತವ್ಯಕ್ಕೆ ಸಂಬಂಧಿಸಿದಂತೆ ಬೊಂಬಾಯಿ ಸರಕಾರದ ಕಂದಾಯ ಇಲಾಖೆಯು ೧೯೩೮ರ ಸೆಪ್ಟೆಂಬರ್ ೧೩ರಂದು ಹೊರಡಿಸಿದ ೭೪೨೦/೩೩ನೆಯ ನಿರ್ಣಯದ ಪ್ರಕಾರ ಮಹರರು, ಮಾಂಗರು, ವೇಧಿಯರು ೧೯ನೆಯ ಠರಾವಿನಲ್ಲಿ ನಮೂದಿಸಿರುವ ಎಲ್ಲಾ ಕರ್ತವ್ಯಗಳನ್ನೂ ನಿರ್ವಹಿಸಬೇಕು ಎಂದು ಆದೇಶಿಸಿದೆ.

೪. ಈ ಹೊಸ ನೀತಿಯ ವಿರುದ್ಧ ಪ್ರತಿಭಟಿಸಲು ಮಹಾರರು, ಮಾಂಗರು ಹಾಗು ವೇಧಿಯರ ಪ್ರತಿಭಟನೆಯ ಸಮಾವೇಶವು ೧೯೩೯ರ ನವೆಂಬರ್ ಮತ್ತು ೧೬ರಂದು ಅಹ್ಮದ್‌ನಗರ ಜಿಲ್ಲೆಯ ಹಾರೇಗಾಂವ್‌ನಲ್ಲಿ ಜರುಗಿತು. ಇದಕ್ಕೆ ನಾನೇ ಅಧ್ಯಕ್ಷತೆಯನ್ನು ವಹಿಸಿದ್ದೆ. ಈ ಸಮಾವೇಶದಲ್ಲಿ ಕೆಲ ಠರಾವುಗಳನ್ನು ಅಂಗೀಕರಿಸಲಾಯಿತು. ಈ ಠರಾವುಗಳನ್ನು ತಮ್ಮ ಅವಗಾಹನೆಗಾಗಿ ಹಾಗೂ ಸರ್ಕಾರಕ್ಕೆ ಸೂಕ್ತಕ್ರಮವನ್ನು ತೆಗೆದುಕೊಳ್ಳುವಂತೆ ಆದೇಶಿಸುತ್ತೀರೆಂಬ ನಂಬಿಕೆಯಿಂದ, ಕಳುಹಿಸಿಕೊಡಲಾಗಿತ್ತು. ತಮಗೆ ಸುಲಭವಾಗಿ ಸಿಗಲಿ ಎಂಬ ಉದ್ದೇಶದಿಂದ ಆ ಠರಾವುಗಳ ಪ್ರತಿಯನ್ನು ಒಂದನೆಯ ಅನುಬಂಧವಾಗಿ ಲಗತ್ತಿಸಿದ್ದೇನೆ.

೫. ಈ ಪ್ರಸ್ತಾವನೆಗಳನ್ನು ೭ನೆಯ ಜೂನ್ ೧೯೪೦ ಜರುಗಿದ ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ವಿಧಾನ ಸಭೆಯ ಸದಸ್ಯ ಶ್ರೀ B.K. ಗಾಯಕ್‌ವಾಡ್ ಅವರು ಹಿಂದುಳಿದ ವರ್ಗಗಳ ಮಂಡಲಿಯಲ್ಲಿ ೧೯೪೦ರ ಜೂನ್ ೭ರಂದು ಮಂಡಿಸಿದ್ದರು. ಆ ಸಭೆಯ ನಡಾವಳಿಯನ್ನು ತಮ್ಮ ಗಮನಕ್ಕೆ ತರುವ ಉದ್ದೇಶದಿಂದ ಅದನ್ನು ಅನುಬಂಧ II ರಲ್ಲಿ ಸೇರ್ಪಡೆ ಮಾಡಿದ್ದೇನೆ.

೬. ಅತ್ಯಂತ ಗೌರವ ಭಾವನೆಯಿಂದ ಒಂದು ವಿಷಯವನ್ನು ನಾನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಈ ಮೇಲಿನ ಯಾವ ಪ್ರಸ್ತಾವನೆಗಳಿಗೂ ಸರ್ಕಾರ ಈವರೆಗೆ ಸೂಕ್ತವಾಗಿ ಸ್ಪಂದಿಸಿಲ್ಲ. ಈ ಪ್ರಸ್ತಾವನೆಗಳನ್ನು ನಾನು ಸರ್ಕಾರದ ಮುಂದೆ ಇರಿಸಿ ಒಂದೂವರೆ ವರ್ಷವೇ ಕಳೆದು ಹೋಗಿದೆ. ಇದುವರೆಗೂ ನೀತಿಯಲ್ಲಿ ಸರ್ಕಾರವು ಬದಲಾವಣೆಯನ್ನು ತಂದಿಲ್ಲ. ಭೂಮಿಯ ಮೇಲೆ ತೆರಿಗೆ ವಿಧಿಸುವುದಕ್ಕೆ ಸಂಬಂಧಿಸಿದಂತೆ ಅಥವಾ ಈ ಕೆಳವರ್ಗದವರ ಕರ್ತವ್ಯಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಧಾರವನ್ನೂ ಸರ್ಕಾರ ಕೈಗೊಂಡಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅಧಿಕ ತೆರಿಗೆಯನ್ನು ಅತ್ಯಂತ ಕ್ರಮಬದ್ಧವಾಗಿ ವಸೂಲಿಮಾಡಲಾಗುತ್ತಿದೆ. ತೆರಿಗೆಯನ್ನು ನೀಡಲಾಗದಿದ್ದವರ ಮನೆಯ ಪಾತ್ರೆ ಪಡಗಗಳನ್ನೆಲ್ಲಾ ಜಪ್ತಿ ಮಾಡಲಾಗುತ್ತಿದೆ. ಇದ್ದರಿಂದ ಈ ಬಡ ಕುಟುಂಬಗಳು ಈಗ ಬೀದಿಗೆ ಬೀಳುವ ಹಾಗಾಗಿದೆ.

ಈ ಮೇಲಿನ ಕಾರಣಕ್ಕಾಗಿ ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ವಿಷಯ ಕುರಿತು ಮಹಾಪ್ರಭುಗಳು ಅತ್ಯಂತ ಸೂಕ್ತವಾದ, ದಯಾಪರವಾದ ಹಾಗು ಸಹಾನುಭೂತಿಯ ನಿರ್ಧಾರ ಕೈಗೊಳ್ಳುವಿರಿ ಎಂಬ ನಿರೀಕ್ಷೆ ನಮಗಿದೆ. ಬಹಳ ಕಾಲದಿಂದ ಇರುವ ಈ ಕೆಳಮಟ್ಟದ ಕಾರ್ಮಿಕರ ಸಮಸ್ಯೆಯನ್ನು ತಾವು ಪರಿಹರಿಸುವಿರಿ ಎಂಬ ಭಾವನೆ ನಮಗಿದೆ.

---

ಇಲ್ಲಿ ನಮೂದಿಸಿರುವ ತಿಂಗಳನ್ನು ಡಿಸೆಂಬರ್ ಎಂದು ಓದಿಕೊಳ್ಳಬೇಕು : ಜನತಾ: ೧೯೩೯ರ ಡಿಸೆಂಬರ್ ೯ ಮತ್ತು ೨೩.

## I. ಭತ್ಯೆಯಲ್ಲಿ ಕಡಿತ

೭. ಮೊದಲು 'ಜುಡಿ' ಎಂಬ ತೆರಿಗೆಯ ವಿಧಿಸುವಿಕೆಯ ಪ್ರಸ್ತಾಪವನ್ನು ನಾನು ಮಾಡಬಯಸುವೆ. ಪ್ರಕೃತ ಈ ನೀತಿಯನ್ನು ಮಹಾರ್ ಜನಾಂಗದವರಿಗೆ ದೊರೆತಿರುವ ಇನಾಂ ಭೂಮಿಗೆ ಸಂಬಂಧಿಸಿದಂತೆ ಮಾತ್ರವೇ ಜಾರಿಗೊಳಿಸಲಾಗಿದೆ. ಆದರೆ ಕಾಲಕ್ರಮೇಣ ಇದು ಬೇರೆಯವರಿಗೂ ವಿಸ್ತರಣೆ ಆಗಬಹುದು. ಇನ್ನು 'ಇನಾಂ' ರೂಪದಲ್ಲಿ ದೊರೆತಿರುವ ಭೂಮಿಗೆ ಈ ತೆರಿಗೆ ವಿಧಿಸಲ್ಪಡುತ್ತಿರುವುದಕ್ಕೆ ಸರಿಯಾದ ಕಾರಣ ನನಗೆ ತಿಳಿದಿಲ್ಲ. ಏತಕ್ಕೆ ಮಹಾರ್ ಜನಾಂಗದವರ ಭತ್ಯೆ ಕಡಿತ ಮಾಡಬೇಕು ಎಂದು ಸರ್ಕಾರ ಆದೇಶ ನೀಡಿದೆಯೋ ತಿಳಿದಿಲ್ಲ. ಆದರೆ ಎರಡು ಕಾರಣಗಳು ಇರಬಹುದು ಎಂದು ತಿಳಿದುಬಂದಿದೆ.

೮. 'ಜುಡಿ' ತೆರಿಗೆಯನ್ನು ಹೆಚ್ಚಳ ಮಾಡಿರುವುದಕ್ಕೆ ಕಾರ್ಯನಿರ್ವಹಿಸುತ್ತಿರುವ ಮಹಾರ್ ಜನಾಂಗದವರ ಸಂಖ್ಯೆಯು ಕಡಿಮೆಯಾಗಿರುವುದೇ ಕಾರಣ ಎಂದು ಸರ್ಕಾರ ಸಮರ್ಥನೆ ನೀಡುತ್ತದೆ. 'ಜುಡಿ' ತೆರಿಗೆಯ ವಿಧಿಸುವಿಕೆಯಿಂದ ಮಹಾರರ ಭತ್ಯೆಯ ಕಡಿತವಾಗಿ ಇದರಿಂದ ಇವರ ಜನಾಂಗದವರು ಕಡಿಮೆ ಆಗಿರುವುದೇ ಕಾರಣ ಎಂದೂ ಸಮರ್ಥಿಸಿಕೊಳ್ಳಲಾಗುತ್ತಿದೆ.

೯. ಮೊದಲಿಗೆ ನಾನು ಈ ಸರ್ಕಾರದ ಕಾರಣದ ಹಿಂದಿರುವ ಆಭ್ಯಾಸಗಳನ್ನು ಮಹಾಪ್ರಭುಗಳ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ನಿಜಾಂಶ ಎಂದರೆ ಎಲ್ಲಿಯೂ ಹಳ್ಳಿಗಳಲ್ಲಿ ಕೂಡ, ಕಾರ್ಯ ನಿರ್ವಹಿಸುತ್ತಿರುವ ಮಹಾರರ ಸಂಖ್ಯೆಯಲ್ಲಿ ಕಡಿತವಂತೂ ಆಗಿಯೇ ಇಲ್ಲ. ಇದು ಮೊದಲಿನಷ್ಟೇ ಇದೆ. ಆಗಿರುವುದು ಏನೆಂದರೆ ವತನದ ದಾಖಲೆಗಳನ್ನು ಸರ್ಕಾರದ ಅಗತ್ಯಕ್ಕೆ ತಕ್ಕಂತೆ ತಿದ್ದಲಾಗಿದೆ. ಒಂದು ಸಮಯದಲ್ಲಿ ಪ್ರತಿಯೊಂದು ಹಳ್ಳಿಯ ಕೃಷಿಯ ದಾಖಲೆಯಲ್ಲಿ ಮಹಾರರ ಸಂಖ್ಯೆ ಹೆಚ್ಚಾಗಿಯೇ ತೋರಿಸಲಾಗಿತ್ತು. ಇದಕ್ಕೆ ಮಹಾರ್ ಜನಾಂಗದವರು ಎರಡು ಕಾರಣಗಳಿಂದ ವಿರೋಧ ವ್ಯಕ್ತಪಡಿಸಲಿಲ್ಲ. ಏಕೆಂದರೆ ದಾಖಲೆಯಲ್ಲಿ ತೋರ್ಪಡಿಸಿದ್ದ ಮಹಾರರ ಸಂಖ್ಯೆ ಅಷ್ಟೇನೂ ಹೆಚ್ಚಿರಲಿಲ್ಲ. ವಾಸ್ತವದಲ್ಲಿ ಅದಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿ ಮಹಾರರು ಇದ್ದರು. ಇನ್ನು ದಾಖಲೆಯಲ್ಲಿ ಮಹಾರರ ಹೆಸರು ಸೇರ್ಪಡೆ ಆಗುವುದು ಇವರಿಗೆ ಲಾಭದಾಯಕವೆ ಆಗಿತ್ತು ಏಕೆಂದರೆ; ಆತ ಒಬ್ಬ ಕೃಷಿಕನೆಂದು ದಾಖಲೆಯಾಗುತ್ತಿದ್ದ. ಇದರಿಂದ ಆತನಿಗೆ ವತನದ ಕಛೇರಿ ಹಾಗೂ ವತನದ ಆಸ್ತಿ ದೊರೆಯುತ್ತಿತ್ತು. ಮಹಾರರಲ್ಲಿನ ಆತ್ಮಗೌರವ ಬೆಳೆದಂತೆ ಅದು ಮಹಾರರ ಹಾಗೂ ಹಳ್ಳಿಯವರ ನಡುವಿನ ವೈಮನಸ್ಯಕ್ಕೂ ಎಡೆ ಮಾಡಿ ಕೊಟ್ಟಿತ್ತು. ಹಳ್ಳಿಯಲ್ಲಿನ ಅಧಿಕಾರಿಗಳು ಈ ದಾಖಲೆಗಳನ್ನು ದುರುಪು ಯೋಗಮಾಡತೊಡಗಿದರು. ಅದರಲ್ಲಿ, ಪಟ್ಟಿಯಾಗಿರುವಂತೆ, ಅಷ್ಟೇ ಸಂಖ್ಯೆಯ ವತನದಾರ ಮಹಾರರು ಹಾಜರಿರಬೇಕು ಎನ್ನತೊಡಗಿದರು. ಇಲ್ಲಿ ದಾಖಲೆಯಾಗಿರುವ ಸಂಖ್ಯೆಯಲ್ಲಿ ಹತ್ತನೆಯ ಒಂದು ಭಾಗದಷ್ಟು ವತನದಾರರ ಅಗತ್ಯವೂ ಇರಲಿಲ್ಲ. ಇವರಿಗೆ ತಾಲೂಕು ಪಟೇಲರ ಬೆಂಬಲವೂ ದೊರೆತು ಅವರು ಕೂಡ ಅಷ್ಟೇ ಸಂಖ್ಯೆಯ ವತನದಾರರು ಹಾಜರಿರಬೇಕು ಎನ್ನತೊಡಗಿದರು. ಇದರಿಂದ ಹಳ್ಳಿಯಲ್ಲಿ ಇರುವ ಬಹಳಷ್ಟು ಮಹಾರರು ಈ ಸರ್ಕಾರಿ ಸೇವೆಗೆ ಹಾಜರಾಗುವಂತಾಯಿತು. ಆದರೆ ಮಹಾರರು ಈ ಅನ್ಯಾಯಯುತವಾದ ಬೇಡಿಕೆಯನ್ನು ಒಪ್ಪಲು ನಿರಾಕರಿಸತೊಡಗಿದರು. ಏಕೆಂದರೆ ಅವರಿಗೆ ಇದರಿಂದ ಇನಾಮ್ ಜಮೀನಿನಿಂದ ಬರುತ್ತಿದ್ದ ಆದಾಯದಿಂದ ಸಂಸಾರ ನಿರ್ವಹಣೆಯು ಅಸಾಧ್ಯವಾಗಿತ್ತು. ಮಾತ್ರವಲ್ಲ ಅವರು ಅಧಿಕ ಹಣ ಸಂಪಾದಿಸಲು ಇತರ ಕೆಲಸಗಳನ್ನು ಮಾಡುತ್ತಿದ್ದರು. ಆದ್ದರಿಂದ ವತನದಾರ ಮಹಾರರು ಈ ದಾಖಲೆಗಳನ್ನು ಸರಿಪಡಿಸಬೇಕು ಎಂದು ಆಗ್ರಹಿಸತೊಡಗಿದರು. ಇದರಲ್ಲಿ ಅವರು ಮಹಾರ್ ಅಧಿಕಾರಿಗಳ ಸಂಖ್ಯೆ ಕಡಿಮೆಗೊಳಿಸುವಂತೆ ಒತ್ತಾಯಪಡಿಸತೊಡಗಿದರು. ಇದರಲ್ಲಿ ಅವರು ಯಶಸ್ವಿಯಾದರು. ಮಹಾರ್ ಅಧಿಕಾರಿಗಳ ಸಂಖ್ಯೆಯೂ

ಇದರಿಂದ ಕಡಿಮೆಯಾಯಿತು. ಆದರೆ ನಾನು ಈ ಮೊದಲೇ ಹೇಳಿದಂತೆ ಮಹಾರ್ ಅಧಿಕಾರಿಗಳ ಸಂಖ್ಯೆಗೇನೂ ಕೊರತೆ ಇರಲಿಲ್ಲ. ಅದು ಕೇವಲ ತಪ್ಪು ದಾಖಲೆಯ ತಿದ್ದುಪಡಿಯಾಗಿತ್ತು. ಅದನ್ನು ಸಂಖ್ಯೆ ಕಡಿಮೆಗೊಳಿಸುವಿಕೆ ಎಂದು ಕರೆಯುವುದು ಖಂಡಿತ ಸೂಕ್ತವಲ್ಲ. ಇಲ್ಲಿ ವಾಸ್ತವವಾಗಿ ಆಗಿರುವುದು ಏನೆಂದರೆ ಕೃಷಿ ದಾಖಲೆಯ ಸೂಕ್ತ ತಿದ್ದುಪಡಿ. ಇದು ನಿಜವಾದ ಕಾರಣ ಆಗಿರುವುದರಿಂದ ಸರ್ಕಾರದ ಸಮರ್ಥನೆ ಯಾವ ರೀತಿಯಲ್ಲಿ ಸೂಕ್ತ ಎಂದು ತಾವು ನಿರ್ಧರಿಸಬೇಕು.

೧೦. ಇನ್ನು ಸರ್ಕಾರವು ಹೇಳುವಂತೆ, ಅದು ವಾಸ್ತವ ಸಂಗತಿ ಅಲ್ಲದಿದ್ದರೂ ಮಹಾರ್ ಅಧಿಕಾರಿಗಳ ಸಂಖ್ಯೆ ಕಡಿಮೆ ಆಗಿದೆ ಎಂದು ನಾವು ಭಾವಿಸುವಂತಿದ್ದರೆ, ನಾನು ಒಂದು ವಿಷಯವನ್ನು ಅತ್ಯಂತ ಗೌರವಪೂರ್ಣವಾಗಿ ತಮ್ಮ ಎದುರು ಇರಿಸಬಯಸುತ್ತೇನೆ. ಒಂದು ವೇಳೆ ಅಧಿಕಾರಿಗಳು ಕಡಿಮೆ ಆಗಿದ್ದರೂ ಕೂಡ, ಅದು ಹೇಗೆ ಅವರ ಭತ್ಯೆ ಕಡಿಮೆ ಮಾಡಲು ಇಲ್ಲ 'ಜುಡಿ' ತೆರಿಗೆಯನ್ನು ಹೆಚ್ಚಳ ಮಾಡಲು ಸಾಧ್ಯ. ಈ ಕ್ರಮವನ್ನು ಅನುಸರಿಸುವಾಗ ಅತ್ಯಂತ ಪ್ರಮುಖ ವಿಷಯವನ್ನು ಕಡೆಗಣಿಸಲಾಗಿದೆ ಎಂಬುದೇ ನನ್ನ ಭಾವನೆ. ಅದು ಯಾವುದೆಂದರೆ ಈ ವತನದಾರ ಆಸ್ತಿಯು ಹಾಗು ಅದರಿಂದ ಬರುವ ಆದಾಯವು ವಿಶೇಷ ಗುಂಪಿಗೆ ಸೇರುತ್ತದೆ. ಆದ್ದರಿಂದ "ಕೆಲಸ ಮಾಡದಿದ್ದರೆ, ಭತ್ಯೆ ಇಲ್ಲ". "ಇಷ್ಟು ಕೆಲಸಕ್ಕೆ ಇಷ್ಟು ಭತ್ಯೆ" ಎಂಬ ಇವರ ತತ್ವಗಳನ್ನು ಕೃಷಿಕರಿಗೆ ಅನ್ವಯಿಸಲು ಸಾಧ್ಯವಿಲ್ಲ.

೧೧. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ತಮ್ಮ ಗಮನವನ್ನು ಕೆಲ ವಾಸ್ತವ ಸಂಗತಿಗಳ ಕಡೆಗೆ ಸೆಳೆಯಬಯಸುತ್ತೇನೆ. ಈ ಸಂದರ್ಭದಲ್ಲಿ ವತನದಾರರೊಂದಿಗೆ ಈ ಸರ್ಕಾರವು ನಡೆದುಕೊಂಡ ಬಗೆಯನ್ನು ತಮಗೆ ತಿಳಿಸಲು ಬಯಸುತ್ತೇನೆ. ಬ್ರಿಟಿಷರು ನಮ್ಮ ದೇಶದ ಈ ಭಾಗವನ್ನು ವಶಪಡಿಸಿಕೊಂಡಾಗ, ಮರಾಠರ ಸರ್ಕಾರವು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವುದು ಅವರ ಗಮನಕ್ಕೆ ಬಂದಿತು. ಅದು ಖಾಸಗಿ ವ್ಯಕ್ತಿಗಳ ಭೂಮಿಯನ್ನು ಆಕ್ರಮಿಸಿಕೊಳ್ಳುವುವನ್ನು ನಿಲ್ಲಿಸಲು ವಿಫಲವಾಗಿತ್ತು. ಇದರಿಂದಾಗಿ ಬಹಳ ದೊಡ್ಡ ಮಟ್ಟದಲ್ಲಿ 'ಇನಾಂ' ಭೂಮಿಯು ಅಸ್ತಿತ್ವಕ್ಕೆ ಬಂದಿತ್ತು. ಈ ರೀತಿಯಾಗಿ 'ಇನಾಂ' ಭೂಮಿಯ ಒಡೆಯರನ್ನು 'ಇನಾಂದಾರರು' ಅಥವಾ 'ವತನದಾರರು' ಎಂದು ಸಂಬೋಧಿಸಲಾಗುತ್ತಿತ್ತು. ಈ ಇನಾಂ ಭೂಮಿಯನ್ನು ನಾಲ್ಕು ವರ್ಗಕ್ಕೆ ಸೇರಿಸಲಾಗುತ್ತಿತ್ತು. ೧) ಖಾಸಗಿ ೨) ದೇವಸ್ಥಾನ ೩) ರಾಜಕೀಯ ೪) ರಾಜಕೀಯೇತರ ಇವೆಲ್ಲವೂ ವಂಶಪಾರಂಪರ್ಯವಾದ ಇನಾಂ ಆಗಿತ್ತು. ಇನ್ನು ಕಾರ್ಯನಿರ್ವಹಣೆಯ ದೃಷ್ಟಿಯಿಂದ ಈ ಇನಾಂಗಳು ಎರಡು ವರ್ಗಕ್ಕೆ ಸೇರ್ಪಡೆ ಆಗುತ್ತಿತ್ತು.

A) ಮೊದಲನೆಯ ವರ್ಗದಲ್ಲಿ ಸರ್ಕಾರಕ್ಕೆ ಸೇವೆ ಸಲ್ಲಿಸಿದವರಿಗೆ ಇದು ಬಹುಮಾನವಾಗಿ ದೊರಕುತ್ತಿತ್ತು.

B) ಎರಡನೆಯ ವರ್ಗದಲ್ಲಿ ಸರ್ಕಾರಕ್ಕೆ ಸೇವೆ ಸಲ್ಲಿಸುವ ಅಗತ್ಯವಿರಲಿಲ್ಲ. ಖಾಸಗಿ ಹಾಗು ದೇವಸ್ಥಾನಕ್ಕೆ ಸೇರಿದ್ದ ಇನಾಂಗಳು ಸೇವೆ ಅಗತ್ಯ ಇರದಿದ್ದ ವರ್ಗಕ್ಕೆ ಸೇರಿದರೆ ರಾಜಕೀಯ ಹಾಗು ರಾಜಕೀಯೇತರ ಇನಾಂಗಳು ಸೇವೆ ಸಲ್ಲಿಸಬೇಕಿದ್ದ ವರ್ಗಕ್ಕೆ ಸೇರುತ್ತಿದ್ದವು.

೧೨) ಬ್ರಿಟಿಷ್ ರಾಜ್ಯಭಾರದ ಮೊದಲ ೨೩ ವರ್ಷಗಳಲ್ಲಿ (೧೮೧೮–೧೮೪೧) ಬಹಳಷ್ಟು ಖಾಸಗಿ ವ್ಯಕ್ತಿಗಳು ಈ ಇನಾಂ ಭೂಮಿಯನ್ನು ಪಡೆಯಲು ಪ್ರಯತ್ನ ಪಡುತ್ತಿದ್ದರು. ಆದರೆ ಆ ವ್ಯಕ್ತಿಗಳ ಪೂರ್ವಾಪರದ ಬಗ್ಗೆ ಆಗ ಬ್ರಿಟಿಷ್ ಸರ್ಕಾರವು ಚಿಂತಿಸುತ್ತಿರಲಿಲ್ಲ. ಅದು ೧೮೪೧ ರಿಂದ ಈ ಅರ್ಜಿಗಳನ್ನು ಪರಿಶೀಲಿಸುವ ಕಾರ್ಯ ಆರಂಭವಾದದ್ದು. ೧೮೪೩ರಲ್ಲಿ ಈ ರೀತಿ ದಕ್ಷಿಣ ಮಹಾರಾಷ್ಟ್ರದಲ್ಲಿ ಪರಭಾರೆ ಮಾಡಿರುವ ಭೂಮಿಯ ಪರಿಶೀಲನೆಗೆ ಸಮಿತಿಯೊಂದನ್ನು ರಚಿಸಲಾಯಿತು. ೧೮೪೩ರಲ್ಲಿ ಈ ವಿಷಯಕ್ಕೆಂದು

ಸ್ಥಾಪಿತವಾಗಿದ್ದ ಸಮಿತಿಯು ೯ ವರ್ಷಗಳವರೆಗೆ ನಿರಂತರವಾಗಿ ತನ್ನ ಕಾರ್ಯವನ್ನು ನಿರ್ವಹಿಸಿತು. ಅಂದರೆ ೧೮೫೨ರವರೆಗೆ ಈ ಸಮಿತಿಯು ತನ್ನ ಕಾರ್ಯನಿರ್ವಹಣೆ ಮಾಡಿತ್ತು. ಅನಂತರ ಅದು ಇನಾಂ ಸಮಿತಿಯಾಗಿ ಮಾರ್ಪಟ್ಟು ೧೮೫೨ರ ಕಾಯ್ದೆ XI ರ ಪ್ರಕಾರ ಕಾನೂನಿನ ಚೌಕಟ್ಟಿಗೆ ಒಳಪಟ್ಟಿತು. ಈ ಕಾಯ್ದೆಯ ಪ್ರಕಾರ ಇನಾಂ ಆಯುಕ್ತರನ್ನು ಹಾಗು ಇನಾಂ ಉಪ ಆಯುಕ್ತರನ್ನು ನೇಮಿಸುವ ಅಧಿಕಾರವು ಸರ್ಕಾರಕ್ಕೆ ದೊರೆಯಿತು. ಇದರ ಕಾರ್ಯವೆಂದರೆ 'ಇನಾಂ ಜಾಗವನ್ನು ಹೊಂದಿರುವವರ ತಪಾಸಣೆ, ಅಂತೆಯೇ ಯಾವ ಆಧಾರದ ಮೇಲೆ ಅವರು ಸರ್ಕಾರಕ್ಕೆ ತೆರಿಗೆ ಪಾವತಿಸುತ್ತಿಲ್ಲ ಎಂದು ವಿಚಾರಣೆ ನಡೆಸುವುದಾಗಿತ್ತು'. ಈ ಸಮಿತಿಯ ಕಾರ್ಯ ಅತ್ಯಂತ ನಿಧಾನವಾಗಿತ್ತು ಹಾಗು ಅದು ಗುಜರಾತ್‌ಗೆ ವಿಸ್ತಾರವಾಗಲೇ ಇಲ್ಲ. ಕೊನೆಗೆ ಈ ಸಮಿತಿಯಿಂದ ತಪಾಸಣೆ ಮಾಡುವುದನ್ನೇ ನಿಲ್ಲಿಸಬೇಕು ಎಂಬ ನಿರ್ಧಾರಕ್ಕೆ ಬರಲಾಯಿತು. ಇದರ ಬದಲು ಇಡೀ ರಾಜ್ಯಕ್ಕೆ "ಒಟ್ಟಾರೆ ತೆರಿಗೆ ಪಾವತಿಯ"ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ವ್ಯವಸ್ಥೆಯು ೧೮೬೩ರ II ನೆಯ ಪ್ರಕಾರ ದಕ್ಷಿಣದ ಎಲ್ಲಾ ಹೊಸ ಜಿಲ್ಲೆಗಳಿಗೂ, ಖಾನ್‌ದೇಶ ಮತ್ತು ದಕ್ಷಿಣದ ಮರಾಠ ಭಾಗಕ್ಕೂ ಮತ್ತು ೧೮೬೩ರ VII ರ ಕಾಯ್ದೆ ಅನ್ವಯ ಎಲ್ಲಾ ಹಳೆಯ ಪ್ರದೇಶಗಳಿಗೂ ಅನ್ವಯ ಮಾಡಲಾಯಿತು.

**A) ಕಾರ್ಯೇತರ ಇನಾಂಗಳು: (ಬಹುಮಾನಗಳು)**

೧೩. ಈ ಒಟ್ಟಾರೆ ತೆರಿಗೆ ಪಾವತಿಯ ಪದ್ಧತಿಯು "ಇನಾಮು"ಗಳಿಗೆ ಮಾತ್ರ ಅನ್ವಯ ಆಗುತ್ತಿತ್ತು. ೧) ಖಾಸಗಿ ಮತ್ತು ೨) ದೇವಸ್ಥಾನದ ಇನಾಮುಗಳು ಎಂದರೆ ಸೇವೆಗೆ ಒಳಪಡದ ಇನಾಮುಗಳು. ಈ ಕಾಯ್ದೆಯ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

a) ಇನಾಂ ಸಮಿತಿಯ ತೀರ್ಪಿಗೆ ಒಳಪಟ್ಟಿರಲಿ ಅಥವಾ ಇಲ್ಲದಿರಲಿ ವರ್ಷಾಶನ ಎಂದೂ ಕರೆಯಲ್ಪಡುವ ಈ ಎಲ್ಲಾ ಇನಾಂಗಳನ್ನೂ ಮುಕ್ತವಾಗಿ ವರ್ಗಾಯಿಸಬಹುದಾದ ಆಸ್ತಿಯನ್ನಾಗಿ ಪರಿವರ್ತಿಸುವುದು.

b) ಇಂತಹ ಭೂಮಿಗಳ ಮೇಲೆ ಪರಿವರ್ತನೆಯ ಶುಲ್ಕ ಅಥವಾ 'ನಜ್ಜರಾನ್' ಅನ್ನು ವಿಧಿಸುವುದು. ಅದರ ದರಗಳು ಹೀಗಿವೆ:

i) ೧೮೬೩ರ II ನೆಯ ಕಾಯ್ದೆಯ ಪ್ರಕಾರ ಮೌಲ್ಯ ಮಾಪನದ ಒಂದು ರೂಪಾಯಿಗೆ ನಾಲ್ಕು ಆಣೆಯಂತೆ ಹಾಗು ಒಂದು ರೂಪಾಯಿಗೆ ಹೆಚ್ಚುವರಿ ಒಂದು ಆಣೆಯಂತೆ ನಜ್ಜರಾನಾವನ್ನು ವಿಧಿಸುವಿಕೆ.

ii) ೧೮೬೩ರ III ನೆಯ ಕಾಯ್ದೆಯ ಪ್ರಕಾರ ನಜ್ಜರಾನ ಇಲ್ಲದೆ ಒಂದು ರೂಪಾಯಿಗೆ ೨ ಆಣೆಯಂತೆ.

೧೪) ಪೂರ್ಣಪ್ರಮಾಣದ ಮೌಲ್ಯಮಾಪನೆಯ ತನ್ನ ಹಕ್ಕನ್ನು ತ್ಯಜಿಸಿದ್ದರಿಂದ, ಸರಕಾರವು ಅನುಭವಿಸಿದ ವಾರ್ಷಿಕ ನಷ್ಟವು, ಈ ಕೆಳಗಿನ ಅಂಕಿಅಂಶಗಳು ತೋರಿಸುವಂತೆ, ಅಲ್ಪವೇನಲ್ಲ.

ಖಾಸಗಿ ಹಾಗು ದೇವಸ್ಥಾನದ ಇನಾಮು ಭೂಮಿ ಎಂದು ಉಳಿಸಿಕೊಂಡಿರುವ ಸೇವೆಯೇತರ ಭೂಮಿಯಿಂದ ಸರ್ಕಾರಕ್ಕೆ ಆಗಿರುತಂತಹ ವಾರ್ಷಿಕ ನಷ್ಟ:

| **ವಿಭಾಗ** | **ಪರಭಾರೆ ಮಾಡಲ್ಪಟ್ಟ ಭೂಮಿಯಿಂದ ಆಗಿರುವ ನಷ್ಟ ಪರಿವರ್ತನಾ ಬಾಡಿಗೆಯನ್ನು ಹೊರತು ಪಡಿಸಿ (ಜಡಿ)** | | |
|---|---|---|---|
| | Rs. | a. | p |
| I ಉತ್ತರ ವಿಭಾಗ | ೧,೨೬,೫೪೯ | ೧೫ | ೧ |
| II ಕೇಂದ್ರಿಯ ವಿಭಾಗ | ೨,೮೬,೪೯೨ | ೨ | ೩ |
| III ದಕ್ಷಿಣ ವಿಭಾಗ | ೨,೦೨,೮೨೭ | ೩ | ೬ |
| ಒಟ್ಟು | Rs. 6,15,649 | 4 | 10 |

೧೫. ಈ ಮೊದಲೇ ಹೇಳಿದಂತೆ ಈ ಕಾಯ್ದೆಯು ಸೇವೆಯೇತರ ಇನಾಮುಗಳಿಗೆ ಮಾತ್ರವೇ ಅನ್ವಯ ಆಗುತ್ತಿತ್ತು. ಎಂದರೆ ಖಾಸಗಿ ಇನಾಮುಗಳು ಹಾಗು ದೇವಸ್ಥಾನದ ಇನಾಮುಗಳಿಗೆ ಮಾತ್ರ. ಅದು ಸೇವೆಯ ಇನಾಮುಗಳಿಗೆ ಎಂದರೆ ರಾಜಕೀಯ ಹಾಗು ರಾಜಕೀಯೇತರ ಇನಾಮುಗಳಿಗೆ ಅನ್ವಯ ಆಗುತ್ತಿರಲಿಲ್ಲ. ಇವನ್ನು ಈ ಕಾಯ್ದೆಯಿಂದ ಹೊರಗೆ ಉಳಿಸಲಾಗಿತ್ತು ಹಾಗು ಅದನ್ನು ಬೇರೆಯ ರೀತಿಯಲ್ಲಿ ನಿರ್ವಹಿಸುವ ಚಿಂತನೆಯಿತ್ತು.

**B) ಸೇವೆಯ ಇನಾಮುಗಳು:**

೧೬. (೧) ರಾಜಕೀಯ ಇನಾಮು: ಇದರಲ್ಲಿ 'ಜಹಗೀರಿಗಳು" ಹಾಗು "ಸರಂಜಾಮುಗಳು" ಎಂಬ ಎರಡು ಬಗೆಯ ಇನಾಮುಗಳು ಸೇರ್ಪಡೆ ಆಗಿದ್ದವು. ಇದನ್ನು ಸರ್ಕಾರ ಮತ್ತು ಮಿಲಿಟರಿಗಳಿಗೆ ಸೇವೆ ಸಲ್ಲಿಸಿದ ಉನ್ನತ ವರ್ಗದ ಅಧಿಕಾರಿಗಳಿಗಾಗಿ ಹಾಗೂ ಸರ್ಕಾರಿ ಸೇವೆಯಲ್ಲಿ ಹಿಂದೆ ಇದ್ದ ಉನ್ನತ ಅಧಿಕಾರಿವರ್ಗಗಳಿಗಾಗಿ ಮೀಸಲಾಗಿರಿಸಲಾಗಿತ್ತು. ಖಾಸಗಿ ಇನಾಮುಗಳನ್ನು ಹಂಚಿದ ರೀತಿಯಲ್ಲೇ ಈ ಇನಾಮುಗಳನ್ನು ಕೂಡ ಸರ್ಕಾರ ಹಂಚಿಕೆ ಮಾಡಿತ್ತು ಎಂದರೆ ಹಲವಾರು ತಲೆಮಾರುಗಳಿಗೆ ಇದು ವಂಶಪಾರಂಪರ್ಯವಾಗಿ ಮುಂದುವರಿಯುತ್ತಿತ್ತು. ಈ ಮೊದಲು ಮಾಡಿದ್ದ ದಿನಾಂಕವನ್ನೇ ಮುಂದುವರೆಸಿಕೊಂಡು ಬರಲಾಗಿತ್ತು. ಆದರೆ ಇದನ್ನು ಪಡೆದುಕೊಂಡವರು ಸರ್ಕಾರಕ್ಕೆ ಸೇವೆ ಸಲ್ಲಿಸಬೇಕು ಎಂಬ ನಿಯಮವೇನು ಇರಲಿಲ್ಲ. ಇದರ ಪರಣಾಮವೆಂದರೆ ಈ 'ಸರಂಜಾಮುದಾರರು' ಸರ್ಕಾರಕ್ಕೆ ಯಾವುದೇ ಸೇವೆ ಸಲ್ಲಿಸದೇ ಸರ್ಕಾರದಿಂದ ಭತ್ಯೆಗಳನ್ನು ಪಡೆಯುತ್ತಿದ್ದರು. ಈ ರೀತಿಯಾಗಿ ಸರಂಜಾಮುದಾರರಿಗೆ ನೀಡುತ್ತಿದ್ದ ಭತ್ಯದ ಮೂಲಕ ಸರಕಾರಕ್ಕೆ ಆಗುತ್ತಿದ್ದ ವಾರ್ಷಿಕ ನಷ್ಟವನ್ನು ಕೆಳಗಿನ ತಃಖ್ತೆಯು ತೋರಿಸುತ್ತದೆ.

**ಸರಂಜಾಮುದಾರರಿಂದ ಉಂಟಾದ ವಾರ್ಷಿಕ ನಷ್ಟ.**

| ಜಿಲ್ಲೆ | ಪಾವತಿಸಿದ ನಗದು ಭತ್ಯೆ | | |
|---|---|---|---|
| | ರೂಪಾಯಿ | ಆಣೆ | ಪೈಸೆ |
| ಪೂನಾ | ೩೪,೯೯೧ | ೧೧ | ೧೧ |
| ಶೋಲಾಪುರ | ೧೦,೬೫೧ | ೧೩ | ೯ |
| ಅಹ್ಮದ್‌ನಗರ | ೩೬,೫೯೦ | ೧೨ | ೫ |
| ಸತಾರ | ೨೫,೪೪೭ | ೯ | ೩ |
| ಖಾನ್ ದೇಶ | ೩೮,೭೧೪ | ೫ | ೫ |
| ಬಿಜಾಪುರ | ೧೧,೭೩೮ | ೧೨ | ೧ |
| ನಾಸಿಕ್ | ೪೭,೦೩೭ | ೧೦ | ೪ |
| ಬೆಳಗಾವಿ | ೩೨,೮೭೫ | ೧೨ | ೪ |
| ರತ್ನಗಿರಿ | ೧,೦೭೯ | ೨ | ೩ |
| ಕೋಲಾಬಾ | ೧,೬೫೫ | ೧೦ | ೬ |
| ಧಾರವಾಡ | ೩೦,೯೯೧ | ೦ | ೩ |
| ದಕ್ಷಿಣ M.C. | ೩,೩೭೮ | ೧೫ | ೧ |
| ಸತಾರ ರಾಜಕೀಯ ಸಮಿತಿ | ೧೫೮ | ೮ | ೦ |
| ಒಟ್ಟು | ೨,೬೭,೫೦೧ | ೧೧ | ೭ |

೧೭. ಈ ರಾಜ್ಯದಲ್ಲಿ ಒಟ್ಟು ೧೦೪ ಸರಂಜಾಮುದಾರರಿದ್ದಾರೆ. ಇದರ ಅರ್ಥ ಎಂದರೆ ಪ್ರತಿಯೊಬ್ಬ ಸರಂಜಾಮುದಾರನೂ ವಾರ್ಷಿಕವಾಗಿ ೨,೫೦೦ ರೂ. ಗಳನ್ನು ಸರ್ಕಾರಕ್ಕೆ ಯಾವುದೇ ಸೇವೆ ಸಲ್ಲಿಸದೇ ಪಡೆಯುತ್ತಿದ್ದಾರೆ. ನಾನು ಇಲ್ಲಿ ಮತ್ತೊಂದು ವಿಷಯವನ್ನು ಎಲ್ಲರ ಗಮನಕ್ಕೆ ತರಬಯಸುವೆ. ಅದೇನೆಂದರೆ ಈ ೧೦೪ ಸರಂಜಾಮುದಾರರಲ್ಲಿ ೫೪ಜನ ಬ್ರಾಹ್ಮಣರು, ೩೮ ಮರಾಠರು, ೭ ಮುಸಲ್ಮಾನರು, ೩ ಕಾಯಸ್ಥರು ೧ ಪರದೇಶಿ ರಾಜಪುತ್ರ ಹಾಗು ಒಬ್ಬ ಮಹಾರ್ ಧರ್ಮದವನು ಇದ್ದಾನೆ.

೧೮. (ii) ರಾಜಕೀಯತರ: ಈ ರಾಜಕೀಯೇತರ ಇನಾಮುಗಳನ್ನು ಪಡೆದವರು ಎಂದರೆ ಆದಾಯ ವಸೂಲಿ ಹಾಗು ಆಡಳಿತ ವ್ಯವಸ್ಥೆಯ ಸಲುವಾಗಿ ಪೇಶ್ವೆಗಳ ನೇಮಿಸಿಕೊಂಡಿದ್ದ. ೧) ಜಿಲ್ಲಾ ಅಧಿಕಾರಿಗಳು ೨) ಹಳ್ಳಿಯ ಅಧಿಕಾರಿಗಳು.

**೧) ಜಿಲ್ಲಾ ಮಟ್ಟದ ಅಧಿಕಾರಿಗಳು:**

ಈ ವರ್ಗದ ಅಧಿಕಾರಿಗಳು ಎಂದರೆ ವಂಶಪಾರಂಪರ್ಯವಾಗಿ ಅಧಿಕಾರ ಪಡೆದ ದೇಸಾಯಿಗಳು, ದೇಶಮುಖರು, ದೇಶಪಾಂಡೆಗಳು ಮುಂತಾದವರು ಇವರು ಪೇಶ್ವೆಗಳ ಸರ್ಕಾರದ ತಾಲ್ಲೂಕು ಮಟ್ಟದ ಅಧಿಕಾರಿಗಳಾಗಿದ್ದರು. ಆದಾಯದ ವಸೂಲಾತಿಯೇ ಇವರ ಮುಖ್ಯ ಕೆಲಸ ಆಗಿತ್ತು. ಇವರನ್ನು ಬ್ರಿಟಿಷ್ ಸರ್ಕಾರವು ಬದಲಿಸಿ ಇವರ ಬದಲಿಗೆ 'ಮಾಮ್ಲತ್ತದಾರರು' ಹಾಗು 'ಮಹಲ್‌ಕಾರಿ'ಯರನ್ನು ಕರೆತಂದರು. ಸೇವೆಯಲ್ಲಿನ ಈ ಪರಿವರ್ತನೆಗಾಗಿ ಇವರಿಗೆ, ಸಂದಾಯವಾದ ಹಣದಲ್ಲಿ ಒಂದು ರೂಪಾಯಿಗೆ ೩ ರಿಂದ ೮ ಆಣೆಯವರೆಗಿನ ಹಣವನ್ನು ಇಟ್ಟುಕೊಳ್ಳುವ ಅಧಿಕಾರವನ್ನು ನೀಡಲಾಗಿತ್ತು. ಇದು ಅವರಿಗೆ ದೊರಕುತ್ತಿದ್ದ

ಸಂಭಾವನೆ ಹಾಗೂ ಅವರ ಹುದ್ದೆಯ ಹೆಸರನ್ನು ಮಾರ್ಪಡಿಸಿರುವುದಕ್ಕೆ ನೀಡುತ್ತಿದ್ದ ಪರಿಹಾರ.

೨೦. ಈ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನೀಡುವ ಭತ್ಯೆಯಿಂದ ಸರ್ಕಾರಕ್ಕೆ ಉಂಟಾದ ವಾರ್ಷಿಕ ನಷ್ಟ ಈ ಕೆಳಗಿನಂತಿದೆ:

**ಸರ್ಕಾರಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಉಂಟಾದ ವಾರ್ಷಿಕ ನಷ್ಟ**
**(ಇವರ ಕಛೇರಿಗಳನ್ನು ಇದೀಗ ರದ್ದುಗೊಳಿಸಲಾಗಿದೆ)**

| ವಿಭಾಗ | ನಿವ್ವಳ ಭತ್ಯೆ | | |
|---|---|---|---|
| | ರೂಪಾಯಿ | ಆಣೆ | ಪೈ |
| I ಉತ್ತರ ವಿಭಾಗ | ೧,೦೪,೭೫೩ | ೧ | ೯ |
| II ಕೇಂದ್ರೀಯ ವಿಭಾಗ | ೩,೧೬,೬೦೨ | ೭ | ೯ |
| III ದಕ್ಷಿಣ ವಿಭಾಗ | ೩,೯೩,೧೮೯ | ೧೫ | ೮ |
| **ಒಟ್ಟು** | **೮,೧೪,೫೪೫** | **೯** | **೨** |

**೨) ಹಳ್ಳಿಯ ಅಧಿಕಾರಿಗಳು:**

೨೧. ಹಳ್ಳಿಯ ಮಟ್ಟದ ಅಧಿಕಾರಿಗಳನ್ನು ಕೆಳಗಿನ ಉಪವರ್ಗಗಳಾಗಿ ವಿಂಗಡನೆ ಮಾಡಲಾಗಿತ್ತು.

i) ಸರ್ಕಾರಕ್ಕೆ ಹಾಗು ಸಮಾಜಕ್ಕೆ ಎರಡಕ್ಕೂ ಪ್ರಯೋಜನವಿರದ ಅಧಿಕಾರಿಗಳು.

ii) ಹಳ್ಳಿಗೆ ಪ್ರಯೋಜನವಿರುವ ಅಧಿಕಾರಿಗಳು.

iii) ಸರ್ಕಾರಕ್ಕೆ ಪ್ರಯೋಜನವಿರುವ ಅಧಿಕಾರಿಗಳು.

೨೨. ಸಮಾಜಕ್ಕೆ ಹಾಗು ಸರ್ಕಾರಕ್ಕೆ ಎರಡಕ್ಕೂ ಪ್ರಯೋಜನ ಇರದ ಅಧಿಕಾರಿಗಳು:– ಈ ಇನಾಂ ವರ್ಗದಲ್ಲಿ ಹಳ್ಳಿಯ ಸೇವಕರಾದ **'ಪೋತದಾರರು'** ಇದ್ದರು. ಇವರು ಹಳ್ಳಿಯ ಅಕ್ಕಸಾಲಿಗನಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಸರ್ಕಾರಕ್ಕೆ ಸಲ್ಲಿಸಲಾದ ಅಥವಾ ವ್ಯಕ್ತಿಗೆ ಸಲ್ಲಿಸಲಾದ ಹಣದ ಲೋಹ ಪರೀಕ್ಷೆಯನ್ನು ನಡೆಸುತ್ತಿದ್ದರು. ಇವರು ಪಟೇಲರಿಗೆ ಒಂದು ರೀತಿಯಲ್ಲಿ ಸಹಾಯಕರಾಗಿದ್ದರು ಅಲ್ಲದೇ ಕುಲಕರ್ಣಿಗಳ ದಾಖಲೆಯ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದ್ದರು. ಅವರ ಇನಾಮುಗಳ ಪರಿವರ್ತನ ಮಾಡುವಾಗ ಈ ವರ್ಗದ ಜನರು ಹೊಂದಿದ್ದ ಭೂಮಿಯನ್ನು ಕೆಳಗಿನಂತೆ ಮಾರ್ಪಡಿಸಲಾಗುತ್ತಿತ್ತು.

i) ಹಳೆಯ ಜಿಲ್ಲೆಗಳಲ್ಲಿ – ಮೌಲ್ಯ ಮಾಪನದ ಪ್ರಕಾರ ಕಂದಾಯವನ್ನು ಸಂಪೂರ್ಣವಾಗಿ ನೀಡಬೇಕಾದ್ದ ಜಮೀನು

ii) ಹೊಸ ಜಿಲ್ಲೆಗಳಲ್ಲಿ – ಮೌಲ್ಯಮಾಪನದ ಪ್ರಕಾರ ಮೌಲ್ಯದ ಅರ್ಧದಷ್ಟು ತೆರಿಗೆಯನ್ನು ನೀಡಬೇಕಾದ ಜಮೀನು.

ಎರಡೂ ಪ್ರಕರಣಗಳಲ್ಲಿಯೂ ಭೂಮಿಯನ್ನು ವರ್ಗಾವಣೆ ಮಾಡಬಹುದಿತ್ತು.

೨೪. ಹಳ್ಳಿಗಳಿಗೆ ಪ್ರಯೋಜನಕಾರಿಯಾಗಿರುತ್ತಿದ್ದ ಅಧಿಕಾರಿಗಳು :

ಈ ವರ್ಗದಲ್ಲಿ ಇನಾಂನಲ್ಲಿ ಸೇರ್ಪಡೆ ಆಗುತ್ತಿದ್ದವರು ಎಂದರೆ ಹಳ್ಳಿಯ ಸೇವಕರಾದಂತಹ ಕುಂಬಾರರು ಹಾಗು ಸುತಾರರು ಮುಂತಾದವರು. ಇವರು ಈಗಲೂ ಹಳ್ಳಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ವಿಷಯದಲ್ಲಿ ಮಾಡಿಕೊಂಡಿದ್ದ ಒಪ್ಪಂದ ಈ ಕೆಳಗಿನಂತಿತ್ತು.

i) ಹಳೆಯ ಜಿಲ್ಲೆಗಳಲ್ಲಿ – ಇವರ ಸೇವೆಯ ಅಗತ್ಯವು ಸಮುದಾಯಕ್ಕೆ ಇದ್ದುದರಿಂದ, ಮೌಲ್ಯಮಾಪನ ಮಾಡಿದ ಕಂದಾಯದ ಕಾಲು ಭಾಗ ಅಥವಾ ಅರ್ಧಭಾಗವನ್ನು ಇವರು ಪಾವತಿಸಬೇಕಾಗಿದ್ದಿತು.

ii) ಹೊಸ ಜಿಲ್ಲೆಗಳಲ್ಲಿ – ಇವರ ಇನಾಂಭೂಮಿಯ ಮೇಲಿನ ಕಂದಾಯದ ಕಾಲು ಭಾಗವನ್ನು ಇವರು ಪಾವತಿಸಬೇಕಾಗಿತ್ತು.

ಈ ವರ್ಗದಲ್ಲಿ ಭೂಮಿಯನ್ನು ಪಡೆಯಲು ಸೇವೆಯನ್ನು ಸಲ್ಲಿಸುವುದು ಅಗತ್ಯವಿದ್ದು ಸದರಿ ಭೂಮಿಯನ್ನು ವರ್ಗಾವಣೆ ಮಾಡುವಂತೆ ಇರಲಿಲ್ಲ.

೨೪. ಈ ಕೆಳಗಿನ ಪಟ್ಟಿಯನ್ನು ಗಮನಿಸಿದರೆ ಹಳ್ಳಿಯ ಈ ರೀತಿ ಸೇವಕರೊಂದಿಗೆ ಭೂಕಂದಾಯದ ಬಗೆಗೆ ಮಾಡಿಕೊಂಡಿರುವ ಒಪ್ಪಂದದಿಂದಾಗಿ ಸರ್ಕಾರಕ್ಕೆ ಆಗಿರುವ ನಷ್ಟವು ಅಂದಾಜಿಗೆ ಬರುತ್ತದೆ.

ಹಳ್ಳಿಗಳಲ್ಲಿ ಸೇವೆಯನ್ನು ಸಲ್ಲಿಸಿ 'ಇನಾಮಾಗಿ' ಪಡೆದುಕೊಂಡಿದ್ದ ಭೂಮಿಯನ್ನು ಪರಿವರ್ತಿಸಿದುದರಿಂದ ಸರಕಾರಕ್ಕೆ ಉಂಟಾಗಿರುವ ನಷ್ಟದ ಪಟ್ಟಿ

| | ರೂಪಾಯಿ | ಆಣೆ | ಪೈ |
|---|---|---|---|
| I ಉತ್ತರ ವಿಭಾಗ | ೭೯,೧೭೭ | ೦ | ೦ |
| II ಕೇಂದ್ರ ವಿಭಾಗ | ೭೨,೩೪೩ | ೫ | ೧ |
| III ದಕ್ಷಿಣ ವಿಭಾಗ | ೬೪,೨೫೬ | ೧೫ | ೩ |
| **ಒಟ್ಟು** | **೨,೧೫,೭೭೭** | **೪** | **೪** |

೨೫. ಸರ್ಕಾರಕ್ಕೆ ಪ್ರಯೋಜನಕಾರಿ ಆಗಿರುವ ಹಳ್ಳಿಯ ಅಧಿಕಾರಿಗಳು: ಈ ವರ್ಗಕ್ಕೆ ಸೇರ್ಪಡೆ ಆಗುತ್ತಿದ್ದವರು ಎಂದರೆ (೧) ಪಾಟೀಲರು (೨) ಕುಲಕರ್ಣಿಗಳು (೩) ಮಹಾರರು.

೨೬. ಹಳ್ಳಿಯ ಅಧಿಕಾರಿಗಳಿಗೆ ಸೇವಾ ನಿವೃತ್ತಿ ಇರಲಿಲ್ಲ. ಅವರಿಗೆ ವಂಶಪಾರಂಪರ್ಯವಾಗಿ ಅಧಿಕಾರ ಪಡೆದುಕೊಂಡ ಅಧಿಕಾರಿಗಳಂತೆ ಯಾವುದೇ ನಿರ್ದಿಷ್ಟ ವೇತನ ಇರಲಿಲ್ಲ. ಏಕೆಂದರೆ ಆಡಳಿತಕ್ಕೆ ಈ ಅಧಿಕಾರಿಗಳ ಅಗತ್ಯ ಯಾವಾಗಲೂ ಇರುತ್ತಿತ್ತು. ಬ್ರಿಟಿಷ್ ಸರ್ಕಾರದ ಅವಿಭಾಜ್ಯ ಅಂಗವಾಗಿದ್ದಂತೆಯೇ ಇವರು ಪೇಶ್ವೆಗಳ ಸರ್ಕಾರಕ್ಕೂ ಅಗತ್ಯ ಆಗಿದ್ದರು.

೨೭. ಮೇಲ್ಕಂಡ ಸಮೀಕ್ಷೆಯಿಂದ ಈ ಕೆಲವು ವಾಸ್ತವ ಸಂಗತಿಗಳು ಹೊರ ಬೀಳುತ್ತವೆ.

(i) ಖಾಸಗಿ ಹಾಗು ದೇವಸ್ಥಾನದ ಇನಾಂ ಭೂಮಿಯನ್ನು ಹೊಂದಿರುವವರು ಸರ್ಕಾರಕ್ಕೆ ಯಾವುದೇ ಸೇವೆಯನ್ನು ಸಲ್ಲಿಸವುದಿಲ್ಲ. ಪೇಶ್ವೆಗಳ ಸರ್ಕಾರದಿಂದ ಇವರಿಗೆ ಬಂದಿರುವ ಭೂಮಿಯನ್ನು ಉಳಿಸಿಕೊಳ್ಳಲು ಬ್ರಿಟಿಷ್ ಸರ್ಕಾರವು ಇವರಿಗೆ ಅನುಮತಿ ನೀಡಿದೆ. ಇದನ್ನು ಅವರು ವಂಶಪಾರಂಪರ್ಯವಾಗಿ ಅನುಭವಿಸಬಹುದು ಮತ್ತು ಸರ್ಕಾರಕ್ಕೆ ಯಾವುದೇ ಸೇವೆಯನ್ನು ಸಲ್ಲಿಸಲೇಬೇಕೆಂಬ ನಿರ್ಬಂಧ ಅವರ ಮೇಲೆ ಇರಲಿಲ್ಲ. ಆದರೆ ಇವರಿಂದ ಸರ್ಕಾರಕ್ಕೆ ಉಂಟಾಗುವ ವಾರ್ಷಿಕ ನಷ್ಟ ರೂ. ೬,೧೫,೬೪೯–೪–೧೦.

(ii) ರಾಜಕೀಯ ಇನಾಮುಗಳನ್ನು ಪಡೆದುಕೊಂಡಿರುವುವರು ಸರ್ಕಾರಕ್ಕೆ ಸೇವೆ ಸಲ್ಲಿಸಬೇಕು ಎಂಬ ನಿಬಂಧನೆಯಿಂದ ಬ್ರಿಟಿಷ್ ಸರ್ಕಾರವು ಇವರನ್ನು ಬಿಡುಗಡೆ ಮಾಡಿದೆ. ಆದರೂ ಅವರಿಗೆ ದೊರೆಯುತ್ತಿದ್ದ ಭತ್ಯೆಗಳನ್ನು ಮುಂದುವರಿಸಲಾಗಿದೆ. ಅವರ ವಂಶದವರು

ಮತ್ತು ಅವರ ಸಂಬಂಧಿಗಳು ಈ ಸೌಲಭ್ಯಗಳನ್ನು ಹಲವಾರು ತಲೆಮಾರುಗಳವರೆಗೆ ಮತ್ತು ಅನುಭವಿಸುತ್ತಾ ಬಂದಿದ್ದಾರೆ. ಇದರಿಂದ ಸರ್ಕಾರಕ್ಕೆ ಉಂಟಾಗುವ ವಾರ್ಷಿಕ ನಷ್ಟ ರೂ. ೨,೬೭,೫೦೧–೧೧–೭.

(iii) ಪೇಶ್ವಾ ಸರ್ಕಾರದ ಜಿಲ್ಲಾ ಮಟ್ಟದ ಅಧಿಕಾರಿಗಳಾಗಿದ್ದ ದೇಸಾಯಿಗಳು ಹಾಗು ದೇಶಪಾಂಡೆಗಳು ಬ್ರಿಟಿಷ್ ಸರ್ಕಾರಕ್ಕೆ ಯಾವುದೇ ರೀತಿಯ ಸೇವೆಯನ್ನು ಸಲ್ಲಿಸಬೇಕಾಗಿರಲಿಲ್ಲ. ಇವರ ಸೇವೆಗೆ ಪ್ರತಿಫಲವಾಗಿ ಪೇಶ್ವಾ ಸರ್ಕಾರವು ಇವರಿಗೆ ನೀಡಿದ 'ಇನಾಮು' ಭೂಮಿಯನ್ನು, ಬ್ರಿಟಿಷ್ ಸರ್ಕಾರ ಇವರಿಗೇ ಬಿಟ್ಟುಕೊಟ್ಟಿದೆ. ಆದರೆ ಇದರ ಮೇಲೆ ಸಣ್ಣ ಮೊತ್ತದ 'ಜೂಡಿ' ತೆರಿಗೆಯನ್ನು ವಿಧಿಸಲಾಗಿದೆ. ಬ್ರಿಟಿಷ್ ಸರ್ಕಾರ ಜೀವವಾನ ಪರ್ಯಂತ ನೀಡಿದ್ದ ಪಿಂಚಣಿ ಇದು. ಇದು ವಂಶಪಾರಂಪರ್ಯವಾಗಿ ದೊರೆಯುವ ಭತ್ಯೆಯಾಗಿದೆ. ಇದರಿಂದ ಸರ್ಕಾರಕ್ಕೆ ಉಂಟಾಗುವ ವಾರ್ಷಿಕ ನಷ್ಟ ರೂ. ೮,೧೪,೫೪೫–೮–೪.

(iv) ಸರ್ಕಾರಕ್ಕೆ ಹಾಗು ಸಮಾಜಕ್ಕೆ ಅಪ್ರಯೋಜಕವಾಗಿದ್ದ ಹಳ್ಳಿಯ ಅಧಿಕಾರಿಗಳನ್ನು ಕೂಡ ಬ್ರಿಟಿಷ್ ಸರ್ಕಾರವು ಎಲ್ಲಾ ರೀತಿಯ ಸೇವೆಯಿಂದ ಮುಕ್ತಗೊಳಿಸಿದೆ. ಆದರೆ ಅವರಿಗೆ ನಿಡುತ್ತಿದ್ದ ಭತ್ಯೆಯನ್ನು ಸಂಪೂರ್ಣ ಉಳಿಸಿಕೊಳ್ಳಲಾಗಿಲ್ಲ. ಅವರ ತಮ್ಮ 'ಇನಾಮು' ಭೂಮಿಯನ್ನು ಉಳಿಸಿಕೊಂಡರಾದರೂ, ಕೆಲ ಸಂದರ್ಭಗಳಲ್ಲಿ ಮೌಲ್ಯಮಾಪನ ಮಾಡಿದ ಕಂದಾಯದ ಪೂರ್ಣಭಾಗವನ್ನು, ಕೆಲಸಂದರ್ಭಗಳಲ್ಲಿ ಅರ್ಧಭಾಗವನ್ನೂ ಪಾವತಿಸುತ್ತಿದ್ದರು.

೨೮. ಈ ಮೇಲಿನ ಪ್ರಕರಣಗಳನ್ನು ಗಮನಿಸಿದರೆ ಬೊಂಬಾಯಿ ಸರ್ಕಾರವು 'ವತನ್' ಹಾಗು' ಇನಾಂ' ಆಸ್ತಿಗಳನ್ನು ವಿಶೇಷ ವಿಶೇಷವರ್ಗಕ್ಕೆ ಸೇರಿಸಿರುವುದು ನಮ್ಮ ಗಮನಕ್ಕೆ ಬರುತ್ತದೆ. ಅದನ್ನು ಕೇವಲ ಸೇವೆಗೆಂದು ದೊರೆತ ಭತ್ಯೆ ಎಂದು ಪರಿಗಣಿಸಿಲ್ಲ. ಹಾಗೆ ಪರಿಗಣಿಸಿದ ಸಂದರ್ಭದಲ್ಲಿಯೂ 'ಸೇವೆಸಲ್ಲಿಸದಿದ್ದರೆ ಭತ್ಯವಿಲ್ಲ' ಎಂಬ ನಿಯಮವನ್ನು ಅನ್ವಯ ಮಾಡಲಿಲ್ಲ.

೨೯. ಮಹಾರರ ಮೇಲೆ ಈ 'ಜುಡಿ' ತೆರಿಗೆಯನ್ನು ವಿಧಿಸಿರುವ ನೀತಿಯನ್ನು ಗಮನಿಸಿದರೆ, ಯಾವುದೇ ದೃಷ್ಟಾಂತದ ಹಿನ್ನೆಲೆ ಇಲ್ಲದೆಯೇ ಈ ನೀತಿಯನ್ನು ಜಾರಿಗೆ ತರಲಾಗಿದೆ ಎಂದು ಅರಿವಾಗುತ್ತದೆ.

೩೦. ಮಹರ್ ಜನಾಂಗದವರಿಗೆ ಸೇರಿದ 'ವತನ್' ಆಸ್ತಿಯನ್ನು ಕುರಿತಂತೆ ಆಗಿರುವ ಅಸಮಾನತೆಯನ್ನು ಕುರಿತಂತೆ ನಾನು ಕುಲಕರ್ಣಿ ವತನದತ್ತ ತಮ್ಮೆಲ್ಲರ ಗಮನ ಸೆಳೆಯ ಬಯಸುತ್ತೇನೆ. ಕುಲಕರ್ಣಿ ವತನವು ಸರ್ಕಾರಕ್ಕೆ ಪ್ರಯೋಜನಕಾರಿಯಾದ ಅಧಿಕಾರಿಗಳ ವರ್ಗಕ್ಕೆ ಬೀಳುತ್ತದೆ. ಇದೇ ವರ್ಗದಲ್ಲಿ ಸೇರ್ಪಡೆ ಆಗುವವರು ಎಂದರೆ ೧) ಪಾಟೀಲರು ೨) ಕುಲಕರ್ಣಿಗಳು ೩) ಮಹಾರರು. ಕುಲಕರ್ಣಿ ವತನ ವರ್ಗವು ಒಂದು ವಂಶಪಾರಂಪರ್ಯವಾದ ಪದ್ಧತಿ ಹಾಗು ಇದು ೧೯೧೪ರ ವರೆಗೆ ಮುಂದುವರಿದಿತ್ತು. ೧೯೧೪ರಲ್ಲಿ ಸರ್ಕಾರಿ ಆದೇಶ ಸಂಖ್ಯೆ ೫೦೭೦ರ ಪ್ರಕಾರ ಮೇ ೩೦ ೧೯೧೪ರಂದು ಕುಲಕರ್ಣಿಗಳ ವತನವನ್ನು ಅನೂರ್ಜಿತಗೊಳಿಸಲಾಯಿತು. ಇದಾದ ನಂತರ ಇವರು ಸರ್ಕಾರಕ್ಕೆ ಸೇವೆ ಸಲ್ಲಿಸಲೇ ಬೇಕು ಎಂಬ ನಿಬಂಧನೆಯಿಂದ ಮುಕ್ತಗೊಳಿಸಲಾಯಿತು. ರದ್ದು ಪಡಿಸುವಿಕೆಯು ಈ ಕೆಳಗಿನ ನಿಬಂಧನೆಯಂತೆ ಜರುಗಿತು.

೧) ವತನದಾರರ ವಂಶದವರಿಗೆ ಅಥವಾ ಅವರು ದತ್ತು ತೆಗೆದುಕೊಂಡಿರುವವರಿಗೆ ಇವರ

ಪೋಟಗಿಯ ಮತ್ತು ಆಕರಣೆಯು ಮೂರನೆಯ ಒಂದು ಭಾಗದಷ್ಟು ಹಣವನ್ನು ನೀಡುವುದು.

೨) ಈಗಿರುವ ಅಧಿಕಾರಿಗಳಿಗೆ ಹಾಗು ಅವರ ಮಕ್ಕಳಿಗೆ ಅಥವಾ ದತ್ತುತೆಗೆದುಕೊಳ್ಳಲ್ಪಟ್ಟವರಿಗೆ ಭತ್ಯೆಯ ಮುಂದುವರಿಯುತ್ತದೆ. ಆದರೆ ಈ ಭತ್ಯೆಯನ್ನು ಪಡೆಯಲು ಅವರು ಭೂಮಿಗೆ 'ಜುಡಿ' ತೆರಿಗೆಯನ್ನು ಪಾವತಿಮಾಡಬೇಕು. ಇದು ನಿಗದಿತ ಭತ್ಯೆಗಿಂತ ಕಡಿಮೆ ಇರುವಾಗ, ಆ ಮೊತ್ತಕ್ಕೆ ನಿಗದಿತ ಕಂದಾಯದ ಹದಿನಾರನೆಯ ಒಂದರಷ್ಟನ್ನು ಮೀರದ ಹಣವನ್ನು ತೆರಿಗೆಯಾಗಿ ನೀಡಬೇಕು. ಆದರೆ ಈ ಎರಡೂ ಮೊಬಲಗುಗಳ ಒಟ್ಟು ಮೊತ್ತವು ಜೂಡಿಯ ಹಣಕ್ಕಿಂತ ಹೆಚ್ಚಿಗೆ ಇರಬಾರದು.

೩) ಈ ಭೂಮಿಯು ಹಳ್ಳಿಯ ಕಛೇರಿ ಕಾಯ್ದೆಯ ೧೦,೧೧,೧೧ಎ ಮತ್ತು ೧೨ನೆಯ ವಿಧಿಗಳಿಗೆ ಒಳಪಡುತ್ತವೆ. ಆದರೆ ಕಲೆಕ್ಟರ್ ಅವರು ಈ ವಿಧಿಗಳಿಗೆ ವಿನಾಯತಿಯನ್ನು ನೀಡಬಹುದು.

೪) ಈ ವತನ್ ಭೂಮಿಗೆ ನೀಡುವ ಭತ್ಯೆಯು ಹಾಗು ವತನ್ ಭೂಮಿಯ ಒಡೆತನವು ಮುಂದುವರೆಯಬೇಕೆಂದರೆ, ಆ ವತನದಾರರು ಬ್ರಿಟಿಷರ ಸರ್ಕಾರಕ್ಕೆ ನಿಷ್ಠರಾದ ಪ್ರಜೆಗಳಾಗಿರಬೇಕು.

೫) ರೂಪಾಯಿಯ ಒಂದು ಭಾಗವನ್ನು ಖಂಡಿತವಾಗಿಯೂ ಅದರ ಇಪ್ಪತ್ತು ಪಟ್ಟು ಮೌಲ್ಯಕ್ಕೆ ಖರೀದಿಸಲೇ ಬೇಕಾಗುತ್ತದೆ.

೩೧. ಎಲ್ಲಾ ವತನದಾರರಲ್ಲಿ, ಕುಲಕರ್ಣಿಗಳಿಗೆ ಅತ್ಯಂತ ಹೆಚ್ಚಿನ ಅನುಕೂಲವು ದೊರೆತಿದೆ. ಅವರಿಗೆ ಯಾವುದೇ ಸೇವೆ ಸಲ್ಲಿಸುವ ಬಾಧ್ಯತೆಗಳಿಲ್ಲ. ಆತ ಸರ್ಕಾರಕ್ಕೆ ಯಾವುದೇ ಸೇವೆ ಸಲ್ಲಿಸದೆಯೇ ತನ್ನ ಭೂಮಿ ಉಳಿಸಿಕೊಳ್ಳಬಹುದು. ಆತ ಕೇವಲ 'ಜುಡಿ' ತೆರಿಗೆಯನ್ನು ಮಾತ್ರ ಪಾವತಿ ಮಾಡಬೇಕು. ಕರಾಕರಣೆ ಮತ್ತು ಪೋಟಗಿಯ ೩ನೆಯ ಒಂದು ಭಾಗವನ್ನು ಅವರು ೧೯೧೩–೧೪ರಲ್ಲಿ ಇಟ್ಟುಕೊಳ್ಳಬಹುದಿತ್ತು. ಅಲ್ಲದೇ ಕುಲಕರ್ಣಿಗಳು ವಂಶಪಾರಂಪರ್ಯವಾಗಿ ಸರ್ಕಾರಕ್ಕೆ ಸೇವೆ ಸಲ್ಲಿಸಬೇಕು ಎಂಬ ನಿಯಮವನ್ನು ಕೂಡ ತೆಗೆದುಹಾಕಲಾಯಿತು. ಆದರೆ ಈಗಲೂ ಕೂಡ ಸರ್ಕಾರವು 'ತಲಾಟಿ' ಎಂಬ ಅಧಿಕಾರಿಗಳ ನೇಮಕದಲ್ಲಿ ಅವರಿಗೆ ಸರ್ಕಾರ ಅದ್ಯತೆಯನ್ನು ನೀಡುತ್ತಿದೆ.

೩೨. ಆದರೆ ಇದೀಗ ನಾನು ಕೇಳಲು ಇಚ್ಛಿಸುವ ಪ್ರಶ್ನೆ ಎಂದರೆ; ಸರ್ಕಾರವು "ಸೇವೆ ಇಲ್ಲದಿದ್ದರೆ... ಭತ್ಯೆ ಇಲ್ಲ" ಹಾಗು "ಸೇವೆಯಷ್ಟೆ ಭತ್ಯೆ" ಎಂಬ ನಿಯಮವನ್ನು ಪಾಲಿಸುತ್ತಿದ್ದರೆ ಈ ನೀತಿಯನ್ನು ಬ್ರಿಟಿಷ್ ಸರ್ಕಾರವು (i) ವರ್ಷಾಶನದಾರರು (ii) ಇನಾಂದಾರರು (iii) ಜಹಗೀರುದಾರರು (iv) ವಂಶಪಾರಂಪರ್ಯವಾದ ಜಿಲ್ಲಾ ಮಟ್ಟದ ಅಧಿಕಾರಿಗಳು (v) ಇತರ ಹಳ್ಳಿಯ ಅಧಿಕಾರಿಗಳು (vi) ಕುಲಕರ್ಣಿಗಳು ಇವರುಗಳಿಗೆ ಏಕೆ ಅನ್ವಯಿಸಲಿಲ್ಲ. ಅವರಿಗೆ ಈಗಲೂ ಗಣನೀಯವಾದ ಭತ್ಯೆ ದೊರೆಯುತ್ತಿದೆ. ಜಹಗೀರುದಾರರಿಗೆ ಹಾಗು ಕುಲಕರ್ಣಿಗಳಿಗೆ ನೀಡುತ್ತಿರುವ ಸೌಲಭ್ಯ ಗಮನಿಸಿದರೆ, ಮಹರರಿಗೆ ನೀಡುತ್ತಿರುವಂತಹ ಸೌಲಭ್ಯ ತದ್ವಿರುದ್ಧವಾಗಿದೆ. ಇದಕ್ಕಿಂತ ಹೆಚ್ಚಿನ ಅಸಮಾನತೆಯನ್ನು ಮಹಾರರು ಅನುಭವಿಸಲು ಸಾಧ್ಯವೇ ಇಲ್ಲ. ಈ ತಾರತಮ್ಯವನ್ನು ಮಹಾರರಿಗೆ ಮಾತ್ರ ಏಕೆ ಅನ್ವಯಿಸಲಾಗುತ್ತದೆ? ಈ ಅಸಮಾನತೆಗೆ ಸರ್ಕಾರವು ನೀಡುವ ವಿವರಣೆಯಾದರೂ ಏನು? ಈ ಕಾರಣ ಹುಡುಕುವಲ್ಲಿ ನಾನು ಅಸಮರ್ಥನಾಗಿದ್ದೇನೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ತದ್ದಿರುದ್ಧವಾಗಿ ಮಹರರಿಗೆ

ಸಂಬಂಧಿಸಿದ್ದಂತೆ ಅನ್ವಯ ಆಗಿರುವ ನೀತಿ ಅತ್ಯಂತ ತಪ್ಪು. ಇತರ ವತನದಾರರಿಗೆ ಸಂಬಂಧ ಪಟ್ಟಂತೆ ಅನ್ವಯ ಆಗಿರುವ ನೀತಿ ಸರಿಯಾಗಿದೆ. ಪೇಶ್ವಾ ಸರ್ಕಾರವು ವತನದ ಆಸ್ತಿ ವಂಶಪಾರಂಪರ್ಯವಾಗಿ ಉಳಿಯಬೇಕು ಆದರೆ ಅದನ್ನು ಅವರು ವರ್ಗಾವಣೆ ಮಾಡಬಹುದು ಎಂಬ ನೀತಿಯನ್ನು ಪಾಲಿಸುತ್ತಿತ್ತು. ತನ್ನ ವೃತ್ತಿ ಹಾಗೂ ವತನದ ಆಸ್ತಿಯನ್ನು ವತನದಾರನು ವರ್ಗಾವಣೆ ಮಾಡಬಲ್ಲವನಾಗಿದ್ದ. ವತನದ ಆಸ್ತಿಯು ಖಾಸಗಿ ಆಸ್ತಿಯಾಗಿದ್ದು ಅದನ್ನು ತನ್ನ ಇತರ ಖಾಸಗಿ ಆಸ್ತಿಯಂತೆ ತನ್ನ ಇಚ್ಛೆಯ ಪ್ರಕಾರ ಆತ ವಿಲೇವಾರಿ ಮಾಡಬಲ್ಲವನಾಗಿದ್ದ. ಇದೇ ಕಾನೂನು ೧೮೨೭ರ ವರೆಗೂ ಜಾರಿಯಲ್ಲಿತ್ತು. ೧೮೨೭ ರಲ್ಲಿ ಬೊಂಬಾಯಿ ಸರ್ಕಾರವು XII ಆದೇಶದ ಅನ್ವಯ ಇದನ್ನು ಬದಲಿಸಿ ಈ ವತನದ ಆಸ್ತಿಯನ್ನು ಪರಭಾರೆ ಮಾಡಲಾಗದು ಎಂಬ ನಿಯಮವನ್ನು ಜಾರಿಗೆ ತಂದಿತು.

೩೩. ಈ ರೀತಿಯಾಗಿ ವತನ್ ಆಸ್ತಿಯ ಮೇಲಿನ ಅಧಿಕಾರ ಬದಲಾದ ನಂತರ, ಸರ್ಕಾರವು ಹಿಂಸೆಗೆಡೆಗೊಡದಂತೆ, ಯಾರ ಭಾವನೆಗಳಿಗೂ ಧಕ್ಕೆ ತರದಂತೆ, ಈ ಅನಿವಾರ್ಯವಾದ ಮಾರ್ಗವನ್ನು ಅನುಸರಿಸಿತು. ನನ್ನ ಗೌರವ ಪೂರ್ವಕವಾದ ವಿನಂತಿ ಏನೆಂದರೆ ಮಹಾರರ ವತನವು ಯಾವುದೇ ವತನ್ ಆಸ್ತಿಗಿಂತ ಭಿನ್ನವಲ್ಲ ಬೇರೆಯ ವತನ್ ಆಸಿಗಳಿಗೆ "ಸೇವೆ ಇಲ್ಲ..... ಭತ್ಯೆ ಇಲ್ಲ" "ಎಷ್ಟು ಸೇವೆಯೋ ಅಷ್ಟೇ ಭತ್ಯೆ" ಮುಂತಾದ ನೀತಿಗಳು ಅನ್ವಯ ಆಗುವುಂತಿದ್ದರೆ 'ಮಹಾರರ ವತನ್‌ಗಳಿಗೂ ಇದು ಏಕೆ ಅನ್ವಯವಾಗಬಾರದು ಎಂಬುದು.

೩೪. ಜುಡಿಯನ್ನು ಹೆಚ್ಚಳ ಮಾಡಲು ಮತ್ತೊಂದು ಕಾರಣವನ್ನು ಈ ಸರ್ಕಾರ ನೀಡುತ್ತಿದೆ. ಅದೇನೆಂದರೆ ಹಳ್ಳಿಯ ಕೆಳವರ್ಗದ ಇತರ ಸೇವಕರಿಗೆ ಉತ್ತಮ ವೇತನವನ್ನು ನೀಡಲು ಇದರಿಂದ ಸಹಾಯವಾಗುತ್ತದೆ. ಏಕೆಂದರೆ ಜುಡಿಯಿಂದ ಬರುವ ಆದಾಯದಿಂದ ಅವರ ಭತ್ಯೆಯನ್ನು ಹೆಚ್ಚಳ ಮಾಡಬಹುದು. ಜೂಡಿಯನ್ನು ಹೆಚ್ಚಿಸಿರುವುದನ್ನು ಸಮರ್ಥಿಸಿಕೊಳ್ಳುತ್ತಾ ಬಾಂಬೆ ಕಂದಾಯ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿಯವರು ವಿಧಾನಸಭಾದಸ್ಯರಾದ ಶ್ರೀ ಬಿ.ಕೆ. ಗಾಯಕವಾಡೆ ಹಾಗೂ ಶ್ರೀ ಎಂ.ಜೆ. ದೇಸಾಯಿಯವರಿಗೆ ಬರೆದ ತಮ್ಮ ೧೯೩೮ರ ನವೆಂಬರ್ ೧೧ರ ಎಲ್.ಎ ೨೬–ಎಫ್. ನೇ ಸಂಖ್ಯೆಯ ಪತ್ರದಲ್ಲಿ ಹೀಗೆ ಹೇಳುತ್ತಾರೆ:

೩ "ಹಳ್ಳಿಯ ಗಾತ್ರವನ್ನು ಅನುಸರಿಸಿ ಅಥವಾ ರೂ. ೫೦ ರಿಂದ ೧೦೦/– ರವರೆಗೆ ನೀಡುತ್ತಿರುವ ಭತ್ಯದ ಆಧಾರದ ಮೇಲೆ ಮಹಾರರಿಗೆ ನೀಡಿರುವ ಇನಾಂ ಜಮೀನಿನಿಂದ ಆಗುತ್ತಿರುವ ನಷ್ಟ ರೂ. ೧೦ ರಿಂದ ೨೦ರ ವರೆಗೆ ಇದೆ. ಇವರಿಗಿಂತಲೂ ಕಡಿಮೆ ವೇತನವನ್ನು ಪಡೆಯುವ ಗ್ರಾಮಸೇವಕರು ಇದ್ದಾರೆ. ಕಡಿಮೆ ವೇತನವನ್ನು ಪಡೆಯುವವರಿಗೆ ಹೆಚ್ಚಿನ ವೇತನವನ್ನು ನೀಡಲು ಮಾಡುತ್ತಿರುವ ಅವಕಾಶಗಳು ಹೆಚ್ಚುತ್ತಲೇ ಇವೆ. ಇವರ ವೇತನಶ್ರೇಣಿಗಳಿಗಿಂತ ಹೆಚ್ಚಿನ ವೇತನವನ್ನು ಪಡೆಯುತ್ತಿರುವವರ ಭತ್ಯೆಯನ್ನು ಕಡಿಮೆ ಮಾಡುವುದು ಇವರ ಭತ್ಯೆಗಳನ್ನು ಹೆಚ್ಚುಮಾಡಲು ಇರುವ ಆದಾಯದ ಒಂದು ಮೂಲ."

೩೫. ಈ ಹೇಳಿಕೆಯಿಂದ 'ಗ್ರಾಮಸೇವಕರಿಗೆ ಉತ್ತಮ ವೇತನವನ್ನು ನೀಡಲು ಮಹಾರರ ಮೇಲೆ ವಿಧಿಸುತ್ತಿರುವ ಜೂಡಿಯನ್ನು ಹೆಚ್ಚುಮಾಡಲಾಗಿದೆ' ಎಂಬುದು ತಿಳಿದುಬರುತ್ತದೆ. ಕೆಳಮಟ್ಟದ ಎಲ್ಲಾ ಗ್ರಾಮಸೇವಕರಿಗೂ ಕಡಿಮೆ ಭತ್ಯವನ್ನುನೀಡಲಾಗಯತ್ತಿದೆ ಎಂಬ ವಿಷಯದಲ್ಲಿ ಸಂದೇಹವಿರುವುದು ಸಾಧ್ಯವಿಲ್ಲ. ಆದರೆ, ಮಹಾರರು ಗ್ರಾಮಗಳಲ್ಲಿ ಸಲ್ಲಿಸುತ್ತಿರುವ ಸೇವೆಯ ದೃಷ್ಟಿಯಿಂದ ಅವರಿಗೇನೂ ಉತ್ತಮವಾದ ವೇತನವು ಸಿಗುತ್ತಿಲ್ಲವೆಂಬುದೂ ನಿಜ. ಆದರೆ, ಈ ವಿಷಯದಲ್ಲಿ ಗೌರವಪೂರ್ವಕವಾಗಿ ನಾನು ಬಿನ್ನವಿಸುವುದೇನೆಂದರೆ, ಸರಕಾರದ ಈ ನೀತಿಯು, ರಾಮನನ್ನು ದೋಚಿ ಕೃಷ್ಣನಿಗೆ ನೀಡಿದ

ಹಾಗಿದೆ ಮತ್ತು ಇದು ಸರಕಾರದ ಘೋಷಿತ ನೀತಿಗೆ ಹಾಗೂ ವತನದ ಕಾಯ್ದೆಯ ವಿಧಿಗಳಿಗೆ ವಿರುದ್ಧವಾಗಿದೆ.

೩೬. ಇನ್ನು ಜೂಡಿಯನ್ನು ಹೆಚ್ಚಿಸಿದುದನ್ನು ಕುರಿತಂತೆ, ಸರ್ಕಾರವು ಕಟ್ಟುನಿಟ್ಟಾಗಿ ಅನುಸರಿಸಬೇಕಾದ ಕೆಲವು ನಿಬಂಧನೆಗಳಿವೆ. ಇದರ ಸಾರಾಂಶ ಸಹಿತ ವಿವರಣೆಯನ್ನು ನವದೆಹಲಿಯ ಸರ್ವೇಕ್ಷಣಾ ಆಯುಕ್ತರಾದ ಕರ್ನಲ್ ಡಬ್ಲೂಸಿ ಆಂಡರ್‌ಸನ್ ಅವರು ವಿವರಿಸಿದ್ದಾರೆ. ಈ ಕುರಿತು ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ೧೮೭೭ರ ಜುಲೈ ೨೩ರಂದು ಪತ್ರವನ್ನು ಬರೆದಿದ್ದಾರೆ. ಇದು ಬೊಂಬಾಯಿ ಸರ್ವೇಕ್ಷಣೆ ಹಾಗು ಒಪ್ಪಂದ ದಾಖಲಾತಿ ಪುಸ್ತಕದ ಎರಡನೆಯ ಸಂಪುಟದಲ್ಲಿ, ನಾಲ್ಕನೆಯ ಅನುಬಂಧವಾಗಿ, ಪುಟ ೪೯೬–೫೦೫ರಲ್ಲಿ ಮುದ್ರಣಗೊಂಡಿದೆ ಇದರ ಲೇಖಕ R.G. ಗೋರ್ಡನ್, I.C.S

೩೭. ಬೊಂಬಾಯಿ ಸರ್ಕಾರವು ೧೮೭೫ರ ನವೆಂಬರ್ ೧ ರಂದು ಈ ಜೂಡಿಯ ಹೆಚ್ಚಳಕ್ಕೆ ಸಂಬಂಧಿಸಿದಂತೆ ಒಂದು ನಿರ್ಣಯವನ್ನು (ಸಂ. ೬೧೪೧) ಕೈಗೊಂಡಿತ್ತು. ಇದರಲ್ಲಿ ಕೆಲ ಅನುಮಾನಗಳಿದ್ದ ಹಾಗೆ ಕಂಡುಬರುತ್ತದೆ. ಆದ್ದರಿಂದ ಇದರ ವಿವರಣೆಯನ್ನು ನೀಡಬೇಕು ಎಂಬ ಅನಿಸಿಕೆ ಕರ್ನಲ್ ಆ್ಯಂಡರ್‌ಸನ್ ಅವರಿಗೆ ಉಂಟಾಯಿತು. ಆತ ತನ್ನ ಪತ್ರದ ನಾಲ್ಕನೆಯ ಪ್ಯಾರಾದಲ್ಲಿ ನೀಡಿರುವ ವಿವರಣೆಯು ಈ ಕೆಳಗಿನಂತಿದೆ.

೪. "ಸರಕಾರವು ೧೮೭೫ರ ನವೆಂಬರ್ ೧ ರಂದು ತೆಗೆದುಕೊಂಡ ೬೧೪೧ನೆಯ ಸಂಖ್ಯೆಯ ನಿರ್ಣಯದಲ್ಲಿ ವತನ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಅಧಿಕಾರಿಗಳು ನಿರ್ಧರಿಸಿದ ಭತ್ಯೆಯನ್ನು ನೀಡಬೇಕು ಎಂಬ ಆಶಯವಿತ್ತು. ಆದರೆ ಇದರಿಂದ ಉಳಿಯುವ ಹಣದಿಂದ ಆದಾಯವನ್ನು ಹೆಚ್ಚಿಸಿಕೊಳ್ಳುವ ಇಚ್ಛೆ ಸರ್ಕಾರಕ್ಕೆ ಇರಲಿಲ್ಲ."

೩೮. ೧೮೭೫ರ ನಿರ್ಣಯದ ಬಗ್ಗೆ ಕರ್ನಲ್ ಆಂಡರ್‌ಸನ್ ಅವರು ನೀಡಿರುವ ವಿವರಣೆಯ ವಿರುದ್ಧ ಸರಕಾರವು ಯಾವ ಹೊಸನಿರ್ಣಯವನ್ನೂ ತಂದಿಲ್ಲ, ಅಥವಾ ೧೮೭೫ರ ನಿರ್ಣಯಕ್ಕೆ ಯಾವ ಬದಲಾವಣೆಯನ್ನೂ ಮಂಡಿಸಿಲ್ಲ. ಅಂದರೆ, ೧೮೭೫ರ ನಿರ್ಣಯ ಹಾಗೂ ಕರ್ನಲ್ ಆಂಡರೆಸನ್ ಅವರ ವಿವರಣೆಗಳು ಇಂದೂ ಹಾಗೆಯೇ ಇವೆ ಮತ್ತು ಜೂಡಿಯ ಪ್ರಶ್ನೆಯ ಮುಖ್ಯ ಆಶಯ ಹಾಗೇ ಉಳಿದಿದೆ. ಈ ಹಿನ್ನೆಲೆಯಲ್ಲಿ ಇತರ ವತನದಾರರಿಗೆ ಹೆಚ್ಚಿನ ಭತ್ಯೆಯನ್ನು ನೀಡಲು ಮಹಾರರ ಮೇಲಿನ ಜೂಡಿಯನ್ನು ಹೆಚ್ಚಿಸುವುದು ಮೇಲೆ ಹೇಳಿದ ನಿರ್ಣಯದ ನೇರ ಉಲ್ಲಂಘನೆಯಾಗಿದೆ.

೩೯. ಈ ನಿರ್ಣಯವು ಜೂಡಿಯನ್ನು ಹೆಚ್ಚಳ ಮಾಡಲು ಇವರ ಎರಡು ನಿಯಮಗಳನ್ನು ಹೇಳುತ್ತದೆ. (i) ಸರ್ಕಾರದ ಆದಾಯವನ್ನು ಹೆಚ್ಚಳ ಮಾಡಿಕೊಳ್ಳಲು ಜೂಡಿಯನ್ನು ಹೆಚ್ಚಳ ಮಾಡುವಂತಿಲ್ಲ, ಮತ್ತು (ii) ಕೇವಲ ಅಧಿಕಾರಿಯ ಭತ್ಯೆಯನ್ನು ಹೆಚ್ಚಳ ಮಾಡಬೇಕಾದಂತಹ ಸಂದರ್ಭದಲ್ಲಿ ಮಾತ್ರವೇ ಜೂಡಿಯನ್ನು ಹೆಚ್ಚಳ ಮಾಡಲಾಗುತ್ತದೆ. ಇಲ್ಲಿ ಎದುರಾಗುವ ಮತ್ತೊಂದು ಪ್ರಮುಖ ಪ್ರಶ್ನೆ ಎಂದರೆ ಮಹಾರರ ಭೂಮಿಯ ಮೇಲೆ ಜೂಡಿಯನ್ನು ಹೆಚ್ಚಳ ಮಾಡುತ್ತಿರುವುದರಿಂದ ಮಹರ್ ಅಧಿಕಾರಿಗಳ ಸಂಬಳ ಹೆಚ್ಚಾಗುತ್ತಿದೆಯೇ? ಒಂದು ವೇಳೆ ಈ ರೀತಿಯಾದರೆ ಇದಕ್ಕೆ ಯಾವುದೇ ವಿರೋಧ ನಾನು ವ್ಯಕ್ತಪಡಿಸುವುದಿಲ್ಲ. ಆದರೆ ವಾಸ್ತವವಾಗಿ ಹಾಗೆ ಆಗಿಲ್ಲ. ಮಹಾರರ ಭೂಮಿಯ ಮೇಲೆ ಜೂಡಿಯನ್ನು ಹೆಚ್ಚಳ ಮಾಡುತ್ತಿರುವುದರಿಂದ ಲಾಭ ಆಗುತ್ತಿರುವುದು ಭಿಲ್ಲರಿಗೆ, ರಾಮೋಷಿಯರಿಗೆ ಹಾಗು ಇತರ ಕೆಳಮಟ್ಟದ ಹಳ್ಳಿಯ ಅಧಿಕಾರಿಗಳಿಗೆ. ಯಾವ ಕಾನೂನಾದರೂ ಕೂಡ ಈ ಭಿಲ್ಲರು. ರಾಮೋಶಿಯರು ಹಾಗು ಇತರ ಕೆಳಮಟ್ಟದ ಹಳ್ಳಿಯ ಅಧಿಕಾರಿಗಳು ಮಹರ್ ವತನದಾರರ ಬದಲಿಗೆ ಕುರಿತಂತೆ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

೪೦. ಈ ರೀತಿ ಭಿಲ್ಲರಿಗೆ, ರಾಮೋಷಿಯರಿಗೆ ಹಾಗು ಇತರ ಕೆಳಮಟ್ಟದ ಅಧಿಕಾರಿಗಳಿಗೆ ಭತ್ಯೆಯನ್ನು ಹೆಚ್ಚಳ ಮಾಡುವುದಕ್ಕಾಗಿ ಜೂಡಿಯನ್ನು ಹೆಚ್ಚಿಸುತ್ತೇವೆಂದು ಹೇಳುವಾಗ ನಾವು ವತನದ ಕಾಯ್ದೆಯನ್ನೇ ಮರೆತಂತಿದೆ. ಈ ಕಾಯ್ದೆಯ ಪ್ರಕಾರ ಪ್ರತಿಯೊಂದು ವತನವೂ ಪ್ರತ್ಯೇಕವಾದ, ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿವೆ. ಬೇರೆ ಬೇರೆ ವತನಗಳಿಗೆ ಬೇರೆ ಬೇರೆ ಅಂಶಗಳನ್ನು ಸೇರಿಸಲಾಗಿದೆ. ಅದನ್ನು ಅನುಭೋಗಿಸುವ ಹಕ್ಕು ಆ ಭೂಮಿಯ ವತನದಾರನಿಗೆ ಹಾಗು ಆತನ ಕುಟುಂಬದವರಿಗೆ ಮಾತ್ರವೇ ಇರುತ್ತದೆ ಇದನ್ನು ಈ ಭೂಮಿಗೆ ಸೇರದ ವತನದಾರರಿಗೆ ವರ್ಗಾವಣೆ ಮಾಡುವ ಹಕ್ಕು ಯಾರಿಗೂ ಇರುವುದಿಲ್ಲ. ಅಂತೆಯೇ ಪಾಟೀಲರ ವತನವು ಮಹಾರರ ವತನಕ್ಕಿಂತ ಬೇರೆಯಿತ್ತು. ಕುಲಕರ್ಣಿಯ ವತನವು ಅಸ್ತಿತ್ವದಲ್ಲಿದ್ದಾಗ ಅದು ಇತರರ ವತನಗಳಿಗಿಂತ ಪ್ರತ್ಯೇಕವಾಗಿತ್ತು. ಒಬ್ಬ ಪಾಟೀಲ, ಪಾಟೀಲನ ಭೂಮಿಯ ಹಕ್ಕನ್ನು ಮಹಾರನಿಗೆ ಹಸ್ತಾಂತರಿಸುವಂತೆ ಇರಲಿಲ್ಲ. ಅಂತೆಯೇ ಒಬ್ಬ ಮಹಾರ ಕೂಡ ತನ್ನ ಭೂಮಿಯನ್ನು ಪಾಟೀಲನಿಗೆ ಹಸ್ತಾಂತರಿಸುವಂತಿರಲಿಲ್ಲ. ಅಂತೆಯೇ ಜುಡಿಯ ಹೆಚ್ಚಳ ಕೂಡ ಒಂದೇ ವತನಕ್ಕೆ ಸಂಬಂಧಿಸಿದ ಅಧಿಕಾರಿಯ ಭತ್ಯೆಯ ಹೆಚ್ಚಳ ಮಾಡಲು ಮಾತ್ರವೇ ಮಾಡಬಹುದಾಗಿತ್ತು. ಅಲ್ಲದೇ ಒಂದು ವತನವನ್ನು ಮತ್ತೊಬ್ಬ ವತನದ ಒಡೆಯನಿಗೆ ಹಸ್ತಾಂತರ ಮಾಡುವುದು ಕೂಡ ಕಾನೂನುಬಾಹಿರವಾಗಿತ್ತು. ಆದ್ದರಿಂದ ಮಹಾರರ ಭತ್ಯೆ ಹೆಚ್ಚಳ ಮಾಡಲು ಪಾಟೀಲರ ಭೂಮಿಯ ಮೆಲಿನ ಜೂಡಿಯನ್ನು ಹೆಚ್ಚಳ ಮಾಡುವ ಅಧಿಕಾರ ಸರ್ಕಾರಕ್ಕೆ ಇರಲಿಲ್ಲ ಅಂತೆಯೇ ಕುಲಕರ್ಣಿಗಳ ಭೂಮಿಯ ಮೇಲಿನ ಜೂಡಿಯನ್ನು ಹೆಚ್ಚಳ ಮಾಡಿ ಅದರಿಂದ ಪಾಟೀಲರ ಭತ್ಯೆಯನ್ನು ಹೆಚ್ಚಳ ಮಾಡುವಂತಿರಲಿಲ್ಲ. ಆದ್ದರಿಂದ ಭಿಲ್ಲರಿಗೆ ಹಾಗು ರಾಮೋಷಿಯರಿಗೆ ಭತ್ಯೆಯನ್ನು ಹೆಚ್ಚಳ ಮಾಡುವ ಸಲುವಾಗಿ ಮಹಾರರ ಭೂಮಿಯ ಮೇಲಿನ ಜೂಡಿಯನ್ನು ಹೆಚ್ಚಳ ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲ ಎಂಬುದೇ ನನ್ನ ವಾದ.

೪೧. ಮೇಲೆ ನೀಡಿರುವ ಎಲ್ಲಾ ಅಂಶಗಳನ್ನು ಪುರಾವೆಯನ್ನಾಗಿ ಒದಗಿಸಿ ಸರ್ಕಾರವು ಮಹಾರರ ಭೂಮಿಯ ಮೇಲಿನ ಜುಡಿಯನ್ನು ಹೆಚ್ಚಳ ಮಾಡಿರುವುದು ಕಾನೂನು ಬಾಹಿರ ಎಂದು ನಾನು ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

೪೨. ಈ ವಿಷಯದಲ್ಲಿ ಈ ರಾಜ್ಯದ ಇತರ ಕಡೆಗಳಲ್ಲಿ ಮಹಾರ್ ಜನಾಂಗದವರ ಭತ್ಯೆಯ ವಿಷಯದಲ್ಲಿ ಇರುವ ವಾಸ್ತವ ಪರಿಸ್ಥಿತಿಯನ್ನು ಮಹಾಪ್ರಭುಗಳ ಮುಂದಿರಿಸಲು ನಾನು ಬಯಸುತ್ತೇನೆ. ಮಹಾರ್ ಜನಾಂಗದವರಿಗೆ ನೀಡುವ ಭತ್ಯೆಯು ಮೂರು ಮೂಲಗಳಿಂದ ಬರುತ್ತದೆ 1) ಇನಾಂ ಭೂಮಿ ೨) ಹಳ್ಳಿಗರು ಮಹಾರ್ ಅಧಿಕಾರಿಗಳಿಗೆ ನೀಡುವ ವಾರ್ಷಿಕ ಭತ್ಯೆಯಾದ – 'ಬಲೂಟ' ೩) ಸರ್ಕಾರಿ ಖಜಾನೆಯಿಂದ ಬರುವ ನಗದು ಭತ್ಯೆ. ಮೊದಲ ಹಾಗು ಕಡೆಯ ಮೂಲಗಳು ಎಲ್ಲಾ ಜಿಲ್ಲೆಗಳಲ್ಲಿಯೂ ಕಾಣಲು ಸಿಗುವುದಿಲ್ಲ. ಹಲವಾರು ಜಿಲ್ಲೆಗಳಲ್ಲಿ ಮಹಾರ್ ಜನಾಂಗದವರಿಗೆ ಯಾವುದೇ ವತನವೂ ಇಲ್ಲ ಅಥವಾ ಯಾವುದೇ ನಗದು ಭತ್ಯೆಯೂ ದೊರೆಯುವುದಿಲ್ಲ. ಎರಡನೆಯ ಮೂಲ ಎಂದರೆ 'ಬಲೂಟ'ವನ್ನು ಮಾತ್ರವೇ ನಾವು ಈ ಇಡೀ ರಾಜ್ಯದಾಂದ್ಯಂತ ಕಾಣಬಹುದು ಇದೇ ಮಹಾರ್ ಜನಾಂಗದವರ ಪ್ರಧಾನ ಹಣಕಾಸಿನ ಮೂಲ. ಇದು ಜಾರಿಯಲ್ಲಿರುವ ಹಳ್ಳಿಗಳ ಸಂಖ್ಯೆ ಸಣ್ಣದಲ್ಲ. ಬೆಳಗಾವಿ ಜಿಲ್ಲೆಯಲ್ಲಿ ೩೧೭ ಈ ರೀತಿಯ ಹಳ್ಳಿಗಳಿದ್ದರೆ, ಬಿಜಾಪುರ ಜಿಲ್ಲೆಯಲ್ಲಿ ೫೪೩, ಧಾರವಾಡ ಜಿಲ್ಲೆಯಲ್ಲಿ ೫೭೨ ಹಾಗು ಶೋಲಾಪುರ ಜಿಲ್ಲೆಯಲ್ಲಿ ೪೬೩ ಈ ರೀತಿಯ ಹಳ್ಳಿಗಳಿವೆ. ಅಂದರೆ ಇಲ್ಲಿ ಮಹಾರ್ ಜನಾಂಗದವರಿಗೆ ಬಲೂಟವನ್ನು ಹೊರತು ಪಡಿಸಿದರೆ ಬೇರೆ ಯಾವುದೇ ಆದಾಯದ ಮೂಲ ಇಲ್ಲ. ಇದೇ ಪರಿಸ್ಥಿತಿಯು ಥಾನೆ, ಕೋಲಾಬಾ ಹಾಗು ರತ್ನಗಿರಿ ಜಿಲ್ಲೆಗಳಲ್ಲಿ ಕೂಡ ಇರುತ್ತದೆ. ಆದರೆ 'ಬಲೂಟ' ಏಕೈಕ ಆದಾಯದ

ಮೂಲ ಆಗಿರುವ ಹಳ್ಳಿಗಳ ಪಟ್ಟಿಯು ಸಂಪೂರ್ಣವಾದುದಲ್ಲ'. ಆದರೆ ಇಲ್ಲಿ ದೊರೆತಿರುವ ಮಾಹಿತಿಯಿಂದ ಬಹಳಷ್ಟು ಹಳ್ಳಿಗಳು ಕೇವಲ 'ಬಲೂಟ'ವನ್ನೇ ಅವಲಂಬಿಸಿದೆ ಎನ್ನುವುದು ಸ್ಪಷ್ಟವಾಗುತ್ತದೆ.

೪೩. ಇನ್ನು 'ಬಲೂಟ' ದಿಂದ ಮಹಾರರಿಗೆ ಭತ್ಯೆಯನ್ನು ನೀಡುವುದು ಎಷ್ಟು ದೋಷಯುಕ್ತವಾದದ್ದು ಎಂಬುದನ್ನು ನಾನು ಮಹಾಪ್ರಭುಗಳ ಗಮನಕ್ಕೆ ತರಬಯಸುತ್ತೇನೆ. ಮಹಾರ್ ಜನಾಂಗದವರು ಸರ್ಕಾರಿ ನೌಕರರು, ಸರ್ಕಾರವು ಅವರಿಂದ ಸೇವೆ ಪಡೆಯುತ್ತದೆ. ಆದರೆ ಅವರ ಭತ್ಯೆ ವಿಷಯಕ್ಕೆ ಬಂದಾಗ ಅದನ್ನು ಸರ್ಕಾರ ಹಳ್ಳಿಯ ಜನರ ಜವಾಬ್ದಾರಿಗೆ ವಹಿಸುತ್ತದೆ. ಈ ರೀತಿ ಸರ್ಕಾರಿ ಸೇವಕರನ್ನು ನೋಡುವುದು ಅವಮಾನಕರವಲ್ಲದಿದ್ದರೂ ವಿಚಿತ್ರವಾಗಿದೆ. ಯಾವ ಸರ್ಕಾರ ತನ್ನನ್ನು ಸುಸಂಸ್ಕೃತ ಎಂದು ಕರೆದುಕೊಳ್ಳುತ್ತದೆಯೋ ಅಂತಹ ಸರ್ಕಾರಕ್ಕೆ ಈ ರೀತಿಯ ವರ್ತನೆ ಶೋಭಿಸುವುದಿಲ್ಲ.

೪೪. ಈ ರೀತಿ 'ಬಲೂಟ' ಪಡೆಯುವ ದೋಷಯುಕ್ತವಾದ ಸಂಪ್ರದಾಯವು ಮಹಾರರ ಭತ್ಯೆಗೆ ಸಂಬಂಧಿಸಿದಂತೆ ಅವರಿಗೆ ಸರ್ಕಾರವು ಮಾಡುತ್ತಿರುವ ಅನ್ಯಾಯವಾಗಿದೆ. ಹಳ್ಳಿಗರು ಮಹಾರ್ ಜನಾಂಗದವರಿಗೆ ಎಷ್ಟು 'ಬಲೂಟ'ವನ್ನು ನೀಡುತ್ತಿದೆ ಎಂಬುದನ್ನು ಪರಿಗಣಿಸಿ, ಅದರ ಮೇಲೆ ಮಹಾರ್ ಜನಾಂಗದವರ ಒಟ್ಟು ಭತ್ಯೆಯನ್ನು ಸರ್ಕಾರವು ನಿರ್ಧಾರ ಮಾಡುತ್ತದೆ. ಆದರೆ ಒಂದು ವ್ಯಾವಹಾರಿಕ ಸತ್ಯ ಹಾಗು ಅನುಭವ ಏನೆಂದರೆ ಮಹಾರರಿಗೆ 'ಬಲೂಟ'ವು ದೊರಕುವುದೇ ಇಲ್ಲ. ಅದಕ್ಕೆ ಕಾರಣಗಳು ಕೂಡ ಸ್ಪಷ್ಟವಾಗಿದೆ. ಮಹಾರರು ಹಾಗು ಹಳ್ಳಿಗರ ನಡುವಿನ ಸಂಬಂಧ ಎಂದಿಗೂ ಸೌಹಾರ್ದಯುತವಾಗಿ ಇರುವುದಿಲ್ಲ. ಮಹಾರರು ಹಾಗು ಹಳ್ಳಿಗರ ನಡುವೆ ಜಗಳ ಇಲ್ಲದಿರುವ ಒಂದೇ ಒಂದು ಹಳ್ಳಿಯೂ ಇಲ್ಲ. ಯಾವಾಗಲೂ ಆಗುವುದು ಏನೆಂದರೆ, ಮಹಾರರು ಹಾಗು ಹಳ್ಳಿಗರ ನಡುವಿನ ಸಂಬಂಧ ಸೌಹಾರ್ದಯುತವಾಗಿಯೇ ಇರುತ್ತದೆ ಮತ್ತು ತಮಗೆ 'ಬಲೂಟ' ದೊರೆಯುತ್ತದೆ ಎಂಬ ನಿರೀಕ್ಷೆಯಲ್ಲಿ ಇಡೀ ವರ್ಷ ಮಹಾರರು ದಣಿವರಿಯದೇ ಹಳ್ಳಿಗೆ ಮತ್ತು ಸರಕಾರಕ್ಕೆ ಸೇವೆಯನ್ನು ಸಲ್ಲಿಸುತ್ತಾರೆ. ಆದರೆ ಕೊಯ್ಲಿನ ಸಮಯ ಬರುತ್ತಿದ್ದಂತೆಯೇ ಯಾವುದೋ ಕಾರಣಕ್ಕೆ ಇವರಿಬ್ಬರ ನಡುವೆ ವೈಮನಸ್ಯ ಏರ್ಪಡುತ್ತದೆ. ಇದರ ಪರಿಣಾಮವಾಗಿ ಹಳ್ಳಿಗರು ಮಹಾರರಿಗೆ ಬಲೂಟ ನೀಡಲು ನಿರಾಕರಿಸುತ್ತಾರೆ. ಮಹಾರರಿಗೆ ಬಲೂಟ ನೀಡುವುದನ್ನು ತಪ್ಪಿಸುವ ಮತ್ತು ಅದರೊಂದಿಗೆ ಸೇರಿಕೊಂಡು ಸ್ವಾಭಾವಿಕ ವೈಷಮ್ಯ – ಇವು ಬಲೂಟ ವ್ಯವಸ್ಥೆಯು ನಿಷ್ಪ್ರಯೋಜಕವಾಗಲು ಇರುವ ಕಾರಣಗಳು. ಇದರ ಪರಿಣಾಮ ಏನೆಂದರೆ 'ಬಲೂಟ' ಪಡೆಯುವ ನಿರೀಕ್ಷೆಯಿಂದ ಮಹಾರರು ವರ್ಷವಿಡೀ ಕೆಲಸಮಾಡಿದರೂ ಅವರಿಗೆ ಬಲೂಟ ದೊರೆಯುವುದೇ ಇಲ್ಲ. ಇದನ್ನು ಕೊಡಲೇಬೇಕು ಎಂದು ಖಡ್ಡಾಯವಾಗಿ ಹೇಳುವ ಅಧಿಕಾರ ಮಹಾರರಿಗೆ ಇರುವುದಿಲ್ಲ. ಆತ ಹಳ್ಳಿಯಲ್ಲಿ ಅಲ್ಪಸಂಖ್ಯಾತನಾಗಿರುತ್ತಾನೆ ಆದ್ದರಿಂದ ಅಲ್ಲಿ ಹಳ್ಳಿಗರ ನಿರ್ಣಯವೇ ಅಂತಿಮವಾಗುತ್ತದೆ. ಈ ಹೋರಾಟದಲ್ಲಿ ಸಂಕಷ್ಟವನ್ನು ಅನುಭವಿಸುವವನು ಮಹಾರನೇ ಆಗಿರುತ್ತಾನೆ. ಮಹಾರರಿಂದ ಸೇವೆಯನ್ನು ಪಡೆಯುವ ಅಧಿಕಾರಿಗಳು ಹಳ್ಳಿಗರಿಂದ ಬಲೂಟವನ್ನು ಪಡೆಯಲು ಮಹಾರರಿಗೆ ಯಾವ ಸಹಾಯವನ್ನೂ ಮಾಡುವುದಿಲ್ಲ. ಇದು ಮಹಾರರಿಗೆ ಆಗುತ್ತಿರುವ ಅನ್ಯಾಯವನ್ನು ಇನ್ನೂ ಹೆಚ್ಚು ಮಾಡಿ, ಅಸಹನೀಯವಾಗುವಂತೆ ಮಾಡುತ್ತದೆ. ಕಾನೂನಿನಲ್ಲಿ ಒಂದು ಪೂರ್ವನಿಯೋಜಿತ ನಿಯಮವಿದೆ. ಅದೇನೆಂದರೆ 'ಬಲೂಟ' ವನ್ನು ಸರ್ಕಾರಿ ಅಧಿಕಾರಿಗಳು ತೆರಿಗೆಯೊಂದಿಗೆ ಪಡೆದುಕೊಂಡು, ಆನಂತರ ಅದನ್ನು ಮಹಾರರಿಗೆ ಕೊಡಬಹುದು. ಆದರೆ ಬಹುಸಂಖ್ಯೆಯ ಅಧಿಕಾರಿಗಳು ಈ ರೀತಿ ಮಾಡಲು ನಿರಾಕರಿಸಿದ್ದಾರೆ. ಏಕೆಂದರೆ ಅವರಿಗೆ ಅನಂತರ ತಾವು ಹಳ್ಳಿಯವರ ಕೆಂಗಣ್ಣಿಗೆ ಬಲಿಯಾಗಬಹುದು ಎಂಬ ಭೀತಿಯಿದೆ.

೪೫. ಈ ಬಲೂಟ ಪದ್ಧತಿಯು ಒಂದು ಕಾಲದಲ್ಲಿ ಹಳ್ಳಿಯ ಎಲ್ಲ ಸೇವಕರಿಗೂ ಅನ್ವಯ ಆಗುತ್ತಿತ್ತು. ಮಹಾರರಂತೆ ಅದು ಪಾಟೀಲರಿಗೆ ಹಾಗು ಕುಲಕರ್ಣಿಗಳಿಗೆ ಕೂಡ ಅನ್ವಯ ಆಗುತ್ತಿತ್ತು. ಆದರೆ ೧೮೪೪ ರಿಂದ ಈ ಪದ್ಧತಿಯನ್ನು ಪಾಟೀಲರಿಗೆ ಹಾಗು ಕುಲಕರ್ಣಿಗಳಿಗೆ ಅನ್ವಯವಾಗದಂತೆ ಮಾಡಿತು. ಅದರ ಬದಲು ನೇರವಾಗಿ ಇವರಿಗೆ ಸರ್ಕಾರಿ ಖಜಾನೆಯಿಂದ ಭತ್ಯೆಗಳು ಪಾವತಿಸಲ್ಪಡತೊಡಗಿದವು. ಇದಕ್ಕೆ ಸರ್ಕಾರವು ನೀಡಿದ ಕಾರಣ ಎಂದರೆ ಪಾಟೀಲರು ಹಾಗು ಕುಲಕರ್ಣಿಗಳು ಬಲಪ್ರಯೋಗ ಮಾಡಿ ಹಳ್ಳಿಗರಿಂದ ತಮಗೆ ದೊರೆಯಬೇಕಿದ್ದುದಕ್ಕಿಂತ ಹೆಚ್ಚಿನ ಹಣವನ್ನು ಪಡೆಯುತ್ತಾರೆ ಎಂಬುದು. ಈ ಕಾರಣದಿಂದ ಪಾಟೀಲರಿಗೆ ಹಾಗು ಕುಲಕರ್ಣಿಗಳಿಗೆ ಈ ಹೊಸ ಪದ್ಧತಿ ಅನ್ವಯವಾಗದಂತೆ ಮಾಡಬಹುದಾದರೆ, ಅದು ಮಹಾರರಿಗೆ ಅನ್ವಯವಾಗಬಾರದ್ದೇಕೆ? ಪಾಟೀಲರು ಹಾಗು ಕುಲಕರ್ಣಿಗಳು ಹೆಚ್ಚು ಮೊತ್ತವನ್ನು ಪಡೆಯುವಷ್ಟು ಬಲಿಷ್ಠರಾಗಿದ್ದರೆ, ತಮಗೆ ನ್ಯಾಯಯುತವಾಗಿ ದೊರೆಯಬೇಕಾದ ಮೊತ್ತ ಕೂಡ ಪಡೆಯದಷ್ಟು ಅಸಮರ್ಥರಾಗಿದ್ದಾರೆ ಮಹಾರರು. ಈ ವಿಷಯದಲ್ಲಿ ಸರ್ಕಾರವು ಕೇವಲ ಹಳ್ಳಿಗರ ಹಿತಚಿಂತನೆಯನ್ನು ಮಾತ್ರ ಮಾಡಿದೆ. ಅವರು ಮಹಾರರ ಹಿತಾಸಕ್ತಿಯ ಬಗ್ಗೆ ಗಮನವನ್ನೇ ನೀಡಿಲ್ಲ. ಒಂದು ವೇಳೆ ಮಾಡಿದ್ದರೆ ಅದು ಬಲೂಟದಂತಹ ಪದ್ಧತಿಯನ್ನು ರದ್ದು ಪಡಿಸುತ್ತಿತ್ತು. ಇಲ್ಲವೆ ಮಹಾರರು ಇದನ್ನು ವಸೂಲು ಮಾಡಿಕೊಳ್ಳಲು ಒಂದು ದಾರಿಯನ್ನಾದರೂ ಕಲ್ಪಿಸಿ ಕೊಡುತ್ತಿದ್ದರು. ಅದನ್ನು ಹಳ್ಳಿಗರಿಂದ ನೇರವಾಗಿ ವಸೂಲಿ ಮಾಡಲು ಸರ್ಕಾರ ಬಿಟ್ಟಿರುವುದು ಅತ್ಯಂತ ದೊಡ್ಡ ತಪ್ಪು. ಏಕೆಂದರೆ ಹಳ್ಳಿಗರಿಗೆ ಹಾಗು ಮಹಾರರಿಗೆ ಯಾವಾಗಲೂ ಒಂದು ಸೌಹಾರ್ದಯುತ ಸಂಬಂಧ ಇರಲೇ ಇಲ್ಲ.

೪೬. ಆದ್ದರಿಂದ ಇಲ್ಲಿ ಒಂದು ಸಮಂಜಸವಾದ ಪ್ರಶ್ನೆ ಉದ್ಭವಿಸುತ್ತದೆ. ಪಾಟೀಲರು ಬಲೂಟದ ಮೇಲೆ ಅವಲಂಬಿತರಾಗಬಾರದು ಎಂದು ಹೇಳಲಾಗುತ್ತಿತ್ತು. ಹಳ್ಳಿಯ ಸೇವಕನಾಗಿದ್ದ ಸಮಯದಲ್ಲಿ ಕೂಡ ಕುಲಕರ್ಣಿಗಳು ಬಲೂಟವನ್ನು ಮಾತ್ರವೇ ಅವಲಂಬಿಸಿರಲಿಲ್ಲ. ಹಾಗಾದರೇ ಮಹಾರರಿಗೆ ಮಾತ್ರವೇ ಏಕೆ ಈ ರೀತಿಯ ನಿಯಮ. ಆತ ಸರ್ಕಾರದ ಸೇವೆ ಮಾಡಬೇಕು, ಆದರೆ ಹಣವನ್ನು ಪಡೆಯುವ ಸಂದರ್ಭ ಬಂದಾಗ ಆತ ಬೇರೊಬ್ಬರನ್ನು ಅವಲಂಬಿಸಬೇಕು. ಆತನಿಗೆ ಕಾನೂನಿನಿಂದ ಕೂಡ ಯಾವುದೇ ರೀತಿಯ ಸಹಾಯ ದೊರೆಯುವುದಿಲ್ಲ. ಮಹಾರರ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಆದಷ್ಟು ಬೇಗನೇ ಈ ಸರ್ಕಾರ ತೆಗೆದುಕೊಂಡು ಅವರಿಗೆ ಅವರ ಭತ್ಯೆಯನ್ನು ನೀಡಬೇಕು.

೪೭. ಇನ್ನು ಸರ್ಕಾರದಿಂದ ನಗದು ಸ್ವರೂಪದಲ್ಲಿ ಭತ್ಯೆ ಪಡೆಯುವ ವಿಷಯಕ್ಕೆ ಬಂದರೆ, ಮಹಾರರಿಗೆ ಸರ್ಕಾರವು ನಿಗದಿಗೊಳಿಸಿರುವ ಭತ್ಯೆಯು ಬಹಳ ಕ್ಷುಲ್ಲಕ. ಅದನ್ನು ೧೮೬೯ರ ಸುಮಾರಿನಲ್ಲಿ ನಿಗದಿ ಪಡಿಸಲಾಗಿತ್ತು ಆ ಸಮಯದಲ್ಲಿ ಇತರ ಸರ್ಕಾರಿ ಅಧಿಕಾರಿಗಳಿಗೆ ನಿಗದಿಯಾಗಿದ ಭತ್ಯೆಯನ್ನು ಕಾಲದಿಂದ ಕಾಲಕ್ಕೆ ಹೆಚ್ಚಳ ಮಾಡಲಾಗಿದೆ. ಆದ್ದರಿಂದ ಮಹಾರರಿಗೂ ಭತ್ಯೆಯನ್ನು ಹೆಚ್ಚಳ ಮಾಡಬೇಕು ಎಂಬುದು ಅತ್ಯಂತ ನ್ಯಾಯಯುತವಾದ ಬೇಡಿಕೆಯಾಗಿದೆ.

### II. ಕೆಳಮಟ್ಟದ ಹಳ್ಳಿಯ ಸೇವಕರ ಕರ್ತವ್ಯದಲ್ಲಿ ಹೆಚ್ಚಳ

೪೮. ಬಾಂಬೆ ಸರಕಾರದ ಕಂದಾಯ ಇಲಾಖೆಯು ೧೩-೯-೩೮ ರಂದು ೩೪೨೦/೩೩ನೆಯ ಸಂಖ್ಯೆಯ ಆದೇಶವನ್ನು ನೀಡಿ. ಅದರಲ್ಲಿ ಮಹಾರರ, ಮಾಂಗರ, ವೇಧಿಯರ ಕರ್ತವ್ಯಗಳನ್ನು ನಿಗದಿ ಪಡಿಸಲಾಗಿದೆ. ಈ ಕರ್ತವ್ಯಗಳನ್ನು ನಿರ್ವಹಿಸುವುದು ಮಹಾರರಿಗೆ ಅತ್ಯಂತ ಕಷ್ಟಕರವಾಗಿದೆ. ಆದರೆ ಇದನ್ನು ಸಹಿಸಿಕೊಳ್ಳಲು ವತನದಾರರಿಗೆ ಆಗುತ್ತಿಲ್ಲ. ಈ ರೀತಿ ಸರ್ಕಾರವು ನಿಗದಿಪಡಿಸಿರುವ ಕರ್ತವ್ಯಗಳು

ಹಾರೇಗಾಂವ್‌ನ ಸಮಾವೇಶದಲ್ಲಿ ವ್ಯಾಪಕ ಖಂಡನೆಗೆ ಒಳಗಾಯಿತು. ಈ ಮನವಿಗೆ ಲಗತ್ತಿಸಿರುವ ಆ ಸಮಾವೇಶದ ನಿರ್ಣಯಗಳು ಸರಕಾರವು ಕೆಳಹಂತದ ಗ್ರಾಮಸೇವಕರಿಗೆ ನಿಗದಿಗೊಳಿಸಿರುವ ಕರ್ತವ್ಯಗಳನ್ನು ಖಂಡಿಸುತ್ತವೆ.

೪೯. ಈ ಪಟ್ಟಿಯಲ್ಲಿ ನಮೂದಿಸಿರುವ ೧,೩,೫,೯,೧೩ ಹಾಗು ೧೯ನೆಯ ಕರ್ತವ್ಯಗಳನ್ನು ತಮಗೆ ವಿಧಿಸಬಾರದು ಎಂಬುದೇ ಈ ವತನದಾರರ ವಾದ. ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸಬೇಕೆಂದರೆ, ಅದಕ್ಕೆ ಅವರಿಗೆ ಪ್ರತ್ಯೇಕ ಹಾಗು ಹೆಚ್ಚಿನ ಭತ್ಯೆ ನೀಡಬೇಕು. ಅದು ದಿನಗೂಲಿ ಆಗಿರಬಹುದು. ಅದು ಒಂದು ದಿನಕ್ಕೆ ಎಂಟಾಣೆಗಿಂತಲೂ ಕಡಿಮೆ ಇರಬಾರದು. ಈ ರೀತಿ ಅವರು ಕೇಳುವುದರಲ್ಲಿ ನ್ಯಾಯವಿದೆ. ಈ ಜಿಲ್ಲೆಯ ವತನದಾರರಿಂದ ನನಗೆ ಹಲವಾರು ದೂರುಗಳು ಬಂದಿವೆ. ಅವರು ಹೇಳುವಂತೆ ಇಲ್ಲಿನ ಹಳ್ಳಿಯ ಹಾಗು ತಾಲ್ಲೂಕು ಅಧಿಕಾರಿಗಳು ಅವರಿಂದ ಖಾಸಗಿ ಸೇವೆಯನ್ನು ಕೂಡ ನಿರೀಕ್ಷಿಸುತ್ತಾರೆ ಉದಾಹರಣೆಗೆ ತಮ್ಮ ಖಾಸಗಿ ಪತ್ರವನ್ನು ದೂರದ ಒಂದು ಊರಿಗೆ ಕೊಂಡೊಯ್ದು ಕೊಡುವುದು. ಏಕೆಂದರೆ ಅವರಿಗೆ ಸರ್ಕಾರ ಮಾಡಿರುವ ಪಟ್ಟಿಯಲ್ಲಿ ಈ ಕರ್ತವ್ಯವೂ ಸೇರ್ಪಡೆ ಆಗಿದೆ ಎಂದು ಈ ಅಧಿಕಾರಿಗಳು ಹೇಳುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಯಾವಾಗ ಈ ಅಧಿಕಾರಿಗಳು ಸರ್ಕಾರದ ಕೆಲಸಕ್ಕೆಂದು ಹೊರಗೆ ಪ್ರಯಾಣಿಸುತ್ತಾರೋ ಆಗ ಅವರಿಗೆ ಪ್ರತ್ಯೇಕ ಭತ್ಯೆ ದೊರೆಯುತ್ತದೆ. ಅದೇ ರೀತಿ, ಸರಕಾರೀ ನೌಕರರಾಗಿರುವ ವತನದಾರರು ಬೇರೆ ಬೇರೆ ಸ್ಥಳಗಳಿಗೆ ಸ್ಥಳಗಳಿಗೆ ಹೋದಾಗ, ಅವರು ಮಾಡಬೇಕಾಗಿರುವ ಅಧಿಕ ವೆಚ್ಚದ ಪರಿಹಾರಕ್ಕಾಗಿ ಅವರಿಗೂ ಇಂತಹ ಭತ್ಯಗಳನ್ನು ನೀಡಲೇ ಬೇಕಾಗುತ್ತದೆ.

೫೦. ಸರ್ಕಾರಿ ನಿರ್ಣಯದ ಕರ್ತವ್ಯ ೨ನ್ನು ಗಮನಿಸಿದರೆ, ಖಾತೇದಾರರಿಗೆ ಎಲ್ಲರು 'ಬಾಟಕಿ' ಅಥವಾ 'ದಾವಂಡಿ'ಯನ್ನು ನೀಡಿ ಸೇವೆ ಪಡೆಯಬಹುದಾಗಿರುತ್ತದೆ. ಆದರೆ ಇದನ್ನು ಹಲವಾರು ಬಾರಿ ಖಾತೇದಾರರು ಪ್ರತಿಭಟಿಸಿದ್ದಾರೆ. ಈ ನಿಟ್ಟಿನಲ್ಲಿ ಮಹಾಪ್ರಭುಗಳ ಗಮನಕ್ಕೆ ನಾನು ಒಂದು ವಿಷಯ ತರಬಯಸುತ್ತೇನೆ. ಅದೇನೆಂದರೆ ಈ ಮಹಾರರು ಕೂಡ ಹಲವಾರು ಬಾರಿ ಪ್ರತಿಭಟನೆಯನ್ನು ನಡೆಸುವ ಈ ಖಾತೇದಾರರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಈ ರೀತಿಯ ಸಂದರ್ಭಗಳು ಇನ್ನು ಮುಂದೆ ಪುನರಾವರ್ತನೆ ಆಗಬಾರದು ಎಂದು ನಾವು ನಿರೀಕ್ಷಿಸಿದರೆ ಮೇಲಿನ ಪರಿಹಾರವನ್ನು ಅಳವಡಿಸಿಕೊಳ್ಳುವುದೊಂದೇ ಇರುವ ಮಾರ್ಗ.

೫೧. ಇನ್ನು ಸರ್ಕಾರಿ ನಿರ್ಣಯದಲ್ಲಿ ಹೇಳಲಾಗಿರುವ ಕರ್ತವ್ಯ ಸಂಖ್ಯೆ ೭ಕ್ಕೆ ಸಂಬಂಧಿಸಿದಂತೆ, ವತನದಾರರು ಗ್ರಾಮದ ಅಧಿಕಾರಿಗಳಿಗೆ ಆ ಹಳ್ಳಿಯಲ್ಲಿ ಆಗುವಂತಹ ಜನನ ಹಾಗು ಮರಣದ ಮಾಹಿತಿಯನ್ನು ನೀಡಬೇಕು. ಆದರೆ ಅವರು ಇದರಿಂದ ಬಿಡುಗಡೆ ಬಯಸುತ್ತಾರೆ. ಈ ಕೆಳಗೆ ನೀಡಿರುವ ಕಾರಣಗಳನ್ನು ಗಮನಿಸಿ ಅವರನ್ನು ಈ ಕರ್ತವ್ಯದಿಂದ ಬಿಡುಗಡೆಗೊಳಿಸಬೇಕು. ನಗರಸಭೆಗಳಲ್ಲಿ ಇರುವಂತೆಯೇ, ಗ್ರಾಮಗಳಲ್ಲಿ ಕೂಡ, ಸಂಬಂಧಪಟ್ಟ ವ್ಯಕ್ತಿಯೇ ಗ್ರಾಮದ ಪಾಟೀಲನಿಗೆ ಜನನ ಅಥವಾ ಮರಣದ ಮಾಹಿತಿಯನ್ನು ನೀಡಬೇಕು. ಕೆಲವೊಮ್ಮೆ ಈ ವತನದಾರರು ಹಳ್ಳಿಯ ಒಳಕ್ಕೆ ಪ್ರವೇಶಿಸಲು ಹಳ್ಳಿಗರು ಬಿಡುವುದಿಲ್ಲ. ಇದರಿಂದ ವತನದಾರರಿಗೆ ಜನನ ಮತ್ತು ಮರಣದ ಮಾಹಿತಿ ದೊರಕುವುದೇ ಇಲ್ಲ. ಇದರ ಪರಿಣಾಮ, ಅವರು ತಪ್ಪುಮಾಡದಿದ್ದರೂ, ಶಿಕ್ಷೆಗೆ ಗುರಿಯಾಗುತ್ತಾರೆ.

೫೨. ಇನ್ನು ಕರ್ತವ್ಯ ಸಂಖ್ಯೆ ೧೫ಕ್ಕೆ ಬಂದರೆ, ಇದು ವಾರಸುದಾರರಿಲ್ಲದ ಶವಗಳನ್ನು ಈ ಮಹಾರರೇ ತೆಗೆದು ಹಾಕಬೇಕು ಎಂದು ಹೇಳುತ್ತದೆ. ಆದರೆ ನನ್ನ ಅಭಿಪ್ರಾಯದಲ್ಲಿ ಈ ಕರ್ತವ್ಯವನ್ನು

ನಿರ್ವಹಿಸಬೇಕಿರುವುದು ಪೋಲಿಸರು. ಆದ್ದರಿಂದ ಮಹಾರರನ್ನು ಈ ಕರ್ತವ್ಯದಿಂದಲೂ ಮುಕ್ತಗೊಳಿಸಬೇಕು.

**III. ಉಪಸಂಹಾರ**

೫೩. ಕೊನೆಯಲ್ಲಿ ಇಲ್ಲಿ ಹೇಳಲಾಗಿರುವ ದೂರುಗಳತ್ತ ಸರ್ಕಾರ ದಯಮಾಡಿ ಗಮನ ಹರಿಸಬೇಕು. ಈವರೆಗೆ ಮಹಾರರಿಂದ ಎಷ್ಟು 'ಜೂಡಿ'ಯನ್ನು ವಸೂಲು ಮಾಡಲಾಗಿದೆ ಎಂಬ ಬಗ್ಗೆ ನನ್ನಲ್ಲಿ ನಿಖರವಾದ ಮಾಹಿತಿ ಇಲ್ಲ. ನನಗೆ ನಾಸಿಕ್ ಜಿಲ್ಲೆಯಲ್ಲಿ ಮಹಾರರ ಭೂಮಿಯ ಮೇಲೆ ಎಷ್ಟು 'ಜೂಡಿ'ಯನ್ನು ಈ ಹೊಸ ನೀತಿಯ ಅನ್ವಯ ಪಡೆಯಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿಯಿದೆ. ಅದು ವಾರ್ಷಿಕ ೨,೨೦೧–೪–೧೧ ಇದ್ದು ಬಹಳಷ್ಟು ಅಸಮಾಧಾನಕ್ಕೆ ಕಾರಣವಾಗಿದೆ. ಸರ್ಕಾರ ಒಂದು ವೇಳೆ, ಈ ಮಹಾರ್ ವತನದಾರರ ದೂರನ್ನು ಪರಿಗಣಿಸದೇ ಹೋದರೇ ಅವರು ಮುಷ್ಕರಕ್ಕೆ ಮುಂದಾಗಬಹುದು ಎಂಬ ಭಯ ನನಗಿದೆ. ಈ ರೀತಿಯ ನಿರ್ಣಯವನ್ನು ಅವರು ಹರೇಗಾಂವ್ ಸಮಾವೇಶದಲ್ಲಿ ಕೈಗೊಂಡಿದ್ದಾರೆ. ಆದರೆ ಅವರ ದೂರನ್ನು ಪುನಃ ಸರ್ಕಾರ ಪರಿಶೀಲಿಸುತ್ತದೆ ಎಂಬ ಆಶ್ವಾಸನೆಯನ್ನು ಅವರಿಗೆ ನೀಡಿ, ಅವರ ಮುಷ್ಕರವನ್ನು ಮುಂದೂಡುವಂತೆ ನಾನು ಕೋರಿದ್ದೇನೆ. ಆದರೆ ಇದುವರೆಗೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಗೌರವಾನ್ವಿತ ಮಹಾಪ್ರಭುಗಳು ಇದನ್ನು ಅತ್ಯಂತ ತುರ್ತು ಸಂಗತಿ ಎಂದು ಪರಿಗಣಿಸಿ ಕ್ರಮ ಕೈಗೊಳ್ಳಬೇಕು. ಸರ್ಕಾರವು ಈ ಮಹಾರ್ ಕೃಷಿಕರ ವಿಷಯದಲ್ಲಿ ಅನ್ಯಾಯ ಎಸಗಿರುವುದು ತಮ್ಮ ಕಣ್ಣೆದುರು ಇದೆ. ಒಂದು ವೇಳೆ ಸರಕಾರದ ಈ ನೀತಿಯಿಂದ ಮಹಾರರಿಗೆ ಸಂಕಷ್ಟಗಳು ಉಂಟಾಗಿ ಅವರು ಮುಷ್ಕರದ ಹಾದಿಯನ್ನು ಹಿಡಿದರೆ ಅಥವಾ ಜೂಡಿಯ ವಸೂಲಾತಿಯ ವಿಷಯದಲ್ಲಿ ಅವರ ಆಸ್ತಿಯನ್ನು ಜಪ್ತಿ ಮಾಡಲು ಬಂದಾಗ ಅವರು ಹೋರಾಟಕ್ಕೆ ಇಳಿದರೆ ಅದರ ಹೊಣೆಗಾರಿಕೆ ಸರ್ಕಾರದ ಮೇಲೆ ಇರುತ್ತದೆ. ಕಾರಣ ತಮ್ಮ ಕುಂದುಕೊರತೆಗಳ ನಿವಾರಣೆಗೆ ಅವರು ಕಾನೂನುಬದ್ಧ ಕ್ರಮಗಳನ್ನು ಅನುಸರಿಸಿ ವಿಫಲರಾಗಿದ್ದಾರೆ.

೫೪. ನಾನು ಅತ್ಯಂತ ಗೌರವಯುತವಾಗಿ ಒಂದು ಬೇಡಿಕೆಯನ್ನು ತಮ್ಮ ಮುಂದೆ ಇರಿಸಬಯಸುತ್ತೇನೆ. ಹಳ್ಳಿಯ ಕೆಳಮಟ್ಟದ ಕೆಲಸಗಾರರಿಗೆ ಅನ್ವಯವಾಗುತ್ತಿರುವ ಈ ನೀತಿಯನ್ನು ಸರ್ಕಾರವು ಈ ಕೂಡಲೇ ರದ್ದುಗೊಳಿಸಬೇಕು. ಇದರಲ್ಲಿ ಹಲವಾರು ದೊಡ್ಡ ವಿವಾದಾತ್ಮಕ ಅಂಶಗಳು ಅಡಕವಾಗಿವೆ. ಅದನ್ನು ಮಹಾಪ್ರಭುಗಳ ಅಧಿಕಾರಿಗಳು ಪರಿಹಾರ ಮಾಡುವುದು ಅಸಾಧ್ಯ ಅವರೆಷ್ಟೇ ಬುದ್ಧಿವಂತರಾಗಿದ್ದರೂ ಕೂಡ. ಶಾಸಕಾಂಗದ ಸಭೆಯಲ್ಲಿ, ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ಪಡೆದು, ಮತದಾನದ ಮೂಲಕ ಈ ಸಮಸ್ಯೆಯನ್ನೂ ಬಗೆಹರಿಸಬಹುದು. ಆದರೆ ಶಾಸನಸಭೆಯು ಅಮಾನತ್ತಿನಲ್ಲಿರುವುದರಿಂದ ಈಗ ಈ ಮಾರ್ಗವನ್ನು ಅನುಸರಿಸುವುದೂ ಸಾಧ್ಯವಿಲ್ಲ. ಆದರೆ ಇದು ಒಂದು ಅತ್ಯಂತ ಹಳೆಯ ಪ್ರಶ್ನೆಯಾಗಿದ್ದು ಇತ್ಯರ್ಥಕ್ಕಾಗಿ ಇನ್ನಷ್ಟು ಕಾಲ ಕಾಯಬಹುದು. ಆದ್ದರಿಂದ ಮಹಾರರು ಹಾಗು ಇತರ ಕೆಳ ಹಂತದ ಗ್ರಾಮಸೇವಕರು ನ್ಯಾಯಯುತ ನಿರ್ಣಯಕ್ಕಾಗಿ ಕಾಯಲು ಸಿದ್ಧರಿದ್ದಾರೆ ಎಂಬುದು ನನ್ನ ಖಚಿತವಾದ ಅಭಿಪ್ರಾಯ.

'ರಾಜಗೃಹ' ದಾದರ್
ಹಿಂದೂ ಬಡಾವಣೆ
ಬೊಂಬಾಯಿ – ೧೪
೧೪ನೆಯ ಜುಲೈ ೧೯೪೧

ಎಂದಿಗೂ ತಮ್ಮ ಅತ್ಯಂತ
ವಿಧೇಯ ಸೇವಕನಾಗಿ
ಉಳಿಯಬಯಸುವ
ಡಾ. ಬಿ.ಆರ್. ಅಂಬೇಡ್ಕರ್

## ಅನುಬಂಧ I
## ಹರೇಗಾಂವ್ ಸಮಾವೇಶದಲ್ಲಿ ಕೈಗೊಳ್ಳಲಾದ ನಿರ್ಣಯಗಳು

**ನಿರ್ಣಯ ಸಂಖ್ಯೆ ೧.**

ಈಗಾಗಲೇ ಬಡತನದ ಬೇಗೆಯಲ್ಲಿ ಬೇಯುತ್ತಿರುವ ತಮ್ಮ ಜನಾಂಗದ ಮೇಲೆ, ಈಗ ಪ್ರಾಂತದಲ್ಲಿ ಜಾರಿಗೆ ಬಂದಿರುವ ಜೂಡಿಯನ್ನು ಅನ್ಯಾಯವಾಗಿ ಅಧಿಕ ದರದಲ್ಲಿ ವಿಧಿಸುವ ನೀತಿಯನ್ನು ವತನದಾರ ಮಹಾರರು, ಮಾಂಗರು, ವೇಧೀಯರು ಮತ್ತು ಗ್ರಾಮಗಳಲ್ಲಿರುವ ಇತರ ಕೆಳಮಟ್ಟದ ಗ್ರಾಮಸೇವಕರು ಖಂಡಿಸುತ್ತಾರೆ ಮತ್ತು ಈ ನೀತಿಯನ್ನು ತಕ್ಷಣವೇ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸುತ್ತಾರೆ. ಈಗ ವಿಧಿಸುತ್ತಿರುವ ಹೆಚ್ಚುವರಿ ಕಂದಾಯವು ವಂಶ ಪಾರಂಪರ್ಯವಾಗಿ ಬರುವ ಗ್ರಾಮಸೇವಕರ ಕಾಯ್ದೆಗೆ ವಿರೋಧವಾಗಿದೆ, ಅನ್ಯಾಯದಿಂದ ಕೂಡಿದೆ.

**ನಿರ್ಣಯ ಸಂಖ್ಯೆ ೧A**

೧೯೩೮ರ ಸೆಪ್ಟೆಂಬರ್ ೧೩ ರಂದು ಕಂದಾಯ ಇಲಾಖೆಯು ಹೊರಡಿಸಿದ ೩೪೨೦/೩೩ನೇ ಸಂಖ್ಯೆಯ ಸರಕಾರಿ ಆದೇಶದಲ್ಲಿ ಮಹರರು ಮತ್ತು ಮಾಂಗರು ನಿರ್ವಹಿಸಬೇಕಾದ ಕರ್ತವ್ಯಗಳ ಪಟ್ಟಿ ಇದೆ. ಈ ಕರ್ತವ್ಯಗಳು ವತನದಾರರಿಗೆ ಅಸಹನೀಯವಾಗಿದ್ದು, ಅವುಗಳ ನಿರ್ವಹಣೆ ಅಸಾಧ್ಯವಾಗಿದೆ. ಈ ಪಟ್ಟಿಯಲ್ಲಿರುವ ೧,೩,೫,೬,೧೩ ಮತ್ತು ೧೯ನೆಯ ಕರ್ತವ್ಯಗಳನ್ನು ನಿರ್ವಹಿಸಲು ದಿನಕ್ಕೆ ಎಂಟು ಆಣೆಯಂತೆ ಅಧಿಕ ಭತ್ಯೆಯನ್ನು ನೀಡದಿದ್ದರೆ, ಆ ಕೆಲಸಗಳ ನಿರ್ವಹಣೆಗೆ ವತನದಾರರನ್ನು ನಿರ್ಬಂಧಿಸಬಾರದು ಎಂದು ಈ ಸಮಾವೇಶವು ಅಭಿಪ್ರಾಯಪಡುತ್ತದೆ.

**ನಿರ್ಣಯ ಸಂಖ್ಯೆ ೧B**

ಮೇಲಿನ ಪಟ್ಟಿಯಲ್ಲಿನ ೧೫ನೆಯ ಸಂಖ್ಯೆಯ ಕರ್ತವ್ಯವು ಪೋಲಿಸರದಾಗಿದ್ದು ಅದನ್ನು ವತನದಾರರ ಕರ್ತವ್ಯಗಳ ಪಟ್ಟಿಯಿಂದ ತೆಗೆದುಹಾಕಬೇಕು ಎಂದು ಈ ಸಮಾವೇಶವು ಅಭಿಪ್ರಾಯಪಡುತ್ತದೆ.

**ನಿರ್ಣಯ ಸಂಖ್ಯೆ IC**

'ಬಾಟಾಕಿ' ಎಂಬ ಹೆಚ್ಚಿನ ಭತ್ಯೆ ನೀಡುವ ಮೂಲಕ ಕರ್ತವ್ಯ ಸಂಖ್ಯೆ ೨ನ್ನು ನಿರ್ವಹಿಸಲು ಮಹಾರರನ್ನು ಕರೆಯಬಹುದು. ಆದರೆ ಮೊಡುತನ ಮಾಡುವ ಹಳ್ಳಿಗರ ಬಳಿಗೆ ಮತ್ತೆ ಮತ್ತೆ ಹೋಗುವ ಕೆಲಸವನ್ನು ನಿಲ್ಲಿಸಬೇಕು.

**ನಿರ್ಣಯ ಸಂಖ್ಯೆ ೨:**

ವತನದಾರರ ಭೂಮಿಯನ್ನು ಪರಿವರ್ತಿಸಲು ಅನ್ವಯಿಸುತ್ತಿರುವ ೧೮೬೩ರ ಗೋರ್ಡಾನ್ ಅವರ ನೀತಿಯನ್ನು ಮಹಾರ್ ವತನದಾರರ ಭೂಮಿಯನ್ನು ಪರಿವರ್ತಿಸಲೂ ಅನ್ವಯ ಮಾಡಬೇಕು ಮತ್ತು ಮಹಾರರು ಗ್ರಾಮಗಳಿಗಾಗಲೀ, ಸರಕಾರಕ್ಕಾಗಲೀ ಸೇವೆಸಲ್ಲಿಸಬೇಕು ಎಂಬ ನೀತಿಯನ್ನು ತೆಗೆದುಹಾಕಬೇಕು.

**ನಿರ್ಣಯ ಸಂಖ್ಯೆ ೩:**

ಈ ರಾಜ್ಯದ ಬಹುತೇಕ ಹಳ್ಳಿಗಳಲ್ಲಿ ಮಹಾರರು ಉಚಿತವಾಗಿ ಕೆಲ ಕಾರ್ಯಗಳನ್ನು ಮಾಡಬೇಕಾಗಿದೆ ಎಂಬುದನ್ನು ಈ ಸಮಾವೇಶವು ಸರಕಾರದ ಗಮನಕ್ಕೆ ತರಬಯಸುತ್ತದೆ. ಕೆಳಮಟ್ಟದ ನೌಕರರಿಗೆ ವೇತನವನ್ನು ಕೊಡಿಸುವ ಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳಬೇಕು ಎಂದು ಈ ಸಮಾವೇಶವು ಅಭಿಪ್ರಾಯ ಪಡುತ್ತದೆ. ಆದ್ದರಿಂದ ಈ ಸಮಾವೇಶವು ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ನೀಡುತ್ತದೆ. ಅದೇನೆಂದರೆ ಈ ನಿಟ್ಟಿನಲ್ಲಿ ಸರ್ಕಾರವು ಆರು ತಿಂಗಳ ಒಳಗಾಗಿ ಕ್ರಮ ಕೈಗೊಳ್ಳಬೇಕು. ಇಲ್ಲದೇ ಹೋದರೆ ಈ ರೀತಿಯ ಉಚಿತವಾದ ಸೇವೆಯನ್ನು ಸಲ್ಲಿಸದಂತೆ ಮಹರರಿಗೆ ಈ ಸಮಾವೇಶವು ಆದೇಶಿಸುತ್ತದೆ.

**ನಿರ್ಣಯ ಸಂಖ್ಯೆ–೪:**

ಈ ಸಮಾವೇಶವು ಸರ್ಕಾರಕ್ಕೆ ಒಂದು ಸಲಹೆಯನ್ನು ನೀಡಬಯಸುತ್ತದೆ. ವತನದಾರ ಮಹಾರರ ಒಂದು ಸಮಿತಿಯನ್ನು ರಚಿಸಿ ಅವರಿಗೆ ಶಾಸಕಾಂಗದಲ್ಲಿ ಅವಕಾಶ ಕಲ್ಪಿಸಿಕೊಡಬೇಕು. ಅವರು ಇದುವರೆಗೆ ಕಂದಾಯ ಇಲಾಖೆಯ ಅಧಿಕಾರಿಗಳಿಂದ ವಿಧಿಸಲ್ಪಟಿರುವ ದಂಡ ಹಾಗು ವಜಾ ಆದೇಶಗಳನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಬೇಕು. ಅನಂತರ ಈ ಸಮಿತಿಯ ಅಭಿಪ್ರಾಯದಂತೆ ಸರ್ಕಾರವು ಮುಂದಿನ ಕ್ರಮವನ್ನು ಕೈಗೊಳ್ಳಬೇಕು.

**ನಿರ್ಣಯ ಸಂಖ್ಯೆ–೫:**

ಈ ಸಮಾವೇಶವು, ಬೊಂಬಾಯಿಯ ಶಾಸಕಾಂಗದಲ್ಲಿ ಇರುವ ಪರಿಶಿಷ್ಟ ವರ್ಗದ ಜನರಿಗೆ, ವತನದಾರ ಮಹಾರರು ಹಾಗು ಮಾಂಗರ ಕುಂದುಕೊರತೆಗಳನ್ನು ಮಾನ್ಯ ರಾಜ್ಯಪಾಲರ ಮುಂದೆ ಇರಿಸುವ ಅಧಿಕಾರ ನೀಡುತ್ತದೆ.

**ನಿರ್ಣಯ ಸಂಖ್ಯೆ–೬:**

ಈ ಸಮಾವೇಶವು ಕೈಗೊಂಡಿರುವ ನಿರ್ಣಯಗಳನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ಆ ಸಮಿತಿಗೆ ವಹಿಸಲಾಗಿದೆ ಈ ಕೆಳಗಿನ ಸದಸ್ಯರ ಸಮಿತಿಯೊಂದನ್ನು ರಚಿಸಿ. ಈ ನಿರ್ಣಯಗಳು ಜಾರಿಯಾಗುವಂತೆ ಮಾಡುವ ಮುಂದಿನ ಕ್ರಮಗಳನ್ನು ಈ ಸಮಿತಿಯು ನಿರ್ಧರಿಸಬಹುದಾಗಿರುತ್ತದೆ.

## ಅನುಬಂಧ II

## ೧೯೪೦ರ ಜೂನ್ ೭ ರಂದು ಬೆಳಿಗ್ಗೆ ೧೧ ಗಂಟೆಯ ಸಮಯದಲ್ಲಿ ೨೩ನೆಯ ಹಿಂದುಳಿದ ವರ್ಗಗಳ ಸಮಾವೇಶ II, ಸಲಹೆಗಾರರ ಕೊಠಡಿ, ಆಡಳಿತ ಕಛೇರಿ, ಬೊಂಬಾಯಿ, ಇಲ್ಲಿ ನಡೆದ ಹಿಂದುಳಿದ ವರ್ಗಗಳ ಮಂಡಲಿಯ ಸಭೆಯ ನಡಾವಳಿಯ ಉದ್ಧೃತ ಭಾಗಗಳು

**ನಿರ್ಣಯ ಸಂಖ್ಯೆ–೬:**

ಈಗಾಗಲೇ ಬಡತನದ ಬೇಗೆಯಲ್ಲಿ ಬೇಯುತ್ತಿರುವ ವತನದಾರ ಮಹಾರರು, ಮಾಂಗರು, ವೇಧೀಯರುಗಳ ಮೇಲೆ ಅಧಿಕ ಜೂಡಿಯನ್ನು ಹೇರುವ ನೀತಿಯನ್ನು ಇತ್ತೀಚೆಗೆ ಬೊಂಬಾಯಿ ಪ್ರಾಂತದಲ್ಲಿ ಜಾರಿಗೊಳಿಸಿದ್ದು ಇದು ಅನ್ಯಾಯವಾಗಿದೆ ಹಾಗೂ ಇದನ್ನು ಈ ಕೂಡಲೆ ರದ್ದು ಪಡಿಸಬೇಕು. ಏಕೆಂದರೆ, ಇದು ವಂಶಪಾರಂಪರ್ಯ ಗ್ರಾಮ ಸೇವಕರ ಕಾಯ್ದೆಯ ಮೂಲ ನೀತಿಗೆ ವಿರುದ್ಧವಾಗಿದೆ. ಇದನ್ನು ಈ ಮಂಡಲಿಯು ಉಗ್ರವಾಗಿ ಖಂಡಿಸುತ್ತದೆ. ಶ್ರೀ. ಬಿ.ಕೆ. ಗಾಯಕ್‌ವಾಡ್ ಅವರ ಪ್ರಸ್ತಾವನೆ ಸಂಖ್ಯೆ ೨ನ್ನು ಚರ್ಚಿಸಿ ಕೆಲ ಬದಲಾವಣೆಗಳೊಂದಿಗೆ ನಿರ್ಣಯ ಸಂಖ್ಯೆ ೭ನ್ನಾಗಿ ಅಂಗೀಕರಿಸಿದೆ. ಇನ್ನು ಭತ್ಯೆಯ ವಿಷಯಕ್ಕೆ ಸಂಬಂಧಿಸದಿಂತೆ ಒಬ್ಬ ಮಹಾರ್ ಹಾಗು ವೇಧಿಯನಿಗೆ ೬ ಆಣೆಗಳಷ್ಟು ವೇತನವನ್ನು ಆತ/ ಸರ್ಕಾರಿ ಕಾರ್ಯನಿಮಿತ್ತ ಹಳ್ಳಿಯಿಂದ ಹೊರ ಹೋದಾಗ ನೀಡಬೇಕೆಂದು ಸಲಹೆಯನ್ನು ಈ ಮಂಡಲಿಯು ನೀಡುತ್ತದೆ.

**ನಿರ್ಣಯ ಸಂಖ್ಯೆ–೭:**

(ಶ್ರೀ. ಬಿ.ಕೆ. ಗಾಯಕ್‌ವಾಡ್) ದಿನಾಂಕ ೧೩–೯–೧೯೩೮ ರಂದು ಕಂದಾಯ ಇಲಾಖೆಯು ಹೊರಡಿಸಿದ ೭೪೨೦/೩೩ನೇ ಸಂಖ್ಯೆಯ ಸರಕಾರಿ ಆದೇಶವು ಮಹಾರರು, ಮಾಂಗರು, ವೇಧೀಯರು ಕೆಲವು ಅಸಹನೀಯ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಸೂಚಿಸುತ್ತದೆ. ಇವು ಅವರ ಮೇಲೆ ಅತ್ಯಂತ ಕಠಿಣವಾದ ಹಾಗು ಅಸಾಧ್ಯವಾದ ಕರ್ತವ್ಯಗಳಾಗಿವೆ. ಈ ಮಂಡಲಿಯು ಕರ್ತವ್ಯ ಸಂಖ್ಯೆ ೧,೩,೫,೯,೧೩ ಹಾಗು ೧೯ರಿಂದ ಮಹಾರರನ್ನು ಮುಕ್ತಗೊಳಿಸಬೇಕು ಎಂದು ಅಗ್ರಹಿಸುತ್ತದೆ ಮತ್ತು ಒಂದು ವೇಳೆ ಅವರು ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸಬೇಕೆಂದರೆ ಅವರಿಗೆ ಈ ಕಾರ್ಯಗಳನ್ನು ಮಾಡಲು ಒಂದು ದಿನಕ್ಕೆ ೬ ಆಣೆಗಿಂತ ಕಡಿಮೆ ಇರದ ಭತ್ಯೆಯನ್ನು ಪ್ರತ್ಯೇಕವಾಗಿ ನೀಡಬೇಕು ಎಂದು ಸೂಚಿಸಲು ನಿರ್ಣಯವನ್ನು ತೆಗೆದುಕೊಂಡಿದೆ.

a) ೧೫ನೆಯ ಕ್ರಮ ಸಂಖ್ಯೆಯ ಕರ್ತವ್ಯವು ಪೋಲಿಸರಿಗೆ ಸಂಬಂಧಿಸಿದ್ದು ಇದರ ನಿರ್ವಹಣೆಯಿಂದ ವತನದಾರರನ್ನು ಮುಕ್ತಗೊಳಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

b) ಸಮಿತಿಯು ಕರ್ತವ್ಯ ಸಂಖ್ಯೆ ೨ ನ್ನು ಕುರಿತು ಖಾತೇದಾರರನ್ನು 'ಬಾಟಕಿ' ಅಥವಾ' ದಾವಂಡಿ' ಕೆಲಸಗಳಿಗೆ ಮಾತ್ರ ಕರೆಯಬೇಕು. ದೂರದ ಹಳ್ಳಿಗಳ ಮೊಂಡುತನದ ಹಳ್ಳಿಗರ ಬಳಿಗೆ ಓಡುವ ಹಾಗೆ ಮಾಡಬಾರದು.

c) ವತನದಾರ ಮಹಾರರು, ಮಾಂಗರು, ವೇಧೀಯರು ೭ನೇ ಕ್ರಮಸಂಖ್ಯೆಯ ಕರ್ತವ್ಯವನ್ನು ನಿರ್ವಸುವ ಬಗೆಗೆ ಒತ್ತಾಯಮಾಡಬಾರದು. ನಗರ ಸಭೆಗಳಲ್ಲಿರುವಂತೆಯೇ ಗ್ರಾಮಗಳಲ್ಲಿಯೂ ಸಂಬಂಧಪಟ್ಟ ವ್ಯಕ್ತಿಗಳೇ ಜನನ ಮತ್ತು ಮರಣದ ಮಾಹಿತಿಯನ್ನು ಗ್ರಾಮದ ಪಾಟೀಲನಿಗೆ ಒದಗಿಸಬೇಕು ಎಂದು ಈ ಮಂಡಲಿಯು ಅಭಿಪ್ರಾಯವನ್ನುಪಡುತ್ತದೆ.

ಶ್ರೀ ಬಿ.ಕೆ. ಗಾಯಕ್‌ವಾಡ್

**ನಿರ್ಣಯ ಸಂಖ್ಯೆ–೮:**

ಮತ್ತೊಂದು ವಿಷಯವನ್ನು ಈ ಸಮಿತಿಯು ಸರ್ಕಾರದ ಗಮನಕ್ಕೆ ತರಬಯಸುತ್ತದೆ. ಅದೇನೆಂದರೆ ಬೊಂಬಾಯಿ ರಾಜ್ಯದಲ್ಲಿ ನೂರಾರು ಹಳ್ಳಿಗಳಲ್ಲಿ ಯಾವುದೇ ಭತ್ಯೆ ಇಲ್ಲದೇ ಮಹಾರರು, ಮಾಂಗರು ಹಾಗು ವೇಧೀಯರಿಗೆ ಸೇವೆ ಸಲ್ಲಿಸುವಂತೆ ಬಲವಂತಪಡಿಸಲಾಗುತ್ತಿದೆ.

ಆದ್ದರಿಂದ ಸರ್ಕಾರಕ್ಕೆ ಈ ಸಮಿತಿಯು ಮೇಲೆ ಹೇಳಿದ ಜನರಿಂದ ಯಾವುದೇ ಸೇವೆಯನ್ನು ಭತ್ಯೆ ನೀಡದೇ ಪಡೆಯಬಾರದು ಎಂದು ನಿರ್ದೇಶಿಸುವಂತೆ ಸರಕಾರವನ್ನು ತೀವ್ರವಾಗಿ ಒತ್ತಾಯಿಸುತ್ತದೆ.

* * * * *

## ಅನುಬಂಧ III
## ಕೆಳಮಟ್ಟದ ಗ್ರಾಮ ಸೇವಕರ ಕರ್ತವ್ಯಗಳು

ಬೊಂಬಾಯಿ ಸರ್ಕಾರ
ಕಂದಾಯ ಇಲಾಖೆ
ನಿರ್ಣಯ ಸಂಖ್ಯೆ ೭೪೨೦/೩೩
ಬಾಂಬೆ ಕ್ಯಾಸೆಲ್, ೧೩ನೆಯ ಸೆಪ್ಟೆಂಬರ್ ೧೯೩೮.

ಸರ್ಕಾರಿ ಲಿಖಿತ ದಾಖಲೆ ಸಂಖ್ಯೆ ೭೪೨೦–F /೩೩
ದಿನಾಂಕ ೨೭ ಜನವರಿ ೧೯೩೮
ಜಿಲ್ಲಾಧಿಕಾರಿ/ಆಯುಕ್ತರು:– ಉತ್ತರವಿಭಾಗ/ಕೇಂದ್ರೀಯ ವಿಭಾಗ/ದಕ್ಷಿಣ ವಿಭಾಗ
ಉತ್ತರ ವಿಭಾಗದ ಆಯುಕ್ತರ ೨೫ನೆಯ ಫೆಬ್ರವರಿ ೧೯೩೮ರ ಪತ್ರ ಸಂಖ್ಯೆ W.T.N 1062
ಕೇಂದ್ರೀಯ ವಿಭಾಗದ ಆಯುಕ್ತರಿಂದ ೨೨ನೆಯ ಮಾರ್ಚ್ ೧೯೩೮ರ ಪತ್ರ ಸಂಖ್ಯೆ–೨೧೨೭
ದಕ್ಷಿಣ ವಿಭಾಗದ ಆಯುಕ್ತರ ೨೬ನೆಯ ಏಪ್ರಿಲ್ ೧೯೩೮ರ ಪತ್ರ ಸಂಖ್ಯೆ W.T.N 860

ನಿರ್ಣಯ:– ೧) ತಾವು ಸರಕಾರಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ನಿರ್ದಿಷ್ಟವಾಗಿ ವಿವರಿಸಬೇಕು ಮತ್ತು ತಮ್ಮನ್ನು ಅಧಿಕಾರಿಗಳ ವೈಯಕ್ತಿಕ ಕೆಲಸಗಳಿಗೆ ನೇಮಿಸಬಾರದು ಎಂಬ ವಿನಂತಿಗಳು ಗ್ರಾಮಗಳ ಕೆಳಮಟ್ಟದ ಸೇವಕರಿಂದ ಸರಕಾರಕ್ಕೆ ಆಗಾಗ್ಗೆ ಬರುತ್ತಲೇ ಇವೆ. ಈ ವರ್ಗಗಳವರಿಂದ ಅವರಿಗೆ ಪರಿಹಾರ ಭತ್ಯೆಯನ್ನು ನೀಡದೆ ಯಾವುದೇ ಬಗೆಯ ಕೆಲಸಗಳನ್ನು ಮಾಡಿಸಿಕೊಳ್ಳಬಾರದೆಂದು ಸರಕಾರೀ ಅಧಿಕಾರಿಗಳಿಗೆ ಸೂಚಿಸಿ ೧೯೩೭ರ ಆಗಸ್ಟ್ ೨೫ರಂದು ೧೫೮/೩೪ನೆಯ ಸಂಖ್ಯೆಯ ಆದೇಶವನ್ನು ಸರಕಾರವು ನೀಡಿದೆ. ಈ ಪತ್ರದ ಸಂಗಡ ಇರುವ ಅನುಬಂಧದಲ್ಲಿ ಗ್ರಾಮಗಳ ಕೆಳಮಟ್ಟದ ನೌಕರರು ಮಾಡಬೇಕಾದ ಕರ್ತವ್ಯಗಳ ಪಟ್ಟಿಯನ್ನು ನೀಡಲಾಗಿದೆ.

೨) ಈ ಆದೇಶವನ್ನು ಗುಜರಾತಿ, ಮರಾಠಿ, ಕನ್ನಡ ಹಾಗು ಉರ್ದು ಭಾಷೆಗಳಿಗೆ ಅನುವಾದ ಮಾಡಲು ಸರ್ಕಾರದ ಅನುವಾದಕರನ್ನು ವಿನಂತಿಸಿಕೊಳ್ಳಬೇಕು. ಅನಂತರ ಅದರ ಪ್ರತಿಯನ್ನು ವ್ಯವಸ್ಥಾಪಕರು, ಸರ್ಕಾರಿ ಮುದ್ರಣಾಲಯ, ಇವರಿಗೆ ಮುದ್ರಣಕ್ಕಾಗಿ ನೀಡಬೇಕು. ಈ ಮುದ್ರಿತ ಪ್ರತಿಗಳನ್ನು ಆ ವ್ಯವಸ್ಥಾಪಕರು ಜಿಲ್ಲಾಧಿಕಾರಿಗಳ ಅಗತ್ಯಕ್ಕೆ ತಕ್ಕಂತೆ ಅಯಾ ಜಿಲ್ಲೆಗಳಿಗೆ ಈ ನಿರ್ಣಯ ಹೊರಬಿದ್ದ ತಿಂಗಳ ಒಳಗಾಗಿ ಪೂರೈಸಬೇಕು. ಮುದ್ರಿತ ಪ್ರತಿಗಳನ್ನು ಎಲ್ಲಾ ತಲಾಟಿಗಳಿಗೆ ಹಾಗು ಪಾಟೀಲರಿಗೆ ಕೂಡ ನೀಡಬೇಕು. ಪ್ರತಿಯೊಂದು ಹಳ್ಳಿಯ ಚಾವಡಿಯಲ್ಲಿಯೂ ಇದು ಎದ್ದು ಕಾಣುವಂತೆ ಪ್ರದರ್ಶಿಸಬೇಕು. ಚಾವಡಿಗಳು ಇಲ್ಲದಿರುವ ಹಳ್ಳಿಗಳಲ್ಲಿ ಇದನ್ನು ಇತರ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

೩) ಇದರ ವೆಚ್ಚವನ್ನು '೨೫, ಸಾಮಾನ್ಯ ಆಡಳಿತ'ದ ಬಾಬ್ತಿಗೆ ಸೇರಿಸಬೇಕು.

ಬೊಂಬಾಯಿ ಸರ್ಕಾರದ ಆದೇಶದಂತೆ
ಎಂ.ಎಸ್. ದೇಸಾಯಿ
ಮುಖ್ಯಕಾರ್ಯದರ್ಶಿಗಳು
ಬೊಂಬಾಯಿ ಸರ್ಕಾರ

**ಸರ್ಕಾರಿ ಆದೇಶದ ಸಂಖ್ಯೆ–೭೪೨೦/೩೩**
**ಕಂದಾಯ ಇಲಾಖೆ,**
**೧೩ನೆಯ ಸೆಪ್ಟೆಂಬರ್ ೧೯೩೮**

## ಗ್ರಾಮಗಳ ಕೆಳಮಟ್ಟದ ನೌಕರರು ನಿರ್ವಹಿಸಬೇಕಿರುವ ಕರ್ತವ್ಯಗಳ ಪಟ್ಟಿ

ಮಹಾರರು, ದೇಢರು, ವೇಧೀಯರು, ಭಾಂಗೀಗಳು ಹಾಗು ಮಾಧವೀಗಳ ಕರ್ತವ್ಯಗಳು.

೧) ಸರ್ಕಾರಕ್ಕೆ ಪಾವತಿಯಾಗಿರುವ ಹಣವನ್ನು ಉಪ–ಖಜಾನೆಗೆ ಕೊಂಡೊಯ್ಯುವುದು.
೨) ಸರ್ಕಾರಕ್ಕೆ ಬಾಕಿ ಹಣವನ್ನು ಪಾವತಿಸಲು ಹಳ್ಳಿಗರನ್ನು ಚಾವಡಿಗೆ ಕರೆತರುವುದು.
೩) ತಾಲ್ಲೂಕು ಕಛೇರಿಯಿಂದ ಹಾಗು ತಾಲ್ಲೂಕು ಕಛೇರಿಗೆ ಹಳ್ಳಿಯ ದಾಖಲೆಯ ಕಡತಗಳನ್ನು ಕೊಂಡೊಯ್ಯುವುದು.
೪) ಹಳ್ಳಿಯಲ್ಲಿ ಇರುವ ಸರ್ಕಾರದ ಹಣ ಹಾಗೂ ಕಡತಗಳ ಬಗ್ಗೆ ಹಾಗು ಸರ್ಕಾರಕ್ಕೆ ಬರಬೇಕಾಗಿರುವ ಬಾಕಿಯ ವಸೂಲಿಗಾಗಿ ಜಪ್ತಿಯಾಗಿರುವ ಆಸ್ತಿಯ ಮೇಲೆ ನಿಗಾ ಇರಿಸುವುದು.
೫) ತಾಲ್ಲೂಕು ಕಛೇರಿಯಿಂದ ಹಾಗು ತಾಲ್ಲೂಕು ಕಛೇರಿಗೆ ಸರ್ಕಾರಿ ಟಪಾಲುಗಳ್ನು ಕೊಂಡೊಯ್ಯುವುದು ಯಾವ ಯಾವ ಹಳ್ಳಿಗಳಿಗೆ ವಾಹನದ ಸೌಕರ್ಯವಿದೆಯೋ ಅಲ್ಲಿಗೆಲ್ಲಾ ಅಂಚೆಯ ಅಧಿಕಾರಿಗಳನ್ನು ಕರೆದೊಯ್ಯುವುದು.
೬) ಹಳ್ಳಿಯ ಅಧಿಕಾರಿಗಳು ಹಾಗು ಸರ್ಕಾರಿ ಪ್ರವಾಸದಲ್ಲಿ ಇರುವ ಅಧಿಕಾರಿಗಳ ಜೊತೆಯಲ್ಲಿ ತೆರಳಿ, ಬೆಳೆಯ ಕಟಾವಿನ ಸಮಯದಲ್ಲಿ ಭೂಮಿಯನ್ನು ಅಳೆಯಲು ಸಹಾಯ ಮಾಡುವುದು. ಹಾಗು ಹಳ್ಳಿಯ ಅಧಿಕಾರಿಗಳು ಹಾಗು ಇತರ ಪ್ರವಾಸಿಗರಿಗೆ ರಸ್ತೆಗಳನ್ನು ತೋರಿಸಿ ಕೊಡುವುದು.
೭) ಹುಟ್ಟು ಮತ್ತು ಸಾವಿನ ಮಾಹಿತಿಯನ್ನು ಹಳ್ಳಿಯ ಅಧಿಕಾರಿಗಳಿಗೆ ಒದಗಿಸುವುದು.
೮) ಜಪ್ತಿಯಾದ ಸಣ್ಣಪುಟ್ಟ ಚರ ಆಸ್ತಿಗಳನ್ನು ಚಾವಡಿಗೆ ತೆಗೆದುಕೊಂಡು ಬರುವುದು.
೯) ನೋಟೀಸನ್ನು ನೀಡಬೇಕಾಗಿರುವ ವ್ಯಕ್ತಿಗಳಿಗೆ ಆಯಾ ನೋಟೀಸುಗಳನ್ನು ನೀಡುವುದು ಮತ್ತು ನ್ಯಾಯಾಧೀಶರಿಂದ ಹಾಗೂ ಪೋಲಿಸರಿಂದ ನೀಡಲ್ಪಟ್ಟ ನೋಟಿಸ್‌ಗಳನ್ನು ಸಂಬಂಧಪಟ್ಟವರಿಗೆ ವಿತರಿಸಲು ಪೋಲಿಸ್ ಪಾಟೀಲರಿಗೆ ಸಹಾಯವನ್ನು ಮಾಡುವುದು.
೧೦) ಭೂಮಿಯನ್ನು ಅಳತೆ ಮಾಡಲು ಅವಶ್ಯವಿರುವಂತಹ ಸರಪಳಿಗಳು, ಕುರ್ಚಿ ಮೇಜುಗಳು ಮುಂತಾದ ಸಲಕರಣೆಗಳನ್ನು ಜಮೀನುಗಳಿಗೆ ಕೊಂಡೊಯ್ಯುವುದು.
೧೧) ರಾತ್ರಿಯ ಗಸ್ತಿನ ಕೆಲಸಕ್ಕಾಗಿ ಜಗ್ಲ್ಯಾಗಳು ನೇಮಿಕಗೊಂಡಿರದ ಎಡೆಗಳಲ್ಲಿ, ಪೋಲಿಸ್ ಪಾಟೀಲ ಅಥವಾ ಪೋಲಿಸರೊಂದಿಗೆ ಹೋಗುವುದು.
೧೨) ಹಳ್ಳಿಯಲ್ಲಿ ತಮಟೆ ಬಡಿದು ಸರಕಾರಿ ಆದೇಶಗಳನ್ನು ಸಾರುವುದು.
೧೩) ದೊಡ್ಡಿಯಲ್ಲಿ ಕೂಡಿರುವ ದನಕರುಗಳನ್ನು ಸರ್ಕಾರಿ ಕಛೇರಿಗೆ ಹರಾಜಿಗಾಗಿ ಕರೆತರುವುದು.

೧೪) ಮಕ್ಕಳಿಗೆ ಲಸಿಕೆ ಹಾಕಿಸಲು ಲಸಿಕೆ ಹಾಕುವವರಿಗೆ ಮಕ್ಕಳನ್ನು ಕರೆತರಲು ಸಹಾಯ ಮಾಡುವುದು.

೧೫) ಹಳ್ಳಿಯಲ್ಲಿ ದೊರಕಿದ ವಾರಸುದಾರರಿಲ್ಲದ ಶವಗಳನ್ನು ಸೂಕ್ತ ರೀತಿಯಲ್ಲಿ ದಹನ ಮಾಡುವುದು. ಶವಗಳ ಪರೀಕ್ಷೆ ನಡೆಸಲು ಪೋಲೀಸರಿಗೆ ಸಹಾಯ ಮಾಡುವುದು.

೧೬) ಅಪಘಾತದಿಂದ ಉಂಟಾದ ಸಾವಿನ ಪ್ರಕರಣಗಳಲ್ಲಿ ಹಾಗೂ ಸಾಂಕ್ರಾಮಿಕ ರೋಗಗಳು ಹರಡಿರುವ ಸಂದರ್ಭದಲ್ಲಿ ಪೋಲೀಸರಿಗೆ ಸಹಾಯ ಮಾಡುವುದು.

೧೭) ಅಪರಾಧೀ ಬುಡಕಟ್ಟುಗಳವರ ಮತ್ತು ಅಪರಾಧಿಗಳ ಚಲನವಲನದ ಬಗ್ಗೆ ಪೋಲೀಸರಿಗೆ ಮಾಹಿತಿ ನೀಡಬೇಕು ಮತ್ತು ಅಪರಾಧ ತನಿಖೆಯ ವಿಷಯದಲ್ಲಿ ಅಪರಾಧ ಆಯುಕ್ತರಿಗೆ ನೆರವು ನೀಡಿ ಮುಂದೆ ಆಗಬಹುದಾದ ಅಪರಾಧಗಳನ್ನು ತಪ್ಪಿಸಬೇಕು.

೧೮) ಪೋಲೀಸರ ಬಂಧನದಲ್ಲಿ ಇರುವಂತಹ ಕಾರಾಗೃಹವಾಸಿಗಳ ಬಗ್ಗೆ ಗಮನ ಇರಿಸುವುದು.

೧೯) ಹಳ್ಳಿಗಳಲ್ಲಿ ಕ್ಯಾಂಪುಗಳನ್ನು ನಡೆಸುವ ಕಛೇರಿಯನ್ನು ತೆರೆಯುವುದು.

**ರಾಮೋಷಿಗಳ ಅಥವಾ ರಾವಣೆಗಳ ಅಥವಾ ವಾರ್ತಾನಿಗಳ ಕರ್ತವ್ಯಗಳು:**

೧) ಭೂ ಕಂದಾಯದ ಸಂಗ್ರಹದ ಸಮಯದಲ್ಲಿ ಹಳ್ಳಿಯ ಚಾವಡಿಯಲ್ಲಿ ಉಪಸ್ಥಿತರಿರುವುದು.

೨) ತಾಲ್ಲೂಕು ಕಛೇರಿಗಳಿಗೆ ದುಡ್ಡನ್ನು ತಲುಪಿಸುವ ಸಂದರ್ಭದಲ್ಲಿ ಮಹಾರರು ಹಾಗು ದೇಢರ ಜೊತೆ ತೆರಳುವುದು.

೩) ಹಳ್ಳಿಗಳಿಗೆ ಸರ್ಕಾರಿ ಕೆಲಸದ ನಿಮಿತ್ತ ಬಂದಿರುವ ಸರ್ಕಾರಿ ಅಧಿಕಾರಿಗಳ ಸಹಾಯಕರಾಗಿ ಕಾರ್ಯ ನಿರ್ವಹಿಸುವುದು.

೪) ಸರ್ಕಾರಿ ಬಾಕಿಯನ್ನು ಪಾವತಿಸಿಕೊಳ್ಳುವ ಸಲುವಾಗಿ ಜಪ್ತಿ ಮಾಡಿರುವ ಆಸ್ತಿಯ ಮೇಲೆ ನಿಗಾ ಇರಿಸುವುದು.

೫) ಸಂಗ್ರಹದ ಸಮಯದಲ್ಲಿ ಅಗತ್ಯ ಬಿದ್ದಾಗ ಹಳ್ಳಿಗರನ್ನು ಕರೆತರುವುದು.

೬) ರಾತ್ರಿ ಒಂದು ಬಾರಿ ಗಸ್ತು ತಿರುಗುವುದು. ರಾತ್ರಿಯ ಗಸ್ತಿನಲ್ಲಿ ಇರುವ ಪೋಲೀಸರಿಗೆ ಅಪರಾಧಿಗಳನ್ನು ಬಂಧಿಸಲು ಮತ್ತು ಅಪರಾಧಗಳ ಪತ್ತೆ ಹಚ್ಚುವಲ್ಲಿ ಹಾಗು ಅಪಘಾತಗಳ ತನಿಖೆ ಮಾಡುವಲ್ಲಿ ಪೋಲಿಸರಿಗೆ ಸಹಾಯ ಮಾಡುವುದು.

೭) ಕಳ್ಳತನ ಸುಲಿಗೆ ಮುಂತಾದ ಅಪರಾಧಗಳನ್ನು ತಡೆಗಟ್ಟುವಲ್ಲಿ ಪೋಲೀಸರಿಗೆ ಸಹಾಯ ಮಾಡುವುದು.

೮) ಅಪರಾಧಿಗಳ ಬುಡಕಟ್ಟು ಜನಾಂಗದ ಚಲನವಲನಗಳ ಮೇಲೆ ಗಮನ ಇರಿಸುವುದು ಹಾಗು ಅದನ್ನು ಪೋಲೀಸರಿಗೆ ತಿಳಿಸುವುದು. ಇವರಿಂದ ಜರುಗುವ ಅಪರಾಧಗಳ ಬಗ್ಗೆಯೂ ಗಮನ ಇರಿಸುವುದು.

೯) ಹಳ್ಳಿಯ ಸರ್ಕಾರಿ ಅಧಿಕಾರಿಗಳ ಕಡತಗಳನ್ನು ಒಯ್ಯುವುದು.

೧೦) ಭೂಕಂದಾಯದ ಸಂಗ್ರಹದ ಸಂದರ್ಭದ ವೇಳೆ ಸರ್ಕಾರಿ ಅಧಿಕಾರಿಗಳಿಗೆ ಸಹಾಯ ಮಾಡುವುದು.

೧೧) ಬೆಳೆಯ ತಪಾಸಣೆಗೆ ತೆರಳುವ ಅಧಿಕಾರಿಗಳ ಜೊತೆ ಹೋಗುವುದು.

೧೨) ಪೋಲೀಸರ ಬಂಧನದಲ್ಲಿ ಇರುವ ವ್ಯಕ್ತಿಗಳ ಮೇಲೆ ನಿಗಾ ಇರಿಸುವುದು.
೧. ಗ್ರಾಮಾಧಿಕಾರಿಗಳ ಕಡತಗಳನ್ನು ಒಯ್ಯುವುದು
೨. ಭೂಕಂದಾಯದ ವಸೂಲಿಯ ಸಂದರ್ಭದಲ್ಲಿ ಗ್ರಾಮಾಧಿಕಾರಿಗಳಿಗೆ ನೆರವು ನೀಡುವುದು.
೩. ಬೆಳೆ ತಪಾಸಣೆಯ ಸಂದರ್ಭದಲ್ಲಿ ಗ್ರಾಮಾಧಿಕಾರಿಗಳ ಜೊತೆ ಹೋಗುವುದು.
೪. ಗ್ರಾಮಗಳಲ್ಲಿನ ಚಾವಡಿಗಳನ್ನು ಶುಚಿಯಾಗಿಡುವುದು ಮತ್ತು ಅಲ್ಲಿನ ದೀಪಗಳನ್ನು ಹೊತ್ತಿಸುವುದು.

**ಜಗಳ್ಯರ ಕರ್ತವ್ಯಗಳು**

೧) ರಾತ್ರಿಯ ವೇಳೆ ಗಸ್ತು ತಿರುಗುವುದು; ಹಳ್ಳಿಗೆ ಆಗಮಿಸುವವರ ಹಾಗು ಹಳ್ಳಿಯಿಂದ ನಿರ್ಗಮಿಸುವರ ಬಗ್ಗೆ ನಿಗಾ ಇರಿಸುವುದು.ಎಲ್ಲಾ ಅನುಮಾನಸ್ಪದ ವ್ಯಕ್ತಿಗಳ ವಿವರಗಳನ್ನು ಪೋಲೀಸರಿಗೆ ನೀಡುವುದು.
೨) ಹೆಜ್ಜೆಯ ಗುರುತನ್ನು ಅವಲಂಬಿಸಿ ಕಳ್ಳರನ್ನು ಕಂಡು ಹಿಡಿಯುವುದು.
೩) ಅಪರಾಧದ ವಿಚಾರಣೆಯಲ್ಲಿ ಪೋಲೀಸರಿಗೆ ಸಹಾಯ ಮಾಡುವುದು.
೪) ತಾಲ್ಲೂಕು ಕಛೇರಿಗೆ ತಲುಪಿಸಲ್ಪಡುವ ಹಣಕ್ಕೆ ಭದ್ರತೆ ಒದಗಿಸುವುದು.
೫) ಬೆಳೆಯ ತಪಾಸಣೆಯ ಸಂದರ್ಭದಲ್ಲಿ ಹಾಗು ಭೂಮಿಯ ಮಾಪನ ಮಾಡುವಾಗ ಸರ್ಕಾರಿ ಅಧಿಕಾರಿಗಳೊಂದಿಗೆ ತೆರಳುವುದು.

**ತಲ್ಬಡರು ಹಾಗು ಕೋಲಿಗಳ ಕರ್ತವ್ಯಗಳು**

೧) ಹಳ್ಳಿಯ ಚಾವಡಿಗಳನ್ನು ಗುಡಿಸಿ, ಸಗಣಿಯಿಂದ ಸಾರಿಸಿ, ಅಲ್ಲಿ ದೀಪ ಹಚ್ಚುವುದು.
೨) ಬೆಳೆಯ ತಪಾಸಣೆಯ ಸಮಯದಲ್ಲಿ ಹಾಗು ಭೂಮಾಪನ ಮಾಡುವ ಅಧಿಕಾರಿಗಳಿಗೆ ಸಹಾಯ ಮಾಡುವುದು.
೩) ಸರ್ಕಾರಿ ಅಧಿಕಾರಿಗಳು ಹಳ್ಳಿಯಲ್ಲಿ ಬೀಡುಬಿಟ್ಟಾಗ ಅವರು ತಮ್ಮ ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸಲು ಅನುಕೂಲವಾಗುದಂತೆ ಅವರಿಗೆ ಸೂಕ್ತ ಬಂದೋಬಸ್ತನ್ನು ಒದಗಿಸುವುದು.

**ಸಮಾಧಿಗರು ಅಥವಾ ವಾಲೀಕರರು, ತಲ್ವಾರರು, ಹೊಂಬರರು ಹಾಗು ಉಗ್ರಾಣಿಗಳ ಕರ್ತವ್ಯಗಳು.**

೧) ಸರ್ಕಾರಿ ಕಂದಾಯವನ್ನು ಸಂಗ್ರಹಿಸುವಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಸಹಾಯ ಮಾಡುವುದು.
೨) ನ್ಯಾಯಾಧೀಶರಿಂದ ಬಂದ ನೋಟೀಸುಗಳನ್ನು ಪತ್ರಗಳನ್ನು ಸಂಬಂಧಿಸಿದ ವ್ಯಕ್ತಿಗಳಿಗೆ ತಲುಪಿಸುವಲ್ಲಿ ಪೋಲಿಸರಿಗೆ ಸಹಾಯ ಮಾಡುವುದು.
೩) ಹಳ್ಳಿಯ ದಾಖಲೆಗಳು ಹಾಗು ಸಾರ್ವಜನಿಕರ ಹಣದ ಮೇಲೆ ಗಮನ ಇರಿಸುವುದು.
೪) ತಾಲ್ಲೂಕು ಅಥವಾ ಮಹಲಿನ ಖಜಾನೆಗೆ ಹಣವನ್ನು ಕೊಂಡೊಯ್ಯುವಾಗ ತಾವೂ ಜೊತೆಯಲ್ಲಿ ಭದ್ರತೆಗಾಗಿ ಹೋಗುವುದು.
೫) ಹಳ್ಳಿಗೆ ಬಂದ ಅಂಚೆ ಪತ್ರಗಳು ಹಾಗು ಅಧಿಕಾರಿಗಳ ಪತ್ರಗಳನ್ನು ಸ್ಥಳದಿಂದ ಸ್ಥಳಕ್ಕೆ ಕೊಂಡೊಯ್ಯುವುದು (ಎಲ್ಲಿ ಈ ಕಾರ್ಯವನ್ನು ನಿರ್ವಹಿಸಲು ವಾಹನ ಸೌಕರ್ಯ ಇಲ್ಲವೋ ಅಲ್ಲಿ)

೬) ಹಳ್ಳಿಯಲ್ಲಿ ರಾತ್ರಿಯ ವೇಳೆ ಗಸ್ತು ತಿರುಗುವುದು.

೭) ಪೋಲಿಸರ ಬಂಧನದಲ್ಲಿ ಇರುವ ಅಪರಾಧಿಗಳ ಬಗ್ಗೆ ನಿಗಾವಹಿಸುವುದು.

೮) ಹಳ್ಳಿಗಳ ಪ್ರವಾಸದಲ್ಲಿ ಇರುವ ಅಧಿಕಾರಿಗಳಿಗೆ ಹಳ್ಳಿಯಿಂದ ಹಳ್ಳಿಗೆ ದಾರಿ ತೋರಿಸುವುದು. ರಸ್ತೆ ಇಲ್ಲದ ಸಂದರ್ಭದಲ್ಲಿ ಅವರೊಂದಿಗೆ ನಡೆದು ಹೋಗುವುದು ಹಾಗು ಹಳ್ಳಿಯಿಂದ ಹಳ್ಳಿಗೆ ದಾರಿ ತೋರಿಸುವುದು.

೯) ಜನನ ಹಾಗು ಮರಣದ ಮಾಹಿತಿಯನ್ನು ಪೋಲಿಸರಿಗೆ ತಿಳಿಸುವುದು.

೧೦) ಸರ್ಕಾರಿ ಕೆಲಸಕ್ಕೆ ಅಗತ್ಯವಿರುವಾಗ ಹಳ್ಳಿಗರನ್ನು ಚಾವಡಿಗೆ ಕರೆ ತರುವುದು.

೧೧) ಭೂಮಿಯ ತಪಾಸಣೆಗೆ ಬಂದಿರುವ ಅಧಿಕಾರಿಗಳೊಂದಿಗೆ ತಪಾಸಣೆಗೆ ತೆರಳುವುದು.

೧೨) ಮಕ್ಕಳಿಗೆ ಲಸಿಕೆ ಹಾಕಲು ಮಕ್ಕಳನ್ನು ಕರೆತರಲು ಲಸಿಕೆದಾರರಿಗೆ ಸಹಾಯ ಮಾಡುವುದು.

೧೩) ಹಳ್ಳಿಯ ದಾಖಲೆಗಳನ್ನು ಹಳ್ಳಿಗಳಿಂದ ತಾಲ್ಲೂಕಿಗೆ ಹಾಗು ತಾಲ್ಲೂಕುಗಳಿಂದ ಹಳ್ಳಿಗೆ ತರುವುದು.

೧೪) ಸರ್ಕಾರಿ ಕಾರ್ಯಗಳನ್ನು ನಿರ್ವಹಿಸಲು ಹಳ್ಳಿಗೆ ಬಂದಿರುವ ಅಧಿಕಾರಿಗಳಿಗೆ ಸಹಾಯ ಮಾಡುವುದು.

೧೫) ಹಳ್ಳಿಯ ಚಾವಡಿಗಳನ್ನು ಶುಭ್ರವಾಗಿ ಇರಿಸುವುದು.

೧೬) ಹಳ್ಳಿಯಲ್ಲಿ ಕ್ಯಾಂಪುಗಳ ಕಛೇರಿಗಳನ್ನು ಸ್ಥಾಪಿಸುವುದು.

ಬಾರ್ಕರುಗಳ ಕರ್ತವ್ಯಗಳು:

೧) ಹಳ್ಳಿಯ ಚಾವಡಿಯನ್ನು ಶುಭ್ರವಾಗಿ ಇರಿಸುವುದು.

* * * * *

## ೨೮
## ಹಿಂದೂಗಳಿಗಿಂತ ಬ್ರಿಟಿಷರಿಗೆ ನಾನು ಅತ್ಯಂತ ಮಾರಕವಾಗಿರುವೆ..... ಒಂದು ವೇಳೆ ಅವರು...

೧೯೪೧ರ ಜುಲೈ ೨೭ರಂದು ಭಾರತದ ವೈಸ್‌ರಾಯ್ ಅವರು ಭಾರತದ ಭದ್ರತಾ ಸಮಿತಿಯನ್ನು ರಚಿಸಿದರು. ಅದರಲ್ಲಿ ಇದ್ದ ೧೩ ಜನರಲ್ಲಿ ಎಂಟು ಜನರು ಭಾರತೀಯರಾಗಿದ್ದರು. ಈ ಸಮಿತಿಯ ಸದಸ್ಯರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕೂಡ ಒಬ್ಬರು. ಬ್ರಿಟಿಷರ ಕೆಟ್ಟ ನಿಯಮಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಅವರು ಈ ಕೆಳಗಿನಂತೆ ಮಂಡಿಸಿದರು. –ಸಂಪಾದಕರು.

ಕಳೆದ ಕೆಲವು ವರ್ಷಗಳಲ್ಲಿ ಹಿಂದೂ ಸಮಾಜವು ಎಸಗಿರುವ ದೌಜನ್ಯಗಳ ವಿರುದ್ಧ ನಾನು ಅತ್ಯಂತ ತೀವ್ರವಾಗಿ, ಕ್ರೂರವಾಗಿ ದಾಳಿಯನ್ನು ಮಾಡಿದ್ದೇನೆ. ಆದರೆ ಬ್ರಿಟಿಷರೇನಾದರೂ ನನ್ನ ಜನತೆಯ ಬಗೆಗಿನ ನನ್ನ ನಿಷ್ಠೆಯನ್ನು ಅವರ ಶೋಷಣೆಗಾಗಿ, ಅವರನ್ನು ದಮನಿಸಲು ಉಪಯೋಗಿಸಿದರೆ ಅವರ ರಕ್ತವನ್ನು ಬಸಿಯಲು ಪ್ರಯತ್ನಿಸಿದರೆ, ಆ ಬ್ರಿಟಿಷರ ವಿರುದ್ಧ ನಾನು, ಹಿಂದೂಗಳ ವಿರುದ್ಧ ನಡೆಸಿದ ದಾಳಿಗಿಂತ ನೂರಾರು ಪಟ್ಟು ತೀವ್ರವಾದ, ಕ್ರೂರವಾದ ದಾಳಿಯನ್ನು ನಡೆಸುತ್ತೇನೆ.

(ಸ್ವಾತಂತ್ರ್ಯಕ್ಕೆ ೧೦ ವರ್ಷಗಳು
ಪುಟ ೫೮–೫೯)[1]

* * * *

1. quoted, Khairnode Vol. 9. p. 130

## ೨೯

## ಶೋಷಿತ ವರ್ಗದವರನ್ನು ವೈಸ್‌ರಾಯ್ ಅವರ ಸಮಿತಿಯಿಂದ ಹೊರಗೆ ಉಳಿಸಿರುವುದು ಅತ್ಯಂತ ಘಾತಕ ಕೃತ್ಯ ಹಾಗು ವಿಶ್ವಾಸದ ಉಲ್ಲಂಘನೆ

ಬೊಂಬಾಯಿ*
ಗುರುವಾರ

"ಶೋಷಿತವರ್ಗದವರನ್ನು ವೈಸ್‌ರಾಯ್ ಅವರ ಪುನಸ್ಸಂಘಟಿತ ಸಮಿತಿಯಲ್ಲಿ ಸೇರ್ಪಡೆ ಮಾಡಿಕೊಳ್ಳದಿರುವುದು ಒಂದು ಘಾತಕ ಕೃತ್ಯ ಹಾಗು ವಿಶ್ವಾಸದ ಉಲ್ಲಂಘನೆ ಎಂದು ಅವರು ಪರಿಗಣಿಸುತ್ತಾರೆ" ಎಂದು ಭಾರತದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಎಲ್. ಎಸ್. ಅಮೇರಿ ಅವರಿಗೆ ಕಳುಹಿಸಿದ ತಂತಿಯ ಸಂದೇಶದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ತಿಳಿಸಿದ್ದಾರೆ. "ನೀವು ೬೦ ಲಕ್ಷ ಶೋಷಿತ ವರ್ಗದವರ ಜನಸಂಖ್ಯೆಯನ್ನು ಕಡೆಗಣಿಸಿದ್ದೀರಿ. ಮುಸಲ್ಮಾನರಿಗೆ ಶೇಕಡ ೪೩ರಷ್ಟು ಪ್ರಾತಿನಿಧ್ಯವನ್ನು ನೀಡಿದ್ದೀರಿ. ಅದು ಹಿಂದೂಗಳಿಗೆ ಇರುವಷ್ಟೇ ಪ್ರಾತಿನಿಧ್ಯ. ಇದು ಅತ್ಯಂತ ಆಘಾತಕಾರಿ ಸಂಗತಿಯಾಗಿದೆ. ಕೆಲವೊಂದು ಧರ್ಮಗಳಿಗೆ ಮಾತ್ರವೇ ಈ ಸರ್ಕಾರವು ತನ್ನನ್ನು ಒತ್ತೆ ಇರಿಸಿಕೊಂಡಿರುವ ಹಾಗೆ ಕಾಣಿಸುತ್ತಿದೆ.

ಭಾರತದ ರಾಷ್ಟ್ರೀಯ ಜೀವನದಲ್ಲಿ ಪ್ರತ್ಯೇಕ ಅಂಗವೆಂದು ಶೋಷಿತವರ್ಗವನ್ನು ಪರಿಗಣಿಸಿದ ನಂತರವೂ, ಅವರ ವಿಷಯದಲ್ಲಿ ಸಾಂವಿಧಾನಿಕ ಬದಲಾವಣೆಗಳನ್ನು ತರುವುದು ಅಗತ್ಯ ಎಂದು ನಿರ್ಧರಿಸಿದ ನಂತರವೂ, ಯುದ್ಧದ ಸಮಯದಲ್ಲಿ ಅವರನ್ನು ಉಪಯೋಗಿಸಿಕೊಂಡ ನಂತರವೂ, ಅವರನ್ನು ಈ ಸಮಿತಿಯಿಂದ ಹೊರಗುಳಿಸಿರುವಿರಿ. ಇದು ನಿಮ್ಮಲ್ಲಿರುವ ವಿಶ್ವಾಸಾರ್ಹತೆಯ ಕೊರತೆಯನ್ನು ತೋರಿಸುತ್ತದೆ.

ಶೋಷಿತ ವರ್ಗದ ಜನರ ಹೆಸರಿನಲ್ಲಿ ಮತ್ತು ಅವರ ಹಕ್ಕುಗಳಿಗಾಗಿ ಹೋರಾಡುವಾಗ ಎಂದಿಗೂ ನಾನು ವೈಯಕ್ತಿಕವಾಗಿ ಬ್ರಿಟಿಷರ ಸಹಾಯವನ್ನು ಕೇಳಿಲ್ಲ ಇಲ್ಲವೆ ಅವಲಂಬಿಸಿಲ್ಲ. ಭವಿಷ್ಯದಲ್ಲಿಯೂ ನನಗೆ ಇದರ ಅಗತ್ಯವಿಲ್ಲ. ನೀವು ನಿಮ್ಮ ಆಯ್ಕೆಯಲ್ಲಿ ಸಂಪೂರ್ಣ ಸ್ವತಂತ್ರರಾಗಿರುವಿರಿ.

ನನಗೆ ಬೇಕಿರುವುದು ಶೋಷಿತ ವರ್ಗದ ಜನರಿಗೆ ನ್ಯಾಯ. ಈ ಸಮಿತಿಯ ಸದಸ್ಯತ್ವ ಪಡೆಯುವ ಸಲುವಾಗಿ ತಮ್ಮ ಯಾವುದೇ ಹಕ್ಕನ್ನು ಬಿಟ್ಟುಕೊಡಲು ಈ ವರ್ಗ ಸಿದ್ಧವಿಲ್ಲ ಎಂದು ನಾನು ಸ್ಪಷ್ಟ ಪಡಿಸುತ್ತೇನೆ. ಇದನ್ನು ತಾವು ಕೂಡ ಗಮನಿಸಬೇಕು. ಸಮಿತಿಗೆ ಒಬ್ಬ ಸದಸ್ಯರ ಸೇರ್ಪಡೆ ಆಗುವುದರಿಂದ ಯಾವುದೇ ಅವಗಡ ಸಂಭವಿಸುವುದಿಲ್ಲ.[೧]

* * * * *

1. Free Press Journal 1941 ನೆಯ ಆಗಸ್ಟ್ ೧ ೧೯೪೧ನೆಯ ೩೧ ಜುಲೈ
* 31st July 1941

## ೩೦
## ಭಾರತದಾದ್ಯಂತ ಇರುವ ಶೋಷಿತ ವರ್ಗಗಳ ಎಲ್ಲಾ ನಾಯಕರ ಸಭೆ

ಬೊಂಬಾಯಿ
ಸೆಪ್ಟೆಂಬರ್ ೨೬, ೧೯೪೧

ದೇಶದಲ್ಲಿರುವ ೬೦ ಲಕ್ಷ ಶೋಷಿತರನ್ನು ಸಂಘಟಿಸಲು, ಒಂದು ರಾಜಕೀಯ ಸಂಘಟನೆಯ ಅಡಿಯಲ್ಲಿ ತರಲು ಅವರೆಲ್ಲರ ಪರವಾಗಿ ಅಧಿಕಾರಯುತವಾಗಿ ಮಾತನಾಡಲು ಒಂದು ಸಮಾವೇಶವನ್ನು ನಿನ್ನೆಯ ದಿನ ಬಾಂಬೆಯಲ್ಲಿ ಆಯೋಜಿಸಲಾಗಿತ್ತು ಮತ್ತು ಈ ಸಭೆಯಲ್ಲಿ ಈ ವರ್ಗದ ನಾಯಕರಾದಂತಹ ಡಾ.ಬಿ.ಆರ್.ಅಂಬೇಡ್ಕರ್, ಅಖಿಲ ಭಾರತ ಹರಿಜನ ರಾಜಕೀಯ ಸಮಾವೇಶದ ಅಧ್ಯಕ್ಷರಾದಂತಹ ಶ್ರೀ ಪಿ.ಎನ್. ರಾಜಭೋಗ್ ಮುಂತಾದವರು ಪಾಲ್ಗೊಂಡಿದ್ದರು ಎಂದು "ಯುನೈಟೆಡ್ ಪ್ರಸ್"ಗೆ ತಿಳಿದು ಬಂದಿದೆ.

ಯುನೈಟೆಡ್ ಪ್ರೆಸ್‌ಗೆ ತಿಳಿದು ಬಂದಿರುವ ಮತ್ತೊಂದು ವಿಷಯವೆಂದರೆ, ಭಾರತದಾದ್ಯಂತ ಇರುವ ಶೋಷಿತವರ್ಗದ ಜನರ ಎಲ್ಲಾ ನಾಯಕರ ಸಭೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರ ಮಾರ್ಗದರ್ಶನದಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ಬೊಂಬಾಯಿಯಲ್ಲಿ ಅಥವಾ ಪುಣೆಯಲ್ಲಿ ನಡೆಸಲು ನಿರ್ಧರಿಸಲಾಗಿದೆ ಮತ್ತು ದಿನಾಂಕವನ್ನು ಸಮಾವೇಶದ ಸಂಚಾಲಕರಾಗಿ ಶ್ರೀ ರಾಜ್‌ಭೋಗ್ ಅವರನ್ನು ನೇಮಕ ಮಾಡಲಾಗಿದೆ. ಇದು ಜರುಗುವ ಸ್ಥಳವನ್ನು ಈ ಶೋಷಿತ ವರ್ಗದ ನಾಯಕರನ್ನು ಸಂದರ್ಶಿಸಿದ ನಂತರ ಅಂತಿಮವಾಗಿ ನಿರ್ಣಯಿಸಲಾಗುವುದು.

ಅಲ್ಲದೇ ತಿಳಿದು ಬಂದಿರುವ ಮತ್ತೊಂದು ವಿಷಯ ಎಂದರೆ ಶೋಷಿತ ವರ್ಗದ ಈ ಸಂಘಟನೆಯು ಬೇರೆಯ ರಾಜಕೀಯ ಸಮಿತಿಗಳಾದ ಹಿಂದೂ ಮಹಾಸಭೆ ಹಾಗು ಮುಸ್ಲಿಂ ಮಹಾ ಸಭೆಯಂತೆ ಶಾಶ್ವತವಾಗಿರುತ್ತದೆ. –ಯುನೈಟೆಡ್ ಪ್ರೆಸ್[೧]

* * * * *

1. The Bombay chranice ೨೭ನೆಯ ಸೆಪ್ಟೆಂಬರ ೧೯೪೧

## ೩೧
## ಡಾ.ಬಿ.ಆರ್.ಅಂಬೇಡ್ಕರ್ ಹಾಗು ಯಹೂದಿ ಜನರು

೫೦ ವರ್ಷಗಳ ಹಿಂದೆ (೧೯೪೧ರಲ್ಲಿ) ಬೊಂಬಾಯಿಯ ಯಹೂದಿ ಮಾಸಿಕವೊಂದರ ಸಂಪಾದಕರಿಗೆ ನೀಡಿದ ವಿಶೇಷ ಸಂದರ್ಶನದಲ್ಲಿ, ಭಾರತದ ಅತ್ಯಂತ ಪ್ರಮುಖ ಹಾಗು ಗೌರವಾನ್ವಿತ ನಾಯಕರೊಬ್ಬರು ಪ್ಯಾಲೆಸ್ಟೈನಿನಲ್ಲಿ ಯಹೂದ್ಯರು ನಡೆಸುತ್ತಿರುವ ಹೋರಾಟಕ್ಕೆ ಹಾಗೂ "ಅಲ್ಲಿ ಸೃಷ್ಟಿಯಾಗುತ್ತಿರುವ ಸಾಮಾಜಿಕ ವ್ಯವಸ್ಥೆಯ" ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಇವರು ಬೇರೆಯಾರೂ ಅಲ್ಲ "ಭಾರತದ ಸಂವಿಧಾನದ ಪಿತಾಮಹ" ಹಾಗು ಶೋಷಿತ ವರ್ಗದ ನಾಯಕರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಶತಮಾನೋತ್ಸವವನ್ನು ಪ್ರಪಂಚದಾದ್ಯಂತ ಆಚರಿಸಲಾಗುತ್ತಿದೆ ಒಬ್ಬರು. ಇಸ್ರೇಲ್‌ನಲ್ಲಿ ನಡೆಯುತ್ತಿರುವ ಹೋರಾಟವನ್ನು ಪ್ರೋತ್ಸಾಹಿಸಿ ಅರಿತು ಅದನ್ನು ಬೆಂಬಲಿಸಿದ ಭಾರತದ ಕೆಲವೇ ರಾಷ್ಟ್ರೀಯ ಹೋರಾಟದ ನಾಯಕರಲ್ಲಿ ಇವರು ಒಬ್ಬರು. (ಆಗ ಪ್ಯಾಲೆಸ್ಟೇನ್ ದೇಶವು ಬ್ರಿಟಿಷರ ವಶದಲ್ಲಿತ್ತು)

ಯಹೂದ್ಯರೊಂದಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಹೊಂದಿದ್ದ ಸಂಬಂಧವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ, ಅವರು ಬರೆದಿರುವ ಲೇಖನ." ಮೋಸಸ್ ಹಾಗು ಅವನ ಪ್ರಾಮುಖ್ಯ"ವನ್ನು ಓದಬೇಕು. ಇದು ಬಹುಶಃ ೧೯೪೧ರಲ್ಲಿ Bombay Sentinel ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಬೈಬಲ್ಲಿನ ನಾಯಕ ಮೋಸಸ್ ಅವರನ್ನು ಕುರಿತು ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದಿರುವ ಈ ಲೇಖನದಲ್ಲಿ ಯಹೂದ್ಯರೊಂದಿಗೆ ಏಕೆ ತಾವು ವಿಶೇಷ ಸಂಬಂಧವನ್ನು ಹೊಂದಿದ್ದೇವೆ ಎಂಬುದನ್ನು ವಿರಿಸಿತ್ತಾರೆ. ಅದರ ಪ್ರಾಮುಖ್ಯವನ್ನು ಗಮನಿಸಿ ಅದನ್ನು ಮತ್ತೊಮ್ಮೆ ಪ್ರಕಟಿಸುವುದು ಅತ್ಯಂತ ಸೂಕ್ತ ಎಂದು ನನ್ನ ಅನಿಸಿಕೆ.

"ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಮೂಡಿಬಂದಿರುವ ಯಹೂದ್ಯರ ಕಥೆಯು ಅತ್ಯಂತ ಕರುಣಾಜನಕವಾಗಿದೆ. ಅದಕ್ಕೆ ಸಮಾನಾಂತರವಾದ ಮತ್ತೊಂದು ಕಥೆಯನ್ನು ಹುಡುಕುವುದು ಕಷ್ಟ ಸಾಧ್ಯ. ಅದನ್ನು ಅತ್ಯಂತ ಸರಳ ಆದರೆ ಮೈನವಿರೇಳಿಸುವ ಭಾಷೆಯಲ್ಲಿ ವಿವರಿಸಲಾಗಿದೆ. ತಮ್ಮನ್ನು ಹಾಗು ವಿಮೋಚನೆಗೊಳಿಸಿದ ಕರುಣಾಜನಕ ಕಥೆಯು ಅದರಲ್ಲಿ ಅಡಗಿದೆ. ಫ಼ರೋನ ಆಡಳಿತ ಇದ್ದ ಈಜಿಪ್ಟಿನಲ್ಲಿ ಇಂತಹದೇ ಕಷ್ಟ ಕೋಟಲೆಗಳನ್ನು ಅನುಭವಿಸಿದ್ದ ಯಹೂದ್ಯರ ಮನಸ್ಸಿನಲ್ಲಿ ಇದು ಮಹತ್ತರವಾದ ಅನುಕಂಪವನ್ನು ಸೃಷ್ಟಿಸಿತು. ಯಾರು ಯಾರು ಶೋಷಿತ ವರ್ಗದ ಜನರ ವಿಮೋಚನೆಗಾಗಿ ಹೋರಾಡುತ್ತಿರುವವರೋ, ಅವರಿಗೆ ಯಹೂದ್ಯರ ವಿಮೋಚನೆಗೆ ಕಾರಣಕರ್ತನಾಗಿದ್ದ ಮೋಸೆಸ್ ಎದುರಿಸಿದ ತೊಂದರೆಯು ಅರ್ಥವಾಗುತ್ತದೆ.

ಯಹೂದ್ಯರಿಗಾಗಿ ಮೋಸೆಸ್ ಏನು ತಾನೇ ಮಾಡಲಿಲ್ಲ? ಅವರನ್ನು ಈಜಿಪ್ಟಿನಿಂದ ಹೊರನಡೆಸಿದ, ದಾಸ್ಯದಿಂದ ಹೊರತಂದ, ಅವರ ಧರ್ಮಕ್ಕೆ ಭದ್ರ ಬುನಾದಿಯನ್ನು ಹಾಕಿದ. ಮೌಂಟ್ ಸಿನಾಯ್‌ನಿಂದ ೧೦ ಅನುಶಾಸನಗಳನ್ನು ತಂದ, ಸಾಮಾಜಿಕ, ನಾಗರಿಕ ಹಾಗು ಧಾರ್ಮಿಕ ಕಾರಣಗಳಿಗಾಗಿ ಆತ ಕಾನೂನು ರೂಪಿಸಿದ, ಅವರು ತಮ್ಮ ವಸತಿಗಳನ್ನು ನಿರ್ಮಿಸಿಕೊಳ್ಳಲು ಅಗತ್ಯ ನಿರ್ದೇಶನಗಳನ್ನು ನೀಡಿದ.

ಆದರೆ ತನ್ನ ಅನುಯಾಯಿಗಳಿಂದ ಯಾವ ರೀತಿಯ ಪೀಡನೆಗಳಿಗೆ ಮೋಸೆಸ್ ಒಳಗಾಗಲಿಲ್ಲ? ಇಸ್ರೇಲ್‌ನಲ್ಲಿದ್ದ ಮಕ್ಕಳು ಈಜಿಪ್ಟನ್ನು ಬಿಟ್ಟು ತೆರಳಿದಾಗ ಅವರ ಮೇಲೆ ಫರೋನ ಸೇನೆಯು ದಾಳಿಯನ್ನು ಮಾಡಿತು. ಆಗ ಅವರೆಲ್ಲಾ ಮೋಸೆಸ್‌ನ ಮೇಲೆ ಕುಪಿತಗೊಂಡರು. "ಈಜಿಪ್ಟಿನಲ್ಲಿ ಸಮಾಧಿಗಳು ಇರಲಿಲ್ಲವಾದ್ದರಿಂದ ನೀನು ನಮ್ಮನ್ನು ಇಲ್ಲಿ ಸಾಯಲಿ ಎಂದು ಕರೆತಂದಿದ್ದೀಯಾ? ಮೃತಪಡುವುದಕ್ಕಿಂತ ಈಜಿಪ್ಷಿಯನ್ನರ ಸೇವೆ ಮಾಡಿಕೊಂಡಿರುವುದೇ ಒಳಿತಾಗಿರುತ್ತಿತ್ತು' ಎಂದು ಹೇಳುತ್ತಿದ್ದರು.

ಹೀಗೆ ನಡೆಯುತ್ತ ಬಂದ ಇಸ್ರೇಲಿಗರು ಎಲಿಂ ನಗರ ತಲುಪಿ ಅಲ್ಲಿ ಬೀಡುಬಿಟ್ಟರು. ಅಲ್ಲಿ ಅವರೆಲ್ಲರಿಗೆ ಸಾಕಾಗುವಷ್ಟು ನೀರು ಇರಲಿಲ್ಲ. ಅವರೆಲ್ಲಾ ಕೂಗಾಡತೊಡಗಿದರು. "ನಮಗೆ ನೀರು ಕೊಡು, ನಮ್ಮ ಮಕ್ಕಳೂ, ಜಾನುವಾರುಗಳೊಂದಿಗೆ ನಮ್ಮನ್ನು ಕೂಡ ಬಾಯಾರಿಕೆಯಿಂದ ಸಾಯಿಸಲು ನೀನು ನಮ್ಮನ್ನು ಇಲ್ಲಿಗೆ ಕರೆತಂದಿರುವೆಯಷ್ಟೆ". ಅಲ್ಲಿ ನೀರಿನ ಅಭಾವ ಇದ್ದ ಕಾರಣ ಎಲ್ಲರೂ ಆತನನ್ನು ಕಲ್ಲುಗಳಿಂದ ಹೊಡೆದು ಸಾಯಿಸಲು ತಯಾರಿದ್ದರು.

ಮೌಂಟ್ ಸಿನಾಯ್ ಏರಿ ಹೋದ ಮೋಸೆಸ್ ಕೆಳ ಬರಲು ತಡ ಮಾಡಿದ. ತತಕ್ಷಣವೇ ಆರೋನ್‌ನ ಬಳಿಗೆ ತೆರಳಿದ ಯಹೂದ್ಯರು ಈತನ ವಿರುದ್ಧ ತಿರುಗಿ ಬಿದ್ದರು. "ದೇವರೇ, ನಮ್ಮನ್ನು ಬೇಗನೇ ಕರೆಸಿಕೋ. ಈಜಿಪ್ಟಿನಿಂದ ನಮ್ಮನ್ನು ಈ ರೀತಿ ಸಾಯಲು ಕರೆತಂದ ಮೋಸೆಸ್ ಕಷ್ಟವನ್ನು ಅನುಭವಿಸುವಂತಾಗಲಿ' "ಆತನಿಗೆ ಸದ್ಗತಿ ಎಂದೆಂದಿಗೂ ಉಂಟಾಗದಿರಲಿ"

ಆತನ ನಾಯಕತ್ವವನ್ನೇ ಪ್ರಶ್ನಿಸಲಾಯಿತು. ಹಳೆಯ ಒಡಂಬಡಿಕೆಯಲ್ಲಿ ಮಿರಿಯಂ ಹಾಗು ಆ್ಯರೋನ್ ಈತನ ವಿರುದ್ಧ ಮಾತನಾಡಿರುವ ಪುರಾವೆಗಳಿವೆ. ಆತ ಇಥಿಯೋಪಿಯಾದ ಸ್ತ್ರೀಯನ್ನು ಮದುವೆಯಾದುದದ್ದಕ್ಕೆ ಅವರು ಈ ರೀತಿ ಪ್ರತಿಕ್ರಿಯಿಸಿದ್ದರು. 'ಸೃಷ್ಟಿಕರ್ತನು ಕೇವಲ ಮೋಸೆಸ್‌ನೊಂದಿಗೆ ಮಾತ್ರವೇ ಸಂವಾದ ನಡೆಸಿದ್ದನೇ? ನಮ್ಮ ಮೂಲಕ ಆತ ಮಾತನಾಡಿರಲಿಲ್ಲವೇ?" ಮೋಸೆಸ್ ಈ ಎಲ್ಲಾ ಸುಳ್ಳು ಆಪಾದನೆಗಳನ್ನು ನಿಂದನೆಯನ್ನೂ, ಅವರ ಅಸಹನೆಯನ್ನು ಸಹಿಸಿಕೊಂಡು, ಅವರ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡ.

ಹಳೆಯ ಒಡಂಬಡಿಕೆಯಲ್ಲಿ ಹೇಳಿದಂತೆ "ಮೋಸೆಸ್ ಹುಟ್ಟುವವರೆಗೂ ಇಸ್ರೇಲ್ ಓರ್ವ ಸಂತನ ಜನನವನ್ನು ಕಂಡೇ ಇರಲಿಲ್ಲ. ದೇವರಿಗೂ ಆತನಿಗೂ ಮುಖತಃ ಪರಿಚಯವಿತ್ತು". ಈತ ಕೇವಲ ಯಹೂದ್ಯರ ಮಹಾ ನಾಯಕನಾಗಿರಲಿಲ್ಲ. "ಯಾವುದೇ ಶೋಷಿತ ವರ್ಗದ ಜನರು ಈತನ ಜನನಕ್ಕೆ ಪ್ರಾರ್ಥಿಸುವಷ್ಟು ಒಳ್ಳೆಯ ನಾಯಕ ಈತನಾಗಿದ್ದ".

ಮೋಸೆಸ್‌ನ ಈ ನಾಯಕತ್ವದ ಗುಣದಿಂದ ಹಾಗು ದೇಶಾಂತರ ಪಯಣದ ಕಥೆಯಿಂದ ಯಾರಿಗೆ ಯಾವ ಭಾವನೆ ಉಂಟಾಗಿದೆಯೋ ನನಗೆ ತಿಳಿದಿಲ್ಲ. ಆದರೆ ನನಗೆ ಈ ಕಥೆ ದೀರ್ಘಕಾಲಿಕ ಸ್ಫೂರ್ತಿ ಹಾಗು ಭರವಸೆಯನ್ನು ತುಂಬಿದೆ.

ಯಹೂದ್ಯರಿಗೆ ಒಂದು ಭರವಸೆಯ ಭೂಮಿ ಇತ್ತು. ಅಂತೆಯೇ ಶೋಷಿತ ವರ್ಗದ ಜನರಿಗೂ ಒಂದು ಭರವಸೆಯ ಭೂಮಿ ಇರಲೀ ಎಂಬುದೇ ನನ್ನ ಆಶಯ. ಕಟ್ಟಕಡೆಗೆ ಯಹೂದ್ಯರು ತಮ್ಮ ಈ ಭರವಸೆಯ ಭೂಮಿಯನ್ನು ತಲುಪಲು ಸಫಲರಾದರು. ಅಂತೆಯೇ ಶೋಷಿತ ವರ್ಗದ ಜನರು ಕೂಡ ಒಂದು ದಿನ ತಮ್ಮ ಈ ಗಮ್ಯವನ್ನು ತಲುಪುತ್ತಾರೆ ಎಂಬ ನಂಬಿಕೆ ನನಗಿದೆ".

ಶೋಷಿತ ವರ್ಗದವರ ಇಂದಿನ ಪರಿಸ್ಥಿತಿಯು ಈಜಿಪ್ಟಿನಲ್ಲಿ ಬಂಧನದಲ್ಲಿದ್ದ ಯಹೂದ್ಯರ ಪರಿಸ್ಥಿತಿಗೆ ಸಮನಾಗಿಯೇ ಇದೆ. ಮೋಸೆಸ್‌ನಲ್ಲಿ ನಾನು ಅಪ್ರತಿಮ ನಾಯಕನೊಬ್ಬನ ಗುಣವನ್ನು ಗುರುತಿಸಿದ್ದೇನೆ. ಆತನಲ್ಲಿ ತನ್ನ ಜನರ ಬಗೆಗೆ ಇದ್ದ ಪ್ರೇಮವು ಅವನಿಗೆ ಎದುರಾದ ಎಲ್ಲಾ ಕಷ್ಟಗಳನ್ನೂ ಎದುರಿಸುವ

ಧೈರ್ಯವನ್ನು ತುಂಬಿತ್ತು.

ಶೋಷಿತ ವರ್ಗದ ಜನರನ್ನು ಶೋಷಣೆಯಿಂದ ಮುಕ್ತಗೊಳಿಸುವ ನನ್ನ ಹೋರಾಟ ಜಾರಿಯಲ್ಲಿ ಇರಲು ಮೋಸೆಸ್‌ನ ಈ ಕಥೆಯೇ ಪ್ರೇರಣೆ."

ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅವರ ಹೋರಾಟವನ್ನು ಅತ್ಯಂತ ಪ್ರಶಂಸೆಯ ದೃಷ್ಟಿಯಿಂದ ನೋಡುವುದು ಅತ್ಯಂತ ಸಹಜ. ಈತ ಸಮಾಜದ ಅತ್ಯಂತ ಬಲಹೀನ ವರ್ಗದವರ ಹೋರಾಟಗಾರನಾಗಿ ಉದಯಿಸಿದ್ದ. ನೂರಾರು ವರ್ಷಗಳಿಂದ ತಮ್ಮ ಭರವಸೆಯ ಭೂಮಿಯಿಂದ ದೂರವಾಗಿದ್ದವರಿಗೆ ಅದನ್ನು ಹಿಂದಿರುಗಿಸಿ ಕೊಡುವ ಪ್ರಯತ್ನಪಟ್ಟಿದ್ದ.

ಇಸ್ರೇಲಿಗರಾದ ನಾವು ಇಂದಿಗೂ ನಮ್ಮ ರಾಷ್ಟ್ರದ ಕಟ್ಟುವಿಕೆ ಹಾಗು ಹೋರಾಟದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರೋತ್ಸಾಹವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

* * * * *

ಸೌಜನ್ಯ: ಇಸ್ರೇಲ್ ವಾರ್ತೆ[೧]

---

೧. ಪ್ರಜಾ ಬಂಧು ೨. ೩೦ನೆಯ ಡಿಸೆಂಬರ್ ೧೯೯೧

## ೩೨
## ಮಂತ್ರಿಮಂಡಲದ ರಚನೆಯಲ್ಲಿ ನನಗೆ ಸ್ವಲ್ಪವೂ ಆಸಕ್ತಿಯಿಲ್ಲ

ಬೊಂಬಾಯಿ
ಶನಿವಾರ

'ಕ್ರಾನಿಕಲ್' ಪತ್ರಿಕೆಯ ವರದಿಗಾರರಿಗೆ ನೀಡಿದ ಸಂದರ್ಶನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು 'ಬೊಂಬಾಯಿಯಲ್ಲಿ ಮಂತ್ರಿ ಮಂಡಲ ರಚಿಸಲು ನನಗೆ ಯಾವುದೇ ಆಸಕ್ತಿಯಿಲ್ಲ" ಎಂದಿದ್ದರು. ನವೆಂಬರ್ ೨೫ ರಂದು ಈ ವಿಷಯವಾಗಿ ನವದೆಹಲಿಯಿಂದ ಸಂದೇಶ ಬಂದಿತ್ತು. ಈ ಸಂದೇಶದಲ್ಲಿ, ಮುಂದಿನ ವಾರ ಡಾ.ಬಿ.ಆರ್.ಅಂಬೇಡ್ಕರ್ ಅವರು ದೆಹಲಿಯಲ್ಲಿ ಇರುವ ಸಮಯದಲ್ಲಿ ಅಲ್ಲಿನ ರಾಜ್ಯಪಾಲರನ್ನು ಬಂದು ಕಾಣುವಂತೆ ಸೂಚಿಸಲಾಗಿತ್ತು. ಒರಿಸ್ಸಾದಂತೆಯೇ ಬೊಂಬಾಯಿಯಲ್ಲಿ ಕೂಡ ಮಂತ್ರಿಮಂಡಲ ರಚಿಸುವ ನಿಟ್ಟಿನಲ್ಲಿ ಈ ಸಭೆ ಕರೆಯಲಾಗಿತ್ತು.

ಡಾ.ಬಿ.ಆರ್.ಅಂಬೇಡ್ಕರ್ ಅವರು "ಈ ಸಲಹೆಗೆ ಯಾವುದೇ ಬುನಾದಿಯಿಲ್ಲ" ಎಂದಿದ್ದರು.

ನವದೆಹಲಿಯಿಂದ ಬಂದಿರುವ ಸಂದೇಶದಲ್ಲಿ "ಕೆಲವು ವ್ಯಕ್ತಿಗಳು ಈಗಾಗಲೇ ರಾಜ್ಯಪಾಲರನ್ನು ಭೇಟಿ ಮಾಡಿದ್ದಾರೆ ಮಂತ್ರಿಮಂಡಲದ ರಚನೆಯ ವಿಷಯವಾಗಿ ಎಂದು ಹೇಳಲಾಗುತ್ತಿದೆ. ಆದರೆ ಇದಕ್ಕೆ ಯಾವುದೇ ಆಧಾರವಿಲ್ಲ. ಈ ರೀತಿ ಮಂತ್ರಿಮಂಡಲವನ್ನು ರಚನೆ ಮಾಡಬೇಕು ಎಂದು ಹೇಳುತ್ತಿರುವುದರಲ್ಲಿ ಕ್ರಾಂಗ್ರೆಸ್‌ನಲ್ಲಿರುವ ಹುಳುಕುಗಳನ್ನು ಕಂಡುಹಿಡಿಯುವ ಪ್ರಯತ್ನಗಳಿವೆ. ಕಾಂಗ್ರೆಸ್ ಶಾಸಕಾಂಗ ಪಕ್ಷದಿಂದ ಕೆಲ ಶಾಸಕರನ್ನು ಹೊರತರುವ ಪ್ರಯತ್ನಗಳ ಸೂಚನೆಗಳಾವುವೂ ಕಾಣಿಸುತ್ತಿಲ್ಲ.

ಆದರೆ ಕಾಂಗ್ರೆಸ್‌ನ ಪಾಳಯದಲ್ಲಿ ಒರಿಸ್ಸಾದಲ್ಲಿ ಆದಂತೆ ಆಗಲು ಸಾಧ್ಯವಿಲ್ಲ ಎಂದೇ ಎಲ್ಲರು ಹೇಳುತ್ತಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಹಿರಿಯ ನಾಯಕರೊಬ್ಬರು ಈ ಪಕ್ಷದ ಸಮಗ್ರತೆಯ ಬಗ್ಗೆ ನಮಗೆ ಯಾವುದೇ ಸಂದೇಹವಿಲ್ಲ ಎಂದು ಹೇಳಿದ್ದಾರೆ.[೧]

* * * * *

೧. The Bombay Chronicle ೩೦ನೆಯ ನವೆಂಬರ್ ೧೯೪೧

* The 29th November 1941

## ೩೩
## ಹಿಂದೂ ಧರ್ಮ ಕೂಡ ಒಂದು ರಾಜಕೀಯ ಸಿದ್ಧಾಂತ ಇದರ ಲಕ್ಷಣ ಕೂಡ

ಡಾ. ಬಿ.ಆರ್. ಅಂಬೇಡ್ಕರ್ ಅವರು ಒಂದು ಪತ್ರಿಕಾ ಹೇಳಿಕೆಯಲ್ಲಿ ಈ ಕೆಳಗಿನಂತೆ ಹೇಳಿದ್ದಾರೆ.

ಭಾರತೀಯರಿಗೆ ಕೊಡಬೇಕಾಗಿರುವ ರಾಜಕೀಯ ಅಧಿಕಾರಗಳನ್ನು ಆದಷ್ಟು ತುರ್ತಾಗಿ ನೀಡಬೇಕೆಂದು ಸೇನಾಧಿಕಾರಿಯಾದ ಚಿಯಾಂಗ್ ಕಾಯ್ ಶೇಖ್ ಅವರು ಬ್ರಿಟಿಷರ ಸರ್ಕಾರಕ್ಕೆ ಒಂದು ವಿಶೇಷ ಮನವಿಯನ್ನು ಸಲ್ಲಿಸಿರುತ್ತಾರೆ. ಆದರೆ ಈ ರೀತಿ ಅವರ ಇಷ್ಟಾರ್ಥಸಿದ್ಧಿ ಆಗುವ ನಿಟ್ಟಿನಲ್ಲಿ ಎದುರಾಗುವ ಅಡೆತಡೆಗಳನ್ನು ನಿವಾರಿಸುವುದಕ್ಕೆ ಅಗತ್ಯವಾದ ಯಾವುದೇ ಪರಿಹಾರವನ್ನು ಅವರು ನೀಡಿಲ್ಲ. ಈ ಸಂಕಷ್ಟವು ಉದ್ಭವವಾಗಿರುವುದಕ್ಕೆ ಕಾರಣವೆಂದರೆ, ಭವಿಷ್ಯದ ಭಾರತದ ಸಂವಿಧಾನವು ಭಾರತದ ಎಲ್ಲಾ ಮುಖ್ಯವರ್ಗಗಳವರ ಒಪ್ಪಿಗೆಯನ್ನು ಹೊಂದಿರತಕ್ಕದ್ದು ಎಂದು ಆಗಸ್ಟ್ ನಿರ್ಣಯದಲ್ಲಿ ವೈಸ್‌ರಾಯ್ ಅವರು ತಿಳಿಸಿರುವುದನ್ನು ಕಾಂಗ್ರೆಸ್ ಪಕ್ಷವು ಒಪ್ಪಿಕೊಳ್ಳುತ್ತಿಲ್ಲ. ಈ ಸಂಕಷ್ಟದ ಹೊಣೆಗಾರಿಕೆ ಬ್ರಿಟಿಷರ ಮೇಲೂ ಇದೆ. ಅವರು ತಮ್ಮ ಹೊಣೆಗಾರಿಕೆಯನ್ನು ಅರ್ಥಮಾಡಿಕೊಂಡಿಲ್ಲ. ಈ ದೇಶದ ಆಡಳಿತವನ್ನು ಬಹುಸಂಖ್ಯೆಯಲ್ಲಿ ಇದ್ದಾರೆಂಬ ಕಾರಣದಿಂದ ಹಿಂದುಗಳ ಕೈಯಲ್ಲಿ ಇರಿಸಬೇಕೆಂದು ಇವರು ಪ್ರಜ್ಞಾಪೂರ್ವಕವಾಗಿ ಬಯಸುತ್ತಾರೆಂದು ಕಾಂಗ್ರೆಸ್‌ನವರು ಆಶಿಸುವಹಾಗಿಲ್ಲ. ಹಿಂದೂ ಧರ್ಮವು ಫ್ಯಾಸಿಸ್ಟರಂತೆ, ನಾಜಿಗಳಂತೆಯೇ ಒಂದು ಜನತಂತ್ರವಿರೋಧಿ ರಾಜಕೀಯ ಸಂಘಟನೆ ಎಂಬುದನ್ನು ಕಾಂಗ್ರೆಸ್‌ನವರು ಬೇಕೆಂದೇ ಮರೆತುಬಿಡುತ್ತಾರೆ. ಹಿಂದೂಧರ್ಮವನ್ನು ತನ್ನ ಆಟ ಆಡಲು ಬಿಟ್ಟುಬಿಟ್ಟರೆ. ಅದು ತನ್ನ ವ್ಯಾಪ್ತಿಯಲ್ಲಿಲ್ಲದವರ ಮತ್ತು ತನ್ನನ್ನು ವಿರೋಧಿಸುವರ ಪಾಲಿಗೆ ಯಮನಂತೆ ಆಗುತ್ತದೆ. ಈ ದೃಷ್ಟಿಯು ಕೇವಲ ಮುಸ್ಲಿಮರದ್ದಲ್ಲ. ಅದು ಶೋಷಿತವರ್ಗದವರ, ಬ್ರಾಹ್ಮಣೇತರರ ದೃಷ್ಟಿಯೂ ಹೌದು.

### ಏಕೈಕ ಪ್ರತಿವಿಷ:

ಬ್ರಿಟಿಷ್ ಸರ್ಕಾರವು ಈ ಕೆಳಗಿನಂತೆ ನಿರ್ಣಯಗಳನ್ನು ತೆಗೆದುಕೊಳ್ಳಬಹುದು ಎಂದು ನಾನು ಭಾವಿಸುತ್ತೇನೆ:

೧) ಶಾಂತಿ ಏರ್ಪಟ್ಟು ಮೂರು ವರ್ಷಗಳ ಒಳಗಾಗಿ ಭಾರತವನ್ನು ಪರಮಾಧಿಕಾರದ ರಾಜ್ಯವನ್ನಾಗಿ ಮಾಡಬೇಕು.

೨) ಇದು ಸಂಪೂರ್ಣವಾಗಿ ಸಿದ್ಧಿಸಬೇಕೆಂದರೆ, ಭಾರತ ರಾಷ್ಟ್ರದ ವಿವಿಧ ಘಟಕಗಳು ಒಂದು ವರ್ಷದ ಒಳಗೆ ಸಂವಿಧಾನದ ವಿಷಯದಲ್ಲಿ ಒಮ್ಮತಕ್ಕೆ ಬರಬೇಕು.

೩) ಈ ಒಪ್ಪಂದಕ್ಕೆ ಒಪ್ಪಿಗೆ ಸೂಚಿಸಲು ವಿಫಲವಾದರೆ ಬ್ರಿಟಿಷ್ ಸರಕಾರವು ಈ ವಿವಾದವನ್ನು ಅಂತಾರಾಷ್ಟ್ರೀಯನ್ಯಾಯಪೀಠಕ್ಕೆ ಒಪ್ಪಿಸಬೇಕು.

೪) ಅಂತಾರಾಷ್ಟ್ರೀಯ ನ್ಯಾಯಪೀಠದ ನಿರ್ಧಾರವು ಹೊರಬಿದ್ದ ನಂತರ ಬ್ರಿಟಿಷ್ ಸರ್ಕಾರವು ಆ ನಿರ್ಣಯವನ್ನು ಜಾರಿಗೆ ತರಬೇಕು.

ಈ ನಿರ್ಧಾರವು ಸರಿಸುಮಾರು ಎಲ್ಲ ಜನರನ್ನು ತೃಪ್ತಿಪಡಿಸುವಂತಿರಬೇಕು. ನಾನು ಕಂಡಂತೆ ಇದು ಶ್ರೀ ಜಿನ್ನಾರವರ ಅಭಿಪ್ರಾಯಕ್ಕೆ ಹತ್ತಿರವಾಗಿರುತ್ತದೆ. ಜಾತ್ಯಾಧಾರಿತ ಸಮಸ್ಯೆಯ ಬಗೆಗೆ ಒಂದು ನಿರ್ಣಯಕ್ಕೆ ಬರಬೇಕು ಎನ್ನುವ ಶೋಷಿತವರ್ಗಗಳವರ ದೃಷ್ಟಿಗೂ ಹೊಂದಾಣಿಕೆಯಾಗುತ್ತದೆ. ಇದು ಕಾಂಗ್ರೆಸ್ ಪಕ್ಷದ

ಅಭಿಪ್ರಾಯವನ್ನು ಒಪ್ಪುತ್ತದೆ. ಅದೇನೆಂದರೆ ಬ್ರಿಟಿಷ್ ಸರ್ಕಾರವು ಭಾರತಕ್ಕೆ ಪರಮಾಧಿಕಾರ ನೀಡಬೇಕು ಎಂಬ ನಿರ್ಧಾರಕ್ಕೆ ಯಾರೂ ವಿರೋಧವನ್ನು ವ್ಯಕ್ತಪಡಿಸುತ್ತಿಲ್ಲ. ನಿರ್ಣಯನ್ನು ತೆಗೆದುಕೊಳ್ಳಲು ನಾವೀಗ ಯುದ್ಧದ ಸಮಯದಲ್ಲಿ ಇದ್ದೇವೆ ಎನ್ನುವ ವಾದವು ವಾದವೇ ಅಲ್ಲ. ಬದಲಿಗೆ ಈ ಅವಕಾಶವು ನಿರ್ಧಾರವನ್ನು ತೆಗೆದುಕೊಳ್ಳಲು ಸರಿಯಾದುದಾಗಿದೆ.

## ಹರಿಜನರು ಮುಸಲ್ಮಾನರ ನಡುವಿನ ವಿವಾದ

ಈ ನಿರ್ಣಯವು ರಾಷ್ಟ್ರೀಯ ಸರಕಾರದ ಉದಯದೊಡನೆಯೇ ಪ್ರಕಟಗೊಳ್ಳಬೇಕೆ? ಒಂದು ವೇಳೆ ಹಾಗಾಗುವುದಾದರೆ ಅದು ಒಳ್ಳೆಯದೆ. ಆದರೆ ಇಲ್ಲಿ ಶ್ರೀ ಜಿನ್ನಾ ಅವರು ಮುಂದಿಟ್ಟಿರುವ ಎರಡು ಬೇಡಿಕೆಗಳ ವಿಷಯದಲ್ಲಿ ಸ್ವಲ್ಪ ತೊಂದರೆಯಿದೆ. ಮೊದಲನೆಯದು, ಅಂತಿಮವಾಗಿ ಪಾಕಿಸ್ಥಾನದ ನಿರ್ಮಾಣ. ೧) ಎರಡನೆಯದು ತುರ್ತಾಗಿ ಆಗಬೇಕಿರುವುದು. ಅದೇನೆಂದರೆ, ಮಂತ್ರಿ ಮಂಡಲದಲ್ಲಿ ಶೇಕಡ ೫೦ರಷ್ಟು ಪ್ರಾತಿನಿಧ್ಯ.

ಮುಸ್ಲಿಮರು ಒಂದು ರಾಷ್ಟ್ರ ಎಂದು ಹೇಳುವ ಜಿನ್ನಾ ಅವರ ಬೇಡಿಕೆಯನ್ನು ನಾನು ಅರ್ಥ ಮಾಡಕೊಳ್ಳಬಲ್ಲೆ. ಈ ಕಾರಣವಾಗಿ ಜಗಳ ಮಾಡಲು ನನಗೆ ಯಾವುದೇ ಕಾರಣ ಕಂಡು ಬರುತ್ತಿಲ್ಲ. ಮುಸ್ಲಿಮರಿಗೆ ಒಂದು ಪ್ರತ್ಯೇಕ ರಾಷ್ಟ್ರ ನೀಡಬೇಕು ಎಂಬುದೇ ಶ್ರೀ ಜಿನ್ನಾ ಅವರ ಬೇಡಿಕೆ ಕೂಡ. ಆದರೆ ಅವರ ಪ್ರಕಾರ ಪ್ರತ್ಯೇಕ ರಾಷ್ಟ್ರವಾಗಿರುವ ಹಿಂದೂಗಳು ವಾಸವಾಗಿರುವ ದೇಶದ ಭಾಗವನ್ನು ಅವರು ಪಾಕಿಸ್ಥಾನದ ಭಾಗವನ್ನಾಗಿಸಿಕೊಳ್ಳಕೂಡದು.

ಇನ್ನು ಪಾಕಿಸ್ತಾನದ ವಿಷಯಕ್ಕೆ ಬಂದರೆ ಜಿನ್ನಾ ಅವರು ಮೊಟ್ಟೆ ಇಡುವ ಮುನ್ನವೇ ಮರಿಗಳ ಎಣಿಕೆಯಲ್ಲಿ ತೊಡಗಿದ್ದಾರೆ.

ವಾಯವ್ಯ ಗಡಿ ಭಾಗವು ಪಾಕಿಸ್ತಾನದ ಅತ್ಯಂತ ಪ್ರಮುಖ ಭಾಗವಾಗಿದೆ. ಆದರೆ ವಾಯುವ್ಯ ಗಡಿಭಾಗದ ಆತಿಥೇಯರು ತಾವಲ್ಲ ಎಂಬುದನ್ನು ಜಿನ್ನಾ ಅವರೇ ಒಪ್ಪಿಕೊಳ್ಳಬೇಕು. ಇದರ ಆತಿಥೇಯರು ಅಬ್ದುಲ್ ಗಫಾರ್ ಖಾನ್ ಅವರು. ಅವರ ಅನುಮತಿ ಇಲ್ಲದಿದ್ದರೆ, ಪಾಕಿಸ್ಥಾನಕ್ಕೆ ಅಸ್ತಿತ್ವವೇ ಇರುವುದಿಲ್ಲ. ಪಾಕಿಸ್ಥಾನ ಬೇಕು ಎಂಬ ಭರಾಟೆಯ ಪ್ರಚಾರದಲ್ಲಿ ತೊಡಗುವುದನ್ನು ಬಿಟ್ಟು ಜಿನ್ನಾ ಅವರು ತಮ್ಮ ಸಮಯ ಹಾಗು ಶಕ್ತಿಯನ್ನು ಅಬ್ದುಲ್ ಗಫಾರ್ ಖಾನ್ ಅವರನ್ನು ಪರಿವರ್ತಿಸುವುದಕ್ಕೆ ಉಪಯೋಗಿಸಬೇಕು. ಅದನ್ನು ಪರಿಗಣಿಸುವುದು ಬಿಡುವುದು ಜಿನ್ನಾ ಅವರಿಗೆ ಬಿಟ್ಟದ್ದು. ನಾನು ಈ ಮೊದಲೇ ಹೇಳಿದಂತೆ ಪಾಕಿಸ್ಥಾನದ ಬೇಡಿಕೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ.

## ಅತಿರೇಕ

ಆದರೆ ಮುಸಲ್ಮಾನರಿಗೆ ಶೇಕಡ ೫೦ರಷ್ಟು ಪ್ರಾತಿನಿಧ್ಯ ನೀಡಬೇಕು ಎಂಬ ಇವರ ಬೇಡಿಕೆ ನನಗೆ ಅರ್ಥವಾಗುತ್ತಿಲ್ಲ. ಇದು ಪಾಕಿಸ್ತಾನದ ಬೇಡಿಕೆಗೆ ಹೇಗೆ ಸಂಬಂಧಪಟ್ಟಿದೆ ಎಂದು ಕೂಡ ನನಗೆ ಅರ್ಥ ಆಗುತ್ತಿಲ್ಲ. ಇನ್ನು ಈ ಮುಸಲ್ಮಾನರ ಸಂಘದ ಬೇಡಿಕೆಯು ಅತಿರೇಕದಿಂದ ಕೂಡಿದೆ. ಇದನ್ನು ನಿರಾಕರಿಸುವುದರ ಮೂಲಕ ಲಾರ್ಡ್ ಲಿನ್‌ಲಿಥ್‌ಗೋ ಅವರು ಭಾರತಕ್ಕೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ನನ್ನ ಅಭಿಪ್ರಾಯದಲ್ಲಿ, ಶೇ. ೫೦ರಷ್ಟು ಪ್ರಾತಿನಿಧ್ಯ ಬೇಕು ಎನ್ನುವ ಜಿನ್ನಾ ಅವರ ಬೇಡಿಕೆಯನ್ನು

ಮನ್ನಿಸಿದರೆ ಭಾರತದಲ್ಲಿ ಯಾವುದೇ ರಾಷ್ಟ್ರೀಯ ಸರ್ಕಾರವು ಈ ಕೂಡಲೇ ಸ್ಥಾಪನೆ ಆಗುವ ಆವಶ್ಯಕತೆಯೇ ಇಲ್ಲ. ಅದಲ್ಲದೇ ನಾವೀಗ ಯುದ್ಧ ತಪ್ಪಿಸುವ ನಿಟ್ಟಿನಲ್ಲಿ ಮಾಡುತ್ತಿರುವ ಪ್ರಯತ್ನಕ್ಕಿಂತ ಹೆಚ್ಚಿನದನ್ನು ರಾಷ್ಟ್ರೀಯ ಸರ್ಕಾರವು ಮಾಡಲು ಸಾಧ್ಯವಿಲ್ಲ ಎಂದೇ ನನ್ನ ಅನಿಸಿಕೆ. ಇದಕ್ಕಿಂತ ಹೆಚ್ಚಿನದೇನನ್ನೂ ಭಾರತ ಮಾಡುವುದು ಸಾಧ್ಯವಿಲ್ಲ. ಏಕೆಂದರೆ ಅದಕ್ಕೆ ಆ ಸಾಮರ್ಥ್ಯವಿಲ್ಲ. ಈ ತಪ್ಪಿನ ಹೊಣೆ ಸಂಪೂರ್ಣ ಬ್ರಿಟಿಷರ ಸರ್ಕಾರದ್ದು. ಶಾಂತಿಯ ಕಾಲದಲ್ಲಿ ಅವರು ಭಾರತವನ್ನು ಅಭಿವೃದ್ಧಿಯಾಗಲು ಬಿಡಲೇ ಇಲ್ಲ. ಆದ್ದರಿಂದ ಈಗ ಯಾವುದೇ ರೀತಿಯ ಅಭಿವೃದ್ಧಿಯನ್ನು ಈ ರಾಷ್ಟ್ರೀಯ ಸರ್ಕಾರ ಕೈಗೊಳ್ಳುವುದು ಕಷ್ಟವಾಗುತ್ತಿದೆ. ಸಂಪೂರ್ಣವಾಗಿ ಅಭಿವೃದ್ಧಿಯಾಗಿದ್ದಿದ್ದರೆ ಭಾರತವು ಸಾಮ್ರಾಜ್ಯವನ್ನು ಕಾಪಾಡಿಕೊಳ್ಳುತ್ತಿತ್ತು. ಈಗ ತನ್ನನ್ನು ತಾನು ಕಾಪಾಡಿಕೊಳ್ಳುವ ಸಾಮರ್ಥ್ಯವೇ ಭಾರತಕ್ಕಿಲ್ಲ. ಆದ್ದರಿಂದ ಜಪಾನರ ದಾಳಿಯಿಂದ ತನ್ನನ್ನು ಕಾಪಾಡಿಕೊಳ್ಳಲು ಭಾರತವು ಇಂಗ್ಲೆಂಡಿನ ಮೊರೆ ಹೋಗಬೇಕಿದೆ. ಇದು ಈ ದೇಶದ ಅಸಹಾಯಕ ಪರಿಸ್ಥಿತಿ. ಭಾರತದ ಭದ್ರತೆಯ ಅಧಿಕಾರಿಯಾಗಿ ಒಬ್ಬ ಭಾರತೀಯನ ನೇಮಕ ಮಾಡಬಹುದು. ಆದರೆ ಅಷ್ಟು ಮಾಡಿದರೆ ಸಾಕೇ? ಆತನ ಸಂಪೂರ್ಣ ಅಧೀನಕ್ಕೆ ಸೇನೆಯನ್ನು ನೀಡದೇ ಇದ್ದರೆ, ಆ ರಕ್ಷಣಾಸಚಿವರು ಮಾಡುವುದಾದರೂ ಏನು?

ನನ್ನ ಅಭಿಪ್ರಾಯದಲ್ಲಿ ತನ್ನ ರಕ್ಷಣೆಗೆಂದು ಭಾರತ, ಇಂಗ್ಲೆಂಡಿನ ಸೇನೆಯನ್ನು ಕರೆಯಿಸಿಕೊಳ್ಳುವುದೇ ಒಳಿತು. ಅದರಲ್ಲಿ ಈಗಿನ ಭಾರತದ ಹಿತಾಸಕ್ತಿಯೂ ಅಡಗಿದೆ. ಅಂತೆಯೇ ಇಂಗ್ಲೆಂಡ್ ಕೂಡ ತನ್ನ ಕರ್ತವ್ಯವನ್ನು ನಿರ್ವಹಿಸಿದಂತಾಗುತ್ತದೆ. A.P[1]

* * * * *

1. The Bombay chronice ೨೭ನೆಯ ಫೆಬ್ರವರಿ ೧೯೪೨

## ೩೪
## ರಾಷ್ಟ್ರೀಯ ಜೀವನದಲ್ಲಿ ನಾವು ಒಂದು ಪ್ರತ್ಯೇಕ ಘಟಕ

ವೈಸ್‌ರಾಯ್ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನಾಗಿ ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ನೇಮಿಸಿದ ನಂತರ ಲಂಡನ್ನಿನ ಪತ್ರಕರ್ತನಾದ ಶ್ರೀ ಬೇವರಾಲಿ ನಿಕೋಲಸ್ ಎಂಬಾತ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂದರ್ಶನ ನಡೆಸಿದ. "ಭಾರತದ ಬಗೆ ನನ್ನ ನಿರ್ಣಯ" ಎಂಬ ಕೃತಿಯಲ್ಲಿ ಆತ ಈ ಸಂದರ್ಶನವನ್ನು ಪ್ರಕಟಿಸಿದ್ದಾನೆ. ಇದು ೧೯೪೪ರಲ್ಲಿ ಪ್ರಕಟವಾಯಿತು. ಇದರಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಕೆಲ ಖಾಸಗಿ ವಿಷಯಗಳು ಬೆಳಕಿಗೆ ಬಂದವು. ಸಂಪಾದಕರು.

"ತನ್ನ ಮನೆಯ ಪಡಸಾಲೆಯ ಬೆತ್ತದ ಖುರ್ಚಿಯಲ್ಲಿ ಕುಳಿತು ಸಮಾರು ೫೦ ವರ್ಷದ ವ್ಯಕ್ತಿ ನನ್ನ ಆಗಮನವನ್ನು ಎದುರು ನೋಡುತ್ತಿದ್ದರು. ಆತ ತುಸು ದೊಡ್ಡ ಗಾತ್ರದ, ಕ್ರಿಯಾತ್ಮಕ ವ್ಯಕ್ತಿಯಾಗಿ ನನಗೆ ಕಂಡರು. ಆತನ ನಡತೆ ಬಹಳ ಸಭ್ಯವಾಗಿತ್ತು. ಆಗಾಗ್ಗೆ ಅವರು ತಮ್ಮ ಬೂಟಿನ ದಾರವನ್ನು ಕಟ್ಟಿಕೊಳ್ಳುತ್ತಿದ್ದರು. ತಮ್ಮ ಬಗ್ಗೆ ರಕ್ಷಣಾತ್ಮಕವಾಗಿದ್ದ ಅವರು ಬೇರೆ ಬೇರೆ ದಿಕ್ಕಿನಿಂದ ತಮ್ಮ ಮೇಲೆ ಬೀಳುತ್ತಿದ್ದ ಟೀಕಾಪ್ರಾಹಾರದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಆ ವ್ಯಕ್ತಿಯೇ ಡಾ.ಬಿ.ಆರ್.ಅಂಬೇಡ್ಕರ್. ಈ ಮನುಷ್ಯನಿಂದ ಏನನ್ನು ನಿರೀಕ್ಷಿಸಬಹುದು ಎಂಬುದನ್ನು ಇಷ್ಟರಲ್ಲೇ ನೀವು ತಿಳಿಯವಿರಿ.

ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತ ಸರ್ಕಾರದ ಕಾರ್ಮಿಕ ಸದಸ್ಯರು. ಈತ ಭಾರತದ ಅತ್ಯುತ್ತಮ ೬ ಬುದ್ಧಿವಂತರಲ್ಲಿ ಒಬ್ಬರು. ಆತ ಒಬ್ಬ ಅತ್ಯುತ್ತಮ ಆಡಳಿತಗಾರ ಹಾಗು ವಾಸ್ತವವಾದಿ. ಆತ ಸಾರ್ವಜನಿಕವಾಗಿ ಮಾತನಾಡುವಾಗ ವಿದ್ಯುತ್ಪ್ರವಾಹ ಹರಿಯುತ್ತಿರುವಂತೆ ಇರುತ್ತದೆ. ಅವರು ಕ್ರಿಯಾತ್ಮಕ ಹಾಗು ವಾಸ್ತವವಾದಿ. ಅದರಲ್ಲಿಯೂ ಹಿಂದೂ ಧರ್ಮದ ನ್ಯೂನತೆಗಳನ್ನು ಎತ್ತಿ ತೋರಿಸುವಲ್ಲಿ ಈತ ಸಿದ್ಧಹಸ್ತ.

ಈ ಕಾರಣದಿಂದ ಈತ ಭಾರತದ ಅತ್ಯಂತ ದ್ವೇಷಿಸಲ್ಪಡುವ ಮನುಷ್ಯನೂ ಆಗಿದ್ದಾರೆ.

ನಾವೇಕೆ ಈತನ ವಿಷಯದಲ್ಲಿ ಭಯ ಪಡಬೇಕು. ಆತ ಅಪಮಾನಿತನಾಗುತ್ತಾನೆ ಎಂದು ಏಕೆ ನಿರೀಕ್ಷಿಸಬೇಕು. ನಾವೇಕೆ ಇದನ್ನೇ ನಿರೀಕ್ಷಿಸಬೇಕು?

ಏಕೆಂದರೆ ೮೦ ಲಕ್ಷ ಸವರ್ಣೀಯ ಹಿಂದೂಗಳ ದೃಷ್ಟಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಒಬ್ಬ ಅಸ್ಪೃಶ್ಯ. ಆತನ ಮೇಲಂಗಿಯು ಮುಟ್ಟಿದರೆ ತಮ್ಮ ಧೋತಿಗಳು ಅಪವಿತ್ರ ಆಗುತ್ತದೆ ಎಂದು ಇವರು ಭಾವಿಸುತ್ತಾರೆ. ಈತನ ಸ್ಪರ್ಶಕ್ಕೆ ಹೆದರಿ ಅತಿಯಾದ ಮಡಿವಂತರು ಒಂದು ಹಾಳೆಯಂತೆ ಹಾರಿ ಹೋಗುತ್ತಾರೆ. ಈತನ ಒಂದು ಸಣ್ಣ ಸ್ಪರ್ಶವು ಅವರನ್ನು ಸ್ನಾನದ ಗೃಹ ಹಾಗು ತಮ್ಮ ಸಾಬೂನಿನತ್ತ ಕರೆದೊಯ್ಯುತ್ತದೆ. ಅವರು ಸ್ನಾನ ಮಾಡಿ ತಮ್ಮ ಪಾಪವನ್ನು ಕ್ಷಮಿಸುವಂತೆ ದೇವರಲ್ಲಿ ಮೊರೆಯಿಡುತ್ತಾರೆ. ಈತನೇ ಡಾ. ಬಿ.ಆರ್. ಅಂಬೇಡ್ಕರ್, ಲಂಡನ್ನಿನಲ್ಲಿ ಎಂ.ಎ. ಮಾಡಿರುವಾತ*. ಈತನೇ ಅಪಮಾನದ ಸಂಕೇತವಾದ ಅಂಬೇಡ್ಕರ್ – ಕೊಲಂಬಿಯಾ ವಿಶ್ವವಿದ್ಯಾಲಯದ ಗೌರವಾನ್ವಿತ ವಿದ್ಯಾರ್ಥಿ, ಹೀಡಲ್‌ಬರ್ಗ್

---

* ಡಾ.ಬಿ.ಆರ್.ಅಂಬೇಡ್ಕರ್ ಅವರು MA. Ph.d ಪದವಿಗಳನ್ನು ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಪಡೆದಿದ್ದರು. ಲಂಡನ್ನಿನಿಂದಲ್ಲ. ಅವರು D.sc ಪದವಿಯನ್ನು ಲಂಡನ್ನಿನಿಂದ ಪಡೆದಿದ್ದರು ಸಂಪಾದಕರು.

ವಿಶ್ವವಿದ್ಯಾಲಯದ ವಿಶೇಷ ವಿದ್ಯಾರ್ಥಿ. ಈತನ ಸ್ಪರ್ಶದಿಂದ ಉಂಟಾದ ಅಪವಿತ್ರತೆಯಿಂದ ಅವರು ತಮ್ಮ ಆತ್ಮವನ್ನು ಶುದ್ಧೀಕರಿಸಿಕೊಳ್ಳಲಿ.

ಡಾ.ಬಿ.ಆರ್.ಅಂಬೇಡ್ಕರ್ ಅವರು ನನಗೆ ಹೇಳಿದರು. ನನ್ನ ದೃಷ್ಟಿಯ ಮುಖ್ಯ ಅಂಶ ಎಂದರೆ ನಾವು ಹಿಂದೂಗಳ ಒಂದು ಭಾಗವಲ್ಲ. ಬದಲಾಗಿ ಈ ರಾಷ್ಟ್ರೀಯ ಜೀವನದ ಒಂದು ಪ್ರತ್ಯೇಕ ಘಟಕ'

ಗಾಂಧೀಜಿ ನಮಗೆ ಹೇಳಿದರು 'ನಾವು ಹಿಂದೂ ಧರ್ಮೀಯರು ನಮ್ಮನ್ನು ನಂಬಿ' ಅದಕ್ಕೆ ನಾನು ಅವರಿಗಿತ್ತ ಉತ್ತರ" ನಾವು ನಿಮ್ಮನ್ನು ನಂಬುವುದಿಲ್ಲ. ಏಕೆಂದರೆ ನೀವು ನಮ್ಮ ತಲೆತಲಾಂತರದ ಶತ್ರುಗಳು".

"ಎಲ್ಲಾ ಹಳ್ಳಿಗಳಲ್ಲಿಯೂ ಅಲ್ಪಸಂಖ್ಯೆಯಲ್ಲಿ ಅಸ್ಪೃಶ್ಯರು ಇರುತ್ತಾರೆ. ಅವರೆಲ್ಲರನ್ನು ಒಟ್ಟುಗೂಡಿಸಿ ನಾನು ಬಹುಸಂಖ್ಯಾತರನ್ನಾಗಿಸಬಯಸುವೆ. ಇದು ಮಾಡುವುದು ಒಂದು ಅತ್ಯಂತ ಜವಾಬ್ದಾರಿಯ ಕೆಲಸ. ಇದರಲ್ಲಿ ಜನರನ್ನು ವರ್ಗಾಯಿಸುವ ಕೆಲಸ ಇರುತ್ತದೆ. ಹೊಸ ಹಳ್ಳಿಗಳನ್ನು ಕಟ್ಟುವ ಕೆಲಸ ಇರುತ್ತದೆ. ನಾವು ಇದನ್ನು ಮಾಡಬಹುದು ಆದರೆ ಅದಕ್ಕೆ ಅನುಮತಿ ದೊರೆತರೆ ಮಾತ್ರ" (ಪುಟ–೪೦)

ನಾವು ಕೂಡ ಕಾಂಗ್ರೆಸ್ಸಿಗರಂತೆಯೇ ಕಟ್ಟಾ ರಾಷ್ಟ್ರೀಯವಾದಿಗಳು. ಆದರೆ, ನಮ್ಮ ಹಿತಾಸಕ್ತಿಯ ಭದ್ರವಾಗುವವರೆಗೂ ಬ್ರಿಟಿಷರು ಭಾರತ ಬಿಟ್ಟು ತೊಲಗುವುದು ನಮಗೆ ಇಷ್ಟವಿಲ್ಲ. ಒಂದು ವೇಳೆ ಹಾಗಾದರೆ ನಮ್ಮ ಪಾಡು ಯೂರೋಪಿನ ಶೋಷಿತರಿಗಿಂತ ಕಡೆಯಾಗುತ್ತದೆ. (ಪುಟ–೪೧)[೧]

* * * * *

* Quoted : Khairmode : Vol. 8. Pp. 36-39.

## ೩೫
## ಪರಿಶಿಷ್ಟ ಜಾತಿಯ ವಸಾಹತುಗಳನ್ನು ಬಂಟುಗಳ ವಸಾಹತುಗಳ ಮಟ್ಟದಲ್ಲಿರಿಸಬೇಕು.

ಹೈದರಾಬಾದ್ (ಡೆಕ್ಕನ್) ಏಪ್ರಿಲ್ ೨೨, ೧೯೪೬: ಪರಿಶಿಷ್ಟ ಜಾತಿಯವರಿಗೆ ಪ್ರತ್ಯೇಕ ವಹಾಸತುಗಳನ್ನು ನೀಡಬೇಕು ಎಂಬ ಬೇಡಿಕೆ ಯಾವುದೇ ಪಕ್ಷದ ಹಕ್ಕುಗಳ ಉಲ್ಲಂಘನೆಯಲ್ಲ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿಪ್ರಾಯಪಟ್ಟರು. ಕೃಷಿಗೆ ಯೋಗ್ಯವಾದ ಬಹಳಷ್ಟು ಭೂಮಿಯು ಈ ದೇಶದ ಎಲ್ಲೆಡೆ ಉಪಯೋಗಿಸಲ್ಪಡದೇ ಬಿದ್ದಿದೆ. ಅಂತಹ ಭೂಮಿಯನ್ನು ಪರಿಶಿಷ್ಟ ಜಾತಿಯವರಿಗೆ ನೀಡಬಹುದು. ಈ ನಿಟ್ಟಿನಲ್ಲಿ ಸರ್ಕಾರವು ಈ ಕೂಡಲೇ ಒಂದು ಸಮಿತಿಯನ್ನು ರಚಿಸಿ, ಈ ಯೋಜನೆಯನ್ನು ಜಾರಿಗೆ ತರಬೇಕು ಎಂದೂ ಅವರು ಹೇಳಿದರು.

ಪರಿಶಿಷ್ಟ ಜಾತಿಯ ಜನರನ್ನು ಜೀತಕ್ಕಾಗಿ ಉಪಯೋಗಿಸುವ, ಎಲ್ಲಾ ಅಸಹ್ಯಕರವಾದ ಹಾಗು ಕೊಳಕು ಕೆಲಸಗಳನ್ನು ಈ ವರ್ಗದ ಜನರಿಂದ ಅತ್ಯಂತ ಕಡಿಮೆ ಭತ್ಯೆಗೆ ಮಾಡಿಸಿಕೊಳ್ಳುವುದು ರೂಢಿಯಾಗಿ ಹೋಗಿರುವ ಮೇಲ್ವರ್ಗದ ಜನರಿಂದ ಮಾತ್ರ ಇದಕ್ಕೆ ಅಡ್ಡಿಬರಬಹುದು. ಅವರು ಇದೇ ಪದ್ಧತಿಯನ್ನು ಮುಂದುವರಿಸಬಯಸುತ್ತಾರೆ. ಆದರೆ ಪರಿಶಿಷ್ಟ ಜಾತಿಯವರು ಬೊಂಬಾಯಿ ಹಾಗು ಮದರಾಸುಗಳಲ್ಲಿ ವಾಸಿಸುತ್ತಿರುವ ಸ್ಥಳಗಳನ್ನು ಗಮನಿಸಿ ಕಂಡಿತ ಇವು ವಾಸಕ್ಕೆ ಯೋಗ್ಯವಲ್ಲ. ಆದ್ದರಿಂದ ಅವರಿಗೆ ಪ್ರತ್ಯೇಕ ಹಳ್ಳಿಗಳನ್ನು ಮಾಡಿಕೊಡಬೇಕು.

ಡಾ. ಬಿ.ಆರ್. ಅಂಬೇಡ್ಕರ್ ಮುಂದುವರೆಯುತ್ತಾ ಈ ವಿಷಯದಲ್ಲಿ ಮತ್ತಷ್ಟು ಸ್ಪಷ್ಟನೆ ನೀಡಿದರು. ಈ ಹಳ್ಳಿಗಳು ಈ ದೇಶದ ಒಂದು ಸಾಮಾಜಿಕ ಘಟಕವೇ ಹೊರತು ಆರ್ಥಿಕ ಘಟಕವಲ್ಲ. ಈ ಹಳ್ಳಿಗಳನ್ನು ಪ್ರತ್ಯೇಕಿಸುವುದರಿಂದ ಅವುಗಳ ಆರ್ಥಿಕತೆಯು ಏರುಪೇರಾಗುತ್ತದೆ ಎಂಬ ಭಯಬೇಡ. ಈ ಹಳ್ಳಿಯಿಂದ ಉತ್ಪನ್ನವಾಗುವ ಉತ್ಪಾದನೆಗಳನ್ನು ಎಲ್ಲಿ ಸ್ವಾಗತಿಸುತ್ತಾರೋ, ಅಲ್ಲಿಗೆ ಕಳುಹಿಸಿಕೊಡಬಹುದು.

ಈ ಬೇಡಿಕೆ ಪಾಕಿಸ್ತಾನದ ಪ್ರದೇಶಗಳಿಗೂ ಅನ್ವಯ ಆಗುತ್ತದೆಯೇ ಎಂದು ಕೇಳಿದಾಗ ಡಾ.ಬಿ.ಆರ್.ಅಂಬೇಡ್ಕರ್ ಅವರು ಹೌದು ಎಂದರು. ಈವರೆಗೆ ಪಾಕಿಸ್ತಾನದ ಬಗ್ಗೆ ಯಾವುದೇ ಗಟ್ಟಿಯಾದ ನಿರ್ಧಾರ ಆಗಿಲ್ಲ. ಆದ್ದರಿಂದ ಈ ನಿರ್ಧಾರ ಗಟ್ಟಿಯಾದ ನಂತರವಷ್ಟೇ ಹಳ್ಳಿಗಳ ಪ್ರತ್ಯೇಕತೆಯ ಪ್ರಶ್ನೆ ಬರುತ್ತದೆ.

ಪರಿಶಿಷ್ಟ ಜಾತಿಯವರ ಪರಿಸ್ಥಿತಿ ದಕ್ಷಿಣ ಆಫ್ರಿಕಾದ ಬಂಟು ಹಾಗು ಇತರ ಬುಡಕಟ್ಟು ಜನಾಂಗದವರ ಪರಿಸ್ಥಿತಿಯನ್ನು ಹೋಲುತ್ತದೆ. ಆದ್ದರಿಂದ ದಕ್ಷಿಣ ಆಫ್ರಿಕಾದ ಸಂವಿಧಾನದಲ್ಲಿ ಬಂಟೂಗಳಿಗೆ ಹಿತವಾಗುವಂತಹ ಕೆಲ ಸೌಕರ್ಯಗಳನ್ನು ಕಲ್ಪಿಸಿರುವಂತೆ ಭಾರತದ ಸಂವಿಧಾನದಲ್ಲಿ ಕೂಡ ಅವುಗಳನ್ನು ಕಲ್ಪಿಸಬೇಕು ಎಂದರು.

* * * * *

---

1. The Times of India ೨೩ನೆಯ ಏಪ್ರಿಲ್ ೧೯೪೬

## ೩೬
## ಹಿಂದೂಗಳು ಯಾವಾಗಲೂ ಪರಿಶಿಷ್ಟ ಜಾತಿಯವರನ್ನು ತಮ್ಮ "ಧರ್ಮದ ಹೊರಗೆ" ಎಂದೇ ಭಾವಿಸಿದ್ದಾರೆ

ಇಂಗ್ಲೆಂಡ್‌ನಲ್ಲಿ ಭಾರತದ ೫೦,೦೦,೦೦೦,೦೦೦ ಅಸ್ಪೃಶ್ಯರ ಪರವಾಗಿ ವಾದಿಸಿ, ೧೯೪೬ರ ನವೆಂಬರ್ ೨೦ ರಂದು ಹಿಂದಿರುಗಿದ ಡಾ. ಅಂಬೇಡ್ಕರ್ ಅವರು ಬಾಂಬೆಯಲ್ಲಿ ಗ್ಲೋಬ್ ಪತ್ರಿಕೆಗೆ ಪ್ರತ್ಯೇಕವಾದ ಸಂದರ್ಶನವನ್ನು ನೀಡಿದ ಸಂದರ್ಭದಲ್ಲಿ, ತಾವು ಲಂಡನ್‌ನಲ್ಲಿ ಭಾರತದಲ್ಲಿನ ರಾಜಕೀಯ ಮಸುಕಾಗಿದೆ ಮತ್ತು ರಾಷ್ಟ್ರೀಯ ಜೀವನದಲ್ಲಿನ ಎಲ್ಲಾ ಪ್ರಮುಖ ಅಂಗಗಳನ್ನೂ ಒಟ್ಟುಗೂಡಿಸದೆ ಇದ್ದರೆ ಮುಂದೆ ದೇಶದ ಭವಿಷ್ಯವು ನಿರಾಶಾದಾಯಕವಾಗಿರುತ್ತದೆ ಎಂದು ನೀಡಿದ ತಮ್ಮ ಹೇಳಿಕೆಯನ್ನು ಮಾರ್ಪಡಿಸುವುದಕ್ಕೆ ಕಾರಣವೇ ಇಲ್ಲವೆಂದು ಹೇಳಿದರು.

ಶ್ರೀ ಜಿನ್ನಾ ಅವರ ಇತ್ತೀಚಿನ ಹೇಳಿಕೆ ಮತ್ತು ದೇಶದಲ್ಲಿನ ಅತೃಪ್ತಿಕರವಾದ ವಾತಾವರಣದಲ್ಲಿ, ಡಿಸೆಂಬರ್ ೯ರಂದು ನಡೆಯಬೇಕೆಂದು ನಿರ್ಧರಿಸಿರುವ ಸಂವಿಧಾನ ಸಮಿತಿಯ ಸಭೆಯನ್ನು ಮುಂದೂಡಬೇಕೆಂದು ಬಯಸುವಿರಾ ಎಂಬ ಪ್ರಶ್ನೆಗೆ ಡಾ. ಅಂಬೇಡ್ಕರ್ ಅವರು, 'ಮುಸ್ಲಿಮರು ಸಭೆಯಲ್ಲಿ ಹಾಜರಿರದೇ ಹೋದರೆ, ಈ ಸಂವಿಧಾನ ಸಭೆಗೆ ನೈತಿಕ ಅಧಿಕಾರವಿರುತ್ತದೆಯೇ ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿದೆ. ಮುಸ್ಲಿಮರ ಅನುಪಸ್ಥಿತಿಯಲ್ಲಿ ೯ರಂದು ಅಥವಾ ಮುಂದಿನ ಯಾವುದೇ ದಿನದಂದು ಸಭೆಸೇರಿದರೂ, ಸಂವಿಧಾನ ಸಭೆಯು ಏನು ಮಾಡುತ್ತದೆ ಎಂಬುದು ನನಗೆ ಗೊತ್ತಿಲ್ಲ' ಎಂದು ಹೇಳಿದರು.

### ಬೆಲೆ ಇರುವುದಿಲ್ಲ

ಸಂವಿಧಾನ ಸಭೆಯೆಂದು ಕರೆದುಕೊಂಡು ತಾವು ಮಾತ್ರ ಹಾಜರಿದ್ದ ಸಭೆಯಲ್ಲಿ ಸಂವಿಧಾನವನ್ನು ರೂಪಿಸಿದರೆ ಅದನ್ನು ಬ್ರಿಟಿಷರು ಒಪ್ಪಿಕೊಳ್ಳುತ್ತಾರೆ ಎಂದು ಹಿಂದೂಗಳು ಭಾವಿಸಿದರೆ, ಕೇವಲ ಹಿಂದೂಗಳೇ ಇರುವ ಸಂವಿಧಾನ ಸಭೆಗೆ ಏನಾದರೂ ಬೆಲೆ ಬರುತ್ತದೆ ಎಂದು ನಾನು ಭಾವಿಸುವುದಿಲ್ಲ ಎಂದೂ ಅವರು ಹೇಳಿದರು.

"ಪರಿಶಿಷ್ಟ ಜಾತಿಯ ಒಕ್ಕೂಟವು ಆಲೋಚಿಸುತ್ತಿರುವಂತೆ ಪರಿಶಿಷ್ಟ ಜಾತಿಯೂ ಸೇರಿದಂತೆ ಎಲ್ಲಾ ವರ್ಗಗಳ ನಡುವೆ ಒಮ್ಮತಕ್ಕೆ ತರಬಹುದಾದ ಯಾವುದಾದರೂ ಮೂಲ ಇದೆ ಎಂದು ತಮಗೆ ಎನ್ನಿಸುತ್ತದೆಯೇ ಎಂಬ ಪ್ರಶ್ನೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಕೆಳಗಿನಂತೆ ಉತ್ತರಿಸಿದರು. 'ಪರಿಶಿಷ್ಟ ಜಾತಿ ಹಾಗು ಇತರ ಪಕ್ಷಗಳ ನಡುವೆ – ಹಿಂದೂ ಮುಸಲ್ಮಾನರನ್ನು ಒಳಗೊಂಡಂತೆ ಒಂದು ಇತ್ಯರ್ಥಕ್ಕೆ ಬರುವುದು ಕಷ್ಟವೇನಲ್ಲ. ಆದರೆ ಅದಕ್ಕೆ ಕಾಂಗ್ರೆಸ್ ಪಕ್ಷದ ಧೋರಣೆ ಸರಿಯಾದ ರೀತಿಯಲ್ಲಿರಬೇಕು.

### ಪರಿಶಿಷ್ಟ ಜಾತಿಯವರಿಗೆ ಅಗತ್ಯವಿರುವುದು ರಾಜಕೀಯ ರಕ್ಷಣೆ:

ಪರಿಶಿಷ್ಟ ಜಾತಿಯವರು ಬೇಡಿಕೆ ಇಡುತ್ತಿರುವುದು ರಾಜಕೀಯ ಹಿತರಕ್ಷಣೆಗಾಗಿ. ಈ ವಿಷಯದಲ್ಲಿ ಯಾವುದೇ ವಿವಾದಕ್ಕೆ ಆಸ್ಪದವಿಲ್ಲ. ತಮಗೆ ಪ್ರತ್ಯೇಕ ಮತಕ್ಷೇತ್ರಗಳು ಬೇಕೆಂಬುದು ಇವರ ಮುಖ್ಯ ಬೇಡಿಕೆ ಏಕೆಂದರೆ, ಪ್ರತ್ಯೇಕ ಮತಕ್ಷೇತ್ರಗಳಿಲ್ಲದೇ ಇದ್ದರೆ, ಅವರಿಗೆ ನೀಡುವ ಉಳಿದ ಎಲ್ಲಾ ರಾಜಕೀಯ ರಕ್ಷಣೆಗಳೂ ವ್ಯರ್ಥವಾಗುತ್ತವೆ.

ಇದುವರೆಗೂ ನಾನು ತಿಳಿದಿರುವಂತೆ ಮುಸಲ್ಮಾನರ ಒಕ್ಕೂಟ ಇದಕ್ಕೆ ಯಾವುದೇ ವಿರೋಧ ವ್ಯಕ್ತಪಡಿಸಿಲ್ಲ. ವಿರೋಧ ವ್ಯಕ್ತಪಡಿಸುವ ಏಕೈಕ ಪಕ್ಷವೆಂದರೆ ಕಾಂಗ್ರೆಸ್ ಪಕ್ಷ. ಅದು ಹಿಂದೂಗಳ ದೃಷ್ಟಿಕೋನವನ್ನು ಬಿಂಬಿಸುತ್ತದೆ. ಕಾಂಗ್ರೆಸ್ ಪಕ್ಷವು ಪ್ರತ್ಯೇಕ ಮತಕ್ಷೇತ್ರಕ್ಕೆ ಒಪ್ಪಿಗೆ ಸೂಚಿಸಿದರೆ, ಕಾಂಗ್ರೆಸ್ ಹಾಗು ಪರಿಶಿಷ್ಟ ಜಾತಿಯವರ ನಡುವೆ ವಿವಾದ ಏರ್ಪಡಲು ಸಾಧ್ಯವೇ ಇಲ್ಲ."

ಕಾಂಗ್ರೆಸ್ ಹಾಗೂ ಮುಸ್ಲಿಮ್ ಲೀಗ್‌ಗಳ ನಡುವೆ ಸಮಾನ ಮನಸ್ಥಿತಿ ಬರುವುದು ಕಷ್ಟ. ಏಕೆಂದರೆ ಅವೆರಡೂ ಪಕ್ಷಗಳ ಧೋರಣೆ ಬೇರೆ ಬೇರೆಯಾಗಿವೆ. ಇವರ ನಡುವೆ ಈಗ ಏರ್ಪಟ್ಟಿರುವ ಕಂದಕವು ಬಹಳ ದೊಡ್ಡದು. ಈ ಮುಸಲ್ಮಾನರ ಒಕ್ಕೂಟವು ಒಂದು ಅಭಿಪ್ರಾಯ ವ್ಯಕ್ತಪಡಿಸಿದರೆ ಕಾಂಗ್ರೆಸ್ ಪಕ್ಷವು ಅದನ್ನು ವಿರೋಧಿಸುತ್ತದೆ. ಈ ವಿವಾದ ಬಗೆಹರಿಸುವ ಬಗೆಯು ನನಗೂ ತಿಳಿಯುತ್ತಿಲ್ಲ. ಈ ಪ್ರಶ್ನೆಯನ್ನು ಬಗೆಹರಿಸಿಕೊಳ್ಳುವುದನ್ನು ಕಾಂಗ್ರೆಸ್ ಹಾಗು ಮುಸಲ್ಮಾನರ ಪಕ್ಷಕ್ಕೇ ಬಿಡುತ್ತೇನೆ. ಭಾರತೀಯರಾಗಿ ಪರಿಶಿಷ್ಟ ಜಾತಿಯವರು ಇಂತಹ ಒಂದು ಒಪ್ಪಂದದ ಬಗೆ ಅಸಕ್ತಿಯನ್ನು ಹೊಂದಿರುವುದಷ್ಟೇ ಅಲ್ಲದೆ, ಆ ಒಪ್ಪಂದದಲ್ಲಿನ ಷರತ್ತುಗಳ ಬಗೆಗೆ ಕಾಳಜಿಯನ್ನು ಹೊಂದಿದ್ದಾರೆ.

ಗ್ಲೋಬ್ ಪತ್ರಿಕೆಯವರ ಮುಂದಿನ ಪ್ರಶ್ನೆ." ಏಕತೆಯ ಹಿತಾಸಕ್ತಿಯಿಂದ ಗಮನಿಸಿದರೆ, ಪರಿಶಿಷ್ಟ ಜಾತಿಯವರಿಗೆ ನೀವು ಕೇಳುತ್ತಿರುವ ಪ್ರತ್ಯೇಕ ಪ್ರಾತಿನಿಧ್ಯ ಸಮಂಜಸವೇ? ಕಾಂಗ್ರೆಸ್ ಪಕ್ಷದೊಂದಿಗೆ ಪ್ರಮಾಣಕ್ಕೆ ಅನುಗುಣವಾಗಿ ಪ್ರಾತಿನಿಧ್ಯ ಪಡೆಯುವ ಒಪ್ಪಂದವನ್ನು ಪರಿಶಿಷ್ಟ ಜಾತಿಯ ಒಂದು ವರ್ಗ ಮಾಡಿಕೊಂಡಿದೆ. ಈ ವರ್ಗವನ್ನು ಹೊರತು ಪಡಿಸಿ, ಈ ಪ್ರಾತಿನಿಧ್ಯವನ್ನು ಪಡೆಯುವುದು ಒಳಿತಲ್ಲವೇ?" ಇದಕ್ಕೆ ಉತ್ತರಿಸುತ್ತಾ ಡಾ.ಬಿ.ಆರ್.ಅಂಬೇಡ್ಕರ್ ಹೇಳಿದರು. "ನಾನೀಗಾಗಲೇ ಒಂದು ವಿಷಯವನ್ನು ಸ್ಪಷ್ಟ ಪಡಿಸಿದ್ದೇನೆ. ಕಾಂಗ್ರೆಸ್ ಪಕ್ಷವು ಶಾಸಕಾಂಗದಲ್ಲಿ, ಅಧಿಕಾರದಲ್ಲಿ, ಸರ್ಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಪ್ರಾತಿನಿಧ್ಯ ಕೊಡಲು ಸಿದ್ಧವಿದ್ದರೆ ಅದು ನ್ಯಾಯಯುತವಾಗಿ ಅವರಿಗೆ ಪ್ರತ್ಯೇಕ ಮತಕ್ಷೇತ್ರವನ್ನು ಕೂಡ ಕೊಡಬೇಕು. ಈ ರೀತಿ ನೀಡಿದರೆ ಮಾತ್ರವೇ ಅವರು ಶಾಸಕಾಂಗಕ್ಕೆ ಆಯ್ಕೆಯಾಗಿ ಬರುವುದು ಸಾಧ್ಯ. ಅವರ ಧರ್ಮದ ಜನರು ಮಾತ್ರವೇ ಸ್ವಜನರ ಪರವಾಗಿ ಹೋರಾಡುವುದು ಸಾಧ್ಯ. ಅಸ್ಪೃಶ್ಯರ ಪರವಾಗಿ ನೀಡಿರುವ ಹಕ್ಕುಗಳ ವಿರುದ್ಧ ಅತಿಕ್ರಮಣಗಳು ನಡೆದರೆ ಅವರು ಮಾತ್ರವೇ ಪರಿಣಾಮಕಾರಿಯಾಗಿ ಕೆಲಸಮಾಡಬಹುದು.

### ''ಪಕ್ಷದ ಶಿಸ್ತಿಗೆ ಕಟ್ಟು ಬಿದ್ದಿರುವುದು''

ಪರಿಶಿಷ್ಟ ವರ್ಗದವರಿಗೆ ರಾಜಕೀಯ ಸೌಲಭ್ಯಗಳನ್ನು ನೀಡಿರುವುದು ಅವರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡದೇ ಇರುವುದು ದೊಡ್ಡ ಮಟ್ಟದ ಮೋಸ. ಏಕೆಂದರೆ ಇದು ಒಂದು ಕೈಯಿಂದ ನೀಡಿ ಮತ್ತೊಂದು ಕೈಯಿಂದ ಕಿತ್ತುಕೊಂಡಂತೆ.

ತನ್ನ ಪಕ್ಷದ ಟಿಕೆಟನ್ನು ನೀಡಿ ಕಾಂಗ್ರೆಸ್ ಪಕ್ಷವು ವಿವಿಧ ಶಾಸಕಾಂಗ ಸಭೆಗಳಲ್ಲಿ ಪರಿಶಿಷ್ಟ ಜಾತಿಯವರ ಆಯ್ಕೆಗೆ ಕಾರಣವಾಗಿದೆ ಎಂಬುದನ್ನು ನಾವು ಗಮನಿಸಿದ್ದೇವೆ ಎಂದ ಡಾ.ಅಂಬೇಡ್ಕರ್ ಮುಂದುವರಿಯುತ್ತಾ, ಎಂದಿಗೂ ಆ ಪಕ್ಷವು ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದ ಒಂದೇ ಒಂದು ಪ್ರಶ್ನೆಯನ್ನೂ ಶಾಸಕಾಂಗ ಸಭೆಯ ಮುಂದೆ ಇರಿಸಿಲ್ಲ. ಏಕೆಂದರೆ ಇಲ್ಲಿ ಕಾರಣ ಸ್ಪಷ್ಟವಾಗಿದೆ. ಕಾಂಗ್ರೆಸ್ ಪಕ್ಷದ ಟಿಕೆಟ್ ಪಡೆದು ಆಯ್ಕೆಯಾಗಿ ಬಂದಿರುವ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಕೂಡ ಆ ಪಕ್ಷದ ಶಿಸ್ತಿಗೆ ಕಟ್ಟು ಬಿದ್ದಿರುತ್ತಾರೆ. ಅವರಿಗೆ ಕಾರ್ಯವೆಸಗುವ ಯಾವುದೇ ಸ್ವಾತಂತ್ರ್ಯವಿಲ್ಲ.

ಆದ್ದರಿಂದ ಈ ರೀತಿಯ ಪ್ರಾತಿನಿಧ್ಯ ಇರುವುದಕ್ಕಿಂತ ಇಲ್ಲದಿರುವುದೇ ಲೇಸು.

**ಪ್ರಮಾಣಬದ್ಧವಾದ ಪ್ರಾತಿನಿಧ್ಯ:**

ಇನ್ನು ಈ ಸಮಸ್ಯೆಗೆ ಪ್ರಮಾಣಕ್ಕನುಗುಣವಾದ ಪ್ರಾತಿನಿಧ್ಯ ಉತ್ತರವಾಗಬಹುದೇ ಎಂಬ ಪ್ರಶ್ನೆ ಎದುರಾಗುತ್ತದೆ. ಇದನ್ನು ಕೂಡ ನಾನು ಗಮನಿಸಿದ್ದೇನೆ. ಆದರೆ ಇದು ಯಶಸ್ವಿ ಆಗುವುದಿಲ್ಲ. ಏಕೆಂದರೆ ಈಗ ಹೇಳಿರುವಷ್ಟು ಸಂಖ್ಯೆಯ ಶಾಸಕರು ಆಯ್ಕೆಯಾದರೂ, ಪರಿಶಿಷ್ಟ ಜಾತಿಯವರಿಗೆ ಅಗತ್ಯ ಇರುವಷ್ಟು ಸ್ಥಾನಗಳು ಸಿಗುವುದು ಎಂದಿಗೂ ಸಾಧ್ಯವೇ ಇಲ್ಲ.

ಡಾ.ಬಿ.ಆರ್.ಅಂಬೇಡ್ಕರ್ ಅವರೆದುರು ಇರಿಸಲಾದ ಮುಂದಿನ ಪ್ರಶ್ನೆಯೆಂದರೆ ಎಲ್ಲಾ ಸಾಮಾಜಿಕ ಅಸಮತೋಲನ ಹೋಗಲಾಡಿಸಿ ಅವರಿಗೆ ಸಮಾನ ಹಕ್ಕುಗಳನ್ನು ನೀಡಿದರೆ ಹಿಂದೂ ಧರ್ಮದೊಳಗೆ ಸೇರ್ಪಡೆ ಆಗಲು ಪರಿಶಿಷ್ಟ ಜಾತಿಯವರಿಗೆ ಸಾಧ್ಯವಿಲ್ಲವೇ.

"ಈ ಪ್ರಶ್ನೆಗೆ ಉತ್ತರ ಇರುವುದು ಹಿಂದೂ ಸವರ್ಣೀಯರ ಬಳಿಯಲ್ಲಿ. ಅವರ ಆಶಯದ ಮೇಲೆ ಇದು ಅವಲಂಬಿತವಾಗಿದೆ. ಇದನ್ನೇ ಅಸ್ಪೃಶ್ಯರು ಯಾವಾಗಲೂ ಬಯಸಿದ್ದಾರೆ. ಹಾಗು ಅದಕ್ಕಾಗಿ ಪ್ರಯತ್ನ ಪಟ್ಟಿದ್ದಾರೆ. ಆದರೆ ಅವರು ಹಿಂದೂಗಳ ಅಭಿಪ್ರಾಯವನ್ನು ಬದಲಿಸಲು ವಿಫಲವಾಗಿದ್ದಾರೆ. ಏಕೆಂದರೆ ಹಿಂದೂಗಳು ಯಾವಾಗಲೂ ಅಸ್ಪಶ್ಯರನ್ನು ಹಿಂದೂ ಧರ್ಮದ ಹೊರಗಿರುವವರು ಎಂದೇ ಪರಿಗಣಿಸಿದ್ದಾರೆ.

**ಹಿಂದೂ ಧರ್ಮಕ್ಕೆ ಸೇರ್ಪಡೆ ಒಂದು ಕನಸು**

ಪರಿಶಿಷ್ಟ ಜಾತಿಯ ಜನರು ಹಿಂದೂ ಧರ್ಮಕ್ಕೆ ತಾವು ಸೇರ್ಪಡೆ ಆಗುವುದು ಕನಸು ಎಂಬ ಸತ್ಯವನ್ನು ಮನಗಂಡಿದ್ದಾರೆ. ಆದ್ದರಿಂದಲೇ ಅವರು ಪ್ರತ್ಯೇಕ ಮತಕ್ಷೇತ್ರಕ್ಕೆ ಬೇಡಿಕೆಯನ್ನು ಇರಿಸಿದ್ದು.

ಕೇವಲ ದೇವಸ್ಥಾನಗಳಿಗೆ ಪ್ರವೇಶವನ್ನು ದೊರಕಿಸಿಕೊಡುವುದು, ಹೋಟೆಲ್‌ಗಳ ಪ್ರವೇಶಕ್ಕೆ ಅವಕಾಶವನ್ನು ಕೊಡಿಸುವುದು ಇಂತಹ ಅತಿ ಸಣ್ಣ ಪುಟ್ಟ ವಿಧಾನಗಳ ಬದಲಿಗೆ ಅಂತರ್ಜಾತಿಯ ವಿವಾಹ, ಸಹಭೋಜನ ಮುಂತಾದವುಗಳ ಮೂಲಕ ಪರಿಶಿಷ್ಟ ಜಾತಿಯನ್ನು ತಮ್ಮ ಮಡಿಲಿನೊಳಕ್ಕೆ ಸವರ್ಣೀಯರು ಸೇರಿಸಿಕೊಂಡರೆ, ಅದನ್ನು ಪರಿಶಿಷ್ಟ ಜಾತಿಯವರು ಒಪ್ಪಿಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ.

ಹಿಂದೂಗಳು ಒಂದು ವಿಷಯವನ್ನು ಮನಗಾಣಬೇಕು. ಪರಿಶಿಷ್ಟ ಜಾತಿಯವರ ಸೇರ್ಪಡೆ ಎಂದರೆ, ಅಂತರ ಜಾತೀಯ ವಿವಾಹಕ್ಕೆ ಅನುಮತಿ ಹಾಗು ಸಹ ಪಂಕ್ತಿಯ ಭೋಜನಕ್ಕೆ ಅನುಮತಿ ಇರಬೇಕು. ಹಾಗಾದರೆ ಮಾತ್ರವೇ ಹಿಂದೂ ಧರ್ಮದೊಳಗೆ ನಿಜವಾದ ಅರ್ಥದಲ್ಲಿ ಪರಿಶಿಷ್ಟ ಜಾತಿಯವರ ಸೇರ್ಪಡೆ ಸಾಧ್ಯವಾಗುತ್ತದೆ.

ಈ ಪ್ರಶ್ನೆಗೆ ಇನ್ನೊಂದು ಮುಖವೂ ಇದೆ. ಈಗ ಹಿಂದೂಗಳು ಹೊಂದಿರುವ ಸಾಮಾಜಿಕ ಸ್ಥಾನ ಮಾನಗಳನ್ನು ಅಸ್ಪೃಶ್ಯರೂ ಹೊಂದಿದರೆ ಅವರು ಒಟ್ಟಾರೆಯಾಗಿ ಹಿಂದೂ ಸಮಾಜದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಳ್ಳುವುದು ಸಾಧ್ಯವಾಗುತ್ತದೆ. ಈಗಿರುವ ಪರಿಸ್ಥಿತಿಯಲ್ಲಿ ಎಷ್ಟೇ ದೊಡ್ಡ ಸಮಾಜ ಸುಧಾರಕನಾದರೂ ಆತ ಅಸ್ಪೃಶ್ಯನೊಂದಿಗೆ ಸಹ ಪಂಕ್ತಿಯ ಭೋಜನಕ್ಕೆ ಸಮ್ಮತಿಸುವುದಿಲ್ಲ ಅಥವಾ ಅಂತರ್ಜಾತಿಯ ವಿವಾಹಕ್ಕೆ ಸಮ್ಮತಿಸುವುದಿಲ್ಲ. ಆದರೆ ರಾಜಕೀಯ ಹಕ್ಕುಗಳು ದೊರೆಯುವುದರಿಂದ ಅಸ್ಪೃಶ್ಯರು ಒಳ್ಳೆಯ ಶಿಕ್ಷಣ ಪಡೆದು, ಉತ್ತಮ ಹುದ್ದೆಗಳನ್ನು ಪಡೆದುಕೊಂಡರೆ ಅಂತರ್ಜಾತಿಯ ವಿವಾಹ ಹಾಗು ಸಹ ಪಂಕ್ತಿಯ ಭೋಜನ ಸಾಧ್ಯವಾಗಬಹುದು.

**ಅಜ್ಞಾನ, ಹಠಮಾರಿತನ**

ಈ ದೃಷ್ಟಿಯಿಂದ ಗಮನಿಸಿದರೆ ಅಸ್ಪೃಶ್ಯರು ಕೇಳುತ್ತಿರುವಂತಹ ರಾಜಕೀಯ ರಕ್ಷಣೆಗಳಿಂದ

ಹಿಂದೂಗಳೊಡನೆ ಒಂದಾಗುವ ಅವರ ಪ್ರಯತ್ನಗಳಿಗೆ ಯಾವುದೇ ರೀತಿಯ ತೊಂದರೆಯೂ ಆಗುವುದಿಲ್ಲ. ಏಕೆಂದರೆ ಅಸ್ಪೃಶ್ಯರಿಗೆಂದೇ ಪ್ರತ್ಯೇಕವಾದ ಮತಕ್ಷೇತ್ರಗಳಿದ್ದರೆ. ತಮ್ಮ ಧರ್ಮದೊಳಗೆ ಇವರನ್ನು ಸೇರ್ಪಡೆ ಮಾಡಿಕೊಳ್ಳುವುದರಲ್ಲಿ ಹಿಂದೂಗಳಿಗೆ ಆಗುವ ತೊಂದರೆ ಏನೆಂದು ನನಗೆ ಅರ್ಥವಾಗುತ್ತಿಲ್ಲ. ಇದರಿಂದ ಅವರೊಂದಿಗೆ ಸಹ ಪಂಕ್ತಿಯ ಭೋಜನ ಮಾಡಲು ಇಲ್ಲವೇ ಅಂತರ್ಜಾತಿಯ ವಿವಾಹವಾಗಲು ಅಡ್ಡಿ ಆಗುವುದಿಲ್ಲ. ಆದರೆ ಅಸ್ಪೃಶ್ಯರ ಪ್ರತ್ಯೇಕ ಪ್ರಾತಿನಿಧ್ಯದ ಬೇಡಿಕೆಯನ್ನು ಕಾಂಗ್ರೆಸ್ ನಿರಾಕರಿಸುತ್ತಿರುವುದು ಅದರ ಅಜ್ಞಾನ ಹಾಗು ಹಠಮಾರಿತನಕ್ಕೆ ಸಾಕ್ಷಿ ಆಗಿದೆ ಅಷ್ಟೆ.

ಇತ್ತೀಚಿಗೆ ರೆವರೆಂಡ್ ಗೋರ್ಡಾನ್ ಲಿವಿಂಗಸ್ಟನ್ ಎಂಬುವವರು, ಇಸ್ಲಾಂ ಧರ್ಮಕ್ಕೆ ಬದಲಾಗಿ ಅಸ್ಪೃಶ್ಯರು ಕ್ರೈಸ್ತ ಮತವನ್ನು ಅಪ್ಪಿಕೊಳ್ಳಬೇಕು ಎಂದು ಸೂಚಿಸಿದ್ದರು. ಅದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಕೆಳಗಿನಂತೆ ಅವಲೋಕಿಸಿದ್ದರು.

'ಹಿಂದೂ ಧರ್ಮವು ಈಗಿರುವಂತೆ, ತನ್ನ ಜನಗಳಿಗೆ ನೀಡಬೇಕಾಗಿರುವ ಆಧ್ಯಾತ್ಮಿಕ ನೆಲೆಯನ್ನಾಗಲೀ, ಸಾಮಾಜಿಕ ಹೊಕ್ಕುಬಳಕೆಯ ಅವಕಾಶವನ್ನಾಗಲೀ ನೀಡುವುದಿಲ್ಲ' –ಎಂದು ಪರಿಶಿಷ್ಟ ಜನಾಂಗದಲ್ಲಿನ ವಿಚಾರವಂತರು ಅಭಿಪ್ರಾಯ ಪಡುತ್ತಾರೆ.

ಎರಡನೆಯದಾಗಿ ಒಂದು ಸಸಿಯನ್ನು ಮಣ್ಣಿನಿಂದ ತೆಗೆದು ಬೇರೆಡೆ ನೆಡುವಂತೆ ಮಾನವ ಸ್ವಭಾವವನ್ನು ನೆಡುವುದು ಸಾಧ್ಯವಿಲ್ಲ. ಇದು ಅತ್ಯಂತ ಕ್ಲಿಷ್ಟಕಾರ್ಯ. ಅತ್ಯಂತ ಯೋಜಿತವಾಗಿ ನಾವು ಈ ಕಾರ್ಯಕ್ಕೈಗೊಳ್ಳಬೇಕು ಮಾತ್ರವಲ್ಲ, ಅದಕ್ಕೆ ಸಮಯಾವಕಾಶವನ್ನು ನಾವು ನೀಡಬೇಕು.

ಆದರೆ ಮೂರನೆಯದಾಗಿ ಅಸ್ಪೃಶ್ಯರು ಒಂದು ನಂಬಿಕೆ ಇರಿಸಿಕೊಂಡಿದ್ದಾರೆ. ಅದೇನೆಂದರೆ ಕಾಲಕ್ರಮೇಣ ಹಿಂದೂ ಧರ್ಮ ಬದಲಾವಣೆಯಾಗುತ್ತದೆ. ಅವರಿಗೆ ಈ ವಿಷಯದಲ್ಲಿ ಸಂದೇಹಗಳು ಇದ್ದರೂ ಕೂಡ ಅವರು ಇದನ್ನು ನಂಬಲು ಸಿದ್ಧರಿದ್ದಾರೆ. ಆದರೆ ಆ ಕಾಯುವ ಸಮಯದಲ್ಲಿ ಅವರಿಗೆ ಸೂಕ್ತವಾದ ರಾಜಕೀಯ ರಕ್ಷಣೆ ದೊರೆಯಬೇಕು ಇದರಿಂದಾಗಿ ಅವರಿಗೆ ಶೋಷಣೆಯ ವಿರುದ್ಧ ಹಾಗು ಅನ್ಯಾಯದ ವಿರುದ್ಧ ತಿರುಗಿ ಬೀಳಲು ಸಾಧ್ಯವಾಗುತ್ತದೆ. ಅವರು ಬಹಳ ಕಾಲದಿಂದ ಹಿಂದೂಗಳಿಂದ ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾರೆ. ಒಂದು ವೇಳೆ ಬಹುಸಂಖ್ಯಾತ ಹಿಂದೂಗಳಿಗೆ, ಅಧಿಕಾರವೂ ದೊರೆತುಬಿಟ್ಟರೆ, ಈ ಶೋಷಣೆಯು ಅಧಿಕವಾಗುತ್ತದೆ ಎಂಬ ಭಯ ಇವರಿಗಿದೆ. ಭಾರತ ಸಂಪೂರ್ಣವಾಗಿ ಸ್ವತಂತ್ರವಾದರೆ ಈ ಪರಿಸ್ಥಿತಿ ಎದುರಾಗುವ ಸಂಭವವಿರುತ್ತದೆ. ಒಂದು ವೇಳೆ ಹಿಂದೂಗಳು ಈ ಪರಿಸ್ಥಿತಿಯನ್ನು ಅರಿಯಲು ವಿಫಲರಾದರೇ, ಅವರು ಅಸ್ಪೃಶ್ಯರಿಗೆ ರಾಜಕೀಯ ರಕ್ಷಣೆಯನ್ನು ನೀಡದಿದ್ದರೆ. ಅಸ್ಪೃಶ್ಯರು ಧರ್ಮಾಂತರವಾಗುವುದು ಅವರಿಗೆ ತುರ್ತಿನ ವಿಷಯವಾಗುತ್ತದೆ.

### "ಹಾಗಾದರೇ ಅಸ್ಪೃಶ್ಯರಿಗೆ ಯಾವ ಧರ್ಮ?"

ನಾಲ್ಕನೆಯದಾಗಿ, ಅಸ್ಪೃಶ್ಯರಲ್ಲಿ ಇರುವಂತಹ ವಿದ್ಯಾವಂತ ವರ್ಗವು ಹಿಂದೂ ಧರ್ಮವನ್ನು ತೊರೆಯುವ ನಿರ್ಧಾರಕ್ಕೆ ಬಂದಿದೆ. ಆದರೆ ಯಾವ ಧರ್ಮವನ್ನು ಆಲಂಗಿಸಿಕೊಳ್ಳಬೇಕು ಎಂಬ ನಿರ್ಧಾರಕ್ಕೆ ಇನ್ನೂ ಬಂದಿಲ್ಲ. ಈ ವಿಷಯ ಇನ್ನೂ ಮುಕ್ತವಾಗಿದೆ.

ಇನ್ನು ರೆವರೆಂಡ್ ಲಿವಿಂಗ್‌ಸ್ಟನ್ ಅವರ ಸಲಹೆಯಂತೆ, ಕ್ರೈಸ್ತರು ಎಲ್ಲಾ ೫೦,೦೦೦,೦೦೦ ಅಸ್ಪೃಶ್ಯರನ್ನು ಯಾವುದೇ ಸಿದ್ಧತೆಯಿಲ್ಲದೇ ತಮ್ಮ ಧರ್ಮದೊಳಗೆ ಸೇರ್ಪಡೆ ಮಾಡಿಕೊಂಡರೆ, ಅದೊಂದು ಐತಿಹಾಸಿಕ ಘಟನೆ ಆಗುತ್ತದೆಯೇ ಹೊರತು, ನಿಜವಾದ ಅರ್ಥದಲ್ಲಿ ಕ್ರೈಸ್ತರ ಧರ್ಮ ಬದಲಾವಣೆ

ಆಗುವುದಿಲ್ಲ. ಇಂದು ಕ್ರೈಸ್ತಧರ್ಮ ಅಥವಾ ಬೇರೆ ಯಾವುದೇ ಧರ್ಮದಲ್ಲಿಯೇ ಆಗಲೀ, ವಂಶಪಾರಂಪರ್ಯವಾಗಿ ಬರುವಂತಹದ್ದಾಗಿದೆ. ಒಬ್ಬ ಕ್ರೈಸ್ತ ವಂಶಪಾರಂಪರ್ಯವಾಗಿ ತನ್ನ ತಂದೆಯ ಆಸ್ತಿಯನ್ನು ಪಡೆದುಕೊಂಡಂತೆ ಧರ್ಮವನ್ನೂ ಪಡೆದುಕೊಳ್ಳುತ್ತಾನೆ. ಆತ ಬೇರೆ ಯಾವುದೇ ಧರ್ಮದೊಂದಿಗೂ ಕ್ರೈಸ್ತ ಧರ್ಮವನ್ನು ತುಲನೆ ಮಾಡಿ ನೋಡುವುದಿಲ್ಲ. ಅಥವಾ ಆ ಧರ್ಮಕ್ಕೆ ಸಂಬಂಧಿಸಿದ ಆಧ್ಯಾತ್ಮಿಕ ನಿಲುವಿನಲ್ಲಿ ತುಲನೆಯನ್ನು ಮಾಡುವುದಿಲ್ಲ. ಇನ್ನು ಇತಿಹಾಸವನ್ನು ಗಮನಿಸಿದರೆ, ಈ ಹಿಂದೆ ಕ್ರೈಸ್ತ ಧರ್ಮಕ್ಕೆ ಧರ್ಮಾಂತರ ಆಗಿರುವುದೆಲ್ಲಾ ಸಾಮೂಹಿಕವಾಗಿಯೇ ಆಗಿದೆಯೇ ಹೊರತು ಆಧ್ಮಾತ್ಮಿಕವಾದ ದೃಷ್ಟಿಕೋನದಿಂದ ಯಾವುದೇ ಧರ್ಮಾಂತರವೂ ಆಗಿಲ್ಲ. ಅಂತೆಯೇ ಅಸ್ಪೃಶ್ಯರ ವಿಷಯದಲ್ಲಿ ಕೂಡ ಆಗುತ್ತಿದೆ. ಬೇರೆಯ ಧರ್ಮಗಳು, ಅದರ ಆಧ್ಯಾತ್ಮಿಕ ಅಂಶಗಳು ಹಾಗು ಸಾಮಾಜಿಕ ವಿಷಯಗಳ ತುಲನೆ ಆಗುತ್ತಿಲ್ಲ. ಇದೊಂದು ವ್ಯಾಪಾರೀ ಮನೋಭಾವದ ಬದಲಾವಣೆ ಅಲ್ಲ. ಒಂದು ವೇಳೆ ಆಧ್ಯಾತ್ಮಿಕ ಹಾಗು ಸಾಮಾಜಿಕ ಅನುಕೂಲತೆಗಿಂತ ಹೆಚ್ಚಿನದೇನಾದರೂ ಅಸ್ಪೃಶ್ಯರಿಗೆ ದೊರೆತರೇ ಅದು ಸಾಂದರ್ಭಿಕವಾದವು ಅಷ್ಟೆ". ಗ್ಲೋಬ್[೧]

* * * * *

---

ಜೈ ಭೀಮ್ ವಾರ ಪತ್ರಿಕೆ ೨೫ನೆಯ ಡಿಸೆಂಬರ್ ೧೯೪೬

## ೩೭
## ಪರಿಶಿಷ್ಟ ಜಾತಿಯವರ ಪ್ರಕರಣವನ್ನು ವಿಶ್ವ ಸಂಸ್ಥೆಯ ಮುಂದಿರಿಸುವುದು

ಹಿಂದೂಗಳು ಪರಿಶಿಷ್ಟ ಜಾತಿಗಳ ಜನರ ಮೇಲೆ ನಡೆಸುತ್ತಿರುವ ಸಾಮಾಜಿಕ ದೌರ್ಜನ್ಯ, ಅರ್ಥಿಕ ಮತ್ತು ರಾಜಕೀಯ ಶೋಷಣೆಯನ್ನು ವಿಶ್ವಸಂಸ್ಥೆಯ ಮುಂದೆ ಇರಿಸಬೇಕು ಎಂಬ ನಿರ್ಣಯವನ್ನು ಇಂದು ನಡೆದ ತನ್ನ ಸಭೆಯಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ ತೆಗೆದುಕೊಂಡಿದೆ. ಈ ಸಮಿತಿಯು ತನ್ನ ಎರಡು ದಿನದ ಸಮಾವೇಶವನ್ನು ಅಧ್ಯಕ್ಷರಾದ ಶ್ರೀ. ಎನ್ ಶಿವರಾಜ್ ಅವರ ನೇತೃತ್ವದಲ್ಲಿ ಮುಕ್ತಾಯಗೊಳಿಸಿದೆ.

ವಿಶ್ವಸಂಸ್ಥೆಯ ಮುಂದಿರಿಸುವ ಲಿಖಿತ ದಾಖಲೆಯನ್ನು ಡಾ. ಬಿ.ಆರ್.ಅಂಬೇಡ್ಕರ್ ಅವರು ಸಿದ್ಧಪಡಿಸಿದ್ದಾರೆ. ಇದನ್ನು ಸಮಿತಿಯು ಕೂಡ ಅಂಗೀಕರಿಸಿದೆ. ಮತ್ತು ಒಕ್ಕೂಟದ ಅಧ್ಯಕ್ಷರು ಈ ನಿರ್ಣಯವನ್ನು ವಿಶ್ವ ಸಂಸ್ಥೆಯ ಕಾರ್ಯದರ್ಶಿಗಳಿಗೆ ಸಲ್ಲಿಸಲು ಶೀಘ್ರಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಒಂದು ನಿಯೋಗವನ್ನು ಈ ಕಾರ್ಯಕ್ಕಾಗಿ ರಚಿಸಬೇಕು ಎಂದು ಸೂಚಿಸಿದೆ.

"ಶೋಷಣೆ ಹಾಗು ನಿರಂತರವಾದ ಕ್ರೌರ್ಯದಿಂದ ಪರಿಶಿಷ್ಟ ಜಾತಿಯವರ ಪರಿಸ್ಥಿತಿಯನ್ನು ದಕ್ಷಿಣ ಆಫ್ರಿಕಾದ ಭಾರತೀಯರಿಗಿಂತ ಹೀನಾಯಗೊಳಿಸಿದ್ದಾರೆ ಎಂಬ ದೂರನ್ನು ಈ ವಿಜ್ಞಾಪನೆಯು ಒಳಗೊಂಡಿದೆ. "ಬ್ರಿಟಿಷ್ ಸರ್ಕಾರವು ಪರಿಶಿಷ್ಟ ಜಾತಿಯವರಿಗೆ ಸೂಕ್ತ ರಕ್ಷಣೆ ಒದಗಿಸುವಲ್ಲಿ ವಿಫಲವಾಗಿದೆ" ಎಂದೂ ಈ ಅಹವಾಲಿನಲ್ಲಿ ದೂರಲಾಗಿದೆ. ಆದ್ದರಿಂದ ವಿಶ್ವಸಂಸ್ಥೆಯು ಈ ಕೂಡಲೇ ಮಧ್ಯೆ ಪ್ರವೇಶಿಸಿ, "ಸೂಕ್ತಕ್ರಮ"ಕೈಗೊಳ್ಳಬೇಕು ಎಂದು ಅದರಲ್ಲಿ ವಿನಂತಿಸಿಕೊಳ್ಳಲಾಗಿದೆ.

ಕಾರ್ಯಕಾರಿ ಸಮಿತಿಯು, ಭವಿಷ್ಯದ ಸಂವಿಧಾನದ ಬಗೆಗೆ ಒಂದು ನಿರ್ಣಯವನ್ನು ತೆಗೆದುಕೊಂಡು ಒಕ್ಕೂಟವು 'ಭಾರತದ ಸಮಗ್ರತೆಯನ್ನು ಹಾಗೂ ಪ್ರಬಲವಾದ ಕೇಂದ್ರ ಸರಕಾರವನ್ನು ಬಯಸುತ್ತದೆ' ಎಂಬ ನಿರ್ಣಯವನ್ನು ತೆಗೆದುಕೊಂಡಿತು. ಅಲ್ಲದೆ ಸಮಿತಿಯ ನಿರ್ಣಯದ ಪ್ರಕಾರ ಭಾರತದ ಸಂವಿಧಾನದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯುವ ಸಲುವಾಗಿ ಕ್ಯಾಬಿನೆಟ್ ಸಮಿತಿಯು ರೂಪಿಸಿರುವ ವಿವಿಧ ವರ್ಗಗಳಿಗೆ ತನ್ನ ಒಪ್ಪಿಗೆಯನ್ನು ಸೂಚಿಸುತ್ತದೆ.

### ಸಂವಿಧಾನದ ಮೂಲಮಂತ್ರವೇ ಸಮಾನತೆಯಾಗಬೇಕು

ಈ ಸಂವಿಧಾನದ ಮೂಲಮಂತ್ರವು ಸ್ವಾತಂತ್ರ್ಯ ಹಾಗು ಸಮಾನತೆಯಾಗಿರಬೇಕು ಎಂಬುದನ್ನು ಒಕ್ಕೂಟವು ಸಮರ್ಥಿಸುತ್ತದೆ. "ಪರಿಶಿಷ್ಟ ಜಾತಿಯವರ ಹಿತಾಸಕ್ತಿಗೆ ಹೋರಾಡುವಾಗ, ಆ ಧ್ಯೇಯಕ್ಕೆ ಧಕ್ಕೆಯಾಗದಂತೆ ಇತರ ಅಲ್ಪಸಂಖ್ಯಾತ ವರ್ಗದವರ ಹಿತಾಸಕ್ತಿಗೂ ಹೋರಾಡಲಿದೆ ಎಂದು ಒಕ್ಕೂಟ ಹೇಳಿಕೊಳ್ಳುತ್ತದೆ.

ಕಾರ್ಯಕಾರಿ ಸಮಿತಿಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ "ಭಾರತದ ಹಿತಾಸಕ್ತಿಯ ಪ್ರಕಾರ, ಭಾರತವು ಪರಮಾಧಿಕಾರದಿಂದ ತೃಪ್ತಿಪಟ್ಟುಕೊಳ್ಳಬೇಕು. ಅದನ್ನು ಭಾರತದ ಸ್ವಾತಂತ್ರಕ್ಕೆ ಧಕ್ಕೆಯಿಲ್ಲದ ರೀತಿಯಲ್ಲಿ ಯಾವುದೇ ಪಕ್ಷಪಾತ ಧೋರಣೆ ಇಲ್ಲದೆಯೇ ಒಪ್ಪಿಕೊಳ್ಳಬೇಕು.

## ಅಲ್ಪ ಸಂಖ್ಯಾತ ಸಮಿತಿಗೆ ಅಹವಾಲು

ಸಂವಿಧಾನ ಸಭೆಯ ಸದಸ್ಯರಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಿದ್ಧಪಡಿಸಿದ್ದ ಮತ್ತೊಂದು ಅಹವಾಲನ್ನು ಕಾರ್ಯಕಾರಿ ಸಮಿತಿಯು ಅಂಗೀಕರಿಸಿತು. ಭಾರತದ ಭವಿಷ್ಯದ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಯವರ ಹಿತಾಸಕ್ತಿಯನ್ನು ಕಾಪಾಡುವ ವಿಷಯದಲ್ಲಿ ಸೂಚನೆಗಳನ್ನು ಅದು ಒಳಕೊಂಡಿತ್ತು.

ಸಂವಿಧಾನ ಸಮಿತಿಯಲ್ಲಿದ್ದ ತನ್ನ ಸದಸ್ಯರಿಗೆ ಒಕ್ಕೂಟವು "ಸಂವಿಧಾನದಲ್ಲಿ ಪರಿಶಿಷ್ಟ ಜಾತಿಯವರ ಹಿತಾಸಕ್ತಿಯನ್ನು ಕಾಪಾಡುವ ಹಾಗು ಅದರ ರಕ್ಷಣೆ ಮಾಡುವ ವಿಷಯದಲ್ಲಿ ಅಂತಿಮ ನಿರ್ಧಾರದ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಇರಬೇಕು" ಪತ್ಯೇಕ ಮತಕ್ಷೇತ್ರಗಳನ್ನು ನೀಡುವುದರಿಂದ ಮಾತ್ರವೇ ನಿಜವಾದ ಅರ್ಥದಲ್ಲಿ ಪರಿಶಿಷ್ಟ ಜಾತಿಯವರಿಗೆ ಪ್ರಾತಿನಿಧ್ಯ ಕಲ್ಪಿಸಲು ಸಾಧ್ಯವಾಗುತ್ತದೆ. ಇಲ್ಲದೇ ಹೋದರೇ, ಈ ರಕ್ಷಣೆಯು ಕೇವಲ ಕಾಗದಕ್ಕೆ ಮಾತ್ರ ಸೀಮಿತ ಆಗುತ್ತದೆ" – ಎಂಬ ಅಂಶಗಳನ್ನು ಒತ್ತಿಹೇಳುವಂತೆ ಸೂಚಿಸಿತು.

ಈ ಸಮಿತಿಯು ನಗರಪಾಲಿಕೆ ಸದಸ್ಯರಾದ ಶ್ರೀ ಬಿ.ಜೆ.ದೇವ್‌ರೂಕರ್, ಹಾಗೂ ಪರಿಶಿಷ್ಟ ಜಾತಿಗಳ ಕಾರ್ಯಕರ್ತರಾದ ಶ್ರೀ ಹರಿ ಮತ್ತು ಡಾ. ಧರ್ಮಣ್ಣ ಅವರ ನಿಧನಕ್ಕೆ ಸಂತಾಪಸೂಚಿಸಿತು.

ಡಾ. ಬಿ.ಆರ್. ಅಂಬೇಡ್ಕರ್ ಅವರು ಪತ್ರಿಕೆಗೆ ಸಂದರ್ಶನ ನೀಡುತ್ತಾ ಸಮಿತಿಯ ನಿರ್ಣಯವನ್ನು ವಿವರಿಸಿದರು. ದಕ್ಷಿಣ ಆಫ್ರಿಕಾದ ಭಾರತೀಯರ ವಿಷಯದಲ್ಲಿದ್ದ ಹಾಗೆಯೇ ಭಾರತದಲ್ಲಿನ ಪರಿಶಿಷ್ಟರ ವಿಷಯದಲ್ಲಿಯೂ ನಿರ್ಣಯ ಕೈಗೊಳ್ಳುವ ಅಧಿಕಾರ ವಿಶ್ವಸಂಸ್ಥೆಗೆ ಇದೆ ಎಂದರು. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ನಿಗ್ರೋಗಳ ನಾಯಕರಾದ ಪಾಲ್ ಡೂಬಯಿಸ್ ಅವರೊಂದಿಗೆ ಸಂಪರ್ಕದಲ್ಲಿ ಇರುವುದಾಗಿ ಹೇಳಿದರು. ಈತ ಅಮೇರಿಕದ ನಿಗ್ರೋಗಳ ಪರಿಸ್ಥಿತಿಯನ್ನು ವಿಶ್ವಸಂಸ್ಥೆಯ ಮುಂದೆ ಇರಿಸುವವರಿದ್ದರು. ಅಮೇರಿಕಾ ಸಂಯುಕ್ತ ಸಂಸ್ಥಾನದ ನಿಗ್ರೋಗಳ ಒಕ್ಕೂಟದ ಅಧ್ಯಕ್ಷರಾಗಿದ್ದ ಪಾಲ್ ಡುಬಾಯಿಸ್ ಆ ದೇಶದಲ್ಲಿ ನಿಗ್ರೋಗಳ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ.*

ಡಾ. ಬಿ.ಆರ್.ಅಂಬೇಡ್ಕರ್ ಅವರು ಭಾರತದಲ್ಲಿ ಪರಿಶಿಷ್ಟ ಜಾತಿಯ ಜನರ ಪರಿಸ್ಥಿತಿಯನ್ನು ಅಮೇರಿಕಾದ ನಿಗ್ರೋಗಳ ಪರಿಸ್ಥಿತಿಗೆ ಹೋಲಿಸಿದರು "ಪರಿಶಿಷ್ಟ ವರ್ಗದವರು ಹಿಂದೂ ಧರ್ಮದವರಿಂದ ಅನುಭವಿಸುತ್ತಿರುವ ಶೋಷಣೆಯನ್ನೇ ಅಮೆರಿಕಾದ ಬಿಳಿಯರಿಂದ ನಿಗ್ರೋಗಳು ಅನುಭವಿಸುತ್ತಿದ್ದಾರೆ.

ಇನ್ನು ಭಾರತದ ಸಂವಿಧಾನದ ರಚನೆಯ ವಿಷಯಕ್ಕೆ ಸಂಬಂಧಿಸಿದಂತೆ ಡಾ.ಬಿ.ಆರ್.ಅಂಬೇಡ್ಕರ್ ಸರಕಾರದಲ್ಲಿ ಬೇರೆ ಪಕ್ಷಕ್ಕೆ ಸೇರಿದ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ನಿರ್ಲಕ್ಷಿಸುವ ಬಹುಸಂಖ್ಯಾತರ ಪ್ರಾಬಲ್ಯವನ್ನು ತಡೆಯುವುದಕ್ಕೆ ತಮ್ಮ ಬಳಿ ಸೂಕ್ತಯೋಜನೆಯಿದೆ ಎಂದು ಹೇಳಿದರು. ಆದರೆ ಅವರು ತಮ್ಮ ಯೋಜನೆಯ ವಿವರಗಳನ್ನು ನೀಡಲು ನಿರಾಕರಿಸಿದರು ಆದರೆ ಈಗಿರುವ ಸಂವಿಧಾನದ ಪ್ರಕಾರ, ಒಂದು ಪ್ರಾಂತದ ಆಡಳಿತವನ್ನು ಬಹುಸಂಖ್ಯಾತರೇ ವಹಿಸಿಕೊಂಡಿದ್ದಾರೆ. ಈ ಪರಿಸ್ಥಿತಿ ಮುಂದುವರಿಯಬಾರದು ಇದರಿಂದ "ಒಂದು ಅಲ್ಪಸಂಖ್ಯಾತ ಸಮುದಾಯದ ಮೇಲೆ ಅತ್ಯಂತ ದೊಡ್ಡ ಮಟ್ಟದ ಶೋಷಣೆ ಮಾಡಿದಂತಾಗುತ್ತದೆ. ಬಹುಸಂಖ್ಯಾತ ಸಮುದಾಯದ ಕೈಗಳಿಗೆ ಆಡಳಿತ ಸಿಕ್ಕದಂತೆ ಮಾಡಿ ಅಲ್ಪಸಂಖ್ಯಾತರ ಅಸಹಾಯಕತೆಯನ್ನು ನಿವಾರಿಸಲು ಸಂವಿಧಾನದಲ್ಲಿ ವಿಧಿಗಳನ್ನು ಅಳವಡಿಸಬೇಕು." ಬೇರೆ ಬೇರೆ ಪ್ರಾಂತಗಳಲ್ಲಿ ಹಾಗೂ ಕೇಂದ್ರದಲ್ಲಿ ಬಹುಸಂಖ್ಯಾತ ಹಾಗೂ ಅಲ್ಪ ಸಂಖ್ಯಾತರ ಪ್ರತಿನಿಧಿಗಳು ಸರಕಾರ ರಚಿಸುವುದರ ಪರವಾಗಿ ತಾವು ಇರುವುದಾಗಿ ಡಾ. ಅಂಬೇಡ್ಕರ್ ಅವರು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಈಗಿನ ಪರಿಸ್ಥಿತಿಯಲ್ಲಿ ಭಾರತವು ಪರಮಾಧಿಕಾರದಿಂದ

ತೃಪ್ತವಾಗಬೇಕು ಎಂಬ ತಮ್ಮ ಅಭಿಪ್ರಾಯವನ್ನು ಪುನರುಚ್ಚರಿಸಿದರು. "ನನ್ನ ಅಭಿಪ್ರಾಯ ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ಸ್ಪಷ್ಟವಾಗಿದೆ. ಭಾರತದ ಸ್ವಾತಂತ್ರ್ಯವನ್ನು ರಕ್ಷಣೆಯ ದೃಷ್ಟಿಯಿಂದಲೇ ನೋಡಬೇಕು. ಈಗ ಭಾರತವು ತನ್ನ ರಕ್ಷಣೆಯನ್ನು ಬ್ರಿಟಿಷರ ಸಹಾಯವಿಲ್ಲದೇ ತಾನೆ ಮಾಡಿಕೊಳ್ಳುವ ಸ್ಥಿತಿಯಲಿಲ್ಲ ಮತ್ತು ಸಂವಿಧಾನ ಸಮಿತಿಯು ನನ್ನ ತಂತ್ರವನ್ನು ಅನುಸರಿಸಿದರೆ, ಬ್ರಿಟಿಷರ ಸೇನೆಯನ್ನು, ಅವರ ಆಧಿಪತ್ಯವಿಲ್ಲದೆಯೇ ಬಳಸಿಕೊಳ್ಳಬಹುದು" ಎಂದು ಅವರು ನುಡಿದರು.[೧]

* * * * *

## ೩೮
## ಅಟ್ಲೀ ಅವರ ಹೇಳಿಕೆಯ ನನಗೆ ಅರ್ಥವಾಗುವುದಿಲ್ಲ

ರಾಜ್ಯಪಾಲರ ಸಲಹಾ ಸಮಿತಿಯ ಮಾಜೀ ಸದಸ್ಯರು ಹಾಗು ಪರಿಶಿಷ್ಟ ಜಾತಿಯ ನಾಯಕರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಗ್ಲೋಬ್ ಪತ್ರಿಕೆಗೆ ಸಂದರ್ಶನ ನೀಡಿದರು. ಅಟ್ಲೀ ಅವರ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ "ಅದನ್ನು ನಾನು ಇದುವರೆಗೂ ಸರಿಯಾಗಿ ಓದಿಲ್ಲ. ಆದರೆ ಆ ಹೇಳಿಕೆಯೇ ನನಗೆ ಅರ್ಥ ಆಗುತ್ತಿಲ್ಲ" ಎಂದರು.

ಮುಂದುವರೆಯುತ್ತಾ ಡಾ.ಬಿ.ಆರ್.ಅಂಬೇಡ್ಕರ್ "ಈ ಹೇಳಿಕೆಯಲ್ಲಿ ಒಂದೇ ಒಂದು ಅಂಶದತ್ತ ಕೈತೋರಿಸಿ ಈ ಅಂಶ ನನಗೆ ಅರ್ಥ ಆಗಿದೆ ಎಂದು ಹೇಳಲುಬರುವುದಿಲ್ಲ. ಇಡೀ ಹೇಳಿಕೆಯೇ ಅಸ್ಪಷ್ಟವಾಗಿದೆ. ನನ್ನ ಬುದ್ಧಿ ಶಕ್ತಿಯ ಮಿತಿಯಿಂದಾಗಿ ಕಾರಣದಿಂದ ಈ ಹೇಳಿಕೆ ನನಗೆ ಅರ್ಥವಾಗದೇ ಇರಬಹುದು."

ಪರಿಶಿಷ್ಟ ವರ್ಗದ ಸಿಖ್ಖರು ಕೂಡ ಅಖಿಲ ಭಾರತ ಪರಿಶಿಷ್ಟ ಜಾತಿಯಲ್ಲಿ ಸೇರ್ಪಡೆಯಾಗಿದ್ದಾರೆಯೇ, ಒಂದು ವೇಳೆ ಹಾಗಾಗಿದ್ದರೆ, ಪಂಜಾಬ್ ಸರ್ಕಾರದ ವಿರುದ್ಧ ಒಕ್ಕೂಟುವು ಕೈಗೊಂಡಿರುವ ಧರಣಿಯಲ್ಲಿ ಅವರೇಕೆ ಪಾಲ್ಗೊಳುತ್ತಾರೆ ಎಂಬ ಪ್ರಶ್ನೆಯನ್ನು ಅವರಿಗೆ ಕೇಳಲಾಯಿತು. ಡಾ. ಬಿ.ಆರ್. ಅಂಬೇಡ್ಕರ್ ಅವರು ಇದಕ್ಕೆ ಉತ್ತರಿಸುತ್ತಾ "ಅವರು ಈ ಒಕ್ಕೂಟದ ಒಂದು ಭಾಗವೇ ಎಂದು ನನಗೆ ಖಂಡಿತವಾಗಿಯೂ ತಿಳಿದಿಲ್ಲ. ಬಹುಶಃ ಈ ಪ್ರಶ್ನೆಗೆ ಸಿಖ್ಖರೇ ಉತ್ತರಿಸುವುದು ಉತ್ತಮ" ಎಂದರು. –ಗ್ಲೋಬ್[೨]

* * * * *

---

೧. ಜೈ ಭೀಮ್ ೨೬ ಜನವರಿ ೧೯೪೭

೨. ಮರು ಮುದ್ರಣ ಜೈಭೀಮ್ ೧೬ನೆಯ ಮಾರ್ಚ್ ೧೯೪೭

## ೩೯
## ಅಸ್ಪೃಶ್ಯರಿಗಾಗಿ ಸಾಕಷ್ಟು ರಕ್ಷಣೆಯನ್ನು ಪಡೆದುಕೊಳ್ಳಬೇಕು

ಜೋಗೇಂದ್ರನಾಥ ಮಂಡಲ್ ಅವರಿಗೆ ಬರೆದ ಪತ್ರದಲ್ಲಿ ಅಸ್ಪೃಶ್ಯರಿಗೆ ಸಾಕಷ್ಟು ರಕ್ಷಣೆಯನ್ನು ಪಡೆಯುವ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಡಾ.ಬಿ.ಆರ್.ಅಂಬೇಡ್ಕರ್ ತಿಳಿಸಿದ್ದಾರೆ. ಆ ಪತ್ರವನ್ನು ಕೆಳಗೆ ನೀಡಲಾಗಿದೆ. ಸಂಪಾದಕರು.

**ರಹಸ್ಯ**

ಭೀಮರಾವ್ ಆರ್. ಅಂಬೇಡ್ಕರ್ ರಾಜಗೃಹ
M.A Phd, D.Sc. ದಾದರ್. ಬೊಂಬಾಯಿ
ವಕೀಲರು ಬೊಂಬಾಯಿ, ಜೂನ್ ೨ ೧೯೪೭

ಪ್ರಿಯ ಮಂಡಲ್ ಅವರೇ,

೧೯೪೭ ರ ಮೇ ೩೦ ರಂದು ತಾವು ನನಗೆ ಬರೆದ ಪತ್ರವನ್ನು ಮೇಶ್ರಾಂ ಅವರು ನಿನ್ನೆ ನನಗೆ ತಲಪಿಸಿದ್ದಾರೆ. ನಾನು ಮೊದಲು ನಿಮ್ಮ ಕ್ಷಮೆ ಯಾಚಿಸುವೆ. ಹೋದ ತಿಂಗಳು ಸಂಪೂರ್ಣವಾಗಿ ನಾನು ಎಡಗಾಲಿನ ನೋವಿನಿಂದ ಬಳಲುತ್ತಾ ಹಾಸಿಗೆ ಹಿಡಿದಿದ್ದೆ. ಆದ್ದರಿಂದ ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳಲ್ಲಿಯೂ ಪಾಲ್ಗೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಕೇಂದ್ರಿಯ ಸಂವಿಧಾನ ಸಮಿತಿಯ ಸದಸ್ಯನಾಗಿ ನಾನು ನೇಮಕಗೊಂಡಿದ್ದೇನೆ. ನಾನು ಈ ತಿಂಗಳ ೪ ರಂದು ವಿಮಾನದ ಮುಖೇನ ದೆಹಲಿಗೆ ಆಗಮಿಸುತ್ತಿದ್ದೇನೆ. ಆದರೆ ಅದು ಕೂಡ ನಾನು ಎಷ್ಟರ ಮಟ್ಟಿಗೆ ಆರೋಗ್ಯವಂತನಾಗಿರುವೆ ಎಂಬುದನ್ನು ಅವಲಂಬಿಸಿದೆ. ಒಂದು ವೇಳೆ ಓಡಾಡದಂತೆ ನನಗೆ ನನ್ನ ವೈದ್ಯರು ಸೂಚಿಸಿದರೆ, ಬಂಗಾಳ ವಿಭಜನೆ ಕುರಿತ ನನ್ನ ಅಭಿಪ್ರಾಯವನ್ನು ನಾನು ತಮಗೆ ತಿಳಿಸುವೆ. ಬ್ರಿಟಿಷರು ಪರಿಶಿಷ್ಟ ಜಾತಿಯ ಜನರನ್ನು ಒಂದು ಪ್ರತ್ಯೇಕ ಧರ್ಮವಾಗಿ ನೋಡಲು ವಿಫಲರಾಗಿದ್ದಾರೆ ಎಂಬುದು ನನ್ನ ಭಾವನೆ. ಆದ್ದರಿಂದ ಈ ವಿಭಜನೆಯ ವಿಷಯವಾಗಿ ಏನನ್ನೂ ಮಾಡಲು ಪರಿಶಿಷ್ಟ ಜಾತಿಯವರಿಗೆ ಸಾಧ್ಯವಾಗಲಿಲ್ಲ. ಅವರಿಗೆ ವಿಭಜನೆಯನ್ನು ಬೆಂಬಲಿಸಲಾಗಲಿ, ವಿರೋಧಿಸಲಾಗಲೀ ಸಾಧ್ಯವಾಗಲಿಲ್ಲ. ಈಗ ಪರಿಶಿಷ್ಟ ಜಾತಿಯ ಜನರ ಮುಂದೆ ಇರುವುದು ಒಂದೇ ಮಾರ್ಗ. ಅದೇನೆಂದರೆ ವಿಭಜಿತ ಅಥವಾ ಅವಿಭಜಿತ ಬಂಗಾಳದಲ್ಲಿ ತಮ್ಮ ರಕ್ಷಣೆಗಾಗಿ ಹೋರಾಡುವುದು. ನನ್ನ ದೃಷ್ಟಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಹಿಂದೂಗಳಿಗಿಂತ ಮುಸ್ಲಿಮರು ಹೆಚ್ಚು ಸ್ನೇಹಿತರಲ್ಲ. ಆದ್ದರಿಂದ ಅದು ಹಿಂದೂ ಬಂಗಾಳವೋ ಅಥವಾ ಮುಸಲ್ಮಾನರ ಬಂಗಾಳವೋ ಎಂಬುದು ನಗಣ್ಯವಾಗುತ್ತದೆ. ಅವರ ಧ್ಯೇಯ ಯಾವುದೇ ಪರಿಸ್ಥಿತಿಯಲ್ಲಿಯೂ ಅವರ ಮುಂದಿರುವುದು ತಮ್ಮ ರಕ್ಷಣೆಗಾಗಿ ನಡೆಸಬೇಕಾದ ಹೋರಾಟ. ಈ ಕಾರಣಕ್ಕಾಗಿಯೇ, ಪರಿಶಿಷ್ಟ ಜಾತಿಯ ಜನರು ಬಂಗಾಳ ವಿಭಜನೆಯಾದರೆ ಪೂರ್ವ ಬಂಗಾಳದಲ್ಲಿನ ಪರಿಶಿಷ್ಟ ಜಾತಿಯ ಜನರು ಅಲ್ಲಿಯೇ ಇರಬಯಸುತ್ತಾರೆ. ಆದರೆ ಹಿಂದೂಗಳಿಗೆ ಕೂಡ ಒಂದು ಅಂಶವನ್ನು ನಾನು ಸ್ಪಷ್ಟಪಡಿಸಿದ್ದೇನೆ. ಅದೇನೆಂದರೆ ಪಶ್ಚಿಮ ಬಂಗಾಲದಲ್ಲಿ ಪರಿಶಿಷ್ಟ ಜಾತಿಯ ಜನರಿಗೆಂದೇ ಸ್ವಲ್ಪ ಭೂಮಿಯನ್ನು ಕಾಯ್ದಿರಿಸಬೇಕು. ದಾಮೋದರ ಕಣಿವೆಯ ಯೋಜನೆ ಸಾಕಾರಗೊಂಡ ಮೇಲೆ ಕೂಡ ಈ ಕಾಯ್ದಿರಿಸುವಿಕೆಯು ಜಾರಿಯಲ್ಲಿ ಇರಬೇಕು. ಪೂರ್ವ ಬಂಗಾಳದಲ್ಲಿ ಇರುವ ಪರಿಶಿಷ್ಟ ಜಾತಿಯ ಜನರು ಪಶ್ಚಿಮ ಬಂಗಾಳಕ್ಕೆ ಬರುವ ಇಚ್ಛೆ ವ್ಯಕ್ತಪಡಿಸಿದರೇ, ಅವರಿಗೆ ಈ ಭೂಮಿಯನ್ನು ನೀಡಬಹುದು. ಇದು ಸಾಧ್ಯವಾಗಬಹುದಾದ ಕೆಲಸ. ಸದ್ಯದಲ್ಲಿ ತಾವು ಈಗ

ಲೀಗ್‌ನೊಂದಿಗೆ ಕೈ ಜೋಡಿಸಿ ಕಾರ್ಯಕೈಗೊಳ್ಳಬೇಕು ಹಾಗು ಅವರಿಗೆ ಸೂಕ್ತ ರಕ್ಷಣೆ ಪಡೆದುಕೊಳ್ಳಬೇಕು ಎಂಬ ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಏಕೆಂದರೆ ಈ ಮಟ್ಟದ ರಕ್ಷಣೆಯನ್ನು ಹಿಂದೂಗಳು ಪರಿಶಿಷ್ಟ ಜಾತಿಯವರಿಗೆ ನೀಡಲಾರರು. ಇಲ್ಲಿ ಯಾರ ಮನಸ್ಸೂ ಪವಿತ್ರವಾದುದಲ್ಲ. ನಾನು ಕಂಡಂತೆ ನಾವು ಅಪೇಕ್ಷಿಸುತ್ತಿರುವ ರಕ್ಷಣೆಯನ್ನು ಖಂಡಿತ ಅವರು ನಮಗೆ ನೀಡುತ್ತಾರೆ. ಅವರು ನಿರಾಕರಿಸಬಹುದಾದ ಒಂದೇ ಒಂದು ಅಂಶವೆಂದರೆ ಪ್ರತ್ಯೇಕ ಮತಕ್ಷೇತ್ರಕ್ಕೆ ಸಂಬಂಧಿಸಿದ್ದು, ಆದರೆ ಮುಸ್ಲಿಂ ಒಕ್ಕೂಟವು ಪರಿಶಿಷ್ಟ ಜಾತಿಯವರಿಗೆ ಪ್ರತ್ಯೇಕ ಮತಕ್ಷೇತ್ರ ನೀಡಲು ಸಿದ್ಧವಿರುತ್ತದೆ. ಏಕೆಂದರೆ ಅವರು ಕೂಡ ತಮಗಾಗಿ ಪ್ರತ್ಯೇಕ ಮತಕ್ಷೇತ್ರ ಪಡೆಯುವ ಚಿಂತನೆಯಲ್ಲಿದ್ದಾರೆ. ಇದು ಖಂಡಿತ ಪೂರ್ವಬಂಗಾಳದ ಪರಿಶಿಷ್ಟ ಜಾತಿಯ ಜನರಿಗೆ ವರವಾಗಿ ಪರಿಣಮಿಸಲಿದೆ.

ಮುಸಲ್ಮಾನರ ಒಕ್ಕೂಟದ ಎದುರು ಯಾವ ಬೇಡಿಕೆಗಳನ್ನು ಇರಿಸಬೇಕು ಎಂದು ತಿಳಿಸುವಂತೆ ನೀವು ನನ್ನನ್ನು ಕೇಳಿರುವಿರಿ. ನಾನು ಬೇಡಿಕೆಗಳ ಪಟ್ಟಿಯನ್ನು ಸಿದ್ಧಪಡಿಸಿ, ಮುದ್ರಿಸಿ ಅದನ್ನು ಅಲ್ಪಸಂಖ್ಯಾತರ ಸಮಿತಿಯ ಮುಂದೆ ಇರಿಸಿದ್ದೇನೆ. ಇದರ ಒಂದು ಪ್ರತಿಯನ್ನು ನಾನು ತಮಗೂ ಕಳುಹಿಸಿಕೊಡುತ್ತಿದ್ದೇನೆ. ನನ್ನ ದೃಷ್ಟಿಯಲ್ಲಿ ನಮ್ಮ ರಕ್ಷಣೆಗೆ ಅಗತ್ಯವಿರುವ ಎಲ್ಲಾ, ಅಂಶಗಳೂ ಈ ವಿಜ್ಞಾಪನಾ ಪತ್ರದಲ್ಲಿ ಅಡಕವಾಗಿದೆ. ಕೇವಲ ಪೂರ್ವ ಬಂಗಾಳಕ್ಕೆ ಮಾತ್ರವಲ್ಲ ಇದು ಇಡೀ ಭಾರತಕ್ಕೆ ಅನ್ವಯಿಸುತ್ತದೆ. ಆದ್ದರಿಂದ ಮುಸ್ಲಿಂಲೀಗ್‌ನೊಂದಿಗೆ ಮಾತುಕತೆಗೆ ತೆರಳಿದಾಗ ಇದರ ಪ್ರಯೋಜನವನ್ನು ತಾವು ಪಡೆಯಬೇಕು. ಇದಕ್ಕೆ ಅಗತ್ಯ ಇರುವ ಇತರ ಅಂಶಗಳೇನಾದರೂ ಇದ್ದಲ್ಲಿ ಅವುಗಳನ್ನು ತಾವು ಸೇರಿಸಲು ಹಿಂಜರಿಯಬೇಡಿ. ಪೂರ್ವ ಬಂಗಾಳದವರಿಗೆ ಕೆಲವು ವಿಶೇಷ ರಕ್ಷಣೆಗಳು ಬೇಕಾಗಬಹುದು.

ಸತ್ಯಾಗ್ರಹಿಗಳು ಈಗಾಗಲೇ ಪುಣೆಯ ಕಾರಾಗೃಹದಲ್ಲಿ ಅನುಭವಿಸುತ್ತಿರುವ ಹಿಂಸೆಯ ಬಗೆಗೆ ತಮಗೆ ಈಗಾಗಲೇ ತಿಳಿಸಿದ್ದೇನೆ. ಇವರ ಪರಿಸ್ಥಿತಿಯನ್ನು ತಿಳಿದು ಬರಲು ಕಾರಾಗೃಹಕ್ಕೆ ನಾನು ನನ್ನ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಿ ಕೊಡುತ್ತಿದ್ದೇನೆ. ನಾನು ಉತ್ತರ ಪ್ರದೇಶದ ಪ್ರಧಾನ ಮಂತ್ರಿಯವರಿಗೂ ಪತ್ರವನ್ನು ಬರೆದಿದ್ದೇನೆ. ಆದರೆ ಈ ಸರ್ಕಾರದ ವಿರುದ್ಧವೇ ನಮ್ಮ ಸತ್ಯಾಗ್ರಹಿಗಳು ಹೋರಾಟ ಮಾಡಿದ್ದಾರೆ. ಆದ್ದರಿಂದ ಇವರನ್ನು ಬಿಡುಗಡೆ ಮಾಡುವುದು ಅವರ ಗೌರವಕ್ಕೆ ಧಕ್ಕೆಯಾದಂತೆ ಎಂದೆನಿಸಬಹುದು. ಒಂದು ವೇಳೆ ನಮ್ಮ ರಕ್ಷಣೆಯ ವಿಷಯವಾಗಿ ಯಾವುದಾದರೂ ಒಂದು ಒಪ್ಪಂದಕ್ಕೆ ಬರುವುದು ಸಾಧ್ಯವಾದರೆ. ನಾನು ಈ ಒಪ್ಪಂದದಲ್ಲಿ ಖಾತ್ರಿಯಾಗಿ ಇವರ ಬಿಡುಗಡೆಯ ಸಾಲನ್ನು ಸೇರಿಸುತ್ತೇನೆ.

ಅಭಿಮಾನಪೂರ್ವಕವಾಗಿ,

ತಮ್ಮ ವಿಶ್ವಾಸದ
(ಸಹಿ)
ಡಾ. ಬಿ.ಆರ್. ಅಂಬೇಡ್ಕರ್

ಗೌರವಾನ್ವಿತ ಜೆ.ಎನ್. ಮಂಡಲ್
ಭಾರತ ಸರ್ಕಾರದ ಕಾನೂನು ವಿಭಾಗದ ಸದಸ್ಯರು
ನವದೆಹಲಿ[೧]

---

೧. ಖೈರ ಮೋಡೆ ಸಂಪುಟ ೮ ಪುಟ ೧೬೪ – ೧೬೬

## ೪೦
## ಭಾರತದ ಜನಗಣತಿ

ಭಾರತದ ಜನಗಣತಿಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಕೆಳಗಿನಂತೆ ದಿನಾಂಕ ೨೬ ಅಕ್ಟೋಬರ್ ೧೯೪೭ ರಂದು ವ್ಯಕ್ತಪಡಿಸಿದರು: –ಸಂಪಾದಕರು

"ಜನಸಂಖ್ಯಾಶಾಸ್ತ್ರದ ಪ್ರಮುಖ ಅಂಶವಾಗಿರಬೇಕಿದ್ದ ಭಾರತದ ಜನಗಣತಿಯು ಆ ರೀತಿ ಆಗಿರದೇ ದಶಕಗಳೇ ಕಳೆದು ಹೋಗಿವೆ. ಅದೊಂದು ರಾಜಕೀಯ ನಾಟಕವಾಗಿದೆ. ಪ್ರತಿಯೊಂದು ಧರ್ಮವೂ ರಾಜಕೀಯ ಲಾಭಕ್ಕಾಗಿ ಮತ್ತೊಂದು ಧರ್ಮವನ್ನು ಮೀರಿಸುವ ಪ್ರಯತ್ನಪಡುತ್ತಿದೆ. ಆದರೆ ಇದಕ್ಕೆ ಅತ್ಯಂತ ದೊಡ್ಡ ಮಟ್ಟದಲ್ಲಿ ಬಲಿಯಾಗಿರುವುದು ಪರಿಶಿಷ್ಟ ಜಾತಿಯ ಜನರು. ಏಕೆಂದರೆ ಬೇರೆಯ ಎಲ್ಲಾ ವರ್ಗದವರು ಕೂಡ ತಮ್ಮ ಸ್ವಂತ ಲಾಭಕ್ಕಾಗಿ ಇವರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ."[೧]

* * * * *

## ೪೧
## ಪಾಕಿಸ್ತಾನದ ಪರಿಶಿಷ್ಟ ಜಾತಿಯ ಜನರು ಭಾರತಕ್ಕೆ ಆಗಮಿಸಬೇಕು

ನವದೆಹಲಿ
ನವೆಂಬರ್ ೨೭, ೧೯೪೭

"ಭಾರತದೊಂದಿಗೆ ಒಗ್ಗೂಡಬೇಕು ಎಂಬ ವಿಷಯವನ್ನು ವಿರೋಧಿಸುವ ನಿಜಾಂ ಅವರಿಗೆ ಯಾವುದೇ ಸಹಾನುಭೂತಿಯೂ ದೊರೆಯಲಾರದು. ಭಾರತದ ಶತ್ರುವಿನ ಜೊತೆಗೆ ಯಾವುದೇ ಪರಿಶಿಷ್ಟ ಜಾತಿಯ ವ್ಯಕ್ತಿಯೂ ಕೈಜೋಡಿಸಿ ಆ ವರ್ಗದ ಗೌರವಕ್ಕೆ ಧಕ್ಕೆತರಬಾರದು". ಇದು ಡಾ.ಬಿ.ಆರ್.ಅಂಬೇಡ್ಕರ್ ಅವರ ಹೇಳಿಕೆ. ಭಾರತದ ಕಾನೂನು ಮಂತ್ರಿಯಾದ ಅವರು ಆತ ಭಾರತಕ್ಕೆ ವಲಸೆ ಬರಲು ಪರಿಶಿಷ್ಟ ಜಾತಿಯ ಜನರಿಗೆ ಸಾರ್ವಜನಿಕವಾಗಿ ಮುಕ್ತ ಆಹ್ವಾನ ನೀಡುತ್ತಾ ಈ ಹೇಳಿಕೆಯನ್ನು ನೀಡಿದರು.

ಅವರು ಪಾಕಿಸ್ತಾನದಲ್ಲಿ ಇರುವ ತಮ್ಮ ಬೆಂಬಲಿಗರ ಪರಿಸ್ಥಿತಿಯನ್ನು ಗಮನಿಸಿ ಈ ಹೇಳಿಕೆಯನ್ನು ನೀಡಿದ್ದರು. ಮುಸಲ್ಮಾನರ ಒಕ್ಕೂಟ ಹಾಗು ಅದರ ಅಧ್ಯಕ್ಷರು ತಮಗೆ ಅಗತ್ಯ ಇರುವಾಗ ಮಾತ್ರವೇ ಪರಿಶಿಷ್ಟ ಜಾತಿಯ ಜನರಿಗೆ ಬೆಂಬಲ ನೀಡಿದ್ದಾರೆ. ಆದ್ದರಿಂದ ಅವರೆಲ್ಲರೂ ಪಾಕಿಸ್ತಾನವನ್ನು ತೊರೆದು ಭಾರತಕ್ಕೆ ಬರಬೇಕು ಎಂಬ ಆಹ್ವಾನ ಇವರು ನೀಡಿದ್ದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಅಭಿಪ್ರಾಯದಲ್ಲಿ ಭಾರತದಲ್ಲಿ ಇರುವ ಪರಿಶಿಷ್ಟ ಜಾತಿಯ ಜನಗಳ ಸಂಖ್ಯೆ ಬಹಳ ದೊಡ್ಡದಿದ್ದು. ಅವರು ಖಂಡಿತವಾಗಿಯೂ ಸರ್ಕಾರದ ಆಡಳಿತದ ಮೇಲೆ ಪ್ರಭಾವ ಬೀರಬಲ್ಲವರಾಗಿದ್ದಾರೆ.

---

೧. ಖೈರ್ ಮೋಡೆ ಸಂಪುಟ ೧೦, ಪುಟ ೨೨ ಸ್ಥಳ ನಮೂದಿಸಲಾಗಿಲ್ಲ – ಸಂಪಾದಕರು.

ಅವರು ಮುಂದುವರಿದು ಹೀಗೆ ಹೇಳಿದರು" ಪಾಕಿಸ್ತಾನ ಹಾಗು ಹೈದರಾಬಾದಿನ ಪರಿಶಿಷ್ಟ ಜಾತಿಯ ಜನರಿಂದ ನನಗೆ ಅಸಂಖ್ಯಾತ ಪತ್ರಗಳು ಬಂದಿವೆ. ಪಾಕಿಸ್ತಾನ ಹಾಗು ಹೈದರಾಬಾದು ಸರ್ಕಾರಗಳು ಅನುಸರಿಸುತ್ತಿರುವ ನೀತಿಯಿಂದ ತಮಗೆ ಉಂಟಾಗುತ್ತಿರುವ ಶೋಷಣೆಯಿಂದ ತಮ್ಮನ್ನು ಮುಕ್ತಗೊಳಿಸುವಂತೆ ಅವರು ಕೇಳಿಕೊಂಡಿದ್ದಾರೆ. ಪಾಕಿಸ್ತಾನದಲ್ಲಿ, ಅವರನ್ನು ಭಾರತಕ್ಕೆ ಹೋಗದಂತೆ ತಡೆಯಲಾಗುತ್ತಿದೆ. ಅಂತೆಯೇ ಬಲವಂತವಾಗಿ ಅವರನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಆಗುವಂತೆ ಬಲವಂತಪಡಿಸಲಾಗುತ್ತಿದೆ. ಹೈದರಾಬಾದಿನಲ್ಲಿ ಕೂಡ ಇದೇ ಪರಿಸ್ಥಿತಿ ಇದೆ. ಮುಸಲ್ಮಾನರ ಜನಸಂಖ್ಯೆ ಹೆಚ್ಚಿಸಲು ಬಲವಂತದ ಮತಾಂತರ ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಮುಸಲ್ಮಾನ ಸಂಘಟನೆಯಾದ ಇತೇಹದ್-ಉಲ್-ಮುಸ್ಲಿಮೀನ್ ಎಂಬ ಸಂಘಟನೆಯ ಕಾರ್ಯಕರ್ತರು ಅಸ್ಪೃಶ್ಯರ ಮನೆಗಳನ್ನು ಬೆಂಕಿಗೆ ಆಹುತಿ ಮಾಡಿ ಅವರಲ್ಲಿ ಭಯೋತ್ಪಾದನೆಯನ್ನು ಉಂಟುಮಾಡಿ ಇವರು ಹೈದರಾಬಾದ್ ವಿರುದ್ಧದ ಚಳುವಳಿಯಲ್ಲಿ ಎಂದಿಗೂ ಪಾಲ್ಗೊಳ್ಳದಂತೆ ಮಾಡುತ್ತಿದ್ದಾರೆ.

## ಮುಕ್ತ ಆಹ್ವಾನ

ನಾನು ಮಾಡಬಹುದಾದ ಒಂದೇ ಕಾರ್ಯವೆಂದರೇ ಅವರನ್ನು ಭಾರತಕ್ಕೆ ಆಹ್ವಾನಿಸುವುದು. ಏಕೆಂದರೆ ಪರಿಶಿಷ್ಟ ಜಾತಿಯ ಜನರ ಪರಿಸ್ಥಿತಿ ಅಲ್ಲಿಗಿಂತ ಇಲ್ಲಿ ಭಿನ್ನವಾಗಿಲ್ಲ. ಭಾರತದ ಎಲ್ಲಾ ಭಾಗಗಳಲ್ಲಿಯೂ ಅವರು ಹಿಂದೂಗಳಿಂದ ಶೋಷಣೆಗೆ ಒಳಗಾಗಿದ್ದಾರೆ. ಪಾಕಿಸ್ತಾನದಲ್ಲಿ ಅವರನ್ನು ಧರ್ಮಾಂತರಕ್ಕೆ ಬಲವಂತ ಮಾಡಲಾಗುತ್ತಿದೆ. ಇಲ್ಲಿ ಅವರನ್ನು ರಾಜಕೀಯ ಧರ್ಮಾಂತರಕ್ಕೆ ಒತ್ತಾಯ ಮಾಡಲಾಗುತ್ತಿದೆ. ಅವರನ್ನು ಕಾಂಗ್ರೆಸ್ ಪಕ್ಷದ ಸದಸ್ಯರಾಗುವಂತೆ ಬಲವಂತಪಡಿಸಲಾಗುತ್ತಿದೆ. ಒಂದು ವೇಳೆ ಅವರು ನಿರಾಕರಿಸಿದರೆ, ಅವರನ್ನು ಬಹಿಷ್ಕರಿಸಿ, ಅವರು ಜೀವನ ಸಾಗಿಸುವುದೇ ದುಸ್ತರವಾಗುವಂತೆ ಮಾಡಲಾಗುತ್ತಿದೆ. ಉತ್ತರ ಪ್ರದೇಶದ ಕೆಲ ಪ್ರಕರಣಗಳಲ್ಲಿ ಕೆಲ ಅಸ್ಪೃಶ್ಯರನ್ನು ಜೀವಂತವಾಗಿ ಸುಟ್ಟಿದ್ದಾರೆ. ಪೂರ್ವ ಪಂಜಾಬಿನಲ್ಲಿ ಪಶ್ಚಿಮ ಪಂಜಾಬಿನಿಂದ ಬಂದ ಪರಿಶಿಷ್ಟ ಜಾತಿಗೆ ಸೇರಿದ ಸಿಖ್ಖರ ಪರಿಸ್ಥಿತಿ ಶೋಚನೀಯವಾಗಿದೆ. ಹಿಂದೂಗಳ ಸರಕಾರವು ಅವರಿಗೆ ಯಾವುದೇ ರೀತಿಯ ಸಹಾಯವನ್ನೂ ನೀಡಿಲ್ಲ.

ಆದರೆ ಭಾರತದಲ್ಲಿ ಪರಿಶಿಷ್ಟ ಜಾತಿಯ ಜನರ ಪರಿಸ್ಥಿತಿ ಈ ರೀತಿ ಇದ್ದರೂ ಕೂಡ ನಾನು ಪಾಕಿಸ್ತಾನದಲ್ಲಿ ಇನ್ನೂ ಇರುವ ಪರಿಶಿಷ್ಟ ಜಾತಿಯ ಜನರಿಗೆ ಇಲ್ಲಿಗೆ ಬರುವಂತೆ ಮುಕ್ತ ಆಹ್ವಾನ ನೀಡುತ್ತೇನೆ. ಹೊಸ ಸಂವಿಧಾನದಲ್ಲಿ ಕಾಂಗ್ರೆಸ್ ಪಕ್ಷವು ಪರಿಶಿಷ್ಟರ ರಕ್ಷಣೆಯ ವಿಷಯವನ್ನು ದುರ್ಬಲಗೊಳಿಸಿ ಅವರನ್ನು ನಿಷ್ಪ್ರಯೋಜಕರೆಂಬಂತೆ ಮಾಡಿದೆ. ಆದರೂ ನಮ್ಮ ಸಂಖ್ಯೆ ಬಹಳ ದೊಡ್ಡದಿದೆ. ಆದ್ದರಿಂದ ನಾವು ವ್ಯವಸ್ಥಿತವಾದ ಹೋರಾಟ ನಡೆಸಿದರೆ, ಇಂದಿನ ಸರ್ಕಾರದ ಮೇಲೆ ಖಂಡಿತವಾಗಿ ನಾವು ಪ್ರಭಾವವನ್ನು ಬೀರಬಹುದು.

## 'ಮುಸಲ್ಮಾನರು ನಮ್ಮ ಮಿತ್ರರಲ್ಲ'

ಪ್ರಭಾವವನ್ನು ಹೈದರಾಬಾದಿನಲ್ಲಿ ಇಲ್ಲವೇ ಪಾಕಿಸ್ತಾನದಲ್ಲಿ ಇರುವ ಪರಿಶಿಷ್ಟ ಜಾತಿಯ ಜನರಿಗೆ ಒಂದು ಕಿವಿಮಾತನ್ನು ಹೇಳಬಯಸುತ್ತೇನೆ. ಅದೇನೆಂದರೆ ಒಂದು ವೇಳೆ ನೀವು ಮುಸಲ್ಮಾನರ ಮೇಲೆ ನಂಬಿಕೆ ಇರಿಸಿದರೆ ಅದು ಮಾರಣಾಂತಿಕವಾಗುತ್ತದೆ. ಹಿಂದೂಗಳನ್ನು ಮುಸಲ್ಮಾನರು ದ್ವೇಷಿಸುತ್ತಾರೆ ಎಂದಾಕ್ಷಣ ಅವರನ್ನು ಪರಿಶಿಷ್ಟ ಜಾತಿಯ ಮಿತ್ರರು ಎಂದು ಪರಿಗಣಿಸುವ ತಪ್ಪನ್ನು ಪರಿಶಿಷ್ಟರು ಮಾಡುತ್ತಿದ್ದಾರೆ. ಮುಸಲ್ಮಾನರಿಗೆ ಪರಿಶಿಷ್ಟ ಜಾತಿಯ ಜನರ ಬೆಂಬಲ ಬೇಕಿತ್ತು. ಆದರೆ ಅವರು ಪರಿಶಿಷ್ಟ ಜಾತಿಯ

ಜನರನ್ನು ಬೆಂಬಲಿಸಲು ಸಿದ್ಧರಿರಲಿಲ್ಲ. ಶ್ರೀ ಜಿನ್ನಾ ಅವರು ಯಾವಾಗಲೂ ಕಣ್ಣಾಮುಚ್ಚಾಲೆ ಆಡುತ್ತಲೇ ಬಂದಿದ್ದಾರೆ. ಆತನಿಗೆ ಪರಿಸ್ಥಿತಿ ಅನುಕೂಲಕರವಾಗಿದ್ದಾಗ ಪರಿಶಿಷ್ಟ ವರ್ಗದವರು ಒಂದು ಪ್ರತ್ಯೇಕ ಧರ್ಮ ಎಂದರು. ಆದರೆ ಅವರಿಗೆ ಅಗತ್ಯ ಇಲ್ಲದಿರುವಾಗ ಪರಿಶಿಷ್ಟ ಜಾತಿಯವರು ಕೂಡ ಹಿಂದೂಗಳೇ ಎಂದರು. ಮುಸಲ್ಮಾನರದ್ದು ಹಾಗು ಮುಸಲ್ಮಾನರ ಒಕ್ಕೂಟದ ಗುರಿ ಎಂದರೆ ಆದಷ್ಟು ಬೇಗನೇ ಮುಸಲ್ಮಾನರು ಆಡಳಿತ ಪಡೆಯಬೇಕು ಎಂಬುದು. ಆದ್ದರಿಂದ ಅವರು ಪರಿಶಿಷ್ಟ ಜಾತಿಯ ಜನರ ಭಾವನೆಗಳಿಗೆ ಯಾವುದೇ ಬೆಲೆ ನೀಡಲಾರರು. ನಾನು ನನ್ನ ಅನುಭವದಿಂದ ಮಾತನಾಡುತ್ತಿದ್ದೇನೆ.

ಇನ್ನು ಮತಾಂತರದ ವಿಷಯಕ್ಕೆ ಬಂದರೆ, ಕ್ರೌರ್ಯದಿಂದ ಮಾಡಬಹುದಾದ ಮತಾಂತರವು ಕಟ್ಟಕಡೆಯ ಕಾರ್ಯ ಎಂದು ತಿಳಿಯಬೇಕು. ಇನ್ನು ಬಲವಂತವಾಗಿ ಹಾಗು ಕ್ರೌರ್ಯದಿಂದ ಮತಾಂತರ ಆಗಿರುವವರು ಕೂಡ ತಮ್ಮ ಜೀವನ ಪರ್ಯಂತ ಮುಸಲ್ಮಾನರಾಗಿಯೇ ಇರಬೇಕೆಂದು ತಿಳಿಯಬೇಕಿಲ್ಲ. ನಾನು ಒಂದು ಭರವಸೆ ನೀಡುತ್ತೇನೆ. ಒಂದು ವೇಳೆ ನೀವು ಹಿಂದಿರುಗಿ ಬರಲು ಇಚ್ಛಿಸಿದರೆ, ನಿಮಗೆ ನಮ್ಮ ಧರ್ಮದೊಳಗೆ ಸ್ವಾಗತವಿದೆ. ನೀವು ಮತಾಂತರ ಆಗುವ ಮೊದಲು ಸಿಗುತ್ತಿದ್ದ ಗೌರವವೇ ನಿಮಗೆ ಸಿಗುತ್ತದೆ.

ಹೈದರಾಬಾದ್‌ನಲ್ಲಿ ಇರುವ ಪರಿಶಿಷ್ಟ ಜಾತಿಯ ಜನರು ಯಾವುದೇ ಕಾರಣಕ್ಕೂ ನಿಜಾಮನನ್ನಾಗಲೀ ಇಲ್ಲವೇ ಇತೀಹಾದ್–ಉಲ್–ಮುಸ್ಲಿಮೀನನ್ನಾಗಲೀ ಬೆಂಬಲಿಸಬಾರದು. ಹಿಂದೂಗಳು ನಮ್ಮ ಮೇಲೆ ಎಷ್ಟೇ ಶೋಷಣೆ ಮಾಡಿದರು ಕೂಡ ನಾವು ನಮ್ಮ ಕರ್ತವ್ಯದಿಂದ ಹಿಂದೆ ಸರಿಯಬಾರದು. ಭಾರತದ ಸಮಗ್ರತೆಯನ್ನು ಒಪ್ಪದ ನಿಜಾಮನಿಗೆ ಯಾವುದೇ ರೀತಿಯ ಸಹಾನುಭೂತಿಯನ್ನು ವ್ಯಕ್ತಪಡಿಸುವ ಅಗತ್ಯವಿಲ್ಲ. ಹೀಗೆ ಮಾಡುವ ಮೂಲಕ ಆತ ತನ್ನ ಹಿತಕ್ಕೆ ಧಕ್ಕೆ ತಂದುಕೊಳ್ಳುತ್ತಿದ್ದಾರೆ. ಆತ ತನಗೆ ವಂಶಪಾರಂಪರ್ಯವಾಗಿ ಬಂದಿರುವ ಹಕ್ಕುಗಳ ರಕ್ಷಣೆಯನ್ನು ಕುರಿತು ಚಿಂತನೆಯನ್ನೂ ಮಾಡುತ್ತಿಲ್ಲ. ಭಾರತದ ಶತ್ರುವಿನೊಂದಿಗೆ ಕೈಜೋಡಿಸಿ ತಮ್ಮ ಸಮುದಾಯಕ್ಕೆ ಪರಿಶಿಷ್ಟ ಜಾತಿಯ ಜನರು ಅಪಕೀರ್ತಿಯನ್ನು ತರಬಾರದು ಎಂಬುದರ ಬಗ್ಗೆ ನಾನು ಕಾತರನಾಗಿರುವೆ.[೧]

* * * * *

1. The National Standard ೨೮ ನೆಯ ನವೆಂಬರ್ ೧೯೪೭

## ೪೨
## ಪರಿಶಿಷ್ಟ ಜಾತಿಯ ನಿರಾಶ್ರಿತರನ್ನು ಕಡೆಗಣಿಸಲಾಗಿದೆ

ಪಂಜಾಬ್ ಹಾಗು ಬಂಗಾಳದ ವಿಭಜನೆಯ ನಂತರ ಹಿಂದೂಗಳು ಹಾಗು ಮುಸಲ್ಮಾನರ ನಡುವೆ ಕೋಮು ಕಲಹವು ಹಿಂದೆಂದೂ ಕಾಣದಷ್ಟು ತೀವ್ರವಾಗಿ ಜರುಗಿತು. ಇದು ಎರಡೂ ಪಂಗಡಗಳ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಿತ್ತು. ಆದರೆ ಈ ಕೆಟ್ಟ ಪರಿಣಾಮ ಎಲ್ಲರಿಗಂತೂ ಹೆಚ್ಚು ಅನುಭವಿಸುವಂತಾಗಿದ್ದು ಅಸ್ಪೃಶ್ಯರು. ಹಿಂದೂಗಳು ಮುಸಲ್ಮಾನರು, ಸಿಖ್ಖರು, ಜಾಠರು ಇವರಿಂದ ಅಸ್ಪೃಶ್ಯರು ಅನುಭವಿಸಿದ ಹಿಂಸೆಯನ್ನು ವಿವರಿಸುತ್ತಾ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ನೂರಾರು ಪತ್ರಗಳು ಬಂದಿದ್ದವು. ಆದ್ದರಿಂದ ಅವರು ಪ್ರಧಾನ ಮಂತ್ರಿ ಎಂದರೆ ಜವಹರಲಾಲ್ ನೆಹರು ಅವರಿಗೆ ಪತ್ರವೊಂದನ್ನು ೧೮ನೆಯ ಡಿಸೆಂಬರ್ ೧೯೪೭ರಂದು ಬರೆದರು. ಇದರಲ್ಲಿ ಪರಿಶಿಷ್ಟ ಜಾತಿಯ ನಿರಾಶ್ರಿತರು ಅನುಭವಿಸುತ್ತಿದ್ದ ಪಾಡನ್ನು ವಿವರಿಸಿ, ಅವರಿಗೆ ಸಹಾಯ ಮಾಡುವಂತೆ ಕೋರಿದ್ದರು. ಆ ಪತ್ರ ಈ ಕೆಳಗೆ ನೀಡಲಾಗಿದೆ – ಸಂಪಾದಕರು

ನವದೆಹಲಿ
೧೮ ನೆಯ ಡಿಸೆಂಬರ್ ೧೯೪೭

ಪ್ರೀತಿಯ ಶ್ರೀ ಜವಹರಲಾಲ್ ಅವರೇ,

ನನಗೆ ಪಾಕಿಸ್ತಾನದಿಂದ ಆಗಮಿಸಿರುವ ಪರಿಶಿಷ್ಟ ಜಾತಿಯ ನಿರಾಶ್ರಿತರಿಂದ, ಮತ್ತು ಪಾಕಿಸ್ತಾನ ಸರ್ಕಾರವು ಆ ದೇಶದಿಂದ ಹೊರ ಹೋಗದಂತೆ ಬಲವಂತ ಪಡಿಸುತ್ತಿರುವ ಪರಿಶಿಷ್ಟ ಜಾತಿಯವರಿಂದಲೂ ಹಲವಾರು ಪತ್ರಗಳು ಬಂದಿವೆ. ಆದ್ದರಿಂದ ಈಗ ಅವರ ಕಷ್ಟಕೋಟಲೆಗಳತ್ತ ತಮ್ಮ ಗಮನ ಸೆಳೆಯುವ ಸಂದರ್ಭವು ಬಂದಿದೆ. ನಿಮ್ಮ ಗಮನಕ್ಕೆ ಅವರು ಅನುಭವಿಸುತ್ತಿರುವ ಕಷ್ಟಗಳನ್ನು ತರಬಯಸುತ್ತೇನೆ. ಅಂತೆಯೇ ಅವರ ಈ ಸಮಸ್ಯೆಗೆ ಏನು ಕಾರಣ ಹಾಗು ಇದಕ್ಕೆ ಯಾವ ಪರಿಹಾರ ಎಂದು ಕೂಡ ನಾನು ತಿಳಿಸಲು ಬಯಸುತ್ತೇನೆ.[೧]

ಪಾಕಿಸ್ತಾನ ಸರ್ಕಾರವು ತಮಗೆ ಇರುವ ಎಲ್ಲಾ ಮಾರ್ಗಗಳನ್ನು ಪ್ರಯೋಗಿಸಿ ಪರಿಶಿಷ್ಟ ಜಾತಿಯ ಜನರು ಅಲ್ಲಿಂದ ಹೊರಹೋಗದಂತೆ ಮಾಡಿದೆ. ಇದಕ್ಕೆ ನನಗೆ ಕಂಡು ಬರುತ್ತಿರುವುದು ಒಂದೇ ಒಂದು ಕಾರಣ. ಅದೇನೆಂದರೆ ಅವರು ಏನ್ನನ್ನಾದರೂ ಮಾಡಿ ಪರಿಶಿಷ್ಟ ಜಾತಿಯ ಜನರನ್ನು ಅಲ್ಲಿಯೇ ಉಳಿಸಿಕೊಳ್ಳಬಯಸುತ್ತಾರೆ. ಏಕೆಂದರೆ ಎಲ್ಲಾ ರೀತಿಯ ಕೆಳ ಮಟ್ಟದ ಕೆಲಸಗಳನ್ನು ಮಾಡಲು ಅವರಿಗೆ ಈ ವರ್ಗದ ಜನರ ಅಗತ್ಯವಿದೆ. ಅಲ್ಲಿಯ ಕೃಷಿ ಭೂಮಿಯ ಒಡೆಯರಿಗೆ ಕೃಷಿ ಭೂಮಿ ಇರದ ಈ ಕಾರ್ಮಿಕರ ಅಗತ್ಯವಿದೆ. ಅದರಲ್ಲಿಯೂ ಪಾಕಿಸ್ತಾನ ಸರ್ಕಾರವು ಕಸ ಗುಡಿಸುವ ಕಾರ್ಮಿಕರ ವಿಷಯದಲ್ಲಿ ಅತ್ಯಂತ ಕಟ್ಟುನಿಟ್ಟಾಗಿದೆ. ಏಕೆಂದರೆ, ಇವರ ಸೇವೆಯನ್ನು ಅಗತ್ಯ ಸೇವೆಗಳ ಅಡಿಯಲ್ಲಿ ಗುರುತಿಸಿ ಒಂದು ತಿಂಗಳ ಮುನ್ಸೂಚನೆ ಇಲ್ಲದೇ ಅವರನ್ನು ಬಿಡುಗಡೆ ಮಾಡುವುದು ಸಾಧ್ಯವಿಲ್ಲ ಎಂದು ಹೇಳುತ್ತಿದೆ.

೨. MEO ಎಂಬ ಒಂದು ಸಂಸ್ಥೆಯ ಈ ಪರಿಶಿಷ್ಟ ಜಾತಿಯ ಜನರಿಗೆ ಸ್ವಲ್ಪ ಮಟ್ಟಿನ ಸಹಾಯ ಮಾಡಿದೆ. ಕೆಲ ನಿರಾಶ್ರಿತರಿಗೆ ದೇಶ ಬಿಟ್ಟು ಹೋಗಲು ಅದು ಅವಕಾಶ ಕಲ್ಪಿಸಿದೆ. ಆದರೆ ಪಾಕಿಸ್ತಾನ ಸರ್ಕಾರವು ಈ ಸಂಸ್ಥೆಗೆ ನೇರವಾಗಿ ನಿರಾಶ್ರಿತರೊಂದಿಗೆ ಸಂಪರ್ಕ ಸಾಧಿಸಲು ಬಿಡುತ್ತಿಲ್ಲ. ಆದ್ದರಿಂದ

ನಿರಾಶ್ರಿತರನ್ನು ಬಿಡುಗಡೆ ಮಾಡುವ ಈ ಕಾರ್ಯವು ಅತಿಯಾಗಿ ಕುಂಟುತ್ತಾ ಸಾಗಿದೆ. ಕೆಲ ಸ್ಥಳಗಳಲ್ಲಿ ಅದು ನಿಂತೇ ಹೋಗಿದೆ. ಈ ಸಂಸ್ಥೆಯು ಸದ್ಯದಲ್ಲಿಯೇ ಮುಚ್ಚಿಹೋಗಲಿದೆ ಎಂದು ನನಗೆ ತಿಳಿದು ಬಂದಿದೆ. ಈ ರೀತಿಯಾದರೆ ಪಾಕಿಸ್ತಾನದಿಂದ ನಿರಾಶ್ರಿತರ ಬಿಡುಗಡೆ ಸಾಧ್ಯವೆ ಇಲ್ಲದ ಹಾಗೆ ಆಗುತ್ತದೆ.

೩) ಈಗ ಅಗತ್ಯವಾಗಿ ಕೈಗೊಳ್ಳಬೇಕಾದ ಕಾರ್ಯವೆಂದರೆ:

೧) ಹೊರಹೋಗಬಯಸುತ್ತಿರುವ ಪರಿಶಿಷ್ಟ ಜಾತಿಯ ಜನರನ್ನು ತಡೆಯದಂತೆ ಪಾಕಿಸ್ತಾನ ಸರ್ಕಾರಕ್ಕೆ ತಿಳಿಸುವುದು.

೨) ನಿರಾಶ್ರಿತರು ಹೊರಹೋಗಬಯಸಿದರೆ, ಅವರಿಗೆ ನೇರವಾಗಿ MEO ಸಂಸ್ಥೆಯೊಂದಿಗೆ ಸಂಪರ್ಕ ಕಲ್ಪಿಸಲು ಅನುಮತಿ ನೀಡುವಂತೆ ತಿಳಿಸುವುದು.

೩) ಪರಿಶಿಷ್ಟ ಜಾತಿಯ ಎಲ್ಲಾ ಜನರು ಹೊರಹೋಗುವವರೆಗೂ MEO ಸಂಸ್ಥೆಯು ಮುಚ್ಚದಂತೆ ನೋಡಿಕೊಳ್ಳುವುದು.

೪) ಇದುವರೆಗೆ ಪರಿಹಾರ ಹಾಗು ಪುನರ್ವಸತಿ ಇಲಾಖೆಯು ಪಶ್ಚಿಮ ಪಂಜಾಬಿನಲ್ಲಿ ಒಬ್ಬನೇ ಒಬ್ಬ ಪರಿಶಿಷ್ಟ ವರ್ಗದ ಅಧಿಕಾರಿಯನ್ನು ನೇಮಿಸಿದೆ. ಆದರೆ ಪಾಕಿಸ್ತಾನದ N.W.F.P ಸಿಂಧ್, ಭವಲ್‌ಪುರ ಮುಂತಾದ ಪ್ರಾಂತ್ಯಗಳಲ್ಲಿ ಒಬ್ಬನೇ ಒಬ್ಬ ಪರಿಶಿಷ್ಟ ಜಾತಿಯ ಅಧಿಕಾರಿಯೂ ಇಲ್ಲ. ಆದ್ದರಿಂದ ಈ ಕೂಡಲೇ ಈ ಇಲಾಖೆಯು ಪರಿಶಿಷ್ಟ ಜಾತಿಯ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬೇಕು. ಮಾತ್ರವಲ್ಲ ಅವರುಗಳು ಪಾಕಿಸ್ತಾನದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಪ್ರವಾಸ ಕೈಗೊಂಡು, ಪರಿಶಿಷ್ಟ ಜಾತಿಯವರನ್ನು ಬಲವಂತವಾಗಿ ಉಳಿಸಿಕೊಳ್ಳಲಾಗಿರುವ ಎಡೆಗಳಿಂದ ಅಂತಹವರನ್ನು ಹೊರಕ್ಕೆ ಬರುವಂತೆ ಮಾಡುವುದು.

## II

ಇನ್ನು ಪಾಕಿಸ್ತಾನದಿಂದ ಪೂರ್ವ ಪಂಜಾಬಿಗೆ ಆಗಮಿಸಿರುವ ಪರಿಶಿಷ್ಟ ಜಾತಿಯ ಜನರ ವಿಷಯಕ್ಕೆ ಬಂದರೆ, ಅವರು ಕೂಡ ತಮ್ಮ ದೂರುಗಳನ್ನು ಕಳುಹಿಸಿಕೊಟ್ಟಿದ್ದಾರೆ. ಇದು ಪಾಕಿಸ್ತಾನದಲ್ಲಿ ಸಿಲುಕಿರುವವರ ದೂರುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದೆ. ಅದರ ಸಾರಾಂಶ ಕೆಳಗೆ ನೀಡಿದ್ದೇನೆ.

### (೧)

೧) ಪೂರ್ವ ಪಂಜಾಬಿಗೆ ಆಗಮಿಸಿರುವ ಪರಿಶಿಷ್ಟ ಜಾತಿಯ ನಿರಾಶ್ರಿತರು ನಿರಾಶ್ರಿತರ ಶಿಬಿರಗಳಲ್ಲಿ ವಾಸಿಸುತ್ತಿಲ್ಲ. ಈ ಶಿಬಿರಗಳನ್ನು ಭಾರತ ಸರ್ಕಾರವೇ ಸ್ಥಾಪಿಸಿದೆ. ಇದಕ್ಕೆ ಕಾರಣವೆಂದರೆ, ಈ ಸಭೆಯ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುವ ಅಧಿಕಾರಿಗಳು ಹಿಂದೂ ನಿರಾಶ್ರಿತರು ಹಾಗು ಪರಿಶಿಷ್ಟ ಜಾತಿಯ ನಿರಾಶ್ರಿತರ ನಡುವೆ ಭೇದಭಾವವನ್ನು ಮಾಡುತ್ತಿದ್ದಾರೆ.

೨) ನನಗೆ ತಿಳಿದಿರುವಂತೆ ಪರಿಹಾರ ಹಾಗು ಪುನರ್‌ನಿರ್ಮಾಣ ಇಲಾಖೆಯು, ನಿರಾಶ್ರಿತರ ಸಭೆಯಲ್ಲಿ ಇರುವವರು ಮಾತ್ರ ಆಹಾರ ಸಾಮಾಗ್ರಿಗಳು ಹಾಗು ಬಟ್ಟೆಯನ್ನು ಪಡೆಯಬಹುದು ಎಂಬ ನಿಯಮವನ್ನು ಮಾಡಿದ್ದಾರೆ. ಪರಿಶಿಷ್ಟ ಜಾತಿಯ ಜನರು ನಿರಾಶ್ರಿತರು ಸಭೆಗಳಲ್ಲಿ ವಾಸಿಸುತ್ತಿಲ್ಲ, ಇದರಿಂದಾಗಿ ಅವರಿಗೆ ಆಹಾರ ಸಾಮಗ್ರಿಗಳು ಹಾಗು ಬಟ್ಟೆ ಬರೆ ದೊರೆಯದೇ ಬಹಳ ಕಷ್ಟವಾಗಿದೆ.

೩) ಈ ಪರಿಸ್ಥಿತಿಯಲ್ಲಿ ಪಕ್ಷಪಾತವನ್ನು ತಡೆಯುವುದು ಸಾಧ್ಯವಿಲ್ಲ. ಆದ್ದರಿಂದ, ಕಾನೂನನ್ನೇ

ಮಾರ್ಪಡಿಸಿ, ನಿರಾಶ್ರಿತ ಶಿಬಿರದ ಹೊರಗೆ ಇರುವ ಪರಿಶಿಷ್ಟ ಜಾತಿಯ ಜನರಿಗೂ ಆಹಾರ ಧಾನ್ಯ ಹಾಗು ಬಟ್ಟೆ ಬರೆ ದೊರೆಯುವಂತೆ ಮಾಡಬೇಕು.

(೨)

ಪೂರ್ವ ಪಂಜಾಬ್ ಸರ್ಕಾರವು ಭೂಮಿಯನ್ನು ಹಂಚುವಾಗ ಪರಿಶಿಷ್ಟ ಜಾತಿಯ ಜನರ ಹಿತಾಸಕ್ತಿಯನ್ನು ಸಂಪೂರ್ಣ ಕಡೆಗಣಿಸಿದೆ. ಈ ವಿಷಯದಲ್ಲಿ ಪಂಜಾಬ್ ಸರ್ಕಾರವು ಸಂಪೂರ್ಣವಾಗಿ ಹಿಂದೂಗಳೊಂದಿಗೆ ಶಾಮೀಲಾಗಿದೆ. ಪರಿಶಿಷ್ಟ ಜಾತಿಯ ಜನರ ಪುನರ್‌ವಸತಿಯ ಬಗ್ಗೆ ಯಾರೂ ಆಸಕ್ತಿಯನ್ನು ವಹಿಸುತ್ತಿಲ್ಲ. ಪರಿಶಿಷ್ಟ ಜಾತಿಗಳವರ ಹಿತಾಸಕ್ತಿಗಳು ನಿರ್ಲಕ್ಷಿಸಲ್ಪಟ್ಟಿವೆ ಎಂದು ಪೂರ್ವ ಪಂಜಾಬ್ ಸರಕಾರದ ಗಮನಕ್ಕೆ ತರುವಂತಹ ಯಾವ ಸಂಸ್ಥೆಯನ್ನೂ ಭಾರತ ಸರಕಾರವು ನೇಮಕಮಾಡಿಲ್ಲ.

(೨) ಪರಿಶಿಷ್ಟ ಜಾತಿಗಳ ನಿರಾಶ್ರಿತರು ತಮಗೆ ನ್ಯಾಯಯತವಾಗಿ ದೊರೆಯಬೇಕಿರುವ ಭೂಮಿಯನ್ನು ಪಡೆಯಲು ಭಾರತ ಸರಕಾರವು ಸಾಕಷ್ಟು ಸಂಖ್ಯೆಯ ಅಧಿಕಾರಿಗಳನ್ನು ನೇಮಿಸಿ ಪೂರ್ವ ಪಂಜಾಬಿಗೆ ಕಳುಹಿಸಿಕೊಡಬೇಕು.

೩) ಶ್ರೀ ನಿಯೋಗಿ ಅವರ ಬಳಿ ನಾನು ಒಂದು ಪಟ್ಟಿಯನ್ನು ಕೊಟ್ಟಿದ್ದೇನೆ ನನ್ನ ಪ್ರಕಾರ ಈ ಪಟ್ಟಿಯಲ್ಲಿ ಇರುವ ವ್ಯಕ್ತಿಗಳು ಈ ಕಾರ್ಯಕೈಗೊಳ್ಳಲು ಅತ್ಯಂತ ಸಮರ್ಥರು.

೪) ಪೂರ್ವ ಪಂಜಾಬಿನ ಬಲಿಷ್ಠ ಕೋಮಿನವರಾದ ಸಿಖ್ಖರು ಹಾಗು ಜಾಠರು, ಅಲ್ಲಿರುವ ಪರಿಶಿಷ್ಟ ಜಾತಿಯವರಿಗೆ ತಮ್ಮ ಮನೆಗಳನ್ನು ಖಾಲಿ ಮಾಡಿಕೊಂಡು ಹೋಗುವಂತೆ ಸೂಚಿಸುತ್ತಿದ್ದಾರೆ. ಏಕೆಂದರೆ ಇವರು ತಮ್ಮ ಮನೆ ಮತ್ತು ಭೂಮಿಯನ್ನು ಕೂಡ ಬೇರೆಯವರಿಗೆ ನೀಡಬಹುದು. ಸಿಖ್ಖರು ಹಾಗು ಜಾಠರು ತಮ್ಮ ಮನೆ ಮತ್ತು ಮೇಲೆ ಮಾಡುತ್ತಿರುವ ಶೋಷಣೆಯನ್ನು ನೋಡಿದರೂ ಏನೂ ಮಾಡಲಾಗದ ಸ್ಥಿತಿಯಲ್ಲಿ ಇದ್ದಾರೆ ಪರಿಶಿಷ್ಟ ಜಾತಿಯ ಜನರು. ಏಕೆಂದರೆ ಪೂರ್ವ ಪಂಜಾಬಿನ ನ್ಯಾಯಾಲಯದಲ್ಲಿ ಕಾರ್ಯ ನಿರ್ವಹಿಸುವವರೆಲ್ಲರೂ ಸಿಖ್ಖರು ಹಾಗು ಜಾಠರೇ ಆದ್ದರಿಂದ ಅವರು ಸ್ವಾಭಾವಿಕವಾಗಿಯೇ ಪರಿಶಿಷ್ಟ ಜಾತಿಯ ಜನರ ದೂರನ್ನು ಕಡೆಗಣಿಸಿ, ತಮ್ಮ ಸಂಬಂಧಿಕರನ್ನು ಕಾಪಾಡುವುದರಲ್ಲಿಯೇ ಮಗ್ನರಾಗಿದ್ದಾರೆ.

b) ಆದ್ದರಿಂದ ಈ ಕೂಡಲೇ ಅಗತ್ಯವಾಗಿ ಪೂರ್ವ ಪಂಜಾಬಿನ ಪೋಲೀಸರು ತತ್‌ಕ್ಷಣದಿಂದಲೇ ಕಡೆಯ ಪಕ್ಷ ೩೦೦ ಪರಿಶಿಷ್ಟ ಜಾತಿಯ ಪೋಲೀಸರನ್ನು ಸೇವೆಗೆ ನಿಯೋಜಿಸಿಕೊಳ್ಳಬೇಕು. ಇತ್ತೀಚೆಗೆ ಯಾವುದೋ ಒಂದು ಪತ್ರಿಕೆಯಲ್ಲಿ ಪೂರ್ವ ಪಂಜಾಬಿನ ಸರ್ಕಾರವು ೩೦೦ ಪೋಲೀಸರನ್ನು ನಿಯೋಜಿಸಿದೆ ಎಂದು ಓದಿದ ನೆನಪಿದೆ. ಆದರೆ ಇದನ್ನು ವಿಚಾರಿಸಿದಾಗ ನನಗೆ ತಿಳಿದು ಬಂದ ವಿಷಯವೆಂದರೆ ಈ ನಿಯೋಜನೆಯು ಗಡಿನಾಡು ಪೋಲೀಸರಿಗೆ ಆಗಿರುವುದೇ ಹೊರತು ನಗರದ ಪೋಲೀಸರ ಪಡೆಗಲ್ಲ. ಆದರೆ ಪರಿಶಿಷ್ಟ ಜಾತಿಯ ಜನರ ರಕ್ಷಣೆಗೆ ಅಗತ್ಯವಿರುವುದು ನಗರ ಪೋಲೀಸರೇ ಹೊರತು ಗಡಿನಾಡು ಪೋಲೀಸರಲ್ಲ. ಆದರೆ ನನಗೆ ತಿಳಿದು ಬಂದಂತೆ, ಒಬ್ಬನೇ ಒಬ್ಬ ಪರಿಶಿಷ್ಟಜಾತಿಯ ಪೋಲೀಸನೂ ಕೂಡ ನಗರ ಪೋಲೀಸ್ ಪಡೆಯಲಿಲ್ಲ.

೫) (a) ಪೂರ್ವ ಪಂಜಾಬಿನ ಭೂಕಂದಾಯದ ಇಲಾಖೆಯು, ಹಳ್ಳಿಯವರನ್ನು ಎರಡು ವರ್ಗಗಳಾಗಿ ವಿಭಜಿಸಿದೆ. ಅವೆಂದರೇ ಜಮೀನುದಾರರು ಹಾಗು ಕಮೀನರು. ಜಮೀನ್ದಾರರ ವರ್ಗದಲ್ಲಿ ಇರುವವರೆಂದರೆ ಹಳ್ಳಿಯ ಒಳಗೆ ಭೂಮಿಯನ್ನು ಹೊಂದಿರುವವರು ಹಾಗು ಅವರ ಕುಟುಂಬದವರು ಇನ್ನು ಕಮೀನರ ವರ್ಗಕ್ಕೆ ಸೇರುವ ಜನರಿಗೆ ಊರ ಒಳಗೆ ಭೂಮಿಯನ್ನು ಹೊಂದುವ ಅಥವಾ ಖರೀದಿಸುವ ಅಧಿಕಾರ

ಇರುವುದಿಲ್ಲ. ಇವರ ಮನೆಗಳು ಇರುವ ಭೂಮಿಯು ಕೂಡ ಜಮೀನ್ದಾರರಿಗೇ ಸೇರಿರುತ್ತದೆ. ಏಕೆಂದರೆ ಒಂದು ವೇಳೆ ಕಮೀನರು ಜಮೀನ್ದಾರರ ಆದೇಶಗಳನ್ನು ಪಾಲಿಸದೇಹೋದರೆ, ಅವರನ್ನು ಹೊರ ಹೋಗುವಂತೆ ಜಮೀನ್ದಾರರು ಬಲವಂತಪಡಿಸಬಹುದು. ಈ ನಿಯಮದಿಂದ ಪ್ರತಿ ಹಳ್ಳಿಯಲ್ಲಿಯೂ ಕಮೀನರು ಜಮೀನ್ದಾರರ ಕರುಣೆಯ ಭಿಕ್ಷದಲ್ಲಿ ಇದ್ದಾರೆ. ಈ ಪೂರ್ವ ಪಂಜಾಬ್ ರಾಜ್ಯದ ಹಳ್ಳಿಯಲ್ಲಿ ಎಲ್ಲಾ ಪರಿಶಿಷ್ಟ ಜಾತಿಯ ಜನರೂ ಜಮೀನ್ದಾರರ ಅಡಿಯಾಳುಗಳಾಗಿದ್ದಾರೆ.

(a) ಪೂರ್ವ ಪಂಜಾಬಿನಲ್ಲಿ ಭೂಮಿ ಹಸ್ತಾಂತರ ಕಾಯ್ದೆ ನಿಯಮ ಜಾರಿಯಲ್ಲಿದೆ. ಇದನ್ನು ಕೃಷಿಕರನ್ನು ಹಣಕಾಸು ಲೇವಾದೇವಿಗಾರರಿಂದ ಪಾರುಮಾಡುವ ಸಲುವಾಗಿ ಜಾರಿಗೆ ತರಲಾಗಿದೆ. ಆದರೆ ಇದೊಂದು ಅತ್ಯಂತ ಪಕ್ಷಪಾತಯುತ ಕಾಯ್ದೆ ಎನ್ನುವುದರಲ್ಲಿ ಯಾವುದೇ ಸಂದೇಹವೇ ಉಳಿದಿಲ್ಲ. ಏಕೆಂದರೆ ಇದು ಔದ್ಯೋಗಿಕ ಕಾಯ್ದೆಯಾಗಿ ಉಳಿಯದೇ ಒಂದು ಕೋಮುವಾದಿ ಕಾಯ್ದೆಯಾಗಿದೆ. ಇದರ ಪ್ರಕಾರ ಒಬ್ಬ ಕೃಷಿಕ – ಆ ಕೃಷಿಕ ವರ್ಗಕ್ಕೆ ಸೇರ್ಪಡೆ ಆಗಬೇಕೆಂದರೆ, ಸರ್ಕಾರ ಈ ನಿಟ್ಟಿನಲ್ಲಿ ತಯಾರಿಸಿರುವ ಸಮುದಾಯಗಳ ಪಟ್ಟಿಯಲ್ಲಿರಬೇಕು. ಅದರಲ್ಲಿ ಹಳೆಯ ಪಂಜಾಬ್ ಸರ್ಕಾರವು ಪರಿಶಿಷ್ಟ ಜಾತಿಯ ಜನರು ಈ ವರ್ಗಕ್ಕೆ ಸೇರ್ಪಡೆ ಆಗದಂತೆ ಮಾಡಿದೆ. ಆದರೆ ಪರಿಶಿಷ್ಟ ಜಾತಿಯ ಪ್ರತಿಯೋರ್ವ ವ್ಯಕ್ತಿಯೂ ಕೃಷಿಕ ಇಲ್ಲವೇ ಕೃಷಿ ಭೂಮಿಯಲ್ಲಿ ಕೆಲಸ ಮಾಡುತ್ತಿರುವವನು. ಇದರ ಪರಿಣಾಮವೆಂದರೆ ಪಂಜಾಬಿನ ಪರಿಶಿಷ್ಟ ಜಾತಿಯ ಜನರು ಯಾವುದೆ ಭೂಮಿಯನ್ನು ಕೊಳ್ಳುವಂತಿಲ್ಲ. ಆದ್ದರಿಂದ ಭೂಮಿಯಿಲ್ಲದೇ ಕೇವಲ ಕಾರ್ಮಿಕರಂತೆ ಅವರು ಹಿಂದೂಗಳ, ಸಿಖ್ಖರ ಹಾಗು ಜಾಠರ ನೆರಳಿನಲ್ಲಿಯೇ ಇರಬೇಕು. ಇದು ಒಂದು ಅತ್ಯಂತ ಕ್ರೌರ್ಯವಾದ ಕಾನೂನು ಹಾಗು ಇದನ್ನು ಯಾವುದೇ ಕಾರಣಕ್ಕೂ ಕಾಯಿದೆ ಪುಸ್ತಕದಲ್ಲಿ ಉಳಿಯದಂತೆ ಮಾಡಬೇಕು.

(b) ಪೂರ್ವ ಪಂಜಾಬಿನ ಸರ್ಕಾರವು ಈ **'ಕೃಷಿಕ'** ಎಂಬ ಪದದ ವ್ಯಾಖ್ಯಾನವನ್ನು ಬದಲಿಸಬೇಕು ಅದನ್ನು ವೃತ್ತಿಪರಗೊಳಿಸಬೇಕು. ಒಬ್ಬ ವ್ಯಕ್ತಿ ಯಾವ ಧರ್ಮಕ್ಕೆ ಸೇರಿದ್ದರೂ, ಆತ ತನ್ನ ಜೀವನಕ್ಕಾಗಿ ಕೃಷಿಯನ್ನು ಅವಲಂಬಿಸಿದರೆ, ಆತನನ್ನು ಕೃಷಿಕ ಎನ್ನಬೆಕು. ಈತನಿಗೆ ಭೂಮಿಯನ್ನು ಖರೀದಿಸುವ ಅಧಿಕಾರವನ್ನು ನೀಡಬೇಕು.

ನನ್ನ ಗಮನಕ್ಕೆ ತರಲಾಗಿರುವಂತಹ ಪರಿಶಿಷ್ಟ ಜಾತಿಯ ಜನರ ಎಲ್ಲಾ ಸಮಸ್ಯೆಗಳ ಸಾರಾಂಶವನ್ನು ತಮ್ಮ ಮುಂದೆ ಇರಿಸಿದ್ದೇನೆ ಹಾಗು ಅದಕ್ಕೆ ಪರಿಹಾರವನ್ನು ಕೂಡ ಸೂಚಿಸಿದ್ದೇನೆ. ಈ ಪರಿಹಾರ ಮಾರ್ಗಗಳನ್ನು ಅನುಸರಿಸಿದರೆ, ಆ ಸಮಸ್ಯೆಗಳು ದೂರವಾಗಬಹುದು ಎಂಬ ಆಶಯ ನನಗಿದೆ. ಕೆಲ ಸಮಸ್ಯೆಗಳನ್ನು ಪರಿಹಾರ ಮಾಡುವುದು ಭಾರತ ಸರ್ಕಾರದ ಜವಾಬ್ದಾರಿಯಾಗಿದೆ. ಇತರ ಕೆಲ ಸಮಸ್ಯೆಗಳ ಪರಿಹಾರ ಪೂರ್ವ ಪಂಜಾಬ್ ಸರ್ಕಾರಕ್ಕೆ ಬಿಟ್ಟ ವಿಷಯ. ಕೇಂದ್ರ ಸರ್ಕಾರವು ಮನಸ್ಸು ಮಾಡಿದರೆ ಈ ಮಾರ್ಗವನ್ನು ಅನುಸರಿಸುವುದು ಕಷ್ಟವೇನೂ ಇಲ್ಲ. ಇನ್ನು ಪಂಜಾಬ್ ಸರ್ಕಾರದ ಕೆಳಗೆ ಬರುವ ಸಮಸ್ಯೆಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಏಕೆಂದರೆ ಈಗ ಪುನರ್‌ವಸತಿಯ ವೆಚ್ಚವನ್ನು ಭಾರತ ಸರ್ಕಾರ ಭರಿಸುತ್ತಿದೆ. ಆದ್ದರಿಂದ ಪಂಜಾಬ್ ಸರ್ಕಾರಕ್ಕೆ ಈ ಪರಿಹಾರ ಮಾರ್ಗಗಳನ್ನು ಅಳವಡಿಸಿಕೊಳ್ಳುವಂತೆ ಬಲವಂತಪಡಿಸುವ ಅಧಿಕಾರ ಹಾಗು ನೈತಿಕ ಹಕ್ಕು ಭಾರತಕ್ಕಿದೆ. ಆದ್ದರಿಂದಲೇ ಯಾವುದೇ ಹಿಂಜರಿಕೆ ಇಲ್ಲದೇ ಭಾರತ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳನ್ನು ನಾನು ವಿವರಿಸಿದ್ದೇನೆ. ಇದುವರೆಗೂ ಮುಸಲ್ಮಾನರ ಸಮಸ್ಯೆಗಳನ್ನು ಪರಿಹರಿಸಲು ಭಾರತ ಸರ್ಕಾರವು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದೆ. ಆದರೆ ಸರಕಾರವು ಪರಿಶಿಷ್ಟ ಜಾತಿಯ ಜನರ ಸಮಸ್ಯೆ ಸಮಸ್ಯೆಯೇ ಅಲ್ಲ, ಇಲ್ಲವೇ ಅದು ಗಮನ

ಕೊಡುವಷ್ಟು ದೊಡ್ಡದಲ್ಲ ಎಂದು ಭಾವಿಸುತ್ತಿರಬಹುದು. ಕೆಲವರಿಗೆ ಪರಿಶಿಷ್ಟ ಜಾತಿಯ ಜನರ ಸಮಸ್ಯೆಗಳ ಬಗ್ಗೆ ಮಾತನಾಡುವ ಇಚ್ಛೆಯೇ ಇಲ್ಲ. ಆದರೆ ಪರಿಶಿಷ್ಟ ಜಾತಿಯ ಹಿತಾಸಕ್ತಿಯನ್ನು ಬಯಸುವವರಿಗೆ ಈ ಸಮಸ್ಯೆಗಳ ಸ್ವರೂಪ ಎಷ್ಟು ಗಂಭೀರ ಎಂಬುದು ತಿಳಿದಿದೆ. ನಿಜ ಹೇಳಬೇಕೆಂದರೆ ಮುಸಲ್ಮಾನರ ಸಮಸ್ಯೆಗಳಿಗಿಂತ ಇವರ ಸಮಸ್ಯೆಯು ಗಂಭೀರವಾಗಿದೆ.

ಬಹಳಷ್ಟು ಬಾರಿ ನಾನು ಬೇರೆಯ ರೀತಿಯಲ್ಲಿ ಚಿಂತಿಸಿದ್ದೇನೆ. ಭಾರತ ಹಾಗು ಪಾಕಿಸ್ತಾನದ ಸರ್ಕಾರಗಳು ಪರಿಶಿಷ್ಟ ಜಾತಿಯವರ ವಿಷಯದಲ್ಲಿ ತಳೆದಿರುವ ಮಲತಾಯಿ ಧೋರಣೆಯ ಬಗ್ಗೆ ಸಾರ್ವಜನಿಕರ ಗಮನವನ್ನು ಸೆಳೆಯುಲು ಯೋಚಿಸಿದೆ. ಆದರೆ ಎಲ್ಲರಿಗೂ ತಿಳಿದಿರುವ ಕಾರಣದಿಂದ ನಾನು ಈ ರೀತಿ ಮಾಡಿಲ್ಲ. ನೀವು ಕೂಡ ಬೇರೆಯ ಇತರ ಕಾರ್ಯಗಳಲ್ಲಿ ಮಗ್ನರಾಗಿರುವುದು ನನಗೆ ತಿಳಿದಿದೆ. ತಾವು ಈ ಸಮಸ್ಯೆಯ ಪರಿಹಾರದ ಕಡೆಗೆ ಗಮನ ನೀಡಿಲ್ಲ ಎಂದು ಈ ಕಾರಣಕ್ಕಾಗಿ ನಾನು ದೂರುತ್ತಿಲ್ಲ. ಆದರೆ ಇದೀಗ ತಾವು ಖುದ್ದಾಗಿ ಈ ಸಮಸ್ಯೆಯತ್ತ ಗಮನ ಹರಿಸುವ ಸಮಯ ಬಂದಿದೆ. ತಾವು ಈ ಇಲಾಖೆಗೆ ಸಂಬಂಧಿಸಿದ ಮಂತ್ರಿಗಳಿಗೆ ಈ ಸಮಸ್ಯೆಯ ಪರಿಹಾರ ಮಾಡುವಂತೆ ಸೂಕ್ತ ನಿರ್ದೇಶನ ನೀಡಬೇಕು ಮತ್ತು ತಾವು ಈ ವಿಷಯದತ್ತ ತುರ್ತಾಗಿ ಗಮನ ಹರಿಸಬೇಕು. ಹಾಗೆ ಮಾಡಿದರೆ ನಾನು ತಮಗೆ ಅತ್ಯಂತ ಋಣಿಯಾಗಿರುವೆ.

ತಮ್ಮ ವಿಶ್ವಾಸಿ
ಡಾ. ಬಿ.ಆರ್. ಅಂಬೇಡ್ಕರ್
(ಸಹಿ)

ಗೌರವಾನ್ವಿತ ಪಂಡಿತ ಜವಹರಲಾಲ ನೆಹರು
ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ
ನವದೆಹಲಿ[೧]

ಈ ಮೇಲಿನ ಪತ್ರಕ್ಕೆ ಪಂಡಿತ ಜವಹರಲಾಲನೆಹರು ಅವರು ಈ ಕೆಳಗಿನಂತೆ ಉತ್ತರಿಸಿದರು.
ಪ್ರಧಾನ ಮಂತ್ರಿಗಳು
ಭಾರತ

PM
ನವದೆಹಲಿ
೨೫ನೆಯ ಡಿಸೆಂಬರ್ ೧೯೪೭

ಪ್ರೀತಿಯ ಡಾ.ಅಂಬೇಡ್ಕರ್ ಅವರೇ,

ಪಾಕಿಸ್ತಾನದಿಂದ ಹೊರಬರಲು ಇಚ್ಛಿಸುತ್ತಿರುವ ಪರಿಶಿಷ್ಟ ಜಾತಿಯ ಜನರನ್ನು ಕುರಿತು ತಾವು ಡಿಸೆಂಬರ್ ೧೮ ರಂದು ಬರೆದ ಪತ್ರ ನನಗೆ ತಲುಪಿದೆ.

ಪಾಕಿಸ್ತಾನದಿಂದ ಹೊರಬರಲು ಬಯಸುತ್ತಿರುವ ವಲಸೆಗಾರರಿಗೆ ಅದರಲ್ಲಿಯೂ ವಿಶೇಷವಾಗಿ ಸಿಂಧ್ ಪ್ರಾಂತ್ಯದಿಂದ ಹೊರಬರಲು ಇಚ್ಛಿಸುವವರಿಗೆ ಸರ್ಕಾರ ತನ್ನ ಶಕ್ತಿ ಮೀರಿ ಸಹಾಯ ಮಾಡುತ್ತಿದೆ. ನಮ್ಮ ಪೋಲೀಸ್ ವರಿಷ್ಠರು ಈ ವಿಷಯದಲ್ಲಿ ನನ್ನೊಂದಿಗೆ ನಿರಂತರವಾದ ಸಂಪರ್ಕದಲ್ಲಿದ್ದಾರೆ.

---

೨. ಪುನರ್ ಮುದ್ರಣ ಖೈರ್‌ಮೋಡೆ ಸಂಪುಟ ೧೦, ಪುಟ ೩೨–೩೩

ಇನ್ನು ತಾವು ಉಲ್ಲೇಖಿಸಿರುವ ಇತರ ಸಮಸ್ಯೆಗಳ ಪರಿಹಾರ ಪೂರ್ವ ಪಂಜಾಬ್ ಪ್ರಾಂತ್ಯದ ಸರ್ಕಾರಕ್ಕೆ ಸೇರಿದ್ದು. ಈ ವಿಷಯಕ್ಕೆ ಸಂಬಂಧ ಪಟ್ಟಂತೆ ನಾವು ಆ ಸರ್ಕಾರಕ್ಕೆ ಸೂಕ್ತ ಮಾರ್ಗದರ್ಶನ ಹಾಗು ಸಲಹೆ ನೀಡುತ್ತೇವೆ. ಪರಿಶಿಷ್ಟ ಜಾತಿಯವರಿಗೆ ಎಲ್ಲಾ ವಿಧವಾದ ನೆರವೂ ಸಿಗುವಂತೆ ಮಾಡಲಾಗುವುದು.

ಆದರೆ ಪೂರ್ವ ಪಂಜಾಬ್ ಸರ್ಕಾರದ ಜವಾಬ್ದಾರಿಯಾಗಿರುವ ಕೆಲ ಸಮಸ್ಯೆಗಳ ಪರಿಹಾರ ಬಹಳ ಕಷ್ಟ. ಏಕೆಂದರೆ, ಅದು ಅಗಾಧವಾಗಿದೆ. ಆದರೂ ಈ ವಿಷಯಕ್ಕೆ ನಾನು ಖುದ್ದಾಗಿ ಅತ್ಯಂತ ಸಂತೋಷದಿಂದ ಗಮನಹರಿಸುತ್ತೇನೆ. ಮಾತ್ರವಲ್ಲ ಈ ಇಲಾಖೆಯ ಮಂತ್ರಿಯವರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತೇನೆ.

ನಿಮ್ಮ ವಿಶ್ವಾಸಿ
ಜವಹರಲಾಲ ನೆಹರು
(ಸಹಿ)

ಗೌರವಾನ್ವಿತ ಡಾ.ಬಿ.ಆರ್.ಅಂಬೇಡ್ಕರ್[೧]

* * * * *

೧. ಪುನರ್ ಮುದ್ರಣ ಖೈರ್‌ಮೋಡೆ ಸಂಪುಟ ೧೦, ಪುಟ ೩೨-೩೩

## ೪೩
## ಸರ್ಕಾರವು ನಿಷ್ಪಕ್ಷಪಾತವಾಗಿರಬೇಕು

ಪೂರ್ವ ಪಂಜಾಬಿನ ಅಸ್ಪೃಶ್ಯರ ಸ್ಥಿತಿಯಂತೂ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಇದಕ್ಕೆ ಪರಿಹಾರ ಸಿಗಬೇಕೆಂದರೆ ಪರಿಹಾರ ಹಾಗು ಪುನರ್‌ವಸತಿಯ ಇಲಾಖೆಯ ಅಧಿಕಾರಿಗಳಾಗಿ ಪರಿಶಿಷ್ಟ ಜಾತಿಯ ವ್ಯಕ್ತಿಗಳು ಕೂಡಲೇ ನೇಮಕ ಆಗಬೇಕು. ಆದ್ದರಿಂದ ಈ ಇಲಾಖೆಯ ಮಂತ್ರಿಗಳಾದಂತಹ ಗೌರವಾನ್ವಿತ ಶ್ರೀ ಕೆ.ಸಿ. ನಿಯೋಗಿ ಅವರಿಗೆ ಅಂಬೇಡ್ಕರ್ ಅವರು ಪತ್ರ ಬರೆದರು. ಆ ಪತ್ರ ಈ ಕೆಳಗಿನಂತಿದೆ

– ಸಂಪಾದಕರು.

ಖಾಸಗಿ

ನವದೆಹಲಿ

೨೩ನೆಯ ಮಾರ್ಚ ೧೯೪೮

ಪ್ರಿಯ ಶ್ರೀ ನಿಯೋಗಿ ಅವರೇ,

ಪೂರ್ವ ಹಾಗು ಪಶ್ಚಿಮ ಪಂಜಾಬಿನಿಂದ ಬಂದಂತಹ ವಲಸೆಗಾರರ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಆ ಇಲಾಖೆಗೆ ಕೆಲವು ಅಧಿಕಾರಿಗಳ ಅಗತ್ಯದ ಬಗ್ಗೆ ನೀವು ನನ್ನೊಂದಿಗೆ ಈ ಹಿಂದೆ ಮಾತನಾಡಿದ್ದಿರಿ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ಪರಿಶಿಷ್ಟ ಜಾತಿಯಲ್ಲಿ ಇದಕ್ಕೆ ಸೂಕ್ತವಾದ ಅಭ್ಯರ್ಥಿಗಳನ್ನು ಸೂಚಿಸುವಂತೆ ನೀವು ನನ್ನನ್ನು ಕೇಳಿದ್ದಿರಿ. ಈ ಕಾರ್ಯಕ್ಕಾಗಿ ನಿಯೋಜಿಸಬಲ್ಲ ವ್ಯಕ್ತಿಗಳ ಪಟ್ಟಿಯನ್ನು ನಾನು ನಿಮಗೆ ನೀಡಿದ್ದೆ. ಆದರೆ ಈ ವಿಷಯದಲ್ಲಿ ತಾವು ಏನು ಮಾಡಿದಿರಿ ಎಂಬುದು ನನಗೆ ತಿಳಿದಿಲ್ಲ. ನಾನು ನೀಡಿದ್ದ ಪಟ್ಟಿಯಿಂದ ತಾವು ಇಬ್ಬರು ವ್ಯಕ್ತಿಗಳನ್ನು ಆಯ್ಕೆಮಾಡಿದ್ದಿರಿ. ಆದ್ದರಿಂದಲೇ ಈ ಪತ್ರ ನಾನು ಬರೆಯುತ್ತಿದ್ದೇನೆ. ಅವರಿಬ್ಬರು ಎಂದರೆ ಶ್ರೀ. ಬಿ.ಕೆ.ಗಾಯಕ್‌ವಾಡ್ ಹಾಗು ಆರ್.ಎಸ್. ಜಾಧವ್. ಇವರಿಬ್ಬರೂ ನನ್ನ ಬಳಿಗೆ ದೂರು ತಂದಿದ್ದಾರೆ. ಅದೇನೆಂದರೆ ಅವರಿಗೆ ಯಾವುದೇ ಕೆಲಸವನ್ನು ನೀಡುತ್ತಿಲ್ಲ ಹಾಗು ಅವರು ತಮ್ಮ ಸಮಯವನ್ನು ಅವರು ವ್ಯರ್ಥವಾಗಿ ಕಳೆಯುತ್ತಿದ್ದಾರೆ ಎಂದು. ಅಲ್ಲದೇ ನನಗೆ ಅವರು ಮತ್ತೊಂದು ವಿಷಯವನ್ನೂ ತಿಳಿಸಿದ್ದಾರೆ. ಅದೇನೆಂದರೆ ತಮ್ಮ ಇಲಾಖೆಯ ಹರಿಜನ ವಿಭಾಗದ ಮುಖ್ಯ ವ್ಯವಸ್ಥಾಪಕರಾದ ಶ್ರೀ ಸೇವಕ್‌ರಾಂ ಕರಂಚಂದ್ ಅವರು ಇವರಿಬ್ಬರನ್ನು ತಮ್ಮ ಕಛೇರಿಗೆ ಪ್ರತ್ಯೇಕವಾಗಿ ಬರಮಾಡಿಕೊಂಡು ಇವರ ರಾಜಕೀಯ ದೃಷ್ಟಿಕೋನದ ಬಗ್ಗೆ ಕೆಲ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರಿಗೆ ಈ ಭೇಟಿಯ ನಂತರ ಒಂದು ಅಭಿಪ್ರಾಯ ಬಂದಿದೆ ಹಾಗು ಅದನ್ನು ಅವರು ನನಗೆ ತಿಳಿಸಿದ್ದಾರೆ. ಅದೇನೆಂದರೆ ಕಾಂಗ್ರೆಸ್ ಪಕ್ಷದ ಬೆಂಬಲಿಗರಲ್ಲದವರನ್ನು ಈ ಸರ್ಕಾರ ಯಾವುದೇ ಕಾರ್ಯಕ್ಕೆ ಬಳಸಿಕೊಳ್ಳಲು ಸಿದ್ಧವಿಲ್ಲ ಎಂಬುದು. ನನಗೆ ಇದು ಅತ್ಯಂತ ಅಸಂಬದ್ಧ ಎನಿಸುತ್ತಿದೆ. ಇದು ಕೀಟಲೆಯ ಕೆಲಸ. ಯಾವ ಪಕ್ಷ ಅಧಿಕಾರದಲ್ಲಿ ಇದೆಯೋ ಆ ಪಕ್ಷದ ಬೆಂಬಲಿಗರೇ ಅಧಿಕಾರಿಗಳಾಬೇಕು. ಎಂಬ ಅಭಿಪ್ರಾಯ ಈ ಸರ್ಕಾರಕ್ಕೆ ಇದ್ದಂತಿದೆ. ಶ್ರೀ ಸೇವಕ್ ರಾಂ ಕರಂಚಂದ್ ಅವರ ಅಭಿಪ್ರಾಯ ನೀವು ಒಪ್ಪುವುದಿಲ್ಲವೆಂದು ನನಗೆ ತಿಳಿದಿದೆ. ಆದರೆ ನನಗೆ ಆಗಿರುವ ಆತಂಕ ಎಂದರೆ ಈ ಇಬ್ಬರು ವ್ಯಕ್ತಿಗಳಿಗೆ ಯಾವುದೇ ಕೆಲಸ ನೀಡಲಾಗುತ್ತಿಲ್ಲ. ಅವರನ್ನು ಯಾವ ಕಾರ್ಯಕ್ಕಾಗಿ ನಿಯೋಜನೆ ಮಾಡಲಾಗಿತ್ತೋ, ಆ ಉದ್ದೇಶ ನೆರವೇರುತ್ತಿಲ್ಲ. ಶ್ರೀ ಕರಂಚಂದ್ ಅವರು ಸಂದರ್ಶನವೊಂದರಲ್ಲಿ ಮಾತನಾಡುತ್ತಾ, ಹರಿಜನ ಒಕ್ಕೂಟದ ಶಿಫಾರಸ್ಸಿನಿಂದ ಬಂದಿರುವ ವ್ಯಕ್ತಿಗಳು ಅತ್ಯಂತ ಅಸಮರ್ಥರು ಹಾಗು ಅವರಿಂದ ಯಾವ

ಕೆಲಸವನ್ನು ನಾವು ನಿರೀಕ್ಷಿಸುವಂತಿಲ್ಲ ಎಂದಿದ್ದರು. ಅಂತೆಯೇ, ಪರಿಶಿಷ್ಟ ಜಾತಿಯ ಒಕ್ಕೂಟವು ಶಿಫಾರಸ್ಸು ಮಾಡಿರುವ ವ್ಯಕ್ತಿಗಳು ಅತ್ಯಂತ ಸಮರ್ಥರು ಎಂದೂ ಹೇಳಿದ್ದರು. ಹಾಗಾದರೆ ಇವರಿಗೆ ಏಕೆ ಯಾವುದೇ ಜವಾಬ್ದಾರಿಯುತ ಕೆಲಸವನ್ನು ನೀಡಿಲ್ಲ? ಏಕೆಂದರೆ ಇವರ ರಾಜಕೀಯ ಅಭಿಪ್ರಾಯದಲ್ಲಿ ಭಿನ್ನತೆ ಇದೆ. ಅದ್ದರಿಂದ ನಾನು ಅನಿವಾರ್ಯವಾಗಿ ನಿಮಗೆ ಈ ಪ್ರಶ್ನೆ ಕೇಳಬೇಕಾಗಿದೆ. ಅವರನ್ನು ಯಾವ ಕೆಲಸಕ್ಕಾಗಿ ತಾವು ನಿಯೋಜನೆ ಮಾಡಿಕೊಂಡಿರುವಿರೋ ಆ ಕಾರ್ಯ ಅವರಿಗೆ ವಹಿಸಲು ತಾವು ಸಿದ್ಧರಿರದೇ ಹೋದರೇ ಈ ಕೂಡಲೆ ಅವರನ್ನು ತಾವು ಸೇವೆಯಿಂದ ವಜಾಗೊಳಿಸಿ. ಅವರು ತಮ್ಮ ಸ್ಥಳಕ್ಕೆ ಹಿಂದಿರುಗಲಿ, ಅವರು ಈವರೆಗೆ ಮಾಡುತ್ತಿದ್ದ ಸಮಾಜ ಸೇವೆಯನ್ನೇ ಅವರು ಮುಂದುವರೆಸಲಿ. ಈ ರೀತಿ ತಮಗೆ ನೇರವಾಗಿ ಪತ್ರ ಬರೆದಿರುವುದಕ್ಕೆ ನಾನು ತಮ್ಮಲ್ಲಿ ಕ್ಷಮೆ ಯಾಚಿಸುತ್ತೇನೆ. ಆದರೆ ಒಬ್ಬ ವ್ಯಕ್ತಿಯ ತಾಳ್ಮೆಯು ತನ್ನ ಗಡಿಯನ್ನು ಮೀರಿದರೆ ಆತನಿಗೆ ಅನ್ಯಮಾರ್ಗ ಇರುವುದಿಲ್ಲ.

ವಿಶ್ವಾಸಪೂರ್ವಕವಾಗಿ
ಡಾ. ಬಿ.ಆರ್. ಅಂಬೇಡ್ಕರ್
(ಸಹಿ)

ಗೌರವಾನ್ವಿತ ಶ್ರೀ ಕೆ.ಸಿ. ನಿಯೋಗಿ
ಪರಿಹಾರ ಹಾಗು ಪುನರ್ವಸತಿ ಇಲಾಖೆ
ಮಂತ್ರಿಗಳು
ನವದೆಹಲಿ

* * * * *

---

ಪುನರ್ ಮುದ್ರಣ – ಖೈರ್‌ಮೋಡಿ ಸಂಪುಟ ೧೦, ಪುಟ ೩೪–೩೫

## ೪೪
## ನೀವೇ ನಿಮ್ಮ ಸ್ವಂತ ಬೆಳಕಾಗಿರಿ

೧೯೫೦ರ ಒಂದು ಮುಸುಕಾದ ಸಂಜೆಯಲ್ಲಿ ಬೊಂಬಾಯಿಯ ಕಫ್ ಪರೇಡ್ ಮೈದಾನದಲ್ಲಿ ಒಂದು ಕಲ್ಲು ಬೆಂಚಿನ ಮೇಲೆ ಕುಳಿತ ಇಬ್ಬರು ವ್ಯಕ್ತಿಗಳು ಸಂಭಾಷಣೆಯಲ್ಲಿ ತೊಡಗಿದ್ದರು ಅವರಲ್ಲಿ ಒಬ್ಬರು ಭಾರತದ ಸಂವಿಧಾನ ಶಿಲ್ಪಿಯಾದ ಡಾ. ಭೀಮ್‌ರಾವ್ ರಾಂಜೀ ಅಂಬೇಡ್ಕರ್ ಮತ್ತೊಬ್ಬರು 'ಅಸ್ಪೃಶ್ಯ' ಕೃತಿಯ ಲೇಖಕರೂ ಪ್ರಖ್ಯಾತ ಸಾಹಿತಿಗಳೂ ಆದಂತಹ ಶ್ರೀ ಮುಲ್ಕ್ ರಾಜ್ ಆನಂದ್ ಅವರು.

೪೦ ವರ್ಷಗಳ ನಂತರ ಈ ಕೆಳವರ್ಗದ ದೇವರಾದ ಈ ವ್ಯಕ್ತಿಯೊಂದಿಗೆ ತಾವು ನಡೆಸಿದ ಸಂಭಾಷಣೆಯನ್ನು ಮುಲ್ಕ್ ರಾಜ್ ಆನಂದ್ ಅವರು ಮೆಲುಕು ಹಾಕುತ್ತಾರೆ.

ಮುಲ್ಕ್ ರಾಜ್ ಆನಂದ್ : ನಮಸ್ಕಾರ ಅಂಬೇಡ್ಕರ್ ಅವರೇ

ಬಿ.ಆರ್.ಅಂಬೇಡ್ಕರ್ : ನಾನು ಬೌದ್ಧರ ರೀತಿಯ ಶುಭಾಶಯ ಕೋರುತ್ತೇನೆ – ಓಮ್ ಮಣಿ ಪದ್ಮಾಯೇ– ಪದ್ಮಗಳೆಲ್ಲಾ ಜಾಗೃತವಾಗಲೀ.

MRA: ನಾನು ಒಪ್ಪುತ್ತೇನೆ. ನಾವೆಷ್ಟು ವಿಚಾರಹೀನರು ನಾವು ಪದಗಳನ್ನು ಅವುಗಳ ಅರ್ಥವನ್ನು ತಿಳಿಯದೇಯೇ ಎರವಲು ಪಡೆಯುತ್ತೇವೆ. ಆದರೆ ನಮಸ್ಕಾರದ ಅರ್ಥ ನನಗೆ ಗೊತ್ತು... ನಾನು ನಿಮ್ಮೆದುರಿಗೆ ತಲೆ ಬಾಗುತ್ತೇನೆ ಎಂದು ಅರ್ಥ.

BRA: ಅಲ್ಲಿಯೇ ನಾವು ಅಡಿಯಾಳುಗಳಾಗುತ್ತಿರುವುದು. ಪದ್ಮಗಳು ಜಾಗೃತವಾಗಲೀ ಎನ್ನುವುದು ಜ್ಞಾನೋದಯದ ಸಂಕೇತ.

MRA: ನಿಜ ಆದರೆ ಹಿಂದಿನಿಂದ ಬಂದ ಪದ್ಧತಿಗಳನ್ನು ತೊರೆಯುವುದು ಕಷ್ಟ. ಹಿಂದೆ ಮುಂದೆ ಯೋಚಿಸದೇ ನಾವು ಅವುಗಳನ್ನು ಒಪ್ಪಿಕೊಳ್ಳುತ್ತೇವೆ.

¨BRA: ಎಲ್ಲ ವಿಷಯಗಳಲ್ಲಿಯೂ.

MRA: ಈ ವಿಷಯಕ್ಕೆ ಬಂದರೇ, ಪ್ರತಿಯೋರ್ವನು ಹುಟ್ಟಿನಿಂದಲೇ ಹಿಂದೂ ಮುಸಲ್ಮಾನ್ ಅಥವಾ ಕ್ರೈಸ್ತನಾಗಿ ಜನಿಸುವುದಿಲ್ಲ. ಹಿಂದೂ ಪೋಷಕರು ಒಂದು ನಾಮಕರಣ ಸಮಾರಂಭ ಮಾಡಿ ಅವರ ಮಗುವಿಗೆ ಹೆಸರು ಇಡುತ್ತಾರೆ. ಈ ಮಗುವಿಗೆ ಅರ್ಥವೇ ಆಗದ ಮಂತ್ರಗಳನ್ನು ಪಂಡಿತನೊಬ್ಬ ಸಂಸ್ಕೃತದಲ್ಲಿ ಉಚ್ಚರಿಸುತ್ತಿರುತ್ತಾನೆ. ಒಂದು ಜನಿವಾರವನ್ನು ಆ ಮಗುವಿಗೆ ಹಾಕಲಾಗುತ್ತದೆ..... ನೋಡಿ.....ಅಲ್ಲಿಗೆ ಆ ಮಗು ಹಿಂದೂ!!

BRA: ಇದು ಮೂರ್ಖತನದ ಪರಮಾವಧಿ.

MRA: ಮೂರ್ಖ ಎಂಬ ಗ್ರೀಕ್ ಪದದ ಅರ್ಥ ಎಂದರೆ ಕಾರ್ಯವಿಲ್ಲದೇ, ಸುತ್ತುವವ.

BRA: ಒಬ್ಬ ವ್ಯಕ್ತಿ ಎಲ್ಲಾ ಹಳೆಯ ಪದ್ಧತಿಗಳನ್ನು ಪ್ರಶ್ನಿಸಬೇಕು ಯುವ ಜನರು ಈ ಪ್ರಶ್ನೆಯೆಲ್ಲಾ ತಮ್ಮ ಗುರುಗಳನ್ನು ಕೇಳುವಂತೆ ನಾವು ಪ್ರೋತ್ಸಾಹಿಸಬೇಕು..... ದಿನಕ್ಕೊಂದು ಹೊಸ ಪ್ರಶ್ನೆ.

MRA: ಇದು ಶಿಕ್ಷಕರ ಕಲಿಕೆಗೆ ಒಳ್ಳೆಯ ವಿಧಾನವೂ ಹೌದು! ಪಠ್ಯ ಪುಸ್ತಕದ ಹೊರಗೆ ಇರುವ ವಿಷಯಗಳು ಅವರಿಗೆ ತಿಳಿದಿರುವುದೇ ಇಲ್ಲ. ನಿಜಾಂಶವೆಂದರೆ, ಒಬ್ಬ ವ್ಯಕ್ತಿ ಪ್ರೌಢಿಮೆ ಪಡೆಯಬೇಕು, ಬೆಳೆಯಬೇಕು ಎಂದರೆ ಆತ ಪ್ರಶ್ನೆಗಳನ್ನು ಕೇಳಬೇಕು. ಇದನ್ನು ನಾನು ಅರಿತದ್ದು ಹೆನ್ರಿ ಬೆರ್ಗ್‌ಸನ್‌ರ ಪುಸ್ತಕ creative evolution (ಸೃಜನಾತ್ಮಕ ವಿಕಸನ) ಓದಿದ ನಂತರವೇ. ಹೇಗರ್ ಕಾಂಬ್, ಡೆಸ್ಕರೆಂಟ್ಸ್

ಇವರೆಲ್ಲರನ್ನೂ ಓದಿದ ನಂತರ ನನ್ನ ಮನಸ್ಸು ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿತ್ತು. ಬೆರ್ಗ್‌ಸನ್ ಒಬ್ಬ ವ್ಯಕ್ತಿ ತನ್ನ ಜಾಗೃತಾವಸ್ಥೆಯನ್ನು ಹೆಚ್ಚಿಸಿಕೊಳ್ಳಬೇಕೆಂದರೆ, ಪ್ರತಿಯೊಂದು ಮನೋವೈಜ್ಞಾನಿಕ ಸಲಹೆಯನ್ನು ಪ್ರಶ್ನಿಸಬೇಕು ಎಂದು ಹೇಳುತ್ತಾನೆ.

BRA: ಬ್ರಾಹ್ಮಣರೊಂದಿಗೆ ಪ್ರತಿಯೊಂದು ಆಚರಣೆಯ ವಿಷಯಕ್ಕೂ ಬುದ್ಧ ವಾದ ಮಾಡುತ್ತಿದ್ದ. ಎಲ್ಲರನ್ನು ಬ್ರಾಹ್ಮಣರು ಕೆಳಜಾತಿಯವರು ಎಂಬ ಕೀಳು ಭಾವನೆಯಿಂದ ಕಾಣುತ್ತಿದ್ದರು. ಅವರು ದೇವರೇ ವರ್ಣಗಳನ್ನು ಮಾಡಿರುವುದು ಎಂದು ಪ್ರತಿಪಾದಿಸುತ್ತಿದ್ದರು – ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಎಂಬಂತೆ. ಆಗ ಬುದ್ಧ ಕೇಳಿದ ಹಾಗಾದರೆ ಮನುಷ್ಯನೆಂಬ ವ್ಯಕ್ತಿಯನ್ನು ಮಾಡಿದ್ದು ಯಾರು? ಒಬ್ಬ ಮನುಷ್ಯ ದನಗಳ ಹೆಣವನ್ನು ಎತ್ತುವ ಕುಟುಂಬದಲ್ಲಿ ಜನಿಸಿದರೆ ಆತ ಅಸ್ಪೃಶ್ಯನಾಗುತ್ತಾನೆ. ಎಲ್ಲಾ ಕಾಡು ಮನುಷ್ಯರೂ ಹಿಂದೂಗಳ ದೃಷ್ಟಿಯಲ್ಲಿ ಅನಾಗರಿಕರು.

MRA: ಒಪ್ಪಿಕೊಳ್ಳಲು ಸಾಧ್ಯವಿಲ್ಲ!!

BRA: ಯಾರ್‍ಯಾರು ತಮ್ಮ ಕೈಗಳನ್ನು ಉಪಯೋಗಿಸಿ ಕೆಲಸ ಮಾಡುತ್ತಿದ್ದರು ಅವರನ್ನೆಲ್ಲಾ ತಿರಸ್ಕರಿಸಲಾಯಿತು. ಯಾರ್‍ಯಾರು ಪ್ರಾಣಿಗಳ ಚರ್ಮ ಸುಲಿಯುತ್ತಿದ್ದರೋ, ಸಗಣಿ ಎತ್ತುತ್ತಿದ್ದರೋ, ಭೂಮಿಯ ಮೇಲೆ ಕೀಳು ಕೆಲಸ ಮಾಡುತ್ತಿದ್ದರೋ..... ಇವರೆಲ್ಲರನ್ನು... ಇವರಿಗೆ ಹಣೆಪಟ್ಟಿ ಕಟ್ಟಿ ಜೀತದಾಳುಗಳನ್ನಾಗಿ ಮಾಡಲಾಯಿತು. ಇದಾಗಿ ಐದು ಸಾವಿರ ವರ್ಷಗಳಾದರೂ ಕೂಡ ಪರಿಸ್ಥಿತಿ ಇನ್ನೂ ಹೀನಾಯವಾಗಿಯೇ ಇದೆ. ಒಬ್ಬ ಅಸ್ಪೃಶ್ಯ ಸ್ನಾನ ಮಾಡಿದ್ದರೂ ಅವನು ದೇವಸ್ಥಾನವನ್ನು ಪ್ರವೇಶಿಸುವಂತಿಲ್ಲ, ಹಳ್ಳಿಯ ಬಾವಿಯಿಂದ ನೀರನ್ನು ಸೇದುವಂತಿಲ್ಲ. ಊರ ಹೊರಗೆ ಇರುವ ಕೊಳಕು ಕೆರೆಯ ನೀರನ್ನೇ ಆತ ಬಳಸಬೇಕು. ಈತ ತನ್ನ ಭೂಮಾಲೀಕರ ಭೂಮಿಯಲ್ಲಿ ತನ್ನ ದನಕರುಗಳನ್ನು ಮೇಯಲು ಬಿಡುವಂತಿಲ್ಲ. ಆತ ಕೊಳಕನ್ನು ಶುಚಿ ಮಾಡುತ್ತಾನಾದ್ದರಿಂದ ಆತ ಕೊಳಕ, ಯಾವಾಗಲೂ ಅವನನ್ನು ಅಪವಿತ್ರ ಎಂದೇ ಪರಿಗಣಿಸಲಾಗುತ್ತದೆ. ಒಂದು ಪ್ರಾಣಿಯನ್ನು ಸ್ಪರ್ಶಿಸಬಹುದು. ಆದರೆ ಅಸ್ಪೃಶ್ಯನನ್ನು ಸ್ಪರ್ಶಿಸುವಂತಿಲ್ಲ...

MRA ಮಂತ್ರಿ ಮಂಡಲದ ಓರ್ವ ಸದಸ್ಯರಾಗಿ ತಮಗೆ ಅಸ್ಪೃಶ್ಯರ ಹಕ್ಕುಗಳನ್ನು ಕಾಯ್ದಿರಿಸಲು ಸಾಧ್ಯವಾಗಿಲ್ಲವೇ? ನಿಮ್ಮ ಸಮಿತಿಯು ಮೂಲಭೂತ ಹಕ್ಕುಗಳನ್ನು ಕಾಯ್ದಿರಿಸುತ್ತದೆ ಎಂದು ಕೇಳಿದ್ದೇನೆ. ಒಬ್ಬ ವ್ಯಕ್ತಿಯ ವ್ಯಕ್ತಿಗತ ಸ್ವಾತಂತ್ರ್ಯ..... ಈ ಆಸ್ತಿಯ ಹಕ್ಕಿನಿಂದ ವಂಶಪಾರಂಪರ್ಯವಾಗಿ ಹಕ್ಕು ಪಡೆದುಕೊಂಡಾತನಿಗೆ ಇದು ಲಾಭದಾಯಕ. ಆದರೆ ಕಡು ಬಡವರಾಗಿರುವ ಅಸ್ಪೃಶ್ಯರಿಗೆ ಇದೊಂದು ಶಾಪ ಅಲ್ಲವೇ??

BRA: ನಮ್ಮ ಸಂವಿಧಾನದಲ್ಲಿ ನಾವು ಪಾಲಿಸ ಹೊರಟಿರುವುದು ಜಾತ್ಯತೀತ ಸಮಾಜವಾದಿ ಪ್ರಜಾಪ್ರಭುತ್ವ. ಪ್ರತಿಯೊಬ್ಬ ವ್ಯಕ್ತಿಗೂ ಭೂಮಿಯ ಉಳುಮೆ ಮಾಡುವ ಹಕ್ಕು ಇರುತ್ತದೆ. ಇದರಲ್ಲಿ ರಾಜ್ಯದ ಹಿಡುವಳಿ ಹಕ್ಕುಗಳ ಪ್ರಶ್ನೆ ಬರುತ್ತದೆ. ಆಗ ಎಲ್ಲರೂ ಸಮಾನರು ಎಂಬ ದೃಷ್ಟಿ ಬರುತ್ತದೆ. ಇದರಿಂದ ಶೋಷಣೆಗೆ ಅವಕಾಶ ಇರುವುದಿಲ್ಲ. ಇದುವರೆಗೂ ಬಹಳಷ್ಟು ಅಸ್ಪೃಶ್ಯರಿಗೆ ಹಾಗು ಕೆಲ ಹಿಂದೂಗಳು ಹಾಗು ಮುಸಲ್ಮಾನರಿಗೆ ಹಿಡುವಳಿ ಹಕ್ಕುಗಳಿಲ್ಲ ಈ ಕೃಷಿಭೂಮಿ ಇಲ್ಲದ ಜನರು ಕೇವಲ ಆಳುಗಳ ಹಾಗೆ.

MRA: ಹಾಗಾದರೆ ಕೆಲಸ ಮಾಡುವ ಹಕ್ಕನ್ನು ಕೂಡ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕಾಗಿತ್ತು.

BRA: ರಚನಾ ಸಮಿತಿಯಲ್ಲಿ ನಾನು ಓರ್ವ ಸದಸ್ಯನಾಗಿದ್ದೆ ಅಷ್ಟೇ.

MRA: ಆದ್ದರಿಂದ ಹುಲಿಗಳ ಮುಂದೆ ನೀವು ಕುರಿ ಆದಿರಿ.

BRA: ನಾನು ಆಗ ಕುರಿಯಂತೆ ಅರಚುತ್ತಿದ್ದೆ, ಈಗ ನಾನು ಘರ್ಜಿಸುತ್ತಿದ್ದೇನೆ.

MRA: ಒಬ್ಬ ವಕೀಲರಾಗಿ ಇದು ತಮಗೆ ತಿಳಿಯದ ಸಂಗತಿ ಏನಲ್ಲ. ತೀರ್ಪು ಯಾವಾಗಲೂ ಮೇಲ್ವರ್ಗದ ಹಿಂದೂಗಳ ಪರವಾಗಿಯೇ ಇರುತ್ತದೆ.

BRA: ಖಂಡಿತವಾಗಿ.... ಕೇವಲ ಒಬ್ಬನೇ ಒಬ್ಬ ಬ್ರಾಹಣೇತರ ವ್ಯಕ್ತಿಯಾಗಿ ಜವಹರಲಾಲ ನೆಹರೂ ಅವರ ಸರ್ಕಾರದಲ್ಲಿ ಆಸ್ತಿ ಹೊಂದುವುದು ಮೂಲಭೂತ ಹಕ್ಕಾಗಬೇಕು ಎಂದು ಹೋರಾಡಿದೆ....... ಬಾಬು ರಾಜೇಂದ್ರ ಪ್ರಸಾದ್ ಅವರಿಗೆ ನೆಹರೂ ಭಾರತವನ್ನು ರಷ್ಯಾ ಮಾಡಹೊರಟಿದ್ದಾರೆ ಎಂದು ತಿಳಿದಿತ್ತು.

MRA: ಈ ವಿಷಯವು ಆಸ್ತಿವಂತರ ಪರವಾಗಿಯೇ ಆಯಿತು ಎಂದಾಯಿತಲ್ಲ.

BRA: ಒಂದು ದಿನ ಸಮಾಜವಾದಿಗಳು ಬಹುಸಂಖ್ಯೆಯ ಮತಗಳನ್ನು ಗಳಿಸಬಹುದು. ಹಾಗು ಇದನ್ನು ಪುನರಾವಲೋಕಿಸಲು ಕೋರಬಹುದು. ಏಕೆಂದರೆ ಜಾತಿಭ್ರಷ್ಟರು ಹಾಗು ಬುಡಕಟ್ಟು ಜನಾಂಗದವರನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ. ಅವರ ಏಳಿಗೆಗಾಗಿ ಅವರಿಗೆ ಕೆಲ ಸೌಕರ್ಯಗಳನ್ನು ನೀಡಲಾಗುತ್ತದೆ. ಉದಾಹರಣೆಗೆ ಶಾಲಾ-ಕಾಲೇಜುಗಳಲ್ಲಿ ದಾಖಲಾತಿ ಪಡೆಯಲು ಮೀಸಲು ಸೌಲಭ್ಯಗಳನ್ನು ನೀಡಲಾಗುತ್ತದೆ.

MRA: ಆದರೆ ಈ ಮೀಸಲಾತಿಯನ್ನು ಹಿಂದೂ ಸವರ್ಣೀಯರು ವಿರೋಧಿಸುತ್ತಾರೆ.

BRA: ನಾವು ಮೊದಲು ನಮ್ಮನ್ನು ವ್ಯವಸ್ಥಿತಗೊಳಿಸಿಕೊಳ್ಳಬೇಕು. ಯಾರಿಗೆ ಆಸ್ತಿಪಾಸ್ತಿ ದೊರಕಿಲ್ಲವೋ ಅವರನ್ನು ಹೋರಾಟಕ್ಕೆ ಸಜ್ಜು ಮಾಡಬೇಕು. ಸವರ್ಣೀಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇತರರು ಇದ್ದಾರೆ. ಈ ಮೇಲ್ವರ್ಗದವರು ಮುಸಲ್ಮಾನರನ್ನು ಕೂಡ ಅಸ್ಪೃಶ್ಯರಂತೆಯೇ ಕಾಣುತ್ತಾರೆ. ಹಾಗು ಬುಡಕಟ್ಟು ಜನರು ಇವರೆಲ್ಲರೂ ಸೇರಿ ಖಾಸಗಿ ಆಸ್ತಿಯನ್ನು ಹೊಂದುವ ಹಕ್ಕಿನ ವಿರುದ್ಧ ಹೋರಾಡಬಹುದು. ಯಾವ ಒಡೆಯರೂ ಇಲ್ಲ... ಯಾವ ಬಾಡಿಗೆದಾರನೂ ಇಲ್ಲ!! ಒಟ್ಟಿನಲ್ಲಿ ಕೃಷಿ ಭೂಮಿ ಇಲ್ಲದ ಕಾರ್ಮಿಕರೇ ಇಲ್ಲ!

MRA: ಈ ಸರಕಾರದ ಬಂಡವಾಳಶಾಹಿ ದೃಷ್ಟಿಕೋನ ಕೂಡ ಅಪಾಯಕಾರಿಯಾಗಿ ಪರಿಣಮಿಸಬಹುದು. ಸ್ಟ್ಯಾಲಿನ್ ರಷಿಯಾದಲ್ಲಿ ಏನು ಮಾಡಿದ ಎಂದು ತಮಗೆ ತಿಳಿದಿದೆ. ಕಮ್ಯೂನಿಸಂನ ಹೆಸರಿನಲ್ಲಿ ಜನರ ಒಂದು ಅಧಿಕಾರಶಾಹಿ ಗುಂಪನ್ನು ಅಧಿಕಾರಕ್ಕೆ ತಂದ!

BRA: ಖಂಡಿತ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಯ ಸ್ವಾತಂತ್ರ್ಯಹರಣ ಆಗದಂತೆ ನಾವು ಗಮನಿಸಬೇಕು, ಒಬ್ಬ ವ್ಯಕ್ತಿಯ ಮೂಲಭೂತ ಸ್ವಾತಂತ್ರ್ಯಕ್ಕೆ ನಾವು ಮಾನ್ಯತೆ ನೀಡಬೇಕು. ಮೂಲಭೂತ ಹಕ್ಕುಗಳಿಗಾಗಿ ಹೋರಾಡುವಾಗ ನನ್ನ ಮನದಲ್ಲಿ ಇದ್ದದ್ದು ಕೂಡ ಇದೇ.

MRA: ಇದು ನಿಮ್ಮ ಮನದಲ್ಲಿತ್ತಾದರೇ, ನೀವು ಸಂಸತ್ತನ್ನು ಈ ಮೂಲಭೂತ ಹಕ್ಕುಗಳಿಗಾಗಿ ಒತ್ತಾಯಿಸಬೇಕಿತ್ತಲ್ಲವೇ? ನಾವು ಸರಕಾರ ಬಂಡವಾಳಶಾಹಿ ಪ್ರವೃತ್ತಿ ಹಾಗು ಖಾಸಗಿ ಬಂಡವಾಳಶಾಹಿ ಪ್ರವೃತ್ತಿಯ ವಿರುದ್ಧ ಹೋರಾಡಬೇಕು. ಎಲ್ಲಾ ಕಡೆಯಲ್ಲಿ ಒಡೆಯರ ಮರ್ಜಿಯಲ್ಲಿ ಬಹುಸಂಖ್ಯೆಯ ಜನರು ಸಿಲುಕಿರುವುದು ಎಲ್ಲರಿಗೂ ತಿಳಿದಿರುವ ಸತ್ಯ.

BRA: ನಿಜ. ಈಗ ಸ್ವಾತಂತ್ರ್ಯ ಎಂದರೆ ಮಾಲೀಕನು ಬಾಡಿಗೆ ಏರಿಸುವುದಕ್ಕೆ ಇರುವ ಅಧಿಕಾರ ಎಂದಾಗಿ ಹೋಗಿದೆ. ಬಂಡವಾಳಶಾಹಿಗಳು ಯಾವಾಗಲೂ ಕೂಲಿಯನ್ನು ಕಡಿಮೆ ಮಾಡಿ, ಕೆಲಸವನ್ನು ಜಾಸ್ತಿ ಮಾಡಿಸುವ ಹುನ್ನಾರದಲ್ಲಿರುತ್ತಾರೆ. ಬಂಡವಾಳಶಾಹಿ ಎಂದರೆ ಒಬ್ಬ ಯಜಮಾನನ ಸರ್ವಾಧಿಕಾರಿ

ಧೋರಣೆ ಎಂಬಂತಾಗಿದೆ.

MRA: ಮೂಲಭೂತ ಹಕ್ಕುಗಳು – ಜೀವನ ಕನಸಾಗಿಯೇ ಉಳಿದು ಹೋಗಿದೆ.

BRA: ಈ ಯುವ ಜನಾಂಗ ಹೋರಾಟಕ್ಕೆ ಮೊರೆಹೋಗಬೇಕು. ಅವರು ಸಂವಿಧಾನವನ್ನು ಬದಲಿಸಬಲ್ಲರು.

MRA: ಆದರೆ ೧೭೮೯ರಲ್ಲಿ ಫ್ರಾನ್ಸ್ ಕ್ರಾಂತಿಯಲ್ಲಿ ಅದಂತೆ ಇಡೀ ವ್ಯವಸ್ಥೆಯನ್ನು ಬುಡಮೇಲು ಮಾಡದಿದ್ದರೆ ಅದು ಸಾಧ್ಯವಾಗದು.

BRA: ಇದನ್ನು ನಿಮ್ಮಿಂದ ಕೇಳಲು ವಿಚಿತ್ರವೆನಿಸುತ್ತದೆ. ಏಕೆಂದರೆ ಗಾಂಧೀಜಿಯನ್ನು ಅಸ್ಪೃಶ್ಯರ ಸ್ವಾತಂತ್ರ್ಯವಾದಿ ಹಾಗು ನಾಯಕನೆಂದು ನಿಮ್ಮ ಕೃತಿಯಲ್ಲಿ ಚಿತ್ರಿಸಿರುವಿರಿ. ನೀವು ಕೂಡ ಅಹಿಂಸಾತತ್ವಕ್ಕೆ ಮೊರೆ ಹೋಗಿರುವಿರಿ ಎಂದೇ ಭಾವಿಸಿದೆ.

MRA: ಮಹಾತ್ಮ ಗಾಂಧೀಜಿಯವರ ಸಿದ್ಧಾಂತಕ್ಕೆ ನಾನು ಕಟ್ಟು ಬೀಳಲು ಸಾಧ್ಯವಾಗಲಿಲ್ಲ. ನಾವು ಹಿಟ್ಲರ್ ಹಾಗು ಮುಸೋಲಿನಿಯನ್ನು ಎದುರಿಸಬೇಕಾಯಿತು. ನಾನು ಸ್ಪೇನ್‌ಗೆ ತೆರಳಿ ಅಂತರರಾಷ್ಟ್ರೀಯ ಸೇನೆಗೆ ಸೇರ್ಪಡೆಯಾದೆ. ಆದರೆ ಒಂದು ಚಿಕಿತ್ಸಾಲಯದಲ್ಲಿ ರಕ್ತ ಕಣ್ಣಿಗೆ ಬಿದ್ದಂತೆಯೇ ಮೂರ್ಛೆ ತಪ್ಪಿದೆ ನನಗೆ ಹೊರಹೋಗುವಂತೆ ತಿಳಿಸಲಾಯಿತು...... ಆದರೆ ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ನಾವು ಯಾವುದಾದರೂ ಒಂದು ಗುಂಪಿಗೆ ಸೇರ್ಪಡೆ ಆಗಲೇಬೇಕಾಯಿತು. ಈ ಯುದ್ಧವನ್ನು ಒಬ್ಬ ಕವಿ ಫ್ಯಾಸಿಸಮ್ ಹಾಗು ಪ್ರಜಾಪ್ರಭುತ್ವದ ನಡುವಿನ ಯುದ್ಧ, ದೊಡ್ಡ ಸುಳ್ಳಿನ ವಿರುದ್ಧ ಅರ್ಧಸುಳ್ಳಿನ ಯುದ್ಧ ಎಂದು ಬಣ್ಣಿಸಿದ.

BRA: ನಿಮಗೆ ತಿಳಿದಿದೆಯೆ; ಮಹಾತ್ಮ ಹರಿಜನರಿಗಾಗಿ ಹೋರಾಡಿದರೂ ಕೂಡ, ಭಗವದ್ಗೀತೆಯಲ್ಲಿ ಬೋಧಿಸಿದ ವರ್ಣಾಶ್ರಮದ ನಂಬಿಕೆಯಿಂದ ಹೊರಬರಲಿಲ್ಲ. ಅಸ್ಪೃಶ್ಯರಿಗೆ ಹರಿಜನರು ಎಂದು ನಾಮಕರಣ ಮಾಡುವ ಮುಖಾಂತರ ಅವರನ್ನು ಸಂತಸಪಡಿಸುತ್ತಿದ್ದೇನೆ ಎಂದು ಭ್ರಮಿಸಿದರು. ಆದರೆ ನಿಜಸಂಗತಿ ಎಂದರೆ ಇವರುಗಳು ಇನ್ನೂ ಅತ್ಯಂತ ಕೀಳುಮಟ್ಟದಲ್ಲಿಯೇ ಇದ್ದಾರೆ.

MRA: ಈ ಕಾರಣಕ್ಕಾಗಿಯೇ ತಾವು ಬೌದ್ಧಧರ್ಮದ ಮೊರೆ ಹೋದಿರಾ?

BRA: ಇದು ಮುಖ್ಯ ಕಾರಣವಿರಬಹುದು ಅಲ್ಲದೇ ಒಬ್ಬ ವ್ಯಕ್ತಿ ಪರಿಶಿಷ್ಟ ಜಾತಿಯಲ್ಲಿಯೇ ಇದ್ದರೆ ಆತ ಎಂದಿಗೂ ಜಾತಿಭ್ರಷ್ಟನಾಗಿಯೇ ಉಳಿಯುತ್ತಾನೆ. ನನಗೆ ಬುದ್ಧನಲ್ಲಿ ನಂಬಿಕೆಯಿದೆ. ಏಕೆಂದರೆ ಬೌದ್ಧಧರ್ಮಕ್ಕೆ ಹಿಂದೂ ದೇವರಾದ ಬ್ರಹ್ಮನಲ್ಲಿ ನಂಬಿಕೆಯಿಲ್ಲ. ಬದಲಿಗೆ ಎಲ್ಲಾ ಸ್ತ್ರೀಪುರುಷರೂ ಮತ ಸಿದ್ಧಾಂತಗಳಿಂದ ಮುಕ್ತರಾಗಿರಬೇಕು ಎಂದು ಅದು ಬಯಸುತ್ತದೆ. ಒಬ್ಬ ಇಲ್ಲಿ ಜ್ಞಾನವನ್ನು ಅರಸಬಹುದು! ಧಾರ್ಮಿಕ ನಂಬಿಕೆಯಿಂದ ನಾಯಕರಾಗಿರುವ ರಾಮ, ವಿಷ್ಣು ಮುಂತಾದವರನ್ನು ಕಡೆಗಣಿಸಬಹುದು. ಹಿಂದೂ ಧರ್ಮವು ಬೋಧಿಸುವ ಇತರ ಭಾವನಾತ್ಮಕ ವಿಷಯಗಳಿಂದ ಹೊರಗುಳಿಯಬಹುದು.

MRA: ನನಗೂ ಕೂಡ ಬ್ರಾಹ್ಮಣರ ಕುರುಡು ಸಿದ್ಧಾಂತಗಳಿಗಿಂತ ಬುದ್ಧನ ಬೋಧನೆಗಳು ಇಷ್ಟವಾಗುತ್ತವೆ. ಆತ ಈ ಪ್ರಪಂಚದ ಮೊತ್ತ ಮೊದಲ ಅಸ್ತಿತ್ವವಾದಿ. ಆತ ಕೂಗಿ ಹೇಳಿದ "ದುಃಖ, ದುಃಖ, ದುಃಖ. ಹಿಂದೂಗಳು ಯಾವಾಗಲೂ ಮೂಢ ನಂಬಿಕೆಗಳಿಗೆ ಕಟ್ಟು ಬಿದ್ದಿರುತ್ತಾರೆ. ಆನಂದವೇ ದೇವರು. ಭಿಕ್ಷುಕರು ಕೂಡ ದೇವರಿಂದ ಸಹಾಯ ಪಡೆಯಬೇಕೆಂದರೆ ಹೂವು–ಹಣ್ಣಿನ ಲಂಚದ ಆಮಿಷವನ್ನು ದೇವರಿಗೆ ಒಡ್ಡುತ್ತಾರೆ. ಅದೂ ಒಬ್ಬ ಅರ್ಚಕನ ಮುಖಾಂತರ!!

BRA: ಆದ್ದರಿಂದಲೇ ಬಹಳಷ್ಟು ಅರ್ಚಕರಿಗೆ ದೊಡ್ಡ ಹೊಟ್ಟೆಯಿರುತ್ತದೆ.

MRA: ನಿರಾಕರಿಸಲ್ಪಟ್ಟವರಿಗೆ ತಮ್ಮ ಸಂದೇಶವೇನು?

BRA: ನಾನು ಅಸ್ಪೃಶ್ಯರಿಗೆ ಹೇಳುತ್ತೇನೆ: ನೀವು ಹುಲಿಯಾಗಬೇಕು. ಹಿಂದೂಗಳು ಕಾಳಿ ದೇವಿಯ ಮುಂದೆ ಕುರಿಗಳ ಬಲಿ ನೀಡಿದರು. ನೀವೇ ನಿಮ್ಮ ಬೆಳಕಾಗಿರಿ. ಅಟಾಧೀದ ಭಾವ್[೧]

MRA: ಬುದ್ಧ ಆನಂದನಿಗೆ ಹೇಳಿದಂತೆ: ನೀನೆ ನಿನಗೆ ಬೆಳಕಾಗಿರು.

* * * * *

---

೧. ಮುಲ್ಕ್ ರಾಜ್ ಆನಂದ್ ಒಬ್ಬ ಪ್ರಸಿದ್ಧ ಲೇಖಕ: The Untouchable ಕೃತಿಯ ಕರ್ತೃ – Tribal World ಪತ್ರಿಕೆ ೧೯೯೧, ಪುಟ–೧೩

Remembrances of Dr. B R Ambedkar ನಲ್ಲಿ ಪುನರ್ಮುದ್ರಿತ – ಪುಟಗಳು ೧೧೦–೧೧೪

## ೪೫

## ಭಾರತೀಯ ಸಾಮಾಜಿಕ ಚಿಂತನೆಯಲ್ಲಿ ಹಿಂದುತ್ವವು ಇತ್ತೀಚಿನ ಬೆಳವಣಿಗೆ

ಬೊಂಬಾಯಿ, ಬುಧವಾರ*

ಭಾರತದ ಕಾನೂನು ಸಚಿವರಾದ ಡಾ.ಬಿ.ಆರ್.ಅಂಬೇಡ್ಕರ್, ಸಂಜೆ ದೆಹಲಿಯಿಂದ ಬೊಂಬಾಯಿಗೆ ಆಗಮಿಸಿದರು. ಅವರು ಬೌದ್ಧಮತಕ್ಕೆ ಮತಾಂತರ ಆಗಿರುವುದನ್ನು ಕುರಿತ ವರದಿಗಳಮೇಲೆ ಯಾವ ಅಭಿಪ್ರಾಯವನ್ನೂ ನೀಡಲು ನಿರಾಕರಿಸಿದರು.

ಸಿದ್ದಾರ್ಥ ಕಾಲೇಜಿನಂತಹ ಒಂದು ಕಾಲೇಜನ್ನು ಅಹ್ಮದ್ ನಗರದಲ್ಲಿ ಪ್ರಾರಂಭ ಮಾಡಬೇಕು ಎಂದು ಉದ್ದೇಶಿಸಿರುವುದಾಗಿ ಅವರು ವರದಿಗಾರರಿಗೆ ತಿಳಿಸಿದರು. ಆ ಕಾಲೇಜಿನಲ್ಲಿ ಕಲೆ ಹಾಗು ವಿಜ್ಞಾನ ಎರಡೂ ವಿಭಾಗಗಳನ್ನು ಪ್ರಾರಂಭಮಾಡುವುದಾಗಿ ಅವರು ತಿಳಿಸಿದರು. ಅದು ಬರುವ ವರ್ಷ ಜುಲೈನಿಂದ ಕಾರ್ಯರಂಭ ಮಾಡಲಿದೆ ಎಂದರು.

ಅವರು ಇಂದು ರಾತ್ರಿ ಪೂನಾಗೆ ತೆರಳಿ ನಾಳೆ ಸಂಜೆ ನಗರಕ್ಕೆ ಮರಳಲಿದ್ದಾರೆ.

ಒಬ್ಬ ಕುತೂಹಲವುಳ್ಳ ವ್ಯಕ್ತಿಯಾಗಿ "ಭಾರತದಲ್ಲಿ ಬೌದ್ಧಧರ್ಮದ ಉಗಮ ಹಾಗು ಪತನದ ಕಾರಣಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿರುವುದಾಗಿ ನುಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಅಭಿಪ್ರಾಯದಲ್ಲಿ ನಾವು ಬೌದ್ಧ ಧರ್ಮದ ಮಹತ್ವವನ್ನು ಅರಿಯಬೇಕೆಂದರೆ, ಅದರ ಹುಟ್ಟಿಗೆ ಕಾರಣವಾದ ಪರಿಸ್ಥಿತಿಯನ್ನು ಕೂಡ ಅರಿಯಬೇಕು. ಭಾರತದಲ್ಲಿ ಅನಾದಿ ಕಾಲದಿಂದಲೂ ಹಿಂದೂ ಧರ್ಮವು ಅಚರಣೆಯಲ್ಲಿ ಇದೆ ಎಂದು ಹೇಳುವ ಜನರ ವಾದವನ್ನು ಅವರು ಒಪ್ಪುವುದಿಲ್ಲ. ಭಾರತದ ಸಮಾಜ ವ್ಯವಸ್ಥೆಯಲ್ಲಿ ಹಿಂದೂ ಧರ್ಮವು ತೀರ ಇತ್ತೀಚಿನ ಚಿಂತನೆ ಎಂದರು.

### ಕ್ಷೀಣಿಸುವಿಕೆಗೆ ಕಾರಣ

ಬೌದ್ಧಧರ್ಮದ ಇಳಿತಕ್ಕೆ ಕಾರಣವನ್ನು ವಿವರಿಸುತ್ತಾ, ಅವರು ಬಹಳಷ್ಟು ಜನರು ಹೇಳುವಂತೆ ಬೌದ್ಧಮತವು ಕ್ಷೀಣಿಸುವಿಕೆಗೆ ಶಂಕರಾಚಾರ್ಯರ ತರ್ಕ ಹಾಗು ಚರ್ಚಾಕುಶಲತೆ ಕಾರಣವಲ್ಲ ಎಂದರು. "ಇದು ತಪ್ಪು ಏಕೆಂದರೆ ಶಂಕರಾಚಾರ್ಯರ ನಿಧನದ ನಂತರ ಹಲವಾರು ಶತಮಾನಗಳ ಕಾಲವೂ ಬೌದ್ಧ ಧರ್ಮ ಅಸ್ತಿತ್ವದಲ್ಲಿತ್ತು." ಎಂದರು.

ಬೌದ್ಧಧರ್ಮ ಭಾರತದಲ್ಲಿ ಮರೆಯಾಗಲು ವೈಷ್ಣವ ಧರ್ಮ ಹಾಗು ಶೈವ ಧರ್ಮದ ಉಗಮ ಕಾರಣ ಎಂದರು. ಮತ್ತೊಂದು ಕಾರಣವೆಂದರೆ ಭಾರತದ ಮೇಲೆ ಮುಸಲ್ಮಾನರ ಆಕ್ರಮಣ. "ಅಲ್ಲಾವುದ್ದೀನ ಬಿಹಾರವನ್ನು ಆಕ್ರಮಿಸಿದಾಗ ಆತ ೫,೦೦೦ ಭಿಕ್ಷುಗಳನ್ನು ಕೊಂದ" ಮಿಕ್ಕ ಬೌದ್ಧ ಸನ್ಯಾಸಿಗಳು ಅಕ್ಕ ಪಕ್ಕದ ದೇಶಗಳಾದ ಚೈನಾ, ನೇಪಾಳ ಹಾಗು ಟಿಬೆಟ್ಟಿಗೆ ಪಲಾಯನಗೈದರು. ಅನಂತರ ಭಾರತದಲ್ಲಿ ಆಳಿದುಳಿದಿದ್ದ ಬೌದ್ಧಧರ್ಮೀಯರು, ಬೌದ್ಧಮತವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಪಟ್ಟರು. ಆದರೆ ಇದು ವಿಫಲವಾಯಿತು. ಏಕೆಂದರೆ ಆ ಹೊತ್ತಿಗಾಗಲೇ ಶೇಕಡಾ ೯೦ ರಷ್ಟು ಬೌದ್ಧಧರ್ಮೀಯರು ಹಿಂದೂ ಧರ್ಮಕ್ಕೆ ಮತಾಂತರ ಆಗಿದ್ದರು.

ಬೌದ್ಧಮತದ ಮರಣದ ನಂತರ ಹಿಂದೂ ಧರ್ಮ ಹೇಗೆ ಉಳಿದುಕೊಂಡಿತು ಎಂದು ಅಂಬೇಡ್ಕರ್ ಅವರನ್ನು ಪ್ರಶ್ನಿಸಲಾಯಿತು ಅದಕ್ಕೆ ಅವರು "ಬೌದ್ಧಮತವನ್ನು ಆಚರಣೆಯಲ್ಲಿ ಇರಿಸಿಕೊಳ್ಳುವುದು ಕಷ್ಟ ಆದರೆ ಹಿಂದೂ ಧರ್ಮ ಹಾಗಲ್ಲ" ಎಂದರು.[೧]

1. The Free press journal 4ನೆಯ ಮೇ ೧೯೫೦

* The 3rd May 1950

## ೪೬
## ಪರಿಶಿಷ್ಟ ಜಾತಿಯವರ ವಿಮೋಚನೆ
## ಕರಡು ಪ್ರಣಾಳಿಕೆ

ಚುನಾವಣಾ ಪ್ರಣಾಳಿಕೆಯನ್ನು ನಿರ್ಧರಿಸುವ ಸಲುವಾಗಿ ನವದೆಹಲಿಯ ಡಾ.ಬಿ.ಆರ್.ಅಂಬೇಡ್ಕರ್ ಅವರ ನಿವಾಸದಲ್ಲಿ ೧೯೫೧ರ ಅಕ್ಟೋಬರ್ ೬ ರಂದು ಅಖಿಲ ಭಾರತ ಪರಿಶಿಷ್ಟ ಜಾತಿಯ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸದಸ್ಯರ. ಸಭೆ ನಡೆಯಿತು.[1]

ಕಾಂಗ್ರೆಸ್, ಹಿಂದೂ ಮಹಾ ಸಭಾ, RSS, ಸಮತಾವಾದಿ ಪಕ್ಷಗಳು ಹಾಗು ಜನಸಂಘದೊಂದಿಗೆ ಮೈತ್ರಿ ಮಾಡಿಕೊಳ್ಳಬಾರದು ಎಂದು ಆ ಸಭೆಯಲ್ಲಿ ನಿರ್ಧಾರಕ್ಕೆ ಬರಲಾಯಿತು. ಬೇರೆಯ ಪಕ್ಷಗಳೊಂದಿಗೆ ಮೈತ್ರಿಯನ್ನು ಮಾಡಿಕೊಳ್ಳುವ ವಿಷಯವನ್ನು ನಿರ್ಧರಿಸಲು ಒಂದು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್, ಎನ್. ಶಿವರಾಜ್ ಹಾಗು ಬಾಪು ಸಾಹೇಬ್ ರಾಜ್‌ಭೋಗ್ ಅವರಿದ್ದರು. ಈ ಸಮಿತಿಯೇ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಬೇಕು ಎಂದು ನಿರ್ಧರಿಸಲಾಯಿತು.

ಇದಲ್ಲದೇ ಪರಿಶಿಷ್ಟ ಜಾತಿಯ ಒಕ್ಕೂಟ 'ಸಮತಾ ಸೈನಿಕ ದಳ' ವನ್ನು ಬಲಪಡಿಸಲು ನಿರ್ಧರಿಸಲಾಯಿತು.

'ಪರಿಶಿಷ್ಟ ಜಾತಿಯ ಒಕ್ಕೂಟವು' ಸಿದ್ಧಪಡಿಸಿದ್ದ ಪ್ರಣಾಳಿಕೆಗೆ ಎಲ್ಲರೂ ಒಕ್ಕೊರಲಿನಿಂದ ಸಮ್ಮತಿ ಸೂಚಿಸಿದರು. ಇದಾದ ನಂತರ ಮಾಧ್ಯಮದ ಜನರು ಬಹಳಷ್ಟು ಬಾರಿ ಈ ವಿಷಯವನ್ನೇ ಕುರಿತು ಬರೆದರು. ೭ನೆಯ ಅಕ್ಟೋಬರ್ ೧೯೫೧ ರಂದು ಬಿಡುಗಡೆಯಾದ ಈ ಪ್ರಣಾಳಿಕೆಯನ್ನು ಭಾರತೀಯರು ಹಾಗು ಪಾಶ್ಚಾತ್ಯರು ಸ್ವಾಗತಿಸಿದರು. ಇದು ಅತ್ಯಂತ ವಿಶಿಷ್ಟವಾದ, ಸಾಟಿಯಿಲ್ಲದ ಹಾಗು ಖಂಡಿತವಾದಿಯಾದ ಪ್ರಣಾಳಿಕೆ ಎಂದರು.[2]

ಈ ಪ್ರಣಾಳಿಕೆಯ ಪ್ರತಿಗಳನ್ನು ಎಲ್ಲಾ ಪತ್ರಿಕೆಯವರಿಗೆ ಮುಂಚಿತವಾಗಿಯೇ ಕಳುಹಿಸಿಕೊಡಲಾಗಿತ್ತು. ಅಂತೆಯೇ ಆ ದಿನಗಳ ಅತ್ಯಂತ ಪ್ರಮುಖ ದಿನಪತ್ರಿಕೆಯಾದ 'The Times of India' ಪತ್ರಿಕೆಯು ೧೯೫೧ರ ಅಕ್ಟೋಬರ್ ೩ರಂದು ಈ ಕೆಳಗಿನಂತೆ ಪ್ರತಿಕ್ರಿಯೆ ವ್ಯಕ್ತಪಡಿಸಿತು:–

"ಬಡತನದ ವಿರುದ್ಧ ಹೋರಾಡಲು ಈ ಒಕ್ಕೂಟವು ಎರಡು ಮಾರ್ಗಗಳನ್ನು ಅನುಸರಿಸಲು ನಿರ್ಧರಿಸಿದೆ. ಮೊದಲನೆಯದು ಅದು ಜನರಿಗೆ ಜನಸಂಖ್ಯೆಯ ಮಿತಿಯನ್ನು ಪ್ರತಿಪಾದಿಸುತ್ತದೆ. ಅಂತೆಯೇ ಕೃಷಿಯ ಹಾಗು ಕಾರ್ಖಾನೆಗಳ ಉತ್ಪನ್ನಗಳ ಹೆಚ್ಚುಮಾಡಲು ನಿರ್ಧರಿಸಿದೆ. ಕಾರ್ಖಾನೆಗಳ ಅಭಿವೃದ್ಧಿಯ ಪ್ರಾಮುಖ್ಯವನ್ನು ಒಕ್ಕೂಟವು ತಿಳಿದಿದೆ. ಅಲ್ಲದೇ, ಕೃಷಿ ಚಟುವಟಿಕೆಗಳೇ ಈ ದೇಶದ ಆರ್ಥಿಕತೆಯ ಬುನಾದಿ ಎಂಬ ಅಂಶವನ್ನು ಇದು ಅರಿತುಕೊಂಡಿದೆ. ಇನ್ನು ಆಡಳಿತದ ವಿಷಯಕ್ಕೆ ಬಂದರೆ, ಈ ಒಕ್ಕೂಟವು ಭಾಷಾವಾರು ಪ್ರಾಂತಗಳ ರಚನೆಗೆ ಒತ್ತಾಯಿಸಲಿದೆ. ಭ್ರಷ್ಟಾಚಾರ ಹಾಗೂ ಕಪ್ಪು ಮಾರುಕಟ್ಟೆ, ಅದರಲ್ಲಿಯೂ ವಿಶೇಷವಾಗಿ ಮಂತ್ರಿಗಳು ಹಾಗೂ ಅಧಿಕಾರಿಗಳ ವಿಷಯದಲ್ಲಿ ಅತ್ಯಂತ ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಳ್ಳಲಿದೆ. ಸೇನೆಯಲ್ಲಿ ಆಗುತ್ತಿರುವ ಖರ್ಚುಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿಯೂ ಇದು ಗಮನ ಹರಿಸಲಿದೆ. ಅಂತೆಯೇ ಪುನಃ ಉಪ್ಪಿನ ಮೇಲಿನ ತೆರಿಗೆಯನ್ನು ಜಾರಿಗೆ ತರಲಿದೆ, ಜೀವ

---

1. Khaimode Vol. 10 P. 147
2. Janata, October 13th, 1951

ವಿಮೆಯನ್ನು ರಾಷ್ಟ್ರೀಕರಣಗೊಳಿಸಲಿದೆ. ಇನ್ನು ವಿದೇಶಿ ನೀತಿಗಳಿಗೆ ಬಂದರೆ, ಭಾರತ ಮೊದಲು ತನ್ನ ಬಗ್ಗೆ ಆದ್ಯತೆ ನೀಡಬೇಕೆಂದು ಹೇಳಿದೆ. ಈಗಿರುವ ನೀತಿಯನ್ನು ಸಂಪೂರ್ಣ ಬದಲಾವಣೆ ಮಾಡಲು ಅದು ಒತ್ತಾಯಿಸುತ್ತದೆ. ಏಕೆಂದರೆ ಈಗಿನ ನೀತಿಯಿಂದಾಗಿ ಭಾರತದ ಮಿತ್ರರೆಲ್ಲರೂ ಶತ್ರುಗಳಾಗಿ ಮಾರ್ಪಟ್ಟಿದ್ದಾರೆ – ಇದಕ್ಕೆ ಉದಾಹರಣೆಯಾಗಿ ಭಾರತ ಹಾಗು ಅಮೆರಿಕಾಗಳ ನಡುವಿನ ಮನಸ್ತಾಪವನ್ನು ವಿವರಿಸಲಾಗಿದೆ.....[೧]

**ತಮ್ಮ ಮತ ಚಲಾವಣೆ ಮಡುವ ಮುನ್ನ ಚಿಂತಿಸಬೇಕಾಗಿರುವ ಹಾಗೂ ತಮ್ಮ ಸ್ವಹಿತಕ್ಕಿಂತ ಸಾರ್ವಜನಿಕ ಹಿತಾಸಕ್ತಿ ಮುಖ್ಯ ಎಂದು ಅರಿತುಕೊಳ್ಳಬೇಕಾಗಿರುವ ಭಾರತದ ಸ್ತ್ರೀ ಪುರುಷರಿಗೆ.**

## ಪರಿಶಿಷ್ಟ ಜಾತಿಯ ಒಕ್ಕೂಟದ ಚುನಾವಣಾ ಪ್ರಣಾಲಿಕೆ

ಪರಿಶಿಷ್ಟ ಜಾತಿಯ ಒಕ್ಕೂಟವು ಅಖಿಲ ಭಾರತ ಮಟ್ಟದ ಒಂದು ರಾಜಕೀಯ ಪಕ್ಷ. ಇದನ್ನು ಸ್ಥಾಪಿಸಿರುವವರು ಪರಿಶಿಷ್ಟ ಜಾತಿಯ ಜನರು. ಈ ಕೆಳಗಿನ ಪುಟಗಳಲ್ಲಿ ಅದರ ೧) ತತ್ವಗಳನ್ನು ೨) ನೀತಿಗಳನ್ನು ೩) ಕಾರ್ಯಚಟುವಟಿಕೆಗಳನ್ನು ಹಾಗು ೪) ಇತರ ಪಕ್ಷಗಳೊಂದಿಗೆ ಅದರ ಒಡಂಬಡಿಕೆಯನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್

### ಪಕ್ಷದ ತತ್ವಗಳು:

೧) ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದಂತೆ ಈ ಪಕ್ಷದ ಧೋರಣೆಗಳು ಈ ಕೆಳಗಿನ ತತ್ತ್ವಗಳಿಗೆ ಒಳಪಟ್ಟಿರುತ್ತವೆ.

೧) ಅದು ಎಲ್ಲಾ ಭಾರತೀಯರರನ್ನು ಕಾನೂನಿನ ವಿಷಯದಲ್ಲಿ ಸಮಾನವಾಗಿ ಪರಿಗಣಿಸಲಿದೆ. ಈ ಕ್ಷೇತ್ರದಲ್ಲಿ ಮಾತ್ರವಲ್ಲದೆ ಅದು ಇಲ್ಲದ ಕ್ಷೇತ್ರಗಳಲ್ಲಿಯೂ ಸಮಾನತೆಯನ್ನು ಬೆಳಸಲಿದೆ ಮತ್ತು ಸಮಾನತೆಯನ್ನು ನೀಡದಿರುವ ಎಡೆಗಳಲ್ಲಿ ಅಲ್ಲಿ ಇದು ಸಮಾನತೆಯು ದೊರೆಯುವಂತೆ ಮಾಡುತ್ತದೆ.

೨) ಇದು ಪ್ರತಿಯೋರ್ವ ವ್ಯಕ್ತಿಯನ್ನು ಒಬ್ಬ ಪ್ರತ್ಯೇಕ ವ್ಯಕ್ತಿಯಾಗಿ ಪರಿಗಣಿಸಲಿದೆ. ಆತ ತನ್ನ ಅಭಿವೃದ್ಧಿಗೆ ತನ್ನದೇ ಆದ ರೀತಿಯ ಹಕ್ಕುಗಳನ್ನು ಹೊಂದಿರುತ್ತಾನೆ. ಇದಕ್ಕೆ ಸರಕಾರವು ಕೇವಲ ಒಂದು ಸಾಧನವಷ್ಟೆ.

೩) ರಾಷ್ಟ್ರದ ಅಥವಾ ಇತರ ಪ್ರಜೆಗಳ ಹಿತಕ್ಕೆ ಧಕ್ಕೆಯಾಗದಂತೆ ಪ್ರತಿಯೊಬ್ಬ ಭಾರತೀಯನ

---

1. The Times of India, dated 3rd October 1951 under title - `Scheduled castes' emancipation : Draft Manifesto'
Reprinted, Khairmade, Vol. 10, P. 147.

ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳನ್ನು ಪಕ್ಷವು ಸಮರ್ಥಿಸುತ್ತದೆ.

೪) ಎಲ್ಲಾ ಭಾರತೀಯರಿಗೂ ಸಮಾನವಾದ ಅವಕಾಶಗಳು ಎಂಬ ತತ್ವಕ್ಕೆ ಪಕ್ಷ ಅಂಟಿಕೊಳ್ಳಲಿದೆ. ಯಾರಿಗೆ ಈ ಮೊದಲು ಒಂದು ಬಾರಿಯೂ ಅವಕಾಶ ದೊರೆತಿರಲಿಲ್ಲವೋ ಅವರಿಗೆ ಅದು ಆದ್ಯತೆಯನ್ನು ನೀಡಲಿದೆ.

೫) ಎಲ್ಲಾ ವ್ಯಕ್ತಿಗಳ ಅಗತ್ಯ ಪೂರೈಸುವುದು ಹಾಗು ಅವರನ್ನು ಭಯರಹಿತರನ್ನಾಗಿ ಇಡುವುದು ಸರಕಾರದ ಜವಾಬ್ದಾರಿ ಎಂದು ಎಚ್ಚರಿಸುತ್ತಾ ಇರುತ್ತದೆ.

೬) ಸ್ವಾತಂತ್ರ್ಯ, ಸಮಾನತೆ ಹಾಗು ಭ್ರಾತೃತ್ವಕ್ಕೆ ಈ ಪಕ್ಷ ಒತ್ತು ನೀಡಲಿದೆ ಮನುಷ್ಯರಿಂದ ಮನುಷ್ಯರ, ಧರ್ಮಗಳಿಂದ ಧರ್ಮಗಳ ಹಾಗು ದೇಶಗಳಿಂದ ದೇಶಗಳ ಶೋಷಣೆಯನ್ನು ನಿಲ್ಲಿಸಲು ಹೋರಾಡಲಿದೆ.

೭) ಇದು ವ್ಯಕ್ತಿಗತವಾಗಿ ಹಾಗು ದೇಶದ ಹಿತ ದೃಷ್ಟಿಯಿಂದ ಒಳ್ಳೆಯ ಸಂಸದೀಯ ವ್ಯವಸ್ಥೆಯ ಸರಕಾರವನ್ನು ಪಕ್ಷವು ಬೆಂಬಲಿಸಲಿದೆ.

೨) ಈ ತತ್ವಗಳ ಹಿಂದಿರುವ ಆಶಯವನ್ನು ಅರಿಯಬೇಕಾದರೆ ಎರಡು ವಿಷಯಗಳ ಬಗ್ಗೆ ಗಮನ ನೀಡಬೇಕು. ಈ ತತ್ವಗಳನ್ನು ಪರಿಶಿಷ್ಟ ಜಾತಿಯ ಒಕ್ಕೂಟವು ಪ್ರಕಟಿಸಿದ್ದರೂ ಕೂಡ ಅದು ಪರಿಶಿಷ್ಟ ಜಾತಿಯ ಜನರ ಒಳಿತಿಗಾಗಿ ಮಾತ್ರವಲ್ಲ ಬದಲಾಗಿ ಅತ್ಯಂತ ಕೆಳ ಮಟ್ಟದಲ್ಲಿ ಶೋಷಣೆಗೆ ಒಳಗಾಗುತ್ತಿರುವ ಇಡೀ ಮನುಷ್ಯ ಕುಲಕ್ಕಾಗಿ ಅವುಗಳನ್ನು ಅನುಷ್ಠಾನಕ್ಕೆ ತರಲಾಗುವುದು. ಇದೇ ಈ ತತ್ವಗಳ ಹಿಂದಿರುವ ಈ ಆಶಯದ ದೃಷ್ಟಿಯಿಂದ ಗಮನಿಸಿದರೆ ಈ ಒಕ್ಕೂಟವು ಜಾತ್ಯತೀತ ಎಂಬುದು ತಿಳಿಯುತ್ತದೆ. ಅದು ಎಲ್ಲರಿಗೂ ಅನ್ವಯವಾಗದೆ ಇರಬಹುದು. ಆದರೆ ಇದು ಅರ್ಹರಾದ ಎಲ್ಲರ ಸಮಸ್ಯೆಗಳಿಗೂ ಸ್ಪಂದಿಸಲಿದೆ.

೩) ಪರಿಶಿಷ್ಟ ಜಾತಿಯ ಒಕ್ಕೂಟದ ತತ್ವಗಳಲ್ಲಿ ಯಾವುದೇ ಹೊಸತನ ಇರದೇ ಇರಬಹುದು. ಬಹಳಷ್ಟು ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಲ್ಲಿ ನಾವು ಈ ಅಂಶಗಳನ್ನು ಕಾಣಬಹುದು. ಆದರೆ ಎರಡು ವಿಷಯಗಳಲ್ಲಿ ಈ ಒಕ್ಕೂಟವು ಇತರ ಪಕ್ಷಗಳಿಗಿಂತ ಭಿನ್ನವಾಗಿದೆ. ಮೊದಲನೆಯ ಅಂಶ ಎಂದರೆ ಒಕ್ಕೂಟವು ಈ ತತ್ವಗಳನ್ನು ಕೇವಲ ಕಣ್ಣೊರಸುವ ತಂತ್ರವನ್ನಾಗಿಸಿಕೊಂಡಿಲ್ಲ. ಅಥವಾ ಇದು ಮತದಾರರನ್ನು ಒಲಿಸುವ ತಂತ್ರವಲ್ಲ. ಇದು ಈ ಒಕ್ಕೂಟದ ಅಸ್ತಿತ್ವದಲ್ಲಿ ಅತ್ಯಂತ ಸ್ವಾಭಾವಿಕವಾಗಿ ಬಂದಿರುವಂತಹುದು. ಪರಿಶಿಷ್ಟ ಜಾತಿಯ ಜನರ ಸಾಮಾಜಿಕ ಸ್ಥಿತಿಗತಿಯಿಂದ ಇದು ಉದ್ಭವಿಸಿದೆ. ಪರಿಶಿಷ್ಟ ಜಾತಿಯ ಒಕ್ಕೂಟವು ಈ ತತ್ವಗಳನ್ನು ಅಳವಡಿಸಿಕೊಳ್ಳದೇ ಇರುವಂತಿಲ್ಲ. ಮಾತ್ರವಲ್ಲ, ಈ ತತ್ವಗಳನ್ನು ಆಚರಣೆಗೆ ತರದಿದ್ದರೇ ಅದಕ್ಕೆ ಅಸ್ತಿತ್ವವೂ ಇಲ್ಲ. ಈ ತತ್ವಗಳೇ ಈ ಒಕ್ಕೂಟದ ಜೀವಾಳ. ಇದೊಂದು ರಾಜಕೀಯ ನಂಬಿಕೆಯ ಬಾಹ್ಯ ಚಿಹ್ನೆ ಅಲ್ಲ. ಅದೊಂದು ಅಂತರಾಳದ ಭಾವನೆಯ ಬಹಿರಂಗ ಅಭಿವ್ಯಕ್ತಿ. ಇದು ಚುನಾವಣೆಯಲ್ಲಿ ಗೆಲುವಿಗಾಗಿ ಅಳವಡಿಸಿಕೊಂಡಿರುವ ತಂತ್ರವಲ್ಲ. ಹಲವಾರು ಪಕ್ಷಗಳು ಈ ತತ್ವಗಳನ್ನು ಅಳವಡಿಸಿಕೊಂಡಿರಬಹುದು. ಆದರೆ ಈ ಒಕ್ಕೂಟದಂತೆ ನಿಜವಾದ ಅರ್ಥದಲ್ಲಿ ಇದಕ್ಕೆ ಅವು ಕಟ್ಟುಬಿದ್ದಿಲ್ಲ. ಇದು ನಾವು ಗಮನಿಸಬೇಕಾದ ಎರಡನೆಯ ಅಂಶ.

## ಪಕ್ಷದ ನೀತಿ

೪) ಮೇಲೆ ಹೇಳಿರುವ ತತ್ವಗಳು ಆಚರಣೆಗೆ ಬರುವಂತೆ ಮಾಡುವುದೇ ಈ ಪಕ್ಷದ ನೀತಿ. ಈ ಪಕ್ಷದ ನೀತಿಯು ಯಾವುದೇ ಸಿದ್ಧಾಂತಕ್ಕೆ ಕಟುಬಿದ್ದಿಲ್ಲ. ಅಥವಾ ಕಮ್ಯುನಿಸಂ, ಸಮಾಜವಾದ ಅಥವಾ ಗಾಂಧೀವಾದಕ್ಕೆ ಕಟ್ಟುಬಿದ್ದಿಲ್ಲ. ಈ ಪಕ್ಷ ಸಮಾಜದ ಹಿತಕ್ಕಾಗಿ ಯಾವುದೇ ಸಿದ್ಧಾಂತವನ್ನು ಅಳವಡಿಸಿಕೊಳ್ಳಲು ಸಿದ್ಧವಿದೆ. ಜೀವನದೆಡೆಗಿನ ಪಕ್ಷದ ಈ ದೃಷ್ಟಿಯು ಅತ್ಯಂತ ವೈಚಾರಿಕ, ಹಾಗೂ ಅನುಭವಾತ್ಮಕವಾಗಿರುತ್ತದೆ.

## ಪಕ್ಷದ ಕಾರ್ಯಚಟುವಟಿಕೆಗಳು

### ೧. ಹಳೆಯ ಸಮಸ್ಯೆಗಳು

೫. ಭಾರತದಲ್ಲಿ ಅಸ್ತಿತ್ವದಲ್ಲಿ ಇರುವ ಯಾವುದೆ ರಾಜಕೀಯ ಪಕ್ಷದ ಕಾರ್ಯಚಟುವಟಿಕೆಗಳು ಸಂಪೂರ್ಣವಾಗಿ ಬ್ರಿಟಿಷರು ಬಿಟ್ಟು ಹೋಗಿರುವ ಆಸ್ತಿಯಂತಿರಬೇಕು. ಬ್ರಿಟಿಷರ ಆಡಳಿತಕ್ಕೆ ತನ್ನದೇ ಆದ ಒಳಿತು ಕೆಡಕುಗಳಿದ್ದವು. ಬ್ರಿಟಿಷರ ಆಡಳಿತದ ವಿಶ್ವಾಸಾರ್ಹ ಅಂಶಗಳು ಎಂದರೆ ೧) ಕಾನೂನಿನ ಏಕರೂಪತೆ, ೨) ನ್ಯಾಯ ವಿತರಣೆಯಲ್ಲಿನ ಏಕರೂಪತೆ, ೩) ಆಡಳಿತ ವ್ಯವಸ್ಥೆಯ ಏಕರೂಪತೆ. ಆದರೆ ಇದರ ನಕಾರಾತ್ಮಕ ಅಂಶಗಳು ಎಂದರೆ ೧) ಈ ದೇಶದ ಜನರು ಪಾಲಿಸುತ್ತಿರುವ ಪುರಾತನ ಸಾಮಾಜಿಕ ವ್ಯವಸ್ಥೆಯ ಪಾಲನೆಯ ಮುಂದುವರಿಕೆ, ೨) ಶಿಕ್ಷಣ ಹಾಗು ಸಾರ್ವಜನಿಕ ಮತ್ತು ಮಿಲಿಟರಿ ಸೇವೆಯಲ್ಲಿ ಮೇಲ್ವರ್ಗದ ಜನರಿಗೆ ಮಾತ್ರ ಅವಕಾಶ, ೩) ಅಸ್ಪೃಶ್ಯರು, ಬುಡಕಟ್ಟು ಜನಾಂಗದವರು ಹಾಗು ಹಿಂದುಳಿದ ವರ್ಗಗಳ ಜನರ ಬಗ್ಗೆ ಸಂಪೂರ್ಣ ಉದಾಸೀನ, ೪) ದೇಶವನ್ನು ಬಡತನದ ಆಳಕ್ಕೆ ತಳ್ಳುತ್ತಿರುವುದು.

### A. ಹಿಂದುಳಿದ ವರ್ಗಗಳನ್ನು ಬೆಳೆಸಲು ಇರುವ ಸಮಸ್ಯೆಗಳು

ಶೈಕ್ಷಣಿಕ ಹಾಗು ಔದ್ಯೋಗಿಕ ಕ್ಷೇತ್ರಗಳಲ್ಲಿ ಪರಿಶಿಷ್ಟ ವರ್ಗದ ಜನರು, ಬುಡಕಟ್ಟು ಜನರು ಹಾಗು ಹಿಂದುಳಿದ ವರ್ಗದ ಜನರನ್ನು ಮೇಲಕ್ಕೆ ಎತ್ತುವ ಪ್ರಯತ್ನವನ್ನು ಪರಿಶಿಷ್ಟ ಜಾತಿಯ ಒಕ್ಕೂಟವು ಕೈಗೊಳ್ಳಲಿದೆ. ಇದು ಹಿಂದುಳಿದ ವರ್ಗದ ಒಕ್ಕೂಟದ ಮೂಲಧ್ಯೇಯ ಆಗಲಿದೆ ಹಾಗು ಇದಕ್ಕೆ ಪ್ರಥಮ ಆದ್ಯತೆ ದೊರೆಯಲಿದೆ. ಈ ಕಾರ್ಯವನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವನ್ನಾಗಲೀ, ಸಾಧನಗಳ ಕೊರತೆಯನ್ನಾಗಲೀ ಕಾರಣವೆಂದು ಒಪ್ಪಿಕೊಳ್ಳಲಾಗುವುದಿಲ್ಲ. ಒಕ್ಕೂಟವು ಪರಿಶಿಷ್ಟ ಜಾತಿಯವರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇವಲ ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣವನ್ನು ಮಾತ್ರ ಗಮನದಲ್ಲಿ ಇರಿಸಿಕೊಂಡಿಲ್ಲ. ಅದರ ಮನದಲ್ಲಿ ಇರುವುದು ಈ ದೇಶದಲ್ಲಿ ಹಾಗು ವಿದೇಶದಲ್ಲಿ ಅವರಿಗೆ ದೊರಕಿಸಿಕೊಡಬಹುದಾದ ಉನ್ನತ ಶಿಕ್ಷಣ. ಇದರಿಂದಾಗಿ ಈ ವರ್ಗದ ಜನರು ಆಡಳಿತ ವ್ಯವಸ್ಥೆಗೆ ಸೇರ್ಪಡೆ ಆಗುವುದು ಸುಲಭವಾಗುತ್ತದೆ. ಅಂತೆಯೇ ಔದ್ಯೋಗಿಕ ಕ್ಷೇತ್ರದಲ್ಲಿ ಈ ಒಕ್ಕೂಟವು ಕನಿಷ್ಠ ವಿದ್ಯಾರ್ಹತೆಗೆ ಒಳಪಟ್ಟು ಮೀಸಲಾತಿಗೆ ಒತ್ತಾಯಿಸಲಿದೆ. ಹೀಗಾಗದಿದ್ದರೆ ಆಡಳಿತ ಹಾಗೂ ಮಿಲಿಟರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳವರಿಗೆ ಸ್ಥಾನಗಳು ದೊರಕುವುದೇ ಇಲ್ಲ. ಇಂದು ಈ ಮಿಲಿಟರಿ ಹಾಗು ಆಡಳಿತ

ವಲಯದ ಉದ್ಯೋಗ ಕ್ಷೇತ್ರದಲ್ಲಿ ಕೇವಲ ಮೇಲ್ವರ್ಗದ ಜನರೇ ಹಿಡಿತ ಸಾಧಿಸಿದ್ದಾರೆ. ಕೆಲವೇ ಕೆಲವು ಸಮುದಾಯಗಳು ಇಲ್ಲಿ ಸರ್ವಾಧಿಕಾರ ನಡೆಸುತ್ತಿವೆ. ಆದರೆ ಈ ಧೋರಣೆಯನ್ನು ಮುರಿಯಲು ಹಿಂದುಳಿದ ವರ್ಗದ ಜನರು ಮುಂದಾದರೆ ಅವರನ್ನು ಜಾತಿವಾದಿಗಳೆಂದು ಬಿಂಬಿಸಲಾಗುತ್ತದೆ. ಇಂತಹ ಅತಾರ್ಕಿಕ ನಿಲುವು ಶೋಷಿತರ ಹಾದಿಯಲ್ಲಿ ಅಡೆತಡೆಯಾಗುವುದಕ್ಕೆ, ಅವರು ಈ ದೇಶದಲ್ಲಿ ತಮ್ಮ ನ್ಯಾಯಬದ್ಧ ಸ್ಥಾನಗಳನ್ನು ಗಳಿಸಿಕೊಳ್ಳುವುದಕ್ಕೆ ಅಡ್ಡಿ ಪಡಿಸುವುದಕ್ಕೆ ಪರಿಶಿಷ್ಟ ಜಾತಿಗಳ ಒಕ್ಕೂಟವು ಅವಕಾಶವನ್ನು ಮಾಡಿಕೊಡುವುದಿಲ್ಲ.

೭) ಮೇಲ್ವರ್ಗದ ಜನರು ಹಾಗು ಹಿಂದುಳಿದ ವರ್ಗದ ಜನರ ನಡುವೆ ಈ ದೇಶದಲ್ಲಿ ಇರುವ ಕಂದಕ ಈಗಾಗಲೇ ಬಹಳ ದೊಡ್ಡದಾಗಿದೆ ಎಂದು ಈ ಒಕ್ಕೂಟಕ್ಕೆ ತಿಳಿದಿದೆ. ಈ ಕಂದಕದಿಂದಾಗಿ ಈಗಾಗಲೇ ಈ ಎರಡು ವರ್ಗಗಳ ನಡುವೆ ಸಾಕಷ್ಟು ಶತ್ರುತ್ವ ಉಂಟಾಗಿದೆ. ೧೯೪೮ರಲ್ಲಿ ಗಾಂಧಿಯವರ ಹತ್ಯೆಯನಂತರ ಕೆಳವರ್ಗದ ಜನರು ಮೇಲ್ವರ್ಗದ ಜನರ ಮೇಲೆ ಕೊಲೆ, ಸುಲಿಗೆ, ಲೂಟಿ ಮುಂತಾದ ಅಪರಾಧಗಳನ್ನು ಎಸಗಿರುವುದು ಈ ಶತ್ರುತ್ವ ಎಷ್ಟು ಆಳವಾಗಿದೆ ಎಂಬುದನ್ನು ತೋರಿಸಿಕೊಡುತ್ತದೆ.

ಈ ಶತ್ರುತ್ವವನ್ನು ನಿವಾರಿಸಬೇಕಾದರೆ ಕೆಳವರ್ಗದ ಜನರಿಗೆ ಉನ್ನತ ಮಟ್ಟದ ವಿದ್ಯಾಭ್ಯಾಸ ದೊರೆಯುವಂತೆ ಮಾಡಬೇಕು ಮತ್ತು ಅವರಿಗೆ ಉನ್ನತ ಹುದ್ದೆಗಳ ಅವಕಾಶವನ್ನು ಕಲ್ಪಿಸಬೇಕು ಹಾಗೂ ಜನನದಿಂದಲೇ ಬರುವ ಮೇಲು–ಕೀಳು ಎಂಬ ಭಾವನೆ ತೊಲಗಬೇಕು. ಆದರೆ ಇದೆಲ್ಲಾ ಸಾಕಾರವಾಗಬೇಕಾದರೆ ಶೈಕ್ಷಣಿಕವಾಗಿ ಹಿಂದುಳಿದ ವರ್ಗದ ಜನರು ಮೇಲ್ವರ್ಗದ ಜನರ ಮಟ್ಟಕ್ಕೆ ಏರಲೇಬೇಕು.

**B. ಬಡತನದ ಸಮಸ್ಯೆ**

೮) ಭಾರತದ ಆರ್ಥಿಕ ಪರಿಸ್ಥಿತಿಯನ್ನು ಯೋಜನಾ ಆಯೋಗವು ಅತ್ಯಂತ ನೈಜವಾಗಿ ವಿವರಿಸಿದೆ. ಅದು ಹೇಳುವಂತೆ

i) ಭಾರತದ ಒಟ್ಟು ಜನಸಂಖ್ಯೆಯು (ಜಮ್ಮುಕಾಶ್ಮೀರವನ್ನು ಹೊರತು ಪಡಿಸಿ) ೧೯೦೧ರಲ್ಲಿ ೨೩೫.೫ ಮಿಲಿಯನ್‌ಗಳಷ್ಟಿತ್ತು. ಅದು ೧೯೫೧ರ ಹೊತ್ತಿಗೆ ೩೫೬.೯ ಮಿಲಿಯನ್‌ನಷ್ಟಾಯಿತು. ಕೇವಲ ಅರ್ಧ ಶತಮಾನದಲ್ಲಿ ಅದು ಈ ಶೇ ೫೨ ರಷ್ಟು ಏರಿಕೆ ಆಯಿತು. ಮೊದಲ ಎರಡು ದಶಕಗಳಲ್ಲಿ ಈ ಏರಿಕೆ ಸ್ವಲ್ಪ ಕಡಿಮೆ ಇತ್ತು. ಆದರೆ ಆನಂತರ ಬಹಳ ವೇಗವಾಗಿ ಏರತೊಡಗಿತು. ೧೯೨೧ರಿಂದ ೧೯೩೧ರವರೆಗೆ ಈ ಏರಿಕೆ ಈ ೧೧ ಇತ್ತು, ೧೯೩೧ರಿಂದ ೪೧ವರೆಗೆ ಅದು ಶೇ. ೧೪.೩ ಇತ್ತು ಹಾಗು ಶೇ. ೧೯೪೧–೫೧ರವರೆಗೆ ೧೩.೪ ಇತ್ತು.

ii) ಕೈಗಾರಿಕೆಗಳು ಬಹಳಷ್ಟು ಅಭಿವೃದ್ಧಿ ಆಗಿದ್ದರೂ ಔದ್ಯೋಗಿಕ ಕ್ಷೇತ್ರದಲ್ಲಿ ಉದ್ಯೋಗಗಳಲ್ಲಿ ಪ್ರಮಾಣದಲ್ಲಿ ಅಷ್ಟೇನೂ ಪ್ರಗತಿಯಿಲ್ಲ. ೧೯೧೧ರಲ್ಲಿ ಶೇ ೭೧ ಜನರು ಕೃಷಿಯಲ್ಲಿ ನಿರತರಾಗಿದ್ದರು. ೧೯೪೮ ರಲ್ಲಿ ರಾಷ್ಟ್ರೀಯ ಆದಾಯ ಸಮಿತಿಯ ಈ ಸಂಖ್ಯೆಯನ್ನು ಶೇ ೬೮.೨ ಎಂದು ಹೇಳುತ್ತದೆ. ಕೃಷಿ ಕ್ಷೇತ್ರವು ಉದ್ಯೋಗ ಒದಗಿಸುವುದು ಒಂದು ಕಾಲದಲ್ಲಿ ಮಾತ್ರ ವರ್ಷದ ಮಿಕ್ಕ ಭಾಗದಲ್ಲಿ ಅವರೆಲ್ಲರೂ ನಿರುದ್ಯೋಗಿಗಳಾಗಿರುತ್ತಾರೆ. ಆದ್ದರಿಂದ ದೇಶದಲ್ಲಿ ನಿರುದ್ಯೋಗವು ಗಂಭೀರವಾಗಿದೆ ಎಂದೇ ಹೇಳಬಹುದು.

iii) ವ್ಯಕ್ತಿಯ ಉಳುವ ಭೂಮಿಯ ಪ್ರಮಾಣವು ನಿರಂತವಾಗಿ ಕಡಿಮೆ ಆಗುತ್ತಿದೆ. ಬ್ರಿಟಿಷರ

ಭಾರತದಲ್ಲಿ ಇದು ೧೯೧೧–೧೨ ರಲ್ಲಿ ತಲಾ ೦.೮೮ ಎಕರೆಯಷ್ಟಿದ್ದರೆ, ೧೯೪೧–೪೨ ರಲ್ಲಿ ೦.೭೨ ಎಕರೆಗೆ ಇಳಿಯಿತು. ೧೯೪೮ ರಲ್ಲಿ ಎಂದರೆ ವಿಭಜನೆಯ ನಂತರ ಇದು ೦.೭೧ ಎಕರೆಗೆ ಇಳಿಯಿತು. ಇನ್ನು ಪ್ರತಿ ಎಕರೆಯಿಂದ ಪಡೆದ ಬೆಳೆಯ ಪ್ರಮಾಣದ ಬಗೆಗೆ ನಿಖರ ಮಾಹಿತಿಯಿಲ್ಲ. ಆದರೆ ಪ್ರಕಟವಾಗಿರುವ ಕೆಲ ಸಮೀಕ್ಷೆಗಳ ಪ್ರಕಾರ ಈ ಇಳುವರಿಯಲ್ಲೂ ಕುಸಿತವಿದೆ. ಆದರೆ ಕೃಷಿಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇದನ್ನು ಅತ್ಯಂತ ನಿಖರವಾಗಿ ಹೇಳುವುದು ಕೂಡ ಕಷ್ಟವೇ. ಇಲ್ಲಿ ಮೂಡಿ ಬರುವ ಚಿತ್ರಣವನ್ನೇ ನಾವು ಎಲ್ಲಾ ಸಮೀಕ್ಷೆಗಳಿಗೂ ಆಧಾರವಾಗಿಸಿಕೊಳ್ಳಬೇಕಾಗುತ್ತದೆ.

೮) ಬಡತನದ ಸಮಸ್ಯೆಯು ಈ ಕಾರಣದಿಂದ ದ್ವಿಮುಖ ಸಮಸ್ಯೆ ಆಗಿದೆ. ಒಂದು ದೃಷ್ಟಿಕೋನದಿಂದ ನೋಡಿದರೆ ಕೃಷಿ ಹಾಗು ಕೈಗಾರಿಕಾ ಕ್ಷೇತ್ರದಲ್ಲಿನ ಅತಿಯಾದ ಉತ್ಪಾದನೆಯೂ ಸಮಸ್ಯೆಯೇ. ಮತ್ತೊಂದು ದೃಷ್ಟಿಕೋನದಿಂದ, ಅತಿಯಾದ ಜನಸಂಖ್ಯೆಗೆ ಕಡಿವಾಣ ಹಾಕಬೇಕಿರುವುದರಿಂದ, ಅದು ಕೂಡ ಸಮಸ್ಯೆಯೇ. ಎರಡೂ ಕಡೆಗಳೂ ಅಷ್ಟೇ ಮುಖ್ಯ. ಈ ಎರಡು ದೃಷ್ಟಿಕೋನಗಳಿಂದಲೂ ಪರಿಶಿಷ್ಟ ಜಾತಿಯ ಒಕ್ಕೂಟವು ಈ ಸಮಸ್ಯೆಯ ನಿವಾರಣೆಗೆ ಪ್ರಯತ್ನಪಡಲಿದೆ.

೯) ಜನಸಂಖ್ಯೆಯನ್ನು ಕಡಿಮೆಗೊಳಿಸುವ ಸಲುವಾಗಿ ಅದು ಜನರಿಗೆ ಜನಸಂಖ್ಯಾ ಮಿತಿಯ ಬಗ್ಗೆ ಎಚ್ಚರಿಸಿ ಸಂತಾನ ನಿಯಂತ್ರಣದ ಪ್ರಾಮುಖ್ಯವನ್ನು ವಿವರಿಸುತ್ತದೆ. ಅದು ಸಂತಾನ ನಿಯಂತ್ರಣ ಚಿಕಿತ್ಸಾಲಯಗಳನ್ನು ದೇಶದಾದ್ಯಂತ ತೆರೆಯಲು ಒತ್ತಾಯಿಸುತ್ತದೆ. ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಈ ದೇಶಕ್ಕೆ ಅತ್ಯಂತ ಮಾರಕವಾಗಲಿದೆ. ಆದ್ದರಿಂದ ಇನ್ನೂ ತೀವ್ರತರ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಮಾಡಲಿದೆ.

೧೦) ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಈ ಒಕ್ಕೂಟವು ಯಾವುದೇ ಸಿದ್ಧಾಂತಕ್ಕೆ ಕಟ್ಟಿಬೀಳುವುದಿಲ್ಲ ಅಥವಾ ಯಾವುದೇ ಒಂದು ವ್ಯವಸ್ಥೆಗೂ ಅಂಟಿಕೊಳ್ಳುವುದಿಲ್ಲ. ಆಯಾ ಸಮಯಕ್ಕೆ ಹಾಗು ಸಂದರ್ಭಕ್ಕೆ ತಕ್ಕಂತೆ ಉತ್ಪಾದನಾ ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ. ಎಲ್ಲೆಲ್ಲಿ ಕಾರ್ಖಾನೆಗಳನ್ನು ರಾಷ್ಟ್ರೀಕೃತಗೊಳಿಸುವುದು ಅಗತ್ಯ ಎಂದೆನಿಸುತ್ತದೆಯೋ ಅಲ್ಲೆಲ್ಲಾ ಒಕ್ಕೂಟವು ಕಾರ್ಖಾನೆಗಳನ್ನು ರಾಷ್ಟ್ರೀಕೃತಗೊಳಿಸಲು ತನ್ನ ಬೆಂಬಲವನ್ನು ನೀಡುತ್ತವೆ. ಎಲ್ಲೆಲ್ಲಿ ರಾಷ್ಟ್ರೀಕೃತಗೊಳಿಸುವ ಅಗತ್ಯ ಇಲ್ಲವೋ ಅಲ್ಲೆಲ್ಲಾ ಕೈಗಾರಿಕೆಗಳು ಖಾಸಗಿಯಾಗಿಯೇ ಉಳಿಯಲಿವೆ. ಈ ದೇಶದಲ್ಲಿ ಇರುವ ಬಡತನದ ತೀವ್ರತೆಯನ್ನು ಗಮನಿಸಿದರೆ, ಇಲ್ಲಿ ಬೇರೆ ಯಾವುದೇ ವಿಷಯಗಳಿಗಿಂತ ಉತ್ಪಾದನೆಯೇ ಮುಖ್ಯವಾಗುತ್ತದೆ. ಇಲ್ಲಿ ಆದ್ಯತೆಯನ್ನು ಕೊಡುವುದು. ಸಾಧ್ಯವಿಲ್ಲ. ಈ ಬಡತನದ ಸಮಸ್ಯೆಯು ನಿವಾರಣೆಗೆ ಉತ್ಪಾದನೆ ಮುಖ್ಯವಾಗುತ್ತದೆಯೇ ಹೊರತು ಯಾವ ರೀತಿಯಿಂದಾಗುತ್ತದೆ ಎಂಬುದಲ್ಲ. ಪರಿಶಿಷ್ಟ ವರ್ಗಗಳ ಒಕ್ಕೂಟವು ಕಾರ್ಮಿಕರನ್ನು ಶೋಷಿಸದ ಯಾವುದೇ ರೀತಿಯ ಉತ್ಪಾದನಾ ಕ್ರಮವನ್ನಾದರೂ ಸ್ವಾಗತಿಸುತ್ತದೆ.

೧೧. ಕೈಗಾರೀಕರಣದ ಅಗತ್ಯ ಈ ದೇಶಕ್ಕೆ ಖಂಡಿತವಾಗಿಯೂ ಇದೆ ಎಂದು ಒಕ್ಕೂಟ ಒಪ್ಪಿಕೊಳ್ಳುತ್ತಾದರೂ, ಈ ದೇಶದ ಬುನಾದಿ ಕೃಷಿಯೇ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಉತ್ಪಾದನೆಯಲ್ಲಿ ಹೆಚ್ಚಳ ಮಾಡಬೇಕು ಎನ್ನುವ ಕಾರಣಕ್ಕೆ ಕೃಷಿಯ ಅಭಿವೃದ್ಧಿಯನ್ನು ಕೈಬಿಟ್ಟರೆ ಖಂಡಿತವಾಗಿಯೂ ನಮಗೆ ನಿರಾಶೆಯೇ ಕಟ್ಟಿಟ್ಟಬುತ್ತಿಯಾಗಿರುತ್ತದೆ.

೧೨. ಕೃಷಿಯ ಕ್ಷೇತ್ರದ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಒಕ್ಕೂಟವು ಈ ಕೆಲವೊಂದು ತಂತ್ರಗಳನ್ನು ಅನುಸರಿಸುತ್ತದೆ:–

i) ಕೃಷಿಯ ಕ್ಷೇತ್ರದಲ್ಲಿ ಯಾಂತ್ರೀಕರಣವಾಗಬೇಕು. ಎಲ್ಲಿಯವರೆಗೆ ಭಾರತದಲ್ಲಿ ಹಳೆಯ ಕಾಲದ ಪದ್ಧತಿಯನ್ನೇ ಅನುಸರಿಸಲಾಗುತ್ತದೆಯೋ ಅಲ್ಲಿಯವರೆಗೆ ಭಾರತದ ಕೃಷಿ ಕ್ಷೇತ್ರ ಮುಂದುವರೆಯುವುದು ಸಾಧ್ಯವಿಲ್ಲ.

ii) ಕೃಷಿಯ ಕ್ಷೇತ್ರವನ್ನು ಯಾಂತ್ರೀಕರಣಗೊಳಿಸಬೇಕೆಂದರೆ ಸಣ್ಣ ಹಿಡುವಳಿಗಳ ಬದಲು ದೊಡ್ಡ ಹಿಡುವಳಿಗಳ ವ್ಯವಸ್ಥೆಯಾಗಬೇಕು.

iii) ಉತ್ಪಾದನೆಯನ್ನು ಹೆಚ್ಚಳ ಮಾಡಬೇಕೆಂದರೆ, ಅಗತ್ಯವಾದಷ್ಟು ಗೊಬ್ಬರ ಮತ್ತು ಒಳ್ಳೆಯ ಗುಣಮಟ್ಟದ ಬೀಜಗಳು ದೊರೆಯಬೇಕು.

೧೩. ಒಬ್ಬ ಸಾಮಾನ್ಯ ಕೃಷಿಕನಿಗೆ ಈ ಮೇಲೆ ಹೇಳಿದ ಕ್ರಮಗಳನ್ನು ಅನುಸರಿಸಲು ಸಾಧ್ಯವಿಲ್ಲ. ಏಕೆಂದರೆ ಇದಕ್ಕೆ ವಿನಿಯೋಗಿಸಲು ಆತನ ಬಳಿಯಲ್ಲಿ ಸಾಕಷ್ಟು ಹಣ ಇರುವುದಿಲ್ಲ. ಆದ್ದರಿಂದ ರಾಜ್ಯ ಸರಕಾರವೇ ಇದಕ್ಕೆ ಸಹಾಯ ಮಾಡಬೇಕು ಎಂದು ಒಕ್ಕೂಟವು ಅಭಿಪ್ರಾಯಪಡುತ್ತದೆ. ಅದರ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕು ಎಲ್ಲಾ ಯಂತ್ರಗಳನ್ನು ಸರ್ಕಾರವೇ ರೈತನಿಗೆ ಬಾಡಿಗೆಗೆ ನೀಡಬೇಕು. ಭೂಕಂದಾಯದೊಂದಿಗೆ ಈ ಬಾಡಿಗೆಯ ಹಣವನ್ನು ಸರ್ಕಾರವು ವಸೂಲಿ ಮಾಡಬೇಕು.

೧೪. ಸಣ್ಣ ಸಣ್ಣ ಹಿಡುವಳಿಗಳ ಪ್ರಮಾಣ ಅಧಿಕವಾಗಿರುವುದರಿಂದ ದೊಡ್ಡ ದೊಡ್ಡ ಹಿಡುವಳಿಗಳು ದೊರಕುವುದು ಕಷ್ಟವಾಗುತ್ತದೆ. ಆದ್ದರಿಂದ ಸಹಕಾರಿ ಒಕ್ಕೂಟಗಳನ್ನು ರಚಿಸಬಹುದು ಇಲ್ಲವೇ ಒಂದಿಬ್ಬರು ರೈತರ ಜಮೀನುಗಳನ್ನು ಸೇರಿಸಿ ಕೂಡುಕೃಷಿ ಕೈಗೊಳ್ಳಬಹುದು.

೧೫. ಭಾರತ ಒಂದು ಕೃಷಿ ಪ್ರಧಾನ ದೇಶವಾಗಿದ್ದರೂ ಕೂಡ, ಸಂಖ್ಯೆಯಲ್ಲಿ ಭೂರಹಿತ ಕಾರ್ಮಿಕರು ಇದ್ದಾರೆ. ಇವರು ನಿರಂತರವಾಗಿ ಶ್ರೀಮಂತ ಭೂಮಿಯೊಡೆಯರಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಇವರಲ್ಲಿ ಬಹಳಷ್ಟು ಜನರು ಅಸ್ಪೃಶ್ಯರು ಹಾಗು ಇತರ ಹಿಂದುಳಿದ ವರ್ಗದವರು. ಇವರು ಕಡೆಯವರೆಗೂ ಇದೇ ಸ್ಥಿತಿಯಲ್ಲಿ ಇರಬೇಕಾದ ಆವಶ್ಯಕತೆಯೇನಿದೆ? ಈ ಪರಿಸ್ಥಿತಿಯು ಸುಧಾರಿಸಲ್ಪಡಬಹುದಾದರೂ ಸುಧಾರಿಸಿಲ್ಲದಿರುವುದು ಶೋಚನೀಯ ಸಂಗತಿ. ಈ ಸಂಬಂಧದಲ್ಲಿ ಭಾರತದಲ್ಲಿನ ಭೂಮಿಯ ಬಗ್ಗೆ ಕೆಳಗೆ ನೀಡಿರುವ ಅಂಕಿ ಅಂಶಗಳು ನಮ್ಮ ಕಣ್ಣನ್ನು ತೆರೆಸಬೇಕು.

| | | | |
|---|---|---|---|
| ಒಟ್ಟು ಭೌಗೋಳಿಕ ಪ್ರದೇಶ | – | ೮೧೧ | ಮಿಲಿಯನ್ ಎಕರೆ |
| ಒಟ್ಟು ಕೃಷಿ ಭೂಮಿ | – | ೫೭೭ | –"– |
| ಕಾಡು | – | ೮೪ | –"– |
| ಕೃಷಿಯೋಗ್ಯವಾದ ಆದರೆ | | | |
| ಪಾಳುಬಿದ್ದಿರುವ ಭೂಮಿ | – | ೯೩ | –"– |
| ಪಾಳು ಕೃಷಿಯೋಗ್ಯವಲ್ಲದ ಭೂಮಿ | – | ೯೩ | –"– |
| ಉಳಿದಿರುವ ಪಾಳು ಭೂಮಿ | – | ೬೨ | –"– |
| ಒಟ್ಟು ಕೃಷಿಗೆ ಒಳಪಟ್ಟಿರುವ ಭೂಮಿ | – | ೨೪೪ | –"– |

ಇದರಿಂದ ೯೩ ಮಿಲಿಯನ್ ಎಕರೆ, ಕೃಷಿಗೆ ಯೋಗ್ಯವಾದ ಭೂಮಿಯು ಇದೀಗ ನಿರುಪಯಕ್ತ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಹಾಗು ಇದರಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಬಹುದಾಗಿದೆ. ಈಗಿರುವ ಆಧುನಿಕ ತಂತ್ರಜ್ಞಾನದ ಉಪಯೋಗದಿಂದ ಇದನ್ನು ಕೃಷಿಗೆ ಒಳಪಡಿಸುವುದು ಅಸಾಧ್ಯವಲ್ಲ. ಈ ಪ್ರಶ್ನೆಯನ್ನು ಕೂಡ ಈ ಒಕ್ಕೂಟ ಕೈಗೆತ್ತಿಕೊಳ್ಳಲಿದೆ.

೧೬. ಕೃಷಿಕರ ಅಭಿವೃದ್ಧಿ ಈ ದೇಶದ ಕಾಡುಗಳನ್ನು ಎಷ್ಟರಮಟ್ಟಿಗೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದೇವೆ ಎಂಬುದನ್ನು ಅವಲಂಬಿಸಿರುತ್ತದೆ. ಕಾಡಿನ ಪೋಷಣೆ ಸೂಕ್ತ ರೀತಿಯಲ್ಲಿದ್ದರೆ, ಒಳ್ಳೆಯ ಮಳೆ ಬಂದು, ಹಿಂದಿನಂತೆಯೇ ಕೃಷಿ ಚಟುವಟಿಕೆಗಳು ಅತ್ಯುತ್ತಮವಾಗಿರುತ್ತದೆ. ಆದ್ದರಿಂದ ಕಾಡಿನ ಸೂಕ್ತ ರಕ್ಷಣೆಗೆ ಕೂಡ ಒಕ್ಕೂಟವು ಒತ್ತಾಯಿಸಲಿದೆ.

೧೭. ಒಂದು ಕೃಷಿಯ ಚಟುವಟಿಕೆಯು ತನ್ನಷ್ಟಕ್ಕೇ ಲಾಭದಾಯಕ ಉದ್ಯಮವಾಗಲು ಸಾಧ್ಯವಿಲ್ಲ. ಅದಕ್ಕೆ ಪೂರಕವಾಗಿ ಗೃಹ ಕೈಗಾರಿಕೆಗಳು ಕೂಡ ಇರಬೇಕು. ಆದರೆ ಯಾವುದೇ ಗೃಹ ಕೈಗಾರಿಕೆಯೂ ವಿದ್ಯುಚ್ಛಕ್ತಿಯ ಸಮರ್ಪಕ ಪೂರೈಕೆ ಇಲ್ಲದೆಯೇ ನಡೆಯಲಾರದು. ವಿದ್ಯುಚ್ಛಕ್ತಿಯ ಉತ್ಪಾದನೆಯ ಮೇಲೆ ಭಾರತದ ಭವಿಷ್ಯ ನಿಂತಿದೆ. ಆದ್ದರಿಂದ ನದಿ ನೀರಿನ ಯೋಜನೆಗಳ ಚಾಲನೆಗೆ ಒಕ್ಕೂಟವು ಸರ್ಕಾರವನ್ನು ಒತ್ತಾಯಿಸಲಿದೆ. ಇದರಿಂದ ಕೃಷಿಗೆ ಅಗತ್ಯವಿರುವ ವಿದ್ಯುಚ್ಛಕ್ತಿ ದೊರೆಯುತ್ತದೆ, ನೀರಾವರಿಯಿಂದ ಕೃಷಿಗೆ ನೀರು ದೊರೆಯುತ್ತದೆ. ಹಾಗು ನದಿಯಲ್ಲಿ ಉಂಟಾಗಬಹುದಾದ ಪ್ರವಾಹವನ್ನು ತಡೆಯುತ್ತದೆ.

೧೮. ಭೂಮಿಯನ್ನು ಉದಾಸೀನ ಮಾಡಿರುವಂತೆಯೇ ಭೂರಹಿತ ಕಾರ್ಮಿಕರನ್ನು ಕೂಡ ಉದಾಸೀನ ಮಾಡಲಾಗಿದೆ. ಆದ್ದರಿಂದ ಪುನಃ ಸ್ವಾಧೀನಪಡಿಸಿಕೊಳ್ಳಲಾಗಿರುವ ಭೂಮಿಯಲ್ಲಿ ಹಾಗೂ ಕೃಷಿಗೆ ಉಪಯೋಗಿಸಲ್ಪಡದೆ ಇರುವ ಭೂಮಿಯಲ್ಲಿ ಸ್ವಲ್ಪ ಭೂಮಿಯನ್ನು ಇವರಿಗೆ ಮೀಸಲಿರಿಸುವಂತೆ ಒಕ್ಕೂಟವು ಸರ್ಕಾರವನ್ನು ಒತ್ತಾಯಿಸಲಿದೆ. ಅಂತೆಯೇ ಇಂತಹ ಕಾರ್ಮಿಕರಿಗೆ ಕನಿಷ್ಠ ಭತ್ಯೆಯನ್ನು ಕೂಡ ನಿಗದಿ ಮಾಡಲು ಒತ್ತಾಯಿಸುತ್ತದೆ.

## II ಹೊಸ ಸಮಸ್ಯೆಗಳು

೧೯. ಬ್ರಿಟಿಷರು ಭಾರತಕ್ಕೆ ಆಸ್ತಿಯಂತೆ ಬಿಟ್ಟು ಹೋಗಿರುವ ಸಮಸ್ಯೆಗಳನ್ನು ಯಾವ ರೀತಿ ಪರಿಹಾರ ಮಾಡಬಹುದು ಎಂದು ಇದುವರೆಗೆ ಪ್ರಣಾಳಿಕೆಯು ಚರ್ಚಿಸಿತು. ಆದರೆ ಸ್ವಾತಂತ್ರ್ಯ ಬಂದ ನಂತರ ಹೊಸ ಸಮಸ್ಯೆಗಳು ಉದ್ಭವಿಸಿವೆ. ಅವುಗಳನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಬಹುದು.

i) ಒಳ ಆಡಳಿತದಲ್ಲಿನ ಸಮಸ್ಯೆಗಳು ಮತ್ತು

ii) ವಿದೇಶಗಳಿಗೆ ಸಂಬಂಧಿಸಿದ ಸಮಸ್ಯೆಗಳು.

### A. ಒಳ ಆಡಳಿತದಲ್ಲಿ ಸಮಸ್ಯೆಗಳು

20. ಇವುಗಳಲ್ಲಿ ಅತ್ಯಂತ ಗಂಭೀರವಾಗಿ ಎದ್ದು ಕಾಣುವ ಸಮಸ್ಯೆಗಳು ಎಂದರೆ

i) ಭಾಷಾವಾರು ಪ್ರಾಂತ್ಯಗಳ ಸಮಸ್ಯೆ

ii) ಆಡಳಿತದಲ್ಲಿ ಪಾವಿತ್ರ್ಯವನ್ನು ಕಾಯ್ದುಕೊಳ್ಳುವ ಸಮಸ್ಯೆ

iii) ನಿಯಂತ್ರಣ ಹಾಗು ಕಾಳಸಂತೆಯ ಸಮಸ್ಯೆ

iv) ಹಣದುಬ್ಬರ ಹಾಗು ಏರುತ್ತಿರುವ ದಿನನಿತ್ಯದ ಖರ್ಚುಗಳ ಸಮಸ್ಯೆ.

೨೧. ಇದರಲ್ಲಿ ಭಾಷಾಪಾಂತ್ಯಗಳ ಸಮಸ್ಯೆ ಅತ್ಯಂತ ತುರ್ತು ಗಮನ ಸೆಳೆಯುವಂತಹದು. ಮದರಾಸು, ಮಧ್ಯಪ್ರದೇಶ ಹಾಗು ಬೊಂಬಾಯಿ ಮುಂತಾದ ರಾಜ್ಯಗಳಲ್ಲಿ ಈ ಸಮಸ್ಯೆಯಿಂದಾಗಿ ಪ್ರಜಾಪ್ರಭುತ್ವ ಕಾರ್ಯ ವ್ಯವಸ್ಥೆಯು ಸಂಪೂರ್ಣ ವಿಫಲವಾಗಿದೆ. ನಮ್ಮ ಸಂವಿಧಾನದ ಪ್ರಕಾರವಾಗಿ ರಾಜಕೀಯವಾಗಿ ಕಾರ್ಯನಿರ್ವಹಿಸಬೇಕಾದರೆ ಸಾಮಾಜಿಕ ಶಾಂತಿ ಇರುವುದು ಅತ್ಯಂತ ಮುಖ್ಯ. ಅದಕ್ಕೆ ಇರುವ ಏಕೈಕ ಮಾರ್ಗವೆಂದರೆ ಭಾಷಾವಾರು ಪ್ರಾಂತ್ಯಗಳನ್ನು ಹೊಂದುವುದು. ಆದ್ದರಿಂದ ಒಕ್ಕೂಟವು ಭಾಷಾವಾರು ಪ್ರಾಂತ್ಯಗಳಿಗಾಗಿ ಒತ್ತಾಯಪಡಿಸಲಿದೆ.

೨೨. ಆಡಳಿತದಲ್ಲಿ ಭ್ರಷ್ಟಾಚಾರದ ಸೃಷ್ಟಿ ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷದ ಕೊಡುಗೆ ಎಂದು ಒಕ್ಕೂಟ ಬಲವಾಗಿ ನಂಬಿದೆ. ಕಾಂಗ್ರೆಸ್ ಪಕ್ಷವು ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆ ಕೊಡುವುದರಲ್ಲಿ ನಂಬಿಕೆ ಇಟ್ಟಿಲ್ಲ. ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದವರೇ ತಮ್ಮ ಪಕ್ಷದ ಮಂತ್ರಿಗಳ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿದ್ದಾರೆ. ಆದರೆ ಇಂತಹ ಭ್ರಷ್ಟ ಮಂತ್ರಿಗಳ ವಿರುದ್ಧ ಕಾಂಗ್ರೆಸ್ ಪಕ್ಷದ ಹೈಕಮ್ಯಾಂಡ್ ವಿಚಾರಣೆ ನಡೆಸಲಿಲ್ಲ. ಬದಲಾಗಿ ಈ ರೀತಿಯ ದೂರನ್ನು ನೀಡುತ್ತಿದ್ದವರ ಬಾಯಿಯನ್ನು ಮುಚ್ಚಿಸಿತ್ತು. ಇದರಿಂದ ಅದು ಎಲ್ಲರ ಕಣ್ಣೆದುರೇ ಭ್ರಷ್ಟ ಹಾಗು ಅಪ್ರಾಮಾಣಿಕ ಮಂತ್ರಿಗಳ ರಕ್ಷಣೆಗೆ ನಿಂತುಕೊಂಡಿತು. ಮೇಲಿನ ಮಂತ್ರಿಗಳೇ ಇಷ್ಟೊಂದು ಭ್ರಷ್ಟರಾಗಿರುವಾಗ ಅವರ ಕೆಳಗಿರುವ ಅಧಿಕಾರಿಗಳು ಪ್ರಾಮಾಣಿಕರಾಗಿರಲು ಹೇಗೆ ಸಾದ್ಯ? ಈ ಒಕ್ಕೂಟವು ಇಂತಹ ಭ್ರಷ್ಟ ಮಂತ್ರಿಗಳು ಅಥವಾ ಅಧಿಕಾರಿಗಳ ವಿರುದ್ಧ ತೀವ್ರವಾದ ಕ್ರಮಕ್ಕೆ ಆಗ್ರಹಿಸಿ ಕಾಂಗ್ರೆಸ್ ಆಡಳಿತದ ಸಮಯದಲ್ಲಿ ಅತ್ಯಂತ ಕೆಳಮಟ್ಟಕ್ಕೆ ಇಳಿದಿರುವ ಆಡಳಿತ ಯಂತ್ರವನ್ನು ಸುಧಾರಿಸಲು ಪ್ರಯತ್ನ ಪಡಲಿದೆ.

೨೩. ಕಾಳಸಂತೆಕೋರರನ್ನು ಹತೋಟಿಯಲ್ಲಿಡಲಾರದ ಸಮಸ್ಯೆ ಉದ್ಭವಿಸಿರುವುದು ಕೂಡ ಕಾಂಗ್ರೆಸ್ ಪಕ್ಷ ಹಾಗು ದೊಡ್ಡ ವ್ಯಾಪಾರಸ್ಥರ ನಡುವಿನ ಒಡಂಬಡಿಕೆಯಿಂದ. ಹಿಂದಿನಿಂದಲೂ ಕಾಂಗ್ರೆಸ್ ಪಕ್ಷವು ತನ್ನ ಅಸ್ತಿತ್ವ ಕಾಯ್ದುಕೊಳ್ಳಲು ಇಂತಹ ದೊಡ್ಡ ವ್ಯಾಪಾರಸ್ಥರ ಬೆಂಬಲದ ಮೇಲೆ ಅವಲಂಬಿಸಿತ್ತು ಹಾಗೂ ಈಗಲೂ ಅವಲಂಬಿಸಿದೆ ಎಂಬುದು ಈಗ ಬಯಲಾಗಿರುವ ವಿದ್ಯಮಾನಗಳಿಂದ ಜಗಜ್ಜಾಹೀರಾಗಿದೆ. ಇಂದು ಉತ್ತರ ಪ್ರದೇಶ ರಾಜ್ಯದಲ್ಲಿ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷವು ಇಂತಹ ದೊಡ್ಡ ವಾಣಿಜ್ಯೋದ್ಯಮಿಗಳಿಂದ ಹಣ ಪಡೆದು, ಅವರಿಗೆ ಕೆಲ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದೆ. ಅಂತೆಯೇ ಅನುಕೂಲ ಪಡೆದುಕೊಂಡ ವಾಣಿಜ್ಯೋದ್ಯಮಿಗಳು ಕಾಂಗ್ರೆಸ್‌ಗೆ ಹಣದ ನೆರವು ನೀಡಲು ಹಿಂಜರಿದಿಲ್ಲ ಕೂಡ, ಈ ಸಮಸ್ಯೆಗೆ ಬಹಳಷ್ಟು ಪರಿಹಾರವು ಮತದಾರನ ಬಳಿಯೇ ಇದೆ. ಇಂತಹ ದೊಡ್ಡ ವಾಣಿಜ್ಯೋದ್ಯಮಿಗಳ ಬೆಂಬಲ ಪಡೆದ ಒಬ್ಬ ಅಭ್ಯರ್ಥಿಗೆ ಮತವನ್ನು ನೀಡದಿದ್ದರೆ ಸಮಸ್ಯೆಗೆ ಪರಿಹಾರ ದೊರಕುತ್ತದೆ. ಇಂತಹ ವಾಣಿಜ್ಯೋದ್ಯಮಿಗಳಿಂದ ಒಕ್ಕೂಟವು ಮಾರು ದೂರದಲ್ಲಿದೆ. ಇಂತಹ ವಾಣಿಜ್ಯೋದ್ಯಮಿಗಳು ದೇಶವನ್ನು ಆಳದಂತೆ ಒಕ್ಕೂಟವು ಮಾಡುತ್ತದೆ.

೨೪. ಹಣದುಬ್ಬರದ ಸಮಸ್ಯೆಯಂತೂ ಬಲವಾಗಿ ಬೇರೂರಿದೆ ಇದು ಜನರ ಜೀವನವನ್ನು

ದುಸ್ತರಗೊಳಿಸುವುದನ್ನು ತಪ್ಪಿಸುತ್ತಿಲ್ಲ. ಇದರ ನಿಗ್ರಹಕ್ಕೆ ಸೂಕ್ತ ಗಮನಹರಿಸಿಲ್ಲ. ಒಕ್ಕೂಟವು ಇದಕ್ಕೂ ಒತ್ತಾಯಿಸುತ್ತದೆ.

### B. ವಿದೇಶೀ ನೀತಿಯಿಂದ ಉದ್ಭವಿಸುವ ಸಮಸ್ಯೆಗಳು

೨೫. ಭಾರತ ಸ್ವಾತಂತ್ರ್ಯವನ್ನು ಪಡೆದುಕೊಂಡ ದಿನ, ಭಾರತದೊಂದಿಗೆ ಎಲ್ಲಾ ರಾಷ್ಟ್ರಗಳೂ ಮಿತ್ರತ್ವದಿಂದಿದ್ದವು ಹಾಗು ಶುಭ ಹಾರೈಸಿದ್ದವು. ಆದರೆ ಇಂದಿನ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಭಾರತಕ್ಕೆ ಮಿತ್ರರೇ ಇಲ್ಲ. ಎಲ್ಲಾ ದೇಶಗಳು, ಭಾರತವು ಅವುಗಳಿಗೆ ಶತ್ರುಗಳಾಗಿರದೇ ಇದ್ದರೂ ಕೂಡ, ಭಾರತದ ವಿರೋಧಿಗಳಾಗಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಆಗಿರುವ ಈ ರೀತಿಯ ಅಗಾಧವಾದ ಪರಿವರ್ತನೆಗೆ ಕಾಂಗ್ರೆಸ್ ಪಕ್ಷವು ಕಾಶ್ಮೀರದ ಬಗ್ಗೆ ತಳೆದಿರುವ ನಿಲುವು ಹಾಗೂ ವಿಶ್ವಸಂಸ್ಥೆಯಲ್ಲಿ ಕೊರಿಯಾ ಯುದ್ಧದ ವಿಷಯದಲ್ಲಿ ಚೀನಾಗೆ ಅವಕಾಶ ಮಾಡಿಕೊಟ್ಟುದೇ ಕಾರಣವಾಗಿದೆ.

೨೬. ಕಾಶ್ಮೀರದ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷವು ತಳೆದಿರುವ ನಿಲುವಿನ ಬಗ್ಗೆ ಒಕ್ಕೂಟಕ್ಕೆ ಸಮ್ಮತಿಯಿಲ್ಲ. ಈ ನಿಲುವು ಮುಂದುವರಿದರೆ ಅದು ಮತ್ತಷ್ಟು ಕಹಿ ಭಾವನೆಗೆ ಎಡೆ ಮಾಡಿಕೊಡುತ್ತದೆ, ಮತ್ತು ಮುಂದೆ ಅದು ಯುದ್ಧಕ್ಕೆ ಕೂಡ ಕಾರಣವಾಗಬಹುದು. ಎರಡೂ ರಾಷ್ಟ್ರಗಳ ಹಿತಾಸಕ್ತಿಯ ದೃಷ್ಟಿಯಿಂದ ಅವರು ಮಿತ್ರರಾಗಿ ಉಳಿಯುವುದು ಅತ್ಯಂತ ಆವಶ್ಯಕ ಕೂಡ ಎಂದು ಒಕ್ಕೂಟವು ನಂಬುತ್ತದೆ. ಆದ್ದರಿಂದ ಪಾಕಿಸ್ತಾನದೊಂದಿಗಿನ ನೀತಿ ಎರಡು ವಿಷಯಗಳ ಮೇಲೆ ಅವಲಂಬಿತವಾಗಿರಬೇಕು.

೧) ಮೊದಲನೆಯದೆಂದರೆ, ಭಾರತದ ವಿಭಜನೆ ರದ್ದುಗೊಳಿಸುವ ವಿಷಯವಾಗಿ ಯಾವುದೇ ಮಾತುಕತೆ ನಡೆಯಕೂಡದು. ವಿಭಜನೆಯು ನಡೆದು ಹೋಗಿರುವ ಸಂಗತಿ ಎಂದು ಎರಡೂ ರಾಷ್ಟ್ರಗಳು ಒಪ್ಪಿಕೊಳ್ಳಬೇಕು ಮತ್ತು ಎರಡೂ ರಾಷ್ಟ್ರಗಳೂ ಪ್ರತ್ಯೇಕ ಸಾರ್ವಭೌಮರಾಷ್ಟ್ರಗಳಾಗಿ ಕಾರ್ಯ ನಿರ್ವಹಿಸಬೇಕು. ೨) ಕಾಶ್ಮೀರದ ವಿಭಜನೆಯಲ್ಲಿ ಮುಸಲ್ಮಾನರು ವಾಸವಿರುವ ಪ್ರದೇಶಗಳು ಪಾಕಿಸ್ತಾನಕ್ಕೆ ಸೇರಬೇಕು (ಅದು ಅಲ್ಲಿ ವಾಸಿಸುತ್ತಿರುವ ಜನರ ಇಚ್ಛೆಯೂ ಆಗಿದ್ದರೆ ಮಾತ್ರ) ಹಾಗು ಮುಸಲ್ಮಾನೇತರ ಪ್ರದೇಶಗಳಾದ ಜಮ್ಮು-ಲಡಾಖ್ ಮುಂತಾದ ಪ್ರದೇಶಗಳು ಭಾರತಕ್ಕೆ ಸೇರಬೇಕು.

೨೭. ಈ ನೀತಿಯಿಂದ ಎರಡೂ ರಾಷ್ಟ್ರಗಳ ನಡುವೆ ಮಿತ್ರತ್ವ ಏರ್ಪಡಲು ಉತ್ತಮ ಅವಕಾಶಗಳು ಸಿಗುತ್ತವೆ. ಪರಿಶಿಷ್ಟ ಜಾತಿಯ ಒಕ್ಕೂಟವು ಇದಕ್ಕೆ ಪ್ರಬಲವಾಗಿ ಆಗ್ರಹಿಸಲಿದೆ.

೨೮. ಈ ವಿದೇಶೀ ನೀತಿಯಿಂದ ನಮ್ಮ ಶತ್ರುವಾಗಿರುವ ಮತ್ತೊಂದು ದೇಶವೆಂದರೆ ಅದು ಚೀನಾ. ಚೀನಾ ದೇಶವು ತಾನು ವಿಶ್ವಸಂಸ್ಥೆಯಲ್ಲಿ ಸ್ಥಾನವನ್ನು ಪಡೆದುಕೊಳ್ಳಲು, ತನ್ನ ಪರವಾಗಿ ಭಾರತವು ಹೋರಾಡುವಂತೆ ಮಾಡಿದೆ. ಇದೊಂದು ಅತ್ಯಂತ ವಿಚಿತ್ರವಾದ ಸಂಗತಿ. ಚೀನಾ ದೇಶವು ತಾನೇ ಹೋರಾಡುವ ಸಾಮರ್ಥ್ಯವನ್ನು ಹೊಂದಿರುವಾಗ ಅದಕ್ಕಾಗಿ ಭಾರತ ಏಕೆ ಹೋರಾಡಬೇಕು. ಈ ಕಾರಣದಿಂದಲೇ ಭಾರತ ಈಗಾಗಲೇ ಅಮೆರಿಕಾ ದೇಶದೊಂದಿಗೆ ತನ್ನ ಭಾಂಧವ್ಯವನ್ನು ಕೆಡಿಸಿಕೊಂಡಿದೆ. ಇದರ ಪರಿಣಾಮವಾಗಿ, ಭಾರತವು ಅಮೇರಿಕಾದಿಂದ ಆರ್ಥಿಕ ಹಾಗೂ ತಾಂತ್ರಿಕ ಸಹಾಯವನ್ನು ಪಡೆಯುವುದು ಅಸಾಧ್ಯವಾಗಿದೆ.

೨೯. ನಾವು ಭಾರತವು ಪರಮಾಧಿಕಾರ ಪಡೆದ ದೇಶವಾಗುವುದನ್ನು ನಿರಾಕರಿಸಿದೆವು. ನಾವೊಂದು ಸ್ವತಂತ್ರ ರಾಷ್ಟ್ರವಾದೆವು. ಮತ್ತು ಬ್ರಿಟಿಷ್ ಕಾಮನ್‌ವೆಲ್ತ್ ಕೂಟದಲ್ಲಿ ಉಳಿಯಲು ನಿರ್ಧರಿಸಿದೆವು. ಆದರೂ ಕೂಡ ಇತರ ದೇಶಗಳೊಂದಿಗಿನ ನಮ್ಮ ಬಾಂಧವ್ಯವು ಸೌಹಾರ್ದಯುತವಾಗಿಲ್ಲ.

೩೦. ನಮ್ಮ ವಿದೇಶಿ ನೀತಿಯಲ್ಲಿ ನಾವು ಬಂಡವಾಳಶಾಹಿ ಹಾಗು ಪ್ರಜಾಪ್ರಭುತ್ವದ ನಡುವೆ ವ್ಯತ್ಯಾಸವನ್ನು ಗುರುತಿಸಿಲ್ಲ. ಬಂಡವಾಳಶಾಹಿ ಪದ್ಧತಿಯನ್ನು ಇಷ್ಟಪಡದೇ ಇರುವುದು ಅರ್ಥವಾಗುವಂತಹ ಸಂಗತಿ. ಆದರೆ ಸಂವಿಧಾನಬದ್ಧ ಪ್ರಜಾಪ್ರಭುತ್ವವು ಸಡಿಲಗೊಂಡು ಸರ್ವಾಧಿಕಾರಿ ಪ್ರಭುತ್ವಕ್ಕೆ ಹಾದಿ ಮಾಡಿಕೊಡದಂತೆ ಎಚ್ಚರಿಕೆ ವಹಿಸಬೇಕು. ಹಾಗೇನಾದರೂ ಮಾಡಿದರೆ ಅನಾವಶ್ಯಕವಾದುದರ ಜೊತೆ ಅವಶ್ಯವಾದುದನ್ನೂ ನಾವು ಕಳೆದುಕೊಂಡ ಹಾಗೆ ಆಗುತ್ತದೆ.

೩೧. ಭಾರತದ ಮೊದಲ ಕರ್ತವ್ಯ ತನ್ನೆಡೆಗೇ ಇರಬೇಕು. ಕಮ್ಯುನಿಸ್ಟ್ ಚೀನಾವನ್ನು ವಿಶ್ವ ಸಂಸ್ಥೆಯ ಖಾಯಂ ಸದಸ್ಯನನ್ನಾಗಿ ಮಾಡುವ ಬದಲು ಮೊದಲು ತಾನು ಈ ಸಂಸ್ಥೆಯ ಖಾಯಂ ಸದಸ್ಯನಾಗುವತ್ತ ಗಮನನೀಡಬೇಕು. ಇದು ಮಾಡುವುದನ್ನು ಬಿಟ್ಟ ಭಾರತ ಮಾವೋ ಪರ ಚಿಯಾಂಗ್ ಕಾಯ್ ಶೇಕರ ವಿರುದ್ಧ ಯುದ್ಧದಲ್ಲಿ ನಿರತವಾಗಿದೆ. ಭಾರತದ ಈ ರೀತಿಯ ಹುಚ್ಚು ಧೋರಣೆಯು ದೇಶಕ್ಕೆ ಮಾರಕವಾಗಿ ಪರಿಣಮಿಸಿಲಿದೆ. ಆದ್ದರಿಂದ ಇಂತಹ ವಿದೇಶೀ ನೀತಿಯನ್ನು ಆದಷ್ಟು ಶೀಘ್ರವಾಗಿ ಮತ್ತು ಆಮೂಲಾಗ್ರವಾಗಿ ಬದಲಿಸಬೇಕು. ಏಷಿಯಾದ ಇತರ ರಾಷ್ಟ್ರಗಳಿಗಾಗಿ ಹೋರಾಡುವ ಮುನ್ನ ಭಾರತವು ತನ್ನ ಪ್ರತಿಯೊಂದು ನರನಾಡಿಯನ್ನು ಬಲಿಷ್ಠಗೊಳಿಸುವತ್ತ ಗಮನ ನೀಡಬೇಕು. ಆಗ ಮಾತ್ರವೇ ಭಾರತದ ದನಿಯನ್ನು ಎಲ್ಲರೂ ಕೇಳಲು ಸಾಧ್ಯ. ಇಂತಹವುಗಳ ಆಧಾರದ ಮೇಲೆ ವಿದೇಶೀ ನೀತಿಯನ್ನು ರೂಪಿಸುವಂತೆ ಒಕ್ಕೂಟವು ಒತ್ತಾಯಿಸುತ್ತದೆ.

## III ಸಂಪನ್ಮೂಲಗಳ ಪ್ರಶ್ನೆ

೩೨. ಅಭಿವೃದ್ಧಿ ಕಾರ್ಯಕ್ರಮಗಳು ಕೇವಲ ಮಾತುಗಳಿಗೆ ಮಾತ್ರ ಸೀಮಿತವಾಗಿರಬಾರದು. ಅದನ್ನು ಕಾರ್ಯಗತಗೊಳಿಸಬೇಕು. ಎಂದರೆ, ಅದಕ್ಕೆ ಅಗತ್ಯವಿರುವ ಆದಾಯದ ಮಾರ್ಗವನ್ನು ಹುಡುಕಬೇಕು. ಅಗತ್ಯವಿರುವ ಹಣಕಾಸಿನ ಮಾರ್ಗವನ್ನು ರೂಪಿಸಿ ಜನಗಳಿಗೆ ಮನವರಿಕೆ ಮಾಡದಿದ್ದರೆ ಯಾರೂ ಪಕ್ಷದ ಕಾರ್ಯಕ್ರಮಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.

೩೩. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಂದಾಜು ಮಾಡಿರುವ ಹಣದ ಮೊತ್ತವು ಸಣ್ಣದಿಲ್ಲದಿದ್ದರೂ ಅಷ್ಟು ಹಣದ ವ್ಯವಸ್ಥೆ ಮಾಡುವುದು ಅಸಾಧ್ಯವೇನೂ ಅಲ್ಲ. ಈ ದೇಶದ ಅಭಿವೃದ್ಧಿಗಾಗಿ ಹಣದ ವ್ಯವಸ್ಥೆ ಮಾಡಲು ಪರಿಶಿಷ್ಟ ವರ್ಗವು ಈ ಕೆಳಗಿನ ಮಾರ್ಗಗಳನ್ನು ಸೂಚಿಸುತ್ತದೆ. i) ಸೇನೆಯ ಮೇಲೆ ಮಾಡುತ್ತಿರುವ ವೆಚ್ಚದಲ್ಲಿ ಕಡಿತ, ii) ಉಪ್ಪಿನ ಮೇಲಿನ ತೆರಿಗೆಯನ್ನು ಮರಳಿ ಜಾರಿಗೆ ತರುವುದು, iii) ಪಾನ ನಿಷೇಧವನ್ನು ರದ್ದುಗೊಳಿಸಿ ಮಾದಕ ಪಾನೀಯಗಳ ಮೇಲೆ ಅಬಕಾರಿ ಸುಂಕವನ್ನು ಹೇರುವುದು, iv) ಜೀವವಿಮೆಯನ್ನು ರಾಷ್ಟ್ರೀಕರಣಗೊಳಿಸುವುದು.

೩೪. ಭಾರತದ ಒಟ್ಟು ವಾರ್ಷಿಕ ಆದಾಯ ೩೫೦ ಕೋಟಿ ರೂಗಳು. ಇದರಲ್ಲಿ ಶೇ ೫೦ ಕ್ಕಿಂತಲೂ ಹೆಚ್ಚಿನ ಹಣ ಸೇನೆಗಾಗಿ ವ್ಯಯ ಆಗುತ್ತಿದೆ. ಎಂದರೆ ವಾರ್ಷಿಕ ೧೮೦ ಕೋಟಿ ರೂಪಾಯಿಗಳಷ್ಟು ಇದಕ್ಕಾಗಿ ಖರ್ಚಾಗುತ್ತಿದೆ. ಭಾರತದಲ್ಲಿ ಅಸಂಖ್ಯ ಜನರು ಹಸಿವೆಯಿಂದ

ದಿನನಿತ್ಯ ಸಾಯುತ್ತಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ಇದು ಊಹಿಸಲಾರದಷ್ಟು ದೊಡ್ಡ ವೆಚ್ಚ. ಪ್ರಣಾಳಿಕೆಯಲ್ಲಿ ಹೇಳಿರುವಂತೆ ಕಾಶ್ಮೀರ ಸಮಸ್ಯೆಯನ್ನು ಇತ್ಯರ್ಥಪಡಿಸಿಕೊಂಡು, ವಿದೇಶೀ ನೀತಿಯಲ್ಲಿ ಬದಲಾವಣೆ ತಂದರೆ, ಭಾರತಕ್ಕೆ ಶತ್ರುಗಳ ಭೀತಿಯೂ ಕಡಿಮೆ ಆಗುತ್ತದೆ. ಇದರಿಂದ ಸೇನೆಯ ವೆಚ್ಚವು ವಾರ್ಷಿಕ ೫೦ ಕೋಟಿರೂಗಳಷ್ಟು ವೆಚ್ಚವನ್ನು ಕಡಿಮೆಮಾಡಬಹುದು.

೩೬. ಉಪ್ಪಿನ ತೆರಿಗೆಯನ್ನು ಮರಳಿ ವಿಧಿಸದೇ ಇರಲು ಕಾರಣವಿಲ್ಲ. ಇದನ್ನು ರದ್ದು ಮಾಡಿದ್ದು ಕೇವಲ ಜನರ ಭಾವನೆಗಳಿಗೆ ಬೆಲೆಕೊಟ್ಟು. ಇದರಿಂದ ಉಪ್ಪಿನ ದರವೇನೂ ಕಡಿಮೆ ಆಗಿಲ್ಲ. ಬದಲಾಗಿ ಪ್ರತಿ ವರ್ಷವೂ ಅದರ ದರ ಹೆಚ್ಚುತ್ತಲೇ ಇದೆ. ಇದರ ಇದರ ಪರಿಣಾಮವೆಂದರೆ ರಾಜ್ಯದ ಅಮೂಲ್ಯ ಆದಾಯದ ನಷ್ಟ. ಈ ಉಪ್ಪಿನ ತೆರಿಗೆಯಿಂದಲೇ ರಾಜ್ಯಕ್ಕೆ ವಾರ್ಷಿಕ ೧೧ ಕೋಟಿ ರೂಪಾಯಿಗಳ ಆದಾಯ ಬರುತ್ತಿತ್ತು. ಈ ಆದಾಯವು ನಿಂತು ಹೊರಗಿರುವುದರಿಂದ ರಾಜ್ಯದ ಅಭಿವೃದ್ಧಿಯ ಮೇಲೆ ತೀವ್ರವಾದ ಪರಿಣಾಮ ಬೀರಿದೆ. ಈಗಿನ ಪರಿಸ್ಥಿತಿಯಲ್ಲಿ ಉಪ್ಪಿನ ಮೇಲಿನ ತೆರಿಗೆಯಿಂದ ೩೦ ಕೋಟಿ ರೂಪಾಯಿಗಳು ಬರುವಷ್ಟು ತೆರಿಗೆಯನ್ನು ವಿಧಿಸಿದರೂ, ಜನಗಳ ಮೇಲೆ ಬೀಳುವ ಹೊರೆ ಅತ್ಯಲ್ಪ.

೩೭. ಪಾನನಿಷೇಧವು ಹುಚ್ಚುತನದ ಪರಮಾವಧಿ. ಇದನ್ನು ಈ ಕೂಡಲೇ ರದ್ದು ಮಾಡಬೇಕು. ಇದರಿಂದ ಆಗಿರುವ ಒಳಿತಿಗಿಂತ ಕೆಡುಕೇ ಹೆಚ್ಚು. ಮದ್ಯ ತಯಾರಿಕೆಯು ಇದೀಗ ಗೃಹ ಕೈಗಾರಿಕೆಯೇ ಆಗಿ ಹೋಗಿದೆ. ಹಿಂದೆ ಕೇವಲ ಪುರಷರು ಮಾತ್ರವೇ ಮದ್ಯವನ್ನು ಸೇವಿಸುತ್ತಿದ್ದರು. ಆದರೆ ಇದೀಗ ಸ್ತ್ರೀಯರು ಹಾಗು ಮಕ್ಕಳು ಕೂಡ ಮದ್ಯವನ್ನು ಸೇವಿಸಲು ಪ್ರಾರಂಭ ಮಾಡಿದ್ದಾರೆ. ಏಕೆಂದರೆ ಅವರವರ ಮನೆಗಳಲ್ಲಿಯೇ ಮದ್ಯ ತಯಾರಾಗುತ್ತದೆ. ಆದ್ದರಿಂದ ಇದು ಹೆಚ್ಚಿನ ಅಪರಾಧಗಳಿಗೆ ಎಡೆ ಮಾಡಿಕೊಟ್ಟಿದೆ ಹಾಗು ಕೆಳವರ್ಗದ ಜನರು ನೈತಿಕವಾಗಿ ಕುಸಿದು ಹೋಗಿದ್ದಾರೆ.

೩೮. ಈ ಪಾನನಿಷೇಧವು ಒಟ್ಟಾರೆಯಾಗಿ ನಿರುಪಯುಕ್ತವಾಗಿದೆ. 'A' ಅನುಬಂಧದಲ್ಲಿರುವ ರಾಜ್ಯಗಳ ಆದಾಯವು ೧೯೪೫–೪೬ರಲ್ಲಿ ೫೧.೬೭ ಕೋಟಿಗಳಷ್ಟಿತ್ತು. ೧೯೫೦–೫೧ರಲ್ಲಿ ೨೫.೨೩ ಕೋಟಿಗಳಿತ್ತು. ೫೧–೫೨ರಲ್ಲಿ ಇದು ೨೪.೯೫ ಕೋಟಿಗಳಷ್ಟು ಇರುತ್ತದೆ ಎಂದು ಬಜೆಟ್‌ನಲ್ಲಿ ಅಂದಾಜಿಸಲಾಗಿದೆ. ೧೯೪೫–೪೬ರ ಅಂಕಿ ಅಂಶಗಳಲ್ಲಿ ಅವಿಭಜಿತ ಪಂಜಾಬ್ ಹಾಗು ಬಂಗಾಳಗಳು ಸೇರ್ಪಟ್ಟಿದೆ. ಆದಾಗ್ಯೂ ಪಾನ ನಿಷೇಧದಿಂದ ಅನುಬಂಧ 'A' ನಲ್ಲಿರುವ ರಾಜ್ಯಗಳಿಗೆ ಆಗುವ ನಷ್ಟವನ್ನು ಸುಮಾರು ೨೫ ಕೋಟಿ ರೂ.ಗಳು ಎಂದು ಹೇಳಬಹುದು. ಈ ಅಂದಾಜಿನಲ್ಲಿ, ಪಾನನಿಷೇಧವು ಇಲ್ಲಿ ಜಾರಿಯಲ್ಲಿ ಇಲ್ಲದೆ ಇದ್ದು, ಸ್ವಾಭಾವಿಕವಾಗಿ ಅಬಕಾರಿ ಸುಂಕದಲ್ಲಿ ಆಗಬಹುದಾಗಿದ್ದ ದರದ ಏರಿಕೆಯನ್ನು ಪರಿಗಣಿಸಿಲ್ಲ.

೩೯. ಬೊಂಬಾಯಿ ರಾಜ್ಯವೊಂದರಲ್ಲಿಯೇ ೧೯೪೬–೪೭ರಲ್ಲಿ ಅಬಕಾರಿ ಆದಾಯವು ರೂಪಾಯಿ ೯.೭೪ ಕೋಟಿಗಳಷ್ಟಿತ್ತು. ೧೯೫೦–೫೧ರಲ್ಲಿ ಅದು ೧.೨೦ ಕೋಟಿಗಳಾಗಿದ್ದರೆ ೧೯೫೧–೫೨ರಲ್ಲಿ ಅದು ೧.೦೫ ಕೋಟಿಗಳಷ್ಟು ಇರುತ್ತದೆ ಎಂದು ಆಯವ್ಯಯ ಅಂದಾಜುಮಾಡಿತು. ಆದ್ದರಿಂದ ಅಬಕಾರಿ ಆದಾಯ ಒಂದರಿಂದಲೇ ಆಗುವ ನಷ್ಟವು ೮.೭ ಕೋಟಿ ರೂ.ಗಳು

೪೦ ಮದರಾಸಿನಲ್ಲಿ ಅಬಕಾರಿ ೧೯೪೫–೪೬ರಲ್ಲಿ ಆದಾಯವು ೧೬.೮೦ ಕೋಟಿಗಳಷ್ಟು ಇತ್ತು. ಅದು ೧೯೫೦–೫೧ರಲ್ಲಿ ಅರ್ಧ ಕೋಟಿಗೆ ಇಳಿಕೆ ಆಯಿತು. ೧೯೫೧–೫೨ಕ್ಕೆ ಆಯವ್ಯಯ

ಅಂದಾಜು ೦.೩೬ ಕೋಟಿಗಳು. ಈ ನಿಷೇಧದ ಪರಿಣಾಮದಿಂದ ಆಗುವ ನಷ್ಟ ೧೬ ಕೋಟಿ ರೂ.ಗಳು.

೪೧. ಉತ್ತರ ಪ್ರದೇಶದಲ್ಲಿ ಅಬಕಾರಿ ೧೯೪೭–೪೮ ರಲ್ಲಿ ೭.೦೬ ಕೋಟಿ ರೂ.ಗಳಷ್ಟಿತ್ತು. ೧೯೫೦–೫೧ ರಲ್ಲಿ ೫.೯೩ ಕೋಟಿಗಳಾದರೆ, ೧೯೫೧–೫೨ರಲ್ಲಿ ಇದನ್ನು ೫.೮೪ ಕೋಟಿಗಳು ಎಂದು ಅಂದಾಜು ಮಾಡಲಾಗಿದೆ. ಅಂದರೆ ಒಟ್ಟು ನಷ್ಟವು ೧.೨ ಕೋಟಿ ರೂ.ಗಳು.

೪೨. ಮಧ್ಯಪ್ರದೇಶ, ಪಂಜಾಬ್ ಹಾಗು ಬಂಗಾಳದ ಅಬಕಾರಿ ಆದಾಯ ಕೂಡ ಸ್ವಲ್ಪ ಕುಸಿದಿದೆ.

೪೩. ಕೇವಲ ಮದರಾಸು ಹಾಗೂ ಬೊಂಬಾಯಿಗಳಲ್ಲಿನ ಅಬಕಾರಿ ಆದಾಯದ ನಷ್ಟವೇ ಸುಮಾರು ೨೫ ಕೋಟಿಗಳಾಗಿದ್ದು ಇದು ಅನುಬಂಧ 'A' ರಾಜ್ಯಗಳಲ್ಲಿನ ಒಟ್ಟು ನಷ್ಟದಷ್ಟು ಇದೆ.

೪೪. ಈ ಸಂಖ್ಯೆಗಳು ಅಪೂರ್ಣ. ಏಕೆಂದರೆ ಇದರಲ್ಲಿ 'B' ವಿಭಾಗದ ರಾಜ್ಯಗಳ ಅಂಕಿ ಅಂಶಗಳು ಸೇರ್ಪಡೆಯಾಗಿಲ್ಲ. ಅವುಗಳು ಲಭ್ಯವೂ ಇಲ್ಲ. ಈ ಅಂಕಿ ಅಂಶಗಳಲ್ಲಿ ಪಾನನಿಷೇಧವನ್ನು ಜಾರಿಗೆ ತರುವಲ್ಲಿ ಮಾಡಬೇಕಾಗಿರುವ ವೆಚ್ಚವನ್ನು ಸೇರಿಸಿಲ್ಲ.

೪೫. ಈ ನಿಷೇಧವು ನ್ಯಾಯದ ದೃಷ್ಟಿಯಿಂದಲೂ ಅಸಮಂಜಸವಾಗಿದೆ. ಏಕೆಂದರೆ ಇದರ ವೆಚ್ಚವನ್ನು ಭರಿಸುವವರು ಸಾಮಾನ್ಯ ಜನತೆ. ಕೆಲವೇ ಲಕ್ಷಗಳ ಸಂಖ್ಯೆಯಷ್ಟು ಇರುವ ಕುಡುಕರು ಬದಲಾಗುವ ಸಾಧ್ಯತೆಯೇ ಇಲ್ಲ. ಆದ್ದರಿಂದ ಇಂತಹವರ ಸುಧಾರಣೆಗಾಗಿ ಸಾರ್ವಜನಿಕರ ಹಣ ಏಕೆ ದುಂದುವೆಚ್ಚ ಆಗಬೇಕು? ಇದರ ಬದಲು ಶಿಕ್ಷಣ, ಮನೆಗಳ ನಿರ್ಮಾಣ ಹಾಗು ಆರೋಗ್ಯದ ಸಮಸ್ಯೆಗಳಿಗಾಗಿ ಹಣ ವ್ಯಯಿಸುವುದು ಸೂಕ್ತವಲ್ಲವೇ? ಇದೇ ಹಣವನ್ನು ಅಭಿವೃದ್ಧಿಯ ಕೆಲಸಗಳಿಗಾಗಿ ವ್ಯಯಿಸುವುದು ಸೂಕ್ತವಲ್ಲವೇ? ಯಾರಿಗೆ ನಾವು ಹೆಚ್ಚಿನ ಆದ್ಯತೆ ನೀಡಬೇಕು. ಕುಡಿಕರಿಗೋ ಅಥವಾ ಹಸಿದಿರುವವರಿಗೋ? ಈ ರೀತಿಯ ಪ್ರಸ್ತುತವಾಗಿರುವ ಪ್ರಶ್ನೆಗಳಿಗೆ ಉತ್ತರಗಳು ದೊರಕುವುದಿಲ್ಲ ಬದಲಿಗೆ ಈ ವಿಷಯಗಳಲ್ಲಿ ನಾವು ಕಾಣುವುದು ಸರಕಾರದ ಅಹಂಕಾರ ಮತ್ತು ಹಠಮಾರಿತನ. ಏನಾದರೂ ಆಗಲೀ ಪಾನನಿಷೇಧವನ್ನು ರದ್ದು ಮಾಡಬೇಕು ಹಾಗು ದೊಡ್ಡ ಪ್ರಮಾಣದ ಸಾರ್ವಜನಿಕ ಹಣದ ದುರುಪಯೋಗ ನಿಲ್ಲಬೇಕು ಹಾಗೂ ಈ ಹಣ ಜನರ ಕಲ್ಯಾಣಕ್ಕಾಗಿ ವ್ಯಯ ಆಗಬೇಕು.

೪೬. ವಿಮೆಯನ್ನು ರಾಷ್ಟ್ರೀಕೃತಗೊಳಿಸುವುದು ಅತ್ಯಂತ ಲಾಭದಾಯಕ. ಕೆಳಗಿನ ಪಟ್ಟಿ ಇದನ್ನು ಧೃಢೀಕರಿಸುತ್ತದೆ.

| | | |
|---|---|---|
| ೧೯೫೦ರಲ್ಲಿ ವಿಮಾಕಾಯ್ದೆಯಡಿ ನೋಂದಣಿ ಆಗಿದ್ದ ವಿಮೆದಾರರು | – | ೩೩೯ |
| ೧೯೪೯ರಲ್ಲಿ ನೀಡಿರುವ ಪಾಲಿಸಿಗಳು | – | ೩೩,೦೩,೦೦೦ |
| ವಿಮೆಯ ಮೊತ್ತ | – | ೭,೩೯,೪೯,೦೦,೦೦೦ |
| ಪ್ರೀಮಿಯಂನಿಂದ ಬಂದ ಲಾಭ | – | ೩೭,೧೮,೦೦,೦೦೦ |
| ಸರ್ಕಾರದ ಹುಂಡಿಗಳಲ್ಲಿ ಹೂಡಿದ ಹಣ | – | ೮,೬೪,೧೬,೦೦೦ |
| ಆಡಳಿತ ವೆಚ್ಚ | – | ವಾರ್ಷಿಕ ಕಂತಿನ ಶೇ ೨೯.೨ |

೪೭. ಈ ಅಂಕಿ ಅಂಶಗಳಿಂದ, ಜೀವ ವಿಮಾ ಸಂಸ್ಥೆಗಳಿಗೆ ವಾರ್ಷಿಕವಾಗಿ ಉಳಿಯುವ ಹಣ ೩೭ ಕೋಟಿ ರೂ.ಗಳು ಎಂಬುದು ಗೊತ್ತಾಗುತ್ತದೆ. ಬ್ಯಾಂಕಿನ ಬಂಡವಾಳದಂತೆ ಇವು ಅಲ್ಪಾವಧಿ ಠೇವಣಿಗಳಲ್ಲ. ಆದ್ದರಿಂದ ಈ ಹಣದಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದು. ಈ ಸಂಸ್ಥೆಯ ಹಣವು ಸರ್ಕಾರದ ಹುಂಡಿಗಳಿಗಾಗಿ ವಿನಿಯೋಗಿಸಲ್ಪಡುತ್ತದೆ ಎಂಬುದು ನಿಜ. ಈ ಹಣವು ಸರ್ಕಾರಕ್ಕೆ ಸೇರುತ್ತದೆ ಎಂಬುದೂ ನಿಜ. ಆದರೆ ವಿಮೆಯನ್ನು ರಾಷ್ಟ್ರೀಕರಣಗೊಳಿಸುವುದಕ್ಕೆ ಇದು ಸಮನಾಗಲಾರದು. ಹೂಡಿರುವ ಹಣ ಕೂಡ ಅತ್ಯಂತ ಕಡಿಮೆ ಮೊತ್ತವೆ (೩೭ ಕೋಟಿಗಳಲ್ಲಿ ಕೇವಲ ೯ ಕೋಟಿ). ಎರಡನೆಯದಾಗಿ, ಸರ್ಕಾರ ಈ ಹಣದ ಮೇಲೆ ಬಡ್ಡಿ ನೀಡಬೇಕಾಗುತ್ತದೆ. ಅದು ತೆರಿಗೆದಾರನ ಮೇಲೆ ಹೊರಿಸುವ ಅನಗತ್ಯ ಹೊರೆ ಆಗುತ್ತದೆ. ಆದ್ದರಿಂದ ಇದೆಲ್ಲಾ ನಿಲ್ಲಬೇಕೆಂದರೆ, ವಿಮೆಯನ್ನು ರಾಷ್ಟ್ರೀಕೃತಗೊಳಿಸುವುದೊಂದೇ ಇರುವ ಮಾರ್ಗ.

೪೮. ಒಕ್ಕೂಟವು ಕೇವಲ ವಿಮೆಯ ರಾಷ್ಟ್ರೀಕರಣಕ್ಕಾಗಿ ಮಾತ್ರ ಒತ್ತಾಯ ಮಾಡುವುದಿಲ್ಲ. ಬದಲಾಗಿ ರಾಜ್ಯ ಸರ್ಕಾರ ಎಲ್ಲಾ ನೌಕರರಿಗೆ ಹಾಗು ಎಲ್ಲಾ ಖಾಸಗಿ ನೌಕರರಿಗೆ ಇದನ್ನು ಕಡ್ಡಾಯ ಮಾಡುತ್ತದೆ. ಈ ರೀತಿ ವಿಮೆಯನ್ನು ಕಡ್ಡಾಯಗೊಳಿಸುವುದರಿಂದ ವ್ಯಕ್ತಿಗೆ ಭದ್ರತೆಯೂ ದೊರೆಯುತ್ತದೆ. ಹಾಗು ಸರ್ಕಾರಕ್ಕೆ ಅಭಿವೃದ್ಧಿಗೆ ಅಗತ್ಯ ಇರುವ ಹಣವೂ ದೊರೆಯುತ್ತದೆ.

೪೯. ಈ ಒಕ್ಕೂಟವು ನೀಡಿರುವ ಸಲಹೆಗಳು ಕಾರ್ಯಗತವಾದರೆ ಸರ್ಕಾರಕ್ಕೆ ಬರಬಹುದಾದ ಆದಾಯವನ್ನು ಈ ಕೆಳಗೆ ನೀಡಲಾಗಿದೆ.

| | | |
|---|---|---|
| ೧) ಸೇನೆಯ ವೆಚ್ಚದಲ್ಲಿನ ಉಳಿತಾಯದಿಂದ | – | ೫೦ ಕೋಟಿ |
| ೨) ಉಪ್ಪಿನ ಮೇಲಿನ ತೆರಿಗೆಯಿಂದ | – | ೩೦ ಕೋಟಿ |
| ೩) ಅಬಕಾರಿ ಆದಾಯ | – | ೨೫ ಕೋಟಿ |
| ೪) ವಿಮೆಯಿಂದ | | |
| ೫) ರಾಜ್ಯಸರ್ಕಾರ ಹಾಗು ಖಾಸಗಿ ನೌಕರರ ಕಡ್ಡಾಯ ವಿಮೆಯಿಂದ | – | ಅಂಕಿ ಸಂಖ್ಯೆಗಳು ಲಭ್ಯವಿಲ್ಲ. |

೫೦. ಈ ಮೂಲಗಳಿಂದ ಬರುವ ಹಣವನ್ನು ದೇಶದ ಅಭಿವೃದ್ಧಿಗಾಗಿ ಬಳಸಬಹುದು.

**IV) ಪರಿಶಿಷ್ಟ ಜಾತಿಯ ಒಕ್ಕೂಟ ಹಾಗು ಇತರ ರಾಜಕೀಯ ಪಕ್ಷಗಳ ನಡುವೆ ಸಹಕಾರ.**

೫೧. ಕೇವಲ ಒಂದು ಸಂಘದಿಂದ ಒಂದು ಪಕ್ಷ ಉದ್ಭವಿಸುವುದಿಲ್ಲ. ಒಂದು ಪಕ್ಷ ಎಂದರೆ ಒಂದೇ ಸಿದ್ಧಾಂತಕ್ಕೆ ಬದ್ಧರಾಗಿರುವ ಜನರ ಗುಂಪು. ಯಾವುದೇ ಸಿದ್ಧಾಂತ ಇಲ್ಲದೆಯೇ ಒಂದು ಪಕ್ಷ ಕಾರ್ಯನಿರ್ವಹಿಸುವುದು ಸಾಧ್ಯವಿಲ್ಲ. ಸಿದ್ಧಾಂತ ಇಲ್ಲದ ಸಂದರ್ಭದಲ್ಲಿ ಜನರನ್ನು ಒಟ್ಟಾಗಿ ಹಿಡಿದಿಡುವಂತಹುದು ಯಾವುದೂ ಇರುವುದಿಲ್ಲ. ಸಿದ್ಧಾಂತ ಇರದ ಒಂದು ಪಕ್ಷ ಧರ್ಮಶಾಲೆಯಂತೆ ಇರುತ್ತದೆ. ನೀತಿಗಳನ್ನು ಸರಿಯಾಗಿ ರೂಪಿಸಿಕೊಂಡಿರದ, ತನ್ನ ಸದಸ್ಯರಿಂದ ಅಂತಹ ನೀತಿಗಳಿಗೆ ಬದ್ಧರಾಗಿರುತ್ತೇವೆಂದು ವಚನವನ್ನು ಪಡೆಯದಿರುವ ಪಕ್ಷಗಳ ಜೊತೆ, ಅಲ್ಲದೆ ಒಕ್ಕೂಟದ ನೀತಿಗಳಿಗೆ ಹೊಂದಾಣಿಕೆಯಾಗದ ನೀತಿಗಳನ್ನು ಹೊಂದಿರುವಂತಹ ರಾಜಕೀಯ ಪಕ್ಷಗಳೊಂದಿಗೆ, ಒಕ್ಕೂಟವು ಸಹಯೋಗವನ್ನು ಹೊಂದಿರುವುದಿಲ್ಲ.

೫೨. ಕೇವಲ ಆದರ್ಶಗಳು ಮಾತ್ರ ಸಾಕಾಗುವುದಿಲ್ಲ. ಈ ಅದರ್ಶಗಳನ್ನು ಸಾಕಾರಪಡಿಸುವುದೂ ಅತ್ಯವಶ್ಯಕ. ಈ ಗೆಲವು ಸಾಧಿಸುವುದು ಒಂದು ಸಂಘಟಿತ ಪಕ್ಷದಿಂದ ಸಾಧ್ಯವೆ ಹೊರತೂ, ವ್ಯಕ್ತಿಗಳಿಂದಲ್ಲ. ಈ ಕಾರಣಕ್ಕಾಗಿ ವಿಶೇಷ ಸಂಧರ್ಭಗಳನ್ನು ಹೊರತುಪಡಿಸಿ ಒಕ್ಕೂಟವು ಸ್ವತಂತ್ರ ಅಭ್ಯರ್ಥಿಗಳನ್ನು ಬೆಂಬಲಿಸುವುದಿಲ್ಲ.

೫೩. ಎರಡನೆಯದಾಗಿ, ಪರಿಶಿಷ್ಟ ಜಾತಿಯ ಒಕ್ಕೂಟವು ಹಿಂದುಳಿದ ವರ್ಗಗಳು ಹಾಗು ಪರಿಶಿಷ್ಟ ಪಂಗಡಗಳು ಸಹಕರಿಸಿ ಕಾರ್ಯನಿರ್ವಹಿಸಬೇಕೆಂದು ಬಯಸುತ್ತದೆ. ಏಕೆಂದರೆ ಅವರು ಹೆಚ್ಚು ಕಡಿಮೆ ಪರಿಶಿಷ್ಟ ಜಾತಿಗಳವರ ಪರಿಸ್ಥಿತಿಯಲ್ಲಿಯೇ ಇದ್ದಾರೆ. ದುಃಖದ ಸಂಗತಿ ಎಂದರೆ ಇವರಿಗೆ ಪರಿಶಿಷ್ಟ ಜಾತಿಯ ಜನರಿಗಿರುವಷ್ಟು ರಾಜಕೀಯ ಪ್ರಜ್ಞೆ ಇಲ್ಲ. ಕಳೆದ ೨೦ ವರ್ಷಗಳಿಂದ ಪರಿಶಿಷ್ಟ ಜಾತಿಯು ರಾಜಕೀಯ ಕಾರಣಗಳಿಗಾಗಿ ಹೋರಾಡುತ್ತಲೇ ಬಂದಿದೆ. ಸ್ವತಂತ್ರ ಭಾರತದ ಸಂವಿಧಾನವು, ಹಿಂದುಳಿದ ವರ್ಗಗಳು, ಪರಿಶಿಷ್ಟವರ್ಗ ಹಾಗು ಪರಿಶಿಷ್ಟ ಜಾತಿಯ ಜನರನ್ನು ಈ ದೇಶದ ನಾಯಕರನ್ನಾಗಿಸಿದೆ. ಸವರ್ಣೀಯ ಹಿಂದೂಗಳಲ್ಲಿನ ಅಲ್ಪಸಂಖ್ಯಾತರು ತಾವೇ ಈ ದೇಶದ ಆಡಳಿತದ ಚುಕ್ಕಾಣಿಯನ್ನು ಹಿಡಿದುಕೊಂಡಿದ್ದಾರೆ. ಪರಿಶಿಷ್ಟ ಜಾತಿಯ ಒಕ್ಕೂಟದ ಜನರ ಭಯವೆಂದರೆ, ತಮ್ಮ ರಾಜಕೀಯ ಪ್ರಜ್ಞೆಯ ಕೊರತೆಯಿಂದ ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ತಿಳುವಳಿಕೆ ಇಲ್ಲದೆ ಸವರ್ಣೀಯ ಹಿಂದೂಗಳ ಸೇವಕರಾಗಿಯೇ ಉಳಿದುಬಿಡುಬಹುದು. ಆದ್ದರಿಂದ ಪರಿಶಿಷ್ಟ ಜಾತಿಯ ಒಕ್ಕೂಟದ ಮೊದಲ ಆದ್ಯತೆಯೆಂದರೆ ಈ ಜನರನ್ನು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡುವುದು. ಒಂದು ವೇಳೆ ಅವರಿಗೆ ಆಸಕ್ತಿಯಿದ್ದರೆ, ಪರಿಶಿಷ್ಟ ಜಾತಿಯ ಒಕ್ಕೂಟವು ತನ್ನ ಹೆಸರನ್ನು ಬದಲಿಸಿಕೊಂಡು, ಅದನ್ನು ಹಿಂದುಳಿದ ವರ್ಗಗಳ ಒಕ್ಕೂಟ ಎಂದು ಕರೆದುಕೊಳ್ಳಲು ಸಿದ್ಧವಿದೆ. ಆಗ ಇದು ಈ ಎರಡೂ ವರ್ಗಗಳ ಸಾಮಾನ್ಯ ಒಕ್ಕೂಟ ಆಗುತ್ತದೆ. ಇದೊಂದು ವೇಳೆ ಆಗದೇ ಹೋದರೂ ಅವರ ಸಂಸ್ಥೆಗಳೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಒಕ್ಕೂಟವು ಸಿದ್ಧವಿದೆ.

೫೪. ಇತರ ರಾಜಕೀಯ ಪಕ್ಷಗಳಿಗೆ ಹೋಲಿಸಿದರೆ, ಪರಿಶಿಷ್ಟ ಜಾತಿಯ ಒಕ್ಕೂಟದ ನಿಲುವನ್ನು ಬಣ್ಣಿಸುವುದು ಸುಲಭ. ಹಿಂದೂ ಮಹಾಸಭೆ, ಆರ್.ಎಸ್.ಎಸ್. ನಂತಹ ಪ್ರತಿಗಾಮಿ ಪಕ್ಷಗಳೊಂದಿಗೆ ಪರಿಶಿಷ್ಟ ಜಾತಿಗಳ ಒಕ್ಕೂಟವು ಹೊಂದಾಣಿಕೆಯನ್ನು ಮಾಡಿಕೊಳ್ಳುವುದಿಲ್ಲ.

೫೫. ವ್ಯಕ್ತಿಸ್ವಾತಂತ್ರ್ಯಕ್ಕೆ ಅಡ್ಡಿಮಾಡುವಂತಹ ಹಾಗು ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ಅಡ್ಡಿಯನ್ನುಂಟುಮಾಡಿ ಸರ್ವಾಧಿಕಾರವನ್ನು ಸ್ಥಾಪಿಸಬಯಸುವ ಕಮ್ಯುನಿಸ್ಟ್ ಪಕ್ಷದಂತಹ ಪಕ್ಷದೊಂದಿಗೆ ಒಕ್ಕೂಟವು ಒಡಂಬಡಿಕೆಯನ್ನು ಮಾಡಿಕೊಳ್ಳುವುದಿಲ್ಲ.

೫೬. ಸರ್ವಾಧಿಕಾರಿ ಧೋರಣೆಯಲ್ಲಿ ಈ ಒಕ್ಕೂಟವು ನಂಬಿಕೆಯನ್ನು ಇರಿಸಿಲ್ಲ. ಆದ್ದರಿಂದ ಸರ್ವಾಧಿಕಾರಿ ಧೋರಣೆಯನ್ನು ಅನುಸರಿಸುವ ಹಾಗು ಪ್ರತಿಪಕ್ಷವನ್ನು ಬೆಳೆಯಲು ಬಿಡದ ಪಕ್ಷಗಳೊಂದಿಗೆ ಒಕ್ಕೂಟವು ಹೊಂದಾಣಿಕೆಯನ್ನು ಮಾಡಿಕೊಳ್ಳುವುದಿಲ್ಲ.

೫೭. ಅಂತೆಯೇ ಹೆಚ್ಚಿನ ಸಂಖ್ಯೆಯ ರಾಜಕೀಯ ಪಕ್ಷಗಳಿರುವುದನ್ನು ಒಕ್ಕೂಟವು ಅನುಮೋದಿಸುವುದಿಲ್ಲ. ಈ ಪಕ್ಷದ ಆದರ್ಶವೆಂದರೆ ಎರಡು ಪಕ್ಷ ಮಾತ್ರ ಅಸ್ತಿತ್ವದಲ್ಲಿರಬೇಕು ಎಂಬುದು. ಆಗ ಮಾತ್ರವೇ ಸರಕಾರಕ್ಕೆ ಭದ್ರತೆ ಒದಗಲು ಸಾಧ್ಯ ಹಾಗು ವ್ಯಕ್ತಿಗತ ಸ್ವಾತಂತ್ರ್ಯ

ದೊರೆಯಲು ಸಾಧ್ಯ. ಆದ್ದರಿಂದ ಈ ದೇಶದಲ್ಲಿ ಎರಡೇ ಪಕ್ಷಗಳಿರಬೇಕೆಂಬ ನೀತಿಯನ್ನು ಸ್ಥಾಪಿಸಲು ಒಕ್ಕೂಟವು ಪ್ರಯತ್ನಿಸಲಿದೆ. ಆದರೆ ಇದು ಸದ್ಯದಲ್ಲಿ ಕೈಗೂಡುವಂತಹುದಲ್ಲ. ಈಗ ಮಾಡಬಹುದಾದುದೆಂದರೆ, ವ್ಯಕ್ತಿಗಳಿಗೆ ಬದಲಾಗಿ ಸಮಾನ ರಾಜಕೀಯ ನೀತಿಗಳನ್ನು ಹೊಂದಿರುವ ಹಾಗೂ ಸಾಮಾನ್ಯ ನಿಬಂಧನೆಗಳಿಗೆ ಒಳಪಟ್ಟಂತಹ, ಆದರೆ ತಮ್ಮ ತಮ್ಮ ಘಟಕಗಳ ಒಳಗೆ ಸ್ವಾಯತ್ತತೆಯನ್ನು ಹೊಂದಿರುವ ವಿವಿಧ ರಾಜಕೀಯ ಪಕ್ಷಗಳನ್ನು ಸದಸ್ಯರನ್ನಾಗಿ ಒಳಗೊಂಡ ಒಂದು ಅಖಿಲ ಭಾರತ ಪಕ್ಷಗಳ ಒಕ್ಕೂಟವನ್ನು ರಚಿಸುವುದು. ಈ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಚುನಾವಣೆಗಾಗಿ ನಿಲ್ಲಿಸುವಾಗ ಎಲ್ಲಾ ಘಟಕ ಪಕ್ಷಗಳಿಗೂ ಸಾಮಾನ್ಯವಾಗಿರುವಂತಹ ನೀತಿಗಳನ್ನು ಅನುಸರಿಸಬೇಕು. ಅಲ್ಲದೆ, ಒಂದು ಸಮಿತಿಯ ಒಪ್ಪಿಗೆಗೆ ಒಳಪಟ್ಟು, ಪರಸ್ಪರ ಮಿತ್ರಪಕ್ಷಗಳ ಅಭ್ಯರ್ಥಿಗಳಿಗೆ ಬೆಂಬಲವನ್ನು ನೀಡುವ ನಿಯಮಕ್ಕೆ ಬದ್ಧವಾಗಿರಬೇಕು. ಒಟ್ಟಿನಲ್ಲಿ, ವಿವಿಧ ರಾಜಕೀಯ ಪಕ್ಷಗಳ ಈ ಒಕ್ಕೂಟವು, ಇಂತಹ ಒಂದು ಒಕ್ಕೂಟವೇ ಆಗಿರುವ ಬ್ರಿಟಿಷ್ ಲೇಬರ್ ಪಕ್ಷದ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು.

೫೮. ಕೆ.ಎಂ.ಪಿ. ಪಕ್ಷ, ಸೋಷಿಯಲಿಸ್ಟ್ ಪಕ್ಷ, ಜಸ್ಟೀಸ್ ಪಕ್ಷಗಳಂತಹ ಪಕ್ಷಗಳೊಂದಿಗೆ ಹಾಗೂ, ಅಂತಹ ಪಕ್ಷಗಳು ಇಲ್ಲದಿರುವ ಎಡೆಗಳಲ್ಲಿ ಇತರ ಪಕ್ಷಗಳೊಂದಿಗೆ, ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು ಮೇಲೆ ಹೇಳಿದಂತಹ ರಾಜಕೀಯ ಪಕ್ಷಗಳ ಒಕ್ಕೂಟದ ಒಂದು ಘಟಕವಾಗಿರಲು ಸಿದ್ಧವಿದೆ.

* ರಾಜಕೀಯ ಪಕ್ಷಗಳ ಒಕ್ಕೂಟಕ್ಕೆ ಸೇರುವ ಪಕ್ಷಗಳು ತಮ್ಮ ನೀತಿಗಳನ್ನು ಸ್ಪಷ್ಟವಾಗಿ ರೂಪಿಸಿರಬೇಕು.
* ಅಂತಹ ನೀತಿಗಳು ಪರಿಶಿಷ್ಟ ಜಾತಿಗಳ ಒಕ್ಕೂಟದ ನೀತಿಗಳಿಗೆ ವಿರುದ್ಧವಾಗಿರಬಾರದು.
* ಈ ಒಕ್ಕೂಟಕ್ಕೆ ಸೇರಬಯಸುವ ಪಕ್ಷಗಳು ಪರಿಶಿಷ್ಟ ಜಾತಿಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಪಣತೊಡಬೇಕು.
* ತನ್ನ ಆಂತರಿಕ ವಿಷಯಗಳಲ್ಲಿ, ಪರಿಶಿಷ್ಟ ಜಾತಿಗಳ ಒಕ್ಕೂಟವು ಈ ರಾಜಕೀಯ ಪಕ್ಷಗಳ ಒಕ್ಕೂಟದಲ್ಲಿಯೇ, ಸ್ವಾಯತ್ತವಾಗಿರುವುದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಬೇಕು, ಮತ್ತು
* ಈ ರಾಜಕೀಯ ಪಕ್ಷಗಳ ಒಕ್ಕೂಟವು ಒಂದು ಸ್ವತಂತ್ರ ಘಟಕ ಎಂದು ಮಾನ್ಯತೆ ಮಾಡದಿರುವ ಪಕ್ಷಗಳ ಜೊತೆ ಈ ಒಕ್ಕೂಟದ ಸದಸ್ಯತ್ವವನ್ನು ಬಯಸುವ ರಾಜಕೀಯ ಪಕ್ಷವು ಹೊಂದಾಣಿಕೆಯನ್ನು ಮಾಡಿಕೊಂಡಿರಬಾರದು.

೫೯. ಇನ್ನು ಯಾವ ವ್ಯಕ್ತಿಗಳು ಪರಿಶಿಷ್ಟ ಜಾತಿಯ ಒಕ್ಕೂಟದಿಂದ ಚುನಾವಣೆಯಲ್ಲಿ ಬೆಂಬಲ ಬಯಸುವ ಈ ಒಕ್ಕೂಟ ಸಹ ಸದಸ್ಯರಾಗಿ ನೊಂದಾಯಿತರಾಗಿರಬೇಕು ಮತ್ತು ರಾಜಕೀಯ ಪಕ್ಷಗಳ ಒಕ್ಕೂಟದ ನೀತಿ, ನಿಯಮ, ತತ್ವ ಹಾಗು ಶಿಸ್ತಿಗೆ ಬದ್ಧರಾಗಿರುವುದಾಗಿ ಪ್ರಮಾಣ ಪತ್ರ ಕೊಡಬೇಕು.

* * * * *

## ೪೭

## ರಾಜೀನಾಮೆ ನೀಡಿರುವುದು ಅಸ್ವಸ್ಥತೆಯ ಕಾರಣದಿಂದಲ್ಲ

### ೧೯೫೧ ರ ಅಕ್ಟೋಬರ್ ೧೨ ರಂದು ನವದೆಹಲಿಯಲ್ಲಿ ಡಾ.ಅಂಬೇಡ್ಕರ್ ಅವರು ನೀಡಿದ ಹೇಳಿಕೆ.

ತಾವು ಅಸ್ವಸ್ಥರಾಗಿರುವ ಕಾರಣದಿಂದ ಈ ರಾಜೀನಾಮೆಯನ್ನು ನೀಡಿಲ್ಲ ಎಂದು ಡಾ.ಅಂಬೇಡ್ಕರ್ ಅವರು ಇಲ್ಲಿ ಸ್ಪಷ್ಟಪಡಿಸಿದರು.

ಅವರು ತಾವು ಆಗಸ್ಟ್ ೧೦ ರಂದು ಪ್ರಧಾನಿಯವರಿಗೆ ಬರೆದ ಪತ್ರದಲ್ಲಿ ತಮ್ಮ ಅನಾರೋಗ್ಯದ ಪ್ರಸ್ತಾಪ ಮಾಡಿದ್ದರೂ ಈ ರಾಜೀನಾಮೆಗೆ ಅದು ಕಾರಣವಲ್ಲ ಎಂಬ ಅಂಶವನ್ನು ತಿಳಿಸಿದರು. "ಹಿಂದೂ ಸಿವಿಲ್ ಕೋಡಿಗೆ" ಹೆಚ್ಚಿನ ಆದ್ಯತೆಯನ್ನು ಪಡೆಯಲು ಅವರು ತಮ್ಮ ಆರೋಗ್ಯದ ವಿಷಯವನ್ನು ತಿಳಿಸಿದ್ದರು. ಸೆಪ್ಟೆಂಬರ್ ೨೭ ರಂದು ಬರೆದ ರಾಜಿನಾಮೆ ಪತ್ರದಲ್ಲಿ ಅವರು ತಮ್ಮ ಅನಾರೋಗ್ಯವನ್ನು ತಮ್ಮ ರಾಜೀನಾಮೆಗೆ ಕಾರಣ ಎಂದು ಹೇಳಿರಲಿಲ್ಲ.

"ಎರಡು ಪತ್ರಗಳನ್ನು ಓದಿರುವ ಯಾರೇ ಆದರೂ ನಾನು ಅನಾರೋಗ್ಯದ ಕಾರಣ ರಾಜೀನಾಮೆ ನೀಡುತ್ತಿದ್ದೇನೆ ಎಂದು ಹೇಳಲು ಹೇಗೆ ಸಾಧ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈ ರೀತಿಯ ಅಭಿಪ್ರಾಯ ಮೂಡಿಸುವ ಪ್ರಯತ್ನಗಳು ನಡೆದಿವೆ ಎಂಬುದು ನನಗೆ ಗೊತ್ತಿತ್ತು. ಆದ್ದರಿಂದಲೇ ಈ ಸದನದಲ್ಲಿ ನಾನು ಈ ಸ್ಪಷ್ಟೀಕರಣ ನೀಡುತ್ತಿದ್ದೇನೆ. ಏಕೆಂದರೆ ಯಾರೂ ತಪ್ಪು ಕಲ್ಪನೆಯಲ್ಲಿ ಇರಬಾರದು.

ನಿನ್ನ ಸಂಜೆ ೬ ಘಂಟೆಗೆ ಸಂಸತ್ತಿನಲ್ಲಿ ತಮ್ಮ ರಾಜೀನಾಮೆಯನ್ನು ಕುರಿತ ಕೆಲ ಪ್ರಶ್ನೆಗಳ ಬಗೆಗೆ ಮಾಜಿ ಕಾನೂನು ಮಂತ್ರಿಗಳು ಆಶ್ಚರ್ಯ ವ್ಯಕ್ತಪಡಿಸಿದರು. ತಮ್ಮ ಅನುಪಸ್ಥಿತಿಯಲ್ಲಿ ಸಂಸತ್ತಿನಲ್ಲಿ ಏನು ಜರುಗಿದೆ ಎಂಬುದನ್ನು ಇವರು ದಿನ ಪತ್ರಿಕೆಗಳ ಮೂಲಕ ತಿಳಿದುಕೊಂಡ ನಂತರ ಅವರಿಗೆ ಉಪ ಸ್ಪೀಕರ್ ಹಾಗು ಪ್ರಧಾನಮಂತ್ರಿಯವರ ಹೇಳಿಕೆಯಿಂದ ಈ ಗೊಂದಲ ಉಂಟಾಗಿರುವುದು ತಿಳಿದು ಬಂದಿತು.

"ದುರದೃಷ್ಟವಶಾತ್, ಈ ಪ್ರಶ್ನೆಯನ್ನು ಸದನದ ಮುಂದೆ ಸಂಜೆ ೬ ಘಂಟೆಗೆ ಇರಿಸುವುದಾಗಿ ಪ್ರಧಾನಿಗಳು ನನಗೆ ತಿಳಿಸಿರಲಿಲ್ಲ. ಅವರೇನಾದರೂ ತಮ್ಮ ಈ ಇರಾದೆಯನ್ನು ನನಗೆ ತಿಳಿಸಿದ್ದರೆ, ನಾನು ಸದನದಲ್ಲಿ ಉಪಸ್ಥಿತನಿದ್ದು ಅವರೇನು ಹೇಳುತ್ತಾರೆ ಎಂಬುದನ್ನು ಗಮನಿಸಿ. ಅಲ್ಲಿಯೇ ಅದಕ್ಕೆ ಸೂಕ್ತ ವಿವರಣೆಯನ್ನು ನೀಡುತ್ತಿದ್ದೆ. ಆದರೆ ಅವರಿಂದ ನನಗೆ ಆ ರೀತಿಯ ಯಾವುದೇ ಮಾಹಿತಿ ಇರಲಿಲ್ಲ ಆದ್ದರಿಂದ ನಾನು ಸದನದಲ್ಲಿ ಅನುಪಸ್ಥಿತನಾಗಿದ್ದೆ" ಎಂದು ಡಾ.ಅಂಬೇಡ್ಕರ್ ಹೇಳಿದರು.

ಆದ್ದರಿಂದ ಉಂಟಾಗಿರುವ ಗೊಂದಲಕ್ಕೆ ಸೂಕ್ತ ವಿವರಣೆ ನೀಡುವುದು ಅಗತ್ಯ ಎಂದೆನಿಸುತ್ತಿದೆ. ನನ್ನ ಹಾಗು ಅವರ ನಡುವೆ ನಡೆದಿದ್ದ ಪತ್ರ ವ್ಯವಹಾರವನ್ನು ಓದುವುದರಿಂದ ಪ್ರಧಾನಿಗಳಿಗೆ ಯಾವ ಲಾಭ ಉಂಟಾಯಿತು ಎಂದು ತಿಳಿಯಲು ನಾನು ವಿಫಲನಾಗಿದ್ದೇನೆ. ಆದರೆ ಅನಾರೋಗ್ಯದ ನಿಮಿತ್ತ ನಾನು ರಾಜೀನಾಮೆ ನೀಡಿರುವೆ ಎಂದು ಸಾಬೀತು ಪಡಿಸುವ ಪ್ರಯತ್ನ ಪ್ರಧಾನಿಯವರದ್ದಾಗಿದ್ದರೆ, ಅದನ್ನು ಸುಳ್ಳು ಮಾಡುವುದು ನನಗೆ ಕಷ್ಟವೇ ಅಲ್ಲ".

### ಡಾ. ಅಂಬೇಡ್ಕರ್ ಅವರ ಪತ್ರಗಳನ್ನೋದಿದುದರ ಔಚಿತ್ಯ

ಸಂಸತ್ತಿನಲ್ಲಿ ಶ್ರೀ ಕಾಮತ್ ಅವರ ಪ್ರಶ್ನೆ:

ನವದೆಹಲಿ ಅಕ್ಟೋಬರ್ ೧೨

ಪ್ರಧಾನಿ ಮಂತ್ರಿಯವರು ಹಾಗು ಅಂಬೇಡ್ಕರ್ ಅವರ ನಡುವಿನ ನಡೆದಿರುವ ಪತ್ರವ್ಯವಹಾರವನ್ನು

ಪ್ರಧಾನಿಯವರು ಸಂಸತ್ತಿನ ಸಭೆಯಲ್ಲಿ, ಅಂಬೇಡ್ಕರ್ ಅವರಿಗೆ ಮೊದಲೇ ತಿಳಿಸದೆ, ಅಥವಾ ಅವರ ಅನುಮತಿಯನ್ನು ಪಡೆಯದೆ, ಪ್ರಧಾನ ಮಂತ್ರಿಗಳು ಓದಿದುದನ್ನು ಕುರಿತು ಇಂದು ಬೆಳಿಗ್ಗೆ ಶ್ರೀ ಎಚ್.ವಿ. ಕಾಮತ್ ಅವರು ಪ್ರಶ್ನಿಸಿದರು.

ಡಾ.ಅಂಬೇಡ್ಕರ್ ಅವರು ಅತ್ಯಂತ ಜೋರಾದ ಕರತಾಡನದ ನಡುವೆ, ಮುಂದಿನ ಆಸನಗಳಲ್ಲಿ ಬಂದು ಆಸೀನರಾದರು. ಆ ಕೂಡಲೇ ತಮ್ಮ ಪತ್ರಗಳ ಬಗೆಗೆ ಸೂಕ್ತ ವಿವರಣೆ ನೀಡಲು ಡಾ.ಅಂಬೇಡ್ಕರ್ ಅವರಿಗೆ ಅವಕಾಶ ಕೊಡಲಾಗುವುದೇ ಎಂದು ಶ್ರೀ ಕಾಮತ್ ಅವರು ಪ್ರಶ್ನಿಸಿದರು. ಪ್ರತಿಯೊಬ್ಬ ಸದಸ್ಯನೂ ತನ್ನ ಪರವಾಗಿ ಮಾತನಾಡಬಹುದು ಎಂದೂ ಮತ್ತು ಕಳೆದ ಸಂಜೆ ೬ ಘಂಟೆಗೆ ಡಾ.ಅಂಬೇಡ್ಕರ್ ಅವರು ಹೇಳಿಕೆ ನೀಡುವುದಕ್ಕೆ ತಾವು ಸಮಯ ನಿಗದಿ ಪಡಿಸಿದ್ದುದಾಗಿ ಉಪಸ್ಪೀಕರ್ ಅವರು ನುಡಿದರು. ಆ ಸಮಯದಲ್ಲಿ ಅಂಬೇಡ್ಕರ್ ಅವರು ಅಲ್ಲಿ ಉಪಸ್ಥಿತರಿರಲಿಲ್ಲ ಹಾಗು ಕೆಲ ಸೂಕ್ತ ಕಾಗದಗಳನ್ನು ಸದನದ ಮುಂದೆ ಮಂಡಿಸುವ ಅವಕಾಶವನ್ನು ಪ್ರಧಾನಿಯವರು ಕೋರಿದಾಗ, ಸ್ಪೀಕರ್ ಅವರು ಅದಕ್ಕೆ ಒಪ್ಪಿಗೆ ನೀಡಿದ್ದರು. ಇದಕ್ಕೆ ಮೊದಲು ಯಾವ ಸದಸ್ಯರಿಗೂ ಆ ಕುರಿತು ಯಾವುದೇ ಮುನ್ಸೂಚನೆ ಇರಲಿಲ್ಲ.

ತಮ್ಮ ನಿಲುವನ್ನು ವಿವರಿಸುತ್ತಾ ಡಾ. ಅಂಬೇಡ್ಕರ್ ಅವರು ನಿನ್ನೆಯ ದಿನ ಬೆಳಿಗ್ಗೆ ಸದನದಿಂದ ನಿರ್ಗಮಿಸುವಾಗ ತಾವು ಸಂಜೆ ೬ ಗಂಟೆಗೆ ಹೇಳಿಕೆಯನ್ನು ನೀಡಲು ಸಿದ್ಧರಿರಲಿಲ್ಲ ಎನ್ನುವುದನ್ನು ಸ್ಪೀಕರ್ ಅವರಿಗೆ ತಿಳಿಯುವಂತೆ ಮಾಡಿದ್ದೆ ಎಂದು ತಾವು ನಿಶ್ಚಯವಾಗಿ ಭಾವಿಸಿದ್ದೆ ಎಂದುಹೇಳಿದರು. "ನಾನು ನಿನ್ನೆಯ ಸಂಜೆ ೬ ಗಂಟೆಗೆ ನನ್ನ ಹೇಳಿಕೆಯನ್ನು ನೀಡಲು ತಾವು ನೀಡಿದ್ದ ಸೂಚನೆಯನ್ನು ಪಾಲಿಸುವುದಿಲ್ಲ ಎಂದು ತಮಗೆ ಸ್ಪಷ್ಟಪಡಿಸಿದ್ದೆ" ಆದರೆ ಪ್ರಧಾನ ಮಂತ್ರಿಯವರು ಪತ್ರವನ್ನು ಸದನದಲ್ಲಿ ಓದಿದ್ದರಿಂದ ತಮ್ಮ ಮನಸ್ಸಿಗೇನೂ ನೋವಾಗಿಲ್ಲ ಎಂದು ಅವರು ಹೇಳಿದರು.

ಮುಂದುವರಿಯುತ್ತಾ ಅವರು, ಸದನದಲ್ಲಿ ತಮ್ಮ ಪತ್ರವನ್ನು ಓದಿದ್ದು ಉಚಿತವೋ ಅಲ್ಲವೋ ಎಂಬುದನ್ನು ತೀರ್ಮಾನಿಸುವುದನ್ನು ತಾವು ಪ್ರಧಾನ ಮಂತ್ರಿಯವರಿಗೆ ಹಾಗೂ ಸ್ಪೀಕರ್ ಅವರಿಗೇ ಬಿಡುತ್ತಿದ್ದೇನೆ ಹಾಗೂ ತಮ್ಮ ಬಗೆಗಿನ ಇತರರ ಅಭಿಪ್ರಾಯಗಳನ್ನು ಸರಿಪಡಿಸಲು ತಮಗೆ ಅನ್ಯಮಾರ್ಗಗಳಿವೆ ಎಂದೂ ಅವರು ಹೇಳಿದರು.

ಈ ಘಟನೆಯ ಬಗ್ಗೆ ಚರ್ಚೆಯನ್ನು ಮುಗಿಸುತ್ತಾ ಉಪಸಭಾಪತಿಯವರು "ನಾನು ಆ ಸಮಯ ನಿಗದಿ ಮಾಡಿದ್ದರು ಕೂಡ ಸದಸ್ಯರು ತಮ್ಮ ಮನವನ್ನು ಬದಲಿಸಿಕೊಂಡು ಹೇಳಿಕೆ ನೀಡದಿರಲು ನಿರ್ಧರಿಸಬಹುದು."[೧]

* * * * *

---

೧. ಟೈಂಸ್ ಆಫ್ ಇಂಡಿಯಾ ದಿನಾಂಕ: ೧೧.೧೦.೧೯೫೧
(ಈ ದಿನಾಂಕ ತಪ್ಪಾಗಿರುವ ಸಾಧ್ಯತೆಯಿದೆ – ಸಂಪಾದಕರು)
ಪುನರ್ ಮುದ್ರಣ : ಖೈರ್ ಮೋಡೆ ಸಂಪುಟ ೧೦ ಪುಟ – ೧೧೯–೧೨೧.

## ೪೮
## ಯಾವ ಪಕ್ಷದ ಗುರಿಗಳು ಒಕ್ಕೂಟದ ಗುರಿಗಳೊಂದಿಗೆ ವಿರುದ್ಧವಾಗಿಲ್ಲವೋ ಅಂತಹ ಪಕ್ಷಗಳೊಂದಿಗೆ ಹೊಂದಾಣಿಕೆ.

ಪಾಟ್ನಾ ನವೆಂಬರ್ ೭, ೧೯೫೧ (ಪಿ.ಟಿ.ಐ)

ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾಗೆ ಸಂದರ್ಶನವೊಂದನ್ನು ನೀಡುತ್ತಾ ಅಖಿಲ ಭಾರತ ಪರಿಶಿಷ್ಟ ಜಾತಿಯ ಒಕ್ಕೂಟದ ಅಧ್ಯಕ್ಷರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಚುನಾವಣೆಯಲ್ಲಿ ಚುನಾವಣಾ ಮೈತ್ರಿಯನ್ನು ಸೋಷಿಯಲಿಸ್ಟ್ ಪಕ್ಷದೊಂದಿಗೆ ಮಾತ್ರವಲ್ಲದೆ ತಮ್ಮ ಒಕ್ಕೂಟದ ಗುರಿಯೊಂದಿಗೆ ಸರಿಹೊಂದುವ ಉದ್ದೇಶಗಳನ್ನು ಹೊಂದಿರುವ ಯಾವುದೇ ಪಕ್ಷದ ಜೊತೆಗೂ ಹೊಂದಾಣಿಕೆಗೆ ತಮ್ಮ ಒಕ್ಕೂಟವು ಸಿದ್ಧವಾಗಿದೆ ಎಂದರು.

ಸೋಷಿಯಲಿಸ್ಟ್ ಪಕ್ಷದ ನಾಯಕರಾದಂತಹ ಶ್ರೀ ಜಯಪ್ರಕಾಶ ನಾರಾಯಣ ಅವರೊಂದಿಗೆ ಡಾ.ಬಿ.ಆರ್.ಅಂಬೇಡ್ಕರ್ ಚರ್ಚಿಸಿದರು. ಆ ಮಾತುಕತೆ ಒಂದು ಘಂಟೆಯ ಕಾಲ ನಡೆಯಿತು. ಚುನಾವಣಾ ಮೈತ್ರಿಯ ಬಗ್ಗೆಯೇ ಈ ಮಾತುಕತೆಗಳು ನಡೆದಿರುವುದಾಗಿ ತಿಳಿದು ಬಂದಿದೆ.

ತಮ್ಮ ಒಕ್ಕೂಟವು ಯಾವುದೇ ಕಾರಣಕ್ಕೂ ಕಮ್ಯೂನಿಸ್ಟ್ ಪಕ್ಷದೊಂದಿಗೆ ಮೈತ್ರಿಗೆ ಒಳಪಡುವುದಿಲ್ಲ ಎಂದರು. ಇದಕ್ಕೆ ಕಾರಣವೆಂದರೆ "ಕಮ್ಯೂನಿಸಂ ಬಗೆಗೆ ತಮಗೆ ನಂಬಿಕೆ ಇಲ್ಲ" ಎಂದು ಅವರು ಹೇಳಿದರು.

ತಮಗೆ ವೈಯಕ್ತಿಕವಾಗಿ ಕಮ್ಯೂನಿಸಂನಲ್ಲಿ ನಂಬಿಕೆ ಇಲ್ಲದಿರುವುದರಿಂದ ತಾವು ತಮ್ಮ ಪಕ್ಷವನ್ನು ಒಡಂಬಡಿಕೆಯಿಂದ ಹೊರಗೆ ಉಳಿಸುತ್ತಿರುವಿರಾ ಎಂದು ಕೇಳಲಾದ ಪ್ರಶ್ನೆಗೆ ಅಂಬೇಡ್ಕರ್ ಅವರು ಈ ಕೆಳಗಿನಂತೆ ಉತ್ತರಿಸಿದರು. "ನಾನು ನನ್ನ ಪಕ್ಷಕ್ಕೆ ಸೇವಕನಾಗಿರಲು ಒಪ್ಪುವುದಿಲ್ಲ. ನನಗೆ ಹಾಗು ನನ್ನ ಪಕ್ಷಕ್ಕೆ ಇದು ಒಮ್ಮತವಿರುವವರೆಗೂ ನಾವು ಒಟ್ಟಿಗೆ ಕಾರ್ಯನಿರ್ವಹಿಸುತ್ತೇವೆ. ಇಲ್ಲವೆಂದರೆ ನಾವು ನಮ್ಮ ನಮ್ಮ ದಾರಿಗಳನ್ನು ಹಿಡಿದು ಬೇರೆಯಾಗುತ್ತೇವೆ. ನಾನೇನು ರಾಜಕೀಯವನ್ನು ನಂಬಿ ಜೀವನ ನಡೆಸುತ್ತಿಲ್ಲ. ಮುಂದೆಯೂ ನಡೆಸುವುದಿಲ್ಲ."

ಕಮ್ಯುನಿಸ್ಟ್ ವಿಷಯದಲ್ಲಿ ತಮ್ಮ ಹಾಗು ಪಕ್ಷದ ನಡುವೆ ಯಾವುದೇ ಅಭಿಪ್ರಾಯಭೇದವಿಲ್ಲ ಎಂದು ನುಡಿದರು.

### ಇನ್ನೂ ಹೆಚ್ಚಿನ ಸಮಯ:

'ಚುನಾವಣೆಗಳನ್ನು ತರಾತುರಿಯಲ್ಲಿ ನಡೆಸುವುದು ಬೇಡವೆಂದು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ. ಜನ ಪ್ರತಿನಿಧಿಕಾಯ್ದೆಯು ಜಾರಿಯಾದ ನಂತರ ಒಂದು ವರ್ಷವಾದರೂ ನಾವು ಜನರಿಗೆ ಸಮಯಾವಕಾಶವನ್ನು ನೀಡಬೇಕು' ಎಂದು ಡಾ.ಅಂಬೇಡ್ಕರ್ ನುಡಿದರು.

ತಮಗೆ ಸಮಯವಿದ್ದರೆ ಕಾಂಗ್ರೆಸ್ ಅನ್ನು ವಿರೋಧಿಸುವ ಏಕೈಕ ಪಕ್ಷವನ್ನು ಅಥವಾ ಪಕ್ಷಗಳ ಒಕ್ಕೂಟವನ್ನು ತಮ್ಮ ಪಕ್ಷದ ನೀತಿ, ನಿಲವುಗಳಿಗೆ ವಿರೋಧವಿಲ್ಲದ ನೀತಿ, ನಿಲುವುಗಳನ್ನು ಹೊಂದಿರುವ ಪಕ್ಷಗಳೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಬೇರೆ ಬೇರೆ ಪ್ರಾಂತದ ತಮ್ಮ ಶಾಖೆಗಳಿಗೆ ಸ್ವಾತಂತ್ರ್ಯವನ್ನು ನೀಡಲಾಗಿದೆ ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು.

* * * * *

## ೪೯
## ಯಾವುದೇ ವ್ಯಕ್ತಿಯೂ ತನ್ನ ಪ್ರಕರಣಕ್ಕೆ ತಾನೇ ತೀರ್ಪುಗಾರನಾಗಬಹುದು.

ನವದೆಹಲಿ, ಡಿಸೆಂಬರ್ ೧೦ ೧೯೫೧

ಭಾರತದ ಮಾಜಿ ಕಾನೂನು ಮಂತ್ರಿಗಳು ಹಾಗು ಸಂವಿಧಾನದ ಮುಖ್ಯ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್, ಅವರು ಉಚ್ಚನ್ಯಾಯಾಲಯದ ಮುಂದೆ ಇಂದು ಹಾಜರಾದರು. ಮುಂಬರುವ ದಿನಗಳಲ್ಲಿ ಅವರು ಕೆಲ ಜಮೀನ್ದಾರರ ಪರವಾಗಿ ವಾದಮಂಡನೆಯನ್ನು ಮಾಡಲಿದ್ದಾರೆ.

ಶ್ರೀ ಪಿ.ಆರ್. ದಾಸ್ ಅವರು ಇಂದು ತಮ್ಮ ವಾದವನ್ನು ಮಂಡನೆ ಮಾಡುವ ಸಂದರ್ಭದಲ್ಲಿ ಒಮ್ಮೆ ಡಾ. ಅಂಬೇಡ್ಕರ್ ಅವರ ಬಗೆಗೆ ಉಲ್ಲೇಖಿಸಿದರು. ಸಂವಿಧಾನದ ಕರಡಿನಲ್ಲಿ ಒಂದು ನಿರ್ದಿಷ್ಟ ಪದಗುಚ್ಛವಿದ್ದು ಅದನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರ ಒತ್ತಾಯದ ಮೇರೆಗೆ ತೆಗೆದುಹಾಕಲಾಯಿತು ಎಂದು ನ್ಯಾಯಾಲಯಕ್ಕೆ ಅವರು ತಿಳಿಸಿದರು.

ಮುಂದುವೆಯುತ್ತಾ ದಾಸ್ ಅವರು "ಡಾ.ಬಿ.ಆರ್.ಅಂಬೇಡ್ಕರ್ ಅವರು ಇಲ್ಲಿ ಉಪಸ್ಥಿತರಿದ್ದಾರೆ. ಗೌರವಾನ್ವಿತ ಸಭಾಪತಿಗಳು ಅವರನ್ನು ಕರೆದು ಇದಕ್ಕೆ ವಿವರಣೆಯನ್ನು ಪಡೆಯಬೇಕು" (ಜೋರಾದ ನಗು) – UPI[1]

ನವದೆಹಲಿ, ಮಾರ್ಚ್ ೬,*

ಡಾ.ಬಿ.ಆರ್.ಅಂಬೇಡ್ಕರ್ ಅವರು ಉಚ್ಚನ್ಯಾಯಾಲಯದ ಎದುರು ಉತ್ತರ ಪ್ರದೇಶದ ಜಮೀನ್ದಾರರ ಪರವಾಗಿ ತಮ್ಮ ವಾದವನ್ನು ಮುಂದುವರಿಸುತ್ತಾ ಜಮೀನ್ದಾರರಿಗೆ ನೀಡಬೇಕಾದ ಪರಿಹಾರ ಧನದ ವಿಷಯವಾಗಿ ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಬಾರದು ಎಂದರು.

ಅಮೆರಿಕಾದ ನ್ಯಾಯ ಸಿದ್ಧಾಂತವನ್ನು ಅನುಸರಿಸಿ, ನ್ಯಾಯಶಾಸ್ತ್ರದ ಪ್ರಕಾರ ಯಾವ ವ್ಯಕ್ತಿಯೂ ತನ್ನ ಸ್ವಂತ ಪ್ರಕರಣಕ್ಕೆ ತಾನೇ ತೀರ್ಪುಗಾರನಾಗಬಾರದು ಎಂದರು.

ಡಾ. ಅಂಬೇಡ್ಕರ್ ಅವರು ಉತ್ತರಪ್ರದೇಶದ ಜಮೀಂದಾರಿ ಮತ್ತು ಆಸ್ತಿ ನಿರ್ಮೂಲನಾ ಕಾಯ್ದೆಯ ವಿರುದ್ಧ, ಕೇಂದ್ರ ಜಮೀನುದಾರರ ಪರವಾಗಿ ವಾದಿಸುತ್ತಿದ್ದರು. ಒಂದು ವೇಳೆ ಸರ್ಕಾರವು ಪರಿಹಾರಧನವನ್ನು ನಿರ್ಧರಿಸದಿದ್ದರೆ ಈ ಸಮಸ್ಯೆಗೆ ಪರಿಹಾರ ಏನು ಎಂದು ಮುಖ್ಯ ನ್ಯಾಯಾಧೀಶರು ಪ್ರಶ್ನಿಸಿದುದಕ್ಕೆ ಉತ್ತರಿಸುತ್ತಾ ಅಂಬೇಡ್ಕರ್ ಅವರು ಸರಕಾರವು ಘೋಷಿಸಿರುವ ಪರಿಹಾರವನ್ನು ಕಾನೂನುಬದ್ಧವಲ್ಲ ಎಂದು ನ್ಯಾಯಾಲಯವು ಸಾರಬೇಕು ಅವರು ಹೇಳಿದರು.

ಈ ಪರಿಹಾರ ಧನವನ್ನು ನಿರ್ಧರಿಸುವ ಕಾರ್ಯವನ್ನು ಯಾವುದಾದರೂ ಸ್ವತಂತ್ರ ಸಂಸ್ಥೆಗೆ ಒಪ್ಪಿಸಬೇಕೇ ಹೊರತು, ಖಾಸಗಿ ಆಸ್ತಿಯನ್ನು ವಶಪಡಿಸಿಕೊಳ್ಳುವ ಸರಕಾರವು ಇದನ್ನು ಮಾಡಬಾರದು ಎಂದರು. ಉತ್ತರ ಪ್ರದೇಶ ಸರ್ಕಾರವು ನಿಗದಿ ಮಾಡಿದ್ದ ಪರಿಹಾರಧನವು ಭ್ರಾಮಕವಾಗಿದೆ. ತಮ್ಮ ಸಾಲಗಳನ್ನು ತೀರಿಸಿದ ಮೇಲೆ ಭೂಮಾಲೀಕರಿಗೆ ಪರಿಹಾರಧನ ಏನೂ ಉಳಿದಿರುವುದಿಲ್ಲ ಎಂದು ಹೇಳಿದರು.[೨]

---

1. Free Press Journal, ೧೧ ಡಿಸೆಂಬರ್ ೧೯೫೧

ಇವುಗಳಲ್ಲಿ ಒಂದು ದಿನಾಂಕ ತಪ್ಪಾಗಿ ದಾಖಲಾಗಿರುವ ಹಾಗೆ ಕಾಣಿಸುತ್ತದೆ. –ಸಂಪಾದಕರು.

2. The Free Press Journal ೫ನೆಯ ಮಾರ್ಚ್ ೧೯೫೧

## ೫೦
## ಚುನಾವಣಾ ತಕರಾರು ಅರ್ಜಿ

ಭಾರತದ ಮೊತ್ತ ಮೊದಲ ಸಾರ್ವತ್ರಿಕ ಚುನಾವಣೆಯು ಘೋಷಣೆಯಾದದ್ದು ೧೯೫೨ರಲ್ಲಿ. ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಮಾನಮನಸ್ಕ ರಾಜಕೀಯ ಪಕ್ಷಗಳೊಂದಿಗೆ ಮೈತ್ರಿ ಬೇಕಿತ್ತು. 'ಕೃಷಿಕರು ಹಾಗು ಕಾರ್ಮಿಕರ ಪಕ್ಷ'ದೊಂದಿಗೆ ಮಹಾರಾಷ್ಟ್ರದಲ್ಲಿ ಮೈತ್ರಿಯ ಮಾತುಕತೆಗಳು ನಡೆದಿದ್ದವು ಹಾಗು ಸಮಾಜವಾದಿ ಪಕ್ಷದೊಂದಿಗೆ ಕೂಡ ಮಾತುಕತೆಗಳು ನಡೆದಿದ್ದವು. ಶ್ರೀ ಜಯಪ್ರಕಾಶ್ ನಾರಾಯಣ್ ಹಾಗು ಶ್ರೀ ಅಶೋಕ್ ಮೆಹ್ತಾ ಅವರು ಆಚಾರ್ಯ ದೋಂಡೆಯವರ ಮೂಲಕ ಅಂಬೇಡ್ಕರ್ ಅವರನ್ನು ದೆಹಲಿಯಲ್ಲಿ ಭೇಟಿಯಾದರು.

ಪರಿಶಿಷ್ಟ ಜಾತಿಯ ಒಕ್ಕೂಟ ಹಾಗು ಸೋಷಿಯಲಿಸ್ಟ್ ಪಕ್ಷದೊಂದಿಗೆ ಮೈತ್ರಿ ಏರ್ಪಟ್ಟಿತು. ಹಾಗು ಡಾ.ಬಿ.ಆರ್.ಅಂಬೇಡ್ಕರ್ ಅವರು ಮೇಲ್ಮನೆಗೆ ಬೊಂಬಾಯಿ ಉತ್ತರ ಮೀಸಲಾತಿ ಮತಕ್ಷೇತ್ರದಿಂದ ತಮ್ಮ ನಾಮಪತ್ರ ಸಲ್ಲಿಸಿದರು. ಈ ಚುನಾವಣೆಯು ೧೯೫೨ರ ಜನವರಿ ೩ರಂದು ನಡೆಯಿತು.

ಸಂಪಾದಕರು.

### ಬೊಂಬಾಯಿಯ ಚುನಾವಣಾ ಫಲಿತಾಂಶವು
### ಆಘಾತಕಾರಿ
### ವಿಚಾರಣೆಗೆ ಒತ್ತಾಯ

ನವದೆಹಲಿ, ಜನವರಿ, ೫, ೧೯೫೨

ಭಾರತ ಸರ್ಕಾರದ ಮಾಜಿ ಕಾನೂನು ಮಂತ್ರಿಗಳಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೊಂಬಾಯಿಯ ಉತ್ತರ ಕ್ಷೇತ್ರದಿಂದ ಮೀಸಲು ಸ್ಥಾನದಿಂದ ಲೋಕಸಭೆಗೆ ಸ್ಪರ್ಧಿಸಿದ್ದರು. ಇದುವರೆಗೆ ಹೊರಬಿದ್ದಿರುವ ಬೊಂಬಾಯಿ ಚುನಾವಣೆಯ ಫಲಿತಾಂಶದಿಂದ ಬೊಂಬಾಯಿಯ ಜನತೆ ಆಶ್ಚರ್ಯಗೊಂಡಿದ್ದಾರೆ ಎಂದು ಹೇಳಿದರು.

ಇಂದು ನೀಡಿದ ಹೇಳಿಕೆಯಲ್ಲಿ, ಡಾ.ಬಿ.ಆರ್.ಅಂಬೇಡ್ಕರ್ ಅವರು, ಕಾಂಗ್ರೆಸ್‌ಗೆ ದೊರಕಿದ್ದ ಪ್ರತಿಕ್ರಿಯೆಯು ಮುಂಬಯಿಯಲ್ಲಿ ಅತಿಕಡಿಮೆಯಿತ್ತು ಎಂದರು. ಮತದಾರರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸೋಷಿಯಲಿಸ್ಟ್ ಪಕ್ಷ ಹಾಗು ಪರಿಶಿಷ್ಟ ಜಾತಿಯ ಒಕ್ಕೂಟಕ್ಕೆ ಮತ ನೀಡಿದ್ದರು ಎಂದು ಹೇಳಿದರು.

ಆದರೆ ಈ ಫಲಿತಾಂಶದಲ್ಲಿನ ಪರಿಣಾಮಗಳು ಅದಕ್ಕೆ ತದ್ವಿರುದ್ದವಾಗಿವೆ. ಇದರ ಬಗೆಗೆ ಚುನಾವಣಾ ಆಯುಕ್ತರು ವಿಚಾರಣೆಯನ್ನು ನಡೆಸಬೇಕು ಎಂದು ಅವರು ಒತ್ತಾಯಿಸಿದರು.

### ಅಂಬೇಡ್ಕರ್, ಮೆಹ್ತಾ ಅವರು ಚುನಾವಣಾ ಅರ್ಜಿ ಸಲ್ಲಿಸಿದ್ದಾರೆ.

ನವದೆಹಲಿ, ಏಪ್ರಿಲ್ ೨೪, ೧೯೫೨

ಡಾ. ಬಿ.ಆರ್.ಅಂಬೇಡ್ಕರ್ ಮಾಜಿ ಕಾನೂನು ಮಂತ್ರಿಗಳು ಹಾಗು ಸಮಾಜವಾದಿ ಪಕ್ಷದ ನಾಯಕ ಶ್ರೀ ಅಶೋಕ್ ಮೆಹ್ತಾ ಅವರು ಸೇರಿ ಜಂಟಿ ಚುನಾವಣಾ ತರಕಾರು ಅರ್ಜಿಯನ್ನು ಚುನಾವಣಾ ಅಧಿಕಾರಿಗಳಿಗೆ ಸಲ್ಲಿಸಿದ್ದಾರೆ. ಈಗ ನಡೆದ ಚುನಾವಣೆಯನ್ನು ಕಾನೂನುಬಾಹಿರ ಎಂದು ಘೋಷಿಸಬೇಕು ಎಂದು ಕೋರಿದ್ದಾರೆ.

ಈ ಚುನಾವಣಾ ಕ್ಷೇತ್ರದಲ್ಲಿ ಇರುವ ಎರಡು ಸ್ಥಾನಕ್ಕೆ ಎಂಟು ಅಭ್ಯರ್ಥಿಗಳು ನಡುವೆ ತೀವ್ರ ಹಣಾಹಣಿ ಏರ್ಪಟ್ಟಿತ್ತು. ಮುಖ್ಯ ಅಭ್ಯರ್ಥಿಗಳಲ್ಲಿ ಶ್ರೀ ಎಸ್.ಎ.ಡಾಂಗೆ ಎಂಬ ಕಮ್ಯುನಿಸ್ಟ್ ನಾಯಕರೂ ಕೂಡ ಇದ್ದರು.

ಈ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ್ದ, ಕಾಂಗ್ರೆಸ್ ಪಕ್ಷದ ಶ್ರೀ. ವಿ.ಬಿ.ಗಾಂಧಿ ಹಾಗು ಶ್ರೀ. ಎನ್.ಎಸ್. ಕಜ್ರೋಲೇಕರ್ ಅವರು ಜಯಗಳಿಸಿದರು.

ಈ ಚುನಾವಣಾ ತಕರಾರು ಅರ್ಜಿಯಲ್ಲಿ, ಚುನಾವಣೆಯನ್ನು ಅನೂರ್ಜಿತಗೊಳಿಸಲು ಹಲವಾರು ಕಾರಣಗಳನ್ನು ನೀಡಲಾಗಿದೆ. ಪಿ.ಟಿ.ಐ.[೧]

ಚುನಾವಣಾ ಆಯೋಗಕ್ಕೆ ಏಪ್ರಿಲ್ ೨೧, ೧೯೫೨ ರಂದು ಡಾ. ಅಂಬೇಡ್ಕರ್ ಅವರು ಚುನಾವಣಾ ಅರ್ಜಿ ಸಲ್ಲಿಸಿದರು.

ಜನತಾ ಕಾಯ್ದೆಯ ಪರವಾಗಿ ಅರ್ಜಿಸಲ್ಲಿಕೆ.

೮೧ನೇ ಪರಿಚ್ಛೇದದ ಪ್ರಕಾರ, ಬೊಂಬಾಯಿ ಉತ್ತರ ಮತಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ, ೧೯೫೨ರ ಜನವರಿ ೩ ರಂದು ನಡೆದ ಮೇಲ್ಮನೆಯ ಚುನಾವಣೆಗೆ ಸಂಬಂಧಿಸಿದ ಅರ್ಜಿ:

ಚುನಾವಣಾ ಆಯೋಗದ ಗಮನಕ್ಕೆ
ನವದೆಹಲಿ.

೧) ಭೀಮ್‌ರಾವ್ ರಾಮ್‌ಜೀ ಅಂಬೇಡ್ಕರ್
ವಯಸ್ಸು ೬೦ ವರ್ಷ, ಬೊಂಬಾಯಿಯ ನಿವಾಸಿ ಅರ್ಜಿದಾರರು
ರಾಜಗೃಹ, ಹಿಂದೂ ಬಡವಾಣೆ
ದಾದರ್ (ಕೋಟೆ ಪ್ರದೇಶದ) ನಿವಾಸಿ

೨) ಅಶೋಕ ರಣ್‌ಜಿತ್ ರಾಮ್ ಮೆಹ್ತಾ
ವಯಸ್ಸು ೩೯ ವರ್ಷ, ಬೊಂಬಯಿಯ ನಿವಾಸಿ
ದಾದಿಸ್ತ್ ಬೀದಿ, ಬಾಬುಲ್‌ನಾಥ್ ದೇವಸ್ಥಾನ
ಸಮೀಪ (ಕೋಟೆ ಪ್ರದೇಶದ ಹೊರಗೆ) ಬೊಂಬಾಯಿ–ನಿವಾಸಿ

ವಿರುದ್ಧ

೧) ಶ್ರೀಪಾದ ಅಮೃತ್ ಡಾಂಗೆ
ವಯಸ್ಸು ೫೨ ವರ್ಷಗಳು, ಬೊಂಬಾಯಿ ನಿವಾಸಿ
ಶಾಹ್ ನಿವಾಸ, ಮುನಿಸಿಪಲ್ ಹೌಸ್
ಸಂಖ್ಯೆ ೩, ಕೊಹಿನೋರ್ ರಸ್ತೆ (ಕೋಟೆ ಪ್ರದೇಶದ ಹೊರಗೆ)
ದಾದರ್

೨) ಗೋಪಾಲ ವಿನಾಯಕ ದೇಶ್‌ಮುಖ್
ವಯಸ್ಸು ೫೬ ವರ್ಷಗಳು, ಬೊಂಬಾಯಿ ನಿವಾಸಿ,
ಪೆಡ್ಡಾರ್ ರಸ್ತೆ (ಬಾಂಬೆಯ ಕೋಟೆ ಪ್ರದೇಶ ಹೊರಗೆ)

---

೧. The National Standard, dated 25th April. 1952.

೩) ವಿಠ್ಠಲ್ ಬಾಲಕೃಷ್ಣ ಗಾಂಧಿ,
ವಯಸ್ಸು ೫೫ ವರ್ಷಗಳು, ಬೊಂಬಾಯಿ ನಿವಾಸಿ
೨೩ ದ್ವಾರಕಾದಾಸ ರಸ್ತೆ, ಖಟಾವು ಕಟ್ಟಡ,

೪) ಕೇಶವ ಬಾಲಕೃಷ್ಣ ಜೋಷಿ
ವಯಸ್ಸು ೪೯ ವರ್ಷ, ಬೊಂಬಾಯಿ ನಿವಾಸಿ
# ೧೬೫, ಶಿವಾಜಿ ಪಾರ್ಕ್, ರಸ್ತೆ ಸಂಖ್ಯೆ–೬
ಮಾಹಿಂ, ಬಾಂಬೆಯ ಕೋಟೆ ಪ್ರದೇಶದ ಹೊರಗೆ

೫) ನಾರಾಯಣ ಸಡೋಬಾ ಕಾಜ್ರೋಲ್ಕರ್,
ವಯಸ್ಸು ೫೬ ವರ್ಷ, ಬೊಂಬಾಯಿ ನಿವಾಸಿ
೧೮೭, ಸುಪಾರಿಬಾಗ್ ರಸ್ತೆ, ಪಾರೇಲ್, ಬಾಂಬೆಯ ಕೋಟೆ ಪ್ರದೇಶದ ಹೊರಗೆ

೬) ನೀಲಕಂಠ ಬಾಬುರಾವ್ ಪಾರುಲೇಕರ್
ವಯಸ್ಸು ೫೭ ವರ್ಷ, ಬೊಂಬಾಯಿ ನಿವಾಸಿ,
ಪ್ರಿನ್ಸೆಸ್ ರಸ್ತೆ. ಬಾಂಬೆಯ ಕೋಟೆ ಪ್ರದೇಶದ ಹೊರಗೆ

೭) ದತ್ತಾತ್ರೇಯ ರಾಮಚಂದ್ರ ಗರ್ಪುರ,
ವಯಸ್ಸು ೬೨ ವರ್ಷ, ಬೊಂಬಾಯಿ ನಿವಾಸಿ
ಟೋಪಿವಾಲ ಮ್ಯಾನ್‌ಷನ್, ೩೮೬
ಸ್ಯಾಂಡಹರ್ಡ್ ರಸ್ತೆ, ಬಾಂಬೆಯ ಕೋಟೆ ಪ್ರದೇಶದ ಹೊರಗೆ

೮) ರಾಮಚಂದ್ರ ಸಡೋಬ ಕಜ್ರೋಲ್ಕರ್
ವಯಸ್ಸು ೪೨ ವರ್ಷ, ಬೊಂಬಾಯಿ ನಿವಾಸಿ
# ೧೮೫, ಸುಪಾರಿಬಾಗ್ ರಸ್ತೆ,
ಪರೇಲ್, ಬಾಂಬೆಯ ಕೋಟೆ ಪ್ರದೇಶದ ಹೊರಗೆ

೯) ಶಾಂತಾರಾಂ ಸಾವಲ್‌ರಾಂ ಮೀರಜ್‌ಕರ್
ವಯಸ್ಸು ೪೯ ವರ್ಷ, ಬೊಂಬಾಯಿ ನಿವಾಸಿ
ಅಬ್ದುಲ್ ಖಾದರ್ ಚೇಂಬರ್ಸ್, ಪ್ರತಿವಾದಿಗಳು
ಮುನಿಸಿಪಲ್ ಹೌಸ್
ಸಂಖ್ಯೆ. # ೧೮೦, ಸೈಂಟ್ ಗ್ಸೇವಿಯರ್ ರಸ್ತೆ,
ಬೋಯಿವಾಡ ಪೋಲಿಸ್ ಠಾಣೆ ಸರಹದ್ದು.
ಬಾಂಬೆಯ ಕೋಟೆ ಪ್ರದೇಶದ ಹೊರಗೆ

ಚುನಾವಣಾ ಆಯೋಗ
ನವದೆಹಲಿ
ಇವರಿಗೆ

ಮೇಲ್ಕಂಡ ಅರ್ಜಿದಾರರು ಅತ್ಯಂತ ನಮ್ರತೆಯಿಂದ ಆಯೋಗದ ಎದುರು ಸಲ್ಲಿಸಿರುವ ಅರ್ಜಿ.

೧. ಮೇಲ್ಕಂಡ ಅರ್ಜಿದಾರರು, ೧೯೫೨ರ ಜನವರಿ ೩ ರಂದು ಲೋಕಸಭೆಗೆ ನಡೆದ ಚುನಾವಣೆಯಲ್ಲಿ ನಗರದ ಉತ್ತರ ಚುನಾವಣಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು.

೨. ಮೇಲ್ಕಂಡ ಅರ್ಜಿದಾರರ ಹೆಸರು ಚುನಾವಣಾ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದು. ಅವರು ಲೋಕಸಭೆಯ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ಸ್ಪರ್ಧಿಸುವ ಅರ್ಹತೆಯನ್ನು ಪಡೆದಿದ್ದರು.

೩. ಮೇಲ್ಕಂಡ ಅರ್ಜಿದಾರರು ತಮ್ಮ ನಾಮಪತ್ರಗಳನ್ನು ಉತ್ತರ ಚುನಾವಣಾ ಕ್ಷೇತ್ರದಿಂದ ಸಲ್ಲಿಸಿದ್ದರು. ಇವರ ಅರ್ಜಿಯನ್ನು ೧೯೫೧ ರ ನವೆಂಬರ್ ೨೭ ರಂದು ಒಪ್ಪಿಕೊಳ್ಳಲಾಯಿತು. ಕ್ರಮಸಂಖ್ಯೆ ೧ ರಿಂದ ೯ರ ವರೆಗಿನ ಪ್ರತಿವಾದಿಗಳು ತಮ್ಮತಮ್ಮ ನಾಮಪತ್ರಗಳನ್ನು ಅರ್ಜಿದಾರರ ಕ್ಷೇತ್ರದಿಂದಲೇ ಸಲ್ಲಿಸಿದ್ದರು. ಕ್ರಮಸಂಖ್ಯೆ ೭,೮ ಮತ್ತು ೯ ರ ವರೆಗಿನ ಪ್ರತಿವಾದಿಗಳು ಮತ್ತು ತಮ್ಮ ನಾಮಪತ್ರವನ್ನು ನಿಗದಿತ ದಿನಾಂಕದ ಒಳಗೆ ಹಿಂದಕ್ಕೆ ಪಡೆದಿದ್ದರು.

೪. ಮೇಲ್ಕಂಡ ಚುನಾವಣಾ ಕ್ಷೇತ್ರದಿಂದ ಆಯ್ಕೆಯಾಗಿಬೇಕಾಗಿದ್ದ ಅಭ್ಯರ್ಥಿಗಳ ಸಂಖ್ಯೆ ಎರಡು. ಈ ಎರಡು ಸ್ಥಾನಗಳಲ್ಲಿ ಒಂದು ಸ್ಥಾನವು ಸಾಮಾನ್ಯವರ್ಗಕ್ಕೆ ಸೇರಿದರೆ, ಮತ್ತೊಂದು ಸ್ಥಾನವು ಪರಿಶಿಷ್ಟ ಜಾತಿಯ ಅಭ್ಯರ್ಥಿಗೆ ಮೀಸಲಿರುವ ಸ್ಥಾನ. ಪರಿಚ್ಛೇದ ೬೩(೧)ರ ಪ್ರಕಾರ ಪ್ರತಿಯೋರ್ವ ಮತದಾರನಿಗೂ ಎರಡು ಮತಗಳನ್ನು ಚಲಾಯಿಸುವ ಅವಕಾಶ ಇರುತ್ತದೆ. ೧೯೫೧ರ ೪೩ನೆಯ ಜನಪ್ರತಿನಿಧಿಗಳ ಕಾಯ್ದೆಯ ೬೩(೧)ನೆಯ ಪರಿಚ್ಛೇದದ ಪ್ರಕಾರ ಒಬ್ಬನೇ ಮತದಾರ ಯಾವುದೇ ಒಬ್ಬ ಅಭ್ಯರ್ಥಿಗಾದರೂ ಒಂದಕ್ಕಿಂತ ಹೆಚ್ಚು ಮತಗಳನ್ನು ನೀಡುವಂತಿಲ್ಲ.

೫. ಈ ಚುನಾವಣಾ ಮತಗಟ್ಟೆಯಲ್ಲಿ ಚುನಾವಣೆಯು ೧೯೫೨ ಜನವರಿ ೩ ರಂದು ಜರುಗಿತು

೬. ಮತಗಳ ಎಣಿಕೆಯ ಪ್ರಕ್ರಿಯೆಯು ೧೯೫೨ ರ ಜನವರಿ ೭ ರಂದು ಪ್ರಾರಂಭಗೊಂಡು ೧೧ರಂದು ಮುಕ್ತಾಯವಾಯಿತು.

೭. ಈ ಮತಕ್ಷೇತ್ರದ ಫಲಿತಾಂಶವನ್ನು ಚುನಾವಣಾ ಅಧಿಕಾರಿಯವರು ಜನವರಿ ೧೧ ರಂದು ಪ್ರಕಟಿಸಿದರು.

i) ಅರ್ಜಿದಾರ ೧ ಹಾಗು ೨ ಇವರಿಗೆ ಕ್ರಮವಾಗಿ ೧,೨೩,೫೭೬ ಹಾಗು ೧,೩೯,೭೪೧ ಮತಗಳು ದೊರೆತವು.

ii) ಪ್ರತಿ ಅರ್ಜಿದಾರರಾದ ೧,೨,೩,೪,೫ ಹಾಗು ೬ ಇವರಿಗೆ ಕ್ರಮವಾಗಿ ೯೬,೭೫೫, ೪೦,೭೮೬, ೧,೪೯,೧೩೮, ೧೫,೧೯೫, ೧,೩೮,೧೩೭, ೧೨,೫೬೦ ಮತಗಳು ದೊರೆತವು.

iii) ೫ನೆಯ ಪ್ರತಿವಾದಿ ಅವರು ಮೀಸಲು ಸ್ಥಾನಕ್ಕೆ ಆಯ್ಕೆಯಾದರೆ, ೩ನೆಯ ಪ್ರತಿವಾದಿ ಸಾಮಾನ್ಯ ಮತಕ್ಷೇತ್ರದಿಂದ ಆಯ್ಕೆಯಾದರು.

iv) ಈ ಮತಕ್ಷೇತ್ರದಲ್ಲಿ ಪರಿಗಣಿಸಲ್ಪಡಬಹುದಾದ ಮತಗಳ ಸಂಖ್ಯೆ ೭,೧೫,೮೮೮ ಮತ್ತು ತಿರಸ್ಕೃತಗೊಂಡ ಮತಗಳ ಸಂಖ್ಯೆ ೭೪,೩೩೩.

೮) ಅರ್ಜಿದಾರರು, ಈ ಅಧಿಕಾರಿಗಳು ಘೋಷಿಸಿರುವ ಫಲಿತಾಂಶವನ್ನೇ ಪರಿಗಣನೆಗೆ ತೆಗೆದುಕೊಳ್ಳುತ್ತಾರೆ. ಇದನ್ನು 'A' ಎಂದು ಗುರುತು ಹಾಕಿ ಈ ಅರ್ಜಿಯೊಂದಿಗೆ ಲಗತ್ತಿಸಲಾಗಿದೆ.

೯) ಈ ಚುನಾವಣಾ ಫಲಿತಾಂಶವು ವಿಶೇಷ ಗೆಜೆಟ್‌ನಲ್ಲಿ ೧೯೫೨ರ ಜನವರಿ ೨೬ ರಂದು, ವಿಭಾಗ–೭ರಲ್ಲಿ ಪ್ರಕಟಿಸಲಾಯಿತು (ಪುಟ ೧೩೦). ಈ ಚುನಾವಣೆಗೆ ಸಂಬಂಧಿಸಿದ ಖರ್ಚು ವೆಚ್ಚಗಳ ಲೆಕ್ಕವನ್ನು ಮೊದಲನೆಯ ಅರ್ಜಿದಾರರು ೧೯೫೨ರ ಮಾರ್ಚ್ ೧೦ರಂದೂ, ಎರಡನೆಯ ಅರ್ಜಿದಾರರು ೧೯೫೨ರ ಮಾರ್ಚ ೭ ರಂದೂ ೧೯೫೧ರ ಜನಪ್ರತಿನಿಧಿಗಳ (ಚುನಾವಣೆಗಳ ನಡೆಸುವುದರ) ಬಗೆಗಿನ ನಿಯಮಗಳಲ್ಲಿನ ೧೧೨ನೆಯ ನಿಯಮದ ಪ್ರಕಾರ ಚುನಾವಣಾ ಅಧಿಕಾರಿಗಳಿಗೆ ಸಲ್ಲಿಸಿದ್ದರು.

೧೦) ಚುನಾವಣಾ ಅಧಿಕಾರಿಯವರೇ ಹೇಳಿರುವಂತೆ ಕೆಲವು ಅಭ್ಯರ್ಥಿಗಳಿಗೆ ಹಲವು ಬಾರಿ ಎರಡೆರಡು ಮತಗಳು ಒಬ್ಬನೇ ಮತದಾರನಿಂದ ದೊರೆತಿದ್ದವು. ಆದ್ದರಿಂದ ಚುನಾವಣಾ ಅಧಿಕಾರಿಯವರು ಇದನ್ನು ಅನೂರ್ಜಿತವೆಂದು ಪರಿಗಣಿಸಿದರು. ಮತಪಟ್ಟಿಗೆಗಳನ್ನು ಪರೀಕ್ಷಿಸಿದಾಗ ಅಂತಹ ಮತಗಳ ಸಂಖ್ಯೆಯನ್ನು ಈ ಕೆಳಗೆ ನೀಡಲಾಗಿದೆ.

| | | | |
|---|---|---|---|
| ಅರ್ಜಿದಾರ ಸಂಖ್ಯೆ ೧ | | – | ೨,೯೨೧ |
| ಅರ್ಜಿದಾರ ಸಂಖ್ಯೆ ೨ | | – | ೫,೫೯೭ |
| ಪ್ರತಿವಾದಿ ಸಂಖ್ಯೆ | ೧ | – | ೩೯,೧೬೫ |
| –"– | ೨ | – | ೬,೬೩೪ |
| –"– | ೩ | – | ೧೦,೮೮೧ |
| –"– | ೪ | – | ೧,೧೬೮ |
| –"– | ೫ | – | ೬,೮೯೨ |
| –"– | ೬ | – | ೧,೦೨೫ |
| | **ಒಟ್ಟು** | | **೭೪,೩೩೩** |

ಅರ್ಜಿದಾರರು ಮೇಲಿನ ಪಟ್ಟಿಯನ್ನೇ ಸಾಕ್ಷಿಯಾಗಿ ಪರಿಗಣಿಸುತ್ತಾರೆ.

ಆದ್ದರಿಂದ ಅರ್ಜಿದಾರರ ಪ್ರಕಾರ ೭೪,೩೩೩ ಮತದಾನ ಪತ್ರಗಳು ತಿರಸ್ಕೃತವಾಗಿದ್ದು, ಅವುಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂದು ಚುನಾವಣಾ ಅಧಿಕಾರಿಗಳು ಹೇಳಿದ್ದಾರೆ ಎಂದು ಅರ್ಜಿದಾರರು ಬಿನ್ನವಿಸಿಕೊಳ್ಳುತ್ತಾರೆ.

೧೧. ಮೇಲೆ ಹೇಳಲ್ಪಟ್ಟಿರುವ ಮತಕ್ಷೇತ್ರದ ಹಲವು ಮತಗಟ್ಟೆಗಳಲ್ಲಿ ಮತದಾರರಿಗೆ ಎರಡೆರಡು ಮತಪತ್ರಗಳನ್ನು ವಿತರಿಸುವ ಸಂದರ್ಭದಲ್ಲಿ ಜನಪ್ರತಿನಿಧಿಯ ಕಾಯ್ದೆಯ ೬೩(೧)ನೆಯ ಪರಿಚ್ಛೇದವನ್ನು ಸಾವಿರಾರು ಪ್ರಕರಣಗಳಲ್ಲಿ ಉಲ್ಲಂಘಿಸಲಾಗಿದೆ. ೬೩(೧)ನೆಯ ಪರಿಚ್ಛೇದದ ಪ್ರಕಾರ ಮತಪತ್ರಗಳನ್ನು ವಿತರಿಸಲಾಗದಿರುವ ಪರಿಣಾಮವಾಗಿ ಅಂತಹ ಮತಪತ್ರಗಳನ್ನು ಅನೂರ್ಜಿತವೆಂದು ಪರಿಗಣಿಸಿ ತಿರಸ್ಕರಿಸಬೇಕಾಗಿತ್ತು.

೧೨. ಮೇಲೆ ಹೇಳಿದಷ್ಟು ಸಂಖ್ಯೆಯ ಮತಗಳು ತಿರಸ್ಕೃತವಾಗಲು ಜನಪ್ರತಿನಿಧಿ ಕಾಯ್ದೆಯ ೧೨೩/೨೦ನೆಯ ಪರಿಚ್ಛೇದದ ಪ್ರಕಾರ ಭ್ರಷ್ಟಾಚಾರವೆಂದು ಪರಿಗಣಿಸಬಹುದಾದ ಆಚರಣೆಗಳು ಒಂದನೆಯ ಮತ್ತು ಎರಡನೆಯ ಪ್ರತಿವಾದಿಗಳ ಪ್ರಭಾವದಿಂದ ನಡೆದಿರುವುದು ಕಂಡುಬರುತ್ತದೆ ಎಂದು ಅರ್ಜಿದಾರರು ವಾದಿಸುತ್ತಾರೆ. ಇದರಿಂದಾಗಿ, ಈ ಭ್ರಷ್ಟ ಆಚರಣೆಗಳು ಇಡೀ ಚುನಾವಣೆಯ ಪ್ರಕ್ರಿಯೆಯನ್ನೇ ಕಲುಷಿತಗೊಳಿಸಿದೆ

ಮತ್ತು ಅದನ್ನು ಅಸಿಂಧುಗೊಳಿಸಿದೆ.

೧೩. ಮೊದಲ ಮತ್ತು ಎರಡನೆಯ ಪ್ರತಿವಾದಿಗಳು ತಮ್ಮ ಚುನಾವಣಾ ಪ್ರಚಾರದ ವೇಳೆ ಅತ್ಯಂತ ಪ್ರಚೋದನಾಕಾರಿ, ದ್ವೇಷಪೂರಿತ ಹಾಗು ದುರುದ್ದೇಶದಿಂದ ತುಂಬಿದ ಪ್ರಚಾರವನ್ನು ಕರಪತ್ರಗಳು, ಪತ್ರಿಕಾ ಹೇಳಿಕೆಗಳು, ಸಾರ್ವಜನಿಕ ಭಾಷಣಗಳ ಮೂಲಕ ಮಾಡಿದ್ದಾರೆ. ಅವರು ಪ್ರತಿಯೋರ್ವ ಮತದಾರನನ್ನೂ ದಾರಿ ತಪ್ಪಿಸಿ, ಒಬ್ಬನೇ ಅಭ್ಯರ್ಥಿಗೆ ಒಬ್ಬನೇ ಮತದಾರನಿಂದ ಎರಡೆರಡು ಮತಗಳು ಬೀಳುವಂತೆ ಮಾಡಿ ೬೩(೧)ನೆಯ ಪರಿಚ್ಛೇದದ ಉಲ್ಲಂಘನೆಯನ್ನು ಮಾಡಿದ್ದಾರೆ. ಅವರಿಗೆ ನೀಡಿದ ಎರಡೂ ಚುನಾವಣಾ ಪತ್ರಗಳನ್ನು ಒಬ್ಬನೇ ಅಭ್ಯರ್ಥಿಯ ಪರವಾಗಿ ಒಂದೇ ಮತಪಟ್ಟಿಗೆ ಈ ಮೂಲಕ ಮತಗಳು ಅನೂರ್ಜಿತ ಆಗುವಂತೆ ಮಾಡಿದ್ದಾರೆ.

೧೪. i) ಮೊದಲನೆಯ ಪ್ರತಿವಾದಿ ಅಥವಾ ಅವರ ಪ್ರತಿನಿಧಿಗಳು ಅಥವಾ ಅವರ ಬೆಂಬಲಿಗರು ಮರಾಠಿ ಭಾಷೆಯಲ್ಲಿ ಮುದ್ರಿಸಿ ಬಾಂಬೆಯ ನಗರದ ಉತ್ತರ ಮತಕ್ಷೇತ್ರದ ಮತದಾರರನ್ನು ಉದ್ದೇಶಿಸಿ ಮತ್ತು ಅವರಿಗೆ ಹಂಚಿದ ಕರಪತ್ರದಲ್ಲಿ ಮೊದಲನೆಯ ಪ್ರತಿವಾದಿಯನ್ನು ಲೋಕಸಭೆಯಲ್ಲಿ ಆ ಜನತೆಯ ರಂಗವನ್ನು ಮುನ್ನಡೆಸಲು ಅತ್ಯಂತ ಸಮರ್ಥರಾದ ವ್ಯಕ್ತಿಯೆಂದು ಬಣ್ಣಿಸಲಾಗಿದೆ. ಹಾಗೂ ಅದರಲ್ಲಿ ಮೊದಲನೆಯ ಪ್ರತಿವಾದಿಯ ಪರವಾಗಿ ಎರಡೂ ಮತಗಳನ್ನು ಚಲಾಯಿಸಲು ಮತದಾರರನ್ನು ಪ್ರಚೋದಿಸಲಾಗಿದೆ ಮತ್ತು ಹೀಗೆ ಮಾಡುವುದರಿಂದ ಮೊದಲನೆಯ ಪ್ರತಿವಾದಿಗೆ ಅನುಕೂಲವಾಗುತ್ತದೆ ಎಂಬ ವಿಷಯವನ್ನು ಮತದಾರರಿಂದ ಮರೆಮಾಚಲಾಗಿದೆ. ಈ ಕರಪತ್ರದ ಇಂಗ್ಲಿಷ್ ಅನುವಾದವನ್ನು 'ಬಿ' ಎಂದು ನಮೂದಿಸಿದ ಅನುಬಂಧದಲ್ಲಿ ತಮಗೆ ಒದಗಿಸಲಾಗಿದೆ.

ii) ಬಾಂಬೆಯಲ್ಲಿ ಮುದ್ರಿತವಾದ 'ಯುಗಾಂತರ' ಎಂಬ ವಾರಪತ್ರಿಕೆಯು ೧೯೫೧ರ ಡಿಸೆಂಬರ್ ೨೯ರ ಸಂಚಿಕೆಯ ೪ನೆಯ ಪುಟದ ಒಂದು, ಎರಡು ಮತ್ತು ಮೂರನೆಯ ಅಂಕಣಗಳಲ್ಲಿ ಎರಡು ಮತಪತ್ರಗಳನ್ನು ಪಡೆದ ಮತದಾರರು ಅವೆರಡೂ ಮತಪತ್ರಗಳನ್ನು ಮೊದಲನೆಯ ಪ್ರತಿವಾದಿಯ ಚುನಾವಣಾ ಚಿಹ್ನೆಯಾದ 'ಇಂಜಿನ್'ನ ಚಿತ್ರವನ್ನು ಅಂಟಿಸಿರುವ ಮತಪೆಟ್ಟಿಗೆಗೆ ಹಾಕುವಂತೆ ಸೂಚಿಸುವ ಲೇಖನವನ್ನು ಪ್ರಕಟಿಸಿತ್ತು. ಹೀಗೆ ಮಾಡುವುದರಿಂದ ಮೊದಲನೆಯ ಪ್ರತಿವಾದಿಗೆ ಅನುಕೂಲವಾಗುತ್ತದೆ ಎಂಬ ವಿಷಯವನ್ನು ಮತದಾರರಿಂದ ಮುಚ್ಚಿಡಲಾಗಿತ್ತು. ಈ ಯುಗಾಂತರವು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ಪತ್ರಿಕೆಯಾಗಿದ್ದು ಮೊದಲನೆಯ ಪ್ರತಿವಾದಿಯು ಲೋಕಸಭೆಗೆ ನಡೆದ ಈ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಕಮ್ಯುನಿಸ್ಟ್ ಪಕ್ಷದ ಯುಗಾಂತರ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಈ ಭಾಗದ ಅನುವಾದವನ್ನು 'ಸಿ' ಎಂದು ನಮೂದಿಸಿದ ಅನುಬಂಧದಲ್ಲಿ ತಮಗೆ ಒದಗಿಸಲಾಗಿದೆ.

iii) ಇದೇ ರೀತಿಯಲ್ಲಿ, ಮೊದಲನೆಯ ಪ್ರತಿವಾದಿಯ ಸಹಿ ಇರುವ ಮರಾಠಿ ಕರಪತ್ರದಲ್ಲಿ, ಅವರನ್ನು ಲೋಕಸಭೆಗಾಗಿ ಬಾಂಬೆ ನಗರದ ಉತ್ತರ ಕ್ಷೇತ್ರದಿಂದ ನಡೆಯುವ ಚುನಾವಣೆಯಲ್ಲಿ ಯುನೈಟೆಡ್ ರಂಗದ ವಾಮವಾದಿ ಅಭ್ಯರ್ಥಿ ಎಂದು ಬಣ್ಣಿಸಲಾಗಿತ್ತು. ಮತದಾರರು ತಮ್ಮ ಅಭ್ಯರ್ಥಿಯು ಆಯ್ಕೆಯಾಗಬೇಕೆಂದು ಬಯಸಿದರೆ ಎರಡೂ ಮತಗಳನ್ನು ಮೊದಲನೆಯ ಪ್ರತಿವಾದಿಯ ಪರವಾಗಿಯೇ ಚಲಾಯಿಸಬೇಕೆಂದು ಹೇಳಿತ್ತು. ಹೀಗೆ ಚಲಾಯಿಸಿದ ಎರಡು ಮತಗಳಲ್ಲಿ ಒಂದು ಮತವು ಪೋಲಾದರೆ ಅದರಿಂದ ಪ್ರಜಾಪ್ರಭುತ್ವಕ್ಕೆ ಯಾವುದೇ ಹಾನಿಯಿಲ್ಲ. ಏಕೆಂದರೆ ಪರಿಶಿಷ್ಟ ಜಾತಿಗೆ ಸೇರಿರದ ಮತದಾರರು ಮೀಸಲಾಗಿರುವ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗೆ ಮತವನ್ನು ಹಾಕಿದರೆ ಅದು ಪರಿಶಿಷ್ಟ ಜಾತಿಯ ಮತದಾರರ, ಪ್ರಜಾಪ್ರಭುತ್ವದ ಹಿತಾಸಕ್ತಿಗೆ ವಿರುದ್ಧವಾಗಿರುತ್ತದೆ ಎಂದು ಮೊದಲನೆಯ ಪ್ರತಿವಾದಿಯು

ಹೇಳಿದ್ದಾರೆ. ಮುಂದುವರಿದು ಅವರು, ಮೊದಲನೆಯ ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ ಮತ್ತು ಅವರು ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಬಹುದು. ಅಲ್ಲದೆ ಅವರು ಎರಡೂ ಮತಗಳನ್ನು ಪಡೆಯುವುದು ಅಪೇಕ್ಷಣೀಯ ಎಂದು ಹೇಳಿದ್ದಾರೆ. ಯುನೈಟೆಡ್ ರಂಗದ ವಾಮಪಕ್ಷದ ಅಭ್ಯರ್ಥಿಯನ್ನು ಜಯಶೀಲರನ್ನಾಗಿ ಮಾಡಬೇಕಾದರೆ ಮತದಾರರು ತಮ್ಮ ಎರಡೂ ಮತಗಳನ್ನು ಮೊದಲನೆಯ ಪ್ರತಿವಾದಿಗಳಾದ ಅವರ ಈ ಚುನಾವಣೆಯಲ್ಲಿನ ಚಿಹ್ನೆಯಾದ 'ಇಂಜಿನ್' ಗೇ ನೀಡಬೇಕೆಂದು ಸೂಚಿಸಿದ್ದಾರೆ. ಈ ಕರಪತ್ರದ ಇಂಗ್ಲಿಷ್ ಅನುವಾದವನ್ನು 'ಡಿ' ಎಂದು ನಮೂದಿಸಿದ ಅನುಬಂಧದಲ್ಲಿ ತಮಗೆ ಒದಗಿಸಲಾಗಿದೆ.

೧೬. ಮೇಲೆ ಹೇಳಿದ ಮರಾಠಿ ವಾರಪತ್ರಿಕೆಯಾದ 'ವಿವಿಧ ವಾರ್ತಾ' ಎರಡನೆಯ ಪ್ರತಿವಾದಿಯ ಪರವಾಗಿಯೇ ಪ್ರಚಾರ ಕಾರ್ಯವನ್ನೇ ಕೈಗೊಂಡಿತ್ತು. 'ಮತದಾನದಲ್ಲಿ ಷಡ್ಯಂತ್ರ' ಎಂಬ ಶೀರ್ಷಿಕೆಯಡಿಯಲ್ಲಿ ಅದು ೧೯೫೧ ರ ಡಿಸೆಂಬರ್ ೩೦ರ ಸಂಚಿಕೆಯಲ್ಲಿ 'ಎರಡೂ ಮತ ಪತ್ರಗಳನ್ನು ಹಿಂದೂ ಅಭ್ಯರ್ಥಿಯ ಪೆಟ್ಟಿಗೆಯಲ್ಲಿ ಹಾಕಬಹುದು. ಇದು ಯಾವುದೇ ಕಾರಣದಿಂದಲೂ ಕಾನೂನು ಬಾಹಿರ ಆಗುವುದಿಲ್ಲ.' ಎಂದು ಹೇಳಿದೆ. ಮುಂದುವರಿಯುತ್ತಾ ಅದು ಒಬ್ಬನೇ ಅಭ್ಯರ್ಥಿಗೆ ಮತದಾರರು ಎರಡೂ ಮತಗಳನ್ನು ಹಾಕಬಹುದು ಎಂದು ಹೇಳಿದೆ. ಅದನ್ನು ಆಂಗ್ಲ ಭಾಷೆಗೆ ಭಾಷಾಂತರ ಮಾಡಿ 'F' ಎಂದು ಸೂಚಿಸಿ ಇದರೊಂದಿಗೆ ನೀಡಲಾಗಿದೆ.

೧೭. ಮೊದಲನೆಯ ಹಾಗೂ ಎರಡನೆಯ ಪ್ರತಿವಾದಿಗಳು, ಈ ಮೇಲಿನ ೧೩, ೧೪, ೧೫ ಮತ್ತು ೧೬ನೆಯ ಪ್ಯಾರಗಳಲ್ಲಿ ಹೇಳಿರುವಂತೆ ಮತದಾರರಿಗೆ ತಪ್ಪು ಮಾಹಿತಿಯನ್ನು ನೀಡಿರುವುದಷ್ಟೇ ಅಲ್ಲದೆ ಸವರ್ಣೀಯ ಹಿಂದೂಗಳ ಮತೀಯ ಭಾವನೆಗಳೊಡನೆ ಆಟಮಾಡಿದ್ದಾರೆ. ಅದರಲ್ಲಿಯೂ ಎರಡನೆಯ ಪ್ರತಿವಾದಿಯು ಸವರ್ಣೀಯ ಹಿಂದೂಗಳ ಮನಸ್ಸಿನಲ್ಲಿ, ಕಾನೂನಿನ ಪ್ರಕಾರ ಬೇರೆ ಬೇರೆಯವರಿಗೆ ತಮ್ಮ ಮತಗಳನ್ನು ಹಾಕಿದರೆ, ಮತದಾರ ಹಿತಾಸಕ್ತಿಗಳು ಅಪಾಯದಲ್ಲಿ ಸಿಲುಕಿಕೊಳ್ಳುತ್ತವೆ ಎಂಬ ಭಯವನ್ನು ಉಂಟುಮಾಡಿದ್ದಾರೆ ಎಂದು ಅರ್ಜಿದಾರರು ಈ ಮೂಲಕ ಹೇಳುತ್ತಾರೆ.

೧೮. ಅರ್ಜಿದಾರರು ಹೇಳುವುದೇನೆಂದರೆ ಮೊದಲನೆಯ ಮತ್ತು ಎರಡನೆಯ ಪ್ರತಿವಾದಿಗಳು ಹಿಂದೂ ಧರ್ಮೀಯರ ಮನದಲ್ಲಿ ಭಯವನ್ನು ಬಿತ್ತಿರುವುದು ಮಾತ್ರವಲ್ಲ, ಅವರಿಗೆ ಕಾಯ್ದೆಯ ೫೪ನೆ ಪರಿಚ್ಛೇದ ಪ್ರಕಾರ ಚುನಾವಣಾ ಫಲಿತಾಂಶಗಳನ್ನು ನಿರ್ಧರಿಸುವ ಹಾಗೂ ಪ್ರಕಟಿಸುವ ವಿಧಾನವನ್ನು ತಿಳಿಸಿಲ್ಲ.

೧೯. ಮೇಲೆ ಹೇಳಿದ ರೀತಿಯಲ್ಲಿ, ಮೊದಲನೆಯ ಮತ್ತು ಎರಡನೆಯ ಪ್ರತಿವಾದಿಗಳು ಕಾನೂನನ್ನು ತಪ್ಪಾಗಿ ಅರ್ಥೈಸಿರುವುದು ಮಾತ್ರವಲ್ಲ ಹಿಂದೂ ಮತದಾರರ ಮನದಲ್ಲಿ ಕೆಲ ತಪ್ಪು ಕಲ್ಪನೆಗಳನ್ನು ಉಂಟು ಮಾಡಿದ್ದಾರೆ. ಹಿಂದೂ ಧರ್ಮದ ಅಭ್ಯರ್ಥಿಗಳನ್ನು ಬಿಟ್ಟು ಎರಡೂ ಸ್ಥಾನಗಳಿಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳೇ ಆಯ್ಕೆಯಾಗುವ ಸಾಧ್ಯತೆಯಿದೆ ಎಂಬ ತಪ್ಪು ಮಾಹಿತಿಯನ್ನು ಅವರು ರವಾನಿಸಿದ್ದಾರೆ.

೨೦. ಮೇಲಿನ ಎಲ್ಲಾ ಉಲ್ಲೇಖಗಳನ್ನು ನೀಡಿ ಮೊದಲನೆಯ ಮತ್ತು ಎರಡನೆಯ ಪ್ರತಿವಾದಿಗಳು ಹಿಂದೂ ಮತದಾರರಿಗೆ ಮೋಸ ಎಸಗಿದ್ದಾರೆ, ಹಾಗು ಉದ್ದೇಶಪೂರ್ವಕವಾಗಿ ಅವರು ತಮಗೇ ಮತ ಚಲಾಯಿಸುವಂತೆ ಮತದಾರರನ್ನು ಪ್ರಚೋದಿಸಿದ್ದಾರೆ ಎಂದು ಅರ್ಜಿದಾರರು ಆಪಾದಿಸಿದ್ದಾರೆ.

೨೧. ಈ ಹಿಂದಿನ ಪ್ಯಾರಾಗಳಲ್ಲಿ ತಿಳಿಸಿರುವಂತೆ, ಮೊದಲನೆಯ ಮತ್ತು ಎರಡನೆಯ ಪ್ರತಿವಾದಿಗಳು, ಅವರ ಪ್ರತಿನಿಧಿಗಳು ಮತ್ತು ಅವರ ಪರವಾಗಿ ಕೆಲಸಮಾಡುತ್ತಿರುವವರು ಈ ಚುನಾವಣೆಯಲ್ಲಿ ಜನಪ್ರತಿನಿಧಿ ಕಾಯ್ದೆಯ ೧೨೩(೨)ನೆಯ ಪರಿಚ್ಛೇದದಲ್ಲಿ ಅನ್ಯಾಯಯುತವೆಂದು ಪರಿಗಣಿಸಬಹುದಾದ ಪ್ರಭಾವವನ್ನು

ಮತದಾರರ ಮೇಲೆ ಬೀರಿದ್ದಾರೆ ಮತ್ತು ಈ ಕಾರಣದಿಂದ ಈ ಚುನಾವಣೆಯು ಈ ಕಾಯ್ದೆಯ ೧೦೦(೧)(ಎ)ನೆಯ ಪರಿಚ್ಛೇದವು ಹೇಳುವ ಪ್ರಕಾರ ಮುಕ್ತ ಚುನಾವಣೆಯಾಗಿರಲಿಲ್ಲ ಎಂದು ಅರ್ಜಿದಾರರು ಹೇಳುತ್ತಾರೆ.

೨೨. ಮೊದಲನೆಯ ಮತ್ತು ಎರಡನೆಯ ಪ್ರತಿವಾದಿಗಳು ತಾವು ಮಾಡಿದ ಪ್ರಚಾರದಿಂದ ಎರಡೂ ಮತಗಳನ್ನು ಪಡೆದರೆ ಅದರಿಂದ ತಮಗೆ ಯಾವ ಲಾಭವೂ ಆಗುವುದಿಲ್ಲ ಎನ್ನುವುದನ್ನು ಅರಿತಿದ್ದರು. ಅದರೂ, ಮೊದಲನೆಯ ಹಾಗೂ ಎರಡನೆಯ ಅರ್ಜಿದಾರರ ಚುನಾವಣಾ ಭವಿಷ್ಯವನ್ನು ಹಾಳುಮಾಡುವ ದುರುದ್ದೇಶದಿಂದ ಅವರು ತಮ್ಮ ವಿಷಪೂರಿತ ಪ್ರಚಾರವನ್ನು ಮುಂದುವರಿಸಿದರು ಎಂದು ಅರ್ಜಿದಾರರು ವಾದಿಸುತ್ತಾರೆ.

೨೩. ಹಿಂದಿನ ೧೦ನೆಯ ಪ್ಯಾರಾದಲ್ಲಿ ಹೇಳಿರುವ ಹಾಗೆ ಮೊದಲನೆಯ ಮತ್ತು ಎರಡನೆಯ ಪ್ರತಿವಾದಿಗಳು ಪಡೆದಿರುವ ಎರಡೆರಡು ಮತಗಳು ಈ ಇಬ್ಬರು ಪ್ರತಿವಾದಿಗಳು ಕಳೆದ ಚುನಾವಣೆಯಲ್ಲಿ ಅನ್ಯಾಯಯುತವಾದ ಪ್ರಭಾವವನ್ನು ತಮ್ಮ ಮತಕ್ಷೇತ್ರಗಳಲ್ಲಿನ ಮತದಾರರ ಮೇಲೆ ಬೀರಿದ್ದಾರೆಂಬುದನ್ನು ಸಾಬೀತುಪಡಿಸುತ್ತವೆ ಎಂದು ಅರ್ಜಿದಾರರು ಹೇಳುತ್ತಾರೆ.

೨೪. ಈ ಚುನಾವಣೆಯು ಸಂಪೂರ್ಣವಾಗಿ ನ್ಯಾಯಯುತವಾಗಿ ನಡೆದಿಲ್ಲ ಆದ್ದರಿಂದ ಈ ಚುನಾವಣೆಯನ್ನು ಮಾನ್ಯ ಮಾಡಬಾರದು ಎಂದು ಅರ್ಜಿದಾರರು ಕೋರುತ್ತಾರೆ.

೨೫. ೧೧೭ನೆಯ ಪರಿಚ್ಛೇದದ ಪ್ರಕಾರ ಅರ್ಜಿದಾರರು ರಿಸರ್ವ್ ಬ್ಯಾಂಕಿನಲ್ಲಿ ಚುನಾವಣಾ ಆಯೋಗದ ಹೆಸರಿಗೆ ೧,೦೦೦ ರೂಪಾಯಿಗಳ ಮೊತ್ತವನ್ನು ಜಮಾ ಮಾಡಿದ್ದಾರೆ. ಇದಕ್ಕೆ ಸಂಬಂಧಿಸದಿಂತೆ ನೀಡಲಾಗಿದ ರಶೀದಿಯನ್ನು 'G' ಎಂದು ಗುರುತು ಮಾಡಿ ಇದರೊಂದಿಗೆ ಲಗತ್ತಿಸಲಾಗಿದೆ.

೨೬. ಮೊದಲನೆಯ ಮತ್ತು ಎರಡನೆಯ ಪ್ರತಿವಾದಿಗಳು ನಡೆಸಿರುವ ಭ್ರಷ್ಟಾಚಾರಗಳ ಪಟ್ಟಿಯನ್ನು 'ಎಚ್' ಎಂದು ಗುರುತು ಮಾಡಿ, ಅದಕ್ಕೆ ೧೯೫೧ರ ಜನ ಪ್ರತಿನಿಧಿಗಳ ಕಾಯ್ದೆಯ ೮೩(೨)ನೆಯ ಪರಿಚ್ಛೇದದಲ್ಲಿ ಹೇಳಿರುವ ಹಾಗೆ, ಮೊದಲನೆಯ ಮತ್ತು ಎರಡನೆಯ ಅರ್ಜಿದಾರರು ಸಹಿ ಮಾಡಿ ಈ ತಕರಾರು ಅರ್ಜಿಯೊಂದಿಗೆ ಲಗತ್ತಿಸಿದ್ದಾರೆ.

೨೭. ಜನಪ್ರತಿನಿಧಿ ಕಾಯ್ದೆಯು ಪರಿಚ್ಛೇದ ೧೧೯ (b) ರ ಪ್ರಕಾರ ನಿಗದಿತ ದಿನಾಂಕದ ಒಳಗೆ ಈ ಅರ್ಜಿಯನ್ನು ಸಲ್ಲಿಸಲಾಗಿದೆ. ಈ ನಿಯಮದ ಪ್ರಕಾರ ೧೯೫೨ರ ಮಾರ್ಚ್ ೧೧ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬೇಕಾಗಿದ್ದಿತು.

೨೮. ಎರಡನೆಯ ಅರ್ಜಿದಾರರು ಈ ಅರ್ಜಿಯಲ್ಲಿ ನೀಡಿರುವ ದೂರುಗಳಿಗಿಂತ ಅಗತ್ಯಬಿದ್ದರೆ ಬೇರೆಯ ದೂರುಗಳನ್ನು ಬೇರೆ ಯಾವುದೇ ಅರ್ಜಿಯ ಮುಖೇನ ನೀಡಲು ತಮ್ಮ ಅನುಮತಿಯನ್ನು ಯಾಚಿಸುತ್ತಾರೆ.

ಆದ್ದರಿಂದ, ಅವರು ತಮ್ಮಲ್ಲಿ ನಮ್ರತೆಯಿಂದ ಸಲ್ಲಿಸುವ ಕೋರಿಕೆಯೆಂದರೆ:–

(a) ಚುನಾವಣಾ ಮೇಲ್ಮನವಿ ಸಮಿತಿಯನ್ನು ಈ ಅರ್ಜಿಯ ವಿಚಾರಣೆಗಾಗಿ ನೇಮಕ ಮಾಡಬೇಕು.

(b) ಬೊಂಬಾಯಿ ಉತ್ತರ ಮತಕ್ಷೇತ್ರದಿಂದ, ಲೋಕಸಭೆಗೆ ನಡೆದ ಚುನಾವಣೆಯನ್ನು ಸಂಪೂರ್ಣವಾಗಿ ಅಸಿಂಧು ಎಂದು ಘೋಷಿಸಬೇಕು.

(c) ಇದಕ್ಕೆ ಅರ್ಜಿದಾರರಿಗೆ ತಗುಲಿರುವ ವೆಚ್ಚವನ್ನು ತುಂಬಿಕೊಡಬೇಕು.

(b) ಮೇಲ್ಕಂಡ ಅರ್ಜಿಯಲ್ಲಿ ಸಲ್ಲಿಸಿರುವ ದೂರುಗಳು ಹಾಗು ಇನ್ನುಳಿದ ಯಾವುದೇ ದೂರುಗಳಿಗೆ

ಸಂಬಂಧಿಸಿದಂತೆ ಅನುಕೂಲಕರವಾದ ನಿರ್ದೇಶನಗಳನ್ನು ನೀಡಬೇಕು ಪರಿಹಾರವನ್ನು ಕೊಡಿಸಬೇಕು ಅಲ್ಲದೇ ಮತಗಳ ಸೂಕ್ತ ಪರಿಶೀಲನೆಯೂ ನಡೆಯಬೇಕು.

(ಸಹಿ) ಬಿ.ಆರ್.ಅಂಬೇಡ್ಕರ್

(ಸಹಿ) ಅಶೋಕ ಮೆಹ್ತಾ

ಅರ್ಜಿಯ ಬರಹಗಾರರು (ಬಿಕ್ಲಂ)
Mr. N.C.N. ಆಚಾರ್ಯ
ವಕೀಲರು O.S.
(ಸಹಿ) ಕೊಠಾರಿ ಹಾಗು ಕಂ.
ಅರ್ಜಿದಾರರ ಪರ ವಕೀಲರು

ನಾವು (೧) ಭೀಮ್‌ರಾವ್ ರಾಮ್‌ಜೀ ಅಂಬೇಡ್ಕರ್ ಹಾಗು (೨) ಅಶೋಕ ರಣ್‌ಜಿತ್‌ರಾಮ್ ಮೆಹ್ತಾ ಕ್ರಮವಾಗಿ ರಾಜಗೃಹ, ಹಿಂದೂ ಬಡವಾಣೆ ದಾದರ್ ಹಾಗು # ೩, ಆದಿಸೇತ್ ರಸ್ತೆ, ಬಾಬುಲ್‌ನಾಥ್ ದೇವಸ್ಥಾನ ಸಮೀಪ, ಅವರು ಹೇಳುವುದೇನೆಂದರೆ ಮೇಲ್ಕಂಡ ಅರ್ಜಿಯಲ್ಲಿ ೧ ರಿಂದ ೨೬ ರವರೆಗೆ ಹೇಳಿರುವ ಎಲ್ಲಾ ಅಂಶಗಳೂ ನಮ್ಮ ಅರಿವಿಗೆ ಬಂದಿರುವ ಪ್ರಕಾರ ಸತ್ಯವಾಗಿವೆ. ೧೦ನೆಯ ಪ್ಯಾರಾದಲ್ಲಿ ನೀಡಿರುವ ಮಾಹಿತಿಯನ್ನು ನಮಗೆ ದೊರೆತಿರುವ ಮಾಹಿತಿಯ ಪ್ರಕಾರ ಸತ್ಯವಾಗಿರಬಹುದು ಎಂದು ಹೇಳುತ್ತೇವೆ.

ವಿನಮ್ರ ಘೋಷಣೆ ಮಾಡಿರುವ
ಭೀಮ್‌ರಾವ್ ರಾವ್‌ಜೀ ಅಂಬೇಡ್ಕರ್
ಅರ್ಜಿದಾರ ಸಂಖ್ಯೆ೧
ಬೊಂಬಾಯಿ
೧೯೫೨ ಏಪ್ರಿಲ್ ೨೧

ಮೊಹರು

ಸಹಿ
ಬಿ.ಆರ್. ಅಂಬೇಡ್ಕರ್
ಸಾಕ್ಷಿ (ಸಹಿ)
ಪ್ರಾಂತೀಯ ವಕೀಲರು
XI ನ್ಯಾಯಾಲಯ
ಕುರ್ಲಾ, ಬೊಂಬಾಯಿ
೨೧-೪-೧೯೫೨

ವಿನಮ್ರ ಘೋಷಣೆ
ಅಶೋಕ ರಣ್‌ಜಿತ್ ರಾಮ್ ಮೆಹ್ತಾ
ಅರ್ಜಿದಾರ ಸಂಖ್ಯೆ ೨
೧೯೫೨ ಏಪ್ರಿಲ್ ೨೧
ಮೊಹರು

ಸಹಿ
ಅಶೋಕ ಮೆಹ್ತಾ

ಸಾಕ್ಷಿ
(ಸಹಿ) ಹೆಚ್. ಕೆ. ಪಾಟೀಲ್
ಪ್ರಾಂತೀಯ ವಕೀಲರು
XI ನ್ಯಾಯಾಲಯ
ಕುರ್ಲಾ, ಬೊಂಬಾಯಿ
೨೧-೪-೧೯೫೨[೧]

* * * * *

---

೧. ಖೈರ ಮೋಡೆ ಸಂಪುಟ ೧೦ ಪುಟ ೨೬೯-೨೮೦

## ಸಾರ್ವತ್ರಿಕ ಚುನಾವಣೆಗಳಲ್ಲಿ ಏಜೆಂಟರ ಬಳಕೆ

ಡಾ. ಅಂಬೇಡ್ಕರ್ ಅವರ ಮನವಿ

ಯಾವ ಅಂಶಗಳು ಮತದಾರರ ಮನದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುವುದೋ ಅಂತಹವನ್ನು ಮತದಾರರ ಮನದ ಮೇಲೆ ಒತ್ತಡ ಹೇರುವ ಹಾಗು ಅವರ ಅಭಿಪ್ರಾಯ ಬದಲಿಸುವ ಹುನ್ನಾರ ಮಾಡುತ್ತಿರುವ ಅಂಶಗಳು ಎಂದು ಪರಿಗಣಿಸಲಾಗುತ್ತದೆ. ಯಾವುದೇ ಒಬ್ಬ ಅಭ್ಯರ್ಥಿಯು ಪ್ರಚಾರದ ವೇಳೆಯಲ್ಲಿ ಮತದಾರರ ಮನದಲ್ಲಿ ಭಯ ಉಂಟುಮಾಡುವ ಪ್ರಯತ್ನಪಟ್ಟರೆ ಅದು ಮತದಾರರ ಮನದ ಮೇಲೆ ಪರಿಣಾಮ ಬೀರುವ ಪ್ರಯತ್ನ ಎಂದು ಬಣ್ಣಿಸಲಾಗುತ್ತದೆ. ಆತ ಯಾವುದಾದರೂ ಕಾನೂನಿಗೆ ಸಂಬಂಧಿಸಿದ ಅಂಶವನ್ನು ಮುಚ್ಚಿಟ್ಟರೇ, ಅದು ಮತದಾರರಿಗೆ ಮಾಡುವ ಮೋಸ ಮತ್ತು ಅದನ್ನು ಅವರ ಮನದ ಮೇಲೆ ಪರಿಣಾಮ ಬೀರುವ ಪ್ರಯತ್ನ ಎಂದು ಪರಿಗಣಿಸಲಾಗುತ್ತದೆ. ಚುನಾವಣೆಯ ಕಾನೂನಿಗೆ ವಿರುದ್ಧವಾಗಿ ವರ್ತಿಸುವಂತೆ ಮತದಾರರಿಗೆ ಹೇಳುವುದು ಒಂದು ಭ್ರಷ್ಟ ನಡವಳಿಕೆಯಾಗುತ್ತದೆ.

ಈ ರೀತಿಯ ಇನ್ನೂ ಕೆಲ ಕಾನೂನು ಅಂಶಗಳನ್ನು ಡಾ. ಅಂಬೇಡ್ಕರ್ ಅವರು ಚುನಾವಣಾ ಸಮಿತಿಯ ಮುಂದೆ ಇರಿಸಿದ್ದರು. ಈ ಸಮಿತಿಯಲ್ಲಿ ಶ್ರೀ ಎನ್.ಜೆ. ವಾಡಿಯಾ, ಅಧ್ಯಕ್ಷರು, ಶ್ರೀ ಎಂ.ಕೆ.ಲಾಲ್‌ಕಾಕಾ ಹಾಗು ಶ್ರೀ ಜಿ.ಪಿ. ಮುರ್ಡೇಶ್ವರ ಸಮಿತಿಯು ಬೊಂಬಾಯಿ ಉತ್ತರ ಕ್ಷೇತ್ರದಿಂದ ಲೋಕಸಭೆಗೆ ನಡೆದ ಚುನಾವಣೆಯ ಸಂಬಂಧ ಡಾ. ಅಂಬೇಡ್ಕರ್ ಹಾಗೂ ಸೋಷಿಯಲಿಸ್ಟ್ ಪಕ್ಷದ ಅಶೋಕ್‌ಮೆಹ್ತಾ ಅವರು ಸಲ್ಲಿಸಿದ್ದ ತಕರಾರು ಅರ್ಜಿಯ ವಿಚಾರಣೆಯನ್ನು ಪುನರಾರಂಭಿಸಿತ್ತು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಸಂದರ್ಭದಲ್ಲಿ ಖುದ್ದು ಹಾಜರಿದ್ದರು ಹಾಗು ಚುನಾವಣೆಯಲ್ಲಿ ಏಜೆಂಟರ್ ಪಾತ್ರವನ್ನು ಕುರಿತು ವಿವರವಾಗಿ ವಾದವನ್ನು ಮಂಡಿಸಿದ್ದರು. ಕೆಲ ಅರ್ಭ್ಯರ್ಥಿಗಳು ದಿನಪತ್ರಿಕೆಗಳು ಹಾಗು ಭಿತ್ತಿ ಪತ್ರಗಳ ಮೂಲಕ ಮತದಾರರ ಮನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಪ್ರಯತ್ನ ನಡೆಸಿದ್ದಾರೆ ಎಂದರು.

## ಅನಗತ್ಯ ಹಸ್ತಕ್ಷೇಪ

ಅವರು ಬ್ರಿಟಿಷರ ಕಾನೂನು ಹಾಗು ಭಾರತೀಯ ಕಾನೂನಿನ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಿದರು. ಬ್ರಿಟಿಷರ ಕಾನೂನು ಅನಗತ್ಯ ಹಸ್ತಕ್ಷೇಪ ನಡೆಸುವುದನ್ನು ವಿಶಿಷ್ಟಾರ್ಥದಲ್ಲಿ ಒಳಸಿದರೆ, ಭಾರತೀಯ ಕಾನೂನು ಈ ಪದಗಳನ್ನು ಒಂದು ಸಾಮಾನ್ಯ ಅರ್ಥದಲ್ಲಿ ಪ್ರಯೋಗಿಸುವುದನ್ನು ವಿವರಿಸಿದರು.

ಅವರು ಈ ನಿಟ್ಟಿನಲ್ಲಿ ಕಮ್ಯುನಿಸ್ಟ್ ಪಕ್ಷದ ಶ್ರೀ ಎಸ್.ಎ.ಡಾಂಗೆ ಹಾಗು ಸ್ವತಂತ್ರ ಅಭ್ಯರ್ಥಿಯಾದ ಡಾ. ಜಿ.ವಿ. ದೇಶ್‌ಮುಖ್ ಅವರ ಹೇಳಿಕೆಗಳನ್ನು ಉಲ್ಲೇಖಿಸಿದರು. ಅವರಿಬ್ಬರೂ ತಮ್ಮ ಎರಡೂ ಮತಗಳನ್ನು ಒಬ್ಬನೇ ಅಭ್ಯರ್ಥಿಗೆ ನೀಡುವಂತೆ ಹೇಳಿ ಮತದಾರರ ದಾರಿ ತಪ್ಪಿಸಿದ್ದರು. ಈ ಸಂಬಂಧ ಸಾಕ್ಷವನ್ನು ನೀಡಿದ್ದ ನಾಲ್ವರಲ್ಲಿ ಒಬ್ಬರು ಡಾಂಗೆಯವರು ತಮ್ಮನ್ನು ಬೆಂಬಲಿಸುತ್ತಿದ್ದ ಕಮ್ಯುನಿಸ್ಟ್ ಪಕ್ಷವು ಕರಪತ್ರಗಳನ್ನು ನೀಡಿದ್ದುವನ್ನು ಅರಿತಿದ್ದರು, ಆದರೆ ಅದನ್ನು ತಡೆಯುವ ಪ್ರಯತ್ನವನ್ನು ಅವರು ಮಾಡಲಿಲ್ಲ ಎಂದು ಹೇಳಿದರು.

ಅರ್ಜಿದಾರರು ಶ್ರೀ ಡಾಂಗೆಯವರ ಏಜೆಂಟರು ಮಾಡಿದುದೆಲ್ಲಕ್ಕೂ ಶ್ರೀ ಡಾಂಗೆಯವರೇ ನೇರವಾಗಿ ಹೊಣೆ ಎಂದರು. 'ಯುಗಾಂತರ' ಎಂಬ ಮರಾಠಿ ವಾರಪತ್ರಿಕೆ ಕೂಡ ತಾನು ಕಮ್ಯುನಿಸ್ಟ್ ಪಕ್ಷ ಬೆಂಬಲಕ್ಕೆ ನಿಂತಿತ್ತು. ಅದನ್ನು ಆ ಪತ್ರಿಕೆಯು ಹಿಂಜರಿಕೆಯ ಮನಃಸ್ಥಿತಿಯಿಂದಲೇ ಒಪ್ಪಿಕೊಂಡಿತ್ತು. ಎಡಪಕ್ಷದ ಇಬ್ಬರು

ಸದಸ್ಯರು ಕೂಡ ಹೇಳಿಕೆ ನೀಡುತ್ತಾ ತಾವು ಡಾಂಗೆ ಅವರನ್ನು ಬೆಂಬಲಿಸಿದ್ದುದಾಗಿ ತಿಳಿಸಿದ್ದರು. ಅವರ ಹೇಳಿಕೆಯನ್ನು ಆಲಿಸಿದ ನಂತರ ಇವರು ಡಾಂಗೆಯವರ ಏಜೆಂಟರು ಎಂಬುದರಲ್ಲಿ ಯಾವ ಸಂಶಯವೂ ಉಳಿದಿಲ್ಲ ಎಂದು ಅರ್ಜಿದಾರರು ತಮ್ಮ ಅಭಿಪ್ರಾಯವನ್ನು ನೀಡಿದರು.

ಡಾ.ಅಂಬೇಡ್ಕರ್ ಅವರು ಪ್ರತಿ ಭಾನುವಾರ ಪ್ರಕಟವಾಗುವ ಮರಾಠಿ ವಾರಪತ್ರಿಕೆ 'ವಿವಿಧ ವಾರ್ತಾ' ಹಾಗು ಡಾ.ದೇಶಪಾಂಡೆ (ದೇಶ್‌ಮುಖ್) ಅವರ ನಡುವಿನ ಸಂಬಂಧ ಅರಿಯುವ ಪ್ರಯತ್ನ ನಡೆಸಿದ್ದರು. ಇವರು ನೀಡಿದ್ದ ಹೇಳಿಕೆಯನ್ನು ಪತ್ರಿಕೆಯು ಪ್ರಕಟಿಸಿದ್ದು ಮತದಾರರ ಮನ ಜಾಗೃತಗೊಳಿಸಲು ಅಲ್ಲ. ಏಕೆಂದರೆ ಈ ಹೇಳಿಕೆಯನ್ನು ಬೇರೆ ಯಾವ ಪತ್ರಿಕೆಗಳಿಗೂ ನೀಡದಿರುವುದು ಡಾ. ದೇಶಪಾಂಡೆಯವರು ಈ ವಾರಪತ್ರಿಕೆಯೊಂದಿಗೆ ಸಂಬಂಧ ಹೊಂದಿದ್ದಾರೆ ಎಂಬುದನ್ನು ಸಾಬೀತು ಮಾಡುತ್ತದೆ ಎಂದು ಹೇಳಿದರು.

ಈ ಹಂತದಲ್ಲಿ ಎದ್ದು ನಿಂತ ಡಾ.ದೇಶ್‌ಮುಖ್ ಅವರು ಸಮಿತಿಯೆದರು, ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಪ್ರಶ್ನೆ ಕೇಳುವ ಅವಕಾಶ ನೀಡಬೇಕು ಎಂದರು. ಅದಕ್ಕೆ ಉತ್ತರವಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರು "ನಾನು ನಿಮ್ಮನ್ನು ಯಾವುದೇ ಪ್ರಶ್ನೆ ಕೇಳುತ್ತಿಲ್ಲ. ನಿಜ ಹೇಳಬೇಕೆಂದರೆ... ನೀವು ಈ ಪ್ರಶ್ನೆಗಳನ್ನು ಎತ್ತಿರುವಿರಿ ನಾನು ಕೇವಲ ಅದಕ್ಕೆ ಉತ್ತರ ನೀಡಲು ಪ್ರಯತ್ನಿಸುತ್ತಿರುವೆ' ಹೇಳಿದರು. ಅಂಬೇಡ್ಕರ್ ಅವರ ಈ ಉತ್ತರಕ್ಕೆ ಇಡೀ ನ್ಯಾಯಾಲಯದ ಕೋಣೆಯ ನಗೆಗಡಲಲ್ಲಿ ತೇಲಿತು.

ಇದಕ್ಕೆ ಮೊದಲು ಸಿದ್ಧಾರ್ಥ ಕಾಲೇಜಿನ ರಿಜಿಸ್ಟ್ರಾರರು ಹಾಗು ಡಾ.ಬಿ.ಆರ್.ಅಂಬೇಡ್ಕರ್ ಅವರ ಏಜೆಂಟರು ಆಗಿದ್ದ ಶ್ರೀ ಕೆ.ವಿ. ಚಿತ್ರೆ ಅವರು ಸಾಕ್ಷ್ಯ ನೀಡಿದ್ದರು.

ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಲಾಯಿತು.

(The Times of India 4-10-1952)[1]

### "ಮತಗಳನ್ನು ವ್ಯರ್ಥ ಮಾಡುವಂತೆ ಪ್ರಚಾರ ನಡೆಸುವುದು ಕಾನೂನು ಬಾಹಿರ"
### ಚುನಾವಣಾ ವಿವಾದದ ಬಗ್ಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಮನವಿ

ಚುನಾವಣಾ ಕ್ಷೇತ್ರದಲ್ಲಿ ಧಾರ್ಮಿಕ ಭಾವನೆಯನ್ನು ಜಾಗೃತಗೊಳಿಸುವ ಪ್ರಯತ್ನವು ಖಂಡಿತವಾಗಿಯೂ ಕಾನೂನು ಬಾಹಿರ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಘೋಷಿಸಿದರು. ಅವರು ತಮ್ಮ ವಾದವನ್ನು ಚುನಾವಣಾ ಸಮಿತಿಯು ಎದುರು ಮಂಡಿಸುತ್ತಿದ್ದರು. ಆ ಸಮಿತಿಯಲ್ಲಿ ಇದ್ದ ಸದಸ್ಯರು ಎಂದರೆ ಶ್ರೀ. ಎನ್.ಎಸ್. ವಾಡಿಯಾ, ಅಧ್ಯಕ್ಷರು, ಹಾಗು ಶ್ರೀ ಎಂ.ಡಿ. ಲಾಲ್‌ಕಾಕಾ ಹಾಗು ಸಣ್ಣ ಪ್ರಕರಣಗಳ ನ್ಯಾಯಾಲಯದ ಶ್ರೀ ಜಿ.ಪಿ. ಮುರ್ಡೇಶ್ವರ.

ಅವರು ಬೊಂಬಾಯಿಯ ಉತ್ತರ ಚುನಾವಣಾ ಕ್ಷೇತ್ರದಲ್ಲಿ ಡಾ.ಜಿ.ವಿ. ದೇಶ್‌ಮುಖ್ ಅವರು ಕೈಗೊಂಡಿದ್ದ ಧಾರ್ಮಿಕ ವಿಷಯಗಳ ಕುರಿತ ಪ್ರಚಾರಕ್ಕೆ ಸಂಬಂಧ ಪಟ್ಟಂತೆ ಈ ಹೇಳಿಕೆ ನೀಡಿದ್ದರು. ಡಾ.ಜಿ.ವಿ. ದೇಶಮುಖ್ ಅವರು ೧೭ ಜನ ಅಭ್ಯರ್ಥಿಗಳು ಇದ್ದ ಸ್ವತಂತ್ರ ಪಕ್ಷದ ಅಭ್ಯರ್ಥಿಗಳ ನಾಯಕರಾಗಿದ್ದರು.

ಇದಕ್ಕಿಂತ ಕೆಟ್ಟ ಪ್ರಚಾರವನ್ನು ನಾನು ಇದುವರೆಗೆ ಕಂಡಿಲ್ಲ. ಹಿಂದೂಗಳ ಮನಸ್ಥಿತಿಯನ್ನು ಅರಿತು

---

೧. ಖೈರ್ ಮೋಡೆ – ಸಂಪುಟ ೧೦, ಪುಟ ೨೯೮–೨೯೯

ಅವರು ಈ ರೀತಿಯ ಪ್ರಚಾರ ಕೈಗೊಂಡಿದ್ದಾರೆ. ಏಕೆಂದರೆ ಅಸ್ಪೃಶ್ಯರು ಪ್ರಮುಖವಾದ ಹುದ್ದೆಗಳನ್ನು ಅಲಂಕರಿಸುವುದು ಹಿಂದೂಗಳಿಗೆ ಒಪ್ಪಿಗೆ ಆಗದ ಸಂಗತಿ. ಅದಕ್ಕೆಂದೇ ಮಾಂಟೆಗ್ಯೂ ಚೆಲ್ಮ್ಸ್ ಫೋರ್ಡ್ ಸುಧಾರಣೆಯಲ್ಲಿ ಪರಿಶಿಷ್ಟ ಜಾತಿಯವರಿಗೆಂದೇ ಪ್ರತ್ಯೇಕ ಮೀಸಲಾತಿಯನ್ನು ಕಲ್ಪಿಸಲಾಗಿದೆ.

## ಮತಗಳ ವಿಲೇವಾರಿ

ಡಾ. ಬಿ.ಆರ್. ಅಂಬೇಡ್ಕರ್ ಅವರು ಎರಡು ಮತಗಳಲ್ಲಿ ಒಂದು ಮತದ ವಿಲೇವಾರಿಯನ್ನು ಅಭ್ಯರ್ಥಿಗಳ ಅಥವಾ ಮತದಾರರ ಇಚ್ಛೆಗೆ ಬಿಡಬಾರದು ಎಂದು ಹೇಳಿದರು. ಎರಡನೆಯ ಮತದ ವಿಲೇವಾರಿಯು ೭೯ (a)ನೆಯ ಪರಿಚ್ಛೇದದ ಪ್ರಕಾರ ನಡೆಯಬೇಕು. ಇದರಂತೆ ಮತದಾರರು ಅವರಿಗೆ ಇಚ್ಛೆಯಿದ್ದರೆ ಮಾತ್ರ ಮತ ಚಲಾವಣೆ ಮಾಡಬಹುದಾಗಿತ್ತು. ಇಲ್ಲದಿದ್ದರೆ ಅವರಿಗೆ ಯಾರೂ ಬಲವಂತ ಪಡಿಸುವಂತಿರಲಿಲ್ಲ. ಏಕೆಂದರೆ ಭಾರತದಲ್ಲಿ ಮತದಾನ ಕಡ್ಡಾಯವಾಗಿರಲಿಲ್ಲ. ಅವರು ಈ ಮುಂದಿನ ಕೆಲ ಅಂಶಗಳನ್ನು ತಮ್ಮ ವಾದದಲ್ಲಿ ಮಂಡಿಸಿದ್ದರು. (೧) ಮತದಾರನು ತನ್ನ ಮತದಾನದ ಹಕ್ಕನ್ನು ಚಲಾಯಿಸಲು ಸ್ವತಂತ್ರ (೨) ಆತ ಮತಗಟ್ಟೆಗೆ ತೆರಳಿ ಎರಡೂ ಮತಪತ್ರಗಳನ್ನು ಪಡೆದು, ಅದನ್ನು ಬೇರೆ ಬೇರೆ ಅಭ್ಯರ್ಥಿಗಳಿಗೆ ನೀಡಬಹುದು. (೩) ಆತ ಅದರಲ್ಲಿ ಒಂದನ್ನು ಮಾತ್ರವೇ ಬಳಸಿ ಮತ್ತೊಂದನ್ನು ಮತಗಟ್ಟೆಯ ಅಧಿಕಾರಿಗೆ ಹಿಂದಿಗಿಸಬಹುದು (೪) ಆತ ಒಂದು ಮತಪತ್ರ ಬಳಸಿ ಮತ್ತೊಂದನ್ನು ನಾಶ ಮಾಡಬಹುದು (೫) ೧೩೫ ನೆಯ ಪರಿಚ್ಛೇದದ ಅನ್ವಯ ಆತ ಒಂದು ಮತಪತ್ರವನ್ನು ಬಳಸಿ, ಮತ್ತೊಂದನ್ನು ತನ್ನೊಂದಿಗೆ ಕೊಂಡೊಯ್ಯುವುದು ಕಾನೂನುಬಾಹಿರ (೬) ಎರಡೂ ಮತ ಪತ್ರಗಳನ್ನು ಒಂದೇ ಡಬ್ಬಿಯಲ್ಲಿ ಹಾಕುವುದು ಕೂಡ ೨೫(೧)ನೆಯ ಪರಿಚ್ಛೇದದ ಪ್ರಕಾರ ಕಾನೂನುಬಾಹಿರ.

ಅವರು ಒಂದು ಅಂಶ ಸ್ಪಷ್ಟ ಪಡಿಸಿದರು. ಅದೇನೆಂದರೆ “ಒಂದು ವೇಳೆ ಕಾನೂನು ಬಾಹಿರವಾದ ಕೃತ್ಯಗಳು ವ್ಯಾಪಕವಾಗಿ ನಡೆದಿರುವುದು ಕಂಡು ಬಂದಲ್ಲಿ ಈ ಚುನಾವಣೆಯನ್ನು ೧೦೦ನೆಯ ಪರಿಚ್ಛೇದದ ಪ್ರಕಾರ ರದ್ದು ಪಡಿಸಬಹುದು. ಕೆಟ್ಟ ರೀತಿಯ ಪ್ರಚಾರದಿಂದಾಗಿ ೭೪,೩೩೩ ಮತಗಳು ವ್ಯರ್ಥವಾಗಿರುವುದು ದೊಡ್ಡದಲ್ಲವೇ ಎಂದು ಸಮಿತಿಯನ್ನು ಅವರು ಪಶ್ನಿಸಿದರು. “ನಾನು ಈ ಚುನಾವಣೆಯಲ್ಲಿ ೧೩,೦೦೦ ಮತಗಳಿಂದ ಸೋತಿದ್ದೇನೆ. ನಾನು ದುರಹಂಕಾರಿಯಲ್ಲ. ಆದರೆ ಡಾಂಗೆಯವರು ಮತಗಳು ವ್ಯರ್ಥವಾಗುವಂತೆ ಮಾಡಿರದಿದ್ದರೆ. ೩೯,೦೦೦ ಮತಗಳಲ್ಲಿ ನನಗೆ ಹಲವಾರು ಸಾವಿರ ಮತಗಳು ದಕ್ಕಿರುತ್ತಿತ್ತು. ಆದರೆ ಇವರ ಕಾನೂನುಬಾಹಿರ ಕೃತ್ಯಗಳಿಂದ ಇದು ತಪ್ಪಿತು ಎಂದರು.

## ಅಸಮಬಾಂಧವ್ಯದ ಕಥೆ

ಡಾಂಗೆಯವರ ವಕೀಲರಾದ ಶ್ರೀ. ಎ.ಎಸ್.ಆರ್ ಚಾರಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗು ಡಾ. ಅಶೋಕಮೆಹ್ತಾ ಅವರ ಅರ್ಜಿಯನ್ನು ಸೋಷಿಯಲಿಸ್ಟರು ಹಾಗು ಪರಿಶಿಷ್ಟ ಜಾತಿಯ ಒಕ್ಕೂಟದ ಅಸಮಬಾಂಧವ್ಯ ಎಂದು ಬಣ್ಣಿಸಿದರು. ಅವರು ಇದಕ್ಕೆ ಅರ್ಜಿದಾರರು ಸಾಕ್ಷಿಯಾಗಿ ಬಾಪುರಾವ್ ಜಗತಾಪ್ ಅವರ ಮೇಲ್ಮನವಿ ಸಮಿತಿಗೆ ಹೇಳಿದ ಪ್ರಕಾರ ಈ ಎರಡೂ ಪಕ್ಷದವರನ್ನು ಎಡ ಸಂಯುಕ್ತ ಪಕ್ಷವು ಆಹ್ವಾನಿಸಿತ್ತು. ಆದರೆ ಇವರು ತಮ್ಮ ಬಲದ ಬಗ್ಗೆ ಅತಿಯಾದ ವಿಶ್ವಾಸ ಹೊಂದಿದ್ದರಿಂದ ಆ ಆಹ್ವಾನವನ್ನು ನಿರಾಕರಿಸಿದ್ದರು ಎಂದು ಹೇಳಿದ್ದರು.

ಶ್ರೀ ಚಾರಿಯವರು ವಾದ ಮಾಡುತ್ತಾ ಒಬ್ಬ ಮತದಾರನಿಗೆ ತನ್ನ ಎರಡೂ ಮತಗಳನ್ನು ಚಲಾಯಿಸುವಂತೆ

ಯಾರೂ ಬಲವಂತ ಪಡಿಸುವಂತಿರಲಿಲ್ಲ. ಏಕೆಂದರೆ ಇದು ಪರಿಚ್ಛೇದ ೬೩ಕ್ಕೆ ವಿರುದ್ಧವಾಗಿತ್ತು. ಎಂದರು ಅವರ ವಾದ ಏನೆಂದರೆ: ಒಬ್ಬ ಮತದಾರನಿಗೆ ಒಂದು ಮತವನ್ನು ಒಬ್ಬ ಅಭ್ಯರ್ಥಿಯ ಪರವಾಗಿಯೇ ಚಲಾಯಿಸುವಂತೆ ಮನಪರಿವರ್ತನೆಗೊಳಿಸುವುದು ಮತದಾರನ ಅಥವಾ ಬೇರೆಯವರ ಪರವಾಗಿ ಚಲಾಯಿಸದಿರುವಂತೆ ಮನಃಪರಿವರ್ತನೆಗೊಳಿಸುವುದು ಮತದಾನದ ಹಕ್ಕಿನೊಂದಿಗೆ ಹಸ್ತಕ್ಷೇಪ ಮಾಡಿದ ಹಾಗೆ ಆಗುವುದಿಲ್ಲ ಅಥವಾ "ಅನಗತ್ಯ ಹಸ್ತಕ್ಷೇಪ"ವೂ ಅಲ್ಲ. ಶ್ರೀ ಡಾಂಗೆಯವರ ಯಾವುದೇ ಕಾರ್ಯವೂ "ಅನೈತಿಕ ಪದ್ಧತಿ"ಯಾಗಿಲ್ಲ. ಶ್ರೀ ಡಾಂಗೆಯವರು ಕೇವಲ ಮತದಾರರ ಮನ ಓಲೈಸುವ ಪ್ರಯತ್ನ ಪಟ್ಟಿದ್ದರು ಹಾಗು ಅವರಿಗೆ ಈ ರೀತಿಯ ಪ್ರಯತ್ನಪಡುವ ಎಲ್ಲಾ ಅಧಿಕಾರ ಇತ್ತು. ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿರುವುದು ಕೇವಲ ತಮ್ಮ ಸಹಚರರ ಅನುಕಂಪ ಪಡೆಯಲು ಮಾತ್ರವೇ, ಅವರು ಈ ಚುನಾವಣೆಯಲ್ಲಿ ಸೋತಿರುವುದರಿಂದ ತಮ್ಮ ಬೆಂಗಲಿಗರನ್ನು ಎದುರಿಸಲು ಹಿಂಜರಿಕೆ ಆಗುತ್ತಿರುವುದರಿಂದ ಈ ರೀತಿ ಮಾಡಿದ್ದಾರೆ. ಆದರೆ ಅವರು ಸೋಲಲು ಅವರ ದುರಹಂಕಾರ ಕಾರಣವೇ ಹೊರತು ಮತ್ತೇನೂ ಅಲ್ಲ. ಎಡಪಕ್ಷವು ಇವರೊಂದಿಗೆ ಸೇರಿ ಕಾಂಗ್ರೆಸ್ ಹಾಗು ಇತರ ಪಕ್ಷಗಳ ವಿರುದ್ಧ ಹೋರಾಡುವ ಆಸಕ್ತಿಯನ್ನು ತೋರಿಸಿತ್ತು.

**ಅನಗತ್ಯ ಹಸ್ತಕ್ಷೇಪ**

ವಿ.ಬಿ. ಗಾಂಧಿಯವರ ವಕೀಲರಾದ ಶ್ರೀ.ಟಿ.ಆರ್.ಕಪಾಡಿಯಾ ಅವರು ಶ್ರೀ ಚಾರಿಯವರ ವಾದವನ್ನು ಬೆಂಬಲಿಸುತ್ತಾ. ಅಭ್ಯರ್ಥಿಯು ಮತದಾರರಲ್ಲಿ ಅನಗತ್ಯ ಹಸ್ತಕ್ಷೇಪ ಮಾಡಿದ್ದಾರೆ ಎಂದು ಸಾಬೀತು ಪಡಿಸುವಲ್ಲಿ ಅರ್ಜಿದಾರರು ವಿಫಲವಾಗಿದ್ದಾರೆ ಎಂದರು. ಅವರು ಕೇವಲ ಪ್ರತಿವಾದಿಗಳು ಮಾತ್ರವೇ ಈ ಕೃತ್ಯ ಎಸಗಿದ್ದಾರೆಯೇ ಇಲ್ಲವೇ ಅರ್ಜಿದಾರರೂ ಇದಕ್ಕೆ ಹೊಣೆಯೇ ಎಂದು ಪ್ರಶ್ನಿಸಿದರು.

ಡಾ. ದೇಶ್‌ಮುಖ್ ಅವರು ನ್ಯಾಯಾಲಯದಿಂದ ಅನುಮತಿ ಪಡೆದು ತಮ್ಮ ವಕೀಲರ ಬದಲು ತಾವೇ ಮಾತನಾಡಿದರು. ಅವರು ಎಲ್ಲಾ ಪಕ್ಷಗಳಲ್ಲಿಯೂ ಕಾನೂನುಬಾಹಿರವಾದ ಪದ್ಧತಿಗಳು ಕಳೆದ ಚುನಾವಣೆಯಲ್ಲಿ ನಡೆದಿದ್ದವು ಎಂದರು. ಮರಾಠಿ ವಾರ ಪತ್ರಿಕೆಯಾದ 'ವಿವಿಧ ವೃತ್ತಾ'ದ ಸಂಪಾದಕರು ತಮ್ಮ ಸ್ನೇಹಿತರು ಮಾತ್ರವಲ್ಲ ತಮ್ಮ ಏಜೆಂಟರು ಕೂಡ ಎಂಬ ವಿಷಯವನ್ನು ಅವರು ಒಪ್ಪಿಕೊಂಡರು.

**ವಿಚಾರಣೆಯನ್ನು ಬುಧವಾರ ಮುಂದುವರೆಸಲಾಗುವುದು**

ಪ್ರತಿವಾದಿಗಳೆಂದರೆಶ್ರೀ ಎಸ್.ಎ. ಡಾಂಗೆ, ಡಾ.ಜಿ.ವಿ. ದೇಶ್‌ಮುಖ್, ಡಾ. ವಿ.ಬಿ. ಗಾಂಧೀ, ಶ್ರೀ ಕೆ.ಬಿ. ಜೋಷಿ, ಶ್ರೀ. ಎನ್.ಎಸ್. ಕಾಜ್‌ರೋಲ್‌ಕರ್ ಹಾಗು ಶ್ರೀ ಎನ್.ಬಿ. ಪಾರುಲ್‌ಕರ್.

ಕೊಠಾರೆ ಕಂಪನಿಯ ನಿರ್ದೇಶನದಂತೆ ಶ್ರೀ ಎಸ್. ಎಸ್. ಕವಲೇಕರ್ ಹಾಗು ಶ್ರೀ ಮಧುಸೂಧನ ವ್ಯಾಸ್ ಅವರು ಶ್ರೀ ಅಶೋಕ ಮೆಹ್ತಾ ಅವರ ಪರವಾಗಿ ಬಂದಿದ್ದರು. ಅಂತೆಯೆ ಶ್ರೀ ಡಾಂಗೆ ಅವರ ಪರವಾಗಿ ಶ್ರೀ A.S.R ಚಾರಿ ಹಾಗು ಶ್ರೀ ಟಿ.ಎಸ್. ಹೆಗ್ಡೆ, ಶ್ರೀ ಡಾ.ಜಿ.ವಿ ದೇಶ್‌ಮುಖ್ ಅವರ ಪರವಾಗಿ ಶ್ರೀ ಪಂಡಿತ್ ಹಾಗು ಡಾ.ಗಾಂಧಿಯವರ ಪರವಾಗಿ ಶ್ರೀ. ಟಿ.ಆರ್.ಕಪಾಡಿಯಾ ಹಾಗು ಶ್ರೀ ಕಜ್ರೋಲ್ಕರ್ ಆಗಮಿಸಿದ್ದರು.[೧]

* * * * *

1. The Times of India : Dated 7-10-1952

ಪುನರ್ ಮುದ್ರಣ ಖೈರ ಮೋಡೆ : ಸಂಪುಟ–೧೦ ಪುಟ ೩೦೦–೩೦೨.

## ೫೧
## ಮಹಾರಾಷ್ಟ್ರದಲ್ಲಿ ಕಮ್ಯುನಿಸ್ಟರು

೧೯೫೩ ರ ಫೆಬ್ರವರಿ ೨೧ ಹಾಗು ೨೮ರಂದು ಹಾಗು ಅಕ್ಟೋಬರ ೯ರಂದು ಅಮೆರಿಕಾದ ಪತ್ರಕರ್ತರಾದ ಶ್ರೀ ಸೆಲಿಂಗ್. ಎಸ್. ಹ್ಯಾರಿಸನ್ ಅವರು ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ಸಂದರ್ಶಿಸಿದ್ದರು. ಅವರ ಸಂದರ್ಶನದ ವಿಷಯ ಏನೆಂದರೆ ಮಹಾರಾಷ್ಟ್ರ ರಾಜ್ಯದಲ್ಲಿ ಕಮ್ಯುನಿಸ್ಟರು ಏಕೆ ಬಲಹೀನರು ಎಂಬುದು. ಈ ಸಂದರ್ಶನದ ಪ್ರಮುಖ ಅಂಶಗಳನ್ನು ಕೆಳಗೆ ನೀಡಲಾಗಿದೆ. ಸಂಪಾದಕರು.

ಮಹಾರ್ ಜನಾಂಗದವರು ಒಂದು ರಾಜಕೀಯ ಶಕ್ತಿಯಾಗಿ ರೂಪುಗೊಳ್ಳಲು ಕಾರಣರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಮಹಾರಾಷ್ಟ್ರದಲ್ಲಿ ಸಮತಾವಾದಿಗಳ ಬಲಹೀನತೆಯನ್ನು ಅವರು ಈ ಕೆಳಗಿನಂತೆ ವಿಶ್ಲೇಷಿಸಿದರು.

'ಈ ಸಮತಾ ಪಕ್ಷವು ಮೊದಲು ಡಾಂಗೆ ಹಾಗು ಇತರ ಬ್ರಾಹ್ಮಣ ಹುಡುಗರ ಕೈಯಲ್ಲಿತ್ತು. ಅವರು ಮರಾಠ ಜಾತಿಯವರ ಹಾಗು ಪರಿಶಿಷ್ಟ ವರ್ಗದವರ ಮನಗೆಲ್ಲಲು ಪ್ರಯತ್ನ ಪಡುತ್ತಿದ್ದಾರೆ. ಆದರೆ ಮಹಾರಾಷ್ಟ್ರದಲ್ಲಿ ಯಶಸ್ವಿಯಾಗಿಲ್ಲ. ಏಕೆ? ಏಕೆಂದರೆ ಮೂಲತಃ ಅದೊಂದು ಬ್ರಾಹ್ಮಣ ಹುಡುಗರ ಗುಂಪು. ಇವರುಗಳ ಕೈಗೆ ಕಮ್ಯೂನಿಸಂನ ಚಳುವಳಿಯನ್ನು ನೀಡಿ ರಷಿಯನ್ನರು ಬಹಳ ದೊಡ್ಡ ತಪ್ಪನ್ನು ಮಾಡಿದ್ದಾರೆ. ರಷಿಯನ್ನರಿಗೆ ಭಾರತದಲ್ಲಿ ಕಮ್ಯೂನಿಸಂನ್ನು ಬೆಳಸುವ ಇಚ್ಛೆ ಇರಲಿಲ್ಲ. ಇಲ್ಲವೇ ಅವರಿಗೆ ಕೇವಲ ಪ್ರಚಾರದ ಹುಡುಗರ ಅವಶ್ಯಕತೆ ಇತ್ತು – ಇಲ್ಲವೇ ಅವರಿಗೆ ಅರ್ಥವಾಗಲಿಲ್ಲ.[೧]

* * * *

---

೧. ಭಾರತದಲ್ಲಿ ಸಮತಾವಾದದ ಬಗ್ಗೆ ಅಂಬೇಡ್ಕರ್ ಅವರ ನಿಲುವು
The Most dangerous decade ಎಂಬ ಸೆಲಿಂಗ್ ಎಸ್. ಹ್ಯಾರಿಸನ್ ಎಂಬಾತನ ಪುಸ್ತಕದಲ್ಲಿ ಮುದ್ರಿತ ೧೯೦–೯೧
ಉಲ್ಲೇಖ : ಖೈರಮೋಡೆ ಸಂಪುಟ ೧೧ ಪುಟ ೧೬೪

## ೫೨
## ಹಸಿದ ಜನರು ಅನ್ನವನ್ನು ಬೇಡುತ್ತಾರೆ

ಹೈದರಾಬಾದ್ ಸರ್ಕಾರ ಪರಿಶಿಷ್ಟ ಜಾತಿಯ ಜನತೆಗೆ ಭೂಮಿಯನ್ನು ಮಂಜೂರು ಮಾಡಲು ಚಿಂತಿಸಿತ್ತು. ಆಂಧ್ರ ಪ್ರದೇಶದ ಮಾನ್ಯ ಮಂತ್ರಿಗಳಾದ ಬಿಂದು ಅವರು ಈ ವಿಷಯವನ್ನು ಅಂಬೇಡ್ಕರ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದಾಗ ತಿಳಿಸಿದರು. ಆದಷ್ಟು ಬೇಗನೆ ಆ ಆದೇಶದ ಪ್ರತಿಯನ್ನು ತಮಗೆ ಕಳುಹಿಸಿಕೊಡುವಂತೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಶ್ರೀ ಬಿಂದು ಅವರನ್ನು ವಿನಂತಿಕೊಂಡರು. ಹೈದರಾಬಾದ್ ಸರ್ಕಾರವು ಪರಿಶಿಷ್ಟ ಜಾತಿಯ ಜನರಿಗೆ ಮಂಜೂರು ಮಾಡಿದ್ದ ಭೂಮಿಯನ್ನು ಹಿಂದಕ್ಕೆ ಪಡೆದುಕೊಂಡಿತ್ತು. ಇದನ್ನು ವಿರೋಧಿಸಿ ಪರಿಶಿಷ್ಟ ಜಾತಿಯ ಜನರು ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರು. ಈ ವೇಳೆ ೧೭೦೦ ಜನರನ್ನು ಬಂಧಿಸಲಾಯಿತು. ಆಗ ಡಾ. ಬಿ.ಆರ್.ಅಂಬೇಡ್ಕರ್ ಅವರು ಶ್ರೀ ಬಿಂದು ಅವರಿಗೆ ಅತ್ಯಂತ ಕಟುವಾಗಿ ಪತ್ರವನ್ನು ಬರೆದು. ಸರ್ಕಾರವು ಈ ನಿರ್ಧಾರವನ್ನು ಹಿಂಪಡೆಯಬೇಕು ಆಗ ಮಾತ್ರವೇ ತಾವು ಪರಿಶಿಷ್ಟ ಜಾತಿಯ ಜನರಿಗೆ ಸತ್ಯಾಗ್ರಹ ಹಿಂಪಡೆಯಲು ತಿಳಿಸುವುದಾಗಿ ಹೇಳಿದರು. ಈ ಪತ್ರದ ಸಾರಾಂಶ ಕೆಳಗಿನಂತಿದೆ – ಸಂಪಾದಕರು.

೨೬, ಅಲಿಪುರ ರಸ್ತೆ, ದೆಹಲಿ
೬ನೆಯ ನವೆಂಬರ್ ೧೯೫೩

ಪ್ರೀತಿಯ ಶ್ರೀ ಬಿಂದು,

ಪರಿಶಿಷ್ಟ ಜಾತಿಯ ಜನರಿಗೆ ಭೂಮಿಯನ್ನು ಮಂಜೂರು ಮಾಡಿರುವ ಹೈದರಾಬಾದ್ ಸರ್ಕಾರದ ಆದೇಶದ ಪ್ರತಿಯನ್ನು ನನಗೆ ಕಳುಹಿಸಿಕೊಡುವುದಾಗಿ ತಾವು ನನ್ನನ್ನು ದೆಹಲಿಯಲ್ಲಿ ಭೇಟಿಯಾದಾಗ ತಿಳಿಸಿದ್ದಿರಿ. ಇದಾಗಿ ಈಗಾಗಲೇ ಒಂದು ವಾರ ಕಳೆದಿದೆ. ನನಗೆ ಆದೇಶದ ಪ್ರತಿ ಇನ್ನೂ ದೊರೆತಿಲ್ಲ.

ಆದರೆ ದಿನಪತ್ರಿಕೆಗಳಿಂದ ನನಗೆ ತಿಳಿದು ಬಂದಿರುವ ಮಾಹಿತಿಯ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿರುವ ೧೭೦೦ ಪುರುಷರು ಹಾಗು ಸ್ತ್ರೀಯರನ್ನು ಔರಂಗಾಬಾದ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಹಾಗು ಸತ್ಯಾಗ್ರಹ ಮಾಡಿದ್ದಕ್ಕಾಗಿ ಅವರನ್ನು ಕಾರಾಗೃಹಕ್ಕೆ ಕಳುಹಿಸಲಾಗಿದೆ.

ಸರ್ಕಾರದ ಇರಾದೆ ಏನೆಂಬುದು ನನಗೆ ತಿಳಿಯುತ್ತಿಲ್ಲ. ಅವರನ್ನು ಅಪರಾಧಿಗಳ ಪಟ್ಟಿಗೆ ಸೇರ್ಪಡೆ ಮಾಡಿ, ಜೈಲಿಗೆ ಕಳುಹಿಸುವುದೇ? ಇದು ನಿಜವಾದರೆ, ಇದೊಂದು ದೊಡ್ಡ ದುರಂತ. ಹಸಿದ ಜನರು ಅನ್ನ ಕೇಳಿದರು ಎಂಬ ಕಾರಣಕ್ಕೆ ಅವರನ್ನು ಜೈಲಿಗೆ ಕಳುಹಿಸುವುದು ಯಾವುದೇ ಸರ್ಕಾರಕ್ಕೂ ಶೋಭೆ ತರುವುದಿಲ್ಲ. ನೀವು ಅವರನ್ನು ಬಿಡುಗಡೆಗೊಳಿಸಲೇಬೇಕು. ಕಾನೂನಿನ ಸಮರ್ಥನೆ ಇದೆ.

ಒಂದು ವೇಳೆ ನಿಮ್ಮ ಮಂತ್ರಿಮಂಡಲವು ತೆಗೆದುಕೊಳ್ಳುವ ನಿರ್ಧಾರ ನನ್ನ ದೃಷ್ಟಿಯಿಂದ ತೃಪ್ತಿಕರವಾಗಿದ್ದರೆ ಪರಿಶಿಷ್ಟ ಜಾತಿಯವರಿಗೆ ಸತ್ಯಾಗ್ರಹವನ್ನು ಕೈಬಿಡುವಂತೆ ನಾನು ಹೇಳುತ್ತೇನೆ.

ತ್ವರಿತವಾಗಿ ಉತ್ತರವನ್ನು ನೀಡಿದರೆ ನಾನು ಋಣಿಯಾಗಿರುತ್ತೇನೆ.

ಶ್ರೀ ಬಿಂದು — ತಮ್ಮ ವಿಶ್ವಾಸಿ
ಮಾನ್ಯ ಗೃಹ ಸಚಿವರು — (ಸಹಿ) ಡಾ. ಬಿ.ಆರ್. ಅಂಬೇಡ್ಕರ್
ಹೈದರಾಬಾದ್ ರಾಜ್ಯ, ಹೈದರಾಬಾದ್[೧]

* * * * *

೧. ಖೈರ್ ಮೋಡೆ ಸಂಪುಟ–೧೧ ಪುಟ ೬೭–೬೮

೫೩

## ಬೆಂಗಳೂರಿನಲ್ಲಿ ಪ್ರಾರಂಭವಾಗಲಿರುವ ಬೌದ್ಧ ಧರ್ಮದ ಸಮಾವೇಶ

ಮಂಗಳವಾರ* ಸಂಸದರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೊಂಬಾಯಿಯಲ್ಲಿ ಹೇಳಿಕೆಯನ್ನು ನೀಡಿ, ಭಾರತದಲ್ಲಿ ಬೌದ್ಧಧರ್ಮದ ಪ್ರಚಾರದ ಮೊದಲ ಹೆಜ್ಜೆಯಾಗಿ ಮೊದಲ ಬೌದ್ಧಧರ್ಮದ ಬೋಧನಾ ಶಾಲೆಯನ್ನು ಬೆಂಗಳೂರಿನಲ್ಲಿ ನಡೆಸಲಾಗುವುದು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ತಾವು ಬೌದ್ಧಮತಕ್ಕೆ ಮತಾಂತರಗೊಳ್ಳಬೇಕು ಎನ್ನುವ ತಮ್ಮ ಇರಾದೆಯನ್ನು ಇತ್ತೀಚಿಗಷ್ಟೇ P.T.I ಎದುರು ವ್ಯಕ್ತ ಪಡಿಸಿದ್ದರು. ಮೈಸೂರಿನ ರಾಜಪ್ರಮುಖರು ಈ ಬೌದ್ಧ ಸಂಸ್ಥೆಗೆ ಬೆಂಗಳೂರಿನ ಅತ್ಯಂತ ಪ್ರಮುಖ ಸ್ಥಳವಾದ ಭಾರತೀಯ ವಿಜ್ಞಾನ ಸಂಸ್ಥೆ ಹಾಗು ರಾಮನ್ ಸಂಸ್ಥೆಯ ಮಧ್ಯದಲ್ಲಿ ಐದು ಎಕರೆ ಜಮೀನನ್ನು ನೀಡಿರುವುದಾಗಿ ಅವರು ತಿಳಿಸಿದರು.

ಇತ್ತೀಚೆಗೆ ತಾವು ಬರ್ಮಾಕ್ಕೆ ಎರಡು ಭಾರಿ ಭೇಟಿ ನೀಡಿರುವ ಫಲವಾಗಿ ಎಲ್ಲಾ ರೀತಿಯ ಆರ್ಥಿಕ ಹಾಗು ತಾಂತ್ರಿಕ ಸಹಾಯ ಒದಗಿ ಬಂದಿದೆ. ವಿಶ್ವ ಬೌದ್ಧ ಸಂಸ್ಥೆ ಹಾಗು ಬುದ್ಧ ಸಾಸನ ಸಂಸ್ಥೆ ಎಲ್ಲಾ ರೀತಿಯ ಸಹಾಯ ನೀಡಲು ಮುಂದಾಗಿವೆ ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಸಂದರ್ಭದಲ್ಲಿ ಮತ್ತೊಂದು ವಿಷಯ ತಿಳಿಸಿದರು. ಅತ್ಯಂತ ಯಶಸ್ವಿಯಾಗಿ ಅವರು ಈ ಕಾರ್ಯಕ್ಕಾಗಿ ಬಹಳಷ್ಟು ವ್ಯಕ್ತಿಗಳಿಂದ ದೇಣಿಗೆ ಪಡೆದಿದ್ದು ಅಲ್ಲದೇ ಇಷ್ಟರಲ್ಲಿಯೇ ತಾವು ಸಾರ್ವಜನಿಕರ ಬಳಿಯೂ ದೇಣಿಗೆಗೆ ತೆರಳುವುದಾಗಿ ತಿಳಿಸಿದರು.

### ಪ್ರಚಾರಕರಿಗೆ ತರಬೇತಿ

ಹಣ ಹರಿದು ಬಂದಂತೆ ಅಗತ್ಯ ಇರುವ ಎಲ್ಲಾ ಸೌಲಭ್ಯಗಳನ್ನು ಒಂದು ವರ್ಷದ ಒಳಗೆ ಕಲ್ಪಿಸಲಾಗುವುದು. ಅಲ್ಲಿ ಒಂದು ಸಂಸ್ಥೆಯ ಸ್ಥಾಪನೆಯೂ ಆಗುವುದು. ಈ ಸಂಸ್ಥೆಯ ಮೂಲ ಉದ್ದೇಶವೆಂದರೆ ಸಾಮಾನ್ಯ ಜನರನ್ನು ಬೌದ್ಧ ಧರ್ಮದ ಪ್ರಚಾರಕರಾಗಿ ಮಾಡುವ ತರಬೇತಿ ನೀಡುವುದು ಎಂದರು.

ಈ ಸಂಸ್ಥೆಗೆ ಜಾತಿ, ಧರ್ಮ, ರಾಷ್ಟ್ರೀಯತೆ ಯಾವುದನ್ನು ಗಣನೆಗೆ ತೆಗೆದುಕೊಳ್ಳದೇ ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗುವುದು. ಅಲ್ಲಿ ಅವರಿಗೆ ಬೌದ್ಧಧರ್ಮ ಹಾಗು ಇತರ ಧರ್ಮಗಳ ತೌಲನಿಕ ಅಧ್ಯಯನಕ್ಕೆ ಅವಕಾಶವನ್ನು ನೀಡಲಾಗುವುದು ಎಂದರು. ವೈಜ್ಞಾನಿಕವಾಗಿ ಬೇರೆಯ ಜಾತಿಗಳ ಅಧ್ಯಯನ ಮಾಡದೇ ಯಾರೇ ಆದರೂ ಬೌದ್ಧ ಧರ್ಮವನ್ನು ಆಲಂಗಿಸಿಕೊಂಡು, ಅದನ್ನು ಮೆಚ್ಚುವುದು ಸಾಧ್ಯವಿಲ್ಲ ಎಂದರು.

ಈ ಸಂಸ್ಥೆಯಲ್ಲಿ ಬೌದ್ಧಧರ್ಮಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಮುದ್ರಣ ಮಾಡುವ ಒಂದು ಮುದ್ರಣಾಲಯನ್ನು ಕೂಡ ಸ್ಥಾಪಿಸಲಾಗುವುದು. ವಿಶ್ವದ ಎಲ್ಲೆಡೆಯಿಂದ ಪ್ರಸಿದ್ಧ ಭಾಷಾಂತರಕಾರರಿಂದ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಪಾಲಿಯಿಂದ ಹಲವು ಭಾಷೆಗಳಿಗೆ ಭಾಷಾಂತರ ಮಾಡಿಸಿ ಈ ಮುದ್ರಣಾಲಯದಲ್ಲಿ ಮುದ್ರಿಸಲಾಗುವುದು ಎಂದರು.

ಧರ್ಮ ಹಾಗು ತತ್ವಶಾಸ್ತ್ರದ ಪುಸ್ತಕಗಳನ್ನು ಹೊಂದಿರುವ ಒಂದು ದೊಡ್ಡ ಗ್ರಂಥಾಲಯವನ್ನು ಕೂಡ ಇಲ್ಲಿ ಸ್ಥಾಪಿಸಲಾಗುವುದು. ಅಲ್ಲದೇ ಇಲ್ಲಿ ಬರುವ ವಿದ್ಯಾರ್ಥಿಗಳಿಗೆ, ಅಧ್ಯಯನಕಾರರಿಗೆ ಹಾಗು ಶಿಕ್ಷಕರಿಗೆ ಕೊಠಡಿಗಳು ಹಾಗು ದೇವಾಲಯಗಳ ವ್ಯವಸ್ಥೆಯನ್ನು ಕೂಡ ಮಾಡಲಾಗುವುದು ಎಂದರು.

ಅಲ್ಲದೇ ೧೦,೦೦೦ ರೂಪಾಯಿಗಳ ಒಟ್ಟು ಬಹುಮಾನ ಇರುವ ಪ್ರಬಂಧ ಲೇಖನ ಸ್ಪರ್ಧೆಯನ್ನು ಕೂಡ ಇಷ್ಟರಲ್ಲಿಯೇ ಆಯೋಜಿಸಲಾಗುವುದು ಎಂದರು.[೧]

---

1. The Times of India ದಿನಾಂಕ ೧೨ ಜನವರಿ ೧೯೫೫

* The 11th January 1955

## ೫೪

## ಸಾಮಾನ್ಯ ಜನರ ಹಿಂಜರಿಕೆಯ ಮನೋಭಾವದಿಂದ ಭಾರತದಲ್ಲಿ ಬೌದ್ಧ ಧರ್ಮ ನಶಿಸಿತು

ಡಿ. ವಾಲಿ ಸಿನ್ಹಾ, ಕಲ್ಕತ್ತಾದ ಮಹಾಬೋಧಿ ಸಂಸ್ಥೆಯ ಅಧ್ಯಕ್ಷರಾದ ಅವರಿಗೆ ೧೯೫೫ರ ಫೆಬ್ರವರಿ ೧೬ ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಪತ್ರ ಬರೆದು ಧರ್ಮದೀಕ್ಷೆಯ ಬಗೆಗಿನ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಆ ಪತ್ರವನ್ನು ಕೆಳಗೆ ನೀಡಲಾಗಿದೆ.

ಸಂಪಾದಕರು

"ಸಾಮಾನ್ಯ ಜನರ ಮತಾಂತರವು ಮತಾಂತರವೇ ಅಲ್ಲ ಎಂಬುದು ನನ್ನ ಅಭಿಪ್ರಾಯ. ಅದೊಂದು ಅತ್ಯಂತ ಸಾಮಾನ್ಯ ಸಂಗತಿ. ಈ ಸಾಮಾನ್ಯ ಜನರು ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದರು ಎಂಬುದೇನೋ ನಿಜ. ಆದರೆ, ಬುದ್ಧನನ್ನು ಆರಾಧನೆ ಮಾಡುವ ಜೊತೆ ಜೊತೆಯಲ್ಲಿಯೇ, ಇತರ ದೇವರುಗಳು ಹಾಗು ದೇವತೆಗಳ ಆರಾಧನೆಯಲ್ಲಿಯೂ ತೊಡಗಿದ್ದಾರೆ. ಈ ದೇವರು ಹಾಗು ದೇವತೆಗಳನ್ನು ಬ್ರಾಹ್ಮಣರು ಬೌದ್ಧ ಧರ್ಮದ ವಿನಾಶಕ್ಕಾಗಿ ಸೃಷ್ಟಿಸಿದ್ದಾರೆ. ಸಾಮಾನ್ಯ ಜನರ ಈ ಪ್ರವೃತ್ತಿಯಿಂದಾಗಿ ಬೌದ್ಧ ಧರ್ಮವು ಭಾರತದಿಂದ ನಶಿಸಿ ಹೋಯಿತು. ಒಂದು ವೇಳೆ ಭಾರತದಲ್ಲಿ ಬೌದ್ಧಧರ್ಮವು ನಿಜವಾದ ಅರ್ಥದಲ್ಲಿ ಸ್ಥಾಪನೆ ಆಗಬೇಕಾದರೆ ಸಾಮಾನ್ಯ ಜನರನ್ನು ಆ ಧರ್ಮದ ನಿಬಂಧನೆಗೆ ಕಟ್ಟುನಿಟ್ಟಾಗಿ ನಾವು ಕಟ್ಟಿಹಾಕಬೇಕು. ಇದು ಈ ಮೊದಲು ಸಾಧ್ಯವಾಗಲಿಲ್ಲ. ಏಕೆಂದರೆ ಬೌದ್ಧಧರ್ಮಕ್ಕೆ ಮತಾಂತರ ಆದವರನ್ನು ವಿಧ್ಯುಕ್ತವಾಗಿ ಸಂಘಕ್ಕೆ ಸೇರ್ಪಡೆ ಮಾಡಿಕೊಳ್ಳಲಾಯಿತು. ಆದರೆ ಅವರ ಧರ್ಮ ಬದಲಾವಣೆಯ ಸಂಕೇತವಾಗಿ ಯಾವುದೇ ವಿಧ್ಯುಕ್ತ ಸಮಾರಂಭ ಇರಲಿಲ್ಲ. ಅದೇ ಕ್ರೈಸ್ತ ಮತದಲ್ಲಿ ಎರಡು ಸಮಾರಂಭಗಳಿರುತ್ತವೆ ೧) ಕ್ರೈಸ್ತ ಮತಕ್ಕೆ ಸೇರ್ಪಡೆ ಆಗುವ ವಿಧ್ಯುಕ್ತ ಸಮಾರಂಭ ೨) ಧರ್ಮಾಧಿಕಾರಿಯಿಂದ ಅವರನ್ನು ಕಟ್ಟಳೆಗೆ ಒಳಪಡಿಸುವುದು. ಇದೇ ರೀತಿ ಬೌದ್ಧ ಧರ್ಮವು ಕೂಡ ಕ್ರೈಸ್ತ ಮತದ ಕ್ರಮವನ್ನು ಅನುಕರಣೆ ಮಾಡಬೇಕು. ಇಲ್ಲಿರುವ ಅನಿಷ್ಟಗಳನ್ನು ತೊಡೆದು ಹಾಕುವ ಸಲುವಾಗಿ ನಾನು "ಧಮ್ಮದೀಕ್ಷಾ" ಎಂಬ ತಂತ್ರವನ್ನು ತಯಾರಿಸಿದ್ದೇನೆ. ಯಾರು ಯಾರು ಬೌದ್ಧಧರ್ಮಕ್ಕೆ ಮತಾಂತರ ಹೊಂದ ಬಯಸುವರೋ ಅವರು ವಿವರವಾದ ವಿಧಿಗೆ ಒಳಪಡಬೇಕಾಗುತ್ತದೆ. ಇಲ್ಲದೇ ಹೋದರೆ ಅವನನ್ನು ಬೌದ್ಧಧರ್ಮೀಯ ಎಂದು ಪರಿಗಣಿಸಲಾಗುವುದಿಲ್ಲ.[೧]

* * * * *

---

೧. ಖೈರಮೋಡೆ ಸಂಪುಟ ೧೨
ಮೊದಲ ಮುದ್ರಣ – ಜುಲೈ ೧೯೮೭ – ಪುಟ ೨೪–೨೫

## ೫೫
## ನಾನು ನಿಮ್ಮ ಜೀವವನ್ನು ರಕ್ಷಿಸಲು ಸಿದ್ಧನಿರುವೆ ಆದರೆ...

೧೯೫೫ರ ಮೊದಲನೆಯ ಮೂರು ತಿಂಗಳಿನಲ್ಲಿ ಬ್ರಿಟಿಷ್ ಬಿತ್ತರ ಸಂಸ್ಥೆಯ ಮಾರಿಸ್ ಬ್ರೌನ್ ಹಾಗು ಫ್ರಾನ್ಸಿಸ್ ವ್ಯಾಟ್ಸನ್ ಅವರು ಭಾರತಕ್ಕೆ ಭೇಟಿ ನೀಡಿದ್ದರು. ಆ ಸಮಯದಲ್ಲಿ ಮಹಾತ್ಮಾ ಗಾಂಧೀಜಿಯವರ ಬಗ್ಗೆ ಸಾಕಷ್ಟು ಮಾಹಿತಿ ಹಾಗು ಅಭಿಪ್ರಾಯಗಳನ್ನು ನೀಡಬಲ್ಲ ಕೆಲ ಪ್ರಮುಖ ವ್ಯಕ್ತಿಗಳನ್ನು ಅವರು ಭೇಟಿ ಮಾಡಿದರು. ಆ ಸಂದರ್ಭದಲ್ಲಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರೊಂದಿಗೆ ನಡೆಸಿದ ಸಂದರ್ಶನದ ಕೆಲವು ಭಾಗಗಳನ್ನು ಇಲ್ಲಿ ನೀಡಲಾಗಿದೆ.

ನಿರೂಪಕ: ನಾವೀಗ ಅತ್ಯಂತ ಎತ್ತರದಲ್ಲಿ ಇದ್ದೇವೆ. ಏಕೆಂದರೆ ನಾವು ಯೋಗಿಯಾದ ಮಹಾತ್ಮ ಅವರೊಂದಿಗೆ ಇದ್ದೇವೆ.

ಡಾ.ಬಿ.ಆರ್.ಅಂಬೇಡ್ಕರ್: ಅವರೆಂದೂ ಮಹಾತ್ಮರಾಗಿರಲಿಲ್ಲ. ಅವರನ್ನು ಮಹಾತ್ಮ ಎಂದು ಸಂಬೋಧಿಸಲು ನಿರಾಕರಿಸುತ್ತೇನೆ ನಾನು ನನ್ನ ಜೀವಮಾನ ಪರ್ಯಂತ ಅವರನ್ನು ಮಹಾತ್ಮ ಎಂದು ಸಂಬೋಧಿಸಿಯೇ ಇಲ್ಲ. ಅವರು ಆ ರೀತಿಯ ಸಂಬೋಧನೆಗೆ ಅರ್ಹರೇ ಅಲ್ಲ, ನೈತಿಕತೆಯ ದೃಷ್ಟಿಯಿಂದಲೂ ಅಲ್ಲ.

ನಿರೂಪಕ : ಈ ಸಂಬೋಧನೆಗೆ ವಿರೋಧ ವ್ಯಕ್ತಪಡಿಸುತ್ತಿರುವವರು ಭಾರತದಲ್ಲಿ ಪರಿಶಿಷ್ಟ ಜಾತಿಯ ನಾಯಕರಾದಂತಹ ಡಾ.ಬಿ.ಆರ್.ಅಂಬೇಡ್ಕರ್. ಗಾಂಧಿಯವರು ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಸಲುವಾಗಿ, ಪರಿಶಿಷ್ಟ ಜಾತಿಯವರನ್ನು ಹಿಂದೂ ಧರ್ಮದೊಳಕ್ಕೆ ಸೇರ್ಪಡೆಗೊಳಿಸುವ ಪ್ರಯತ್ನ ಪಟ್ಟಿದ್ದರು. ಆದರೆ ಅವರನ್ನು ಬೇರೆಯ ಸಮುದಾಯದಲ್ಲಿ ಇರಿಸಿ, ಅವರಿಗೆ ರಕ್ಷಣೆ ನೀಡುವಂತೆ ಡಾ.ಬಿ.ಆರ್.ಅಂಬೇಡ್ಕರ್ ಬಯಸಿದರು. ಇದು ಗಾಂಧಿಯವರಿಗೆ ನೈತಿಕವಾಗಿ ತಪ್ಪಾಗಿ ಹಾಗು ರಾಜಕೀಯವಾಗಿ ಅಪಾಯಕಾರಿಯಾಗಿ ಕಂಡುಬಂದಿತು. ಇದೊಂದು ತೀವ್ರ ಹೋರಾಟವಾಗಿ ಮಾರ್ಪಟ್ಟು, ಕೊನೆಯಲ್ಲಿ ಗಾಂಧಿಯವರ ಪ್ರಸಿದ್ಧ ಉಪವಾಸಕ್ಕೆ ಕಾರಣವಾಯಿತು.

ಡಾ.ಬಿ.ಆರ್.ಅಂಬೇಡ್ಕರ್: ಓಹ್ ಖಂಡಿತ. ಅವರು ಚೌಕಾಶಿ ಮಾಡಿಯೇ ಮಾಡಿದರು. ನಾನು ಕೂಡ ಬಗ್ಗಲಿಲ್ಲ: ನಾನು ನಿಮ್ಮ ಜೀವನವನ್ನು ರಕ್ಷಿಸಲು ತಯಾರಾಗಿದ್ದೇನೆ. ಆದ್ದರಿಂದ ನೀವು ಸ್ವಲ್ಪ ಮಟ್ಟಿಗೆ ಷರತ್ತುಗಳನ್ನು ಸಡಿಲಿಸಬೇಕು. ನನ್ನ ಜನರ ಜೀವಗಳನ್ನು ಒತ್ತೆ ಇಟ್ಟು ನಿಮ್ಮ ಜೀವ ಉಳಿಸಲು ನಾನು ಸಿದ್ಧನಿಲ್ಲ. ನಾನು ಯಾವಾಗಲೂ ತಮ್ಮನ್ನು ಭೇಟಿ ಮಾಡಿರುವುದು ಒಬ್ಬ ಪ್ರತಿಸ್ಪರ್ಧಿಯಂತೆಯೇ ಎಂದು ಹೇಳಿದೆ. ಇತರರಿಗಿಂತ ಚೆನ್ನಾಗಿ ನನಗೆ ಇವರ ಬಗ್ಗೆ ತಿಳಿದಿತ್ತು. ಏಕೆಂದರೆ ಆತ ತನ್ನ ನಿಜವಾದ ಕರಾಳರೂಪವನ್ನು ತೆರೆದಿಟ್ಟಿದ್ದರು. ಆ ವ್ಯಕ್ತಿಯ ಮತ್ತೊಂದು ಮುಖದ ಅನಾವರಣ ನನ್ನೆದುರು ಆಗಿತ್ತು.

ನಿರೂಪಕ: ಆದರೆ ಮಹಾತ್ಮ ಅವರ ಸಿದ್ಧಾಂತಗಳನ್ನು ಅರಿತುಕೊಳ್ಳಲು ಅವರ ವಿರೋಧಿಯೇ ಆಗ ಬೇಕಾಗಿಲ್ಲ. ಭಾರತದ ಸಮಾಜವಾದಿ ನಾಯಕರಾದ ಜೆ.ಬಿ. ಕೃಪಲಾನಿ ಅವರ ಪ್ರತಿಸ್ಪರ್ಧಿ ಆಗಿರಲಿಲ್ಲ. ಅವರು ೧೯೧೭ ರಿಂದ ಗಾಂಧಿಯವರು ಮೃತರಾಗುವವರೆಗೂ ಅವರ ಹಿಂಬಾಲಕರಾಗಿದ್ದರು.

ಜೆ.ಬಿ. ಕೃಪಲಾನಿ : ಅವರು ತಾವೊಬ್ಬ ಮಹಾ ಪುರುಷ, ಮಹಾತ್ಮ ಎಂಬುದನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ನಾನೊಂದು ವೇಳೆ ಮಹಾತ್ಮನಾಗಿದ್ದರೆ, ಯಾರೂ ನನ್ನನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯ ಆಗುತ್ತಿರಲಿಲ್ಲ ಎಂದು ಗಾಂಧೀಜಿ ಹೇಳುತ್ತಿದ್ದರು. ಗಾಂಧೀಜಿಯವರ ಸಂದೇಶಗಳು ಸಾಮಾಜಿಕ, ಆರ್ಥಿಕ ಹಾಗು

ರಾಜಕೀಯ ಸಂದೇಶಗಳಾಗಿರುತ್ತಿದ್ದವು ಎಲ್ಲರೂ ತಿಳಿದಂತೆ ಧಾರ್ಮಿಕ ಸಂದೇಶಗಳಾಗಿರುತ್ತಿರಲಿಲ್ಲ. ನಮಗೆ ಈಗಾಗಲೇ ಹಲವಾರು ದೇವರುಗಳು ಹಾಗು ದೇವಮಾನವರು ಇದ್ದಾರೆ ಗಾಂಧೀಯವರು ಒಬ್ಬ ಸಾಮಾನ್ಯ ಮನುಷ್ಯನಾಗಿಯೇ ನಮಗೆ ಸಾಕು.

ಧೀರೇಂದ್ರ ಮೋಹನ ದತ್ತಾ: ಮಹಾತ್ಮ ಅವರೊಬ್ಬ ಭಾರತೀಯ ಮಾದರಿ ಪುರುಷ ಎಂಬ ವಿಷಯವೇ ನನಗೆ ತಿಳಿದಿರಲಿಲ್ಲ.

ನಿರೂಪಕ: ಡಾ.ದತ್ತ ಅವರೊಬ್ಬ ಪ್ರಸಿದ್ಧ ತತ್ವ ಜ್ಞಾನಿ. ಅವರೀಗ ಶಾಂತಿ ನಿಕೇತನದಲ್ಲಿ ನೆಲೆಸಿದ್ದಾರೆ. ಈ ಸಂಸ್ಥೆಯನ್ನು ರಬೀಂದ್ರನಾಥ ಟ್ಯಾಗೂರ್ ಅವರು ಸ್ಥಾಪಿಸಿದ್ದರು. ಅದೀಗ ಒಂದು ವಿಶ್ವವಿದ್ಯಾಲಯವಾಗಿದೆ. ಧೀರೇಂದ್ರ ಮೋಹನ ದತ್ತಾ: ಆಧುನಿಕ ಹಿಂದೂಗಳಿಗೆ ಅವರೊಬ್ಬ ಆದರ್ಶಪ್ರಾಯ ವ್ಯಕ್ತಿ ಆಗಿದ್ದರು. ಯುರೋಪಿನ ತತ್ವಗಳ ಹಿನ್ನೆಲೆ ಇರುವ, ಅಲ್ಲಿಯೇ ಶಿಕ್ಷಣ ಪಡೆದ ಭಾರತೀಯರು ಇವರನ್ನು ಆದರ್ಶವಾಗಿ ಪರಿಗಣಿಸಿದ್ದರು. ಆದರೆ ಸಂಪ್ರದಾಯವಾದಿ ಹಿಂದೂಗಳು ಮಾತ್ರ ಇವರು ಪ್ರಚಾರ ಮಾಡುತ್ತಿರುವ ಹಿಂದುತ್ವ ನಿಜವಾದ ಹಿಂದುತ್ವವೇ ಅಲ್ಲ ಎನ್ನುತ್ತಿದ್ದರು. ಅವರು ಹಿಂದೂಗಳನ್ನು ವಂಚಿಸುತ್ತಿದ್ದಾರೆ ಎಂದು ಭಾವಿಸಿದ್ದರು.

ಡಾ.ಬಿ.ಆರ್.ಅಂಬೇಡ್ಕರ್: ಅವರೊಬ್ಬ ಸಂಪ್ರದಾಯವಾದಿ ಹಿಂದೂ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

ನಿರೂಪಕ: ಡಾ.ಬಿ.ಆರ್.ಅಂಬೇಡ್ಕರ್ ಹೀಗೆಂದು ಭಾವಿಸುತ್ತಾರೆ. ಎಲ್ಲರೂ ಅಲ್ಲದಿದ್ದರೂ ಬಹಳಷ್ಟು ಜನ ಮುಸಲ್ಮಾನರೂ ಹೀಗೇ ಭಾವಿಸುತ್ತಾರೆ. ಕೆಲವರು ಗಾಂಧೀಜಿಯವರು ಅಸ್ಪೃಶ್ಯತೆಯ ಬಗ್ಗೆ ಹೊಂದಿರುವ ಮನೋಭಾವದಿಂದ ಅವರು ಭಿನ್ನ ವ್ಯಕ್ತಿತ್ವದವರು ಎಂದು ಯೋಚಿಸುತ್ತಾರೆ.

ಹೆಚ್.ಎನ್. ಬ್ರೈಲ್ಸ್‌ಫೋರ್ಡ್: ಒಂದು ಬಾರಿ ಅವರು ತಾವು ಶೇ ೮೫ ರಷ್ಟು ಭಾರತೀಯರ ಪ್ರತಿನಿಧಿ ಎಂದಿದ್ದರು. ಆದರೆ, ಅದು ಸ್ವಲ್ಪ ಮಟ್ಟಿಗೆ ಉತ್ಪ್ರೇಕ್ಷೆಯಾಗಿತ್ತು. ಏಕೆಂದರೆ ಅವರು ಮುಸಲ್ಮಾನರಲ್ಲಿ ಸ್ವಲ್ಪಭಾಗದ ಜನರ ಪ್ರತಿನಿಧಿಯೂ ಆಗಿರಲಿಲ್ಲ. ಆದರೆ ಅದು ಇತರರ ವಿಷಯಕ್ಕೆ ಅಂದರೆ ಹಿಂದೂಗಳು ಸಿಖ್ಖರು ಹಾಗು ಅಸ್ಪೃಶ್ಯರ ವಿಷಯಕ್ಕೆ ಬಂದಾಗ ಅವರು ತಮ್ಮ ಬಗ್ಗೆ ಹೇಳಿಕೊಳ್ಳುತ್ತಿದ್ದುದು ನಿಜವಾಗಿತ್ತು.

ನಿರೂಪಕ: ಎಲ್ಲಾ ಸಮಾರಂಭಗಳಲ್ಲಿಯೂ ಅವರು ಪ್ರಾಮಾಣಿಕವಾಗಿ ಇರುತ್ತಿದ್ದರು. ಎಲ್ಲದಕ್ಕಿಂತ ಮಿಗಿಲಾಗಿ ಅಸ್ಪೃಶ್ಯರ ತೊಂದರೆಗಳನ್ನು ಅವರು ತಮ್ಮದೆಂದೇ ಭಾವಿಸಿದ್ದರು. ಬ್ರೈಲ್ಸ್‌ಫೋರ್ಡ್ ಅವರೊಂದಿಗೆ ಖಾಸಗಿಯಾಗಿ ಈ ವಿಷಯದ ಬಗ್ಗೆ ಚರ್ಚಿಸಿದ್ದರು.

ಹೆಚ್.ಎನ್. ಬ್ರೈಲ್ಸ್‌ಫೋರ್ಡ್: ಅವರು ಅತ್ಯುತ್ಸಾಹದಿಂದ ಈ ಬಗ್ಗೆ ಮಾತನಾಡಿದ್ದರು. ಎಲ್ಲದಕ್ಕಿಂತ ಮಿಗಿಲಾಗಿ ಅವರಿಗೆ ದೊಡ್ಡ ಮಟ್ಟದಲ್ಲಿ ಅಪರಾಧಿ ಭಾವನೆ ಕಾಡುತ್ತಿತ್ತು. ಅಸ್ಪೃಶ್ಯರನ್ನು ಇತರ ಹಿಂದೂಗಳು ಎಷ್ಟೊಂದು ಕಠೋರವಾಗಿ ನಡೆಸಿಕೊಂಡಿದ್ದಾರೆ ಎಂಬುದು ಅವರಿಗೆ ತಿಳಿದಿತ್ತು. ಆದ್ದರಿಂದ ಸವರ್ಣೀಯ ಹಿಂದೂಗಳೇ ಈ ಘಟಿಸಿಹೋಗಿದ್ದ ತಪ್ಪನ್ನು ತಿದ್ದಬೇಕು ಎಂಬ ನಿರ್ಧಾರಕ್ಕೆ ಅವರು ಬಂದಿದ್ದರು.

ನಿರೂಪಕ: ಗಾಂಧೀಯವರ ಈ ತೆರನಾದ ನಿರ್ಧಾರ ಆ ಸಮಯದಲ್ಲಿ ಹೊಸತಾಗಿತ್ತು. ಕೆಲ ವರ್ಷಗಳ ಹಿಂದೆ, ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಪ್ರಾರಂಭದಲ್ಲಿ ಡಾ.ವೆರಿಯರ್ ಎಲ್ವಿನ್ ಅವರು ಗಾಂಧೀಜಿಯವರ ಜೊತೆ ಇದ್ದರು.

ವೆರಿಯರ್ ಎಲ್ವಿನ್: ಹೌದು ಅದು ೧೯೩೧ರಲ್ಲಿ ಆ ಸಮಯದಲ್ಲಿ ಅಹ್ಮದಾಬಾದ್‌ನಲ್ಲಿದ್ದ ಗಿರಣಿ ಮಾಲೀಕರಿಗೆ ಸೇರಿದ್ದ ದೇವಸ್ಥಾನವೊಂದಕ್ಕೆ ಹೋಗಿದ್ದೆವು. ಗಾಂಧೀಜಿ ಅವರು ತಮ್ಮೊಂದಿಗೆ ಕೆಲ ಅಸ್ಪೃಶ್ಯರ ಮಕ್ಕಳನ್ನು ದೇವಾಲಯದೊಳಗೆ ಕರೆತಂದರು. ಆ ಸಮಯದಲ್ಲಿ ದೇವಾಲಯದ ಅರ್ಚಕರ ಮುಖದ ಭಾವನೆಯನ್ನು ನೀವು ಗಮನಿಸಬೇಕಿತ್ತು. ಅವರಿಗೆ ಗಾಂಧೀಯವರ ಈ ನಡೆ ಸರಿಬಂದಿರಲಿಲ್ಲ. ಅನಂತರ ಗಾಂಧೀಯವರು ಈ ವಿಷಯವಾಗಿ ಒಂದು ಸಭೆಯನ್ನು ನಡೆಸಿದರು. ಭವಿಷ್ಯದಲ್ಲಿ ಅಸ್ಪೃಶ್ಯರನ್ನು 'ದೇವರ ಮಕ್ಕಳು' ಎಂದು ಸಂಬೋಧಿಸಲಾಗುವುದು ಎಂದರು. ಆಗಿನಿಂದಲೂ ಇವರನ್ನು ಹರಿಜನರು ಎಂದೇ ಕರೆಯಲಾಗುತ್ತಿದೆ.[೧]

ನಿರೂಪಕ: ಅವರ ಈ ಕಠಿಣ ನಿಲುವನ್ನು ನಾವು ದುಂಡು ಮೇಜಿನ ಸಮಾವೇಶದಲ್ಲಿ ಗಮನಿಸಿದ್ದೆವು. ಆದರೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಹುಟ್ಟಿನಿಂದ ಅಸ್ಪೃಶ್ಯರಾಗಿದ್ದರು. ಅವರು ಕೇವಲ ತಮ್ಮ ಸ್ವಂತ ಪರಿಶ್ರಮದಿಂದಲೇ ಮೇಲೆ ಬಂದಿದ್ದರು. ಯಾವ ಹಿಂದೂಧರ್ಮೀಯನು ತಮಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುವುದೂ ಅವರಿಗೆ ಬೇಕಿರಲಿಲ್ಲ.

ಡಾ.ಬಿ.ಆರ್.ಅಂಬೇಡ್ಕರ್ ನೀವು ನಮಗೆ ಪ್ರತ್ಯೇಕ ಮತಕ್ಷೇತ್ರ ನೀಡಿ ನಂತರ ನೋಡಿ.

ನಿರೂಪಕ: ಡಾ.ಬಿ.ಆರ್.ಅಂಬೇಡ್ಕರ್ ಅವರು ಅತ್ಯಂತ ನೇರವಾಗಿ ಹಾಗು ಕಠಿಣವಾಗಿ ವರ್ತಿಸಿದ್ದರು ಅನಂತರವೂ ಗಾಂಧೀಜಿಯವರ ಬಗ್ಗೆ ಇವರ ಅಭಿಪ್ರಾಯ ಬದಲಾಗಲಿಲ್ಲ.

ಡಾ.ಬಿ.ಆರ್.ಅಂಬೇಡ್ಕರ್: ಅಸ್ಪೃಶ್ಯರ ಬಗ್ಗೆ ಈ ರೀತಿಯ ಅವರ ಮಾತುಗಳೆಲ್ಲಾ ಅಸ್ಪೃಶ್ಯರನ್ನು ಕಾಂಗ್ರೆಸ್ ಪಕ್ಷಕ್ಕೆ ಸೆಳೆಯುವ ತಂತ್ರವಾಗಿತ್ತು. ಇದು ಮೊದಲನೆಯ ಅಂಶ. ಎರಡನೆಯ ಅಂಶ ಎಂದರೆ ಅಸ್ಪೃಶ್ಯರಿಂದ ಅವರ ಸ್ವರಾಜ್ಯ ಚಳುವಳಿಗೆ ಯಾವುದೇ ತೊಂದರೆಯಾಗುವುದು ಅವರಿಗೆ ಬೇಕಿರಲಿಲ್ಲ. ಈ ಎರಡು ವಿಷಯಗಳನ್ನು ಹೊರತು ಪಡಿಸಿದರೆ, ಅವರಿಗೇ ಅಸ್ಪೃಶ್ಯರ ಬಗೆಗೆ ನೈಜ ಕಾಳಜಿ ಇರಲಿಲ್ಲ.

ನಿರೂಪಕ: ಆದರೆ ಅವರ ಧ್ಯೇಯ ದೃಢವಾಗಿತ್ತು. ಅವರು ಭಾರತಕ್ಕೆ ಹಿಂದಿರುಗಿ ಹೋದ ನಂತರ ಪ್ರಸಿದ್ಧ ಪುಣೆಯ ಉಪವಾಸವೇ ಇದಕ್ಕೆ ಸಾಕ್ಷಿ. ಲಂಡನ್ನಿನನಲ್ಲಿ ನಡೆದ ಸಂಘರ್ಷಗಳ ನಂತರವೂ ಅವರು ಅಂತಹ ಕಠಿಣ ಪರೀಕ್ಷೆಗೆ ಸಿದ್ಧರಾಗಿದ್ದರು ಎಂದು ಪ್ಯಾರೇಲಾಲ್ ಅವರು ನೆನಪಿಸಿಕೊಳ್ಳುತ್ತಾರೆ.

ಪ್ಯಾರೇಲಾಲ್ ನಾಯರ್: ಭಾರತದ ಸ್ವಾತಂತ್ರ್ಯದ ಸಲುವಾಗಿ ಕೂಡ ನಾನು ಅಸ್ಪೃಶ್ಯರ ಹಿತವನ್ನು ಬಲಿಗೊಡಲು ಸಿದ್ಧವಿಲ್ಲ ಎಂದವರು ಸ್ಪಷ್ಟ ಪಡಿಸಿದ್ದರು. ಪ್ರತ್ಯೇಕ ಮತಕ್ಷೇತ್ರಗಳನ್ನು ಕೊಡುವುದು ಅಸ್ಪೃಶ್ಯರ ದೃಷ್ಟಿಯಿಂದ, ದೂರದೃಷ್ಟಿಯಿಂದ ಒಳ್ಳೆಯದಲ್ಲ ಎಂದವರಿಗೆ ತಿಳಿದಿತ್ತು. ತಾವು ಏಕಾಂಗಿಯಾಗಿ ಹೋರಾಡಬೇಕಿದ್ದರೂ ತಾವು ತಮ್ಮ ಜೀವವನ್ನು ಪಣಕ್ಕಿಟ್ಟು ಹೋರಾಡುವುದಾಗಿ ಅವರು ತಿಳಿಸಿದರು. ಆದರೆ ಯಾರೂ ಆ ಸಮಯದಲ್ಲಿ ಇದರ ಪರಿಣಾಮ ಏನಾಗಬಹುದು ಎಂದು ಯೋಚಿಸಿರಲಿಲ್ಲ.[೧]

---

1. B.B.C – ಗಾಂಧೀಜಿ ಅವರೊಂದಿಗೆ ಸಂವಾದ
ಓರಿಯಂಟ್ ಲಾಂಗ್ ಮ್ಯಾನ್
ಬೊಂಬಾಯಿ, ಕೋಲ್ಕತ್ತಾ ಹಾಗು ಮದರಾಸು
ಲೇಖನ ಹಾಗು ವಕ್ತಾರರು" ಫ್ರಾನ್ಸಿಸ್ ವ್ಯಾಟ್ಸನ್
ನಿರ್ಮಾಪಕರು" ಮಾರಿಸ್ ಬ್ರವ್ನ್
ಪುಟ ೯,೧೦,೧೬,೭೮ ಹಾಗು ೭೯
ಪುನರ್ ಮುದ್ರಣ: ರಟ್ಟು
ಡಾ.ಬಿ.ಆರ್.ಅಂಬೇಡ್ಕರ್ ಅವರ ನೆನಪುಗಳು ಹಾಗು ಮೆಲಕುಗಳು
ಪುಟ ೧೫೫–೧೬೨

## ೫೬
## ಒಂದು ರಾಜಕೀಯ ಪಕ್ಷ ಅಸ್ತಿತ್ವದಲ್ಲಿ ಇರುವುದು ಕೇವಲ ಚುನಾವಣೆ ಜಯಿಸಲು ಮಾತ್ರವಲ್ಲ; ಬದಲಾಗಿ ಜನರಿಗೆ ಶಿಕ್ಷಣ ನೀಡಲು, ಎಚ್ಚರಿಸಲು ಹಾಗು ವ್ಯವಸ್ಥೆಯನ್ನು ಸರಿಪಡಿಸಲು

ಪರಿಶಿಷ್ಟ ಜಾತಿಯ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸಭೆಯನ್ನು ಅದರ ಅಧ್ಯಕ್ಷರಾದ ಡಾ.ಬಿ.ಆರ್.ಅಂಬೇಡ್ಕರ್ ಅವರ ೧೯೫೫ರ ಆಗಸ್ಟ್ ೨೧ ರಂದು ಬೊಂಬಾಯಿಯ "ಜೈರಾಜ್ ಹೌಸ್‌ನಲ್ಲಿ" ಕರೆದಿದ್ದರು.

೧೯೫೫ರಲ್ಲಿ ಮುದ್ರಿಸಲಾಗಿದ್ದ ಪರಿಶಿಷ್ಟ ಜಾತಿಯ ಒಕ್ಕೂಟದ ಸಂವಿಧಾನವನ್ನು ಕುರಿತು ಈ ಸಭೆಯಲ್ಲಿ ಚರ್ಚೆ ನಡೆಯಿತು. ಹಲವಾರು ಭಾಗಗಳಲ್ಲಿ ತಿದ್ದು ಪಡಿಗಳನ್ನು ಸೂಚಿಸಿ ನಂತರ ಅದನ್ನು ಅಂಗೀಕಾರ ಮಾಡಲಾಯಿತು.

ಕಾರ್ಯಕಾರಿ ಸಮಿತಿಯ ಸಭೆಯ ವರದಿ ಹಾಗೂ ಅಂಗೀಕರಿಸಿದ ತಿದ್ದುಪಡಿಗಳು ಇಂತಿವೆ– ಸಂಪಾದಕರು.

### ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸಭೆ, ಜೈರಾಜ್ ಹೌಸ್, ಬೊಂಬಾಯಿ.

ಡಾ. ಬಿ.ಆರ್. ಅಂಬೇಡ್ಕರ್ MA, Phd, D.S.C, LL.D, D.L.tt, ವಕೀಲರು, ಸದಸ್ಯರು, ರಾಜ್ಯಸಭೆ, ಇವರು ೧೯೫೫ರ ಆಗಸ್ಟ್ ೨೧ ರಂದು ಸಂಜೆ ೪ ಘಂಟೆ, ಬೊಂಬಾಯಿಯ ಕೊಲಾಬಾದಲ್ಲಿರುವ ಜೈರಾಜ್ ಹೌಸಿನಲ್ಲಿ ಈ ಸಭೆಯನ್ನು ಕರೆದಿದ್ದರು.

ಪರಿಶಿಷ್ಟ ಜಾತಿಯ ಒಕ್ಕೂಟದ ಕಾರ್ಯಕಾರಿ ಸಮಿತಿಯ ಕೆಳಕಂಡ ಸದಸ್ಯರು ಸಭೆಯಲ್ಲಿ ಹಾಜರಿದ್ದರು.

೧. ಡಾ.ಬಿ.ಆರ್.ಅಂಬೇಡ್ಕರ್
೨. ಶ್ರೀ ರಾಜ್‌ಭಾವ್ ಖೋಬ್ರಾಗಡೆ (ಮಧ್ಯ ಪ್ರದೇಶ)
೩. ಶ್ರೀ ಎ. ರತ್ನಂ (ಮದರಾಸು)
೪. ಶ್ರೀ ಹರಿದಾಸ್ ಅವೋದೆ (ನಾಗ್ಪುರ, ಮಧ್ಯಪ್ರದೇಶ)
೫. ಶ್ರೀ ಜೆ.ಸಿ. ಆದಿಮುಗಂ (ಮೈಸೂರು)
೬. ಶ್ರೀ ಜೆ.ಎಸ್. ಬಾನ್ಸೋದೆ (ಮಧ್ಯಭಾರತ)
೭ ಶ್ರೀ ಸಿ.ಎಂ. ಅರ್ಮುಗಂ(ಮೈಸೂರು)
೮. ಶ್ರೀ ನೀಲಂ ಸಿಂಗ್‌ಗಿಲ್ (ಪೆಪ್ಸು)
೯. ಶ್ರೀ ಬಿ.ಎಸ್. ಮೋರೆ (ಔರಂಗಾಬಾದ್)
೧೦. ಶ್ರೀ ಆರ್.ಡಿ. ಭಂಡಾರೆ (ಬೊಂಬಾಯಿ)
೧೧. ಶ್ರೀ ಹರಿದಾಸ್ ಅಶರ್‌ವರ್ (ವಿಂಧ್ಯಪ್ರದೇಶ)
೧೨. ಶ್ರೀ ಜಿ.ಟಿ. ಪರ್‌ಮಾರ್ (ಗುಜರಾತ್)
೧೩. ಶ್ರೀ ಬಿ.ಕೆ. ಗಾಯಕ್‌ವಾಡ್ (ಮಹಾರಾಷ್ಟ್ರ)
೧೪. ಶ್ರೀ ಎ.ಜಿ. ಪವಾರ್ (ಮಹಾರಾಷ್ಟ್ರ)

೧೫. ಶ್ರೀ ವಿ. ದೊರೆಸ್ವಾಮಿ, (ಮೈಸೂರು)

೧೬. ಶ್ರೀ ಎಂ.ಜಿ. ವೇಲು (ಮದರಾಸು)

೧೭. ಶ್ರೀ ಡಬ್ಲ್ಯೂ.ಎಸ್. ಕಾಂಬ್ಳೆ (ಬೇರಾರ್)

ಡಾ.ಬಿ.ಆರ್.ಅಂಬೇಡ್ಕರ್: "ಮಿತ್ರರೇ ನಾವು ಬಹಳಷ್ಟು ಸಮಯದ ನಂತರ ಭೇಟಿಯಾಗುತ್ತಿದ್ದೇವೆ. ನಾವು ಈ ಮೊದಲು ಭೇಟಿ ಆಗದಿರುವುದಕ್ಕೆ ಹಲವಾರು ಕಾರಣಗಳಿವೆ. ನನ್ನ ವಿಷಯಕ್ಕೆ ಬಂದರೆ ನನ್ನ ಆರೋಗ್ಯ ಸರಿ ಇಲ್ಲದಿರುವುದು ತಮಗೆ ತಿಳಿದಿದೆ. ಆದರೆ ಒಂದು ಅಂಶ ನನ್ನ ಗಮನಕ್ಕೆ ಬಂದಿದೆ. ಅದೇನೆಂದರೆ ಒಕ್ಕೂಟದ ಕಾರ್ಯಗಳನ್ನು ನನ್ನ ಅನುಪಸ್ಥಿತಿಯಲ್ಲಿ ತಾವು ಮುಂದುವರಿಸುತ್ತಿಲ್ಲ. ನಾನು ಇಲ್ಲದಿದ್ದರೂ ಈ ಕಾರ್ಯವನ್ನು ಮುಂದಕ್ಕೆ ಕೊಂಡೊಯ್ಯಬೇಕಾಗಿರುವ ಸಮಯ ಈಗ ಬಂದಿದೆ. ನಾನು ಕೇವಲ ಒಬ್ಬ ಸಲಹೆಗಾರನಾಗಿ ಮಾತ್ರ ಉಳಿಯಬೇಕು. ಏನಾದರೂ ಕ್ಲಿಷ್ಟ ಪರಿಸ್ಥಿತಿ ಎದುರಾದರೆ ತಾವುಗಳು ನನ್ನ ಸಲಹೆಯನ್ನು ಪಡೆಯಬಹುದು." ಈ ಮೊದಲ ಮಾತುಗಳ ನಂತರ ಹಲವು ಸಮಸ್ಯೆಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

**ನಿರ್ಣಯ ಸಂಖ್ಯೆ ೧:** ಈ ಕಾರ್ಯಕಾರಿ ಸಮಿತಿಯು ಕಳೆದ ಸಭೆಯಲ್ಲಿ ಈ ಸಮಿತಿಯ ಅಧ್ಯಕ್ಷರನ್ನಾಗಿ ಡಾ.ಬಾಬಾಸಾಹೇಬ ಅಲಿಯಾಸ್ ಬಿ.ಆರ್.ಅಂಬೇಡ್ಕರ್ ಅವರನ್ನು ಆಯ್ಕೆ ಮಾಡಿತ್ತು. ಆ ನಿರ್ಧಾರವನ್ನು ಈ ಸಭೆಯು ಧೃಢಪಡಿಸುತ್ತದೆ.

ಪ್ರಸ್ಥಾಪಿಸಿದವರು : ಎ. ರತ್ನಂ (ಮದರಾಸು)

ಅನುಮೋದಿಸಿದವರು : ಜಿ.ಸಿ. ಆರ್ಮುಗಂ

ಬೆಂಬಲಿಸಿದವರು : ಬಿ.ಕೆ. ಗಾಯಕ್‌ವಾಡ್

ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ : ಕೆಲ ಹಳೆಯ ಸದಸ್ಯರು ಈ ಒಕ್ಕೂಟ ಮುಂದುವರೆಯಬೇಕೇ ಬೇಡವೇ ಎಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಅಸ್ಪೃಶ್ಯತೆಯ ಪಿಡುಗು ಇರುವವರೆಗೂ ನಮ್ಮ ಈ ಒಕ್ಕೂಟ ಕಾರ್ಯನಿರತವಾಗಿರಬೇಕು. ಆದರೆ ಚುನಾವಣೆಯ ಸಮಯದಲ್ಲಿ ಬೇರೆ ಯಾವುದಾದರೂ ಪಕ್ಷದೊಂದಿಗೆ ಸೇರಿ ಕಾರ್ಯನಿರ್ವಹಿಸಬೇಕೇ ಎಂಬುದು ಈಗ ನಮ್ಮೆದುರು ಇರುವ ಪ್ರಶ್ನೆ. ಆದರೆ ಬೇರೆಯ ಪಕ್ಷಗಳೊಂದಿಗೆ ಸೇರಿ ಕಾರ್ಯನಿರ್ವಹಿಸಬೇಕಾಗಿ ಬಂದಾಗಿನ ನಮ್ಮ ಅನುಭವಗಳನ್ನು ನೀವು ಅರಿತಿರುವಿರಿ. ಈ ಪ್ರಶ್ನೆಯನ್ನು ಸೂಕ್ತ ಸಮಯದಲ್ಲಿ ಗಮನಿಸೋಣ. ಈಗ ಕೇವಲ ನಮ್ಮ ಒಕ್ಕೂಟ ಕಾರ್ಯಗತವಾಗಿರಬೇಕೇ, ಬೇಡವೆ ಎಂಬುದನ್ನು ಚರ್ಚಿಸೋಣ.

**ನಿರ್ಣಯ ಸಂಖ್ಯೆ ೨:** ಕಳೆದ ಚುನಾವಣೆಯಲ್ಲಿ ಅನುಭವಿಸಿರುವ ಸೋಲು ಕಾರ್ಯಕಾರಿ ಸಮಿತಿಗೆ ತಿಳಿದಿದೆ. ಆದರೆ ಈ ಸೋಲಿನಿಂದ ಕಾರ್ಯಕಾರಿ ಸಮಿತಿಯ ಸದಸ್ಯರು ಎದೆಗುಂದಿಲ್ಲ, ಈ ರೀತಿಯ ಸೋಲುಗಳು ಸರ್ವೇಸಾಮಾನ್ಯ. ಒಂದು ರಾಜಕೀಯ ಪಕ್ಷ ಕೇವಲ ಚುನಾವಣೆ ಗೆಲ್ಲುವ ಸಲುವಾಗಿ ಅಸ್ತಿತ್ವದಲ್ಲಿ ಇರುವುದಿಲ್ಲ. ಒಂದು ರಾಜಕೀಯ ಪಕ್ಷ ಅಸ್ತಿತ್ವದಲ್ಲಿ ಇರುವುದು ಜನರನ್ನು ಜಾಗೃತಗೊಳಿಸಲು, ಶಿಕ್ಷಿತಗೊಳಿಸಲು ಹಾಗು ವ್ಯವಸ್ಥೆಯನ್ನು ಸರಿಪಡಿಲು. ಈ ಕಾರ್ಯವನ್ನು ಒಕ್ಕೂಟ ಶಕ್ತಿಮೀರಿ ಮಾಡಿದೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

ಎಲ್ಲಿಯವರೆಗೂ ಅಸ್ಪೃಶ್ಯತೆಯಿಂದ ಉಂಟಾಗುವ ತೊಂದರೆಗಳು ನಿವಾರಣೆ ಆಗುವದಿಲ್ಲವೋ, ಅಲ್ಲಿಯವರೆಗೂ ಈ ಒಕ್ಕೂಟವು ಅಸ್ತಿತ್ವದಲ್ಲಿ ಇರುತ್ತದೆ ಎಂದು ಈ ಕಾರ್ಯಕಾರಿ ಸಮಿತಿಯು ಸ್ಪಷ್ಟವಾಗಿ ತಿಳಿಸುತ್ತದೆ.

ಪ್ರಸ್ತಾಪಿಸಿದವರು: ಶ್ರೀ ಹೆಚ್.ಡಿ. ಅವೋದೆ

ಅನುಮೋದಿಸಿದವರು : ಶ್ರೀ ಎಂ.ಎಸ್.ವೇಲು

ಈ ನಿರ್ಣಯವು ಕೂಡ ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ ಸಂಖ್ಯೆ ೩:** ಈ ಕಾರ್ಯಕಾರಿ ಸಮಿತಿಯು ಅತ್ಯಂತ ಖೇದದಿಂದ ಒಂದು ವಿಷಯವನ್ನು ಸಮಿತಿಯ ಸದಸ್ಯರ ಎದುರು ಇಡಬಯಸುತ್ತದೆ. ಚುನಾವಣಾ ಸಮಿತಿಯು ಈ ಒಕ್ಕೂಟವು ಅಖಿಲಭಾರತ ಮಟ್ಟದಲ್ಲಿ ಒಂದು ಪಕ್ಷ ಎಂಬ ಮಾನ್ಯತೆಯನ್ನು ನೀಡಿಲ್ಲ. ಒಂದು ಪಕ್ಷವು ಅಖಿಲ ಭಾರತ ಮಟ್ಟದಲ್ಲಿ ಮಾನ್ಯತೆ ಪಡೆಯಬೇಕು ಎಂದರೆ, ಅದಕ್ಕೆ ದೊರೆತ ಮತಗಳ ಮೇಲೆ ನಿರ್ಧಾರ ಕೈಗೊಳ್ಳಬೇಕೇ ಹೊರತು, ಅದು ಗೆದ್ದ ಸ್ಥಾನಗಳಿಂದಲ್ಲ ಮತಗಳನ್ನು ಲೆಕ್ಕಹಾಕುವಾಗ ಪರಿಶಿಷ್ಟ ಜಾತಿಯ ಸೋಷಿಯಲಿಸ್ಟ್ ಪಕ್ಷದೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರ ಪರಿಶಿಷ್ಟ ಜಾತಿಯವರು ಸೋಷಿಯಲಿಸ್ಟ್ ಪಕ್ಷದ ಅಭ್ಯರ್ಥಿಗಳ ಪರವಾಗಿ ಚಲಾಯಿಸಿದ್ದ ಮತಗಳನ್ನೂ ಪರಿಗಣಿಸಬೇಕು. ಸೋಷಿಯಲಿಸ್ಟ್ ಮತದಾರರು ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಪರವಾಗಿ ತಮ್ಮ ಮತವನ್ನು ಚಲಾಯಿಸಲಿಲ್ಲ. ಪರಿಶಿಷ್ಟ ಜಾತಿಯವರು ಸೋಷಿಯಲಿಸ್ಟ್‌ರ ಪರವಾಗಿ ಚಲಾಯಿಸಿದ ಮತಗಳನ್ನೂ ಕೂಡಿಸಿದರೆ, ಒಕ್ಕೂಟದ ಪರವಾಗಿದ್ದ ಮತಗಳು ಸೋಷಿಯಲಿಸ್ಟ್ ಪಕ್ಷವು ಗಳಿಸಿದ ಒಟ್ಟು ಮತಗಳಿಗಿಂತ ಅಧಿಕವಾಗಿರುತ್ತಿದ್ದವು.

ಆದ್ದರಿಂದ ಮೊದಲ ಚುನಾವಣೆಯಲ್ಲಿ ನೀಡಿದ್ದಂತೆಯೇ ಈ ಒಕ್ಕೂಟಕ್ಕೆ ಅಖಿಲ ಭಾರತ ಮಟ್ಟದ ಮಾನ್ಯತೆಯನ್ನು ಮುಂದುವರಿಸಬೇಕು ಎಂದು ಈ ಕಾರ್ಯಕಾರಿ ಸಮಿತಿಯು ಚುನಾವಣಾ ಸಮಿತಿಯ ಎದುರು ಬೇಡಿಕೆ ಇರಿಸುತ್ತದೆ.

ಪ್ರಸ್ತಾಪಿಸಿದವರು : ಶ್ರೀ ಎ.ಜಿ. ಪವಾರ್ (ಮಹಾರಾಷ್ಟ್ರ)

ಅನುಮೋದಿಸಿದವರು : ಶ್ರೀ ವಿ. ದೊರೆಸ್ವಾಮಿ (ಮೈಸೂರು)

ಈ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ ಸಂಖ್ಯೆ ೪** ಒಕ್ಕೂಟದ ಸಂವಿಧಾನಕ್ಕೆ ಈ ಕೆಳಗಿನ ತಿದ್ದುಪಡಿಗಳನ್ನು ನಮ್ಮ ಅಧ್ಯಕ್ಷರು ಸೂಚಿಸಿದ್ದಾರೆ.

ಕಲಮ್ ಸಂಖ್ಯೆ I ಕ್ಕೆ ತಿದ್ದುಪಡಿ : ಎರಡನೆಯ ಉಪವಾಕ್ಯದಲ್ಲಿ ೧೯೫೭ ಸಂಖ್ಯೆಯ ನಂತರ ಈ ಪದಗಳು ಸೇರ್ಪಡೆ ಆಗಬೇಕು. "ಅಥವಾ ಸಮಿತಿಯಿಂದ ನೇಮಕ ಆಗುವ ದಿನಾಂಕದವರೆಗೆ."

ಕಲಮ್ ಸಂಖ್ಯೆ II ಕ್ಕೆ ತಿದ್ದುಪಡಿ ಈ ಕೆಳಗಿನ ಉಪವಾಕ್ಯ VII ನ್ನು ಉಪವಾಕ್ಯ VI ರ ನಂತರ ಸೇರ್ಪಡೆ ಮಾಡಿಕೊಳ್ಳಬೇಕು. ಉಪವಾಕ್ಯ VII ಈ ಕೆಳಗಿನಂತಿದೆ: "ಈ ವಿಷಯವಾಗಿ ಸಾಮಗ್ರಿಗಳನ್ನು ಹಂಚುವುದು ಹಾಗೂ ಮುದ್ರಣಾಲಯಗಳನ್ನು ನಡೆಸುವುದು."

ಉಪವಾಕ್ಯ III, IV, VI, VI ಎರಡೆರಡು ಬಾರಿ ಮುದ್ರಣಗೊಂಡಿದೆ ಇದು ಮುದ್ರಕರ ದೋಷ.

ಕಲಮ್ VI ಕ್ಕೆ ತಿದ್ದುಪಡಿ ಉಪವಾಕ್ಯ ೩,೪,೫,೬,೭,೮,೯, ಹಾಗು ೧೦ ರಲ್ಲಿ ಇರುವ ಕೂಡುಗೆರೆಗಳನ್ನು ತೆಗೆಯಬೇಕು.

II) ಉಪವಾಕ್ಯ ೧೦ರ ನಂತರ ಕೆಳಗಿನ ೧೧ನೆಯ ಉಪವಾಕ್ಯವನ್ನು ಸೇರ್ಪಡೆ ಮಾಡಬೇಕು.

"ಹಳ್ಳಿಯ ಸಮಿತಿ, ತಾಲ್ಲೂಕು ಸಮಿತಿ, ಜಿಲ್ಲಾ ಸಮಿತಿ ಹಾಗು ರಾಜ್ಯ ಸಮಿತಿಯ ಸದಸ್ಯರ ಸಂಖ್ಯೆಯನ್ನು ಕೇಂದ್ರ ಸಮಿತಿಯ ಒಪ್ಪಿಗೆಯೊಂದಿಗೆ ಪ್ರತಿ ರಾಜ್ಯ ಸಮಿತಿಗಳು ನಿರ್ಧಾರ ಮಾಡುತ್ತವೆ.

ಕಲಮ್ VII ರ ತಿದ್ದುಪಡಿ : ೧) ವಾಕ್ಯ I ರ ಉಪವಾಕ್ಯ II 'ಒಕ್ಕೂಟ' ಎಂಬ ಪದದ ನಂತರ "ಪ್ರಾಂತೀಯ ಕಾರ್ಯದರ್ಶಿಗಳು" ಎಂಬ ಪದಗಳನ್ನು ಸೇರಿಸಬೇಕು.

೨) ಉಪವಾಕ್ಯಸಂಖ್ಯೆ IVನ್ನು ತೆಗೆದುಹಾಕಬೇಕು. ಅದು ಉಪವಾಕ್ಯ ಸಂಖ್ಯೆ Vರ ನಂತರ ಮತ್ತೊಮ್ಮೆ ಮುದ್ರಣ ಆಗಿದೆ.

ಕಲಮ್ ಸಂಖ್ಯೆ VIII ಕ್ಕೆ ತಿದ್ದುಪಡಿ : ೧) ವಾಕ್ಯ ೧ರಲ್ಲಿ ಎರಡನೆಯ ವಾಕ್ಯದ ನಂತರ ಇರುವ ಕೂಡುಗೆರೆಯನ್ನು ತೆಗೆದುಹಾಕಿ.

೧) 'ಒಳಗೊಂಡಿದೆ' ಎಂಬ ಪದ ಸೇರಿಸಬೇಕು

೨) ಉಪವಾಕ್ಯ ೪ ರಲ್ಲಿ (ಅಧ್ಯಕ್ಷ) President ಎಂಬ ಪದದ ಮುಂದೆ "The" ಪದದ ಸೇರ್ಪಡೆ ಮಾಡಬೇಕು.

೩) ಉಪವಾಕ್ಯ ೫ರ ನಂತರ ಈ ಕೆಳಗಿನ ಅಂಶಗಳನ್ನು ಸೇರ್ಪಡೆ ಮಾಡಬೇಕು.

೪) ಅಧ್ಯಕ್ಷರು ಪ್ರತಿ ವಿಭಾಗಕ್ಕೂ ಪ್ರಾಂತೀಯ ಕಾರ್ಯದರ್ಶಿಗಳನ್ನು ನೇಮಕ ಮಾಡುತ್ತಾರೆ. ಅವರ ಸಂಖ್ಯೆ ೫ನ್ನು ದಾಟ ಕೂಡದು.

೫) ಉಪವಾಕ್ಯ ೭ ರ ನಂತರ ಕೆಳಗಿನ ಅಂಶಗಳನ್ನು ಸೇರ್ಪಡೆ ಮಾಡಬೇಕು.

"೮) ಪ್ರಾಂತೀಯ ಕಾರ್ಯದರ್ಶಿಗಳು ಒಕ್ಕೂಟದ ಕಾರ್ಯಕ್ರಮಗಳನ್ನು ತಮ್ಮ ತಮ್ಮ ವ್ಯಾಪ್ತಿಯಲ್ಲಿ ವ್ಯವಸ್ಥೆಗೊಳಿಸುವ ಕಾರ್ಯವನ್ನು ಮಾಡಲಿದ್ದಾರೆ. ಅಧ್ಯಕ್ಷರಂತೆಯೇ ತಮ್ಮ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಾರೆ. ಇವರು ಅಧ್ಯಕ್ಷರ ಅಣತಿಯಂತೆ ನಡೆದುಕೊಳ್ಳುತ್ತಾರೆ ಹಾಗು ತಮ್ಮ ಕಾರ್ಯ ಚಟುವಟಿಕೆಗಳ ಬಗ್ಗೆ ಕಾಲದಿಂದ ಕಾಲಕ್ಕೆ ಅಧ್ಯಕ್ಷರಿಗೆ ಮಾಹಿತಿ ನೀಡುತ್ತಾರೆ.

ಕಲಮ್ X ಕ್ಕೆ ತಿದ್ದುಪಡಿ : ವಾಕ್ಯ ೧ರಲ್ಲಿ 'ದ್ವಿ ವಾರ್ಷಿಕ' ಎಂಬ ಪದದ ಬದಲಾಗಿ "ಎರಡು ವರ್ಷಕ್ಕೊಮ್ಮೆ" ಎಂಬ ಪದಗಳನ್ನು ಸೇರಿಸುವುದು.

ಕಲಮ್ XIV ಕ್ಕೆ ತಿದ್ದುಪಡಿ: ಉಪವಾಕ್ಯ ೫ರ ಕಡೆಯ ಸಾಲಿನಲ್ಲಿ "ಕಛೇರಿಗಳು" ಎಂದು ಮುದ್ರಿಸಲಾಗಿದೆ. ಇದನ್ನು "ಅಧಿಕಾರಿಗಳು" ಎಂದು ಬದಲಾಯಿಸಬೇಕು.

ಕಲಮ್ XVII ಕ್ಕೆ ತಿದ್ದುಪಡಿ: ವಾಕ್ಯ ೪ರ ೨ನೆಯ ಸಾಲಿನಲ್ಲಿ "ರಾಜ್ಯಗಳ ಒಕ್ಕೂಟ" ಎಂಬುದನ್ನು ಬದಲಿಸಿ "ಒಕ್ಕೂಟದ ಅಖಿಲ ಭಾರತ ಸಮಿತಿ" ಎಂಬುದನ್ನು ಆದೇಶಿಸಬೇಕು.

ಕಲಮ್ XXIII ಕ್ಕೆ ತಿದ್ದುಪಡಿ: ಉಪವಾಕ್ಯ ೨ರ ೫ನೆಯ ಸಾಲಿನಲ್ಲಿ "ಜಿಲ್ಲೆ" ಎಂಬ ಪದದ ಬದಲಾಗಿ "ರಾಜ್ಯ" ಎಂಬ ಪದವನ್ನು ಬಳಸಬೇಕು.

ಕಲಮ್ XXVI ಕ್ಕೆ ತಿದ್ದುಪಡಿ: ಉಪವಾಕ್ಯ ೧ರಲ್ಲಿ "ತ್ರಿಕೋನ" ಎಂಬ ಪದದ ಬದಲಾಗಿ "ಆಯಾಕಾರ" ಎಂಬ ಪದವನ್ನು ಬಳಸಬೇಕು.

ಅದೇ ಉಪವಾಕ್ಯದಲ್ಲಿ "ಒಳಗೊಂಡಿದೆ" ಎಂಬ ಪದದ ನಂತರ "೧೧ ನಕ್ಷತ್ರಗಳು" ಎಂಬ

ಪದಗಳು ಸೇರ್ಪಡೆ ಆಗಬೇಕು.

ಈ ಎಲ್ಲಾ ಬದಲಾವಣೆಗಳನ್ನು ಮತದಾನಕ್ಕೆ ಹಾಕಿ ಮತ್ತು ಅವುಗಳನ್ನು ಅಂಗೀಕರಿಸಿಲಾಯಿತು.

**ನಿರ್ಣಯ ಸಂಖ್ಯೆ ೫:** ಅಖಿಲಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಸಂವಿಧಾನವನ್ನು ಈ ಕಾರ್ಯಕಾರಿ ಸಮಿತಿಯು ಅಂಗೀಕರಿಸಿದೆ ಮತ್ತು ಒಕ್ಕೂಟವು ಈ ಸಂವಿಧಾನಕ್ಕೆ ಬದ್ಧವಾಗಿದೆ ಎಂದು ತೀರ್ಮಾನಿಸಿದೆ.

ಈ ಹಂತದಲ್ಲಿ ಡಾ.ಬಾಬಾಸಾಹೇಬ್ ಅವರು ಒಂದು ವಿವರಣೆ ನೀಡಿದರು. ಅದೇನೆಂದರೆ ಸಂವಿಧಾನದ ಗಾತ್ರವು ದೊಡ್ಡದಾಗಿದೆ. ಆದ್ದರಿಂದ ಅದರ ಕೆಲಭಾಗಗಳನ್ನು **"ಸ್ಥಾಯೀ ಆದೇಶಗಳಿಗೆ"** ಎಂದು ವರ್ಗಾವಣೆ ಮಾಡಿ, ಸಂವಿಧಾನವನ್ನು ಮೊಟಕುಗೊಳಿಸಬಹುದು ಎಂದರು.

ಈ ನಿರ್ಣಯವನ್ನು ಎಲ್ಲರೂ ಸರ್ವಾನುಮತದಿಂದ ಅಂಗೀಕರಿಸಿದರು.

**ನಿರ್ಣಯ ಸಂಖ್ಯೆ ೬:** ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆಂದು ಸಂಸತ್ತಿನಲ್ಲಿ, ರಾಜ್ಯ ಸಭೆಯಲ್ಲಿ ನಗರಪಾಲಿಕೆಯಲ್ಲಿ ಹಾಗು ಜಿಲ್ಲೆ ಹಾಗು ಸ್ಥಳೀಯ ಮಂಡಳಿಗಳಲ್ಲಿ ಸ್ಥಾನಗಳಿಗಾಗಿ ಮೀಸಲಾತಿ ಇದೆ. ಆದರೆ ಇವುಗಳನ್ನು ಈ ತಕ್ಷಣದಿಂದ ರದ್ದು ಪಡಿಸಬೇಕು ಎಂಬ ಅಭಿಪ್ರಾಯವನ್ನು ಕಾರ್ಯಕಾರಿ ಸಮಿತಿಯು ಹೊಂದಿದೆ.

ಪ್ರಸ್ತಾಪಿಸಿದವರು : ಶ್ರೀ ಎ.ಜಿ. ಪವಾರ್

ಅನುಮೋದಿಸಿದವರು : ಶ್ರೀ ಎ. ರತ್ನಂ

ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಿರ್ಣಯ ಸಂಖ್ಯೆ ೭ : ೧) ಅಸ್ಪೃಶ್ಯರ ಸಮಸ್ಯೆಯನ್ನು ತೊಡೆದು ಹಾಕಲು ಯೋಜನಾ ಆಯೋಗವು ಕೆಲ ಕಾರ್ಯಕ್ರಮಗಳನ್ನು ರೂಪಿಸುವಾಗ ಪರಿಶಿಷ್ಟ ಜಾತಿಯ ಒಕ್ಕೂಟದವರಿಂದ ಯಾವುದೇ ಸಲಹೆಯನ್ನು ಪಡೆಯಲಿಲ್ಲ. ಆಯೋಗದ ಈ ಕ್ರಮದ ಬಗೆಗೆ ಒಕ್ಕೂಟವು ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ.

೨) ಯೋಜನಾ ಆಯೋಗವು ರೂಪಿಸಿರುವ ಕಾರ್ಯಕ್ರಮಗಳಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಲೀ ಅಥವಾ ಅಸ್ಪೃಶ್ಯರ ಬಡತನವನ್ನು ಹೋಗಲಾಡಿಸಲಾಗಲೀ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ ಎಂಬ ಅಭಿಪ್ರಾಯವನ್ನು ಈ ಕಾರ್ಯಕಾರಿ ಸಮಿತಿಯು ಹೊಂದಿದೆ.

೩) ಈ ಒಕ್ಕೂಟದ ಕಾರ್ಯಕಾರಿ ಸಮಿತಿಗೆ ಒಂದು ಅಂಶ ಸ್ಪಷ್ಟವಾಗಿದೆ. ಅದೇನೆಂದರೆ ಹಳ್ಳಿಯ ಜೀವನದ ನಿರ್ಬಂಧಿತ ಸಹ–ಅಸ್ತಿತ್ವದ ಜೀವನ ರೀತಿಯೇ ಅಸ್ಪೃಶ್ಯತೆಗೆ ಹಾಗು ಅಸ್ಪೃಶ್ಯರ ಬಡತನಕ್ಕೆ ಮುಖ್ಯಕಾರಣವಾಗಿದೆ ಎಂಬುದು ಒಕ್ಕೂಟದ ಕಾರ್ಯಕಾರಿ ಸಮಿತಿಗೆ ಕೂಡ ಮನದಟ್ಟಾಗಿದೆ.

೪) ಎರಡು ಪಕ್ಷಗಳು ಸಹಜೀವನವನ್ನು ನಡೆಸಬೇಕು ಎಂದಾಗ ಪರಸ್ಪರರ ಮನವನ್ನು ಹಾಗೂ ನಿಲುವುಗಳನ್ನು ಅರಿತಿರುವುದು, ಅತ್ಯಾವಶ್ಯಕ. ಅವರು ಆಡುವ ಮಾತಿನ ಹಿಂದೆ ಅವರು ಯಾವುದರ ಬಗೆಗೆ ಹಾಗೂ ಹೇಗೆ ಆಲೋಚನೆ ಮಾಡುತ್ತಿದ್ದಾರೆ ಎಂಬುದನ್ನು ನಾವು ಚಿಂತಿಸಬಹುದು. ಜಾತೀಯ ಭಾವನೆಗಳಿಂದ ಕೂಡಿದ ಮನಸ್ಸು ಹೇಗೆ ರೂಪುಗಳ್ಳುತ್ತದೆ. ಅದು ಯಾವ ರೀತಿ ಕಾರ್ಯ ನಿರ್ವಹಿಸುತ್ತದೆ ಹಾಗು ಯಾವ ಸಂದರ್ಭದಲ್ಲಿ ಯಾವ ರೀತಿ ಪ್ರತಿಕ್ರಿಯೆ ನೀಡುತ್ತದೆ? ಅದಕ್ಕೆ ಒಂದು ನಿರ್ದಿಷ್ಟ ಸ್ವರೂಪವಿದೆಯೆ? ನಾವು ಕಲಿಯಬೇಕಾದುದು ಏನು? ನಾವು ಆರಂಭ ಮಾಡುವುದಾದರೂ ಎಲ್ಲಿಂದ? –ಇವುಗಳನ್ನು ಚಿಂತಿಸಬೇಕು.

ನಾವು ಹಿಂದೂ ಸವರ್ಣೀಯರ ಪ್ರತಿಕ್ರಿಯೆಯನ್ನು ಗಮನಿಸುವಲ್ಲಿ ವಿಫಲರಾಗಿದ್ದೇವೆ. ನಮ್ಮ

ಹಿಂದಿನ ತಪ್ಪುಗಳಿಗೆ ಏನು ಕಾರಣ ಎಂದು ವಿಶ್ಲೇಷಿಸುವಲ್ಲಿ ಕೂಡ ವಿಫಲರಾಗಿದ್ದೇವೆ. ಯಾವ ರೀತಿಯ ಮನಸ್ಥಿತಿಯನ್ನು ಹಿಂದೂ ಧರ್ಮೀಯರು ಹೊಂದಿರಬೇಕೋ ಆ ರೀತಿಯ ಮನಸ್ಥಿತಿಯನ್ನು ಅವರು ಹೊಂದಿಲ್ಲ.

೫) ಈ ರೀತಿಯ ಸಹಜೀವನದಿಂದ ಹೊರಬರಬೇಕು ಎಂಬುದು ಕಾರ್ಯಕಾರಿ ಸಮಿತಿಯ ಖಚಿತವಾದ ಅಭಿಪ್ರಾಯ.

೬) ಕಾರ್ಯಕಾರಿ ಸಮಿತಿಯ ಅಭಿಪ್ರಾಯದಲ್ಲಿ, ಈ ರೀತಿ ಆಗಬೇಕಾದರೆ ಈಗ ಹಿಂದೂಗಳ ಅಡಿಯಾಳುಗಳಾಗಿ ಸಣ್ಣ ಸಣ್ಣ ಗುಂಪುಗಳಲ್ಲಿ ವಾಸಿಸುತ್ತಿರುವ ಅಸ್ಪೃಶ್ಯರಿಗೆಂದೇ ಪ್ರತ್ಯೇಕ ಹಳ್ಳಿಗಳು ಇರಬೇಕು.

೭) ಆದ್ದರಿಂದ ಕಾರ್ಯಕಾರಿ ಸಮಿತಿಯು ಯೋಜನಾ ಆಯೋಗಕ್ಕೆ ಆಗ್ರಹಪಡಿಸುವುದು ಏನೆಂದರೆ, ಕೃಷಿಯೋಗ್ಯವಿದ್ದೂ ಉಪಗೋಗಿಸಲ್ಪಡದೆ ಇರುವ ಹಾಗೂ ಕೃಷಿಯೋಗ್ಯವಲ್ಲದ ಪಾಳು ಭೂಮಿಯನ್ನು ಸಮತಟ್ಟುಗೊಳಿಸಿ, ಕೃಷಿಯೋಗ್ಯಗೊಳಿಸಿ, ಅದನ್ನು ಅಸ್ಪೃಶ್ಯರಿಗೆ ನೀಡಬೇಕು. ಇದರಿಂದಾಗಿ ಅವರಿಗೆ ನೆಲೆ ದೊರೆತಂತೆ ಆಗುತ್ತದೆ.

೮) ಕಾರ್ಯಕಾರಿ ಸಮಿತಿಯು ಯೋಜನೆಗಳಿಗೆ ಹಣ ಒದಗಿಸಲು ಉಪ್ಪಿನ ಮೇಲೆ ತೆರಿಗೆಯನ್ನು ಪುನಃ ವಿಧಿಸಬೇಕು ಎಂಬ ಅಭಿಪ್ರಾಯವನ್ನು ಹೊಂದಿದೆ.

ಎಲ್ಲಿಯವರೆಗೂ ಪರಿಶಿಷ್ಟ ಜಾತಿಯ ಜನರು ಹಿಂದೂಗಳ ಅಡಿಯಾಳುಗಳಾಗಿರುತ್ತಾರೆಯೋ, ಅಲ್ಲಿಯವರೆಗೆ ಅವರು ಸ್ವತಂತ್ರವಾದ ಹಾಗು ಶೋಷಣೆಯಿಂದ ಮುಕ್ತವಾದ ಜೀವನ ನಡೆಸುವುದು ಸಾಧ್ಯವಿಲ್ಲ. ಮದರಾಸು ಸರ್ಕಾರವು ಅಸ್ಪೃಶ್ಯರಿಗೆಂದೇ ಪ್ರತ್ಯೇಕ ಬಡಾವಣೆಗಳನ್ನು ಕಟ್ಟಿಕೊಡುವ ಯೋಜನೆ ಹಾಕಿಕೊಂಡಿತ್ತು. ಆದರೆ ಇವರು ಅದನ್ನು ತೀವ್ರವಾಗಿ ವಿರೋಧಿಸಿದರು. ಇದರಿಂದ ಅಸ್ಪೃಶ್ಯತೆಯನ್ನು ಖಾಯಂಗೊಳಿಸಿದಂತೆ ಆಗುತ್ತದೆ ಎಂಬ ನಿರ್ಣಯವನ್ನು ಅಧ್ಯಕ್ಷಸ್ಥಾನದಿಂದ ಅಂಬೇಡ್ಕರ್ ಅವರು ಮಂಡಿಸಿದರು.

ಕಾರ್ಯಕಾರಿ ಸಮಿತಿಯ ಸಭೆಯು ಒಮ್ಮತದಿಂದ ಈ ನಿರ್ಣಯವನ್ನು ಅಂಗೀಕರಿಸಿತು.

**ನಿರ್ಣಯ ಸಂಖ್ಯೆ ೮:** ಕಾರ್ಯಕಾರಿ ಸಮಿತಿಯು, ಗೋವಾದಲ್ಲಿ ನಡೆದ ಸತ್ಯಾಗ್ರಹದ ಸಮಯದಲ್ಲಿ ಉಂಟಾದ ಸಾವು ನೋವುಗಳಿಗೆ ಸಂತಾಪ ಸೂಚಿಸುತ್ತದೆ. ಆದರೆ ಸ್ವಾತಂತ್ರ್ಯ ಪಡೆಯಲು ಸತ್ಯಾಗ್ರಹವು ಸರಿಯಾದ ಮಾರ್ಗವಲ್ಲ ಎಂಬ ಅನಿಸಿಕೆಯನ್ನು ಕಾರ್ಯಕಾರಿ ಸಮಿತಿಯು ಹೊಂದಿದೆ.

೨) ಸತ್ಯಾಗ್ರಹ ಸಮಿತಿಯು ತಿಳಿದುಕೊಂಡಿರುವಂತೆ, 'ಸತ್ಯಾಗ್ರಹ' ಎಂಬ ಪದದಲ್ಲಿ 'ಸತ್ಯ' ಎಂಬುದು ಎರಡೂ ಸಂದರ್ಭಗಳಲ್ಲಿ ಒಂದೇ ಅರ್ಥ ನೀಡುತ್ತದೆ. ಭೇದ ಬರುವುದು 'ಅಗ್ರಹ' ಎಂಬ ಪದದ ಬಳಕೆಯಲ್ಲಿ ಮಾತ್ರ. ಈ ರೀತಿಯ ಸಂದರ್ಭದಲ್ಲಿ ಗಾಂಧೀಜಿ ಅವರ ರೀತಿಯ ಸತ್ಯಾಗ್ರಹವು ಸರಿ ಎಂದು ತೋರಬಹುದು. ಹಾಗು ಅದನ್ನು ಅನುಸರಿಸಬಹುದು. ಆದರೆ ಯಾವ ಸಂದರ್ಭದಲ್ಲಿ ಸತ್ಯವೇ ಇರುವುದಿಲ್ಲವೋ ಅಂತಹ ಸಂದರ್ಭದಲ್ಲಿ ಗಾಂಧಿಯವರ ರೀತಿಯ ಸತ್ಯಾಗ್ರಹವನ್ನು ಪ್ರಯತ್ನಿಸುವುದು ವ್ಯರ್ಥ. ಆದ್ದರಿಂದ ಕಾರ್ಯಕಾರಿ ಸಮಿತಿಯು ಈ ರೀತಿಯ ಸತ್ಯಾಗ್ರಹಕ್ಕೆ ಗೋವಾದಲ್ಲಿ ಸೇರ್ಪಡೆ ಆಗಿರಿ ಎಂದು ಪರಿಶಿಷ್ಟ ಜಾತಿಯ ಜನರಿಗೆ ಸಲಹೆ ನೀಡುವುದಿಲ್ಲ.

೩) ಕಾರ್ಯಕಾರಿ ಸಮಿತಿಯ ಅಭಿಪ್ರಾಯ ಏನೆಂದರೆ, ಗೋವಾ ಭಾರತದ ಒಂದು ಅವಿಭಾಜ್ಯ ಅಂಗ. ಆದ್ದರಿಂದ ಪೋರ್ಚುಗೀಸರು ಅಲ್ಲಿಂದ ಹೊರ ಹೋಗಬೇಕು. ಅದಕ್ಕೆ ಇರುವುದು ೩ ಮಾರ್ಗಗಳು

೧) ಖರೀದಿ ೨) ಭೋಗ್ಯ ಇಲ್ಲವೇ ೩) ಯುದ್ಧ. ಒಂದು ವೇಳೆ ಸರ್ಕಾರವು ಈ ೩ ಮಾರ್ಗಗಳಿಗೂ ಸಿದ್ಧವಿರದಿದ್ದರೆ, ಮತ್ತೆ ಯಾವ ಮಾರ್ಗ ಅನುಸರಿಸಬೇಕು ಎಂದು ಅವರೇ ತಿಳಿಸಬೇಕು.

ಡಾ. ಬಾಬಾ ಸಾಹೇಬ್ ಅವರು ಸತ್ಯಾಗ್ರಹ ಎನ್ನುವುದು ಸತ್ಯವನ್ನು ಒಪ್ಪಿಕೊಳ್ಳುವ ಎರಡು ಪಕ್ಷಗಳ ನಡುವೆ ಇರಬಹುದಾದ ಒಪ್ಪಂದ ಎಂದರು. ಈಗ ಭೇದ ಇರುವುದು ಅಗ್ರಹದಲ್ಲಿ. ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕು. ಏಕೆಂದರೆ ಭಾರತೀಯರಂತೆ ಬ್ರಿಟಿಷರು ಕೂಡ ಭಾರತಕ್ಕೆ ಅದರದ್ದೇ ಆದ ಸರ್ಕಾರ ಇರಬೇಕು ಎಂದು ಒಪ್ಪಿಕೊಂಡಿದ್ದಾರೆ. ಇದನ್ನೇ ಬಹಳ ಹಿಂದೆ ಎಂದರೆ ೧೮೩೩ರಲ್ಲಿಯೇ ಮೆಕಾಲೆ ಹೇಳಿದ್ದ. ಆತ ಭಾರತೀಯರೇನೂ ಅಸಂಸ್ಕೃತರಲ್ಲ ಎಂದು ಹೇಳಿದ್ದ. ಅವರಿಗೆ ತಮ್ಮದೇ ಆದ ವಿಭಿನ್ನ ಸಂಸ್ಕೃತಿ ಇದೆ. ಆದ್ದರಿಂದ ಅವರಿಗೆ ತಮ್ಮ ಸ್ವಂತ ಆಡಳಿತ ನಡೆಸಿಕೊಳ್ಳಲು ಅಳ್ವಿಕೆಯ ಅವಕಾಶ ನೀಡಬೇಕು ಎಂದಿದ್ದ. ಆದರೆ ಗೋವಾದ ವಿಷಯಕ್ಕೆ ಬಂದರೆ, ಪೋರ್ಚುಗೀಸರು ಗೋವಾ ಪ್ರದೇಶವನ್ನು ಬಿಟ್ಟುಕೊಡಲು ಒಪ್ಪವುದಿಲ್ಲ. ಆದ್ದರಿಂದ ಇವರನ್ನು ಹೊರದೂಡಲು ಸತ್ಯಾಗ್ರಹದ ಅಸ್ತ್ರ ವ್ಯರ್ಥ ಮಾತ್ರವಲ್ಲ, ಅಪಾಯಕಾರಿ ಕೂಡ. ನನ್ನ ಜನರು ಗುಂಡಿಗೆ ಎದೆಯೊಡ್ಡುವುದು ನನಗೆ ಒಪ್ಪಿಗೆ ಇಲ್ಲ. ನಮಗೆ ಬಂದೂಕುಗಳನ್ನು ನೀಡಿದರೆ, ನಾವು ಹೋರಾಡುತ್ತೇವೆ. ಆದ್ದರಿಂದ ಮೇಲೆ ಸೂಚಿಸಿದ ನಿರ್ಣಯವು ಅಂಗೀಕಾರ ಆಗಬೇಕು.

ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

**ನಿರ್ಣಯ ಸಂಖ್ಯೆ ೯:** ವಿದೇಶಿ ನೀತಿಯ ಬಗೆಗೆ ಕಾರ್ಯಕಾರಿ ಸಮಿತಿಯು ತೃಪ್ತಿಯನ್ನು ಹೊಂದಿಲ್ಲ. ಅದು ಭಾರತೀಯ ಸಂಸದೀಯ ವ್ಯವಸ್ಥೆಯನ್ನು ಬಲಗೊಳಿಸುವುದಿಲ್ಲ ಮತ್ತು ಭದ್ರತೆಯ ದೃಷ್ಟಿಯಿಂದಲೂ ಅದು ಪ್ರಯೋಜನಕಾರಿ ಅಲ್ಲ.

ಈ ನಿರ್ಣಯವು ಅಂಗೀಕಾರವಾದ ನಂತರ ಅಧ್ಯಕ್ಷರು ಶ್ರೀ ರಾಜಭಾವು ಖೋಬ್ರಾಗಡೆ ಅವರನ್ನು ಅಖಿಲ ಭಾರತ ಪರಿಶಿಷ್ಟ ಜಾತಿಯ ಒಕ್ಕೂಟದ ಮಹಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿರುವುದಾಗಿ ಪ್ರಕಟಿಸಿದರು.

**ನಿರ್ಣಯ ಸಂಖ್ಯೆ ೧೦ :** ಖೋಬ್ರಾಗಡೆ ಅವರಿಗೆ ಶುಭಾಶಯ ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಕಾರ್ಯಕಾರಿ ಸಮಿತಿಗೆ ಸಲಹೆಗಾರರಾಗಿ ಇದ್ದುದಕ್ಕಾಗಿ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಲಾಯಿತು.

ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೂ ಧನ್ಯವಾದಗಳನ್ನು ಅರ್ಪಿಸಲಾಯಿತು.

ಇದಲ್ಲದೇ ಕಾರ್ಯಕಾರಿ ಸಮಿತಿಯು ಒಕ್ಕೂಟದ ಅಧ್ಯಕ್ಷರಿಗೆ ಒಕ್ಕೂಟದ ಪರವಾಗಿ ಈ ಕೆಳಕಂಡ ಅಂಶಗಳನ್ನು ಒಳಗೊಂಡಂತೆ ಭಾಷಾವಾರು ಪ್ರಾಂತಗಳ ರಚನೆಯ ಬಗ್ಗೆ ಒಂದು ನಿರ್ಣಯದ ಕರಡನ್ನು ಸಿದ್ಧಪಡಿಸುವ ಅಧಿಕಾರವನ್ನು ನೀಡಿತು.

೧) ಈ ರಾಷ್ಟ್ರದ ಒಗ್ಗಟ್ಟನ್ನು ಕಾಪಾಡುವ ಸಲುವಾಗಿ ರಾಜ್ಯಗಳನ್ನು ವಿಂಗಡಿಸಬೇಕು.

೨) ಆಂಗ್ಲ ಭಾಷೆ ಹಾಗು ಹಿಂದಿ ಆಡಳಿತ ಭಾಷೆಗಳಾಗಬೇಕು.

೩) ಬೊಂಬಾಯಿಯು ಏಕೀಕೃತ ಮಹಾರಾಷ್ಟ್ರಕ್ಕೆ ಸೇರ್ಪಡೆ ಆಗಬೇಕು.

೪) ಹೈದರಾಬಾದ್ ನಗರವು ಭಾರತದ ಎರಡನೆಯ ರಾಜಧಾನಿಯಾಗಬೇಕು. ಅದನ್ನು ರಾಜ್ಯಪಾಲರ ಜಿಲ್ಲೆ ಎಂದು ಹೆಸರಿಸಬೇಕು.

* * * * *

## ೫೭
## 'ಬುದ್ಧ ಹಾಗು ಆತನ ಧರ್ಮ' ಪುಸ್ತಕ ಕುರಿತು ಜವಹರಲಾಲ ನೆಹರು ಅವರಿಗೊಂದು ಪತ್ರ

೧೯೫೬ರ ಸೆಪ್ಟೆಮಬರ್ ೧೪ ರಂದು 'ಬುದ್ಧ ಹಾಗು ಅವನ ಧರ್ಮ' ಎಂಬ ಪುಸ್ತಕವನ್ನು ಕುರಿತು ಶ್ರೀ ಜವಹರಲಾಲ ನೆಹರು ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಪತ್ರವೊಂದನ್ನು ಬರೆದಿದ್ದರು. ಅದನ್ನು ಕೆಳಗೆ ನೀಡಲಾಗಿದೆ.

ನನ್ನ ಪ್ರೀತಿಯ ಪಂಡಿತ್ ಜೀ:

'ಬುದ್ಧ ಹಾಗು ಆತನ ಧರ್ಮ' ಪುಸ್ತಕದ ವಿಷಯಸೂಚಿಯಿರುವ ಹೊತ್ತಗೆಯ ಎರಡು ಪತ್ರಿಗಳನ್ನು ಈ ಪತ್ರದೊಂದಿಗೆ ಕಳುಹಿಸಿದ್ದೇನೆ. ಈಗಷ್ಟೇ ಈ ಪುಸ್ತಕವನ್ನು ನಾನು ಬರೆದು ಮುಗಿಸಿದ್ದೇನೆ. ಈ ಪುಸ್ತಕವು ಮುದ್ರಣದ ಹಂತದಲ್ಲಿದೆ. ಈ ವಿಷಯ ಸೂಚಿಯನ್ನು ಗಮನಿಸಿದರೆ ಇದು ಎಷ್ಟೊಂದು ವಿಸ್ತೃತವಾಗಿದೆ ಹಾಗು ಅಗಾಧವಾದ ಕೆಲಸ ಎಂಬುದನ್ನು ತಾವು ತಿಳಿಯಬಹುದು. ೧೯೫೬ರ ಸೆಪ್ಟೆಂಬರ ತಿಂಗಳಿನಲ್ಲಿ ಈ ಪುಸ್ತಕವು ಮಾರುಕಟ್ಟೆಗೆ ಬರಲಿದೆ. ಈ ಪುಸ್ತಕಕ್ಕೆ ನಾನು ಐದು ವರ್ಷಗಳ ಕಾಲ ವ್ಯಯಿಸಿದ್ದೇನೆ. ಈ ಸಣ್ಣ ಹೊತ್ತಗೆಯೇ ಈ ಕೆಲಸದ ಗುಣಮಟ್ಟವನ್ನು ತಮಗೆ ತೋರ್ಪಡಿಸುತ್ತದೆ.

ಇದರ ಮುದ್ರಣ ವೆಚ್ಚ ಬಹಳ ದುಬಾರಿಯಾಗಿದ್ದು ಇದು ೨೦,೦೦೦/– ರೂಪಾಯಿಗಳಷ್ಟು ಆಗಬಹುದು. ಇದು ನನ್ನ ಯೋಗ್ಯತೆಗೆ ಮೀರಿದ ವೆಚ್ಚವಾಗಿರುವುದರಿಂದ ಎಲ್ಲ ಕಡೆಯಿಂದ ನಾನು ಧನಸಹಾಯವನ್ನು ಅಪೇಕ್ಷಿಸುತ್ತಿದ್ದೇನೆ.

ಭಾರತ ಸರ್ಕಾರವು ಈ ಪುಸ್ತಕಗಳ ೫೦೦ ಪ್ರತಿಗಳನ್ನು ಖರೀದಿಸಿ, ಹಲವಾರು ಗ್ರಂಥಾಲಯಗಳಿಗೆ ವಿತರಿಸಬಹುದು ಅಥವಾ ಈ ವರ್ಷ ಬುದ್ಧನ ೨೫೦೦ ವರ್ಷಗಳ ಜನ್ಮ ದಿನದ ಆಚರಣೆಗೆ ಆಗಮಿಸಲಿರುವ ವಿದ್ವಾಂಸರಿಗೆ ನೀಡಬಹುದು.

ಬೌದ್ಧ ಧರ್ಮದ ಬಗ್ಗೆ ತಮಗೆ ಇರುವ ಆಸಕ್ತಿ ನನಗೆ ತಿಳಿದಿದೆ. ಆದ್ದರಿಂದಲೇ ನಾನು ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಈ ವಿಷಯದಲ್ಲಿ ತಾವು ನನಗೆ ಸಹಾಯ ಮಾಡುವಿರಿ ಎಂದು ಭಾವಿಸುತ್ತೇನೆ.

ತಮ್ಮ ವಿಶ್ವಾಸಿ
(ಸಹಿ)
ಡಾ.ಬಿ.ಆರ್.ಅಂಬೇಡ್ಕರ್

### ಪಂಡಿತ್ ನೆಹರೂ ಅವರ ಉತ್ತರ:

ಈ ಪತ್ರಕ್ಕೆ ಉತ್ತರವನ್ನು ಕೂಡ ನೀಡಿದ್ದರು. "ಬುದ್ಧ ಹಾಗು ಆತನ ಧರ್ಮ" ಈ ಪುಸ್ತಕವನ್ನು ಖರೀದಿಸಲು ಅಸಮರ್ಥರಾಗಿರುವ ವಿಷಯಕ್ಕೆ ಅವರು ಖೇದ ವ್ಯಕ್ತಪಡಿಸಿದ್ದರು. ಈ ವಿಷಯವನ್ನು ಅವರು ಡಾ. ರಾಧಾಕೃಷ್ಣನ್ ಅಧ್ಯಕ್ಷರು, ಬುದ್ಧ ಜಯಂತಿ ಆಚರಣೆ ಸಮಿತಿ, ಇವರ ಗಮನಕ್ಕೆ ತಂದಿದ್ದರು. ಜವಹರಲಾಲ ನೆಹರೂ ಅವರ ಉತ್ತರ ಈ ಕೆಳಗಿನಂತೆ ಇತ್ತು. –ಸಂಪಾದಕರು.

ಶ್ರೀ ಜವಹರಲಾಲ ನೆಹರು
ಭಾರತದ ಪ್ರಧಾನ ಮಂತ್ರಿಗಳು
ನವದೆಹಲಿ

ಸಂಖ್ಯೆ ೨೧೯೬ PMH/56
ನವದೆಹಲಿ
ಸೆಪ್ಟೆಂಬರ ೧೫, ೧೯೫೬

ನನ್ನ ಪ್ರೀತಿಯ ಡಾ.ಬಿ.ಆರ್.ಅಂಬೇಡ್ಕರ್ ಅವರೇ,
ಸೆಪ್ಟೆಂಬರ್ ೧೪ರ ತಮ್ಮ ಪತ್ರ

ನಿಮ್ಮ ಸಲಹೆಯಂತೆ ಇಷ್ಟೊಂದು ಪುಸ್ತಕಗಳನ್ನು ಖರೀದಿಸಲು ಸಾಧ್ಯವೇ ಎಂಬುದರ ಬಗೆಗೆ ನನಗೆ ಅನುಮಾನವಿದೆ. ಬುದ್ಧ ಜಯಂತಿಯ ಆಚರಣೆಯ ಅಂಗವಾಗಿ ಪ್ರಕಾಶನಕ್ಕೆಂದು ಸ್ವಲ್ಪ ಮೊತ್ತದ ಹಣವನ್ನು ಮೀಸಲಿರಿಸಲಾಗಿತ್ತು. ಆ ಮೊತ್ತ ಈಗಾಗಲೇ ಖರ್ಚಾಗಿ ಹೋಗಿದೆ. ನೈಜ ಸಂಗತಿ ಎಂದರೆ, ಅದಕ್ಕಿಂತಲೂ ಅಧಿಕ ಮೊತ್ತವೇ ಖರ್ಚಾಗಿದೆ. ಆದ್ದರಿಂದ ಬೌದ್ಧ ಧರ್ಮ ಕುರಿತು ನಮ್ಮಿಂದ ಪ್ರಕಟಣೆಯನ್ನು ನಿಲ್ಲಿಸಲಾಗಿದೆ. ಆದರೂ ನಾನು ತಮ್ಮ ಪತ್ರವನ್ನು ಬುದ್ಧ ಜಯಂತಿ ಆಚರಣಾ ಸಮಿತಿಯ ಅಧ್ಯಕ್ಷರಾದಂತಹ ಡಾ.ರಾಧಾಕೃಷ್ಣನ್ ಅವರಿಗೆ ಕಳುಹಿಸಿಕೊಡುತ್ತಿದ್ದೇನೆ.

ನಾನು ನಿಮಗೆ ಒಂದು ಸಲಹೆಯನ್ನು ನೀಡುತ್ತೇನೆ. ತಾವು ತಮ್ಮ ಪುಸ್ತಕವನ್ನು ದೆಹಲಿಯಲ್ಲಿ ಮಾರಾಟಕ್ಕೆ ಮಾಡುವುದಕ್ಕೆ ಏರ್ಪಾಟುಮಾಡಿ. ಬುದ್ಧ ಜಯಂತಿಯ ಸಂದರ್ಭದಲ್ಲಿ ಅಲ್ಲಿಗೆ ವಿದೇಶದಿಂದ ಹಲವಾರು ವ್ಯಕ್ತಿಗಳೂ ಆಗಮಿಸಲಿದ್ದಾರೆ. ಆಗ ಅಲ್ಲಿ ಒಳ್ಳೆಯ ಮಾರಾಟ ಆಗಬಹುದು.

ತಮ್ಮ ವಿಶ್ವಾಸಿ
(ಸಹಿ) ಜವಹರಲಾಲ ನೆಹರು

ಡಾ.ಬಿ.ಆರ್.ಅಂಬೇಡ್ಕರ್
೨೬, ಅಲಿಪುರ ರಸ್ತೆ,
ಸಿವಿಲ್ ಲೈನ್ಸ್
ದೆಹಲಿ

ಡಾ. ಎಸ್. ರಾಧಾಕೃಷ್ಣನ್ ಅವರು ತಾವು ಈ ವಿಷಯದಲ್ಲಿ ಯಾವುದೇ ಸಹಾಯ ಮಾಡಲು ಸಾಧ್ಯವಿಲ್ಲ ಎಂದು ದೂರವಾಣಿಯ ಮುಖಾಂತರ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ತಿಳಿಸಿದರು.

* * * * *

೫೮

## ಬುದ್ಧನ ಧರ್ಮವನ್ನು ಪ್ರಚಾರ ಮಾಡುವ ಮೂಲಕ ಭಿಕ್ಕುಗಳು ಅವನ ಸೇವೆ ಮಾಡಬೇಕು

ಡಾ. ಬಿ.ಆರ್. ಅಂಬೇಡ್ಕರ್
M.A., Phd, D.S.C, LL.D, D Litt, ವಕೀಲರು
ರಾಜ್ಯಸಭಾ ಸದಸ್ಯರು
೨೬, ಅಲಿಪುರ ರಸ್ತೆ, ಸಿವಿಲ್ ಲೈನ್ಸ್, ದೆಹಲಿ

೩೦ನೆಯ ಅಕ್ಟೋಬರ್ ೧೯೫೬

ನನ್ನ ಪ್ರೀತಿಯ ಶ್ರೀ ವಾಲಿಸಿನ್ಹಾ

೧೯೫೬ ರ ಅಕ್ಟೋಬರ್ ೨೫ರ ತಮ್ಮ ಪತ್ರಕ್ಕೆ ವಂದನೆಗಳು ಇದು ಖಂಡಿತವಾಗಿಯೂ ಒಂದು ಅಭೂತಪೂರ್ವವಾದ ಸಮಾರಂಭ ಹಾಗು ನಾನು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮತಬದಲಾವಣೆಗೆ ಮುಂದೆ ಬಂದರು. ಬುದ್ಧನ ಅನುಗ್ರಹನಿಂದ ಎಲ್ಲವೂ ಸುಸೂತ್ರವಾಗಿ ನಡೆಯಿತು.

ಉತ್ತಮವಾಗಿ ಪ್ರಾರಂಭಿಸಲ್ಪಟ್ಟಿರುವ ಈ ಕಾರ್ಯವು ಅಡೆತಡೆಯಿಲ್ಲದೆಯೇ ಮುಂದುವರಿಯುವಂತೆ ಮಾಡಬೇಕಾಗಿದೆ. ಆದರ ಅರಿವು ನಿಮಗೂ ಆಗಿರುವುದು ನನಗೆ ಸಂತಸ ಉಂಟುಮಾಡಿದೆ. ನನ್ನ ಮಾತಿಗೆ ಬೆಲೆಕೊಟ್ಟು ಬೌದ್ಧಮತವನ್ನು ಆಲಂಗಿಸಿಕೊಂಡಿರುವ ಜನರಿಗೆ ಬೌದ್ಧಮತದ ಬಗ್ಗೆ ಜ್ಞಾನವನ್ನು ನೀಡುವ ವಿಧಾನವನ್ನು ನಾವು ತಿಳಿಸಬೇಕು. ಹಲವಾರು ಜನರನ್ನು ಈ ನಿಟ್ಟಿನಲ್ಲಿ ನಾವು ತಯಾರು ಮಾಡಬೇಕು. ಆದರೆ ಈ ಕಾರ್ಯವನ್ನು ಮಾಡಲು ಅತ್ಯಂತ ಸಮರ್ಥರು ಎಂದರೆ ಭಿಕ್ಕುಗಳು. ಅವರು ಜನಸಾಮಾನ್ಯರು ಹೊಂದಿರಲಾರದಷ್ಟು ಗೌರವ ಭಾವನೆಯನ್ನು ಹೊಂದಿದ್ದಾರೆ.

ನನ್ನ ಅನಿಸಿಕೆಯಲ್ಲಿ ತಮ್ಮ ಎದುರಿಗಿದ್ದ ಅಪಾರವಾದ ಕೆಲಸವು ಪೂರ್ಣಗೊಂಡಿರುವುದನ್ನು ಕಂಡು ಭಿಕ್ಕುಗಳು ಸಂತೋಷಪಡಬೇಕು. ಆದರೆ ಭಿಕ್ಕುಗಳೊಂದಿಗೆ ಇರುವ ಏಕೈಕ ತೊಂದರೆ ಎಂದರೆ, ಅವರು ಸ್ಥಳೀಯರ ಭಾಷೆಯನ್ನು ಕಲಿಯಲು ಪ್ರಯತ್ನಿಸುವುದಿಲ್ಲ. ಆದ್ದರಿಂದ ಸಂಘವು ತನ್ನ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕು. ಅವರು ತಮ್ಮೊಳಗೇ ತಾವೇ ಮುದುರಿಕೊಳ್ಳುವದನ್ನು ಬಿಟ್ಟು ಕ್ರೈಸ್ತಮತಗಳ ಸಾಮಾಜಿಕ ಕಾರ್ಯಕರ್ತರಂತೆ ಆಗಬೇಕು. ನಾನು ಈ ಮೊದಲೇ ಹೇಳಿದಂತೆ ಇವರಿಂದ ಇಂದಿನ ಸಮಾಜಕ್ಕೆ ಯಾವುದೇ ಪ್ರಯೋಜನವೂ ಇಲ್ಲ. ಇದನ್ನು ಅವರಿಗೆ ಮನದಟ್ಟಾಗುವಂತೆ ತಿಳಿಸಬೇಕು. ಮಾತ್ರವಲ್ಲ ಬುದ್ಧನ ಧರ್ಮವನ್ನು ಪ್ರಚಾರ ಮಾಡುವುದರಿಂದ ಅವನಿಗೆ ಸೇವೆ ಸಲ್ಲಿಸಬಹುದು ಎಂಬ ಅಂಶವನ್ನು ತಿಳಿಸಬೇಕು.

ಭಿಕ್ಕುಗಳು ಹಾಗು ಭಿಕ್ಕುಗಳಲ್ಲದವರಿಗೆ ಬೌದ್ಧಮತದ ತತ್ವಗಳನ್ನು ತಿಳಿಸಿಕೊಡುವ ಸಮ್ಮೇಳನವನ್ನು ಆಯೋಜಿಸಬೇಕು ಎಂದು ತಿಳಿಸಿದ್ದೀರಿ. ನನಗೂ ಕೂಡ ಈ ಸಲಹೆ ಇಷ್ಟವಾಗಿದೆ. ಅವರಿಗೆ ಈ ಸಮಯದಲ್ಲಿ ಭಾರತದ ವಿವಿಧ ಭಾಷೆಗಳನ್ನು ಕಲಿಸಿಕೊಡಬೇಕು. ಆಗ ಅವರನ್ನು ಭಾರತದಾದ್ಯಂತ ಬೌದ್ಧ ಧರ್ಮದ ಪ್ರಚಾರಕ್ಕಾಗಿ ಕಳುಹಿಸಬಹುದು.

ಇನ್ನು ಭಾರತದ ಯುವ ಜನಾಂಗದ ನಾಡಿ ಮಿಡಿತವನ್ನು ಸ್ವಲ್ಪ ಮಟ್ಟಿಗೆ ಅರಿಯುವ ಪ್ರಯತ್ನವನ್ನು ನಾನು ಮಾಡಿದ್ದೇನೆ. ಅವರನ್ನು ಬೌದ್ಧಮತದ ತತ್ವಗಳತ್ತ ಆಕರ್ಷಿಸುವುದು ತುಸು ಕಷ್ಟವಾದ ಕೆಲಸ.

ಇದನ್ನು ಮಾಡಬೇಕೆಂದರೆ ಜಪಾನಿನವರು ಮತ್ತು ಪ್ರಾಟೆಸ್ಟೆಂಟ ಕ್ರೈಸ್ತರು ಮಾಡಿರುವಂತೆ ಈ ಭಿಕ್ಕುಗಳು ವಿವಾಹಿತರಾಗಬೇಕು. ಹೀಗೆ ಮಾಡಬೇಕೆಂದರೆ, ಅವರ ಶಿಕ್ಷಣದ ವೆಚ್ಚಗಳನ್ನು ಭರಿಸುವ ಹಾಗು ಸಾರ್ವಜನಿಕ ಜೀವನಕ್ಕೆ ಕಾಲಿಡುವ ಸಮಯದಲ್ಲಿನ ಅವರ ಖರ್ಚು ವೆಚ್ಚಗಳನ್ನು ಭರಿಸಬಲ್ಲ ಮಾರ್ಗಗಳನ್ನು ನಾವು ಹುಡುಕಬೇಕು.

ಬೊಂಬಾಯಿಯಲ್ಲಿ ಮತಾಂತರದ ಸಮಾರಂಭವು ಡಿಸೆಂಬರ ತಿಂಗಳಿನಲ್ಲಿ ಜರುಗಲಿದೆ. ಕ್ರಿಸ್‌ಮಸ್ ಸಂದರ್ಭದಲ್ಲಿ ಇದು ಜರುಗುವುದು ಸೂಕ್ತ. ಏಕೆಂದರೆ, ಆಗ ಜನರಿಗೆ ವಾಹನ ವ್ಯವಸ್ಥೆಯು ಸೂಕ್ತವಾಗಿ ದೊರಕುತ್ತದೆ. ಬೊಂಬಾಯಿಯಲ್ಲಿ ನನ್ನ ಜನರನ್ನು ಸಂಪರ್ಕಿಸಿದ ನಂತರ ನಾನು ನಿಮಗೆ ಸೂಕ್ತ ದಿನಾಂಕ ತಿಳಿಯಪಡಿಸುತ್ತೇನೆ.

ನಾಗಪುರದ ಸಮಾರಂಭದ ಬಗೆಗೆ ನೀವು ವ್ಯಾಪಕವಾದ ಪ್ರಚಾರ ಕೈಗೊಂಡಿರುವಿರಿ ಎಂದು ನಾನು ಭಾವಿಸುತ್ತೇನೆ. ಈ ಕೆಳಗಿನ ಅಂಶಗಳನ್ನು ತಾವು ಸ್ಪಷ್ಟವಾಗಿ ವಿವರಿಸಬೇಕು.

೧) ಮೊದಲನೆಯ ದಿನ ಸುಮಾರು ೩ ಲಕ್ಷದ ೮೦ ಸಾವಿರ ಜನರು ಬೌದ್ಧಮತಕ್ಕೆ ಪರಿವರ್ತನೆಯಾದರು. ಎರಡನೆಯ ದಿನ ಜರುಗಿದ ಸಮಾರಂಭಕ್ಕೆ ಕೂಡ ಅಷ್ಟೇ ಸಂಖ್ಯೆಯಲ್ಲಿ ಜನರು ಆಗಮಿಸಿದ್ದರು.

೨) ೧೯೫೬ರ ಅಕ್ಟೋಬರ್ ೧೬ರಂದು ಚಾಂದಾದಲ್ಲಿ ಕೂಡ ಮತ್ತೊಂದು ಸಮಾವೇಶ ಜರುಗಿತು. ಆ ಸಮಾರಂಭದಲ್ಲಿ ಸುಮಾರು ೩ ಲಕ್ಷ ಜನರು ಮತಾಂತರಗೊಂಡರು.

೩) ನಿನ್ನೆ ದಿನಪತ್ರಿಕೆಯಲ್ಲಿ ಬಂದ ವಾರ್ತೆಯ ಪ್ರಕಾರ ನಾನು ಹಿಂದಿರುಗಿದ ನಂತರ ಅಕೋಲದಲ್ಲಿ ಮತ್ತೊಂದು ಸಮಾವೇಶ ಜರುಗಿ ಅದರಲ್ಲಿ ಕೂಡ ೨೦೦೦ ಜನರು ಮತಾಂತರಗೊಂಡರು.

೪) 'ನವಯುಗ' ಎಂಬ ಮರಾಠಿ ದಿನಪತ್ರಿಕೆಯು ನಾಗಪುರದ ಸಮಾರಂಭದಲ್ಲಿ ಉಪಸ್ಥಿತರಿದ್ದ ಜನರ ಸುಂದರ ಚಿತ್ರವನ್ನು ಪ್ರಕಟಿಸಿದೆ.

೫) ಮತಾಂತರಗೊಳ್ಳಬೇಕು ಎಂಬ ಆಸಕ್ತಿ ತೋರಿಸಿ ದೇಶದ ಹಲವಾರು ಭಾಗಗಳಿಂದ ನನಗೆ ಪತ್ರಗಳು ಬರುತ್ತಿವೆ.

ನೀವು ಮಹಾಬೋಧಿ ಸಂಘ ಸಂಸ್ಥೆಯ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಸಿದ್ಧಪಡಿಸುವ ಆಸಕ್ತಿ ಹೊಂದಿದ್ದು ಅದಕ್ಕಾಗಿ ತಮಗೆ ಚಿತ್ರಗಳ ಆವಶ್ಯಕತೆ ಇದ್ದರೆ ದಯವಿಟ್ಟು ನನಗೆ ತಿಳಿಸಿ. ಅವುಗಳನ್ನು ಪಡೆಯಲು ನಾನು ಸಹಾಯ ಮಾಡಬಲ್ಲೆ.

ಇನ್ನು ನಮ್ಮ ಪ್ರವಾಸ ಕಾರ್ಯಕ್ರಮದ ಬಗ್ಗೆ ತಾವು ಕೇಳಿರುವಿರಿ. ಇದರ ಒಂದು ಪ್ರತಿಯನ್ನು ಈಗಾಗಲೇ ತಮಗೆ ಕಳುಹಿಸಿ ಕೊಡಲಾಗಿದೆ ಎಂದು ನನಗೆ ತಿಳಿದು ಬಂದಿದೆ. ಅದರಿಂದ ನಾನು ಸಾರ್‌ನಾಥ್‌ನಲ್ಲಿ ಯಾವ ದಿನ ಇರುತ್ತೇನೆ ಎಂಬುದು ತಮಗೆ ತಿಳಿದು ಬರುತ್ತದೆ.

ತಮ್ಮ ವಿಶ್ವಾಸಿ
(ಸಹಿ) ಡಾ. ಬಿ.ಆರ್. ಅಂಬೇಡ್ಕರ್

ಶ್ರೀ ಐ. ವಾಲಿ ಸಿನ್ಹಾ
ಅಧ್ಯಕ್ಷರು
ಮಹಾಬೋಧಿ ಸಂಸ್ಥೆ, ಭಾರತ
೪–A ಬಂಕಿಮ ಚಂದ್ರ ಚಟರ್ಜಿ ರಸ್ತೆ
(ಕಾಲೇಜು ಚೌಕ) ಕಲ್ಕತ್ತಾ–೨

## ೫೯
## ಬೌದ್ಧ ಮತವನ್ನು ಭಾರತದಲ್ಲಿ ಸ್ಥಾಪಿಸಲು ನನ್ನ ಜನರು ಎಲ್ಲಾ ರೀತಿಯ ತ್ಯಾಗಕ್ಕೂ ಸಿದ್ಧರಿದ್ದಾರೆ ಎಂದು ನಾನು ನಂಬಿದ್ದೇನೆ

೧೯೫೬ರ ನವೆಂಬರ್ ೧೭ರಂದು ನೇಪಾಳದಲ್ಲಿ ಆಯೋಜಿಸಲಾಗಿದ್ದ ವಿಶ್ವ ಬೌದ್ಧ ಸಮಾವೇಶದಲ್ಲಿ ಪಾಲ್ಗೊಳ್ಳಲು ಡಾ. ಬಿ.ಆರ್. ಅಂಬೇಡ್ಕರ್ ಅವರು, ಶ್ರೀಮತಿ ಅಂಬೇಡ್ಕರ್ ಅವರು, ಡಾ. ಮಾವಳಂಕರ್ ಹಾಗು ಶ್ರೀ ಬಿ.ಹೆಚ್ ವರಳೆ ಅವರೊಂದಿಗೆ ಹೊರಟರು.

ನೇಪಾಳಿಗೆ ೧೩ನೆಯ ನವೆಂಬರ್‌ನಂದು ಹೊರಟ ಇವರನ್ನು, ದೆಹಲಿಯ ವಿಮಾನ ನಿಲ್ದಾಣದಲ್ಲಿ ಶ್ರೀ ವೈ.ಸಿ. ಶಂಕರಾನಂದ ಶಾಸ್ತ್ರಿ ಅವರು ಅತ್ಯಂತ ಗೌರವದಿಂದ "ಬಾಬಾ ಸಾಹೇಬ್ ಅವರೇ, ತಮ್ಮ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಅಂತಹುದರಲ್ಲಿ ಭಾರತದಾದ್ಯಂತ ಪ್ರವಾಸ ಮಾಡಿ ಈ ಧರ್ಮವನ್ನು ತಾವು ಪ್ರಚಾರ ಮಾಡಲು ಸಾಧ್ಯವೇ" ಎಂದು ಪ್ರಶ್ನಿಸಿದರು. ಇದರಿಂದ ಬಾಬಾ ಅವರು ತುಸು ಕಸಿವಿಸಿಗೆ ಒಳಗಾದರು. ಆದರೆ ಅತ್ಯಂತ ಸ್ಪಷ್ಟವಾಗಿ 'ಬೌದ್ಧಮತದ ಪ್ರಚಾರದಂತಹ ಕಾರ್ಯಕ್ಕೆ ನಾನು ಆರೋಗ್ಯವಾಗಿಯೇ ಇದ್ದೇನೆ. ನನ್ನ ಜೀವನದಲ್ಲಿ ಉಳಿದಿರುವ ಪ್ರತಿಯೊಂದು ಕ್ಷಣವನ್ನೂ ನಾನು ಬೌದ್ಧಮತದ ಪ್ರಚಾರಕ್ಕಾಗಿ ಬಳಸಿಕೊಳ್ಳಲು ಸಿದ್ಧನಿದ್ದೇನೆ.

ಡಿಸೆಂಬರ್ ತಿಂಗಳಿನಲ್ಲಿ ಬೊಂಬಾಯಿಯಲ್ಲಿ ಲಕ್ಷಾಂತರ ಜನರಿಗೆ ನಾನು ದೀಕ್ಷೆಯನ್ನು ನೀಡಲಿದ್ದೇನೆ. ೧೯೫೬ರ ಅಕ್ಟೋಬರ್ ೧೪ ರಂದು ನಾಗಪುರದಲ್ಲಿ ನಡೆದಂತಹ ಮಹಾನ್ ಸಮಾರಂಭವನ್ನು ನಾನು ಬೊಂಬಾಯಿಯಲ್ಲಿ ಕೂಡ ಆಯೋಜಿಸಲಿದ್ದೇನೆ. ಇದರಲ್ಲಿ ಲಕ್ಷಾಂತರ ಜನರು ಬೌದ್ಧಮತಕ್ಕೆ ಮತಾಂತರಗೊಳ್ಳಲಿದ್ದಾರೆ. ಇಂತಹ ಸಮಾರಂಭಗಳು ಭಾರತದಾದ್ಯಂತ ಎಲ್ಲಾ ಪ್ರಮುಖ ನಗರಗಳಲ್ಲಿಯೂ ಆಯೋಜಿಸಲಾಗುವುದು.

"ಕೇವಲ ಅಸ್ಪೃಶ್ಯರು ಮಾತ್ರವಲ್ಲ, ಜಾತಿ, ಧರ್ಮದ ಭೇದವಿಲ್ಲದೇ ಬುದ್ಧನ ಬೋಧನೆಗಳಲ್ಲಿ ನಂಬಿಕೆ ಇರುವ ಎಲ್ಲರೂ ಬೌದ್ಧ ಮತವನ್ನು ಆಲಿಂಗಿಸಿಕೊಳ್ಳಬೇಕು ಹಾಗು ದೀಕ್ಷೆಯಲ್ಲಿ ಭಾಗವಹಿಸಬೇಕು."

ಅವರು ಈ ಸಂವಾದ ಕೈಗೊಂಡ ಸಂದರ್ಭದಲ್ಲಿ ಅಲ್ಲಿ ಹಾಜರಿದ್ದ ಜನರೆದುರು ಒಂದು ವಿಷಯವನ್ನು ಸ್ಪಷ್ಟವಾಗಿ ಅಂಬೇಡ್ಕರ್ ಹೇಳಿದರು "ಬುದ್ಧನನ್ನು ವಿಷ್ಣುವಿನ ಅವತಾರ ಎಂದು ಭಾವಿಸಬಾರದು. ಇದು ತಪ್ಪು ಮತ್ತು ಕುಚೇಷ್ಟೆಯಾಗುತ್ತದೆ" ಎಂದರು. ಈ ರೀತಿಯ ದ್ವಿಮುಖ ಪ್ರಚಾರ ಕೈಗೊಳ್ಳುವರು ಬೇರೆ ಯಾರು ಅಲ್ಲ ಬ್ರಾಹ್ಮಣರು ಮಾತ್ರ. ಅವರ ಏಕೈಕ ಧ್ಯೇಯ ಎಂದರೆ ಸಮಾಜದಲ್ಲಿ ಅಸಮಾನತೆಯನ್ನು ಉಂಟು ಮಾಡುವುದು, ಪರಸ್ಪರ ದ್ವೇಷ ಹುಟ್ಟುಹಾಕುವುದು ಹಾಗು ತಮ್ಮ ಜಾತಿಯನ್ನು ಮಾತ್ರವೇ ಮೇಲ್ಜಾತಿ ಎಂದು ಪ್ರಚಾರ ಮಾಡುವುದು. ಈ ಕೆಟ್ಟ ಸಂಪ್ರದಾಯವನ್ನು ತೊಡೆದು ಹಾಕಲು ನಾನು ಜೀವನ ಪರ್ಯಂತ ಹೋರಾಡಿದ್ದೇನೆ. ಆದರೆ ನೈಜ ಸಂಗತಿ ಎಂದರೆ ಭಾರತದಲ್ಲಿ ಬೌದ್ಧ ಮತ ಸಂಸ್ಥಾಪನೆಯ ಕಾರ್ಯವನ್ನು ನಾನು ತಡವಾಗಿ ಆರಂಭಿಸಿದ್ದೇನೆ ಎಂಬ ತಪ್ಪಿತಸ್ಥ ಭಾವ ನನ್ನನ್ನು ಕಾಡುತ್ತಿದೆ. ಆದರೆ ಈಗಲೂ ನಾನು ನನ್ನ ಭರವಸೆಯನ್ನು ಬಿಟ್ಟಿಲ್ಲ. ನನ್ನ ಜನರು ತಮ್ಮ ಸ್ವಂತ ಸೌಕರ್ಯಗಳನ್ನು ಮರೆತು, ನನ್ನೊಂದಿಗೆ ಯಾವುದೇ ಸ್ವಹಿತದ ಚಿಂತನೆಯಿಲ್ಲದೇ ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರು ಬೌದ್ಧಧರ್ಮವನ್ನು ಭಾರತದಾದ್ಯಂತ ಯಶಸ್ವಿಯಾಗಿ ಪ್ರಚಾರ ಮಾಡುತ್ತಾರೆ ಎಂಬ ನಂಬಿಕೆ ನನಗಿದೆ.

* * * *

# VI

# ಲೇಖನಗಳು, ಸಂದೇಶಗಳು, ಮುನ್ನುಡಿಗಳು

# ೧. ಧರ್ಮ ಮತ್ತು ಪುರೋಹಿತವರ್ಗಗಳ ನಿಯಂತ್ರಣ

**ಡಾ. ಬಿ.ಆರ್. ಅಂಬೇಡ್ಕರ್, ಎಂ.ಎ.,ಪಿಎಚ್.ಡಿ., ಡಿ.ಎಸ್ಸಿ, ಬಾರ್–ಅಟ್–ಲಾ., ಎಂ.ಎಲ್.ಸಿ.**

ಪುರೋಹಿತಿಕೆಯೇ ತಮ್ಮ ಸಮಾಜದಲ್ಲಿ ಒಂದು ಜಾತಿಯಾಗಿರುವುದನ್ನು ನಿರ್ಮೂಲನಗೊಳಿಸುವ ಮುಖ್ಯ ಉದ್ದೇಶದಿಂದ ಬಾಂಬೆಯಲ್ಲಿರುವ ಕೆಲವು ಪಾರ್ಸಿಗಳು ಒಂದು ಸಂಘವನ್ನು ಹುಟ್ಟುಹಾಕಲು ಉದ್ಯುಕ್ತರಾಗಿರುವ ವಿಷಯದ ಬಗೆ ನಾನು ಬೆಳಗಾಮ್‌ನಲ್ಲಿದ್ದಾಗ ಕೇಳಿದೆ. ಇಂತಹ ಒಂದು ಸಂಘದ ಉದ್ದೇಶವನ್ನು ಉತ್ಸಾಹದಿಂದ ಸ್ವಾಗತಿಸುವ ರೀತಿಯನ್ನು ಭಾರತದ ವಿದ್ಯಾವಂತ ಯುವಕರಿಗೆ ತಿಳಿಹೇಳಬೇಕಾಗಿದೆ. ಪಾರ್ಸಿ ಮೊಬೆಡ್ಸ್‌ಗಳ (ಪುರೋಹಿತರ) ಆಚಾರಗಳನ್ನು ನಾನು ಇಲ್ಲಿ ಚರ್ಚಿಸಬೇಕಾದ ಅಗತ್ಯವಿಲ್ಲ. ಆದರೆ, ಪಾರ್ಸಿ ಸಮುದಾಯದ ಸಾಮಾನ್ಯ ಪುರೋಹಿತನೊಬ್ಬನಿಗಿಂತ ಹಿಂದು ಪುರೋಹಿತ ವರ್ಗಗಳು ನೈತಿಕವಾಗಿ, ಶೈಕ್ಷಣಿಕವಾಗಿ ಅಥವಾ ಇನ್ನಾವುದೇ ವಿಧದಲ್ಲಿಯೂ ಉತ್ತಮವಾಗಿಲ್ಲ ಎಂಬ ಬಗೆಗೆ ನನ್ನ ಪಾರ್ಸಿ ಮಿತ್ರರು ಸಮಾಧಾನಪಟ್ಟುಕೊಳ್ಳಬಹುದು.

## ಹಾದಿಯಲ್ಲಿನ ಮುಳ್ಳು

ಹಿಂದು ಆನುವಂಶಿಕ ಪುರೋಹಿತರ ವಿರುದ್ಧವಿರುವ ಆಪಾದನೆಗಳು ಅನೇಕ ಮತ್ತು ಅವುಗಳು ಗಾಬರಿಯನ್ನು ಹುಟ್ಟಿಸುವಂತಹವು. ಪುರೋಹಿತನು ನಮ್ಮ ಸಂಸ್ಕೃತಿಯ ಅಭಿವೃದ್ಧಿಯ ಹಾದಿಯಲ್ಲಿರುವ ಮುಳ್ಳು. ಮನುಷ್ಯ ಹುಟ್ಟುತ್ತಾನೆ, ವಿವಾಹವಾಗುತ್ತಾನೆ, ತಂದೆಯಾಗಿ ಕುಟುಂಬದ ಯಜಮಾನನಾಗುತ್ತಾನೆ ಮತ್ತು ಕಾಲಕ್ರಮದಲ್ಲಿ ಸಾಯುತ್ತಾನೆ. ಈ ಎಲ್ಲಾ ಅವಧಿಯಲ್ಲಿಯೂ ಅವನ ಮೇಲೆ ಪುರೋಹಿತನೆಂಬ ದೌರ್ಭಾಗ್ಯದೇವತೆಯ ಕರಾಳ ನೆರಳು ಬಿದ್ದಿರುತ್ತದೆ. ಅವನು ತಾನೇ ರೂಪಿಸಿದ ಶಾಸ್ತ್ರ ಮತ್ತು ಸ್ಮೃತಿಗಳ ಆಧಾರದ ಮೇಲೆ ವಿಧಿಸುವ ಕಠೋರ ನಿಯಮಗಳನ್ನು ಉಲ್ಲಂಘಿಸಿದರೆ ಘೋರ ಪರಿಣಾಮಗಳುಂಟಾಗುತ್ತವೆ. ಇದನ್ನು ಸಹಿಸುವುದು ಶೇ. ೯೯ ಮಂದಿಗೆ ಸಾಧ್ಯವಾಗುವುದಿಲ್ಲ. ಜಾತಿಯಿಂದ ಅಥವಾ ಸಮಾಜದಿಂದ ಬಹಿಷ್ಕರಿಸುವುದು ಆ ಸೈತಾನನೇ ಕಂಡುಕೊಂಡಿರುವ ಅಸ್ತ್ರ. ಈ ಅಸ್ತ್ರವನ್ನು ಅವನು ನಿರ್ದಯವಾಗಿ, ನಿರ್ದಾಕ್ಷಿಣ್ಯವಾಗಿ ಮತ್ತು ನಿಷ್ಠುರವಾದ ಹುರುಪಿನಿಂದ ಪ್ರಯೋಗಿಸುತ್ತಾನೆ. ಪೌರೋಹಿತ್ಯವನ್ನು ನಡೆಸುವ ಬ್ರಾಹ್ಮಣ ನಿಜವಾಗಿಯೂ ಮಾನವಜನಾಂಗದಲ್ಲಿನ ಕ್ಷುದ್ರತೆಯ ಮಾದರಿ. ಇದನ್ನು ನಾವು ಅರಿತಿರುವಷ್ಟೇ ಚೆನ್ನಾಗಿ ಅವನೂ ಅರಿತಿದ್ದಾನೆ. ಕಾಣದ ಶಕ್ತಿ ಮತ್ತು ಅಸಹಾಯಕ ಮನುಷ್ಯನ ನಡುವಿನ ಮಧ್ಯವರ್ತಿಯಾಗಿ ನಾಚಿಕೆಗೇಡಿವೃತ್ತಿಯನ್ನು ಅವನು ಅನುಸರಿಸುತ್ತಾನೆ. ಈತನು ಧರ್ಮವಿದೂರನಾದ ದುರಾಚಾರಿಯೇ ಎಂದು ತತ್ತ್ವಶಾಸ್ತ್ರಜ್ಞರು ಕೇಳಬಹುದು. ಈ ಪ್ರಶ್ನೆಗೆ ಉತ್ತರವೇನೇ ಇರಲಿ, ಇಂತಹ ಪರಾವಲಂಬೀ ಜೀವನ ಮತ್ತು ಸಮಾಜದ ಜೀವಾಳವನ್ನೇ ನುಂಗಿಹಾಕುವ ವೃತ್ತಿಯು ಅನಿರ್ಬಾಧಿತವಾಗಿ, ಅನಿಯಂತ್ರಿತವಾಗಿ ಮುಂದುವರೆಯುವುದಕ್ಕೆ ಅವಕಾಶಕೊಡಬಾರದು. ಆಂಗ್ಲರ ಸುಧಾರಣೆಯನ್ನು ನಾವು ಭಾರತದಲ್ಲಿ ಮೇಲ್ಪಂಕ್ತಿಯನ್ನಾಗಿ ಇಟ್ಟುಕೊಂಡು ಧರ್ಮ ಮತ್ತು ಪುರೋಹಿತವರ್ಗವನ್ನು ಮಿತಿಯಲ್ಲಿಡಬಹುದು ಮತ್ತು ಆ ಕೂಟದ ಉಚ್ಛೃಂಖಲ ಪ್ರವೃತ್ತಿಗೆ ತಡೆಯನ್ನೊಡ್ಡಬಹುದು.

## ಉದಾತ್ತ ಕ್ರಮ

ಈಗ ಜನಸಾಮಾನ್ಯರಲ್ಲಿರುವ ಮೂಢ ಆಚರಣೆಗಳ ವಿರುದ್ಧ ಪರಿಣಾಮಕಾರಿ ಕಾನೂನನ್ನು ಜಾರಿಗೆ ತರುವುದು ಅತ್ಯಂತ ಅಗತ್ಯವಾಗಿದೆ. ಇದರಲ್ಲೆಲ್ಲಾ ಅವರಿಗೆ ಪುರೋಹಿತನು ಬೆಂಬಲವಾಗಿ ನಿಂತಿರುತ್ತಾನೆ. ದೇವ–ದೇವಿಯರಿಗೆ ಅರ್ಪಣೆ ಮಾಡುವಲ್ಲಿ ನಡೆಯುವ ಅಪವ್ಯಯದಲ್ಲಿ, ಹುಟ್ಟು, ಸಾವು, ವಿವಾಹಗಳ ಸಂದರ್ಭದಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳಲ್ಲಿ, ಅರ್ಥರಹಿತ ಜಾತೀಯ ಔತಣಕೂಟಗಳಲ್ಲಿ ಹಾಗೂ ಇನ್ನೂ ಹಲವಾರು ಸನ್ನಿವೇಶಗಳಲ್ಲಿ ಪುರೋಹಿತನಿಗೆ ಸುಗ್ಗಿಯ ಪರಮಾನಂದ. ಹರ್ಷವನ್ನು ಹಂಚಿಕೊಳ್ಳುವ ವಿವಾಹದಂತಹ ಸಂದರ್ಭವಾಗಿರಬಹುದು, ಮರಣವು ತಂದ ದುಃಖದ ಸನ್ನಿವೇಶವಾಗಿರಬಹುದು, ನಮ್ಮ ಪಾರ್ಸಿ ಮಿತ್ರರೊಬ್ಬರು ಹೇಳಿದ ಹಾಗೆ, ಬಹಳಷ್ಟು ಪುರೋಹಿತರು ಜನತೆಯನ್ನು ಬಲಿಪಶುವನ್ನಾಗಿಸಿ ಅವರನ್ನು ಸುಲಿಯುವ ಪ್ರಾರ್ಥನೆಯನ್ನು ಮಾಡುತ್ತಿರುತ್ತಾರೆ. ಪುರೋಹಿತವರ್ಗದ ಅನಿಷ್ಟಗಳ ಪಟ್ಟಿಯು ನಿಜಕ್ಕೂ ದಿಗಿಲನ್ನು ಹುಟ್ಟುಸಿವಂತಿದೆ ಎಂದು ನಾನು ಹೇಳುತ್ತೇನೆ. ಅಂತಿಮವಾಗಿ ಇದರ ನಿವಾರಣೆಯನ್ನು ನಾವು ಆದರ್ಶವಾಗಿಟ್ಟುಕೊಳ್ಳಬೇಕಾಗಿದ್ದರೂ, ನ್ಯಾಯಯುತವಾದ ಈ ಕಾರ್ಯಾಚರಣೆಯನ್ನು ಆತುರದಲ್ಲಿ ಆರಂಭಿಸುವಹಾಗಿಲ್ಲ. ಪಾರ್ಸಿ ಜನಾಂಗದ ಕೆಲವು ಪ್ರಮುಖರು ಯೋಜಿಸಿರುವ ಈ ಪ್ರಯತ್ನವನ್ನು ನಾನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಪಾರ್ಸಿ ಸಮುದಾಯವು ಎಷ್ಟರ ಮಟ್ಟಿಗೆ ಪುರೋಹಿತಶಾಹಿಯ ತೆಕ್ಕೆಯಲ್ಲಿ ಸಿಕ್ಕಿಕೊಂಡಿದೆ ಎಂಬುದು ವಿಸ್ಮಯಕಾರಿಯಾಗಿದೆ. ಕೆಲವು ಪಾರ್ಸಿ ಮಿತ್ರರು ಲೆಕ್ಕಹಾಕಿರುವಂತೆ, ಒಂದು ಬಡ ಪಾರ್ಸಿ ಕುಟುಂಬದ ಸದಸ್ಯರೊಬ್ಬರು ಮರಣಹೊಂದಿದರೆ, ಮೊದಲ ವರ್ಷದಲ್ಲಿ ಆತನಿಗಾಗಿ ಮಾಡುವ ಖರ್ಚು ಒಬ್ಬನ ಒಂದು ವರ್ಷದ ಜೀವನದ ಖರ್ಚಿಗಿಂತ ಹಲವು ಪಟ್ಟು ಹೆಚ್ಚಾಗಿರುತ್ತದೆ. ಬದುಕಿದ್ದಾಗ ಒಂದು ಅಲ್ಯೂಮಿನಿಯಂ ಲೋಟವನ್ನು ಕೊಂಡುಕೊಳ್ಳಲೂ ಶಕ್ತನಲ್ಲದ ಪಾರ್ಸಿಯೊಬ್ಬ ಮೃತನಾದಾಗ, ಅವನ ಉತ್ತರಕ್ರಿಯೆಯ ಸಂದರ್ಭದಲ್ಲಿ ಬೆಳ್ಳಿಯ ಪಾನಪಾತ್ರೆಯೊಂದನ್ನು ಬಳಸಬೇಕೆಂದು ಪುರೋಹಿತನು ಆಗ್ರಹಮಾಡಿದನೆಂದು ಪಾರ್ಸಿ ವೃತ್ತಪತ್ರಿಕೆಯೊಂದು ಇತ್ತೀಚೆಗೆ ವರದಿಮಾಡಿತ್ತು. ನಾನು ಇದನ್ನು ಉದ್ಧರಿಸುತ್ತಿರುವ ಉದ್ದೇಶ ತಮ್ಮ ವ್ಯಾವಹಾರಿಕ ವಿವೇಕಕ್ಕೆ ಹೆಸರಾಗಿರುವ ಪಾರ್ಸಿಜನಾಂಗದವರು ಭಾರತದಿಂದ ಪುರೋಹಿತವರ್ಗದ ಈ ಅನಿಷ್ಟ ಪದ್ಧತಿಯನ್ನು ಬೇರುಸಹಿತ ಕಿತ್ತುಹಾಕಲು ಈ ಉದ್ದೇಶಿಸಿರುವ ಕ್ರಮವು ಅತ್ಯಂತ ಸೂಕ್ತವಾಗಿದೆ ಎಂಬುದನ್ನು ಸೂಚಿಸುವುದು. ಈ ಪರಂಪರಾಗತ ಪದ್ಧತಿಯ ಹೊರೆಯನ್ನು ನಿಭಾಯಿಸುವುದರಲ್ಲಿ ಪಾರ್ಸಿ ಸಮುದಾಯದವರಿಗಿಂತ ನಿರ್ಬಲರಾಗಿರುವ ಹಿಂದು, ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಧರ್ಮದ ವಿವೇಕಯುತ ಜನರು ಪಾರ್ಸಿ ಜನರು ಕೈಗೊಂಡಿರುವ ಉದಾತ್ತವಾದ ಮತ್ತು ಶ್ಲಾಘ್ಯವಾದ ಈ ಕ್ರಮವನ್ನು ಅನುಸರಿಸುತ್ತಾರೆಂಬುದರಲ್ಲಿ ನನಗೆ ಸಂಶಯವಿಲ್ಲ.

* * * * *

---

ದ ಬಾಂಬೆ ಕ್ರಾನಿಕಲ್, ದಿನಾಂಕ: ನವೆಂಬರ್ ೮, ೧೯೨೯

# ೨. ಬಾಂಬೆ ಪ್ರಾಂತದಲ್ಲಿ ಕಾನೂನು ವಿದ್ಯಾಭ್ಯಾಸದ ಸುಧಾರಣೆಯ ಬಗ್ಗೆ ಕೆಲವು ಆಲೋಚನೆಗಳು

**ಡಾ. ಬಿ.ಆರ್. ಅಂಬೇಡ್ಕರ್, ಎಂ.ಎ.,ಪಿಎಚ್.ಡಿ., ಡಿ.ಎಸ್‌ಸಿ, ಬಾರ್–ಅಟ್–ಲಾ., ಎಂ.ಎಲ್.ಸಿ, ಪ್ರಾಚಾರ್ಯರು, ಸರಕಾರೀ ಕಾನೂನು ಕಾಲೇಜು, ಬಾಂಬೆ**

ಬಾಂಬೆ ಪ್ರಾಂತದಲ್ಲಿನ ವಕೀಲಿವೃತ್ತಿಯು ಹಲವು ವಿಧವಾದ ಘಟಕಗಳಿಂದ ಕೂಡಿದೆ. ಅವುಗಳ ಅಂತಸ್ತಿನಲ್ಲಿ ಮತ್ತು ಅವುಗಳ ತರಬೇತಿಯಲ್ಲಿ ವ್ಯತ್ಯಾಸಗಳಿವೆ. ಈ ಪ್ರಾಂತದಲ್ಲಿ ವಕೀಲಿವೃತ್ತಿಯನ್ನು ಅನುಸರಿಸುತ್ತಿವವರಲ್ಲಿ ಆರು ವರ್ಗಗಳು ಇವೆ. ಅವೆಂದರೆ (೧) ಬ್ಯಾರಿಸ್ಟರ್–ಅಟ್–ಲಾ, (೨) ಅಡ್ವೊಕೇಟ್ಸ್ (ಒರಿಜಿನಲ್ ಸೈಡ್–ಒ.ಎಸ್.), (೩) ಬಾಂಬೆ ವಿಶ್ವವಿದ್ಯಾನಿಲಯದ ಅಡ್ವೊಕೇಟ್ಸ್ (ಅಪೆಲೇಟ್ ಸೈಡ್ – ಎ.ಎಸ್), (೪) ವಕೀಲರ ಸಂಘದ ಅಡ್ವೊಕೇಟ್ಸ್ (ಎ.ಎಸ್.), (೫) ಸಾಲಿಸಿಟರ್ಸ್ ಮತ್ತು (೬) ಬಾಂಬೆ ಪ್ರಾಂತದ ನ್ಯಾಯಾಲಯಗಳ ನ್ಯಾಯಾಲಯಗಳಲ್ಲಿ ಮೊಕದ್ದಮೆಯನ್ನು ನಡೆಸಲು ಅರ್ಹತೆಯುಳ್ಳ ಮುಕ್ತ್ಯಾರ್‌ಗಳು. ಈ ಆರು ವರ್ಗಗಳ ವಕೀಲರಿಗೆ ಅಗತ್ಯವಾಗಿರುವ ತರಬೇತಿಯಲ್ಲಿ ಸಾಕಷ್ಟು ಅಂತರಗಳಿವೆ. ಬ್ಯಾರಿಸ್ಟರ್‌ಗಾಗಿ ನೀಡುವ ತರಬೇತಿಯು ಮೂರುವರ್ಷಗಳದ್ದಾಗಿದ್ದು, ಮತ್ತೊಂದು ವರ್ಷ ಅವರು ಛೇಂಬರ್‌ನಲ್ಲಿ ತರಬೇತಿಯನ್ನು ಪಡೆಯಬೇಕು. ಬಾಂಬೆ ವಿಶ್ವವಿದ್ಯಾನಿಲಯದ ಅಡ್ವೊಕೇಟ್ (ಎ.ಎಸ್) ಆ ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಪಡೆದಿದ್ದು ಮಾನ್ಯತೆ ಪಡೆದಿರುವ ಸಂಸ್ಥೆಯಲ್ಲಿ ಎರಡು ವರ್ಷಗಳವರೆಗೆ ತರಬೇತಿಯನ್ನು ಪಡೆಯುವುದು ಕಡ್ಡಾಯ. ಹೀಗಾಗಿ, ಆತ ತನ್ನ ವೃತ್ತಿಯನ್ನು ಪ್ರಾರಂಭಿಸುವಷ್ಟರಲ್ಲಿ ಮೆಟ್ರಿಕ್ಯುಲೇಷನ್ ನಂತರ ಆರು ವರ್ಷಗಳನ್ನು ತರಬೇತಿಯಲ್ಲಿ ಕಳೆದಿರುತ್ತಾನೆ. ಈತನ ಹಾಗಲ್ಲದೆ, ವಕೀಲರ ಸಂಘದ ಅಡ್ವೊಕೇಟ್ (ಎ.ಎಸ್.) ಕೇವಲ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು, ಆತನಿಗೆ ಮಾನ್ಯತೆಪಡೆದಿರುವ ಯಾವುದೇ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆಯಬೇಕಾದ ಆವಶ್ಯಕತೆಯಿರುವುದಿಲ್ಲ. ತನ್ಮಧ್ಯೆ ಯಾವ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಬೇಕಾದ ಅಗತ್ಯವಿಲ್ಲದ ಆತ ವಕೀಲರ ಸಂಘದ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹನಾಗಿರುತ್ತಾನೆ. ಅಡ್ವೊಕೇಟ್ (ಎ.ಎಸ್)ನ ಹಾಗೆಯೇ, ಅಡ್ವೊಕೇಟ್ (ಒ.ಎಸ್.) ಕೂಡ ಎಲ್.ಎಲ್.ಬಿ ಪದವೀಧರನಾಗಿದ್ದು ಆತ ಒಟ್ಟು ಐದು ವರ್ಷಗಳ ತರಬೇತಿಯನ್ನು ಪಡೆದಿರುತ್ತಾನೆ. ಎಲ್.ಎಲ್.ಬಿ ತೇರ್ಗಡೆಯಾಗಿ ಎರಡು ವರ್ಷಗಳ ನಂತರ ಆತ ಅಡ್ವೊಕೇಟ್ (ಒ.ಎಸ್.) ಪರೀಕ್ಷೆಯನ್ನು ತೆಗೆದುಕೊಳ್ಳುತ್ತಾನೆ. ಇಷ್ಟಾದನಂತರವೂ ಹಿರಿಯ ವೃತ್ತಿನಿರತರ ಬಳಿಯಲ್ಲಿ ಒಂದುವರ್ಷದ ವರೆಗೆ ಅಭ್ಯಾಸಮಾಡುವವರೆಗೆ ಆತ ತನ್ನ ವೃತ್ತಿಯನ್ನು ಪ್ರಾರಂಭಿಸಲು ಅರ್ಹನಾಗಿರುವುದಿಲ್ಲ. ಅಂದರೆ ಮೆಟ್ರಿಕ್ಯುಲೇಷನ್ ನಂತರ ಆತ ಒಟ್ಟು ಒಂಬತ್ತು ವರ್ಷಗಳನ್ನು ಕಳೆಯಬೇಕು. ಸಾಲಿಸಿಟರ್ಸ್ ಕಂಪನಿಯ ಆರ್ಟಿಕಲ್ಸಿಗೆ ಸಹಿಹಾಕುವ ಮೊದಲು ಸಾಲಿಸಿಟರ್ ಬಿ.ಎ. ಅಥವಾ ಎಲ್.ಎಲ್.ಬಿ ಪದವಿಯನ್ನು ಪಡೆದಿರಬೇಕು. ಹಾಗೆ ಸಹಿಹಾಕಿದ ಮೂರು ವರ್ಷಗಳ ನಂತರ ಆತ ಸಾಲಿಸಿಟರ್ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಆತ ಬಿ.ಎ. ಪದವೀಧರನಾಗಿದ್ದರೆ ಆತನ ತರಬೇತಿ ಏಳುವರ್ಷದ ಅವಧಿಯದಾಗಿದ್ದರೆ, ಎಲ್.ಎಲ್.ಬಿ ಪದವೀಧರನ ಪಾಲಿಗೆ ಈ ಅವಧಿ ಒಂಬತ್ತು ವರ್ಷಗಳದ್ದಾಗಿರುತ್ತದೆ.

ಈ ಶ್ರೇಣಿಯಲ್ಲಿ ಮುಕ್ತ್ಯಾರ್ ಅತ್ಯಂತ ಕೆಳಹಂತದಲ್ಲಿರುತ್ತಾನೆ. ಅವನು ಕಾನೂನಿನಲ್ಲಿ ಯಾವುದೇ ತರಬೇತಿಯನ್ನು ಪಡೆದಿರಬೇಕಿಲ್ಲ ಮತ್ತು ಯಾವುದೇ ಅರ್ಹತಾ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಬೇಕಾಗಿಲ್ಲ. ಬೇರೆ ಎರಡು ಸನ್ನಿವೇಶಗಳು ಈ ಪರಿಸ್ಥಿತಿಯನ್ನು ಇನ್ನೂ ಸಂಕೀರ್ಣಗೊಳಿಸುತ್ತವೆ. ಮೊದಲನೆಯದು, ವಿವಿಧ ಕಾನೂನು ಪರೀಕ್ಷೆಗಳನ್ನು ಬೇರೆ ಬೇರೆ ಮಂಡಲಿಯವರು ನಡೆಸುತ್ತಾರೆ. ಅಡ್ವೊಕೇಟ್ (ಎ.ಎಸ್.)ನ ಎರಡು ವರ್ಗಗಳವರ ಪರೀಕ್ಷೆಗಳನ್ನು ನಡೆಸುವ ಅಧಿಕಾರ ಎರಡು ಪ್ರತ್ಯೇಕ ಮಂಡಲಿಗಳದ್ದಾಗಿದೆ. ಇವುಗಳಲ್ಲಿ ಒಂದು ಬಾಂಬೆ ವಿಶ್ವವಿದ್ಯಾನಿಲಯವಾದರೆ, ಇನ್ನೊಂದು ವಕೀಲರ ಸಂಘ. ಉಚ್ಚನ್ಯಾಯಾಲಯವು ಅಡ್ವೊಕೇಟ್ (ಒ.ಎಸ್.) ಹಾಗೂ ಸಾಲಿಸಿಟರ್ಸ್‌ಗಳ ಪರೀಕ್ಷೆಯನ್ನು ನಡೆಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪರೀಕ್ಷೆಗಳನ್ನು ನಡೆಸುವ ಈ ಸಂಸ್ಥೆಗಳಲ್ಲಿ ಯಾವುದೂ ಕಾನೂನನ್ನು ಕಲಿಸುವ ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಪರಿಸ್ಥಿತಿಯನ್ನು ಸಂಕೀರ್ಣಗೊಳಿಸುವ ಎರಡನೆಯ ಸನ್ನಿವೇಶವೆಂದರೆ, ಬಾಂಬೆ ಪ್ರಾಂತದಲ್ಲಿ ಈ ವೃತ್ತಿಯನ್ನು ಅನುಸರಿಸುತ್ತಿರುವವರ ಸ್ಥಾನಮಾನಗಳಲ್ಲಿರುವ ಅಂತರ. ಅಡ್ವೊಕೇಟ್ಸ್ ಮತ್ತು ಬ್ಯಾರಿಸ್ಟರ್‌ಗಳಿಗೆ ಈ ಕ್ಷೇತ್ರ ಸಂಪೂರ್ಣವಾಗಿ ಮುಕ್ತವಾಗಿದೆ. ಯಾವುದೇ ನ್ಯಾಯಾಲಯದಲ್ಲಿ ಅವರು ವಾದಿಸಬಹುದು ಮತ್ತು ಉಚ್ಚನ್ಯಾಯಾಲದ ಎರಡೂ ಪಕ್ಷಗಳ ವಾದವನ್ನು ಮಂಡಿಸಬಹುದು. ಆದರೆ ಕೆಲವೊಂದು ವಿಷಯಗಳಲ್ಲಿ ಅವರು ಮುಂದುವರೆಯುವಂತಿಲ್ಲ. ಉಚ್ಚನ್ಯಾಯಾಲಯದಲ್ಲಿ ಅಪೆಲೇಟ್ ಪಕ್ಷಕ್ಕೆ ಮಾತ್ರ ಅಡ್ವೊಕೇಟ್ (ಎ.ಎಸ್.) ಸೀಮಿತವಾಗಿರಬೇಕು. ಅತ ವಾದಗಳನ್ನು ಮಂಡಿಸಬಹುದು. ಅದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲೂ ಆತ ಸ್ವತಂತ್ರನಾಗಿರುತ್ತಾನೆ. ತನ್ನ ವೃತ್ತಿಯನ್ನು ಸಾಲಿಸಿಟರ್ ಎಲ್ಲಿ ಬೇಕಾದರೂ ನಡೆಸಬಹುದು ಮತ್ತು ಉಚ್ಚನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಆತ ಒರಿಜಿನಲ್ ಪಕ್ಷದ ಪರವಾಗಿ ಕೆಲಸಮಾಡಬಹುದಾದರೂ, ಅಪೆಲೇಟ್ ಪಕ್ಷದ ಪರವಾಗಿಯೂ ಆತ ತನ್ನ ಕೆಲಸವನ್ನು ಮಾಡಬಹುದು, ಜೊತೆಗೆ ವಾದಿಸಲೂ ಬಹುದು.

ವಿದ್ಯಾರ್ಹತೆಯಲ್ಲಿ, ಪರೀಕ್ಷೆಗಳ ವಿಷಯದಲ್ಲಿ ಮತ್ತು ಒಂದೇ ವೃತ್ತಿಯನ್ನು ಅನುಸರಿಸುತ್ತಿರುವವರ ಸ್ಥಾನಮಾನದಲ್ಲಿರುವ ಅಂತರದಲ್ಲಿ ಇಷ್ಟೊಂದು ವ್ಯತ್ಯಾಸಗಳು ಇರುವುದು ದುರದೃಷ್ಟಕರ. ಇದನ್ನು ಅತೃಪ್ತಿಕರವೆಂದು, ಅಥವಾ ಇನ್ನೂ ಮುಂದೆ ಹೋಗಿ, ನಿಂದನೀಯವೆಂದು ಹೇಳಬಹುದಾದರೂ ಇದು ಸಮಸ್ಯಾತ್ಮಕವಾಗಿದೆಯೆಂದು ಹೇಳಬೇಕೆಂದು ನನಗೆ ಅನ್ನಿಸುವುದಿಲ್ಲ. ವ್ಯವಸ್ಥೆಯು ಕೆಡುಕನ್ನುಂಟುಮಾಡುವಷ್ಟು ಸಂಕೀರ್ಣವಾಗಿದೆ ಅಥವಾ ಅತಾರ್ಕಿಕವಾಗಿದೆಯೆಂದು ಪರಿಗಣಿಸುವುದರಲ್ಲಿ ನನಗೆ ನಂಬಿಕೆಯಿಲ್ಲ. ವಿದ್ಯಾಭ್ಯಾಸದ ಇತರ ವಿಭಾಗಗಳಲ್ಲಿಯೂ ಇಂತಹ ಅಸಂಗತತೆಗಳು ಇವೆ. ಉದಾಹರಣೆಗಾಗಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್‌ಗಳನ್ನೇ ತೆಗೆದುಕೊಳ್ಳೋಣ. ಬಾಂಬೆ ವಿಶ್ವವಿದ್ಯಾನಿಲಯವು ವೈದ್ಯಕೀಯ ಕೋರ್ಸೊಂದನ್ನು ನಡೆಸುತ್ತಿದೆ. ಅದರಲ್ಲಿ ತೇರ್ಗಡೆಯಾದ ವ್ಯಕ್ತಿಯು ಎಂ.ಬಿ.ಬಿ.ಎಸ್. ಪದವಿಗೆ ಅರ್ಹನಾಗುತ್ತಾನೆ. ಇದಕ್ಕೆ ಸಮಾನಾಂತರವಾಗಿ ಸರಕಾರವು ಎಲ್.ಸಿ.ಪಿ.ಎಸ್. ಕೋರ್ಸನ್ನು ನಡೆಸುತ್ತಿದೆ. ಇದನ್ನು ಪೂರ್ಣಗೊಳಿಸಿದ ವ್ಯಕ್ತಿ ಡಿಪ್ಲೊಮಾವನ್ನು ಪಡೆಯುತ್ತಾನೆ. ಹಾಗೆಯೇ ಬಾಂಬೆ ವಿಶ್ವವಿದ್ಯಾನಿಲಯವು ಇಂಜನಿಯರಿಂಗ್ ಕೋರ್ಸನ್ನು ನಡೆಸುತ್ತಿದೆ ಮತ್ತು ಅದರಲ್ಲಿ ಯಶಸ್ವಿಯಾದವರಿಗೆ ಬಿ.ಇ. ಪದವಿಯು ದೊರೆಯುತ್ತದೆ. ವಿಕ್ಟೋರಿಯ ಜ್ಯುಬಿಲಿ ತಾಂತ್ರಿಕ ಸಂಸ್ಥೆಯವರು ನಡೆಸುವ ಕೋರ್ಸಿನಲ್ಲಿ ತೇಗಡೆಯಾದ ವಿದ್ಯಾರ್ಥಿ ಡಿಪ್ಲೊಮಾವನ್ನು ಪಡೆಯುತ್ತಾನೆ. ವಿಶ್ವವಿದ್ಯಾನಿಲಯದ ವೈದ್ಯಕೀಯ ಅಥವಾ ಇಂಜನಿಯರಿಂಗ್ ಪದವಿಯನ್ನು ಪಡೆದವರೂ ಮತ್ತು ಡಿಪ್ಲೊಮಾವನ್ನು ಪಡೆದವರೂ ವೃತ್ತಿನಿರತರಾಗಿ ಸರಕಾರೀ ಕ್ಷೇತ್ರದಲ್ಲಾಗಲೀ, ಅದರ ಹೊರಗಡೆಯಲ್ಲಾಗಲೀ ಉದ್ಯೋಗಾವಕಾಶವನ್ನು ಪಡೆಯಬಹುದು. ಇವರಲ್ಲಿ ಪ್ರತಿಯೊಬ್ಬರೂ

ತಮ್ಮ ತಮ್ಮ ವಿದ್ಯಾಭ್ಯಾಸ, ತರಬೇತಿಗಳಿಗನುಸಾರವಾಗಿ ಉದ್ಯೋಗಗಳನ್ನು ಪಡೆಯುವುದರಿಂದ ಇದರ ಬಗ್ಗೆ ಯಾರೂ ಆಕ್ಷೇಪಿಸುವುದಿಲ್ಲ. ವಕೀಲಿವೃತ್ತಿಯು ನಡೆಯುತ್ತಿರುವ ರೀತಿಯನ್ನು ಗಮನಿಸಿದರೆ ಅಲ್ಲಿ ನಡೆಯುತ್ತಿರುವುದು ಇದಕ್ಕಿಂತ ಭಿನ್ನವಲ್ಲವೆಂದು ಯಾರಾದರೂ ಕಾಣಬಹುದು. ಮುಕ್ತ್ಯಾರುಗಳು ಅತ್ಯಂತ ಕೆಳಹಂತದ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಮಾತ್ರ ಕೆಲಸಮಾಡುತ್ತಿದ್ದು ಸಣ್ಣಪುಟ್ಟ ಪ್ರಕರಣಗಳನ್ನು ಕೈಗೆತ್ತಿಕೊಳ್ಳುತ್ತಾರೆ. ಹಲವಾರು ವೃತ್ತಿನಿರತರಿಗೆ ಕಣ್ಕಿಸುರಾಗಿರುವ ಅಡ್ವೋಕೇಟ್ (ಎ.ಎಸ್.)ಗಳು ತಾಲ್ಲೂಕು ಹಂತದ ಅಧೀನ ನ್ಯಾಯಾಲಯ ಮತ್ತು ಅಧೀನ ದಂಡಾಧಿಕಾರಿಗಳ ನ್ಯಾಯಾಲಯಗಳಲ್ಲಿ ತಮ್ಮ ವೃತ್ತಿಯನ್ನು ನಡೆಸುತ್ತಾರೆ. ವಾಸ್ತವವಾಗಿ ಈ ವೃತ್ತಿಯು ಅನುಸರಿಸಲ್ಪಡುತ್ತಿರುವ ರೀತಿಯನ್ನು ನೋಡಿದಾಗ ಅದರಲ್ಲಿ ಯಾವುದಾದರೂ ಗಂಭೀರ ತಪ್ಪುಗಳಿದೆಯೆಂದು ಹೇಳಲಾಗುವುದಿಲ್ಲ. ಈ ವ್ಯವಸ್ಥೆ ಸಂಕೀರ್ಣವಾಗಿದೆ ಮತ್ತು ತಾರತಮ್ಯದಿಂದ ಕೂಡಿದೆ ಎನ್ನುವುದು ನಿಜ. ಆದರೆ, ಕೇವಲ ಸಂಕೀರ್ಣತೆ ಮತ್ತು ತರತಮಗಳಿಂದ ಕೂಡಿದ ಶ್ರೇಣೀಕರಣವಿದೆಯೆಂಬ ಕಾರಣದಿಂದಷ್ಟೆ ಇದು ಸಮಸ್ಯಾತ್ಮಕವಾಗಿದೆಯೆಂದು ಪರಿಗಣಿಸಲಾಗುವುದಿಲ್ಲ. ಕಾರಣ, ತಮ್ಮ ತಮ್ಮ ತರಬೇತಿಗಳಿಗನುಸಾರವಾದ ಸ್ಥಾನದಲ್ಲಿ ಪ್ರತಿಯೊಬ್ಬರೂ ಸಹಜವಾಗಿಯೇ ತಮ್ಮತಮ್ಮ ನೆಲೆಯನ್ನು ಕಂಡುಕೊಳ್ಳುತ್ತಾರೆ.

ಇಲ್ಲಿ ಸಮಸ್ಯೆಯೊಂದು ಇದೆಯೆಂದು ಭಾವಿಸಿ ನೋಡಿದಾಗ, ವಿಷಯದಲ್ಲಿರಬಹುದಾದ ಗೋಜಲನ್ನು ತಿಳಿಗೊಳಿಸಲು ಕೆಲವೊಂದು ವ್ಯತ್ಯಾಸಗಳನ್ನು ಅರಿಯುವುದು ಅಗತ್ಯ. ವಕೀಲಿವೃತ್ತಿಯನ್ನವಲಂಬಿಸುತ್ತಿರುವವರ ಸಂಖ್ಯೆ ಅತಿಯಾಗುತ್ತಿರುವುದರಿಂದ ಉಂಟಾಗುತ್ತಿರುವ ಸಮಸ್ಯೆಯನ್ನು ಕಾನೂನು ವಿದ್ಯಾಭ್ಯಾಸದ ಸಮಸ್ಯೆಯಿಂದ ಪ್ರತ್ಯೇಕಿಸಬೇಕು. ವಿದ್ಯಾಭ್ಯಾಸದ ದೃಷ್ಟಿಯಿಂದಲಾಗಲೀ, ಸಾಮಾಜಿಕ ನ್ಯಾಯದ ದೃಷ್ಟಿಯಿಂದಲಾಗಲೀ, ಈ ಕ್ಷೇತ್ರವನ್ನು ಕೆಲವರ ಸ್ವತ್ತನ್ನಾಗಿಸುವುದು ಅಸಮರ್ಥನೀಯವಾಗುತ್ತದೆ. ಸಮರ್ಥ ವಕೀಲರನ್ನು ತಯಾರಿಸಲು ಯಾವ ರೀತಿಯ ಕಾನೂನು ವಿದ್ಯಾಭ್ಯಾಸವನ್ನು ನೀಡಬೇಕು ಎನ್ನುವುದು ಶೈಕ್ಷಣಿಕ ಸಮಸ್ಯೆಯಾಗುತ್ತದೆ. ಈ ಸಮಸ್ಯೆಯನ್ನು ಬಿಡಿಸುವುದು ಶಿಕ್ಷಣತಜ್ಞರ ಕರ್ತವ್ಯ. ಆದರೆ, ವಕೀಲಿವೃತ್ತಿಯನ್ನು ಹಿಡಿಯುವವರ ಸಂಖ್ಯೆಯು ಅತಿ ಹೆಚ್ಚಾಗಿ ಪರ್ಯಾಪ್ತ ಮಟ್ಟವನ್ನು ಮೀರಿದೆಯೇ ಎಂಬ ಪರಿಗಣನೆಯಿಂದ ಈ ಕರ್ತವ್ಯವು ಬಾಧಿತವಾಗಿರಬಾರದು. ನಾನು ಮತ್ತೊಂದು ವಿಷಯವನ್ನೂ ಪರಿಗಣಿಸಬೇಕು. ಅದೆಂದರೆ, ಕಾನೂನು ವಿದ್ಯಾಭ್ಯಾಸವನ್ನು ನೀಡುವ ಸಂಸ್ಥೆಯು ಪೂರ್ಣಕಾಲಿಕವಾಗಿ ಅಥವಾ ಅರೆಕಾಲಿಕವಾಗಿ ಈ ದಿಸೆಯಲ್ಲಿ ತೊಡಗಿಕೊಂಡಿರಬೇಕೇ ಎಂಬುದು. ಕಾನೂನು ಶಾಲೆ ಅಥವಾ ಕಾನೂನು ಕಾಲೇಜೊಂದು ಅರೆಕಾಲಿಕವಾಗಿ ತೊಡಗಿಕೊಂಡಿದ್ದರೂ, ಅದು ಸಾಕಷ್ಟು ಒಳ್ಳೆಯ ಕಾನೂನು ಶಿಕ್ಷಣವನ್ನು ನೀಡಬಹುದಾದ ವ್ಯವಸ್ಥೆಯನ್ನು ಯೋಜಿಸಿ ರೂಪಿಸುವುದು ಸಾಧ್ಯ.

ಪ್ರಾಥಮಿಕವಾಗಿ ಇಷ್ಟನ್ನು ಅವಲೋಕಿಸದ ನಂತರ, ಕಾನೂನು ಶಿಕ್ಷಣದ ಸುಧಾರಣೆಯ ಬಗ್ಗೆ ಮಾತನಾಡಬಹುದು. ನಮ್ಮ ಮುಂದಿನ ಅವಗಾಹನೆಗೆ ನಾಲ್ಕು ಪ್ರಶ್ನೆಗಳು ಇವೆ.

೧. ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸದ ಯಾವ ಹಂತದಲ್ಲಿ ಕಾನೂನನ್ನು ಅಭ್ಯಸಿಸಲು ತೊಡಗಲು ಅವಕಾಶ ನೀಡಬಹುದು?

೨. ಕಾನೂನು ಶಿಕ್ಷಣದ ಅವಧಿ ಎಷ್ಟಿರಬೇಕು?

೩. ಸಂಪೂರ್ಣ ಕಾನೂನು ಶಿಕ್ಷಣದ ಪಾಠ್ಯಕ್ರಮವು ಯಾವ ಯಾವ ವಿಷಯಗಳನ್ನೊಳಗೊಂಡಿರಬೇಕು?

೪. ಹಾಗೆ ನಿಗದಿಗೊಳಿಸಿದ ಪಾಠ್ಯಕ್ರಮವನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಲು ಕಾನೂನು

ಕಾಲೇಜುಗಳನ್ನು ಯಾವರೀತಿ ವ್ಯವಸ್ಥೆಗೊಳಿಸಬೇಕು?

ನನಗೆ ಮೂರನೆಯ ಪ್ರಶ್ನೆಯು ಪ್ರಧಾನವಾಗಿರುವಂತೆ ಕಾಣಿಸುತ್ತದೆ. ಇದಕ್ಕೆ ಸಿಗಬಹುದಾದ ಸರಿಯಾದ ಉತ್ತರದ ಮೇಲೆ ಉಳಿದ ಮೂರು ಪ್ರಶ್ನೆಗಳ ಪರಿಹಾರವು ನಿಂತಿದೆ. ಅನುಸರಿಸಬೇಕಾದ ಉತ್ತಮ ಮಾರ್ಗವನ್ನು ಬಾಂಬೆ ವಿಶ್ವವಿದ್ಯಾನಿಲಯವು ಎಲ್.ಎಲ್.ಬಿ ಪರೀಕ್ಷೆಗೆಂದು ನೇಮಕಮಾಡಿದ್ದ ಪರೀಕ್ಷಕರು ಕಾಲಕಾಲಕ್ಕೆ ನೀಡಿದ ತಮ್ಮ ಅಭಿಪ್ರಾಯಗಳನ್ನೊಳಗೊಂಡಿರುವ ವರದಿಯಲ್ಲಿ ಸೂಚಿಸಿದ್ದಾರೆ. ಈ ವರದಿಗಳನ್ನು ಅವಗಾಹಿಸಿದರೆ, ಈ ಪರೀಕ್ಷಕರು ಈ ಎಲ್ಲಾ ಅವಧಿಗಳಲ್ಲಿ ಪರೀಕ್ಷಾರ್ಥಿಗಳಲ್ಲಿ ತಾವು ಗಮನಿಸಿದ ಕೆಳಕಂಡ ಕೊರತೆಗಳನ್ನು ಒತ್ತಿಹೇಳಿದ್ದಾರೆ.

೧. ಕಾನೂನುಗಳ ಮೂಲಭೂತ ತತ್ವಗಳನ್ನು ಕಾನೂನು ವಿದ್ಯಾರ್ಥಿಯು ಸರಿಯಾಗಿ ತಿಳಿದುಕೊಂಡಿರುವನೆಂಬುದರ ಬಗ್ಗೆ ಯಾವುದೇ ಸೂಚನೆಗಳು ದೊರಕುವುದಿಲ್ಲ.
೨. ಸಾಮಾನ್ಯಜ್ಞಾನದ ತಳಪಾಯವೇ ವಿದ್ಯಾರ್ಥಿಗಳಿಗೆ ಇಲ್ಲದಿರುವುದು.
೩. ವಿಷಯವನ್ನು ನಿರೂಪಿಸುವಲ್ಲಿನ ವ್ಯವಸ್ಥಿತ ಕ್ರಮದ ಅಭಾವ.
೪. ಕೇಳಿರುವ ಪ್ರಶ್ನೆಗೆ ವಿದ್ಯಾರ್ಥಿಯು ನೀಡಿರುವ ಉತ್ತರದ ಅಸಮಂಜಸತೆ.
೫. ವಿಷಯವನ್ನು ನಿರೂಪಿಸುವಲ್ಲಿ ನಿರೂಪಣಾಂಶಗಳು, ತಾರ್ಕಿಕ ಯುಕ್ತಿ, ಅಭಿಪ್ರಾಯಗಳಲ್ಲಿ ಇರಬೇಕಾದ ನಿಷ್ಕೃಷ್ಟತೆಯು ಕಾಣಸಿಗದಿರುವುದು.
೬ ತನ್ನ ಮನಸ್ಸಿನಲ್ಲಿರುವುದನ್ನು ಸ್ಫುಟವಾದ ಭಾಷೆಯಲ್ಲಿ ಹೇಳುವ ಅಸಾಮರ್ಥ್ಯ.

ಕಾನೂನು ವಿದ್ಯಾರ್ಥಿಯಲ್ಲಿರುವ ಈ ಕೊರತೆಗಳು ನಿಜವಾಗಿಯೂ ಗಂಭೀರವಾದ ಕೊರತೆಗಳು ಮತ್ತು ಇವುಗಳನ್ನು ನಿವಾರಿಸಲು ಏನನ್ನಾದರೂ ಮಾಡಲೇಬೇಕು. ಈ ಕೊರತೆಗಳನ್ನು ಹೇಗೆ ನಿವಾರಿಸಬಹುದು? ಮೊಟ್ಟಮೊದಲಿಗೆ ನಾವು ಈ ಕೊರತೆಗಳ ಕಾರಣಗಳನ್ನು ಅರಿತುಕೊಳ್ಳಬೇಕು. ನನ್ನ ಅಭಿಪ್ರಾಯದಲ್ಲಿ, ಈ ಕೊರತೆಗಳಿಗೆ ಕಾರಣಗಳು ಎರಡು – ಅವೆಂದರೆ, ಅಸಮರ್ಪಕ ಪಾಠ್ಯಕ್ರಮ ಮತ್ತು ಅಸಮರ್ಪಕ ರೀತಿಯ ಬೋಧನೆ.

ಶಿಕ್ಷಣತಜ್ಞನ ಪ್ರಕಾರ ಕಾನೂನಿನ ಅಭ್ಯಾಸಕ್ಕೆ ಕೆಲವೊಂದು ನಿರ್ದಿಷ್ಟ ಉಪಾಂಗ ವಿಷಯಗಳ ಅಧ್ಯಯನವೂ ಆವಶ್ಯಕ. ಈ ಉಪಾಂಗ ವಿಷಯಗಳನ್ನು ಅಭ್ಯಸಿಸದೆ ಇದ್ದರೆ, ಕಾನೂನಿನ ವೃತ್ತಿಯು ಅಸಂಪೂರ್ಣವಾಗುತ್ತದೆ. ವಕೀಲರಿಗೆ ಇರಬೇಕಾದ ವೃತ್ತಿನಿರತ ಮನೋವೃತ್ತಿಯನ್ನು ನಾವು ಗಮನಿಸಿದರೆ, ಈ ಉಪಾಂಗ ವಿಷಯಗಳು ಯಾವುವು ಎಂಬುದನ್ನು ಪಟ್ಟಿಮಾಡುವುದೇನೂ ಕಷ್ಟದ ಕೆಲಸವಲ್ಲ. ತನ್ನ ಪ್ರಾಸಂಗಿಕ ಅಭಿಪ್ರಾಯಗಳಲ್ಲಿ (ಆಬಿಟರ್ ಡಿಕ್ಟ) ಸೂಕ್ಷ್ಮವಾಗಿ ಅವಲೋಕಿಸುವ ವ್ಯಕ್ತಿಯ ಅಭಿಪ್ರಾಯದೊಂದಿಗೆ ತನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ಅಗಸ್ಟೈನ್ ಬಿರೆಲ್ 'ವೃತ್ತಿನಿರತ ಮನೋವೃತ್ತಿಯು ನಿಸ್ಸಂದಿಗ್ಧವಾದುದನ್ನು ವಿವರಿಸುವ, ಸ್ಫುಟವಾದುದನ್ನು ವಿವರಿಸುವ ಮತ್ತು explatiating on the common place ಗುಣವನ್ನು ಹೊಂದಿದೆ' ಎಂಬ ವಾಕ್ಯವನ್ನು ಉದ್ಧರಿಸುತ್ತಾನೆ. ಇದರಲ್ಲಿರುವ ವ್ಯಂಗ್ಯವನ್ನು ನಾವು ಸದ್ಯಕ್ಕೆ ಮರೆತು ನೋಡಿದರೂ, ವಕೀಲನ ಉದ್ಯೋಗ ನಿಜವಾಗಿ ಹೇಗಿರಬೇಕೆಂಬುದರ ಬಗ್ಗೆ ಇದರಲ್ಲಿ ಸತ್ಯದ ತುಣುಕೊಂದು ಹುದುಗಿರುವುದು ಕಾಣಿಸುತ್ತದೆ. ಈ ಹೇಳಿಕೆಯ ಪ್ರಕಾರ ವಕೀಲನ ಕೆಲಸವೆಂದರೆ ವಾದವನ್ನು ಮಂಡಿಸುವುದು. ವಾದಮಂಡನೆ ವಕೀಲಿ ವೃತ್ತಿಯಲ್ಲಿ ಎಷ್ಟು ಮುಖ್ಯವಾದುದೆಂದರೆ, ವಕೀಲನು ಸಾಧಿಸಬೇಕಾದ ಪರಮ ಪುರುಷಾರ್ಥವೇ ಇದು ಎಂದು ನಾನು ಹೇಳಲು ತಯಾರಿದ್ದೇನೆ. ವಾದಚಾತುರ್ಯವನ್ನು ಬೆಳೆಸಿಕೊಳ್ಳಲು ಕೆಳಕಂಡವು ಮೂಲಭೂತವಾಗಿ ಅಗತ್ಯವಾಗಿವೆ.

೧. ವ್ಯಕ್ತಿಯ ಬಗ್ಗೆ ಮತ್ತು ಆತ ಸಮಾಜದಲ್ಲಿ ಹೇಗೆ ತನ್ನ ಕೆಲಸವನ್ನು ಮಾಡುತ್ತಾನೆ ಎಂಬ ಬಗ್ಗೆ ತಿಳಿವಳಿಕೆ,

೨. ಮನುಷ್ಯನ ಮನಸ್ಸು ಹೇಗೆ ಕೆಲಸಮಾಡುತ್ತದೆ ಎಂಬುದರ ತಿಳಿವಳಿಕೆ,

೩. ತಾರ್ಕಿಕವಾಗಿ ಅನುಮಾನಿಸುವ ದಿಸೆಯಲ್ಲಿನ ತರಬೇತಿ.

ವಾದಚಾತುರ್ಯಕ್ಕೆ ಈ ಮೂಲಭೂತ ಅಗತ್ಯಗಳೊಂದಿಗೆ, ಆಲಂಕಾರಿಕ ಅಗತ್ಯಗಳೂ ಇವೆ. ಇವು ಆಲಂಕಾರಿಕಗಳಾಗಿದ್ದರೂ ಅವುಗಳ ಪ್ರಾಮುಖ್ಯವೇನೂ ಕಡಿಮೆಯಿರುವುದಿಲ್ಲ. ಅವೆಂದರೆ, ಭಾಷೆಯಲ್ಲಿನ ಬೆಡಗು ಮತ್ತು ಕ್ರಮಬದ್ಧವಾದ ನಿರೂಪಣೆ. ಇದನ್ನೇ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ವಕೀಲನ ತರಬೇತಿಯು ಈ ಮುಂದಿನ ವಿಷಯಗಳ ಅಭ್ಯಾಸವನ್ನು ಒಳಗೊಂಡಿರಬೇಕು – (೧) ಸಮಾಜವಿಜ್ಞಾನ, (೨) ಮನಶ್ಶಾಸ್ತ್ರ, (೩) ತರ್ಕ, (೪) ವಾಗ್ಮಿತೆ ಮತ್ತು ಸಾರ್ವಜನಿಕರ ಮುಂದೆ ಮಾತನಾಡುವ ಕಲೆ, ಮತ್ತು (೫) ಭಾಷಾಪ್ರಭುತ್ವ. ಈಗಿರುವ ಪಾಠ್ಯಕ್ರಮದಲ್ಲಿ ಇವುಗಳಲ್ಲಿ ಯಾವುದಕ್ಕೂ ಸ್ಥಾನವಿಲ್ಲ. ಮೊದಲ ಹೆಜ್ಜೆಯೆಂದರೆ, ಪಾಠ್ಯಕ್ರಮವನ್ನು ಸುಧಾರಿಸುವುದು ಮತ್ತು ಈ ವಿಷಯಗಳನ್ನು ಅದರಲ್ಲಿ ಸೇರಿಸುವುದು.

ಈ ರೀತಿಯಲ್ಲಿ ಪಾಠ್ಯಕ್ರಮವನ್ನು ವಿಸ್ತರಿಸಿದರೆ, ಕಾನೂನು ಶಿಕ್ಷಣದ ಅವಧಿಯು ಎಷ್ಟಿರಬೇಕು ಎಂಬ ಎರಡನೆಯ ಪ್ರಶ್ನೆಗೆ ನನ್ನ ಏಕಮಾತ್ರ ಉತ್ತರವು ಈ ಅವಧಿಯು ಈಗಿರುವ ಎರಡು ವರ್ಷಗಳಾಗಿರುವುದು ಸಾಧ್ಯವಿಲ್ಲ. ಅದು ಎರಡು ವರ್ಷಗಳಿಗಿಂತಲೂ ಹೆಚ್ಚಿಗೆ ಇರಬೇಕು. ಆದರೆ ಈ ಅವಧಿಯು ಎರಡು ವರ್ಷಗಳಿಗಿಂತ ಖಚಿತವಾಗಿ ಎಷ್ಟು ಹೆಚ್ಚಿಗೆ ಇರಬೇಕು ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದು ಸಾಧ್ಯ. ನನ್ನ ದೃಷ್ಟಿಯಲ್ಲಿ ಇದು ನಾಲ್ಕು ವರ್ಷದ್ದಾಗಿರಬೇಕು. ನಾನು ಈ ನಾಲ್ಕು ವರ್ಷದ ಅವಧಿಯನ್ನು ಎರಡೆರಡು ವರ್ಷಗಳ ಎರಡು ಅವಧಿಯನ್ನಾಗಿ ವಿಭಾಗಿಸುತ್ತೇನೆ. ಮೊದಲನೆಯ ಎರಡು ವರ್ಷಗಳ ಅವಧಿಯ ನಂತರ ವಿಶ್ವವಿದ್ಯಾನಿಲಯವೋ ಅಥವಾ ಈ ಉದ್ದೇಶಕ್ಕಾಗಿ ನೇಮಿಸಲ್ಪಟ್ಟ ಮಂಡಲಿಯೋ ಪರೀಕ್ಷೆಯನ್ನು ನಡೆಸಬೇಕು ಮತ್ತು ಈ ಪರೀಕ್ಷೆಯನ್ನು ಪ್ರಥಮ ಎಲ್.ಎಲ್.ಬಿ ಪರೀಕ್ಷೆಯೆಂದು ಕರೆಯಬೇಕು. ಇದೇ ಮಂಡಲಿಯು ಎರಡನೆಯ ಎರಡು ವರ್ಷಗಳ ಅವಧಿಯ ಕೊನೆಯಲ್ಲಿ ಮತ್ತೊಂದು ಪರೀಕ್ಷೆಯನ್ನು ನಡೆಸಬೇಕು. ಇದು ದ್ವಿತೀಯ ಎಲ್.ಎಲ್.ಬಿ. ಪರೀಕ್ಷೆಯೆಂದಾಗಿರಬೇಕು.

ನನ್ನ ಯೋಜನೆಯ ಪ್ರಕಾರ ಪ್ರಥಮ ಮತ್ತು ದ್ವಿತೀಯ ಎಲ್.ಎಲ್.ಬಿ.ಗಳ ಪಾಠ್ಯಕ್ರಮದಲ್ಲಿ ಒಳಗೊಂಡಿರಬೇಕಾದ ವಿಷಯಗಳನ್ನು ಈಗ ಚರ್ಚಿಸುತ್ತೇನೆ. ಪ್ರಥಮ ಎಲ್.ಎಲ್.ಬಿ.ಗೆ ಈ ವಿಷಯಗಳಿರಬೇಕು:

(೧) ಸಮಾಜವಿಜ್ಞಾನ ಮತ್ತು ಮನಶ್ಶಾಸ್ತ್ರ, (೨) ತರ್ಕ ಮತ್ತು ವಾಗ್ಮಿತೆ, (೩) ಇಂಗ್ಲಿಷ್ ಭಾಷೆ, (೪) ಕಾಂಟ್ರಾಕ್ಟ್ ಲಾ, (೫) ಕಾನೂನು ದರ್ಶನ ಮತ್ತು ಕಾನೂನು ಸೂತ್ರಗಳು, (೬) ಸಂವಿಧಾನದ ಕಾನೂನು, (೭) ಭಾರತದ ಕಾನೂನುಗಳು, ಮತ್ತು (೮) ಅಪರಾಧಗಳಿಗೆ ಸಂಬಂಧಿಸಿದ ಕಾನೂನು ಮತ್ತು ಅಪರಾಧ ಪ್ರಕ್ರಿಯಾ ಸಂಹಿತೆ.

ನನ್ನ ಯೋಜನೆಯ ಪ್ರಕಾರ ಈಗಾಗಲೇ ಮೊದಲ ಎಲ್.ಎಲ್.ಬಿ.ಯಲ್ಲಿ ಸೇರಿಸಿರುವ ಸಂವಿಧಾನದ ಕಾನೂನು, ಭಾರತದ ಕಾನೂನುಗಳು, ಅಪರಾಧಗಳಿಗೆ ಸಂಬಂಧಿಸಿದ ಕಾನೂನು ಮತ್ತು ಅಪರಾಧ ಸಂಹಿತೆ, ಹಾಗೂ ಕಾಂಟ್ರಾಕ್ಟ್ ಕಾನೂನು – ಇವುಗಳನ್ನು ಕೈಬಿಟ್ಟು ಈಗ ಪ್ರಥಮ ಮತ್ತು ದ್ವಿತೀಯ ಎಲ್.ಎಲ್.ಬಿಗಳಿಗೆ ಪ್ರಸ್ತುತವಿರುವ ವಿಷಯಗಳಲ್ಲಿ ಉಳಿದವುಗಳನ್ನೇ ದ್ವಿತೀಯ ಎಲ್.ಎಲ್.ಬಿಗೆ ಮುಂದುವರಿಸಬೇಕು. ಆದರೆ, ಇವುಗಳ ಜೊತೆಗೆ, ನಾನು ಮುಂದಿನ ಕಾನೂನುಗಳನ್ನು ದ್ವಿತೀಯ

ಎಲ್.ಎಲ್.ಬಿ.ಗೆ ಸೇರಿಸಲು ಇಚ್ಛಿಸುತ್ತೇನೆ.

೧) ಜಿಲ್ಲಾ ಮತ್ತು ಪ್ರಾಂತೀಯ (ಪ್ರಾವಿನ್ಷಿಯಲ್ ಮತ್ತು ಪ್ರೆಸಿಡೆನ್ಸಿ) ಲಘುವಿವಾದಗಳ ನ್ಯಾಯಾಲಯಗಳ ಕಾನೂನು, ಮತ್ತು

೨) ಬಾಂಬೆ ಸಿವಿಲ್ ನ್ಯಾಯಾಲಯಗಳ ಕಾನೂನು.

ಕೆಲವರು ಸಿವಿಲ್ ಮತ್ತು ಅಪರಾಧೀಪ್ರಕ್ರಿಯಾ ಸಂಹಿತೆಗಳನ್ನು ಕೈಬಿಡಬೇಕೆಂದು ವಾದಿಸುತ್ತಾರೆ. ಆದರೆ, ನನ್ನ ಯೋಜನೆಯ ಪ್ರಕಾರ ಶಿಕ್ಷಣದ ಅವಧಿಯು ಸಾಕಷ್ಟು ಇರುವುದರಿಂದ, ನಾನು ಇವೆರಡು ವಿಷಯಗಳನ್ನು ಕೈಬಿಡುವ ವಿಷಯದ ಪರವಾಗಿಲ್ಲ.

ಶಿಕ್ಷಣದ ಪಾಠ್ಯಕ್ರಮ ಮತ್ತು ಅವಧಿಯ ಬಗ್ಗೆ ನನ್ನ ಅಭಿಪ್ರಾಯಗಳನ್ನು ತಿಳಿಸಿದ ನಂತರ, ವಿದ್ಯಾರ್ಥಿಯು ಯಾವ ಹಂತದಲ್ಲಿ ಕಾನೂನು ಶಿಕ್ಷಣವನ್ನು ಅಭ್ಯಾಸಮಾಡಲು ಅನುಮತಿ ನೀಡಬೇಕು ಎಂಬ ಮೊದಲನೆಯ ಪ್ರಶ್ನೆಯನ್ನು ನಾನೀಗ ವಿಚಾರಮಾಡುತ್ತೇನೆ. ಮೆಟ್ರಿಕ್ಯುಲೇಷನ್ ತೇರ್ಗಡೆಯಾದ ಮುಂದಿನ ವರ್ಷದಲ್ಲಿಯೇ ಇದನ್ನು ಪ್ರಾರಂಭಿಸಬೇಕೆಂದು ಹೇಳುವಲ್ಲಿ ನನಗೆ ಯಾವ ಆಶಂಕೆಯೂ ಇಲ್ಲ. ಮುಂದಿನ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ವಿಫಲನಾಗಿರುವುದೇ ನನ್ನ ಈ ಅಭಿಪ್ರಾಯಕ್ಕೆ ಕಾರಣ:

೧) ಕಾನೂನು ಶಿಕ್ಷಣವನ್ನು ಸ್ನಾತಕೋತ್ತರ ಶಿಕ್ಷಣವೆಂದು ಏಕೆ ಪರಿಗಣಿಸಬೇಕು?

೨) ಕಲಾ ಕಾಲೇಜಿನ ಪದವಿಪೂರ್ವ ಶಿಕ್ಷಣದ ಪಾಠ್ಯಕ್ರಮವು ವಿದ್ಯಾರ್ಥಿಯನ್ನು ಸಮರ್ಥ ವಕೀಲನನ್ನಾಗಿಸಲು ತರಬೇತಿಯನ್ನು ನೀಡುತ್ತಿದೆಯೇ ಮತ್ತು ಇಂತಹ ತರಬೇತಿಯ ಅಭಾವದ ಬಗ್ಗೆ ಪರೀಕ್ಷಕರು ಯಾವಾಗಲೂ ಆಕ್ಷೇಪವನ್ನು ವ್ಯಕ್ತಪಡಿಸುತ್ತಿದ್ದಾರೆಯೇ?

ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ, ಬಾಂಬೆ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ವಿಜ್ಞಾನದ ಪದವಿಗಳು, – ಉದಾ. ಇಂಜಿನಿಯರಿಂಗ್, ವೈದ್ಯಕೀಯ, ರಸಾಯನಶಾಸ್ತ್ರ, ಭೌತಶಾಸ್ತ್ರ, ಇತ್ಯಾದಿಗಳು – ಸ್ನಾತಕೋತ್ತರಪದವಿಗಳೆಂದು ಪರಿಗಣಿಸಲ್ಪಟ್ಟಿಲ್ಲ ಮತ್ತು ಈ ಪದವಿಗಳ ಪ್ರವೇಶಕ್ಕೆ ಬಿ.ಎ. ಪದವಿಯನ್ನು ಪಡೆದಿರಲೇಬೇಕೆಂದು ವಿಧಿಸಿಲ್ಲ. ಕೇವಲ ಕಾನೂನು ಪದವಿಯು ಮಾತ್ರ ಇದಕ್ಕೆ ಅಪವಾದವೇಕಾಗಬೇಕು? ಇದರ ಹಿಂದಿನ ನೆಲಗಟ್ಟಿಗೆ ಯಾವ ಸಮರ್ಥನೆಯೂ ನನಗೆ ತೋರುವುದಿಲ್ಲ. ಎರಡನೆಯದಾಗಿ, ವಿದ್ಯಾರ್ಥಿಯು ಬಿ.ಎ. ತರಗತಿಯಲ್ಲಿ ಪದವಿಯನ್ನು ಪಡೆಯಲು ನಾಲ್ಕು ವರ್ಷ ಏನನ್ನು ಕಲಿಯುತ್ತಾನೆಯೋ ಅದು ಊಹಾ ಪ್ರತಿಜ್ಞೆಯ ಪ್ರಕಾರ ಕಾನೂನು ಶಿಕ್ಷಣ ಪಡೆಯುವಲ್ಲಿ ಯಾವ ವಿಧವಾದ ಸಹಾಯವನ್ನೂ ಮಾಡುವುದಿಲ್ಲ. ಈ ದೃಷ್ಟಿಯಿಂದ ಪರಿಶೀಲಿಸಿದ ಮೇಲೆ ಕಾನೂನು ಶಿಕ್ಷಣವನ್ನು ಸ್ನಾತಕೋತ್ತರ ಪದವಿಯೆಂದು ಪರಿಗಣಿಸದೆ, ಕೇವಲ ಪದವಿ ಪರೀಕ್ಷೆಯೆಂದು ಪರಿಗಣಿಸಬೇಕು ಮತ್ತು ಮೆಟ್ರಿಕ್ಯುಲೇಷನ್‌ನ ನಂತರ ಕಾನೂನು ಶಿಕ್ಷಣವನ್ನು ಮುಂದುವರಿಸಬಹುದು ಎಂಬ ತೀರ್ಮಾನಕ್ಕೆ ಬಂದಿದ್ದೇನೆ. ಕಾನೂನು ಶಿಕ್ಷಣವನ್ನು ಪ್ರಾರಂಭಿಸುವ ಮೊದಲು ಪದವಿ ಪರೀಕ್ಷೆಯು ಪೂರ್ವಭಾವಿ ಅಗತ್ಯವೆಂದು ಮತ್ತು ಈ ಪದವಿಯು ಕಾನೂನು ವಿದ್ಯಾರ್ಥಿಯನ್ನು ಉತ್ತಮ ವಕೀಲನನ್ನಾಗಿಸಲು ಸಹಾಯಮಾಡುತ್ತದೆ ಎಂದು ಹೇಳಬಹುದಾದಷ್ಟು, ಬಾಂಬೆ ವಿಶ್ವವಿದ್ಯಾನಿಲಯವು ನಡೆಸುತ್ತಿರುವ ಪದವಿ ಪರೀಕ್ಷೆಗಳು ಉತ್ತಮವಾಗಿಲ್ಲ. ಬ್ಯಾರಿಸ್ಟರ್ ಶಿಕ್ಷಣವನ್ನು ಸ್ನಾತಕೋತ್ತರ ಪದವಿ ಶಿಕ್ಷಣವಲ್ಲ ಎಂಬುದನ್ನೂ ನಾನು ಇಲ್ಲಿ ಹೇಳುತ್ತೇನೆ.

ಪದವಿಪೂರ್ವ ಶಿಕ್ಷಣವನ್ನು ಮುಗಿಸಿದ ನಂತರ ಕಾನೂನು ಶಿಕ್ಷಣವನ್ನು ಪ್ರಾರಂಭಿಸಬಹುದೆಂಬ ಅಭಿಪ್ರಾಯವೂ ಇದೆ. ಕಾನೂನು ಶಿಕ್ಷಣವನ್ನು ಸ್ನಾತಕೋತ್ತರ ಶಿಕ್ಷಣವೆಂದು ಪರಿಗಣಿಸಿರದಿದ್ದ ಹಳೆಯ ಪದ್ಧತಿಗೆ ಹಿಂತಿರುಗಬೇಕೆಂಬ ಮಟ್ಟಿಗೆ ಈ ಸಲಹೆಯು ಉತ್ತಮವಾದದ್ದೆಂದು ಹೇಳಬಹುದು. ನನ್ನ

ದೃಷ್ಟಿಯಲ್ಲಿ ಈ ಸಲಹೆಯನ್ನು ಅನುಸರಿಸುವುದು ಎರಡು ಕಾರಣಗಳಿಂದಾಗಿ ತಪ್ಪಾಗುತ್ತದೆ. ನಾವು ಕಾನೂನು ಕಾಲೇಜುಗಳಿಂದ ಉತ್ತಮ ವಕೀಲರನ್ನು ಹೊರತರುವುದಕ್ಕಾಗಿ ಮೇಲಿನ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರ ಬದಲಾಗಿ ಪದವಿಪೂರ್ವ ಶಿಕ್ಷಣಪಡೆದವರನ್ನು ಕಾನೂನು ಶಿಕ್ಷಣಕ್ಕೆ ಪರಿಗಣಿಸಬೇಕೆಂದರೆ, ಈ ಸಲಹೆಯು ಸ್ವಲ್ಪ ವಿಚಿತ್ರವಾಗಿದೆಯೆಂದು ನನಗೆ ತೋರುತ್ತದೆ. ಬಿ.ಎ. ಪದವಿಯು ಉತ್ತಮವಲ್ಲದಿದ್ದರೆ, ಪದವಿಪೂರ್ವ ಪರೀಕ್ಷೆಯು ಹೇಗೆ ಅದಕ್ಕಿಂತ ಉತ್ತಮವಾಗಿರಬಲ್ಲುದು ಎಂಬುದು ನನಗೆ ಅರ್ಥವಾಗುವುದಿಲ್ಲ. ಕೊನೆಯಲ್ಲಿ ವಕೀಲನಾಗುವುದಕ್ಕೆ ಯಾವುದೇ ವಿಧದಲ್ಲಿಯೂ ಸಹಾಯವಾಗದೆ ಇದ್ದರೆ ವಿದ್ಯಾರ್ಥಿಯನ್ನು ಎರಡು ವರ್ಷಗಳವರೆಗೆ ಕಲಾ ಕಾಲೇಜಿಗೆ ಏಕೆ ಕಳುಹಿಸಬೇಕು?

ಮೆಟ್ರಿಕ್ಯುಲೇಷನ್ ಮುಗಿಸಿದ ಕೂಡಲೇ ಕಾನೂನನ್ನು ವಿದ್ಯಾರ್ಥಿಗೆ ಅವಕಾಶವನ್ನು ಕೊಡಬೇಕೆನ್ನುವ ನನ್ನ ಸಲಹೆಯಲ್ಲಿ ಮೂರು ಸ್ಪಷ್ಟ ಅನುಕೂಲಗಳಿರುವುದು ನನಗೆ ಕಂಡುಬರುತ್ತದೆ.

೧) ನಾನು ಅತ್ಯಂತ ಮೌಲ್ಯಯುತವೆಂದು ಪರಿಗಣಿಸುವ ಮೊದಲನೆಯ ಅನುಕೂಲವು ಇದು. ಪ್ರಸಕ್ತ, ಕಾನೂನು ಶಿಕ್ಷಣಕ್ಕೆ ಸೇರುವ ವಿದ್ಯಾರ್ಥಿಯು ಈ ವೃತ್ತಿಯನ್ನು ಅನುಸರಿಸಬೇಕೆಂಬ ದೃಢವಾದ ಧ್ಯೇಯದಿಂದ ಈ ವಿಭಾಗಕ್ಕೆ ಸೇರಿರುವುದಿಲ್ಲ. ತನ್ನ ಪದವಿಯ ಬತ್ತಳಿಕೆಯಲ್ಲಿ ಮತ್ತೊಂದು ಬಾಣವನ್ನು ಸೇರಿಸಿಕೊಳ್ಳುವ ಉದ್ದೇಶದಿಂದ ಈ ಶಿಕ್ಷಣಕ್ಕೆ ಬಂದಿರುತ್ತಾನೆ. ಬೇರೇನೂ ದಾರಿಯಿಲ್ಲದೆ ಇಲ್ಲಿಗೆ ಬಂದಿದ್ದರೂ ಕಾನೂನು ವೃತ್ತಿಯನ್ನು ಅವನು ಕೈಗೆತ್ತಿಕೊಳ್ಳಬಹುದು ಅಥವಾ ಇಲ್ಲದೆಯೂ ಇರಬಹುದು. ಅವನು ನಿರುದ್ಯೋಗಿಯಾಗಿದ್ದು, ತತ್ಕಾಲಕ್ಕೆ ಬೇರೇನನ್ನೂ ಮಾಡಲು ತೋಚದೆ ಆತ ಕಾನೂನು ಕಾಲೇಜಿಗೆ ಸೇರುತ್ತಾನೆ. ಈ ಕಾರಣದಿಂದಾಗಿ ಅವನು ಕಾನೂನು ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಹಾಗಾಗಿ ಅವನಲ್ಲಿ ಅಶಿಸ್ತು ಮೂಡಿ ಕಾನೂನು ವಿದ್ಯಾಭ್ಯಾಸವು ಅಸ್ತವ್ಯಸ್ತವಾಗಿರುತ್ತದೆ. ಇದನ್ನು ತಪ್ಪಿಸಲು ಅವನನ್ನು ಕಾನೂನು ಶಿಕ್ಷಣಕ್ಕೆ ಅಂಟಿಕೊಳ್ಳುವಂತೆ ಮಾಡುವುದು ಆವಶ್ಯಕ. ಬಿ.ಎ. ಪದವಿಯು ಅವನಿಗೆ ಇನ್ನಿತರ ಅವಕಾಶಗಳನ್ನು ಕೊಡುತ್ತದೆಯಾದ್ದರಿಂದ ಕಾನೂನು ಶಿಕ್ಷಣದ ಬಗ್ಗೆ ಅವನ ಬುದ್ಧಿ ನಿಶ್ಚಯವಾಗಿ ಕೂರುವುದಿಲ್ಲ. ಮೆಟ್ರಿಕ್ಯುಲೇಷನ್‌ನ ನಂತರ ಪ್ರತಿಯೊಬ್ಬನೂ ತನ್ನ ಮುಂದಿನ ವೃತ್ತಿಜೀವನವನ್ನು ನಿರೂಪಿಸಿಕೊಳ್ಳಬೇಕಾಗಿರುವುದರಿಂದ, ನನ್ನ ಸಲಹೆಯನ್ನು ಅನುಸರಿಸಿದರೆ, ವಿದ್ಯಾರ್ಥಿಗಳನ್ನು ಕಾನೂನು ಶಿಕ್ಷಣಕ್ಕೇ ಅಂಟಿಕೊಳ್ಳುವಂತೆ ಮಾಡುವ ಅವಕಾಶವಿರುತ್ತದೆ.

೨) ನನ್ನ ಸಲಹೆಯ ಎರಡನೆಯ ಉಪಯೋಗವೆಂದರೆ ಅದು ಮಿತವ್ಯಯ ಹಾಗೂ ದಕ್ಷತೆಯೆರಡನ್ನೂ ಸಾಧಿಸಬಹುದು. ವಿದ್ಯಾರ್ಥಿಯು ನಾಲ್ಕು ವರ್ಷಗಳಲ್ಲಿ ತನ್ನ ಕಾನೂನು ಶಿಕ್ಷಣವನ್ನು ಪೂರೈಸಬಹುದು. ಈಗ ಚಾಲ್ತಿಯಲ್ಲಿರುವ ಪದ್ಧತಿಯ ಪ್ರಕಾರ ಅಗತ್ಯವಿರುವ ಅವಧಿಗೆ ಹೋಲಿಸಿದರೆ ಇದರಿಂದ ಎರಡು ವರ್ಷಗಳ ಉಳಿತಾಯವಾಗುತ್ತದೆ. ಪರ್ಯಾಯವಾಗಿ ಸೂಚಿಸಲ್ಪಟ್ಟಿರುವ ಸಲಹೆಯ ಪ್ರಕಾರವೂ ಕಾನೂನು ಶಿಕ್ಷಣಕ್ಕೆ ಆರುವರ್ಷಗಳ ಅಗತ್ಯವಿದೆ. ಪ್ರಸಕ್ತವಿರುವ ಶಿಕ್ಷಣಕ್ರಮಕ್ಕಿಂತ ಈ ಯೋಜನೆಯಿಂದ ಯಾವ ಹೆಚ್ಚಿನ ಉಪಯೋಗವೂ ಬಡವಿದ್ಯಾರ್ಥಿಗಳಿಗೆ ಇರುವುದಿಲ್ಲ. ತರಬೇತಿಯ ದೃಷ್ಟಿಯಿಂದ ನೋಡಿದರೂ, ಹಾಲಿಯಿರುವ ಕ್ರಮವನ್ನಾಗಲೀ ಅಥವಾ ಸಮಿತಿಯು ಸೂಚಿಸಿರುವ ಪರ್ಯಾಯ ಕ್ರಮವನ್ನಾಗಲೀ ನಾನು ಸೂಚಿಸಿರುವ ಕ್ರಮಕ್ಕೆ ಹೋಲಿಸಿದಾಗ ದೌರ್ಬಲ್ಯಗಳಿಂದ ಪೀಡಿತವಾಗಿದೆಯೆಂದು ಧೈರ್ಯವಾಗಿ

ಹೇಳಬಲ್ಲೆ. ಹಾಲಿಯಿರುವ ಶಿಕ್ಷಣವು ಎರಡು ವರ್ಷಗಳ ಅವಧಿಯದಾಗಿದ್ದು ಇದು ನಿಸ್ಸಂಶಯವಾಗಿಯೂ ಅಗತ್ಯಕ್ಕಿಂತ ಕಡಿಮೆಯಾಗಿದೆ. ಪರ್ಯಾಯವಾಗಿ ಸೂಚಿತವಾಗಿರುವ ಕ್ರಮವು ಮೂರುವರ್ಷಗಳ ಅವಧಿಯನ್ನು ನಿಗದಿಗೊಳಿಸಿದೆ. ಆದರೆ ನನ್ನ ಯೋಜನೆಯ ಪ್ರಕಾರ ಇದು ನಾಲ್ಕು ವರ್ಷಗಳದ್ದಾಗಿದೆ. ಆದ್ದರಿಂದ ನನ್ನ ಸೂಚನೆಯು ಉಳಿದೆರಡು ಪದ್ಧತಿಗಳಿಗಿಂತ ಉತ್ತಮವಾಗಿದೆ.

೩) ಮೂರನೆಯ ಅನುಕೂಲವೆಂದರೆ ಇದರಲ್ಲಿ ಆಯ್ಕೆಯ ಪ್ರಕ್ರಿಯೆಯಿದೆ. ಇದರಿಂದಾಗಿ, ವಕೀಲಿ ವೃತ್ತಿಯನ್ನೇ ಆಯ್ದುಕೊಳ್ಳುವ ದೃಢವಾದ ಧ್ಯೇಯವಿಲ್ಲದವರನ್ನು ಪ್ರವೇಶ ದ್ವಾರದಲ್ಲಿಯೇ ತಡೆಯಬಹುದು. ದೃಢವಾದ ಸಂಕಲ್ಪವಿರುವವರು ಮಾತ್ರ ಕಾನೂನು ಶಿಕ್ಷಣಕ್ಕೆ ಸೇರುತ್ತಾರೆ. ಹೀಗಾಗಿ ಈ ಕ್ಷೇತ್ರದಲ್ಲಿ ಜನಗಳ ಅತಿಯಾದ ಸಂದಣಿಯನ್ನು ತಡೆಯಲು ಸಾಧ್ಯವಾಗುತ್ತದೆ.

ನಾನು ಈಗಾಗಲೇ ಈ ವಿಷಯವನ್ನು ಚರ್ಚಿಸಿದವರಿಂದ ಒಂದೇ ಒಂದು ಆಕ್ಷೇಪಣೆ ಬಂದಿದೆ. ಅದು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಯು ಕಾನೂನಿನ ಮೇಲಿನ ಉಪನ್ಯಾಸಗಳನ್ನು ಅರ್ಥಮಾಡಿಕೊಳ್ಳಲಾರ ಎಂಬುದು. ಇದಕ್ಕೆ ನನ್ನ ಉತ್ತರ ಎರಡು ವಿಧವಾಗಿದೆ. ಬಾಂಬೆ ಉಚ್ಚನ್ಯಾಯಾಲಯದಲ್ಲಿ ವಕೀಲರಾಗಿರುವ ನನ್ನ ಸ್ನೇಹಿತ ಶ್ರೀ ಎಸ್. ಸಿ. ಜೋಷಿ, ಎಂ.ಎ., ಎಲ್.ಎಲ್.ಬಿ, ಅವರ ಪ್ರಕಾರ ಇದು ಆಧಾರರಹಿತ ಆಕ್ಷೇಪಣೆಯಾಗಿದೆ. ಅವರು ಕಳೆದ ಹಲವು ವರ್ಷಗಳಿಂದ ವಕೀಲರ ಸಂಘದ ಪರೀಕ್ಷೆಗಳಿಗಾಗಿ ತರಗತಿಗಳನ್ನು ನಡೆಸುತ್ತಿದ್ದಾರೆ ಮತ್ತು, ಅವರು ಅದರಲ್ಲಿ ಸಾಕಷ್ಟು ಹೆಸರನ್ನೂ ಗಳಿಸಿದ್ದಾರೆ. ತಾವೇ ಮೆಟ್ರಿಕ್ಯುಲೇಷನ್ ವಿದ್ಯಾರ್ಥಿಗಳಿಗೆ ಪಾಠಮಾಡಿರುವುದರಿಂದ ಅವರಿಗೆ ಅದರಲ್ಲಿ ನೇರವಾದ ಅನುಭವವಿದೆ ಮತ್ತು ಈ ವಿಷಯದಲ್ಲಿ ನಾನು ಅವರ ಅಭಿಪ್ರಾಯಗಳಿಗೆ ಮನ್ನಣೆಯನ್ನು ನೀಡುತ್ತೇನೆ. ನನ್ನ ಸಲಹೆಯ ಪ್ರಕಾರ ಎಲ್.ಎಲ್.ಬಿ. ಯು ಎರಡು ವರ್ಷಗಳ ಅವಧಿಯದಾಗಿದ್ದು ಮೊದಲನೆಯ ವರ್ಷದಲ್ಲಿ ಕಾನೂನು ಶಿಕ್ಷಣವನ್ನು ನೀಡಬೇಕಾದ ಅಗತ್ಯವಿಲ್ಲ. ಅದು ಎರಡನೆಯ ವರ್ಷದಿಂದ ಪ್ರಾರಂಭವಾಗುತ್ತದೆ.

ಕಾನೂನು ಕಾಲೇಜುಗಳನ್ನು ಮಾನ್ಯಮಾಡುವ ಕೊನೆಯ ಪ್ರಶ್ನೆಯ ಪರಿಶೀಲನೆಗೆ ಬಂದರೆ, ಈ ಸಮಸ್ಯೆಯನ್ನು ಎರಡು ಸಮಿತಿಗಳು– ಒಂದು ೧೮೯೮ರಲ್ಲಿ ನೇಮಿಸಲ್ಪಟ್ಟ ಸಮಿತಿ ಮತ್ತು ಎರಡನೆಯದು ೧೯೧೫ರಲ್ಲಿ ನೇಮಿಸಲ್ಪಟ್ಟ ಚಂದಾವರ್ಕರ್ ಸಮಿತಿ – ಪರಿಶೀಲಿಸಿವೆ ಮತ್ತು ಈ ಸಲಹೆಯನ್ನು ತಿರಸ್ಕರಿಸಿವೆ. ಕಾನೂನು ಕಾಲೇಜನ್ನು ಪೂರ್ಣಾವಧಿಯದನ್ನಾಗಿ ಮಾಡುವುದರ ಬಗ್ಗೆ ನನ್ನ ಒಲವಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾನೂನನ್ನು ಅಭ್ಯಾಸಮಾಡುತ್ತಿರುವವರಲ್ಲಿ ಹಲವಾರು ವಿದ್ಯಾರ್ಥಿಗಳು ದಿನದ ವೇಳೆಯಲ್ಲಿ ಜೀವನ ನಡೆಸುವ ಸಲುವಾಗಿ ಕೆಲಸಮಾಡುತ್ತಾರೆ. ಹೀಗೆ ಕೆಲಸ ಮಾಡಿಕೊಂಡು ಕಾನೂನನ್ನು ಅಭ್ಯಾಸಮಾಡದೆ ಇದ್ದರೆ ಹಲವರ ಪಾಲಿಗೆ ಕಾನೂನು ಶಿಕ್ಷಣವು ಸಾಧ್ಯವೇ ಆಗುತ್ತಿರಲಿಲ್ಲ. ಹಾಲಿ ಇರುವಂತೆ ಕಾನೂನು ಶಿಕ್ಷಣದ ಅವಧಿಯು ಆರು ವರ್ಷಗಳದ್ದಾಗಿದ್ದರೂ ಪೂರ್ಣಾವಧಿ ಕಾಲೇಜಿನ ಸಲಹೆಯನ್ನು ನಾನು ವಿರೋಧಿಸುತ್ತಿದ್ದೆ. ನಡುವೆ ಅನುತ್ತೀರ್ಣನಾಗುವ ಸಂದರ್ಭವನ್ನು ಬಿಟ್ಟರೂ, ಶಿಕ್ಷಣದ ಆರುವರ್ಷಗಳ ಈ ಅವಧಿಯವರೆಗೆ ವಿದ್ಯಾರ್ಥಿಯ ಹೊಣೆಯನ್ನು ಅವನ ತಂದೆತಾಯಿಗಳ ಮೇಲೆ ಬಿಡುವುದನ್ನು ಯಾವುದೇ ಶಿಕ್ಷಣತಜ್ಞನೂ ಸಮರ್ಥಿಸಿಕೊಳ್ಳಲಾರ. ನನ್ನ ಸಲಹೆಯ ಪ್ರಕಾರ ಶಿಕ್ಷಣದ ಅವಧಿಯು ಕೇವಲ ನಾಲ್ಕು ವರ್ಷದ್ದಾಗಿರುವುದರಿಂದ ಮತ್ತು ವಿದ್ಯಾರ್ಥಿಗಳನ್ನು ಅವರು ಇನ್ನೂ ಅಪಕ್ವ ಸ್ಥಿತಿಯಲ್ಲಿದ್ದಾಗಲೇ ಶಿಕ್ಷಣಕ್ಕೆ ಒಳಪಡಿಸುವುದರಿಂದ, ಕೇವಲ ನಿಷ್ಠುರ ಅಗತ್ಯಗಳಿಗೆ ಒಳಗಾಗಿ ನಾನು

ಪೂರ್ಣಾವಧಿಯ ಕಾಲೇಜುಗಳ ಪರವಾಗಿದ್ದೇನೆ ಅಷ್ಟೆ.

ಕಾಲೇಜಿನ ಅಧ್ಯಾಪಕವರ್ಗದ ವಿಷಯಕ್ಕೆ ಬಂದರೆ, ನಾನು ಅವರನ್ನು ಎರಡು ವರ್ಗಗಳನ್ನಾಗಿ ವಿಭಾಗಮಾಡುತ್ತೇನೆ – ಮೊದಲನೆಯದು ಬೋಧಕರು ಮತ್ತು ಎರಡನೆಯದು ಪ್ರಾಚಾರ್ಯರು. ವೃತ್ತಿನಿರತರಿಂದ ಕಾನೂನು ವಿದ್ಯಾರ್ಥಿಗಳಿಗೆ ಬೋಧನೆಮಾಡಿಸಬೇಕೆಂಬ ನಿಟ್ಟಿನಲ್ಲಿ ನಾನು ಕಾತರನಾಗಿದ್ದೇನೆ. ಬೋಧಿಸಲು ವೃತ್ತಿನಿರತರಿಲ್ಲದೆ ಇದ್ದರೆ ಕಾನೂನಿನ ವಿದ್ಯಾರ್ಥಿಯು ಕೇವಲ ಅವ್ಯಾವಹಾರಿಕ ಓದಿಗೆ ಸೀಮಿತನಾಗುತ್ತಾನೆ. ವ್ಯಾವಹಾರ್ಯತೆಯತ್ತ ಒಲವು ಅವನಲ್ಲಿ ಮೂಡುವಂತೆ ಮಾಡಬೇಕು. ಇದು ಸಾಧ್ಯವಾಗುವುದು ವೃತ್ತಿನಿರತ ಸದಸ್ಯರ ಸಾಹಚರ್ಯದಿಂದ ಮಾತ್ರ. ಆದ್ದರಿಂದ ಪ್ರಾಚಾರ್ಯರುಗಳು ಶಿಕ್ಷಕವೃಂದದ ಖಾಯಂ ಸದಸ್ಯರಾಗಬಾರದು. ಕೇವಲ ಪ್ರಾಂಶುಪಾಲರು ಮತ್ತು ಬೋಧಕರು ಶಿಕ್ಷಕ ವರ್ಗದ ಖಾಯಂ ಸದಸ್ಯರಾಗಿರಬೇಕು. ಬೋಧಕರು ವಿದ್ಯಾರ್ಥಿಗಳಿಗೆ ಕೇವಲ ಪಾಠವನ್ನು ಹೇಳಿಕೊಡುವುದಷ್ಟಕ್ಕೇ ಸೀಮಿತವಾಗಿರಬೇಕು ಮತ್ತು ಪ್ರಾಚಾರ್ಯರು ಹಾಗೂ ಪ್ರಾಂಶುಪಾಲರು ಉಪನ್ಯಾಸಗಳನ್ನು ನೀಡಬೇಕು.

ಶಿಕ್ಷಕವರ್ಗವನ್ನು ಎರಡು ವರ್ಗಗಳನ್ನಾಗಿ ವಿಭಾಗಿಸುವುದರ ಉದ್ದೇಶ ಬೋಧನಾಕ್ರಮದಲ್ಲಿರುವ ಕೊರತೆಗಳನ್ನು ನೀಗುವುದು. ಕಾನೂನು ಕಾಲೇಜುಗಳಲ್ಲಿ ಬೋಧಿಸಿರುವ ಅನುಭವವುಳ್ಳ ಯಾರಿಗೇ ಆದರೂ, ಈಗಿನ ಬೋಧನಾಕ್ರಮದಲ್ಲಿರುವ ಕೊರತೆಗಳ ಅರಿವು ಸಹಜವಾಗಿಯೇ ಬರುತ್ತದೆ. ಈಗಿರುವ ವ್ಯವಸ್ಥೆಯ ಪ್ರಕಾರ, ವಿದ್ಯಾರ್ಥಿಗಳ ಭಾಗವಹಿಸುವಿಕೆಯು ಪ್ರಾಚಾರ್ಯರು ನೀಡುವ ಉಪನ್ಯಾಸಗಳನ್ನು ಟಿಪ್ಪಣಿಮಾಡಿಕೊಳ್ಳುವಷ್ಟಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಹೆಚ್ಚೆಂದರೆ, ಈ ವ್ಯವಸ್ಥೆಯು, ವಿವಿಧ ಕಾನೂನುಗಳ ಉಪಬಂಧಗಳ ಪರಿಚಯವನ್ನು ಮಾಡಿಕೊಡಬಹುದು ಅಷ್ಟೆ. ವ್ಯಾವಹಾರಿಕವಾಗಿ ಕಾರ್ಯನಿರ್ವಹಿಸುವಾಗ ತಲೆದೋರುವ ಹಲವಾರು ಸಂಕೀರ್ಣ ಸಂದರ್ಭಗಳಲ್ಲಿ ಕಾನೂನಿನ ತತ್ವಗಳನ್ನು ಅನ್ವಯಮಾಡಬಲ್ಲ ಸಾಮರ್ಥ್ಯವನ್ನು ಕೇವಲ ಉಪನ್ಯಾಸಗಳನ್ನು ನೀಡುವ ಸದ್ಯದ ವ್ಯವಸ್ಥೆಯು ವಿದ್ಯಾರ್ಥಿಗೆ ನೀಡಲು ಶಕ್ತವಾಗಿದೆಯೇ ಎಂಬುದು ಸಂಶಯಾಸ್ಪದವಾದ ವಿಷಯ. ನಿಗದಿಗೊಳಿಸಿದ ಪಠ್ಯಪುಸ್ತಕಗಳನ್ನು ಓದಿ ಉಪನ್ಯಾಸಗಳನ್ನು ಅನುಸರಿಸುವಂತೆ ವಿದ್ಯಾರ್ಥಿಯನ್ನು ಮಾಡುವಂತಹ ಒತ್ತಾಯಪೂರ್ವಕ ವಿಧಾನಗಳಾವುವೂ ಈಗಿನ ವ್ಯವಸ್ಥೆಯಲ್ಲಿ ಇಲ್ಲ. ಇದರ ಪರಿಣಾಮವಾಗಿ, ಪರೀಕ್ಷೆಗೆ ಹತ್ತಿರದವರೆಗೂ, ವಿದ್ಯಾರ್ಥಿಯು ಪುಸ್ತಕಗಳನ್ನು ಓದುವ ಗೋಜಿಗೇ ಹೋಗುವುದಿಲ್ಲ ಮತ್ತು ಓದದೆ ಬಾಕಿ ಉಳಿಸಿಕೊಂಡಿರುವ ಪಠ್ಯಗಳನ್ನು ಅಭ್ಯಸಿಸುವ ಸಲುವಾಗಿ ಆತ ನೋಟ್ಸುಗಳ ಅಥವಾ ಕಂಠಪಾಠದ ಮೊರೆಹೋಗುತ್ತಾನೆ.

ಕಾನೂನು ಶಿಕ್ಷಣವನ್ನು ನೀಡುವ ಕ್ರಮಗಳ ಬಗ್ಗೆ ಹಲವಾರು ಭಿನ್ನ ಭಿನ್ನ ದೃಷ್ಟಿಗಳಿವೆ. ಅವುಗಳಲ್ಲಿ ಕೆಲವು ಹಿಂದಿನ ಪ್ರಕರಣಗಳ ಅಭ್ಯಾಸವನ್ನು ಎತ್ತಿಹಿಡಿದರೆ, ಉಳಿದವರು ಉಪನ್ಯಾಸಗಳ ಬೆಂಬಲದ ಜೊತೆಗೆ ಪಠ್ಯಪುಸ್ತಕಗಳ ಉಪಯೋಗವನ್ನು ಎತ್ತಿಹಿಡಿಯುತ್ತಾರೆ. ಇವೆರಡರಲ್ಲಿ ಯಾವುದನ್ನೂ ಇದೇ ಸರಿಯಾದ ಕ್ರಮವೆಂದು ವಾದಿಸುವುದು ಯಾರಿಗೂ ಸಾಧ್ಯವಾಗದು. ಬೋಧಿಸುವ ಕ್ರಮವನ್ನು ಸಾಮಾನ್ಯವಾಗಿ ಆಯಾ ಬೋಧಕರಿಗೇ ಬಿಡಬೇಕು. ಶಿಕ್ಷಕವರ್ಗಕ್ಕೆ ಕೆಲವೊಂದು ವಿಧಾಯಕ ಸೂಚನೆಗಳನ್ನು ನೀಡುವುದು ಮತ್ತು ಈಗಿನ ಕ್ರಮದಲ್ಲಿರುವ ಕೊರತೆಗಳನ್ನು ಅವರ ಗಮನಕ್ಕೆ ತರುವುದು ಅಗತ್ಯವೆಂದು ನನ್ನ ನಂಬಿಕೆ. ಅಲ್ಲದೆ, ಬೌದ್ಧಿಕ ಶ್ರಮದ ಹೆಚ್ಚಿನ ಪಾಲು ವಿದ್ಯಾರ್ಥಿಗಳಿಂದ ಬರುವಂತೆ ಮಾಡುವುದು ಮತ್ತು ಅವರಿಗೆ ಬೋಧಿಸುತ್ತಿರುವ ಸಮಯದಲ್ಲಿಯೇ ಅವರಿಗೆ ತರಬೇತಿಯನ್ನೂ ನೀಡುವಂತಹ ಸೂಚನೆಗಳನ್ನು ಶಿಕ್ಷಕರಿಗೆ ನೀಡುವುದು ಆವಶ್ಯಕ. ಕೇವಲ ಉಪನ್ಯಾಸಗಳನ್ನು ನೀಡುವುದರ ಬದಲು ಉಪನ್ಯಾಸ ಹಾಗೂ ಬೋಧನೆ

ಇವೆರಡರ ಅಗತ್ಯವೂ ಇದೆಯೆಂಬುದು ನನ್ನ ಅಭಿಪ್ರಾಯ. ಉಪನ್ಯಾಸಗಳಿಗೆ ಬೋಧನೆಯು ಪೂರಕವಾಗಿರದಿದ್ದರೆ, ಹೊಸ ಕಾಲೇಜುಗಳು ಹೊಸ ಹಾಗೂ ಉತ್ತಮ ವಕೀಲರ ವರ್ಗವನ್ನು ಸೃಷ್ಟಿಸುವ ಭರವಸೆ ಈಡೇರುವುದು ಸಾಧ್ಯವಿಲ್ಲ.

ಕಾನೂನು ಶಿಕ್ಷಣದ ಸುಧಾರಣೆಯು, ನನ್ನ ದೃಷ್ಟಿಯಲ್ಲಿ, ತನ್ನ ಜೊತೆಜೊತೆಗೇ ಇನ್ನೂ ಮೂರು ದಿಕ್ಕಿನ ಸುಧಾರಣೆಯನ್ನು ಬಯಸುತ್ತದೆ.

೧) ಕಾನೂನಿನ ಕ್ಷೇತ್ರದಲ್ಲಿ ನಡೆಸುವ ವಿವಿಧ ಪರೀಕ್ಷೆಗಳನ್ನು ತೆಗೆದುಹಾಕಬೇಕು ಮತ್ತು ಅವುಗಳ ಬದಲಿಗೆ ಎಲ್ಲರಿಗೂ ಒಂದೇ ಪರೀಕ್ಷೆಯನ್ನು ನಡೆಸಬೇಕು. ಅಡ್ವೊಕೇಟ್ (ಎ.ಎಸ್.) ಮತ್ತು ಅಡ್ವೊಕೇಟ್ (ಒ.ಎಸ್.)ಗಳ ನಡುವೆ ನಡೆಸಲ್ಪಡುತ್ತಿರುವ ಪರೀಕ್ಷೆಗಳನ್ನು ಕೈಬಿಡಬೇಕು. ಈ ವ್ಯತ್ಯಾಸವನ್ನು ಉಳಿಸಿಕೊಂಡು ಹೋಗಬೇಕಾದರೆ, ಅದು ಪದವಿ ಪತ್ರವನ್ನು ಪಡೆಯಲು ಅರ್ಜಿ ಸಲ್ಲಿಸುವ ಸಮಯದಲ್ಲಿ ಆತ ತೆಗೆದುಕೊಳ್ಳುವ ಅಡ್ವೊಕೇಟ್ (ಎ.ಎಸ್.), ಅಡ್ವೊಕೇಟ್ (ಒ.ಎಸ್.) ಅಥವಾ ಸಾಲಿಸಿಟರ್‌ಗಳ ವೃತ್ತಿಯ ಆಯ್ಕೆಯ ಮೇಲೆ ಅವಲಂಬಿಸಿರಬೇಕು.

೨) ಸಾಮಾನ್ಯವಾದ ಒಂದೇ ಪರೀಕ್ಷಾಮಂಡಲಿಯಿರಬೇಕು. ಪುನರ್ವ್ಯವಸ್ಥೆಗೊಳಿಸುವ ಈ ಯೋಜನೆಯ ಭಾಗವಾಗಿ, ಕಾನೂನು ಪರೀಕ್ಷೆಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ಮತ್ತು ಪರೀಕ್ಷೆಗಳನ್ನು ನಡೆಸಲು ಕಾನೂನು ಶಿಕ್ಷಣ ಪರಿಷತ್ತೊಂದನ್ನು ಸ್ಥಾಪಿಸಬೇಕು. ಈ ಪರಿಷತ್ತು ಕೆಳಕಂಡವುಗಳನ್ನು ಒಳಗೊಂಡಿರಬೇಕು:

ಅ) ವಿಶ್ವವಿದ್ಯಾನಿಲಯದ ಪ್ರತಿನಿಧಿಗಳು,

ಆ) ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳ ಪ್ರತಿನಿಧಿಗಳು,

ಇ) ವಕೀಲರ ಸಂಘದ ಪ್ರತಿನಿಧಿಗಳು,

ಈ) ಕಾನೂನು ಕಾಲೇಜಿನ ಪ್ರಾಚಾರ್ಯರ ಪ್ರತಿನಿಧಿಗಳು, ಮತ್ತು

ಉ) ಸಾರ್ವಜನಿಕ ಪ್ರತಿನಿಧಿಗಳು.

ಪರೀಕ್ಷೆಯ ಕರ್ತವ್ಯವನ್ನು ವಕೀಲರ ಸಂಘಕ್ಕೆ ವಹಿಸಿಕೊಡಲು ನಾನು ತಯಾರಿಲ್ಲ. ಪರಿಷತ್ತಿಗೆ ಕಾರ್ಮಿಕ ಸಂಘದ ಮನೋಭಾವ ಬರುವ ಸಾಧ್ಯತೆಯಿದೆ. ಪರೀಕ್ಷೆಗಳನ್ನು ನಡೆಸುವಲ್ಲಿ ಇಂತಹ ಮನೋಭಾವವು ಕಾರುಬಾರು ನಡೆಸತೊಡಗಿದರೆ, ಅದು ಕಾನೂನು ಶಿಕ್ಷಣಕ್ಕೆ ಮಾರಕವಾಗುತ್ತದೆ. ಕಾನೂನು ಶಿಕ್ಷಣದ ಎಲ್ಲಾ ಹಿತಾಸಕ್ತಿಗಳನ್ನು ಈಗಾಗಲೇ ಈಗಿನ ಪರೀಕ್ಷಾ ವ್ಯವಸ್ಥೆ ಹಾಳುಮಾಡಿದೆ. ಈ ದುರದೃಷ್ಟಕರ ಬೆಳವಣಿಗೆಯು ಇನ್ನೂ ಉಲ್ಬಣಾವಸ್ಥೆಗೆ ಹೋಗದ ಹಾಗೆ ಎಚ್ಚರಿಕೆಯನ್ನು ವಹಿಸಬೇಕು.

೩) ಕೇವಲ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದರ ಮೇಲೆ ಪದವಿ ಪ್ರದಾನಮಾಡಬಾರದು. ಅದು ಮೂರು ವಿಷಯಗಳಲ್ಲಿ ತೇರ್ಗಡೆಯಾಗುವುದರ ಮೇಲೆ ಅವಲಂಬಿತವಾಗಿರಬೇಕು. ಅವೆಂದರೆ–

ಅ) ಕಾನೂನು ಪದವಿಯನ್ನು ಪಡೆದಿರಬೇಕು,

ಆ) ಹಿರಿಯ ವಕೀಲರ ಬಳಿ ಒಂದು ವರ್ಷದವರೆಗೆ ವಾದಮಾಡುವುದಕ್ಕೆ ಸಂಬಂಧಿಸಿದ ಕಾನೂನುಗಳ ತರಬೇತಿಯನ್ನು ಪಡೆದು, ತತ್ಸಂಬಂಧಿ ಪರೀಕ್ಷೆ ಹಾಗೂ ಈ ವೃತ್ತಿಧರ್ಮದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಲ್ಲದೆ,

ಇ) ೧) ಅಡ್ವೊಕೇಟ್ (ಒ.ಎಸ್.) ಪದವಿಯುನ್ನು ಪಡೆಯುಬಯುಸುವವರು

ಉಚ್ಚನ್ಯಾಯಾಲಯಗಳ ಒರಿಜಿನಲ್ ಸೈಡ್ ನಿಯಮಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

೨) ಅಡ್ವೋಕೇಟ್ (ಎ.ಎಸ್.) ಪದವಿಯನ್ನು ಪಡೆಯಬಯಸುವವರು ಉಚ್ಚನ್ಯಾಯಾಲಯವು ನಡೆಸುವ ಅಪೆಲೇಟ್ ಸೈಡಿನ ನಿಯಮಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

೩) ಸಾಲಿಸಿಟರ್ ಪದವಿಯ ಆಕಾಂಕ್ಷಿಗಳು ಉಚ್ಚನ್ಯಾಯಾಲಯವು ನಡೆಸುವ ಒರಿಜಿನಲ್ ಮತ್ತು ಅಪೆಲೇಟ್ ಸೈಡಿನ ಎರಡೂ ಪರೀಕ್ಷೆಗಳಲ್ಲಿ ಹಾಗೂ ಆಸ್ತಿ ವರ್ಗಾವಣೆಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು.

೪) ಉತ್ತಮ ನೈತಿಕ ನಡತೆಯ ಪ್ರಮಾಣಪತ್ರವೊಂದನ್ನು ಸಲ್ಲಿಸಬೇಕು.

ಶಿಕ್ಷಣ ಪದ್ಧತಿಯನ್ನು ಎಲ್ಲರಿಗೂ ಸಮಾನವಾಗಿರುವಂತೆ ಮಾಡಿದ ನಂತರ ಹಾಗೂ ಎಲ್ಲಾ ವರ್ಗದವರ ಅಗತ್ಯಗಳನ್ನು ಒಳಗೊಳ್ಳುವಷ್ಟು ವ್ಯಾಪಕಗೊಳಿಸಿದ ಮೇಲೆ ಭಿನ್ನತೆಗಳಿಗೆ ಮತ್ತು ಅವ್ಯವಸ್ಥೆಗಳಿಗೆ ಮುಂದುವರೆಯುವ ಅವಕಾಶವಿರುವುದಕ್ಕೆ ಯಾವುದೇ ಸಮರ್ಥನೆಯಿರುವುದಿಲ್ಲ.

ಹಿರಿಯ ವಕೀಲರ ಬಳಿ ವ್ಯವಹಾರೋಪಯೋಗೀ ತರಬೇತಿ ಪಡೆಯುವುದರ ಬಗ್ಗೆ, ಕೆಳಕಂಡ ಅಂಶಗಳನ್ನು ಗಮನಿಸುವುದು ಆವಶ್ಯಕ.

೧) ಹಿರಿಯ ವಕೀಲರ ಬಳಿ ಅಗತ್ಯ ಸೌಕರ್ಯಗಳಿವೆಯೇ?

೨) ಹಿರಿಯ ವಕೀಲರು ಕಾನೂನು ವಿದ್ಯಾರ್ಥಿಗಳಿಗೆ ತಮ್ಮಲ್ಲಿ ಪ್ರವೇಶವನ್ನು ನಿರಾಕರಿಸಿದರೆ ಅಥವಾ ಪ್ರವೇಶವನ್ನು ನೀಡುವವರು ದುಬಾರಿ ಶುಲ್ಕವನ್ನು ವಿಧಿಸಿದರೆ ಏನಾಗುತ್ತದೆ?

ತರಬೇತಿಯು ಕಾರ್ಯಸಾಧುವಾಗಿರಬೇಕಾದರೆ, ಈ ಅಂಶಗಳ ಬಗ್ಗೆ ಒಂದು ನಿರ್ಧಾರಕ್ಕೆ ಬರಬೇಕು. ಈ ಉದ್ದೇಶಕ್ಕಾಗಿ ಬಾಂಬೆ ಹಾಗೂ ಜಿಲ್ಲಾ ಪಟ್ಟಣಗಳಲ್ಲಿರುವ ಹಿರಿಯ ವಕೀಲರನ್ನು ಹುಡುಕುವುದು ಸಾಧ್ಯವೆಂದು ನನಗೆ ಅನಿಸುತ್ತದೆ. ಕಾನೂನು ವಿದ್ಯಾರ್ಥಿಗಳಿಗೆ ಪ್ರವೇಶನೀಡಬೇಕೆಂದು ಹಿರಿಯ ವಕೀಲರನ್ನು ಉಚ್ಚ ನ್ಯಾಯಾಲಯವು ಒತ್ತಾಯಪೂರ್ವಕವಾಗಿ ಒಪ್ಪಿಸದೆ ಇದ್ದರೆ ಈ ವ್ಯವಸ್ಥೆಯು ವಿಫಲವಾಗುತ್ತದೆ. ತಮಗೆ ಮುಂದೆ ಎದುರಾಳಿಯಾಗಬಹುದು ಮತ್ತು ತಮ್ಮ ಕಕ್ಷಿಗಾರರೊಡನೆ ಒಳಹಾಕಿಕೊಂಡು ಅವರಲ್ಲಿ ಕೆಲವರನ್ನು ತಮ್ಮ ಜೊತೆಗೆ ಕರೆದೊಯ್ಯಬಹುದು ಎಂಬ ಹೆದರಿಕೆಯು ಹಿರಿಯ ವಕೀಲರ ಮನಸ್ಸಿನಲ್ಲಿ ಬಲವಾಗಿ ಬೇರೂರಿ ಮತ್ತು ಈ ಕಾರಣದಿಂದ ಅವರು ತಮ್ಮ ವೃತ್ತಿಯ ತಂತ್ರೋಪಾಯಗಳನ್ನು ಬೇರೆಯವರಿಗೆ ಹೇಳಿಕೊಡುವುದಿಲ್ಲ ಎಂಬುದು ನನಗೆ ಮನವರಿಕೆಯಾಗಿದೆ. ಒತ್ತಾಯದ ಅನಿವಾರ್ಯತೆಯಿಲ್ಲದಿದ್ದರೆ ಅವರು ವಿದ್ಯಾರ್ಥಿಗಳಿಗೆ ತಮ್ಮ ಕಚೇರಿಯಲ್ಲಿ ಪ್ರವೇಶ ನೀಡುವುದಿಲ್ಲ. ಮೂರನೆಯ ವಿಷಯಕ್ಕೆ ಸಂಬಂಧಿಸಿದಂತೆ, ಉಚ್ಚನ್ಯಾಯಾಲಯವು ಕಿರಿಯರಿಗೆ ತರಬೇತಿ ನೀಡಲು ಇಂತಿಷ್ಟು ಶುಲ್ಕವೆಂದು ನಿಗದಿಗೊಳಿಸಬೇಕು. ಹಾಗಿಲ್ಲದಿದ್ದರೆ, ಶುಲ್ಕವು ದುಬಾರಿಯಾಗಿ, ವಕೀಲಿ ವೃತ್ತಿಯು ಹಣವಂತರಿಗಾಗಿ ಕಾಯ್ದಿರಿಸಿದ ಕ್ಷೇತ್ರವಾಗುತ್ತದೆ.

---

ಸರಕಾರೀ ಕಾನೂನು ಕಾಲೇಜಿನ ಪತ್ರಿಕೆ – ಸಂಪುಟ. ೭, ಸಂಚಿಕೆ ೧, ಜನವರಿ, ೧೯೩೬

# ೩. ಸರ್ ರಾಧಕೃಷ್ಣನ್ ಅವರಿಗೆ ಡಾ. ಅಂಬೇಡ್ಕರ್ ಅವರು ನೀಡಿದ ಉತ್ತರ

ಪ್ರೊ. ರಾಧಾಕೃಷ್ಣನ್ ಅವರು ಒಮ್ಮೆ ಹೇಳಿದ್ದರು "ಹಿಂದೂಗಳ ಹಿರಿಮೆಯನ್ನು ಸಾಧಿಸಿ ತೋರಿಸಲು ಒಂದು ವಾದವಿದೆ. ಅದೆಂದರೆ, ಕಾಲದ ಆಘಾತಗಳಿಗೆ ಒಳಪಟ್ಟಿದ್ದೂ, ಅದು ಇನ್ನೂ ಮುಂದುವರಿದುಕೊಂಡು ಹೋಗುತ್ತಿದೆ. ಆದರೆ, ಇತರ ಪ್ರಾಚೀನ ಮತ, ಪಂಥಗಳು ಬಹಳ ಹಿಂದೆಯೇ ಹೇಳಹೆಸರಿಲ್ಲವಾದವು"

ಈ ವಾದಕ್ಕೆ ಉತ್ತರವಾಗಿ ಡಾ. ಅಂಬೇಡ್ಕರ್ ಅವರು ಹೇಳುತ್ತಾರೆ –

"ಬದುಕುಳಿಯಲು ಸಾಧ್ಯವಾಗಲು ಉಳಿಯುವ ಸಾಮರ್ಥ್ಯವು ಕಾರಣವೆಂಬ ಒಂದು ವಿಷಮ ವಾದಕ್ಕೆ ಇದು ಆಧಾರವಾಗುತ್ತದೆ. ನನ್ನ ದೃಷ್ಟಿಯಲ್ಲಿ ಒಂದು ಸಮುದಾಯವು ಉಳಿಯುತ್ತದೆಯೋ ಅಥವಾ ಅಳಿಯುತ್ತದೆಯೋ ಎಂಬುದು ಮುಖ್ಯ ಪ್ರಶ್ನೆಯಾಗುವುದಿಲ್ಲ. ಯಾವ ಸ್ತರದಲ್ಲಿ ಅದು ಬದುಕಿರುತ್ತದೆ ಎಂಬುದು ಪ್ರಶ್ನೆ. ಉಳಿವಿಗೆ ಹಲವು ಮಾರ್ಗಗಳುಂಟು. ಆದರೆ ಅವೆಲ್ಲವೂ ಒಂದೇ ಸಮನಾಗಿ ಗೌರವಾರ್ಹವಾಗಿರುವುದಿಲ್ಲ. ಅದು ವ್ಯಕ್ತಿಯಾಗಲೀ, ಸಮಾಜವಾಗಲೀ, ಕೇವಲ ಬದುಕಿರುವುದು ಮತ್ತು ಸಾರ್ಥಕವಾಗಿ ಬದುಕಿರುವುದು ಇವುಗಳ ನಡುವೆ ಅಗಾಧವಾದ ಅಂತರವಿದೆ. ಯುದ್ಧದಲ್ಲಿ ಹೋರಾಡಿ ಕೀರ್ತಿಯನ್ನು ಪಡೆದು ಬಾಳುವುದು ಒಂದು ರೀತಿ. ಕದನದಲ್ಲಿ ಹಿಮ್ಮೆಟ್ಟಿ, ಶರಣಾಗತನಾಗಿ ಅಥವಾ ಬಂಧಿಯಾಗಿ ಬದುಕುವುದೂ ಒಂದು ರೀತಿ. ತಾನು ಮತ್ತು ತನ್ನ ಜನಾಂಗ ಬದುಕುಳಿದಿದೆ ಎಂಬ ಸಮಾಧಾನ ಅಪ್ರಯೋಜಕ. ಹಾಗಿ ಬದುಕುಳಿದು ಸಾಗಿಸುವ ಜೀವನದ ಗುಣಮಟ್ಟ ಎಂತಹುದು ಎಂಬುದನ್ನು ನಾವು ಗಮನಿಸಬೇಕು. ಹಾಗೆ ಮಾಡಿದರೆ, ಅವನು ಕೇವಲ ಬದುಕುಳಿದಿರುವುದರ ಬಗ್ಗೆ ಹೆಮ್ಮೆಪಡಲಾರ ಎಂಬುದು ನನಗೆ ಖಚಿತವಾಗಿದೆ. ಹಿಂದೂಗಳು ಒಂದಾದ ಮೇಲೊಂದರಂತೆ ಪರಾಭವವನ್ನು ಅನುಭವಿಸುತ್ತಲೇ ಬಂದಿದ್ದಾರೆ. ಅವರಿಗೆ ಕಾಣುವ ಬದುಕಿನ ಸಾತತ್ಯವು ಚಿರಂಜೀವಿಯಾಗಿ ಬದುಕುವುದಲ್ಲ. ಸತ್ಯವನ್ನು ಒಪ್ಪಿಕೊಳ್ಳುವ ಮನಸ್ಸಿನ ವಿಚಾರವಂತ ಹಿಂದುವಿಗೆ ಹಾಗೆ ಬದುಕುವುದು ಅವಮಾನಕರವಾಗಿರುತ್ತದೆ".

* * * * *

---

'ದ ಲ್ಯಾಂಪ್. ನಲ್ಲಿ ೧೯೩೬ರ ಜೂನ್ ೨೫ರಂದು ಪ್ರಕಟವಾಗಿತ್ತು. ಖೈರ್‌ಮೊಡೆ, ಸಂಪುಟ ೬, ಪುಟ ೨೬೬ರಲ್ಲಿ ಉದ್ಧೃತವಾಗಿದೆ.

# ೪. ನ್ಯಾಯಾಧೀಶರ ಪೀಠದಿಂದ

## ೧೮೨೯–೩೧ರ ಅವಧಿಯಲ್ಲಿ ಪ್ರೈವೀ ಕೌನ್ಸಿಲ್‌ನ ಮುಂದೆ ವಾದಿಸಿದ ಮತ್ತು ನಿರ್ಣಯಿಸಲ್ಪಟ್ಟ ಪ್ರಕರಣಗಳ ವರದಿಗಳು
## ಜೆರೋಮ್ ವಿಲಿಯಮ್ ನ್ಯಾಪ್, ಬ್ಯಾರಿಸ್ಟರ್–ಅಟ್–ಲಾ, – ಸಂ.–೧
## (ಡಾ. ಬಿ.ಆರ್.ಅಂಬೇಡ್ಕರ್ ಅವರ ಟಿಪ್ಪಣಿ)

ಈ ಮುಂದೆ ಕೊಟ್ಟಿರುವ 'ಪರಮೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನು ಕುರಿತು' ಪ್ರಕರಣವು ೧೮೨೯ರ ಮೇ ೧೪ರಂದು ತೀರ್ಮಾನವಾಗಿದ್ದಿತು. ಈ ಪ್ರಕರಣವು ೧೦೭ ವರ್ಷಗಳಷ್ಟು ಹಳೆಯದಾದದ್ದರಿಂದ, ಕೇವಲ ಹಳೆಯದು ಎಂಬ ಕಾರಣಕ್ಕಾಗಿ ಮಾತ್ರ ಇದು ಆಸಕ್ತಿದಾಯಕವಾಗಿರಬಹುದು ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಇದು ಚರಿತ್ರೆಯ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಕಾನೂನು ವಿದ್ಯಾರ್ಥಿಗಳಿಗೂ ಮತ್ತು ಸಾಮಾನ್ಯ ಜನತೆಗೂ ಗಮನಸೆಳೆಯುವಂತಹುದಾಗಿದೆ. (ಸಿಪಾಯಿ) ದಂಗೆಯ ಪೂರ್ವದಲ್ಲಿ ಎರಡು ಸರಕಾರಗಳು ಇದ್ದಾಗ, ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳ ಮತ್ತು ಚಕ್ರವರ್ತಿಗಳ ಅಧಿಕಾರಿಗಳ ನಡುವೆ ಇದ್ದ ಹೊಟ್ಟೆಕಿಚ್ಚು ಮತ್ತು ದ್ವೇಷವನ್ನು ಚರಿತ್ರೆಯ ವಿದ್ಯಾರ್ಥಿಗಳೆಲ್ಲರೂ ಬಲ್ಲರು. 'ಸರ್ ಎಡ್ವರ್ಡ್ ವೆಸ್ಟ್ ಅವರ ನೆನಪು'ಗಳನ್ನು ಓದಿದವರು, ಈಸ್ಟ್ ಇಂಡಿಯಾ ಕಂಪನಿಯು ನೇಮಿಸಿದ್ದ ಗವರ್ನರ್ ಅವರು ಸಂಚು ನಡೆಸಿ, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳೊಂದಿಗೆ ವಾಗ್ವಿವಾದದಲ್ಲಿ ಮುಖಾಮುಖಿಯಾಗಿದ್ದರು ಎಂಬುದನ್ನು ಬಲ್ಲರು. ಈ ಪ್ರಕರಣವು ಈಸ್ಟ್ ಇಂಡಿಯಾ ಕಂಪನಿಯಿಂದ ಹಾಗೂ ಚಕ್ರವರ್ತಿಯವರಿಂದ ನೇಮಕವಾದ ಅಧಿಕಾರಿಗಳ ನಡುವಿನ ಅಸೂಯೆ ಮತ್ತು ದ್ವೇಷ ಎಷ್ಟು ದೂರ ಹೋಗಿತ್ತೆಂಬುದು ಚರಿತ್ರೆಯ ವಿದ್ಯಾರ್ಥಿಗಳಿಗೆ ಆಸಕ್ತಿಯನ್ನು ಹುಟ್ಟಿಸಿದರೆ, ಇದೇ ಪ್ರಕರಣವು ಬಹಳ ಹಳೆಯದಾಗಿದ್ದರೂ ಇಂದಿಗೂ ಪ್ರಸ್ತುತವಾಗಿರುವುದರಿಂದ ಕಾನೂನು ವಿದ್ಯಾರ್ಥಿಗಳಿಗೂ ಕುತೂಹಲಕರವಾಗಿದೆ. ಸ್ಥಳೀಯ ವ್ಯಾಪ್ತಿಯ ಹೊರಗೆ ವಾಸಿಸುತ್ತಿರುವ ವ್ಯಕ್ತಿಯೊಬ್ಬನನ್ನು ಹಾಜರುಪಡಿಸುವಂತೆ ಆದೇಶವನ್ನು ನೀಡಲು ಬಾಂಬೆಯಲ್ಲಿರುವ ಉಚ್ಚನ್ಯಾಯಾಲಯಕ್ಕೆ ಅಧಿಕಾರವಿದೆಯೇ ಎಂಬ ಪ್ರಶ್ನೆಯನ್ನು ಈ ಪ್ರಕರಣದಲ್ಲಿ ಎತ್ತಲಾಗಿದ್ದಿತು. ಈಗ ಅಸ್ತಿತ್ವದಲ್ಲಿ ಇಲ್ಲದಿರುವ ಉಚ್ಚನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಇದರ ತೀರ್ಮಾನವು ಸಂಬಂಧಿಸಿದ್ದಿತು ಎಂಬ ಕಾರಣಕ್ಕಾಗಿ ಇಂದಿನ ಕಾನೂನು ವಿದ್ಯಾರ್ಥಿಗಳಿಗೆ ಈ ಪ್ರಕರಣದ ಪ್ರಾಮುಖ್ಯವು ಕಡಿಮೆಯಾಗುವುದಿಲ್ಲ. ಇದಕ್ಕೆ ಕಾರಣವೆಂದರೆ, ಸರ್ವೋಚ್ಚನ್ಯಾಯಾಲಯವು ಈಗ ಅಸ್ತಿತ್ವದಲ್ಲಿಲ್ಲದಿದ್ದರೂ ಈಗಿರುವ ಉಚ್ಚ ನ್ಯಾಯಾಲಯಕ್ಕೆ ತನ್ನ ಅಧಿಕಾರ ವ್ಯಾಪ್ತಿಯ ಹೊರಗೆ ಇರುವ ವ್ಯಕ್ತಿಯನ್ನು ಹಾಜರು ಪಡಿಸುವಂತೆ ಆದೇಶವಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ಹಿಂದೆ ಇದ್ದ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟ ಹಾಗೆ ಆದ ತೀರ್ಮಾನವನ್ನು ಗಮನಿಸಲೇಬೇಕು. ವಿಶೇಷ ಅಧಿಕಾರ ಪತ್ರದ ಪ್ರಕಾರ, ಉಚ್ಚ ನ್ಯಾಯಾಲಕ್ಕೆ, ಈ ಹಿಂದೆ ಇದ್ದ ಸರ್ವೋಚ್ಚ ನ್ಯಾಯಾಲಯಕ್ಕೆ ಇದ್ದ ಅಧಿಕಾರಗಳು ಮಾತ್ರ ಇರುತ್ತವೆ. ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಅರಿಯಲು ಸರ್ವೋಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಅರಿಯಬೇಕಾಗುತ್ತದೆ. ತಮ್ಮ ಆದೇಶವನ್ನು

ಪಾಲಿಸಲು ಬಾಂಬೆ ಸರಕಾರವು ನಿರಾಕರಿಸಿದ್ದರಿಂದ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸರ್ ಜಾನ್ ಗ್ರಾಂಟ್ ಅವರು ಪ್ರೈವಿ ಕೌನ್ಸಿಲ್‌ಗೆ ಅರ್ಜಿಯನ್ನು ಸಲ್ಲಿಸಬೇಕಾಯಿತು. ಇಲ್ಲಿ, ನ್ಯಾಯಾಂಗದ ಆದೇಶವನ್ನು ಕಾರ್ಯಾಂಗವು ಪಾಲಿಸಬೇಕು ಎಂದು ಕಾನೂನು ವಿಧಿಸಬೇಕು ಎನ್ನುವುದು ಪ್ರಶ್ನೆಯಾಗಿರದೆ ಇದ್ದರೂ, ಜನಸಾಮಾನ್ಯರ ದೃಷ್ಟಿಯಿಂದ ಇದಕ್ಕಿಂತ ಹೆಚ್ಚಿನ ಪ್ರಾಧಾನ್ಯವುಳ್ಳ ವಿಷಯಗಳು ಇರುವುದು ವಿರಳ. ಯಾವುದೇ ಸಂವಿಧಾನವನ್ನು ನೋಡಿದರೂ, ನ್ಯಾಯಾಂಗವು, ಶಾಸಕಾಂಗ ಹಾಗೂ ಕಾರ್ಯಾಂಗಕ್ಕಿಂತ ದುರ್ಬಲವಾದ ಅಂಗವಾಗಿರುತ್ತದೆ. ಶಾಸನಗಳನ್ನು ಮಾಡುವುದಕ್ಕೆ ಶಾಸಕಾಂಗದ ಮೇಲೆಯೂ ಮತ್ತು ತನ್ನ ಆದೇಶಗಳನ್ನು ಪಾಲಿಸಲು ಕಾರ್ಯಾಂಗದ ಮೇಲೆಯೂ  ನ್ಯಾಯಾಂಗವು ಅವಲಂಬಿತವಾಗಿರುತ್ತದೆ. ಕಾರ್ಯಾಂಗವು ಸಾಮಾನ್ಯವಾಗಿ ನ್ಯಾಯಾಂಗವನ್ನು ಗೌರವಿಸುತ್ತದೆ ಮತ್ತು ಅದರ ಆದೇಶವನ್ನು ಪಾಲಿಸುತ್ತದೆ. ಪ್ರಸಕ್ತ ಪ್ರಕರಣದಲ್ಲಿ ನ್ಯಾಯಾಂಗವು ಆದೇಶವನ್ನು ನೀಡಲು ಅಧಿಕಾರವನ್ನು ಹೊಂದಿರಲಿಲ್ಲ ಎಂದು ವರದಿಯಾಗಿದೆ, ಆದ್ದರಿಂದ, ಆ ಆದೇಶವನ್ನು ಪಾಲಿಸಲು ನಿರಾಕರಿಸಿದ ಕಾರ್ಯಾಂಗದ ನಿಲವು ಸಮರ್ಥನೀಯವಾಗಿದೆ.  ಆದರೆ ಕೆಲವೊಮ್ಮೆ, ಕಾರ್ಯಾಂಗವು ನ್ಯಾಯಾಂಗದ ಮೇಲಿನ ದ್ವೇಷದಿಂದಾಗಲೀ, ತನ್ನ ಅವಿಧೇಯತೆಯಿಂದಾಗಲೀ, ನ್ಯಾಯಾಂಗದ ಆದೇಶವನ್ನು ಪಾಲಿಸಲು ನಿರಾಕರಿಸುವ ಸಂದರ್ಭಬರಬಹುದು. ಹಾಗಾದರೆ, ನ್ಯಾಯವಿತರಣೆಯು ಗಗನಕುಸುಮವಾಗುತ್ತದೆ ಮತ್ತು ಇದರ ಪರಿಣಾಮವಾಗಿ, ನಾಗರಿಕರ ಜೀವ, ಸ್ವಾತಂತ್ರ್ಯ ಮತ್ತು ಆಸ್ತಿಗಳ ವಿಷಯದಲ್ಲಿ ಗಂಭೀರ ಪ್ರಶ್ನೆಗಳು ಉದ್ಭವವಾಗಬಹುದು. ೧೯೩೫ರ ಹೊಸ ಭಾರತ ಸರಕಾರದ ಅಧಿನಿಯಮದಲ್ಲಿ ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸುವ ಬಗ್ಗೆ ಕಾರ್ಯಾಂಗದ ಹೊಣೆಯನ್ನು ಕುರಿತು ಇರುವ ವಿಧಿಗಳು ಹಾಗೂ, ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಕೈಸರ್‌ನ ಪತನ–ಹಿಟ್ಲರನ ಉನ್ನತಿಯ ನಡುವಿನ ಸಂಧಿಕಾಲದಲ್ಲಿನ ಜರ್ಮನ್ ದೇಶದ ಸಂವಿಧಾನಗಳಲ್ಲಿರುವ ಇದಕ್ಕೆ ಸದೃಶವಾದ ವಿಧಿಗಳು – ಇವುಗಳ ನಡುವೆ ಅಂತರವಿರುವುದರಿಂದ ಇದನ್ನು ಗಮನಿಸಬೇಕಾಗುತ್ತದೆ. ಇದರ ಅಧ್ಯಯನವು ನಿಶ್ಚಯವಾಗಿಯೂ ಲಾಭದಾಯಕವಾಗಿದ್ದು, ಇದರಲ್ಲಿ ಆಸಕ್ತಿಯಿರುವವರು ಸಹಜವಾಗಿಯೇ ಈ ಅಧ್ಯಯನವನ್ನು ಮಾಡುತ್ತಾರೆ. (ಪ್ರಕರಣದ ವಿವರಗಳನ್ನು ಮುಂದೆ ನೀಡಲಾಗಿದೆ)

**ಬಾಂಬೆ (ಸರಕಾರದ) ವತಿಯಿಂದ**

**'ಪರಮೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನು ಕುರಿತು' (೧೮೨೯ರ ಮೇ ೧೪)**

ತನ್ನ ಅಧಿಕಾರವ್ಯಾಪ್ತಿಯಲ್ಲಿ ವಾಸವಾಗಿರುವ ವ್ಯಕ್ತಿ, ಅಥವಾ ಇಂತಹ ವ್ಯಾಪ್ತಿಯಲ್ಲಿ ಈ ಹಿಂದೆ ಇದ್ದು ಈಗ ಈ ವ್ಯಾಪ್ತಿಯ ಹೊರಗೆ ಇರುವಂತಹ ವ್ಯಕ್ತಿಯನ್ನು ಹೊರತುಪಡಿಸಿ, ಇತರರನ್ನು ವ್ಯಕ್ತಿಶಃ ಹಾಜರುಪಡಿಸಲು ಆದೇಶವನ್ನು ನೀಡಲು ಬಾಂಬೆಯ ಸರ್ವೋಚ್ಚನ್ಯಾಯಾಲಯಕ್ಕೆ ಯಾವುದೇ ಅಧಿಕಾರವಿರುವುದಿಲ್ಲ (೧ ನ್ಯಾಪ್,೫೮).

ಸ್ಥಳೀಯ ನ್ಯಾಯಾಲಯದ ಆದೇಶದ ಮೇಲೆ ಬಂಧಿತವಾಗಿರುವ ವ್ಯಕ್ತಿಯನ್ನು ಬಿಡುಗಡೆ ಮಾಡುವ ಅಧಿಕಾರವಿಲ್ಲದಿರುವ ಬಂದೀಖಾನೆಯ ಅಧಿಕಾರಿ ಅಥವಾ ಸ್ಥಳೀಯ ನ್ಯಾಯಾಲದ ಅಧಿಕಾರಿಗಳಿಗೆ ಆ ಬಂಧಿತ ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸುವಂತೆ ಆದೇಶವನ್ನು ನೀಡುವ ಅಧಿಕಾರವು ಸರ್ವೋಚ್ಚ ನ್ಯಾಯಾಲಕ್ಕೆ ಇರುವುದಿಲ್ಲ (೧ ನ್ಯಾಪ್. ೫೮)

ಲಿಖಿತರೂಪದಲ್ಲಿ, ಅದರಲ್ಲಿಯೂ ವ್ಯಕ್ತಿಯೊಬ್ಬನನ್ನು ವ್ಯಕ್ತಿಶಃ ಹಾಜರು ಪಡಿಸುವ ವಿಷಯದಲ್ಲಿ,

ಇಲ್ಲದಿರುವ ತನ್ನ ಅಧಿಕಾರವ್ಯಾಪ್ತಿಯನ್ನು ಗಮನಿಸುವುದಕ್ಕೆ ಸರ್ವೋಚ್ಚ ನ್ಯಾಯಾಲಯವು ಬದ್ಧವಾಗಿರುತ್ತದೆ. (೧ ನ್ಯಾಪ್, ೫೯).

ಬಾಂಬೆಯ ಹಿಂದಿನ ಸರ್ವೋಚ್ಚ ನ್ಯಾಯಾಲಯದ ಈಗ ಉಳಿದಿರುವ ನ್ಯಾಯಮೂರ್ತಿಗಳಾದ ಸರ್ ಜಾನ್ ಪೀಟರ್ ಗ್ರಾಂಟ್ ಅವರ ಅರ್ಜಿಯಿಂದಾಗಿ ಈ ಪ್ರಕರಣವು ನ್ಯಾಯಾಲಯದ ಮುಂದೆ ಬಂದಿದೆ. 'ಡಿಸೆಂಬರ್ ೮ನೆಯ ದಿನಾಂಕದ ತಮ್ಮ ಅಧಿಕಾರಸ್ವಾಮ್ಯದ ಪತ್ರದ ಪ್ರಕಾರ, ಮಾನ್ಯ ಚಕ್ರವರ್ತಿಗಳು ಬಾಂಬೆ ಪ್ರದೇಶದ ವ್ಯಾಪ್ತಿಯಲ್ಲಿ ಒಂದು ಅಭಿಲೇಖ ನ್ಯಾಯಾಲಯವು ಇರತಕ್ಕದ್ದು, ಆ ನ್ಯಾಯಾಲಯಕ್ಕೆ ಬಾಂಬೆಯ ಸರ್ವೋಚ್ಚನ್ಯಾಯಾಲಯವೆಂಬ ಹೆಸರಿರತಕ್ಕದ್ದು ಎಂದು ಆಜ್ಞೆಮಾಡಿದ್ದಾರೆ, ಮತ್ತು ಈ ನಿಯಮಗಳ ಪ್ರಕಾರ ಬಾಂಬೆಯ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ. ಈ ನ್ಯಾಯಾಲಯವು ಒಬ್ಬ ಪ್ರಧಾನ ನ್ಯಾಯಮೂರ್ತಿಯನ್ನು ಹೊಂದಿರಬೇಕು ಮತ್ತು ಅವರನ್ನು ಬಾಂಬೆ ಸರ್ವೋಚ್ಚ ನ್ಯಾಯಾಲಯದ ಪ್ರಧಾನ ನ್ಯಾಯಮೂರ್ತಿ ಎಂದು ಕರೆಯಬೇಕು. ಅವರ ಜೊತೆಗೆ, ಮತ್ತಿಬ್ಬರು ನ್ಯಾಯಮೂರ್ತಿಗಳನ್ನೂ ನ್ಯಾಯಾಲಯವು ಹೊಂದಿರಬೇಕು ಮತ್ತು ಅವರನ್ನು ಬಾಂಬೆ ಸರ್ವೋಚ್ಚ ನ್ಯಾಯಾಲಯದ ಕಿರಿಯ ನ್ಯಾಯಮೂರ್ತಿಗಳೆಂದು ಕರೆಯಬೇಕು.

ಈ ರೀತಿಯಲ್ಲಿ ನೇಮಕವಾದ ಪ್ರಧಾನ ಮತ್ತು ಕಿರಿಯ ನ್ಯಾಯಮೂರ್ತಿಗಳು ಎಲ್ಲರೂ ಒಟ್ಟಾಗಿ, ವ್ಯಕ್ತಿಶಃ ಪ್ರತಿಯೊಬ್ಬರೂ ಬಾಂಬೆ ನಗರ ಮತ್ತು ದ್ವೀಪವನ್ನು ಒಳಗೊಂಡಂತೆ ಇಡೀ ಬಾಂಬೆ ಪ್ರದೇಶದಲ್ಲಿ ಶಾಂತಿಯನ್ನು ಕಾಪಾಡಿಕೊಂಡುಬರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮಾನ್ಯ ಚಕ್ರವರ್ತಿಗಳ ನ್ಯಾಯಾಲಯವು ಇಂಗ್ಲೆಂಡಿನಲ್ಲಿ ಹೊಂದಿರುವಂತಹ ಅಧಿಕಾರವ್ಯಾಪ್ತಿಯನ್ನು ಇದೇ ವ್ಯಾಪ್ತಿಯಲ್ಲಿ ಬರುವ ಇಡೀ ಪ್ರದೇಶದಲ್ಲಿನ ವ್ಯಾಪಾರ ಕೋಠಿಗಳ ಮತ್ತು ಸದರಿ ಪ್ರದೇಶದಲ್ಲಿನ ಸರಕಾರಗಳ ಮೇಲೆ ಮತ್ತು ಸಾಂದರ್ಭಿಕವಾಗಿ ನ್ಯಾಯಯುತವಾಗಿ ವಹಿಸಿಕೊಳ್ಳುವ ಅಧಿಕಾರವನ್ನು ಈ ನ್ಯಾಯಾಲಯವೂ ಹೊಂದಿರುತ್ತದೆ.

ಮಾನ್ಯ ಚಕ್ರವರ್ತಿಗಳ ಲಾಂಛನವನ್ನು, ಬಾಂಬೆ ಸರ್ವೋಚ್ಚ ನ್ಯಾಯಾಲಯವು ಹೊಂದಿರಬೇಕು ಮತ್ತು ಸಂದರ್ಭಕ್ಕೆ ಅನುಗುಣವಾಗಿ ಉಪಯೋಗಿಸಬೇಕು. ತಾನು ನೀಡುವ ಎಲ್ಲಾ ಲಿಖಿತಗಳನ್ನೂ, ಹಾಜರಿ ಆಜ್ಞೆಗಳನ್ನೂ, ನಿರೂಪಣಾ ಪತ್ರಗಳನ್ನೂ, ಆದೇಶಗಳನ್ನೂ ಹಾಗೂ ಮತ್ತಿತರ ನಿರ್ಬಂಧಕಗಳನ್ನೂ ಬಾಂಬೆ ಸರ್ವೋಚ್ಚ ನ್ಯಾಯಾಲಯವು ಮಾನ್ಯ ಚಕ್ರವರ್ತಿಗಳ ಹೆಸರಿನಲ್ಲಿ ಮತ್ತು ಅವರ ಲಾಂಛನದ ಅಡಿಯಲ್ಲಿ ನೀಡಬೇಕು.

ಈ ಹಿಂದೆ ಹೇಳಿದ ಅಧಿಕಾರ ಸ್ವಾಮ್ಯ ಪತ್ರದ ಪ್ರಕಾರ, ಚಕ್ರವರ್ತಿಗಳು ಬಾಂಬೆಯ ಅಭಿಲೇಖಕರಾಗಿದ್ದ ಸರ್ ಎಡ್ವರ್ಡ್ ವೆಸ್ಟ್ ಅವರನ್ನು ಪ್ರಧಾನ ನ್ಯಾಯಮೂರ್ತಿಯನ್ನಾಗಿ ಹಾಗೂ ಪ್ರಿನ್ಸ್ ಆಫ಼್ ವೇಲ್ಸ್‌ನ ಅಭಿಲೇಖಕರಾಗಿದ್ದ ಸರ್ ರಾಲ್ಫ್ ರೈಸ್ ಮತ್ತು ಸರ್ ಚಾರ್ಲ್ಸ್ ಹರ್ಕೋರ್ಟ್ ಛೇಂಬರ್ಸ್ ಅವರನ್ನು ಮೊದಲ ಕಿರಿಯ ನ್ಯಾಯಮೂರ್ತಿಗಳನ್ನಾಗಿ ಬಾಂಬೆ ಸರ್ವೋಚ್ಚ ನ್ಯಾಯಾಲಯಕ್ಕೆ ನೇಮಿಸಿದರು.

ಮತ್ತು, ಚಕ್ರವರ್ತಿಗಳು ಮೇಲೆ ಹೇಳಿದ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರಸ್ವಾಮ್ಯದ ಪತ್ರದಲ್ಲಿ ಹೇಳಿರುವ ಕೆಲವೊಂದು ನಿರ್ದಿಷ್ಟ ಷರತ್ತು, ವಿನಾಯತಿ ಮತ್ತು ಘೋಷಣೆಗಳಿಗೆ ಒಳಪಟ್ಟು, ಈ ಮೇಲೆ ಹೇಳಿದ ಸರಕಾರದ ವ್ಯಾಪ್ತಿಯಲ್ಲಿ ಅಥವಾ ಸರಕಾರದ ಮೇಲೆ ಅವಲಂಬಿತವಾಗಿರುವ ಪ್ರದೇಶಗಳಲ್ಲಿ ಹುಟ್ಟುವ ವ್ಯಾಜ್ಯ ಪ್ರಕರಣಗಳನ್ನು ಆಲಿಸಿ, ತೀರ್ಮಾನಿಸುವುದರ ಬಗ್ಗೆ ನಿರ್ದೇಶನ, ಆದೇಶವನ್ನು ನೀಡಿ, ತತ್ಸಂಬಂಧಿ ಅಧಿಕಾರವ್ಯಾಪ್ತಿಯನ್ನು ನಿರ್ದಿಷ್ಟಗೊಳಿಸಿದರು. ದಿವಾಣಿ ವ್ಯಾಜ್ಯ ಪ್ರಕರಣಗಳನ್ನು ಆರಂಭಿಸಲು, ಆಲಿಸಲು ಮತ್ತು ತೀರ್ಮಾನಿಸಲು ಬೇಕಾದ ಮತ್ತು ಹಾಗೆ ನೀಡಿದ ತೀರ್ಮಾನವನ್ನು ಜಾರಿಗೊಳಿಸಲು

ಅಗತ್ಯವಾದ ಆದೇಶವನ್ನು ನೀಡಲು ಬೇಕಾದ ಕಾರ್ಯಸ್ವರೂಪದ ರೂಪರೇಷೆಗಳನ್ನು ಚಕ್ರವರ್ತಿಗಳು ನೀಡಿದರು.

ಚಕ್ರವರ್ತಿಗಳು ದಯವಿಟ್ಟು ಆದೇಶ ನೀಡಿ ಹಿಂದೆ ಹೇಳಿದ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಿ ಈ ಮುಂದೆ ಹೇಳಿದಂತೆ ನಿಯಮಿಸಿದರು. – ಈ ಸರ್ವೋಚ್ಚ ನ್ಯಾಯಾಲಯವು ಧರ್ಮಸಮ್ಮತವಾದ ನ್ಯಾಯಾಲಯವಾಗಿರತಕ್ಕದ್ದು, ಅಧಿಕಾರಸ್ವಾಮ್ಯದ ಪತ್ರದಲ್ಲಿ ಹೇಳಿರುವಂತೆ ತನ್ನ ವ್ಯಾಪ್ತಿಯಲ್ಲಿ ಬರುವ ಪ್ರಜೆಗಳ ಮೇಲೆ ನ್ಯಾಯಸಮ್ಮತವಾದ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು, ಸಂಚಾರೀ ನ್ಯಾಯಾಲಯವಾಗಿರತಕ್ಕದ್ದು, ಬಾಂಬೆನಗರ ಮತ್ತು ಬಾಂಬೆ ದ್ವೀಪದ ಬಂಧಿತರನ್ನು ಖುಲಾಸೆಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು, ಬಾಂಬೆ ನಗರ ಮತ್ತು ಬಾಂಬೆ ದ್ವೀಪ ಹಾಗೂ ಅವುಗಳ ವ್ಯಾಪ್ತಿಯಲ್ಲಿ, ಮತ್ತು ಮೇಲೆ ಹೇಳಿದ ಸರಕಾರದ ವ್ಯಾಪ್ತಿಯಲ್ಲಿ ಬರುವ ಅಥವಾ ಅದರ ಮೇಲೆ ಅವಲಂಬಿತವಾಗಿರುವ ಎಲ್ಲಾ ಪ್ರದೇಶಗಳಲ್ಲಿನ ವ್ಯಾಪಾರ ಕೋಠಿಗಳ ವಿಷಯದಲ್ಲಿ ಸಮುದ್ರನ್ಯಾಯಾಲಯದ ರೀತಿಯಲ್ಲಿ ಇರತಕ್ಕದ್ದು.

ಮತ್ತು, ಬಾಂಬೆ ಸರ್ವೋಚ್ಚ ನ್ಯಾಯಾಲಯದ ಮೇಲೆ ಹೇಳಿದ ಕಿರಿಯ ನ್ಯಾಯಮೂರ್ತಿಗಳಲ್ಲಿ ಮೊದಲನೆಯವರಾದ ಸರ್ ಆರ್. ರೈಸ್ ಅವರು ೧೮೨೭ರ ನವೆಂಬರ್‌ನಲ್ಲಿ ತಮ್ಮ ಪದತ್ಯಾಗವನ್ನು ಮಾಡಿದರು, ಮತ್ತು ಸರ್ ಸಿ.ಎಚ್. ಛೇಂಬರ್ಸ್ ಅವರು ಕಿರಿಯ ನ್ಯಾಯಮೂರ್ತಿಗಳಲ್ಲಿ ಮೊದಲನೆಯವರಾದರು, ಅಲ್ಲದೆ ಸರ್ ಆರ್. ರೈಸ್ ಅವರು ರಾಜೀನಾಮೆಯನ್ನು ನೀಡಿದ ನಂತರ ೧೮೨೭ ಆಗಸ್ಟ್ ೩೦ನೆಯ ದಿನಾಂಕದ ಅಧಿಕಾರಸ್ವಾಮ್ಯದ ಪತ್ರದ ಪ್ರಕಾರ, ಅವರ ಕೋಣೆಯಲ್ಲಿ, ಪ್ರಸಕ್ತ ಅಹವಾಲುದಾರರನ್ನು ಬಾಂಬೆ ಸರ್ವೋಚ್ಚ ನ್ಯಾಯಾಲಯದ ಕಿರಿಯ ನ್ಯಾಯಮೂರ್ತಿಗಳಲ್ಲಿ ಒಬ್ಬರನ್ನಾಗಿ ನೇಮಿಸಲಾಯಿತು ಮತ್ತು ಅವರು ೧೮೨೮ರ ಫೆಬ್ರವರಿ ತಿಂಗಳಿನ ೯ನೆಯ ದಿನಾಂಕದಂದು ತಮ್ಮ ಅಧಿಕಾರವನ್ನು ಸ್ವೀಕರಿಸಿದರು.

ಈ ಮೇಲೆ ಹೇಳಿದ ಪ್ರಧಾನ ನ್ಯಾಯಮೂರ್ತಿ ಸರ್. ಎಡ್ವರ್ಡ್ ವೆಸ್ಟ್ ಅವರು ೧೮೨೮ರ ಆಗಸ್ಟ್ ೧೮ರಂದು ಇಹಲೋಕವನ್ನು ತ್ಯಜಿಸಿದರು. ಅದೇ ವರ್ಷದ ಅಕ್ಟೋಬರ್ ೩ರಂದು ಒಂದು ಪತ್ರವನ್ನು ಕೆಳಕಂಡಹಾಗೆ ಬರೆದು ಕಳುಹಿಸಲಾಗಿತ್ತು.

"ಬಾಂಬೆ ಸರ್ವೋಚ್ಚ ನ್ಯಾಯಾಲಯದ ಕಿರಿಯ ನ್ಯಾಯಮೂರ್ತಿಗಳಾದ ಸರ್ ಸಿ.ಎಚ್. ಛೇಂಬರ್ಸ್ ಹಾಗೂ ಪ್ರಸಕ್ತ ಅಹವಾಲುದಾರರಿಗೆ ೧೮೨೮ರ ಅಕ್ಟೋಬರ್ ೩ರ ದಿನಾಂಕದ ಆ ಪತ್ರವು ಗವರ್ನರ್ ಜಾನ್ ಮಾಕೋಮ್, ಲೆಫ್ಟಿನೆಂಟ್ ಜನರಲ್ ಹಾಗೂ ಸೇನಾ ದಂಡನಾಯಕ ಟಿ. ಬ್ರ್ಯಾಡ್‌ಫೋರ್ಡ್, ಸಂಪುಟದ ಎರಡನೆಯ ಹಾಗೂ ಮೂರನೆಯ ಸದಸ್ಯರಾಗಿದ್ದ ಜೆ.ಜೆ. ಸ್ಪ್ಯಾರೊ ಮತ್ತು ಜಾನ್ ರೋಮರ್ ಅವರುಗಳಿಂದ ರುಜುಮಾಡಲ್ಪಟ್ಟಿತ್ತು"

ಆ ಪತ್ರದ ಧಾಟಿ ಹೀಗಿತ್ತು,

"ಸನ್ಮಾನ್ಯರೆ,

ನಾವು ತಮಗೆ ಈ ಪತ್ರವನ್ನು ಬರೆಯುವಲ್ಲಿ ಸಾಮಾನ್ಯ ನೀತಿಸಂಹಿತೆಯನ್ನು ಮೀರುತ್ತಿದ್ದೇವೆ ಎಂಬ ಅರಿವು ನಮಗಿದೆ. ಆದರೆ ನಾವು ಇರುವ ಸನ್ನಿವೇಶವು ಈ ಉಲ್ಲಂಘನೆಯನ್ನು ಸಮರ್ಥಿಸುತ್ತದೆ ಎಂದು ನಾವು ನಂಬಿದ್ದೇವೆ. ನಾವು ತಿಳಿದಿರುವ ತಮ್ಮ ಸಾರ್ವಜನಿಕ ಹಾಗೂ ಖಾಸಗೀ ಜೀವನದ ಚಾರಿತ್ರ್ಯದ ಖ್ಯಾತಿಯು ತಾವು ಯೋಗ್ಯವಾದ ದೃಷ್ಟಿಯಿಂದ ಈ ಪತ್ರದ ಬರೆಯುವುದರಲ್ಲಿ ಉಂಟಾಗಿರುವ ಉಲ್ಲಂಘನೆಯನ್ನು ನೋಡುತ್ತೀರೆಂಬ ಧೈರ್ಯವನ್ನು ನಮಗೆ ತುಂಬುತ್ತಿದೆ. ತಾವು ಬ್ರಿಟಿಷ್

ನ್ಯಾಯಮೂರ್ತಿಗಳಾಗಿ ಎಲ್ಲಾ ಕರ್ತವ್ಯಗಳನ್ನೂ ನಿಷ್ಠುರವಾಗಿ ಪಾಲಿಸುವ ಹೊಣೆಗಾರಿಕೆಯನ್ನು ಹೊತ್ತಿರುವುದು ನಿಜವಾಗಿದ್ದಾಗ್ಯೂ, ಈ ವಿಶೇಷ ಸನ್ನಿವೇಶದಲ್ಲಿ ತಮ್ಮ ನೇತೃತ್ವದ ನ್ಯಾಯಾಲಯದ ಕಾನೂನುಗಳಿಗೆ ತಾವೂ ಬಾಧ್ಯರಾಗಿರಬೇಕಾಗಿರುತ್ತದೆ. ಅಲ್ಲದೆ ವ್ಯವಸ್ಥೆಯಲ್ಲಿ ಶಾಸಕಾಂಗದ ಆಶಯಗಳನ್ನೂ ಅರ್ಥಮಾಡಿಕೊಳ್ಳಬೇಕಾಗುತ್ತದೆ ಮತ್ತು ಪ್ರಾಂತದ ಆಡಳಿತವನ್ನು ನಡೆಸುತ್ತಿರುವ ಸರಕಾರಕ್ಕೆ ಅನುವಾಗಿ ಬೆಂಬಲವನ್ನು ನೀಡಬೇಕಾಗುತ್ತದೆ. ಹೀಗಾಗಿ ನಮ್ಮ ಮನವಿಯನ್ನು ಆಲಿಸಿ, ತಮ್ಮ ಕಾರ್ಯವು ಎಷ್ಟೇ ನ್ಯಾಯಸಮ್ಮತವಾಗಿದ್ದರೂ, ಆ ಕಾರ್ಯನಿರ್ವಹಣೆಯನ್ನು ಸ್ವಲ್ಪಕಾಲದವರೆಗೆ ಜಾರಿಗೊಳಿಸದೆ ಇರಬೇಕಾಗುತ್ತದೆ. ಹಾಗಿಲ್ಲದಿದ್ದರೆ, ತಮ್ಮ ಈ ಕಾರ್ಯ ನಿರ್ವಹಣೆಯು ನಮ್ಮ ಅಧಿಕಾರ ಹಾಗೂ ತಮ್ಮ ಅಧಿಕಾರಗಳ ನಡುವೆ ಮುಕ್ತ ಸಂಘರ್ಷಕ್ಕೆ ಕಾರಣವಾಗುತ್ತದೆ ಎಂದು ನಾವು ಭಾವಿಸಿದ್ದೇವೆ. ಇದು ದೇಶೀಯರ ದೃಷ್ಟಿಯಲ್ಲಿ, ನಮ್ಮಿಬ್ಬರಿಗೂ ಅತ್ಯಗತ್ಯವಾದ ಗೌರವವನ್ನು ಕಡಿಮೆಮಾಡುವುದಷ್ಟೇ ಅಲ್ಲದೆ, ನಮ್ಮ ಆಂತರಿಕ ಆಡಳಿತದಲ್ಲಿ ಒಡಕಿರಬಹುದೆಂಬ ಭಾವನೆಯನ್ನು ದೇಶೀಯ ಪ್ರಜೆಗಳ ಮನಸ್ಸಿನಲ್ಲಿ ಮೂಡಿಸಿ ಭಾರತ ಸಾಮ್ರಾಜ್ಯದ ಅಭಿವೃದ್ಧಿ ಹಾಗೂ ಶಾಶ್ವತತೆಗೆ ಧಕ್ಕೆಯನ್ನು ತರುತ್ತದೆ. ಇಂತಹ ಸನ್ನಿವೇಶಕ್ಕೆ ಹಲವಾರು ರೀತಿಯ ಕಾರಣಗಳಿದ್ದು, ಅವುಗಳನ್ನು ವಿವರಿಸುವುದು ನಮ್ಮಿಬ್ಬರ ಅಧಿಕಾರಕ್ಕೂ ಮೀರಿದ ವಿಷಯವಾಗಿದೆ. ಆದರೆ ನಾವು ಯಥಾರ್ಥವೆಂದು ಮನಗಂಡುದನ್ನು ಒತ್ತಿಹೇಳುವ ಆವಶ್ಯಕತೆಯಿದೆ ಎಂದು ಭಾವಿಸುತ್ತೇವೆ. ಹೀಗೆ ಮಾಡುವುದರಿಂದ, ನಮ್ಮ ಸರಕಾರದ ಬಲವನ್ನು ಎಲ್ಲಾ ಪ್ರಾಂತಗಳಲ್ಲೂ ಅದರಲ್ಲಿಯೂ ಇತ್ತೀಚೆಗೆ ಗೆದ್ದುಕೊಂಡಿರುವ ಪ್ರದೇಶಗಳಲ್ಲಿಯೂ, ಕಾಪಾಡಿಕೊಂಡು ಹೋಗಲು ಸಹಾಯಕವಾಗುತ್ತದೆ, ಮತ್ತು ಅದರಿಂದ ದೇಶದಲ್ಲಿ ಸಾಮಾನ್ಯವಾಗಿ ಶಾಂತಿಯನ್ನು, ಉತ್ತಮ ಆಡಳಿತವನ್ನು ಸಾಧಿಸಲು, ಆಡಳಿತಾತ್ಮಕ ಕಾನೂನುಗಳನ್ನು ಜಾರಿಗೆ ತರಲು ನೆರವಾಗುತ್ತದೆ ಎಂಬುದನ್ನು ತಮಗೆ ಮನಗಾಣಿಸಲು ಸಶಕ್ತವಾಗುತ್ತದೆ ಎಂಬ ನಂಬಿಕೆಯು ನಮಗಿದೆ.

"೨. ಸರ್ವೋಚ್ಚನ್ಯಾಯಾಲಯವು ಇತ್ತೀಚಿನ ಮೊರೊ ರಾಗೋನಾಥ್ (೧ ನ್ಯಾಪ್, ೮) ಮತ್ತು ಬಾಪೋ ಗುನ್ನೆಸ್ (೧ ನ್ಯಾಪ್, ೧೧) ಇವರುಗಳ ಪ್ರಕರಣದಲ್ಲಿ ನೀಡಿರುವ ಆದೇಶವನ್ನು ಪಾಲಿಸುವ ಕಾರ್ಯವು ನಮಗೆ ಕಾರ್ಯಸಾಧುವಾಗಿರುವುದಿಲ್ಲ. ಇದರ ಕಾರಣಗಳನ್ನು ನಾವು ಈಗಾಗಲೇ ನಮ್ಮ ಮೇಲಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಸದ್ಯ ನಮಗೆ ಬಂದಿರುವಂತಹ ಆದೇಶಗಳ ರೀತಿಯ ಯಾವುದೇ ಆದೇಶಗಳನ್ನು, ಅಂದರೆ ನಮ್ಮ ಅಧಿಕಾರವ್ಯಾಪ್ತಿಯ ಬಾಂಬೆ ದ್ವೀಪದಲ್ಲಿ ಇದ್ದು, ಈಗ ಇಲ್ಲಿ ವಾಸವಾಗಿರದ ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸಬೇಕೆಂದು ನೀಡಿರುವ ಆದೇಶದ ಮಾದರಿಯ ಯಾವುದೇ ಆದೇಶಗಳನ್ನು ಪಾಲಿಸಲು ಇನ್ನು ಮುಂದೆಯೂ ಸಾಧ್ಯವಾಗುವುದಿಲ್ಲ.

"೩. ಇಂತಹ ಪ್ರಕರಣಗಳಲ್ಲಿ ನಾವು ನಿಭಾಯಿಸಬೇಕಾದ ಜವಾಬ್ದಾರಿಯ ಸಂಪೂರ್ಣ ಅರಿವಿನ ಸೂಕ್ಷ್ಮತೆ ನಮಗಿದೆ. ಆದರೆ ನಾವಿರುವ ಪರಿಸ್ಥಿತಿಯ ಅಗತ್ಯಗಳನ್ನು ಸಮರ್ಥಿಸಿಕೊಳ್ಳುವ ದಾರಿಯನ್ನೂ ನಾವು ನೋಡಬೇಕಾಗಿದೆ. ನಾವು ಕ್ರಮ ಜರುಗಿಸಬೇಕಾದರೆ ಅದಕ್ಕೆ ಬೇಕಾಗುವ ಆಧಾರವನ್ನು ನಮ್ಮ ನಾಗರಿಕ ಆಡಳಿತ ಮತ್ತು ಸರಕಾರದ ನೀತಿಗಳ ಏಕಮಾತ್ರ ದೃಷ್ಟಿಯಿಂದ ಗಮನಿಸಬೇಕು. ನಮ್ಮ ಮೇಲಧಿಕಾರಿಗಳಿಂದ ಆಜ್ಞಪ್ತರಾಗುವವರೆಗೆ ನಾವು ಈ ನಿಲುವನ್ನು ಬದಲಾಯಿಸಲು ಸಾಧ್ಯವಿಲ್ಲ. ಅವರಿಂದ ಆದೇಶವು ಬಂದ ತಕ್ಷಣ ನಾವು ಅದನ್ನು ತಮಗೆ ತಿಳಿಸುತ್ತೇವೆ. ಅಲ್ಲಿಯವರೆಗೆ, ನಾವು ಮೇಲೆ ವಿವರಿಸಿದ ಕಾರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಮೇಲೆ ಹೇಳಿದ ಪ್ರಕರಣಗಳಲ್ಲಿ ನಮ್ಮ ಈ ನಡವಳಿಕೆಯನ್ನು ಸಮ್ಮತಿಸದೆ, ತಮ್ಮ ಕರ್ತವ್ಯದ ದೃಷ್ಟಿಯಿಂದ ನಮ್ಮ ವಿರುದ್ಧ ಹೂಡಿರುವ ಮೇಲ್ಮನವಿಯ ವಿಚಾರದಲ್ಲಿ

ತಾವು ತಟಸ್ಥ ನೀತಿಯನ್ನು ಅನುಸರಿಸಬೇಕು. ಇಲ್ಲದಿದ್ದರೆ ಇದು ಸಾರ್ವಜನಿಕ ಹಿತಾಸಕ್ತಿಗೆ ತೀವ್ರ ಧಕ್ಕೆಯನ್ನುಂಟುಮಾಡುತ್ತದೆ. ಅಲ್ಲದೆ, ಸರಕಾರವು ತೆಗೆದುಕೊಂಡಿರುವ ಘೋಷಿತ ನಿಲುವು ತಾವು ಹೇಳುವ ಸದ್ಯದ ಅಥವಾ ಭವಿಷ್ಯದ ಅಧಿಕಾರವ್ಯಾಪ್ತಿಯ ವಿಷಯಕ್ಕೆ ಅನುಕೂಲಕರವಾಗಿರುವುದಿಲ್ಲ. ಸಂಪೂರ್ಣವಾಗಿ ಮತ್ತು ಶೀಘ್ರವಾಗಿ ಪರಾಮರ್ಶಿಸಲು ಕೋರಿರುವ ಈ ವಿಷಯಕ್ಕೆ ಪರಿಹಾರವನ್ನು ನೀಡಲು ಹೆಚ್ಚು ಸಮಯವೇನೂ ಬೇಕಾಗುವುದಿಲ್ಲ. ನಾವು ತಮ್ಮ ಆದೇಶದ ಪ್ರಕಾರ ಕೆಲವೊಮ್ಮೆ ನಡೆದುಕೊಳ್ಳಬೇಕು ಎಂಬ ಹೊಣೆಗಾರಿಕೆಯ ಸೂಕ್ಷ್ಮ ಅರಿವಿದ್ದರೂ, ಸರಕಾರದ ಸ್ಪಷ್ಟ ನಿರಾಕರಣೆಯು ತಮ್ಮ ಮೇಲ್ಮನವಿಯನ್ನು ಆಹ್ವಾನಿಸುವಷ್ಟು ಅನಿವಾರ್ಯವಾದ ಅಗತ್ಯವಾಗಿಲ್ಲ

ಗೌರವಪೂರ್ವಕವಾಗಿ,

ತಮ್ಮ.......................".

ಅದೇ ವರ್ಷದ ಅಕ್ಟೋಬರ್ ೬ರಂದು, ಸರ್ವೋಚ್ಚ ನ್ಯಾಯಾಲಯವು ತನ್ನ ನ್ಯಾಯ ವಿತರಣೆಯ ಕಾರ್ಯವನ್ನು ಪ್ರಾರಂಭಿಸಿದ ಸಮಯದಲ್ಲಿ, ಸರ್. ಸಿ. ಎಚ್. ಛೇಂಬರ್ಸ್ ಅವರು ನ್ಯಾಯಾಲಯದ ಗುಮಾಸ್ತನಿಗೆ ಈ ಪತ್ರವನ್ನು ಓದುವಂತೆ ಹೇಳಿದರು. ಪತ್ರದ ರೀತಿ ಮತ್ತು ಅದು ಒಳಗೊಂಡಿರುವ ವಿಷಯದ ಬಗ್ಗೆ, ಪ್ರಸಕ್ತ ಅಹವಾಲುದಾರರಾಗಿರುವವರ ಅಭಿಪ್ರಾಯದೊಂದಿಗೆ ಸಹಮತವನ್ನು ವ್ಯಕ್ತಪಡಿಸುತ್ತಾ ಸರ್. ಸಿ. ಎಚ್. ಛೇಂಬರ್ಸ್ ಅವರು 'ಈ ಪತ್ರವು ನ್ಯಾಯಾಲಯಕ್ಕೆ ತಲುಪಿದೆ ಆದರೆ, ನ್ಯಾಯಮೂರ್ತಿಗಳು ಇದನ್ನು ಪರಿಗಣಿಸುವುದಿಲ್ಲ' ಎಂದು ಸರಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಲಿಖಿತದ ಮೂಲಕ ತಿಳಿಸುವಂತೆ ನ್ಯಾಯಾಲಯದ ಗುಮಾಸ್ತನಿಗೆ ನಿರ್ದೇಶಿಸಿದರು.

ಮೇಲೆ ಹೇಳಿದಂತೆ ಸರ್. ಸಿ. ಎಚ್. ಛೇಂಬರ್ಸ್ ಅವರು ಮತ್ತು ಪ್ರಸಕ್ತ ಅಹವಾಲುದಾರರು ತಮ್ಮ ಸನ್ನಿಧಾನದಲ್ಲಿ ವಿನಯಪೂರ್ವಕವಾಗಿ ವಿನಂತಿಮಾಡುವ ಉದ್ದೇಶವೇನೆಂದರೆ, ಇಂತಹ ಸನ್ನಿವೇಶಗಳಲ್ಲಿ ಸಮಸ್ಯೆಗಳಿಗೆ ಪರಿಹಾರವನ್ನು ತಮ್ಮ ಸನ್ನಿಧಾನದಲ್ಲಿ ಬೇಡಿಕೊಳ್ಳುವುದು ಮತ್ತು ಸನ್ನಿಧಾನದ ಮಾರ್ಗದರ್ಶನವನ್ನು ಪಡೆಯುವುದು ಸರಿಯಾದ ಕರ್ತವ್ಯವಾಗಿರುತ್ತದೆ. ಆದರೆ, ಸಕಲ ಅಧಿಕಾರ, ನಾಗರಿಕ ಮತ್ತು ಮಿಲಿಟರಿ ಬಲವನ್ನು ಹೊಂದಿರುವ ಅವರು ವಿವೇಕಯುತರು ಮಾಡುವಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ವಿಯಯಪೂರ್ವಕ ಮನವಿಯನ್ನು ತಾವಾಗಲೀ, ತಮ್ಮ ಪರವಾಗಿ ನ್ಯಾಯವಾದಿಗಲಿಂದಾಗಲೀ ಸಲ್ಲಿಸದೆ, ಅದಕ್ಕೆ ಪ್ರತಿಯಾಗಿ ಅಸಾಂವಿಧಾನಿಕ ಮತ್ತು ಅಪರಾಧೀ ಮಾರ್ಗವನ್ನು ಅನುಸರಿಸಿದ್ದಾರೆ. ಹಲವು ಕಾಲದಿಂದ ಪರಂಪರೆಯಾಗಿ ನಡೆದುಬಂದಿರುವ ನಡವಳಿಕೆಗೆ ವಿರುದ್ಧವಾದ ರೀತಿಯಲ್ಲಿ, ಸೋಗಿನ ಖಾಸಗೀ ಪತ್ರವನ್ನು ಕಳುಹಿಸಿದ್ದಾರೆ. ಇದರಿಂದ ಆಳುವವರು ಅನುಚಿತವಾದ ರೀತಿಯಲ್ಲಿ ಒತ್ತಾಯವನ್ನು ಹೇರುವಲ್ಲಿರುವ ಅಥವಾ ಹೇರುವ ಅಪಾಯದ ವಿರುದ್ಧ ಶಾಸನಸಭೆಯ ರಕ್ಷಣೆಯನ್ನು ಪಡೆದು, ದೇವಕಾರ್ಯ, ರಾಜಕಾರ್ಯಗಳಲ್ಲಿ ನಿಷ್ಠೆಯಿಂದ ತೊಡಗಿಕೊಂಡಿರುವ ನ್ಯಾಯಮೂರ್ತಿಗಳು ನಿರ್ವಹಿಸುತ್ತಿರುವ ಕರ್ತವ್ಯದಿಂದ ಅವರನ್ನು ವಿಮುಖಗೊಳಿಸುವ, ಪ್ರೇರಿಸುವ ಉದ್ದೇಶದಿಂದ ಈ ಕಾರ್ಯದಲ್ಲಿ ಉದ್ಯುಕ್ತರಾಗಿ, ನ್ಯಾಯಯುತವಾಗಿ ತಾವು ನಿರ್ವಹಿಸಬೇಕಾದ ಕರ್ತವ್ಯವನ್ನು, ಸರಕಾರದ ನೀತಿ ಎಂಬ ವಾದವನ್ನು ಮುಂದೆಮಾಡಿ ನಿರಾಕರಿಸುತ್ತಿದ್ದಾರೆ.

ಈ ಪ್ರಕರಣದ ಮೇಲ್ಮನವಿಯನ್ನು ಇಂಗ್ಲೆಂಡಿನಲ್ಲಿ ಸಲ್ಲಿಸಬೇಕೆಂದಿರುವಷ್ಟರಲ್ಲಿ, ಆ ಸಂದರ್ಭದಲ್ಲಿ ಪ್ರಭಾರಿಯಾಗಿ ಮುಖ್ಯ ನ್ಯಾಯಮೂರ್ತಿಗಳ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಸರ್. ಚಾರ್ಲ್ಸ್ ಹರ್ಕೋರ್ಟ್

ಅವರು ಅನಿರೀಕ್ಷಿತವಾಗಿ ೧೮೨೮ರ ಅಕ್ಟೋಬರ್ ೧೩ರಂದು ನಿಧನಹೊಂದಿದರು.

ಈ ಅಹವಾಲುದಾರರನ್ನು ಮತ್ತು ಅವರ ಸಹ ನ್ಯಾಯಮೂರ್ತಿಗಳ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದ ಗವರ್ನರ್ ಮತ್ತು ಅವರ ಸಂಪುಟದ ನಡವಳಿಕೆಗೆ ಛೀಮಾರಿಯನ್ನು ಹಾಕಲು ಮತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಗೊಳಿಸುಂವಂತೆ ಸರಕಾರಕ್ಕೆ ಆದೇಶವನ್ನು ನೀಡುವ ಅಧಿಕಾರದಿಂದ ಆಗುವ ಸತ್ಪರಿಣಾಮಗಳನ್ನು ಮನದಟ್ಟು ಮಾಡಲು ಸದರಿ ಮೇಲ್ಮನವಿಯು ಸಾಕಷ್ಟು ಚರ್ಚಿತವಾಯಿತು. ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ, ಮಹಾಸನ್ನಿಧಾನವು ಈ ಪ್ರಕರಣವನ್ನು ಗಮನಿಸಿ, ಮಹಾಸನ್ನಿಧಾನಕ್ಕೆ ಸೂಕ್ತವೆಂದು ತೋರಿದ ಹಾಗೆ, ಬಾಂಬೆ ಸರ್ವೋಚ್ಚ ನ್ಯಾಯಾಲಯದ ಗೌರವ ಮತ್ತು ನ್ಯಾಯಯುತ ಅಧಿಕಾರವನ್ನು ರಕ್ಷಿಸಿ, ಅದರ ಧರ್ಮಸಮ್ಮತ ನಿಲವನ್ನು ಸಮರ್ಥಿಸಬೇಕೆಂದು ಪ್ರಾರ್ಥಿಸುತ್ತೇವೆ.

ಮನವಿಯಲ್ಲಿ ಪ್ರಸ್ತಾಪಿಸಲಾಗಿರುವ ಮೊರೊ ರಘೋನಾಥ್ (೧ ನ್ಯಾಪ್, ೫) ಅವರ ಪ್ರಕರಣವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ೧೮೨೮ರ ಆಗಸ್ಟ್ ೨೫ರಂದು, ನ್ಯಾಯಮೂರ್ತಿ ಗ್ರಾಂಟ್ ಅವರು ಪಾಂಡುರಂಗ ರಾಮಚಂದ್ರ ಅವರ ವಿರುದ್ಧ ಒಂದು ವ್ಯಕ್ತಿ ಹಾಜರಿ ಆಜ್ಞಾಪತ್ರವನ್ನು ಹೊರಡಿಸಿ ಮೊರೊ ರಘೊನಾಥ್ ಅವರನ್ನು ವ್ಯಕ್ತಿಶಃ ಹಾಜರುಪಡಿಸುವಂತೆ ಆಜ್ಞೆಯನ್ನು ನೀಡಿದ್ದರು. ಇದಕ್ಕೆ ಪೂರಕವಾಗಿ ದಿನಕರ್ ಗೋಪಾಲ ದೇವ್ ಎಂಬುವರು ತಮ್ಮ ಪ್ರಮಾಣಪತ್ರದಲ್ಲಿ ಮೊರೊ ರಘೊನಾಥ್ ಅವರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಪಾಂಡುರಂಗ ರಾಮಚಂದ್ರ ಅವರು ಒಂದು ವರ್ಷಕ್ಕೂ ಹೆಚ್ಚಿನ ಸಮಯದಿಂದ ಬಂಧನದಲ್ಲಿ ಇಟ್ಟಿದ್ದಾರೆಂದೂ ಮತ್ತು ರಘೊನಾಥ್ ಅವರು ಅಲ್ಲಿ ಹೇಳತೀರದ ಕಷ್ಟಗಳನ್ನು, ಕ್ರೌರ್ಯವನ್ನು ಅನುಭವಿಸುತ್ತಿದ್ದಾರೆಂದೂ ತಿಳಿಸಿದ್ದರು. ಪಾಂಡುರಂಗ ರಾಮಚಂದ್ರ ಮತ್ತು ಮೊರೊ ರಘೊನಾಥ್ ಅವರು ಪೂನಾದ ನಿವಾಸಿಗಳಾಗಿರುವುದರಿಂದ ಈ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲವೆಂಬ ಆಧಾರದ ಮೇಲೆ ಅಡ್ವೊಕೇಟ್ ಜನರಲ್ ಅವರು ಈ ಆಜ್ಞೆಯನ್ನು ವಿರೋಧಿಸಿದರು. ಹಲವಾರು ಕಾರಣಗಳಿಗಾಗಿ, ಆಜ್ಞೆಯನ್ನು ನೀಡುವುದನ್ನು ಆಗಸ್ಟ್ ೩೦ರ ವರೆಗೆ ಮುಂದೂಡಲಾಯಿತು, ಮತ್ತು ಈ ಅವಧಿಯಲ್ಲಿ ಪೂರಕ ಪ್ರಮಾಣಪತ್ರಗಳನ್ನು ಸಲ್ಲಿಸಿ, ಅದರಲ್ಲಿ ಮೊರೊ ರಘೊನಾಥ್ ಅವರು ಪಾಂಡುರಂಗ ರಾಮಚಂದ್ರ ಅವರ ಬಂಧನದಿಂದ ಜುಲೈ ೧೨ರಂದು ತಪ್ಪಿಸಿಕೊಂಡರೆಂದೂ, ನಂತರ ಅವರನ್ನು ಪೂನಾದ ಸ್ಥಳೀಯ ದಂಡಾಧಿಕಾರಿಗಳಾಗಿರುವ ಬ್ರಿಟಿಷ್ ಸಂಜಾತ ಆಂಡ್ರ್ಯೂ ಡನ್‌ಲಪ್ ಅವರ ಆದೇಶದ ಅನುಸಾರವಾಗಿ ಮತ್ತೆ ಬಂಧನಕ್ಕೆ ಒಳಪಡಿಸಲಾಗಿದೆಯೆಂದೂ ಹೇಳಲಾಗಿದೆ. ಸಾಕಷ್ಟು ಚರ್ಚೆಯ ನಂತರ ಆಜ್ಞೆಯನ್ನು ನೀಡಲು ನಿರ್ಧರಿಸಿ ಸೆಪ್ಟೆಂಬರ್ ೧೫ರ ಒಳಗೆ ನ್ಯಾಯಾಲಯಕ್ಕೆ ಉತ್ತರವನ್ನು ಸಲ್ಲಿಸಬೇಕೆಂದು ಆಜ್ಞಾಪಿಸಿದ್ದ ಆದೇಶವನ್ನು ಮರಾಠಿಗೆ ತರ್ಜುಮೆ ಮಾಡಿಸಿ ಪಾಂಡುರಂಗ ರಾಮಚಂದ್ರ ಅವರಿಗೆ ನೀಡಲಾಯಿತು. ಈ ಆಜ್ಞೆಗೆ ಪ್ರತಿಯಾಗಿ ಈ ಕೆಳಕಂಡ ಉತ್ತರವನ್ನು ಅವರು ನ್ಯಾಯಾಲಯಕ್ಕೆ ಸಲ್ಲಿಸಿದರು.

"ಪಾಂಡುರಂಗ ರಾಮಚಂದ್ರ ದಾಮೋದರನಾದ ನಾನು ಪೇಶ್ವೆಯವರ ಮಿತ್ರನೂ ಮತ್ತು ಸಂಬಂಧಿಯೂ ಆಗಿದ್ದೇನೆ. ನಾನು ನನ್ನ ಜೀವಮಾನದಲ್ಲಿ ಎಂದೂ ಬ್ರಿಟಿಷ್ ಸರಕಾರದ ಅಥವಾ ಬ್ರಿಟಿಷರ ಕೈಕೆಳಗಿನ ಪ್ರಜೆಯಾಗಿಲ್ಲ. ಕಂಪನಿ ಸರಕಾರವು ಈ ಪ್ರಾಂತವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಾಗ, ನಾನು ಈ ಪ್ರಾಂತದಲ್ಲಿ ಯಾವುದೇ ಭಯ ಅಥವಾ ತೊಂದರೆಗಳಿಲ್ಲದೇ ಜೀವಿಸಬಹುದೆಂಬ ಆಶ್ವಾಸನೆಯನ್ನು ನನಗೆ ನೀಡಲಾಗಿತ್ತು. ಈ ಆಶ್ವಾಸನೆಯ ಆಧಾರದ ಮೇಲೆ ನಾನು ಪೂನಾ ನಗರದಲ್ಲಿಯೇ ಉಳಿದುಕೊಂಡೆ. ಇನ್ನು ನನ್ನ ಮೊಮ್ಮಗ ಮೊರೊ ರಘೊನಾಥನ ವಿಷಯಕ್ಕೆ ಬಂದರೆ, ನಾನು ಅವನ ತಾತನಾಗಿದ್ದು,

ಅವನನ್ನು ನಮ್ಮ ಸಂಪ್ರದಾಯದ ಅನುಸಾರವಾಗಿ ಪಾಲಿಸಬೇಕೆಂಬ ಉದ್ದೇಶದಿಂದ, ನನ್ನ ಪಾಲನೆಗೆ ಬಿಡಲಾಗಿತ್ತು. ಹಿಂದೂ ಶಾಸ್ತ್ರದ ಪ್ರಕಾರ ಆತನ ಬುದ್ಧಿಯು ಸರಿಯಾಗಿ ಬೆಳೆದಿಲ್ಲ. ಹಾಗಾಗಿ ಅವನು ಅವನ ಪೋಷಕರು ಹೇಳಿದ ಹಾಗೆ ವರ್ತಿಸಬೇಕಾಗಿದೆ. ಈ ಬಾಲಕನ ಆಸ್ತಿ ಮತ್ತು ಸಂಪತ್ತನ್ನೂ ರಕ್ಷಿಸಿಕೊಂಡು ಹೋಗಬೇಕಾದ ಆವಶ್ಯಕತೆಯಿದೆ. ಒಬ್ಬ ಪೋಷಕನಾಗಿ, ಹಿಂದೂ ಕುಟುಂಬದ ಹಿರಿಯನಾಗಿ ಮಾಡಬೇಕಾದುದಕ್ಕಿಂತ ಹೆಚ್ಚಿನದೇನನ್ನೂ ಮತ್ತು ಅತಿಯಾದುದೇನನ್ನೂ ನಾನು ಮಾಡಿಲ್ಲ. ನಾನೂ ಅವನಿಗೆ ಮಾಡಬಾರದುದನ್ನು ಮಾಡಿದ್ದಿದ್ದರೆ ಅಥವಾ ಮಾಡಬೇಕಾದುದನ್ನು ಮಾಡದೆ ಇದ್ದಿದ್ದರೆ, ಪೂನಾದಲ್ಲಿರುವ ನ್ಯಾಯಾಲಯವು ಅದನ್ನು ತಕ್ಷಣವೇ ನಿಲ್ಲಿಸಬಹುದಿತ್ತು. ಮೊರೊ ರಘೊನಾಥನ ಅಜ್ಜಿಯು ನಿಧನರಾದ ನಂತರ, ಅವನನ್ನು, ನಿಯಮಾನುಸಾರವಾಗಿ ನನ್ನ ವಶಕ್ಕೆ ಒಪ್ಪಿಸಲಾಯಿತು. ನನ್ನ ಮೊಮ್ಮಗನ ಸಂಪತ್ತು ಹಾಳಾಗದ ಹಾಗೆ ನೋಡಿಕೊಳ್ಳುವ ಉದ್ದೇಶದಿಂದ ನಾನು ಅವನ ಪಾಲನೆಗೆ ಒಪ್ಪಿಕೊಂಡೆ. ಅವನನ್ನು ನನ್ನ ಸುಫರ್ದಿಗೆ ಒಪ್ಪಿಸಿದವರ ಅನುಮತಿಯಿಲ್ಲದೆ, ನಾನು ಅವನ ಜವಾಬ್ದಾರಿಯನ್ನು ನನ್ನ ಹೆಗಲಿನಿಂದ ಕೊಡವಿಕೊಳ್ಳಲಾರೆ.

ಇತಿ

೧೭೫೦ನೆಯ ಶಕ ಶಾರ್ವರಿ ಸಂವತ್ಸರದ ಭಾದ್ರಪದ ಮಾಸದ ಶುಕ್ಲ ಪ್ರತಿಪತ್."

ಈ ಪ್ರತ್ಯುತ್ತರವನ್ನು ಕೆಳಕಂಡ ಕಾರಣಗಳಿಂದ ವಿರೋಧಿಸಲಾಯಿತು – ಮೊದಲನೆಯದು, ವ್ಯಕ್ತಿಯನ್ನು ಹಾಜರು ಪಡಿಸುವಂತೆ ನೀಡಿದ್ದ ಆಜ್ಞೆಗೆ ಯಾವುದೇ ಉತ್ತರವಿಲ್ಲ, ಎರಡನೆಯದು, ಆಜ್ಞೆಯನ್ನು ಪಾಲಿಸಲಾಗದುದಕ್ಕಾಗಿ ಯಾವುದೇ ಕಾರಣಗಳನ್ನು ನೀಡಿಲ್ಲ, ಅಲ್ಲದೆ, ಈ ಆಜ್ಞೆಯನ್ನು ನ್ಯಾಯಾಲಯವು ನೀಡಬಾರದಿತ್ತು ಹಾಗಾಗಿ ನ್ಯಾಯಾಲಯಕ್ಕೆ ಸದರಿ ವ್ಯಕ್ತಿಯನ್ನು ಹಾಜರುಪಡಿಸಬೇಕೆಂದು ಹೇಳುವಹಾಗಿಲ್ಲ. ಹೀಗಾಗಿ ಪಾಂಡುರಂಗ ರಾಮಚಂದ್ರ ಅವರ ಬಂಧನಕ್ಕೆ ಆಜ್ಞೆಯನ್ನು ನೀಡಬೇಕೆಂದು ನ್ಯಾಯಾಲಯವನ್ನು ಪ್ರಾರ್ಥಿಸಲಾಯಿತು. ನ್ಯಾಯಮೂರ್ತಿಗಳು ಈ ವಿಷಯವನ್ನು ದೀರ್ಘವಾಗಿ ಪರಿಶೀಲಿಸಿ, ಸದರಿ ವ್ಯಕ್ತಿಯನ್ನು ಅಕ್ಟೋಬರ್ ೧೦ರ ಒಳಗಾಗಿ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಆದೇಶವನ್ನು ನೀಡಿದರು.

ಈ ಮಧ್ಯೆ, ಥಾಣೆಯ ಬಂದೀಖಾನೆಯ ಮುಖ್ಯಾಧಿಕಾರಿಗೆ ಅವರ ಅಧೀನದ ಬಂದೀಖಾನೆಯಲ್ಲಿ ಸೆರೆಯಲ್ಲಿದ್ದ ಬಾಪೂ ಗುಣೆಸ್ (೧ ನ್ಯಾಪ್ ೬) ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಆದೇಶವನ್ನು ಕೋರಿದ್ದ ಪ್ರಕರಣವು ಸರ್ವೋಚ್ಚ ನ್ಯಾಯಾಲದ ಮುಂದೆ ವಿಚಾರಣೆಗೆ ಬಂದಿತು. ಈ ಪ್ರಕರಣದಲ್ಲಿ ಬಬೂಲ್ ರಣ್‌ಜೀ ಎಂಬುವರು ಬಂದೀಖಾನೆಯ ಮುಖ್ಯಾಧಿಕಾರಿಗಳಿಗೆ ಒಂದು ಅರ್ಜಿಯನ್ನು ಸಲ್ಲಿಸಿ ಬಾಪೂ ಗುಣೆಸ್ ಅವರನ್ನು ಬಂಧಿಸಲು ನೀಡಿದ್ದ ಆದೇಶದ ಪ್ರತಿಯನ್ನು ಕೇಳಿದ್ದರು, ಆದರೆ, ಅವರಿಗೆ ಆ ಆದೇಶದ ಪ್ರತಿಯನ್ನು ನೀಡಲು ಬಂದೀಖಾನೆಯ ಅಧಿಕಾರಿಗಳು ನಿರಾಕರಿಸಿದ್ದರು. ಈ ಸಂಬಂಧ ೧೦ನೆಯ ದಿನಾಂಕ ಒಂದು ಆಜ್ಞೆಯನ್ನು ಹೊರಡಿಸಿ ೧೮೨೮ರ ಸೆಪ್ಟೆಂಬರ್ ೧೯ರ ಒಳಗೆ ಉತ್ತರವನ್ನು ನ್ಯಾಯಾಲಯಕ್ಕೆ ನೀಡುವಂತೆ ಆದೇಶಿಸಲಾಗಿತ್ತು. ಇದಕ್ಕೆ ಉತ್ತರವನ್ನು ಕೊಂಕಣದ ನ್ಯಾಯಾಲಯದ ನಜ಼ೀರ್ ಮತ್ತು ಸರ್ವೋಚ್ಚ ನ್ಯಾಯಲಯದ ಆಜ್ಞೆಯು ಕುರಿತಿದ್ದ ಬಂದೀಖಾನೆಯ ಅಧಿಕಾರಿಯವರು ಸಲ್ಲಿಸಿ ಈ ಮುಂದಿನಂತೆ ತಿಳಿಸಿದರು: "ಈ ಆಜ್ಞೆಯು ನಮಗೆ ತಲುಪುವ ಮೊದಲೇ, ಉತ್ತರ ಕೊಂಕಣದ ನ್ಯಾಯಾಲಯದ ಒಂದು ನಿರ್ದಿಷ್ಟ ಆದೇಶಾನುಸಾರವಾಗಿ ಬಾಪೂ ಗುಣೆಸ್ ಅವರನ್ನು ಬಂಧಿಸಲಾಗಿದೆ. ಕೊಂಕಣದ ನ್ಯಾಯಾಲಯದ ಆಜ್ಞೆಯು ಮರಾಠಿ ಭಾಷೆಯಲ್ಲಿದ್ದು ಅದು ಈ ರೀತಿ ಆದೇಶಿಸುತ್ತದೆ – ಹಣದ ದುರುಪಯೋಗದ ವಿಷಯದಲ್ಲಿ ಅಪರಾಧಿಯೆಂದು ತೀರ್ಮಾನಿಸಲ್ಪಟ್ಟಿರುವ

ಬಾಪೂ ಗುಣೆಸ್ ಅವರನ್ನು ಎರಡು ವರ್ಷಗಳ ಸಜೆಗೆ ಒಳಪಡಿಸಲಾಗಿದೆ ಮತ್ತು ಅವರಿಗೆ ೩೫೦ ರೂ.ಗಳ ದಂಡವನ್ನೂ ವಿಧಿಸಲಾಗಿದೆ. ಈ ದಂಡವನ್ನು ಕಟ್ಟಲು ಅವರು ತಪ್ಪಿದಲ್ಲಿ, ಮತ್ತೊಂದು ವರ್ಷದವರೆಗೆ ಅವರ ಸೆರೆವಾಸವನ್ನು ವಿಸ್ತರಿಸಲಾಗುವುದು." ಈ ಉತ್ತರಕ್ಕೆ ಸ್ಪಂದಿಸಬೇಕಾದ ಅಗತ್ಯವು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ಇಲ್ಲವಾದ್ದರಿಂದ ಮತ್ತು ಸೆರೆವಾಸದಲ್ಲಿರುವ ಸದರಿ ವ್ಯಕ್ತಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಹಾಜರು ಪಡಿಸಲು ಬಂದೀಖಾನೆಯ ಅಧಿಕಾರಿಯು ವಿಫಲನಾಗಿರುವುದರಿಂದ ಅವರನ್ನು ಬಂಧಿಸುವಂತೆ ಆದೇಶವನ್ನು ನೀಡಲಾಯಿತು. ೨೬ನೆಯ ದಿನಾಂಕದಂದು ಅಡ್ವೊಕೇಟ್ ಜನರಲ್ ಅವರ ಕೋರಿಕೆಯಂತೆ, ನ್ಯಾಯಾಲಯದ ವೆಚ್ಚವನ್ನು ಭರ್ತಿಮಾಡಿದ ನಂತರ, ಬಂಧನದ ಆಜ್ಞೆಯನ್ನು ರದ್ದುಗೊಳಿಸಲಾಯಿತು. ಬಾಪೂ ಗುಣೆಸ್ ಅವರನ್ನು ಹಾಜರುಪಡಿಸಲಾಯಿತು ಹಾಗೂ ಪ್ರತ್ಯುತ್ತರವನ್ನು ನ್ಯಾಯಾಲಯದಲ್ಲಿ ಓದಲಾಯಿತು. ಆದರೆ ಅದನ್ನು ಅಸಂಪೂರ್ಣವೆಂದು ತೀರ್ಮಾನಿಸಲಾಯಿತು. ಕಾರಣ, ಅದರಲ್ಲಿ ಉತ್ತರ ಕೊಂಕಣದ ನ್ಯಾಯಾಲಯದ ಅಧಿಕಾರವನ್ನು ನಮೂದಿಸಿರಲಿಲ್ಲ. ಅದನ್ನು ತಿದ್ದುಪಡಿಮಾಡಲು ನಾಲ್ಕು ದಿನಗಳ ಅವಕಾಶವನ್ನು ನೀಡಲಾಯಿತು. ಈ ಮಧ್ಯೆ, ಖೈದಿಯನ್ನು ಬಾಂಬೆಯ ಬಂದೀಖಾನೆಯಲ್ಲಿ ಇಡಲಾಯಿತು. ಆದರೆ, ನಿಗದಿತ ಅವಧಿಯಲ್ಲಿ ಉತ್ತರಕ್ಕೆ ತಿದ್ದುಪಡಿಯನ್ನು ಮಾಡಲಾಗಲಿಲ್ಲ. ಸರಕಾರವು ಪ್ರಾಂತೀಯ ನ್ಯಾಯಾಲಯದ ಅಧಿಕಾರಕ್ಕೆ ಚ್ಯುತಿಯನ್ನುಂಟುಮಾಡುವುದಕ್ಕೆ ಸಮ್ಮತಿಸುವುದಿಲ್ಲ ಎಂಬುದೇ ಇದಕ್ಕೆ ಕಾರಣವೆಂದು ಅಡ್ವೊಕೇಟ್ ಜನರಲ್ ಅವರು ಸರ್ವೋಚ್ಚ ನ್ಯಾಯಾಲಯಕ್ಕೆ ತಿಳಿಸಿದರು. ತತ್ಪರಿಣಾಮವಾಗಿ ಬಾಪೂ ಗುಣೆಸ್ ಅವರನ್ನು ಬಂಧವಿಮುಕ್ತರನ್ನಾಗಿಸಲಾಯಿತು.

ಫಿರ್ಯಾದುದಾರರ ಪರವಾಗಿ ಡೆನ್ಮಾನ್ (ಕಾಮನ್ ಸರ್ಜೆಂಟ್) ಮತ್ತು ಆಲ್ಡರ್‌ಸನ್ ಅವರು – 'ಮಹಾಪ್ರಭುಗಳ ಅಧೀನದಲ್ಲಿರುವ ಯಾವುದೇ ಪ್ರಜೆಯನ್ನು ಬಂಧನದಲ್ಲಿಟ್ಟಿರುವ ಮಹಾಪ್ರಭುಗಳ ಅಧೀನದಲ್ಲಿರುವ ಯಾವುದೇ ಪ್ರಜೆಗೆ, ಬಂಧನದಲ್ಲಿರುವ ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸಬೇಕೆಂಬ ಆಜ್ಞೆಯನ್ನು ಸರ್ವೋಚ್ಚ ನ್ಯಾಯಾಲಯವು ನೀಡಬಹುದು ಎಂಬ ವಿಷಯವು ಅನುಮಾನಕ್ಕೆಡೆಯಿಲ್ಲದಷ್ಟು ಸ್ಪಷ್ಟವಾಗಿದೆ' ಎಂದು ಹೇಳಿದರು.

ಹಾಲಿ ಇರುವ ಮಹಾಪ್ರಭುಗಳ ನಾಲ್ಕನೆಯ ಅಧಿನಿಯಮದ ಪ್ರಕಾರ ನೀಡಿದ, ಹಾಗೂ ತನ್ನ ಸ್ಥಾಪನೆಗೆ ಕಾರಣವಾದ ಸನ್ನದಿನಿಂದ ಈ ಸರ್ವೋಚ್ಚ ನ್ಯಾಯಾಲಯವು ತನ್ನ ಹಲವು ಅಧಿಕಾರಗಳನ್ನು ಪಡೆದುಕೊಳ್ಳುತ್ತದೆ [೧೮೨೩ರ ಡಿಸೆಂಬರ್ ೮, ಮೋರ್ಲೆಯವರ ಡೈಜೆಸ್ಟ್ ಸಂಪುಟ ೨, ಪುಟ ೬೩೮ನ್ನು ನೋಡಿ]. ನಮ್ಮ ಈಸ್ಟ್ ಇಂಡಿಯಾದ ಅಧೀನ ಪ್ರದೇಶಗಳಲ್ಲಿರುವ ನ್ಯಾಯಾಲಯಗಳಿಗೆ ಈ ಅಧಿಕಾರವನ್ನು ನೀಡುವುದಕ್ಕೆ, ಹಿಂದಿನ ಆಳ್ವಿಕೆಯಲ್ಲಿ ಬೇರೆ ಬೇರೆ ಕಾಲಗಳಲ್ಲಿ, ಕಂಪನಿಯ ಮುಂದೆ ಹಾಗೂ ಈ ದೇಶದ ಸಂಸತ್ತಿನ ಮುಂದೆ ಅಧಿಕಾರದಲ್ಲಿರುವವರ ದಬ್ಬಾಳಿಕೆ ಮತ್ತು ತತ್ಸಂಬಂಧಿ ವ್ಯಾಜ್ಯಗಳ ವಿರುದ್ಧ ದೂರುಗಳನ್ನು ದಾಖಲಿಸಲಾಗಿರುವುದು ಕಾರಣವಾಗಿತ್ತು.

೧೭೭೩ರ ಮೇ ೧೦ರಂದು ನಡೆದ ಕೋರ್ಟ್ ಆಫ್ ಪ್ರೊಪ್ರೈಟರ್ಸ್‌ನ ಸಭೆಯಲ್ಲಿ ತೆಗೆದುಕೊಂಡ ಮುಖ್ಯ ನಿರ್ಣಯಗಳಲ್ಲಿ ಒಂದು ಹೀಗಿತ್ತು – "ಮೂರು ಪ್ರಾಂತಗಳ ಮೇಯರ್ಸ್ ನ್ಯಾಯಾಲಯಗಳಿಗೂ ಮತ್ತು ಗವರ್ನರ್ ಅವರ ನ್ಯಾಯಾಲಯಗಳಿಗೂ ಒಬ್ಬ ಬ್ಯಾರಿಸ್ಟರ್ ಅವರನ್ನು ಜಿಲ್ಲಾ ನ್ಯಾಯಾಧೀಶರನ್ನಾಗಿ ನೇಮಿಸಲು ಒಂದು ಹೊಸ ನ್ಯಾಯ ಸನ್ನದಿಗಾಗಿ ಅರ್ಜಿಯನ್ನು ಹಾಕಬೇಕು." ವಿಶೇಷವಾಗಿ ಭಾರತಕ್ಕೆ ಸಂಬಂಧಿಸಿದ ಹಾಗೆ 'ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಪಡಿಸಲು ನೀಡುವ ಆಜ್ಞೆಯನ್ನು' ಸೇರಿಸತಕ್ಕದ್ದು ಎಂದು ಈ ನಿರ್ಣಯಕ್ಕೆ ಸೇರಿಸಿದ ಪೂರಕ ವಾಕ್ಯವು ಪ್ರಸಕ್ತ ಪ್ರಕರಣಕ್ಕೆ ಸಂಬಂಧಿಸಿದ ಹಾಗೆ ಬಹಳ

ಮುಖ್ಯವಾಗುತ್ತದೆ –. "ಕಂಪನಿಯು ಶಿಫಾರಸ್ಸು ಮಾಡಿದ್ದ ಬಹು ಪರಿಣಾಮಕಾರಿಯಾದ 'ವ್ಯಕ್ತಿಶಃ ಹಾಜರುಪಡಿಸಲು ಹೊರಡಿಸುವ ಆಜ್ಞೆ'ಯ ವಿಧಿಯನ್ನು ಕೈಬಿಡಲಾಗಿದೆ. ಒಬ್ಬ ವ್ಯಕ್ತಿಯ ವಿರುದ್ಧ ಯಾವ ಅಪರಾಧದ ಆರೋಪವನ್ನು ಮಾಡಲಾಗಿದೆ ಮತ್ತು ಯಾರು ಆತನನ್ನು ಬಂಧಿಸಿದ್ದಾರೆ ಇತ್ಯಾದಿ ವಿಷಯಗಳನ್ನು ಈ ವಿಧಿಯಿಂದ ತಿಳಿದುಕೊಳ್ಳಲು ಸಹಾಯವಾಗುತ್ತಿತ್ತು" ಎಂದು ಈಸ್ಟ್ ಇಂಡಿಯಾ ಕಂಪನಿಯು ಮೇಲ್ಮನೆಗೆ ಮಾಡಿಕೊಂಡ ಅರ್ಜಿಯಲ್ಲಿ ಹೇಳಿರುವುದೂ ಅತ್ಯಂತ ಮುಖ್ಯ ವಿಷಯವಾಗಿದೆ.

ಕಲ್ಕತ್ತದ ಸರ್ವೋಚ್ಚ ನ್ಯಾಯಾಲಯವು ೧೯೭೪ರ ಅಕ್ಟೋಬರ್ ೨೨ರಂದು ಪ್ರಾರಂಭವಾಯಿತು. ಅಂದಿನಿಂದ ಇಲ್ಲಿಯವರೆಗಿನ ದೀರ್ಘ ಅವಧಿಯಲ್ಲಿ 'ವ್ಯಕ್ತಿಶಃ ಹಾಜರು ಪಡಿಸುವ ಆಜ್ಞೆಯನ್ನು' ಹಲವಾರು ಬಾರಿ ಹೊರಡಿಸಲಾಗಿದೆ. ಇವುಗಳಲ್ಲಿ ಬಹಳಷ್ಟು ಸಂಸ್ಥಾನಗಳ ಪ್ರಜೆಗಳ ವಿರುದ್ಧ ನೀಡಲಾಗಿದೆಯೇ ಹೊರತು, ಅಲ್ಲಿರುವ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳ ಮೇಲೆ ಅಲ್ಲ. ಮುಂದಿನ ವರ್ಷದ ಜನವರಿ ತಿಂಗಳಿನ ೧೬ರಂದು ಇಂತಹ ಒಂದು ಆಜ್ಞೆಯನ್ನು ದಿವಾನಿ ಕಚೇರಿಯ ಅಧಿಕಾರಿಯ ವಿರುದ್ಧ ಹೊರಡಿಸಲಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮಹಾಪ್ರಭುಗಳ ನ್ಯಾಯಾಲಯಕ್ಕೆ ಕಲ್ಕತ್ತ ಪ್ರಾಂತದ ಸ್ಥಳೀಯರ ಮೇಲಾಗಲೀ ಅಥವಾ ಇತರರ ಮೇಲಾಗಲೀ ಅಧಿಕಾರವ್ಯಾಪ್ತಿಯು ಇರಲಿಲ್ಲ. ಜಮೀಂದಾರಿ ನ್ಯಾಯಾಲಯಗಳು, ಪ್ರಸಕ್ತ ಸಮಯದಲ್ಲಿ ಇರುವ ಹಾಗೆ, ಅಂದೂ ಕಲ್ಕತ್ತದ ಸ್ಥಳೀಯರ ಮೇಲೆ ತಾವು ಹೊಂದಿದ್ದ ವ್ಯಾಪ್ತಿಯನ್ನು ಮುಂದುವರೆಸಿದ್ದವು. ಈ ಜಮೀಂದಾರಿ ನ್ಯಾಯಾಲಯಗಳು ಸ್ಥಳೀಯರ ವಿರುದ್ಧ ಬಂದ ದೂರುಗಳ, ಪ್ರಕರಣಗಳ ವಿಷಯದಲ್ಲಿ ಕ್ರಮವನ್ನು ತೆಗೆದುಕೊಳ್ಳಲು ಮಾತ್ರ ಅಧಿಕಾರವನ್ನು ಹೊಂದಿದ್ದು, ಕಂಪನಿಯಲ್ಲಿ ಉದ್ಯೋಗದಲ್ಲಿರುವವರ ವಿರುದ್ಧವಾಗಲೀ, ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳ ವಿರುದ್ಧವಾಗಲೀ ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರಲಿಲ್ಲ. ಈ ಪ್ರಕರಣಗಳನ್ನು ಆಯರ್ ಮತ್ತು ಟರ್ಮೈನರ್ ನ್ಯಾಯಾಲಯದ ಮುಂದೆ ಹೂಡುವಂತೆಯೂ ಇರಲಿಲ್ಲ. ಗುಲಾಮ್ ಹೈದರ್ ಎಂಬುವರ ವಿರುದ್ಧ ಹನ್ನೊಂದು ವರ್ಷದ ಹುಡುಗಿಯನ್ನು ವ್ಯಕ್ತಿಶಃ ಹಾಜರು ಪಡಿಸಲು ನೀಡಿದ್ದ ಆಜ್ಞೆಗೆ ಜನವರಿ ೧೭ರಂದು ನೀಡಿದ ಉತ್ತರದಲ್ಲಿ ಆ ಹುಡುಗಿಯು ತನ್ನ ಸ್ವಂತ ಇಚ್ಛೆಯಿಂದಲೇ ಅವರ ಪಾಲನೆಯಲ್ಲಿ ಇದ್ದಾಳೆಂದೂ, ಅವಳನ್ನು ಹೈದರ್ ಅವರು ಬಲವಂತವಾಗಿ ತಮ್ಮ ಬಳಿಯಲ್ಲಿ ಇಟ್ಟುಕೊಂಡಿಲ್ಲವೆಂದೂ ತಿಳಿಸಿದರು. ಬಂಚೂರಾಮ್ ರಾಯ್ ಎಂಬುವರನ್ನು ವ್ಯಕ್ತಿಶಃ ಹಾಜರುಪಡಿಸುವಂತೆ ಕಲ್ಕತ್ತದ ದಿವಾನೀ ನ್ಯಾಯಾಲಯದ ಅಧಿಕಾರಿ ಜಾನ್ ಮಲ್ಲಿಕ್ ಅವರಿಗೆ ಅದೇ ವರ್ಷದ ಜನವರಿ ೧೯ರಂದು ಆಜ್ಞೆಮಾಡಲಾಗಿತ್ತು. ಈ ಆಜ್ಞೆಯು ಪ್ರಕರಣ ೨ರ ಅನ್ವಯ ನೀಡಲಾಗಿದೆಯೆಂದು ಮತ್ತು ಅದರ ಮೇಲೆ 'ಪರ್ ಸ್ಟೆಟಮ್' ಎಂದು ನಮೂದಿಸಿಲ್ಲವೆಂದು ನ್ಯಾಯವಾದಿಗಳು ಅದಕ್ಕೆ ಆಕ್ಷೇಪಣೆಯನ್ನು ಎತ್ತಿದರು. ಇದಕ್ಕೆ ಉತ್ತರಿಸಿದ ಮುಖ್ಯ ನ್ಯಾಯಮೂರ್ತಿಗಳು ಇದನ್ನು ಸಾಮಾನ್ಯ ಕಾನೂನಿನ ಅಡಿಯಲ್ಲಿ ಪರಿಗಣಿಸಬಹುದೆಂದು ಹೇಳಿದರು. ಇದಕ್ಕೆ ಪ್ರತಿಯಾಗಿ ಇಂಗ್ಲೆಂಡಿನ ಸಾಮಾನ್ಯ ಕಾನೂನು ಭಾರತಕ್ಕೆ, ಕನಿಷ್ಠ ಪಕ್ಷ ಬ್ರಿಟಿಷ್ ಪ್ರಜೆಯಲ್ಲದವರಿಗೆ, ಅನ್ವಯವಾಗುವುದಿಲ್ಲವೆಂಬ ಕಾರಣದಿಂದ ಈ ಆಜ್ಞೆಯನ್ನು ವಜಾಗೊಳಿಸಬೇಕೆಂದು ವಾದಿಸಲಾಯಿತು. ಆದರೆ ನ್ಯಾಯಾಲಯವು ಈ ವಾದವನ್ನೂ ತಳ್ಳಿಹಾಕಿತು. ಈ ನಿರೂಪಕ್ಕೆ ಜನವರಿಯ ೩೧ನೆಯ ದಿನಾಂಕದಂದು ಮತ್ತೊಂದು ಸಮಜಾಯಿಷಿಯನ್ನು ನ್ಯಾಯಲಯಕ್ಕೆ ನೀಡಲಾಯಿತು. ಅದರೆ ಇದನ್ನೂ ನ್ಯಾಯಾಯಲವು ಒಪ್ಪಿಕೊಳ್ಳಲಿಲ್ಲ. ಆದರೆ ಅದೇ ವರ್ಷದ ಮಾರ್ಚ್ ೨ರಂದು ಮತ್ತೊಂದು ಉತ್ತರವನ್ನು ನ್ಯಾಯಾಲಯದ ಮುಂದೆ ನೀಡಿ ಸದರಿ ವ್ಯಕ್ತಿಯನ್ನು ದಿವಾಣಿ ಕಾನೂನಿನ ಪ್ರಕಾರ ಸಾಲದ ಪ್ರಕರಣದಲ್ಲಿ ದಿವಾಣೀ ನ್ಯಾಯಾಲಯದ ಆದೇಶದ

ಮೇಲೆ ಬಂಧಿಸಲಾಗಿದೆಯೆಂದು ತಿಳಿಸಲಾಯಿತು. ಆಗ, ದಿವಾಣೀ ನ್ಯಾಯಾಲಯವು ಕೆಲವು ಪ್ರಕರಣಗಳಲ್ಲಿ ತನ್ನ ವ್ಯಾಪ್ತಿಯನ್ನು ಸಂಶಯಾತೀತವಾಗಿ ಹೊಂದಿದೆಯಾದರೂ, ಪ್ರಸಕ್ತ ವಿಷಯವು ಅದರ ವ್ಯಾಪ್ತಿಗೆ ಬರುತ್ತದೆಯೇ ಎಂದು ವಿಚಾರಣೆಯನ್ನು ನಡೆಸಲು ಕಲ್ಕತ್ತದ ಸರ್ವೋಚ್ಚ ನ್ಯಾಯಾಲಯವು ಮುಂದಾಯಿತು. ಫಿರ್ಯಾದುದಾರರು ಬ್ರಿಟಿಷ್ ಪ್ರಜೆಯಾಗಿದ್ದು, ಪ್ರತಿವಾದಿಯು ಫಿರ್ಯಾದಿಯ ಗೋಮಸ್ತಾಹ್, ಅಂದರೆ ಮನೆವಾರ್ತೆಯ ಪಾರುಪತ್ಯೆಗಾರರಾಗಿರುವುದರಿಂದ ಪ್ರತಿವಾದಿಯನ್ನು ಬ್ರಿಟಿಷ್ ಪ್ರಜೆಯ ನೌಕರನೆಂದು ಪರಿಗಣಿಸಬಹುದು. ಆದ್ದರಿಂದ ಇಬ್ಬರು ವ್ಯಕ್ತಿಗಳೂ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತಾರೆಯೇ ಹೊರತು ದಿವಾಣೀ ಅದಾಲತ್ತಿಗೆ ಅಲ್ಲ. ಬಂದೀಖಾನೆಯ ಅಧಿಕಾರಿಯು ತಮ್ಮ ಉತ್ತರವನ್ನು ನೀಡುವುದಕ್ಕೆ ನ್ಯಾಯಾಲಯದಲ್ಲಿ ಹಾಜರಿದ್ದಾಗ, ಬಂಧಿತನನ್ನು ಬಂಧಮುಕ್ತನನ್ನಾಗಿಸಲಾಯಿತು. ಈ ರೀತಿಯಾಗಿ ಬಂಧಿತ ವ್ಯಕ್ತಿಯು ಕೆಳ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲವೆಂಬುದನ್ನು ಸರ್ವೋಚ್ಚ ನ್ಯಾಯಾಲಯವು ನಿರ್ಧರಿಸುವಲ್ಲಿ ತನ್ನ ಅಧಿಕಾರವ್ಯಾಪ್ತಿಯನ್ನು ಬಳಸಿಕೊಂಡಿತು.

ಮತ್ತೆ, ತಮ್ಮ ಬಂದೀಖಾನೆಯಲ್ಲಿ ಬಂಧಿತರಾಗಿದ್ದ ಸೆರೆಮನಿ ಎಂಬುವರನ್ನು ವ್ಯಕ್ತಿಶಃ ಹಾಜರುಪಡಿಸಬೇಕೆಂದು ತಮಗೆ ನೀಡಿದ್ದ ಆಜ್ಞೆಗೆ ಫೌಜುದಾರಿ ನ್ಯಾಯಾಲಯದ ಬಂದೀಖಾನೆ ಮುಖ್ಯಸ್ಥರಾದ ಜೋನಾ ಮಲ್ಲಿಕ್ ಅವರು ೧೭೭೫ರ ಮಾರ್ಚ್ ೨೮ರಂದು ಸರ್ವೋಚ್ಚ ನ್ಯಾಯಾಲಕ್ಕೆ ತಮ್ಮ ಉತ್ತರವನ್ನು ಸಲ್ಲಿಸಿದ್ದರು. ಮತ್ತೊಂದು ಪ್ರಕರಣದಲ್ಲಿ, ಜೋಸೆಫ್ ಪವೆಸ್ಸಿ ಎಂಬುವರನ್ನು ಹಾಜರು ಪಡಿಸುವಂತೆ ಗವರ್ನರ್ ಜನರಲ್ ವಾರೆನ್ ಹೇಸ್ಟಿಂಗ್ಸ್ ಅವರಿಗೇ ಇಂತಹ ಆಜ್ಞೆಯನ್ನು ಮಾಡಲಾಗಿತ್ತು. ಇದಕ್ಕೆ ಉತ್ತರವನ್ನು ಗವರ್ನರ್ ಜನರಲ್ ಅವರೇ ಸ್ವತಃ ನೀಡಿದ್ದು ಅದರಲ್ಲಿ ಸರ್ವೋಚ್ಚ ನ್ಯಾಯಾಲಯದ ಆಜ್ಞೆಯ ಬಗ್ಗೆ ಆಕ್ಷೇಪಣೆಯ ಲೇಶವೂ ಇರಲಿಲ್ಲ. ಈ ಉತ್ತರದಲ್ಲಿ ಪವೆಸ್ಸಿಯವರನ್ನು ಬಿಡುಗಡೆ ಮಾಡಲಾಗಿದೆಯೆಂದು ಉಕ್ತವಾಗಿತ್ತು. ಇದನ್ನು ಸತ್ಯವೆಂದು ಹೇಳಲು ಇಚ್ಛಿಸದ ಗವರ್ನರ್ ಜನರಲ್ ಅವರು ತಿದ್ದುಪಡಿಮಾಡಲಾದ ಇನ್ನೊಂದು ಹೇಳಿಕೆಯಲ್ಲಿ ವಾಸ್ತವಾಂಶಗಳನ್ನು ತಿಳಿಸಿದ್ದರು. ಬ್ರಿಟಿಷ್ ಪ್ರಜೆಯಲ್ಲದ ಪವೆಸ್ಸಿಯವರನ್ನು ನಿಯಮಬಾಹಿರವಾಗಿ ಭಾರತದಿಂದ ಹೊರಕ್ಕೆ ಕಳುಹಿಸುವ ಸಲುವಾಗಿ ಅವರನ್ನು ತಮ್ಮ ಸುಫರ್ದಿಗೆ ತೆಗೆದುಕೊಂಡಿದ್ದರು. ಮೊದಮೊದಲ ಹಂತಗಳಲ್ಲಿ ಭಾರತದ ಸರಕಾರಗಳ ಸುಧಾರಣೆ ಮತ್ತು ವಸಾಹತುಗಳಲ್ಲಿ ಇಂಗ್ಲಿಷ್ ಕಾನೂನಿನ ಮೇಲ್ವಿಚಾರಣೆ ಈ ಎರಡೂ ಒಂದೇ ಎಂದು ಭಾವಿಸಿದ್ದರು ಎಂಬುದು ಇದರಿಂದ ಕಂಡುಬರುತ್ತದೆ. ಕಂಪನಿಯ ಘನೋದ್ದೇಶಗಳಲ್ಲಿ ಒಂದು ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ಕಳೆದುಕೊಂಡ ಬಂಧಿತ ವ್ಯಕ್ತಿಯು ತನ್ನನ್ನು ಬಂಧಿಸಲು ಬಂಧಿಸಿದ ವ್ಯಕ್ತಿಗೆ ಇದ್ದ ಕಾನೂನಿನ ಅಧಿಕಾರವನ್ನು ತಿಳಿದುಕೊಳ್ಳುವುದಕ್ಕೆ ಅಧಿಕಾರವನ್ನು ನೀಡುವ 'ವ್ಯಕ್ತಿಶಃ ಬಂಧಿತ ವ್ಯಕ್ತಿಯನ್ನು ಹಾಜರು ಪಡಿಸಲು ನೀಡುವ ಆಜ್ಞೆ'ಯ ಅಧಿಕಾರವನ್ನು ನೀಡುವುದು.

ಇದೇ ರೀತಿಯ ಹಲವಾರು ಪ್ರಕರಣಗಳು ಕಲ್ಕತ್ತದಲ್ಲಿ ನಡೆದಿರುವುದನ್ನು ಉದಾಹರಿಸಬಹುದು. ಇಂತಹುದೆ ಪ್ರಕರಣಗಳು ಮದರಾಸಿನಲ್ಲಿಯೂ ನಡೆದಿವೆ. 'ವ್ಯಕ್ತಿಯನ್ನು ಹಾಜರು ಪಡಿಸಲು ನೀಡುವ ಆಜ್ಞೆ'ಯ ಮಹತ್ವವನ್ನು ಸರಿಯಾಗಿ ಮತ್ತು ನ್ಯಾಯಯುತವಾಗಿ ಅರ್ಥಮಾಡಿಕೊಳ್ಳಲಾಗಿದೆ. ಯಾವುದೇ ಕಾನೂನನ್ನು ಅಂಗೀಕರಿಸದರೂ, ಯಾವುದೇ ಸನ್ನದನ್ನು ನೀಡಿದರೂ, ಅಧಿಕಾರದ ವ್ಯಾಪ್ತಿಗೆ ಸೀಮಿತವಾಗಿ, ಮೇಲಿನ ಆಜ್ಞೆಗೆ ಅಪವಾದವೆಂಬುದೇ ಇರುವುದಿಲ್ಲ ಮತ್ತು ಅದರ ವ್ಯಾಪ್ತಿಯು ಯಾವುದೇ ಕಾನೂನಿಗೆ ಅಥವಾ ಸನ್ನದಿಗೆ ಒಳಪಟ್ಟಿರುವುದಿಲ್ಲ.

ಮೂರನೆಯ ಜಾರ್ಜ್ ಅವರ ೧೩ನೆಯ ಅಧಿಕಾರ ಸ್ವಾಮ್ಯದ ಸನ್ನದನ್ನು ನೀಡುವ ಮೂಲಕ

ಕಲ್ಕತ್ತಾದ ಸರ್ವೋಚ್ಚ ನ್ಯಾಯಾಲಯಕ್ಕೆ ವ್ಯಕ್ತಿಯನ್ನು ಖುದ್ದಾಗಿ ಹಾಜರುಪಡಿಸುವ ಅಧಿಕಾರವನ್ನು ಕೊಡಲಾಗಿದೆ, ಹಾಗೆ ನೀಡುವಾಗ "ಗ್ರೇಟ್ ಬ್ರಿಟನ್ ಎಂದು ಕರೆಯಲ್ಪಡುತ್ತಿರುವ ಇಂಗ್ಲೆಂಡ್ ದೇಶದಲ್ಲಿ ಕಾನೂನುಬದ್ಧವಾಗಿ ಮಹಾಪ್ರಭುಗಳ ನ್ಯಾಯಾಲಯವು ಹೊಂದಿರುವ ಅಧಿಕಾರ ಮತ್ತು ವ್ಯಾಪ್ತಿಯನ್ನು, ಕಲ್ಕತ್ತದ ಸರ್ವೋಚ್ಚ ನ್ಯಾಯಾಲಯವೂ ಹೊಂದಿರುತ್ತದೆ" ಎಂದು ಹೇಳಲಾಗಿತ್ತು. ಈ ಸನ್ನದಿನ ಪ್ರಕಾರ ವ್ಯಕ್ತಿಗಳನ್ನು ಹಾಜರುಪಡಿಸಲು ನೀಡಲಾದ ಆಜ್ಞೆಯ ಹಿಂದಿರುವ ಅಧಿಕಾರವನ್ನು ಯಾರಾದರೂ ಸಂಶಯದೃಷ್ಟಿಯಿಂದ ನೋಡಿದ ಹಾಗೆ ಕಾಣಿಸುವುದಿಲ್ಲ. ಬಾಂಬೆಯ ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆಯಲ್ಲಿ ಕಲ್ಕತ್ತದ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿರುವ ಅಧಿಕಾರದ ಬಗ್ಗೆ ಉಲ್ಲೇಖಗಳಿವೆ. ನಾಲ್ಕನೆಯ ಜಾರ್ಜ್ ಅವರ ೪ನೆಯ ಅಧಿನಿಯಮದ (ಸಿ.೭೧) ಪ್ರಕಾರ ಮಹಾಪ್ರಭುಗಳಿಗೆ ಬಾಂಬೆಯಲ್ಲಿ ಸರ್ವೋಚ್ಚ ನ್ಯಾಯಾಲಯವೊಂದನ್ನು ಸ್ಥಾಪಿಸಲು ಮತ್ತು ಅದರ ವ್ಯಾಪ್ತಿಗೆ ದಿವಾಣಿ, ತಕ್ಸೀರು ವಿಷಯಗಳ ಹಾಗೂ ಸಮುದ್ರವ್ಯವಹಾರ, ಮತ್ತು ಧಾರ್ಮಿಕ ವ್ಯವಹಾರಗಳ ಮೇಲಿನ ಸಂಪೂರ್ಣ ಅಧಿಕಾರವನ್ನು ಮತ್ತು ಈ ಅಧಿಕಾರದ ವ್ಯಾಪ್ತಿಯೊಳಕ್ಕೆ ಸ್ಥಳೀಯರನ್ನು ಹಾಗೂ ಬ್ರಿಟಿಷ್ ಪ್ರಜೆಗಳನ್ನು ತರುವ ಅಧಿಕಾರವನ್ನು, ಅದಕ್ಕೆ ಅನುಗುಣವಾದ ಇತರೆ ಅಧಿಕಾರ, ಸವಲತ್ತು ಮತ್ತು ವಿನಾಯತಿಗಳನ್ನು ಬಾಂಬೆ ಮತ್ತು ಅದರ ಗಡಿಯೊಳಗೆ ಬರುವ ಎಲ್ಲಾ ಪ್ರದೇಶಗಳಿಗೆ ವ್ಯಾಪ್ತವಾಗಿರುವಂತೆ ಮತ್ತು ಇದುವರೆಗೆ ಇದ್ದಂತಹ ಅಥವಾ ಇನ್ನುಮುಂದೆ ಒಳಪಡುವ ಪ್ರದೇಶಗಳಿಗೆ ವಿಸ್ತರಿಸುವಂತೆ ನೀಡಲು ಅಗತ್ಯವಾದ ಅಧಿಕಾರವನ್ನು ನೀಡಿದೆ. ಜಾರಿಯಲ್ಲಿ ಇರುವ ಅಥವಾ ರದ್ದುಗೊಳಿಸಲ್ಪಡದೆ ಇರುವ ಯಾವುದೇ ಕಾನೂನಿನ ಪ್ರಕಾರ ಅಥವಾ ಬಂಗಾಳದ ಫೋರ್ಟ್ ವಿಲಿಯಮ್ಸ್‌ನಲ್ಲಿರುವ ಸರ್ವೋಚ್ಚ ನ್ಯಾಯಾಲಯವು ಹೊಂದಿರುವ ಎಲ್ಲಾ ಅಧಿಕಾರಗಳನ್ನೂ ಬಾಂಬೆಯ ಸರ್ವೋಚ್ಚನ್ಯಾಯಾಲಯವು ಹೊಂದಿರುತ್ತದೆ. ಇಲ್ಲಿಯವರೆಗೆ ಫೋರ್ಟ್ ವಿಲಿಯಮ್ಸ್‌ನ ಗವರ್ನರ್ ಜನರಲ್ ಅವರು ಮತ್ತು ಪರಿಷತ್ತು ಈ ನಿಟ್ಟಿನಲ್ಲಿ ಅನುಭವಿಸುತ್ತಿದ್ದ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಯಿಂದ ಬಾಧಿತವಾಗದಂತಹ ವಿನಾಯತಿಗಳನ್ನೂ, ಇನ್ನು ಮುಂದೆ ಬಾಂಬೆಯ ಗವರ್ನರ್ ಮತ್ತು ಪರಿಷತ್ತು ಹಾಗೂ ಫೋರ್ಟ್ ವಿಲಿಯಮ್ಸ್‌ನಲ್ಲಿರುವ ಗನರ್ವರ್ ಜನರಲ್ ಮತ್ತು ಪರಿಷತ್ತುಗಳೂ ಕೂಡ ಅನುಭವಿಸಲು ಅರ್ಹರಾಗಿರುತ್ತಾರೆ." ಬಾಂಬೆಯ ಗವರ್ನರ್ ಮತ್ತು ಪರಿಷತ್ತಿಗೆ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಯಿಂದ ವಿನಾಯತಿಯನ್ನು ನೀಡಿರುವ ವಿಧಿಯು ಇದೊಂದೇ ಆಗಿದೆ. ಆದರೆ ಫೋರ್ಟ್ ವಿಲಿಯಮ್ಸ್‌ನ ಗವರ್ನರ್ ಜನರಲ್ ಮತ್ತು ಪರಿಷತ್ತು ಇಂತಹ ವಿನಾಯತಿಯನ್ನು ತಾವು ಪಡೆದಿರುವುದಷ್ಟೇ ಅಲ್ಲದೆ* ಮೂರನೆಯ ಜಾರ್ಜ್ ಅವರ ೨೧ನೆಯ ಅಧಿನಿಯಮದ ಪ್ರಕಾರ ತಮಗೆ ಇಂತಹ ವಿನಾಯತಿಯನ್ನು ದಯಪಾಲಿಸಬೇಕೆಂದು ಬೇಡಿಕೊಂಡ ಇತರರಿಗೂ ಇಂತಹ ವಿನಾಯತಿಯನ್ನು ಲಿಖಿತ ರೂಪದಲ್ಲಿ ನೀಡುವ ಅಧಿಕಾರವನ್ನು ಹೊಂದಿದ್ದಾರೆ.

ತಮ್ಮ ಈ ೪ನೆಯ ಜಿಇಒ ೪ (ಪ್ರಕರಣ ೭೧)ರ ಅಡಿಯಲ್ಲಿ ಮಹಾಪ್ರಭುಗಳು ಮಾನ್ಯ ನಿರೂಪಗಳಿಗೆ ಇಂಗ್ಲೆಂಡಿನಲ್ಲಿ ಇರುವ ಅಧಿಕಾರಗಳನ್ನು ಸದರಿ ಸರ್ವೋಚ್ಚ ನ್ಯಾಯಾಲಯಕ್ಕೂ ನೀಡಿದರು. ಆದರೆ ಹಾಗೆ ಮಾಡುವಾಗ ಅದರ ದಿವಾಣಿ, ಧಾರ್ಮಿಕ ಮತ್ತು ಆಯರ್ ಮತ್ತು ಟರ್ಮೈನರ್ ನ್ಯಾಯಾಲಯಗಳ

---

* ೧ನೆಯ ಜಿ.ಎಇ.ಒ ೩ರ ಪ್ರಕರಣ ೭೦ರಲ್ಲಿನ ೨ನೆಯ ಪರಿಚ್ಛೇದವು ಹೀಗೆ ಹೇಳುತ್ತದೆ: 'ಯಾವುದೇ ವ್ಯಕ್ತಿಯು ಅಥವಾ ವ್ಯಕ್ತಿಗಳು ಗವರ್ನರ್ ಜನರಲ್ ಮತ್ತು ಪರಿಷತ್ತಿನ ಲಿಖಿತ ಆಜ್ಞೆಯ ಪ್ರಕಾರ ಯಾವುದೆ ದಿವಾಣಿ ಅಥವಾ ತಕ್ಸೀರು ಅಪರಾಧಗಳನ್ನು ಮಾಡಿದ್ದು, ಅದನ್ನು ಅಂತಹ ಆಜ್ಞೆಯ ಪ್ರಕಾರ ಮಾತ್ರ ಮಾಡಿದುದೆಂದು ಸಾಬೀತುಮಾಡಿದರೆ, ಅವರನ್ನು ಅವರ ವಿರುದ್ಧ ಇರುವ ಯಾವುದೇ ಅಥವಾ ಎಲ್ಲಾ ಕಟ್ಟಳೆಗಳಿಂದ ಮುಕ್ತಗೊಳಿಸತಕ್ಕದ್ದು,

ವ್ಯಾಪ್ತಿಯನ್ನು ಸೀಮಿತಗೊಳಿಸುವುದು ಯೋಗ್ಯವೆಂದು ಅಪೇಕ್ಷಿಸಿದರು. ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಮೇಲೆ ಹೇರಿರುವ ಸೀಮಿತತೆಯು ಈ ವಿಷಯಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಸೀಮಿತತೆಯನ್ನು ಹೇರಿರುವ ವಿಧಿಯ ಪಾಠವು ಈ ರೀತಿ ಇದೆ – "ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿ, ಅಧಿಕಾರಗಳು ನಮ್ಮ ಸನ್ನದಿನಲ್ಲಿ ವಿವರಿಸಿರುವ ಹಾಗೂ ನಿರ್ದಿಷ್ಟಪಡಿಸಿರುವ ಬಾಂಬೆ ಪ್ರದೇಶ ವ್ಯಾಪ್ತಿಯ ಒಳಗೆ ವಾಸಿಸುವ ಮತ್ತು ಬಾಂಬೆ ಸರಕಾರದ ಮೇಲೆ ಅವಲಂಬಿತವಾಗಿರುವ ಎಲ್ಲಾ ಬ್ರಿಟಿಷ್ ಪ್ರಜೆಗಳಿಗೂ ಅನ್ವಯವಾಗುತ್ತದೆ ಎಂದು ನಾವು ಈ ಮೂಲಕ ನಿರ್ದೇಶಿಸುತ್ತೇವೆ, ವಿಧಿಸುತ್ತೇವೆ ಹಾಗೂ ನಿರ್ಧರಿಸುತ್ತೇವೆ. ಮುಂದುವರೆದು ಅದು ಹೀಗೆ ಹೇಳುತ್ತದೆ – "ಮೇಲೆ ಹೇಳಿದ ಎಲ್ಲರ ಮೇಲೂ, ಎಲ್ಲಾ ಪ್ರದೇಶದ ಮೇಲೂ ಬಾಂಬೆ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಯು ಇರುತ್ತದೆ ಎಂದ ಮಾತ್ರಕ್ಕೆ ಇವರನ್ನು ಹೊರತುಪಡಿಸಿ ಇನ್ನಾರ ಮೇಲೂ ಅಥವಾ ಇನ್ನಾವ ಪ್ರದೇಶದ ಮೇಲೂ ಅದರ ವ್ಯಾಪ್ತಿಯು ಇರುವುದಿಲ್ಲ ಎಂದು ಇದರಿಂದ ಹೊರಡುವುದಿಲ್ಲ". ಈ ವಿಧಿಯ ಪಾಠವನ್ನು ಒಂದುಗೂಡಿಸಿ ಓದಿದಾಗ ಹೀಗೆ ಇರುತ್ತದೆ – "ಬಾಂಬೆಯ ಸರ್ವೋಚ್ಚ ನ್ಯಾಯಾಲಯದ ಅಧಿಕಾರ, ವ್ಯಾಪ್ತಿಗಳು ತನ್ನ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಯಾವುದೇ ದಿವಾಣಿ ಪ್ರಕರಣವನ್ನು ವಿಚಾರಿಸುವುದನ್ನು ಹಾಗೂ ನಿರ್ಣಯಿಸುವುದನ್ನು ಒಳಗೊಳ್ಳುತ್ತವೆ" ಇದು ಸದರಿ ನ್ಯಾಯಾಲಯದ ಇತರ ಯಾವುದೇ ಅಧಿಕಾರ ಹಾಗೂ ವ್ಯಾಪ್ತಿಗಳನ್ನು ಇತರ ವಿಷಯಗಳಲ್ಲಿ ಸೀಮಿತಗೊಳಿಸುವುದಿಲ್ಲ. ಈ ನ್ಯಾಯಾಲಯವು ದಿವಾಣಿ ಪ್ರಕರಣಗಳನ್ನು ಎದುರಿಸುತ್ತಿರುವವರ ಮೇಲೆ ಹೇಗೆಯೋ ಹಾಗೆಯೇ ಇತರ ಎಲ್ಲರ ಮೇಲೂ ಅಧಿಕಾರವನ್ನು ಹೊಂದಿದೆ. ಅಪರಾಧೀ ಕಾನೂನುಗಳ ಬಗ್ಗೆ ಹೇಳುತ್ತಾ, ಈ ಸನ್ನದು (೪೪ನೆಯ ಪರಿಚ್ಛೇದ) 'ಬಾಂಬೆ ಸರಕಾರದ ಮೇಲೆ ಅವಲಂಬಿತವಾಗಿರುವ, ಅದರ ವ್ಯಾಪ್ತಿಯಲ್ಲಿ ಬರುವ, ಬಾಂಬೆಗೆ ಸೇರಿದ ಯಾವುದೇ ಪ್ರದೇಶದ ಎಲ್ಲಾ ಬ್ರಿಟಿಷ್ ಪ್ರಜೆಗಳು ಮಾಡಿದ ರಾಜದ್ರೋಹ, ಕೊಲೆ, ಹಿಂಸಾತ್ಮಕ ಅಪರಾಧ, ದುರ್ವರ್ತನೆ, ಮೊದಲಾದವುಗಳನ್ನು ವಿಚಾರಿಸಲು, ನಿರ್ಣಯಿಸಲು' ಬಾಂಬೆಯ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವನ್ನು ನೀಡುತ್ತದೆ. ಹಿಂದಿನ ಪರಿಚ್ಛೇದದಲ್ಲಿ ಹೇಳಿರುವಂತೆ ಪರಮೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಸೀಮಿತಗೊಳಿಸಿದ್ದಿದ್ದರೆ ಪ್ರಸಕ್ತ ಪರಿಚ್ಛೇದವು ಅಸಂಗತವಾಗುತ್ತಿತ್ತು. ಇದರಿಂದ ತಿಳಿಯುವುದು ಏನೆಂದರೆ, ಈ ಸೀಮಿತತೆಯು ಕೇವಲ ದಿವಾಣಿ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆಯೇ ಹೊರತು, ಇತರ ಪ್ರಕರಣಗಳಿಗೆ ಅಲ್ಲ. ಇವೆಲ್ಲದರ ಪರಿಣಾಮವೆಂದರೆ, ಮೊದಲನೆಯದಾಗಿ, ಪೂನಾ ಮತ್ತು ಥಾಣೆಗಳ ಎಲ್ಲಾ ಪ್ರದೇಶಗಳ ಮೇಲೆ ಮಹಾಪ್ರಭುಗಳ ನ್ಯಾಯಾಲಯಕ್ಕೆ ಇರುವ ಎಲ್ಲಾ ಅಧಿಕಾರಗಳನ್ನೂ ಬಾಂಬೆಯ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಲಾಗಿದೆ. ಹಾಗೆ ಮಾಡುವಾಗ ದಿವಾಣಿ ಪ್ರಕರಣಗಳ ಮೇಲಿನ ಅಧಿಕಾರವನ್ನು ಸೀಮಿತಗೊಳಿಸಲಾಗಿದೆ ಮತ್ತು ಇದೇ ರೀತಿಯಲ್ಲಿ ಇತರ ಪ್ರಕರಣಗಳಲ್ಲಿಯೂ ನ್ಯಾಯಾಲಯದ ಅಧಿಕಾರವನ್ನು ಸೀಮಿತಗೊಳಿಸಲಾಗಿದೆ.

ಈ ಸನ್ನದಿನ ಭಾಷೆಯು ಸನ್ನದಿನ ಆಶಯದಂತೆಯೇ ಬುದ್ಧಿಗಮ್ಯವಾಗುವಷ್ಟು ಸರಳವಾಗಿದೆ. ಸ್ಥಳೀಯ ಪ್ರಜೆಯು ವಿದೇಶೀ ಕಾನೂನಿನ ವ್ಯಾಪ್ತಿಗೆ ಒಳಪಡುವುದಿಲ್ಲ. ಆದರೆ ಆತನ ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಇತರರು ಆಕ್ರಮಣಮಾಡದಂತೆ ಅದು ಆತನಿಗೆ ರಕ್ಷಣೆಯನ್ನು ಕೊಡುತ್ತದೆ ಎಂಬ ಅರ್ಥವನ್ನು ಈ ಸನ್ನದಿನಿಂದ ಹೊರಡುತ್ತದೆ. ಇಂತಹ ಸ್ವಾತಂತ್ರ್ಯವಿಲ್ಲದಿದ್ದರೆ, ಯಾವ ರೀತಿಯ ನ್ಯಾಯವೂ ದೊರಕುವುದು ಸಾಧ್ಯವಿಲ್ಲ. ದಿವಾಣೀ ಮತ್ತು ಆಪರಾಧಿಕ ನ್ಯಾಯಗಳ ಉದ್ದೇಶ ಹಾಗೂ ಎಲ್ಲಾ ಪ್ರಜೆಗಳಿಗೂ ರಕ್ಷಣೆಯನ್ನು ನೀಡುವ ಸಲುವಾಗಿ ಮಹಾಪ್ರಭುಗಳಿಗೆ ವಿಶೇಷವಾಗಿ ದತ್ತವಾಗಿರುವ ಅಧಿಕಾರಗಳು ಇವುಗಳ ಮಧ್ಯೆ

ಇರುವ ಅಂತರವು ಸ್ಪಷ್ಟವಾಗಿ ಕಾಣಿಸುತ್ತದೆ. ಮಹಾಪ್ರಭುಗಳು ತಮಗೆ ತಮ್ಮ ರಾಜತ್ವದ ಕಾರಣದಿಂದ ದತ್ತವಾಗಿ ಬಂದ ಈ ಅಧಿಕಾರವನ್ನು ಮಹಾಪ್ರಭುಗಳ ನ್ಯಾಯಾಲಯದ ನ್ಯಾಯಮೂರ್ತಿಗಳ ಮೂಲಕ ತಾವು ಗೆದ್ದ ದೇಶಗಳಲ್ಲಿ ಹಾಗೂ ತಾವು ಪಟ್ಟಾಭಿಷಿಕ್ತರಾಗುವಾಗ ತಾವು ಆಳ್ವಿಕೆಯನ್ನು ವಹಿಸಿಕೊಂಡ ದೇಶಗಳಲ್ಲಿ ಜಾರಿಗೆ ತರುತ್ತಾರೆ. ಅವರು ಸಂಸತ್ತಿನ ಎರಡೂ ಸದನಗಳ ಒಪ್ಪಿಗೆಯನ್ನು ಪಡೆದ ಮೇಲೆ ತಾವಾಗಿಯೇ ತ್ಯಜಿಸದಿದ್ದರೆ, ಅವರ ಈ ಅಧಿಕಾರವನ್ನು ಯಾರೂ ಅವರಿಂದ ಕಿತ್ತುಕೊಳ್ಳುವ ಹಾಗಿಲ್ಲ.

ಈ ಅಧಿಕಾರ ಸನ್ನದಿನಲ್ಲಿ ಈ ಮುಂದಿನ ವಿಧಿಯೂ ಇದೆ (ವಿಧಿ ೪೫) "ಗವರ್ನರ್ ಜನರಲ್ ಹಾಗೂ ಕೆಲವು ನಿರ್ದಿಷ್ಟವಾಗಿ ಹೇಳಿರುವ ಇತರರ ಮೇಲೆ, ಕೆಲವೊಂದು ನಿರ್ದಿಷ್ಟ ಪ್ರಕರಣಗಳನ್ನು ಹೊರತುಪಡಿಸಿ, ಯಾವುದೇ ದೋಷಾರೋಪವನ್ನು ಮಾಡಲು ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವಿರುವುದಿಲ್ಲ." ಅವರ ಮೇಲೆ ಆಪರಾಧಿಕ ವಿಷಯಗಳಲ್ಲಿ ದೋಷಾರೋಪವನ್ನು ಮಾಡುವುದನ್ನು ಪ್ರತಿಷೇಧಿಸಿದರೂ, ಅಲ್ಲಿ ಹೇಳಿರುವ ಪ್ರಕರಣಗಳನ್ನು ಹೊರತು ಪಡಿಸಿ ಇತರ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಆಪರಾಧಿಕ ವಿಷಯಗಳಲ್ಲಿನ ದೋಷಾರೋಪದ ವಿಚಾರಣೆಯನ್ನು ನಡೆಸಬಹುದು ಎಂಬುದು ಈ ವಿಧಿಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

೧೮೨೭ರಲ್ಲಿ ಸರ್ ಚಾರ್ಲ್ಸ್ ಗ್ರೆ ಅವರು ನೀಡಿದ ತೀರ್ಪು (ಮಾರ್ಲೆ ಡೈಜೆಸ್ಟ್ ಸಂಪುಟ ೧, ಪುಟ ೧೨೦) ಈ ವಿಷಯದಲ್ಲಿ ಆ ಪ್ರಾಜ್ಞ ಮುಖ್ಯ ನ್ಯಾಯಮೂರ್ತಿಗಳ ಅಭಿಪ್ರಾಯವೇನಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ. ನ್ಯಾಯಾಲಯದ ಆಜ್ಞೆಯನ್ನು ನಿರ್ವಹಿಸುವಾಗ ನ್ಯಾಯಾಲಯದ ಅಧಿಕಾರಿಗೆ ಅಡ್ಡಿಪಡಿಸಿದರು ಎಂಬ ಆರೋಪದ ಮೇಲೆ ದೋಷಾರೋಪಣೆಯನ್ನು ಹಲವು ವ್ಯಕ್ತಿಗಳ ಮೇಲೆ ಮಾಡಲಾಗಿತ್ತು. ಆರೋಪಿತ ವ್ಯಕ್ತಿಗಳಲ್ಲಿ ಕೆಲವರು ಸ್ಥಳೀಯ ಪ್ರಜೆಗಳಾಗಿದ್ದು, ಸಾಮಾನ್ಯವಾದ ನ್ಯಾಯಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರಲಿಲ್ಲ. ಆದರೆ ಉಳಿದವರು ಬ್ರಿಟಿಷ್ ಪ್ರಜೆಗಳಾಗಿದ್ದವರು ಅಥವಾ ಬ್ರಿಟಿಷ್ ಪ್ರಜೆಗಳ ಕೈಕೆಳಗಿನ ಉದ್ಯೋಗಿಗಳಾಗಿದ್ದವರು. ಹಾಗಾಗಿ ಅವರು ಈ ಕಾನೂನಿನಿಂದ ವಿನಾಯತಿಯನ್ನು ಪಡೆದವರಾಗಿರಲಿಲ್ಲ. ಈ ಎರಡು ವರ್ಗಗಳವರ ನಡುವೆ ನಾವು ಇಲ್ಲಿ ಎಳೆದಿರುವ ವ್ಯತ್ಯಾಸದ ಗೆರೆಯನ್ನು ಸರ್ ಚಾರ್ಲ್ಸ್ ಗ್ರೆ ಅವರು ಖಚಿತವಾಗಿ ಗುರುತಿಸಿದ್ದರು. ಈ ಪ್ರದೇಶದ ವ್ಯಾಪ್ತಿಯಲ್ಲಿ ವಾಸಿಸುತ್ತಿರದ ಕಾರಣದಿಂದ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂಬ ಆಧಾರದ ಮೇಲೆ ಮೆಂಡಿ ಅಲ್ಲಿ ಖಾನ್ ಎಂಬುವರ ಮೇಲೆ ಮಾಡಿದ ಆಪರಾಧಿಕ ದೋಷಾರೋಪಣೆಯನ್ನು ಕುರಿತು ಸದರಿ ನ್ಯಾಯಾಲಯವು ವಿಚಾರಣೆ ನಡೆಸಲು ಅಧಿಕಾರವನ್ನು ಹೊಂದಿದೆಯೇ ಎಂಬ ಪ್ರಶ್ನೆ ನಮಗೆ ಎದುರಾಗಿತ್ತು. ಬಂಗಾಳದ ಮುಖ್ಯ ನ್ಯಾಯಮೂರ್ತಿಗಳ ಅಭಿಪ್ರಾಯದ ಪ್ರಕಾರ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ನ್ಯಾಯಾಲಯಕ್ಕೆ ಮೊದಲನೆಯದಾಗಿ ಆಯರ್ ಮತ್ತು ಟರ್ಮೈನರ್ ನ್ಯಾಯಾಲಯದ ಹಾಗೂ ಎರಡನೆಯದಾಗಿ ಮಹಾಪ್ರಭುಗಳ ನ್ಯಾಯಾಲಯದ – ಈ ಎರಡೂ ನ್ಯಾಯಾಲಯದ ಅಧಿಕಾರಗಳು ದತ್ತವಾಗಿವೆ. ಮೊದಲನೆಯದಕ್ಕೆ ಕೆಲವೊಂದು ಮಿತಿಗಳು ಇವೆ, ಆದರೆ, ಯಾವ ಮಿತಿಗೂ ಒಳಪಡದ ಎರಡನೆಯದು ಈ ಸರಕಾರದ ಅಧೀನಕ್ಕೆ ಒಳಪಡುವ ಎಲ್ಲಾ ಪ್ರದೇಶಗಳ ಮೇಲೂ ತನ್ನ ವ್ಯಾಪ್ತಿಯನ್ನು ಹೊಂದಿರುತ್ತದೆ. ಅವರ ಅಭಿಪ್ರಾಯದಲ್ಲಿ, ಮಹಾಪ್ರಭುಗಳ ನ್ಯಾಯಾಲಯವು ಇಂಗ್ಲೆಂಡಿನಲ್ಲಿ ಹೊಂದಿರುವ ಎಲ್ಲಾ ಆರೋಪಗಳ ವಿಚಾರಣಾಧಿಕಾರಗಳನ್ನೂ ಕಂಪನಿಯ ಆಳ್ವಿಕೆಯಲ್ಲಿರುವ ಎಲ್ಲಾ ಪ್ರದೇಶಗಳ ಮೇಲೂ ಸರ್ವೋಚ್ಚ ನ್ಯಾಯಾಲವೂ ಹೊಂದಿರುತ್ತದೆ. ವಿಚಾರಣೆಗೆ ಒಳಪಡಿಸಿಯೂ ದಂಡನೆಗೆ ಒಳಪಡಿಸಲಾಗುವಂತಹ ಅಧಿಕಾರವನ್ನು ನ್ಯಾಯಾಲಯವು ಹೊಂದಿಲ್ಲವೆಂದು ಹೇಳುವುದು ಅತ್ಯಂತ ಅಸಹಜವಾಗುತ್ತದೆ. ಆದ್ದರಿಂದ,

ನ್ಯಾಯಮೂರ್ತಿಯವರು, ತಮ್ಮ ನ್ಯಾಯಾಲಯವು ಮಹಾಪ್ರಭುಗಳ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದರಿಂದ, ತಮ್ಮ ಅಭಿಪ್ರಾಯವನ್ನು ಈ ಪ್ರಶ್ನೆಗೆ ಸೀಮಿತಗೊಳಿಸಲಿಲ್ಲ. ಯಾರ ವಿರುದ್ಧವಾದರೂ ಆಪರಾಧಿಕ ಕಾನೂನಿಡಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬಹುದೆಂಬುದು ಅವರಿಗೆ ತಿಳಿದಿರಲಿಲ್ಲ. ಅವರ ಪ್ರಕಾರ, ಅಂತಹ ಅಧಿಕಾರವನ್ನು ಬಹಳ ಅಪರೂಪವಾಗಿ ಮತ್ತು ಎಚ್ಚರಿಕೆಯಿಂದ ಉಪಯೋಗಿಸಬೇಕು. ಮೆಂಡಿ ಅಲ್ಲಿ ಖಾನ್ ಅವರು ಕಲ್ಕತ್ತದ ನಿವಾಸಿಯಲ್ಲವೆಂಬ ಕಾರಣದಿಂದ ಅವರ ಮೇಲೆ ಕ್ರಮತೆಗೆದುಕೊಳ್ಳಲು ಇದ್ದ ಇತರ ಕಾರಣಗಳು ನಿಷ್ಕ್ರಿಯಗೊಳ್ಳುತ್ತವೆ." ಮತ್ತೆ ಮುಂದುವರೆದು ಅವರು ಹೇಳುತ್ತಾರೆ "ಅವರಲ್ಲಿ ಕೆಲವರು ದೋಷಾರೋಪಕ್ಕೆ ಒಳಗಾಗದಿರುವುದರಿಂದ ಮತ್ತು ದೋಷಾರೋಪಕ್ಕೆ ಒಳಗಾಗಿರುವವರ ದೋಷವು ಪರಿಗಣಿಸಲಾಗದಷ್ಟು ಅತ್ಯಲ್ಪವಾದುದರಿಂದ ಆಪರಾಧಿಕ ದೋಷಾರೋಪಣೆಯ ವಿಚಾರಣೆಯನ್ನು ನಡೆಸಲು ತಾವು ಸಮ್ಮತಿಸುವುದಿಲ್ಲ, ಆದರೆ ಈ ವಿಷಯವನ್ನು ದೋಷಾರೋಪಮಾಡುವ ಅಭಿಯೋಗಕ್ಕೇ ಬಿಟ್ಟುಬಿಡುವುದು ಉತ್ತಮವೆಂದು ಅವರು ಅಭಿಪ್ರಾಯಪಟ್ಟರು".

ಈ ಹೇಳಿಕೆಯಲ್ಲಿ, ದೋಷಾರೋಪದ ವಿಚಾರಣೆ ಮಾಡುವುದನ್ನು ದೋಷಾರೋಪಮಾಡುವ ಹಕ್ಕು ಮತ್ತು ಆಪರಾಧಿಕ ವಿಷಯಗಳಲ್ಲಿ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರದಿಂದ ಸ್ಪಷ್ಟವಾಗಿ ಬೇರೆ ಮಾಡಲಾಗಿದೆ. ದೋಷಾರೋಪಣೆಯನ್ನು ಆಯರ್ ಮತ್ತು ಟರ್ಮೈನರ್ ನ್ಯಾಯಾಲಯದ ಅಧಿಕಾರದ ಮೇಲೆ ಸರ್ವೋಚ್ಚ ನ್ಯಾಯಾಲಯವು ಮಾಡಬಹುದು, ಆದರೆ ಹಾಗೆ ಮಾಡುವಲ್ಲಿ ಅದರ ವ್ಯಾಪ್ತಿಯು ಎಲ್ಲಾ ಪ್ರಕರಣಗಳಿಗೂ ಅನ್ವಯವಾಗದೆ ಕೇವಲ ಅಪವಾದಾತ್ಮಕ ಪ್ರಕರಣಗಳಿಗೆ ಅನ್ವಯವಾಗುತ್ತದೆ. ಆದರೆ ಅಪರಾಧಿಗಳಿಗೆ ಶಿಕ್ಷೆಯನ್ನು ನೀಡುವ ಅಧಿಕಾರವು ನ್ಯಾಯಾಲಯಗಳಿಗೆ ಸಹಜವಾಗಿಯೇ ಇರುತ್ತದೆ. ಮಹಾಪ್ರಭುಗಳ ನ್ಯಾಯಾಲಯಕ್ಕೆ ಸಹಜವಾಗಿರುವ ಇಂತಹ ಅಧಿಕಾರವನ್ನು, ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಲಾದ ಸನ್ನದಿನ ಮೂಲಕ, ವ್ಯಕ್ತಿನಿರ್ದಿಷ್ಟವಾಗಿರದೆ ಯಾವ ಮಿತಿಗೂ ಒಳಪಡದೆ ಇರುವಂತೆ ಅದಕ್ಕೆ ನೀಡಲಾಗಿದೆ. ಮೇಲೆ ವಿವರಿಸಿರುವ ರೀತಿಯಲ್ಲಿ. ಸನ್ನಿಧಾನಕ್ಕೆ ಈ ಅಧಿಕಾರಗಳು ದತ್ತವಾಗಿವೆ ಎಂಬುದನ್ನು ತೋರಿಸಲು ಕಾನೂನು ಪುಸ್ತಕಗಳಿಂದ ಉದಾಹರಣೆಗಳನ್ನು ಹೇರಳವಾಗಿ ನೀಡಬಹುದು. ಬೌರ್ನ್ ಪ್ರಕರಣದಲ್ಲಿ (ಕ್ರೊ. ಜೇಮ್ಸ್. ಪುಟ ೫೪೩) 'ಮುಖ್ಯ ನ್ಯಾಯಮೂರ್ತಿ ಮಾಂಟೆಗ್ಯೂ ಅವರು ಹೇಳಿರುವುದು – "ಮಹಾಪ್ರಭುಗಳ ನಿರೂಪವು ನಡೆಯದ ಕ್ಲಿಂಕ್ ಪೋರ್ಟ್‌ಗಳಲ್ಲಿ ಸವಲತ್ತುಗಳು ವಿವಿಧ ಪಕ್ಷಗಳ ನಡುವೆ ಇರಬೇಕೆಂದು ಉದ್ದೇಶಿಸಲಾಗಿತ್ತು, ಆದರೆ ಮಹಾಪ್ರಭುಗಳ ವಿರುದ್ಧ ಅಂತಹ ಸವಲತ್ತುಗಳಿಗೆ ಸ್ಥಾನವಿರುವುದಿಲ್ಲ. ಈ ನಿರೂಪವು (ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸಬೇಕೆಂಬ ಆಜ್ಞೆಯು) ವಿಶೇಷಾಧಿಕಾರದ ಆಜ್ಞೆಯಾಗಿರುತ್ತದೆ ಮತ್ತು ಇಂತಹ ಆಜ್ಞೆಯು ತನ್ನ ಪ್ರಜೆಗಳಿಗೆ ನ್ಯಾಯವಿತರಣೆಯನ್ನು ಮಾಡುವ ಉದ್ದೇಶವನ್ನು ಹೊಂದಿರುತ್ತದೆ. ತನ್ನ ಪ್ರಜೆಗಳಲ್ಲಿ ಯಾರನ್ನಾದರೂ ಏಕೆ ಬಂಧನದಲ್ಲಿರಸಲಾಗಿದೆ ಎಂಬುದನ್ನು ತಿಳಿದುಕೊಳ್ಳಲೇಬೇಕು. ಸಂಬಂಪಟ್ಟ ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸದೆ ಬೇರೆ ಯಾವ ಉತ್ತರವನ್ನು ನೀಡಿದರೂ ಈ ಆಜ್ಞೆಯನ್ನು ಪಾಲಿಸಿದ ಹಾಗೆ ಆಗುವುದಿಲ್ಲ. ಈ ಆಜ್ಞೆಯನ್ನು ಸದರಿ ನ್ಯಾಯಾಲಯದಿಂದ ಫ್ರಾನ್ಸಿನ ಕ್ಯಾಲೆ ನಗರ ಹಾಗೂ ಸಾಮ್ರಾಜ್ಯದ ಯಾವುದೇ ಪ್ರದೇಶದ ಮೇಲಾದರೂ ನೀಡಬಹುದಾಗಿದೆ. ಇದನ್ನು ಪ್ರಶ್ನಿಸುವುದು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸಿದ ಹಾಗೆ ಅಲ್ಲ, ಬದಲಿಗೆ ಮಹಾಪ್ರಭುಗಳ ಅಧಿಕಾರವನ್ನೇ ಪ್ರಶ್ನಿಸಿದಂತೆ. ಇದು ಎಂದಿಗೂ ಆಗತಕ್ಕದ್ದಲ್ಲ. ಇತರ ಎಲ್ಲಾ ನ್ಯಾಯಮೂರ್ತಿಗಳೂ ಈ ಅಭಿಪ್ರಾಯದೊಂದಿಗೆ ಸಹಮತವನ್ನು ಹೊಂದಿದ್ದಾರೆ." ಲಾರ್ಡ್ ಮಾಂಟೆಗ್ಯೂ ಅವರ ಈ ಸಿದ್ಧಾಂತವನ್ನು ಸ್ಥಿರೀಕರಿಸುವಂತೆ, ಮಹಾಪ್ರಭುಗಳ

ಆಜ್ಞೆಯನ್ನು ಕ್ಯಾಲೆ ನಗರ ಹಾಗೂ ಸಾಮ್ರಾಜ್ಯಕ್ಕೆ ಸೇರಿದ ಎಲ್ಲಾ ಪ್ರದೇಶಗಳ ಮೇಲೂ ಹಲವಾರು ಬಾರಿ ನೀಡಲಾಗಿದೆ ಮತ್ತು ಅಂದಿನಿಂದ ಇಂದಿನವರೆಗೂ ಎಲ್ಲಾ ನ್ಯಾಯಾಲಯಗಳೂ ಇದನ್ನು ಸಂಪೂರ್ಣವಾಗಿ ಮಾನ್ಯಮಾಡಿವೆ. ಲಾರ್ಡ್ ಮ್ಯಾನ್ಸ್‌ಫೀಲ್ಡ್ ಅವರು ಕೌಲೆ ಪ್ರಕರಣದಲ್ಲಿ (೨ ಬರ್ರೋ ಅವರ ವರದಿಗಳು –ಪುಟ ೮೩೪) ಮಹಾಪ್ರಭುಗಳ ಆಜ್ಞೆಯು ಅವರ ಸಾಮ್ರಾಜ್ಯದ ಎಲ್ಲಾ ಪ್ರದೇಶಗಳಿಗೂ ಅನ್ವಯವಾಗುತ್ತದೆ ಎಂದು ತಿಳಿಯತಕ್ಕದ್ದು, ಆದರೆ ಉಳಿದ ಆಜ್ಞೆಗಳ ಬಗ್ಗೆ ಇದೇ ಮಾತನ್ನು ಹೇಳುವುದಕ್ಕಾಗುವುದಿಲ್ಲ ಎಂದು ನಿರ್ಣಯಿಸಿದ್ದಾರೆ. ಹಾಗೆ ನಿರ್ಣಯಿಸುವಾಗ ಅವರು ನ್ಯಾಯಮಂಡಲಿಯ ಸದಸ್ಯರ ಆಜ್ಞೆಯ ಮೇಲೆ ಆ ಆಜ್ಞೆಯು ಬೆರ್ವಿಕ್ ನಗರಕ್ಕೆ ಅನ್ವಯಿಸುವುದಿಲ್ಲ ಎಂಬುದನ್ನು ಸೂಚಿಸಬೇಕು ಎಂದು ನಿರ್ದೇಶಿಸಿದರು. ಹೆಚ್ಚಿನ ಪ್ರಾಮುಖ್ಯವನ್ನು ಹೊಂದಿರುವಂತಹ ಆಜ್ಞೆಗಳನ್ನು ನೀಡುವಾಗ ಅತ್ಯಂತ ಹೆಚ್ಚಿನ ವ್ಯಾಪ್ತಿಯಲ್ಲಿ ಜಾರಿಗೆ ಬರುವಂತೆ ನೋಡಿಕೊಳ್ಳತಕ್ಕದ್ದು ಎಂದೂ ಅವರು ನಿರ್ದೇಶಿಸಿದರು. ಇಲ್ಲಿ ಹೇಳಿರುವ ಪ್ರಾಮುಖ್ಯವು ಪ್ರಜೆಗೆ ರಾಜನಲ್ಲಿರುವ ನಿಷ್ಠೆಯ ಪರಿಣಾಮವಾಗಿ ಬರುತ್ತದೆಯೋ ಅಥವಾ ರಾಜರಿಗೆ ತಮ್ಮ ಪ್ರಜೆಗಳನ್ನು ರಕ್ಷಿಸಲು ಇರುವ ಕರ್ತವ್ಯದಿಂದ ಉದ್ಭವವಾಗುತ್ತದೆಯೋ? ಇದನ್ನು ಕಾಲ್ವಿನ್ ಅವರ ಪ್ರಕರಣದಲ್ಲಿ (೭ನೆ ವರದಿ–೧) ಹೀಗೆ ಸ್ಪಷ್ಟಪಡಿಸಲಾಗಿದೆ – ರಾಜರಲ್ಲಿ ನಿಷ್ಠೆಯನ್ನು ತೋರಬೇಕಾದದ್ದು ಪ್ರಜೆಗಳ ಕರ್ತವ್ಯ ಹಾಗೂ ಪ್ರಜೆಗಳನ್ನು ರಕ್ಷಿಸುವುದು ರಾಜನ ಕರ್ತವ್ಯ. ತಮಗೆ ನಿಷ್ಠೆಯನ್ನು ಹೊಂದಿರುವ ಪ್ರಜೆಗಳನ್ನು ರಾಜರು ರಕ್ಷಿಸಬೇಕಾಗುತ್ತದೆ. ಸಾಮ್ರಾಜ್ಯವು ಗೆದ್ದ ಯಾವುದೇ ದೇಶದ ಪ್ರಜೆಗಳು ಮಹಾಪ್ರಭುಗಳಿಗೆ ನಿಷ್ಠೆಯಿಂದ ಇರಬೇಕು ಎನ್ನುವುದನ್ನು ಪ್ರಶ್ನಿಸಬಹುದೇ? ಹಾಗೆ ಅವರು ನಿಷ್ಠೆಯನ್ನು ಹೊಂದಿದ್ದರೆ, ಅವರನ್ನು ರಕ್ಷಿಸುವುದು ಮಹಾಪ್ರಭುಗಳ ಕರ್ತವ್ಯವಾಗುತ್ತದೆ. ಹೀಗೆ ರಕ್ಷಣೆಯನ್ನು ನೀಡುವಾಗ ಅದರ ಅಂಗವಾಗಿ, ಬಂಧನದಲ್ಲಿಟ್ಟಿರುವ ವ್ಯಕ್ತಿಯನ್ನು ನ್ಯಾಯಯುತವಾಗಿ ಬಂಧಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಅರಿತುಕೊಳ್ಳಲು ಸಂಬಂಧಿಸಿದ ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸಬೇಕೆಂದು ಆಜ್ಞೆಯನ್ನು ನೀಡಬಹುದು, ಅಥವಾ ತನ್ನ ಕೆಳ ನ್ಯಾಯಾಲಯದ ನಿರ್ಣಯದ ಸಂದರ್ಭದಲ್ಲಿ ನಡೆದ ನಡಾವಳಿಯು ನ್ಯಾಯಸಮ್ಮತವಾಗಿ ನಡೆದಿದೆಯೇ ಎಂಬುದನ್ನು ಅರಿಯಲು ನಡಾವಳಿಯ ಒಂದು ಪ್ರತಿಯನ್ನು ಉಚ್ಚನ್ಯಾಯಾಲಯಕ್ಕೆ ಸಲ್ಲಿಸುವಂತೆ ಮಹಾಪ್ರಭುಗಳು ನಿರ್ದೇಶಿಸಬಹುದು, ಅಥವಾ ತಮ್ಮ ಅಧೀನದಲ್ಲಿರುವ ಯಾವುದೇ ನ್ಯಾಯಾಲಯವು ಅದರ ಕಾರ್ಯವನ್ನು ನಡೆಸುವುದುನ್ನು ಪ್ರತಿಷೇಧಿಸುವ ಆಜ್ಞೆಯನ್ನು ನೀಡಬಹುದು, ಅಥವಾ, ವ್ಯಕ್ತಿಗಳು ನಿರ್ವಹಿಸಬೇಕಾದ ಕರ್ತವ್ಯವನ್ನು ನಿರ್ವಹಿಸುವಂತೆ ಕಾನೂನುಬದ್ಧವಾಗಿ ಒತ್ತಾಯಿಸಬಹುದು. ಸಂಸತ್ತಿನಲ್ಲಿ ವಿಧ್ಯುಕ್ತವಾಗಿ ಅಂಗೀಕರಿಸಿದ ನಂತರ ತಮ್ಮ ಈ ಆಧಿಕಾರವನ್ನು ಒಂದು ನಿರ್ದಿಷ್ಟ ನ್ಯಾಯಾಲಯಕ್ಕೆ ವರ್ಗಾಯಿಸಿದರೆ, ಸದರಿ ನ್ಯಾಯಾಯಲಯದ ಅಧಿಕಾರವ್ಯಾಪ್ತಿಯನ್ನು ಭೌಗೋಳಿಕವಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ಮಹಾಪ್ರಭುಗಳು ಸ್ಪಷ್ಟವಾಗಿ ಮಿತಿಗೊಳಿಸದಿದ್ದರೆ, ಸದರಿ ನ್ಯಾಯಾಲಯವು ಈ ಆಜ್ಞೆಯನ್ನು ನೀಡುವಲ್ಲಿ ಮಹಾಪ್ರಭುಗಳಿಗೆ ಇರುವ ಅಧಿಕಾರವ್ಯಾಪ್ತಿಯನ್ನೇ ಹೊಂದಿರುತ್ತದೆ. ಬಾಂಬೆ ನ್ಯಾಯಾಲಯಕ್ಕೆ ಮಹಾಪ್ರಭುಗಳು ತಮ್ಮ ನ್ಯಾಯಾಯಲವು ಇಂಗ್ಲೆಂಡಿನಲ್ಲಿ ಹೊಂದಿರುವಂತಹ ಅಧಿಕಾರವ್ಯಾಪ್ತಿಯನ್ನು ದಯಪಾಲಿಸಿರುತ್ತಾರಾಗಿ, ಬಾಂಬೆ ನ್ಯಾಯಾಲಯವು ಪ್ರಸಕ್ತ ಪ್ರಕರಣದಲ್ಲಿ ತನ್ನ ಆಜ್ಞೆಯನ್ನು ನೀಡಿರುವ ಪ್ರದೇಶವನ್ನೂ ಒಳಗೊಂಡಂತೆ ಬಾಂಬೆ ಪ್ರಾಂತದ ಅಧೀನದಲ್ಲಿರುವ ಎಲ್ಲಾ ಪ್ರದೇಶಗಳ ಮೇಲೆಯೂ ಈ ಆಜ್ಞೆಯನ್ನು ನೀಡುವ ಅಧಿಕಾರವನ್ನು ಹೊಂದಿದೆ. ಭಾರತದ ಸ್ಥಳೀಯ ಪ್ರಜೆಗಳು ತಮ್ಮತಮ್ಮಲ್ಲಿ ಒಬ್ಬರು ಮತ್ತೊಬ್ಬರ ಮೇಲೆ ವೈಯಕ್ತಿಕ ವ್ಯಾಜ್ಯವನ್ನು ಹೂಡುವ ವಿಷಯದಲ್ಲಿ ಅವರು ಈ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲವೆಂಬುದು ಮತ್ತು

ನಮ್ಮ ಕಾನೂನುಗಳು ಭಾರತದ ವಿವಿಧ ಪಕ್ಷಗಳವರ ನಡುವಿನ ವ್ಯಾಜ್ಯದ ವಿಷಯದಲ್ಲಿ ಸಾಗವು ಎಂಬುದೂ ಸತ್ಯವಾದ ವಿಷಯಗಳಾಗಿವೆ. ಆದರೂ, ಮಹತ್ವಪೂರ್ಣ ಆಜ್ಞೆಗಳ ವಿಷಯದಲ್ಲಿ ಇಂಗ್ಲೆಂಡಿನ ಸಂಸತ್ತು ಯಾವುದೇ ಮಿತಿಯನ್ನು ವಿಧಿಸದಿದ್ದ ಪಕ್ಷದಲ್ಲಿ, ಅದರ ಅಧಿಕಾರವ್ಯಾಪ್ತಿಯು ಮಹಾಪ್ರಭುಗಳಲ್ಲಿ ಆವಿಷ್ಟವಾಗಿರುತ್ತದೆ ಮತ್ತು ಸಂಬಂಧಪಟ್ಟ ನ್ಯಾಯಾಲಯಗಳ ಮೂಲಕ ಅದು ಕಾರ್ಯಗತವಾಗುತ್ತದೆ.

೧೯೭೭ರಲ್ಲಿ ಸರ್ ಎಲಿಜಾ ಇಂಪೆ ಅವರ ಮುಂದೆ ಬಂದ ಪ್ರಖ್ಯಾತವಾದ ಪಾಟ್ನಾ ಪ್ರಕರಣದಲ್ಲಿ (ಪಾಟ್ನಾ, ಪರಿಶಿಷ್ಟ ೧೭, ನಾದರಾ ಬೇಗಂ ಮತ್ತು ಬೆಹಾದೆರ್ ಬೇಗ್ ಅವರ ನಡುವಿನ ಪ್ರಕರಣದಲ್ಲಿ ಸರ್ ಎಲಿಜಾ ಇಂಪೆಯವರು ನೀಡಿದ ತೀರ್ಪು) ತಮ್ಮ ವಾದದ ಮೊದಲ ಭಾಗದಲ್ಲಿ ಅಡ್ವೊಕೇಟ್ ಜನರಲ್ ಅವರು ಸಮರ್ಥವಾಗಿ ಮಂಡಿಸಿದ ಹಾಗೆ ನ್ಯಾಯಾಲಯವು ಭಾರತೀಯ ಪ್ರಜೆಗಳ ಮೇಲೆ ಅಧಿಕಾರವನ್ನು ಹೊಂದಿಲ್ಲ. ಅವರ ಪ್ರಕಾರ "ಈ ದೇಶದ ಜನಸಂಖ್ಯೆಯ ಬಹು ದೊಡ್ಡ ಭಾಗವು ಮಹಾಪ್ರಭುಗಳ ಕಾನೂನಿನ ಅಥವಾ ಈ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಡುವುದಿಲ್ಲ, ಮತ್ತು ಅದಕ್ಕೆ ಒಳಪಡುವಂತಹವರ ಸಂಖ್ಯೆಯ ಪ್ರಮಾಣವು ಬಹಳ ಕಡಿಮೆಯಿದೆ. ಈ ದೇಶದ ಜನರು ಒಳಪಟ್ಟಿರುವಂತಹ ವ್ಯಾಪ್ತಿಯನ್ನುಳ್ಳ ನ್ಯಾಯಾಲಯಗಳು ಹಲವಾರು ಇದ್ದು ನಾವು ಅವುಗಳ ವ್ಯಾಪ್ತಿಯ ವಿಷಯದಲ್ಲಿ ಆತಂಕಗೊಂಡಿಲ್ಲ." ಶ್ರೀ ದೇವರ್‌ಅವರು ಈ ವಿಷಯದ ಮೇಲೆ ಬಹಳಷ್ಟು ಒತ್ತನ್ನು ನೀಡಿದರು. ಆದರೆ, ಸ್ಥಳೀಯರು ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಯಿಂದ ವಿನಾಯತಿಯನ್ನು ಪಡೆದಿದ್ದಾರೆಯೇ ಎಂಬುದನ್ನು ತೀರ್ಮಾನಿಸಲು ಸರ್ ಎಲಿಜಾ ಇಂಪೆಯವರಿಗೆ ಈ ವಾದದ ನೆರವು ಅಗತ್ಯವಾಗಿರಲಿಲ್ಲ. ನಾವು ಇಲ್ಲಿ ಪರಿಗಣಿಸುತ್ತಿರುವ ಅಧಿಕಾರವ್ಯಾಪ್ತಿಯು ಯಾವುದರ ಬಗ್ಗೆ ಎಂಬ ಪ್ರಶ್ನೆಯು ಸುತ್ತಿಸುತ್ತಿ ಮತ್ತೆ ಇದ್ದಲ್ಲಿಗೇ ಬಂದಿತು. ಇಲ್ಲಿ ಪರಿಗಣಿತವಾಗುತ್ತಿರುವುದು ಸಂಸತ್ತಿನ ಅಂಗೀಕಾರದ ಮುದ್ರೆಯಿಲ್ಲದೆ ರದ್ದುಮಾಡಲಾಗದ ಮಹತ್ವಪೂರ್ಣ ಆಜ್ಞೆಗಳ ವ್ಯಾಪ್ತಿಯೇ ಅಥವಾ ವ್ಯಕ್ತಿ ವ್ಯಕ್ತಿಗಳ ನಡುವೆ ನಡೆಯುವ ಸಾಮಾನ್ಯ ಪ್ರಕರಣಗಳ ಬಗ್ಗೆ ನೀಡುವ ಆಜ್ಞೆಗಳ ವ್ಯಾಪ್ತಿಯೇ? ಬಹುಶಃ ಸರ್ ಎಲಿಜಾ ಅವರು ಎರಡನೆಯದನ್ನು ಕುರಿತು ಚರ್ಚೆಯನ್ನು ನಡೆಸಲು ಅನುಮತಿಯನ್ನು ನೀಡಿದ್ದಿರಬೇಕು.

ಎಲ್ಲಾ ಸ್ಥಳೀಯ ಪ್ರಜೆಗಳೂ ಈ ಕಾನೂನಿನ ವ್ಯಾಪ್ತಿಯೊಳಗೆ ಬರುವ ಹಾಗಿದ್ದಿದ್ದರೆ, "ಈಸ್ಟ್ ಇಂಡಿಯಾ ಕಂಪನಿಯ ಕಚೇರಿಗಳಲ್ಲಿರುವ ಎಲ್ಲಾ ಸ್ಥಳೀಯರ ಕಾರ್ಯನಿರ್ವಹಣಾ ಸ್ಥಳ, ಅವರು ಸಾಮಾನ್ಯವಾಗಿ ವಾಸಿಸುವ ನಿವಾಸದ ವಿವರ ಇವುಗಳನ್ನು ಅಕ್ಷರಾನುಕ್ರಮದಲ್ಲಿ ಪುಸ್ತಕ/ಪುಸ್ತಕಗಳಲ್ಲಿ ಬರೆದು ಸದರಿ ಕಚೇರಿಗಳಲ್ಲಿ ಇಟ್ಟಿರಬೇಕು ಎಂಬುದರ ಬಗ್ಗೆ ಗವರ್ನರ್ ಜನರಲ್ ಮತ್ತು ಅವರ ಪರಿಷತ್ತು ನಿರ್ದೇಶಿಸಬೇಕು" ಎಂದು ಜಿ.ಇ.ಓ ೩ ಕ್ಯಾಪ್. ೭೦ಯ ೨೧ನೆಯ ಅಧಿನಿಯಮದ ೧೧ನೆಯ ಪರಿಚ್ಛೇದದಲ್ಲಿ ವಿಧಿಸಿರುವುದರ ಆಧಾರದ ಮೇಲೆ, ಯಾರನ್ನೂ ಈ ನಿರ್ದೇಶಿತ ಪಟ್ಟಿಯಲ್ಲಿ ಸೇರಿಸಲು ಸದರಿ ಕಚೇರಿಯವರು ಪ್ರಯತ್ನಿಸುತ್ತಿರಲಿಲ್ಲ ಎಂದು ವಾದಿಸಲಾಗಿದೆ. ಸೀಮಿತಾರ್ಥದಲ್ಲಿ ಪರಿಗಣಿಸಿದಾಗ, ಕೇವಲ ಕೆಲವೇ ವರ್ಗಗಳವರು ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತಾರೆಂಬುದನ್ನು ನಾವು ಒಪ್ಪಿಕೊಳ್ಳುವುದನ್ನು ಆಕ್ಷೇಪಿಸುವುದಿಲ್ಲ. ವಿಶಾಲಾರ್ಥದಲ್ಲಿ ಪರಿಗಣಿಸಿದಾಗ, ಎಲ್ಲ ವರ್ಗಗಳವರೂ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತಾರೆಂಬ ನಮ್ಮ ವಾದವು ಸಾಧಾರವಾಗಿರಲಿ ಅಥವಾ ನಿರಾಧಾರವಾಗಿರಲಿ, ಸದರಿ ಕಚೇರಿಯ ಪುಸ್ತಕಗಳು ಎಲ್ಲ ವರ್ಗಗಳವರ ವಿವರಗಳನ್ನೂ ಒಳಗೊಳ್ಳುವುದು ಅಪೇಕ್ಷಣೀಯವಾಗಿರುತ್ತದೆ.

ಇಲ್ಲಿಯವರೆಗೂ ನಾವು ಅತ್ಯಂತ ಪ್ರಮುಖವಾದ ಆಜ್ಞೆಗಳ ಬಗ್ಗೆ ಸಾಮಾನ್ಯವಾಗಿ ಮಾತನಾಡಿದ ಮೇಲೆ, ಈಗ ನಿರ್ದಿಷ್ಟವಾಗಿ ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಪಡಿಸುವ ಆಜ್ಞೆಯ ಬಗ್ಗೆ ಚರ್ಚಿಸುತ್ತೇವೆ. ಈ

ಆಜ್ಞೆಯ ಬಗ್ಗೆ ಮಾಡಿರುವ ವಾದಗಳನ್ನು ೧೮೧೮ರಲ್ಲಿ ಲಾರ್ಡ್ ಎಲ್ಡನ್ ಅವರು ಕ್ರೌಲೆಯ ಪ್ರಕರಣದಲ್ಲಿ (೨ನೆಯ ಸ್ವಾನ್ಸ್‌ಟನ್, ಪುಟ ೧) ಪರಿಶೀಲಿಸಿದರು. ದಿವಾಳಿ ಆಯುಕ್ತರು ಒಬ್ಬ ವ್ಯಕ್ತಿಯನ್ನು ಸಮಂಜಸವಾಗಿ ಉತ್ತರಿಸಲಿಲ್ಲವೆಂಬ ಕಾರಣದಿಂದಾಗಿ ಶಿಕ್ಷೆಗೆ ಗುರಿಪಡಿಸಿದ್ದರು. ಈ ಸಂದರ್ಭದಲ್ಲಿ ಸದರಿ ವ್ಯಕ್ತಿಯನ್ನು ಹಾಜರು ಪಡಿಸುವಂತೆ ನಿರ್ದೇಶಿಸಲು ಮನವಿಯೊಂದನ್ನು ನ್ಯಾಯಾಲಯದಲ್ಲಿ ಮಾಡಿಕೊಳ್ಳಲಾಯಿತು. ತಮಗೆ ಅಂತಹ ಆಜ್ಞೆಯನ್ನು ನೀಡಲು ಅಧಿಕಾರವಿದೆಯೇ, ಇಲ್ಲವೇ ಎಂಬುದನ್ನು ಲಾರ್ಡ್ ಎಲ್ಡನ್ ಅವರು ಬಹಳ ಎಚ್ಚರಿಕೆಯಿಂದ ಚರ್ಚಿಸಿದರು. ಲಾರ್ಡ್ ಚಾನ್ಸಲರ್ ನಾಟಿಂಗ್‌ಹ್ಯಾಮ್ ಅವರು ನಿರ್ಣಯಿಸಿದ್ದ ಒಂದು ಪ್ರಕರಣವನ್ನು (೧೬೭೬ರ ಜೆಂಕಿನ್ಸ್ ಪ್ರಕರಣ, ೬ ಹೌ ಎಸ್ಟಿ. ಟ್ರಾ. ೧೧೮೯) ಅವರು ಪತ್ತೆಹಚ್ಚಿದರು. ಆದರೆ, ಈ ನಿರ್ಣಯವು ಇಂಗ್ಲೆಂಡಿನ ನ್ಯಾಯವಿತರಣಾ ನೀತಿಗೆ ಅನುಗುಣವಾಗಿಲ್ಲದಿದ್ದುದರಿಂದ ಅವರು ಅದನ್ನು ದೃಢವಾಗಿ ತಿರಸ್ಕರಿಸಿದರು. ಬಂಧನದ ಕಾರಣಗಳನ್ನು ಕಾಲವಿಳಂಬವಿಲ್ಲದ ಹಾಗೆ ವಿವರಿಸುವ ವಿಷಯದಲ್ಲಿ ನ್ಯಾಯಾಂಗದ ಪರಮೋಚ್ಚ ಅಧಿಕಾರವಿಲ್ಲದೆ ಯಾವ ಮನುಷ್ಯನ ವೈಯಕ್ತಿಕ ಸ್ವಾತಂತ್ರ್ಯವನ್ನೂ ಉಲ್ಲಂಘಿಸುವ ಹಾಗಿಲ್ಲ ಎಂದು ಈ ಕಾನೂನು ಹೇಳುತ್ತದೆ ಎಂದು ಅವರು ಅರ್ಥೈಸಿದರು. ಅಲ್ಲದೆ, ಯಾವ ಸಮಯದಲ್ಲಿಯಾದರೂ, ಅಧಿನಿಯಮದಲ್ಲಿ ಸಾಮಾನ್ಯವಾಗಿ ಉಪಯೋಗಿಸಿರುವ ಭಾಷೆ, ಪದಗಳಿಂದ ಬಾಧಿತವಾಗದೆ, ಮಹಾಪ್ರಭುಗಳ ವಿಶೇಷ ಅಧಿಕಾರವನ್ನು ಜಾರಿಗೆ ತರಬಹುದು ಎಂದೂ ಅವರು ಹೇಳಿದರು.

ಮೋರೊ ರಘೋನಾಥ್ (೧ ನ್ಯಾಪ್ ೮) ಅವರ ಪ್ರಕರಣವು ಗವರ್ನರ್ ಹಾಗೂ ಅವರ ಪರಿಷತ್ತು ವಿಶೇಷವಾದ ಮಧ್ಯಪ್ರವೇಶಕ್ಕೆ ಎಡೆಮಾಡಿಕೊಟ್ಟಿದೆ. ಈ ಪ್ರಕರಣದಲ್ಲಿ ಸದರಿ ವ್ಯಕ್ತಿಯನ್ನು ಹಾಜರುಪಡಿಸಲು ಆಜ್ಞೆಯನ್ನು ನೀಡಲಾಗಿದ್ದರೂ, ಆ ವ್ಯಕ್ತಿಯನ್ನು ಹಾಜರುಪಡಿಸಲಿಲ್ಲ, ಅಥವಾ ಹಾಗೆ ಮಾಡದಿರುವುದಕ್ಕೆ ಸೂಕ್ತ ಸಮಜಾಯಿಷಿಯನ್ನೂ ನೀಡಲಿಲ್ಲ. ಬದಲಿಗೆ ಈ ಆಜ್ಞೆಯು ಯಾರ ಮೇಲೆ ನೀಡಲಾಗಿದ್ದಿತೋ ಅವರು ವಿಚಿತ್ರವಾದ, ಅಸಂಗತವಾದ ಹಾಗೂ ಪ್ರಶ್ನಾರ್ಹವಾದ ಪತ್ರವೊಂದನ್ನು ಸಲ್ಲಿಸಿದ್ದಾರೆ. ಅವರು ಪತ್ರದಲ್ಲಿ ಹೇಳಿರುವ ಅಂಶಗಳು ವಾಸ್ತವವಾಗಿದ್ದಿದ್ದರೆ, ಮತ್ತು ಹೇಳಿರುವ ಕಾರಣಗಳು ಸೂಕ್ತವಾಗಿ ಕಂಡುಬಂದಿದ್ದಿದ್ದರೆ ಅದನ್ನು ನ್ಯಾಯಾಲಯವು ಒಪ್ಪಿಕೊಳ್ಳಬಹುದಿತ್ತು. ಆಜ್ಞೆಯು ಯಾರ ಮೇಲೆ ನೀಡಲಾಗಿದ್ದಿತೋ ಅವರು ಮೋರೋ ರಘೋನಾಥ್ ಅವರನ್ನು ತಮ್ಮ ಸುಫರ್ದಿನಲ್ಲಿಯೇ ಇಟ್ಟುಕೊಂಡಿರಲು ಸದರಿ ಪ್ರದೇಶದ ಮೇಲೆ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಮೂರ್ತಿ ಡನ್‌ಲಪ್ ಅವರ ಅನುಮತಿಯನ್ನು ಪಡೆದಿದ್ದಿದ್ದರೆ, ಅವರನ್ನು ನ್ಯಾಯಮೂರ್ತಿ ಡನ್‌ಲಪ್ ಅವರ ಕಾರ್ಯಭಾರಿ ಎಂದು ಪರಿಗಣಿಸಬಹುದಿತ್ತು, ತನ್ಮೂಲಕ ಅಧಿಕಾರವ್ಯಾಪ್ತಿಯಲ್ಲಿರುವವರನ್ನು ಅತಿ ಸಂಕುಚಿತಾರ್ಥದಲ್ಲಿಯಾದರೂ ಸೂಚಿಸಬಹುದಿತ್ತು. ಯಾವುದೇ ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸುವ ಆಜ್ಞೆಯ ಪ್ರಕಾರ ಸಾಮಾನ್ಯ ವ್ಯವಹಾರಗಳ ನ್ಯಾಯಾಲದ ಮುಂದೆ ಹಾಜರುಪಡಿಸಿದರೆ, ಆ ವ್ಯಕ್ತಿಯನ್ನು ವಿಶೇಷ ಸವಲತ್ತುಗಳನ್ನುಳ್ಳ ವ್ಯಕ್ತಿಯೆಂದು ಪರಿಗಣಿಸುವುದು ಮೊಂಡುಧೈರ್ಯದ ಪ್ರದರ್ಶನವಾಗುತ್ತದೆ. ಅನ್ಯಾಯಯುತವಾಗಿ ಬಂಧನದಲ್ಲಿರುವ ವ್ಯಕ್ತಿಯು ಆಜ್ಞೆಗೆ ಉತ್ತರವನ್ನು ನೀಡಬಲ್ಲನೆಂಬ ಹೇಳಿಕೆಯನ್ನು ನ್ಯಾಯಾಲಯವು ಸಹಿಸುವುದಿಲ್ಲವಾದ್ದರಿಂದ ಸಾಮಾನ್ಯ ವ್ಯವಹಾರಗಳ ನ್ಯಾಯಾಲಯವು ಮೇಲೆ ಹೇಳಿದಂತಹ ವ್ಯಕ್ತಿಗಳಿಗೆ ವಿಶೇಷ ಸವಲತ್ತುಗಳಿಲ್ಲದಿದ್ದರೂ, ಇವೆಯೆಂಬುದಾಗಿ ಭಾವಿಸುವುದನ್ನು ಲಾರ್ಡ್ ಎಲ್ಡನ್ ಹಾಗೂ ನ್ಯಾಯಮೂರ್ತಿ ಬ್ಲಾಕ್‌ಸ್ಟೋನ್ ಅವರು ಖಂಡಿಸುತ್ತಾರೆ

ಭಾರತದ ಸೀಮೆಯೊಳಗೆ ಇರುವ ಸ್ಥಳೀಯ ವ್ಯಕ್ತಿಯನ್ನು, ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳ

ಮಧ್ಯಪ್ರವೇಶವಿಲ್ಲದೆಯೇ ಬಂಧನವು ಸಂಭವಿಸುವುದು ಇಲ್ಲವೇ ಇಲ್ಲವೆನ್ನುವಷ್ಟು ವಿರಳವಾಗಿರುತ್ತದೆ.

ಹೆಚ್ಚುಕಡಿಮೆ ಎಲ್ಲಾ ಬಂದೀಖಾನೆಯ ಅಧಿಕಾರಿಗಳೂ ಸ್ಥಳೀಯರೇ ಆಗಿರುತ್ತಾರೆ. ಸ್ಥಳೀಯ ನ್ಯಾಯಾಲಯದ ಅಧಿಕಾರಿಗಳೂ ಸ್ಥಳೀಯರೇ ಆಗಿರುತ್ತಾರೆ. ಆದರೆ ಸ್ಥಳೀಯ ನ್ಯಾಯಾಲದ ಮೇಲಿರುವ ಅಧಿಕಾರವು ಹೆಚ್ಚುಕಡಿಮೆ ಎಲ್ಲಾ ಸಂದರ್ಭಗಳಲ್ಲಿಯೂ ಬ್ರಿಟಿಷ್ ಪ್ರಜೆಗಳ ವಶದಲ್ಲಿಯೇ ಇರುತ್ತದೆ. ಈಸ್ಟ್ ಇಂಡಿಯಾ ಕಂಪನಿಯ ನೌಕರರು ಈ ನ್ಯಾಯಾಲಯಗಳಲ್ಲಿ ಉನ್ನತ ಅಧಿಕಾರಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡಿರುತ್ತಾರೆ. ಒಬ್ಬ ವ್ಯಕ್ತಿಯು ಮತ್ತೊಬ್ಬನನ್ನು ಸೆರೆಯಲ್ಲಿಟ್ಟುಕೊಂಡಿರುವಂತಹ ಸನ್ನಿವೇಶ ಮತ್ತು ಹಾಗೆ ಮತ್ತೊಬ್ಬನನ್ನು ಸೆರೆಯಲ್ಲಿ ಇಟ್ಟುಕೊಂಡಿರುವ ಆ ವ್ಯಕ್ತಿಯು ಬ್ರಿಟಿಷ್ ಪ್ರಜೆಗಳ ಅಧೀನದಲ್ಲಿ ಇಲ್ಲದಿರುವಂತಹ ಸನ್ನಿವೇಶ ಇವೆರಡೂ ಅಪರೂಪವಾದ ಸನ್ನಿವೇಶಗಳು ಒಟ್ಟುಗೂಡುವುದನ್ನು ಕಾಣುವುದಕ್ಕೆ ವಿಶೇಷವಾದ ಬುದ್ಧಿವಂತಿಕೆಯು ಅಗತ್ಯವಾಗಿರುತ್ತದೆ.

ಪರಮೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಭಿಲೇಖವು ಮಹಾಪ್ರಭುಗಳು ಸನ್ನದಿನ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿರುವ ಅಧಿಕಾರವನ್ನು ಬಾಂಬೆಯ ದ್ವೀಪದಲ್ಲಿ ವಾಸಿಸುತ್ತಿರುವವರನ್ನು ಅಥವಾ ಬ್ರಿಟಿಷ್ ಪ್ರಜೆಗಳ ಅಧೀನದಲ್ಲಿ ನೌಕರಿ ಮಾಡುತ್ತಿರುವವರನ್ನು ಹೊರತು ಪಡಿಸಿ, ಉಳಿದವರ ವಿಷಯದಲ್ಲಿ ರದ್ದುಗೊಳಿಸುವ ಉದ್ದೇಶವನ್ನು ಹೊಂದಿದೆ. ಈ ಅಭಿಲೇಖವು ಸರ್ವೋಚ್ಚ ನ್ಯಾಯಾಲಯವು ಪ್ರಾಂತೀಯ ನ್ಯಾಯಾಲಯಗಳಿಗೆ ನಿರ್ದೇಶನವನ್ನು ನೀಡುವುದನ್ನು ತಿರಸ್ಕರಿಸುವುದನ್ನು ಸೂಚಿಸುತ್ತದೆ. ಇಂತಹುದೇ ಅಭಿಪ್ರಾಯವನ್ನು ಸರಕಾರವು ಹೊಂದಿರುವುದನ್ನು ಬಾಪು ಗುಣ್ಣೆಸ್ ಅವರ ಪ್ರಕರಣದಲ್ಲಿಯೂ ನಾವು ಕಾಣಬಹುದು.

ಮುಂದುವರೆಯುತ್ತಾ, ನ್ಯಾಯವಾದಿಗಳು ಗವರ್ನರ್ ಮತ್ತು ಪರಿಷತ್ತು ಹಾಗೂ ನ್ಯಾಯಮೂರ್ತಿಗಳ ನಡುವಿನ ಸಂಬಂಧವನ್ನು ಚರ್ಚಿಸುತ್ತಾರೆ.

ಈ ಸಂದರ್ಭದಲ್ಲಿ ಲಾರ್ಡ್ ಚಾನ್ಸಲರ್ (ಲಾರ್ಡ್ ಲಿಂಡ್‌ಹರ್ಸ್ಟ್) ಅವರು ಹೀಗೆ ಹೇಳುತ್ತಾರೆ: "ನಾವು ಇಲ್ಲಿ ಸಭೆಸೇರಿರುವುದು ಬಾಂಬೆ ಸರ್ವೋಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಖಚಿತಪಡಿಸಿಕೊಳ್ಳುವುದಕ್ಕೆ. ಅಂದರೆ ಈ ನ್ಯಾಯಾಲಯದ ಅಧಿಕಾರಗಳೇನು ಎಂಬುದು ಈ ಚರ್ಚೆಯ ಉದ್ದೇಶ."

ಯಾವುದೇ ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸುವಂತೆ ಆಜ್ಞೆಮಾಡುವ ಅಧಿಕಾರವು ಮಹಾಪ್ರಭುಗಳಿಗೆ ಜನ್ಮಜಾತವಾಗಿ ಬಂದಿರುತ್ತದೆ. ಈ ಅಧಿಕಾರವನ್ನು ರದ್ದುಗೊಳಿಸಬೇಕಾದರೆ ಹಾಗೆಂದು ಸ್ಪಷ್ಟವಾದ ಭಾಷೆಯಲ್ಲಿ ಅದನ್ನು ಹೇಳಿರಬೇಕು. ಆದರೆ ಅಂತಹುದೇನೂ ನ್ಯಾಯಾಲಕ್ಕೆ ನೀಡಿರುವ ಸನ್ನದಿನಲ್ಲಿ ಇಲ್ಲ. ಅಂತಹ ಆಜ್ಞೆಗಳನ್ನು ಇಂಗ್ಲೆಂಡಿನ ಮಹಾಪ್ರಭುಗಳ ನ್ಯಾಯಾಲಯವು ನೀಡುತ್ತದೆ. ಮಹಾಪ್ರಭುಗಳ ಸಾಮ್ರಾಜ್ಯವು ವಿಸ್ತರಿಸಿರುವ ಎಲ್ಲಾ ದೇಶಗಳಲ್ಲಿಯೂ ಈ ಆಜ್ಞೆ ಚಾಲ್ತಿಯಲ್ಲಿರುತ್ತದೆ. ಇಂಗ್ಲೆಂಡಿನ ಸಂಸತ್ತು ಇಂಗ್ಲೆಂಡಿನ ಮಹಾಪ್ರಭುಗಳು ನೀಡಿರುವ ಅಧಿಕಾರವನ್ನು ಹೊಂದಿರುವ, ಭಾರತೀಯ ಪ್ರಾಂತಗಳಲ್ಲಿರುವ ಹಲವಾರು ನ್ಯಾಯಾಲಯಗಳು ಅಂತಹ ಆಜ್ಞೆಯನ್ನು ನೀಡಿವೆ. ಅವುಗಳಿಗೆ ಒಳಪಡುವ ವ್ಯಕ್ತಿಗಳ ವಿಚಾರದಲ್ಲಿ ಕೆಲವೊಂದು ಮಿತಿಯನ್ನು ಸರ್ವೋಚ್ಚ ನ್ಯಾಯಾಲಯದ ಮೇಲೆ ವಿಧಿಸಲಾಗಿದೆ, ಆದರೆ ಈ ವಿಧಿಗಳನ್ನು ಪರ್ಯಾಲೋಚಿಸಿ, ಸಾಮಾನ್ಯ ವ್ಯವಹಾರಗಳ ವಿಷಯದಲ್ಲಿ ಆಯರ್ ಮತ್ತು ಟರ್ಮೈನರ್ ನ್ಯಾಯಾಲಯದಲ್ಲಿ ಮಾಡುವಂತೆ ಅನ್ವಯಮಾಡಬೇಕು. ಆದರೆ, ಮಹಾಪ್ರಭುಗಳಿಗೆ ನಿಷ್ಠೆಯನ್ನು ತೋರುವ ಪ್ರಜೆಗಳ ರಕ್ಷಣೆಯ ವಿಷಯದಲ್ಲಿ ನಿರ್ಣಯವನ್ನು ತುರ್ತಾಗಿ ತೆಗೆದುಕೊಳ್ಳಬೇಕಾದ ಸಂದರ್ಭಬಂದಾಗ ನೀಡಬೇಕಾಗುವ

ವಿಶೇಷ ಆಜ್ಞೆಗಳಿಗೆ ಈ ಮಿತಿಯನ್ನು ಅನ್ವಯಮಾಡತಕ್ಕದ್ದಲ್ಲ. ಸ್ಥಳೀಯ ಪ್ರಜೆಯೊಬ್ಬನನ್ನು ಬಂಧಿಸಿ ತನ್ನ ವಶದಲ್ಲಿಟ್ಟುಕೊಂಡಿರುವ ಇನ್ನೊಬ್ಬ ಸ್ಥಳೀಯ ಪ್ರಜೆಯು ಈ ನ್ಯಾಯಾಲಯದ ವ್ಯಾಪ್ತಿಗೆ ಸಾಮಾನ್ಯಾರ್ಥದಲ್ಲಿ ಒಳಪಡದಿದ್ದರೂ, ಆತ ಬ್ರಿಟಿಷ್ ನ್ಯಾಯಾಧೀಶರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯಾಗಿದ್ದರೆ, ಆತನು ಈ ವಿನಾಯತಿಯ ಕಕ್ಷೆಯಲ್ಲಿ ಬರುವುದಿಲ್ಲ.

ಇಂತಹ ಪ್ರಾಮುಖ್ಯವನ್ನು ಪಡೆದಿರುವ 'ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಪಡಿಸಲು ನೀಡುವ ಆಜ್ಞೆ'ಯನ್ನು 'ವಿನಾಕರಣ ವ್ಯಕ್ತಿಯೊಬ್ಬನನ್ನು ಬಂಧಿಸುವುದನ್ನು ತಡೆಯಲು ಮತ್ತು ವ್ಯಕ್ತಿಗಳ ವೈಯಕ್ತಿಕ ಸ್ವಾತಂತ್ರವನ್ನು ರಕ್ಷಿಸಲು ಇರುವ ಅಧಿನಿಯಮ' ಎಂದು ಹೆಸರಿಸಲಾಗಿದೆ. ಮಹಾಪ್ರಭುಗಳ ವಿರುದ್ಧ ಇದ್ದ ಕೌಲೆ ಪ್ರಕರಣದಲ್ಲಿ (ಕೌಲೆ, ೧೭೫೯, ೨ನೆಯ ಬರ್. ೮೩೫) ಹೀಗೆ ಹೇಳಲಾಗಿತ್ತು "ಇಂತಹ ವರ್ಗಗಳ ಆಜ್ಞೆಯನ್ನು ವಸಾಹತುಗಳಲ್ಲಿರುವ ಪ್ರಜೆಗಳ ಮೇಲೆ ನೀಡಲು, ಸಂದರ್ಭವು ಉದ್ಭವವಾಗದೆ ಇದ್ದಾಗಲೂ, ಮಹಾಪ್ರಭುಗಳ ನ್ಯಾಯಾಲಯಕ್ಕೆ ಅಧಿಕಾರವು ಇರುತ್ತದೆ. ಲಾರ್ಡ್ ಮ್ಯಾನ್ಸ್‌ಫೀಲ್ಡ್ ಅವರು ನೀಡಿರುವ ತೀರ್ಪಿನ [ಕೌಲೆ ಪ್ರಕರಣದಲ್ಲಿ (ಕೌಲೆ, ೧೭೫೯, ೨ನೆಯ ಬರ್. ೮೩೫)] ಪ್ರಕಾರ ಹಾಗೂ ಇಂತಹ ಆಜ್ಞೆಗಳನ್ನು ಇಂಗ್ಲೆಂಡಿನ ಪ್ರಭುತ್ವವಿರುವ ಎಲ್ಲಾ ದೇಶಗಳಲ್ಲಿಯೂ ನೀಡುತ್ತಿರುವುದರಿಂದ ಈ ಅಧಿಕಾರವಿರುವುದು ಸ್ಪಷ್ಟವಾಗಿದೆ. ಈ ಆಜ್ಞೆಗಳು ಇಲ್ಲಿನ ಸಾಮಾನ್ಯ ದಿವಾಣೀ ಕಾನೂನಿನ ವ್ಯಾಪ್ತಿಯನ್ನು ಮೀರಿದ ವ್ಯಾಪ್ತಿಯನ್ನು ಹೊಂದಿರಬಹುದು ಮತ್ತು ಹೊಂದಿವೆ. ಹೀಗಾಗಿ, ದಿವಾಣೀ ಕಾನೂನಿನ ವಿಷಯದಲ್ಲಿ ತನ್ನ ಅಧಿಕಾರ ವ್ಯಾಪ್ತಿಯು ಬಾಂಬೆಗೆ ಸೀಮಿತವಾಗಿದ್ದರೂ, ಬಾಂಬೆ ಸರ್ವೋಚ್ಚ ನ್ಯಾಯಾಲಯವು ಬ್ರಿಟಿಷ್ ಸಾಮ್ರಾಜ್ಯದ ವಶದಲ್ಲಿರುವ ಎಲ್ಲಾ ಪ್ರದೇಶಗಳ ಮೇಲೂ ಈ ಆಜ್ಞೆಯನ್ನು ನೀಡಲು ಅಧಿಕಾರವನ್ನು ಹೊಂದಿದೆ. ಇಂತಹ ಪ್ರಕರಣಗಳಲ್ಲಿ, ಮಹಾಪ್ರಭುಗಳ ನ್ಯಾಯಾಲಯದ ಕರ್ತವ್ಯಗಳನ್ನು ಲಾರ್ಡ್ ಕೋಕ್ ಅವರು ಈ ವಿಷಯದ ಬಗ್ಗೆ ನೀಡಿರುವ ತಮ್ಮ ವಿವರಣೆಯಲ್ಲಿ ಸರಿಯಾಗಿ ಗುರುತಿಸಿದ್ದಾರೆ. "ದೇವರನ್ನು ಸಂತೋಷಗೊಳಿಸುವುದಕ್ಕಾಗಿ, ನಮ್ಮ ಪ್ರಜೆಗಳ ಶಾಂತ ಜೀವನಕ್ಕಾಗಿ, ನಮ್ಮ ಮನಸ್ಸಾಕ್ಷಿಯ ಪ್ರಕಾರ ನಡೆದುಕೊಳ್ಳುವುದಕ್ಕಾಗಿ, ನಾವು ತೆಗೆದುಕೊಂಡಿರುವ ಪ್ರಮಾಣವಚನವನ್ನು ನಿಭಾಯಿಸುವುದಕ್ಕಾಗಿ, ನಮ್ಮ ಹಿಂದಿನ ಮಹಾನುಭಾವರ ನಮ್ಮ ಪರಿಷತ್ತಿನ ಅಭಿಪ್ರಾಯದ ಪ್ರಕಾರ ನಾವು, ಬಡವ-ಬಲ್ಲಿದ ಭೇದವಿಲ್ಲದೆ, ವ್ಯಕ್ತಿ-ವ್ಯಕ್ತಿಗಳ ನಡುವೆ ತಾರತಮ್ಯವಿಲ್ಲದೆ ಸರ್ವರಿಗೂ ಅನ್ವಯಮಾಡಲು ಅನುಕೂಲವಾಗುವಂತೆ ಮತ್ತು ನಮ್ಮಿಂದಾಗಲೀ ಇತರರಿಂದಾಗಲೀ ಅವರಿಗೆ ನೀಡಲ್ಪಡುವ ಯಾವುದೇ ಆಜ್ಞೆಯಿಂದ ಅವರ ಹಕ್ಕುಗಳು ಬಾಧಿತವಾಗದಂತೆ, ನಮ್ಮ ನ್ಯಾಯವಿತರಣೆಯನ್ನು ಮಾಡುತ್ತೇವೆ". ಇಂಗ್ಲೆಂಡಿನ ಮಹಾಪ್ರಭುಗಳು ನೀಡಿದ ಯಾವುದೇ ಆಜ್ಞೆಯ ಪ್ರಕಾರ ಮಹಾಪ್ರಭುಗಳ ನ್ಯಾಯಾಲಯವು ನ್ಯಾಯವನ್ನು ಪರಿಪಾಲಿಸುವುದನ್ನು ಅಲಕ್ಷಿಸುವುದು ಸಾಧ್ಯವಿಲ್ಲದಿರುವ ಸಾಮ್ಯದ ಮೇಲೆ, ತಮ್ಮ ನ್ಯಾಯಬದ್ಧವಾದ ಕರ್ತವ್ಯವನ್ನು ನಿರ್ವಹಿಸುವಲ್ಲಿ ಮಧ್ಯಪ್ರವೇಶಮಾಡುತ್ತಿರುವ ಗವರ್ನರ್ ಜನರಲ್ ಮತ್ತು ಪರಿಷತ್ತಿನಿಂದ ಬಂದ ಈ ಪತ್ರವನ್ನು ಅಥವಾ ಆದೇಶವನ್ನು ಪ್ರತಿಭಟಿಸದೆ ಬಾಂಬೆ ನ್ಯಾಯಾಲಯದ ನ್ಯಾಯಮೂರ್ತಿಗಳು ಒಪ್ಪಿಕೊಳ್ಳಬೇಕು ಎಂದು ನಿರೀಕ್ಷಿಸುವುದು ಅತಿಯಾಗುತ್ತದೆ.

ಈಸ್ಟ್ ಇಂಡಿಯಾ ಕಂಪನಿಯ ಪರವಾಗಿ ಬೋಸಾಂಕ್ವೆ ಮತ್ತು ಸ್ಪಾಂಕಿ (ಸರ್ವೋಚ್ಚ ವಕೀಲರು):- ಸದ್ಯದಲ್ಲಿ ಅಧಿಕಾರದಲ್ಲಿರುವ ಮಹಾಪ್ರಭುಗಳ ನಾಲ್ಕನೆಯ ಅಧಿನಿಯಮದಲ್ಲಿರುವ ಭಾಷೆಯ ಪ್ರಕಾರ, ಬಾಂಬೆ ಪ್ರಾಂತದ ಆಡಳಿತಕ್ಕೆ ಒಳಪಟ್ಟಿರುವ ಯಾವುದೇ ಪ್ರದೇಶದ ಮೇಲೂ, ಫ್ಲೋರ್ಟ್ ವಿಲಿಯಮ್ಸ್‌ನ ವ್ಯಾಪ್ತಿಯಲ್ಲಿರುವ ಪ್ರದೇಶಗಳ ಮೇಲೆ ಕಲ್ಕತ್ತ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿರುವಂತಹ ವ್ಯಾಪ್ತಿಯನ್ನು,

ಬಾಂಬೆ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡುವುದು ಈ ಅಧಿನಿಯಮದ ಉದ್ದೇಶವಾಗಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಸನ್ನದಿನಲ್ಲಿನ ಉದ್ದೇಶಗಳನ್ನು ನಿರ್ವಹಿಸಲು ಬಾಂಬೆ ಸರ್ವೋಚ್ಚ ನ್ಯಾಯಾಲಯಕ್ಕೆ ದಯಪಾಲಿಸಿರುವ ಅಧಿಕಾರವ್ಯಾಪ್ತಿಯು ಸೀಮಿತವಾದುದು ಎಂಬುದನ್ನೂ ಇಲ್ಲಿ ಕಾಣಬಹುದು.

ಫೋರ್ಟ್ ವಿಲಿಯಮ್ಸ್‌ನ ಸರ್ವೋಚ್ಚ ನ್ಯಾಯಾಲಯಕ್ಕೆ ಇರುವ ಅಧಿಕಾರಗಳನ್ನೇ ಬಾಂಬೆ ಸರ್ವೋಚ್ಚ ನ್ಯಾಯಾಲಯಕ್ಕೂ ನೀಡಲಾಗಿದೆ ಎಂಬುದನ್ನು ಚರ್ಚೆಯ ಉದ್ದೇಶಕ್ಕಾಗಿ ಊಹಿಸಿಕೊಳ್ಳೋಣ. ಮೂರನೆಯ ಜಾರ್ಜ್ ಅವರ ೧೩ನೆಯ ಅಧಿನಿಯಮದ ಪ್ರಕಾರ ಭಾರತದಲ್ಲಿ ಸ್ಥಾಪಿತವಾಗಿರುವ ನ್ಯಾಯಾಲಯಗಳ ವಿಶಾಲ ವ್ಯಾಪ್ತಿಯು ಹೀಗಿದೆ: ಕಲ್ಕತ್ತದ ನ್ಯಾಯಾಲಯಕ್ಕೆ ತನ್ನ ವ್ಯಾಪ್ತಿಯಲ್ಲಿರುವ ಎಲ್ಲಾ ನಿವಾಸಿಗಳ ಮೇಲೆಯೂ ಅನಿರ್ಬಂಧಿತವಾದ ಅಧಿಕಾರವಿದೆ. ಆದರೆ, ಸಾಮ್ರಾಜ್ಯಕ್ಕೆ ಒಳಪಟ್ಟಿರುವ ಇಡೀ ಪ್ರದೇಶದ ಮೇಲೆ ವ್ಯಾಪ್ತಿಯನ್ನು ಹೊಂದಿದ್ದರೂ, ಕೆಲವೇ ನಿರ್ದಿಷ್ಟ ವರ್ಗಗಳವರಿಗೆ ಮಾತ್ರ ಅನ್ವಯವಾಗುವಂತಹ ಮತ್ತೊಂದು ಅಧಿಕಾರವಿದೆ. ಇವೆರಡೂ ಅಧಿಕಾರಗಳ ನಡುವಿನ ಅಂತರವು ಸ್ಪಷ್ಟವಾಗಿದೆ. ಮಹಾಪ್ರಭುಗಳ ನ್ಯಾಯಾಲಯಕ್ಕೆ ಇರುವ ಅಧಿಕಾರ ಮತ್ತು ಸವಲತ್ತುಗಳನ್ನು ಬಾಂಬೆ ಮತ್ತು ಕಲ್ಕತ್ತ ಪ್ರಾಂತಗಳ ಮೇಲೂ ಅಥವಾ ನಿರ್ದಿಷ್ಟವಾಗಿ ಹೆಸರಿಸಿದ ವರ್ಗಗಳ ಮೇಲೂ ಚಲಾಯಿಸಬಹುದು ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಅಧಿಕಾರವ್ಯಾಪ್ತಿಯನ್ನು ಒಪ್ಪಿಕೊಳ್ಳಬಹುದು. ಆದರೆ ನಿರ್ದಿಷ್ಟಪಡಿಸಿರದ ವ್ಯಕ್ತಿಗಳ/ವರ್ಗಗಳ ಮೇಲೆ ಆಜ್ಞೆಯನ್ನು ನೀಡುವುದಕ್ಕೆ ಅಥವಾ ಇತರ ನ್ಯಾಯಾಲಯಗಳ ವ್ಯವಹಾರವನ್ನು ನಿಯಂತ್ರಿಸುವುದಕ್ಕೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವಿದೆಯೆಂದಾಗಲೀ, ಅಥವಾ ಪ್ರಾಂತದ ಎಲ್ಲೆಡೆಯೂ ಅದು ಅನಿರ್ಬಂಧಿತ ವ್ಯಾಪ್ತಿಯನ್ನು ಹೊಂದಿದೆ ಎನ್ನುವುದಾಗಲೀ ಇದರಿಂದ ಹೊರಡುವುದಿಲ್ಲ. ಇಲ್ಲಿ ಇರುವ ವ್ಯತ್ಯಾಸವನ್ನು ವಿವೇಕಯುತವಾಗಿ ಮತ್ತು ಎಚ್ಚರಿಕೆಯಿಂದ ಗುರುತಿಸಲಾಗಿದೆ. ಫೋರ್ಟ್ ವಿಲಿಯಮ್ಸ್, ಮದರಾಸು ಮತ್ತು ಬಾಂಬೆಗಳಲ್ಲಿ ಕಳೆದ ಒಂದು ಶತಮಾನದಿಂದ ಇಂಗ್ಲಿಷ್ ಕಾನೂನುಗಳು ಚಾಲ್ತಿಯಲ್ಲಿವೆ. ಅವು ಮೊದಲನೆಯ ಜಾರ್ಜ್ ಅವರು (೧೭೨೬: ೧೩ ಜಿ.ಇ.ಒ ೧) ಸನ್ನದು ನೀಡಲ್ಪಟ್ಟ ದಿನದಿಂದ ಜಾರಿಯಲ್ಲಿವೆ. ಅವು ೧೭೭೪ರ ಹಿಂದಿನಿಂದಲೂ ಜಾರಿಯಲ್ಲಿದ್ದವೆಂಬುದು ತಿಳಿದುಬಂದಿದೆ. ಕಲ್ಕತ್ತಾದ ವ್ಯಾಪ್ತಿಯಲ್ಲಿ ಸುಳ್ಳು ದಸ್ತಾವೇಜುಗಳನ್ನು ಸೃಷ್ಟಿಸಿದುದಕ್ಕಾಗಿ ಮತ್ತಿತರ ಅಪರಾಧಗಳಿಗಾಗಿ ಪ್ರಜೆಗಳ ವಿಚಾರಣೆಯನ್ನು ಇಂಗ್ಲಿಷ್ ಕಾನೂನಿನ್ವಯ ನಡೆಸಲಾಗಿದೆ. ಇದು ಎಷ್ಟರಮಟ್ಟಿನವರೆಗೆ ಹೋಯಿತೆಂದರೆ, ಸದರಿ ಆಪಾದಿತರು ಇಂಗ್ಲೆಂಡಿಗೆ ಹೋದರೂ ಅವರ ಬೆಂಬತ್ತುವುದನ್ನು ಈ ಕಾನೂನುಗಳು ಬಿಡುತ್ತಿರಲಿಲ್ಲ. ಬ್ರಿಟಿಷ್ ಕಾನೂನುಗಳಿಗೆ ಒಳಪಡುತ್ತಿದ್ದ ಇನ್ನೊಂದು ವರ್ಗವೆಂದರೆ ಕಂಪನಿಯ ನೌಕರರು ಅಥವಾ ಬ್ರಿಟಿಷ್ ಪ್ರಜೆಗಳು – ಇವರು ಮಹಾಪ್ರಭುಗಳ ನ್ಯಾಯಾಲಯಗಳ ವ್ಯಾಪ್ತಿಗೆ ಸಹಜವಾಗಿಯೇ ಒಳಪಡುತ್ತಿದ್ದರು. ಸ್ಥಳೀಯ ಕಾನೂನಿಗೆ ಒಳಪಡುವವರನ್ನು ಬ್ರಿಟಿಷ್ ಕಾನೂನುಗಳ ವ್ಯಾಪ್ತಿಯಿಂದ ಮತ್ತು ನಿರ್ದಿಷ್ಟ ವರ್ಗಗಳಿಂದ ಹೊರಗೆ ಇರಿಸುವುದು ಕಾನೂನಿನ ನೀತಿಯಾಗಿತ್ತು. ಈ ಅಭಿಪ್ರಾಯವನ್ನೇ ಸರ್ ಎಲಿಜಾ ಇಂಪೆಯವರು ಕೆಳಮನೆಯಲ್ಲಿ ಮಾಡಿದ ಭಾಷಣದಲ್ಲಿಯೂ ಕಾಣಬಹುದು [ಸಂಸತ್ತಿನ ಚರಿತ್ರೆ – ಸಂಪುಟ ೨೬, ಪುಟಗಳು (೧೩೪೧ರಿಂದ ೧೪೧೬)].

ಸ್ಥಳೀಯ ಅಥವಾ ಪ್ರಾಂತೀಯ ನ್ಯಾಯಾಲಯಗಳು ಹೊಂದಿರುವ ಅಧಿಕಾರಗಳು ಬ್ರಿಟಿಷರು ಭಾರತವನ್ನು ತಮ್ಮ ವಶಮಾಡಿಕೊಳ್ಳುವುದಕ್ಕೆ ಮೊದಲೂ ಹೊಂದಿದ್ದ ಅಧಿಕಾರಗಳಾಗಿವೆ. ಇದಕ್ಕೆ ಅಪವಾದವೆಂದರೆ, ನಂತರ ಶಾಸನಸಭೆಯು ಮಾಡಿರುವ ತಿದ್ದುಪಡಿಗಳು ಮಾತ್ರ. ಆದರೆ ಈ ಸಂದರ್ಭಗಳಲ್ಲಿಯೂ, ಬ್ರಿಟಿಷರು ಈ ಕಾನೂನುಗಳನ್ನು ನೇರವಾಗಿ ಬಳಸುವಂತಿಲ್ಲ ಬದಲಿಗೆ ಇವು

ಗವರ್ನರ್ ಜನರಲ್–ಇನ್–ಕೌನ್ಸಿಲ್ ಅವರ ವಿವೇಚನೆಗೆ ಒಳಪಟ್ಟಿವೆ. ಮಹಾಪ್ರಭುಗಳ ನ್ಯಾಯಾಲಯದ ವ್ಯಾಪ್ತಿಗೆ ಒಳಪಡದವರು ತಮ್ಮ ಬ್ರಿಟಿಷ್ ಸಂಸತ್ತು ರಚಿಸಿದ ಕಾನೂನುಗಳಿಗೆ ಮಾತ್ರ ಬದ್ಧವಾಗಿರುತ್ತಾರೆ. ಇವರುಗಳನ್ನು ಒಂದು ಪ್ರತ್ಯೇಕ ಸರಕಾರದ ಆಳ್ವಿಕೆಯಲ್ಲಿರುವ ಪ್ರತ್ಯೇಕ ರಾಷ್ಟ್ರವೆಂದು ಪರಿಗಣಿಸಬೇಕು. ಮಹಾಪ್ರಭುಗಳ ನ್ಯಾಯಲಯದ ಅಧಿಕಾರಗಳೇನು? ತಮ್ಮ ಸಾರ್ವಭೌಮ ಅಧಿಕಾರವನ್ನು ಮಹಾಪ್ರಭುಗಳು ಸ್ವತಃ ತಾವೇ ಔಲಾ ರೆಜಿಸ್ ನ್ಯಾಯಾಲಯದ ಮೂಲಕ ಚಲಾಯಿಸುತ್ತಿದ್ದರು. ಈಗಲೂ ಅವರು ತಮ್ಮ ಅಧಿಕಾರಗಳನ್ನು ಮಹಾಪ್ರಭುಗಳ ನ್ಯಾಯಾಲಯವೆಂಬ ಹೆಸರಿರುವ ಅದೇ ನ್ಯಾಯಾಲಯದ ಮೂಲಕ ಚಲಾಯಿಸುತ್ತಿದ್ದಾರೆ. ಆಡಳಿತವು ಸಂಪೂರ್ಣವಾಗಿ ಹಿಂದಿನ ಔಲಾ ರೆಜಿಸ್ ನ್ಯಾಯಾಲಯದ ಪರಂಪರೆಯಿಂದಲೇ ಬಂದಿರುವಂತಹುದಾಗಿದೆ. ಅದು ಕಾನೂನು ಅಧಿಕಾರದ ಕೇಂದ್ರವಾಗಿದ್ದಿತು. ಮಹಾಪ್ರಭುಗಳ ಇತರ ಎಲ್ಲಾ ನ್ಯಾಯಾಲಯಗಳೂ ಯಾವುದೇ ಅಪವಾದವಿಲ್ಲದದೆ ಮಹಾಪ್ರಭುಗಳ ಈ ನ್ಯಾಯಾಲಯಕ್ಕೆ ಒಳಪಟ್ಟಿರುತ್ತವೆ. ಆದರೆ, ಇಂಗ್ಲೆಂಡಿನ ಕಾನೂನುಗಳು ಭಾರತದ ಕಾನೂನುಗಳಲ್ಲ. ಕೆಲವು ಕಾನೂನು ಸಂಹಿತೆಗಳನ್ನು ಸಂಸತ್ತಿನ ಒಪ್ಪಿಗೆಯ ಅಧಾರದ ಮೇಲೆ ತಮಗೆ ಸರಿಯೆಂದು ತೋರಿದುದರಿಂದ ಮಹಾಪ್ರಭುಗಳು ಮುಂದುವರೆಸಿಕೊಂಡು ಹೋಗುತ್ತಾರೆ ಅಥವಾ ರಚಿಸುತ್ತಾರೆ, ಆದರೆ ಇವು, ಇಂಗ್ಲೆಂಡಿನಲ್ಲಿ ಅರ್ಥೈಸುವ ರೀತಿಯ ಕಾನೂನುಗಳಲ್ಲ. ಆದ್ದರಿಂದ ಎರಡೂ ಸನ್ನಿವೇಶಗಳ ಮಧ್ಯೆ ಯಾವ ಹೋಲಿಕೆಯೂ ಸಾಧ್ಯವಿಲ್ಲ. ಇಂಗ್ಲೆಂಡಿನ ಎಲ್ಲಾ ನ್ಯಾಯಾಲಯಗಳೂ ಒಂದೇ ಮೂಲದಿಂದ ಬಂದವುಗಳಾಗಿವೆ, ಒಂದೇ ಪದ್ದತಿಯನ್ನು ಅನುಸರಿಸುತ್ತವೆ ಮತ್ತು ಎಲ್ಲಾ ಪ್ರಜೆಗಳಿಗೂ ಅವುಗಳ ಅಧಿಕಾರವು ಅನ್ವಯವಾಗುತ್ತವೆ. ಆದರೆ ಭಾರತದ ಕಾನೂನುಗಳು ಬೇರೆಯೇ ಆದ ಮೂಲದಿಂದ ಬಂದವುಗಳು. ಅವುಗಳು ವಿವಿಧ ವರ್ಗಗಳಿಗೆ ಅನ್ವಯವಾಗುತ್ತವೆ. ಅವುಗಳ ಮತ್ತು ಇಂಗ್ಲೆಂಡಿನ ಕಾನೂನುಗಳ ನಡುವೆ ಯಾವುದೇ ಸಾಮ್ಯವಿಲ್ಲ. ಕಲ್ಕತ್ತ ಅಥವಾ ಬಾಂಬೆಯ ಇಂಗ್ಲಿಷ್ ನ್ಯಾಯಾಲಯಗಳಿಗೆ ಸ್ಥಳೀಯ ನ್ಯಾಯಾಲಯ ಮತ್ತು ಕಾನೂನಿನ ಮೇಲೆ ನಿಯಂತ್ರಣದ ಅಧಿಕಾರವನ್ನು ನೀಡುವುದು ನ್ಯಾಯವಿತರಣೆಯಲ್ಲಿನ ಅಸಹಜತೆಯನ್ನು ಉಂಟುಮಾಡುತ್ತದೆ. ಇದನ್ನು ಬ್ರಿಟಿಷ್ ಸಂಸತ್ತು ಎಂದಿಗೂ ಒಪ್ಪುವುದಿಲ್ಲವೆಂದು ನಾವು ನಂಬುತ್ತೇವೆ.

೧೭೭೩ರಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸುವುದಕ್ಕೆ ಮೊದಲು, ಕಲ್ಕತ್ತ, ಮದರಾಸು ಮತ್ತು ಬಾಂಬೆಗಳಲ್ಲಿ ಮೇಯರ್ಸ್ ನ್ಯಾಯಾಲಯಗಳು ಇದ್ದವು. ಮೂರನೆಯ ಜಾರ್ಜ್ ಅವರ ೧೩ನೆಯ (ಸಿ.೬೩) ಅಧಿನಿಯಮವು ಕಲ್ಕತ್ತಾದಲ್ಲಿ ಮಾತ್ರ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಲು ಅಧಿಕಾರವನ್ನು ನೀಡಿದ್ದಿತು. ಈ ಅಧಿನಿಯಮದ ಭಾಷೆ ಮತ್ತು ಅದರ ಆಧಾರದ ಮೇಲೆ ನೀಡಲಾಗಿರುವ ಸನ್ನದು ಹಲವಾರು ಚರ್ಚೆಗಳಿಗೆ ಆಸ್ಪದವನ್ನು ನೀಡಿದ್ದಿತು. ಪ್ರತಿಪಕ್ಷದವರು ಪೂರ್ವಪ್ರಕರಣಗಳೆಂದು ನಿವೇದಿಸಿರುವವುಗಳು ೨೧ನೆಯ ಜಿ.ಇ.ಒ.೩ (ಸಿ.೭೦) ಜಾರಿಗೆ ಬರುವ ಪೂರ್ವದಲ್ಲಿ ಇದ್ದಂತವುಗಳು. ನಮ್ಮ ಬುದ್ಧಿಶಕ್ತಿಯ ಪರಿಮಿತಿಯೊಳಗೆ, ೨೧ನೆಯ ಜಿ.ಇ.ಒ.೩ (ಸಿ.೭೦) ಅನ್ನು ೧೭೮೧ರಲ್ಲಿ ಜಾರಿಗೆ ತಂದಮೇಲೆ, ಪ್ರಸಕ್ತ ಚರ್ಚಿಸಲ್ಪಡುತ್ತಿರುವಂತಹ 'ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಪಡಿಸಬೇಕು' ಎಂಬಂತಹ ಆಜ್ಞೆಯನ್ನು ಈ ಮೂರು ಪ್ರಾಂತಗಳಲ್ಲಿ ನೀಡಿದ ಯಾವುದೇ ಪ್ರಕರಣಗಳು ಸಂಭವಿಸಲ್ಲ.

ಮೂರನೆಯ ಜಾರ್ಜ್ ಅವರ ೧೩ನೆಯ (ಸಿ.೬೩) ಅಧಿನಿಯಮವು ಫೋರ್ಟ್ ವಿಲಿಯಮ್ಸ್‌ನಲ್ಲಿ

---

ಈ ಪ್ರಕರಣಗಳ ಬಗ್ಗೆ, ಸಂಕ್ಷಿಪ್ತ ಹಾಗೂ ಮನೋರಂಜಕವಾದ, ಆದರೆ ನಿಷ್ಪಕ್ಷಪಾತವಲ್ಲದ ವಿವರಣೆಗಳಿಗಾಗಿ, ಮಿಲ್ ಅವರ ಬ್ರಿಟಿಷ್ ಭಾರತದ ಚರಿತ್ರೆಯ ಐದನೆಯ ಸಂಪುಟ, ಆರನೆಯ ಪ್ರಕರಣವನ್ನು ನೋಡಿ

ಸರ್ವೋಚ್ಚ ನ್ಯಾಯಾಲಯವೊಂದನ್ನು ಸ್ಥಾಪಿಸಲು ೧೭೭೩ರಲ್ಲಿ ಮಹಾಪ್ರಭುಗಳಿಗೆ ಅಧಿಕಾರವನ್ನು ನೀಡಿತು (ಪರಿಚ್ಛೇದ ೧೩) ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ೧೪ನೆಯ ಪರಿಚ್ಛೇದವು ಹೀಗೆ ಹೇಳುತ್ತದೆ "ಹೊಸದಾಗಿ ನೀಡಲ್ಪಡುತ್ತಿರುವ ಸನ್ನದು, ಅದರ ಅಧಿಕಾರ ಮತ್ತು ವ್ಯಾಪ್ತಿಗೆ ಬಂಗಾಳ, ಬಿಹಾರ, ಒರಿಸ್ಸಾ ಪ್ರಾಂತಗಳಲ್ಲಿ ಯುನೈಟೆಡ್ ಕಂಪನಿಯ ಅಧೀನದಲ್ಲಿರುವ ಪ್ರಜೆಗಳಿಗೆ ಅನ್ವಯವಾಗತಕ್ಕದ್ದಲ್ಲ. ಆದರೆ, ಸದರಿ ಸನ್ನದು, ಮತ್ತು ಈ ಸನ್ನದಿನ ಮೂಲಕ ಸ್ಥಾಪಿಸಲ್ಪಡುವ ಸರ್ವೋಚ್ಚ ನ್ಯಾಯಾಲಯವು ಬಂಗಾಳ, ಬಿಹಾರ ಮತ್ತು ಒರಿಸ್ಸಾ ಪ್ರಾಂತಗಳಲ್ಲಿರುವ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳ ಹಾಗೂ ಅವರ ಅಧೀನದಲ್ಲಿನ ಸೇವೆಯಲ್ಲಿರುವ ಯಾವುದೇ ವ್ಯಕ್ತಿಗಳ ಮೇಲಿನ ಆಪಾದನೆಗಳನ್ನು, ಯಾವುದೇ ಅಪರಾಧಗಳನ್ನು, ದುರ್ವರ್ತನೆಗಳನ್ನು, ನಡೆಸಿದ ಅಥವಾ ನಡೆಸಲು ಉದ್ದೇಶಿಸಿರುವ ದಬ್ಬಾಳಿಕೆಗಳನ್ನು ವಿಚಾರಿಸಲು, ಅಂತಹವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಲು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತವೆ."

ಸದರಿ ಸನ್ನದಿನಲ್ಲಾಗಲೀ ಅಥವಾ ಸಂಸತ್ತಿನ ಅಧಿನಿಯಮದಲ್ಲಾಗಲೀ ಇರಬಹುದಾದ ಅಸಂದಿಗ್ಧತೆಗಳು ಏನೇ ಇರಲಿ, ಇದರ ಅಡಿ ಸ್ಥಾಪಿತವಾಗಿರುವ ನ್ಯಾಯಾಲಯವು ಕೆಲವು ವಿಷಯಗಳಲ್ಲಿ ಅಲ್ಪಸ್ವಲ್ಪ ಮಿತಿಯಿರಬಹುದಾದ, ಪ್ರಾಂತದಲ್ಲೆಲ್ಲಾ ಸಾಮಾನ್ಯವಾದ ಅಧಿಕಾರ ವ್ಯಾಪ್ತಿಯನ್ನು ಉಳ್ಳ, ಮಹಾಪ್ರಭುಗಳ ನ್ಯಾಯಾಲಯವನ್ನು ಹೋಲುವಂತಹ ನ್ಯಾಯಾಲಯವಲ್ಲ. ಆದರೆ ಅದು ಸ್ಥಳೀಯವಾದ, ಸೀಮಿತ ವ್ಯಾಪ್ತಿಯನ್ನುಳ್ಳ, ಕೆಲವು ವಿಷಯಗಳಲ್ಲಿ ಮತ್ತು ಕೆಲವು ನಿರ್ದಿಷ್ಟ ವರ್ಗದ ವ್ಯಕ್ತಿಗಳಿಗೆ ಮಾತ್ರ ವಿಸ್ತರಿಸಬಹುದಾದ ವ್ಯಾಪ್ತಿಯನ್ನುಳ್ಳ, ನ್ಯಾಯಾಲಯವಾಗಿದೆ ಎಂಬುದು ನಮ್ಮ ಗ್ರಹಿಕೆ. ಇದು ಇವೆರಡೂ ನ್ಯಾಯಾಲಯಗಳ ಮಧ್ಯೆ ಇರುವ ತಾತ್ತ್ವಿಕ ವ್ಯತ್ಯಾಸ. ಈ ನ್ಯಾಯಾಲಯಗಳಿಗೆ ದಿವಾಣೀ ಮತ್ತು ಆಪರಾಧಿಕ ಪ್ರಕರಣಗಳಲ್ಲಿ, ಬ್ರಿಟಿಷ್ ಪ್ರಜೆಗಳೇ ಅಲ್ಲದೆ, ಹಿಂದೂಗಳು, ಮಹಮ್ಮಡನ್ನರು ಹಾಗೂ ಕ್ರಿಶ್ಚಿಯನ್ನರ ಮೇಲೆ ಅಧಿಕಾರವುಳ್ಳ, ತನ್ನ ಪ್ರಾಂತೀಯ ವ್ಯಾಪ್ತಿಗೆ ಸೀಮಿತವಾದ ಅಧಿಕಾರವಿದೆಯೆಂಬುದು ಸಾರ್ವತ್ರಿಕವಾಗಿ ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಆದರೆ, ಕೆಲವು ವಿಷಯಗಳಲ್ಲಿ ವಿವಿಧ ಧರ್ಮದವರನ್ನು ಅವರವರ ಧರ್ಮದ ನಿಯಮಗಳ ಪ್ರಕಾರವೇ ವಿಚಾರಣೆಗೆ ಒಳಪಡಿಸಬೇಕು. ಅಲ್ಲದೆ, ಮೇಲಿನ ಮಿತಿಯನ್ನು ಮೀರಿದಂತೆ, ಕೆಲವು ನಿರ್ದಿಷ್ಟ ವರ್ಗದ ವ್ಯಕ್ತಿಗಳ ಮೇಲೆ – ಅವರು ಬ್ರಿಟಿಷ್ ಪ್ರಜೆಗಳಾಗಿರಬೇಕು ಅಥವಾ ಈಸ್ಟ್ ಇಂಡಿಯಾ ಕಂಪನಿಯ ಯಾ ಬ್ರಿಟಿಷ್ ಪ್ರಜೆಗಳ ಅಧೀನದಲ್ಲಿ ಉದ್ಯೋಗದಲ್ಲಿರಬೇಕು – ತನ್ನ ಅಧಿಕಾರವನ್ನು ಚಲಾಯಿಸಬಹುದು.

ಪ್ರಕೃತ ವಿಷಯಕ್ಕೆ ಸಂಬಂಧಿಸಿದ ಮುಂದಿನ ವಿಧಿ (ಪರಿಚ್ಛೇದ ೧೬) ಹೀಗಿದೆ "ಮಹಾಪ್ರಭುಗಳ ಪ್ರಜೆಗಳು ಬಂಗಾಳ, ಬಿಹಾರ, ಒರಿಸ್ಸಾದಲ್ಲಿರುವ ದೇಶವಾಸಿಗಳ ಮೇಲೆ, ಅವರಿಬ್ಬರ ನಡುವೆ ಲಿಖಿತ ಒಪ್ಪಂದವಾಗಿದ್ದು, ಅದರ ಮೌಲ್ಯ ೫೦೦ ರೂ.ಗಳಿಗಿಂತ ಹೆಚ್ಚಿನದಾಗಿದ್ದು, ಮತ್ತು ಒಪ್ಪಂದವನ್ನು ಕಾರ್ಯಗತಗೊಳಿಸುವಾಗ ಉದ್ಭವಿಸಬಹುದಾದ ಯಾವುದೇ ತಕರಾರುಗಳನ್ನು ಸದರಿ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು ಎಂದು ಎರಡೂ ಪಕ್ಷಗಳವರು ಆ ಒಪ್ಪಂದದಲ್ಲಿ ಸಮ್ಮತಿಸಿದ್ದರೆ, ಅಂತಹ ನ್ಯಾಯಪ್ರಕರಣಗಳನ್ನು ಸರ್ವೋಚ್ಚ ನ್ಯಾಯಾಲಯವು ಆಲಿಸಬಹುದು, ನಿರ್ಣಯವನ್ನು ತೆಗೆದುಕೊಳ್ಳಬಹುದು". ಸಾಮಾನ್ಯವ್ಯಾಪ್ತಿಯನ್ನುಳ್ಳ ನ್ಯಾಯಾಲಯವನ್ನು ಸ್ಥಾಪಿಸುವ ಉದ್ದೇಶದಿಂದ ಅಂಗೀಕರಿಸಲ್ಪಟ್ಟ ಈ ಆಧಿನಿಯಮದಲ್ಲಿ ಈ ಪರಿಚ್ಛೇದವು ನಿಶ್ಚಯವಾಗಿಯೂ ಅಸಾಧಾರಣವಾದ ಒಂದು ಪರಿಚ್ಛೇದವಾಗಿದೆ.

ಮೂರನೆಯ ಜಾರ್ಜ್ ಅವರ ೧೩ನೆಯ ಅಧಿನಿಯಮವು ಮತ್ತು ಅದರ ಮೇಲೆ ಅವಲಂಬಿಸಿ

ನೀಡಿರುವ ಈ ಸನ್ನದು ಹಲವು ತಕರಾರುಗಳಿಗೆ ಕಾರಣವಾಗಿವೆ. ಅವುಗಳು 'ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಪಡಿಸಬೇಕು' ಎಂದು ನೀಡಿರುವ ಆಜ್ಞೆಗ್ಗಳಿಂದ ಉದ್ಭವಿಸಿವೆ. ಅದರ ಪರಿಣಾಮವಾಗಿ, ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಬರುವ ವ್ಯಕ್ತಿಗಳನ್ನು ನಿರ್ದಿಷ್ಟಪಡಿಸಲು ೨೧ನೆಯ ಜಿ.ಇ.ಓ.೩ ಕ್ಯಾಪ್ ೭೦ನೆಯ ಅಧಿನಿಯಮವನ್ನು ಅಂಗೀಕರಿಸಲಾಯಿತು. ಈ ಆಜ್ಞೆಯನ್ನು ಭೂಮಾಲೀಕರಾಗಿದ್ದ ವ್ಯಕ್ತಿಗಳ ವಿರುದ್ಧವಾಗಿ ನೀಡಲಾಗಿತ್ತು. ಮತ್ತು ಭೂಮಿಯನ್ನು ಹೊಂದಿದ್ದು ಕಂದಾಯವನ್ನು ಕಟ್ಟುತ್ತಿದ್ದ, ಆದರೆ ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿ ಇರದಿದ್ದ ವ್ಯಕ್ತಿಗಳನ್ನು ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿದ್ದವರೆಂದೇ ಪರಿಗಣಿಸಿ ಅವರನ್ನು ನ್ಯಾಯಾಲಯದ ವ್ಯಾಪ್ತಿಯ ಒಳಗೆ ಇರುವವರೆಂದೇ ಪರಿಗಣಿಸಲಾಗುತ್ತಿತ್ತು. ಈ ಅಧಿನಿಯಮದಲ್ಲಿ 'ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಪಡಿಸುವ' ಆಜ್ಞೆಯನ್ನು ನೀಡಲು ಅನುಕೂಲಕರವಾದ ಪರಿಚ್ಛೇದಗಳನ್ನು ಸೇರಿಸಬೇಕೆಂದು ಈಸ್ಟ್ ಇಂಡಿಯಾ ಕಂಪನಿಯ ಪರವಾಗಿ ಮನವಿಯನ್ನು ಮಾಡಲಾಗಿತ್ತೆಂದು ಹೇಳಲಾಗಿದೆ. ಆದರೆ ಯಾವ ಬಗೆಯ ವ್ಯಕ್ತಿಗಳನ್ನು ಬಂಧನದಲ್ಲಿಡಬಹುದು ಎಂಬ ಅಭಿಪ್ರಾಯವು ಇಂತಹ ಆಜ್ಞೆಗ್ಗಳಲ್ಲಿ ಇದೆ ಎಂಬುದನ್ನು ಇಲ್ಲಿ ವ್ಯಕ್ತಪಡಿಸಿಲ್ಲ. ಈ ವಿಷಯವನ್ನು ಸರಕಾರದ ಪರಿಗಣನೆಗೆ ತಂದರೂ ಮೂರನೆಯ ಜಾರ್ಜ್ ಅವರ ೨೧ನೆಯ ಅಧಿನಿಯಮದಲ್ಲಿ ತತ್ಸಂಬಂಧಿ ಯಾವ ಅವಕಾಶವನ್ನೂ ಕಲ್ಪಿಸದಿರುವುದರಿಂದ ಈಗ ವಿವಾದಾಸ್ಪದವಾಗಿರುವ ಅಂಶವು ಶಾಸಕಾಂಗದ ಉದ್ದೇಶದಲ್ಲಿ ಸೇರಿತ್ತು ಎಂದು ಊಹಿಸುವುದಕ್ಕೆ ಕಾರಣಗಳೇ ಇರುವುದಿಲ್ಲ. ಇದನ್ನು ನಿಸ್ಸಂದಿಗ್ಧವಾಗಿ ಹೇಳಿರದಿದ್ದರೂ, ವ್ಯಕ್ತಿಶಃ ಹಾಜರು ಪಡಿಸುವ ಆಜ್ಞೆಯನ್ನು ಯಾರ ಮೇಲೆ ನೀಡಲಾಗಿದೆಯೋ ಆ ವ್ಯಕ್ತಿಗೆ ೯ ಮತ್ತು ೧೦ನೆಯ ಪರಿಚ್ಛೇದಗಳು ನ್ಯಾಯಾಲಯದ ವ್ಯಾಪ್ತಿಯಿಂದ ವಿನಾಯತಿಯನ್ನು ನೀಡುತ್ತವೆ. ಈ ಪರಿಚ್ಛೇದಗಳ ಪ್ರಕಾರ, ನಿರ್ದಿಷ್ಟಗೊಳಿಸಿದ ಸನ್ನಿವೇಶಗಳಲ್ಲಿ ಸ್ಥಳೀಯರು ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ, ಇದರಿಂದ ಹೊರಡುವುದೇನೆಂದರೆ, ಸ್ಥಳೀಯರಾಗಿರುವ ಕಾರಣದಿಂದಲೇ ಸ್ಥಳೀಯರು ನ್ಯಾಯಾಲಯದ ವ್ಯಾಪ್ತಿಯ ಹೊರಗಿರುತ್ತಾರೆ. ಇದಕ್ಕೆ ಮತ್ತೊಂದು ಖಂಡವನ್ನು ಸೇರಿಸಲಾಗಿದೆ. ಅದು ಹೀಗಿದೆ: 'ಸರ್ವೋಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಯಾರು ಒಳಪಡುತ್ತಾರೆಂಬುದನ್ನು ಖಚಿತವಾಗಿ ತಿಳಿದುಕೊಳ್ಳಲು ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿರುವ ಎಲ್ಲಾ ಸ್ಥಳೀಯರ (ಕೆಲವೊಂದು ವರ್ಗಗಳವರನ್ನು ಹೊರತು ಪಡಿಸಿ) ಕಾರ್ಯನಿರ್ವಹಣಾ ಸ್ಥಳ, ಅವರು ಸಾಮಾನ್ಯವಾಗಿ ವಾಸಿಸುವ ನಿವಾಸದ ವಿವರ ಇವುಗಳನ್ನು ಅಕ್ಷರಾನುಕ್ರಮದಲ್ಲಿ ಪುಸ್ತಕ/ಪುಸ್ತಕಗಳಲ್ಲಿ ಬರೆದು ಸದರಿ ಕಚೇರಿಗಳಲ್ಲಿ ಇಟ್ಟಿರಬೇಕು ಎಂಬುದರ ಬಗ್ಗೆ ಗವರ್ನರ್ ಜನರಲ್ ಮತ್ತು ಅವರು ಪರಿಷತ್ತು ನಿರ್ದೇಶಿಸಬೇಕು".

ಹಾಗಾದರೆ, ಮೂರನೆಯ ಜಾರ್ಜ್ ಅವರ ೨೧ನೆಯ (ಸಿ.೭೦)ರ ಅಧಿನಿಯಮವನ್ನು ಅಂಗೀಕರಿಸಿದ ನಂತರ ಈ ವಿಷಯವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ೧೭೭೩ ರಿಂದ ೧೭೮೧ರ ವರೆಗಿನ ಅವಧಿಯಲ್ಲಿ ನಡೆದ ಹಲವಾರು ಪ್ರಕರಣಗಳಲ್ಲಿ ಕೆಲವು ವ್ಯಕ್ತಿಗಳ ವಿರುದ್ಧ ವಿವಿಧ ರೀತಿಯ ಆಪಾದನೆಗಳು ಕೇಳಿಬಂದವು. ಅವುಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸರ್ ಎಲಿಜಾ ಇಂಪೆಯವರೂ ಸೇರಿದ್ದರು. ಅವರು ತಮ್ಮನ್ನು ಸಂಸತ್ತಿನ ಕೆಳಮನೆಯಲ್ಲಿ ಸಮರ್ಥಿಸಿಕೊಂಡಿದ್ದರು. ಅವರು ಆಗ ಮಾಡಿದ ಭಾಷಣವು ನಂತರ ಒಂದು ಪ್ರತ್ಯೇಕವಾದ ಪುಸ್ತಕದ ರೂಪದಲ್ಲಿ ಪ್ರಕಟವಾಗಿದ್ದಿತು ಮತ್ತು ಅದನ್ನು ಸಂಸತ್ತಿನ ಚರಿತ್ರೆಯ ೨೬ನೆಯ ಸಂಪುಟದಲ್ಲಿ ಯಥಾವತ್ತಾಗಿಯೇ ಪ್ರಕಟಿಸಲಾಗಿದೆ (ಪು. ೧೩೪೧–೧೪೧೬). ಅದರಲ್ಲಿನ ೧೩೫೮ನೆಯ ಪುಟದಲ್ಲಿ ಸರ್ ಎಲಿಜಾ ಇಂಪೆಯವರು ಹೀಗೆ ಹೇಳಿದ್ದಾರೆ "ಈ ಸನ್ನದು, ಪ್ರಾಂತಗಳ ಮೇಲೆ ಆಪರಾಧಿಕ ಪ್ರಕರಣಗಳಲ್ಲಿ ವ್ಯಾಪ್ತಿಯನ್ನು ದಯಪಾಲಿಸಿದೆ,

ಅದರೆ ಸ್ಥಳೀಯ ಹಾಗೂ ಭೌಗೋಳಿಕ ವಿಷಯಗಳ ಮೇಲಲ್ಲ, ಪ್ರಾಂತಗಳ ಮೇಲೆ ಅದರ ವ್ಯಾಪ್ತಿಯಿದ್ದರೂ ಅದು ಆ ಪ್ರಾಂತಗಳಲ್ಲಿ ವಾಸಿಸುವ ಕೆಲವು ನಿರ್ದಿಷ್ಟ ವರ್ಗದ ವ್ಯಕ್ತಿಗಳ ಮೇಲೆ ಮಾತ್ರವಿದೆ. ಆದರೆ ಕಲ್ಕತ್ತದ ಪ್ರಜೆಗಳ ಮೇಲೆ ನೀಡಿರುವ ವ್ಯಾಪ್ತಿಯು ಮಾತ್ರ ಸಾರ್ವತ್ರಿಕವಾಗಿದ್ದು, ಇಡೀ ಕಲ್ಕತ್ತ ನಗರವನ್ನು ಒಳಗೊಳ್ಳುತ್ತದೆ." ಪ್ರಾಜ್ಞರಾದ ನ್ಯಾಯಮೂರ್ತಿಗಳು ಆ ಸಂದರ್ಭದಲ್ಲಿ ನುಡಿದ ಮಾತಿನ ಹಿಂದಿನ ಉದ್ದೇಶವು ಈಗ ಚರ್ಚಿಸುತ್ತಿರುವ ವಿಷಯದ ಉದ್ದೇಶಕ್ಕಿಂತ ಭಿನ್ನವಾಗಿತ್ತು. ಅಂದು ಅವರಿಗೆ ಕಲ್ಕತ್ತ ನ್ಯಾಯಾಲಯದ ವ್ಯಾಪ್ತಿಯು ಸಾಮಾನ್ಯವಾದದ್ದು, ಆದರೆ ಪ್ರಾಂತದ ಇತರ ಪ್ರದೇಶಗಳ ಮೇಲೆ ಇದ್ದ ವ್ಯಾಪ್ತಿಯು ಹಾಗೆ ಸಾಮಾನ್ಯವಾದುದಲ್ಲ ಎಂಬುದನ್ನು ತೋರಿಸಿಕೊಡಬೇಕಿತ್ತು. "ಮೊದಲನೆಯದಾಗಿ, ಪ್ರಾಂತಗಳು ಹೊಸವು, ಮತ್ತು ಅವುಗಳನ್ನು ಸನ್ನದಿನ ಮೂಲಕ ನ್ಯಾಯಾಲಯದ ವ್ಯಾಪ್ತಿಗೆ ತರಲಾಯಿತು. ಸನ್ನದಿನ ಮೂಲಕ ಸ್ಥಾಪಿತವಾದ ಇಂಗ್ಲೆಂಡ್ ಎಲ್ಲಾ ಕಾನೂನುಗಳೂ ಹೊಸವು ಮತ್ತು ಅವುಗಳು ಸನ್ನದಿನ ಆಧಾರದ ಮೇಲೆಯೇ ನಿಂತಿವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಕಲ್ಕತ್ತ ನಗರಕ್ಕೆ ಅನ್ವಯವಾಗುವ ಕಾನೂನು ಪ್ರಕ್ರಿಯೆಗಳು ಭಿನ್ನವಾಗಿವೆ. ೧೭೭೪ರಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸುವ ಬಹಳಷ್ಟು ಹಿಂದಿನಿಂದ ಕಲ್ಕತ್ತದಲ್ಲಿ ಆಯರ್ ಮತ್ತು ಟರ್ಮೈನರ್ ಹಾಗೂ ಜೈಲ್ ಡಿಲಿವರಿ ಮಾದರಿಯ ನ್ಯಾಯಾಲಯಗಳು ಅಸ್ತಿತ್ವದಲ್ಲಿದ್ದು, ಅವು ಕಲ್ಕತ್ತದ ಭೌಗೋಳಿಕ ವ್ಯಾಪ್ತಿಯಲ್ಲಿ ಇಂಗ್ಲೆಂಡಿನ ಅಪರಾಧಿಕ ಕಾನೂನುಗಳನ್ನು ಜಾರಿಗೆ ತಂದಿದ್ದವು. ಸರ್ವೋಚ್ಚ ನ್ಯಾಯಾಲಯಕ್ಕೆ ಅವಕಾಶವನ್ನು ಮಾಡಿಕೊಡಲು ಮೂರನೆಯ ಜಾರ್ಜ್ ಅವರ ೧೩ನೆಯ (ಸಿ.೬೩) ಅಧಿನಿಯಮವು ಈ ನ್ಯಾಯಾಲಯಗಳನ್ನು ರದ್ದುಮಾಡಿತು, ಮತ್ತು ಅಪರಾಧಿಕ ಪ್ರಕರಣಗಳ ಮೇಲೆ ಹಿಂದಿನ ನ್ಯಾಯಾಲಯಗಳಿಗೆ ಇದ್ದ ಅಧಿಕಾರವನ್ನು ಈ ಅಧಿನಿಯಮವು ಸರ್ವೋಚ್ಚ ನ್ಯಾಯಾಲಯಕ್ಕೆ ದಯಪಾಲಿಸಿತು."

ಈಗ ವಿವಾದಾಸ್ಪದವಾಗಿರುವ ವ್ಯಾಪ್ತಿಯ ವಿಷಯವನ್ನು ಮದರಾಸಿನಲ್ಲಿ ಜಾರಿಗೆ ತರಲಾಯಿತು ಎಂದು ತಿಳಿಸಲಾಗಿದೆ. ಆದರೆ, ಇದು ನಾಗಪ್ಪ ಚೆಟ್ಟಿ ಮತ್ತು ರಾಚಮ್ಮ ಮತ್ತಿತರರ ನಡುವಿನ ಪ್ರಕರಣದಲ್ಲಿ (ಮದರಾಸಿನ ನ್ಯಾಯಪ್ರಕರಣಗಳ ಮೇಲಿನ ಟಿಪ್ಪಣಿ, ಪುಟ ೧೩೫) ಮದರಾಸಿನ ಮುಖ್ಯ ನ್ಯಾಯಮೂರ್ತಿ ಸರ್ ಥಾಮಸ್ ಸ್ಟ್ರೇಂಜ್ ಅವರು ನೀಡಿದ ವಿವರಣೆಗಿಂತ ಭಿನ್ನವಾಗಿದೆ. "ಈ ನ್ಯಾಯಾಲಯದ ವ್ಯಾಪ್ತಿಯನ್ನು ಕುರಿತು ಇಂತಹುದೇ ಹಳೆಯ ಪ್ರಕರಣಗಳ ಮೇಲಿನಿಂದ ವಾದಿಸುವುದು ಅಸಾಧ್ಯವೆಂದು ನಿಜವಾಗಿಯೂ ಕಂಡುಬಂದಿದೆ. ನ್ಯಾಯವಿತರಣೆಯ ಜವಾಬ್ದಾರಿಯ ವಿಷಯದಲ್ಲಿ ನ್ಯಾಸಧಾರಿಯಾಗಿರುವ ಈ ನ್ಯಾಯಾಲಯಗಳು ತಮ್ಮ ರಚನೆ ಮತ್ತು ಸಂವಿಧಾನದ ಪ್ರಕಾರ, ಯಾವುದಾದರೂ ನ್ಯಾಯವಿಚಾರಣಾ ಪ್ರಕರಣದಿಂದ ಹಿಂದೆಗೆಯಲು ಪ್ರಯತ್ನಿಸಿದ ಪ್ರತಿ ಸಂದರ್ಭದಲ್ಲಿಯೂ ಅಂತಹ ಸಂದರ್ಭಕ್ಕೆ ಅನ್ವಯವಾಗುವ ಅಧಿಕಾರವ್ಯಾಪ್ತಿಯು ತನ್ನಿಂದ ಹೊರಗೆ ಇರುವುದನ್ನು ಕಂಡುಕೊಳ್ಳುತ್ತವೆ. ಅದನ್ನು ಹಾಗೆ ಹೇಳಿರದಿದ್ದರೆ, ಅಧಿಕಾರವ್ಯಾಪ್ತಿಯು ಇರುತ್ತದೆ (ಎಂದು ಭಾವಿಸಬೇಕು). ಆದರೆ ಇಲ್ಲಿನ ಪರಿಸ್ಥಿತಿ ಭಿನ್ನವಾಗಿದೆ. ಏಕೆಂದರೆ, ತನ್ನ ರಚನಾ ಸಂವಿಧಾನದ ಪ್ರಕಾರ ಈ ನ್ಯಾಯಾಲಯವು ಇತರ ನ್ಯಾಯಾಲಯಗಳಿಗೆ ಸಮಾನವಾದ ಅಧಿಕಾರವನ್ನೇ ಹೊಂದಿದ್ದರೂ, ಬ್ರಿಟಿಷ್ ಪ್ರಜೆಗಳಲ್ಲದವರ ವಿಷಯದಲ್ಲಿ ಸೀಮಿತವಾದ ವ್ಯಾಪ್ತಿಯನ್ನು ಹೊಂದಿದೆ". ಎಂದು ಸರ್ ಥಾಮಸ್ ಸ್ಟ್ರೇಂಜ್ ಅವರು ಹೇಳುತ್ತಾರೆ. ಇಲ್ಲಿ ಚರ್ಚಿಸುತ್ತಿರುವ ವಿಷಯಕ್ಕೆ ಈ ನಿರ್ಣಯವು ನೇರವಾಗಿ ಸಂಬಂಧಿಸಿದೆ. ಈ ಸರ್ವೋಚ್ಚ ನ್ಯಾಯಾಲಯಕ್ಕೆ ಮಹಾಪ್ರಭುಗಳ ನ್ಯಾಯಾಲಯದ ಅಧಿಕಾರಗಳು ಇರುವುದನ್ನು ಸನ್ನದಿನಲ್ಲಿ ಪ್ರಸ್ತಾಪಿಸಲಾಗಿದೆಯಾದರೂ, ಅದು ಅಧಿಕಾರದ ಲಕ್ಷಣಗಳನ್ನು ಕುರಿತದ್ದಾಗಿವೆಯೇ ಹೊರತು ವ್ಯಾಪ್ತಿಯನ್ನಲ್ಲ. ನ್ಯಾಯಾಲಯದ ವ್ಯಾಪ್ತಿಯನ್ನು ಸನ್ನದಿನಲ್ಲಿರುವ ಇತರ

ಪರಿಚ್ಛೇದಗಳು ಮಿತಿಗೊಳಿಸುತ್ತವೆ. ವ್ಯಾಪ್ತಿಗೆ ಒಳಪಟ್ಟ ವಿಷಯಗಳಲ್ಲಿ, ಸಾಮಾನ್ಯವಾಗಿ ಸ್ಥಳೀಯ ನಿವಾಸಿಗಳ ಪ್ರಕರಣಗಳಲ್ಲಾಗಲೀ ಅಥವಾ ಈ ಸ್ಥಳೀಯ ಮಿತಿಯ ಹೊರಗೆ ಇರುವ ಬ್ರಿಟಿಷ್ ಪ್ರಜೆಗಳ ಪ್ರಕರಣಗಳಲ್ಲಾಗಲೀ, ನ್ಯಾಯಮೂರ್ತಿಗಳು ಹೊಂದಿರುವ ಅಧಿಕಾರವು ಇಂಗ್ಲಿಷ್ ಕಾನೂನಿನ ದೃಷ್ಟಿಯಿಂದ ಮತ್ತು ಅವುಗಳನ್ನು ಅನ್ವಯಗೊಳಿಸುವ ದೃಷ್ಟಿಯಿಂದ ಇಂಗ್ಲೆಂಡಿನ ಮಹಾಪ್ರಭುಗಳ ನ್ಯಾಯಾಲಯದ ಅಧಿಕಾರಗಳಂತೆಯೇ ಇವೆ. ಸರ್ ಥಾಮಸ್ ಸ್ಟ್ರೇಂಜ್ ಅವರು ಮುಂದುವರೆದು ಹೇಳುತ್ತಾರೆ " ಸಾಮಾನ್ಯವಾಗಿ ಹೇಳುವುದಾದರೆ, ಮದರಾಸಿನ ಸ್ಥಳೀಯ ನಿವಾಸಿಗಳ ವಿಷಯದಲ್ಲಿ ಸೀಮಿತವಾದ ವ್ಯಾಪ್ತಿಯನ್ನು ಈ ನ್ಯಾಯಾಲಯವು ಹೊಂದಿದೆ. ಇದು ವಿವೇಕಯುತವಾದದ್ದೊ ಅಥವಾ ಅಲ್ಲವೋ ಎಂಬುದನ್ನು ನಾವು ಇಲ್ಲಿ ಪರಿಗಣಿಸುವುದಿಲ್ಲ. ಆದ್ದರಿಂದ ಇಲ್ಲಿರುವ ಪ್ರಶ್ನೆಯು ಈ ಮುಂದಿನ ವಿಷಯಗಳಿಗೆ ಮಾತ್ರ ಸಂಬಂಧಿಸಿರುತ್ತದೆ. ಸದರಿ ಪ್ರಕರಣಗಳಲ್ಲಿ, ಮದರಾಸಿನ ಸ್ಥಳೀಯ ನಿವಾಸಿಗಳು ನ್ಯಾಯಲಯದ ವ್ಯಾಪ್ತಿಗೆ ಒಳಪಡುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಮಾತ್ರ ನ್ಯಾಯಾಲಯವು ತೀರ್ಮಾನಿಸಬೇಕಾಗಿದೆ. ಉತ್ತಮ ನ್ಯಾಯಮೂರ್ತಿಯಾದವನು ಪರಿಹಾರವನ್ನು ನೀಡುವ ದೃಷ್ಟಿಯಿಂದ ತನ್ನ ಅಧಿಕಾರದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬೇಕು ಎಂದು ಹೇಳುವುದನ್ನು ಹಲವು ಬಾರಿ ನಾವು ಕೇಳುತ್ತೇವೆ. ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬೇಕು ಎಂದಿರುವುದನ್ನು ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದು ಅವರ ಕರ್ತವ್ಯವಾಗಬೇಕು ಎಂದು ಬದಲಾಯಿಸಿಕೊಂಡರೆ ಅದೊಂದು ಅತ್ಯುತ್ತಮ ಸೂತ್ರವಾಗುತ್ತದೆ. ಅಧಿಕಾರ ವ್ಯಾಪ್ತಿಯ ಉದ್ದೇಶ ಮತ್ತು ವಸ್ತುಸ್ಥಿತಿಯ ಪ್ರಶ್ನೆಯು ಬಂದಾಗ, ಸಂದರ್ಭವು ಅವಕಾಶವನ್ನು ಮಾಡುಕೊಡುವಷ್ಟು ದೂರ ಹೋಗಿ, ಸಂಬಂಧಪಟ್ಟ ಎಲ್ಲಾ ಪಕ್ಷಗಳವರ ಹಿತಾಸಕ್ತಿಗಳನ್ನು ಗಮನಿಸಿ ಮತ್ತು ಅದರ ಪರಿಣಾಮಗಳನ್ನು ಪರಿಗಣಿಸಿ, ವ್ಯಾಪ್ತಿಯನ್ನು ವಿಸ್ತರಿಸಲು ಪ್ರಯತ್ನಿಸುವುದು ಉತ್ತಮ ನ್ಯಾಯಾಮೂರ್ತಿಯವರಿಗೆ ಬಿಟ್ಟದ್ದಾಗಿರುತ್ತದೆ. ನನ್ನ ದೃಷ್ಟಿಯಲ್ಲಿ ಎಲ್ಲಾ ಅಧಿಕಾರವ್ಯಾಪ್ತಿಯ ಶಕ್ತಿಯು ಸಂಬಂಧಪಟ್ಟವರು ಅದನ್ನು ಎಷ್ಟು ಸಂಯಮದಿಂದ ಅಳೆಯುತ್ತಾರೆ ಎಂಬುದರಲ್ಲಿ ಇರುತ್ತದೆ. ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದು ಕರ್ತವ್ಯವಾಗಬೇಕು ಎಂದಾಗ ಮನಸ್ಸಿಗೆ ತೋರಿದ ಹಾಗೆ, ಅತಿಯಾದ ಶ್ರಮದಿಂದ ಕಾನೂನುಗಳನ್ನು ತಿರುಚದೆ ನ್ಯಾಯಮಂಡಲಿಗಳು ರೂಪಿಸಿರುವ ನೀತಿಗಳನ್ನು ಮೀರಿ ನಡೆಯದೆ ನ್ಯಾಯಮೂರ್ತಿಗಳೇ, ಅಧಿಕಾರದಲ್ಲಿರುವ ಇತರರಿಗೆ, ಬೇರೆಯ ರೀತಿಯ ಉದಾಹರಣೆಯನ್ನು ತೋರಿಸಿಕೊಡಬೇಕು. ಹಾಗೆ ನ್ಯಾಯವನ್ನು ನಾವು ನೀಡುವುದು ಸಾಧ್ಯವಾಗುವುದಿಲ್ಲವೆಂದು ಭಾವಿಸಿಕೊಂಡರೆ, ನ್ಯಾಯವಿತರಣೆಯ ಸ್ಥಾನವನ್ನು ತ್ಯಜಿಸಲೇಬೇಕಾಗುತ್ತದೆ."

ಭಾರತದ ಇಡೀ ಸ್ಥಳೀಯರು ಸರ್ವೋಚ್ಚ ನ್ಯಾಯಾಲಯಗಳ ವ್ಯಾಪ್ತಿಗೆ ಬಾರರು ಎಂಬುದನ್ನು ಬೇರೆ ಬೇರೆಯ ಕಾನೂನುಗಳ ಹಲವಾರು ಪರಿಚ್ಛೇದಗಳು ಹೇಳುವುದನ್ನು ನಾವು ಕಾಣಬಹುದು. ಆದರೆ ಅವರೆಲ್ಲರನ್ನೂ ತನ್ನ ವ್ಯಾಪ್ತಿಗೆ ತೆಗೆದುಕೊಳ್ಳುವುದು ಸರ್ವೋಚ್ಚ ನ್ಯಾಯಾಲಯದ ಉದ್ದೇಶವೂ ಆಗಿರಲಿಲ್ಲ. ಬ್ರಿಟಿಷ್ ಪ್ರಜೆಗಳ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿರುವ ವ್ಯಾಪಕವಾದ ಅಧಿಕಾರವು ತನ್ನ ವ್ಯಾಪ್ತಿಯಲ್ಲಿ ಸ್ಥಳೀಯರನ್ನು ಅಳವಡಿಸಿಕೊಳ್ಳಲು ಎಂದೂ ಪ್ರಯತ್ನಿಸಲಿಲ್ಲ.

ಸ್ಥಳೀಯ ಹಾಗೂ ವೈಯಕ್ತಿಕ ಕ್ಷೇತ್ರದಲ್ಲಿ ನ್ಯಾಯಾಯಲಕ್ಕೆ ಇರುವ ಅಧಿಕಾರ ವ್ಯಾಪ್ತಿಯನ್ನು ಸ್ಪಷ್ಟವಾದ ಮಾತಿನಲ್ಲಿ ಮೂರನೆಯ ಜಾರ್ಜ್ ಅವರ ೫೩ನೆಯ ಅಧಿನಿಯಮ ಕ್ಯಾಪ್.೧೫೫ರಲ್ಲಿ ವಿವಿಧ ಪ್ರಕರಣಗಳ ಅಡಿಯಲ್ಲಿ ಬರುವ ಅಪರಾಧಗಳ ಪಟ್ಟಿಯೊಂದಿಗೆ ವಿವರಿಸಲಾಗಿರುವುದನ್ನು ಸನ್ನಿಧಾನವು ಗಮನಿಸಬಹುದು. ೧೧೪ನೆಯ ಪರಿಚ್ಛೇದದಲ್ಲಿ, 'ಈಸ್ಟ್ ಇಂಡಿಯಾದ ಪರಿಧಿಯೊಳಗೆ ಹಣವನ್ನು ನೀಡಬೇಕಾಗಿರುವಲ್ಲಿ, ಆಧಾರಪತ್ರಗಳನ್ನು ಕದಿಯುವುದನ್ನು ಮಹಾ ಅಪರಾಧವೆಂದು ಪರಿಗಣಿಸುವುದು

ಉಚಿತವಾಗುತ್ತದೆ" ಎಂದು ಹೇಳಿದ ನಂತರ ಮುಂದಿನದನ್ನು ವಿಧಿಸಲಾಗಿದೆ "ಫೋರ್ಟ್ ವಿಲಿಯಮ್ಸ್, ಫೋರ್ಟ್ ಸೇಂಟ್ ಜಾರ್ಜ್, ಬಾಂಬೆ ಅಥವಾ ಪ್ರಿನ್ಸ್ ಆಫ್ ವೇಲ್ಸ್ ದ್ವೀಪದ ಆಪರಾಧಿಕ ವ್ಯಾಪ್ತಿಯಲ್ಲಿ ಯಾವ ವ್ಯಕ್ತಿಯಾದರೂ ಯಾ ವ್ಯಕ್ತಿಗಳಾದರೂ, ಅಥವಾ, ಮೇಲೆ ಹೇಳಿದ ಈಸ್ಟ್ ಇಂಡಿಯಾದ ಯಾವುದೇ ನ್ಯಾಯಾಲಯಗಳ ವ್ಯಾಪ್ತಿಗೆ ವೈಯಕ್ತಿಕವಾಗಿ ಒಳಪಡುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು" (ಎಂಬುದನ್ನು ಗುರುತಿಸಬೇಕು). ಹೀಗೆ ಮಾಡುವುದರಿಂದ ನ್ಯಾಯಾಲಯಗಳ ಸ್ಥಳೀಯ ವ್ಯಾಪ್ತಿ ಹಾಗೂ ವೈಯಕ್ತಿಕ ವ್ಯಾಪ್ತಿಗಳ ನಡುವೆ ಇರುವ ಅಂತರಗಳನ್ನು ಸ್ಪಷ್ಟವಾಗಿ ಅರಿಯಬಹುದು. ಸ್ಥಳೀಯ ವ್ಯಾಪ್ತಿಯೊಳಗೆ ವೈಯಕ್ತಿಕವಾಗಿ ನ್ಯಾಯಾಲಯದ ಅಧಿಕಾರವ್ಯಾಪ್ತಿಯಿಂದ ಹೊರಗಿರುವಂತಹವರು ಇರಬಹುದು.

ಇಲ್ಲಿ ಒಂದು ಪ್ರಶ್ನೆಯು ಉದ್ಭವವಾಗುತ್ತದೆ. ಅದೇಂದರೆ ಸ್ಥಳೀಯನೊಬ್ಬ ಸ್ಥಳೀಯ ನ್ಯಾಯಾಲಯದ ನೌಕರನಾಗಿದ್ದರೆ, ಉದಾಹರಣೆಗೆ ಜೈಲಿನ ಅಧಿಕಾರಿ, ಅವನನ್ನು ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿರುವವನೆಂದು ಪರಿಗಣಿಸಬಹುದಾದರೆ, ಅವನ ಮೇಲೆ ಆತನ ಬಂಧನದಲ್ಲಿರುವ ಸ್ಥಳೀಯ ವ್ಯಕ್ತಿಯೊಬ್ಬನನ್ನು ಬಾಂಬೆಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಆಜ್ಞೆಯನ್ನು ನೀಡಬಹುದೇ ಎಂಬುದು. ಸ್ಥಳೀಯ ನ್ಯಾಯಾಲಯಗಳ ಮೇಲಿನ ನಿಯಂತ್ರಣವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡುವ ಯಾವುದೇ ಉದ್ದೇಶವೂ ಇರಲಿಲ್ಲವೆಂಬ ಅಭಿಪ್ರಾಯವು ಸರಿಯಾಗಿದ್ದರೆ, ಸ್ಥಳೀಯ ನ್ಯಾಯಾಲಯಗಳಿಂದ ಪರಮೋಚ್ಚ ನ್ಯಾಯಾಲಯದರೆಗೆ ಏರುವ ಮೇಲುಮೊಕದ್ದಮೆಗಳ ಆನುಪೂರ್ವಿಯನ್ನು ಸ್ಥಾಪಿಸಬಹುದಾದರೆ, ೧೭೭೩ ಮತ್ತು ೧೭೮೧ರ ನಡುವಿನ ಪ್ರಕರಣಗಳಲ್ಲಿ ತೆಗೆದುಕೊಂಡ ನಿಲುವಿನ ಆಧಾರದ ಮೇಲೆ ಈಗ ಅನುಸರಿಸಲ್ಪಡುತ್ತಿರುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ನಿರರ್ಥಕಗೊಳಿಸಬೇಕೆ ಎಂಬ ಮುಖ್ಯ ಪ್ರಶ್ನೆಯೊಂದು ಎದುರಾಗುತ್ತದೆ. ಈ ಅವಧಿಯಲ್ಲಿ ಕೆಲವು ವ್ಯಕ್ತಿಗಳು ಭೂಮಾಲೀಕರಾಗಿದ್ದುದರಿಂದ ಅಥವಾ ಕೆಲವೊಂದು ನಿರ್ದಿಷ್ಟ ವ್ಯವಹಾರಗಳಲ್ಲಿ ಪಾಲುಗೊಂಡಿದ್ದುದರಿಂದ ಅವರು ಸಂಸತ್ತಿನ ಕಾನೂನುಗಳ ಹಾಗೂ ಈ ಸನ್ನದಿನ ವ್ಯಾಪ್ತಿಗೆ ಒಳಪಡುತ್ತಾರೆಂದು ವಾದಿಸಲಾಯಿತು ಮತ್ತು ತನ್ಮೂಲಕ ಈಸ್ಟ್ ಇಂಡಿಯಾ ಕಂಪನಿಯ ಉದ್ಯೋಗದಲ್ಲಿರುವವರನ್ನು ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ತರಲಾಯಿತು. ಕೇವಲ ವಾದಮಾಡುವುದಕ್ಕಾಗಿ, ಬಂದೀಖಾನೆಯ ಅಧಿಕಾರಿಯೊಬ್ಬನು ಈಸ್ಟ್ ಇಂಡಿಯಾ ಕಂಪನಿಯ ಉದ್ಯೋಗಿಯಾಗಿರುವುದರಿಂದ ಆತನು ಬಂಧಿಸಿದ ವ್ಯಕ್ತಿಯೊಬ್ಬನನ್ನು ಹಾಜರು ಪಡಿಸುವಂತೆ ಬಂದೀಖಾನೆಯ ಅಧಿಕಾರಿಯ ಮೇಲೆ 'ಬಂಧಿತ ವ್ಯಕ್ತಿಯನ್ನು ಹಾಜರುಪಡಿಸುವಂತೆ' ಆಜ್ಞೆಯನ್ನು ನೀಡಬಹುದು ಎಂದು ಭಾವಿಸೋಣ. ಅಂತಹ ಪರಿಸ್ಥಿತಿಯಲ್ಲಿ ಆತ ಕಂಪನಿಯ ಉದ್ಯೋಗಿ ಎಂಬ ಕಾರಣದಿಂದ ಇಂತಹ ಆಜ್ಞೆಯನ್ನು ಸ್ವೀಕರಿಸಿ ಅದಕ್ಕೆ ತಲೆಬಾಗಿ ತನ್ನ ಬಂಧನದಲ್ಲಿರುವಂತಹ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕೆಂಬ ಅರ್ಥವು ಇದರಿಂದ ಹೊರಡುತ್ತದೆಯೇ? ಸ್ಥಳೀಯ ನ್ಯಾಯಾಲಯದ ಕಾರ್ಯನೀತಿಸಂಹಿತೆಯನ್ನು ಪರೀಕ್ಷಿಸಲು ಸರ್ವೋಚ್ಚ ನ್ಯಾಯಾಲಯವು ಅಧಿಕಾರವನ್ನು ಹೊಂದಿದೆಯೇ? ಸ್ಥಳೀಯ ನ್ಯಾಯಾಲಯಗಳು ಯಾವ ನಿಯಮ ಮತ್ತು ಕಾನೂನುಗಳ ಅಡಿಯಲ್ಲಿ ಸ್ಥಾಪಿತವಾಗಿವೆ, ಅವು ಈ ಹಿಂದೆ ಮೊಘಲ್ ಸರಕಾರದ ವ್ಯವಸ್ಥೆಯ ಭಾಗವಾಗಿದ್ದು ಅವೇ ನಿಯಮಗಳನ್ನು ಅನುಸರಿಸುತ್ತಿವೆಯೇ ಅಥವಾ ಅವನ್ನು ಸಂಸತ್ತು ಸರಕಾರಕ್ಕೆ ನೀಡಿರುವ ಅಧಿಕಾರದಡಿ ರೂಪಿಸಿದ ನಿಯಮಗಳ ಪ್ರಕಾರ ಸ್ಥಾಪಿಸಲಾಗಿದೆಯೇ ಎಂಬ ವಿಷಯಗಳನ್ನು ನ್ಯಾಯಾಲಯವು ಪರಿಶೀಲಿಸಬೇಕು ಎಂದು ಹೇಳಲಾಗಿದೆ. ಮುಂದಿಟ್ಟಿರುವ ವಾದದ ಪ್ರಕಾರ, ಈ ಅಂಶಗಳನ್ನೆಲ್ಲಾ ಸರ್ವೋಚ್ಚ ನ್ಯಾಯಾಲಯದ ಮುಂದೆ ಅಧಿಕೃತ ಉತ್ತರದ ರೂಪದಲ್ಲಿ ಪರಿಶೀಲನೆಗೆ

ತರಬೇಕು. ಈ ಅಂಶಗಳು, ಪ್ರಥಮತಃ, ಸ್ಥಳೀಯ ನ್ಯಾಯಾಲಯಗಳು ನ್ಯಾಯಸಮ್ಮತವಾದ ರೀತಿಯಲ್ಲಿ ಸ್ಥಾಪಿತವಾಗಿದೆಯೇ, ಅವುಗಳ ಕಾರ್ಯನಿರ್ವಹಣಾ ಕ್ರಮವು ಕ್ರಮಬದ್ಧವಾಗಿದೆಯೇ ಎಂಬುದನ್ನೂ ಒಳಗೊಂಡಿರಬೇಕು. ಸಂಸತ್ತಿನ ಅಧಿನಿಯಮಗಳಲ್ಲಿ ಅಂತಹ ಅಧಿಕಾರವ್ಯಾಪ್ತಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡುವಂತಹ ಉದ್ದೇಶವಿರಲಿಲ್ಲ ಎಂಬುದು ಸ್ಪಷ್ಟವಾಗಿದೆಯೆಂಬ ನಮ್ಮ ಅಭಿಪ್ರಾಯವನ್ನು ವಿನಯಪೂರ್ವಕವಾಗಿ ತಮ್ಮ ಮುಂದಿಡಬಯಸುತ್ತೇವೆ. 'ಗವರ್ನರ್ ಜನರಲ್ ಮತ್ತು ಪರಿಷತ್ತು, ಕಾಲಕಾಲಕ್ಕೆ ಅಗತ್ಯವಾದ ಹಾಗೆ, ಸ್ಥಳೀಯ ನ್ಯಾಯಾಲಯ ಹಾಗೂ ಪರಿಷತ್ತುಗಳಿಗೆ ಅನ್ವಯವಾಗುವ ನಿಯಮ, ನಿಬಂಧನೆಗಳನ್ನು ರೂಪಿಸುವ ಅಧಿಕಾರವನ್ನು ಹೊಂದಿರುತ್ತಾರೆ" ಎಂದು ಮೂರನೆಯ ಜಾರ್ಜ್ ಅವರ ೨೧ನೆಯ (ಸಿ. ೭೦) ಅಧಿನಿಯಮದ ೨೩ನೆಯ ಪರಿಚ್ಛೇದದಲ್ಲಿ ವಿಧಿಸಲಾಗಿದೆ. ಸ್ಥಳೀಯ ನ್ಯಾಯಾಲಯಗಳನ್ನು ಕುರಿತಾಗಿರುವ ನಿರ್ದಿಷ್ಟವಾದ ವಿಧಿಗಳು ಇಲ್ಲಿರುವುದನ್ನು ಕಾಣಬಹುದು. ತಮ್ಮ ತಮ್ಮ ಪ್ರಾಂತಗಳಲ್ಲಿ ಬರುವ ಸ್ಥಳೀಯ ನ್ಯಾಯಾಲಯಗಳ ವ್ಯವಹಾರಗಳನ್ನು ನಿಯಂತ್ರಿಸುವ ಇಂತಹುದೇ ಅಧಿಕಾರವನ್ನು ಮದರಾಸು ಮತ್ತು ಬಾಂಬೆಯ ಸರಕಾರಗಳಿಗೂ ನೀಡಲಾಗಿದೆ. ಈ ಎಲ್ಲಾ ನಿಯಮಗಳೂ ಪರಿಷತ್ತಿನಲ್ಲಿ ಮಹಾಪ್ರಭುಗಳ ಪರಶೀಲನೆಗೆ ಒಳಪಟ್ಟಿವೆ. ಅವುಗಳೆಲ್ಲವನ್ನೂ ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಕಳುಹಿಸಲು ನಿರ್ದೇಶಿಸಲಾಗಿದೆ. ಅವುಗಳಲ್ಲಿ ಬದಲಾವಣೆಯನ್ನು ಮಾಡದೆ ಇದ್ದರೆ ಅವುಗಳು ಸಂಬಂಧಪಟ್ಟ ರಾಜ್ಯಗಳ ಕಾನೂನುಗಳಾಗಿ, ಅಲ್ಲಿನ ನ್ಯಾಯಾಲಯಗಳನ್ನು ತನ್ನ ಪರಿಮಿತಿಯಲ್ಲಿ ಒಳಗೊಳ್ಳುತ್ತದೆ. ಆ ನ್ಯಾಯಾಲಯಗಳ ಅಸ್ತಿತ್ವವನ್ನು, ಅವುಗಳ ನಿಯಂತ್ರಣವನ್ನು ಮಾಡುವ ಬಗೆಗಳನ್ನು ಮತ್ತು ಅವುಗಳ ನಿರ್ವಹಣೆಯ ಕಾನೂನುಗಳನ್ನು ಶಾಸಕಾಂಗವು ಪ್ರತ್ಯೇಕವಾಗಿ ಗುರುತಿಸಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಪ್ರಾಂತಗಳನ್ನು ಆಳುವುದಕ್ಕಾಗಿ ಇರುವ ನಿಬಂಧನೆಗಳನ್ನು ಸರ್ವೋಚ್ಚ ನ್ಯಾಯಾಲದಲ್ಲಿ ನೊಂದಣಿಮಾಡಿಸಬೇಕಾದ ಅಗತ್ಯವಿಲ್ಲ. ಆದರೆ, ಕಲ್ಕತ್ತ, ಬಾಂಬೆ ಮತ್ತು ಮದರಾಸುಗಳಲ್ಲಿ ಅನ್ವಯವಾಗುವಂತಹ ಕಾನೂನುಗಳೂ ಮತ್ತು ಎಲ್ಲಾ ಬ್ರಿಟಿಷ್ ಪ್ರಜೆಗಳೂ ಸ್ಥಳೀಯ ನ್ಯಾಯಾಲಯಗಳಲ್ಲಿ ನೋಂದಾಯಿಸಲ್ಪಡಬೇಕು ಮತ್ತು ನ್ಯಾಯಾಲಯಗಳಿಂದ ಅನುಮತಿಯನ್ನು ಪಡೆದಿರಬೇಕು.

ನಂತರ ನಾವು ೨೪ನೆಯ ಪರಿಚ್ಛೇದಕ್ಕೆ ಬರೋಣ. "ದೇಶೀಯ ನ್ಯಾಯಾಲಯಗಳಲ್ಲಿ ಅಧಿಕಾರದಲ್ಲಿರುವ ಯಾವುದೇ ವ್ಯಕ್ತಿಯ ವಿರುದ್ದವಾಗಲೀ, ಅಥವಾ ಈ ನ್ಯಾಯಾಲಯಗಳ ಆಜ್ಞೆಯ ಪ್ರಕಾರ ತಮ್ಮ ಕರ್ತವ್ಯವನ್ನು ನಿರ್ವಹಿಸುವ ಯಾವ ವ್ಯಕ್ತಿಯ ವಿರುದ್ಧವಾಗಲೀ, ತೀರ್ಪು, ಆಜ್ಞೆಗಳನ್ನು ನೀಡಲು, ಅವುಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವಿರುವುದಿಲ್ಲ." ಅಂದರೆ, ಸ್ಥಳೀಯ ವ್ಯಕ್ತಿಯೊಬ್ಬರು ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿದ್ದು, ಸ್ಥಳೀಯ ನ್ಯಾಯಾಲಯದ ಅಧಿಕಾರಿಯಾಗಿದ್ದರೆ, ಸ್ಥಳೀಯ ನ್ಯಾಯಾಲಯದ ನ್ಯಾಯಮೂರ್ತಿಗಳು ಬ್ರಿಟಿಷ್ ಪ್ರಜೆಗಳೇ ಆಗಿದ್ದರೂ, ಆ ವ್ಯಕ್ತಿಯ ಮೇಲೆ ಕ್ರಮತೆಗೆದುಕೊಳ್ಳುವುದು ಸರ್ವೋಚ್ಚ ನ್ಯಾಯಾಲಯಕ್ಕೆ ಸಾಧ್ಯವಿಲ್ಲ. ಇದೇ ಅಭಿಪ್ರಾಯವನ್ನು ಸನ್ನದಿನ ಭಾಷೆಯೂ ವ್ಯಕ್ತಪಡಿಸುತ್ತದೆ. ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವಿಲ್ಲದಿದ್ದರೂ, ನ್ಯಾಯಪ್ರಕ್ರಿಯೆಯು ನ್ಯಾಯಯುತವಾಗಿದೆಯೇ, ಇಲ್ಲವೇ, ಎಂಬುದರ ಬಗ್ಗೆ 'ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಪಡಿಸಬೇಕು' ಎಂಬ ಆಜ್ಞೆಯ ಮೂಲಕ ಸರ್ವೋಚ್ಚ ನ್ಯಾಯಾಲಯವು ವಿಚಾರಣೆಯನ್ನು ನಡೆಸಬಹುದು ಎಂದು ವಾದಿಸಲಾಗುತ್ತಿದೆ. ಇಂತಹ ವಾದವು ಅಸಾಧಾರಣವಾದದ್ದಾಗಿದೆ. ಯಾವ ಕಾನೂನಿನಲ್ಲಿಯೂ ಇದಕ್ಕೆ ಅವಕಾಶವಿಲ್ಲದಿರುವುದರಿಂದ, ಈ ಆಜ್ಞೆಯನ್ನು ನೀಡುವುದಕ್ಕೆ ಯಾವುದೇ ಆಧಾರವೂ ಇಲ್ಲವೆಂದು ಹೇಳುವ ಸಾಹಸವನ್ನು ನಾವು ಮಾಡುತ್ತೇವೆ.

ಇತ್ತೀಚೆಗೆ ಬಾಂಬೆಗೆ ನೀಡಿರುವ ಸನ್ನದನ್ನು (ಮಾರ್ಲೆಯವರ ಡೈಜೆಸ್ಟ್, ಸಂಪುಟ ೨, ಪುಟ. ೬೩೮) ನಾವು ಈಗ ಪರಿಶೀಲಿಸೋಣ. ಈ ಸನ್ನದಿನಲ್ಲಿರುವ ಒಂದು ಪರಿಚ್ಛೇದದ ಸುತ್ತ ಇಡೀ ಪ್ರಶ್ನೆಯು ಸುತ್ತುತ್ತಿರುತ್ತದೆ. ಇಲ್ಲಿ ವಾದಕ್ಕೆ ಅವಕಾಶವೇ ಇಲ್ಲ. ಈ ಪರಿಚ್ಛೇದ (ಪರಿಚ್ಛೇದ ೧೦) ಹೀಗೆ ಹೇಳುತ್ತದೆ. "ಈ ಹಿಂದೆ ಹೇಳಿದ ಮುಖ್ಯ ನ್ಯಾಯಮೂರ್ತಿಗಳು ಮತ್ತು ಕಿರಿಯ ನ್ಯಾಯಮೂರ್ತಿಗಳನ್ನು, ಈ ಮೂಲಕ ಬಾಂಬೆ ನಗರ ಮತ್ತು ಬಾಂಬೆ ದ್ವೀಪದ ಮತ್ತು ಅಲ್ಲಿನ ವ್ಯಾಪಾರ ಕೋಠಿಗಳ ಮೇಲೆ ಅಧಿಕಾರವುಳ್ಳ, ಅಲ್ಲಿನ ಶಾಂತಿಯನ್ನು ನಿರ್ವಹಿಸುವ ಕ್ರಮವಾಗಿ ಮುಖ್ಯ ನ್ಯಾಯಾಧೀಶರನ್ನಾಗಿ ಮತ್ತು ಕಿರಿಯ ನ್ಯಾಯಮೂರ್ತಿಗಳನ್ನಾಗಿ ನೇಮಕಮಾಡಲಾಗಿದೆ. ಇವರ ಅಧಿಕಾರ ವ್ಯಾಪ್ತಿಯು ಬಾಂಬೆ ಸರಕಾರದ ಮೇಲೆ ಅವಲಂಬಿತವಾಗಿರುತ್ತದೆ. ಇವರು, ನಮ್ಮ ಮಹಾಪ್ರಭುಗಳ ನ್ಯಾಯಾಲಯವು ಇಂಗ್ಲೆಂಡ್ ಎಂದು ಕರೆಯಲ್ಪಡುತ್ತಿರುವ ಗ್ರೇಟ್ ಬ್ರಿಟನ್ನಿನಲ್ಲಿ ಹೊಂದಿರುವ ನ್ಯಾಯಯುತ ಅಧಿಕಾರವನ್ನು, ಸಂದರ್ಭಾನುಸಾರವಾಗಿ ಹೊಂದಿರುತ್ತಾರೆ. ಸದರಿ ನ್ಯಾಯಮೂರ್ತಿಗಳು ಇಡೀ ಬಾಂಬೆ ಪ್ರಾಂತದಲ್ಲಿ ಶಾಂತಿಯ ನಿರ್ವಾಹಕ ನ್ಯಾಯಮೂರ್ತಿಗಳಾಗಿರುತ್ತಾರೆ ಎಂಬುದಕ್ಕಿಂತ ಬೇರೆಯಾದ ಅರ್ಥವನ್ನು ಹಾಗೂ ಅವರು ಚರ್ಚಿತವಾಗುತ್ತಿರುವ ವಿಷಯ ಮತ್ತು ಸಂದರ್ಭದ ಪ್ರಕಾರ ಅಧಿಕಾರವನ್ನು ಹೊಂದಿದ್ದಾರೆ ಎಂಬುದನ್ನು ಮೇಲೆ ಹೇಳಿದ ಪರಿಚ್ಛೇದದಿಂದ ಹೊರಡಿಸುವುದು ಸಾಧ್ಯವೇ? ಮಹಾಪ್ರಭುಗಳ ನ್ಯಾಯಾಲಯದ ನ್ಯಾಯಮೂರ್ತಿಗಳು, ಅವರು ಶಾಂತಿನಿರ್ವಾಹಕ ನ್ಯಾಯಮೂರ್ತಿಗಳಾಗಿರುವುದರಿಂದ, ಸನ್ನಿವೇಶಗಳ ಮಿತಿಗೆ ಒಳಪಟ್ಟು, ತಮ್ಮ ಅಧಿಕಾರವನ್ನು ಇಂಗ್ಲೆಂಡಿನಲ್ಲಿ ಚಲಾಯಿಸುತ್ತಾರೆ ಎಂಬುದನ್ನು ನಾವು ಬಲ್ಲೆವು. ಹಾಗೆಯೇ, ಬ್ರಿಟಿಷ್ ಪ್ರಜೆಗಳ ಮೇಲೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳೂ ಅಂತಹ ಅಧಿಕಾರವನ್ನೇ ಹೊಂದಿರುತ್ತಾರೆ ಎಂಬುದು ನಿರ್ವಿವಾದ ಅಂಶವಾಗಿದೆ. ಈ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಮಹಾಪ್ರಭುಗಳ ನ್ಯಾಯಾಲಯದ ನ್ಯಾಯಮೂರ್ತಿಗಳಂತೆಯೇ ಶಾಂತಿಪಾಲನೆಯ ನ್ಯಾಯಮೂರ್ತಿಗಳ ವ್ಯಾಪ್ತಿಯನ್ನು ಹೊಂದಿರುತ್ತಾರೆ.

ಪ್ರಕೃತ ಸಂದರ್ಭದಲ್ಲಿ, ಮಹಾಪ್ರಭುಗಳ ನ್ಯಾಯಾಲಯದ ನ್ಯಾಯಮೂರ್ತಿಗಳಂತೆಯೇ ಎಲ್ಲಾ ಅಧಿಕಾರಗಳನ್ನೂ, ವ್ಯಾಪ್ತಿಯನ್ನೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಬಾಂಬೆ ನಗರದಲ್ಲಿ ಮಾತ್ರವಲ್ಲ, ಇಡೀ ಬಾಂಬೆ ಪ್ರಾಂತದಲ್ಲಿ, ಎಲ್ಲಾ ವ್ಯಕ್ತಿಗಳ ಮೇಲೆ ತಮ್ಮ ಅಧಿಕಾರವ್ಯಾಪ್ತಿಯನ್ನು ಅನಿರ್ಬಂಧಿತವಾಗಿ ಹೊಂದಿರುತ್ತಾರೆ, ಮತ್ತು ಮಹಾಪ್ರಭುಗಳ ನ್ಯಾಯಾಲಯವು ಭಾರತದ ಯಾವುದೇ ಪ್ರಾಂತದ ಮೇಲೂ ತನ್ನ ಆಜ್ಞೆಯನ್ನು ಜಾರಿಗೊಳಿಸಬಹುದು ಎಂದೂ ವಾದಿಸಲಾಗುತ್ತಿದೆ. ಈ ವಿಷಯದ ಬಗ್ಗೆ ಆಳವಾಗಿ ಚರ್ಚಿಸುವ ಅಗತ್ಯವು ಈಗ ಇಲ್ಲ. ಆದರೂ, ಈ ವಾದವು ಲಾರ್ಡ್ ಮ್ಯಾನ್ಸ್‌ಫೀಲ್ಡ್ ಅವರ ಒಂದು ತೀರ್ಪಿನಲ್ಲಿ ಉಪಯೋಗಿಸಿರುವ 'ದ ಪ್ಲಾಂಟೇಷನ್ಸ್' ಎಂಬ ಪದಗಳನ್ನು (ಕೌಲೇಯವರ ಪ್ರಕರಣ, ೨ನೆಯ ಬರೋಸ್, ಪುಟ. ೮೫೬) ಆಧಾರವಾಗಿಸಿಕೊಂಡಿದೆ ಎಂದು ನಾವು ಭಾವಿಸುತ್ತೇವೆ. ಆದರೆ ಆ ತೀರ್ಪಿನಲ್ಲಿ 'ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರುಪಡಿಸಬೇಕು' ಎಂಬ ಆಜ್ಞೆಯನ್ನು ತಾವು ಯಾವುದಾದರೂ ಪ್ರಾಂತದ ಮೇಲೆ ನೀಡಿದ್ದೆವು ಎಂಬುದು ತಮಗೆ ಜ್ಞಾಪಕವಿಲ್ಲವೆಂದು ಲಾರ್ಡ್ ಮ್ಯಾನ್ಸ್‌ಫೀಲ್ಡ್ ಅವರು ಹೇಳಿದ್ದಾರೆ. ಈ ವಿಷಯದಲ್ಲಿ ಹಲವಾರು ಮನವಿಗಳನ್ನು ಸದರಿ ನ್ಯಾಯಾಲಯಕ್ಕೆ ಮಾಡಲಾಗಿವೆ ಮತ್ತು ವಸಾಹತುಗಳ ಮೇಲೆ ನ್ಯಾಯಾಲಯಕ್ಕೆ ಸಾಮಾನ್ಯವಾಗಿ ಅಧಿಕಾರವ್ಯಾಪ್ತಿಯಿರುತ್ತದೆ ಎಂಬುದು ನಮಗೆಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಇದನ್ನು ಆಧಾರವಾಗಿಟ್ಟುಕೊಂಡು ಯಾವ ವ್ಯಕ್ತಿಯಾದರೂ ಒಂದು ಪ್ರಮಾಣಪತ್ರವನ್ನು ನೀಡಲು ಧೈರ್ಯಮಾಡಿ, ನ್ಯಾಯಾಲಯದ ವ್ಯಾಪ್ತಿಯನ್ನು ವಿಸ್ತರಿಸಿ, ಹಿಮಾಲಯದ

ತಪ್ಪಲಲ್ಲಿ ಬಂಧನದಲ್ಲಿರುವ ವ್ಯಕ್ತಿಯೊಬ್ಬನನ್ನು ವೆಸ್ಟ್ ಮಿನಿಸ್ಟರ್‌ನಲ್ಲಿರುವ ಮಹಾಪ್ರಭುಗಳ ನ್ಯಾಯಾಲಯಕ್ಕೆ ವ್ಯಕ್ತಿಶಃ ಹಾಜರುಪಡಿಸಬೇಕೆಂದು ಕೋರಿದರೆ, ಮಹಾಪ್ರಭುಗಳ ನ್ಯಾಯಾಲಯವು ಅದನ್ನು ನ್ಯಾಯಯುತವೆಂದು ಭಾವಿಸಿ ಆಜ್ಞೆಯನ್ನು ನೀಡಿದರೆ, ಅಂತಹ ಬಂಧಿತ ವ್ಯಕ್ತಿಯನ್ನು ಸದರಿ ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗುತ್ತದೆ. ಇಂತಹ ಅಧಿಕಾರವು ನ್ಯಾಯಾಲಯಕ್ಕೆ ಇದೆ ಎಂದು ಹೇಳಲಾಗಿದೆ. ಅದು ಕ್ಯಾಲೈ ನಗರವು ಇಂಗ್ಲೆಂಡಿನ ಆಳ್ವಿಕೆಯಲ್ಲಿದ್ದಾಗಿನ ಸಂದರ್ಭದಲ್ಲಿ ನಡೆದಂತಹ ಪ್ರಕರಣ. ಕ್ಯಾಲೈ ನಗರವು ಇಂಗ್ಲೆಂಡಿನ ಸಂಸತ್ತಿಗೆ ತನ್ನ ಪ್ರತಿನಿಧಿಗಳನ್ನು ಕಳುಹಿಸುತ್ತಿತ್ತು ಮತ್ತು ಆ ನಗರದಲ್ಲಿ ಆಗ ಇಂಗ್ಲೆಂಡಿನ ಕಾನೂನುಗಳು ಅನ್ವಯವಾಗುತ್ತಿದ್ದವು. ಈ ಪ್ರಶ್ನೆಯ ಬಗ್ಗೆ ಚರ್ಚಿಸುವುದು ಪ್ರಕೃತ ಪ್ರಕರಣದಲ್ಲಿ ಅಗತ್ಯವಿಲ್ಲ.

ಲಾರ್ಡ್ ಹೇಲ್ ಅವರ ಸಿದ್ಧಾಂತದ ಅಧಾರದ ಮೇಲೆ ಒಂದ ಪ್ರೌಢಪ್ರಬಂಧವನ್ನು ಬರೆಯಲಾಗಿದೆ ಎಂಬುದು ನಮಗೆ ತಿಳಿದುಬಂದಿದೆ. ಅಧಿಕಾರವ್ಯಾಪ್ತಿಯು, ಅದರ ಸಾಮಾನ್ಯಾರ್ಥದಲ್ಲಿ, ಸ್ಥಳೀಯರ ಮೇಲೆ ಸರ್ವೋಚ್ಚ ನ್ಯಾಯಾಲಯಕ್ಕೆ ದಿವಾಣೀ ಪ್ರಕರಣಗಳಲ್ಲಿ, ಆಪರಾಧಿಕ ಪ್ರಕರಣಗಳಲ್ಲಿ, ಧಾರ್ಮಿಕ ಪ್ರಕರಣಗಳಲ್ಲಿ, ನೌಕಾವ್ಯಾಪ್ತಿಯ ಪ್ರಕರಣಗಳಲ್ಲಿ ಅಧಿಕಾರವು ಇಲ್ಲದಿದ್ದರೂ, ಮಹಾಪ್ರಭುಗಳ ಪ್ರಜೆಗಳ ಮೇಲೆ ಈ ಎಲ್ಲಾ ಅಧಿಕಾರವ್ಯಾಪ್ತಿಯನ್ನೂ ಹೊಂದಿದೆ ಎಂದು ವಾದಿಸಲಾಗಿದೆ.* ನಾವೀಗ ಚರ್ಚಿಸುತ್ತಿರುವ 'ಅಧಿಕಾರ, ಅಧಿಕಾರದ ವ್ಯಾಪ್ತಿ' – ಈ ಪದಗಳನ್ನು ನಾವು ಪರಿಶೀಲಿಸುತ್ತಿರುವ ಸನ್ನದಿನ ಪ್ರತಿಯೊಂದು ಭಾಗದಲ್ಲಿಯೂ ಕಾಣಬಹುದು. ಆದರೆ ಈ ನಿರ್ದಿಷ್ಟ ಪರಿಚ್ಛೇದದಲ್ಲಿ ಅಧಿಕಾರವೆಂಬ ಪದವು ಕಾಣಸಿಗುವುದಿಲ್ಲ. ಅಧಿಕಾರವೆಂಬ ಪಾರಿಭಾಷಿಕ ಶಬ್ದದ ಮೇಲೆ ಇಷ್ಟೊಂದು ಚರ್ಚೆಗೆ ಅವಕಾಶಮಾಡಿಕೊಟ್ಟಿರುವ ಸಂದರ್ಭದಲ್ಲಿ ಅಧಿಕಾರವೆಂಬ ಪದವೇ ಕಾಣಸಿಗದಿರುವುದು ನಿಜಕ್ಕೂ ಅತ್ಯಂತ ಆಶ್ಚರ್ಯಕರವಾಗಿದೆ. ಅಧಿಕಾರವನ್ನು ಅಧಿಕಾರದ ವ್ಯಾಪ್ತಿಯಿಂದ ಪ್ರತ್ಯೇಕಿಸುವ ಅಂಶವು ಯಾವುದು? ಇಲ್ಲಿ ನಾವು ಅಧಿಕಾರದ ವ್ಯಾಪ್ತಿಯೆಂದು ನಾವು ಯಾವುದನ್ನು ಚರ್ಚಿಸುತ್ತಿದ್ದೇವೆ? ದಿವಾಣೀ ಕಾನೂನು ಸಂಹಿತೆಯೊಂದರಲ್ಲಿ ಟೀಕಾಕಾರರೊಬ್ಬರು ಒಂದೇ ಸಾಲಿನಲ್ಲಿ ಇದನ್ನು ಹೀಗೆ ವಿವರಿಸಿದ್ದಾರೆ 'ನ್ಯಾಯಾಲಯದ ಪ್ರಕರಣಗಳ ವಿಚಾರಣೆಮಾಡಲು ನ್ಯಾಯಾಧೀಶರಿಗೆ ಇರುವ ಭೌಗೋಳಿಕ ಪರಿಮಿತಿ'.

ಸರ್ವೋಚ್ಚ ನ್ಯಾಯಾಲಯವೆಂದರೆ, ಮಹಾಪ್ರಭುಗಳ ನ್ಯಾಯಾಲಯದ ಅಧಿಕಾರಗಳನ್ನೆಲ್ಲಾ ಹೊಂದಿರುವ ನ್ಯಾಯಾಯಲಯ ಎಂದು ಹೇಳಲಾಗಿದೆ. ಇದೇ ರೀತಿಯ ವ್ಯಾಖ್ಯಾನವನ್ನು ವೇಲ್ಸ್‌ನಲ್ಲಿ

---

*ಲಾರ್ಡ್ ಹೇಲ್ ಅವರ ವಿವರಣೆಯನ್ನು ನೀಡಿದ ನಂತರ ಸರ್. ಪೀಟರ್ ಗ್ರಾಂಟ್ ಅವರು, ಮಹಾಪ್ರಭುಗಳ ನ್ಯಾಯಾಲಯದ ಬಗ್ಗೆ ಲಾರ್ಡ್ ಕೋಕ್ ಅವರು ನೀಡಿರುವ ವಿವರಣೆಯನ್ನು ತಮ್ಮ ತೀರ್ಪಿನಲ್ಲಿ ಉಲ್ಲೇಖಿಸುತ್ತಾ ಹೀಗೆ ಹೇಳಿದ್ದಾರೆ: ಈ ನ್ಯಾಯಾಲಯವು ಹೊಂದಿರುವ ಅಧಿಕಾರದ ಮೂರನೆಯ ವಿವರಣೆಯು ನ್ಯಾಯಾಲಯಕ್ಕೆ ನೀಡಿರುವ ಸಚಿವರ ಪರಮೋಚ್ಚ ಅಧಿಕಾರದ ಸಂಬಂಧವನ್ನು ಹೊಂದಿದೆ. ಈ ಅಧಿಕಾರವು, ನ್ಯಾಯಾಲಯವು ತಾನೇ ಪ್ರಥಮತಃ ವಿಚಾರಣೆಯನ್ನು ನಡೆಸುವ ಅಥವಾ ಮೇಲ್ಮನವಿಯ ವಿಚಾರಣೆಯನ್ನು ನಡೆಸುವ ಅಧಿಕಾರಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ ಮತ್ತು ಪ್ರತ್ಯೇಕವಾಗಿರುತ್ತದೆ. ಇದು ಸಾಮ್ರಾಜ್ಯದ ಪರಮಾಧಿಕಾರಗಳಲ್ಲಿ ಒಂದಾಗಿದ್ದು, ಲಾರ್ಡ್ ಕೋಕ್ ಅವರು ಹೇಳಿರುವಂತೆ, ನ್ಯಾಯನಿರ್ವಹಣಾ ವ್ಯವಸ್ಥೆಯಲ್ಲಿ ಆಗಬಹುದಾದ ತಪ್ಪುಗಳನ್ನು ಮತ್ತು ದುರ್ವರ್ತನೆಗಳನ್ನು ತಿದ್ದಲು ನೀಡಿರುವಂತಹುದಾಗಿದೆ. ಆದರೆ, ಈ ಅಧಿಕಾರವನ್ನು, ಮಹಾಪ್ರಭುಗಳ ನ್ಯಾಯಾಲಯದಲ್ಲಿ ನಡೆಯುವ ರೀತಿಯಲ್ಲಿ ವಿಚಾರಣೆಮಾಡುವ ಮೂಲಕವಾಗಲೀ, ತೀರ್ಪುನೀಡುವ ಮೂಲಕವಾಗಲೀ ಚಲಾಯಿಸದೆ, ಮಹಾಪ್ರಭುಗಳ ಹೆಸರಿನಲ್ಲಿ 'ವ್ಯಕ್ತಿಗಳನ್ನು ಹಾಜರು ಪಡಿಸಬೇಕೆಂಬ ಆಜ್ಞೆ, ನಿಷೇಧಾಜ್ಞೆ, ಅಧೀನ ನ್ಯಾಯಾಲಯಗಳಿಗೆ ನೀಡುವ ನಿರೂಪ' ಇತ್ಯಾದಿ ವಿಶೇಷ ಆಜ್ಞೆಗಳ ಮೂಲಕ ಅಥವಾ ಯಾವುದೇ ಅಪರಾಧವನ್ನೆಸಗಿದ್ದ ವ್ಯಕ್ತಿಯನ್ನಾದರೂ ಬಂಧವಿಮುಕ್ತಗೊಳಿಸುವ ಮೂಲಕ ಚಲಾಯಿಸಬೇಕು.

ಗ್ರೇಟ್ ಸೆಷನ್ಸ್ ನ್ಯಾಯಾಲಯದ ಅಧಿಕಾರಕ್ಕೆ ಎಂಟನೆಯ ಹೆನ್ರಿಯವರ ೩೪ನೆಯ ಮತ್ತು ೩೫ನೆಯ ಅಧಿನಿಯಮಗಳಲ್ಲಿ ನೀಡಲಾಗಿದೆ. ಇವೇ ಅಂಶಗಳನ್ನು, ಮಹಾಪ್ರಭುಗಳ ಎಲ್ಲಾ ವಸಾಹತು ದೇಶಗಳಲ್ಲಿನ ನ್ಯಾಯಾಲಯಕ್ಕೆ ನೀಡಿರುವ ಸನ್ನದುಗಳಲ್ಲಿ ಅಳವಡಿಸಲಾಗಿದೆ. ಇವೆಲ್ಲವೂ ಸಾಮಾನ್ಯ ಸೂತ್ರಗಳಾಗಿವೆ. ಇವುಗಳ ಹಿಂದಿರುವ ಉದ್ದೇಶಗಳನ್ನು, ಸಂಬಂಧಪಟ್ಟ ಸೂತ್ರಗಳ ಜೊತೆಯಲ್ಲಿಯೇ ನೀಡಲಾಗಿರುವ ವಿಶೇಷ ವಿಧಿಗಳ ಮೂಲಕವೇ ಅರ್ಥೈಸಬೇಕು.

ಫ಼ೋರ್ಟ್ ವಿಲಿಯಮ್‌ನ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿರುವ ಸನ್ನದಿನಲ್ಲಿರುವ ೪ನೆಯ ಪರಿಚ್ಛೇದದಲ್ಲಿ ಇಂತಹುದೇ ವಿವರಣೆಯಿರುವುದನ್ನು ಗಮನಿಸುವುದು ಲಾಭದಾಯಕವಾಗುತ್ತದೆ (ಮಾರ್ಲೆಯವರ ಡೈಜೆಸ್ಟ್ ೨, ಪುಟ ೫೫೧). ಈ ಪರಿಚ್ಛೇದವನ್ನು ಎರಡನೆಯ ಜಾರ್ಜ್‌ಅವರ ೨೬ನೆಯ ಅಧಿನಿಯಮದ ಪ್ರಕಾರ (ಪುಟ ೪೪೬) ಈಸ್ಟ್‌ಇಂಡಿಯಾ ಕಂಪನಿಗೆ ನೀಡಿದ್ದ ಸನ್ನದಿನಿಂದ ತೆಗೆದುಕೊಳ್ಳಲಾಗಿದೆ. ಇದು ಫ಼ೋರ್ಟ್ ವಿಲಿಯಮ್ಸ್‌ನ ಗವರ್ನರ್ ಮತ್ತು ಪರಿಷತ್ತಿನ ಅಧ್ಯಕ್ಷರನ್ನು ಶಾಂತಿನಿರ್ವಹಣಾ ನ್ಯಾಯಮೂರ್ತಿಗಳನ್ನಾಗಿ ತತ್ಕಾಲಕ್ಕೆ ನೇಮಿಸಿ ಅವರಿಗೆ ಶಾಂತಿನಿರ್ವಹಣಾ ನ್ಯಾಯಮೂರ್ತಿಗಳ ಅಧಿಕಾರವನ್ನು, ಮತ್ತು ಆಯರ್ ಮತ್ತು ಟರ್ಮೈನರ್ ನ್ಯಾಯಾಲಯದ ಆಯುಕ್ತರಿಗೆ ಹಾಗೂ ಬಂದೀಖಾನೆಯ ಅಧಿಕಾರಿಗಳಿಗೆ ಇರುವ ಅಧಿಕಾರವನ್ನು ನೀಡುತ್ತದೆ. ಅವರುಗಳು, ಅಥವಾ ಅವರಲ್ಲಿ ಗವರ್ನರ್ ಅಥವಾ ಅಧ್ಯಕ್ಷರನ್ನು (ಅಥವಾ ಅವರ ಅನುಪಸ್ಥಿತಿಯಲ್ಲಿ ಫ಼ೋರ್ಟ್ ವಿಲಿಯಮ್ಸ್‌ನಲ್ಲಿರುವ ಪರಿಷತ್ತಿನ ಹಿರಿಯ ಸದಸ್ಯರನ್ನು) ಒಳಗೊಂಡಂತೆ ಮೂವರು ಅಥವಾ ಮೂವರಿಗಿಂತ ಹೆಚ್ಚಿನ ಸದಸ್ಯರು ಕಲ್ಕತ್ತ ನಗರದಲ್ಲಾಗಲೀ, ಕಲ್ಕತ್ತದ ವ್ಯಾಪಾರ ಕೋಠಿಯಲ್ಲಾಗಲೀ, ಅಥವಾ ಬಂಗಾಳದ ಫ಼ೋರ್ಟ್ ವಿಲಿಯಮ್ಸ್‌ನಲ್ಲಾಗಲೀ, ಅಥವಾ ಅದರ ಅಧೀನದಲ್ಲಿರುವ ಕೋಠಿಗಳಲ್ಲಾಗಲೀ ಅಧಿವೇಶನವನ್ನು ನಡೆಸಿ, ಶಾಂತಿನಿರ್ವಹಣಾ ನ್ಯಾಯಾಧೀಶರ, ಆಯರ್ ಮತ್ತು ಟರ್ಮೈನರ್‌ನ ಆಯುಕ್ತರ ಮತ್ತು ಬಂದೀಖಾನೆಯ ಅಧಿಕಾರಿಯ ಕರ್ತವ್ಯವನ್ನು ನಿರ್ವಹಿಸಬಹುದು ಮತ್ತು ಹಾಗೆ ನಿರ್ವಹಿಸಲು ಅಗತ್ಯವಾದ ಎಲ್ಲಾ ಅಧಿಕಾರಗಳನ್ನೂ ಈ ಹಿಂದೆ ಹೇಳಲಾಗಿರುವ ನಿಬಂಧನೆಗಳಿಗೆ ಅನುಸಾರವಾಗಿ ಅವರಿಗೆ ನೀಡಲಾಗಿದೆ. ಮದರಾಸಿಗೆ ಸಂಬಂಧಿಸಿದಂತೆ ಇರುವ ವಿಧಿಯನ್ನು ೪೩೦ನೆಯ ಪುಟದಲ್ಲಿ ಕಾಣಬಹುದು. ಅದು ಹೀಗಿದೆ: "ನಾವು ಈ ಸನ್ನದನ್ನು ಈಸ್ಟ್ ಇಂಡಿಯಾ ಕಂಪನಿಗೆ ಮತ್ತು ಅದರ ಉತ್ತರಾಧಿಕಾರಿಗಳಿಗೆ ನೀಡುತ್ತಿದ್ದೇವೆ ಮತ್ತು ತನ್ಮೂಲಕ ಫ಼ೋರ್ಟ್ ಸೈಂಟ್ ಜಾರ್ಜ್‌ನ ಪರಿಷತ್ತು ಮತ್ತು ಗವರ್ನರ್ ಅವರನ್ನು ಮದರಾಸು ಪಟ್ಟಣ, ಫ಼ೋರ್ಟ್ ಸೈಂಟ್ ಡೇವಿಡ್, ವಿಶಾಖಪಟ್ಟಣ, ಸುಮಾತ್ರದ ಕರಾವಳಿಯಲ್ಲಿರುವ ವ್ಯಾಪಾರ ಕೋಠಿಗಳು ಮತ್ತು ಫ಼ೋರ್ಟ್ ಸೈಂಟ್ ಜಾರ್ಜ್‌ನ ಅಧೀನದಲ್ಲಿರುವ ಎಲ್ಲಾ ವ್ಯಾಪಾರ ಕೋಠಿಗಳು – ಇವುಗಳ ಶಾಂತಿನಿರ್ವಹಣಾ ನ್ಯಾಯಾಧೀಶರನ್ನಾಗಿ ನೇಮಿಸಿ ಅವರಿಗೆ ಇರಬೇಕಾದ ಮತ್ತು ಮಹಾಪ್ರಭುಗಳ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ಇಂಗ್ಲೆಂಡ್ ದೇಶದ ಎಲ್ಲೆಡೆಯಲ್ಲಿಯೂ ಇರುವಂತಹ ಎಲ್ಲಾ ಅಧಿಕಾರಗಳನ್ನೂ ನೀಡುತ್ತಿದ್ದೇವೆ." ಸರ್ವೋಚ್ಚ ನ್ಯಾಯಾಲಯವು ಸ್ಥಾಪಿಸಲ್ಪಟ್ಟಾಗ, ಅದರ ನ್ಯಾಯಮೂರ್ತಿಗಳಿಗೆ, ಸಂದರ್ಭಕ್ಕೆ ಅನುಸಾರವಾಗಿ ಮತ್ತು ಸಾಮಾನ್ಯ ಪರಿಸ್ಥಿತಿ ಹಾಗೂ ವಿಶೇಷ ಸಂದರ್ಭಗಳಿಗೆ ಅನುಗುಣವಾಗಿ, ಇವೇ ಅಧಿಕಾರಗಳನ್ನೂ, ಅಧಿಕಾರದ ವ್ಯಾಪ್ತಿಯನ್ನೂ ನೀಡಲಾಗಿರುವುದು ಸಹಜವೇ ಆಗಿದೆ. ಸನ್ನದಿನ ಪ್ರಕಾರ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಅಧಿಕಾರವನ್ನು ನ್ಯಾಯನಿರ್ವಹಣಾ ನ್ಯಾಯಾಧೀಶರ ಅಧಿಕಾರದೊಂದಿಗೆ ಸಮೀಕರಿಸದೆ ಅವರನ್ನು ಶಾಂತಿ ಪಾಲನಾ ನ್ಯಾಯಮೂರ್ತಿಗಳನ್ನಾಗಿಸಿ, ಅವರಿಗೆ ಮಹಾಪ್ರಭುಗಳ ನ್ಯಾಯಾಲಯದ ನ್ಯಾಯಮೂರ್ತಿಗಳ ಅಧಿಕಾರವನ್ನು

ನೀಡಿರುವುದು, ಸಹಜವೇ ಆಗಿದೆ. ನಾವು ಈಗ ಗಮನಿಸುತ್ತಿರುವ ಪರಿಚ್ಛೇದದಲ್ಲಿ ವ್ಯಕ್ತವಾಗುವ ಉದ್ದೇಶವು ಇದೇ ಆಗಿದೆ. ಬಾಂಬೆ ಪ್ರಾಂತದ ಎಲ್ಲಾ ಪ್ರದೇಶಗಳ ಎಲ್ಲಾ ಬಗೆಯ ನ್ಯಾಯಾಲಯಗಳ ಮೇಲೂ ಸರ್ವೋಚ್ಚ ನ್ಯಾಯಾಲಯವು, ಮಹಾಪ್ರಭುಗಳು ನೀಡಬಹುದಾದಂತಹ ಎಲ್ಲಾ ಆಜ್ಞೆಗ್ಗಳನ್ನು ನೀಡಲು ಅಧಿಕಾರವನ್ನು ಹೊಂದಿದೆ ಎಂದು ಎದುರು ಪಕ್ಷದವರು ವಾದಿಸುತ್ತಿದ್ದಾರೆ. ಈ ಮೊದಲು ಹೇಳಿದ ಸಾಮಾನ್ಯ ವಿಧಿಯ ಪ್ರಕಾರ ಮೇಲೆ ಸೂಚಿಸಿರುವ ಎಲ್ಲಾ ಅಧಿಕಾರಗಳೂ ಸರ್ವೋಚ್ಚ ನ್ಯಾಯಾಲಯಕ್ಕೆ ಇದೆಯೆಂದು ವಾದಿಸುವುದಾದರೆ, ಕೋರ್ಟ್ಸ್ ಆಫ್ ರಿಕ್ವೆಸ್ಟ್ಸ್ ಅಂಡ್ ಕ್ವಾರ್ಟರ್ ಸೆಷನ್ಸ್‌ನ್ನು ಸ್ಥಾಪಿಸಿದ ನಂತರ ಸನ್ನದು ಮುಂದುವರೆದು, ಬಾಂಬೆನಗರ, ದ್ವೀಪ, ಅದಕ್ಕೆ ಸೇರಿರುವ ವ್ಯಾಪಾರ ಕೋಠಿಗಳು ಇವೆಲ್ಲವುಗಳ ಮೇಲೆ ಅಧಿಕಾರವುಳ್ಳ ನ್ಯಾಯಾಲಯಗಳು ಸರ್ವೋಚ್ಚ ನ್ಯಾಯಾಲಯದ ಅಧೀನದಲ್ಲಿ ಮತ್ತು ನಿಯಂತ್ರಣದಲ್ಲಿ ಇರಬೇಕೆಂದು ಮತ್ತು ಅವುಗಳ ಮೇಲೆ ಸರ್ವೋಚ್ಚ ನ್ಯಾಯಾಲಯವು ನಿರೂಪಗಳನ್ನು, ದಾಖಲೆಗಳನ್ನು ಸಲ್ಲಿಸಲು ಆದೇಶಗಳನ್ನು, ವ್ಯಕ್ತಿಶಃ ಹಾಜರುಪಡಿಸಬೇಕೆಂಬ ಪ್ರಕರಣಗಳ ಬಗ್ಗೆ ನೀಡುವ ಆಜ್ಞೆಗ್ಗಳನ್ನು ನೀಡಲು ಅಗತ್ಯವಾದ ಅಧಿಕಾರಗಳು ಇರಬೇಕೆಂದು ಸೂಚಿಸಬೇಕಾದ ಮತ್ತು ಈ ಅಧೀನತೆ ಮತ್ತು ನಿಯಂತ್ರಣಗಳು ಮಹಾಪ್ರಭುಗಳ ನ್ಯಾಯಾಲಯವು ಇಂಗ್ಲೆಂಡಿನ ಅಧೀನ ನ್ಯಾಯಾಲಯಗಳ, ದಂಡಾಧಿಕಾರಿಗಳ ಮೇಲೆ ಹೊಂದಿರುವಂತಹವುಗಳೇ ಆಗಿರುತ್ತವೆ ಎಂದು ಹೇಳುವ ಆವಶ್ಯಕತೆಯಾದರೂ ಏತಕ್ಕಾಗಿ ಇರುತ್ತಿತ್ತು? ಸರ್ವೋಚ್ಚ ನ್ಯಾಯಾಲಯವು ಬಾಂಬೆ ಪ್ರಾಂತದಲ್ಲಿರುವ ಎಲ್ಲಾ ನ್ಯಾಯಾಲಯಗಳ ಮೇಲೆ ಪರಮಾಧಿಕಾರವನ್ನು ಸಾಮಾನ್ಯವಾಗಿ ಹೊಂದಿದ್ದರೆ, ಈ ಪರಿಚ್ಛೇದದಲ್ಲಿ ಕೆಲವೊಂದು ನ್ಯಾಯಾಲಯಗಳನ್ನು ಸರ್ವೋಚ್ಚ ನ್ಯಾಯಾಲಯಗಳ ಅಡಿಯಲ್ಲಿ ನಿರ್ದಿಷ್ಟವಾಗಿ ತರಲು ಇದ್ದ ಆವಶ್ಯಕತೆಯಾದರೂ ಏಕೆ ಇರುತ್ತಿತ್ತು? ತನ್ನ ಲಕ್ಷಣದಲ್ಲಿ ನ್ಯಾಯಾಲಯವು ಆಯರ್ ಮತ್ತು ಟರ್ಮೈನರ್ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನೇ ಹೊಂದಿತ್ತು

ಅಂತಿಮ ಸನ್ನದಿನ ಹಿಂದಿನ ಸನ್ನದನ್ನು ನೀಡಿದ ಮೂರನೆಯ ಜಾರ್ಜ್ ಅವರ ೩೪ನೆಯ ಅಧಿನಿಯಮದಲ್ಲಿ (ಪ್ರ. ೫೨) ಬಂಗಾಳದ ಗವರ್ನರ್ ಜನರಲ್ ಅವರಿಗೆ ಮಹಾಪ್ರಭುಗಳ ಅಧೀನ ಪ್ರದೇಶಗಳಲ್ಲಿ ನ್ಯಾಯಮೂರ್ತಿಗಳನ್ನು ನೇಮಿಸುವ ಅಧಿಕಾರವನ್ನು ನೀಡಲಾಗಿದ್ದಿತು. ಇದಕ್ಕೆ ಮತ್ತೊಂದು ಪರಿಚ್ಛೇದವನ್ನು ಸೇರಿಸಲಾಗಿದ್ದಿತು (ಪರಿಚ್ಛೇದ ೧೫೩). ಅದರಲ್ಲಿ "ಹೀಗೆ ನೇಮಕವಾದ ನ್ಯಾಯಮೂರ್ತಿಗಳು ಭಾರತದ ಯಾವುದೇ ಪ್ರಾಂತಗಳಲ್ಲಿ ನಡೆಸಿದ ಯಾವುದೇ ಪ್ರಕರಣಗಳ ವಿಚಾರಣೆಗಳನ್ನು, ನೀಡಿದ ಆಜ್ಞೆಗ್ಗಳನ್ನು, ತೀರ್ಪುಗಳನ್ನು, ಆಯಾ ಪ್ರಕರಣಗಳ ನಡಾವಳಿಯನ್ನು ಸಲ್ಲಿಸಬೇಕೆಂಬ ನಿರೂಪವನ್ನು ಆಯರ್ ಮತ್ತು ಟರ್ಮೈನರ್ ನ್ಯಾಯಾಲಯಕ್ಕೆ ನೀಡಬಹುದು ಮತ್ತು ಅವುಗಳನ್ನು ರದ್ದುಮಾಡುವ ಅಧಿಕಾರವು ಅವರಿಗೆ ಇರುತ್ತದೆ. ಈ ಕ್ರಮವನ್ನು ಈ ನ್ಯಾಯಮೂರ್ತಿಗಳ ಆಜ್ಞೆಯಿಂದ ಬಾಧಿತರಾದ ಯಾವುದೇ ಪಕ್ಷದವರು ಮನವಿಯ ಮೇಲೆ ತೆಗೆದುಕೊಳ್ಳಬಹುದು".

ಜಿಲ್ಲಾ ದಂಡಾಧಿಕಾರಿಗಳು ನೀಡಿದ ತೀರ್ಪಿನ ಬಗ್ಗೆಯೂ ಇಂತಹ ವಿಧಿಗಳನ್ನೇ ಮಾಡಲಾಗಿದೆ. ಮಹಾಪ್ರಭುಗಳ ೫೩ನೆಯ ಅಧಿನಿಯಮದ ೧೫೫ನೆಯ ಪ್ರಕರಣದ ೧೦೫ನೆಯ ಪರಿಚ್ಛೇದದ ಪ್ರಕಾರ ಆಯರ್ ಮತ್ತು ಟರ್ಮೈನರ್ ನ್ಯಾಯಾಲಯಕ್ಕೆ ಜಿಲ್ಲಾ ದಂಡಾಧಿಕಾರಿಗಳ ತೀರ್ಪನ್ನು ರದ್ದುಮಾಡುವ ಅಧಿಕಾರವನ್ನು ನೀಡಲಾಗಿದೆ. ಯಾವ ನ್ಯಾಯಾಲಯದಿಂದ ತನ್ನ ಕೆಳಗಿನ ನ್ಯಾಯಾಲಯಕ್ಕೆ ಅದರ ನಡಾವಳಿಯನ್ನು ಸಲ್ಲಿಸಬೇಕೆಂಬ ಅಧಿಕಾರವನ್ನು ಕಿತ್ತುಹಾಕಿಲ್ಲವೋ, ಅಂತಹ ನ್ಯಾಯಾಲಯಗಳು ಮಹಾಪ್ರಭುಗಳ ನ್ಯಾಯಾಲಯಕ್ಕೆ ಅನ್ವಯವಾಗುವ ಸಾಮಾನ್ಯ ಕಾನೂನುಗಳ ಅಧಿಕಾರವನ್ನು ಹೊಂದಿರುತ್ತವೆ.

ಇಂತಹ ಅಧಿಕಾರವನ್ನು ಸ್ಪಷ್ಟವಾಗಿ ರದ್ದುಮಾಡಿದ್ದರೆ ಮಾತ್ರ ಅದು ಇಲ್ಲವಾಗುತ್ತದೆ. ಆದರೆ ಇಲ್ಲಿ ಏಳುವ ಪ್ರಶ್ನೆಯೆಂದರೆ, ಸ್ಪಷ್ಟವಾಗಿ ಅದನ್ನು ರದ್ದು ಮಾಡಬೇಕಾಗಿದ್ದರೆ ಅಂತಹ ಅಧಿಕಾರವು ಮೊದಲು ಸಂಬಂಧಪಟ್ಟ ನ್ಯಾಯಾಲಯಗಳಿಗೆ ಇದ್ದಿತೇ ಎಂಬುದು. ಬಾಂಬೆಯ ಆಯರ್ ಮತ್ತು ಟರ್ಮೈನರ್ ನ್ಯಾಯಾಲಯದ ನ್ಯಾಯಮೂರ್ತಿಗಳು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳೇ ಆಗಿರುತ್ತಾರೆ. ಜಿಲ್ಲಾ ನ್ಯಾಯಾಲಯಗಳ ಮೇಲಿನ ಮೇಲ್ವಿಚಾರಣಾ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯವು ತೆಗೆದುಕೊಳ್ಳುವುದು ತಾನು ಸರ್ವೋಚ್ಚ ನ್ಯಾಯಾಲಯ ಎಂಬ ಸ್ಥಾನದ ಬಲದಿಂದ ಅಲ್ಲ, ಬದಲಿಗೆ, ಅದಕ್ಕೆ ಹಾಗೆ ಮಾಡಲು ನೀಡಿರುವ ಒಂದು ವಿಶೇಷಾಧಿಕಾರದಿಂದ. ಇದರಿಂದ ತಿಳಿಯುವುದು ಏನೆಂದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಮೂಲತಃ ನಾವೀಗ ಚರ್ಚಿಸುತ್ತಿರುವ ಅಧಿಕಾರವು ಸಹಜವಾಗಿ ಇರುವುದಿಲ್ಲ.

ಲಾರ್ಡ್ ಟೆಂಟರ್ಡನ್: "ಇತರ ನ್ಯಾಯಮೂರ್ತಿಗಳ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಪರಿಶೀಲಿಸಿ ರದ್ದುಮಾಡಬಹುದು"

"ಹಾಗೆ ಮಾಡಬಹುದು. ಎರಡೂ ನ್ಯಾಯಾಲಯಗಳ ನ್ಯಾಯಮೂರ್ತಿಗಳು ಅಭಿನ್ನವಾಗಿರುವುದರಿಂದ ಹಾಗೆ ಭಾವಿಸಬಹುದು. ಆದರೆ ಅವರು ಹಾಗೆ ಮಾಡಬಹುದಾಗಿರುವುದು ಅವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿರುವುದರಿಂದ ಅಲ್ಲ, ಆದರೆ ಆಯರ್ ಮತ್ತು ಟರ್ಮೈನರ್ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿರುವುದರಿಂದ ಪಡೆದಿರುವ ವಿಶೇಷ ಅಧಿಕಾರದಿಂದ.

ಬಾಂಬೆಗೆ ನೀಡಿರುವ ಸನ್ನದಿನಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಆಪರಾಧಿಕ ಕಾನೂನುಗಳ ಪ್ರಕರಣದಲ್ಲಿ ವಿಚಾರಣೆಯನ್ನು ನಡೆಸುವ ಅಧಿಕಾರವನ್ನು ನೀಡಿಲ್ಲ. ಏಕೆಂದರೆ ಇದೇ ಉದ್ದೇಶದಿಂದ ಅದು ಆಯರ್ ಮತ್ತು ಟರ್ಮೈನರ್ ನ್ಯಾಯಾಲಯವನ್ನು ಹಾಗೂ ಬಂದೀಖಾನೆಯ ಅಧಿಕಾರಿಗಳನ್ನು ಸೃಷ್ಟಿಮಾಡಿದೆ. ದಿವಾಣೀ ಪ್ರಕರಣಗಳಲ್ಲಿಯೂ ಅಧಿಕಾರವ್ಯಾಪ್ತಿಯನ್ನು 'ನಿರ್ದಿಷ್ಟ ವ್ಯಾಪ್ತಿಯಲ್ಲಿರುವ ವ್ಯಕ್ತಿಗಳ ಮೇಲೆ ಮಾತ್ರ' ಎಂದು ಸ್ಪಷ್ಟಪಡಿಸಿದೆ. ಮಹಾಪ್ರಭುಗಳ ನ್ಯಾಯಾಲಯಕ್ಕೆ ಇರುವ ಸವಲತ್ತು ಮತ್ತು ಅಧಿಕಾರಗಳು ಇದ್ದರೂ, ಸರ್ವೋಚ್ಚ ನ್ಯಾಯಾಲಯಕ್ಕೆ ಅನಿರ್ಬಂಧಿತವಾದ ಅಧಿಕಾರವ್ಯಾಪ್ತಿಯನ್ನು ನೀಡಲಾಗಿದೆ ಎಂದು ಭಾವಿಸಲಾಗದು. ಸರ್ವೋಚ್ಚ ನ್ಯಾಯಾಲಯವು ಕೇವಲ ದಿವಾಣೀ ನ್ಯಾಯಾಲಯವಾಗಿದೆ. ಸರ್ವೋಚ್ಚ ನ್ಯಾಯಾಲಯಕ್ಕೆ ಎಲ್ಲಾ ಅಧಿಕಾರಗಳನ್ನು ನೀಡಲಾಗಿದೆಯೆಂದು ಭಾವಿಸಿದರೂ, ಅದಕ್ಕೆ ಸಂಪೂರ್ಣ ಅಧಿಕಾರಕ್ಕಿಂತ ಸ್ವಲ್ಪ ಕಡಿಮೆ ಅಧಿಕಾರವನ್ನು ನೀಡಲಾಗಿದೆ. ಸಂಪೂರ್ಣ ಅಧಿಕಾರವನ್ನು ಈಗ ಹೊಂದಿರುವವರೂ, ಈ ವಾದದ ಪ್ರಕಾರ ಅದರಲ್ಲಿ ಸ್ವಲ್ಪ ಭಾಗವನ್ನು ಕಳೆದುಕೊಳ್ಳುತ್ತಾರೆ.

ಮೊರೊ ರಘೋನಾಥ್ ಪ್ರಕರಣದಲ್ಲಿ ಬಾಂಬೆ ಸರ್ವೋಚ್ಚ ನ್ಯಾಯಾಲಯವು ಮಾಡಿರುವ ಪ್ರಯತ್ನದ ಹಿಂದಿರುವ ಅಧಿಕಾರವನ್ನು ಆ ನ್ಯಾಯಾಲಯವು ಹೊಂದಿದೆ ಎಂದು ವಾದಿಸುವುದು ಅಸಾಧ್ಯವಾಗುತ್ತದೆ. ರಘೋನಾಥ್ ಪೂನಾದಲ್ಲಿ ವಾಸಿಸುತ್ತಿದ್ದನು. ಬಾಂಬೆ ನ್ಯಾಯಾಲಯದಲ್ಲಿ ಅವರ ಪ್ರಕರಣವನ್ನು ವಿಚಾರಿಸಲು ಉದ್ದೇಶಿಸಲಾಗಿತ್ತು. ಆತನನ್ನು ಉನ್ನತ ಸ್ಥಾನದಲ್ಲಿರುವ ಆತನ ಕುಟುಂಬದ ಹಿರಿಯ ಸದಸ್ಯರೊಬ್ಬರು ನ್ಯಾಯಯುತವಲ್ಲದ ಮಾರ್ಗದಿಂದ ಬಂಧನದಲ್ಲಿರಿಸಿದ್ದಾರೆಂಬ ಹೇಳಿಕೆಯ ಮೇಲಿನಿಂದ ಅವರಿಗೆ ರಘೋನಾಥನನ್ನು ಬಾಂಬೆ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಆಜ್ಞೆಯನ್ನು ನೀಡಲಾಗಿತ್ತು. ಮೊದಲಿಗೇ ಇಲ್ಲಿ ಎದುರಾಗುವ ಪ್ರಶ್ನೆಯೆಂದರೆ, ಈ ವ್ಯಕ್ತಿಯು ಬಾಂಬೆಯ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಹೇಗೆ ಬರುತ್ತಾನೆ? ಈ ಆಜ್ಞೆಯನ್ನು ಆತ ವಿರೋಧಿಸಿದ್ದರೆ ಮತ್ತು ಅದರಿಂದ ಘರ್ಷಣೆಯು ಸಂಭವಿಸಿದ್ದಿದ್ದರೆ, ಆತನ ವಿರುದ್ಧ ಬಂಧನದ ಆಜ್ಞೆಯನ್ನು ಹೇಗೆ ನೀಡಲು ಸಾಧ್ಯವಾಗುತ್ತಿತ್ತು? ಈತ ಸರ್ವೋಚ್ಚ ನ್ಯಾಯಾಲಯದ

ವ್ಯಾಪ್ತಿಗೆ ಬರುವಂತಹವನಾಗಿದ್ದರೆ, ಆತ ನೊಂದಾಯಿತನಾಗಿರಬೇಕಿತ್ತು. ಆದರೆ ಆತ ನೊಂದಾಯಿತನಾಗಿಲ್ಲ. ಆದ್ದರಿಂದ ಆತನ ಮೇಲೆ ಆಜ್ಞೆಯನ್ನು ನೀಡುವುದು ಸರ್ವೋಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯಲ್ಲಿ ಬರುವುದೇ ಇಲ್ಲ. ಹೀಗಿರುವಾಗ ಆತ ಸರ್ವೋಚ್ಚ ನ್ಯಾಯಾಲಯದ ಆಜ್ಞೆಯನ್ನು ಧಿಕ್ಕರಿಸಿದ್ದಾನೆ ಮತ್ತು ನ್ಯಾಯಾಲಯದ ನಿಂದನೆ ಮಾಡಿದ್ದಾನೆ ಎಂಬ ಆಪಾದನೆಗೆ ಒಳಗಾಗುವ ಪ್ರಶ್ನೆಯೇ ಇಲ್ಲ. ನ್ಯಾಯಮೂರ್ತಿಗಳು ತಮ್ಮ ಅಧಿಕಾರವ್ಯಾಪ್ತಿಯನ್ನು ಮೀರಿ ನಡೆದರೆ, ಅವರ ಆಜ್ಞೆಯನ್ನು ಅನುಸರಿಸಬೇಕಾದ ಅಗತ್ಯವಿಲ್ಲವೆಂದು ರೋಮನ್ ಚಕ್ರವರ್ತಿಯು ತನ್ನ ಪ್ರಜೆಗಳಿಗೆ ತಿಳಿಸುತ್ತಾನೆ (ಪ್ಯಾಂಡ್. ಲಿಬ್.೨ ಟಿಟ್ ೧, ಪರಿಚ್ಛೇದ ೨೦ 'ಅಧಿಕಾರ ವ್ಯಾಪ್ತಿಯನ್ನು ಮೀರಿದ ನ್ಯಾಯಾಲಯದ ಅಧಿಕಾರ, ನ್ಯಾಯಾಲಯದ ಅಧಿಕಾರವೇ ಅಲ್ಲ').

ಬಾಪೂ ಗುಣೆಸ್ ಅವರ ಪ್ರಕರಣದಲ್ಲಿ ಸ್ಥಳೀಯ ಬಂದೀಖಾನೆಯ ಅಧಿಕಾರಿಯ ಮೇಲೆ 'ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸಬೇಕು' ಎಂಬ ಆಜ್ಞೆಯನ್ನು ನೀಡಲಾಗಿತ್ತು. ಇಂತಹ ಆಜ್ಞೆಯನ್ನು ನೀಡಲು ಅಧಿಕಾರವನ್ನು ಸದರಿ ನ್ಯಾಯಾಯಲಕ್ಕೆ ನೀಡಿದರೆ, ಆಜ್ಞಾಪಿಸಲ್ಪಟ್ಟ ಇತರ ನ್ಯಾಯಾಲಯ ಪ್ರತಿ ಅಧಿಕಾರಿಯು, ಬಂಧನದಲ್ಲಿರಿಸಿದ್ದ ವ್ಯಕ್ತಿಯನ್ನು ನ್ಯಾಯಾಲಯ ಮುಂದೆ ಹಾಜರುಪಡಿಸಬೇಕು, ಅಥವಾ ಬಂಧನದ ಕಾರಣಗಳನ್ನು, ಯಾರು ಬಂಧಿಸಿದರು, ಮುಂತಾದ ವಿವರಗಳನ್ನು ನ್ಯಾಯಾಲಯಕ್ಕೆ ನೀಡಬೇಕು. ಆಕ್ಷೇಪಣೆಯು ಬಾರದ ರೀತಿಯಲ್ಲಿ ಆತ ಹೇಗೆ ತಾನೆ ಇದನ್ನೆಲ್ಲಾ ಕರಾರುವಾಕ್ಕಾಗಿ ನೀಡಲು ಸಾಧ್ಯ? ದೆಹಲಿ ಅಥವಾ ಪೂನಾದ ಮೇಲೆ ನೀಡುವ ಇಂತಹ ಆಜ್ಞೆಗಳು ಕಾನೂನಿನ ದೃಷ್ಟಿಯಿಂದ ಅಸಂಪೂರ್ಣವೆನಿಸದೆ ಇರದು. ಕಾನೂನುಗಳನ್ನು ರಚಿಸಿದವರು ಇಂತಹ ಕೊರತೆಗಳನ್ನು ಗಮನಿಸದೆ ಇರಲಾರರು. ಮತ್ತು, ಇದರಿಂದ, ಅಧಿಕಾರದ ಇಂತಹ ಅತಿವ್ಯಾಪ್ತಿಯನ್ನು ಅವರು ಎಂದೂ ಕಲ್ಪಿಸಿಕೊಂಡಿರಲೂ ಸಾಧ್ಯವಿಲ್ಲ.

ಸ್ಥಳೀಯ ನ್ಯಾಯಾಲಯಗಳನ್ನು ಸ್ಥಾಪಿಸಲು ಮತ್ತು ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವನ್ನು ಹಲವಾರು ಅಧಿನಿಯಮಗಳಲ್ಲಿ ಕಲ್ಪಿಸಲಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಸನ್ನಿಧಾನದ ಗಮನಕ್ಕೆ ತರುವುದು ಅತ್ಯಂತ ಮುಖ್ಯವಾದುದು. ಸ್ಥಳೀಯರು ಒಳಪಡುವ ಗವರ್ನರ್ ಜನರಲ್ ಅವರ ನಿಯಮ ನಿಬಂಧನೆಗಳನ್ನು ಎಲ್ಲಾ ಸ್ಥಳೀಯ ಭಾಷೆಗಳಲ್ಲಿ ಒಂದು ಸಂಹಿತೆಯ ರೂಪದಲ್ಲಿ ಪ್ರಕಟಿಸಬೇಕು, ಇದರಿಂದ ಸ್ಥಳೀಯರಿಗೆ ಕಾನೂನು ಮತ್ತು ನಿಯಮಗಳ ಬಗ್ಗೆ ಅರಿವು ಮೂಡುತ್ತದೆ ಎಂದು ೩ನೆಯ ಜಾರ್ಜ್ ಅವರ ೩೭ನೆಯ ಅಧಿನಿಯಮದ (ಕ್ಯಾಪ್ ೧೪೨) ೮ನೆಯ ಪರಿಚ್ಛೇದವು ಸೂಚಿಸುತ್ತದೆ. ಇದನ್ನು ಮೊದಲಿಗೆ ದಿವಂಗತ ಮಾರ್ಕಿಸ್ ಕಾರ್ನ್‌ವಾಲಿಸ್ ಅವರು ಜಾರಿಗೆ ತಂದು ಇದು ಅತ್ಯಂತ ಲಾಭಕರವೆಂಬುದನ್ನು ಕಂಡುಕೊಂಡರು. ಹಾಗಾಗಿ, ಹೀಗೆ ಮಾಡುವುದನ್ನು ದೇಶದ ಕಾನೂನುಬದ್ಧ ಕರ್ತವ್ಯವನ್ನಾಗಿ ಶಾಸಕಾಂಗವು ಅಂಗೀಕರಿಸಿತು.

ಎಲ್ಲೆಡೆ ಸ್ಥಳೀಯ ನ್ಯಾಯಾಲಯಗಳನ್ನು ಸ್ಥಾಪಿಸಿ, ದಿವಾಣಿ ಹಾಗೂ ಆಪರಾಧಿಕ ಪ್ರಕರಣಗಳಲ್ಲಿಯೂ, ಒಂದು ನ್ಯಾಯಾಲಯದ ತೀರ್ಪಿನ ವಿರುದ್ಧ ಆ ನ್ಯಾಯಾಲಯದ ಮೇಲಿನ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಭಾರತದಲ್ಲಿ ಸುದ್ದೂರು ದಿವಾಣಿ ಅದಾಲತ್, ದಿವಾಣೀ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವಾಗಿದ್ದರೆ, ಸುದ್ದೂರು ನಿಝಾಮತ್ ಅದಾಲತ್ ಆಪರಾಧಿಕ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವಾಗಿದೆ. ಮೂರನೆಯ ಜಾರ್ಜ್ ಅವರ ೫೩ನೆಯ (ಸಿ.೧೫೫) ಅಧಿನಿಯಮವು ಈ ಎರಡೂ ನ್ಯಾಯಾಲಯಗಳನ್ನು ಮಾನ್ಯಮಾಡುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧವೂ, ಸದರಿ ಪ್ರಕರಣವು ೫೦೦೦ ಪೌಂಡ್‌ಗಳಿಗಿಂತ ಹೆಚ್ಚಿನ ಮೌಲ್ಯದ ಪ್ರಕರಣವಾಗಿದ್ದರೆ, ಮಹಾಪ್ರಭುಗಳಿಗೂ

ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವಿದೆ. ಬಾಂಬೆಯಲ್ಲಿ ನ್ಯಾಯಾಲಯಗಳಿಗೆ ಸಂಬಂಧಿಸಿದ ಎಲ್ಲಾ ನಿಯಮ, ನಿಬಂಧನೆಗಳನ್ನೂ ಬಹಳ ಶ್ರಮದಿಂದ ಮತ್ತು ಎಚ್ಚರಿಕೆಯಿಂದ ಸಂಕಲಿಸಿ ಇತ್ತೀಚೆಗೆ ಪುನರ್ವಿಮರ್ಶಿಸಿ ಅದಕ್ಕೆ ಸಂಹಿತೆಯ ರೂಪವನ್ನು ಕೊಡಲಾಗಿದೆ. ಇದನ್ನು ೧೮೨೭ರಲ್ಲಿ ಪ್ರಕಟಿಸಲಾಯಿತು. ಮಹಾಪ್ರಭುಗಳು, ಇತರ ಯಾವುದೇ ಪ್ರಾಂತದಲ್ಲಿರುವಂತೆ ಬಾಂಬೆ ಪ್ರಾಂತದಲ್ಲಿಯೂ ಸ್ಥಳೀಯ ನ್ಯಾಯಾಲಯಗಳಿಂದಾಗಲೀ, ದಂಡಾಧಿಕಾರಿಗಳಿಂದಾಗಲೀ, ಸ್ಥಳೀಯ ಪ್ರಜೆಗಳಿಗೆ ತೊಂದರೆಯಾಗದಂತೆ ಇದರಲ್ಲಿ ರಕ್ಷಣೆಯನ್ನು ನೀಡಿರುವುದು, ಹಾಗೆ ತೊಂದರೆಯಾದ ಸಂದರ್ಭದಲ್ಲಿ ಪರಿಹಾರ ಮಾರ್ಗಗಳನ್ನು ಸೂಚಿಸಿರುವುದು ಕಂಡುಬರುತ್ತದೆ. ಕಾನೂನಿಗೆ ವಿರುದ್ಧವಾದ ರೀತಿಯಲ್ಲಿ ಯಾವುದಾದರೂ ವ್ಯಕ್ತಿಯ ಬಂಧನವಾಗಿದ್ದರೆ, ದಂಡಾಧಿಕಾರಿಗಳು ತಾವು ತೆಗೆದುಕೊಂಡ ಪ್ರಮಾಣವಚನದ ಪ್ರಕಾರ ಕಾನೂನಿನ ಎಲ್ಲಾ ನಿಯಮಗಳನ್ನೂ ಚಾಚು ತಪ್ಪದೆ ಅನುಸರಿಸಬೇಕಾಗುತ್ತದೆ. ಅವರು ಈ ವಿಷಯದಲ್ಲಿ ಕಾನೂನಿನ ವಿರುದ್ಧವಾಗಿ ನಡೆದುಕೊಂಡರೆ, ಅವರ ವಿರುದ್ಧ ಕ್ರಮತೆಗೆದುಕೊಳ್ಳಲು ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಲು ಕಾನೂನಿನಲ್ಲಿ ಅವಕಾಶವಿದೆ. ೧೨ನೆಯ ನಿಬಂಧನೆಯ ಪ್ರಕಾರ, ಹಿರಿಯ ದಂಡಾಧಿಕಾರಿಯು ತನ್ನ ಅಧೀನದಲ್ಲಿರುವ ಎಲ್ಲಾ ಅಧಿಕಾರಗಳ ಮೇಲ್ವಿಚಾರಣೆಯನ್ನು ಮಾಡಲು ಅನುಸರಿಸಬೇಕಾದ ರೀತಿಯನ್ನು, ಹಾಗೂ ೧೩ನೆಯ ನಿಬಂಧನೆಯು, ಬಂದೀಖಾನೆಗಳಲ್ಲಿ ಯಾರನ್ನಾದರೂ ಕಾನೂನುಬಾಹಿರವಾಗಿ ಬಂಧಿಸಲಾಗಿದೆಯೇ ಎಂಬುದನ್ನು ವಿಚಾರಿಸುವ ಉದ್ದೇಶದಿಂದ ನ್ಯಾಯಾಧೀಶರು ಎಲ್ಲಾ ಬಂದೀಖಾನೆಗಳನ್ನು ಸಂದರ್ಶಿಸಬೇಕು ಎಂದೂ ಸೂಚಿಸಲಾಗಿದೆ. ಅವರು ದಿವಾಣೀ ಹಾಗೂ ಅಪರಾಧಿಕ ಪ್ರಕರಣಗಳಲ್ಲಿ ವ್ಯಕ್ತಿಗಳನ್ನು ಬಂಧಿಸಿ ಇಟ್ಟಿರುವ ಎಲ್ಲಾ ಬಂದೀಖಾನೆಯಗಳನ್ನು ಸಂದರ್ಶಿಸಿ, ಆ ಪ್ರಕರಣಗಳ ತೀರ್ಪಿನಲ್ಲಿ ತಪ್ಪುಗಳೇನಾದರೂ ನುಸುಳಿವೆಯೇ ಎಂಬುದನ್ನು ಪರಿಶೀಲಿಸಿ, ತಪ್ಪುಗಳನೇದರೂ ಕಂಡುಬಂದಲ್ಲಿ, ಆ ಪ್ರಕರಣಗಳನ್ನು ಪುನರ್ಪರಿಶೀಲಿಸಲು ಸುದ್ದೂರು ಫೌಜುದಾರೀ ಅದಾಲತ್ತಿಗೆ ಕಳುಹಿಸಬೇಕು.

ಸ್ಥಳೀಯ ನ್ಯಾಯಾಲದ ಅಧಿಕಾರಿಯಾಗಿರುವುದರಿಂದ ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿರುವ ಯಾವುದೇ ವ್ಯಕ್ತಿಯು, ವೈಯಕ್ತಿಕವಾಗಿ ಸರ್ವೋಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಡಬೇಕಾಗಿಲ್ಲ ಎಂದು ಹೇಳುವುದು ನಮ್ಮ ಉದ್ದೇಶವಲ್ಲ. ಆದರೆ, ಸ್ಥಳೀಯ ನ್ಯಾಯಾಲಯದ ಆದೇಶದ ಮೇಲೆ ಯಾರನ್ನಾದರೂ ಆತ ಬಂಧನದಲ್ಲಿಟ್ಟಿದ್ದರೆ, ಅಂತಹ ಅಧಿಕಾರಿಯ ಮೇಲಾಗಲೀ, ಅಥವಾ ಬಂಧನದ ಆಜ್ಞೆಯನ್ನು ನೀಡಿದ ನ್ಯಾಯಾಧೀಶರ ಮೇಲಾಗಲೀ ಯಾವುದೇ ಕ್ರಮವನ್ನೂ ತೆಗೆದುಕೊಳ್ಳುವ ಹಾಗಿಲ್ಲ. ಭ್ರಷ್ಟಾಚಾರದ ಪ್ರಕರಣಗಳಲ್ಲಿ ಮಾತ್ರ ಬಂದೀಖಾನೆಯ ಅಧಿಕಾರಿಯ ಮೇಲೆ ಕ್ರಮವನ್ನು ತೆಗೆದುಕೊಳ್ಳಬಹುದು. ಸ್ಥಳೀಯ ನ್ಯಾಯಾಲಯದ ಆದೇಶದ ಮೇಲೆ ವ್ಯಕ್ತಿಯೊಬ್ಬನನ್ನು ಬಂಧನದಲ್ಲಿಟ್ಟಿದ್ದರೆ, ಅಂತಹ ಪ್ರಕರಣಗಳಲ್ಲಿ, ಆ ವ್ಯಕ್ತಿಯನ್ನು ಹಾಜರುಪಡಿಸುವಂತೆ ಸರ್ವೋಚ್ಚ ನ್ಯಾಯಾಲಯವು ಆದೇಶವನ್ನು ನೀಡುವಂತಿಲ್ಲ ಮತ್ತು ಆ ಪ್ರಕರಣವನ್ನು ಪರಿಶೀಲಿಸುವಂತೆಯೂ ಇಲ್ಲ. ಮಹಾಪ್ರಭುಗಳ ನ್ಯಾಯಾಲಯವು ತನ್ನ ಅಧೀನದಲ್ಲಿರುವ ಎಲ್ಲಾ ನ್ಯಾಯಾಲಯಗಳ ಮೇಲೂ ಮೇಲ್ವಿಚಾರಣೆಯನ್ನು ನಡೆಸುವ ಅಧಿಕಾರವನ್ನು ಹೊಂದಿರುವಂತೆ ಈ ನ್ಯಾಯಾಲಯವು ಸ್ಥಳೀಯ ನ್ಯಾಯಾಲಯಗಳ ಮೇಲೆ ಅಂತಹ ಮೇಲ್ವಿಚಾರಣಾ ಅಧಿಕಾರವನ್ನು ಹೊಂದಿಲ್ಲ ಎಂದು ಲಾರ್ಡ್ ಕೋಕ್ ಅವರು ನಾಲ್ಕನೆಯ 'ಇನ್‌ಸ್ಟಿಟ್ಯೂಟ್'ನಲ್ಲಿ ತಿಳಿಸುತ್ತಾರೆ. ಸರ್ವೋಚ್ಚ ನ್ಯಾಯಾಲಯಕ್ಕೆ ಈ ಅಧಿಕಾರವನ್ನು ನೀಡಿಲ್ಲವಾದ್ದರಿಂದ, ಪ್ರಸಕ್ತ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ವ್ಯಕ್ತಿಗಳನ್ನು ಹಾಜರುಪಡಿಸಲು ನೀಡಿರುವ ಆಜ್ಞೆಯು ಕಾನೂನುಗಳಿಗೆ ವಿರುದ್ಧವಾಗಿದೆ.

ಇದಕ್ಕೆ ಉತ್ತರಿಸುತ್ತಾ ಡೆನ್‌ಮನ್ ಅವರು ಹೇಳಿದರು: – "ಬಾಂಬೆಯ ಸರ್ವೋಚ್ಚ ನ್ಯಾಯಾಲಯವನ್ನು ಆಯರ್ ಮತ್ತು ಟರ್ಮೈನರ್ ನ್ಯಾಯಾಲಯವನ್ನಾಗಿ ಮಾಡಲಾಗಿದೆ ಮತ್ತು ಮಹಾಪ್ರಭುಗಳ ನ್ಯಾಯಾಲಯಕ್ಕೆ ಇರುವ ಅಧಿಕಾರವ್ಯಾಪ್ತಿಯನ್ನೇ ಈ ನ್ಯಾಯಾಲಯಕ್ಕೆ ನೀಡಲಾಗಿದೆ. ಆದ್ದರಿಂದ ಈ ಪ್ರಕರಣವು ಬಾಂಬೆ ನ್ಯಾಯಾಲಯದ ಅಧಿಕಾರವ್ಯಾಪ್ತಿಯ ಒಳಗೇ ಬರುತ್ತದೆ."

ನಿರೂಪಗಳನ್ನು ನೀಡಲು, ಕೆಳ ನ್ಯಾಯಾಲಯಗಳ ಪ್ರಕರಣಗಳ ದಾಖಲೆಗಳನ್ನು ಹಾಜರುಪಡಿಸಬೇಕೆಂದು ಆಜ್ಞೆಗಳನ್ನು ನೀಡಲು, ನ್ಯಾಯನಿಂದನೆಗಳ, ಉದ್ದೇಶಪೂರಿತ ಅವಿಧೇಯತೆಯ ಪ್ರಕರಣಗಳಲ್ಲಿ, ದಂಡದ ಅಥವಾ ಬಂಧನದ ಶಿಕ್ಷೆಯನ್ನು ನೀಡಲು ಸರ್ವೋಚ್ಚ ನ್ಯಾಯಾಲಯಕ್ಕೆ ಕೋರ್ಟ್ ಆಫ್ ರಿಕ್ವೆಸ್ಟ್ಸ್ ಮತ್ತು ಕೋರ್ಟ್ ಆಫ್ ಸೆಷನ್ಸ್‌ಗಳ ಮೇಲೆ ಅಧಿಕಾರವನ್ನು ಸ್ಪಷ್ಟವಾಗಿ ಹೊಂದಿದೆ. ಸಾಮಾನ್ಯ ಸನ್ನದಿನ ಮೂಲಕ ಈಗಾಗಲೇ ಈ ಅಧಿಕಾರವನ್ನು ನೀಡಿದ್ದಿದ್ದರೆ, ಈ ಸನ್ನದಿನಲ್ಲಿ ಅದನ್ನು ಮತ್ತೆ ನೀಡಬೇಕಾದ ಆವಶ್ಯಕತೆಯೇನಿತ್ತು ಎನ್ನುವ ಪ್ರಶ್ನೆಯು ಏಳಬಹುದು. ಹಿಂದಿನ ಇಂಗ್ಲಿಷ್ ಸಂಸತ್ತಿನ ಎಲ್ಲಾ ಕಾನೂನುಗಳ ಪಟ್ಟಿಯಲ್ಲಿ, ಅನಾವಶ್ಯಕ ಅಧಿಕಾರವನ್ನು ಈ ಮೂಲಕ ಸೃಷ್ಟಿಸಿದ್ದಾರೆ ಎಂದು ಇದರ ಬಗ್ಗೆ ಹೇಳಬಹುದೇ ಅಥವಾ, ಹಿಂದೆ ಇದ್ದ ಅಧಿಕಾರವನ್ನೆಲ್ಲಾ ಇದು ಅಳಿಸಿ ಹೊಸದಾಗಿ ಬರೆದಿದೆ ಎನ್ನಬಹುದೇ ಅಥವಾ, ಇದರಲ್ಲಿ ಹಿಂದಿನ ಕಾನೂನುಗಳಲ್ಲಿ ಹೇಳಿದುದನ್ನೇ ಪುನರುಕ್ತಮಾಡಲಾಗಿದೆ ಎನ್ನಬಹುದೇ? ಈ ವಾದವನ್ನು ಅಲ್ಲಿಯವರೆಗೂ ಲಂಬಿಸದೇ ಇದ್ದರೆ, ಇದೊಂದು ನಿರರ್ಥಕ ವಾದವಾಗುತ್ತದೆ. ಆದರೆ, ಇದನ್ನು ಅಲ್ಲಿಯವರೆಗೂ ಲಂಬಿಸುವುದೂ ಸಾಧ್ಯವಿಲ್ಲವೆಂಬುದು ನ್ಯಾಯಾಲಯದ ಎಲ್ಲಾ ಅಧಿವೇಶನದಲ್ಲಿಯೂ ಸಾಬೀತಾಗಿದೆ.

ನಾವು ವಿವೇಚಿಸುತ್ತಿರುವ ಈ ಪರಿಚ್ಛೇದವು ಏನನ್ನಾದರೂ ನಿಶ್ಚಿತವಾಗಿ ತೋರಿಸುತ್ತದೆಯೆಂದರೆ, ಅದು ನಿಜಕ್ಕೂ ಅತಿಯಾದುದನ್ನು ಅತಿಯಾಗಿಯೇ ತೋರಿಸುತ್ತದೆ. ಇದರ ಪ್ರಕಾರ ಸರ್ವೋಚ್ಚನ್ಯಾಯಾಲಯವು ನೀಡಬಹುದಾದ ಆಜ್ಞೆಗಳೆಂದರೆ, ಮೇಲೆ ಹೇಳಿದ ನಿರೂಪಗಳು, ಕೆಳ ನ್ಯಾಯಾಲಯಗಳ ಪ್ರಕರಣಗಳ ದಾಖಲೆಗಳನ್ನು ಹಾಜರುಪಡಿಸಬೇಕೆಂದು ಆಜ್ಞೆಗಳು, ನ್ಯಾಯನಿಂದನೆಗಳ, ಉದ್ದೇಶಪೂರಿತ ಅವಿಧೇಯತೆಯ ಪ್ರಕರಣಗಳಲ್ಲಿ ನೀಡಬಹುದಾದ ಶಿಕ್ಷೆ. ಈ ಸನ್ನದಿನಲ್ಲಿ ವ್ಯಕ್ತಿಗಳನ್ನು ವ್ಯಕ್ತಿಶಃ ಹಾಜರು ಪಡಿಸಬೇಕೆಂಬ ಆಜ್ಞೆಯನ್ನು ನೀಡಬಹುದೆಂದು ಎಲ್ಲಿಯೂ ಹೇಳಿಲ್ಲ. ನ್ಯಾಯಾಧೀಶರೊಬ್ಬರು ಒಬ್ಬನನ್ನು ಅಪರಾಧಿಯೆಂದು ನಿರ್ಣಯಿಸಿ ಶಿಕ್ಷೆಯನ್ನು ನೀಡಿರುವಾಗ, ಸರ್ವೋಚ್ಚ ನ್ಯಾಯಾಲಯದ ಸದರಿ ಆಜ್ಞೆಯೇ ನಿರರ್ಥಕವಾಗಿರುವಾಗ, ಕೆಳ ನ್ಯಾಯಾಲಯದ ಆ ತೀರ್ಪನ್ನು ರದ್ದುಮಾಡಬೇಕಾದ ಅಗತ್ಯವೇನು?

ಬಂಗಾಳದ ಫೋರ್ಟ್ ವಿಲಿಯಮ್‌ನಲ್ಲಿರುವ ಕಲ್ಕತ್ತದ ಸರ್ವೋಚ್ಚ ನ್ಯಾಯಾಲಯವು ವ್ಯಕ್ತಿಯನ್ನು ವ್ಯಕ್ತಿಶಃ ಹಾಜರುಪಡಿಸಲು ಆಜ್ಞೆಯನ್ನು ನೀಡಬಹುದು ಎಂಬುದು ಒಪ್ಪಿತವಾಗಿರುವ ವಿಷಯ. ಹಾಗೆಯೇ, ಬಾಂಬೆ ಪ್ರಾಂತದ ಎಲ್ಲೆಯೊಳಗೆ, ಈಗಿನ ಮಹಾಪ್ರಭುಗಳ ನಾಲ್ಕನೆಯ ಅಧಿನಿಯಮದ ಪ್ರಕಾರ, ಇಂತಹುದೇ ಅಧಿಕಾರವನ್ನು ಬಾಂಬೆಯ ಸರ್ವೋಚ್ಚ ನ್ಯಾಯಾಲಯವೂ ಹೊಂದಿದೆ.

೧೦ನೆಯ ಪರಿಚ್ಛೇದದ ಪ್ರಕಾರ, ಬಂಗಾಳದ ಫೋರ್ಟ್ ವಿಲಿಯಮ್‌ನ ಮಿತಿಯಲ್ಲಿ ಅಲ್ಲಿನ ಸರಕಾರದ ಅಧೀನದಲ್ಲಿರುವ ಪ್ರದೇಶಗಳ ಮೇಲೆ ಕಲ್ಕತ್ತ ಸರ್ವೋಚ್ಚ ನ್ಯಾಯಾಲಯಕ್ಕೆ ಇರುವ ಅಧಿಕಾರದ ಮಾದರಿಯಲ್ಲಿಯೇ, ಈ ನ್ಯಾಯಾಲಯವು, ಬಾಂಬೆ ನಗರ ಮತ್ತು ದ್ವೀಪದಲ್ಲಿ ಎಲ್ಲರ ಮೇಲೆಯೂ ಅಧಿಕಾರವನ್ನುಳ್ಳ, ಇಲ್ಲಿನ ವ್ಯಾಪಾರ ಕೋಠಿಗಳ ಮೇಲೆ, ಈ ಕೋಠಿಗಳ ಅಧೀನದಲ್ಲಿ ಸದ್ಯದಲ್ಲಿ ಇರುವ ಹಾಗೂ ಇನ್ನು ಮುಂದೆ ಅವುಗಳ ಅಧೀನಕ್ಕೆ ಒಳಪಡುವ ಪ್ರದೇಶಗಳ ಮೇಲೆ ಅಧಿಕಾರವ್ಯಾಪ್ತಿಯನ್ನು

ಹೊಂದಿದೆ. (ಮಾರ್ಲೆಯವರ ಡೈಜೆಸ್ಟ್ ೨, ಪುಟ ೬೪೫).

ಮಹಾಪ್ರಭುಗಳ ನ್ಯಾಯಾಲಯ ನ್ಯಾಯಾಧೀಶರು ಇಂಗ್ಲೆಂಡ್ ಎಂದು ಕರೆಯಲ್ಪಡುವ ಗ್ರೇಟ್ ಬ್ರಿಟನ್ನಿನ ವ್ಯಾಪ್ತಿಯಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಹೊಂದಿರುವಂತಹ ಎಲ್ಲಾ ಅಧಿಕಾರಗಳನ್ನೂ, ಅಧಿಕಾರವ್ಯಾಪ್ತಿಯನ್ನೂ ಹೊಂದಿರುವ ಈ ನ್ಯಾಯಾಲಯವನ್ನು ಈ ಮೂಲಕ ಸ್ಥಾಪಿಸಲಾಗಿದೆ (ಪರಿಚ್ಛೇದ ೧೦). ಅಂದರೆ, ಮಹಾಪ್ರಭುಗಳ ನ್ಯಾಯಾಲಯವು ಹೊಂದಿರುವ ಎಲ್ಲಾ ಅಧಿಕಾರಗಳನ್ನೂ ಈ ನ್ಯಾಯಾಲಯವೂ ಈ ದೇಶದಲ್ಲಿ ಹೊಂದಿದೆ. ಹಾಗಿರುವಾಗ ಯಾವುದಾದರೂ ಆಜ್ಞೆಯನ್ನು ನೀಡಲು ಇರುವ ಅಧಿಕಾರದಲ್ಲಿ ಯಾವ ಕೊರತೆಯಿದೆ? ಕೆಲವು ಪ್ರಕರಣಗಳಲ್ಲಿ ಇದು ಕಾರ್ಯಗತವಾಗಿರುವುದನ್ನು ನಾವು ಕಾಣಬಹುದಾದರೂ, ಇದು, ಅಪರಾಧಿಕ ಪ್ರಕರಣಗಳಲ್ಲಿ, ವ್ಯಕ್ತಿಗಳನ್ನು ಹಾಜರು ಪಡಿಸುವ ಆಜ್ಞೆಗಳ ವಿಷಯದಲ್ಲಿ ಮತ್ತಿತರ ಹೆಚ್ಚಿನ ಸವಲತ್ತುಗಳನ್ನು ಹೊಂದಿರುವ ಪ್ರಕರಣಗಳಲ್ಲಿ ಇದರ ಪ್ರಭಾವವನ್ನು ಕಾಣಲಾರೆವು.

ನಮ್ಮ ಪ್ರಶ್ನೆಗೆ ಸರ್ ಥಾಮಸ್ ಸ್ಟ್ರೇಂಜ್ ಅವರ ತೀರ್ಪು (ನಾಗಪ್ಪಯ್ಯ ಚೆಟ್ಟಿ ಮತ್ತು ರಾಚಮ್ಮ ಅವರ ಪ್ರಕರಣದಲ್ಲಿ) ಯಾವ ರೀತಿಯಲ್ಲಿಯೂ ಸಂಬಂಧಿಸಿಲ್ಲ. ಮದರಾಸಿನ ನ್ಯಾಯಾಲಯದ ವ್ಯಾಪ್ತಿಯಲ್ಲಿ ಇಲ್ಲದ ವ್ಯಕ್ತಿಯೊಬ್ಬನನ್ನು ಕಾನೂನಿಗೆ ಸಮ್ಮತವಲ್ಲದ ರೀತಿಯಲ್ಲಿ ಮೋಸದಿಂದ ಮದರಾಸಿನ ನ್ಯಾಯಾಲಯದ ವ್ಯಾಪ್ತಿಯ ಒಳಕ್ಕೆ ತರಲಾಗಿತ್ತು.

ಅಲ್ಲಿನ ಮುಖ್ಯ ನ್ಯಾಯಾಧೀಶರು ಹೀಗೆ ತೀರ್ಮಾನಿಸುತ್ತಾರೆ (೧ ಸ್ಟ್ರೇಂಜ್ ಅವರ ಮದರಾಸು ಪ್ರಕರಣಗಳು – ಪುಟ ೧೩೫) "ಮದರಾಸು ಸರಕಾರದ ಮುಂದೆ ಸ್ಥಳೀಯನೊಬ್ಬನನ್ನು, ಅವನ ಇಚ್ಛೆಗೆ ವಿರುದ್ಧವಾಗಿ ತರಲಾಯಿತು. ಅವನನ್ನು ಇಲ್ಲಿಗೆ ಕರೆತರುವ ವಿಷಯದಲ್ಲಿ ಭಾಗಿಯಾಗಿಲ್ಲದ ಮೂರನೆಯ ವ್ಯಕ್ತಿಯೊಬ್ಬ ಆತ ಮದರಾಸು ಪ್ರಾಂತದ ಒಳಗೆ ಇರುವ ಈ ಸಂದರ್ಭದ ಉಪಯೋಗವನ್ನು ಪಡೆಯಲು ಪ್ರಯತ್ನಿಸಿದ. ಇಂತಹ ವರ್ತನೆಯನ್ನು ಒಪ್ಪಲು ಸಾಧ್ಯವಿಲ್ಲ. ಅದೂ ಮನವಿದಾರನು ತನ್ನ ಪ್ರಕರಣವನ್ನು ಬಲಗೊಳಿಸುವುದಕ್ಕಾಗಿ ಆ ವ್ಯಕ್ತಿಯನ್ನು ಕರೆತಂದಿರುವುದರಿಂದ ಇದು ಸರ್ವಥಾ ಸಾಧ್ಯವಿಲ್ಲ. ಇದು ಯಾವ ವ್ಯಕ್ತಿಯೂ ತನ್ನ ತಪ್ಪಿನ ಲಾಭವನ್ನು ಪಡೆದುಕೊಳ್ಳಕೂಡದು ಎಂಬ ಸೂತ್ರಕ್ಕೆ ವಿರೋಧವಾಗಿರುತ್ತದೆ."

ನಮ್ಮ ಗಮನಕ್ಕೆ ತಂದಿರುವ ಈ ಒಂದೇ ಒಂದು ಪ್ರಕರಣದ ಪರಿಣಾಮವು ಹೀಗಿದೆ: ಇಬ್ಬರು ವ್ಯಕ್ತಿಗಳ ನಡುವಿನ ದಿವಾಣೀ ಪ್ರಕರಣದಲ್ಲಿ, ಪ್ರತಿವಾದಿಯು ನ್ಯಾಯಾಲಯದ ವ್ಯಾಪ್ತಿಯ ಹೊರಗೆ ಇರುವುದು ಸ್ಪಷ್ಟವಾಗಿದ್ದರೂ, ಮನವಿದಾರನು ನ್ಯಾಯಯುತವಲ್ಲದ ಮಾರ್ಗದಿಂದ ಆತನನ್ನು ವ್ಯಾಪ್ತಿಯ ಪ್ರದೇಶದ ಒಳಕ್ಕೆ ಕರೆತರದೆ ಇದ್ದರೆ, ತಪ್ಪುಮಾಡಿದ ವ್ಯಕ್ತಿಗೆ ಪರಿಸ್ಥಿತಿಯ ಲಾಭವು ಸಿಗಬಾರದು.

ವಿಧ್ಯುಕ್ತವಾದ ಆಜ್ಞೆಗಳನ್ನು ನೀಡಲು ಯಾವ ವಿಧಿಯೂ ಅವಕಾಶವನ್ನು ಸ್ಪಷ್ಟವಾಗಿ ನೀಡಿಲ್ಲವೆಂಬುದನ್ನು ಸರಿಯಾಗಿಯೇ ತಿಳಿಸಲಾಗಿದೆ. ಆದರೆ, ಇಂತಹ ಆಜ್ಞೆಯನ್ನು ನೀಡುವ ಅಧಿಕಾರವು ಉಪಯೋಗಿಸಲ್ಪಡುತ್ತಿರುವುದರಿಂದ ಅದು ನಿರ್ವಿವಾದವಾಗಿ ಅಸ್ತಿತ್ವದಲ್ಲಿದೆ. ಮಹಾಪ್ರಭುಗಳ ನ್ಯಾಯಾಲಯದ ಕರ್ತವ್ಯಗಳನ್ನು ಈ ನ್ಯಾಯಾಲಯಕ್ಕೆ ನೀಡಿ ಈ ನ್ಯಾಯಾಲಯವನ್ನು ಸ್ಥಾಪಿಸಿರುವುದರಿಂದ, ಈ ಅಧಿಕಾರದ ಅಸ್ತಿತ್ವಕ್ಕೆ ನಾವು ಬೇರೆ ಯಾವ ಆಧಾರವನ್ನೂ ಹುಡುಕಬೇಕಾದ ಆವಶ್ಯಕತೆಯಿಲ್ಲ. ಮತ್ತೊಂದು ಆಧಾರವೆಂದರೆ, ಈ ನ್ಯಾಯಾಲಯವನ್ನು ಸ್ಥಾಪಿಸಲು ನೀಡಿರುವ ಅಧಿನಿಯಮವು ಕೇವಲ ಶಬ್ದಗಳ ಕಸರತ್ತಲ್ಲ, ಬದಲಿಗೆ ಅದು ನ್ಯಾಯಾಲಯಕ್ಕೆ ಸರ್ವಶಕ್ತಿಯನ್ನೂ ತುಂಬುತ್ತದೆ. ಮೂರನೆಯ ಜಾರ್ಜ್ ಅವರ ೨೧ನೆಯ ಅಧಿನಿಯಮವು (ಅಧಿಕಾರವ್ಯಾಪ್ತಿಯಲ್ಲಿ) ಕೆಲವೊಂದು ವ್ಯತ್ಯಾಸಗಳನ್ನು ಮಾಡಿದೆಯಾದರೂ ಅದು ಸುಲಭವಾಗಿ

ಗ್ರಾಹ್ಯವಾಗುವುದಿಲ್ಲ. ಮೂರನೆಯ ಜಾರ್ಜ್ ಅವರ ೧೩ನೆಯ ಅಧಿನಿಯಮದ ಪ್ರಕಾರ ನೀಡಲಾಗಿರುವ ಅಧಿಕಾರ ವ್ಯಾಪ್ತಿಯ ವೈಶಾಲ್ಯವನ್ನು ಮಿತಿಗೊಳಿಸಲು ಈ ೨೧ನೆಯ ಅಧಿನಿಯಮದಲ್ಲಿ ಪ್ರಯತ್ನಿಸಲಾಗಿದೆಯೆಂದು ಭಾವಿಸಿದರೆ, ಇದನ್ನು ಸಾಮಾನ್ಯವಾದ ಒಂದು ಅಧಿನಿಯಮದ ಅಡಿಯಲ್ಲಿ ಮಾಡಬಹುದಾಗಿದ್ದಿತು.

ಈ ಪ್ರಕರಣದಲ್ಲಿ ಯಾವ ತೀರ್ಪನ್ನೂ ನೀಡಲಿಲ್ಲ. ಮಹಾಪ್ರಭುಗಳಿಂದ ಎತ್ತಿಹಿಡಿಯಲಾದ ಪ್ರೈವಿ ಕೌನ್ಸಿಲ್ಲಿನ ವರದಿಯು ಹೀಗಿತ್ತು – "ಮನವಿಯಲ್ಲಿ ತಿಳಿಸಲಾಗಿರುವ ವ್ಯಕ್ತಿಯನ್ನು ಹಾಜರುಪಡಿಸಬೇಕೆಂದು ನೀಡಿರುವ ಎರಡೂ ಆಜ್ಞೆಗಳು ಸಕ್ರಮವಾಗಿಲ್ಲ.

ಆಜ್ಞಾಪಿತ ವ್ಯಕ್ತಿಯು ಸರ್ವೋಚ್ಚ ನ್ಯಾಯಾಲಯಕ್ಕೆ ಇರುವ ಸಾಮಾನ್ಯ ವ್ಯಾಪ್ತಿಯೊಳಗೆ ಅಥವಾ ಅಂತಹ ವ್ಯಕ್ತಿಯು ಸರ್ವೋಚ್ಚ ನ್ಯಾಯಾಲಯದ ದಿವಾಣೀ ಮತ್ತು ಆಪರಾಧಿಕ ಪ್ರಕರಣಗಳ ವಿಚಾರಣಾ ವ್ಯಾಪ್ತಿಯ ಒಳಗೆ ಇದ್ದಂತಹ ಸಂದರ್ಭಗಳ ವಿನಹ ಆ ವ್ಯಕ್ತಿಯ ಮೇಲೆ ಬಂಧಿತನನ್ನು ಹಾಜರು ಪಡಿಸಬೇಕೆಂಬ ಆಜ್ಞೆಯನ್ನು ನೀಡುವ ಅಧಿಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ಇರುವುದಿಲ್ಲ.

ಯಾವುದೇ ಬಂದೀಖಾನೆಯ ಅಧಿಕಾರಿಯ ಮೇಲೆ ಅಥವಾ ಯಾವುದೇ ಸ್ಥಳೀಯ ನ್ಯಾಯಾಲಯದ ಅಧಿಕಾರಿಯ ಮೇಲೆ ವ್ಯಕ್ತಿಯನ್ನು ಹಾಜರುಪಡಿಸಬೇಕೆಂಬ ಆಜ್ಞೆಯನ್ನು ನೀಡುವುದಕ್ಕಾಗಲೀ, ಅಥವಾ ಸ್ಥಳೀಯ ನ್ಯಾಯಾಲಯವು ತನಗೆ ದತ್ತವಾಗಿರುವ ಅಧಿಕಾರದಿಂದ ಬಂಧಿಸಿರುವ ವ್ಯಕ್ತಿಯನ್ನು ಬಂಧಮುಕ್ತಮಾಡುವುದಕ್ಕಾಗಲೀ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವು ಇರುವುದಿಲ್ಲ.

ವ್ಯಕ್ತಿಯನ್ನು ಹಾಜರುಪಡಿಸಬೇಕೆಂಬ ಆಜ್ಞೆಯಲ್ಲಿ ನಮೂದಿಸಿರುವ ವ್ಯಾಪ್ತಿ ಹಾಗೂ ಸ್ಥಳೀಯ ನ್ಯಾಯಾಲಯದ ವ್ಯಾಪ್ತಿಗಳು ಬೇರೆಬೇರೆಯಾಗಿದ್ದ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು ಸ್ಥಳೀಯ ನ್ಯಾಯಾಲಯದ ವ್ಯಾಪ್ತಿಯನ್ನು ಆವಶ್ಯಕವಾಗಿ ಗಮನಿಸಬೇಕು".

**ಟಿಪ್ಪಣಿ:**

ಈ ತೀರ್ಪು ಬರುವ ಮೊದಲೇ, ಬಾಂಬೆ ಸರ್ವೋಚ್ಚ ನ್ಯಾಯಾಲಯವು ಪ್ರಕರಣವನ್ನು ಮುಂದೆ ತಿಳಿಸಿರುವ ಸನ್ನಿವೇಶದ ದೆಸೆಯಿಂದಾಗಿ ಮುಕ್ತಾಯಗೊಳಿಸಿತ್ತು. ಪಾಡುರಂಗ ರಾಮಚಂದ್ರವರ ಮೇಲೆ ನೀಡಿದ್ದ ಆಜ್ಞೆಗೆ ಪ್ರತ್ಯುತ್ತರವು ೧೮೨೮ರ ಅಕ್ಟೋಬರ್ ೧೦ರ ವರೆಗೆ ಬಂದಿರಲಿಲ್ಲ. ಆದಕಾರಣ, ತಕ್ಷಣ ಪ್ರತ್ಯುತ್ತರವನ್ನು ನೀಡುವಂತೆ, ಅದಕ್ಕೆ ತಪ್ಪಿದರೆ ೧೦,೦೦೦ ರೂಗಳ ದಂಡವನ್ನು ಕಟ್ಟಬೇಕೆಂದು ಆದೇಶಿಸಿ ಮತ್ತೊಂದು ಅದೇ ರೀತಿಯ ಆಜ್ಞೆಯನ್ನು ನೀಡಲಾಯಿತು. ಈ ಆಜ್ಞೆಗೂ ಪ್ರತ್ಯುತ್ತರವು ನ್ಯಾಯಾಲಯಕ್ಕೆ ಬರಲಿಲ್ಲವಾದ್ದರಿಂದ ನ್ಯಾಯಮೂರ್ತಿ ಗ್ರಾಂಟ್ ಅವರು ೧೮೨೯ರ ಫೆಬ್ರವರಿ ೨೩ರಂದು ಪಾಂಡುರಂಗ ಅವರನ್ನು ಬಂಧಿಸಲು ಆಜ್ಞೆಯನ್ನು ನೀಡಿದರು. ವ್ಯಕ್ತಿಯೊಬ್ಬನನ್ನು ಅಥವಾ ವ್ಯಕ್ತಿಗಳನ್ನು ಕಳುಹಿಸಿ ಈ ಆಜ್ಞೆಯನ್ನು ಕಾರ್ಯಗತಗೊಳಿಸಲು ಗವರ್ನರ್ ಮತ್ತು ಪರಿಷತ್ತಿಗೆ ಕಳುಹಿಸಲಾಯಿತು. ಅದೇ ಕಾಲದಲ್ಲಿ ಸರಕಾರದ ಕಾರ್ಯದರ್ಶಿಯವರಿಗೂ ಪತ್ರವೊಂದನ್ನು ಬರೆದು, ಅದಕ್ಕೆ ಸಂಬಂಧಿಸಿದ ಪ್ರಮಾಣಪತ್ರಗಳ ಮತ್ತು ಪ್ರಕರಣದ ನಡಾವಳಿಯ ಪ್ರತಿಗಳನ್ನು ಲಗತ್ತಿಸಿ, ನ್ಯಾಯಾಲಯವು ಈ ಕ್ರಮವನ್ನು ತೆಗೆದುಕೊಳ್ಳಲು ಇದ್ದ ಕಾರಣಗಳನ್ನು ವಿವರಿಸಬೇಕೆಂದು ನ್ಯಾಯಮೂರ್ತಿಯವರು ನಿರ್ದೇಶಿಸಿದರು. ಅದಕ್ಕೆ ಪ್ರತ್ಯುತ್ತರವನ್ನು ಬರೆದ ಕಾರ್ಯದರ್ಶಿಯವರು, ೧೮೨೯ರ ಅಕ್ಟೋಬರ್ ೩ರ ತಮ್ಮ ಪತ್ರದಲ್ಲಿ ತಿಳಿಸಿರುವ ಸರಕಾರದ ಉದ್ದೇಶದಲ್ಲಿ, ಇಂಗ್ಲೆಂಡಿನಲ್ಲಿರುವ ತಮ್ಮ ಮೇಲಧಿಕಾರಿಗಳಿಂದ ಸೂಕ್ತ ಆದೇಶವು ಬರುವವವರೆಗೆ, ಯಾವುದೇ ಬದಲಾವಣೆಯಿರುವುದಿಲ್ಲವೆಂದು ಸ್ಪಷ್ಟಪಡಿಸಿದ್ದರು. ಈ ಉತ್ತರವು ತಮಗೆ ತಲುಪಿದ ಮೇಲೆ, ನ್ಯಾಯಮೂರ್ತಿ ಗ್ರಾಂಟ್ ಅವರು ೧೮೨೯ರ ಏಪ್ರಿಲ್ ೧ರಂದು, ತನ್ನಲ್ಲಿದ್ದ ಎಲ್ಲಾ ಮಾರ್ಗಗಳನ್ನೂ ಸಂಪೂರ್ಣವಾಗಿ ಅನುಸರಿಸಿಯಾಗಿರುವುದರಿಂದ, ಪ್ರಾಂತೀಯ ಸರಕಾರದಿಂದ ನ್ಯಾಯಾಲಯವು ತನ್ನ ಅಧಿಕಾರವನ್ನು ಬಳಸಿಕೊಂಡು ಕಾರ್ಯವನ್ನು ನಿರ್ವಹಿಸಬಹುದು ಎಂಬ ಆಶ್ವಾಸನೆಯು ತಮಗೆ ದೊರಕುವವರೆಗೂ, ತಾವು ನ್ಯಾಯಮೂರ್ತಿಯಾಗಿ ತಮ್ಮ ಕರ್ತವ್ಯವನ್ನು ಮುಂದುವರೆಸುವುದಿಲ್ಲವೆಂದು ಘೋಷಿಸಿದರು. (ಏಷಿಯಾಟಿಕ್ ರಿಜಿಸ್ಟರ್, ಸಂಪುಟ ೨೮, ೩೫೧ನೆಯ ಮತ್ತು ಮುಂದಿನ ಪುಟಗಳು).

* * * * *

---

[ಭಾರತದ ಉಚ್ಚ ನ್ಯಾಯಾಲಯಗಳ ಅಧಿನಿಯಮದ ಅಡಿಯಲ್ಲಿ ಉಚ್ಚ ನ್ಯಾಯಾಲಯಗಳನ್ನು ಸ್ಥಾಪಿಸಲು ಪ್ರತ್ಯೇಕವಾಗಿ ನೀಡಿದ ಅಧಿಕಾರ ಪತ್ರಗಳ ದಿನಾಂಕಗಳು ಹೀಗಿವೆ: ಕಲ್ಕತ್ತ – ೧೮೬೫ರ ಡಿಸೆಂಬರ್ ೨೮; ಮದರಾಸು – ೧೮೬೫ರ ಡಿಸೆಂಬರ್ ೨೮; ಬಾಂಬೆ – ೧೮೬೫ರ ಡಿಸೆಂಬರ್ ೨೮; ವಾಯವ್ಯ ಪ್ರಾಂತಗಳು – ೧೮೬೬ರ ಮಾರ್ಚ್ ೧೭. ಈ ಅಧಿಕಾರ ಪತ್ರಗಳನ್ನು ಅವುಗಳ ವಿವರಗಳ ಸಮೇತ ಸ್ಟಾಟ್.ಆರ್.ಅಂಡ್. ಒ. ರೆವ್. ಸಂಪುಟ ೪ರಲ್ಲಿ ೮೨ನೆಯ ಪುಟದಿಂದ ೧೩೧ನೆಯ ಪುಟದವರೆಗೆ ನೀಡಲಾಗಿದೆ. ಉಚ್ಚ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ತಿಳಿದುಕೊಳ್ಳಲು, ಇಲ್‌ಬರ್ಟ್ ಅವರ "ಭಾರತ ಸರಕಾರ'ದ ೨೪೧ರಿಂದ ೨೫೫ನೆಯ ಪುಟಗಳನ್ನು ನೋಡಿ. ಅದೇ ಕೃತಿಯ ೩೮೭ರಿಂದ ೪೦೫ರ ವರೆಗಿನ ಪುಟಗಳನ್ನೂ (ಭಾರತದ ಸ್ಥಳೀಯರಿಗೆ ಅನ್ವಯವಾಗುವ ಇಂಗ್ಲಿಷ್ ಕಾನೂನುಗಳು) ಮತ್ತು ೪೦೬ರಿಂದ ೪೬೩ರ ವರೆಗಿನ ಪುಟಗಳನ್ನೂ (ಭಾರತೀಯ ಪ್ರಾಂತಗಳಲ್ಲಿ ಬ್ರಿಟಿಷ್ ಅಧಿಕಾರವ್ಯಾಪ್ತಿ) ನೋಡಿ.]

# ೫. ಬಾಂಬೆ ನಗರದ ಅಸ್ಪೃಶ್ಯ ಕೆಲಸಗಾರರು

(ಜಿ.ಆರ್. ಪ್ರಧಾನ್, ಪಿ. ಎಚ್.ಡಿ, ಅವರ ಪುಸ್ತಕಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಬರೆದ ಮುನ್ನುಡಿ)

ಈ ಹೊತ್ತಗೆಯು ಬಾಂಬೆ ವಿಶ್ವವಿದ್ಯಾನಿಲಯದಿಂದ ಡಾಕ್ಟರ್ ಆಫ್ ಫಿಲಾಸಫಿ ಇನ್ ಆರ್ಟ್ಸ್ ಪದವಿಯನ್ನು ಪಡೆಯುವ ಯೋಜನೆಯನ್ನು ಪೂರ್ಣಗೊಳಿಸಲು ಈ ಲೇಖಕರು ಸಲ್ಲಿಸಿದ ಪ್ರೌಢ ಪ್ರಬಂಧ. ವಿಶ್ವವಿದ್ಯಾನಿಲಯವೇ ಇದನ್ನು ಒಪ್ಪಿಕೊಂಡಿದೆಯೆಂದ ಮೇಲೆ, ಈ ಪುಸ್ತಕಕ್ಕೆ ಸಾಕಷ್ಟು ಮನ್ನಣೆಯಿದ್ದು, ಇದಕ್ಕೆ, ನನ್ನಿಂದ ಮುನ್ನುಡಿಯನ್ನು ಬರೆಸಬೇಕಾದ ಅಗತ್ಯ ಲೇಖಕರಿಗೆ ಇರಲಿಲ್ಲ. ನನ್ನಿಂದ ಈ ಬರಹವನ್ನು ಲೇಖಕರು ಏಕೆ ಅಪೇಕ್ಷಿಸಿದರು ಎಂಬುದು ನನಗೆ ಗೊತ್ತಿಲ್ಲ. ಬಹುಶಃ, ಈ ಅಧ್ಯಯನದ ಕೇಂದ್ರವಾದ ಜಾತಿಗೆ ನಾನೂ ಸೇರಿದವನಾದುದರಿಂದ ಅವರು ನನ್ನಿಂದ ಕೆಲವು ನುಡಿಗಳನ್ನು ಬಯಸಿರಬಹುದು. ಹೀಗಾಗಿ ನಾನು ಅವರ ಮನವಿಗೆ ಸಂತೋಷದಿಂದಲೇ ಸ್ಪಂದಿಸಿದ್ದೇನೆ.

ಬಾಂಬೆ ನಗರದಲ್ಲಿರುವ ಅಸ್ಪೃಶ್ಯರ ಜೀವನವನ್ನು ವಿವಿಧ ಸ್ಥರಗಳಲ್ಲಿ ಲೇಖಕರು ಅಧ್ಯಯನ ಮಾಡಿದ್ದಾರೆ. ಇದರಿಂದಾಗಿ ಅವರು ಅಸ್ಪೃಶ್ಯರ ಜೀವನದ ಹಲವು ಮುಖಗಳ ಬಗ್ಗೆ – ಚಿಕ್ಕ ಚಿಕ್ಕ ಪ್ರದೇಶಗಳಲ್ಲಿ ಕಿಕ್ಕಿರಿದು ವಾಸಿಸುವ ಸ್ಥಿತಿ, ವರಮಾನ, ಉದ್ಯೋಗ, ಸಾಲ ಮೊದಲಾದ ವಿಷಯಗಳ ಬಗ್ಗೆ – ಅಂಕಿಅಂಶಗಳನ್ನು ನೀಡುತ್ತಾರೆ. ಅವರು ಸಂಗ್ರಹಿಸಿರುವ ಮಾದರಿಗಳು ನಿಜಕ್ಕೂ ಬೆಲೆಯುಳ್ಳದ್ದಾಗಿವೆ. ಯಾವುದೇ ಅಂಕಿಅಂಶಗಳ ಪರಿಶೀಲನೆಯಲ್ಲಿಯಾದರೂ, ಈ ಮಾದರಿಗಳು ಪ್ರಾತಿನಿಧಿಕವೇ ಎಂಬ ಪ್ರಶ್ನೆಯು ಏಳುತ್ತದೆ. ಫಲಿತಾಂಶವು ಸಾಧರಣವಾಗಿಯಾದರೂ ಇರಬೇಕಾದರೆ, ಪರಿಶೀಲಿಸಿದ ಮಾದರಿಗಳು ಪ್ರಾತಿನಿಧಿಕವಾಗಿರಬಹುದು. ಲೇಖಕರು ಬಳಸಿಕೊಂಡಿರುವ ಮಾದರಿಗಳು ಪ್ರಾತಿನಿಧಿಕವಲ್ಲವೆಂದು ಹೇಳಲು ಯಾವುದೇ ಕಾರಣಗಳಿಲ್ಲ. ಆದ್ದರಿಂದ, ಅವರು ಇಲ್ಲಿ ನೀಡಿರುವ ಅಸ್ಪೃಶ್ಯರ ಜೀವನ ಚಿತ್ರವು ವಾಸ್ತವ ಚಿತ್ರವಾಗಿದೆ.

ಈ ಲೇಖಕರು ಈ ಪುಸ್ತಕದಲ್ಲಿ ಅಸ್ಪೃಶ್ಯರ ಸಾಮಾಜಿಕ ಸ್ಥಿತಿಗತಿಗಳನ್ನು ಸವರ್ಣೀಯ ಹಿಂದೂಗಳ ಸಾಮಾಜಿಕ ಸ್ಥಿತಿಗತಿಗಳನ್ನೂ ನೀಡಿದ್ದಿದ್ದರೆ ಈ ಅಧ್ಯಯನವು ಇನ್ನೂ ಮಹತ್ವಪೂರ್ಣವಾಗಿರುತ್ತಿತ್ತು. ಆದರೆ ಹಾಗಾಗಿಲ್ಲ. ಅಸ್ಪೃಶ್ಯತೆಯ ಕಾರಣದಿಂದಾಗಿ ಅಸ್ಪೃಶ್ಯರು ಯಾವುದೇ ಕಷ್ಟವನ್ನು ಅನುಭವಿಸುತ್ತಿಲ್ಲ ಎಂಬ ವಾದದ ಸನ್ನಿವೇಶದಲ್ಲಿ ಇಂತಹ ಅಧ್ಯಯನವು ವಿಶೇಷವಾಗಿ ಅಗತ್ಯವಾಗಿರುತ್ತಿತ್ತು. ಆದರೆ, ಇದಕ್ಕೆ ಬದಲಾಗಿ ಕೇವಲ ಅಸ್ಪೃಶ್ಯತೆಯ ಕಾರಣದಿಂದ ಮಾತ್ರ ಅಸ್ಪೃಶ್ಯರು ಸವರ್ಣೀಯ ಹಿಂದುಗಳಿಗಿಂತ ಹೆಚ್ಚಿನ ಅನನುಕೂಲಗಳನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಸಾಧಿಸಿದರೆ, ಅಸ್ಪೃಶ್ಯರ ಮತಾಂತರವು ಸಕಾರಣವಾಗಿಯೇ ಇದೆ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇಂತಹ ತೌಲನಿಕ ಅಧ್ಯಯನವು ನಡೆಯುವವರೆಗೆ ನಾವು ಕಾಯಬೇಕಾಗುತ್ತದೆ. ಈ ಲೇಖಕರು ತೆಗೆದುಕೊಂಡಿರುವ ತೀರ್ಮಾನಗಳನ್ನು ಅರಿತುಕೊಳ್ಳಬೇಕಾದರೆ ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವೆ ಇರುವ ಅಂತರಕ್ಕೆ ಅಸ್ಪೃಶ್ಯತೆಯಂತಹ ಸಾಮಾಜಿಕ ಅಂಶವು ಕಾರಣವೇ ಎಂಬುದನ್ನು ಅರಿಯಲು ಈ ಲೇಖಕರಾಗಲೀ ಅಥವಾ ಇತರರಾಗಲೀ ಮೇಲೆ ಹೇಳಿದಂತಹ ಅಧ್ಯಯನವನ್ನು ಕೈಗೆತ್ತಿಕೊಳ್ಳಬೇಕು. ಅಂತಹ ಅಧ್ಯಯನಕ್ಕೆ ಪೂರ್ವಪೀಠಿಕೆಯಾಗಿರುವ ಈ ಕೃತಿಯನ್ನು ನಾವು ಸ್ವಾಗತಿಸಬೇಕು.

ರಾಜಗೃಹ, ದಾದರ್, ಬಿ.ಆರ್. ಅಂಬೇಡ್ಕರ್

೧೦.೨.೧೯೩೮

---

ಕರ್ನಾಟಕ ಪಬ್ಲಿಷಿಂಗ್ ಹೌಸ್, ಬಾಂಬೆ, ೧೯೩೮

# ೬. ಗಾಂಧಿಯವರು ಮಹಾತ್ಮರೇ?

ಗಾಂಧಿಯವರು ಮಹಾತ್ಮರೇ? ಈ ಪ್ರಶ್ನೆ ನನಗೆ ತಲೆಚಿಟ್ಟು ಹಿಡಿಸಿದೆ. ಈ ಪ್ರಶ್ನೆಯು ನನಗೆ ಎರಡು ಕಾರಣಗಳಿಗಾಗಿ ಕೋಪವನ್ನು ಬರಿಸುತ್ತದೆ. ಮೊದಲನೆಯದಾಗಿ, ನಾನು ಎಲ್ಲಾ ಮಹಾತ್ಮರನ್ನೂ ದ್ವೇಷಿಸುತ್ತೇನೆ ಮತ್ತು ಅವರೆಲ್ಲರನ್ನೂ ನಾವು ತ್ಯಜಿಸಬೇಕು. ಅಂತಹವರ ಇರುವಿಕೆಯು ಅವರ ಜನ್ಮತಳೆದಿರುವ ನಾಡಿಗೆ ಬಡಿದಿರುವ ಶಾಪವೆಂಬುದು ನನ್ನ ಅಭಿಪ್ರಾಯ.

ನಾನು ಹೀಗೆ ಹೇಳುವುದಕ್ಕೆ ಕಾರಣವೆಂದರೆ, ಬುದ್ಧಿ ಮತ್ತು ವಿವೇಕವಿರಬೇಕಾದ ಎಡೆಗಳಲ್ಲಿ ಅವರು ಮೌಢ್ಯವನ್ನು ಬಿತ್ತುತ್ತಾರೆ.

ಎರಡನೆಯದಾಗಿ, ಮಹಾತ್ಮ ಎಂಬ ಪದವನ್ನು ಜನರು ಹೇಗೆ ಅರ್ಥಮಾಡಿಕೊಂಡಿದ್ದಾರೆ ಎಂಬುದು ನನಗೆ ತಿಳಿಯುವುದಿಲ್ಲ.

ಹೀಗಿದ್ದರೂ, 'ಚಿತ್ರ'ದ ಸಂಪಾದಕರು ಈ ಪ್ರಶ್ನೆಗೆ ನನ್ನಿಂದ ಉತ್ತರವನ್ನು ಪಡೆದೇ ಪಡೆಯಬೇಕೆಂಬ ಹಟಮಾರಿತನವನ್ನು ಹೊಂದಿರುವುದರಿಂದ ನಾನು ಈ ಪ್ರಶ್ನೆಗೆ ಉತ್ತರವನ್ನು ನೀಡಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕೆಂದು ತೀರ್ಮಾನಿಸಿದ್ದೇನೆ.

ಸಾಮಾನ್ಯ ಹಿಂದುವು, ಒಬ್ಬ ವ್ಯಕ್ತಿಯನ್ನು ಮಹಾತ್ಮನೆಂದು ಹೇಳಬೇಕಾದರೆ, ಆ ವ್ಯಕ್ತಿಯು ಮೂರು ವಿಷಯಗಳನ್ನು ಹೊಂದಿರಬೇಕು. ಅವೆಂದರೆ, ಅವನ ಉಡುಪು, ಅವನ ನಡತೆ ಮತ್ತು ವೈಯಕ್ತಿಕವಾದ ದರ್ಶನ. ಈ ಮೂರು ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ಅವಿದ್ಯಾವಂತ, ಅಜ್ಞ ಜನತೆಯ ದೃಷ್ಟಿಯಲ್ಲಿ ಮೋಹನದಾಸ ಕರಮಚಂದ ಗಾಂಧಿಯವರನ್ನು ಒಬ್ಬ ಮಹಾತ್ಮನೆಂದು ಕರೆಯಬಹುದು. ತನ್ನ ಉಡುಪನ್ನು ಬದಲಾಯಿಸಿ ಮಹಾತ್ಮನಾಗುವುದು ಭಾರತದಲ್ಲಿ ಯಾರಿಗಾದರೂ ಸುಲಭದ ಕೆಲಸವಾಗಿದೆ. ನೀವು ಸಾಧಾರಣ ಉಡುಪನ್ನು ಧರಿಸಿ ಸಾಧಾರಣ ಜೀವನವನ್ನು ನಡೆಸುತ್ತಾ ಅಸಾಧಾರಣವಾದುದನ್ನು, ಮಹೋನ್ನತವಾದುದನ್ನು ಸಾಧಿಸಿದರೂ ಯಾರೂ ನಿಮ್ಮನ್ನು ಗಮನಿಸುವುದಿಲ್ಲ. ಬದಲಿಗೆ ಸಾಮಾನ್ಯನಂತೆ ವರ್ತಿಸದ, ವಿಚಿತ್ರವಾದ ನಡತೆಯನ್ನುಳ್ಳವನು ಸಂತ ಅಥವಾ ಮಹಾತ್ಮನಾಗುತ್ತಾನೆ. ಒಬ್ಬ ವ್ಯಕ್ತಿ ಸೂಟ್ ಧರಿಸಿದರೆ, ಅಥವಾ ಸಾಮಾನ್ಯ ಉಡುಪನ್ನು ಧರಿಸಿದರೆ ಜನರು ಅವನನ್ನು ನೋಡಲೂ ಇಷ್ಟಪಡುವುದಿಲ್ಲ. ಆದರೆ, ಅದೇ ವ್ಯಕ್ತಿ ತನ್ನ ವಸ್ತ್ರಗಳನ್ನು ಬಿಚ್ಚಿಹಾಕಿದರೆ, ಬೆತ್ತಲೆಯಾಗಿ ಓಡಾಡಿದರೆ, ಕೂದಲುಗಳನ್ನು ಉದ್ದವಾಗಿ ಬಿಟ್ಟಿದ್ದರೆ, ಜನರನ್ನು ಬಯ್ಯುತ್ತಿದ್ದರೆ, ಚರಂಡಿಯಲ್ಲಿನ ಕೊಳಕು ನೀರನ್ನು ಕುಡಿಯುತ್ತಿದ್ದರೆ ಜನರು ಅವನ ಪಾದಗಳ ಮೇಲೆ ಬೀಳುತ್ತಾರೆ ಮತ್ತು ಅವನನ್ನು ಪೂಜಿಸಲು ತೊಡಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಗಾಂಧಿ ಮಹಾತ್ಮರಾದರೆ, ಅದರಲ್ಲಿ ಆಶ್ಚರ್ಯಕರವಾದುದೇನೂ ಇರದು. ಇಂತಹ ಅಭ್ಯಾಸಗಳನ್ನು ಇನ್ನಾವುದೇ ನಾಗರಿಕ ದೇಶದಲ್ಲಿ ಅನುಸರಿಸಿದ್ದರೆ ಅವರನ್ನು ನೋಡಿ ಜನರು ನಗುತ್ತಿದ್ದರು. ಗಂಭೀರವಾಗಿ ಚಿಂತಿಸುವ ಗುಣವಿಲ್ಲದ ಯಾರಿಗಾದರೂ ಗಾಂಧಿಯವರ ಉಪದೇಶಗಳು ಮಧುರವೆಂದು, ಆಪ್ಯಾಯಮಾನವೆಂದು ತೋರಬಹುದು. ಸತ್ಯ ಮತ್ತು ಅಹಿಂಸೆ ಎಂಬುವು ಉದಾತ್ತ ತತ್ವಗಳು. ಗಾಂಧಿಯವರು ಸತ್ಯ ಮತ್ತು ಅಹಿಂಸೆಯ ಬಗ್ಗೆ ಬೋಧಿಸುತ್ತಾರೆ ಮತ್ತು ಜನರು ಅದನ್ನು ಎಷ್ಟು ಇಷ್ಟಪಡುತ್ತಾರೆ ಎಂದರೆ, ಗಾಂಧಿಯವರ ಸುತ್ತ ಸಾವಿರಾರು ಸಂಖ್ಯೆಯಲ್ಲಿ ನೆರೆಯುತ್ತಾರೆ. ಅವರು ಹೀಗೇಕೆ ಮಾಡುತ್ತಾರೆ ಎಂದು

ನನಗೆ ತಿಳಿಯುವುದಿಲ್ಲ. ಸಾವಿರಾರು ವರ್ಷಗಳ ಹಿಂದೆ ಭಗವಾನ್ ಬುದ್ಧ ಸತ್ಯ ಮತ್ತು ಅಹಿಂಸೆಯ ಸಂದೇಶವನ್ನು ಜಗತ್ತಿಗೆ ನೀಡಿರಲಿಲ್ಲವೇ? ಸತ್ಯ ಮತ್ತು ಅಹಿಂಸೆಯನ್ನು ಗಾಂಧಿಯವರ ಸ್ವಂತ ಚಿಂತನೆಗಳೆಂದು ಪರಿಗಣಿಸಿ ದಡ್ಡಶಿಖಾಮಣಿಗಳು ಮತ್ತು ಜನ್ಮತಃ ಮೂರ್ಖರಾದವರನ್ನು ಬಿಟ್ಟು ಬೇರೆ ಯಾರೂ ಅವರಿಗೆ ಪ್ರಶಸ್ತಿಯನ್ನು ನೀಡುವುದಿಲ್ಲ. ಮಾನವಜನಾಂಗದ ಉಳಿವಿಗೆ ಸತ್ಯ ಮತ್ತು ಅಹಿಂಸೆಗಳು ಅಗತ್ಯವೆನ್ನುವ ಮಾತಿನಲ್ಲಿ ಯಾವುದೇ ಹೊಸದೇನೂ ಇಲ್ಲ. ಈ ಸೂತ್ರಕ್ಕೆ ಗಾಂಧಿಯವರು ಏನನ್ನೂ ಹೊಸದಾಗಿ ಸೇರಿಸಿಲ್ಲ. ನಾನಾಗಲೇ ಹೇಳಿದಂತೆ, ಸಾವಿರಾರು ವರ್ಷಗಳ ಹಿಂದೆಯೇ ಭಗವಾನ್ ಬುದ್ಧ ಈ ತತ್ವಗಳನ್ನು ಪ್ರತಿಪಾದಿಸಿದ್ದ. ಸತ್ಯ ಮತ್ತು ಅಹಿಂಸೆಯನ್ನು ಆಚರಿಸುವಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸುವ ನಿಟ್ಟಿನಲ್ಲಿ ಬೆಳಕನ್ನು ಗಾಂಧಿಯವರು ಚೆಲ್ಲಿದ್ದಿದ್ದರೆ, ಅವರ ಮಹಾತ್ಮನ ಗುಣವು ಕಾಂತಿಯುಕ್ತವಾಗಿರುತ್ತಿತ್ತು ಮತ್ತು ವಿಶ್ವವು ಅವರಿಗೆ ಸದಾಕಾಲಕ್ಕೂ ಋಣಿಯಾಗಿರುತ್ತಿತ್ತು. ಉದಾತ್ತ ತತ್ವವಾದ ಸತ್ಯವನ್ನು ಎತ್ತಿಹಿಡಿಯುವುದು ಹೇಗೆ ಮತ್ತು ಯಾವ ಸಂದರ್ಭದಲ್ಲಿ ಹಿಂಸೆಯು ಸರಿಯಾದ ಮಾರ್ಗವಾಗುತ್ತದೆ ಎಂಬ ಎರಡು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ವಿಶ್ವವು ಕಾತರದಿಂದ ಕಾದಿದೆ. ಸತ್ಯ ಮತ್ತು ಅಹಿಂಸೆಗಳ ಬಗೆಗಿನ ದೃಷ್ಟಿಯು ವ್ಯಾವಹಾರಿಕವಾಗಿ ಕಾರ್ಯ ಸಾಧುವಾಗಿರಬೇಕೆಂದು ಭಗವಾನ್ ಬುದ್ಧ ಬೋಧಿಸಿದ. ಈ ಪ್ರಶ್ನೆಗೆ ಜೀಸಸ್ ಕ್ರೈಸ್ಟ್ ಯಾವ ಉತ್ತರವನ್ನು ಕೊಡುತ್ತಿದ್ದ ಎಂದು ಊಹಿಸುವುದಕ್ಕೆ ನಮಗೆ ಯಾವ ಸಾಧನವೂ ಇಲ್ಲ. ಬಹುಶಃ ಈ ಪ್ರಶ್ನೆಗೆ ಉತ್ತರಿಸಲು ಅವನಿಗೆ ಪಿಲಾತನು ಸಾಕಷ್ಟು ಸಮಯವನ್ನು ನೀಡಲಿಲ್ಲವೆಂದು ಕಾಣುತ್ತದೆ. ಗಾಂಧಿಯವರು ಈ ಪ್ರಶ್ನೆಗೆ ಉತ್ತರವನ್ನು ನೀಡಿರುವರೆ? ನನಗೆ ಅದು ಎಲ್ಲೂ ಕಾಣಸಿಗಲಿಲ್ಲ. ನಾವು ಅವರ ಉಪದೇಶ ಮತ್ತು ಪ್ರವಚನಗಳನ್ನು ಕೇಳಿದಾಗ ಅವರು ಇತರರ ಸರಕುಗಳನ್ನು ತಮ್ಮದನ್ನಾಗಿ ಮಾಡಿಕೊಂಡಿರುವುದು ಕಾಣಿಸುತ್ತದೆ. ಸತ್ಯ ಮತ್ತು ಅಹಿಂಸೆಗಳು ಅವರ ಸ್ವಂತ ಅನ್ವೇಷಣೆಗಳಲ್ಲ. ನಾನು ಗಾಂಧಿಯವರ ಗುಣಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದಾಗ, ಅವರಲ್ಲಿ ಗಂಭೀರ ವಿಚಾರಶೀಲತೆ, ಪ್ರಾಮಾಣಿಕತೆಗಳಿಗಿಂತ ತಂತ್ರಗಾರಿಕೆಯೇ ಹೆಚ್ಚಾಗಿದೆ ಎಂಬುದು ನನಗೆ ದಟ್ಟವಾಗಿ ಮನವರಿಕೆಯಾಗಿದೆ. ನನ್ನ ಪ್ರಕಾರ ಅವರ ಚಟುವಟಿಕೆಗಳನ್ನು ಖೋಟಾ ನಾಣ್ಯಗಳಿಗೆ ಹೋಲಿಸಬಹುದು. ಅವರ ಸುಸಂಸ್ಕೃತತೆಯು ಡೇವಿಡ್ ಕಾಪರ್ ಫೀಲ್ಡ್ ಇಂಗ್ಲಿಷ್ ಕಾದಂಬರಿಯಲ್ಲಿ ಬರುವ ಯೂರಿಯಾ ಹೀಪ್‌ನ ವಿನೀತತೆಯಂತೆ ಕಾಣಿಸುತ್ತದೆ. ಅವರು ತಮ್ಮ ತಂತ್ರಗಾರಿಕೆ ಮತ್ತು ರಕ್ತಗತವಾಗಿರುವ ಬುದ್ಧಿಸೂಕ್ಷ್ಮತೆಯಿಂದಾಗಿ ಯಾವಾಗಲೂ ಮುಂಚೂಣಿಯಲ್ಲಿರುತ್ತಾರೆ. ತನ್ನ ಸಾಮರ್ಥ್ಯ ಮತ್ತು ಚಾರಿತ್ರ್ಯಗಳಲ್ಲಿ ನಂಬಿಕೆಯಿರುವ ವ್ಯಕ್ತಿಯು ವಾಸ್ತವವನ್ನು ಧೈರ್ಯವಾಗಿ, ಪೌರುಷಯುಕ್ತನಾಗಿ ಎದುರಿಸುತ್ತಾನೆ. ಅವನು ಮರೆಯಲ್ಲಿ ನಿಂತು ಯುದ್ಧಮಾಡುವವನಾಗಿರುವುದಿಲ್ಲ. ಯುದ್ಧದಲ್ಲಿ ನೆಪೋಲಿಯನ್ ಯಾವಾಗಲೂ ಮುಂಚೂಣಿಯಲ್ಲಿರುತ್ತಿದ್ದ. ಅವನು ಸಂಚಿನ ತಂತ್ರಗಳನ್ನು ರೂಪಿಸುವುದರಲ್ಲಿ ವಿಶ್ವಾಸವಿಟ್ಟಿರಲಿಲ್ಲ ಮತ್ತು ಹಿಂದಿನಿಂದ ಶತ್ರುಗಳ ಮೇಲೆ ಬೀಳುತ್ತಿರಲಿಲ್ಲ. ವಿಶ್ವಾಸಘಾತುಕತೆ ಮತ್ತು ಮೋಸ ಎಂಬವು ದುರ್ಬಲರ ಅಸ್ತ್ರ. ಗಾಂಧಿಯವರು ಯಾವಾಗಲೂ ಈ ಅಸ್ತ್ರಗಳನ್ನು ಉಪಯೋಗಿಸುತ್ತಾರೆ. ಹಲವು ವರ್ಷಗಳವರೆಗೆ ತಮ್ಮನ್ನು ಗೋಖಲೆಯವರ ವಿನೀತ ಶಿಷ್ಯನೆಂದು ಅವರು ಕರೆದುಕೊಳ್ಳುತ್ತಿದ್ದರು ನಂತರ ಹಲವು ವರ್ಷಗಳು ತಿಲಕರನ್ನು ಆರಾಧಿಸುತ್ತಿದ್ದರು. ನಂತರ ಅವರು ತಿಲಕರನ್ನು ದ್ವೇಷಿಸಲು ಪ್ರಾರಂಭಿಸಿದರು. ಇದನ್ನು ಎಲ್ಲರೂ ಬಲ್ಲರು. ತಿಲಕರ ಹೆಸರನ್ನು ಬಳಸಿಕೊಳ್ಳದೆ ಇದ್ದಿದ್ದರೆ ರೂ. ೧,೦೦೦,೦೦೦ಗಳನ್ನು 'ಸ್ವರಾಜ್ಯ' ನಿಧಿಗೆ ಸಂಗ್ರಹಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ತಮ್ಮ ಚರಿತ್ರೆಯನ್ನು ಮರೆತು, ಕುಶಾಗ್ರಮತಿಯಾದ ರಾಜಕೀಯಸ್ಥರ ರೀತಿಯಲ್ಲಿ ಅವರು ಆ ನಿಧಿಗೆ ತಿಲಕರ ಹೆಸರನ್ನು ಅಂಟಿಸಿದರು.

ಗಾಂಧಿಯವರು ಕ್ರಿಶ್ಚಿಯನ್ ಧರ್ಮಕ್ಕೆ ಕಟ್ಟಾ ವಿರೋಧಿಯಾಗಿದ್ದರು. ಪಾಶ್ಚಿಮಾತ್ಯರನ್ನು ಮೆಚ್ಚಿಸಲು, ಬಿಕ್ಕಟ್ಟಿನ ಸಮಯದಲ್ಲಿ ಬೈಬಲ್ಲಿನಿಂದ ಉದ್ಧರಣಗಳನ್ನು ನೀಡುತ್ತಿದ್ದರು. ಅವರ ಮನಸ್ಸು ಹೇಗೆ ಕೆಲಸಮಾಡುತ್ತದೆ ಎಂಬುದನ್ನು ವಿಶದಪಡಿಸಲು ಮತ್ತೆರಡು ಉದಾಹರಣೆಗಳನ್ನು ನೀಡುತ್ತೇನೆ.

ದುಂಡುಮೇಜಿನ ಪರಿಷತ್ತಿನಲ್ಲಿ ಅವರು ಜನರಿಗೆ ಹೀಗೆಂದರು –"ದಲಿತ ವರ್ಗಗಳವರ ಪ್ರತಿನಿಧಿಗಳು ಮುಂದಿಡುವ ಬೇಡಿಕೆಗಳಿಗೆ ನಾನು ಯಾವುದೇ ಆಕ್ಷೇಪಣೆಯನ್ನೂ ಮಾಡುವುದಿಲ್ಲ". ಆದರೆ, ದಲಿತ ವರ್ಗಗಳವರ ಪ್ರತಿನಿಧಿಗಳು ತಮ್ಮ ಬೇಡಿಕೆಯನ್ನು ಮುಂದಿಟ್ಟ ಕೂಡಲೇ ಅವರು ತಾವು ನೀಡಿದ್ದ ಆಶ್ವಾಸನೆಯನ್ನು ಮರೆತರು. ನಾನು ಅವರ ಈ ವರ್ತನೆಯನ್ನು ದಲಿತ ವರ್ಗದ ಜನತೆಗೆ ಮಾಡಿದ ವಂಚನೆಯೆಂದು ಕರೆಯುತ್ತೇನೆ. ಅವರು ಮುಸ್ಲಿಮರ ಬಳಿಗೆ ಹೋಗಿ, ಮುಸ್ಲಿಮರು ದಲಿತ ವರ್ಗಗಳ ಪ್ರತಿನಿಧಿಗಳು ಮುಂದಿಟ್ಟಿರುವ ಬೇಡಿಕೆಯನ್ನು ವಿರೋಧಿಸಿದರೆ, ಮುಸ್ಲಿಮರ ೧೪ ಬೇಡಿಕೆಗಳಿಗೆ ಬೆಂಬಲವನ್ನು ನೀಡುತ್ತೇವೆ ಎಂದು ಹೇಳಿದರು. ಎಂತಹ ನೀಚನೂ ಇಂತಹ ಕೆಲಸವನ್ನು ಮಾಡುವುದಿಲ್ಲ. ಇದು ಗಾಂಧಿಯವರ ದ್ರೋಹಚಿಂತನೆಯ ಒಂದು ಪ್ರಕರಣ.

ನೆಹರೂ ಸಮಿತಿಯ ವರದಿಯನ್ನು ಕಾಂಗ್ರೆಸ್ಸಿನ ಮುಕ್ತ ಅಧಿವೇಶನದಲ್ಲಿ ಮಂಡಿಸಲಾಯಿತು. ಈ ವರದಿಗೆ ಕೆಲವು ತಿದ್ದುಪಡಿಗಳನ್ನು ಮಾಡಲಾಯಿತು. ನಿಮಗೆಲ್ಲರಿಗೂ ಅದು ಗೊತ್ತಿರಬಹುದು. ಈ ತಿದ್ದುಪಡಿಗಳನ್ನು ವಿರೋಧಿಸುವುದಕ್ಕೆ ಜಯಕರ್ ಅವರನ್ನು ಗಾಂಧಿಯವರು ಛೂಬಿಟ್ಟಿದ್ದರು. ಜಯಕರ್ ಮತ್ತು ಅವರ ಬೆಂಬಲಿಗರು ಈ ತಿದ್ದುಪಡಿಗಳನ್ನು ಪ್ರಬಲವಾಗಿ ವಿರೋಧಿಸಿದರು. ಇದು ಬಹಳ ಜನರಿಗೆ ತಿಳಿದಿದೆ. ಆದರೆ, ಈ ತಿದ್ದುಪಡಿಗಳಾವುವು ಮತ್ತು ಅವನ್ನು ಏಕೆ ಅಷ್ಟು ಪ್ರಬಲವಾಗಿ ವಿರೋಧಿಸಿದರು? ಈ ತಿದ್ದುಪಡಿಗಳ ಹಿನ್ನೆಲೆಯು ಬಹಳ ಜನರಿಗೆ ತಿಳಿದಿಲ್ಲ. ತಿದ್ದುಪಡಿಗಳನ್ನು ವಿರೋಧಿಸಿದವರಿಂದ ನಾನು ಅವರ ವಿರೋಧದ ಕಾರಣವನ್ನು ತಿಳಿದುಕೊಂಡೆ. ಅದರ ಸತ್ಯತೆಯನ್ನು ಪ್ರಶ್ನಿಸುವ ಪ್ರಮೇಯವು ನನಗೆ ಇರಲಿಲ್ಲ. ಇದನ್ನು ಹೊರಗೆಡಹಿದವರು ಪಂಡಿತ್ ಮೋತಿಲಾಲ್ ನೆಹರು ಮತ್ತು ಜಿನ್ನಾ ಅವರು. ಈ ಇಬ್ಬರನ್ನೂ ಗಾಂಧಿಯವರು ವಂಚಿಸಿದ್ದರು. ನೆಹರೂ ಸಮಿತಿಯ ವರದಿಗೆ ತಿದ್ದುಪಡಿಯನ್ನು ತಮ್ಮ ಸಮುದಾಯದವರ ಅನುಕೂಲಕ್ಕಾಗಿ ಸೂಚಿಸಿದವರು ಜಿನ್ನಾ ಅವರು. ಗಾಂಧಿಯವರಿಗೆ ಇದು ತಿಳಿದಾಗ ಅವರು, ಪಂಡಿತ್ ಮೋತಿಲಾಲ್ ನೆಹರು ಅವರು ತಾವು ಮೊದಲು ಕೊಟ್ಟುದುದಕ್ಕಿಂತ ಹೆಚ್ಚಿನದನ್ನು ಮುಸ್ಲಿಮರಿಗೆ ನೀಡುತ್ತಿದ್ದಾರೆ ಎಂದು ಯೋಚಿಸಿದರು.

ಪಂ. ಮೋತಿಲಾಲ್ ನೆಹರು ಅವರ ಪ್ರತಿಷ್ಠೆಯನ್ನು ಕುಂದಿಸಲು ಗಾಂಧಿ ಅದನ್ನು ಪ್ರಬಲವಾಗಿ ವಿರೋಧಿಸಿದರು. ಹಿಂದು–ಮುಸ್ಲಿಂ ಸಮುದಾಯದವರ ನಡುವಿನ ಹಗೆತನಕ್ಕೆ ಗಾಂಧಿಯವರ ಈ ಮೋಸಗಾರಿಕೆಯ ವರ್ತನೆಯೇ ಕಾರಣ.

ತಾವು ಅಸ್ಪೃಶ್ಯರ ಮತ್ತು ಮುಸ್ಲಿಮರ ಪರವಾದ ಅದ್ವಿತೀಯ ಹೋರಾಟಗಾರರೆಂದು ಹೇಳಿಕೊಳ್ಳುತ್ತಿದ್ದ, ಅವರ ಸ್ನೇಹಿತರೆಂದು ಪರಿಗಣಿಸಲ್ಪಟ್ಟಿದ್ದ ಗಾಂಧಿಯವರು ಆ ಜನತೆಗಳಿಗೇ ದ್ರೋಹವನ್ನು ಬಗೆದರು. ಇದು ನನಗೆ ಸಹಿಸಲು ಸಾಧ್ಯವಾಗದಷ್ಟು ನೋವನ್ನು ಕೊಟ್ಟಿತು. ಈ ಸಂದರ್ಭಕ್ಕೆ ಹೊಂದತಕ್ಕ ಒಂದು ನಾಣ್ಣುಡಿಯಿದೆ – "ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ಥಿ". ಅಂತಹ ವ್ಯಕ್ತಿಯನ್ನು ಮಹಾತ್ಮನೆಂದು ಕರೆಯಬಹುದಾದರೆ, ಗಾಂಧಿಯನ್ನು ಮಹಾತ್ಮನೆಂದು ಕರೆಯಿರಿ. ನನ್ನ ಪ್ರಕಾರ, ಆತ ಕೇವಲ ಮೋಹನದಾಸ ಕರಮಚಂದ ಗಾಂಧಿ ಅಷ್ಟೆ.

ನಾನು 'ಚಿತ್ರ'ದ ಸಂಪಾದಕರು ಬಯಸಿದುದಕ್ಕಿಂತ ಹೆಚ್ಚಿನದನ್ನೇ ಕೊಟ್ಟಿದ್ದೇನೆ. 'ಚಿತ್ರ'ದ ಓದುಗರು

ಅರಗಿಸಿಕೊಳ್ಳಬಹುದಾದುದಕ್ಕಿಂತ ಅಧಿಕವಾದುದನ್ನು ನಾನು ಇಲ್ಲಿ ಹೇಳಿರಬಹುದು.

ಮೇಲೆ ಹೇಳಿದ ಎರಡು ಪ್ರಕರಣಗಳಲ್ಲದೆ ಇನ್ನೆರಡು ಪ್ರಸಂಗಗಳನ್ನು ತಿಳಿಸಿ ಇದನ್ನು ಮುಗಿಸುತ್ತೇನೆ. ರಾನಡೆ, ಗೋಖಲೆ, ಅಗರ್ಕರ್ ಮತ್ತು ತಿಲಕ್ ಅವರು ಚಳವಳಿಯನ್ನು ಪ್ರಾರಂಭಿಸಿದ ಕಾಲವು, ಗಾಂಧಿಯುಗಕ್ಕಿಂತ ಬೇರೆಯಾದುದು. ಅವರ ಯುಗವು ಜ್ಞಾನದ ಯುಗವಾಗಿತ್ತು. ಇದರಲ್ಲಿ ಯಾವುದೇ ಸಂದೇಹವಿಲ್ಲ. ಗಾಂಧಿಯುಗವನ್ನು ಭಾರತದ ತಮೋಯುಗವೆಂದು ಕರೆಹಬಹುದು. ಅಗರ್ಕರ್ ಮತ್ತು ತಿಲಕ್ ಅವರ ರಾಜಕೀಯವು ಪ್ರಾಮಾಣಿಕತೆ ಮತ್ತು ಸತ್ಯದ ಆಧಾರದ ಮೇಲೆ ನಿಂತಿತ್ತು. ಅದು ಜೊಳ್ಳಾಗಿರಲಿಲ್ಲ ಮತ್ತು ಕೇವಲ ಘೋಷಣೆಗಳಿಂದ ಕೂಡಿದುದಾಗಿರಲಿಲ್ಲ. ಆದರೆ ಗಾಂಧಿಯವರ ರಾಜಕೀಯವು ಟೊಳ್ಳು ಮತ್ತು ಆರ್ಭಟದಿಂದ ಕೂಡಿದುದಾಗಿದೆ. ಭಾರತದ ರಾಜಕೀಯ ಚರಿತ್ರೆಯಲ್ಲಿ ಇದು ಅತ್ಯಂತ ಅಪ್ರಮಾಣಿಕ ರಾಜಕೀಯವಾಗಿದೆ. ರಾಜಕೀಯದಿಂದ ನೈತಿಕತೆಯನ್ನು ಹೊರಹಾಕುವುದಕ್ಕೆ ಗಾಂಧಿಯವರೇ ಮುಖ್ಯವಾಗಿ ಹೊಣೆಗಾರರು. ಅದರ ಬದಲಿಗೆ ರಾಜಕೀಯದೊಳಕ್ಕೆ ಅವರು ವ್ಯಾಪಾರೀ ಮನೋಭಾವವನ್ನು ತಂದರು. ಉಪ್ಪು ತನ್ನ ರುಚಿಯನ್ನು ಕಳೆದುಕೊಂಡರೆ ಅದಕ್ಕೆ ಉಪ್ಪಿನ ರುಚಿಯನ್ನು ಯಾವುದರಿಂದ ನೀಡುವಿರಿ ಎಂದು ಜೀಸಸ್ ಕ್ರೈಸ್ಟ್ ಪಾರ್ಸಿಗಳನ್ನು ಒಮ್ಮೆ ಕೇಳಿದನು. ಭಾರತದ ಸಾರ್ವಜನಿಕ ಜೀವನದಲ್ಲಿ ಗಾಂಧಿಯವರ ಮಾರಕವಾದಂತಹ ಮಹಾತ್ಮನ ವಿಲಕ್ಷಣತೆಯನ್ನು ಹೇಗೆ ಹೋಗಲಾಡಿಸುವುದು ಎಂಬುದು ಎರಡನೆಯ ಮತ್ತು ಅತಿ ಮುಖ್ಯವಾದ ಪ್ರಶ್ನೆ. ಹಿಂದೂ ಭಾರತವು ಈಗ ಇದರ ಬಗ್ಗೆ ಎಚ್ಚರಗೊಳ್ಳದಿದ್ದರೆ ಇದನ್ನು ತಿದ್ದುಕೊಳ್ಳಲು ಅದಕ್ಕೆ ಬಹಳ ಕಾಲ ಹಿಡಿಯುತ್ತದೆ. ಭಾರತದ ಬಹುಪಾಲು ಜನತೆಯು ಅನಕ್ಷರಸ್ಥರು, ಅಜ್ಞಾನಿಗಳು ಮತ್ತು ನಾಗರಿಕತೆಯನ್ನು ಅರಿಯದವರು. ಇದು ಜನತೆಯ ಅಪರಾಧವಾಗಿರದಿರಬಹುದು. ಸಮಾಜದಲ್ಲಿ ವಿಶೇಷ ಸವಲತ್ತುಗಳನ್ನುಳ್ಳ ಕೆಲವೇ ಮಂದಿ ಈ ಜನತೆಯನ್ನು ಉದ್ದೇಶಪೂರ್ವಕವಾಗಿ ಅಜ್ಞಾನಿಗಳನ್ನಾಗಿಯೇ, ಅನಕ್ಷರಸ್ಥರನ್ನಾಗಿಯೇ ಇರಿಸಿದ್ದಾರೆ. ಕೇವಲ ತಾರ್ಕಿಕವಾಗಿ ಅಥವಾ ವೈಚಾರಿಕವಾಗಿ ಮಹಾತ್ಮರ ವಿರುದ್ಧ ಹೋರಾಡುವುದು ಅಸಾಧ್ಯವೆಂಬುದು ವಾಸ್ತವಾಂಶ. ಅದು ವೈಚಾರಿಕತೆಯು ಅಂಧಶ್ರದ್ಧೆಯ ಮತ್ತು ವಿಲಕ್ಷಣತೆಯ ವಿರುದ್ಧ ನಡೆಸಬೇಕಾದ ಹೋರಾಟವಾಗಿದೆ. ಮಹಾತ್ಮರ ವಶೀಕರಣದ ಪರಿಣಾಮಗಳನ್ನು ವೈಚಾರಿಕತೆಯಿಂದ ಮಾತ್ರ ತೊಡೆದುಹಾಕಲು ಸಾಧ್ಯವಾಗುವುದಿಲ್ಲ. ಈ ದಿಸೆಯಲ್ಲಿ ನಾನು ಕೆಲವು ಸಲಹೆಗಳನ್ನು ನೀಡಲು ಬಯಸುತ್ತೇನೆ. ಈ ಮಹಾತ್ಮರ ಚಟುವಟಿಕೆಗಳನ್ನು ಕೊನೆಗಾಣಿಸಲು, ಇತರ ಮಹಾತ್ಮರು ಭಾರತದ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಮತ್ತು ತಮ್ಮದೇ ಆದ ರಾಜಕೀಯ ಬಣವೊಂದನ್ನು ಕಟ್ಟಿಕೊಳ್ಳಬೇಕು. ಭಾರತದಲ್ಲಿ ಮಹಾತ್ಮರಿಗೇನೂ ಬರವಿಲ್ಲ. ಉದಾಹರಣೆಗೆ, ಉಪಾಸನಿ ಬುವಾ, ದಾದಾ ಮಹಾರಾಜ್, ಮೆಹರ್ ಬಾಬಾ, ನಾರಾಯಣ ಬುವಾ ಕೆಡ್ಗಾಂವ್ಕರ್ ಮೊದಲಾದವರು ಹೆಸರುವಾಸಿಯಾಗಿದ್ದಾರೆ. ಹಲವಾರು ಸಂತರು ಮತ್ತು ಮಹಾತ್ಮರು ಭಾರತದಲ್ಲಿ ಇದ್ದಾರೆ. ಮುಗ್ಧ ಜನರನ್ನು ಮೋಸಗೊಳಿಸುವ ಮತ್ತು ತಮ್ಮೆಡೆಗೆ ಸೆಳೆದುಕೊಳ್ಳುವ ಕಲೆಯನ್ನು ಅವರು ಬಲ್ಲರು. ಅವರ ಹಿಂಬಾಲಕರ ಸಂಖ್ಯೆ ಗಾಂಧೀಜಿಯವರ ಹಿಂಬಾಲಕರ ಸಂಖ್ಯೆಗಿಂತ ಅತಿ ಕಡಿಮೆಯೆಂಬುದು ನಿಜವಾದರೂ, ಇದಕ್ಕೆ ಅವರ ಅಸಾಮರ್ಥ್ಯ ಕಾರಣವಲ್ಲ. ಅವರಿಗೆ ಹಿಂದೂ ಸಮುದಾಯದವರ ಜೊತೆಯಲ್ಲಿ ತಾವೂ ಮುಕ್ತರಾಗುವ ಸಾಮರ್ಥ್ಯ ಮತ್ತು ಶಕ್ತಿ ಇದೆ. ಅವರಿಗೆ ಇದನ್ನು ಅರಿತುಕೊಂಡಿರದೆ ಇರುವುದಕ್ಕೆ ಹಲವು ಕಾರಣಗಳಿವೆ. ತಮ್ಮ ಇಬ್ಬಂದಿ ನೀತಿ ಹಾಗೂ ತಂತ್ರಗಾರಿಕೆಯ ಚಾರಿತ್ರ್ಯದಿಂದಾಗಿ ಎಲ್ಲರಿಗೂ ಆಧ್ಯಾತ್ಮಿಕ ಮತ್ತು ರಾಜಕೀಯ ಮುಕ್ತಿಯನ್ನು ದೊರಕಿಸಿಕೊಡುತ್ತೇನೆಂದು ಆಶ್ವಾಸನೆಯನ್ನು ನೀಡಿ ಹಿಂಬಾಲಕರ ದೊಡ್ಡ ಸೇನೆಯನ್ನು ಗಾಂಧಿಯವರು ಕಟ್ಟಿಕೊಂಡಿದ್ದಾರೆ. ತಾವೂ ಇದೇ ತಂತ್ರಗಳನ್ನು ಅನುಸರಿಸಿ ಉಪಾಸನಿ

ಬುವಾ, ನಾರಾಯಣ ಮಹಾರಾಜ್ ಮುಂತಾದವರು ತಮ್ಮದೇ ಒಂದು ಅಂಗಸಂಸ್ಥೆಯನ್ನು ಕಟ್ಟಿ, ಗಾಂಧಿಯವರ ಅಂಥ ಹಿಂಬಾಲಕರನ್ನು ಪರಿಣಾಮಕಾರಿಯಾಗಿ ಎದುರಿಸಬಲ್ಲರು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಕಡೆಯ ಪಕ್ಷ ಸದ್ಯದ ಪರಿಸ್ಥಿತಿಯಲ್ಲಿ, ಹಲವು ಪಕ್ಷಗಳನ್ನು ಹೊಂದಿರುವುದು ದೇಶಕ್ಕೆ ಲಾಭಕರ. ಇಂತಹ ಧ್ಯೇಯೋದ್ದೇಶಗಳನ್ನು ಹೊಂದಿರುವ ಸಂಸ್ಥೆಯೊಂದನ್ನು ಸ್ಥಾಪಿಸಿದರೆ, ಪುರಾಣಗಳಲ್ಲಿ ಅಪ್ಸರೆಯರನ್ನು ಉಪಯೋಗಿಸಿಕೊಂಡು ದೇವತೆಗಳು ತಮ್ಮ ವಿರೋಧಿಗಳನ್ನು ನಾಶಮಾಡಿದಂತಹ ಕಾರ್ಯವನ್ನು ಇಲ್ಲಿಯೂ ಸಾಧಿಸಬಹುದು. ಹೀಗೆ ನಡೆಯದಿದ್ದರೂ, ಇಂತಹ ಸಂಸ್ಥೆಯು ಕ್ರಾಂತಿಕಾರಿಯಾಗಷ್ಟೇ ಉಳಿದರೂ ಅದು ಲಾಭಕರವಾಗಿರುತ್ತದೆ. ಹೀಗೆ ಮಾಡುವುದರಿಂದ, ಈಗ ತನ್ನ ವಿನಾಶಕರ ಹಸ್ತಗಳನ್ನು ಎಲ್ಲಾ ಕಡೆಗಳಿಗೂ ಚಾಚುತ್ತಿರುವ ಫ್ಯಾಸಿಸಂನ ಹರಡುವಿಕೆಯನ್ನು ನಿಲ್ಲಿಸಬಹುದು. ಮಹಾತ್ಮನೊಬ್ಬನು ಬಂದು ಮುಕ್ತಿಯನ್ನು ಕೊಡಿಸುತ್ತೇನೆ ಎಂದು ನೇರವಾಗಿ ತನ್ನ ಕಾರ್ಯ ಪ್ರಣಾಳಿಕೆಯನ್ನು ಮುಂದಿಟ್ಟರೆ ಭಾರತವು ಬೌದ್ಧಿಕ ಸ್ವಾತಂತ್ರ್ಯವನ್ನು ಗಳಿಸಬಹುದು. ಇದು ಹಾಸ್ಯದ ವಿಷಯವಲ್ಲ. ಹೀಗೆ ಹೇಳುವುದರಲ್ಲಿ ಯಾರ ಹೆಸರನ್ನು ಕೆಡಿಸುವ ಅಥವಾ ಯಾರನ್ನೂ ಟೀಕಿಸುವ ಕೆಲಸವನ್ನು ಮಾಡುತ್ತಿಲ್ಲ. ನಾನು ನನ್ನಲ್ಲಿರುವ ಪೂರ್ಣಪ್ರಮಾಣದ ಗಂಭೀರತೆಯಿಂದ ಈ ಮಾತನ್ನು ಬರೆಯುತ್ತಿದ್ದೇನೆ.

ದಾದಾ ಮಹಾರಾಜ್, ಮೆಹರ್ ಬಾಬಾ ಅಥವಾ ನಾರಾಯಣ ಬುವಾರಂತಹವರ ಭಾರತದ ಸೇವೆಗೆ ಬರುವಂತೆ ಹಿಂದೂಗಳು ಅವರ ಮನವೊಲಿಸುತ್ತಾರೆಯೇ?

* * * * *

---

ಈ ಲೇಖನವು ಮೊದಲಬಾರಿಗೆ ಮರಾಠಿಯ ಚಿತ್ರ ಪತ್ರಿಕೆಯ ೧೯೩೮ರ ನವೆಂಬರ್ ದೀಪಾವಳಿ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದ್ದಿತು.

## ೭. ಮರಾಠಿ ವಿದ್ವಾಂಸರಿಗೆ ಆರ್ಥಿಕ ನೆರವಿನ ನಿಧಿಗಾಗಿ ಮನವಿ

ಮರಾಠಿಯ ಹೆಸರಾಂತ ವಿದ್ವಾಂಸರಾದ ಶ್ರೀ ಜೆ. ಆರ್. ಅಜಗಾಂವ್‌ಕರ್ ಅವರಿಗೆ ಅವರ ೬೦ನೆಯ ಹುಟ್ಟುಹಬ್ಬದಂದು ಧನಸಹಾಯ ಮಾಡಬೇಕೆಂದು ಅವರ ಸ್ನೇಹಿತರು ಮತ್ತು ಅಭಿಮಾನಿಗಳು ತೀರ್ಮಾನಿಸಿದ್ದಾರೆಂದು ಡಾ. ಅಂಬೇಡ್ಕರ್ ಅವರು ತಿಳಿಸಿದ್ದಾರೆ.

ಶ್ರೀ ಅಜಗಾಂವ್‌ಕರ್ ಅವರು ಪ್ರಾಚೀನ ಸಾಹಿತ್ಯದ ಅಧ್ಯಯನವನ್ನೇ ತಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಇದು ಅವರಿಗೆ ಆರ್ಥಿಕವಾಗಿ ದೊಡ್ಡಪ್ರಮಾಣದಲ್ಲಿ ಸಹಾಯಕವಾಗಲಿಲ್ಲ.

ಮರಾಠಿ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಯಶಸ್ವಿಯಾದ ಇವರು ೬೧ವರ್ಷದ ಹೊಸ್ತಿಲಿನಲ್ಲಿರುವ ಈ ಸಮಯದಲ್ಲಿ ಆರ್ಥಿಕವಾಗಿ ಯಶಸ್ವಿಯಾಗದೆ ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಸ್ವಲ್ಪ ಸಮಯದ ಹಿಂದೆ ತಮ್ಮ ಕೌಟುಂಬಿಕ ಆಪತ್ತುಗಳಿಗೆ ದುರ್ದೈವದಿಂದ ತುತ್ತಾದ ಈ ಮರಾಠಿ ವಿದ್ವಾಂಸರಿಗೆ ಈಗಲಾದರೂ ಒತ್ತಾಸೆಯಾಗಿ, ಸಹಾಯವಾಗಿ ಮರಾಠಿ ಸಾಹಿತ್ಯಪ್ರಿಯರು ನಿಲ್ಲುವುದು ಅತ್ಯಂತ ಅಗತ್ಯವಾಗಿದೆ.

ಈ ನಿಧಿಗೆ ಸಾಧ್ಯವಾದಷ್ಟು ಬೇಗ ತಮ್ಮ ವಂತಿಗೆಗಳನ್ನು ಕಳುಹಿಸುವಂತೆ ಡಾ. ಅಂಬೇಡ್ಕರ್ ಅವರು ಸಾರ್ವಜನಿಕರನ್ನು ಕೋರಿದ್ದಾರೆ.

ಸಹಿ/– ಬಿ.ಆರ್. ಅಂಬೇಡ್ಕರ್

* * * * *

---

ಬಾಂಬೆ ಕ್ರಾನಿಕಲ್, ದಿನಾಂಕ: ೧೯೩೯ರ ಜುಲೈ ೧೪.
ದಿನಾಂಕವನ್ನು ನಮೂದಿಸಿಲ್ಲ – ಸಂಪಾದಕರು.

# ೮. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಜ್ಞಾನವೇ ಶಕ್ತಿ

**ಮರಾಠ ಮೊದಲ ವಾರ್ಷಿಕ ಜರ್ನಲ್‌ಗೆ ನೀಡಿದ ಸಂದೇಶ**
**("ಮರಾಠ" ವಿಶೇಷ ಸಂಚಿಕೆ)**
**ಅಂಬೇಡ್ಕರ್ ಸ್ಕೂಲ್ ಆಫ್ ಪಾಲಿಟಿಕ್ಸ್, ಪೂನಾ.**
**ಸ್ಥಾಪನೆ: ೧೯೪೪ರ ಜುಲೈ ೩೦**
**ಅಧ್ಯಯನ, ಸೇವೆ ಮತ್ತು ತ್ಯಾಗ**

**ಸಂದೇಶ**

ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಜ್ಞಾನವೇ ಶಕ್ತಿ ಎಂದು ನಾನು ಯಾವಾಗಲೂ ಪ್ರತಿಪಾದಿಸುತ್ತೇನೆ. ಜ್ಞಾನಸಾಗದಲ್ಲಿ ಮುಳುಗುವವರೆಗೆ ಪರಿಶಿಷ್ಟ ಜಾತಿಗಳವರು ಸ್ವಾತಂತ್ರ್ಯ ಮತ್ತು ವಿಮುಕ್ತಿಯನ್ನು ಸಾಧಿಸುವ ತಮ್ಮ ಗುರಿಯನ್ನು ಮುಟ್ಟಲು ಸಾಧ್ಯವಿಲ್ಲ. ಪೂನಾದ ಅಂಬೇಡ್ಕರ್ ಸ್ಕೂಲ್ ಆಫ್ ಪಾಲಿಟಿಕ್ಸ್ ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆ ಎಂದು ನಾನು ನಂಬುತ್ತೇನೆ. ಮರಾಠ ಪತ್ರಿಕೆಯ ಪ್ರಥಮ ವಾರ್ಷಿಕ ಸಂಚಿಕೆಯು ಒಂದು ಒಳ್ಳೆಯ ಪ್ರಯತ್ನವಾಗಿದ್ದು ಅವರಿಗೆ ನನ್ನ ಶುಭಾಶಯಗಳು.

ಸಹಿ/– ಬಿ. ಆರ್. ಅಂಬೇಡ್ಕರ್

* * * * *

---

ಪ್ರಕಟಣೆಯ ದಿನಾಂಕ ಲಭ್ಯವಿಲ್ಲ – ಸಂಪಾದಕರು.

# ೯. ಕಾಂಗ್ರೆಸ್ ಪಕ್ಷವು ಅಸ್ಪೃಶ್ಯರನ್ನು ಉಪೇಕ್ಷಿಸುವ ಪ್ರಯತ್ನವನ್ನು ಮಾಡುತ್ತಿದೆ

ಭಾರತದ ರಾಜಕೀಯದ ಚರಿತ್ರೆಯಲ್ಲಿನ ಒಂದು ಅತಿ ಮುಖ್ಯವಾದ ದಿನವೆಂದರೆ ೧೯೩೦ರ ನವೆಂಬರ್ ೧೨. ಅಂದು ದಿವಂಗತ ಚಕ್ರವರ್ತಿ ೫ನೆಯ ಜಾರ್ಜ್ ಅವರು ಭಾರತೀಯ ದುಂಡುಮೇಜಿನ ಪರಿಷತ್ತನ್ನು ಔಪಚಾರಿಕವಾಗಿ ಉದ್ಘಾಟಿಸಿದರು. ಭಾರತೀಯರ ದೃಷ್ಟಿಯಿಂದ ಅದು ಬಹಳ ಮುಖ್ಯವಾದ ಪ್ರಸಂಗ ಏಕೆಂದರೆ, ಸಂವಿಧಾನವನ್ನು ರೂಪಿಸುವಾಗ ಭಾರತೀಯರ ಸಲಹೆಯನ್ನು ಕೇಳಬೇಕೆಂದು ಅವರ ಹಕ್ಕನ್ನು ಮೊಟ್ಟಮೊದಲ ಬಾರಿಗೆ ಮಾನ್ಯಮಾಡಿದುದು ಅಂದು. ಅಸ್ಪೃಶ್ಯರಿಗೆ ಅವರ ಚರಿತ್ರೆಯಲ್ಲಿ ಇದು ಯುಗಪ್ರವರ್ತಕ ಘಟನೆ. ಅವರ ವರ್ಗಗಳನ್ನು ಪ್ರತಿನಿಧಿಸಲು ಮೊಟ್ಟಮೊದಲ ಬಾರಿಗೆ ಅವಕಾಶವನ್ನು ಕೊಡಲಾಯಿತು. ಅವರನ್ನು ಪ್ರತಿನಿಧಿಸಿದ ಇಬ್ಬರು ಸದಸ್ಯರಲ್ಲಿ ದಿವಂಗತ ಶ್ರೀ ಶ್ರೀನಿವಾಸನ್ ಮತ್ತು ನಾನು ಇದ್ದೆವು. ಈ ಸಮ್ಮೇಳನದಲ್ಲಿ ಭಾಗವಹಿಸದೆ ಇದ್ದ ಏಕೈಕ ಪಕ್ಷವೆಂದರೆ ಭಾರತ ರಾಷ್ಟ್ರೀಯ ಕಾಂಗ್ರೆಸ್. ಸಮ್ಮೇಳನದ ಕಾರ್ಯಗಳನ್ನು ಒಂಬತ್ತು ಸಮಿತಿಗಳಿಗೆ ವಿಂಗಡಿಸಿಕೊಡಲಾಗಿತ್ತು. ಇವುಗಳಲ್ಲಿ ಒಂದು ಅಲ್ಪಸಂಖ್ಯಾತರ ಸಮಿತಿ.

೧೯೧೯ರ ಅಧಿನಿಯಮ ದಲಿತ ವರ್ಗಗಳ ರಕ್ಷಣೆಯ ಬಗ್ಗೆ ಒತ್ತಿಹೇಳಿದರೂ, ವಾಸ್ತವವಾಗಿ ಅದರಿಂದ ಸಾಧ್ಯವಾದದ್ದು ಏನೂ ಇಲ್ಲ. ಅದು ಕೇವಲ ತಾತ್ವಿಕ ಘೋಷಣೆಯಾಗಿತ್ತು. ಆದ್ದರಿಂದ, ನಾನು ಈ ಮುಂದಿನ ವಿಷಯಗಳನ್ನೊಳಗೊಂಡ ಮನವಿಯನ್ನು ಸಲ್ಲಿಸಿದೆ:

೧. ದಲಿತ ವರ್ಗಗಳವರಿಗೆ ತಾರತಮ್ಯರಹಿತವಾದ ಪೌರತ್ವ,

೨. ತಾರತಮ್ಯರಹಿತ ಹಕ್ಕುಗಳನ್ನು ಮುಕ್ತವಾಗಿ ಅನುಭವಿಸುವ ಅವಕಾಶ,

೩. ತಾರತಮ್ಯದ ವಿರುದ್ಧ ರಕ್ಷಣೆ,

೪. ದಲಿತ ವರ್ಗಗಳವರಿಗೆ ಶಾಸಕಾಂಗದ ಮೇಲೆ ಪ್ರಭಾವ ಬೀರುವಷ್ಟು ರಾಜಕೀಯ ಶಕ್ತಿ ಮತ್ತು ಕೆಳಕಂಡ ವಿಷಯಗಳನ್ನು ಒಳಗೊಂಡಂತೆ ತಮ್ಮ ಕಲ್ಯಾಣಗಳನ್ನು ಸಾಧಿಸುವಷ್ಟು ಕಾರ್ಯಾಂಗಗಳ ಮೇಲೆ ಪ್ರಭಾವವನ್ನುಬೀರಬಲ್ಲಷ್ಟು ಶಕ್ತಿ –

   ಅ) ಶಾಸಕಾಂಗದಲ್ಲಿ ಸಾಕಷ್ಟು ಪ್ರಾತಿನಿಧ್ಯ, ಮತ್ತು

   ಆ) ವಯಸ್ಕ ಮತದಾನದ ಮೂಲಕ ಮತ್ತು ಮೊದಲ ಹತ್ತುವರ್ಷಗಳವರೆಗೆ ಅವರಿಗೆ ಪ್ರತ್ಯೇಕ ಮತದಾನದ ವ್ಯವಸ್ಥೆ, ಹತ್ತುವರ್ಷಗಳ ನಂತರ ಮತದಾರರ ಜಂಟಿ ಸಮುದಾಯ ಮತ್ತು ಮೀಸಲು ಸ್ಥಾನಗಳು – ಇವುಗಳ ಮೂಲಕ ಅವರ ಜನರನ್ನೇ ಆಯ್ಕೆಮಾಡುವ ಹಕ್ಕು.

೫) ಸೇವಾ ಕ್ಷೇತ್ರದಲ್ಲಿ ಸಾಕಷ್ಟು ಪ್ರಾತಿನಿಧ್ಯ. ಎಲ್ಲಾ ಪ್ರಾಂತಗಳಲ್ಲಿಯೂ ಲೋಕಸೇವಾ ಆಯೋಗಗಳನ್ನು ರಚಿಸಬೇಕು ಮತ್ತು ಈ ಆಯೋಗಗಳ ಕರ್ತವ್ಯಗಳು ಹೀಗಿರಬೇಕು –

   ಅ) ಎಲ್ಲಾ ಸಮುದಾಯಗಳವರಿಗೂ ಸಾಕಷ್ಟು ಪ್ರಾತಿನಿಧ್ಯವಿರುವ ರೀತಿಯಲ್ಲಿ ನೇಮಕಾತಿಗಳನ್ನು ಮಾಡಬೇಕು, ಮತ್ತು,

   ಆ) ನಿರ್ದಿಷ್ಟ ಸೇವಾ ಕ್ಷೇತ್ರದಲ್ಲಿ ಈಗ ವಿವಿಧ ಸಮುದಾಯಗಳಿಗಿರುವ ಪ್ರಾತಿನಿಧ್ಯದ ಮಟ್ಟದಲ್ಲಿಯೇ

ನೇಮಕಾತಿಗಳಲ್ಲಿ ಆದ್ಯತೆಯನ್ನು ನಿಯಂತ್ರಿಸುವುದು.

೬) ತಾರತಮ್ಯಗಳನ್ನು ಮತ್ತು ಹಿತಾಸಕ್ತಿಗಳನ್ನು ಕಡೆಗಣಿಸುವುದನ್ನು ಪರಿಹರಿಸುವುದು.

೭) ಇಲಾಖೆಗಳ ಮೂಲಕ ವಿಶೇಷವಾಗಿ ಲಕ್ಷ್ಯವನ್ನು ಕೊಡುವಂತೆ ಮಾಡುವುದು,

೮) ಸಂಪುಟದಲ್ಲಿ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ.

ಈಗ ಅಸ್ಪೃಶ್ಯರ ಈ ಬೇಡಿಕೆಗಳಿಗೆ ಏನಾಯಿತು ಎಂಬುದನ್ನು ಅರಿಯಲು ನಾವು ದುಂಡು ಮೇಜಿನ ಸಮ್ಮೇಳನಕ್ಕೆ ಅಲ್ಪಸಂಖ್ಯಾತರ ಸಮಿತಿಯು ನೀಡಿದ ವರದಿಯನ್ನು ನೋಡಬೇಕು. ತಮಗೆ ಪ್ರತ್ಯೇಕ ಮತದಾರ ಸಮುದಾಯದ ಸ್ಥಾನಮಾನಗಳನ್ನು ಪಡೆಯುವ ದಲಿತ ವರ್ಗಗಳವರ ದೃಢ ಸಂಕಲ್ಪದ ಬಗ್ಗೆ ೧೬ ಮತ್ತು ೧೮ನೆಯ ಅಂಶಗಳು ನಮಗೆ ವಿಶದವಾಗಿ ತಿಳಿಸುತ್ತವೆ. ಭಾರತದ ರಾಜಕೀಯ ಜೀವನದಲ್ಲಿ ಅಸ್ಪೃಶ್ಯರನ್ನು ಒಂದು ಪ್ರತ್ಯೇಕ ಘಟಕವನ್ನಾಗಿ ಪರಿಗಣಿಸಲ್ಪಡುವುದಕ್ಕೆ ಅವರು ಅರ್ಹರು ಎಂದು ಒಮ್ಮತದಿಂದ ತೀರ್ಮಾನವಾಗಿತ್ತು. ಅಸ್ಪೃಶ್ಯರನ್ನು ಪ್ರತ್ಯೇಕವೆಂದು ಗುರುತಿಸುವ ಈ ಒಮ್ಮತದ ತೀರ್ಮಾನವು ಸಾಧ್ಯವಾದುದಕ್ಕೆ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅನುಪಸ್ಥಿತಿಯೇ ಕಾರಣ ಎಂಬುದನ್ನು ನಾವು ಮರೆಯಬಾರದು.

ಎರಡನೆಯ ದುಂಡು ಮೇಜಿನ ಸಮ್ಮೇಳನಕ್ಕೆ ಬಂದರೆ, ಅಲ್ಲಿ ಕಾಂಗ್ರೆಸ್ ತನ್ನ ಸಂಪೂರ್ಣ ಬಲದೊಂದಿಗೆ ಹಾಜರಿತ್ತು. ಪ್ರತಿಯೊಬ್ಬರೂ ಸಮ್ಮೇಳನವು ಯಶಸ್ವಿಯಾಗುವುದಕ್ಕೆ ಕಾಂಗ್ರೆಸ್‌ನತ್ತ ನೋಡುತ್ತಿದ್ದರು. ದುರದೃಷ್ಟದಿಂದ ಶ್ರೀ ಗಾಂಧಿಯವರನ್ನು ತಮ್ಮ ನಾಯಕನನ್ನಾಗಿ ಕಾಂಗ್ರೆಸ್‌ನವರು ಆಯ್ದುಕೊಂಡಿದ್ದರು. ಭಾರತದ ಭವಿಷ್ಯವನ್ನು ರೂಪಿಸಲು ಇವರಿಗಿಂತ ಅನರ್ಹವ್ಯಕ್ತಿಯನ್ನು ಕಾಣುವುದು ಸಾಧ್ಯವಿರಲಿಲ್ಲ. ಇತರರಿಗೆ ಈತನ ದೃಷ್ಟಿಕೋನವು ಪೂರ್ವಗ್ರಹಪೀಡಿತವೆಂದು ತೋರಿದರೂ, ತನ್ನ ತತ್ತ್ವಗಳಿಗೆ ಹೊಂದದಂತಹ ವಿಷಯಗಳನ್ನು ಘೋರವಾಗಿ ಪ್ರತಿಭಟಿಸುತ್ತಿದ್ದ ಹಾಗೂ ಮತ್ತೆ ಕೆಲವು ಅತಿ ಮುಖ್ಯವಾದ ವಿಷಯಗಳಲ್ಲಿ ಮೌನವಾಗಿರುತ್ತಿದ್ದ ಈ ವ್ಯಕ್ತಿ ತನ್ನ ವಿಚಿತ್ರ ಸ್ವರೂಪವನ್ನು ಪ್ರದರ್ಶಿಸಿದರು. ೧೯೩೧ರ ಸೆಪ್ಟೆಂಬರ್ ೧೫ರಂದು, ಶ್ರೀ ಗಾಂಧಿಯವರು ತಮ್ಮ ಮೊದಲ ಭಾಷಣವನ್ನು ಮಾಡಿದರು ಮತ್ತು ಅದರಲ್ಲಿ ಅಸ್ಪೃಶ್ಯರ ಸಮಸ್ಯೆ ಎನ್ನುವಂತಹುದು ಯಾವುದೂ ಇಲ್ಲ ಎಂದು ಹೇಳಿದರು. ಸಾಮಾಜಿಕ ಸಮ್ಮೇಳನವೊಂದರ ಬಗ್ಗೆ ಅವರು ಹೇಳಿದರು. ಆದರೆ ವಾಸ್ತವ ಸಂಗತಿಯೆಂದರೆ, ಈ ಸಾಮಾಜಿಕ ಸಮ್ಮೇಳನವನ್ನು ಕಾಂಗ್ರೆಸ್ ತನ್ನ ಚಪ್ಪರದಲ್ಲಿ ನಡೆಯಲು ಅನುಮತಿ ನೀಡಿರಲಿಲ್ಲ. ಇದಕ್ಕೆ ಕಾರಣ, ಈ ಸಾಮಾಜಿಕ ಸಮ್ಮೇಳನಕ್ಕೆ ಅವಕಾಶವನ್ನು ನೀಡಿದರೆ ಇಡೀ ಚಪ್ಪರವನ್ನೇ ಸುಟ್ಟುಹಾಕುವುದಾಗಿ ತಿಲಕರು ಬೆದರಿಕೆಯನ್ನು ಒಡ್ಡಿದ್ದರು. ೧೯೩೧ರ ಸೆಪ್ಟೆಂಬರ್ ೧೭ರಂದು ಫೆಡರಲ್ ಸ್ಟ್ರಕ್ಚರ್ ಸಮಿತಿಯಲ್ಲಿ ಶ್ರೀ ಗಾಂಧಿಯವರು ಕೆಳಗಿನಂತೆ ಉಗ್ರವಾಗಿ ಘೋಷಿಸಿದ್ದರು.

“ಅಸ್ಪೃಶ್ಯರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ವಿಷಯದಲ್ಲಿ ಅಂಬೇಡ್ಕರ್ ಅವರೊಂದಿಗೆ ಕಾಂಗ್ರೆಸ್ ಪಕ್ಷವೂ ಸಮಾನವಾಗಿ ಭಾಗಿಯಾಗುತ್ತದೆ. ಭಾರತದ ಉದ್ದಗಲಗಳಲ್ಲಿರುವ ಇತರ ಯಾವುದೇ ಹಿತಾಸಕ್ತಿಗಳ ವಿಷಯದಲ್ಲಿ ಯಾವುದೇ ಸಂಸ್ಥೆಗಾಗಲೀ ಅಥವಾ ವ್ಯಕ್ತಿಗಾಗಲೀ ಇರುವಷ್ಟೇ ಪ್ರೀತಿ ಕಾಂಗ್ರೆಸ್‌ಗೂ ಇದೆ. ಆದ್ದರಿಂದ ಈ ವಿಷಯಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವಿರುವುದನ್ನು ನಾನು ಪ್ರಬಲವಾಗಿ ವಿರೋಧಿಸುತ್ತೇನೆ”.

ಶ್ರೀ ಗಾಂಧಿ ಮತ್ತು ಕಾಂಗ್ರೆಸ್‌ನವರು ಅಸ್ಪೃಶ್ಯರ ವಿರುದ್ಧ ಮಾಡಿದ ಘೋಷಣೆಯು ಯುದ್ಧಕ್ಕೆ ಯಾವುದೇ ರೀತಿಯಲ್ಲಿಯೂ ಕಡಿಮೆಯದಾಗಿರಲಿಲ್ಲ. ಹಿಂದೂಗಳು, ಸಿಖ್ಖರು ಮತ್ತು ಮುಸ್ಲಿಮರ ನಡುವೆ ಒಪ್ಪಂದವೊಂದನ್ನು ಮಾಡಿಸಿ, ಅಸ್ಪೃಶ್ಯರನ್ನು ಸಂಪೂರ್ಣವಾಗಿ ಉಪೇಕ್ಷಿಸಿ, ಈ ಸಮಸ್ಯೆಯನ್ನು ಮುಚ್ಚಿಹಾಕಲು ಅವರು ಪ್ರಯತ್ನಿಸುತ್ತಿದ್ದರು. ತಮ್ಮ ಈ ಕಾರ್ಯವನ್ನು ಅವರು ವಿಶ್ವಾಸಪೂರ್ವಕವಾಗಿ ಮಾಡಿದ್ದರು.

ಇದೊಂದು ಕುಚೇಷ್ಟೆಯ ನಡೆಯೆಂದು ನನಗೆ ಗೊತ್ತಿದ್ದರಿಂದ, ನಾನು ಎದ್ದು ಹೀಗೆ ಹೇಳಿದೆ. "ನಾನು ಹಿಂದಿನ ಸಮ್ಮೇಳನದಲ್ಲಿಯೇ ನಮ್ಮ ಅಹವಾಲನ್ನು ಅಲ್ಪಸಂಖ್ಯಾತರ ಸಮಿತಿಗೆ ಒಪ್ಪಿಸಿದ್ದೇನೆ ಎಂದು ಹೇಳಬಯಸುತ್ತೇನೆ. ಯಾರೂ ಈ ವಿಷಯದಲ್ಲಿ ನನ್ನ ಪಾಲಿನ ಕೀರ್ತಿಯನ್ನು ಕಿತ್ತುಕೊಳ್ಳುವ ಹಾಗಿಲ್ಲ. ಇದನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ". ಈ ಅಂಶದ ಬಗ್ಗೆ ಶ್ರೀ ಗಾಂಧಿಯವರು ಮೌನವಾಗಿ ಹಿಂದೂಗಳು, ಸಿಖ್ಖರು ಮತ್ತು ಮುಸ್ಲಿಮರ ನಡುವಿನ ತಮ್ಮ ಒಪ್ಪಂದದ ಬಗ್ಗೆ ಆಲೋಚಿಸುತ್ತಿದ್ದರು. ಶ್ರೀ ಗಾಂಧಿಯವರು ಈ ಒಪ್ಪಂದವನ್ನು ಯಶಸ್ವಿಗೊಳಿಸುವಲ್ಲಿ ವಿಫಲರಾದರು. ಎಲ್ಲಾ ಪ್ರತಿನಿಧಿಗಳನ್ನೂ ಸರಕಾರವೇ ನೇಮಿಸಿದ್ದರಿಂದ, ಪ್ರಾತಿನಿಧ್ಯವು ದೋಷಪೂರ್ಣವಾಗಿದ್ದಿತು, ಹೀಗಾಗಿ ತಮ್ಮ ಪ್ರಯತ್ನ ವಿಫಲವಾಯಿತು ಎಂದು ತಮ್ಮ ವೈಫಲ್ಯವನ್ನು ವಿಷಾದದಿಂದ ನುಡಿದರು. ಅಸ್ಪೃಶ್ಯರನ್ನು ಪ್ರತಿನಿಧಿಸಿದ ನಾನು ಇದೊಂದು ಸುತ್ತಿಬಳಸಿ ನೀಡಿದ ಸವಾಲು ಎಂದು ಹೇಳಿದಾಗ, ಶ್ರೀ ಗಾಂಧಿಯವರು ತಾವೊಬ್ಬರೇ ದಲಿತ ವರ್ಗಗಳವರ ಸಮರ್ಥಕ ಎಂಬುದನ್ನು ಮತ್ತೆ ಮತ್ತೆ ಹೇಳಿದರು. ನಾನು ಅವರ ಸವಾಲಿಗೆ ಉತ್ತರವಾಗಿ "ಭಾರತದ ದಲಿತವರ್ಗಗಳವರಿಗೆ ಈ ಸಮ್ಮೇಳನಕ್ಕೆ ತಮ್ಮ ಪ್ರತಿನಿಧಿಯನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿದ್ದಿದ್ದರೆ, ಅಂತಹ ಸಂದರ್ಭದಲ್ಲಿಯೂ ನಾನು ಈಗಿರುವ ಈ ಸ್ಥಾನದಲ್ಲಿಯೇ ಇರುತ್ತಿದ್ದೆ. ಆದ್ದರಿಂದ ಆಯ್ಕೆ ಮಾಡಲ್ಪಟ್ಟ ಪ್ರತಿನಿಧಿಯೋ ಅಲ್ಲವೋ, ಆದರೂ ನನ್ನ ಸಮುದಾಯವನ್ನು ನಾನು ಸಂಪೂರ್ಣವಾಗಿ ಪ್ರತಿನಿಧಿಸುತ್ತೇನೆ" ಎಂದೆ. ಈ ಸಂದರ್ಭದಲ್ಲಿ ನನಗೆ ಬಂದಿದ್ದ ತಂತಿ ಸಂದೇಶವನ್ನು ಅವರಿಗೆ ತೋರಿಸಿದೆ. ಅದು ಇದುವರೆಗೂ ನಾನು ಸಂಧಿಸಿರದ ವ್ಯಕ್ತಿಯಿಂದ, ಇದುವರೆಗೂ ನಾನು ಭೇಟಿಕೊಡದ ಪ್ರದೇಶದಿಂದ ಬಂದಿತ್ತು. ಅಷ್ಟೇ ಅಲ್ಲದೆ, ಸಮ್ಮೇಳನದುದ್ದಕ್ಕೂ ನನಗೆ ಬೆಂಬಲ ಸೂಚಿಸುವಂತಹ ತಂತಿ ಸಂದೇಶಗಳ ಸುರಿಮಳೆಯೇ ಆಯಿತು. ಇದು ಗಾಂಧಿಯವರಿಗಾದ ಸೋಲು. ಅಪಮಾನಕರವಾದಂತಹ ಸೋಲನ್ನುಂಡ ಗಾಂಧಿಯವರು ಅನಿವಾರ್ಯವಾಗಿ ಮೌನಕ್ಕೆ ಶರಣಾದರು.

ಕೋಮುವಾರು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವ ಅಲ್ಪಸಂಖ್ಯಾತರ ಸಮಿತಿಯ ಪ್ರಯತ್ನದ ಕತೆ ಹೀಗೆ ಕೊನೆಗೊಂಡಿತು. ಅಸ್ಪೃಶ್ಯರ ಬೇಡಿಕೆಗಳನ್ನು ವಿರೋಧಿಸಲೆಂದೇ ಗಾಂಧಿಯವರು ದುಂಡು ಮೇಜಿನ ಸಮ್ಮೇಳನಕ್ಕೆ ಬಂದಿದ್ದರು. ಮುಸ್ಲಿಮರನ್ನು, ಸಿಖ್ಖರನ್ನು ಪ್ರತ್ಯೇಕ ಚುನಾವಣಾ ಸಮುದಾಯವೆಂದು ಪರಿಗಣಿಸುವುದಕ್ಕೆ ಅವರಿಗೆ ಯಾವ ಸಮಸ್ಯೆಯೂ ಇರಲಿಲ್ಲ. ಆದರೆ ಇಂತಹುದೇ ಅವಕಾಶವನ್ನು ಪಡೆಯಲು ಅಸ್ಪೃಶ್ಯರು ಪ್ರಯತ್ನಿಸಿದರೆ, ಅವರು ಅದನ್ನು ಉಗ್ರವಾಗಿ ಖಂಡಿಸುತ್ತಾರೆ. ಗಾಂಧಿಯವರ ಬಳಿ ಯಾವುದೇ ತರ್ಕವಿಲ್ಲ, ಯಾವುದೇ ತತ್ವಗಳಿಲ್ಲ. ಅವರ ಬಳಿ ಇರುವುದು 'ಆತ್ಮದ ಸಂಕಟ' ಮಾತ್ರ. ಇದರಿಂದಾಗಿ ಅಸ್ಪೃಶ್ಯರ ವಿಷಯದಲ್ಲಿ ಅವರು ಇಂತಹ ಆಣಿಮುತ್ತುಗಳನ್ನು ಉದುರಿಸುತ್ತಿರುತ್ತಾರೆ. ಇಷ್ಟೇ ಕಟುವಾಗಿ ಅವರು ಮುಸ್ಲಿಮರ ಬಗ್ಗೆ ಮಾತನಾಡುವ ಧೈರ್ಯವನ್ನು ತೋರುವುದಿಲ್ಲ. ಅದು ಅವರಿಗೆ ಹೇಗೆ ತಾನೆ ಸಾಧ್ಯವಾದೀತು? ಅವರು ಅಸ್ಪೃಶ್ಯರ ಬೇಡಿಕೆಗಳನ್ನು ವಿರೋಧಿಸಿದ ಕಾರಣ, ಇದುವರೆಗೆ ಯಾವುದೇ ಪ್ರತಿಫಲವನ್ನು ಪಡೆಯದೆ ಸವರ್ಣೀಯ ಹಿಂದೂಗಳ ಗುಲಾಮರಾಗಿದ್ದ ಅಸ್ಪೃಶ್ಯರು ಈಗ ಅಂತಹ ಗುಲಾಮಗಿರಿಯಿಂದ ಹೊರಗೆ ನಡೆಸಲ್ಪಡುತ್ತಿದ್ದಾರೆ ಮತ್ತು ಸವರ್ಣೀಯ ಹಿಂದುಗಳು ಇನ್ನು ಮುಂದೆ ಬಿಟ್ಟಿ ಗುಲಾಮರನ್ನು ಕಳೆದುಕೊಳ್ಳಬೇಕಾಗಿದೆ ಎಂಬ ವಾಸ್ತವ ಚಿತ್ರಣವನ್ನು ಅವರು ಕಾಣುತ್ತಿದ್ದಾರೆ.

ತನ್ನ ಪ್ರಾತಿನಿಧ್ಯದ ರೀತಿಯ ಬಗ್ಗೆ ಕಾಂಗ್ರೆಸ್ ತಮಟೆ ಬಾರಿಸಿಕೊಂಡು ಟಾಂಟಾಂ ಮಾಡಿಕೊಂಡರೂ, ಈ ಪ್ರಕರಣವು ಕಾಂಗ್ರೆಸ್ ಎಂದರೆ ಸವರ್ಣೀಯರ ಪಕ್ಷವೆಂಬುದನ್ನು ಸಾಬೀತುಗೊಳಿಸಿತು. ಸವರ್ಣೀಯ ಹಿಂದೂಗಳಿಂದ ಅಸ್ಪೃಶ್ಯರನ್ನು ಬೇರ್ಪಡಿಸುವ ವಿಷಯದಲ್ಲಿ ಕಾಂಗ್ರೆಸ್ ಏಕೆ ಇಷ್ಟು ಎಚ್ಚರವಾಗಿದೆ ಎಂಬುದಕ್ಕೆ

ಇದೇ ಕಾರಣ. ಅಸ್ಪೃಶ್ಯರ ಬಗೆಗೆ ಕಾಂಗ್ರೆಸ್ ಮಾತನಾಡುವಾಗ ಆ ಮಾತಿನ ಹಿಂದಿರುವ ಕಾಂಗ್ರೆಸ್‌ನ ಸ್ವಾರ್ಥ ಏನು? ಕಾಂಗ್ರೆಸ್ ಎಂದರೆ ಅದು ಹಿಂದೂ ಪಕ್ಷವೆಂದು ಅರ್ಥಮಾಡಬಹುದೇ? ಅಸ್ಪೃಶ್ಯರ ಸಮಸ್ಯೆಯು ಸವರ್ಣೀಯ ಹಿಂದೂಗಳ ಸಮಸ್ಯೆ. ಕಾಂಗ್ರೆಸ್ ಹಿಂದೂ ಸಂಸ್ಥೆಯಾಗಿರದೆ ಇದ್ದರೆ, ತನ್ನ ಕ್ಷೇತ್ರಕ್ಕೆ ಸಂಬಂಧಿಸಿರದ ಸಮಸ್ಯೆಯಲ್ಲಿ ಅದು ತನ್ನ ಮೂಗನ್ನೇಕೆ ತೂರಿಸಬೇಕು? ಅಸ್ಪೃಶ್ಯರ ನ್ಯಾಯಯುತ ಬೇಡಿಕೆಗಳಿಗೆ ಅವಕಾಶವನ್ನು ನಿರಾಕರಿಸಿ, ಅವರನ್ನು ಮತ್ತೆ ಸಾವಿರಾರು ವರ್ಷಗಳವರೆಗೆ ನಿದ್ದೆಹೋಗುವಂತೆ ಮಾಡುವುದೇ ಕಾಂಗ್ರೆಸ್‌ಗೆ ಬೇಕಿರುವುದು.

ಅಸ್ಪೃಶ್ಯರನ್ನು ತೃಣೀಕರಿಸಲು ಕಾಂಗ್ರೆಸ್ ತನ್ನೆಲ್ಲಾ ಶಕ್ತಿಯನ್ನೂ ಒಗ್ಗೂಡಿಸುತ್ತಿದೆ. ಅಸ್ಪೃಶ್ಯರನ್ನು ಕಡೆಗಣಿಸಲು ಅನುವಾಗಲು ಅವರು ಮುಸ್ಲಿಮರತ್ತ ನಡೆದರು. ಮುಸ್ಲಿಮರು ಅಸ್ಪೃಶ್ಯರ ಬೇಡಿಕೆಗಳಿಗೆ ಬೆಂಬಲ ಸೂಚಿಸದೆ ಇದ್ದರೆ ತಾವು ಮುಸ್ಲಿಮರ ೧೪ ಬೇಡಿಕೆಗಳಿಗೆ ಒಪ್ಪಿಕೊಳ್ಳುತ್ತೇನೆ ಎಂದು ಗಾಂಧಿಯವರು ಆಶ್ವಾಸನೆಯನ್ನು ನೀಡಿದರು. ಆದರೆ ಮುಸ್ಲಿಮರಲ್ಲಿ ಮಾನವತ್ವದ ಬಗೆಗೆ ಇರುವ ಉದಾತ್ತ ಭಾವನೆಗೆ ನಾವು ಅವರನ್ನು ವಂದಿಸಬೇಕು. ಅವರು ಅಸ್ಪೃಶ್ಯರನ್ನು ಪ್ರತ್ಯೇಕಿಸುವ ಕ್ರಮವನ್ನು ಒಪ್ಪದೆ, ಕಾಂಗ್ರೆಸ್ ಪಕ್ಷದ ಸೂಚನೆಯನ್ನು ನಿರಾಕರಿಸಿದರು. ಫ್ರಾಂಚೈಸಿ ಸಮಿತಿಯಲ್ಲಿ ಕೂಡ ಕಾಂಗ್ರೆಸ್ ಅಸ್ಪೃಶ್ಯರನ್ನು ಉಪೇಕ್ಷಿಸುವಂತೆ ಮಾಡಲು ಮತ್ತೊಂದು ಪ್ರಯತ್ನವನ್ನು ಮಾಡಿತು. ಅಲ್ಲಿದ್ದವರು ಆ ಸಮಿತಿಯಲ್ಲಿ ಅಸ್ಪೃಶ್ಯರೇ ಇರಲಿಲ್ಲವೆಂಬ ವಿಚಿತ್ರ ಸಂಗತಿಯನ್ನು ಹೇಳಿದರು. ತನ್ನ ಸ್ವಾರ್ಥಕ್ಕಾಗಿ ಅಸ್ಪೃಶ್ಯರನ್ನು ಹೊರಗಿಡಲು ಕಾಂಗ್ರೆಸ್ ಹೇಗೆ ಸಂಚನ್ನು ನಡೆಸುತ್ತದೆ ಮತ್ತು ಇದಕ್ಕಾಗಿ ಏನೆಲ್ಲ ಕ್ರಮವನ್ನು ಅದು ತೆಗೆದುಕೊಳ್ಳುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

* * * * *

# ೧೦. ಸೋಲನ್ನೊಪ್ಪಿಕೊಳ್ಳುವ ಸ್ವಭಾವವು ನನ್ನದಲ್ಲ

**ಸಂದೇಶ**

ಹಿಂದಿನ ಮಹಾ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗಳ ಒಕ್ಕೂಟವು ಸೋಲನ್ನು ಕಂಡಿತು*. ಈ ಸೋಲಿನ ಪರಿಣಾಮವಾಗಿ ಕೆಲವರು ಒಕ್ಕೂಟವನ್ನು ತ್ಯಜಿಸಿದರು, ಮತ್ತೆ ಕೆಲವರು ಅದರಲ್ಲಿ ತಾವು ಇಟ್ಟಿದ್ದ ವಿಶ್ವಾಸವನ್ನು ಕಳೆದುಕೊಂಡರು. ಆದರೆ ನಾನು ಇದನ್ನು ಸೋಲೆಂದು ಒಪ್ಪಿಕೊಳ್ಳುವುದಿಲ್ಲ. ಚುನಾವಣೆಯಲ್ಲಿ ಸ್ಥಾನಗಳನ್ನು ಗೆಲ್ಲಲೇಬೇಕೆಂಬುದು ಒಕ್ಕೂಟದ ಗುರಿಯಲ್ಲ. ಒಕ್ಕೂಟಕ್ಕಾಗಿ ಸ್ಥಾನಗಳನ್ನು ಗೆಲ್ಲುವುದು ನಾವು ಸಾಧಿಸಬೇಕೆಂದಿರುವುದರ ಸಾಧನ ಮಾತ್ರ. ಯಾರ ಸೇವೆಯನ್ನು ಮಾಡಬೇಕೆಂದು ಈ ಒಕ್ಕೂಟವನ್ನು ಪ್ರಾರಂಭಿಸಲಾಗಿದೆಯೋ, ಆ ಸೇವೆಯನ್ನು ಸಲ್ಲಿಸುವುದು ನಮ್ಮ ಗುರಿ. ಸಮಸ್ಯೆಗಳು ಮುಂದುವರೆಯುತ್ತಿರುವವರೆಗೆ ಒಕ್ಕೂಟವು ಒಂದಲ್ಲ ಒಂದು ರೀತಿಯಿಂದ ತನ್ನ ಕಾರ್ಯಕ್ರಮವನ್ನು ಮುಂದುವರೆಸುತ್ತಿರುತ್ತದೆ.

ಒಕ್ಕೂಟದ ಸೋಲನ್ನು ಸ್ವಾಗತಿಸಬೇಕು. ಇದು ಒಕ್ಕೂಟದೊಳಕ್ಕೆ ಪ್ರವೇಶಿಸಿದ್ದ ಅತ್ಯಂತ ಅನಪೇಕ್ಷಿತ ಶಕ್ತಿಗಳನ್ನು ಹೊರಕ್ಕೆ ಅಟ್ಟಲು ಸಹಕಾರಿಯಾಯಿತು. ಒಕ್ಕೂಟದಲ್ಲಿ ಉಳಿದುಕೊಂಡಿರುವವರ ಹೆಗಲಿನ ಮೇಲೆ ಈಗ ಹೆಚ್ಚಿನ ಜವಾಬ್ದಾರಿ ಬಿದ್ದಿದೆ. ಇವರಿಗೆ ನನ್ನ ಸಂದೇಶವೆಂದರೆ, ಈ ಸೋಲಿನ ನಂತರ ಒಕ್ಕೂಟವು ಒಣಗಿದ ಮರದಂತಾಗಿದೆ ಎಂದೆನಿಸಬಹುದು ಆದರೆ ಅದರ ಬೇರುಗಳು ಜೀವಂತವಾಗಿವೆ.

ಸಹಿ/– ಬಿ.ಆರ್. ಅಂಬೇಡ್ಕರ್**

* * * * *

---

* ೧೯೪೬ನೆಯ ಇಸವಿಯಲ್ಲಿ ನಡೆದುದು

** ಜೈ ಭೀಮ್: ದಿನಾಂಕ: ೧೯೪೬ರ ಮಾರ್ಚ್ ೧೨.
ಪುನರ್ಮುದ್ರಣ: ಖೈರ್‌ಮೊಡೆ, ಸಂಪುಟ ೮, ಪುಟ ೪೮

## ೧೧. ನಮ್ಮ ವಿದ್ಯಾರ್ಥಿಗಳು ಕಲಿತು ಮುಂದಾಳುಗಳಾಗಬೇಕು

೧೯೪೬ರ ಡಿಸೆಂಬರ್ ೨೫ರಿಂದ ೨೭ರ ವರೆಗೆ ನಡೆದ ಅಖಿಲ ಭಾರತ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟಗಳ ಸಮಾವೇಶಕ್ಕೆ ಡಾ. ಅಂಬೇಡ್ಕರ್ ಅವರು ನೀಡಿದ ಸಂದೇಶ

ತನ್ನ ಒಕ್ಕೂಟಕ್ಕೆ ಸಂವಿಧಾನವನ್ನು ನಿರೂಪಿಸುವ ಉದ್ದೇಶದಿಂದ ೧೯೪೬ರ ಡಿಸೆಂಬರ್ ೨೫ರಿಂದ ೨೭ರ ವರೆಗೆ ನಾಗಪುರದಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟದ ಎರಡನೆಯ ಸಮಾವೇಶವು ನಡೆಯಿತು*. ಬಾಂಬೆಯಲ್ಲಿ ೧೯೪೫ರ ಮೇ ೧೨ರಂದು ನಡೆದ ಪ್ರಥಮ ಸಮಾವೇಶದಲ್ಲಿ ಈ ಸಂಸ್ಥೆಗೆ ಅಡಿಪಾಯವನ್ನು ಹಾಕಲಾಗಿದ್ದಿತು.

ಈ ಸಮಾವೇಶದಲ್ಲಿ ಭಾಗವಹಿಸಬೇಕೆಂಬುದು ಡಾ. ಬಿ.ಆರ್. ಅಂಬೇಡ್ಕರ್ ಅವರ ಅಪೇಕ್ಷೆಯಾಗಿದ್ದಿತು. ಆದರೆ ಈ ಮೊದಲೇ ನಿಗದಿಯಾಗಿದ್ದ ಕಾರ್ಯಕ್ರಮಗಳ ನಿಮಿತ್ತ ಅವರು ಹಾಗೆ ಮಾಡಲಾಗಲಿಲ್ಲ. ಆದರೆ ಅವರು ಭಾರತದ ಮಧ್ಯಂತರ ಸರಕಾರದ ಕಾನೂನು ಸದಸ್ಯರಾಗಿರುವ ಶ್ರೀ ಜೋಗೇಂದ್ರನಾಥ್ ಮಂಡಲ್ ಅವರನ್ನು ಈ ಸಮಾವೇಶದಲ್ಲಿ ಭಾಗವಹಿಸಬೇಕೆಂದು ನಿರ್ದೇಶಿಸಿದರು.

ಈ ಸಮ್ಮೇಳನವು ಚಾರಿತ್ರಿಕವಾಗಿತ್ತು. ಅದನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ವ್ಯವಸ್ಥೆಗೊಳಿಸಲಾಗಿತ್ತು. ಸ್ವಾಗತ ಸಮಿತಿಯನ್ನು ೧೯೪೬ರ ಡಿಸೆಂಬರ್ ೧೬ರಂದು ರಚಿಸಲಾಗಿತ್ತು ಮತ್ತು ಸಮಾವೇಶವನ್ನು ಅದೇ ವರ್ಷದ ಡಿಸೆಂಬರ್ ೨೫ರಿಂದ ೨೭ರವರೆಗೆ ನಡೆಸಲಾಯಿತು. ಇಷ್ಟು ಕಡಿಮೆ ಅವಧಿಯಲ್ಲಿ ವ್ಯವಸ್ಥೆಗೊಳಿಸಿದ್ದರೂ, ಸುಮಾರು ಮೂರು ಸಾವಿರ ಹುಡುಗರೂ, ಐದು ನೂರು ಹುಡುಗಿಯರೂ ಹಾಜರಾಗಿದ್ದರು. ಅಲ್ಲಿಗೆ ಭೇಟಿಕೊಟ್ಟವರು ಸುಮಾರು ಮೂವತ್ತು ಸಾವಿರದಷ್ಟಿದ್ದರು. ಉತ್ತರ ಪ್ರದೇಶ, ಮಧ್ಯ ಪ್ರಾಂತ ಮತ್ತು ಬೆರಾರ್, ಮದರಾಸು, ಬೆಂಗಾಲ್, ಹೈದರಾಬಾದ್ ಮತ್ತು ಡೆಲ್ಲಿಗಳಿಂದ ಬಂದಿದ್ದ ಸದಸ್ಯರಿಗೆ ನಾಗಪುರದ ಹೊಸ ಕಾಲನಿಯಲ್ಲಿನ ಚೊಖಮೇಳ ಕನ್ಯಾ ಶಾಲೆಯಲ್ಲಿ ವಸತಿಯನ್ನು ಕಲ್ಪಿಸಲಾಗಿತ್ತು.

ಸಮಾವೇಶವು ಕಸ್ತೂರ್‌ಚಂದ್ ಪಾರ್ಕಿನಲ್ಲಿ ಸುಂದರವಾಗಿ ಅಲಂಕರಿಸಿದ್ದ ಚಪ್ಪರದಲ್ಲಿ ನಡೆಯಿತು. ಶ್ರೀ ಜೋಗೇಂದ್ರನಾಥ್ ಮಂಡಲ್ ಅವರು ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು. ೧೯೪೬ರ ಡಿಸೆಂಬರ್ ೨೫ರಂದು, ಸಾಯಂಕಾಲ ೬.೩೦ ರ ಸಮಯದಲ್ಲಿ ಅವರನ್ನು ನಲವತ್ತು ಸಾವಿರದಷ್ಟಿದ್ದ ಜನಸಮೂಹವು ನಾಗಪುರದ ರೈಲ್ವೆ ಸ್ಟೇಷನ್ನಿನಲ್ಲಿ ಸ್ವಾಗತಿಸಿತು. ಅವರಿಗೆ ಸಮತಾ ಸೈನಿಕ ದಳ ಮತ್ತು ರಾಷ್ಟ್ರೀಯ ಮುಸ್ಲಿಂ ಗಾರ್ಡ್‌ಪಡೆಗಳು ಸಾಂಪ್ರದಾಯಿಕ ವಂದನೆಗಳನ್ನು ಸಲ್ಲಿಸಿದವು. ಅವರನ್ನು ಪರಿಶಿಷ್ಟ ಜಾತಿಗಳ ಒಕ್ಕೂಟದ ನಾಯಕರು, ಮುಸ್ಲಿಂ ಲೀಗಿನ ನಾಯಕರು ಮತ್ತು ಸರಕಾರೀ ಅಧಿಕಾರಿಗಳು ಕೂಡ ಸ್ವಾಗತಿಸಿದರು.

---

*ಪರಿಶಿಷ್ಟ ೧ನ್ನು ನೋಡಿ

**ಸಂದೇಶ**

"೨, ವೆಸ್ಟರ್ನ್ ಕೋರ್ಟ್,
ಹೊಸ ದಿಲ್ಲಿ,
ದಿ. ೧೯೪೬ರ ಡಿಸೆಂಬರ್ ೨೦.

ಪ್ರಿಯ ಜೆಡಾಮ್,*

ಈ ಹಿಂದೆ ನಿಗದಿಯಾಗಿದ್ದ ಕಾರ್ಯಗಳ ನಿಮಿತ್ತ ನಿಮಗೆ ನಾನು ಪತ್ರ ಬರೆಯಲಾಗದಿದ್ದುದಕ್ಕೆ ವಿಷಾದಿಸುತ್ತೇನೆ.

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಸಮಾವೇಶಗಳಿಗಿಂತ ಪ್ರತ್ಯೇಕವಾದ ಸಮ್ಮೇಳನವನ್ನು ಅಖಿಲ ಭಾರತ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟವು ವ್ಯವಸ್ಥೆಗೊಳಿಸಲು ಉದ್ದೇಶಿಸಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಇದೊಂದು ವಿವೇಕಯುತ ನಿರ್ಧಾರವಾಗಿದ್ದು ನಾನು ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ.

ಮಾನ್ಯ ಜೆ. ಎನ್. ಮಂಡಲ್ ಅವರೊಂದಿಗೆ ಮಾತನಾಡಿದ್ದೇನೆ. ಅವರು ನಿಮ್ಮ ಸಮಾವೇಶದ ಅಧ್ಯಕ್ಷತೆಯನ್ನು ಖಂಡಿತವಾಗಿಯೂ ವಹಿಸಿಕೊಳ್ಳುತ್ತಾರೆ. ನನಗೂ ಸಮಾವೇಶದಲ್ಲಿ ಭಾಗವಹಿಸುವ ಅಪೇಕ್ಷೆಯಿತ್ತು. ಆದರೆ, ದುರದೃಷ್ಟವಶಾತ್, ಇದು ಸಾಧ್ಯವಾಗುವ ಹಾಗೆ ಕಾಣುವುದಿಲ್ಲ. ನಾನು ಸಮಾವೇಶಕ್ಕೆ ನನ್ನ ಶುಭಾಶಯಗಳನ್ನು ಕಳುಹಿಸುತ್ತಿದ್ದೇನೆ. ನಮ್ಮ ಯುವಕರು ಎರಡು ಸಂಗತಿಗಳನ್ನು ಕಲಿತುಕೊಳ್ಳಬೇಕು. ಅವರು ತಮಗೆ ದೊರೆತ ಅವಕಾಶದಲ್ಲಿಯೇ, ಬುದ್ಧಿವಂತಿಕೆಯಲ್ಲಿ ಇತರರಿಗಿಂತ ತಾವು ಯಾವುದೇ ರೀತಿಯಲ್ಲಿಯೂ ಕೀಳಲ್ಲ ಎಂಬುದನ್ನು ಸಾಧಿಸಿ ತೋರಿಸಬೇಕು. ಎರಡನೆಯದಾಗಿ ಅವರು ತಮ್ಮ ವೈಯಕ್ತಿಕ ಸಂತೋಷಗಳ ದಾರಿಯಲ್ಲಿ ಮುಂದುವರೆಯುವುದಷ್ಟೇ ಅಲ್ಲದೆ, ತಮ್ಮ ಜನಾಂಗವನ್ನು ಮುಕ್ತವನ್ನಾಗಿಸುವ, ಸಶಕ್ತವನ್ನಾಗಿಸುವ ಮತ್ತು ಗೌರವಿಸಲ್ಪಡುವಂತಹ ದಾರಿಯಲ್ಲಿ ಮುನ್ನಡೆಸಬೇಕು.

ಈ ಎರಡು ಉದ್ದೇಶಗಳನ್ನು ಸಮ್ಮೇಳನವು ನಮ್ಮ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೂಡುವಂತೆ ಮಾಡಿದರೆ ಸಮ್ಮೇಳನವು ಸಾರ್ಥಕವಾದ ಹಾಗೇ ಸರಿ. ಇದನ್ನು ಸಮ್ಮೇಳನವು ಸಾಧಿಸುತ್ತದೆ ಎಂಬ ನಂಬಿಕೆ ನನಗಿದೆ.

ಗೌರವಪೂರ್ವಕ ನಮಸ್ಕಾರಗಳೊಂದಿಗೆ,

ನಿಮ್ಮ ವಿಶ್ವಾಸಿ,
**ಬಿ.ಆರ್. ಅಂಬೇಡ್ಕರ್****

* * * * *

---

* ಟಿ. ವಿ. ಜೆಡಾಮ್, ಮಹಾ ಕಾರ್ಯದರ್ಶಿ, ಮಧ್ಯಪ್ರಾಂತ ಮತ್ತು ಬೆರಾರ್‌ನ ಪರಿಶಿಷ್ಟ ಜಾತಗಳ ವಿದ್ಯಾರ್ಥಿಗಳ ಒಕ್ಕೂಟ

** ಚಹಂಡೆ ವಿ.ಡಿ.; ಸಮಾವೇಶದ ವರದಿ

# ೧೨. ಮರಾಠಾ ಮಂದಿರಕ್ಕೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂದೇಶ

ಮರಾಠಾ ಸಮುದಾಯದವರು ಯಾವ ಧ್ಯೇಯ ಮತ್ತು ಉದ್ದೇಶಗಳನ್ನು ಅನುಸರಿಸಬೇಕು ಎಂದು ಅವರಿಗೆ ಸಂದೇಶವನ್ನು ನೀಡುವ ಮಟ್ಟಿನ ಅರ್ಹತೆ ನನಗಿದೆಯೆಂಬುದನ್ನು ನಾನೇ ನಂಬುವುದಿಲ್ಲ. ಆದರೆ ಮರಾಠಾ ಮಂದಿರದ ವ್ಯವಸ್ಥಾಪಕರು ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಮರಾಠರು ಏನು ಮಾಡಬೇಕು ಎಂಬುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲೇಬೇಕೆಂದು ಒತ್ತಾಯಮಾಡಿದುದರಿಂದ, ಅವರ ಕೋರಿಕೆಯನ್ನು ಮನ್ನಿಸುತ್ತಿದ್ದೇನೆ.

ಮರಾಠರು ತುಳಿತದಿಂದ ತಪ್ಪಿಸಿಕೊಳ್ಳಲು ರಾಜಕೀಯ ಮತ್ತು ವಿದ್ಯಾಭ್ಯಾಸ ಈ ಎರಡು ವಿಷಯಗಳಲ್ಲಿ ತಮ್ಮ ಚಿತ್ತವನ್ನು ನೆಡಬೇಕು. ಇದು, ಇತರ ಪ್ರತಿಯೊಂದು ಹಿಂದುಳಿದ ಸಮುದಾಯಕ್ಕೂ ಅನ್ವಯವಾಗುತ್ತದೆ. ಒಂದು ಸಮುದಾಯವು, ಆಳುವವರ ಮೇಲೆ ಹಿಡಿತವನ್ನು ಹೊಂದಿದ್ದರೆ ಮಾತ್ರ ಸುಭದ್ರಸ್ಥಿತಿಯಲ್ಲಿರುವುದಕ್ಕೆ ಸಾಧ್ಯ. ಒಂದು ಅಲ್ಪಸಂಖ್ಯಾತ ವರ್ಗವು ಆಡಳಿತದಲ್ಲಿ ತನ್ನ ಪ್ರಭಾವವನ್ನು ಹೊಂದಿದ್ದರೆ ಹೇಗೆ ತನ್ನ ಪಾರಮ್ಯವನ್ನು ಸಾಧಿಸಿಕೊಳ್ಳಬಹುದು ಎಂಬುದಕ್ಕೆ ಭಾರತದಲ್ಲಿ ಬ್ರಾಹ್ಮಣರೇ ಉದಾಹರಣೆ. ಇಂತಹ ಪ್ರಭಾವವು ಅತ್ಯಗತ್ಯ. ಏಕೆಂದರೆ ಅಭಿವೃದ್ಧಿಯು ಸರಕಾರದ ನೀತಿಗಳ ಮೇಲೆ ಅವಲಂಬಿತವಾಗಿರುತ್ತದೆ, ಆದರೆ ಅವುಗಳ ಮೇಲೆ ಪ್ರಭಾವವನ್ನು ಬೀರಲಾಗದಿದ್ದರೆ, ಸರಕಾರದ ನೀತಿಗಳಿಗೆ ಒಂದು ದಿಕ್ಕನ್ನು ಕೊಡುವುದು ಸಾಧ್ಯವಾಗುವುದಿಲ್ಲ.

ಶಿಕ್ಷಣಕ್ಕೂ ಗಮನವನ್ನೀಯುವುದು ಅಷ್ಟೇ ಅಗತ್ಯ. ಬೇರೆ ಬೇರೆ ಸಮುದಾಯಗಳವರು ಅಧಿಕಾರಕ್ಕಾಗಿ ನಡೆಸುವ ಪೈಪೋಟಿಯಲ್ಲಿ ಮುಖ್ಯವಾಗುವುದು ಸಾಮಾನ್ಯ ಶಿಕ್ಷಣವಲ್ಲ, ಆದರೆ ಉನ್ನತ ಶಿಕ್ಷಣ. ಉನ್ನತ ಶಿಕ್ಷಣವೆಂದರೆ, ಮರಾಠರು ಅಧಿಕಾರದ ಸೂಕ್ತ ಸ್ಥಾನಗಳನ್ನು ಹಿಡಿದು, ಅದರಲ್ಲಿ ತಮ್ಮ ಜನಾಂಗವನ್ನು ಸರ್ವೇಕ್ಷಣೆಮಾಡುವಂತಹ, ಅದನ್ನು ಹಿಡಿತದಲ್ಲಿಟ್ಟುಕೊಳ್ಳುವಂತೆ ಮಾಡಿ ಅನ್ಯಾಯಗಳ ವಿರುದ್ಧ ರಕ್ಷಣೆಮಾಡುವಂತಹ ಶಿಕ್ಷಣ. ಈ ದೃಷ್ಟಿಯಿಂದ ನೋಡಿದರೂ ಮತ್ತೆ ನಾವು ನೋಡುವುದು ಬ್ರಾಹ್ಮಣ ಸಮುದಾಯವನ್ನು. ಎಷ್ಟೆಲ್ಲಾ ಎಡರು ತೊಡರುಗಳನ್ನು ಎದುರಿಸಬೇಕಾಗಿ ಬಂದರೂ, ಎಷ್ಟು ವಿರೋಧವನ್ನು ಎದುರಿಸಬೇಕಾಗಿ ಬಂದರೂ, ಬ್ರಾಹ್ಮಣ ಸಮುದಾಯವು ಪ್ರಮುಖ ಸ್ಥಾನಗಳನ್ನು ಆಕ್ರಮಿಸಿಕೊಂಡಿರುವುದರಿಂದ, ಅದು ತನ್ನ ಸ್ಥಾನವನ್ನು ಭದ್ರವಾಗಿ ಕಾಯ್ದುಕೊಂಡು ಬಂದಿದೆ.

ನನ್ನ ದೃಷ್ಟಿಯಲ್ಲಿ ಮರಾಠಾ ಮಂದಿರವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಂತಹ ಸುಲಭಸಾಧ್ಯವಾದ ಸೇವೆಗಳ ಮೂಲಕ ತನ್ನ ಸಮುದಾಯಕ್ಕೆ ಸೇವೆ ಸಲ್ಲಿಸುವಷ್ಟಕ್ಕೆ ಸೀಮಿತವಾಗಬಾರದು. ಅನೇಕ ಪ್ರಾಂತೀಯ ಸರಕಾರಗಳು ಪ್ರಾಥಮಿಕ ಶಿಕ್ಷಣವನ್ನು ಹರಡಲು ಯೋಜನೆಗಳನ್ನು ಹಮ್ಮಿಕೊಂಡಿವೆ. ಈ ವಿಷಯದ ಬಗ್ಗೆ ಭಾರತದಲ್ಲಿ ಅನೇಕರು ತೃಪ್ತಿಯನ್ನು ಹಾಗೂ ಕೃತಜ್ಞತಾಭಾವವನ್ನು ಹೊಂದಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಹರಡುವ ಯೋಜನೆಗಳು ನನ್ನಲ್ಲಿ ನಿರುತ್ಸಾಹವನ್ನು ಉಂಟುಮಾಡುತ್ತದೆ. ಅದು ನನ್ನಲ್ಲಿ ಉತ್ಸಾಹವನ್ನು ತುಂಬುವ ಬದಲು, ಅದನ್ನು ನಾನು ಒಂದು ಪ್ರಲೋಭನ ತಂತ್ರವೆಂದು ಕರೆಯುವ ಹಾಗೆ ಮಾಡುತ್ತದೆ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರುಗಳ ನಡುವೆ ಇರುವ ಜಾತಿಗಳಲ್ಲಿನ ಅಂತರಕ್ಕೆ, ಶತಮಾನಗಳಿಂದ

ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವೆ ಇರುವ ಮೇಲು ಕೀಳುಗಳ ಭಾವನೆಗೆ ಶಿಕ್ಷಣದಲ್ಲಿನ ತಾರತಮ್ಯವೇ ಕಾರಣ ಎಂಬುದನ್ನು ಹಲವರು ಅರಿತಿಲ್ಲದಿರುವುದು ನನಗೆ ವಿಷಾದವನ್ನುಂಟುಮಾಡುತ್ತದೆ. ಪ್ರಾಥಮಿಕ ಶಿಕ್ಷಣದ ಪ್ರಸಾರದಿಂದ ಈ ತಾರತಮ್ಯವು ನಾಶವಾಗುವುದಿಲ್ಲ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವೆ ಇರುವ ಈ ತಾರತಮ್ಯವನ್ನು ನೀಗಿಸಲು ಬ್ರಾಹ್ಮಣೇತರರಲ್ಲಿ ಕೆಲವರು ಉನ್ನತ ಶಿಕ್ಷಣವನ್ನು ಪಡೆದು ಪ್ರಮುಖ ಸ್ಥಾನಗಳಲ್ಲಿ ಬ್ರಾಹ್ಮಣರು ಸ್ಥಾಪಿಸಿಕೊಂಡಿರುವ ಏಕಸ್ವಾಮ್ಯವನ್ನು ಮುರಿಯಲು ಸಹಾಯಕವಾಗುವಂತಹ ನೀತಿಯು ಶಿಕ್ಷಣಪದ್ಧತಿಯಲ್ಲಿ ಜಾರಿಗೆ ಬರಬೇಕು. ಬ್ರಾಹ್ಮಣೇತರರನ್ನು ಪ್ರಮುಖ ಹುದ್ದೆಗಳಿಗೆ ಅರ್ಹರನ್ನಾಗಿಸುವಂತಹ ಶಿಕ್ಷಣವನ್ನು ನೀಡುವ ಕೆಲಸವನ್ನು ಸರಕಾರವು ಕೈಗೆತ್ತಿಕೊಳ್ಳಬೇಕು ಎಂಬುದು ನನ್ನ ಅಭಿಪ್ರಾಯ. ಸರಕಾರವು ಹೀಗೆ ಮಾಡದಿದ್ದರೆ, ಈ ಕಾರ್ಯವನ್ನು ಮರಾಠಾ ಮಂದಿರವು ಮಾಡಬೇಕು.

ನಾನು ಇನ್ನೊಂದು ಅಂಶವನ್ನು ಇಲ್ಲಿ ಹೇಳಬಯಸುತ್ತೇನೆ. ಮೇಲಿನ ವರ್ಗಕ್ಕೆ ಹೋಲಿಸಿದಾಗ ಮಧ್ಯಮ ವರ್ಗವು ಒಂದು ದೋಷವನ್ನು ಹೊಂದಿದೆ. ಈ ದೋಷವು ವಿಶ್ವದೆಲ್ಲಡೆಯೂ ಇರುವಂತಹುದು. ಕೆಳವರ್ಗಗಳ ಅಭಿವೃದ್ಧಿಯನ್ನು ಮೇಲ್ವರ್ಗವು ಸಹಿಸುವಂತೆ ಮಧ್ಯಮವರ್ಗವು ಸಹಿಸುವುದಿಲ್ಲ. ಅದಕ್ಕೆ ಕೆಳವರ್ಗಗಳು ಹೊಂದಿರುವಂತಹ ಆದರ್ಶವೂ ಇರುವುದಿಲ್ಲ. ಈ ಗುಣವು ಮಧ್ಯಮವರ್ಗವನ್ನು ಇತರ ಎರಡೂ ವರ್ಗಗಳ ಶತ್ರುವನ್ನಾಗಿ ಮಾಡುತ್ತದೆ. ತನಗಿಂತ ಮೇಲಿರುವುದರಿಂದ ಮೇಲ್ವರ್ಗವನ್ನು ಅದು ದ್ವೇಷಿಸುತ್ತದೆ. ಕೆಳವರ್ಗಗಳು ತಮ್ಮ ಮಟ್ಟಕ್ಕೆ ಬೆಳೆಯುವುದಕ್ಕೆ ಪ್ರಯತ್ನಿಸುವುದನ್ನು ಅದು ಇಷ್ಟಪಡುವುದಿಲ್ಲವಾದುದರಿಂದ, ಕೆಳವರ್ಗಗಳನ್ನೂ ಅದು ದ್ವೇಷಿಸುತ್ತದೆ. ಮರಾಠರು ಭಾರತದ ಮಧ್ಯಮವರ್ಗಕ್ಕೆ ಸೇರಿದ್ದು, ಅದರೊಂದಿಗೆ ಕೆಲಸಮಾಡಿದವರೆಲ್ಲರಿಗೂ ನಾನು ಮೇಲೆ ಹೇಳಿದ ದೋಷವು ಅದರಲ್ಲಿಯೂ ಇರುವುದು ಕಾಣುತ್ತದೆ. ಮರಾಠರು ಮುಂದುವರೆಯಲು ಎರಡು ದಾರಿಗಳಿವೆ: ಮೊದಲನೆಯದು, ಮೇಲ್ವರ್ಗಗಳ ಜೊತೆ ಸೇರಿ ಕೆಳವರ್ಗಗಳ ಮುಂದುವರಿಕೆಯನ್ನು ತಡೆಯುವುದು; ಎರಡನೆಯದು ಕೆಳವರ್ಗಗಳ ಸಂಗಡ ಬೆರೆತು, ಈ ಎರಡೂ ವರ್ಗಗಳ ಮೇಲೆ ಇರುವ ವರ್ಗಗಳ ಸ್ವಾಮ್ಯವನ್ನು ಮುರಿಯುವುದು. ಮರಾಠರು ಕೆಳವರ್ಗಗಳವರ ಸಂಗಡವಿದ್ದ ಕಾಲವೂ ಇತ್ತು. ಇತ್ತೀಚೆಗೆ ಅವರು ಮೇಲ್ವರ್ಗಗಳವರ ಜೊತೆ ಕೈಜೋಡಿಸಿದ್ದಾರೆ. ಅವರು ಯಾವ ದಾರಿಯಲ್ಲಿ ನಡೆಯಬೇಕೆಂದು ಹೇಳುವುದು ನನ್ನ ಕೆಲಸವಲ್ಲ. ಈ ಎರಡು ದಾರಿಗಳಲ್ಲಿ ಅವರು ಯಾವುದನ್ನು ಹಿಡಿಯುತ್ತಾರೆ ಎಂಬುದರ ಮೇಲೆ ಅವರ ಹಣೆಯ ಬರಹವಷ್ಟೇ ಅಲ್ಲದೆ, ಇತರರದ್ದೂ ಅವಲಂಬಿತವಾಗಿರುತ್ತದೆ. ಇದರ ತೀರ್ಮಾನವನ್ನು ಮರಾಠಾ ಮುಂದಾಳುಗಳ ವಿವೇಕಕ್ಕೆ ಬಿಡಬೇಕು, ಆದರೆ ಮುಂದಾಳುಗಳಲ್ಲಿ ವಿವೇಕದ ಕೊರತೆ ಎದ್ದು ಕಾಣಿಸುತ್ತಿದೆ.

ಸಹಿ/– ಬಿ. ಆರ್. ಅಂಬೇಡ್ಕರ್*

* * * * *

*ಮರಾಠಾ ಮಂದಿರದ ಪತ್ರಿಕೆಯ ವಿಶೇಷಾಂಕ, ೧೯೪೭ರ ಮಾರ್ಚ್ ೨೩.

# ೧೩. ಅಸ್ಪೃಶ್ಯರು ಮನುಷ್ಯರ ಮಟ್ಟವನ್ನು ಮುಟ್ಟುವವರೆಗೆ ನಿಲ್ಲದೆ ಮುಂದುವರೆಯಬೇಕು

**(ಜೈ ಭೀಮ್ ಪತ್ರಿಕೆಯ ಓದುಗರಿಗೆ ಡಾ. ಅಂಬೇಡ್ಕರ್ ಅವರ ಸಂದೇಶ)**

ನನ್ನ ೫೫ನೆಯ ವರ್ಷದ ಜನ್ಮದಿನದಂದು ನಿಮ್ಮ ಪತ್ರಿಕೆಯ ವಿಶೇಷಾಂಕಕ್ಕೆ ಒಂದು ಸಂದೇಶವನ್ನು ನೀಡುವಂತೆ ನನ್ನನ್ನು ಕೇಳಿದ್ದೀರಿ. ಭಾರತದ ರಾಜಕೀಯ ಮುಂದಾಳುಗಳನ್ನು ಪ್ರವಾದಿಗಳ ಸ್ಥಾನದಲ್ಲಿ ನಿಲ್ಲಿಸುವ ಪ್ರವೃತ್ತಿ ದುರದೃಷ್ಟಕರ. ಭಾರತದ ಹೊರಗೆ ಜನರು ತಮ್ಮ ತಮ್ಮ ಪ್ರವಾದಿಗಳ ಜನ್ಮದಿನಗಳನ್ನು ಆಚರಿಸುತ್ತಾರೆ. ಆದರೆ ಭಾರತದಲ್ಲಿ ಪ್ರವಾದಿಗಳ ಜನ್ಮದಿನಗಳ ಆಚರಣೆಯಂತೆಯೇ ರಾಜಕೀಯದವರ ಜನ್ಮದಿನಗಳನ್ನೂ ಆಚರಿಸುತ್ತಾರೆ. ಇಂತಹ ಆಚರಣೆಗಳು ನಡೆಸುವುದು ವಿಷಾದದ ಸಂಗತಿ. ನನ್ನ ಜನ್ಮದಿನವನ್ನು ಆಚರಿಸುವುದನ್ನು ವೈಯಕ್ತಿಕವಾಗಿ ನಾನು ಇಷ್ಟಪಡುವುದಿಲ್ಲ. ನಾನು ಪ್ರಜಾಪ್ರಭುತ್ವವಾದಿಯಾಗಿರುವುದರಿಂದ, ವ್ಯಕ್ತಿಗಳ ಆರಾಧನೆಯು ಪ್ರಜಾಪ್ರಭುತ್ವದ ವಿಕೃತಿಯೆಂದು ಭಾವಿಸುತ್ತೇನೆ. ಅರ್ಹರಾದ ನಾಯಕರ ಬಗ್ಗೆ ಅವರ ಹಿಂಬಾಲಕರಲ್ಲಿ ಇರುವ ಮೆಚ್ಚುಗೆ, ಪ್ರೀತಿ ಮತ್ತು ಗೌರವಗಳು ಇಬ್ಬರಿಗೂ – ಅಂದರೆ ನಾಯಕರಿಗೂ ಮತ್ತು ಅವರ ಹಿಂಬಾಲಕರಿಗೂ – ಸಾಕೆಂದು ನನ್ನ ಭಾವನೆ. ಆದರೆ ನಾಯಕನನ್ನು ಆರಾಧಿಸುವುದು ನಿಶ್ಚಯವಾಗಿಯೂ ಒಳ್ಳೆಯದಲ್ಲ. ಇಬ್ಬರ ನೈತಿಕ ಸ್ಥೈರ್ಯವನ್ನೂ ಇದು ಕುಂದಿಸುತ್ತದೆ. ಆದರೆ ಇದೆಲ್ಲವೂ ಪ್ರಸಕ್ತ ವಿಷಯಕ್ಕೆ ಹೊರತಾಗಿದೆಯೆಂದು ಭಾವಿಸುತ್ತೇನೆ. ರಾಜಕೀಯ ನಾಯಕನೊಬ್ಬನನ್ನು ಪ್ರವಾದಿಯ ಸ್ಥಾನದಲ್ಲಿ ಕೂರಿಸಿದರೆ, ಅವನು ಪ್ರವಾದಿಯ ಪಾತ್ರವನ್ನು ಮಾಡಲೇಬೇಕು ಮತ್ತು ತನ್ನ ಜನ್ಮದಿನಗಳಂದು ಪ್ರವಾದಿಯ ರೀತಿಯಲ್ಲಿ ಸಂದೇಶವನ್ನು ತನ್ನ ಹಿಂಬಾಲಕರಿಗೆ ನೀಡಲೇಬೇಕು.

ಅಸ್ಪೃಶ್ಯರಿಗೆ ನಾನು ಯಾವ ಸಂದೇಶವನ್ನು ನೀಡಲಿ? ಯಾವ ಸಂದೇಶವನ್ನೂ ಅವರಿಗೆ ಕೊಡಲು ನನಗೆ ಸಾಧ್ಯವಿಲ್ಲ. ಬದಲಿಗೆ ಒಂದು ಗ್ರೀಕ್ ಕತೆಯನ್ನು ಹೇಳಿ ಅದರಲ್ಲಿರುವ ಸಂದೇಶದತ್ತ ಬೆರಳುತೋರಿಸುತ್ತೇನೆ. ಈ ಕತೆಯು ಡೆಮಿತರ್ ಎಂಬ ಗ್ರೀಕ್ ದೇವತೆಯನ್ನು ಕುರಿತ ಹೋಮರನ ಒಂದು ಗೀತೆಯಲ್ಲಿದೆ. ಈ ಮಹಾನ್ ದೇವತೆಯು ತನ್ನ ಮಗಳನ್ನು ಅರಸುತ್ತಾ ಕೆಲೋಸ್‌ನ ಆಸ್ಥಾನಕ್ಕೆ ಬರುತ್ತಾಳೆ. ದಾದಿಯ ವೇಷದಲ್ಲಿ ಬರುವ ಈ ದೇವತೆಯನ್ನು ಯಾರೂ ಗುರುತಿಸುವುದಿಲ್ಲ. ರಾಣಿ ಮೆಟೊನೈರಾ ತನ್ನ ಹಸುಗೂಸನ್ನು ನೋಡಿಕೊಳ್ಳಲು ಅವಳನ್ನು ನೇಮಿಸುತ್ತಾಳೆ. ಆ ಕೂಸು ಮುಂದೆ ಟ್ರಿಪ್ಟೋಲೆಮಸ್ ಎಂದು ಕರೆಯಲ್ಪಟ್ಟ ಡೆಮಾಫೂನ್.

ತನ್ನಲ್ಲಿ ಆ ಮಗುವನ್ನು ದೈವತ್ವಕ್ಕೆ ಏರಿಸಲು ನಿಜವಾದ ಪ್ರೀತಿ ಮತ್ತು ಉದ್ದೇಶವಿದ್ದರೂ, ರಾತ್ರಿಯಲ್ಲಿ ಎಲ್ಲರೂ ನಿದ್ರೆಮಾಡುತ್ತಿರವಾಗ ಅವಳು ನಿರ್ದಯವಾಗಿ ಆ ಮಗುವಿನ ಬಟ್ಟೆಗಳನ್ನು ಕಳಚಿ, ಸಣ್ಣಗೆ ಉರಿಯುತ್ತಿರುವ ಕೆಂಡದ ಹಾಸಿಗೆಯ ಮೇಲೆ ಮಲಗಿಸುತ್ತಿರುತ್ತಾಳೆ. ಆ ಮಗು ಬೆಂಕಿಯ ಮೇಲೆ ಮಲಗುವುದನ್ನು ಸಹಿಸಿಕೊಂಡು ಈ ದಿವ್ಯದಿಂದ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಮಗುವು ಒಳ್ಳೆಯ ದೃಢಕಾಯವನ್ನು, ಇತರರು ಮಹಿಮೆಯೆಂದು ಪರಿಗಣಿಸಬಹುದಾದುಕ್ಕಿಂತ ಹೆಚ್ಚಿನದನ್ನು ಪಡೆದುಕೊಂಡು ತನ್ನಲ್ಲಿಯೇ ಒಂದು ಅದ್ಭುತ ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತದೆ. ಒಂದು ರಾತ್ರಿ, ರಾಣಿ ಮೆಟೊನೈರಾ

ಆತಂಕದಿಂದ ಮಗುವಿನ ಕೋಣೆಗೆ ನುಗ್ಗಿಬಂದು ಈ ಪ್ರಕ್ರಿಯೆಯ ದೃಶ್ಯವನ್ನು ನೋಡಿ, ದಾದಿಯ ನಿಜವಾದ ಉದ್ದೇಶವನ್ನು ಅರಿಯಲಾಗದೆ, ಬೆಂಕಿಯ ಹಾಸಿಗೆಯನ್ನು ಪಕ್ಕಕ್ಕೆ ತಳ್ಳಿ ಮಗುವನ್ನು ಎತ್ತಿಕೊಂಡು ಹೋಗುತ್ತಾಳೆ. ಇದರಿಂದಾಗಿ, ಅವಳು ಮಗುವು ಬೆಂಕಿಯ ಮೇಲೆ ಮಲಗುತ್ತಿದ್ದ ದಾರುಣತೆಯನ್ನು ತಪ್ಪಿಸಿದರೂ, ಅದರ ಸಂಗಡವೇ, ಆ ಮಗುವು ಮುಂದೆ ಅದ್ಭುತ ವ್ಯಕ್ತಿಯಾಗುವುದನ್ನು ಹಾಗೂ ದೈವತ್ವಕ್ಕೇರುವುದನ್ನು ತಪ್ಪಿಸುತ್ತಾಳೆ.

ಇದರಿಂದ ಹೊಮ್ಮುವ ನೀತಿಯಾವುದು? ತೀವ್ರ ಹೋರಾಟ ಹಾಗೂ ತ್ಯಾಗದಿಂದ ಮಾತ್ರ ಔನ್ನತ್ಯವನ್ನು ಸಾಧಿಸಬಹುದು. ಅಗ್ನಿದಿವ್ಯದ ಮೂಲಕ ಪುಟವಿಡಲ್ಪಡದಿದ್ದರೆ ಮನುಷ್ಯತ್ವವನ್ನಾಗಲೀ, ದೈವತ್ವನ್ನಾಗಲೀ ಪಡೆಯುವುದು ಸಾಧ್ಯವಿಲ್ಲ. ಅಗ್ನಿಯು ಪಾವನಗೊಳಿಸುತ್ತದೆ, ಬಲವನ್ನು ನೀಡುತ್ತದೆ, ಹೋರಾಟವೂ, ಜೀವನದ ಸಂಕಟಗಳೂ ಇದನ್ನೇ ಮಾಡುತ್ತವೆ. ಕೆಳಕ್ಕೆ ತುಳಿಯಲ್ಪಟ್ಟ ಯಾರೂ ಹೋರಾಟಮಾಡದೆ, ಸಂಕಟಗಳನ್ನು ಅನುಭವಿಸದೆ, ಮಹತ್ವವಾದುದನ್ನು ಸಾಧಿಸಲು ಸಾಧ್ಯವಿಲ್ಲ. ಭವಿಷ್ಯವನ್ನು ಕಟ್ಟುವುದಕ್ಕಾಗಿ, ಇಂದಿನ ಸುಖಭೋಗಗಳನ್ನು–ಕೆಲವೊಂದು ಆವಶ್ಯಕತೆಗಳನ್ನೂ – ಆತ ತ್ಯಾಗಮಾಡಬೇಕಾಗುತ್ತದೆ. ಬೈಬಲ್ಲಿನ ಭಾಷೆಯನ್ನು ಬಳಸಬಹುದಾದರೆ, ಜೀವನದ ಪಂದ್ಯದಲ್ಲಿ ಎಲ್ಲರೂ ಭಾಗವಹಿಸಬಹುದು, ಆದರೆ ಕೆಲವೇ ಮಂದಿ ಅದರಲ್ಲಿ ಆಯ್ಕೆಯಾಗುತ್ತಾರೆ. ಕೆಳಕ್ಕೆ ತುಳಿಯಲ್ಪಟ್ಟವರಲ್ಲಿ ಬಹಳಷ್ಟು ಜನರು ಮಹತ್ವವಾದುದನ್ನು ಸಾಧಿಸುವಲ್ಲಿ ವಿಫಲರಾಗುತ್ತಾರೆ. ಅದಕ್ಕೆ ಕಾರಣ, ಮುಂದಿನ ಒಳಿತಿಗಾಗಿ ಅವರು ಇಂದಿನ ಸುಖವನ್ನು, ಕೆಲವು ಆವಶ್ಯಕತೆಗಳನ್ನು, ತ್ಯಾಗಮಾಡಲು ಬೇಕಾದ ಧೈರ್ಯವನ್ನಾಗಲೀ, ಕಠಿಣ ನಿರ್ಧಾರವನ್ನಾಗಲೀ ಹೊಂದಿರುವುದಿಲ್ಲ.

ಈ ಕತೆಯಲ್ಲಿರುವುದಕ್ಕಿಂದ ಉತ್ತವಾದ ಮತ್ತು ಮಹತ್ವವಾದ ಸಂದೇಶವು ಬೇರೆಡೆ ಸಿಗುತ್ತದೆಯೇ? ನನಗೆ ತಿಳಿದ ಮಟ್ಟಿಗೆ ಇಲ್ಲ. ಇದು ಅಸ್ಪೃಶ್ಯರಿಗೆ ನಾನು ನೀಡುವ ಅತ್ಯಂತ ಯುಕ್ತವಾದ ಸಂದೇಶ. ನಾನು ಅವರ ಹೋರಾಟ ಮತ್ತು ಸಂಕಟಗಳನ್ನು ಬಲ್ಲೆ. ತಮ್ಮ ಮುಕ್ತಿಗಾಗಿ ಅವರು ನಡೆಸುತ್ತಿರುವ ಹೋರಾಟದಲ್ಲಿ ಅವರು ಅನುಭವಿಸುತ್ತಿರುವ ಸಂಕಟಗಳು ನಾನು ಅನುಭವಿಸಿದ ಸಂಕಟಗಳಿಗಿಂತಲೂ ಹೆಚ್ಚಿನವು ಎಂಬುದನ್ನೂ ಬಲ್ಲೆ. ಈ ಅರಿವು ನನಗಿದ್ದರೂ ನಾನು ಇದಕ್ಕಿಂತ ಉತ್ತಮ ಸಂದೇಶವನ್ನು ಕೊಡಲಾರೆ. ನನ್ನ ಸಂದೇಶವೆಂದರೆ ಹೋರಾಡಿ, ಮತ್ತೂ ಹೋರಾಡಿ, ತ್ಯಾಗವನ್ನು ಮಾಡಲು ಸಿದ್ದರಾಗಿರಿ ಮತ್ತು ಇನ್ನೂ ಹೆಚ್ಚಿನ ತ್ಯಾಗವನ್ನು ಮಾಡಿ. ನಾವು ಮಾಡುವ ತ್ಯಾಗವನ್ನು ಮತ್ತು ಅನುಭವಿಸುವ ಸಂಕಟಗಳನ್ನು ಎಣಿಸದೆ, ನಡೆಸುವ ಹೋರಾಟವೇ, ಮತ್ತು ಹೋರಾಟ ಮಾತ್ರವೇ ಅವರಿಗೆ ಬಿಡುಗಡೆಯನ್ನು ತಂದುಕೊಡುತ್ತದೆ, ಇನ್ನಾವುದೂ ಅಲ್ಲ.

ತಾವು ಮೇಲೆ ಬರಲು ಮತ್ತು ಸಂಕಷ್ಟಗಳನ್ನು ಎದುರಿಸಲು ಅಸ್ಪೃಶ್ಯರು ಒಂದು ಸಾಮೂಹಿಕ ಇಚ್ಛಾಶಕ್ತಿಯನ್ನು ಬೆಳಸಿಕೊಳ್ಳಬೇಕು. ಈ ಕಾರ್ಯದಲ್ಲಿರುವ ಪಾವಿತ್ರ್ಯವನ್ನು ಅವರು ಮನದಟ್ಟುಮಾಡಿಕೊಳ್ಳಬೇಕು ಹಾಗು ತಮ್ಮ ಉದ್ದೇಶವನ್ನು ಸಾಧಿಸಲು ಅಗತ್ಯವಾದ ದೃಢ ನಿರ್ಧಾರವನ್ನು ತಮ್ಮಲ್ಲಿಯೇ ಬೆಳಸಿಕೊಳ್ಳಬೇಕು.

ಅವರ ಈ ಕಾರ್ಯ ಘನವಾದದ್ದು ಮತ್ತು ಅವರ ಉದ್ದೇಶ ಉದಾತ್ತವಾದದ್ದು ಆಗಿರುವುದರಿಂದ ಅಸ್ಪೃಶ್ಯರು ಮುಂದಿನಂತೆ ಪ್ರಾರ್ಥನೆ ಮಾಡಬೇಕು:

"ತಾವು ಹುಟ್ಟಿರುವ ಜನಾಂಗದ ಉದ್ಧಾರಕ್ಕಾಗಿ ಬದುಕುವವರು ಪುಣ್ಯವಂತರು, ತಮ್ಮ ಬದುಕಿನ ಯೌವನದ ಫಲಗಳನ್ನು, ತಮ್ಮ ಮನೋದೈಹಿಕ ಶಕ್ತಿಗಳನ್ನು ತಮ್ಮ ಕೈಲಾದುದೆಲ್ಲವನ್ನೂ ಗುಲಾಮಗಿರಿಯ ನಾಶಕ್ಕಾಗಿ ಧಾರೆಯೆರೆಯುವವರು ಪುಣ್ಯವಂತರು, ಒಳ್ಳೆಯದೇ ಬರಲಿ, ಕೆಟ್ಟದ್ದೇ ಬರಲಿ, ಮಳೆಯೇ

ಬರಲಿ, ಬಿಸಿಲೇ ಇರಲಿ, ಬಿರುಗಾಳಿ ಬೀಸಲಿ ಮಾನಾಪಮಾನಗಳು ಎದುರಾಗಲಿ, ಎದೆಗುಂದದೆ ಮುನ್ನಡೆದು, ಅಸ್ಪೃಶ್ಯರು ಸಂಪೂರ್ಣ ಮಾನವತ್ವನ್ನು ಪಡೆಯುವವರೆಗೆ ತಾವು ವಿರಮಿಸುವುದಿಲ್ಲ ಎನ್ನುವವರು ಪುಣ್ಯವಂತರು"*

* ಮದರಾಸಿನ ಜೈ ಭೀಮ್ ಪತ್ರಿಕೆಯ 'ಡಾ. ಅಂಬೇಡ್ಕರ್ ಅವರ ಜನ್ಮದಿನದ ವಿಶೇಷಾಂಕ', ೧೯೪೭ರ ಏಪ್ರಿಲ್ ೧೩.

## ೧೪. 'ದ ಎಸೆನ್ಸ್ ಆಫ್ ಬುದ್ಧಿಸಂ'ನ ಮೂರನೇ ಆವೃತ್ತಿಗೆ ಬರೆದ ಪೀಠಿಕೆ

ಈ ಪುಸ್ತಕದ ಲೇಖಕರು ಪ್ರೊ. ಪಿ. ಲಕ್ಷ್ಮಿ ನರಸು ಅವರು. ನಾನು ಈ ಪುಸ್ತಕವನ್ನು ಪರಿಚಯಿಸುತ್ತಿರುವುದು ನನಗೆ ಅತ್ಯಂತ ಸಂತೋಷಕರವಾಗಿದ್ದರೂ, ನಾನು ಲೇಖಕರನ್ನು ಭೇಟಿಯಾಗಿರಲಿಲ್ಲ, ಮತ್ತು ಅವರ ಬಗ್ಗೆ ಹೆಚ್ಚಿನ ತಿಳಿವಳಿಕೆಯೂ ಇಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳಬೇಕು. ಆತನ ಬಗ್ಗೆ ಮತ್ತು ಆತನ ಕೃತಿಗಳ ಬಗ್ಗೆ ಸಿಗಬಹುದಾದ ಮಾಹಿತಿಯನ್ನು ಕಲೆಹಾಕಲು ಪ್ರಯತ್ನಿಸಿದೆ. ಈ ವಿಷಯದಲ್ಲಿ ಡಾ. ಪಟ್ಟಾಭಿರಾಮಯ್ಯ ಅವರು ಸೂಕ್ತವಾದ ಆಕರವೆಂಬುದನ್ನು ಕಂಡುಕೊಂಡೆ. ಅವರು ಪ್ರೊ. ಲಕ್ಷ್ಮಿ ನರಸು ಅವರನ್ನು ವೈಯಕ್ತಿಕವಾಗಿ ಬಲ್ಲವರು ಮತ್ತು ಅವರ ಮಿತ್ರರು. ಡಾ. ಪಟ್ಟಾಭಿಯವರು ನನಗೆ ಪ್ರೊ. ನರಸು ಅವರ ಜೀವನದ ಬಗ್ಗೆ ನೀಡಿದ ಮಾಹಿತಿಯನ್ನು ನಾನು ಇಲ್ಲಿ ಕೊಡುತ್ತಿದ್ದೇನೆ.

ಪ್ರೊ. ಪಿ. ಲಕ್ಷ್ಮಿ ನರಸು, ಬಿ.ಎ., ಅವರು ಕಳೆದ ಶತಮಾನದ ಅಗಾಧ ಬುದ್ಧಿಮತ್ತೆಯುಳ್ಳ ವ್ಯಕ್ತಿಯಾಗಿದ್ದರು. ಅವರು ಮದರಾಸು ಕ್ರಿಶ್ಚಿಯನ್ ಕಾಲೇಜಿನಿಂದ ಭೌತಶಾಸ್ತ್ರದಲ್ಲಿ ಪದವಿಯನ್ನು ಪಡೆದಿದ್ದರು. ಬೋಧಕರಾಗಿ, ಪ್ರಯೋಗಶಾಲೆಯಲ್ಲಿನ ಡೆಮಾನ್ಸ್ಟ್ರೇಟರ್ ಆಗಿ, ೧೮೯೭ರ ವೇಳೆಗೆ ಸಹಾಯಕ ಪ್ರಾಧ್ಯಾಪಕರಾಗಿದ್ದರು. ೧೮೯೮-೯೯ ರಲ್ಲಿ ಭೌತಶಾಸ್ತ್ರದ ಖಾಯಂ ಪ್ರಾಧ್ಯಾಪಕರಾಗಿದ್ದ ಪ್ರೊ. ಮೊಫ಼ಟ್ ಅವರ ರಜೆಯ ಅವಧಿಯಲ್ಲಿ ಪ್ರೊ. ನರಸು ಅವರ ಮೇಲೆ ಬಿ.ಎ. ತರಗತಿಗಳಿಗೆ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳನ್ನು ಬೋಧಿಸುವ ಹೊಣೆಯನ್ನು ಹೊರಿಸಲಾಯಿತು. ಕಳೆದ ಶತಮಾನದ ೯೦ರ ದಶಕದಲ್ಲಿ ನಿಸ್ತಂತು ತಾರು ಇನ್ನೂ ಶೈಶವಾವಸ್ಥೆಯಲ್ಲಿದ್ದ ಕಾಲದಲ್ಲಿ, ಪ್ರೊ. ನರಸು ಅವರು ಅದರಲ್ಲಿ ಸಾಕಷ್ಟು ಕೆಲಸಮಾಡಿ, ಭೌತಶಾಸ್ತ್ರದಲ್ಲಿ ವಿಶೇಷ ಮನ್ನಣೆಯನ್ನು ಗಳಿಸಿದ್ದರು. ಅಂತಹ ಹಿರಿಯರನ್ನು ಕಡೆಗಣಿಸಿ ಯುವಕ ಪ್ರೊ. ಮೊಫ಼ಟ್ ಅವರನ್ನು ಪ್ರೊಫೆಸರನ್ನಾಗಿ ನೇಮಿಸಿದ್ದರು. ೧೮೯೮-೯೯ರಷ್ಟರಲ್ಲಿಯೇ ಪ್ರೊ. ನರಸು ಅವರು (ಆಗ ಅವರನ್ನು ಹಾಗೆಯೇ ಕರೆಯುತ್ತಿದ್ದುದು) ಭೌತ ಮತ್ತು ರಸಾಯನಶಾಸ್ತ್ರದಲ್ಲಿ ಬಿ.ಎ. ಮತ್ತು ಎಂ.ಎ. ಎರಡಕ್ಕೂ ಪರೀಕ್ಷಕರಾಗಿದ್ದರು. ಅವರು ಚಲನಶಾಸ್ತ್ರದಲ್ಲಿ (ಡೈನಮಿಕ್ಸ್) ವಿಶೇಷವಾಗಿ ಪರಿಣತಿಯನ್ನು ಹೊಂದಿದ್ದರು. ಒಮ್ಮೆ ಪ್ರೊ. ನರಸು ಅವರು ಚಲನಶಾಸ್ತ್ರದ ಸಮಸ್ಯೆಯೊಂದರ ಬಗ್ಗೆ ವ್ಯಕ್ತಪಡಿಸಿದ್ದ ಅಭಿಪ್ರಾಯದ ಸತ್ಯಾಸತ್ಯತೆಯನ್ನು ಆಗ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಪ್ರಾಧ್ಯಪಕರೂ ಮತ್ತು ಪರೀಕ್ಷಕರ ಮಂಡಲಿಯ ಅಧ್ಯಕ್ಷರೂ ಆಗಿದ್ದ ಮುಂಗೋಪಿ ಆಂಗ್ಲ ಪ್ರೊ. ವಿಲ್ಸನ್ ಅವರು ಪ್ರಶ್ನಿಸಿದರು. ಪ್ರೊ. ನರಸು ಅವರು ತಕ್ಷಣ ಆ ಸವಾಲನ್ನು ಸ್ವೀಕರಿಸಿದರು. ಅಹಂಕಾರದಿಂದ ತುಂಬಿದ್ದ ಪ್ರೊ. ವಿಲ್ಸನ್ ಅವರು 'ಮಿ. ನರಸು, ನನಗೆ ಹೇಳಿಕೊಡಲು ಪ್ರಯತ್ನಿಸುತ್ತಿದ್ದೀರಾ?' ಎಂದು ಪ್ರಶ್ನಿಸಿದರು. ಅದಕ್ಕೆ ಅಷ್ಟೇ ತೀವ್ರವಾಗಿ ಪ್ರೊ. ನರಸು ಅವರು ಪ್ರೊ. ವಿಲ್ಸನ್ ಅವರಿಗೆ ಚಲನಶಾಸ್ತ್ರದ ಬಗ್ಗೆ ನಾನು ಹೇಳಿಕೊಡುತ್ತಿರುವುದರಿಂದ ನನಗೆ ಸಂತೋಷವಾಗುತ್ತಿದೆ' ಎಂದರು. ಈ ಘಟನೆಯು ನಡೆದು ೫೦ ವರ್ಷಗಳಾದ ಮೇಲೆಯೂ ಅದು ನಮಗೆ ಆಸಕ್ತಿದಾಯಕವಾಗಿರುವುದರ ಕಾರಣ, ಪ್ರೊ. ನರಸು ಅವರು ಶ್ರದ್ಧಾಭಂಜಕರಾಗಿದ್ದುದನ್ನು ಇದು ತೋರಿಸುತ್ತದೆ. ಪ್ರೊ. ನರಸು ಅವರು ಸಮಾಜ ಸುಧಾರಕರಾಗಿದ್ದರು. ಅವರು ಜಾತಿಪದ್ಧತಿಯ ವಿರುದ್ಧ ತಮ್ಮ ಕೈಲಾದಷ್ಟು ಹೋರಾಡಿದ್ದರು ಮತ್ತು ೧೮ನೆಯ ಶನಮಾನದ ೯೦ರ ದಶಕದಷ್ಟು ಹಿಂದೆಯೇ ಹಿಂದೂಗಳ ಕ್ರೌರ್ಯದ ವಿರುದ್ಧ ದಂಗೆಯ ಪತಾಕೆಯನ್ನು ಹಾರಿಸಿದ್ದರು.

ಅವರು, ಬೌದ್ಧಮತದ ಬಗ್ಗೆ ಅಭಿಮಾನವನ್ನು ಹೊಂದಿದ್ದರು ಮತ್ತು ವಾರಗಟ್ಟಲೆ ಈ ವಿಷಯದ ಮೇಲೆ ಉಪನ್ಯಾಸಗಳನ್ನು ಮಾಡುತ್ತಿದ್ದರು. ತಮ್ಮ ವಿದ್ಯಾರ್ಥಿ ಸಮುದಾಯದಲ್ಲಿ ಅವರು ಬಹಳ ಹೆಸರುವಾಸಿಯಾಗಿದ್ದರು ಮತ್ತು ತಮ್ಮ ವ್ಯಕ್ತಿತ್ವದ ಐಂದ್ರಜಾಲಿಕ ಪ್ರಭಾವವನ್ನು ಬೀರಿ ವಿದ್ಯಾರ್ಥಿಗಳ ಮನೋವೈಶಾಲ್ಯವನ್ನು, ದೃಷ್ಟಿಯನ್ನು ಹೆಚ್ಚಿಸುತ್ತಿದ್ದರು. ಅವರ ಸ್ವಾಭಿಮಾನ ಮತ್ತು ದೇಶಾಭಿಮಾನವು ಉನ್ನತಮಟ್ಟದ್ದಾಗಿತ್ತು. ಅವರು ತಮ್ಮ ಯೂರೋಪಿಯನ್ ಅಧಿಕಾರಿಗಳಿಂದ ಆಗುವ ಅವಮಾನವನ್ನು ಸಹಿಸುತ್ತಿರಲಿಲ್ಲ. ಮೈಮುದುಡಿಕೊಂಡು ಆಂಗ್ಲರು ಅಂದ ಮಾತನ್ನೆಲ್ಲಾ ಸಹಿಸಿಕೊಳ್ಳದೆ, ಅವರಿಗೆ ತಕ್ಷಣವೇ ಮಾರುತ್ತರ ಕೊಡುತ್ತಿದ್ದರು.

ಶಿಕ್ಷಣತಜ್ಞರಾಗಿ ಅವರು ಗಣಿಸಲ್ಪಡುವುದಕ್ಕೆ ಹೆಚ್ಚುಕಾಲ ಹಿಡಿಸಲಿಲ್ಲ. ಅವರ ಖ್ಯಾತಿ ಹರಡುತ್ತಿದ್ದ ಹಾಗೆಯೇ, ತಡಮಾಡದೆ, ಅವರನ್ನು ಪಾಚಿಯಪ್ಪ ಕಾಲೇಜಿಗೆ ಪ್ರಿನ್ಸಿಪಾಲರನ್ನಾಗಿ ನೇಮಕಮಾಡಿದರು.

ಪ್ರೊ. ನರಸು ಅವರು ಸಾರ್ವಜನಿಕ ಜೀವನದಲ್ಲಿ ಅತ್ಯುತ್ಸಾಹಿಗಳಾಗಿದ್ದರು ಮತ್ತು 'ನ್ಯಾಷನಲ್ ಫಂಡ್ ಮತ್ತು ಇಂಡಸ್ಟ್ರಿಯಲ್ ಅಸೋಸಿಯೇಷನ್' ಎಂಬ ಸಂಸ್ಥೆಯಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತಿದ್ದರು. ಈ ಸಂಸ್ಥೆ ಅತಿ ಕಡಿಮೆ ಮೊತ್ತದ ಚಂದಾವನ್ನು ಸಂಗ್ರಹಿಸಿ, ಅದನ್ನು ಹೆಚ್ಚಿನ ತಾಂತ್ರಿಕ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗಬಯಸುವ ವಿದ್ಯಾರ್ಥಿಗಳಿಗೆ ಸಹಾಯಮಾಡಲು ಉಪಯೋಗಿಸುತ್ತಿತ್ತು. ಅಂದಿನ ದಿನಗಳಲ್ಲಿ ಹಲವು ವಿಧದ ಸಣ್ಣ ಕೈಗಾರಿಕೆಗಳಲ್ಲಿ – ಅದರಲ್ಲಿಯೂ, ಸಾಬೂನು ತಯಾರಿಕೆ, ಪಿಂಗಾಣಿ/ಗಾಜು ಲೇಪನ, ಬಣ್ಣಗಳ ತಯಾರಿಕೆ ಮೊದಲಾದವುಗಳಲ್ಲಿ – ತಂತ್ರಜ್ಞಾನವನ್ನು ಪಡೆಯುವುದಕ್ಕೆ ತರುಣರನ್ನು ಜಪಾನ್ ಆಕರ್ಷಿಸುತ್ತಿತ್ತು. ಪ್ರೊಫೆಸರ್ ಅವರ ಪಾಪವೆಂದರೆ ಅವರ ಸಮಾಜ ಸುಧಾರಣೆ. ಬೌದ್ಧಮತದಲ್ಲಿ ಅವರು ತಮ್ಮ ಶಾಂತಿ ಮತ್ತು ಸಮಾಧಾನವನ್ನು ಕಂಡುಕೊಂಡಿದ್ದರು. ಜಾತಿ ಪದ್ಧತಿಯ ಬಾಲ್ಯವಿವಾಹದ ಮತ್ತು ವಿಧವಾವಿವಾಹದ ವಿರೋಧಧ ದುಷ್ಪರಿಣಾಮಗಳನ್ನು ಕಂಡುಕೊಂಡವರಲ್ಲಿ ಅವರು ಅತ್ಯಂತ ಮೊದಲಿನವರು. ಅವರ ಸುಧಾರಣಾವಾದಿಗಳ ಸಮಾಜದಲ್ಲಿ ಒಂದು ತೃಪ್ತಿಕರ ಅಂಶವೆಂದರೆ, ಅವರ ಸಹೋದರರೊಬ್ಬರು ಸುಧಾರಣಾವಾದವನ್ನು ಕಾರ್ಯತಃ ಸಾಧಿಸುವವರಾಗಿದ್ದು, ವಿಧವೆಯೊಬ್ಬಳನ್ನು ಮದುವೆಯಾಗಿದ್ದರು. ಅದು ಕ್ರಿಶ್ಚಿಯನ್ ಮಿಷನರಿಗಳು ಸಮಾಜದ ಸುಧಾರಣೆಗೆ ಅನುಮೋದನೆಯನ್ನಷ್ಟೇ ನೀಡದೆ, ಆದರೆ ಇಂತಹ ನಡೆಯನ್ನು ಸಂಪ್ರದಾಯಬದ್ಧ ಹಿಂದುಗಳ ಮತ್ತು ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಳಿಸುವವರ ನಡುವಿನ ಸ್ಥಿತಿಯೆಂದು ಪರಿಗಣಿಸುತ್ತಿದ್ದ ಕಾಲ. ತಮ್ಮ ಈ ಅಭಿಪ್ರಾಯಗಳನ್ನು ಅವರು ಶೀಘ್ರವೇ ಬದಲಾಯಿಸಿಕೊಂಡು ಇಂತಹ ನಡೆ ಮತಾಂತರಕ್ಕೆ ಎದುರಾಗಬಹುದಾದ ತೊಡರುಗಳೆಂದು ಭಾವಿಸುವಂತಾಯಿತು. ಪ್ರೊ. ನರಸು ಅವರು ೧೯ನೆಯ ಶತಮಾನದ ಕಡು ನಿಷ್ಠೆಯ ಹೋರಾಟಗಾರರಾಗಿದ್ದರು. ಅವರು ಯೂರೋಪಿಯನ್ನರ ಅಹಂಕಾರವನ್ನು ತಮ್ಮ ದೇಶಾಭಿಮಾನದ ಮೂಲಕ, ನಿಷ್ಠಾವಂತ ಹಿಂದುಗಳಿಗೆ ಶ್ರದ್ಧಾಭಂಜಕರಾಗುವ ಮೂಲಕ, ಸಂಪ್ರದಾಯನಿಷ್ಠ ಬ್ರಾಹ್ಮಣರನ್ನು ರಾಷ್ಟ್ರೀಯ ದೃಷ್ಟಿಯ ಮೂಲಕ, ಆಕ್ರಮಣಶೀಲ ಕ್ರಿಶ್ಚಿಯನ್–ಧರ್ಮವನ್ನು ವೈಚಾರಿಕ ನಿಲುವಿನ ಮೂಲಕ ಎದುರಿಸುತ್ತಿದ್ದರು. ಇವೆಲ್ಲಕ್ಕೂ ಮೂಲಭೂತವಾಗಿ ಭಗವಾನ್ ಬುದ್ಧನ ಉಪದೇಶಗಳಲ್ಲಿ ಅವರು ಅಚಲವಾದ ವಿಶ್ವಾಸವನ್ನು ಹೊಂದಿದ್ದರು.

ಇತ್ತೀಚಿನ ದಿನಗಳಲ್ಲಿ, ಭಾರತದ ವಿವಿಧ ಭಾಗಗಳ ಹಲವಾರು ಜನರು ಬೌದ್ಧ ಮತದ ಬಗ್ಗೆ ಒಂದು ಒಳ್ಳೆಯ ಪುಸ್ತಕವನ್ನು ಸೂಚಿಸುವಂತೆ ಕೇಳುತ್ತಿರುತ್ತಾರೆ. ಅವರಿಗೆ ಪ್ರೊ. ನರಸು ಅವರ ಈ ಪುಸ್ತಕವನ್ನು ಓದಲು ಸೂಚಿಸಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ಕಾರಣ, ಬೌದ್ಧ ಧರ್ಮದ ಬಗ್ಗೆ ಇಲ್ಲಿಯವರೆಗೆ

ಬಂದಿರುವ ಪುಸ್ತಕಗಳಲ್ಲೆಲ್ಲಾ ಇದು ಅತ್ಯುತ್ತಮ ಪುಸ್ತಕ. ದುರದೃಷ್ಟವಶಾತ್ ಬಹಳ ಕಾಲದಿಂದ ಈ ಪುಸ್ತಕದ ಪ್ರತಿಗಳು ದೊರಕುತ್ತಿರಲಿಲ್ಲ. ಆದ್ದರಿಂದ, ಬೌದ್ಧಧರ್ಮದ ಉಪದೇಶಗಳಲ್ಲಿ ಆಸಕ್ತರಾಗಿರುವವರಿಗೆ ಈ ವಿಷಯದ ಬಗ್ಗೆ ಸರಳವಾಗಿ ಹಾಗೂ ಸಂಪೂರ್ಣವಾಗಿ ವಿವರಿಸಿರುವ ಪುಸ್ತಕವೊಂದನ್ನು ನೀಡುವ ಉದ್ದೇಶದಿಂದ ಪ್ರೊ. ನರಸು ಅವರ ಪುಸ್ತಕವನ್ನು ಪುನರ್ಮುದ್ರಣ ಮಾಡಿಸಲು ನಿರ್ಧರಿಸಿದೆ. ಹಿಂದೆ ಈ ಪುಸ್ತಕದ ಮೂಲ ಹಕ್ಕುಗಳನ್ನು ಹೊಂದಿದ್ದ ಮದರಾಸಿನ ವರದಾಚಾರಿ ಅಂಡ್ ಕಂಪನಿಯವರನ್ನು ಪುನರ್ಮುದ್ರಣಕ್ಕಾಗಿ ನೀಡಿದ ಅನುಮತಿಗಾಗಿ ಕೃತಜ್ಞತೆಯನ್ನು ಸೂಚಿಸಬಯಸುತ್ತೇನೆ.

ಈ ಮುನ್ನುಡಿಯನ್ನು ಬರೆಯುವಾಗ, ಬುದ್ಧನ ವಿಷಯದಲ್ಲಿ ಹಿಂದೆ ಮತ್ತು ಈಗ ಕೆಲವರು ಮಾಡುತ್ತಿರುವ ಟೀಕೆಗಳ ಬಗ್ಗೆ ಉತ್ತರಿಸುವುದು ನನ್ನ ಉದ್ದೇಶದಲ್ಲಿತ್ತು. ಆದರೆ ನಾನು ಎರಡು ಕಾರಣಗಳಿಗಾಗಿ ಅದನ್ನು ಕೈಬಿಟ್ಟಿದ್ದೇನೆ. ಮೊದಲನೆಯದಾಗಿ ನನ್ನ ಆರೋಗ್ಯವು ಇದಕ್ಕೆ ಅನುಮತಿಯನ್ನು ಕೊಡುತ್ತಿಲ್ಲ. ಎರಡನೆಯದಾಗಿ, ನಾನು ಇದೇ ವಿಷಯದಲ್ಲಿ ಒಂದು ಪುಸ್ತಕವನ್ನು ಬರೆಯುವ ತಯಾರಿಯನ್ನು ನಡೆಸುತ್ತಿರುವುದರಿಂದ, ಮತ್ತೊಬ್ಬರ ಪುಸ್ತಕಕ್ಕೆ ಬರೆಯುವ ಮುನ್ನುಡಿಗಿಂತ ವಿಶದವಾಗಿ ನನ್ನ ಪುಸ್ತಕದಲ್ಲಿಯೇ ಈ ವಿಷಯವನ್ನು ಬರೆಯುವುದು ಯೋಗ್ಯವೆಂದು ಭಾವಿಸಿದ್ದೇನೆ. ಪ್ರೊ. ನರಸು ಅವರ ಪುಸ್ತಕವನ್ನು ಓದುವವರಿಗೆ, ನನ್ನ ಈ ನಿರ್ಧಾರದಿಂದ, ಬೌದ್ಧಧರ್ಮದ ಬಗ್ಗೆ ತಿಳಿದುಕೊಳ್ಳುವಲ್ಲಿ ಯಾವುದೇ ಕೊರತೆಯಾಗುವುದಿಲ್ಲ ಎಂದು ನಂಬಿದ್ದೇನೆ.

ಬಿ.ಆರ್. ಅಂಬೇಡ್ಕರ್*

ರಾಜಗೃಹ
ಹಿಂದೂ ಕಾಲೊನಿ, ದಾದರ್,
ಬಾಂಬೆ ೧೪
೧೯೪೮ ರ ಮಾರ್ಚ್ ೧೦

* * * * *

(ಮೊದಲ ಮುದ್ರಣ ೧೯೦೭, ಎರಡನೆಯ ಮುದ್ರಣ ೧೯೧೨)

*ಮೂರನೆಯ ಮುದ್ರಣದ ಪ್ರಕಾಶಕರು: ಥ್ಯಾಕರ್ ಅಂಡ್ ಕಂ., ರ್ಯಾಂಪಾರ್ಟ್ ರೊ, ಬಾಂಬೆ, (೧೯೪೮).

# ೧೫. ಭಾರತದ ಪ್ರಾಚೀನ ಪರಂಪತರೆಯು ನಿರಾಶಾವಾದಕ್ಕೆ ದಾರಿಮಾಡಿಕೊಟ್ಟಿದೆ

### ಸ್ವಾಮಿ ವೇದಾಂತ ತೀರ್ಥರ 'ರಾಷ್ಟ್ರ ರಕ್ಷಾ ಕೆ ವೈದಿಕ್ ಸಾಧನ್' ಪುಸ್ತಕಕ್ಕೆ ಬರೆದ ಮುನ್ನುಡಿ

ಸ್ವಾಮಿ ವೇದಾಂತ ತೀರ್ಥರು ಈ ಕಿರುಹೊತ್ತಗೆಗೆ ಒಂದು ಮುನ್ನುಡಿಯನ್ನು ಬರೆದುಕೊಡಬೇಕೆಂದು ನನ್ನನ್ನು ಕೇಳಿದ್ದರು. ನನ್ನ ಕಾರ್ಯಬಾಹುಳ್ಯದ ಮಧ್ಯದಲ್ಲಿ ಇದು ನನಗೆ ಸಾಧ್ಯವಿಲ್ಲವೆಂದು ಅವರಿಗೆ ತಿಳಿಸಿದ್ದೆ. ಆದರೆ ಅವರ ಒತ್ತಾಯವನ್ನು ಮೀರಲಾರದೆ ಬರೆಯುವುದಕ್ಕೆ ಒಪ್ಪಿಕೊಂಡೆ. ಹತ್ತು ಹಲವುಕಡೆ ಚೆದುರಿ ಹೋಗಿರುವ ವೇದಗಳ ಉಪದೇಶವನ್ನು ಇಲ್ಲಿ ಒಂದೆಡೆ ಸಂಗ್ರಹಿಸಿ ಅವರು ಮುದ್ರಿಸಿದ್ದಾರೆ. ವೇದಗಳ ಉಪದೇಶವನ್ನು ಭಾರತವು ತನ್ನ ಧರ್ಮವನ್ನಾಗಿ ಅನುಸರಿಸಬೇಕೆಂಬುದು ಲೇಖಕರ ಆಶಯ. ಈ ಪುಸ್ತಕವು ನವ ಭಾರತದ ಆದರ್ಶ ಧರ್ಮಗ್ರಂಥವಾಗುತ್ತದೆಯೇ ಎಂಬುದು ನನಗೆ ತಿಳಿದಿಲ್ಲ. ಆದರೆ ಇದು ಕೇವಲ ಪ್ರಾಚೀನ ಆರ್ಯರ ಹಲವು ಧರ್ಮಗ್ರಂಥಗಳಿಂದ ಆಯ್ದ ಹೇಳಿಕೆಗಳ ಸಂಗ್ರಹವಷ್ಟೇ ಆಗದೆ, ಪ್ರಾಚೀನ ಆರ್ಯರ ಆಲೋಚನೆಯ ವೀರ್ಯವತ್ತಾದ ಪದ್ಧತಿಯನ್ನು ಮತ್ತು ಚಲನಶೀಲತೆಯನ್ನು ಕಣ್ಣಿಗೆ ಕಟ್ಟುವಂತೆ ನಮಗೆ ನೀಡುತ್ತದೆ. ಇಂದಿನ ಹಿಂದೂಗಳಲ್ಲಿ ಮಡುಗಟ್ಟಿರುವ ನಿರಾಶಾವಾದವು ಪ್ರಾಚೀನ ಆರ್ಯರಲ್ಲಿ ಇರಲಿಲ್ಲವೆಂಬುದನ್ನು ನಮಗೆ ತೋರಿಸುತ್ತದೆ. ಹಿಂದಿನ ವಸ್ತುನಿಷ್ಠದೃಷ್ಟಿ ಮತ್ತು ಆಶಾವಾದವು ಮಾಯವಾಗಿ ಇಂದಿನ ನಿರಾಶಾವಾದವು ಮೂಡುವುದಕ್ಕೆ ಕಾರಣವೇನು ಎಂಬುದನ್ನು ಲೇಖಕರು ವಿವರಿಸಿದ್ದರೆ ಈ ಕೃತಿಯ ಉಪಯೋಗ ಬಹಳಪಟ್ಟು ಹೆಚ್ಚುತ್ತಿತ್ತು. ಈ ಸಮಸ್ಯೆಯನ್ನು ಕುರಿತು ತಮ್ಮ ಮುಂದಿನ ಕೃತಿಗಳಲ್ಲಿ ಲೇಖಕರು ವಿವೇಚಿಸುತ್ತಾರೆ ಎಂದು ನಂಬುತ್ತೇನೆ. ಜಗತ್ತು ಒಂದು ಮಾಯೆ ಎಂಬ ವಾದವು ಇತ್ತೀಚಿನದು ಎಂಬುದನ್ನು ನಮಗೆ ತಿಳಿಸುವ ಈ ಹೊತ್ತಗೆಯ ಉಪಯೋಗ ಅಲ್ಪವೇನಲ್ಲ. ಈ ದೃಷ್ಟಿಯಿಂದ ನಾನು ಈ ಕೃತಿಯನ್ನು ಪ್ರಶಂಸಿಸುತ್ತೇನೆ.

**ಬಿ.ಆರ್. ಅಂಬೇಡ್ಕರ್**[೧]

* * * * *

---

* ಸ್ವಾಮಿ ವೇದಾಂತ ತೀರ್ಥ (೧೮೯೨–೧೯೫೬) – ರಾಷ್ಟ್ರ ರಕ್ಷಾ ಕೆ ವೈದಿಕ್ ಸಾಧನ್ – ೧೯೪೮

# ೧೬. 'ಸ್ವೀಕೃತಿ' ಪದದ ಅರ್ಥ

ಪ್ರಕೃತ ವಿಷಯವೆಂದರೆ, ೧೯೮ನೆಯ ವಿಧಿಯ ೨ನೆಯ ಉಪಬಂಧದಲ್ಲಿ ಬಂದಿರುವ 'ಸ್ವೀಕೃತಿ' ಎಂಬ ಪದವನ್ನು ಅರ್ಥೈಸುವುದು ಹೇಗೆ ಎಂಬುದು. ಅದು, ವಿಧಾನ ಪರಿಷತ್ತಿನ ಸಚಿವಾಲಯದ ಸ್ವೀಕೃತಿ ಎಂದಾಗಬೇಕೇ ಅಥವಾ ವಿಧಾನ ಪರಿಷತ್ತಿನ ಸ್ವೀಕೃತಿ ಎಂದಾಗಬೇಕೆ? ಹದಿನಾಲ್ಕು ದಿನಗಳ ಅವಧಿಯು ಸ್ವೀಕೃತಿಯ ದಿನದಿಂದ ಸೀಮಿತವಾಗಿರುವುದರಿಂದ ಈ ವ್ಯತ್ಯಾಸವು ಬಹಳ ಮಹತ್ವದ್ದಾಗುತ್ತದೆ. ಆರ್.ಎಲ್.ಎ. ಹಾಗೂ ಬಿಹಾರದ ಅಡ್ವೊಕೇಟ್ ಜನರಲ್ ಅವರ ನಡುವೆ ಉಂಟಾದ ಭಿನ್ನಾಭಿಪ್ರಾಯದ ಕಾರಣದಿಂದಾಗಿ ಈ ವಿಷಯವನ್ನು ಭಾರತ ಸರಕಾರದ ಗಮನಕ್ಕೆ ತರಲಾಯಿತು. ಇವರಿಬ್ಬರಲ್ಲಿ ಆರ್. ಎಲ್. ಎ. ಅವರು ಮೊದಲನೆಯ ಅಭಿಪ್ರಾಯವನ್ನು ಮತ್ತು ಅಡ್ವೊಕೇಟ್ ಜನರಲ್ ಅವರು ಎರಡನೆಯ ಅಭಿಪ್ರಾಯವನ್ನು ಎತ್ತಿಹಿಡಿಯುತ್ತಾರೆ.

ಆರ್.ಎಲ್.ಎ. ಅವರು ತಮ್ಮ ವಾದವನ್ನು ಮೂರು ಆಧಾರಗಳ ಮೇಲೆ ಮಂಡಿಸುತ್ತಾರೆ –

೧. 'ಸ್ವೀಕರಿಸಿದ ದಿನದಿಂದ ೧೪ ದಿನಗಳು' ಎಂದು ೧೯೮ನೇ ವಿಧಿಯ ಎರಡನೆಯ ಉಪಬಂಧದಲ್ಲಿ ಹೇಳುತ್ತದೆ,

೨. ೧೯೭ನೆಯ ವಿಧಿಯ ೨(ಬಿ.)ನೆಯ ಉಪಬಂಧದಲ್ಲಿ ಹಾಗೂ ೧೯೮ನೆಯ ವಿಧಿಯ ೨ನೆಯ ಉಪಬಂಧದಲ್ಲಿ ಉಪಯೋಗಿಸಿರುವ ಭಾಷೆಗಳಲ್ಲಿ ಅಂತರವಿದೆ.

೩. ಅಡ್ವೊಕೇಟ್ ಜನರಲ್ ಅವರ ವಾದವನ್ನು ಒಪ್ಪುವುದಾದರೆ, ಅದರಿಂದ ಹುಂಡಿಯ ಮೂಲಕ ಹಣವನ್ನು ಪಡೆಯುವಲ್ಲಿ ನಿಧಾನವಾಗುತ್ತದೆ.

ಮೇಲ್ಕಂಡ ಅಂಶಗಳನ್ನು ನಾನು ಅನುಕ್ರಮವಾಗಿ ಚರ್ಚಿಸುತ್ತೇನೆ.

ಆರ್.ಎಲ್.ಎ. ಅವರ ವಾದದ ಮೊದಲ ಅಂಶವನ್ನು ಗಮನಿಸಿದಾಗ ಅವರ ವಾದವು ಕೆಳಕಂಡ ಅಂಶಗಳನ್ನು ಗಮನಿಸುವಲ್ಲಿ ವಿಫಲವಾಗಿರುವುದರಿಂದ ಅದು ದೋಷಯುಕ್ತವಾಗಿದೆ.

೧) ೧೯೮ನೆಯ ವಿಧಿಯ ೨ನೆಯ ಉಪಬಂಧದಲ್ಲಿರುವ 'ಹುಂಡಿಯ ಸ್ವೀಕೃತಿ' ಎಂಬುದನ್ನು ಎತ್ತಿಕೊಂಡು ಅವರು ತಮ್ಮ ವಾದವನ್ನು ಕಟ್ಟುತ್ತಾರೆ. ಹಾಗೆ ಮಾಡುವಾಗ ಅವರು ಮೇಲ್ಮನೆಯು ವಾಸ್ತವವಾಗಿ ಸ್ವೀಕರಿಸಿದ ದಿನ ಎಂಬುದಕ್ಕೆ ಬದಲಾಗಿ ಮೇಲ್ಮನೆಯ ಸಚಿವಾಲಯವು ಸ್ವೀಕರಿಸಿದ ದಿನವೆಂಬುದು ಸಂವಿಧಾನದ ಆಶಯವೆಂದು ಅರ್ಥೈಸುತ್ತಾರೆ. ಆದರೆ ೨ನೆಯ ಉಪಬಂಧದಲ್ಲಿರುವ 'ಶಿಫಾರಸ್ಸು ಮಾಡುವ ಉದ್ದೇಶಕ್ಕಾಗಿ ಪರಿಷತ್ತಿಗೆ ರವಾನಿಸಿದ ದಿನಾಂಕ'ವೆಂಬ ಅತಿಮುಖ್ಯವಾದ ಪದಗುಚ್ಛಗಳನ್ನು ಒಟ್ಟಾರೆಯಾಗಿ ಬಿಟ್ಟುಬಿಡುತ್ತಾರೆ. 'ಅದರ ಸ್ವೀಕೃತಿ' ಎಂಬ ಪದಗಳಷ್ಟನ್ನೇ ತೆಗೆದುಕೊಂಡರೆ ಅದಕ್ಕೆ ಯಾವುದೇ ಪ್ರಾಮುಖ್ಯವೂ ಇರುವುದಿಲ್ಲ. 'ಶಿಫಾರಸ್ಸು ಮಾಡುವ ಉದ್ದೇಶಕ್ಕಾಗಿ ಪರಿಷತ್ತಿಗೆ ರವಾನಿಸಲಾಗಿದೆ' ಎಂಬ ಪದಗಳ ಸಂದರ್ಭದಲ್ಲಿಯೇ 'ಸ್ವೀಕೃತಿ' ಪದವನ್ನು ಅರ್ಥೈಸಬೇಕು. ಹೀಗೆ ಈ ಪದಗಳನ್ನು ಓದಿದಾಗ, ಅದು ಸಚಿವಾಲಯವು ಸ್ವೀಕರಿಸಿದ ದಿನಾಂಕ ಎಂಬ ಅರ್ಥವನ್ನು ನೀಡುವುದಿಲ್ಲ.

೨) ಆರ್. ಎಲ್. ಎ. ಅವರು ಉಪಬಂಧ ೩ ಮತ್ತು ೪ನ್ನು ತಮ್ಮ ಗಮನಕ್ಕೆ ತಂದುಕೊಂಡಿಲ್ಲ.

> ಅವರು ತಮ್ಮ ವಾದಕ್ಕಾಗಿ ೫ನೆಯ ಉಪಬಂಧವನ್ನು ಆಶ್ರಯಿಸುತ್ತಾರೆ. ಆದರೆ ೫ ನೆಯ ಉಪಬಂಧವು ೩ ಮತ್ತು ೪ನೆಯ ಉಪಬಂಧವನ್ನು ಪರಿಷತ್ತು ಅನುಸರಿಸಿದ ನಂತರ ಅನ್ವಯವಾಗುತ್ತದೆ ಎಂಬ ವಾಸ್ತವ ಸಂಗತಿಯನ್ನು ಮರೆಯುತ್ತಾರೆ. ೩ ಮತ್ತು ೪ನೆಯ ಉಪಬಂಧಗಳು ಪರಿಷತ್ತಿನ ಅಧಿವೇಶನ ನಡೆಯುತ್ತಿರಬೇಕು ಮತ್ತು ಹುಂಡಿಯನ್ನು ಪರಿಷತ್ತು ಗಮನಿಸಲು ಅವಕಾಶವಿರಬೇಕು ಎಂಬ ಅಗತ್ಯಗಳನ್ನು ಮುಂದಿಡುತ್ತದೆ.

ತಮ್ಮ ವಾದವನ್ನು ಆರ್.ಎಲ್.ಎ. ಅವರು ಬೆಳೆಸುವ ರೀತಿ ದೋಷರಹಿತವಾದುದಲ್ಲ. ಸಂಬಂಧಪಟ್ಟ ವಿಧಿಯನ್ನು ಅರ್ಥೈಸಲು ಅನುಸರಿಸಬೇಕಾದ ರೀತಿಯನ್ನು ಸರ್ವಗ್ರಾಹಿ ಪದ್ಧತಿಯೆಂದು ಕರೆಯುತ್ತಾರೆ. ಕೋಕ್‌ನಂತಹ ಮೇಧಾವಿ ಇದನ್ನು ಒಪ್ಪುತ್ತಾರೆ. ಅವರ ಪ್ರಕಾರ 'ಸಂಸತ್ತಿನ ಕಾನೂನನ್ನು ಅರ್ಥೈಸಬೇಕಾದರೆ ಆ ಕಾನೂನಿನ ಎಲ್ಲಾ ಅಂಶಗಳನ್ನೂ ವಾದವನ್ನು ಬೆಳಸುವ ಹಂತದಲ್ಲಿ ಬಳಸಿಕೊಳ್ಳಬೇಕೇ ವಿನಹ, ಕೇವಲ ಅಲ್ಲೊಂದು ಇಲ್ಲೊಂದು ಅಂಶವನ್ನು ತೆಗೆದುಕೊಳ್ಳಬಾರದು. ಕಾನೂನಿನ ಆಶಯವನ್ನು ವ್ಯಕ್ತಪಡಿಸಲು, ಅದರ ಒಂದು ಭಾಗವನ್ನು ಇನ್ನೊಂದು ಭಾಗಕ್ಕೆ ಪೂರಕವಾಗಿ ನೋಡುವುದು ಉತ್ತಮ ಹಾಗೂ ಸ್ವಾಭಾವಿಕ ಮಾರ್ಗ' (ಕ್ರೈ ಅವರಿಂದ ಉದ್ಧೃತ – ಪುಟ ೯೫).

ಎರಡನೆಯದಾಗಿ '೧೯೭ನೆಯ ವಿಧಿಯ ೨(ಬಿ.) ಉಪಬಂಧದಲ್ಲಿ ಹಾಗೂ ೧೯೮ನೆಯ ವಿಧಿಯ ೨ನೆಯ ಉಪಬಂಧದಲ್ಲಿ ಉಪಯೋಗಿಸಿರುವ ಭಾಷೆಗಳಲ್ಲಿ ಅಂತರವಿದೆ' ಎಂಬ ಆರ್.ಎಲ್.ಎ. ಅವರ ವಾದದ ಎರಡನೆಯ ಅಂಶವನ್ನು ಗಮನಿಸೋಣ. ಅವರು ಹೇಳುವ ಹಾಗೆ ಈ ಎರಡು ಭಾಷೆಗಳಲ್ಲಿ ಅಂತರವಿದೆ ಎಂಬುದು ಸತ್ಯ. ಈ ವ್ಯತ್ಯಾಸವನ್ನು ಹಿಡಿದುಕೊಂಡು ಆಸಕ್ತರು ಮೇಲೆ ಹೇಳಿದ ಎರಡೂ ಉಪಬಂಧಗಳ ಆಶಯವು ಬೇರೆಬೇರೆ ಎಂದು ವಾದಿಸಬಹುದು. ಆರ್. ಎಲ್. ಎ. ಅವರ ವಾದಕ್ಕೆ ವಿರುದ್ಧವಾಗಿ ನಾನು ಕೆಲವು ಚಿಂತನೆಗಳನ್ನು ಮುಂದಿಡುತ್ತಿದ್ದೇನೆ.

೧೯೭ನೆಯ ವಿಧಿಯ ೨(ಬಿ) ಉಪಬಂಧದ ಭಾಷೆಯು ಮೂಲತಃ ೧೯೮ನೆಯ ವಿಧಿಯ ೨ನೆಯ ಉಪಬಂಧದ ಭಾಷೆಯಂತೆಯೇ ಇದೆ. ವಿಧಾಯಕ ಮಂಡಲಿಯ ಮುಂದೆ ೧೯೭ನೆಯ ವಿಧಿಯ ನಾಲ್ಕು ಕರಡುಗಳನ್ನು ಇಡಲಾಗಿತ್ತು. ಮೊದಲ ಮೂರರಲ್ಲಿನ ಭಾಷೆಯು ಒಂದೇ ರೀತಿಯದಾಗಿತ್ತು. ಸಂವಿಧಾನದ ವಿಧಾಯಕ ಸಭೆಯ ದಾಖಲೆಗಳನ್ನು ನಾನು ಪರಿಶೀಲಿಸಿ ಇದನ್ನು ಕಂಡುಕೊಂಡಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ಹಲವಾರು ಪ್ರಶ್ನೆಗಳು ಏಳುತ್ತವೆ. ೧೯೮ನೆಯ ವಿಧಿಯ ಭಾಷೆಯನ್ನು ಬದಲಾಯಿಸದೆ ಕೇವಲ ೧೯೭ನೆಯ ವಿಧಿಯ ಭಾಷೆಯನ್ನು ಏಕೆ ಬದಲಾಯಿಸಿದರು? ೧೯೭ನೆ ವಿಧಿಯ ೨(ಬಿ) ಉಪಬಂಧದ ಭಾಷೆಯ ಬದಲಾವಣೆಗೆ ಕಾರಣಗಳೇನು? ೧೯೭ನೆಯ ವಿಧಿಯ ಉಪಬಂಧ ೨(ಬಿ)ಯ ಮೂಲ ಉದ್ದೇಶದ ಬದಲಾವಣೆಯಿಂದಾಗಿ, ಇದರ ಭಾಷೆಯನ್ನು ಬದಲಾಯಿಸಲಾಯಿತೆ? ಅಥವಾ, ಮೂಲ ಉದ್ದೇಶದಲ್ಲಿ ಯಾವ ಬದಲಾವಣೆಯೂ ಇಲ್ಲದಿದ್ದರೆ, ಮೊದಲು ಬಳಸಿದ್ದ ಭಾಷೆಗಿಂತ ಬದಲಾಯಿಸಿದ ಭಾಷೆಯು ಮೂಲ ಉದ್ದೇಶವನ್ನು ಉತ್ತಮವಾಗಿ ವ್ಯಕ್ತಪಡಿಸುತ್ತದೆಯಂದಿರಬಹುದೇ? ಈ ಪ್ರಶ್ನೆಗಳಿಗೆ ಖಚಿತವಾದ ಉತ್ತರವನ್ನು ನೀಡುವುದು ಕಷ್ಟವೇ? ನನಗೆ ಜ್ಞಾಪಕವಿರುವಷ್ಟರ ಮಟ್ಟಿಗೆ ಹೇಳುವುದಾದರೆ, ನಾವು ಮೂಲ ಉದ್ದೇಶವನ್ನು ಬದಲಾಯಿಸಲೆಂದು ಭಾಷೆಯನ್ನು ಬದಲಾಯಿಸಲಿಲ್ಲ, ಬದಲಿಗೆ ನಮ್ಮ ಮೂಲ ಉದ್ದೇಶವನ್ನು ಉತ್ತಮವಾಗಿ ವ್ಯಕ್ತಪಡಿಸುತ್ತದೆಯೆನ್ನುವುದಕ್ಕಾಗಿ ಭಾಷೆಯಲ್ಲಿ ಬದಲಾವಣೆಯನ್ನು ಮಾಡಲಾಯಿತು. ಇದು ಹೇಗೇ ಇದ್ದರೂ, ಭಾಷೆಯಲ್ಲಿನ ವ್ಯತ್ಯಾಸವು ನಿರ್ಣಾಯಕವಾದುದೇ ಅಲ್ಲ.

ಭಾಷೆಯಲ್ಲಿನ ವ್ಯತ್ಯಾಸವು ವಾದವನ್ನು ಬಗೆಹರಿಸುವಂತೆ ಶುಷ್ಕ ಪಂಡಿತರಿಗೆ ಕಾಣುವುದಿಲ್ಲ ಎನ್ನುವುದನ್ನು

ನಾನು ಅರಿತುಕೊಂಡೆ. ಮತ್ತೆ ವಾದಕ್ಕೆ ಹಿಂದಿರುಗಿ, ೧೯೮ನೆಯ ವಿಧಿಯ ಉದ್ದೇಶವು ೧೯೭ನೆಯ ವಿಧಿಯ ೨(ಬಿ) ಉಪಬಂಧದ ಉದ್ದೇಶಕ್ಕಿಂತ ಭಿನ್ನವಾಗಿಲ್ಲದಿದ್ದರೆ, ಅದೇ ಮಾದರಿಯನ್ನು ಅನುಸರಿಸಿ, ೧೯೭ನೆಯ ವಿಧಿ ೨(ಬಿ) ಉಪಬಂಧಧ ಭಾಷೆಯನ್ನೂ ಬದಲಾಯಿಸಲಿಲ್ಲವೇಕೆ ಎಂದು ಕೇಳಬಹುದು. ಈ ವಾದಕ್ಕೆ ನನ್ನ ಉತ್ತರವು ಬಹಳ ಸರಳವಾಗಿದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಭಾಷೆಯ ಬದಲಾವಣೆಯಾದರೆ ಉದ್ದೇಶವೂ ಬದಲಾಯಿಸಲ್ಪಟ್ಟಿದೆ ಎಂದು ತಿಳಿಯುವುದು ತಪ್ಪಾಗುತ್ತದೆ. ಒಂದೇ ಉದ್ದೇಶವು ಭಾಷೆಯ ಬೇರೆ ಬೇರೆಯ ನುಡಿಗಟ್ಟುಗಳನ್ನು ಬಳಸಿ ಹೇಳಿದರೂ, ಬದಲಾಗದೆ ಹಾಗೆಯೇ ಉಳಿಯಬಹುದು ಎಂಬುದು ಎಲ್ಲರೂ ಒಪ್ಪಿರುವ ಸಂಗತಿ. ಈ ಸಂದರ್ಭದಲ್ಲಿ, ಕ್ರೈ ಅವರ ಶಾಸನ ಸಂಬಂಧಿ ಕಾನೂನು ಕೃತಿಯಲ್ಲಿನ ಕೆಲ ಭಾಗಗಳನ್ನು ಉದ್ಧರಿಸುತ್ತೇನೆ:

"ಸಾಮಾನ್ಯವಾಗಿ ಹೇಳುವ ಹಾಗೆ, ಈ ಪೂರ್ವಗ್ರಹಿಕೆಯನ್ನು ಇಟ್ಟುಕೊಳ್ಳಬೇಕು, ಮತ್ತು 'ನಿಶ್ಚಯವಾಗಿಯೂ ಹೀಗೇ ಇರಬೇಕು ಎಂಬ ಉದ್ದೇಶವನ್ನಿಟ್ಟುಕೊಳ್ಳಬೇಕು' ಕೇಸ್‌ಮೆಂಟ್ ಮತ್ತು ಫಲ್ಟನ್ ಇವರ ನಡುವಿನ ಮೊಕದ್ದಮೆಯಲ್ಲಿ ನ್ಯಾಯಾಂಗ ಸಮಿತಿಯು "ಶಾಸನಗಳನ್ನು ರೂಪಿಸುವಾಗ, ಅದೇ ಪದಗಳನ್ನು ಅದೇ ಅರ್ಥವನ್ನು ಕೊಡುವುದಕ್ಕಾಗಿ ಬಳಸಬೇಕು" ಎಂದಿತ್ತು. ಆದರೆ ಶಾಸಕಾಂಗವು ತನ್ನ ಉದ್ದೇಶವನ್ನು ಬದಲಾಯಿಸದೆ ತಾನು ಹಿಂದೆ ಉಪಯೋಗಿಸಿದ ಭಾಷೆಯಿಂದ ಹಲವು ವೇಳೆ ದೂರ ಸರಿದು ಭಾಷೆಯನ್ನು ಬದಲಾಯಿಸಿರುವಂತಹ ಪ್ರಕರಣಗಳನ್ನು ನಾವು ಕಾಣಬಹುದು. ನ್ಯಾಯಮೂರ್ತಿ ಬ್ಲಾಕ್‌ಬರ್ನ್ ಅವರು ಹೇಳಿದಂತೆ "ಸಾಮಾನ್ಯವಾಗಿ, ಭಾಷೆಯಲ್ಲಿನ ಬದಲಾವಣೆ ಉದ್ದೇಶದಲ್ಲಿನ ಬದಲಾವಣೆಯನ್ನು ಸೂಚಿಸುತ್ತದೆ ಎಂದು ಆಪಾತತಃ ಹೇಳಬಹುದು'. ಆದರೆ ಇದು ಅಗತ್ಯವಾಗಿ ಎಲ್ಲಾ ಕಡೆಯಲ್ಲಿಯೂ ಒಪ್ಪಿಕೊಳ್ಳಬೇಕಾದ ಪ್ರಮೇಯವಲ್ಲ. ನ್ಯಾಯಮೂರ್ತಿ ಬ್ಲಾಕ್‌ಬರ್ನ್ ಅವರು ಹ್ಯಾಡ್ಲಿ ಮತ್ತು ಪರ್ಕ್ಸ್ ಅವರ ಪ್ರಕರಣದಲ್ಲಿ ಹೇಳಿರುವ ಹಾಗೆ "ಸಂಸತ್ತಿನಲ್ಲಿ ಶಾಸನಗಳನ್ನು ರೂಪಿಸುವಾಗ, ಶೈಲಿಯನ್ನು ಉತ್ತಮಪಡಿಸುವುದಕ್ಕಾಗಿ ಮತ್ತು ಉಪಯೋಗಿಸಿದ ಪದಗಳನ್ನೇ ಮತ್ತೆ ಮತ್ತೆ ಉಪಯೋಗಿಸುವುದನ್ನು ತಡೆಯುವುದಕ್ಕಾಗಿ ಪದಗಳನ್ನು ಯಾವಾಗಲೂ ಬದಲಾಯಿಸುತ್ತಲೇ ಇರುತ್ತಾರೆ". ೧೮೪೯ರ ದಿವಾಳಿ ಮತ್ತು ೧೮೬೯ರ ದಿವಾಳಿ ಕಾನೂನುಗಳಲ್ಲಿನ ಇಂತಹ ವ್ಯತ್ಯಾಸವನ್ನು ಕುರಿತು ನ್ಯಾಯಮೂರ್ತಿ ಮೆಲ್ಲಿಷ್ ಅವರು ಹೀಗೆ ಹೇಳಿದ್ದಾರೆ "ಪ್ರಸಕ್ತ ಇರುವ ದಿವಾಳಿ ಕಾನೂನಿನ ಪರಿಚಯವಿರುವ ಎಲ್ಲರಿಗೂ ಮೊದಲಿನ ಕಾನೂನಿನಲ್ಲಿ ಉಪಯೋಗಿಸಿರುವ ಭಾಷೆಯನ್ನು, ಕಾನೂನಿನ ಉದ್ದೇಶವನ್ನು ಬದಲಾಯಿಸದೆ, ಸಾಕಷ್ಟು ಎಡೆಗಳಲ್ಲಿ ಬದಲಾಯಿಸಲಾಗಿದೆ ಎಂಬುದು ಗೊತ್ತಿದೆ". ಅಕೌಂಟೆಂಟ್ ಜನರಲ್ ಮತ್ತು ಬ್ರ್ಯಾಡ್‌ಲಾಫ್ ನಡುವಿನ ಪ್ರಕರಣದಲ್ಲಿ ೧೮೬೬ರ ಸಂಸತ್ತಿನ ಪ್ರಮಾಣಗಳ ಕಾನೂನಿನಲ್ಲಿ ಉಪಯೋಗಿಸಿರುವ 'ಮಾಡಿದ' ಎಂಬ ಪದವು 'ಪ್ರಮಾಣವನ್ನು ಮಾಡಬೇಕು' ಎಂಬ ಅರ್ಥವನ್ನು ಕೊಡುತ್ತದೆ ಮತ್ತು ಅದು ಆ ಪದವು 'ತೆಗೆದುಕೊಳ್ಳಬೇಕು' ಎಂಬುದಕ್ಕಿಂತ ಭಿನ್ನವಾದ ಅರ್ಥವನ್ನು ನೀಡುತ್ತದೆ ಎಂಬ ವಾದದ ಬಗ್ಗೆ ಬ್ರೆಟ್ ಅವರು "ಪೀಠಿಕಾ ಭಾಗವನ್ನು ನೋಡಿದಾಗ ಈ ಎರಡೂ ಪ್ರಯೋಗಗಳೂ ಒಂದೇ ಅರ್ಥವನ್ನು ನೀಡುತ್ತದೆ ಎಂದು ನನಗೆ ಕಾಣಿಸುತ್ತದೆ" ಎಂದು ಹೇಳಿದರು.

"ಸಂಸತ್ತು ಒಂದು ಪ್ರಕರಣವನ್ನು ಒಂದು ವಿಶಿಷ್ಟ ರೀತಿಯಲ್ಲಿ ನಿರೂಪಿಸಿ, ಮತ್ತೊಂದು ಪ್ರಕರಣದಲ್ಲಿ ಅಂತಹ ವಿಶಿಷ್ಟ ರೀತಿಯನ್ನು ಉಪಯೋಗಿಸದೆ ಇದ್ದರೆ, ಅದನ್ನು ಉಪೇಕ್ಷೆಯಿಂದಾಗಲೀ, ಅಲಕ್ಷ್ಯದಿಂದಾಗಲೀ ಆದುದೆಂದು ಭಾವಿಸಬಾರದು' ಎಂದು ಲಾರ್ಡ್ ಕಾಟನ್‌ಹ್ಯಾಮ್ ಅವರು ಮಾಂಟಿತ್ ಮತ್ತು ಮ್ಯಾಕ್‌ಗವಿನ್ ಅವರ ಪ್ರಕರಣದಲ್ಲಿ ಹೇಳಿದ್ದಾರೆ. ಆದರೆ, ನಾಟೇಜ್ ಮತ್ತು ಜಾಕ್ಸನ್ ಅವರ ಪ್ರಕರಣದಲ್ಲಿ ಬ್ರೆಟ್ ಅವರು

ಹೇಳಿರುವುದು ಇದು “ಸಂಸತ್ತಿನ ಕಾನೂನುಗಳಿಗೆ ರೂಪವನ್ನು ಕೊಡುವವರು ಕೆಲವು ವೇಳೆ, ಬೇರೆ ಯಾರೂ ಉಪಯೋಗಿಸದ ಪದಗುಚ್ಛಗಳನ್ನು ಉಪಯೋಗಿಸುತ್ತಾರೆ. ಇದರಿಂದ ಕೆಲವು ವೇಳೆ ನಮಗೆ ಎದರಾಗುವ ಪದಗುಚ್ಛಗಳನ್ನು ನೋಡಿದಾಗ, ಇವುಗಳನ್ನು ಯಾವುದೇ ಉದ್ದೇಶವಿಲ್ಲದೆ ಆದರೆ ಅದನ್ನು ರೂಪಿಸಿದವರ ಎಚ್ಚರಗೇಡಿತನದಿಂದ ರಚಿಸಲಾಗಿರುವ ಶಾಸನಗಳು ಇವು ಎಂಬ ನಿರ್ಣಯಕ್ಕೆ ಬರುತ್ತೇವೆ. ಮತ್ತೊಂದು ಪ್ರಕರಣದಲ್ಲಿ “ಸುಳ್ಳು ಸಾಕ್ಷ್ಯದ ವಿರುದ್ಧ ಮಾಡಲಾದ ಆಪಾದನೆಗಳಿಗೆ ಸಂಬಂಧಪಟ್ಟ ಪ್ರಕರಣಗಳನ್ನು ಬಿಟ್ಟು ಉಳಿದಂತೆ ಆಯುಕ್ತರ (ನಿರ್ದಿಷ್ಟ) ಪ್ರಶ್ನೆಗೆ ಯಾವ ಉತ್ತರವನ್ನೂ ಯಾವುದೇ ವ್ಯಕ್ತಿಯು ಕೊಡದಿದ್ದರೆ, ಅದನ್ನು ಯಾವುದೇ ನ್ಯಾಯಪ್ರಕ್ರಿಯೆಯಲ್ಲಿ ಸಾಕ್ಷಿಯೆಂದು ಪರಿಗಣಿಸಲಾಗದು” ಎಂಬಲ್ಲಿನ ಸುಳ್ಳುಸಾಕ್ಷ್ಯದ ವಿರುದ್ಧ ಮಾಡಲಾದ ಆಪಾದನೆ ಎಂಬ ಪದಗುಚ್ಛವನ್ನು ಸುಳ್ಳುಸಾಕ್ಷ್ಯದ ಎಲ್ಲಾ ಪ್ರಕರಣಗಳಿಗೂ ಅನ್ವಯಿಸಬೇಕೆ, ಅಥವಾ ಆಯುಕ್ತರ ಮುಂದೆ ನೀಡಲಾದ ಸುಳ್ಳುಸಾಕ್ಷ್ಯದ ಪ್ರಕರಣಗಳಿಗೆ ಮಾತ್ರ ಅನ್ವಯಿಸಬೇಕೆ ಎಂಬ ಪ್ರಶ್ನೆ ಉದ್ಭವಿಸಿತ್ತು. ಹಿಂದಿನ ಕಾನೂನಿನಲ್ಲಿ ಇದ್ದ ಇಂತಹದೇ ಪದಗುಚ್ಛವಿದ್ದು ಅದು ‘ಅಂತಹ ಉತ್ತರಗಳನ್ನು ನೀಡುವಾಗಿನ ಸುಳ್ಳು ಸಾಕ್ಷ್ಯದ ವಿರುದ್ಧ ಮಾಡಿದ ಆಪಾದನೆಗಳು’ ಎಂದಿತ್ತು. ಹೀಗಾಗಿ ಶಾಸಕಾಂಗವು ಪದಗಳ ಬದಲಾವಣೆಯನ್ನು ಮಾಡಿರುವುದರಿಂದ ಅದರ ಉದ್ದೇಶದಲ್ಲಿಯೂ ಬದಲಾವಣೆಯಿತ್ತು ಎಂದು ವಾದಿಸಲಾಯಿತು. ಆದರೆ ಇಂತಹ ಬದಲಾವಣೆ ಶಾಸನಗಳ ಮೂಲಭೂತ ಆಶಯಕ್ಕೆ ವಿರುದ್ಧವಾಗಿರುವುದರಿಂದ, ಭಾಷೆಯಲ್ಲಿನ ಬದಲಾವಣೆಗೆ ಯಾವುದೇ ಕಾರಣವಿರುವುದು ಸಾಧ್ಯವಿಲ್ಲ. ಸಿ.ಬಿ. ಕೆಲ್ಲಿ ಅವರು “ಈ ಕಾನೂನನ್ನು ರೂಪಿಸಿದವರು ಯಾರೇ ಆಗಿರಲಿ, ಅವರು ಎಚ್ಚರಗೇಡಿತನದಿಂದ ರೂಪಿಸಿದ್ದಾರೆ ಮತ್ತು ಇದರಲ್ಲಿ ಎಚ್ಚರಿಕೆಯ ಅಭಾವ ಎದ್ದು ಕಾಣುತ್ತದೆ” ಎಂದಿದ್ದಾರೆ. ಹಿಂದಿನ ಕಾನೂನಿನಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಪದಗಳನ್ನು ಉಪಯೋಗಿಸಿರುವುದು ಕಾಣುತ್ತದೆ. ಮುಂದಿನ ಕಾನೂನಿನಲ್ಲಿ ಇಂತಹ ಹೆಚ್ಚಿನ ಪದಗಳನ್ನು, ಕಾನೂನಿನ ಆಶಯವನ್ನು ಬದಲಾಯಿಸದೆ, ಬಿಟ್ಟುಬಿಡಲಾಗಿದೆ. “ಹೊಸ ಕಾನೂನನ್ನು ರೂಪಿಸಿದವರು ಹಿಂದಿನ ಕಾನೂನಿನಲ್ಲಿದ್ದ ಅನಗತ್ಯ ವಾದವಿವಾದಗಳಿಗೆ ಕಾರಣವಾಗುವ ಪದಗಳನ್ನು ಬಿಟ್ಟುಬಿಡುವುದು ಭಾಷೆಯನ್ನು ಉಪಯೋಗಿಸುವಲ್ಲಿ ಒಂದು ರೀತಿಯ ಪ್ರಗತಿಯಂತೆ ಆಗುತ್ತದೆ ಎಂದು ಯೋಚಿಸಿರುವಂತೆ ಕಾಣುತ್ತದೆ ಮತ್ತು ಅವರು, ಉದ್ದೇಶವನ್ನು ಬದಲಾಯಿಸದೆ, ಹಾಗೆ ಮಾಡಿರುವುದು ಯೋಗ್ಯವಾಗಿದೆ ಎಂದು ನನಗೆ ಅನಿಸುತ್ತಿದೆ" ಎಂದು ನ್ಯಾಯಮೂರ್ತಿ ಮೆಲ್ಲಿಷ್ ಅವರು ಹೇಳಿದ್ದಾರೆ.

ಇನ್ನು ಆರ್. ಎಲ್. ಎ ಅವರ ವಾದದ ಮೂರನೆಯ ಅಂಶಕ್ಕೆ ಬಂದರೆ, ಅದು ನನಗೆ ಸ್ವಲ್ಪವೂ ಮನದಟ್ಟಾಗಿಲ್ಲ. ಇಲ್ಲಿ ಆಗುವ ನಿಧಾನಕ್ಕೆ ಎರಡು ಕಾರಣಗಳಿರುವುದನ್ನು ನಾವು ಕಾಣಬಹುದು. ಅಧಿವೇಶನವು ನಡೆಯುತ್ತಿದ್ದರೂ, ಸ್ವೀಕರಿಸುವುದರಲ್ಲಿ ನಿಧಾನವಾಗಬಹುದು. ಹುಂಡಿಯು ರವಾನಿಸಲ್ಪಟ್ಟಿದ್ದರೂ, ಅಧಿವೇಶನವು ನಡೆಯದೆ ಇದ್ದರೆ, ಅದೂ ಸ್ವೀಕಾರಮಾಡುವಲ್ಲಿ ನಿಧಾನವಾಗಬಹುದು. ಅದು ಸಂಸತ್ತಿಗೆ ಬಂದಾದಮೇಲೆ ಹದಿನಾಲ್ಕು ದಿನಗಳಿಗಿಂತ ಹೆಚ್ಚು ನಿಧಾನವಾಗುವುದಿಲ್ಲ ಮತ್ತು, ಒಂದು ವೇಳೆ ಹಾಗೆ ನಿಧಾನವಾದರೂ, ಅದರಿಂದ ಸಂಸತ್ತಿಗೆ ತೊಂದರೆಯೂ ಇರುವುದು ಸಾಧ್ಯವಿಲ್ಲ. ಕಾರಣ, ಹಾಗಾದರೆ ಅದಕ್ಕೆ ದಂಡಕೊಡಬೇಕಾಗುವುದು ಮತ್ತು ಇದನ್ನು ಉಪಬಂಧ ೫ರಲ್ಲಿ ಹೇಳಲಾಗಿದೆ. ಸಂಸತ್ತು ಸಮಾವೇಶಗೊಂಡಿರದೆ ಇದ್ದಾಗ ಹುಂಡಿಯನ್ನು ರವಾನಿಸಿದರೆ, ಇಂತಹ ಸನ್ನಿವೇಶಗಳಲ್ಲಿ ಉಂಟಾಗುವ ನಿಧಾನದಲ್ಲಿ ಸಂಸತ್ತಿನ ಯಾವ ದೋಷವೂ ಇರುವುದಿಲ್ಲ. ಈ ದೋಷವು, ಗವರ್ನರ್ ಅವರಿಗೆ ಸಮಾವೇಶವನ್ನು ಕರೆಯಲು ಸಲಹೆ ನೀಡುವವರದೇ ಆಗಿರುತ್ತದೆ. ೫ನೆಯ ಉಪಬಂಧದ ಪ್ರಯೋಜನವನ್ನು ಪಡೆಯಬೇಕಾದರೆ

ಮತ್ತು ಅವರು ಪರಿಷತ್ತಿನ ಸಮಾವೇಶವನ್ನು ಕರೆದು, ಪರಿಷತ್ತಿಗೆ ಹದಿನಾಲ್ಕು ದಿನಗಳ ಅವಕಾಶವನ್ನು ಕೊಡಬೇಕು. ಹೀಗೆ ಮಾಡುವುದರಿಂದ ನಿಧಾನವಾಗುವುದನ್ನು ತಡೆಗಟ್ಟಬಹುದು. ಅದು ಅವರ ಅಧಿಕಾರ ವ್ಯಾಪ್ತಿಯ ಒಳಗೇ ಬರುತ್ತದೆ. ಆದರೆ ಅವರು ಎರಡೂ ಕಡೆಗಳಿಂದ ಅನುಕೂಲಗಳನ್ನು ಪಡೆಯುವುದು ಸಾಧ್ಯವಿಲ್ಲ. ಅಧಿವೇಶನವನ್ನು ಕರೆಯುವುದನ್ನು ಅಥವಾ ಕರೆಯದೆ ಇರುವುದನ್ನು ಅವರ ವಿವೇಚನೆಗೆ ಬಿಡುವುದು ಮತ್ತು, ಅದೇ ಸಮಯದಲ್ಲಿ, ೫ನೆಯ ಉಪವಿಧಿಯ ಲಾಭವನ್ನು ಪಡೆಯುವುದಕ್ಕೆ ಅವಕಾಶ ಕೊಡುವುದು – ಹೀಗೆ ಮಾಡುವುದರಿಂದ ಅವರಿಗೆ ಸದನಕ್ಕೆ ಮೋಸಮಾಡುವ ಸ್ವಾತಂತ್ರ್ಯವನ್ನು ನೀಡುವುದಷ್ಟೇ ಅಲ್ಲ, ಸಂವಿಧಾನವನ್ನೇ ವಂಚಿಸಿದ ಹಾಗೆ ಆಗುತ್ತದೆ. ಬಿಹಾರ ಸರಕಾರವು ಮಾಡಿರುವುದು ಇದನ್ನೇ. ಹುಂಡಿಯೊಂದನ್ನು ಪರಿಷತ್ತಿಗೆ ರವಾನಿಸಿದಾಗ, ಅಧಿವೇಶನವನ್ನು ಕರೆಯುವುದು ಸರಕಾರದ ಕರ್ತವ್ಯವಾಗಿರುತ್ತದೆ ಮತ್ತು ಹಾಗೆ ಮಾಡುವುದು ಸಂಪೂರ್ಣವಾಗಿ ಅದರ ಅಧಿಕಾರವ್ಯಾಪ್ತಿಯಲ್ಲಿ ಇರುತ್ತದೆ. ಸರಕಾರವು ಹಾಗೆ ಮಾಡದಿದ್ದಲ್ಲಿ ೧೯೮ನೆಯ ವಿಧಿಯ ೫ನೆಯ ಉಪಬಂಧದ ಅನುಕೂಲಗಳನ್ನು ಅದು ಪಡೆಯಲು ಸಾಧ್ಯವಾಗುವುದಿಲ್ಲ.

ಈ ಕಾರಣಗಳಿಂದಾಗಿ, ನಾನು ಬಿಹಾರದ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನು ಒಪ್ಪುತ್ತೇನೆ ಮತ್ತು ಆರ್.ಎಲ್.ಎ. ಅವರ ಅಭಿಪ್ರಾಯವನ್ನು ತಳ್ಳಿಹಾಕುತ್ತೇನೆ.

ನನಗೆ ಆರ್.ಎಲ್. ಎ. ಅವರಲ್ಲಿ ಗೌರವವಿರುವ ಕಾರಣದಿಂದಲೇ ಅವರ ವಾದದ ಬಗ್ಗೆ ಇಷ್ಟು ಲಂಬಿಸಬೇಕಾಯಿತು. ಇಲ್ಲದಿದ್ದರೆ, ಅದನ್ನು ಮೊದಲಿನಲ್ಲಿಯೇ ತಳ್ಳಿಹಾಕುತ್ತಿದ್ದೆ. ಇಲ್ಲಿನ ವಿಷಯ ನನಗೆ ದುರ್ಜ್ಞೇಯವಾಗಿ ಕಾಣಿಸುವುದಿಲ್ಲ. ಈ ಸಂದರ್ಭದಲ್ಲಿ ಸಂವಿಧಾನವನ್ನು ರೂಪಿಸಿದವರ ಆಶಯವೇನಿತ್ತು ಎಂದು ತಿಳಿದುಕೊಳ್ಳುವುದಕ್ಕೆ ಸಾಮಾನ್ಯಜ್ಞಾನಕ್ಕಿಂತ ಹೆಚ್ಚಿನದೇನೂ ಬೇಕಾಗಿಲ್ಲ. ಬಿಹಾರ ಸರಕಾರ ಮಾಡಿರುವುದು ಉದ್ದೇಶಪೂರ್ವಕವಾದ ಮತ್ತು ಯೋಜಿತವಾದ ವಂಚನೆಯ ಕೃತ್ಯ. ಇದು ಅಜ್ಞಾನದಿಂದ ಮಾಡಿದ ಕೃತ್ಯವೆಂದು ನನಗೆ ಅನಿಸುವುದಿಲ್ಲ. ಬಿಹಾರ ಸರಕಾರವು ಒಬ್ಬ ಸಾಮಾನ್ಯ ವಂಚಕನ ಮಟ್ಟಕ್ಕೆ ಇಳಿದಿದೆ ಎನ್ನದೆ ನನಗೆ ಬೇರೆಯ ರೀತಿಯಲ್ಲಿ ವರ್ಣಿಸಲು ಪದಗಳೇ ತೋರುತ್ತಿಲ್ಲ. ನನಗೆ ಆಗುತ್ತಿರುವ ನೋವಿನಿಂದಾಗಿ, ನನ್ನ ಈ ಭಾವನಾ ತೀವ್ರತೆಯನ್ನು ಬಿಹಾರ ಸರಕಾರಕ್ಕೆ ನೇರವಾಗಿ ತಿಳಿಸುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

ನಾನು ಮುಕ್ತಾಯಮಾಡುವುದಕ್ಕೆ ಮುಂಚೆ, ಕಾನೂನು ಇಲಾಖೆಯು ಪರಿಗಣಿಸಬೇಕಾದ ಪ್ರಶ್ನೆಯೊಂದನ್ನು ಎತ್ತಬಯಸುತ್ತೇನೆ. ಸಂವಿಧಾನದ ವಿಷಯದಲ್ಲಿ ಸಲಹೆಯನ್ನು ಕೇಳುವ ಬೇಡಿಕೆಗಳು ಹೇರಳವಾಗಿ ರಾಜ್ಯ ಸರಕಾರದಿಂದ ನಮಗೆ ಬರುತ್ತಿರುತ್ತವೆ. ನಾವು ಇಂತಹ ಬೇಡಿಕೆಗಳನ್ನು ಮನ್ನಿಸಿ, ನಮ್ಮ ಸಲಹೆಯನ್ನು ನೀಡುತ್ತೇವೆ. ಇಂತಹ ಸಲಹೆಗಳು ಅನುಸರಿಸಲ್ಪಡುತ್ತವೆ ಮತ್ತು ಅವುಗಳು ಸಾಂವಿಧಾನಿಕವಾಗಿ ಬಳಕೆಯಲ್ಲಿ ನಿಲ್ಲುತ್ತವೆ. ನಾವು ಹೀಗೆ ಮಾಡುವುದು ಸರಿಯೇ ಎಂದು ಹಲವು ಬಾರಿ ನಾನು ಪ್ರಶ್ನಿಸಿಕೊಳ್ಳುತ್ತೇನೆ. ಸಂಬಂಧಪಟ್ಟವರು ತಮಗೆ ತೋರಿದ ಹಾಗೆ ನಡೆದುಕೊಂಡು ತಮ್ಮ ಸರಿ ತಪ್ಪುಗಳನ್ನು ನಿರ್ಧರಿಸುವುದನ್ನು ನ್ಯಾಯಾಲಯಕ್ಕೆ ಬಿಡುವುದು ಉತ್ತಮವಲ್ಲವೇ? ಕ್ರೈ ಅವರು ಹೇಳಿದ ಹಾಗೆ ಬಳಕೆಯು ಶಾಸನವೊಂದನ್ನು ಅರ್ಥೈಸುವಲ್ಲಿನ ಒಂದು ಪ್ರಮುಖ ವಿಧಾನವಾಗುತ್ತದೆ. ನಾವು ಸಲಹೆಯನ್ನು ಕೊಡುವುದರ ಮೂಲಕ ಶಾಸನಕ್ಕೆ ಒಂದು ರೀತಿಯ ಅರ್ಥವನ್ನು ನೀಡುತ್ತೇವೆ, ನಾವು ಹೇಳಿದ ಅರ್ಥವು ಸರಿಯಾಗದೆ ಇರಬಹುದು ಆದರೆ ಅದನ್ನು ನಾವು ಹೇಳಿರದೆ ಇದ್ದರೆ ಆ ಅರ್ಥವು ದೋಷಪೂರಿತವೆಂದು ತೀರ್ಮಾನವೂ ಆಗಬಹುದಿತ್ತು. ನಾವು ನೀಡಿದ ಅರ್ಥವು ದೋಷಪೂರಿತವೆಂದು

ನಿರ್ಣಯಿಸಲ್ಪಟ್ಟರೆ ಅದಕ್ಕೆ ನಾವು ಹೊಣೆಗಾರರಾಗಬೇಕಾಗಿರುತ್ತದೆ. ನ್ಯಾಯವಿತರಣೆಯ ಕ್ಷೇತ್ರದಲ್ಲಿ, ಬಳಕೆಯು ಬಹಳ ಕಾಲದಿಂದ ಮಾನ್ಯಮಾಡಲ್ಪಟ್ಟ ವಿಧಾನವಾಗಿದೆ ಮತ್ತು ಈ ವಿಧಾನವನ್ನು ಮುಂದುವರೆಸದೆ ಇರುವುದು ಕಷ್ಟವೆಂಬುದನ್ನು ನಾನು ಈಗ ಅರಿತಿದ್ದೇನೆ. ಇಷ್ಟೆಲ್ಲಾ ವಾದವನ್ನು ಮಾಡಿದಮೇಲೆಯೂ, ನಾವು ಇದಕ್ಕೆ ಎಷ್ಟರ ಮಟ್ಟಿಗೆ ಜವಾಬ್ದಾರರಾಗಿರುತ್ತೇವೆ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದು ಉತ್ತಮ.

ಬಿ.ಆರ್. ಅಂಬೇಡ್ಕರ್

* * * * *

---

ಡಾ. ಅಂಬೇಡ್ಕರ್ ಸೋರ್ಸ್ ಮೆಟೀರಿಯಲ್ ಪಬ್ಲಿಕೇಷನ್ಸ್ ಸಮಿತಿಯಲ್ಲಿ ವಿಶೇಷ ಅಧಿಕಾರಿಯಾಗಿದ್ದವರು, ಈ ಲೇಖನವು ಮಹಾರಾಷ್ಟ್ರ ಸರಕಾರದ ಅಡ್ಮಿನಿಸ್ಟ್ರೇಟರ್ ಜನರಲ್ ಅವರಿಂದ ೧೯೭೭ರಲ್ಲಿ ದೊರಕಿತು ಎಂದು ನಮೂದಿಸಿದ್ದಾರೆ. ಈ ಲೇಖನಕ್ಕೆ ಡಾ. ಅಂಬೇಡ್ಕರ್ ಅವರು ಸಹಿಮಾಡಿದ್ದಾರೆ.

# ೧೭. ಬುದ್ಧ ಮತ್ತು ಬೌದ್ಧಧರ್ಮದ ಭವಿಷ್ಯ

## ೧

ಮತಧರ್ಮಗಳನ್ನು ಸ್ಥಾಪಿಸಿದ ಹಲವರಲ್ಲಿ, ನಾಲ್ಕು ಜನರ ಮತಧರ್ಮಗಳು ಹಿಂದೆ ಪ್ರಪಂಚದಲ್ಲಿ ಬದಲಾವಣೆಯನ್ನು ತಂದುದಷ್ಟೇ ಅಲ್ಲ, ಈಗಲೂ ಜನಸಮೂಹದ ಮೇಲೆ ತಮ್ಮ ಪ್ರಭಾವವನ್ನು ಹೊಂದಿವೆ. ಅವರೆಂದರೆ, ಬುದ್ಧ, ಜೀಸಸ್, ಮಹಮ್ಮದ್ ಮತ್ತು ಕೃಷ್ಣ. ಈ ಧರ್ಮಸ್ಥಾಪಕರುಗಳನ್ನು ಮತ್ತು ಅವರುಗಳ ನಿಲುವನ್ನು ಪರಸ್ಪರ ಹೋಲಿಸಿದಾಗ, ಭಗವಾನ್ ಬುದ್ಧ ಮತ್ತು ಇತರರ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸಬಹುದು ಮತ್ತು ಹೀಗೆ ಮಾಡುವುದು ಅರ್ಥಪೂರ್ಣವಾಗಿಯೂ ಇರುತ್ತದೆ.

ಇತರರಲ್ಲಿ ಕಾಣದ ಆದರೆ ಬುದ್ಧನಲ್ಲಿ ಮಾತ್ರ ಕಾಣುವ ಮೊದಲ ಅಂಶವೆಂದರೆ ಆತನ ಸ್ವಾರ್ಥರಾಹಿತ್ಯ. ತಾನು ದೇವರ ಮಗನೆಂದೂ, ತನ್ನನ್ನು ಹಾಗೆ ಮಾನ್ಯಮಾಡದವರು, ದೇವರ ರಾಜ್ಯವನ್ನು ಪ್ರವೇಶಿಸಲು ಆಶಿಸಿದರೂ ವಿಫಲರಾಗುತ್ತಾರೆ ಎಂದು ಬೈಬಲ್ಲಿನಲ್ಲಿ ಮೊದಲಿನಿಂದ ಕಡೆಯವರೆಗೂ ಜೀಸಸ್ ಹೇಳುತ್ತಾನೆ. ಮಹಮ್ಮದ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಾನೆ. ಜೀಸಸ್‌ನಂತೆಯೇ ಆತನೂ ತಾನು ದೇವದೂತನೆಂದು ಸಾರಿಕೊಳ್ಳುತ್ತಾನೆ. ಅಷ್ಟೇ ಅಲ್ಲದೆ ತಾನೇ ಕಡೆಯ ದೇವದೂತನೆಂಬುದನ್ನು ಒತ್ತಿಹೇಳುತ್ತಾನೆ. ಅಂದರೆ, ತಾನು ದೇವದೂತನಷ್ಟೇ ಅಲ್ಲ, ತಾನೇ ಕಡೆಯ ದೇವದೂತನೆಂಬುದನ್ನು ಮುಕ್ತಿಯನ್ನು ಬಯಸುವವರೆಲ್ಲರೂ ಒಪ್ಪಿಕೊಳ್ಳಬೇಕೆಂದೂ ಘೋಷಿಸುತ್ತಾನೆ. ಕೃಷ್ಣನಾದರೋ ಇವರಿಬ್ಬರಿಗಿಂತ ಹೆಚ್ಚು ದೂರ ಹೋಗುತ್ತಾನೆ. ಅವನು ತನ್ನನ್ನು ದೇವರ ಮಗನೆಂದು ಅಥವಾ ತಾನೇ ಕಡೆಯ ದೇವದೂತ ಅಥವಾ ಕಡೆಯ ದೇವದೂತ ಎಂದು ಹೇಳಿಕೊಳ್ಳುವಷ್ಟರಲ್ಲಿ ತೃಪ್ತನಾಗುವುದಿಲ್ಲ. ಅವನು ತಾನೇ ದೇವರೆಂದು ಕರೆದುಕೊಳ್ಳುವುದರಲ್ಲಿ ಕೂಡ ತೃಪ್ತನಾಗುವುದಿಲ್ಲ. ತನ್ನನ್ನು ತಾನು ಪರಮೇಶ್ವರನೆಂದು ಕರೆದುಕೊಳ್ಳುತ್ತಾನೆ. ಅವನ ಅನುಯಾಯಿಗಳು ಆತನನ್ನು ದೇವಾಧಿದೇವ ಎಂದರೆ ದೇವರುಗಳಿಗೇ ದೇವನಾದವನು ಎಂದು ವರ್ಣಿಸುತ್ತಾರೆ. ಸಾಮಾನ್ಯ ಮನುಷ್ಯನಿಂದ ಜನಿಸಿದ ಆತ, ಜನಸಾಮಾನ್ಯರಿಗೆ ಬೋಧಿಸುವುದಷ್ಟರಲ್ಲಿ, ಸಾಮಾನ್ಯ ಮನುಷ್ಯನಾಗಿರುವುದರಲ್ಲಿ ತೃಪ್ತಿಯನ್ನು ಕಾಣಲಿಲ್ಲ. ತಾನು ಅದ್ಭುತ ರೀತಿಯಲ್ಲಿ ಜನ್ಮತಳೆದವನೆಂದು ಹೇಳಿಕೊಳ್ಳುವುದಿಲ್ಲ ಮತ್ತು ತನ್ನ ಅದ್ಭುತ ಶಕ್ತಿಯನ್ನು ಪ್ರದರ್ಶಿಸಲು ಆತ ಪ್ರಕೃತಿಗೆ ಅತೀತವಾದ ಅದ್ಭುತ ಪವಾಡಗಳನ್ನೇನೂ ಮಾಡುವುದಿಲ್ಲ. ಬುದ್ಧನಾದರೋ ಮಾರ್ಗದಾತ ಮತ್ತು ಮೋಕ್ಷದಾತ ಎನ್ನುವುದರಲ್ಲಿ ಸರಿಯಾದ ವ್ಯತ್ಯಾಸವನ್ನು ಗುರುತಿಸಿದ. ಜೀಸಸ್, ಮಹಮ್ಮದ್ ಮತ್ತು ಕೃಷ್ಣ ಇವರು ತಮ್ಮನ್ನು ಮೋಕ್ಷದಾತರೆಂದು ಕರೆದುಕೊಂಡರು. ಆದರೆ ಮಾರ್ಗದಾತನಾಗಿ ತನ್ನ ಪಾತ್ರವನ್ನು ನಿರ್ವಹಿಸುವಷ್ಟರಲ್ಲಿ ಬುದ್ಧ ತೃಪ್ತನಾಗಿದ್ದ.

ಈ ನಾಲ್ವರು ಧರ್ಮಗುರುಗಳ ಮಧ್ಯೆ ಇನ್ನೂ ಒಂದು ವ್ಯತ್ಯಾಸವಿದೆ. ತಾವು ಬೋಧಿಸುತ್ತಿರುವುದು ದೇವರ ವಾಕ್ಯ ಮತ್ತು ದೇವರ ವಾಕ್ಯವಾದುದರಿಂದ ಅದು ವಿಫಲವಾಗುವ ಪ್ರಶ್ನೆಯೇ ಇಲ್ಲ ಮತ್ತು ಅದನ್ನು ಪ್ರಶ್ನಿಸಲಾಗದು ಎಂದು ಜೀಸಸ್ ಮತ್ತು ಮಹಮ್ಮದ್ ಇಬ್ಬರೂ ಸಾರಿದರು. ತಾನು ದೇವಾಧಿದೇವನೆಂದುಕೊಂಡ ಕೃಷ್ಣ ತಾನು ಹೇಳಿದುದೆಲ್ಲಾ ದೇವರ ವಾಕ್ಯವೇ, ದೇವರೇ ಹೇಳಿದುದು ಮತ್ತು ಅದೇ ಅಂತಿಮ ಅದನ್ನು ಪ್ರಶ್ನಿಸುವ ಹಾಗೆಯೇ ಇಲ್ಲ ಮತ್ತು ಅದು ವಿಫಲವಾಗುವ ಪ್ರಮೇಯವೇ

ಇಲ್ಲ ಎಂದು ಹೇಳಿಕೊಂಡ. ಆದರೆ ಬುದ್ಧ ತನ್ನ ಬೋಧನೆಗಳು ದೋಷಾತೀತವೆಂದು ಹೇಳಿಕೊಳ್ಳಲಿಲ್ಲ. ಮಹಾಪರಿನಿಬ್ಬಣ ಸುತ್ತದಲ್ಲಿ ಅವನು ಆನಂದನಿಗೆ ಹೀಗೆ ಹೇಳಿದ: ನನ್ನ ಧರ್ಮವು ವಿಚಾರ ಮತ್ತು ಅನುಭವದ ಆಧಾರದ ಮೇಲೆ ನಿಂತಿದೆ. ಆದರೆ ನಾನು ಹೇಳಿದೆ ಎಂಬ ಮಾತ್ರಕ್ಕೆ ನನ್ನ ಅನುಯಾಯಿಗಳು ಅದನ್ನೇ ಸರಿಯೆಂದು ಒಪ್ಪಿಕೊಳ್ಳಬೇಕೆಂದಿಲ್ಲ. ಯಾರೇ ಆದರೂ ತಮ್ಮ ತಮ್ಮ ಅನುಭವದ ಆಧಾರದ ಮೇಲೆ, ಕಾಲ ಮತ್ತು ಸಂದರ್ಭಗಳಿಗೆ ಹೊಂದದಂತಹ ನನ್ನ ಉಪದೇಶಗಳನ್ನು ಬದಲಾಯಿಸಬಹುದು ಅಥವಾ ಸಂಪೂರ್ಣವಾಗಿ ತ್ಯಜಿಸಬಹುದು. ಬುದ್ಧ ತನ್ನ ಧರ್ಮವು ಪ್ರಾಚೀನ ಅನುಪಯುಕ್ತ ವಿಷಯಗಳಿಂದ ತುಂಬಿರಕೂಡದು ಕಾರಣದಿಂದಲೇ ಆತ ತನ್ನ ಶಿಷ್ಯರಿಗೆ ತನ್ನ ಉಪದೇಶಗಳನ್ನು ಸನ್ನಿವೇಶಗಳಿಗೆ ತಕ್ಕಂತೆ ಬದಲಾಯಿಸುವ ಅಧಿಕಾರವನ್ನು ಕೊಟ್ಟಿದ್ದ. ಬೇರೆ ಯಾವುದೇ ಧರ್ಮಸಂಸ್ಥಾಪಕರೂ ಇಂತಹ ಎದೆಗಾರಿಕೆಯನ್ನು ತೋರಲಿಲ್ಲ. ಬದಲಾವಣೆಯ ಬಗ್ಗೆ ಅವರಿಗೆ ಹೆದರಿಕೆಯಿತ್ತು ಏಕೆಂದರೆ ಅಂತಹ ಸ್ವಾತಂತ್ರ್ಯವು ತಮ್ಮ ಧರ್ಮದ ಒಳತಿರುಳನ್ನೇ ಬದಲಾಯಿಸಬಹುದೆಂಬ ಆತಂಕ ಅವರಲ್ಲಿತ್ತು. ಬುದ್ಧನಿಗೆ ಆ ರೀತಿಯ ಆತಂಕವಿರಲಿಲ್ಲ. ತನ್ನ ಧರ್ಮದ ಅಡಿಪಾಯ ಎಷ್ಟುಗಟ್ಟಿಯಾಗಿದೆಯೆಂಬುದನ್ನು ಆತ ಅರಿತಿದ್ದ. ಎಂತಹ ಕ್ರೂರ ವಿಚಾರವಿನಾಶಕನೂ ತನ್ನ ಧರ್ಮದ ಮೂಲಭೂತ ಅಂಶವನ್ನು ನಾಶಮಾಡಲಾರ ಎಂಬುದು ಅವನಿಗೆ ಮನವರಿಕೆಯಾಗಿತ್ತು.

## ೨

ಇದು ಬುದ್ಧನ ಅಪ್ರತಿಮ ನಿಲುವು. ಆದರೆ ಆತನ ಧರ್ಮದ ವಿಷಯವೇನು? ಅದು ಆತನ ಸ್ಪರ್ಧಿಗಳು ಹುಟ್ಟುಹಾಕಿದ ಧರ್ಮಗಳಿಗೆ ಹೋಲಿಸಿದರೆ ಹೇಗೆ ಕಾಣಿಸುತ್ತದೆ?

ಹಿಂದೂ ಧರ್ಮವು ನೈತಿಕತೆಯ ಆಧಾರದ ಮೇಲೆ ಕಟ್ಟಲಾಗಿಲ್ಲ. ಅದರಲ್ಲಿ ನಾವು ಕಾಣುವ ನೈತಿಕತೆಯು ಆ ಧರ್ಮದ ಅವಿಭಾಜ್ಯ ಅಂಗವಲ್ಲ. ನೈತಿಕತೆಯು ಹಿಂದೂ ಧರ್ಮದಲ್ಲಿ ರಕ್ತಗತವಾಗಿಲ್ಲ. ಅದು ಉಳಿದಿರುವುದಕ್ಕೆ ಕಾರಣ ಸಾಮಾಜಿಕ ಆವಶ್ಯಕತೆಗಳೇ ಹೊರತು ಹಿಂದೂ ಧರ್ಮವು ತಾನು ಆಂತರಿಕವಾಗಿ ಅದನ್ನು ಬೆಳೆಸಿಕೊಂಡಿರುವುದರಿಂದ ಅಲ್ಲ. ಬುದ್ಧನ ಧರ್ಮವೇ ನೈತಿಕವಾದುದು. ಬೌದ್ಧಧರ್ಮದಲ್ಲಿ ದೇವರ ಕಲ್ಪನೆಯಿಲ್ಲ ಎಂಬುದು ಸತ್ಯ. ದೇವರ ಸ್ಥಾನದಲ್ಲಿ ನೈತಿಕತೆಯು ಪ್ರತಿಷ್ಠಿತವಾಗಿದೆ. ಉಳಿದ ಮತಗಳಿಗೆ ದೇವರು ಹೇಗೋ, ಬೌದ್ಧಧರ್ಮಕ್ಕೆ ನೈತಿಕತೆಯು ಹಾಗೆ.

ಧಮ್ಮ ಎಂಬ ಪದಕ್ಕೆ ಬುದ್ಧನು ಕ್ರಾಂತಿಕಾರಿಯಾದ ಅರ್ಥವನ್ನು ಮಾಡಿದ ಎಂಬುದನ್ನು ಜನತೆ ಗುರುತಿಸಿಯೇ ಇಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಧರ್ಮ ಎಂಬ ಪದಕ್ಕೆ ವೈದಿಕ ಅರ್ಥದಲ್ಲಿ ನೈತಿಕತೆಯ ಭಾವವೇ ಸಿಗುವುದಿಲ್ಲ. ಬ್ರಾಹ್ಮಣರು ಪ್ರತಿಪಾದಿಸಿದ ಹಾಗೆ, ಮತ್ತು ಜೈಮಿನಿಯ ಪೂರ್ವಮೀಮಾಂಸೆಯಲ್ಲಿ ಉದ್ಘೋಷಿಸಿರುವ ಹಾಗೆ ಧರ್ಮವೆಂದರೆ ಕರ್ಮಗಳ ಆಚರಣೆಯಷ್ಟೇ ಆಗಿದ್ದು ಅದರ ಪರಿಧಿಯ ಆಚೆಗೆ ಆ ಪದದ ಅರ್ಥ ಹೋಗುವುದಿಲ್ಲ. ಬ್ರಾಹ್ಮಣರ ಪಾಲಿಗೆ ಧರ್ಮವೆಂದರೆ ಯಜ್ಞ, ಯಾಗಾದಿಗಳನ್ನು ಮಾಡುವುದು ಮಾತ್ರವಾಗಿತ್ತು. ಇದು ಬ್ರಾಹ್ಮಣ ಮತದ ಅಥವಾ ವೈದಿಕ ಧರ್ಮದ ಜೀವಾಳವಾಗಿತ್ತು. ಅದಕ್ಕೂ ನೈತಿಕತೆಗೂ ಯಾವ ಸಂಬಂಧವೂ ಇರಲಿಲ್ಲ.

ಬುದ್ಧನು ಉಪಯೋಗಿಸಿರುವ ಅರ್ಥದಲ್ಲಿ ಧಮ್ಮವು ಕರ್ಮಾಚರಣೆಗೆ ಯಾವ ರೀತಿಯಲ್ಲಿಯೂ ಸಂಬಂಧಿಸಿದುದಲ್ಲ. ಯಜ್ಞ, ಯಾಗಗಳು ಧರ್ಮದ ತಿರುಳು ಎಂಬ ವಾದವನ್ನು ಅವನು ತಿರಸ್ಕರಿಸಿದ. ನೈತಿಕತೆಯನ್ನು ಕರ್ಮದ ಬದಲಾಗಿ ಧರ್ಮದ ತಿರುಳೆಂದು ಪ್ರತಿಪಾದಿಸಿದ. ಧಮ್ಮ ಎಂಬ ಪದವನ್ನು

ಬ್ರಾಹ್ಮಣ ಆಚಾರ್ಯರು ಮತ್ತು ಬುದ್ಧ ಇಬ್ಬರೂ ಉಪಯೋಗಿಸಿದರೂ, ಅವರಿಬ್ಬರು ಅದಕ್ಕೆ ಮಾಡುವ ಅರ್ಥದಲ್ಲಿ ಮೂಲಭೂತ ವ್ಯತ್ಯಾಸವಿದೆ. ನೈತಿಕತೆಯನ್ನು ಮತವೊಂದರ ತಳಹದಿಯನ್ನಾಗಿ, ತಿರುಳನ್ನಾಗಿ ಮಾಡಿದ ಧರ್ಮಬೋಧಕರಲ್ಲಿ ಬುದ್ಧನೇ ಮೊದಲಿಗನು ಎಂದು ಹೇಳಬಹುದು. ಭಗವದ್ಗೀತೆಯಲ್ಲಿ ನಾವು ನೋಡಬಹುದಾದ ಹಾಗೆ, ಕರ್ಮಗಳು ಮತ್ತು ಆಚರಣೆಗಳೇ ಧರ್ಮವೆಂಬ ತಿಳಿವಳಿಕೆಯಿಂದ ಕೃಷ್ಣನಂತಹವನೂ ಬಿಡುಗಡೆ ಹೊಂದಲಿಲ್ಲ. ಕೃಷ್ಣನು ಬೋಧಿಸಿದ ಅನಾಸಕ್ತಿಯೋಗ ಎಂದೂ ಕರೆಯಲ್ಪಡುವ ನಿಷ್ಕಾಮ ಕರ್ಮದ ಸೆಳೆತಕ್ಕೆ ಬಹಳಷ್ಟು ಜನರು ಸಿಕ್ಕಿಕೊಂಡಿರುವ ಹಾಗೆ ಕಾಣಿಸುತ್ತದೆ. ಇದು 'ಒಳ್ಳೆಯದನ್ನು ಮಾಡು ಆದರೆ ಅದರ ಫಲವನ್ನು ಆಶಿಸಬೇಡ' ಎಂದು ಹೇಳುವ ಸ್ಕೌಟ್ ಹುಡುಗರ ಧ್ಯೇಯದಂತೆ ಬಾಲಿಶವಾಗಿ ಕಾಣುತ್ತದೆ. ನಿಷ್ಕಾಮ ಕರ್ಮಕ್ಕೆ ಈ ರೀತಿ ಮಾಡುವ ಅರ್ಥವು, ಅದರ ನಿಜವಾದ ಅರ್ಥದ ತಪ್ಪು ತಿಳಿವಳಿಕೆಯಿಂದ ಆಗಿದೆ. ನಿಷ್ಕಾಮಕರ್ಮ ಎಂದಿರುವ ಪದಗುಚ್ಛದಲ್ಲಿನ ಕರ್ಮವು, 'ಕಾರ್ಯ' ಎಂಬ ಸಾಮಾನ್ಯ ಅರ್ಥವನ್ನು ಹೊಂದಿಲ್ಲ. ಮೂಲತಃ ಬ್ರಾಹ್ಮಣರು ಮತ್ತು ಜೈಮಿನಿ ಉಪಯೋಗಿಸಿದ ಅರ್ಥದಲ್ಲಿಯೇ 'ನಿಷ್ಕಾಮಕರ್ಮ'ವೂ ಉಪಯೋಗವಾಗಿದೆ. ಜೈಮಿನಿ ಮತ್ತು ಬ್ರಾಹ್ಮಣರ ಬಳಕೆಯಲ್ಲಿ ಆಚರಣೆಗಳ ಅರ್ಥದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಬ್ರಾಹ್ಮಣರ ಆಚರಣೆಗಳಲ್ಲಿ ಎರಡು ವಿಧಗಳಿವೆ – ನಿತ್ಯಕರ್ಮಗಳು ಮತ್ತು ನೈಮಿತ್ತಿಕ ಕರ್ಮಗಳು. ನಿತ್ಯಕರ್ಮಗಳು ಎಂದರೆ ಪ್ರತಿದಿನವೂ ಮಾಡಲೇಬೇಕೆಂದು ವಿಧಿಸಿರುವ ಕರ್ಮಗಳು. ಈ ಕಾರಣಕ್ಕಾಗಿ ಅವುಗಳನ್ನು ನಿತ್ಯಕರ್ಮಗಳೆಂದು ಕರೆಯಲಾಗಿದೆ. ಇವುಗಳನ್ನು ಧಾರ್ಮಿಕ ಕರ್ತವ್ಯಗಳೆಂದು ಮಾಡಬೇಕಾಗಿರುವುದರಿಂದ ಅವುಗಳ ಫಲವನ್ನು ಅಪೇಕ್ಷಿಸುಂತಿಲ್ಲ. ಈ ಕಾರಣಕ್ಕಾಗಿಯೇ ಅವುಗಳನ್ನು ನಿಷ್ಕಾಮಕರ್ಮಗಳೆಂದು ಕರೆಯಲಾಗಿದೆ. ಇನ್ನೊಂದು ವರ್ಗದ ಕರ್ಮಗಳೆಂದರೆ ನೈಮಿತ್ತಿಕ ಕರ್ಮಗಳು. ಅವುಗಳನ್ನು ಅಗತ್ಯ ಸಮಯದಲ್ಲಿ ಆಚರಿಸಬೇಕು. ಅವುಗಳಿಗೆ ಕಾಮ್ಯಕರ್ಮಗಳೆಂದೂ ಹೆಸರು, ಏಕೆಂದರೆ ಅವುಗಳನ್ನು ಫಲಾಪೇಕ್ಷೆಯಿಂದ ಆಚರಿಸಲಾಗುತ್ತವೆ. ಭಗವದ್ಗೀತೆಯಲ್ಲಿ ಕೃಷ್ಣ ಖಂಡಿಸಿದ್ದು ಕಾಮ್ಯಕರ್ಮಗಳನ್ನು, ನಿಷ್ಕಾಮಕರ್ಮಗಳನ್ನಲ್ಲ. ಬದಲಿಗೆ, ನಿಷ್ಕಾಮಕರ್ಮಗಳನ್ನು ಆತ ಪ್ರಶಂಸಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕೃಷ್ಣನಿಗೂ ಧರ್ಮದಲ್ಲಿ ನೈತಿಕತೆಯೆಂಬುದು ಅಗತ್ಯವಾಗಿರಲಿಲ್ಲ. ಅವನ ಪ್ರಕಾರ ಧರ್ಮವು ನಿಷ್ಕಾಮಕರ್ಮದ ವರ್ಗಕ್ಕೆ ಸೇರಿದ ಯಜ್ಞ, ಯಾಗಾದಿಗಳನ್ನು ಒಳಗೊಂಡಿತ್ತು.

ಹಿಂದೂ ಮತ್ತು ಬೌದ್ಧ ಧರ್ಮಗಳಲ್ಲಿ ಇರುವ ವ್ಯತ್ಯಾಸಗಳಲ್ಲಿ ಈ ಅಂಶವೂ ಒಂದು. ಎರಡನೆಯ ಅಂಶ, ಅಸಮಾನತೆಯು ಹಿಂದೂಧರ್ಮ ಸೂತ್ರ. ಚಾತುರ್ವರ್ಣದ ತತ್ತ್ವವು ಈ ಸೂತ್ರದ ಮೂರ್ತಿಸ್ವರೂಪದಂತಿದೆ. ಬುದ್ಧನಾದರೋ ಸಮಾನತೆಯ ಪರವಾಗಿ ಹೋರಾಡಿದ. ಅವನು ಚಾತುರ್ವರ್ಣದ ಅತ್ಯಂತ ವಿರೋಧಿಯಾಗಿದ್ದ. ಆತ ಅದರ ವಿರುದ್ಧ ಉಪದೇಶವನ್ನು ಮಾಡಿದ್ದಷ್ಟೆ ಅಲ್ಲ, ಹೋರಾಡಿದುದಷ್ಟೆ ಅಲ್ಲ, ಅದನ್ನು ಬೇರುಸಮೇತ ಕಿತ್ತುಹಾಕಲು ಸಾಧ್ಯವಾದುದೆಲ್ಲವನ್ನೂ ಮಾಡಿದ. ಹಿಂದೂ ಧರ್ಮದ ಪ್ರಕಾರ, ಶೂದ್ರನಾಗಲೀ, ಸ್ತ್ರೀಯಾಗಲೀ ಧರ್ಮೋಪದೇಶಕರಾಗುವ, ಸಂನ್ಯಾಸವನ್ನು ಸ್ವೀಕರಿಸುವ ಮತ್ತು ತನ್ಮೂಲಕ ದೇವರನ್ನು ಪಡೆಯುವ ಹಾಗೆ ಇರಲಿಲ್ಲ. ಬುದ್ಧ ತನ್ನ ಭಿಕ್ಕುಗಳ ಸಂಘಕ್ಕೆ ಶೂದ್ರರನ್ನು ಸೇರಿಸಿಕೊಂಡ. ಸ್ತ್ರೀಯರಿಗೂ ಭಿಕ್ಕುಣಿಯರನ್ನಾಗಿ ಸಂಘಕ್ಕೆ ಸೇರಲು ಅವಕಾಶ ಮಾಡಿಕೊಟ್ಟ. ಅವನು ಏಕೆ ಹಾಗೆ ಮಾಡಿದ? ಅವನು ಹೀಗೆ ಮಾಡಿದುದನ್ನು ಬಹಳ ಜನರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಅಸಮಾನತೆಯನ್ನು ನಾಶಮಾಡಲು, ನಿರ್ದಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳುವುದು ಆತನ ಉದ್ದೇಶವಾಗಿತ್ತು. ಬುದ್ಧನ ಆಕ್ರಮಣದ ಪರಿಣಾಮವಾಗಿ ಹಿಂದೂಧರ್ಮವು ತನ್ನ ಸಿದ್ಧಾಂತಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು. ಅದು ಹಿಂಸೆಯನ್ನು ತ್ಯಜಿಸಿತು. ವೇದದ ಅಸ್ಖಲಿತತ್ವವನ್ನು ಬಿಟ್ಟುಕೊಡಲು

ಅದು ಸಿದ್ಧವಾಗಿತ್ತು. ಆದರೆ ಚಾತುರ್ವರ್ಣದ ವಿಷಯದಲ್ಲಿ ಮಾತ್ರ ಎರಡೂ ಪಕ್ಷಗಳು ತಮ್ಮ ತಮ್ಮ ನಿಲುವನ್ನು ತ್ಯಜಿಸಲು ಸಿದ್ಧವಿರಲಿಲ್ಲ. ಬುದ್ಧನಂತೂ ಚಾತುರ್ವರ್ಣದ ಬಗ್ಗೆ ತನಗಿದ್ದ ವಿರೋಧವನ್ನು ತಣ್ಣಗಾಗಿಸಲು ಒಪ್ಪಲೇ ಇಲ್ಲ. ಈ ಕಾರಣದಿಂದಾಗಿಯೇ, ಹಿಂದೂಧರ್ಮವು ಜೈನಧರ್ಮವನ್ನು ದ್ವೇಷಿಸುತ್ತಿದ್ದುದಕ್ಕಿಂತಲೂ ಹೆಚ್ಚಾಗಿ ಬೌದ್ಧಧರ್ಮವನ್ನು ದ್ವೇಷಿಸಲು ಆರಂಭಿಸಿತು. ಚಾತುರ್ವರ್ಣಕ್ಕೆ ವಿರೋಧವಾಗಿದ್ದ ಬುದ್ಧನ ವಾದದಲ್ಲಿದ್ದ ಶಕ್ತಿಯನ್ನು ಹಿಂದೂಧರ್ಮವು ಗುರುತಿಸಲೇ ಬೇಕಾಗಿತ್ತು. ಅದಕ್ಕೆ ಶರಣಾಗುವ ಬದಲಿಗೆ, ಹಿಂದೂಧರ್ಮವು ಚಾತುರ್ವರ್ಣಕ್ಕೆ ಪೋಷಕವಾಗುವಂತಹ ತಾತ್ವಿಕ ಸಮರ್ಥನೆಯನ್ನು ಹೊಸದಾಗಿ ಹುಟ್ಟುಹಾಕಿತು. ಈ ತಾತ್ವಿಕ ಸಮರ್ಥನೆಯು ಭಗವದ್ಗೀತೆಯಲ್ಲಿ ಕಂಡುಬರುತ್ತದೆ. ಭಗವದ್ಗೀತೆಯು ಏನನ್ನು ಉಪದೇಶಿಸುತ್ತಿದೆ ಎಂಬುದನ್ನು ಹೇಳಲು ಯಾರಿಗೂ ಸಾಧ್ಯವಿಲ್ಲ. ಆದರೆ ಅದು ಚಾತುರ್ವರ್ಣದ ಪದ್ಧತಿಯನ್ನು ಸಮರ್ಥಿಸುತ್ತದೆ ಎಂಬ ವಿಷಯವು ಮಾತ್ರ ಪ್ರಶ್ನಾತೀತವಾಗಿದೆ. ಈ ಒಂದು ಸಿದ್ಧಾಂತವನ್ನು ಎತ್ತಿಹಿಡಿಯುವ ಮುಖ್ಯ ಉದ್ದೇಶದಿಂದಲೇ ಭಗವದ್ಗೀತೆಯನ್ನು ಬರೆದ ಹಾಗೆ ಕಾಣಿಸುತ್ತದೆ. ಈ ಸಮರ್ಥನೆಯನ್ನು ಅದು ಹೇಗೆ ಮಾಡಿದೆ? ತಾನು ಭಗವಂತ ಮತ್ತು ತಾನೇ ಚಾತುರ್ವರ್ಣಗಳನ್ನು ಗುಣ ಕರ್ಮಗಳ ಆಧಾರದ ಮೇಲೆ ಸೃಷ್ಟಿಮಾಡಿ ಪ್ರತಿಯೊಬ್ಬರ ಅವರವರ ಜನ್ಮಜಾತ ಗುಣಗಳ ಪ್ರಕಾರ ಅವರಿಗೆ ಸ್ಥಾನಗಳನ್ನೂ ಮತ್ತು ವೃತ್ತಿಗಳನ್ನೂ ನಿಗದಿಗೊಳಿಸಿದೆ ಎಂದು ಕೃಷ್ಣ ಅದರಲ್ಲಿ ಹೇಳುತ್ತಾನೆ. ಮೊದಲನೆಯದಾಗಿ ಈ ವಾದವು ಹೊಸದು. ಹಳೆಯ ವಾದವು ಇದಕ್ಕಿಂತ ಭಿನ್ನವಾಗಿತ್ತು. ಹಳೆಯ ವಾದದ ಪ್ರಕಾರ ಚಾತುರ್ವರ್ಣದ ತಳಹದಿಯನ್ನು ವೇದವು ತನ್ನ ವಿಧಾಯಕ ಶಕ್ತಿಯಿಂದ ಮಾಡಿದೆ ಎಂಬುದಾಗಿತ್ತು. ವೇದಗಳು ಅಸ್ಖಲಿತವಾದವುಗಳಾಗಿರುವುದರಂದ ಅವುಗಳ ಆಧಾರದ ಮೇಲೆ ನಿರ್ಮಿತವಾದ ಚಾತುರ್ವರ್ಣ ವ್ಯವಸ್ಥೆಯೂ ಅಸ್ಖಲಿತವಾದುದು. ವೇದಗಳು ಅಸ್ಖಲಿತವಾದವುಗಳಲ್ಲವೆಂಬ ಬುದ್ಧನ ತೀವ್ರವಾದ ವಾದವು ಚಾತುರ್ವರ್ಣದ ಈ ಪ್ರಾಚೀನ ತಳಹದಿಯನ್ನೇ ನಾಶಮಾಡಿತು. ಚಾತುರ್ವರ್ಣವನ್ನು ತನ್ನ ಜೀವಾಳವೆಂದು ಭಾವಿಸಿದ್ದ ಹಿಂದೂಧರ್ಮವು ಅದನ್ನು ತ್ಯಜಿಸಲು ಸಿದ್ಧವಿರದಿದ್ದುದು ಸಹಜವೇ ಆಗಿದೆ. ಇಂತಹ ಸಂದರ್ಭದಲ್ಲಿ ಅದು ಈ ಸಿದ್ಧಾಂತವನ್ನು ಭದ್ರ ಬುನಾದಿಯ ಮೇಲೆ ಉಳಿಸಿಕೊಳ್ಳಲು ಪ್ರಯತ್ನಪಡಬೇಕಾಯಿತು. ಇದನ್ನೇ ಭಗವದ್ಗೀತೆಯ ಮಾಡಲು ಉದ್ದೇಶಿಸಿರುವುದು. ಕೃಷ್ಣನು ಭಗವದ್ಗೀತೆಯಲ್ಲಿ ನೀಡಿರುವ ಹೊಸ ಸಮರ್ಥನೆಯು ಎಷ್ಟು ತೃಪ್ತಿಕರವಾಗಿದೆ? ಬಹಳಷ್ಟು ಹಿಂದೂಗಳಿಗೆ ಈ ವಾದದಲ್ಲಿ ಶ್ರದ್ಧೆಯಿದೆ. ಅದೂ ಎಷ್ಟರ ಮಟ್ಟಿನ ಶ್ರದ್ಧೆಯೆಂದರೆ, ಈ ವಾದವನ್ನು ಅವರು ಅಲ್ಲಗಳೆಯುವುದು ಸಾಧ್ಯವೇ ಇಲ್ಲ ಎಂದು ನಂಬುತ್ತಾರೆ. ಹಿಂದೂಗಳಲ್ಲದವರಿಗೂ ಕೂಡ ಈ ವಾದ ಆಪಾತರಮಣೀಯವಾಗಿದೆ ಮತ್ತು ಅದು ಅವರನ್ನು ಮೋಡಿಮಾಡಿಬಿಟ್ಟಿದೆ. ಚಾತುರ್ವರ್ಣವು ವೇದದ ಪಾರಮ್ಯದಮೇಲೆ ಮಾತ್ರ ನಿಂತಿದ್ದಿದ್ದರೆ, ಅದು ಎಂದೋ ಹೇಳಹೆಸರಿಲ್ಲದಂತೆ ನಾಶವಾಗಬೇಕಿತ್ತು. ಭಗವದ್ಗೀತೆಯಲ್ಲಿರುವ, ಕುತಂತ್ರದಿಂದ ಕೂಡಿದ ಈ ಹುಸಿವಾದವು ಚಾತುರ್ವರ್ಣ ವ್ಯವಸ್ಥೆಯನ್ನು ಚಿರಸ್ಥಾಯಿಯಾಗುವಂತೆ ಮಾಡಿತು. ಈ ವಾದದ ಬೀಜವನ್ನು ಸಾಂಖ್ಯವಾದದಿಂದ ತೆಗೆದುಕೊಳ್ಳಲಾಗಿದೆ. ಇದರಲ್ಲಿ ಭಗವದ್ಗೀತೆಯ ಸ್ವಂತದ್ದೇನೂ ಇಲ್ಲ. ಕೃಷ್ಣನ ಸ್ವಂತಿಕೆ ಇರುವುದು ಈ ವಾದವನ್ನು ಚಾತುರ್ವರ್ಣದ ಸಮರ್ಥನೆ ಮಾಡುವುದರಲ್ಲಿ ಇದೆ. ಸಾಂಖ್ಯವಾದದ ಪ್ರತಿಪಾದಕನಾದ ಕಪಿಲನ ಪ್ರಕಾರ ದೇವರು ಎಂಬುದು ಇಲ್ಲ. ಭೌತವಸ್ತುವನ್ನು ನಿರ್ಜೀವವೆಂದು ಪರಿಗಣಿಸಿದುದರಿಂದ ದೇವರ ಆವಶ್ಯಕತೆ ಹುಟ್ಟಿಕೊಂಡಿತು. ಆದರೆ ಭೌತವಸ್ತುವು ನಿರ್ಜೀವವಲ್ಲ. ಅದು ರಾಜಸ, ತಾಮಸ ಮತ್ತು ಸತ್ವವೆಂಬ ಮೂರುಗುಣಗಳಿಂದ ಕೂಡಿದೆ. ಈ ಮೂರೂ ಗುಣಗಳು ಸಮತೋಲನ ಸ್ಥಿತಿಯಲ್ಲಿರುವುದರಿಂದ ಅದು ನಿರ್ಜೀವವಾಗಿರುವಂತೆ ಕಾಣಿಸುತ್ತದೆ. ಈ ಗುಣತ್ರಯಗಳಲ್ಲಿ ಒಂದು

ಇನ್ನೆರಡಕ್ಕಿಂತ ಹೆಚ್ಚು ಪ್ರಭಾವಶಾಲಿಯಾದರೆ, ಆಗ ಪ್ರಕೃತಿಯು ಸಜೀವವಾಗುತ್ತದೆ. ಇದು ಸಾಂಖ್ಯವಾದದ ಮುಖ್ಯ ಸಾರಾಂಶ. ಸಾಂಖ್ಯರ ಈ ವಾದದ ಬಗ್ಗೆ ಯಾವ ತಕರಾರೂ ಇಲ್ಲ. ಈ ವಾದವು ಬಹುಶಃ ಸತ್ಯವೂ ಆಗಿರಬಹುದು. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಈ ಮೂರು ಗುಣಗಳಿಂದ ಮಾಡಲ್ಪಟ್ಟಿದ್ದು, ಪ್ರಕೃತಿಯ ಪ್ರತಿರೂಪವೇ ಆಗಿರುತ್ತಾನೆ. ಮೇಲೆ ಹೇಳಿದ ಮೂರು ಗುಣಗಳಲ್ಲಿ ಪರಸ್ಪರ ಪೈಪೋಟಿಯಿದ್ದು ಪ್ರತಿಯೊಂದೂ ಉಳಿದೆರಡಕ್ಕಿಂತ ಪ್ರಬಲವಾಗಲು ಹವಣಿಸುತ್ತಿರುತ್ತವೆ ಎಂಬುದನ್ನೂ ಒಪ್ಪಬಹುದು. ಆದರೆ, ವ್ಯಕ್ತಿಯೊಬ್ಬನ ಜನನ ಕಾಲದಲ್ಲಿ ಪ್ರಬಲವಾಗಿದ್ದ ಗುಣವೇ ಆ ವ್ಯಕ್ತಿಯ ಜೀವಮಾನದ ಅಂತ್ಯದವರೆಗೂ ತನ್ನ ಪ್ರಾಬಲ್ಯವನ್ನು ಮುಂದುವರೆಸಿಕೊಂಡು ಹೋಗುತ್ತದೆ ಎಂದು ಹೇಳುವುದು ಹೇಗೆ ಸಾಧ್ಯ? ಸಾಂಖ್ಯದಲ್ಲಾಗಲೀ, ಅಥವಾ ನಿಜ ಜೀವನದ ಅನುಭವದಲ್ಲಾಗಲೀ ಇದಕ್ಕೆ ಯಾವುದೇ ಸಮರ್ಥನೆಯೂ ಇಲ್ಲ. ದುರದೃಷ್ಟವಶಾತ್, ಕೃಷ್ಣ ಈ ವಾದವನ್ನು ಪ್ರತಿಪಾದಿಸಿದಾಗ ಹಿಟ್ಲರನಾಗಲೀ, ಮುಸೊಲಿನಿಯಾಗಲಿ ಇನ್ನೂ ಹುಟ್ಟಿರಲಿಲ್ಲ. ಫಲಕಗಳನ್ನು ಬರೆಯುವವನು ಅಥವಾ ಇಟ್ಟಿಗೆ ಕೆಲಸಗಾರನು ಮುಂದೊಂದು ದಿನ ಹೇಗೆ ಇಡೀ ವಿಶ್ವವನ್ನೇ ಆಳಬಲ್ಲಷ್ಟು ಪ್ರಬಲ ನಿರಂಕುಶಾಧಿಕಾರಿಯಾದ ಎಂಬುದನ್ನು ವಿವರಿಸುವುದಕ್ಕೆ ಕೃಷ್ಣನಿಗೂ ಸಾಕಷ್ಟು ಕಷ್ಟವಾಗುತ್ತಿತ್ತು. ಒಬ್ಬ ವ್ಯಕ್ತಿಯಲ್ಲಿರುವ ಗುಣಗಳು ಸಾಪೇಕ್ಷವಾಗಿ ಬದಲಾಗುತ್ತಲೇ ಇರುವುದರಿಂದ ಆ ವ್ಯಕ್ತಿಯ ಪ್ರಕೃತಿಯೂ ಬದಲಾಗುತ್ತಲೇ ಇರುತ್ತದೆ ಎಂಬ ಮುಖ್ಯ ಸಂಗತಿಯನ್ನು ಗಮನಿಸಬೇಕು. ಹೀಗೆ ಗುಣಗಳ ಪ್ರಾಬಲ್ಯವು ವ್ಯಕ್ತಿಯಲ್ಲಿ ಸದಾ ಬದಲಾಗುತ್ತಲೇ ಇರುವುದರಿಂದ ವ್ಯಕ್ತಿಗಳನ್ನು ಸದಾಕಾಲವೂ ಒಂದೇ ವರ್ಣಕ್ಕೇ ಬಂಧಿಸುವ ಮತ್ತು ಒಂದೇ ವೃತ್ತಿಗೇ ಅಂಟಿಕೊಂಡಿರುವಂತೆ ಮಾಡುವ ವ್ಯವಸ್ಥೆಯಿರುವುದು ಸಾಧ್ಯವಿಲ್ಲ. ಇದರಿಂದಾಗಿ ಭಗವದ್ಗೀತೆಯ ಇಡೀ ವಾದವೇ ಮಣ್ಣುಮುಕ್ಕುತ್ತದೆ. ಆದರೆ ನಾನಾಗಲೇ ಹೇಳಿದಂತೆ, ಈ ವಾದದಿಂದ ಮೋಹಿತರಾಗಿರುವ ಹಿಂದೂಗಳಿಗೆ ಇದು ಆಪಾತರಮಣೀಯವಾಗಿಯೇ ಮುಂದುವರೆದಿದ್ದು, ಅವರು ಅದರ ಗುಲಾಮರಾಗಿದ್ದಾರೆ. ಪರಿಣಾಮವಾಗಿ, ವರ್ಣವ್ಯವಸ್ಥೆಯನ್ನು ಮತ್ತು ಅಸಮಾನತೆಯ ತತ್ವವನ್ನು ಹಿಂದೂಧರ್ಮ ಎತ್ತಿಹಿಡಿಯುತ್ತಲೇ ಬಂದಿದೆ. ಹಿಂದೂ ಧರ್ಮದಲ್ಲಿರುವ ಈ ಎರಡು ಅನಿಷ್ಟಗಳಿಂದ ಬುದ್ಧ ಮುಕ್ತನಾಗಿದ್ದ.

೩

ಬುದ್ಧನ ತತ್ತ್ವಗಳನ್ನು ಅನುಸರಿಸಿದರೆ ಮಾತ್ರ ಹಿಂದೂಧರ್ಮವು ಉಳಿಯಬಲ್ಲುದು ಎಂದು ಭಾವಿಸುವವರಲ್ಲಿ ಈಗ ಸ್ವಲ್ಪ ವಿಷಾದವಿದೆ, ಏಕೆಂದರೆ ಬೌದ್ಧಧರ್ಮದ ಪುನರುಜ್ಜೀವನಕ್ಕೆ, ಮತ್ತೆ ಅದರ ಹಿಂದಿರುಗುವಿಕೆಗೆ ಭಾರತದಲ್ಲಿ ಅವಕಾಶವಿಲ್ಲವೆಂದು ಅವರು ಭಾವಿಸಿದ್ದಾರೆ. ಆದರೆ ನಾನು ಅವರಷ್ಟು ನಿರಾಶಾವಾದಿಯಲ್ಲ.

ಮತಧರ್ಮಗಳ ಬಗ್ಗೆ ಹಿಂದೂಗಳಿಗೆ ಇರುವ ದೃಷ್ಟಿಯಿಂದ ಅವರನ್ನು ಎರಡು ವಿಭಾಗವನ್ನಾಗಿ ಮಾಡಬಹುದು. ಮೊದಲನೆಯವರು 'ಹಿಂದೂಧರ್ಮವೂ ಸೇರಿದಂತೆ ಎಲ್ಲಾ ಧರ್ಮಗಳೂ ಸತ್ಯ' ಎಂದು ಹೇಳುವವರದು. ಇತರ ಧರ್ಮಗಳ ಮುಖಂಡರು ಇವರೊಂದಿಗೆ ದನಿಗೂಡಿಸುತ್ತಾರೆ. ಎಲ್ಲಾ ಧರ್ಮಗಳೂ ಸತ್ಯ ಎಂದು ಹೇಳುವ ವಾದಕ್ಕಿಂತ ಹುಸಿಯಾದ ವಾದ ಇನ್ನೊಂದು ಇರಲಾರದು. ಆದರೆ, ಈ ವಾದವನ್ನು ಮಂಡಿಸುವವರಿಗೆ, ಇತರ ಧರ್ಮಗಳ ಅನುಯಾಯಿಗಳ ಬೆಂಬಲ ದೊರಕುತ್ತದೆ. ಎರಡನೆಯ ಪ್ರಕಾರದವರಲ್ಲಿ ತಮ್ಮ ಧರ್ಮದಲ್ಲಿ ಯಾವುದೋ ಕೊರತೆಯಿದೆ ಎಂಬ ತಿಳಿವಳಿಕೆಯಿದೆ. ಆದರೆ ಅವರು ತಮ್ಮ ಧರ್ಮವನ್ನು ಮುಕ್ತವಾಗಿ ಟೀಕಿಸಲು ಸಿದ್ಧರಾಗಿರುವುದಿಲ್ಲ. ಇವರ ಮನೋಭಾವವನ್ನು

ಅರ್ಥಮಾಡಿಕೊಳ್ಳಬಹುದು. ಮತಧರ್ಮವು ಒಬ್ಬನು ವಂಶಪಾರಂಪರ್ಯವಾಗಿ ಪಡೆದಿರುವಂತಹುದು. ಪ್ರತಿಯೊಬ್ಬನ ಗೌರವ, ಹೆಮ್ಮೆಗಳು ಅದರೊಂದಿಗೆ ಹೆಣೆದುಕೊಂಡಿರುತ್ತವೆ. ತನ್ನ ಮತವನ್ನು ತ್ಯಜಿಸುವುದು ಯಾರಿಗೂ ಸುಲಭವಲ್ಲ. ತಪ್ಪೋ ಸರಿಯೋ, ನನ್ನ ದೇಶ ಎನ್ನುವುದರಿಂದ ದೇಶಭಕ್ತಿ ಬರುತ್ತದೆ. ಹಾಗೆಯೇ, ತಪ್ಪೋ ಸರಿಯೋ ನನ್ನ ಮತಧರ್ಮ ನನ್ನದು ಎಂಬುದು ಕೂಡ. ತಮ್ಮ ಧರ್ಮವನ್ನು ತ್ಯಜಿಸುವ ಬದಲು ಹಿಂದೂಗಳು ಅದರಿಂದ ತಪ್ಪಿಸಿಕೊಳ್ಳಲು ಒಳದಾರಿಗಳನ್ನು ಹುಡುಕುತ್ತಾರೆ. ಎಲ್ಲಾ ಮತಧರ್ಮಗಳಲ್ಲಿಯೂ ಅನ್ಯಾಯದ ಅಂಶಗಳಿವೆ, ಹಾಗಾಗಿ ಮತಧರ್ಮಗಳ ವಿಷಯದಲ್ಲಿ ತಲೆಯನ್ನು ಕೆಡಿಸಿಕೊಳ್ಳಬೇಕಾದ ಆವಶ್ಯಕತೆಯೇ ಇಲ್ಲ ಎಂದು ಯೋಚಿಸುತ್ತಾರೆ. ದೇಶಭಕ್ತಿಯ ಬಗ್ಗೆ ಇರುವ ಇಂತಹ ಭಾವನೆಯೇ ಅವರು ಬೌದ್ಧಧರ್ಮವನ್ನು ಅಪ್ಪಿಕೊಳ್ಳುವುದನ್ನು ತಡೆಯುತ್ತದೆ. ಇದರಿಂದ ಉಂಟಾಗುವ ಪರಿಣಾಮ ಒಂದೇ. ಅದೆಂದರೆ, ಹಿಂದೂಧರ್ಮವು ತಾನಾಗಿಯೇ ಇಲ್ಲವಾಗುತ್ತದೆ ಮತ್ತು ಜೀವನದ ಒಂದು ಪ್ರಭಾವಶಾಲಿ ಚೋದಕಶಕ್ತಿಯಾಗುವುದು ನಿಂತುಹೋಗುತ್ತದೆ. ಇದರಿಂದ ಹಿಂದೂ ಸಮಾಜವನ್ನು ನುಚ್ಚುನೂರುಮಾಡುವಂತಹ ಶೂನ್ಯವು ಉಂಟಾಗುತ್ತದೆ. ಆಗ ಹಿಂದೂಗಳು ಅಸ್ತ್ಯಾತ್ಮಕ ಗುಣಗಳನ್ನು ಪಡೆಯುವುದು ಅನಿವಾರ್ಯವಾಗುತ್ತದೆ. ಹಾಗಾದಾಗ, ಅವರಿಗೆ ಬೌದ್ಧಧರ್ಮವಲ್ಲದೆ ಅನ್ಯಗತಿ ಇರುವುದಿಲ್ಲ.

ನನಗೆ ಕಾಣುವಂತೆ ಇದೊಂದೇ ಆಶಾಕಿರಣವಲ್ಲ. ಇತರ ದಿಕ್ಕಿನಿಂದಲೂ ಈ ಆಶಾಕಿರಣಗಳು ಮೂಡಿಬರುತ್ತವೆ.

ಪ್ರತಿಯೊಂದು ಧರ್ಮವೂ ಉತ್ತರಿಸಬೇಕಾದ ಒಂದು ಪ್ರಶ್ನೆಯಿದೆ. ತುಳಿತಕ್ಕೆ ಒಳಗಾಗಿರುವವರಿಗೆ ಮಾನಸಿಕವಾಗಿ ಮತ್ತು ನೈತಿಕವಾಗಿ ಯಾವ ಪರಿಹಾರವನ್ನು ಧರ್ಮಗಳು ನೀಡುತ್ತವೆ? ಇದರಲ್ಲಿ ಧರ್ಮಗಳು ವಿಫಲವಾದರೆ ಅವುಗಳಿಗೆ ದುರ್ಗತಿ ತಪ್ಪಿದ್ದಲ್ಲ. ಲಕ್ಷಾಂತರ ಸಂಖ್ಯೆಯಲ್ಲಿರುವ ಹಿಂದುಳಿದ ವರ್ಗಗಳವರಿಗೆ ಮತ್ತು ಪರಿಶಿಷ್ಟ ಜಾತಿಗಳವರಿಗೆ ಹಿಂದೂಧರ್ಮವು ಯಾವ ಮಾನಸಿಕ ಅಥವಾ ನೈತಿಕ ಪರಿಹಾರವನ್ನು ನೀಡುತ್ತದೆ? ಯಾವುದೂ ಇಲ್ಲ. ತಮಗೆ ಮಾನಸಿಕ ಮತ್ತು ನೈತಿಕ ಪರಿಹಾರಗಳನ್ನು ನೀಡದ ಹಿಂದೂಧರ್ಮದಲ್ಲಿ ಹಿಂದುಳಿದ ವರ್ಗಗಳವರು ಮತ್ತು ಪರಿಶಿಷ್ಟ ಜಾತಿಯವರು ಉಳಿಯುತ್ತಾರೆಂದು ಹಿಂದೂಗಳು ನಿರೀಕ್ಷಿಸುತ್ತಾರೆಯೇ? ಅಂತಹ ನಿರೀಕ್ಷೆಯು ಸಂಪೂರ್ಣವಾಗಿ ವ್ಯರ್ಥವಾದುದು. ಈಗ ಹಿಂದೂಧರ್ಮವು ಅಗ್ನಿಪರ್ವತದ ಮೇಲೆ ನಿಂತಿದೆ. ಆ ಅಗ್ನಿಪರ್ವತವು ಈಗ ನಿಷ್ಕ್ರಿಯವಾಗಿರುವಂತೆ ಕಾಣಿಸುತ್ತಿದೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಈಗ ಸುಪ್ತವಾಗಿರುವ ಲಕ್ಷಾಂತರ ಜನರು ಹಿಂದೂಧರ್ಮದಿಂದ ತಮಗೆ ಆಗುತ್ತಿರುವ ಅವಮಾನವನ್ನು ಒಮ್ಮೆ ಅರಿತುಕೊಂಡರೆ, ಇದೆಲ್ಲವೂ ಹಿಂದೂಧರ್ಮದ ಕಾರಣದಿಂದ ಮಾತ್ರವೆಂಬ ಸತ್ಯವನ್ನು ತಿಳಿದುಕೊಂಡರೆ, ಅಗ್ನಿಪರ್ವತವು ಲಾವಾರಸವನ್ನು ಉಗುಳುವ ತನ್ನ ಶಕ್ತಿಯನ್ನು ಮತ್ತೆ ಪಡೆದುಕೊಳ್ಳುತ್ತದೆ. ಕ್ರಿಶ್ಚಿಯನ್ ಧರ್ಮವು ರೋಮನ್ ಸಾಮ್ರಾಜ್ಯದಲ್ಲಿದ್ದ ಪ್ರಕೃತಿಪೂಜನೆಯನ್ನು ಕಿತ್ತೆಸೆದುದನ್ನು ಇದು ಜ್ಞಾಪಕಕ್ಕೆ ತರುತ್ತದೆ. ಪ್ರಕೃತಿಪೂಜನೆಯು ತಮಗೆ ಮಾನಸಿಕ ಮತ್ತು ನೈತಿಕ ಪರಿಹಾರಗಳನ್ನು ನೀಡಲು ವಿಫಲವಾಗುತ್ತಿದೆ ಎಂದು ಜನಸಮೂಹವು ಭಾವಿಸದಾಗ ಅದು ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸಿತು. ರೋಮಿನಲ್ಲಾದುದು ಭಾರತದಲ್ಲಿಯೂ ಖಂಡಿತವಾಗಿ ಆಗುತ್ತದೆ. ಹಿಂದೂ ಸಮಾಜಕ್ಕೆ ಜ್ಞಾನೋದಯವಾದಾಗ ಅದು ಬೌದ್ಧಧರ್ಮದತ್ತ ಮುಖಮಾಡುತ್ತದೆ.

೪

ಇದು ಬೌದ್ಧಧರ್ಮ ಮತ್ತು ಹಿಂದೂಧರ್ಮಗಳ ತುಲನೆಯಾದರೆ, ಬೌದ್ಧಧರ್ಮವನ್ನು ಇತರ

ಧರ್ಮಗಳಿಗೆ ಹೋಲಿಸಿದಾಗ ನಾವು ಕಾಣುವ ಚಿತ್ರವು ಯಾವುದು? ಹಿಂದೂಧರ್ಮವನ್ನು ಬಿಟ್ಟು ಉಳಿದೆಲ್ಲಾ ಧರ್ಮಗಳನ್ನು ವಿವರವಾಗಿ ಬೌದ್ಧಧರ್ಮದೊಂದಿಗೆ ತುಲನೆಮಾಡುವುದು ಇಲ್ಲಿ ಸಾಧ್ಯವಿಲ್ಲ. ನಾನು ಇಲ್ಲಿ ಮಾಡಬಹುದಾದುದೆಂದರೆ ನನ್ನ ನಿರ್ಣಯಗಳ ಸಾರಾಂಶವನ್ನು ಇಲ್ಲಿ ನೀಡಬಹುದು. ಅವುಗಳೆಂದರೆ –

ಅ) ಕಾನೂನು ಮೂಲಕವಾಗಲೀ ಅಥವಾ ನೈತಿಕತೆಯ ಮೂಲಕವಾಗಲೀ ಒಂದು ಸಮಾಜವು ಒಟ್ಟಾಗಿರುವುದಕ್ಕೆ ಅನುವಾಗುವ ಅವಕಾಶವಿರಬೇಕು. ಹಾಗಿಲ್ಲದಿದ್ದರೆ, ಆ ಸಮಾಜವು ಛಿದ್ರಛಿದ್ರವಾಗಿ ಒಡೆದುಹೋಗುತ್ತದೆ.

ಯಾವುದೇ ಸಮಾಜದಲ್ಲಾದರೂ ಕಾನೂನಿನ ಪಾತ್ರ ಅತ್ಯಲ್ಪವಾಗಿರುತ್ತದೆ. ಅಲ್ಪಸಂಖ್ಯಾತರನ್ನು ಸಾಮಾಜಿಕ ಶಿಸ್ತಿನ ಮಿತಿಯಲ್ಲಿ ಇಡುವುದು ಅದರ ಉದ್ದೇಶವಾಗಿರುತ್ತದೆ. ಬಹುಸಂಖ್ಯಾತರು ಅದರ ಆಚೆಗೆ ಇರುತ್ತಾರೆ. ನೈತಿಕತೆಯ ಆಧಾರಸೂತ್ರದ ಮತ್ತು ಆಧಿಕಾರಿಕ ಸಮ್ಮತಿಯ ಪ್ರಕಾರ ಅವರನ್ನು ಹಾಗೆಯೇ ಇರಗೊಡುವುದು ಸಾಮಾಜಿಕ ಜೀವನದ ದೃಷ್ಟಿಯಿಂದ ಸರಿಯೆನ್ನಿಸಬಹುದು. ಆದ್ದರಿಂದ, ನೈತಿಕತೆ ಎನ್ನುವ ಅರ್ಥದಲ್ಲಿ, ಮತಧರ್ಮವು ಎಲ್ಲಾ ಸಮಾಜದಲ್ಲಿಯೂ ಆಧಿಕಾರಿಕ ತತ್ತ್ವವಾಗಿರಲೇ ಬೇಕು.

ಆ) ಈ ಮೊದಲು ಹೇಳಿದಂತೆ, ಮತಧರ್ಮವು ವೈಜ್ಞಾನಿಕತೆಯ ತಳಹದಿಯ ಮೇಲೆ ಕಟ್ಟಲ್ಪಟ್ಟಿರಬೇಕು. ಹಾಗಿಲ್ಲದಿದ್ದರೆ, ಮತಧರ್ಮವು ತನ್ನ ಗೌರವವನ್ನು ಕಳೆದುಕೊಂಡು ನಗೆಪಾಟಲಿಗೆ ಈಡಾಗುತ್ತದೆ. ಹೀಗಾದರೆ, ಅದು ಜನರ ಜೀವನದಲ್ಲಿನ ಒಂದು ವಿಧಾಯಕ ಶಕ್ತಿಯಾಗಿರುವ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತದೆ. ಅಷ್ಟೇ ಅಲ್ಲದೆ, ನಿಧಾನವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಮರೆಯಾಗಿಹೋಗುತ್ತದೆ. ಧರ್ಮವು ತನ್ನ ಉದ್ದೇಶವನ್ನು ಸಾಧಿಸಬೇಕಾದರೆ, ವೈಜ್ಞಾನಿಕತೆಯ ಮತ್ತೊಂದು ಹೆಸರಾದ ವೈಚಾರಿಕತೆಯು ಧರ್ಮದಲ್ಲಿ ಹಾಸುಹೊಕ್ಕಾಗಿರಬೇಕು.

ಇ) ನೈತಿಕತೆಯ ಸಂಹಿತೆಯಾಗಿ, ಮತಧರ್ಮವು ಮತ್ತೊಂದು ಪರೀಕ್ಷೆಗೆ ಒಳಗಾಗಬೇಕು. ಧರ್ಮವು ನೈತಿಕ ಸಂಹಿತೆಯನ್ನು ಹೊಂದಿದ್ದರಷ್ಟೇ ಸಾಲದು. ಆ ಸಂಹಿತೆಯು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರಿಕೆಗಳನ್ನು ಮಾನ್ಯಮಾಡಬೇಕು. ಮತಧರ್ಮವೊಂದು ಈ ಮೂರು ಮೂಲಭೂತ ತತ್ತ್ವಗಳನ್ನು ಅರಿತುಕೊಳ್ಳದಿದ್ದರೆ, ಅದು ಕಂಡಿತವಾಗಿಯೂ ವಿನಾಶದ ಹಾದಿಯನ್ನು ಹಿಡಿಯುತ್ತದೆ.

ಈ) ಬಡತನವನ್ನು ಉನ್ನತೀಕರಿಸುವುದನ್ನಾಗಲೀ ಅದನ್ನು ಒಂದು ಮಹೋನ್ನತ ಮೌಲ್ಯವನ್ನಾಗಿಸುವುದನ್ನಾಗಲೀ ಮತಧರ್ಮವು ಮಾಡಬಾರದು. ಉಳ್ಳವರು ತ್ಯಾಗಮಾಡುವಂತಹ ಪರಿಸ್ಥಿತಿಯು ಪ್ರಶಂಸನೀಯವಾದುದೇ ಆದರೂ, ಬಡತನವು ಎಂದೂ ಹಾಗಾಗುವುದಿಲ್ಲ. ಬಡತನವನ್ನು ಅಗತ್ಯವಾದ ದಿವ್ಯಸ್ಥಿತಿಯೆಂದು ವರ್ಣಿಸುವುದು ಮತಧರ್ಮವನ್ನು ತಲೆಕೆಳಗು ಮಾಡಿ, ಕ್ರೌರ್ಯ ಮತ್ತು ಅಪರಾಧಗಳನ್ನು ಅಮರವನ್ನಾಗಿಸುತ್ತದೆ ಮತ್ತು ಭೂಮಿಯನ್ನು ನರಕವನ್ನಾಗಿಸುತ್ತದೆ.

ಯಾವ ಧರ್ಮವು ಈ ಅಗತ್ಯಗಳನ್ನು ಪೂರೈಸುತ್ತದೆ? ಈ ಪ್ರಶ್ನೆಯನ್ನು ಪರಿಶೀಲಿಸುವಾಗ, ಮಹಾತ್ಮರುಗಳ ಕಾಲ ಮುಗಿದುಹೋಯಿತು ಮತ್ತು ವಿಶ್ವವು ಹೊಸ ಧರ್ಮವೊಂದನ್ನು ಹೊಂದುವ ನಿರೀಕ್ಷೆಯನ್ನಿರಿಸಿಕೊಳ್ಳುವುದು ಅಸಾಧ್ಯ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈಗ ಇರುವ ಧರ್ಮಗಳಲ್ಲಿಯೇ ಒಂದನ್ನು ನಾವು ಆಯ್ಕೆಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಮ್ಮ ದೃಷ್ಟಿಯು ಇಂದು ಜೀವಂತವಾಗಿರುವ ಧರ್ಮಗಳ ಮೇಲೆಯೇ ಕೇಂದ್ರೀಕೃತವಾಗಬೇಕು.

ಪ್ರಕೃತ ಇರುವ ಧರ್ಮಗಳಲ್ಲಿ ಯಾವುದಾದರೂ ಒಂದು ಮೇಲಿನ ಪರೀಕ್ಷೆಗಳಲ್ಲಿ ಒಂದರಲ್ಲಿ

ತೇರ್ಗಡೆಯಾಗಬಹುದು, ಮತ್ತೊಂದು ಎರಡರಲ್ಲಿ. ನಮ್ಮ ಪ್ರಶ್ನೆಯಿರುವುದು ಯಾವ ಧರ್ಮವು ಮೇಲಿನ ಎಲ್ಲಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗುತ್ತದೆ ಎಂಬುದು. ಈ ಎಲ್ಲಾ ಪ್ರಶ್ನೆಗಳಿಗೂ ಸಮರ್ಪಕ ಉತ್ತರವನ್ನು ನೀಡುವುದು, ನಾನು ತಿಳಿದ ಮಟ್ಟಿಗೆ, ಬೌದ್ಧಧರ್ಮ ಮಾತ್ರ. ಬೇರೆಯ ರೀತಿಯಲ್ಲಿ ಹೇಳಬೇಕಾದರೆ, ಬೌದ್ಧಧರ್ಮವು ಮಾತ್ರ ವಿಶ್ವವು ಸ್ವೀಕರಿಸಲು ಅರ್ಹವಾದ ಧರ್ಮ. ಹಿಂದಿನ ದಿನಗಳಿಗಿಂತ ಇಂದಿನ ದಿನಗಳಲ್ಲಿ ವಿಶ್ವಕ್ಕೆ ಧರ್ಮದ ಆವಶ್ಯಕತೆ ಇದೆಯೆಂದಾದರೆ, ಅಥವಾ ಹಿಂದಿನ ದಿನಗಳಲ್ಲಿ ಇದ್ದ ಧರ್ಮಗಳಿಗಿಂತ ಉತ್ತಮವಾದ ಧರ್ಮವನ್ನು ಇಂದಿನ ವಿಶ್ವವು ಬಯಸುತ್ತದೆಯೆಂದಾದರೆ, ಅಂತಹ ಧರ್ಮ ಬೌದ್ಧಧರ್ಮ ಮಾತ್ರ.

ಹೀಗೆ ಹೇಳುವುದು ಬಹಳ ವಿಚಿತ್ರವೆನಿಸಬಹುದು. ಇದಕ್ಕೆ ಕಾರಣ, ಬುದ್ಧನ ಬಗೆಗೆ ಬರೆದವರಲ್ಲಿ ಬಹುತೇಕರು ಬುದ್ಧನ ಉಪದೇಶದಲ್ಲಿರುವುದು ಅಹಿಂಸೆ ಮಾತ್ರ ಎಂದು ಪ್ರಚಾರಮಾಡಿದ್ದಾರೆ. ಬುದ್ಧ ಅಹಿಂಸೆಯನ್ನು ಉಪದೇಶಿಸಿದ ಎಂಬುದು ಸತ್ಯ. ಅದು ಒಂದು ಬಹುದೊಡ್ಡ ಸಿದ್ಧಾಂತ. ನಾನು ಅದರ ಪ್ರಾಮುಖ್ಯವನ್ನು ಕುಗ್ಗಿಸುವ ಪ್ರಯತ್ನವನ್ನು ಮಾಡುವುದಿಲ್ಲ. ಅಹಿಂಸಾತತ್ತ್ವವನ್ನು ಪಾಲಿಸದಿದ್ದರೆ ವಿಶ್ವವನ್ನು ಉಳಿಸುವುದು ಸಾಧ್ಯವಿಲ್ಲ. ನಾನು ಹೇಳಹೊರಟಿರುವುದು, ಬುದ್ಧ ಅಹಿಂಸೆಯಲ್ಲದೆ ಇತರ ಹಲವಾರು ವಿಷಯಗಳ ಬಗ್ಗೆಯೂ ಉಪದೇಶಿಸಿದ ಎನ್ನುವುದು. ತನ್ನ ಧರ್ಮದ ಭಾಗವಾಗಿ ಆತ ಸಾಮಾಜಿಕ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ ಮತ್ತು ರಾಜಕೀಯ ಸ್ವಾತಂತ್ರ್ಯಗಳ ಬಗ್ಗೆಯೂ ಉಪದೇಶಗಳನ್ನು ನೀಡಿದ. ಮಾನವರ ನಡುವಿನ ಸಮಾನತೆಯನ್ನಷ್ಟೇ ಅಲ್ಲದೆ ಸ್ತ್ರೀ–ಪುರುಷರ ನಡುವಿನ ಸಮಾನತೆಯ ಬಗ್ಗೆಯೂ ಉಪದೇಶ ಮಾಡಿದ. ಜೀವನದ ಹತ್ತು ಹಲವಾರು ಮುಖಗಳನ್ನು ಆವರಿಸುವ, ಸ್ವರ್ಗದಲ್ಲಿ ಕಾಣಬಹುದೆಂದು ಬೋಧಿಸುವ ಸುಖಗಳಿಗೆ ಬದಲಾಗಿ ಈ ಜನ್ಮದಲ್ಲಿಯೇ ಈ ಭೂಮಿಯ ಮೇಲೆಯೇ ಮಾನವರಿಗೆ ಮುಕ್ತಿಯನ್ನು ದೊರಕಿಸಿಕೊಡುವ ಬಗ್ಗೆ ಚಿಂತಿಸುವಂತಹ ತತ್ತ್ವಗಳನ್ನೊಳಗೊಂಡ ಧರ್ಮವನ್ನು ಬೋಧಿಸಿದ ಬುದ್ಧನಂತಹ ಮತ್ತೊಬ್ಬ ಧರ್ಮೋಪದೇಶಕರನ್ನು ಕಾಣುವುದು ಕಷ್ಟ.

೫

ಬೌದ್ಧಧರ್ಮವು ಪ್ರಸಾರಮಾಡುವ ಈ ಆದರ್ಶವನ್ನು ಹೇಗೆ ಸಾಧಿಸಬಹುದು? ಮೂರು ಕ್ರಮಗಳು ಅಗತ್ಯವೆಂದು ಕಂಡುಬರುತ್ತವೆ

ಮೊದಲನೆಯದು - ಬೌದ್ಧಧರ್ಮದ ಒಂದು ಉಪನಿಷತ್ತನ್ನು ತಯಾರಿಸುವುದು,

ಎರಡನೆಯದು – ಭಿಕ್ಕುಗಳ ಸಂಘದಲ್ಲಿ, ಅದರ ಧ್ಯೇಯ ಮತ್ತು ಉದ್ದೇಶಗಳಲ್ಲಿ ಬದಲಾವಣೆಯನ್ನು ಮಾಡುವುದು.

ಮೂರನೆಯದು – ಬೌದ್ಧಧರ್ಮದ ವಿಶ್ವಸ್ಥ ಮಂಡಲಿಯೊಂದನ್ನು ಸ್ಥಾಪಿಸುವುದು.

ಬೌದ್ಧ ಉಪನಿಷತ್ತನ್ನು ತಯಾರಿಸುವುದು ಎಲ್ಲಕ್ಕೂ ಮೊದಲು ಮಾಡಬೇಕಾಗಿರುವ ಮತ್ತು ಅತ್ಯಗತ್ಯವಾದ ಕಾರ್ಯ. ಬೌದ್ಧ ಸಾಹಿತ್ಯವು ವಿಸ್ತಾರವಾಗಿದೆ. ಒಬ್ಬ ವ್ಯಕ್ತಿಯು ಈ ಸಾಹಿತ್ಯ ಸಾಗರದಲ್ಲಿ ಮುಳುಗಿ ಧರ್ಮದ ಸಾರವನ್ನು ತಿಳಿದುಕೊಳ್ಳಬಲ್ಲ ಎಂದು ನಿರೀಕ್ಷಿಸುವುದು ಅಸಾಧ್ಯ. ಬೌದ್ಧಧರ್ಮವನ್ನೊಂದು ಉಳಿದು ಇತರ ಧರ್ಮಗಳವರಿಗೆ ಇರುವ ಒಂದು ಅನುಕೂಲವೆಂದರೆ ಪ್ರತಿಯೊಂದು ಧರ್ಮಕ್ಕೂ ತನ್ನದೇ ಆದ, ತನ್ನ ಸಾರವನ್ನು ಸುಲಭವಾಗಿ ಉಣಬಡಿಸಬಲ್ಲಂತಹ ಸಾರಭೂತ ಗ್ರಂಥಗಳಿರುವುದು. ಅದನ್ನು ಆಸಕ್ತರು ತಮ್ಮೊಡನೆ ಕೊಂಡೊಯ್ಯಬಹುದು ಮತ್ತು ಎಲ್ಲೆಂದರಲ್ಲಿ ಅದನ್ನು ಓದಬಹುದು. ಅದು

ಅಷ್ಟು ಅನುಕೂಲವಿರುವಷ್ಟು ಚಿಕ್ಕ ಗ್ರಂಥ. ಅಂತಹ ಗ್ರಂಥವೊಂದು ಇಲ್ಲದಿರುವುದು ಬೌದ್ಧಧರ್ಮಕ್ಕೆ ಇರುವ ಅನನುಕೂಲ. ಒಂದು ಧರ್ಮಗ್ರಂಥವು ಮಾಡಬಲ್ಲ ಕೆಲಸವನ್ನು ಧಮ್ಮಪದವು ಮಾಡಲು ವಿಫಲವಾಗಿದೆ. ಪ್ರತಿಯೊಂದು ಮಹಾನ್ ಧರ್ಮವೂ ನಂಬಿಕೆಯ ಮೇಲೆ ಕಟ್ಟಲ್ಪಟ್ಟಿದೆ. ಆದರೆ ಮತ ಸಿದ್ಧಾಂತಗಳು ಮತ್ತು ತತ್ತ್ವಗಳನ್ನು ಒಂದೆಡೆ ಕ್ರೋಢೀಕರಿಸವುದು ಕೇವಲ ನಂಬಿಕೆಯಿಂದ ಸಾಧ್ಯವಿಲ್ಲ. ಅದಕ್ಕೆ, ಪತ್ರಕರ್ತರ ಭಾಷೆಯಲ್ಲಿ ಹೇಳುವಂತೆ ಒಂದು ಕತೆಯಿರಬೇಕು ಮತ್ತು ಅದರ ಸುತ್ತ ಸೃಷ್ಟಿಶೀಲತೆಯು ಬೆಳೆದು – ಅದನ್ನು ಪುರಾಣ ಎನ್ನಿರಿ, ಅಥವಾ ಧರ್ಮಗ್ರಂಥ ಎನ್ನಿರಿ – ಒಂದು ವಾತಾವರಣವನ್ನು ನಿರ್ಮಿಸಿಕೊಡುತ್ತದೆ. ಧಮ್ಮಪದದ ನಡುವಿನಲ್ಲಿ ಇಂತಹ ಕತೆಯಿಲ್ಲ. ಅಮೂರ್ತತೆಯ ಮೇಲೆ ತತ್ತ್ವಗಳನ್ನು ಕಟ್ಟಲು ಅದು ಪ್ರಯತ್ನಿಸುತ್ತದೆ.

ಉದ್ದೇಶಿತ ಧರ್ಮಗ್ರಂಥವು ಬುದ್ಧನ ಜೀವನ, ಚೈನಾದ ಧಮ್ಮಪದ, ಬುದ್ಧನ ಕೆಲವು ಮುಖ್ಯವಾದ ಸಂಭಾಷಣೆಗಳು ಮತ್ತು ಜನನ, ದೀಕ್ಷೆ, ವಿವಾಹ, ಮರಣಗಳ ಸಂದರ್ಭದಲ್ಲಿ ಬೌದ್ಧರು ಆಚರಿಸುವ ಆಚರಣೆಗಳು – ಇವುಗಳನ್ನು ಒಳಗೊಂಡಿರಬೇಕು. ಇದನ್ನು ಸಿದ್ಧಮಾಡುವಾಗ ಭಾಷಿಕ ಅಗತ್ಯಗಳನ್ನು ನಿರ್ಲಕ್ಷಿಸಬಾರದು. ಅದು ಬದುಕಿ ಬಾಳುವಂತಹ ಭಾಷೆಯನ್ನು ಉಪಯೋಗಿಸಬೇಕು. ಕಥನಕ್ರಮವನ್ನು ಅನುಸರಿಸದೆ, ಅದು ಮಂತ್ರಸ್ವರೂಪಿಯಾಗಿರಬೇಕು. ಅದು ಸರಳವಾಗಿರಬೇಕು, ಆಕರ್ಷಕವಾಗಿರಬೇಕು ಮತ್ತು ಮೋಡಿಯನ್ನು ಬೀರುವಹಾಗಿರಬೇಕು.

ಹಿಂದೂ ಸಂನ್ಯಾಸಿ ಹಾಗೂ ಬೌದ್ಧ ಭಿಕ್ಕುಗಳ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ಹಿಂದೂ ಸಂನ್ಯಾಸಿಗೆ ಜಗತ್ತಿನ ಸಂಗಡ ಸಂಬಂಧವೇ ಇರುವುದಿಲ್ಲ. ಆದರೆ ಭಿಕ್ಕುವು ಪ್ರಪಂಚದಲ್ಲಿ ಮಾಡಬೇಕಾದುದು ಅಗಾಧವಾಗಿದೆ. ಹಾಗಿದ್ದ ಪಕ್ಷದಲ್ಲಿ ಬುದ್ಧ ಭಿಕ್ಕುಗಳ ಸಂಘವನ್ನು ಏಕೆ ಸ್ಥಾಪಿಸಿದ? ಭಿಕ್ಕುಗಳದೇ ಆದ ಪ್ರತ್ಯೇಕ ಸಮಾಜವನ್ನು ಕಟ್ಟಬೇಕಾದ ಆವಶ್ಯಕತೆಯೇನಿತ್ತು? ಬೌದ್ಧಧರ್ಮದ ಆದರ್ಶ ಮತ್ತು ತತ್ತ್ವಗಳನ್ನು ಪ್ರತಿನಿಧಿಸುವಂತಹ ಮತ್ತು ಸಾಮಾನ್ಯ ಜನರಿಗೆ ಆದರ್ಶಪ್ರಾಯವಾಗಿರುವಂತಹ ಒಂದು ಸಮಾಜದ ಆವಶ್ಯಕತೆಯಿತ್ತು. ಬೌದ್ಧತತ್ತ್ವಗಳನ್ನು ಅರ್ಥಮಾಡಿಕೊಳ್ಳುವುದು ಜನಸಾಮಾನ್ಯರಿಗೆ ಕಷ್ಟವೆಂಬುದು ಬುದ್ಧನಿಗೆ ಗೊತ್ತಿತ್ತು. ಆದರೆ ಜನಸಾಮಾನ್ಯರನ್ನು ತನ್ನ ತತ್ತ್ವಗಳು ಮುಟ್ಟಬೇಕು ಎಂಬುದು ಅವನ ಆಶಯವಾಗಿತ್ತು. ಮತ್ತು, ಸಾಮಾನ್ಯ ಜನರ ಕಣ್ಣೆದುರಿಗೆ ತನ್ನ ತತ್ತ್ವಗಳನ್ನು ಅನುಸರಿಸಿ ತೋರಿಸಲೇ ಬೇಕಾದಂತಹ ಒಂದು ವರ್ಗವೂ ಬೇಕಿತ್ತು. ಈ ಉದ್ದೇಶದಿಂದ ಅವನು ಭಿಕ್ಕುಸಂಘವನ್ನು ಸ್ಥಾಪಿಸಿ ಭಿಕ್ಕುಗಳ ನಡತೆಯನ್ನು ನಿಯಂತ್ರಿಸಲು ವಿನಯಪಿಟಕದಲ್ಲಿ ನಿಯಮಗಳನ್ನು ರೂಪಿಸಿದ. ಹೀಗೆ ಸಂಘವನ್ನು ಸ್ಥಾಪಿಸುವಾಗ ಅವನ ಮನಸ್ಸಿನಲ್ಲಿ ಇತರ ಉದ್ದೇಶಗಳೂ ಇದ್ದವು. ಅವುಗಳಲ್ಲಿ ಒಂದು, ಜನಸಾಮಾನ್ಯರಿಗೆ ಸತ್ಯವಾದ ಮತ್ತು ನಿಷ್ಪಕ್ಷಪಾತವಾದ ಮಾರ್ಗದರ್ಶನವನ್ನು ನೀಡುವ ಬುದ್ಧಿಶಾಲಿಗಳ ಒಂದು ಮಂಡಲಿಯನ್ನು ಸ್ಥಾಪಿಸಿವುದು. ಈ ಕಾರಣದಿಂದಲೇ ಭಿಕ್ಕುಗಳು ಆಸ್ತಿಗಳ ಒಡೆಯರಾಗುವುದನ್ನು ಅವನು ನಿಷೇಧಿಸಿದ. ಮುಕ್ತವಾದ ಚಿಂತನೆ ಮತ್ತು ಮುಕ್ತ ಚಿಂತನೆಗಳ ಅನ್ವಯಮಾಡುವುದು ಇವಕ್ಕೆ ಆಸ್ತಿಗಳ ಒಡೆತನ ಬಹುದೊಡ್ಡ ಅಡಚಣೆಗಳಲ್ಲಿ ಒಂದು. ಭಿಕ್ಕುಗಳ ಸಂಘವನ್ನು ಸ್ಥಾಪಿಸಲು ಇದ್ದ ಮತ್ತೊಂದು ಕಾರಣವೆಂದರೆ, ಅದರ ಸದಸ್ಯರು ಜನಗಳ ಸೇವೆಯನ್ನು ಉಚಿತವಾಗಿ ಮಾಡಬೇಕೆಂಬುದು. ಆದ್ದರಿಂದಲೇ, ಭಿಕ್ಕುಗಳು ಮದುವೆಯಾಗಬಾರದೆಂದು ಆತ ವಿಧಿಸಿದ.

ಇಂದಿನ ಭಿಕ್ಕುಗಳ ಸಂಘವು ಈ ಆದರ್ಶಗಳನ್ನು ಪಾಲಿಸುತ್ತಿದೆಯೇ?

ಇದಕ್ಕೆ ಉತ್ತರ ಸ್ಪಷ್ಟವಾಗಿ ಇಲ್ಲ ಎನ್ನುವುದು. ಅದು ಜನರಿಗೆ ಮಾರ್ಗದರ್ಶನವನ್ನೂ ನೀಡುತ್ತಿಲ್ಲ,

ಅಲ್ಲದೆ, ಜನಸೇವೆಯನ್ನೂ ಮಾಡುತ್ತಿಲ್ಲ.

ಬೌದ್ಧಧರ್ಮವನ್ನು ಪ್ರಸಾರಮಾಡಲು ಭಿಕ್ಕುಗಳ ಸಂಘವು, ಅದು ಈಗಿರುವ ಸ್ಥಿತಿಯಲ್ಲಿ, ಅನುಪಯುಕ್ತವಾಗಿದೆ. ಮೊದಲನೆಯದಾಗಿ ಭಿಕ್ಕುಗಳ ಸಂಖ್ಯೆ ಅತಿಯಾಗಿದೆ. ಅವರಲ್ಲಿ ಬಹುಪಾಲು ಜನರು ಸಾಧು, ಸಂನ್ಯಾಸಿಗಳಾಗಿ ಧ್ಯಾನದಲ್ಲಿ ಕಾಲಕಳೆಯುತ್ತಾರೆ ಅಥವಾ ವೃಥಾ ಕಾಲಹರಣಮಾಡುತ್ತಾ ಇರುತ್ತಾರೆ. ಅವರಲ್ಲಿ ಕಲಿಯುವ ಪ್ರವೃತ್ತಿಯಾಗಲೀ ಸೇವಾಮನೋಭಾವವಾಗಲೀ ಇಲ್ಲ. ಸಂಸ್ಥೆಗಳನ್ನು ಯಾರೂ ನೆನೆಯುವುದಿಲ್ಲ. ಇಂತಹ ಸೇವೆಯನ್ನು ತನ್ನ ಪವಿತ್ರ ಕರ್ತವ್ಯವೆಂದು ಎಣಿಸಬೇಕಾದವರು ಯಾರು – ಬೌದ್ಧ ಸಂಘಗಳೋ ಅಥವಾ ರಾಮಕೃಷ್ಣ ಸೇವಾಸಂಸ್ಥೆಯೋ? ಈ ಪ್ರಶ್ನೆಗೆ ಸಿಗುವ ಉತ್ತರದ ಬಗ್ಗೆ ಯಾವ ಸಂಶಯವೂ ಇಲ್ಲ. ಭಿಕ್ಕುಗಳ ಸಂಘದಲ್ಲಿ ವೃಥಾ ಕಾಲಹರಣ ಮಾಡುವವರ ಸೈನ್ಯವೇ ಇದೆ. ಭಿಕ್ಕುಗಳ ಸಂಖ್ಯೆ ಕಡಿಮೆಯಾಗಬೇಕು. ಭಿಕ್ಕುಗಳು ಒಳ್ಳೆಯ ವಿದ್ಯಾವಂತರಾಗಿರಬೇಕು. ಕ್ರಿಶ್ಚಿಯನ್ ಪಾದ್ರಿಗಳಿಂದ ರೋಮನ್ ಕ್ಯಾಥೊಲಿಕ್ ಪಂಥದವರಿಂದ ಭಿಕ್ಕುಗಳು ಕಲಿಯುವುದು ಸಾಕಷ್ಟಿದೆ. ಭಾರತದಲ್ಲಿ ಕ್ರಿಶ್ಚಿಯನ್ ಧರ್ಮವು ಶೈಕ್ಷಣಿಕ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿನ ಅವರ ಸೇವೆಯಿಂದಾಗಿ ಹರಡಿತು. ಕ್ರಿಶ್ಚಿಯನ್ ಪಾದ್ರಿಗಳು ತಮ್ಮ ಧರ್ಮಸಂಬಂಧಿ ವಿಷಯಗಳಲ್ಲಿ ಮಾತ್ರವಲ್ಲದೆ, ಕಲೆ ಮತ್ತು ವಿಜ್ಞಾನ ಸಂಬಂಧಿ ವಿಷಯಗಳಲ್ಲಿಯೂ ಪರಿಣತರಾಗಿದ್ದರು. ಇದು ಹಿಂದಿನ ಕಾಲದ ಭಿಕ್ಕುಗಳ ಆದರ್ಶವೂ ಆಗಿದ್ದಿತು. ನಳಂದ ಮತ್ತು ತಕ್ಷಶಿಲಾ ವಿಶ್ವ ವಿದ್ಯಾನಿಲಯಗಳನ್ನು ಭಿಕ್ಕುಗಳೇ ನಡೆಸುತ್ತಿದ್ದರು ಮತ್ತು ಎಲ್ಲಾ ಸ್ಥಾನಗಳಲ್ಲಿಯೂ ಅವರನ್ನೇ ನೇಮಕಮಾಡಲಾಗಿತ್ತು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಅವರೆಲ್ಲರೂ ಒಳ್ಳೆಯ ವಿದ್ವಾಂಸರುಗಳಾಗಿದ್ದಿರಲೇಬೇಕು. ಸಮಾಜ ಸೇವೆಯು ತಮ್ಮ ಧರ್ಮಪ್ರಸಾರಕ್ಕೆ ಅಗತ್ಯವೆಂಬುದನ್ನು ಅವರು ಮನಗಂಡಿದ್ದರು. ಇಂದಿನ ಭಿಕ್ಕುಗಳು ಅಂದಿನ ಆದರ್ಶಕ್ಕೆ ಮರಳಬೇಕು. ಈಗ ಇರುವ ಸ್ಥಿತಿಯಲ್ಲಿ, ಸಂಘಕ್ಕೆ ಲೌಕಿಕರ ಸೇವೆಯನ್ನು ಮಾಡುವುದು ಸಾಧ್ಯವಿಲ್ಲ ಮತ್ತು ಇದರಿಂದಾಗಿ ಜನರನ್ನು ತನ್ನತ್ತ ಆಕರ್ಷಿಸುವುದೂ ಅದಕ್ಕೆ ಸಾಧ್ಯವಿಲ್ಲ.

ಸೇವಾಸಂಸ್ಥೆಯಿಲ್ಲದಿದ್ದರೆ, ಬೌದ್ಧಧರ್ಮವನ್ನು ಹರಡುವುದು ಬಹಳ ಕಷ್ಟ. ವಿದ್ಯಾಪ್ರಸಾರದಂತೆಯೇ ಧರ್ಮದ ಪ್ರಸಾರವೂ ಆಗಬೇಕು. ಆದರೆ ಧರ್ಮಪ್ರಸಾರವು ಜನಬಲ ಮತ್ತು ಧನಬಲವಿಲ್ಲದೆ ಸಾಧ್ಯವಿಲ್ಲ. ಇವೆರಡನ್ನೂ ಯಾರು ಒದಗಿಸುವವರು? ಇದಕ್ಕೆ ಉತ್ತರ – ನಿಸ್ಸಂದೇಹವಾಗಿ, ಬೌದ್ಧಧರ್ಮವು ಎಲ್ಲಿ ಜೀವಂತವಾಗಿದೆಯೋ ಆ ದೇಶಗಳವರು. ಈ ದೇಶಗಳು, ಕನಿಷ್ಠಪಕ್ಷ ಆರಂಭಕಾಲದಲ್ಲಿಯಾದರೂ ಜನಬಲ ಹಾಗೂ ಧನಬಲಗಳನ್ನು ಒದಗಿಸಬೇಕು. ಈ ದೇಶಗಳು ಹಾಗೆ ಮಾಡುತ್ತವೆಯೇ? ಅವರಿಗೆ ಬೌದ್ಧಧರ್ಮವನ್ನು ಹರಡುವಲ್ಲಿ ಹೆಚ್ಚಿನ ಉತ್ಸಾಹವಿಲ್ಲವೆಂದು ತೋರುತ್ತಿದೆ.

ಬೌದ್ಧಧರ್ಮವನ್ನು ಪ್ರಸಾರಮಾಡಲು ಇದು ಪ್ರಶಸ್ತ ಸಮಯವಾಗಿದೆ. ಧರ್ಮವೆನ್ನುವುದು ವಂಶದ ಪರಂಪರೆಯಿಂದ ಬರುವಂತಹ ಕಾಲವೊಂದಿತ್ತು. ಬಾಲಕನಾಗಲೀ, ಬಾಲಕಿಯಾಗಲೀ, ತನ್ನ ತಂದೆ–ತಾಯಿಗಳಿಂದ ಆಸ್ತಿಯನ್ನು ಪಡೆಯುವ ಹಾಗೆಯೇ ಧರ್ಮವನ್ನೂ ಅವರಿಂದಲೇ ಪಡೆಯುವಂತಹ ಕಾಲವಿತ್ತು. ಹೀಗಾಗಿ ಅಂತಹ ಧರ್ಮದ ಒಳಿತು–ಕೆಡುಕುಗಳನ್ನು ಪರೀಕ್ಷಿಸುವ ಪ್ರಮೇಯವೇ ಇರುತ್ತಿರಲಿಲ್ಲ. ತಾನು ತನ್ನ ಹಿರಿಯರಿಂದ ಪಡೆದ ಆಸ್ತಿಯು ತನಗೆ ಯೋಗ್ಯವಾಗಿದೆಯೇ ಇಲ್ಲವೇ ಎಂದು ಯೋಚಿಸುವ ಸಂದರ್ಭಗಳಿರುತ್ತಿದ್ದವು. ಆದರೆ ತನ್ನ ತಂದೆತಾಯಿಗಳಿಂದ ತನಗೆ ಬಂದಿರುವ ಧರ್ಮವು ಅನುಸರಿಸಲು ಯೋಗ್ಯವಾಗಿದೆಯೇ ಎಂಬ ಪ್ರಶ್ನೆ ಯಾವ ವಾರಸುದಾರನಿಗೂ ಬರುತ್ತಿರಲಿಲ್ಲ. ಕಾಲವು ಬದಲಾಗಿರುವಂತೆ ಕಾಣುತ್ತದೆ. ಪ್ರಪಂಚದ ಆದ್ಯಂತ ಜನರು ತಮಗೆ ಆನುವಂಶಿಕವಾಗಿ ಬಂದಿರುವ ಧರ್ಮದ ಬಗ್ಗೆ ಪ್ರಶ್ನಿಸುವ

ಧೈರ್ಯವನ್ನು ತೋರುತ್ತಿದ್ದಾರೆ. ಅವರಲ್ಲಿ ಹಲವರು, ವೈಜ್ಞಾನಿಕತೆಯ ಪ್ರಭಾವದಿಂದಾಗಿ, ಮತಧರ್ಮವೆಂಬುದು ಆಭಾಸಕರ ಮತ್ತು ಅದನ್ನು ತ್ಯಜಿಸಲೇಬೇಕು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಮತಧರ್ಮವೆಂಬುದು ಒಂದು ರೀತಿಯ ಅಫೀಮಿನ ರೀತಿಯ ಮಾದಕ ವಿಷಯ ಮತ್ತು ಅದು ಉಳ್ಳವರು ನಿರ್ಗತಿಕರನ್ನು ಶೋಷಿಸುವ ಸಾಧನ, ಆದ್ದರಿಂದ ಅದನ್ನು ದೂರವಿಡಬೇಕು ಎಂದು ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿರುವ ಕೆಲವರು ವಾದಿಸುತ್ತಾರೆ. ಕಾರಣಗಳು ಯಾವುದೇ ಇದ್ದರೂ, ಧರ್ಮವನ್ನು ಪರೀಕ್ಷಿಸುವ, ಪ್ರಶ್ನಿಸುವ ಮನೋಧೈರ್ಯವನ್ನು ಜನರು ಬೆಳೆಸಿಕೊಳ್ಳುತ್ತಿದ್ದಾರೆ ಎಂಬುದು ವಾಸ್ತವ. ಧೈರ್ಯವಾಗಿ ಮತಧರ್ಮವನ್ನು ಪ್ರಶ್ನಿಸುವವರು ಮನಸ್ಸಿನಲ್ಲಿ ಮತಧರ್ಮದ ಆವಶ್ಯಕತೆಯಿದೆಯೇ, ಹಾಗಿದ್ದರೆ, ಯಾವ ಧರ್ಮವನ್ನು ನಾವು ಆಯ್ಕೆಮಾಡಿಕೊಳ್ಳಬೇಕು ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಅವಕಾಶವು ಈಗ ಬಂದಿದೆ, ಬೇಕಾಗಿರುವುದು ಇಚ್ಛಾಶಕ್ತಿ ಮಾತ್ರ. ಬೌದ್ಧಧರ್ಮವು ಇರುವ ದೇಶಗಳವರು ಅದರ ಪ್ರಸಾರಕ್ಕೆ ಮನಸ್ಸುಮಾಡಿದರೆ, ಬೌದ್ಧಧರ್ಮದ ಪ್ರಸಾರ ಅಸಾಧ್ಯವಾದ ಕೆಲಸವೇನಲ್ಲ. ತಮ್ಮ ಕರ್ತವ್ಯವು ಕೇವಲ ಬೌದ್ಧರಾಗಿರುವುದು ಮಾತ್ರವಲ್ಲ, ಅದರ ಜೊತೆಗೆ ಬೌದ್ಧಧರ್ಮವನ್ನು ಪ್ರಸಾರಮಾಡುವುದು ಕೂಡ ಎಂಬುದನ್ನು ಅವರು ಅರಿತುಕೊಳ್ಳಬೇಕು. ಬೌದ್ಧಧರ್ಮವನ್ನು ಪ್ರಸಾರಮಾಡುವುದು ಜನಸೇವೆಯೆಂಬುದರಲ್ಲಿ ಅವರು ನಂಬಿಕೆಯಿಡಬೇಕು.*

* * * * *

---

* ಮಹಾಬೋಧಿ ಪತ್ರಿಕೆಯ ವೈಶಾಖ ಸಂಚಿಕೆ, ಮಹಾಬೋಧಿ ಸಂಸ್ಥೆ, ಕಲ್ಕತ್ತ, ಸಂಪುಟ ೫೮, ೧೯೫೦ರ ಮೇ.

# ೧೮. ಹಿಂದೂ ಸ್ತ್ರೀಯ ಉನ್ನತಿ ಮತ್ತು ಅವನತಿ – ಅದಕ್ಕೆ ಹೊಣೆಗಾರರು ಯಾರು?

ಮಹಾಬೋಧಿ ಪತ್ರಿಕೆಯ ೧೯೫೦ರ ಮಾರ್ಚ್ ಸಂಚಿಕೆಯಲ್ಲಿ 'ಹಿಂದೂಧರ್ಮ ಮತ್ತು ಬೌದ್ಧಧರ್ಮದಲ್ಲಿ ಸ್ತ್ರೀಯರ ಸ್ಥಾನ' ಎಂಬ ಲಾಮಾ ಗೋವಿಂದ ಎಂಬುವರ ಲೇಖನವೊಂದು (ಪರಿಶಿಷ್ಟ ೨ನ್ನು ನೋಡಿ) ಪ್ರಕಟವಾಗಿತ್ತು. ಭಾರತದಲ್ಲಿ ಸ್ತ್ರೀಯರ ಪತನಕ್ಕೆ ಬುದ್ಧನ ಉಪದೇಶವೇ ಮುಖ್ಯ ಕಾರಣ ಎಂದು ಆರೋಪಿಸಿದ ಲೇಖನವೊಂದು ಈವ್ಸ್ ವೀಕ್ಲಿಯ ೧೯೫೦ ರ ಜನವರಿ ೨೧ರ ಸಂಚಿಯಲ್ಲಿ ಪ್ರಕಟವಾಗಿದ್ದು ಅದಕ್ಕೆ ಈ ಲೇಖವನವು ಪ್ರತ್ಯುತ್ತರವಾಗಿತ್ತು. ಈ ಆರೋಪವನ್ನು ಖಂಡಿಸುವಲ್ಲಿ ಯಾವುದೇ ಬೌದ್ಧರು ಮಾಡಬೇಕಾದ ಕರ್ತವ್ಯವನ್ನು ಲಾಮಾ ಗೋವಿಂದ ಮಾಡಿದ್ದರು. ಆದರೆ ಅಷ್ಟಕ್ಕೇ ಈ ವಿಷಯವನ್ನು ಬಿಡುವ ಹಾಗಿಲ್ಲ. ಬುದ್ಧನ ಮೇಲೆ ಇಂತಹ ಆರೋಪಮಾಡಿದುದು ಇದೇ ಮೊದಲಲ್ಲ. ಈವ್ಸ್ ವೀಕ್ಲಿಯ ಲೇಖನದ ಲೇಖಕರಿಗಿಂತ ಉತ್ತಮವಾದ ಹಿನ್ನೆಲೆಯನ್ನು ಉಳ್ಳ, ಬುದ್ಧನ ಹಿರಿಮೆಯನ್ನು ಸಹಿಸಲಾಗದ, ಕೆಲವು ಹಿತಾಸಕ್ತಿಯನ್ನುಳ್ಳ ಕೆಲವರು ಇಂತಹ ಆರೋಪಗಳನ್ನು ಮಾಡಿದ್ದರು. ಆದ್ದರಿಂದ ಪದೇ ಪದೇ ಮಾಡಲಾಗುತ್ತಿರುವ ಇಂತಹ ಆಪಾದನೆಗಳ ಮೂಲಕ್ಕೆ ಹೋಗಿ ಅವುಗಳ ತಳಹದಿಯನ್ನು ಪರೀಕ್ಷಿಸಬೇಕು. ಇದು ಗಂಭೀರ ಹಾಗೂ ಕುತ್ಸಿತ ಆರೋಪವಾಗಿದ್ದು, ಮಹಾಬೋಧಿಯ ಓದುಗರು ಇಂತಹ ಒಂದು ಪರೀಕ್ಷೆಯನ್ನು ಸ್ವಾಗತಿಸುತ್ತಾರೆ ಎಂಬುದರಲ್ಲಿ ನನಗೆ ವಿಶ್ವಾಸವಿದೆ.

ಬುದ್ಧನ ಮೇಲಿನ ಈ ಆರೋಪಗಳನ್ನು ಎರಡು ಆಧಾರಗಳ ಮೇಲೆ ಮಾಡಬಹುದು.

ಮೊದಲನೆಯದು ಎಂದರೆ, ಮಹಾಪರಿನಿಬ್ಬಣ ಸುತ್ತದ ೫ನೆಯ ಅಧ್ಯಾಯದಲ್ಲಿ ಕೊಟ್ಟಿರುವ, ಬುದ್ಧನು ಆನಂದನ ಪ್ರಶ್ನೆಯೊಂದಕ್ಕೆ ನೀಡಿದನೆಂದು ಹೇಳಲಾಗಿರುವ ಉತ್ತರ. ಅದು ಈ ರೀತಿ ಇದೆ

> ೧) "ಸ್ತ್ರೀಯರ ವಿಷಯದಲ್ಲಿ ನಾವು ಹೇಗೆ ನಡೆದುಕೊಳ್ಳಬೇಕು? (ಆನಂದ ಕೇಳಿದ). ಅವರನ್ನು ನೋಡದೆ ಇರುವುದು. ಅವರನ್ನು ನೋಡಲೇ ಬೇಕಾಗಿ ಬಂದರೆ ಏನು ಮಾಡುವುದು? ಆನಂದ, ಅವರೊಂದಿಗೆ ಮಾತನಾಡದೆ ಇರುವುದು. ಭಗವನ್, ಅವರೇ ನಮ್ಮೊಡನೆ ಮಾತನಾಡಿದರೆ ನಾವು ಏನು ಮಾಡಬೇಕು? ಬಹಳ ಎಚ್ಚರವಾಗಿರಬೇಕು ಆನಂದ.

ಆಕ್ಸ್‌ಫೋರ್ಡ್ ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ ಮಹಾಪರಿನಿಬ್ಬಣ ಸುತ್ತದಲ್ಲಿ ಈ ಸಂಭಾಷಣೆಯಿರುವುದನ್ನು ನಿರಾಕರಿಸಲಾಗುವುದಿಲ್ಲ. ಈ ಸಂಭಾಷಣೆಯಿರುವುದೋ ಇಲ್ಲವೋ ಎಂಬುದಲ್ಲ ಇಲ್ಲಿಯ ಪ್ರಶ್ನೆ. ಆದರೆ ಮುಖ್ಯವಾದ ಅಂಶವೆಂದರೆ, ಈ ಭಾಗವು ಮೂಲದಲ್ಲಿಯೇ ಇದ್ದಿತೋ ಅಥವಾ ನಂತರದ ಕಾಲದಲ್ಲಿ ಭಿಕ್ಕುಗಳು ಅದನ್ನು ಇಲ್ಲಿ ಸೇರಿಸಿದರೋ ಎಂಬುದು. ಮೂಲವನ್ನು ಹಲವು ವಿಧಗಳಲ್ಲಿ ಅಲಂಕರಿಸಿರುವ, ಮಧ್ಯೆಮಧ್ಯೆ ಬೇಕಾದಹಾಗೆ ಬ್ರಾಹ್ಮಣರ ವಿಚಾರಧಾರೆಗಳನ್ನು ಸೇರಿಸಿ ಕುರೂಪಗೊಳಿಸಿರುವ, ಸಂನ್ಯಾಸಿಗಳ ಜೀವನದ ಆದರ್ಶವನ್ನು ತುರುಕಿರುವ ಇಂದಿನ ಸುತ್ತ ಪಿಟಕವನ್ನು ನೋಡಿದ ಯಾವುದೇ ವ್ಯಕ್ತಿಗೆ, ಆತ ಬುದ್ಧನ ಉಪದೇಶಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ,

ಆಘಾತವಾಗುತ್ತದೆ. ಏಷ್ಟೆಂದರೆ, ಅವರೂ ಶ್ರೀಮತಿ ರೈಸ್ ಡಾವಿಡ್ಸ್ ಅವರೊಂದಿಗೆ ದನಿಗೂಡಿಸುತ್ತಾರೆ ಮತ್ತು "ಇಲ್ಲಿನ (ಸುತ್ತಪಿಟಕದ) ಪುಟಗಳಲ್ಲಿ ಗೌತಮನು ಎಲ್ಲಿ? ಮೂಲದಲ್ಲಿನ ಬುದ್ಧನ ಹೇಳಿಕೆಯಲ್ಲಿ ಎಷ್ಟನ್ನು ಬಿಟ್ಟಿದ್ದಾರೆ, ಮತ್ತು ಅದಕ್ಕೆ ಎಷ್ಟನ್ನು ಸೇರಿಸಿದ್ದಾರೆ? ಮೂಲ ಹೇಳಿಕೆಯನ್ನು ಯಥಾವತ್ತಾಗಿ ಇಲ್ಲಿ ಕೊಟ್ಟಿದ್ದಾರೆಯೇ ಅಥವಾ ತಾವೇ ಸರಿಯಾಗಿ ಅರ್ಥಮಾಡಿಕೊಳ್ಳದೆ ಬರೆದಿದ್ದಾರೆಯೇ? ಕಾಲಾನುಕ್ರಮದಲ್ಲಿ ಬಂದ ವಿವರಣಕಾರರು – ಜನತೆಗೆ ಉಪದೇಶ ಮಾಡುವವರಲ್ಲ, ಆದರೆ ಬಾಯಿಪಾಠಮಾಡುವ ವಿದ್ಯಾರ್ಥಿಗಳು – ಶ್ರುತಿ ಪದ್ಧತಿಯ ಆಧಾರದ ಮೇಲೆ ನೀಡಿರುವ ವಾಕ್ಪರಂಪರೆಯಲ್ಲಿ ಎಷ್ಟನ್ನು ಸರಿಯಾಗಿ ಹೇಳಿದ್ದಾರೆ? ಜೀವನಕ್ಕೆ ಹತ್ತಿರವಾಗಿ ಇರದಿದ್ದ ವಿವರಣಕಾರರು, ಉಪಾಧ್ಯಾಯರು, ಸಂಪಾದಕರು, ಇವರೆಲ್ಲರೂ ಜೀವನದ ಅನುಭವ ಸಾಲದೆ ಇದ್ದರೂ ಇದರಲ್ಲಿ ಕೈಯಾಡಿಸಿದ್ದಾರೆ. ಹೀಗೆ ಮಧ್ಯೆ ಮಧ್ಯೆ ತಮ್ಮ ಪಾಠಗಳನ್ನು ತುರುಕಿರುವವರಿಗೆ ಮೂಲವು ಎಲ್ಲಿಂದ ದೊರಕಿತು ಎಂದು ಕೇಳಬೇಕು."

ಆದ್ದರಿಂದ ಈ ಪಾಠ ಪ್ರಕರಣವು ಬುದ್ಧನ ನಂತರದ ಭಿಕ್ಕುಗಳು ಸೇರಿಸಿರುವುದು ಎಂದರೆ ಅದು ಅತ್ಯುಕ್ತಿಯೇನಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಗಮನಿಸಬೇಕಾದ ಅಂಶ, ಬುದ್ಧನು ನಿರ್ವಾಣವಾದ ೪೦೦ ವರ್ಷಗಳ ನಂತರ ಈ ಸುತ್ತಪಿಟಕವು ಬರವಣಿಗೆಯಲ್ಲಿ ರೂಪುಗೊಂಡಿತು. ಎರಡನೆಯದಾಗಿ, ಇದನ್ನು ಸಂಪಾದಿಸಿ ಪ್ರಕಟಿಸಿದವರು ಸಂನ್ಯಾಸಿಗಳು ಮತ್ತು ಈ ಸಂನ್ಯಾಸಿಗಳು ಸಂನ್ಯಾಸಿಗಳಿಗೋಸ್ಕರ ಪ್ರಕಟಿಸಿದರು. ಇಂತಹ ಬುದ್ಧನು ಹೇಳಿದನೆಂದು ಪರಿಗಣಿಸಲ್ಪಟ್ಟಿರುವ ಹೇಳಿಕೆಗಳು ಸಂನ್ಯಾಸಿಗಳಿಗೆ ಮೌಲ್ಯಯುತವಾದವುಗಳು ಮತ್ತು ಅವರ ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ಬರಲು ಹೇಳಿದ ಹೇಳಿಕೆಗಳು ಮತ್ತು ಹೀಗಾಗಿರುವುದರಿಂದ ಸಂನ್ಯಾಸಿ–ಸಂಪಾದಕರು ಅದನ್ನು ಪ್ರಕ್ಷೇಪಮಾಡಿರುವುದು ಅಸಹಜವೇನಲ್ಲ.

ಈ ಪಾಠಭಾಗವು ನಂತರದ ಪ್ರಕ್ಷಿಪ್ತವೆಂಬುದನ್ನು ಸಮರ್ಥಿಸುವ ಮತ್ತೆರಡು ವಿಷಯಗಳು ಇವೆ.

೧) ಈ ಸುತ್ತಕ್ಕೆ (ಎಸ್.ಬಿ.ಬಿ. ಸರಣಿಯಲ್ಲಿ ಪ್ರಕಟಿಸಿದ ಡಾವಿಡ್ ಅವರ ದೀಘನಿಕಾಯದ ಎರಡನೆಯ ಭಾಗದ ಪುಟ ೭೨ರಲ್ಲಿರುವ ಹಾಗೆ) ಬರೆದಿರುವ ಪೀಠಿಕೆಯಲ್ಲಿನ ತಃಖ್ತೆಯಲ್ಲಿ ಕೊಟ್ಟಿರುವ ಹಾಗೆ, ಈ ಮಹಾಪರಿನಿಬ್ಬಾಣ ಸುತ್ತದಲ್ಲಿ ಬರುವ ಅನೇಕ ಸುತ್ತಗಳು ಬೇರೆಯ ಸುತ್ತಗಳಲ್ಲಿಯೂ ಕಂಡುಬರುತ್ತವೆ. ಹೀಗೆ ಹಲವಾರು ಸುತ್ತಗಳು ಒಂದಕ್ಕಿಂತ ಹೆಚ್ಚಿನ ಸುತ್ತಗಳಲ್ಲಿ ಪುನರಾವರ್ತನೆಯಾಗಿದ್ದರೂ, ಈ ಸುತ್ತವು ಮಾತ್ರ ಇತರ ಸುತ್ತಗಳಲ್ಲಿ ಕಂಡುಬರುವುದಿಲ್ಲ.

೨) ಈ ಸುತ್ತದ ಪೀಠಿಕೆಯ ೩೮ನೆಯ ಪುಟದಲ್ಲಿ (ಡಾವಿಡ್ಸ್ ಅವರ ಎಸ್.ಬಿ.ಇ. ಸರಣಿಯ ಹನ್ನೊಂದನೆಯ ಸಂಪುಟ) ಈ ಸುತ್ತದ ಚೈನೀ ಭಾಷೆಯ ಅನುವಾದವೊಂದು ಇರುವುದಾಗಿ ಹೇಳಿದ್ದಾರೆ. ಈ ಚೈನೀ ಭಾಷೆಯ ಅನುವಾದವೂ ಈ ಪಾಠವನ್ನು ಒಳಗೊಂಡಿಲ್ಲ.

ನಾವು ಇನ್ನೂ ಮುಂದೆ ಹೋಗಿ ಸಂಭಾವ್ಯತಾ ಪರೀಕ್ಷೆಯನ್ನು ಮಾಡೋಣ. ಈ ಪ್ರಶ್ನೆಯನ್ನು ಕೇಳಲು ಆನಂದನಿಗೆ ಯಾವುದಾದರೂ ಕಾರಣವಿತ್ತೇ? ಅಥವಾ, ಬುದ್ಧನು ಹೆಂಗಸರ ಬಗ್ಗೆ ನಡೆದುಕೊಳ್ಳುತ್ತಿದ್ದ ರೀತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಆನಂದ ಈ ಪ್ರಶ್ನೆಯನ್ನು ಕೇಳಿದನೆ? ಆನಂದ ಅಂತಹ ಪ್ರಶ್ನೆಯನ್ನು ಕೇಳಿರುವುದು ಸಾಧ್ಯವಿಲ್ಲ ಎಂಬುದಕ್ಕೆ ಮತ್ತು ಆನಂದನು ಆ ಪ್ರಶ್ನೆಯನ್ನು ಕೇಳಿದ್ದರೂ, ಬುದ್ಧ ಈ ರೀತಿಯ ಉತ್ತರವನ್ನು ನೀಡಿರಲಿಕ್ಕಿಲ್ಲ ಎಂಬುದಕ್ಕೆ ನಮಗೆ ಪುರಾವೆ ಇದೆ. ಅಂತಹ ಪ್ರಶ್ನೆಯನ್ನು ಆನಂದ ಕೇಳಿದ ಮತ್ತು ಬುದ್ಧನು ಅಂತಹ ಉತ್ತರವನ್ನು ನೀಡಿದ ಎಂಬುದು ಆನಂದ ಮತ್ತು ಬುದ್ಧ ಇವರ ಚಾರಿತ್ರ್ಯಕ್ಕೆ ವಿರೋಧವಾಗಿದೆ.

ಆನಂದನು ಅಂತಹ ಪ್ರಶ್ನೆಯನ್ನು ಕೇಳುವ ಅಗತ್ಯವಿತ್ತೇ ಎನ್ನುವುದನ್ನು ಗಮನಿಸುವಾಗ, ನಾವು

ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಮಹಾಪರಿನಿಬ್ಬಣ ಸುತ್ತದ ಅದೇ ಅಧ್ಯಾಯದಲ್ಲಿ, ಆನಂದನದು ಎಂತಹ ಆಪ್ಯಾಯಮಾನವಾದ ವ್ಯಕ್ತಿತ್ವ, ಹೇಗೆ ಎಲ್ಲರೂ ಅವನನ್ನು ಇಷ್ಟಪಡುತ್ತಾರೆ ಎಂದು ಬುದ್ಧನೇ ವರ್ಣಿಸುತ್ತಾನೆ. ಆ ಗಾಥೆಗಳ ಪೈಕಿ ನಾನು ಎರಡು ಗಾಥೆಗಳನ್ನು ಇಲ್ಲಿ ಉದ್ಧರಿಸುತ್ತೇನೆ.

"೧೬. ಬಂಧುಗಳೇ, ಆನಂದನಲ್ಲಿ ಈ ನಾಲ್ಕು ಅದ್ಭುತ ಮತ್ತು ಅತ್ಯುತ್ತಮ ಗುಣಗಳು ಇವೆ.

ಬಂಧುಗಳೆ, ಸಂಘದ ಹಲವಾರು ಬಂಧುಗಳು ಆನಂದನನ್ನು ಕಾಣಲು ಬಂದರೆ, ಅವರು ಅವನನ್ನು ನೋಡಿ ಆನಂದಪೂರಿತರಾಗುತ್ತಾರೆ. ಆನಂದನು ಅವರಿಗೆ ಉಪದೇಶ ಮಾಡಿದರೆ, ಅವರು ಅವನ ಉಪದೇಶದಿಂದ ಆನಂದತುಂದಿಲರಾಗುತ್ತಾರೆ. ಆನಂದನು ಮೌನವಾಗಿದ್ದರೆ, ಬಂಧುಗಳು ಮನಸ್ಸಿನಲ್ಲಿ ಮುಜುಗರಕ್ಕೆ ಒಳಗಾಗುತ್ತಾರೆ.

ಬಂಧುಗಳೆ, ಸಂಘದ ಹಲವಾರು ಸೋದರಿಯರು .........ಅಥವಾ ಹಲವಾರು ಭಕ್ತರು..... ಅಥವಾ ಹಲವಾರು ಭಕ್ತೆಯರು ಆನಂದನನ್ನು ನೋಡಿದರೆ, ಆನಂದನು ಅವರಿಗೆ ಉಪದೇಶ ಮಾಡಿದರೆ, ಅವರು ಅವನ ಉಪದೇಶವನ್ನು ಕೇಳಿ ಆತ್ಯಾನಂದವನ್ನು ಹೊಂದುತ್ತಾರೆ, ಆನಂದನು ಮೌನವಾಗಿದ್ದರೆ, ಸೋದರಿಯರ ಸಮೂಹ ಮುಜುಗರಕ್ಕೆ ಒಳಗಾಗುತ್ತದೆ"

ಮೇಲಿನ ಉದ್ಧರಣೆಯಿಂದ ಆನಂದನನ್ನು ಭೇಟಿಯಾಗಲು ಸ್ತ್ರೀಯರು ಬರುತ್ತಿದ್ದುದು ಸಾಮಾನ್ಯವಾಗಿತ್ತು ಮತ್ತು ಭಕ್ತೆಯರು ಮಾತ್ರವಲ್ಲ, ಸಂಘದ ಸದಸ್ಯೆಯರಲ್ಲದ ಇತರ ಹೆಂಗಸರೂ ಬರುತ್ತಿದ್ದರು ಎಂದು ತಿಳಿದುಬರುತ್ತದೆ. ಹೀಗಿರುವಾಗ ಆನಂದ ಈ ಪ್ರಶ್ನೆಯನ್ನು ಕೇಳುವ ಆವಶ್ಯಕತೆ ಏನಿತ್ತು? ಸ್ತ್ರೀಯರು ಆನಂದನನ್ನು ಭೇಟಿಯಾಗುತ್ತಿದ್ದುದು ಬುದ್ಧನಿಗೆ ತಿಳಿದಿತ್ತು. ಅಲ್ಲಿಯವರೆಗೂ ಅವನು ಯಾವುದೇ ರೀತಿಯಲ್ಲಿಯೂ ಆಕ್ಷೇಪಿಸಿರಲಿಲ್ಲ. ಆದ್ದರಿಂದ ಹೆಂಗಸರನ್ನು ಭೇಟಿಮಾಡಲು ನಿಷೇಧ, ಪ್ರತಿಷೇಧಗಳನ್ನು ಹೇರುವ ಬಗ್ಗೆ ಯೋಚಿಸಬೇಕಾಗಿದ್ದ ಸನ್ನಿವೇಶವೇನು? ಇಡೀ ಈ ಪಾಠಭಾಗವೇ ಎಷ್ಟು ಅಸಹಜವೆಂದು ಅನಿಸುತ್ತದೆಯೆಂದರೆ, ಅದನ್ನು ನಂತರದ ಕಾಲದ ಸಂನ್ಯಾಸಿಗಳ ಪ್ರಕ್ಷೇಪವೆಂದು ಹೇಳಲೇಬೇಕು.

ಆನಂದನ ಜೀವನದಲ್ಲಿನ ಒಂದು ಪ್ರಸಂಗವು ಮಹಾಪರಿನಿಬ್ಬಾಣದ ಸುತ್ತದ ಈ ಪಾಠಭಾಗಕ್ಕೆ ಸ್ವಲ್ಪವೂ ಹೊಂದದ ರೀತಿಯಲ್ಲಿ ಇದೆ. ಸ್ಪಷ್ಟವಾಗಿ ಗೊತ್ತಿರುವ ಹಾಗೆ, ಮೊದಲ ಪರಿಷತ್ತಿನ ಸಮಾವೇಶದಲ್ಲಿ ಆನಂದನ ವಿರುದ್ಧ ಐದು ಆಕ್ಷೇಪಣೆಗಳನ್ನು ಮಾಡಲಾಯಿತು. ಅವುಗಳು –

೧. ವಿನಯಪಿಟಕದ ಯಾವ ಭಾಗಗಳು ಕಡಿಮೆ ಪ್ರಾಮುಖ್ಯವುಳ್ಳವು ಎಂದು ಅವುಗಳನ್ನು ಬದಲಾಯಿಸುವ ಮತ್ತು ತಿದ್ದುವ ಅಧಿಕಾರವನ್ನು ಬುದ್ಧನು ಸಂಘಕ್ಕೆ ನೀಡಿದನು ಎಂದು ಕೇಳುವಲ್ಲಿ ಆನಂದನು ವಿಫಲನಾಗಿದ್ದಾನೆ.

೨. ಏಕಾಂತವಾಸದ ಅವಧಿಯಲ್ಲಿ, ಭಗವಂತನ ಉಡುಪನ್ನು ಹೊಲಿಯುವಾಗ ಆನಂದನು ಅದರಮೇಲೆ ನಡೆದನು,

೩. ಭಗವಂತನ ನಿರ್ವಾಣದ ನಂತರ ಆತನ ಕಳೇಬರಕ್ಕೆ ಮೊದಲು ನಮಸ್ಕರಿಸುವ ಅವಕಾಶವನ್ನು ಆನಂದನು ಸ್ತ್ರೀಯರಿಗೆ ಕೊಟ್ಟು, ತನ್ಮೂಲಕ ಅವರ ಕಣ್ಣೀರಿನಿಂದ ಭಗವಂತನ ಕಳೇಬರವು ಮಲಿನವಾಯಿತು,

೪) ಅವನು ಭಗವಂತನನ್ನು ಮತ್ತೊಂದು ಅವಧಿಯವರೆಗೆ ಬದುಕಿರುವಂತೆ ಕೇಳಿಕೊಳ್ಳಲಿಲ್ಲ, ಮತ್ತು,

೫) ಸ್ತ್ರೀಯರನ್ನು ಸಂಘಕ್ಕೆ ಸೇರಿಸಿಕೊಳ್ಳಲು ಮುಖ್ಯವಾಗಿ ಆತನೇ ಕಾರಣ.

ಈ ಆಪಾದನೆಗಳೆಲ್ಲವನ್ನೂ ಆನಂದ ಒಪ್ಪಿಕೊಂಡ. ಆತ ಇವುಗಳನ್ನು ಒಪ್ಪಿಕೊಳ್ಳಬೇಕಿತ್ತೆ ಇಲ್ಲವೇ ಎಂಬುದು ಬೇರೆಯ ವಿಷಯ. ಇಲ್ಲಿ ಮುಖ್ಯವಾಗಿರುವುದು ಮೂರನೆಯ ಆಪಾದನೆ. ಏಕೆಂದರೆ, ಪ್ರಸಕ್ತ ನಾವು ಚರ್ಚಿಸುತ್ತಿರುವ ಅಂಶಕ್ಕೆ ಅದು ನೇರವಾಗಿ ಸಂಬಂಧಪಟ್ಟಿದೆ. ಮಹಾಪರಿನಿಬ್ಬಾಣ ಸುತ್ತದಲ್ಲಿ ಹೇಳಿರುವ ಪ್ರಸಂಗವು ನಿಜವೇ ಆಗಿದ್ದಲ್ಲಿ, ಆನಂದನು ಸ್ತ್ರೀಯರಿಗೆ ಭಗವಂತನ ಕಳೇಬರವನ್ನು ಮುಟ್ಟಲು ಏಕೆ ಅವಕಾಶಮಾಡಿಕೊಡುತ್ತಿದ್ದ? ಈ ಪ್ರಸಂಗಕ್ಕೆ ಕೆಲವೇ ನಿಮಿಷಗಳ ಮುಂಚೆ ಬುದ್ಧನು ನೀಡಿದ್ದ ಉಪದೇಶವನ್ನು ಅಷ್ಟು ಸ್ಪಷ್ಟವಾಗಿ ಮತ್ತು ತಿಳಿದೂ ತಿಳಿದೂ ಉಲ್ಲಂಘಿಸುತ್ತಿದ್ದನೇ? ಇದಕ್ಕೆ ಇಲ್ಲವೆಂಬುದೇ ಉತ್ತರ. ಈ ನಿಷೇಧಾತ್ಮಕ ಉತ್ತರದ ನಂತರದ ಪರಿಣಾಮಗಳೇನು? ಈ ಆಪಾದನೆಗಳು ಹೇಳುವಂತೆ, ಬುದ್ಧ ಈ ವಿಷಯದಲ್ಲಿ ಆನಂದನಿಗೆ ಉಪದೇಶವನ್ನು ಮಾಡಿರಲೇ ಇಲ್ಲ. ಒಂದು ಪಕ್ಷ ಅವನು ಹಾಗೆ ಉಪದೇಶ ಮಾಡಿದ್ದಿದ್ದರೆ, ಆನಂದ ಅವನ ಉಪದೇಶವನ್ನು ಉಲ್ಲಂಘಿಸುತ್ತಿರಲಿಲ್ಲ. ಈ ವಿಶ್ಲೇಷಣೆಯಿಂದ ಇಂತಹ ಯಾವುದೇ ಉಪದೇಶವು ಬುದ್ಧನಿಂದ ಕೊಡಲ್ಪಟ್ಟಿತು ಎನ್ನುವುದು ನಿಜವಲ್ಲವೆಂದು ಪ್ರಮಾಣೀಕೃತವಾಗುತ್ತದೆ.

ಈ ಪ್ರಶ್ನೆಯನ್ನು ಬುದ್ಧನ ಕಡೆಯಿಂದ ಪರಿಶೀಲಿಸೋಣ. ಬುದ್ಧನಿಗೆ ಅಂತಹ ಉತ್ತರವನ್ನು ಕೊಡುವುದು ಸಹಜವಾಗಿತ್ತೇ? ಇದಕ್ಕೆ ಉತ್ತರವು ಬುದ್ಧನು ಮಹಿಳೆಯರ ಬಗ್ಗೆ ಹೇಗೆ ನಡೆದುಕೊಳ್ಳುತ್ತಿದ್ದ ಎಂಬುದರ ಮೇಲೆ ನಿಂತಿದೆ. ತಾನು ಆನಂದನಿಗೆ ನೀಡಿದ ಉತ್ತರದಲ್ಲಿ ಹೇಳಿದಂತೆ ಬುದ್ಧನು ಸ್ತ್ರೀಯರನ್ನು ಭೇಟಿಮಾಡುವುದರಿಂದ ತಪ್ಪಿಸಿಕೊಳ್ಳುತ್ತಿದ್ದನೇ? ಅದಕ್ಕೆ ಆಧಾರವಾದ ಸಾಕ್ಷ್ಯಗಳಾವುವು?

ತಕ್ಷಣವೇ ಎರಡು ಪ್ರಸಂಗಗಳು ಮನಸ್ಸಿಗೆ ಬರುತ್ತವೆ. ಒಂದು ವಿಶಾಖಳ ಪ್ರಸಂಗ. ಅವಳು ಬುದ್ಧನ ಎಂಬತ್ತು ಪ್ರಮುಖ ಶಿಷ್ಯೆಯರಲ್ಲಿ ಒಬ್ಬಳು. ಅವಳಿಗೆ 'ಭಿಕ್ಷಾದಾನಮಾಡುವವರಲ್ಲಿ ಅಗ್ರಗಣ್ಯೆ' ಎಂಬ ಬಿರುದು ಇತ್ತು. ಅಂತಹ ವಿಶಾಖಳು ಒಮ್ಮೆಯಾದರೂ ಬುದ್ಧನ ಪ್ರವಚನಗಳಿಗೆ ಹೋಗಿರಲಿಲ್ಲವೇ? ಅವನ ಆಶ್ರಮವನ್ನು ಪ್ರವೇಶಿಸಿರಲಿಲ್ಲವೇ? ತಾನು ಆನಂದನಿಗೆ ಸ್ತ್ರೀಯರ ಬಗ್ಗೆ ಉಪದೇಶ ಮಾಡಿದ ರೀತಿಯಲ್ಲಿಯೇ ಬುದ್ಧನು ವಿಶಾಖಳ ವಿಷಯದಲ್ಲಿ ನಡೆದುಕೊಂಡನೇ? ಬುದ್ಧನು ಅವಳನ್ನು ಭೇಟಿಮಾಡಿದಾಗ ಅಲ್ಲಿದ್ದ ಭಿಕ್ಕುಗಳು ಏನು ಮಾಡಿದರು? ಅವರು ಅಲ್ಲಿಂದ ನಿರ್ಗಮಿಸಿದರೇ?

ನಮ್ಮ ಮನಸ್ಸಿಗೆ ಬರುವ ಎರಡನೆಯ ಪ್ರಸಂಗವೆಂದರೆ, ವೈಶಾಲಿಯ ಅಮ್ರಪಾಲಿಯದು. ಅವಳು ಬುದ್ಧನನ್ನು ಭೇಟಿಯಾಗಿ ಭೋಜನಕ್ಕೆ ತನ್ನ ಮನೆಗೆ ಬರುವಂತೆ ಆತನನ್ನು ಮತ್ತು ಇತರ ಭಿಕ್ಕುಗಳನ್ನು ಆಹ್ವಾನಿಸಿದಳು. ಅವಳೊಬ್ಬ ವೇಶ್ಯೆ. ವೈಶಾಲಿಯಲ್ಲಿ ಅವಳೊಬ್ಬಳು ಅತಿ ಸುಂದರಳಾಗಿದ್ದ ಹೆಂಗುಸು. ಅವಳನ್ನು ಭೇಟಿಯಾಗಲು ಬುದ್ಧನಾಗಲೀ, ಅವನ ಇತರ ಭಿಕ್ಕುಗಳಾಗಲೀ ನಿರಾಕರಿಸಿದರೇ? ಲಿಚ್ಛವಿಸ್ಸಳ ಆಹ್ವಾನವನ್ನು ತಿರಸ್ಕರಿಸಿ, ಅವರು ಆಮ್ರಪಾಲಿಯ ಆಹ್ವಾನವನ್ನು ಒಪ್ಪಿಕೊಂಡರು. ಇದರಿಂದ ನಿರಾಶೆಗೊಂಡ ಅವಳು ಮನೆಗೆ ಹೋಗಿ ಅವಳ ಆಹಾರವನ್ನು ಸೇವಿಸಿದಳು.

ಇನ್ನೂಹೆಚ್ಚಿನ ಉದಾಹರಣೆಗಳನ್ನು ಕೊಡುವುದು ಅನಗತ್ಯ. ನಂದಕೋವಾದ ಸುತ್ತವು ತಿಳಿಸುವಂತೆ ಮಹಾಪ್ರಜಾಪತಿ ಗೋತಮಿಯು ಐನೂರು ಭಿಕ್ಷಾದಾನಿ ಸ್ತ್ರೀಯರನ್ನು ಬುದ್ಧನ ಬಳಿಗೆ ಕರೆದುಕೊಂಡುಹೋಗಿ, ಅವರಿಗೆ ತತ್ತ್ವ ಮತ್ತು ಶಿಸ್ತಿನ ಬಗ್ಗೆ ಉಪದೇಶ ನೀಡುವಂತೆ ಕೋರುತ್ತಾಳೆ. ಬುದ್ಧ ಅವರನ್ನು ನೋಡಿ ಓಡಿಹೋದನೇ?

ಪುಜ್ಜಣನ ಮಗಳು ಕೋಕನದ ಎಂಬುವಳು ತನ್ನ ಅಪೂರ್ವವಾದ ಸೌಂದರ್ಯದ ಪ್ರಜ್ವಲತೆಯಿಂದ ಕತ್ತಲನ್ನೇ ಹೊಡೆದೋಡಿಸುವಂತೆ ನಿಶಿಯಲ್ಲಿ ಬುದ್ಧನನ್ನು ಕಾಣಲು ಅವನು ವೈಶಾಲಿಯಲ್ಲಿ ತಂಗಿದ್ದ

ಮಹಾವನಕ್ಕೆ ಬರುತ್ತಾಳೆ ಎಂದು ಸಮ್ಯುತ್ತ ನಿಕಾಯವು ತಿಳಿಸುತ್ತದೆ.

ಪ್ರಸೇನಜಿತನ ರಾಣಿ ಮಲ್ಲಿಕಾ ಆಗಾಗ್ಗೆ ಬುದ್ಧನ ಬಳಿಗೆ ಧರ್ಮೋಪದೇಶವನ್ನು ಕೇಳಲು ಬರುತ್ತಿದ್ದ ವಿಷಯವನ್ನು ಪಿಟಕಗಳು ದಾಖಲಿಸುತ್ತವೆ.

ಬುದ್ಧ ಹೆಂಗಸರನ್ನು ದೂರವಿರಿಸುತ್ತಿರಲಿಲ್ಲ, ಮತ್ತು ಸ್ತ್ರೀಯರು ಅವನನ್ನು ಕಂಡರೆ ಹೆದರುತ್ತಿರಲಿಲ್ಲ ಎಂಬುದು ಮೇಲಿನ ಪ್ರಸಂಗಗಳಿಂದ ತಿಳಿದುಬರುತ್ತದೆ.

ಭಿಕ್ಕುಗಳು ಪರಿಚಯವಿಲ್ಲದವರ ಕುಟುಂಬಗಳಿಗೆ ಭೇಟಿಕೊಡುವುದರ ವಿರುದ್ಧ ಬುದ್ಧ ಎಚ್ಚರಿಸಿದ್ದ ಎಂಬುದು ನಿಜ. ಅದು ಮಾನವ ಸಹಜವಾದ ದೌರ್ಬಲ್ಯಕ್ಕೆ ಇಂತಹ ಭೇಟಿಗಳು ದಾರಿಮಾಡಿಕೊಡುತ್ತವೆ ಎಂಬುದು ಅವನ ನಿಜವಾದ ಹೆದರಿಕೆಯಾಗಿತ್ತು. ಆದರೆ ಅಂತಹ ಭೇಟಿಗಳನ್ನು ಅವನು ನಿಷೇಧಿಸಿರಲಿಲ್ಲ ಮತ್ತು ಸ್ತ್ರೀಯರ ಬಗ್ಗೆ ತಿರಸ್ಕಾರವನ್ನು ಹೊಂದಿರಲಿಲ್ಲ.

ಬುದ್ಧನು ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವ ವಿಷಯದಲ್ಲಿ ಅತ್ಯುಗ್ರವಾದ ಎಚ್ಚರಿಕೆಯಿಂದ ಇದ್ದ ಎನ್ನುವುದೂ ಸತ್ಯ. ಅವನ ಮಾತನ್ನೇ ಉದ್ಧರಿಸುವುದಾದರೆ, 'ಸ್ತ್ರೀಯರು ಬ್ರಹ್ಮಚಾರಿಯ ಜೀವನದಲ್ಲಿ ಒಂದು ಕಳಂಕ' ಎಂದು ಹೇಳುವಷ್ಟು ಆ ವಿಷಯದಲ್ಲಿ ಬುದ್ಧ ನೋವಿನ ಭಾವನೆಯನ್ನು ಹೊಂದಿದ್ದ. ಆದರೆ ಅವನು ಏನೆಂದು ಉಪದೇಶಿಸಿದ? ಭಿಕ್ಕುಗಳು ಸ್ತ್ರೀಯರನ್ನು ಭೇಟಿಯಾಗದೆ ಅವರನ್ನು ದೂರವಿರಿಸಬೇಕೆಂದು ಆಜ್ಞೆಮಾಡಿದ್ದನೆ? ಅಂತಹುದು ಏನೂ ಇಲ್ಲ. ಆತ ಅಂತಹುದನ್ನು ಅಧಿಕಾರಕವಾಗಿ ನಿಷೇಧಿಸಿರಲಿಲ್ಲ. ಬದಲಿಗೆ ಅವನು ಭಿಕ್ಕುಗಳಿಗೆ ಹೇಳಿದ್ದು ಏನೆಂದರೆ – ಸ್ತ್ರೀಯರನ್ನು ನೋಡಿದಾಗ ನಿಮ್ಮಲ್ಲಿ ನೀವೇ ತಾಯಿಯ ಬಗ್ಗೆ, ಸೋದರಿಯ ಬಗ್ಗೆ, ಮಗಳ ಬಗ್ಗೆ ಇರಬಹುದಾದ ಭಾವನೆಯನ್ನು ಆಹ್ವಾನಿಸಿಕೊಳ್ಳಿ, ಅಂದರೆ, ಹೆಂಗಸರನ್ನು ನಿಮ್ಮ ತಾಯಿಯ ಹಾಗೆ, ಸೋದರಿಯ ಹಾಗೆ, ಅಥವಾ ಮಗಳ ಹಾಗೆ ನೋಡಿ.

ಈ ಆಪಾದನೆಗೆ ಸಂಬಂಧಿಸಿದಂತೆ ಆಪಾದನೆ ಮಾಡುವವರು ಆಧಾರವನ್ನಾಗಿ ಮಾಡಿಕೊಳ್ಳುವ ಇನ್ನೊಂದು ಅಂಶವೆಂದರೆ, ಸ್ತ್ರೀಯರಿಗೆ ಸಂಘ ಪ್ರವೇಶಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದು ಮತ್ತು ಭಿಕ್ಕುಣಿಯರ ಸಂಘವನ್ನು, ಅದಕ್ಕೆ ಅನುಮತಿಯನ್ನು ನೀಡಿದ ಮೇಲೆ, ಭಿಕ್ಕುಗಳ ಸಂಘಕ್ಕೆ ಅಧೀನವನ್ನಾಗಿ ಮಾಡಿದ್ದು. ಈ ಪ್ರಕರಣವನ್ನು ಇನ್ನೂ ಆಳವಾಗಿ ಅಧ್ಯಯನ ಮಾಡುವ ಆವಶ್ಯಕತೆಯಿದೆ. ಬುದ್ಧನು ಮಹಾಪ್ರಜಾಪತಿಯ ಪರಿವ್ರಾಜಕ ದೀಕ್ಷೆಯನ್ನು ಪಡೆಯುವ ಬೇಡಿಕೆಯನ್ನು ಏಕೆ ವಿರೋಧಿಸಿದ? ಹೆಂಗಸರು ಕೆಳವರ್ಗಕ್ಕೆ ಸೇರಿದವರೆಂದು, ಅವರನ್ನು ಸಂಘಕ್ಕೆ ಸೇರಿಸಿಕೊಂಡರೆ, ಸಂಘದ ಸ್ಥಾನಮಾನಕ್ಕೆ ಕುಂದುಂಟಾಗುವುದೆಂದು ಆತ ಅದಕ್ಕೆ ವಿರೋಧವನ್ನು ಹೊಂದಿದ್ದನೆ? ಹೆಂಗಸರು ತನ್ನ ಧರ್ಮವನ್ನು, ತನ್ನ ಕಾರ್ಯನೀತಿಯನ್ನು ಅರಿಯುವಷ್ಟು, ಆದರ್ಶಗಳನ್ನು ಮೈಗೂಡಿಸಿಕೊಳ್ಳುವಷ್ಟು ವಿವೇಕವನ್ನು ಹೊಂದಿದವರಲ್ಲವೆಂಬುದು ಅವನ ಅಭಿಪ್ರಾಯವಾಗಿತ್ತೇ? ಬುದ್ಧನು ಒಂದುರೀತಿಯಲ್ಲಿ ಕಲ್ಲುಮನಸ್ಸಿನವನಂತೆ ಕಂಡಾಗ ಆನಂದ ಈ ಪ್ರಶ್ನೆಗಳಲ್ಲಿ ಎರಡನೆಯದನ್ನು ಕಂಡಿತವಾಗಿಯೂ ಕೇಳಿರಬೇಕು. ತನ್ನ ಅಸಂದಿಗ್ಧ ಮಾತಿನಿಂದ, ಯಾವುದೇ ಸಂದೇಹಕ್ಕೆ ಅವಕಾಶಕೊಡದಂತೆ ಬುದ್ಧ ಈ ಪ್ರಶ್ನೆಗೆ ಉತ್ತರಿಸಿದ್ದ. ಸ್ತ್ರೀಯರು ತನ್ನ ತತ್ತ್ವಗಳನ್ನು ಅರಿತುಕೊಳ್ಳುವುದರಲ್ಲಿ ಮತ್ತು ತನ್ನ ಕಾರ್ಯನೀತಿಯನ್ನು ಅನುಸರಿಸಲು ಅವರು ಸಂಪೂರ್ಣವಾಗಿ ಸಮರ್ಥರೆಂದು ಹೇಳಿದ. ಆದರೆ ತಾನು ಅವರು ಪರಿವ್ರಾಜಕಿಯರ ದೀಕ್ಷೆಯನ್ನು ಪಡೆಯಲು ವಿರೋಧಿಸಿದುದಕ್ಕೆ ಅದು ಕಾರಣವಲ್ಲವೆಂದೂ ಹೇಳಿದ. ಸ್ತ್ರೀಯರು ಪುರುಷರಿಗಿಂತ ಬುದ್ಧಿಮತ್ತೆಯಲ್ಲಿ, ಚಾರಿತ್ರ್ಯದಲ್ಲಿ ಕೀಳು ಎಂದು ಅವನು ಎಂದೂ ಪರಿಗಣಿಸಿರಲಿಲ್ಲ ಎಂಬುದು ಇದರಿಂದ

ತಿಳಿದುಬರುತ್ತದೆ. ಅವರ ಬಗ್ಗೆ ಅವನಿಗೆ ಕೀಳುಭಾವನೆಯಿದ್ದು, ಅವರನ್ನು ಸಂಘಕ್ಕೆ ಸೇರಿಸಿಕೊಂಡರೆ ಸಂಘದ ಗೌರವಕ್ಕೆ ಕುಂದು ಉಂಟಾಗುತ್ತದೆ ಎಂಬ ವಾದವು ಚರ್ಚಾರ್ಹ ವಿಷಯವೇ ಅಲ್ಲ. ಅವನ ಭಾವನೆ ಹಾಗಿದ್ದಿದ್ದರೆ, ಅವನು ಸ್ತ್ರೀಯರನ್ನು ಎಂದೂ ಸಂಘಕ್ಕೆ ಸೇರಿಸಿಕೊಳ್ಳುತ್ತಲೇ ಇರಲಿಲ್ಲ.

ಬುದ್ಧನು ಭಿಕ್ಕುಣಿಯರ ಸಂಘವನ್ನು ಭಿಕ್ಕುಗಳ ಸಂಘಕ್ಕೆ ಅಧೀನವನ್ನಾಗಿಸಿದ ಎಂಬ ವಾದಕ್ಕೆ ನೀಡುವ ಉತ್ತರವೆಂದರೆ, ಬೌದ್ಧಧರ್ಮದ ವ್ಯವಸ್ಥೆಯಲ್ಲಿ ಮೇಲು, ಕೀಳು ಎಂಬ ಭಾವನೆಯೇ ಇರಲಿಲ್ಲ. ಬುದ್ಧನ ನಿರ್ಧಾರದ ಹಿಂದೆ ಇದ್ದುದು ಶುದ್ಧವಾಗಿ ಕಾರ್ಯಸಾಧುವೆನ್ನಬಹುದಾದ ಗುಣ. ಸ್ತ್ರೀಯರನ್ನು ಪರಿವ್ರಾಜಕಿಯರನ್ನಾಗಿ ಸೇರಿಸಿಕೊಳ್ಳುವಲ್ಲಿ, ಬುದ್ಧನು ಎರಡು ಪ್ರಶ್ನೆಗಳನ್ನು ಎದುರಿಸಬೇಕಾಗಿತ್ತು. ಪುರುಷರು ಮತ್ತು ಸ್ತ್ರೀಯರು ಇಬ್ಬರಿಗೂ ಸೇರಿದಂತೆ ಒಂದೇ ಸಂಘವಿರಬೇಕೇ? ಬುದ್ಧ ಎರಡು ಪ್ರತ್ಯೇಕ ಸಂಘಗಳಿರಬೇಕೆಂದು ತೀರ್ಮಾನಿಸಿದ. ಸ್ತ್ರೀ ಮತ್ತು ಪುರುಷ ಪರಿವ್ರಾಜಕರಿಗೆ ಒಂದೇ ಸಂಘವಿದ್ದರೆ, ಬ್ರಹ್ಮಚರ್ಯದ ನಿಯಮಗಳು ಸಂಪೂರ್ಣವಾಗಿ ಹಾಳಾಗುತ್ತದೆ ಎಂಬುದು ಅವನ ಹೆದರಿಕೆಯಾಗಿತ್ತು. ಅವನ ಮಾತಿನಲ್ಲಿಯೇ ಹೇಳುವುದಾದರೆ, ಸ್ತ್ರೀಯರನ್ನು ಸಂಘಕ್ಕೆ ಸೇರಿಸಿಕೊಳ್ಳಬೇಕಾದರೆ ಅವರ ಮತ್ತು ಪುರುಷರ ಸಂಘಗಳ ನಡುವೆ ಒಂದು ಪ್ರತಿಬಂಧಕ ತಡೆಯಿರಬೇಕು ಎಂದು ಅವನು ಯೋಚಿಸಿದ. ಹೀಗೆ ಎರಡು ಸಂಘಗಳನ್ನು ಸ್ಥಾಪಿಸಲು ಅನುಮತಿಯನ್ನು ನೀಡಿದ ನಂತರ, ಅವನು ಇನ್ನೊಂದು ಪ್ರಶ್ನೆಯನ್ನು ಎದುರಿಸಬೇಕಾಯಿತು. ಎರಡು ಸಂಘಗಳನ್ನು ಸ್ಥಾಪಿಸಿದ ಮೇಲೆ ಅವುಗಳು ಪರಸ್ಪರ ಅವಲಂಬಿತವಾಗಿರಬೇಕೇ ಅಥವಾ ಒಂದರಿಂದ ಮತ್ತೊಂದು ಸ್ವತಂತ್ರವಾಗಿರಬೇಕೆ?

ಮೊದಲನೆಯ ಅಂಶದ ಬಗ್ಗೆ, ಸ್ತ್ರೀಯರಿಗೆ ಪುರುಷರ ಸಂಘಕ್ಕಿಂತ ಪ್ರತ್ಯೇಕವಾದ ಸಂಘವನ್ನು ಸ್ಥಾಪಿಸುವುದಕ್ಕೆ ಪರ್ಯಾಯವು ಸಾಧ್ಯವಿಲ್ಲ ಎಂಬುದು ನಿಶ್ಚಯವಾಗಿತ್ತು. ಇದು ಸ್ತ್ರೀ ಪುರುಷರಿಬ್ಬರಿಗೂ ಅನ್ವಯವಾಗುವ ಬ್ರಹ್ಮಚರ್ಯದ ನಿಯಮದಿಂದಾಗಿ ಅನಿವಾರ್ಯವಾದ ನಿರ್ಧಾರವಾಗಿತ್ತು. ಸ್ತ್ರೀ ಪುರುಷರ ಜೀವನದಲ್ಲಿ ಕಾಮವು ಎಂತಹ ಪ್ರಬಲವಾದ ಸೆಳೆತವೆಂಬುದನ್ನು ಬುದ್ಧನು ಅರಿತಿದ್ದ. ಅವನ ಮಾತಿನಲ್ಲಿಯೇ ಹೇಳುವುದಾದರೆ ಕಾಮದ ಪ್ರವೃತ್ತಿಯು ಗಂಡಸನ್ನು ಹೆಂಗಸಿನ ದಾಸನನ್ನಾಗಿ ಮತ್ತು ಹೆಂಗಸನ್ನು ಗಂಡಸಿನ ದಾಸಿಯನ್ನಾಗಿ ಮಾಡುತ್ತದೆ. ಈ ಪ್ರವೃತ್ತಿಗೆ ಮುಕ್ತ ಸ್ವಾತಂತ್ರ್ಯವನ್ನು ಕೊಟ್ಟರೆ ಬ್ರಹ್ಮಚರ್ಯದ ನಿಯಮವು ಒಂದು ನಿಮಿಷವೂ ಬಾಳುವುದಿಲ್ಲ. ಬ್ರಹ್ಮಚರ್ಯವನ್ನು ಕಾಪಾಡುವುದಕ್ಕಾಗಿ ಅವನು ಎರಡು ಸಂಘಗಳನ್ನು ಮಾಡಬೇಕಾಯಿತು.

ಪ್ರಶ್ನೆಯ ಎರಡನೆಯ ಅಂಶವನ್ನು ಗಮನಿಸಿದರೆ, ಬುದ್ಧನು ತೆಗೆದುಕೊಂಡ ನಿರ್ಧಾರಕ್ಕಿಂತ ಬೇರೆಯಾದ ನಿರ್ಧಾರವನ್ನು ತೆಗೆದುಕೊಳ್ಳುವುದು ಸಾಧ್ಯವಿತ್ತೇ? ಅವನ ಧರ್ಮಕ್ಕೆ ಸೇರಿದ ಸ್ತ್ರೀಯರು ಅನುಭವವಿಲ್ಲದವರಾಗಿದ್ದರು. ಅವರಿಗೆ ಬೌದ್ಧತತ್ತ್ವಗಳ ಬಗ್ಗೆ ಉಪದೇಶವನ್ನು ನೀಡಬೇಕಾಗಿತ್ತು ಮತ್ತು ಅವರಿಗೆ ತನ್ನ ಕಾರ್ಯನೀತಿಗೆ ಅನುಗುಣವಾಗಿ ತರಬೇತಿಯನ್ನು ನೀಡಬೇಕಾಗಿತ್ತು. ಈ ಕೆಲಸವನ್ನು ಮಾಡಬೇಕಾಗಿದ್ದವರು ಯಾರು? ಬೇರಾರಿಗೆ ಈ ಕರ್ತವ್ಯವನ್ನು ವಹಿಸಬಹುದಿತ್ತು? ಅದು ಭಿಕ್ಕುಗಳಲ್ಲದೆ ಬೇರೆ ಯಾರು ಆಗಿರುವುದು ಸಾಧ್ಯವಿರಲಿಲ್ಲ. ಏಕೆಂದರೆ, ಭಿಕ್ಕುಗಳು ಈ ದಿಕ್ಕಿನಲ್ಲಿ ಅವನಿಂದ ಸಾಕಷ್ಟು ತರಬೇತಿಯನ್ನು ಪಡೆದಿದ್ದರು. ಹಾಗಾಗಿ ಅವನು ಅವರಿಗೆ ಈ ಕೆಲಸವನ್ನು ವಹಿಸಿದ. ಭಿಕ್ಕುಗಳಿಗೆ ಈ ಕರ್ತವ್ಯವನ್ನು ನಿಗದಿಗೊಳಿಸಿದ ಮೇಲೆ, ಭಿಕ್ಕುಗಳ ಮತ್ತು ಭಿಕ್ಕುಣಿಯರ ನಡುವಿನ ಸಂಬಂಧ ಯಾವ ರೀತಿಯದಿರಬೇಕು ಎಂಬುದು ಆವಶ್ಯಕವಾಗಿ ಎತ್ತಲೇಬೇಕಾದ ಪ್ರಶ್ನೆ. ಇದಿಲ್ಲದಿದ್ದರೆ, ಭಿಕ್ಕುಣಿಯರ ಸಂಘವು ಭಿಕ್ಕುಗಳ ಸಂಘಕ್ಕೆ ಅಧೀನವಾಗಿರಬೇಕು ಎಂಬುದಕ್ಕೆ ಯಾವ ಸಮರ್ಥನೆಯೂ ದೊರೆಯದು.

ತರಬೇತಿಗಾಗಿ ಭಿಕ್ಕುಣಿಯರನ್ನು ಭಿಕ್ಕುಗಳಿಗೆ ಒಪ್ಪಿಸಿದ ಮೇಲೆ ಅವರ ನಡುವಿನ ಸಂಬಂಧವು ಗುರು–ಶಿಷ್ಯೆಯರ ಸಂಬಂಧವಾಗುತ್ತದೆ. ಗುರು–ಶಿಷ್ಯರ ಸಂಬಂಧವೆಂದರೆ, ಗುರುವಿಗೆ ಶಿಷ್ಯರ ಮೇಲೆ ಅಧಿಕಾರವೂ, ಶಿಷ್ಯರು ಗುರುವಿಗೆ ವಿಧೇಯವಾಗಿರುವ ಮತ್ತು ಅಧೀನವಾಗಿರುವ ಪರಿಸ್ಥಿತಿಯೂ ಅನಿವಾರ್ಯವಾಗಿ ಉಂಟಾಗುವುದು ಸಹಜವಲ್ಲವೇ? ಇದಕ್ಕಿಂತ ಘೋರವಾದದ್ದೇನನ್ನು ಬುದ್ಧ ಮಾಡಿದ?

ಇದಕ್ಕೆ ಸಂಬಂಧಿಸಿದಂತೆ, ಕ್ರೈಸ್ತರ ಸಂನ್ಯಾಸಿಗಳ ಮತ್ತು ಸಂನ್ಯಾಸಿನಿಯರ ಮಠಗಳಿಗಿರುವ ಸಂಬಂಧವನ್ನು ಹೋಲಿಸುವುದು ಸಂಗತವಾಗುತ್ತದೆ. ಸಂನ್ಯಾಸಿನಿಯರು ಸಂನ್ಯಾಸಿಗಳಿಗೆ ಅಧೀನರಾಗಿರುವುದಿಲ್ಲವೇ? ಹಾಗಿರುವುದರಲ್ಲಿ ಸಂಶಯವೇನೂ ಇಲ್ಲ (ಕ್ಯಾಥೊಲಿಕ್ ವಿಶ್ವಕೋಶದ ಸಂಪುಟ ೧೧ರ ೧೬೪ನೇ ಪುಟದಲ್ಲಿರುವ 'ಸಂನ್ಯಾಸಿನಿಯರು' ಎಂಬ ಲೇಖನವನ್ನು ನೋಡಿ). ಇದರಿಂದ ಕ್ರಿಶ್ಚಿನ್ ಧರ್ಮದಲ್ಲಿ ಪುರುಷರಿಗಿಂತ ಹೆಂಗಸರನ್ನು ಕೀಳು ಎಂದು ಪರಿಗಣಿಸುತ್ತಾರೆಂದು ಯಾರಾದರೂ ಹೇಳಬಹುದೇ? ಹಾಗಿಲ್ಲದಿದ್ದರೆ, ಬುದ್ಧನು ಭಿಕ್ಕುಗಳಿಗೆ ಮತ್ತು ಭಿಕ್ಕುಣಿಗಳಿಗೆ ಮಾಡಿದ ಪ್ರತ್ಯೇಕ ವ್ಯವಸ್ಥೆಯನ್ನು ಬೇರೆಯ ಮಾನದಿಂದೇಕೆ ಅಳೆಯಬೇಕು?

ಸುತ್ತಪಿಟಕವು ಸಂಬಂಧಿಸಿದ ಹಾಗೆ ಹೇಳುವುದಾದರೆ, ಬುದ್ಧನು ಸ್ತ್ರೀಯರ ವಿಷಯದಲ್ಲಿ ಪೂರ್ವಗ್ರಹಪೀಡಿತನಾಗಿದ್ದನೆಂಬುದಕ್ಕೆ ಮತ್ತು ಅವನು ಭಿಕ್ಕುಣಿಯರ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕೆಂದು ಭಿಕ್ಕುಗಳನ್ನು ಬುದ್ಧಿಹೇಳುತ್ತಿದ್ದನೆಂಬುದಕ್ಕೆ ಯಾವ ಆಧಾರವೂ ಇಲ್ಲ.

೨

ಸ್ತ್ರೀಯರ ಬಗೆಗೆ ಬುದ್ಧನ ನಿಲುವೇನು ಎಂಬ ವಿಷಯದಲ್ಲಿ, ಕೆಲವು ನಿರ್ದಿಷ್ಟ ಪ್ರಸಂಗಗಳನ್ನು ಬಿಟ್ಟು, ಸಾಮಾನ್ಯವಾಗಿ ಆತನ ನಿಲುವು ಏನಾಗಿತ್ತು ಎಂಬುದನ್ನು ನೋಡೋಣ. ಬುದ್ಧನು ಸ್ತ್ರೀಯರನ್ನು ಕೀಳಾಗಿ ಕಾಣುತ್ತಿದ್ದನೇ? ಬೌದ್ಧಧರ್ಮದ ಸಾಹಿತ್ಯವನ್ನು ಓದಿದ ಯಾರಿಗಾದರೂ, ಬುದ್ಧನು ಸ್ತ್ರೀಯರನ್ನು ಕೀಳಾಗಿ ಕಾಣುವುದರ ಬದಲಿಗೆ, ಯಾವಾಗಲೂ ಅವರನ್ನು ಗೌರವಪೂರ್ಣವಾಗಿ ನೋಡಿ ಅವರ ಉದ್ಧಾರವನ್ನು ಮಾಡಲು ಪ್ರಯತ್ನಿಸುತ್ತಿದ್ದ ಎಂಬುದರ ಬಗ್ಗೆ ಮನವರಿಕೆಯಾಗುತ್ತದೆ. ಈ ದೃಷ್ಟಿಯನ್ನು ಸಮರ್ಥಿಸುವ ಕೆಲವು ನಿದರ್ಶನಗಳನ್ನು ಈಗ ಕೊಡುತ್ತಿದ್ದೇನೆ.

ಸಾಮಾನ್ಯವಾಗಿ, ಪ್ರಾಚೀನ ಕಾಲದಿಂದಲೂ ಹೆಣ್ಣುಮಕ್ಕಳು ಹುಟ್ಟಿದರೆ ಅದನ್ನೊಂದು ಘೋರ ವಿಪತ್ತು ಎಂಬಂತೆ ಭಾರತದಲ್ಲಿ ಜನರು ಭಾವಿಸುತ್ತಿದ್ದಾರೆ. ಬುದ್ಧನಲ್ಲಿಯೂ ಇಂತಹ ಭಾವನೆಯು ಇತ್ತೇ? ಈ ವಿಷಯದಲ್ಲಿ ಪರಂಪರಾಗತವಾಗಿ ಬಂದಿರುವ ಅಭಿಪ್ರಾಯಕ್ಕೆ ವಿರುದ್ಧವಾಗಿತ್ತು ಬುದ್ಧನ ನಿಲುವು ಎಂಬುದನ್ನು ಪ್ರಸೇನಜಿತ ರಾಜನಿಗೆ ಅವನು ನೀಡಿದ ಉಪದೇಶದ ಮೂಲಕ ತೋರಿಸಬಹುದು. ಒಮ್ಮೆ ಪ್ರಸೇನಜಿತ ರಾಜನು ಬುದ್ಧನನ್ನು ಭೇಟಿಯಾಗಲು ಶ್ರಾವಸ್ಥಿಯ ಜೇತ ಉದ್ಯಾನವನಕ್ಕೆ ಬಂದ. ರಾಜದೂತನೊಬ್ಬ ಬಂದು ರಾಜನಿಗೆ ರಾಣಿ ಮಲ್ಲಿಕಾ ಹೆಣ್ಣುಮಗುವೊಂದಕ್ಕೆ ಜನ್ಮವಿತ್ತಳೆಂದು ತಿಳಿಸುತ್ತಾನೆ. ಈ ಮಾತನ್ನು ಕೇಳಿ ರಾಜ ಕಳೆಗುಂದಿ, ವಿಷಾದಪರನಾಗುತ್ತಾನೆ. ಅವನ ಮುಖದಲ್ಲಿ ಆದ ಬದಲಾವಣೆಯನ್ನು ಗಮನಿಸಿದ ಬುದ್ಧನು ಅದರ ಕಾರಣವನ್ನು ಕೇಳುತ್ತಾನೆ. ಅವನಿಂದ ಅದರ ಕಾರಣವನ್ನು ತಿಳಿದು ಬುದ್ಧ ಹೇಳುತ್ತಾನೆ (ಸಂಯುತ್ತ ನಿಕಾಯ – ಸಂ. ೧, ಪು. ೧೧೦) "ರಾಜ, ಹೆಣ್ಣುಮಗುವೆಂದು ವಿಷಾದಪಡುವುದೇಕೆ? ಆ ಹೆಣ್ಣುಮಗು ವಿವೇಕಯುತಳಾಗಿ ಮತ್ತು ಗುಣಸಂಪನ್ನೆಯಾಗಿ ಬೆಳೆಯುತ್ತಾಳೆ. ಅವಳು ಜನ್ಮಕೊಡುವ ಮಗನು ದೊಡ್ಡ ಕಾರ್ಯಗಳನ್ನು ಮಾಡಿ ದೊಡ್ಡ ಸಾಮ್ರಾಜ್ಯವನ್ನು ಆಳುತ್ತಾನೆ...".

ಕೆಲವು ಸಂಸಾರಗಳು ಉನ್ನತಿಯತ್ತ ನಡೆದರೆ ಕೆಲವೊಂದು ಸಂಸಾರಗಳು ಅವನತಿಯತ್ತ ಏಕೆ

ಜಾರುತ್ತವೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಬುದ್ಧನು ಭಿಕ್ಕುಗಳಿಗೆ ಈ ರೀತಿಯಾಗಿ ಹೇಳುತ್ತಾನೆ ಎಂಬ ಅಂಶ ದೊರೆಯುತ್ತದೆ (ಅಂಗುತ್ತರ ನಿಕಾಯ – ಸಂ. ೨, ಪು. ೨೫೪–೨೫೫) –

"ಭಿಕ್ಕುಗಳೇ, ಉನ್ನತಿಯನ್ನು ಹೊಂದಿದ ಕೆಲ ಸಂಸಾರಗಳು ಹೆಚ್ಚುಕಾಲ ತಮ್ಮ ಸ್ಥಿತಿಯನ್ನು ಕಾಪಾಡಿಕೊಂಡು ಹೋಗಲು ವಿಫಲವಾಗುವದಕ್ಕೆ ಕಾರಣ ಕಳೆದುಕೊಂಡುದಕ್ಕೆ ಅವರು ಚಿಂತಿಸುವುದಿಲ್ಲ, ಕೆಟ್ಟುಹೋದುದನ್ನು ಸರಿಪಡಿಸಲು ಪ್ರಯತ್ನಿಸುವುದಿಲ್ಲ, ಮಿತಿಮೀರಿ ತಿಂದು ಕುಡಿಯುತ್ತಾರೆ, ಅವರು ಒಬ್ಬ ಅನೈತಿಕ ಹೆಂಗುಸಿನ ಅಥವಾ ಗಂಡಸಿನ ಕೈಗೆ ಎಲ್ಲಾ ಅಧಿಕಾರವನ್ನೂ ಕೊಡುತ್ತಾರೆ. ಈ ನಾಲ್ಕು ಕಾರಣಗಳಿಂದಾಗಿ, ಅಥವಾ ಅವುಗಳಲ್ಲಿ ಒಂದಲ್ಲ ಒಂದು ಕಾರಣಕ್ಕಾಗಿ ಪತನದ ಹಾದಿಯನ್ನು ಆ ಸಂಸಾರಗಳು ಹಿಡಿಯುತ್ತವೆ.

ಭಿಕ್ಕುಗಳೇ, ಉನ್ನತಿಯನ್ನು ಹೊಂದಿ ತಮ್ಮ ಔನ್ನತ್ಯವನ್ನು ಕಾಪಾಡಿಕೊಂಡು ಹೋಗುವ ಸಂಸಾರಗಳು, ಕಳೆದುಕೊಂಡುದನ್ನು ಪಡೆಯಲು ಪ್ರಯತ್ನಿಸುತ್ತಾರೆ, ಕೆಟ್ಟುಹೋದುದನ್ನು ಸರಿಪಡಿಸುತ್ತಾರೆ, ತಿನ್ನುವುದರಲ್ಲಿ ಮತ್ತು ಕುಡಿಯುವುದರಲ್ಲಿ ಸಂಯಮವನ್ನು ಹೊಂದಿರುತ್ತಾರೆ ಮತ್ತು ನೈತಿಕತೆಯನ್ನು ಹೊಂದಿರುವ ಸ್ತ್ರೀ ಅಥವಾ ಪುರುಷನ ಕೈಯಲ್ಲಿ ಅಧಿಕಾರವನ್ನು ಕೊಟ್ಟಿರುತ್ತಾರೆ. ಈ ನಾಲ್ಕು ಕಾರಣಗಳಿಂದಾಗಿ, ಅಥವಾ ಇವುಗಳಲ್ಲಿ ಒಂದಲ್ಲ ಒಂದು ಕಾರಣದಿಂದಾಗಿ ತಮ್ಮ ಔನ್ನತ್ಯವನ್ನು ಕಾಪಾಡಿಕೊಂಡು ಹೋಗುತ್ತಾರೆ"

ಭಿಕ್ಕುಗಳಿಗೆ ಚಕ್ರವರ್ತಿಯಾಗುವವನು ಬರುವಾಗ ಏನಾಗುತ್ತದೆ ಎಂದು ಬುದ್ಧನು ಹೀಗೆ ಹೇಳಿದನೆಂದು ತಿಳಿಸಲಾಗಿದೆ (ಅಂಗುತ್ತರಾ ನಿಕಾಯ, ಸಂ. ೫, ಪು. ೮೩)

"ಅಂತಹ ಚಕ್ರವರ್ತಿಯು ಉದಯವಾದಾಗ ಸಪ್ತ ಸಂಪತ್ತುಗಳು ಕಾಣಿಸಿಕೊಳ್ಳುತ್ತವೆ, ಅವುಗಳು – ಸಂಪತ್ತಿನ ಚಕ್ರ, ಆನೆ, ಕುದುರೆ, ಆಭರಣಗಳು, ಸ್ತ್ರೀ, ಮನೆಯೊಡೆಯ ಮತ್ತು ವಾರಸುದಾರನಾಗುವ ಮಗ".

ಮತ್ತೊಂದು ಪ್ರಸಂಗದಲ್ಲಿ ಸ್ತ್ರೀಯರ ಮಹತ್ವದ ಬಗ್ಗೆ ಮಾತನಾಡುತ್ತಾ ಬುದ್ಧ ಹೀಗೆ ಹೇಳಿದ (ಸಂಯುತ್ತ ನಿಕಾಯ ಸಂ. ೧, ಪು. ೬೨) – "ಸ್ತ್ರೀ ಅತ್ಯಂತ ಮೌಲ್ಯಯುತವಾದವಳು (ಟೀಕಾಕಾರನು ಮುಂದಕ್ಕೆ ಸೇರಿಸಿದಹಾಗೆ) ಕಾರಣ, ಅವಳು ಅತ್ಯಗತ್ಯವಾದವಳು, ಏಕೆಂದರೆ, ಬೋಧಿಸತ್ತ್ವನಂತಹವರಿಗೆ ಮತ್ತು ಚಕ್ರವರ್ತಿಗಳಿಗೆ ಜನ್ಮಕೊಡುತ್ತಾಳೆ".

ಹೆಣ್ಣುಮಗುವಿನ ಜನನದ ಪ್ರಸಂಗವು ದುಃಖದಾಯಕವಲ್ಲ, ಬದಲಿಗೆ ಸಂತೋಷದಾಯಕವೆಂದವನು, ಸಂಸಾರದ ಅಧಿಕಾರಗಳನ್ನು ಸ್ತ್ರೀಯ ಕೈಗೆ ಕೊಟ್ಟರೆ ಸಂಸಾರದ ಉದ್ಧಾರವಾಗುತ್ತದೆ ಎಂದವನು, ಸ್ತ್ರೀಯನ್ನು ಸಪ್ತ ಸಂಪತ್ತಿನಲ್ಲಿ ಒಂದು ಎಂದು ಬಣ್ಣಿಸಿದವನು, ಸ್ತ್ರೀಯು ಅತ್ಯಂತ ಮೌಲ್ಯಯುತಳಾದವಳು ಎಂದವನು, ಸ್ತ್ರೀಯ ದ್ವೇಷಿಯಾಗುವುದು ಹೇಗೆ ಸಾಧ್ಯ? ಮೇಲೆ ಹೇಳಿರುವಂತಹವುಗಳು ಬುದ್ಧನು ಸಾಮಾನ್ಯವಾಗಿ ಸ್ತ್ರೀಯರ ಬಗ್ಗೆ ಇದ್ದ ಭಾವನೆಗಳು. ಈ ಭಾವನೆಗಳು ಸ್ತ್ರೀಯರನ್ನು ಹೀಗಳೆಯುವಂತಹವುಗಳು, ಅಪಹಾಸ್ಯಮಾಡುವಂತಹವುಗಳು ಎಂದು ಯಾರಾದರೂ ಹೇಳುವುದು ಸಾಧ್ಯವೇ?

## ೩

ಭಿಕ್ಕುಣಿಯರನ್ನು ಭಿಕ್ಕುಗಳ ಅಧೀನಕ್ಕೆ ಒಳಪಡಿಸಿದುದನ್ನು ಬುದ್ಧನು ಮಾಡಿದ ತಪ್ಪು ಎಂದು ಟೀಕಿಸುವವರು, ಸ್ತ್ರೀಯರಿಗೆ ಸಂನ್ಯಾಸ ಸ್ವೀಕರಿಸಲು ಬುದ್ಧನು ಅನುಮತಿ ನೀಡಿದುದು ಎಂತಹ ಕ್ರಾಂತಿಕಾರಿ ವಿಷಯವೆಂಬುದನ್ನು ಅರ್ಥಮಾಡಿಕೊಳ್ಳುವುದಿಲ್ಲ. ಬ್ರಾಹ್ಮಣರ ಮತದಂತೆ, ಸ್ತ್ರೀಯರು ಜ್ಞಾನಸಂಪಾದನೆಯ

ಮಾರ್ಗದಿಂದ ವಂಚಿತರಾಗಿದ್ದರು. ಸಂನ್ಯಾಸದ ಪ್ರಶ್ನೆ ಎದುರಾದಾಗ ಅವರು ಸ್ತ್ರೀಯರಿಗೆ ಮತ್ತೊಂದು ಅನ್ಯಾಯವನ್ನು ಮಾಡಿದರು. ಚರಿತ್ರೆಯ ಪ್ರಕಾರ ಸಂನ್ಯಾಸತ್ವವು ವೇದಾರಾಧಕರಾಗಿದ್ದ ಬ್ರಾಹ್ಮಣರಿಗೆ ಆದರ್ಶಪ್ರಾಯವಾದುದೇನೂ ಆಗಿರಲಿಲ್ಲ. ಅವರು ಉಪನಿಷತ್ತುಗಳನ್ನು ಗೌರವಿಸಲು ಬಹಳ ಕಾಲದವರೆಗೆ ನಿರಾಕರಿಸಿದ್ದರು. ಸಂನ್ಯಾಸಾಶ್ರಮವು ಉಪನಿಷತ್ತುಗಳ ಆದರ್ಶ ಮತ್ತು ಉಪನಿಷತ್ತುಗಳ ಅಂತಿಮ ಗುರಿ ಎಂದರೆ ಸಂನ್ಯಾಶ್ರಮದ ಕೊನೆಯಲ್ಲಿ ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವುದು. ಬ್ರಾಹ್ಮಣರು ಸಂನ್ಯಾಸತ್ವದ ಕಟ್ಟಾ ವಿರೋಧಿಗಳಾಗಿದ್ದರು. ಕೊನೆಗೆ ಅವರು, ಕೆಲವು ಕರಾರುಗಳನ್ನು ಹಾಕಿ ಸಂನ್ಯಾಸಜೀವನವನ್ನು ಒಪ್ಪಿಕೊಂಡರು. ಆ ಕರಾರುಗಳಲ್ಲಿ ಒಂದು ಎಂದರೆ, ಸ್ತ್ರೀಯರಿಗೆ (ಮತ್ತು ಶೂದ್ರರಿಗೆ) ಸಂನ್ಯಾಸಾಶ್ರಮವನ್ನು ಪಡೆಯುವ ಅಧಿಕಾರವಿರಬಾರದು ಎಂಬುದು.

ಬ್ರಾಹ್ಮಣರು ಸ್ತ್ರೀಯರಿಗೆ ಸಂನ್ಯಾಸಾಶ್ರಮವನ್ನು ನಿರಾಕರಿಸಿದ್ದರ ಕಾರಣವನ್ನು ತಿಳಿದುಕೊಳ್ಳುವುದು ಅತ್ಯಂತ ಮುಖ್ಯವಾದುದು. ಇದರಿಂದ ಸ್ತ್ರೀಯರ ವಿಷಯದಲ್ಲಿ ಅವರ ನಿಲುವು ಏನಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅವರ ನಿಲುವು ಬುದ್ಧನು ಸ್ತ್ರೀಯರ ಬಗ್ಗೆ ಹೊಂದಿದ್ದ ನಿಲುವಿಗೆ ತದ್ವಿರುದ್ಧವಾಗಿತ್ತು. ಈ ನಿಲುವನ್ನು ಮನುವು ವರ್ಣಿಸುತ್ತಾನೆ –

"೯–೧೮: ಸ್ತ್ರೀಯರಿಗೆ ವೇದಾಭ್ಯಾಸದ ಅಧಿಕಾರವಿಲ್ಲ. ಈ ಕಾರಣಕ್ಕಾಗಿಯೇ ಅವರಿಗೆ ಮಾಡುವ ಸಂಸ್ಕಾರಗಳಲ್ಲಿ ವೇದಮಂತ್ರಗಳನ್ನು ಉಪಯೋಗಿಸುವ ಹಾಗಿಲ್ಲ. ಅವರಿಗೆ ವೇದವನ್ನು ಅಭ್ಯಾಸಮಾಡುವ ಅಧಿಕಾರವಿಲ್ಲವಾದ್ದರಿಂದ ಅವರಿಗೆ ಧರ್ಮದ ಬಗ್ಗೆ ಯಾವ ವಿಷಯವೂ ತಿಳಿದಿರುವುದಿಲ್ಲ. ವೇದಮಂತ್ರೋಚ್ಚಾರಣೆಯಿಂದ ಪಾಪಗಳು ನಾಶವಾಗುತ್ತವೆ. ಈ ಅಧಿಕಾರವು ಸ್ತ್ರೀಯರಿಗೆ ಇಲ್ಲವಾಗಿರುವುದರಿಂದ ಅವರು ಅಜ್ಞಾನದ ಮೂಟೆಯಾಗಿರುತ್ತಾರೆ".

ಮನುವು ಬುದ್ಧನಿಗಿಂತ ಈಚಿನವನಾದರೂ, ಅವನು ಪ್ರಾಚೀನ ಧರ್ಮಶಾಸ್ತ್ರಗಳನ್ನೇ ಪ್ರತಿಪಾದಿಸಿದ. ಸ್ತ್ರೀಯರ ವಿಷಯದಲ್ಲಿನ ಈ ದೃಷ್ಟಿಯು, ಸ್ತ್ರೀಯರನ್ನು ಕುರಿತು ಮಾಡುವ ಅವಹೇಳನ ಮತ್ತು ಭಾರತದ ಸ್ತ್ರೀಯರಿಗೆ ಮಾಡುವ ಅಪಚಾರ. ಅಪಚಾರವೇಕೆಂದರೆ, ಎಲ್ಲಾ ವ್ಯಕ್ತಿಗಳಿಗೂ ಜನ್ಮಸಿದ್ಧ ಹಕ್ಕಾಗಿರುವ ಜ್ಞಾನಸಂಪಾದನೆಗೆ ಆಕೆ ಎರವಾದಳು. ಅವಹೇಳನವೇಕೆಂದರೆ, ಅವಳಿಗೆ ಜ್ಞಾನಸಂಪಾದನೆಯ ಮಾರ್ಗಗಳನ್ನು ಮುಚ್ಚಿ ಅವಳನ್ನು ಶ್ವಪಚಳೆಂದು, ಅಜ್ಞಾನಿಯೆಂದು ನಿರ್ಣಯಿಸಿ, ಅವಳಿಗೆ ಬ್ರಹ್ಮತತ್ತ್ವವನ್ನು ಅರಿಯುವ ದಾರಿಯಾದ ಸಂನ್ಯಾಸಜೀವನದ ಅವಕಾಶವನ್ನು ನಿರಾಕರಿಸಿದರು. ಬ್ರಾಹ್ಮಣರು ಅವಳಲ್ಲಿ ಆಧ್ಯಾತ್ಮಿಕ ಸೆಲೆಯೇ ಇಲ್ಲವೆಂದು ತೀರ್ಮಾನಿಸಿ, ಅವಳನ್ನು ಆಧ್ಯಾತ್ಮಿಕ ಬಂಜೆಯನ್ನಾಗಿಸಿದರು.

ಇದು ಸ್ತ್ರೀಯರ ಮೇಲೆ ಎಸಗಿದ ಘೋರ ಅನ್ಯಾಯ. ಇದಕ್ಕೆ ಸಮನಾದುದು ಬೇರೆಯಾವುದೂ ಇಲ್ಲ. ಪ್ರೊ. ಮ್ಯಾಕ್ಸ್ ಮುಲ್ಲರ್ ಅವರು ಹೇಳಿದ ಹಾಗೆ (ಧರ್ಮದ ಮೇಲಿನ ಹಿಬ್ಬರ್ಟ್ ಅವರ ಉಪನ್ಯಾಸಗಳು – ಪು. ೩೭೯) "ದೈವತ್ವದಿಂದ ಮಾನವನು ಎಷ್ಟೇ ದೂರವಿದ್ದರೂ, ಭಗವಂತನಿಗೆ ಪುರುಷನಿಗಿಂತ ಹತ್ತಿರವಾದದ್ದು ಯಾವುದೂ ಇಲ್ಲ. ಈ ಭೂಮಿಯ ಮೇಲೆ ಪುರುಷನಿಗಿಂತ ದೈವಸ್ವರೂಪಿಯಾದದ್ದು ಯಾವುದೂ ಇಲ್ಲ". ಇದು ಪುರುಷನ ವಿಷಯದಲ್ಲಿ ನಿಜವಾದರೆ, ಸ್ತ್ರೀಯರ ವಿಷಯದಲ್ಲಿ ಸತ್ಯವೇಕಾಗಬಾರದು? ಇದಕ್ಕೆ ಬ್ರಾಹ್ಮಣರಿಂದ ಉತ್ತರವಿಲ್ಲ.

ಸ್ತ್ರೀಯರಿಗೆ ಪರಿವ್ರಾಜಕಿಯರಾಗುವ ಅವಕಾಶವನ್ನು ನೀಡಿ ಬುದ್ಧನು ಇವೆರಡು ಅನ್ಯಾಯಗಳನ್ನೂ ಒಮ್ಮೆಗೇ ನಿವಾರಿಸಿದ. ಪುರುಷರಿಗೆ ಇರುವಂತೆ ಅವರಿಗೂ ಜ್ಞಾನಸಂಪಾದನೆಯ ಹಕ್ಕನ್ನು ಮತ್ತು ತಮ್ಮಲ್ಲಿರುವ ಆಧ್ಯಾತ್ಮಿಕ ಜ್ಯೋತಿಯನ್ನು ಬೆಳಗಿಸಿಕೊಳ್ಳುವ ಹಕ್ಕನ್ನು ನೀಡಿದ. ಈ ಕ್ರಮವು ಭಾರತದಲ್ಲಿ

ಒಂದು ಕ್ರಾಂತಿಕಾರಿಯಾಗಿತ್ತು ಮತ್ತು ಸ್ತ್ರೀಯರನ್ನು ಶೋಷಣೆಯಿಂದ ಮುಕ್ತರನ್ನಾಗಿಸುವತ್ತ ಇಟ್ಟ ದಿಟ್ಟ ಹೆಜ್ಜೆಯಾಗಿತ್ತು. ಪ್ರೊ. ಮ್ಯಾಕ್ಸ್ ಮುಲ್ಲರ್ ಅವರ ಮಾತುಗಳಲ್ಲಿ –

"ಪ್ರಾಚೀನ ಬ್ರಾಹ್ಮಣರಿಂದಾಗಿ ಅಪಮಾನಕಾರಕವಾದ ಜೀವನವನ್ನು ನಡೆಸುತ್ತಿದ್ದವರ ಕೈಕೋಳಗಳನ್ನು ಕೊನೆಗೂ ಕಿತ್ತುಹಾಕಲಾಯಿತು ಎಂಬುದನ್ನು ಭಾರತದ ಚರಿತ್ರೆಯು ನಮಗೆ ತಿಳಿಸುತ್ತದೆ. ಇದಕ್ಕೆ ಕಾರಣ ಬೌದ್ಧಧರ್ಮವು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕಾದ ಸಮಾಜದ ಅಡೆತಡೆಗಳನ್ನು ಮೀರಿಬೆಳೆಯುವ ಹಕ್ಕು, ಸ್ವಾತಂತ್ರ್ಯದ ಬಯಕೆ ಚಿಗುರಿದಾಗ, ಆಧ್ಯಾತ್ಮಿಕ ಗುರಿಯನ್ನು ಅನುಸರಿಸಿ ಕಾಡಿಗೆ ಹೋಗುವ ಹಕ್ಕು, ಮತ್ತು ಕಾಡಿನಲ್ಲಿ ಪರಿಪೂರ್ಣ ಆಧ್ಯಾತ್ಮಿಕ ಜೀವನವನ್ನು ನಡೆಸುವ ಹಕ್ಕು –ಇವುಗಳನ್ನು ಎಲ್ಲರಿಗೂ ನೀಡಿತು."

ಭಿಕ್ಕುಣಿಯರನ್ನು ಭಿಕ್ಕುಗಳ ಸಂಘಕ್ಕೆ ಅಧೀನರನ್ನಾಗಿಸಿದನೆಂದು ಮಾಡುವ ಆಪಾದನೆಗಳನ್ನು ಬುದ್ಧನು ಭಾರತದ ಸ್ತ್ರೀಯರಿಗೆ ನೀಡಿದ ಸ್ವಾತಂತ್ರ್ಯದ ಮಹತ್ವವು ನುಂಗಿಹಾಕಿ ಇಲ್ಲವಾಗಿಸಿತು. ಇದು ಕೇವಲ ಬಾಯಿಮಾತಿನ ಸ್ವಾತಂತ್ರ್ಯವಾಗಿರಲಿಲ್ಲ. ಬ್ರಾಹ್ಮಣ ಹುಡುಗಿ ಮುತ್ತಳು ಭಿಕ್ಕುಣಿಯಾಗಿ (ಸೋದರಿಯರ ಗೀತೆಗಳು – ಸಂಖ್ಯೆ ೧೧) ಈ ಸ್ವಾತಂತ್ರ್ಯದ ಸವಿಯನ್ನು ಸವಿಯುತ್ತಾ ಹಾಡಿದ ಆನಂದದಲ್ಲಿ ಅವಳೂ ಭಿಕ್ಕುಣಿಯಾಗಿ ಹಾಡುತ್ತಾಳೆ, "ಇಲ್ಲಿರುವೆ ನೋಡಿ, ನಾ, ಬಂಡೆಯೊಂದರ ಮೇಲೆ ಕುಳಿತು, ಸ್ವಾತಂತ್ರ್ಯದ ಗಾಳಿಯನು ಸ್ವಚ್ಛಂದ ಹೀರುತ್ತಾ" (ಸೋದರಿಯರ ಗೀತೆಗಳು, – ಸಂಖ್ಯೆ ೨೪)"

ಶ್ರೀಮತಿ ರೈಸ್ ಡಾವಿಡ್ಸ್ ಹೇಳುತ್ತಾರೆ (ಥೇರೀಗಾಥದ ಮುನ್ನುಡಿಯಲ್ಲಿ) " ಮುಂದೆ ತನ್ನ ಕ್ರಿಶ್ಚಿಯನ್ ಸೋದರಿಯರು ಪಡೆದ ಚಲನಶೀಲ ಸ್ವಾತಂತ್ರ್ಯವನ್ನು ಪಡೆಯಲು ಆಕೆ ತನ್ನ ಸಾಮಾಜಿಕ ಸ್ಥಾನಮಾನಗಳನ್ನು, ಕೌಟುಂಬಿಕ ಸ್ಥಾನಗಳನ್ನು ತ್ಯಜಿಸಬೇಕಾಯಿತು, ಅವಳು ತನ್ನ ಪಾಲಿನ ಪ್ರಪಂಚವನ್ನೇ ಕಳೆದುಕೊಂಡಿದ್ದಳು. ಇದರಿಂದ, ಎಷ್ಟೇ ಹೊಗಳಿ ಆಕಾಶಕ್ಕೇರಿಸಿದ್ದರೂ, ತನಗಿದ್ದ ಗೌಣ, ಅಪ್ರಧಾನ ಜೀವನದ ಬದಲಿಗೆ, ರಕ್ಷಣೆಯ ಹೆಸರಿನಲ್ಲಿ ನಡೆಸುತ್ತಿದ್ದ ಪರಾಶ್ರಯದ ಜೀವನದ ಬದಲಿಗೆ, ಅವಳು ತಾನೂ ವೈಯಕ್ತಿಕ ಜೀವನಕ್ಕೆ ಅರ್ಹಳಾದ ಒಬ್ಬಳು ವ್ಯಕ್ತಿಯೆಂಬ ಸ್ಥಾನವನ್ನು ಪಡೆದಳು. ಪುರುಷ ಸಂನ್ಯಾಸಿಗಳಂತೆಯೇ, ಅವಳೂ ಉಡುಪುಗಳನ್ನು ಧರಿಸಿ, ಇಳಿವಸ್ತ್ರಗಳನ್ನು ಧರಿಸಿ ಓಡಾಡುವ, ಕಾಡಿನ ಮಧ್ಯಕ್ಕೆ ಸ್ವತಂತ್ರವಾಗಿ ಹೋಗುವ, ಬೆಟ್ಟಗಳನ್ನು ಏರುವ ಸ್ವಾತಂತ್ರ್ಯವನ್ನು ಗಳಿಸಿಕೊಂಡಳು."

ಸ್ತ್ರೀಯರಿಗೆ ಭಿಕ್ಕುಣಿಯರಾಗಲು ಅನುಮತಿಯನ್ನು ನೀಡಿದ ಬುದ್ಧ ಅವರಿಗೆ ಸ್ವಾತಂತ್ರ್ಯದ ಹಾದಿಯನ್ನು ಮಾತ್ರ ಮುಕ್ತವಾಗಿಸಲಿಲ್ಲ, ಅದರ ಜೊತೆಗೆ ಲಿಂಗಭೇದವಿಲ್ಲದೆ ಗೌರವವನ್ನು ಪಡೆಯುವ ದಾರಿಯನ್ನೂ ತೋರಿಸಿದ. "ಸ್ತ್ರೀಯು ಲಿಂಗಭೇದವಿಲ್ಲದೆ ವೈಚಾರಿಕತೆಯುಳ್ಳ ವ್ಯಕ್ತಿಯೆಂದು ಅವಳ ಸೋದರ ಅರ್ಹಂತರಿಂದ ಗುರುತಿಸಲ್ಪಟ್ಟಳು. ಅವಳಿಗೆ ಆಧ್ಯಾತ್ಮಿಕ ವಾತಾವರಣ ಸಿಕ್ಕಿತ್ತು, ಪಿಟಕದಲ್ಲಿ ಹೇಳಿರುವ ಅರಿಯಾಗಳು ಎಂಬ ಧಾರ್ಮಿಕ ಅಭಿಜಾತವರ್ಗದವರೊಡನೆ ಬೌದ್ಧಿಕ ಸಾಹಚರ್ಯವನ್ನು ಪಡೆದಳು, ಅಂತಹವರೊಡನೆ ತಾನೂ ವಾಸ್ತವ ಸಂಗತಿಯನ್ನು ಅರಿಯಬಲ್ಲವಳಾದಳು. ಇದನ್ನೇ ಬುದ್ಧನು ಪರಿಜ್ಞಾನವೆಂದು ಕರೆದ.

'ಸ್ತ್ರೀಯರಾಗಿರುವ ನಮ್ಮ ಸ್ತ್ರೀತ್ವವು ನಮಗೆ ಹೇಗೆ ತೊಡಕಾಗುತ್ತದೆ,
ಕೇಳಿದಳು ಸೋಮಳೆಂಬ ಭಿಕ್ಕುಣಿ
ಅಂತರ್ಜ್ಞಾವು ಅರಳಿ ಅದರ ಬೆಳಕಿನಲ್ಲಿ ಎಲ್ಲವನು ಕಾಂಬವಗೆ
ಲಿಂಗಭೇದವು ಯಾವ ತೊಡಕನೊಡ್ಡಬಹುದು?

ನಾನೊಬ್ಬಳು ಸ್ತ್ರೀಯೇ? ಅಥವಾ ನಾನೊಬ್ಬ ಪುರುಷನೇ,
ಅಥವಾ ಇದರ ಹೊರತಾಗಿ ನಾನಲ್ಲವಾದರೆ, ನಾನೇನು?
ಎಂಬ ಪೃಚ್ಛಕ ವ್ಯಕ್ತಿಗೆ ಮಾರನೇ ಉತ್ತರಿಸಬೇಕು"

ಇಷ್ಟೇ ಅಲ್ಲ. ಬುದ್ಧ ಸ್ತ್ರೀಯರಿಗೆ ಭಿಕ್ಕುಣಿಯರಾಗುವ ಅವಕಾಶವನ್ನು ಕಲ್ಪಿಸಿ ಅವರು ಪುರುಷರ ಸಮಾನರಾಗುವ ದಾರಿಯನ್ನು ಮುಕ್ತಗೊಳಿಸಿದ. "ಭಿಕ್ಕುಗಳಿಗೆ ಭಿಕ್ಕುಣಿಯರು ಶಾಶ್ವತವಾಗಿ ಅಧೀನರಾಗಿರುವಂತಹ ವ್ಯವಸ್ಥೆಯಾಗಿತ್ತು. ಹೆಚ್ಚಿನ ಬೌದ್ಧಿಕತೆಯನ್ನು ಹೊಂದಿದ್ದ ಹಿರಿಯ ಸಂನ್ಯಾಸಿನಿಯು ಸಂನ್ಯಾಸಿ ಬಂಧುಗಳಲ್ಲಿ ಹಿರಿಯರ ಜೊತೆ ಸಮಾನಸ್ಕಂಧಳಾಗಿ ವ್ಯವಹರಿಸಬಲ್ಲವಳಾಗಿದ್ದಳು. ೩೦ನೆಯ ಮತ್ತು ೭ನೆಯ ಗೀತೆಗಳಲ್ಲಿ ಒಂದು ಪ್ರಸಂಗವು ಬರುತ್ತದೆ. ಬೌದ್ಧಳು ಆಧ್ಯಾತ್ಮಿಕ ಸಾಧನೆಯಲ್ಲಿ ಮಹನೀಯನಾದ ಕಸ್ಸಪನೊಂದಿಗೆ ಸಮನಾದ ಸ್ಥಾನವನ್ನು ಪಡೆಯಲು ಅರ್ಹಳಾಗಿರುತ್ತಾಳೆ. ಈ ಸಂದರ್ಭದಲ್ಲಿ ಗಮನಿಸಬೇಕಾದ ಅಂಶವೆಂದರೆ, ಸ್ತ್ರೀಯರ ಕನ್ಯತ್ವಕ್ಕೆ ಮಹತ್ವವನ್ನೇನೂ ನೀಡಿರಲಿಲ್ಲ. ಎಲ್ಲಾ ವರ್ಗಗಳ ಮಹಿಳೆಯರಿಗೂ – ಅವರು ಮದುವೆಯಾಗಿರಲಿ, ಮದುವೆಯಾಗದೆ ಇರಲಿ, ವಿಧವೆಯಾಗಿರಲಿ, ಅಥವಾ ವೇಶ್ಯೆಯರೇ ಆಗಿರಲಿ, ಎಲ್ಲರಿಗೂ – ಅವನ ಬಳಿಗೆ ಬರುವ ಮಾರ್ಗವನ್ನು ತೆರೆದಿಟ್ಟಿದ್ದ. ಪುರುಷರ ಸಮಕ್ಕೂ ಅರ್ಹತೆಯನ್ನು, ಸ್ವಾತಂತ್ರ್ಯವನ್ನು, ಗೌರವವನ್ನು ಮತ್ತು ಸಮಾನತೆಯನ್ನು ಸ್ತ್ರೀಯರೂ ಪಡೆಯಬಹುದಾಗಿತ್ತು" (ಶ್ರೀಮತಿ ರೈಸ್ ಡಾವಿಡ್ಸ್ – ಥೇರೀಗಾಥಕ್ಕೆ ಬರೆದ ಮುನ್ನುಡಿಯಲ್ಲಿ – ಪು.೧೬–೧೭).

೪

ಭಾರತದಲ್ಲಿ ಹಿಂದೆ ಇದ್ದ ಸ್ತ್ರೀಯರ ಉನ್ನತವಾದ ಸ್ಥಾನವು ಈಗ ಅತ್ಯಂತ ಆಳಕ್ಕೆ ಇಳಿದಿದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಸ್ತ್ರೀಯರು ರಾಜ್ಯತಂತ್ರದಲ್ಲಿ ವಹಿಸಿದ್ದ ಪಾತ್ರದ ಬಗ್ಗೆ ಹೆಚ್ಚೇನೂ ಹೇಳುವಹಾಗಿಲ್ಲ. ನಮ್ಮ ದೇಶದ ಬೌದ್ಧಿಕ ಮತ್ತು ಸಾಮಾಜಿಕ ಜೀವನದಲ್ಲಿ ಅವರು ಅತ್ಯುನ್ನತ ಸ್ಥಾನವನ್ನು ಹೊಂದಿದ್ದರು ಎಂಬ ವಿಷಯದಲ್ಲಿ ಅನುಮಾನವಿಲ್ಲ.

ಅಥರ್ವವೇದದ ಪ್ರಕಾರ, ಬ್ರಹ್ಮಚರ್ಯಾಶ್ರಮವನ್ನು ಮುಗಿಸಿ ವಿವಾಹಕ್ಕೆ ಸಿದ್ಧಳಾಗಿದ್ದಾಳೆ ಎಂದು ಹೇಳುವಲ್ಲಿ, ಸ್ತ್ರೀಯರೂ ಉಪನಯನಕ್ಕೆ ಅರ್ಹರಾಗಿದ್ದರು ಎಂಬುದು ಗೋಚರವಾಗುತ್ತದೆ. ಹೆಂಗಸರು ವೇದಮಂತ್ರೋಚ್ಚಾರಣೆಮಾಡಬಲ್ಲವರಾಗಿದ್ದರು ಮತ್ತು ಅವರಿಗೆ ವೇದಗಳನ್ನು ಹೇಳಿಕೊಡುತ್ತಿದ್ದರು ಎಂಬುದು ಶ್ರೌತಸೂತ್ರಗಳಿಂದ ತಿಳಿದುಬರುತ್ತದೆ. ಅವರು ಗುರುಕುಲವಾಸದಲ್ಲಿರುತ್ತಿದ್ದರು, ವೇದದ ಹಲವು ಶಾಖೆಗಳ ಅಧ್ಯಯನವನ್ನು ಮಾಡುತ್ತಿದ್ದರು ಮತ್ತು ಮೀಮಾಂಸದಲ್ಲಿ ಪರಿಣತಿಯನ್ನು ಪಡೆದಿದ್ದರು ಎಂಬ ವಿಷಯಕ್ಕೆ ಪಾಣಿನಿಯ ಅಷ್ಟಾಧ್ಯಾಯದಲ್ಲಿ ಸಾಕ್ಷ್ಯದೊರಕುತ್ತದೆ. ಹೆಂಗಸರು ಗುರುಗಳಾಗಿದ್ದರು ಮತ್ತು ಬಾಲಕಿಯರಿಗೆ ವೇದಗಳ ಪಾಠವನ್ನು ಮಾಡುತ್ತಿದ್ದರು ಎಂದು ಪತಂಜಲಿಯ ಮಹಾಭಾಷ್ಯವು ಹೇಳುತ್ತದೆ. ಸ್ತ್ರೀಯರು ಪುರುಷರೊಡನೆ ಧರ್ಮ, ತತ್ತ್ವಜ್ಞಾನ ಮತ್ತು ತತ್ತ್ವಮೀಮಾಂಸೆಯಂತಹ ಗಹನವಾದ ವಿಷಯಗಳಲ್ಲಿ ಚರ್ಚೆಗೆ ತೊಡಗುತ್ತಿದ್ದ ಸಂದರ್ಭಗಳು ಹೇರಳವಾಗಿ ಸಿಗುತ್ತವೆ. ಜನಕ–ಸುಲಭಾ ಇವರ ಮಧ್ಯೆ, ಯಾಜ್ಞವಲ್ಕ್ಯ–ಗಾರ್ಗಿ ಹಾಗೂ ಯಾಜ್ಞವಲ್ಕ್ಯ–ಮೈತ್ರೇಯಿ ಇವರ ನಡುವೆ, ಶಂಕರಾಚಾರ್ಯ–ವಿದ್ಯಾಧರಿ ಇವರ ಮಧ್ಯೆ ಸಾರ್ವಜನಿಕವಾಗಿ ನಡೆದ ವಾದ–ವಿವಾದಗಳು ಮನು–ಪೂರ್ವದಲ್ಲಿ ಸ್ತ್ರೀಯರು ವಿದ್ಯೆಯನ್ನು ಗಳಿಸಿ ಅದರಲ್ಲಿ ಸಂಪೂರ್ಣ ಪರಿಣತಿಯನ್ನು ಪಡೆಯುವ ಅವಕಾಶವನ್ನು ಹೊಂದಿದ್ದರು ಎಂಬುದನ್ನು ತೋರಿಸುತ್ತದೆ.

ಒಂದು ಕಾಲದಲ್ಲಿ ಸ್ತ್ರೀಯರು ಅತ್ಯಂತ ಗೌರವಾರ್ಹ ಸ್ಥಾನದಲ್ಲಿದ್ದರು ಎಂಬುದು ನಿರ್ವಿವಾದವಾದ ಸಂಗತಿ. ಪ್ರಾಚೀನ ಭಾರತದಲ್ಲಿ ರಾಜನ ಪಟ್ಟಾಭಿಷೇಕದ ಕಾಲದಲ್ಲಿ ಅತ್ಯಂತ ಮಹತ್ವಪೂರ್ಣ ಪಾತ್ರವನ್ನು ವಹಿಸಿದ್ದ ರತ್ನಿಯು ರಾಣಿಯಾಗಿದ್ದಳು ಮತ್ತು ರಾಜನು ಇತರರಿಗೆ ನೀಡುವಂತೆ ಅವಳಿಗೂ ಕೊಡುಗೆಗಳನ್ನು ನೀಡುತ್ತಿದ್ದ (ಇಂಡಿಯನ್ ಪಾಲಿಟಿ, ಭಾಗ ೨, ಪುಟ ೧೬ – ಜೈಸ್ವಾಲ್). ರಾಜನಾಗುವವನು ರಾಣಿಗೆ ಮಾತ್ರ ವಂದನೆಗಳನ್ನು ಸಲ್ಲಿಸುತ್ತಿರಲಿಲ್ಲ, ತನ್ನ ಕೆಳಜಾತಿಯ ಪತ್ನಿಯರಿಗೂ ಗೌರವವನ್ನು ತೋರುತ್ತಿದ್ದ (ಇಂಡಿಯನ್ ಪಾಲಿಟಿ, ಭಾಗ ೨, ಪುಟ ೧೭ – ಜೈಸ್ವಾಲ್). ಹಾಗೆಯೇ, ಪಟ್ಟಾಭಿಷೇಕದ ನಂತರ ಶ್ರೇಣಿಯ ಮುಖ್ಯರ ಪತ್ನಿಯರಿಗೂ ವಂದನೆಗಳನ್ನು ಸಲ್ಲಿಸುತ್ತಿದ್ದ (ಇಂಡಿಯನ್ ಪಾಲಿಟಿ, ಭಾಗ ೨, ಪುಟ ೮೨ – ಜೈಸ್ವಾಲ್).

ಇದು ಪ್ರಪಂಚದ ಯಾವುದೇ ಭಾಗದಲ್ಲಿ ಸ್ತ್ರೀಯರಿಗೆ ನೀಡಿದ್ದ ಸ್ಥಾನಮಾನಗಳಲ್ಲಿಯೇ ಅತ್ಯುನ್ನತವಾದದ್ದು. ಅವರ (ಸ್ತ್ರೀಯರ) ಪತನಕ್ಕೆ ಹೊಣೆಗಾರರು ಯಾರು? ಅವನೇ, ಹಿಂದೂಗಳ ಧರ್ಮಶಾಸ್ತ್ರಕಾರನಾದ ಮನು. ಇದನ್ನು ಬಿಟ್ಟು ಈ ಪ್ರಶ್ನೆಗೆ ಬೇರೆ ಯಾವ ಉತ್ತರವೂ ಇಲ್ಲ. ಏಳಬಹುದಾದ ಯಾವುದೇ ಸಂದೇಹಗಳ ನಿವಾರಣೆಗಾಗಿ, ಮನುಸ್ಮೃತಿಯಲ್ಲಿ ಕೊಟ್ಟಿರುವ, ಮನು ನಿರ್ಮಿತವಾದ ನಿಯಮಗಳನ್ನು ನಾನು ಇಲ್ಲಿ ಉದ್ಧರಿಸುತ್ತೇನೆ.

೨–೨೧೩ ಈ ಪ್ರಪಂಚದಲ್ಲಿ ಪುರುಷರನ್ನು ಮೋಹಗೊಳಿಸುವುದು ಸ್ತ್ರೀಯರ ಗುಣ. ಅವರ ಈ ಗುಣದಿಂದಾಗಿಯೇ, ಅವರ ಸಂಪರ್ಕದಲ್ಲಿದ್ದಾಗ ಬಹಳ ಎಚ್ಚರಿಕೆಯಿಂದ ಇರಬೇಕು.

೨–೨೧೪. ಬುದ್ಧಿಹೀನರನ್ನು ಮಾತ್ರವಲ್ಲ, ವಿದ್ವಾಂಸರನ್ನೂ ಹೆಂಗಸರು ಮರುಳುಮಾಡಬಲ್ಲರು ಮತ್ತು ಅವರನ್ನು ಆಸೆ ಮತ್ತು ಕೋಪಗಳ ದಾಸರನ್ನಾಗಿಸಬಲ್ಲರು.

೨–೨೧೫. ಒಂಟಿಯಾಗಿರುವಾಗ ತಾಯಿಯ ಬಳಿ, ಸೋದರಿಯ ಬಳಿ ಅಥವಾ ಮಗಳ ಬಳಿ ಕುಳಿತುಕೊಳ್ಳಬಾರದು. ಏಕೆಂದರೆ ಭಾವನೆಗಳು ಶಕ್ತಿಯುತವಾಗಿರುತ್ತವೆ ಮತ್ತು ಜ್ಞಾನಿಗಳನ್ನೂ ತನ್ನ ವಶಕ್ಕೆ ತೆಗೆದುಕೊಳ್ಳುತ್ತವೆ.

೯–೧೪. ಹೆಂಗಸರಿಗೆ ಪುರುಷರ ರೂಪದ ಮೇಲೆ ಅವರ ವಯಸ್ಸಿನ ಮೇಲೆ ಗಮನವಿರುವುದಿಲ್ಲ, ಅವರು ಗಂಡಸರು ಎಂಬುದಷ್ಟೇ ಅವರ ಮನಸ್ಸಿನಲ್ಲಿರುತ್ತದೆ. ಪುರುಷರು ರೂಪವಂತರಾಗಿರಲಿ, ಕುರೂಪಿಗಳಾಗಿರಲಿ ಸ್ತ್ರೀಯರು ಅವರನ್ನು ತಮ್ಮವರನ್ನಾಗಿಸಿಕೊಳ್ಳುತ್ತಾರೆ.

೯–೧೫. ಪತಿಗಳು ಅವರನ್ನು ಎಷ್ಟೇ ಜತನದಿಂದ ನೋಡಿಕೊಳ್ಳುತ್ತಿದ್ದರೂ, ಹೆಂಗಸರು (ಇತರ) ಗಂಡಸರ ಬಗ್ಗೆ ಇರುವ ಮೋಹದಿಂದ, ತಮ್ಮ ಬದಲಾಗುತ್ತಲೇ ಇರುವ ಭಾವದಿಂದ, ಮತ್ತು ಸ್ವಾಭಾವಿಕವಾಗಿ ಹೃದಯಹೀನರಾಗಿರುವುದರಿಂದ ತಮ್ಮ ಪತಿಗಳಿಗೆ ಮೋಸವನ್ನು ಮಾಡುತ್ತಾರೆ.

೯–೧೬. ಅವರನ್ನು ಸೃಷ್ಟಿಮಾಡುವಾಗಲೇ ಪರಮಾತ್ಮನು ಅವರಲ್ಲಿ ಈ ಗುಣವನ್ನು ಇಟ್ಟಿರುತ್ತಾನಾಗಿ, ಪುರುಷರು ಅತ್ಯಂತ ಶ್ರಮಪೂರ್ಣವಾಗಿ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕು.

೯–೧೭. ಅವರನ್ನು ಸೃಷ್ಟಿಮಾಡುವಾಗ ಮನುವು ಸ್ಥಾನವನ್ನು, ಒಡವೆಗಳನ್ನು, ಕೆಟ್ಟ

ಬಯಕೆಗಳನ್ನು, ಕೋಪ, ಅಪ್ರಾಮಾಣಿಕತೆಯನ್ನು, ಅಸೂಯೆಯನ್ನು ಹಾಗೂ ದುಶ್ಚಾರಿತ್ರ್ಯವನ್ನು ಅವರಿಗೆ ನೀಡಿದ.

ಮನುವಿನ ದೃಷ್ಟಿಯಲ್ಲಿ ಸ್ತ್ರೀಯರು ಎಷ್ಟು ಕೀಳಾಗಿದ್ದರು ಎಂಬುದಕ್ಕೆ ಇವು ನಿದರ್ಶನ. ಮನುವು ತನ್ನ ಧರ್ಮಶಾಸ್ತ್ರದಲ್ಲಿ ಮಹಿಳೆಯರನ್ನು ಹೀಗೆ ಕಂಡಿದ್ದಾನೆ.

ಎಂತಹುದೇ ಸಂದರ್ಭದಲ್ಲಿಯೂ, ಸ್ತ್ರೀಯರು ಸ್ವತಂತ್ರರಾಗಿರಬಾರದು. ಮನುವಿನ ಅಭಿಪ್ರಾಯದಲ್ಲಿ –

೯–೨. ಸ್ತ್ರೀಯರು ಅವರ ಕುಟುಂಬದ ಪುರುಷರ ಮೇಲೆ ಹಗಲೂ ರಾತ್ರಿ ಅವಲಂಬಿಸರಬೇಕು. ಮತ್ತು ಅವರು ತಮ್ಮ ಇಂದ್ರಿಯ ಸುಖಗಳಿಗೆ ಬಲಿಯಾದರೆ, ಅವರನ್ನು ಒಬ್ಬನ ಅಂಕೆಯಲ್ಲಿರಿಸಬೇಕು.

೯–೩. ಅವಳನ್ನು ಬಾಲ್ಯದಲ್ಲಿ ಅವಳ ತಂದೆಯೂ, ಯೌವನದಲ್ಲಿ ಅವಳ ಪತಿಯೂ, ಮುಪ್ಪಿನ ಕಾಲದಲ್ಲಿ ಮಗನೂ ರಕ್ಷಿಸುತ್ತಾರೆ. ಅವಳು ಸ್ವಾತಂತ್ರ್ಯಕ್ಕೆ ಎಂದೂ ಅರ್ಹಳಾಗುವುದಿಲ್ಲ.

೯–೫. ಸ್ತ್ರೀಯರ ಕೀಳು ಪ್ರವೃತ್ತಿಗಳಿಂದ, ಅವು ಎಷ್ಟೇ ಚಿಕ್ಕವಾಗಿದ್ದರೂ, ಅವರನ್ನು ಪಾರುಮಾಡಬೇಕು. ಇಲ್ಲದಿದ್ದರೆ, ಅದರಿಂದ ಎರಡೂ ವಂಶಗಳಿಗೆ ತೊಂದರೆಯಾಗುತ್ತದೆ.

೯–೬. ಎಲ್ಲಾ ಜಾತಿಯ ಪುರುಷರೂ, ಅವರು ಎಷ್ಟೇ ದುರ್ಬಲರಾಗಿದ್ದರೂ, ತಮ್ಮ ಪತ್ನಿಯರನ್ನು ಕಾಯ್ದುಕೊಳ್ಳಬೇಕು.

೫–೧೪೭. ಸ್ತ್ರೀಯು ಹುಡುಗಿಯಾಗಿರಲಿ, ಯೌವನಸ್ಥೆಯಾಗಿರಲಿ, ಅಥವಾ ಮುದುಕಿಯೇ ಆಗಿರಲಿ, ಅವರು ತಮ್ಮ ಮನೆಯಲ್ಲಿ ಕೂಡ ಸ್ವತಂತ್ರವಾಗಿ ಏನನ್ನೂ ಮಾಡಬಾರದು.

೫–೧೪೮. ಬಾಲ್ಯದಲ್ಲಿ ಅವಳು ತಂದೆಯ ಅಧೀನದಲ್ಲಿಯೂ, ಯೌವನದಲ್ಲಿ ಪತಿಯ ಅಧೀನದಲ್ಲಿಯೂ ಮತ್ತು ಪತಿಯ ನಿಧನಾನಂತರ, ಮಗನ ಅಧೀನದಲ್ಲಿಯೂ ಇರತಕ್ಕದ್ದು. ಅವಳು ಎಂದೂ ಸ್ವತಂತ್ರವಾಗಿ ಇರತಕ್ಕವಳಲ್ಲ.

೫–೧೪೯. ಅವಳು ತನ್ನ ತಂದೆಯಿಂದ, ಪತಿಯಿಂದ, ಅಥವಾ ಮಗನಿಂದ ಎಂದೂ ಪ್ರತ್ಯೇಕವಾಗಿರತಕ್ಕದ್ದಲ್ಲ. ಪ್ರತ್ಯೇಕವಾಗಿದ್ದರೆ, ಅವಳು ಎರಡೂ ಮನೆಗಳನ್ನು (ತಾನು ಹುಟ್ಟಿದ ಮನೆ ಮತ್ತು ಸೇರಿದ ಮನೆಗಳೆರಡನ್ನೂ) ನಿಕೃಷ್ಟಸ್ಥಾನಕ್ಕೆ ಇಳಿಸುತ್ತಾಳೆ. ಸ್ತ್ರೀಯು ಪತಿಯಿಂದ ವಿಚ್ಛೇದನವನ್ನು ಪಡೆಯಲು ಅರ್ಹಳಾಗಿರುವುದಿಲ್ಲ.

೯–೪೫. ಮದವೆಯಾದಮೇಲೆ ಅವಳು ಎಂದೆಂದಿಗೂ ಪತಿಯೊಂದಿಗೇ ಇರತಕ್ಕದ್ದು, ಅಂದರೆ ಒಮ್ಮೆ ಮದುವೆಯಾದ ಮೇಲೆ ಹೆಂಗುಸು ಪ್ರತ್ಯೇಕವಾಗಿರುವುದಕ್ಕೆ ಅವಕಾಶವಿಲ್ಲ.

ಹಿಂದೂಗಳಲ್ಲಿ ಹಲವರು ಇಲ್ಲಿಂದ ಮುಂದಕ್ಕೆ ಆಲೋಚಿಸದೆ, ವಿವಾಹವಿಚ್ಛೇದನಕ್ಕೆ ಅವಕಾಶಕೊಡದ ಮನುವಿನ ನೀತಿಯನ್ನು ಪ್ರಶಂಸಿಸುತ್ತಾರೆ. ವಿವಾಹವು ಮನುವಿನ ಪ್ರಕಾರ ಪವಿತ್ರಬಂಧವಾದದ್ದು ಆಗಿರುವುದರಿಂದ ವಿಚ್ಛೇದನಕ್ಕೆ ಅನುಮತಿಯನ್ನು ಅವನು ಕೊಡಲಿಲ್ಲ ಎಂದು ಅವರು ಭಾವಿಸುತ್ತಾರೆ. ಆದರೆ ಇದು ಸತ್ಯಕ್ಕೆ ದೂರವಾದ ಸಂಗತಿ. ಈ ಸಂಬಂಧದಲ್ಲಿ ಅವನ ದೃಷ್ಟಿ ಬೇರೆಯೇ ಆಗಿತ್ತು.

ಪುರುಷನನ್ನು ಒಬ್ಬ ಸ್ತ್ರೀಗೆ ಕಟ್ಟುವುದು ಅವನ ಉದ್ದೇಶವಾಗಿರಲಿಲ್ಲ, ಬದಲಿಗೆ ಒಬ್ಬ ಸ್ತ್ರೀಯನ್ನು ಅವನಿಗೆ ಕಟ್ಟಿ ಅವನನ್ನು ಸ್ವತಂತ್ರವಾಗಿ ಬಿಟ್ಟುಬಿಡುವುದು ಅವನ ಉದ್ದೇಶವಾಗಿತ್ತು.

ಮನುವು ಪುರುಷನು ತನ್ನ ಪತ್ನಿಯನ್ನು ಪರಿತ್ಯಜಿಸುವುದನ್ನು ತಡೆಯುವುದಿಲ್ಲ. ಪತಿಯು ತನ್ನ ಪತ್ನಿಯನ್ನು ಪರಿತ್ಯಜಿಸುವುದಷ್ಟೇ ಅಲ್ಲ ಅವನು ಅವಳನ್ನು ಮಾರಲೂ ಅವಕಾಶವನ್ನು ನೀಡುತ್ತಾನೆ. ಆದರೆ ಪತ್ನಿಯನ್ನು ಸ್ವತಂತ್ರಳಾಗಲು ಅವನು ಬಿಡುವುದಿಲ್ಲ. ಅವನ ಪ್ರಕಾರ (೯–೪೬.) ಮಾರುವುದರಿಂದಾಗಲೀ, ಪರಿತ್ಯಜಿಸುವುದರಿಂದಾಗಲೀ, ಸ್ತ್ರೀಯ ಮೇಲಿನ ಅಧಿಕಾರವು ಅವಳ ಪತಿಗೆ ಎಂದೂ ಇಲ್ಲವಾಗುವುದಿಲ್ಲ.

ಅಂದರೆ, ಸ್ತ್ರೀಯು ಪರಿತ್ಯಜಿಸಲ್ಪಟ್ಟರೂ, ಮಾರಲ್ಪಟ್ಟರೂ, ಅವಳು ತನ್ನನ್ನು ಕೊಂಡುಕೊಂಡವನ ಅಥವಾ ಸ್ವೀಕರಿಸಿದವನ ಧರ್ಮಪತ್ನಿಯಾಗುವುದು ಸಾಧ್ಯವಿಲ್ಲ. ಇದು ಅಮಾನವೀಯವಲ್ಲದಿದ್ದರೆ, ಇನ್ನಾವುದನ್ನೂ ಅಮಾನವೀಯವೆಂದು ಪರಿಗಣಿಸುವುದು ಸಾಧ್ಯವಿಲ್ಲ. ನಿಯಮಗಳನ್ನು ರೂಪಿಸುವಾಗ ಮನುವು ನ್ಯಾಯ ಅನ್ಯಾಯಗಳ ಬಗ್ಗೆ ವಿವೇಚಿಸಲಿಲ್ಲ. ಬೌದ್ಧರು ಸ್ತ್ರೀಯರಿಗೆ ನೀಡಿದ್ದ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದನ್ನು ಅವನು ಬಯಸಿದ್ದ. ಅವರಿಗೆ ನೀಡಿದ್ದ ಸ್ವಾತಂತ್ರ್ಯದಿಂದ ಅವನು ಕ್ರುದ್ಧನಾಗಿದ್ದ ಮತ್ತು ಅದನ್ನು ಅವರಿಗೆ ಅದು ಲಭ್ಯವಾಗದಂತೆ ಮಾಡಿದ.

ಆಸ್ತಿಯ ವಿಷಯದಲ್ಲಿ ಪತ್ನಿಯನ್ನು ಅವನು ಗುಲಾಮಳ ಮಟ್ಟಕ್ಕೆ ಇಳಿಸಿದ. (೯–೪೧೬) – ಪತ್ನಿ, ಮಗ ಮತ್ತು ಸೇವಕ – ಈ ಮೂವರು ಆಸ್ತಿಯನ್ನು ಹೊಂದುವಂತಿಲ್ಲ. ಅವರು ಸಂಪಾದಿಸಿದುದೆಲ್ಲವೂ ಅವರು ಯಾರ ಅಧೀನದಲ್ಲಿರುತ್ತಾರೆಯೋ ಅವರಿಗೆ ಸೇರುತ್ತದೆ.

ತಾನು ಗಂಡನೊಂದಿಗೆ ಇದ್ದು ವಿಧವೆಯಾದರೆ, ಅವಳಿಗೆ ಜೀವನಾಂಶದ ಹಕ್ಕನ್ನು ಮನುವು ನೀಡುತ್ತಾನೆ. ಆದರೆ ಅವಳು ಗಂಡನಿಂದ ಪ್ರತ್ಯೇಕವಾಗಿದ್ದು ವಿಧವೆಯಾದರೆ ಅವಳಿಗೆ ತನ್ನ ಪತಿಯ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ಹಾಗಿದ್ದರೂ ಅವಳು ಆ ಆಸ್ತಿಯ ಮೇಲೆ ಸಂಪೂರ್ಣ ಅಧಿಕಾರವನ್ನು ಚಲಾಯಿಸುವಂತಿಲ್ಲ.

ಸ್ತ್ರೀಯರನ್ನು ದೈಹಿಕವಾಗಿ ದಂಡಿಸುವುದಕ್ಕೆ ಮನುವು ಅವಕಾಶ ಮಾಡಿಕೊಡುತ್ತಾನೆ. ಮನುವಿನ ನಿಯಮಗಳ ಪ್ರಕಾರ ಪತಿಯಾದವನು ಅವಳಿಗೆ ಹೊಡೆಯುವ ಹಕ್ಕನ್ನು ಹೊಂದಿರುತ್ತಾನೆ. (೮–೨೯೯) – ಪತ್ನಿ, ಮಗ, ನೌಕರ, ಶಿಷ್ಯ, ಸಹೋದರ – ಇವರುಗಳು ಅಪರಾಧವನ್ನು ಮಾಡಿದರೆ ಅವರುಗಳನ್ನು ಹಗ್ಗದಿಂದ ಅಥವಾ ಬಿದಿರಿನ ದೆಬ್ಬೆಯಿಂದ ಹೊಡೆಯಬಹುದು.

ಮನುವಿನ ಪ್ರಕಾರ, ಸ್ತ್ರೀಯರಿಗೆ ವಿದ್ಯೆಯನ್ನು ಕಲಿಯುವ ಹಕ್ಕು ಇಲ್ಲ. ಅವರು ವೇದವನ್ನು ಕಲಿಯುವುದನ್ನು ನಿಷೇಧಿಸಲಾಗಿತ್ತು. (೨–೬೬) – ಸ್ತ್ರೀಯರಿಗೆ ಸಂಸ್ಕಾರಗಳನ್ನು ಮಾಡುವುದು ಅಗತ್ಯ. ಈ ಸಂಸ್ಕಾರಗಳನ್ನು ಮಾಡುವಾಗ ವೇದಮಂತ್ರಗಳನ್ನು ಪಠಿಸುವಂತಿಲ್ಲ.

ಹೋಮ ಹವನಗಳನ್ನು ಮಾಡುವುದು ಬ್ರಾಹ್ಮಣ ಧರ್ಮದ ಜೀವಾಳವಾಗಿತ್ತು. ಆದರೆ ಸ್ತ್ರೀಯರು ಹೋಮ–ಹವನಗಳನ್ನು ಮಾಡುವುದನ್ನು ಮನುವು ನಿಷೇಧಿಸಿದ. ಅವನು ವಿಧಿಸಿದ ನಿಯಮಗಳು ಹೀಗಿದೆ – (೧೧–೩೬, ೩೭) – ವೇದಗಳು ವಿಧಿಸಿರುವ ಹೋಮಹವನದ ಕಾರ್ಯವನ್ನು ಸ್ತ್ರೀಯರು ಮಾಡುವಂತಿಲ್ಲ. ಅವುಗಳನ್ನು ಮಾಡುವ ಸ್ತ್ರೀಯರು ನರಕಕ್ಕೆ ಹೋಗುತ್ತಾರೆ.

ಅವಳು ಅವುಗಳನ್ನು ಆಚರಿಸದೆ ಇರುವಂತೆ ಮಾಡಲು, ಅವಳಿಗೆ ಬ್ರಾಹ್ಮಣಪುರೋಹಿತರ ಸಹಾಯವನ್ನು ಮನುವು ನಿಷೇಧಿಸುತ್ತಾನೆ.

೪–೨೦೫, ೨೦೬ ಸ್ತ್ರೀಯರು ನಡೆಸಿದ ಹೋಮ–ಹವನಗಳಲ್ಲಿ ಬ್ರಾಹ್ಮಣರು ಆಹಾರವನ್ನು

ಸೇವಿಸುವಂತಿಲ್ಲ. ಸ್ತ್ರೀಯರು ನಡೆಸಿದ ಯಜ್ಞಯಾಗಾದಿಗಳು ಅಮಂಗಳಕರವಾದವು ಮತ್ತು ದೇವತೆಗಳು ಅದನ್ನು ಸ್ವೀಕರಿಸುವುದಿಲ್ಲ. ಆದುದರಿಂದ ಸ್ತ್ರೀಯರು ಯಜ್ಞಯಾಗಾದಿಗಳನ್ನು ಮಾಡುವುದನ್ನು ತಡೆಯಬೇಕು. ಅವರಿಗೆ ಯೋಗ್ಯವಾದ ಜೀವನರೀತಿಯನ್ನು ಮನುವು ಹೇಳುತ್ತಾನೆ. ಅದನ್ನು ಅವನ ಮಾತುಗಳಲ್ಲಿಯೇ ಕೇಳುವುದು ಉತ್ತಮ –

೫–೧೫೧. ತಂದೆಯಾಗಲೀ, ತಂದೆಯ ಅನುಮತಿಯಿಂದ ಸೋದರನಾಗಲೀ, ಸ್ತ್ರೀಯೊಬ್ಬಳನ್ನು ಪುರುಷನೊಬ್ಬನಿಗೆ ಧಾರೆಯೆರೆದು ಕೊಟ್ಟಮೇಲೆ, ಆಕೆ ತನ್ನ ಪತಿಗೆ ಆತನು ಬದುಕಿರುವವರೆಗೂ ವಿಧೇಯಳಾಗಿರಬೇಕು ಮತ್ತು ಆತನ ನಿಧನಾನಂತರ ಅವನ ನೆನಪಿಗೆ ಯಾವುದೇ ಕುಂದನ್ನೂ ತರಬಾರದು.

೫–೧೫೪. ಪತಿಯು ಗುಣಹೀನನಾಗಿರಲಿ, ಇಂದ್ರಿಯ ಸುಖಗಳನ್ನು ಮನೆಯ ಹೊರಗೆ ಅರಸುತ್ತಿರಲಿ, ಯಾವುದೇ ಸದ್ಗುಣಗಳೂ ಅವನಲ್ಲಿ ಇಲ್ಲದಿರಲಿ, ಆದರೂ ಪತ್ನಿಯು ಅವನನ್ನೇ ದೇವರೆಂದು ತಿಳಿದು ಅವನನ್ನು ಸೇವಿಸಬೇಕು.

೫–೧೫೫. ಪತ್ನಿಯಾದವಳು ಪತಿಸೇವೆಯಲ್ಲದೆ ಬೇರೆ ಯಾವ ಯಾಗಗಳನ್ನಾಗಲೀ, ವ್ರತವನ್ನಾಗಲೀ, ಉಪವಾಸವನ್ನಾಗಲೀ ಮಾಡುವ ಆವಶ್ಯಕತೆಯಿಲ್ಲ. ಅವಳು ತನ್ನ ಪತಿಗೆ ವಿಧೇಯಳಾಗಿದ್ದರೆ, ಇದೊಂದು ಧರ್ಮದಿಂದಾಗಿಯೇ, ಸ್ವರ್ಗದಲ್ಲಿ ಪ್ರಶಂಸಿಸಲ್ಪಡುತ್ತಾಳೆ.

ನಂತರ ಮನುವಿನ ಆದರ್ಶಗಳ ಸಾರಸರ್ವಸ್ವವೇ ಈ ಮುಂದೆ ನೀಡಿರುವ ಅವನ ನಿಬಂಧನೆಯಲ್ಲಿ ಬರುತ್ತದೆ. ಅವನು ಸ್ತ್ರೀಯರಿಗೆ ಹೀಗೆ ವಿಧಿಸುತ್ತಾನೆ–

೫–೧೫೩. ಪವಿತ್ರಮಂತ್ರಗಳನ್ನು ಉಚ್ಚರಿಸುತ್ತಾ ಅವಳನ್ನು ವಿವಾಹವಾದ ಪುರುಷನು ಎಲ್ಲಾ ಕಾಲಗಳಲ್ಲೂ, ಇಹಜೀವನದಲ್ಲೂ ಮರಣಾನಂತರದ ಪರಲೋಕದಲ್ಲಿಯೂ ಅವಳ ಸುಖದ ಸೆಲೆಯಾಗಿರುತ್ತಾನೆ.

೫–೧೫೦. ಪತ್ನಿಯು ಯಾವಾಗಲೂ ಹರ್ಷಚಿತ್ತಳಾಗಿರಬೇಕು, ಗೃಹಕೃತ್ಯವನ್ನು ನಿರ್ವಹಿಸುವಲ್ಲಿ ಜಾಣೆಯಾಗಿರಬೇಕು, ಪಾತ್ರೆಗಳನ್ನು ಶುಚಿಯಾಗಿಟ್ಟಿರಬೇಕು ಮತ್ತು ಮಿತವ್ಯಯಿಯಾಗಿರಬೇಕು.

ಹಿಂದೂಗಳು ಇವುಗಳನ್ನೇ ಸ್ತ್ರೀಯರ ಪರಮಧ್ಯೇಯವೆಂದು ಪರಿಗಣಿಸುತ್ತಾರೆ!!! ಸ್ತ್ರೀಯರನ್ನು ಹೀಗೆ ದುರ್ಬಲಗೊಳಿಸುವ ತನ್ನ ನಿಯಮಗಳಿಗೆಲ್ಲಾ ಕಿರೀಟವಿಡುವಂತೆ ಮನುವು ಒಂದು ಹೊಸ ನಿಯಮವನ್ನು ಘೋಷಿಸುತ್ತಾನೆ – 'ಹೆಂಗಸನ್ನು ಕೊಲ್ಲುವುದು ಒಂದು ಉಪ–ಪಾತಕವಾಗುತ್ತದೆ (ಮಹಾ ಪಾತಕವಲ್ಲ)' ಅಂದರೆ ಅದು ಕೇವಲ ಒಂದು ಗೌಣವಾದ ಪಾಪದ ಕೆಲಸವಾಗಿರುತ್ತದೆ.

೧೧–೬೭. ಮದ್ಯಪಾನ, ಸ್ತ್ರೀ, ಶೂದ್ರ. ವೈಶ್ಯ ಅಥವಾ ಕ್ಷತ್ರಿಯ ಅಥವಾ ದೈವಭಕ್ತರನ್ನು ಹತ್ಯೆ ಮಾಡುವುದು ಇವೆಲ್ಲವೂ ಗೌಣವೆಂದು ಪರಿಗಣಿಸಬಹುದಾದ (ಮಹತ್ತರವಲ್ಲದ) ಪಾಪಗಳಾಗುತ್ತವೆ.

ಶೂದ್ರರನ್ನು, ವೈಶ್ಯರನ್ನು ಅಥವಾ ಕ್ಷತ್ರಿಯರನ್ನು ಕೊಲ್ಲುವುದು ಉಪಪಾತಕವಾಗುತ್ತದೆ ಎಂದು ಮನುವು ಹೇಳಿರುವುದನ್ನು ಅರ್ಥಮಾಡಿಕೊಳ್ಳಬಹುದು. ಅವನ ಉದ್ದೇಶವಿದ್ದುದು, ಬ್ರಾಹ್ಮಣನು ಇವರೆಲ್ಲರಿಗಿಂತಲೂ ಶ್ರೇಷ್ಠನಾದವನು, ಅವನನ್ನು ಕೊಲ್ಲುವುದು ಮಹಾಪಾತಕವಾಗುತ್ತದೆ ಎಂದು ಸಾರುವುದರಲ್ಲಿ. ಆದರೆ ಮೇಲಿನ ನಿಯಮವನ್ನು ಅವನು ಸ್ತ್ರೀಯರಿಗೆ ಏಕೆ ಅನ್ವಯಿಸಿದ? ಅವನ ದೃಷ್ಟಿಯಲ್ಲಿ ಸ್ತ್ರೀಯರೆಂದರೆ ಮೌಲ್ಯವಿಲ್ಲದ ವಸ್ತು ಅಷ್ಟೆ.

ಮೇಲಿನ ಈ ಹೇಳಿಕೆಗಳನ್ನು ಗಮನಿಸಿದ ಯಾರೇ ಆದರೂ, ಭಾರತದಲ್ಲಿ ಸ್ತ್ರೀಯರ ಪತನಕ್ಕೆ ಕಾರಣನಾದವನು ಮನು ಎಂದು ಹೇಳುವದರಲ್ಲಿ ಅನುಮಾನಪಡಬೇಕಾಗಿದೆಯೇ? ಇದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ವಿಷಯವೇ. ಆದರೆ ಎರಡು ವಿಷಯಗಳು ಅವರ ಅರಿವಿಗೆ ಬಂದಂತಿಲ್ಲ. ಮನುವಿನಲ್ಲಿರುವ ವಿಶೇಷತೆಯನ್ನು ಅವರು ಅರಿಯರು. ಸ್ತ್ರೀಯರ ವಿಷಯದಲ್ಲಿ ಮನುವಿನ ನಿಲವು ಗಾಬರಿಯನ್ನು ಹುಟ್ಟಿಸುವಂತಿಲ್ಲ ಮತ್ತು ಅದು ಹೊಸದೂ ಅಲ್ಲ. ಬ್ರಾಹ್ಮಣ ಮತವು ಈ ದೇಶದಲ್ಲಿ ಹುಟ್ಟಿದಾಗಿನಿಂದಲೂ ಬ್ರಾಹ್ಮಣರು ಇದೇ ನಿಲುವನ್ನು ಹೊಂದಿದ್ದರು. ಮನುವಿಗೆ ಮೊದಲು ಅದು ಕೇವಲ ಸಾಮಾಜಿಕ ಕಟ್ಟಳೆಯ ರೂಪದಲ್ಲಿ ಇತ್ತು. ಈ ಸಾಮಾಜಿಕ ಕಟ್ಟಳೆಗಳನ್ನೇ ಮನುವು ತನ್ನ ಧರ್ಮಶಾಸ್ತ್ರದ ನಿಯಮಗಳನ್ನಾಗಿ ರೂಪಿಸಿದ. ಮನುವು ಸ್ತ್ರೀಯರ ಮೇಲೆ ಈ ಅನರ್ಹತೆಯನ್ನು ಹೇರುವುದಕ್ಕೆ ಇದ್ದ ಕಾರಣವನ್ನು ಕೂಡ ಅವರು ಅರಿತಿಲ್ಲ. ಅದೇಂದರೆ, ಸಮಾಜದ ಎರಡು ಪ್ರಮುಖ ಅಂಗಗಳಾಗಿದ್ದ ಶೂದ್ರರು ಮತ್ತು ಸ್ತ್ರೀಯರು ಬ್ರಾಹ್ಮಣಧರ್ಮವನ್ನು ತಿರಸ್ಕರಿಸಿ ಬೌದ್ಧಧರ್ಮವನ್ನು ಅಪ್ಪಿಕೊಳ್ಳುವತ್ತ ಧಾವಿಸುತ್ತಿದ್ದರು. ಸ್ತ್ರೀಯರು ಹೀಗೆ ಪ್ರವಾಹದೋಪಾದಿಯಲ್ಲಿ ಬೌದ್ಧಧರ್ಮದತ್ತ ನುಗ್ಗುತ್ತಿರುವುದನ್ನು ತಡೆಯಲು ಬಯಸಿದ.

ಇಂತಹ ಕಾರಣಗಳಿಂದಾಗಿ ಸ್ತ್ರೀಯರ ಮೇಲೆ ಮನುವು ಈ ಅನರ್ಹತೆಗಳನ್ನು ವಿಧಿಸಿ ಅವರನ್ನು ಎಲ್ಲಾ ಕಾಲಕ್ಕೂ ಬಲಹೀನರನ್ನಾಗಿಸಿದ. ಇದನ್ನು ನಂಬದೆ ಇರುವವರಿಗೆ ಮನುಸ್ಮೃತಿಯಲ್ಲಿ ಈ ಪ್ರತಿಬಂಧಕವನ್ನು ವಿಧಿಸಿದೆ –

೫–೮೮. ವರ್ಣಸಂಕರದಿಂದಾಗಿ ಜನಿಸಿದವರಿಗೆ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿದವರಿಗೆ, ಆತ್ಮಹತ್ಯೆಯನ್ನು ಮಾಡಿಕೊಂಡು ತಮ್ಮ ಜೀವನವನ್ನು ಕೊನೆಗಾಣಿಸಿಕೊಂಡವರಿಗೆ ಮರಣಾನಂತರ ಅಂತ್ಯಸಂಸ್ಕಾರಗಳನ್ನಾಗಲೀ ಇತರ ಅಂತ್ಯ ವಿಧಿಗಳನ್ನಾಗಲೀ ಮಾಡಬಾರದು.

೫–೮೯. ಪಾಷಂಡಿಗಳ ಸಂಗವನ್ನು ಮಾಡಿದ್ದ, ಸ್ವೇಚ್ಛೆಯಾಗಿದ್ದ, ತನ್ನ ಗರ್ಭದಲ್ಲಿದ್ದ ಶಿಶುವಿಗೆ ಹಾನಿಮಾಡಿದ್ದ ಅಥವಾ ತನ್ನ ಪತಿಗೆ ದ್ರೋಹವೆಸಗಿದ್ದ, ಅಥವಾ ಮದ್ಯಪಾನಮಾಡುತ್ತಿದ್ದ ಸ್ತ್ರೀಯರಿಗೂ ಅವರ ಮರಣಾನಂತರ ಅಂತ್ಯಸಂಸ್ಕಾರಗಳನ್ನಾಗಲೀ ಇತರ ಅಂತ್ಯ ವಿಧಿಗಳನ್ನಾಗಲೀ ಮಾಡಬಾರದು.

ಈ ಪ್ರತಿಬಂಧಕವು, ಇತರ ಉದ್ದೇಶಗಳ ಮಧ್ಯದಲ್ಲಿ, ಮುಖ್ಯವಾಗಿ ಎರಡು ವರ್ಗಗಳವರನ್ನು ಗುರಿಯಾಗಿಟ್ಟುಕೊಂಡಿತ್ತು – (೧) ಸಂನ್ಯಾಸಾಶ್ರಮವನ್ನು ತೆಗೆದುಕೊಂಡಿದ್ದವರು ಮತ್ತು (೨) ಪಾಷಂಡಿಗಳ ಸಂಗವನ್ನು ಸೇರಿದ್ದ ಹೆಂಗಸರು. ಇಲ್ಲಿ, ಸಂನ್ಯಾಸಿಗಳು ಎಂದರೆ ಪರಿವ್ರಾಜಕರು, ಸಂನ್ಯಾಸಾಶ್ರಮವನ್ನು ತೆಗೆದುಕೊಳ್ಳಲು ಮನೆಮಠವನ್ನು ಬಿಟ್ಟು ಬಂದಿರುವವರು ಎಂದು ಅರ್ಥ ಮತ್ತು ಮನುವಿನ ಮನಸ್ಸಿನಲ್ಲಿದ್ದವರು ಬುದ್ಧನ ಧರ್ಮಕ್ಕೆ ಸೇರಿದವರು. ಸಂನ್ಯಾಸಿಗಳಿಗೆ, ಪಾಷಂಡಿಗಳ ಸಂಗವನ್ನು ಸೇರಿದ ಹೆಂಗಸರಿಗೆ ಅವರ

ಮರಣಾನಂತರ ಅಂತ್ಯಸಂಸ್ಕಾರವನ್ನು ಮಾಡಬಾರದು ಎಂದು ಮನುವು ವಿಧಿಸಿದಾಗ, ಅವನು ಬೌದ್ಧಧರ್ಮಕ್ಕೆ ಸೇರಿದ ಪುರುಷ ಅಥವಾ ಸ್ತ್ರೀಯರಿಗೆ ಅಂತ್ಯಸಂಸ್ಕಾರವನ್ನು ಮಾಡಬಾರದು ಎಂದು ಹೇಳುತ್ತಿದ್ದಾನೆ. ಹೀಗೆ ಮಾಡುವುದರಿಂದ ಅವರನ್ನು ಸಮಾಜಕ್ಕೆ ಸೇರಿದವರಲ್ಲವೆಂಬುದನ್ನು ಮತ್ತು ಅವರಿಗೆ ಅವರ ಕುಲದ ಸಂಬಂಧವು ಇರುವುದಿಲ್ಲ ಎಂಬುದನ್ನು ಹೇಳಬಯಸುತ್ತಾನೆ. ಮನುವು, ಬೌದ್ಧಧರ್ಮದ ಅತಿ ದೊಡ್ಡ ವಿರೋಧಿಯಾಗಿದ್ದ. ಅವನು ಮಹಿಳೆಯರ ಮೇಲೆ ಹೊರಿಸಿದ ಪಕ್ಷಪಾತದ ಹೊರೆಯ ಹಿಂದಿರುವ ಗುಟ್ಟು ಇದು. ಬೌದ್ಧಧರ್ಮದ ಆಕ್ರಮಣದಿಂದ ಮನೆಯನ್ನು ರಕ್ಷಿಸಬೇಕಾದರೆ ಮನೆಯಲ್ಲಿನ ಮಹಿಳೆಯರ ಮೇಲೆ ವಿಧಿ–ನಿಷೇಧಗಳನ್ನು ಹೇರುವುದೇ ತಕ್ಕ ಉಪಾಯವೆಂದು ಅವನು ತಿಳಿದಿದ್ದ. ಅದನ್ನು ಮಾಡಿಯೂ ಮಾಡಿದ. ಆದ್ದರಿಂದ ಭಾರತದಲ್ಲಿ ಮಹಿಳೆಯರ ಅಧಃಪತನದ ಹೊಣೆಯನ್ನು ಮನುವಿನ ತಲೆಗೆ ಕಟ್ಟಬೇಕು. ಅದನ್ನು ಬಿಟ್ಟು ಬುದ್ಧನನ್ನು ಅದಕ್ಕಾಗಿ ದೂರುವ ಹಾಗಿಲ್ಲ.

ಕೆಲವು ಪುಟಗಳ ಮಿತಿಯಲ್ಲಿ ನಾನು ಹಿಂದೂ ಸ್ತ್ರೀಯ ಅಭ್ಯುದಯ ಮತ್ತು ಅವನತಿಗಳ ಚಿತ್ರಣವನ್ನು ನೀಡಲು ಪ್ರಯತ್ನಿಸಿದ್ದೇನೆ. ಅವರ ಅವನತಿಗೆ ಕಾರಣನಾದವನು ಯಾರು ಮತ್ತು ಅವನು ಹಾಗೆ ಮಾಡಲು ಅವನಿಗಿದ್ದ ಕಾರಣಗಳೇನು ಎಂಬುದನ್ನೂ ವಿವರಿಸಲು ಪ್ರಯತ್ನಪಟ್ಟಿದ್ದೇನೆ. ದುರಾಗ್ರಹಪೀಡಿತರಲ್ಲದವರು ಮತ್ತು ನಿಷ್ಪಕ್ಷಪಾತಿಗಳು ಈ ದುರಂತಕ್ಕೆ ಬುದ್ಧನು ಕಾರಣನಲ್ಲವೆಂಬುದನ್ನು ಅರಿಯುತ್ತಾರೆ ಎಂದು ಭಾವಿಸಿದ್ದೇನೆ. ಬುದ್ಧನು ಸ್ತ್ರೀಯ ಸ್ಥಾನವನ್ನು ಉದಾತ್ತಗೊಳಿಸಲು ಪ್ರಯತ್ನಪಟ್ಟಿದ್ದರೆ ಅದು ಅವಳನ್ನು ಪುರುಷನಿಗೆ ಸಮಾನಳನ್ನಾಗಿಸುವುದಕ್ಕಾಗಿ.*

* * * * *

---

*ಮಹಾಬೋಧಿ ಪತ್ರಿಕೆ, ಮೇ–ಜೂನ್, ೧೯೫೧, ಸಂಪುಟ ೫೯,ಪುಟಗಳು ೧೩೭–೧೫೧

## ೧೯. ಸಾಧುಗಳ ಸಾಹಿತ್ಯವು ಮಾನವನನ್ನು ಅವನ ಜೀವನದ ಹೋರಾಟಕ್ಕೆ ಅಣಿಮಾಡಲು ನೈತಿಕವಾಗಿ ಸಹಾಯಮಾಡುತ್ತದೆ

ಏಕನಾಥ ಸಂಶೋಧನಾ ಮಂಡಲಿಯು ಔರಂಗಾಬಾದಿನಲ್ಲಿ ಪ್ರಾರಂಭಗೊಂಡಿದೆಯೆಂದು ತಿಳಿದು ನನಗೆ ಸಂತೋಷವಾಗಿದೆ. ಮಹಾರಾಷ್ಟ್ರದ ಸಂತರ ಸಾಹಿತ್ಯದ ಬಗ್ಗೆ ನನಗೆ ಬಾಲ್ಯದಲ್ಲಿ ಅತೀವ ಆಸಕ್ತಿಯಿತ್ತು. ಈ ಸಾಹಿತ್ಯವನ್ನು ಓದುವುದರಿಂದ ಮಾನವರಿಗೆ ಎಂತಹ ನೈತಿಕ ಕವಚವು ದೊರೆಯುತ್ತದೆ ಎಂಬುದನ್ನು ನಾನು ಹೇಳಬಲ್ಲೆ. ಮಂಡಲಿಗೆ ಎಲ್ಲ ರೀತಿಯ ಶುಭವೂ ಆಗಲಿ ಎಂದು ಹಾರೈಸುತ್ತೇನೆ ಮತ್ತು ಅದಕ್ಕೆ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಯಿಂದ ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡುವ ಆಶ್ವಾಸನೆಯನ್ನು ನೀಡುತ್ತೇನೆ.

ಔರಂಗಾಬಾದ್.

ದಿನಾಂಕ: ೨.೯.೧೯೫೧ ಸಹಿ/– ಬಿ.ಆರ್. ಅಂಬೇಡ್ಕರ್.

(ಏಕನಾಥ ದರ್ಶನ (ಮರಾಠಿ), ಸಂಪುಟ ೧, ಶ್ರೀ ಏಕನಾಥ ಸಂಶೋಧನಾ ಮಂದಿರ, ೧೨೮, ಮರಾಠವಾಡ, ಸುಲ್ತಾನ್ ಬಜ಼ಾರ್, ಹೈದರಾಬಾದ್, ೧೯೫೨)*

* * * * *

---

* ಪುನರ್ಮುದ್ರಣ, ಖೈರ್‌ಮೋಡೆ ಸಂಪುಟ ೧೦, ಪುಟ ೧೪೩

# ೨೦. ರೂಪರೇಖೆಗಳು – ಇಕ್ಕಟ್ಟಿನಲ್ಲಿರುವ ಜನಾಂಗ


ಲೇಖಕರು:
ಬಿ.ಆರ್. ಅಂಬೇಡ್ಕರ್
ಎಂ.ಎ. ಪಿ.ಎಚ್.ಡಿ., ಡಿ.ಎಸ್‌ಸಿ.
ಬ್ಯಾರಿಸ್ಟರ್–ಅಟ್–ಲಾ
(ಜಾತಿಯ ಮೂಲೋತ್ಪಾಟನದ ಲೇಖಕರು)

ರಾಜಗೃಹ
ದಾದರ್
ಬಾಂಬೆ–೧೪

# ಇಕ್ಕಟ್ಟಿನಲ್ಲಿರುವ ಜನಾಂಗ

## ಪರಿವಿಡಿ

ಅಧ್ಯಾಯ


೧ ಕುಖ್ಯಾತಿಯ ಸಂಸ್ಕೃತಿ
೨ ಶ್ರೇಣೀಕರಣದ ಘೋರಪಾಪ
೩ ಅಗಾಧ ಸಂಖ್ಯೆಯು ಅಲ್ಪವಾದಾಗ
೪ ರಹದಾರಿಯ ನಿರೀಕ್ಷೆಯಲ್ಲಿ
೫ ಅಸ್ಪೃಶ್ಯರ ದಂಗೆ
೬ ದೂರದಲ್ಲಿಟ್ಟಾಗ
೭ ಶಾಸನೋಲ್ಲಂಘನೆಯೇ ಶಾಸನವಾದಾಗ
೮ ಪ್ರಕರಣಗಳ ಸಾದೃಶ್ಯ
೯ ಗುಲಾಮರು ಮತ್ತು ಅಸ್ಪೃಶ್ಯರು
೧೦ ಶಾಶ್ವತ ಸತ್ಯ
೧೧ ಅಸ್ಪೃಶ್ಯರು ಮತ್ತು ಬ್ರಿಟನ್ನಿನ ಶಾಂತಿಮಂತ್ರ
೧೨ ಸುಧಾರಣೆಯ ಹಾದಿಯಲ್ಲಿ ಹಿಂದೂ ಸುಧಾರಕರು
೧೩ ಅಸ್ಪೃಶ್ಯರನ್ನು ಕ್ರಿಶ್ಚಿಯನ್ನರನ್ನಾಗಿ ಮತಾಂತರಗೊಳಿಸುವುದು
೧೪ ಶ್ರೀ ಗಾಂಧಿಯವರ ಆಶ್ರಯದಲ್ಲಿ
೧೫ ಅಸ್ಪೃಶ್ಯರು ಮತ್ತು ಅವರ ಉಗಮ
೧೬ ಅಸ್ಪೃಶ್ಯರು ಮತ್ತು ಅವರ ಗುರಿ

# ಸಾರಾಂಶ

## ಅಧ್ಯಾಯ ೧
## ಕುಖ್ಯಾತಿಯ ಸಂಸ್ಕೃತಿ

೧ ಮತ್ತೊಂದು ಪ್ರಾತಿನಿಧಿಕ ದೃಷ್ಟಿ
೨ ತನ್ಮೂಲಕ ಕಂಡ ಕೆಳವರ್ಗಗಳು – ಅ) ಅನಾಗರಿಕ ಪಂಗಡಗಳು, ಆ) ಅಪರಾಧೀ ಪಂಗಡಗಳು, ಇ) ಅಸ್ಪೃಶ್ಯರು
೩ ಹಿಂದೂ ಸಂಸ್ಕೃತಿಯಿಂದ ಬಾಧಿತವಾದ ಅವರ ಸ್ಥಾನ
೪ ಈ ವರ್ಗಗಳಲ್ಲಿರುವ ಸಮಸ್ಯೆಗಳ ನಡುವಿನ ಅಂತರ

## ಅಧ್ಯಾಯ ೨
## ಶ್ರೇಣೀಕರಣದ ಘೋರ ಪಾಪ

೧ ಹಿಂದೂ ಸಾಮಾಜಿಕ ಸಂಸ್ಥೆ
೨ ಶ್ರೇಣೀಕರಣ ಮತ್ತು ಅಸಮಾನತೆ
೩ ಅದರ ಹಿಂದಿರುವ ವಾಸ್ತವತೆ
೪ ಅದರಲ್ಲಿರುವ ಪಕ್ಷಪಾತ

## ಅಧ್ಯಾಯ ೩
## ಅಗಾಧ ಸಂಖ್ಯೆಯು ಅಲ್ಪವಾದಾಗ

೧ ಅಸ್ಪೃಶ್ಯ ಜನಸಂಖ್ಯೆ ಮತ್ತು ಅರಿವಿಗೆ ಬರದ ಪರಿಮಾಣ
೨ ೧೯೧೧ರ ಜನಗಣತಿ ಮತ್ತು ಪ್ರತ್ಯೇಕ ಗಣತಿಯ ಪ್ರಥಮ ಪ್ರಯತ್ನ
೩ ೧೯೧೧ರ ಜನಗಣತಿಯ ಫಲಿತಗಳ ದೃಢೀಕರಣ
೪ ಲೋಥಿಯನ್ ಸಮಿತಿ ಮತ್ತು 'ಅಸ್ಪೃಶ್ಯತೆಯೇ ಇಲ್ಲ' ಎನ್ನುವ ಬೊಬ್ಬೆ
೫ ಬೊಬ್ಬೆಯ ಹಿಂದಿನ ಕಾರಣಗಳು
೬ ಹಿಂದುಳಿದ ವರ್ಗಗಳವರ ಮತ್ತು ಮುಸ್ಲಿಮರ ದೃಷ್ಟಿ

## ಅಧ್ಯಾಯ ೪
## ರಹದಾರಿಯ ನಿರೀಕ್ಷೆಯಲ್ಲಿ

೧ ಮೈಲಿಗೆಯವರು ಮತ್ತು ಅನಿಷ್ಟಕಾರಕರು
೨ ಅಸ್ಪೃಶ್ಯತೆ ಮತ್ತು ಹಿಂದೂಗಳು

೩ ಅಸ್ಪೃಶ್ಯತೆ ಮತ್ತು ಪಾರ್ಸಿಗಳು

೪ ಅಸ್ಪೃಶ್ಯತೆ ಮತ್ತು ಮುಸ್ಲಿಮರು

೫ ಬಂಧುಮಿತ್ರರಾದರೂ ಮನುಷ್ಯರೂ ಅಲ್ಲ, ಸೋದರರರೂ ಅಲ್ಲ

**ಅಧ್ಯಾಯ ೫**

**ಅಸ್ಪೃಶ್ಯರ ದಂಗೆ**

೧ ಕ್ಲೇಶಗಳ ಸರಮಾಲೆಯಲ್ಲಿ

೨ ರಸ್ತೆಗಳನ್ನು ಉಪಯೋಗಿಸುವ ಹಕ್ಕಿಗಾಗಿ ಹೋರಾಟ

೩ ನೀರನ್ನು ಪಡೆಯುವ ಹಕ್ಕಿಗಾಗಿ ಹೋರಾಟ

೪ ದೇವಸ್ಥಾನಗಳಲ್ಲಿ ಪೂಜೆಸಲ್ಲಿಸುವ ಹಕ್ಕಿಗಾಗಿ ಹೋರಾಟ

೫ ಶುಚಿಯಾದ ಬದುಕಿಗಾಗಿ ಹೋರಾಟ

**ಅಧ್ಯಾಯ ೬**

**ದೂರದಲ್ಲಿಟ್ಟಾಗ**

೧ ಅಸ್ಪೃಶ್ಯರ ದಂಗೆಗೆ ಹಿಂದೂ ಪ್ರತಿಕ್ರಿಯೆ

೨ ಶಾಸನರಾಹಿತ್ಯವೆಂದರೆ ಕ್ರೂರವಾದ ತುಳಿತ

೩ ಅಸ್ಪೃಶ್ಯರ ದುರ್ಬಲ ಶಕ್ತಿ

೪ ನಿರ್ಲಜ್ಜ ಪಕ್ಷಪಾತಿಗಳಾದ ಅಧಿಕಾರಿಗಳು

೫ ವಾದಿಗಳ ಸೊಲ್ಲಡಗಿಸುವುದು

೬ ಶಿಕ್ಷೆಯ ಹೊಸರೂಪ

**ಅಧ್ಯಾಯ ೭**

**ಶಾಸನೋಲ್ಲಂಘನೆಯೇ ಶಾಸನವಾದಾಗ**

೧ ಧರ್ಮದ ಬದಲಿಗೆ ಅಧರ್ಮ

೨ ಮನು ಮತ್ತು ಧರ್ಮ

೩ ಆಧುನಿಕ ಮನುಗಳು

೪ ಚಾರಿತ್ರ್ಯ ಮತ್ತು ದೃಷ್ಟಿಯ ಮೇಲೆ ಧರ್ಮದ ಪರಿಣಾಮ

**ಅಧ್ಯಾಯ ೮**

**ಪ್ರಕರಣಗಳ ಸಾದೃಶ್ಯ**

೧ ರೋಮಿನಲ್ಲಿ ಗುಲಾಮಗಿರಿ

೨ ಇಂಗ್ಲೆಂಡಿನಲ್ಲಿ ಊಳಿಗಮಾನ್ಯ

೩ ಜ್ಯೂಗಳು ಮತ್ತು ಗುಲಾಮಗಿರಿ

೪ ನಿಗ್ರೋಗಳು ಮತ್ತು ಗುಲಾಮಗಿರಿ

## ಅಧ್ಯಾಯ ೯
## ಗುಲಾಮರು ಮತ್ತು ಅಸ್ಪೃಶ್ಯರು

೧ ಭಾರತದಲ್ಲಿ ಗುಲಾಮಗಿರಿ
೨ ಕಾನೂನುಬದ್ಧ ಗುಲಾಮಗಿರಿ
೩ ವಾಸ್ತವವಾಗಿ ಗುಲಾಮಗಿರಿ
೪ ವಿರೋಧಾಭಾಸ ಮತ್ತು ಅದರ ವಿವರಣೆ

## ಅಧ್ಯಾಯ ೧೦
## ಶಾಶ್ವತ ಸತ್ಯ

೧ ತೊಳೆಯಲಾಗದ ಕಳಂಕ
೨ ಕಾನೂನು ಮತ್ತು ಮತಧರ್ಮ
೩ ವಿಚಾರವಂತರ ಪಾತ್ರ
೪ ಅಂತಸ್ತಿನ ಶ್ರೇಣೀಕರಣ ಮತ್ತು ಹೋರಾಟದ ಮುಂಚೂಣಿಯನ್ನು ದುರ್ಬಲಗೊಳಿಸುವುದು
೫ ಚತುರ್ವರ್ಣ ಮತ್ತು ಜನಸಮೂಹವನ್ನು ನಿರ್ವೀರ್ಯಗೊಳಿಸುವಿಕೆ

## ಅಧ್ಯಾಯ ೧೧
## ಅಸ್ಪೃಶ್ಯರು ಮತ್ತು ಬ್ರಿಟನ್ನಿನ ಶಾಂತಿಮಂತ್ರ

೧ ಅಸ್ಪೃಶ್ಯರು ಮತ್ತು ಭಾರತದ ಮೇಲೆ ಇಂಗ್ಲಿಷರ ವಿಜಯ
೨ ಬ್ರಿಟಿಷ್ ಸರಕಾರ ಮತ್ತು ಅಸ್ಪೃಶ್ಯರ ವಿದ್ಯಾಭ್ಯಾಸ
೩ ಬ್ರಿಟಿಷ್ ಸರಕಾರ ಮತ್ತು ಸಾರ್ವಜನಿಕ ಅಧಿಕಾರದೊಳಕ್ಕೆ ಅಸ್ಪೃಶ್ಯರ ಪ್ರವೇಶ
೪ ಬ್ರಿಟಿಷ್ ಸರಕಾರ ಮತ್ತು ಸಾಮಾಜಿಕ ಸುಧಾರಣೆ
೫ ಬ್ರಿಟಿಷ್ ಸರಕಾರ ಮತ್ತು ಅಸ್ಪೃಶ್ಯರಿಗಾದ ಲಾಭ

## ಅಧ್ಯಾಯ ೧೨
## ಸುಧಾರಣೆಯ ಹಾದಿಯಲ್ಲಿ ಹಿಂದೂ ಸುಧಾರಕರು

೧ ಬುದ್ಧ ಮತ್ತು ಸಾಮಾಜಿಕ ಸುಧಾರಣೆ
೨ ಹಿಂದೂ ಸಂತರು ಮತ್ತು ಅವರು ಮಾಡಿದ ಕಾರ್ಯಗಳು
೩ ಆಧುನಿಕ ಭಾರತದಲ್ಲಿ ಸಾಮಾಜಿಕ ಸುಧಾರಣೆಯ ಉಗಮ

೪ ಸುಧಾರಣಾ ಚಳವಳಿಯ ವ್ಯಾಪ್ತಿ
೫ ಸುಧಾರಣೆಯ ಜಾರಿಯಲ್ಲಿ
೬ ಹಿಂದೂ ಯುವಕರು ಮತ್ತು ಸಾಮಾಜಿಕ ಸುಧಾರಣೆ

**ಅಧ್ಯಾಯ ೧೩**

**ಅಸ್ಪೃಶ್ಯರನ್ನು ಕ್ರಿಶ್ಚಿಯನ್ನರನ್ನಾಗಿ ಮತಾಂತರಗೊಳಿಸುವುದು**

೧ ಮತಾಂತರಕ್ಕೆ ಹಿಂದೂಗಳ ವಿರೋಧ
೨ ಕ್ರಿಶ್ಚಿಯನ್ ಧರ್ಮದ ನಿಧಾನ ಬೆಳವಣಿಗೆ
೩ ತಪ್ಪು ಕಾರ್ಯನೀತಿ
೪ ಕ್ರಿಶ್ಚಿಯನ್ ಧರ್ಮ ಮತ್ತು ಪಗನ್ ಧರ್ಮದ ಪುನರಾಗಮನ
೫ ಕ್ರಿಶ್ಚಿಯನ್ ಧರ್ಮ ಮತ್ತು ಮತಾಂತರಗೊಂಡವರ ಸಾಮಾಜಿಕ ಸ್ಥಿತಿ

**ಅಧ್ಯಾಯ ೧೪**

**ಶ್ರೀ ಗಾಂಧಿಯವರ ಆಶ್ರಯದಲ್ಲಿ**

೧ ಸಂತ ಹಾಗೂ ರಾಜಕಾರಣಿ
೨ ಜವಾಬ್ದಾರಿಯ ಮಹಾನ್ ನಿರಾಕರಣ
೩ ಅಸ್ಪೃಶ್ಯರ ಬಗ್ಗೆ ಅವರು ಮಾಡಿರುವ ಕಾರ್ಯಗಳು
೪ ಗಾಂಧಿಯವರ ಮಾರ್ಗದಲ್ಲಿ ಮೋಕ್ಷ
೫ ರಾಜಕಾರಣಿ ಮತ್ತು ಸಂತ

**ಅಧ್ಯಾಯ ೧೫**

**ಅಸ್ಪೃಶ್ಯರು ಮತ್ತು ಅವರ ಉಗಮ**

೧ ಜನಾಂಗ ವಾದ
೨ ವಿಜಯದ ವಾದ
೩ ಮನುವಿನ ವಾದ
೪ ಮೈಲಿಗೆಯ ವಾದ
೫ ಒಂದು ಹೊಸ ವಾದ

**ಅಧ್ಯಾಯ ೧೬**

**ಅಸ್ಪೃಶ್ಯರು ಮತ್ತು ಅವರ ಗುರಿ**

೧ ಒಳಗಿನಿಂದ ಮತ್ತು ಹೊರಗಿನಿಂದ
೨ ಆಧ್ಯಾತ್ಮಿಕ ಆಲಯವಾಗಿ ಹಿಂದೂಧರ್ಮ
೩ ಭಗವದ್ಗೀತೆ ಮತ್ತು ಅಸ್ಪೃಶ್ಯರ ಭರವಸೆ

# ೨೧. ಮಹರರು – ಅವರು ಯಾರು? ಅವರು ಅಸ್ಪೃಶ್ಯರಾದದ್ದು ಹೇಗೆ?

ಈ ಲೇಖನದಲ್ಲಿ, ನಾನು ಕೆಲವು ಪ್ರಶ್ನೆಗಳನ್ನು ಎತ್ತಿ, ಅದಕ್ಕೆ, ನನ್ನ ವಿವೇಚನೆಯ ಪ್ರಕಾರ, ಯೋಗ್ಯ ಉತ್ತರವನ್ನು ನೀಡುವ ಪ್ರಯತ್ನವನ್ನು ಮಾಡುತ್ತೇನೆ. ಈ ಪ್ರಶ್ನೆಗಳು – (೧) ಮಹರರು ಯಾರು? (೨) ಅವರು ಏಕೆ ಊರ ಹೊರಗೆ ಜೀವಿಸುತ್ತಾರೆ? ಮತ್ತು (೩) ಅವರನ್ನು ಅಸ್ಪೃಶ್ಯರೆಂದು ಏಕೆ ಪರಿಗಣಿಸಲಾಗಿದೆ?

೧

ಶ್ರೀ ವಿಲ್ಸನ್ ಅವರು ಮಹಾರಾಷ್ಟ್ರ ಎಂಬ ಪದವು ಮಹರ್ ಎಂಬುದರಿಂದ ನಿಷ್ಪತ್ತಿಯಾಗಿದೆ ಎಂದು ಹೇಳಿ, ಈ ಪ್ರದೇಶವು ಮಹರ್ ಅವರಿಗೆ ಸೇರಿದುದು ಎನ್ನುತ್ತಾರೆ. ಈ ನಿರ್ವಚನವು ಗುಜ್ಜರ್ ಎಂಬುದರಿಂದ ಗುಜರಾಷ್ಟ್ರವೂ ಸೌರಜ್ ಎಂಬುದರಿಂದ ಸೌರಾಷ್ಟ್ರವೂ ಬಂದಿದೆ ಎಂಬುದರ ಸಾಮ್ಯದ ಮೇಲೆ ಊಹಿಸಲಾಗಿದೆ. ಈ ವ್ಯುತ್ಪತ್ತಿಗೆ ಎರಡು ನೆಲೆಗಳಿಂದ ಆಕ್ಷೇಪವು ಬರಬಹುದು. ಮೊದಲನೆಯದು, ಮಹಾರಾಷ್ಟ್ರವು ಮಹರ್ ಅವರ ಪ್ರದೇಶವೆಂದಲ್ಲ, ಬದಲಿಗೆ ಅದು ದೊಡ್ಡ ದೇಶ ಎಂಬ ಅರ್ಥದಿಂದ ಕೂಡಿದೆ ಎನ್ನುವುದು. ಇಂದು ಮಹರರು ಇರುವ ಅತ್ಯಂತ ಹೀನ ಸ್ಥಿತಿಯನ್ನು ನೋಡಿದರೆ, ಅವರು ಚರಿತ್ರೆಯಲ್ಲಿ ಈ ಪ್ರದೇಶವನ್ನು ಆಳುವಂತಹ ಅತ್ಯುನ್ನತ ಸ್ಥಾನದಲ್ಲಿದ್ದರು ಎಂದು ಊಹಿಸುವುದು ಕಷ್ಟವಾಗುತ್ತದೆ. ನನ್ನ ದೃಷ್ಟಿಯಲ್ಲಿ, ಶ್ರೀ ವಿಲ್ಸನ್ ಅವರು ನೀಡಿರುವ ವ್ಯುತ್ಪತ್ತಿಯು ಎರಡು ಕಾರಣಗಳಿಂದ ಅಸಮರ್ಥನೀಯವಾಗುತ್ತದೆ. ಅವರ ಊಹೆಯನ್ನು ನಿರಾಕರಿಸಲು ನನಗೆ ತೋರುವ ಮೊದಲನೆಯ ಕಾರಣ ಹೀಗಿದೆ: ಮಹರರ ರಾಜ್ಯವು ಮಹಾರಾಷ್ಟ್ರವೆಂದಾಯಿತು ಎಂಬುದು ನಿಜವಾಗಿದ್ದರೆ, ಮಹರರು ಇತರ ಸಮುದಾಯಗಳವರಿಗಿಂತ ಭಿನ್ನವಾಗಿದ್ದು, ಅವರು ಬಹಳ ಕಾಲದಿಂದ ಇದ್ದು, ಚರಿತ್ರೆಯಲ್ಲಿ ಅವರ ಹೆಸರು ನಮಗೆ ಪರಿಚಯವಾಗಿರಬೇಕಾಗಿತ್ತು. ಆದರೆ ಮಹರರು, ಮಹರರೆಂದೇ ಚರಿತ್ರೆಯಲ್ಲಿ ಗುರುತಿಸಿಲ್ಪಟ್ಟಿದ್ದಾರೆ ಎಂಬುದಕ್ಕೆ ಪುರಾವೆಗಳಿವೆಯೇ? ನಮ್ಮ ಅಧ್ಯಯನವನ್ನು ಬಾಂಬೆ ಪ್ರಾಂತಕ್ಕೆ ಸೀಮಿತಗೊಳಿಸಿ ನೋಡುವುದಾದರೆ, ಅಸ್ಪೃಶ್ಯರಲ್ಲಿರುವ ಮೂರು ಮುಖ್ಯ ಸಮುದಾಯಗಳು (೧) ಮಹರರು, (೨) ಚಮ್ಮಾರರು ಮತ್ತು (೩) ಮಾಂಗರು. ಇವರುಗಳಲ್ಲಿ, ಮಹರರ ಸಂಖ್ಯೆಯೇ ಅತಿ ದೊಡ್ಡದು. ಚಮ್ಮಾರರು ಮತ್ತು ಮಾಂಗರು ಚರಿತ್ರೆಯ ಸಮುದಾಯಗಳ ಹೆಸರಾಗಿ ಉಲ್ಲೇಖಿತವಾಗಿದ್ದರೂ, ಮಹರರನ್ನು ಒಂದು ಸಮುದಾಯವನ್ನಾಗಿ ಮಾಡಿರುವ ಉಲ್ಲೇಖವು ಕಾಣಬರದಿರುವುದು ಒಂದು ಆಶ್ಚರ್ಯದ ವಿಷಯವೇ ಸರಿ. ಮನುವಿನ ಕಾಲದಷ್ಟು ಹಿಂದಕ್ಕೆ ಹೋದರೆ, ಅವನು ಕೆಲವು ಜನಾಂಗಗಳನ್ನು ಅಸ್ಪೃಶ್ಯರೆಂದು ಪರಿಗಣಿಸಿರುವುದು ಕಂಡುಬರುತ್ತದೆ. ಅಂತಹ ಜನಾಂಗಗಳಲ್ಲಿ ಚಮ್ಮಾರರನ್ನು ವಿಶೇಷವಾಗಿ ಅಸ್ಪೃಶ್ಯ ಜನಾಂಗವೆಂದು ಉಲ್ಲೇಖಿಸಿರುವುದು ಕಂಡುಬರುತ್ತದೆ. ಮನುವು ಮಾಂಗರ ಹೆಸರನ್ನು ಹೇಳುವುದಿಲ್ಲ. ಮನುಸ್ಮೃತಿಯ ಲೇಖಕನಿಗೆ ತಿಳಿದಿದ್ದ ಪ್ರದೇಶದಲ್ಲಿ ಬಹುಶಃ ಮಾಂಗರು ವಾಸಿಸುತ್ತಿರಲಿಲ್ಲವೆಂದು ಕಾಣುತ್ತದೆ. ಆದರೆ ಬೌದ್ಧ ಸಾಹಿತ್ಯದಲ್ಲಿ ಮಾಂಗರ ಉಲ್ಲೇಖವು ಸಾಕಷ್ಟು ಬಾರಿ ಕಂಡುಬರುತ್ತದೆ. ಅಲ್ಲಿ ಅವರನ್ನು ಆ ಕಾಲದಲ್ಲಿ ಈ ಪ್ರದೇಶದಲ್ಲಿ ವ್ಯಾಪಕವಾಗಿದ್ದು ಪ್ರತ್ಯೇಕವಾಗಿ ವಾಸಿಸುತ್ತಿದ್ದ ಸಮುದಾಯವೆಂದು ಗುರುತಿಸಿ

ಮಾತಂಗರು ಎಂದು ಕರೆದಿದ್ದಾರೆ. ಆದರೆ ಬೌದ್ಧ ಸಾಹಿತ್ಯದಲ್ಲಾಗಲೀ ಅಥವಾ ಮನುಸ್ಮೃತಿಯಲ್ಲಾಗಲೀ ಮಹರರು ಒಂದು ಸಮುದಾಯವೆಂಬ ಉಲ್ಲೇಖವು ಕಂಡುಬರುವುದಿಲ್ಲ. ಮಹರರ ಉಲ್ಲೇಖವು ಈ ಪ್ರಾಚೀನ ಸಾಹಿತ್ಯಗಳಲ್ಲಿ ಕಂಡುಬರದಿರುವುದಷ್ಟೇ ಅಲ್ಲ, ಇತ್ತೀಚಿನವುಗಳೆಂದು ಗುರುತಿಸಲ್ಪಟ್ಟ ಸ್ಮೃತಿಗಳಲ್ಲೂ ಅವರ ಉಲ್ಲೇಖವು ನಮಗೆ ಸಿಗುವುದಿಲ್ಲ. ವಾಸ್ತವವಾಗಿ, ಮುಸ್ಲಿಮರ ಪ್ರವೇಶದವರೆಗೂ, ನಮಗೆ ಮಹರರು ಎಂಬ ಪದವು ಕಾಣಸಿಗುವುದಿಲ್ಲ. ಕ್ರಿ.ಶ. ೧೧೦೦ರ ಧ್ಯಾನೇಶ್ವರಿಯಲ್ಲಿ ಈ ಪದವನ್ನು ಒಮ್ಮೆ ಮಾತ್ರ ಬಳಸಿರುವುದನ್ನು ನಾವು ನೋಡಬಹುದು. ಇದಕ್ಕೆ ಹಿಂದಿನ ಕಾಲದಲ್ಲಿ ಈ ಮಹರರ ಹೆಸರೇ ಇರಲಿಲ್ಲ. ಎಂದರೆ, ಇದರ ಅರ್ಥವೇನು? ಧ್ಯಾನೇಶ್ವರಿಗೆ ಹಿಂದೆ, ಮಹರರು ಎಂಬ ಸಮುದಾಯವೇ ಇರಲಿಲ್ಲವೇ? ಅಥವಾ, ಈ ಸಮುದಾಯವು ಆಗಲೂ ಇದ್ದು, ಅದಕ್ಕೆ ಬೇರೆಯ ಹೆಸರಿತ್ತೇ? ವಾಸ್ತವವು ಹೇಗೇ ಇದ್ದರೂ, ಮಹರರ ಉಲ್ಲೇಖವು ಪ್ರಾಚೀನ ಚರಿತ್ರೆಯಲ್ಲಿ ಇಲ್ಲದಿರುವುದು ಶ್ರೀ ವಿಲ್ಸನ್ ಅವರ ವಾದಕ್ಕೆ ವಿರುದ್ಧವಾಗಿದೆ. ಮಹರರು ಎಂಬ ಹೆಸರೇ ಕಾಣಬರದಿರುವುದರಿಂದ, ಅವರಿಂದಾಗಿ ನಾಡಿನ ಹೆಸರನ್ನು ಈ ಹೆಸರಿನಿಂದ ವ್ಯುತ್ಪತ್ತಿಮಾಡುವುದು ಸಾಧ್ಯವಾಗುವುದೇ ಇಲ್ಲ.

ಶ್ರೀ ವಿಲ್ಸನ್ ಅವರ ವಾದವನ್ನು ನಾನು ಒಪ್ಪದಿರುವುದಕ್ಕೆ ಎರಡನೆಯ ಆಧಾರವೆಂದರೆ ಮಹರರಲ್ಲಿ ಪ್ರಚಲಿತವಿರುವ ಕುಲದೇವತಾ ಪದ್ಧತಿಗಳು. ಶ್ರೀ ವಿಲ್ಸನ್ ಅವರ ವಾದವನ್ನು ಒಪ್ಪಿಕೊಂಡರೆ, ಇಂದು ಮಹಾರಾಷ್ಟ್ರವೆಂದು ಕರೆಯಲ್ಪಡುತ್ತಿರುವ ನಾಡಿನ ಆದಿವಾಸಿಗಳಾಗಿ ಆರ್ಯರು ಇಲ್ಲಿಗೆ ಬರುವ ಹಿಂದಿನಿಂದಲೂ ಮಹರರು ಇದ್ದಿರಬೇಕು ಎಂಬ ತೀರ್ಮಾನಕ್ಕೆ ಬರುವುದು ಆವಶ್ಯಕವಾಗುತ್ತದೆ. ಮಹರರು ಈ ನಾಡಿನ ಆದಿವಾಸಿಗಳ ವರ್ಗಕ್ಕೆ ಸೇರಿದವರು ಎಂಬ ವಾದವನ್ನು ಮುಂದಿಡುವವರು ಇದನ್ನು ಸರಿಯಾಗಿ ಅರ್ಥಮಾಡಿಕೊಂಡಿರುವ ಹಾಗೆ ಕಾಣಿಸುವುದಿಲ್ಲವಾದ್ದರಿಂದ ಶ್ರೀ ವಿಲ್ಸನ್ನರ ತೀರ್ಮಾನವು ಅಸಮರ್ಥನೀಯವಾಗುತ್ತದೆ. ನನ್ನ ವಿಚಾರಸರಣಿಯ ಮೊದಲ ಹೆಜ್ಜೆಯಾಗಿ ಅದನ್ನು ಸಮರ್ಥಿಸುವ ಸಲುವಾಗಿ ನಾನು ಇಲ್ಲಿ ಮುಖ್ಯವಾದ ವಿಷಯವೊಂದಕ್ಕೆ ಸಂಬಂಧಪಟ್ಟವರ ಗಮನವನ್ನು ಸೆಳೆಯಬಯಸುತ್ತೇನೆ. ಅದೇಂದರೆ – ಮಹರರು ಇಲ್ಲದೆಡೆ ಮರಾಠರು ಇಲ್ಲ, ಮತ್ತು ಮಹರರು ಇದ್ದ ಎಡೆಗಳಲ್ಲೆಲ್ಲಾ ಮರಾಠರು ಇದ್ದಾರೆ. ಈ ಸಂಬಂಧವು ಆಕಸ್ಮಿಕವಾದುದಲ್ಲ, ಬದಲಿಗೆ ಇವರಿಬ್ಬರ ನಡುವಿನ ಸಂಬಂಧವು ಅವಿನಾಭಾವದಿಂದ ಕೂಡಿದೆ ಎಂಬುದಕ್ಕೆ ಇರುವ ಪುರಾವೆಯನ್ನು ಜನಾಂಗಶಾಸ್ತ್ರದ ವಿದ್ಯಾರ್ಥಿಗಳು ಸಾಮಾನ್ಯವಾಗಿ ನಿರ್ಲಕ್ಷಿಸುತ್ತಾರೆ. ಮರಾಠರು ಒಂದು ಸಂಘಟಿತ ಬಣವಾಗಿದ್ದರು ಎಂಬುದು ಈಗ ಸರ್ವವಿದಿತವಾಗಿರುವ ವಿಷಯ. ಅವರು ಇದನ್ನೇ ಕುಲ ಎಂದು ಕರೆಯುತ್ತಾರೆ, ಅವರಿಗೆ ಕುಲದೇವತಾ ಪದ್ಧತಿಯಿದೆ. ಕುಲ ಮತ್ತು ಕುಲದೇವತಾ ಪದ್ಧತಿಯ ಪ್ರಾಮುಖ್ಯವು ಜನಾಂಗಶಾಸ್ತ್ರದ ವಿದ್ಯಾರ್ಥಿಗಳಿಗೆಲ್ಲಾ ಚೆನ್ನಾಗಿ ಗೊತ್ತಿರುವಂತಹುದೇ. ಈ ದೃಷ್ಟಿಯಿಂದ ಮಹರರು ಮತ್ತು ಮರಾಠರ ಕುಲಗಳನ್ನು ತುಲನೆ ಮಾಡುವುದು ಮಹತ್ವಪೂರ್ಣ ಫಲವನ್ನು ಕೊಡುತ್ತದೆ.

(ಈ ಮುಂದೆ ಸೂಚಿಸಿರುವ ತಃಖ್ತೆಯು ಹಸ್ತಪ್ರತಿಯಲ್ಲಿ ಇರಲಿಲ್ಲ – ಸಂಪಾದಕರು)

ಈ ತಃಖ್ತೆಯನ್ನು ಗಮನಿಸಿದರೆ, ಮಹರರಲ್ಲಿ ಇಲ್ಲದಿರುವ ಕುಲವು ಮರಾಠರಲ್ಲಿ ಇಲ್ಲ ಮತ್ತು ಮರಾಠರಲ್ಲಿ ಇಲ್ಲದಿರುವ ಕುಲವು ಮಹರರಲ್ಲಿ ಇಲ್ಲ ಎಂಬುದು ಗೊತ್ತಾಗುತ್ತದೆ. ಕುಲವು ಜನಾಂಗಗಳ ನಡುವಿನ ಸಂಬಂಧವನ್ನು ಸೂಚಿಸುತ್ತದೆ ಎಂದು ಹೇಳುವಲ್ಲಿ ಜನಾಂಗಶಾಸ್ತ್ರವನ್ನು ಅವಲಂಬಿಸಬಹುದಾದರೆ, ಮಹರರು ಮತ್ತು ಮರಾಠರು ಸಂಬಂಧವನ್ನು ಹೊಂದಿದ್ದ ಸಮುದಾಯದವರು ಎಂದಾಗುತ್ತದೆ. ಆದ್ದರಿಂದ, ಮರಾಠರನ್ನು ಆದಿವಾಸಿಗಳೆಂದು ಪರಿಗಣಿಸದೆ ಇದ್ದಲ್ಲಿ, ಮಹರರನ್ನೂ ಆದಿವಾಸಿಗಳೆಂದು ಪರಿಗಣಿಸುವುದೂ

ಸಾಧ್ಯವಿಲ್ಲ.

ಮರಾಠರು ಆರ್ಯರೇ ಅಥವಾ ಆರ್ಯೇತರರೇ ಎಂಬ ಬಗ್ಗೆ ಸಹಮತವಿಲ್ಲ. ರಿಸ್ಲೆ ಅವರು ಮರಾಠರು ಆರ್ಯರಲ್ಲ ಎಂಬ ವಾದವನ್ನು ಪ್ರತಿಪಾದಿಸಿದರು. ಅವರು ತಮ್ಮ ನಿರ್ಣಯಕ್ಕೆ ಮಾನವಮಾಪನವನ್ನು ಆಧಾರವನ್ನಾಗಿಸಿಕೊಂಡಿದ್ದರು. ಇತರರು ಇವರ ವಾದವನ್ನು ಅಲ್ಲಗಳೆದು, ಮರಾಠರನ್ನು ಆರ್ಯರೆಂದೇ ನಿರ್ಣಯಿಸಿದರು. ರಿಸ್ಲೆಯವರ ವಾದವನ್ನು ನಿರಾಕರಿಸುತ್ತಾ ಇವರು ಆರ್ಯರಲ್ಲಿ ಎರಡು ಬಣಗಳಿದ್ದು, ಮರಾಠರು ಎರಡನೆಯ ಬಣಕ್ಕೆ ಸೇರಿದವರೆಂಬ ವಾದವನ್ನು ಮುಂದಿಟ್ಟರು. ಈ ವಾದದ ಪ್ರಕಾರ, ರಿಸ್ಲೆಯವರ ಸಂಶೋಧನೆಯ ಫಲಿತಗಳು, ಇತರರ ಮಾನವಮಾಪನದ ಫಲಿತಗಳಿಗೆ ಸರಿಹೊಂದುವುದಿಲ್ಲ. ಪ್ರಾಚೀನಕಾಲದಲ್ಲಿ, ಮಹಾರಾಷ್ಟ್ರವು ಆರ್ಯರು ಈ ಪ್ರದೇಶದಲ್ಲಿ ಮುಖ್ಯ ಜನಾಂಗವಾಗಿದ್ದದ್ದರಿಂದ ಅರಿಯಕೆ ಎಂದು ಕರೆಯಲ್ಪಡುತ್ತಿತ್ತು ಮತ್ತು ಕರ್ನಾಟಕದಲ್ಲಿ ಈಗಲೂ ಮರಾಠರನ್ನು ವ್ಯಾಪಕವಾಗಿ ಆರ್ಯರು ಎಂಬುದಾಗಿಯೇ ಕರೆಯುತ್ತಾರೆ ಎಂಬುದನ್ನು ಎರಡನೆಯ ವಾದವು ಬಳಸಿಕೊಳ್ಳುತ್ತದೆ.

ಇದು ಹೇಗೇ ಇದ್ದರೂ, ಮಹರರು ಆದಿವಾಸಿಗಳಲ್ಲ ಎಂಬುದರ ಬಗ್ಗೆ ಸಂಶಯವೇ ಇಲ್ಲ. ಇದರ ಜೊತೆಗೆ, ಆಧಾರವಾಗಿ ಇಟ್ಟುಕೊಳ್ಳಬಹುದಾದ ಇತಿಹಾಸದಲ್ಲಿನ ಕೆಲವು ಸ್ಥಿತ್ಯಂತರಗಳು ಮತ್ತು ಅವಶೇಷಗಳು ಈ ನಿಲುವನ್ನು ಸಮರ್ಥಿಸುತ್ತವೆ. ಇವುಗಳಲ್ಲಿ ಮೊದಲು ನಮ್ಮ ಗಮನವನ್ನು ಸೆಳೆಯುವಂತಹುದು ರಜಪೂತರಲ್ಲಿ ಇರುವ ಹಲವು ಕುಲಪದ್ಧತಿಗಳು ಮಹರರಲ್ಲಿಯೂ ಕಂಡುಬರುತ್ತವೆ. ಮರಾಠರು ಕ್ಷತ್ರಿಯಜಾತಿಗೆ ಸೇರಿದವರೇ ಅಲ್ಲವೇ ಎಂಬ ವಿವಾದವು ಮರಾಠರು ಮತ್ತು ಬ್ರಾಹ್ಮಣರ ನಡುವೆ ಬಂದಾಗ, ಕ್ಷತ್ರಿಯರು ಎಂಬುದು ಪ್ರಶ್ನಾತೀತವಾಗಿದ್ದ ರಜಪೂತರಲ್ಲಿದ್ದ ೯೬ ಕುಲಪದ್ಧತಿಗಳು ಕ್ಷತ್ರಿಯ ಜಾತಿಯವರೆಂದು ಕರೆದುಕೊಳ್ಳಬಯಸುತ್ತಿರುವ ಮಹರರಲ್ಲಿಯೂ ಇದ್ದಿತೇ ಎಂಬುದು ಪರೀಕ್ಷೆಗೆ ಒಳಪಡಬೇಕಾಗಿದ್ದಿತು. ಈ ಪರೀಕ್ಷೆಯಲ್ಲಿ ಮಹರರು ಜಯಶಾಲಿಗಳಾದರೆ, ಅವರನ್ನು ಮೂಲತಃ ರಜಪೂತರ ಜಾತಿಗೇ ಸೇರಿದವರು, ಅಂದರೆ ಕ್ಷತ್ರಿಯರು ಎಂದು ಘೋಷಿಸಬೇಕಾಗಿತ್ತು. ಆದರೆ, ಇತ್ತೀಚೆಗೆ, ಮಹರರು ತಮ್ಮ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಿಕೊಳ್ಳಲು, ರಜಪೂತರ ಕುಲಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಇದು ಅಕ್ಷರಶಃ ತಪ್ಪು ಗ್ರಹಿಕೆ. ಮಹರರು ಸೋಮವಂಶಕ್ಕೆ ಸೇರಿದವರು ಎಂಬುದು ಪರಂಪರಾಗತವಾಗಿ ಬಂದಿರುವ ನಂಬಿಕೆ. ಸೋಮವಂಶವು ಕ್ಷತ್ರಿಯರ ಎರಡು ಶಾಖೆಗಳಲ್ಲಿ ಒಂದು. ಮಹರರು ಬಹಳ ಹಿಂದಿನಿಂದಲೂ ತಮ್ಮನ್ನು ಈ ಗೋತ್ರಗಳಿಗೆ ಸೇರಿದವರೆಂಬುದೂ, ಮತ್ತು ಇತ್ತೀಚೆಗೆ ರಜಪೂತರ ಕುಲಪದ್ಧತಿಗಳನ್ನು ಅಳವಡಿಸಿಕೊಂಡಿಲ್ಲವೆಂಬ ವಾಸ್ತವವು ಬ್ರಾಹ್ಮಣರು ತಾವು ಒಮ್ಮೆ ಸತಾರಾದ ಮರಾಠಾ ರಾಜನಾದ ಪ್ರತಾಪಸಿಂಹನು ಕ್ಷತ್ರಿಯನೆಂದು ಪರಿಗಣಿಸಲು ನಿರಾಕರಿಸಿ, ನಡೆಸಿದ ವಿಚಾರಣಾ ಮಂಡಲಿಯ ತೀರ್ಮಾನದ ಪ್ರಕಾರ ಬಹಳ ಹಿಂದೆಯೇ ಸ್ಪಷ್ಟವಾಗಿದೆ. ಪ್ರತಾಪಸಿಂಹನ ಪಕ್ಷವನ್ನು ವಹಿಸಿದ್ದ ಬ್ರಾಹ್ಮಣರ ಪಂಗಡವು, ಭೋನ್ಸ್ಲೆ ಕುಲವು ರಜಪೂತರ ೯೬ ಕುಲಗಳಲ್ಲಿ ಒಂದೆಂದೂ ಮತ್ತು ರಜಪೂತರು ಕ್ಷತ್ರಿಯರೆಂದೂ ಪರಿಗಣಿಸಲ್ಪಟ್ಟಿರುವುದರಿಂದ ಪ್ರತಾಪಸಿಂಹನನ್ನೂ ಕ್ಷತ್ರಿಯ ಕುಲಕ್ಕೇ ಸೇರಿದವನೆಂದು ವಾದಿಸಿದರು. ಇದನ್ನು ವಿರೋಧಿಸಿದ ಪ್ರತಿಪಕ್ಷದವರು ಈ ಸಮಸ್ಯೆಯನ್ನು ಇನ್ನೂ ಕಗ್ಗಂಟುಮಾಡುವಂತಹ ವಾದವನ್ನು ಮುಂದಿಟ್ಟು, ಪ್ರತಾಪಸಿಂಹನನ್ನು ಕ್ಷತ್ರಿಯ ಕುಲಕ್ಕೆ ಸೇರಿದವನೆಂದು ಪರಿಗಣಿಸಿದರೆ, ರಜಪೂತರಲ್ಲಿರುವ ಕುಲಪದ್ಧತಿಗಳನ್ನೇ ತಾವೂ ಹೊಂದಿರುವ ಎಲ್ಲಾ ಮಹರರನ್ನೂ ಕ್ಷತ್ರಿಯರೆಂದೇ ಪರಿಗಣಿಸಬೇಕಾಗುತ್ತದೆ ಎಂದರು. ಕುಲಪದ್ಧತಿಗಳನ್ನು ಪರೀಕ್ಷೆಯ ಒರೆಗಲ್ಲನ್ನಾಗಿ ಇರಿಸಿಕೊಳ್ಳುವುದರ ಅಂಗೀಕಾರಾರ್ಹತೆಯ ಜೊತೆಗೇ, ಮಹರರು ಈ ಕುಲಪದ್ಧತಿಗಳನ್ನು

ಅನುಸರಿಸುತ್ತಿರುವುದು ಇತ್ತೀಚಿನ ವಿದ್ಯಮಾನವಲ್ಲವೆಂಬುದೂ ವಾಸ್ತವವೆಂಬುದು ಕಂಡುಬರುತ್ತದೆ. ಇದರಿಂದ ಮಹರರು ಆದಿವಾಸಿಗಳಲ್ಲವೆಂಬುದು ಇದರಿಂದ ಸಿದ್ಧವಾಗುತ್ತದೆ.

ಈ ವಾದಕ್ಕೆ ಪೋಷಕವಾಗಿ ಪರಿಗಣಿಸಬೇಕಾದ ಎರಡನೆಯ ಅಂಶವೆಂದರೆ, ಮಹರರಿಗೇ ವಿಶೇಷವಾದ ಅವರ ಅಭಿವಂದನೆಗೆ ಬಳಸುವ ನುಡಿ. ಮಹರರು ಅಭಿವಂದಿಸುವುದಕ್ಕಾಗಿ ಉಪಯೋಗಿಸುವ ಪದ 'ಜೋಹರ್'. ಈ ಪದವು 'ಯೋಧರ್' ಎಂಬ ಸಂಸ್ಕೃತ ಪದದ ಅಪಭ್ರಂಶವೆಂಬುದು ನಿಸ್ಸಂದೇಹ. ಪ್ರಾಚೀನ ವೇದಗಳ ಕಾಲದಲ್ಲಿ, ಬ್ರಾಹ್ಮಣರು ಮತ್ತು ಕ್ಷತ್ರಿಯರು ಪ್ರತ್ಯೇಕವಾದಪದಗಳನ್ನು ಅಭಿವಂದನಾರ್ಥವಾಗಿ ಬಳಸುತ್ತಿದ್ದರು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಬ್ರಾಹ್ಮಣರು 'ನಮಸ್ಕಾರ'ವೆಂದು ಹೇಳಿದರೆ, ಕ್ಷತ್ರಿಯರು 'ಯೋಧರ್' ಎಂದು ಹೇಳುತ್ತಿದ್ದರು. ಮಹರರು ಕೀಳುವರ್ಗಗಳವರಾಗಿದ್ದರೆ, ಅವರಿಗೆ 'ಯೋಧರ್' ಎಂಬ ಅಭಿನಂದನಾ ಪದವನ್ನು ಉಪಯೋಗಿಸಲು ಅವಕಾಶಕೊಡುತ್ತಿದ್ದರೆಂಬುದನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಚಮ್ಮಾರರು ಮತ್ತು ಮಾಂಗರು ಈ ಉದ್ದೇಶಕ್ಕಾಗಿ ಬಳಸುವ ಪದಗಳು ಬೇರೆಯಾಗಿದ್ದು, ಅದು ಕ್ಷತ್ರಿಯರು ಉಪಯೋಗಿಸುವ ಪದಕ್ಕೆ ಸುತ್ತುಬಳಸಿನ ಸಂಬಂಧವನ್ನೂ ಹೊಂದಿಲ್ಲ. ಮಾಂಗರು 'ಘುರ್ಮಾನ್' ಎಂಬ ಪದವನ್ನು ಉಪಯೋಗಿಸುತ್ತಾರೆ. ಅದು 'ಅರ್ಪಣೆ' ಎಂಬ ಅರ್ಥವುಳ್ಳ 'ಫರ್ಮಾನ್' ಎಂಬುದರ ಅಪಭ್ರಂಶ. ಚಮ್ಮಾರರು 'ದುಫ್ಟರಾವ್' ಎಂಬ ಪದವನ್ನು ಬಳಸುತ್ತಾರೆ. ಈ ಪದದ ನಿಷ್ಪತ್ತಿಯು ನನಗೆ ತಿಳಿದಿಲ್ಲ. ಆದರೆ, ಮಹರ್ ಸಮುದಾಯವು ಅಭಿವಂದನಾರ್ಥವಾಗಿ ಉಪಯೋಗಿಸುವ 'ಜೋಹರ್' ಪದವು, ಈ ಮೊದಲೇ ನಾನು ಹೇಳಿದ ಹಾಗೆ, ಕ್ಷತ್ರಿಯರು ಮಾತ್ರ ಉಪಯೋಗಿಸುವ ಪದವಾಗಿದೆ. ಮರಾಠರೂ ಹಿಂದೆ ಈ ಉದ್ದೇಶಕ್ಕಾಗಿ 'ಜೋಹರ್' ಎಂಬ ಪದವನ್ನೇ ಉಪಯೋಗಿಸುತ್ತಿದ್ದರು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಶಿವಾಜಿಯ ಆಡಳಿತದ ಕೆಲವು ಕಾಲದಲ್ಲಿ ಇದು ಬಳಕೆಯಲ್ಲಿದ್ದಿತು. ಇಲ್ಲಿಯವರೆಗೂ ಅವನದೆಂದೇ ಗುರುತಿಸಲ್ಪಟ್ಟಿರುವ ಒಂದೇ ಒಂದು ಪತ್ರದಲ್ಲಿ ಶಿವಾಜಿಯು 'ಜೋಹರ್' ಎಂಬ ಪದವನ್ನು ಅಭಿವಂದನಾರ್ಥವಾಗಿ ಬಳಸಿದ್ದಾನೆ. ಈ ಪತ್ರವನ್ನು ಸ್ವತಃ ಅವನೇ ಮಾಲೋಜಿ ಘೋರ್ಪಡೆಯವರಿಗೆ ಬರೆದಿದ್ದ. ಶಿವಾಜಿಯ ನಂತರ ಮರಾಠರು 'ರಾಮ್ ರಾಮ್' ಎಂಬ ಪದವನ್ನು ಈ ಉದ್ದೇಶಕ್ಕಾಗಿ ಉಪಯೋಗಿಸಲು ಪ್ರಾರಂಭಿಸಿದ್ದು ಸರ್ವವಿದಿತ. ಮಹರರು ಈ ಪದ್ಧತಿಯನ್ನು ಮರಾಠರನ್ನು ಈ ವಿಷಯದಲ್ಲಿ ಅನುಸರಿಸಲಿಲ್ಲವೆಂಬುದು ಕುತೂಹಲಕಾರಿಯಾಗಿದೆ. ಮರಾಠರು 'ಜೋಹರ್' ಪದವನ್ನು ಬಳಸುವುದನ್ನು ನಿಲ್ಲಿಸದ ನಂತರವೂ, ಮಹರರು ಅದನ್ನು ಮುಂದುವರೆಸಿಕೊಂಡು ಬಂದುದು ಏಕೆ ಮತ್ತು ಸರಕಾರವು 'ರಾಮ್, ರಾಮ್' ಎಂಬುದನ್ನು ಉಪಯೋಗಿಸುತ್ತಿದ್ದರೂ ಮಹರರಿಗೆ ಹಾಗೆ ಮಾಡಲು ಅವಕಾಶವನ್ನು ನಿರಾಕರಿಸಲಿಲ್ಲವೇಕೆ ಎಂಬ ಪ್ರಶ್ನೆಗಳು ಹೆಚ್ಚಿನ ವಿವರಣೆಯನ್ನು ಬಯಸುತ್ತವೆ. ಆದರೂ, 'ಜೋಹರ್' ಎಂಬ ಪದದ ಪ್ರಯೋಗವು ಕ್ಷತ್ರಿಯರ ಪದ್ಧತಿಯನ್ನು ಸೂಚಿಸುತ್ತದೆ ಎಂಬುದು ವಾಸ್ತವ.

'ಮಹರರು ಆದಿವಾಸಿಗಳಲ್ಲ, ಬದಲಿಗೆ ಅವರು ಮೂಲತಃ ಕ್ಷತ್ರಿಯರು ಎಂದು ಪರಿಗಣಿತವಾಗಿರುವ ಮರಾಠ ಸಮುದಾಯಕ್ಕೆ ನಿಜವಾಗಿಯೂ ಸೇರಿದವರು' ಎಂಬ ನನ್ನ ವಾದಕ್ಕೆ ವಿರೋಧವಾಗಬಹುದಾದ ಅಂಶವೊಂದನ್ನು ಇಲ್ಲಿ ಗಮನಿಸಬೇಕು. ಅದೆಂದರೆ, ಮರಾಠರಲ್ಲಿ ಮತ್ತು ಕ್ಷತ್ರಿಯರಲ್ಲಿ ಶವಗಳನ್ನು ಸುಡುವ ಪದ್ಧತಿಯು ಆಚರಣೆಯಲ್ಲಿದ್ದರೂ, ಮಹರರಲ್ಲಿ ಶವಗಳನ್ನು ಹೂಳುವ ಪದ್ಧತಿಯು ಇದೆ. ಶವಗಳನ್ನು ಹೂಳುವ ಪದ್ಧತಿಯು ಮಹರರಲ್ಲಿ ಇದೆಯೆಂಬುದನ್ನು ಒಪ್ಪಿಕೊಳ್ಳಲೇಬೇಕು. ಈ ಪದ್ಧತಿಯು ಇದೆಯೆಂದು ಒಪ್ಪಿಕೊಂಡ ಮಾತ್ರದಿಂದಲೇ ಅವರು ಕ್ಷತ್ರಿಯರಲ್ಲವೆಂಬ ನಿರ್ಣಯವನ್ನು ಒಪ್ಪಿಕೊಳ್ಳಲೇಬೇಕಾಗಿಲ್ಲ.

ಮೊದಲನೆಯದಾಗಿ ಶವಗಳನ್ನು ಹೂಳುವ ಸಂಪ್ರದಾಯವು ಮೂಲತಃ ಮಹರರಲ್ಲಿ ಇರಲಿಲ್ಲವೆಂಬುದಕ್ಕೆ ಸೂಚನೆಗಳಿವೆ. ಅವರು ಶವಗಳನ್ನು ತೆಗೆದುಕೊಂಡು ಹೋಗುವಾಗ ಅದರ ಮುಂದೆ, ಈಗಲೂ ಬೆಂಕಿಯನ್ನು ತೆಗೆದುಕೊಂಡು ಹೋಗುವುದು ಹಿಂದೆ ಮಹರರು ಶವಗಳನ್ನು ಸುಡುತ್ತಿದ್ದರು ಎಂಬುದಕ್ಕೆ ಪುರಾವೆಯಾಗಿದೆ.

ಹೀಗೆ ಬೆಂಕಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಒಂದು ನಿರ್ದಿಷ್ಟವಾದ ಉದ್ದೇಶವಿರಬೇಕು ಮತ್ತು ಸತ್ತವರ ದೇಹವನ್ನು ಸುಡುವುದಕ್ಕಲ್ಲದೆ ಬೇರೆ ಯಾವುದೋ ಒಂದು ಉದ್ದೇಶವೂ ಇದಕ್ಕೆ ಇರಲಿಲ್ಲ. ಮಹರರಲ್ಲಿ ಹಿಂದೆ ಇದ್ದ ಶವಗಳನ್ನು ಸುಡುವಪದ್ಧತಿಯು ಹೂಳುವ ಪದ್ಧತಿಗೆ ಹೇಗೆ ದಾರಿಮಾಡಿಕೊಟ್ಟಿತು ಎಂಬುದಕ್ಕೆ ಖಚಿತವಾದ ಕಾರಣವನ್ನು ಕೊಡುವುದು ಕಷ್ಟ. ಕಾಲಾನುಕ್ರಮದಲ್ಲಿ ಮಹರರನ್ನು ಅಸ್ಪೃಶ್ಯರು ಎಂದು ಪರಿಗಣಿಸಿದ ನಂತರ ಅವರ ಮೇಲೆ ಶವಗಳನ್ನು ಹೂಳುವ ಪದ್ಧತಿಯನ್ನು ಹೇರಲಾಯಿತು ಎಂದು ತೋರುತ್ತದೆ. ಪದ್ಮಪುರಾಣದಲ್ಲಿ ಈ ವಾದಕ್ಕೆ ಸಾಕಷ್ಟು ಬೆಂಬಲವು ಸಿಗುತ್ತದೆ. ಇದು ನಿಜವಾದರೆ, ಮಹರರು ಆದಿವಾಸಿಗಳಲ್ಲ, ಹಿಂದೆ ಒಂದು ಕಾಲದಲ್ಲಿ ಅವರು ಮರಾಠ ಸಮುದಾಯದ ಭಾಗವಾಗಿದ್ದು, ಕ್ಷತ್ರಿಯರಾಗಿದ್ದರು ಎಂಬುದಕ್ಕೆ ಸಿಗುವ ವ್ಯಾಪಕವಾದ ಬೆಂಬಲಗಳನ್ನು ಅವರು ಶವಗಳನ್ನು ಹೂಳುತ್ತಿರುವ ಪದ್ಧತಿಯು ಮೀರಿ ನಿಲ್ಲಲಾರದು.

೨

**ಅವರು ಊರಿನ ಹೊರಗೆ ಏಕೆ ಇರುತ್ತಾರೆ**

ಮಹರರು ಊರ ಹೊರಗೆ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎನ್ನುವುದು ಬಹಳ ಕುಖ್ಯಾತವಾದ ಸಂಗತಿ. ಊರುಗಳು ಯಾವುದೇ ನಿರ್ದಿಷ್ಟ ಎಲ್ಲೆಗಳನ್ನು ಹಾಕಿರದ, ಬಯಲಿನಲ್ಲಿ ಕಟ್ಟಲ್ಪಟ್ಟಿರುವಾಗ, ವಿಚಾರವಂತಿಕೆಗೆ ಹೊರತಾದವರಿಗೆ ಈ ವಿಷಯವು ಅರಿವಿಗೇ ಬರುವುದಿಲ್ಲ. ಮಹರರು ಊರ ಹೊರಗಿನವರು ಎಂದು ಗಣಿಸಲ್ಪಟ್ಟಿರುವುದನ್ನು ಎರಡು ವಿಷಯಗಳು ನಿರ್ವಿವಾದವಾಗಿ ತೋರಿಸುತ್ತವೆ. ಊರಿನಲ್ಲಿರುವ ಪ್ರತಿಯೊಬ್ಬನೂ ತನ್ನ ಊರಿನಲ್ಲಿ ಎರಡು ವಿಭಾಗಗಳನ್ನು ಪ್ರತ್ಯೇಕವಾಗಿ ಗುರುತಿಸುತ್ತಾನೆ – ಮೊದಲನೆಯದು ಊರು ಮತ್ತು ಎರಡನೆಯದು ಮಹರ್‌ವಾಡ. ಇದರ ಅರ್ಥವೆಂದರೆ, ಮಹರರು ಇರುವ ಪ್ರದೇಶವಾದ ಮಹರ್‌ವಾಡವು, ಊರಿನ ಒಳಗೆ ಇರುವುದಿಲ್ಲ. ಊರಿನ ಸುತ್ತ ಗೋಡೆಯಿದ್ದರೆ ಅದು ಈ ಅಂತರಕ್ಕೆ ಕಣ್ಣಿಗೆ ಹೊಡೆಯುವಂತಹ ದೃಷ್ಟಾಂತವಾಗುತ್ತದೆ. ಇಂತಹ ಗೋಡೆಗಳು ಇರುವ ಊರಿನಲ್ಲಿ, ಮಹರರು ಈ ಗೋಡೆಗಳ ಹೊರಗೆ ಇರುತ್ತಾರೆ. ಮೊದಲನೆಯ ಪ್ರಶ್ನೆಯನ್ನು ಕುರಿತು ಈ ಲೇಖನದಲ್ಲಿ ಹೇಳಿರುವುದರ ಬೆಳಕಿನಲ್ಲಿ ಈ ವಿಷಯವನ್ನು ಗಮನಿಸಿದರೆ, ಈ ವಿಷಯವು ಎರಡನೆಯ ಪ್ರಶ್ನೆಗೆ ಅರ್ಥವನ್ನು ತಂದುಕೊಡುತ್ತದೆ. ಮಹರರು ಆದಿವಾಸಿಗಳಲ್ಲದಿರುವಾಗ ಸಮಾಜವು ಅವರನ್ನು ತಿರಸ್ಕೃತರೆಂಬಂತೆ ಏಕೆ ನಡೆಸಿಕೊಳ್ಳುತ್ತಿದೆ ಮತ್ತು ಅವರನ್ನು ಊರಿನ ಹೊರಗೆ ವಾಸಿಸುವಂತೆ ಏಕೆ ಮಾಡಲಾಗಿದೆ? ಈ ಪ್ರಶ್ನೆಗೆ ಹೊಳೆಯಬಹುದಾದ ಒಂದೇ ಒಂದು ಸಹಜವಾದ ಉತ್ತರವು ನಮಗೆ ಮನುಸ್ಮೃತಿಯಲ್ಲಿರುವ ಕಟ್ಟುಕಟ್ಟಳೆಯಲ್ಲಿ ದೊರೆಯುತ್ತದೆ. ಚಂಡಾಲರ ವಿಷಯವನ್ನು ಹೇಳುತ್ತಾ, ಅವರು ಊರಿನ ಎಲ್ಲೆಯ ಹೊರಗೆ ವಾಸಿಸಬೇಕೆಂದು ಮನುವು ವಿಧಿಸುತ್ತಾನೆ. ಚಂಡಾಲರ ಬಗ್ಗೆ ಮನುವು ಹೇಳಿರುವ ನಿಯಮವನ್ನೇ ಹಿಂದೂ ರಾಜರು ಅದೇ ಸ್ಥಿತಿಯಲ್ಲಿದ್ದ ಎಲ್ಲಾ ವರ್ಗಗಳವರ ಬಗ್ಗೆಯೂ ನಿಷ್ಠುರವಾಗಿ ಜಾರಿಗೆ ತಂದರು. ಆದರೆ, ಇನ್ನೂ ಆಳವಾಗಿ ಯೋಚಿಸಿದಾಗ, ನಮ್ಮ ಪ್ರಶ್ನೆಗೆ ಇದು ಸರಿಯಾದ ಉತ್ತರವೆಂದು ನನಗೆ ಅನಿಸುವುದಿಲ್ಲ. ಮನುವು ಹೇಳಿರುವುದು ನಿಜವಾದ ಸ್ಮೃತಿಕಾರರು

ವಿಧಿಸುವ ಕಟ್ಟಳೆಯಂತಿಲ್ಲ. ಚಾರಿತ್ರಿಕವಾಗಿ ನಡೆಯುತ್ತಿದ್ದ ಬಲಾಬಲಗಳ ಮೇಲಾಟಗಳ ಫಲವು ತನ್ನ ಉದ್ದೇಶಕ್ಕೆ ಪೂರಕವಾದುದರಿಂದ ಅದನ್ನೇ ಅವನೂ ತನ್ನ ಸ್ಮೃತಿಯಲ್ಲಿ ಕಟ್ಟಳೆಯನ್ನಾಗಿ ವಿಧಿಸಿದನೆಂದು ನನ್ನ ಬುದ್ಧಿಗೆ ತೋರುತ್ತದೆ. ಮೇಲಿನ ಪ್ರಶ್ನೆಯ ಉತ್ತರಕ್ಕಾಗಿ ನಾವು ಬೇರೆಯ ದಿಕ್ಕಿನತ್ತ ನೋಡಬೇಕು. ನನ್ನ ದೃಷ್ಟಿಯಲ್ಲಿ, ಈ ಪ್ರಶ್ನೆಗೆ ನಿಜವಾದ ಉತ್ತರವನ್ನು ಕಂಡುಹಿಡಿಯಲು ನಮ್ಮ ದೃಷ್ಟಿ ದನಗಾಹಿ ಸಮುದಾಯವು ಒಂದೇ ಕಡೆಯಲ್ಲಿ ನೆಲೆನಿಲ್ಲುವಂತೆ ಆದ ಕಾಲದತ್ತ ಹರಿಯಬೇಕಾಗಿದೆ. ಒಂದು ಸಮುದಾಯದ ಪದ್ಧತಿಗಳು ಮುಖ್ಯವಾಗಿ ಆ ಸಮುದಾಯದ ಸಿರಿವಂತಿಕೆಯ ಮೇಲೆ ಅವಲಂಬಿತವಾಗಿರುತ್ತದೆ ಎಂಬುದು ನಾಗರಿಕತೆಯ ಅಧ್ಯಯನ ಮಾಡುವ ಎಲ್ಲಾ ವಿದ್ಯಾರ್ಥಿಗಳಿಗೂ ಸಾಮಾನ್ಯವಾಗಿ ತಿಳಿದಿರುವ ಸಂಗತಿ. ದನಗಾಹಿ ಸಮುದಾಯದವರು ಒಂದೇ ಪ್ರದೇಶದಲ್ಲಿ ಬಹುಕಾಲ ವಾಸಿಸದೆ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವ ಅಲೆಮಾರಿ ಜೀವನವನ್ನು ನಡೆಸುತ್ತಿದ್ದರು. ಇದಕ್ಕೆ ಕಾರಣ ಅವರ ಸಿರಿವಂತಿಕೆಯಿದ್ದದ್ದು ಅವರು ಹೊಂದಿರುತ್ತಿದ್ದ ಕುರಿ ಮತ್ತು ದನಗಳ ಸಂಖ್ಯೆಯನ್ನು ಅವಲಂಬಿಸಿರುತ್ತಿತ್ತು. ಮೇವು, ನೀರುಗಳು ಯಥೇಚ್ಛವಾಗಿ ಸಿಗುವಂತಹ ಪ್ರದೇಶಗಳಿಗೆ ಹೋಗುವುದು ಅವರಿಗೆ ಸಹಜವಾಗಿರುತ್ತಿತ್ತು. ವ್ಯವಸಾಯವನ್ನು ಕಲಿತು, ಭೂಮಿಯನ್ನು ಕೃಷಿಮಾಡಲಾರಂಭಿಸಿದ ಸಮುದಾಯದ ಆಸ್ತಿಯು ಪ್ರಧಾನವಾಗಿ ಭೂಮಿಯೇ ಆಗಿದ್ದುದರಿಂದ ಅವರು ಅಲೆಮಾರಿ ಜೀವನವನ್ನು ತೊರೆದು ಒಂದೇ ಸ್ಥಳದಲ್ಲಿ ನೆಲೆಸುವುದು ಅವರಿಗೆ ಆವಶ್ಯಕವಾಯಿತು. ಅಲೆಮಾರಿ ಜೀವನವನ್ನು ತೊರೆದು ಒಂದೇ ಸ್ಥಳದಲ್ಲಿ ನೆಲೆಸುವಂತಹ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯು ಸಾಕಷ್ಟು ಕಾಲವನ್ನು ತೆಗೆದುಕೊಂಡಿತು. ಈ ಪ್ರಕ್ರಿಯೆ ಕಾಲದಲ್ಲಿ ಕೆಲವರು ಒಂದೆಡೆ ಸ್ಥಿರವಾಗಿ ನೆಲೆಸಿದರೆ, ಮತ್ತೆ ಕೆಲವರು ತಮ್ಮ ಅಲೆಮಾರಿತನವನ್ನು ಮುಂದುವರೆಸುತ್ತಾ ಇದ್ದರು. ಆ ಕಾಲದಲ್ಲಿನ ಜನರು ಪಂಗಡ-ಪಂಗಡಗಳಾಗಿ ಜೀವಿಸುತ್ತಿದ್ದರು ಮತ್ತು ಇಂತಹ ಪಂಗಡಗಳ ನಡುವೆ ಪರಸ್ಪರ ಯುದ್ಧಗಳು ನಡೆಯುತ್ತಿದ್ದವು ಎನ್ನುವುದನ್ನು ಮಾನವಜನಾಂಗದ ನಾಗರಿಕತೆಯ ಚರಿತ್ರೆಯನ್ನು ಅಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳೆಲ್ಲರೂ ಚೆನ್ನಾಗಿ ಬಲ್ಲರು. ನಾವು ಈಗ ಬಹಳ ಹಿಂದಕ್ಕೆ ಹೋಗಿ, ಅಲೆಮಾರಿತನವನ್ನು ತೊರೆದು ಒಂದೇ ಕಡೆ ನೆಲೆಸಿದ ಒಂದು ಸಮುದಾಯದ ಅತ್ಯಂತ ಪ್ರಮುಖವಾದ ಆವಶ್ಯಕತೆ ಏನಿತ್ತು ಎಂಬುದನ್ನು ಊಹಿಸಿಕೊಳ್ಳಬೇಕು. ಒಂದೆಡೆ, ಈ ಸಮುದಾಯದ ಬಳಿ ಧಾನ್ಯ ಸಂಪತ್ತು ಇತ್ತು ಅದು ಕುರಿ ಮತ್ತು ದನಗಳ ಒಡೆತನವನ್ನೂ ಹೊಂದಿತ್ತು ಮತ್ತು ಇಂದು ನಾವು ಊರು ಎಂದು ಹೇಳುವ ವಸತಿಗಳನ್ನು ಏರ್ಪಡಿಸಿಕೊಂಡಿತ್ತು. ಇನ್ನೊಂದೆಡೆ, ಈ ಸಮುದಾಯವು ಹೊಂದಿದ್ದ ಧಾನ್ಯ, ಕುರಿ, ದನಗಳ ಮೇಲೆ ಹದ್ದಿನ ಕಣ್ಣಿಟ್ಟುಕೊಂಡಿದ್ದ ಇನ್ನೊಂದು ಅಲೆಮಾರಿ ಸಮುದಾಯವು ಇತ್ತು. ಸಹಜವಾಗಿಯೇ, ಈ ಅಲೆಮಾರಿ ಸಮುದಾಯಗಳ ಆಕ್ರಮಣದಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ಮತ್ತು ಅವರು ತಮ್ಮ ಸಂಪತ್ತನ್ನು ಕೊಳ್ಳೆಹೊಡೆಯದ ಹಾಗೆ ನೋಡಿಕೊಳ್ಳುವುದು ಹೇಗೆ ಎಂಬುದು ಒಂದೇ ಪ್ರದೇಶದಲ್ಲಿ ನೆಲೆನಿಂತ ಸಮುದಾಯದ ಆದ್ಯ ಪ್ರಶ್ನೆಯಾಗಿತ್ತು. ಅವರು ತಮ್ಮ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳಬಲ್ಲವರಾಗಿದ್ದರು? ಅಂತಹ ರಕ್ಷಣೆಗೆ ಅಗತ್ಯವಾದ ವ್ಯವಸ್ಥೆಯನ್ನು ಹೇಗೆ ಮಾಡಿಕೊಳ್ಳುತ್ತಿದ್ದರು? ಅವರು ತಾವಾಗಿಯೇ ಅಲೆಮಾರಿಗಳ ವಿರುದ್ಧ ಅಥವಾ ಅಲೆಮಾರಿಗಳು ಆಕ್ರಮಿಸಿದಾಗ ಅವರನ್ನು ಎದುರಿಸಲು ಶಾಶ್ವತವಾಗಿ ಯುದ್ಧಮಾಡುತ್ತಲೇ ಇರುವುದು ಸಾಧ್ಯವಿರಲಿಲ್ಲ. ಕಾರಣ, ಅವರು ತಮ್ಮ ಹೊಸವೃತ್ತಿಯಾದ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಗಿತ್ತು ಮತ್ತು ಹೀಗಾಗಿ ಅವರ ಶಕ್ತಿಯೆಲ್ಲವೂ ಈ ಉದ್ದೇಶಕ್ಕಾಗಿಯೇ ಮೀಸಲಾಗಿರುತ್ತಿತ್ತು. ಅವರಿಗಿದ್ದ ಒಂದೇ ದಾರಿಯೆಂದರೆ, ತಮ್ಮ ಪಂಗಡದ ಮುಖಂಡನತ್ತ ಮುಖಮಾಡುವುದು. ಆದರೆ, ತನ್ನ ಪಂಗಡದ ಎಲ್ಲ ಸದಸ್ಯರೂ ಭೂಮಿಯನ್ನು

ಉಳುವುದರಲ್ಲಿ ಸತತವಾಗಿ ತೊಡಗಿಕೊಂಡಿರುವುದರಿಂದ ಮತ್ತು ಇದರಿಂದಾಗಿ ಆಕ್ರಮಣಗಳ ವಿರುದ್ಧ ಯುದ್ಧಮಾಡುವುದಕ್ಕೆ ಸಮಯ ಮತ್ತು ಶಕ್ತಿಗಳ ಅಭಾವವು ಅವರಿಗೆ ಇರುತ್ತಿದ್ದುದರಿಂದ, ಪಂಗಡದ ಮುಖಂಡನು ಇಂತಹ ಪರಿಸ್ಥಿತಿಯಲ್ಲಿ ತನ್ನ ಪಂಗಡದ ರಕ್ಷಣಾ ಕಾರ್ಯವನ್ನು ಹೇಗೆ ನಿಭಾಸಲು ಶಕ್ತನಾಗುತ್ತಿದ್ದ? ಅಲೆಮಾರಿಗಳ ಆಕ್ರಮಣದ ವಿರುದ್ಧ ತನ್ನ ಪಂಗಡದ ರಕ್ಷಣೆಗಾಗಿ ತನ್ನ ಆಜ್ಞಾನುವರ್ತಿಯಾಗಿ ಕೆಲಸಮಾಡುವಂತಹ ಇತರ ಬಲಗಳತ್ತ ಅವನು ಯೋಚಿಸಬೇಕಾಗಿತ್ತು. ರಕ್ಷಣಾ ಬಲಕ್ಕೆ ಆತ ಯಾವ ಮೂಲದಿಂದ ಜನಗಳನ್ನು ನೇಮಿಸಿಕೊಳ್ಳಲು ಸಾಧ್ಯವಿತ್ತು? ಅವನಿಗಿದ್ದದ್ದು ಒಂದೇ ಮೂಲ. ಅವರ ನೆಲೆಯ ಸಮೀಪದಲ್ಲಿಯೇ ಬೇರೆಬೇರೆ ಪಂಗಡಗಳ ನಡುವೆ ಹೋರಾಟವು ಸಾಗುತ್ತಾ ಇರುತ್ತಿತ್ತು. ಒಂದು ಪಂಗಡವು ಒಂದಲ್ಲ ಒಂದು ಪಂಗಡ ಮೇಲೆ ಯುದ್ಧವನ್ನು ನಡೆಸುತ್ತಲೇ ಇರುತ್ತಿತ್ತು. ಈ ಯುದ್ಧಗಳಲ್ಲಿ ಒಂದು ಪಂಗಡವು ಸೋತು ಸುಣ್ಣವಾಗಿ, ಆ ಪಂಗಡದ ಸದಸ್ಯರು ಮಾನಸಿಕವಾಗಿ ಜರ್ಝರಿತವಾಗಿರುತ್ತಿದ್ದರು. ತಮ್ಮ ರಕ್ಷಣೆಯ ಬಗ್ಗೆಯೇ ಅವರಲ್ಲಿ ಭಯವು ಮನೆಮಾಡಿರುತ್ತಿತ್ತು ಮತ್ತು ಅವರು ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಲು ಹವಣಿಸುತ್ತಿದ್ದರು. ಹೀಗೆ ಸೋತುಹೋಗಿದ್ದ ಪಂಗಡದವರು ಮತ್ತು ಒಂದೇ ಕಡೆ ನೆಲೆನಿಂತ ಪಂಗಡದವರು ಒಟ್ಟಾಗಿ ತಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳುವಂತಾದರೆ ಅದು ಪರಸ್ಪರವಾಗಿ ಎಷ್ಟು ಉತ್ತಮವಾಗಿರುತ್ತದೆ? ತನ್ನ ಪಂಗಡದವರ ವೃತ್ತಿಗೆ ಭಂಗತಾರದಂತೆ, ಆ ಪಂಗಡದ ಮುಖಂಡನು ತಮ್ಮ ನೆಲೆಯನ್ನು ಕಳೆದುಕೊಂಡಿದ್ದ ಪಂಗಡಗಳವರ ಬಲವನ್ನು ಪಡೆದು ತನ್ನ ಪಂಗಡದವರ ಶಕ್ತಿಯನ್ನು ವೃದ್ಧಿಸಿಕೊಳ್ಳಬಹುದಿತ್ತು. ಈಗಾಗಲೇ ನೆಲೆನಿಂತಿರುವ ಪಂಗಡಗಳ ಆಶ್ರಯದಲ್ಲಿ ತಮ್ಮ ರಕ್ಷಣೆಗೆ ಮತ್ತು ಅನ್ನಕ್ಕೆ ದಾರಿಯನ್ನು ಕಂಡುಕೊಳ್ಳುವುದು ಈ ಹಿಂದೆ ತಮ್ಮದೆಲ್ಲವನ್ನೂ ಕಳೆದುಕೊಂಡಿದ್ದ ಪಂಗಡಗಳವರಿಗೆ ಸುಲಭವಾಗಿ ಕಂಡಿರಬೇಕು. ಆದರೆ ಈ ಹೊಸ ಪಂಗಡದವರು ತಮ್ಮ ಪಂಗಡಕ್ಕಿಂತ ಬೇರೆಯೇ ಆದ ಪಂಗಡಕ್ಕೆ ಸೇರಿದವರಾದುದರಿಂದ ಅವರನ್ನು ತಮ್ಮ ನಡುವೆಯೇ ವಾಸಿಸಲು, ಈಗಾಗಲೇ ನೆಲೆನಿಂತ ಪಂಗಡದವರು ಅವಕಾಶಕೊಡಲಿಲ್ಲ. ಸಂಬಂಧಿಗಳು ಮಾತ್ರ ಒಂದೇ ಊರಿನಲ್ಲಿ ನೆಲೆಸಲು ಅವಕಾಶವಿತ್ತು.

ಇಂತಹ ಪರಿಸ್ಥಿತಿಯಲ್ಲಿ ನೆಲೆನಿಂತ ಸಮುದಾಯದ ಮುಖಂಡನು ಸೋತು ಹೋಗಿದ್ದ ಸಮುದಾಯದವರು ನೆಲಸಲು ಸಹಾಯಮಾಡಬಹುದಾಗಿದ್ದ ಮಾರ್ಗವೆಂದರೆ, ಅವರಿಗೆ ತಮ್ಮ ಸಮುದಾಯವು ನೆಲೆಯಾಗಿ ಮಾಡಿಕೊಂಡಿರುವ ಊರಿನ ಹೊರಗೆ ನೆಲಸಲು ಅವಕಾಶವನ್ನು ಕೊಡುವುದು. ನನ್ನ ತಿಳಿವಳಿಕೆಯ ಪ್ರಕಾರ, ಈ ಒಂದು ವಿಧಾನವೇ ಮಹರರು ಊರಹೊರಗೆ ನೆಲಸಲು ಕಾರಣವಾಯಿತು. ಮಹರರು ಹಿಂದೆ ತಮ್ಮತಮ್ಮಲ್ಲೇ ಹೊಡೆದಾಡಿ ಅತಂತ್ರ ಸ್ಥಿತಿಯನ್ನು ತಲುಪಿದ್ದ ಪಂಗಡಗಳ ಭಾಗವಾಗಿದ್ದರು. ಪಾಟೀಲ ಎಂದು ಕರೆಯಲ್ಪಡುವ ಊರಿನ ಮುಖಂಡ ಅವರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಅವರನ್ನು ತನ್ನ ಊರ ಗಡಿಗೆ ಹೊಂದಿಕೊಂಡಿರುವಂತೆ ವಾಸಿಸಲು ಅನುಮತಿಕೊಟ್ಟ. ಮಹರರು ಪಾಟೀಲನ ರಕ್ಷಕದಳವಾಗಿ ಕಾರ್ಯನಿರ್ವಹಿಸಿದರು ಮತ್ತು ಅದಕ್ಕಾಗಿ ಅವರಿಗೆ ಕೆಲವು ಜಾಗಗಳನ್ನು ಕೊಡಲಾಗಿತ್ತು. ಮಹರರು ಊರಹೊರಗೆ ವಾಸಿಸುತ್ತಿರುವುದು ವಿಚಿತ್ರವೆನಿಸುವುದಿಲ್ಲ. ವಾಸ್ತವವಾಗಿ ಅವರು ಕೆಳವರ್ಗಕ್ಕೆ ಸೇರಿದವರು ಎನ್ನುವುದು ಇದರಿಂದ ಹೊರಡುವುದಿಲ್ಲ. ತನ್ನ ಗ್ರಾಮದ ರಕ್ಷಣೆಗಾಗಿ ಅವರನ್ನು ಗ್ರಾಮದ ಮುಖಂಡನು ಕರೆತಂದು, ಅವರನ್ನು ಊರ ಹೊರಗೆ ನೆಲಸುವಂತೆ ಮಾಡಿದುದು ಅವರು ಕೆಳವರ್ಗಕ್ಕೆ ಸೇರಿದವರು ಎಂಬ ದೃಷ್ಟಿಯಿಂದಲ್ಲ, ಬದಲಿಗೆ ಅವರು ಹೊರಗಿನಿಂದ ಬಂದವರು ಎಂಬ ಕಾರಣಕ್ಕೆ. ಈ ವಾದಕ್ಕೆ ಬೆಂಬಲವಾಗಿ ವೇಲ್ಸ್ ಮತ್ತು ಐರ್ಲೆಂಡ್‌ಗಳಲ್ಲಿ ನಡೆದುದನ್ನೇ ನೋಡಬಹುದು. ಐರ್ಲೆಂಡಿನವರು

ನೆಲೆನಿಂತ ಗ್ರಾಮ ಸಮುದಾಯದವರಾಗಿದ್ದರು, ಮತ್ತು ಅವರ ಊರಿನ ಹೊರಭಾಗದಲ್ಲಿ ಬೋವಾರಿಸ್ ಎಂಬ ಪಂಗಡದವರು ನೆಲೆಸಿದ್ದರು ಎಂಬುದು ನಮಗೆ ಐರ್ಲೆಂಡಿನ ಬ್ರೆಹೋನ್ ಕಾನೂನನ್ನು ಅಭ್ಯಾಸಮಾಡಿದರೆ ತಿಳಿಯುತ್ತದೆ. ಬೋವಾರಿಸ್ ಪಂಗಡದವರು ಪಂಗಡಗಳ ನಡುವಿನ ಹೋರಾಟದಲ್ಲಿ ಸೋತು ಅತಂತ್ರರಾಗಿದ್ದವರು. ಅವರನ್ನು ಆ ಊರಿನ ಮುಖಂಡ ತನ್ನ ಸೇವೆಯಲ್ಲಿರಿಸಿಕೊಳ್ಳಲು ಮತ್ತು ತನ್ನ ಸಮುದಾಯದ ರಕ್ಷಣೆಯ ಉದ್ದೇಶದಿಂದ ಕರೆದುಕೊಂಡು ಬಂದಿದ್ದ. ಗ್ವಾಲೆಗಳು ಎಂದು ಹೆಸರಾಗಿರುವ ವೇಲ್ಸ್ ಗ್ರಾಮಗಳಲ್ಲಿ ಇಂತಹುದೇ ಪರಿಸ್ಥಿತಿ ಏರ್ಪಟ್ಟಿತ್ತು. ಪ್ರತಿಯೊಂದು ಗ್ವಾಲೆ ಗ್ರಾಮದ ಒತ್ತಿನಲ್ಲಿಯೇ ಹೊರಗಿನವರು ವಾಸಿಸುತ್ತಿದ್ದರು. ಅವರನ್ನು ಆಲ್ತುದ್ ಎಂದು ಕರೆಯುತ್ತಿದ್ದರು. ಪಂಗಡ–ಪಂಗಡಗಳ ನಡುವಿನ ಹೋರಾಟದಲ್ಲಿ ಸೋತು ಹೋಗಿದ್ದ ಅವರನ್ನು ಆ ಊರಿನ ಮುಖಂಡ ತನ್ನ ಗ್ವಾಲೆಯ ರಕ್ಷಣೆಗಾಗಿ ಕರೆದುಕೊಂಡು ಬಂದಿದ್ದ. ಇದು, ನನ್ನ ಪ್ರಕಾರ, ನಾವು ಕೇಳಿದ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಡುತ್ತದೆ. ಐರ್ಲೆಂಡಿನ ಎರಡೂ ಪಂಗಡಗಳವರು ಒಟ್ಟಾಗಿ ಸೇರಿಕೊಂಡು ಗ್ರಾಮದ ಇತರರೊಡನೆ ಒಂದಾದರೂ, ಭಾರತದಲ್ಲಿ ಮಹರರು ಮಾತ್ರ ಪ್ರತ್ಯೇಕವಾದ ಸಮುದಾಯವಾಗಿ ಏಕೆ ಮುಂದುವರಿದರು? ಇದಕ್ಕೆ ನೀಡಬೇಕಾದ ಉತ್ತರವು ಬಹಳ ಸುಲಭವಾಗಿದೆ. ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ – ಇವು ಮಹರರು ಇತರರೊಡನೆ ಬೆರೆತುಕೊಳ್ಳಲು ಅವಕಾಶವೀಯಲಿಲ್ಲ. ಆದರೆ ಇದು, ನಾವು ಈ ಲೇಖನದ ಪ್ರಾರಂಭದಲ್ಲಿ ಎತ್ತಿದ್ದ ಮೂರು ಪ್ರಶ್ನೆಗಳಲ್ಲಿ ಕಡೆಯದಕ್ಕೆ ದಾರಿಮಾಡಿಕೊಡುತ್ತದೆ.

**೩**

**ಮಹರರನ್ನು ಅಸ್ಪೃಶ್ಯರು ಎಂದು ಏಕೆ ಪರಿಗಣಿಸಲಾಯಿತು?**

ಅಸ್ಪೃಶ್ಯತೆಯ ಜನನದ ಮೂಲವನ್ನು ಕಂಡುಹಿಡಿಯಲು ಬ್ರಾಹ್ಮಣರ ಮತ್ತು ಬೌದ್ಧರ ನಡುವಿನ ತಿಕ್ಕಾಟವನ್ನು ಗಮನಿಸಬೇಕು. ಮೇಲಿನ ಪ್ರಶ್ನೆಗೆ ಈ ಉತ್ತರವು ವಿಚಿತ್ರವೆನಿಸಿದರೂ ಇದೇ ನಿಜವಾದ ಉತ್ತರವೆನ್ನುವುದರಲ್ಲಿ ಸಂಶಯವೇ ಇಲ್ಲ. ವಿಷಯವನ್ನು ವಿಶದಗೊಳಿಸಲು ಬೌದ್ಧಮತವು ಯಾವ ತತ್ತ್ವಗಳನ್ನು ಸಮರ್ಥನೆ ಮಾಡಲು ಹೊರಟಿತ್ತು ಎಂಬುದನ್ನು ವಿವರಿಸುವುದು ಅಗತ್ಯ. ಎಲ್ಲಾ ವಿವರಗಳನ್ನೂ ನೋಡುವುದು ಅನಗತ್ಯ. ಬೌದ್ಧಧರ್ಮವು ಕಟುವಾಗಿ ವಿರೋಧಿಸಿದ ಪದ್ಧತಿಗಳಲ್ಲಿ ಯಜ್ಞವೂ ಒಂದು. ಯಜ್ಞವು ಆರ್ಯರ ಧರ್ಮದ ಒಂದು ಪ್ರಮುಖ ಅಂಗವಾಗಿತ್ತು ಮತ್ತು ಅದರಲ್ಲಿ ಪಶುಬಲಿಯೂ ಒಳಗೊಂಡಿತ್ತು.

ಆರ್ಯರ ಆರ್ಥಿಕ ಬದುಕಿನಲ್ಲಿ ಹಸುಗಳು ಬಹಳ ಮುಖ್ಯವಾದುದು. ಅವುಗಳ ಮೇಲೆಯೇ ಇಡೀ ಕೃಷಿ ವ್ಯವಸ್ಥೆಯು ಅವಲಂಬಿಸಿರುತ್ತಿತ್ತು. ಅವರ ಆಹಾರದಲ್ಲಿ ಪ್ರಧಾನವಾಗಿದ್ದ ಹಾಲನ್ನು ಹಸುಗಳು ಸರಬರಾಜು ಮಾಡುತ್ತಿದ್ದವು ಮತ್ತು ಭೂಮಿಯನ್ನು ಉಳಲು ಬೇಕಾದ ಎತ್ತುಗಳನ್ನು ಅವರಿಗೆ ನೀಡುತ್ತಿದ್ದವು. ಬುದ್ಧನು ಯಜ್ಞಕ್ಕೆ ವಿರೋಧವನ್ನು ಹೊಂದಿದ್ದುದು ತಾತ್ತ್ವಿಕ ಮಜಲಿನಲ್ಲಿಯೇ ಆದರೂ, ಸಾಮಾನ್ಯ ಜನತೆಯ ಬುದ್ಧಿಮತ್ತೆಯು ತಮ್ಮ ದಿನನಿತ್ಯದ ಜೀವನದ ಮಟ್ಟಕ್ಕಿಂತ ಮೇಲೆ ಹೋಗಿ ಆಲೋಚಿಸಲು ಸಮರ್ಥವಾಗಿರಲಿಲ್ಲ. ಬುದ್ಧನ ಈ ಕ್ರಮ, ಬ್ರಾಹ್ಮಣರು ಯಜ್ಞದ ಮೂಲಕ ಹಸುಗಳನ್ನು ಬಲಿಕೊಡುತ್ತಿದ್ದುದನ್ನು ತಪ್ಪಿಸುವುದಕ್ಕಾಗಿ ಎಂಬುದನ್ನು ಮಾತ್ರ ಅವರು ನೋಡಿದರು. ತಮಗೆ ಅತ್ಯಗತ್ಯವಾಗಿದ್ದ ಹಸುಗಳನ್ನು ಉಳಿಸುವ ಸಲುವಾಗಿ ಅವರು ಬುದ್ಧನತ್ತ ಮುಖಮಾಡಿದರು. ಹೀಗಾಗಿ ಹಸುವು ಮೊದಲು ವಿಶೇಷವಾದ ಸ್ಥಾನವನ್ನು ಗಳಿಸಿ ಕೊನೆಗೆ ಪೂಜನೀಯ ಸ್ಥಾನದಲ್ಲಿ ನಿಂತಿತು. ಸಾಮಾನ್ಯ ಜನತೆಯು ಹಸುಗಳನ್ನು ಯಜ್ಞದಲ್ಲಿ ಬಲಿಕೊಡಲು ನಿರಾಕರಿಸುತ್ತಿದ್ದುದರಿಂದ ಬ್ರಾಹ್ಮಣರು ತಮ್ಮ ಪಾರಮ್ಯಕ್ಕೆ ಗಂಡಾಂತರ ಬಂದುದನ್ನು

ಅರಿತುಕೊಂಡು, ಬೌದ್ಧದರ್ಮದತ್ತ ಆಕರ್ಷಿತರಾಗಿದ್ದ ಜನತೆಯ ಹೃದಯವನ್ನು ಗೆಲ್ಲಲು ಹೊಸ ಮಾರ್ಗಗಳನ್ನು ಹುಡುಕಬೇಕಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಬ್ರಾಹ್ಮಣರು ಮಾಡಿದುದೇನು? ಬೌದ್ಧ ಧರ್ಮದಲ್ಲಿ ಹಸುವಿಗೆ ನೀಡಿದ್ದ ಗೌರವವು ಜನತೆಯ ಮನಸ್ಸಿನ ಆಳದಲ್ಲಿ ಬಲವಾಗಿ ಬೇರುಬಿಟ್ಟಿದ್ದುದರಿಂದ, ಬ್ರಾಹ್ಮಣರಿಗೆ ತಾವೂ ಬೌದ್ಧರಂತೆಯೇ ಹಸುವನ್ನು ಪೂಜನೀಯ ಸ್ಥಾನಕ್ಕೆ ಏರಿಸಿ, ಯಜ್ಞಗಳನ್ನು ಕೈಬಿಡಬೇಕಾದುದು ಅನಿವಾರ್ಯವೇ ಆಗಿದ್ದಿತು. ಆದರೆ ಅಷ್ಟೇ ಸಾಲುತ್ತಿರಲಿಲ್ಲ. ಬ್ರಾಹ್ಮಣರು ಬೌದ್ಧಧರ್ಮದ ವಿರುದ್ಧ ಹೋರಾಟವನ್ನು ನಡೆಸಲು ಪ್ರಾರಂಭಿಸಿದಾಗ ಅವರ ಉದ್ದೇಶದ ಹಿಂದೆ ಧಾರ್ಮಿಕ ಭಾವನೆಗಳು ಪ್ರಮುಖವಾದವುಗಳಾಗಿರಲಿಲ್ಲ. ತಮ್ಮ ಮೇಲಿದ್ದ ಗೌರವ ಮತ್ತು ತಮಗೆ ಸಮಾಜದಲ್ಲಿದ್ದ ಸ್ಥಾನಮಾನಗಳು ಬೌದ್ಧಭಿಕ್ಷುಗಳ ಪಾಲಾಗಿದ್ದು ಅದನ್ನು ಪುನಃ ಹಿಂದಕ್ಕೆ ಪಡೆಯುವ ರಾಜಕೀಯ ಅವರ ಮನಸ್ಸಿನಲ್ಲಿ ಅವರನ್ನು ಈ ಕೆಲಸಕ್ಕೆ ಪ್ರಚೋದಿಸುತ್ತಿತ್ತು. ತಾವು ತಮ್ಮ ಪಾರಮ್ಯವನ್ನು ಮತ್ತೆ ಗಳಿಸಿಕೊಳ್ಳಬೇಕಾದರೆ, ಸಮಾಜದಲ್ಲಿ ಬೌದ್ಧರಿಗಿಂತ ಒಂದು ಹೆಜ್ಜೆ ಮುಂದಿರಬೇಕೆಂಬುದನ್ನು ಅವರು ತಿಳಿದಿದ್ದರು. ಅವರು ನಿಜವಾಗಿಯೂ ಬೌದ್ಧರಿಗಿಂತ ಮುಂದೆಹೋಗಿ, ಹಸುಗಳನ್ನು ಕೊಲ್ಲದಿರುವುದಷ್ಟೇ ಅಲ್ಲ ಬೇರೆ ಯಾವ ಪ್ರಾಣಿಯನ್ನೂ ಕೊಲ್ಲುವುದಿಲ್ಲವೆಂದು ಘೋಷಿಸಿದರು. ಬ್ರಾಹ್ಮಣರಲ್ಲಿ ಈಗ ಪ್ರಚಲಿತವಾಗಿರುವ ಸಸ್ಯಾಹಾರದ ಪದ್ಧತಿಯ ಮೂಲ ಬೌದ್ಧಧರ್ಮದ ಸವಾಲನ್ನು ಯಶಸ್ವಿಯಾಗಿ ಮೀರಲು ಅವರು ಹಿಂದೆ ಹೆಣೆದಿದ್ದ ಕಾರ್ಯತಂತ್ರದಲ್ಲಿದೆ.

ಇದರೊಂದಿಗೆ ನಾವು ಮನಸ್ಸಿನಲ್ಲಿ ಇಡಬೇಕಾದ ಮತ್ತೊಂದು ಅಂಶವಿದೆ. ಬುದ್ಧನ ಕಾಲದ ಹಿಂದಿನಿಂದಲೂ ಮತ್ತು ಅಶೋಕನ ಕಾಲದವರೆಗೂ ದನದ ಮಾಂಸವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ – ಎಲ್ಲ ವರ್ಗಗಳ ಆಹಾರವಾಗಿ ಪ್ರಚಲಿತವಾಗಿದ್ದಿತು. ಇದರಲ್ಲಿ ಅಸಾಮಂಜಸ್ಯವೇನೂ ಇಲ್ಲ. ಕುರಿ, ಆಡು ಅಥವಾ ಜಿಂಕೆಯ ರೀತಿಯಲ್ಲಿಯೇ ಹಸುವೂ ಒಂದು ಸಾಮಾನ್ಯ ಪ್ರಾಣಿ. ಜನರನ್ನು ನಾಲ್ಕು ವರ್ಣಗಳನ್ನಾಗಿ ವಿಭಜಿಸಿದ್ದರೂ, ಈ ನಾಲ್ಕು ವರ್ಣಗಳ ಜನರ ಆಹಾರರೀತಿಯಲ್ಲಿ, ಅದರಲ್ಲಿ ದನದ ಮಾಂಸವನ್ನು ತಿನ್ನುವುದರಲ್ಲಿ, ಯಾವುದೇ ಭೇದವಿರಲಿಲ್ಲ. ಭೇದವಿದ್ದದ್ದು, ಬಹುಶಃ ಕೆಲವರು ವಧೆಮಾಡಲ್ಪಟ್ಟ ಪ್ರಾಣಿಗಳ ಮಾಂಸವನ್ನು ಸೇವಿಸುತ್ತಿದ್ದರು. ಇಂತಹ ಮಾಂಸವನ್ನು ಕೊಂಡುಕೊಳ್ಳಲು ಶಕ್ತರಾಗಿದ್ದವರು ಮಾತ್ರ ಹೀಗೆ ಮಾಡುತ್ತಿದ್ದರು. ಹಣವಂತರು ಸತ್ತಪ್ರಾಣಿಗಳ ಮಾಂಸವನ್ನು ತಿನ್ನುತ್ತಿರಲಿಲ್ಲವಾದ್ದರಿಂದ, ಬಡವರು ಅಂತಹ ಪ್ರಾಣಿಗಳ ಮಾಂಸವನ್ನು ಆಹಾರದ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ, ತನ್ನ ಗ್ರಾಮದ ಹೊರವಲಯದಲ್ಲಿ ನೆಲೆಸಿದ್ದ ಪರಾಜಿತ ಸಮುದಾಯದವರಿಗೆ, ಅವರು ಸಲ್ಲಿಸಿದ ಸೇವೆಗಾಗಿ ಆ ಗ್ರಾಮದ ಮುಖಂಡನು ಸತ್ತ ಪ್ರಾಣಿಗಳನ್ನು ಕೂಲಿಯಾಗಿ ನೀಡುತ್ತಿದ್ದನು ಎಂದು ಊಹಿಸುವುದರಲ್ಲಿ ಅಸಹಜವಾದುದೇನೂ ಇಲ್ಲ. ಸತ್ಯಕ್ಕೆ ಅಪಚಾರವಾಗದೆ ಹೇಳಬಹುದಾದರೆ, ಅಶೋಕನ ಕಾಲಕ್ಕಿಂತ ಹಿಂದೆ, ಹಸುವಿನ ಮಾಂಸವನ್ನು ತಿನ್ನುವ ವಿಷಯದಲ್ಲಿ ಯಾವುದೇ ಭೇದಭಾವವಿರಲಿಲ್ಲ. ಎಲ್ಲರೂ ಗೋಮಾಂಸವನ್ನು ಭಕ್ಷಿಸುತ್ತಿದ್ದರು. ಗ್ರಾಮದಲ್ಲಿ ನೆಲೆಸಿದ್ದವರು ವಧೆಮಾಡಿದ ಹಸುವಿನ ಮಾಂಸವನ್ನು ತಿನ್ನುತ್ತಿದ್ದರೆ, ಊರ ಹೊರಗೆ ನೆಲೆಸಿದ್ದವರು ಸತ್ತ ಹಸುವಿನ ಮಾಂಸವನ್ನು ಸೇವಿಸುತ್ತಿದ್ದರು, ಎಂಬುದಷ್ಟೆ ಅಲ್ಲಿ ಇದ್ದ ವ್ಯತ್ಯಾಸ. ಈ ವ್ಯತ್ಯಾಸಕ್ಕೆ ಧಾರ್ಮಿಕ ಅಥವಾ ಸಾಮಾಜಿಕ ಕಾರಣಗಳಾವುವೂ ಇರಲಿಲ್ಲವೆಂಬುದನ್ನು ಗಮನಿಸಬೇಕು. ಈ ವ್ಯತ್ಯಾಸದ ಕಾರಣವು ಕೇವಲ ಬಡವ–ಬಲ್ಲಿದರ ನಡುವಿನ ಅಂತರದಿಂದ ಉದ್ಭವವಾದುದು. ಬುದ್ಧನ ನಂತರದ ಕಾಲದಲ್ಲಿ, ಅದರಲ್ಲಿಯೂ ವಿಶೇಷವಾಗಿ ಅಶೋಕನ ಕಾಲದಲ್ಲಿ ಒಂದು ಮುಖ್ಯ ಬದಲಾವಣೆಯು ಸಂಭವಿಸಿತು. ಹಸುಗಳ ವಧೆಯನ್ನು ಜನತೆಯು ತಾನಾಗಿಯೇ ಕೈಬಿಟ್ಟಿತು ಅಥವಾ ಸರಕಾರವೇ ಅದನ್ನು ನಿಷೇಧಿಸಿತು. ಇದರ ಪರಿಣಾಮವಾಗಿ, ತೀವ್ರತರವಾದ ವ್ಯತ್ಯಾಸವೊಂದು

ಹುಟ್ಟಿಕೊಂಡಿತು. ಅಲ್ಲಿಯವರೆಗೂ ಗೋಮಾಂಸವನ್ನು ಸೇವಿಸುತ್ತಿದ್ದ ಗ್ರಾಮಸ್ಥರು, ಗೋಹತ್ಯೆಯನ್ನು ನಿಷೇಧಿಸಿದ್ದರಿಂದ, ಅದನ್ನು ತಿನ್ನುವುದನ್ನು ನಿಲ್ಲಿಸಿದರು. ಗ್ರಾಮದ ಹೊರಗೆ ನೆಲೆಸಿದ್ದ ಪರಾಜಿತ ಸಮುದಾಯದವರು ಸತ್ತ ಹಸುಗಳ ಮಾಂಸವನ್ನು ತಿನ್ನುವುದನ್ನು ಮುಂದುವರೆಸಿದರು. ಸತ್ತಪ್ರಾಣಿಗಳ ಮಾಂಸವನ್ನು ತಿನ್ನುವುದರಲ್ಲಿ ಪ್ರಾಣಿಹತ್ಯೆಯ ಪಾತ್ರವಿರಲಿಲ್ಲವಾಗಿ ಅವರು ಹಸುವಿನ ಮಾಂಸವನ್ನು ತಿನ್ನುವುದನ್ನು ನಿಷೇಧಿಸುವ ಅಗತ್ಯವಿರಲಿಲ್ಲ. ನಂತರದ ದಿನಗಳಲ್ಲಿ ಹಸುವಿನ ಮಾಂಸವನ್ನು ತಿನ್ನದವರ ಮತ್ತು ಅದನ್ನು ತಿನ್ನುವವರ ನಡುವೆ ಇದ್ದ ಭೇದವು ಕೇವಲ ಆರ್ಥಿಕತೆಯಲ್ಲಿನ ವ್ಯತ್ಯಾಸದಿಂದ ಆಗಿದ್ದುದಲ್ಲ. ಅದು ಧಾರ್ಮಿಕ ಭಾವನೆಗಳಲ್ಲಿ ತನ್ನ ಬೇರನ್ನು ಬಿಡಲು ಕಾರಣವಾಯಿತು. ಹಸುಗಳನ್ನು ಕೊಲ್ಲುವುದು ಧಾರ್ಮಿಕ ದೃಷ್ಟಿಯಿಂದ ಒಪ್ಪಲಾಗದ ವಿಷಯವಾಯಿತು. ಇದರ ಪರಿಣಾಮವಾಗಿ, ಸತ್ತ ಹಸುಗಳ ಮಾಂಸವನ್ನು ತಿನ್ನುವವರು ಸಾಮಾಜಿಕವಾಗಿ ತಿರಸ್ಕೃತರ ಪಟ್ಟಿಯಲ್ಲಿ ಸೇರಬೇಕಾಯಿತು. ಈ ತಿರಸ್ಕಾರವೇ ಅಸ್ಪೃಶ್ಯತೆಯ ಜನನಿಯಾತು. ಈ ತಿರಸ್ಕಾರಕ್ಕೆ ಹಸುಗಳ ಮೇಲಿದ್ದ ಪೂಜ್ಯಭಾವ ಅಥವಾ ಅದರ ಅಭಾವವೇ ಕಾರಣವಾಯಿತು. ತಮ್ಮ ಹಿತರಕ್ಷಣೆಯನ್ನೇ ಕೇಂದ್ರವಾಗಿರಿಸಿಕೊಂಡಿದ್ದ ಬ್ರಾಹ್ಮಣರು ಹಸುವನ್ನು ಪೂಜ್ಯಭಾವದಿಂದ ನೋಡಿ ಅದನ್ನು ದೇವತೆಯ ಸ್ಥಾನಕ್ಕೆ ಏರಿಸಿದರು. ಇದು, ತಮ್ಮ ಈ ಭಾವನೆಗೆ ವಿರುದ್ಧವಾಗಿ ನಡೆದುಕೊಂಡವರನ್ನು, ಅಂದರೆ ಹಸುಗಳ ಬಗ್ಗೆ ಪೂಜ್ಯಭಾವನೆ ಇಲ್ಲದವರನ್ನು, ಅಸ್ಪೃಶ್ಯರು ಎಂದು ಪರಿಗಣಿಸುವವರೆಗೂ ಹೋಯಿತು ಮತ್ತು ಇದರಿಂದಾಗಿ ಅಸ್ಪೃಶ್ಯರೊಡನೆ ಸಂಬಂಧವಿಟ್ಟುಕೊಳ್ಳುವುದು ದೂಷ್ಯವೆಂಬಂತೆ ಆಯಿತು.

ಇದು ಅಸ್ಪೃಶ್ಯತೆಯ ಹುಟ್ಟಿನ ಕತೆ. ಅಸ್ಪೃಶ್ಯರು ಎಂದು ಕರೆಯಲ್ಪಡುವವರು ದುರದೃಷ್ಟದಿಂದ ಯಾವ ವೃತ್ತಿಯನ್ನು ಅವಲಂಬಿಸಬೇಕಾಯಿತು ಎಂಬುದನ್ನು ಅಧ್ಯಯನಮಾಡುವ ಯಾರೇ ಆದರೂ ಮಹರರನ್ನು ಅಸ್ಪೃಶ್ಯರು ಎಂದು ಏಕೆ ಪರಿಗಣಿಸಲಾಯಿತು ಎಂಬುದರ ಹಿಂದಿರುವ ಈ ಕಾರಣವನ್ನು ಅರಿಯಬಹುದು. ಭಾರತದ ಯಾವ ಭಾಗದಲ್ಲಿಯೇ ಆಗಲಿ, ಅಸ್ಪೃಶ್ಯರು ನಿರ್ವಹಿಸುತ್ತಿರುವ ಕರ್ತವ್ಯವನ್ನು ಪರೀಕ್ಷಿಸಿದಲ್ಲಿ, ಎಲ್ಲರ ಕರ್ತವ್ಯವೂ ಒಂದೇ ಆಗಿರುವುದನ್ನು ಕಾಣಬಹುದು. ಅವುಗಳೆಂದರೆ, ಸತ್ತ ಹಸುಗಳನ್ನು ಸಾಗಿಸುವುದು, ಸತ್ತ ಪ್ರಾಣಿಗಳ ಚರ್ಮವನ್ನು ಸುಲಿಯುವುದು, ಅವುಗಳ ಮಾಂಸವನ್ನು ತಿನ್ನುವುದು, ಮತ್ತು ಮೂಳೆಗಳನ್ನು ಮಾರುವುದು. ಈ ವಿಧದ ಜೀವನ ಶೈಲಿಯಲ್ಲಿ ಯಾವುದೇ ವ್ಯತ್ಯಾಸಗಳೂ ಇಲ್ಲ. ಇದನ್ನು ಎಲ್ಲಾ ಪ್ರಾಂತಗಳಲ್ಲಿಯೂ ಕಾಣಬಹುದು. ಸತ್ತ ಹಸುಗಳು ಮತ್ತು ಅಸ್ಪೃಶ್ಯತೆಯ ನಡುವೆ ಇರುವ ಈ ಸಂಬಂಧವು ಇಷ್ಟೇಕೆ ಗಾಢವಾಗಿದೆ? ಇವೆರಡೂ ಜೊತೆಯಲ್ಲಿಯೇ ಸಾಗುತ್ತಾ ಬರುತ್ತಿರುವುದಕ್ಕೆ ಕಾರಣವೇನು? ನನ್ನ ಪ್ರಕಾರ ಅವೆರಡರ ನಡುವೆ ಪರಸ್ಪರ ಕಾರ್ಯ–ಕಾರಣಗಳ ಅವಿನಾ ಸಂಬಂಧವಿದೆ. ಬೌದ್ಧಧರ್ಮದ ಪ್ರಸಾರದ ಪರಿಣಾಮವಾಗಿ ಹಿಂದೂ ಸಮಾಜದಲ್ಲಿ ಹಸುವಿನ ಬಗ್ಗೆ ಮೂಡಿದ ಪೂಜ್ಯಭಾವವು, ಹಸುಗಳ ಮಾಂಸವನ್ನು ತಿನ್ನುವುದನ್ನು ಮುಂದುವರೆಸಿದವರನ್ನು ಅಸ್ಪೃಶ್ಯರನ್ನಾಗಿಸಿತು. ಮಹರರು ಗೋಮಾಂಸವನ್ನು ತಿನ್ನುವುದನ್ನು ನಿಲ್ಲಿಸದಿದ್ದುದರಿಂದ, ಅವರು ತಿರಸ್ಕಾರಕ್ಕೆ ಗುರಿಯಾಗಬೇಕಾಯಿತು ಮತ್ತು ನಂತರ ಬೆಳೆದ ಸಾಮಾಜಿಕ ಶ್ರೇಣೀಕರಣದಲ್ಲಿ ಅವರು ಬಲಿಯಾಗಬೇಕಾಯಿತು.

ಈ ಲೇಖನದ ಪ್ರಾರಂಭದಲ್ಲಿ ಚರ್ಚೆಗೆ ತೆಗೆದುಕೊಂಡ ಮೂರು ಪ್ರಶ್ನೆಗಳನ್ನು ಉತ್ತರಿಸಲ್ಪಟ್ಟಿವೆ. ಆದಾಗ್ಯೂ, ಇನ್ನೊಂದು ಪ್ರಶ್ನೆ ಉತ್ತರವನ್ನು ಬಯಸುತ್ತದೆ, ಅದೆಂದರೆ – ಮಹರರು ಎಂದು ಅವರಿಗೆ ಏಕೆ ಹೆಸರಿಸಲಾಯಿತು?

ಹಲವರು ಈ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಿದ್ದಾರೆ. ಆದರೆ ಈ ಎಲ್ಲಾ ಉತ್ತರಗಳಲ್ಲಿ ಡಾ.

ಭಂಡಾರ್ಕರ್ ಅವರು ನೀಡಿರುವ ವಿವರಣೆಯು ತೃಪ್ತಿಕರವಾಗಿರುವ ಹಾಗೆ ಕಂಡುಬರುತ್ತದೆ. ಡಾ. ಭಂಡಾರ್ಕರ್ ಅವರ ಪ್ರಕಾರ ಮಹರ್ ಎಂಬ ಪದವು ಮೃತ+ಆಹಾರ ಎಂಬುದರ ಅಪಭ್ರಂಶ ರೂಪ. ಅದರ ಅರ್ಥ ಮೃತ ಪ್ರಾಣಿಗಳ ಮಾಂಸವನ್ನು ತಿನ್ನುವವರು ಎಂದು. ಅಸ್ಪೃಶ್ಯತೆಯ ಉಗಮದ ಬಗ್ಗೆ ಈ ಹಿಂದೆ ನಾವು ಹೇಳಿರುವುದಕ್ಕೆ ಇದು ಅನುಗುಣವಾಗಿದೆ. ಆದರೆ ಈ ಸಂದರ್ಭದಲ್ಲಿ ಮತ್ತೆರಡು ಉಪ–ಪ್ರಶ್ನೆಗಳು ಹುಟ್ಟುತ್ತವೆ. ಮೊದಲನೆಯದು, ಮಹರರ ಆಹಾರದ ಪದ್ಧತಿಯನ್ನೇ ಅವರನ್ನು ಹೆಸರಿಸಲು ಏಕೆ ಆಯ್ದುಕೊಳ್ಳಲಾಯಿತು? ಈ ಪ್ರಶ್ನೆಗೆ ಈಗಾಗಲೆ ಉತ್ತರವನ್ನು ನೀಡಲಾಗಿದೆ. ಅದರ ಜೊತೆಗೆ ಮತ್ತೊಂದು ಅಂಶವನ್ನು ಸೇರಿಸಬಹುದಾದರೆ, ಅದು 'ಅವರ ಸಮುದಾಯದ ಹೆಸರಿನ ಸರಿಯಾದ ನಿಷ್ಪತ್ತಿಯನ್ನು ನೀಡುತ್ತದೆ'. ನಾನಾಗಲೇ ಹೇಳಿದಂತೆ, ಒಂದುಕಾಲದಲ್ಲಿ, ಗೋಮಾಂಸವನ್ನು ತಿನ್ನುವುದು ಸಾಮಾನ್ಯವಾಗಿದ್ದು, ಅದು ಪ್ರತ್ಯೇಕವಾಗಿ ಗಮನಿಸಬೇಕಾದ ಅಂಶವಾಗಿರಲಿಲ್ಲ. ಆ ಕಾಲದಲ್ಲಿಯೂ, ಕೆಲವರು ವಧೆಮಾಡಿದ ಪ್ರಾಣಿಗಳ ಮಾಂಸವನ್ನೂ, ಮತ್ತೆ ಕೆಲವರು ಮೃತ ಪ್ರಾಣಿಗಳ ಮಾಂಸವನ್ನೂ ಸೇವಿಸುತ್ತಿದ್ದರು. ಆದರೆ ಇದು ಅವರವರ ಆರ್ಥಿಕತೆಯ ಮೇಲೆ ಅವಲಂಬಿತವಾಗಿತ್ತೇ ಹೊರತು, ಇದಕ್ಕೆ ಧಾರ್ಮಿಕ ಅಥವಾ ಸಾಮಾಜಿಕ ಆಯಾಮವಿರಲಿಲ್ಲ. ಆದರೆ, ಹೆಚ್ಚೂಕಡಿಮೆ ಎಲ್ಲರೂ ಗೋಮಾಂಸ ಭಕ್ಷಣವನ್ನು ತ್ಯಜಿಸಿದ ಮೇಲೆ, ಕೇವಲ ಕೆಲವೇ ಜನರು ಅದನ್ನು ಮುಂದುವರಿಸಿದಾಗ, ಈ ಎರಡು ಪದ್ಧತಿಗಳ ನಡುವಿನ ವ್ಯತ್ಯಾಸವು ಕಣ್ಣಿಗೆ ರಾಚುವಷ್ಟು ಬೇರೆ ಬೇರೆಯಾಗಿದ್ದು, ಅದನ್ನು ಧಾರ್ಮಿಕತೆಯ ದೃಷ್ಟಿಯಿಂದ ನೋಡಿದಾಗ ಅದಕ್ಕೆ ಹೊಸ ಆಯಾಮವೊಂದು ಹುಟ್ಟಿಕೊಂಡಿತು. ಈ ವ್ಯತ್ಯಾಸವು ಗಮನಾರ್ಹವಾದುದೂ ಮತ್ತು ಕಣ್ಣಿಗೆ ಹೊಡೆಯುವಷ್ಟು ಪ್ರಮುಖವೂ ಆಗಿದ್ದುದರಿಂದ, ಅವರನ್ನು ಹೆಸರಿಸಲು ಅದನ್ನೇ ಆಧಾರವನ್ನಾಗಿ ಮಾಡಿಕೊಂಡಿದ್ದು ಸಹಜವಾಗಿಯೇ ಇದೆ. ಆದರೆ ಈ ವಿವರಣೆಯನ್ನು ಒಪ್ಪಿಕೊಳ್ಳುವುದರಲ್ಲಿ ಒಂದು ತೊಂದರೆಯಿದೆ. ಈ ವಿವರಣೆಯು ನಿಜವಾಗಿದ್ದಿದ್ದರೆ, ಮತ್ತು ಮೇಲಿನ ಕಾರಣಗಳಿಂದಾಗಿಯೇ ಮಹರರೆಂಬ ಪದವು ಪ್ರಚಲಿತವಾಗಿ ಅವರಿಗೆ ಅಂಟಿಕೊಂಡಿದ್ದಿದ್ದರೆ, ಈ ವ್ಯತ್ಯಾಸವು ಹುಟ್ಟಿಕೊಂಡು ಗಮನಸೆಳೆಯುವಂತೆ ಆದ ಕಾಲದಿಂದಲೇ ಮಹರರು ಈ ಹೆಸರಿನಿಂದ ಸೂಚಿಸಲ್ಪಡುತ್ತಿದ್ದಿರಬೇಕು. ಮಹರರಿಗೆ ಈ ಹೆಸರು ಬರುವ ಮೊದಲು, ಚರಿತ್ರೆಯಲ್ಲಿ ಅವರನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು. ಜ್ಞಾನೇಶ್ವರಿಯ ಹೊರತಾಗಿ ಬೇರೆ ಯಾವ ಸಾಹಿತ್ಯದಲ್ಲಾಗಲೀ, ಚರಿತ್ರೆಯ ಪುಟಗಳಲ್ಲಾಗಲೀ ಮಹರರು ಎಂಬ ಹೆಸರು ಗೋಚರವಾಗುವುದಿಲ್ಲವಾದುದರಿಂದ, ಈ ಪದವು ಹೊಸ ಆವಿಷ್ಕಾರವಾಗಿದೆಯೆಂದು ಹೇಳಬಹುದು. ಇದರಿಂದ ಮಹರರು ಮಹರರೆಂದು ಗುರುತಿಸಲ್ಪಡುವ ಮೊದಲು ಅವರ ಸಮುದಾಯಕ್ಕೆ ಯಾವ ಹೆಸರಿತ್ತು ಎಂಬ ಮುಖ್ಯವಾದ ಮತ್ತೊಂದು ಪ್ರಶ್ನೆಯು ಎದುರಾಗುತ್ತದೆ. ಮಹರರನ್ನು ಪರ್ವಾರಿಗಳೆಂದೂ ಕರೆಯುತ್ತಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅವರಿಗೆ ಮಹರರು ಎಂದು ನಾಮಕರಣವಾಗಿ ಅದನ್ನೇ ಪ್ರಮುಖವಾಗಿ ಎಲ್ಲರೂ ಉಪಯೋಗಿಸುತ್ತಿದ್ದರೂ, ಪರ್ವಾರಿ ಎಂಬುದು ಮರೆಯಾಗದೇ, ಅದರ ಜೊತೆಜೊತೆಯಲ್ಲಿ ಉಪಯೋಗಿಸಲ್ಪಡುತ್ತಿದೆ. ಆದರೆ ಹಿಂದೆ ಮಹರರು ಎನ್ನುವುದಕ್ಕಿಂತ ಪರ್ವಾರಿಗಳು ಎಂಬುದೇ ಹೆಚ್ಚು ಬಳಕೆಯಲ್ಲಿದ್ದ ಪದ. ಉದಾಹರಣೆಗೆ, ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಅವರು ತಮ್ಮ ಸೈನ್ಯದಲ್ಲಿ ಮಹರರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕಮಾಡಿಕೊಂಡಿದ್ದರು. ಕಂಪನಿಯವರು ತಮ್ಮ ದಾಖಲೆಗಳಲ್ಲಿ ಅವರನ್ನು ಪರ್ವಾರಿ ಜಾತಿಗಳವರೆಂದೇ ನಮೂದಿಸಿದ್ದಾರೆ. ಆದ್ದರಿಂದ ಮಹರರಿಗೆ ಪರ್ವಾರಿಗಳೆಂಬ ಇನ್ನೊಂದು ಹೆಸರು ಇದ್ದಿತೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಮಹರರು ಎಂಬ ಹೆಸರು

ಬರುವ ಮುನ್ನ, ಅವರಿಗೆ ಪರ್ವಾರಿಗಳೆಂಬ ಹೆಸರೇ ಇದ್ದಿತು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಟಾಲೆಮಿಯೂ ಈ ಪದವನ್ನು ಉಪಯೋಗಿಸಿರುವುದರಿಂದ, ಇದನ್ನು ಪ್ರಾಚೀನ ಪದವೆಂದು ಹೇಳಬಹುದು. ಅವನು, ಪರ್ವಾರಿ* ಎಂಬ ಪದದ ತಪ್ಪು ಕಾಗುಣಿತವೋ, ಅಥವಾ ತಪ್ಪು ಉಚ್ಚಾರಣೆಯೋ ಆದ ಪೌರವರ್ದಿ ಎಂಬ ಪದವನ್ನು ಉಪಯೋಗಿಸುತ್ತಾನೆ. ಪರ್ವಾರಿ ಎಂದರೆ ಏನು? ಅದರೆ ಇದಕ್ಕೆ ಉತ್ತರಿಸುವುದು ಕಷ್ಟ. ಈ ಪದದ ಮೂಲವು 'ಅವಲಂಬನೆ' ಎಂಬ ಅರ್ಥವುಳ್ಳ ಪರಿವಾರ ಎಂದಿರಬೇಕೆಂಬುದು ಸಾಮಾನ್ಯವಾಗಿ ಒಪ್ಪಿರುವ ವಿಷಯ. ಪಂಗಡಗಳ ನಡುವಿನ ಹೋರಾಟದಲ್ಲಿ ಪರಾಜಿತವಾದ ಪಂಗಡದ ಜನರು ತಮ್ಮ ಜೀವಿತಕ್ಕಾಗಿ ಗ್ರಾಮಗಳಲ್ಲಿ ನೆಲೆನಿಂತ ಸಮುದಾಯದ ಮೇಲೆ ನಿಸ್ಸಂಶಯವಾಗಿ ಅವಲಂಬಿತರಾಗಿದ್ದರು. ಆದ್ದರಿಂದ ಗ್ರಾಮಗಳವರು ಇವರನ್ನು ಪರ್ವಾರಿಗಳೆಂದು ಅರ್ಥಯುಕ್ತವಾದ ಹೆಸರಿನಿಂದ ಕರೆದರು. ಪ್ರಸಕ್ತ ಮಹರರೆಂದು ಕರೆಯಲ್ಪಡುತ್ತಿರುವವರನ್ನು ಮಾತ್ರ ಪರ್ವಾರಿಗಳೆಂದು ಸಂಬೋಧಿಸುತ್ತಿರಲಿಲ್ಲ ಎಂಬುದನ್ನೂ ಈ ಸಂದರ್ಭದಲ್ಲಿ ಹೇಳಬೇಕು. ಅದನ್ನು ಅದರ ಸಾಮಾನ್ಯಾರ್ಥದಲ್ಲಿ ಉಪಯೋಗಿಸುತ್ತಿದ್ದರು. ಪರ್ವಾರಿ ಎಂಬ ಪದವು ಈಗ ಮಾಂಗರು ಎಂದು ಕರೆಯಲ್ಪಡುತ್ತಿದ್ದವರನ್ನೂ ಒಳಗೊಂಡಿತ್ತು ಎಂಬುದಕ್ಕೆ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಅಂದರೆ, ಗ್ರಾಮವೊಂದಕ್ಕೆ ಹೊರಗಿನಿಂದ ಬಂದು ನೆಲಸಿದವರೆಲ್ಲರನ್ನೂ ಸಾಮಾನ್ಯವಾಗಿ ಈ ಹೆಸರಿನಿಂದ ಕರೆಯುತ್ತಿದ್ದರು ಎಂದು ತೋರುತ್ತದೆ. ಪರ್ವಾರಿ ಪದದಂತೆಯೇ ಮಹರ್ ಎಂಬ ಪದವೂ ಸಂಯುಕ್ತಪದವಾಗಿದ್ದು ಒಂದೇ ಪದದಿಂದ ನಿಷ್ಪತ್ತಿಯಾದುದಲ್ಲ. ಮಹರ್ ಸಮುದಾಯವು ತನ್ನಲ್ಲಿಯೇ ಒಂದು ಉನ್ನತ ಸ್ತರವನ್ನೂ ಮತ್ತು ಒಂದು ಕೆಳ ಸ್ಥರವನ್ನೂ ಹೊಂದಿದ್ದ ಹಾಗೆ ಕಾಣಿಸುತ್ತದೆ. ಇದು ಮಹರರಲ್ಲಿರುವ ಬೇರೆ ಬೇರೆ ಕುಲಗಳಿಂದ ವ್ಯಕ್ತವಾಗುತ್ತದೆ. ೯೬ ಕುಲಗಳ ಒಳಗೆ ಬರುವ ಕುಲಗಳು ಮೇಲು ಸ್ತರದವರೆಂದೂ, ಹಾಗಿಲ್ಲದವರು ಕೆಳಸ್ತರದವರೆಂದೂ ಪರಿಗಣಿಸಲ್ಪಡುತ್ತಿದ್ದರು. ಹೀಗಿದ್ದರೂ, ಹಲವಾರು ಶತಮಾನಗಳಿಂದ ಸಾಮಾನ್ಯ ಹೆಸರಾಗಿ ಮಹರ್ ಎಂಬುದು ಬಂದಿರುವುದರಿಂದ ಆ ಸಮುದಾಯದ ಆಂತರ್ಯದಲ್ಲಿದ್ದ ಮೇಲು ಸ್ತರ ಹಾಗೂ ಕೆಳಸ್ತರ ಎಂಬ ಭಾವವು ಅವರ ಪ್ರಜ್ಞೆಯಿಂದ ಸಂಪೂರ್ಣವಾಗಿ ಅಳಿಸಿಹೋಗಿದೆ. ಪ್ರಸಕ್ತ ಕಾಲದಲ್ಲಿ ಮಹರರೆಂದು ಸಂಬೋಧಿಸಲ್ಪಡುವ ಸಮುದಾಯವು ತನ್ನ ಮೂಲದಲ್ಲಿ ಹಲವು ಪರಾಜಿತ ಪಂಗಡಗಳ ಒಕ್ಕೂಟವಾಗಿದ್ದಿತು. ಈ ಎಲ್ಲಾ ಪಂಗಡಗಳೂ ನೆಲೆ ನಿಂತ ಗ್ರಾಮಸ್ಥರ ಆಶ್ರಯದ ಮೇಲೆ ಅವಲಂಬಿಸಿದ್ದರಿಂದ ಅವರೆಲ್ಲರೂ ಪರ್ವಾರಿಗಳೆಂದೇ ಕರೆಯಲ್ಪಡುತ್ತಿದ್ದರು.

* * * * *

---

* ಪರ್ವಾರಿ ಎಂಬ ಪದವನ್ನು ಬರೋಡ ರಾಜ್ಯಸರಕಾರದ ಪತ್ರವೊಂದರಲ್ಲಿ ಉಪಯೋಗಿಸಲಾಗಿದೆ. ಇದೇ ಸಂಪುಟದ ಪರಿಶಿಷ್ಟ ೭ರ ಮೊದಲ ಭಾಗವನ್ನು (ಪುಟ ____) ನೋಡಿ – ಸಂಪಾದಕರು.

# ೨೨ ರಿಪಬ್ಲಿಕನ್ ಪಕ್ಷವು ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಮತ್ತು ನ್ಯಾಯಗಳನ್ನು ಪ್ರತಿನಿಧಿಸುತ್ತದೆ

ಡಾ. ಬಿ. ಆರ್. ಅಂಬೇಡ್ಕರ್ ಅವರು ಮತಾಂತರದ ಬಗ್ಗೆ ನಿರ್ಧರಿಸಿದ ಹಾಗೆ, ೧೯೫೬ರ ಅಕ್ಟೋಬರ್ ತಿಂಗಳಿನಲ್ಲಿ ತಾವು ಬೌದ್ಧಧರ್ಮವನ್ನು ಸೇರುವುದಾಗಿ ೧೯೫೬ರ ಮೇ ತಿಂಗಳಿನಲ್ಲಿ ಅವರು ಘೋಷಿಸಿದರು. ಇದರೊಂದಿಗೇ ಅವರು ಭಾರತದ ಸಂವಿಧಾನದದಲ್ಲಿ ನಿರೂಪಿತವಾಗಿರುವ ತತ್ತ್ವಗಳ ಆಧಾರದ ಮೇಲೆ ರಾಜಕೀಯ ಪಕ್ಷವೊಂದನ್ನು ಪ್ರಾರಂಭಿಸುವ ಬಗ್ಗೆಯೂ ತೀವ್ರವಾಗಿ ಆಲೋಚಿಸುತ್ತಿದ್ದರು.

೧೯೩೬ರಲ್ಲಿ ಹುಟ್ಟುಹಾಕಿದ 'ಸ್ವತಂತ್ರ ಕಾರ್ಮಿಕರ ಪಕ್ಷ, ೧೯೪೨ರಲ್ಲಿ ಪ್ರಾರಂಭಿಸಿದ ಪರಿಶಿಷ್ಠ ಜಾತಿಗಳ ಒಕ್ಕೂಟ, ಮತ್ತು ಈಗ ಪ್ರಾರಂಭಿಸಲಿರುವ ರಿಪಬ್ಲಿಕನ್ ಪಕ್ಷ – ಇವುಗಳು ಅವರು ತಮ್ಮ ಮನಸ್ಸಿನಲ್ಲಿದ್ದ ಧ್ಯೇಯಗಳನ್ನು ಸಾಕಾರಗೊಳಿಸುವ ಕಾರ್ಯಗಳಲ್ಲಿ ಎಷ್ಟು ಶ್ರಮಪೂರ್ಣವಾಗಿ ತೊಡಗಿಕೊಂಡಿದ್ದರು ಎಂಬುದನ್ನು ಸೂಚಿಸುತ್ತವೆ.

ತಮ್ಮ ದೂರದೃಷ್ಟಿಗೆ ಒಂದು ಆಕಾರವನ್ನು ನೀಡುವುದಕ್ಕಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ತಾವು ಯೋಜಿಸಿದ್ದ ರಿಪಬ್ಲಿಕನ್ ಪಕ್ಷದ ಒಂದು ನೀಲನಕ್ಷೆಯನ್ನು ಖಚಿತವಾಗಿ ತಯಾರುಮಾಡಿದರು. ಶ್ರೀ ಡಿ.ಟಿ. ರೂಪ್ವತೆಯವರು ಮಾಡಿದ ಈ ನೀಲನಕ್ಷೆಯ ಮರಾಠಿ ಅನುವಾದವನ್ನು ನಂತರ 'ಪ್ರಬುದ್ಧ ಭಾರತ'ದಲ್ಲಿ 'ರಿಪಬ್ಲಿಕನ್ ಪಕ್ಷದ ಸ್ಥಾಪನೆಗಾಗಿ ಪರಮಪೂಜ್ಯ ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತೀಯರಿಗೆ ಬರೆದ ಮುಕ್ತ ಪತ್ರ' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟಿಸಲಾಗಿತ್ತು.

ಮೇಲೆ ಹೇಳಿದ ನೀಲ ನಕ್ಷೆಯು ಮುಂದೆ ಹೇಳಿರುವ ಐದು ಅಧ್ಯಾಯಗಳನ್ನು ಒಳಗೊಂಡಿತ್ತು:

ಅಧ್ಯಾಯ – ೧: ಒಂದು ಚಳವಳಿಯು ರಾಜಕೀಯ ಪಕ್ಷವಾಗಿ ಹೇಗೆ ರೂಪುಗೊಳ್ಳುತ್ತದೆ?

ಅಧ್ಯಾಯ – ೨: ಪ್ರಜಾಪ್ರಭುತ್ವವು ಯಶಸ್ವಿಯಾಗಿ ಕೆಲಸಮಾಡಲು ಅಗತ್ಯವಾದ ಪೂರ್ವ ಪರಿಸ್ಥಿತಿಗಳು

ಅಧ್ಯಾಯ – ೩: ಸಂಸದೀಯ ಸರಕಾರಕ್ಕೆ ವಿರೋಧಪಕ್ಷಗಳು ಏಕೆ ಅಗತ್ಯವಾಗಿರುತ್ತವೆ?

ಅಧ್ಯಾಯ – ೪: ಪಕ್ಷವೆಂದರೆ ಏನು?

ಅಧ್ಯಾಯ – ೫: ಪಕ್ಷದ ಧ್ಯೇಯೋದ್ದೇಶಗಳು.

ಭಾರತೀಯ ರಿಪಬ್ಲಿಕನ್ ಪಕ್ಷವನ್ನು ಸ್ಥಾಪಿಸಿದ ವರ್ತಮಾನವು 'ಜನತಾ' ಪತ್ರಿಕೆಯ ೧೯೫೫ರ ಡಿಸೆಂಬರ್ ೧೦ರ ಸಂಚಿಕೆಯಲ್ಲಿ ಪ್ರಕಟವಾಯಿತು. ಈ ವಿಷಯದಲ್ಲಿ ಅವರು ಡಾ. ರಾಮ್ ಮನೋಹರ್ ಲೋಹಿಯಾ ಅವರಂತಹ ಸಮಾನಮನಸ್ಕರೊಡನೆ ಪತ್ರವ್ಯವಹಾರ ಮಾಡಿದ್ದರು.

೧೯೫೬ರ ಸೆಪ್ಟೆಂಬರ್ ತಿಂಗಳ ೩೦ನೆಯ ದಿನಾಂಕ ಡಾ. ಬಿ.ಆರ್. ಅಂಬೇಡ್ಕರ್ ಅವರ ನವದೆಹಲಿಯ ನಿವಾಸದಲ್ಲಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸಭೆಯು ನಡೆಯಿತು. ಡಾ. ಅಂಬೇಡ್ಕರ್ ಅವರು ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಆ ಸಭೆಯಲ್ಲಿ ತೆಗೆದುಕೊಂಡ ಎರಡನೆಯ ನಿರ್ಣಯದ ಪ್ರಕಾರ ಪರಿಶಿಷ್ಟ ಜಾತಿಗಳ ಒಕ್ಕೂಟವನ್ನು ವಿಸರ್ಜಿಸಿ, ಹೊಸ ರಾಜಕೀಯ ಪಕ್ಷವೊಂದನ್ನು ರಿಪಬ್ಲಿಕನ್ ಪಕ್ಷವೆಂಬ ಹೆಸರಿನಿಂದ ಸ್ಥಾಪಿಸಬೇಕೆಂದು ಸರ್ವಾನುಮತದಿಂದ

ತೀರ್ಮಾನಿಸಲಾಯಿತು (ಪ್ರಬುದ್ಧ ಭಾರತ, ೧೯೫೬ರ ಅಕ್ಟೋಬರ್ ೬ ಮತ್ತು ೧೩ರ ಸಂಚಿಕೆ).

ಡಾ. ಬಿ.ಆರ್. ಅಂಬೇಡ್ಕರ್ ಅವರು ನಾಗಪುರದಲ್ಲಿ ೧೯೫೬ರ ಅಕ್ಟೋಬರ್ ೧೩ರಂದು ಪತ್ರಿಕಾಗೋಷ್ಠಿಯನ್ನು ನಡೆಸಿ, ತಾವು ರಿಪಬ್ಲಿಕನ್ ಪಕ್ಷದ ಸಂವಿಧಾನವನ್ನು ಈಗಾಗಲೇ ರೂಪಿಸಿರುವುದಾಗಿ ಸಂಶಯಕ್ಕೆಡೆಗೊಡದ ರೀತಿಯಲ್ಲಿ ಹೇಳಿದರು (ಡಾ. ಅಂಬೇಡ್ಕರ್: ಬೌದ್ಧಧರ್ಮಕ್ಕೆ ಮತಾಂತರ, ಪ್ರಬುದ್ಧ ಭಾರತದ ವಿಶೇಷಾಂಕ, ಎಇ.೨೭.೧೦.೧೯೫೬). 'ಭಾರತದ ಮತದಾನ' ಸಂಪುಟದ ಸಂಪಾದಕರಾದ ಆರ್. ಚಂಡಿದಾಸ್, ವಾರ್ಡ್ ಮೋರ್‌ಹೌಸ್, ಲಿಯೋನ್ ಕ್ಲಾರ್ಕ್ ಮತ್ತು ರಿಚರ್ಡ್ ಫ಼ಾಂಟೆರಾ ಅವರುಗಳು ರಿಪಬ್ಲಿಕನ್ ಪಕ್ಷದ ವೈಶಿಷ್ಟ್ಯಗಳನ್ನು ಕೆಳಕಂಡಂತೆ ವಿವರಿಸಿದರು.

"ಮಹಾನ್ ರಾಜಕೀಯ ಚಿಂತಕರೂ, ಮಹಾನ್ ಸಾಮಾಜಿಕ ಕ್ರಾಂತಿಕಾರರೂ, ಮತ್ತು ಮಹಾನ್ ಸಂವಿಧಾನ ತಜ್ಞರೂ ಆಗಿದ್ದ ದಿ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸ್ಥಾಪಿಸಿದ ಭಾರತೀಯ ರಿಪಬ್ಲಿಕನ್ ಪಕ್ಷವು ಅಖಿಲ ಭಾರತ ರಾಜಕೀಯ ಪಕ್ಷ. ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಆಧಾರದ ಮೇಲೆ ಭಾರತೀಯ ಸಮಾಜದ ಪುನರ್ನಿರ್ಮಾಣವನ್ನು ಮಾಡಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಭಾರತೀಯ ರಿಪಬ್ಲಿಕನ್ ಪಕ್ಷವು ಈ ಮಹಾನ್ ಉದ್ದೇಶಕ್ಕಾಗಿ ತನ್ನನ್ನು ತಾನೇ ಸಮರ್ಪಿಸಿಕೊಳ್ಳುತ್ತದೆ –

**ಭಾರತೀಯ ರಿಪಬ್ಲಿಕನ್ ಪಕ್ಷವು ಸಂಸದೀಯ ಪ್ರಜಾಪ್ರಭುತ್ವವನ್ನು ಬೆಂಬಲಿಸುತ್ತದೆ.**

೧. ಜನತೆಯ ಹಾಗೂ ವೈಯಕ್ತಿಕವಾಗಿ ಸಂಸದೀಯ ಪ್ರಜಾಪ್ರಭುತ್ವವು ಅತ್ಯುತ್ತಮ ಆಡಳಿತ ವ್ಯವಸ್ಥೆಯಾಗಿದ್ದು ಅದನ್ನು ಭಾರತೀಯ ರಿಪಬ್ಲಿಕನ್ ಪಕ್ಷವು ಬೆಂಬಲಿಸುತ್ತದೆ.

**ಜಾತ್ಯತೀತತೆಯ ಸಮರ್ಥನೆ**

೨. ಭಾರತೀಯ ರಿಪಬ್ಲಿಕನ್ ಪಕ್ಷವು ದೇಶದ ಆಡಳಿತದಲ್ಲಿ ಜಾತ್ಯತೀತತೆಯನ್ನು ಸಮರ್ಥಿಸುತ್ತದೆ." (ಭಾರತದ ಮತದಾನ, ಪು. ೮೫).

ಪಕ್ಷದ ನೀಲನಕ್ಷೆಯು ಮುಂದಿನಂತಿದೆ:

## ಅಧ್ಯಾಯ ೧

## ಒಂದು ಚಳವಳಿಯು ರಾಜಕೀಯ ಪಕ್ಷವಾಗಿ ಹೇಗೆ ರೂಪುಗೊಳ್ಳುತ್ತದೆ

ಭಾರತೀಯ ಕಾಂಗ್ರೆಸ್ ೧೮೮೫ರಲ್ಲಿ ಸ್ಥಾಪಿತವಾಯಿತು. ೧೯೪೭ರವರೆಗೆ ಅದು ಭಾರತದ ಸ್ವಾತಂತ್ರ್ಯವನ್ನು ಗಳಿಸುವ ದಿಕ್ಕಿನಲ್ಲಿ ಚಳವಳಿಯನ್ನು ಮಾಡಿತು. ಅದು ಪ್ರಾರಂಭದಲ್ಲಿ ಸ್ಪಷ್ಟವಾದ ಗುರಿಯೊಂದನ್ನು ಹೊಂದಿರಲಿಲ್ಲ. ಒಳ್ಳೆಯ ಆಡಳಿತವು ಬೇಕೆಂಬ ಬೇಡಿಕೆಯೊಂದಿಗೆ ಅದು ಪ್ರಾರಂಭವಾಯಿತು. ಕೆಲವು ಕಾಲದ ನಂತರ ಅದು ತನ್ನ ಗುರಿಯನ್ನು ಬದಲಿಸಿಕೊಂಡಿತು. ಆಗ ಅದರ ಗುರಿಯು ಸ್ವಯಮಾಡಳಿತವೆಂದಾಯಿತು. ಬ್ರಿಟಿಷ್ ರಾಜಕೀಯ ಮುತ್ಸದ್ದಿತನವು ಅದನ್ನು (೧) ದೊರೆತನದ (ಡೊಮಿನಿಯನ್) ಸ್ಥಾನ ಮತ್ತು (೨) ಸ್ವಾತಂತ್ರ್ಯ ಎಂದು ಎರಡು ಭಾಗಗಳನ್ನಾಗಿ ವಿಭಜಿಸಿತು. ಡೊಮಿನಿಯನ್ ಎಂದರೆ ದೊರೆಗೆ ಇಡೀ ದೇಶವು ನಿಷ್ಠೆಯಿಂದ ಇರಬೇಕಾದುದು. ಸ್ವಾತಂತ್ರ್ಯವೆಂದರೆ, ರಾಜನಿಗೆ ನಿಷ್ಠನಾಗಿರಬೇಕಿರದ ಸ್ವಾತಂತ್ರ್ಯ.

ಕೆಲವು ಸಮಯದ ವರೆಗೆ ಕಾಂಗ್ರೆಸ್ ಪಕ್ಷವು ಡೊಮಿನಿಯನ್ ಸ್ಥಾನಮಾನಕ್ಕೆ ಒಪ್ಪಿಕೊಂಡಿತ್ತು. ಸ್ವಲ್ಪಕಾಲದ ನಂತರ, ೧೯೩೦ರಲ್ಲಿ ಅದು ಒಂದು ನಾಟಕೀಯ ರೀತಿಯಲ್ಲಿ ತನ್ನ ನಿಲವನ್ನು ಬದಲಿಸಿ

ಸಂಪೂರ್ಣ ಸ್ವಾತಂತ್ರ್ಯವು ತನ್ನ ಗುರಿಯೆಂದು ನಿರ್ಣಯವನ್ನು ಕೈಗೊಂಡು ಅದನ್ನು ೧೯೪೭ರಲ್ಲಿ ಪಡೆಯಿತು.

ಇಲ್ಲಿಯವರೆಗೂ ಕಾಂಗ್ರೆಸ್ ಸಂಸದೀಯ ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದ ಸೇನೆಯಂತಿರಲಿಲ್ಲ, ಬದಲಿಗೆ ವಿದೇಶದ ಆಡಳಿತದ ವಿರುದ್ಧ ರಾಜಕೀಯ ಹೋರಾಟವನ್ನು ನಡೆಸುವ ಸಲುವಾಗಿ ನೇಮಕವಾದ ಸೇನೆಯಂತಿತ್ತು. ಇದನ್ನು ಅರಿತ ಶ್ರೀ ಗಾಂಧಿಯವರು ಕಾಂಗ್ರೆಸ್ಸನ್ನು ವಿಸರ್ಜಿಸಬೇಕು ಮತ್ತು ಪಕ್ಷಗಳ ಮೂಲಕ ಸರಕಾರವನ್ನು ನಡೆಸಲು ಹೊಸ ರಾಜಕೀಯ ಪಕ್ಷಗಳು ಉದಯವಾಗಬೇಕು ಎಂಬ ವಿವೇಕಯುತವಾದ ಸಲಹೆಯನ್ನು ಮಾಡಿದರು. ಆದರೆ ಕಾಂಗ್ರೆಸ್ಸಿನ ಮುಖಂಡರು ನೇತಾರರ ದಿರಸಿನಲ್ಲಿ ಸರಕಾರದ ವಾಘೆಯನ್ನು ತಮ್ಮ ಕೈಗಳಲ್ಲಿ ತೆಗೆದುಕೊಳ್ಳಲು ಸನ್ನದ್ಧರಾಗಿ ನಿಂತಿದ್ದರು. ಅವರು ಶ್ರೀ ಗಾಂಧಿಯವರ ಬುದ್ಧಿವಾದವನ್ನು ಒಪ್ಪಿಕೊಳ್ಳಲಿಲ್ಲ. ಸಾಮಾನ್ಯವಾಗಿ, ಶಾಂತಿಯನ್ನು ಸಾಧಿಸಿದ ನಂತರ ಅದಕ್ಕಾಗಿ ಹೋರಾಡಿದ ಸೇನೆಯು ವಿಸರ್ಜಿಸಲ್ಪಡುತ್ತದೆ. ಇದಕ್ಕೆ ಕಾರಣವೆಂದರೆ, ಯುದ್ಧದ ಸಮಯದಲ್ಲಿ ಸೇನೆಗೆ ನೇಮಕವಾಡಿಕೊಳ್ಳುವ ಉದ್ದೇಶದಿಂದ ಸೇರಿಸಿಕೊಳ್ಳಬೇಕಾದವರ ಗುಣಮಟ್ಟವನ್ನು ಕಡಿಮೆಮಾಡಲಾಗಿರುತ್ತದೆ, ಇದರಿಂದ ಒಳ್ಳೆಯವರು, ಕೆಟ್ಟವರು, ಎಲ್ಲರೂ ಅದಕ್ಕೆ ಸೇರಲು ಅವಕಾಶವಿರುತ್ತದೆ. ಭಾರತದ ವಿಷಯದಲ್ಲಿ ಸೇನೆಯು ವಿಸರ್ಜಿಸಲ್ಪಡದೆ ಇರುವುದಷ್ಟೇ ಅಲ್ಲ, ಆ ಸೇನೆಯು ಆಡಳಿತದ ಸೂತ್ರಗಳನ್ನು ಹಿಡಿಯಲು ಕೂಡ ಅವಕಾಶವಾಯಿತು.

ನಾವೀಗ ಕಾಂಗ್ರೆಸ್ ಪಕ್ಷದ ಆಡಳಿತವನ್ನು ಹತ್ತುವರ್ಷಗಳ ಕಾಲ ಕಂಡಿದ್ದೇವೆ. ಅದರಲ್ಲಿ ಹೊಗಳಿಸಿಕೊಳ್ಳಬಹುದಾದುದು ಏನೂ ಇಲ್ಲ. ಶ್ರೀ ಗಾಂಧಿಯವರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿ ಮತ್ತೊಂದು ವಿರೋಧಪಕ್ಷವನ್ನು ನಾವು ರಚಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಸಮಯವು ಈಗ ಬಂದಿದೆ.

## ಅಧ್ಯಾಯ ೨

೧೯೫೨ರ ಡಿಸೆಂಬರ್ ೨೨ರಂದು ಪುಣೆಯಲ್ಲಿ ಡಾ. ಅಂಬೇಡ್ಕರ್ ಅವರು ಪ್ರಜಾಪ್ರಭುತ್ವವು ಯಶಸ್ವಿಯಾಗಿ ಕೆಲಸಮಾಡಲು ಅಗತ್ಯವಾದ ಪೂರ್ವ ಪರಿಸ್ಥಿತಿಗಳು" ಎಂಬ ಶೀರ್ಷಿಕೆಯ ಅಡಿಯಲ್ಲಿ ನೀಡಿದ ಭಾಷಣವನ್ನು ಈ ಅಧ್ಯಾಯವು ಒಳಗೊಂಡಿದೆ – ಸಂಪಾದಕರು.

## ಅಧ್ಯಾಯ ೩

## ಸಂಸದೀಯ ಸರಕಾರಕ್ಕೆ ವಿರೋಧಪಕ್ಷಗಳು ಏಕೆ ಅಗತ್ಯವಾಗಿರುತ್ತವೆ?

ಶಿಕ್ಷಿತ ಸಾರ್ವಜನಿಕ ಅಭಿಪ್ರಾಯವಿರುವ ಜನತೆಯಿಲ್ಲದಿದ್ದರೆ ಸಂಸದೀಯ ಪ್ರಜಾಪ್ರಭುತ್ವವು ಯಶಸ್ವಿಯಾಗುವುದಿಲ್ಲ. ನ್ಯಾಯಯುತವಾಗಿ ಕೆಲಸಮಾಡಲು ಸರಕಾರ ಮತ್ತು ಸಂಸತ್ತು ಸಾರ್ವಜನಿಕ ಅಭಿಪ್ರಾಯವೆಂದರೆ ಏನು ಎಂಬುದನ್ನು ತಿಳಿದಿರಬೇಕು.

ಇದನ್ನು ವಿಶದೀಕರಿಸಬೇಕೆಂದರೆ, ಶಿಕ್ಷಣ ಮತ್ತು ಪ್ರಚಾರ ಇವೆರಡರ ನಡುವೆ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರಿಸಬೇಕು. ಪ್ರಚಾರದ ಅಲೆಯ ಮೇಲಿರುವ ಸರಕಾರವೇ ಬೇರೆ, ಶಿಕ್ಷಣದ ಬಲದ ಮೇಲೆ ಆಡಳಿತ ನಡೆಸುವ ಸರಕಾರವೇ ಬೇರೆ. ಪ್ರಚಾರವೆಂದರೆ ಒಂದು ವಿಷಯದ ಒಳ್ಳೆಯ ಅಂಶಗಳನ್ನಷ್ಟೇ ಹರಡುವುದು. ಶಿಕ್ಷಣವೆಂದರೆ ಒಂದು ವಿಷಯದ ಸಾಧಕ–ಬಾಧಕಗಳನ್ನು ಪರಿಶೀಲಿಸಿದ ಮೇಲೆ ಆಡಳಿತವನ್ನು ನಡೆಸುವುದು.

ಯಾವುದೇ ವಿಷಯದಲ್ಲಿ ನಿರ್ಣಯವನ್ನು ಸಂಸತ್ತು ತೆಗೆದುಕೊಳ್ಳಬೇಕಾದರೆ, ಅದರ ಸಾಧಕ–ಬಾಧಕಗಳೆರಡನ್ನೂ ಜನತೆಯ ಮುಂದಿಡುವುದು ಆವಶ್ಯಕವಾದರೆ, ಆಗ ಎರಡು ಪಕ್ಷಗಳ ಅಗತ್ಯವಿರುತ್ತದೆ. ಒಂದು ಪಕ್ಷವು ಆ ವಿಷಯದ ಸಾಧಕಗಳನ್ನು ಎತ್ತಿ ತೋರಿಸಿದರೆ, ಇನ್ನೊಂದು ಬಾಧಕ ಅಂಶಗಳನ್ನು ಎತ್ತಿ ತೋರಿಸುತ್ತದೆ. ಹಾಗಿಲ್ಲದೆ ಒಂದೇ ಪಕ್ಷವಿದ್ದರೆ, ಅದು ಕೇವಲ ನಿರಂಕುಶಪ್ರಭುತ್ವಕ್ಕೆ ಎಡೆಮಾಡಿಕೊಡುತ್ತದೆ. ನಿರಂಕುಶಾಧಿಕಾರವನ್ನು ತಡೆಯಲು ಎರಡನೆಯ ಪಕ್ಷದ ಅಗತ್ಯವಿರುತ್ತದೆ. ಇದು ಬಹಳ ಮುಖ್ಯವಾದ ವಿಷಯ. ಜನತೆಗೆ ಒಳ್ಳೆಯ ಆಡಳಿತವು ಒಳ್ಳೆಯ ಕಾನೂನುಗಳಿಗಿಂತ ಮುಖ್ಯವಾಗಿರುತ್ತದೆ. ಕಾನೂನುಗಳು ಉತ್ತಮವಾಗಿರಬಹುದಾದರೂ ಅದರ ನಿರ್ವಹಣೆ ಕೆಟ್ಟದ್ದಾಗಿರಬಹುದು.

ಕಾನೂನಿನ ನಿರ್ವಹಣೆಯು ಉತ್ತಮವಾಗಿದೆಯೋ ಅಥವಾ ಇಲ್ಲವೋ ಎಂಬುದು, ಅದನ್ನು ನಿರ್ವಹಿಸಲು ನೇಮಕವಾಗಿರುವ ಅಧಿಕಾರಿಯು ಎಷ್ಟು ಸ್ವತಂತ್ರನಾಗಿರುತ್ತಾನೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಏಕಪಕ್ಷದ ಪರಿಸ್ಥಿತಿಯಲ್ಲಿ ಅಧಿಕಾರಿಯು ತನ್ನ ರಾಜಕೀಯ ಮುಖ್ಯಸ್ಥನಾದ ಸಚಿವನ ಕರುಣೆಯ ಮೇಲೆ ನಿಂತಿರುತ್ತಾನೆ. ಸಚಿವನ ಸ್ಥಾನವು ಅವನು ಪಡೆಯುವ ಮತಗಳ ಮೇಲೆ ಅವಲಂಬಿತವಾಗಿರುತ್ತದೆ. ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು, ಮತಗಳನ್ನು ತನ್ನದಾಗಿಸಿಕೊಳ್ಳಲು, ಮತದಾರರಿಗೆ ಅನುಕೂಲಗಳನ್ನು ಕಲ್ಪಿಸಲು ಸಚಿವನು ಅಧಿಕಾರಿಯನ್ನು ಅಕ್ರಮಗಳನ್ನು ಮಾಡಲು ಬಲವಂತ ಮಾಡಬೇಕಾಗುತ್ತದೆ. ವಿರೋಧ ಪಕ್ಷವೊಂದಿದ್ದರೆ, ಅದು ಅಂತಹ ಸಚಿವನ ಬಣ್ಣವನ್ನು ಬಯಲು ಮಾಡಿ ಇಂತಹ ಅಕ್ರಮಗಳನ್ನು ತಡೆಯಬಹುದು.

ಒಳ್ಳೆಯ ಆಡಳಿತದ ನಂತರ ಜನತೆ ಬಯಸುವುದು ವಾಕ್ಸ್ವಾತಂತ್ರ್ಯ ಮತ್ತು ಬಂಧಮುಕ್ತತೆ. ವಿರೋಧಪಕ್ಷವೊಂದು ಇದ್ದರೆ, ವಾಕ್ಸ್ವಾತಂತ್ರ್ಯವಿರುತ್ತದೆ ಮತ್ತು ಕಾರ್ಯಸ್ವಾತಂತ್ರ್ಯವು ಇರುತ್ತದೆ. ವಿರೋಧಪಕ್ಷವಿಲ್ಲದಿದ್ದರೆ ಇವುಗಳು ಅಪಾಯವನ್ನೆದುರಿಸಬೇಕಾಗುತ್ತದೆ. ಏಕೆಂದರೆ, ತಮ್ಮನ್ನು ಸ್ವತಂತ್ರವಾಗಿ ಮಾತನಾಡಲು ಏಕೆ ಬಿಡಲಿಲ್ಲ ಅಥವಾ ತಾವು ಮಾಡಬೇಕೆಂದಿದ್ದ ಕೆಲಸವನ್ನು ಮಾಡಲು ಅವಕಾಶವನ್ನೇಕೆ ಕೊಡಲಿಲ್ಲ ಎಂದು ಪ್ರಶ್ನಿಸಲು ಯಾರೂ ಇರುವುದಿಲ್ಲ.

ಈ ಕಾರಣಗಳಿಂದ ವಿರೋಧಪಕ್ಷವು ಅಗತ್ಯವಾಗಿರುತ್ತದೆ. ಸಂಸದೀಯ ಸರಕಾರವಿರುವ ಎಲ್ಲಾ ದೇಶಗಳಲ್ಲಿಯೂ, ವಿರೋಧ ಪಕ್ಷವನ್ನು ಒಂದು ರಾಜಕೀಯ ಸಂಸ್ಥೆಯನ್ನಾಗಿ ಪರಿಗಣಿಸುತ್ತಾರೆ.

ಇಂಗ್ಲೆಂಡ್ ಮತ್ತು ಕೆನಡಾ ದೇಶಗಳಲ್ಲಿ ವಿರೋಧಪಕ್ಷವನ್ನು ಕಾನೂನಿಗನುಗುಣವಾಗಿ ಮಾನ್ಯಮಾಡಲಾಗಿದೆ. ಈ ಎರಡೂ ದೇಶಗಳಲ್ಲಿನ ಸಂಸತ್ತಿನಲ್ಲಿ, ಯಾವ ತೊಂದರೆಯೂ ಇಲ್ಲದೆ ತನ್ನ ಸಂಸದೀಯ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಲು ವಿರೋಧಪಕ್ಷದ ನಾಯಕನಿಗೆ ಸಂಬಳವನ್ನು ನೀಡುತ್ತಾರೆ.

## ಅಧ್ಯಾಯ ೪

## ಪಕ್ಷವೆಂದರೆ ಏನು?

ಪಕ್ಷವು ಒಂದು ಸೈನ್ಯವಿದ್ದ ಹಾಗೆ. ಅದರಲ್ಲಿ ಮುಂದೆ ಹೇಳಿರುವಂತಹವು ಇರಬೇಕು –

೧. ಮುಖ್ಯ ಸೇನಾಧಿಪತಿ

೨. (ಅ) ಸದಸ್ಯತ್ವ, (ಆ) ಸ್ಥೂಲ ಯೋಜನೆ, (ಇ) ಶಿಸ್ತು – ಇವುಗಳಿರುವ ಒಂದು ಸಾಂಸ್ಥಿಕ ವ್ಯವಸ್ಥೆ.

೩. ತತ್ವಗಳು ಮತ್ತು ನೀತಿಗಳು

೪. ನಿರ್ದಿಷ್ಟ ಕಾರ್ಯಗಳು ಅಥವಾ ಕಾರ್ಯನೀತಿ

೫. ಕಾರ್ಯತಂತ್ರ ಮತ್ತು ನಿರ್ವಹಣಾ ಚಾತುರ್ಯ (ಅಂದರೆ ಯಾವ ಕೆಲಸವನ್ನು ಯಾವಾಗ ಮತ್ತು ಹೇಗೆ ಮಾಡಿದರೆ ಗುರಿಯನ್ನು ಸಾಧಿಸಬಹುದು ಎಂಬ ಚಾತುರ್ಯ)

ಅದನ್ನೇ ಸರಳವಾಗಿ ಹೇಳಬೇಕೆಂದರೆ,

ಅದು ಕೆಲವು ಧ್ಯೇಯಗಳನ್ನುಳ್ಳ ಮತದಾರರ ಒಂದು ಕೂಟ.

(೧) ಪಕ್ಷದ ಸಂಸ್ಥೆಯನ್ನು ಕಟ್ಟಿ ಬೆಳೆಸುವ ಮೂಲಕ ಪಕ್ಷವನ್ನು ಬೆಳೆಸುವುದು,

(೨) ಪತ್ರಿಕೆಗಳು, ಭಾಷಣಗಳು, ಉಪನ್ಯಾಸಗಳು, ಮತ್ತು ಲೇಖನಗಳ ಮೂಲಕ ಪಕ್ಷದ ನೀತಿಯನ್ನು ಪ್ರಚುರಪಡಿಸುವುದು,

(೩) ರಿಪಬ್ಲಿಕನ್ ಪಕ್ಷದ ಹೆಸರಿನ ಅಡಿಯಲ್ಲಿ ಶಾಸನ ಸಭೆಗಳಲ್ಲಿ ಪಕ್ಷದ ಪ್ರತಿನಿಧಿಗಳ ಮೂಲಕ ಸಂಘಟಿತ ರಾಜಕೀಯ ಕೆಲಸಕಾರ್ಯಗಳನ್ನು ನಡೆಸಲು ಅನುಕೂಲಕರವಾದ ನೆಲೆಗಟ್ಟನ್ನು ಒದಗಿಸುವುದು.

## ಅಧ್ಯಾಯ ೫
## ಪಕ್ಷದ ಧ್ಯೇಯೋದ್ದೇಶಗಳು

೧. ಭಾರತದ ಸಂವಿಧಾನದ ಪೀಠಿಕಾ ಪ್ರಕರಣದಲ್ಲಿ ಹೀಗೆ ಹೇಳಲಾಗಿದೆ –

"ಭಾರತದ ಪ್ರಜೆಗಳಾದ ನಾವು ಭಾರತವು ಒಂದು ಸಂಪೂರ್ಣ ಪ್ರಜಾಪ್ರಭುತ್ವ ಗಣರಾಜ್ಯವನ್ನಾಗಿ ವ್ಯವಸ್ಥೆಗೊಳಿಸುವುದಕ್ಕಾಗಿಯೂ;

ಮತ್ತು ಸಮಸ್ತ ಪ್ರಜೆಗಳಿಗೆ –

ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು,

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮ ಮತ್ತು ಉಪಾಸನೆ – ಇವುಗಳಲ್ಲಿ ಸ್ವಾತಂತ್ರ್ಯವನ್ನು,

ಸ್ಥಾನಮಾನಗಳಲ್ಲಿ ಮತ್ತು ಅವುಗಳಿಗಿರುವ ಅವಕಾಶಗಳಲ್ಲಿ ಸಮಾನತೆಯನ್ನು, ಹಾಗು, ವ್ಯಕ್ತಿಗೌರವ, ರಾಷ್ಟ್ರದ ಏಕತೆಯ ಆಶ್ವಾಸನೆ ಮತ್ತು ಭ್ರಾತೃತ್ವದ ಭಾವನೆಯನ್ನು ನೀಡುವುದಕ್ಕೆ ದೃಢಸಂಕಲ್ಪ ಮಾಡಿ –

ನಮ್ಮ ಸಂವಿಧಾನ ಸಭೆಯಲ್ಲಿ ಇಂದು, ಎಂದರೆ ೧೯೪೯ನೆಯ ಇಸವಿ ನವೆಂಬರ್ ೨೬ನೆ ದಿನಾಂಕದಂದು, ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸದ್ದೇವೆ, ಕಾನೂನುಬದ್ಧಗೊಳಿಸಿದ್ದೇವೆ ಮತ್ತು ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ."

ಭಾರತದ ಸಂವಿಧಾನದ ಈ ಪೀಠಿಕೆಯಲ್ಲಿ ಹೇಳಿರುವ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ – ಇವುಗಳನ್ನು ಸಾಧಿಸುವುದು ರಿಪಬ್ಲಿಕನ್ ಪಕ್ಷದ ಧ್ಯೇಯೋದ್ದೇಶಗಳಾಗಿವೆ.

ಇವುಗಳನ್ನು ಪಕ್ಷದ ಧ್ಯೇಯೋದ್ದೇಶಗಳನ್ನಾಗಿ ಇಟ್ಟುಕೊಂಡು, ಸಾರ್ವಜನಿಕ ವ್ಯವಹಾರಗಳಲ್ಲಿ ಪಕ್ಷವು ಈ ಮುಂದಿನ ನೀತಿಗಳನ್ನು ಅನುಸರಿಸತಕ್ಕದ್ದು –

೧) ಪಕ್ಷವು ಎಲ್ಲಾ ಭಾರತೀಯರನ್ನೂ ಕಾನೂನಿನ ದೃಷ್ಟಿಯಲ್ಲಿ ಸಮಾನರು ಎಂದು ಪರಿಗಣಿಸುವುದಷ್ಟೇ ಅಲ್ಲದೆ ಎಲ್ಲರಿಗೂ ಸಮಾನತೆಯ ಹಕ್ಕು ಇರುವುದರಿಂದ ಸಮಾನತೆಯ ಅಭಾವವಿರುವೆಡೆಯಲ್ಲಿ ಹಾಗೂ ಸಮಾನತೆಯ ಅವಕಾಶವನ್ನು ನಿರಾಕರಿಸಲಾಗಿರುವಂತಹ ಪರಿಸ್ಥಿತಿಯಲ್ಲಿ ಇಂತಹ ಸಮಾನತೆಯನ್ನು ಬೆಳೆಸುವುದು.

೨) ಅಭಿವೃದ್ಧಿಹೊಂದಲು ಇರುವ ಆತನ ಹಕ್ಕುಗಳನ್ನುಳ್ಳ ಪ್ರತಿಯೊಬ್ಬ ಭಾರತೀಯನನ್ನೇ ಧ್ಯೇಯವಾಗಿಟ್ಟುಕೊಂಡು ಅದನ್ನು ಸಾಧಿಸಲು ಪಕ್ಷವು ಸರಕಾರವನ್ನು ಸಾಧನವನ್ನಾಗಿಸಿಕೊಳ್ಳುವುದು.

೩) ಇತರ ವ್ಯಕ್ತಿಗಳ ಹಾಗೂ ದೇಶದ ಹಿತವನ್ನು ಕಾಪಾಡುವುದಕ್ಕೋಸ್ಕರವಾಗಿರುವ ಕೆಲವು ಮಿತಿಗಳಿಗೆ ಒಳಪಟ್ಟು ಪ್ರತಿಯೊಬ್ಬ ಭಾರತೀಯನ ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಗಳನ್ನು ಪಕ್ಷವು ಕಾಪಾಡುವುದು,

೪) ಇಲ್ಲಿಯವರೆಗೂ ಸಮಾನತೆಯ ರುಚಿಯನ್ನೇ ಕಾಣದವರಿಗೆ ಆದ್ಯತೆಯನ್ನು ನೀಡುವುದರ ಜೊತೆಗೆ, ಪ್ರತಿಯೊಬ್ಬ ಭಾರತೀಯನಿಗೂ ಸಮಾನ ಅವಕಾಶಗಳನ್ನು ನೀಡುವಂತೆ ಪಕ್ಷವು ಮಾಡುವುದು.

೫) ಪ್ರತಿಯೊಬ್ಬ ಭಾರತೀಯನ ಎಲ್ಲಾ ಆವಶ್ಯಕತೆಗಳನ್ನೂ ಪೂರೈಸಿ ಅವನನ್ನು ಭಯಮುಕ್ತನನ್ನಾಗಿಸುವಲ್ಲಿ ಸರಕಾರವು ಸದಾ ಎಚ್ಚರದಿಂದಿರುವಂತೆ ಪಕ್ಷವು ಮಾಡುವುದು.

೬) ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ಕಾಪಾಡಿಕೊಂಡು ಬರುವಂತೆ ಒತ್ತಡವನ್ನು ಪಕ್ಷವು ಹೇರುವುದು. ಒಬ್ಬರು ಮತ್ತೊಬ್ಬರ ಮೇಲೆ, ಒಂದು ವರ್ಗವು ಮತ್ತೊಂದು ವರ್ಗದ ಮೇಲೆ ಹಾಗೂ ಒಂದು ದೇಶವು ಮತ್ತೊಂದು ದೇಶದ ಮೇಲೆ ದಬ್ಬಾಳಿಕೆ ನಡೆಸುವುದನ್ನು ಮತ್ತು ಶೋಷಿಸುವುದನ್ನು ಪಕ್ಷವು ತಪ್ಪಿಸುವುದು.

೭) ದೇಶದ ಹಾಗೂ ವ್ಯಕ್ತಿಗಳ ವೈಯಕ್ತಿಕ ಹಿತದ ದೃಷ್ಟಿಯಿಂದ ಸಂಸದೀಯ ಸರಕಾರದ ವ್ಯವಸ್ಥೆಯು ಉಳಿದೆಲ್ಲಾ ವ್ಯವಸ್ಥೆಗಿಂತ ಉತ್ತಮವಾಗಿರುವ ಕಾರಣದಿಂದ ಈ ವ್ಯವಸ್ಥೆಯನ್ನು ಪಕ್ಷವು ಸಮರ್ಥಿಸುವುದು.

* * * * *

# ೨೩. ಬುದ್ಧ ಮತ್ತು ಅವನ ಧರ್ಮ

ಬುದ್ಧ ಮತ್ತು ಅವನ ಧರ್ಮಕ್ಕೆ ಪೀಠಿಕೆಯನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ೧೯೫೬ರ ಮಾರ್ಚ್ ೧೫ರಂದು, ತಮ್ಮ ಭವ್ಯವಾದ ಶೈಲಿಯಲ್ಲಿ ಹದಿಮೂರು ಪುಟಗಳಷ್ಟು ಉದ್ದವಾಗಿ ಬರೆದಿದ್ದಾರೆ. ಇದನ್ನು ಪೂರ್ಣಗೊಳಿಸಲು ಅವರು ಮೂರು ಪೆನ್ನುಗಳನ್ನು ಬದಲಾಯಿಸಿದ್ದರು. ಅವರ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುವ ಹಾಗೂ ಅದರಲ್ಲಿ ಯಾವ ಸಂಶಯವೂ ಇರಬಾರದೆಂಬ ಉದ್ದೇಶದಿಂದ, ಅವರ ಪೀಠಿಕೆಯಲ್ಲಿನ ಕೊನೆಯ ಪ್ಯಾರಾವನ್ನು ಇಲ್ಲಿ ಕೊಡಲಾಗಿದೆ. ಇದು ಅವರ ಹೇಳಿಕೆಯಲ್ಲಿರುವುದನ್ನು ದೃಢೀಕರಿಸುತ್ತದೆ.

ಈ ಪುಸ್ತಕವು ಬೌದ್ಧಧರ್ಮವನ್ನು ಅರಿಯಲು ಸಹಾಯವಾಗುವ ಮೂರು ಪುಸ್ತಕಗಳಲ್ಲಿ ಒಂದು ಎಂಬುದನ್ನು ನಾನು ಇಲ್ಲಿ ಹೇಳಬೇಕು. ಇನ್ನುಳಿದ ಎರಡು ಪುಸ್ತಕಗಳೆಂದರೆ (೧) ಬುದ್ಧ ಮತ್ತು ಕಾರ್ಲ್ಸ್ ಮಾರ್ಕ್ಸ್, ಮತ್ತು (೨) ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ. ಅವುಗಳು ಭಾಗಶಃ ಬರೆಯಲ್ಪಟ್ಟಿವೆ. ಅವುಗಳನ್ನು ಶೀಘ್ರವೇ ಪ್ರಕಟಿಸುವ ವಿಶ್ವಾಸವಿದೆ.

೧೯೫೬ರ ಮಾರ್ಚ್ ೧೫ — ಸಹಿ/– ಬಿ.ಆರ್. ಅಂಬೇಡ್ಕರ್*.

* * * * *

*'ಡಾ. ಅಂಬೇಡ್ಕರ್ ಅವರ ಅಂತಿಮ ವರ್ಷಗಳು' – ರತ್ತು ನಾನಕ್ ಚಂದ್, ಪುಟ ೧೯೭.

# ೨೪. ರಾಜಕೀಯ ಪ್ರವೇಶದ ತರಬೇತಿಗಾಗಿ ಶಾಲೆ

## ಸಂಪಾದಕೀಯ ನುಡಿ

೧೯೬೨ರಲ್ಲಿ ಪ್ರೊ. ಕೆ.ಟಿ. ಷಾ ಅವರು ಸಂಸತ್ತಿನ ಹಾಗೂ ರಾಜ್ಯ ಶಾಸನಸಭೆಗಳ ಸದಸ್ಯರಿಗೆ ಯಾವುದಾದರೂ ಔಪಚಾರಿಕ ವಿದ್ಯಾರ್ಹತೆಗಳು ಇರಬೇಕೇ ಎಂಬ ಗೊತ್ತುವಳಿಯೊಂದನ್ನು ಸಂಸತ್ತಿನ ಮುಂದಿಟ್ಟರು. ಕನಿಷ್ಠ ವಿದ್ಯಾರ್ಹತೆಗಳಿರಬೇಕೆಂಬುದು ಸದಸ್ಯರ ಅಭಿಮತವಾಗಿತ್ತು. ಆದರೆ ಅಂತಹ ನಿಯಮವು, ಅಪಾರ ಜನರನ್ನು ಸದಸ್ಯತ್ವಕ್ಕಾಗಿ ಚುನಾವಣೆಗಳಲ್ಲಿ ಸ್ಪರ್ಧಿಸುವುದರಿಂದ ತಪ್ಪಿಸುತ್ತಿತ್ತು. ಕಾನೂನು ಸಚಿವರಾಗಿದ್ದ ಡಾ. ಅಂಬೇಡ್ಕರ್ ಅವರು, ಕನಿಷ್ಠ ಔಪಚಾರಿಕ ವಿದ್ಯಾರ್ಹತೆಯ ಬದಲಿಗೆ, ಸ್ಪರ್ಧಿಗಳು ಪ್ರಜ್ಞಾವಂತರಾಗಿರಬೇಕು ಮತ್ತು ಶೀಲವಂತರಾಗಿರಬೇಕು ಎಂದು ಸೂಚಿಸಿದರು. ಅವರು ಮಾಡಿದ ಭಾಷಣದ ಸಂಬಂಧಿಸಿದ ಭಾಗಗಳನ್ನು ಕೆಳಗೆ ಕೊಟ್ಟಿದೆ.

"ಪ್ರೊ. ಷಾ ಅವರ ಗೊತ್ತುವಳಿಯನ್ನು ಅನುಮೋದಿಸಿದವರು ಈ ಗೊತ್ತುವಳಿಯ ವಿಷಯವಾಗಿ ಪ್ರೊ. ಷಾ ಅವರು ಮಾಡಿದ ಹಲವಾರು ಭಾಷಣಗಳನ್ನು ಕೇಳಿ, ಅವರ ಮನಸ್ಸನ್ನು ಸರಿಯಾಗಿ ಅರ್ಥೈಸಿದ್ದಾರೆ ಎಂದು ನನಗೆ ಭಾಸವಾಗುತ್ತದೆ. ಆದರೂ, ಹಲವಾರು ಸದಸ್ಯರು ಸಂವಿಧಾನದಲ್ಲಿ ನಮೂದಿಸಿರದ ವಿದ್ಯಾರ್ಹತೆಗಳನ್ನು ಈ ಉದ್ದೇಶಕ್ಕಾಗಿ ಕನಿಷ್ಠ ಅರ್ಹತೆಯನ್ನಾಗಿ ವಿಧಿಸಬೇಕೆಂದು ಬಯಸುತ್ತಿದ್ದಾರೆ ಎಂದು ಕಾಣುತ್ತದೆ. ಆದರೆ ಯಾರೂ ಈ ವಿಷಯದಲ್ಲಿ ನಿಷ್ಕೃಷ್ಟವಾಗಿ ತಮ್ಮ ನಿಲವನ್ನು ತಿಳಿಸಿಲ್ಲ. ಸ್ಪರ್ಧಿಯು ಕಾನೂನು ಸಮ್ಮತವಾಗಿ ಸ್ಪರ್ಧಿಸಲು ಯಾವ ಕನಿಷ್ಠ ಮಟ್ಟದ ವಿದ್ಯಾರ್ಹತೆಯನ್ನು ಹೊಂದಿರಬೇಕು ಎಂಬ ಬಗ್ಗೆ ನನಗೆ ಯಾರೂ ಸೂಚಿಸಿಲ್ಲ.

ಕೇವಲ ಶಿಕ್ಷಣವು ಈ ಸದನದ ಸದಸ್ಯತ್ವಕ್ಕೆ ಮಾನದಂಡವಾಗಲಾರದು. ಬುದ್ಧನ ಮಾತುಗಳನ್ನು ನಾನು ಉದ್ಧರಿಸಬಹುದಾದರೆ, ಮನುಷ್ಯನಿಗೆ ಎರಡು ವಿಷಯಗಳ ಅಗತ್ಯವಿರುತ್ತದೆ – ಒಂದು ಜ್ಞಾನ ಮತ್ತು ಇನ್ನೊಂದು ಶೀಲ. ಶೀಲವಿಲ್ಲದ ಜ್ಞಾನವು ಬಹು ಅಪಾಯಕಾರಿ, ಅದು ಯಾವಾಗಲೂ ಶೀಲಕ್ಕೆ ಸಹಚಾರಿಯಾಗಿರಬೇಕು. ಶೀಲವೆಂದರೆ ಚಾರಿತ್ರ್ಯ, ನೈತಿಕ ಧೈರ್ಯ, ಯಾವ ಬಗೆಯ ಆಮಿಷಗಳಿಗೂ ಬಲಿಯಾಗದಿರುವ ಸಾಮರ್ಥ್ಯ ಮತ್ತು ತನ್ನ ಧ್ಯೇಯಗಳಿಗೆ ಪ್ರಾಮಾಣಿಕನಾಗಿರುವುದು. ಪ್ರೊ. ಷಾ ಅವರನ್ನು ಸಮರ್ಥಿಸಿ ಮಾತನಾಡಿದವರು ಈ ಎರಡರಲ್ಲಿ ಎರಡನೆಯದರ ಬಗ್ಗೆ ಏನನ್ನಾದರೂ ಹೇಳಿದುದು ನನಗೆ ಕಂಡುಬರಲಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ, ಶೀಲವನ್ನು ತಕ್ಕ ಪ್ರಮಾಣದಲ್ಲಿ ಹೊಂದಿಲ್ಲದ ಯಾವ ವ್ಯಕ್ತಿಯೂ ಈ ಪವಿತ್ರ ಸದನವನ್ನು ಪ್ರವೇಶಿಸಬಾರದು. ಆದರೆ ಈ ಅಮೂಲ್ಯ ಅರ್ಹತೆಯ ಆಶ್ವಾಸನೆಯನ್ನು ಅಳೆಯಲು ಅಗತ್ಯವಾದ ಸಾಧನವನ್ನಾಗಲೀ, ತಂತ್ರವನ್ನಾಗಲೀ ಅಳವಡಿಸಿಕೊಳ್ಳುವುದು ಅತ್ಯಂತ ಕಠಿಣವಾದುದು.

ಶಿಕ್ಷಣದ ಪ್ರಶ್ನೆಬಂದಾಗ, ನಾನು ಅಜ್ಞಾನವನ್ನು ಒಂದು ಸದ್ಗುಣವೆಂದು ಹೇಳುವವನಲ್ಲ. ಅದನ್ನು ನಾನು ಸ್ಪಷ್ಟವಾಗಿ ಎಲ್ಲರಿಗೂ ತಿಳಿಸುತ್ತೇನೆ. ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನೆರವೇರಿಸಲು ಅಗತ್ಯವಾದ ಸಾಮರ್ಥ್ಯದ ಮಟ್ಟವನ್ನು ತಲುಪಲು ಅಗತ್ಯವಾದ ಶಿಕ್ಷಣವು ಬೇಕು ಎಂದು ನಾನು ತಿಳಿದಿದ್ದೇನೆ. ಈ ಸದನದಲ್ಲಿ ಇರುವ ಕೆಲವು ಸದಸ್ಯರು, ವಿದ್ಯಾವಂತರಲ್ಲದಿದ್ದರೂ ತಾವು ಪ್ರತಿನಿಧಿಸುವ ಕ್ಷೇತ್ರದಲ್ಲಿನ ಕುಂದುಕೊರತರೆಗಳಿಗೆ ದನಿಕೊಡುವಲ್ಲಿ ಅತ್ಯಂತ ಸಮರ್ಥರಾಗಿದ್ದಾರೆ. ಉನ್ನತ ಶಿಕ್ಷಣವನ್ನು ಪಡೆದ

ವ್ಯಕ್ತಿಯೊಬ್ಬನು ತನ್ನ ಕರ್ತವ್ಯದಲ್ಲಿ ಸಫಲನಾಗದೆ ಇರಬಹುದು. ಇದಕ್ಕೆ ಕಾರಣ ಆತನಿಗೆ ತನ್ನ ಕ್ಷೇತ್ರದ ಸಮಸ್ಯೆಗಳು ಅರಿವಿಗೆ ಬಂದಿಲ್ಲದಿರಬಹುದು ಅಥವಾ ಸಾಕಷ್ಟು ಅನುಭವವು ಇಲ್ಲದಿರಬಹುದು. ಈ ವರ್ಗದಿಂದ ಬಂದಿರುವ ನನ್ನ ಸ್ನೇಹಿತರು, ಅವರ ಬಗ್ಗೆ ನನಗೆ ಸಹಾನುಭೂತಿಯಿದ್ದರೂ, ಈ ಸದನದಲ್ಲಿ ಅಗತ್ಯವಾಗಿರುವುದು ಯಾವುದು ಎಂಬುದನ್ನು ತಿಳಿದುಕೊಳ್ಳಲು ವಿಫಲರಾಗುತ್ತಾರೆ ಎಂದು ಹೇಳುತ್ತೇನೆ. ಇಲ್ಲಿ ಅಗತ್ಯವಾಗಿರುವುದು ತಾವು ಪ್ರತಿನಿಧಿಸುವ ಜನತೆಯ ಕಷ್ಟಗಳನ್ನು ನಿವಾರಿಸುವ ಸಲುವಾಗಿ ಕೇವಲ ಭಾಷಣಗಳನ್ನು ಮಾಡುವುದಲ್ಲ, ಬದಲಿಗೆ, ಈ ಸಂಕಷ್ಟಗಳನ್ನು ನಿವಾರಿಸಲು ಬೇಕಾದ ಪರಿಹಾರವನ್ನು ಸೂಚಿಸುವುದು. ಭಾಷಣಗಳನ್ನು ಮಾಡಿ ತಮ್ಮ ಜನತೆಯ ಸಮಸ್ಯೆಯನ್ನು ಸದನದ ಮುಂದಿಡುವುದು ಬಹಳ ಸುಲಭವಾದ ಕೆಲಸ. ಆದರೆ ಅದಕ್ಕೆ ಅಗತ್ಯವಾದ ಪರಿಹಾರಗಳನ್ನು ರೂಪಿಸುವುದು ಅತ್ಯಂತ ಕಠಿಣವಾದ ವಿಷಯ. ಅದಕ್ಕೆ ಶಿಕ್ಷಣವು ಬೇಕು. ಹಿಂದುಳಿದ ವರ್ಗಗಳ, ಪರಿಶಿಷ್ಟ ವರ್ಗಗಳ ಅಥವಾ ಗಿರಿಜನರ ದೃಷ್ಟಿಯಿಂದಲೂ ಶಿಕ್ಷಣವು ಅತ್ಯಗತ್ಯವಾದ ವಿಷಯ. ನಾವು ಅದನ್ನು ಜಾರಿಗೊಳಿಸುವುದು ಹೇಗೆ? ಸದಸ್ಯರಿಗೆ ಒಂದಲ್ಲ ಒಂದು ರೀತಿಯ ಕನಿಷ್ಠ ವಿದ್ಯಾರ್ಹತೆಯಿರಬೇಕೆಂಬ ಸಲಹೆಯನ್ನು ನಾನು ಪರಿಶೀಲಿಸಿದಾಗ, ಅದು ತರ್ಕದ ದೃಷ್ಟಿಯಿಂದ ಸರಿಯೆನಿಸಿದರೂ, ಅದರಿಂದ ಯಾವುದೇ ಕೆಟ್ಟ ಪರಿಣಾಮಗಳು ಉಂಟಾಗದಂತೆ, ಕಾರ್ಯಸಾಧುವಾಗುವಂತೆ ರೂಪಿಸುವುದು ಅಸಾಧ್ಯದ ಮಾತು. ನನಗೆ ಕಷ್ಟವು ಎದುರಾಗಿರುವುದು ಇಲ್ಲಿ. ವಿದ್ಯಾರ್ಹತೆಯ ಮಟ್ಟವನ್ನು ಹೇಗೆ ಗುರುತಿಸುವುದು? ಕೇವಲ ಬಿ.ಎ. ಪದವೀಧರರು ಮಾತ್ರ ಈ ಸದನಕ್ಕೆ ಪ್ರವೇಶಿಸಲು ಅರ್ಹರಾಗಿರುತ್ತಾರೆಯೇ? ನೀವು ಹಾಗೆ ನಿರ್ಧರಿಸಿದರೆ, ಅದರ ಪರಿಣಾಮವೇನಾಗುತ್ತದೆ? ಕಾಲೇಜಿನ ಅಥವಾ ವಿಶ್ವವಿದ್ಯಾನಿಲಯದ ಆವರಣದೊಳಕ್ಕೆ ಒಮ್ಮೆಯೂ ಪ್ರವೇಶಿಸದ ಕೆಲವರು, ಪದವೀಧರರಿಗಿಂತ ಹೆಚ್ಚಿನ ವಿದ್ಯೆ ಮತ್ತು ಜ್ಞಾನವನ್ನು ಹೊಂದಿರುತ್ತಾರೆ ಎಂಬ ವಾಸ್ತವತೆಯು ಈ ಸದನದ ಸದಸ್ಯರಿಗೆ ತಿಳಿದಿರಬಹುದು. ಅಂತಹವರು ಬಹುಮಂದಿಯಿದ್ದಾರೆ. ಖಾಸಗಿಯಾಗಿ ಶಿಕ್ಷಣವನ್ನು ಪಡೆದು, ಬಿ.ಎ. ಅಥವಾ ಎಂ.ಎ. ಪದವಿಯನ್ನು ಪಡೆದವರಷ್ಟೇ ಅಥವಾ ಇನ್ನೂ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವ ಇಂತಹ ವ್ಯಕ್ತಿಗಳನ್ನು, ಕೇವಲ ಅವರು ವಿಶ್ವವಿದ್ಯಾನಿಲಯದ ಪದವಿಪತ್ರವನ್ನು ಪಡೆದಿಲ್ಲವೆಂಬ ಕಾರಣದಿಂದ ಈ ಸದನದಿಂದ ಹೊರಗೆ ಇಡುವಿರಾ? ಹೀಗಾಗುವುದು ಅತ್ಯಂತ ದುರದೃಷ್ಟದ ಸಂಗತಿ ಎಂದು ನನಗನಿಸುತ್ತದೆ.

ಇದರ ಇನ್ನೊಂದು ಪರಿಣಾಮವನ್ನು ನೋಡಿ. ಈ ದೇಶದಲ್ಲಿ ಶಿಕ್ಷಣವು ಅತ್ಯಂತ ಕೆಳಮಟ್ಟದಲ್ಲಿದೆ. ಅದು ಹಾಗಿರುವುದಷ್ಟೇ ಅಲ್ಲದೆ, ಶಿಕ್ಷಣವು ಎಲ್ಲಾ ಸಮುದಾಯದವರಲ್ಲಿಯೂ ಒಂದೇ ಮಟ್ಟದಲ್ಲಿ ಹರಡಿಲ್ಲ ಎಂಬುದು ನಮಗೆಲ್ಲಾ ಗೊತ್ತಿದೆ. ಕೆಲವು ಸಮುದಾಯಗಳು ಹೆಚ್ಚಿನ ಶಿಕ್ಷಣವನ್ನು ಪಡೆದಿದ್ದರೆ, ಮತ್ತೆ ಕೆಲವು ಸಮುದಾಯಗಳಲ್ಲಿನ ಶಿಕ್ಷಣದ ಮಟ್ಟವು ಬಹಳ ಕಡಿಮೆ ಪ್ರಮಾಣದಲ್ಲಿದೆ. ಈ ಸದನದ ಸದಸ್ಯರ ಕನಿಷ್ಠ ವಿದ್ಯಾರ್ಹತೆಯನ್ನು ಬಿ.ಎ. ಎಂದಾಗಲೀ, ಅಥವಾ ಮೆಟ್ರಿಕ್ಯುಲೇಷನ್ ಎಂದಾಗಲೀ ಮಾಡಿದರೆ, ನೀವು ಒಂದೇ ಸಮುದಾಯದವರು ಈ ಸದನದ ಗುತ್ತಿಗೆಯನ್ನು ತೆಗೆದುಕೊಳ್ಳುವುದಕ್ಕೆ ಅನುವುಮಾಡಿಕೊಡುವುದಿಲ್ಲವೇ? ಇದೇ ರೀತಿ ಆಗುತ್ತದೆ ಎಂಬ ಭಯವು ನನ್ನದು. ಇದನ್ನು ಬಿಟ್ಟು ಎಲ್ಲಾ ಸಮುದಾಯಗಳಿಗೂ ಅವಕಾಶವನ್ನು ಕೊಡುವ ಉದ್ದೇಶದಿಂದ ಸಾಕ್ಷರತೆಯನ್ನು ಮಾನವಾಗಿಟ್ಟುಕೊಂಡು, ಅಥವಾ ಓದುವುದು, ಬರೆಯುವುದು ಮತ್ತು ಗಣಿತ ಇವುಗಳನ್ನು ಮಾನವನ್ನಾಗಿಟ್ಟುಕೊಂಡು ನಾಲ್ಕನೆಯ ತರಗತಿಯ ಮಟ್ಟಕ್ಕೆ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಗೊಳಿಸಿದರೆ, ಅದು ಸಮರ್ಪಕ ವಿದ್ಯಾರ್ಹತೆಯಾಗುತ್ತದೆಯೇ? ಅದಕ್ಕೇ ಯಾವ ಬೆಲೆಯೂ ಇರುವುದಿಲ್ಲ.

ಆದ್ದರಿಂದ, ನಾನು ಹೇಳುವುದೇನೆಂದರೆ, ಇದು ಒಂದು ಒಳ್ಳೆಯ ಸಲಹೆ. ತಮ್ಮ ಕ್ಷೇತ್ರಗಳನ್ನು

ಪ್ರತಿನಿಧಿಸುವ ಸದಸ್ಯರಿಗೆ ಕನಿಷ್ಠ ವಿದ್ಯಾರ್ಹತೆಯಿರಬೇಕು ಎಂಬ ಭಾವನೆಯ ವಿರುದ್ಧ ನಾನು ಹಾರಾಡುವುದಿಲ್ಲ. ಆದರೆ, ಅದನ್ನು ಕಾನೂನು ರೀತ್ಯಾ ಹೇಗೆ ಜಾರಿಗೊಳಿಸುವುದು? ಈ ವಿಷಯವನ್ನು ಜನತೆಗೇ ಬಿಡುವುದು ಅಥವಾ ಸರಕಾರವನ್ನು ನಡೆಸುವ ರಾಜಕೀಯ ಪಕ್ಷಗಳ ತೀರ್ಮಾನಕ್ಕೆ ಬಿಡುವುದು ಒಳ್ಳೆಯದು ಎಂಬುದು ನನ್ನ ಸಲಹೆ. ರಾಜಕೀಯ ಪಕ್ಷಗಳು ಈ ವಿಷಯದ ಬಗ್ಗೆ ತಲೆಯನ್ನು ಕೆಡಿಸಿಕೊಳ್ಳದಿದ್ದರೆ, ಮುಂದೆ ಜನತೆಯೇ ಅವರಿಗೆ ತಕ್ಕ ಪಾಠವನ್ನು ಕಲಿಸುತ್ತಾರೆ. ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸದ ಸದಸ್ಯರನ್ನು ಜನರು ಮುಂದುವರೆಯಲು ಬಿಡುವುದಿಲ್ಲ ಅಥವಾ ಅವರನ್ನು ಮತ್ತೆ ಮತ್ತೆ ಆಯ್ಕೆ ಮಾಡುತ್ತಲೇ ಇರುವುದಿಲ್ಲ. ಅವರಿಗೆ ಕೆಲಸಗಳಾಗಬೇಕು, ಅವರ ಕಲ್ಯಾಣವಾಗಬೇಕು. ಅದನ್ನು ಸಾಧಿಸಿಕೊಳ್ಳಬೇಕಾದರೆ, ಅವರಿಗಿರುವ ಸಾಧನವೆಂದರೆ ಉತ್ತಮ ವ್ಯಕ್ತಿಗಳನ್ನು ಆಯ್ಕೆಮಾಡುವುದು ಎನ್ನುವುದನ್ನು ಜನತೆ ಅರಿತುಕೊಳ್ಳುತ್ತಾರೆ. ಆದ್ದರಿಂದ ಈಗ ನಮ್ಮ ಮುಂದಿರುವ ಉತ್ತಮ ಮಾರ್ಗವೆಂದರೆ ಈ ವಿಷಯವನ್ನು ಜನತೆಗೇ ಬಿಡುವುದು."*

ಶಿಕ್ಷಣ ಮತ್ತು ಶೀಲವಿದ್ದರೂ ಸಂಸದೀಯ ಶಾಸಕಾಂಗದ ಕ್ರಮ ಮತ್ತು ಪ್ರಕ್ರಿಯೆಗಳ ಬಗ್ಗೆ ಸದಸ್ಯರಿಗೆ ತರಬೇತಿಯ ಆವಶ್ಯಕತೆಯಿದೆ ಎಂಬುದು ಡಾ. ಅಂಬೇಡ್ಕರ್ ಅವರಿಗೆ ಚೆನ್ನಾಗಿ ತಿಳಿದಿದ್ದಿತು. ಈ ವಿಷಯವು ಅವರ ಮನಸ್ಸನ್ನು ಕೊರೆಯುತ್ತಲೇ ಇದ್ದುದರಿಂದ, ಅವರು ರಾಜಕೀಯ ಪ್ರವೇಶಕ್ಕೆ ಒಂದು ತರಬೇತಿ ಶಾಲೆಯನ್ನು ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡಿದ್ದರು.

ಪ್ರಜಾಪ್ರಭುತ್ವದ ಶಕ್ತಿಗಳನ್ನು ಉದ್ದೀಪಿಸುವುದಕ್ಕಾಗಿ ಮತ್ತು ತಮ್ಮ ಉದ್ದೇಶಿತ ರಿಪಬ್ಲಿಕನ್ ಪಕ್ಷಕ್ಕೆ ಹೊಸ ರಕ್ತವನ್ನು ತುಂಬುವುದಕ್ಕಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ೧೯೫೬ರ ಜುಲೈನಲ್ಲಿ ರಾಜಕೀಯ ಪ್ರವೇಶದ ತರಬೇತಿ ಶಾಲೆಯನ್ನು ಸ್ಥಾಪಿಸಿದರು. ಡಾ. ಅಂಬೇಡ್ಕರ್ ಅವರು ಅದರ ನಿರ್ದೇಶಕರಾಗಿದ್ದರು ಮತ್ತು, ಶ್ರೀ ಎಸ್. ಎಸ್. ರೇಗೆಯವರು ಅದರ ರಿಜಿಸ್ಟ್ರಾರರಾಗಿದ್ದರು. ಶಾಸನ ಸಭೆಗಳನ್ನು ಪ್ರವೇಶಿಸುವ ಆಸೆಯನ್ನು ಇಟ್ಟುಕೊಂಡಿದ್ದವರಿಗಾಗಿ ಈ ಶಾಲೆಯು ತೆರೆಯಲ್ಪಟ್ಟಿದ್ದು, ದೇಶದಲ್ಲಿ ಇಂತಹ ಶಾಲೆ ಇದೇ ಮೊದಲನೆಯದಾಗಿತ್ತು. ಇದರಲ್ಲಿ ಪ್ರವೇಶವನ್ನು ಪಡೆದವರು, ಅರ್ಥಶಾಸ್ತ್ರ, ರಾಜಕೀಯ, ಸಾಮಾಜಿಕ ಹಾಗೂ ಸಂಸದೀಯ ವಿಷಯಗಳಲ್ಲಿ ತಮ್ಮ ಅಭಿಪ್ರಾಯವನ್ನು ನಿರರ್ಗಳವಾಗಿ ಮಂಡಿಸುವಂತಹ ವಾಗ್ಮಿಗಳಾಗಬೇಕು ಎಂಬುದು ಡಾ. ಅಂಬೇಡ್ಕರ್ ಅವರು ಬಯಸುತ್ತಿದ್ದರು.

ಆ ಶಾಲೆಯ ಪ್ರಾಚಾರ್ಯ ಹುದ್ದೆಗಾಗಿ ಒಳ್ಳೆಯ ವ್ಯಕ್ತಿತ್ವವುಳ್ಳ, ವಿಷಯಗಳ ಮೇಲೆ ಒಳ್ಳೆಯ ಪ್ರಭುತ್ವವುಳ್ಳ, ಉತ್ತಮ ವಾಗ್ಮಿಯಾದಂತಹವರಿಗಾಗಿ ಅವರು ಹುಡುಕಾಟವನ್ನು ಪ್ರಾರಂಭಿಸಿದ್ದರು. ಆ ಶಾಲೆಯ ಯಶಸ್ಸು ಅಧ್ಯಾಪಕರ ಸಾಮರ್ಥ್ಯ ಮತ್ತು ಉತ್ತಮ ವಾಗ್ಮಿತೆಯಮೇಲೆ ಅವಲಂಬಿತವಾಗಿರುತ್ತದೆ ಎಂದು ಅವರು ತಿಳಿದಿದ್ದರು. ೧೯೫೬ರ ಜುಲೈ ೧ರಂದು ೧೫ ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಆ ಶಾಲೆ ೧೯೫೭ರ ಮಾರ್ಚ್ ವರೆಗೆ ನಡೆಯಿತು.

೧೯೫೬ರ ಡಿಸೆಂಬರ್‌ನಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಭಾಷಣಕಲೆಯ ಬಗ್ಗೆ ತಿಳಿಸಲು ಒಂದು ಭಾಷಣವನ್ನು ಮಾಡಬೇಕೆಂದು ಡಾ. ಅಂಬೇಡ್ಕರ್ ಅವರು ಯೋಜಿಸಿದ್ದರು. ಆದರೆ ಅವರು ಅಕಾಲಮರಣಕ್ಕೆ ತುತ್ತಾದ ಕಾರಣ ಆ ಶಾಲೆಗೆ ಭೇಟಿಯನ್ನು ನೀಡಬೇಕೆಂದಿದ್ದ ಅವರ ಉದ್ದೇಶ ನೆರವೇರಲಿಲ್ಲ.**

* * * * *

---

*ಬರಹಗಳು ಮತ್ತು ಭಾಷಣಗಳು –ಸಂಪುಟ ೧೫, ಪುಟ ೧೮೯–೧೯೧

**ಕೀರ್, ಪುಟ ೪೯೧–೪೯೨ ಮತ್ತು ರೇಗೆ ಪುಟ ೮೦–೮೧

# VII

# ಕ್ಯಾಬಿನೆಟ್ ಮಿಷನ್ ಹಾಗೂ ಅಧಿಕಾರದ ಹಸ್ತಾಂತರದ ಬಗೆಗೆ ಡಾ. ಬಿ.ಆರ್. ಅಂಬೇಡ್ಕರ್

# ಕ್ಯಾಬಿನೆಟ್ ಮಿಷನ್ ಮತ್ತು ಅಧಿಕಾರದ ಹಸ್ತಾಂತರ

## ಸಂಪಾದಕೀಯ ನುಡಿ

ಭಾರತ ರಾಷ್ಟ್ರೀಯ ಸೇನೆಯಿಂದ (ಇಂಡಿಯನ್ ನ್ಯಾಷನಲ್ ಆರ್ಮಿ) ಉಂಟಾದ ರಾಷ್ಟ್ರಪ್ರೇಮದ ಉಬ್ಬರ, ಅವರ ವಿಚಾರಣೆ, ರಾಯಲ್ ಇಂಡಿಯನ್ ನೇವಲ್ ರೇಟಿಂಗ್ಸ್ ಮತ್ತು ರಾಯಲ್ ಏರ್ ಫೋರ್ಸ್ ಅವರುಗಳ ದಂಗೆ, ಇವು ಸಾಮ್ರಾಜ್ಯದ ವ್ಯವಸ್ಥೆಯನ್ನೇ ಹಾಳುಮಾಡುವಂತೆ ಕಂಡುಬಂದಿತು. ಸ್ವಾತಂತ್ರ್ಯಕ್ಕಾಗಿ ಭಾರತದ ಸೇನೆಯು ತಹತಹಿಸುತ್ತಿತ್ತು. ರಾಜಕೀಯ ಮತ್ತು ರಾಷ್ಟ್ರೀಯತೆಗಳು ಸೇನೆಯ ವಿವಿಧ ಹಂತಗಳನ್ನೂ ತಲುಪಿ ಅವರ ಹೃದಯಗಳನ್ನು ತನ್ನತ್ತ ಆಕರ್ಷಿಸಿತ್ತು. ಭಾರತವನ್ನು ತಮ್ಮ ದಾಸ್ಯದಲ್ಲಿ ಇನ್ನು ಹೆಚ್ಚು ಕಾಲ ಇಟ್ಟುಕೊಳ್ಳುವುದು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಅರಿತರು. ೧೯೪೬ರ ಮಾರ್ಚ್ ೧೫ರಂದು ಆಗ ಬ್ರಿಟಿಷ್ ಪ್ರಧಾನಮಂತ್ರಿಯಾಗಿದ್ದ ಕ್ಲೆಮೆಂಟ್ ಅಟ್ಲಿಯವರು ಭಾರತವು ಬ್ರಿಟಿಷ್ ಕಾಮನ್‌ವೆಲ್ತ್‌ನ ಒಳಗಿರಲಿ ಅಥವಾ ಹೊರಗಿರಲಿ, ಅದು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವ ಹಕ್ಕನ್ನು ಹೊಂದಿದೆ ಎಂಬ ವಿಷಯವನ್ನು ಒಪ್ಪಿಕೊಂಡರು. ಆ ಸಮಯದಲ್ಲಿ ಅವರು, ಅಲ್ಪಸಂಖ್ಯಾತರು ಬಹುಸಂಖ್ಯಾತರ ಪ್ರಗತಿಗೆ ಅಡ್ಡಿಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದು ಹೇಳಿದರು.

ಭಾರತದಲ್ಲಿ ಆಗ ಉಂಟಾಗಿದ್ದ ರಾಜಕೀಯ ಕಗ್ಗಂಟನ್ನು ಬಿಡಿಸುವ ಸಲುವಾಗಿ ಭಾರತದ ರಾಜಕೀಯ ಮುಖಂಡರೊಡನೆ ಚರ್ಚಿಸಲು ತಮ್ಮ ಸಂಪುಟದ ಮೂವರು ಸದಸ್ಯರ – ಸರ್ ಸ್ಟಾಫೋರ್ಡ್ ಕ್ರಿಪ್ಸ್, ಎ.ವಿ. ಅಲೆಗ್ಸಾಂಡರ್ ಮತ್ತು ಭಾರತದ ಸೆಕ್ರೆಟರಿಯವರಾಗಿದ್ದ ಲಾರ್ಡ್ ಪೆಥಿಕ್ ಲಾರೆನ್ಸ್ ಅವರ – ನಿಯೋಗವೊಂದನ್ನು ಭಾರತಕ್ಕೆ ಕಳುಹಿಸಿದರು. ಈ ನಿಯೋಗವು ನವದೆಹಲಿಯನ್ನು ೧೯೪೬ರ ಮಾರ್ಚ್ ೨೪ರಂದು ತಲುಪಿತು.*

ಕ್ಯಾಬಿನೆಟ್ ಮಿಷನ್ನಿಗೆ ಜ್ಞಾಪನಾಪತ್ರವನ್ನು ಸಲ್ಲಿಸಿ ಪರಿಶಿಷ್ಟಜಾತಿಗಳವರ ಅಹವಾಲನ್ನು ಬಲವಾಗಿ ಮತ್ತು ಸೂಕ್ಷ್ಮದೃಷ್ಟಿಯಿಂದ ವಿಶ್ಲೇಷಿಸುವ ಅಧಿಕಾರವನ್ನು ಪರಿಶಿಷ್ಟ ಜಾತಿಗಳ ಒಕ್ಕೂಟವು ಡಾ. ಅಂಬೇಡ್ಕರ್ ಅವರಿಗೆ ನೀಡಿತು. ಅವರು ದಲಿತ ವರ್ಗಗಳ ಪ್ರತಿನಿಧಿಗಳ ಚುನಾವಣೆಗಾಗಿ ಪ್ರತ್ಯೇಕವಾದ ಮತದಾರರ ಕ್ಷೇತ್ರಕ್ಕಾಗಿ ಸಂವಿಧಾನದಲ್ಲಿ ಅವಕಾಶಮಾಡಿಕೊಡಬೇಕೆಂದು ಒತ್ತಾಯಿಸಿದರು ಮತ್ತು ಕೇಂದ್ರ ಮತ್ತು ರಾಜ್ಯಗಳ ಶಾಸನಸಭೆಗಳಲ್ಲಿ, ಕೇಂದ್ರ ಮತ್ತು ರಾಜ್ಯಗಳ ಕಾರ್ಯಾಂಗದಲ್ಲಿ ಹಾಗೂ ಕೇಂದ್ರ ಮತ್ತು ರಾಜ್ಯಗಳ ಸೇವೆಯಲ್ಲಿ, ಲೋಕಸೇವಾ ಆಯೋಗಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ಅವರಿಗೆ ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಅಲ್ಲದೆ, ಪರಿಶಿಷ್ಟ ಜಾತಿಗಳವರ ಶಿಕ್ಷಣಕ್ಕಾಗಿ ಪ್ರತ್ಯೇಕ ನಿಧಿಯೊಂದನ್ನು ಸ್ಥಾಪಿಸುವಂತೆ ಮತ್ತು ಅವರಿಗಾಗಿ ಹೊಸ ನೆಲಸುಗಳನ್ನು ವ್ಯವಸ್ಥೆಮಾಡುವಂತೆ ಒತ್ತಾಯ ಮಾಡಿದರು.

ಭಾರತದಲ್ಲಿನ ಕಗ್ಗಂಟನ್ನು ಬಿಡಿಸುವ ಸಲುವಾಗಿ ನೇಮಕವಾದ ಕ್ಯಾಬಿನೆಟ್ ಮಿಷನ್ ೧೯೪೬ರ ಮೇ ೧೬ರಂದು 'ರಾಜ್ಯಪತ್ರದಲ್ಲಿ' ತನ್ನ ಯೋಜನೆಯನ್ನು ಪ್ರಕಟಿಸಿತು. ಅದರ ಪ್ರಕಾರ ಭಾರತದ

---

*ಬ್ರಿಟಿಷ್ ಕ್ಯಾಬಿನೆಟ್ ಮಿಷನ್ನಿನ ಪಾತ್ರದ ಬಗ್ಗೆ ಹೆಚ್ಚಿನ ಮಾಹಿತಿಗೆ ಪರಿಶಿಷ್ಟ–೩ನ್ನು ನೋಡಿ) (ಕೀರ್ ಪುಟ ೩೭೮)

ಸಂಯುಕ್ತ ಸಂಸ್ಥಾನವಾಗಿರಬೇಕು, ಮತ್ತು ಅದು ಮೂರು ಪಂಗಡಗಳನ್ನಾಗಿ ವಿಭಾಗಿಸಿದ ಸಂಸ್ಥಾನಗಳನ್ನು ಒಳಗೊಂಡಿರಬೇಕು, ತಾತ್ಪೂರ್ತಿಕ ಸರಕಾರವೊಂದು ನೇಮಕವಾಗಬೇಕು ಮತ್ತು ಸಂವಿಧಾನ ಸಭೆಯ ರಚನೆಯಾಗಬೇಕು. ಈ ಸಂವಿಧಾನ ಸಭೆಯ ಪ್ರಾಂತೀಯ ಶಾಸನಸಭೆಗಳ ಪ್ರತಿನಿಧಿಗಳು ಮತ್ತು ಸಂಯುಕ್ತ ಭಾರತಕ್ಕೆ ಸೇರ ಬಯಸುವ ರಾಜ್ಯಗಳ ಪ್ರತಿನಿಧಿಗಳಿಂದ ಕೂಡಿರಬೇಕಾಗಿತ್ತು. ಆದರೆ ಅವರು ಹೊರಡಿಸಿದ ರಾಜ್ಯಪತ್ರವು ಅಂಬೇಡ್ಕರ್ ಅವರು ಮುಂದಿಟ್ಟಿದ್ದ ಬೇಡಿಕೆಗಳನ್ನು ಗಮನಿಸಿರಲಿಲ್ಲ.*

ಡಾ. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳವರಿಗೆ ಸಾಂವಿಧಾನಿಕ ಹಕ್ಕುಗಳನ್ನು ಪಡೆದುಕೊಳ್ಳಲು ಶತಪ್ರಯತ್ನವನ್ನು ಮಾಡಿದರು. ಈ ಮುಂದಿನ ಸ್ವವಿವರಾಣಾತ್ಮಕ ದಾಖಲೆಗಳಲ್ಲಿ ಇವೆಲ್ಲವುಗಳನ್ನೂ ನೀಡಲಾಗಿದೆ – ಸಂಪಾದಕರು.

* * * * *

*ಜಾಥವ್. ರಾಷ್ಟ್ರೀಯ ಚಳವಳಿಯಲ್ಲಿ ಡಾ. ಅಂಬೇಡ್ಕರ್ ಅವರ ಪಾತ್ರ, ಪುಟ ೧೮೪–೧೮೫.

# ೧. ಕಾರ್ಯಾಂಗದ ಪರಿಷತ್ತಿನಲ್ಲಿ ಪರಿಶಿಷ್ಟಜಾತಿಗಳವರಿಗೆ ಪ್ರಾತಿನಿಧ್ಯದ ಬಗೆಗೆ ಕಾರ್ಯಸೂಚನೆ

ನವದೆಹಲಿ, ೧೯೪೫ರ ಜೂನ್ ೭

ಪ್ರಿಯ ಲಾರ್ಡ್ ವೇವೆಲ್,

ತಾವು ಕಾರ್ಯಾಂಗದ ಪರಿಷತ್ತನ್ನು ಭಾರತೀಕರಣಗೊಳಿಸುವ ತಮ್ಮ ಸೂಚನೆಯನ್ನು ಮುಂದುವರಿಸಲು ಉದ್ದೇಶಿಸಿರುವ ಸಮ್ಮೇಳನದಲ್ಲಿ ಅದರ ಸದಸ್ಯನಾಗಿ ಭಾಗವಹಿಸಲು ನನ್ನನ್ನು, ನಾನು ಪರಿಶಿಷ್ಟ ಜಾತಿಗಳವರ ಮುಖಂಡನಾಗಿರುವುದರಿಂದ, ಆಹ್ವಾನಿಸಿರುವುದಕ್ಕೆ ನಾನು ತಮಗೆ ಕೃತಜ್ಞನಾಗಿದ್ದೇನೆ. ನಾನು ಈಗಾಗಲೇ ತಿಳಿಸಿರುವ ಕಾರಣಗಳಿಂದಾಗಿ ತಮ್ಮ ಆಹ್ವಾನವನ್ನು ಒಪ್ಪಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ಈ ಕಾರಣಗಳನ್ನು ಮತ್ತೆ ಇಲ್ಲಿಹೇಳಬೇಕಾದ ಅಗತ್ಯವಿಲ್ಲ. ನಂತರ ತಾವು ನನ್ನ ಬದಲಿಗೆ ಮತ್ತೊಬ್ಬರ ಹೆಸರನ್ನು ಸೂಚಿಸುವಂತೆ ಕೇಳಿದಿರಿ. ನಾನು ತಮ್ಮ ಸಲಹೆಗಳಿಗೆ ವಿರೋಧವನ್ನು ಸೂಚಿಸಿದರೂ, ಈ ಸಮ್ಮೇಳನದಲ್ಲಿ ಪರಿಶಿಷ್ಟ ಜಾತಿಗಳ ಪ್ರತಿನಿಧಿಯೊಬ್ಬರು ಇರಬೇಕೆಂಬ ತಮ್ಮ ಅಪೇಕ್ಷೆಗೆ ಬೆಂಬಲವನ್ನು ನಿರಾಕರಿಸುವ ಮನಸ್ಸು ನನಗಿಲ್ಲ. ಆದ್ದರಿಂದ ನನ್ನ ಬದಲಿಗೆ ಬೇರೆ ಪ್ರತಿನಿಧಿಯೊಬ್ಬರ ಹೆಸರನ್ನು ಸೂಚಿಸಲು ಸಿದ್ಧನಿದ್ದೇನೆ. ಈ ಬಗ್ಗೆ ನನ್ನ ಮನಸ್ಸಿಗೆ ಬಂದ ಹಲವಾರು ಹೆಸರುಗಳಲ್ಲಿ ರಾವ್ ಬಹದ್ದೂರ್. ಎನ್. ಶಿವರಾಜ್, ಬಿ.ಎ., ಬಿ. ಎಲ್. ಅವರ ಹೆಸರನ್ನಲ್ಲದೆ ಬೇರೆ ಯಾರ ಹೆಸರುಗಳು ಸೂಕ್ತವಾಗಿ ನನಗೆ ಕಂಡುಬರಲಿಲ್ಲ. ಅವರು ಅಖಿಲ ಭಾರತ ಪರಿಶಿಷ್ಟ ಜಾತಿಗಳವರ ಒಕ್ಕೂಟದ ಅಧ್ಯಕ್ಷರೂ, ಕೇಂದ್ರ ಶಾಸನಸಭೆಯ ಸದಸ್ಯರೂ ಹಾಗೂ ರಾಷ್ಟ್ರೀಯ ಭದ್ರತಾ ಸಮಿತಿಯ ಸದಸ್ಯರೂ ಆಗಿದ್ದಾರೆ. ನಿಮಗೆ ಒಪ್ಪಿಗೆಯಾದರೆ, ಅವರನ್ನು ಪರಿಶಿಷ್ಟ ಜಾತಿಗಳವರ ಪ್ರತಿನಿಧಿಯನ್ನಾಗಿ ಭಾಗವಹಿಸಲು ಆಹ್ವಾನಿಸಬಹುದು.

೨. ಮತ್ತೊಂದು ವಿಷಯದತ್ತ ತಮ್ಮ ಗಮನವನ್ನು ನಾನು ಸೆಳೆಯಲೇ ಬೇಕು. ಅದೆಂದರೆ, ಕಾರ್ಯಾಂಗದ ಪರಿಷತ್ತಿನ ಪುನಾರಚನೆಯಲ್ಲಿ ಮಹಾಪ್ರಭುಗಳ ಸರಕಾರದ ಸಲಹೆಗಳ ಪ್ರಕಾರ ಪರಿಶಿಷ್ಟ ಜಾತಿಗಳವರಿಗೆ ನೀಡಿರುವ ಸ್ಥಾನಗಳ ಸಂಖ್ಯೆ ಅತಿ ಕಡಿಮೆಯಾಗಿದೆ. ೯೦ ದಶಲಕ್ಷ ಜನಸಂಖ್ಯೆಯಿರುವ ಮುಸ್ಲಿಮರಿಗೆ ಐದು ಸ್ಥಾನಗಳು, ೫೦ ದಶಲಕ್ಷದಷ್ಟಿರುವ ಅಸ್ಪೃಶ್ಯರಿಗೆ ಒಂದು ಮತ್ತು ೬ ದಶಲಕ್ಷವಿರುವ ಸಿಖ್ಖರಿಗೆ ಒಂದು ಸ್ಥಾನಗಳನ್ನು ನೀಡಿರುವುದು ವಿಚಿತ್ರವೆನಿಸುತ್ತದೆ ಮತ್ತು ದುರುದ್ದೇಶಪೂರಿತವಾದ ಈ ಲೆಕ್ಕಾಚಾರವು ನ್ಯಾಯ ಮತ್ತು ಸಾಮಾನ್ಯ ಪ್ರಜ್ಞೆಯ ನನ್ನ ಭಾವನೆಗಳ ವಿರುದ್ಧ ಸಮರವನ್ನೇ ಸಾರಿದೆ. ನಾನು ಇದರ ಒಂದು ಭಾಗವಾಗಲಾರೆ. ಅವರ ಅಗತ್ಯಗಳನ್ನು ಗಮನಿಸಿದರೆ, ಅಸ್ಪೃಶ್ಯರು, ಮುಸ್ಲಿಮರಿಗಿಂತ ಹೆಚ್ಚಲ್ಲದಿದ್ದರೂ, ಅವರಷ್ಟೇ ಪ್ರಾತಿನಿಧ್ಯವನ್ನು ಪಡೆಯಬೇಕಾಗಿತ್ತು. ಅಗತ್ಯಗಳನ್ನು ಪರಿಗಣಿಸದೆ, ಕೇವಲ ಸಂಖ್ಯೆಗಳನ್ನು ಗಮನಿಸಿದರೂ, ಅಸ್ಪೃಶ್ಯರಿಗೆ ಕನಿಷ್ಠಪಕ್ಷ ಮೂರು ಸ್ಥಾನಗಳನ್ನಾದರೂ ನೀಡಬೇಕಾಗಿತ್ತು. ಅದರ ಬದಲಿಗೆ, ಹದಿನೈದು ಸದಸ್ಯರಿರುವ ಪರಿಷತ್ತಿನಲ್ಲಿ ಅವರಿಗೆ ಕೇವಲ ಒಂದು ಸ್ಥಾನವನ್ನು ನೀಡಲಾಗಿದೆ. ಇದು ಅಸಹನೀಯ ಸ್ಥಿತಿ.

ಜೂನ್ ೫ರಂದು ನಡೆದ ಕಾರ್ಯಾಂಗದ ಪರಿಷತ್ತಿನ ಸಭೆಯಲ್ಲಿ ಮಹಾಪ್ರಭುಗಳ ಸರಕಾರದ

ಸಲಹೆಯನ್ನು ತಾವು ಪರಿಷತ್ತಿಗೆ ವಿವರಿಸಿದಾಗ ನಾನು ತಮ್ಮ ಗಮನವನ್ನು ಇದೇ ವಿಷಯದತ್ತ ಸೆಳೆದಿದ್ದೆ. ಸರಕಾರದ ಸಲಹೆಮೇಲೆ ಹಿಂದಿನ ದಿನ ಸದಸ್ಯರು ಮಾಡಿದ್ದ ಟೀಕೆಗಳಿಗೆ ೬ರಂದು ನಡೆದ ಸಭೆಯಲ್ಲಿ ತಾವು ಉತ್ತರಿಸಿದ್ದಿರಿ. ತಾವು ನಾನು ಎತ್ತಿದ ಅಂಶಗಳನ್ನೂ ವಿವರಿಸುತ್ತೀರಿ ಎಂದು ನಾನು ಸಹಜವಾಗಿಯೇ ನಿರೀಕ್ಷಿಸಿದ್ದೆ. ಆದರೆ, ತಾವು ಅದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದಿರಿ ಮತ್ತು ಅದರ ಬಗ್ಗೆ ತಮ್ಮ ಉತ್ತರದಲ್ಲಿ ಏನನ್ನೂ ಹೇಳಲಿಲ್ಲ. ಇದರಿಂದ ನನಗೆ ಅತೀವ ಆಶ್ಚರ್ಯವಾಯಿತು. ನಾನು ನನ್ನ ವಿಷಯಗಳನ್ನು ಪ್ರಬಲವಾಗಿ ಪ್ರತಿಪಾದಿಸಿರಲಿಲ್ಲವೆಂದಲ್ಲ. ನಾನು ಅದಕ್ಕಿಂತಲೂ ಹೆಚ್ಚಿನದನ್ನು ಮಾಡಿದ್ದೆ. ತಮ್ಮ ವರ್ತನೆಯಿಂದ ಹೊರಡುವ ನಿರ್ಣಯವೆಂದರೆ, ನಾನು ಪ್ರತಿಪಾದಿಸಿದ ವಿಷಯವು ತಮ್ಮ ಗಮನವನ್ನು ಸೆಳೆಯುವಷ್ಟು ಪ್ರಮುಖವಾದುದಲ್ಲ ಅಥವಾ ಪ್ರತಿಭಟನೆಯನ್ನು ಮಂಡಿಸುವುದಷ್ಟೇ ನನ್ನ ಉದ್ದೇಶವಾಗಿತ್ತು ಎನ್ನುವುದು. ಈ ತಪ್ಪು ಕಲ್ಪನೆಯನ್ನು ನಿವಾರಿಸಲು ಮತ್ತು ತಮಗೆ ನಮ್ಮ ಉದ್ದೇಶವನ್ನು ನಿಸ್ಸಂದಿಗ್ಧವಾಗಿ ಹೇಳುವ ಉದ್ದೇಶದಿಂದ, ಮಹಾಪ್ರಭುಗಳ ಸರಕಾರವು ಆಗಿರುವ ಪ್ರಮಾದವನ್ನು ನಿವಾರಿಸಲು ಕ್ರಮವನ್ನು ಕೈಗೊಳ್ಳದಿದ್ದರೆ, ನಾನು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಿದ್ದೇನೆ. ಈ ಕಾರಣದಿಂದಾಗಿ ನಾನು ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ.

ಕಾಂಗ್ರೆಸ್ ಅಥವಾ ಹಿಂದೂ ಮಹಾಸಭೆಯಿಂದ ಇಂತಹ ಸಲಹೆಗಳು ಬಂದಿದ್ದರೆ ನನಗೆ ಈಗಾಗಿರುವಷ್ಟು ನೋವು ಆಗುತ್ತಿರಲಿಲ್ಲ. ಆದರೆ ಇದು ಮಹಾಪ್ರಭುಗಳ ಸರಕಾರದ ತೀರ್ಮಾನ. ಶಾಸನಸಭೆಗಳಲ್ಲಿ ಮತ್ತು ಕಾರ್ಯಾಂಗದಲ್ಲಿ ಪರಿಶಿಷ್ಟ ಜಾತಿಗಳವರಿಗೆ ಇನ್ನೂ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕೆಂಬ ದನಿಯು ಹಿಂದೂಗಳಿಂದಲೂ ಕೇಳಿಬರುತ್ತಿದೆ. ಸಪ್ರೂ ಸಮಿತಿಯ ಸಲಹೆಗಳನ್ನು ಹಿಂದೂಗಳ ಸಾಮಾನ್ಯ ಅಭಿಮತವೆಂದು ಪರಿಗಣಿಸಿದರೆ, ಮಹಾಪ್ರಭುಗಳ ಸರಕಾರದ ಸಲಹೆಗಳು ಪ್ರತಿಗಾಮಿ ಪ್ರವೃತ್ತಿಯದೆಂದು ಹೇಳದೆ ವಿಧಿಯಿಲ್ಲ. ಸಪ್ರೂ ಸಮಿತಿಯು ಹೇಳಿದುದು ಇದು –

"ಭಾರತ ಸರಕಾರದ ಅಧಿನಿಯಮದಲ್ಲಿ ಸಿಖ್ಖರಿಗೆ ಮತ್ತು ಪರಿಶಿಷ್ಟ ಜಾತಿಗಳವರಿಗೆ ನೀಡಿರುವ ಪ್ರಾತಿನಿಧ್ಯವು ಏನೇನೂ ಸಾಲದು ಎಂಬುದು ಸುವ್ಯಕ್ತವಾಗಿಯೇ ಇದೆ. ಈ ಪ್ರಮಾಣವನ್ನು ಸಾಕಷ್ಟು ಹೆಚ್ಚಿಸಬೇಕು. ಪ್ರಾತಿನಿಧ್ಯದಲ್ಲಿ ಅವರಿಗೆ ನೀಡಬೇಕಾಗಿರುವ ಹೆಚ್ಚಳದ ಬಗ್ಗೆ ನಿರ್ಧರಿಸುವ ವಿಷಯವನ್ನು ಸಂವಿಧಾನ ರಚಿಸುವ ಮಂಡಲಿಗೆ ಅಧಿಕಾರವನ್ನು ನೀಡಬೇಕು.

(ಅ) ಕಲಮಿಗೆ ಒಳಪಟ್ಟಂತೆ, ಕೇಂದ್ರದ ಕಾರ್ಯಾಂಗವು ಈ ಮುಂದೆ ಹೇಳಿರುವ ಸಮುದಾಯಗಳವರನ್ನು ಒಳಗೊಂಡಂತಹ ಒಂದು ಸಂಯುಕ್ತ ಸಂಪುಟವಾಗಿರಬೇಕು –

ಅ) ಪರಿಶಿಷ್ಟ ಜಾತಿಗಳವರನ್ನು ಹೊರತುಪಡಿಸಿ ಇತರ ಹಿಂದೂಗಳು

ಆ) ಮುಸ್ಲಿಮರು

ಇ) ಪರಿಶಿಷ್ಟ ಜಾತಿಗಳವರು

ಈ) ಸಿಖ್ಖರು

ಉ) ಭಾರತೀಯ ಕ್ರಿಶ್ಚಿಯನ್ನರು

ಊ) ಆಂಗ್ಲೋ–ಇಂಡಿಯನ್ನರು.

(ಆ) ಕಾರ್ಯಾಂಗದಲ್ಲಿ ಈ ಸಮುದಾಯಗಳವರ ಪ್ರಾತಿನಿಧ್ಯವು ಸಾಧ್ಯವಾದಷ್ಟು ಮಟ್ಟಿಗೆ ಶಾಸನಸಭೆಯಲ್ಲಿನ ಅವರ ಸಂಖ್ಯಾಬಲವನ್ನು ಪ್ರತಿಬಿಂಬಿಸುವಂತಿರಬೇಕು"

ಕಾರ್ಯಾಂಗದ ಪರಿಷತ್ತಿನಲ್ಲಿರುವ ನನ್ನ ಇಬ್ಬರು ಹಿಂದೂ ಸಹೋದ್ಯೋಗಿಗಳು ತಮಗೆ ಇಂದಿನ

ಪ್ರಾತಃಕಾಲ ನೀಡಿರುವ ಜ್ಞಾಪನಾಪತ್ರದಲ್ಲಿ ಮಹಾಪ್ರಭುಗಳ ಸರಕಾರವು ಸಲಹೆಮಾಡಿರುವುದರಲ್ಲಿ ಪರಿಶಿಷ್ಟಜಾತಿಯವರಿಗೆ ನೀಡಿರುವ ಪ್ರಾತಿನಿಧ್ಯವು ಅತಿ ಕಡಿಮೆಯದು ಮತ್ತು ಅನ್ಯಾಯಯುತವಾದುದು ಎಂದು ಹೇಳಿದ್ದಾರೆ. ಪ್ರಜ್ಞಾವಂತ ಹಿಂದೂಗಳು ನೀಡುಬಹುದಿದ್ದ ಸಂಖ್ಯೆಗಿಂತ ಅತಿ ಕಡಿಮೆಯ ಪ್ರಾತಿನಿಧ್ಯವನ್ನು, ಇಲ್ಲಿಯವರೆಗೂ ತಾನೇ ಪರಿಶಿಷ್ಟ ಜಾತಿಗಳವರ ವಿಶ್ವಸ್ಥರೆಂದು ಹೇಳಿಕೊಳ್ಳುತ್ತಿದ್ದ ಮಹಾಪ್ರಭುಗಳ ಸರಕಾರವು ಈಗ ಅದಕ್ಕೆ ವ್ಯತಿರಿಕ್ತವಾಗಿ ಪರಿಶಿಷ್ಟ ಜಾತಿಗಳವರ ರಕ್ಷಣೆಗೆ ಇಷ್ಟು ಸಂಕುಚಿತ ಮನಸ್ಸಿನಿಂದ, ಅಪ್ರಾಮಾಣಿಕ ಹಾಗೂ ಅನ್ಯಾಯಯುತ ರೀತಿಯಲ್ಲಿ ನಿರ್ಧಾರವನ್ನು ತೆಗೆದುಕೊಂಡಿರುವುದು ನನಗೆ ಆಘಾತಕಾರಿಯಾಗಿದೆ. ಆದ್ದರಿಂದ, ಈ ಸಲಹೆಯನ್ನು ನನ್ನ ಕೈಲಾದಷ್ಟು ಮಟ್ಟಿಗೆ ವಿರೋಧಿಸುವುದು ನನ್ನ ಕಡ್ಡಾಯವಾದ ಮತ್ತು ಪವಿತ್ರವಾದ ಕರ್ತವ್ಯವೆಂದು ಭಾವಿಸಿದ್ದೇನೆ. ತಾನು ಅನೇಕ ಬಾರಿ ಪುನರುಚ್ಚರಿಸುತ್ತಿದ್ದ ಹೇಳಿಕೆಗಳಿಗೆ ವಿರುದ್ಧವಾಗಿ, ಮಹಾಪ್ರಭುಗಳ ಸರಕಾರವು ಅಸ್ಪೃಶ್ಯರ ಹಣೆಯ ಬರಹವನ್ನು ಬರೆಯುವ ಅವಕಾಶವನ್ನು ಹಿಂದೂ–ಮುಸ್ಲಿಮರ ಸಂಯುಕ್ತ ಕರುಣೆಗೆ ನೀಡುವುದನ್ನೇ ತಮ್ಮ ಅಪೇಕ್ಷೆಯನ್ನಾಗಿಸಿಕೊಂಡಿದ್ದಲ್ಲಿ, ಹಾಗೆಯೇ ಮಾಡಬಹುದು. ನಾನು ನನ್ನ ಜನರನ್ನು ತುಳಿಯುವ ಕೆಲಸದಲ್ಲಿ ಪಾಲುದಾರನಾಗಲು ಇಷ್ಟಪಡುವುದಿಲ್ಲ. ಈಗ ಮಾಡಿರುವ ಅನ್ಯಾಯವನ್ನು ಸರಿಪಡಿಸಿ, ಕಾರ್ಯಾಂಗದ ಪರಿಷತ್ತಿನಲ್ಲಿ ಕನಿಷ್ಟಪಕ್ಷ ಮೂರು ಸ್ಥಾನಗಳನ್ನಾದರೂ ಪರಿಶಿಷ್ಟ ಜಾತಿಗಳವರಿಗೆ ನೀಡಬೇಕೆಂದು ಮಹಾಪ್ರಭುಗಳ ಸರಕಾರಕ್ಕೆ ತಿಳಿಸುವ ತೀರ್ಮಾನಕ್ಕೆ ಬಂದಿದ್ದೇನೆ. ಮಹಾಪ್ರಭುಗಳ ಸರಕಾರವು ಇದಕ್ಕೆ ಸಿದ್ಧವಿಲ್ಲದಿದ್ದಲ್ಲಿ, ಹೊಸದಾಗಿ ರಚಿತವಾಗಿರುವ ಕಾರ್ಯಾಂಗದ ಪರಿಷತ್ತಿನಲ್ಲಿ ಸದಸ್ಯನಾಗಿರುವುದಕ್ಕೆ ಆಹ್ವಾನ ಬಂದರೂ ಅದು ನನಗೆ ಸಾಧ್ಯವಿಲ್ಲ ಎಂಬುದನ್ನು ಮಹಾಪ್ರಭುಗಳ ಸರಕಾರವು ಅರಿತಿಕೊಳ್ಳಬೇಕು. ತಮ್ಮ ರಾಜಕೀಯ ಹಕ್ಕುಗಳನ್ನು ಮಾನ್ಯಮಾಡುತ್ತಾರೆಂದು ಕಳೆದ ಕೆಲವು ಸಮಯದಿಂದ ಅಸ್ಪೃಶ್ಯರು ನಿರೀಕ್ಷಿಸುತ್ತಿದ್ದಾರೆ. ಮಹಾಪ್ರಭುಗಳ ಸರಕಾರದ ಈ ನಿರ್ಣಯದಿಂದ ಅವರಿಗೆ ಆಘಾತವಾಗುವುದರಲ್ಲಿ ಸಂಶಯವೇ ಇಲ್ಲ. ಇದರಿಂದ ಕುಪಿತರಾದ ಪರಿಶಿಷ್ಟ ಜಾತಿಗಳ ಇಡೀ ಸಮುದಾಯವು, ಇದರ ವಿರುದ್ಧ ಪ್ರತಿಭಟಿಸುವ ಸಲುವಾಗಿ, ತಮಗೂ ಹೊಸ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲವೆಂಬ ನಿರ್ಣಯವನ್ನು ತೆಗೆದುಕೊಂಡರೆ, ಅದು ನನಗೆ ಆಶ್ಚರ್ಯವೆನಿಸದು. ಅವರಿಗಾಗಿರುವ ಹತಾಶೆಯು ಅವರು ಬೇರೆ ದಾರಿಯನ್ನು ಹಿಡಿಯುವಂತೆ ಮಾಡುತ್ತದೆ ಎಂಬುದು ನನಗೆ ನಿಶ್ಚಯವಾಗಿ ತೋರುತ್ತಿದೆ. ಮಹಾಪ್ರಭುಗಳ ಸರಕಾರವು ತನ್ನ ನೀತಿಯನ್ನು ಬದಲಾಯಿಸದಿದ್ದರೆ, ಇದು ಘಟಿಸಿಯೇ ಘಟಿಸುತ್ತದೆ ನಾನು ನಿರೀಕ್ಷಿಸುತ್ತೇನೆ. ಈ ನಿರ್ಣಯವು ಅಂತಿಮವಾದುದಲ್ಲ ಆದರೆ ಕೇವಲ ತಾತ್ಕಾಲಿಕವಾದುದು ಎಂದು ನನಗೆ ನೀವು ಹೇಳಬಹುದು. ನಾನು ಸಾಕಷ್ಟು ಕಾಲ ರಾಜಕೀಯ ಜೀವನದಲ್ಲಿ ಇರುವುದರಿಂದ, ಒಮ್ಮೆ ಪಟ್ಟಭದ್ರ ಹಿತಾಸಕ್ತಿಗಳಿಗೆ ನೀಡಿದ ವಿನಾಯತಿಯು, ಅವರ ಪರವಾಗಿ ಮಾಡಿದ ಅನ್ಯಾಯಯುತ ನಿರ್ಣಯವು ಮುಂದಿನ ಮಾತುಕತೆಗಳಲ್ಲಿ ಪೂರ್ವಪ್ರಕರಣಗಳ ರೂಪವನ್ನು ತಳೆದು ಎಷ್ಟು ಶಕ್ತಿಯುತವಾಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬಲ್ಲೆ. ನಾನು ನನ್ನ ಕರ್ತವ್ಯಗಳಲ್ಲಿ ಬಹಳ ಚಚ್ಚರದಿಂದ ಇದ್ದೇನೆ. ನಾನು ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದರೆ, ತಾತ್ಕಾಲಿಕವೆಂದು ಪ್ರಾರಂಭವಾದ ಸ್ಥಾನಗಳ ವಿತರಣಾ ವಿಧಾನವು ತನ್ನ ಬೇರನ್ನು ಆಳವಾಗಿ ಬಿಟ್ಟು ಹೇಗೆ ಶಾಶ್ವತವಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಕಾಣುತ್ತಿದ್ದೇನೆ. ಅಂತಿಮ ಕ್ಷಣಗಳಲ್ಲಿ ವಿಷಾದವನ್ನು ಅನುಭವಿಸುವ ಬದಲು, ಪ್ರಾರಂಭದಲ್ಲಿಯೇ ನನ್ನ ಆಕ್ಷೇಪಣೆಗಳನ್ನು ದಾಖಲಿಸಬಯಸುತ್ತೇನೆ.

ನಾನು ತೆರೆಮರೆಗೆ ಸರಿಯುವುದನ್ನು ಅಥವಾ ಇಡೀ ಪರಿಶಿಷ್ಟ ಜಾತಿಗಳವರು ಮುಂದಿನ

ಸರಕಾರದಿಂದ ದೂರವಿರುವುದು ಮಹಾಪ್ರಭುಗಳ ಸರಕಾರದ ಆಶಯವಾಗಿದ್ದರೆ, ಹಾಗೂ ಆಗಬಹುದು. ಪರಿಣಾಮವಾಗಿ ಬ್ರಿಟಿಷ್ ಸರಕಾರ ಹಾಗೂ ಪರಿಶಿಷ್ಟ ಜಾತಿಗಳವರು ತಮ್ಮ ತಮ್ಮ ದಿಕ್ಕುಗಳನ್ನು ಬದಲಿಸಬೇಕಾಗಿ ಬಂದರೆ, ಅದರಿಂದಲೂ ನಾನು ವಿಷಾದಪಡುವುದಿಲ್ಲ. ಮಹಾಪ್ರಭುಗಳ ಸರಕಾರವು ಈ ವಿಷಯದಲ್ಲಿ ನಾನು ಹೇಳಬೇಕಾಗಿರುವುದು ಏನೆಂಬುದನ್ನು ತಿಳಿದುಕೊಳ್ಳಬೇಕು ಎಂಬುದು ನನ್ನ ಅಪೇಕ್ಷೆ. ಈ ಕಾರಣಕ್ಕಾಗಿ ನಾನು ತಮ್ಮಲ್ಲಿ ವಿನಂತಿಸುವುದೆಂದರೆ, ಪರಿಶಿಷ್ಟ ಜಾತಿಗಳವರಿಗಾಗಿ ಕಾರ್ಯಾಂಗದ ಪರಿಷತ್ತಿನಲ್ಲಿ ನಿಗದಿಗೊಳಿಸಿರುವ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬುದನ್ನು ಮತ್ತು ಈ ನನ್ನ ಸಲಹೆಯನ್ನು ತಿರಸ್ಕರಿಸಿದರೆ, ನಾನು ತೆಗೆದುಕೊಳ್ಳಬೇಕೆಂದಿರುವ ಕ್ರಮಗಳ ವಿವರವನ್ನು ತಾವು ಮಹಾಪ್ರಭುಗಳ ಸರಕಾರದ ಗಮನಕ್ಕೆ ತರಬೇಕು.

ತಮ್ಮ ವಿಶ್ವಾಸಿ,
ಡಾ. ಬಿ.ಆರ್. ಅಂಬೇಡ್ಕರ್

* * * * *

---

(ವೇವೆಲ್ ಪೇಪರ್ಸ್, ಪೊಲಿಟಿಕಲ್ ಸೀರೀಸ್, ೧೯೪೪ರ ಏಪ್ರಿಲ್–೧೯೪೫ರ ಜುಲೈ, ಭಾಗ ೧, ಪುಟಗಳು ೨೦೭–೨೦೯)

# ೨. ಕ್ಯಾಬಿನೆಟ್ ಮಿಷನ್ನಿಗೆ ಸಲ್ಲಿಸಿದ ಜ್ಞಾಪನಾಪತ್ರ

ಭಾರತವನ್ನು ತಮ್ಮ ದಾಸ್ಯದಲ್ಲಿ ಇನ್ನು ಹೆಚ್ಚು ಕಾಲ ಇಟ್ಟುಕೊಳ್ಳುವುದು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಅರಿತರು. ೧೯೪೬ರ ಮಾರ್ಚ್ ೧೫ರಂದು ಆಗ ಬ್ರಿಟಿಷ್ ಪ್ರಧಾನಮಂತ್ರಿಯಾಗಿದ್ದ ಕ್ಲೆಮೆಂಟ್ ಅಟ್ಲಿಯವರು ಭಾರತವು ಬ್ರಿಟಿಷ್ ಕಾಮನ್‌ವೆಲ್ತ್‌ನ ಒಳಗಿರಲಿ ಅಥವಾ ಹೊರಗಿರಲಿ, ಅದು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವ ಹಕ್ಕನ್ನು ಹೊಂದಿದೆ ಎಂಬ ವಿಷಯವನ್ನು ಒಪ್ಪಿಕೊಂಡರು. ಆ ಸಮಯದಲ್ಲಿ ಅವರು, ಅಲ್ಪಸಂಖ್ಯಾತರು ಬಹುಸಂಖ್ಯಾತರ ಪ್ರಗತಿಗೆ ಅಡ್ಡಿಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದೂ ಹೇಳಿದರು.

ಭಾರತದಲ್ಲಿ ಆಗ ಉಂಟಾಗಿದ್ದ ರಾಜಕೀಯ ಕಗ್ಗಂಟನ್ನು ಬಿಡಿಸುವ ಸಲುವಾಗಿ ಭಾರತದ ರಾಜಕೀಯ ಮುಖಂಡರೊಡನೆ ಚರ್ಚಿಸಲು ತಮ್ಮ ಸಂಪುಟದ ಮೂವರು ಸದಸ್ಯರನ್ನು – ಸರ್ ಸ್ಟಾಫ಼ೊರ್ಡ್ ಕ್ರಿಪ್ಸ್, ಎ.ವಿ. ಅಲೆಗ್ಸಾಂಡರ್ ಮತ್ತು ಭಾರತದ ಸೆಕ್ರೆಟರಿಯವರಾಗಿದ್ದ ಲಾರ್ಡ್ ಪೆಥಿಕ್ ಲಾರೆನ್ಸ್ ಅವರ ನಿಯೋಗವೊಂದನ್ನು ಭಾರತಕ್ಕೆ ಕಳುಹಿಸಿದರು. ಈ ನಿಯೋಗವು ನವದೆಹಲಿಯನ್ನು ೧೯೪೬ರ ಮಾರ್ಚ್ ೨೪ರಂದು ತಲುಪಿತು. ಹಲವಾರು ಸಂದರ್ಶನಗಳು, ಉನ್ನತ ಮಟ್ಟದ ಚರ್ಚೆಗಳು ಮತ್ತು ಸೂಕ್ಷ್ಮವಾದ ಸಮಾಲೋಚನೆಗಳು ವೈಸ್ ರೀಗಲ್ ಲಾಡ್ಜ್‌ನಲ್ಲಿ ನಡೆದವು.

ಈ ಸನ್ನಿವೇಶದಲ್ಲಿ, ೧೯೪೬ರ ಏಪ್ರಿಲ್ ೫ರಂದು ಅಲ್ಪಸಂಖ್ಯಾತ ಸಮುದಾಯದ ಇಬ್ಬರು ಪ್ರತಿನಿಧಿಗಳನ್ನು ಮಿಷನ್ ಸಂದರ್ಶಿಸಿತು. ಆ ಪ್ರತಿನಿಧಿಗಳೆಂದರೆ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಮಾಸ್ಟರ್ ತಾರಾ ಸಿಂಗ್. ಡಾ. ಅಂಬೇಡ್ಕರ್ ಅವರು ಸಮಿತಿಯ ಮುಂದೆ ಒಂದು ಜ್ಞಾಪನಾಪತ್ರವನ್ನು ಸಲ್ಲಿಸಿದರು.(ಕೀರ್. ಪುಟ ೩೭೮–೩೭೯) ಆ ಜ್ಞಾಪನಾಪತ್ರವು ಕೆಳಕಂಡಂತೆ ಇತ್ತು:

**ಅಖಿಲ ಭಾರತ ಜಾತಿಗಳ ಒಕ್ಕೂಟದ ಜ್ಞಾಪನಾಪತ್ರ**

**ಕ್ಯಾಬಿನೆಟ್ ಮಿಷನ್ನಿಗೆ ೧೯೪೬ರ ಏಪ್ರಿಲ್ ೫ರಂದು ಸಲ್ಲಿಸಿದವರು ಡಾ. ಬಿ.ಆರ್. ಅಂಬೇಡ್ಕರ್**

**ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ದೆಹಲಿಯಲ್ಲಿ ೧೯೪೬ರ ಏಪ್ರಿಲ್ ೨ರಂದು ನಡೆದ ತನ್ನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ**

**ಭಾಗ ೧**

**ಸಾಮಾನ್ಯ ಅಂಶಗಳು**

೧. ಕ್ಯಾಬಿನೆಟ್ ಮಿಷನ್ ಭಾರತವನ್ನು ಒಂದು ಸ್ವಯಮಾಡಳಿತ ದೇಶವನ್ನಾಗಿಸುವ ತನ್ನ ಉದ್ದೇಶದಲ್ಲಿ ಸಫಲತೆಯನ್ನು ಸಾಧಿಸುವ ವಿಷಯದ ಬಗ್ಗೆ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು, ದೆಹಲಿಯಲ್ಲಿ ೧೯೪೬ರ ಏಪ್ರಿಲ್ ೨ರಂದು ನಡೆದ ತನ್ನ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ–

ಹಿಂದೂ ಬಹುಸಂಖ್ಯಾತರಿಗೆ ಸ್ವಾತಂತ್ರ್ಯವನ್ನು ನೀಡುವುದಷ್ಟೇ ಅಲ್ಲದೆ, ಅಲ್ಪಸಂಖ್ಯಾತ ಸಮುದಾಯಗಳವರಿಗೂ, ಅದರಲ್ಲಿಯೂ ಪರಿಶಿಷ್ಟ ಜಾತಿಗಳವರಿಗೂ ಬಹುಸಂಖ್ಯಾತರ ಕ್ರೌರ್ಯದಿಂದ

ವಿಮುಕ್ತಿಯನ್ನು ನೀಡುವುದರಲ್ಲಿ ಇರುವ ಸಮಸ್ಯೆಗಳನ್ನು ಹೇಗೆ ನಿವಾರಿಸಬೇಕೆನ್ನುವುದರ ಬಗ್ಗೆ ಮಿಷನ್ನಿನ ಮುಂದೆ ತನ್ನ ಪರ್ಯಾಲೋಚಿತ ಅಭಿಪ್ರಾಯಗಳನ್ನು ಮಂಡಿಸಲು ತೀರ್ಮಾನಿಸಿದೆ. ಇದಕ್ಕೆ ಕಾರಣವೆಂದರೆ, ಈ ಕ್ರೌರ್ಯವು ರಾಜಕೀಯದ ಪರಿಧಿಯಲ್ಲಿ ಇರುವುದಿಲ್ಲವಾಗಿ ಅದನ್ನು ಬದಲಾಯಿಸಲಾಗುವುದಿಲ್ಲ, ಮತ್ತು ಜಾತೀಯವಾಗಿರುವುದರಿಂದ ಅದರ ಬಗ್ಗೆ ಯಾವಾಗಲೂ ಬಹುಸಂಖ್ಯಾತರು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

೨. ಭಾರತದ ರಾಜಕೀಯ ಬೆಳವಣಿಗೆಗಳಲ್ಲಿ ಅಡ್ಡಿಯನ್ನು ಉಂಟುಮಾಡುತ್ತಿದ್ದಾರೆ ಎಂದು ಪರಿಶಿಷ್ಟ ಜಾತಿಗಳ ವಿರುದ್ಧ ಮಾಡಲಾಗಿರುವ ಆಪಾದನೆಗಳನ್ನು ಕಾರ್ಯಕಾರಿ ಸಮಿತಿಯು ನಿರಾಕರಿಸುತ್ತದೆ. ಕಾರ್ಯಕಾರಿ ಸಮಿತಿಯ ಅಭಿಪ್ರಾಯದಲ್ಲಿ, ಭಾರತದ ರಾಜಕೀಯ ಬೆಳವಣಿಗೆಗಳಲ್ಲಿ ತಡೆಯನ್ನೊಡ್ಡುವ ಹೊಣೆಯು ಬಹುಸಂಖ್ಯಾತರ ಮೇಲಿದೆ ಎನ್ನುವುದರಲ್ಲ ಅನುಮಾನವಿಲ್ಲ. ಏಕೆಂದರೆ, ಅಲ್ಪಸಂಖ್ಯಾತ ಸಮುದಾಯಗಳ, ಅದರಲ್ಲಿಯೂ ಪರಿಶಿಷ್ಟ ಜಾತಿಗಳ ಸಂರಕ್ಷಣೆಯ ಹೊಣೆಯು ತನ್ನ ಮೇಲೆಯೇ ಇದೆ ಎಂದು ಅಹಂಕಾರದಿಂದ ಹೇಳಿಕೊಳ್ಳುವ ಬಹುಸಂಖ್ಯಾತರು ಇಂತಹ ಹೊಣೆಯನ್ನು ನಿರ್ವಹಿಸುವ ಬಗ್ಗೆ ನೀಲನಕ್ಷೆಯನ್ನು ಪ್ರಕಟಪಡಿಸಿಯೇ ಇಲ್ಲ. ಈ ಕಾರಣದಿಂದ, ಪರಿಶಿಷ್ಟ ಜಾತಿಗಳವರು ಎರಡು ವಿಷಯಗಳ ಬಗ್ಗೆ ಒತ್ತಾಯ ಮಾಡುತ್ತಾರೆ ಮತ್ತು ಇಂತಹ ಒತ್ತಾಯವನ್ನು ಮುಂದುವರೆಸುತ್ತಲೇ ಇರುತ್ತಾರೆ. ಅವುಗಳೆಂದರೆ, ಮೊದಲನೆಯದಾಗಿ ತಮ್ಮ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಬಗ್ಗೆ ಸಂವಿಧಾನದಲ್ಲಿಯೇ ಅಗತ್ಯ ವಿಧಿಗಳನ್ನು ಸೇರಿಸಬೇಕೆಂದು ಬಯಸುತ್ತಾರೆ. ಎರಡನೆಯದಾಗಿ, ಪರಿಶಿಷ್ಟ ಜಾತಿಗಳವರ ಹಕ್ಕನ್ನು ಬಹುಸಂಖ್ಯಾತರು ಒಪ್ಪಿದಮೇಲೆ, ತಮಗೆ ಬೇಕಾದ ರಕ್ಷಣಾ ಕ್ರಮಗಳ ಸ್ವರೂಪ ಮತ್ತು ಲಕ್ಷಣಗಳನ್ನು ಪರಿಶಿಷ್ಟ ಜಾತಿಗಳವರೇ ನಿರ್ಧರಿಸಿಕೊಳ್ಳಬೇಕು.

೩. ಪರಿಶಿಷ್ಟ ಜಾತಿಗಳವರಿಗೆ ಮಹಾಪ್ರಭುಗಳ ಸರಕಾರದ ಪ್ರತಿನಿಧಿಗಳು ಅಸಂದಿಗ್ಧ ಮಾತುಗಳಲ್ಲಿ ಹಲವಾರು ಬಾರಿ ನೀಡಿರುವ ಭರವಸೆಗಳನ್ನು ಈ ನಿಲುವಳಿಯ ಒಂದನೆಯ ಪರಿಶಿಷ್ಟದಲ್ಲಿ ನೀಡಿರುವುದರಿಂದ, ಈಗ ಪರಿಶಿಷ್ಟ ಜಾತಿಗಳವರು ಮುಂದಿಡುತ್ತಿರುವ ಬೇಡಿಕೆಗಳನ್ನು ಈಗಾಗಲೇ ಮಹಾಪ್ರಭುಗಳ ಸರಕಾರವು ಒಪ್ಪಿದೆಯೆಂದು ಮತ್ತೆ ಮಿಷನ್ನಿನ ಮುಂದೆ ಒತ್ತಿಹೇಳುವುದು ಅನಗತ್ಯವೆಂದು ಕಾರ್ಯಕಾರಿ ಸಮಿತಿಯು ಭಾವಿಸುತ್ತದೆ. ಈಗ ನಡೆಯುತ್ತಿರುವ ಮಾತುಕತೆಗಳ ನಂತರ ತೆಗೆದುಕೊಳ್ಳುವ ಅಂತಿಮ ನಿರ್ಣಯದಲ್ಲಿ ಮಿಷನ್ ಪರಿಶಿಷ್ಟ ಜಾತಿಗಳವರಿಗೆ ನೀಡಿರುವ ಭರವಸೆಯನ್ನು ಮೀರಿ ನಡೆಯುವುದಿಲ್ಲವೆಂದು ಮತ್ತು ಆದಷ್ಟು ಬೇಗ ಈ ವಿಷಯವನ್ನು ಪರಿಹರಿಸುವ ತಮ್ಮ ಪ್ರಯತ್ನದಲ್ಲಿ ಪರಿಶಿಷ್ಟ ಜಾತಿಗಳವರಿಗೆ ಇರಬೇಕಾದ ಹಿತರಕ್ಷಣೆಯ ವಿಧಿಗಳನ್ನು ಅಧಿಕಾರಯುತವಾಗಿ ನಿರ್ಧರಿಸುವ ಅವಕಾಶವನ್ನು ಮಿಷನ್ ಇತರರಿಗೆ ನೀಡುವುದಿಲ್ಲವೆಂದು ಮಿಷನ್ನಿನ ಬಗ್ಗೆ ಕಾರ್ಯಕಾರಿ ಸಮಿತಿಯು ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.

೪. ಮಿಷನ್ನಿನ ಉದ್ದೇಶಗಳಿಂದಾಗಿ ಉದ್ಭವಿಸುವ ವಿಷಯಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಪ್ರಾರಂಭಿಸುವ ಮೊದಲು ಇತ್ತೀಚೆಗೆ ಹಲವು ಪ್ರಾಂತಗಳಲ್ಲಿ ನಡೆದ ಪ್ರಾಥಮಿಕ ಚುನಾವಣೆಗಳ ಪರಿಣಾಮಗಳತ್ತ ಮಿಷನ್ನಿನ ಗಮನವನ್ನು ಸೆಳೆಯಲು ಕಾರ್ಯಕಾರಿ ಸಮಿತಿಯು ಬಯಸುತ್ತದೆ. ಏಕೆಂದರೆ, ಪರಿಶಿಷ್ಟ ಜಾತಿಗಳವರ ಪರವಾಗಿ ಮಾತನಾಡುವ ಹಕ್ಕು ಕೇವಲ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟಕ್ಕೆ ಮಾತ್ರ ಇದೆ, ಮತ್ತು ಕಾಂಗ್ರೆಸ್‌ಗಾಗಲೀ ಅಥವಾ ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ಸಂಸ್ಥೆಗಳಲ್ಲಿ ಯಾವುದಕ್ಕಾಗಲೀ ಪರಿಶಿಷ್ಟ ಜಾತಿಗಳವರ ಪರವಾಗಿ ಮಾತನಾಡುವ ಹಕ್ಕು ಇರುವುದಿಲ್ಲ ಎಂಬುದನ್ನು ಈ ಪರಿಣಾಮಗಳು ಸ್ಪಷ್ಟಗೊಳಿಸಿವೆ.

## ಭಾಗ ೨

## ಸ್ವತಂತ್ರ ಭಾರತದ ಅಂತಿಮ ಸಂವಿಧಾನದ ಬಗ್ಗೆ ಅಭಿಪ್ರಾಯಗಳು

೫. ಸ್ವತಂತ್ರ ಭಾರತದ ಸಂವಿಧಾನದ ವಿಷಯದಲ್ಲಿ, ಈ ಮುಂದಿನ ಹಿತರಕ್ಷಣಾ ಕ್ರಮಗಳನ್ನು ಒಳಗೊಳ್ಳದ ಸಂವಿಧಾನವನ್ನು ಪರಿಶಿಷ್ಟ ಜಾತಿಗಳವರು ಒಪ್ಪುವುದೇ ಇಲ್ಲ ಎಂದು ಮಿಷನ್ನಿನವರಿಗೆ ಒಕ್ಕೂಟದ ಕಾರ್ಯಕಾರಿ ಸಮಿತಿಯು ಸ್ಪಷ್ಟವಾಗಿ ತಿಳಿಸಬಯಸುತ್ತದೆ –

ಅ) ಕೇಂದ್ರದ ಮತ್ತು ರಾಜ್ಯಗಳ ಶಾಸಕಾಂಗಗಳಲ್ಲಿ ಕಾರ್ಯಸಾಧುವಾದ ಮತ್ತು ಸಾಕಷ್ಟು ಸಂಖ್ಯೆಯ ಪ್ರಾತಿನಿಧ್ಯ,

ಆ) ಕೇಂದ್ರದ ಮತ್ತು ರಾಜ್ಯಗಳ ಕಾರ್ಯಾಂಗದಲ್ಲಿ ಕಾರ್ಯಸಾಧುವಾದ ಮತ್ತು ಸಾಕಷ್ಟು ಸಂಖ್ಯೆಯ ಪ್ರಾತಿನಿಧ್ಯ,

ಇ) ಪ್ರತ್ಯೇಕ ಮತಕ್ಷೇತ್ರಗಳ ಮೂಲಕ ಚುನಾವಣೆಗಳಿಗೆ ಅವಕಾಶ,

ಈ) ಲೋಕಸೇವೆಯಲ್ಲಿ ಸಾಕಷ್ಟು ಪ್ರಾತಿನಿಧ್ಯ,

ಉ) ಕೇಂದ್ರ ಹಾಗೂ ರಾಜ್ಯಗಳ ಲೋಕಸೇವಾ ಆಯೋಗದಲ್ಲಿ ಸಾಕಷ್ಟು ಪ್ರಾತಿನಿಧ್ಯ,

ಊ) ಪರಿಶಿಷ್ಟ ಜಾತಿಗಳವರ ಉನ್ನತ ವಿದ್ಯಾಭ್ಯಾಸಕ್ಕಾಗಿ ಕೇಂದ್ರ ಮತ್ತು ರಾಜ್ಯಗಳ ವಾರ್ಷಿಕ ಆಯವ್ಯಯದಲ್ಲಿ ಸಾಕಷ್ಟು ಮೊತ್ತದ ಹಣವನ್ನು ಮೀಸಲಿಡುವುದು; ಮತ್ತು

ಋ) ಹೊಸ ಮತ್ತು ಪ್ರತ್ಯೇಕ ನಿವಾಸ ಸ್ಥಾನಗಳಿಗೆ ಅವಕಾಶವನ್ನು ಕಲ್ಪಿಸುವುದು.

೬. ಮೇಲೆ ಹೇಳಿದ ಹಿತರಕ್ಷಣಾ ಮಾರ್ಗಗಳ ಪ್ರಾಮುಖ್ಯವನ್ನಾಗಲೀ, ಅಗತ್ಯವನ್ನಾಗಲೀ ಯಾವುದೇ ವಿಧದಲ್ಲಿಯೂ ಕಡಿಮೆಗೊಳಿಸದೆ, (೧) ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವುದು, (೨) ಶಾಸನಸಭೆಗಳಲ್ಲಿ, ಕಾರ್ಯಾಂಗದಲ್ಲಿ ಮತ್ತು ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ನೀಡುವುದು, ಮತ್ತು, (೩) ಹೊಸ ಮತ್ತು ಪ್ರತ್ಯೇಕ ನಿವಾಸಸ್ಥಾನಗಳಿಗೆ ಅವಕಾಶವನ್ನು ಕಲ್ಪಿಸುವುದು – ಇವುಗಳನ್ನು ಅತಿ ಮೂಲಭೂತವಾದವುಗಳೆಂದು ಕಾರ್ಯಕಾರಿ ಸಮಿತಿಯು ಭಾವಿಸುತ್ತದೆ.

೭. ಪ್ರತ್ಯೇಕ ಮತಕ್ಷೇತ್ರಗಳನ್ನು ಕುರಿತಾಗಿ, ಕಾರ್ಯಕಾರಿ ಸಮಿತಿಯು ಮಿಷನ್ನಿನ ಗಮನವನ್ನು ಕೆಳಕಂಡ ವಿಷಯಗಳತ್ತ ಸೆಳೆಯಬಯಸುತ್ತದೆ.

ಅ) ಈ ಬೇಡಿಕೆಯು ಹೊಸ ಬೇಡಿಕೆಯಲ್ಲ. ಇದನ್ನು ದುಂಡುಮೇಜಿನ ಸಮ್ಮೇಳನದ ವೇಳೆಯಲ್ಲಿಯೇ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳು ಮಂಡಿಸಿದ್ದರು.

ಆ) ಶ್ರೀ ಗಾಂಧಿಯವರು ಅದನ್ನು ಪ್ರಬಲವಾಗಿ ವಿರೋಧಿಸಿದ್ದರು. ಈ ವಿರೋಧದ ಹೊರತಾಗಿಯೂ, ಮಹಾಪ್ರಭುಗಳ ಸರಕಾರವು ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕ ಮತಕ್ಷೇತ್ರಗಳಿರಬೇಕೆಂಬುದರ ಅಗತ್ಯವನ್ನು ಮನಗಂಡಿದ್ದಿತು ಮತ್ತು ಅದು ತನ್ನ '೧೯೩೨ರ ಜಾತಿವಾರು ನಿರ್ಣಯ'ದಲ್ಲಿ ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ಮಂಜೂರು ಮಾಡಿದ್ದಿತು.

ಇ) ಆದರೆ, ಈ ಆಜ್ಞೆಯನ್ನು ಜಾರಿಗೊಳಿಸುವ ಮೊದಲೇ ಶ್ರೀ ಗಾಂಧಿಯವರು, ಪರಿಶಿಷ್ಟ ಜಾತಿಯವರಿಗೆಂದೇ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡಿದರೆ ತಾವು ಆಮರಣ ಉಪವಾಸ ಮಾಡುವುದಾಗಿ ಘೋಷಿಸಿದರು, ಮಾತ್ರವಲ್ಲ ಆಮರಣ ಉಪವಾಸವನ್ನು ಪ್ರಾರಂಭಿಸಿಯೂ ಬಿಟ್ಟರು. ಶ್ರೀ ಗಾಂಧಿಯವರ ಆಮರಣ ಉಪವಾಸದಿಂದಾಗಿ ಉಂಟಾದ ಒತ್ತಡದಿಂದಾಗಿ

ಪರಿಶಿಷ್ಟ ಜಾತಿಯವರು ಪ್ರತ್ಯೇಕ ಮತಕ್ಷೇತ್ರದ ಬಗ್ಗೆ ಇದ್ದ ತಮ್ಮ ಬೇಡಿಕೆಯನ್ನು ಕೈಬಿಡಬೇಕಾಗಿ ಬಂದಿತು.

ಈ) ಜಾತಿವಾರು ನಿರ್ಣಯದ ನಂತರದ ಪೂನಾದ ಒಪ್ಪಂದದ ಅಡಿಯಲ್ಲಿ, (೧) ಪರಿಶಿಷ್ಟ ಜಾತಿಗಳವರನ್ನು ಎರಡು ಹಂತದ ಚುನಾವಣೆಗಳ ಕಣಗಳಿಗೆ ಇಳಿಸಲಾಯಿತು – ಒಂದನೆಯದು ಪ್ರಾಥಮಿಕ ಮತ್ತು ಎರಡನೆಯದು ಅಂತಿಮ ಚುನಾವಣೆಗಳು. ಮೊದಲನೆಯದು ಪ್ರತ್ಯೇಕ ಮತಕ್ಷೇತ್ರಗಳ ಮೂಲಕ ನಡೆದರೆ, ಎರಡನೆಯದು, ಜಂಟಿ ಮತಕ್ಷೇತ್ರಗಳ ಮೂಲಕ ನಡೆಯಿತು, (೨) ಕಡಿಮೆ ಸಂಖ್ಯೆಯ ಪರಿಶಿಷ್ಟ ಜಾತಿಗಳ ಸ್ಪರ್ಧಿಗಳನ್ನು ಹಿಂದೂಗಳೇ ಹೆಚ್ಚಾಗಿರುವಂತಹ ಜಂಟಿ ಮತಕ್ಷೇತ್ರಗಳಲ್ಲಿ ಅವರ ಕರುಣೆಯ ಭಿಕ್ಷೆಯ ಅಡಿಯಲ್ಲಿ, ನಿಲ್ಲಿಸಲಾಯಿತು.

ಉ) ಅಂತಿಮ ಚುನಾವಣೆಯ ಫಲಿತಾಂಶಗಳನ್ನು ಪ್ರಾಥಮಿಕ ಚುನಾವಣೆಯ ಫಲಿತಾಂಶಗಳಿಗೆ ಹೋಲಿಸಿದರೆ (ಇದನ್ನು ೨ನೆಯ ಪರಿಶಿಷ್ಟದಲ್ಲಿ ನೀಡಲಾಗಿದೆ) ಜಂಟಿಮತಕ್ಷೇತ್ರಗಳ ವಿಧಾನ ಮತ್ತು ಸ್ಥಾನಗಳ ಮೀಸಲಾತಿಗಳು ಪರಿಶಿಷ್ಟ ಜಾತಿಗಳವರಿಗೆ ತಮ್ಮ ನಿಜವಾದ ಪ್ರತಿನಿಧಿಗಳನ್ನು ಶಾಸನ ಸಭೆಗೆ ಕಳುಹಿಸಲು ನೀಡಿರುವ ಹಕ್ಕನ್ನು ಅಣಕವಾಡಿದ ಹಾಗೆ ಕಾಣುತ್ತದೆ ಮತ್ತು ಇದು ಪರಿಶಿಷ್ಟ ಜಾತಿಗಳವರಿಗೆ ಮಾಡಿರುವ ನಿಜವಾದ ವಂಚನೆ.

೮. ಪರಿಶಿಷ್ಟ ಜಾತಿಗಳವರ ನಿಜವಾದ ಪ್ರತಿನಿಧಿಯಾಗಿ, ಪರಿಶಿಷ್ಟ ಜಾತಿಗಳವರ ಮತದಿಂದಲೇ ಸ್ಥಳೀಯ ಶಾಸನಸಭೆಗಳಿಗೆ ಒಬ್ಬ ಅಭ್ಯರ್ಥಿಯೂ ಜಯಗಳಿಸಲಾಗದುದಕ್ಕೆ ಕಾರಣವು ಹೀಗಿದೆ – ಜಂಟಿ ಮತಕ್ಷೇತ್ರಗಳು ತಮ್ಮಲ್ಲಿ ಪರಿಶಿಷ್ಟ ಜಾತಿಗಳವರ ಮತ್ತು ಸವರ್ಣೀಯ ಹಿಂದೂಗಳ ನಡುವಿನ ಮತಗಳ ಅಪಾರ ಅಂತರದ ಬಲದಿಂದಾಗಿ ಪರಿಶಿಷ್ಟ ಜಾತಿಗಳವರ ದೃಷ್ಟಿಯಿಂದ ಕೊಳೆತ ಮತಕ್ಷೇತ್ರಗಳಾಗಿದ್ದರೆ ಅದೇ ಕೊಳೆತ ಮತಕ್ಷೇತ್ರಗಳು ಸವರ್ಣೀಯ ದೃಷ್ಟಿಯಿಂದ ಸುರಕ್ಷಿತ ಮತಕ್ಷೇತ್ರಗಳಾಗಿವೆ. ಈ ಮತಕ್ಷೇತ್ರಗಳಲ್ಲಿ, ತಮ್ಮ ಆಶಯಗಳಿಗೆ ಅನುಕೂಲವಾಗಿ ನಡೆಯುವಂತಹ, ಕೈಗೊಂಬೆಗಳಂತಹ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳನ್ನು ನಿಲ್ಲಿಸಿ ಅವರನ್ನು ಸವರ್ಣೀಯ ಹಿಂದೂಗಳ ಮತದಿಂದ ಗೆಲ್ಲಿಸಲಾಯಿತು.

೯. ಹಿಂದೆ ತಮಗಾದ ಅತ್ಯಂತ ಕಹಿ ಅನುಭವವನ್ನು ಗಣಿಸಿ, ಪರಿಶಿಷ್ಟ ಜಾತಿಗಳವರಿಗೇ ಪ್ರತ್ಯೇಕ ಮತಕ್ಷೇತ್ರಗಳನ್ನು ಮರಳಿ ಜಾರಿಗೆ ತರಬೇಕಾದ ಆವಶ್ಯಕತೆಯು ಅತ್ಯಂತ ಜರೂರಾಗಿ ಆಗಬೇಕಾಗಿದೆ ಎಂಬುದು ಪರಿಶಿಷ್ಟ ಜಾತಿಗಳವರ ನಿಶ್ಚಿತಾಭಿಪ್ರಾಯವಾಗಿದೆ ಎಂಬುದನ್ನು ಕಾರ್ಯಕಾರಿ ಸಮಿತಿಯು ಮಿಷನ್ನಿಗೆ ತಿಳಿಸಲು ಬಯಸುತ್ತದೆ. ಸವರ್ಣೀಯ ಹಿಂದೂಗಳು ಪರಿಶಿಷ್ಟ ಜಾತಿಗಳವರಿಗಾಗಿ ಸಂವಿಧಾನದಲ್ಲಿ ನೀಡಿರುವ ಹಿತರಕ್ಷಣಾ ವಿಧಿಗಳನ್ನು ನಿರರ್ಥಕಗೊಳಿಸುವುದನ್ನು ತಡೆಯಲು ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕ ಮತಕ್ಷೇತ್ರಗಳು ಇದ್ದರೆ ಮಾತ್ರ ಸಾಧ್ಯ, ಹಾಗೂ, ಪ್ರತ್ಯೇಕ ಮತಕ್ಷೇತ್ರಗಳಿಲ್ಲದೆ ಇದ್ದರೆ ಸಂವಿಧಾನದಲ್ಲಿ ಎಷ್ಟೇ ರಕ್ಷಣಾತ್ಮಕ ವಿಧಿಗಳನ್ನು ಅಳವಡಿಸಿದರೂ, ಅವುಗಳಿಂದ ಪರಿಶಿಷ್ಟ ಜಾತಿಗಳವರಿಗೆ ಯಾವ ವಿಧವಾದ ಪ್ರಯೋಜನವೂ ಸಿಗುವುದು ಸಾಧ್ಯವಿಲ್ಲ.

೧೦. ಶಾಸನಸಭೆಗಳಲ್ಲಿ, ಕಾರ್ಯಾಂಗದಲ್ಲಿ ಮತ್ತು ಸೇವೆಗಳಲ್ಲಿ ನೀಡಬೇಕಾದ ಸಾಕಷ್ಟು ಪ್ರಾತಿನಿಧ್ಯದ ಬಗೆಗೆ, ಪರಿಶಿಷ್ಟ ಜಾತಿಗಳವರಿಗೆ ನೀಡುವ ಸಾಂಕೇತಿಕ ಪ್ರಾತಿನಿಧ್ಯಗಳನ್ನು ಕಾರ್ಯಕಾರಿ ಸಮಿತಿಯು ನಿಷ್ಠುರವಾಗಿ ಖಂಡಿಸುತ್ತದೆ. ಅದೇ ಸಮಯದಲ್ಲಿ ಇತರ ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಿ, ನ್ಯಾಯಯುತವಾಗಿ ಪರಿಶಿಷ್ಟ ಜಾತಿಗಳವರಿಗೂ ಸಿಗಬೇಕಿದ್ದ ಅಂತಹ ಪ್ರಾಮುಖ್ಯವನ್ನು ಅವರಿಗೆ ಇಲ್ಲವಾಗಿಸಿರುವುದನ್ನು ಕಾರ್ಯಕಾರಿ ಸಮಿತಿಯು ಪ್ರಬಲವಾಗಿ ವಿರೋಧಿಸುತ್ತದೆ. ಪರಿಶಿಷ್ಟ ಜಾತಿಗಳು

ಭಾರತದ ರಾಷ್ಟ್ರೀಯ ಜೀವನದಲ್ಲಿ ಮೂರನೆಯ ಪ್ರಮುಖ ಅಂಗವೆಂಬ ವಿಷಯವನ್ನು ಮತ್ತು ಈ ಕಾರಣದಿಂದಾಗಿ ಅವರ ಅಗತ್ಯ ಹಾಗೂ ಸಂಖ್ಯಾಬಲಕ್ಕೆ ಅನುಗುಣವಾಗಿ ಸಿಗಬೇಕಾದ ಪ್ರಾತಿನಿಧ್ಯವು ಅವರಿಗೆ ಸಿಗದೆಹೋದರೆ ಅವರಲ್ಲಿ ಅತೃಪ್ತಿಯು ಉಂಟಾಗುತ್ತದೆ ಎಂಬುದನ್ನು ಕಾರ್ಯಕಾರಿ ಸಮಿತಿಯು ಒತ್ತಿಹೇಳಬಯಸುತ್ತದೆ.

ಪೋಲಿಸ್ ಮತ್ತು ಕಂದಾಯ ಇಲಾಖೆಯ ಸೇವೆಯಲ್ಲಿ ಸವರ್ಣೀಯ ಹಿಂದೂಗಳೇ ಸಹಜವಾಗಿ ತುಂಬಿರುವುದರಿಂದ, ಅವುಗಳ ಬಗ್ಗೆ ಯೋಚಿಸಿದ ಮಾತ್ರಕ್ಕೇ ಪರಿಶಿಷ್ಟ ಜಾತಿಗಳವರಲ್ಲಿ ಭಯವು ತಾಂಡವವಾಡುತ್ತದೆ ಎನ್ನುವ ವಿಷಯವನ್ನು ಮಿಷನ್ನಿಗೆ ತಿಳಿಸಲು ಸಾಧ್ಯವಾಗಿದ್ದಿದ್ದರೆ ಕಾರ್ಯಕಾರಿ ಸಮಿತಿಯು ಸಂತೋಷಪಡಬಹುದಿತ್ತು. ಬ್ರಿಟಿಷ್ ಸರಕಾರದ ಅಡಿಯಲ್ಲಿಯೇ ಸವರ್ಣೀಯ ಹಿಂದೂಗಳು ಪರಿಶಿಷ್ಟ ಜಾತಿಗಳವರ ಮೇಲೆ ಇಂತಹ ದೌರ್ಜನ್ಯವನ್ನು ನಡೆಸಬಲ್ಲವರಾಗಿದ್ದರೆ, ತುಳಿತಕ್ಕೆ ಅವರನ್ನು ಒಳಪಡಿಸಬಹುದಿದ್ದರೆ ಹಾಗೂ ಭೇದಭಾವಗಳನ್ನು ತೋರಬಹುದಿದ್ದರೆ, ಅವರೇ ಬಹುಮತವನ್ನು ಹೊಂದಿರುವ ಶಾಸನ ಸಭೆ ಮತ್ತು ಕಾರ್ಯಾಂಗಗಳಿದ್ದರೆ ಅವುಗಳಿಂದ ತಮ್ಮ ದೌರ್ಜನ್ಯಕ್ಕೆ, ತುಳಿತಕ್ಕೆ ಇನ್ನೂ ಹೆಚ್ಚಿನ ಬಲವನ್ನು ಅವರು ಸಂಪಾದಿಸಿಕೊಳ್ಳುತ್ತಾರೆ. ಪರಿಶಿಷ್ಟ ಜಾತಿಗಳವರಿಗೆ ಶಾಸನ ಸಭೆಗಳಲ್ಲಿ, ಕಾರ್ಯಾಂಗಗಳಲ್ಲಿ ಮತ್ತು ಲೋಕಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲದಿದ್ದರೆ, ಅವರು ತಮ್ಮ ಬಗ್ಗೆ ಉದಾಸೀನ ಮನೋಭಾವವನ್ನು ಹೊಂದಿರುವ ಶಾಸಕಾಂಗ, ಹಿಂದೂ ಪರವಾಗಿರುವ ಕಾರ್ಯಾಂಗ ಮತ್ತು ಪರಿಶಿಷ್ಟ ಜಾತಿಗಳ ವಿರೋಧದ ನೀತಿಗಳಿಂದ ಸುತ್ತುವರೆಯಲ್ಪಟ್ಟ ಪರಿಶಿಷ್ಟ ಜಾತಿಗಳವರಿಗೆ, ರಕ್ಷಣೆಯೇ ಇಲ್ಲವಾಗುತ್ತದೆ.

೧೧. ಪ್ರತ್ಯೇಕ ನಿವಾಸಸ್ಥಾನಗಳ ವಿಷಯದಲ್ಲಿ, ಕಾರ್ಯಕಾರಿ ಸಮಿತಿಯ ಪರ್ಯಾಲೋಚಿತ ಅಭಿಪ್ರಾಯವು ಹೀಗಿದೆ –

ಅ) ಪ್ರಕೃತ ಗ್ರಾಮಗಳಲ್ಲಿ ಇರುವ ವ್ಯವಸ್ಥೆಯು ಪರಿಶಿಷ್ಟ ಜಾತಿಗಳವರನ್ನು ಸವರ್ಣೀಯ ಹಿಂದೂಗಳ ಗುಲಾಮರನ್ನಾಗಿಸುತ್ತಿದೆ. ಈ ಕಾರಣದಿಂದಾಗಿಯೇ, ದಂಡಸಂಹಿತೆಯು ಗುಲಾಮಗಿರಿಯನ್ನು ಮಾನ್ಯಮಾಡದಿದ್ದರೂ, ಇಂದಿಗೂ ಪ್ರತಿ ಹಳ್ಳಿಗಳಲ್ಲಿಯೂ ಪರಿಶಿಷ್ಟ ಜಾತಿಗಳವರು ಸವರ್ಣೀಯರ ಗುಲಾಮರಾಗಿಯೇ ಮುಂದುವರಿದಿದ್ದಾರೆ. ಪರಿಶಿಷ್ಟ ಜಾತಿಗಳವರನ್ನು ಗುಲಾಮಗಿರಿಗೆ ಒಳಪಡಿಸುವುದನ್ನು ಈಗಿರುವ ವ್ಯವಸ್ಥೆಯಲ್ಲಿರುವುದಕ್ಕಿಂತ ಹೆಚ್ಚು ಪ್ರಬಲವಾಗಿರುವಂತೆ ಮಾಡುವುದು ಬೇರೆ ಯಾವ ವ್ಯವಸ್ಥೆಯಿಂದಲೂ ಸಾಧ್ಯವಿಲ್ಲ.

ಆ) ಹಳ್ಳಿಗಳಲ್ಲಿ ಈಗಿರುವ ವ್ಯವಸ್ಥೆಯಿಂದಾಗಿ ಯಾರು ಸ್ಪೃಶ್ಯರು ಮತ್ತು ಯಾರು ಅಸ್ಪೃಶ್ಯರು ಎನ್ನುವುದು ಎಲ್ಲರಿಗೂ ತಿಳಿದಿರುವುದರಿಂದ ಅಸ್ಪೃಶ್ಯತೆಯು ಅವ್ಯಾಹತವಾಗಿ ಮುಂದುವರೆಯುತ್ತಲೇ ಇರುತ್ತದೆ. ಈ ವ್ಯವಸ್ಥೆಯಷ್ಟು ಪರಿಣಾಮಕಾರಿಯಾಗಿ ಬೇರೆ ಯಾವ ವ್ಯವಸ್ಥೆಯೂ ಅಸ್ಪೃಶ್ಯತೆಯನ್ನು ಶಾಶ್ವತಗೊಳಿಸುವುದರಲ್ಲಿ ಯಶಸ್ವಿಯಾಗುವುದಿಲ್ಲ.

ಇ) ಗ್ರಾಮ ವ್ಯವಸ್ಥೆಯಲ್ಲಿ –

೧) ಪರಿಶಿಷ್ಟ ಜಾತಿಗಳವರು ಗ್ರಾಮದ ಒಳಗೆ ವಾಸಿಸಲು ಅವಕಾಶವಿಲ್ಲ. ಅವರು ಗ್ರಾಮದ ಹೊರವಲಯದಲ್ಲಿ ವಾಸಿಸಬೇಕು. ಗ್ರಾಮದ ಭಾವಿಗಳಿಂದ ನೀರನ್ನು ತೆಗೆದುಕೊಳ್ಳುವಂತಿಲ್ಲ. ತಮ್ಮ ಮಕ್ಕಳನ್ನು ಅವರು ಗ್ರಾಮದ ಶಾಲೆಗೆ ಕಳುಹಿಸಲು ಅನುಮತಿಯಿರುವುದಿಲ್ಲ. ಗ್ರಾಮದ ನಾಯಿಂದನು ಅವರಿಗೆ ಕ್ಷೌರವನ್ನು ಮಾಡುವುದಿಲ್ಲ. ಗ್ರಾಮದಲ್ಲಿರುವ ಸವರ್ಣೀಯ ಹಿಂದುಗಳೊಂದಿಗೆ ಸಾಮಾಜಿಕ

ಹೊಕ್ಕು–ಬಳಕೆಯನ್ನು ಹೊಂದಲು ಸಾಧ್ಯವಾಗದೆ, ಅವರು ಒಂದು ಪ್ರತ್ಯೇಕ ಸಮುದಾಯವಾಗಿ ಬಾಳಬೇಕು.

೨) ಅವರಿಗೆ ಸ್ವಂತ ಜೀವನೋಪಾಯವಿರುವುದಿಲ್ಲ. ಅವರಿಗೆ ಜಮೀನು ಇರುವುದಿಲ್ಲ. ಸ್ವತಂತ್ರವಾಗಿ ದುಡಿದು ತಮ್ಮ ಅನ್ನವನ್ನು ಸಂಪಾದಿಸಿಕೊಳ್ಳಲು ಅವರಿಗೆ ದಾರಿಯಿರುವುದಿಲ್ಲ. ಹಿಂದೂ ಗ್ರಾಮವು ಅವರಿಗಿರುವ ಒಂದೇ ಮಾರುಕಟ್ಟೆ. ಆದರೆ ಯಾವ ಹಿಂದುವೂ ಅವರಿಂದ ಪದಾರ್ಥಗಳನ್ನು ಖರೀದಿಸುವುದಿಲ್ಲ. ಅವರಲ್ಲಿ ಬಹುಮಂದಿ, ಹಿಂದೂ ದಣಿಗಳ ಮನೆಯಲ್ಲಿ ಭಿಕ್ಷವನ್ನು ಬೇಡಿ ಅದರಿಂದ ಜೀವಿಸುತ್ತಾರೆ. ಅವರು ಭೂರಹಿತ ಮಂದಿಯಾಗಿದ್ದಾರೆ, ಗತಿಯಿಲ್ಲದ ದಿವಾಳಿತನವನ್ನು ವಂಶಪಾರಂಪರ್ಯವಾಗಿ ಗುತ್ತಿಗೆ ಹಿಡಿದ ಜನರಾಗಿದ್ದಾರೆ. ಹಿಂದೂ ಭೂಮಾಲೀಕರು ನೀಡಬಹುದಾದ ಉದ್ಯೋಗಕ್ಕಾಗಿ, ಕೂಲಿಗಾಗಿ ಕಾಯುತ್ತಾ ಅಲ್ಪಸ್ವಲ್ಪ ವರಮಾನವನ್ನು ಕಂಡುಕೊಳ್ಳುತ್ತಾರೆ.

೩) ದಿನ ಬೆಳಗಾದರೆ ಹಿಂದೂ ಭೂಮಾಲೀಕರು ಅವರನ್ನು ಅವರ ಕೇರಿಗಳಿಂದ ತಮ್ಮ ಹೊಲಗದ್ದೆಗಳಿಗೆ ಅಟ್ಟಿಕೊಂಡು ಹೋಗುತ್ತಾರೆ, ಕಾರಣ ಭೂಮಾಲೀಕರಿಗೆ ಸಿಗಬಹುದಾದ ಬಹಳ ಅಗ್ಗವಾದ ಕೂಲಿಕಾರರು ಅವರು. ಹೀಗೆ ಮಾಡುವಲ್ಲಿ ಎಲ್ಲಾ ಭೂಮಾಲೀಕರೂ ಪರಿಶಿಷ್ಟ ಜಾತಿಗಳವರ ವಿರುದ್ಧ ಒಂದಾಗುತ್ತಾರೆ.

೪) ಅವರ ಎಲ್ಲಾ ತಲೆಮಾರುಗಳವರೂ ಹೀನಸ್ಥಿತಿಯಲ್ಲಿ, ಅವಮಾನಕರ ರೀತಿಯಲ್ಲಿ ಹೇಯ ಬಾಳನ್ನು ಬಾಳುತ್ತಿರಬೇಕು. ಅದೊಂದು ಶಾಶ್ವತವಾದ ನರಕದ ಬಾಳು. ಅವರು ಸ್ವಚ್ಛವಾದ ಬಟ್ಟೆಗಳನ್ನು ಉಡುವಂತಿಲ್ಲ, ಆಭರಣಗಳನ್ನು ತೊಡುವಂತಿಲ್ಲ, ಒಳ್ಳೆಯ ಆಹಾರವನ್ನು ಸೇವಿಸುವಂತಿಲ್ಲ, ಹಿಂದೂಗಳ ಮುಂದೆ ಕುರ್ಚಿಯಲ್ಲಿ ಕೂರುವಂತಿಲ್ಲ, ಆದರೆ ಎಲ್ಲಾ ಕೊಳಕು ಕೆಲಸಗಳನ್ನೂ ಅವರು ಮಾಡಬೇಕು.

೫) ಪರಿಶಿಷ್ಟ ಜಾತಿಗಳವರ ಮೇಲೆ ಗ್ರಾಮಗಳಲ್ಲಿನ ಸವರ್ಣೀಯ ಹಿಂದೂಗಳ ಕ್ರೌರ್ಯವು ಎಷ್ಟಿರುತ್ತದೆ ಮತ್ತು ಎಷ್ಟು ವ್ಯಾಪಕವಾಗಿರುತ್ತದೆ ಎಂಬುದನ್ನು ಕಳೆದ ಚುನಾವಣೆಯಲ್ಲಿ ಕಂಡುಬಂದಂತೆ, ಪರಿಶಿಷ್ಟ ಜಾತಿಗಳವರು, ಹಿಂದೂಗಳು ಒಪ್ಪದಿರುವ ಅಭ್ಯರ್ಥಿಗೆ ಅಥವಾ ತಮ್ಮ ಆಯ್ಕೆಯ ಅಭ್ಯರ್ಥಿಗೆ ಮತವನ್ನು ಹಾಕುವಂತಿಲ್ಲ.

೬) ಪರಿಶಿಷ್ಟ ಜಾತಿಗಳವರ ಅಭಿವೃದ್ಧಿಯನ್ನು ಗ್ರಾಮವ್ಯವಸ್ಥೆಯು ಸರ್ವಥಾ ವಿರೋಧಿಸಿ ಅದನ್ನು ಅಸಾಧ್ಯಗೊಳಿಸುತ್ತದೆ. ಸಾಮಾಜಿಕ ಬಹಿಷ್ಕಾರದ ಬೆದರಿಕೆ ಪರಿಶಿಷ್ಟ ಜಾತಿಗಳವರನ್ನು ಅಂಕೆಯಲ್ಲಿಡುವ ಒಂದು ದೊಡ್ಡ ಸಾಧನವಾಗಿದೆ. ಇದರಿಂದಾಗಿ ಈ ಜಾತಿಗಳವರು ತಮಗೆ ಎಷ್ಟೇ ಲಾಭದಾಯಕವಾಗಿದ್ದರೂ, ಅವು ಹಿಂದೂಗಳ ಹಿತಕ್ಕೆ ಅಥವಾ ಅವರ ಭಾವನೆಗಳಿಗೆ ಧಕ್ಕೆಯನ್ನು ತರುವಂತಹುದಾಗಿದ್ದರೆ, ತಮ್ಮ ಆ ಕೆಲಸಗಳನ್ನು ತೊರೆಯಬೇಕಾಗುತ್ತದೆ.

೧೨) ಈ ಗ್ರಾಮ ವ್ಯವಸ್ಥೆಯನ್ನು ನಾಶಮಾಡದವರೆಗೆ, ಪರಿಶಿಷ್ಟ ಜಾತಿಗಳವರು ಅಸ್ಪೃಶ್ಯರಾಗಿಯೇ ಮುಂದುವರೆಯುತ್ತಿರುತ್ತಾರೆ, ಸವರ್ಣೀಯ ಹಿಂದೂಗಳ ದೌರ್ಜನ್ಯಕ್ಕೆ ಮತ್ತು ತುಳಿತಕ್ಕೆ ಒಳಗಾಗುತ್ತಲೇ ಇರುತ್ತಾರೆ. ಅವರಿಗೆ ಮುಕ್ತ ಜೀವನ ಮತ್ತು ಪರಿಪೂರ್ಣವಾದ ಗೌರವಯುತವಾದ ಜೀವನವು ಗಗನಕುಸುಮವಾಗಿಯೇ ಇರುತ್ತದೆ. ಕಾರ್ಯಕಾರಿ ಸಮಿತಿಯು, ದೀರ್ಘವಾಗಿ ಮತ್ತು ಪರಿಪಕ್ವತೆಯಿಂದ ವಿಚಾರಮಾಡಿ ಈ ತೀರ್ಮಾನಕ್ಕೆ ಬಂದಿದೆ – ಸವರ್ಣೀಯ ಹಿಂದೂಗಳ ದೌರ್ಜನ್ಯ ಹಾಗೂ ತುಳಿತಗಳ ವಿರುದ್ಧ ರಕ್ಷಣೆಯನ್ನು ಪಡೆಯಲು, ಮತ್ತು ಅವರು ಮಾನವತ್ವದ ಪೂರ್ಣ ಹಂತವನ್ನು ತಲುಪುವಂತೆ ಮಾಡಲು, ಅವರಿಗೆ ಆರ್ಥಿಕ ಮತ್ತು ಸಾಮಾಜಿಕ ಸಂರಕ್ಷಣೆಯನ್ನು ನೀಡಲು, ಮತ್ತು ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಗ್ರಾಮವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯನ್ನು ತರಬೇಕು. ಪರಿಶಿಷ್ಟ ಜಾತಿಗಳವರ ಮೇಲೆ ಹಿಂದೂಗಳು ನಡೆಸುವ ದೌರ್ಜನ್ಯವು 'ಹಿಂದೂರಾಜ್ಯ'ವೆಂಬ ಇನ್ನೊಂದು ಹೆಸರಿನಿಂದ

ಕರೆಯಬಹುದಾದ ಸ್ವರಾಜ್ಯದಲ್ಲಿ ಇನ್ನೂ ದೊಡ್ಡಪ್ರಮಾಣಕ್ಕೆ ಬೆಳೆಯುತ್ತದೆ. ಈ ಹಿಂದೂಗಳ ಕೈಯಲ್ಲಿ ಹಲವು ಶತಮಾನಗಳಿಂದ ಅನುಭವಿಸುತ್ತಿರುವ ಎಲ್ಲಾ ಅನಿಷ್ಟಗಳನ್ನೂ ನಿವಾರಿಸಲು ಗ್ರಾಮ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರುವುದು ಅತ್ಯಗತ್ಯವಾಗಿದೆ. ಗ್ರಾಮವ್ಯವಸ್ಥೆಗಳಲ್ಲಿ ಅಗತ್ಯವಾಗಿ ಮಾಡಬೇಕಾಗಿರುವ ಬದಲಾವಣೆಗಳನ್ನು ಅರಿತು, ಸಂವಿಧಾನದಲ್ಲಿ ಮುಂದೆ ಹೇಳಿರುವ ರೀತಿಯಲ್ಲಿ ವಿಧಿಗಳನ್ನು ಅಳವಡಿಸಬೇಕೆಂದು ಕಾರ್ಯಕಾರಿ ಸಮಿತಿಯ ಅಭಿಪ್ರಾಯಪಡುತ್ತದೆ.

ಅ) ಪರಿಶಿಷ್ಟ ಜಾತಿಗಳವರನ್ನು ಸದ್ಯದಲ್ಲಿ ಅವರು ವಾಸಿಸುತ್ತಿರುವ ಕೇರಿಗಳಿಂದ ಬಿಡಿಸಿ ಹಿಂದೂ ಗ್ರಾಮಗಳಿಂದ ದೂರದಲ್ಲಿ ಅವರಿಗಾಗಿ ವಸತಿಸ್ಥಾನಗಳನ್ನು ಪ್ರತ್ಯೇಕವಾಗಿ ನಿರ್ಮಿಸಿ ಅಲ್ಲಿಗೆ ಅವರನ್ನು ವರ್ಗಾಯಿಸಲು ಅಗತ್ಯ ಅವಕಾಶಗಳನ್ನು ಸಂವಿಧಾನದಲ್ಲಿ ಸೇರಿಸಬೇಕು.

ಆ) ಹೊಸ ವಸತಿಸ್ಥಾನಗಳಲ್ಲಿ ಪರಿಶಿಷ್ಟ ಜಾತಿಗಳವರು ನೆಲಸುವುದರ ಉಸ್ತುವಾರಿಯನ್ನು ನೋಡಿಕೊಳ್ಳಲು ಒಂದು ಸೆಟ್ಲ್‌ಮೆಂಟ್ ಕಮೀಷನ್ನನ್ನು ಸ್ಥಾಪಿಸಲು ಸಂವಿಧಾನದಲ್ಲಿ ಅವಕಾಶವಿರಬೇಕು.

ಇ) ಬೇರೆಯವರ ಸ್ವಾಧೀನದಲ್ಲಿ ಇಲ್ಲದಿರುವ ಎಲ್ಲಾ ಕೃಷಿಯೋಗ್ಯ ಸರಕಾರೀ ಭೂಮಿಯನ್ನೂ ಪರಿಶಿಷ್ಟ ಜಾತಿಗಳವರಿಗೆ ಹೊಸ ವಸತಿಸ್ಥಾನಗಳನ್ನು ಕಲ್ಪಿಸಲು ಅನುಕೂಲವಾಗುವಂತೆ ಸೆಟ್ಲ್‌ಮೆಂಟ್ ಕಮೀಷನ್ನಿಗೆ ಒಪ್ಪಿಸಬೇಕು. ಆ ಕಮೀಷನ್ ವಿಶ್ವಸ್ಥನಂತೆ ಈ ಭೂಮಿಯನ್ನು ತನ್ನ ವಶದಲ್ಲಿಟ್ಟುಕೊಂಡಿರಬೇಕು.

ಈ) ಪರಿಶಿಷ್ಟ ಜಾತಿಗಳವರಿಗಾಗಿ ಹೊಸ ವಸತಿ ಸ್ಥಾನಗಳನ್ನು ಕಲ್ಪಿಸಲು ಖಾಸಗೀ ಭೂಮಾಲೀಕರಿಂದಲೂ ಭೂಮಿಯನ್ನು ಖರೀದಿಸಲು ಕಮೀಷನ್ನಿಗೆ ಅಧಿಕಾರವನ್ನು ನೀಡಬೇಕು.

ಉ) ಈ ನಿಟ್ಟಿನಲ್ಲಿ ತಮ್ಮ ಕರ್ತವ್ಯವನ್ನು ನಿಭಾಯಿಸಲು ಸೆಟ್ಲ್‌ಮೆಂಟ್ ಕಮೀಷನ್ನಿಗೆ ವಾರ್ಷಿಕವಾಗಿ ಕನಿಷ್ಠ ಐದು ಕೋಟಿ ರೂಗಳ ಅನುದಾನವನ್ನು ನೀಡಲು ಕೇಂದ್ರ ಸರಕಾರವು ಬಾಧ್ಯವಾಗಿರುವಂತೆ ಸಂವಿಧಾನವು ನಿರ್ದೇಶಿಸಬೇಕು.

## ಭಾಗ ೩
## ಭಾರತ ಮತ್ತು ಮಹಾಪ್ರಭುಗಳ ಸರಕಾರದ ನಡುವಿನ ಒಪ್ಪಂದ

೧೩. ಭಾರತ ಮತ್ತು ಮಹಾಪ್ರಭುಗಳ ಸರಕಾರದ ನಡುವಿನ ಒಪ್ಪಂದದ ಪ್ರಸ್ತಾಪವನ್ನು ಕಾರ್ಯಕಾರಿ ಸಮಿತಿಯು ಆಳವಾಗಿ ಪರ್ಯಾಲೋಚಿಸಿತು. ಈ ಹಿಂದೆ ಮಹಾಪ್ರಭುಗಳ ಸರಕಾರವು ನೀಡಿದ್ದ ಆಶ್ವಾಸನೆಯಂತೆ ಈ ಒಪ್ಪಂದದ ಹಿಂದಿರುವ ಉದ್ದೇಶವು, ಭಾರತವು ಸ್ವತಂತ್ರವಾದ ನಂತರವೂ, ಅಲ್ಪಸಂಖ್ಯಾತರ ಹಿತರಕ್ಷಣೆಯನ್ನು ಮಾಡುವಂತೆ ವ್ಯವಸ್ಥೆಯನ್ನು ಏರ್ಪಡಿಸುವುದು ಎಂಬುದನ್ನು ಕಾರ್ಯಕಾರಿ ಸಮಿತಿಯು ಅರಿತುಕೊಂಡಿದೆ. ಈ ಉದ್ದೇಶವನ್ನು ಶ್ಲಾಘಿಸುತ್ತಾ, ಭಾರತವು ಒಂದು ಸ್ವತಂತ್ರ ರಾಷ್ಟ್ರವಾಗಬೇಕೆಂಬುದನ್ನು ದೃಷ್ಟಿಯಲ್ಲಿರಿಸಿಕೊಂಡರೆ, ಈ ಒಪ್ಪಂದವು ಸಂವಿಧಾನವನ್ನು ಹೇಗೆ ಉಲ್ಲಂಘಿಸಲು ಶಕ್ತವಾಗುತ್ತದೆ, ಅಥವಾ ಸಂವಿಧಾನವನ್ನು ಉಲ್ಲಂಘಿಸಲು ಈ ಒಪ್ಪಂದಕ್ಕೆ ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಅದರಿಂದ ಪರಿಶಿಷ್ಟ ಜಾತಿಗಳವರಿಗೆ ಆಗುವ ಉಪಯೋಗವು ಏನು ಎಂಬುದನ್ನು ತಿಳಿದುಕೊಳ್ಳಲು ಕಾರ್ಯಕಾರಿ ಸಮಿತಿಯು ವಿಫಲವಾಗಿದೆ. ಒಪ್ಪಂದಕ್ಕೆ ವಿಧಾಯಕ ಅಧಿಕಾರವು ಇರುವುದಿಲ್ಲವಾದ್ದರಿಂದ ತಮ್ಮ ಹಿತರಕ್ಷಣಾ ವಿಧಿಗಳನ್ನು ಒಪ್ಪಂದದಲ್ಲಿ ಮಾತ್ರ ಸೇರಿಸದೆ ಸಂವಿಧಾನದಲ್ಲಿಯೇ ಅಳವಡಿಸಬೇಕೆಂದು ಪರಿಶಿಷ್ಟ ಜಾತಿಗಳವರು ಬಯಸುತ್ತಾರೆ ಎಂಬ ನಿರ್ಣಯಕ್ಕೆ ಕಾರ್ಯಕಾರಿ ಸಮಿತಿಯು ತಲುಪಿದೆ.

## ಭಾಗ ೪

## ಸಂವಿಧಾನ ಸಭೆ

೧೪. ಮುಂದೆ ಸೂಚಿಸಿರುವಂತಹವು ಕಾರ್ಯಕಾರಿ ಸಮಿತಿಯ ಖಚಿತ ಅಭಿಪ್ರಾಯಗಳು –

ಅ) ಸಂವಿಧಾನ ಸಭೆಯು ಅನಾವಶ್ಯಕ ಮತ್ತು ಅದು ಶುದ್ಧಾಂಗವಾಗಿ ಸಾಂವಿಧಾನಿಕವಾಗಿರುವ ಪ್ರಶ್ನೆಗಳನ್ನು ಬಿಡಿಸಲು ಅಸಮರ್ಥವಾಗಿದೆ.

ಆ) ಯಾವ ಅಲ್ಪಸಂಖ್ಯಾತರೂ ಬಹುಸಂಖ್ಯಾತರ ನಿರ್ಣಯಗಳನ್ನು ಒಪ್ಪಿಕೊಳ್ಳಲು ಸಿದ್ಧರಾಗಿರುವುದಿಲ್ಲವಾದ್ದರಿಂದ, ಈ ಸಂವಿಧಾನ ಸಭೆ ಜಾತೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅನುಪಯುಕ್ತವಾಗುತ್ತದೆ.

ಇ) ಸಂವಿಧಾನ ಸಭೆಯು ಭ್ರಷ್ಟಾಚಾರಗಳಿಗೆ ತನ್ನ ಬಾಗಿಲನ್ನು ತೆರೆದಿರುತ್ತದೆ ಮತ್ತು ತಮ್ಮ ಪರವಾಗಿ ಮತವನ್ನು ಚಲಾಯಿಸುವಂತೆ ಪರಿಶಿಷ್ಟ ಜಾತಿಗಳ ಸದಸ್ಯರನ್ನು ಪ್ರಬಲ ಹಾಗೂ ಹಣವಂತ ಪಕ್ಷಗಳು ಖರೀದಿಮಾಡಿಕೊಳ್ಳಲು ಅದು ಮುಕ್ತ ಸ್ವಾತಂತ್ರ್ಯವನ್ನು ಕೊಡುತ್ತದೆ.

ಈ) ಸಂವಿಧಾನ ಸಭೆಯಲ್ಲಿ ಪರಿಶಿಷ್ಟ ಜಾತಿಗಳವರನ್ನು ಇತರರು ಸಂಖ್ಯಾಬಲದಲ್ಲಿ ಮೀರಿಸಿರುತ್ತಾರೆ. ಆದ್ದರಿಂದ ಪರಿಶಿಷ್ಟ ಜಾತಿಗಳ ಸದಸ್ಯರು ಸಭೆಯಲ್ಲಿ ಪರಿಣಾಮಕಾರಿಯಾದ ನಿಲುವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರುವುದಿಲ್ಲ.

ಈ ಕಾರಣಗಳಿಂದಾಗಿ ಕಾರ್ಯಕಾರಿ ಸಮಿತಿಯು ಉದ್ದೇಶಿತ ಸಂವಿಧಾನ ಸಭೆಯನ್ನು ವಿರೋಧಿಸುತ್ತದೆ.

## ಭಾಗ ೫

## ತಾತ್ಕಾಲಿಕವಾಗಿ ನೇಮಕಗೊಂಡ ಸರಕಾರದ ಬಗೆಗಿನ ಅಭಿಪ್ರಾಯಗಳು

೧೫. ಪೂರ್ವಭಾವಿಯಾಗಿ ಈ ಮುಂದಿನ ಷರತ್ತುಗಳನ್ನು ಪೂರೈಸದ ಹೊರತು ತಾತ್ಕಾಲಿಕವಾಗಿ ನೇಮಕಗೊಳ್ಳುವ ಸರಕಾರವನ್ನು ಪರಿಶಿಷ್ಟ ಜಾತಿಗಳವರು ಒಪ್ಪಿಕೊಳ್ಳುವುದಿಲ್ಲ –

ಅ) ನಾಮಕರಣಗೊಂಡು ನೇಮಕವಾಗುವ ಸದಸ್ಯರ ಗುಂಪನ್ನು ರದ್ದುಗೊಳಿಸಿ, ಕೇಂದ್ರೀಯ ಶಾಸನಸಭೆಗೆ ಸಾಕಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳನ್ನು ನೇಮಕಮಾಡುವುದು ಮತ್ತು ಖಾಲಿಬಿದ್ದ ಸ್ಥಾನಗಳಿಗೆ ಸಾಕಷ್ಟು ಸಂಖ್ಯೆಯ ಪರಿಶಿಷ್ಟ ಜಾತಿಯ ಸದಸ್ಯರನ್ನು ನೇಮಕಮಾಡುವುದು.

ಆ) ಕಾರ್ಯಾಂಗದ ಪರಿಷತ್ತಿನಲ್ಲಿ ಮುಸ್ಲಿಮರಿಗೆ ನೀಡಿರುವ ಸ್ಥಾನಗಳ ಸಂಖ್ಯೆಯಲ್ಲಿ ಅರ್ಧಕ್ಕೆ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿಗಳವರಿಗೆ ಮೀಸಲಿರಿಸಲು ಅನುಕೂಲವಾಗುವಂತೆ ಅವಕಾಶಗಳನ್ನು ಕಲ್ಪಿಸುವುದು.

ಇ) ಗವರ್ನರ್ ಜನರಲ್ ಅವರ ಒಪ್ಪಿಗೆಯಿಲ್ಲದೆ, ೧೯೪೩ರ ಭಾರತ ಸರಕಾರದ ಗೊತ್ತುವಳಿಯಂತೆ ಲೋಕಸೇವೆಯಲ್ಲಿನ ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯವನ್ನು, ಪರಿಶಿಷ್ಟ ಜಾತಿಗಳವರಿಗೆ ಪ್ರತಿಕೂಲವಾಗುವಂತೆ ಬದಲಾಯಿಸಬಾರದು.

ಈ) ಭಾರತ ಸರಕಾರವು ಪರಿಶಿಷ್ಟ ಜಾತಿಗಳವರಿಗಾಗಿ, ಉನ್ನತ ಮಟ್ಟದ ವಿದ್ಯಾಭ್ಯಾಸಕ್ಕೆಂದು ಕಲ್ಪಿಸಿರುವ ವಿಧಿಗಳನ್ನು, ಗವರ್ನರ್ ಜನರಲ್ ಅವರ ಒಪ್ಪಿಗೆಯಿಲ್ಲದೆ, ಪರಿಶಿಷ್ಟ

ಜಾತಿಗಳವರಿಗೆ ಪ್ರತಿಕೂಲವಾಗುವಂತೆ ರದ್ದುಗೊಳಿಸಬಾರದು ಅಥವಾ ಬದಲಾಯಿಸಬಾರದು.

ಉ) ಲಾರ್ಡ್ ವೇವೆಲ್ ಅವರು ಶ್ರೀ ಗಾಂಧಿಯವರಿಗೆ ಬರೆದ ೧೯೪೪ರ ಆಗಸ್ಟ್ ೧೫ರ ಪತ್ರದಲ್ಲಿ ಹೇಳಿರುವಂತೆ, ಸ್ವತಂತ್ರ ಭಾರತದ ಹೊಸ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳವರ ಹಿತರಕ್ಷಣೆಯ ಬಗ್ಗೆ ಸೇರಿಸಲಾಗುವ ವಿಧಿಗಳ ಹಿಂದಿರುವ ತಾತ್ವಿಕತೆಯನ್ನು ಸಂಬಂಧಿಸಿದ ಎಲ್ಲಾ ಪಕ್ಷಗಳೂ ಮುಂಗಡವಾಗಿ ಒಪ್ಪಿಕೊಳ್ಳಬೇಕು.

## ಭಾಗ ೬

## ಪಾಕಿಸ್ತಾನದ ಬಗೆಗಿನ ಅಭಿಪ್ರಾಯಗಳು

ಪಾಕಿಸ್ತಾನಕ್ಕಾಗಿ ಇರುವ ಬೇಡಿಕೆಯ ಬಗ್ಗೆ ಕಾರ್ಯಕಾರಿ ಸಮಿತಿಗೆ ಅರಿವಿದೆ. ಈ ಬೇಡಿಕೆಯು ಒಳಗೊಂಡಿರಬಹುದಾದ ವಿಷಯಗಳ ಬಗ್ಗೆ ಪರಿಶಿಷ್ಟ ಜಾತಿಗಳವರಿಗೆ ಆತಂಕವಿದೆ. ಈ ಹಂತದಲ್ಲಿ ಈ ವಿಷಯದಲ್ಲಿ ಪರಿಶಿಷ್ಟ ಜಾತಿಗಳವರ ಅಭಿಪ್ರಾಯವನ್ನು ವ್ಯಕ್ತಪಡಿಸುವುದರಿಂದ ಯಾವ ಉಪಯೋಗವೂ ಇರುದಿಲ್ಲವೆಂದು ಕಾರ್ಯಕಾರಿ ಸಮಿತಿಯು ಭಾವಿಸುತ್ತದೆ ಮತ್ತು ಅನಿವಾರ್ಯ ಹಂತವನ್ನು ತಲುಪುವವರೆಗೆ ತನ್ನ ಅಭಿಪ್ರಾಯಗಳನ್ನು ತನ್ನಲ್ಲಿಯೇ ಇಟ್ಟುಕೊಂಡಿರಲು ಬಯಸುತ್ತದೆ.

## ಪರಿಶಿಷ್ಟ ೧

## ವಾಗ್ದಾನಗಳು ಮತ್ತು ಘೋಷಣೆಗಳು

೧. ದಲಿತ ಸಮುದಾಯಗಳವರು ಕೂಡ ಸ್ವರಕ್ಷಣೆಯ ಪಾಠಗಳನ್ನು ಕಲಿತುಕೊಳ್ಳಬೇಕು ಎಂದು ಲೇಖಕರು ಹೇಳಿದ್ದಾರೆ. ಅರವತ್ತು ಅಥವಾ ಎಪ್ಪತ್ತು ಸವರ್ಣೀಯರ ಹಿಂದೂ ಸದಸ್ಯರ ಮಧ್ಯೆ ಪರಿಶಿಷ್ಟ ಜಾತಿಗಳ ಒಬ್ಬನೇ ಸದಸ್ಯನಿರುವ ಸಭೆಯಲ್ಲಿ ಇದನ್ನು ನಿರೀಕ್ಷಿಸುವುದು ಅವಾಸ್ತವಿಕವೆನಿಸುತ್ತದೆ. ವರದಿಯ ೫೧, ೧೫೨, ೧೫೪ ಮತ್ತು ೧೫೫ನೆಯ ಪ್ಯಾರಾಗಳಲ್ಲಿ ಉಕ್ತವಾಗಿರುವ ತತ್ತ್ವಗಳನ್ನು ಪಾಲಿಸಲು ಜಾತಿಬಹಿಷ್ಕೃತರನ್ನು ನಾವು ಉದಾರವಾಗಿ ನೋಡಿಕೊಳ್ಳಬೇಕಾಗಿದೆ. ದಲಿತ ವರ್ಗಗಳವರ ದನಿಯು ಕೇಳಿಬರುವಂತೆ ಮಾಡಲು ಮತ್ತು ಸಾಮೂಹಿಕ ಕರ್ತವ್ಯನಿರ್ವಹಣಾ ಸಾಮರ್ಥ್ಯವನ್ನು ಪ್ರಚೋದಿಸಲು ಪ್ರತಿ ಪರಿಷತ್ತಿನಲ್ಲಿಯೂ ದಲಿತ ವರ್ಗಗಳವರ ಪ್ರಾತಿನಿಧ್ಯವು ಸಾಕಷ್ಟು ಇರಬೇಕು ಎಂದು ನಾವು ಅಭಿಪ್ರಾಯಪಡುತ್ತೇವೆ. ಮದರಾಸಿನ ವಿಷಯದಲ್ಲಿ, ಅವರಿಗೆ ಆರು ಸ್ಥಾನಗಳನ್ನೂ, ಬಂಗಾಳ, ಸಂಯುಕ್ತ ಪ್ರಾಂತಗಳು, ಬಿಹಾರ ಮತ್ತು ಒರಿಸ್ಸಾಗಳಲ್ಲಿ ಅವರಿಗೆ ನಾಲ್ಕು ಸ್ಥಾನಗಳನ್ನೂ, ಮಧ್ಯ ಪ್ರಾಂತ ಮತ್ತು ಬಾಂಬೆಯಲ್ಲಿ ಎರಡು ಹಾಗೂ ಇತರೆಡೆಗಳಲ್ಲಿ ಒಂದು ಸ್ಥಾನವನ್ನೂ ನೀಡಬೇಕು ಎಂದು ಸಲಹೆಯನ್ನು ಮಾಡುತ್ತೇವೆ. ಈ ದೃಷ್ಟಿಯಿಂದ ಸಮಿತಿಯ ವರದಿಯಲ್ಲಿ ಬದಲಾವಣೆಗಳನ್ನು ಮಾಡಬೇಕು ಎಂಬುದು ಸ್ಪಷ್ಟವಾಗಿದೆ.

*– ಸೌತ್‌ಬರೋ ಅವರ ವರದಿಯ ಮೇಲೆ ಭಾರತ ಸರಕಾರವು ೧೯೧೯ರ ಏಪ್ರಿಲ್ ೨೩ರಂದು ಬರೆದ ಐದನೆಯ ಪತ್ರದದಿಂದ ಆಯ್ದ ಭಾಗಗಳು*

೨. ಭಾರತದ ಏಕತೆಯ ಹಿತದ ದೃಷ್ಟಿಯಿಂದ ಎಲ್ಲಾ ಸಾಂವಿಧಾನಿಕ ಯೋಜನೆಗಳಲ್ಲಿ ಭಾರತೀಯ ಸಂಸ್ಥಾನಗಳನ್ನು ಸೇರಿಸಿಕೊಳ್ಳಬೇಕಾದ ಅತ್ಯಗತ್ಯತೆಯನ್ನು ಮರೆಯಬಾರದು.

ಇವುಗಳಲ್ಲಿ ನಾನು ಎರಡು ಸಮುದಾಯಗಳ ಬಗೆಗೆ ಇಲ್ಲಿ ಹೇಳಬಯಸುತ್ತೇನೆ – ಅತಿ ದೊಡ್ಡ ಅಲ್ಪಸಂಖ್ಯಾತ ಮುಸ್ಲಿಮ್ ಸಮುದಾಯ ಮತ್ತು ಪರಿಶಿಷ್ಟ ಜಾತಿಗಳವರು. ಇವರಿಗಾಗಿ ಈ ಹಿಂದೆ ಕೆಲವು ಖಚಿತ ಭರವಸೆಗಳನ್ನು ನೀಡಲಾಗಿತ್ತು. ಅವರ ಸ್ಥಿತಿಗತಿಗಳನ್ನು ರಕ್ಷಿಸಬೇಕು ಮತ್ತು ಈ ಭರವಸೆಗಳನ್ನು ಈಡೇರಿಸಬೇಕು.

*– ಬಾಂಬೆಯ ಓರಿಯಂಟ್ ಕ್ಲಬ್‌ನಲ್ಲಿ ಲಾರ್ಡ್ ಲಿಂಗ್‌ಲಿಥ್‌ಗೊ ಅವರು ಮಾಡಿದ ಭಾಷಣದಿಂದ ಉದ್ಧೃತ*

೩. ಇವೆರಡು ಮುಖ್ಯವಾಗಿ ತಲೆದೋರಿರುವ ವಿಷಯಗಳು. ಈ ಎರಡು ವಿಷಯಗಳ ಬಗೆಗೆ ಮಹಾಪ್ರಭುಗಳ ಸರಕಾರವು ತಮ್ಮ ನಿಲುವನ್ನು ಈ ರೀತಿ ಸ್ಪಷ್ಟಪಡಿಸುವಂತೆ ನನಗೆ ಆದೇಶಿಸಿದೆ. ಇವುಗಳಲ್ಲಿ ಮೊದಲನೆಯದು, ಭವಿಷ್ಯದ ಸಂವಿಧಾನದ ಯೋಜನೆಯಲ್ಲಿ ಅಲ್ಪಸಂಖ್ಯಾತರ ಸ್ಥಿತಿಯನ್ನು ಕುರಿತದ್ದು....

ಯಾವ ಸರಕಾರದ ವ್ಯವಸ್ಥೆಯನ್ನು ಭಾರತದ ಹೆಚ್ಚಿನ ಸಂಖ್ಯೆಯ ಜನರು ಮತ್ತು ಪ್ರಬಲ ಅಂಗಗಳು ನಿರಾಕರಿಸುತ್ತವೆಯೋ, ಅಂತಹ ಸರಕಾರದ ವ್ಯವಸ್ಥೆಗೆ ಭಾರತದ ಶಾಂತಿ ಮತ್ತು ಕಲ್ಯಾಣಗಳ ಜವಾಬ್ದಾರಿಯನ್ನು ವರ್ಗಾಯಿಸುವುದನ್ನು ಮಹಾಪ್ರಭುಗಳ ಸರಕಾರವು ಯೋಚಿಸುವುದೂ ಇಲ್ಲ ಎಂಬುದನ್ನು ಪದಗಳ ಮೂಲಕ ವ್ಯಕ್ತಪಡಿಸಬೇಕಾದ ಆವಶ್ಯಕತೆಯಿಲ್ಲ.

*– ಲಾರ್ಡ್ ಲಿಂಗ್‌ಲಿಥ್‌ಗೊ ಅವರು ೧೯೪೦ರ ಆಗಸ್ಟ್ ೮ರಂದು ಮಾಡಿದ ಹೇಳಿಕೆಯಿಂದ ಉದ್ಧೃತ.*

೪. ಕಾಂಗ್ರೆಸ್ ಮುಖಂಡರು..... ಒಂದು ಅದ್ಭುತವಾದ ಸಂಸ್ಥೆಯನ್ನು ಕಟ್ಟಿದ್ದಾರೆ, ಒಂದು ಸಮರ್ಥವಾದ ರಾಜಕೀಯ ವ್ಯವಸ್ಥೆಯನ್ನು ಭಾರತದಲ್ಲಿ ನಿರ್ಮಿಸಿದ್ದಾರೆ.... ಅವರು ಯಶಸ್ವಿಯಾಗಿದ್ದಿದ್ದರೆ, ಸಾಮಾನ್ಯವಾಗಿ ಮಾಡುವ ಹಾಗೆ ಈ ಬಗ್ಗೆಯೂ ಮಾತನಾಡಿದ್ದಿದ್ದರೆ, ಅವರು ತಮ್ಮ ಬೇಡಿಕೆಗಳನ್ನು ಮುಂದಿಟ್ಟಿದ್ದಿದ್ದರೆ, ನಮ್ಮ ಮುಂದಿರುವ ಸಮಸ್ಯೆಯು ಈಗಿರುವುದಕ್ಕಿಂದ ಹಲವು ರೀತಿಯಲ್ಲಿ ಹಗುರವಾಗುತ್ತಿತ್ತು. ಸಂಖ್ಯಾಬಲದಿಂದ ಅವರು ಬ್ರಿಟಿಷ್ ಭಾರತದಲ್ಲಿನ ಅತಿದೊಡ್ಡ ಪಕ್ಷವೆಂಬುದು ನಿಜ. ಇಡೀ ಭಾರತದ ಪರವಾದ ವಕ್ತಾರರೆಂಬ ಅವರ ದಾವೆಯನ್ನು ಭಾರತದ ಸಂಕೀರ್ಣ ರಾಷ್ಟ್ರೀಯ ಜೀವನದಲ್ಲಿರುವ ಹಲವು ಘಟಕಗಳು ಮಾನ್ಯಮಾಡುವುದಿಲ್ಲ. ಈ ಇತರೆ ಘಟಕಗಳು ತಮ್ಮನ್ನು ಅಲ್ಪಸಂಖ್ಯಾತರೆಂಬ ದೃಷ್ಟಿಯಿಂದ, ಸಂಖ್ಯಾಬಲವಿಲ್ಲದಿದ್ದರೂ, ಭಾರತದ ಮುಂದಿನ ನೀತಿನಿರೂಪಣೆಯ ವ್ಯವಸ್ಥೆಯಲ್ಲಿ ಪ್ರತ್ಯೇಕ ಘಟಕವನ್ನಾಗಿ ಪರಿಗಣಿಸಬೇಕೆಂದು ಪ್ರತಿಪಾದಿಸುತ್ತಾರೆ. ಇವರುಗಳಲ್ಲಿ ಅತಿ ಪ್ರಮುಖರಾಗಿರುವವರು ಮುಸ್ಲಿಮ್ ಸಮುದಾಯದವರು. ಭೌಗೋಳಿಕ ಕ್ಷೇತ್ರಗಳಲ್ಲಿ ಬಹುಮತ ಪಡೆದು ಚುನಾಯಿತರಾಗಿರುವವರು ರೂಪಿಸಿದ ಸಂವಿಧಾನಕ್ಕೂ ತಮಗೂ ಯಾವ ಸಂಬಂಧವೂ ಇಲ್ಲವೆಂದು ಹೇಳಿದ್ದಾರೆ. ಯಾವುದೇ ಸಾಂವಿಧಾನಿಕ ಚರ್ಚೆಯಲ್ಲಿ ತಮ್ಮನ್ನು ಪ್ರತ್ಯೇಕ ಘಟಕವನ್ನಾಗಿ ಸಂಖ್ಯಾಬಲವುಳ್ಳವರ ಜೊತೆಯಲ್ಲಿಯೇ ಮಾನ್ಯಮಾಡಬೇಕೆಂಬ ತಮ್ಮ ಹಕ್ಕನ್ನು ಮುಂದಿಟ್ಟಿದ್ದಾರೆ. ಇದು ಇನ್ನೊಂದು ದೊಡ್ಡ ಸಮುದಾಯವಾದ ಪರಿಶಿಷ್ಟ ಜಾತಿಗಳವರರಿಗೂ ಅನ್ವಯವಾಗುತ್ತದೆ. ಶ್ರೀ ಗಾಂಧಿಯವರ ಶ್ರದ್ಧಾಯುಕ್ತವಾದ ಪ್ರಯತ್ನಗಳ ಹೊರತಾಗಿಯೂ, ಕಾಂಗ್ರೆಸ್ ಪಕ್ಷವು ಪ್ರತಿನಿಧಿಸುವ ಹಿಂದೂ ಸಮುದಾಯದಿಂದ ಹೊರಗೆ ಇರಲು ಪರಿಶಿಷ್ಟ ಜಾತಿಗಳವರು ಬಯಸುತ್ತಾರೆ.

*– ಕೆಳಮನೆಯಲ್ಲಿ ೧೯೪೦ರ ಆಗಸ್ಟ್ ೧೪ರಂದು ಭಾರತದ ಸೆಕ್ರೆಟರಿಯಾಗಿದ್ದ ರೈಟ್. ಆನರಬಲ್ ಎಲ್.ಎಸ್ ಆಮೆರಿಯವರು ಮಾಡಿದ ಭಾಷಣದಿಂದ ಉದ್ಧೃತ*

೫. "೩. ಎಲ್ಲವನ್ನೂ ಪುನರ್ಮನನ ಮಾಡಿಕೊಳ್ಳುವ ಬದಲು ...... ವಿವರವಾದ ಕಾರಣಗಳು, ಮಹಾಪ್ರಭುಗಳ ಸರಕಾರವು ..... ಎಂಬುದನ್ನು ನಾನು ಜ್ಞಾಪಿಸಬೇಕು.... ಆ ಸಂದರ್ಭದಲ್ಲಿ ಇದನ್ನು ಸ್ಪಷ್ಟಪಡಿಸಿದರು (ಕೆಲವು ಭಾಗಗಳು ಅಸ್ಪಷ್ಟವಾಗಿವೆ)

ಅ) ಭಾರತದ ಮುಖ್ಯ ಘಟಕಗಳು, ತಮ್ಮ ನಡುವೆ ಇದ್ದ ಪ್ರತಿಕೂಲ ವಾದಗಳನ್ನು ನಿವಾರಿಸಿಕೊಂಡು ಸಂವಿಧಾನವೊಂದನ್ನು ರೂಪಿಸುವ ಬಗ್ಗೆ ಒಪ್ಪಿಗೆಯನ್ನು ನೀಡಿದ ಮೇಲೆ, ಮತ್ತು ಮಹಾಪ್ರಭುಗಳ ಸರಕಾರದೊಡನೆ ಅಗತ್ಯವಾದ ಒಪ್ಪಂದಗಳನ್ನು ಮಾಡಿಕೊಂಡಮೇಲೆ, ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುತ್ತೇವೆ ಎಂಬ ಷರತ್ತುಗಳನ್ನು ಹಾಕಿದ್ದರು.

ಆ) ತಾವು ಸೂಚಿಸಬಹುದಾದ, ಕೇಂದ್ರ ಸಭೆಗೆ ಜವಾಬ್ದಾರವಾಗಿರುವಂತಹ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಸಾಧನವಾಗುವ ಸಂವಿಧಾನವನ್ನು ರೂಪಿಸುವುದು ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ಹೊಂದಿರುವವರೆಗೆ ಸಾಧ್ಯವಾಗುವುದಿಲ್ಲ.

ಈ ಷರತ್ತುಗಳನ್ನು ಇಲ್ಲಿ ವಿಧಿಸಿರುವುದರ ಹಿಂದಿನ ಉದ್ದೇಶವೆಂದರೆ ತಮ್ಮ ಮೇಲಿರುವ ವಿವಿಧ ಜನಾಂಗಗಳ, ಧಾರ್ಮಿಕ ಅಲ್ಪಸಂಖ್ಯಾತರ, ದಲಿತವರ್ಗಗಳ ಹಿತರಕ್ಷಣೆಯ ಹೊಣೆಯನ್ನು ನಿಭಾಯಿಸುವುದು ಮತ್ತು ತಾವು ಭಾರತೀಯ ಸಂಸ್ಥಾನಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಜಾರಿ.

ಲಾರ್ಡ್ ವೇವೆಲ್ ಅವರು ಶ್ರೀ ಗಾಂಧಿಯವರಿಗೆ ೧೯೪೪ರ ಆಗಸ್ಟ್ ೧೫ರಂದು ಬರೆದ ಪತ್ರದಿಂದ ಉದ್ಧೃತ.

## ಪರಿಶಿಷ್ಟ ೨

| ಮತಕ್ಷೇತ್ರ ಚಲಾಯಿತ | ಪ್ರಾಥಮಿಕ ಚುನಾವಣೆ | | ಅಂತಿಮ ಚುನಾವಣೆ | |
|---|---|---|---|---|
| | ಕಾಂಗ್ರೆಸ್ ಪರವಾಗಿ ಚಲಾಯಿತ ಮತಗಳು | ಒಕ್ಕೂಟದ ಪರವಾಗಿ ಮತಗಳು | ಕಾಂಗ್ರೆಸ್ ಪರವಾಗಿ ಚಲಾಯಿತಮತಗಳು | ಒಕ್ಕೂಟದ ಪರವಾಗಿ ಚಲಾಯಿತ ಮತಗಳು |
| ೧) ಬಾಂಬೆ ನಗರ – | | | | |
| ಅ) ಬಾಂಬೆ (ಪರೆಲ್, ಬೈಕುಲ) | ೨,೦೯೬ | ೧೧,೦೯೬ | ೪೩,೪೫೬ | ೩೯,೪೯೮ |
| ಆ) ಬಾಂಬೆ ನಗರ (ಉತ್ತರ ಮತ್ತು ಹೊರವಲಯ) | ೨,೦೮೮ | ೧೨,೮೯೯ | ೫೯,೬೪೬ | ೪೨,೫೧೦ |
| ೨) ಮಧ್ಯ ಪ್ರಾಂತಗಳು | | | | |
| ಅ) ನಾಗಪುರ–ಉಮ್ರೇರ್ | ೨೭೦ | ೧,೯೩೩ | ಪರಿಣಾಮಗಳು | ಲಭ್ಯವಿಲ್ಲ |
| ಆ) ಹಿಂಗನ್‌ಘಟ್–ವಾರ್ಧಾ | ೩೪೨ | ೧,೩೩೯ | ಪರಿಣಾಮಗಳು | ಲಭ್ಯವಿಲ್ಲ |
| ಇ) ಭಂಡಾರ–ಸಕೋಲಿ | ೯೭೬ | ೩,೧೮೭ | ಪರಿಣಾಮಗಳು | ಲಭ್ಯವಿಲ್ಲ |
| ಈ) ಯೋಟ್‌ಮಾಲ್–ಧಾರವಾಡ | ೫೧೪ | ೪೫೨ | ಪರಿಣಾಮಗಳು | ಲಭ್ಯವಿಲ್ಲ |
| ೩) ಪಂಜಾಬ್ | | | | |
| ಅ) ಕರ್ನಾಲ್ | ೫೧೯ | ೧,೬೯೧ | ಕಾಂಗ್ರೆಸ್ಸೇತರ | ಅಭ್ಯರ್ಥಿಗಳು ಅವಿರೋಧವಾಗಿ ಚುನಾಯಿತರಾದರು |
| ಆ) ಅಂಬಾಲ–ಸಿಮ್ಲಾ | ೧,೩೯೨ | ೬,೫೧೯ | ೧೦,೫೦೩ | ೭,೫೩೩ |
| ಇ) ಹೋಷಿಯಾರ್‌ಪುರ್(ಪಶ್ಚಿಮ) | ೬೪೧ | ೬,೫೭೭ | ೧೬,೩೦೭ | ೧೯,೧೩೪ |
| ಈ) ಜಲಂಧರ್ | ೭೭೫ | ೭,೭೫೦ | ೧೮,೦೧೮ | ೨೧,೪೭೬ |
| ಉ) ಲೂದಿಯಾನ–ಫಿರೋಜ್‌ಪುರ | ೮೧೨ | ೫,೯೮೬ | ೨೪,೩೫೨ ಲಭ್ಯವಿಲ್ಲ | ಅಂಕಿ ಅಂಶಗಳು |
| ೪) ಮದರಾಸು | | | | |
| ಅ) ಅಮಲಾಪುರಂ | ೨,೬೮೩ | ೧೦,೫೪೦ | ೨,೩೨೧ | |
| ಆ) ಕೋಕೊನದ | ೧,೪೧೧ | ೭,೫೯೦ | – | |
| ಇ) ಬಂದರ್ | ೪,೯೧೪ | ೧೨,೧೮೨ | ೧೧,೪೪೨ | |
| ಈ) ಗುಡ್ಡಪ್ಪಾ | ೩,೪೮೨ | ೧,೩೬೦ | – | |
| ಉ) ಪೆನುಗೊಂಡ | ೨,೫೬೪ | ೨,೫೬೭ | – | ಫಲಿತಾಂಶ ತಿಳಿದುಬಂದಿಲ್ಲ |
| ಊ) ತಿರುವಣ್ಣಾಮಲೆ | ೧,೯೬೦ | ೧,೮೭೪ | – | |
| ಋ) ತ್ರಿವೇಂದ್ರಮ್ | ೨,೭೮೫ | ೨,೬೭೯ | ೨೦೯ | |
| ೠ) ಮನ್ನಾರ್‌ಗುಡಿ | ೨,೮೯೩ | ಸ್ಪರ್ಧೆಯಿಲ್ಲ | ೬,೫೦೫ | |
| ಎ) ಪೊಲ್ಲಾಚಿ | ೨,೪೩೦ | ೭೯೧ | ೩೩೭ | |
| ಏ) ನಾಮಕಲ್ | ೨,೩೩೬ | ೨೦೬೯ | – | |

**ಟಿಪ್ಪಣಿ:–**

ಪ್ರಾಥಮಿಕ ಚುನಾವಣೆಗಳಲ್ಲಿ ಮತದಾರರಿಗೆ ತಲಾ ಒಂದು ಮತವು ಮಾತ್ರವಿರುತ್ತದೆ, ಆದರೆ, ಅಂತಿಮ ಚುನಾವಣೆಯಲ್ಲಿ, ಎಷ್ಟು ಸ್ಥಾನಗಳು ಇರುತ್ತವೆಯೋ ಅಷ್ಟು ಮತಗಳು ಇರುತ್ತವೆ. ವಿತರಣೆಯು ಕಡ್ಡಾಯವಾಗಿರುವ ಮದರಾಸ್ ಪ್ರಾಂತವನ್ನು ಬಿಟ್ಟು ಉಳಿದ ಪ್ರಾಂತಗಳಲ್ಲಿ ಮತದಾರರು ತಮ್ಮ ಅಭೀಷ್ಟದ ಪ್ರಕಾರ ಮತಗಳ ವಿತರಣೆಯನ್ನು ಮಾಡಬಹುದು.

## ೩. ಕ್ಯಾಬಿನೆಟ್ ಮಿಷನ್ನಿನೊಂದಿಗೆ ಡಾ. ಅಂಬೇಡ್ಕರ್ ಅವರ ಸಂದರ್ಶನ

ಕ್ಯಾಬಿನೆಟ್ ಮಿಷನ್ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಪ್ರತಿನಿಧಿಯಾದ ಡಾ. ಅಂಬೇಡ್ಕರ್ ಅವರನ್ನು ಸಂದರ್ಶಿಸಿತು. ಇದೇ ರೀತಿಯಲ್ಲಿ, ಅಖಿಲ ಭಾರತ ದಲಿತ ವರ್ಗಗಳ ಕೂಟದ ಪ್ರತಿನಿಧಿಗಳಾದ ಶ್ರೀ ಜಗಜ್ಜೀವನ ರಾಮ್, ಶ್ರೀ ರಾಧಾನಾಥ್ ದಾಸ್ ಮತ್ತು ಶ್ರೀ ಪೃಥ್ವೀಸಿಂಗ್ ಅವರನ್ನೂ ಸಂದರ್ಶಿಸಲಾಯಿತು. – ಸಂಪಾದಕರು

"ಪರಿಶಿಷ್ಟ ಜಾತಿಗಳ ಒಕ್ಕೂಟದ ಪ್ರತಿನಿಧಿಯೆಂದು ಪರಿಗಣಿಸಿ, ಡಾ. ಅಂಬೇಡ್ಕರ್ ಅವರನ್ನು ಸಂದರ್ಶಿಸಲಾಯಿತು. ಸಂವಿಧಾನ ಸಭೆಯಲ್ಲಿ ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯದ ಬಗೆಗೆ ತಮ್ಮನ್ನು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಅವರು ತಮಗೆ ಸಂವಿಧಾನ ಸಭೆಯ ಅಗತ್ಯವೇ ಇಲ್ಲವೆಂದು ಹೇಳಿದರು. ಅದರಲ್ಲಿ ಯಾವಾಗಲೂ ಸವರ್ಣೀಯ ಹಿಂದೂಗಳ ಪ್ರಾಬಲ್ಯವೇ ಇದ್ದು, ಪರಿಶಿಷ್ಟ ಜಾತಿಗಳವರು ಅಲ್ಲಿ ಅಲ್ಪಸಂಖ್ಯಾತರಾಗಿಯೇ ಇರುವುದರಿಂದ ಅವರನ್ನು ಮತಗಳ ಮೂಲಕವಾಗಿ ಸುಲಭವಾಗಿ ಸೋಲಿಸಿ ಮೂಲೆಗೆ ಒತ್ತುತ್ತಾರೆ. ಇದರಿಂದಾಗಿ ಅಲ್ಪಸಂಖ್ಯಾತರಿಗೆ ಮಹಾಪ್ರಭುಗಳ ಸರಕಾರವು ನೀಡಿದ್ದ ರಕ್ಷಣೆಯ ಆಶ್ವಾಸನೆಗಳೆಲ್ಲವೂ ನಿರರ್ಥಕವಾಗುವುವು.

ಸಂವಿಧಾನ ಸಭೆಗೆಂದು ರೂಪಿಸಿರುವ ಕರ್ತವ್ಯಗಳನ್ನು ಎರಡು ವಿಭಾಗವನ್ನಾಗಿ ಮಾಡಬೇಕು ಎಂಬುದು ಅವರ ಸಲಹೆಯಾಗಿತ್ತು. ಅವೆಂದರೆ, (ಅ) ಯೋಗ್ಯವಾಗಿ ಕರೆಯಬಹುದಾದ ಸಂವಿಧಾನದ ಪ್ರಶ್ನೆಗಳು, ಉದಾ. ಶಾಸಕಾಂಗ ಮತ್ತು ಕಾರ್ಯಾಂಗಗಳ ಸಂಬಂಧ, ಅವುಗಳ ಸಂಯೋಜನೆ ಮತ್ತು ಕಾರ್ಯಚಟುವಟಿಕೆಗಳು; ಮತ್ತು (ಆ) ಕೋಮುಗಳಿಗೆ ಸಂಬಂಧಿಸಿದ ಪ್ರಶ್ನೆಗಳು. ಮೇಲಿನ (ಅ)ಗೆ ಸಂಬಂಧಿಸಿದ ಪ್ರಶ್ನೆಗಳನ್ನು ಬ್ರಿಟನ್ ಅಥವಾ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನ ತಜ್ಞ ವಕೀಲರೊಬ್ಬರು ಅಧ್ಯಕ್ಷರಾಗಿರುವ ಆಯೋಗದ ಪರ್ಯಾಲೋಚನೆಗೆ ಒಪ್ಪಿಸಬೇಕು. ಆ ಆಯೋಗದ ಇತರ ಸದಸ್ಯರಾಗಿ ಭಾರತದ ಇಬ್ಬರು ಮೇಧಾವಿಗಳು ಹಾಗೂ ಹಿಂದೂ ಮತ್ತು ಮುಸ್ಲಿಂ ಸಮುದಾಯದಿಂದ ತಲಾ ಒಬ್ಬರಂತೆ ಇಬ್ಬರು ಸದಸ್ಯರು ಇರಬೇಕು. ಪರ್ಯಾಲೋಚನೆಯ ವಿಷಯವು ೧೯೩೫ರ ಭಾರತ ಸರಕಾರದ ಅಧಿನಿಯಮದ ಪ್ರಕಾರವಿರಬೇಕು ಮತ್ತು ಈ ಅಧಿನಿಯಮದಲ್ಲಿ ತರಬೇಕಾದ ಬದಲಾವಣೆಗಳನ್ನು ಆಯೋಗವು ಶಿಫಾರಸು ಮಾಡಬೇಕು. (ಆ)ಗೆ ಸಂಬಂಧಿಸಿದ ವಿಷಯಗಳನ್ನು ವಿವಿಧ ಕೋಮುಗಳ ಮುಖಂಡರ ಸಮ್ಮೇಳದ ಪರ್ಯಾಲೋಚನೆಗೆ ಒಪ್ಪಿಸಬೇಕು. ಈ ಮುಖಂಡರಿಂದ ಒಂದು ಪರಿಹಾರವನ್ನು ಕಂಡುಹಿಡಿಯುವುದು ಸಾಧ್ಯವಾಗದಿದ್ದರೆ, ಮಹಾಪ್ರಭುಗಳ ಸರಕಾರವೇ ನಿರ್ಣಯವನ್ನು ತೆಗೆದುಕೊಳ್ಳಬೇಕು.

ಭಾರತವನ್ನು ಬಿಟ್ಟು ಹೋಗುವ ಮುನ್ನ, ಪರಿಶಿಷ್ಟ ಜಾತಿಗಳವರಿಗೆ ಮೂಲಭೂತ ಮಾನವ ಹಕ್ಕುಗಳ, ಸ್ವಾತಂತ್ರ್ಯ, ಮತ್ತು ತಮ್ಮ ಸುಖ-ಸಂತೋಷದ ದಾರಿಯನ್ನು ಅನುಸರಿಸಲು, ಮತ್ತು ಅವರ ಬೇಡಿಕೆಯಾಗಿರುವ ಪ್ರತ್ಯೇಕ ಮತಕ್ಷೇತ್ರ ಹಾಗೂ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಸಂವಿಧಾನವು ಖಾತರಿಯನ್ನು ನೀಡುವಂತೆ ಬ್ರಿಟಿಷರು ಮಾಡಬೇಕು ಎಂದು ಡಾ. ಅಂಬೇಡ್ಕರ್ ಅವರು ಒತ್ತಾಯಿಸಿದರು. ಭಾರತದ ರಾಜಕೀಯದಲ್ಲಿ, ಬ್ರಿಟಿಷರಿಂದ ಬಿಡುಗಡೆಯನ್ನು ಪಡೆಯುವ ಸಮಸ್ಯೆ ಮತ್ತು ಹಿಂದೂ-ಮುಸ್ಲಿಂ ಸಮಸ್ಯೆ ಇವೆರಡು ವಿಷಯಗಳು ಬಹಳ ಪ್ರಮುಖವಾದದ್ದಾಗಿವೆ ಎಂದು ಸೆಕ್ರೆಟರಿ ಆಫ್ ಸ್ಟೇಟ್ ಅವರು ಹೇಳಿದರು.

ಒಮ್ಮೆ ಈ ಎರಡು ಸಮಸ್ಯೆಗಳು ಬಗೆಹರಿದರೆ, ಪಕ್ಷಗಳು ಆರ್ಥಿಕ ವಿಷಯಗಳ ಬಗ್ಗೆ ಗಮನಹರಿಸಬಹುದು. ಈಗಲೋ ಆಗಲೋ ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧರಾಗಿರುವ ಬ್ರಿಟಿಷರ ಮೇಲೆ ಅವಲಂಬಿಸುವುದಕ್ಕಿಂದ, ವಾಮಪಕ್ಷಗಳೊಡನೆ ಸಹಯೋಗವನ್ನು ಸಾಧಿಸುವ ಮೂಲಕ ಪರಿಶಿಷ್ಟ ಜಾತಿಗಳವರು ತಮ್ಮ ಹಿತವನ್ನು, ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವುದು ಸುಲಭ ಎಂದೂ ಅವರು ಹೇಳಿದರು. ಆದರೆ ಇದನ್ನು ಒಪ್ಪದ ಡಾ. ಅಂಬೇಡ್ಕರ್ ಅವರು, ಸಂಯುಕ್ತ ಮತಕ್ಷೇತ್ರಗಳು ಇರುವವರೆಗೆ ಪರಿಶಿಷ್ಟ ಜಾತಿಗಳವರ ಮತಗಳು ಬಹು ಅಲ್ಪವಾಗಿದ್ದು, ಅವರ ಆಶೋತ್ತರಗಳನ್ನು ಹಿಂದೂ ಅಭ್ಯರ್ಥಿಗಳು ಸುಲಭವಾಗಿ ಅಲಕ್ಷಿಸುತ್ತಾರೆ. ಸವರ್ಣೀಯ ಹಿಂದೂಗಳು ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳನ್ನು ಎಂದೂ ಬೆಂಬಲಿಸುವುದಿಲ್ಲ. ಪ್ರತ್ಯೇಕ ಮತಕ್ಷೇತ್ರಗಳು ಮೂಲಭೂತ ಅಗತ್ಯವಾಗಿದ್ದು, ಅವುಗಳು ಇಲ್ಲದಿದ್ದರೆ, ಪರಿಶಿಷ್ಟ ಜಾತಿಗಳವರು ಎಂದೂ ತಮ್ಮ ಪ್ರತಿನಿಧಿಗಳನ್ನು ಹೊಂದಲು ಸಾಧ್ಯವಿಲ್ಲ."[೧]

* * * * *

---

೧. ಭಾರತದಲ್ಲಿ ಅಧಿಕಾರದ ಹಸ್ತಾಂತರ, ಪುಟಗಳು ೨೪೩–೪೪, ಖೈರ್‌ಮೋಡೆ ಅವರಿಂದ ಉದ್ಧೃತ, ಸಂಪುಟ ೮, ಪುಟಗಳು ೬೨–೬೪.

ಜಗಜ್ಜೀವನ ರಾಮ್, ರಾಧಾನಾಥ್ ದಾಸ್ ಮತ್ತು ಪೃಥ್ವೀಸಿಂಗ್ ಅವರುಗಳ ಸಂದರ್ಶನಕ್ಕಾಗಿ ೪ನೆಯ ಪರಿಶಿಷ್ಟವನ್ನು ನೋಡಿ

# ೪. ಡಾ. ಅಂಬೇಡ್ಕರ್ ಮತ್ತು ಫೀಲ್ಡ್ ಮಾರ್ಷಲ್ ವಿಸ್ಕೌಂಟ್ ವೇವೆಲ್ ಅವರ ನಡುವಿನ ಸಭೆಯ ಮೇಲಿನ ಟಿಪ್ಪಣಿ

ಡಾ. ಅಂಬೇಡ್ಕರ್ ಅವರು ಕ್ಯಾಬಿನೆಟ್ ಮಿಷನ್ನಿಗೆ ೧೯೪೬ರ ಏಪ್ರಿಲ್ ೫ರಂದು ಪರಿಶಿಷ್ಟ ಜಾತಿಗಳ ಒಕ್ಕೂಟದ ನೀತಿಯ ಮೇಲೆ ಒಂದು ವಿಜ್ಞಾಪನಾ ಪತ್ರವನ್ನು ಸಲ್ಲಿಸಿದರು. ಅದೇ ದಿನ ಮಧ್ಯಾಹ್ನ ೧೨ ಗಂಟೆಗೆ ಡಾ. ಅಂಬೇಡ್ಕರ್ ಮತ್ತು ಫೀಲ್ಡ್ ಮಾರ್ಷಲ್ ವಿಸ್ಕೌಂಟ್ ವೇವೆಲ್ ಅವರೂ ಸೇರಿದಂತೆ ಕ್ಯಾಬಿನೆಟ್ ಮಿಷನ್ನಿನ ಸಭೆಯು ನಡೆಯಿತು. ಆ ಸಭೆಯ ನಂತರ ಒಂದು ಟಿಪ್ಪಣಿಯನ್ನು ಸಿದ್ಧಪಡಿಸಿದರು. ಅದು ಹೀಗಿತ್ತು– ಸಂಪಾದಕರು.

**ಗೋಪ್ಯ**

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟವು ಏಪ್ರಿಲ್ ೨ರಂದು ತನ್ನ ಸಭೆಯಲ್ಲಿ ಸ್ವೀಕರಿಸಿದ ಗೊತ್ತುವಳಿಯನ್ನು ಒಳಗೊಂಡ ಜ್ಞಾಪನಾ ಪತ್ರದ ಪ್ರತಿಗಳನ್ನು ಸದಸ್ಯರೆಲ್ಲರಿಗೂ ಈಗಾಗಲೇ ವಿತರಿಸಿರುವುದರಿಂದ ಅದಕ್ಕೆ ಸೇರಿಸುವುದು ಮತ್ತೇನೂ ಇಲ್ಲವೆಂದು ಡಾ. ಅಂಬೇಡ್ಕರ್ ಅವರು ಹೇಳಿದರು. ಪರಿಶಿಷ್ಟ ಜಾತಿಗಳವರಿಗೆ ಸರಕಾರದಲ್ಲಿ ಹಾಗೂ ಲೋಕಸೇವೆಯಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ನೀಡುವ ಸಲುವಾಗಿ ರೂಪಿಸಿರುವ ಸಂರಕ್ಷಣಾ ನಿಯಮಗಳನ್ನು ಈ ಜ್ಞಾಪನಾಪತ್ರದ ಐದನೆಯ ಪ್ಯಾರಾವು ಒಳಗೊಂಡಿದೆ. ಇವುಗಳನ್ನು ಒಳಗೊಳ್ಳದ ಯಾವುದೇ ಸಂವಿಧಾನವನ್ನೂ ಒಕ್ಕೂಟವು ಒಪ್ಪಿಕೊಳ್ಳುವುದಿಲ್ಲ.

ಪಾಕಿಸ್ತಾನಕ್ಕೆ ಸಂಬಂಧಿಸಿದಂತೆ, ಒಟ್ಟಾರೆಯಾಗಿ ಮುಸ್ಲಿಮರು ಹೊಸ ರಾಷ್ಟ್ರದಿಂದ ನಿಜವಾಗಿಯೂ ಲಾಭವನ್ನು ಪಡೆಯುತ್ತಾರೆಯೇ ಎಂದು ಡಾ. ಅಂಬೇಡ್ಕರ್ ಅವರು ಶಂಕಿಸಿದರು. ಪಾಕಿಸ್ತಾನಕ್ಕೆ ಹೋಗಲು ಇಚ್ಛೆಯಿಲ್ಲದೆ ಅಥವಾ ಅದಕ್ಕೆ ಬೇಕಾದ ಅನುಕೂಲಗಳಿಲ್ಲದೆ ಹಲವಾರು ಮುಸ್ಲಿಮರು ಹಿಂದೂಸ್ಥಾನದಲ್ಲಿಯೇ ಉಳಿಯಬೇಕಾಗುತ್ತದೆ ಎಂದೂ ಅವರು ಹೇಳಿದರು.

ಪಾಕಿಸ್ತಾನವು ಮುಸ್ಲಿಮರ ಭಾವನೆಯಲ್ಲಿ ಶಾಶ್ವತವಾಗಿರುತ್ತದೆಯೋ ಅಥವಾ ಅದು ಅವರ ಚಿತ್ತದ ಮೇಲೆ ಕೆಲವೇ ಕಾಲ ಸುಳಿದು ಮರೆಯಾಗುವ ಚಿತ್ತವಿಲಾಸವೋ ಎಂಬುದರ ಬಗ್ಗೆ ಅವರು ಕುತೂಹಲಿಗಳಾಗಿದ್ದರು. ಬಹುಶಃ ಅದು ಕೇವಲ ಚಂಚಲ ಭಾವವಾಗಿರಬೇಕು. ಆದರೆ ಅದನ್ನು ತಿಳಿದುಕೊಳ್ಳುವಷ್ಟು ಕಾಲದ ವ್ಯವಧಾನವಿರಲಿಲ್ಲ. ಈ ವಿಷಯದಲ್ಲಿ ಮುಸ್ಲಿಮರ ಬೇಡಿಕೆಯು ಎಷ್ಟು ತೀವ್ರವಾಗಿ ಬೆಳೆದಿತ್ತೆಂದರೆ, ಅದನ್ನು ಎದುರಿಸಬೇಕಾದದ್ದು ಅನಿವಾರ್ಯವಾಗಿತ್ತು. ಈ ಬಿಕ್ಕಟ್ಟಿಗೆ ಪರಿಹಾರವನ್ನು ಹುಡುಕುವುದಕ್ಕೆ ಐರಿಷ್ ಸಮಸ್ಯೆಯನ್ನು ಬಿಡಿಸಲು ೧೯೨೦ರಲ್ಲಿ ಅಸ್ಕಿತ್ ಅವರು ಪ್ರತಿಪಾದಿಸಿದ್ದ ಪರಿಹಾರದ ಸೂತ್ರವನ್ನು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ನಾವೂ ಅಳವಡಿಸಿಕೊಳ್ಳಬೇಕು ಎಂದು ಡಾ. ಅಂಬೇಡ್ಕರ್ ಅವರು ತಮ್ಮ ಪುಸ್ತಕದಲ್ಲಿ ಸೂಚಿಸಿದ್ದರು. ಆರು ವರ್ಷಗಳವರೆಗೆ ಅಲ್ಸ್ಟರ್‌ಅನ್ನು ಐರ್ಲೆಂಡಿನ ಇತರ ಭಾಗಗಳಿಂದ ಬೇರ್ಪಡಿಸಬೇಕು; ಆದರೆ, ದೇಶದ ಎರಡೂ ಭಾಗಗಳ ಪ್ರತಿನಿಧಿಗಳನ್ನೊಳಗೊಂಡ ಪರಿಷತ್ತನ್ನು ಸ್ಥಾಪಿಸಿ, ಈ ಆರು ವರ್ಷದ ಅವಧಿಯಲ್ಲಿ ಈ ಪರಿಷತ್ತು ದೇಶದ ಭಾಗಗಳಿಗೆ ಸಾಮಾನ್ಯವಾದ ವಿಷಯಗಳಲ್ಲಿ ವ್ಯವಹರಿಸುವಂತೆಮಾಡಬೇಕು. ಆರು ವರ್ಷಗಳ ಕೊನೆಯಲ್ಲಿ ತಾನು ಪ್ರತ್ಯೇಕವಾಗಿಯೇ ಉಳಿಯಬೇಕೇ ಅಥವಾ ದಕ್ಷಿಣ ಐರ್ಲೆಂಡಿನ ಜೊತೆ ಒಂದಾಗಬೇಕೆ ಎಂಬುದನ್ನು ಅಲ್ಸ್ಟರ್ ತೀರ್ಮಾನಿಸಬೇಕು. ಇದನ್ನೇ

ಅನುಸರಿಸಿ, ಡಾ. ಅಂಬೇಡ್ಕರ್ ಅವರು ಪಾಕಿಸ್ತಾನಕ್ಕೆ ಹತ್ತು ವರ್ಷಗಳ ಸ್ವಾತಂತ್ರ್ಯವನ್ನು ನೀಡಬೇಕು ಮತ್ತು ಹತ್ತು ವರ್ಷದ ಅಂತ್ಯದಲ್ಲಿ ಪ್ರತ್ಯೇಕ ಪಾಕಿಸ್ತಾನದ ನಿರ್ಣಯ ಆರ್ಥಿಕವಾಗಿ ಸಮರ್ಥನೀಯವೇ ಎಂಬುದು ತಿಳಿಯುತ್ತದೆ ಎಂಬ ಸಲಹೆಯನ್ನು ಮಾಡಿದರು. ಆದರೆ ಹೀಗೆ ಮಾಡುವಲ್ಲಿ, ಪಾಕಿಸ್ತಾನವು ಹತ್ತು ವರ್ಷಗಳ ಕೊನೆಯಲ್ಲಿ ಹಿಂದೂಸ್ಥಾನದೊಡನೆ ಐಕ್ಯವಾಗುವ ಬಯಕೆಯನ್ನು ವ್ಯಕ್ತಪಡಿಸಿದರೆ, ಆಗ ಅದು ಕೊಡುಕೊಳ್ಳುವ ವ್ಯವಹಾರದಲ್ಲಿ ಬಹಳ ದುರ್ಬಲ ಸ್ಥಾನದಲ್ಲಿ ಇರುತ್ತದೆ ಮತ್ತು ಅದೇ ಸಮಯದಲ್ಲಿ ಹಿಂದೂಸ್ಥಾನದ ಕೈ ಮೇಲಾಗಿರುತ್ತದೆ ಎಂಬುದನ್ನು ಅವರು ಒಪ್ಪಿಕೊಂಡರು. ಈ ಹತ್ತು ವರ್ಷಗಳ ಅವಧಿಯಲ್ಲಿ, ಒಂದು ಸಾಮಾನ್ಯ ಪರಿಷತ್ತನ್ನು ಸ್ಥಾಪಿಸಿಕೊಳ್ಳಬಹುದು, ಆದರೆ, ಅದು ಕೇವಲ ಸಲಹಾ ಸಮಿತಿಯಂತೆ ವರ್ತಿಸಬಹುದೇ ಹೊರತು, ಅದಕ್ಕೆ ಕಾರ್ಯಾಂಗದ ಯಾವುದೇ ಅಧಿಕಾರವೂ ಇರಬಾರದು. ಅವರಿಗಿರುವ ಈಗಿನ ಭಾವನೆಯ ಒತ್ತಡದಲ್ಲಿ ಮುಸ್ಲಿಮರು ಒಂದು ಅಖಿಲ ಭಾರತ ಕೇಂದ್ರ ಸರಕಾರದ ಸ್ಥಾಪನೆಗೆ ಒಪ್ಪಿಕೊಳ್ಳುವ ಹಾಗೆ ಮಾಡಿದರೆ, ಆ ಸರಕಾರವು ಎಷ್ಟು ದುರ್ಬಲವಾಗಿರುತ್ತದೆಯೆಂದರೆ, ಅದು ಎಲ್ಲಾ ರೀತಿಯಲ್ಲಿಯೂ ನಿಷ್ಪ್ರಯೋಜಕವಾಗಿರುತ್ತದೆ. ಮುಸ್ಲಿಮರ ಸುತ್ತ ಅನೇಕ ವಿಭಜಕ ಪ್ರವೃತ್ತಿಯ ಶಕ್ತಿಗಳು ಕೆಲಸಮಾಡುತ್ತಿವೆ. ಪ್ರಬಲವಾದ ಕೇಂದ್ರ ಸರಕಾರವು ಮಾತ್ರ ದೇಶದ ಏಕತೆಯನ್ನು ಕಾಪಾಡಲು ಶಕ್ತವಾಗುತ್ತದೆ.

ಸಂವಿಧಾನ ಸಭೆಯಲ್ಲಿ ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯದ ರೀತಿಯ ಬಗೆಗೆ ಅವರನ್ನು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಅವರು ತಮಗೆ ಸಂವಿಧಾನ ಸಭೆಯ ಅಗತ್ಯವೇ ಇಲ್ಲವೆಂದು ಹೇಳಿದರು. ಅದರಲ್ಲಿ ಸವರ್ಣೀಯ ಹಿಂದೂಗಳೇ ಪ್ರಾಬಲ್ಯವನ್ನು ಹೊಂದಿರುತ್ತಾರೆ. ಆ ಸಭೆಯಲ್ಲಿನ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳ ಸಂಖ್ಯೆ ಎಷ್ಟು ಕಡಿಮೆ ಇರುತ್ತದೆ ಎಂದರೆ, ಮೂರನೇ ಎರಡು ಭಾಗದಷ್ಟು ಅಥವಾ ಮುಕ್ಕಾಲು ಭಾಗದ ಬಹುಮತ ಬೇಕಾಗಿರುವಂತಹ ಸನ್ನಿವೇಶಗಳಲ್ಲಿಯೂ, ಅವರ ಮತಗಳಿಗೆ ಮಹತ್ವವೇ ಇರುವುದಿಲ್ಲ. ಪರಿಶಿಷ್ಟ ಜಾತಿಗಳವರಿಗೆ ಮಹಾಪ್ರಭುಗಳ ಸರಕಾರವು ನೀಡಿದ್ದ ಸಂರಕ್ಷಣಾ ಆಶ್ವಾಸನೆಗಳೆಲ್ಲವೂ ನಿಷ್ಪ್ರಯೋಜಕವಾಗುತ್ತವೆ. ಅವರು ತಮ್ಮ ಸಮುದಾಯದ ಹಿತಾಸಕ್ತಿಗಳ ವಿರುದ್ಧವೇ ಮತನೀಡುವಂತೆ ಮಾಡಲು ಅವರಿಗೆ ಆಮಿಷಗಳನ್ನೊಡ್ಡುವಂತಹ ಅಗಾಧವಾದ ಭ್ರಷ್ಟಾಚಾರವು ಅಲ್ಲಿರುತ್ತದೆ.

ಸಂವಿಧಾನ ಸಭೆಗೆಂದು ರೂಪಿಸಿರುವ ಕರ್ತವ್ಯಗಳನ್ನು ಎರಡು ವಿಭಾಗವನ್ನಾಗಿ ಮಾಡಬೇಕು ಎಂಬುದು ಅವರ ಸಲಹೆಯಾಗಿತ್ತು. ಅವೆಂದರೆ, (ಅ) ಯೋಗ್ಯವಾಗಿ ಕರೆಯಬಹುದಾದ ಸಂವಿಧಾನದ ಪ್ರಶ್ನೆಗಳು, ಉದಾ. ಶಾಸಕಾಂಗ ಮತ್ತು ಕಾರ್ಯಾಂಗಗಳ ಸಂಬಂಧ, ಅವುಗಳ ಸಂಯೋಜನೆ ಮತ್ತು ಕಾರ್ಯಚಟುವಟಿಕೆಗಳು; ಈ ವಿಷಯಗಳು ಭಾವನಾತ್ಮಕವಾಗದೆ ಇರುವುದರಿಂದ ಅವು ಅತಿ ವಿವಾದಾತ್ಮಕವಾಗಿರುವುದಿಲ್ಲ. ಇವುಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು ರಾಜ್ಯದ ಶಾಸನಸಭೆಗಳು ಕಳುಹಿಸುವ ಪ್ರತಿನಿಧಿಗಳ ಅಳವಿಗೆ ಮೀರಿರುವುದರಿಂದ, ಆ ಕೆಲಸಕ್ಕೆ ತಜ್ಞರೇ ಬೇಕಾಗುತ್ತದೆ.

ಎರಡನೆಯದು (ಆ) ಕೋಮುಗಳಿಗೆ ಸಂಬಂಧಿಸಿದ ಪ್ರಶ್ನೆಗಳು.

ಮೇಲಿನ (ಅ)ಗೆ ಸಂಬಂಧಿಸಿದ ಪ್ರಶ್ನೆಗಳನ್ನು ಬ್ರಿಟನ್ ಅಥವಾ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನ ತಜ್ಞ ವಕೀಲರೊಬ್ಬರು ಅಧ್ಯಕ್ಷರಾಗಿರುವ ಆಯೋಗದ ಪರ್ಯಾಲೋಚನೆಗೆ ಒಪ್ಪಿಸಬೇಕು. ಆ ಆಯೋಗದ ಇತರ ಸದಸ್ಯರಾಗಿ ಇಬ್ಬರು ಭಾರತದ ಮೇಧಾವಿಗಳು, ಹಿಂದೂ ಮತ್ತು ಮುಸ್ಲಿಂ ಸಮುದಾಯದಿಂದ ತಲಾ ಒಬ್ಬರಂತೆ ಇಬ್ಬರು ಸದಸ್ಯರು ಇರಬೇಕು. ಪರ್ಯಾಲೋಚನೆಯ ವಿಷಯವು ೧೯೩೫ರ ಭಾರತ ಸರಕಾರದ ಅಧಿನಿಯಮದ ಪ್ರಕಾರವಿರಬೇಕು ಮತ್ತು ಈ ಅಧಿನಿಯಮದಲ್ಲಿ ತರಬೇಕಾದ

ಬದಲಾವಣೆಗಳನ್ನು ಆಯೋಗವು ಶಿಫಾರಸು ಮಾಡಬೇಕು.

(ಆ)ಗೆ ಸಂಬಂಧಿಸಿದ ವಿಷಯಗಳನ್ನು ವಿವಿಧ ಕೋಮುಗಳ ಮುಖಂಡರ ಸಮ್ಮೇಳದ ಪರ್ಯಾಲೋಚನೆಗೆ ಒಪ್ಪಿಸಬೇಕು. ಈ ಮುಖಂಡರಿಂದ ಒಂದು ಪರಿಹಾರವನ್ನು ಕಂಡುಹಿಡಿಯುವುದು ಸಾಧ್ಯವಾಗದಿದ್ದರೆ, ಮಹಾಪ್ರಭುಗಳ ಸರಕಾರವೇ ನಿರ್ಣಯವನ್ನು ತೆಗೆದುಕೊಳ್ಳಬೇಕು. ಅಂತಹ ನಿರ್ಣಯವು ಸುಸಂಗತವಾಗಿದ್ದರೆ ಅದು ನಿಶ್ಚಯವಾಗಿಯೂ ಸ್ವೀಕೃತವಾಗುತ್ತದೆ.

ತದನಂತರ ಡಾ. ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಗಳವರ ಇಂದಿನ ಪರಿಸ್ಥಿತಿಯನ್ನು ವಿವರಿಸಿದರು. ಅವರ ಸಂಖ್ಯೆ ಸುಮಾರು ಅರವತ್ತು ದಶಲಕ್ಷವೆಂದು ಅಂದಾಜುಮಾಡಲಾಗಿದೆ. ಈ ಸಂಖ್ಯೆಯು ಬಹುಶಃ ಕರಾರುವಾಕ್ಕಾದುದಲ್ಲ. ಇದಕ್ಕೆ ಕಾರಣ, ಮೊದಲನೆಯದಾಗಿ, ರಾಜ್ಯಗಳ ಬಳಿಯಲ್ಲಿ ನಂಬಲರ್ಹವಾದ ಮಾಹಿತಿಗಳು ಇರಲಿಲ್ಲ. ಎರಡನೆಯದಾಗಿ, ಜನಗಣತಿಗೆ ರಾಜಕೀಯ ಲೇಪವಾಗಿದೆ. ಈ ಎಲ್ಲ ಪರಿಶಿಷ್ಟ ಜಾತಿಗಳ ಜನರೂ ಒಂದಲ್ಲ ಒಂದು ದೌರ್ಬಲ್ಯವನ್ನುಳ್ಳವರು. ಗ್ರಾಮಗಳಲ್ಲಿ, ಅವರು ಭೂರಹಿತರಾಗಿದ್ದಾರೆ ಮತ್ತು ಸವರ್ಣೀಯ ಹಿಂದೂಗಳ ಗುಲಾಮರಾಗಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಡಾ. ಅಂಬೇಡ್ಕರ್ ಅವರು ಒಂದು ಪ್ರಸಂಗವನ್ನು ಹೇಳಿದರು. ಕೆಲವು ಅಸ್ಪೃಶ್ಯರು ಗುಲಾಮಗಿರಿಯಿಂದ ತಪ್ಪಿಸಿಕೊಂಡು ಹೆಚ್ಚಿನ ವರಮಾನವನ್ನು ತಂದುಕೊಡುವ ಮಿಲಿಟರಿ ಅಧಿಕಾರಿಗಳ ಕೈಕೆಳಗಿನ ಕೆಲಸಗಳಿಗೆ ಸೇರಿಕೊಂಡರು. ಇದನ್ನು ತಿಳಿದ ಸವರ್ಣೀಯ ಹಿಂದೂಗಳು ಅವರನ್ನು ಹಿಂದಕ್ಕೆ ಕರೆತಂದು ಮತ್ತೆ ತಮ್ಮ ಸೇವೆಗೇ ಇಟ್ಟುಕೊಂಡರು. ಬ್ರಿಟಿಷ್ ಸರಕಾರವು ಇರುವಾಗಲೇ ಸವರ್ಣೀಯ ಹಿಂದೂಗಳ ಪ್ರಭಾವವು ಕೆಳಹಂತದ ಪೊಲೀಸ್ ಮತ್ತು ಕಂದಾಯ ಇಲಾಖೆಗಳ ಮೇಲೆ ಎಷ್ಟಿದೆಯೆಂದರೆ, ಈ ಬ್ರಿಟಿಷ್ ಸರಕಾರವು ಈಗಾಗಲೇ ಹಿಂದೂಗಳ ಸರಕಾರವಾಗಿದೆ. ಶ್ರೀ ಗಾಂಧಿಯವರ ಮೇಲೆ ಕಲ್ಲುತೂರಿದರೆಂಬ ಆಪಾದನೆಯ ಮೇಲೆ ಈ ಸಮುದಾಯಗಳ ನೂರು ಬಾಲಕರನ್ನು ಬಂಧಿಸಿದುದಷ್ಟೇ ಅಲ್ಲದೆ, ಈ ಅವಕಾಶವನ್ನು ಉಪಯೋಗಿಸಿಕೊಂಡ ಪೊಲಿಸರು ನಗರದಲ್ಲಿನ ಪರಿಶಿಷ್ಟಜಾತಿಗಳವರ ವಾಸಸ್ಥಾನಗಳಿಗೆ ಸಾಕಷ್ಟು ಹಾನಿಯನ್ನುಂಟುಮಾಡಿದರು.

ಇತರ ಸಮುದಾಯಗಳವರಿಗೆ ನೀಡಿರುವ ಹಾಗೆ, ಪರಿಶಿಷ್ಟ ಜಾತಿಗಳವರಿಗೂ ಪ್ರತ್ಯೇಕ ಮತಕ್ಷೇತ್ರಗಳನ್ನು ೧೯೩೨ರಲ್ಲಿ ಮಂಜೂರುಮಾಡಿದ್ದರೂ, ಪೂನಾ ಒಪ್ಪಂದವು ಈ ಮತಕ್ಷೇತ್ರಗಳನ್ನು ಅವರ ಪಾಲಿಗೆ ಇಲ್ಲವಾಗಿಸಿತು. ಇದರ ಬದಲಿಗೆ ಎರಡು ಚುನಾವಣೆಗಳ ವ್ಯವಸ್ಥೆಯನ್ನು ಅವರು ಪಡೆದರು. ಇದರಿಂದಾದ ಪರಿಣಾಮವೆಂದರೆ, ಎರಡನೆಯ ಚುನಾವಣೆಯಲ್ಲಿ ಎಲ್ಲಾ ಹಿಂದೂಗಳೂ ಮತಚಲಾಯಿಸಿ ಮೊದಲು ನಡೆಸಿದ್ದ, ಪರಿಶಿಷ್ಟ ಜನಾಂಗದವರು ಮಾತ್ರ ಮತದಾರರಾಗಿದ್ದಂತಹ, ಚುನಾವಣೆಯನ್ನು ನಿಷ್ಪ್ರಯೋಜಕಗೊಳಿಸಿದರು. ಡಾ. ಅಂಬೇಡ್ಕರ್ ಅವರು ಕಾರ್ಯಕಾರಿ ಸಮಿತಿಯ ತನ್ನ ಏಪ್ರಿಲ್ ೨ರ ಗೊತ್ತುವಳಿಗೆ ಪರಿಶಿಷ್ಟವಾಗಿ ನೀಡಿದ್ದ ಅಂಕಿಅಂಶಗಳನ್ನು ಉದ್ಧರಿಸಿದರು. ಅದರ ಪ್ರಕಾರ ಮೊದಮೊದಲು ಪ್ರಾಥಮಿಕ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳ ಸ್ಪರ್ಧಿಗಳು ಕಾಂಗ್ರೆಸ್ ಸ್ಪರ್ಧಿಗಳಿಗಿಂತ ಹೆಚ್ಚಿನ ಮತವನ್ನು ಪಡೆದರೂ, ನಂತರ ಅಂತಿಮ ಚುನಾವಣೆಗಳಲ್ಲಿ ಸೋಲನ್ನು ಅನುಭವಿಸಿದರು. ಅಲ್ಲದೆ, ಪರಿಶಿಷ್ಟ ಜಾತಿಗಳ ಮತದಾರರ ಸಂಖ್ಯೆ ಇತರ ಮತದಾರರ ಸಂಖ್ಯೆಗೆ ಹೋಲಿಸಿದಾಗ ಪ್ರಮಾಣದಲ್ಲಿ ಎಷ್ಟು ಕಡಿಮೆಯದಾಗಿತ್ತು ಎನ್ನುವುದನ್ನೂ ಅವರು ವಿವರಿಸಿದರು. ಇಷ್ಟಿದ್ದರೂ, ಕಾಂಗ್ರೆಸ್ ಪಕ್ಷದವರು ತಮ್ಮ ವಿಜಯವನ್ನು ಸಾಧಿಸಿಕೊಳ್ಳಲು ಲೂಟಿ ಮತ್ತು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ್ದರು. ಡಾ. ಅಂಬೇಡ್ಕರ್ ಅವರು ಕಾಂಗ್ರೆಸ್‌ನವರು ಇಂತಹ ಪ್ರಕರಣಗಳಲ್ಲಿ ತೊಡಗಿದ್ದುದನ್ನು ಸಾಬೀತುಪಡಿಸಲು ಸಾಕಷ್ಟು ಸಂಖ್ಯೆಯ ಛಾಯಾಚಿತ್ರಗಳನ್ನು ಪ್ರದರ್ಶಿಸಿದರು.

ಕೇಂದ್ರ ಶಾಸನ ಸಭೆಯು ೧೯೧೯ರಿಂದ ಅಸ್ತಿತ್ವದಲ್ಲಿ ಇದೆ. ಆದರೂ ಪರಿಶಿಷ್ಟ ಜಾತಿಗಳಿಗೆ

ಸಹಾಯಮಾಡುವ ಉದ್ದೇಶದಿಂದ ಇದುವರೆಗೂ ಯಾವ ಪ್ರಶ್ನೆಯನ್ನೂ ಈ ಬಗ್ಗೆ ಕೇಳಿಲ್ಲ, ಒಂದು ಗೊತ್ತುವಳಿಯನ್ನೂ ಅಂಗೀಕರಿಸಿಲ್ಲ ಅಥವಾ ಇನ್ನಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ.

ಭಾರತೀಯ ಸಂಸ್ಥಾನಗಳಲ್ಲಿ ಪರಿಶಿಷ್ಟರ ಪರಿಸ್ಥಿತಿ ಇನ್ನೂ ಕೆಟ್ಟದ್ದಾಗಿದೆ. ಕೆಲವು ಪ್ರಕಾರದ ಆಹಾರಗಳನ್ನು ಸೇವಿಸಲು ಅವರಿಗೆ ಅನುಮತಿಯಿಲ್ಲ. ಕೆಲವು ರಾಜ್ಯಗಳಲ್ಲಿ ಸ್ಥಾಪಿತವಾಗಿರುವ ಪ್ರಾತಿನಿಧಿಕ ಸಂಸ್ಥೆಗಳಲ್ಲಿ, ಮುಸ್ಲಿಮರನ್ನು ಹೊರತು ಪಡಿಸಿ, ಇತರ ಸಮುದಾಯದವರಿಗೆ ಪ್ರಾತಿನಿಧ್ಯದ ಅವಕಾಶವನ್ನು ನೀಡಿಲ್ಲ. ಇಂತಹ ಸಾಂವಿಧಾನಿಕ ಪ್ರಯೋಗಗಳಲ್ಲಿ ರಾಜಕೀಯ ವಿಭಾಗವು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕಿತ್ತು ಮತ್ತು ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವತ್ತ ಗಮನವನ್ನು ಹರಿಸಬೇಕಿತ್ತು. ಅದರ ಸದಸ್ಯರು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಸಮಾವೇಶದ ಅಧ್ಯಕ್ಷರನ್ನು ಭೇಟಿಮಾಡಬೇಕಿತ್ತು.

ಈಸ್ಟ್ ಇಂಡಿಯಾ ಕಂಪನಿಯ ಸೈನ್ಯಕ್ಕೆ ಮೊಟ್ಟಮೊದಲ ನೇಮಕಾತಿಮಾಡಿಕೊಂಡದ್ದು ಪರಿಶಿಷ್ಟ ಜಾತಿಯ ಜನಗಳನ್ನೇ, ಮತ್ತು ಅವರ ಸಹಾಯದಿಂದಲೇ ಬ್ರಿಟಿಷರು ಭಾರತವನ್ನು ತಮ್ಮ ಅಧೀನಕ್ಕೆ ತಂದುಕೊಳ್ಳುವುದು ಸಾಧ್ಯವಾಯಿತು. ಮೊದಲಿನಿಂದಲೂ ಅವರು ಬ್ರಿಟಿಷರ ಮಿತ್ರರಾಗಿದ್ದರು. ೧೮೯೨ರಿಂದ ಈಚೆಗೆ ಮುಸ್ಲಿಮರಿಗೆ ಅಧಿಕ ಸಹಾಯವನ್ನು ಮಾಡಿದರೂ, ಬ್ರಿಟಿಷರು ಪರಿಶಿಷ್ಟ ಜಾತಿಗಳವರಿಗೆ ಪ್ರಜ್ಞಾಪೂರ್ವಕವಾಗಿ ಯಾವ ವಿಧವಾದ ಸಹಾಯವನ್ನೂ ಮಾಡಲಿಲ್ಲ.

ಭಾರತಕ್ಕೆ ಸ್ವಾತಂತ್ರ್ಯವು ದೊರಕಿದ್ದೇ ಆದರೆ ಅದು ಭಾರತಕ್ಕೆ ಮಹಾ ವಿಪತ್ತನ್ನು ತರುತ್ತದೆ ಎಂದು ಡಾ. ಅಂಬೇಡ್ಕರ್ ಅವರು ಯೋಚಿಸಿದ್ದರು. ಭಾರತವನ್ನು ಬಿಟ್ಟುಹೋಗುವುದಕ್ಕೆ ಮೊದಲು, ಬ್ರಿಟಿಷರು ಹೊಸ ಸಂವಿಧಾನವು ಪರಿಶಿಷ್ಟ ಜಾತಿಗಳವರಿಗೆ ಬದುಕುವ ಮೂಲಭೂತ ಮಾನವ ಹಕ್ಕನ್ನು, ಸ್ವಾತಂತ್ರ್ಯ ಮತ್ತು ತಮ್ಮ ಸುಖ ಸಂತೋಷಗಳನ್ನು ಪಡೆಯುವಂತಹ ಜೀವನಮಾರ್ಗಗಳನ್ನು ಅನುಸರಿಸುವ ಅವಕಾಶಗಳನ್ನು ನೀಡುತ್ತದೆ ಎನ್ನುವುದನ್ನು ಖಾತರಿಪಡಿಸುವಂತೆ ಮತ್ತು ಪ್ರತ್ಯೇಕ ಮತಕ್ಷೇತ್ರಗಳನ್ನು ಹಾಗೂ ಇತರ ರಕ್ಷಣಾ ವ್ಯವಸ್ಥೆಗಳನ್ನು ಸಂವಿಧಾನದಲ್ಲಿ ಅಳವಡಿಸಬೇಕೆಂದೂ ಒತ್ತಾಯಿಸಿದರು. ತಮ್ಮ ಹಿಂಬಾಲಕರಿಗೆ ಉಂಟಾಗಿರುವ ಭ್ರಮನಿರಸನವು ಅವರನ್ನು ಭಯೋತ್ಪಾದಕ ಕೃತ್ಯಗಳತ್ತ ಹಾಗೂ ಕಮ್ಯೂನಿಸಂನತ್ತ ದೂಡುತ್ತಿದೆ ಎಂದೂ ಅವರು ಹೇಳಿದರು. ಸಾಂವಿಧಾನಿಕ ವಿಧಾನಗಳ ಪರಿಣಾಮಕಾರಿತ್ವವನ್ನು ಪರೀಕ್ಷಿಸಲು ತಾವು ನಡೆಸುತ್ತಿರುವ ಪ್ರಯತ್ನಗಳನ್ನು ಅವರು ವಿಶ್ಲೇಷಿಸುತ್ತಿದ್ದಾರೆ ಎಂದೂ ಅಂಬೇಡ್ಕರ್ ಅವರು ನುಡಿದರು.

ಇಲ್ಲಿಯವರೆಗೆ ಭಾರತದ ರಾಜಕೀಯದಲ್ಲಿ ಎರಡು ವಿಷಯಗಳು ಮಾತ್ರ ಪ್ರಾಮುಖ್ಯವನ್ನು ಪಡೆದಿದ್ದವು – ಬ್ರಿಟಿಷ್ ಆಡಳಿತದಿಂದ ಸ್ವಾತಂತ್ರ್ಯವನ್ನು ಪಡೆಯುವ ಸಮಸ್ಯೆ ಮತ್ತು ಹಿಂದೂ–ಮುಸ್ಲಿಂ ಸಮಸ್ಯೆ, ಈ ಸಮಸ್ಯೆಗಳು ಪಕ್ಷಗಳವರ ಗಮನದಿಂದ ದೂರಸರಿದ ಮೇಲೆ ಬಹುಶಃ ಆರ್ಥಿಕ ವಿಷಯಗಳತ್ತ ಅವು ತಮ್ಮ ಗಮನವನ್ನು ಕೇಂದ್ರೀಕರಿಸುತ್ತವೆ ಎಂದು ಲಾರ್ಡ್ ಪೆಥಿಕ್ ಲಾರೆನ್ಸ್ ಅವರು ಹೇಳಿದರು. ಇನ್ನೇನು ಅಧಿಕಾರವನ್ನು ಹಸ್ತಾಂತರ ಮಾಡಿ ದೇಶವನ್ನು ತೊರೆದು ಹೋಗಲು ಸಿದ್ಧತೆಯನ್ನು ನಡೆಸುತ್ತಿರುವ ಬ್ರಿಟಿಷರಿಗಿಂತ ವಾಮಪಕ್ಷಗಳನ್ನು ಅವಲಂಬಿಸುವುದರಿಂದ ಪರಿಶಿಷ್ಟ ಜಾತಿಗಳ ಜನರು ತಮ್ಮ ಹಕ್ಕುಗಳನ್ನು ಪಡೆಯುವ ಹಾಗೂ ತಮ್ಮ ಪರಿಸ್ಥಿತಿಗಳನ್ನು ಸುಧಾರಿಸಿಕೊಳ್ಳುವ ಅವಕಾಶವನ್ನು ಖಂಡಿತವಾಗಿಯೂ ಹೊಂದಬಹುದು. ಇದಕ್ಕೆ ಉತ್ತರವಾಗಿ ಡಾ. ಅಂಬೇಡ್ಕರ್ ಅವರು ಎಲ್ಲಿಯವರೆಗೆ ಜಂಟಿ ಮತಕ್ಷೇತ್ರಗಳು ಇರುತ್ತವೆಯೋ ಅಲ್ಲಿಯವರೆಗೆ ಪರಿಶಿಷ್ಟ ಜಾತಿಗಳ ಮತದಾರರು ಅತಿ ಕಡಿಮೆ ಸಂಖ್ಯೆಯಲ್ಲಿರುವುದರಿಂದ ಅವರ ಹಿತಾಸಕ್ತಿಗಳನ್ನು ಹಿಂದೂ ಸ್ಪರ್ಧಿಗಳು ಸಂಪೂರ್ಣವಾಗಿ ಕಡೆಗಣಿಸುತ್ತಾರೆ ಎಂದು ಹೇಳಿದರು. ಸವರ್ಣೀಯ ಹಿಂದೂಗಳು ಪರಿಶಿಷ್ಟ ಜಾತಿಗಳ ಸ್ಪರ್ಧಿಗಳಿಗೆ ಎಂದೂ ತಮ್ಮ ಬೆಂಬಲವನ್ನು ನೀಡುವುದಿಲ್ಲ.

ಅಂತಿಮ ಚುನಾವಣೆಗಳಲ್ಲಿ ಹಿಂದೂಗಳು, ಈಗಿರುವ ಪರಿಸ್ಥಿತಿಯಲ್ಲಿ, ಅಸ್ಪೃಶ್ಯರಿಗೆ ತಮ್ಮ ಮತವನ್ನು ಹಾಕುತ್ತಾರೆ. ಇದರ ಹಿಂದಿರುವ ಕಾರಣ ಅವರು ತಾವು ನಿಲ್ಲಿಸಿದ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳನ್ನು ಬೆಂಬಲಿಸುತ್ತಾರೆ ಎಂಬುದಲ್ಲ, ಬದಲಿಗೆ, ಒಕ್ಕೂಟವು ನಿಲ್ಲಿಸಿರುವ ಅಭ್ಯರ್ಥಿಗಳನ್ನು ಸೋಲಿಸುವುದು. ಪ್ರತ್ಯೇಕ ಮತಕ್ಷೇತ್ರಗಳಿಲ್ಲದೆ ಇದ್ದರೆ ಪರಿಶಿಷ್ಟ ಜಾತಿಗಳವರು ತಮ್ಮ ನಿಜವಾದ ಪ್ರತಿನಿಧಿಗಳನ್ನು ಕಳುಹಿಸುವುದು ಸಾಧ್ಯವೇ ಇಲ್ಲದಿರುವುದರಿಂದ, ಈ ವ್ಯವಸ್ಥೆ ಅನಿವಾರ್ಯವಾಗಿದೆ.

---

ಅಧಿಕಾರದ ಹಸ್ತಾಂತರ ಸಂಪುಟ ೭, ಸಂಖ್ಯೆ ೫೮, ಪುಟಗಳು ೧೪೪–೧೪೭.

# ೫. ಅಸ್ಪೃಶ್ಯರಿಗೇ ಪ್ರತ್ಯೇಕವಾದ ನಿವಾಸಸ್ಥಾನಗಳು

ಡಾ. ಅಂಬೇಡ್ಕರ್ ಅವರು ಕ್ಯಾಬಿನೆಟ್ ಕಮೀಷನ್ನಿಗೆ ಒಂದು ಜ್ಞಾಪನಾ ಪತ್ರವನ್ನು ಸಲ್ಲಿಸಿ, ಅಸ್ಪೃಶ್ಯರ ವಾಸಕ್ಕಾಗಿ ಪ್ರತ್ಯೇಕ ಗ್ರಾಮಗಳನ್ನು ವ್ಯವಸ್ಥೆಗೊಳಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಈ ವಿಷಯದಲ್ಲಿನ ತಮ್ಮ ನಿಲವನ್ನು ಅವರು ಪತ್ರಿಕೆಯ ಸಂದರ್ಶನವೊಂದರಲ್ಲಿ ವಿಶದಗೊಳಿಸಿದರು – ಸಂಪಾದಕರು.

"ಸರಕಾರದ ಕಾರ್ಮಿಕ ಸದಸ್ಯ ಡಾ. ಅಂಬೇಡ್ಕರ್ ಅವರು ಒಂದು ಸಂದರ್ಶನದಲ್ಲಿ, ಪರಿಶಿಷ್ಟ ಜಾತಿಗಳವರಿಗಾಗಿ ಪ್ರತ್ಯೇಕ ನಿವಾಸಸ್ಥಾನಗಳನ್ನು ಕೇಳುತ್ತಿರುವುದು ಯಾವ ಪಕ್ಷದ ಹಕ್ಕನ್ನೂ ಅತಿಕ್ರಮಿಸಿದ ಹಾಗಾಗುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ದೇಶದಲ್ಲಿ ಯಾರ ಅನುಭೋಗದಲ್ಲಿಯೂ ಇಲ್ಲದೆ ಇರುವ ಕೃಷಿಯೋಗ್ಯ ಜಮೀನು ಸಾಕಷ್ಟು ಇದೆ. ಈ ಪ್ರದೇಶಗಳನ್ನು ಪರಿಶಿಷ್ಟ ಜಾತಿಗಳವರ ನಿವಾಸಸ್ಥಾನಗಳಿಗಾಗಿ ಮೀಸಲಿಡಬಹುದು. ಈ ಜಮೀನಿನ ವಿತರಣೆಗಾಗಿ ಸರಕಾರವು ಒಂದು ಆಯೋಗವನ್ನು ರಚಿಸಬಹುದು ಎಂದು ಡಾ. ಅಂಬೇಡ್ಕರ್ ಅವರು ನುಡಿದರು.

ಪರಿಶಿಷ್ಟ ಜಾತಿಯ ಜನಗಳನ್ನು ಅತ್ಯಂತ ಕೊಳಕು ಕೆಲಸಗಳನ್ನು ಮಾಡಲು ಉಪಯೋಗಿಸುತ್ತಿದ್ದ ಹಾಗೂ ಇತರೆಡೆಗಳಲ್ಲಿ ಅವರನ್ನು ಅತ್ಯಂತ ಅಗ್ಗದ ಕೂಲಿಕಾರರನ್ನಾಗಿ ಬಳಸಿಕೊಳ್ಳುತ್ತಿದ್ದ ಜನಗಳು ಮಾತ್ರ ಈ ಯೋಜನೆಗೆ ಆಕ್ಷೇಪಣೆಯನ್ನು ಎತ್ತಬಹುದು. ಅಂತಹವರು ಗುಲಾಮಗಿರಿಯನ್ನು ಮುಂದುವರೆಸಿಕೊಂಡು ಹೋಗುವುದನ್ನೇ ಅನುಮೋದಿಸುತ್ತಾರೆ. ಬಾಂಬೆ ಮತ್ತು ಮದರಾಸಿನಂತಹ ಸಂಸ್ಥಾನಗಳಲ್ಲಿ ಇರುವ ಪರಿಶಿಷ್ಟ ಜಾತಿಗಳವರ ಅಸಹನೀಯ ಪರಿಸ್ಥಿತಿಗಳಿಂದಾಗಿ ಅವರಿಗೆ ಪ್ರತ್ಯೇಕ ಗ್ರಾಮಗಳನ್ನು ನಿವಾಸಸ್ಥಾನಗಳನ್ನಾಗಿ ನಿರ್ಮಿಸುವುದು ಅಗತ್ಯವಾಗಿದೆ.

ಗ್ರಾಮಗಳು ಆರ್ಥಿಕ ಘಟಕವಾಗದೆ ಸಾಮಾಜಿಕ ಘಟಕಗಳಾಗಿರುವುದರಿಂದ, ಪ್ರತ್ಯೇಕ ನಿವಾಸಸ್ಥಾನಗಳ ವ್ಯವಸ್ಥೆಯಿಂದಾಗಿ ಈ ಹೊಸ ಗ್ರಾಮಗಳ ಆರ್ಥಿಕ ಜೀವನದ ಕತ್ತುಹಿಸುಕುವಂತಹ ಪರಿಸ್ಥಿತಿ ಏರ್ಪಡುತ್ತದೆ ಎಂಬ ಭಯಕ್ಕೆ ಕಾರಣವಿರುವುದಿಲ್ಲ. ಇಲ್ಲಿನ ಉತ್ಪನ್ನಗಳಿಗೆ ಎಲ್ಲಿ ಮಾರಕಟ್ಟೆಯಿದೆಯೋ ಅಲ್ಲಿಗೆ ಅವುಗಳನ್ನು ಕಳುಹಿಸಬಹುದು.

ತಮ್ಮ ಈ ಯೋಜನೆಯು ಪಾಕಿಸ್ತಾನದ ಪ್ರದೇಶಗಳಿಗೂ ಅನ್ವಯವಾಗುತ್ತದೆಯೇ ಎಂಬ ಪ್ರಶ್ನೆಗೆ ಡಾ. ಅಂಬೇಡ್ಕರ್ ಅವರು ಹೌದು ಎಂಬ ಉತ್ತರವನ್ನು ಇತ್ತರು. ಸದ್ಯ, ಪಾಕಿಸ್ತಾನದ ವಿಷಯವಾಗಿ ಯಾವುದೂ ಮೂರ್ತಸ್ವರೂಪವನ್ನು ಪಡೆದಿಲ್ಲ. ಹಾಗಾಗಿ ಸಂಬಂಧಿಸಿದ ಎಲ್ಲಾ ವಿಷಯಗಳೂ ನಿಶ್ಚಿತ ರೂಪವನ್ನು ಪಡೆದ ನಂತರ ಮಾತ್ರವೇ ಹೊಸ ಗ್ರಾಮಗಳನ್ನು ಸ್ಥಾಪಿಸುವ ವಿಷಯವು ಉದ್ಭವವಾಗುತ್ತದೆ ಎಂದರು.

ಪರಿಶಿಷ್ಟ ಜಾತಿಗಳವರ ಸ್ಥಾನವು, ದಕ್ಷಿಣ ಆಫ್ರಿಕಾದ ಬಂಟು ಮತ್ತು ಇತರ ಪಂಗಡಗಳವರ ಸ್ಥಾನಗಳಿಗೆ ಹೋಲಿಸಬಹುದಾಗಿದೆ. ದಕ್ಷಿಣ ಆಫ್ರಿಕಾದ ಸಂವಿಧಾನದಲ್ಲಿ ಬಂಟುಗಳಿಗಾಗಿ ಒದಗಿಸಿರುವಂತಹ ಸಾಂವಿಧಾನಿಕ ರಕ್ಷಣಾ ವಿಧಾನಗಳನ್ನು ಭಾರತದ ಹೊಸ ಸಂವಿಧಾನದಲ್ಲಿ ಅಳವಡಿಸಲಾಗದು ಎನ್ನುವುದಕ್ಕೆ ಯಾವ ಕಾರಣಗಳೂ ಇಲ್ಲ ಎಂದು ಅವರು ಹೇಳಿದರು.

...ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ

---

ಜೈ ಭೀಮ್, ೧೯೪೬ರ ಮೇ ೭.

# ೬. ಕ್ಯಾಬಿನೆಟ್ ಮಿಷನ್ನಿನ ಶಿಫಾರಸುಗಳ ವಿರುದ್ಧದ ಪ್ರತಿಭಟನಾ ಪತ್ರ

**ಭೀಮರಾವ್ ಆರ್. ಅಂಬೇಡ್ಕರ್**

ಎಂ.ಎ., ಪಿಎಚ್.ಡಿ. ಡಿ.ಎಸ್‌ಸಿ., ಬ್ಯಾರಿಸ್ಟರ್ ಅಟ್ ಲಾ, ೨೨, ಪೃಥ್ವಿರಾಜ್ ರಸ್ತೆ, ನವದೆಹಲಿ,
ಸದಸ್ಯರು, ಗವರ್ನರ್ ಜನರಲ್ಲರ ಕಾರ್ಯಾಂಗ ಸಮಿತಿ ದಿನಾಂಕ: ೧೯೪೬ರ ಮೇ, ೩

ಪ್ರಿಯ ಲಾರ್ಡ್ ವೇವೆಲ್,

ಕ್ಯಾಬಿನೆಟ್ ಮಿಷನ್ ತಮ್ಮ ಸಿಮ್ಲಾ ಸಮ್ಮೇಳನಕ್ಕೆ ಪರಿಶಿಷ್ಟ ಜಾತಿಗಳ ಪ್ರತಿನಿಧಿಯನ್ನು ಆಹ್ವಾನಿಸದಿದ್ದ ತಪ್ಪು ಕ್ಯಾಬಿನೆಟ್ ಮಿಷನ್ ತಮ್ಮ ಸಾಂವಿಧಾನಿಕ ರಕ್ಷಣೆಗೆ ಯಾವ ವ್ಯವಸ್ಥೆಯನ್ನು ಮಾಡಲು ಉದ್ದೇಶಿಸಿದೆ ಎಂಬ ಆತಂಕ ಪರಿಶಿಷ್ಟ ಜಾತಿಗಳವರ ಮನಸ್ಸಿನಲ್ಲಿ ಮನೆಮಾಡುವಂತೆ ಮಾಡಿದೆ. ಸನ್ನಿವೇಶವು ಗಂಭೀರವಾಗಿರುವುದರಿಂದ, ಈ ಸಂಬಂಧ ಪರಿಶಿಷ್ಟ ಜಾತಿಗಳವರ ಅಭಿಪ್ರಾಯವೇನು ಎಂಬುದನ್ನು ತಮ್ಮ ಮನಸ್ಸಿಗೆ ತರಬೇಕೆಂದು ಬಯಸುತ್ತೇನೆ.

ಸಿಮ್ಲಾ ಸಮ್ಮೇಳನಕ್ಕೆ ಪರಿಶಿಷ್ಟ ಜಾತಿಗಳ ಪ್ರತಿನಿಧಿಯನ್ನು ಆಹ್ವಾನಮಾಡುವುದರಲ್ಲಿ ಆದ ಕರ್ತವ್ಯಚ್ಯುತಿಯು ಹಲವಾರು ಬಗೆಯ ವ್ಯಾಖ್ಯಾನಗಳಿಗೆ ಎಡೆಕೊಡಬಲ್ಲುದಾಗಿದೆ. ಮೇಲುನೋಟಕ್ಕೆ ಸರಿಯೆಂದು ನನಗೆ ತೋರುವ ಒಂದು ವ್ಯಾಖ್ಯಾನವೆಂದರೆ, ಇತರರ ನ್ಯಾಯಬದ್ಧ ಹಕ್ಕುಗಳನ್ನು ಆಕ್ರಮಣಮಾಡದಿರುವವರೆಗೆ ಪರಿಶಿಷ್ಟ ಜಾತಿಗಳವರ ಬೇಡಿಕೆಗಳು ಬೇರೆ ಪಕ್ಷಗಳವರ ಒಪ್ಪಿಗೆಯನ್ನು ಪಡೆಯಬೇಕಾದ ಆವಶ್ಯಕತೆಯಿರುವುದಿಲ್ಲ. ಇದು, ಕನಿಷ್ಠಪಕ್ಷ ಮೂರು ಬೇಡಿಕೆಗಳಿಗಾದರೂ ಅನ್ವಯವಾಗುತ್ತದೆ – (೧) ಪ್ರತ್ಯೇಕ ಮತಕ್ಷೇತ್ರಗಳು, (೨) ಕೇಂದ್ರ ಕಾರ್ಯಾಂಗದಲ್ಲಿ ಯಥೋಚಿತವಾದಷ್ಟು ಪ್ರಾತಿನಿಧ್ಯ, ಮತ್ತು (೩) ತಾತ್ಕಾಲಿಕ ಸರಕಾರದ ರಚನೆಗೆ ಮೊದಲು, ಹೊಸ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳವರ ರಕ್ಷಣೆಯ ಬಗ್ಗೆ ಅಳವಡಿಸಬೇಕಾದ ನಿಯಮಗಳ ವಿಷಯದಲ್ಲಿ ಒಂದು ಸಾಮಾನ್ಯ ತತ್ತ್ವಕ್ಕೆ ಬದ್ಧರಾಗಿರುತ್ತೇವೆಂಬ ಆಶ್ವಾಸನೆಯನ್ನು ಎಲ್ಲಾ ಪಕ್ಷಗಳವರಿಂದ ಪಡೆಯುವುದು.

ಪರಿಶಿಷ್ಟ ಜಾತಿಗಳವರ ಬೇಡಿಕೆಗಳಿಗೆ ಇತರ ಪಕ್ಷಗಳವರ ಅನುಮತಿಯ ಅಗತ್ಯವಿಲ್ಲವೆಂಬುದನ್ನು ೧೯೪೬ರ ಏಪ್ರಿಲ್ ೫ರಂದು ನಡೆದ ಸಂದರ್ಶನದಲ್ಲಿ ನಾನು ಮಿಷನ್ನಿಗೆ ಪ್ರಬಲವಾಗಿ ಮನವರಿಕೆಯಾಗುವಂತೆ ಮಾಡಿದ್ದೆ.

ಪಂಜಾಬ್, ವಾಯವ್ಯ ಗಡಿ ಪ್ರಾಂತಗಳು, ಸಿಂಧ್ ಮತ್ತು ಬಂಗಾಳದಲ್ಲಿ ಮುಸ್ಲಿಮರಂತಹ ಬಹುಸಂಖ್ಯಾತ ಪಕ್ಷಗಳವರು ತಗಾದೆ ಮಾಡುತ್ತಿರುವ ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಗೂ, ಪರಿಶಿಷ್ಟ ಜಾತಿಗಳಂತಹ ಅಲ್ಪಸಂಖ್ಯಾತ ಸಮುದಾಯದವರು ಪ್ರತ್ಯೇಕ ಮತಕ್ಷೇತ್ರಗಳಿಗಾಗಿ ಮಾಡುತ್ತಿರುವ ಬೇಡಿಕೆಗೂ ಇರುವ ನೆಲೆಗಟ್ಟುಗಳು ಬೇರೆಬೇರೆಯಾಗಿವೆ. ಬಹುಸಂಖ್ಯಾತರು ಪ್ರತ್ಯೇಕ ಮತಕ್ಷೇತ್ರಕ್ಕಾಗಿ ಮಾಡುವ ಬೇಡಿಕೆಗೆ ಅಲ್ಪಸಂಖ್ಯಾತರ ಒಪ್ಪಿಗೆಯು ಅಗತ್ಯವಾಗಿರುತ್ತದೆ. ಆದರೆ ಅಲ್ಪಸಂಖ್ಯಾತರ ಪ್ರತ್ಯೇಕ ಮತಕ್ಷೇತ್ರದ ಬೇಡಿಕೆಯು ಬಹುಸಂಖ್ಯಾತರ ಒಲವಿನ ಮೇಲೆ ಅವಲಂಬಿತವಾಗಿರಬೇಕಿಲ್ಲ. ಬಹುಸಂಖ್ಯಾತರಿಂದ ಅಲ್ಪಸಂಖ್ಯಾತರನ್ನು ರಕ್ಷಿಸಲು ಮತಕ್ಷೇತ್ರಗಳು ಮೂಲಭೂತ ಸಾಧನಗಳಾಗಿವೆ. ಅಲ್ಪಸಂಖ್ಯಾತರು ತಮ್ಮ

ಕ್ಷೇಮಕ್ಕಾಗಿ ಮಾಡಬೇಕಾದುದನ್ನು ಬಲ್ಲರು, ಆದ್ದರಿಂದ, ಪ್ರತ್ಯೇಕ ಮತಕ್ಷೇತ್ರಗಳು ಇರಬೇಕೆ ಅಥವಾ ಜಂಟಿಮತಕ್ಷೇತ್ರಗಳು ಇರಬೇಕೆ ಎಂಬುದರ ತೀರ್ಮಾನವನ್ನು ಅಲ್ಪಸಂಖ್ಯಾತರಿಗೇ ಬಿಟ್ಟುಬಿಡಬೇಕು. ಈ ವಿಷಯದಲ್ಲಿ ಬಹುಸಂಖ್ಯಾತರಿಗೆ ಯಾವ ಅಧಿಕಾರವೂ ಇರುವುದಿಲ್ಲ. ಅವರು ಅಲ್ಪಸಂಖ್ಯಾತರ ನಿರ್ಣಯವನ್ನು ಒಪ್ಪಿಕೊಳ್ಳಲೇಬೇಕು. ಇದರ ಪರಿಣಾಮವಾಗಿ, ಪರಿಶಿಷ್ಟ ಜಾತಿಗಳವರು ಪ್ರತ್ಯೇಕ ಮತಕ್ಷೇತ್ರಗಳನ್ನು ಹೊಂದಿರಬೇಕೇ ಅಥವಾ ಬೇಡವೇ ಎಂಬ ವಿಷಯದಲ್ಲಿ ತೀರ್ಮಾನಿಸಲು ಹಿಂದೂಗಳಿಗೆ ಯಾವುದೇ ಅಧಿಕಾರವೂ ಇರುವುದಿಲ್ಲ.

ಪರಿಶಿಷ್ಟ ಜಾತಿಗಳವರ ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಯು ಬೇರೆ ಯಾವ ಸಮುದಾಯಗಳವರ ಮೇಲೂ, ಹಿಂದೂಗಳ ಮೇಲೂ, ಪ್ರತಿಕೂಲ ಪರಿಣಾಮವನ್ನು ಬೀರುವುದಿಲ್ಲ. ಈ ಕಾರಣದಿಂದಲೇ ಬೇರೆ ಎಲ್ಲಾ ಸಮುದಾಯದವರೂ ಈ ಬೇಡಿಕೆಯನ್ನು ಒಪ್ಪಿಕೊಂಡಿದ್ದಾರೆ. ಪರಿಶಿಷ್ಟ ಜಾತಿಯವರೂ ಹಿಂದೂಗಳೇ ಎಂಬ ಹಿಂದೂಗಳ ವಾದವು ಕೇವಲ ಸಂಪ್ರದಾಯದಿಂದ ಬಂದಂತಹುದಾಗಿದ್ದು, ಪ್ರತ್ಯೇಕ ಮತಕ್ಷೇತ್ರವೆನ್ನುವುದು ಅಲ್ಪಸಂಖ್ಯಾತರ ಹಿತರಕ್ಷಣಾ ವಿಧಾನಗಳಲ್ಲಿ ಒಂದು ಎಂಬ ವಾಸ್ತವವನ್ನು ಈ ವಾದವು ಮರೆಯುತ್ತದೆ. ಇದಕ್ಕೆ ಪುರಾವೆಗಳೇನಾದರೂ ಬೇಕಿದ್ದರೆ, ಯೂರೋಪಿಯನ್ನರ, ಆಂಗ್ಲೋ ಇಂಡಿಯನ್ನರ ಮತ್ತು ಭಾರತೀಯ ಕ್ರಿಶ್ಚಿಯನ್ನರ ಪ್ರಕರಣಗಳನ್ನು ನೋಡಬೇಕು. ಇವರೆಲ್ಲರೂ ಮೂಲತಃ ಒಂದೇ ಧರ್ಮಕ್ಕೇ ಸೇರಿದವರಾಗಿದ್ದರೂ, ಇವರೆಲ್ಲರಿಗೂ ಪ್ರತ್ಯೇಕ ಮತಕ್ಷೇತ್ರಗಳು ಇವೆ.

ಜಂಟಿ ಮತಕ್ಷೇತ್ರಗಳು ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವೆಂಬುದನ್ನು ಒಂದು ಪ್ರಹಸನವನ್ನಾಗಿಸಿರುವುದನ್ನು ನೋಡಿದ ಮೇಲೆಯಾದರೂ ಈ ಅಂಶಗಳನ್ನು ಕ್ಯಾಬಿನೆಟ್ ಮಿಷನ್ ತನ್ನ ಗಮನಕ್ಕೆ ತಂದುಕೊಂಡರೆ, ತಮ್ಮ ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಗೆ ಹಿಂದೂಗಳ ಒಪ್ಪಿಗೆಯ ಆವಶ್ಯಕತೆಯಿರುವುದಿಲ್ಲ ಎಂಬ ಪರಿಶಿಷ್ಟ ಜಾತಿಗಳವರ ವಾದದಲ್ಲಿ ಯಾವ ಅಸಹಜತೆಯೂ ಇಲ್ಲವೆಂಬುದನ್ನು ಅದು ಕಾಣಬಹುದು.

ತಾತ್ಕಾಲಿಕ ಸರಕಾರದಲ್ಲಿ ತಮ್ಮ ಪ್ರಾತಿನಿಧ್ಯವು ಮುಸ್ಲಿಮರ ಪ್ರಾತಿನಿಧ್ಯದ ಅರ್ಧದಷ್ಟಿರಬೇಕೆಂಬ ಪರಿಶಿಷ್ಟಜಾತಿಗಳವರ ಎರಡನೆ ಬೇಡಿಕೆಯನ್ನು ಒಪ್ಪಲೂ ಸಹ ಹಿಂದೂಗಳ ಒಪ್ಪಿಗೆಯ ಅಗತ್ಯವಿರುವುದಿಲ್ಲ. ಪರಿಶಿಷ್ಟ ಜಾತಿಗಳವರ ಸಂಖ್ಯಾಬಲ, ಅವರು ಅನುಭವಿಸುತ್ತಿರುವ ಹೀನಾಯ ಬದುಕು, ಮತ್ತು ಇತರ ಸಮುದಾಯಗಳವರೊಡನೆ ಸರಿಸಮಾನವಾಗಿ ನಿಲ್ಲಬಲ್ಲಂತಹ ಸ್ಥಿತಿಯನ್ನು ಪಡೆಯಲು ಬೇಕಾದ ಕಾರ್ಯಸ್ವಾತಂತ್ರ್ಯ ಇವುಗಳ ಹಿನ್ನೆಲೆಯಲ್ಲಿ ಅವರಿಗೆ ನೀಡಬೇಕಾದ ಪ್ರಾತಿನಿಧ್ಯವನ್ನು ಕ್ಯಾಬಿನೆಟ್ ಮಿಷನ್ ನಿರ್ಧರಿಸಬೇಕು. ನಾನು ಇದೇ ವಿಷಯವನ್ನು ಸಿಮ್ಲಾ ಸಮ್ಮೇಳನದಲ್ಲಿಯೂ ಎತ್ತಿದ್ದೆ ಎಂಬುದನ್ನು ತಾವು ಜ್ಞಾಪಿಸಿಕೊಳ್ಳಬೇಕು ಮತ್ತು ಮುಸ್ಲಿಮರಿಗೆ ನೀಡಿರುವ ಪ್ರಾತಿನಿಧ್ಯದ ಅರ್ಧಕ್ಕಿಂತ ಸ್ವಲ್ಪವೇ ಕಡಿಮೆಯಾಗಿ, ಎರಡು ಸ್ಥಾನಗಳನ್ನು ಪರಿಶಿಷ್ಟ ಜಾತಿಗಳವರಿಗೆ ಕೊಡಲು ತಾವು ಸಿದ್ಧರಿದ್ದಿರಿ.

ಈ ಬೇಡಿಕೆಯಲ್ಲಿ ಹೊಸದೇನೂ ಇಲ್ಲ. ತಾವು ಶ್ರೀ ಗಾಂಧಿಯವರಿಗೆ ೧೯೪೪ರ ಆಗಸ್ಟ್ ೧೫ರಂದು ಬರೆದ ತಮ್ಮ ಪತ್ರದಲ್ಲಿ ಹೇಳಿರುವುದನ್ನೇ ಇಲ್ಲಿ ಪುನರುಚ್ಚರಿಸಲಾಗಿದೆ. ತಮ್ಮ ಪತ್ರದ ಐದನೆಯ ಪ್ಯಾರಾದಲ್ಲಿ ತಾವು ಹೀಗೆ ಹೇಳಿದ್ದಿರಿ –

"ನೀವು ಸೂಚಿಸಿರುವುದರ ಆಧಾರದ ಮೇಲೆ ಚರ್ಚೆಮಾಡುವುದರಿಂದ, ಈ ಸನ್ನಿವೇಶದಲ್ಲಿ, ಯಾವುದೇ ಪ್ರಯೋಜನವೂ ಇಲ್ಲವೆಂಬುದು ಸ್ಪಷ್ಟವಾಗಿದೆ. ಒಂದುವೇಳೆ, ಹಿಂದೂಗಳ, ಮುಸ್ಲಿಮರ ಹಾಗೂ ಪ್ರಮುಖ ಅಲ್ಪಸಂಖ್ಯಾತರ ಮುಖಂಡರು ಒಮ್ಮತದಿಂದ ಸಂಕ್ರಮಣ ಕಾಲದ ಸರಕಾರಕ್ಕೆ ಸಹಕಾರವನ್ನು ನೀಡುವಿರಾದರೆ ಮತ್ತು ಈಗಿರುವ ಸಂವಿಧಾನದ ಪ್ರಕಾರ ಕಾರ್ಯನಿರ್ವಹಿಸುವಿರಾದರೆ, ಉತ್ತಮ ಪ್ರಗತಿಯನ್ನು ಸಾಧಿಸಬಹುದು. ಅಂತಹ ಸಂಕ್ರಮಣಕಾಲದ ಸರಕಾರವು ಯಶಸ್ವಿಯಾಗಬೇಕಾದರೆ, ಅದನ್ನು ರಚಿಸುವ ಮೊದಲೇ, ಹೊಸ

ಸಂವಿಧಾನವನ್ನು ರೂಪಿಸುವ ವಿಧಾನವನ್ನು ನಾವು ರೂಪಿಸಿಕೊಳ್ಳುವುದಕ್ಕೆ ಹಿಂದೂಗಳ, ಮುಸ್ಲಿಮರ ಮತ್ತು ಇತರ ಪ್ರಮುಖ ಅಂಗಗಳ ಮುಖಂಡರ ನಡುವೆ ತಾತ್ತ್ವಿಕವಾಗಿ ಒಂದು ಒಪ್ಪಂದವಾಗಬೇಕು".

ತಾವು ನಿರ್ದಿಷ್ಟವಾಗಿ ಹೇಳಿದ ಈ ತತ್ತ್ವವು ಮಹಾಪ್ರಭುಗಳ ಸರಕಾರದ ಪರವಾಗಿ ತಾವು ನುಡಿದುದು ಎಂದು ನಂಬಬೇಕಾಗುತ್ತದೆ. ಹೀಗಿರುವಾಗ ಈ ಕ್ಯಾಬಿನೆಟ್ ಮಿಷನ್ ಈ ತತ್ತ್ವಕ್ಕೆ ಬದ್ಧವಾಗಿರಲೇಬೇಕಾಗುತ್ತದೆ. ಈ ತತ್ತ್ವವನ್ನು ಮಿಷನ್ ಕಾರ್ಯರೂಪಕ್ಕೆ ತರುವುದಕ್ಕೆ ಪಕ್ಷಗಳ ಒಪ್ಪಿಗೆಯ ಅಗತ್ಯವೇ ಇರುವುದಿಲ್ಲ ಎಂಬುದಷ್ಟೇ ಪರಿಶಿಷ್ಟ ಜಾತಿಗಳವರ ನಿಲುವು.

ಈ ವಾದಗಳು ಸಬಲವಾಗಿದ್ದು ಹಿಂದೂಗಳ ಒಪ್ಪಿಗೆಯು ಪರಿಶಿಷ್ಟ ಜಾತಿಗಳವರ ಬೇಡಿಕೆಗೆ ಅಗತ್ಯವಿಲ್ಲ ಎಂಬುದನ್ನು ಮಿಷನ್ನಿಗೆ ಚೆನ್ನಾಗಿ ಮನವರಿಕೆಮಾಡಿಕೊಟ್ಟಿರುವುದರಿಂದಲೇ ಮತ್ತು ಈ ಕಾರಣದಿಂದಲೇ ಸಿಮ್ಲಾ ಸಮ್ಮೇಳನಕ್ಕೆ ಪರಿಶಿಷ್ಟ ಜಾತಿಗಳವರ ಪ್ರತಿನಿಧಿಯನ್ನು ಆಹ್ವಾನಿಸುವ ಅಗತ್ಯವು ಮಿಷನ್ನಿಗೆ ಇರಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ದುರದೃಷ್ಟದಿಂದ, ನನ್ನ ಮನಸ್ಸಿಗೆ ಬರುವುದು ಇದೊಂದೇ ವ್ಯಾಖ್ಯಾನವಲ್ಲ. ಇನ್ನೊಂದು ವ್ಯಾಖ್ಯಾನವೂ ಮನಸ್ಸಿಗೆ ಬರುತ್ತಿದೆ. ಅದೇನೆಂದರೆ, ಕಾಂಗ್ರೆಸ್ ಹಾಗೂ ಮುಸ್ಲಿಂಲೀಗ್‌ನೊಡನೆ ತಾನು ಮಾಡಿಕೊಂಡಿರುವ ಒಪ್ಪಂದಕ್ಕೆ ಹೆಚ್ಚಿನ ಗೌರವವನ್ನು ತೋರಿಸುತ್ತಾ, ಪರಿಶಿಷ್ಟ ಜಾತಿಗಳವರ ವಿಷಯವನ್ನು ಪರಿಶೀಲಿಸಲು ಸಮಯವನ್ನು ವ್ಯಯಮಾಡದೆ ಕಾಬಿನಿಟ್ ಮಿಷನ್ ಅವೆರಡು ಪಕ್ಷಗಳಿಗೆ ಸಂವಿಧಾನವನ್ನು ರಚಿಸುವ ವ್ಯವಸ್ಥೆಯನ್ನು ನಿರ್ಧರಿಸುವ ಅವಕಾಶವನ್ನು ನೀಡಿದೆ.

ಮಿಷನ್ ಅನುಸರಿಸುವ ಯೋಜನೆ ಯಾವುದು ಎನ್ನುವುದನ್ನು ತಿಳಿಯದೆ ಪರಿಶಿಷ್ಟ ಜಾತಿಯವರಲ್ಲಿ ಒಂದು ಬಗೆಯ ತಳಮಳವುಂಟಾಗಿದೆ. ನಾನು ನಂಬುವಂತೆ ಎರಡನೆಯ ಕಾರಣವೇ ನಿಜವಾಗಿದ್ದರೆ, ಪರಿಶಿಷ್ಟ ಜಾತಿಗಳಿಗೆ ಮಾಡಿದ ಈ ವಂಚನೆಯ ವಿರುದ್ಧ ಪ್ರತಿಭಟಿಸದಿದ್ದರೆ, ನಾನು ನನ್ನ ಕರ್ತವ್ಯದಲ್ಲಿ ವಿಫಲನಾಗುತ್ತೇನೆ ಮತ್ತು ಇದರಿಂದ ಉದ್ಭವಿಸಬಹುದಾದ ಪರಿಣಾಮಗಳಿಗೆ ಕ್ಯಾಬಿನೆಟ್ ಮಿಷನ್ನೇ ಹೊಣೆಯಾಗಬೇಕಾಗಿರುತ್ತದೆ ಎಂದು ನಾನು ತಮಗೆ ತಿಳಿಸಬಯಸುತ್ತೇನೆ.

ನಾನು ಈ ಪತ್ರವನ್ನು ಪರಿಶಿಷ್ಟ ಜಾತಿಗಳವರ ಪ್ರತಿನಿಧಿಯಾಗಿ ತಮಗೆ ಬರೆಯುತ್ತಿದ್ದೇನೆ. ಇದನ್ನು ತಮಗೆ, ತಮ್ಮ ಕ್ಯಾಬಿನೆಟ್ ಮಿಷನ್ನಿನ ಸದಸ್ಯತ್ವವನ್ನು ಪರಿಗಣಿಸಿ ಬರೆಯಲಾಗಿದೆ. ತಾವು ಈ ಪತ್ರವನ್ನು ತಮ್ಮ ಸಹೋದ್ಯೋಗಿಗಳಿಗೆ ಹಂಚಿದರೆ, ನಾನು ತಮಗೆ ಕೃತಜ್ಞನಾಗಿರುತ್ತೇನೆ.

ತಮ್ಮ ವಿಶ್ವಾಸಿ,
**ಬಿ.ಆರ್. ಅಂಬೇಡ್ಕರ್**

ಮಹಾ ಮಾನ್ಯ ಫೀಲ್ಡ್ ಮಾರ್ಷಲ್
ದ ರೈಟ್ ಆನರಬಲ್ ವಿಸ್ಕೌಂಟ್ ವೇವೆಲ್ ಆಫ್
ಸೈರೆನೈಕಾ ಅಂಡ್ ವಿಂಚೆಸ್ಟರ್, ಸಿಮ್ಲಾ,
ಜಿ.ಸಿ.ಬಿ., ಜಿ.ಎಂ.ಎಸ್.ಐ., ಜಿ.ಎಂ.ಐ.ಇ, ಸಿ.ಎಮ್.ಜಿ., ಎಮ್.ಸಿ.,
ವೈಸ್‌ರಾಯ್ ಅಂಡ್ ಗವರ್ನರ್ ಜನರಲ್ ಆಫ್ ಇಂಡಿಯಾ.

* * * * *

---

ಮೂಲ: ಡಾ. ಅಂಬೇಡ್ಕರ್ ಅವರು ಖಾಸಗಿಯಾಗಿ ಪ್ರಕಟಿಸಿದ ಪುಸ್ತಿಕೆ.

# ೭. ಕ್ಯಾಬಿನೆಟ್ ಮಿಷನ್ನಿನ ಯೋಜನೆಯ ಬಗ್ಗೆ ಎ.ವಿ. ಅಲೆಗ್ಸಾಂಡರ್ ಅವರಿಗೆ ಬರೆದ ಪತ್ರ

**ಭೀಮರಾವ್ ಆರ್. ಅಂಬೇಡ್ಕರ್**
ಎಂ.ಎ., ಪಿಎಚ್.ಡಿ. ಡಿ.ಎಸ್‌ಸಿ., ಬ್ಯಾರಿಸ್ಟರ್ ಅಟ್ ಲಾ,
ಸದಸ್ಯರು, ಗವರ್ನರ್ ಜನರಲ್ಲರ ಕಾರ್ಯಾಂಗ ಸಮಿತಿ

೨೨, ಪೃಥ್ವಿರಾಜ್ ರಸ್ತೆ, ನವದೆಹಲಿ,
ದಿನಾಂಕ: ೧೯೪೬ರ ಮೇ ೧೪.

ಪ್ರಿಯ ಅಲೆಗ್ಸಾಂಡರ್,

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ನಡುವೆ ಒಪ್ಪಂದವೊಂದನ್ನು ಆಗಮಾಡಿಸುವಲ್ಲಿ ತಮ್ಮ ಪ್ರಯತ್ನಗಳು ವಿಫಲವಾಗಬೇಕಾಗಿ ಬಂದುದಕ್ಕೆ ನನಗೆ ವಿಷಾದವಾಗಿದೆ. ತಮಗೆ ಎಲ್ಲರ ಅನುಕಂಪ ಹಾಗೂ ಕೃತಜ್ಞತೆಯು ಸಲ್ಲಲೇಬೇಕಾಗಿದೆ. ಈ ಪ್ರಕರಣವು 'ಮಕ್ಕಳಿಲ್ಲದ ಒಬ್ಬ ವಯಸ್ಸಾದ ವ್ಯಾಪಾರಿಯೊಬ್ಬ ತನ್ನ ಆಸ್ತಿಗೆ ವಾರಸುದಾರನೊಬ್ಬನನ್ನು ಪಡೆಯಲು ಚಿಕ್ಕ ವಯಸ್ಸಿನ ಹುಡುಗಿಯೊಬ್ಬಳನ್ನು ಮದುವೆಯ ಕತೆಯನ್ನು ನನಗೆ ನೆನಪಿಸುತ್ತದೆ. ಹುಡುಗಿಯು ಗರ್ಭವತಿಯಾಗುತ್ತಾಳೆ, ಆದರೆ ಈ ಮುದುಕ ಭಯಂಕರವಾದ ಖಾಯಿಲೆಗೆ ತುತ್ತಾಗುತ್ತಾನೆ. ಅವನಿಗೆ ಅವಳಿಗೆ ನವಮಾಸಗಳು ತುಂಬುವವರೆಗೆ ಕಾಯುವಷ್ಟು ತಾಳ್ಮೆಯಿಲ್ಲ. ಅವನು ಎಷ್ಟು ಆತುರಪಡುತ್ತಿದ್ದನೆಂದರೆ, ವೈದ್ಯರೊಬ್ಬರನ್ನು ಕರೆದು, ಅವಳ ಗರ್ಭವನ್ನು ಕತ್ತರಿಸಿ ಮಗುವನ್ನು ತನಗೆ ತೋರಿಸಬೇಕೆಂದು ಹೇಳುತ್ತಾನೆ. ಇದರ ಪರಿಣಾಮವೆಂದರೆ ಹುಡುಗಿಯ ಸಾವು ಮತ್ತು ಭ್ರೂಣಹತ್ಯೆ.' ಇದನ್ನೇ ಇಲ್ಲಿಗೆ ಹೋಲಿಸಬಹುದಾದರೆ, ಆ ವಯಸ್ಸಾದ ವ್ಯಾಪಾರಿಯು ಮಾಡಿದುದನ್ನೇ ಕ್ಯಾಬಿನೆಟ್ ಮಿಷನ್ ಮಾಡಬಯಸಿತ್ತು. ತಮ್ಮ ಅರಿವಿಗೆ ಬರದಿರಬಹುದು, ಆದರೆ ನನ್ನಂತಹವರು ಭಾವಿಸುವುದು ಏನೆಂದರೆ, ಮಿಷನ್ ಪ್ರಸವದ ದಿನಕ್ಕೆ ಬಹು ಮೊದಲೇ ಬಲವಂತವಾಗಿ ಪ್ರಸವವಾಗುವಂತೆ ಮಾಡುವ ಕಾರ್ಯದಲ್ಲಿ ತೊಡಗಿದ್ದರು ಎನ್ನುವುದು.

೨. ಹಿಂದೂಗಳು ಮತ್ತು ಮುಸ್ಲಿಮರು ಈ ದೇಶದ ಭವಿಷ್ಯವನ್ನು ನಿರ್ಧರಿಸುವ ಸಾಮರ್ಥ್ಯವನ್ನು ಇಂದು ಹೊಂದಿಲ್ಲವೆಂಬುದೇ ವಾಸ್ತವ ಅಂಶ ಎಂದು ನನ್ನ ಮನಸ್ಸಿಗೆ ತೋರುತ್ತಿದೆ. ಹಿಂದೂಗಳು ಮತ್ತು ಮುಸ್ಲಿಮರು ಕೇವಲ ಜನಗಳ ಮಂದೆಯಾಗಿದ್ದಾರೆ. ನಿಮ್ಮ ಅನುಭವದಿಂದ ತಮಗೆ ತಿಳಿದಿರಬಹುದಾದಂತೆ, ಸಾಮಾನ್ಯವಾದ ಜನಗಳ ಮಂದೆಯು ವಾಸ್ತವ ಲಾಭಾಲಾಭಗಳನ್ನು ಪರಿಗಣಿಸದೆ, ಸಾಮೂಹಿಕವಾಗಿ ಭಾವನಾತ್ಮಕ ಲೋಕದಲ್ಲಿ ತೇಲುತ್ತಿರುತ್ತದೆ. ತಮ್ಮನ್ನು ತಾವೇ ಬಲಿಕೊಡುವಂತೆ ಮಂದಿಯನ್ನು ಪ್ರೇರೇಪಿಸುವುದು ಅವರಿಗೆ ಅವರಿಗಾಗಬಹುದಾದ ಲಾಭಾಲಾಭಗಳನ್ನು ಮನಗಾಣಿಸುವುದಕ್ಕಿಂತ ಸುಲಭದ ಕೆಲಸ. ಮಂದಿಯು ಸುಲಭವಾಗಿ ಲಾಭಾಲಾಭದ ಪರಿಗಣನೆಯ ಪ್ರಜ್ಞೆಯನ್ನು ಕಳೆದುಕೊಳ್ಳುತ್ತದೆ. ಅದರ ಉದ್ದೇಶ ಉನ್ನತವಾಗಿರಲಿ ಅಥವಾ ಇಲ್ಲದಿರಲಿ, ನಾಗರಿಕವಾಗಿರಲಿ ಅಥವಾ ಅನಾಗರಿಕವಾಗಿರಲಿ, ಅನುಕಂಪದಿಂದ ಕೂಡಿರಲಿ ಅಥವಾ ಕ್ರೌರ್ಯದಿಂದ ಕೂಡಿರಲಿ, ಆದರೆ ಅದು ನಿಶ್ಚಯವಾಗಿಯೂ ವೈಚಾರಿಕವಾಗಿರುವುದಿಲ್ಲ. ಸಾಮೂಹಿಕ ಭಾವನೆಗಳ ಪ್ರವಾಹದಲ್ಲಿ ವೈಯಕ್ತಿಕವಾಗಿ ಅವರು ಸಾಮಾನ್ಯ ಪ್ರಜ್ಞೆಯನ್ನು ಕಳೆದುಕೊಂಡಿರುತ್ತಾರೆ. ಅವರನ್ನು ಸ್ವತ್ತಿನ ಒಡೆಯರಾಗಿಸುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುವುದು ಸುಲಭವಾದ ಕೆಲಸ.

ನೀವು ಹೇಗೆ ಮುಂದುವರೆಯಬೇಕೆಂಬುದರ ಬಗ್ಗೆ ಸಲಹೆಕೊಡುವುದು ನನ್ನ ಕರ್ತವ್ಯವಲ್ಲ. ಭಂಗಿ ಬಸ್ತಿ ಹಾಗೂ ಔರಂಗಜೇಬ್ ರಸ್ತೆಯ ೧೦ನೆಯ ನಿವಾಸದಿಂದ ಹೆಚ್ಚಿನ ವಿವೇಕವನ್ನು ಮತ್ತು ಉನ್ನತ ಮಟ್ಟದ ಸ್ಫೂರ್ತಿಯನ್ನು ಮಿಷನ್ ಪಡೆಯುತ್ತಿದೆ. ಇಂತಹ ವಿವೇಕ ಹಾಗು ಸ್ಫೂರ್ತಿಯ ಬಗ್ಗೆ ಮಾತನಾಡುವ ಇಚ್ಛೆ ನನಗಿಲ್ಲ. ಐರಿಷ್ ಹೋಂ ರೂಲ್‌ನ ಚಳವಳಿಯಲ್ಲಿ ತೊಡಗಿಕೊಂಡಿದ್ದ ಗ್ಲಾಡ್‌ಸ್ಟನ್ ಅವರನ್ನು ಬಣ್ಣಿಸಲು ಛೇಂಬರ್ಲಿಯನ್ ಅವರು ಉಪಯೋಗಿಸಿದ ಆತುರದಲ್ಲಿರುವ ಮುದುಕನಂತೆ ಕರುಣಾಜನಕ ರೀತಿಯಲ್ಲಿ ಮಿಷನ್ ವರ್ತಿಸದೆ ಇದ್ದರೆ ಈಗ ಅವರ ಮುಂದಿರುವ ಪರಿಸ್ಥಿತಿಯನ್ನು ಸುಲಭವಾಗಿ ನಿರ್ವಹಿಸಬಹುದು.

೩. ಈ ವಿಷಯವು, ಮಿಷನ್ನಿಗೆ, ಪ್ರಮುಖ ಪಕ್ಷಗಳವರಿಗೆ ಮತ್ತು ಪ್ರಮುಖ ಪಕ್ಷಗಳಲ್ಲಿ ವಿಶ್ವಾಸವನ್ನು ಇಟ್ಟವರಿಗೆ ಸಂಬಂಧಿಸಿದ್ದು. ಪರಿಶಿಷ್ಟ ಜಾತಿಗಳವರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆ ಯಾವ ಸಾಂವಿಧಾನಿಕ ಕ್ರಮಗಳನ್ನು ತೆಗೆದುಕೊಳ್ಳಲು ತಾವು ಉದ್ದೇಶಿಸಿದ್ದೀರಿ ಎಂಬುದನ್ನು ತಿಳಿದುಕೊಳ್ಳಲು ನಾನು ಕಾತರನಾಗಿದ್ದೇನೆ. ಮಿಷನ್ ದೆಹಲಿಗೆ ಹಿಂತಿರುಗಿದ ಕೆಲವು ದಿನಗಳ ನಂತರ ತಾನು ಉದ್ದೇಶಿಸಿರುವ ಮುಂದಿನ ಕ್ರಮಗಳ ಬಗ್ಗೆ ಪ್ರಕಟಣೆಯನ್ನು ನೀಡುವುದಾಗಿ ಸಿಮ್ಲಾ ಮಾತುಕತೆಗಳ ಕೊನೆಯ ದಿನದಂದು ಒಂದು ಅಧಿಕೃತ ಹೇಳಿಕೆಯನ್ನು ಮಿಷನ್ ಹೊರಡಿಸಿತ್ತು. ಸಹಜವಾಗಿಯೇ, ಎಲ್ಲಾ ಪರಿಶಿಷ್ಟರ ಗಮನವೂ ಈ ಹೇಳಿಕೆಯನ್ನು ನಿರೀಕ್ಷಿಸುತ್ತಿದೆ. ಮಿಷನ್ನಿನ ಮುಂದಿನ ಕ್ರಮಗಳು ಅವರ ಭವಿಷ್ಯವನ್ನು ನಿರ್ಧರಿಸುತ್ತದೆ. ಮಿಷನ್ನಿನ ನಿರ್ಧಾರವು ಅಸ್ಪೃಶ್ಯರಿಗೆ ಹೊಸ ಜೀವನ, ಸ್ವಾತಂತ್ರ್ಯ, ಸುಖಸಂತೋಷಗಳನ್ನು ಪಡೆಯುವ ಮಾರ್ಗವನ್ನು ತೆರೆಯುತ್ತದೆ, ಅಥವಾ ಅವರ ಮರಣದ ಗಂಟೆಯನ್ನು ಬಾರಿಸುತ್ತದೆ. ಇದು ಅಸ್ಪೃಶ್ಯರ ಸಾವು ಬದುಕಿನ ಪ್ರಶ್ನೆಯಾಗಿರುವುದರಿಂದ, ಅವರ ಈ ಸಮಸ್ಯೆಯ ಬಗ್ಗೆ ನಾನು ತಮ್ಮ ಗಮನವನ್ನು ಕೆಲವು ನಿಮಿಷಗಳವರೆಗೆ ಸೆಳೆಯುವುದು ತಪ್ಪಾಗಲಾರದು.

೪. ಅಸ್ಪೃಶ್ಯರು ಎದುರಿಸುತ್ತಿರುವ ಸಮಸ್ಯೆಯು ಅವರಿಗೆ ಅಸಹನೀಯವಾದುದಾಗಿದೆ. ಅದೃಷ್ಟವಶಾತ್, ಈ ಮುಂದಿನ ಅಂಶಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ, ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗಿರುತ್ತದೆ. ಅಸ್ಪೃಶ್ಯರ ಸಮಾಜವು ಹಿಂದೂಗಳ ಅಪಾರವಾದ ಸಮಾಜದಿಂದ ಆವೃತವಾಗಿದೆ. ಈ ಹಿಂದೂ ಸಮಾಜವು ಅಸ್ಪೃಶ್ಯರ ಬಗ್ಗೆ ಅತೀವ ಪ್ರತಿಕೂಲಕರ ಭಾವನೆಯನ್ನು ಹೊಂದಿದೆ, ಮತ್ತು ಅದಕ್ಕೆ ಅಸ್ಪೃಶ್ಯರ ಮೇಲೆ ಹೇಯವಾಗಿ ಮತ್ತು ಕ್ರೂರವಾಗಿ ವರ್ತಿಸುವುದರಲ್ಲಿ ಯಾವ ಹಿಂಜರಿಕೆಯೂ ಇಲ್ಲ. ಪ್ರತಿದಿನವೂ ನಡೆಯುವ ಇಂತಹ ಘಟನೆಗಳಿಗೆ ಪರಿಹಾರಕ್ಕಾಗಿ ಅಸ್ಪೃಶ್ಯರು ಸರಕಾರವನ್ನೇ ಆಶ್ರಯಿಸಬೇಕಾಗುತ್ತದೆ. ಈ ಆಡಳಿತದ ಲಕ್ಷಣವೇನು ಮತ್ತು ಸಂಯೋಜನೆ ಹೇಗಿದೆ? ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಆಡಳಿತವು ಸಂಪೂರ್ಣವಾಗಿ ಹಿಂದೂಗಳ ಕೈಯಲ್ಲಿಯೇ ಇದೆ. ಅವರು ಇದರ ಮೇಲೆ ಏಕಸ್ವಾಮ್ಯವನ್ನು ಸಾಧಿಸಿದ್ದಾರೆ. ಆಡಳಿತದ ಸರ್ವಾಂಗವೂ ಅವರ ಅಧೀನದಲ್ಲಿದೆ. ಅವರ ಹಿಡಿತದಲ್ಲಿಲ್ಲದ ಯಾವ ವಿಭಾಗವೂ ಇಲ್ಲ. ಪೊಲೀಸ್, ನ್ಯಾಯಾಂಗ ಮತ್ತು ಕಂದಾಯ ಇಲಾಖೆ, ವಾಸ್ತವವಾಗಿ ಆಡಳಿತದ ಎಲ್ಲಾ ಶಾಖೆಗಳಲ್ಲೂ ಅವರ ಕೈವಾಡವಿರುತ್ತದೆ. ಇಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವಿದೆ. ಹಿಂದೂಗಳು ಅಸಾಮಾಜಿಕವಾಗಿರುವುದಷ್ಟೇ ಅಲ್ಲದೆ, ಅವರು ಸಮಾಜವಿರೋಧಿಗಳೂ ಮತ್ತು ಅಸ್ಪೃಶ್ಯರ ವಿರುದ್ಧ ಹಗೆತನವನ್ನು ಸಾಧಿಸುವವರೂ ಆಗಿದ್ದಾರೆ ಅವರ ಏಕಮಾತ್ರ ಉದ್ದೇಶವೆಂದರೆ, ಅಸ್ಪೃಶ್ಯರ ವಿರುದ್ಧ ತಾರತಮ್ಯವನ್ನು ಮಾಡುವುದು, ಅವರಿಗೆ ಕಾನೂನಿನ ಲಾಭವು ಸಿಗದಂತೆ ನೋಡಿಕೊಳ್ಳುವುದು ಮತ್ತು ಅಸ್ಪೃಶ್ಯರ ಮೇಲೆ ನಡೆಯುವ ದೌರ್ಜನ್ಯ ಹಾಗೂ ತುಳಿತದ ವಿರುದ್ಧವಿರುವ ಕಾನೂನುಗಳ ಹಲ್ಲನ್ನು

ಕೀಳುವುದು. ಇದರ ಪರಿಣಾಮವೆಂದರೆ ಒಂದು ಕಡೆಯಲ್ಲಿ ಅವರ ಮೇಲೆ ದೌರ್ಜನ್ಯ ನಡೆಸುವ ಹಿಂದೂ ಸಮಾಜ, ಮತ್ತೊಂದೆಡೆಯಲ್ಲಿ ಈ ಸಮಾಜಕ್ಕೆ ಕುಮ್ಮಕ್ಕು ಕೊಡುವ ಹಿಂದೂಗಳಿಂದಲೇ ತುಂಬಿರುವ ಆಡಳಿತ – ಇವೆರಡರ ಮಧ್ಯೆ ಅಸ್ಪೃಶ್ಯರು ಸಿಕ್ಕಿಕೊಂಡು ನಲುಗುತ್ತಿದ್ದಾರೆ.

೫. ಈ ಹಿನ್ನೆಲೆಯಲ್ಲಿ, ಕಾಂಗ್ರೆಸ್ಸಿಗರ ಸ್ವರಾಜ್ಯವು ಅಸ್ಪೃಶ್ಯರ ಬದುಕಿಗೆ ಯಾವ ಅರ್ಥವನ್ನು ತಂದುಕೊಡುತ್ತದೆ? ಇದರ ಅರ್ಥ, ಇಂದು ಆಡಳಿತವು ಮಾತ್ರ ಹಿಂದೂಗಳ ಕೈಯಲ್ಲಿ ಇದೆ, ಆದರೆ ಸ್ವರಾಜ್ಯದಲ್ಲಿ, ಶಾಸಕಾಂಗ, ಕಾರ್ಯಾಂಗಗಳೆರಡೂ ಅವರಿಂದಲೇ ತುಂಬಲ್ಪಡುತ್ತವೆ. ಸ್ವರಾಜ್ಯವು ಅಸ್ಪೃಶ್ಯರ ಸಂಕಷ್ಟಗಳನ್ನು ಇನ್ನಷ್ಟು ಹೆಚ್ಚಿಸುತ್ತದೆ ಎಂಬುದನ್ನು ಹೇಳಬೇಕಾಗಿಯೇ ಇಲ್ಲ. ಕಾರಣ, ಪ್ರತಿಕೂಲವಾಗಿರುವ ಆಡಳಿತ ವ್ಯವಸ್ಥೆಯನ್ನು ಎದುರಿಸುವುದಷ್ಟೇ ಅಲ್ಲದೆ, ಅಸ್ಪೃಶ್ಯರು ಉದಾಸೀನಭರಿತವಾದ ಶಾಸನಸಭೆ ಮತ್ತು ಜಡ್ಡುಗಟ್ಟಿದ ಕಾರ್ಯಾಂಗಗಳ ಜೊತೆಗೆ ತಮ್ಮ ಮೇಲೆ ಲಂಗುಲಗಾಮುಗಳಿಲ್ಲದೆ ವಿಷವನ್ನು ಕಾರುವ ಮತ್ತು ಅಸಮಾನತೆಯನ್ನೇ ಉಣಿಸುವ ಅಧಿಕಾರಿವರ್ಗವನ್ನೂ ಎದುರಿಸಬೇಕಾಗುತ್ತದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳಬಹುದಾದರೆ, ಕಾಂಗ್ರೆಸ್ಸಿನವರ ಸ್ವರಾಜ್ಯದ ಮಂತ್ರದಡಿ, ಅಸ್ಪೃಶ್ಯರು ಹಿಂದೂಗಳ ಹಿಡಿತದಲ್ಲಿ ಅನುಭವಿಸುವ ಅಪಮಾನಕರ ಬದುಕಿನಿಂದ ಪಾರಾಗುವ ಭವಿಷ್ಯವೇ ಇಲ್ಲದಂತಹ ಸ್ಥಿತಿಯನ್ನು ತಲುಪುತ್ತಾರೆ ಎನ್ನಬಹುದು.

ಇವು ತಮಗೆ ಅಸ್ಪೃಶ್ಯರ ವಿಷಯದಲ್ಲಿ ಒಂದು ಚಿತ್ರಣವನ್ನು ಕೊಡುತ್ತದೆ ಎಂದು ನಂಬಿದ್ದೇನೆ ಮತ್ತು ಸ್ವರಾಜ್ಯವನ್ನು ಅಸ್ಪೃಶ್ಯರು ಏಕೆ ವಿರೋಧಿಸುತ್ತಾರೆಂದರೆ, ಅದು ಅವರ ಜೀವನದಲ್ಲಿ ವಿಪತ್ತಿಗೆ ಕಾರಣವಾಗುತ್ತದೆ, ಹಿಂದೂಗಳು ಮಾಡುವ ತಪ್ಪುಗಳನ್ನು ವಿರೋಧಿಸಿ ಈ ವಿಪತ್ತನ್ನು ತಪ್ಪಿಸಲು ಶಾಸನಸಭೆಗಳಲ್ಲಿ ಅವರ ಪ್ರತಿನಿಧಿಗಳಿರಬೇಕಾದುದು ಅತ್ಯಗತ್ಯ. ತಮ್ಮ ಪ್ರಗತಿಗಾಗಿ ಯೋಜನೆಗಳನ್ನು ರೂಪಿಸುವಂತೆ ಮಾಡಲು ಅವರ ಪ್ರತಿನಿಧಿಗಳು ಕಾರ್ಯಾಂಗದಲ್ಲಿರಬೇಕಾದುದೂ ಅಷ್ಟೇ ಅಗತ್ಯ. ಅಷ್ಟೇ ಅಲ್ಲದೆ, ತಮಗಿರುವ ಪ್ರತಿಕೂಲಗಳನ್ನು ನಿವಾರಿಸಲು ಆಡಳಿತ ವ್ಯವಸ್ಥೆಯಲ್ಲಿಯೂ ಅವರಿಗೆ ಪ್ರಾತಿನಿಧ್ಯವಿರಬೇಕು. ಸಾಂವಿಧಾನಿಕ ಸಂರಕ್ಷಣಾ ಕ್ರಮಗಳಿಗಾಗಿ ಪರಿಶಿಷ್ಟ ಜಾತಿಗಳವರು ಇಟ್ಟಿರುವ ಬೇಡಿಕೆಯ ಹಿಂದೆಯಿರುವ ಸಮರ್ಥನೆಯನ್ನು ತಾವು ಒಪ್ಪಿಕೊಂಡರೆ, ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರವು ಏಕೆ ಇರಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುವುದಿಲ್ಲ. ಶಾಸನಸಭೆಯಲ್ಲಿ ಅಸ್ಪೃಶ್ಯರು ಅಲ್ಪಸಂಖ್ಯಾತರಾಗಿರುತ್ತಾರೆ ಮತ್ತು ಅವರು ಅಲ್ಪಸಂಖ್ಯಾತರಾಗಿಯೇ ಉಳಿದಿರಬೇಕಾದದ್ದು ಅವರ ಹಣೆಯ ಬರಹ. ಹುಟ್ಟಿನಿಂದಲೂ ಹಾಗೂ ಜೀವನದ ರೀತಿಯಿಂದಲೂ ಕೋಮುವಾದಿಗಳಾಗಿರುವ ಬಹುಸಂಖ್ಯಾತರು ಅವರನ್ನು ಯಾವಾಗಲೂ ಮೂಲೆಗೆ ತಳ್ಳುತ್ತಿರುತ್ತಾರೆ. ಅಸ್ಪೃಶ್ಯರಿಗೆ ಇರುವ ಮಾರ್ಗವೆಂದರೆ, ಅವರು ತಮ್ಮ ಕೆಲವು ಷರತ್ತುಗಳೊಂದಿಗೆ ಬಹುಸಂಖ್ಯಾತರೊಂದಿಗೆ ಸಹಭಾಗಿಗಳಾಗಿ ಕೆಲಸ ಮಾಡಬಹುದಾದಂತಹ ಸ್ಥಿತಿಯನ್ನು ತಲುಪುವುದು. ಆದರೆ ಹೀಗೆ ಮಾಡುವಾಗ ಬಹುಸಂಖ್ಯಾತರು ಅವರನ್ನು ತಮ್ಮ ಷರತ್ತುಗಳಿಗೆ ತಲೆಬಾಗುವಂತೆ ಮಾಡಬಾರದು. ಎರಡನೆಯದಾಗಿ, ಬಹುಸಂಖ್ಯಾತರು ಅಲ್ಪಸಂಖ್ಯಾತರೊಡನೆ ಕಾರ್ಯನಿರ್ವಹಿಸಲು ನಿರಾಕರಿಸಿದರೆ, ಅಥವಾ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳದೆ ಇದ್ದರೆ, ಆಗ ಕನಿಷ್ಠ ಪಕ್ಷ ಶಾಸನಸಭೆಯಲ್ಲಿ ಅದರ ವಿರುದ್ಧ ದನಿಯನ್ನು ಎತ್ತಲಾದರೂ ಅಲ್ಪಸಂಖ್ಯಾತರ ಪ್ರತಿನಿಧಿಗಳು ಸ್ವತಂತ್ರರಾಗಿರಬೇಕು. ತಮ್ಮ ವಿರೋಧವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಅಲ್ಪಸಂಖ್ಯಾತರು ಹೇಗೆ ಕಾಪಾಡಿಕೊಂಡು ಹೋಗಬಲ್ಲರು? ಅವರ ಪ್ರತಿನಿಧಿಗಳು ಬಹುಸಂಖ್ಯಾತರ ಮತಗಳಿಂದ ಆರಿಸಲ್ಪಡದೆ ಇದ್ದರೆ ಮಾತ್ರ ಇದು ಸಾಧ್ಯ. ಪ್ರತ್ಯೇಕ ಮತಕ್ಷೇತ್ರಗಳು ತಮಗೆ ಅಗತ್ಯವಾಗಿವೆ ಎಂಬುದರ ಹಿಂದಿರುವ ಮೂಲ ಅಂಶ ಇದು.

೭. ಅಸ್ಪೃಶ್ಯರಿಗೆ ನೀಡುವ ಯಾವುದೇ ರಕ್ಷಣಾವಿಧಿಗಳೂ, ಅವರು ತಮಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು

ಪಡೆಯುವವರೆಗೂ, ಉಪಯೋಗಕ್ಕೆ ಬರಲಾರವು. ಪ್ರತ್ಯೇಕ ಮತಕ್ಷೇತ್ರಗಳು ಅವರಿಗೆ ನಿರ್ಣಾಯಕವಾಗಿವೆ. ೧೯೪೬ರ ಏಪ್ರಿಲ್ ೯ರಂದು ಕ್ಯಾಬಿನೆಟ್ ಮಿಷನ್ ಸಂದರ್ಶಿಸಿದ ಕಾಂಗ್ರೆಸ್ಸಿನ ಮೂವರು ಹರಿಜನ ಸದಸ್ಯರು ಮಿಷನ್ನಿಗೆ ಸಲ್ಲಿಸಿದ ಮನವಿಯ ಪ್ರತಿಯೊಂದು ನನ್ನ ಬಳಿಯಿದೆ. "ಇಂಗ್ಲೆಂಡಿನ ಪ್ರಜೆಗಳಾಗಿರುವ ನಾವು .." ಎಂದು ತಮ್ಮ ಭಾಷಣವನ್ನು ಪ್ರಾರಂಭಿಸುವ ಧಾರ್ಷ್ಟ್ಯವಿರುವ ಟೂಲಿ ರಸ್ತೆಯ ಮೂವರು ದರ್ಜಿಗಳಿಗಿಂತ ಈ ಮೂವರು ಸದಸ್ಯರು ಯಾವ ವಿಧದಲ್ಲಿಯೂ ಉತ್ತಮರಲ್ಲ. ನಾನು ಪರಿಶಿಷ್ಟ ಜಾತಿಗಳ ಒಕ್ಕೂಟದ ಪರವಾಗಿ ಮುಂದಿಟ್ಟಿರುವ ಬೇಡಿಕೆಗಳು ಹಾಗೂ ಕಾಂಗ್ರೆಸ್ಸಿನ ಈ ಮೂವರು ಹರಿಜನರು ಸಲ್ಲಿಸಿರುವ ಬೇಡಿಕೆಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲ ಎಂಬುದು ಅಧ್ಯಯನಯೋಗ್ಯವಾಗಿದೆ. ಇರುವ ಒಂದೇ ವ್ಯತ್ಯಾಸವು ಮತಕ್ಷೇತ್ರಗಳನ್ನು ಕುರಿತಾಗಿ ಇರುವಂತಹುದು. ಕಾಂಗ್ರೆಸ್ಸಿನ ಹರಿಜನರ ಬೇಡಿಕೆಗಳನ್ನು ಹೇಗೆ ಅರ್ಥೈಸುವುದು ಎಂಬುದು ನನಗೆ ತೋಚುವುದಿಲ್ಲ. ಅವುಗಳು ನಿಜವಾಗಿ ಬೇಡಿಕೆಗಳೇ ಅಲ್ಲ. ಅವು ರಾಜಕೀಯವಾಗಿ ಕಾಂಗ್ರೆಸ್ ಅಸ್ಪೃಶ್ಯರಿಗೆ ನೀಡಲು ಬಯಸಿರುವ ರಕ್ಷಣಾ ಕ್ರಮಗಳಷ್ಟೇ ಆಗಿವೆ. ಇದು ನಾನು ಅರ್ಥಮಾಡಿಕೊಂಡಿರುವುದಷ್ಟೇ ಅಲ್ಲ, ನನ್ನ ತಿಳಿವಳಿಕೆಯೂ ಹೌದು. ನಾನು ಜಂಟಿ ಮತಕ್ಷೇತ್ರಗಳ ಸೂಚನೆಯನ್ನು ಒಪ್ಪಿಕೊಳ್ಳಲು ಸಿದ್ಧನಿದ್ದರೆ, ಕಾಂಗ್ರೆಸ್ ನನ್ನ ಉಳಿದೆಲ್ಲ ಬೇಡಿಕೆಗಳನ್ನೂ ಮಾನ್ಯಮಾಡಲು ಸಿದ್ಧವಿದೆಯೆಂಬುದು ಕಾಂಗ್ರೆಸ್ಸಿನ ರೀತಿನೀತಿಗಳನ್ನು ಬಲ್ಲವರೊಬ್ಬರು ಹೇಳಿದರು.

ಕಾಂಗ್ರೆಸ್ ಪರಿಶಿಷ್ಟ ಜಾತಿಗಳವರ ಎಲ್ಲಾ ಬೇಡಿಕೆಗಳನ್ನೂ ಮಾನ್ಯ ಮಾಡಿ, ಕೇವಲ ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಗೆ ಆಕ್ಷೇಪಿಸುತ್ತದೆ ಎಂಬುದು ತಮಗೆ ಆಶ್ಚರ್ಯತರಬಹುದು. ಕಾಂಗ್ರೆಸ್ ಆಡುತ್ತಿರುವ ನಾಟಕವನ್ನು ತಾವು ಸರಿಯಾಗಿ ಅರ್ಥಮಾಡಿಕೊಂಡರೆ, ಇದೇನೂ ಆಶ್ಚರ್ಯಕರವಲ್ಲ. ಈ ನಾಟಕದ ಹಿಂದಿರುವ ಮರ್ಮವು ಬಹು ಆಳವಾಗಿದೆ. ಅಸ್ಪೃಶ್ಯರಿಗೆ ಸಂರಕ್ಷಣಾ ಕ್ರಮಗಳನ್ನು ನೀಡುವುದು ಅನಿವಾರ್ಯವೆಂಬುದನ್ನು ಅರಿತಿರುವ ಕಾಂಗ್ರೆಸ್ಸಿನ ಉದ್ದೇಶ ಹೇಗಾದರೂ ಮಾಡಿ ಈ ಕ್ರಮಗಳು ನಿಷ್ಫಲವಾಗುವಂತೆ ಮಾಡುವುದು. ಇದಕ್ಕೆ ಉತ್ತಮ ಸಾಧನವನ್ನು ಜಂಟಿ ಮತಕ್ಷೇತ್ರಗಳು ಎಂಬುದನ್ನು ಕಾಂಗ್ರೆಸ್ ಕಂಡುಕೊಂಡಿದೆ. ಈ ಕಾರಣದಿಂದಲೇ ಕಾಂಗ್ರೆಸ್ ಜಂಟಿ ಮತಕ್ಷೇತ್ರಗಳ ಬಗ್ಗೆ ಪಟ್ಟುಹಿಡಿದಿರುವುದು. ಜಂಟಿ ಮತಕ್ಷೇತ್ರಗಳು ಎಂದರೆ ಅಸ್ಪೃಶ್ಯರ ಪಾಲಿಗೆ ಅಧಿಕಾರವಿಲ್ಲದ ಪದವಿಯಂತೆ. ಅಸ್ಪೃಶ್ಯರಿಗೆ ಬೇಕಾಗಿರುವುದು ಅಧಿಕಾರವಿರುವ ಸ್ಥಾನ. ಇದು ಅವರಿಗೆ ದೊರಕುವುದು ಪ್ರತ್ಯೇಕ ಮತಕ್ಷೇತ್ರಗಳಿಂದ ಮಾತ್ರ ಸಾಧ್ಯ, ಮತ್ತು ಈ ಕಾರಣಕ್ಕಾಗಿಯೇ ಅವರು ಈ ಬೇಡಿಕೆಯ ಈಡೇರಿಕೆಗಾಗಿ ಒತ್ತಾಯಿಸುತ್ತಿದ್ದಾರೆ.

೮. ಪರಿಶಿಷ್ಟ ಜಾತಿಗಳವರು ಪ್ರತ್ಯೇಕ ಮತಕ್ಷೇತ್ರಗಳಿಗಾಗಿ ಮುಂದಿಟ್ಟಿರುವ ಬೇಡಿಕೆಯು ಸಮರ್ಥನೀಯವಾಗುವಷ್ಟು ದೃಢವಾಗಿದೆ ಎಂಬುದು ನನ್ನ ನಂಬಿಕೆ. ಕಾಂಗ್ರೆಸ್ಸನ್ನು ಉಳಿದಂತೆ ಎಲ್ಲಾ ಪಕ್ಷಗಳೂ ಇದಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಿವೆ. ಪ್ರತ್ಯೇಕ ಮತಕ್ಷೇತ್ರಗಳ ಪರವಾಗಿ ನನ್ನ ವಾದವನ್ನು ಲಾರ್ಡ್ ವೇವೆಲ್ ಅವರಿಗೆ ಬರೆದ ೧೯೪೬ರ ಮೇ ೩ರ ನನ್ನ ಪತ್ರದಲ್ಲಿ ನಾನು ವಿವರಿಸಿದ್ದೇನೆ. ಅದನ್ನು ಅವರು ತಮ್ಮೊಂದಿಗೆ ಹಂಚಿಕೊಂಡಿರಬಹುದು. ಈ ಕಾರಣದಿಂದ ನಾನು ಮತ್ತೆ ಅದನ್ನು ಇಲ್ಲಿ ಮತ್ತೆ ಹೇಳುವುದು ಅನಗತ್ಯ. ಪರಿಶಿಷ್ಟ ಜಾತಿಗಳವರ ಈ ಬೇಡಿಕೆಯ ಬಗ್ಗೆ ಮಿಷನ್ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬುದು ಇಲ್ಲಿನ ಪ್ರಶ್ನೆ. ಅಸ್ಪೃಶ್ಯರನ್ನು ಹಿಂದೂಗಳ ದಾಸ್ಯದಿಂದ ಅವರು ಬಿಡಿಸುತ್ತಾರೆಯೇ? ಅಥವಾ ಹಿಂದೂಗಳನ್ನು ಮತ್ತು ಹಿಂದೂಗಳನ್ನು ಪ್ರತಿನಿಧಿಸುವ ಕಾಂಗ್ರೆಸ್ ಪಕ್ಷವನ್ನು ಓಲೈಸುವ ನಿಟ್ಟಿನಲ್ಲಿ ಅವರು ಜಂಟಿ ಮತಕ್ಷೇತ್ರಗಳಿಗೆ ಒಪ್ಪಿ ಅಸ್ಪೃಶ್ಯರನ್ನು ಅವರಿಗಾಗಿ ಕಾಯುತ್ತಿರುವ ತೋಳಗಳ ಬಾಯಿಗೆ ಹಾಕುತ್ತಾರೆಯೇ? ಮಹಾಪ್ರಭುಗಳ ಸರಕಾರವು ಅಧಿಕಾರವನ್ನು ತ್ಯಾಗಮಾಡುವ ಮೊದಲು, ಸ್ವರಾಜ್ಯವು

ಅಸ್ಪೃಶ್ಯರ ಕೊರಳಿಗೆ ಉರುಳಾಗುವುದಿಲ್ಲ ಎಂಬುದರ ಬಗ್ಗೆ ಆಶ್ವಾಸನೆಯನ್ನು ನೀಡಬೇಕು ಎಂದು ಮಹಾಪ್ರಭುಗಳ ಸರಕಾರವನ್ನು ಒತ್ತಾಯಿಸುವ ಹಕ್ಕು ಅಸ್ಪೃಶ್ಯರಿಗೆ ಇದೆ.

೯. ಪರಿಶಿಷ್ಟ ಜಾತಿಗಳವರ ವಿಷಯದಲ್ಲಿ ಬ್ರಿಟಿಷರಿಗೆ ನೈತಿಕವಾದ ಹೊಣೆಯಿದೆ ಎಂಬುದನ್ನು ಹೇಳಲು ತಮ್ಮ ಅನುಮತಿಯನ್ನು ಬೇಡುತ್ತೇನೆ. ಅವರಿಗೆ ಎಲ್ಲಾ ಅಲ್ಪಸಂಖ್ಯಾತರ ವಿಷಯದಲ್ಲಿಯೂ ಹೊಣೆಯಿರಬಹುದು. ಆದರೆ ಅಂತಹ ಹೊಣೆಯು ಅವರಿಗೆ ಅಸ್ಪೃಶ್ಯರ ಬಗೆಗೆ ಇರುವ ನೈತಿಕ ಹೊಣೆಗೆ ಎಂದೂ ಸಾಟಿಯಾಗಲಾರದು. ಆದರೆ ಇದನ್ನು ಎಷ್ಟು ಅಲ್ಪ ಮಂದಿ ಬ್ರಿಟಿಷರು ಅರಿತಿರುವರೆಂಬುದೂ, ಅದಕ್ಕಿಂತ ಇನ್ನೂ ಕಡಿಮೆ ಪ್ರಮಾಣದ ಬ್ರಿಟಿಷರು ತಮ್ಮ ಹೊಣೆಗಾರಿಕೆಯನ್ನು ನಿಭಾಯಿಸಲು ಸಿದ್ಧರಿರುವರೆಂಬುದೂ ಶೋಚನೀಯವಾದದ್ದಾಗಿವೆ. ತಮ್ಮ ಪ್ರಭುತ್ವವನ್ನು ಭಾರತದಲ್ಲಿ ಸಾಧಿಸಿದುದಕ್ಕೆ ಬ್ರಿಟಿಷರು ಅಸ್ಪೃಶ್ಯರಿಗೆ ಕೃತಜ್ಞರಾಗಿರಬೇಕು. ಭಾರತವನ್ನು ಸ್ವಾಧೀನಪಡಿಸಿಕೊಳ್ಳಲು ಕ್ಲೈವ್‌ಗಳು, ಹೇಸ್ಟಿಂಗ್ಸ್‌ಗಳು, ಕೂಟ್ಸ್‌ಗಳಂತಹವರು ಕಾರಣರೆಂದು ಹಲವು ಬ್ರಿಟಿಷರು ನಂಬುತ್ತಾರೆ. ಇದಕ್ಕಿಂತ ದೊಡ್ಡ ತಪ್ಪು ಇನ್ನೊಂದಿರಲಾರದು. ಭಾರತವನ್ನು ಗೆಲ್ಲಲು ಭಾರತದ ಸೇನೆಯೇ ಬೇಕಾಯಿತು ಮತ್ತು ಆ ಭಾರತದ ಸೇನೆಯು ಅಸ್ಪೃಶ್ಯರ ಸೇನೆಯೇ ಆಗಿತ್ತು. ಅಸ್ಪೃಶ್ಯರು ಸಹಾಯಮಾಡದೇ ಹೋಗಿದ್ದರೆ, ಬ್ರಿಟಿಷರಿಗೆ ಭಾರತವನ್ನು ಗೆಲ್ಲುವುದು ಅಸಾಧ್ಯವೇ ಆಗುತ್ತಿತ್ತು. ಉದಾಹರಣೆಗೆ ಬ್ರಿಟಿಷ್ ಆಡಳಿತಕ್ಕೆ ಅಡಿಪಾಯ ಹಾಕಿದ ಪ್ಲಾಸೀ ಕದನವನ್ನೇ ತೆಗೆದುಕೊಳ್ಳಿ, ಅಥವಾ ಭಾರತವನ್ನು ಸಂಪೂರ್ಣವಾಗಿ ಗೆಲ್ಲುವ ಕೊನೆಯ ಹಂತದ ಕಿರ್ಕೀ ಕದನವನ್ನೇ ತೆಗೆದುಕೊಳ್ಳಿ. ಇವೆರಡೂ ನಿರ್ಣಾಯಕ ಕದನಗಳಲ್ಲಿ ಬ್ರಿಟಿಷರ ಪರವಾಗಿ ಹೋರಾಡಿದ ಸೈನಿಕರು ಅಸ್ಪೃಶ್ಯರು.

೧೦. ತಮಗಾಗಿ ಹೋರಾಡಿದ ಅಸ್ಪೃಶ್ಯರಿಗೆ ಬ್ರಿಟಿಷರು ಏನು ಮಾಡಿದ್ದಾರೆ? ಅವರು ಮಾಡಿದ ಮೊದಲ ಕೆಲಸವೆಂದರೆ ತಮ್ಮ ಸೇನೆಗಾಗಿ ಅಸ್ಪೃಶ್ಯರ ನೇಮಕಾತಿಯನ್ನು ರದ್ದುಮಾಡಿದ್ದು. ಚರಿತ್ರೆಯಲ್ಲಿ ಇದಕ್ಕಿಂತ ಹೆಚ್ಚು ನಿರ್ದಯವಾದ, ಕೃತಘ್ನತೆಯಿಂದ ಕೂಡಿದ ಮತ್ತು ಕ್ರೂರ ಕೃತ್ಯ ಬೇರೆ ಕಾಣುವುದು ಕಷ್ಟಸಾಧ್ಯ. ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ಮತ್ತು ೧೮೫೭ರಲ್ಲಿ ಪ್ರಬಲವಾದ ದೇಶೀಯ ಸೈನ್ಯಗಳು ನಡೆಸಿದ ದಂಗೆಯಲ್ಲಿ ತಮ್ಮ ಸಾಮ್ರಾಜ್ಯವನ್ನು ಕಾಯ್ದ ಅಸ್ಪೃಶ್ಯರನ್ನು ನಂತರ ತಮ್ಮ ಸೈನ್ಯದಿಂದ ದೂರವಿಟ್ಟ ಬ್ರಿಟಿಷರು ಅವರನ್ನು ಸಂಪೂರ್ಣವಾಗಿ ಮರತೇ ಬಿಟ್ಟರು. ತಮ್ಮ ಕೃತ್ಯದ ಪರಿಣಾಮವೇನಾಗಬಹುದೆಂದೂ ಯೋಚಿಸದೆ, ಒಂದು ಸಣ್ಣ ಆಜ್ಞೆಯನ್ನು ಹೊರಡಿಸಿ ಅಸ್ಪೃಶ್ಯರಿಗೆ ಇದ್ದ ಅನ್ನದ ದಾರಿಯನ್ನು ಮುಚ್ಚಿದರು ಮತ್ತು ಅವರು ಈ ಮೊದಲು ಇದ್ದ ಅವನತಿಯ ಪಾತಾಳಕ್ಕೆ ಮತ್ತೆ ಅವರನ್ನು ನೂಕಿದರು. ಅಸ್ಪೃಶ್ಯರು ತಮ್ಮ ಸಾಮಾಜಿಕ ದೌರ್ಬಲ್ಯವನ್ನು ಮೆಟ್ಟಿನಿಲ್ಲುವಂತೆ ಮಾಡಲು ಅವರಿಗೆ ಬ್ರಿಟಿಷರು ಮಾಡಿದ್ದೇನು? ಇಲ್ಲಿಯೂ ಉತ್ತರವು ನಕಾರಾತ್ಮಕವಾಗಿಯೇ ಇದೆ. ಶಾಲೆಗಳು, ಭಾವಿಗಳು ಮತ್ತು ಸಾರ್ವಜನಿಕ ಸ್ಥಳಗಳು ಅವರ ಪಾಲಿಗೆ ಮುಚ್ಚಲ್ಪಟ್ಟಿದ್ದವು. ಸಾರ್ವಜನಿಕ ಹಣದಿಂದ ನಡೆಸಲ್ಪಡುತ್ತಿರುವ ಸಂಸ್ಥೆಗಳಿಗೆ ಮುಕ್ತವಾಗಿ ಪ್ರವೇಶಿಸುವ ಅಧಿಕಾರವನ್ನು ಅಸ್ಪೃಶ್ಯರಿಗೆ ನೀಡಬೇಕಾಗಿದ್ದುದು ಬ್ರಿಟಿಷರ ಕರ್ತವ್ಯವಾಗಿತ್ತು. ಅಂತಹುದೇನನ್ನೂ ಮಾಡದ ಅವರು ಮಾಡಿದ ತುಚ್ಛವಾದ ಕೆಲಸವೆಂದರೆ, ಅಸ್ಪೃಶ್ಯತೆಯು ಹುಟ್ಟಿದುದು ತಮ್ಮಿಂದ ಅಲ್ಲ ಎಂಬ ಸಮರ್ಥನೆಯನ್ನು ಮುಂದಿಟ್ಟದ್ದು. ಹೌದು, ಅಸ್ಪೃಶ್ಯತೆಯ ಉಗಮಕ್ಕೆ ಬ್ರಿಟಷರು ಕಾರಣರಲ್ಲದಿರಬಹುದು. ಆದರೆ, ಸದ್ಯದಲ್ಲಿ ಅವರು ದೇಶದ ಪ್ರಭುತ್ವವನ್ನು ನಡೆಸುತ್ತಿರುವುದರಿಂದ ಅಸ್ಪೃಶ್ಯತೆಯ ನಿವಾರಣೆಯು ಅವರ ಹೊಣೆಯಾಗಿತ್ತು. ತನ್ನ ಕಾರ್ಯಭಾರದ, ಹೊಣೆಗಾರಿಕೆಯ ಅರಿವಿದ್ದ ಯಾವ ಸರಕಾರವೂ ಈ ಕರ್ತವ್ಯದಿಂದ ತಪ್ಪಿಸಿಕೊಳ್ಳುತ್ತಿರಲಿಲ್ಲ. ಬ್ರಿಟಿಷ್ ಸರಕಾರವು ಮಾಡಿದುದೇನು?

ಹಿಂದೂ ಸಮಾಜದ ಸುಧಾರಣೆಗೆ ಸಂಬಂಧಿಸಿದ ಯಾವ ಸಮಸ್ಯೆಯನ್ನೂ ಅವರು ಕಣ್ಣೆತ್ತಿ ನೋಡದೆ ನಿಷ್ಕ್ರಿಯರಾಗಿದ್ದರು. ಜುಗುಪ್ಸೆಯನ್ನು ಹುಟ್ಟಿಸುವಂತಹ ಅಥವಾ ಅರಿವಿನಿಂದ ಈಗ ಮರೆಯಾಗಿಯೇ ಹೋಗಿರುವ ತಮ್ಮ ಚರಿತ್ರೆಯಲ್ಲಿ ತಾವು ಹೆಣಗುತ್ತಾ, ಸಂಕಷ್ಟಗಳನ್ನು ಅನುಭವಿಸುತ್ತಾ ಬದುಕಿದ್ದ, ಅವರನ್ನು ಸತ್ತ ಜೀವನವನ್ನು ಸಾಗಿಸುವಂತೆ ಮಾಡಿದ್ದ ದೇಶೀಯ ಸರಕಾರಗಳಿಗೂ, ಈಗ ಅದೇ ಬದುಕನ್ನು ಸಾಗಿಸುವಂತೆ ಮಾಡಿರುವ ಬ್ರಿಟಷ್ ಸರಕಾರಕ್ಕೂ ಯಾವುದೇ ರೀತಿಯ ಅಂತರವನ್ನೂ ಅವರು ಕಾಣುವುದು ಸಾಧ್ಯವಿಲ್ಲ. ರಾಜಕೀಯದ ದೃಷ್ಟಿಯಿಂದ, ಆಗಿರುವ ಬದಲಾವಣೆಯು ಅತ್ಯಲ್ಪ. ಹಿಂದೂಗಳ ದಬ್ಬಾಳಿಕೆಯು ಅವ್ಯಾಹತವಾಗಿ ಮುಂದುವರಿದೇ ಇದೆ. ಇದನ್ನು ನಿಯಂತ್ರಿಸುವ ಬದಲಿಗೆ ಬ್ರಿಟಿಷ್ ಸರಕಾರವು ಅದಕ್ಕೆ ಇನ್ನೂ ಕುಮ್ಮಕ್ಕನ್ನು ಕೊಡುತ್ತಿದೆ. ಸಾಮಾಜಿಕ ದೃಷ್ಟಿಯಿಂದ ಯಾವ ಪರಿಸ್ಥಿತಿಯು ಇದ್ದಿತೋ, ಅದೇ ಸ್ಥಿತಿಯನ್ನು ವಿಧೇಯವಾಗಿ ಪರಿಪಾಲಿಸಿಕೊಂಡು ಬಂದರು. ಮಾದರಿಗಾಗಿ ನೀಡಿದ ಕೋಟನ್ನು ಎದುರಿಗೆ ಇಟ್ಟುಕೊಂಡು, ಅದು ಹರಿದಿರುವ ಕಡೆ ಅದೇ ರೀತಿಯಾಗಿ ಹರಿದು, ತೇಪೆಹಾಕಿರುವ ಕಡೆ ಅದೇ ರೀತಿಯ ತೇಪೆಯನ್ನು ಹಾಕಿ ತಾನು ಹೊಲೆದ ಕೋಟನ್ನು ಹೆಮ್ಮೆಯಿಂದ ಪ್ರದರ್ಶಿಸಿದ ಚೀನೀ ದರ್ಜಿಯ ಕತೆಯನ್ನು ಇದು ಜ್ಞಾಪಕಕ್ಕೆ ತರುತ್ತದೆ. ಇದರ ಪರಿಣಾಮ? ಪರಿಣಾಮವೆಂದರೆ, ಭಾರತದಲ್ಲಿ ಬ್ರಿಟಿಷ್ ಪ್ರಭುತ್ವವು ಪ್ರಾರಂಭವಾಗಿ ಇನ್ನೂರು ವರ್ಷಗಳಾದವು, ಅಸ್ಪೃಶ್ಯರು ಅಸ್ಪೃಶ್ಯರಾಗಿಯೇ ಉಳಿದರು, ಅವರಿಗಾಗುತ್ತಿದ್ದ ಅನ್ಯಾಯಗಳಿಗೆ ಪರಿಹಾರವು ಮರೀಚಿಕೆಯಾಗಿಯೇ ಉಳಿಯಿತು ಮತ್ತು ಅವರ ಪ್ರಗತಿಯು ಪ್ರತಿ ಹಂತದಲ್ಲಿಯೂ ಕುಂಠಿತವಾಗುತ್ತಲೇ ಹೋಯಿತು. ಅಸ್ಪೃಶ್ಯರು ಅನುಭವಿಸುತ್ತಿರುವ ಎಲ್ಲಾ ದುರವಸ್ಥೆಗಳಿಗೂ ತಾಯಿಯಾಗಿರುವ, ಅಸ್ಪೃಶ್ಯರ ಆಜನ್ಮ ಶತ್ರುವಾಗಿರುವ ಬ್ರಾಹ್ಮಣಧರ್ಮವನ್ನು ಬಲಗೊಳಿಸಿದರು, ಅದಕ್ಕೆ ಉತ್ತೇಜನವನ್ನು ನೀಡಿದರು, ಇದಷ್ಟೇ ಬ್ರಿಟಿಷ್ ಆಳ್ವಿಕೆಯ ಸಾಧನೆ.

೧೧. ಬ್ರಿಟಿಷರು ರಾಜ್ಯಾಧಿಕಾರವನ್ನು ತೊರೆದು ಹೋಗುತ್ತಿದ್ದಾರೆಂದು ಘೋಷಿಸುವುದಕ್ಕಾಗಿ ತಾವು ಇಲ್ಲಿಗೆ ಬಂದಿದ್ದೀರಿ. "ಈ ವಿಧಾಯಕ ಶಕ್ತಿಯನ್ನು ಮತ್ತು ಅಧಿಕಾರವನ್ನು ಯಾರಿಗೆ ಒಪ್ಪಿಸಿ ಹೋಗುತ್ತಿದ್ದೀರಿ" ಎಂದು ಅಸ್ಪೃಶ್ಯನೊಬ್ಬ ತಮ್ಮನ್ನು ಕೇಳಿದರೆ ಅದು ತಪ್ಪಾಗುವುದಿಲ್ಲ. ಅದರ ಉತ್ತರ ಬ್ರಾಹ್ಮಣ ಮುಂದಾಳುಗಳಿಗೆ, ಅಂದರೆ ಅಸ್ಪೃಶ್ಯರನ್ನು ದಮನಿಸುವ, ಕ್ರೂರವಾಗಿ ನಡೆಸಿಕೊಳ್ಳುವ ಜನರಿಗೆ. ಬ್ರಿಟಿಷ್ ಸಾಮ್ರಾಜ್ಯದ ಅಂತ್ಯ ಹೀಗೆ ಆಗುವುದು ಬೇರೆ ಪಕ್ಷಗಳ ಅಂತಸ್ಸಾಕ್ಷಿಯನ್ನು ಚುಚ್ಚುವುದಿಲ್ಲ. ಆದರೆ ಬ್ರಿಟಿಷ್ ಲೇಬರ್ ಪಕ್ಷದ ನಿಲುವೇನು? ತಾನು ಯಾವಾಗಲೂ ದೀನದಲಿತರ, ದಮನಕ್ಕೆ ಒಳಗಾದವರ ಪರವೆಂದು ಲೇಬರ್ ಪಕ್ಷವು ಹೇಳಿಕೊಳ್ಳುತ್ತಿರುತ್ತದೆ ಅವರು ಇದನ್ನು ಆತ್ಮಸಾಕ್ಷಿಯಾಗಿ ಹೇಳುತ್ತಿದ್ದರೆ, ಅವರು ನಿಜವಾಗಿಯೂ ಭಾರತದ ಅರವತ್ತು ದಶಲಕ್ಷ ಅಸ್ಪೃಶ್ಯರಪರವಾಗಿ ನಿಲ್ಲುತ್ತಾರೆ, ಅವರ ಸ್ಥಾನಮಾನಗಳನ್ನು ರಕ್ಷಿಸುತ್ತಾರೆ, ಮತ್ತು ಯಾರು ಅಸ್ಪೃಶ್ಯರ ಶತ್ರುಗಳಾಗಿದ್ದಾರೆಯೋ, ಯಾರು ತಮ್ಮ ಧರ್ಮ ಮತ್ತು ದೈನಿಕ ಜೀವನದ ತತ್ತ್ವಗಳಿಂದಾಗಿ ಆಳಲು ಅರ್ಹರಲ್ಲವೋ ಅವರ ಕೈಗೆ ಅಧಿಕಾರವನ್ನು ಹಸ್ತಾಂತರಿಸುವುದಿಲ್ಲ ಎಂಬುದರಲ್ಲಿ ನನಗೆ ಸಂಶಯವಿಲ್ಲ. ಹೀಗೆ ಮಾಡುವುದರಿಂದ ತಾವು ಎಂದೆಂದೂ ಪರಿಶಿಷ್ಟ ಜಾತಿಗಳವರ ಸಂರಕ್ಷಕರೆಂದು ಹೇಳಿಕೊಳ್ಳುತ್ತಿದ್ದ ಬ್ರಿಟಷರು ಪರಿಶಿಷ್ಟ ಜಾತಿಗಳವರನ್ನು ಉಪೇಕ್ಷಿಸಿದ ಪಾಪದ ಪರಿಹಾರಾರ್ಥವಾಗಿಯಾದರೂ ಇದನ್ನು ಮಾಡಬೇಕು.

೧೨. ಅಸ್ಪೃಶ್ಯರು ತಮ್ಮ ಸಾಂವಿಧಾನಿಕ ಸಂರಕ್ಷಣೆಯ ಬಗ್ಗೆ ಎತ್ತಿದ್ದ ಪ್ರಶ್ನೆಗಳ ಬಗ್ಗೆ ಮಿಷನ್ ಉದಾರವಾದ ಮೌನವನ್ನು ತಳೆದಿರುವುದರಿಂದ ಆಗಿದ್ದ ನನ್ನ ಮನಸ್ಸಿನ ಕಳವಳವನ್ನು ಇಂತಹ ಉದ್ದವಾದ ಪತ್ರವನ್ನು ತಮಗೆ ಬರೆದು ಕಳೆದುಕೊಳ್ಳಬಯಸಿದ ಕಾರಣವೇನು? ಮಹಾಪ್ರಭುಗಳ ಸರಕಾರವು ಅಸ್ಪೃಶ್ಯರಿಗೆ

ನೀಡಿದ್ದ ವಚನಗಳ ಬಗ್ಗೆ ಮಿಷನ್ನಿನ ನಿಲುವು ಈ ಕಳವಳವನ್ನು ಇನ್ನಷ್ಟು ಅಧಿಕಗೊಳಿಸಿತು. ಮಿಷನ್ನಿನ ಈ ನಿಲುವು, ಲಾರ್ಡ್ ಪಾಮರ್‌ಸ್ಟನ್ ಅವರ "ನಮಗೆ ಶಾಶ್ವತ ಶತ್ರುಗಳಿಲ್ಲ, ಶಾಶ್ವತ ಮಿತ್ರರಿಲ್ಲ, ಶಾಶ್ವತವಾಗಿ ಇರುವುದು ನಮ್ಮ ಹಿತಾಸಕ್ತಿಗಳು" ಎಂಬ ನುಡಿಮುತ್ತು. ಪಾಮರ್‌ಸ್ಟನ್ ಅವರ ಈ ಉಕ್ತಿಯನ್ನು ತಮ್ಮ ಧ್ಯೇಯವಾಕ್ಯವನ್ನಾಗಿ ಮಿಷನ್ ಮಾಡಿಕೊಂಡಿದೆ ಎಂಬ ಅಭಿಪ್ರಾಯವು ಮೂಡುವ ಹಾಗಾದರೆ, ಎಂತಹ ಭಯಾನಕ ಪರಿಸ್ಥಿತಿ ಅಸ್ಪೃಶ್ಯರ ಮುಂದೆ ಧುತ್ತೆಂದು ನಿಲ್ಲುತ್ತದೆ ಎಂಬುದನ್ನು ಊಹಿಸಿಕೊಳ್ಳಿ. ನೀವು ಹಕ್ಕುಗಳಿಂದ ವಂಚಿತವಾದ ಬ್ರಿಟಿಷ್ ವರ್ಗದಿಂದಲೇ ಬಂದಿದ್ದೀರಿ. ಹಾಗಾಗಿ ಭಾರತದಲ್ಲಿ ಹಕ್ಕುಗಳಿಂದ ವಂಚಿತರಾದ ೬ ಕೋಟಿ ಜನರಿಗೆ ಆಗಬಹುದಾದ ವಂಚನೆಗೆ ತಾವು ಅವಕಾಶವನ್ನು ಕೊಡುವುದಿಲ್ಲವೆಮಬ ಪೂರ್ಣ ವಿಶ್ವಾಸವು ನನಗಿದೆ. ಆದುದರಿಂದಲೇ ಈ ಪ್ರಕರಣವನ್ನು ನಾನು ತಮ್ಮ ಮುಂದೆ ಇಟ್ಟಿದ್ದೇನೆ. ನಾನು ಹೇಳಬಹುದಾದರೆ, ಅಸ್ಪೃಶ್ಯರು ತಮಗಿಂತ ದೊಡ್ಡ ಸ್ನೇಹಿತರು ಮಿಷನ್ನಿನಲ್ಲಿ ಬೇರೆ ಯಾರೂ ಇಲ್ಲವೆಂಬ ಭಾವನೆಯನ್ನು ಹೊಂದಿದ್ದಾರೆ.

ತಮ್ಮ ವಿಶ್ವಾಸಿ,

**ಡಾ. ಬಿ.ಆರ್. ಅಂಬೇಡ್ಕರ್**

ರೈಟ್ ಆನರಬಲ್ ಎ.ವಿ. ಅಲೆಗ್ಸಾಂಡರ್,
ಸಿ.ಎಚ್.ಎಂ.ಪಿ., ಸದಸ್ಯರು, ಕ್ಯಾಬಿನೆಟ್ ಮಿಷನ್.
ವೈಸರಾಯ್ ಭವನ, ನವ ದೆಹಲಿ.

---

ಮೂಲ: ಡಾ. ಅಂಬೇಡ್ಕರ್ ಅವರು ಖಾಸಗಿಯಾಗಿ ಪ್ರಕಟಿಸಿದ ಪುಸ್ತಿಕೆ

# ೮. ಕ್ಯಾಬಿನೆಟ್ ಮಿಷನ್ ನೀಡಿದ ಹೇಳಿಕೆಯ ಬಗ್ಗೆ ಲಾರ್ಡ್ ಪೆಥಿಕ್ ಲಾರೆನ್ಸ್ ಅವರಿಗೆ ಬರೆದ ಪತ್ರ

೨೨, ಪೃಥ್ವಿರಾಜ್ ರಸ್ತೆ, ನವದೆಹಲಿ,
ದಿನಾಂಕ: ೧೯೪೬ರ ಮೇ ೨೨.

ಪ್ರಿಯ ಲಾರ್ಡ್ ಪೆಥಿಕ್ ಲಾರೆನ್ಸ್,

ಕ್ಯಾಬಿನೆಟ್ ಮಿಷನ್ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ನನಗೆ ಕೆಲವೊಂದು ಅಂಶಗಳಲ್ಲಿ ಸಂದಿಗ್ಧತೆ ಕಂಡುಬರುತ್ತಿದೆ. ಅವುಗಳೆಂದರೆ –

(೧) ೨೦ನೆಯ ಪ್ಯಾರಾದಲ್ಲಿರುವ 'ಅಲ್ಪಸಂಖ್ಯಾತ'ರು ಎಂಬ ಪದವು ಪರಿಶಿಷ್ಟ ಜಾತಿಗಳನ್ನೂ ಒಳಗೊಳ್ಳುತ್ತದೆಯೇ?

(೨) ನಾಗರಿಕರ, ಅಲ್ಪಸಂಖ್ಯಾತರ, ಗುಡ್ಡಗಾಡು ಜನಾಂಗಗಳ ಮತ್ತು ಪ್ರತ್ಯೇಕಿತ ಪ್ರದೇಶಗಳವರ ಹಕ್ಕುಗಳ ಬಗ್ಗೆ ಇರುವ ಸಲಹಾ ಸಮಿತಿಯು ಬಾಧಿತ ಜನತೆಯನ್ನು ಒಳಗೊಂಡಿರಬೇಕು ಎಂದು ೨೦ನೆಯ ಪ್ಯಾರಾ ಹೇಳುತ್ತದೆ. ಈ ಸಂಬಂಧಿತ ಜನಗಳನ್ನು ಸಲಹಾ ಸಮಿತಿಯು ಒಳಗೊಂಡಿದೆಯೇ ಎಂಬುದನ್ನು ನೋಡಿಕೊಳ್ಳುವವರು ಯಾರು?

(೩) ಬಾಧಿತ ಜನರಿಗೆ ಸಂಪೂರ್ಣ ಪ್ರಾತಿನಿಧ್ಯ ದೊರಕಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು, ಮಹಾಪ್ರಭುಗಳ ಸರಕಾರವು ಸಂವಿಧಾನ ಸಭೆಯ ಸದಸ್ಯರಲ್ಲದ ವ್ಯಕ್ತಿಗಳನ್ನು ಈ ಸಮಿತಿಗೆ ನಾಮಕರಣಮಾಡುವ ತನ್ನ ಹಕ್ಕನ್ನು ತಾನೇ ಇಟ್ಟುಕೊಳ್ಳಲು ಉದ್ದೇಶಿಸಿದೆಯೇ? ಸಂವಿಧಾನ ಸಭೆಯ ಮೂಲಕ ಭರ್ತಿಮಾಡುವ ವಿಧಾನದಿಂದ ಗುಡ್ಡಗಾಡು ಜನಾಂಗಗಳ ಹಾಗೂ ಪ್ರತ್ಯೇಕಿತ ಪ್ರದೇಶಗಳವರಿಗೆ ಪ್ರಾತಿನಿಧ್ಯವು ದೊರಕುವುದು ಸಾಧ್ಯವಿಲ್ಲದ ಕಾರಣ, ನಾಮಕರಣಮಾಡುವ ವಿಧಾನದಿಂದ ಈ ಕೊರತೆಯನ್ನು ತುಂಬುವುದು ಅಗತ್ಯವಾಗಿದೆ. ನಾಮಕರಣದ ಅಗತ್ಯವನ್ನು ಒಪ್ಪಿಕೊಂಡ ಮೇಲೆ, ಸಲಹಾ ಸಮಿತಿಯಲ್ಲಿ ಪರಿಶಿಷ್ಟ ಜಾತಿಗಳವರಿಗೆ ಸಂಪೂರ್ಣ ಪ್ರಾತಿನಿಧ್ಯವು ದೊರಕುವಂತೆ ಮಾಡಲು ಅವರಿಗೂ ಈ ನಾಮಕರಣ ಸದಸ್ಯತ್ವದ ನೀತಿಯ ಸೌಲಭ್ಯವು ದೊರಕುವುದೇ?

(೪) ಅಧಿಕಾರ ಹಸ್ತಾಂತರದ ವಿಷಯದಲ್ಲಿ ಉದ್ಭವಿಸಬಹುದಾದ ಕೆಲವು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ಕೇಂದ್ರ ಸಂವಿಧಾನ ಸಭೆ ಹಾಗೂ ಬ್ರಿಟನ್ ಸರಕಾರಗಳ ನಡುವೆ ಒಪ್ಪಂದ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಹೇಳಿಕೆಯ ೨೨ನೆಯ ಪ್ಯಾರಾದಲ್ಲಿ ನೀಡಲಾಗಿದೆ. ಕ್ರಿಪ್ಸ್ ಶಿಫಾರಸು ಮಾಡಿರುವ ಪ್ರಕಾರ, ಈ ಒಪ್ಪಂದದಲ್ಲಿ ಅಲ್ಪಸಂಖ್ಯಾತರ ಹಿತಸಂರಕ್ಷಣಾರ್ಥವಾಗಿ ಇರಬೇಕಾದ ವಿಧಿಗಳನ್ನು ಈ ಒಪ್ಪಂದದಲ್ಲಿ ಸೇರಿಸಲಾಗಿದೆಯೇ? ಅಂತಹ ವಿಧಿಯು ಇಲ್ಲದಿದ್ದ ಪಕ್ಷದಲ್ಲಿ, ಮಹಾಪ್ರಭುಗಳ ಸರಕಾರವು ಸಲಹಾ ಸಮಿತಿಯ ತೀರ್ಮಾನಗಳಿಗೆ ಸಂವಿಧಾನ ಸಭೆಯು ಬದ್ಧವಾಗಿರುವಂತೆ ಮಾಡಲು ಮಹಾಪ್ರಭುಗಳ ಸರಕಾರವು ಯಾವ ಕ್ರಮಗಳನ್ನು ಉದ್ದೇಶಿಸಿದೆ?

(೫) ಈ ಹೇಳಿಕೆಯಲ್ಲಿ ಯೂರೋಪಿಯನ್ನರನ್ನು 'ಸಾಮಾನ್ಯರು' ಎಂಬ ವರ್ಗದಲ್ಲಿ ಸೇರಿಸಲಾಗಿದೆ.

ಅಂದರೆ, ಯೂರೋಪಿಯನ್ನರು ಸಂವಿಧಾನ ಸಭೆಯ ಚುನಾವಣೆಗಳಲ್ಲಿ ಮತಹಾಕುವ ಹಕ್ಕನ್ನು ಹೊಂದಿರುತ್ತಾರೆ ಎಂದು ಅರ್ಥೈಸಬಹುದಾಗಿದೆ. ಸಂವಿಧಾನ ಸಭೆಯಲ್ಲಿ ಯೂರೋಪಿಯನ್ನರು ಯೂರೋಪಿಯನ್ ಅಭ್ಯರ್ಥಿಗಳನ್ನು ನಿಲ್ಲಿಸಬಹುದೇ? ಮಿಷನ್ನಿನ ಹೇಳಿಕೆಯಲ್ಲಿ ಈ ಬಗ್ಗೆ ಸ್ಪಷ್ಟತೆಯಿಲ್ಲ.

ಈ ಪ್ರಶ್ನೆಗಳಿಗೆ ಸ್ಪಷ್ಟೀಕರಣದ ಅಗತ್ಯವಿದೆ. ತಾವು ಈ ಪ್ರಶ್ನೆಗಳಿಗೆ ಉತ್ತರವನ್ನು ನೀಡುವ ಸೌಜನ್ಯವನ್ನು ತೋರಿಸಿದರೆ, ನಾನು ತಮಗೆ ಆಭಾರಿಯಾಗಿರುತ್ತೇನೆ. ನಾನು ಈ ರಾತ್ರಿ ದೆಹಲಿಯಿಂದ ಬಾಂಬೆಗೆ ತೆರಳುತ್ತಿದ್ದೇನೆ. ತಾವು ಈ ಮೇಲಿನ ಪ್ರಶ್ನೆಗಳಿಗೆ ಉತ್ತರವನ್ನು ನೀಡಲು ಉದ್ದೇಶಿಸಿದ್ದಲ್ಲಿ, ಅದನ್ನು ಈ ಮುಂದೆ ಕೊಟ್ಟಿರುವ ಬಾಂಬೆಯ ನನ್ನ ವಿಳಾಸಕ್ಕೆ ದಯವಿಟ್ಟು ಕಳುಹಿಸಿ.

ತಮ್ಮ ವಿಶ್ವಾಸಿ,
**ಡಾ. ಅಂಬೇಡ್ಕರ್***

ವಿಳಾಸ: ಬಿ.ಬಿ. ಅಂಡ್ ಸಿ.ಐ. ರೈಲ್ವೆ**,
ಸಲೂನ್ ಸಂಖ್ಯೆ ೨೭, ಸೆಂಟ್ರಲ್ ಸ್ಟೇಷನ್, ಬಾಂಬೆ

* * * * *

*ಅಧಿಕಾರದ ಹಸ್ತಾಂತರ, ಸಂಪುಟ ೭, ಸಂಖ್ಯೆ ೩೪೯, ಪುಟಗಳು ೬೬೧–೬೨

**ಬಾಂಬೆ–ಬರೋಡ ಮತ್ತು ಸೆಂಟ್ರಲ್ ಇಂಡಿಯಾ, ರೈಲ್ವೆ

# ೯. ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಲಾರ್ಡ್ ಪೆಥಿಕ್ ಲಾರೆನ್ಸ್ ಅವರು ನೀಡಿದ ಸ್ಪಷ್ಟೀಕರಣ

೧೯೪೬ರ ಮೇ ೨೮

ಮಿಷನ್ನಿನ ಇತ್ತೀಚಿನ ಹೇಳಿಕೆಯಲ್ಲಿನ ಕೆಲವೊಂದು ಅಂಶಗಳ ಬಗ್ಗೆ ಸ್ಪಷ್ಟೀಕರಣವನ್ನು ಬಯಸಿ ನೀವು ಬರೆದ ಮೇ ೨೨ರ ಪತ್ರಕ್ಕೆ ಧನ್ಯವಾದಗಳು.

ಸ್ವತಂತ್ರ ಭಾರತಕ್ಕೆ ಅದರದೇ ಸ್ವಂತವಾದ ಒಂದು ಹೊಸ ಸಂವಿಧಾನವನ್ನು ರಚಿಸುವ ವ್ಯವಸ್ಥೆಯನ್ನು ರೂಪಿಸುವುದು ಈ ನಿಯೋಗದ ಉದ್ದೇಶವೆಂಬುದನ್ನು ನೀವು ಅರಿತಿದ್ದೀರಿ. ಈ ಗುರಿಯನ್ನು ಸಾಧಿಸಲು ಪಕ್ಷಗಳು ಒಟ್ಟಾಗಿ ಮುಂದೆಬರುವಂತೆ ಮಾಡಲು ಒಂದು ಸಾಮಾನ್ಯ ನೆಲೆಗಟ್ಟನ್ನು ಒದಗಿಸುವುದು ಈ ಹೇಳಿಕೆಯ ಉದ್ದೇಶ. ಸಂಬಂಧಿಸಿದವರೆಲ್ಲರೂ ಇದನ್ನು ಒಪ್ಪಿಕೊಂಡು ಅದರಂತೆಯೇ ನಡೆಯುತ್ತಾರೆಂದು ನಾವು ನಂಬಿದ್ದೇವೆ. ಈ ಉದ್ದೇಶಕ್ಕೆ ಅಗತ್ಯವೆಂದು ನಮಗೆ ತೋರಿದ ಅಂಶಗಳಿಗೆ ಮಾತ್ರ ನಮ್ಮ ಹೇಳಿಕೆಯನ್ನು ಸೀಮಿತಗೊಳಿಸಿದ್ದೇವೆ. ಇವುಗಳ ಹೊರತಾಗಿ ಇರುವ ಅಂಶಗಳನ್ನು ಸಂವಿಧಾನ ಸಭೆಯು ತೀರ್ಮಾನಿಸುತ್ತದೆ.

ಹೇಳಿಕೆಯ ೨೦ನೆಯ ಪ್ಯಾರಾದಲ್ಲಿರುವ ಅಲ್ಪಸಂಖ್ಯಾತರು ಎಂಬ ಪದವು ಪರಿಶಿಷ್ಟ ಜಾತಿಯವರನ್ನೂ ಒಳಗೊಳ್ಳುತ್ತದೆಯೆಂಬುದು ನಮ್ಮ ಖಚಿತವಾದ ಅಭಿಪ್ರಾಯ. ಸಲಹಾ ಸಮಿತಿಯನ್ನು ರಚಿಸುವುದು ಸಂವಿಧಾನ ಸಭೆಯ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ ಮತ್ತು ಈ ಸಭೆಯು ಸಮಗ್ರವಾಗಿ ಪ್ರಾತಿನಿಧಿಕವಾಗಿರಲು ಬಯಸುತ್ತದೆ ಎಂದು ನಾವು ಭಾವಿಸುತ್ತೇವೆ.

ಸಂವಿಧಾನ ಸಭೆಯ ವ್ಯವಹಾರಗಳಲ್ಲಿ ನಾವು ತಲೆಹಾಕಬಾರದೆಂಬುದು ನಮ್ಮ ಉದ್ದೇಶ. ನಮ್ಮ ಹೇಳಿಕೆಯು, ಸಲಹಾ ಸಮಿತಿಯ ಸದಸ್ಯತ್ವವು ಕೇವಲ ಸಂವಿಧಾನ ಸಭೆಯ ಸದಸ್ಯರಿಗೆ ಮಾತ್ರ ಸೀಮಿತಗೊಳಿಸುವುದಿಲ್ಲ.

ಶನಿವಾರ ಸಂಜೆ ನಿಯೋಗವು ನೀಡಿದ ಇನ್ನೊಂದು ಹೇಳಿಕೆಯು ನಿಮ್ಮ ಇತರ ಪ್ರಶ್ನೆಗಳಿಗೆ ಸ್ಪಷ್ಟೀಕರಣವನ್ನು ನೀಡುತ್ತದೆಯೆಂದು ನಾನು ಭಾವಿಸಿದ್ದೇನೆ. ಅದರ ಪ್ರತಿಯೊಂದನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದೇನೆ.

ಅಲೆಗ್ಸಾಂಡರ್ ಅವರು ನೀವು ಅವರಿಗೆ ಬರೆದಿದ್ದ ಪತ್ರವು ಅವರಿಗೆ ತಲುಪಿದೆ ಎಂಬುದನ್ನು ನಿಮಗೆ ತಿಳಿಸುವಂತೆ ಹಾಗೂ ಅದಕ್ಕಾಗಿ ತಮಗೆ ಧನ್ಯವಾಧಗಳನ್ನು ಅರ್ಪಿಸುವಂತೆ ನನ್ನನ್ನು ಕೋರಿದ್ದಾರೆ. ಅವರು ಕೆಲದಿನಗಳ ಮಟ್ಟಿಗೆ ಸಿಲೋನ್ ಪ್ರವಾಸದಲ್ಲಿದ್ದಾರೆ ಮತ್ತು ಅಲ್ಲಿಂದ ಹಿಂತಿರುಗಿದ ನಂತರ ಅವರು ನಿಮ್ಮ ಪತ್ರಕ್ಕೆ ಉತ್ತರಿಸಲಿದ್ದಾರೆ"*

* * * * *

---

*ಅಧಿಕಾರದ ಹಸ್ತಾಂತರ, ಸಂಪುಟ ೭, ಸಂಖ್ಯೆ ೩೯೯, ಪುಟ ೭೨೩

# ೧೦. ಚರ್ಚಿಲ್ಲರನ್ನು ತಮ್ಮ ಸಮರ್ಥಕರನ್ನಾಗಿ ಅಂಬೇಡ್ಕರ್ ಕಾಣುತ್ತಾರೆ

ಲಂಡನ್, ಮೇ ೩೦

ಎಲ್ಲಾ ಮನುಷ್ಯರೂ ಜನ್ಮತಃ ಸ್ವತಂತ್ರರಾಗಿರುತ್ತಾರೆ, ಸಮಾನರಾಗಿರುತ್ತಾರೆ ಮತ್ತು ಜೀವಿಸುವ, ಸ್ವಾತಂತ್ರ್ಯದ ಹಾಗೂ ತಮ್ಮ ಅಭಿಲಾಷೆಗಳನ್ನು ಪೂರೈಸಿಕೊಳ್ಳುವ ವೃತ್ತಿಯನ್ನು ಅನುಸರಿಸುವ ಹಕ್ಕಿಗೆ ಅರ್ಹರಾಗಿರುತ್ತಾರೆ ಎಂಬ ಅಮೆರಿಕದ ಸ್ವಾತಂತ್ರ್ಯದ ಘೋಷಣೆಯ ವಿಶಾಲವಾದ ತತ್ತ್ವಗಳ ತಳಹದಿಯ ಮೇಲೆ ನಾವು ನಮ್ಮ ನಿಲುವನ್ನು ತೆಗೆದುಕೊಳ್ಳುತ್ತೇವೆ ಎಂದೂ ಚರ್ಚಿಲ್ ಹೇಳಿದರು.

'ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳು ೬ ಕೋಟಿ ಸಂಖ್ಯೆಯ ಅಸ್ಪೃಶ್ಯರಿಗೆ ಮಾಡಿರುವ ಅಪಮಾನ ಹಾಗೂ ದ್ರೋಹ. ಭಾರತದಲ್ಲಿರುವ ಎಲ್ಲಾ ಅಸ್ಪೃಶ್ಯರೂ ತಮಗೆ ತಾವು ಸಂಸತ್ತಿನಲ್ಲಿ ಮಾಡಿದ ಭಾಷಣಕ್ಕಾಗಿ ಕೃತಜ್ಞರಾಗಿದ್ದಾರೆ. ಅಸ್ಪೃಶ್ಯರ ಭವಿಷ್ಯವು ಕರಾಳವಾಗಿದೆ. ಅವರ ಹಿತವನ್ನು ರಕ್ಷಿಸುವುದು ನಿಮ್ಮ ಕೈಯಲ್ಲಿದೆ' ಎಂದು ಡಾ. ಅಂಬೇಡ್ಕರ್ ಅವರು ಚರ್ಚಿಲ್ ಅವರಿಗೆ ತಮ್ಮ ತಂತಿಸಂದೇಶದಲ್ಲಿ ಈ ಮುನ್ನ ತಿಳಿಸಿದ್ದರು.*

* * * * *

---

* ದ ಬಾಂಬೆ ಕ್ರಾನಿಕಲ್, ದಿನಾಂಕ ೧೯೪೬ರ ಮೇ ೩೧.

## ೧೧. ಬಾಂಬೆಯಲ್ಲಿ ಹಿಂದೂಗಳ ಮತ್ತು ಪರಿಶಿಷ್ಟ ಜಾತಿಗಳವರ ನಡುವೆ ನಡೆದ ಹೊಡೆದಾಟ

೧೯೪೬ರ ಜೂನ್ ೧

ಇಲ್ಲಿಯವರೆಗೆ ಐದು ಜನರ ಸಾವಿಗೆ ಮತ್ತು ಸುಮಾರು ಎಪ್ಪತ್ತು ಜನರು ಗಾಯಗೊಳ್ಳುವುದಕ್ಕೆ ವೋರ್ಲಿ ಪ್ರದೇಶದಲ್ಲಿ ಪದೇಪದೇ ಸಂಭವಿಸಿದ ಪರಿಶಿಷ್ಟ ಜಾತಿಗಳ ಸದಸ್ಯರ ಹಾಗೂ ಸವರ್ಣೀಯ ಹಿಂದೂಗಳ ನಡುವಿನ ಹೊಡೆದಾಟಗಳು ಕಳೆದ ನಾಲ್ಕು ದಿವಸಗಳಿಂದ ಕಾರಣವಾಗಿದ್ದವು. ಈಗ ಆ ಪ್ರದೇಶದಲ್ಲಿನ ವಾತಾವರಣವು ಶಾಂತವಾಗಿದ್ದು, ಅಲ್ಲಿ ಎಲ್ಲೆಡೆಯಲ್ಲಿಯೂ ಪ್ರಬಲವಾದ ಪೊಲೀಸ್ ಪಡೆಗಳು ಪಹರೆ ನಡೆಸುತ್ತಿವೆ. ಇಂದಿನ ಮಧ್ಯಾಹ್ನದ ವರೆಗಿನ ವರದಿಯಂತೆ ಕೇವಲ ಮೂರು ಸಣ್ಣಪುಟ್ಟ ಹಲ್ಲೆಯ ಘಟನೆಗಳು ಮಾತ್ರ ನಡೆದಿವೆ.

ವೋರ್ಲಿ ಪ್ರದೇಶದಲ್ಲಿ ಸಹಜ ಸ್ಥಿತಿಯನ್ನು ತರುವ ವಿಷಯದಲ್ಲಿ ಬಾಂಬೆಯ ಪ್ರಧಾನ ಮಂತ್ರಿಗಳಾದ ಶ್ರೀ ಬಿ.ಜಿ. ಖೇರ್ ಅವರು ಪರಿಶಿಷ್ಟ ಜಾತಿಗಳ ಮುಖಂಡರಾದ ಡಾ. ಅಂಬೇಡ್ಕರ್ ಅವರ ಸಂಗಡ ಇಂದು ಸಂಜೆ ಮಾತುಕತೆ ನಡೆಸಲಿದ್ದಾರೆ.

ಕಲ್ಲು ತೂರಾಟದ ಭಯದಿಂದಾಗಿ, ಕಾರ್ಮಿಕರು ಹಾಜರಾಗದಿದ್ದ ಕಾರಣ, ಕೆಲವು ಮಿಲ್ಲುಗಳ ಕಾರ್ಯನಿರ್ವಹಣೆಯಲ್ಲಿ ತೊಂದರೆಯುಂಟಾಯಿತು. ನಿನ್ನೆಯ ದಿನ ನಾಲ್ಕು ಮಿಲ್ಲುಗಳು ರಾತ್ರಿಯ ಪಾಳಿಯನ್ನು ರದ್ದುಗೊಳಿಸಬೇಕಾಯಿತು. ಒಂದು ಮಿಲ್ಲನ್ನು ಹೊರತುಪಡಿಸಿ, ಇತರ ಮಿಲ್ಲುಗಳಲ್ಲಿನ ಹಾಜರಾತಿಯು ಬಹಳ ಕಡಿಮೆ ಇತ್ತು.

**ತುರ್ತುಪರಿಸ್ಥಿತಿಯ ಘೋಷಣೆ**

ಸವರ್ಣೀಯ ಹಿಂದೂಗಳ ಮತ್ತು ಪರಿಶಿಷ್ಟ ಜಾತಿಗಳ ಕೆಲಸಗಾರರ ನಡುವೆ ಸಂಘರ್ಷಗಳಿಗೆ ಈಡಾದ ವೋರ್ಲಿ ಮತ್ತು ಡೆಲಿಸ್ಲೆ ರಸ್ತೆಯ ಕಾರ್ಮಿಕ ಪ್ರದೇಶಗಳಲ್ಲಿ ಬಾಂಬೆ ಸರಕಾರವು ತುರ್ತುಪರಿಸ್ಥಿತಿಯನ್ನು ಘೋಷಿಸಿದೆ.

ಇದರಿಂದಾಗಿ ಸಮಾಜಘಾತುಕ ವ್ಯಕ್ತಿಗಳನ್ನು ಬಂಧಿಸುವ ಮತ್ತು ಅವರನ್ನು ನಗರದಿಂದ ಹೊರಕ್ಕೆ ಕಳುಹಿಸುವ ವಿಶೇಷ ಅಧಿಕಾರವು ಪೋಲಿಸರಿಗೆ ದೊರಕಿ ಅವರು ಪರಿಸ್ಥಿತಿಯನ್ನು ತಹಬಂದಿಗೆ ತರಲು ಅನುಕೂಲವಾಗುತ್ತದೆ.

ನಿನ್ನೆಯ ದಿವಸ ಇರಿತಕ್ಕೊಳಗಾಗಿ ಆಸ್ಪತ್ರೆಯನ್ನು ಸೇರಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಇದುವರೆಗೆ ಮೃತಪಟ್ಟವರ ಸಂಖ್ಯೆಯು ಆರಕ್ಕೆ ಏರಿದೆ.

**ಪರಿಸ್ಥಿತಿಯ ಬಗ್ಗೆ ಡಾ. ಅಂಬೇಡ್ಕರ್ ಅವರ ವಿಷಾದ**

ವೊರ್ಲಿ ಚಾಲ್‌ಗಳಲ್ಲಿ ಹಾಗೂ ಡೆಲಿಸ್ಲೆ ರಸ್ತೆಯಲ್ಲಿ ನಡೆಯುತ್ತಿರುವ ಕಾನೂನು ಉಲ್ಲಂಘನೆಯ ಪ್ರಕರಣಗಳನ್ನು ಕೊನೆಗಾಣಿಸಲು ಬಾಂಬೆ ಸರಕಾರದ ಗೃಹಖಾತೆಯು ತಕ್ಷಣವೇ ನಿರ್ದಾಕ್ಷಿಣ್ಯ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ಧರಿಸಿದೆ.

ಸರಕಾರವು ಈ ರೀತಿಯ ದೃಢ ನಿರ್ಧಾರವನ್ನು ತೆಗೆದುಕೊಳ್ಳುವ ಆಲೋಚನೆಯಲ್ಲಿದ್ದರೆ, ಸರಕಾರೇತರ

ಸಂಸ್ಥೆಗಳಾದ ಸ್ಥಳೀಯ ಕಾಂಗ್ರೆಸ್ ಸಮಿತಿ, ಪರಿಶಿಷ್ಟ ಜಾತಿಗಳ ಒಕ್ಕೂಟ, ಸ್ಥಳೀಯ ಹಿಂದೂ ಸಂಸ್ಥೆಗಳು ಗಲಭೆ ಪೀಡಿತ ಪ್ರದೇಶದಲ್ಲಿ ಶಾಂತಿಯನ್ನು ಪುನಃ ಸ್ಥಾಪಿಸುವ ಬಗ್ಗೆ ಸಮಾಲೋಚನೆಗಳನ್ನು ನಡೆಸಿದವು.

ಇದಾದ ನಂತರ ಭಾರತ ಸರಕಾರದ ಕಾರ್ಮಿಕ ಸದಸ್ಯರಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರು ಬಾಂಬೆ ಸರಕಾರದ ಗೃಹಮಂತ್ರಿಗಳಾದ ಶ್ರೀ ಮೊರಾರ್ಜಿ ದೇಸಾಯಿಯವರನ್ನೂ, ನಂತರ ಪ್ರಧಾನ ಮಂತ್ರಿ ಶ್ರೀ ಬಿ.ಜಿ. ಖೇರ್ ಅವರನ್ನೂ ಭೇಟಿಮಾಡಿದರು. ಭೇಟಿಯ ಸಮಯದಲ್ಲಿ ಡಾ. ಅಂಬೇಡ್ಕರ್ ಅವರು ವೊರ್ಲಿಯಲ್ಲಿ ನಡೆದ ಗಲಭೆಗಳ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದರು ಮತ್ತು ಶಾಂತಿಯನ್ನು ಪುನಸ್ಥಾಪಿಸಲು ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಲಹೆ ಮಾಡಿದರು ಎಂದು ತಿಳಿದುಬಂದಿದೆ. ತಮ್ಮ ಹಿಂಬಾಲಕರಿಗೆ ಶಾಂತಿಯುತ ಹಾಗೂ ಸಂಯಮದಿಂದ ಇರುವಂತೆ ಸೂಚಿಸುವುದಾಗಿ ಮಂತ್ರಿಗಳಿಗೆ ಭರವಸೆಯನ್ನೂ ನೀಡಿದರು.

ಡಾ. ಅಂಬೇಡ್ಕರ್, ಶ್ರೀಯುತರಾದ ನಾಗಿನ್‌ದಾಸ್ ಟಿ ಮಾಸ್ತರ್ ಮತ್ತು ಎಸ್. ಕೆ. ಪಾಟೀಲ ಇವರು ಜಂಟಿಹೇಳಿಕೆಯಲ್ಲಿ ಸವರ್ಣೀಯ ಹಿಂದೂಗಳು, ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪರಿಶಿಷ್ಟ ಜನಾಂಗಳವರು – ಎಲ್ಲರಿಗೂ ಶಾಂತವಾಗಿರುವಂತೆ ಕೋರಿ ಎಲ್ಲರೂ ಸೇರಿ ಸಹಜಸ್ಥಿತಿಯನ್ನು ಪುನಃ ಸ್ಥಾಪಿಸುವಂತೆ ಮನವಿ ಮಾಡಲು ನಿರ್ಧರಿಸಿದರು ಎಂದು ತಿಳಿದುಬಂದಿದೆ.

ಚಾಲ್ ಸಮಿತಿಗಳನ್ನು ರಚಿಸಿ, ಶಾಂತಿಯನ್ನು ಕಾಪಾಡುವ ಜವಾಬ್ದಾರಿಯನ್ನು ಅವುಗಳಿಗೆ ಇತ್ತು ಮತ್ತು ಶಾಂತಿಭಂಗವಾದರೆ ಅವುಗಳನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ಗೃಹಸಚಿವರು ಡಾ. ಅಂಬೇಡ್ಕರ್ ಅವರಿಗೆ ಸಲಹೆ ಮಾಡಿದರು ಎಂದೂ ತಿಳಿದುಬಂದಿದೆ. ಪರಿಸ್ಥಿತಿಯು ಕೈಮೀರಿ ಹೋದರೆ, ಅದರ ಹೊಣೆಯು ಸಮಿತಿಯ ಸದಸ್ಯರ ಮೇಲೆ ಇರುತ್ತದೆ.

ಗೃಹ ಸಚಿವರ ಸೂಚನೆಯ ಮೇರೆಗೆ ಪೋಲಿಸ್ ಅಧಿಕಾರಿಗಳು ಕೆಲವೊಂದು ಆಜ್ಞೆಗಳನ್ನು ಹೊರಡಿಸಿ ಪರಿಸ್ಥಿತಿಯನ್ನು ಎದುರಿಸಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಸಮಾಜಘಾತುಕ ವ್ಯಕ್ತಿಗಳನ್ನು ಬಂಧಿಸಿ, ಪರಿಸ್ಥಿತಿಯು ತೀರ ಹದಗೆಟ್ಟು, ಅಗತ್ಯವಾದರೆ, ತುರ್ತು ಪರಿಸ್ಥಿತಿಯ ಅಧಿಕಾರಗಳನ್ನು ಉಪಯೋಗಿಸುವ ಆಲೋಚನೆಯೂ ಇದೆ.

ಕಳೆದ ನಾಲ್ಕು ದಿನಗಳಿಂದಲೂ ನಡೆಯುತ್ತಿರುವ ಗಲಭೆಗಳಿಂದಾಗಿ ಆರು ಜನರು ಸತ್ತು, ೭೦ ಜನರಿಗೆ ಗಾಯಗಳಾಗಿವೆ ಮತ್ತು ಮಿಲ್ಲಿನ ಬಹುತೇಕ ಪ್ರದೇಶಗಳನ್ನು ಭೀತಿಯ ವಾತಾವರಣದಲ್ಲಿ ಇಡಲಾಗಿದೆ.

**ಶ್ರೀ ರಾಜ್‌ಭೋಜ್ ಅವರ ಹೇಳಿಕೆ**

ವೊರ್ಲಿಯ ಚಾಲ್‌ಗಳಿಗೆ ಭೇಟಿಯನ್ನು ಇತ್ತ ನಂತರ, ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಮಹಾಕಾರ್ಯದರ್ಶಿ ಶ್ರೀ ಪಿ.ಎನ್. ರಾಜ್‌ಭೋಜ್ ಅವರು ಒಂದು ಹೇಳಿಕೆಯನ್ನು ನೀಡಿ ತಮ್ಮ ಹಿಂಬಾಲಕರಲ್ಲಿ ಹಲವರ ಪರಿಸ್ಥಿತಿಯು ಗಂಭೀರವಾಗಿದೆ. ತಮ್ಮ ಮೇಲೆ ಹಲ್ಲೆ ನಡೆಯಬಹುದೆಂಬ ಭೀತಿಯಿಂದ ಅವರು ಮಿಲ್ಲುಗಳಿಗೆ ಹೋಗುತ್ತಿಲ್ಲ. ಅವರಲ್ಲಿ ಹಲವರು ಒಂದು ವಾರದಿಂದ ರೇಷನ್ ಅಂಗಡಿಗಳಿಗೂ ಹೋಗಿಲ್ಲ. ಅವರಿಗೆ ಪೋಲಿಸ್ ರಕ್ಷಣೆ ಸುಲಭವಾಗಿ ಸಿಗುತ್ತಿಲ್ಲ ಮತ್ತು ಹಲವು ಮುಗ್ಧ ಜನರನ್ನು ಪೋಲಿಸರು ವಿನಾಕಾರಣ ಬಂಧಿಸಿದ್ದಾರೆ ಎಂದು ಅವರು ಹೇಳಿದರು.

ಇತ್ತೀಚಿನ ಗಲಭೆಗಳಲ್ಲಿ ತಮ್ಮ ಪಕ್ಷದ ೧೩೦ ಜನರಿಗೆ ಗಾಯಗಳಾಗಿವೆ ಮತ್ತು ಇಬ್ಬರು ಮೃತಪಟ್ಟಿದ್ದಾರೆ ಎಂದು ಶ್ರೀ ರಾಜ್‌ಭೋಜ್ ಅವರು ಹೇಳಿದರು.

**ಹಿಂದೂಗಳ ಮೇಲೆ ಹೆಚ್ಚಿನ ಹೊಣೆಗಾರಿಕೆ – ಬಾಂಬೆಯ ಮುಖಂಡರ ಹೇಳಿಕೆ**

"ಸಮಾಜದಲ್ಲಿ ದೊಡ್ಡ ಸಮುದಾಯವಾಗಿರುವುದರಿಂದ, ಹಿಂದೂಗಳ ಮೇಲೆ ಹೆಚ್ಚಿನ ಹೊಣೆಗಾರಿಕೆ ಇದೆ. ಪ್ರಚೋದಿಸಲ್ಪಟ್ಟಾಗಲೂ ಬಹುಸಂಖ್ಯಾತ ಸಮುದಾಯವು ಹೆಚ್ಚಿನ ಸಂಯಮವನ್ನು ಹೊಂದಿರಬೇಕು. ಈ ವಿಷಯಗಳಲ್ಲಿ ಪರಿಶಿಷ್ಟ ಜಾತಿಗಳಂತಹ ಅಲ್ಪಸಂಖ್ಯಾತ ಸಮುದಾಯಗಳವರ ಹಾಗೂ ಅವರ ನಡುವಿನ ಸಂಬಂಧ ಎಷ್ಟೇ ಹದಗೆಟ್ಟಿದ್ದರೂ, ಅಲ್ಪಸಂಖ್ಯಾತರ ಜೀವ, ಸ್ವಾತಂತ್ರ್ಯ ಮತ್ತು ಆಸ್ತಿಪಾಸ್ತಿಗಳು ಕ್ಷೇಮವಾಗಿವೆ ಎಂಬುದರ ಬಗ್ಗೆ ಅವರಿಗೆ ಆಶ್ವಾಸನೆಯನ್ನು ನೀಡಬೇಕು" ಎಂದು ಡಾ. ಅಂಬೇಡ್ಕರ್, ಶ್ರೀ ನಾಗಿನ್‌ದಾಸ್ ಟಿ. ಮಾಸ್ತರ್ ಮತ್ತು ಶ್ರೀ ಎಸ್.ಕೆ. ಪಾಟೀಲ್ ಅವರು ವೋರ್ಲಿ ಗಲಭೆಗಳನ್ನು ಕುರಿತು ಜೂನ್ ಮೂರರಂದು ನೀಡಿದ ತಮ್ಮ ಜಂಟಿ ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

ಅವರ ಹೇಳಿಕೆಯ ಪಾಠ ಹೀಗಿದೆ. "ಈಗ ಕೆಲವು ದಿನಗಳಿಂದ ವೋರ್ಲಿ, ನಾಯಿಗಮ್, ಮತ್ತು ಡೆಲಿಸಿ ರಸ್ತೆಗಳ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗಳವರು ಮತ್ತು ಸವರ್ಣೀಯ ಹಿಂದೂಗಳ ನಡುವೆ ನಡೆದ ದುರದೃಷ್ಟಕರ ಘಟನೆಗಳಿಂದ ನಮಗೆ ಅತೀವ ನೋವಾಗಿದೆ. ಈ ಗಲಭೆಗಳಲ್ಲಿ ಈಗಾಗಲೇ ಮೂರು ಜನರು ಪ್ರಾಣಗಳನ್ನು ಕಳೆದುಕೊಂಡಿದ್ದು, ಹಲವರಿಗೆ ಗಾಯಗಳಾಗಿವೆ. ನಮ್ಮ ಅಭಿಪ್ರಾಯದಲ್ಲಿ, ಸದರಿ ಪ್ರದೇಶಗಳಲ್ಲಿನ ಶಾಂತಿಯು ಕದಡುವುದಕ್ಕೆ ಕಾರಣವಾಗಿರುವ ಈ ಎರಡೂ ಸಮುದಾಯಗಳವರ ನಡುವಿನ ಇಂತಹ ಪರಸ್ಪರ ಹೊಡೆದಾಟಕ್ಕೆ ಯಾವುದೇ ಕಾರಣಗಳು ಇಲ್ಲ. ಕೆಲವು ವಿಷಯಗಳಲ್ಲಿ ಪ್ರಾಮಾಣಿಕ ಮತ್ತು ತೀವ್ರವಾದ ಭಿನ್ನಾಭಿಪ್ರಾಯಕ್ಕೆ ಕಾರಣಗಳು ಇವೆಯೆಂದು ಭಾವಿಸಿದ ಪಕ್ಷದಲ್ಲಿಯೂ ಪ್ರತೀಕಾರದ ಭಾವನೆಯಿಂದ ನಡೆಯುವ ಇಂತಹ ಕೃತ್ಯಗಳು ಏನನ್ನೂ ಸಾಧಿಸುವುದಿಲ್ಲ. ಜಗಳಗಳನ್ನು ಪರಿಹರಿಸಿ ನ್ಯಾಯವನ್ನು ಪಡೆಯುವುದಕ್ಕೆ ಬೇರೆಯ ಹಾಗೂ ಪರಿಣಾಮಕಾರೀ ಮಾರ್ಗಗಳಿವೆ. ಹಿಂಸಾಕೃತ್ಯಗಳು ಮತ್ತು ದ್ವೇಷದ ಭಾವನೆಗಳು ನಗರದ ಒಳ್ಳೆಯ ಹೆಸರಿಗೆ ಮಸಿಯನ್ನು ಬಳಿಯುತ್ತವೆ ಮತ್ತು ಹಲವು ಮುಗ್ಧ ಜನರ ಮೇಲೆ ಹಲ್ಲೆ ಹಾಗೂ ಸಾವಿಗೆ ಕಾರಣವಾಗುತ್ತವೆ. ಈ ಘಟನೆಗಳಿಗೆ ನಾವು ಯಾರ ಮೇಲೂ ಆಪಾದನೆಯನ್ನು ಹೊರಿಸಲು ಇಷ್ಟಪಡುವುದಿಲ್ಲವಾದರೂ, ಸಮಾಜದಲ್ಲಿ ದೊಡ್ಡ ಸಮುದಾಯವಾಗಿರುವ ಹಿಂದೂಗಳ ಹೆಗಲಿನ ಮೇಲೆ ಹೆಚ್ಚಿನ ಹೊಣೆಗಾರಿಕೆಯಿದೆ ಎಂಬುದನ್ನು ಒತ್ತಿಹೇಳಬಯಸುತ್ತೇವೆ.

ಅರ್ಥರಹಿತವಾದ ಈ ಹಿಂಸಾತ್ಮಕ ಗಲಭೆಗಳನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಮತ್ತು ಈ ಹುಚ್ಚುತನವನ್ನು ನಿಲ್ಲಿಸುವಂತೆ ನೀಡುವಂತೆ ಸಂಬಂಧಪಟ್ಟ ಎಲ್ಲಾ ಪಕ್ಷಗಳವರಲ್ಲಿ ನಾವು ಮನಃಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ. ಅವರು ಪರಸ್ಪರರ ನಡುವೆ ಹೊಣೆಯರಿತ ನಾಗರಿಕರಂತೆ ವರ್ತಿಸಿ, ತಮ್ಮ ತಮ್ಮ ದೈನಂದಿನ ಹಾಗೂ ಶಾಂತಿಯುತವಾದ ಕರ್ತವ್ಯಗಳತ್ತ ಮರಳುತ್ತಾರೆಂದು ನಾವು ನಂಬಿದ್ದೇವೆ"[೧]

* * * * *

೧. ಜೈ ಭೀಮ್, ೧೯೪೬ರ ಜೂನ್ ೧೧.

# ೧೨. ನೇರಕ್ರಮಗಳನ್ನು ತೆಗೆದುಕೊಳ್ಳಲು ಒಕ್ಕೂಟದ ಅಧಿಕಾರಿಗಳಿಂದ ನಿರ್ಧಾರ ಪ್ರಶ್ನಾತೀತ ಪುರಾವೆಗಳನ್ನೂ ದುರ್ಲಕ್ಷಿಸಿದ ಕ್ಯಾಬಿನೆಟ್ ಮಿಷನ್

ಪ್ರಾಮಾಣಿಕವಾಗಿ ಪರಿಶಿಷ್ಟ ಜಾತಿಗಳವರ ಪರವಾಗಿ ನಿಂತು, ಕ್ಯಾಬಿನೆಟ್ ಮಿಷನ್ ತಮಗೆ ಮಾಡಿರುವ ಅನ್ಯಾಯವನ್ನು ತಕ್ಷಣವೇ ಸರಿಪಡಿಸುವ ಪ್ರಯತ್ನಗಳನ್ನು ಕೈಗೆತ್ತಿಕೊಳ್ಳುವಂತೆ ಮಹಾಪ್ರಭುಗಳ ಸರಕಾರವನ್ನೂ ಮತ್ತು ಇಂಗ್ಲೆಂಡಿನ ಲೇಬರ್ ಪಕ್ಷವನ್ನೂ ತನ್ನ ಎರಡು ಸಾವಿರ ಪದಗಳ ಗೊತ್ತುವಳಿಯಲ್ಲಿ, ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ಕೋರಿದೆ. ಇದು ವಿಫಲವಾದರೆ, ನೇರಕ್ರಮಗಳನ್ನು ತೆಗೆದುಕೊಳ್ಳದೆ ಪರಿಶಿಷ್ಟ ಜಾತಿಗಳವರಿಗೆ ಬೇರೆ ಮಾರ್ಗವೇ ಇರುವುದಿಲ್ಲವೆಂದು ಕಾರ್ಯಕಾರಿ ಸಮಿತಿಯ ಗೊತ್ತುವಳಿಯಲ್ಲಿ ಅಭಿಪ್ರಾಯಪಡಲಾಗಿದೆ. “ತಮ್ಮ ರಕ್ಷಣೆಯ ದೃಷ್ಟಿಯಿಂದ ಅಂತಹ ಕ್ರಮಗಳು ಅನಿವಾರ್ಯವಾಗುವಂತೆ ಮಾಡುವ ಪರಿಸ್ಥಿತಿಯು ನಿರ್ಮಾಣವಾದರೆ, ಪರಿಶಿಷ್ಟ ಜಾತಿಗಳವರಿಗೆ ಆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅವರಿಗೆ ಕರೆನೀಡಲು ಸಮಿತಿಯು ಹಿಂದೆಮುಂದೆ ನೋಡುವುದಿಲ್ಲ”.

೧೯೪೬ರ ಜೂನ್ ೪ರಂದು ಭಾರತ ಸರಕಾರದ ಕಾರ್ಮಿಕ ಸದಸ್ಯರಾದ ಡಾ. ಅಂಬೇಡ್ಕರ್ ಅವರ ನಿವಾಸ ‘ರಾಜಗೃಹ’ದಲ್ಲಿ, ರಾವ್ ಬಹದ್ದೂರ್ ಎನ್. ಶಿವರಾಜ್ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ಸಭೆಸೇರಿತ್ತು.

ಜೂನ್ ೪ರ ಪ್ರಾತಃಕಾಲ ಅಧ್ಯಕ್ಷರು ಬಾಂಬೆ ಸೆಂಟ್ರಲ್‌ಗೆ ಧಾವಿಸಿ, ಡಾ. ಅಂಬೇಡ್ಕರ್ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿದ್ದರು. ದೇಶದ ವಿವಿಧ ಭಾಗಗಳಿಂದ ಬಂದಿದ್ದ ಒಕ್ಕೂಟದ ಕಾರ್ಯಕರ್ತರು ತಮ್ಮ ಮುಖಂಡರನ್ನು ಅಲ್ಲಿ ಭೇಟಿಮಾಡಿ ದೇಶಕ್ಕೆ ಹಾಗೂ ತಮ್ಮ ಸಮುದಾಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಮೇಲೆ ಚರ್ಚೆಯನ್ನು ನಡೆಸಿದರು. ಸವರ್ಣೀಯ ಹಿಂದೂಗಳಿಂದಾಗಿ ಪರಿಶಿಷ್ಟ ಜಾತಿಗಳವರು ಅನುಭವಿಸುತ್ತಿರುವ ಹೇಳತೀರದ ಕಷ್ಟಗಳನ್ನೂ, ಊಹಿಸಲೂ ಸಾಧ್ಯವಿಲ್ಲದ ಹತಾಶ ಪರಿಸ್ಥಿತಿಯನ್ನೂ, ಅವರು ತಮ್ಮ ಮುಖಂಡರ ಗಮನಕ್ಕೆ ತಂದರು.

ಮಧ್ಯಾಹ್ನ ಎರಡು ಗಂಟೆಗೆ ಕಾರ್ಯಕಾರಿ ಸಮಿತಿಯು ಈ ವಿಷಯಗಳನ್ನು ಚರ್ಚಿಸಲು ಸಭೆಸೇರಿತು. ಸಮಿತಿಯ ಒಟ್ಟು ೨೦ ಸದಸ್ಯರಲ್ಲಿ ಹನ್ನೊಂದು ಮಂದಿ ಸಭೆಯಲ್ಲಿ ಹಾಜರಿದ್ದರು. ಬಾಂಬೆಯಿಂದ ಐದು ಜನರೂ, ಮಧ್ಯ ಪ್ರಾಂತಗಳಿಂದ ನಾಲ್ವರೂ, ಮದರಾಸು ಮತ್ತು ಸಂಯುಕ್ತ ಪ್ರಾಂತಗಳಿಂದ ತಲಾ ಒಬ್ಬರೂ ಈ ಸಭೆಯಲ್ಲಿದ್ದರು. ಡಾ.ಅಂಬೇಡ್ಕರ್ ಅವರು ವಿಶೇಷ ಆಹ್ವಾನಿತರಾಗಿ ಅಲ್ಲಿ ಉಪಸ್ಥಿತರಿದ್ದರು. ಬ್ರಿಟಿಷ್ ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳಿಗೆ ಪರಿಶಿಷ್ಟ ಜಾತಿಗಳವರಿಂದ ಸಾಮಾನ್ಯವಾಗಿ ಕೇಳಿಬಂದಿರುವ ಪ್ರತಿಕ್ರಿಯೆಗಳ ಬಗ್ಗೆ ಒಕ್ಕೂಟದ ಮಹಾ ಕಾರ್ಯದರ್ಶಿ ಶ್ರೀ ಪಿ.ಎನ್. ರಾಜ್‌ಭೋಜ್ ಅವರು ನೀಡಿದ ವರದಿಯನ್ನು ಸಭೆಯು ಪರಿಶೀಲಿಸಿತು. ಸಂವಿಧಾನ ಸಭೆಯಲ್ಲಿ ತಮ್ಮ ಸಮುದಾಯದವರಿಗೆ ಯಾವ ಪ್ರಾತಿನಿಧ್ಯವನ್ನೂ ನೀಡದಿರುವುದಕ್ಕೆ ವರದಿಯಲ್ಲಿ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸಲಾಗಿದೆಯೆಂದು ತಿಳಿದುಬಂದಿದೆ.

ತಾತ್ಕಾಲಿಕ ಸರಕಾರದ ಬಗ್ಗೆ ಬ್ರಿಟಿಷ್ ಕ್ಯಾಬಿನೆಟ್ ಮಿಷನ್ ಮಾಡಿರುವ ಶಿಫಾರಸ್ಸುಗಳನ್ನು ಕುರಿತು ಕಾರ್ಯಕಾರಿ ಸಮಿತಿಯು ಹತ್ತು ಪ್ರಮುಖ ಗೊತ್ತುವಳಿಗಳನ್ನು ಅಂಗೀಕರಿಸಿತು.

ಪ್ರತ್ಯೇಕ ಮತಕ್ಷೇತ್ರಗಳ ಮೂಲಕ ಪರಿಶಿಷ್ಟ ಜಾತಿಗಳು ಶಾಸನಸಭೆಗಳಲ್ಲಿ ತಮ್ಮ ಪ್ರಾತಿನಿಧ್ಯವನ್ನು ಪಡೆಯುವ ಹಕ್ಕನ್ನು ಹೊಂದಿರಬೇಕು ಮತ್ತು ಪರಿಶಿಷ್ಟ ಜಾತಿಗಳವರ ವಾಸಕ್ಕಾಗಿ ಪ್ರತ್ಯೇಕ ಪ್ರದೇಶಗಳನ್ನು ರಚಿಸುವುದು ಸರಕಾರದ ಅನಿವಾರ್ಯ ಹೊಣೆಯೆಂಬುದನ್ನು ಸಂವಿಧಾನದಲ್ಲಿಯೇ ವಿಧಿಸಬೇಕು ಎಂಬ ಬೇಡಿಕೆಗಳನ್ನು ಸಲ್ಲಿಸಲು ಸಮಿತಿಯು ತೀರ್ಮಾನಿಸಿತು.

ತಮ್ಮ ಬೇಡಿಕೆಗಳು ನ್ಯಾಯಯುತವಾಗಿದ್ದು ಮತ್ತು ಮಾನವೀಯತೆಯ ದೃಷ್ಟಿಯಿಂದ ಕೂಡಿರುವುದರಿಂದ ಶತ್ರುಗಳು ಮಾಡುವ ಕುತಂತ್ರಗಳ ಹೊರತಾಗಿಯೂ ತಮ್ಮ ಹೋರಾಟದ ಯಶಸ್ಸಿನ ಬಗ್ಗೆ ಆತಂಕಪಡಬೇಕಾಗಿಲ್ಲವೆಂದೂ, ಧೈರ್ಯ ಮತ್ತು ಒಗ್ಗಟ್ಟಿನಿಂದ ಇದ್ದರೆ ಭಯಪಡುವ ಕಾರಣಗಳೇನೂ ಇರುವುದಿಲ್ಲ ಎಂದು ಸಮಿತಿಯು ಪರಿಶಿಷ್ಟ ಜಾತಿಗಳ ಜನತೆಗೆ ಆಶ್ವಾಸನೆಯನ್ನು ನೀಡಿತು.

ತೆಗೆದುಕೊಳ್ಳಬೇಕಾದ ನೇರಕ್ರಮಗಳನ್ನು ಪರಿಶೀಲಿಸಲು ಮತ್ತು ಅಂತಹ ಕ್ರಮಗಳನ್ನು ಪ್ರಾರಂಭಮಾಡಬೇಕಾದ ದಿನಾಂಕವನ್ನು ನಿಗದಿಗೊಳಿಸಲು ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಕಾರ್ಯಕಾರಿ ಸಮಿತಿಯು ಅಧ್ಯಕ್ಷರಿಗೆ ನೀಡಿತು.

ಪರಿಶಿಷ್ಟ ಜಾತಿಗಳ ಒಕ್ಕೂಟದ ಈ ಗೊತ್ತುವಳಿಯ ಪ್ರತಿಗಳನ್ನು ನವದೆಹಲಿಯಲ್ಲಿರುವ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ವೈಸರಾಯ್ ಅವರಿಗೂ ಹಾಗೂ ಲಂಡನ್ನಿನಲ್ಲಿರುವ ಬ್ರಿಟಿಷ್ ಪ್ರಧಾನಿ ಅಟ್ಲಿ ಮತ್ತು ಚರ್ಚಿಲ್ ಅವರಿಗೂ ಕಳುಹಿಸಲಾಗುತ್ತಿದೆ.

"ಪರಿಶಿಷ್ಟ ಜಾತಿಗಳವರ ಸಂರಕ್ಷಣಾ ಬೇಡಿಕೆಯನ್ನು ಮಾನ್ಯಮಾಡದೆಯಿದ್ದ ಪಕ್ಷದಲ್ಲಿ, ತಮ್ಮ ಬೇಡಿಕೆಗಳನ್ನು ಬ್ರಿಟಿಷರು ಒಪ್ಪುವಂತೆ ಮಾಡಲು ನೇರ ಕ್ರಮ ತೆಗೆದುಕೊಳ್ಳಲು ಪರಿಣಾಮಕಾರಿಯಾದ ಮಾರ್ಗೋಪಾಯಗಳ ಬಗ್ಗೆ ತೀರ್ಮಾನಿಸಲು ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಅಧ್ಯಕ್ಷರಾದ ರಾವ್ ಬಹದ್ದೂರ್ ಎನ್. ಶಿವರಾಜ್ ಅವರಿಗೆ ಸಮಿತಿಯು ನೀಡಿತು".

ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ಪರಿಶಿಷ್ಟ ಜಾತಿಗಳವರಿಗೆ ಅಗತ್ಯವಾದ ಸಾಂವಿಧಾನಿಕ ರಕ್ಷಣೆಗಳ ಬಗ್ಗೆ ಚಿಂತಿತವಾಗಿರುವುದರಿಂದ ಅದು ತನ್ನ ಗಮನವನ್ನು, ತಾತ್ಕಾಲಿಕ ಸರಕಾರದ ಮೇಲೆ ಇರಿಸುವುದಕ್ಕೆ ಬದಲಾಗಿ ರೂಪಿಸಲಾಗುವ ಭವಿಷ್ಯದ ಸಾಂವಿಧಾನಿಕ ವಿಧಿಗಳ ಮೇಲೆ ಕೇಂದ್ರೀಕರಿಸುತ್ತಿದೆ ಎಂದು ಕಾರ್ಯಕಾರಿ ಸಮಿತಿಯ ಪರವಾಗಿ ಅದರ ವಕ್ತಾರರೊಬ್ಬರು ಹೇಳಿದರು. 'ನಮ್ಮ ಆತ್ಮಗೌರವಕ್ಕೆ ಧಕ್ಕೆ ಬಾರದ ಹಾಗಿದ್ದರೆ ನಾವು ತಾತ್ಕಾಲಿಕ ಸರಕಾರದ ರಚನೆಯನ್ನು ಯಾರೇ ಮಾಡಿದರೂ ಅವರಿಗೆ ನಮ್ಮ ಸಹಕಾರವನ್ನು ಕೊಡಲು ಸಿದ್ಧರಿದ್ದೇವೆ' ಎಂದೂ ಅವರು ಹೇಳಿದರು.

ಭಾರತ–ಬ್ರಿಟಿಷ್ ಒಪ್ಪಂದವು ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಿಗುವ ರಕ್ಷಣೆಯ ಮೇಲೆ ಅವಲಂಬಿತವಾಗಿರುತ್ತದೆ ಎಂಬ ತನ್ನ ಎರಡನೆಯ ಹೇಳಿಕೆಯನ್ನು ನೀಡುವ ಮೂಲಕ ಬ್ರಿಟಿಷ್ ಸರಕಾರದ ಗೌರವವನ್ನು ಕ್ಯಾಬಿನೆಟ್ ಮಿಷನ್ ಸ್ವಲ್ಪ ಮಟ್ಟಿಗಾದರೂ ಪುನಃ ಪಡೆದುಕೊಂಡಿದೆ ಎಂದು ವಕ್ತಾರರು ಹೇಳಿದರು. ಪರಿಶಿಷ್ಟ ಜಾತಿಗಳ ಒಕ್ಕೂಟವು ಒತ್ತಾಯಿಸಿದುದು ಏನೆಂದರೆ, ಇಲ್ಲಿಯೇ ಮತ್ತು ಈಗಲೇ ಕ್ಯಾಬಿನೆಟ್ ಮಿಷನ್ನಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡಬೇಕು ಎಂಬುದು. ಮುಸ್ಲಿಮರಿಗೆ ಮಾಡಿರುವಂತೆಯೇ, ಪರಿಶಿಷ್ಟ ಜಾತಿಗಳವರಿಗಾಗಿ ಈ ತಿದ್ದುಪಡಿಗಳನ್ನು ಮಾಡುವುದರಲ್ಲಿ ಯಾವುದೇ ರೀತಿಯ ತೊಂದರೆಯೂ ಇಲ್ಲವೆಂದು ವಕ್ತಾರರು ನುಡಿದರು.

ಒಕ್ಕೂಟವು ತನ್ನ ಗುರಿಯು ವಿಫಲವಾದರೆ ಮಾತ್ರ ಗೊತ್ತುವಳಿಯಲ್ಲಿ ನೇರ ಕ್ರಮಗಳ ಬಗ್ಗೆ ನಮೂದಿಸಿರುವ ಷರತ್ತು ಕಾರ್ಯಗತವಾಗುತ್ತದೆ. ಅಷ್ಟರ ಹೊರತಾಗಿ ನೇರಕ್ರಮಗಳ ಬಗ್ಗೆ ತಮಗೆ

ಒಲವೇನೂ ಇಲ್ಲ ಎಂದು ಅವರು ತಿಳಿಸಿದರು.

**ಕ್ಯಾಬಿನೆಟ್ ಮಿಷನ್ನಿಗೆ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಂತಿಮ ಗಡುವು**

[ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ಜೂನ್ ಮೊದಲ ವಾರದಲ್ಲಿ ಬಾಂಬೆಯಲ್ಲಿ ನಡೆದ ತನ್ನ ಸಭೆಯಲ್ಲಿ ಅಂಗೀಕರಿಸಿದ ಗೊತ್ತುವಳಿಯ ಪೂರ್ಣಪಾಠ ಕೆಳಕಂಡಂತಿದೆ]

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟವು ಕೆಳಕಂಡ ವಿಷಯಗಳನ್ನು ತನ್ನ ಗಮನಕ್ಕೆ ತಂದುಕೊಂಡಿದೆ – ೧) ಭಾರತದ ಸಂವಿಧಾನದ ಬಗ್ಗೆ ಕ್ಯಾಬಿನೆಟ್ ಮಿಷನ್ ನೀಡಿದ ಮೊದಲ ಹೇಳಿಕೆ, ೨) ತಮ್ಮ ಹೇಳಿಕೆಯನ್ನು ವಿವರಿಸಲು ಮಿಷನ್ನಿನ ಸದಸ್ಯರು ನೀಡಿದ ಪತ್ರಿಕಾ ಸಂದರ್ಶನಗಳು, ೩) ಕ್ಯಾಬಿನೆಟ್ ಮಿಷನ್ ನೀಡಿದ ಎರಡನೆಯ ಹೇಳಿಕೆ, ಮತ್ತು ೪) ಕ್ಯಾಬಿನೆಟ್ ಮಿಷನ್ ಮತ್ತು ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ ಅವರ ನಡುವೆ ನಡೆದ ಪತ್ರವ್ಯವಹಾರ. ಕ್ಯಾಬಿನೆಟ್ ಮಿಷನ್ ನೀಡಿದ ಹೇಳಿಕೆಗಳಲ್ಲಿನ ಹಲವು ಅಂಶಗಳ ಬಗ್ಗೆ ಕಾರ್ಯಕಾರಿ ಸಮಿತಿಯು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಯಸುತ್ತದೆ. ಸದ್ಯಕ್ಕೆ, ಪರಿಶಿಷ್ಟ ಜಾತಿಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಮಾತ್ರ ಭಾರತದ ಭವಿಷ್ಯದ ಸಂವಿಧಾನದ ಬಗ್ಗೆ ಕ್ಯಾಬಿನೆಟ್ ಮಿಷನ್ನಿನ ಕಾರ್ಯ ಯೋಜನೆಗಳನ್ನು ಚರ್ಚಿಸಬಯಸುತ್ತದೆ.

೨. ತಮ್ಮ ೫೦೦೦ ಪದಗಳ ಹೇಳಿಕೆಯಲ್ಲಿ ಒಂದೇ ಒಂದು ಬಾರಿಯೂ ಪರಿಶಿಷ್ಟ ಜಾತಿಗಳವರ ಹೆಸರನ್ನು ಎತ್ತಿಲ್ಲ ಎಂಬುದರ ಬಗ್ಗೆ ಕಾರ್ಯಕಾರಿ ಸಮಿತಿಯು ತನ್ನ ಅಪಾರವಾದ ಕ್ರೋಧವನ್ನು ವ್ಯಕ್ತಪಡಿಸುತ್ತದೆ. ಕ್ಯಾಬಿನೆಟ್ ಮಿಷನ್ನಿನ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಅಸ್ಪೃಶ್ಯರ ಇರುವಿಕೆಯನ್ನು, ಅವರ ದೌರ್ಬಲ್ಯವನ್ನು, ಅವರ ಮೇಲೆ ದಿನನಿತ್ಯ ಸವರ್ಣೀಯ ಹಿಂದೂಗಳು ಎಸಗುತ್ತಿರುವ ದೌರ್ಜನ್ಯಗಳನ್ನು ಕ್ಯಾಬಿನೆಟ್ ಮಿಷನ್ ಅರಿತಿಲ್ಲವೆಂದು ಹೇಳಲಾಗುವುದಿಲ್ಲ. ಅಸ್ಪೃಶ್ಯರು ಸವರ್ಣೀಯರಿಗಿಂತ ಭಿನ್ನವಾದವರು ಮತ್ತು ಅವರು ಭಾರತದ ರಾಷ್ಟ್ರೀಯ ಜೀವನದ ಒಂದು ಪ್ರತ್ಯೇಕ ಅಂಗ ಎಂದು ಮಹಾಪ್ರಭುಗಳ ಸರಕಾರವು ನೀಡಿದ್ದ ಹೇಳಿಕೆಯು ಕ್ಯಾಬಿನೆಟ್ ಮಿಷನ್ನಿನ ಗಮನಕ್ಕೆ ಬಂದಿಲ್ಲದಿರುವುದು ಅಸಾಧ್ಯ. ಪರಿಶಿಷ್ಟ ಜಾತಿಗಳವರ ಒಪ್ಪಿಗೆಯಿಲ್ಲದ ಯಾವ ಸಂವಿಧಾನವನ್ನೂ ಅವರ ಮೇಲೆ ಹೇರಲಾಗುವುದಿಲ್ಲ ಎಂಬ ಮಹಾಪ್ರಭುಗಳ ಸರಕಾರವು ನೀಡಿದ್ದ ಆಶ್ವಾಸನೆಯೂ ಸಹ ಕ್ಯಾಬಿನೆಟ್ ಮಿಷನ್ನಿನ ಗಮನವನ್ನು ತಪ್ಪಿಸಿಕೊಂಡಿರುವುದು ಸಾಧ್ಯವಿಲ್ಲ. ಲಾರ್ಡ್ ವೇವೆಲ್ಲರು ಕೇವಲ ಒಂದು ವರ್ಷದ ಹಿಂದೆ ತಾವು ಆಯೋಜಿಸಿದ್ದ ಸಿಮ್ಲಾ ಸಮ್ಮೇಳನದಲ್ಲಿ ಪರಿಶಿಷ್ಟ ಜಾತಿಗಳವರಿಗೆ ಸವರ್ಣೀಯ ಹಿಂದೂಗಳಿಗಿಂತ ಬೇರೆಯಾದ ಪ್ರಾತಿನಿಧ್ಯವನ್ನು ನೀಡಿದ್ದರು ಎಂಬುದೂ ಕ್ಯಾಬಿನೆಟ್ ಮಿಷನ್ನಿನ ಗಮನದಲ್ಲಿರಲೇಬೇಕು. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಪರಿಶಿಷ್ಟ ಜಾತಿಗಳನ್ನು, ಈಗ ಮಾಡಿರುವ ಹಾಗೆ, ಅಲಕ್ಷಿಸುವ ಮೂಲಕ ಕ್ಯಾಬಿನೆಟ್ ಮಿಷನ್ ಬ್ರಿಟಿಷ್ ಸರಕಾರಕ್ಕೆ ಕಳಂಕ ಹಾಗೂ ಅಪಖ್ಯಾತಿಯನ್ನು ತಂದಿದೆ ಎಂದು ಕಾರ್ಯಕಾರಿ ಸಮಿತಿಯು ನಿರ್ದಾಕ್ಷಿಣ್ಯವಾಗಿ ಅಭಿಪ್ರಾಯ ಪಡುತ್ತದೆ.

೩. ಸಂವಿಧಾನ ಸಭೆ ಹಾಗೂ ಸಲಹಾ ಸಮಿತಿಯಲ್ಲಿ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವನ್ನು ಎರಡರಷ್ಟು ಮಾಡಿರುವುದಾಗಿ ಕ್ಯಾಬಿನೆಟ್ ಮಿಷನ್ ಪತ್ರಿಕಾ ಸಂದರ್ಶನದಲ್ಲಿ ನೀಡಿರುವ ಹೇಳಿಕೆಯನ್ನು ಕಾರ್ಯಕಾರಿ ಸಮಿತಿಯು ಗಮನಿಸಿದೆ. ಈ ಅವಕಾಶಗಳು ಕಣ್ಣೊರಸುವ ಕ್ರಮಗಳು ಮತ್ತು ಅವುಗಳು ಗಂಭೀರವಾಗಿ ಪರಿಗಣಿಸಲ್ಪಡಲು ಅರ್ಹವಾಗಿಲ್ಲ ಎಂದು ಕಾರ್ಯಕಾರಿ ಸಮಿತಿಯು ಅಭಿಪ್ರಾಯ ಪಡುತ್ತದೆ. ಸಿಕ್ಖರು ಮತ್ತು ಮುಸ್ಲಿಮರ ವಿಷಯದಲ್ಲಿ ಮಾಡಿರುವಂತೆ ಪರಿಶಿಷ್ಟ ಜಾತಿಗಳವರಿಗೆ, ಸ್ಥಳೀಯ ಶಾಸನಸಭೆಗಳಿಂದ ಸಂವಿಧಾನ ಸಭೆಗೆ ಆಯ್ಕೆಯಾಗಲು ಅನುವಾಗುವಂತಹ ಸ್ಥಾನಗಳನ್ನು ಅವರಿಗೆ ಮೀಸಲಾಗಿ ಇಟ್ಟಿಲ್ಲ.

ಸಂವಿಧಾನ ಸಭೆಗೆ ಇಂತಿಷ್ಟೇ ಜನ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು ಎಂದು ಸ್ಥಳೀಯ ಶಾಸನಸಭೆಗಳಿಗೆ ಹೇಳಿಲ್ಲ. ಇದರಿಂದಾಗಿ, ಸಂವಿಧಾನ ಸಭೆಯು ಪರಿಶಿಷ್ಟ ಜಾತಿಗಳ ಯಾವುದೇ ಪ್ರತಿನಿಧಿಯನ್ನು ಹೊಂದಿರದೇ ಇರುವುದೂ ಸಾಧ್ಯ. ಇಷ್ಟರ ಮಧ್ಯವೂ ಕೆಲವು ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳು ತಮ್ಮ ಜಾಗವನ್ನು ಸಂವಿಧಾನ ಸಭೆಯಲ್ಲಿ ಕಂಡುಕೊಂಡಿದ್ದರೆ, ಅವರು ಹಿಂದೂ ಮತಗಳಿಂದ ಆಯ್ಕೆಯಾಗಿರುವುದರಿಂದ, ಪರಿಶಿಷ್ಟ ಜಾತಿಗಳ ನಿಜವಾದ ಹಿತರಕ್ಷಣೆಯನ್ನು ಮಾಡುವುದು ಅವರಿಗೆ ಸಾಧ್ಯವಾಗುವುದಿಲ್ಲ. ಸಲಹಾ ಸಮಿತಿಯ ವಿಷಯವನ್ನು ತೆಗೆದುಕೊಂಡರೂ, ಈ ಸಮಿತಿಯು ಸಂವಿಧಾನ ಸಭೆಗಿಂತ ಯಾವ ರೀತಿಯಲ್ಲಿಯೂ ಬೇರೆಯಾಗಿರುವುದಿಲ್ಲ. ಬದಲಿಗೆ ಅದು ಸಂವಿಧಾನದ ಪಡಿಯಚ್ಚಿನಂತೆಯೇ ಇರುತ್ತದೆ.

೪. ಸಂವಿಧಾನ ಸಭೆಯಲ್ಲಿ ಹಾಗೂ ಸಲಹಾ ಸಮಿತಿಯಲ್ಲಿ ಪರಿಶಿಷ್ಟ ಜಾತಿಗಳವರ ದನಿಯು ಕೇಳಿಬರುವಂತೆ ಸಾಕಷ್ಟು ಹಾಗೂ ಉತ್ತಮ ವಿಧಿಗಳನ್ನು ಅಳವಡಿಸಲಾಗಿದೆ ಎಂಬುದನ್ನು ನಂಬುವುದು ಕ್ಯಾಬಿನೆಟ್ ಮಿಷನ್ನಿಗೆ ಹೇಗೆ ಸಾಧ್ಯವಾಯಿತು ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಾರ್ಯಕಾರಿ ಸಮಿತಿಗೆ ಬಹಳ ಕಷ್ಟವಾಗಿದೆ. ಪ್ರತ್ಯೇಕ ಮತಕ್ಷೇತ್ರಗಳಿಂದ ಪ್ರಾಥಮಿಕ ಚುನಾವಣೆಗಳಲ್ಲಿ ಆಯ್ಕೆಯಾದ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳೇ ನಿಜವಾದ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳು, ಈಗ ಸ್ಥಳೀಯ ಶಾಸನಸಭೆಗಳಲ್ಲಿರುವ ಪರಿಶಿಷ್ಟ ಜಾತಿಗಳ ಸದಸ್ಯರು ಪ್ರಾಥಮಿಕ ಚುನಾವಣೆಗಳಲ್ಲಿ ಅತಿ ಕಡಿಮೆ ಮತಗಳನ್ನು ಪಡೆದಿದ್ದರೂ, ಜಂಟಿ ಮತಕ್ಷೇತ್ರಗಳ ದೋಷಯುಕ್ತ ಪದ್ಧತಿಯಿಂದಾಗಿ ಅಂತಿಮ ಚುನಾವಣೆಗಳಲ್ಲಿ ಸವರ್ಣೀಯ ಹಿಂದೂಗಳ ಮತಗಳಿಂದ ಆಯ್ಕೆಯಾಗಿ ಇಂದು ಶಾಸನಸಭೆಯ ಸದಸ್ಯರಾಗಿದ್ದಾರೆ ಮತ್ತು ಈ ಕಾರಣದಿಂದಾಗಿ ಶಾಸನಸಭೆಯಲ್ಲಿನ ಪರಿಶಿಷ್ಟ ಜಾತಿಗಳ ಹಾಲಿ ಸದಸ್ಯರು ಯಾವುದೇ ರೀತಿಯಲ್ಲಿಯೂ ಪರಿಶಿಷ್ಟ ಜಾತಿ ಜನಗಳ ಪ್ರತಿನಿಧಿಗಳಲ್ಲ, ಅವರು ಸವರ್ಣೀಯ ಹಿಂದೂಗಳ ಕೈಯಲ್ಲಿರುವ ಸಾಧನಗಳು ಮಾತ್ರ ಎಂಬುದಕ್ಕೆ ಹೇರಳವಾದ ಮತ್ತು ಸಂಶಯಾತೀತವಾದ ಪುರಾವೆಗಳನ್ನು ಕ್ಯಾಬಿನೆಟ್ ಮಿಷನ್ನಿಗೆ ನೀಡಲಾಗಿತ್ತು. ಸಂವಿಧಾನ ಸಭೆಯಲ್ಲಿ ಮತ್ತು ಸಲಹಾ ಸಮಿತಿಯಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆಯುವ ಅವಕಾಶವನ್ನು ಪರಿಶಿಷ್ಟ ಜಾತಿಗಳವರಿಗೆ ಮಾಡುವುದಿರಲಿ, ನಿರ್ವಿವಾದವಾದಂತಹ ಪುರಾವೆಗಳನ್ನು ಯಾವುದೇ ಮನದ ಅಳುಕೂ ಇಲ್ಲದೆ ನಿರ್ಲಕ್ಷಿಸಿ, ಪರಿಶಿಷ್ಟ ಜಾತಿಗಳವರನ್ನು ಹಿಂದೂಗಳ ಅನುಕಂಪದಡಿಯಲ್ಲಿ ಬದುಕುವಂತೆ ಮಾಡಿದ ಮಿಷನ್, ಅವರಿಗೆ ಅತ್ಯಂತ ಹೇಯವಾದ ವಂಚನೆಯನ್ನು ಎಸಗಿದೆ. ಮಿಷನ್ನಿನ ತರ್ಕವಾಗಲೀ ಅಥವಾ ನೈತಿಕ ಹೊಣೆಗಾರಿಕೆಯಾಗಲೀ ಪರಿಶಿಷ್ಟ ಜಾತಿಗಳವರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನು ಬೀರಲು ಅಸಮರ್ಥವಾಗಿದೆ ಎಂದು ಕಾರ್ಯಕಾರಿ ಸಮಿತಿಯು ಮಿಷನ್ನಿಗೆ ತಿಳಿಸಬಯಸುತ್ತದೆ.

೫. ಮುಸ್ಲಿಮೇತರ ಅಲ್ಪಸಂಖ್ಯಾತರ ಸಮಸ್ಯೆಯನ್ನು ಮುಸ್ಲಿಮರ ಸಮಸ್ಯೆಗಳ ಪರಿಧಿಯ ಒಳಗೆ ಅಳವಡಿಸಿ, ಬಹುಸಂಖ್ಯಾತರಾಗಿರುವ ಮುಸ್ಲಿಮರಿಗೆ ಸ್ವಾತಂತ್ರ್ಯವನ್ನು ನೀಡಿದ ಮತ್ತು ಹಿಂದೂಗಳ ಪರಿಧಿಯಲ್ಲಿ ಹಿಂದೂಗಳಲ್ಲದ ಇತರ ಅಲ್ಪಸಂಖ್ಯಾತರನ್ನು ಸೇರಿಸಿ ಬಹುಸಂಖ್ಯಾತರಾಗಿರುವ ಹಿಂದೂಗಳಿಗೆ ಸ್ವಾತಂತ್ರ್ಯವನ್ನು ನೀಡಿದ ಕ್ಯಾಬಿನೆಟ್ ಮಿಷನ್ನಿನ ಕಾರ್ಯನೀತಿಯು ದುರುದ್ದೇಶಗಳಿಂದ ಕೂಡಿದೆ. ಮುಸ್ಲಿಮ್ ಸಮುದಾಯಗಳವರ ರಕ್ಷಣೆಗೆ ಹೆಚ್ಚಿನ ಒತ್ತುಕೊಟ್ಟ ಮಿಷನ್ ಪರಿಶಿಷ್ಟ ಜಾತಿಗಳವರ ಹಿತಾಸಕ್ತಿಗಳನ್ನು ರಕ್ಷಿಸಲು ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಗಮನವನ್ನೇ ಹರಿಸಿಲ್ಲ. ತಮ್ಮ ಯೋಜನಾ ವರದಿಯ ೧೫ನೆಯ ಪ್ಯಾರಾದಲ್ಲಿ, ಯಾವ ವಿಷಯಗಳು ಸಂವಿಧಾನ ಸಭೆಯ ವ್ಯಾಪ್ತಿಯ ಹೊರಗೆ ಇರಬೇಕು ಎಂಬುದನ್ನು ಮಿಷನ್ ಸೂಚಿಸಿದೆ. ಅವಕಾಶಗಳ ಮಿತಿಯನ್ನು ಹೇರಿರುವ ಈ ಪ್ಯಾರಾದ

ಹಿಂದಿರುವ ಉದ್ದೇಶವು ಹಿಂದೂಗಳು ಮುಸ್ಲಿಮರ ಮೇಲೆ ದಬ್ಬಾಳಿಕೆಯನ್ನು ನಡೆಸಬಾರದು ಎಂಬುದು. ಪರಿಶಿಷ್ಟ ಜಾತಿಗಳವರಿಗೆ ಇರುವ ಹಿಂದೂ ಬಹುಸಂಖ್ಯಾತರ ಭೀತಿಯು, ಹಿಂದೂಗಳ ಬಗ್ಗೆ ಮುಸ್ಲಿಮರಿಗೆ ಇರಬಹುದೆಂದು ನಿರೀಕ್ಷಿಸಿರುವ ಭೀತಿಗಿಂತ ವಾಸ್ತವವಾದುದು ಮತ್ತು ಹಲವು ಪಟ್ಟು ಅಧಿಕವಾದುದು. ತಮಗೆ ಇರಬಹುದಾದ ಏಕೈಕ ರಕ್ಷಣಾ ವಿಧಾನವೆಂದರೆ, ಪ್ರತ್ಯೇಕ ಮತಕ್ಷೇತ್ರಗಳು ಮತ್ತು ಪ್ರತ್ಯೇಕ ವಾಸದ ಪ್ರದೇಶಗಳ ನಿರ್ಮಾಣ ಎಂಬುದರ ಬಗ್ಗೆ ಪರಿಶಿಷ್ಟ ಜಾತಿಗಳವರು ಒತ್ತಾಯಿಸುತ್ತಲೇ ಇದ್ದರೆ. ಈ ಅಂಶಗಳನ್ನು ಹಾಗೂ ಅವುಗಳಿಗೆ ಆಧಾರವಾಗಿರುವ ಪುರಾವೆಗಳನ್ನು ಕ್ಯಾಬಿನೆಟ್ ಮಿಷನ್ ಚೆನ್ನಾಗಿ ಅರಿತಿದೆ. ಮೇಲೆ ಹೇಳಿರುವಂತೆ ಹಿಂದೂ ಬಹುಸಂಖ್ಯಾತರ ದಬ್ಬಾಳಿಕೆಯಿಂದ ಮುಕ್ತವನ್ನಾಗಿಸಲು ಮುಸ್ಲಿಂ ಸಮುದಾಯಕ್ಕೆ ಅವಕಾಶಗಳನ್ನು ಕಲ್ಪಿಸಿರುವ ಕ್ಯಾಬಿನೆಟ್ ಮಿಷನ್ನಿಗೆ, ಅದೇ ರೀತಿಯ ನೀತಿಯನ್ನು ಪ್ರತ್ಯೇಕ ಮತಕ್ಷೇತ್ರಗಳ ಮೂಲಕ ಪರಿಶಿಷ್ಟ ಜಾತಿಗಳವರು ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯವನ್ನು ಪಡೆಯುವಂತೆ ಮಾಡಲು ಹಾಗೂ ಪರಿಶಿಷ್ಟ ಜಾತಿಗಳವರು ಹಿಂದೂ ಬಹುಸಂಖ್ಯಾತರ ದಬ್ಬಾಳಿಕೆಯಿಂದ ಮುಕ್ತಿಯನ್ನು ಪಡೆಯಲು ಅನುಕೂಲವಾಗುವಂತೆ ಪ್ರತ್ಯೇಕ ನಿವಾಸಸ್ಥಾನಗಳನ್ನು ನಿರ್ಮಾಣಮಾಡುವ ಅವಕಾಶಗಳನ್ನು ಈ ೧೫ನೆಯ ಪ್ಯಾರಾದಲ್ಲಿಯೇ ಸಾಂವಿಧಾನಿಕವಾಗಿ ಕಲ್ಪಿಸುವುದು ಸಾಧ್ಯವಿತ್ತು.

೬. ಪರಿಶಿಷ್ಟ ಜಾತಿಗಳವರೂ ಸೇರಿದಂತೆ ಎಲ್ಲಾ ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಸೂಕ್ತ ಸಾಂವಿಧಾನಿಕ ಅವಕಾಶಗಳನ್ನು ಕಲ್ಪಿಸುವುದರ ಮೇಲೆ ಭಾರತದ ಸಂವಿಧಾನ ಸಭೆ ಹಾಗೂ ಬ್ರಿಟಿಷ್ ಸರಕಾರಗಳ ನಡುವಿನ ಒಪ್ಪಂದದ ಅನುಮೋದನೆಯು ಅವಲಂಬಿತವಾಗಿರುತ್ತದೆ ಎಂದು ಕ್ಯಾಬಿನೆಟ್ ಮಿಷನ್ ನೀಡಿರುವ ಎರಡನೆಯ ಹೇಳಿಕೆಯನ್ನು ಕಾರ್ಯಕಾರಿ ಸಮಿತಿಯು ಗಮನಿಸಿದೆ. ಈ ಅಂಶವು ೧೯೪೨ರಲ್ಲಿ ಕ್ರಿಪ್ಸ್ ಸಮಿತಿಯ ಶಿಫಾರಸ್ಸಿನಲ್ಲಿಯೇ ಸೇರಿದ್ದರೂ, ಕಾಂಗ್ರೆಸ್ ಪಕ್ಷವನ್ನು ತೃಪ್ತಿಪಡಿಸುವ ಆತುರದಲ್ಲಿ ಈ ವಿಧಿಯನ್ನು ಕ್ಯಾಬಿನೆಟ್ ಮಿಷನ್ ತನ್ನ ಮೊದಲ ಹೇಳಿಕೆಯ ೨೨ನೆಯ ಪ್ಯಾರಾದಲ್ಲಿ ಸೇರಿಸಿರಲಿಲ್ಲ.

ತನ್ನ ನಿಲುವನ್ನು ಬದಲಾಯಿಸಿಕೊಳ್ಳುವ ಮೂಲಕ ಮಿಷನ್, ಈ ಹಿಂದೆ ಪರಿಶಿಷ್ಟ ಜಾತಿಗಳವರಿಗೆ ವಾಗ್ದಾನವನ್ನು ನೀಡಿದ್ದ ಮಹಾಪ್ರಭುಗಳ ಸರಕಾರದ ಗೌರವವನ್ನು ಕಾಪಾಡಿರುವುದರ ಬಗ್ಗೆ ಕಾರ್ಯಕಾರಿ ಸಮಿತಿಗೆ ಸಂತೋಷವಾಗಿದೆಯಾದರೂ, ಮಿಷನ್ ತನ್ನ ಕಾರ್ಯನೀತಿಯಲ್ಲಿ ಕೆಳಕಂಡ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂದು ಕಾರ್ಯಕಾರಿ ಸಮಿತಿಯು ಒತ್ತಾಯಿಸುತ್ತದೆ.

೧) ೧೫ನೆಯ ಪ್ಯಾರಾಕ್ಕೆ ೭ನೆಯ ಉಪಬಂಧವಾಗಿ ಮುಂದಿನದನ್ನು ಉಪಬಂಧವಾಗಿ ಸೇರಿಸತಕ್ಕದ್ದು–

"(೭) ಪರಿಶಿಷ್ಟ ಜಾತಿಗಳವರು ಶಾಸನಸಭೆಗಳಲ್ಲಿ ಪ್ರತ್ಯೇಕ ಮತಕ್ಷೇತ್ರಗಳ ಮೂಲಕ ಆಯ್ಕೆಯಾಗಿ ತಮ್ಮ ಪ್ರಾತಿನಿಧ್ಯವನ್ನು ಪಡೆಯುವ ಹಕ್ಕನ್ನು ಹೊಂದಿರಬೇಕು.

(೮) ಪರಿಶಿಷ್ಟ ಜಾತಿಗಳವರಿಗಾಗಿ ಪ್ರತ್ಯೇಕ ನಿವಾಸಸ್ಥಾನಗಳನ್ನು ಏರ್ಪಡಿಸುವುದು ಸರಕಾರದ ಹೊಣೆಯಾಗಿರಬೇಕೆಂಬ ವಿಧಿಯನ್ನು ಸಂವಿಧಾನವು ಒಳಗೊಂಡಿರಬೇಕು.

೨) ಕಳೆದ ಪ್ರಾಥಮಿಕ ಚುನಾವಣೆಗಳಲ್ಲಿ ಹೆಚ್ಚಿನ ಮತಗಳನ್ನು ಪಡೆದ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳನ್ನು ಸಲಹಾ ಸಮಿತಿಯ ಸದಸ್ಯರನ್ನಾಗಿ ಮಾಡುವಂತೆ ಮತ್ತು ಅದರ ಜೊತೆಗೆ ಇನ್ನೂ ಐದು ಪರಿಶಿಷ್ಟ ಜಾತಿಗಳ ಸದಸ್ಯರನ್ನು ಸಲಹಾ ಸಮಿತಿಗೆ ಆಯ್ಕೆಮಾಡುವ ಅವಕಾಶವನ್ನು ಈ ಸದಸ್ಯರು ಹೊಂದಿರುವಂತೆ ಮಾಡಲು ಮೊದಲ ಹೇಳಿಕೆಯ ೨೦ನೆಯ ಪ್ಯಾರಾವನ್ನು ಸೂಕ್ತವಾಗಿ ತಿದ್ದುಪಡಿಮಾಡಬೇಕು.

೭. ಮಹಾಪ್ರಭುಗಳ ಸರಕಾರ ಮತ್ತು ಬ್ರಿಟಿಷ್ ಲೇಬರ್ ಪಕ್ಷಗಳು ಪರಿಶಿಷ್ಟ ಜಾತಿಗಳವರ ವಿಷಯವನ್ನು ಶ್ರದ್ಧೆಯಿಂದ ಕೈಗೆತ್ತಿಕೊಳ್ಳುತ್ತದೆ, ಹಾಗೂ ಕ್ಯಾಬಿನೆಟ್ ಮಿಷನ್ ಅವರಿಗೆ ಮಾಡಿರುವ

ಅನ್ಯಾಯಗಳನ್ನು ಸರಿಪಡಿಸುತ್ತದೆ ಎಂದು ಕಾರ್ಯಕಾರಿ ಸಮಿತಿಯು ಆಶಿಸುತ್ತದೆ. ಈ ಕರ್ತವ್ಯದಲ್ಲಿ ವೈಫಲ್ಯವನ್ನು ಕಂಡರೆ, ನೇರ ಕ್ರಮಗಳನ್ನು ತೆಗೆದುಕೊಳ್ಳದೇ ಪರಿಶಿಷ್ಟ ಜಾತಿಗಳವರಿಗೆ ಬೇರೆ ದಾರಿಯೇ ಇರುವುದಿಲ್ಲ ಎಂದು ಕಾರ್ಯಕಾರಿ ಸಮಿತಿಯು ಭಾವಿಸುತ್ತದೆ. ಸನ್ನಿವೇಶಗಳು ತಮ್ಮನ್ನು ಇದಕ್ಕೆ ದೂಡಿದರೆ, ಪರಿಶಿಷ್ಟ ಜಾತಿಗಳವರನ್ನು ಮುಂಬರಬಹುದಾದ ವಿಪತ್ತಿನಿಂದ ರಕ್ಷಿಸಲು ಅವರಿಗೆ ನೇರ ಕ್ರಮಗಳನ್ನು ತೆಗೆದುಕೊಳ್ಳಲು ಹೇಳಲು ಕಾರ್ಯಕಾರಿ ಸಮಿತಿಯು ಹಿಂಜರಿಯುವುದಿಲ್ಲ.

೮. ಕ್ಯಾಬಿನೆಟ್ ಮಿಷನ್ ಮುಂದಿಟ್ಟಿರುವ ಶಿಫಾರಸ್ಸುಗಳಿಂದ ಪರಿಶಿಷ್ಟ ಜಾತಿಗಳವರಿಗೆ ಉಂಟಾಗಿರುವ ಭೀತಿಯ ಬಗ್ಗೆ ಕಾರ್ಯಕಾರಿ ಸಮಿತಿಗೆ ಅರಿವಿದೆ. ಕಾಂಗ್ರೆಸ್ ಪಕ್ಷದ ಹಿಂಸೆ, ಬಲಪ್ರಯೋಗ ಹಾಗೂ ಲೂಟಿಗಳಿಗೆ ಹೆದರದೆ, ಉಳಿದ ಪಕ್ಷಗಳು ಭೀತರಾಗಿ ಕಣಗಳಿಗೆ ಇಳಿಯದೆ ಇದ್ದಾಗ, ಕೆಚ್ಚಿನಿಂದ, ಧನಬಲವಿಲ್ಲದೆ ಕಳೆದ ಚುನಾವಣೆಯಲ್ಲಿ ಪ್ರದರ್ಶಿಸಿದ ಏಕಾಂಗಿಯಾಗಿ ಹೋರಾಡುವಂತಹ ಗುಣಗಳನ್ನು ಮುಂದುವರೆಸಿಕೊಂಡು ಹೋಗುವಂತೆ ಪರಿಶಿಷ್ಟ ಜಾತಿಗಳವರಿಗೆ ಸಲಹೆಯನ್ನು ನೀಡಬಯಸುತ್ತದೆ. ತಮ್ಮ ಬೇಡಿಕೆಗಳು ನ್ಯಾಯಯುತವಾಗಿರುವುದರಿಂದ, ಮಾನವೀಯ ನೆಲೆಯ ಮೇಲೆ ನಿಂತಿರುವುದರಿಂದ ಮತ್ತು ತಮಗೆ ಕೆಚ್ಚಿನಿಂದ ಹೋರಾಡುವ ಮನೋಸ್ಥೈರ್ಯವಿರುವುದರಿಂದ ಯಾವುದಕ್ಕೂ ಹೆದರಬೇಕಾದ ಅಗತ್ಯವಿಲ್ಲ ಹಾಗೂ ಶತ್ರುಗಳ ಕುತಂತ್ರಗಳ ನಡುವೆಯೂ ಜಯವನ್ನು ಸಂಪಾದಿಸುವುದು ಶತಸ್ಸಿದ್ಧ ಎಂಬ ಆಶ್ವಾಸನೆಯನ್ನು ಕೊಡುತ್ತದೆ.

೯. ನೇರ ಕ್ರಮಗಳನ್ನು ತೆಗೆದುಕೊಳ್ಳಲು ಅತ್ಯಂತ ಪರಿಣಾಮಕಾರಿಯಾದ ಮಾರ್ಗೋಪಾಯಗಳ ಬಗ್ಗೆ ಹಾಗೂ ಅವುಗಳಲ್ಲಿ ತೀವ್ರ ಪರಿಣಾಮಕಾರಿಯಾದ ಒಂದು ಕ್ರಮವು ಯಾವುದೆಂದು ತೀರ್ಮಾನಿಸಲು ಮತ್ತು ಅಂತಹ ಕ್ರಮವನ್ನು ಪ್ರಾರಂಭಿಸುವ ದಿನಾಂಕವನ್ನು ನಿಗದಿಗೊಳಿಸಲು ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕಾರ್ಯಕಾರಿ ಸಮಿತಿಯು ನೀಡಿತು.

೧೦. ಕೆಳಕಂಡ ಅಂಶಗಳನ್ನು ಕಾರ್ಯಕಾರಿ ಸಮಿತಿಯು ತನ್ನ ಗಮನಕ್ಕೆ ತಂದುಕೊಂಡಿತು.

೧) ಪರಿಶಿಷ್ಟ ಜಾತಿಗಳವರು ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ನಿಂತಿದ್ದರು ಎಂಬ ಒಂದೇ ಕಾರಣದಿಂದ ಅವರ ಮೇಲೆ ದೇಶದ ಉದ್ದಗಲಗಳಲ್ಲಿ ಸವರ್ಣೀಯ ಹಿಂದೂಗಳಿಂದ ದೌರ್ಜನ್ಯಗಳು ಅವ್ಯಾಹತವಾಗಿ ನಡೆದವು ಮತ್ತು ಇದರಿಂದಾಗಿ ಹಲವರ ಸಾವುಗಳೂ ಮತ್ತು ಹಲವರಿಗೆ ಗಾಯಗಳೂ ಆದವು;

೨) ಸವರ್ಣೀಯ ಹಿಂದೂಗಳ ಪರವಾಗಿ ನಿಂತು ಪರಿಶಿಷ್ಟ ಜಾತಿಗಳ ಮುಗ್ಧ ಸ್ತ್ರೀ ಪುರುಷರನ್ನು ಕಾರಣವಿಲ್ಲದೆ ಪೋಲಿಸರು ಬಂಧಿಸಿದರು ಮತ್ತು ಅವರನ್ನು ಹಿಂಸಿಸಿದರು. ಇದು ಅತ್ಯಂತ ನಾಚಿಕೆಗೇಡಿನ ಸಂಗತಿ.

೩) ನ್ಯಾಯಬೆಲೆ ಅಂಗಡಿಗಳವರು ಪರಿಶಿಷ್ಟ ಜಾತಿಗಳವರಿಗೆ ನ್ಯಾಯಬೆಲೆಯಲ್ಲಿ ದಿನಸಿಗಳನ್ನು ಕೊಡಲು ನಿರಾಕರಿಸಿದರು

೪) ಮುಗ್ಧ ಸ್ತ್ರೀಪುರುಷರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಎಂದೂ ಖಂಡಿಸದೆ ಪತ್ರಿಕೆಗಳವರು ದಿವ್ಯಮೌನವನ್ನು ವಹಿಸಿದ್ದರು.

೫) ಪರಿಶಿಷ್ಟ ಜಾತಿಗಳವರ ಪ್ರಾಣ ಮತ್ತು ಆಸ್ತಿಗಳನ್ನು ರಕ್ಷಿಸುವಲ್ಲಿ ಪ್ರಾಂತೀಯ ಸರಕಾರಗಳು ಉದಾಸೀನವನ್ನು ತೋರುತ್ತಿವೆ.

ಬಹುಸಂಖ್ಯಾತ ಸಮುದಾಯಗಳವರ ಈ ವರ್ತನೆಯು ಅಷ್ಟೊಂದು ಅಧಿಕಾರವನ್ನುಳ್ಳ ಹಿಂದೂ

ಸಮಾಜವು ಸ್ವಲ್ಪವೂ ವಿಶ್ವಾಸಕ್ಕೆ ಅರ್ಹವಲ್ಲವೆಂಬುದನ್ನು ಅನುಮಾನಕ್ಕೆಡೆಯಿಲ್ಲದಂತೆ ಸಮರ್ಥಿಸುತ್ತದೆ. ಬಹುಸಂಖ್ಯಾತರು ಅವರ ನೈತಿಕತೆಯನ್ನು ಸುಧಾರಿಸಿಕೊಳ್ಳದಿದ್ದರೆ, ತಮಗೆ ಇರುವ ಎಲ್ಲಾ ಅವಕಾಶಗಳನ್ನೂ ಬಳಸಿಕೊಂಡು ಪರಿಶಿಷ್ಟ ಜಾತಿಗಳವರು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಮಾರ್ಗವನ್ನು ಅನಿವಾರ್ಯವಾಗಿ ನೋಡಿಕೊಳ್ಳಬೇಕಾಗುತ್ತದೆ”[೧].

* * * * *

೧. ಜೈ ಭೀಮ್, ದಿನಾಂಕ ೧೯೪೭ರ ಜೂನ್ ೧೧ ಮತ್ತು ೧೮.

## ೧೩. ಬ್ರಿಟಿಷ್ ಸಂಪುಟದ ಯೋಜನೆಯ ಬಗ್ಗೆ ಪ್ರತಿಕ್ರಿಯೆಗಳು ಚರ್ಚಿಲ್ ವಿರುದ್ಧ ಡಾ. ಅಂಬೇಡ್ಕರ್ ಅವರ ಪ್ರತಿಭಟನೆ

ಅಸ್ಪೃಶ್ಯರ ಹಿತಾಸಕ್ತಿಗಳನ್ನು ಸಂರಕ್ಷಿಸಲು ಯಾವ ಅವಕಾಶಗಳನ್ನೂ ಕಲ್ಪಿಸದೆ ಕ್ಯಾಬಿನೆಟ್ ಮಿಷನ್ ೧೯೪೬ರ ಮೇ ೧೬ರಂದು 'ರಾಜ್ಯಪತ್ರ'ವನ್ನು ಪ್ರಕಟಿಸಿತು. ಡಾ. ಬಿ.ಆರ್. ಅಂಬೇಡ್ಕರ್ ಅವರು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಚರ್ಚಿಲ್ ಅವರಿಗೆ ಈ ವಿಷಯವನ್ನು ಪರಿಶೀಲಿಸುವಂತೆ ಒಂದು ಪತ್ರವನ್ನು ಬರೆದರು. ಇದಕ್ಕೆ ಚರ್ಚಿಲ್ ಅವರು ಈ ವಿಷಯದಲ್ಲಿ ಪೂರ್ಣಭರವಸೆಯನ್ನು ನೀಡುವ ರೀತಿಯಲ್ಲಿ ಪ್ರತ್ಯುತ್ತರವನ್ನು ಬರೆದರು. ಡಾ. ಅಂಬೇಡ್ಕರ್ ಅವರು ಬರೆದ ಪತ್ರವು ಕೆಳಕಂಡಂತೆ ಇದೆ. – ಸಂಪಾದಕರು.

ಅಮೇರಿಕಾದ ಸ್ವಾತಂತ್ರ್ಯ ಘೋಷಣೆಯನ್ನು ಉದ್ಧರಿಸುತ್ತಾ ವಿನ್ಸ್ಟನ್ ಚರ್ಚಿಲ್ ಅವರು ಕನ್ಸರ್ವೇಟೀವ್ ಪಕ್ಷವು ಭಾರತದ ೬ ಕೋಟಿ ಅಸ್ಪೃಶ್ಯರ ಭವಿಷ್ಯವನ್ನು ಸಂರಕ್ಷಿಸುವ ದಿಕ್ಕಿನಲ್ಲಿ ಸಾಧ್ಯವಾದುದನ್ನೆಲ್ಲಾ ಮಾಡುವುದಾಗಿ ಭರವಸೆಯನ್ನು ಇತ್ತರು. ಸ್ವತಂತ್ರ ಭಾರತದ ಸರಕಾರದ ಬಗ್ಗೆ ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳು ಪರಿಶಿಷ್ಟ ಜಾತಿಗಳವರಿಗೆ ಅಪಮಾನಕಾರಕವಾಗಿದ್ದು, ನಾಚಿಕೆಗೇಡಿನವಾಗಿವೆ ಎಂದು ವೈಸ್‌ರಾಯ್ ಅವರ ಕಾರ್ಯಾಂಗದ ಸದಸ್ಯರಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರು ಮಾಡಿರುವ ಟೀಕೆಗೆ ಉತ್ತರಿಸುತ್ತಾ, ಇಂಗ್ಲೆಂಡಿನ ವಿರೋಧಪಕ್ಷದ ನಾಯಕರಾದ ಚರ್ಚಿಲ್ ಅವರು ಅಂಬೇಡ್ಕರ್ ಅವರಿಗೆ ಕಳುಹಿಸಿರುವ ತಂತಿ ಸಂದೇಶದಲ್ಲಿ ಹೀಗೆ ಹೇಳಿದ್ದಾರೆ. "ಎಲ್ಲಾ ಮನುಷ್ಯರೂ ಜನ್ಮತಃ ಸ್ವತಂತ್ರರಾಗಿರುತ್ತಾರೆ, ಸಮಾನರಾಗಿರುತ್ತಾರೆ ಮತ್ತು ಜೀವಿಸುವ, ಸ್ವಾತಂತ್ರ್ಯದ ಹಾಗೂ ತಮ್ಮ ಅಭಿಲಾಷೆಗಳನ್ನು ಪೂರೈಸಿಕೊಳ್ಳುವ ವೃತ್ತಿಯನ್ನು ಅನುಸರಿಸುವ ಹಕ್ಕಿಗೆ ಅರ್ಹರಾಗಿರುತ್ತಾರೆ ಎಂಬ ಅಮೆರಿಕದ ಸ್ವಾತಂತ್ರ್ಯದ ಘೋಷಣೆಯ ವಿಶಾಲವಾದ ತತ್ತ್ವಗಳ ತಳಹದಿಯ ಮೇಲೆ ನಾವು ನಮ್ಮ ನಿಲುವನ್ನು ತೆಗೆದುಕೊಳ್ಳುತ್ತೇವೆ".

ಡಾ. ಅಂಬೇಡ್ಕರ್ ಅವರು ಕಳುಹಿಸಿದ್ದ ಸಂದೇಶವು ಹೀಗಿತ್ತು: "ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳು ಆರು ಕೋಟಿ ಅಸ್ಪೃಶ್ಯರಿಗೆ ಮಾಡಿರುವ ಅವಮಾನಕರವಾದ ವಂಚನೆ. ಸಂವಿಧಾನ ಸಭೆಯಲ್ಲಿ ಪ್ರಾತಿನಿಧ್ಯವಿಲ್ಲದಿರುವುದು, ಸಲಹಾ ಸಮಿತಿಯಲ್ಲಿ ಪ್ರಾತಿನಿಧ್ಯವಿಲ್ಲದಿರುವುದು, ಸಂರಕ್ಷಣಾ ಕರಾರು ಇಲ್ಲದಿರುವುದು – ಇದರ ಅರ್ಥ ಅಸ್ಪೃಶ್ಯರ ಕೈಕಾಲುಗಳನ್ನು ಕಟ್ಟಿ ಬೇರೆಯವರಿಗೆ ಒಪ್ಪಿಸುವಂತೆ ಆಗುತ್ತದೆ. ತಾವು ಸಂಸತ್ತಿನಲ್ಲಿ ಮಾಡಿದ ಭಾಷಣಕ್ಕೆ ಭಾರತದ ಆದ್ಯಂತ ಇರುವ ಅಸ್ಪೃಶ್ಯರು ಆಭಾರಿಗಳಾಗಿದ್ದಾರೆ. ಅಸ್ಪೃಶ್ಯರ ಭವಿಷ್ಯವು ಮಸುಕುಮಸುಕಾಗಿದೆ. ಅವರ ಹಿತವನ್ನು ಸಂರಕ್ಷಣೆ ಮಾಡುವುದಕ್ಕಾಗಿ ನಾವು ನಿಮ್ಮನ್ನು ಅವಲಂಬಿಸಿದ್ದೇವೆ".

ಅದಕ್ಕೆ ಚರ್ಚಿಲ್ ಅವರು ಹೀಗೆ ಉತ್ತರಿಸಿದ್ದರು: ಸಹಧರ್ಮೀಯರಿಂದಲೇ ತುಳಿತಕ್ಕೆ ಒಳಗಾಗಿರುವ ೬ ಕೋಟಿ ಅಸ್ಪೃಶ್ಯರ ಪ್ರಕರಣವು ಭಾರತದ ಉಪಖಂಡದಲ್ಲಿಯೇ ಅತ್ಯಂತ ಗಂಭೀರವಾದ್ದಾಗಿದ್ದು, ಅವರ ರಕ್ಷಣೆಗೆ ಸಾಧ್ಯವಾದುದೆಲ್ಲವನ್ನೂ ಕನ್ಸರ್ವೇಟಿವ್ ಪಕ್ಷವು ಮಾಡುತ್ತದೆ. ಎಲ್ಲಾ ಮನುಷ್ಯರೂ ಜನ್ಮತಃ ಸ್ವತಂತ್ರರಾಗಿರುತ್ತಾರೆ, ಸಮಾನರಾಗಿರುತ್ತಾರೆ ಮತ್ತು ಜೀವಿಸುವ, ಸ್ವಾತಂತ್ರ್ಯದ ಹಾಗೂ ತಮ್ಮ ಅಭಿಲಾಷೆಗಳನ್ನು ಪೂರೈಸಿಕೊಳ್ಳುವ ವೃತ್ತಿಯನ್ನು ಅನುಸರಿಸುವ ಹಕ್ಕಿಗೆ ಅರ್ಹರಾಗಿರುತ್ತಾರೆ ಎಂಬ ಅಮೆರಿಕದ ಸ್ವಾತಂತ್ರ್ಯದ ಘೋಷಣೆಯ ವಿಶಾಲವಾದ ತತ್ತ್ವಗಳ ತಳಹದಿಯ ಮೇಲೆ ನಾವು ನಮ್ಮ ನಿಲುವನ್ನು ತೆಗೆದುಕೊಳ್ಳುತ್ತೇವೆ".[೧]

---

೧. ಜೈ ಭೀಮ್, ದಿನಾಂಕ ೧೯೪೬ರ ಜೂನ್ ೧೮

## ೧೪. ನಾನು ಪರಿಶಿಷ್ಟ ಜಾತಿಗಳವರ ಹಕ್ಕಿಗಾಗಿ ಹೊಡೆದಾಡುತ್ತಿದ್ದೇನೆ

**(ಬ್ರಿಟನ್ ಪ್ರಧಾನಿ ಅಟ್ಲೀ ಅವರಿಗೆ ಕಳುಹಿಸಿದ ತಂತಿ ಸಂದೇಶ)**

ತಾತ್ಕಾಲಿಕ ಸರಕಾರದಲ್ಲಿ ಪರಿಶಿಷ್ಟ ಜಾತಿಗಳವರಿಗೆ ಅತಿ ಕಡಿಮೆಯ ಪ್ರಾತಿನಿಧ್ಯವನ್ನು ಕ್ಯಾಬಿನೆಟ್ ಮಿಷನ್ ಶಿಫಾರಸ್ಸು ಮಾಡಿತ್ತು. ಡಾ. ಬಿ.ಆರ್. ಅಂಬೇಡ್ಕರ್ ಅವರು ಗ್ರೇಟ್ ಬ್ರಿಟನ್ನಿನ ಪ್ರಧಾನಮಂತ್ರಿ ಅಟ್ಲೀ ಅವರಿಗೆ ಒಂದು ತಂತಿ ಸಂದೇಶವನ್ನು ಕಳುಹಿಸಿದ್ದರು. – ಸಂಪಾದಕರು

ಕಳೆದ ವರ್ಷ ನಡೆದ ಸಿಮ್ಲಾ ಸಮ್ಮೇಳನದ ಸಮಯದಲ್ಲಿ ನಾನು ಪ್ರತಿಭಟಿಸಿದುದಕ್ಕಾಗಿ ವೈಸ್‌ರಾಯ್ ಅವರು ಸ್ಥಳೀಯ ಸರಕಾರದೊಡನೆ ಸಮಾಲೋಚಿಸಿ, ಪರಿಶಿಷ್ಟ ಜಾತಿಗಳವರಿಗೆ ತಾತ್ಕಾಲಿಕ ಸರಕಾರದಲ್ಲಿನ ಪ್ರಾತಿನಿಧ್ಯವನ್ನು ಎರಡು ಸ್ಥಾನಗಳಿಗೆ ಏರಿಸಿದ್ದರು. ನಾನು ಮೂರು ಸ್ಥಾನಗಳಿಗೆ ಬೇಡಿಕೆಯನ್ನು ಸಲ್ಲಿಸಿದ್ದೆ. ರಾಜಿ ಮಾಡಿಕೊಳ್ಳುವ ದೃಷ್ಟಿಯಿಂದ ನಾನು ಎರಡು ಸ್ಥಾನಗಳಿಗೆ ಒಪ್ಪಿಕೊಂಡಿದ್ದೆ. ನಿನ್ನೆಯ ದಿನ ಘೋಷಿಸಿದ ಶಿಫಾರಸ್ಸುಗಳ ಪ್ರಕಾರ ತಾತ್ಕಾಲಿಕ ಸರಕಾರದಲ್ಲಿ ಪರಿಶಿಷ್ಟ ಜಾತಿಗಳವರಿಗೆ ಕೇವಲ ಒಂದೇ ಸ್ಥಾನವನ್ನು ನೀಡಲಾಗಿದೆ. ಇದರಿಂದಾಗಿ ಆಳವಾಗಿ ಸಮಾಲೋಚಿಸಿದ ನಂತರ ನೀಡಿದ ಮಹತ್ವಪೂರ್ಣ ಆಶ್ವಾಸನೆಯ ಸಂಪೂರ್ಣ ಉಲ್ಲಂಘನೆಯಾಗಿದೆ. ನೀಡಿರುವ ಒಂದೇ ಸ್ಥಾನವು ಅತ್ಯಂತ ಅನ್ಯಾಯಯುತವಾದುದಾಗಿದೆ. ಪ್ರಾತಿನಿಧ್ಯದ ವಿಷಯದಲ್ಲಿ ಆರು ಕೋಟಿ ಅಸ್ಪೃಶ್ಯರನ್ನು ೪೦ ಲಕ್ಷ ಸಿಕ್ಖರಿಗೆ, ೩೦ ಲಕ್ಷ ಕ್ರಿಶ್ಚಿಯನ್ನರಿಗೆ ಸಮವೆಂದು ಪರಿಗಣಿಸಲಾಗಿದೆ. ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳು ಪರಿಶಿಷ್ಟ ಜಾತಿಗಳನ್ನು ಪ್ರತಿನಿಧಿಸುವುದಿಲ್ಲ. ಅವರು ಹಿಂದೂ ಮತಗಳಿಂದ ಆಯ್ಕೆಯಾದವರು ಮತ್ತು ಅವರು ಕಾಂಗ್ರೆಸ್ ಪಕ್ಷದ ಕೈಗೊಂಬೆಗಳು. ಕಾಂಗ್ರೆಸ್ಸಿನ ಪರಿಶಿಷ್ಟ ಜಾತಿಗಳ ಸದಸ್ಯರ ಪ್ರಾತಿನಿಧ್ಯವು ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯವಲ್ಲ. ಆ ಪ್ರಾತಿನಿಧ್ಯವು ಕಾಂಗ್ರೆಸ್ ಪಕ್ಷದ ಪ್ರಾತಿನಿಧ್ಯ. ಪರಿಶಿಷ್ಟ ವರ್ಗಕ್ಕೆ ಕ್ಯಾಬಿನೆಟ್ ಮಿಷನ್ ಒಂದಾದ ಮೇಲೆ ಒಂದರಂತೆ ಅನ್ಯಾಯಗಳನ್ನು ಮಾಡುತ್ತಲೇ ಬಂದಿದೆ. ಕಾಂಗ್ರೆಸ್ ಪಕ್ಷವನ್ನು ತೃಪ್ತಿಗೊಳಿಸುವುದಕ್ಕಾಗಿ, ಪರಿಶಿಷ್ಟ ಸಮುದಾಯಗಳವರನ್ನು ಬಲಿಕೊಡಲಾಗಿದೆ ಮತ್ತು ರಾಷ್ಟ್ರದ ಸಾರ್ವಜನಿಕ ಜೀವನದಲ್ಲಿ ಅವರ ಸ್ವತಂತ್ರವಾದ ಸ್ಥಾನವನ್ನು ನಾಶಮಾಡುವ ಹುನ್ನಾರವು ನಡೆದಿದೆ. ಈ ವಿಷಯವನ್ನು ತಾವು ವೈಯಕ್ತಿಕವಾಗಿ ಪರಿಶೀಲಿಸಿ. ಹಾಗೂ, ಪರಿಶಿಷ್ಟ ಜಾತಿಗಳವರ ಪ್ರಾತಿನಿಧಿಕ ಸಂಸ್ಥೆಯಾದ ಒಕ್ಕೂಟದ ಬಗ್ಗೆ ಮಿಷನ್ನಿಗೆ ತಿಳುವಳಿಕೆಯಿರುವುದರಿಂದ, ಒಕ್ಕೂಟದ ಇಬ್ಬರು ಪ್ರತಿನಿಧಿಗಳಿಗೆ ಸ್ಥಾನವನ್ನು ಕಲ್ಪಿಸುವಂತೆ ಮಿಷನ್ನಿಗೆ ತಾವು ದಯವಿಟ್ಟು ಸೂಚಿಸಬೇಕು. ಪರಿಶಿಷ್ಟರು ಕನಿಷ್ಠ ಎರಡು ಸ್ಥಾನಗಳಿಗಾಗಿ ಒತ್ತಾಯಿಸುತ್ತಾರೆ, ಇಷ್ಟು ಸಿಗದಿದ್ದರೆ ತಮಗೆ ಪ್ರಾತಿನಿಧ್ಯವೇ ಬೇಡವೆನ್ನುತ್ತಿದ್ದಾರೆ. ಉಂಟಾಗಬಹುದಾದ ತಪ್ಪು ಗ್ರಹಿಕೆಗಳನ್ನು ನಿವಾರಿಸುವ ಸಲುವಾಗಿ ನಾನು ತಾತ್ಕಾಲಿಕ ಸರಕಾರದಲ್ಲಿ ಇರುವುದಕ್ಕೆ ಇಚ್ಛೆಪಡುವುದಿಲ್ಲ. ನಾನು ಹೊರಗೇ ಇರುತ್ತೇನೆ. ನಾನು ಪರಿಶಿಷ್ಟ ಜಾತಿಗಳವರ ಹಕ್ಕುಗಳಿಗಾಗಿ ಹೋರಾಡುತ್ತಿದ್ದೇನೆ. ಬ್ರಿಟಿಷ್ ಸರಕಾರದಲ್ಲಿ ನ್ಯಾಯಾನ್ಯಾಯದ ಬಗ್ಗೆ ವಿವೇಕವು ಇನ್ನೂ ಸ್ವಲ್ಪವಾದರೂ ಉಳಿದಿದೆ ಎಂದು ಭಾವಿಸಿದ್ದೇನೆ – ಡಾ. ಅಂಬೇಡ್ಕರ್.

ದಿನಾಂಕ: ೧೭.೬.೧೯೪೬ **ಡಾ. ಬಿ. ಆರ್. ಅಂಬೇಡ್ಕರ್**

೨೨, ಪೃಥ್ವಿರಾಜ್ ರಸ್ತೆ, ನವ ದೆಹಲಿ.

# ೧೫. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾರತದ ಅಸ್ಪೃಶ್ಯರನ್ನು ಪ್ರತಿನಿಧಿಸುತ್ತದೆಯೇ?

ಕ್ಯಾಬಿನೆಟ್ ಮಿಷನ್ ತನ್ನ ಶಿಫಾರಸ್ಸುಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡಿರಲಿಲ್ಲವಾದ್ದರಿಂದ ಮತ್ತು ರಕ್ಷಣಾ ವಿಧಿಗಳನ್ನು ಅಳವಡಿಸಿರಲಿಲ್ಲವಾದ್ದರಿಂದ, ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರಧಾನ ಮಂತ್ರಿ ಅಟ್ಲೀ, ಚರ್ಚಿಲ್ ಮತ್ತು ಲೇಬರ್ ಪಕ್ಷದ ಇತರರಿಗೆ ತಂತಿ ಸಂದೇಶವನ್ನು ಕಳುಹಿಸಿದ ನಂತರ ಜ್ಞಾಪನಾ ಪತ್ರಗಳನ್ನೂ ಕಳುಹಿಸಿದರು. ಈ ಜ್ಞಾಪನಾ ಪತ್ರದ ಪಾಠವು ಹೀಗಿತ್ತು – ಸಂಪಾದಕರು.

**ಪರಿಶಿಷ್ಟ ಜಾತಿಗಳವರಿಗೆ ಸಂಬಂಧಪಟ್ಟ ಹಾಗೆ ಭಾರತೀಯ ಸಾಂವಿಧಾನಿಕ ಬದಲಾವಣೆಗಳ ಬಗ್ಗೆ ಕ್ಯಾಬಿನೆಟ್ ಮಿಷನ್ ಮಾಡಿರುವ ಶಿಫಾರಸ್ಸುಗಳ ಮೇಲಿನ ವಿಮರ್ಶೆ**

**ಅಸ್ಪೃಶ್ಯರು**

**ಡಾ. ಬಿ.ಆರ್. ಅಂಬೇಡ್ಕರ್**

ಭಾರತದಲ್ಲಿನ ರಾಜಕೀಯ ಕಗ್ಗಂಟನ್ನು ಬಿಡಿಸಲೋಸುಗ ಈ ವರ್ಷದ ಆದಿಭಾಗದಲ್ಲಿ ಭಾರತಕ್ಕೆ ಇಂಗ್ಲೆಂಡಿನ ಲೇಬರ್ ಪಕ್ಷದ ಸರಕಾರವು ಕಳುಹಿಸಿದ ಕ್ಯಾಬಿನೆಟ್ ಮಿಷನ್ ಸಂವಿಧಾನ ಸಭೆಯ ರಚನೆಗೆ ರೂಪರೇಷೆಗಳನ್ನು ರೂಪಿಸಿತು. ಪ್ರಾಂತೀಯ ಶಾಸನ ಸಭೆಗಳ ಪ್ರತಿ ಸದಸ್ಯರ ವರ್ಗಾಯಿಸಬಹುದಾದ ಏಕಮಾತ್ರ ಮತದಿಂದ ಸಂವಿಧಾನಸಭೆಗೆ ಪ್ರತಿನಿಧಿಗಳನ್ನು ಆಯ್ಕೆಮಾಡಬೇಕು. ಸಂವಿಧಾನ ಸಭೆಯ ಸಂಯೋಜನೆಯ ದೃಷ್ಟಿಯಿಂದ ಸದಸ್ಯರನ್ನು ಕ್ಯಾಬಿನೆಟ್ ಮಿಷನ್ ಮೂರು ರೀತಿಯ ವರ್ಗಗಳನ್ನಾಗಿ ವಿಂಗಡಿಸಿತು – ೧) ಮುಸ್ಲಿಮರು, ೨) ಸಿಕ್ಖರು ಮತ್ತು ೩) ಸಾಮಾನ್ಯರು. ಇವರಲ್ಲಿ ಪ್ರತಿ ವರ್ಗಗಳವರಿಗೆ ಸ್ಥಾನಗಳ ಸಂಖ್ಯೆಯನ್ನು ನಿಗದಿಗೊಳಿಸಿತು. ಪ್ರತಿಯೊಂದು ವರ್ಗದವರಿಗೂ ಪ್ರತ್ಯೇಕ ಮತಕ್ಷೇತ್ರಗಳು ಇವೆ. ಮುಸ್ಲಿಮ್ ಪ್ರತಿನಿಧಿಗಳು ಪ್ರಾಂತೀಯ ಶಾಸನ ಸಭೆಯಲ್ಲಿನ ಮುಸ್ಲಿಮ್ ವರ್ಗದ ಸದಸ್ಯರಿಂದಲೇ ಆಯ್ಕೆಯಾಗಬೇಕು, ಸಿಕ್ಖರು ಸಿಕ್ಖರಿಂದ ಹಾಗೂ ಸಾಮಾನ್ಯ ಸದಸ್ಯರು ಇತರ ಸದಸ್ಯರಿಂದ ಆಯ್ಕೆಯಾಗಬೇಕು. 'ಸಾಮಾನ್ಯ' ವರ್ಗವು ೧) ಹಿಂದೂಗಳು, ೨) ಪರಿಶಿಷ್ಟ ಜಾತಿಗಳು, ೩) ಭಾರತೀಯ ಕ್ರಿಶ್ಚಿಯನ್ನರು, ಮತ್ತು ೪) ಆಂಗ್ಲೋ ಇಂಡಿಯನ್ನರನ್ನು ಒಳಗೊಂಡಿದೆ.

೨. ಹಿಂದುಮುಂದು ನೋಡದೆ ತಮ್ಮನ್ನು ಹಿಂದೂಗಳ ಜೊತೆ ಸೇರಿಸಿರುವದರಿಂದ ಪರಿಶಿಷ್ಟ ಜಾತಿಗಳವರಿಗೆ ಅತೀವ ಆಶ್ಚರ್ಯವಾಗಿದೆ. ಪರಿಶಿಷ್ಟ ಜಾತಿಗಳವರು ಭಾರತದ ರಾಷ್ಟ್ರೀಯ ಜೀವನದಲ್ಲಿ ಒಂದು ಪ್ರತ್ಯೇಕವಾದ ಘಟಕವೆಂದು ತಾವು ಗಣಿಸುವುದಾಗಿ ಮಹಾಪ್ರಭುಗಳ ಸರಕಾರವು ಪದೇಪದೇ ಘೋಷಿಸಿದೆ. ಅಲ್ಲದೆ, ಪರಿಶಿಷ್ಟ ಜಾತಿಗಳವರು ಭಾಗಿಯಾಗಿಲ್ಲದ ಸಂವಿಧಾನವನ್ನು ಮಹಾಪ್ರಭುಗಳ ಸರಕಾರವು ಅವರ ಮೇಲೆ ಹೇರುವುದಿಲ್ಲವೆಂಬ ಆಶ್ವಾಸನೆಯನ್ನೂ ನೀಡಿದೆ. ಮುಸ್ಲಿಮರನ್ನು ಮತ್ತು ಸಿಕ್ಖರನ್ನು ಪ್ರತ್ಯೇಕ ಘಟಕಗಳನ್ನಾಗಿ ಪರಿಗಣಿಸಿದ ಕ್ಯಾಬಿನೆಟ್ ಮಿಷನ್, ಪರಿಶಿಷ್ಟ ಜಾತಿಗಳವರಿಗೆ ಅದೇ ಸ್ಥಾನಮಾನಗಳನ್ನು ಏಕೆ ನೀಡಲಿಲ್ಲ ಎನ್ನುವ ಪ್ರಶ್ನೆಯನ್ನು ಕೇಳಲಾಗುತ್ತಿದೆ.

೧೯೪೬ರ ಜುಲೈ ೧೮ರಂದು ಸಂಸತ್ತಿನಲ್ಲಿ ನಡೆದ ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳನ್ನು ಕುರಿತ

ಚರ್ಚೆಯಲ್ಲಿ ಮಾತನಾಡುತ್ತಾ ಸರ್ ಸ್ಟಾಫೊರ್ಡ್ ಕ್ರಿಪ್ಸ್, ಅಲೆಗ್ಸಾಂಡರ್ ಮತ್ತು ಲಾರ್ಡ್ ಪೆಥಿಕ್ ಲಾರೆನ್ಸ್ ಈ ಟೀಕೆಯ ವಿರುದ್ಧ ತಮ್ಮನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು. ಅವರ ವಾದವು ಎರಡು ಬಗೆಯದಾಗಿತ್ತು.–

೧) ಪ್ರಾಂತೀಯ ಶಾಸನಸಭೆಗೆ ನಡೆದ ಹಿಂದಿನ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳವರಿಗಾಗಿ ಮೀಸಲಿಟ್ಟಿದ್ದ ಸ್ಥಾನಗಳನ್ನು ಕಾಂಗ್ರೆಸ್ ಪಕ್ಷವೇ ಪಡೆಯಿತು. ಪರಿಶಿಷ್ಟ ಜಾತಿಗಳವರು ಕಾಂಗ್ರೆಸ್ ಪಕ್ಷದೊಂದಿಗೆ ಇದ್ದಾರೆಂದು ಇದು ತೋರಿಸುತ್ತದೆ ಮತ್ತು ತಮ್ಮ ಭವಿಷ್ಯವನ್ನು ಕಾಂಗ್ರೆಸ್ ಪಕ್ಷದಲ್ಲಿಯೇ ಅಂದರೆ, ಹಿಂದೂಗಳ ಭವಿಷ್ಯದ ಜೊತೆಯಲ್ಲಿಯೇ ಇರುವುದೆಂದು, ಅವರು ಕಾಣುತ್ತಾರೆ. ಆದ್ದರಿಂದ, ಅವರನ್ನು ಪ್ರತ್ಯೇಕವಾಗಿ ಪರಿಗಣಿಸಬೇಕಾದ ಆವಶ್ಯಕತೆಯೇ ಇಲ್ಲ.

೨) ಅಲ್ಪಸಂಖ್ಯಾತರಿಗಾಗಿ ಒಂದು ಸಲಹಾ ಸಮಿತಿಯಿರುತ್ತದೆ ಮತ್ತು ಅದರಲ್ಲಿ ಪರಿಶಿಷ್ಟ ಜಾತಿಗಳವರು ಪ್ರಾತಿನಿಧ್ಯವನ್ನು ಹೊಂದಿರುತ್ತಾರೆ ಮತ್ತು ಈ ಸಮಿತಿಯಲ್ಲಿ ತಮಗೆ ಅಗತ್ಯವಾದ ಸಂರಕ್ಷಣಾ ವಿಧಿಗಳನ್ನು ಸಂವಿಧಾನದಲ್ಲಿ ಅಳವಡಿಸುವ ಅವಕಾಶವನ್ನು ಅವರು ಹೊಂದಿರುತ್ತಾರೆ.

ಇವೆರಡರಲ್ಲಿ ಎರಡನೆಯ ಸಮರ್ಥನೆಯು ನಿಷ್ಪ್ರಯೋಜಕವೆಂದೂ ಗಣಿಸಲಾರದಷ್ಟು ಕೆಟ್ಟದ್ದಾಗಿದೆ. ಅದರ ಕಾರಣಗಳು ಸ್ಪಷ್ಟವಾಗಿವೆ. ಸಲಹಾ ಸಮಿತಿಯ ಸ್ಥಾನಮಾನಗಳನ್ನಾಗಲೀ, ಅಧಿಕಾರವನ್ನಾಗಲೀ ವಿಶದೀಕರಿಸಿಲ್ಲ. ಪರಿಶಿಷ್ಟ ಜಾತಿಗಳವರ ಪ್ರತಿನಿಧಿಗಳ ಸಂಖ್ಯೆಯನ್ನು ನಿಗದಿಗೊಳಿಸಿಲ್ಲ. ಕೇವಲ ಸರಳ ಬಹುಮತದಿಂದ ಸಲಹಾ ಸಮಿತಿಯು ನಿರ್ಣಯಗಳನ್ನು ತೆಗೆದುಕೊಳ್ಳಬಹುದು. ಕೊನೆಯದಾಗಿ, ಸಲಹಾ ಸಮಿತಿಯು ಸಂವಿಧಾನ ಸಮಿತಿಯ ಪ್ರತಿಬಿಂಬವಾಗಿರುತ್ತದೆಯೇ ಹೊರತು ಸ್ವತಂತ್ರ ಸಮಿತಿಯಾಗಿರುವುದೇ ಇಲ್ಲ. ಸಂವಿಧಾನ ಸಭೆಯಲ್ಲಿನ ಪರಿಶಿಷ್ಟ ಜಾತಿಗಳ ಸದಸ್ಯರೆಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದು, ಅವರು ನಿಜವಾಗಿ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳೇ ಅಲ್ಲ. ಆದ್ದರಿಂದ ಅವರು ಕಾಂಗ್ರೆಸ್ ಪಕ್ಷದ ಆದೇಶಗಳ ಪ್ರಕಾರ ನಡೆದುಕೊಳ್ಳುತ್ತಾರೆ. ಸಲಹಾ ಸಮಿತಿಯಲ್ಲಿರುವ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳೂ ಹಾಗೆಯೇ ಅವರ ಪಕ್ಷದ ಆದೇಶಗಳಿಗೆ ಅನುಗುಣವಾಗಿ ವರ್ತಿಸುತ್ತಾರೆ. ಅವರಿಗೆ ಸಂವಿಧಾನ ಸಭೆಯಲ್ಲಾಗಲೀ, ಸಲಹಾ ಸಮಿತಿಯಲ್ಲಾಗಲೀ ಪರಿಶಿಷ್ಟ ಜಾತಿಗಳವರ ಅಭಿಪ್ರಾಯವನ್ನು ಮಂಡಿಸುವುದು ಸಾಧ್ಯವೇ ಆಗುವುದಿಲ್ಲ.

ಕ್ಯಾಬಿನೆಟ್ ಮಿಷನ್ನಿನ ಸದಸ್ಯರು ಪರಿಶಿಷ್ಟ ಜಾತಿಯವರಿಗೆ ಪ್ರತ್ಯೇಕ ಹಾಗೂ ಸ್ವತಂತ್ರ ಪ್ರಾತಿನಿಧ್ಯವನ್ನು ನೀಡಲಾಗದಿರುವುದಕ್ಕೆ ಕೊಟ್ಟಿರುವ ಪ್ರಮುಖ ಸಮರ್ಥನೆಯೆಂದರೆ, ಕಳೆದ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳವರಿಗೆ ಮೀಸಲಾಗಿಟ್ಟಿದ್ದ ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷವು ಜಯಗಳಿಸಿದೆ ಎಂಬುದು. ಕಾಂಗ್ರೆಸ್ ಪಕ್ಷವು ಕಳೆದ ಅಂತಿಮ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳವರ ಮೀಸಲು ಸ್ಥಾನಗಳನ್ನು ಪಡೆದುಕೊಂಡಿದೆ ಎಂಬುದು ಸತ್ಯ. ಆದರೆ ಈ ಚುನಾವಣೆಯ ಫಲಿತಾಂಶಗಳನ್ನು ಒರೆಗಲ್ಲನ್ನಾಗಿಸಿಕೊಳ್ಳುವುದು ಹಲವಾರು ಕಾರಣಗಳಿಂದ ಯೋಗ್ಯವಾದುದಲ್ಲ.

ಮೊದಲನೆಯದಾಗಿ, ಬ್ರಿಟಿಷರೊಂದಿಗೆ ಸಹಕರಿಸಿದ ಕಾರಣಕ್ಕಾಗಿಯೇ, ಪರಿಶಿಷ್ಟ ಜಾತಿಗಳವರನ್ನು ಎಲ್ಲರೂ ಕೀಳಾಗಿ ಕಾಣುತ್ತಿದ್ದಾರೆ.

ಎರಡನೆಯದಾಗಿ, ಇಂಡಿಯನ್ ನ್ಯಾಷನಲ್ ಆರ್ಮಿಯ ವಿಚಾರಣೆಯು ಕಾಂಗ್ರೆಸ್ ಪಕ್ಷವನ್ನು ಅನುಕೂಲಕರ ಪರಿಸ್ಥಿತಿಯಲ್ಲಿಯೂ ಇತರ ಪಕ್ಷಗಳವರನ್ನು ಪ್ರತಿಕೂಲಕರ ಪರಿಸ್ಥಿತಿಯಲ್ಲಿಯೂ ಇರಿಸಿತು. ಕಾಂಗ್ರೆಸ್ ಪಕ್ಷದ ಜನಪ್ರಿಯತೆ ಎಷ್ಟು ಕಡಿಮೆ ಇತ್ತೆಂದರೆ, ಚುನಾವಣಾ ಸಮಯದಲ್ಲಿ ಇಂಡಿಯನ್

ನ್ಯಾಷನಲ್ ಆರ್ಮಿಯ ವಿಚಾರಣೆಯು ಸಂಭವಿಸದೆ ಇದ್ದಿದ್ದರೆ, ಅದೂ ಸಂಪೂರ್ಣವಾಗಿ ನೆಲವನ್ನು ಕಚ್ಚುತ್ತಿತ್ತು.

ಕಳೆದ ಚುನಾವಣೆಯ ಫಲಿತಾಂಶಗಳನ್ನು ನಿಕಷವಾಗಿ ಏಕೆ ಉಪಯೋಗಿಸಬಾರದೆಂಬುದಕ್ಕೆ ಇವೆರಡು ಕಾರಣಗಳ ಹೊರತಾಗಿಯೂ, ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಗಳನ್ನು ಪ್ರತಿನಿಧಿಸುತ್ತದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಇನ್ನೂ ಉತ್ತವಾದ ಕಾರಣವಿದೆ. ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳ ಯಶಸ್ಸು ಹಿಂದೂಗಳೂ ಮತ ಚಲಾಯಿಸುವ ಜಂಟಿ ಮತಕ್ಷೇತ್ರಗಳಲ್ಲಿದೆ. ಪರಿಶಿಷ್ಟರಿಗೆ ಮೀಸಲಾಗಿರುವ ಕ್ಷೇತ್ರಗಳಲ್ಲಿ ಹಿಂದೂಗಳ ಮತಗಳೇ ಪ್ರಧಾನವಾಗಿರುವುದರಿಂದ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳನ್ನು ಅಲ್ಲಿ ನಿಲ್ಲಿಸಿ, ಸಂಪೂರ್ಣವಾಗಿ ಹಿಂದೂಗಳ ಮತದಿಂದ ಅವರನ್ನು ಗೆಲ್ಲಿಸುವುದು ಕಾಂಗ್ರೆಸ್ ಪಕ್ಷಕ್ಕೆ ಸುಲಭವಾಯಿತು. ಪ್ರಾಂತೀಯ ಶಾಸನಸಭೆಗಳಲ್ಲಿನ ಕಾಂಗ್ರೆಸ್ ಟಿಕೆಟ್ಟಿನಿಂದ ಗೆದ್ದುಬಂದಿರುವ ಪರಿಶಿಷ್ಟ ಜಾತಿಗಳ ಸದಸ್ಯರು ಕೇವಲ ಹಿಂದೂಗಳ ಮತದಿಂದಲೇ ಆಯ್ಕೆಯಾದವರು ಮತ್ತು ಪರಿಶಿಷ್ಟ ಜಾತಿಗಳವರ ಮತದಿಂದ ಅಲ್ಲವೆಂಬ ವಾಸ್ತವಾಂಶವನ್ನು ಕ್ಯಾಬಿನೆಟ್ ಮಿಷನ್ ಕೂಡ ಅಲ್ಲಗಳೆಯಲು ಸಾಧ್ಯವಿಲ್ಲ.

ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಗಳನ್ನು ಪ್ರತಿನಿಧಿಸುತ್ತದೆಯೇ ಎಂಬುದನ್ನು ಪರೀಕ್ಷಿಸಲು ಇರುವ ಉತ್ತಮ ಸಾಧನವೆಂದರೆ, ಅಂತಿಮ ಚುನಾವಣೆಗಳಿಗೆ ಸ್ವಲ್ಪ ಮೊದಲು ನಡೆದ ಪ್ರಾಥಮಿಕ ಚುನಾವಣೆಗಳ ಫಲಿತಾಂಶವನ್ನು ವಿಶ್ಲೇಷಿಸುವುದು. ಕಾರಣ, ಪ್ರಾಥಮಿಕ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳವರಿಗಾಗಿ ಪ್ರತ್ಯೇಕ ಮತಕ್ಷೇತ್ರಗಳಿದ್ದು, ಅವುಗಳಲ್ಲಿ ಹಿಂದೂಗಳು ಮತಚಲಾಯಿಸುವಂತಿರಲಿಲ್ಲ. ಆದ್ದರಿಂದ ಪ್ರಾಥಮಿಕ ಚುನಾವಣೆಗಳು ಪರಿಶಿಷ್ಟ ಜಾತಿಗಳ ನಿಜವಾದ ಭಾವನೆಗಳನ್ನು ವ್ಯಕ್ತಪಡಿಸುತ್ತದೆ. ಪ್ರಾಥಮಿಕ ಚುನಾವಣೆಗಳ ಫಲಿತಾಂಶವು ಏನನ್ನು ತೋರಿಸುತ್ತದೆ? ಅದು ಪರಿಶಿಷ್ಟ ಜಾತಿಗಳ ಜನರು ಕಾಂಗ್ರೆಸ್ ಪಕ್ಷದೊಡನೆ ಇದ್ದಾರೆಂಬುದನ್ನು ತೋರಿಸುತ್ತದೆಯೇ?

ಪ್ರಾಂತೀಯ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಒಟ್ಟು ೧೫೧ ಸ್ಥಾನಗಳನ್ನು ನೀಡಲಾಗಿದೆ. ಸಿಂಧ್ ಮತ್ತು ಈಶಾನ್ಯ ಗಡಿಪ್ರಾಂತಗಳನ್ನು ಹೊರತುಪಡಿಸಿ ಈ ೧೫೧ ಸ್ಥಾನಗಳು ಬೇರೆಲ್ಲಾ ಪ್ರಾಂತಗಳಲ್ಲಿ ಹಂಚಿಹೋಗಿವೆ.

ಪ್ರಾಥಮಿಕ ಚುನಾವಣೆಗಳು ಅನಿವಾರ್ಯವಾದವುಗಳೇನೂ ಅಲ್ಲ. ಒಂದೇ ಸ್ಥಾನಕ್ಕಾಗಿ ನಾಲ್ಕಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸ್ಪರ್ಧಿಸುವಂತಿದ್ದರೆ ಮಾತ್ರ ಅದು ಅನಿವಾರ್ಯವಾಗುತ್ತದೆ.

ಅಂತಿಮ ಚುನಾವಣೆಗೆ ಮುನ್ನ ನಡೆದ ಕಳೆದ ಪ್ರಾಥಮಿಕ ಚುನಾವಣೆಗಳಲ್ಲಿ ಒಟ್ಟು ೧೫೧ ಕ್ಷೇತ್ರಗಳ ಪೈಕಿ ೪೦ ಕ್ಷೇತ್ರಗಳಲ್ಲಿ ಮಾತ್ರ ಪ್ರಾಥಮಿಕ ಚುನಾವಣೆಗಳು ಅನಿವಾರ್ಯವಾಗಿದ್ದವು. ಅವುಗಳು ವಿವಿಧ ಪ್ರಾಂತಗಳಲ್ಲಿ ಹೀಗೆ ಹಂಚಿಹೋಗಿದ್ದವು:

| | | | |
|---|---|---|---|
| ಮದರಾಸು | .. | .. | ೧೦ |
| ಬಾಂಬೆ | .. | .. | ೩ |
| ಬಂಗಾಳ | .. | .. | ೧೨ |
| ಸಂಯುಕ್ತ ಪ್ರಾಂತ್ಯ | | .. | ೩ |
| ಮಧ್ಯ ಪ್ರಾಂತ್ಯಗಳು | | .. | ೫ |
| ಪಂಜಾಬ್ | .. | .. | ೭ |

ಬಿಹಾರ ಮತ್ತು ಒರಿಸ್ಸಾ ಪ್ರಾಂತ್ಯಗಳಲ್ಲಿ ಪ್ರಾಥಮಿಕ ಚುನಾವಣೆಗಳು ಇರಲಿಲ್ಲ.

ಮೇಲೆ ಹೇಳಿದ ೪೦ ಕ್ಷೇತ್ರಗಳ ಚುನಾವಣಾ ಫಲಿತಾಂಶವನ್ನು ಈ ಲೇಖನದ ಅನುಬಂಧದಲ್ಲಿ ಕೊಟ್ಟಿದೆ. ಈ ಫಲಿತಾಂಶಗಳು ಕೆಳಗಿನ ಅಂಶಗಳನ್ನು ಸಾಬೀತುಮಾಡುತ್ತವೆ –

೧) ಒಟ್ಟು ೨೮೩ ಅಭ್ಯರ್ಥಿಗಳಲ್ಲಿ ಕಾಂಗ್ರೆಸ್ಸಿನ ಅಭ್ಯರ್ಥಿಗಳ ಸಂಖ್ಯೆ ಕೇವಲ ೪೬ ಹಾಗೂ ೧೬೮ ಯಶಸ್ವೀ ಅಭ್ಯರ್ಥಿಗಳಲ್ಲಿ ಕಾಂಗ್ರೆಸ್ಸಿನ ಪಾಲು ಕೇವಲ ೩೮ (೫ನೆಯ ತಃಖ್ತೆಯನ್ನು ನೋಡಿ).

೨) ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧಿಸುವ ಪಕ್ಷಗಳ ಉದ್ದೇಶ ಅಂತಿಮ ಚುನಾವಣೆಗಳಲ್ಲಿ ಕನಿಷ್ಠ ನಾಲ್ಕು ಜನ ಅಭ್ಯರ್ಥಿಗಳನ್ನು ತನ್ನ ಟಿಕೆಟ್ಟಿನ ಮೇಲೆ ನಿಲ್ಲಿಸಿ, ಇತರ ಎಲ್ಲಾ ಪಕ್ಷಗಳನ್ನೂ ಸಂಪೂರ್ಣವಾಗಿ ಸೋಲಿಸುವುದು. ತಮಗೇ ಮತದಾರರು ಅವರ ಮತವನ್ನು ಹಾಕುತ್ತಾರೆಂಬ ಪಕ್ಷದ ವಿಶ್ವಾಸದ ಮೇಲೆ ನಾಲ್ಕು ಅಭ್ಯರ್ಥಿಗಳನ್ನು ಆ ಪಕ್ಷ ನಿಲ್ಲಿಸಬಹುದು. ಕಾಂಗ್ರೆಸ್ ಪಕ್ಷವು ಪ್ರತಿ ಕ್ಷೇತ್ರದಲ್ಲಿಯೂ ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳನ್ನು ನಿಲ್ಲಿಸುವ ಸಾಹಸವನ್ನು ಮಾಡಲಿಲ್ಲ. ಅಂದರೆ, ಪರಿಶಿಷ್ಟ ಜಾತಿಗಳ ಮತದಾರರು ತಮ್ಮ ಟಿಕೆಟ್ ಪಡೆದ ಅಭ್ಯರ್ಥಿಗೆ ಮತಹಾಕುವರೆಂಬ ಭರವಸೆ ಕಾಂಗ್ರೆಸ್ ಪಕ್ಷಕ್ಕೆ ಇರಲಿಲ್ಲ. ಪ್ರತಿ ಕ್ಷೇತ್ರದಲ್ಲಿಯೂ ನಾಲ್ಕು ಜನ ಅಭ್ಯರ್ಥಿಗಳನ್ನು ನಿಲ್ಲಿಸುವ ಸಾಹಸವನ್ನು ಯಾವುದಾದರೂ ಪಕ್ಷವು ಮಾಡಿರುವುದಾದರೆ, ಅದು ಪರಿಶಿಷ್ಟ ಜಾತಿಗಳ ಒಕ್ಕೂಟ ಮಾತ್ರ (ತಃಖ್ತೆ ೨ರ ಭಾಗ ೧, ೫ರಲ್ಲಿನ ೩ ಮತ್ತು ೪ನೆಯ ಕಾಲಮ್ಮನ್ನು ನೋಡಿ).

೩) ಕಾಂಗ್ರೆಸ್ ಪಕ್ಷದ ಪರವಾಗಿ ಚಲಾಯಿತವಾದ ಮತಗಳನ್ನು ಅಳತೆಗೋಲಾಗಿರಿಸಿಕೊಂಡು ನೋಡಿದರೆ ಆ ಪಕ್ಷವು ಪ್ರಾಥಮಿಕ ಚುನಾವಣೆಗಳಲ್ಲಿ ಗಳಿಸಿದ್ದು ಕೇವಲ ಶೇ. ೨೮ ಎಂಬುದು ಅನುಮಾನಕ್ಕೆಡೆಯಿಲ್ಲದಂತೆ ಸಿದ್ಧವಾಗುತ್ತದೆ (೪ನೆಯ ತಃಖ್ತೆಯನ್ನು ನೋಡಿ).

೪) ಅಂತಿಮ ಚುನಾವಣೆಯಲ್ಲಿ ಹಿಂದೂಗಳ ಮತಗಳ ಸಹಾಯದಿಂದ ಗೆಲ್ಲಬೇಕೆಂಬ ತೀವ್ರವಾದ ಆಸೆಯಿಲ್ಲದೆ ಇದ್ದಿದ್ದರೆ, ಸ್ವತಂತ್ರ ಅಭ್ಯರ್ಥಿಗಳೆಲ್ಲರೂ ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರೇ ಆಗಿರುತ್ತಿದ್ದರು. ಇದನ್ನು ಆಧಾರವಾಗಿಟ್ಟುಕೊಂಡು ಯೋಚಿಸಿದರೆ, ಪರಿಶಿಷ್ಟ ಜಾತಿಗಳ ಒಕ್ಕೂಟವು ಮಾತ್ರ ಪರಿಶಿಷ್ಟ ಜಾತಿಗಳವರನ್ನು ಪ್ರತಿನಿಧಿಸುವ ಪಕ್ಷವೆಂದು ಮತ್ತು ಕಾಂಗ್ರೆಸ್ಸೇತರ ಪಕ್ಷಗಳಿಗೆ ದೊರಕಿದ ಶೇ. ೭೨ರಷ್ಟು ಮತಗಳು ಒಕ್ಕೂಟಕ್ಕೆ ಸಿಗಬೇಕಾದ ಗೌರವವನ್ನು ಸೂಚಿಸುತ್ತವೆ ಎಂದು ಹೇಳಬಹುದು(೪ನೆಯ ತಃಖ್ತೆಯನ್ನು ನೋಡಿ).

ಕ್ಯಾಬಿನೆಟ್ ಮಿಷನ್ನಿನ ಸದಸ್ಯರು, ಡಾ. ಅಂಬೇಡ್ಕರ್ ಅವರಿಗಿರುವ ಬೆಂಬಲವು ಬಾಂಬೆ ಪ್ರಾಂತ ಮತ್ತು ಮಧ್ಯ ಪ್ರಾಂತಗಳಲ್ಲಿನ ಪರಿಶಿಷ್ಟ ಜಾತಿಗಳಿಗೆ ಮಾತ್ರ ಸೀಮಿತವಾಗಿದೆ ಎಂದು ವಾದಿಸಿದರು.

ಈ ಹೇಳಿಕೆಗೆ ಯಾವ ಆಧಾರವೂ ಇಲ್ಲ. ಪರಿಶಿಷ್ಟ ಜಾತಿಗಳ ಒಕ್ಕೂಟವು ಬೇರೆ ಪ್ರಾಂತಗಳಲ್ಲಿಯೂ ತನ್ನ ಕಾರ್ಯವನ್ನು ನಿರ್ವಹಿಸುತ್ತಿದ್ದು ಬಾಂಬೆ ಮತ್ತು ಮಧ್ಯ ಪ್ರಾಂತಗಳಲ್ಲಿ ಗಳಿಸಿದಷ್ಟೇ ಚುನಾವಣಾ ಯಶಸ್ಸನ್ನು ಬೇರೆಡೆಗಳಲ್ಲಿಯೂ ಗಳಿಸಿಕೊಂಡಿದೆ. ಇಂತಹ ಹೇಳಿಕೆಯನ್ನು ನೀಡುವಾಗ ಡಾ. ಅಂಬೇಡ್ಕರ್ ಅವರು ಸಂವಿಧಾನ ಸಭೆಯ ಚುನಾವಣೆಗಳಲ್ಲಿ ಗಳಿಸಿದ ವಿಜಯವನ್ನು ಗಣನೆಗೆ ತಂದುಕೊಳ್ಳುವಲ್ಲಿ ಮಿಷನ್ ವಿಫಲವಾಗಿದೆ. ಅವರು ಬಂಗಾಲ ಪ್ರಾಂತೀಯ ಶಾಸನಸಭೆಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಅವರು ಅಲ್ಲಿ ೭ ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಗಳಿಸಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ ಶರತ್ ಚಂದ್ರ ಬೋಸ್ ಅವರನ್ನು ಸೋಲಿಸಿ ಸಾಮಾನ್ಯ ಸ್ಥಾನಗಳಲ್ಲಿ ಅತಿ ಹೆಚ್ಚಿನ ಮತಗಳನ್ನು ಪಡೆದವರಾಗಿದ್ದರು. ಬಾಂಬೆ ಮತ್ತು ಮಧ್ಯ ಪ್ರಾಂತಗಳ ಹೊರಗೆ ಡಾ. ಅಂಬೇಡ್ಕರ್ ಅವರ ಪ್ರಭಾವವಿಲ್ಲದಿದ್ದರೆ, ಅವರು ಬಂಗಾಳದಿಂದ ಹೇಗೆ ಗೆಲ್ಲುತ್ತಿದ್ದರು. ಇಲ್ಲಿ ಇನ್ನೂ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಬಂಗಾಳದ ಪ್ರಾಂತೀಯ ಶಾಸನಸಭೆಯಲ್ಲಿ ಪರಿಶಿಷ್ಟರ ೩೦ ಸ್ಥಾನಗಳು ಇವೆ. ಈ ೩೦ ಸ್ಥಾನಗಳಲ್ಲಿ ೨೮ ಸ್ಥಾನಗಳು ಕಾಂಗ್ರೆಸ್ ಟಿಕೆಟ್ಟಿನ ಮೇಲೆ ಗೆಲ್ಲಲ್ಪಟ್ಟವು. ಅಂಬೇಡ್ಕರ್ ಅವರ ಪಕ್ಷಕ್ಕೆ ಸೇರಿದ ಒಂದು ಕ್ಷೇತ್ರದ ಅಭ್ಯರ್ಥಿಯು ಚುನಾವಣೆಯ ದಿನ ಅನಾರೋಗ್ಯಕ್ಕೆ ತುತ್ತಾಗಿದ್ದರು. ಅಂದರೆ, ೬ ಜನ ಪರಿಶಿಷ್ಟ ಜಾತಿಗಳ ಸದಸ್ಯರು ಕಾಂಗ್ರೆಸ್ ಪಕ್ಷದ ಆದೇಶವನ್ನು ಉಲ್ಲಂಘಿಸಿ ಡಾ. ಅಂಬೇಡ್ಕರ್ ಅವರ ಪರವಾಗಿ ಮತವನ್ನು ಚಲಾಯಿಸಿದ್ದರು. ಕಾಂಗ್ರೆಸ್ ಪಕ್ಷಕ್ಕೆ ಸೇರಿರುವ ಪರಿಶಿಷ್ಟ ಜಾತಿಗಳ ಸದಸ್ಯರೂ ಡಾ. ಅಂಬೇಡ್ಕರ್ ಅವರನ್ನು ಪರಿಶಿಷ್ಟ ಜಾತಿಗಳ ನಾಯಕನೆಂದು ಮಾನ್ಯಮಾಡುತ್ತಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಮಿಷನ್ನಿನ ಹೇಳಿಕೆಯನ್ನು ಇದು ಸಾರಾಸಗಟಾಗಿ ತಪ್ಪೆಂದು ಸಾಧಿಸಿ ತೋರಿಸುತ್ತದೆ.

ಮಿಷನ್ ತನಗೆ ಇಷ್ಟರಮಟ್ಟಿಗೆ ಶರಣಾಗತವಾಗಿರುವುದರಿಂದ ಕಾಂಗ್ರೆಸ್ ಪಕ್ಷವು ಎಷ್ಟು ಉಬ್ಬಿದೆಯೆಂದರೆ, ಅದು ಮಿಷನ್ನಿಗೆ ಪತ್ರವೊಂದನ್ನು ಬರೆದು ಪರಿಶಿಷ್ಟಜಾತಿಗಳವರು ಅಲ್ಪಸಂಖ್ಯಾತರೇ ಅಲ್ಲವೆಂದು ಹೇಳುವಷ್ಟು ಧಾರ್ಷ್ಟ್ಯವನ್ನು ತೋರಿದೆ. ಇದರ ಅರ್ಥವೇನೆಂದರೆ, ಕಾಂಗ್ರೆಸ್ ಇತರ ಅಲ್ಪಸಂಖ್ಯಾತರಿಗೆ ಕೊಟ್ಟಿರುವ ಸಂರಕ್ಷಣಾ ಅವಕಾಶಗಳನ್ನು ಪರಿಶಿಷ್ಟ ಜಾತಿಗಳವರಿಗೆ ಕೊಡಲು ಸಿದ್ಧವಿಲ್ಲ. ಕಾಂಗ್ರೆಸ್ಸಿನ ಈ ಸಲಹೆಯನ್ನು ಮಿಷನ್ ಖಂಡಿಸಿಲ್ಲ. ಇಲ್ಲೇ ಅಪಾಯವು ಅಡಗಿಕೊಂಡು ಹೊಂಚುಹಾಕುತ್ತಿದೆ. ಪರಿಶಿಷ್ಟ ಜಾತಿಗಳವರನ್ನು ಮಿಷನ್ ಅಲ್ಪಸಂಖ್ಯಾತರೆಂದು ಗುರುತಿಸುತ್ತದೆಯೋ ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸುವಂತೆ ಅದನ್ನು ಒತ್ತಾಯಿಸುವ ಆವಶ್ಯಕತೆ ಈಗ ಬಂದಿದೆ.

ಪ್ರಭುತ್ವವನ್ನು ವರ್ಗಾಯಿಸುವ ಮೊದಲು, ಅಲ್ಪಸಂಖ್ಯಾತರ ಹಿತಸಂರಕ್ಷಣಾ ವಿಧಿಗಳು ಅಳವಡಿಸಲ್ಪಟ್ಟಿವೆಯೇ ಎಂಬುದನ್ನು ಸಂಸತ್ತು ಖಾತ್ರಿಗೊಳಿಸಿಕೊಳ್ಳಬೇಕಾಗಿರುತ್ತದೆ ಎಂದು ತನ್ನ ಸಲಹೆಯಲ್ಲಿ ಕ್ಯಾಬಿನೆಟ್ ಮಿಷನ್ ಹೇಳಿದೆ. ಆದರೆ ಇಂತಹ ಸಂರಕ್ಷಣಾ ವಿಧಾನಗಳನ್ನು ಪರೀಕ್ಷಿಸುವ ಸಾಧನಗಳ ಬಗ್ಗೆ ಮಿಷನ್ ಎಲ್ಲೂ ವಿಶದೀಕರಿಸಿಲ್ಲ. ಇದನ್ನು ಪರೀಕ್ಷಿಸಲು ಸಂಸತ್ತಿನ ಎರಡೂ ಸದನಗಳ ಜಂಟಿ ಸಮಿತಿಯೊಂದು ಇರುತ್ತದೆಯೇ ಎಂಬುದನ್ನೂ ಸ್ಪಷ್ಟಪಡಿಸಿಲ್ಲ. ಸಾಕಷ್ಟು ಸಂರಕ್ಷಣಾ ವಿಧಾನಗಳನ್ನು ಅಳವಡಿಸಲಾಗಿದೆ ಎಂಬುದನ್ನು ತನ್ನ ಸ್ವತಂತ್ರ ಪರಿಜ್ಞಾನದಿಂದ ಮಹಾಪ್ರಭುಗಳ ಸರಕಾರವು ಮಾಡುತ್ತದೆಯೇ ಎಂಬುದನ್ನೂ ತನ್ನ ಹೇಳಿಕೆಯಲ್ಲಿ ಮಿಷನ್ ತಿಳಿಸಿಲ್ಲ. ಈ ವಿಧಿಯು ಪೂರ್ವಚಿಂತನೆಯ ಫಲವಾಗಿರದೆ, ಇತ್ತೀಚಿನ ಯೋಚನೆಯಿಂದ ಮೂಡಿದುದಾಗಿದೆ. ಬಹುತೇಕ ಇದು ಕೇವಲ ಅಲ್ಪಸಂಖ್ಯಾತರನ್ನು ಯಾವುದೇ ಕ್ರಮಗಳಿಗೆ ಮುಂದಾಗದಂತೆ ತಡೆಯುವ ತಂತ್ರದ ಭಾಗವಾಗಿದೆಯೆಂಬ ಅಭಿಪ್ರಾಯವನ್ನು ಮೂಡಿಸುತ್ತದೆ.

## ೧೯೪೫ರ ಡಿಸೆಂಬರ್‌ನಲ್ಲಿ ನಡೆದ ಪ್ರಾಥಮಿಕ ಚುನಾವಣೆಗಳ ಫಲಿತಾಂಶದ ವಿಶ್ಲೇಷಣೆ

[೧೯೪೬ರ ಫೆಬ್ರವರಿಯಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಿಗೆ ಪೂರ್ವಭಾವಿಯಾಗಿ ಈ ಚುನಾವಣೆಗಳು ಪರಿಶಿಷ್ಟ ಜಾತಿಗಳವರಿಗಾಗಿ ಭಾರತದ ಪ್ರಾಂತೀಯ ಶಾಸನಸಭೆಗಳಲ್ಲಿ ಕಾಯ್ದಿರಿಸಿದ ಸ್ಥಾನಗಳಿಗೆ ಪರಿಶಿಷ್ಟ ಜಾತಿಗಳಿಂದ (ಅಸ್ಪೃಶ್ಯರಿಂದ) ಪ್ರತಿನಿಧಿಗಳನ್ನು ಆಯ್ಕೆಮಾಡುವ ಉದ್ದೇಶದಿಂದ ನಡೆದವು.]

ಗಮನಿಸಿ: ಈ ವಿಶ್ಲೇಷಣೆಯಲ್ಲಿ ನೀಡಿರುವ ತಃಖ್ತೆಗಳು ಅಧಿಕೃತ ಅಂಕಿಅಂಶಗಳ ಆಧಾರದಿಂದ ಸಿದ್ಧವಾದವುಗಳು.

### ತಃಖ್ತೆ ೧

### ಪ್ರಾಥಮಿಕ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗಳವರಿಗಾಗಿ ಕಾಯ್ದಿರಿಸಿದ್ದ ಸ್ಥಾನಗಳಿಗೆ ಪ್ರಾಂತ್ಯವಾರು ಸ್ಪರ್ಧಿಸಿದ್ದ ಪಕ್ಷಗಳು

| ಪಕ್ಷ | ಪ್ರತಿಯೊಂದು ಪಕ್ಷಗಳೂ ನಿಲ್ಲಿಸಿದ್ದ ಅಭ್ಯರ್ಥಿಗಳ ಸಂಖ್ಯೆ | | | | | | ಪಕ್ಷವು ಎಲ್ಲಾ ಪ್ರಾಂತಗಳಲ್ಲಿ ನಿಲ್ಲಿಸಿದ್ದ ಒಟ್ಟು |
|---|---|---|---|---|---|---|---|
| | ಮದರಾಸು | ಬಾಂಬೆ | ಬಂಗಾಲ | ಸಂ. ಪ್ರಾಂತಗಳು | ಮ. ಪ್ರಾಂತಗಳು | ಪಂಜಾಬ್ | ಅಭ್ಯರ್ಥಿಗಳು |
| ೧. ಕಾಂಗ್ರೆಸ್ | ೧೦ | ೩ | ೧೩ | ೧೧ | ೫ | ೪ | ೪೬ |
| ೨. ಪ.ಜಾ.ಒಕ್ಕೂಟ | ೩೫ | ೬ | ೮ | ೯ | ೧೨ | – | ೭೦ |
| ೩. ಹರಿಜನರ ಕೂಟ | – | – | – | ೧ | ೩ | – | ೪ |
| ೪. ಸ್ವತಂತ್ರ ಅಭ್ಯರ್ಥಿಗಳು | ೫ | ೯ | ೭೬ | ೩ | ೮ | ೫೨ | ೧೫೩ |
| ೫. ಹಿಂದೂ ಮಹಾಸಭೆ | – | – | ೧ | ೧ | – | – | ೨ |
| ೬. ಕಮ್ಯುನಿಸ್ಟ್ | ೬ | – | ೧ | – | – | – | ೭ |
| ೭. ರ್‍ಯಾಡಿಕಲ್ ಡೆಮಾಕ್ರಟಿಕ್ ಪಕ್ಷ | – | – | ೧ | – | – | – | ೧ |
| ಒಟ್ಟು | ೫೬ | ೧೮ | ೧೦೦ | ೨೫ | ೨೮ | ೫೬ | ೨೮೩ |

## ತಃಖ್ತೆ ೨
## ಪ್ರಾಥಮಿಕ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗಳವರಿಗೆ ಮೀಸಲಾಗಿದ್ದ ಸ್ಥಾನಗಳಿಗಾಗಿ ಕ್ಷೇತ್ರವಾರು ಸ್ಪರ್ಧಿಸಿದ್ದ ಪಕ್ಷಗಳು

### ಭಾಗ ೧ – ಮದರಾಸು

**ಪ್ರಾಥಮಿಕ ಚುನಾವಣೆಗಳು ನಡೆದ ಕ್ಷೇತ್ರ ಸ್ಪರ್ಧೆಯಲ್ಲಿದ್ದ ಒಟ್ಟು ಅಭ್ಯರ್ಥಿಗಳು ಕಾಂಗ್ರೆಸ್ ಪ.ಜಾ.**
**ಒಕ್ಕೂಟ ಕಮ್ಯುನಿಸ್ಟ್ ಸ್ವತಂತ್ರ ಅಭ್ಯರ್ಥಿಗಳು**

| | | | | | |
|---|---|---|---|---|---|
| ೧. ಅಮಲಾಪುರಮ್ | ೭ | ೧ | ೪ | ೨ | – |
| ೨. ಕೋಕನದ | ೫ | ೧ | ೪ | – | – |
| ೩. ಬಂದರ್ | ೫ | ೧ | ೧ | ೩ | – |
| ೪. ಕಡಪ | ೫ | ೧ | ೪ | – | – |
| ೫. ಪೆನುಗೊಂಡ | ೫ | ೧ | ೪ | – | – |
| ೬. ತಿರುವಣ್ಣಾಮಲೆ | ೬ | ೧ | ೫ | – | – |
| ೭. ತಿಂಡಿವನಮ್ | ೬ | ೧ | ೫ | – | – |
| ೮. ಮನ್ನಾರುಗುಡಿ | ೫ | ೧ | – | ೧ | ೩ |
| ೯. ಪೊಲ್ಲಾಚಿ | ೭ | ೧ | ೪ | – | ೨ |
| ೧೦. ನಾಮಕ್ಕಲ್ | ೫ | ೧ | ೪ | – | – |
| **ಒಟ್ಟು** | **೫೬** | **೧೦** | **೩೫** | **೬** | **೫** |

### ಭಾಗ ೨ – ಬಾಂಬೆ

**ಪ್ರಾಥಮಿಕ ಚುನಾವಣೆಗಳು ನಡೆದ ಕ್ಷೇತ್ರ ಸ್ಪರ್ಧೆಯಲ್ಲಿದ್ದ ಒಟ್ಟು ಅಭ್ಯರ್ಥಿಗಳು ಕಾಂಗ್ರೆಸ್ ಪ.ಜಾ.**
**ಒಕ್ಕೂಟ ಸ್ವತಂತ್ರ ಅಭ್ಯರ್ಥಿಗಳು**

| | | | | |
|---|---|---|---|---|
| ೧. ಬಾಂಬೆ ನಗರ (ಉತ್ತರ) | ೭ | ೧ | ೧ | ೫ |
| ೨. ಬಾಂಬೆ ನಗರ (ಬೈಕುಲಾ ಮತ್ತು ಪರೇಲ್) | ೬ | ೧ | ೧ | ೪ |
| ೩. ಪೂರ್ವ ಖಾನ್‌ದೇಶ | ೫ | ೧ | ೪ | – |
| **ಒಟ್ಟು** | **೧೮** | **೩** | **೬** | **೯** |

**ಭಾಗ ೩ – ಬಂಗಾಳ**

| ಪ್ರಾಥಮಿಕ ಚುನಾವಣೆಗಳು ನಡೆದ ಕ್ಷೇತ್ರ | ಸ್ಪರ್ಧೆಯಲ್ಲಿದ್ದ ಒಟ್ಟು ಅಭ್ಯರ್ಥಿಗಳು | ಕಾಂಗ್ರೆಸ್ | ಪ.ಜಾ. ಒಕ್ಕೂಟ | ಹಿಂದೂ ಮಹಾಸಭೆ | ಸ್ವತಂತ್ರ ಅಭ್ಯರ್ಥಿಗಳು | ಕಮ್ಯುನಿಸ್ಟ್ | ರ್ಯಾಡಿಕಲ್ ಡೆಮಾಕ್ರಟಿಕ್ ಪಕ್ಷ |
|---|---|---|---|---|---|---|---|
| ೧. ಹೂಗ್ಲಿ | ೫ | ೧ | – | – | ೩ | – | ೧ |
| ೨. ಹೌರಾ | ೭ | ೩ | – | – | ೪ | – | – |
| ೩. ನಾದಿಯಾ | ೧೨ | ೧ | – | – | ೧೧ | – | – |
| ೪. ಜೆಸ್ಸೂರ್ | ೭ | ೧ | ೨ | – | ೪ | – | – |
| ೫. ಖುಲ್ನಾ | ೧೧ | – | – | – | ೧೧ | – | – |
| ೬. ದಿನಜ್‌ಪುರ್ | ೧೬ | ೨ | – | – | ೧೩ | – | – |
| ೭. ಬೋಗ್ರಾ | ೬ | ೧ | – | – | ೫ | – | – |
| ೮. ಮೈಮನ್ಸಿಂಗ್ | ೭ | ೧ | – | – | ೬ | – | – |
| ೯. ಫ಼ರೀದ್‌ಪುರ್ | ೧೮ | ೨ | ೩ | – | ೧೩ | – | – |
| ೧೦. ಬಕೇರ್‌ಗಂಜ್ | ೬ | – | ೩ | ೧ | ೨ | – | – |
| ೧೧. ತಿಪ್ಪೇರಹ್ | ೫ | ೧ | – | – | ೪ | – | – |
| **ಒಟ್ಟು** | **೧೦೦** | **೧೩** | **೮** | **೧** | **೭೬** | **೧** | **೧** |

**ಭಾಗ ೪ – ಸಂಯುಕ್ತ ಪ್ರಾಂತಗಳು**

| ಪ್ರಾಥಮಿಕ ಚುನಾವಣೆಗಳು ನಡೆದ ಕ್ಷೇತ್ರ | ಸ್ಪರ್ಧೆಯಲ್ಲಿದ್ದ ಒಟ್ಟು ಅಭ್ಯರ್ಥಿಗಳು | ಕಾಂಗ್ರೆಸ್ | ಪ.ಜಾ. ಒಕ್ಕೂಟ | ಹರಿಜನ ಒಕ್ಕೂಟ | ಹಿಂದೂ ಮಹಾಸಭೆ | ಸ್ವತಂತ್ರ ಅಭ್ಯರ್ಥಿಗಳು |
|---|---|---|---|---|---|---|
| ೧. ಆಗ್ರಾ ನಗರ | ೧೧ | ೧ | ೫ | ೧ | ೧ | ೩ |
| ೨. ಅಲಹಾಬಾದ್ ನಗರ | ೮ | ೧ | ೪ | – | – | ೩ |
| ೩. ಅಲ್ಮೊರಾ | ೬ | ೩ | – | – | – | ೩ |
| **ಒಟ್ಟು** | **೨೫** | **೫** | **೯** | **೧** | **೧** | **೯** |

**ಭಾಗ ೫ – ಮಧ್ಯ ಪ್ರಾಂತಗಳು**

| ಪ್ರಾಥಮಿಕ ಚುನಾವಣೆಗಳು ನಡೆದ ಕ್ಷೇತ್ರ | ಸ್ಪರ್ಧೆಯಲ್ಲಿದ್ದ ಒಟ್ಟು ಅಭ್ಯರ್ಥಿಗಳು | ಕಾಂಗ್ರೆಸ್ | ಪ.ಜಾ. ಒಕ್ಕೂಟ | ಹರಿಜನ ಒಕ್ಕೂಟ | ಸ್ವತಂತ್ರ ಅಭ್ಯರ್ಥಿಗಳು |
|---|---|---|---|---|---|
| ೧. ನಾಗಪುರ ಮತ್ತು ಸಕೋಲಿ | ೫ | ೧ | ೨ | ೧ | ೧ |
| ೨. ಹಿಂಗನ್‌ಘಾಟ್ | ೬ | ೧ | ೨ | ೧ | ೨ |
| ೩. ಭಂಡಾರ | ೫ | ೧ | ೩ | ೧ | – |
| ೪. ಯೋಟ್‌ಮಲ್ | ೬ | ೧ | ೨ | – | ೩ |
| ೫. ಚಿಕ್ಲಿ | ೬ | ೧ | ೩ | – | ೨ |
| **ಒಟ್ಟು** | **೨೮** | **೫** | **೧೨** | **೩** | **೮** |

**ಭಾಗ ೫ – ಪಂಜಾಬ್**

| ಪ್ರಾಥಮಿಕ ಚುನಾವಣೆಗಳು ನಡೆದ ಕ್ಷೇತ್ರ | ಸ್ಪರ್ಧೆಯಲ್ಲಿದ್ದ ಒಟ್ಟು ಅಭ್ಯರ್ಥಿಗಳು | ಕಾಂಗ್ರೆಸ್ | ಯೂನಿಯನಿಸ್ಟ್ಸ್ | ಸ್ವತಂತ್ರ ಅಭ್ಯರ್ಥಿಗಳು |
|---|---|---|---|---|
| ೧. ಗುರ್‌ಗಾಂವ್ | ೧೦ | – | ೧ | ೯ |
| ೨. ಕರ್ನಾಲ್ | ೧೦ | ೧ | – | ೯ |
| ೩. ಅಂಬಾಲಾ | ೮ | – | – | ೮ |
| ೪. ಹೋಷಿಯಾರ್‌ಪುರ್ | ೯ | ೧ | ೧ | ೭ |
| ೫. ಜಲಂಧರ್ | ೬ | ೧ | ೧ | ೪ |
| ೬. ಲೂಧಿಯಾನ | ೧೦ | ೧ | – | ೯ |
| ೭. ಲೈಲ್‌ಪುರ್ | ೬ | – | – | ೬ |
| **ಒಟ್ಟು** | **೫೯** | **೪** | **೩** | **೫೨** |

## ತಃಖ್ತೆ ೩

## ಪ್ರಾಥಮಿಕ ಚುನಾವಣೆಗಳಲ್ಲಿ ವಿವಿಧ ಪಕ್ಷಗಳು ಪಡೆದ ಪ್ರಾಂತ್ಯವಾರು ಮತಗಳು

| | | | | | | | | | |
|---|---|---|---|---|---|---|---|---|---|
| | | ಪ್ರತಿ ಪಕ್ಷಗಳೂ ಪಡೆದ ಮತಗಳು | | | | | | | |
| | ಪಕ್ಷ | ಮದರಾಸು | | ಬಾಂಬೆ | ಬಂಗಾಳ | ಸಂ. ಪ್ರಾಂತಗಳು | | ಮ. ಪ್ರಾಂತಗಳು | |
| ಪಂಜಾಬ್ | | | | | | | | | |
| | | **ಒಟ್ಟು** | **ಶೇ.** | **ಒಟ್ಟು** | **ಶೇ.** | **ಒಟ್ಟು** | **ಶೇ.** | **ಒಟ್ಟು** | **ಶೇ.** |
| **ಒಟ್ಟು** | **ಶೇ.** | **ಒಟ್ಟು** | **ಶೇ.** | | | | | | |
| ೧. ಕಾಂಗ್ರೆಸ್ | | ೨೭,೮೩೮ | ೩೩ | ೫,೩೩೩ | ೧೪ | ೫೬,೮೪೮ | ೩೨.೭ | ೪,೧೦೧ | ೪೧.೮ |
| ೧,೧೩೧ | ೧೦.೭ | ೮,೨೯೮ | ೧೮ | | | | | | |
| ೨. ಪರಿಶಿಷ್ಟ ಜಾತಿಗಳ ಒಕ್ಕೂಟ | | | ೩೦,೧೯೯ | ೩೬ | ೨೮,೪೪೯ | ೭೪ | ೨೧,೧೨೯ | ೧೨.೨ | ೩,೯೯೩ |
| ೩೦.೫ | ೮,೬೮೫ | ೮೨.೮ | – | | | | | | |
| ೩. ಸ್ವತಂತ್ರ ಅಭ್ಯರ್ಥಿಗಳು | | | ೪,೬೪೮ | ೪.೫ | ೩,೮೧೪ | ೧೦ | ೮೩,೮೯೬ | ೪೭ | ೧,೭೭೩ |
| ೧೮.೮ | ೫೫೧ | | ೨೪,೬೧೮ | ೫೩ | | | | | |
| ೪. ಹರಿಜನರ ಒಕ್ಕೂಟ | | – | – | – | – | – | | ೩೭೦ | |
| ೧೧೩ | | – | | | | | | | |
| ೫. ಹಿಂದೂ ಮಹಾ ಸಭೆ | | | – | – | – | – | ೭೬೦ | | ೪೫೨ |
| – | | – | | | | | | | |
| ೬. ಯೂನಿಯನಿಸ್ಟ್ಸ್ | | – | – | – | – | – | | – | |
| – | | ೧೩,೫೨೧ | ೨೯ | | | | | | |
| ೭. ಕಮ್ಯುನಿಸ್ಟ್ಸ್ | | ೨೦,೮೧೪ | ೨೫ | – | – | ೧೦,೦೪೯ | ೫.೮ | – | |
| – | | – | | | | | | | |
| **ಒಟ್ಟು** | **೮೩,೪೯೯** | | **೩೭,೬೩೬** | | **೧,೭೨,೬೫೫** | | | **೯,೭೮೯** | |
| **೧೦,೪೮೦** | | **೪೬,೪೩೭** | | | | | | | |

## ತಃಖ್ತೆ ೪

## ಅಖಿಲ ಭಾರತ ಮಟ್ಟದಲ್ಲಿ ಪ್ರಾಥಮಿಕ ಚುನಾವಣೆಯಲ್ಲಿ ಚಲಾವಣೆಯಾದ ಮತಗಳ ವಿತರಣೆ ಮತ್ತು ಕಾಂಗ್ರೆಸ್ ಮತ್ತು ಅವುಗಳಲ್ಲಿ ಕಾಂಗ್ರೆಸ್ಸೇತರ ಪಕ್ಷಗಳ ಪಾಲು

ಪ್ರಾಥಮಿಕ ಚುನಾವಣೆ ಯಲ್ಲಿ ದೇಶದಾ ದ್ಯಂತ ಚಲಾವಣೆ ಯಾದ ಮತಗಳು ಕಾಂಗ್ರೆಸ್ ಪರವಾಗಿ ಕಾಂಗ್ರೆಸ್ಸೇತರ ಪಕ್ಷಗಳ ಪರವಾಗಿ

| | | | | | | | | | |
|---|---|---|---|---|---|---|---|---|---|
| **ಕಾಂಗ್ರೆಸ್** | **ಹರಿ ಜನರ ಒಕ್ಕೂಟ** | | **ಒಟ್ಟು** | **ಶೇ** | **ಪ.ಜಾ. ಒಕ್ಕೂಟ** | | **ಸ್ವತಂತ್ರ ಅಭ್ಯರ್ಥಿ ಗಳು** | | **ಹಿಂದೂ** |
| **ಮಹಾ ಸಭೆ** | **ಕಮ್ಯುನಿಸ್ಟ್ಸ್** | **ಯೂನಿಯನಿಸ್ಟ್ಸ್** | | **ರ್‍ಯಾಡಿಕಲ್ ಡೆಮಾ ಕ್ರಟಿಕ್ ಪಕ್ಷ** | | | **ಒಟ್ಟು** | **ಶೇ** | |
| | ೩,೫೯,೫೩೨ | | ೧,೦೩,೪೪೯ | | ೪೮೩ | ೧,೦೩,೯೩೨ | | ೨೮ | ೯೧,೫೯೫ |
| ೧,೧೯,೨೭೩ | | ೧,೨೧೨ | ೩೦,೮೬೩ | ೧೩,೫೨೧ | ೧೩೬ | ೨,೫೬,೬೦೦ | | ೭೨ | |

**ತಃಖ್ತೆ ೫**

**ಪ್ರಾಥಮಿಕ ಚುನಾವಣೆಯಲ್ಲಿ ವಿವಿಧ ಪ್ರಾಂತಗಳಲ್ಲಿ ಜಯಗಳಿಸಿದ ಅಭ್ಯರ್ಥಿಗಳ ಪಕ್ಷವಾರು ಅಂಕಿಅಂಶಗಳು**

| ಪಕ್ಷ | ಮದರಾಸು | ಬಾಂಬೆ | ಬಂಗಾಳ | ಸಂ.ಪ್ರಾಂ | ಮ.ಪ್ರಾಂ. | ಪಂಜಾಬ್ | ಒಟ್ಟು |
|---|---|---|---|---|---|---|---|
| ೧. ಕಾಂಗ್ರೆಸ್ | ೧೦ | ೩ | ೧೨ | ೪ | ೫ | ೪ | ೩೮ |
| ೨. ಪ.ಜಾ. ಒಕ್ಕೂಟ | ೨೪ | ೫ | ೬ | ೫ | ೧೧ | – | ೫೧ |
| ೩. ಸ್ವತಂತ್ರ ಅಭ್ಯರ್ಥಿಗಳು | ೩ | ೪ | ೩೬ | ೨ | ೩ | ೨೧ | ೬೯ |
| ೪. ಹಿಂದೂ ಮಹಾ ಸಭೆ | – | – | ೧ | ೧ | ೧ | – | ೩ |
| ೫. ಹರಿಜನರ ಒಕ್ಕೂಟ | – | – | – | – | – | – | – |
| ೬. ಕಮ್ಯೂನಿಸ್ಟ್ಸ್ | ೩ | – | ೧ | – | – | – | ೪ |
| ೭. ರ್‍ಯಾಡಿಕಲ್ ಡೆಮಾಕ್ರಟಿಕ್ ಪಕ್ಷ | – | – | – | – | – | – | – |
| ೮. ಯೂನಿಯ ನಿಸ್ಟ್ಸ್ | – | – | – | – | – | ೩ | ೩ |
| **ಒಟ್ಟು** | ೪೦ | ೧೨ | ೫೬ | ೧೨ | ೨೦ | ೨೮ | ೧೬೮ |

# ೧೬. ಇತರರಿಗಿಂತ ನಾನು ಹೆಚ್ಚಿನ ರಾಷ್ಟ್ರೀಯವಾದಿ

"ನ್ಯಾಯ ಮತ್ತು ಮಾನವೀಯತೆಯ ಉದ್ದೇಶಗಳಿಗಾಗಿ ಮತ್ತು ತಮ್ಮ ವಿರುದ್ಧ ಮಾಡುತ್ತಿರುವ ಕುತಂತ್ರ ಮತ್ತು ಪಿತೂರಿಗಳಿಗೆ ಪ್ರತಿಯಾಗಿ ಯುದ್ಧವನ್ನು ಸಾರುವಂತೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ ಸಮುದಾಯದವರಿಗೆ ಹೇಳುವ ಮೂಲಕ ರಣಕಹಳೆಯನ್ನು ಮೊಳಗಿದರು. ತಮ್ಮ ಹಕ್ಕುಗಳನ್ನು ಸಮರ್ಥಿಸಿಕೊಳ್ಳಲು ಮತ್ತು ಇಚ್ಛಾಶಕ್ತಿಯನ್ನು ಪ್ರದರ್ಶಿಸಲು ಇದು ಸಕಾಲ, ಏಕೆಂದರೆ, ಸ್ವತಂತ್ರ ಭಾರತವು ತನ್ನ ಹಿಂದಿನ ಸಾಂಪ್ರದಾಯಿಕ ಚಾಳಿಗೇ ಮತ್ತೆ ಅಂಟಿಕೊಳ್ಳುತ್ತದೆ ಮತ್ತು ತಮ್ಮ ಜನರನ್ನು ಬಡತನದ ಕೂಪಕ್ಕೆ ತಳ್ಳುತ್ತದೆ, ದುರ್ಲಕ್ಷಿಸುತ್ತದೆ, ಸಮಾಜದಿಂದ ಮತ್ತು ಲೋಕಸೇವೆಯಿಂದ ಬಹಿಷ್ಕರಿಸುತ್ತದೆ ಎಂಬ ಭಯವು ಅವರನ್ನು ಕಾಡುತ್ತಿತ್ತು.

೧೯೪೬ರ ಜೂನ್ ೨೯ರಂದು ಉಸ್ತುವಾರಿ ಸರಕಾರವನ್ನು ಘೋಷಿಸಲಾಯಿತು ಮತ್ತು ಅಂದೇ ಬ್ರಿಟಿಷ್ ಮಿಷನ್ ಲಂಡನ್ನಿಗೆ ತೆರಳಿತು. ಉಳಿದ ವಿಷಯಗಳನ್ನು ವೈಸ್‌ರಾಯ್ ಅವರ ನಿರ್ಧಾರಕ್ಕೆ ಬಿಡಲಾಯಿತು.

ಬಾಂಬೆ ಶಾಸನಸಭೆಯ ಪೂನಾ ಅಧಿವೇಶನವು ಪ್ರಾರಂಭವಾದ ೧೯೪೬ರ ಜುಲೈ ೧೫ರಂದೇ ಯುದ್ಧವನ್ನು ಕೂಡ ಪ್ರಾರಂಭಿಸಲಾಯಿತು."(ಕೀರ್. ಪುಟ ೩೮೧).

೧೯೪೬ರ ಜುಲೈ ೧೭ರಂದು ಎ.ಪಿ.ಎ.ಗೆ ನೀಡಿದ ಸಂದರ್ಶನದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಹೀಗೆ ಹೇಳಿದರು:

"ಬೇರೆ ಎಲ್ಲಾ ದೇಶಗಳಂತೆಯೇ, ಈ ದೇಶವೂ ಪ್ರಗತಿಯನ್ನು ಹೊಂದಬೇಕೆಂದು ನಾವು ಬಯಸುತ್ತೇವೆ. ನಾವು ದೇಶದ ಪ್ರಗತಿಯ ಹಾದಿಯಲ್ಲಿ ಅಡ್ಡಗಾಲು ಹಾಕುವುದಿಲ್ಲ. ನಮ್ಮ ಸ್ಥಾನಮಾನಗಳನ್ನು ರಕ್ಷಿಸಬೇಕೆಂಬುದನ್ನಷ್ಟೇ ನಾವು ಕೇಳುತ್ತಿರುವುದು.

ಈ ಗುರಿಯನ್ನು ಸಾಧಿಸಲು ನಾವು, ಬ್ರಿಟಿಷರ ಮೇ ೧೬ರ ಸಲಹೆಗಳ ವಿರುದ್ಧ ಎಲ್ಲಾ ರೀತಿಯ ಹೋರಾಟಗಳಲ್ಲಿಯೂ ಭಾಗಿಯಾಗುತ್ತೇವೆ. ಸಿಕ್ಖರ ನಿಲುವಿಗೆ ಈಗ ನಾನು ಸಂಪೂರ್ಣ ಬೆಂಬಲವನ್ನು ನೀಡುತ್ತಿದ್ದೇನೆ. ಹಾಗೆಯೇ ಮುಸ್ಲಿಮರು ಬ್ರಿಟಿಷರ ವಿರುದ್ಧ ನೇರ ಹೋರಾಟವನ್ನು ಪ್ರಾರಂಭಿಸಿದರೆ, ಅದಕ್ಕೂ ನಾನು ಬೆಂಬಲವನ್ನು ನೀಡುತ್ತೇನೆ."

ಈಗ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಪ್ರತಿನಿಧಿಗಳು ಪೂನಾದಲ್ಲಿ ಪ್ರಾರಂಭಿಸಿರುವ ಸತ್ಯಾಗ್ರಹವು ೧೯೪೨ರಲ್ಲಿ ಕಾಂಗ್ರೆಸ್ ನಡೆಸಿದ ಹೋರಾಟದ ಮಾದರಿಯಲ್ಲಿಯೇ ದೇಶದಲ್ಲಿ ಸಂಪೂರ್ಣವಾಗಿ ಹರಡುತ್ತದೆ ಎಂಬ ಎಚ್ಚರಿಕೆಯನ್ನು ಅವರು ನೀಡಿದರು.

"ಇದು ಕೇವಲ ಪ್ರಾರಂಭ ಮಾತ್ರ, ಈ ಹೋರಾಟವು ಕಾಂಗ್ರೆಸ್ ಹೋರಾಟದ ಆಯಾಮಗಳನ್ನು ಪಡೆಯುವಂತೆ ಮಾಡಿದರೆ, ಆಗಸ್ಟ್ ಗಲಭೆಗಳಲ್ಲಿ ಕಾಂಗ್ರೆಸ್ ಮಾಡಿದುದೆಲ್ಲವನ್ನೂ ನಾವೂ ಮಾಡುತ್ತೇವೆ" ಎಂದು ಅವರು ಹೇಳಿದರು.

ಈಗ ಪೂನಾದಲ್ಲಿ ನಡೆಯುತ್ತಿರುವ ಪರಿಶಿಷ್ಟ ಜಾತಿಗಳ ಪ್ರತಿಭಟನೆಯು, ಬ್ರಿಟಿಷ್ ಸರಕಾರವು ಕಳೆದ ೨೮ ವರ್ಷಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ನೀಡಿದ್ದ ಎಲ್ಲಾ ವಾಗ್ದಾನಗಳನ್ನೂ ಮುರಿದಿರುವುದರ ವಿರುದ್ಧ

ನಡೆಯುತ್ತಿರುವ ಪ್ರತಿಭಟನೆ ಎಂದು ಅವರು ವರ್ಣಿಸಿದರು.

"ಸಾಂವಿಧಾನಿಕ ಸಂರಕ್ಷಣೆ ಮತ್ತು ಇತರ ಸವಲತ್ತುಗಳಿಗೆ ಕಾರಣವಾಗುವ ಅಲ್ಪಸಂಖ್ಯಾತರು ಎಂಬ ಮಾನ್ಯತೆಯನ್ನು ನಾವು ಪಡೆಯದಿದ್ದರೆ, ಈ ಹೋರಾಟವು ಬೇರೆ ಎಡೆಯಲ್ಲಿ, ಬೇರೆಯ ರೂಪದಲ್ಲಿ ಮುಂದುವರೆಯುತ್ತದೆ. ಅದು ಬ್ರಿಟಿಷ್ ಸರಕಾರದ ಅನ್ಯಾಯಯುತ ಶಿಫಾರಸ್ಸುಗಳ ವಿರುದ್ಧ ದೇಶದ ಉದ್ದಗಲಗಳಲ್ಲಿ ಹೋರಾಟವನ್ನು ಪ್ರಾರಂಭಿಸಲು ಪ್ರಾಂತಗಳಿಗೆ ಸಕಾಲವಾಗಿರುತ್ತದೆ."

ಪ್ರಾಂತೀಯ ಸಂಸ್ಥೆಗಳಿಗೆ ಅವರು ಮಾಡಬೇಕಾದ ಹೋರಾಟದ ರೂಪುರೇಷೆಗಳನ್ನು ಅಳವಡಿಸಿಕೊಳ್ಳಬೇಕು ಎಂಬುದರ ಬಗ್ಗೆ ಏನಾದರೂ ಸೂಚನೆಗಳನ್ನು ನೀಡಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಡಾ. ಅಂಬೇಡ್ಕರ್ ಅವರು 'ತಮ್ಮ ಹೋರಾಟದ ರೂಪುರೇಷೆಗಳನ್ನು ರೂಪಿಸಿಕೊಳ್ಳುವುದನ್ನು ಪ್ರಾಂತಗಳಿಗೇ ಬಿಟ್ಟಿದ್ದೇವೆ. ಈ ಎಲ್ಲಾ ವಿಷಯಗಳನ್ನೂ ಕೇವಲ ಬೌದ್ಧಿಕವಾಗಿ ಚರ್ಚಿಸಲಾಗುವುದಿಲ್ಲ. ಪ್ರತಿಯೊಂದು ಪ್ರಾಂತಕ್ಕೂ ತನ್ನದೇ ಆದ ಹಿನ್ನೆಲೆಯಿರುತ್ತದೆ ಮತ್ತು ಒಂದು ಪ್ರಾಂತದಲ್ಲಿ ಪರಿಣಾಮಕಾರಿಯಾದ ಸಾಧನವು ಮತ್ತೊಂದು ಪ್ರಾಂತಕ್ಕೆ ಸೂಕ್ತವಾಗಿರದೆ ಇರಬಹುದು" ಎಂದು ಹೇಳಿದರು.

ಈಗ ಅನುಸರಿಸುತ್ತಿರುವ ಕ್ರಮವನ್ನೇ ಅಂದರೆ, ಸಣ್ಣ ಸಣ್ಣ ಗುಂಪುಗಳನ್ನು ಸತ್ಯಾಗ್ರಹಕ್ಕೆ ಕಳುಹಿಸುವ ಕ್ರಮವನ್ನೇ, ಮುಂದುವರೆಸಿಕೊಂಡು ಪೂನಾದಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ನಡೆಸಿಕೊಂಡು ಹೋಗುವ ಇಚ್ಛೆ ಒಕ್ಕೂಟದ್ದಾಗಿದೆ. ದೊಡ್ಡ ಪ್ರಮಾಣದಲ್ಲಿ ಸತ್ಯಾಗ್ರಹವನ್ನು ನಡೆಸುವುದರಲ್ಲಿರುವ ತೊಂದರೆಯೆಂದರೆ, ಆಹಾರ ಪೂರೈಕೆ. ಇಲ್ಲದಿದ್ದರೆ, ನಾವು ಅತಿ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಯನ್ನು ನಡೆಸುತ್ತಿದ್ದೆವು ಎಂದು ಡಾ. ಅಂಬೇಡ್ಕರ್ ಅವರು ನುಡಿದರು.

ನೀವೇ ಸತ್ಯಾಗ್ರಹದಲ್ಲಿ ಪಾಲುಗೊಳ್ಳುವ ಯೋಚನೆಯಿದೆಯೇ ಎಂಬ ಪ್ರಶ್ನೆಗೆ ಪರಿಶಿಷ್ಟ ಜಾತಿಗಳವರ ನಾಯಕರಾದ ಅಂಬೇಡ್ಕರ್ ಅವರು "ಸೈನ್ಯಾಧಿಪತಿಯು ರಣರಂಗದಲ್ಲಿ ಹಾಜರಿರಬೇಕಾದ ಆವಶ್ಯಕತೆಯಿಲ್ಲ. ನನ್ನ ಬಳಿ ಇಂತಹ ಹೋರಾಟವನ್ನು ನಡೆಸಬಲ್ಲ ವಿಶ್ವಾಸಾರ್ಹ ದಳಪತಿಗಳಿದ್ದಾರೆ. ನಾನು ಅಲ್ಲಿರಬೇಕಾದ ಅಗತ್ಯ ಮತ್ತು ಹೋರಾಟದಲ್ಲಿ ಭಾಗವಹಿಸಬೇಕಾದ ಪ್ರಮೇಯವು ಬಂದರೆ, ನಾನು ಅಲ್ಲಿ ಇದ್ದೇ ಇರುತ್ತೇನೆ.

ಸದ್ಯದಲ್ಲಿ, ನನಗೆ ಪೂನಾದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ತಾಜಾ ಸುದ್ದಿಯು ನನ್ನ ವೈಯಕ್ತಿಕ ದೂತನ ಮೂಲಕ ಪ್ರತಿದಿನವೂ ಬರುತ್ತಿದೆ" ಎಂದು ಅವರು ಹೇಳಿದರು.

### ಶ್ರೀ ಗಾಂಧಿಯವರಿಂದ ಆಹ್ವಾನವಿಲ್ಲ

ತಾವು ಪೂನಾದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸ್ವತಃ ನೋಡಲು ಭಾನುವಾರ ಅಲ್ಲಿಗೆ ಹೋಗುವ ಉದ್ದೇಶವಿದೆ ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು. ಈ ವ್ಯವಹಾರಗಳನ್ನು ಪರಿಹರಿಸುವ ಸಲುವಾಗಿ ಚರ್ಚಿಸಲು ತಮಗೆ ಶ್ರೀ ಗಾಂಧಿಯವರಿಂದಾಗಲೀ, ಅಥವಾ ಇನ್ನಾವುದೇ ಉನ್ನತ ಮಟ್ಟದ ಕಾಂಗ್ರೆಸ್ ವ್ಯಕ್ತಿಗಳಿಂದಾಗಲೀ ಆಹ್ವಾನವು ಬಂದಿಲ್ಲವೆಂದರು.

"ಹಾಗಿದ್ದರೂ, ಸಂಬಂಧಪಟ್ಟ ಪಕ್ಷಗಳವರೊಂದಿಗೆ ಸಂಧಾನ ಪ್ರಾರಂಭಿಸಲು ಒಕ್ಕೂಟವು ಸಿದ್ಧವಿದೆ. ಬ್ರಿಟಿಷ್ ಸರಕಾರದ ಸಚಿವರು ಪರಿಶಿಷ್ಟ ಜಾತಿಗಳವರನ್ನು ನಿರ್ಲಕ್ಷಿಸಬೇಕೆಂಬ ಕರಾರಿನ ಮೇರೆಗೇ ಶ್ರೀ ಗಾಂಧಿಯವರು ಬ್ರಿಟಿಷರ ದೀರ್ಘಾವಧಿ ಯೋಜನೆಗೆ ತಮ್ಮ ಒಪ್ಪಿಗೆಯನ್ನು ಕೊಟ್ಟರು ಎಂದು ಭಾರತದ ಪರಿಶಿಷ್ಟ ಜಾತಿಗಳವರು ತಿಳಿದುಕೊಂಡಿದ್ದಾರೆ ಎಂಬುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳಬೇಕು. ತಮ್ಮ ಕುತ್ಸಿತ ಗುಣಗಳ ಹೊರತಾಗಿಯೂ ಕಾಂಗ್ರೆಸ್ ಮುಖಂಡರು ಹೇಳಿದ ಹಾಗೆ, ಶ್ರೀ ಗಾಂಧಿಯವರು ದೀರ್ಘಾವಧಿಯ ಯೋಜನೆಯಲ್ಲಿ ಕಂಡುಕೊಂಡಿರುವ ಅತಿ ದೊಡ್ಡ ಪ್ರಯೋಜನವೆಂದರೆ ಇದೇ.

ಕಾಂಗ್ರೆಸ್ಸಿನವರನ್ನು ಒಲಿಸಿಕೊಳ್ಳಲು ಬ್ರಿಟಿಷ್ ಸರಕಾರವು ಪರಿಶಿಷ್ಟ ಜಾತಿಗಳವರನ್ನು ಬಲಿಕೊಡಲು ನಿರ್ಧರಿಸಿದ್ದಾರೆ. ಇದನ್ನು ನಾನು ಅತಿ ಹೇಯವಾದ ವಚನಭ್ರಷ್ಟತೆಯೆನ್ನುತ್ತೇನೆ" ಎಂದು ಅವರು ಹೇಳಿದರು.

ಬೇರೆ ಎಲ್ಲಾ ದೇಶಗಳಂತೆಯೇ, ಈ ದೇಶವೂ ಪ್ರಗತಿಯನ್ನು ಹೊಂದಬೇಕೆಂದು ನಾವು ಬಯಸುತ್ತೇವೆ. ನಾವು ದೇಶದ ಪ್ರಗತಿಯ ಹಾದಿಯಲ್ಲಿ ಅಡ್ಡಗಾಲು ಹಾಕುವುದಿಲ್ಲ. ಭವಿಷ್ಯತ್ತಿನಲ್ಲಿ ನಮ್ಮ ಸ್ಥಾನಮಾನಗಳನ್ನು ರಕ್ಷಿಸಬೇಕೆಂಬುದನ್ನಷ್ಟೇ ನಾವು ಕೇಳುತ್ತಿರುವುದು. (ಪುನರ್ಮುದ್ರಿತ: ಜೈಭೀಮ್ ೧೯೪೬ರ ಆಗಸ್ಟ್ ೧೩, ಪುಟಗಳು ೧ ಮತ್ತು ೨).

ಪೂನಾದ ಅಹಲ್ಯಾಶ್ರಮದಲ್ಲಿ ೧೯೪೬ರ ಜುಲೈ ೨೧ರಂದು ಅಸ್ಪೃಶ್ಯರ ಸಭೆಯೊಂದನ್ನು ಆಯೋಜಿಸಲಾಗಿದ್ದಿತು. ಸಭೆಯ ನಂತರ ಡಾ. ಅಂಬೇಡ್ಕರ್ ಅವರು ಪತ್ರಿಕಾಗೋಷ್ಠಿಯೊಂದನ್ನು ಉದ್ದೇಶಿಸಿ ಮಾತನಾಡಿದರು. ಆ ಪತ್ರಿಕಾಗೋಷ್ಠಿಯ ವರದಿಯು ಕೆಳಕಂಡಂತೆ ಇದೆ. – ಸಂಪಾದಕರು

## ಪರಿಶಿಷ್ಟ ಜಾತಿಗಳವರ ಭವಿಷ್ಯ

### ಯೋಜನೆಯ ವಿವರವಾದ ರೂಪರೇಷೆಗಳನ್ನು ನೀಡುವಂತೆ ಕಾಂಗ್ರೆಸ್ಸಿಗೆ ಒತ್ತಾಯ

ಪತ್ರಿಕಾಗೋಷ್ಠಿಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಡಾ. ಬಿ.ಆರ್.ಅಂಬೇಡ್ಕರ್ ಅವರು, ಭಾರತದ ಭವಿಷ್ಯದ ಸಂವಿಧಾನದಲ್ಲಿ ೬ ಕೋಟಿ ಅಸ್ಪೃಶ್ಯರ ಹಿತಾಸಕ್ತಿಗಳನ್ನು ರಕ್ಷಿಸಲು ಕಾಂಗ್ರೆಸ್ ಪಕ್ಷವು ಮಾಡಿರುವ ಯೋಜನೆಯ ಬಗ್ಗೆ ಬಹಿರಂಗ ಹೇಳಿಕೆಯನ್ನು ನೀಡುವಂತೆ ಆ ಪಕ್ಷವನ್ನು ಒತ್ತಾಯಿಸಿದರು. ತಮಗೆ ಬೇಕಾಗಿರುವುದು ಕಾರ್ಯಸಾಧುವಾದ ಯೋಜನೆಯ ರೂಪುರೇಷೆಗಳೇ ಹೊರತು ಕೇವಲ ಬಾಯಿಮಾತಿನ ಆಶ್ವಾಸನೆಗಳಲ್ಲ ಎಂದು ಅವರು ಹೇಳಿದರು.

ತಮ್ಮ ನ್ಯಾಯಯುತವಾದ ರಾಜಕೀಯ ಹಕ್ಕುಗಳನ್ನು ಪಡೆದುಕೊಳ್ಳಲು ದೇಶಾದ್ಯಂತ ನಡೆಯುವ ಹೋರಾಟದ ಪ್ರಯತ್ನದಲ್ಲಿ ಪೂನಾದಲ್ಲಿ ಪ್ರಾರಂಭಿಸಿರುವ ಸತ್ಯಾಗ್ರಹವು ಮೊದಲ ಹೆಜ್ಜೆಯಾಗಿದೆ. ಪೂನಾ ಸತ್ಯಾಗ್ರಹವು ಉನ್ನತ ನೈತಿಕ ಮಟ್ಟದಲ್ಲಿ ನಡೆಸಲ್ಪಡುತ್ತಿದೆ. ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿರುವ ಇಡೀ ಕಾರ್ಯಕರ್ತರ ತಂಡಗಳ ಅಹಿಂಸಾ ನಡವಳಿಕೆಯು, ಸತ್ಯಾಗ್ರಹದಲ್ಲಿ ಪದವಿಯನ್ನು ಪಡೆದಿರುವೆನೆಂದು ಹೇಳಿಕೊಳ್ಳುವ ಶ್ರೀ ಗಾಂಧಿಯವರಿಗೇ ಸತ್ಯಾಗ್ರಹದ ರೀತಿಯನ್ನು ಹೇಳಿಕೊಡುವಂತೆ ಇದೆ. ತಮ್ಮ ನೈತಿಕ ಸಂಪತ್ತು ತೀರಿದ ಮೇಲೆ ತಮ್ಮ ಪ್ರತಿಭಟನೆಯನ್ನು ಮುಂದುವರೆಸಲು ಇತರ ಮಾರ್ಗಗಳನ್ನು ಅನುಸರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ಅವರು ನೀಡಿದರು. ಬಾಂಬೆ ಸರಕಾರದ ವಿರುದ್ಧ ಪ್ರತಿಭಟಿಸಲು ಹರಿಜನರಿಗೆ ಇರುವ ಕಾರಣಗಳೇನು ಎಂಬ ಬಾಂಬೆ ಪ್ರಧಾನ ಮಂತ್ರಿಗಳ ಪ್ರಶ್ನೆಗೆ ಡಾ. ಅಂಬೇಡ್ಕರ್ ಅವರು ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಈ ಪ್ರಶ್ನೆಯ ಉತ್ತರವು ಬಹಳ ಸರಳವಾಗಿದೆ.

### ಅಧಿಕಾರದ ಉತ್ತರಾಧಿಕಾರಿಗಳು

ಬ್ರಿಟಿಷರ ಅಧಿಕಾರಕ್ಕೆ ಉತ್ತರಾಧಿಕಾರಿಗಳು ಮುಸ್ಲಿಮರು ಮತ್ತು ಸವರ್ಣೀಯ ಹಿಂದೂಗಳು – ಈ ಎರಡು ಸಮುದಾಯಗಳು ಮಾತ್ರ ಎಂದು ಕ್ಯಾಬಿನೆಟ್ ಮಿಷನ್ ತೀರ್ಮಾನಿಸಿತ್ತು. ಉದ್ದೇಶಿತ ಸಂವಿಧಾನ ಸಭೆಯಲ್ಲಿ, ಎಲ್ಲಾ ವಿಷಯಗಳನ್ನೂ ಸರಳ ಬಹುಮತದಿಂದ ಸವರ್ಣೀಯ ಹಿಂದೂಗಳೇ ನಿರ್ಣಯಿಸುತ್ತಾರೆ. ಬ್ರಿಟಿಷರು ಭಾರತವನ್ನು ತೊರೆದು ಹೋಗಲು ನಿಶ್ಚಯಿಸಿದ್ದಾರೆ ಮತ್ತು ಅವರ ಅಧಿಕಾರಗಳಿಗೆ ಸವರ್ಣೀಯ ಹಿಂದೂಗಳು ಮತ್ತು ಮುಸ್ಲಿಮರು ಉತ್ತರಾಧಿಕಾರಿಯಾಗುತ್ತಾರೆ. ಹಾಗಿರುವಾಗ, ಸವರ್ಣೀಯ ಹಿಂದೂಗಳನ್ನು ೬ ಕೋಟಿ ಅಸ್ಪೃಶ್ಯರ ರಕ್ಷಣೆಯ ವಿಷಯದಲ್ಲಿ ಯಾವ ತೀರ್ಮಾನವನ್ನು ತೆಗೆದುಕೊಂಡಿರುವಿರಿ ಎಂದು ಕೇಳುವಷ್ಟು ಅರ್ಹತೆಯನ್ನು ಪರಿಶಿಷ್ಟ ಜಾತಿಯವರು ಪಡೆದಿಲ್ಲವೆ?

ಬಾಂಬೆ ಸರಕಾರ ಮತ್ತು ಬಾಂಬೆ ಶಾಸನ ಸಭೆಗಳು ಕಾಂಗ್ರೆಸ್ಸಿನ ಅವಿಭಾಜ್ಯ ಅಂಗಗಳಾಗಿವೆ ಮತ್ತು ಸತ್ಯಾಗ್ರಹದ ಉದ್ದೇಶವು ಕಾಂಗ್ರೆಸ್ಸಿನ ನೀತಿಯ ವಿರುದ್ಧ ಪ್ರತಿಭಟಿಸುವುದಾಗಿದೆ ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು.

ಮುಸ್ಲಿಮರ ಸಂಗಡ ತಮಗೇನೂ ತಕರಾರುಗಳಿಲ್ಲದ ಕಾರಣ ಪಂಜಾಬ್, ಬಂಗಾಳ, ಮೊದಲಾದ ಮುಸ್ಲಿಂ ಪ್ರಾಂತಗಳಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸುವ ಅಪೇಕ್ಷೆ ತಮಗಿಲ್ಲ ಎಂದು ಡಾ. ಅಂಬೇಡ್ಕರ್ ತಿಳಿಸಿದರು. ಮುಸ್ಲಿಮರು ತಾವು ಪರಿಶಿಷ್ಟ ಜಾತಿಗಳವರ ಹಿತಾಸಕ್ತಿಗಳನ್ನು ರಕ್ಷಿಸುತ್ತೇವೆ ಎಂಬ ಆಶ್ವಾಸನೆಯನ್ನು ನೀಡಿದ್ದಾರೆ ಎಂದು ಅವರು ಹೇಳಿದರು.

ಸತ್ಯಾಗ್ರಹ ಚಳವಳಿಯು ಹತಾಶ ಭಾವನೆಯಿಂದ ಮೂಡಿದುದು ಎಂಬ ಆಪಾದನೆಯಿಂದ ರೇಗಿದ ಡಾ. ಅಂಬೇಡ್ಕರ್ ಅವರು ಅದನ್ನು ಅಲ್ಲಗಳೆಯುತ್ತಾ, ಕಳೆದ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗಳು ಶೇ. ನೂರರಷ್ಟು ವಿಜಯವನ್ನು ಸಾಧಿಸಿವೆ ಎಂದು ಹೇಳಿದರು. ಕಾಂಗ್ರೆಸ್ ನಿಲ್ಲಿಸಿದ್ದ ಅಭ್ಯರ್ಥಿಗಳ ಪರವಾಗಿ ಪರಿಶಿಷ್ಟ ಜಾತಿಗಳವರು ಮತಚಲಾಯಿಸಿದ್ದರೆ ಆಗ ಹತಾಶ ಭಾವನೆಯ ಸಂಭವವಿರುತ್ತಿತ್ತು. ಕಾಂಗ್ರೆಸ್ಸಿನ ಹರಿಜನ ಅಭ್ಯರ್ಥಿಗಳು ಕೇವಲ ಸವರ್ಣೀಯ ಹಿಂದೂಗಳ ಮತದಿಂದ ಗೆದ್ದು ಬಂದಿದ್ದಾರೆಯೇ ಹೊರತು, ಶೇ. ೪ ರಷ್ಟು ಮತವನ್ನೂ ಪರಿಶಿಷ್ಟ ಜಾತಿಗಳವರು ಅವರ ಪರವಾಗಿ ನೀಡಿಲ್ಲ ಎಂಬುದನ್ನು ಅಂಕಿ ಅಂಶಗಳ ಮೂಲಕ ಪ್ರಮಾಣಿಸಿ ತೋರಿಸಲು ಅವರು ಸಿದ್ಧರಿದ್ದರು. ಅವರನ್ನು ಸೋಲಿನ ಭಾವನೆಯು ಸ್ವಲ್ಪವೂ ಕಾಡುತ್ತಿರಲಿಲ್ಲ. ಪರಿಶಿಷ್ಟ ಜಾತಿಗಳ ಶೇ ೯೦ರಷ್ಟು ಜನರು ಅವರ ಒಕ್ಕೂಟವನ್ನು ಬೆಂಬಲಿಸುತ್ತಿದ್ದಾರೆ ಎಂಬುದೇ ಅವರಿಗೆ ವಿಜಯವನ್ನು ಸಾಧಿಸಿದ ಸಂತೋಷವನ್ನು ನೀಡಿತ್ತು.

**ಪೂನಾ ಒಪ್ಪಂದ**

"ಪರಿಶಿಷ್ಟ ಜಾತಿಗಳವರ ನಿಜವಾದ ಪ್ರತಿನಿಧಿಗಳು ಶಾಸನಸಭೆಗೆ ಆಯ್ಕೆಯಾಗದಂತೆ ಮಾಡಿದ ಪೂನಾ ಒಪ್ಪಂದವು ತಿರಸ್ಕರಿಸಲ್ಪಡಲೇ ಬೇಕು. ಅದು ೬ ಕೋಟಿ ಅಸ್ಪೃಶ್ಯರ ವಿರುದ್ಧ ತಾರತಮ್ಯವನ್ನು ಮಾಡಿದೆ. ಅಂತಾರಾಷ್ಟ್ರೀಯ ಕಾನೂನಿನ ಪ್ರಕಾರ ಯಾವ ಒಪ್ಪಂದವೂ ಅಂತಿಮವಲ್ಲ ಮತ್ತು ಪುನರವಲೋಕನಮಾಡಬಾರದಷ್ಟು ಪವಿತ್ರವೂ ಅಲ್ಲ. ಪೂನಾ ಒಪ್ಪಂದವು ತಮ್ಮ ಹಿತಾಸಕ್ತಿಗೆ ಆಘಾತಕಾರಿಯಾಗಿರುವುದರಿಂದ ಅದರ ಪರಿಷ್ಕರಣೆಗಾಗಿ ಹೋರಾಡಲು ಪರಿಶಿಷ್ಟ ಜಾತಿಗಳವರಿಗೆ ಎಲ್ಲಾ ಹಕ್ಕುಗಳೂ ಇವೆ.

ಬಾಂಬೆಗೆ ತೆರಳುವ ಮುನ್ನ ಇಂದಿನ ಸಂಜೆ ಪೂನಾದಲ್ಲಿ ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ಪರಿಶಿಷ್ಟ ಜಾತಿಗಳವರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಾ. ಅಂಬೇಡ್ಕರ್ ಅವರು ಈ ಹೋರಾಟವು ಶತಾಯಗತಾಯ ಮುಂದುವರೆಯುವುದು ಎಂದು ಹೇಳಿದರು.

ಪೂನಾ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ, ಇಲ್ಲಿಯವರೆಗೆ ೫೪೭ರಷ್ಟು ಅಗಾಧ ಸಂಖ್ಯೆಯ ಪರಿಶಿಷ್ಟ ಜಾತಿಯ ಕಾರ್ಯಕರ್ತರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ" (ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೧೯೪೬ರ ಜುಲೈ ೨೨, ಖೈರ್‌ಮೊಡೆಯವರಿಂದ ಪುನರ್ಮುದ್ರಿತ ಸಂಪುಟ ೮, ಪುಟಗಳು ೯೬–೯೮).

**ನಾವು ಕೇಳುತ್ತಿರುವುದು ನ್ಯಾಯ ಮತ್ತು ಸಮಾನಾವಕಾಶಗಳು**

ಬಾಂಬೆ, ಬುಧವಾರ (೧೯೪೬ರ ಜುಲೈ ೨೬)

ಬಹಿರಂಗಪಡಿಸಿಲ್ಲದ ಹಲವಾರು ಆಶ್ಚರ್ಯಕರ ಯೋಜನೆಗಳು ತಮ್ಮ ಬಳಿ ಇವೆ ಮತ್ತು ಸರಿಯಾದ

ಸಮಯವು ಬಂದಾಗ ಬ್ರಿಟಿಷರ ಅಧಿಕಾರವನ್ನು ಪಿತ್ರಾರ್ಜಿತದ ರೀತಿಯಲ್ಲಿ ಸ್ವೀಕರಿಸಲಿರುವ ಹಿಂದೂ ಕಾಂಗ್ರೆಸ್ಸಿನ ಭದ್ರನೆಲೆಯನ್ನು ತಮ್ಮ ನೈತಿಕ ಅಸ್ತ್ರಗಳಿಂದ ಛಿದ್ರಛಿದ್ರಗೊಳಿಸುವುದಾಗಿ, ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷರಾಗಿರುವ ಡಾ. ಅಂಬೇಡ್ಕರ್ ಅವರು ಬಾಂಬೆ ಕ್ರಾನಿಕಲ್‌ನ ಪ್ರತಿನಿಧಿಯೊಂದಿಗೆ ನಡೆಸಿದ ೬೦ ನಿಮಿಷಗಳ ಮಾತುಕತೆಯ ಸಂದರ್ಭದಲ್ಲಿ ತಿಳಿಸಿದರು.

## ಅಣುಕು ಪ್ರದರ್ಶನ

"ನಾನು ನನ್ನ ಪೂರ್ಣ ಬಲವನ್ನು ಇನ್ನೂ ಪ್ರದರ್ಶಿಸಿಲ್ಲ. ಪೂನಾದಲ್ಲಿನ ಪ್ರತಿಭಟನೆಗಳನ್ನು ಕೇವಲ ಅಣುಕು ಪ್ರದರ್ಶನವೆಂದು ಭಾವಿಸಬೇಡಿ. ದಿನೇದಿನೇ ಪ್ರಬಲವಾಗಿ, ಗಂಭೀರವಾಗಿ ಮತ್ತು ಭಯಾನಕವಾಗಿ ಬೆಳೆದು ಇಡೀ ದೇಶವನ್ನು ಅಲ್ಲೋಲಕಲ್ಲೋಲಮಾಡುವ ಚಳವಳಿಯ ಪ್ರಾರಂಭ ಅದು" ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು.

ತಮ್ಮ ಬತ್ತಳಿಕೆಯಲ್ಲಿರುವ ಅಸ್ತ್ರಗಳ ಮಾದರಿಯೊಂದನ್ನು ವಿವರಿಸುತ್ತಾ ಅವರು, 'ತಾವು ಮತ್ತು ತಮ್ಮ ಬೆಂಬಲಿಗರು ಆಮರಣ ಉಪವಾಸವನ್ನು ಪ್ರಾರಂಭಿಸಬಹುದು' ಎಂದು ಹೇಳಿದರು.

ಬಾಂಬೆಯ ಪ್ರಧಾನಮಂತ್ರಿಗಳು ಆಹಾರದ ವ್ಯವಸ್ಥೆಯನ್ನು ಮಾಡಿದ್ದೇ ಆದರೆ, ಲಕ್ಷಾಂತರ ಸತ್ಯಾಗ್ರಹಿಗಳು ಪೂನಾಕ್ಕೆ ತೆರಳಲು ಸಿದ್ಧರಿದ್ದಾರೆ. ಈ ಹೋರಾಟವು ಶೀಘ್ರದಲ್ಲಿಯೇ ಅಖಿಲ ಭಾರತ ಹೋರಾಟದ ಸ್ವರೂಪವನ್ನು ಪಡೆದುಕೊಳ್ಳಲಿದೆ. ತಮ್ಮ ಜನರಲ್ಲಿರುವ ಅದ್ಭುತ ಸಾಮರ್ಥ್ಯದ ಒಂದು ತುಣುಕನ್ನಷ್ಟೇ ಪೂನಾ ಪ್ರಕರಣದಲ್ಲಿ ತೋರಿಸಲಾಗಿದೆ ಎಂದು ಅವರು ನುಡಿದರು.

## ಕಾಂಗ್ರೆಸ್ಸಿನ ಪೋಷಕರು

ತಾವು ಕಾಂಗ್ರೆಸ್ಸಿಗೆ ಸಹಾಯಮಾಡುತ್ತಿದ್ದೇವೆಂದು ಹೇಳಿಕೊಂಡ ಡಾ. ಅಂಬೇಡ್ಕರ್ ಅವರು, ಆ ಸಂಸ್ಥೆಯ ಅಸ್ತಿತ್ವವನ್ನು ಸಂಪೂರ್ಣವಾಗಿ ನಾಶಮಾಡುವ ಸಾಮರ್ಥ್ಯವು ತಮಗಿದೆ ಎಂದರು. "ನಾನು ಮತ್ತು ನನ್ನ ಸಮುದಾಯದವರು ಮುಸ್ಲಿಮರಾಗಿ ಮತಾಂತರಗೊಳ್ಳಲಾರೆವೇ? ನಾನು ಜಿನ್ನಾ ಅವರ ಧರ್ಮಕ್ಕೆ ಸೇರಿದರೆ ನನಗೆ ಯಾವುದೇ ಬಗೆಯ ನಷ್ಟವಿಲ್ಲ. ಆದರೆ, ಅದರ ಬದಲಿಗೆ, ಅವರು ನನ್ನನ್ನು ಮುಸ್ಲಿಮ್ ಸದಸ್ಯನೆಂದು ಕಾರ್ಯಾಂಗದ ಪರಿಷತ್ತಿಗೆ ನೇಮಕ ಮಾಡಬಹುದು. ಕಾಂಗ್ರೆಸ್ಸನ್ನು ಬದುಕಿಸುವ ಉದ್ದೇಶದಿಂದ ನಾನು ಇಂತಹ ತೀಕ್ಷ್ಣವಾದ ಕ್ರಮವನ್ನು ತೆಗೆದುಕೊಳ್ಳಲಿಲ್ಲ" ಎಂದು ಖಡಾಖಂಡಿತವಾಗಿ ಅವರು ಹೇಳಿದರು.

"ನಾನು ಅಂತಹ ಕಠಿಣ ಹೆಜ್ಜೆಯನ್ನು ಏಕೆ ತೆಗೆದುಕೊಳ್ಳಲಿಲ್ಲ? ಕಾರಣ, ನಾನು ಕಾಂಗ್ರೆಸ್ಸಿಗೆ ಇನ್ನೊಂದು ಅವಕಾಶವನ್ನು ಕೊಡಬಯಸುತ್ತೇನೆ. ಕನಿಷ್ಠ ಪ್ರತಿರೋಧವನ್ನು ವ್ಯಕ್ತಪಡಿಸುವ ಕ್ರಮವನ್ನಾಗಿ ನಾವು ಪ್ರಾರಂಭಿಸಿರುವ ಹೋರಾಟವನ್ನು ನಮ್ಮ ಪಕ್ಷವು ಕೈಗೆತ್ತಿಕೊಂಡಿದೆ" ಎಂದು ಅವರು ತಿಳಿಸಿದರು.

ಯೋಗ್ಯ ಸಮಯದಲ್ಲಿ ಅವರು ಸತ್ಯಾಗ್ರಹದಲ್ಲಿ ಸ್ವತಃ ಭಾಗವಹಿಸುತ್ತಾರೆ. ಈಗ ಚಳವಳಿಯ ಮುಂದಾಳತ್ವವನ್ನು ವಹಿಸಿರುವವರು ಕೇಂದ್ರ ಮುಖಂಡರ ಒಂದು ಚಿಕ್ಕ ಭಾಗ ಮಾತ್ರ. ಸಹಸ್ರಾರು ಜನರ ವಿಶ್ವಾಸವನ್ನು ಪಡೆದಿರುವ ಹಾಗೂ ನಿರ್ವಿವಾದಿತವಾಗಿ ಅತ್ಯುಚ್ಚ ನಾಯಕರಾಗಿರುವ ತಾವು ಹೋರಾಟದ ಚುಕ್ಕಾಣಿಯನ್ನು ಹಿಡಿದು ಈ ಸಂದರ್ಭದಲ್ಲಿ ಬಂಧನಕ್ಕೆ ಒಳಗಾಗುವುದು ಆವಶ್ಯಕವೆಂದು ತಮಗೆ ತೋರುವುದಿಲ್ಲ ಎಂದು ಡಾ. ಅಂಬೇಡ್ಕರ್ ಅವರು ನುಡಿದರು. "ಆದರೆ ನಾನು ಸೆರೆಮನೆವಾಸಕ್ಕೆ ಹೆದರುವುದಿಲ್ಲ. ಆದರೆ ಕೇವಲ ಕಣ್ಣಿಗೆ ಹೊಡೆಯುವಂತಹ, ಆದರೆ, ಪೂರ್ವಯೋಜಿತವಲ್ಲದ ಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ನನಗೆ ನಂಬಿಕೆಯಿಲ್ಲ" ಎಂದು ಅವರು ತಿಳಿಸಿದರು.

ಕಾಂಗ್ರೆಸ್ಸಿನಿಂದ ಯಾವ ಬಗೆಯ ನೀಲನಕಾಶೆಯನ್ನು ಅವರು ನಿರೀಕ್ಷಿಸುತ್ತಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಡಾ. ಅಂಬೇಡ್ಕರ್ ಅವರು "ಕಾಂಗ್ರೆಸ್ ಪಕ್ಷವು ಕಳೆದ ೨೦ ವರ್ಷಗಳಿಂದ ನಮಗೆ ಏನು ಮಾಡಿದೆ? ಈಗ ಅವರು ಬ್ರಿಟಿಷರ ಅಧಿಕಾರದ ಉತ್ತರಾಧಿಕಾರಿಗಳಾಗುತ್ತಿದ್ದಾರೆ. ನಮ್ಮ ಒಳಿತಿಗಾಗಿ ಅವರು ಹೊಸ ಸಂವಿಧಾನದಲ್ಲಿ ಏನನ್ನು ಮಾಡಲು ಉದ್ದೇಶವನ್ನು ಹೊಂದಿದ್ದಾರೆ ಎಂದು ಕೇಳುವ ಹಕ್ಕು ನಮಗಿದೆ. ಅಸ್ಪಷ್ಟವಾದ ಭರವಸೆ ಮತ್ತು ಚರ್ವಿತಚರ್ವಣ ಮಾತುಗಳಲ್ಲಿ ನಮಗೆ ವಿಶ್ವಾಸವಿಲ್ಲ. ಈ ವಿಷಯದಲ್ಲಿ ಕಾಂಗ್ರೆಸ್ ನ್ಯಾಯಯುತವಾಗಿ ನಡೆದುಕೊಳ್ಳುವಲ್ಲಿ ಮತ್ತು ಸಮಾನಾವಕಾಶಗಳನ್ನು ನೀಡುವಲ್ಲಿ ಕಾಂಗ್ರೆಸ್ ಪಕ್ಷದ ಶ್ರದ್ಧೆಯ ಪ್ರಮಾಣವಾಗಿ ನಿರ್ದಿಷ್ಟ ಸಬೂತನ್ನು ಬಯಸುತ್ತೇವೆ. ಅವರು ತಮ್ಮ ಮೋಹಕ ಶಬ್ದಜಾಲದ ಅರಮನೆಯ ದಂತಗೋಪುರದಿಂದ ಕೆಳಗಿಳಿದು ವಾಸ್ತವಿಕ ಜಗತ್ತಿಗೆ ಬರಲಿ.

### ತೃಪ್ತಿಕರವಾದ ಯೋಜನೆಗಾಗಿ ಕೋರಿಕೆ

ಕಾಂಗ್ರೆಸ್ ಪಕ್ಷವು ತೃಪ್ತಿಕರವಾದ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿದರೆ, ಆ ಪಕ್ಷವನ್ನು ಸೇರಲು ನೀವು ನಿಮ್ಮ ಪಕ್ಷದವರೆಗೆ ಕರೆಕೊಡುತ್ತೀರಾ ಎಂಬುದು ಡಾ. ಅಂಬೇಡ್ಕರ್ ಅವರಿಗೆ ಕೇಳಿದ ಮುಂದಿನ ಪ್ರಶ್ನೆಯಾಗಿತ್ತು.

"ಖಂಡಿತವಾಗಿಯೂ ಇಲ್ಲ. ನಾವು ಕಾಂಗ್ರೆಸ್ಸಿನವರಿಗಿಂತ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಮೂಲಭೂತ ಬದಲಾವಣೆಗಳನ್ನು ಬಯಸುವ ಪಕ್ಷದವರಾಗಿದ್ದೇವೆ. ನಾವು ಸಮಾಜದಲ್ಲಿರುವ ಅತ್ಯಂತ ಬಡವರ್ಗವನ್ನು ಪ್ರತಿನಿಧಿಸುತ್ತೇವೆ. ನಾವು ಈ ಮಣ್ಣಿನ ಮಕ್ಕಳು. ಆದ್ದರಿಂದ ನಾವು ಕಾಂಗ್ರೆಸ್ಸಿನಂತಹ ಹುಸಿ-ಸಮಾಜವಾದೀ ಸಂಸ್ಥೆಯ ಜೊತೆ ಕೈಜೋಡಿಸುವ ಯೋಚನೆಯನ್ನೂ ಮಾಡುವುದಿಲ್ಲ" ಎಂದು ಅವರು ಉತ್ತರಿಸಿದರು.

ಒಂದು ವೇಳೆ ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಗಳವರಿಗೆ ನ್ಯಾಯವನ್ನು ಸಲ್ಲಿಸುವಂತಹ ಕ್ರಮಗಳನ್ನು ತೆಗೆದುಕೊಂಡರೆ, ತಾವು ಅದರ ಜೊತೆ ಹಿಂದೆಮುಂದೆ ನೋಡದೆ ಸಹಕರಿಸುವ ಮತ್ತು ನಂತರ ದೇಶದ ಪುನರುತ್ಥಾನಕ್ಕಾಗಿ ಹೋರಾಡುವ ತಮ್ಮ ನಿಶ್ಚಿತ ಅಭಿಪ್ರಾಯವನ್ನು ಅವರು ತಿಳಿಸಿದರು.

ಮುಸ್ಲಿಂ ಲೀಗಿನವರಿಂದ ತಮ್ಮ ಪಕ್ಷವು ಯಾವ ರೀತಿಯಲ್ಲಾದರೂ ಅಥವಾ ಯಾವ ವಿಷಯದ ಬಗ್ಗೆಯಾದರೂ ಆಶ್ವಾಸನೆಯನ್ನು ಪಡೆದಿದೆ ಎಂದು ಪೂನಾದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಾವು ಹೇಳಿದುದಾಗಿ ವರದಿಯಾಗಿರುವುದನ್ನು ಅಲ್ಲಗಳೆದರು. ಮುಸ್ಲಿಮರು ಪರಿಶಿಷ್ಟ ವರ್ಗಗಳಿಗೆ ಯಾವ ಕೇಡನ್ನೂ ಮಾಡಿಲ್ಲವೆಂಬ ಕಾರಣದಿಂದ ಮುಸ್ಲಿಂ ಪ್ರಾಂತಗಳಲ್ಲಿ ತಮ್ಮ ಸತ್ಯಾಗ್ರಹವನ್ನು ಪ್ರಾರಂಭಿಸಲು ತಾವು ಸಿದ್ಧರಿಲ್ಲವೆಂದು ಹೇಳಿದರು.

### ಮತಗಳು ದಕ್ಕಿದರೂ ದಕ್ಕದ ಸ್ಥಾನಗಳು

ಪರಿಶಿಷ್ಟ ವರ್ಗಗಳವರ ಇತ್ತೀಚಿನ ಚುನಾವಣೆಗಳಲ್ಲಿನ ಅದೃಷ್ಟದ ಬಗ್ಗೆ ಪ್ರಾಸಂಗಿಕವಾಗಿ ಪ್ರಸ್ತಾಪಿಸಿ ಅದು ನಿಜವಾದ ಬಲಪರೀಕ್ಷೆಯಾಗಿರಲಿಲ್ಲ ಎಂದು ಹೇಳಿದರು. ಪರಿಶಿಷ್ಟಜಾತಿಗಳವರು ಹೆಚ್ಚಿನ ಮತಗಳನ್ನು ಗಳಿಸಿದರೂ, ಅವರು ಗೆಲ್ಲುವ ಹಾದಿಯಲ್ಲಿ ಹಿಂದೂಗಳ ಮತಗಳು ಮುಳ್ಳುಗಳಾಗಿ ಪರಿಣಮಿಸಿದವು ಎಂದರು.

"ನಾವು ನಮ್ಮ ಸ್ವಾತಂತ್ರ್ಯಕ್ಕಾಗಿ ಮತ್ತು ನಮ್ಮ ಉಳಿವಿಗಾಗಿ ಹೋರಾಡುತ್ತಿದ್ದೇವೆ" ಎಂದು ಭಾವಪರವಶವಾಗಿ ಹೇಳಿದ ಅವರು, ಒಂದು ದೊಡ್ಡ ಸಮುದಾಯವಾಗಿರುವ ನಾವು ಹಲವು ದಶಕಗಳಿಂದ ಪ್ರಾಥಮಿಕ ನ್ಯಾಯದಿಂದಲೂ ವಂಚಿತರಾಗಿದ್ದೇವೆ. ನಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆ ಮತ್ತು

ನ್ಯಾಯಯುತವಾದ ನಮ್ಮ ಬೇಡಿಕೆಗಳನ್ನು ಅಸಡ್ಡೆಯಿಂದ ಮೂಲೆಗೆ ಎಸೆಯಲಾಗಿದೆ. ಅನುಕಂಪವನ್ನು ನಾವು ಯಾರಿಂದಲೂ ಪಡೆದಿಲ್ಲ. ನ್ಯಾಯ ಮತ್ತು ಸಮಾನ ಅವಕಾಶಗಳನ್ನು ಮಾತ್ರ ನಾವು ಕೇಳುತ್ತಿದ್ದೇವೆ. ನಮಗೆ ಅವು ಸಿಗುವಂತಾಗಲಿ. ಇಲ್ಲವಾದರೆ, ಅದರ ಪರಿಣಾಮಗಳನ್ನು ಊಹಿಸಿಕೊಳ್ಳಲು ಯಾರಿಗೂ ಸಾಧ್ಯವಾಗುವುದಿಲ್ಲ" ಎಂದು ಅವರು ಹೇಳಿದರು (ದ ಬಾಂಬೆ ಕ್ರಾನಿಕಲ್, ದಿ. ೧೯೪೬ರ ಜುಲೈ ೨೫).

## ಬಾಬಾ ಸಾಹೇಬರು ಮುನ್ನಡೆಸಲು ಸಿದ್ಧ

ಇಂದು ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾಗೆ ನೀಡಿದ ಸಂದರ್ಶನದಲ್ಲಿ ಭೀಮರಾವ್ ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಗಳ ಒಕ್ಕೂಟವು ಸತ್ಯಾಗ್ರಹಿಗಳಿಗೆ ಆಹಾರವನ್ನು ಒದಗಿಸುವ ಸಮಸ್ಯೆಯಿರುವುದರಿಂದ ಅವರ ಸಂಖ್ಯೆಯನ್ನು ಆದಷ್ಟು ಕಡಿಮೆಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ ಎಂದು ಹೇಳಿದರು. ನಮಗೆ ದೇಶದ ಎಲ್ಲಾ ಭಾಗಗಳಿಂದಲೂ, ಬರ್ಮಾ ಮತ್ತು ಮಲಯಾಗಳಿಂದ ಕೂಡ ಪೂನಾ ಸತ್ಯಾಗ್ರಹದ ಚಳವಳಿಯಲ್ಲಿ ಭಾಗವಹಿಸಲು ಬರುವುದಾಗಿ ಪತ್ರಗಳು ಮತ್ತು ತಂತಿಸಂದೇಶಗಳು ಬರುತ್ತಿವೆ. ಆದರೆ ಅವರಿಗೆ ಆಹಾರ ಮತ್ತು ವಸತಿ ಸೌಕರ್ಯಗಳನ್ನು ಒದಗಿಸುವುದೇ ಈಗ ಇರುವ ಸಮಸ್ಯೆ. ಈಗಿನ ರೇಷನ್ ವ್ಯವಸ್ಥೆಯಿಂದಾಗಿ ನಮಗೆ ಇದು ಅಸಾಧ್ಯವಾಗಿದೆ. ಶಾಸನ ಸಭೆಯ ಆವರಣದಲ್ಲಿ ಸಭೆಸೇರುವುದನ್ನು ನಿಷೇಧಿಸುವ ಜಿಲ್ಲಾ ದಂಡಾಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸಲು ಇಂದಿನಿಂದ ಸಣ್ಣ ಸಣ್ಣ ಗುಂಪುಗಳಲ್ಲಿ ಬರುವ ಜನಗಳಿಗೆ ಪೂನಾದಲ್ಲಿರುವ 'ಮುಷ್ಟಿ' ನಿಧಿಯಿಂದ ಸಾಧ್ಯವಾದಷ್ಟು ಅನುಕೂಲಗಳನ್ನು ಒದಗಿಸಲಾಗುತ್ತದೆ. ಇದಲ್ಲದೆ, ಬರುವಾಗ ತಮ್ಮ ಸಂಗಡ ನಾಲ್ಕೈದು ದಿನಗಳಿಗಾಗುವಷ್ಟು ಆಹಾರವನ್ನು ತರುವಂತೆ ಭಾಗವಹಿಸಲು ಬರುತ್ತಿರುವವರಿಗೆ ಸೂಚಿಸಲಾಗಿದೆ.

ಚಳವಳಿಯ ವ್ಯವಸ್ಥಾಪಕರಿಗೆ ಅಗತ್ಯವೆನಿಸಿದರೆ, ತಾವು ಚಳವಳಿಯಲ್ಲಿ ಭಾಗವಹಿಸಲು ಪೂನಾಕ್ಕೆ ಬರುವುದಾಗಿ ಅವರಿಗೆ ಡಾ. ಅಂಬೇಡ್ಕರ್ ಅವರು ತಿಳಿಸಿದ್ದಾರೆ. (ಜೈಭೀಮ್, ೧೯೪೬ರ ಆಗಸ್ಟ್ ೧೩, ಪು. ೭)

## ಲಖ್ನೌದಲ್ಲಿ ಸತ್ಯಾಗ್ರಹದ ಪ್ರಾರಂಭ, ೧೪೦ ಜನರ ಬಂಧನ

ಇಂದು ಪೂನಾ ಒಪ್ಪಂದವನ್ನು ವಿರೋಧಿಸಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಲಖ್ನೌ ಶಾಖೆಯು ಪ್ರತಿಭಟನಾ ಸತ್ಯಾಗ್ರಹವನ್ನು ಪ್ರಾರಂಭಿಸಿದಾಗ, ಅದರ ಸುಮಾರು ೧೪೦ ಸದಸ್ಯರನ್ನು ಬಂಧಿಸಲಾಯಿತು.

ಈ ೧೪೦ ಮಂದಿಯಲ್ಲಿ ೮೦ ಜನರನ್ನು ಪರಿಷತ್ತಿನ ಭವನದ ಬಳಿಯೂ, ಉಳಿದವರನ್ನು ನಗರದ ಬೇರೆಬೇರೆ ಭಾಗಗಳಲ್ಲಿಯೂ ಬಂಧಿಸಲಾಯಿತು.

ದಂಡ ಸಂಹಿತೆಯ ಸೆಕ್ಷನ್ ೧೪೪ರ ಪ್ರಕಾರ ಪೋಲಿಸರು ನಿಷೇಧಾಜ್ಞೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದಾರೆ.

## ಪರಿಶಿಷ್ಟ ಜಾತಿಗಳವರಿಂದ ಹಿಂಸಾರಹಿತ ಪ್ರತಿಭಟನೆ ಮಹಾಕಾರ್ಯದರ್ಶಿಗಳಿಂದ ಘೋಷಣೆ

ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳಿಂದ ಪರಿಶಿಷ್ಟ ಜಾತಿಗಳವರಿಗೆ ಅನ್ಯಾಯವಾಗಿದೆಯೆಂದು, ತಮ್ಮ ಪ್ರತ್ಯೇಕ ರಾಜಕೀಯ ಅಸ್ತಿತ್ವವನ್ನೇ ಕಡೆಗಣಿಸಲಾಗಿದೆಯೆಂದು ಭಾವಿಸುತ್ತಿರುವ ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರು ಅದರ ವಿರುದ್ಧ ಪ್ರತಿಭಟಿಸಲು ದೇಶದ ಎಲ್ಲಾ ಭಾಗಗಳಲ್ಲೂ ಅಹಿಂಸಾ ಚಳವಳಿಯನ್ನು ಪ್ರಾರಂಭಿಸಲಿದ್ದಾರೆ.(ಒಂದನೆಯ ಪರಿಶಿಷ್ಟವನ್ನು ನೋಡಿ)

ಪರಿಷತ್ ಭವನದ ಮತ್ತು ಸಚಿವಾಲಯದ ಅರ್ಧಮೈಲಿ ಸುತ್ತಳತೆಯಲ್ಲಿ ಸಭೆಸೇರುವುದನ್ನು, ಮೆರವಣಿಗೆಯಲ್ಲಿ ಹೋಗುವುದನ್ನು ಮತ್ತು ಪ್ರತಿಭಟನೆಗಳನ್ನು ನಿಷೇಧಿಸಿ ಪೂನಾ ಜಿಲ್ಲಾ ದಂಡಾಧಿಕಾರಿಗಳು ಹೊರಡಿಸಿರುವ ಆಜ್ಞೆಯನ್ನು ಉಲ್ಲಂಘಿಸಿ, ಬಾಂಬೆ ಶಾಸನಸಭೆಯು ತನ್ನ ಅಧಿವೇಶನವನ್ನು ಪ್ರಾರಂಭಿಸುವ ದಿವಸವಾದ ಜುಲೈ ೧೫ರಂದು, ಚಳವಳಿಯನ್ನು ಉಪಕ್ರಮಿಸಲಾಗುವುದು. (ಜೈಭೀಮ್, ೧೯೪೬ರ ಆಗಸ್ಟ್ ೧೩)

**ಮಹಾಕಾರ್ಯದರ್ಶಿಯವರ ವಿವರಣೆ**

ಈ ನಿರ್ಣಯವನ್ನು ವಿವರಿಸುತ್ತಾ, ಮಹಾಕಾರ್ಯದರ್ಶಿ ಶ್ರೀ ಪಿ.ಎನ್. ರಾಜ್‌ಭೋಜ್ ಅವರು "ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ೧೯೪೬ರ ಜೂನ್ ೪ರಂದು ತನ್ನ ಸಭೆಯಲ್ಲಿ ನಿರ್ಣಯಿಸಿದ ಪ್ರಕಾರ ಅಹಿಂಸಾಪೂರ್ವಕ ಚಳವಳಿಯನ್ನು ಪ್ರಾರಂಭಿಸುವ ಸಮಯ ಈಗ ಒದಗಿಬಂದಿದೆ. ಈಗ ನೇರಕ್ರಮವಲ್ಲದೆ ನಮಗೆ ಬೇರೆ ದಾರಿಯೇ ಉಳಿದಿಲ್ಲ. ಮುಂದೆ ಒದಗಬಹುದಾದ ವಿಪತ್ತಿನಿಂದ ಪರಿಶಿಷ್ಟ ಜಾತಿಗಳವರನ್ನು ರಕ್ಷಿಸಲು ಪ್ರಕೃತ ಸನ್ನಿವೇಶದಲ್ಲಿ ಹೋರಾಟ ಅಗತ್ಯವಾಗಿದೆ" ಎಂದು ಹೇಳಿದರು.

"ಪರಿಶಿಷ್ಟ ಜಾತಿಗಳವರ ಪ್ರತ್ಯೇಕ ರಾಜಕೀಯ ಅಸ್ತಿತ್ವವನ್ನು ದುರ್ಲಕ್ಷಿಸಿ ಮತ್ತು ರಾಜಕೀಯ ಸಂರಕ್ಷಣಾಕ್ರಮಗಳಿಗಾಗಿ ಡಾ. ಅಂಬೇಡ್ಕರ್ ಮತ್ತು ರಾವ್ ಬಹದ್ದೂರ್ ಎನ್. ಶಿವರಾಜ್ ಅವರು ಮಾಡಿದ ಬೇಡಿಕೆಗಳನ್ನು ತಿರಸ್ಕರಿಸಿ ಬ್ರಿಟಿಷ್ ಸರಕಾರವು ತಾವು ಹಿಂದೆ ನೀಡಿದ್ದ ವಚನವನ್ನು ಉಲ್ಲಂಘಿಸಿದ್ದಾರೆ. ಆದ್ದರಿಂದ ಬ್ರಿಟಿಷ್ ಸರಕಾರದ ವಿರುದ್ಧ ಒಕ್ಕೂಟಕ್ಕೆ ನೇರಕ್ರಮಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಅಲ್ಲದೆ ಈ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷದ ನಡವಳಿಕೆಯಲ್ಲಿದ್ದ ತುಚ್ಛತನವನ್ನು ಮರೆಯುವುದು ಸಾಧ್ಯವೇ ಇಲ್ಲ. ಬಹುಸಂಖ್ಯಾತ ಪಕ್ಷವಾಗಿರುವ ಕಾಂಗ್ರೆಸ್ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದೆ ಮತ್ತು ಅವರನ್ನು ಓಲೈಸುವ ಭರದಲ್ಲಿ ಬ್ರಿಟಿಷ್ ಸರಕಾರವು ಪರಿಶಿಷ್ಟ ಜಾತಿಗಳವರನ್ನು ರಾಜಕೀಯವಾಗಿ ಒಂದು ಪ್ರತ್ಯೇಕ ಘಟಕವೆಂಬುದನ್ನು ಅಲಕ್ಷಿಸಿದೆ ಎಂಬ ವಿಷಯವು ಒಕ್ಕೂಟಕ್ಕೆ ಮನದಟ್ಟಾಗಿದೆ. ಕ್ಯಾಬಿನೆಟ್ ಮಿಷನ್ ಪರಿಶಿಷ್ಟ ಜಾತಿಗಳಿಗೆ ಮಾಡಿರುವ ಅನ್ಯಾಯವು ಕಾಂಗ್ರೆಸ್ ನಡೆಸಿದ ಕುತಂತ್ರದ ನೇರ ಪರಿಣಾಮವಾಗಿದೆ. ಆದ್ದರಿಂದ ಒಕ್ಕೂಟವು ಕಾಂಗ್ರೆಸ್ ಪಕ್ಷದ ವಿರುದ್ಧವೂ ಕ್ರಮವನ್ನು ತೆಗೆದುಕೊಳ್ಳಲು ಬದ್ಧವಾಗಿದೆ." ಎಂದು ಅವರು ನುಡಿದರು.

ಹೋರಾಟದ ರೂಪುರೇಷೆಗಳನ್ನು ನಿರ್ಧರಿಸಲು ಜೂನ್‌ನಲ್ಲಿ ನೇಮಿಸಿದ ಸಮಿತಿಯು ಎಲ್ಲಾ ಪ್ರಾಂತೀಯ ಘಟಕಗಳಿಗೂ ಅವರವರು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ತಿಳಿಸುತ್ತದೆ. ಈ ಮಧ್ಯೆ, ಬಾಂಬೆ ಪ್ರಾಂತೀಯ ಪರಿಶಿಷ್ಟ ಜಾತಿಗಳ ಒಕ್ಕೂಟವು ಜುಲೈ ೧೫ರಂದು ಪೂನಾ ಜಿಲ್ಲಾ ದಂಡಾಧಿಕಾರಗಳ ಆಜ್ಞೆಯನ್ನು ಉಲ್ಲಂಘಿಸುವ ಮೂಲಕ ಈ ದಿಸೆಯಲ್ಲಿ ಮೊದಲ ಹೆಜ್ಜೆಯನ್ನು ಇಡಲು ತೀರ್ಮಾನಿಸಿದೆ ಎಂದು ಶ್ರೀ ರಾಜ್‌ಭೋಜ್ ಅವರು ಹೇಳಿದರು. ಈ ಚಳವಳಿಯಲ್ಲಿ ಭಾಗವಹಿಸಲು ಇಚ್ಛಿಸುವವರು ಶ್ರೀ ಬಿ.ಕೆ. ಗಾಯಕವಾಡ್ ಅವರು ಅಧ್ಯಕ್ಷರಾಗಿರುವ ಬಾಂಬೆ ಪ್ರಾಂತೀಯ ಪರಿಶಿಷ್ಟಜಾತಿಗಳ ಒಕ್ಕೂಟದ ಕಚೇರಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕೆಂದು ಶ್ರೀ ರಾಜ್‌ಭೋಜ್ ವಿನಂತಿಸಿಕೊಂಡಿದ್ದಾರೆ. (ಜೈಭೀಮ್, ೧೯೪೬ರ ಆಗಸ್ಟ್ ೧೩, ಪುಟಗಳು ೨-೩).

ಜೈಭೀಮ್ ಪತ್ರಿಕೆಯು ೧೯೪೬ರ ಸೆಪ್ಟೆಂಬರ್ ೧೬ರಂದು ಪ್ರಕಟಿಸಿದ ಸಂದರ್ಶನದಲ್ಲಿ ಡಾ. ಅಂಬೇಡ್ಕರ್ ಅವರು ಹಿಂದಿನ ಕೆಲವು ಸಂದರ್ಶನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೂ ಹಾಗೂ

ತಾವು ಈಗ ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳಿಗೂ ಸಾಮ್ಯವಿದೆ ಎಂದು ತಿಳಿಸಿದ್ದಾರೆ. – ಸಂಪಾದಕರು

**ಬಾಬಾ ಸಾಹೇಬ್ ಅವರು ವಿವರಿಸಿದ ಸತ್ಯಾಗ್ರಹದ ಉದ್ದೇಶಗಳು**

ಕಾಂಗ್ರೆಸ್ ಪಕ್ಷವು ಈ ದೇಶದ ೬ ಕೋಟಿ ಪರಿಶಿಷ್ಟ ಜಾತಿಗಳ ಜನರ ಭವಿಷ್ಯವನ್ನು ಹೇಗೆ ನಿರ್ಧರಿಸಲಿದೆ ಎಂಬ ತಮ್ಮ ಯೋಜನೆಗಳ ಮೂಲ ನಕಾಶೆಯನ್ನು ಪ್ರಕಟಿಸಬೇಕು ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಒಂದು ಪತ್ರಿಕಾ ಸಂದರ್ಶನದಲ್ಲಿ ಆ ಪಕ್ಷವನ್ನು ಒತ್ತಾಯಿಸಿದರು. ಕಾಂಗ್ರೆಸ್ ಪಕ್ಷದಿಂದ ಈ ಪ್ರಶ್ನೆಗೆ ಉತ್ತರವನ್ನು ಪಡೆಯುವ ಉದ್ದೇಶದಿಂದ ಹಾಗೂ ಪರಿಶಿಷ್ಟ ಜಾತಿಗಳವರ ಭದ್ರತೆಗಾಗಿ ಕಾಂಗ್ರೆಸ್ ಪಕ್ಷವು ಮುಂದೆ ರಚಿಸುವ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲು ಯೋಚಿಸಿರುವ ಯೋಜನೆಯನ್ನು ಬಹಿರಂಗಪಡಿಸಬೇಕೆಂದು ಕಾಂಗ್ರೆಸ್ ಪಕ್ಷವನ್ನು ಒತ್ತಾಯಿಸುವ ದೃಷ್ಟಿಯಿಂದ ಪೂನಾದಲ್ಲಿ ಈ ಸತ್ಯಾಗ್ರಹವನ್ನು ಪರಿಶಿಷ್ಟ ಜಾತಿಗಳ ಒಕ್ಕೂಟವು ಹಮ್ಮಿಕೊಂಡಿದೆ.

ಬ್ರಿಟಿಷ್ ಮಿಷನ್ನಿನವರು ಮಾಡಿದುದು ಸರಿಯೇ ಅಥವಾ ತಪ್ಪೇ ಇರಬಹುದು, ಆದರೂ, ತಮ್ಮ ಅಧಿಕಾರಕ್ಕೆ ಉತ್ತರಾಧಿಕಾರಿಗಳು ಸವರ್ಣೀಯ ಹಿಂದೂಗಳು ಮತ್ತು ಮುಸ್ಲಿಮರು ಎಂದು ಅವರು ತೀರ್ಮಾನಮಾಡಿದರು. ಇದನ್ನು ಪರಿಶಿಷ್ಟ ಜಾತಿಯವರು ಅನ್ಯಾಯ ಹಾಗೂ ಅಸಮಾನತೆಯಿಂದ ಕೂಡಿರುವುದೆಂದು ಭಾವಿಸುತ್ತಾರೆ. ಮುಸ್ಲಿಮರು ಪರಿಶಿಷ್ಟ ಜಾತಿಗಳವರ ಹಕ್ಕುಗಳನ್ನು ರಕ್ಷಿಸುವ ತಮ್ಮ ಸಂಕಲ್ಪವನ್ನು ಪ್ರಕಟಿಸಲು ಸಿದ್ಧರಿರುವುದರಿಂದ ಮುಸ್ಲಿಮರೊಂದಿಗೆ ಪರಿಶಿಷ್ಟ ಜಾತಿಯವರಿಗೆ ಯಾವ ತಕರಾರೂ ಇಲ್ಲ ಮತ್ತು ಮುಸ್ಲಿಮರ ಪ್ರದೇಶಗಳಲ್ಲಿ ಸತ್ಯಾಗ್ರಹಗಳನ್ನು ಕೈಗೊಳ್ಳುವ ಉದ್ದೇಶವೂ ಪರಿಶಿಷ್ಟ ಜಾತಿಯವರಿಗೆ ಇಲ್ಲ. ಆದರೆ, ಈ ವಿಷಯದಲ್ಲಿ ಕಾಂಗ್ರೆಸ್ ಇದುವರೆಗೆ ಮೌನವನ್ನು ತಾಳಿದೆ. ಸಂವಿಧಾನ ಸಭೆಯಲ್ಲಿ ಕಾಂಗ್ರೆಸ್ ನಾಲ್ಕರಲ್ಲಿ ಮೂರರಷ್ಟು ಬಹುಮತವನ್ನು ಪಡೆಯುವುದರಿಂದ ತಮ್ಮ ಬಹುಮತದ ಆಧಾರದ ಮೇಲೆ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಅವರೇ ತೀರ್ಮಾನಿಸುತ್ತಾರೆ. ಈ ಕಾರಣದಿಂದ, ಪರಿಶಿಷ್ಟ ಜಾತಿಗಳು ಕಾಂಗ್ರೆಸ್ ಪಕ್ಷದಿಂದ ಈ ಪ್ರಶ್ನೆಗೆ ಉತ್ತರವನ್ನು ಬಯಸುತ್ತಾರೆ.

ಪರಿಶಿಷ್ಟ ಜಾತಿಯವರಿಂದ ಬಾಂಬೆ ಸರಕಾರಕ್ಕೆ ತೊಂದರೆಯಾಗುತ್ತಿದ್ದರೆ, ಅದಕ್ಕೆ ಕಾರಣ ಬಾಂಬೆ ಸರಕಾರವು ಕಾಂಗ್ರೆಸ್ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವುದು ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು. ಪರಿಶಿಷ್ಟ ಜಾತಿಗಳ ಒಕ್ಕೂಟವು ಹಿಂದಿನ ಚುನಾವಣೆಗಳಲ್ಲಿ ಪರಾಜಯವನ್ನು ಅನುಭವಿಸಿ ಹತಾಶರಾಗಿರುವ ಕಾರಣವು ಪ್ರಸಕ್ತ ಸತ್ಯಾಗ್ರಹವನ್ನು ಪ್ರಾರಂಭಿಸುವಂತೆ ಅವರನ್ನು ಪ್ರಚೋದಿಸುತ್ತಿದೆ ಎಂದು ಶ್ರೀ ಬಿ.ಜಿ. ಖೇರ್ ಅವರು ಈ ಹಿಂದೆ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದರು. ಇದಕ್ಕೆ ಉತ್ತರಿಸಿದ ಡಾ. ಅಂಬೇಡ್ಕರ್ ಅವರು "ನಮ್ಮ ಚಳವಳಿಗೆ ಶ್ರೀ ಖೇರ್ ಅವರು ಯಾವ ಬಗೆಯ ಕಾರಣಗಳನ್ನಾಗಲೀ, ಚೋದನೆಯನ್ನಾಗಲೀ ನೀಡಬಹುದು. ಆದರೆ ಅವರು ಸಾರ್ವಜನಿಕ ಜೀವನದಲ್ಲಿ ಅಥವಾ ರಾಜಕೀಯ ಜೀವನದಲ್ಲಿ ಸಮರ್ಥಿಸಿಕೊಳ್ಳಲಾಗದುದನ್ನು ಮಾಡಲಾರರು". ಆದರೆ, ಪರಿಶಿಷ್ಟ ಜಾತಿಗಳವರ ಮನಸ್ಸಿನಲ್ಲಿ ಹತಾಶ ಭಾವನೆ ಮೂಡಿದೆಯೆಂದು ಹೇಳುವುದು ಮಾತ್ರ ತಪ್ಪು. ಚುನಾವಣೆಗಳಲ್ಲಿ ಸ್ಥಾನಗಳನ್ನೂ ಪರಿಶಿಷ್ಟ ಜಾತಿಗಳವರು ಪಡೆಯಲಾಗಲಿಲ್ಲವಾದರೂ ನೂರಕ್ಕೆ ನೂರರಷ್ಟು ಮತಗಳನ್ನು ಅವರು ಗಳಿಸಿದರು.

"ಪರಿಶಿಷ್ಟ ಜಾತಿಗಳವರು ನಮ್ಮ ಅಭ್ಯರ್ಥಿಗಳ ವಿರುದ್ಧ ತಮ್ಮ ಮತಗಳನ್ನು ಚಲಾಯಿಸಿದ್ದಿದ್ದರೆ ಹತಾಶಭಾವನೆಯು ಉಂಟಾಗಬಹುದಿತ್ತು. ಅದು ನಮ್ಮ ವಿನಾಶಕ್ಕೇ ಕಾರಣವಾಗಬಹುದಿತ್ತು. ಸವರ್ಣೀಯ ಹಿಂದೂಗಳ ಮತಗಳಿಂದ ವಿಜಯವನ್ನು ಸಾಧಿಸಿದ ಕಾಂಗ್ರೆಸ್ಸಿನ ಹರಿಜನ ಅಭ್ಯರ್ಥಿಗಳಿಗೆ ಶೇ. ನಾಲ್ಕಕಿಂತ

ಹೆಚ್ಚಿನ ಪರಿಶಿಷ್ಟ ಜಾತಿಗಳವರ ಮತವು ದೊರಕಲಿಲ್ಲ. ಇದು ನಮ್ಮ ಸೋಲಲ್ಲ, ಸಾಧನೆ. ಅಲ್ಲದೆ, ಈ ಬಾರಿ ಸ್ಥಾನಗಳನ್ನು ನಾವು ಪಡೆಯಲು ವಿಫಲರಾದವೆಂದ ಮಾತ್ರಕ್ಕೆ, ಪ್ರತಿಬಾರಿಯೂ ನಾವು ಹೀಗೆಯೇ ವಿಫಲರಾಗುತ್ತೇವೆ ಎಂದಲ್ಲ".

ಪರಿಶಿಷ್ಟ ಜಾತಿಗಳ ಬೇಡಿಕೆಯ ಬಗ್ಗೆ ಮಾತನಾಡುತ್ತಾ ಡಾ. ಅಂಬೇಡ್ಕರ್ ಅವರು ಪೂನಾ ಒಪ್ಪಂದವನ್ನು ರದ್ದುಗೊಳಿಸುವುದು ಅವರ ಬೇಡಿಕೆಗಳಲ್ಲಿ ಒಂದು ಎಂದು ಹೇಳಿದರು. "ನಾವೇಕೆ ಅದರ ವಿರುದ್ಧ ಪ್ರತಿಭಟಿಸಬಾರದು? ಪ್ರಪಂಚದ ಯಾವುದೇ ಒಪ್ಪಂದವೂ ಬದಲಾಯಿಸಲೇಬಾರದಷ್ಟು ಪವಿತ್ರವಾದುದಲ್ಲ. ಪೂನಾ ಒಪ್ಪಂದವು ಯಾರ ಹಿತಾಸಕ್ತಿಗಳನ್ನು ರಕ್ಷಿಸಬೇಕಾಗಿದ್ದಿತೋ ಅಂತಹ ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯದ ಹರಣವನ್ನು ಮಾಡಿದೆ. ಒಂದು ಸಮುದಾಯದ ಬುದ್ಧಿಪೂರ್ವಕ ಅಭಿಪ್ರಾಯವನ್ನು ಇನ್ನೊಂದು ಸಮುದಾಯವು ನಿರರ್ಥಕಗೊಳಿಸಬಾರದು ಎಂಬುದನ್ನಷ್ಟೇ ನಾವು ಕೇಳುತ್ತಿರುವುದು. ದೇಶದ ಯಾವುದೇ ಭಾಗಗಳಲ್ಲಿ ನಡೆದ ಪ್ರಾಥಮಿಕ ಚುನಾವಣೆಗಳಲ್ಲಿ ಒಕ್ಕೂಟದ ಅಭ್ಯರ್ಥಿಗಳ ಮೇಲೆ ವಿಜಯವನ್ನು ಸಾಧಿಸಲು ಕಾಂಗ್ರೆಸ್ಸಿಗೆ ಸಾಧ್ಯವಾಗಲಿಲ್ಲ. ಆದರೆ ಅಂತಿಮ ಚುನಾವಣೆಗಳಲ್ಲಿ "ಸವರ್ಣೀಯ ಹಿಂದೂ"ಗಳ ಮತದಿಂದ ಕಾಂಗ್ರೆಸ್ ಕೈಗೊಂಬೆಗಳಾದಂತಹ, ಕಾಂಗ್ರೆಸ್ಸಿನ ಕೈಯಲ್ಲಿ ಸಾಧನಗಳಾಗಿರುವಂತಹ ಹರಿಜನ ಅಭ್ಯರ್ಥಿಗಳು ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳನ್ನು ಸೋಲಿಸಿದರು. ತಮ್ಮ ಸಮುದಾಯಗಳವರಿಗೆ ಮಾಡಬಹುದಾದ ರಾಜಕೀಯ ಸಂರಕ್ಷಣಾ ವಿಧಿಗಳು ಯಾವುದೇ ತಪ್ಪುಗಳನ್ನೂ, ಠಕ್ಕುಗಳನ್ನೂ ಒಳಗೊಂಡಿರಬಾರದು ಎಂದು ಡಾ. ಅಂಬೇಡ್ಕರ್ ಅವರು ಒತ್ತಾಯಿಸಿದರು.

ಜನತೆಯ ಹಿತವನ್ನು ಸಾಧಿಸುವ ಮನಸ್ಸುಳ್ಳವರು ಪರಿಶಿಷ್ಟ ಜಾತಿಗಳವರು ಪ್ರಾರಂಭಿಸಿರುವ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಬೇಕೆಂದು ಡಾ. ಅಂಬೇಡ್ಕರ್ ಅವರು ಮನವಿಯನ್ನು ಮಾಡಿಕೊಂಡರು. ಸ್ವಾವಲಂಬನೆಯೆಂದರೆ ಎಲ್ಲರಿಗೂ ಸ್ವಾತಂತ್ರ್ಯ ಮತ್ತು ಗುಲಾಮಗಿರಿಯಿಂದ ವಿಮೋಚನೆ ಸಿಗುತ್ತದೆ ಎಂಬುದು ನಿಜವಾಗದೆ ಇರಬಹುದು. ಅಧಿಕಾರವು ಚಿಕ್ಕ ರಾಜಕೀಯ ಕೂಟವೊಂದಕ್ಕೆ ಹಸ್ತಾಂತರವಾಗಿ, ಜನತೆಯು ಹಿಂದೆ ಅನುಭವಿಸಿದುದಕ್ಕಿಂತ ಹೆಚ್ಚಿನ ಕಿರುಕುಳವನ್ನು ಅನುಭವಿಸುವಂತೆ ಆಗಬಹುದು. "ನಮಗೆ ಸಹಾಯವು ದೊರಕಲಿ ಅಥವಾ ದೊರಕದಿರಲಿ, ನಾವು ಮಾತ್ರ ನಮ್ಮ ಹೋರಾಟವನ್ನು ನೈತಿಕ ಅಡಿಪಾಯದ ಮೇಲೆ ನಮ್ಮ ಅಂತಿಮ ಗುರಿಯನ್ನು ತಲುಪುವವರೆಗೂ ಮುಂದುವರೆಸುತ್ತೇವೆ. ನಮ್ಮ ನೈತಿಕ ಸಾಧನಗಳು ವಿಫಲವಾದರೆ, ನಾವು ಇತರ ಮಾರ್ಗಗಳನ್ನು ಹಿಡಿಯಬೇಕಾಗುತ್ತದೆ. ಜನತೆಯ ವಿಮೋಚನೆಯು ಅದನ್ನು ಸಾಧಿಸುವುದಕ್ಕಾಗಿ ಅನುಸರಿಸಲ್ಪಡುವ ಮಾರ್ಗಗಳ ಪಾವಿತ್ರ್ಯಕ್ಕಿಂತ ಮುಖ್ಯವಾದುದು" ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು. (ಜೈಭೀಮ್, ೧೯೪೬ರ ಸೆಪ್ಟೆಂಬರ್ ೧೬)

ಡಾ. ಅಂಬೇಡ್ಕರ್ ಅವರು ಈಗ ಪ್ರಾರಂಭಿಸಿರುವ ಸತ್ಯಾಗ್ರಹವನ್ನು ಶತಾಯಗತಾಯ ಮುಂದುವರೆಸಿಕೊಂಡು ಹೋಗಬೇಕೆಂದು ತಮ್ಮ ಹಿಂಬಾಲಕರಿಗೆ ಕರೆನೀಡಿದರು. ಕಾಂಗ್ರೆಸ್ಸಿನ ಹರಿಜನ ಮುಖಂಡರು, ಡಾ. ಅಂಬೇಡ್ಕರ್ ಅವರ ಹೋರಾಟದ ಫಲವನ್ನು ಉಂಡು, ಅವರ ಚಳವಳಿಯ ವಿರುದ್ಧವೇ ಹರಿಹಾಯುತ್ತಿದ್ದಾರೆ ಮತ್ತು ಹರಿಜನರ ಬೇಡಿಕೆಗಳನ್ನು ವಿರೋಧಿಸುತ್ತಿರುವವರಿಗೆ ತಮ್ಮ ಬೆಂಬಲವನ್ನು ನೀಡುತ್ತಿದ್ದಾರೆ. ಇದು ತನ್ನ ಒಡೆಯನನ್ನೇ ಕಚ್ಚುವ ಸಾಕುನಾಯಿಯ ವರ್ತನೆಯಂತೆ ಇದೆ. ಅಂಬೇಡ್ಕರ್ ಅವರ ಈ ಚಳವಳಿಯು ಸತ್ಯಾಗ್ರಹದ ವಿಕಟಾನುಕರಣವಾಗಿದೆ, ಮತ್ತು ಮಾರ್ಗವು ಅಹಿಂಸಾತ್ಮಕವಾದರೂ ಉದ್ದೇಶವು ಖಂಡಿತವಾಗಿಯೂ ಅನಿಶ್ಚಿತವಾಗಿದೆ ಎಂದು ಶ್ರೀ ಗಾಂಧಿಯವರು ತಮ್ಮ ಹರಿಜನ ಪತ್ರಿಕೆಯಲ್ಲಿ ಬರೆದಿದ್ದಾರೆ.

ಸತ್ಯಾಗ್ರಹವು ಹದಿನೈದು ದಿನಗಳ ಕಾಲ ಯಾವುದೇ ಅಡೆತಡೆಯಿಲ್ಲದೆ ಮುಂದುವರೆಯಿತು. ಇದು ಸೃಷ್ಟಿಸಿದ ಒತ್ತಡದಿಂದಾಗಿ ಸರಕಾರವು ಪೂನಾ ಅಧಿವೇಶನವನ್ನು ಮೊಟಕುಗೊಳಿಸಬೇಕಾಯಿತು. ಕಾಂಗ್ರೆಸ್ ಮುಖಂಡರು ಡಾ. ಅಂಬೇಡ್ಕರ್ ಅವರೊಡನೆ ಪುನರ್ಮೈತ್ರಿಯನ್ನು ಸ್ಥಾಪಿಸುವ ಆಲೋಚನೆಯನ್ನು ಮಾಡಿದರು. ಇದರ ಪರಿಣಾಮವಾಗಿ, ಬಾಂಬೆ ಕಾಂಗ್ರೆಸ್ಸಿನ ಪ್ರಾಂತೀಯ ಸಮಿತಿಯ ಮುಖಂಡರಾದ ಶ್ರೀ ಎಸ್.ಕೆ. ಪಾಟೀಲರು ಡಾ. ಅಂಬೇಡ್ಕರ್ ಅವರನ್ನು ಸಿದ್ಧಾರ್ಥ ಕಾಲೇಜಿನಲ್ಲಿ ಭೇಟಿಯಾದರು. ಅವರಿಬ್ಬರೂ, ಶ್ರೀ ಎನ್.ಎಂ. ಜೋಷಿಯವರೊಡನೆ ಸರ್ದಾರ್ ಪಟೇಲರನ್ನು ಜುಲೈ ೨೭ರಂದು ಭೇಟಿ ಮಾಡಿದರು. ಅವರ ನಡುವೆ ಸುಮಾರು ಒಂದು ಗಂಟೆಯ ಕಾಲ ಸಂವಿಧಾನ ಸಭೆಯಲ್ಲಿ ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯದ ಬಗ್ಗೆ ಮತ್ತು ಪೂನಾ ಸತ್ಯಾಗ್ರಹದ ಬಗ್ಗೆ ಮಾತುಕತೆಗಳು ನಡೆದವು. ಆದರೆ ಈ ವಿಷಯಗಳಲ್ಲಿ ಒಂದು ತೀರ್ಮಾನಕ್ಕೆ ಬರಲು ಅವರಿಗೆ ಆಗಸ್ಟ್ ೮ನೆಯ ದಿನಾಂಕದವರೆಗೂ ಸಾಧ್ಯವಾಗಲಿಲ್ಲ. ಪರಿಶಿಷ್ಟ ಜಾತಿಗಳವರು ತಮ್ಮ ಮುಖಂಡರಾದ ಶ್ರೀ ಗಾಯಕ್‌ವಾಡ್ ಮತ್ತು ಶ್ರೀ ರಾಜ್‌ಭೋಜ್ ಅವರ ನೇತೃತ್ವದಲ್ಲಿ ಮೆರವಣಿಗೆಯನ್ನು ನಡೆಸಿ ವಾರ್ಧಾದಲ್ಲಿ ನಡೆಯುತ್ತಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಮಾವೇಶದತ್ತ ತೆರಳಿದರು.

ಇದಾದ ಸ್ವಲ್ಪ ದಿನಗಳ ನಂತರ ಡಾ. ಅಂಬೇಡ್ಕರ್ ಅವರು ಸರ್ದಾರ್ ಪಟೇಲರಿಗೆ ಪತ್ರವೊಂದನ್ನು ಬರೆದು, ತಾವು ಯಾವುದೇ ವ್ಯಕ್ತಿಯು ಎಷ್ಟೇ ಪ್ರಭಾವಶಾಲಿಯಾಗಿದ್ದರೂ ಆತನಿಗಿಂತ ದೇಶವನ್ನು ದೊಡ್ಡದು ಎಂದು ಭಾವಿಸುವುದಾಗಿ ತಿಳಿಸಿದರು. ಅಲ್ಲದೆ ಕಾಂಗ್ರೆಸ್ಸಿಗೆ ಸೇರದೆ ಇದ್ದವರೂ ದೊಡ್ಡ ರಾಷ್ಟ್ರೀಯವಾದಿಯಾಗಿರಬಹುದು ಮತ್ತು ತಾವು ಯಾವುದೇ ಕಾಂಗ್ರೆಸ್ ಮುಖಂಡರಿಗಿಂತ ಹೆಚ್ಚಿನ ರಾಷ್ಟ್ರೀಯವಾದಿ ಎಂದು ಅವರು ಆ ಪತ್ರದಲ್ಲಿ ತಿಳಿಸಿದ್ದಾರೆ. (ಕೀರ್. ಪುಟ ೩೮೩)

* * * * *

# ೧೭. ಡಾ. ಅಂಬೇಡ್ಕರ್ ಅವರಿಗೆ ಅಟ್ಲೀಯವರು ಬರೆದ ಪತ್ರ

ಪ್ಯಾರಿಸ್, ೧೯೪೬ರ ಆಗಸ್ಟ್ ೧,

ಪ್ರಿಯ ಅಂಬೇಡ್ಕರ್,

ನೀವು ಜುಲೈ ೧ರಂದು ಬರೆದ ಪತ್ರವನ್ನೂ ಮತ್ತು ಅದರೊಂದಿಗೆ ಕಳುಹಿಸಿದ್ದ ಇತರ ಪತ್ರಗಳನ್ನೂ ಎಚ್ಚರಿಕೆಯಿಂದ ಓದಿದ್ದೇನೆ.*

ಕ್ಯಾಬಿನೆಟ್ ಮಿಷನ್ನಾಗಲೀ, ವೈಸರಾಯ್ ಅವರಾಗಲೀ ಪರಿಶಿಷ್ಟ ಜಾತಿಗಳಿಗೆ ಅನ್ಯಾಯವನ್ನು ಮಾಡಿದ್ದಾರೆಂಬ ನಿಮ್ಮ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಾಗದುದಕ್ಕೆ ವಿಷಾದಿಸುತ್ತೇನೆ. ೧೯೪೫ರ ಸಿಮ್ಲಾ ಸಮ್ಮೇಳನದ ನೀತಿಗಳನ್ನು ಪರಿಷ್ಕರಿಸಲು ಇದ್ದ ಕಾರಣಗಳೆಂದರೆ, ನೀವು ಹೇಳಿದ ಹಾಗೆ, ಕಳೆದ ವಸಂತದಲ್ಲಿ ಪ್ರಾಂತೀಯ ಶಾಸನಸಭೆಗಳಿಗೆ ನಡೆದ ಚುನಾವಣೆಗಳ ಫಲಿತಾಂಶಗಳು. ಚುನಾವಣೆಯಲ್ಲಿನ ಮತಗಳ ಅಂಕಿಅಂಶಗಳನ್ನು ಮಿಷನ್ ಎಚ್ಚರಿಕೆಯಿಂದ ಪರಿಶೀಲಿಸಿದೆ ಮತ್ತು ನಾನೂ ಅವುಗಳನ್ನು ಪರಿಶೀಲಿಸಿದ್ದೇನೆ. ಕಾಂಗ್ರೆಸ್ ಪಕ್ಷವನ್ನು ವಿರೋಧಿಸಿ ಸ್ಪರ್ಧಿಸಿದ್ದ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳಿಗೆ ಈಗಿರುವ ಚುನಾವಣಾ ವ್ಯವಸ್ಥೆಯಿಂದ ಪ್ರತಿಕೂಲಗಳಾಗಿವೆ ಎಂಬ ಅಭಿಪ್ರಾಯಕ್ಕೆ ಬರಲು ಕೆಲವೊಂದು ವಾಸ್ತವಾಂಶಗಳು ಇರುವುದನ್ನು ನಾವೂ ಒಪ್ಪುತ್ತೇವೆ. ಆದರೆ, ಪ್ರಾಥಮಿಕ ಚುನಾವಣೆಗಳ ಅಂಕಿಅಂಶಗಳು ನಿಮ್ಮ ಒಕ್ಕೂಟದ ಅಭ್ಯರ್ಥಿಗಳ ಸಾಧನೆಯನ್ನು ಬಿಂಬಿಸುತ್ತವೆ ಎಂಬ ನಿಮ್ಮ ಹೇಳಿಕೆಯನ್ನು ಸಮರ್ಥಿಸುವುದಿಲ್ಲ**. ನಾನು ಇಲ್ಲಿ ಅತಿಯಾಗಿ ವಿವರಗಳಿಗೆ ಹೋಗದಿದ್ದರೂ, ವಾಸ್ತವಾಂಶವೆಂದರೆ ಪರಿಶಿಷ್ಟ ಜಾತಿಗಳವರಿಗಾಗಿ ಮೀಸಲಿಟ್ಟಿದ್ದ ೧೫೧ ಕ್ಷೇತ್ರಗಳಲ್ಲಿ ಕೇವಲ ೪೩ ಕ್ಷೇತ್ರಗಳಲ್ಲಿ ಪ್ರಾಥಮಿಕ ಚುನಾವಣೆಗಳು ನಡೆದಿದ್ದವು. ಈ ೪೩ ಕ್ಷೇತ್ರಗಳಲ್ಲಿ

---

*ಜುಲೈ ೧ರಂದು ಡಾ. ಅಂಬೇಡ್ಕರ್ ಅವರು ಅಟ್ಲಿಯವರಿಗೆ ಸಾಕಷ್ಟು ದೀರ್ಘವಾದ ಒಂದು ಪತ್ರವನ್ನು ಬರೆದಿದ್ದು ಅದರೊಂದಿಗೆ ಇತ್ತೀಚೆ ವ್ಯವಹರಿಸಿದ್ದ ಕೆಲವು ಪತ್ರಗಳನ್ನೂ, ಒಂದು ವಿಜ್ಞಾಪನಾ ಪತ್ರವನ್ನೂ, ಭಾಷಣದ ಒಂದು ಪ್ರತಿಯನ್ನೂ ಮತ್ತು ಇತರ ಕೆಲವು ಪತ್ರಗಳನ್ನೂ ಕಳುಹಿಸಿದ್ದರು. ಈ ಪತ್ರವು ಅಂಬೇಡ್ಕರ್ ಅವರು ಅಟ್ಲಿಗೆ ಜೂನ್ ೧೭ರಂದು ಕಳುಹಿಸಿದ್ದ ತಂತಿ ಸಂದೇಶದ ಮುಂದುವರಿಕೆಯಾಗಿತ್ತು ಮತ್ತು ಅದೇ ವಿಷಯಗಳನ್ನು ಕುರಿತದ್ದಾಗಿತ್ತು.

**ಈ ಪತ್ರದಲ್ಲಿ ಅಂಬೇಡ್ಕರ್ ಅವರು ಹೀಗೆ ಬರೆದಿದ್ದರು – "ಒಕ್ಕೂಟದ ಪರವಾಗಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು, ಅಂತಿಮ ಸ್ಥಾನಗಳ ಗಳಿಕೆಯಲ್ಲಿ ಹೇಗಿದ್ದರೂ – ಪ್ರಾಥಮಿಕ ಚುನಾವಣೆಯಲ್ಲಿ ಅತ್ಯಧಿಕ ಮತಗಳನ್ನು ಗಳಿಸಿದ್ದರು ಮತ್ತು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಅತಿ ಕಡಿಮೆ ಮತಗಳನ್ನು ಗಳಿಸಿದ್ದರು".

***ಆ ಮೂರು ಕೋರಿಕೆಗಳು ಹೀಗಿದ್ದವು –

೧) ಕ್ಯಾಬಿನೆಟ್ ಮಿಷನ್ನಿನ ಹೇಳಿಕೆಯ ೨೦ನೆಯ ಪ್ಯಾರಾಗ್ರಾಫ್‌ನ ಅಡಿಯಲ್ಲಿ ಪರಿಶಿಷ್ಟ ಜಾತಿಗಳನ್ನು ಅಲ್ಪಸಂಖ್ಯಾತರು ಎಂದು ಮಹಾಪ್ರಭುಗಳ ಸರಕಾರವು ಬಹಿರಂಗವಾಗಿ ಹೇಳಬೇಕು,

೨) ಮಹಾಪ್ರಭುಗಳ ಸರಕಾರವು ತನ್ನ ಅಧಿಕಾರವನ್ನು ತೊರೆಯುವ ಮೊದಲು ಪರಿಶಿಷ್ಟ ಜಾತಿಗಳವರು ಬಹುಸಂಖ್ಯಾತರ ಭಯದಿಂದ ಮುಕ್ತವಾಗಿ ಬದುಕಲು ತೃಪ್ತಿಕರವಾದ ರಕ್ಷಣಾ ವಿಧಿಗಳನ್ನು (ಸಂವಿಧಾನದಲ್ಲಿ) ಅಳವಡಿಸುವಂತೆ ಮಾಡಬೇಕು.

೩) ತಾತ್ಕಾಲಿಕ ಸರಕಾರದಲ್ಲಿ, ಪರಿಶಿಷ್ಟ ಜಾತಿಗಳ ಒಕ್ಕೂಟವು ನಾಮಕರಣಮಾಡುವ ಕನಿಷ್ಠ ಇಬ್ಬರು ಸದಸ್ಯರು ಇರಬೇಕು. (ಅದೇ. ಪು. ೮೧)

ಪರಿಶಿಷ್ಟ ಜಾತಿಗಳ ಒಕ್ಕೂಟವು ೨೨ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು ಕೇವಲ ೧೩ ಕ್ಷೇತ್ರಗಳಲ್ಲಿ ಮೇಲುಗೈಯನ್ನು ಸಾಧಿಸಿತ್ತು.

ನಿಮ್ಮ ಪತ್ರದಲ್ಲಿ ನೀವು ಮೂರು ನಿರ್ದಿಷ್ಟ ಕೋರಿಕೆಗಳನ್ನು ಮಾಡಿದ್ದೀರಿ.*** ಅವುಗಳಲ್ಲಿ ಮೊದಲನೆಯದನ್ನು ಕುರಿತು, ಕ್ಯಾಬಿನೆಟ್ ಮಿಷನ್ ಮೇ ೧೬ ಮತ್ತು ೧೭ರಂದು ನೀಡಿದ ಹೇಳಿಕೆಯ ಪ್ರಕಾರವೇ ಸಂವಿಧಾನ ಸಭೆಯು ತನ್ನ ಕಾರ್ಯಗಳನ್ನು ನಿರ್ವಹಿಸುವ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರಬೇಕು ಎಂಬುದು ಮಹಾಪ್ರಭುಗಳ ಸರಕಾರದ ಕಳಕಳಿ. ಪರಿಶಿಷ್ಟ ಜಾತಿಗಳು ಅಲ್ಪಸಂಖ್ಯಾತರಲ್ಲಿ ಒಂದು ಪ್ರಮುಖ ಅಂಗ ಮತ್ತು ಅವರು ಅಲ್ಪಸಂಖ್ಯಾತರ ಸಲಹಾ ಸಮಿತಿಯಲ್ಲಿ ಸೂಕ್ತವಾಗಿ ಪ್ರತಿನಿಧಿಸಲ್ಪಡಬೇಕು ಎಂಬುದನ್ನೂ ನಾವು ಪರಿಶೀಲಿಸುತ್ತೇವೆ. ಆದರೆ ನೀವು ಕೋರಿರುವಂತೆ ನಮ್ಮ ಹೇಳಿಕೆಯನ್ನು ಪರಿಶಿಷ್ಟ ಜಾತಿಗಳಿಗೆ ಮಾತ್ರ ಸೀಮಿತಗೊಳಿಸುವುದು ಸಾಧ್ಯವಿರಲಿಲ್ಲ. ಬದಲಿಗೆ ಆ ಹೇಳಿಕೆಯು ನಾವು ಯಾರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸುತ್ತೇವೆಯೋ ಅವರನ್ನು ಮಾತ್ರ ಸಲಹಾ ಸಮಿತಿಯು ಒಳಗೊಂಡಿರಬೇಕು ಎಂದು ಹೇಳಬೇಕಾಗಿತ್ತು. ಇದು ಮಹಾಪ್ರಭುಗಳ ಸರಕಾರದ ಒಂದು ಹೇಳಿಕೆಯೆಂದು ಸರಳವಾಗಿ ಹೇಳಿಬಿಡಬಹುದಾದರೂ, ಅದು ಶಾಸನಸಭೆಯ ಸ್ವಾತಂತ್ರ್ಯದಲ್ಲಿ ಮೂಗುತೂರಿಸಿದಂತೆ ಆಗುತ್ತದೆ ಎಂಬ ಟೀಕೆಗಳಿಗೆ ಗುರಿಯಾಗುವುದು ಅನಿವಾರ್ಯವಾಗುತ್ತದೆ ಮತ್ತು ಇದರಿಂದ ಗಂಭೀರವಾದ ಅಸಮಾಧಾನವೂ ಉಂಟಾಗುತ್ತದೆ. ಈ ಪರಿಸ್ಥಿತಿಯಲ್ಲಿ, ಅಂತಹ ಹೇಳಿಕೆಗಳನ್ನು ನೀಡುವುದು ಪರಿಶಿಷ್ಟ ಜಾತಿಗಳವರ ಉದ್ದೇಶಗಳಿಗೆ ಯಾವುದಾದರೂ ರೀತಿಯಲ್ಲಿ ಸಹಾಯಮಾಡುತ್ತದೆ ಎಂದು ನನಗೆ ಭಾಸವಾಗುವುದಿಲ್ಲ.

ನಿಮ್ಮ ಎರಡನೆಯ ಕೋರಿಕೆಯನ್ನು ಕುರಿತು – ನಾನು ಮಾರ್ಚ್ ೧೫ರಂದು ಕೆಳಮನೆಯಲ್ಲಿ ಮಾಡಿದ ಭಾಷಣದಲ್ಲಿ ನಾನು ಹೇಳಿರುವೆನೆಂದು ನೀವು ಸೂಚಿಸಿರುವ ಮಾತುಗಳು ನನಗೇ ಕಂಡುಬರಲಿಲ್ಲ. "ನಾವು ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಲಕ್ಷವಿಟ್ಟಿದ್ದೇವೆ ಮತ್ತು ಅಲ್ಪಸಂಖ್ಯಾತರು ಭಯದಿಂದ ಮುಕ್ತರಾಗಿ ಬದುಕಬೇಕು" ಎಂದು ನಾನು ಹೇಳಿದ್ದೆ. ಇದೇ ಅಭಿಪ್ರಾಯವೂ ಮಹಾಪ್ರಭುಗಳ ಸರಕಾರದ ಅಭಿಪ್ರಾಯವೂ ಆಗಿದೆ. ಇದನ್ನೇ ಮೇ ೨೫ರ ಕ್ಯಾಬಿನೆಟ್ ಮಿಷನ್ನಿನ ಹೇಳಿಕೆಯಲ್ಲಿನ ೪ನೆಯ ಪ್ಯಾರಾದಲ್ಲಿ ವ್ಯಕ್ತಪಡಿಸಲಾಗಿದೆ. ಆ ಪ್ಯಾರಾದಲ್ಲಿ ಹೇಳಿರುವ ವಿಷಯವನ್ನೇ ಮಹಾಪ್ರಭುಗಳ ಸರಕಾರವು ಇನ್ನೂ ವಿಸ್ತರಿಸಿ ಹೇಳುವುದು ಆವಶ್ಯಕವೆಂದು ನನಗೆ ಅನಿಸುವುದಿಲ್ಲ.

ನಿಮ್ಮ ಕೊನೆಯ ಕೋರಿಕೆಯು ತಾತ್ಕಾಲಿಕ ಸರಕಾರದಲ್ಲಿ, ಪರಿಶಿಷ್ಟ ಜಾತಿಗಳ ಒಕ್ಕೂಟವು ನಾಮಕರಣಮಾಡುವ ಕನಿಷ್ಠ ಇಬ್ಬರು ಸದಸ್ಯರು ಇರಬೇಕು ಎಂಬುದು. ಇದರ ಸಾಧ್ಯತೆಯ ಬಗ್ಗೆ ನನಗೆ ವಿಶ್ವಾಸವಿಲ್ಲ ಎಂಬುದನ್ನು ತಿಳಿಸಲು ವಿಷಾದಿಸುತ್ತೇನೆ.

ನೀವು ಸಂವಿಧಾನ ಸಭೆಗೆ ಆಯ್ಕೆಯಾಗಿರುವುದರಿಂದ ನನಗೆ ಅತೀವ ಸಂತೋಷವಾಗಿದೆ.

ಸಿ.ಆರ್.ಎ.

* * * * *

# ೧೮. ಅಟ್ಲಿಯವರಿಗೆ ಡಾ. ಅಂಬೇಡ್ಕರ್ ಅವರ ಪ್ರತಿಭಟನಾ ಪತ್ರ

ರಾಜಗೃಹ
ದಾದರ್, ಬಾಂಬೆ ೧೪
೧೯೪೬ರ ಆಗಸ್ಟ್ ೧೨.

ಪ್ರಿಯ ಅಟ್ಲೀ,

೧೯೪೬ರ ಆಗಸ್ಟ್ ೧ರ ತಮ್ಮ ಪತ್ರಕ್ಕೆ ಧನ್ಯವಾದಗಳು. ೧೯೪೬ರ ಜುಲೈ ೧ರ ನನ್ನ ಪತ್ರಕ್ಕೆ ಉತ್ತರ ಬರೆಯುವಷ್ಟು ವ್ಯವಧಾನವು ತಮಗೆ ಇರುತ್ತದೆ ಎಂದು ನಾನು ಊಹಿಸಿರಲಿಲ್ಲ. ತಾವು ಬಿಡುವು ಮಾಡಿಕೊಂಡು ನನ್ನ ಪತ್ರದಲ್ಲಿನ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ ಕಾರಣಕ್ಕೆ ನಾನು ತಮಗೆ ಕೃತಜ್ಞನಾಗಿದ್ದೇನೆ.

೨. ಮಹಾಪ್ರಭುಗಳ ಸರಕಾರವು ೧೯೪೫ರ ಸಿಮ್ಲಾ ಒಪ್ಪಂದದ ಪ್ರಕಾರ ಅನುಸರಿಸುತ್ತಿದ್ದ ನೀತಿಗೆ ಮಾಡಿದ ಪರಿಷ್ಕರಣೆಯನ್ನು ಮತ್ತು ಪರಿಶಿಷ್ಟಜಾತಿಯವರನ್ನು ಮಿಷನ್ ನಡೆಸಿಕೊಳ್ಳುತ್ತಿರುವ ರೀತಿಯನ್ನು ತಾವು ಸಮರ್ಥಿಸಿಕೊಂಡಿರುವುದನ್ನು ಒಪ್ಪಲು ನನಗೆ ಸಾಧ್ಯವಾಗುತ್ತಿಲ್ಲ ಎಂದು ತಿಳಿಸುವುದಕ್ಕೆ ವಿಷಾದವಾಗುತ್ತದೆ. ಅಲೆಗ್ಸಾಂಡರ್ ಅವರು ಕೆಳಮನೆಯಲ್ಲಿ 'ಪರಿಶಿಷ್ಟ ಜಾತಿಗಳು ಕಾಂಗ್ರೆಸ್ಸಿನೊಂದಿಗೆ ಇದ್ದಾರೆ' ಎಂದು ನೀಡಿರುವ ಹೇಳಿಕೆಯು ನಿಜವಾಗಿಯೂ ಅತ್ಯಂತ ಅಸಹ್ಯಕರವಾದ ಹೇಳಿಕೆಯಾಗಿದೆ. ಇದು ನನ್ನ ಅಭಿಪ್ರಾಯ ಮಾತ್ರವಲ್ಲ, ಭಾರತದಲ್ಲಿರುವ ಪ್ರತಿಯೊಬ್ಬ ಇಂಗ್ಲಿಷಿನವನ ಅಭಿಪ್ರಾಯವೂ ಇದೇ ಆಗಿದೆ. ಈಗ ಇಂಗ್ಲೆಂಡಿನಲ್ಲಿರುವ ಸರ್. ಎಡ್ವರ್ಡ್ ಬೆಂಥಾಲ್ ಅವರಲ್ಲಿ ತಾವು ವಿಚಾರಿಸಿದರೆ ಅವರು ಖಂಡಿತವಾಗಿಯೂ ನನ್ನ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ.

೩. ಪ್ರಾಥಮಿಕ ಚುನಾವಣೆಗಳಲ್ಲಿ ಒಕ್ಕೂಟದ ಸಾಧನೆಯ ಬಗ್ಗೆ ತಾವು ಮಾಡಿರುವ ವಿಶ್ಲೇಷಣೆಯ ಬಗ್ಗೆ ನಾನು ಹೇಳುವುದು ಇಷ್ಟೇ, ತಾವು ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸಿದ್ದೀರಿ. ಅಲ್ಲದೆ ವಾಸ್ತವಾಂಶಗಳ ಅರ್ಥಪೂರ್ಣತೆಯನ್ನು ಮತ್ತು ಇಲ್ಲಿನ ಚುನಾವಣೆಗಳ ರೀತಿಯನ್ನು ಅರಿಯದ ಹೊರಗಿನವರು ಸರಿಯಾದ ವಿಶ್ಲೇಷಣೆಯಿಲ್ಲದೆ ನೀಡಿದ ತಮ್ಮ ಹೇಳಿಕೆಗಳನ್ನು ತಾವೇ ಅರ್ಥಮಾಡಿಕೊಳ್ಳಲಾರರು. ನಾನು ಮಿಷನ್ನಿನ ವಿರುದ್ಧ ಮಾಡಿರುವ ಆಪಾದನೆಯ ಮುಖ್ಯ ಭೂಮಿಕೆಯೆಂದರೆ, ಕಾಂಗ್ರೆಸ್‌ನವರು ನೀಡಿದ ವಿವರಣೆಯನ್ನು ಆಲಿಸಿದ ಮಿಷನ್ ಸಮಸ್ಯೆಯ ಇನ್ನೊಂದು ಮುಖವನ್ನು ಅರಿಯಲು ನನ್ನನ್ನು ಆಹ್ವಾನಿಸಿ ನನ್ನ ವಿವರಣೆಯನ್ನೂ ಕೇಳಬೇಕಾಗಿತ್ತು. ಇದು ಅವರ ಬದ್ಧ ಕರ್ತವ್ಯವಾಗಿತ್ತು. ನ್ಯಾಯಬದ್ಧವಾಗಿ ಮಾಡಬೇಕಾಗಿದ್ದುದನ್ನು ಮಿಷನ್‌ಮಾಡಲಿಲ್ಲ. ನಾನು ಅವರಿಗೆ ತೃಪ್ತಿಕರವಾದ ವಿವರಣೆಯನ್ನು ನೀಡಲು ವಿಫಲನಾಗಿದ್ದಿದ್ದರೆ, ಮಿಷನ್ ಈಗ ತೆಗೆದುಕೊಂಡಿರುವ ತೀರ್ಮಾನಕ್ಕೆ ಸಮರ್ಥನೆ ದೊರಕುತ್ತಿತ್ತು. ನಾನು ಸಂವಿಧಾನ ಸಭೆಗೆ ಬಂಗಾಳದಿಂದ ಆಯ್ಕೆಯಾಗಿರುವುದರಿಂದ ಮಿಷನ್ನಿಗೆ ದೊರಕಿರುವ ಸುದ್ದಿ ಸುಳ್ಳುಸುದ್ದಿಯಾಗಿತ್ತು ಎನ್ನುವುದು ಸಾಬೀತಾಗುತ್ತದೆ. ನನ್ನ ಪ್ರಭಾವವು ಬಾಂಬೆ ಮತ್ತು ಮಧ್ಯ ಪ್ರಾಂತಗಳಿಗೆ ಮಾತ್ರ ಸೀಮಿತವಾಗಿದೆ ಎಂದು ಕ್ಯಾಬಿನೆಟ್ ಮಿಷನ್ ಕೆಳಮನೆಯಲ್ಲಿ ಹೇಳಿತ್ತು. ಹಾಗಿದ್ದರೆ, ನಾನು ಬಂಗಾಳದಿಂದ ಹೇಗೆ ಆಯ್ಕೆಯಾಗುತ್ತಿದ್ದೆ?

ನನ್ನ ಚುನಾವಣೆಗೆ ಸಂಬಂಧಿಸಿದಂತೆ ಮೂರು ಅಂಶಗಳನ್ನು ತಮಗೆ ಮನಗಾಣಿಸಬಯಸುತ್ತೇನೆ. ಮೊದಲನೆಯದು, ನಾನು ಚುನಾವಣೆಯಲ್ಲಿ ಅಲ್ಪಸ್ವಲ್ಪ ಮತಗಳಿಂದ ಗೆದ್ದುಬರಲಿಲ್ಲ, ಆದರೆ ಬಂಗಾಳದ ಅತ್ಯಂತ ಹಿರಿಯ ಕಾಂಗ್ರೆಸ್ ಮುಖಂಡರಾದ ಶ್ರೀ ಶರಚ್ಚಂದ್ರ ಬೋಸ್ ಅವರನ್ನು ಸೋಲಿಸಿ ಮತಗಳಿಕೆಯಲ್ಲಿ ಮೊದಲನೆಯವನಾಗಿದ್ದೆ. ಎರಡನೆಯದಾಗಿ ಬಂಗಾಳದ ಪರಿಶಿಷ್ಟ ಜಾತಿಗಳ ಯಾವುದೇ ಪಂಗಡಕ್ಕೂ ನನಗೂ ಯಾವ ರೀತಿಯ ಸಂಬಂಧವೂ ಇಲ್ಲ. ಅವರು ನನ್ನ ಜಾತಿಗಿಂತ ಭಿನ್ನವಾದ ಜಾತಿಗೆ ಸೇರಿದವರು. ವಾಸ್ತವವಾಗಿ ನನ್ನ ಜಾತಿಯ ಜನಗಳು ಬಂಗಾಳದಲ್ಲಿ ಇಲ್ಲವೇ ಇಲ್ಲ. ಆದರೂ ಬಂಗಾಳೀ ಪರಿಶಿಷ್ಟ ಜಾತಿಗಳವರು ನನಗೆ ಬೆಂಬಲವನ್ನು ನೀಡಿ ನಾನು ಅತಿಹೆಚ್ಚಿನ ಮತಗಳನ್ನು ಪಡೆಯುವಂತೆ ಮಾಡಿದರು. ಮೂರನೆಯದಾಗಿ, ಕಾಂಗ್ರೆಸ್ಸಿನ ಟಿಕೆಟ್ಟಿನ ಮೇಲೆ ಪರಿಶಿಷ್ಟ ಜಾತಿಗಳವರು ಆಯ್ಕೆಯಾಗಿ ಬಂದಿದ್ದರೂ ತಮ್ಮ ಪಕ್ಷದ ಅಭ್ಯರ್ಥಿಗೇ ಮತನೀಡಬೇಕೆಂಬ ತಮ್ಮ ಪಕ್ಷದ ನಿಯಮವನ್ನು ಉಲ್ಲಂಘಿಸಿ ನನಗೆ ಮತವನ್ನು ನೀಡಿದ್ದಾರೆ. ನನಗೆ ಬಂಗಾಳದಲ್ಲಿ ಬೆಂಬಲವಿಲ್ಲವೆಂದು ಇದು ಪ್ರಮಾಣಿಸುತ್ತದೆಯೇ? ಕ್ಯಾಬಿನೆಟ್ ಮಿಷನ್ ಪ್ರಾಮಾಣಿಕವಾಗಿದ್ದಲ್ಲಿ, ಅವರು ಸದನದ ಕೆಳಮನೆಯಲ್ಲಿ ನೀಡಿರುವ ತಪ್ಪು ಅಭಿಪ್ರಾಯವನ್ನು ಪರಿಷ್ಕರಿಸಬೇಕು ಮತ್ತು ತಮ್ಮ ದೃಷ್ಟಿಯನ್ನು ಬದಲಿಸಿಕೊಂಡು ಒಕ್ಕೂಟಕ್ಕೆ ತಕ್ಕ ಮಾನ್ಯತೆಯನ್ನು ನೀಡಬೇಕು.

೪. ಅಲ್ಪಸಂಖ್ಯಾತರ ಸಲಹಾ ಸಮಿತಿಯಲ್ಲಿ ಪರಿಶಿಷ್ಟ ಜಾತಿಗಳ ಸ್ಥಾನವನ್ನು ಕುರಿತು ಬ್ರಿಟಿಷ್ ಸಚಿವ ಸಂಪುಟದಿಂದ ಪರಿಶಿಷ್ಟ ಜಾತಿಗಳವರನ್ನು ಅಲ್ಪಸಂಖ್ಯಾತರಲ್ಲಿನ ಒಂದು ಪ್ರಮುಖ ಅಂಗವೆಂದು ಪರಿಗಣಿಸುವ ಆಶ್ವಾಸನೆ ಸಿಕ್ಕಿರುವುದರಿಂದ ನನಗೆ ಸಂತೋಷವಾಗಿದೆ. ಆದರೆ ಕ್ಯಾಬಿನೆಟ್ ಮಿಷನ್ ಈ ವಿಷಯದಲ್ಲಿ ಸಾರ್ವಜನಿಕ ಹೇಳಿಕೆಯನ್ನು ನೀಡದೆ ಇರುವವರೆಗೆ, ಮೇಲಿನ ಆಶ್ವಾಸನೆ ಪರಿಶಿಷ್ಟ ಜಾತಿಯವರಿಗೆ ಯಾವ ಸಹಾಯವನ್ನೂ ಮಾಡುವುದಿಲ್ಲ. ನಾನು ಹೀಗೆ ಹೇಳಲು ಇರುವ ಕಾರಣವೆಂದರೆ, ನೀವು ನೋಡುವ ಹಾಗೆ, ಒಪ್ಪಂದವು ಮುರಿದು ಬೀಳುವ ಮೊದಲು ಕಾಂಗ್ರೆಸ್ ಪಕ್ಷದ ಪರವಾಗಿ ವೈಸ್‌ರಾಯ್ ಅವರಿಗೆ ಮೌಲಾನಾ ಅಬುಲ್ ಕಲಮ್ ಆಜ಼ಾದ್ ಅವರು ಬರೆದಿರುವ ಪತ್ರದಲ್ಲಿ, ಪರಿಶಿಷ್ಟ ಜಾತಿಗಳವರು ಅಲ್ಪಸಂಖ್ಯಾತರು ಎಂಬ ವಿಷಯವನ್ನು ಅವರು ಬಲವಾಗಿ ಆಕ್ಷೇಪಿಸಿದ್ದಾರೆ. ಈ ದೃಷ್ಟಿಯನ್ನು ಸಕಾಲದಲ್ಲಿ ಬ್ರಿಟಿಷರು ಸರಿಪಡಿಸದಿದ್ದಲ್ಲಿ, ಕಾಂಗ್ರೆಸ್ಸಿನವರಿಂದಲೇ ತುಂಬಲ್ಪಡುವ ಸಲಹಾ ಸಮಿತಿಯು ಪರಿಶಿಷ್ಟ ಜಾತಿಗಳವರ ಪರಿಸ್ಥಿತಿಯನ್ನು ಗಮನಿಸದೇಹೋಗಬಹುದು. ಬ್ರಿಟಷರು ಪರಿಶಿಷ್ಟರಿಗೆ ಸಹಾಯ ಮಾಡಲು ನಿರಾಕರಿಸಿರುವುದರಿಂದ ಶ್ರೀ ಗಾಂಧಿಯವರು ಪರಿಶಿಷ್ಟ ಜಾತಿಗಳವರ ವಿಷಯದಲ್ಲಿ ಅವರ ಮನಸ್ಸಿಗೆ ಬಂದಹಾಗೆ ನಿಶ್ಚಯವಾಗಿಯೂ ವರ್ತಿಸಬಹುದು ಎಂಬುದು ಅವರು ಈಚೆಗೆ ನೀಡಿದ ಹೇಳಿಕೆಯಿಂದ ಗೊತ್ತಾಗುತ್ತದೆ. ಇದರ ಪರಿಣಾಮವಾಗಿ, ಪರಿಶಿಷ್ಟ ಜಾತಿಗಳವರನ್ನು ಅಲ್ಪಸಂಖ್ಯಾತರು ಎಂದು ಪರಿಗಣಿಸದೆ ಅವರನ್ನು ಹಿಂದೂ ಸಮಾಜದ ಒಳಗೆ ಇರುವ ಒಂದು ಸಾಮಾಜಿಕ ಗಣವೆಂದು ಪರಿಗಣಿಸಲಾಗುತ್ತದೆ.

೫. ಈ ಸನ್ನಿವೇಶಗಳಲ್ಲಿ, ಪರಿಶಿಷ್ಟ ಜಾತಿಗಳವರ ಸ್ಥಾನಮಾಗಳಿಗೆ ಭಾವೀ ಸಂವಿಧಾನದಲ್ಲಿ ಒದಗಬಹುದಾದ ಅಪಾಯವನ್ನು ತಪ್ಪಿಸಲು ಅವರನ್ನು ಒಂದು ಪ್ರಮುಖ ಅಲ್ಪಸಂಖ್ಯಾತ ವರ್ಗವೆಂದು ಪರಿಗಣಿಸಲು ನಾನು ಮತ್ತೊಮ್ಮೆ ತಮ್ಮನ್ನು ಒತ್ತಾಯಮಾಡುತ್ತೇನೆ.

೬. ಪರಿಶಿಷ್ಟ ಜಾತಿಗಳವರು ತಾತ್ಕಾಲಿಕ ಸರಕಾರದಲ್ಲಿ ಎರಡು ಸ್ಥಾನಗಳನ್ನು ಪಡೆಯುವಲ್ಲಿ ಸಹಾಯಮಾಡಲು ತಮಗೆ ಸಾಧ್ಯವಾಗುವುದಿಲ್ಲವೆಂಬುದನ್ನು ಓದಿ ನನಗೆ ವಿಷಾದವೆನಿಸಿತು. ತಮ್ಮ ಈ ನಿರಾಕರಣೆಗೆ ಯಾವ ಸಮರ್ಥನೆಯೂ ನನಗೆ ಕಾಣಿಸುತ್ತಿಲ್ಲ. ತಮ್ಮ ಸಂಖ್ಯಾಬಲದಿಂದ ಹಾಗೂ ೧೯೪೫ರ

ಸಿಮ್ಲಾ ಒಪ್ಪಂದದಲ್ಲಿ ನೀಡಿದ ಭರವಸೆಯ ಪ್ರಕಾರ ಸಿಕ್ಖರು ಅತವಾ ಇನ್ನಾವುದೇ ಸಣ್ಣಪುಟ್ಟ ಅಲ್ಪಸಂಖ್ಯಾತ ಸಮುದಾಯಗಳವರಿಗೆ ನೀಡುವ ಸ್ಥಾನಮಾನಗಳಿಗಿಂತ ಉತ್ತಮ ಸ್ಥಾನಮಾನಗಳನ್ನು ಪರಿಶಿಷ್ಟ ಜನಾಂಗವು ಪಡೆಯಲು ಅರ್ಹರಾಗಿರುತ್ತಾರೆ. ನಾನು ಮಾಡಿದ್ದ ಕೋರಿಕೆಗಳಿಗೆ ನಾನು ಹೆಚ್ಚೆಂದೇ ಹೇಳಬಹುದಾದಷ್ಟು ಸಮರ್ಥನೆಯನ್ನು ನೀಡಿದ್ದೇನೆ ಎಂದು ಭಾವಿಸುತ್ತೇನೆ.

ಗೌರವಪೂರ್ವಕ ಅಭಿವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಬಿ.ಆರ್. ಅಂಬೇಡ್ಕರ್**

* * * * *

# ೧೯. ನಮ್ಮನ್ನು ಗೆಲ್ಲಬಹುದು ಆದರೆ ನಾವು ಸೋಲನ್ನೊಪ್ಪಿಕೊಳ್ಳುವುದಿಲ್ಲ

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಪೂನಾಕ್ಕೆ ಬಂದಿದ್ದ ಡಾ. ಅಂಬೇಡ್ಕರ್ ಅವರು ಇತ್ತೀಚೆಗೆ ರಚಿಸಲಾದ ತಾತ್ಕಾಲಿಕ ಸರಕಾರದಲ್ಲಿ ಪರಿಶಿಷ್ಟ ಜಾತಿಗೆ ನೀಡಿರುವ ಪ್ರಾತಿನಿಧ್ಯವು ತೀರ ಕಡಿಮೆಯಾಗಿರುವುದಕ್ಕೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರು. (ದ ಟೈಮ್ಸ್ ಆಫ್ ಇಂಡಿಯಾ, ೧೯೪೬ರ ಆಗಸ್ಟ್ ೨೬)

"ಕಾರ್ಯಾಂಗದಲ್ಲಿನ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯದ ಸಂಬಂಧದಲ್ಲಿ ಕಾಂಗ್ರೆಸ್ ತೆಗೆದುಕೊಂಡಿರುವ ನಿಲುವಿನಿಂದಾಗಿ ಪರಿಶಿಷ್ಟ ಜಾತಿಗಳವರಿಗೆ ವೈಸ್‌ರಾಯ್ ಅವರು ರಚಿಸಿರುವ ತಾತ್ಕಾಲಿಕ ಸರಕಾರದ ಬಗೆಗೆ ವಿಧೇಯತೆಯಾಗಲೀ, ಗೌರವವಾಗಲೀ ಇಲ್ಲ" ಎಂದು ಡಾ. ಅಂಬೇಡ್ಕರ್ ಅವರು ತಾತ್ಕಾಲಿಕ ಸರಕಾರದ ರಚನೆಯ ಬಗ್ಗೆ ನಡೆದ ಸಂದರ್ಶನವೊಂದರಲ್ಲಿ ತಿಳಿಸಿದರು.

ಕಾರ್ಯಾಂಗದಲ್ಲಿ ಪರಿಶಿಷ್ಟ ಜಾತಿಗಳವರ ಅಸ್ತಿತ್ವವನ್ನೇ ಕೊನೆಗಾಣಿಸಲು ಕಾಂಗ್ರೆಸ್ ಮತ್ತು ಬ್ರಿಟಿಷ್ ಸರಕಾರಗಳ ನಡುವೆ ಒಳಸಂಚೊಂದನ್ನು ಬುದ್ಧಿಪೂರ್ವಕವಾಗಿ ಹೆಣೆದಿರುವಂತೆ ಕಾಣುತ್ತಿದೆ. ಪಾಕಿಸ್ತಾನದ ನಿರ್ಮಾಣಕ್ಕೆ ಸಮರ್ಥನೆ ಇದೆ. ಆದರೆ, ಕಾರ್ಯಾಂಗದಲ್ಲಿ ಸ್ಥಾನಗಳ ಬಗ್ಗೆ ಸವರ್ಣೀಯ ಹಿಂದೂಗಳಿಗೆ ಸಮನಾಗಿ ಮುಸ್ಲಿಮರನ್ನು ಇರಿಸುವುದುದಕ್ಕೆ ಯಾವ ಸಮರ್ಥನೆಯೂ ಇಲ್ಲ. ಅದೇ ಸಮಯದಲ್ಲಿ ಮುಸ್ಲಿಮರ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿಯವರೂ ಸೇರಿರುವ ಇತರ ಅಲ್ಪಸಂಖ್ಯಾತರ ಸ್ಥಾನಗಳನ್ನು ಕೇವಲ ನಾಲ್ಕಕ್ಕೆ ಸೀಮಿತಿಗೊಳಿಸುವುದಕ್ಕೂ ಸಮರ್ಥನೆಯಿರುವುದು ಸಾಧ್ಯವಿಲ್ಲ. ಮುಸ್ಲಿಮರಿಗೆ ಗರಿಷ್ಠ ಮೂರನೆಯ ಒಂದು ಭಾಗದಷ್ಟು (ಅಂದರೆ ಶೇ. ೩೩.೩೩ರಷ್ಟು) ಸ್ಥಾನಗಳನ್ನು ಬ್ರಿಟಿಷ್ ಸರಕಾರವು ನೀಡಲು ಸಮ್ಮತಿಸಬಹುದಿತ್ತು. ಅವರಿಗೆ ಇದಕ್ಕಿಂತಲೂ ಹೆಚ್ಚಿನ ಸ್ಥಾನಗಳನ್ನು ನೀಡುವಂತಹುದು ಏನೂ ಸಂಭವಿಸಿಲ್ಲ. ಸವರ್ಣೀಯ ಹಿಂದೂಗಳಿಗೆ ನೀಡಿರುವಷ್ಟೇ ಸ್ಥಾನಗಳನ್ನು ಮುಸ್ಲಿಮರೂ ಪಡೆಯಬಹುದಾದರೆ, ಮುಸ್ಲಿಮರಿಗೆ ನೀಡಿರುವ ಸ್ಥಾನಗಳ ಶೇ ೫೦ರಷ್ಟನ್ನಾದರೂ ಕನಿಷ್ಠತಮವಾಗಿ ಪಡೆಯುವ ಎಲ್ಲಾ ಹಕ್ಕುಗಳೂ ಪರಿಶಿಷ್ಟ ಜಾತಿಯವರಿಗೆ ಇದೆ.

ಮುಂದುವರೆಯುತ್ತಾ ಡಾ. ಅಂಬೇಡ್ಕರ್ ಅವರು ಹೇಳಿದರು "ಸಿಮ್ಲಾ ಸಮ್ಮೇಳನದಲ್ಲಿ ಮುಸ್ಲಿಮರಿಗೆ ತಾತ್ಕಾಲಿಕ ವ್ಯವಸ್ಥೆಯಲ್ಲಿ ಎರಡು ಸ್ಥಾನಗಳಿರಬೇಕೆಂದು ವೈಸರಾಯ್ ಅವರು ಒಪ್ಪಿಕೊಂಡಿದ್ದರು. ಪರಿಶಿಷ್ಟ ಜಾತಿಯವರು ಮೂರು ಸ್ಥಾನಗಳಿಗೆ ಬೇಡಿಕೆಯನ್ನು ಸಲ್ಲಿಸಿದ್ದರೂ, ಅಂತಿಮವಾಗಿ ಅವರಿಗೆ ಎರಡು ಸ್ಥಾನಗಳನ್ನು ನೀಡಲು ಒಪ್ಪಿಕೊಂಡಿದ್ದರು. ಆ ಸಮಯದಲ್ಲಿ ಕಾಂಗ್ರೆಸ್ ಪರಿಶಿಷ್ಟ ಜಾತಿಯವರಿಗೆ ಎರಡು ಸ್ಥಾನಗಳನ್ನು ನೀಡಲು ಒಪ್ಪಿಕೊಂಡಿತ್ತು. ಕಣ್ಣಿಗೆ ರಾಚುವಂತಹ ಇಂತಹ ಅನ್ಯಾಯವನ್ನು ಕಾಂಗ್ರೆಸ್ ತಮಗೆ ಮಾಡಿರುವಾಗ, ಕಾಂಗ್ರೆಸ್ ಪಕ್ಷವೇ ಪ್ರಾಯೋಜಿಸಿರುವ ತಾತ್ಕಾಲಿಕ ಸರಕಾರದ ಜೊತೆ ತಾವು ಸಹಕರಿಸಬೇಕೇ ಎಂಬ ಪ್ರಶ್ನೆಯು ಪರಿಶಿಷ್ಟ ಜಾತಿಗಳವರನ್ನು ಗಂಭೀರವಾಗಿ ಕಾಡುತ್ತಿದೆ. ಕಾರ್ಯಾಂಗ ಸಮಿತಿಯಲ್ಲಿ ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯವನ್ನು ಕುರಿತು ಕಾಂಗ್ರೆಸ್ ಪಕ್ಷವು ಈ ನಿಲುವನ್ನು ತೆಗೆದುಕೊಂಡಿರುವ ಸಂದರ್ಭದಲ್ಲಿ ವೈಸ್‌ರಾಯ್ ಅವರು ರಚಿಸಿರುವ ತಾತ್ಕಾಲಿಕ ಸರಕಾರವು ಪರಿಶಿಷ್ಟ ಜಾತಿಯವರಿಂದ ವಿಧೇಯತೆಯನ್ನಾಗಲೀ, ಗೌರವವನ್ನಾಗಲೀ ಪಡೆಯಲು ಸಾಧ್ಯವಿಲ್ಲ".

"ಇದಕ್ಕಿಂತ ಹೆಚ್ಚಿನ ಗಾಬರಿತರುವ ವಿಷಯವೆಂದರೆ, ಕಾರ್ಯಾಂಗ ಸಮಿತಿಯನ್ನು ಸೇರುವಂತೆ ತಮಗೆ ನೀಡಿದ ಆಹ್ವಾನವನ್ನು ಶ್ರೀ ಜಗಜ್ಜೀವನ ರಾಮ್ ಅವರು ಒಪ್ಪಿಕೊಂಡಿರುವುದು. ಪರಿಶಿಷ್ಟ ಜಾತಿಗಳವರಿಗೆ ಕಾರ್ಯಾಂಗದ ಸಮಿತಿಯಲ್ಲಿ ನೀಡಿರುವ ಪ್ರಾತಿನಿಧ್ಯದ ಬಗೆಗೆ ಪ್ರತಿಭಟಿಸಿ ನಾನು ಪ್ರಧಾನ ಮಂತ್ರಿಗಳಿಗೆ ತಂತಿ ಸಂದೇಶವನ್ನು ಕಳುಹಿಸಿದಾಗ, ಪರಿಶಿಷ್ಟ ಜಾತಿಗಳವರಿಗೆ ಇನ್ನೂ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕು ಎಂದು ಶ್ರೀ ಜಗಜ್ಜೀವನ ರಾಮ್ ಅವರೇ ಖುದ್ದಾಗಿ ಒಂದು ಪತ್ರಿಕಾ ಹೇಳಿಕೆಯನ್ನು ನೀಡಿ ಪರಿಶಿಷ್ಟ ಜಾತಿಗಳ ಪರವಾಗಿ ಮಾಡಿದ್ದ ನನ್ನ ಬೇಡಿಕೆಗೆ ಬೆಂಬಲವನ್ನು ನೀಡಿದ್ದರು. ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯವನ್ನು ಹೆಚ್ಚಿಸಲು ಒಪ್ಪದಿರುವುದರಿಂದ, ಶ್ರೀ ಜಗಜ್ಜೀವನ ರಾಮ್ ಅವರು ತಮಗೆ ಬಂದ ಆಹ್ವಾನವನ್ನು ಒಪ್ಪಿಕೊಂಡಿರುವುದು ಅವರು ಪರಿಶಿಷ್ಟ ಜಾತಿಗಳವರನ್ನು ಎಷ್ಟರ ಮಟ್ಟಿಗೆ ಪ್ರತಿನಿಧಿಸುತ್ತಾರೆ ಎಂಬುದನ್ನು ತೋರಿಸುತ್ತದೆ. ಕಾಂಗ್ರೆಸ್ ಪಕ್ಷದ ಒಳಗೆ ಇದ್ದು, ಪರಿಶಿಷ್ಟ ಜಾತಿಗಳವರನ್ನು ತಾವು ಪ್ರತಿನಿಧಿಸುತ್ತೇವೆ ಮತ್ತು ಕಾಂಗ್ರೆಸ್ ಪರಿಶಿಷ್ಟ ಜಾತಿಗಳವರನ್ನು ನಿರಾಶೆಗೊಳಿಸದಂತೆ ನೋಡಿಕೊಳ್ಳುತ್ತೇವೆ ಎಂದು ನಾಟಕವನ್ನಾಡುತ್ತಿರುವ ಜಗಜ್ಜೀವನ ರಾಮ್ ಹಾಗೂ ಅವರಂತಹ ಇತರ ಜನಗಳ ಋಜುತ್ವ ಮತ್ತು ಪ್ರಾಮಾಣಿಕತೆಗಳನ್ನು ಅರಿತುಕೊಳ್ಳಲು ಈ ಪ್ರಸಂಗವು ಒಂದು ಉತ್ತಮ ನಿಕಷವಾಗಿದೆ."

ಒಕ್ಕೂಟವು ಪ್ರಾರಂಭಿಸಿರುವ ಚಳವಳಿಯ ಬಗ್ಗೆ ಮಾತನಾಡುತ್ತಾ ಡಾ. ಅಂಬೇಡ್ಕರ್ ಅವರು ತಮ್ಮ ನ್ಯಾಯಯುತವಾದ ಹಕ್ಕುಗಳನ್ನು ಪಡೆಯಲು ನಡೆಸುತ್ತಿರುವ ಈ ಹೋರಾಟವು ಮುಂದುವರೆಯಲಿದೆ, ನಾವು ಸೋತಿರಬಹುದು ಆದರೆ ಸೋಲನ್ನು ಒಪ್ಪಿಕೊಳ್ಳುವುದಿಲ್ಲ ಎಂದು ನುಡಿದರು (ಜೈ ಭೀಮ್, ದಿನಾಂಕ ೧೯೪೬ರ ಸೆಪ್ಟೆಂಬರ್ ೧೬)

* * * * *

# ೨೦. ಲಾರ್ಡ್ ಪೆಥಿಕ್ ಲಾರೆನ್ಸ್ ಅವರು ಪ್ರಧಾನ ಮಂತ್ರಿ ಅಟ್ಲಿಯವರಿಗೆ ಬರೆದ ಪತ್ರ

ಇಂಡಿಯಾ ಆಫೀಸ್,

೧೯೪೬ರ ಸೆಪ್ಟೆಂಬರ್ ೩

ಸೆಕ್ರೆಟರಿ ಆಫ್ ಸ್ಟೇಟ್ ಅವರ ಟಿಪ್ಪಣಿ

ಪ್ರಧಾನಮಂತ್ರಿಯವರೇ,

ಡಾ. ಅಂಬೇಡ್ಕರ್ ಅವರು ತಮಗೆ ೧೯೪೬ರ ಆಗಸ್ಟ್ ೧೨ರಂದು ಬರೆದ ಪತ್ರದ ಬಗ್ಗೆ ನನ್ನ ಅಭಿಪ್ರಾಯಗಳನ್ನು ಕೇಳಿದ್ದೀರಿ.

೨. ಅವರ ಪತ್ರದಲ್ಲಿನ ಎರಡನೆಯ ಪ್ಯಾರಾದ ಬಗ್ಗೆ ನನ್ನ ಆಪ್ತ ಕಾರ್ಯದರ್ಶಿಯು ತಮಗೆ ಡಾ. ಅಂಬೇಡ್ಕರ್ ಅವರ ಹಿಂದಿನ ಪತ್ರಕ್ಕೆ ನೀಡಬಹುದಾದ ಉತ್ತರದ ಕರಡು ಪ್ರತಿಯೊಂದಿಗೆ ಕಳುಹಿಸಿದ ಜುಲೈ ೨೬ರ ಜ್ಞಾಪನಾ ಪತ್ರದಲ್ಲಿ ದಲಿತ ವರ್ಗಗಳ ಚುನಾವಣೆಯ ವಿಶ್ಲೇಷಣೆಯನ್ನು ತಾವು ನೋಡಬಹುದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಪ್ರಾಥಮಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಡಾ. ಅಂಬೇಡ್ಕರ್ ಅವರ ಸಂಸ್ಥೆಗೆ ದೊರಕಿದ ಮತಗಳಿಗಿಂತ ಅಧಿಕ ಮತಗಳು ದೊರಕಿದವು. ಕಾಂಗ್ರೆಸ್ ಪಕ್ಷಕ್ಕಿಂತಲೂ ಹೆಚ್ಚಿನ ಮತಗಳನ್ನು ಸ್ವತಂತ್ರ ಅಭ್ಯರ್ಥಿಗಳು ಪಡೆದುಕೊಂಡರು. ಈ ಸ್ವತಂತ್ರ ಅಭ್ಯರ್ಥಿಗಳು ಡಾ. ಅಂಬೇಡ್ಕರ್ ಅವರನ್ನು ಬೆಂಬಲಿಸಬಹುದು ಅಥವಾ ಬೆಂಬಲಿಸದೇ ಇರಲೂ ಬಹುದು. ಇದರ ಹೊರತಾಗಿ, ಕಾಂಗ್ರೆಸ್ ಮೂರನೇ ಎರಡು ಭಾಗದಷ್ಟು ಸ್ಥಾನಗಳನ್ನು ಅವಿರೋಧವಾಗಿ ಪಡೆದುಕೊಂಡಿದೆ. ಈ ಅಂಕಿಅಂಶಗಳು ನಿರ್ಣಾಯಕವಲ್ಲದಿದ್ದರೂ, ಪ್ರಥಮ ಲಾರ್ಡ್ ಅವರು ಸಂಸತ್ತಿನ ಕೆಳಮನೆಯಲ್ಲಿ ನೀಡಿದ ಹೇಳಿಕೆಯು, ಅದನ್ನು ನಾನು ಅತಿಯಾದ ವಿಶ್ವಾಸಪೂರಿತವಾದುದು ಎಂದು ಹೇಳಬಹುದಾದರೂ, ಆಧಾರರಹಿತವಾದುದು ಎಂದು ಹೇಳುವುದು ಸಮರ್ಥನೀಯವಾಗದು.

೩. ಡಾ. ಅಂಬೇಡ್ಕರ್ ಅವರ ಪತ್ರದ ಮೂರನೆಯ ಪ್ಯಾರಾವನ್ನು ಕುರಿತು – ಅವರ ಪ್ರಭಾವವು ಬಾಂಬೆ ಮತ್ತು ಮಧ್ಯ ಪ್ರಾಂತಗಳಿಗೆ ಮಾತ್ರ ಸೀಮಿತವಾಗಿದೆಯೆಂದು ಸಂಸತ್ತಿನ ಕೆಳಮನೆಯಲ್ಲಿ ಹೇಳಿಲ್ಲ. ಅವರು ಬಹುಶಃ ವ್ಯಾಪಾರ ಮಂಡಲಿಯ ಅಧ್ಯಕ್ಷರ ಭಾಷಣವನ್ನು ಕುರಿತು ಹೇಳುತ್ತಿರಬಹುದು. ಅಧ್ಯಕ್ಷರ ಭಾಷಣದಲ್ಲಿನ ಆ ಭಾಗವು ಯಥಾವತ್ತಾಗಿ ಹೀಗಿದೆ 'ಬಾಂಬೆ ಮತ್ತು ಮಧ್ಯ ಪ್ರಾಂತಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ ಡಾ. ಅಂಬೇಡ್ಕರ್ ಅವರ ಸಂಸ್ಥೆಯ ಪ್ರಭಾವವು ಕಾಂಗ್ರೆಸ್ ಪಕ್ಷದ ಅಖಿಲ ಭಾರತ ವ್ಯಾಪ್ತಿಯನ್ನು ಹೊಂದಿರದೆ, ಕೇವಲ ಸ್ಥಳೀಯವಾಗಿದೆ' ದಾಮಾಷಾ ಸೂತ್ರದ ಪ್ರಕಾರ ಸಂವಿಧಾನ ಸಭೆಗೆ ನಡೆದ ಬಂಗಾಳದ ಚುನಾವಣೆಗಳಲ್ಲಿ ವಾಸ್ತವವಾಗಿ ನಡೆದ ವಿಷಯಗಳ ಬಗ್ಗೆ ನಾನು ವಿಚಾರಿಸಿದ್ದೇನೆ. ಡಾ. ಅಂಬೇಡ್ಕರ್ ಅವರು ಮೊದಲ ಪ್ರಾಶಸ್ತ್ಯದ ಐದು ಮತಗಳನ್ನು ಪಡೆದರು. ಶರಚ್ಚಂದ್ರ ಬೋಸರೂ ಮೊದಲ ಪ್ರಾಶಸ್ತ್ಯದ ಐದು ಮತಗಳನ್ನು ಪಡೆದರು. ಚುನಾವಣೆಯಲ್ಲಿ ಬಂಗಾಳದ ಕೋಟಾ ನಾಲ್ಕು ಮತಗಳಾಗಿದ್ದವು. ಕಾಂಗ್ರೆಸ್ ಪಕ್ಷವು ಸಹಜವಾಗಿಯೇ ತನ್ನ ಪ್ರತಿ ಅಭ್ಯರ್ಥಿಗಳಿಗೂ ನಾಲ್ಕು ಮತಗಳನ್ನಾದರೂ

ಪಡೆಯುವ ದಿಕ್ಕಿನಲ್ಲಿ ವ್ಯವಸ್ಥೆಯನ್ನು ಮಾಡಿತ್ತು. ದಾಮಾಷಾ ಸೂತ್ರದ ಪ್ರಕಾರ ನಡೆಯುವ ಚುನಾವಣೆಗಳಲ್ಲಿ 'ಎಲ್ಲರಿಗಿಂತ ಹೆಚ್ಚಿನ ಮತ' ಎನ್ನುವ ಪದಗುಚ್ಛಕ್ಕೆ ಯಾವ ಅರ್ಥವೂ ಇಲ್ಲ. ಡಾ. ಅಂಬೇಡ್ಕರ್ ಅವರಿಗೆ ಬಂಗಾಳದ ಕೆಲ ದಲಿತ ವರ್ಗಗಳ ಮೇಲೆ ಪ್ರಭಾವವಿದೆ ಎಂಬುದನ್ನು ಯಾರೂ ನಿರಾಕರಿಸಲಾಗದು. ಬಂಗಾಳ ಶಾಸನ ಸಭೆಯಲ್ಲಿ ಒಟ್ಟು ಇಪ್ಪತ್ತೈದು ಪರಿಶಿಷ್ಟ ಜಾತಿಯ ಸದಸ್ಯರಿದ್ದಾರೆ. ಅವರಲ್ಲಿ ನಾಲ್ವರು ಸ್ವತಂತ್ರ ಅಭ್ಯರ್ಥಿಗಳಾಗಿ ಗೆಲವನ್ನು ಪಡೆದಂತಹವರು ಮತ್ತು ಒಬ್ಬರು ಡಾ. ಅಂಬೇಡ್ಕರ್ ಅವರು. ಡಾ. ಅಂಬೇಡ್ಕರ್ ಅವರು ಸಂವಿಧಾನ ಸಭೆಯ ಚುನಾವಣೆಯಲ್ಲಿ ಪಡೆದದ್ದು ಎಲ್ಲಾ ಸ್ವತಂತ್ರ ಅಭ್ಯರ್ಥಿಗಳ ಮತಗಳನ್ನೋ ಅಥವಾ ಅವರ ಪರವಾಗಿ ಕೆಲವು ಆಂಗ್ಲೋ ಇಂಡಿಯನ್ನರು ತಮ್ಮ ಮತವನ್ನು ಚಲಾಯಿಸಿದರೋ ಎಂಬುದು ನನಗೆ ತಿಳಿದಿಲ್ಲ.

೪. ಡಾ. ಅಂಬೇಡ್ಕರ್ ಅವರ ಪತ್ರದ ನಾಲ್ಕನೆಯ ಪ್ಯಾರಾವನ್ನು ಕುರಿತು – ಅಲ್ಪಸಂಖ್ಯಾತ ಸಲಹಾ ಸಮಿತಿಯಲ್ಲಿ ಪ್ರತಿನಿಧಿತ್ವವನ್ನು ಪಡೆಯುವಂತೆ ಮಾಡಲು ಪರಿಶಿಷ್ಟ ಜಾತಿಗಳನ್ನು ಹಿಂದುಳಿದ ವರ್ಗವೆಂದು ಸಾರ್ವಜನಿಕವಾಗಿ ಘೋಷಿಸಲು ಸಾಧ್ಯವಿಲ್ಲವೆಂಬ ಬಗ್ಗೆ ನನಗೆ ಮನದಟ್ಟಾಗಿದೆ. ಕಾಂಗ್ರೆಸ್ ಪಕ್ಷವು ಅವರನ್ನು ರಾಜಕೀಯ ಪ್ರಾತಿನಿಧ್ಯದ ಉದ್ದೇಶಕ್ಕಾಗಿ ಪ್ರತ್ಯೇಕಮಾಡುವುದನ್ನು ವಿರೋಧಿಸಿದರೂ ನಾವು ಯಾವಾಗಲೂ ಹಾಗೆಯೇ ಮಾಡುತ್ತಿದ್ದೇವೆ ಎಂಬುದು ಸತ್ಯ. ಆದರೆ, ಡಾ. ಅಂಬೇಡ್ಕರ್ ಅವರ ಸಂಸ್ಥೆಯನ್ನು ಅಲ್ಪಸಂಖ್ಯಾತ ಸಲಹಾ ಸಮಿತಿಯಲ್ಲಿ ಪ್ರತಿನಿಧಿಸುವಂತೆ ಮಾಡುವಂತಹ ಸ್ಥಿತಿಯಲ್ಲಿ ನಾವು ಇಲ್ಲ.

೫. ಡಾ. ಅಂಬೇಡ್ಕರ್ ಅವರ ಪತ್ರಕ್ಕೆ ಉತ್ತರವನ್ನು ನೀಡುವುದು ಅತ್ಯಂತ ಅಗತ್ಯವಾಗಿಯೇನೂ ಇಲ್ಲ. ಆದರೆ, ತಾವು ಸೌಜನ್ಯತೆಯ ದೃಷ್ಟಿಯಿಂದ ಉತ್ತರಿಸಬೇಕೆಂದಿದ್ದರೆ, ಅದಕ್ಕಾಗಿ ನಾನು ಒಂದು ಚಿಕ್ಕ ಪತ್ರದ ಕರಡನ್ನು ಇದರೊಂದಿಗೆ ಲಗತ್ತಿಸಿದ್ದೇನೆ (ಇವು ಅಚ್ಚಾಗಿಲ್ಲ). ಪ್ರಥಮ ಲಾರ್ಡ್ ಅವರು ಮತ್ತು ವ್ಯಾಪಾರ ಮಂಡಲಿಯ ಅಧ್ಯಕ್ಷರು ಸಂಸತ್ತಿನ ಕೆಳಮನೆಯಲ್ಲಿ ಮಾಡಿದ ಭಾಷಣವನ್ನು ತಾವು ಅವಲೋಕಿಸ ಬಯಸಿದರೆ, ಅವುಗಳ ಪ್ರತಿಯನ್ನೂ ಇದರೊಂದಿಗೆ ಕಳುಹಿಸುತ್ತಿದ್ದೇನೆ(ಇದು ಅಚ್ಚಾಗಿಲ್ಲ). ನನ್ನ ಇತ್ತೀಚಿನ ಭಾಷಣವೊಂದು ಇಂತಹುದೇ ಮಾತುಗಳನ್ನು, ಸಂಕ್ಷಿಪ್ತವಾಗಿ ಒಳಗೊಂಡಿತ್ತು.

**ಪೆಥಿಕ್ ಲಾರೆನ್ಸ್**

**೨**

ಇಂಡಿಯಾ ಆಫೀಸ್, ೧೯೪೬ರ ಸೆಪ್ಟೆಂಬರ್ ೯

**ಸೆಕ್ರೆಟರಿ ಆಫ್ ಸ್ಟೇಟ್ ಅವರ ಟಿಪ್ಪಣಿ**

ಪ್ರಧಾನಮಂತ್ರಿಯವರೇ,

ಸಂವಿಧಾನ ಸಭೆಯ ಸಲಹಾ ಸಮಿತಿಯಲ್ಲಿ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವನ್ನು ಕುರಿತು ತಾವು ಸೆಪ್ಟೆಂಬರ್ ೪ರಂದು ಬರೆದಿದ್ದ ೨೯೬/೪೬ ನೇ ಸಂಖ್ಯೆಯ (ಅಧಿಕಾರದ ಹಸ್ತಾಂತರದಲ್ಲಿ ಈ ಸಂಖ್ಯೆಯನ್ನು ೨೫೩ ಎಂದಿದೆ) ಸಂಖ್ಯೆ ಟಿಪ್ಪಣಿಯ ಬಗ್ಗೆ

೨. ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳನ್ನು ಸಲಹಾ ಸಮಿತಿಯು ಒಳಗೊಂಡಿರಬೇಕೆಂಬುದು

ಮಿಷನ್ನಿನ ನಿಶ್ಚಿತ ಅಭಿಪ್ರಾಯವಾಗಿತ್ತು. ನಾನು ಭಾರತದಲ್ಲಿದ್ದಾಗ ಡಾ. ಅಂಬೇಡ್ಕರ್ ಅವರಿಗೆ ಪತ್ರವೊಂದನ್ನು (ಸಂ. ೩೯೯ – ಸಂಪುಟ ೭) – (ಪುಟ ೫೦೨ನ್ನು ನೋಡಿ) ಬರೆದು ಈ ವಿಷಯವನ್ನು ತಿಳಿಸಿದ್ದೆ. ತಾವು ಡಾ. ಅಂಬೇಡ್ಕರ್ ಅವರಿಗೆ ಆಗಸ್ಟ್ ೧ರಂದು ಬರೆದ ಪತ್ರದ ಮೂರನೆಯ ಪ್ಯಾರಾದಲ್ಲಿ ಹೀಗೆ ವಿವರಿಸಿದ್ದಿರಿ 'ಮಹಾಪ್ರಭುಗಳ ಸರಕಾರವು ಪರಿಶಿಷ್ಟ ಜಾತಿಗಳನ್ನು ಒಂದು ಪ್ರಮುಖ ಅಲ್ಪಸಂಖ್ಯಾತ ಸಮುದಾಯವೆಂದು ಮತ್ತು ಅವರು ಅಲ್ಪಸಂಖ್ಯಾತ ಸಲಹಾ ಸಮಿತಿಯಲ್ಲಿ ಪ್ರತಿನಿಧಿಸಲ್ಪಡಬೇಕೆಂದು ಪರಿಗಣಿಸಿದ್ದರೂ, ಅದನ್ನು ಸಾರ್ವಜನಿಕವಾಗಿ ಘೋಷಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಕಾರಣಗಳೆಂದರೆ, ಅಂತಹ ಘೋಷಣೆಯು

ಅ) ಮಹಾಪ್ರಭುಗಳ ಸರಕಾರವು ಅಲ್ಪಸಂಖ್ಯಾತರೆಂದು ಪರಿಗಣಿಸುವ ಇತರ ಸಮುದಾಯಗಳವರನ್ನೂ ಇದರೊಂದಿಗೆ ನಿರ್ದಿಷ್ಟವಾಗಿ ಒಳಗೊಳ್ಳಬೇಕಾಗುತ್ತದೆ, ಮತ್ತು,

ಆ) ಸಂವಿಧಾನ ಸಭೆಯ ಕರ್ತವ್ಯ ನಿರ್ವಹಣಾ ಸ್ವಾತಂತ್ರ್ಯದಲ್ಲಿ ಮೂಗುತೂರಿಸಿದಂತೆ ಆಗುತ್ತದೆ ಎಂಬಂತೆ ಕಂಡುಬರಬಹುದು.

೩. ಸಲಹಾ ಸಮಿತಿಯ ಸಂಯೋಜನೆಯ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ನಾವು ಸಂವಿಧಾನ ಸಭೆಗೆ ಬಿಟ್ಟುಕೊಟ್ಟಿದ್ದೇವೆ. ಹಾಗಾಗಿ ನಾವು ಈಗ ಮಧ್ಯೆ ಪ್ರವೇಶಿಸುವುದು ಸಾಧ್ಯವಿಲ್ಲ. ಪರಿಸ್ಥಿತಿಯನ್ನು ವ್ಯಾಪಾರ ಮಂಡಲಿಯ ಅಧ್ಯಕ್ಷರು ತಮ್ಮ ಜುಲೈ ೧೮ರ ಭಾಷಣದಲ್ಲಿ ಸ್ಪಷ್ಟಪಡಿಸಿರುವುದರಿಂದ (ಇದಕ್ಕೆ ಸಂಬಂಧಿಸಿದ ಈ ಭಾಷಣದಲ್ಲಿನ ಭಾಗವನ್ನು ಸೆಪ್ಟೆಂಬರ್೩ರಂದು ತಮಗೆ ಕಳುಹಿಸಿದ ಪತ್ರದ ಸಂಗಡ (ಸಂ. ೨೫೦ – ಪುಟ ೫೧೫ನ್ನು ನೋಡಿ) ಕಳುಹಿಸಿಕೊಟ್ಟಿದ್ದೇನೆ) ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದೇವೆ ಎಂಬ ಆಪಾದನೆಗೆ ನಾವು ಗುರಿಯಾಗಬೇಕಿಲ್ಲ ಎಂಬುದು ನನ್ನ ಭಾವನೆ.

೪. ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯವನ್ನು ಹೊಂದಿರಬೇಕು ಎನ್ನುವ ವಿಷಯದಲ್ಲಿ ಪರಿಶಿಷ್ಟ ಜಾತಿಗಳವರನ್ನು ಅಲ್ಪಸಂಖ್ಯಾತರು ಎಂದು ಪರಿಗಣಿಸಲ್ಪಡಬೇಕೇ ಅಥವಾ ಅವರನ್ನು ಹಿಂದೂಸಮುದಾಯದ ಭಾಗವೆಂದು ಪರಿಗಣಿಸಬೇಕೆ ಎಂಬ ವಿವಾದಕ್ಕೆ ದೀರ್ಘ ಇತಿಹಾಸವಿದೆ. ಇವೆರಡರಲ್ಲಿ ಎರಡನೆಯ ದೃಷ್ಟಿಯನ್ನು ಪ್ರಚುರಗೊಳಿಸಲು ಗಾಂಧಿಯವರು ತಮ್ಮ ಜೀವನದ ಬಹುಭಾಗವನ್ನು ಕಳೆದಿದ್ದಾರೆ. ಆದರೆ ಸೆಪ್ಟೆಂಬರ್ ೩ರ ನನ್ನ ಟಿಪ್ಪಣಿಯಲ್ಲಿ ಕಾಂಗ್ರೆಸ್ ಪರಿಶಿಷ್ಟ ಜಾತಿಗಳನ್ನು ರಾಜಕೀಯ ಪ್ರಾತಿನಿಧ್ಯದ ದೃಷ್ಟಿಯಿಂದ ಅಲ್ಪಸಂಖ್ಯಾತರೆಂದು ಪರಿಗಣಿಸುವುದಿಲ್ಲ ಎಂದು ನಾನು ಹೇಳಿದಾಗ ನನ್ನ ಮನಸ್ಸಿನಲ್ಲಿ ಆಜ಼ಾದ್ ಅವರು ಜೂನ್ ೨೫ರಂದು (ಅಧಿಕಾರದಹಸ್ತಾಂತರ – ಸಂಪುಟ ೭, ಸಂ. ೬೦೩) ವೈಸ್‌ರಾಯ್ ಅವರಿಗೆ ಬರೆದ ಪತ್ರದ ಸಂಬಂಧಪಟ್ಟ ಭಾಗವೇ ಇತ್ತು. ತಮಗೆ ಬರೆದ ಪತ್ರದಲ್ಲಿ ಡಾ. ಅಂಬೇಡ್ಕರ್ ಅವರು ಇದನ್ನೇ ಕುರಿತು ಹೇಳಿದ್ದುದು(ಅಧಿಕಾರದ ಹಸ್ತಾಂತರ – ಸಂಖ್ಯೆ ೧೦೫ ಮತ್ತು ೧೪೨ರ ಅಡಿಟಿಪ್ಪಣಿಯನ್ನು ನೋಡಿ). ತಮ್ಮ ಈ ಪತ್ರದಲ್ಲಿ ಆಜ಼ಾದ್ ಅವರು 'ಪರಿಶಿಷ್ಟ ಜಾತಿಗಳು ಅಲ್ಪಸಂಖ್ಯಾತರು ಎನ್ನುವ ವಾದವನ್ನು ಕಾಂಗ್ರೆಸ್ ಖಂಡಿಸುತ್ತದೆ ಮತ್ತು ಅವರನ್ನು ಹಿಂದೂ ಸಮಾಜದ ಅವಿಭಾಜ್ಯ ಅಂಗವೆಂದು ಪರಿಗಣಿಸುತ್ತದೆ' ಎಂದು ಹೇಳಿದ್ದರು. ತಾತ್ಕಾಲಿಕ ಸರಕಾರದಲ್ಲಿ ಅಲ್ಪಸಂಖ್ಯಾತರ ಸ್ಥಾನಗಳಲ್ಲಿ ತೆರವಾಗಿರುವ ಯಾವುದೇ ಸ್ಥಾನಗಳನ್ನು ತುಂಬುವ ವಿಷಯದಲ್ಲಿ ತಾವು ಜಿನ್ನಾ ಅವರೊಡನೆ ಸಮಾಲೋಚಿಸುವುದಾಗಿ ಕೊಟ್ಟಿದ್ದ ಭರವಸೆಗೆ ಅಜ಼ಾದ್ ಅವರ ಹೇಳಿಕೆಯು ಸಂಬಂಧಿಸಿದೆ. ಪರಿಸ್ಥಿತಿಯು ಹೀಗೆ ಇರುವುದರಿಂದ ಪರಿಶಿಷ್ಟ ಜಾತಿಗಳವರ ಯೋಗಕ್ಷೇಮವು ತನ್ನ ಹೆಗಲಿನ ಮೇಲೆ ಇದೆ ಎಂದು ಕಾಂಗ್ರೆಸ್ ಹೇಳಿರುವುದು ಸಹಜವಾಗಿಯೇ ಇದೆ. ಮುಸ್ಲಿಂ ಲೀಗ್ ಪರಿಶಿಷ್ಟ ಜಾತಿಗಳವರ ಪ್ರತಿನಿಧಿಗಳನ್ನು ನೇಮಕವಾಡುವುದನ್ನು

ಕಾಂಗ್ರೆಸ್ ವಿರೋಧಿಸುತ್ತದೆ.

೫. ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳನ್ನು ಸಲಹಾ ಸಮಿತಿಯಲ್ಲಿ ನೇಮಿಸುವುದನ್ನು ಕಾಂಗ್ರೆಸ್ ಇಷ್ಟಪಡುವುದಿಲ್ಲ ಎಂದು ಯೋಚಿಸುವುದಕ್ಕೆ ಆಧಾರಪೂರ್ವಕ ಕಾರಣಗಳು ಇಲ್ಲ. ದೇಶದ ಒಳಗಾಗಲೀ, ಅಥವಾ ಅಂತಾರಾಷ್ಟ್ರೀಯ ಮಟ್ಟದಲ್ಲಾಗಲೀ, ತಾನು ಟೀಕೆಗಳಿಗೆ ಗುರಿಯಾಗುವುದನ್ನು ತಪ್ಪಿಸಿಕೊಳ್ಳುವ ಕಳಕಳಿ ಅದಕ್ಕೆ ಇದೆ. ಪರಿಶಿಷ್ಟ ಜಾತಿಗಳು ಮುಸ್ಲಿಂ ಲೀಗಿನೊಂದಿಗೆ ಕೈಜೋಡಿಸುವುದನ್ನು ತಪ್ಪಿಸಲಿಕ್ಕಾದರೂ ಅವರನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಅಥವಾ ಅವರೊಂದಿಗೆ ಸ್ನೇಹದಿಂದಿರಲು ಕಾಂಗ್ರೆಸ್ ಪಕ್ಷದವರು ಕಾತುರರಾಗಿದ್ದಾರೆ. ಅಲ್ಪಸಂಖ್ಯಾತರನ್ನೂ ಒಳಗೊಂಡಂತೆ ಎಲ್ಲಾ ನಾಗರಿಕರ ಹಕ್ಕುಗಳ ವಿಷಯವನ್ನು ಸಮಿತಿಯು ನೋಡಿಕೊಳ್ಳುವುದರಿಂದ, ಪರಿಶಿಷ್ಟ ಜಾತಿಗಳವರ ಪ್ರತಿನಿಧಿಗಳನ್ನು ಸಮಿತಿಯಲ್ಲಿ ಸೇರಿಸಿಕೊಳ್ಳುವುದು ಪರಿಶಿಷ್ಟ ಜಾತಿಗಳವರು ಅಲ್ಪಸಂಖ್ಯಾತರು ಅಥವಾ ಅಲ್ಲ ಎಂಬ ಪ್ರಶ್ನೆಯನ್ನು ಅನೂರ್ಜಿತಗೊಳಿಸುವುದಿಲ್ಲ. ಅಲ್ಲದೆ, ಕಾಂಗ್ರೆಸ್ಸನ್ನು ವಿರೋಧಿಸುವ ಡಾ. ಅಂಬೇಡ್ಕರ್ ಅವರು ಅಥವಾ ಪರಿಶಿಷ್ಟ ಜಾತಿಯ ಬೇರೆ ಯಾವುದೇ ಸದಸ್ಯರು ಸಮಿತಿಯಲ್ಲಿ ಸ್ಥಾನವನ್ನು ಪಡೆಯಬಲ್ಲರು ಎಂಬುದಕ್ಕೆ ಭರವಸೆಯಿಲ್ಲ.

೬. ಮಿಷನ್ನಿನ ಮೇ ೧೬ರ ಹೇಳಿಕೆಯ ೨೦ನೆಯ ಪ್ಯಾರಾದ ಅಡಿಯಲ್ಲಿಯೇ ಪರಿಶಿಷ್ಟ ಜಾತಿಗಳು ಅಲ್ಪಸಂಖ್ಯಾತರ ಅರ್ಥವ್ಯಾಪ್ತಿಯಲ್ಲಿ ಬರುತ್ತವೆಂದು, ಡಾ. ಅಂಬೇಡ್ಕರ್ ಅವರು ಕೋರಿರುವ ಹಾಗೆ, ಸಾರ್ವಜನಿಕವಾಗಿ ಘೋಷಣೆಯನ್ನು ಮಾಡಲು ಮುಂದಾಗಬಾರದು ಎಂಬ ಅಭಿಪ್ರಾಯವನ್ನು ನಾನು ಇನ್ನೂ ಹೊಂದಿದ್ದೇನೆ. ಹಾಗೆ ಮಾಡುವುದು ಗಾಂಧಿಯವರೊಂದಿಗೆ ವಿವಾದಕ್ಕೆ ಕಾರಣವಾಗಿ, ಮತ್ತೊಂದು ಪ್ರತಿಭಟನೆಯನ್ನು ಹುಟ್ಟುಹಾಕುತ್ತದೆ. ಪರಿಶಿಷ್ಟ ಜಾತಿಯವರು ಅಲ್ಪಸಂಖ್ಯಾತರು ಎಂಬುದನ್ನು ನಾವು ಮುಕ್ತವಾಗಿ ಹೇಳದೆ, ಅವರನ್ನು ಸಮಿತಿಯು ಒಳಗೊಳ್ಳಬೇಕು ಎಂದು ಹೇಳಿದರೆ, ಅಂತಹ ಹೇಳಿಕೆಯು ಆಂಗ್ಲೋ–ಇಂಡಿಯನ್ನರು ಮತ್ತಿತರರೂ ತಮ್ಮನ್ನೂ ಸಮಿತಿಗೆ ಸೇರಿಸುವಂತೆ ನಮ್ಮನ್ನು ಒತ್ತಾಯಿಸಲು ಅವಕಾಶವನ್ನು ಉಂಟುಮಾಡಬಹುದು. ನಾವು ಸಮಿತಿಗೆ ಸಲಹೆಗಳನ್ನು ನೀಡುತ್ತಾ ಹೋದರೆ, ಅದರ ಕರ್ತವ್ಯದಲ್ಲಿ ಮಧ್ಯಪ್ರವೇಶಿಸಬಾರದೆಂದು ನಮ್ಮನ್ನು ನಾವೇ ಸಂಯಮಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ, ನಾವು ಹಾಗೆಯೇ ಮಾಡುತ್ತಿದ್ದೇವೆ ಎಂಬ ಟೀಕೆಯನ್ನು ನಾವು ಎದುರಿಸಬೇಕಾಗಿ ಬರುತ್ತದೆ. ಒಂದುವೇಳೆ ನಾವು ಸಾರ್ವಜನಿಕವಾಗಿ ಈ ಹೇಳಿಕೆಯನ್ನು ಘೋಷಿಸಿದರೆ, ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಯವರೊಡನೆ ಈಗ ವರ್ತಿಸುತ್ತಿರುವುದಕ್ಕಿಂತ ಉತ್ತಮವಾಗಿ ವರ್ತಿಸುವರೆಂಬ ಸಾಧ್ಯತೆಯು ಇಲ್ಲ. ಅಲ್ಲದೆ ಪರಿಶಿಷ್ಟಜಾತಿಗಳು ಕಾಂಗ್ರೆಸ್ಸಿಗೆ ಬೆಂಬಲ ನೀಡಲಿ ಅಥವಾ ನೀಡದಿರಲಿ, ನಾವು ಮಾಡುವ ಅಂತಹ ಘೋಷಣೆಯು ಪರಿಶಿಷ್ಟ ಜಾತಿಗಳವರಿಗೆ ಮಾತ್ರ ಸಂಬಂಧಿಸಿರುವುದರಿಂದ, ಅದರಿಂದ ಡಾ. ಅಂಬೇಡ್ಕರ್ ಅವರಿಗೆ ಯಾವ ಸಹಾಯವೂ ದೊರಕುವುದಿಲ್ಲ.

**ಪೆಥಿಕ್ ಲಾರೆನ್ಸ್**

(ಈ ಟಿಪ್ಪಣಿಯ ಮೇಲೆ, 'ಕ್ರಮತೆಗೆದುಕೊಳ್ಳುವ ಅಗತ್ಯವಿಲ್ಲ' ಎಂದು ಅಟ್ಲಿಯವರು ಬರೆದಿದ್ದರು – ಅಟ್ಲಿಯವರ ಪತ್ರಗಳು, ಆಕ್ಸ್‌ಫೋರ್ಡ್ ವಿಶ್ವವಿದ್ಯಾನಿಲಯದ ಕಾಲೇಜ್)

# ೨೧. ಕ್ಯಾಬಿನೆಟ್ ಮಿಷನ್ ಮತ್ತು ಅಸ್ಪೃಶ್ಯರು
## ಅಸ್ಪೃಶ್ಯರನ್ನು ಕ್ಯಾಬಿನೆಟ್ ಮಿಷನ್ ಹೇಗೆ ನಿರ್ಲಕ್ಷಿಸಿತು?

ಕರಾಚಿ, ೧೯೪೬ರ ಅಕ್ಟೋಬರ್ ೧೪

ಪರಿಶಿಷ್ಟ ಜಾತಿಗಳ ಮುಖಂಡರೂ, ವೈಸ್‌ರಾಯ್ ಅವರ ಕಾರ್ಯಾಂಗದ ಮಾಜಿ ಸದಸ್ಯರೂ ಆದ ಡಾ. ಬಿ.ಆರ್. ಅಂಬೇಡ್ಕರ್ ಅವರು ಬಾಂಬೆಯಿಂದ ಲಂಡನ್ನಿಗೆ ಹೋಗುವ ಮಾರ್ಗದಲ್ಲಿ, ಕರಾಚಿಗೆ ವಿಮಾನದಲ್ಲಿ ಬಂದಿಳಿದರು.

ತಾವು ರಾಜಕೀಯ ಉದ್ದೇಶದಿಂದ ಪ್ರಧಾನ ಮಂತ್ರಿ ಸಿ.ಆರ್. ಅಟ್ಲಿ ಹಾಗೂ ಚರ್ಚಿಲ್ ಅವರನ್ನು ಭೇಟಿಯಾಗಿ ಭಾರತದ ಸಂವಿಧಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಅವರೊಡನೆ ಚರ್ಚಿಸಲು ತೆರಳುತ್ತಿರುವುದಾಗಿ ಡಾ. ಅಂಬೇಡ್ಕರ್ ಅವರು ಹೇಳಿದರು. (ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ – ದ ಟೈಮ್ಸ್ ಆಫ್ ಇಂಡಿಯಾ, ೧೯೪೬ರ ಅಕ್ಟೋಬರ್ ೧೫).

ಈ ಮುಂದಿನ ಜ್ಞಾಪನಾ ಪತ್ರವನ್ನು ಸಿದ್ಧಪಡಿಸಿಕೊಂಡು ಅದನ್ನು ತಮ್ಮ ಸಂಗಡ ಡಾ. ಅಂಬೇಡ್ಕರ್ ಅವರು ತೆಗೆದುಕೊಂಡು ಹೋದರು – ಸಂಪಾದಕರು.

ಭಾರತದಲ್ಲಿನ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ತನ್ನ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಸಲಹೆಗಳನ್ನು ತನ್ನ ಮೇ ೧೦ರ ಹೇಳಿಕೆಯಲ್ಲಿ ಕ್ಯಾಬಿನೆಟ್ ಮಿಷನ್ ನಿರೂಪಿಸಿದೆ. ಅವರ ಸಲಹೆಗಳಲ್ಲಿರುವ ಅತ್ಯಂತ ಹೀನಾಯವಾದ ಮತ್ತು ದಿಗ್ಭ್ರಮೆಹಿಡಿಸುವ ಅಂಶವೆಂದರೆ ಅವರು ಭಾರತದ ಜನತೆಯ ಜೀವನದಲ್ಲಿ ಅಸ್ಪೃಶ್ಯರನ್ನು ಪ್ರತ್ಯೇಕವಾದ ಅಂಗವೆಂದು ಪರಿಗಣಿಸಲು ನಿರಾಕರಿಸಿರುವುದು. ಮಿಷನ್ ಅಸ್ಪೃಶ್ಯರನ್ನು ಎಷ್ಟರ ಮಟ್ಟಿಗೆ ನಿರ್ಲಕ್ಷಿಸಿದೆ ಎಂದರೆ, ತನ್ನ ಸುದೀರ್ಘವಾದ ಹೇಳಿಕೆಯಲ್ಲಿ ಅವರ ಬಗ್ಗೆ ಒಂದೇ ಒಂದು ಹೇಳಿಕೆಯನ್ನೂ ಸೇರಿಸಿಲ್ಲ. ಅಸ್ಪೃಶ್ಯರನ್ನು ನಿರ್ಲಕ್ಷಿಸಿರುವ ಪರಿಯು ಹೀಗಿದೆ –

ಅ) ಸಿಕ್ಖರಿಗೆ ಮತ್ತು ಮುಸ್ಲಿಮರಿಗೆ ತಮ್ಮ ಪ್ರತಿನಿಧಿಗಳನ್ನು ಕೇಂದ್ರ ಕಾರ್ಯಾಂಗದಲ್ಲಿ ನೇಮಿಸುವ ಅವಕಾಶವನ್ನು ಕಲ್ಪಿಸಿ, ಅದೇ ಅವಕಾಶದಿಂದ ಅಸ್ಪೃಶ್ಯರನ್ನು ವಂಚಿತರನ್ನಾಗಿ ಮಾಡಲಾಗಿದೆ. ಪ್ರಸಕ್ತ ಇರುವ ತಾತ್ಕಾಲಿಕ ಸರಕಾರದಲ್ಲಿ ಪರಿಶಿಷ್ಟ ಜಾತಿಯ ಇಬ್ಬರು ಪ್ರತಿನಿಧಿಗಳಿದ್ದು, ಅವರು ಪರಿಶಿಷ್ಟ ಜಾತಿಗಳಿಗೆ ಯಾವ ರೀತಿಯಲ್ಲಿಯೂ ನಿಷ್ಠೆಯನ್ನಾಗಲೀ, ಬದ್ಧತೆಯನ್ನಾಗಲೀ ಹೊಂದಿಲ್ಲ. ಅವರಲ್ಲಿ ಒಬ್ಬರು ಕಾಂಗ್ರೆಸ್ಸಿನಿಂದ ನಾಮಕರಣಮಾಡಲ್ಪಟ್ಟವರು ಮತ್ತು ಇನ್ನೊಬ್ಬರು ಮುಸ್ಲಿಂ ಲೀಗಿನಿಂದ ನೇಮಿಸಲ್ಪಟ್ಟವರು.

ಆ) ತಾತ್ಕಾಲಿಕ ಸರಕಾರದಲ್ಲಿ ಮುಸ್ಲಿಮರಿಗೆ ನೀಡಿರುವ ಹಾಗೆ, ಅಸ್ಪೃಶ್ಯರಿಗೆ ಪ್ರತಿನಿಧಿಗಳ ಹಕ್ಕಿನ ಪಾಲನ್ನು ನಿಗದಿಗೊಳಿಸಿಲ್ಲ. ೧೪ ಸದಸ್ಯರಿರುವ ಸಂಪುಟದಲ್ಲಿ ಪರಿಶಿಷ್ಟ ಜಾತಿಗಳ ಸದಸ್ಯರು ಕನಿಷ್ಠ ಇಬ್ಬರಾದರೂ ಇರಬೇಕು ಎಂದು ೧೯೪೫ರ ಸಿಮ್ಲಾ ಒಪ್ಪಂದದಲ್ಲಿ ಒಪ್ಪಿಕೊಳ್ಳಲಾಗಿತ್ತು. ೧೯೪೫ ಮತ್ತು ೧೯೪೬ರ ನಡುವೆ ಬಂದಿರುವ ಈ ಮುಖವಾಡಕ್ಕೆ ಕಾರಣಗಳೇನು ಎಂಬುದು ತಿಳಿದಿಲ್ಲ.

ಇ) ಸಂವಿಧಾನ ಸಭೆಯಲ್ಲಿ ಪ್ರತಿನಿಧಿಸಲು ಅವರಿಗೆ ಪ್ರತ್ಯೇಕವಾದ ಮತಕ್ಷೇತ್ರಗಳನ್ನು ಹೊಂದುವ ಹಕ್ಕನ್ನು ನೀಡಿಲ್ಲ. ಮಹಾಪ್ರಭುಗಳ ಸರಕಾರದ ನಿರ್ಣಯದಿಂದ ಕ್ಯಾಬಿನೆಟ್ ಮಿಷನ್ನಿನ ನಿರ್ಣಯವು ಹೇಗೆ ಭಿನ್ನವಾಗಿದೆ ಎಂಬುದನ್ನು ಇದು ತೋರಿಸುತ್ತದೆ.

೨. ಕ್ಯಾಬಿನೆಟ್ ಮಿಷನ್ನಿನ ನಿರ್ಣಯವು ಅಸ್ಪೃಶ್ಯರಿಗೆ ಗಂಭೀರವಾದ ಅನ್ಯಾಯವನ್ನಷ್ಟೇ ಮಾಡಿಲ್ಲ. ಜೊತೆಗೆ, ಅದು ಮಹಾಪ್ರಭುಗಳ ಸರಕಾರವು ಭಾರತದ ರಾಜಕೀಯದಲ್ಲಿ ಮತ್ತು ಅಸ್ಪೃಶ್ಯರ ವಿಷಯದಲ್ಲಿ ಇದುವರೆಗೆ ಅನುಸರಿಸುತ್ತಿದ್ದ ನೀತಿಗಳನ್ನು ಭಿನ್ನವಾದ ಮಾರ್ಗದಲ್ಲಿ ಹೋಗುವಂತೆ ಮಾಡಿದೆ.

ಅ) ೧೯೨೦ಕ್ಕೆ ಮೊದಲು ಸಾಂವಿಧಾನಿಕ ಬದಲಾವಣೆಗಳನ್ನು ಬ್ರಿಟಿಷ್ ಸರಕಾರವು ತನ್ನ ಅಧಿಕಾರದ ವ್ಯಾಪ್ತಿಯ ಒಳಗೇ ಮತ್ತು ತನ್ನ ಇಚ್ಛಾನುಸಾರವಾಗಿ ಮಾಡುತ್ತಿತ್ತು. ೧೯೨೦ರಲ್ಲಿ ಮೊದಲ ಬಾರಿಗೆ ಬ್ರಿಟಿಷ್ ಸರಕಾರವು ಭಾರತೀಯರೊಂದಿಗೆ ಚರ್ಚಿಸಿ ಭಾರತದ ಸಂವಿಧಾನವನ್ನು ರೂಪಿಸಲು ತೀರ್ಮಾನಿಸಿತು. ಇದರ ಪರಿಣಾಮವಾಗಿ ದುಂಡುಮೇಜಿನ ಸಮ್ಮೇಳನವನ್ನು ವ್ಯವಸ್ಥೆಗೊಳಿಸಿ, ಅದಕ್ಕೆ ಭಾರತೀಯರನ್ನು ಆಹ್ವಾನಿಸಲಾಯಿತು. ಕಾಂಗ್ರೆಸ್, ಮತ್ತು ಇತರ ಯಾವ ಪಕ್ಷಗಳಿಗೆ ಸೇರದೇ ಇರುವಂತಹ ಅಸ್ಪೃಶ್ಯರೂ ಆಹ್ವಾನಿತ ಭಾರತೀಯರ ಪಟ್ಟಿಯಲ್ಲಿ ಇದ್ದರು.

ಆ) ಕಾಂಗ್ರೆಸ್ಸಿನ ಪ್ರತಿನಿಧಿ ಶ್ರೀ ಗಾಂಧಿಯವರು ಅಸ್ಪೃಶ್ಯರು ರಾಜಕೀಯ ಜೀವನದಲ್ಲಿ ಒಂದು ಪ್ರತ್ಯೇಕ ಅಂಗವೆಂಬುದನ್ನು ಪ್ರಬಲವಾಗಿ ವಿರೋಧಿಸಿದರು ಮತ್ತು ಅವರು ಹಿಂದೂ ಸಮಾಜದ ಒಂದು ಅವಿಭಾಜ್ಯವಾಗಿರುವುದರಿಂದ ಅವರಿಗೆ ಪ್ರತ್ಯೇಕವಾದ ಪ್ರಾತಿನಿಧ್ಯವನ್ನು ನೀಡುವ ಅಗತ್ಯವಿಲ್ಲವೆಂದು ವಾದಿಸಿದರು. ಆದರೆ ಶ್ರೀ ಗಾಂಧಿಯವರ ಈ ವಾದವನ್ನು ತಳ್ಳಿಹಾಕಿದ ಬ್ರಿಟಿಷ್ ಸರಕಾರವು ಅಸ್ಪೃಶ್ಯರು ಭಾರತದ ರಾಷ್ಟ್ರೀಯ ಜೀವನದಲ್ಲಿ ಒಂದು ಪ್ರತ್ಯೇಕ ಅಂಗವೆಂದೂ, ಆದ್ದರಿಂದ ಮುಸ್ಲಿಮರಿಗೆ ಮತ್ತು ಭಾರತೀಯ ಕ್ರಿಶ್ಚಿಯನ್ನರಿಗೆ ಇರುವ ಸಂರಕ್ಷಣಾ ವಿಧಿಗಳು ಅವರಿಗೂ ಇರಬೇಕು ಎಂದೂ ತನ್ನ ನಿರ್ಣಯದಲ್ಲಿ ತಿಳಿಸಿತು.

ಇ) ಬ್ರಿಟಿಷ್ ಸರಕಾರವು ೧೯೪೫ರಲ್ಲಿ ನಡೆದ ಸಿಮ್ಲಾ ಸಮ್ಮೇಳನದವರೆಗೂ ಇದೇ ಸೂತ್ರಕ್ಕೆ ಅಂಟಿಕೊಂಡಿತ್ತು. ಈ ಸಮ್ಮೇಳನಕ್ಕೆ ಆಹ್ವಾನಿತರಾಗಿದ್ದ ಭಾರತೀಯರಲ್ಲಿ ಅಸ್ಪೃಶ್ಯರ ಪ್ರತಿನಿಧಿಯೊಬ್ಬರು ಸೇರಿದ್ದರು. ಕಾಂಗ್ರೆಸ್ ಅಥವಾ ಇತರ ಯಾವುದೇ ರಾಜಕೀಯ ಪಕ್ಷಗಳಿಗೆ ಸೇರದ ಈ ಪ್ರತಿನಿಧಿಯನ್ನು ಮತ್ತೆ ಪ್ರತ್ಯೇಕವಾಗಿ ಚರ್ಚೆಗೆ ಆಹ್ವಾನಿಸಲಾಗಿತ್ತು.

ಈ) ೧೯೪೨ರ ಕ್ರಿಪ್ಸ್ ಯೋಜನೆಯ ಭಾಗವಾಗಿದ್ದ ಸಂವಿಧಾನ ಸಭೆಯಲ್ಲಿ ಅಸ್ಪೃಶ್ಯರಿಗೆ ಪ್ರತ್ಯೇಕವಾದ ಪ್ರಾತಿನಿಧ್ಯವನ್ನು ಕೊಡಲು ಅಗತ್ಯವಾದ ಅವಕಾಶಗಳು ಇಲ್ಲ, ಆದ್ದರಿಂದ, ಕ್ಯಾಬಿನೆಟ್ ಮಿಷನ್ನಿನ ಈಗಿನ ಸಲಹೆಗಳು ಹಿಂದಿನ ಪದ್ಧತಿಗಳಿಂದ ಬೇರೆಯಾದ ಹೊಸ ಪದ್ಧತಿಯಲ್ಲ ಎಂದು ಹೇಳಲಾಗಿದೆ. ಆದರೆ ಅದಕ್ಕೆ ಉತ್ತರ 'ಅವರು ಹಾಗೆ ಮಾಡಿದ್ದಾರೆ'. ೧೯೪೨ರ ಕ್ರಿಪ್ಸ್ ಯೋಜನೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡದಿದ್ದದ್ದು ಅಸ್ಪೃಶ್ಯರಿಗೆ ಮಾತ್ರವಲ್ಲ. ಆದರೆ ಸಂವಿಧಾನ ಸಭೆಯನ್ನು ರಚಿಸಿದಾಗ, ಪ್ರತ್ಯೇಕ ಮಾನ್ಯತೆ ಮತ್ತು ಪ್ರತ್ಯೇಕ ಪ್ರಾತಿನಿಧ್ಯವನ್ನು ಮುಸ್ಲಿಮರಿಗೆ ಮತ್ತು ಸಿಕ್ಖರಿಗೆ ನೀಡಲಾಗಿದೆ, ಆದರೆ ಆ ಸವಲತ್ತನ್ನು ಪರಿಶಿಷ್ಟ ಜಾತಿಯವರಿಗೆ ನೀಡದೆ ಅವರನ್ನು ವಂಚಿಸಲಾಗಿದೆ. ಅಸ್ಪೃಶ್ಯರು ತಮ್ಮ ಅಸಮಾಧಾನವನ್ನು ಸೂಚಿಸುತ್ತಿರುವುದು ಈ ತಾರತಮ್ಯಕ್ಕಾಗಿ.

೩. ಅಸ್ಪೃಶ್ಯರನ್ನು ಭಾರತದ ರಾಷ್ಟ್ರೀಯ ಜೀವನದಲ್ಲಿ ಪ್ರತ್ಯೇಕ ಅಂಗವೆಂದು ಮಾನ್ಯಮಾಡದೆ, ಮುಸ್ಲಿಮರಿಗೆ ಮತ್ತು ಸಿಕ್ಖರಿಗೆ ನೀಡಿದ ಮಾನ್ಯತೆಯನ್ನು ಅಸ್ಪೃಶ್ಯರಿಗೆ ನೀಡದೆ, ಹಿಂದಿನಿಂದ ನಡೆದುಬಂದ ನೀತಿಯನ್ನು ಅನುಸರಿಸಿಲ್ಲ ಎಂಬುದರಲ್ಲಿ ಕ್ಯಾಬಿನೆಟ್ ಮಿಷನ್ ತನ್ನ ಶಿಫಾರಸ್ಸುಗಳಲ್ಲಿನ ತೋರಿರುವ ಅಸಮಾನತೆ ಎದ್ದುಕಾಣುವಂತಿದೆ.

**ಮಹಾಪ್ರಭುಗಳ ಸರಕಾರವು ಅಸ್ಪೃಶ್ಯರಿಗೆ ನೀಡಿದ ವಚನವನ್ನು ಕ್ಯಾಬಿನೆಟ್ ಮಿಷನ್ ಹೇಗೆ**

**ನಿಷ್ಕ್ರಿಯಗೊಳಿಸುತ್ತದೆ?**

೪. ಕ್ಯಾಬಿನೆಟ್ ಮಿಷನ್ ಅಸ್ಪೃಶ್ಯರನ್ನು ಪ್ರತ್ಯೇಕ ಅಂಗವೆಂದು ಪರಿಗಣಿಸದೆ ಇರುವುದು, ಬ್ರಿಟಿಷ್ ಸರಕಾರವು ಮತ್ತು ಅದರ ಪರವಾಗಿ ಅಸ್ಪೃಶ್ಯರಿಗೆ ನೀಡಿದ್ದ ವಚನಕ್ಕೆ ವಿರೋಧವಾಗಿದೆ. ಕೆಳಗಿನವು ಕೆಲವು ಮುಖ್ಯ ವಚನಗಳು:

(೧)

"ಭಾರತದ ಐಕ್ಯದ ದೃಷ್ಟಿಯಿಂದ, ಭಾರತದ ಸಂಸ್ಥಾನಗಳನ್ನು ಸಂವಿಧಾನದ ಯಾವುದೇ ಯೋಜನೆಯಲ್ಲಿ ಒಳಗೊಳ್ಳುವಂತೆ ಮಾಡಲೇಬೇಕಾಗಿರುವುದು ಅತ್ಯಂತ ಆವಶ್ಯಕ ಎಂಬುದನ್ನು ನಾವು ಮರೆಯಬಾರದು.

ಮುಸ್ಲಿಂ ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿಯವರು – ಮಹತ್ವದ ಈ ಎರಡು ಅಲ್ಪಸಂಖ್ಯಾತ ಸಮುದಾಯಗಳಿಗೆ ಹಿಂದೆ ಕೆಲವೊಂದು ಭರವಸೆಗಳನ್ನು ನೀಡಲಾಗಿತ್ತು ಎಂಬುದನ್ನು ನಾನು ಇಲ್ಲಿ ಹೇಳಬೇಕು. ಅದರ ಪ್ರಕಾರ ಅವರ ಸ್ಥಾನಮಾನಗಳನ್ನು ರಕ್ಷಿಸಬೇಕು ಮತ್ತು ಅವರಿಗೆ ನೀಡಿರುವ ವಚನಗಳನ್ನು ಪಾಲಿಸಲೇಬೇಕು."

*ಬಾಂಬೆಯ ಓರಿಯಂಟ್ ಕ್ಲಬ್‌ನಲ್ಲಿ ಲಾರ್ಡ್ ಲಿಂಗ್‌ಲಿಥ್‌ಗೋ ಅವರು ಮಾಡಿದ ಭಾಷಣದಿಂದ ಉದ್ಧೃತ*

(೨)

"ಈ ಎರಡು ಮುಖ್ಯ ವಿಷಯಗಳು ವ್ಯಕ್ತವಾಗಿವೆ. ಈ ಎರಡು ವಿಷಯಗಳಲ್ಲಿ ತಮ್ಮ ನಿಲುವನ್ನು ನಾನು ಸ್ಪಷ್ಟಪಡಿಸುವಂತೆ ಮಹಾಪ್ರಭುಗಳ ಸರಕಾರವು ಇಚ್ಛಿಸಿದೆ. ಇವುಗಳಲ್ಲಿ ಮೊದಲನೆಯದು, ಭಾವೀ ಸಂವಿಧಾನದ ಯೋಜನೆಯಲ್ಲಿ ಅಲ್ಪಸಂಖ್ಯಾತರ ಸ್ಥಾನಮಾನಗಳನ್ನು ಕುರಿತದ್ದು. ಭಾರತದ ರಾಷ್ಟ್ರೀಯ ಜೀವನದಲ್ಲಿ ಪ್ರಬಲವಾದ ಕೆಲವು ಅಂಗಗಳು ಒಪ್ಪಲು ನಿರಾಕರಿಸುವಂತಹ ಯಾವುದೇ ಸರಕಾರದ ವ್ಯವಸ್ಥೆಗೆ ಭಾರತದ ಶಾಂತಿ ಮತ್ತು ಕಲ್ಯಾಣದ ಬಗೆಗೆ ತಮಗಿರುವ ಹೊಣೆಗಾರಿಕೆಯನ್ನು, ಮಹಾಪ್ರಭುಗಳ ಸರಕಾರವು ನೀಡಲು ಸಿದ್ಧವಿಲ್ಲ ಎಂಬುದನ್ನು ಹೇಳಬೇಕಾಗಿಲ್ಲ. ಅಲ್ಲದೆ, ಮುಂಬರುವ ಸರಕಾರವು, ಮೇಲೆ ಹೇಳಿದ ಪ್ರಬಲ ಅಂಗಗಳನ್ನು ತಮ್ಮ ಅನುಕೂಲವನ್ನು ಸಾಧಿಸಿಕೊಳ್ಳಲು ಬಲಪ್ರಯೋಗ, ಒತ್ತಾಯ ಮೊದಲಾದವುಗಳನ್ನು ಮಾಡುವಂತಹ ಸನ್ನಿವೇಶಕ್ಕೆ ತಾವು ಸಹಭಾಗಿಗಳಾಗಲೂ ಮಹಾಪ್ರಭುಗಳ ಸರಕಾರವು ಇಚ್ಛಿಸುವುದಿಲ್ಲ.'

*ಲಾರ್ಡ್ ಲಿಂಗ್‌ಲಿಥ್‌ಗೋ ಅವರು ೧೯೪೦ರ ಆಗಸ್ಟ್ ೮ರಂದು ನೀಡಿದ ಹೇಳಿಕೆಗಳಿಂದ ಉದ್ಧೃತ*

(೩)

ಕಾಂಗ್ರೆಸ್ ಮುಖಂಡರು ಒಂದು ಅದ್ಭುತವಾದ ಸಂಸ್ಥೆಯನ್ನು, ರಾಜಕೀಯ ವ್ಯವಸ್ಥೆಯನ್ನು ಭಾರತದಲ್ಲಿ ಕಟ್ಟಿದ್ದಾರೆ. ಅದು ಯಶಸ್ವಿಯಾಗಿದ್ದಿದ್ದರೆ ಉತ್ತಮವಾಗಿರುತ್ತಿತ್ತು. ತಾವು ಹೇಳಿಕೊಳ್ಳುವ ಹಾಗೆ, ಕಾಂಗ್ರೆಸ್ಸಿನವರು ಭಾರತದ ಎಲ್ಲಾ ಪ್ರಮುಖ ಅಂಗಗಳ ಪರವಾಗಿ ಮಾತನಾಡಿದ್ದಿದ್ದರೆ, ಅವರ ಬೇಡಿಕೆಗಳು ಏನೇ ಆಗಿದ್ದರೂ, ನಮ್ಮ ಮುಂದಿರುವ ಈಗಿನ ಸಮಸ್ಯೆಗಳು ಈಗಿರುವುದಕ್ಕಿಂತ ಹಲವು ರೀತಿಗಳಲ್ಲಿ ಹಗುರವಾಗಿರುತ್ತಿದ್ದವು. ಅವರ ಪಕ್ಷವು ಸಂಖ್ಯೆಯ ದೃಷ್ಟಿಯಿಂದ ಭಾರತದಲ್ಲಿನ ಅತಿ ದೊಡ್ಡ ಪಕ್ಷವೆಂಬುದು ನಿಜ. ಆದರೆ ಈ ದೃಷ್ಟಿಯಿಂದ ತಾವು ಇಡೀ ಭಾರತದ ಜನತೆಯ ಪರವಾಗಿ ಮಾತನಾಡಬಲ್ಲವರೆಂದು ಅವರು

ಹೇಳಿಕೊಳ್ಳುವುದನ್ನು, ಭಾರತದ ಸಂಕೀರ್ಣ ರಾಷ್ಟ್ರೀಯ ಜೀವನದಲ್ಲಿನ ಪ್ರಮುಖ ಅಂಗಗಳು ಅಲ್ಲಗಳೆಯುತ್ತವೆ. ಈ ಅಂಗಗಳು ತಮ್ಮನ್ನು ಸಂಖ್ಯಾದೃಷ್ಟಿಯಿಂದ ಅಲ್ಪಸಂಖ್ಯಾತರೆಂದು ಮಾನ್ಯಮಾಡಬೇಕೆಂದಷ್ಟೇ ಅಲ್ಲದೆ ಮುಂದಿನ ಭಾರತೀಯ ನೀತಿಗಳಲ್ಲಿ ಪ್ರತ್ಯೇಕ ಸಾಂವಿಧಾನಿಕ ಘಟಕಗಳೆಂದು ಪರಿಗಣಿಸಬೇಕೆಂದೂ ಒತ್ತಿ ಹೇಳುತ್ತವೆ. ಈ ಅಂಗಗಳಲ್ಲಿ ಪ್ರಮುಖವಾದುದು ಪ್ರಬಲವಾದ ಮುಸ್ಲಿಂ ಸಮುದಾಯ. ಭೌಗೋಳಿಕ ಮತಕ್ಷೇತ್ರಗಳ ಬಹುಸಂಖ್ಯಾತ ಪ್ರತಿನಿಧಿಗಳಿಂದ ಕೂಡಿರುವ ಸಂವಿಧಾನಸಭೆಯು ರಚಿಸುವ ಸಂವಿಧಾನಕ್ಕೂ ತಮಗೂ ಯಾವುದೇ ಸಂಬಂಧವಿಲ್ಲವೆಂದು ಅವರು ಹೇಳುತ್ತಾರೆ. ಯಾವುದೇ ಸಾಂವಿಧಾನಿಕ ಚರ್ಚೆಗಳಲ್ಲಿ ಸಾಂಖ್ಯಿಕ ಬಹುಮತದ ವಿರುದ್ಧ ಪ್ರತ್ಯೇಕ ಘಟಕವಾಗಿರಬೇಕಾದ ತಮ್ಮ ಹಕ್ಕಿಗಾಗಿ ಒತ್ತಾಯಪಡಿಸುತ್ತಾರೆ. ಇದು ಪರಿಶಿಷ್ಟ ಜಾತಿಗಳವರು ಎಂದು ಕರೆಯಲ್ಪಡುವ ಮತ್ತೊಂದು ಪ್ರಬಲ ಅಂಗಕ್ಕೂ ಅನ್ವಯವಾಗುತ್ತದೆ. ಶ್ರೀ ಗಾಂಧಿಯವರು ತಮ್ಮ ಪರವಾಗಿ ಮಾಡುತ್ತಿರುವ ಶ್ರದ್ಧಾಪೂರ್ವಕ ಪ್ರಯತ್ನಗಳ ಹೊರತಾಗಿಯೂ ಈ ಜಾತಿಗಳವರು ತಮ್ಮನ್ನು ಹಿಂದೂ ಸಮುದಾಯದ ಹೊರಗಿರುವ ಸ್ವತಂತ್ರ ಸಮುದಾಯವೆಂದು ಪರಿಗಣಿಸಬೇಕೆಂದು ಇಚ್ಛಿಸುತ್ತಾರೆ."

*೧೯೪೦ರ ಆಗಸ್ಟ್ ೧೪ರಂದು ಸೆಕ್ರೆಟರಿ ಆಫ್ ಸ್ಟೇಟ್ ರೈಟ್ ಆನರಬಲ್ ಎಲ್. ಎಸ್. ಅಮೆರಿಯವರು ಸಂಸತ್ತಿನ ಕೆಳಮನೆಲ್ಲಿ ಮಾಡಿದ ಭಾಷಣದ ಉದ್ಧೃತಭಾಗ*

(೪)

ಎಲ್ಲಾ ಕಾರಣಗಳನ್ನೂ ವಿವರವಾಗಿ ಮತ್ತೆ ಜ್ಞಾಪಿಸಲು ಹೋಗದೆ, ಮಹಾಪ್ರಭುಗಳ ಸರಕಾರವು ಆ ಸಮಯದಲ್ಲಿ ಕೆಳಕಂಡ ಸ್ಪಷ್ಟನೆಗಳನ್ನು ಮಾಡಿತು ಎಂಬುದನ್ನು ನಾನು ತಮಗೆ ಜ್ಞಾಪಿಸಬೇಕು –

ಅ) ಬೇಷರತ್ತಾಗಿ ತಾವು ನೀಡಬೇಕೆಂದಿದ್ದ ಸ್ವಾತಂತ್ರ್ಯದ ನೀಡಿಕೆಯ ಪ್ರಸ್ತಾಪವನ್ನು ಪ್ರತಿಭಟನೆಗಳ ನಂತರ ಮಾರ್ಪಡಿಸಿ ಭಾರತದ ರಾಷ್ಟ್ರೀಯ ಜೀವನದಲ್ಲಿನ ಪ್ರಮುಖ ಅಂಗಗಳ ಅನುಮತಿಯನ್ನು ಪಡೆದು ಸಂವಿಧಾನವನ್ನು ರಚಿಸಬೇಕು ಮತ್ತು ಮಹಾಪ್ರಭುಗಳ ಸರಕಾರದೊಡನೆ ಸೂಕ್ತ ಒಪ್ಪಂದಗಳನ್ನು ಮಾಡಿಕೊಳ್ಳಬೇಕು ಎಂದು ಷರತ್ತುಬದ್ಧವಾಗಿಸಲಾಯಿತು.

ಆ) ನೀವು ಸಲಹೆಮಾಡಿರುವಂತೆ ಕೇಂದ್ರೀಯ ಸಭೆಗೆ ಹೊಣೆಯಾಗಿರುವಂತಹ ರಾಷ್ಟ್ರೀಯ ಸರಕಾರವನ್ನು ರಚಿಸಲು ಏಕಮಾತ್ರ ಸಾಧನವಾಗಿರುವ ಸಂವಿಧಾನವನ್ನು ಆಗಮಾಡಿಸುವುದು ಈ ಪ್ರತಿಕೂಲ ಪರಿಸ್ಥಿತಿಯಿರುವ ಸಮಯದಲ್ಲಿ ಸಾಧ್ಯವಿಲ್ಲ.

ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ, ದಲಿತವರ್ಗಗಳ ಹಿತರಕ್ಷಣೆಯನ್ನು ಮಾಡುವ ಹಾಗೂ ಭಾರತೀಯ ಸಂಸ್ಥಾನಗಳೊಡನೆ ಮಾಡಿಕೊಂಡಿರುವ ಒಪ್ಪಂದಗಳ ಕರಾರುಗಳನ್ನು ನಡೆಸಿಕೊಡುವ ತಮ್ಮ ಕರ್ತವ್ಯವನ್ನು ಪೂರೈಸುವುದು ಈ ಷರತ್ತುಗಳ ಉದ್ದೇಶ.

*೧೯೪೪ರ ಆಗಸ್ಟ್ ೧೫ರಂದು ಲಾರ್ಡ್ ವೇವೆಲ್ ಅವರು ಶ್ರೀ ಗಾಂಧಿಯವರಿಗೆ ಬರೆದ ಪತ್ರದಿಂದ ಉದ್ಧೃತ*

೫. ಕ್ಯಾಬಿನೆಟ್ ಮಿಷನ್ ಅಸ್ಪೃಶ್ಯರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನಿರಾಕರಿಸಿರುವುದು ಸಂಬಂಧಪಟ್ಟ ಎಲ್ಲಾ ಅಂಶಗಳನ್ನೂ ಪ್ರಾಮಾಣಿಕವಾಗಿ ವಿಶ್ಲೇಷಿಸಿದ ನಂತರ ಸ್ವಂತ ವಿವೇಚನೆಯಿಂದ ತೆಗೆದುಕೊಂಡ ನಿರ್ಧಾರವಲ್ಲ. ಬದಲಿಗೆ, ಶ್ರೀ ಗಾಂಧಿಯವರ ಪೂರ್ವಗ್ರಹಗಳನ್ನು ಪೂರೈಸಿ ಅವರನ್ನು ಓಲೈಸುವಂತಹ ಕೆಲಸವನ್ನಷ್ಟೇ ಮಿಷನ್ ಮಾಡಿರುವುದು. ಭಾರತದ ರಾಷ್ಟ್ರೀಯ ಜೀವನದಲ್ಲಿ ಅಸ್ಪೃಶ್ಯರಿಗೆ ಅವರು ಪ್ರತ್ಯೇಕವಾದ ಅಂಗವೆಂಬ ಮಾನ್ಯತೆಗೆ ಶ್ರೀ ಗಾಂಧಿಯವರು ಪ್ರಬಲವಾಗಿ ಪ್ರತಿರೋಧವನ್ನು ಒಡ್ಡುತ್ತಲೇ ಇದ್ದಾರೆ.

ಇಂತಹ ಮಾನ್ಯತೆಯನ್ನು ನೀಡುವುದನ್ನು ದುಂಡುಮೇಜಿನ ಸಮ್ಮೇಳನದಲ್ಲಿ ಅವರು ವಿರೋಧಿಸಿದರು. ತಮ್ಮ ವಿರೋಧವನ್ನು ಲೆಕ್ಕಿಸದೇ, ರಾಮ್ಸೇ ಮ್ಯಾಕ್ಡೊನಾಲ್ಡ್ ಅವರ ನಿರ್ಣಯದಂತೆ ಪರಿಶಿಷ್ಟ ಜಾತಿಯವರನ್ನು ಪ್ರತ್ಯೇಕ ಅಂಗವೆಂದು ಮಾನ್ಯಮಾಡಿದಾಗ, ಈ ನಿರ್ಣಯವನ್ನು ಹಿಂತೆಗೆದುಕೊಳ್ಳದಿದ್ದರೆ ಶ್ರೀ ಗಾಂಧಿಯವರು ತಾವು ಆಮರಣಾಂತ ಉಪವಾಸವನ್ನು ಕೈಗೊಳ್ಳುವುದಾಗಿ ಹೆದರಿಸಿದರು. ೧೯೪೫ರಲ್ಲಿ, ಪ್ರಥಮ ಸಿಮ್ಲಾ ಸಮ್ಮೇಳನದಲ್ಲಿ ಅಸ್ಪೃಶ್ಯರಿಗೆ ಅವರು ಪ್ರತ್ಯೇಕ ಅಂಗವೆಂಬ ಮಾನ್ಯತೆಯನ್ನು ಮಹಾಪ್ರಭುಗಳ ಸರಕಾರವು ನೀಡಿದಾಗ ಶ್ರೀ ಗಾಂಧಿಯವರು ತಮ್ಮ ವಿರೋಧವನ್ನು ಮತ್ತೆ ಮುಂದುವರೆಸಿದರು. ಕ್ಯಾಬಿನೆಟ್ ಮಿಷನ್ ತನ್ನ ಉದ್ದೇಶಿತ ಸಲಹೆಗಳ ಯಶಸ್ಸಿನ ಬಗ್ಗೆ ಅತಿಯಾದ ಕಾಳಜಿಯನ್ನು ಹೊಂದಿದ್ದರು. ಆದರೆ ಅದು ಶ್ರೀ ಗಾಂಧಿಯವರ ಒಪ್ಪಿಗೆಯಿಲ್ಲದೆ ಸಾಧ್ಯವಿರಲಿಲ್ಲ. ಅದಕ್ಕಾಗಿ ಶ್ರೀ ಗಾಂಧಿಯವರು ಒತ್ತಾಯಮಾಡಿದ ಬೆಲೆಯನ್ನು ಮಿಷನ್ ನೀಡಬೇಕಾಗಿ ಬಂದಿತು. ಆ ಬೆಲೆಯೆಂದರೆ, ಅಸ್ಪೃಶ್ಯರಿಗೆ ನೀಡಬೇಕಾಗಿದ್ದ ಪ್ರತ್ಯೇಕ ರಾಜಕೀಯ ಅಸ್ತಿತ್ವದ ಮಾನ್ಯತೆಯನ್ನು ಬಲಿಕೊಡುವುದು. ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ಅಲ್ಪಸಂಖ್ಯಾತರ ಸಂಬಂಧವಾಗಿ ಕ್ಯಾಬಿನೆಟ್ ಮಿಷನ್ನಿನ ಸಲಹೆಗಳು ಶ್ರೀ ಗಾಂಧಿಯವರು ಎರಡನೆಯ ದುಂಡುಮೇಜಿನ ಸಮ್ಮೇಳನದಲ್ಲಿ ಮತ್ತೆ ಪ್ರಕಟಿಸಿದ್ದ ಸೂತ್ರಗಳನ್ನೇ ಪ್ರತಿಬಿಂಬಿಸುತ್ತಿವೆ. ಶ್ರೀ ಗಾಂಧಿಯವರು, ರಾಜಕೀಯ ಉದ್ದೇಶಕ್ಕಾಗಿ ೧) ಹಿಂದೂಗಳು, ೨) ಮುಸ್ಲಿಮರು, ಮತ್ತು ೩) ಸಿಕ್ಖರು ಎಂಬ ಮೂರು ಸಮುದಾಯಗಳನ್ನು ಮಾತ್ರ ತಾವು ಮಾನ್ಯಮಾಡುವುದಾಗಿ ಹೇಳಿದರು. ಮಿಷನ್ ತನ್ನ ಶಿಫಾರಸ್ಸುಗಳಲ್ಲಿ ಅದನ್ನೇ ಯಥಾವತ್ತಾಗಿ ಭಟ್ಟಿಯಿಳಿಸಿದೆ. ಇದಕ್ಕೆ ಇನ್ನಾವ ವಿವರಣೆಯೂ ಅಗತ್ಯವಿಲ್ಲ.

## ೩

## ತನ್ನ ನಿರ್ಣಯವನ್ನು ಸಮರ್ಥಿಸಿಕೊಳ್ಳಲು ಕ್ಯಾಬಿನೆಟ್ ಮಿಷನ್ ನೀಡಿದ ಆಧಾರಗಳು

೬. ಅಸ್ಪೃಶ್ಯರನ್ನು ಪ್ರತ್ಯೇಕ ರಾಜಕೀಯ ಘಟಕವೆಂದು ಪರಿಗಣಿಸದಿರುವ ತನ್ನ ನಿರ್ಧಾರವನ್ನು ಕ್ಯಾಬಿನೆಟ್ ಮಿಷನ್ ೧೯೪೮ರ ಫೆಬ್ರವರಿಯಲ್ಲಿ ಪ್ರಾಂತೀಯ ಶಾಸನಸಭೆಗಳಿಗೆ ನಡೆದ ಚುನಾವಣೆಯ ಫಲಿತಾಂಶಗಳ ಮೇಲೆ ಸಮರ್ಥಿಸಿಕೊಂಡಿದೆ. ೧೯೪೬ರ ಜುಲೈ ೧೮ರಂದು ಸಂಸತ್ತಿನಲ್ಲಿ ನಡೆದ ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳ ಮೇಲಿನ ಚರ್ಚೆಯಲ್ಲಿ, ಮಿಷನ್ನಿನ ಸದಸ್ಯರು ಈ ಮುಂದಿನ ಅಂಶಗಳನ್ನು ಸದನದ ಗಮನಕ್ಕೆ ತರಲು ಪ್ರಯತ್ನಿಸಿದರು –

ಅ) ಚುನಾವಣೆಯಲ್ಲಿ ಅಸ್ಪೃಶ್ಯರಿಗೆ ಮೀಸಲಿಟ್ಟಿದ್ದ ಎಲ್ಲಾ ಸ್ಥಾನಗಳನ್ನೂ ಕಾಂಗ್ರೆಸ್ ಪಕ್ಷವೇ ಗಳಿಸಿಕೊಂಡಿದೆ, ಆದ್ದರಿಂದ ಕಾಂಗ್ರೆಸ್ ಪಕ್ಷವೇ ಅಸ್ಪೃಶ್ಯರನ್ನು ಪ್ರತಿನಿಧಿಸುತ್ತದೆ. ಈ ಪರಿಸ್ಥಿತಿಯಲ್ಲಿ, ಅಸ್ಪೃಶ್ಯರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡುವುದಕ್ಕೆ ಯಾವ ಸಮರ್ಥನೆಯೂ ಇಲ್ಲ.

ಆ) ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಹಾಗೂ ನನ್ನ ಪ್ರಭಾವವು ಬಾಂಬೆ ಮತ್ತು ಮಧ್ಯ ಪ್ರಾಂತಗಳಿಗೆ ಮಾತ್ರ ಸೀಮಿತವಾಗಿದೆ.

**ದೋಷಯುಕ್ತ ಸಮರ್ಥನೆಗಳು:**

೭. ಇವೆಲ್ಲವೂ ಅಮಾನವೀಯ ಪ್ರತಿಪಾದನೆಗಳು ಮತ್ತು ಪ್ರಾಮಾಣಿಕವಾದ ಪರೀಕ್ಷೆಯಲ್ಲಿ ಯಶಸ್ವಿಯಾಗುವುದಿಲ್ಲ. ಕಾಂಗ್ರೆಸ್ಸಿನ ಪ್ರಾತಿನಿಧ್ಯದ ಲಕ್ಷಣಗಳನ್ನು ಚುನಾವಣೆಯ ಫಲಿತಾಂಶದ ನೆಲೆಯಿಂದ ಪರೀಕ್ಷಿಸುವುದು ಕ್ಯಾಬಿನೆಟ್ ಮಿಷನ್ ಮಾಡಿದ ಮೊದಲ ದೊಡ್ಡ ಪ್ರಮಾದ. ಹಾಗೆ ಮಾಡುವಾಗ ಮಿಷನ್ ಮುಂದಿನ ಅಂಶಗಳನ್ನು ತನ್ನ ಗಮನಕ್ಕೆ ತೆಗೆದುಕೊಂಡಿಲ್ಲ.

ಅ) ಹಿಂದೂ ಮತದಾರರು ಬ್ರಿಟಿಷರ ವಿರುದ್ಧ ಯುದ್ಧವನ್ನು ಸಾರಿದವರು. ಅವರು ವಿಶ್ವಸಂಗ್ರಾಮದಲ್ಲಿ ಬ್ರಿಟಿಷರೊಡನೆ ಸೇರಿಕೊಂಡಿದ್ದರೂ ಅದು ತಮ್ಮ ಸ್ವಸಂತೋಷದಿಂದಲ್ಲ. ಬ್ರಿಟಿಷರನ್ನು ಯಾವಾಗಲೂ ವಿರೋಧಿಸುತ್ತಿರುವ ಮತ್ತು ಅವರೊಡನೆ ಅಸಹಕಾರವನ್ನು ತೋರುತ್ತಿರುವ ಕಾಂಗ್ರೆಸ್ ಹಿಂದೂ ಮತದಾರರ ಅತಿ ಪ್ರಿಯವಾದ ಪಕ್ಷವಾಗಿದೆ. ಇತರ ಪಕ್ಷಗಳು, ಅದರಲ್ಲೂ ಪರಿಶಿಷ್ಟ ಜಾತಿಗಳವರು ಯಾವಾಗಲೂ ಬ್ರಿಟಿಷರ ಪರವಾಗಿದ್ದುದರಿಂದ ಮತ್ತು ಯುದ್ಧದ ಪ್ರಕ್ರಿಯೆಯಲ್ಲಿ ಅವರಿಗೆ ನೆರವಾಗಿದ್ದುದರಿಂದ ಅವರು ಚುನಾವಣೆಗಳಲ್ಲಿ ಅಪಜಯವನ್ನು ಅನುಭವಿಸಬೇಕಾಗಿ ಬಂದಿತು.

ಆ) ಚುನಾವಣೆಗಳು ಪ್ರಾರಂಭವಾಗುವ ಸ್ವಲ್ಪ ಮೊದಲು, ವೈಸ್‌ರಾಯ್ ಮತ್ತು ಕಮ್ಯಾಂಡರ್–ಇನ್–ಚೀಫ್ ಅವರು ಇಂಡಿಯನ್ ನ್ಯಾಷನಲ್ ಆರ್ಮಿಯ ಸದಸ್ಯರ ವಿರುದ್ಧ ವಿಚಾರಣೆಯನ್ನು ಕೈಗೆತ್ತಿಕೊಂಡರು. ಇಳಿಮುಖವಾಗಿದ್ದ ಕಾಂಗ್ರೆಸ್ಸಿನ ಪ್ರಭಾವವನ್ನು ಮತ್ತು ಹೆಚ್ಚಿಸಲು ಈ ವಿಚಾರಣೆಯು ಸಹಾಯಮಾಡಿತು.

ಇ) ಈ ಚುನಾವಣೆಯ ಮುಖ್ಯ ವಿಷಯವು ದೇಶದ ಸ್ವಾತಂತ್ರ್ಯ ಮತ್ತು ಬ್ರಿಟಿಷರನ್ನು ಭಾರತವನ್ನು ಬಿಟ್ಟು ತೊಲಗಿಸುವುದೇ ಆಗಿತ್ತು. ಭಾವೀ ಸಂವಿಧಾನವನ್ನು ಕುರಿತಾದ ವಿಚಾರವೇ ಈ ಚುನಾವಣೆಯಲ್ಲಿ ಚರ್ಚಿತವಾಗಲಿಲ್ಲ. ಈ ವಿಷಯದ ಮೇಲೆ ಚುನಾವಣೆಯು ನಡೆದಿದ್ದಿದ್ದರೆ, ಕಾಂಗ್ರೆಸ್ ಕಂಡಿತವಾಗಿಯೂ ಜಯವನ್ನು ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ.

ಈ) ಸವರ್ಣೀಯ ಹಿಂದೂಗಳೇ ಆಗಿದ್ದ ಚುನಾವಣಾ ಅಧಿಕಾರಿಗಳು ಕಾಂಗ್ರೆಸ್ಸಿಗೆ ಪ್ರತಿಯಾಗಿ ಚುನಾವಣೆಯಲ್ಲಿ ನಿಂತಿದ್ದ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳ ವಿರುದ್ಧ ಹೊಂದಿದ್ದ ದ್ವೇಷವನ್ನು ಕ್ಯಾಬಿನೆಟ್ ಮಿಷನ್ ತನ್ನ ಗಮನಕ್ಕೇ ತಂದುಕೊಂಡಿಲ್ಲ. ಈ ಅಧಿಕಾರಿಗಳು ಈ ಅಭ್ಯರ್ಥಿಗಳ ನಾಮಪತ್ರವನ್ನು ತಿರಸ್ಕರಿಸುವ ಮತ್ತು ಅವರಿಗೆ ಮತಪತ್ರಗಳನ್ನು ನೀಡದಿರುವ ಮಟ್ಟದವರೆಗೂ ಹೋಗಿದ್ದರು. ಕಾಂಗ್ರೆಸ್ಸಿಗೆ ಮತನೀಡಲು ಸಿದ್ಧರಿಲ್ಲದ ಅಸ್ಪೃಶ್ಯರ ವಿರುದ್ದ ಸವರ್ಣೀಯ ಹಿಂದೂಗಳು ನಡೆಸಿದ ಬಲಪ್ರದರ್ಶನ ಮತ್ತು ಭಯೋತ್ಪಾದನೆಗಳನ್ನು ಮಿಷನ್ ಗಮನಿಸಿಯೇ ಇಲ್ಲ. ಆಗ್ರಾ ನಗರದಲ್ಲಿ ಅಸ್ಪೃಶ್ಯರ ೪೦ ಮನೆಗಳನ್ನು ಸುಟ್ಟುಹಾಕಲಾಯಿತು. ಬಾಂಬೆಯಲ್ಲಿ ಒಬ್ಬ ಅಸ್ಪೃಶ್ಯನನ್ನು ಕೊಲೆಮಾಡಲಾಯಿತು. ಮತ್ತು ಗ್ರಾಮಾಂತರ ಪ್ರದೇಶಗಳ ನೂರಾರು ಹಳ್ಳಿಗಳಲ್ಲಿದ್ದ ಪರಿಶಿಷ್ಟ ಮತದಾರರು ಮತಗಟ್ಟೆಗಳಿಗೆ ಹೋಗದಂತೆ ತಡೆಯಲಾಗಿತ್ತು. ನಾಗಪುರದಲ್ಲಿ ಪೋಲಿಸ್ ಅಧಿಕಾರಿಯೊಬ್ಬರು ಕಾಂಗ್ರೆಸ್ಸಿನ ಪರವಾಗಿ ಎಷ್ಟು ಒಲವನ್ನು ತೋರಿಸಿದರೆಂದರೆ, ಜಿಲ್ಲಾ ದಂಡಾಧಿಕಾರಿಗಳ ಅನುಮತಿಯೂ ಇಲ್ಲದೆ, ಅಸ್ಪೃಶ್ಯರನ್ನು ಬೆದರಿಸಲು ಅವರ ಮೇಲೆ ಗುಂಡನ್ನು ಹಾರಿಸಿದರು. ಇಂತಹ ಪ್ರಕರಣಗಳು ದೇಶದ ಎಲ್ಲಾ ಕಡೆಯಲ್ಲಿಯೂ ಅಸಂಖ್ಯಾತವಾಗಿದ್ದವು.

೮. ಕ್ಯಾಬಿನೆಟ್ ಮಿಷನ್ ಈ ಎಲ್ಲಾ ಸನ್ನಿವೇಶಗಳನ್ನು ಪರಿಗಣಿಸಿದ್ದಿದ್ದರೆ, ಕಾಂಗ್ರೆಸ್ ಪಕ್ಷದ ಚುನಾವಣಾ ಯಶಸ್ಸು ಅದಕ್ಕೆ ಪೂರಕವಾಗಿದ್ದ ಅನುಕೂಲಕರ ಪರಿಸ್ಥಿತಿಯಿಂದಷ್ಟೇ ಸಾಧ್ಯವಾಯಿತು ಎಂಬುದನ್ನು ಅರಿಯಬಹುದಿತ್ತು. ಅಸ್ಪೃಶ್ಯರಿಗೆ ಸಂವಿಧಾನ ಸಭೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯವನ್ನು ನಿರಾಕರಿಸಲು ಇಂತಹ ಸನ್ನಿವೇಶಗಳಲ್ಲಿ ನಡೆದ ಚುನಾವಣೆಯ ಫಲಿತಾಂಶಗಳನ್ನು ಆಧಾರವನ್ನಾಗಿ ತೆಗೆದುಕೊಳ್ಳಬಾರದಿತ್ತು.

**ಕ್ಯಾಬಿನೆಟ್ ಮಿಷನ್ ತನ್ನ ನಿರ್ಣಯಕ್ಕೆ ದೋಷಯುಕ್ತ ಮಾನದಂಡವನ್ನು ಉಪಯೋಗಿಸಿಕೊಂಡ ರೀತಿ**

೯. ಕಾಂಗ್ರೆಸ್ ಅಸ್ಪೃಶ್ಯರಿಗೆ ಮೀಸಲಿಟ್ಟಿದ್ದ ಸ್ಥಾನಗಳಲ್ಲಿ ಎಷ್ಟು ಸ್ಥಾನಗಳಲ್ಲಿ ಜಯಗಳಿಸಿತು ಎಂಬ

ಮಾನದಂಡದ ಮೇಲೆ ಅದು ಅಸ್ಪೃಶ್ಯರನ್ನು ಪ್ರತಿನಿಧಿಸುತ್ತದೆಯೇ ಅಥವಾ ಇಲ್ಲವೆ ಎಂಬುದನ್ನು ಕ್ಯಾಬಿನೆಟ್ ತೀರ್ಮಾನಿಸಿತು. ಈ ಚುನಾವಣೆಯ ಫಲಿತಾಂಶಗಳ ಮೇಲೆ ಅಸ್ಪೃಶ್ಯರಿಗೆ ಯಾವುದೇ ಹಿಡಿತವಿಲ್ಲದಿದ್ದುದರಿಂದ ಅದನ್ನು ಒಂದು ಮಾನದಂಡವನ್ನಾಗಿ ಪರಿಗಣಿಸಿದುದೇ ದೋಷಯುಕ್ತವಾಗಿದ್ದಿತು. ಅಂತಿಮ ಚುನಾವಣೆಯ ಫಲಿತಾಂಶಗಳು ಪೂನಾ ಒಪ್ಪಂದದ ಪ್ರಕಾರ ಹಿಂದೂ ಮತಗಳಿಂದ ನಿರ್ಧರಿಸಲ್ಪಟ್ಟಿತ್ತು. ಅಸ್ಪೃಶ್ಯರು ಹೇಗೆ ತಮ್ಮ ಮತಗಳನ್ನು ಚಲಾಯಿಸಿದರು ಮತ್ತು ಕಾಂಗ್ರೆಸ್ಸಿನ ಪರವಾಗಿ ಎಷ್ಟು ಮತ್ತು ವಿರೋಧವಾಗಿ ಎಷ್ಟು ಮತಗಳು ಚಲಾಯಿಸಲ್ಪಟ್ಟವು ಎಂಬುದು ಮಿಷನ್ ಇಟ್ಟುಕೊಳ್ಳಬೇಕಾಗಿದ್ದ ನಿಜವಾದ ಮಾನದಂಡವಾಗಿತ್ತು. ಇದನ್ನು ಪ್ರಾಥಮಿಕ ಚುನಾವಣೆಗಳ ಫಲಿತಾಂಶದ ಮೇಲೆ ನಿರ್ಧರಿಸಬೇಕಾಗಿದ್ದಿತೇ ಹೊರತು ಅಂತಿಮ ಚುನಾವಣೆಯ ಫಲಿತಾಂಶದ ಮೇಲೆ ಅಲ್ಲ. ಕಾರಣ, ಪ್ರಾಥಮಿಕ ಚುನಾವಣೆಗಳಲ್ಲಿ ಅಸ್ಪೃಶ್ಯರು ಮಾತ್ರ ಮತಗಳನ್ನು ಚಲಾಯಿಸಿದ್ದರು. ಪ್ರಾಥಮಿಕ ಚುನಾವಣೆಯ ಫಲಿತಾಂಶಗಳನ್ನು ಆಧಾರವಾಗಿ ತೆಗೆದುಕೊಂಡರೆ, ಕ್ಯಾಬಿನೆಟ್ ಮಿಷನ್ ತೆಗೆದುಕೊಂಡಿರುವ ನಿರ್ಧಾರವು ಅಸಂಬದ್ಧ ಮತ್ತು ವಾಸ್ತವಾಂಶಗಳಿಗೆ ವಿರೋಧವಾಗಿದೆಯೆಂಬುದನ್ನು ಕಾಣಬಹುದು. ಈ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಪರವಾಗಿ ಶೇ. ೨೮ರಷ್ಟು ಮತಗಳೂ, ಮತ್ತು ಅದರ ವಿರುದ್ಧವಾಗಿ ಶೇ ೭೨ರಷ್ಟು ಮತಗಳೂ ಚಲಾಯಿಸಲ್ಪಟ್ಟಿದ್ದವು.

೧೦. ಅಸ್ಪೃಶ್ಯರು ಕಾಂಗ್ರೆಸ್ಸಿನೊಂದಿಗೆ ಇಲ್ಲದಿದ್ದರೆ, ಅವರು ಪ್ರಾಥಮಿಕ ಚುನಾವಣೆಯು ನಡೆದ ಎಲ್ಲಾ ೧೫೧ ಮೀಸಲು ಕ್ಷೇತ್ರಗಳಲ್ಲಿಯೂ ಸ್ಪರ್ಧಿಸಬೇಕಾಗಿತ್ತು ಎಂದು ಹೇಳಲಾಗುತ್ತಿದೆ. ವಾಸ್ತವವಾಗಿ, ಇಡೀ ದೇಶದಲ್ಲಿ ಪ್ರಾಥಮಿಕ ಚುನಾವಣೆಗಳು ನಡೆದದ್ದು ಕೇವಲ ೪೩ ಸ್ಥಾನಗಳಿಗಾಗಿ. ಉಳಿದ ೧೦೮ ಕ್ಷೇತ್ರಗಳಲ್ಲಿನ ಚುನಾವಣೆಗಳಲ್ಲಿ ಅಸ್ಪೃಶ್ಯರು ಏಕೆ ಭಾಗವಹಿಸಲಿಲ್ಲ?

ಮುಂದೆ ನೀಡಿರುವ ಕಾರಣಗಳಿಂದಾಗಿ ಈ ವಾದವೇ ಅಸಂಬದ್ಧವಾಗಿದೆ.

ಅ) ಪ್ರಾಥಮಿಕ ಚುನಾವಣೆಗಳು ಅನಿವಾರ್ಯವಾದವುಗಳೇನೂ ಅಲ್ಲ. ಒಂದೇ ಸ್ಥಾನಕ್ಕೆ ನಾಲ್ಕಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸ್ಪರ್ಧಿಸಿದರೆ ಮಾತ್ರ ಚುನಾವಣೆ ಅನಿವಾರ್ಯವಾಗುತ್ತದೆ. ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧಿಸಿದವರು ಅಂತಿಮ ಚುನಾವಣೆಯಲ್ಲಿಯೂ ಸ್ಪರ್ಧಿಸಬೇಕಾದ ಅಗತ್ಯವಿಲ್ಲವೆಂಬ ಅಂಶವನ್ನು ಮನಗಂಡಿಲ್ಲ. ಎರಡೂ ಚುನಾವಣೆಗಳಲ್ಲಿ ಸ್ಪರ್ಧಿಸಲು ಅಗತ್ಯವಾದ ಹಣಕಾಸಿನ ಬಲವಿಲ್ಲದಿರುವುದರಿಂದ ಅಸ್ಪೃಶ್ಯ ಸಮುದಾಯದ ಅಭ್ಯರ್ಥಿಗಳಿಗೆ ಪ್ರಾಥಮಿಕ ಚುನಾವಣೆಗಳಲ್ಲಿ ಸ್ಪರ್ಧಿಸುವಂತೆ ಮಾಡುವುದು ಅಸಾಧ್ಯ. ಅಸ್ಪೃಶ್ಯರು ತಾವು ಕಾಂಗ್ರೆಸ್ಸಿನವರ ಜೊತೆ ಸೇರಿಲ್ಲ ಎಂಬ ವಾದವನ್ನು ಮಂಡಿಸುವುದಿಲ್ಲ ಎಂದು ಊಹಿಸುವುದಕ್ಕೆ ಪ್ರಾಥಮಿಕ ಚುನಾವಣೆಯು ಕೇವಲ ೪೩ ಕ್ಷೇತ್ರಗಳಲ್ಲಿ ನಡೆಯಿತು ಎಂಬುದನ್ನು ಆಧಾರವಾಗಿ ತೆಗೆದುಕೊಳ್ಳುವುದು ಸರಿಯಾಗುವುದಿಲ್ಲ.

ಆ) ಪ್ರಾಥಮಿಕ ಚುನಾವಣೆಗಳಲ್ಲಿ ಪ್ರತಿಕ್ಷೇತ್ರದಲ್ಲಿಯೂ ನಾಲ್ಕು ಸ್ಪರ್ಧಿಗಳನ್ನು ನಿಲ್ಲಿಸಲಿಲ್ಲವೇಕೆ ಎಂದು ಕಾಂಗ್ರೆಸ್ ಪಕ್ಷವನ್ನು ಪ್ರಶ್ನಿಸಬೇಕು. ಕಾಂಗ್ರೆಸ್ ತಾನು ಅಸ್ಪೃಶ್ಯರನ್ನು ಪ್ರತಿನಿಧಿಸುತ್ತೇನೆಂದು ಹೇಳಿಕೊಳ್ಳಬಯಸಿದ್ದರೆ, ಆ ಪಕ್ಷವು ಪ್ರಾಥಮಿಕ ಚುನಾವಣೆಗಳಲ್ಲಿ ಪ್ರತಿ ಕ್ಷೇತ್ರದಲ್ಲಿ ನಾಲ್ಕಕ್ಕಿಂತ ಹೆಚ್ಚು ಸ್ಪರ್ಧಿಗಳನ್ನು ನಿಲ್ಲಿಸಿ ೧೫೧ ಕ್ಷೇತ್ರಗಳಲ್ಲಿಯೂ ಚುನಾವಣೆಯನ್ನು ನಡೆಯುವಂತೆ ಮಾಡಿ, ಉಳಿದ ಎಲ್ಲಾ ಪಕ್ಷಗಳ ಅಭ್ಯರ್ಥಿಗಳನ್ನೂ ಅಂತಿಮ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡಬಹುದಿತ್ತು. ಆದರೆ ಕಾಂಗ್ರೆಸ್ ಹಾಗೆ ಮಾಡಲಿಲ್ಲ. ಬದಲಿಗೆ, ಈ ೪೩ ಕ್ಷೇತ್ರಗಳಲ್ಲಿಯೂ ಒಬ್ಬೊಬ್ಬ ಸ್ಪರ್ಧಿಯನ್ನು ನಿಲ್ಲಿಸಿತು. ಹಾಗಿದ್ದರೂ ಆತ ಅಲ್ಲಿನ ಚುನಾವಣೆಯಲ್ಲಿ ವಿಜಯವನ್ನು ಗಳಿಸುವ ಸಂಭವನೀಯತೆಯು ಅತ್ಯಲ್ಪವಾಗಿದ್ದಿತು. ಅಕಸ್ಮಾತ್ ಅವನು ಗೆದ್ದರೆ, ಆತನನ್ನು ಅಂತಿಮ ಚುನಾವಣೆಯಲ್ಲಿ ನಿಲ್ಲಿಸಿ ಅಲ್ಲಿ

ಹಿಂದೂಗಳ ಮತಗಳ ಸಹಾಯದಿಂದ ವಿಜಯವನ್ನು ಸಾಧಿಸುವ ಹವಣಿಕೆ ಅವರದಾಗಿದ್ದಿತು. ಕಾಂಗ್ರೆಸ್ಸಿನವರಿಗೆ ಅಸ್ಪೃಶ್ಯರು ತಮ್ಮನ್ನು ಬೆಂಬಲಿಸುತ್ತಾರೆಂಬ ವಿಷಯದಲ್ಲಿ ವಿಶ್ವಾಸವಿರಲಿಲ್ಲ ಎಂಬುದನ್ನು ಇದು ತೋರಿಸುತ್ತದೆ.

ಇ) ಅಸ್ಪೃಶ್ಯರು ಪ್ರಥಮ ಬಾರಿಗೆ ಮತನೀಡುವ ಹಕ್ಕನ್ನು ೧೯೩೭ರಲ್ಲಿ ಪಡೆದುಕೊಂಡರು. ೧೯೩೭ರ ನಂತರವೇ ಅಸ್ಪೃಶ್ಯರು ಚುನಾವಣೆಗಳಲ್ಲಿ ಸಂಘಟಿತರಾಗುವುದಕ್ಕೆ ಪ್ರಾರಂಭಿಸಿದರು. ಚುನಾವಣೆಗಳಲ್ಲಿ ಕಾಂಗ್ರೆಸ್ ಪರಿಶಿಷ್ಟ ಜಾತಿಗಳ ಒಕ್ಕೂಟಕ್ಕಿಂತ ಹೆಚ್ಚಿನ ಯಶಸ್ಸನ್ನು ಸಾಧಿಸಿತು ಎಂಬ ಅಂಶದಿಂದ ಅಸ್ಪೃಶ್ಯರು ಕಾಂಗ್ರೆಸ್ಸಿನೊಂದಿಗೆ ಇದ್ದಾರೆ ಎಂದು ತೀರ್ಮಾನಿಸುವುದು ತಪ್ಪಾಗುತ್ತದೆ. ಪರಿಶಿಷ್ಟ ಜಾತಿಗಳ ಒಕ್ಕೂಟಕ್ಕೆ ಪ್ರತಿಕೂಲವಾದ ನಿರ್ಣಯಗಳನ್ನು ತೆಗೆದುಕೊಳ್ಳುವ ಮೊದಲು, ಕಾಂಗ್ರೆಸ್ ಮತ್ತು ಒಕ್ಕೂಟಗಳ ಬಲಾಬಲಗಳ ನಡುವೆ ಇದ್ದ ಅಂತರವನ್ನು ಕ್ಯಾಬಿನೆಟ್ ಮಿಷನ್ ಗಮನಿಸಿ ಚುನಾವಣೆಯ ಫಲಿತಾಂಶಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಸೂಕ್ತ ರಿಯಾಯತಿಯನ್ನು ನೀಡಬೇಕಾಗಿತ್ತು.

**ತಮ್ಮ ನಿರ್ಣಯವನ್ನು ಸಮರ್ಥಿಸಿಕೊಳ್ಳಲು ಕ್ಯಾಬಿನೆಟ್ ಮಿಷನ್ ನೀಡಿದ ಆಧಾರಗಳ ನಿಷ್ಪ್ರಯೋಜಕತೆ**

೧೧. ಡಾ. ಅಂಬೇಡ್ಕರ್ ಅವರಿಗೆ ಬೆಂಬಲಿಗರು ಬಾಂಬೆ ಪ್ರಾಂತ ಮತ್ತು ಮಧ್ಯಪ್ರಾಂತಗಳಿಗೆ ಮಾತ್ರ ಸೀಮಿತವಾಗಿದ್ದಾರೆ ಎಂದು ಕ್ಯಾಬಿನೆಟ್ ಮಿಷನ್ನಿನ ಸದಸ್ಯರು ವಾದಿಸಿದರು. ಈ ವಾದಕ್ಕೆ ಯಾವುದೇ ಆಧಾರವಿಲ್ಲ. ಪರಿಶಿಷ್ಟ ಜಾತಿಗಳ ಒಕ್ಕೂಟವು ಎಲ್ಲಾ ಪ್ರಾಂತಗಳಲ್ಲಿಯೂ ಚಟುವಟಿಕೆಯಿಂದ ಇದೆ. ಅಲ್ಲದೆ, ಅವುಗಳು ಬಾಂಬೆ ಮತ್ತು ಮಧ್ಯ ಪ್ರಾಂತಗಳಿಗಿಂತ ಅಧಿಕವಾಗಿ ಅಲ್ಲದಿದ್ದರೂ, ಅಷ್ಟೇ ಯಶಸ್ಸನ್ನು ಈ ಎಲ್ಲಾ ಪ್ರಾಂತಗಳಲ್ಲಿನ ಚುನಾವಣೆಗಳಲ್ಲಿ ಪಡೆದಿದೆ. ಹೀಗೆ ಹೇಳಿಕೆಯನ್ನು ನೀಡುವಾಗ ಮಿಷನ್ ಡಾ. ಅಂಬೇಡ್ಕರ್ ಅವರು ಸಂವಿಧಾನ ಸಭೆಯ ಚುನಾವಣೆಯಲ್ಲಿ ಆಯ್ಕೆಯಾದುದನ್ನು ತನ್ನ ಗಮನಕ್ಕೆ ತಂದುಕೊಳ್ಳುವಲ್ಲಿ ವಿಫಲವಾಗಿದೆ. ಅವರು ಬಂಗಾಳ ಪ್ರಾಂತದ ಶಾಸನ ಸಭೆಯ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಆ ಚುನಾವಣೆಯಲ್ಲಿ ಅವರು ಸಾಮಾನ್ಯ ಸ್ಥಾನಗಳಲ್ಲಿ ಅತ್ಯಂತ ಹೆಚ್ಚು ಮತಗಳನ್ನು ಪಡೆದುದಷ್ಟೇ ಅಲ್ಲದೆ, ಕಾಂಗ್ರೆಸ್ ಪಕ್ಷದ ಮುಖಂಡ ಶ್ರೀ ಶರಚ್ಚಂದ್ರ ಬೋಸರನ್ನು ಸೋಲಿಸಿದರು. ಡಾ. ಅಂಬೇಡ್ಕರ್ ಅವರು ಬಾಂಬೆ ಮತ್ತು ಮಧ್ಯ ಪ್ರಾಂತಗಳ ಹೊರಗೆ ಪ್ರಭಾವವನ್ನು ಹೊಂದಿಲ್ಲದಿದ್ದಿದ್ದರೆ, ಅವರು ಬಂಗಾಳದಿಂದ ಹೇಗೆ ಆಯ್ಕೆಯಾಗುತ್ತಿದ್ದರು? ಬಂಗಾಳ ಶಾಸನ ಸಭೆಯಲ್ಲಿ ಪರಿಶಿಷ್ಟ ಜಾತಿಗಳವರಿಗೆ ೩೦ ಸ್ಥಾನಗಳು ಇವೆ. ಅಲ್ಲಿನ ೮೦ ಸ್ಥಾನಗಳಲ್ಲಿ, ೨೮ ಮಂದಿ ಕಾಂಗ್ರೆಸ್ ಟಿಕೆಟ್ಟಿನ ಮೇಲೆ ಆಯ್ಕೆಯಾಗಿದ್ದಾರೆ. ಡಾ. ಅಂಬೇಡ್ಕರ್ ಅವರ ಪಕ್ಷಕ್ಕೆ ಸೇರಿದ ಇಬ್ಬರು ಅಭ್ಯರ್ಥಿಗಳಲ್ಲಿ ಒಬ್ಬರು ಚುನಾವಣೆಯ ದಿನದಂದು ಅನಾರೋಗ್ಯಕ್ಕೆ ತುತ್ತಾಗಿದ್ದರು. ಇದರ ಹೊರತಾಗಿಯೂ, ಡಾ. ಅಂಬೇಡ್ಕರ್ ಅವರು ಚುನಾವಣೆಗಳಲ್ಲಿ ಅಧಿಕ ಮತಗಳನ್ನು ಗಳಿಸಿದರು. ಕಾಂಗ್ರೆಸ್ ಟಿಕೆಟ್ಟಿನ ಮೇಲೆ ಆಯ್ಕೆಯಾಗಿದ್ದ ಪರಿಶಿಷ್ಟ ಜಾತಿಯ ಸದಸ್ಯರು ಡಾ. ಅಂಬೇಡ್ಕರ್ ಅವರಿಗೆ ತಮ್ಮ ಮತಗಳನ್ನು ನೀಡದೇ ಇದ್ದಿದ್ದರೆ ಈ ಮಟ್ಟಿನ ಗೆಲವು ಸಾಧ್ಯವಾಗಿರುತ್ತಿರಲಿಲ್ಲ. ಅಲ್ಲದೆ ಇನ್ನೂ ಒಂದು ಅಂಶವನ್ನು ಇಲ್ಲಿ ನೆನಪಿನಲ್ಲಿಡಬೇಕು – ಬಂಗಾಳದಲ್ಲಿರುವ ಪರಿಶಿಷ್ಟ ಸಮುದಾಯದವರು, ಡಾ. ಅಂಬೇಡ್ಕರ್ ಅವರ ಸಮುದಾಯಕ್ಕೆ ಸೇರಿದವರಾಗಿಲ್ಲ. ಕಾಂಗ್ರೆಸ್ಸಿಗೆ ಸೇರಿದ ಪರಿಶಿಷ್ಟ ಜಾತಿಗಳ ಸದಸ್ಯರು ಹಾಗೂ ಡಾ. ಅಂಬೇಡ್ಕರ್ ಅವರ ಸಮುದಾಯಕ್ಕೆ ಸೇರಿರದ ಇತರ ಪರಿಶಿಷ್ಟ ಜನಾಂಗದವರೂ ಅವರನ್ನು ಪರಿಶಿಷ್ಟ ಜಾತಿಗಳ ನಾಯಕರೆಂದು ಮಾನ್ಯಮಾಡುತ್ತಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮಿಷನ್ನಿನ ಸದಸ್ಯರು ನೀಡಿದ ಹೇಳಿಕೆಯನ್ನು ಇದು ಸಂಪೂರ್ಣವಾಗಿ

ನಿರಾಧಾರವೆಂದು ಸಾಬೀತುಪಡಿಸುತ್ತದೆ.

೧೨. ಸಂವಿಧಾನ ಸಭೆಯಲ್ಲಿನ ಸಂಯೋಜನೆಯಲ್ಲಿ ಏಕರೂಪತೆಯನ್ನು ಕಾಪಾಡಿಕೊಂಡುಬರುವ ಸಲುವಾಗಿ, ಇತರ ಸಮುದಾಯಗಳ ವಿಷಯದಲ್ಲಿ ಮಾಡಿದ ಹಾಗೆಯೇ, ಪರಿಶಿಷ್ಟ ಜಾತಿಗಳವರ ವಿಷಯದಲ್ಲಿಯೂ ಅಂತಿಮ ಚುನಾವಣೆಯ ಫಲಿತಾಂಶಗಳನ್ನೇ ಗಣನೆಗೆ ತೆಗೆದುಕೊಳ್ಳಬೇಕಾಯಿತು ಎಂದು ಕ್ಯಾಬಿನೆಟ್ ಮಿಷನ್ನಿನ ಸದಸ್ಯರು ವಾದಿಸಿದರು. ಈ ವಿಶೇಷ ವಾದವೂ ಜೊಳ್ಳುಜೊಳ್ಳಾಗಿದೆ. ಅಂತಿಮ ಚುನಾವಣೆಗಳಲ್ಲಿ ಮುಸ್ಲಿಮರು, ಭಾರತೀಯ ಕ್ರಿಶ್ಚಿಯನ್ನರು ಮತ್ತು ಸಿಕ್ಖರು ಪ್ರತ್ಯೇಕ ಮತಕ್ಷೇತ್ರಗಳನ್ನು ಹೊಂದಿದ್ದರು ಎಂಬುದು ಮಿಷನ್ನಿನ ಅರಿವಿನಲ್ಲಿ ಇತ್ತು. ಆದರೆ ಅಂತಿಮ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕ ಮತಕ್ಷೇತ್ರಗಳಿರಲಿಲ್ಲ. ಪರಿಣಾಮವಾಗಿ, ಏಕರೂಪತೆಯನ್ನು ಕಾಪಾಡಿಕೊಂಡು ಹೋಗುವ ಸಲುವಾಗಿ, ಅಸ್ಪೃಶ್ಯರಿಗೆ ಸಂವಿಧಾನ ಸಭೆಯಲ್ಲಿ ಪ್ರಾತಿನಿಧ್ಯವನ್ನು ನೀಡಲು ಮಿಷನ್ ಪ್ರಾಥಮಿಕ ಚುನಾವಣೆಗಳ ಫಲಿತಾಂಶವನ್ನು ಗಣಿಸಬೇಕಾಗಿತ್ತು. ಪೂನಾ ಒಪ್ಪಂದದ ಪ್ರಕಾರ ಪರಿಶಿಷ್ಟ ಜಾತಿಗಳವರಿಗಾಗಿ ಚುನಾವಣೆಗಳನ್ನು ನಡೆಸುವುದು ಅಸಮರ್ಪಕವಾದುದು ಎಂದು ಸರ್. ಸ್ಟಾಫೋರ್ಡ್ ಕ್ರಿಪ್ಸ್ ಅವರು ಚರ್ಚೆಯಲ್ಲಿ ಒಪ್ಪಿಕೊಂಡಿರುವದರಿಂದ, ಮಿಷನ್ ಹಾಗೆಯೇ ಮಾಡಲು ಕರ್ತವ್ಯಬದ್ಧವಾಗಿದ್ದಿತು. ಹೀಗಿರುವಾಗ ಮಿಷನ್ ಅದನ್ನು ತನ್ನ ನಿರ್ಣಯಕ್ಕೆ ಆಧಾರವನ್ನಾಗಿ ಏಕೆ ಇಟ್ಟುಕೊಳ್ಳಲಿಲ್ಲ?

ೱ

## ಮುಂಬರಬಹುದಾದ ವಿಪತ್ತಿನಿಂದ ಅಸ್ಪೃಶ್ಯರನ್ನು ರಕ್ಷಿಸಲು ಏನು ಮಾಡಬೇಕು?

೧೩. ಕ್ಯಾಬಿನೆಟ್‌ಮಿಷನ್ ಸಂವಿಧಾನಸಭೆಯನ್ನು ರಚಿಸುವ ಮೂಲಕ ಅಸ್ಪೃಶ್ಯರನ್ನು ಸಂವಿಧಾನ ಸಭೆಯಲ್ಲಿ ಬಹುಸಂಖ್ಯಾತರಾಗಿರುವ ಸವರ್ಣೀಯ ಹಿಂದೂಗಳ ಕೃಪಾಭಿಕ್ಷೆಯಡಿಯಲ್ಲಿ ಬದುಕುವಂತೆ ಮಾಡಿದರು. ಮಹಾಪ್ರಭುಗಳ ಸರಕಾರವು ಕೋಮುವಾರು ಆಜ್ಞೆಯ ಪ್ರಕಾರ ತಮಗೆ ನೀಡಿದ್ದ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡಬೇಕೆಂದು ಮತ್ತು ಗಾಂಧಿಯವರು ಆಮರಣಾಂತ ಉಪವಾಸವನ್ನು ಕೈಗೊಳ್ಳುತ್ತೇನೆಂದು ಬೆದರಿಸಿದಾಗ ಅವರಿಗೆ ಮಣಿದು ತಮ್ಮ ಮೇಲೆ ಹೇರಲಾದ ಪೂನಾ ಒಪ್ಪಂದವನ್ನು ರದ್ದುಪಡಿಸಬೇಕೆಂದು ಪರಿಶಿಷ್ಟ ಜಾತಿಯವರು ಬಯಸುತ್ತಾರೆ. ಇದನ್ನು ಹಿಂದೂಗಳು ವಿರೋಧಿಸಿಯೇ ತೀರುತ್ತಾರೆ. ಪರಿಶಿಷ್ಟ ಜಾತಿಯವರನ್ನು ಹಿಂದೂ ಬಹುಸಂಖ್ಯಾತರ ದಯಾಛತ್ರದ ಅಡಿಗೆ ದೂಡಿದ ಬಗ್ಗೆ ಟೀಕೆಗಳು ಬಂದಾಗ ಮಿಷನ್ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ಅಲ್ಪಸಂಖ್ಯಾತರಿಗಾಗಿ ಸಲಹಾ ಸಮಿತಿಯೊಂದನ್ನು ರಚಿಸುವ ಬಗ್ಗೆ ಹೇಳಿಕೊಳ್ಳುತ್ತಿದ್ದಾರೆ. ಈ ಸಮಿತಿಗೆ ಇರುವ ಅಧಿಕಾರ ಮತ್ತು ಅದರ ಸಂಯೋಜನೆಯನ್ನು ನೋಡಿದವರಿಗೆ ಈ ಸಮಿತಿಯು ನಿಷ್ಪ್ರಯೋಜಕವೆನಿಸಿಕೊಳ್ಳಲೂ ಅರ್ಹವಾಗಿಲ್ಲ ಎಂಬುದನ್ನು ಕಾಣಬಹುದು.

ಅ) ಅದರ ಸಂರಚನೆಯಲ್ಲಿ ಅದು ಸಂವಿಧಾನ ಸಭೆಯ ತೆಳುವಾದ ಪ್ರತಿಬಿಂಬದಂತೆಯೇ ಇದೆ. ಸಂವಿಧಾನ ಸಭೆಯಲ್ಲಿ ಇರುವಂತೆಯೇ, ಇಲ್ಲಿಯೂ ಹಿಂದೂಗಳೇ ತಮ್ಮ ಪ್ರಾಬಲ್ಯವನ್ನು ಹೊಂದಿರುತ್ತಾರೆ.

ಆ) ಸಂವಿಧಾನ ಸಭೆಯಲ್ಲಿ ಹಾಗೂ ಸಲಹಾ ಸಮಿತಿಯಲ್ಲಿ ಕಾಂಗ್ರೆಸ್ಸಿನ ಕೃಪೆಯಿಂದ ಆಯ್ಕೆಯಾದ ನಿರ್ದಿಷ್ಟ ಸಂಖ್ಯೆಯ ಅಸ್ಪೃಶ್ಯ ಸದಸ್ಯರು ಇರುತ್ತಾರೆ ಎಂಬುದು ನಿಜವಾದರೂ ಅವರುಗಳು ಹಿಂದೂಗಳ ಹಂಗಿನವರೇ ಆಗಿರುವುದರಿಂದ, ಅವರಿಂದ ಅಸ್ಪೃಶ್ಯರಿಗೆ ಯಾವುದೇ ಉಪಯೋಗವೂ ಇರುವುದಿಲ್ಲ.

ಇ) ಸಲಹಾ ಸಮಿತಿಯು ಅಲ್ಪಸಂಖ್ಯಾತರ ವಿಷಯಗಳಲ್ಲಿ ತೆಗೆದುಕೊಳ್ಳುವ ನಿರ್ಣಯಗಳಿಗೆ

ಸರಳ ಬಹುಮತವೇ ಸಾಕಾಗಿರುವುದರಿಂದ, ಸವರ್ಣೀಯ ಹಿಂದೂಗಳು ನಿರ್ಣಯವನ್ನು ತೆಗೆದುಕೊಂಡು ಅದನ್ನು ಅಲ್ಪಸಂಖ್ಯಾತರ ಮೇಲೆ ಹೇರುತ್ತಾರೆ.

ಈ) ಸಲಹಾ ಸಮಿತಿಯ ನಿರ್ಣಯಗಳು ಅನುಕೂಲಕರವಾಗಿದ್ದರೂ, ಅವುಗಳು ಶಿಫಾರಸ್ಸುಗಳು ಮಾತ್ರವಾಗಿರುತ್ತವೆ. ಅವುಗಳ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಲೇಬೇಕೆಂಬ ನಿರ್ಬಂಧವು ಸಂವಿಧಾನಸಭೆಗೆ ಇರುವುದಿಲ್ಲ.

೧೪. ಸಲಹಾ ಸಮಿತಿಯೆನ್ನುವುದು ಮೋಸವಲ್ಲದಿದ್ದರೂ ಅದು ಒಂದು ತಮಾಷೆಯ ವಿಷಯವಾಗಿದೆ ಮತ್ತು ಹಿಂದೂ ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ನಡೆಸುವ ದೌರ್ಜನ್ಯಗಳ ವಿರುದ್ಧ ಯಾವ ಕ್ರಮವನ್ನೂ ತೆಗೆದುಕೊಳ್ಳಲು ಅದಕ್ಕೆ ಸಾಧ್ಯವಿಲ್ಲ. ತಮ್ಮ ಹಗೆತನವನ್ನು ಸಾಧಿಸಿಕೊಳ್ಳಲು ಹಿಂದೂ ಬಹುಸಂಖ್ಯಾತರು ಅಸ್ಪೃಶ್ಯರನ್ನು ವಿಶೇಷವಾಗಿ ಪ್ರತ್ಯೇಕಿಸುತ್ತಾರೆ ಮತ್ತು ಅವರಿಗೆ ರಾಜಕೀಯ ಸಂರಕ್ಷಣೆಯ ಹಕ್ಕುಗಳನ್ನು ವಂಚಿಸಲೇಬೇಕೆಂಬ ದೃಢ ನಿರ್ಧಾರವನ್ನು ಮಾಡಿರುವ ಹಾಗೆ ಕಾಣುತ್ತದೆ. ೧೯೪೬ರ ಜೂನ್ ೨೫ರಂದು ಕಾಂಗ್ರೆಸ್ ಬರೆದಿರುವ ಪತ್ರದಿಂದ (ವಿಷಯದ ಸಂಖ್ಯೆ ೨೧) ಸ್ಪಷ್ಟವಾಗುತ್ತದೆ. ಅಸ್ಪೃಶ್ಯರು ಅಲ್ಪಸಂಖ್ಯಾತರಲ್ಲ ಎಂಬ ತನ್ನ ನಿಲುವನ್ನು ಆ ಪತ್ರದಲ್ಲಿ ಕಾಂಗ್ರೆಸ್ ತಿಳಿಸಿದೆ. ಇದು ದಿಗ್ಭ್ರಮೆಯನ್ನು ಹುಟ್ಟಿಸುತ್ತದೆ. ತಮ್ಮ ಹರಿಜನ ಎಂಬ ವಾರಪತ್ರಿಕೆಯ ೧೯೩೯ರ ಅಕ್ಟೋಬರ್ ೨೧ರ ಸಂಚಿಕೆಯಲ್ಲಿ ಭಾರತದಲ್ಲಿ ಅಲ್ಪಸಂಖ್ಯಾತರು ಎಂದರೆ ಕೇವಲ ಅಸ್ಪೃಶ್ಯರು ಮಾತ್ರ ಎಂದು ಶ್ರೀ ಗಾಂಧಿಯವರು ಬರೆದಿದ್ದರು. ಕಾಂಗ್ರೆಸ್ ತನ್ನ ಈ ನಿಲುವನ್ನು ಸಂಪೂರ್ಣವಾಗಿ ಬದಲಾಯಿಸಿ ವಿರುದ್ಧವಾದ ನಿಲುವನ್ನು ಈಗ ಪ್ರದರ್ಶಿಸುತ್ತಿದೆ. ಕಾಂಗ್ರೆಸ್ ಈಗ ತೆಗೆದುಕೊಂಡಿರುವ ನಿಲುವು ಅಸ್ಪೃಶ್ಯರನ್ನು ಅಲ್ಪಸಂಖ್ಯಾತರು ಎಂದು ಪರಿಗಣಿಸಿರುವ ೧೯೩೫ರ ಭಾರತ ಸರಕಾರದ ಅಧಿನಿಯಮದ ಮೂಲಭೂತ ನೀತಿಗಳಿಗೆ ವಿರುದ್ಧವಾಗಿದೆ. ಕಾಂಗ್ರೆಸ್ಸಿನ ನಿಲುವಿನಲ್ಲಿ ಆಗಿರುವ ಬದಲಾವಣೆಯ ಹಿಂದಿರುವ ಕುತಂತ್ರವೇನು ಎಂಬುದನ್ನು ಅರಿಯುವುದು ಸಾಧ್ಯವಿಲ್ಲ. ಕಾಂಗ್ರೆಸ್ ಅಸ್ಪೃಶ್ಯರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸದಿದ್ದಲ್ಲಿ, ಸಂವಿಧಾನ ಸಭೆಯು ಇತರ ಅಲ್ಪಸಂಖ್ಯಾತರಿಗೆ ನೀಡಲಿರುವ ರಕ್ಷಣಾ ಸೌಲಭ್ಯಗಳನ್ನು ಅಸ್ಪೃಶ್ಯರಿಗೆ ನೀಡಲು ನಿರಾಕರಿಸಬಹುದು. ಆದ್ದರಿಂದ ಅಸ್ಪೃಶ್ಯರನ್ನು ಅವರ ಆಪತ್ತಿನಿಂದ ಕಾಪಾಡಲು ಸಲಹಾಸಮಿತಿಗೆ ಸಾಧ್ಯವಾಗುವುದಿಲ್ಲ.

೧೫. ಆದ್ದರಿಂದ ಅಸ್ಪೃಶ್ಯರ ಸ್ಥಾನವು ಯಾವುದೇ ಗಂಡಾಂತರಕ್ಕೆ ಸಿಕ್ಕುವುದನ್ನು ತಪ್ಪಿಸಲು ಸಂಸತ್ತು ಮಧ್ಯೆ ಪ್ರವೇಶಿಸಬೇಕು. ತಾನು ನೀಡಿರುವ ವಚನವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದಷ್ಟೇ ಅಲ್ಲದೆ, ಸಂವಿಧಾನ ಸಭೆಯಲ್ಲಿ ನಡೆಯುವ ಚರ್ಚೆಗಳನ್ನು ಮತ್ತು ತೆಗೆದುಕೊಳ್ಳುವ ನಿರ್ಧಾರಗಳನ್ನು ನಂತರ ಪುನರ್ವಿಮರ್ಶೆಮಾಡಲು ಸಾಧ್ಯವಿಲ್ಲದಿರುವ ಕಾರಣದಿಂದ ಸಂಸತ್ತು ಈಗ ಈ ವಿಷಯದಲ್ಲಿ ಕ್ರಿಯಾಶೀಲವಾಗಬೇಕು.

೧೬. ಸಂಸತ್ತು ಮಾಡಬಹುದಾದುದೇನು? ತಾತ್ಕಾಲಿಕ ಸರಕಾರದ ವಿಷಯದಲ್ಲಿ ತಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಅಸ್ಪೃಶ್ಯರು ಇಚ್ಛಿಸುತ್ತಾರೆ. ಅವರು ತಮಗೆ ನಿರ್ದಿಷ್ಟ ಸಂಖ್ಯೆಯ ಸ್ಥಾನಗಳನ್ನು ನಿಗದಿಮಾಡಬೇಕೆಂದು ಕೇಳುತ್ತಾರೆ. ಕಾರ್ಯಾಂಗದಲ್ಲಿ ತಮ್ಮ ಸದಸ್ಯರನ್ನು ನಾಮಕರಣಮಾಡುವ ಹಕ್ಕನ್ನು ಬಯಸುತ್ತಿದ್ದಾರೆ. ಈ ಹಕ್ಕುಗಳು ಹೊಸ ಬೇಡಿಕೆಗಳೇನೂ ಅಲ್ಲ. ಅವುಗಳು ಅವರ ಕಾನೂನುಬದ್ಧ ಹಕ್ಕುಗಳಾಗಿವೆ ಮತ್ತು ಅವುಗಳನ್ನು ಇತ್ತೀಚಿನ ೧೯೪೫ರ ಸಿಮ್ಲಾ ಸಮ್ಮೇಳನದಲ್ಲಿಯೂ ಮಾನ್ಯಮಾಡಲಾಗಿತ್ತು. ಈಗ ಈ ಸಮಸ್ಯೆಗೆ ಪರಿಹಾರವನ್ನು ದೊರಕಿಸಿಕೊಡುವುದು ಕಷ್ಟವೆಂಬುದನ್ನು ಅವರು ಅರಿತಿದ್ದಾರೆ. ಆದರೆ, ಸನ್ನಿವೇಶಗಳಲ್ಲಿ ಬದಲಾವಣೆಗಳಾದರೆ, ಮತ್ತು ಸರಕಾರವನ್ನು ಪುನಃ ರಚಿಸಿದರೆ, ಈ ಅನ್ಯಾಯವನ್ನು

ಸರಿಪಡಿಸಲು ಸಂಸತ್ತು ಮಹಾಪ್ರಭುಗಳ ಸರಕಾರದ ಮೇಲೆ ಒತ್ತಾಯವನ್ನು ಹೇರಬಹುದು ಎಂದು ಅವರು ನಿರೀಕ್ಷಿಸುತ್ತಾರೆ.

೧೭. ಸವರ್ಣೀಯ ಹಿಂದೂಗಳಿಂದ ತುಂಬಿರುವ ಸಂವಿಧಾನ ಸಭೆಯು ಅಸ್ಪೃಶ್ಯರಿಗೆ ರಾಜಕೀಯ ಸಂರಕ್ಷಣೆಯನ್ನು ನೀಡಲೇಬಾರದೆಂದು ತೀರ್ಮಾನಿಸಿರುವುದರಿಂದ, ಈ ಅಸ್ಪೃಶ್ಯರಿಗೆ ಆಗುವ ಅನ್ಯಾಯವನ್ನು ಸರಿಪಡಿಸಲು ಮಾಡಬಹುದಾದದ್ದು ಬಹಳಷ್ಟು ಇದೆ. ಈ ಕುಚೇಷ್ಟೆಯನ್ನು ತಡೆಯಲು ಈ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಬಹುದು –

೧) ಅಸ್ಪೃಶ್ಯರನ್ನು ಅಲ್ಪಸಂಖ್ಯಾತರೆಂದು ಘೋಷಿಸುವಂತೆ ಮಹಾಪ್ರಭುಗಳ ಸರಕಾರವನ್ನು ಒತ್ತಾಯಿಸುವುದು

೧೯೪೬ರ ಜೂನ್ ೨೫ರ ತನ್ನ ಪತ್ರದಲ್ಲಿ ಕಾಂಗ್ರೆಸ್ ಸ್ಪಷ್ಟಪಡಿಸಿರುವ ನಿಲುವಿನಿಂದಾಗಿ ಈ ಕ್ರಮ ಅತ್ಯಗತ್ಯವಾಗಿದೆ. ಅಸ್ಪಶ್ಯರು ಅಲ್ಪಸಂಖ್ಯಾತರಲ್ಲ ಎಂಬ ಕಾಂಗ್ರೆಸ್ಸಿನ ಧೋರಣೆಗೆ ವೈಸ್‌ರಾಯ್ ಅವರು ೧೯೪೬ರ ಜೂನ್ ೨೭ರ ತಮ್ಮ ಪತ್ರದಲ್ಲಿ ಸ್ಪಷ್ಟವಾದ ಉತ್ತರವನ್ನು ನೀಡದೆ ನುಣುಚಿಕೊಂಡಿರುವುದರಿಂದ ಈ ಕ್ರಮವು ಅನಿವಾರ್ಯವಾಗಿದೆ. ಸರಕಾರವು ಈ ನಿಟ್ಟಿನಲ್ಲಿ ಒಂದು ಘೋಷಣೆಯನ್ನು ಹೊರಡಿಸದಿದ್ದರೆ, ಅಸ್ಪೃಶ್ಯರು ಎರಡು ಬಗೆಯ ತೊಂದರೆಗಳಿಗೆ ಸಿಕ್ಕಿಕೊಳ್ಳುತ್ತಾರೆ. –

ಅ) ಹಿಂದೂಗಳೇ ಪ್ರಬಲವಾಗಿರುವ ಸಂವಿಧಾನ ಸಭೆಯು ಅಲ್ಪಸಂಖ್ಯಾತರ ಹಕ್ಕುಗಳನ್ನು ಅಸ್ಪೃಶ್ಯರಿಗೆ ನೀಡುವುದಿಲ್ಲ.

ಆ) ತಾವು ಅಸ್ಪೃಶ್ಯರನ್ನು ಅಲ್ಪಸಂಖ್ಯಾತರೆಂದು ಮಾನ್ಯಮಾಡಬೇಕೆಂಬುದಕ್ಕೆ ಬದ್ಧವಾಗಿಲ್ಲ ಎಂದು ಮಹಾಪ್ರಭುಗಳ ಸರಕಾರವು ಈ ಸಮಸ್ಯೆಯಿಂದ ತಪ್ಪಿಸಿಕೊಂಡು ಅಸ್ಪೃಶ್ಯರ ಸಹಾಯಕ್ಕೆ ಬರದಿರಬಹುದು.

೨) ಸಂವಿಧಾನ ಸಭೆಯು ಅಸ್ಪೃಶ್ಯರ ರಕ್ಷಣೆಗೆ ರಚಿಸಿರುವ ಸಾಂವಿಧಾನಿಕ ಕ್ರಮಗಳು ಆವಶ್ಯಕತೆಗಳಿಗೆ ತಕ್ಕಷ್ಟು ಇವೆಯೇ ಮತ್ತು ಸಮರ್ಪಕವಾಗಿವೆಯೇ ಎಂಬುದನ್ನು ಪರೀಕ್ಷಿಸಲು ಒಂದು ವ್ಯವಸ್ಥೆಯನ್ನು ರೂಪಿಸುವ ವಿಷಯದಲ್ಲಿ ಒಂದು ಘೋಷಣೆಯನ್ನು ನೀಡುವಂತೆ ಹಾಗೂ ಅಂತಹ ವ್ಯವಸ್ಥೆಯು ಯಾವ ರೀತಿಯದಾಗಿರುತ್ತದೆ ಎಂಬುದನ್ನು ತಿಳಿಸುವಂತೆ ಮಹಾಪ್ರಭುಗಳ ಸರಕಾರವನ್ನು ಒತ್ತಾಯಿಸುವುದು.

ಅ) ೧೯೪೬ರ ಮೇ ೨೫ರ ತಮ್ಮ ಪೂರಕ ಹೇಳಿಕೆಯಲ್ಲಿ ಕ್ಯಾಬಿನೆಟ್ ಮಿಷನ್ ಹೀಗೆ ಹೇಳುತ್ತದೆ –

"ಸಂವಿಧಾನ ಸಭೆಯು ತನ್ನ ಕಾರ್ಯವನ್ನು ಪೂರೈಸಿದ ನಂತರ, ಮಹಾಪ್ರಭುಗಳ ಸರಕಾರವು ಭಾರತದ ಜನತೆಯ ಮೇಲಿನ ತನ್ನ ಪ್ರಭುತ್ವವನ್ನು ಹಿಂತೆಗೆದುಕೊಳ್ಳುವ ಸಂಬಂಧದಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಂಸತ್ತಿಗೆ ಶಿಫಾರಸ್ಸನ್ನು ಮಾಡುತ್ತದೆ. ಆದರೆ ಇದು ವಿವಾದಾತ್ಮಕವಲ್ಲವೆಂದು ನಾವು ಭಾವಿಸಿರುವ ಎರಡು ವಿಷಯಗಳಿಗೆ ಒಳಪಟ್ಟಿದೆ. ಅವೆಂದರೆ, ಅಲ್ಪಸಂಖ್ಯಾತರ ರಕ್ಷಣೆಗೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವುದು (ಹೇಳಿಕೆಯ ೨೦ನೆಯ ಪ್ಯಾರಾ) ಮತ್ತು ಅಧಿಕಾರದ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಏಳಬಹುದಾದ ಯಾವುದೇ ವಿಷಯಗಳನ್ನು ಒಳಗೊಳ್ಳುವಂತಹ ಒಂದು ಒಪ್ಪಂದವನ್ನು ಮಹಾಪ್ರಭುಗಳ ಸರಕಾರದ ಜೊತೆಗೆ ಮಾಡಿಕೊಳ್ಳುವುದು (ಹೇಳಿಕೆಯ ೨೨ನೆಯ ಪ್ಯಾರಾ)."

ಈ ಪ್ಯಾರಾದ ಹಿಂದಿರುವ ಉದ್ದೇಶವು ಅರ್ಥವಾಗುವುದಿಲ್ಲ. ಇಲ್ಲಿನ ಉದ್ದೇಶವನ್ನು ವಿವರಿಸುವಂತೆ

ಮಹಾಪ್ರಭುಗಳ ಸರಕಾರವನ್ನು ಕೇಳುವುದು ಅಗತ್ಯವಾಗಿದೆ.

ಆ) ಮೇಲಿನ ಹೇಳಿಕೆಯಲ್ಲಿನ 'ಒಳಪಟ್ಟು' ಎಂಬ ಪದಗಳು ಮಹಾಪ್ರಭುಗಳ ಸರಕಾರವು ಸಂವಿಧಾನ ಸಭೆಯು ಅಲ್ಪಸಂಖ್ಯಾತರನ್ನು ರಕ್ಷಿಸಲು ರೂಪಿಸುವ ಕ್ರಮಗಳು ಅಗತ್ಯಕ್ಕೆ ಅನುಗುಣವಾಗಿದೆಯೇ ಮತ್ತು ಸಮರ್ಪಕವಾಗಿವೆಯೇ ಎಂಬುದನ್ನು ಪರೀಕ್ಷಿಸುವ ಹಕ್ಕನ್ನು ತಾನೇ ಇಟ್ಟುಕೊಳ್ಳುತ್ತದೆ ಎಂಬ ಅರ್ಥವನ್ನು ನೀಡುವುದಾದರೆ, ಇದಕ್ಕಾಗಿ ಯಾವ ರೀತಿಯ ವ್ಯವಸ್ಥೆಯನ್ನು ಜಾರಿಗೆ ತರಲು ಉದ್ದೇಶಿಸಿದೆ ಎಂಬುದನ್ನು ತಿಳಿಸುವಂತೆ ಮಹಾಪ್ರಭುಗಳ ಸರಕಾರವನ್ನು ಒತ್ತಾಯಿಸುವುದು ಅಗತ್ಯವಾಗಿದೆ. ಅಲ್ಪಸಂಖ್ಯಾತ ಸಮುದಾಯಗಳಿಂದ ಸಾಕ್ಷಿಗಳ ವಿಚಾರಣೆಯನ್ನು ನಡೆಸುವ ಅಧಿಕಾರವುಳ್ಳ ಸಂಸತ್ತಿನ ಜಂಟಿ ಸಮಿತಿಯನ್ನು ರಚಿಸುವುದು ಅತ್ಯಂತ ಯುಕ್ತವಾದ ವ್ಯವಸ್ಥೆಯಾಗುತ್ತದೆ. ಇದಕ್ಕೆ ಪೂರ್ವನಿದರ್ಶನವೂ ಇದೆ. ೧೯೩೫ರ ಭಾರತ ಸರಕಾರದ ಕಾನೂನು ರಚನೆಯ ಹಂತದಲ್ಲಿದ್ದಾಗ ಸಂಸತ್ತಿನ ಜಂಟಿ ಸಮಿತಿಯೊಂದನ್ನು ರಚಿಸಲಾಗಿತ್ತು. ಸಂವಿಧಾನ ಸಭೆಯ ವರದಿಯ ವಿಷಯದಲ್ಲಿಯೂ ಇಂತಹ ಪೂರ್ವನಿದರ್ಶನವನ್ನು ಅನುಸರಿಸುವುದರಲ್ಲಿ ತಪ್ಪೇನೂ ಇಲ್ಲ.

೩) ಸಂವಿಧಾನ ಸಭೆಯು ರೂಪಿಸುವ ಸಂವಿಧಾನದಲ್ಲಿ ಅಲ್ಪಸಂಖ್ಯಾತರ ಸಂರಕ್ಷಣಾ ಕ್ರಮಗಳನ್ನು ಭಾವೀ ಶಾಸಕಾಂಗವು ಕೇವಲ ಸರಳ ಬಹುಮತದಿಂದ ತೆಗೆದುಹಾಕಬಹುದಾದ ವಿಧಿಗೆ ಇತಿಮಿತಿಗಳನ್ನು ಕಲ್ಪಿಸುವಂತೆ ಒತ್ತಾಯಮಾಡುವ ಷರತ್ತನ್ನು ಒಳಗೊಳ್ಳುವುದೆಂದು ಘೋಷಿಸುವಂತೆ ಮಹಾಪ್ರಭುಗಳ ಸರಕಾರವನ್ನು ಕೋರುವುದು.

ಅ) ಸ್ವತಂತ್ರ ಭಾರತದ ಶಾಸಕಾಂಗವು ಅಲ್ಪಸಂಖ್ಯಾತರ ಸಂರಕ್ಷಣಾ ಕ್ರಮವನ್ನು ಒಳಗೊಂಡಿರುವ ವಿಧಿಗಳನ್ನು ರದ್ದುಪಡಿಸುವುದರ ಬಗ್ಗೆಯಾಗಲೀ ಅಥವಾ ತಿದ್ದುಪಡಿಮಾಡುವ ಬಗೆಗಾಗಲೀ ಕ್ಯಾಬಿನೆಟ್ ಮಿಷನ್ನಿನ ೧೯೪೫ ಮೇ ೧೬ರಂದು ನೀಡಿದ ಪ್ರಥಮ ಹೇಳಿಕೆಯಾಗಲೀ ಅಥವಾ ೧೯೪೬ರ ಮೇ ೨೫ರಂದು ನೀಡಿದ ಪೂರಕ ಹೇಳಿಕೆಯಾಗಲೀ ಏನನ್ನೂ ಹೇಳುವುದಿಲ್ಲ. ಸ್ವತಂತ್ರ ಭಾರತದ ಶಾಸಕಾಂಗವು ರದ್ದುಮಾಡಬಹುದಾದಂತಹ ಸಂರಕ್ಷಣಾ ವಿಧಿಗಳನ್ನು ಈಗಿನ ಸಂಸತ್ತಿನಲ್ಲಿ ಮಂಡಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇಂತಹ ಕ್ರಮಗಳ ವಿರುದ್ಧ ಈಗ ಮಾಡಬಹುದಾಗಿರುವ ಕ್ರಮವೆಂದರೆ, ಸಂವಿಧಾನ ಸಭೆಯು ರಚಿಸಲಿರುವ ಸಂವಿಧಾನದಲ್ಲಿಯೇ ಅಲ್ಪಸಂಖ್ಯಾತರಿಗಾಗಿ ಮಾಡಿರುವ ಸಂರಕ್ಷಣಾ ವಿಧಿಗಳಿಗೆ ಸ್ವತಂತ್ರ ಭಾರತದ ಶಾಸಕಾಂಗವು ತಿದ್ದುಪಡಿಮಾಡುವ ಮೊದಲು ಇಂತಿಂತಹ ಷರತ್ತುಗಳನ್ನು ಪೂರೈಸಿರಬೇಕು ಎಂಬ ಪೂರ್ವನಿರ್ಣಯವನ್ನು ಸೇರಿಸಬೇಕು. ಇಂತಹ ಕರಾರುಗಳು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಮತ್ತು ಆಸ್ಟ್ರೇಲಿಯಾದ ಸಂವಿಧಾನಗಳಲ್ಲಿ ಇವೆ.

ಆ) ಈ ವಿಷಯವು ಅಲ್ಪಸಂಖ್ಯಾತರಿಗೆ ಅತಿ ಮಹತ್ವದ್ದಾಗಿದ್ದರೂ, ಕ್ಯಾಬಿನೆಟ್ ಮಿಷನ್ ಇದನ್ನು ಕುರಿತು ಯೋಚಿಸಿಯೇ ಇಲ್ಲ. ಈ ಸಮಸ್ಯೆಯನ್ನು ಕುರಿತು ತಮ್ಮ ಅಭಿಪ್ರಾಯವೇನೆಂದು ತಿಳಿಯ ಪಡಿಸುವಂತೆ ಮಹಾಪ್ರಭುಗಳ ಸರಕಾರವನ್ನು ಕೋರುವುದು ಅತ್ಯಾವಶ್ಯಕ.

**ಡಾ. ಬಿ.ಆರ್. ಅಂಬೇಡ್ಕರ್**

---

(ಖೈರ್‌ಮೊಡೆ, ಸಂಪುಟ ೮, ಪುಟಗಳು೧೨೪–೧೩೯)

# ೨೨. ಡಾ. ಅಂಬೇಡ್ಕರ್ ಅವರ ಜ್ಞಾಪನಾಪತ್ರ

ಲಂಡನ್, ಅಕ್ಟೋಬರ್ ೨೫

“ಡಾ. ಬಿ.ಆರ್. ಅಂಬೇಡ್ಕರ್ ಅವರು ಬ್ರಿಟಿಷ್ ಪ್ರಧಾನಿಯವರಿಗೆ, ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಅವರಿಗೆ, ವಿನ್ಸ್ಟನ್ ಚರ್ಚಿಲ್ ಅವರಿಗೆ ಮತ್ತು ಇತರ ರಾಜಕೀಯ ನಾಯಕರಿಗೆ ಕಳೆದ ರಾತ್ರಿ ಪತ್ರಗಳನ್ನು ಕಳುಹಿಸಿದರು.

ಡಾ. ಅಂಬೇಡ್ಕರ್ ಅವರು ತಮ್ಮ ವಾದವನ್ನು ಮಂಡಿಸುವುದಕ್ಕಾಗಿ ಇವರುಗಳ ಸಂದರ್ಶನವನ್ನು ತಮ್ಮ ಪತ್ರದಲ್ಲಿ ಕೋರಿದ್ದಾರೆ.

ಡಾ. ಅಂಬೇಡ್ಕರ್ ಅವರು ತಮ್ಮ ಪತ್ರವ್ಯವಹಾರವನ್ನು ಮಾಡುತ್ತಿರುವವರಲ್ಲಿ ಲಾರ್ಡ್ ಟೆಂಪಲ್‌ವುಡ್ (ಈ ಮೊದಲು ಸರ್ ಸಾಮ್ಯುಯಲ್ ಹೋರೆ ಎಂಬ ಹೆಸರಿನವರು), ಲಾರ್ಡ್ ಸ್ಕಾರ್‌ಬರೋ (ಈ ಮೊದಲು ಸರ್ ರೋಜರ್ ಲೂಮ್ಲೆ ಎಂಬ ಹೆಸರಿನವರು), ಲಾರ್ಡ್ ಲಿನ್‌ಲಿಥ್‌ಗೋ ಮತ್ತು ಲಾರ್ಡ್ ಸಾಲಿಸಬರಿ ಇದ್ದಾರೆ.

ಕಳೆದ ರಾತ್ರಿ ರಾಯ್ಟರ್‌ನ ಪ್ರತಿನಿಧಿಯೊಂದಿಗೆ ಮಾತನಾಡುತ್ತಾ ಡಾ. ಅಂಬೇಡ್ಕರ್ ಅವರು 'ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ ಮತ್ತು ಪರಿಶಿಷ್ಟ ಜಾತಿಯವರ ಸ್ಥಿತಿಗತಿಗಳನ್ನು ಬಲ್ಲ ಹಲವಾರು ಸ್ನೇಹಿತರಿಗೂ ಪತ್ರಗಳನ್ನು ಬರೆದಿದ್ದೇನೆ. ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಗಳವರನ್ನು ಪ್ರತಿನಿಧಿಸುತ್ತದೆ ಎಂಬುದು ನಿಜವಲ್ಲವೆಂಬುದನ್ನು ಮನಗಾಣಿಸಲು ಪ್ರಾಥಮಿಕ ಚುನಾವಣೆಗಳ ಫಲಿತಾಂಶವನ್ನು ವಿಶ್ಲೇಷಿಸಿ ಒಂದು ಜ್ಞಾಪನಾಪತ್ರವನ್ನು ಸಿದ್ಧಪಡಿಸಿದ್ದೇನೆ' ಎಂದು ಹೇಳಿದರು.

ಜ್ಞಾಪನಾ ಪತ್ರವು ಮುದ್ರಣಗೊಳ್ಳುತ್ತಿದ್ದು, ಅದರ ಪ್ರತಿಗಳನ್ನು ಸಂಬಂಧಿಸಿದ ರಾಜಕೀಯ ನಾಯಕರಿಗೆ ನೀಡಲಾಗುವುದು. (ರಾಯ್ಟರ್) (ದ ಟೈಮ್ಸ್ ಆಫ್ ಇಂಡಿಯಾ, ದಿ. ೧೯೪೬ರ ಅಕ್ಟೋಬರ್ ೨೬)

* * * * *

# ೨೩. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಬೇಡಿಕೆ

ಲಂಡನ್, ನವೆಂಬರ್ ೧ (ರಾಯ್ಟರ್)

ಈಗ ಲಂಡನ್ನಿನಲ್ಲಿರುವ ಪರಿಶಿಷ್ಟ ಜಾತಿಗಳ ನಾಯಕರಾದ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಕಾರ, ಹೊಸ ಭಾರತೀಯ ಸರಕಾರದಿಂದ ಪರಿಶಿಷ್ಟ ಜಾತಿಗಳು ಪ್ರತ್ಯೇಕ ಪ್ರಾತಿನಿಧ್ಯವನ್ನು ಪಡೆಯದಿದ್ದರೆ, ಅವರು ಮುಸ್ಲಿಂ ಸಮುದಾಯದವರೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಸಂಭವವಿದೆ.

ಟೊರಾಂಟೋ ವಿಶ್ವವಿದ್ಯಾನಿಲಯದ ಭಾರತೀಯ ವಿದ್ಯಾರ್ಥಿ ಹಾಗೂ ಲಾಹೋರಿನ ಮಾಜಿ ಪತ್ರಕರ್ತ ಶ್ರೀ ಅಮೀನ್ ತರೀನ್ ಅವರು ಪರಿಶಿಷ್ಟ ಜಾತಿಗಳವರು ಭಾರತದ ಸರಕಾರದಿಂದ ತೃಪ್ತಿಯು ಸಿಗದಿದ್ದರೆ ಇಸ್ಲಾಂ ಮತಕ್ಕೆ ಮತಾಂತರಗೊಳ್ಳುವಂತೆ ಡಾ. ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಯ ಜನರಿಗೆ ಸಲಹೆಯನ್ನು ನೀಡಿದ್ದಾರೆ ಎಂದು ನೀಡಿರುವ ವರದಿಯನ್ನು ಕುರಿತು ಡಾ. ಅಂಬೇಡ್ಕರ್ ಅವರು ಇಂದು ರಾಯ್ಟರ್‌ನೊಂದಿಗೆ ಮಾತನಾಡುತ್ತಾ ಹೀಗೆ ಹೇಳಿದರು 'ನಾನು ಅಂತಹ ಸಲಹೆಯನ್ನು ನೀಡಿಲ್ಲ. ಆದರೆ ಅಂತಹ ಸನ್ನಿವೇಶವು ಬರಬಹುದು. ಕಾಂಗ್ರೆಸ್ ಹಾಗೂ ಶ್ರೀ ಗಾಂಧಿಯವರಿಗೆ ಜ್ಞಾನೋದಯವಾಗಿ ಅವರು ಅಸ್ಪೃಶ್ಯರಿಗೆ ಹಿಂದೂಗಳ ಹಿಡಿತದಿಂದ ಸ್ವಾತಂತ್ರ್ಯವನ್ನು ಕೊಡಿಸುವುದಕ್ಕೆ ಸಮ್ಮತಿಸುತ್ತಾರೆ ಎಂದು ನಾನು ನಂಬುತ್ತೇನೆ. ಶ್ರೀ ಗಾಂಧಿಯವರಿಗೆ ಈ ವ್ಯತ್ಯಾಸವು ತಿಳಿಯದೇ ಹೋದದ್ದು ನಿಜಕ್ಕೂ ವಿಷಾದನೀಯವಾಗಿದೆ.

ಶ್ರೀ ಗಾಂಧಿಯವರು ಮತ್ತು ಕಾಂಗ್ರೆಸ್ ಪಕ್ಷದವರು, ಅಸ್ಪೃಶ್ಯರಿಗೆ ರಾಜಕೀಯ ಸ್ವಾತಂತ್ರ್ಯವನ್ನು ನೀಡಿದರೆ, ಹಿಂದೂಗಳ ಮತ್ತು ಅಸ್ಪೃಶ್ಯರ ನಡುವೆ ಹೆಚ್ಚಿನ ಏಕತೆ, ಸಹಕಾರ ಮತ್ತು ಸೌಹಾರ್ದತೆಗಳು ಉಂಟಾಗುತ್ತವೆ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ, ಗಾಂಧಿಯವರಾಗಲೀ, ಕಾಂಗ್ರೆಸ್ ಪಕ್ಷದವರಾಗಲೀ ಅವರನ್ನು ಹಿಂದೂಗಳ ರಾಜಕೀಯ ಪ್ರಾಬಲ್ಯದಡಿಯಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿದರೆ, ಅವರನ್ನು ಹಿಂದೂಗಳ ರಾಜಕೀಯ ಗುಲಾಮರನ್ನಾಗಿಸಿದರೆ, ಅಸ್ಪೃಶ್ಯರು ದಂಗೆಯೇಳುತ್ತಾರೆ ಮತ್ತು ಬೇರೆ ಸಮುದಾಯಗಳಿಗೆ ಮತಾಂತರಗೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ'

ದ ಬಾಂಬೆ ಕ್ರಾನಿಕಲ್, ದಿ. ೧೯೪೬ರ ನವೆಂಬರ್ ೨.

* * * * *

## ೨೪. ಚರ್ಚಿಲ್ ಮತ್ತು ಅಂಬೇಡ್ಕರ್ ಅವರ ನಡುವಿನ ಮಾತುಕತೆ

ಡಾ. ಬಿ.ಆರ್. ಅಂಬೇಡ್ಕರ್ ಅವರು ಚರ್ಚಿಲ್ ಅವರನ್ನು ಭೇಟಿಯಾಗಿ ಭಾರತದಲ್ಲಿ ಪರಿಶಿಷ್ಟ ಜಾತಿಗಳವರ ಹೀನಾಯವಾದ ಪರಿಸ್ಥಿತಿಯನ್ನು ವಿವರಿಸಿದರು. ಅವರ ಮಾತುಕತೆಯನ್ನು ಕುರಿತ ಪತ್ರಿಕಾ ವರದಿಯು ಹೀಗಿದೆ – ಸಂಪಾದಕರು.

ಲಂಡನ್, ನವೆಂಬರ್ ೪: ಪರಿಶಿಷ್ಟ ಜಾತಿಗಳ ನಾಯಕರಾದ ಡಾ. ಅಂಬೇಡ್ಕರ್ ಅವರು ತಾವು ಬ್ರಿಟಿಷ್ ಕನ್ಸರ್ವೇಟಿವ್ ಪಕ್ಷದ ನಾಯಕರಾದ ವಿನ್ಸ್‌ಟನ್ ಚರ್ಚಿಲ್ ಅವರನ್ನು ಭೇಟಿಯಾಗಿ ಅವರಿಗೆ, ಪ್ರಾಂತೀಯ ಸರಕಾರಗಳಲ್ಲಿ ದಲಿತ ವರ್ಗಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡುವ ವಿಷಯದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುವುದಾಗಿ ಎಂದು ಹೇಳಿದರು.

ಅವರು ಮುಂದುವರೆದು, ತಾವು ಕೆಂಟ್‌ನ ವೆಸ್ಟರ್‌ಹ್ಯಾಮ್‌ನಲ್ಲಿರುವ ಚರ್ಚಿಲ್ ಅವರ ನಿವಾಸದಲ್ಲಿ ಭೇಟಿಯಾಗಿ, ಯುದ್ಧದ ನಾಯಕನೊಂದಿಗೆ ಭೋಜನವನ್ನು ಮಾಡಿ ದಿನದ ಬಹುಭಾಗವನ್ನು ಕಳೆದುದಾಗಿಯೂ, ಮತ್ತು ಚರ್ಚಿಲ್ ಅವರು ಬಹಳ ಅನುಕಂಪವನ್ನು ವ್ಯಕ್ತಪಡಿಸಿದರು ಎಂದೂ ಹೇಳಿದರು.

(ದ ಟೈಮ್ಸ್ ಆಫ್ ಇಂಡಿಯಾ, ಬುಧವಾರ, ೧೯೪೬ರ ನವೆಂಬರ್ ೬, ಪುಟ ೫ – ಖೈರ್‌ಮೊಡೆ, ಸಂಪುಟ ೮, ಪುಟ ೧೯ರಲ್ಲಿ ಪುನರ್ಮುದ್ರಿತ).

* * * * *

# ೨೫. ಪ್ರತ್ಯೇಕ ಮತಕ್ಷೇತ್ರಗಳನ್ನು ಪುನಃ ಜಾರಿಗೆ ತನ್ನಿ

ಲಂಡನ್ನಿನಲ್ಲಿ ಇರುವಾಗ ಡಾ. ಬಿ.ಆರ್. ಅಂಬೇಡ್ಕರ್ ಅವರು ಕನ್ಸರ್ವೇಟೀವ್ ಇಂಡಿಯನ್ ಕಮಿಟಿಯನ್ನು ಉದ್ದೇಶಿಸಿ ಸಂಸತ್ತಿನ ಕೆಳಮನೆಯಲ್ಲಿ ಭಾಷಣಮಾಡಿದರು. ಈ ಸಭೆಯಲ್ಲಿ ೧೯೪೬ರ ನವೆಂಬರ್ ೫ರಂದು ಲೇಬರ್ ಮತ್ತು ಲಿಬರಲ್ ಪಕ್ಷದ ಸಂಸತ್ ಸದಸ್ಯರೂ ಭಾಗವಹಿಸಿದ್ದರು. ಸಭೆಯ ವರದಿಯು ಮುಂದೆ ನೀಡಿರುವಂತೆ ಇದೆ – ಸಂಪಾದಕರು.

ಲಂಡನ್: ನವೆಂಬರ್ ೬ (ಯು.ಪಿ.ಐ.) – ನಿನ್ನೆಯ ದಿನ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂಸತ್ತಿನ ಕೆಳಮನೆಯಲ್ಲಿ ಕನ್ಸರ್ವೇಟೀವ್ ಇಂಡಿಯನ್ ಕಮಿಟಿಯನ್ನು ಉದ್ದೇಶಿಸಿ ಮಾತನಾಡಿದರು. ಆ ಸಭೆಯಲ್ಲಿ ಲೇಬರ್ ಮತ್ತು ಲಿಬರಲ್ ಪಕ್ಷದ ಕೆಲವು ಸದಸ್ಯರೂ ಹಾಜರಿದ್ದರು. ಪತ್ರಕರ್ತರ ಪ್ರವೇಶವನ್ನು ನಿಷೇಧಿಸಲಾಗಿತ್ತು. ಸಭೆಯು ಸುಮಾರು ಒಂದು ಗಂಟೆಯವರೆಗೆ ನಡೆಯಿತು ಮತ್ತು ಅದರ ಕಲಾಪಗಳು ಅನಧಿಕೃತವಾಗಿದ್ದವು.

ಡಾ. ಅಂಬೇಡ್ಕರ್ ಅವರು ಕ್ಯಾಬಿನೆಟ್ ಮಿಷನ್ನಿನ ಕಾರ್ಯಗಳ ಬಗ್ಗೆ ತಮ್ಮ ಅತೀವ ಅತೃಪ್ತಿಯನ್ನು ವ್ಯಕ್ತಪಡಿಸಿದರು ಎಂದು ತಿಳಿದುಬಂದಿದೆ. ಕಾಂಗ್ರೆಸ್ ಅಸ್ಪೃಶ್ಯರನ್ನು ಪ್ರತಿನಿಧಿಸುವುದಿಲ್ಲ ಎಂದು ವಿವರಿಸಿ ತಾವು ಚರ್ಚಿಲ್ ಹಾಗೂ ಲಾರ್ಡ್ ಪೆಥಿಕ್ ಲಾರೆನ್ಸ್ ಅವರಿಗೆ ನೀಡಿದ್ದ ವಿಜ್ಞಾಪನಾ ಪತ್ರದ ಸಾರಾಂಶವನ್ನು ಅಲ್ಲಿ ಹಾಜರಿದ್ದ ಸದಸ್ಯರಿಗೂ ವಿವರಿಸಿದರು. ತಾವು ಹಾಗೂ ಮಹಾತ್ಮ ಗಾಂಧಿಯವರು ಸಹಿಮಾಡಿರುವ ಪೂನಾ ಒಪ್ಪಂದವನ್ನು (೬ನೆಯ ಪರಿಶಿಷ್ಟವನ್ನು ನೋಡಿ)ರದ್ದುಮಾಡಬೇಕೆಂದೂ ಮತ್ತು ಮ್ಯಾಕ್ಡೊನಾಲ್ಡ್ ಅವರ ತೀರ್ಪಿನ ಪ್ರಕಾರ ಉದ್ದೇಶಿಸಿದ್ದ ಪ್ರತ್ಯೇಕ ಮತಕ್ಷೇತ್ರಗಳನ್ನು ಪುನಃ ಜಾರಿಗೆ ತರಬೇಕೆಂದೂ ಅವರು ಒತ್ತಾಯಮಾಡಿದರು.

ಚರ್ಚಿಲ್ ಅವರು ಅಧಿಕಾರಕ್ಕೆ ಮರಳದಿದ್ದರೆ, ತಮ್ಮ ಧ್ಯೇಯವು ಈಡೇರುವುದರ ಬಗ್ಗೆ ಅವರಿಗೆ ಅನುಮಾನವಿದೆ.

ಲೇಬರ್ ಪಕ್ಷದ ಸದಸ್ಯರು ಅವರನ್ನು ಸೂಕ್ಷ್ಮವಾಗಿ ಪ್ರಶ್ನಿಸಿದರು. ಇದರಿಂದ ಆಳುವ ಪಕ್ಷದವರು ಕೋಮುವಾರು ಸಮಸ್ಯೆಯನ್ನು ಮತ್ತೆ ಉದ್ರೇಕಗೊಳಿಸುವ ಉದ್ದೇಶವನ್ನು ಹೊಂದಿಲ್ಲವೆಂಬುದು ಕಂಡುಬಂದಿತು. ಬದಲಾದ ಸನ್ನಿವೇಶಗಳಿಗೆ ಹೊಂದಿಕೊಂಡು ಹೋಗುವಂತೆ ಮತ್ತು ಸಂವಿಧಾನ ಸಭೆಯಲ್ಲಿ ತಮ್ಮ ಅದೃಷ್ಟವನ್ನು ಪರೀಕ್ಷಿಸುವಂತೆ ಅಂಬೇಡ್ಕರ್ ಅವರಿಗೆ ಆ ಸದಸ್ಯರು ಹೇಳಿದರು ಎಂದು ತಿಳಿದುಬಂದಿದೆ.

(ಬಾಂಬೆ ಕ್ರಾನಿಕಲ್, ದಿನಾಂಕ: ೧೯೪೬ರ ನವೆಂಬರ್ ೭. ಖೈರ್‌ಮೊಡೆ, ಸಂಪುಟ ೮, ಪುಟಗಳು ೧೪೦–೧೪೧ರಲ್ಲಿ ಪುನರ್ಮುದ್ರಿತ)

* * * * *

# ೨೬. ಬ್ರಿಟಿಷರು ನಿಷ್ಪಕ್ಷಪಾತವಾಗಿ ವರ್ತಿಸುತ್ತಾರೆ: ಡಾ. ಅಂಬೇಡ್ಕರ್ ಅವರ ವಿಶ್ವಾಸ

ಲಂಡನ್, ನವೆಂಬರ್ ೭ (ರಾಯ್ಟರ್)

ತಮ್ಮ ಇಂಗ್ಲೆಂಡ್ ಭೇಟಿಯನಂತರ ಸ್ವದೇಶಕ್ಕೆ ಮುಂದಿನ ಸೋಮವಾರ ಹಿಂದಿರುಗುತ್ತಿರುವ, ಪರಿಶಿಷ್ಟ ಜಾತಿಗಳವರ ನಾಯಕ ಡಾ.ಅಂಬೇಡ್ಕರ್ ಅವರು ರಾಯ್ಟರ್‌ನ ರಾಜಕೀಯ ಪ್ರತಿನಿಧಿ ಫ್ರೇಜ಼ರ್ ವೈಟಾನ್ ಅವರಿಗೆ ನೀಡಿದ ಸಂದರ್ಶನದಲ್ಲಿ ಮಾತನಾಡುತ್ತಾ ಸಂದರ್ಭವು ಒದಗಿಬಂದರೆ, ಬ್ರಿಟಿಷ್ ಸರಕಾರವು ಪರಿಶಿಷ್ಟ ಜಾತಿಯವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಹಿಂದೆಮುಂದೆ ನೋಡುವುದಿಲ್ಲ ಎಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ತಾತ್ಕಾಲಿಕ ಸರಕಾರದಲ್ಲಿ ತಮ್ಮ ಜಾತಿಗಳವರ ಪ್ರತಿನಿಧಿಗಳನ್ನು ನಾಮಕರಣಮಾಡಲು ತಮಗೆ ಅವಕಾಶವನ್ನು ನೀಡದಿರುವುದನ್ನು ಪರಿಶಿಷ್ಟ ಜಾತಿಗಳವರಿಗೆ ಮಾಡಿದ ಅನ್ಯಾಯವೆಂದು ಭಾವಿಸಿ ಅದರ ವಿರುದ್ಧ ಪ್ರತಿಭಟಿಸಲು ಇಲ್ಲಿಗೆ ಬಂದಿದ್ದ ಡಾ. ಅಂಬೇಡ್ಕರ್ ಅವರು ಪ್ರಧಾನ ಮಂತ್ರಿ ಕ್ಲೆಮೆಂಟ್ ಅಟ್ಲೀಯವರನ್ನೂ ಒಳಗೊಂಡಂತೆ ಎಲ್ಲಾ ಬ್ರಿಟಿಷ್ ರಾಜಕೀಯ ಮುಖಂಡರನ್ನೂ ಭೇಟಿಯಾಗಿದ್ದರು.

ತಮ್ಮ ಇಂಗ್ಲೆಂಡ್ ಭೇಟಿಯು ಸಂಪೂರ್ಣವಾಗಿ ತೃಪ್ತಿಕರವಾಗಿದ್ದಿತು ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು. "ಎಲ್ಲಾ ಪಕ್ಷಗಳವರೂ ಪರಿಶಿಷ್ಟ ಜಾತಿಗಳವರ ಬಗ್ಗೆ ಅಗಾಧವಾದ ಅನುಕಂಪವನ್ನು ಹೊಂದಿದ್ದಾರೆ" ಎಂದು ಅವರು ಹೇಳಿದರು.

ಇದು ಎಲ್ಲಾ ಪಕ್ಷಗಳವರಿಗೂ ಅನ್ವಯವಾಗುತ್ತದೆ ಎಂದ ಅವರು, ತಮ್ಮ ಭೇಟಿಯಿಂದಾಗಿ ಇಂಗ್ಲೆಂಡಿನ ಪ್ರತಿಯೊಬ್ಬರಿಗೂ ಭಾರತದಲ್ಲಿನ ಪರಿಶಿಷ್ಟರು ಸಂವಿಧಾನ ಸಭೆಯಲ್ಲಿನ ಸ್ಥಾನಗಳಿಂದ ವಂಚಿತರಾಗಿರುವುದರಿಂದ ಅವರು ಸದ್ಯದಲ್ಲಿ ಯಾವ ಪರಿಸ್ಥಿತಿಯಲ್ಲಿ ಇದ್ದಾರೆ ಮತ್ತು ಇದರಿಂದ ಎಂತಹ ವಿಪತ್ತು ಒದಗಲಿದೆ ಎಂಬುದರ ಪರಿಚಯವಾಯಿತು ಎಂದು ನುಡಿದರು.

ಭಾರತದ ವಿಷಯವು ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ, ವಿವಿಧ ಪಕ್ಷಗಳವರು ತಮಗೆ ಮನದಟ್ಟಾಗಿರುವ ಈ ವಿಷಯವನ್ನು ಮರೆಯುವುದಿಲ್ಲ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು. ಇಲ್ಲಿಯವರೆಗೂ ತಮ್ಮ ವಾದಗಳು ನಿಷ್ಫಲವಾಗಿರುವದನ್ನೇ ಕಾಣುತ್ತಿದ್ದ ಅಸ್ಪೃಶ್ಯರಿಗೆ ಇದರಿಂದ ದೊಡ್ಡ ಸಮಾಧಾನವಾಗಿದೆ ಎಂದು ಅವರು ಹೇಳಿದರು.

ಡಾ. ಅಂಬೇಡ್ಕರ್ ಅವರು ತಾವು ಸರಕಾರದ ಸದಸ್ಯರನ್ನೂ ಭೇಟಿಮಾಡಿದುದಾಗಿ ಹೇಳಿದರು. ಆ ಸದಸ್ಯರು ತಮ್ಮ ಮುಂದಿನ ಕ್ರಮಗಳ ಬಗ್ಗೆ ಯಾವುದೇ ಬಗೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಲೂ ಹಿಂಜರಿಯುವುದು ಸ್ವಾಭಾವಿಕವಾಗಿದ್ದರೂ, ಅವರು ಮಧ್ಯಪ್ರವೇಶಿಸಬೇಕಾದ ಸನ್ನಿವೇಶವು ಬಂದರೆ, ಅಸ್ಪೃಶ್ಯರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಅವರು ಹಿಂದೆಮುಂದೆ ನೋಡುವುದಿಲ್ಲವೆಂದೂ ಡಾ. ಅಂಬೇಡ್ಕರ್ ಅವರು ಹೇಳಿದರು.

ತಾವು ಪರಿಶಿಷ್ಟ ಜಾತಿಗಳವರ ಬಗ್ಗೆ ತಳೆದಿರುವ ಕೆಲವು ನಿಲುವುಗಳನ್ನು ಇಂಗ್ಲೆಂಡಿನಲ್ಲಿರುವ ಶ್ರೀ

ಗಾಂಧಿಯವರ ಅನುಯಾಯಿಗಳು ಟೀಕಿಸಿರುವುದನ್ನು ಕೇಳಿ ತಮಗೆ ಆಶ್ಚರ್ಯವಾಗಿದೆ ಎಂದು ಡಾ. ಅಂಬೇಡ್ಕರ್ ಅವರು ನುಡಿದರು. "ಅವರ ದೃಷ್ಟಿಯಲ್ಲಿ ಅಸ್ಪೃಶ್ಯರು ಹಿಂದೂಗಳೇ ಆಗಿದ್ದರೂ, ಅವರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವುದಕ್ಕೆ ಅವರು ತಕರಾರು ಮಾಡುವುದರಲ್ಲಿ ಅನ್ಯಾಯವನ್ನೇನೂ ಅವರು ಕಾಣುವುದಿಲ್ಲ" ಎಂದು ಅವರು ಹೇಳಿದರು. ಪರಿಶಿಷ್ಟ ಜಾತಿಗಳವರನ್ನು ನೋಡಿಕೊಳ್ಳಬೇಕಾದ ಆವಶ್ಯಕತೆಯಿದೆ ಎಂಬುದು ಪ್ರಧಾನ ಮಂತ್ರಿಗಳ ಗಮನದಲ್ಲಿದೆ ಎಂದು ಭಾವಿಸಿರುವ ಡಾ. ಅಂಬೇಡ್ಕರ್ ಅವರು ಭಾರತದಲ್ಲಿನ ಪರಿಸ್ಥಿತಿಯ ಬಗ್ಗೆ ಅಟ್ಲೀಯವರಿಗೆ ಇರುವ ಅಭಿಪ್ರಾಯದಿಂದ ತಮಗೆ ಸಂತೋಷವಾಗಿದೆ ಎಂದು ನುಡಿದರು.

ಅಲ್ಲದೆ ಪರಿಶಿಷ್ಟ ಜಾತಿಗಳವರ ರಕ್ಷಣೆಯು ಯಾವುದೇ ಸಂವಿಧಾನದಲ್ಲಿ ಅತ್ಯಗತ್ಯವಾಗಿರಲೇಬೇಕಾದುದೆಂಬುದರ ಬಗ್ಗೆ ಚರ್ಚಿಲ್ ಅವರು ಬಲವಾದ ನಂಬಿಕೆ ಮತ್ತು ಅಪೇಕ್ಷೆಯನ್ನು ಹೊಂದಿದ್ದಾರೆ (೭ನೆಯ ಪರಿಶಿಷ್ಟವನ್ನು ನೋಡಿ) ಎಂದು ಡಾ. ಅಂಬೇಡ್ಕರ್ ಅವರು ಭಾವಿಸಿದ್ದಾರೆ.

(ದ ಬಾಂಬೆ ಕ್ರಾನಿಕಲ್, ದಿನಾಂಕ ೧೯೪೬ರ ನವೆಂಬರ್ ೯)

* * * * *

# ೨೭. ಅಲ್ಪಸಂಖ್ಯಾತರ ಆಶೆಗಳನ್ನು ತಿಳಿದುಕೊಳ್ಳಿ

ಡಾ. ಬಿ.ಆರ್. ಅಂಬೇಡ್ಕರ್ ಅವರು ಲಂಡನ್ನಿನಿಂದ ಹಿಂದಿರುಗುತ್ತಿರುವಾಗ ಅವರನ್ನು ೧೯೪೬ರ ನವೆಂಬರ್ ೧೫ರಂದು ಕರಾಚಿ ವಿಮಾನನಿಲ್ದಾಣದಲ್ಲಿ ಸಂದರ್ಶಿಸಲಾಯಿತು. ಅದರ ವರದಿಯು ಈ ಮುಂದಿನಂತೆ ಇದೆ – ಸಂಪಾದಕರು

ಕರಾಚಿ, ನವೆಂಬರ್ ೧೫, ೧೯೪೬ – ಇಂಗ್ಲೆಂಡಿನಿಂದ ಹಿಂದಿರುಗುತ್ತಿದ್ದ ಡಾ. ಅಂಬೇಡ್ಕರ್ ಅವರು ಇಲ್ಲಿ ನಡೆದ ಸಂದರ್ಶನವೊಂದರಲ್ಲಿ 'ಅಧಿಕಾರವನ್ನು ಹಸ್ತಾಂತರಗೊಳಿಸುವ ಕಾನೂನನ್ನು ಸಂಸತ್ತಿನಲ್ಲಿ ಅನುಮೋದನೆಯನ್ನು ಪಡೆದುಕೊಳ್ಳುವ ಮೊದಲು, ಬ್ರಿಟಿಷ್ ಸರಕಾರವು ದಲಿತರನ್ನೂ ಒಳಗೊಂಡಂತೆ ಅಲ್ಪಸಂಖ್ಯಾತರ ನಿಜವಾದ ಆಶೋತ್ತರಗಳನ್ನು ತಿಳಿದುಕೊಳ್ಳಲು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುತ್ತದೆ' ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು.

ದಲಿತವರ್ಗ ಹಾಗೂ ಕಾಂಗ್ರೆಸ್‌ಗಳ ನಡುವೆ ಸಂಪೂರ್ಣ ಶಾಂತಿಯನ್ನು ಕಾಪಾಡುವ ಉದ್ದೇಶದಿಂದ ಕಡೆಯ ಗಳಿಗೆಯಲ್ಲಾದರೂ ದಲಿತ ವರ್ಗಗಳವರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯವನ್ನು ಕೊಡುವಂತೆ ಡಾ. ಅಂಬೇಡ್ಕರ್ ಅವರು ಕಾಂಗ್ರೆಸ್ ಪಕ್ಷವನ್ನು ಒತ್ತಾಯಿಸಿದರು.

ಬ್ರಿಟಿಷ್ ಪ್ರಧಾನ ಮಂತ್ರಿಗಳು, ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಹಾಗೂ ಚರ್ಚಿಲ್, ಆರ್. ಎ. ಬಟ್ಲರ್, ಈ ಹಿಂದೆ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಆಗಿದ್ದು, ೧೯೩೫ರ ಭಾರತ ಕಾನೂನನ್ನು ಆಗಮಾಡಿಸಿದ ಲಾರ್ಡ್ ಟೆಂಪಲ್‌ವುಡ್ (ಮೊದಲು ಸರ್. ಸಾಮ್ಯುಯೆಲ್ ಹೋರೆ ಎಂಬ ಹೆಸರಿನವರು) ಮತ್ತು ಲಾರ್ಡ್ ಸ್ಕಾರ್‌ಬರೋ ಅವರುಗಳನ್ನು ಭೇಟಿಮಾಡಿ ದಲಿತ ವರ್ಗಗಳವರ ಸಮಸ್ಯೆಗಳನ್ನು ಚರ್ಚಿಸಿದುದಾಗಿ ತಿಳಿಸಿದರು.

ಬ್ರಿಟನ್ನಿನಲ್ಲಿ ದಲಿತ ವರ್ಗಗಳವರನ್ನು ಕುರಿತು ಅನುಕಂಪ ಮಾತ್ರವಲ್ಲದೆ, ಅವರನ್ನು ಕ್ಯಾಬಿನೆಟ್ ಮಿಷನ್ ನಿರ್ಲಕ್ಷಿಸಿರುವುದಕ್ಕಾಗಿ ತೀವ್ರವಾದ ಅತೃಪ್ತಿಯು ವ್ಯಾಪಕವಾಗಿ ಇದೆ ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು. "ಪ್ರಾಥಮಿಕ ಚುನಾವಣೆಗಳ ಅಂಕಿಅಂಶಗಳನ್ನು ವಿಶ್ಲೇಷಿಸಿದ್ದ ನನ್ನ ಜ್ಞಾಪನಾಪತ್ರವು ಅವರಿಗೆ ಅತ್ಯಾಶ್ಚರ್ಯವನ್ನು ಉಂಟುಮಾಡಿತು, ಏಕೆಂದರೆ, ಕಾಂಗ್ರೆಸ್ ಪಕ್ಷವು ಪರಿಶಿಷ್ಟ ವರ್ಗಗಳವರನ್ನು ಪ್ರತಿನಿಧಿಸುತ್ತದೆ ಎಂದು ಸಂಸತ್ತಿನ ಕೆಳಮನೆಯಲ್ಲಿ ಬ್ರಿಟಿಷ್ ಕ್ಯಾಬಿನೆಟ್ ಮಿಷನ್ ನೀಡಿದ್ದ ಹೇಳಿಕೆಯು ಶುದ್ಧಾಂಗವಾಗಿ ತಪ್ಪು ಎಂದು ನಾನು ನೀಡಿದ ಅಂಕಿಅಂಶಗಳು ತೋರಿಸಿಕೊಟ್ಟವು. ಅಧಿಕಾರ ಹಸ್ತಾಂತರದ ಸಮಯದಲ್ಲಿ ಅಧಿನಿಯಮವು ಪರಿಶೀಲನೆಗೆ ಸಂಸತ್ತಿನ ಮುಂದೆ ಬಂದಾಗ, ಅಲ್ಪಸಂಖ್ಯಾತರ ಸಂರಕ್ಷಣೆಗೆ ಸಂಬಂಧಿಸಿದಂತೆ ಸಂಸದೀಯ ಸಭೆಯು ತೆಗೆದುಕೊಂಡಿರುವ ತೀರ್ಮಾನವು ಕೇವಲ ಬಹುಮತದಿಂದ ಅನುಮೋದನೆಯನ್ನು ಪಡೆದುಕೊಂಡಿದೆ ಎಂಬ ಒಂದು ಅಂಶದಿಂದಷ್ಟೇ ಅವರು ಕ್ರಮವನ್ನು ತೆಗೆದುಕೊಳ್ಳುವುದಿಲ್ಲ ಮತ್ತು ಅಲ್ಪಸಂಖ್ಯಾತರ ಆಶೋತ್ತರಗಳನ್ನು ತಿಳಿದುಕೊಳ್ಳಲು ಕೆಲವು ಖಚಿತ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂಬುದುರ ಬಗೆಗೆ ನನಗೆ ಭರವಸೆಯಿದೆ" ಎಂದು ಅವರು ಹೇಳಿದರು.

ಸಂವಿಧಾನ ಸಭೆಯಲ್ಲಿ ಭಾಗವಹಿಸುತ್ತೀರಾ ಎಂಬ ಪ್ರಶ್ನೆಗೆ ಅವರು ಖಂಡಿತವಾಗಿಯೂ ಭಾಗವಹಿಸುತ್ತೇನೆ ಎಂದು ಹೇಳಿ "ನಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಸಾಂವಿಧಾನಿಕವಾಗಿ ವರ್ತಿಸುತ್ತೇನೆ"

ಎಂದೂ ಹೇಳಿದರು. ಸಾಂವಿಧಾನಿಕವಾಗಿ ಇರುವ ಎಲ್ಲಾ ಮಾರ್ಗಗಳನ್ನೂ ಪ್ರಯತ್ನಿಸಿ ವಿಫಲರಾದರೆ, ಅನುಸರಿಸಬಹುದಾದ ಬೇರೆ ಮಾರ್ಗಗಳನ್ನು ಕುರಿತು ಆಲೋಚಿಸುತ್ತೇವೆ ಎಂದರು.

ಡಾ. ಅಂಬೇಡ್ಕರ್ ಅವರು ಇಂದು ಮಧ್ಯಾಹ್ನ ಬಾಂಬೆಗೆ ತೆರಳಿದರು.

(ದ ಟೈಮ್ಸ್ ಆಫ್ ಇಂಡಿಯ, ಶನಿವಾರ, ೧೯೪೬ರ ನವೆಂಬರ್ ೧೬; ಖೈರ್‌ಮೊಡೆ, ಸಂಪುಟ ೮, ಪುಟಗಳು ೧೪೨–೧೪೩ರಲ್ಲಿ ಪುನರ್ಮುದ್ರಿತ)

* * * * *

# ೨೮. ಅಂಬೇಡ್ಕರ್ ಅವರ ಇಂಗ್ಲೆಂಡ್ ರಾಜಕೀಯ ಯಾತ್ರೆಯನ್ನು ಕುರಿತು ಡಾನ್ ಪತ್ರಿಕೆ

೧೯೪೭ರ ಜನವರಿ ೧

ಪರಿಶಿಷ್ಟ ಜಾತಿಗಳ ನಾಯಕರಾದ ಡಾ. ಅಂಬೇಡ್ಕರ್ ಅವರು ಬ್ರಿಟನ್ನಿನಲ್ಲಿ ಸರಕಾರದ ಮತ್ತು ಪ್ರತಿಪಕ್ಷಗಳ ಮುಖಂಡರನ್ನು ಭೇಟಿಯಾಗಿ, ಒಂದು ತಿಂಗಳ ಕಾಲ ಯೋಜನಾಬದ್ಧವಾದ ತಮ್ಮ ಕಾರ್ಯಕ್ರಮಗಳನ್ನು ಪೂರೈಸಿ, ತಮ್ಮ ಕರ್ಮಭೂಮಿಯಾದ ಭಾರತಕ್ಕೆ ಹಿಂದಿರುಗಿದರು. ಇಂಗ್ಲೆಂಡಿನ ಸಾರ್ವಜನಿಕರ ಮುಂದೆ ತಮ್ಮ ಸಮುದಾಯಗಳವರ ಪಕ್ಷವನ್ನು ವಾಸ್ತವಿಕ ದೃಷ್ಟಿಯಿಂದ ಮಂಡಿಸುವ ಸಲುವಾಗಿ ಅವರು ಈ ಭೇಟಿಯನ್ನು ಕೈಗೊಂಡಿದ್ದರು. ಕಳೆದ ಕೆಲವು ವರ್ಷಗಳಿಂದ ಕಾಂಗ್ರೆಸ್ ನಡೆಸಿದ ಭಾರೀ ಪ್ರಚಾರವು ದೇಶದಲ್ಲಿ ಆಗಿರುವ ಮತಭೇದದ ಅವಾಸ್ತವಿಕ ಚಿತ್ರಣವನ್ನು ಕೊಟ್ಟಿದೆ ಮತ್ತು ವಾಸ್ತವಾಂಶಗಳನ್ನು ತಿರುಚಿರುವ ರೀತಿಯಿಂದ ಕ್ಯಾಬಿನೆಟ್ ಮಿಷನ್ ಕೂಡ ತಪ್ಪುದಾರಿಗೆ ಎಳೆಯಲ್ಪಟ್ಟಿದೆ.

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟವು ಪರಿಶಿಷ್ಟ ಸಮುದಾಯಗಳ ಪ್ರಾತಿನಿಧಿಕ ಸಂಸ್ಥೆಯಾಗಿದೆ. ಒಕ್ಕೂಟದ ಬಲ ಮತ್ತು ಐಕಮತ್ಯವನ್ನು ಒಡೆಯಲು ಕಾಂಗ್ರೆಸ್ ತನ್ನ ಅಧಿಕಪ್ರಸಂಗಿತನದಿಂದ ಮಧ್ಯೆ ಪ್ರವೇಶಿಸಿದೆ. ಅತ್ಯಧಿಕವಾದ ಧನಬಲವನ್ನು ಹೊಂದಿರುವ ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಗಳವರಿಗೆ ಮೀಸಲಿರಿಸಿದ್ದ ಹಲವು ಸ್ಥಾನಗಳನ್ನು ಗೆದ್ದುಕೊಂಡಿದೆ ಎನ್ನುವಷ್ಟರ ಮಟ್ಟಿಗೆ, ಅದು ಪರಿಶಿಷ್ಟ ಜಾತಿಗಳನ್ನು ಪ್ರತಿನಿಧಿಸುತ್ತದೆ ಎಂದು ಕ್ಯಾಬಿನೆಟ್ ಮಿಷನ್ ಸಂಸತ್ತಿನ ಕೆಳಮನೆಯಲ್ಲಿ ನೀಡಿದ ಹೇಳಿಕೆಯು ನಿಜವಾಗಿದೆ. ಆದರೆ ಇಷ್ಟರಿಂದಲೇ, ಪರಿಶಿಷ್ಟ ಜಾತಿಗಳ ನಿಜವಾದ ಪ್ರತಿನಿಧಿಗಳು ವಿವಿಧ ಶಾಸನ ಸಭೆಗೆ ಆಯ್ಕೆಯಾಗಿದ್ದಾರೆ ಎಂದು ಅರ್ಥವಲ್ಲ.

ಈ ಭ್ರಮೆಯನ್ನು ನಿವಾರಿಸುವುದೇ ಡಾ. ಅಂಬೇಡ್ಕರ್ ಅವರು ಇಂಗ್ಲೆಂಡಿನಲ್ಲಿ ತಕ್ಷಣ ಮಾಡಬೇಕಾಗಿದ್ದ ಕೆಲಸವಾಗಿತ್ತು ಮತ್ತು ಅದನ್ನು ಅವರು ಇಂಗ್ಲೆಂಡಿನ ರಾಜಕೀಯ ನಾಯಕರಿಗೆ ತಮ್ಮ ಜ್ಞಾಪನಾಪತ್ರವನ್ನು ಸಲ್ಲಿಸುವ ಮೂಲಕ ಮಾಡಿದ್ದಾರೆ. ಈ ಜ್ಞಾಪನಾಪತ್ರವನ್ನು ಪ್ರಕಟಿಸಲಾಗಿಲ್ಲ, ಆದರೂ, ಡಾ. ಅಂಬೇಡ್ಕರ್ ಅವರು ಕರಾಚಿಗೆ ಬಂದಾಗ ನೀಡಿದ ಸಂದರ್ಶನದಲ್ಲಿ ಅವರು ತಮ್ಮ ಕಾರ್ಯಸಾಧನೆಯ ಹಾದಿಯಲ್ಲಿ ಸ್ವಲ್ಪಮಟ್ಟಿನ ಯಶಸ್ಸನ್ನು ಗಳಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಅವರು ಅಟ್ಲೀ, ಚರ್ಚಿಲ್ ಮೊದಲಾದವರನ್ನೊಳಗೊಂಡಂತೆ ಬ್ರಿಟನ್ನಿನ ಹಲವಾರು ಮುಖಂಡರೊಡನೆ ವೈಯಕ್ತಿಕ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ ಮತ್ತು ಅಧಿಕಾರವನ್ನು ಹಸ್ತಾಂತರಗೊಳಿಸುವ ಸಂದರ್ಭದಲ್ಲಿ ಸಂಸತ್ತಿನ ಪರಿಶೀಲನೆಗೆ ಈ ವಿಷಯವು ಬಂದಾಗ ಅಲ್ಪಸಂಖ್ಯಾತರಿಗೆ ಅಗತ್ಯವಾಗಿರುವ ರಕ್ಷಣಾ ಕ್ರಮಗಳ ಬಗೆಗೆ ಅವರ ನಿಜವಾದ ಆಸೆಗಳೇನು ಎಂಬುದನ್ನು ತಿಳಿದುಕೊಳ್ಳಲು ಕೆಲವು ನಿಶ್ಚಿತವಾದ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂಬ ಬಗೆಗೆ ಅವರು ವಿಶ್ವಾಸದಿಂದ ಇದ್ದಾರೆ. ಇಂಗ್ಲೆಂಡಿನ ಸಾರ್ವಜನಿಕರಲ್ಲಿ ಪರಿಶಿಷ್ಟ ಜಾತಿಗಳವರ ಬಗೆಗೆ ಅಪಾರವಾದ ಅನುಕಂಪವಿರುವುದು ಮಾತ್ರವಲ್ಲ, ಕ್ಯಾಬಿನೆಟ್ ಮಿಷನ್ ಈ ಸಮುದಾಯಗಳವರ ಬೇಡಿಕೆಗಳನ್ನು ನಿರ್ಲಕ್ಷಿಸಿರುವ ರೀತಿಯಿಂದ ಅಲ್ಲಿನ ಜನತೆ ತೀವ್ರವಾದ ಅಸಮಾಧಾನವನ್ನು ಹೊಂದಿದೆ ಎಂಬುದನ್ನು ಡಾ. ಅಂಬೇಡ್ಕರ್ ಅವರ ಮಾತುಗಳಲ್ಲಿ ಕೇಳಿದುದು ಮನಸ್ಸಿಗೆ ಆಹ್ಲಾದವನ್ನುಂಟುಮಾಡಿತು. ಲೇಬರ್

ಪಕ್ಷದ ಸರಕಾರವು ಭಾರತದ ಸಾಂವಿಧಾನಿಕ ಸಮಸ್ಯೆಗಳನ್ನು ನಿವಾರಿಸುವಲ್ಲಿ ಮಾಡಿರುವುದು ಸರಿಯಾಗಿದೆಯೇ ಎಂದು ಅದೇ ಲೇಬರ್ ಪಕ್ಷದ ಸದಸ್ಯರು ಕೇಳುವುದು ಹೆಚ್ಚಾಗುತ್ತಿದೆ ಎಂದು ಹೇಳಲಾಗಿದೆ. ಬ್ರಿಟಿಷ್ ಸಾರ್ವಜನಿಕರು ಭಾವನಾತ್ಮಕ ಲೋಕದಿಂದ ಹೊರಬಂದು ವಾಸ್ತವಿಕ ನೆಲಗಟ್ಟಿನಲ್ಲಿ ನಿಂತು ಭಾರತದಲ್ಲಿನ ವಾಸ್ತವಾಂಶಗಳನ್ನು ವಿಶ್ಲೇಷಿಸಿದರೆ, ಭಾರತದ ಸಮಸ್ಯೆಯ ಕ್ಲಿಷ್ಟತೆಯು ಕಡಿಮೆಯಾಗುತ್ತದೆ.

ಕಾಂಗ್ರೆಸ್ಸಿನೊಂದಿಗೆ ಇರುವ ತಕರಾರುಗಳನ್ನು ಬಗೆಹರಿಸಿಕೊಳ್ಳಲು ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯವನ್ನು ನೀಡುವುದು ಏಕಮಾತ್ರ ಮಾರ್ಗವಾಗಿದೆಯೆಂದು ಡಾ. ಅಂಬೇಡ್ಕರ್ ಅವರು ಒತ್ತಿಹೇಳುತ್ತಾರೆ. ಅದು ದೊರಕಿದರೆ ಕಾಂಗ್ರೆಸ್ ಮತ್ತು ಪರಿಶಿಷ್ಟ ಜಾತಿಗಳವರ ಮಧ್ಯೆ ಸಂಪೂರ್ಣ ಶಾಂತಿ ನೆಲೆಸುತ್ತದೆ ಎಂದು ಅವರು ಭಾವಿಸುತ್ತಾರೆ. ತಮ್ಮ ಬದುಕಿನ ಆರಂಭದ ದಿನಗಳಲ್ಲಿ ಸವರ್ಣೀಯ ಹಿಂದೂಗಳಿಂದ ದಬ್ಬಾಳಿಕೆ, ಬಹಿಷ್ಕಾರ ಮೊದಲಾದ ಕ್ರೌರ್ಯಗಳನ್ನು ಅನುಭವಿಸಿದ ಅವರನ್ನು ಮೇಲ್ವರ್ಗದ ಹಿಂದೂಗಳನ್ನು ಸುಲಭವಾಗಿ ನಂಬುವಂತೆ ಮಾಡುವುದು ಸುಲಭದ ಕೆಲಸವಲ್ಲ. ಅಲ್ಲದೆ ತಮ್ಮ ಜನಾಂಗದ ಹಿತವನ್ನು ಅವರ ಕ್ರೌರ್ಯಕ್ಕೆ ಒಪ್ಪಿಸುವುದು ಅವರಿಗೆ ಆಗದ ವಿಷಯ. ಸವರ್ಣೀಯ ಹಿಂದೂಗಳು ಪರಿಶಿಷ್ಟ ಜನಾಂಗದ ಮೇಲೆ ಹಿಡಿತವನ್ನು ಸಾಧಿಸುವುದನ್ನು ತಪ್ಪಿಸಿ ಅವರ ಹಿತರಕ್ಷಣೆಯನ್ನು ಸಾಧಿಸುವುದು ಕಾನೂನಿನ ಮೂಲಕವೇ ಆಗಬೇಕೆಂಬುದು ಅವರ ಕ್ರಮದ ಮುಖ್ಯ ಆಶಯವಾಗಿದೆ. ತಮ್ಮ ಸಮುದಾಯಗಳವರಿಗೆ ಆಗಿರುವ ಅನ್ಯಾಯವನ್ನು ಸಾಂವಿಧಾನಿಕವಾಗಿಯೇ ಬಗೆಹರಿಸಿಕೊಳ್ಳಬೇಕೆಂಬ ನೀತಿಗೆ ತಾವು ಬದ್ಧರಾಗಿರುವುದಾಗಿ ಹೇಳುವ ಅವರು, ಈ ಎಲ್ಲಾ ಕ್ರಮಗಳೂ ನಿಷ್ಫಲವಾದ ಮೇಲೆ ಮಾತ್ರ ಇತರ ಮಾರ್ಗಗಳತ್ತ ತಮ್ಮ ದೃಷ್ಟಿಯನ್ನು ಹರಿಸುವುದಾಗಿ ಹೇಳುತ್ತಾರೆ. ಇದು ಅವರು ಕಾಂಗ್ರೆಸ್ಸಿನವರಿಗೆ ಶಾಂತಿಗಾಗಿ ನೀಡಿರುವ ಸ್ನೇಹಪೂರ್ವಕ ಸೂತ್ರ.

ಪರಿಶಿಷ್ಟ ಜಾತಿಗಳ ಒಕ್ಕೂಟ ಹಾಗೂ ಮುಸ್ಲಿಂ ಲೀಗಿನ ನಡುವೆ ನಡೆದಿದೆಯೆಂದು ಕೇಳಿಬರುತ್ತಿರುವ ಗುಪ್ತ ಒಪ್ಪಂದವನ್ನು ಪರಿಶಿಷ್ಟ ಜಾತಿಯ ಮುಖಂಡರಾದ ಡಾ. ಅಂಬೇಡ್ಕರ್ ಅವರು ಖಂಡತುಂಡವಾಗಿ ನಿರಾಕರಿಸಿದ್ದಾರೆ. ಸವರ್ಣೀಯ ಹಿಂದೂಗಳ ಆಳ್ವಿಕೆಯನ್ನು ಈ ಉಪಖಂಡದಲ್ಲಿ ಹೇರುವುದರಿಂದ ಪರಿಶಿಷ್ಟ ಜಾತಿಗಳವರು ಮತ್ತು ಮುಸ್ಲಿಮರು ಒಟ್ಟಾಗಿ ಹಾಗೂ ದೇಶವೇ ಎದುರಿಸಬೇಕಾಗುವ ವಿಪತ್ತು ಇಬ್ಬರಿಗೂ ಒಂದೇ ರೀತಿಯದಾಗಿರುವಾಗ, ಗುಪ್ತವಾಗಿಯಾಗಲೀ ಅಥವಾ ಮುಕ್ತವಾಗಿಯಾಗಲೀ ಯಾವ ರೀತಿಯ ಒಪ್ಪಂದವು ಸಾಧ್ಯ ಎಂದು ಅವರು ಕೇಳುತ್ತಾರೆ. ಕಾಂಗ್ರೆಸ್ಸಿನ ಸಂಯೋಜನೆ ಮತ್ತು ಅದರ ನಾಯಕರ ಗುಣಗಳು ಹೇಗಿವೆಯೆಂದರೆ, ಅವು ವ್ಯಾಪಕವಾಗಿ ಜನತೆಯಲ್ಲಿ ಗಂಭೀರವಾದ ಹೆದರಿಕೆಯನ್ನು ಉಂಟುಮಾಡಿವೆ. ಇಂತಹ ಸಂದರ್ಭದಲ್ಲಿ ಮುಸ್ಲಿಂ ಲೀಗ್ ಮತ್ತು ಪರಿಶಿಷ್ಟ ಜಾತಿಗಳವರು ಒಟ್ಟುಗೂಡಿದರೆ ಅದು ಎರಡೂ ಪಕ್ಷಗಳವರಿಗೆ ಸಾಮಾನ್ಯವಾಗಿರುವ ವಿಪತ್ತನ್ನು ಗುರುತಿಸಿ, ಎಲ್ಲರ ಹಿತವನ್ನು ಸಾಧಿಸುವ ಸಲುವಾಗಿ ಅದನ್ನು ಹೇಗೆ ಸಮರ್ಥವಾಗಿ ನಿಭಾಯಿಸಬಹುದೆಂಬುದನ್ನು ವಿಚಾರಮಾಡಲಿಕ್ಕೆ ಮಾತ್ರ. ಈ ದೇಶದಲ್ಲಿ ದಲಿತವರ್ಗಗಳವರ ಬಾಳು ಎಂದರೆ ಅದು ಗುಲಾಮಗಿರಿಯಷ್ಟೇ ಆಗಿದ್ದು, ಅದನ್ನು ಕೊನೆಗಾಣಿಸಲು ಅವರು ದೃಢನಿಶ್ಚಯವನ್ನು ಮಾಡಿದ್ದಾರೆ. ಈಗ ನಿರ್ಧಾರವನ್ನು ತೆಗೆದುಕೊಳ್ಳುವುದು ಪರಿಶಿಷ್ಟ ಜನಾಂಗಗಳವರ ಕೈಯಲ್ಲಿ ಇದೆ ಮತ್ತು ಕಾಂಗ್ರೆಸ್ ಅವರಿಗೆ ಅಪ್ಪಣೆಯನ್ನು ಮಾಡುವಂತಿಲ್ಲ.

**ಡಾನ್**

* * * * *

---

(೧೯೪೭ರ ಜನವರಿ ೧ರಂದು ಜೈಭೀಮ್‌ನಲ್ಲಿ ಪುನರ್ಮುದ್ರಿತ)

# C£ÀÄS¸ÀÁzÀ- 1

## ¥ÁæÀAiÉÆÃV¸ÀÄªÀ «zsÁ£À

**- ªÀÄ°èPÁdÄð£À**

ªÀÄºÀzï ¸vÁÛæ SUU `AiÀÄAUï EArAiiÁ' ¥wæPÁAiÀÄ° ¥Àæl UÉæAq ¯ÃR£ EzÀ.

### "C¸ÀAiÀÄ£À ªÀÄvÀÄ CvÀÄðPÀæ"

ªÀÄºÀzï¤Az M§ ¨ÁwÃzÁg (ªg¢UÁg) §gAiÀÄvÁ£:

P¼z ªiÁað E¥vgAzÀ ¸ø±gÀ ªÀvÀ C¸ø±g £qÀª zÆA© »A¸ÁZÁg £q¬ÀvAzÀ ¤ªÀU w½¸®Ä £ÉU §º¼ zÀßRªÁUÀvz. P¼z wAU¼ 19 ªÀvÀ 20gAzÀ PÆ¯Á¨Á r¹Pï£ ±ÆÃ¶v ªUðU¼ (z°v ªUðU¼) MAzÀ C¢ªÃ±£ª£ÀÄ £q¸¯Á¬ÀvÀ. D ¸ªiÁUªÀªÀ ¸ÁPµÀ AiÀıAiiÁ¬ÀvÀ. Dzg UÀA¥À ZzÀgÀwzÁU, ¸ÆAiÀð£ ©¹®Ä §®Ä wÃP÷ªÁV¢z£ÀÄ PAq ``ªÀÄA¨É£ ¸ÆÃ¶AiÀ¯ï ¸«ð¸¸ï ºÃUï"£ «.«. avæ ªÀÄºÁ±AiÀÄgÀ, d£gÀ ¨ÁAiiÁjzÀz£ÀÄ w½zÀ ¸ÁªðdÀ¤P PgU (P¯ÁtAiÀ) ºÆÃV ¤ÃgÀ PÀrzÀ §g§ºÀzAzÀ w½¹zgÀ. D d£gÀ P¯ÁtAiÀ §½U ºÆÃUÀªÀz£ÀÄ vqAiÀÄ®Ä P®ªgÀ ¥ÀæAiÀw¹zgÀ. Dzg, CzPgÁVz qÁ|| CA¨ÃqgÏ CªgÀ D d£g£ÀÄ P¯ÁtAiÀ §½U vÁªÃ ªÀÄ£qÀ¸®Ä ¤zðj¹zgÀ. ¥Æ°Ã¸ï E£ï¸Pgï PÆqÁ ¥j¹wAiÀ UA©ÃgvAiÀÄ£ÀÄ CxðªiÁrPƼÀªzg° «¥®£ÁV, D UÀA¥£ÀÄ P¯ÁtAiÀ §½U ºÆÃUzAv vqAiÀĪ §z®Ä vÁ£Æ CªgÆA¢UÃ £qz. D P¯ÁtAiÀÄ ¨Áætg ªÁ¸¸Á£z £qÀª E¢vÀ. Dzg. C¸ø±gÀ P¯ÁtAiÀ §½U ºÆÃUÀwzÁgA§ÀªÀzg §UU AiiÁjUÆ Cj«g°®ªÁV, AiiÁªÀzÃ U®¨, »A¸ÁZÁgU½U CªPÁ±ªÁU°® ªÀvÀ £ÆgÁgÀ d£ C¸ø±gÀ, `ºgºg ªÀÄºÁzêª' JA§ WÆÃµuU¼Æq£ P¯ÁtAiÀ ¤Ãj¤Az vªÀÄ zÁº wÃj¹PÆAqgÀ. F ªÀÄzÀ ¸ø±gÀ F WI£ £qz ¸¼P §AzgÀ ºÁUÆ D z±ª£ÀÄ PÆæ¢Az «ÃQ¹zgÀ. C¸ø±g UÀA¥À £Avg H I ªiÁq¯AzÀ ¥AqÁ¯ïU »AwgÀVzgÀ. F WI£AiÀ £Avg PêÁ® MAzÃ MAzÀ WAmAiÀ M¼UÁV, ªÀÄºÀzï£ ¸ÁªðdÀ¤PgÀ ``UÀgÀªÁ" JA§ GUæG£v PÆV¤Az xI£Ã eÁUÀvUÆAqgÀ ªÀvÀ C¸ø±gÀ «ÃgÃ±g zêÁ®AiÀ ¥æÃ²¸®Ä D¯ÆÃa¸ÀwzÁgAzÀ ¸ÁªðdÀ¤PjU w½¸¯Á¬ÀvÀ.

CzÆAzÀ ºÀ¹¨Æ¨AiiÁVvÀ; Dzg Cw²ÃWæ°, vªÀ PÉU¼° zÆuU¼£ÀÄ

»rzÄPÆAqÄ PÆÃ¥ÆÃ¢ÃgÁVz (Pg½z) ¸ø±g UÁA¦¤Az zÃªÁ®AiÄªÀ vÀA©°ÆÃ¬ÄvÄ. D §q¥Á¬Ä C¸ø±jU zÃªÁ®AiÄ ¥ÆeÃ²¸ÄªAv° AiiÁªÀzÃ GzÀ±ªÇ Eg°®. Dzg AiiÁªÀzÃ M§ C¸ø±£Æ zÃªÁ®AiÄ ¥ÆeÃ²®Ä ¥ÁæÄw¸¢zÄz£Ä PAq ¸ø±g UÁA¥Ä gÆÃµÁªÃµ¢Az ¢PÁ¥Á¯ÁV ZzÄj ªÄvÄ CAUr, ªiÁgÀPm, ©Ã¢U½U °ÆÃV vªÄ PÉU ¹Qz C¸ø±g£Ä °ÆqAiÄvÆqVvÄ. »ÃU C¸ø±g ªÄÃ¯ MAzÃ ¸ªÄ£ ¥ÆeÁgªÁUÀwzgÆ Cz£Ä M§£Ã M§ C¸ø±££Æ AiiÁªÀzÃ jÃwAiÄ°AiÄÆ ¥ÆegÆÃ¢¸°®, C¸ø±g §UU ¸°Á£Ä¨Æw vÆÃjz P®ªÀ ¸ø±gÄ Cªg£Ä gQ¸®Ä AiÄw¹zgÄ. Dzg Pg½z UÁA¥£Ä vqAiÄ®Ä CªjU ¸ÁzªÁU°®. JPqU¼£Ä ªiÁqÄª ZªiÁgg UÄr¹®ÄU½UÆ ªÄvÄ CAv° Evgg ªÁ¸¸¼U½UÆ CªgÄ £ÄV C°zªg£Ä wÃªÆÁV x½¹zgÄ. C¸°ÁAiÄPgÁVz C¸ø±gÄ ¸°ÁAiÄª£Ä AiiÁa¸ÄvÁ Jr¢r NrzgÄ? Dzg C°AiÄ CAUrU¼ªgÁgÆ CªjU ¸°ÁAiÄ ¤Ãq°®. ¥AqÁ¯ï£ M¼Uq Ez C¸ø±gÄ °ÆÃgÁq®Ä £Ãgª ÁV °ÆgP §g°®ªAzÄ, ¸ø±gÄ Cªg£Ä UÃ°ªiÁr, Cw °Á¸¢Az »ÃU¼zgÄ. ¥AqÁ°£ M¼U ¸ÄªiÁgÄ 1,500 C¸ø±jzgÄ. CªgÃ£ÁzgÆ °ÆgP §AzÄ °ÆÃgÁr¢zÃ Dzg, §°ÄzÆq zÄgAvªÁUÀwvÄ ªÄvÄ »AzÆzªÄðP C¥ªiÁ£ªÁVgÀw¢vÄ. ¸ÁªðdÀ¤P Pg P¯Ät ªÄvÄ ¨Á«U½Az ¤Ãg£Ä G¥AiÆÃV¸®Ä C¸ø±gÄ £ÁAiÄ§zªÁV ±Á¸£¸ªÄvªÁV °PÄ¥q¢zÁg JA§ ªÄ°zï ¥Äg¸¨AiÄÄ ªP¥r¹z C©¥ÁæÄz §UU ªÄÄA¨Ê£ ¯f¸Ãnªï PË¤¯ï£° CAVÃPvªÁz wÃªiÁð£z §UU vÁªÀ ¤Ãrz ¸®°AiÄ£Ä qÁ|| CA¨Ãqgï ¸ªÄyð¹zgÄ.

»AzÆ¸ªiÁdz° C¸ø±vAiÄ ¸ªÄ¸Ä ªÄvÄ ¸vÁUæz §UU ªÄ°ÁvÁ UÁA¢ vªÄ C©¥ÁæÄU¼£Ä »ÃU C©ªQ¹zgÄ.

E£Æ °a£ «ªgU¼£Ä ¤ÃrgÄªAv° ¨ÁUU¼£Æ ¨ÁwÃzÁg£ ¥væÀAz ©nzÃ£. Dzg D ¥væ ¥ÁæiÁtPªÁVzAiÄAzÆ GvÃQv C©¥ÁæÄª£Ä °ÆA¢¢®ªAzÆ ££U vÆÃgÀvz. D WI£AiÄÄ ¸ªÄ¥ðPªÁV ªg¢ªiÁq®nz JAzÄ ¨Á«¹zg ªÄÃ®Uðzªg Ä J¤¹PÆArgÄªªg° C¥æÆÃ¢vªÁz ¥ÄAqÁI, £ÁAiÄ¨Á»g £qª½P¬ÄvA§ÄªÀzg° AiiÁªÀzÃ C£ÄªiÁ£ªÃ E®. `¸ø±'g£Ä zÃªÁ®AiÄz M¼P MIÄUÆr¹ PgvAzzÄ EzP PÁgtªÃ °ÆgvÄ P¯Át CxªÁ Pg¬ÄAz ¤ÃgÄ PÄr¢z®ªA§Äz£Ä ££¥ÄªiÁrPÆ¼¨ÃPÄ. Dzg C¸ø±gÄ zÃªÁ®AiÄzÆ¼U ¥ÆeÃ²¸®Ä §AiÄ¸Äwz gA§Äz Ä ¸Ä¼Ä ªg¢. Dzg C«ªÃP ªÄvÄ «ªÃZ£, CP¥Pz°gÄvªAzÆ AiiÁgÆ ¤jÃQ¸¯ÁUÄªÀ¢®. C¸ø±vAiÄÄ ¸vß v£Ä° AiiÁªÀzÃ vÁQðP PÁgt «ªÃZ£AiÄ£Æ °ÆA¢®, CzÆAzÄ CªiÁ£«ÃAiÄ ¥zw. CzÄ FUÁU¯Ã ²y®UÆAqÄ C¯ÁqÄwz ªÄvÄ ¸A¥æÁAiÄ¤µ ¥AUqª¤¹PÆAqªjAz, wÃªæ¥Á±«Ã ±Q¬ÄAz ¨A§® ¥qAiÄ°a¸Äwz.

C¸ø±g¤¹PÆAqªgÄ CvÀAv ¥æÆÃz£PÁj ¸Az¨ðU¼°AiÄÆ vªÄ

C£ÀPgtÃAiÀªÁz Dv-¸AAiÀªÀ¢Az F ¥ÀæAiÀ£ÀÛ ¥jºÁgPÀ MAzÀ ªÀÄI®Ä ºwg vA¢zÁVg. CªgÃ£ÁzgÆ ¥ÀæÃPÁgP¼¹¢zÀg §ºÀ±B D¥Áz£AiÀ£ÀÛ ¥Á®ÀªiÁr ºÆg¸ÀªÁzÀ PµªÁUÀwvÀ. FU EgÀªAv D¥Áz£U¼®ªÇ `¸ø±À'g ªÀÄÃ¯AiÀÄ ¤®Ävz. ¥Á±«Ã±QAiÀÄ C¸ø±ÀvAiÀ£ÀÛ fÃªAvªÁVqÀªÀ¢®, ¸ªÀyð¸ÀªÀ¢®. CzÀ ±ÆÃ¶vªUðU¼ ¥gªÁV, ªÀÄÃ®Uðzªg §UU dÀUÀ¥ ºÃ¹UU¼£ÀÄAIÀªiÁqÀvz. §q¥Á¬ÀU¼Áz C¸ø±ÀgÉ£ÀÛ gQ¸®Ä ¥ÀæÀwÀ¹z P®ªgÁzgÆ CºzÀg£ÀªÁzÀ §z¯ÁUÀwgÀª PÁ®z UÀgÀvÀ. CAvºªgÀ ªÀvÀ ºZÀ d£gÀ ªÀºzï£ºg¨ÃPAzÀ D²¸¨ÃPÁVz. CAvº ¸Az¨ðU¼º ªiË£ ¸ºÁ£À¨ÆwAiÀÄ ºZÀ ¥ÀæÆÃd£PÁjAiÀ®. ±ÆÃ¶v ªUðª£ÀÛ ¸ÁªðdjPªÁV ¸ªÀyð¸Àª ªÀÆ®P ªÀvÀ CAvº C¸ºÁAiÀPg£ÆÛ zªÀ£PÆ¼UÁVgÀªªg£ÆÛ gQ¸ÀªÁzgº v£ÀÛ v¯AiÀ£ÆÛ MqzÀPÆ¼Àª ªÀÆ®P, C¸ø±ÀvAiÀ ¤ªÁguAiÀÄ CvÀAv ¥ÁæÀÄRzÀAzÀ ¨Á«¸Àª ¥ÀæAiÆ§ »AzÀªÇ v£ÀÛ ¸ºÁ£À¨ÆwAiÀ£ÀÛ ¸Á©ÃvÀ¥r¸¨ÃPÀ.

ªÀÄA¨Ë£ ¯f¸Ãnªï PË¤¯ï ªÀvÀ ªÀºzï ¥Àg¸¨AiÀ wÃªiÁð£ª£ÀÛ ¥jÃPUÆq®Ä C¸ø±Àg¤¹zªg£ÀÛ P¯ÁtAiÀº ¤ÃgÀ PÀrzÀ zÁºvt¹PÆ¼®Ä qÁ|| CA¨Ãqgï CªgÀ ¤Ãrz ¸®º ¸A¥ÆtðªÁV £ÁAiÀAiÀÄvªÁVvAzÀ £Á£À w½AiÀÄvÃ£. EAvº PÁAiÀðU¼À £qz AiiÁªÀzÃ MAzÀ WI£AiÀÆ, ¸ÀzÁguAiÀº D¸Q ºÆA¢gÀª »AzÆ ªÀºÁ¸¨ÁzAvº ¸AW ¸A¸U¼ UªÀ£PÀ ¨ÁgzÃ ºÆÃU¨ÁgzÀ. ££ÀÛ ¨ÁwÃzÁg ªiÁrgÀª ºÃ½PU¼£ÀÛ CªgÀ ¥jÃQ¸º, CªÃ£ÁzgÆ zËq¥Iº `¸ø±À'g PÁAiÀðª£ÀÛ RAr¸º. J® PqÀPÀU¼£ÆÛ ¤ªÁj¸Àªº CjªÀ JZgUÆAq ¸ÁªðdP C©¥ÁæÁAiÀz ¨¼ª tUVAv®Æ ºa£zÀ AiiÁªÀzÆ E®. C¸ø±ÀvAiÀÆ EAvºÀzÃ MAzÀ PqÀPÁVz.[1]

1. AiÀÄAUï EArAiiÁ, 28 K¦æï 1927
ªÀgÀªÀÄ¢æUÆArzÀ, U£ï«gï, ªÀºzï ¸ªÀv ¸£ïUgï, P.P. 246-248

## C£ÄÀ§Azà - 2

## ªÄÀ£ÀÄ¤µÀÄÀÀ§UÉÉ ªÄÀ£ÀÄ¤µÀÄÀÀC ªÄÀ£ÀÀÃAiÄÀvÉ

**- JA.PÉUÁA¢ü**

``PÁyAiÄªÁq UÁæÄz ±ÆÃ¶v ªUðP ¸Ãjz ¸z¸£ ¸ÁAiÄÄwgÄª ¥wAiÄ §UU ªÉzgÆ§g GzÃ±¥ÆªðP CªiÁ£«ÃAiÄvAiÄ CvAv ºÃAiÄªÁz, C¥ªiÁ£Pg W l£AiÄ£Ä `£ª fÃª£' ¢Az Gzj¸¯ÁVgÄªz£Ä ªÄvÆAzÄ CAP t z° £ÆÃq§ºÄzÄ. F ¥ÇæAUz «ªgU½U dªÁ¨ÁgÁVgÄª Sjt CªÄÀv¯Á¯ï xPgï CªgÄ. D ªÉzgÄ ±ÆÃ¶vªUðP ¸Ãjz ±Á¯Á ªiÁ¸g£Ä ªÄvµÄ vÆAzgUÆ¼¥r¸§ºÄzA§ ¨AiÄ¢Az F ¥ÇæAUz° H j£ ªÄvÄ ªQU¼ º¸gÄU¼£Ä ºÃ¼zÃ ©nzÁg. ºÃUÁzgÆ D º¸gÄU¼£Ä §AiÄ®Ä ªiÁq¨ÃPAzÄ £Á£Ä D²¸ÄvÃ£. ªÄvµÄ Pµ ªÄvÄ z¨Á½PU¼£Ä JzÄj¸ÄªAv ±ÆÃ¶vªUðz d£g£Ä £ÁªÀ ¥ÆÃæÁ»¸ÄªAvº PÁ® §g¨ÃPÁVz. FUÁU¯Ã Cªg AiiÁv£U¼Ä, ªÄvµÄ ¸APµ, AiiÁv£U¼£Æ C£Ä¨«¸®Ä ¸ÁzªÁUzµÄ CUÁzªÁVª. CªU¼ ªÄÆ® AiiÁªzAzÄ ¥vºZÄª v£PªÇ ¸APl¨ÃUÄ¢U¼ §UU ¸Áªðd¤P C©¥ÁæiÄª£Ä Pg½¸®Ä, ZÄgÄPÄUÆ½¸®Ä ¸ÁzªÁUÄª¢®. ªÄÄA¨É£ ªÄrP¯ï PË¤¯ï£ ¤AiÄªÄU¼Ä ££U w½¢®. ªÈw¤gv ªÉz£Ä v£ ±Ä® ¤ÃqÄª ªÄÄ£ gÆÃVAiÄ£Ä ¥jÃQ¸®Ä ¤gÁPj¹zg CAvº ªÉz£Ä ªÉzg ¥jµwU Gvj¸¨ÃPÁUÄvz ªÄvÄ Cª£ º¸g£Ä ¥jµw£°gÄª ¥n¬ÄAz vUzÄºÁP¯ÁUÄvz. E®ªÁz° Cª£ ªÄÃ¯ ²¹£ PæÄ vUzÄPÆ¼¯ÁUÄvz J£ÄªzÄ ££U w½¢z. ±Ä®ª£Ä vUzÄPÆ¼¨ÃPA§Äzg° C£ÄªiÁ£«®; Dzg ªÈw¤gv ªÉz£Æ§£ ªÆz® Pvðª, Dzv gÆÃVU¼£Ä ¸ªÄ¥ðPªÁV UªÄ¤¸ÄªzÄ, ±Ä±Ææ ªiÁqÄªzÁVz. ºÃ¼¯ÁVgÄª «µAiÄU¼Ä ¸vªÁVgÄªzÁz°, F ªÈw¤gv ªÉz£Ä C¸ø±g ªÁ¸¸Á£ ¥æÃ²¸®Ä ¤gÁPj¹zÄ, vÁ£Ä gÆÃVAiÄ£Ä ªÄÄl®Ä ¤gÁPj¹zÄ GµªiÁ¥Pª£Ä vÁ£Ã ¥æiÆÃV¸®Ä ¤gÁPj¹zÄ ¤dªÁz CªiÁ£«ÃAiÄv. C¸ø±vAiÄ ¹zÁAvªÀ JAzÁzgÆ AiiÁªzÃ ¸Az¨ðz°AiiÁzgÆ C£¬Ä¸§ºÄzÁzg. Cz£Ä RArvªÁVAiÄÆ AiiÁª ªÈwAiÄ£Ä C¥ªiÁ¤¹zÁ£AiÆÃ D ªÈwAiÄ ¸z¸¤U C£¬Ä¸¨ÃPÄ. Dzg, Sjt xPgïg ¨ÁwÃzÁg ¤ÃrgÄª ºÃ½PAiÄ° ¸® GvÃP¬ÄzAiÄAzÄ £Á£Ä ¨Á«¸ÄwzÃ£ ªÄvÄ Czg° AiiÁªzÃ GvÃPU CªPÁ±«g¢z°, D ªÈw¥g ªÉzgÄ ¸vB vÁªÃ ªÄÄAz §AzÄ v£ CªiÁ£«ÃAiÄ

ªvð£¬ÄAz DWÁvªÁAIÄªiÁrgÄª, Pg½¹gÄª ¸ªiÁdP ¸ÁPµÄ ¥j°Ág ¤ÃqÄªgAzÆ D²¸ÄvÃ£.

**N¢, aAw¹ ªÀvÀ±ÉÃQ¹**

PÁyAiÄªÁq UÁæÄz° ±ÆÃ¶vªUðU¼ ªÄP½UÁV MAzÄ ±Á¯¬Äz. C°AiÄ M§ ²PP `zÃzï" CxªÁ £ÃPÁg (C¸ø±) ªUðP ¸Ãjz ¸Ä¸A¸ÀvzÃ±¨P. ªÄ°ÁgÁd UÁAiÄPªÁqg PqÁAiÄ ²Pt ¤Ãw¬ÄAzÁV ²Pt ¥q¢zÄjAz, D ¤ÃwU CªÉÄ IÄtAiiÁVzÁ£ ªÄvÄ v£ ¸ªÄÄzÁAiÄz ¸ÄzÁguUÁV v£U ¸ÁzªÁzµÄ PÆqÄU ¤ÃqÄwzÁ£. Cª£Ä ¸Z, ¤ªÄð® C¨Á¸U½AzÁV ªÄvÄ ¸Ä¸A¸Àv £q£ÄrU½AzÁV Cª££ÀÄ AiiÁgÆ C¸ø±ªUðP ¸Ãjzª£AzÄ UÄgÄw¸¯ÁUÄwg°®. Dzg, ¸A¥æÁAiÄ¤µ UÁæÄ PÁyAiÄªÁr£°, Cª£Ä v£zÃ ¸ªÄÄzÁAiÄz ªÄP½U ²Pt ¤Ãq¨ÃPÁVgÄª, Czµª£ÆÃ, zÄgzµª£ÆÃ ¥q¢z£ÁV ¥wÀæÆ§gÆ Cª££ÀÄ C¸ø±£AzÃ PÁtÄvÁg. Dzg Czg §UU ªÄ£¸Ä Pr¹PÆ¼z Cª£Ä ªiË£ªÁV v£ P®¸ ªiÁqÄwz. DzÁUÆ, C¸º¤ÃAiÄ ªÁvÁªgtz° fÃ«¸¨ÃPÁVgÄª ªÄ£Äµ¤U Dv JµÃ vÁ¼AiÄÄ¼ª£ÁzgÆ PÆqÁ v£ zÄR, AiiÁv£ ªÄvÄ PÆæª£ÀÄ ºÆg°ÁP¨ÃPÁz ¥æU JzÄgÁU§°ÄzÄ. P¼U PÁt¹gÄª D ±Á¯Á ²PP£ ¥vÀ½Az EzÄ ¤Z¼ªÁUÄvz. C°£ ¥wÀæÆAzÄ ªÁPªÇ zÄR¢Az vÄA©vÄ¼ÄPÄwz. D ±Á¯Á ²PP¤U ªÄv ºa£ vÆAzg, ¸ªÄ¸U¼ÁU¨ÁgzAzÄ £Á£Ä GzÃ±¥ÆªðPªÁV, ¥væ° £ªÄÆ¢¹gÄª UÁæÄ ºÁUÆ ªQU¼ º¸g£ÀÄ ©I©nzÃ£.

``£ªÄ¸Ág, Lz£AiÄ vÁjÃQ£AzÃ ££ ¥wAiÄÄ MAzÄ ªÄUÄ«U d£ ¤Ãrz¼Ä, K¼£AiÄ vÁjÃQ¤Az Cª¼ DgÆÃU PnvÄ, MAzÃ ¸ªÄ£ ¨Ã¢AiiÁUÄwvÄ. DP ªiÁw£ ±QAiÄ£ÀÄ P¼zÄPÆAq¼Ä ªÄvÄ G¹gÁI PptªÁV JzAiÄÄ H¢PÆArvÄ ªÄvÄ Cª¼ JzAiÄ ªÄÆ¼U¼Ä §º¼ªÁV £ÆÃAiÄÄwzªÀ. £Á£Ä ªµz££ÀÄ ªÄ£U PgAiÄ§AiÄ¹z Dzg CªgÄ ºÃ½zgÄ, `E®, £Á£Ä C¸ø±gÄ ªÁ¹¸Äª ªÄ£U §gÄª¢® ªÄvÄ £Á£Ä ¥jÃPªiÁqÄªzÆ E®' £Avg £Á£Ä £ÁUgï±Ãmï ªÄvÄ UÁgï¹AiiÁ z¨Áðgïg£ÀÄ ¨Ãnªiárz, vªÄ C¢PÁgª£ÀÄ ££UÁV G¥AiÆÃV¹ ¸ºÁAiÄªiÁq¨ÃPAzÄ ¥Áæð¹z. CªgÄ §AzgÄ, ªµzg ±Ä® JgqÄ gÆ¥Á¬ÄU½U £ÁUg±ÃIgÄ eÁ«ÄÃ£ÁV ¤®¨ÃPÄ ºÁUÆ gÆÃVAiÄ£ÀÄ C¸ø±g ªÄ£¬ÄAz DZU Pgvg¨ÃPÄ JA§ ¤§Az£AiÄ £Avg D ªµzgÄ §g®Ä M¦zgÄ. CªgÄ §AzgÄ, PÃª® JgqÄ ¢£z ªÄUÄ«£ vÁ¬ÄAiÄ£ÀÄ £ÁªÀ ºÆgU PgzÄPÆAqÄ §AzªÀ. £Avg ªµzgÄ GµªiÁ¥Pª£ÀÄ M§ ªÄÄ¸¯Á££ PµU PÆIgÄ, Cª£Ä ££U Cz£ÀÄ PÆI. £Á£Ä GµªiÁ¥Pª£ÀÄ G¥AiÆÃV¹ Cz£ÀÄ ªµzjU »A¢gÄV¹z. DU ¸ÄªiÁgÄ gÁwæJAIÄ UAmAiiÁVvÄ. ªµzgÄ ¹ÃªÄJu ¢Ã¥z ¨¼Q£° GµªiÁ¥Pª£ÀÄ ¥jÃQ¹ ºÃ½zgÄ ``Eª½U £ÀªÆÃ¤AiiÁ DVz ªÄvÄ

G¹gÄ Pnz" EµÄ ºÃ½ ªÉzÀgÄ ºÆgÀ lÄ ºÆÃzgÄ ªÄvÄ Oµ¢AiÄ£Äß P½¹zgÄ. £Á£Ä ¥Ãm¬ÄAz £ÁgU¸AiÄ ©Ãdª£Äß vAz (linseed) ªÄvÄ Czg ¥ÆÃºÃ¸£Äß Cª½U ºa ªÉzÀgÄ P¼Ä»¹z Oµzª£Æß PÆqÀwzÀ Ã£. ªÉzÀgÄ Cª¼£Äß ¥jÃQ¸®Ä M¥º®, ¸ÄªÄ£ zÆg¢Az £ÆÃrzgÄ ªiÁvæ£Á£AvÆ Cªg ±Ä®Ä JgqÄ gÆ¥Á¬ÄU¼£Äß CªjU PÆm, EzÆAzÄ UA©ÃgªÁz PÁ¬Ä¯, J®ªÇ zÃªg PÉºz!

£Äß fÃª£z ¨¼PÄ ºÆglÄºÆÃ¬ÄvÄ. EAzÄ ªÄzÁºß JgqÄ UAmU Cª¼Ä wÃjPÆAq¼Ä.

2

nÃPAiÄÄ C£ª±ÄP, ªÄxð, ¸Ä²Qv£ÁVzÄ GµªiÁ¥Pª£Äß M§ ªÄÄ¸¯Á££ ªiÁzÀªÄz ªÄÆ®P G¥AiÆÃV¹ Cz£Äß Cª¤Az¯Ã vÆ¼¹PÆAq ªÉzÀ£ CªiÁ£«ÃAiÄvAiÄ §UU K£Ä ºÃ¼§ºÄzÄ? GµªiÁ¥Pª£Äß ¸ZÀUÆ½¸®Æ ªÄÄ¸¯Á£ï££Äß G¥AiÆÃV¹PÆAqÄ JgqÄ ¢£U½Az®Æ £g¼ÄvÁ ªÄ®VzÀ ºtÄªÄU¼£Äß £Á¬Ä, ¨PÄU½VAv®Æ PlzÁV £ÆÃrPÆAqÄ, `aQv' ¤Ãrz ªÉzÀ£ §UU K£Ä ºÃ¼§ºÄzÄ? EAvº Cª iÁ£«ÃAiÄvAiÄ£Äß ¸»¸Äª ¸ªiÁdz §UU K£Ä ºÃ¼§ºÄzÄ? AiiÁgÃ DzgÆ aAw¸§ºÄzÄ ªÄvÄ ±ÆÃQ¸§ºÄzÄ ªiÁvæ

**J.«. xÃgÀÄï**

# C£ÀÄ§AzsÀ 3

## ``ºÀZÀÄÀ» rzÀwgÀÄªÀ ¸ÀÄÀ¥ÀæÀÁAiÀÄÀ¤µÉ
## ``C¸ÀÀÀÀgÀÉÀÀ PÀÀgÀÀÁV, C£ÁUÀ¥ÀPÀÀÁV £ÀqÀÉPÉAqÀD¥ÁzÀÉ
## ªÀÄÀº gÀÄUÀÁVgÀÄªÀ zÀgÀ C¥ÀgÁzÀ

«Ä|| PÃ±ª f g t bÆÃqïf ªWÃ® CªgÀ Cº ªÄzÁ¨Á¢¤Az `§»µÀv »vPÁj t ¸¨Á'z CzÀPgÁz qÁ|| ©.Dgï.CA¨ÃqÀgï Cª jU P¼PAqAv w½¹zÁg.

P¼z DgÀ ªµðU½Az®Æ ¨Á¥ÆgÁªï ®PÀt ªÄvÀ Cªg ¸ºÆÃzg PËgÁªï CªgÀ Cº ªÄzÁ¨Á¢£ ¤ªÁ¹U¼ÁVzÁg. CªgÀ qP£ï ¥æÃ±P ¸Ãjz ªÄgÁoÁ eÁwAiÀ d£U¼Æq£ ¨gAiÀÄwzgÀ. PËgÁªïg E§gÀ ªÄP¼Áz zÁªÄÆ ªÄvÀ ®PÀt ªÄgÁog ¨d£AiÀ vAqU¼° ¨ÁUª»¸ÄwzgÀ. ºÃUÆÃ K£ÆÃ ªÄgÁojU EwÃZU ¸ÆÃzggÁz zÁªÄÆ ªÄvÀ ®PÀt ªÄºgï eÁwU ¸Ãjz ªgAzÀ w½zÀ§A¢vÀ. Ez£À Rav¥r¹PÆ¼®À ¸Ægvï ªÄvÀ Cº ªÄzÁ¨Ázï £qÀª NqÀª ¥Á¸ð¯ï mÁæ£ï£° - P®¸ªiÁqÄwz E§gÀ ªÄºgïg£À, zÁªÄÆ ªÄvÀ ®PÀt g£À UÄgÄw¸ÀªÁzPÁV «±Ãµ ªÁV Pg¸¯Á¬ÄvÀ. Ez£À SÁvj¥r¹PÆAq £Avg Cªg£À º£ÆAz£AiÀ vÁjÃRÀ ªÄzÀ gÁwæÄº ¨d£AiÀ vAqP §gÀªAv ¨AqÃj¥ÆÃ¯ï£ PÁ¯Á¥ÄgïU PgAiÀ¯Á¬ÄvÀ. ¤ÃªÀ AiiÁª eÁwU ¸Ãjz ªgAzÀ PÃ½zÁU vÁªÀ ¸ÆÃªÄªA²U¼AzÀ zÁªÄÆ ªÄvÀ ®PÀt Gvj¹zgÀ. F GvgªÀ ªÄgÁpUg£À PÆÃ¥ÆÃ¢æÆ½¹vÀ. CªgÀ vªÄ£À ªÄvÀ vªÄ DªÁ¸¸Á£U¼£À C¥«væÆ½¹zgAzÀ F ¸ÆÃzgg£À ªÄ£¹Ã §AiÄgÀ ªÄvÀ F ªÄºgï ¸ÆÃzggÀ ªÄgÁojAz DPæÀtPÆ M¼UÁzgÀ. M§ ¸ÆÃzg£ §½ MAzÀ GAUÄg«vÀ. Cz£À §®¥æÆÃU¢Az QvÄPÆAqÀ º£ÆAzÀ gÆ¥Á¬ÄU½U ªiÁj©lgÀ. F ºtzº DgÀ gÆ¥Á¬ÄU¼£À F ¸ÆÃzgg£À UÄgÄw¸¯AzÀ ¸Ægvï¤Az Pg¹z ªÄºgïU½U PÆq¯Á¬ÄvÀ. vÁªÀ vªÄ ªÄ£U½U »A¢gÄU®À C£ÄªÄw¸Ä£Av zÁªÄÆ ªÄvÀ ®PÀt ªÄgÁpg£À PÃ½PÆAqgÀ. Dzg, LzÀ£ÆgÀ gÀ¥Á¬ÄU¼ dÄ¯Á£ ¤ÃqÀª v£P, CªgÀ ªÄ£U »A¢gÄU®À C£ÄªÄwAiÄ£À ªÄgÁogÀ ¤gÁPj¹zgÀ. CµÀ zÆq ªÆvz ºtª£À dÄ¯Á£AiiÁV PÆq®À vªÄ C¸ÁªÄxðª£À ªÄºgï ¸ÆÃzggÀ ºÃ½PÆAq £Avg, £ÆgÀ¥vöÊzÀ gÆ¥Á¬ÄU¼£ÀzgÆ PÆqÀªAv ªÄgÁog° M§ ¸Æa¹z. Dzg £Avg

ªÄgÁog¯Æ§ dÄ¯Á£AiÀÄ ¸®ºAiÀÄ£Äß «gÆÃ¢¹ vÁªÀ PÃª® dÄ¯Á£ ª¸Æ° ªiÁqÀªÀzjAz v¥gÁU¨ÁgzAzÆ, F ¸ÆÃzgg£Äß Ppt ªÁV ²Q¸¨ÃPAzÆ, CªgÀ vªÄ eÁwAiÀ£Äß ªÄÄanzÀ C¥gÁzP CªjU vP ²P DU¨ÃPAzÀ ºÃ½z. F Pææ vUzÄPÆ¼®Ä wÃªiÁð¤¹z £Avg ªÄºgï ¸ÆÃzgg£Äß C°AiÀÄ G½¹PÆAqgÄ. ¨½U ¸ÀªiÁgÀ MA§vÀ UAmAiÀ ªÃ¼U Cªg£Äß CvÀAv jÃwAiÀ° C£ÁUjP C¥ªiÁ£P UÄjªiÁq¯Á¬ÄvÀ. Cªg Jq ¨ÁUz «ÄÃ¸U¼£Æß §®¨ÁUz ºÀ§ÄU¼£Äß ¨ÆÃ½¸¯Á¬ÄvÀ. Cªg zÃºU½U zÆ¼Ä ªÄvÀ E®tª£Äß ¨g¹z JuAiÀ£Äß §½zgÀ, º¼AiÀ Z¥°U¼ ºÁgª£Äß Cªg Pw£ ¸Äv ºÁQzgÄ. M§£Ä ¥ÆgPAiÀ£Äß PÉAiÀ° »rAiÀÄªAv ºÃ½zgÄ. ªÄvÆ§£ MAzÀ gn£ ¨ÆÃqð£À »rzÄPÆ¼®Ä ºÃ½zgÄ. Czg° ``EzÀ ªÄÃ®Uðz d£g£Äß ªÄÄIÀª ¸Áº¸ ªiÁrzPÁV C¥gÁ¢U½U PÆngÀª ²P" JAzÀ §gAiÀ¯ÁV¢vÀ. ªÄºgï ¸ÆÃzgg£Äß J¥vÉzÀ d£g UÄA¥Ä F jÃw ªÄgª tUAiÀ° PgzÆ¬ÄvÀ ªÄvÀ Cªg ªÄÄAzÄUq vªÄmAiÀ£Äß §rAiÀ¯ÁUÄwvÀ.

D ªÄºgï ¸ÆÃzggÀ ¥Æ°Ã¸jU zÆg£Äß PÆnzÁg. DgÆÃ¦U¼Ä Cªg ºÃ½PAiÀ° zÁªÄÆ ªÄvÀ ®Pötg£Äß vÁªÀ D jÃw ¸ÆÃzggÀ D¥Á¢¹gÀª jÃwAiÀ° £q¹PÆArgÀªÀzÀ ¤dªAzÆ, Dzg ¦AiiÁð¢U¼Ã D ²PAiÀ£Äß C£Ä¨«¸®Ä ¸¬ÄZ¬ÄAz¯Ã ¸ªÄw¹zgAzÀ ªÁ¢¹zgÄ. D jÃw §AiÀÄ ºÆqzÄ, DPæt ªiÁr, Ppt ²PAiÀ ¨zjP ºÁQzÁU zÁªÄÆ ªÄvÀ ®Pöt E§gÆ C¸ºÁAiÄgÁVzgÄ. C¸ø±ªUðP ¸ÃjzªgÀ J£ÄßªªgºF ¥çæAUªÀ zÆq ¸AZ®£ ªÄÆr¹z ªÄvÀ ¦AiiÁð¢U½U ¸ÆPªÁz PÁ£Æ£À ¸ºÁAiÀ ¤Ãq®Ä ¥ææÄvÀU¼£Äß ªiÁq¯ÁUÄwz.[1]

---

1. `¢ ¨ÁA¨ PÁæP¯ï, 25, ¥§æj 1928

# C£ÀÄ§AzsÀ 4

## ¥ÀæC£ÁåA M¥ÀàzÀ ÀªÀÄ£Á¢£ÀÄ ÁA¢üªÀÄvÀÄ ªÀÄ¨sÀ¸É¬ÄAiÀÄ ¨ÉÃn

1932, ¸¥ÀA§gï 6£ÀAiÀÄ vÁjÃRÄ AiÀÄgªÁq ¸gªÀÄ£ÀAiÀÄ° £qz ZZðAiÀÄÄ »ÃVvÀÄ.

ª®¨¨Á¬Ä ¥mÃ¯ï : EªgÀÄ ©æµï ¸PÁðgzªgÀÄ K£Ä ªiÁqÀÄvÁgAzÀÄ ¤ªÀÄU J¤¸ÀÄvz?

UÁA¢Ã f : ºvÆA§v£AiÀÄ vÁjÃQUÆ ªÀÄÄ£ÀªÃ £ÉÀ£À CªÀg ©qÀÄUq ªiÁqÀÄªgAzÀÄ £Á£Ä FU®Æ ¨Á«¸ÀÄvÃ£. £ÉÀ£À CªgÀÄ G¥ªÁ¸ ªiÁq®Ä ©lÄ, Czg §UU AiiÁjUÆ w½AiÀÄzAv ªiÁr, £Avg M§ PÉ¢AiiÁV £Á£Ä ºÁU ªiÁq¯Ã¨ÁgzÁVvÀÄ ºÁUÁV vÁªÀ Czg §UU K£ÉÀ ªiÁq®Ä ¸ÁzÀªÁU°®ªAzÀÄ ºÃ¼ÀªÀzÁzg CzÀÄ zÀÄµv£z, ¥gªiÁª¢AiiÁUÀvz. CªgÀÄ C°AiÀÄ v£P ºÆÃU¯ÁggÀÄ JAzÀÄ £Á£Ä ºÃ¼ÀªÀ¢®, DU ªiÁvæCªgÀÄ Cz£ÀÀ ºÁU ºÃ¼ÀªÀz£ÀÀ Dª±ÀPªAzÀÄ PÁtÄvÁg ªÀÄvÀÄ Dª±ÀPvVAv®Æ ºZÀÄ zÆg ºÆÃUÀªAx d£gÀÄ CªgÀÄ RArv C®.

ª.¥mÃ¯ï : ºÁVzÀ° ¤ÃªÃ£Ä ªiÁqÀÄ«j?

UÁA¢Ã f : G¥ªÁ¸ªÇ E¥v£AiÀÄ vÁjÃRÄ DgA¨ªÁUÀªÀ¢®, £ÁªÀ E¥v£AiÀÄ vÁjÃTUÃ CAnPÆArgÀªÀzPÁUÀªÀ¢®.

ª.¥mÃ¯ï : CAzg ºÆ¸ ¸A«zÁ£z AiÆÃd£AiÀÄÄ vAiiÁgÁUÀªªgUÆ £ªÀÄU ¸ªÀÄAiÀÄ«z JAzÀÄ Ezg Cxðª? CxªÁ, d£jUÆ ¸PÁðgPÆ ¤ÃªÀ ¢ÃWðPÁ¯ÁªÁ¢AiÀÄ JZjP ¤Ãq§ºÀÄzÀÄ JAz?

UÁA¢Ã f : ºËzÀÄ, Dzg, £Á£Ä ºÆgU §Az £Avg d£gÀÄ £Á£Ä JµÀÄ P®¸ ªiÁq®Ä ©qÀÄªg£ÀÀªÀz£ÀÀ CzÀÄ Cª®A©¹z. ¥j¹wAiÀÄÄ ºÃVgÀªÀzA§Äz£ÀÀ £Á£Ä FU ºÃ¼¯ÁUÀªÀ¢®, £Á£Ä AiiÁª jÃwAiÀÄ ¥væ§gAiÀÄ ¨ÃPÁUÀªÀzA§Äzg §UUÆ £ÉU AiiÁªÀzÃ P®£ E®. Dzg £Á£Ä »AzÆ ¸ªiÁd, CAvÀdgÀÄ, ¸PÁðg ªÀÄvÀÄ ªÀÄÄ¹ªÀÄgÀÄ J® ¥PU¼£ÆÀ ¥jUt¸¨ÃPÁUÀÄvz. J® ¸À¼U¼°AiÀÄÆ CAvÀdgÆq£ »AzÆU¼Ä ¸¨U¼£ÀÀ £q¹ Ez£ÆÀ wg¸ÀÄj¸¨ÃPÁVz. ¸PÁðgªÀ, Pæ¸g ¸PÁðgªÁV Ez£ÀÀ

ªiÁrgÀªÀzjAz Pæãç gÁV Ez£Àß ªiÁq¯ÁUÀªÀ¢®ªAzÀ Pæãç jUÆ ªÀvÀ ¸PÁðgPÆ EzÃ «µAiÀªÀ£Àß £Á£Á w½¸¨ÃPÁVz. £ªÀ ¸gÁdªÀ C¹v÷P §gº, £Avg CªgÀ vªÀU Eµ§Az jÃwAiÀº CAvdg£Àß ¥ææÁ«¸§ºÀzÀ. Dzg EAzÀ, FU CªgÀ £ªÀ£Àß «¨f¸¨ÁgzÀ. £Á£Ä Ez£Àß ªÀÀ¹ªÀjU EAUAr£º PÆqÁ ºÃ½z. FU CAvdjU ªÀÀ¹ªÀgÀ CxªÁ PæãçgÁUÀªÀzg ºÆgvÀ ¨Ãg DAiÀ E®ªA§Àz£Àß £Á£Ä »AzÀ ¸ªiÁdPÆ «ªj¸ÀvÃ£.

ªÄºzÃª
zÃ¸Á¬Ä : »ÃU §gÀªªgº Pæãç ¸ÀÃ»vgÆ EgÀvÁg ªÀvÀ CªgÀ ¤ªÀU »ÃU ºÃ¼ÀvÁg: ¸PÁðgª£Àß D¥Á¢¸Àª ªÆz®Ä ¤ÃªÀ ¤ªÀ£ÀÃ ¤A¢¹PÆ¼¨ÃPÀ. CAvdg£Àß »AzÆ ¸ªiÁdªÃP C¸ø±gAzÀ ¥jUt¸Àvz?

UÁA¢Ãf : Cz£Àß £Á£Ä «ªj¸¨ÃPÁVz. CzÃ£Ä CAvº Ppt P®¸ª®, £ÁªÀ CªjU »ÃU ºÃ¼§ºÀzÀ. "£ªÀ ¸ªÀ¸U¼£Àß £ÁªÀ §Uºj¹PÆ¼®Ä ©r, ¤ÃªÃP ªÀz §gÀwÃj? £ÁªÀ £ªÀ ªªºÁgU¼£Àß ¸jªiÁrPÆAq £Avg ¤ÃªÀ ¤«Àµ §AzAv ªiÁq§ºÀzÀ. ¤ÃªÃP ¤ªÀ£Àß MqzÀ «¨f¹ J® «µAiÀU¼ §UU ªÁzªiÁqÀwÃj? EAzÀ CAvdgÀ ¤ªÀ PqU CxªÁ ªÀÀ¹ªÀg PqU ªÀÀRªiÁq¨ÃPÁVz. Dzg ¹ÃAiÀgÀ C¸ø±g®. CªgÀ C¸ø±gÁU§AiÀ¹zgÆ, ¥ÀgÀµgÀ ºÆÃV Cªg ºÁ¹UAiÀº P½vÀPÆ¼ÀvÁg. ¥æÃP ªÀvzÁgg ¸ªÀÀzÁAiÀz ªiÁrzgÆ Cªg£Àß ¨Ã¥ðr¸¯ÁUÀªÀ¢®. EAzÀ CAvdgÀ ±Á±vªÁV ¨Ãg ªiÁq®nzÁg. Ezg ¥juÁªÀªÃ£ÁU §ºÀzÀ? EzjAzÁV DAvjP ¸AWµð, ºÆÃgÁ l U¼ÀAmÁUÀvª. C®z ... CAvº d£jzÁg. CªgÀ ¸ªÀÀzÁAiÀz°£ zÀµ ªQU¼£Àß MlÄUÆr¸ÀvÁg ªÀvÀ »AzÀU¼£Àß DPææ¸ÀªAv, ¨Á«U½U «µºÁPÀªAv ªÀvÀ CAvº Evg P®¸U¼£Àß ªiÁqÀªAv Cªg£Àß ¤AiÆÃf¸ÀvÁg.....[1]

JZï.J¸ï.J¯ï. ¥Æ¯ÁPïU ¨Á¥Æf §gz ¥væº, vªÀ£Àß G¥ªÁ¸P ¥ãgÃ¦¹z ¸¤ªÃ±U¼ ¸µ «ªgª£Àß ¤ÃrzÁg. CªgÀ §gz ¥væEzÀ "G¥ªÁ¸z ¤dªÁz Cxðª£ÀÃ ¤ÃªÀ w½¢®ª¤¸Àvz. C®¸ASÁvg ¸¨AiÀº £Á£Ä ªiÁrz ¨Áµtª£Àß ¤ÃªÀ P¼¨ÃPÁUÀvz. CzÀ ¹z¥r¹PÆArz ¨Áµtª®. Czg ªÀÀPÁAiÀªÀ CzªÀ Mvq¢Az §AzzÁV¢vÀ. D ªÄºv¥ÆtðªÇ UA©ÃgªÇ Dz WÆÃµuAiÀ C¤ªÁAiÀð ¥juÁªÀªÃ G¥ªÁ¸ªÁVzvÀ. D WÆÃµuAiÀÀ ºÃU ¸ÁxðPª£Àß PAqÀPÆ¼Àvz J£Àª §UU ££UÃ£Æ w½¢gº®, D WÆÃµuAiÀÀ zªÀ¢Az DzzAzÀ ºÃ¼ÀvÃ£

1. EArAiiÁ ¸PÁðg ¢ Uª£ðªÀAmï D¥ï EArAiÀ, ¢ P¯Pqï ªPïð D¥ï ªÄºÁv UÁA¢, «Ä¤¹ D¥ï E£ï¥gïªÀõµ£ï CAqï ¨ÁæïPÁ¹AUï, £Æq°, Vol. 11 pp. 457-458.

ªÀvÀÄ Czg ¹¢Þ ¸ÁxðPv PÆqÁ ºÁUÀAiÀÄÃ. CzÀÄ ºÁVzÀݰ J® ªÁz«ªÁzU¼Æ ªÀxðªÃ ¸j. CzÆAzÀÄ PÃª® ¨ææÀAiÆÃ «ÀxÀzÀ±ð£ªÇÃ DVzÀݰ, CzÀÄ CAvºzAzÀÄ £A§Àª ¸ÀÃ»vgÀ, vªÀÄ ¸ºÁAiÀP J® ¦Ãæ ªÀvÀÄ ¤gAvg ¥ÆæÀvÀU¼£ÀÄ G¥AiÆÃV¹PÆAqÀÄ ¸vÀª£ÀÄ £ÉU ªÀÄ£UÁ t¸®À §zÀgÁVzÁg.

``DV¤Az®Æ £q¢gÀª J® WI£U¼Æ, F G¥ªÁ¸ªÀ zÃªjAz ¤Ãq®I dªÁ¨ÁjAiiÁVzAiÀA§ ££À C©¥ÁææÀª£ÀÄ zÀrÃPj¸Àvª. G¥ªÁ¸z ¸AzÃ± ¸gï ¸ÁªÀÄÀAiÀ¯ï ºÆÃg ªÀÆ®P RArv ºÆÃU¯Ã¨ÃPÁV¢vÀ. Dzg £Á£À ¤Ãrz J® ºÃ½PU¼£ÆÀ ºÁUÆ ¥ææÁ¤U½U £Á£À §gz ¥væ£ÆÀ ¤ÃªÀ Cxðªiár PÆArgÀ«gÁzg F G¥ªÁ¸ªÀ ££Àº «±Á¸«nzÀ ºÁUÆ £Á£À Cªg £qÀª EzÁU Ju¬À®z, ¦Ãæ¬ÀAz ££À£ÀÄ ¸ÀvÀªg¢gÀwzÀ ®P®P d£g£ÀÄ PÀjvÀ ¸A¨ÆÃ¢¹zÀzÁVz. AiiÁªÀzÃ jÃwAiÀ ªÁzªiÁqz CªgÀ CªgÀ F G¥ªÁ¸ª£ÀÄ Czg J® CAvgÁxðzÆq£ Cxðªiár PÆAqgÀ. Ezg gÁdQÃAiÀ ¨ÁUªÀ Cªj U PÀ®PªÁV¢vÀ, Czg DAvAiÀðz ¸ÀzÁguAiÀÄÃ ªÀÄRªÁV¢vÀ.

``ºÁVzÀݰ Ez£ÀÄ ºvÀ ªµðU¼ »AzAiÀÄÃ G¥AiÆÃV¸°®ªÃP JAzÀ ¤ÃªÀ PÃ¼ÀwÃj.'' CzP GvgªAzg, ``zÃªgÀ ££U EzPÁV Pg ¤Ãrg°®. ¤ÃªÀ ¸®ªÇ ¤jÃQ¸¢zÁU Cª£À ¤ªÀ£ÀÄ JZj¸®À §gÀvÁ£. Cª£ ªiÁUðU¼À £ªÀ ªiÁUðU½VAv ©£ÀªÁVgÀvª. FU ££VgÀªAv vÆÃgÀª vÁUP ¨ÃPÁz J® ¸ÁªÀxðªÇ DU®Æ ££À° E¢vÀ JAzÀ £Á£À ºÃ½zg ¤ÃªÀ RArv £A§ÀwÃj.''[2]

2 ibid ¸A¥ÀI 51 pp 252-253

ªÀÄÃ°£ J®ªÇ ªÀgÀªÀÄ¢ææUÆArª, Busi Dr: pp 188-190

# C£ÀÄ§AzsÀ 5

## ¥ÀæÀ£Á M¥ÀàzÀ°èAiÀÄ zÀÄqÀÄªÉ£À f£À¸ÀAiÀÄªÀÄ£ÀÄß ¸ÀªÁ¢üªÀiÁrPÉÆAqÀÄ

### 1

### ¸ÀA¸ÀÜ£À dAn DAiÉÆÃUÀ¸ÀªÀÄw :

### ``PÉÃªÀÄªÁ¢ wÃªÀiÁð£ÀªÀ£ÀÄß ¥ÀæÀ£Á M¥ÀàzÀ

¥ÀæÀ ¸ªÄAiÀÄzÀ° eÁwªÁgÀ ¥ÁæµzÀªÀ C¤ªÁAiÀÄðªAzÀ ¸ªÄwAiÀÄªgÀ ¤zÁðg P¼¢zÁg. eÁwÃAiÀÄ wÃªiÁð£z° M¼UÆArgÀªAvº ¥ÁæwÃAiÀÄ C¸A©U¼ gZ£U EzÀ ¸jAiiÁV «ZÁgªiÁrz ªÄvÀ ¸ªÄvÆÃ®£«gÀª K¥Áð I À JAzÀ «ªj¸ÄvÁg.

¥Æ£Á M¥AzPÀ ¸A§A¢¹zAv P«ÄnAiÀÄ zÀ¶PÆÃ£ªAzg, Cªg C©¥ÁæiÄz° ²æªÀ£ï ªÄºÁgÁdg ¸PÁðgz ªÄÆ® ¸®ºU¼Ä, ¸ÁªiÁ£ÀªÁz PÆÃªÄÄªÁz ¥ÁæAiÀÄ EvÀxðPÀ ºZÄ £ÁAiÀÄ¸ªÄvªÁVzÀªÀ ªÄvÀ ±ÆÃ¶v ªUðU½U Cªg FV£ C©ª¢AiÀÄ ºAvz° ºaU ¥ÁæÆÃd£PÁjAiiÁVzÀªÀ. Dzg, F M¥AzªÀ D wÃªiÁð£z C¢PÀv ¥jµgu JAzÀ M¦PÆArgÀªÀzjAz, Cz£Ä FU wg¸j¸¯ÁUÄªÀ¢®ª£ÄªÀzg §UU ¸«ÄwAiÀÄªgÀ ¸µ C©¥ÁæiÀÄ vÁ½zÁg. ±ÆÃ¶vªUðzªjU «ÄÃ¸¯ÁVj¹gÀª ¸z¸vz ¸ASÀAiÀÄ° §AUÁ¼z° MqA§rP¬ÄAz ¸® PrªÄ ªiÁq§ºÄzÁzg, CzPÀ ¥jºÁgÁvPªÁV Evg ¥ÁæwU¼° Cªg ¸z¸vz ¸ASÀAiÀÄ£Ä ºa¸§ºÄzÄ JAzªgÀ D¯ÆÃa¸ÀwzÁg. EzjAz ºÆ¸ ¸A«zÁ£ PÁAiÀÄð¤ªðºuAiÀÄÄ §AUÁ¼z° ¸ÄUªÄªÁUÄªÀzÄ" (¨Ágvz ¸ÁA«zÁ¤P ¸ÄzÁguU¼ §UU ±Ãv¥væº£ ¸®ºU¼ §UU ¸A¸w£ dAn DAiÀÄ ¸«ÄwAiÀÄ ªg¢AiÀÄ ¸ÁgÁA±, ¥ÀI 4, ¢£ÁAP 22, £ªA§gï 1934)[1]

---

1 ªÄgÀªÄÄ¢æUÆArzÀ, SÃgïªÆÃqï, ¸A¥ÀI 5 pp 65-66

## 2

``»AzÄ¸Á£z ªÁ£ÄµïgÀ ªÀvÀ CwªiÁ£ÄµgÀ,'' JA§ vªÀ UÀæxz° eÆÃQªïï D¼ »ÃU ºÃ½zgÀ:

``CªgÀ (qÁ|| ©.Dgï. CA¨ÃqïgïÌ) zÀAiÀÄðªAvgÁVzïgÀ ªÀvÀ CPg±B ¸£gï£ `zÀAiÀÄðªÁVgÀ zÀAiÀÄðªÁVgÀ ªÀvÀ AiiÁªÁU®Æ, JA¢UÆ ºZÀ zÀAiÀÄðªÁVgÀ' JA§ ¸ÆvæÀ£À C¼ªr¹PÆAqgÀ. zÀAiÀÄð¢Az ªÀvÀ ºzgz ªÀÄÄ£ÀUÀªÀzjAz ºa£ ¨AiÀU¼À ªÀvÀ zË§ð®ÌU¼À ¥jºÁgªÁUÀvzA§Àz£À CªgÀ PºvÀPÆAqgÀ. CªgÀ C£UvÀªÁz UªÀ£¤ÃrzÀzjAzÁV CvÀAv ¥ÉæÃ®ªÁV ºzUÆ½¸®l gÀ. ªÀºÁvÀ UÁA¢ PÆqÁ ±ÆÃ¶vªUðzªg ¥gªÁV C£À¥ªÀªÁz ¸ÃªÁ zÁR¯AiÀ£À ºÆA¢zÌgÀ ªÀvÀ ±ÆÃ¶vªUðª£À CªgÀ UËgª¥Æ tðªÁV `ºjd£gÀ' JAzÀ ¸A¨ÆÃ¢¹zgÀ. Dzg qÁPgïgÀ AiiÁªÀzÃ ¥æ¸¢ðAiÀ£À ¸»¸Àwg°®. ¨ÃgÆ§gÀ vªÀ ¦ÃoªÀ£À DPæÀ¸ÀªÀz£À CªgÀ ¸»¸Àwg°®. ¨ÁgwÃAiÀ ¸ªiÁdªÀ v£À£À vÁ£À CvÀAv WÆÃgªÁV ¥v£UÆ½¹PÆAqAvº C¸Á¨Á«PªÁz ¸ÁªiÁfP ªÀvÀ DyðP ¹ÌwAiÀ° d£À vÁ½zÌ qÁ|| CA¨ÃqïgïÌ CªgÀ GzÀÃ±¥ÆªðPªÁVAiÀÄÃ C¸ºdªÁz jÃwAiÀ° vªÀ ªÀQv÷ª£À ¨¼¹ ¥ÆÃ¶¹PÆAqgÀ.'' (»AzÀ¸Á£z ªÁ£ÄµïgÀ ªÀvÀ CwªiÁ£ÄµgÀ ¥Ä l -20)

«zÁ£ªÀAq®z° eÁwªÁgÀ C£À¥ÁvU¼£À ¤zðj¸ÀªAv gÁªïï¸Ã ªiÁPïqÆ£Á¯ïgÆq£ qÁ|| CA¨ÃqïgïÌ Cªg ¨ÃrPAiÀÄ, UÆAz®, ¥ÆæÃ§vU½Az PÆrzÌ gÁdQÃAiÀ fÃª£z° Cªg£À ªÀÄdÀUgQÃqÀªiÁrvÀ. AiÀgªÁq §A¢ÃSÁ£AiÀ ¨ÁV°£° qÁPggÀ UnAiiÁV ¨Æ¨ºÁQzgÀ-

``UÁA¢AiÀ fÃª£ ªÀvÀ ££À d£U¼ ºPÀU¼À EªÀU¼ £qÀª DAiÀªiÁq¨ÃPÁz CUvÀPÌ £Á£À zÆq®qÀªÀ¢®ªAzÀ £A§ÀvÃ£. ££À d£U¼ PÀPÁ®ÀU¼£À PnºÁQ Cªg£À v¯ªiÁgÀU¼ªgUÆ »AzÆU¼ ª±PÌ PÆqÀªÀz£À £Á£À JA¢UÆ M¥ÀªÀ¢®. £ÆgÀd£ ªÀºÁvÀgÀ §°AiiÁzgÆ £Á£À aAw¸ÀªÀ¢®. ªÀºÁvÀgÀU¼Ã£À CªÀgfÃ«U¼®. ££À£À E°AiÀÄÃ EgÀª ¢Ã¥z PA§PÌ £ÃtÀ ºÁP®À ¤ÃªÀ ¸vAvæ¢Ãj. ......'' ªÀºÁvÀgÀ qÁPgjU ºÃ½zgÀ ``¤ªÀ §UÌ ££U ºªÀ¬Àz. ¤ªÀ ¨Áµtª£ÆÀ AiiÁªvÀ £Á£À G¹gÀ ©V»rzÀ D°¹zÃ£.'' (»AzÆ¸Á£z ªÁ£ÄµïgÀ ªÀvÀ CwªiÁ£ÄµgÀ ¥Ä.22)[1]

---

1. ªÀgÀªÀÄzæ, SÀgïªÆÃqï, ¸A¥Ä l 4, pp 168-169

## 3
## PÁªÀåÁªÀÄzÀ §gÉiÀÄwgÀªÀ ÀÉÃRPÀ

`PÁAUæë «¥®ªÁVzAiÀÄ' JA§ v£À ¥À¸Pz° ¸ÁªðdPÀ ªÀªºÁgz «zÁyðAiÆ§ v£À C©¥ÁæAiÀU¼£ÀÄ P¼PAqAv ªÀP¥r¹zÁ£. ``«Ä|| UÁA¢AiÀªg CvÀAv ¥Àæg £a£ ¨A§ºUgÀ PÆqÁ ¸ªÀÄÃ¼£z° «Ä|| UÁA¢AiÀªg ¨ÁUª»¸À«PAiÀÄ AiÀ±¹AiiÁ¬ÀvAzÀ ºÃ¼¯ÁggÀ. J® PqU¼°AiÀÆ eÁwªÁ¢ ¨ÃzU¼Æ ¥ÀæwU CqUÁ®À ºÁPÀwzªÀ ªÀvÀ CAwªÀªÁV C®¸ASÁvg G¥¸«ÀwAiÀÄ MAzÀ MqA§ArPU §g®À «¥®ªÁzz£Æ ªg¢ ªiÁq¯Ã¨ÃPÁ¬ÀvÀ. ªÀºªÀ¢ÃAiÀgÀ, ¹RígÀ ªÀvÀ AiÀÆgÆÃ¦AiÀ£gÆ ºÆgvÀ¥r¹ ¨Ãg AiiÁªÀzÃ ¸ªÀÄzÁAiÀª£Æ ¥ÀæÃP ªÀvzÁg ¸ªÀÄzÁAiÀª£ÁV ¥jUt¸Àª ¸®ºAiÀ£À «Ä|| UÁA¢AiÀªgÀ ¸vvªÁV ¤gÁPj¸Àv¯Ã EzgÀ ªÀvÀ ±ÆÃ¶v ªUðP ¸A§A¢¹zAv, «Ä|| UÁA¢AiÀÄ D ¸ªÀÄzÁAiÀzªgÀ »AzÆU¼AzÆ CªgÀ£ÀÄ »AzÆ JA§ ªÁ¦AiÀ°AiÀÄÃ ¥jUt¸¨ÃPAzÀ MvÁ¬À¹zgÀ. EAvº ºoz zÆÃgu¬ÀAzÁV qÁ|| CA¨Ãqgï ±ÆÃ¶v ªUðU¼£ÀÄ ¥ÀæÃP ªÀvzÁg ¸ªÀÄzÁAiÀªAzÀ WÆÃ¶¸®À ¸µªÁV DUæ¸ÀªAvÁ¬ÀvÀ." - ¥À.55)[1]

## 4

vªÀ DvZjvæAiÀ° qÁ|| JA.Dgï. dAiÀPgï »ÃU ºÃ½zÁg; ``.......... EAUAr£° ¨ÁgwÃAiÀ zÀAqÀªÀÃf£ ¥jµw£° Cªg (ªÀºÁv UÁA¢AiÀªg) zÆÃguAiÀ, C®¸ASÁvg£À C®¸ASÁvg PÀSÁvªÁz M¥AzªÀ£ÀÄ M¦PÆ¼ÀªvzÆrvÀ. PÁAUæë£ ªiÁzªÀ ªÀz¹P¬ÀAz MAzÃ MAzÀ ¸Á£z «ÀÃ¸¯ÁwAiÀ£ÀÄ ¤ÃqÀªz£ÀÄ CªgÀ ¤gÁPj¹zgÀ. £Avg ¥æÁ£ªÀAwæªiÁPïqÆ£Á¯ïg wÃªiÁð£z «gÀz ¨ÁgvzºG¥ªÁ¸ ªiÁrzgÀ. F wÃªiÁð£ª £Avgz ¥Æ£Á wÃªiÁð£QAv®Æ ºZÀ ¸AvÀ°v ªª¸AiiÁV¢vÀ. DzgÆ ¥Æ£Á wÃªiÁð£ª£ÀÃ §AzÆQ£ vÀ¢¬ÀAz¯A§AvºMvÁAiÀ¢Az M¦PÆ¼¨ÃPÁ¬ÀvÀ. »Az UÁA¢ÃfAiÀ ¤µÁªAv C£ÀAiiÁ¬ÀU¼ÁV zªjAz®Æ PÆq §AUÁ¼z° F M¥Azz ¥æÁªªÀ wÃªæÁV nÃPUÆ¼UÁ¬ÀvÀ. (`¢ ¸ÆÃj D¥ï ªÀ¯E¥ï' ¸A¥ÀI 1 ¥À. 361-362)"[2]

## 5

¥Arv dªÁºg¯Á¯ï £ºgÆ Cªg d£¢£z ¸Az¨ðz° `º¼AiÀ ¥væ¼ MAzÀ UÀZÀ' (A bunch of old letters) JA§ ²Ã¶ðPAiÀ MAzÀ ¥À¸PªÀ ¥Àæ uUÆArvÀ.

---

1. Sgïª ÆÃqï ¸A¥ÀI 4, pp 176
2. CzÃ pp 173

D ¥Ä¸Pª À «Ä|| Jqqïð xÁA¥ï¸£ï CªgÀ 1936, 20 r¸A§gï 6 gAzÀ §g¢gÀª MAzÀ ¥vÀæ£ÀÄß M¼UÆArz, D ¥væ° »ÃU ºÃ¼¯ÁVz:

``zÀAqÀ ªÀÄÃf£ ¥jµw£ v£P £Á£Ä JAzÆ UÁA¢AiÀªgÀ v¥Ä ªiÁqÀwzÁgAzÀ w½¢g°®. C° D ¥jµw£° CªgÀ CºAPÁjAiÀÆ C¸A§zªÁVAiÀÆ ªwð¹zgÀ. §ºÀ±B CªgÀ C°U §g¯Ã¨ÁgzÁV¢vÀ. Dzg §Az £Avg, Evg ¨ÁgwÃAiÀg£ÀÄß, vªÀ C©¥ÁæèÀPÁV ¸ÁPµÀ ¨¯vwzAvº C£ÃPg° vªÆq£ ¸ªiÁ¯ÆÃa¸®Ä CºðvºPÀU¼À¼ªg£ÀÄß, ¸ªiÁ£ ¥ÁæèÄvÀ ªÄvÀ ¨gª¸AiÀÀ¼ ¸ÀÃ»vgAv ¥jUt¸®Ä CªgÀ ¤gÁPj¹zÀ C¸ªÄxð¤ÃAiÀ" (P. 208)" ³

**6**

«Ä|| UÆÃgï ¨ÆÃ¯ïm£ï CªgÀ vªÀ ¥Ä¸P ``UÁA¢ÃfAiÀ zÀgAv"z° (The Tragedy of Gandhi) »ÃU §g¢zÁg.

``¤d ºÃ¼¨ÃPAzg «Ä|| UÁA¢ ®Aq£ï£° vªÄv£ª£ÀÄß P¼zÀPÆAqgÀ ºÁUÆ Cªg ªÆz°£ ¨gª¸, «±Á¸, £A©PU¼Ä Cªg£ÀÄß vÆgzÀºÆÃUÀwzªÀ. vÁªÀ wg¸j¸¯Az §A¢z ¥jµw£° ¢£¢£ªÇ CªgÀ ªÀºªÀ¢ÃAiÀ ¥ææ¤¢U¼£ÀÄß JzÀj¸Àwz gÀ ºÁUÆ D ¥ææ¤¢U¼Ä vªÀ AiiÁªÀzÃ MAzÀ ¨ÃrPAiÀ£ÆÄß©lÀPÆqÀwg°®. ¢£P¼zAv qÁ|| CA¨ÃqgÀï §º¼ ¥ÁæÄÄRªÀ£ÀÄß U½¹PÆAqgÀ. CªgÀ `C¸ø±g' ¥gªÁV ªiÁv£ÁqÀwzgÀ, ªÄvÀ ¨Ágvz ¸ªiÁdP¯Átz §UU CªgÀ ¥ææAiÆAzÀ ¨Áµtz°AiÀÆ CzÀ ¸A¥æÁAiÀ¤µªÁVg§ºÀzÀ Cxª Á ¸ªiÁdªÁ¢AiÀzÁVg§ºÀzÀ- C¸ø±g zÀgAv §ª uU¼ §UU ¥æÁ¦¸Àwz gÀ. CzÀ ªÁªºÁjP PÁ¼f¬Ä®zÃ ºZÁV ¨Áª£ÁvPªÁzzÁV¢vÀ. «Ä|| UÁA¢AiÀªgÀ C¸ø±g£ÀÄß ¥ææ¤¢¸Àª ªÀÆ®P ºZÀ PrªÀ EAUAr£ ¥ææAiÆ§jAz®Æ ¥ææA¸ U½¸Àwz gÀ- Dzg FU qÁ|| CA¨Ãqgï D ªÃ¢PAiÀ£ÀÄß £Á±¥r¹zgÀ. CªgÀ ªÀºÁvg£ÀÄß JµÄ «gÆÃ¢¹zgAzg, «Ä|| UÁA¢ ªÄvÀ qÁ|| CA¨Ãqgï, F E§g ªQv÷U¼Ã ¥jµw£° CvAv ¥æÁ£ªÁzªÀ JAzÀ ¸ÁªðdªPgÀ £A§vÆqVzgÀ. EzQAv®Æ ¸vP zÆgªÁVz ¸AUw ¨Ãg AiiÁªÀzÆ Eg°®. ªÆz°U ºÃ¼¨ÃPAzg «Ä|| UÁA¢AiÀªgÀ ¥jµw£° ¸ÁPµÀ ¥ææÁª±Á°U¼ÁVg°®. ¸gï ¸ÁªÀÄAiÀ¯ï ºÆÃgAiÀªgÀ ¥gÆÃP ZÀ£Áªu (DAiÀAiÀ) ¥gªÁV ªiÁv£Árz £Avg UÁA¢AiÀªgÀ ªiÁv£ÁrzgÀ. «Ä|| UÁA¢AiÀªgÀ, ¸gï ¸ÁªÀÄAiÀ¯ïgÆq£ ¸A¥Ætðªá V ¸ºªÀw¹zgÀ ªÄvÀ vªÀ ¥AZÁAiÀvï AiÆÃd£AiÀ£ÀÄß «¸j¸®Ä ªÀÄAzÁzgÀ. F AiÆÃd£AiÀAv UÁæÀ¸gÀ vªÀ ¥ææ¢U¼£ÀÄß DAiÀªiÁqÀvÁg, UÁæÀz ¥ææ¢U¼ MAzÀ UÀA¥Ä vªÀ f¯Á ¥ææ¢AiÀ£ÀÄß DAiÀ ªiÁqÀvz ªÄvÀ f¯Á

3. S£gï ªÆÃqï ¸A¥Ä I 4, Pp. 173-174

¥æ¤¢U¼ MAzÄ UÄA¥Ä ±Á¸£¸¨U vªÄ ¥æ¤¢AiÄ£Äß DAiÄªiÁqÄvz. F ªÄª¸ÄAiÄÄ ¸A¥æðAiÄ¤µg ¨AiÄª£Äß zÄ§ð®UÆ½¸Äv¯Ã PÁAUæ¸£, ªAiÄ¸ ªÄvzÁ£ ¨ÃrPAiÄ£Äß ¥Ægð¸Ävz. ¨Ágvz GzÁgªÁ¢ ¥æ¤¢U¼Ä EzP «±Á¸¥ÆªðPªÁV C£ÄªÄw¹zgÄ. Cªg° M§gÄ ºÃ½zgÄ: ``MAzÄ ªÁgz M¼UÁV ¸A¥æðAiÄ¤µg C©¥ÁæAiÄU¼Ä vªÄv N®ÄªAv ªiÁqÄvÁg JAzgÄ'' UÁA¢AiÄªgÄ F jÃwAiÄ° ªÄv ªiÁv£Áq°®. CzP §z¯ÁV qÁ|| CA¨Ãqgï CªgÆq£ ªÁUÁz GAmÁ¬ÄvÄ. ªÆz°U, ªÄºÁvgªg ªÄÄdÄUgª£Äß PAqÄ ªÆºªÄ¢ÃAiÄgÄ D£A¢¹zgÄ. Dzg ¸® ¸ªÄAiÄz°AiÄÃ, qÁ|| CA¨Ãqgï CªgÄ «Ä|| UÁA¢AiÄªjU Cªg ªÃAiÄQP ¸Á£ª£Äß ¥jUt¹ ¸Ëd£å vÆÃg¨ÃPAzÄ ¥æAiÆ§ ¥æ¤¢AiÄÆ §AiÄ¸ÄwzgÄ.''

(UÁA¢AiÄ zÄgAv, The Tragedy of Gandhi, Pages 266-267)

``E£Äß ªÄÄAz ¨ÆÃ ªÄvÄ £Êmï ¥z«AiÄ ªÃ¢PU¼ÁU° ¥jµw£ ¸ÃgÄ«PAiÄ PÃAzæ¼Á¨ÃPÁV°®. ªÆºªÄ¢ÃAiÄgÄ, AiÄÆgÆÃ¦AiÄ£ßgÄ, DAUÆÃ-EArAiÄ£ßgÄ ªÄvÄ C¸ø±ågÄ J® ¥æ¤¢U¼Æ MnUÃ ¸ÃjzgÄ. PÃª® ¸® ¸ªÄAiÄz°AiÄÃ CªgÄ C®¸ASÁåvg MqA§rPAiÄ£Äß ga¹zgÄ. ¹Sï £ÁAiÄP ¸zÁðgï Gd¯ï ¹AUï£Æ§£Äß ºÆgvÄ ¥r¹ C®¸ASÁåv ¥æ¤¢U¼Ä EzP ¸»ºÁQzgÄ. «Ä|| ¨AxÁv F MqA§rPAiÄ MAzÄ ¥æAiÄ£Æß, GvÁº¥Ætð «ªguÁvåP ºÁUÆ ¸Ëd£å¥Ætð ¥væ£Äß «Ä|| UÁA¢U P½¹zgÄ. ¸ÃAmï eÃªiï£° qÁ|| CA¨Ãqgï UÁA¢ÃfAiÄ zÈ¶AiÄ£Äß ºZÄ PrªÄ Gzþlv£ ªÄvÄ wg¸Ág¢Az PAqgÄ. DU «Ä|| UÁA¢AiÄªjU PÃª® JgqÄ RavªÁz ªiÁUðU¼Ä vg¢zå ªÃ. ªÆz®£AiÄzAzg vªÄU ¸Ázå ªÁzµÄ W£v¬ÄAz C®¸ASÁåvg «¨d£U ¸ªÄw¸ÄªÃzÄ. Jgq£AiÄzAzg CwzÆqzÁz »AzÆ §ºÄ¸ASÁåvg£Äß vªÄqU ¸¼zÄPÆ¼ÄªÃzÄ. EzÄ PÃª® PÁAUæ£ KPÊP ¥æ¤¢AiÄAv ªiÁv£Áq®Ä C® Dzg ¸A¥æðAiÄ¤µ »AzÆ ªÄºÁ¸¨Á PÆq M¼UÆAqAv J® »AzÆU¼ ªÄÄRªÁtAiiÁV ªiÁv£Áq®Ä. «Ä|| UÁA¢AiÄªgÄ ªÃUªÁV D MqA§rP ¤§Az£U¼ ªÄÃ¯ PuÁr¹zgÄ. D MqA§rPAiÄÄ qÁ|| CA¨Ãqgï C¼ªr¹PÆArz dU¼UAn ªÄ£ÆÃ¨Áªª£Æß ¸Æa¸ÄwvAzÄ CªgÄ vPtªÃ ªÄ£UAqgÄ. KPAzg C¸ø±åjU ¥æÃP ªÄvzÁ£z ºPÄU¼£Äß Czg° GzÁgªÁV ¤Ãq¯ÁVvÄ. E°AiÄªgUÆ CªgÄ ®Aq¤ß£° vªÄ PÁAiÆðÃzÃ±z §UU ¸A¢UvAiÄ°zgÄ. Dzg FU vªÄ Pvðªåª Ã£AzÄ CªjU w½¬ÄvÄ. CªgÄ C¸ø±åg£Äß Cªg £ÁAiÄP¤Az gQ¸®Ä ¤±¬Ä¹zgÄ. CªgÄ ¸ÁåªÄÄAiÄ¯ï ºÆÃgAiÄªjU PgªiÁrzgÄ. Cªg ¨ÁªÁªÃ±z zÈ¶PÆÃ£¢Az vªÄ£Äß ¥äÁ«vUÆ½¹z gÁªÄ¸Ã ªiÁåPïqÆ£Á¯ï CªjUÆ PgªiÁrzgÄ.''

«Ä|| UÁA¢AiÄªgÄ ¨Ãg K££Æß ªiÁv£ÁqÄwg°®. CªgÄ MAzÄ ¨Áµtz° »ÃU WÆÃ¶¹zgÄ C¸ø±åjU ¤ÃqÄª ¥æÃP ªÄvzÁ£z ºPÄ Cªjæ ±Á±vªÁz UÄ¯ÁªÄVjAiÄ£Äß RavUÆ½¸Ävz. ¥æÃP ªÄvzÁ£z ºQ¤Az ªÄÄ¸¯Á£gÄ JA¢UÆ

ªÄÄ¸¯Á£gÁUzÃ EgÀªÀ¢®. `C¸ø±ÀgÀ' JA¢UÆ C¸ø±ÀgÁVAiÀÄÃ G½AiÀ¨ÃPÀzÀ ¤ÃªÀ EaÀ¸ÀwÃgÃ£À? ªÀvÀ ¸AAiÀÄP ªÀ¸ªÀ¸AiÀ §UV£ «Ä|| UÁA¢AiÀªg C©¥ÁæAiÀÄU¼£ÀÄ ¨Ágvz GzÁgªÁ¢U¼À JµÃ ®WÀªÁV PAqgÆ, «Ä|| UÁA¢AiÀÄªgÀ C®¸ASÁvg §UV£ C©¥ÁæAiÀz §UU CªjU DgÆÃU¥Æ tðªÁz UËgª«z. C®¸ASÁvg MqA§ rPAiÀÄ ¸A¥Æ tðªÁV ¸ÁªiÁ£À M¦U ¥qAiÀ¢zÀzÀP PÁgtªAzg CzÀ ¸A¥æÁAiÀ¤µ »AzÆ ªÀvÀ ¹PÍg £qÀª «gÆÃzP ¤Ãgg¬ÀvÀ ªÀvÀ «±ÃµªÁV CzÀ «Ä|| UÁA¢AiÀªg PÆÃ¥ª£ÀÄ ºa¹vÀ. Czg ¸Áª£ÀÄ ©æµï ªÀvÀ ¨ÁgwÃAiÀ ¤AiÆÃVU¼À PÆq¯Ã M¦PÆAqgÀ. FU J®gÆ M¦PÆAqAv eÁwªÁgÀ MqA§ rPAiÀÄ ©æµï ¸PÁðg¢Az M¦UAiÀ£ÀÄ ¥qzÀPÆ¼PÆ¼¨ÃPÁVz.

(UÁA¢AiÀ zÀgAv, Pages 277-278)[1]

fÃª£ ZjvÉæg z£AdAiÀ SÃgï »ÃU ºÃ½zÁ£:-

``¥Æ£Á MqA§ rPAiÀÄ »ÃU zÃ±ª£ÀÄ¯Á £qÀV¹vÀ, zÃ±z¯¯Á PA¥£ ºÀn¹vÀ ªÀvÀ ¥gÆÃPªÁV «±ÁzÀAv ¥juÁªÀU¼£ÀÄA l Àªi ÁrvÀ. ¥Æ£Á MqA§ rPAiÀ ¥ÆªðzºPÁAUæ£ £ÁAiÀPgÀ ªÀvÀ ¥wæÀU¼À, ±ÆÃ¶v ªUðU¼ £ÁAiÀP£AzÀ ªÀ¤ÀÄ¸®À ¤gÁPj¹z qÁ|| CA¨Ãqgï CªgÀ ¨ÁgvÁzÀAv ±ÆÃ¶vªUðU¼À ¸ÁªiÁ£ÀªÁV M¦PÆAqAvº £ÁAiÀP£A§ÀªÀzÀ ªÀv ¸Á©ÃvÁ¬ÀvÀ. F ºÆ¸ ªÀ¸ªÀ¸AiÀº JgqÆ ¥PU¼Æ ¸® P¼zÀPÆ¼¨ÃPÁ¬ÀvÀ. ¸ªtðÃAiÀ »AzÆU¼À 71 ¸ÁÀ£U½U §z¯ÁV 148 ¸ÁÀ£U¼£ÀÄ ©lÀPÆq¨ÃPÁ¬ÀvÀ. ±ÆÃ¶v ªUðU¼À ¸ªtð »AzÆ £ÁAiÀPgÀU¼£ÀÄ vªÀ EZÉU ªÀt¹PÆ¼Àª CªPÁ±ª£ÀÄ P¼zÀPÆAqªÀ, KPAzg, F wÃªiÁð£zAv ±ÆÃ¶vªUðU¼À ±Á¸£¸¨U vªÀ ¥æw¤¢U¼£ÀÄ ¥æÃPªÁV DAiÀªiÁrPÆ¼§ºÀzÁVvÀ. CzÆ C®z, ¸ÁªiÁ£À ZÀ£ÁªuÁ PÃvÉæ¼°AiÀÆ PÆq ¸ªtðÃAiÀ »AzÆ ¥æw¤¢U¼£ÀÄ DAiÀªiÁq®À CªgÀ »AzÆU¼Æq£ ªÀvzÁ£ ªiÁq¨ÃPÁV¢vÀ. FU ¸ªtðÃAiÀ »AzÆU¼À ±ÆÃ¶vªUðU¼ ¥æw¤¢U¼£ÀÄ DAiÀ ªiÁqÀª C¢PÁg ¥qzgÀ. ¸¥A§gï 26g zºººAiÀ C¢ªÃ±£z MAzÀ ¤tðAiÀz ªÀÆ®P »AzÆ ªÀºÁ¸¨Á PÆq Ez£ÀÄ CAVÃPj¹vÀ.

EzjAz ¸Á©ÃvÁz ªÀvÆAzÀ ¸AUwAiÀÄAzg, AiiÁª AiiÁª ¸Az¨ðzº UÁA¢AiÆ¼V£ ªÀºÁv, UÁA¢AiÆ¼V£ gÁdPÁgtVAv ªÀÃ®ÀUÉAiiÁUÀwzÀ£ÆÃ DU® CªgÀ ¸g¼ªÁz «µAiÀª£ÀÄ ¸AQÃtð ªiÁqÀªAvº CzÀv P®¸ª£ÀÄ ªiÁqÀwzÀgÀ! zÀAqÀªÀÃf£ ¥jµw£º UÁA¢AiÆ¼V£ ªÀºÁv CªgÆ¼V£ gÁdPÁgtAiÀ ªÀÃ¯ «dAiÀ¸Á¢¹z; DU ªÀºÁv «±ª£ÀÃ £qÀV¹zgÀ, Dzg Cªgº£ gÁdPÁgt «¥®£ÁV ¥gÁfv£Áz. AiÀgªÁqzº UÁA¢AiÆ¼V£ gÁdPÁgt AiÀ±¹AiiÁz ºÁUÆ ªÀºÁv ¥gÁfv£Áz UÁA¢AiÀ «dAiÀ CzµÀ ¥æÁª±Áº AiiÁVvÀ JAzg, CªgÀ

1. SÉgï ªÆÃqï, ¸A¥À l 4 Pp. 173-174

qÁ¨ CA¨Ãqgï Cªg£Àß J® fÃªgÀPÀ DAiÀÄzU½Az®Æ ªAavg£ÁßV ªiÁrzgÀ ªÄvÀ Cªg£Àß EAzææÀ Ptð£ «µAiÀÄzº ªiÁrzAv ¸ÁªÀxÀð»Ã£g£ÁßV, ¥ææÁª»Ã£g£ÁßV ªiÁrzgÀ. ±ÆÃ¶v ªUðU¼ ¸ªÀ¸ÀAiÀ «µAiÀÄzº UÁA¢AiÀªgÀ zÀAqÀªÀÃf£ ¥jµw£º ¸ÁPµÀ zÈqvAiÀ£Àß vÆÃj¢zg Cªg EAvº ¸v÷¥jÃPAiÀ£Àß JzÀj¸¨ÃPÁUÀwg°® JA§ qÁ¨ CA¨Ãqgï ºÃ¼Àª ªiÁvÀU¼Ä ¸ªÄxð¤ÃAiÀªÁVª. F CVß¢ªÀªÀ UÁA¢AiÀªgÃ ¸AiÀA ªiÁrPÆAqAvºÀzÀ.

¥Æ£Á §qA§rPAiÀÄ MAzÀ AiÀÄUª£Àß ªÄÄPÁAiÀ ªiÁrvÀ. Dzg, 1931, DU¸ï 14* gAzÀ ªÀt¨Àª£ï£º WÆÃ¶¸®l AiÀÄzÀ ªÄÄPÁAiÀUÆArv? CxªÁ CzÀ ¢wÃAiÀ Pz£ª? CxªÁ ¸A¢AiÀ £AvgªÇ AiÀÄzÀªÀ ªÄÄAzÀªjAiÀºv?"[1]

---

* £ÆÃr Pp. 51-56

1. SÃgï, Pp. 215-16

# C£ÄÅ§ÁAzÀ - 6

## qÁ|| CA¨ÉÃqÀÌgï CªÀgÀ ÀFUÀ«Ä|| UÁA¢üAiÀÄªÀgÀ ÀÀ
## ¸ÀAÀ¥ÀÌÃPÀÉÉMqÀªÀvzÁgÉ

zÃªÁ®AiÀÄ ¥ÀæªÃ± Z¼ÀÄª½AiÀÄ£ÀÄß PÀjvAv mÉ¸ªïï D¥ï EArAiiÁ ¥wæÀAiÀÄ°è ¥ÀæÀl uUÆAq, ¥wæÀAiÀÄ ªÁZPgÆ§gÀ `mÉ¸ªïï D¥ï EArAiiÁ'U §gz ¥væ

**qÁ|| CA¨ÉÃqÀÌgïgÀ¨ÁA¨ï**
**«Ä|| UÁA¢üAiÀÄªÀgÀUÉ¥ÀÌÃPÉ**

`¢ mÉ¸ªïï D¥ï EArAiiÁ'z ¸A¥ÁzPjU,

ªiÁ£Àg,

¤ªÀÄ ¥Æ£Á ¨ÁwÃzÁg£ C©¥ÁæAiÀÄ RArv ¸jAiiÁVz. qÁ|| CA¨ÃqÀgï CªÀgÀ ``zÃªÁ®AiÀÄ ¥ÀæªÃ±z Z¼ÀÄª½AiÀÄ ªÀ¸ªÀ¸ÀAiÀÄ PÃAzÀæMAzÀÄ ¸fÃª ¨ÁA§£ÀÄß'' J¸¢zÁg. EzÀÄ CzÀQAv®Æ E£ÆÄ ¸® ºa£zÃ DVz. EzÆAzÀÄ PÁAUæÀ ²©gÀ ºÁQz ¨ÁA§Ä DVz. PÁAUæÀ ºZÀÄ PrªÀÄ ¸vÃºÆÃVz JA§Äz£ÀÄß £ÁªÀÄ JA¢UÆ ªÀÄgAiÀÄ¨ÁgzÀÄ, ªÀÄvÀÄ F zÃª¸ÁÄ£ ¥ÀæªÃ± Z¼ÀÄª½ ¥ÀæÁgU¼ÀÄ PÃª® ±ªPÀ fÃª¤ÃqÀ®Ä ªiÁqÀÄwgÀÄª D¸QPg ¥ÀæÃvÀÄU¼ÀÄ. «Ä|| UÁA¢AiÀÄªÀg ªÀÄvÀÄ Cªg PÁAUæ£ ¸ÀAlgUÁ½AiÀÄ ¥ÀæÁgªÀÄ ª¸À¹wAiÀÄ° PÃª® MAzÀÄ `gÁdQÃAiÀÄ vAvæªiÁvæqÁ. CA¨ÃqÀgï CªÀgÀ FU «Ä|| UÁA¢AiÀÄªÀg£ÀÄß Ppt ¥jÃPU MqÀÄwzÁg. £ªÀÄzÀÄgÀÄ FU JgqÀÄ ¥ÀæÉU½ª. 1) ªÀÄºÁvÀgÀÄ F zÃªÁ®AiÀÄ ¥ÀæªÃ±z ¥ÀæÉU¼ §UU ¤dªÁVAiÀÄÆ UÀ©Ãg «ZÁg v¼¢zÁgAiÀÄ CxªÁ CzÀÄ PÃª® MAzÀÄ C©£AiÀÄª? 2) zÃªÁ®AiÀÄU¼£ÀÄß C¸ø±g ¥ÀæªÃ±PÀ vgAiÀÄÄªÀzÆAzjAz¯Ã ±ÆÃ¶v ªUðU¼ CAv¸Ä ªÀÄÃ¯Ãg®Ä ¸ÁzÀª? «Ä|| UÁA¢AiÀÄªÀgÀÄ zÃªÁ®AiÀÄ ¥ÀæªÃ±z ¥ÀæÉAiÀÄ §UU ¤dªÁVAiÀÄÆ UÀ©ÃgªÁV D¯ÆÃa¹®ª£ÀÄßªÀzÀÄ, CªgÀÄ ¸vB M¦PÆArgÀÄªAv ``vÁªÀ JAzÆ F zÃªÁ®AiÀÄU¼£ÀÄß ¥ÀæªÃ²¸ÀÄªÀ¢®'' J£ÀÄßªzjAz ¸Á©ÃvÁUÀvz. ªÁ¸ªªÁV, P¼z ªÁg ¸Ægvï£ ¨Áµtª¸Çzg° ªÀÄºÁ¸A¥ÁæÁAiÀÄ¤µ »AzÆ £ÁAiÀÄPgÁz «Ä|| JA.P. DZÁAiÀÄð £ªÀÄU ££¦¹zgÀÄ: ``«Ä|| UÁA¢AiÀÄªÀgÀÄ ¸vB JAzÆ AiiÁªÀzÃ zÃªÁ®AiÀÄz°AiÀÄÆ ¥ÆeAiÀÄ£ÀÄß ¸º¹®. ªÀÄvÀÄ zÃªÁ®AiÀÄz ¥ÆeAiÀÄ ¤AiÀÄªÀÄ, PÀæÀÄU¼ ªÀÄvÀÄ D vv÷U¼ §UU CªjU

K£Æ w½¢®" E¥vÀ ªµðU½Az EzÀªgUÆ «Ä¶ UÁA¢AiÀªg£ÀB ¤µ¬ÀAz, ¥ÁæiÁtPv¬ÀAz ¨A§°¹z «Ä¶ DZÁAiÀðgAvº J® ¸A¥æÁAiÀ¤µ »AzÆU¼À, FU Cªg£ÆB Cªg PÁAUæ£ÆB vÀf¹zÁg.

«Ä¶ DZÁAiÀð CªgÀ «Ä¶ UÁA¢AiÀªjU MAzÀ ¸ªÁ®£B¸¢zÁg: ``«Ä¶ UÁA¢AiÀªgÀ vÁªÃ vªÀ ¸Av zÃªÁ®AiÀU¼£ÀB KP ¤«Àð¹ C¸Ø±g£ÆB M¼UÆAqAv J® »AzÆU¼Æ C°U ºÆÃV ¥Æe, DgÁz£ £q¸ÀªAv ªiÁq¨ÁgzÀ?" «Ä¶ UÁA¢AiÀªjU £ÉwP zÉAiÀð PrªÀ¬ÀzAiÀAzÀ AiiÁgÆ ºÃ¼¯ÁUÀªÀ¢®. Dzg CªgÀ «Ä¶ DZÁAiÀðg ¸ªÁ®£ÀB M¦PÆ¼®À ¸ÁzÀªÁUÀªÀ¢®. KPAzg ªÀºÁvgÀ ZvÀg gÁdPÁg t ªÀvÀ EzÀ gÁdQÃAiÀ vAvæ ¥æAiÀÃ «£B ¸A¥Æ tðªÁV zÁ«ÀðP ¥æAiÀ®. ªÀºÁvgÀ £ªÀU C£ÃP ¨Áj ºÃ½gÀªÀz£ÀB «À. DZÁAiÀð ªÀgAiÀAvÁg:¹ £Á£À ¨Ãn ªiÁrgÀª C£ÃP zÁ«ÀðP d£gÀ bzÀªÃµz°gÀª gÁdPÁg tU¼À. DzÁUÆ, £Á£À gÁdPÁg t AiÀ ªÃµ zj¹zgÆ, ºÉzAiÀz° £Á£Æ§ zÁ«ÀðP ªÀ£ÀµÀ. ££B zªÀð ££B gÁdPÁg t. CªgÀ AiiÁªÁU®Æ zªÀð ªÀvÀ ¹zÁAvU¼£ÀB, ¤Ãw ªÀvÀ gÁdPÁg tP C¢Ã£ª£ÁV¹zÁg. ¸ÁªiÁ£ÀªÁV vªÀ zÃ±z ªÀÃ¯ ªÀvÀ «±ÃµªÁV »AzÆv÷z ªÀÃ¯ CªgÀ GAIÀªiÁrgÀª UÁAiÀ, PqÀPÀU¼£ÀB GvÃQ¸ÀªÀzÀ C¸ÁzÀ. ¥Æ£Á MqA§rPAiÀ£ÃÃ £ÆÃr, CzÀ DvÀgz° ªiÁrPÆAqAvºÀzÀ. CzÀ ¸ª tðÃAiÀ »AzÆU½U CvÀAv C£ÁAiÀzÁVvA§ ¨Áª£ FU zÃ±ÁzÀAv ºgrz. «Ä¶ UÁA¢ CªgÀ zÃ±ª£ÀB C£ÁAiÀz wÃªiÁð£P £ÆQzgÀ. FU ªÀv CªgÀ, ºjd£jU K£ÁzgÆ ªiÁqÀªAv ªÀv zÃ±ª£ÀB £ÆP®À ¥æÀwB¸ÀwzÁg. Dzg CzÀ ¤dªÁV Cªj U ¨ÃPÁV®.[1]

---

1. DPg : ¸A. 1. ¥À 107-108

## C£ÀÄ§AzsÀ 7

## qÁ|| CA¨ÉÃqÀÌgï CªÀgÀ CªÀgÀ PÁzÀA§j ªÀÄvÀÄÛ ¥ÀwæPÉUÀ¼À°è

## §AiÀÄ¯ÁzÀ ¥ÀvÀæ

16 d£ªÀj 1915

©ÃªÀÄgÁªï gÁªÀiïf CA¨ÃqÀgï

35. (Vide paragraph 1103 of 1913 -S.B.)

(¸µ¯ï ¨ÁæAZïU 1913g 1103£AiÀÄ ¥ÁågÁª£À £ÆÃr) d£ªÀj 15gAzÀÄ ¥ÆªÀð¥gÁªÀÄ±ð£Á¢PÁjU¼À »ÃU §gAiÀÄÄvÁg: 1915g d£ªÀj 15gAzÀÄ ªÀÄ£ ¸ASÉ 509, §gÆÃqz «¼Á¸¢Az, §gÆÃqÁ gÁdåzgÀ ²Pt ªÀÄAwæAiÀÄªgÀ CA¨ÃqÀgï Cªg £ÆÃAiiÁPïð£ 114£AiÀÄ ¥²ªÀÄg¸AiÀÄ 554£AiÀÄ ¸ASÉAiÀÄ ªÀÄ£AiÀÄ «¼Á¸PÀ §gz ¥væ»ÃVz:

``¤ªÀÄU FUÁU¯Ã ªÀÄAdÆgÀÄ ªiÁq¯ÁVgÀª CªÀÄjPÁz°£ ªÁ¸z Cª¢AiÀÄ£ÀÄß «¸guªiÁr ªÀÄÄAzÀªj¸ÀªAv ²ÃæªÀÄ£ï ªÀÄºÁgÁd ¸ÁºÃ§gº ¤ªÃ¢¹PÆ¼¯ÁUÀvz. ªÀÄvÀÄ Ezg ¥°vÁA±ª£ÀÄß CªjU w½¸¯ÁUÀªÁzÀ.''[1]

©ÃªÀÄgÁªï gÁªïf CA¨ÃqÀgï 30, d£ªÀj 1915

81 £ÆÃr 35£Ã ªÁPÀåª£ÀÄß £ÆÃr. §gÆÃq, d£ªÀj 25- C¹¸Amï g¹qAlgÀ »ÃU §gAiÀÄÄvÁg: ``©ÃªÀÄgÁªï gÁªÀiïf CA¨ÃqÀgï ¥ªÁðjU¼ÁVzÀÝ ¨ÆA¨Á¬ÄAiÀÄ ¤ªÁ¹AiiÁVgÀÄvÁg. Cxð±Á¸ ªÀÄvÀÄ ¸ªiÁd±Á¸ z CzÀåAiÀÄ£PÁV UÁAiÀÄPªÁqï CªgÀ CA¨ÃqÀgïg£ÀÄß CªÀÄjPÁPÉ P½¸®nzÁÝg. CªgÀÄ §gÆÃqÁz ¸«ð¸ï AiiÁ¢AiÀÄ° «Ä°lj ¥ÆæÃµ£gï DV PÁt¹PÆ¼ÀÄvÁg. Dzg AiiÁªÁzÃ «Ä°lj vg¨ÃwAiÀÄ£ÆÀß CªgÀÄ

---

¥ªÁðj : ¥ªÁðA ¥zz Cxðw½AiÀÄ®Ä `ªÀÄºgï' JA§ ²Ã¶ðPAiÀÄ° qÁ|| CA¨ÃqÀgï §g¢gÀª ¯ÃR£ª£ÀÄß £ÆÃr : ªÀÄºggÀ CªgÀ AiiÁgÀ, ºÃU C¸ø±ÀgÁzgÀ ¥ÀÄlU¼À F ¸A¥ÀÄlz Jgq£AiÀÄ ¨ÁUz 137-150 - ¥ÀæPgÀ

¥q¢® ªÄvÄ PÃª® «zÁyðªÃv£ ¥qAiÄÄªÁzPÁV ¤AiÄÄPUÆArzgÄ. dÆ£ï 1913gAzÄ Cªg£Ä CªÄjPÁP P¼Ä»¸¯Á¬ÄvÄ. ºÁUÆ CªgÄ E£Æ CºAiÄÃ EgÄªgAzÄ £A§¯ÁVz. CªjU Cªg UÄgÄw£ ¥æiÁt ¥væ£Ä ¤Ãq¯ÁV¢vÄ.”

©ÃªÄgÁªï gÁªiïf CA¨Ãqgï 13, ¥§æj, 1915

107. (£ÆÃr ªÁPUÄZ 81) ¨ÁA¨, ¥§æj 8- ©ÃªÄgÁªï gÁªiïf CA¨Ãqgï CªgÄ ªÄºgï eÁwU ¸Ãjz ªgÁVzÄ gvVj f¯Á qÁ¥Æ° vÁ®ÆQ£ CA¨Ãqï£° d¤¹zªgÁVzÁg. CªgÄ ¨ÆA¨Á¬ÄAiÄ «±«zÁ¤®AiÄz J°£ï¸Æ£ï PÁ¯Ãf£° ©.J. ¥jÃPAiÄ° vÃUðq ºÆA¢ ¨ÆA¨Á¬Ä «±«zÁ®AiÄz°£ ¸ÁvP ¥z«ÃzggÁVzÁg. £Avg CªgÄ §gÆÃqÁ gÁdz° ¸«ð¸ïU ¸ÃjzgÄ ªÄvÄ 1913g° §gÆÃqÁ gÁd¢Az Cxð±Á¸z CzAiÄ£ ªiÁq®Ä CªÄjPÁP P¼Ä»¸®lgÄ. CªgÄ dÆ£ï 13, 1913g° S.S. Sardegna z° ¨ÆA¨Á¬Ä¬ÄAz ºÆglgÄ.

CA¨Ãqgï CªgÄ vªÄ CªÄjPÁz ªÁ¸ªz Cª¢AiÄ£Ä E£Æ JgqÄ ªµð «¸j¸ÄªAv PÃ½PÆArzÄ D Cª¢AiÄ° vªÄ CzAiÄ£ª£Ä ªÄÄV¸Äª ¤jÃP¬ÄlÄPÆArzÁg¤¸Ävz.

# C£ÄߧAzÀ 8

# ¸ÀªÀiÁd qÁ|| CA¨ÉÃqÀÌgïgï C¨sÁªÀ¨ÉÃPÀPÀÄæ ¸ÀÄUÀªÀÄ
# ¥ÀAiÀÄðªÀÄÁUÀðªÀ C¨sÁåAiÀÄ PÉ¸ÀªÀÄgÀPÉÆ

§gÆÃqÁ ¸PÁðgz DzÃ± ¥væ

§gÆÃqÁ ¸PÁðg
£A. 144
ºÄdÆgï PbÃj
§gÆÃq, dÆ£ï, 7, 1918

¦æAiÀÄ £ÁgÁAiÀt gÁªï ¸gï,

«Ä|| CA¨ÃqÌgïg ¥væ£ÆÀ¼UÆArz ¤ªÀ P¼z wAU¼ 5£AiÀ vÁjÃT£ ¥væ F ªÀÆ®P Gvj¸ÀwzÀ£. «Ä|| CA¨ÃqÌgïU ¸A§A¢¹z ¥væAiÁt¥væ¼Ä, zÁR¯ ¥væ¼£À ²æªÀ£ï ªÀºÁgÁdjU M¦¸¯ÁVz. «Ä|| CA¨ÃqÌgï CªgÀ CªÀÃjPÁP ºÆgqÀª ¸ªÀAiÀz° CªjU ¤Ãq®Ä M¦PÆArz ªÃv£z ªÀÃ¯ CªgÀ §gÆÃqÁ ¸gPÁgz ¸ÃªU ¸ÃjPÆ¼¨ÃPÄ JA§ÄzP ²æ ªÀ£ºÁgÁdgÀ ¸AvÆÃµ¢Az ¸ªÀw¹zÁg. D ªÃv£ ¸ªÀ¥ðPª¤¸¢zº, ¸® PÁ¯Á£Avg ¸ÄzÁj¹z ªÃv£PÁV Cªg ªÀ£«AiÀ£À ¥jUt¸¯ÁUÀªÌzÄ. FU ¸zÌz «ZÁg. «Ä|| CA¨ÃqÌgï Cªg £qvAiÀÄ Cªg ²Ptz ªÄlPÁU° CxªÁ Cªg ªÀÃ¯ Ej¹z «±Á¸PÁU° C£ÄUÀtªÁVzAiÀA§ÄzÄ ¸Á©ÃvÁV®ªA§Äz£À ²ÃæªÀ£ºÁgÁdgÀ UªÀ¤¹zÁg ªÄvÀ EzÄ Cªg ªÀ£¹U »vPgªÁV®. «Ä. CA¨ÃqÌgï CªjU FU ¤ÃqÀwgÀª ¸ª®vÀU½VAv ºa£z£À ¤ÃqÀªÌzÄ ²ÃæªÀ£ºÁgÁdg ªÀ£¹U gÀa¸Àw®. ²ÃæªÀ£ºÁgÁdgÀ AiiÁªÁU®Æ «Ä|| CA¨ÃqÌgï Cªg ¸ªÀÄzÁAiÀz PÃªiÁ©ª¢UÁV ¸ÁPµÄ D¸Q ª»¹zÁg, C®z, CA¨ÃqÌgï CªjUÁV zÆqªÆvz ºtª£À ªZ ªiÁrzÁg. F ¸Az¨ðU¼ »£¯¬ÄAz¯ÁzgÆ Czg°AiÀÆ «±Ãµ ªÁV ªÀÄA§gÀª ¢£U¼° CªjU GvªÄ

¨«µÀz ¨gª ¸AiÀ£ÀÄß ¤Ãr gÀªÁU, Cªg vªÀ ªÉAiÀQP £µ, C££ÀPÆ®U¼ £qÀªAiÀÆ, ¥Áæ¸iÁ tPv ªÀvÀ £Ãg £q£Ä rU½U ªiÁz jAiiÁVgÀªAv £qzÀPÆ¼§ºÄzÁVv®ª?

«±«zÁ®AiÀzº vªÀ ªÉwU ¸A§A¢¹z ºÄzAiÀ §UU CA¨ÃqÀgï Cªg PÆÃjPU ¸A§A¢¹zAv D Pvðª£U½U ¸ÆPªÁz ¸ÁÀ£ vgªÁzÁU, ²æ ÀÀ£ï ªÀºÁgÁdgÀ Cz£ÀÄß ¥jUt ¸ÀvÁg. FU ¸zÀz º CªgÀ ¯PÀ¥væ¯ÁSAiÀº ¥jÃPuÁ Cª¢AiÀ C¨ÀyðAiiÁV CªgÀ P®¸ªiÁq¨ÃPÀ.

«Àİ CA¨ÃqÀgï CªgÀ vªÀ «zÁ¨Á¸PÁV ªZªiÁrgÀª º t ª£ÀÄß ªÀgÀ¥ÁªwÀ¸®À Dª±ÀPªÁz ¨zæ¤ÃqÀª ¥j¹wAiÀº®ªÁV, CªgÀ£ÁzgÆ vªÀ ¸ÃªAiÀ£ÀÄß vÀf¸¨ÃPÁz ¸Az¨ðzº, CªgÀ LzÀ ªµðU¼ Cª¢AiÀ v£P vªÀ ªÃv£zº ±ÃPqÁ º¢£ÉzgµÀ º t ª£ÀÄß PrvUÆ½¹PÆ¼¨ÃPÀ. CAvº ¥j¹wAiÀÀ JzÀgÁUÀª ¸A¨ÁªÀvAiÀ zÉ¶¬ÀAz Ez£ÀÄß ¤AiÀªiÁ£À¸Ág ªÀÀIÀUÆÃ®À ºÁQPÆ¼®À oê t Eq¯ÁUÀvz. Dzg, «±Ãµ ¸¤ªÃ±ªAzÀ ¥jUt¹ ²æ ÀÀ£ï ªÀºÁgÁdgÀ, F jÃw DzÃ²¹zÁg: Cªg ªÃv£ª£ÀÄß »rzÀPÆ¼ÀªÀzÀ, PrªÀªiÁqÀªÀzÀ EªÀU½AzÁV Cªg MIÀ ¸A§¼ ªÆzº£ ªÃv£QAv®Æ PrªÀAiiÁUÀªÀzÁzº, CªgÀ P®¸P ¸Ãjz ¢£¢Az AiÀxÆÃavªÁV Cªg ªÃv£ª£ÀÄß ºa¸§ºÄzÀ.

PqAiÀzÁV, MAzÀ «±Ãµ ¸AUw JAzÀ ²æ ÀÀ£ï ªÀºÁgÁdgÀ «Àİ CA¨ÃqÀgï CªgÀ FU ¸zÀP U¸ï ºË¸ï£º (CwyUÉº) G½zÀPÆ¼®À C£ÀªÀw¹zÁg. ªÀvÀ CªjUÁV MAzÀ ªÀ£ ¤«Àð¹PÆq®À DzµÀ ¨ÃU MAzÀ CAzÁd£ÀÄß ¹z¥r¸ÀªAv DzÃ²¹zÁg.

¸gï, JZï.f. ZAzÁªPðgï
gqgï (¥qgï) g¸,
ªÀ®¨Ágï »¯ï, ¨ÁA¨¹

¤ªÀ «±Á¹
ªÀÄÀ¨ÁAiÀ ªÉPÁ

---

1. gvÀ : qÁİ CA¨ÃqÀgï Cªg §UU ºZÀ w½AiÀ¢gÀª «µAiÀU¼À Pp 230-231

# C£ÄÄ§AzÀ 9

## ¤ªÀÄ ¸Á® ªÀÄgÀÄ¥Áª ÀÄ ¸À®Ä ²ÃWÀæªÀÁV ÀÄ¸ÀÄPÀ vÉÉÉ ÀÄ½

K.E.D.S.7 No. 43 | No. 8088 of 1919-1920
m°UÁ¢PÀï «¼Á¸ | D¦Ã¸ï D¥ï ¢ JdÄPÃµ£¯ï P«ÄÃµ£gï
Education, Baroda | §gÆÃq, 13£Ã/14£Ã ªÄÃ, 1920

EAz,
J.©. PÁPïð, J¸ïÉgï, ©.J. (PÁAmÁ¨ï)
¢. JdÄPÃµ£¯ï P«Äµ£gï
§gÆÃqÁ ¸Ãmï, §gÆÃq

U,
qÁ|| ©.Dgï. CA¨ÃqÌgï
¢ ¹q£ï ºÁªiï PÁ¯Ãeï D¥ï PÁªÀ¸ïð CAqï JP£Á«ÄPï, ¨ÁA¨

«µAiÀ : ¸Á®z ªÄgÄ¥Áw.

ªiÁ£Ìg, 24£Ã d£ªj 1920, ¢£ÁAPz 4675£AiÀ ¸ASÉ £££ ¥væ¸ASÉAiÀ §UU ªÄvÀ E£ÆÌAzÀ 6121£AiÀ 18£Ã ªiÁað 1920g eÁ¥£Á ¥væ §UUÆ ¤ªÀ UªÄ£ª£ÄÌ ¸¼AiÄ§AiÄ¸ÄvÃ£. ªÄÃ¯ w½¹gÀª «µAiÄz §UU vÁªÀ ²ÃWæÁV §UU PæÄPÌUÆAqÀ gÁdÌz ¸Á®ª£ÄÌ ªÄgÄ¥Áªw ªiÁq¨ÃPÁV PÆÃgÄvÃ£.

P«Äµ£gï D¥ï JdÄPÃµ£ï | vªÀ ¸ÃªP£ÁUÀª ¸Ë¨ÁUÌ
§gÆÃq ¸Ãmï”¹ | ¥q¢gÀª, ¸Á«À
| ¤ªÀ «zÃAiÀ J.©. PÁPïð

¥væ ®¨Ì«® ¥ÆÉ±PgÄ
1. gvÀ: qÁ|| CA¨ÃqÌgï Cªg §UU ºZÀ w½AiÀ¢gÀª ¸AUwU¼À P. 232

# C£ÀÄ§AzsÀ 10

# 19.6.1936gÀ°è ¨sÁgÀvÀzÀ°è£À C¸ÀàöÈ±ÀågÀ ¸ÀªÀÄ¸ÉåUÀ¼À §UÉÎ ¥ÀwæPÁ ºÉÃ½PÉ

**I**

«Ä|| gÁeÁ Cª jU qÁ|| ªÀÄÆAeÀiÁªg ¥væ

1936, dÆ£ï 30g ¢£ÁAP«z F P¼PAq ¥væPÉ£ÀÄß qÁ|| ªÀÄÆAeÀiÁªgÀ gÁªï§ºzÆgï JA.¹. gÁeÁ Cª jU §gzgÀ :-

¦æAiÀÄ ªiÁ£g,

¨ÆA¨Á¬ÄAiÀÄ ¸ÀÄÃ»vg vÀvÀð PgU¼Ä ªÀvÀ ²æÃªiÁ£ï ¸Ãmï dÀU¯ï Q±ÆÃgï ©gÁ Cªg qÁ|| CA¨Ãqgïg ¸ºªÀvzÆq£ vÁjÃRÄ º¢£A lgAzÀ £Á£À ¨ÆA¨Á¬ÄU ºÆÃUÀª ¸Az¨ð GAmÁ¬ÀvÀ. C° qÁ|| CA¨Ãqgï CªgÀ ££ÆÃq£ ªÀÄÆgÀ¢£U¼ PÁ® ¸Ä¢ÃWð ªiÁvÀPv £q¹zgÀ. ¥juÁªÀªÁV, PqU Cªg »AzÆzªÀðz «gÀz §AqÁAiÀP ºÆAzÁtPAiÀ MqA§rPAiÀ ¸ÆvæÀ¢Az£ÀÄß gÆ¦¸¯Á¬ÀvÀ. qÁ|| CA¨Ãqgï EzP ¸A¥Ætðª ÁV ¸ªÀw¸ÀvÁg.

D ¸Ævæ F P¼PAqAwz :-

qÁ|| CA¨Ãqgï E¸ÁA ªÀvÀ PæÊ¸ zªÀðz §z¯ÁV vÁªÀ ªÀvÀ vªÀ C£ÀAiiÁ¬ÄU¼Ä ¹Sï zªÀðª£ÀÄß C¦PÆ¼®Ä ¹zgÁV ºa£ M®ªÀ, ¥P¥ÁvU¼£ÀÄß D zªÀðz §UU vÆÃgÀªÀzÁV vªÀ ¤zÁðgª£ÀÄß WÆÃ¶¸ÀªÀzÁz° ªÀvÀ CªgÀ ¥ÁæAiÁtPªÁV ºÁUÆ ºvÆªðPªÁV »AzÆU¼Ä ªÀvÀ ¹RgÆq£ Cªg ¸A¸ÀwU¼£ÀÄß ºgq®Ä ¸ºPj¸ÀªÀzÁz° ªÀvÀ ªÀÄ¹ªïï ªÀvz D±æAiÀP ±ÆÃ¶v ªUðU¼£ÀÄß ¸¼zÀPÆ¼Àª ªÀÄ¹ªïï Z¼ª½U¼£ÀÄß ¤µ®UÆ½¸ÀªÀzÁz°, CªgÀ »AzÆ ¸A¸ÀwAiÀ°AiÀÄÃ G½AiÀÄª ¤zÁðg ªiÁrgÀªgA§ zÀ¶¬ÄAz »AzÆªÀºÁ¸¨Á vÁ£Ä EzP Cr¥r¸ÀªÀ¢®ªA§ WÆÃµu ªiÁq®Ä ¹z«z:-

1. ±ÆÃ¶v ªUðU¼Ä ¹Sï zªÀðP ªÀvÁAvgUÆ¼ÀªÀzÀ.

2. ºÆ¸zÁV ¹Sï ªÄvÁª®A©U¼Ázªg£Àß ¥j²µï ªUðU¼ ¥nAiÀº ¸Ãj¸ÀªÀzÀ.

3. ¹RÍg®zªgÀ ªÄvÀ ºÆ¸zÁV ¹SïªÄvÁª®A©U¼ÁVgÀª ±ÆÃ¶v ªUðU¼ £qÀª ¸zðAiÀ ªÀÆ®P, ¥ÆÉ£Á MqA§rPAiÀº MzV¹gÀªAv ±ÆÃ¶v ªUðU¼ ¥ÆÉ£Á M¥Azz gÁdQÃAiÀ ºPÀU¼ C£Ä¨ÆÃV¸ÀªÀzÀ.

EªÀU½U »AzÆ ªÀºÁ¸¨AiÀÄ Cr¥r¸ÀªÀ¢®. ¨ÆA¨Á¬Ä¬ÀAz F ¢£ ¨½Ui vÁ£Ã E°U §A¢zÀ£. F «µAiÀª£Àß »AzÆªÀºÁ ¸¨ÁzzÀgÀ ¥jUt£U EqÀªÀzPÀ ªÀÄAZ ¸ÀÛ»vgÆq£ Ezg §UU ¸ªiÁ¯ÆÃa¸¨ÃPÁVz. £Á£Ä ¥Arv ªiÁ®«ÃAiiÁ CªgÉß ¨Ãnª iÁq®Ä ¥ÀæÀwß¸ÀwzÀ£ ªÄvÀ ¸ÁzÀªÁzg ¥ÁnAiiÁ®z ²ÃæªÀ£ï ªÀºÁgÁdg£Æß ¨Ãnª iÁqÀvÀ£. EzÆAzÀ CvÀAv ¸ÆPÀ «ZÁg. Dz jAz, F «µAiÀz §UU D¯ÆÃa¸¨ÃPAzÆ, Ezg §UU ¤ªÀ D©¥ÁæÀÄª£Àß £ÉU w½¸¨ÃPAzÆ ¥ÁæðÀ¸ÀvÀ£. £ÁªÀ AiiÁªÀzÁzgÆ MAzÀ wÃªiÁð£ vUzÀPÆ¼ÀªªgUÆ F «µAiÀª£Æß PlÀ¤mÁV SÁ¸V ºÁUÆ gº¸ÀªÁV Eq¯ÁUÀvz.

¤ªÀ GvgPÁV PÁAiÀÄwgÀª, ¤ªÀ «±Á¹

(¸») ©.J¸ï. ªÀÆAe

¦.J¸ï. (EzgÆA¢U ¤ªÀ CªUÁº£UÁV qÁ| CA¨Ãqgï vªÀ PÃ¹£ §UU ££ß PÉU PÆngÀª ºÃ½PAiÀ ¥ÀæAiÆAz£Àß Enz À£. ¤ªÀ Gvgª£Àß zAiÀ«lÀ ££ß £ÁU¥Àg «¼Á¸P §g¬Àj)[1]

## II

## qÁ| ªÀÆAeÉAiÀª ÀUÉ«Ä| gÁeÁ CªgÀÀGvgÀÀ

±ÆÃ¶v ªUðU¼Ä »AzÆzªÀðª£Àß vÀf¹ ¨Ãg AiiÁªÀzÁzgÆ zªÀðª£Àß C¦PÆ¼¨ÃPA§ qÁ| CA¨Ãqgï Cªg ¸®ºAiÀ §UU £Á£Ä FUÁU¯Ã ££ß C©¥ÁæÀÄª£Àß ªÀP¥r¹zÀ£. DzÁwP §z¯ÁªuAiiÁz ªÄv¥jªvð£ ªÄvÀ ¸ÁªiÁfP, DyðP, gÁdQÃAiÀ PÁg tU½AzÁV MAzÀ ¸ªÀÄzÁAiÀ¢Az ªÄvÆAzÀ ¸ªÀÄzÁAiÀP ºÆÃUÀªAvº ª®¸ F Jgqg° £Á£Ä ªÀvÁ¸ª£Àß PÁtÄvÀ£.

¦æÀ qÁ| ªÀÆAeAiÀªg, £Á£Ä ºÃ¼Àª F ªiÁvÀU¼UÁV ¤ÃªÀ zAiÀ¬ÄlÀ P«Ä¸¨ÃPÀ. qÁ| CA¨Ãqgï Cªg z¶AiÀAv ¤ÃªÀ ±ÆÃ¶v ªUðU¼ ¸A¥Ætð ¸ªÀ¸ÀAiÀ£Àß eÁwÃAiÀ ª®¸ JA§ z¶¬ÀAz £ÆÃqÀwÃj, Dzg zÁ«ÀðP ¸ªÀ¸ÀAiÀAv

1 : ¨ÁA¨ PÁæP¯ï, ¢£ÁAP 8 DU¸ï 1936

C®, F ¸ªÀ¸ÀAiÀÄ£ÀÄß PÃª® gÁdQÃAiÀ ¸ªÀ¸ÀAiÀÄAv ªÀvÀ ¸ÁªiÁfP ºÁUÆ DyðP ¸ªÀ¸ÀAiÀÄAv PÆq £ÆÃqz »AzÆ ªÀºÁ¸¨AiÀ CzÀPgÀ Ez£ÀÄß zÁ«ÄðP ¸ªÀ¸ÀAiÀÄAv £ÆÃq¨ÃPAzÀ d£ ¤jÃQ¸ÀvÁg. »AzÆªÀºÁ ¸¨AiÀ CzÀPgÁV ¤Ãª ±ÆÃ¶vªUðU¼ DzÁwP P¯ÁtP J®QAv®Æ ªÆz® ¸Á£ ¤Ãr ¸ÁªiÁfP ªÀvÀ DyðP P¯ÁtU¼ §UU £Avg ªÀvÀ gÁdQÃAiÀP PqAiÀ ¸Á£ª£ÀÄß ¤Ãr¢zg D ¸ªÀÄzÁAiÀz §UU ¤ªÀ PÁ¼fAiÀ£ÀÄß AiiÁgÁzgÆ CxðªiÁrPÆ¼§ºÀzÁVvÀ. gÁdQÃAiÀ AiÆÃd£AiÀº ±ÆÃ¶vªUðU¼ §UU ¤ªÀ PÁ¼f, GvÁºU¼À, F ªUðU¼ §UU ¤ªÀ PÁ¼fAiÀ ¸Áxð, »vÁ¸QU¼£ÀÄß §AiÀ®ÀªiÁqÀvª. EzÀ PÀzÀgAiÀ ªÀÄAz UÁrAiÀ£ÀÄß E I AvÁUÀvz. F ªUðU¼ £ÁUjP ºÁUÆ ¸ÁªiÁfP C¸ÁªÀxð, C£ºðvU¼£ÀÄß vÆqzÀºÁPÀª ªÀÆ®P ±ÆÃ¶v ªUðU¼ ¹wAiÀ£ÀÄß ¸ÀzÁj¸¨ÃPA§ÀzÀ£ÀÄß »AzÆ ªÀºÁ¸¨AiÀ CzÀPgÁVgÀª ¤«ÀAz d£ ¤jÃQ¸ÀvÁg. zÃ±ÁzÀAv UÁA¢Ãf¬ÀAz DgA¨UÆAq ºjd£ Z¼Àª½AiÀ£ÀÄß ªÀÄAzÀªj¹, CªjU »AzÆ zÃªÁ®AiÀU¼º Evg ¥ÆeÁyðU¼Æq£ ¸ªiÁ£ £¯AiÀº ¥Æf¸Àª ºPÀ zÆgAiÀĪAv ªiÁqÀªÀz£ÀÄß ¤«ÀAz ¤jÃQ¸ÀvÁg. Cz£ÀÄß ªiÁqÀªÀz£ÀÄß ©I À EzÃ£À ¤Ãª ªiÁqÀwgÀªÀzÀ? ¤Ãª ±ÆÃ¶v ªUðU¼£ÀÄß ¨ÁU¨ÁUU¼ÁV bÃ¢¸Àw¢Ãj ªÀvÀ zÁ«ÄðPªÁV ¹RígÆq£ ¸Ãj¸Àw¢Ãj ªÀvÀ gÁdQÃAiÀªÁV Cªg£ÀÄß »AzÆU¼ÁVAiÀÄ G½¹PÆ¼Àw¢Ãj.

¸A¥ÆtðªÁV F «µAiÀª ±ÆÃ¶vªUðU¼ »vÁ¸QAiÀ zÈ¶¬ÀAz Pº¹z®ªAzÀ ££U vÆÃgÀvz. E£ÆÄAzÀ jÃwAiÀº £ÆÃrzg, EzÀ »AzÆU¼À ªÀvÀ ¹Sïg eÁwÃAiÀ »vÁ¸Q¬ÀAz AiÆÃf¹zAzÆ vÆÃgÀvz. ¨Ãg ¨Ãg ¸ªÀÄzÁAiÀU¼ £ÁAiÀPg £qÀª ªÁ¥Ágz ¥juÁªÀªÁV MAzÀ gÁdQÃAiÀ ¥AUq¢Az ªÀvÆAzÀ gÁdQÃAiÀ ¥PP P¼À»¹ ºAaPÆ¼®À £Áª PÀjU¼Æ C® z£U¼Æ C®. £Áª £ªÀ EZÀAiÀÄAv ¥ÀÄwAiÀ ¢Q£º ¸ÁUÀvÁ MAzÀ zÈq ¸ªÀÄzÁAiÀªÁV G½AiÀ®À §AiÀ¸ÀvÃª ºÁUÆ »AzÆU¼ÁV £ªÀ d£¹z ºPÀU¼£ÀÄß ©I À©qzÃ Ez£ÀÄß EgÀªÀzjAz®Æ ¸Á¢¸§ºÀzÁVz ªÀvÀ »AzÆzªÀðzºAiÀÄ G½zÀPÆAqÀ Cz£ÀÄß PÃª® £ªÀ ¸ªÀÄzÁAiÀU½U ªiÁvÀæ®zÃ EAvºzÃ ºÆuUÁjPU¼À, §ªuU½Az £g¼ÀwgÀª Evg ¸ªÀÄzÁAiÀU½UÆ ºZÀ C£ÀPÆ®PgªÁUÀªAv D zªÀðª£ÀÄß §z¯Á¬À¸¨ÃPÁVz. £ªÀ ¸APµU¼À C¢P ºÁUÆ ¸µªÁVzgÆ £Áª »ÃU ªiÁq¨ÃPÁVz. £ªÀ GzÃ±ª »AzÆ ¸ªiÁdª£ÆÄ zÀ§ð®UÆ½¸Àªz®. Dzg Cz£ÀÄ DAvAiÀð¢Az¯Ã ¸ÀzÁj¹ ªÀvµÀ UnUÆ½¸ÀªzÀ, zÈqUÆ½¸ÀªzÆ DVz. £Áª PÆÃªÀĪÁzz ¸AWµðU¼º ªÀvÀ ¸zðAiÀº PÃª® DIz PÁ¬ÀU¼ÁVg®À Ea¸Àª¢®.

¤ªÀ ¸®ºAiÀÄ »AzÆU¼À, ¹RígÀ ªÀvÀ ªÀĹªÀg ZÀ£ÁªuÁ ¨«µª£ÀÄß M¼UÆArz. »AzÆ UÀA¦¤Az £Áª zªÀðª£ÆÄ §z¯Á¬À¸¨ÃPAzÀ ¤Ãª §AiÀ¹zg, £Áª ¹Rí Cxªá ªÀĹªiïg zªÀðU¼ £qÀª DAiÀ ªiÁrPÆ¼¨ÃPÁUÀvz. ªÀvÁAvg

JAzÄ v¥ÁV º¸j¸Äª F £ªÄ ª®¸U ¹RÍgÄ, ªÄÄ¹ªÄgÄ ºgÁdÄ PÆUÄªªgÁVgÄvÁg £ÁªÃP ªÄÄ¹ªÄg «gÄz ªÇ ºga¹ ¤®¨ÃPÄ, KP Cªg£Ä «gÆÃ¢¸¨ÃPÄ? ¹RÍgÄ ªÄvÄ »AzÆU¼AvAiÄÄ CªgÆ £ªÄ ¸ºÆÃzggÄ, ±ÆÃ¶vªUðzªg¯Á ¹RÍgÁV ¥jªvð£ ºÆA¢ vªÄ£Ä £ª ¹RÍgÄ JAzÄ PgzÄPÆAqg, EzÄ ¨ÁgvÁzÀAv, ¥AeÁ©£ºgÄªAv ¹Sï-»AzÆ-ªÄÄ¹ªiï ¸ªÄ¸AiÄ£Ä ¸¶¸Ävz ªÄvÄ F £ª ¹RÍgÄ ±ÆÃ¶v ªUðU½U ¸ÃjzªgÁVgÄªzjAz ¸ªÄ¸AiÄÄ ªÄvµÄ ¸AQÃtðªÁV ªÄÆ® ¹RÍgºAiÄÆ ¸ªÄ¸ GAmÁUÄvz.

F ªÄvÁAvgz ª®¸AiÄ ¥æAiÄÄ, gÁdQÃAiÄ ZzÄgAUzÁlz £qAiÄAv, zQt ¨Ágvzº £ªÄ£Ä ºZÄ UÆAz®PÆ¼¥r¸Äª¢®. £Áª ¥Æ£Á MqA§rPAiÄ C£Ä¸Ág PÁAiÄð¤ªð»¸ÄªzgºvÀ¥gÁVzÃª. ¨ÁU±B ¥æÃP ªÄvzÁg ¸ªÄÆºªÁV ªÄvÄ ¨ÁU±B £ªÄ ¸Á£ª£Ä zÁ«ÄðPªÁV ªÄvÄ gÁdQÃAiÄªÁV dAn ªÄvzÁg ¸ªÄÆºªÁV »AzÆU¼Æq£ G½¹PÆAqÄ PÁAiÄð¤ªð»¸ÄvÃª. DzjAz ¤ªÄ ¥væº ¸Æa¹gÄª gÁdQÃAiÄ PÄvAvæPªÁqU¼º PÆqÁ £Á£Ä ¨ÁVAiiÁVgÄª¢®. »AzÆ ªÄºÁ¸¨AiÄÄ, ±ÆÃ¶vªUðU¼Ä »AzÆzªÄð ªÄvÄ »AzÆ ¸ªiÁdzº G½AiÄ®Ä C£ÄPÆ®ªÁUÄªAvº PÁAiÄðPUÆ¼¨ÃPAzÄ £Á£Ä ¸¨AiÄ£Ä MvÁAiÄªiÁqÄvÃ£. D ªUðU¼Ä ¨Ãg AiiÁªzÆÃ zÆgz ¸¼ ¥ãÃ²¸®Ä mPmïU½U ¹zv ªiÁqÄªzg §z®Ä CªgÄ E°AiÄÃ G½AiÄÄªAv Pg¤Ãq®Ä, ¤ªÄ ¥æAiÄÄ §º¼µÄ ZZðAiÄ£Ä Pg½¸ªAvºzÁVgÄªzjAz ££ Gvgª£Æ ¸Az¨ð §AzÁU ¥æ¸Äª ££ ºP£Ä £Á£Ä PÁ¢j¹PÆArzÃ£.

## III
## gÁd CªÀUÉ¨É§®

«Ä| ¹. gÁdUÆÃ¥Á¯ÁZÁjAiÄªgÄ gÁªï§ºÁzÆgï gÁeÁ CªjU »ÃU §gzgÄ:-

``¤Ãª P¼Ä»¹z n¥t ªÄvÄ ¥væÆ¼V£ CqPU¼Ä v®Ä¦zª. ¥væªºÁgª£Ä ¥Æwð £Á£Ä N¢z. Eg£Ä £Á£Ä ¥±ÁaP ¸®ºAiÄAzÄ Pgzg CzÄ wÃgÁ Ppt ¨ÁµAiÄÃ£®, ¤Ãª F ¥væªºÁgª£Ä ªÄºÁvÁfU P½¹gÄªzjAz ££U ¸AvÆÃµªÁVz. ¤Ãª ¤ªÄ ¤§Az£AiÄ£Ä¸Ág Gvj¹gÄªzjAz ºÁUÆ D «ZÁgª£Ä ¸A¥ÆtðªÁV wg¹j¹gÄªzjAz ££U ºµðªÁVz.[1]

1. ¢ ¨ÁA¨ PÁæP¯ï, ¢£ÁAP 8 DU¸ï 1936

**qÁ|| CA¨ÉÃqÌgï jUÉgÁeï ¨ÉÃÃeï Cªg̀À̀ÀGvÀg**

»AzÆzªÀÄð¢Az ºÆg£qAiÀÄÀªªjU ¥ÆÉ£Á MqA§rPAiÀÄ ¯Á¨ªÀÄ zÆgP¨ÁgzÀ.

``qÁ|| ªÀÄÆAeAiÀĪg AiÆÃd£AiÀÄ£ÀÄß, vªÀÄ MAzÀÄ ºÃ½PAiÀĺ CT®¨Ágv ±ÆÃ¶v ªUðU¼ PÁAiÀÄðz²ðU¼Æ, ºjd£ £ÁAiÀÄPgÆ Dz «ÀÄ|| ¦.J£ï. gÁeï¨ÆÃeïgÀÄ »ÃU «±Ã¶¸ÀvÁg: ¥ÆÉ£Á MqA§rPAiÀÄÀ »AzÆzªÀÄð¢Az ªÀÄvÁAvg ºÆA¢zªjU AiiÁªÀÄzÃ C£ÀÄPÆ®U¼£ÆÀß MzV¸ÀĪÀÄ¢®. ºÁUÆ ºjd£ ¸ªÀÄÀzÁAiÀÄz P®ªgÀÄ ¹Sïzª¥ÀÄð CxªÁ ¨Ãg AiiÁªÀÄzÃ zªÀÄðª£ÀÄß MmÁV C¦PÆAqgÆ, D ªÀÄvÁAvjU½U ¥ÆÉ£Á MqA§rPAiÀÄ CrAiÀĺ ¥qzÀÄPÆAq AiiÁª C£ÀÄPÆ®U¼£ÀÄ G½¹PÆqÀĪÀÄzÀÄ D MqA§rPAiÀÄ PgÁgÀÄU½U ¸» ºÁQz ªÀQU¼ C¢PÁgz°gÀĪÀÄ¢®.'' gÁeï¨ÆÃeï ªÀÄÀAzÀĪgzÀÄ ºÃ¼ÀÄvÁg ``¥ÆÉ£Á MqA§rPAiÀÄÀ ±ÆÃ¶v ªUðU½U ¸Ãjz ¸z¸ÀjU Ujµ «ÀÄwAiÀÄ jAiiÁAiÀÄwAiÀÄ£ÀÄß ¤ÃqÀĪ «±Ãµ GzÀűºÆA¢vÀÄ, EzjAzÁV ±ÆÃ¶v ªUðU¼ÀÄ »AzÆ ¸ªiÁdz CRAq¨ÁUªÁV G½AiÀÄÀªgA§ D±AiÀÄ ºÆA¢vÀÄ. F MqA§rPAiÀÄ£ÀÄß »AzÆ ¸ªiÁdª£ÀÄß ©lÀÄ ºÆÃzªjUÁUº CxªÁ ©lÀÄ ºÆÃUÀwgÀĪªjUÁUº C£¬À¸Àª ¥ÆÀAiÀÄÃ Eg°®.

F MqA§rPAiÀÄ ¸ªÀÄAiÀÄz° qÁ|| CA¨ÃqÌgï MAzÃ MAzÀÄ ¨Áj PÆq ªÀÄvÁAvgz ¥ÆÀAiÀÄ£ÀÄß Jv°®. §ºÀıB E£ÆÀß ºa£ jAiiÁ¬ÀÄwU¼£ÆÀß ¥qAiÀÄÀª ¸®ÀĪÁV FU F PÆU£ÀÄß J©¹zÁÌg JAzÀÄ £ÉU¤ÀÄß¸Àvz'' J£ÀÄßvÁg gÁeï¨ÆÃeï.

**vÁQðPÀC¸ÃUÀÉ**

ªÀÄÀAzÀĪgAiÀÄÀvÁ «ÀÄ|| gÁeï¨ÆÃeï ¥Ãè¸ÀvÁg: ``»AzÆzªÀÄð¢Az ºÆ¸zÁV ªÀÄvÁAvg ºÆA¢zªjU ¥ÆÉ£Á MqA§rP¬ÄAz §A¢gÀĪAvº ¥ÀÆÀÆÃd£U¼£ÀÄß PÆqÀĪÀÄzÁzg, zÁ«ÀÄðP PÁgtP®¢zÌgÆ, gÁdQÃAiÀÄ PÁgtPÆÃ CxªÁ ªÀÄv AiiÁª PÁgtPÆÃ ªÀÄvÁAvg ºÆA¢z º¼AiÀÄ ªÀÄvÁAvjU¼ÀÄ F ¥ÀÆÃd£ª£ÀÄß §AiÀĹzg CªjUÆ KP F C£ÀÄPÆ®ª£ÀÄß ¤Ãq¨ÁgzÀÄ? ``gÁeï¨ÆÃUï »ÃU ºÃ¼ÀÄvÁg:'' ¨Ãg ªÀÄvU¼º ªÀÄvÁAvgUÆArgÀĪ zÆq ¸ASÀAiÀÄ ±ÆÃ¶vªUðU¼ªjzÁÌg, Dzg ºjd£ ¸ªÀÄÀzÁAiÀÄP CAnPÆArzÌ C£ºðvU¼£ÀÄ Qv¸AiÀÄ®À CªjU ¸ÁzÀªÁV®ªAzÀÄ w½¹ CªgÀÄ ªÀÄzÁè£ P®ªÀÄ ¨ÁUz°gÀĪ Pæçg ¥çÀUU¼£ÀÄß GzÁºj¸ÀvÁg. C£ÀÄPÆ®U¼À, ¸APµ, §ªuU¼rAiÀĺ ¥j±æÀÄ¥lªjUÁV ¤ÃrgÀĪ jAiiÁ¬ÀÄwU¼£ÀÄ, C£ÀÄPÆ® ªÀÄvÀÄ ¯Á¨U¼£ÀÄß AiiÁªÀÄzÃ jÃwAiÀÄ C££ÀÄPÆ® PµU¼£ÀÄß C£À¨«¸zÃ EzÌªjU Czg°AiÀÄÆ AiiÁª C££ÀÄPÆ®U¼£ÆÀß §AiÀĸz PÃª® Evgg ¥j±æÀÄ¢Az ¹UÀª ¥ÀÆÃd£U¼£ÀÄß ªiÁvæ§AiÀĸÀªªjU KP PÆq¨ÃPÀ?''

¥ÆÉ£Áz F £ÁAiÀÄPgÀÄ ªÀÄÀAzÀĪj¸ÀvÁg.[1] ``F ¸ÆvÀè MAzÀÄ «µZPæAvº

---

1. ¢ ¨ÁA¨ PÈæP¯ï, ¢£ÁAP 15 DU¸ï 1936

C¥ÁAiÄPÁjAiiÁz ¸ÆvæEzÄ ºZÄ ºZÄ dn®v ªÄvÄ PÆ£¬Ä®z ¸ªÄ¸ÜU Jq ªiÁrPÆqÄvz. EzP »AzÆU¼ÁU°, ¨Ãg AiiÁgÃ DU° ¸ªÄwAiÄ£Ä ¤Ãq¨ÁgzÄ. £Áª »AzÆU¼Ä Cxª Á »AzÆU¼®¢g§ºÄzÄ. »AzÆ ¸ªiÁdz M¼UÃ EgÄªzÄ£Ä £Áª DAiÄªiÁrPÆAqg, »AzÆU¼Av £Áª £ªÄ ºPÄU¼Ä ªÄvÄ ¨ÁzÄvU½U CºðgÁUÄvÃª. MªÄ £Áª F ¸ªiÁd¢Az ºÆg§Azg £Áª CAvº AiiÁªzÃ ºP£ÆÄ PÃ¼¯ÁUÄª¢®."

¥Æ£Á MqA§rPAiÄ£Ä CAVÃPj¸Äª° »AzÄU¼Ä AiiÁª vÁUª£ÆÄ ªiÁr® JA§ ºÃ½PAiÄ£Ä ¤gÁPj¸ÄvÁ «Ä|| gÁeï ¨ÆÃUï ºÃ¼ÄvÁg. eÁwªÁgÄ wÃªiÁð£zAv ±ÆÃ¶v ªUðU½U ¤Ãq¯ÁVz 71 ¸Á£U¼ §z¯ÁV ¥Æ£Á MqA§rPAiÄÄ ±ÆÃ¶v ªUðU½U 148 ¸Á£U¼£Ä ¤ÃrvÄ. vªÄ ºÃ½PAiÄ£Ä ªÄÄPÁAiÄUÆ½¸ÄvÁ «Ä|| gÁeï¨ÆÃUï WÆÃ¶¸ÄvÁg: ºjd£ ¸ªÄÄzÁAiÄz° ªÄvÁAvgz «ZÁgP ¸ÁªðwÆ ªÄ£«AiiÁU° DPµðuAiiÁU° E®. ªÄºÁgÁµz° PÆq PÃª® ªÄºggÄ F z¶PÆÃ£z ¥gªÁV EzgÄ. Dzg ZªiÁggÄ AiiÁªzÃ ªÄvÁAvgª£ÆÄ z±qªÁV «gÆÃ¢¹zgÄ. F «ZÁgP ¨Ãg AiiÁª ¥Áævz° ¨A§®«g°®. »AzÆ £ÁAiÄPgÄ ºÃU Ezg° ¸ÃjPÆAqgA§Äzg §UU vªÄU D±AiÄðªÁVvz.[1]

V

**ªÄºÁvÀUÁA¢üAiÀ C©üªÁ£ÀzÀ ¥ÀvÀæ**

1936 dÄ¯ 26£Ã vÁjÃRÄ ªÄºÁv UÁA¢, «Ä|| gÁeÁ CªjU §gz ¥væ-

``¤Ãª qÁ|| ªÄÆAeAiÄªjU §gz ¥væ §UU ¸ÁªiÁ£ ¸ªÄw ¤Ãq®Ä £ÉU AiiÁª vÆAzgAiÄÆ E®. qÁ|| ªÄÆAeAiÄªg Cxª Á qÁ|| CA¨ÃqÌgï Cªg ¤®Äª£Ä £ÉU Cxðª iÁrPÆ¼¯Ã DUÄª¢®. £É ªÄnU ºÃ¼Äªzázg C¸ø±vÁ ¥jºÁgª v£zÃ Dz MAzÄ ¨zÆ¯AiÄ° ¤Awz. £É ªÄnU CzÄ UÁqªÁz zÁ«ÄðP ¥æ ¸ªtð »AzÆU¼Ä ¥±ÁvÁ¥z ªÄ£ÆÃ¨ÁªÁ¢Az, ¸AiÄA¥ævgÁV C¸ø±vAiÄ£Ä vÆqzÄ ºÁPÄªzg°AiÄÄ £ªÄ zªÄðz ErAiÄ C¹v÷«z. £É ¥Á°U CzAzÆ ZËPÁ²AiÄ, ºAaPÆ¼Äª ¥æAiiÁUÄª¢®. ¤Ãª PÆq £Á£Ä vÁ½z ¤®Äª£Ã vÁ½gÄªzÄ £ÉU ¸AvÆÃµªÁVz" [ªÁ¶ðP jf¸gï, ¸A¥Ä I 2, dÄ¯-r¸A§gï 1936, ¥Ä I 276-279]"[2]

VI

---

1. ¢. ¨ÁA¨ PÁæ¯ï, ¢£ÁAP 15 DU¸ï 1936.
2. Sgï ªÆÃqï, ¸A¥Ä I 6, ¥Ä. 191-193.

1936 dÄ¯È 30£AiÄ ¢£ÁAPz m°UÁæ ¥Arv JA.JA. ªiÁ¼«ÃAiÄjAz gÁªï§ºÁzÆgï JA.¹. gÁeÁ Cª jU :- ``qÁ|| ªÄÆAeAiÄª jU §g¢zÍ ¤ªÄ PÁUzz ¥æUÁV ªAz£U¼Ä, £Á£Ä ¤ªÆq£ ¸ºªÄw¸ÄvÃ£”.J.¦.¹

**VII**

**ªÄÆAeÉ-gÁeÁ MqÀ§rPÉ(M¥ÀzÀ)²**

**±ÉÃ¶vÀªÀUÀðUÀ¼À«¨Àd£É**

ªiÁ£Àg, qÁ|| ªÄÆAe³ ªÄvÄ »AzÆ ªÄºÁ¸¨AiÄÄ »AzÆzªÄð¢Az C¸Ø±ÀvAiÄ P¼APª£ÄB C½¹ºÁPÄªÀzg° C¸ªÄxðgÁVzÄ, »AzÆ ¸AWl£AiÄ£ÄB ¸±P ºÁUÆ ¸ÁAzææ½¸¢zgÆ, ±ÆÃ¶v ªUðU¼ ±Ãæt U¼° MqPÄAlÄªiÁqÄª zÈ¶¬ÄAz D ªUðU½U ¸Ãjz £ÁAiÄP££ÄB §¯©Ã¹ »rAiÄÄªÀzg° AiÄ±¹AiiÁVzÁg. ªÄÆAe-gÁeÁ M¥Azª£ÄB PÁAUæë ªÄvÄ ªÄºÁ¸¨Á CvÄvÁº¢Az ¥æA¹¸Äwª ªÄvÄ F M¥AzªÀ ±ÆÃ¶v ªUðU¼ §ºÄd£g ¨A§® ¥q¢zAiÄAzÆ ªÄÄU ¸Áªðd¤PgzÄgÄ ¥æëv¥r¸®qÄwz. ªÁ¸ªªÁV F ªÄÆAe-gÁeÁ MqA§rPAiÄ£ÄB zÃ±z J® ±ÆÃ¶v ªUðU¼ ¸AWl£U¼Æ ªÄvÄ J®gÆ M¦PÆArgÄª £ÁAiÄPgÄ PlÄªÁV RAr¸ÄwzÁg. F MqA§rPAiÄÄ J©¸ÄwgÄª §®ªÁz ¥æÃgÆÃzz ¸ªiÁZÁgª£ÄB zªÄ¤¸®Ä PÁAUæë ºÁUÆ ªÄºÁ¸¨AiÄÄ ¦vÆjAiÄ£ßÃ ªiÁrª.

qÁ|| CA¨Ãqgï dAn ªÄvzÁg PÃvæ¼Ä ªÄvÄ «ÄÃ¸®Ä ¸Á£U½UÁV ªÁ¢¸ÄwzÁU, gÁªï §ºzÆgï JA.¹. gÁeÁ CªgÄ ¥æÃP ªÄvzÁg PÃvæ¼ ¥gªÁV ºZÄ M®ªÀ ºÆA¢zgÄ. «Ä|| gÁeÁ Cªg ªÄvÄ ªÄzÁæë ¥Áæv¸z ±ÆÃ¶vªUðU¼ ¸AWl£AiÄ MvÁAiÄ¢AzÁV qÁ|| CA¨Ãqgï vªÄ ªÉAiÄÄQP C©¥ÁæAiÄU¼£ÄB §¢Vj¹zgÄ ªÄvÄ zÄAqÄªÄÃf£ ¥jµw£° ¥æÃP ¥ÁæçzPÁV PÆÃjPAiÄ£ÄB ªÄÄA¢lgÄ. vªÄ PÆÃjPU «Ä|| gÁeÁ CªjAz qÁ|| CA¨Ãqgï CªgÄ ¨A§® ¥qzgÄ. P®ªÀ ªÁgU¼ »Az MAzÄ ¨Áµtz°, gÁeÁ vªÄ C©¥ÁæAiÄª£ÄB w½¸ÄvÁ ``±ÆÃ¶v ªUðU¼ «ªÆÃZ£AiÄÄ ¥æÃP ªÄvzÁg PÃvæ¼° ªiÁvæÆz’ JAzÄ ºÃ½zgÄ. Cªg EwÃa£ F qÆA§g¯ÁU

---

1. ¢. ¨ÁA¨ PÁæP¯ï, ¢£ÁAP 8, DU¸ï 1936
2. ªÄÆAe-gÁd M¥Az: gÁªï §ºÁzÄgï JA.¹.gÁeÁ, ªÄzÁæ£ ±ÆÃ¶v ªUðU¼ £ÁAiÄPgÄ qÁ|| ©.J¸ï. ªÄÆAe, »AzÆ ªÄºÁ¸¨Áz CzÀPgÄ q°AiÄ° «ÄÃ¸¯Áw ¸Á£U¼Ä ªÄvÄ dAn ªÄvzÁg PÃvæ¼ DzÁgz ªÄÃ¯ ZZð £q¹zgÄ. CªgÄ ªiÁrPÆAq M¥AzªÀ ªÄÆAe-gÁd M¥AzªAzÄ º¸g£ÄB ¥q¬ÄvÄ.
3. qÁ|| ©.J¸ï. ªÄÆAe »AzÆ ªÄºÁ¸¨AiÄ CzÀPgÄ ªÄvÄ ¨ÁgwÃAiÄ zÄAqÄªÄÃf£ ¥jµw£° Czg ¥æ¢AiiÁVzgÄ.

J®g£Æß D±AiÀðUÆ½¹vÀ. ¨Ãg ¨Ãg ¥ÁæªvÀUÀ¼°£ ±ÆÃ¶v ªUðU¼ dªÁ¨ÁjAiÀÄv ¸AWl£U¼Æq£, ¨Ãg ¨Ãg £ÁAiÀPgÆq£AiiÁU° ¸ªiÁ¯ÆÃa¸z CªgÀ dAn ªÀvzÁg PÃvæªÀvÀ «ÀÃ¸®À ¸Á£U½UÁV »AzÆ ªÀºÁ¸¨Áz £ÁAiÀP£ÆA¢U M¥AzªÀ£ß ªiÁrPÆAqgÀ. F ºÆ¸ PÁAiÀð¤ÃwAiÀ£ÀÄß ¸ªÀyð¸®À CªgÀ AiiÁª PÁgtª£Æß ¤Ãr®. EwÃZU ªÀzÁæ£°AiÀ qÁ|| CA¨Ãqgï Cªg ¥ææÃP ¥Áææ¤zÀz ¨ÃrPAiÀÄ ¸Á«gÁgÀ d£jAz ¨A§°¸®lÀ qÁ|| CA¨Ãqgï CªgÀ CvÀAv GvÁº¥Æ tðªÁV ¸ÁUw¸®nzÀ, gÁªï §ºÁzÆgï gÁeÁ CªjU vªÀ ¥ÁæªvÀz°AiÀ ¨A§®z PÆgv¬ÀzAiÀ£ÀÄßªÀP ¸ÁPµÀ ¸ÁQAiÀ£ÀÄß MzV¹vÀ J£ß§ºÀzÀ. ZÀ£ÁªuÁ ¸«ÃwAiÀ ªÀÄAz ¤Ãq¯ÁVgÀª ¸ÁQ PÆq «ªÁzPq¬À®zAv ¥ææÃP ªÀvzÁg PÃvææ¼ ¥gªÁVzÀ ±ÆÃ¶v ªUðU¼ C©¥ÁææÀª£ÀÄß ¸Á©ÃvÀ¥r¸Àvz.

ªÀÆAe-gÁeÁ MqA§rPAiÀ£ÀÄß ¨A§º¹ ±ÆÃ¶v ªUðU½U ¸Ãjz LzÀ ¸Á«gPÆ ºZÀ d£g ¸»¬ÀgÀª eÁ¥£Á¥væ£ÀÄß ZÀ£ÁªuÁ ¸«ÃwU «À|| ©.e. zÃªgÀPgï CªgÀ P¼À»¹zÁgAzÀ ¨ÆA¨Á¬ÀAiÀ PÁAUæ ªÀvÀ ªÀºÁ¸¨Á CAU¸A¸U¼À ºÃ½PÆArª. EzÀ PÃª® PlÀPvAiÀA§ÀzÀ §AiÀ¯ÁVz. ªÁ¸ª ¸AUw K£Azg, ZÀ£ÁªuÁ ¸«ÃwAiÀÄ ºÆgr¹z ¥ææÁª½U P®ª ¤¢ðµ GvgU¼£ÀÄß P®ª C¥æÄÄR ªQU½Az, ¸A¸U½Az ¤Ãq¯ÁVzÀ, CªU¼ ¸ASÁ§® PÆq £Utª ÁVz. «À|| zÃªgÀPgï v£ß£ÀÄß ªÀvÀ ºZAzg v£ß G¥eÁw bA¨Ágï ¸ªÀÄzÁAiÀP CAzg qÁ¨Ææ bA¨Ágï ¸ªÀÄzÁAiÀP - ¸Ãjz P®ªg£ÀÄß ¥ææ¢¸ÀvÁg. CªgÀ ªÀºÁgÁµz°£ C¸ø± ¸ªÀÄzÁAiÀªAzÀ PgAiÀ¯ÁUÀª wÃgÁ ¸t ¨ÁUªÁVzÁg.

«±ÃµªÁV EzÃ GzÃ±P £q¸¯ÁUÀª ¸ÁªðwÆ¸¨AiÀº vªÀ §ºÀªÀvª£ÀÄß ¸Á©ÃvÀ¥r¸ÀªAv £ÁªÀ PÁAUæ ªÀvÀ ªÀºÁgÁµz d£vU ªÀvÀ ±ÆÃ¶v ªUðU¼° EgÀª Cªg ¸ÃÀ»vjU ¸ªÁ®ÀºÁPÀvÃª. CªgÀ Ez£ÀÄß ¸Á¢¸®À ¹zgÁU¢gÀª v£Pª PÁAUæ ªÀvÀ ªÀºÁ¸¨Á ¸A¸U¼£ÀÄß CªU½U GavªÁzAvº ¢PÁg, wg¸ÁgU½Az PÁt¨ÃPÁVz.

**¢ªÁPgï ¥ÀÁgÉ(ªÃºgï)**
**PÉ.f. ZÀzÉÃgïPÁgï (bÀ¨Ágï)[1]**

---

1. ¸Àgïª Áq, ¸A¥Àl 1 P.P. 143-144
G,PN-Y-1054-MSDR-BABPOB-8. 2003-15,210 Books-PR-8

# ವಿಷಯಸೂಚಿ


**ಅ**

ಅಂಬಾಲ–ಸಿಮ್ಲಾ ೫೬೦
ಅಂಬೇಡ್ಕರ್ ೩, ೪, ೬, ೭, ೮, ೯, ೧೦, ೧೨, ೧೩, ೧೪, ೧೫, ೧೬, ೧೯, ೨೦, ೨೪, ೨೫, ೨೬, ೨೭, ೨೮, ೨೯, ೩೦, ೩೧, ೩೨, ೩೩, ೩೪, ೩೫, ೩೭, ೩೮, ೩೯, ೪೦, ೪೧, ೪೨, ೪೯, ೫೦, ೫೧, ೫೨, ೫೩, ೫೪, ೫೫, ೫೬, ೫೭, ೫೮, ೬೨, ೬೩, ೬೪, ೬೫, ೬೭, ೬೮, ೬೯, ೭೦, ೭೧, ೭೨, ೭೩, ೭೪, ೮೫, ೮೯, ೯೧, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೩, ೧೧೪, ೧೧೫, ೧೧೬, ೧೧೮, ೧೧೯, ೧೨೦, ೧೨೧, ೧೨೨, ೧೨೪, ೧೨೫, ೧೨೮, ೧೨೯, ೧೩೦, ೧೩೧, ೧೩೮, ೧೩೯, ೧೪೦, ೧೪೧, ೧೪೨, ೧೪೩, ೧೪೪, ೧೪೫, ೧೪೬, ೧೪೭, ೧೪೮, ೧೪೯, ೧೫೦, ೧೫೧, ೧೫೨, ೧೫೩, ೧೫೪, ೧೫೫, ೧೫೬, ೧೫೯, ೧೬೧, ೧೬೩, ೧೬೭, ೧೬೯, ೧೭೦, ೧೭೨, ೧೭೬, ೧೭೭, ೧೭೯, ೧೮೦, ೧೮೫, ೧೮೬, ೧೮೭, ೧೯೩, ೧೯೪, ೧೯೫, ೧೯೬, ೧೯೭, ೧೯೯, ೨೦೦, ೨೦೧, ೨೦೨, ೨೦೩, ೨೦೬, ೨೦೭, ೨೦೮, ೨೦೯, ೨೧೦, ೨೧೩, ೨೧೪, ೨೧೫, ೨೧೬, ೨೧೭, ೨೨೦, ೨೨೧, ೨೨೨, ೨೨೩, ೨೨೪, ೨೨೫, ೨೨೬, ೨೨೯, ೨೩೦, ೨೩೧, ೨೩೨, ೨೩೩, ೨೫೬, ೨೫೭, ೨೫೮, ೨೬೦, ೨೬೧, ೨೬೨, ೨೬೩, ೨೬೪, ೨೭೦, ೨೭೨, ೨೭೩, ೨೭೪, ೨೭೭, ೨೭೮, ೨೯೬, ೩೦೫, ೩೦೬, ೩೦೭, ೩೦೮, ೩೧೦, ೩೧೧, ೩೧೨, ೩೧೫, ೩೧೬, ೩೧೭, ೩೧೮, ೩೧೯, ೩೨೦, ೩೨೧, ೩೨೩, ೩೨೪, ೩೨೫, ೩೨೬, ೩೨೭, ೩೨೮, ೩೩೧, ೩೩೫, ೩೩೬, ೩೩೭, ೩೩೮, ೩೩೯, ೩೪೪, ೩೪೫, ೩೪೬, ೩೬೧, ೩೬೪, ೩೬೫, ೩೬೬, ೩೭೩, ೩೭೫, ೩೭೬, ೩೭೭, ೩೭೯, ೩೮೦, ೩೮೧, ೩೮೨, ೩೮೩, ೩೮೪, ೩೮೫, ೩೮೬, ೩೮೭, ೩೯೧, ೩೯೩, ೩೯೪, ೩೯೫, ೩೯೬, ೩೯೭, ೪೦೧, ೪೦೩, ೪೧೪, ೪೧೫, ೪೫೪, ೪೬೦, ೪೬೧, ೪೬೬, ೪೬೭, ೪೬೮, ೪೬೯, ೪೭೦, ೪೭೧, ೪೭೩, ೪೭೫, ೪೭೬, ೪೮೨, ೫೧೧, ೫೧೩, ೫೩೧, ೫೩೨, ೫೩೩, ೫೩೭, ೫೩೮, ೫೪೦, ೫೪೩, ೫೪೪, ೫೪೮, ೫೪೯, ೫೬೧, ೫೬೨, ೫೬೩, ೫೬೫, ೫೬೬, ೫೬೮, ೫೬೯, ೫೭೧, ೫೭೨, ೫೭೮, ೫೮೦, ೫೮೧, ೫೮೨, ೫೮೩, ೫೮೪, ೫೮೫, ೫೮೬, ೫೮೮, ೫೯೩, ೫೯೪, ೫೯೫, ೫೯೮, ೫೯೯, ೬೦೬, ೬೦೭, ೬೦೮, ೬೦೯, ೬೧೦, ೬೧೧, ೬೧೨, ೬೧೩, ೬೧೪, ೬೧೫, ೬೧೬, ೬೧೭, ೬೧೯, ೬೨೧, ೬೨೨, ೬೨೩, ೬೨೪, ೬೨೫, ೬೨೬, ೬೨೭, ೬೨೮, ೬೩೫, ೬೩೬, ೬೪೦, ೬೪೧, ೬೪೨, ೬೪೩, ೬೪೪, ೬೪೫, ೬೪೬, ೬೪೭, ೬೪೮
ಅಕೋಲ ೩೯೬
ಅಕ್ಬರ್ ೬೮, ೧೦೩
ಅಕ್ಬರ್ ಹೈದರಿ ೬೮, ೧೦೩
ಅಗರ್ಕರ್ ೪೫೮
ಅಗಸ್ಟೈನ್ ಬಿರೆಲ್ ೪೦೬

ಅಜಗಾಂವ್‌ಕರ್ ೪೬೦
ಅಥರ್ವವೇದ ೫೦೪
ಅನಂತರಾವ್ ಚಿಟ್ರೆ ೩, ೮, ೧೯
ಅಬ್ದುಲ್ ಗಫಾರ್ ಖಾನ್ ೩೧೩
ಅಮೃತರಾವ್ ಕಾಂಬೆ ೫೮
ಅಮೆರಿಕ ೭೩, ೮೩, ೯೨, ೧೯೩, ೧೯೪, ೧೯೫, ೧೯೬, ೨೦೧, ೨೧೮, ೨೩೩, ೩೨೪, ೩೪೬, ೩೫೪, ೩೬೪, ೩೭೯, ೪೧೬, ೫೬೧, ೫೬೪, ೫೮೨, ೫೯೩, ೬೪೦
ಅಮೇರಿ ಎಲ್. ಎಸ್. ೩೦೬, ೫೫೮, ೬೩೧
ಅರ್ಮುಗಂ ಸಿ.ಎಂ. ೩೮೬
ಅಲಿ ಇಮಾಂ ೧೦೦
ಅಲಿಪುರ ೩೮೦, ೩೯೪, ೩೯೫
ಅಲಿಭಾಗ್ ೧೫
ಅಲೆಗ್ಸಾಂಡರ್ ೫೪೩, ೫೪೯, ೫೭೨, ೫೭೮, ೫೮೧, ೫೯೫, ೬೧೯
ಅಲ್ಬೇನಿಯಾ ೬೪
ಅಲ್ಲಾವುದ್ದೀನ್ ೩೪೪
ಅಲ್ವರ್ ೫೬೩
ಅವಂತಿಕಾ ಬಾಯಿ ಗೋಖಲೆ ೧೩೮, ೧೫೫, ೧೫೯
ಅಶೋಕ ರಣ್‌ಜಿತ್ ರಾಮ್ ಮೆಹ್ತಾ ೩೬೬, ೩೭೪
ಅಶೋಕ್ ಮೆಹ್ತಾ ೩೬೫, ೩೬೫, ೩೭೩, ೩೭೫, ೩೭೭, ೩೭೮
ಅಸ್ಕಿತ್ ೫೬೩
ಅಸ್ಸಾಂ ೧೧೦, ೧೧೯, ೧೩೪, ೧೪೧, ೧೫೨
ಅಹಲ್ಯಾಶ್ರಮ ೬೦೮
ಅಹ್ಮದಾಬಾದ್ ೧೦೮, ೧೩೦, ೨೫೭, ೩೮೫
ಅಹ್ಮದ್‌ನಗರ ೨೩೦, ೨೭೮, ೨೭೯, ೨೮೪, ೩೪೪

**ಆ**

ಆಂಗ್ಲೋ–ಇಂಡಿಯನ್ನರು. ೨೧೧, ೫೪೬, ೬೨೭
ಆಂಡರ್‌ಸನ್ ಡಬ್ಲೂಸಿ ೨೯೦
ಆಂಡ್ರ್ಯೂ ಡನ್‌ಲಪ್ ೪೨೧, ೪೨೧, ೪೩೨
ಆಕ್ಸ್‌ಫೋರ್ಡ್ ೪೯೪, ೬೨೮
ಆಘಾಖಾನ್ ೬೮, ೮೯
ಆಘಾಖಾನ್ ೭೪, ೧೦೩, ೧೨೦
ಆಚಾರ್ಯ ದೋಂಡೆ ೩೬೫
ಆಜಾದ್ ೬೨೭
ಆದಿಮುಗಂ ಜೆ.ಸಿ. ೩೮೬
ಆನಂದಕುಂಜ್ ೨೬೩
ಆನಂದರಾವ್ ವಿ. ಶಂಕರ್ ೪೬
ಆಫ್ರಿಕಾ ೩೧೭, ೩೨೩, ೩೨೪, ೫೬೮
ಆಮ್ರಪಾಲಿ ೪೯೭
ಆ್ಯಡೆನ್ ೬೮
ಆ್ಯನಿ ಬೆಸೆಂಟ್ ೧೦೦
ಆ್ಯನೆ ೧೩೮
ಆ್ಯರೋನ್ ೩೦೯
ಆರ್.ಎಸ್.ಎಸ್. ೩೫೯
ಆರ್ಮುಗಂ ಜಿ.ಸಿ. ೩೮೭
ಆರ್ಯ ೪೭೬, ೫೧೯, ೫೨೦, ೫೨೬
ಆಲ್ಡರ್‌ಸನ್ ೪೨೩
ಆಲ್ತುದ್ ೫೨೫
ಆಳ್ವಾರ್ ೬೮
ಆಸ್ಟ್ರೇಲಿಯಾ ೬೪೦

**ಇ**

ಇಂಗ್ಲಿಷ್ ೩೭೦, ೩೭೧, ೪೦೭, ೪೨೫, ೪೩೫, ೪೩೬, ೪೪೦, ೪೫೦, ೪೫೬
ಇಂಗ್ಲೆಂಡ್ ೫೩, ೬೮, ೬೯, ೭೧, ೭೪, ೯೫, ೧೬೩, ೧೯೬, ೨೦೭, ೨೧೮, ೩೧೪, ೩೧೮, ೪೧೭, ೪೨೦, ೪೨೪, ೪೨೬, ೪೨೮, ೪೩೦, ೪೩೧, ೪೩೨, ೪೩೩, ೪೩೪, ೪೩೫, ೪೩೬, ೪೩೯, ೪೪೦, ೪೪೩, ೪೪೪, ೪೪೬, ೪೫೧, ೪೫೩, ೫೧೬, ೫೩೪, ೫೭೫, ೫೮೬, ೫೯೩, ೫೯೫, ೬೧೯, ೬೪೪, ೬೪೫, ೬೪೬, ೬೪೭, ೬೪೮
ಇಂಡಿಯನ್ ನ್ಯಾಷನಲ್ ಹೆರಾಲ್ಡ್ ೩೭

ಇಂದೂಲಾಲ್ ಯಾಜ್ಞಿಕ್ ೧೧೪
ಇಟಲಿ ೧೨೦
ಇತೇಹದ್-ಉಲ್-ಮುಸ್ಲಿಮೀನ್ ೩೨೯, ೩೩೦
ಇಥಿಯೋಪಿಯಾ ೩೦೯
ಇಬ್ರಾಹಿಂ ರಹೀಂತುಲ್ ಸರ್ ೧೫೯
ಇಲೆನಾರ್ ೯೨
ಇಸ್ರೇಲ್ ೩೦೮, ೩೦೯, ೩೧೧
ಇಸ್ಲಾಂ ೨೧೮, ೨೧೯, ೨೨೦, ೨೨೪, ೩೨೧, ೩೨೯, ೬೪೧

**ಈ**

ಈಜಿಪ್ಟ್ ೩೦೮, ೩೦೯
ಈವ್ಸ್ ವೀಕ್ಲಿ ೪೯೪
ಈಸ್ಟ್‌ಇಂಡಿಯಾ ಕಂಪನಿ ೪೪೫

**ಉ**

ಉಪಾಸನಿ ಬುವಾ ೪೫೮, ೪೫೯

**ಎ**

ಎಡ್ಮಂಡ್ ಬ್ರೂಕ್ ೭೨
ಎಡ್ವರ್ಡ್ ಬೆಂಥಾಲ್ ೬೧೯
ಎಡ್ವರ್ಡ್ ವೆಸ್ಟ್ ೪೧೫, ೪೧೭, ೪೧೮
ಎಲಿಂ ೩೦೯
ಎಲಿಜಾ ಇಂಪೆ ಸರ್ ೪೩೧, ೪೩೫, ೪೩೯
ಎಲ್ಡನ್ ೪೩೨, ೪೩೩

**ಏ**

ಏಕನಾಥ ಸಂಶೋಧನಾ ಮಂಡಲಿ ೫೧೧
ಏಷಿಯಾ ೩೫೫

**ಐ**

ಐರಿಷ್ ೧೭೮, ೫೬೩, ೫೭೩
ಐರ್ಲೆಂಡ್ ೭೬, ೫೨೫, ೫೬೩
ಐಸ್ಯಾಕ್ ಫುಟ್ ೯೩

**ಒ**

ಒರಿಸ್ಸಾ ೧೧೦, ೧೩೪, ೧೪೧, ೧೫೨, ೩೧೧, ೪೩೭, ೫೫೭, ೫೯೭

**ಔ**

ಔರಂಗಜ಼ೇಬ್ ೫೭೨
ಔರಂಗಾಬಾದ್ ೩೮೦, ೩೮೬, ೫೧೧

**ಕ**

ಕಜ್ರೋಲೇಕರ್ ಎನ್.ಎಸ್. ೩೬೬
ಕದರಿ ಎಸ್. ೧೬
ಕಪಾಡಿಯಾ ಟಿ.ಆರ್. ೩೭೮
ಕಪಿಲ ೪೮೬
ಕಮಲಾ ನೆಹರು ೧೩೮
ಕಮಾಲ್ ಪಾಷಾ ೨೧೬
ಕರಂಜಿಯಾ ಬಿ.ಎನ್. ೧೫೯
ಕರಂಡಿಕರ್ ೧೩೮
ಕರಂವೀರ್ ಭಾವುರಾವ್ ಪಾಟೀಲ್ ೨೦೨, ೨೦೩
ಕರಾಚಿ ೬೨೮, ೬೪೭
ಕರ್ಕಾ ೧೭೪
ಕರ್ಡೇಕರ್ ೧೭೦
ಕರ್ನಾಟಕ ೬೩, ೨೭೮, ೫೨೦
ಕರ್ನಾಲ್ ೧೦೭, ೫೬೦
ಕಲ್ಕತ್ತ ೧೮, ೩೮೨, ೩೯೬, ೪೨೪, ೪೨೫, ೪೨೬, ೪೨೯, ೪೩೫, ೪೩೬, ೪೩೯, ೪೪೨, ೪೪೫, ೪೫೧
ಕವಲೇಕರ್ ಎಸ್. ಎಸ್. ೩೭೮
ಕಸ್ತೂರಬಾ ೧೬೧
ಕಸ್ತೂರ್‌ಚಂದ್ ೪೬೭
ಕಸ್ಸಪ ೫೦೪
ಕಾಂಗ್ರೆಸ್ ೫೦, ೫೦, ೫೧, ೫೨, ೫೩, ೬೧, ೬೨, ೬೮, ೭೫, ೯೩, ೯೭, ೧೦೦, ೧೦೨, ೧೦೪, ೧೦೫, ೧೦೬, ೧೦೭, ೧೧೪, ೧೧೫, ೧೨೦, ೧೨೧, ೧೩೬, ೧೪೧, ೧೪೩, ೧೭೬, ೧೮೭, ೧೮೮, ೧೯೩, ೨೧೩, ೨೧೫, ೨೨೧, ೨೨೨,

೨೩೧, ೨೩೨, ೨೫೭, ೨೫೮, ೨೫೯, ೨೬೦,
೨೬೧, ೨೭೦, ೨೭೧, ೩೧೧, ೩೧೨, ೩೧೮,
೩೧೯, ೩೨೧, ೩೨೯, ೩೩೭, ೩೪೫, ೩೫೩,
೩೫೪, ೩೬೫, ೩೬೬, ೩೭೩, ೩೭೮, ೩೮೫,
೪೬೨, ೪೬೫, ೪೭೩, ೪೭೪, ೫೩೨, ೫೩೩,
೫೪೬, ೫೫೦, ೫೫೮, ೫೬೫, ೫೭೧, ೫೭೨,
೫೭೫, ೫೮೩, ೫೮೪, ೫೯೦, ೫೯೧, ೫೯೪,
೫೯೫, ೫೯೬, ೫೯೭, ೫೯೮, ೫೯೯, ೬೦೬,
೬೦೭, ೬೦೮, ೬೦೯, ೬೧೧, ೬೧೩, ೬೧೪,
೬೧೫, ೬೧೬, ೬೧೭, ೬೧೯, ೬೨೦, ೬೨೨,
೬೨೩, ೬೨೪, ೬೨೫, ೬೨೬, ೬೨೭, ೬೨೯,
೬೩೧, ೬೩೨, ೬೩೩, ೬೩೪, ೬೩೫, ೬೩೬,
೬೩೭, ೬೩೮, ೬೪೦, ೬೪೧, ೬೪೩, ೬೪೬,
೬೪೭, ೬೪೮, ೬೪೯
ಕಾಂಡಾ ೧೦೭
ಕಾಂಪ್ಟೀ ೧೦೮
ಕಾಂಬ್ಳೆ ಡಬ್ಲ್ಯೂ.ಎಸ್. ೩೮೭
ಕಾಜ್‌ರೋಲ್‌ಕರ್ ಎನ್.ಎಸ್. ೩೭೮
ಕಾಟನ್‌ಹ್ಯಾಮ್ ೪೮೦
ಕಾಟಿ ೨೬೭
ಕಾನ್ಪುರ ೧೦೭
ಕಾಮಕೋಟಿ ನಟರಾಜನ್ ೧೫೪
ಕಾಮತ್ ಬಿ.ಎಸ್. ೧೫೪, ೧೫೯, ೨೬೨, ೩೬೧
ಕಾರ್ಣಿಕ್ ವಿ.ಬಿ. ೪೦, ೧೭೩
ಕಾರ್ನ್‌ವಾಲಿಸ್ ೪೪೯
ಕಾರ್ಲ್ ಮಾರ್ಕ್ಸ್ ೫೩೭
ಕಾಲಾರಾಂ ೧೦೮, ೧೬೭, ೧೬೮, ೧೭೧, ೧೭೨,
೧೭೫, ೧೮೫, ೧೮೬, ೧೮೭
ಕಾಲಿಚರಣ ಮಂಡಲ್ ಡಾ. ೧೨೦, ೧೩೮
ಕಾಲ್ವಿನ್ ೪೩೦
ಕಾಶ್ಮೀರ ೩೫೪
ಕಿರ್ಕೀ ೫೭೬
ಕುಂಜಾರು ಪಂಡಿತ್ ೧೩೮
ಕುನ್ರೂ ಹೆಚ್.ಎನ್. ೧೫೫
ಕುರ್ತಕೋಟಿ ಡಾ. ೧೬೯, ೧೭೦, ೨೧೩, ೨೧೫,
೨೨೯
ಕುರ್ಲಾ ೩೭೩, ೩೭೪
ಕೂಟ್ಸ್ ೫೭೬
ಕೃಷ್ಣಾಜಿ ಎಸ್. ಕದರಿ ೧೬
ಕೆಂಟ್ ೬೪೨
ಕೆನಡಾ ೧೪೨, ೫೩೪
ಕೆಲ್ಲೋಸ್ ೪೭೧
ಕೆಲ್ಲಪ್ಪನ್ ೧೫೮
ಕೆಲ್ಲಿ ಸಿ.ಬಿ. ೪೮೦
ಕೇಶವ ಬಾಲಕೃಷ್ಣ ಜೋಷಿ ೩೬೭, ೩೭೮
ಕೇಶವ ರಾವ್ ಜೆಡೆ ೫೫
ಕೊಕಣಿ ಎಸ್. ಎಂ. ೪೨
ಕೊಲಾಬಾ ೩, ೧೦, ೧೧, ೧೩, ೧೪, ೧೫, ೨೦,
೨೮, ೨೯, ೪೧, ೯೫, ೧೮೭, ೩೮೬
ಕೊಲ್ಕತ್ತಾ ೬೪
ಕೊಲ್ಹಾಟ್ಕರ್ ಎ.ಬಿ. ೪೦
ಕೋದಂಡರಾವ್ ಪಿ. ೧೫೫
ಕೋರೆಗಾಂವ್ ೨೭೬
ಕೋಲಂ ೧೫೫
ಕೋಲಂಬೋ ೧೦೮
ಕೋಲ್ಕತ್ತಾ ೧೧೬, ೧೨೦
ಕೋಲ್ವಾಡೇಕರ್ ೧೫
ಕೋವಾಸ್ಜಿ ಜಹಂಗೀರ್ ೧೩, ೧೪, ೭೪, ೨೭೦
ಕೌಲೀ ೫೫
ಕೌಲೇ ೪೪೪
ಕ್ಯಾಥೊಲಿಕ್ ೪೯೨, ೫೦೦
ಕ್ಯಾಲಿಕಟ್ ೧೦೭, ೧೭೬
ಕ್ಯಾಲೆ ೪೨೯, ೪೩೦
ಕ್ಯಾಲೈ ೪೪೪
ಕ್ರಿಪ್ಸ್ ೫೪೩, ೫೪೯, ೫೭೯, ೫೯೦, ೫೯೫, ೬೨೯,
೬೩೬

ಕ್ರಿಶ್ಚಿಯನ್ ೮೬, ೪೦೨, ೪೩೭, ೪೫೭, ೪೭೩, ೪೭೪, ೪೭೫, ೪೮೮, ೪೯೨, ೫೦೩, ೫೧೨, ೫೧೭, ೫೪೬, ೫೭೦, ೫೯೪, ೫೯೫, ೬೨೯, ೬೩೬
ಕ್ರಿಸ್‌ಮಸ್ ೩೯೬
ಕ್ರೈ ೪೭೮, ೪೭೯, ೪೮೧
ಕ್ರೈಸ್ಟ್ ೪೫೬, ೪೫೮
ಕ್ರೈಸ್ತ ೬, ೬೮, ೮೬, ೮೯, ೧೦೦, ೧೦೪, ೧೨೫, ೧೩೨, ೧೭೮, ೧೮೯, ೨೧೦, ೨೧೧, ೨೧೮, ೨೧೯, ೨೨೦, ೨೨೪, ೩೨೧, ೩೨೨, ೩೩೯, ೩೯೫, ೩೯೬, ೫೦೦
ಕ್ರೌಲೆ ೪೩೨
ಕ್ಲೆಮೆಂಟ್ ಅಟ್ಲೀ ೬೩, ೩೨೫, ೫೪೩, ೫೪೯, ೫೮೭, ೫೯೪, ೫೯೫, ೬೧೭, ೬೧೯, ೬೨೪, ೬೨೮, ೬೪೪, ೬೪೫, ೬೪೭
ಕ್ಲೈವ್ ೫೭೬

### ಖ

ಖಾನ್‌ದೇಶ ೨೮೨, ೨೮೪
ಖೇರ್ ಬಿ.ಜಿ. ೧೬೭, ೫೮೩, ೫೮೪, ೬೧೪
ಖೈತಾನ್ ಡಿ.ಪಿ. ೧೫೯
ಖೈರ್‌ಮೊಡೆ ೬೦೯, ೬೪೨, ೬೪೩, ೬೪೭
ಖ್ವಾಜಿ ಹಸನ್ ನಿಜ್ಞಾಮಿ ೨೬೩

### ಗ

ಗಡ್ಕರಿ ವಿ.ಎ. ೨೩೦
ಗಣ್ಯಮಾಲು ಚಂಬಾರ್ ೧೬
ಗವಾಯಿ ಜಿ.ಎ. ೧೧೬, ೧೧೮, ೧೩೩, ೧೩೮, ೧೫೪
ಗಾಂಧಿ ೩೪, ೪೯, ೫೦, ೫೧, ೫೨, ೫೩, ೫೪, ೫೫, ೫೬, ೫೭, ೫೮, ೯೪, ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೩, ೧೧೪, ೧೧೫, ೧೧೮, ೧೨೫, ೧೨೭, ೧೨೮, ೧೨೯, ೧೩೦, ೧೩೧, ೧೩೨, ೧೩೩, ೧೩೬, ೧೩೭, ೧೩೮, ೧೩೯, ೧೪೦, ೧೪೧, ೧೪೩, ೧೪೪, ೧೪೫, ೧೪೬, ೧೪೭, ೧೪೮, ೧೪೯, ೧೫೦, ೧೫೧, ೧೫೨, ೧೫೪, ೧೫೬, ೧೫೭, ೧೫೮, ೧೫೯, ೧೬೧, ೧೬೨, ೧೬೩, ೧೬೭, ೧೭೭, ೧೭೮, ೧೭೯, ೧೮೦, ೧೮೧, ೧೮೨, ೧೮೩, ೧೮೪, ೧೮೫, ೧೮೭, ೧೮೮, ೧೮೯, ೧೯೩, ೨೦೭, ೨೦೮, ೨೦೯, ೨೧೬, ೨೨೧, ೨೨೭, ೨೨೮, ೨೨೯, ೨೩೧, ೨೩೨, ೨೬೧, ೨೬೨, ೨೬೩, ೨೬೪, ೩೧೬, ೩೪೨, ೩೪೯, ೩೭೮, ೩೮೩, ೩೮೪, ೩೮೫, ೩೯೧, ೪೫೫, ೪೫೬, ೪೫೭, ೪೫೮, ೪೫೯, ೪೬೫, ೪೭೩, ೪೭೪, ೫೧೪, ೫೧೭, ೫೩೩, ೫೫೧, ೫೫೭, ೫೫೮, ೫೫೯, ೫೬೫, ೫೭೦, ೬೦೭, ೬೦೮, ೬೧೫, ೬೨೦, ೬೨೬, ೬೨೭, ೬೨೯, ೬೩೧, ೬೩೨, ೬೩೬, ೬೩೭, ೬೪೧, ೬೪೩, ೬೪೫
ಗಾಂಧಿಯುಗ ೪೫೮
ಗಾಂಧಿ ವಿ.ಬಿ. ೩೬೬
ಗಾಂಧೀವಾದ ೩೪೮
ಗಾಂಧೀವಾದಿ ೬೪
ಗಾಡ್ಗಿಲ್ ಎನ್.ವಿ. ೧೫೫
ಗಾಯಕವಾಡ್ ೧೯೪
ಗಾಯಕವಾಡ್ ಬಿ.ಕೆ. ೫೬, ೭೩, ೨೩೦, ೨೭೯, ೨೮೯, ೨೯೮, ೨೯೯, ೩೩೭, ೩೮೬, ೩೮೭, ೬೧೩, ೬೧೬
ಗಾಯಕ್‌ವಾಡ್ ೫೬, ೭೩
ಗಿರಾಸ್ಯ ೨೬೨, ೨೬೩
ಗೀತಾನಂದ ಬ್ರಹ್ಮಚಾರಿ ೧೪
ಗುಜರಾತ್ ೨೮೨, ೩೮೬
ಗುಜರಾತಿ ೩೦೦
ಗುಜರಾಷ್ಟ್ರ ೫೧೮
ಗುಜ್ಜರ್ ೫೧೮
ಗುಡ್ಡಪ್ಪಾ ೫೬೦

ಗುಪ್ತೆ ಎಸ್. ವಿ ೪೨
ಗುರುಕಾ ಭಾಗ್ ೩೧
ಗುರುವಾಯೂರು ೧೦೮, ೧೫೮, ೧೮೧
ಗುರ್‌ಗಾಂವ್ ೧೦೭
ಗುಲಾಮ್ ಹೈದರ್ ೪೨೪
ಗೆವಿನ್ ಜೋನ್ಸ್ ೧೦೨
ಗೋಖಲೆ ೨೦೦, ೨೧೬, ೪೫೬, ೪೫೮
ಗೋತಮಿ ೪೯೭
ಗೋದಾವರಿ ೧೬೯
ಗೋಪಾಲ ವಿನಾಯಕ ದೇಶ್‌ಮುಖ್ ೩೬೬, ೩೭೫, ೩೭೬
ಗೋರ್ಡನ್ ಆರ್.ಜಿ. ೨೯೦
ಗೋರ್ಡಾನ್ ೨೯೭
ಗೋರ್ಡಾನ್ ಲಿವಿಂಗಸ್ಟನ್ ೩೨೧
ಗೋವಾ ೩೯೧, ೩೯೨
ಗೋವಿಂದ ನಾರಾಯಣ ಧಾರಿಯ ೧೦
ಗೌತಮ ೪೯೫
ಗ್ಯಾಂಗೀ ೧೨೨
ಗ್ರೀಕ್ ೩೩೯, ೪೭೧
ಗ್ರೀಸ್ ೬೪
ಗ್ಲಾಡ್‌ಸ್ಟನ್ ೫೭೩
ಗ್ವಯರ್, ಸರ್ ಮಾರಿಸ್ ೨೬೧, ೨೬೪, ೨೬೫, ೨೬೬, ೨೬೯
ಗ್ವಾಲೆ ೫೨೫

**ಘ**

ಘೋರ್ಪಡೆ ೫೫

**ಚ**

ಚಂಡಿದಾಸ್ ಆರ್. ೫೩೨
ಚಂದಾವರ್ಕರ್ ೪೧೦
ಚಂಬಾರ ೨೩೨
ಚವ್ಹಾಣ್ ೫೬
ಚಾರಿ ೩೭೮
ಚಾರ್ಲ್ಸ್ ಗ್ರೆ ಸರ್ ೪೨೮
ಚಾರ್ಲ್ಸ್ ಹರ್ಕೋರ್ಟ್ ಛೇಂಬರ್ಸ್ ೪೧೭, ೪೨೦
ಚಿಂತಾಮಣಿ ಸಿ.ವೈ. ೬೮, ೭೪
ಚಿತಾಲಿಯಾ ಕೆ.ಜಿ. ೧೫೫
ಚಿದಂಬರಂ ೧೦೭
ಚಿಮನ್ ಲಾಲ್ ಸೆಟಲ್‌ವಾಡ್ ೬೮, ೧೫೯
ಚಿಯರ್ ೯೫
ಚಿಯಾಂಗ್ ಕೈ ಶೇಖ್ ೩೧೨, ೩೫೫
ಚೈನಾ ೩೪೪, ೪೯೧
ಚೀನಾ ೩೫೪, ೩೫೫
ಚುನೀಲಾಲ್ ಮೆಹ್ತಾ ೧೪೫, ೧೫೯
ಚುನ್ನೀಲಾಲ್ ೧೩೮, ೧೩೯
ಚೋಯಿತ್‌ರಾಮ್ ಗಿಡ್ವಾನಿ ಡಾ. ೧೫೯
ಚೌತಿ ಡಾ. ೧೩೮
ಚೌಧುರಿ ೩೩

**ಛ**

ಛೇಂಬರ್ಲಿಯನ್ ೫೭೩

**ಜ**

ಜಗಜ್ಜೀವನ ರಾಮ್ ೫೬೧, ೬೨೩
ಜಗನ್ನಾಥನ್ ೧೩೮
ಜನ್ನಾರ್‌ಕರ ೧೫
ಜಪಾನ್ ೩೧೪, ೪೭೪
ಜಮ್ಮುಕಾಶ್ಮೀರ ೩೪೯
ಜಮ್ಮು-ಲಡಾಖ್ ೩೫೪
ಜಯಕರ್ ಎಂ.ಆರ್. ೬೮, ೭೦, ೭೪, ೯೫, ೯೯, ೧೦೮, ೧೧೪, ೧೧೫, ೧೩೯, ೧೪೧, ೧೪೩, ೧೪೪, ೧೪೫, ೧೫೦, ೧೫೩, ೧೫೪, ೧೫೯, ೪೫೭
ಜಯಪ್ರಕಾಶ್ ನಾರಾಯಣ್ ೩೬೫, ೩೭೩
ಜರ್ಮನ್ ೧೨೧, ೪೧೬
ಜರ್ಮನಿ ೧೯೫
ಜಲಂಧರ್ ೫೬೦
ಜವಹರಲಾಲ ನೆಹರು ೯೯, ೩೩೧, ೩೩೫, ೩೩೬, ೩೪೧, ೩೯೩, ೩೯೪

ಜವಳ್ಕರ್ ೨೬
ಜಾಕ್ಸನ್ ೪೮೦
ಜಾತ ೩೩೧, ೩೩೩
ಜಾಧವ್ ಆರ್.ಎಸ್. ೩೩೭
ಜಾಧವ್ ವಿ. ೬೮, ೯೧
ಜಾನ್ ಮಲ್ಲಿಕ್ ೪೨೪
ಜಾನ್ ಮಾಕೋಮ್ ೪೧೮
ಜಾನ್ ರೋಮರ್ ೪೧೮
ಜಾನ್ಸನ್ ೨೬೨, ೨೬೭, ೨೬೮
ಜಾನ್ ಸೈಮನ್ ೬೧
ಜಾಫರ್ ಹಸನ್ ೨೩೧
ಜಿನ್ನಾ, ಮಹಮದಾಲಿ ೬೮, ೭೦, ೭೪, ೯೧, ೯೫, ೧೦೮, ೨೫೭, ೨೭೦, ೨೭೧, ೩೧೨, ೩೧೩, ೩೧೮, ೩೩೦, ೪೫೭, ೬೧೦, ೬೨೭
ಜೀಸಸ್ ೪೫೬, ೪೫೮, ೪೮೩, ೪೮೪
ಜುಡಿ ೨೮೦, ೨೮೧, ೨೮೭, ೨೮೮, ೨೮೯, ೨೯೦, ೨೯೧, ೨೯೬, ೨೯೮
ಜೆಡಾಮ್ ೪೬೮
ಜೆರೋಮ್ ವಿಲಿಯಮ್ ನ್ಯಾಪ್ ೪೧೫, ೪೧೫, ೪೧೬, ೪೧೭, ೪೧೯, ೪೨೧, ೪೨೨, ೪೩೨
ಜೈನಧರ್ಮ ೪೮೬
ಜೈಭೀಮ್ ೬೦೮, ೬೧೨, ೬೧೩, ೬೧೫
ಜೈಮಿನಿ ೪೮೪, ೪೮೫
ಜೈಸ್ವಾಲ್ ೫೦೫
ಜೋಗೇಂದ್ರನಾಥ ಮಂಡಲ್ ೩೨೬, ೩೨೭, ೪೬೭, ೪೬೮
ಜೋನಾ ಮಲ್ಲಿಕ್ ೪೨೫
ಜೋಷಿ ೩೬, ೭೧, ೯೧
ಜೋಷಿ ಎನ್. ಎಂ. ಡಾ. ೯೬, ೬೧೬
ಜೋಷಿ ಎಸ್.ಎಂ. ೭೦
ಜೋಷಿ ಎ.ಸಿ. ೧೯೫
ಜೋಷಿ ಎಸ್. ಸಿ. ೪೧೦
ಜೋಸೆಫ್ ಪವೆಸ್ಸಿ ೪೨೫
ಜೋಹರ್ ೫೨೧, ೫೨೨
ಜ್ಞಾನೇಶ್ವರಿ ೫೨೯
ಝಕೇರಿಯಾ ಮನಿಯಾರ್ ೪೦


**ಝ**


ಝೂನ್ಸಿ ೧೧೬


**ಟ**


ಟಂಬೇ ೯೧, ೧೧೯
ಟಕ್ಕರ್ ಎ.ವಿ. ೧೩೧, ೧೫೪
ಟರ್ಮೈನರ್ ೪೨೪, ೪೨೭, ೪೨೮, ೪೨೯, ೪೩೪, ೪೩೯, ೪೪೫, ೪೪೬, ೪೪೭, ೪೫೦
ಟಾಲೆಮಿ ೫೨೯
ಟಿನ್ನೆವೇಲಿ ೧೦೭
ಟಿಪ್ನಿಸ್ ಎಸ್.ಜಿ. ೨೩೦
ಟಿಬೆಟ್ ೩೪೪
ಟುಟ್ಟಿಕಾರನ್ ೧೦೮
ಟೆಂಟರ್ಡನ್ ೪೪೭
ಟೆಂಪಲ್‌ವುಡ್ ೬೪೦, ೬೪೬
ಟೊರಾಂಟೋ ೬೪೧
ಟೋರಿಸ್ ೧೧೯
ಟ್ರಿಪ್ಲೋಲೆಮಸ್ ೪೭೧


**ಠ**


ಠಾಕೂರ್ ಸಾಹೇಬ್ ೨೬೧, ೨೬೨, ೨೬೩, ೨೬೪, ೨೬೫, ೨೬೬, ೨೬೭, ೨೬೮, ೨೬೯


**ಡ**


ಡಾಂಗೆ ಎಸ್.ಎ. ೩೬೬, ೩೭೫, ೩೭೬, ೩೭೭, ೩೭೮, ೩೭೯
ಡಾಕ್ ೨೩೦
ಡಾನ್ ೬೪೭, ೬೪೯
ಡೆನ್ಮಾನ್ ೨೬೬, ೨೬೭, ೪೨೩, ೪೫೦
ಡೆನ್ಮಾರ್ಕ್ ೧೦೦
ಡೆಮಾಫ್ಲೂನ್. ೪೭೧
ಡೆಮಿತರ್ ೪೭೧
ಡೆಲ್ಲಿ ೪೬೭

ಡೆಸ್ಕರೆಂಟ್ಸ್ ೩೩೯
ಡೋಲಾಸ್ ೫೫

**ತ**

ತಲ್ಬಡರು ೩೦೩
ತಲ್ವಾರರು ೩೦೩
ತಿರುವಣ್ಣಾಮಲೆ ೫೬೦
ತಿಲಕ್ ೨೧೬, ೪೫೮, ೪೫೬, ೪೭೩
ತುರ್ಕಿಸ್ಥಾನ ೨೧೬
ತೇಜ್ ಬಹದ್ದೂರ್ ಸಪ್ರು ೭೦, ೯೬, ೯೯, ೧೪೦, ೧೪೧, ೧೪೨, ೧೪೪, ೧೫೫, ೧೫೭, ೧೫೯, ೨೬೧, ೨೬೪
ತ್ರಿಚೂರು ೧೭೬
ತ್ರಿಪುರಾ ೨೬೧
ತ್ರಿವೇಂದ್ರಮ್ ೫೬೦

**ಥ**

ಥಾಣೆ ೪೨, ೪೨೨, ೪೨೭
ಥಾನಾ ೨೩೦
ಥಾನೆ ೪೧, ೪೨, ೨೯೨, ೨೯೩
ಥಾಮಸ್ ಸ್ಟ್ರೇಂಜ್ ೪೩೯, ೪೪೦, ೪೫೧
ಥೇರೀಗಾಥ ೫೦೩, ೫೦೪

**ದ**

ದತ್ತ ಡಾ. ೧೦೫, ೩೮೪
ದತ್ತಾತ್ರೇಯ ರಾಮಚಂದ್ರ ಗರ್ಪುರ ೩೬೭
ದಪೋಲಿ ೪
ದರ್ಬಾರ್ ವೀರಾವಾಲ್ ೨೬೨, ೨೬೩
ದಲ್ವಿ ಡಿ.ಜಿ. ೧೩೮, ೧೫೯
ದಾದರ್ ೧೮೫, ೨೦೬, ೨೩೦, ೨೯೬, ೩೨೬, ೩೬೬, ೩೭೩, ೪೫೪, ೪೭೫, ೫೧೩, ೬೧೯
ದಾದಾ ಮಹಾರಾಜ್ ೪೫೮
ದಾವಂಡಿ ೨೯೪, ೨೯೮
ದಾಸ್‌ಗಾಂವ್ ೧೯, ೨೦
ದಾಸ್ ಪಿ.ಆರ್. ೩೬೪
ದಿನಕರ್ ಗೋಪಾಲ ದೇವ್ ೪೨೧
ಥಿಯಾ ೫೫
ದಿಯೋಲಾಲಿ ೧೧೬
ದಿಲ್ಲಿ ೪೬೮
ದಿವಾಕರ ಜೋಷಿ ೧೮, ೩೬
ದಿವಾಣೀ ೪೨೪, ೪೨೫, ೪೨೭, ೪೩೪, ೪೩೭, ೪೪೪, ೪೪೫, ೪೪೭, ೪೪೯, ೪೫೨
ದಿವಾನ್ ಬಹದ್ದೂರ್ ಆರ್ ಶ್ರೀನಿವಾಸನ್ ೭೫
ದುಷ್ಟರಾವ್ ೫೨೧
ದೆಹಲಿ ೫೫, ೫೫, ೧೧೬, ೧೧೭, ೩೧೧, ೩೨೬, ೩೪೪, ೩೬೫, ೩೮೦, ೩೯೪, ೩೯೫, ೩೯೭, ೪೪೮, ೫೪೯, ೫೭೩, ೫೭೮, ೫೮೦, ೫೯೪
ದೇವದಾಸ್ ಗಾಂಧಿ ೧೦೩, ೧೪೮, ೧೫೪, ೧೫೯, ೧೭೯
ದೇವಧರ್ ಜಿ.ಕೆ. ೧೩೮, ೧೫೪, ೧೫೯
ದೇವರ್ ೪೩೧
ದೇವರಾವ್ ನಾಯಕ ೪೯, ೧೦೮, ೧೬೭
ದೇವ್‌ರೂಕರ್ ಬಿ.ಜೆ. ೩೨೪
ದೇಶಪಾಂಡೆ ಡಾ. ೩೭೬
ದೇಶಮುಖ್ ಡಾ. ೧೩೮, ೩೭೮
ದೇಸಾಯಿ ಎಂ.ಎಸ್. ೩೦೦
ದೇಸಾಯಿ ಎಂ.ಜೆ. ೨೪೯
ದೊರೆಸ್ವಾಮಿ ವಿ. ೩೮೭, ೩೮೮
ದೋಂಡಿಬಾ ರುಂಕಾಂಬೆ ೧೮೬

**ಧ**

ಧಮ್ಮ ೪೮೪, ೪೮೫
ಧಮ್ಮದೀಕ್ಷಾ ೩೮೨
ಧಮ್ಮಪದ ೪೯೧
ಧರ್ಮಣ್ಣ ಡಾ. ೩೨೪
ಧರ್ಮಲಿಂಗಂ ೧೩೮
ಧಾರವಾಡ ೧೦೮, ೨೮೪, ೨೯೧
ಧಿಯೋರುಕರ್ ಬಿ.ಜೆ. ೧೫೯
ಧೀರೇಂದ್ರ ಮೋಹನ ದತ್ತಾ ೩೮೪
ಧುಲಿಯಾ ೨೩೩

ಧ್ಯಾನೇಶ್ವರಿ ೫೧೯

## ನ

ನಂದಕೋವಾ ೪೯೭
ನಗರ್‌ಕರ್ ೧೭೪
ನಜ್ಬರಾನ್ ೨೮೨
ನಜೀರ್ ೪೨೨
ನಟರಾಜನ್ ೧೩೮
ನಟರಾಜನ್ ಕೆ. ೧೫೪, ೧೫೯
ನವದೆಹಲಿ ೧೧೯, ೨೯೦, ೩೧೧, ೩೨೭, ೩೨೮, ೩೩೧, ೩೩೫, ೩೩೭, ೩೩೮, ೩೪೫, ೩೬೧, ೩೬೪, ೩೬೫, ೩೬೬, ೩೬೮, ೩೯೪, ೫೩೧, ೫೪೩, ೫೪೫, ೫೪೯, ೫೬೯, ೫೭೨, ೫೭೯, ೫೮೭
ನಳಂದ ೪೯೨
ನಾಗಪುರ ೩೯೬, ೩೯೭, ೪೬೭, ೫೩೨, ೫೬೦, ೬೩೩
ನಾಗಪ್ಪ ಚೆಟ್ಟಿ ೪೫೩, ೪೫೧
ನಾಗಪ್ಪಯ್ಯ ಚೆಟ್ಟಿ ೪೫೧
ನಾಗಿನ್‌ದಾಸ್ ಟಿ ಮಾಸ್ತರ್ ೫೮೪, ೫೮೫
ನಾಗ್ಪುರ ೬೭, ೧೦೭, ೩೮೬
ನಾಟಿಂಗ್‌ಹ್ಯಾಮ್ ೪೩೨
ನಾದರಾ ಬೇಗಂ ೪೩೧
ನಾಮಕಲ್ ೫೬೦
ನಾಮ್‌ದೇವ್ ೧೪
ನಾಯಕ್ ಜಿ.ವಿ. ೫೮
ನಾಯಕ್ ಡಿ.ವಿ. ೩೯
ನಾರಾಯಣ ಬುವಾ ಕೆಡ್ಗಾಂವ್ಕರ್ ೪೫೮
ನಾರಾಯಣ ಮಹಾರಾಜ್ ೪೫೯
ನಾರಾಯಣ ಸಡೋಬಾ ಕಜ್ರೋಲ್ಕರ್ ೩೬೭, ೩೭೮
ನಾರ್ಮಿನ್ ೯೨
ನಾಸಿಕ್ ೪೦, ೧೦೮, ೧೧೬, ೧೧೯, ೧೩೬, ೧೬೭, ೧೬೮, ೧೬೯, ೧೭೦, ೧೭೨, ೧೭೬, ೧೭೭, ೧೭೮, ೧೮೫, ೧೮೭, ೧೮೮, ೨೧೩, ೨೩೦, ೨೮೪, ೨೯೫
ನಿಗ್ರೋ ೯೨, ೩೨೪, ೫೧೬
ನಿಜಾಂ ೩೨೮, ೩೩೦
ನಿಜ಼ಾಮತ್ ೪೪೯
ನಿಮಾಂಡಾರ್ಕರ್ ೧೫
ನಿರ್ಮಲ್ ಲಿಂಬಾಜಿ ಗಂಗ್‌ವಾನೇ ೧೪
ನೀಲಂ ಸಿಂಗ್‌ಗಿಲ್ ೩೮೬
ನೀಲಕಂಠ ಬಾಬುರಾವ್ ಪಾರುಲೇಕರ್ ೩೬೭
ನೆಪೋಲಿಯನ್ ೪೫೬
ನೇಪಾಳ ೩೯೭
ನ್ಯೂಯಾರ್ಕ್ ೧೯೪, ೧೯೯

## ಪ

ಪಂಜಾಬ್ ೮೭, ೮೮, ೯೧, ೧೦೫, ೧೧೦, ೧೧೯, ೧೨೪, ೧೩೪, ೧೪೧, ೧೫೨, ೨೧೮, ೨೧೯, ೨೨೦, ೨೨೨, ೨೨೩, ೨೨೪, ೨೨೫, ೩೨೫, ೩೨೯, ೩೩೧, ೩೩೨, ೩೩೩, ೩೩೪, ೩೩೬, ೩೩೭, ೩೫೬, ೩೫೭, ೫೬೦, ೫೬೯, ೫೯೭, ೬೭೯
ಪಂಪಸ್ ಹೆಚ್. ಸಿ. ಡಾ. ೧೯೫
ಪಗನ್ ಧರ್ಮ ೫೧೭
ಪಟವರ್ಧನ್ ೧೮೮
ಪಟ್ಟಾಭಿರಾಮಯ್ಯ ಡಾ. ೪೭೩
ಪತಂಜಲಿ ೫೦೪
ಪತಿತಪಾವನ ದಾಸ್ ೧೬೭
ಪದ್ಮಪುರಾಣ ೫೨೨
ಪರಮೇಶ್ವರ ೪೮೩
ಪರೆಲ್ ೫೬೦
ಪರ್‍ಯಾ ೮೩, ೨೨೭
ಪರ್‌ಮಾರ್ ಜಿ.ಟಿ. ೩೮೬
ಪರ್ವಾರಿ ೫೨೯
ಪವಾರ್ ಎ.ಜಿ. ೩೮೬, ೩೮೮, ೩೯೦

ಪಾಂಡುರಂಗ ಭಾಸ್ಕರ ಶಾಸ್ತ್ರಿ ೩೦
ಪಾಂಡುರಂಗ ರಘುನಾಥ ಧಾರಪ ೩೫
ಪಾಂಡುರಂಗ ರಾಮಚಂದ್ರ ೪೨೧, ೪೨೨, ೪೫೩
ಪಾಂಡುರಂಗ ವಾಮನ ಧರಪ್ ೪೧
ಪಾಕಿಸ್ತಾನ ೩೧೩, ೩೧೭, ೩೨೮, ೩೨೯, ೩೩೧, ೩೩೨, ೩೩೫, ೩೫೪, ೫೫೭, ೫೬೩, ೫೬೪, ೫೬೮, ೬೨೨
ಪಾಟಿಯಾಲ ೬೮, ೭೦
ಪಾಟೀಲ್ ಎಸ್.ಕೆ. ೫೮೫, ೬೧೬
ಪಾಟೀಲ್ ಹೆಚ್. ಕೆ. ೩೭೪
ಪಾಟ್ನಾ ೧೧೬, ೧೧೭, ೩೭೩, ೪೩೧
ಪಾಣಿನಿ ೫೦೪
ಪಾತ್ರೋ ಎ.ಪಿ. ಸರ್ ೬೮
ಪಾದ್ರಿ ೪೯೨
ಪಾಮರ್‌ಸ್ಟನ್ ೫೭೮
ಪಾರುಲ್‌ಕರ್ ಎನ್.ಬಿ. ೩೭೮
ಪಾರೇಲ್ ೨೦೨, ೩೬೭
ಪಾರೇಶ್ ೧೯೭
ಪಾರ್ಸಿ ೬೨, ೨೭೦, ೪೦೧, ೪೦೨, ೪೫೮
ಪಾಲ್ ೯೧
ಪಾಲ್ ಕೆ.ಟಿ. ೬೮
ಪಾಲ್ ಡುಬಾಯಿಸ್ ೩೨೪
ಪೀಟರ್ ಗ್ರಾಂಟ್ ೪೧೭
ಪೀಲ್ ೭೦
ಪುಜ್ಜಣ ೪೯೮
ಪುರುಷೋತ್ತಮದಾಸ್ ೧೩೮
ಪುರುಷೋತ್ತಮದಾಸ್ ಠಾಕೂರ್ ದಾಸ್ ೧೫೫, ೧೫೯
ಪುರುಷೋತ್ತಮ ಪ್ರಭಾಕರ ಜೋಷಿ ೧೦
ಪೂನಾ ೧೬, ೩೧, ೧೨೮, ೧೪೩, ೧೪೪, ೧೪೯, ೧೫೦, ೧೫೬, ೨೦೭, ೨೧೦, ೨೩೦, ೩೪೪, ೪೨೧, ೪೨೨, ೪೪೮, ೪೬೧, ೫೫೨, ೬೦೬, ೬೦೭, ೬೦೮, ೬೦೯, ೬೧೦, ೬೧೧, ೬೧೨, ೬೧೪, ೬೨೨
ಪೃಥ್ವೀಸಿಂಗ್ ೫೬೧
ಪೆಥಿಕ್ ಲಾರೆನ್ಸ್ ೫೪೩, ೫೪೯, ೫೬೬, ೫೭೯, ೫೮೧, ೫೯೫, ೬೨೪, ೬೨೫, ೬೨೮, ೬೪೩
ಪೆನುಗೊಂಡ ೫೬೦
ಪೆಪ್ಸು ೩೮೬
ಪೊಲ್ಲಾಚಿ ೫೬೦
ಪೋರ್ಚುಗೀಸರು ೩೯೧, ೩೯೨
ಪೋರ್ಟ್ ೪೨೯
ಪೌರವರ್ದಿ ೫೨೯
ಪ್ಯಾರಿಸ್ ೬೧೭
ಪ್ಯಾರೇಲಾಲ್ ೧೪೩, ೧೬೧, ೩೮೫
ಪ್ಯಾಲೆಸ್ಟೇನ್ ೩೦೮
ಪ್ರಕಾಶಂ ಟಿ. ೧೩೮, ೧೫೯
ಪ್ರತಾಪಸಿಂಹ ೫೨೧
ಪ್ರಧಾನ್ ಆರ್.ಜಿ. ೨೧೩
ಪ್ರಧಾನ್ ಡಿ.ವಿ. ೨೪
ಪ್ರಭಾಕರ ರೋಹಂ ೨೩೦
ಪ್ರಭಾಶಂಕರ ಪಟ್ಟಾಣಿ ೯೮, ೯೯
ಪ್ರಸೇನಜಿತ ೪೯೮, ೫೦೦
ಪ್ರಾಟೆಸ್ಟೆಂಟ ೩೯೬
ಪ್ರೆಸಡೆನ್ ೧೨೧, ೧೨೨
ಪ್ರೇಮ್‌ತಾಯಿ ೧೮೫
ಪ್ಲಾಸೀ ೫೭೬


## ಫ


ಫಿರೋಜ್ ಷಾ ಮೆಹ್ತಾ ೧೯೯, ೨೦೦, ೨೦೧
ಫ್ಯಾಸಿಸಂ ೩೪೨, ೪೫೯
ಫ್ರಾನ್ಸ್ ೨೧, ೭೧, ೩೪೨, ೪೨೯
ಫ್ರಾನ್ಸಿಸ್ ವ್ಯಾಟ್ಸನ್ ೩೮೩
ಫ್ರೆಂಚ್ ೪, ೧೯೫
ಫ್ರೆಡರಿಕ್ ಸ್ಕೈಸ್ ೧೭೨
ಫ್ರೇಜ಼ರ್ ವೈಟಾನ್ ೬೪೪
ಫ಼ಜಲುಲ್ ಹಕ್ ೬೮

ಫ್ರೋ ೩೦೮, ೩೦೯
ಫ್ಲೋರ್ಟ್ ವಿಲಿಯಮ್ಸ್ ೪೨೬, ೪೨೬, ೪೩೫, ೪೩೭, ೪೪೧, ೪೪೫

## ಬ

ಬಂಗಾಳ ೮೭, ೧೦೫, ೧೧೦, ೧೧೯, ೧೨೦, ೧೨೩, ೧೩೪, ೧೪೧, ೧೫೨, ೨೧೦, ೩೨೬, ೩೨೭, ೩೩೧, ೩೫೬, ೩೫೭, ೪೨೬, ೪೨೮, ೪೩೭, ೪೪೫, ೪೪೬, ೪೫೧, ೪೬೭, ೫೫೭, ೫೬೯, ೫೯೭, ೫೯೮, ೬೦೯, ೬೧೯, ೬೨೦, ೬೨೪, ೬೨೫, ೬೩೫, ೬೩೬
ಬಂಗಾಳಿ ೬೨೦
ಬಂಚೂರಾಮ್ ರಾಯ್ ೪೨೪
ಬಕಾಲೆ ಆರ್.ಆರ್. ೧೫೪
ಬಖಲೆ ೧೧೯
ಬನಾರಸ್ ೧೦೭
ಬಬೂಲ್ ರಣ್‌ಜೀ ೪೨೨
ಬಯೂತ ೨೬೩
ಬರೂಚ ಬಿ.ಎಫ್. ೧೫೯
ಬರೋಡ ೬೮, ೭೩, ೯೧, ೧೯೩, ೧೯೪, ೧೯೫, ೧೯೬, ೧೯೭, ೧೯೮, ೧೯೯
ಬರ್ಕಿನ್ ಹೆಡ್ ೫೮
ಬರ್ಡೋಲಿಯ ೫೩, ೯೮
ಬರ್ಮಾ ೫೫, ೭೮, ೩೮೧, ೬೧೨
ಬರ್ರೋ ೪೩೦
ಬರ್ಲಾ ಜೆ.ಟಿ. ೧೦೦
ಬರ್ಲಿನ್ ೧೨೨, ೨೨೯
ಬಲ್ಗೇರಿಯಾ ೬೪
ಬಾಂಬೆ ೪೧, ೧೨೧, ೧೨೮, ೧೫೫, ೧೮೭, ೨೫೪, ೨೮೯, ೨೯೪, ೩೦೦, ೩೦೭, ೩೧೮, ೩೭೦, ೪೦೧, ೪೦೩, ೪೦೪, ೪೦೬, ೪೦೮, ೪೧೦, ೪೧೩, ೪೧೫, ೪೧೬, ೪೧೭, ೪೧೮, ೪೧೯, ೪೨೧, ೪೨೬, ೪೨೭, ೪೩೦, ೪೩೩, ೪೩೪, ೪೩೫, ೪೩೬, ೪೪೧, ೪೪೨, ೪೪೩, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೩, ೪೫೪, ೪೬೭, ೪೭೫, ೫೧೩, ೫೧೯, ೫೫೭, ೫೬೦, ೫೬೮, ೫೮೦, ೫೮೩, ೫೮೪, ೫೮೬, ೫೮೮, ೫೯೭, ೫೯೮, ೬೦೬, ೬೦೮, ೬೦೯, ೬೧೦, ೬೧೨, ೬೧೩, ೬೧೪, ೬೧೬, ೬೧೯, ೬೨೪, ೬೨೮, ೬೩೩, ೬೩೫, ೬೪೧, ೬೪೩, ೬೪೫, ೬೪೭
ಬಾಂಬೆ ಕ್ರಾನಿಕಲ್ ೧೦, ೪೧, ೧೨೧, ೧೫೫, ೩೧೧, ೬೧೦, ೬೧೨, ೬೪೧, ೬೪೩, ೬೪೫
ಬಾಟಕಿ ೨೯೪, ೨೯೬, ೨೯೮
ಬಾನ್ಸೋದೆ ಜೆ.ಎಸ್. ೩೮೬
ಬಾಪೂ ಗುಣೆಸ್ ೪೨೨, ೪೨೨, ೪೨೩, ೪೩೩, ೪೪೮
ಬಾಪೋ ಗುನ್ನೆಸ್ ೪೧೯
ಬಾಪು ಗುಣ್ಣೆಸ್ ೪೩೩
ಬಾಪುರಾವ್ ಜಗತಾಪ್ ೩೭೭
ಬಾಪು ಸಾಹೇಬ್ ರಾಜ್‌ಭೋಗ್ ೩೪೫
ಬಾಬುರಾವ್ ಗಾಯಕ್‌ವಾಡ್ ೫೮, ೧೬೭
ಬಾಬೂ ರಾಜೇಂದ್ರ ಪ್ರಸಾದ್ ೧೩೮, ೧೪೩, ೧೪೪, ೧೫೪, ೧೫೯, ೩೪೧
ಬಾ.ಮಾವ್ ಡಾ. ೫೫
ಬಾಲು ನಿಕಾಲ್ಜೆ ಪಿ. ೧೩೮
ಬಾಲು ಪಿ. ೧೩೮, ೧೪೪, ೧೫೪, ೧೫೯
ಬಾಲೂ ೧೩೩
ಬಾವುರಾವ್ ಗಾಯಕ್‌ವಾಡ್ ೧೧೯, ೧೮೫
ಬಾವ್ಡೇಕರ್ ಆರ್.ಎಸ್. ೪೬
ಬಾವ್‌ರಾವ್ ಗಾಯಕ್‌ವಾಡ ೧೦೮
ಬಿಕನೇರ್ ೬೮, ೭೦, ೧೦೧
ಬಿಜಾಪುರ ೨೮೪, ೨೯೧
ಬಿರ್ಲಾ ೧೩೮, ೧೪೩, ೧೪೫, ೧೭೦
ಬಿರ್ಲಾ ಜಿ.ಡಿ. ೧೪೪, ೧೫೪, ೧೫೯, ೧೭೯
ಬಿಸ್ವಾಸ್ ೧೫೪

ಬಿಹಾರ ೧೧೦, ೧೧೬, ೧೩೪, ೧೪೧, ೧೫೨, ೨೧೦, ೩೪೪, ೪೩೭, ೪೭೭, ೪೮೧, ೫೫೭, ೫೯೭

ಬುದ್ಧ ೨೭೪, ೨೭೫, ೩೪೨, ೩೮೨, ೩೯೭, ೪೮೩, ೪೮೪, ೪೮೫, ೪೮೬, ೪೯೦, ೪೯೧, ೪೯೬, ೪೯೭, ೪೯೮, ೫೦೦, ೫೦೨, ೫೧೦, ೫೨೬

ಬುಸಾವಲ್ ೧೧೬

ಬೆಂಗಳೂರು ೩೮೧

ಬೆರಾರ್ ೪೬೭

ಬೆರ್ವಿಕ್ ೪೩೦

ಬೆಹಾದೆರ್ ಬೇಗ್ ೪೩೧

ಬೆಳಗಾಮ್ ೪೦೧

ಬೇರಾರ್ ೧೪೧, ೩೮೭

ಬೇವರಾಲಿ ನಿಕೋಲಸ್ ೩೧೫

ಬೈಕುಲ ೫೬೦

ಬೈಬಲ್ ೩೦೮, ೪೫೭, ೪೭೨

ಬೈರಾಂಜೀ ಜೀಜೀಭೋಯ್ ೨೭೦

ಬೊಂಬಾಯಿ ೧೪, ೧೫, ೧೯, ೩೦, ೩೪, ೩೭, ೩೯, ೪೧, ೪೨, ೪೯, ೬೧, ೬೨, ೬೩, ೬೯, ೮೮, ೯೪, ೯೭, ೯೯, ೧೧೦, ೧೨೨, ೧೨೮, ೧೨೯, ೧೩೪, ೧೪೧, ೧೪೪, ೧೫೪, ೧೫೫, ೧೬೭, ೧೭೦, ೧೭೧, ೧೭೫, ೧೭೬, ೧೮೫, ೧೯೩, ೧೯೫, ೧೯೮, ೧೯೯, ೨೦೧, ೨೦೪, ೨೦೬, ೨೦೭, ೨೧೭, ೨೨೧, ೨೨೨, ೨೨೯, ೨೩೦, ೨೩೨, ೨೫೭, ೨೫೮, ೨೫೯, ೨೬೨, ೨೬೩, ೨೬೪, ೨೭೭, ೨೯೭, ೩೦೭, ೩೦೮, ೩೧೧, ೩೩೯, ೩೪೪, ೩೫೭, ೩೬೫, ೩೬೬, ೩೭೬, ೩೮೧, ೩೮೬, ೩೯೨, ೩೯೬, ೩೯೭

ಬೋಯಿವಾಡ ೩೬೭

ಬೋವಾರಿಸ್ ೫೨೫

ಬೋಸಾಂಕ್ವೆ ೪೩೫

ಬೌದ್ಧ ೩೩೯, ೪೯೧, ೪೯೩, ೪೯೪, ೫೦೪, ೫೦೭, ೫೨೬

ಬೌದ್ಧತತ್ತ್ವ ೪೯೧, ೪೯೯

ಬೌದ್ಧದರ್ಮ ೨೭೩, ೨೭೪, ೨೭೫, ೩೪೨, ೩೪೪, ೩೮೧, ೩೮೨, ೩೯೭, ೪೭೫, ೪೮೩, ೪೮೪, ೪೮೬, ೪೮೭, ೪೮೮, ೪೮೯, ೪೯೦, ೪೯೧, ೪೯೨, ೪೯೩, ೪೯೪, ೪೯೯, ೫೦೦, ೫೦೩, ೫೦೯, ೫೧೦, ೫೨೬, ೫೨೮, ೫೩೧, ೫೩೨, ೫೩೭

ಬೌದ್ಧಭಿಕ್ಷು ೫೨೬

ಬೌದ್ಧಮತ ೨೭೩, ೩೪೪, ೩೮೧, ೩೯೫, ೩೯೬, ೩೯೭, ೪೭೪, ೫೨೬

ಬೌರ್ನ್ ೪೨೯

ಬ್ಯಾಲಾರ್ಡ್ ೫೫

ಬ್ರಿಟನ್ ೬೩, ೬೮, ೬೯, ೭೦, ೭೩, ೯೨, ೯೬, ೧೦೦, ೧೦೯, ೧೧೩, ೧೧೪, ೧೧೯, ೧೨೧, ೧೩೧, ೧೪೪, ೧೬೧, ೪೨೬, ೪೪೩, ೪೫೧, ೫೧೨, ೫೧೭, ೫೬೧, ೫೬೪, ೫೭೯, ೫೯೪, ೬೪೬, ೬೪೭

ಬ್ರಿಟಿಷ್ ೪, ೪೪, ೫೧, ೬೧, ೬೩, ೬೮, ೬೯, ೭೦, ೭೧, ೭೨, ೭೩, ೯೨, ೯೫, ೯೬, ೧೧೫, ೧೨೧, ೧೨೨, ೧೨೮, ೧೪೬, ೧೫೧, ೧೮೩, ೧೮೮, ೨೧೨, ೨೭೬, ೨೭೭, ೨೮೧, ೨೮೮, ೩೦೫, ೩೦೬, ೩೦೮, ೩೧೨, ೩೧೪, ೩೧೬, ೩೧೮, ೩೨೫, ೩೨೬, ೩೪೮, ೩೫೦, ೩೫೨, ೩೭೫, ೩೯೨, ೪೨೧, ೪೩೬, ೫೪೩, ೫೪೯, ೫೬೧, ೫೬೨, ೫೬೬, ೫೭೬, ೫೭೭, ೫೮೭, ೫೯೬, ೬೦೬, ೬೦೭, ೬೦೮, ೬೦೯, ೬೧೧, ೬೨೦, ೬೩೩, ೬೪೪

ಬ್ರೂಮ್ ಫೀಲ್ಡ್ ೪೨

ಬ್ರೆಟ್ ೪೭೯, ೪೮೦

ಬ್ರೆಹೋನ್ ೫೨೫

ಬ್ರೈಲ್ಸ್‌ಫೋರ್ಡ್ ೩೮೪

ಬ್ರೌನ್ ಎಲ್.ಎನ್. ೧೭೮

ಬ್ರ್ಯಾಡ್‌ಫೋರ್ಡ್ ೪೧೮

ಬ್ರ್ಯಾಡ್‌ಲಾಫ್ ೪೭೯
ಬ್ಲಾಕ್‌ಬರ್ನ್ ೪೭೯
ಬ್ಲಾಕ್‌ಸ್ಟೋನ್ ೪೩೩

**ಭ**

ಭಂಡಾರೆ ಆರ್.ಡಿ. ೩೮೬
ಭಂಡಾರ್ಕರ್ ಡಾ. ೫೨೮
ಭಗವದ್ಗೀತೆ ೨೧, ೩೪೨, ೪೮೫, ೪೮೬, ೪೮೭
ಭಟ್ ಕೆ. ೧೪೯
ಭಟ್ನಾಗರ್ ಆರ್. ಈ ೨೩೦
ಭಯಾತ್ ೨೬೨
ಭವಲ್‌ಪುರ ೩೩೨
ಭಾವುರಾವ್ ಗಾಯಕ್‌ವಾಡ್ ಕಾಡ್ರೇಕರ್ ೪೯
ಭಾಸ್ಕರ್‌ರಾವ್ ೬೮
ಭಿಕ್ಕುಸಂಘ ೪೯೧
ಭೋಜರಾಜ ೩೨
ಭೋಪಾಲ್ ೭೦, ೭೪
ಭೋಲೆ ಎಸ್.ಕೆ. ೩, ೨೩೦

**ಮ**

ಮಂಡ್ಲಿಕ್ ೨೪
ಮಡಗಾಂವಕರ್ ೧೩೮, ೧೫೯
ಮದನ್ ಮೋಹನ್ ಮಾಳವೀಯ ೯೫, ೯೮, ೧೦೦, ೧೦೨, ೧೦೩, ೧೧೪, ೧೨೭, ೧೨೮, ೧೩೮, ೧೩೯, ೧೪೦, ೧೪೧, ೧೪೪, ೧೪೫, ೧೫೦, ೧೫೧, ೧೫೨, ೧೫೪, ೧೫೫, ೧೫೮, ೧೭೮, ೧೭೯, ೧೮೨, ೨೨೭
ಮದ್ರಾಸು ೧೪, ೪೩, ೪೬, ೬೨, ೮೧, ೮೩, ೧೦೭, ೧೧೦, ೧೨೧, ೧೨೩, ೧೩೪, ೧೪೧, ೧೫೨, ೧೫೩, ೧೭೮, ೧೭೯, ೨೧೦, ೨೬೦, ೩೧೭, ೩೫೩, ೩೫೬, ೩೫೭, ೩೮೬, ೩೮೭, ೩೯೧, ೪೨೫, ೪೩೫, ೪೩೬, ೪೩೯, ೪೪೦, ೪೪೨, ೪೪೫, ೪೫೧, ೪೬೭, ೪೭೩, ೪೭೫, ೫೫೭, ೫೬೦, ೫೬೮, ೫೮೬, ೫೯೭
ಮಧುಸೂಧನ ವ್ಯಾಸ್ ೩೭೮
ಮನಿಭುವನ್ ೪೯, ೯೭
ಮನು ೫೦೨, ೫೦೫, ೫೦೬, ೫೦೭, ೫೦೮, ೫೦೯, ೫೧೦, ೫೧೬, ೫೧೯, ೫೨೩
ಮನುಭವನ ೫೭
ಮನುಸ್ಮೃತಿ ೨೪, ೨೯, ೨೧೪, ೫೧೯, ೫೨೩
ಮನ್ನಾರ್‌ಗುಡಿ ೫೬೦
ಮನ್ಮಾಡ್ ೧೧೬
ಮರಾಠ ೨೮, ೪೪, ೨೮೧, ೨೮೨, ೨೮೪, ೩೭೯, ೪೬೧, ೪೬೯, ೪೭೦, ೫೨೦, ೫೨೧, ೫೨೨
ಮರಾಠವಾಡ ೫೧೧
ಮರಾಠಿ ೨೬, ೨೯, ೩೦೦, ೩೭೦, ೩೭೧, ೩೭೫, ೩೭೬, ೩೭೮, ೩೯೬, ೪೨೧, ೪೨೨, ೪೬೦, ೫೧೧, ೫೩೧
ಮರಿಯಪ್ಪ ಪಿ. ವೈದಿಲಿಂಗ ೪೫
ಮಲಬಾರ್ ೧೫೮, ೧೯೩
ಮಲಬಾರ್‌ಹಿಲ್ ೯೭
ಮಲಯಾ ೬೧೨
ಮಲಿಕ್ ೧೮೫
ಮಲ್ಲಿಕಾ ೪೯೮, ೫೦೦
ಮಹದ್ ೩, ೬, ೭, ೮, ೧೦, ೧೧, ೧೨, ೧೩, ೧೪, ೧೫, ೧೬, ೧೯, ೨೦, ೨೭, ೨೯, ೩೦, ೩೧, ೩೨, ೩೪, ೩೬, ೩೭, ೩೮, ೩೯, ೪೧, ೪೨, ೪೩, ೪೪, ೪೫, ೪೯, ೯೯, ೧೩೬, ೧೮೭
ಮಹದೇವ ದೇಸಾಯಿ ೫೬, ೧೨೬
ಮಹಮದ್ ಇಕ್ಬಾಲ್ ೧೦೦
ಮಹಮದೀಯ ೨೧, ೪೩, ೪೪, ೧೩೨, ೨೧೮
ಮಹಮ್ಮದ್ ೪೮೩, ೪೮೪
ಮಹರ್ ೧೪, ೧೭೮, ೨೨೨, ೨೭೭, ೨೭೯, ೨೮೭, ೨೮೮, ೨೯೦, ೨೯೧, ೨೯೬, ೨೯೭, ೫೧೮, ೫೧೯, ೫೨೦, ೫೨೧, ೫೨೨, ೫೨೩, ೫೨೫,

೫೨೬, ೫೨೮, ೫೨೯, ೫೩೦
ಮಹರ್‌ವಾಡ ೫೨೩
ಮಹಲ್‌ಕಾರಿ ೨೮೪
ಮಹಾಡ್ ೩೩
ಮಹಾದೇವ ಅಬಾಜಿ ಕಾಮ್ಲೀ ೧೪
ಮಹಾದೇವ ದೇಸಾಯಿ ೧೪
ಮಹಾಬೋಧಿ ೩೮೨, ೩೯೬, ೪೯೪
ಮಹಾಭಾಷ್ಯ ೫೦೪
ಮಹಾರ್ ೫, ೨೨೨, ೨೭೬, ೨೭೭, ೨೮೦, ೨೮೧, ೨೮೪, ೨೯೧, ೨೯೨, ೨೯೩, ೨೯೫, ೨೯೭, ೨೯೮, ೩೭೯, ೨೭೬, ೨೭೬, ೨೮೦, ೨೮೬, ೨೮೭, ೨೮೮, ೨೮೯, ೨೯೧, ೨೯೨, ೨೯೩, ೨೯೪, ೨೯೫, ೨೯೬, ೨೯೮
ಮಹಾರಾಷ್ಟ್ರ ೫೧೮, ೫೧೯, ೫೨೦
ಮಾಂಗರು ೧೪, ೧೭೮, ೨೭೮, ೨೭೯, ೨೯೪, ೨೯೬, ೨೯೭, ೨೯೮, ೨೯೯, ೫೧೯, ೫೨೧, ೫೨೯
ಮಾಂಜೆ ಡಾ. ೨೧೭
ಮಾಂಟಿತ್ ೪೮೦
ಮಾಂಟೆಗ್ಯೂ ಚೆಲಮ್ಸ್‌ ಫೋರ್ಡ್ಸ್‌ ೨೧೦, ೩೭೭, ೪೨೯, ೪೩೦
ಮಾಥೂರ್‌ದಾಸ್ ವಾಸನ್ ಜೀ ೧೩೯, ೧೪೧, ೧೫೫
ಮಾಧವೀ ೩೦೧
ಮಾಮ್ಲತ್ತದಾರ ೨೮೪
ಮಾರಿಸ್‌ಗ್ವಯರ್ ೨೬೧
ಮಾರಿಸ್ ಬ್ರೌನ್ ೩೮೩
ಮಾರ್ಕಂಡ ದತ್ತಾತ್ರೇಯ ವೈದ್ಯ ೩೦, ೩೦, ೩೬೭
ಮಾರ್ಕಿಸ್ ಕಾರ್ನ್‌ವಾಲಿಸ್ ೪೪೯
ಮಾರ್ಲೆ ೪೨೮, ೪೪೩, ೪೪೫, ೪೫೧, ೪೨೩
ಮಾಲೀಕ್ ಎಂ.ಬಿ. ೧೧೯
ಮಾಲೋಜಿ ಘೋರ್ಪಡೆ ೫೨೨
ಮಾವಳಂಕರ್ ಡಾ. ೩೯೭
ಮಾವೋ ೩೫೫
ಮಾಸ್ಟರ್ ತಾರಾ ಸಿಂಗ್ ೫೪೯
ಮಾಹಿಂ ೩೬೭
ಮಿರಿಯಂ ೩೧೯
ಮಿರ್ಜಾ ಇಸ್ಮಾಯಿಲ್ ೬೮, ೭೦, ೯೧, ೯೫, ೧೧೩
ಮಿಲ್ಲಿಂಗ್ಟನ್ ೧೭೯
ಮೀರಾವಾಲ ೨೬೨
ಮುಂಬೈ ೩, ೧೩, ೫೫, ೬೮, ೧೪೦, ೧೯೯, ೩೬೫
ಮುಕ್ತ್ಯಾರ್ ೪೦೩, ೪೦೪, ೪೦೫
ಮುಖೇಡ್ ೧೭೭
ಮುರಿಯಲ್ ಲೆಸ್ಟೆರ್ ೧೧೯
ಮುರ್ಡೇಶ್ವರ ೩೭೫, ೩೭೬
ಮುಲ್ಕ್ ರಾಜ್ ಆನಂದ್ ೩೩೯
ಮುಲ್ಲಾ ೧೭
ಮುಸೋಲಿನಿ ೨೧೬, ೩೪೨, ೪೮೭
ಮುಸ್ಲಿಂ ೬, ೭, ೧೨, ೧೯, ೩೧, ೪೪, ೫೨, ೬೨, ೬೩, ೬೪, ೬೬, ೬೮, ೭೦, ೭೩, ೭೪, ೮೬, ೮೭, ೮೮, ೮೯, ೯೧, ೯೭, ೯೯, ೧೦೦, ೧೦೩, ೧೦೪, ೧೦೫, ೧೦೬, ೧೧೦, ೧೧೪, ೧೨೫, ೧೩೨, ೧೩೩, ೧೩೬, ೧೭೮, ೧೮೮, ೧೮೯, ೨೦೩, ೨೧೦, ೨೧೧, ೨೧೬, ೨೧೮, ೨೧೯, ೨೨೦, ೨೨೨, ೨೨೩, ೨೫೭, ೨೬೨, ೨೬೩, ೨೭೦, ೨೮೪, ೩೦೬, ೩೦೭, ೩೧೨, ೩೧೩, ೩೧೮, ೩೧೯, ೩೨೬, ೩೨೭, ೩೨೮, ೩೨೯, ೩೩೦, ೩೩೧, ೩೩೪, ೩೩೫, ೩೪೦, ೩೪೧, ೩೪೪, ೩೫೪, ೩೮೪, ೪೦೨, ೪೫೭, ೪೬೫, ೪೬೭, ೪೭೩, ೪೭೪, ೫೧೫, ೫೧೯, ೫೪೫, ೫೪೬, ೫೫೬, ೫೫೮, ೫೬೧, ೫೬೩, ೫೬೪, ೫೬೬, ೫೬೯, ೫೭೦, ೫೭೨, ೫೮೭, ೫೮೮, ೫೮೯, ೫೯೦, ೫೯೫, ೬೦೬, ೬೦೮, ೬೦೯, ೬೧೦, ೬೧೧, ೬೧೪, ೬೨೨, ೬೨೭, ೬೨೮, ೬೨೯, ೬೩೦, ೬೩೧, ೬೩೨, ೬೩೬,

೬೪೧, ೬೪೮
ಮುಸ್ಲಿಂಲೀಗ್ ೩೨೭, ೫೭೧
ಮೂಂಜೆ ಡಾ. ೬೮, ೭೦, ೭೪, ೯೯, ೧೧೮, ೧೧೯, ೧೩೩, ೧೩೮, ೧೭೦, ೨೧೭, ೨೨೬, ೨೨೯
ಮೆಂಡಿ ಅಲ್ಲಿ ಖಾನ್ ೪೨೮, ೪೨೯
ಮೆಕಾಲೆ ೩೯೨
ಮೆಟೊನ್ಯೆರಾ ೪೭೧
ಮೆನನ್ ಎಂ. ಆರ್. ೪೦
ಮೆನನ್ ಕೆ.ಬಿ. ಡಾ. ೨೩೦
ಮೆಲ್ಲಿಷ್ ೪೭೭, ೪೮೦
ಮೆಹರ್ ಬಾಬಾ ೪೫೮, ೪೫೯
ಮೆಹ್ತಾ ಸಿ.ವಿ. ೧೫೪
ಮೇಯರ್ಸ್ ೪೨೩, ೪೩೬
ಮೇಯೋ ೯೭
ಮೇರಿ ಪ್ರೈಯರ್ ೨೬೬
ಮೇಶ್ರಾಂ ೩೨೬
ಮೈಸೂರು ೩೮೧
ಮೊಘಲ್ ೪೪೨
ಮೊಫ್ಲಟ್ ಪ್ರೊ. ೪೭೩
ಮೊರಾರ್ಜಿ ದೇಸಾಯಿ ೫೮೪
ಮೊರೊ ರಾಗೋನಾಥ್ ೪೧೯, ೪೨೧, ೪೨೨, ೪೩೨, ೪೪೮
ಮೊಹಮದ್ ಶಫಿ ಸರ್ ೬೮
ಮಾಂಟೆಗ್ಯೂ ಚೆಲಮ್ಸ್‌ಫೋರ್ಡ್ ೭೫, ೨೧೦, ೩೭೭
ಮೋತಿಲಾಲ್ ನೆಹರು ೬೧, ೬೨, ೬೭, ೯೪, ೧೧೪, ೪೫೭
ಮೋದಕ್ ಬಿ.ಜಿ. ೪೨
ಮೋದಿ ಎಚ್.ಪಿ. ೨೭೦
ಮೋಲ್ ೯೮
ಮೋಸೆಸ್ ೩೦೮, ೩೦೮, ೩೦೯, ೩೧೦
ಮೋಹನದಾಸ ಕರಮಚಂದ ಗಾಂಧಿ ೪೫೫, ೪೫೭
ಮೋಹ್ಯಾನ್ ೧೩೮
ಮೋಳರ್ ಡಾ. ೧೨೧
ಮೌಂಟ್ ಸಿನಾಯ್ ೩೦೮, ೩೦೯
ಮೌಲಾನಾ ಅಬುಲ್ ಕಲಮ್ ಆಜ಼ಾದ್ ೬೭, ೬೨೦, ೬೨೦, ೬೨೭
ಮ್ಯಾಂಚೆಸ್ಟರ್ ೨೦೬, ೨೦೭
ಮ್ಯಾಕ್‌ಗವಿನ್ ೪೮೦
ಮ್ಯಾಕ್ಸ್‌ಮುಲ್ಲರ್ ೫೦೨, ೫೦೩
ಮ್ಯಾನ್ಸ್‌ಫೀಲ್ಡ್ ೪೩೦, ೪೩೪, ೪೪೪

## ಯ

ಯಹೂದಿ ೩೦೮
ಯಹೂದ್ಯ ೨೨೨, ೩೦೮, ೩೦೯
ಯಾಜ್ಞವಲ್ಕ್ಯ ೫೦೫
ಯುಗೋಸ್ಲೋವಿಯಾ ೬೪
ಯು.ಪಿ.ಐ. ೬೪೩
ಯೂರೋಪ್ ೬೪, ೬೬, ೮೯, ೧೬೩, ೨೨೪, ೨೨೯, ೨೩೩, ೩೮೪, ೪೫೬
ಯೆರವಾಡ ೧೨೫, ೧೨೭, ೧೪೩, ೧೫೦
ಯೇಸು ೨೮
ಯೇಸು ಶೆಡ್ಜೆ ೨೮
ಯೋಟ್ಮಲ್ ೧೦೭
ಯೋಧರ್ ೫೨೧

## ರ

ರಂಗಾ ಅಯ್ಯರ್ ೫೫, ೧೭೮, ೧೭೭, ೧೮೦, ೧೮೧
ರಂಗೂನ್ ೫೫
ರಜಪೂತ ೫೨೦, ೫೨೧
ರಣಕಂಬೆ ೧೦೮, ೧೧೯
ರತ್ನಂ ಎ. ೩೮೬, ೩೮೭, ೩೯೦
ರತ್ನಗಿರಿ ೨೩೦, ೨೮೪, ೨೯೨, ೨೯೩
ರತ್ನಾಬೆನ್ ಮೆಹ್ತಾ ೧೩೮
ರಬೀಂದ್ರನಾಥ ಟ್ಯಾಗೂರ್ ೧೬೧, ೩೮೪

ರಷ್ಯಾ ೩೪೧
ರಾಂಚೀ ೧೯೩
ರಾಂಚೀ ಮಾಲೋಜಿ ೧೯೩
ರಾಗೋಬಾ ನಾರಾಯಣ ೧೪
ರಾಜ ಎಂ.ಸಿ. ೧೦೭, ೧೧೮, ೧೫೮
ರಾಜಕೋಟ್ ೨೬೧, ೨೬೨, ೨೬೩, ೨೬೪
ರಾಜಗೋಪಾಲಚಾರಿ ಸಿ. ೧೩೮, ೧೪೩, ೧೪೪, ೧೪೫, ೧೫೦, ೧೫೧, ೧೫೨, ೧೫೪, ೧೫೫, ೧೫೭, ೧೫೮, ೧೫೯, ೧೭೯, ೨೨೮, ೨೨೯
ರಾಜಬಹದ್ದೂರ್ ೧೪೮
ರಾಜಭಾವು ಖೋಬ್ರಾಗಡೆ ೩೯೨
ರಾಜಭೋಜ್ ೧೫೪, ೧೬೭, ೫೮೪, ೫೮೬, ೬೧೩, ೬೧೬, ೬೮೦
ರಾಜಾ ಎಂ.ಸಿ. ೧೨೯, ೧೪೪, ೧೫೪, ೧೫೯, ೨೨೬, ೬೨೬
ರಾಜ್‌ಕೋಟ್ ೨೬೧, ೨೬೨, ೨೬೩, ೨೬೪, ೨೬೮
ರಾಜ್‌ಭಾವ್ ಖೋಬ್ರಾಗಡೆ ೩೮೬, ೩೮೬, ೩೯೨
ರಾಜ್‌ಭೋಗ್ ೩೦೭, ೩೪೫
ರಾಧಾಕಾಂತ್ ಮಾಳವಿಯಾ ೧೫೫
ರಾಧಾಕೃಷ್ಣನ್ ಡಾ. ೩೯೩, ೩೯೪, ೪೧೪
ರಾಧಾನಾಥ್ ದಾಸ್ ೫೬೧
ರಾನಡೆ ೨೧೬, ೪೫೮
ರಾಬರ್ಟ್ಸನ್ ೧೦೭
ರಾಮದಾಸಿ ೨೨೪, ೨೨೫
ರಾಮನ್ ಟಿ.ಎ. ೧೧೩, ೩೮೧
ರಾಮಸ್ವಾಮಿ ಅಯ್ಯರ್ ಸರ್.ಸಿ.ಪಿ. ೬೮, ೭೦, ೧೫೯
ರಾಮಸ್ವಾಮಿ ಮೊದಲಿಯಾರ್ ೯೫, ೧೦೨
ರಾಮಾನುಜ ಐಯ್ಯಂಗಾರ್ ಎಸ್. ಟಿ. ೧೭೮
ರಾಮೇಶ್ವರ ೧೫೪
ರಾಮೋಷಿ ೨೯೦, ೨೯೧, ೩೦೨
ರಾಮ್ ಮನೋಹರ್ ಲೋಹಿಯಾ ಡಾ. ೫೩೧
ರಾಯಲ್ ಆಯೋಗ ೫೮, ೨೭೧, ೫೪೩
ರಾಯ್ಗರ್ ೨೮, ೩೧
ರಾಯ್ಬರ್ ೬೪೦, ೬೪೧, ೬೪೪
ರಾಲ್ಫ್ ರೈಸ್ ೪೧೭
ರಾವ್ ಬಹದ್ದೂರ್. ಎನ್. ಶಿವರಾಜ್ ೫೪೫
ರಾವ್ ಬಹದ್ದೂರ್ ಪನ್ನೀರ್ ಸೆಲ್ವಂ ೮೯
ರಿಚರ್ಡ್ ಫ಼್ಲಾಂಟೆರಾ ೫೩೨
ರಿಸ್ಲೆ ೫೨೦
ರೂಪ್ವತೆ ಡಿ.ಟಿ. ೫೩೧
ರೂಮಾನಿಯಾ ೬೪
ರೇಗೆ ಎಸ್. ಎಸ್. ೫೪೦
ರೇನಾಲ್ಸ್ ೧೬೯
ರೈಸ್ ಆರ್ ೪೧೮
ರೈಸ್ ಡಾವಿಡ್ಸ್ ೪೯೫, ೫೦೩, ೫೦೪
ರೋಜರ್ ಲಮ್ಲೇ ೨೭೮, ೬೪೦
ರೋಜರ್ ಲೂಮ್ಲೆ ೬೪೦
ರೋಮನ್ ೪೪೮, ೪೮೮, ೪೯೨
ರ್ಯಾಮ್‌ಸೆ ಮ್ಯಾಕ್‌ಡೊನಾಲ್ಡ್ ೬೯, ೮೫, ೧೦೦, ೧೦೪, ೬೩೨


## ಲ


ಲಂಡನ್ ೪೨, ೪೯, ೫೩, ೫೬, ೫೭, ೬೧, ೬೭, ೬೮, ೬೯, ೭೩, ೯೨, ೯೩, ೯೫, ೯೬, ೯೭, ೯೯, ೧೦೦, ೧೦೧, ೧೦೬, ೧೦೮, ೧೦೯, ೧೧೪, ೧೧೫, ೧೨೦, ೧೨೧, ೧೩೩, ೧೩೫, ೧೭೬, ೧೭೭, ೨೦೭, ೨೨೯, ೩೧೫, ೩೧೮, ೩೮೫, ೫೮೨, ೫೮೭, ೬೦೬, ೬೨೮, ೬೪೦, ೬೪೧, ೬೪೨, ೬೪೩, ೬೪೪, ೬೪೬
ಲಕ್ನೋ ೬೬, ೧೧೭, ೬೧೨
ಲಕ್ಷ್ಮಿ ನರಸು ಪಿ. ಪ್ರೊ. ೪೭೩, ೪೭೪, ೪೭೫
ಲಯಾಲ್‌ಪುರ ೧೦೭
ಲಲ್ಲೂಬಾಯಿ ಸಮಾಲದಾಸ್ ೧೫೪, ೧೫೯
ಲಾರ್ಡ್ ಸೈಡೆನ್ ೭೩
ಲಾರ್ಡ್ ಸ್ಯಾಂಕಿ ೯೨
ಲಾಲೆಸ್ ೨೬೭
ಲಾಲ್‌ಕಾಕಾ ಎಂ.ಕೆ. ೩೭೫, ೩೭೬

ಲಾಹೋರ್ ೬೪೧
ಲಿಂಗ್‌ಲಿಥ್‌ಗೊ ೩೧೩, ೫೫೮, ೬೩೦, ೬೪೦
ಲಿಂಡ್‌ಹರ್ಸ್ಟ್ ೪೩೩
ಲಿಮಯೆ ಕೆ.ಜಿ. ೧೫೫
ಲಿಯೋನ್ ಕ್ಲಾರ್ಕ್ ೫೩೨
ಲೂಧಿಯಾನ ೫೬೦
ಲೇಲೆ ಪಿ.ಆರ್. ೩೧
ಲೋಥಿಯನ್ ೧೧೯, ೧೧೪, ೧೧೬, ೧೨೦, ೧೨೧, ೧೫೩, ೧೬೦, ೫೧೫
ಲ್ಯಾಮ್ಸೇ ಮ್ಯಾಕ್ ಡೋನಾಲ್ಡ್ ೭೫

## ವ

ವಜ್ಹೀರಿಸ್ಥಾನ ೨೭೬
ವನಮಾಲಿ ೧೪
ವರಲೆ ಬಿ.ಎಚ್. ೨೩೦
ವರಳೆ ೩೯೭
ವಾಡಿಯ ೪೨
ವಾರೆನ್ ಹೇಸ್ಟಿಂಗ್ಸ್ ೪೨೫
ವಾರ್ಡ್ ಮೋರ್‌ಹೌಸ್ ೫೩೨
ವಾರ್ಧಾ ೬೧೬
ವಾಲಿ ಸಿನ್ಹಾ ೩೮೨, ೩೯೫, ೩೯೬
ವಾಲ್ಚಂದ್ ಹೀರಾಚಂದ್ ೧೩೮, ೧೫೫, ೧೫೯
ವಿಂಚೂರ್ ೧೮೬
ವಿಂಚೆಸ್ಟರ್ ೫೭೧
ವಿಂಧ್ಯಪ್ರದೇಶ ೩೮೬
ವಿಕ್ಟೋರಿಯ ೪೦೪
ವಿಠ್ಠಲಬಾಯಿ ಪಟೇಲ್ ೧೦೭
ವಿಠ್ಠಲ್ ಬಾಲಕೃಷ್ಣ ಗಾಂಧಿ ೩೬೭
ವಿನ್‌ಸ್ಟನ್ ೫೯೩, ೬೪೦, ೬೪೨
ವಿಯೆನ್ನಾ ೧೨೨, ೨೨೯
ವಿಲ್ಸನ್ ೯೮, ೪೭೪, ೫೧೮, ೫೧೯
ವಿಶಾಖಪಟ್ಟಣ ೪೪೫
ವಿಸ್ಕೌಂಟ್ ವೇವೆಲ್ ೫೪೫, ೫೫೭, ೫೫೯, ೫೬೩, ೫೬೯, ೫೭೧, ೫೭೫, ೫೮೮, ೬೩೨
ವಿಸ್ಲೋನ್ಜಿಕಿಮ್ಜಿ ೧೫೫
ವೀರ್‌ಕರ್ ವಿ.ಬಿ. ೩೭, ೪೨
ವೆಡ್ಜ್‌ವುಡ್‌ಬೆನ್ ೧೦೦
ವೆನಿಸ್ ೧೨೨
ವೆರಿಯರ್ ಎಲ್ವಿನ್ ಡಾ. ೩೮೪, ೩೮೫
ವೆಸ್ಟರ್‌ಹ್ಯಾಮ್ ೬೪೨
ವೇಲು ಎಂ.ಜಿ. ೩೮೭
ವೇಲ್ಸ್ ೪೧೭, ೪೪೧, ೪೪೫, ೫೨೫
ವೈದ್ಯ ಜಿ.ವಿ. ೧೯
ವೈಶಾಲಿ ೪೯೭, ೪೯೮
ವೊರ್ಲಿ ೫೮೩, ೫೮೪, ೫೮೫

## ಶ

ಶಂಕರದಾಸ ನಾರಾಯಣದಾಸ ಬಾರ್ವೆ ೨೦೨
ಶಂಕರಲಾಲ್ ಬಂಕಾರ್ ೧೫೪
ಶಂಕರಾನಂದ ಶಾಸ್ತ್ರಿ ೩೯೭
ಶರತ್ ಚಂದ್ರ ಬೋಸ್ ೫೯೮, ೬೨೦, ೬೨೪, ೬೩೫
ಶಾಂತಾರಾಂ ಸಾವಲ್‌ರಾಂ ಮೀರಜ್‌ಕರ್ ೩೬೭
ಶಾಂತಿ ನಿಕೇತನ ೩೮೪
ಶಿಂಧೆ ೫೬
ಶಿಮ್ಲಾ ೯೯, ೧೨೭
ಶಿವಟರ್ಕರ್ ೧೪, ೪೯, ೫೫, ೯೩, ೯೯, ೧೨೧, ೧೩೮, ೧೬೭
ಶಿವರಾಜ್ ಎನ್ ೩೨೩, ೩೪೫, ೫೪೫, ೫೮೬, ೫೮೭, ೬೧೩
ಶಿವಲಾಲ್ ಅಪ್ಪಾ ದೇಶಮುಖ್ ೨೦೪
ಶಿವಲಾಲ್ ಮೋತಿಲಾಲ್ ೧೪೮, ೧೫೨
ಶಿವಸ್ವಾಮಿ ಅಯ್ಯರ್ ೨೬೪
ಶಿವಾಜಿ ೨೦, ೨೮, ೪೦, ೩೬೭, ೫೨೧, ೫೨೨
ಶೆಲ್ಕೆ ೧೭೪
ಶೋಲಾಪುರ ೨೦೪
ಶೌಕತ್ ಅಲಿ ೯೯

ಶ್ರೀನಿವಾಸ ಅಯ್ಯಂಗಾರ್ ೧೭೮
ಶ್ರೀನಿವಾಸನ್ ೬೮, ೭೫, ೯೬, ೯೯, ೧೦೯, ೧೧೦, ೧೨೪, ೧೫೪, ೧೮೫, ೨೨೬, ೪೬೨
ಶ್ರೀನಿವಾಸನ್ ಆರ್.ಎಂ. ೯೫
ಶ್ರೀಪಾದ ಅಮೃತ್ ಡಾಂಗೆ ೩೬೬

## ಷ

ಷೋಲಾಪುರ ೨೦೩

## ಸ

ಸಂಭಾಜೀ ಸಂತೋಜಿ ವಾಗ್ಮಾರೆ ೧೫
ಸತಲ್‌ವಾಡ್ ೭೩
ಸತಾರ ೨೦೨
ಸದಾಶಿವ ಅಯ್ಯರ್ ೪೩, ೪೫
ಸಪ್ರು ಟಿ.ಬಿ. ೧೪೪, ೧೫೬
ಸಮಂತ್ ನಾನ್ಜಿ ಮಾರ್‌ವಾರಿ ೧೪
ಸಮುರಾಯಿ ೨೨
ಸರದಾರ್ ಉಜ್ಜಲ್ ಸಿಂಘ್ ೬೮
ಸರಾಫ್ ವಿ. ಆರ್ ೪೧
ಸರೋಜಿನಿ ನಾಯ್ಡು ೯೫, ೯೮, ೧೦೦, ೧೦೩, ೧೪೫, ೧೬೧, ೨೦೮
ಸರ್ದಾರ್ ವಲ್ಲಭಭಾಯಿ ಪಟೇಲ್ ೯೯, ೧೨೬, ೧೨೭, ೧೪೩, ೧೪೫, ೧೬೧, ೨೬೨, ೨೬೪, ೨೬೫, ೨೬೬, ೨೬೮, ೬೧೬
ಸಹಸ್ರಬುಧೆ ೧೯, ೩೭
ಸಾಂಖ್ಯವಾದ ೪೮೬, ೪೮೭
ಸಾಂಗ್ಲಿ ೪೯
ಸಾತೆ ೩೬
ಸಾಮ್ಯುಯಲ್ ಹೋರೆ ೬೪೦, ೬೪೬
ಸಾರ್‌ನಾಥ್ ೩೯೬
ಸಾವಂತವಾಡಿ ೨೦೭
ಸಾವಡ್ಕರ್ ೩, ೨೩೦
ಸಾವರ್ಕರ್ ಡಾ. ೧೩೮
ಸಿಂಧ್ ೬೩, ೬೫, ೭೦, ೭೪, ೮೮, ೧೧೦, ೧೫೨, ೩೩೨, ೩೩೫, ೫೬೯, ೫೯೭
ಸಿಖ್ ೩೧, ೫೨, ೬೨, ೬೮, ೭೪, ೮೯, ೯೧, ೧೦೪, ೧೦೫, ೧೧೪, ೧೨೫, ೧೩೨, ೧೮೯, ೨೧೧, ೨೧೫, ೨೧೭, ೨೧೮, ೨೧೯, ೨೨೦, ೨೨೨, ೨೨೫, ೨೨೬, ೨೨೮, ೨೨೯, ೩೨೫, ೩೨೯, ೩೩೧, ೩೩೩, ೩೩೪, ೩೮೪, ೪೭೩, ೪೭೪, ೫೪೫, ೫೪೬, ೫೮೮, ೫೯೪, ೫೯೫, ೬೦೬, ೬೨೧, ೬೨೮, ೬೨೯, ೬೩೦, ೬೩೨, ೬೩೬
ಸಿಖ್‌ಧರ್ಮ ೨೧೮
ಸಿಮ್ಲಾ ೧೧೯, ೫೬೯, ೫೭೦, ೫೭೧, ೫೭೩, ೫೮೮, ೫೯೪, ೬೧೭, ೬೧೯, ೬೨೧, ೬೨೨, ೬೨೯, ೬೩೨, ೬೩೮
ಸಿಲೋನ್ ೫೮೧
ಸುದ್ದೂರು ೪೪೯
ಸುಪಾರಿಬಾಗ್ ೩೬೭
ಸುಬೇದಾರ್ ೩, ೧೯, ೧೩೮
ಸುಬೇದಾರ್ ಘಾಟ್ಗೆ ೧೯
ಸುಬೋಧ ಪತ್ರಿಕಾ ೧೧೪
ಸುಬ್ಬರಾಯನ್ ಡಾ. ೫೫, ೧೭೮, ೧೭೯
ಸುಭಾಷ್‌ಬೋಸ್ ೨೬೧
ಸುಭೇದಾರ್ ೨೬, ೧೫೫, ೧೫೯, ೧೯೩
ಸುಭೇದಾರ್ ಗಾಟ್ಗೆ ೨೬, ೨೩೦
ಸುಭ್ರಾ ೩೦
ಸುರೇಂದ್ರನಾಥ ಟಿಪ್ನಿಸ್ ೩
ಸುಲ್ತಾನ್ ಆಹ್ಮದ್, ಸರ್ ೧೦೨
ಸೆಲಿಂಗ್. ಎಸ್. ಹ್ಯಾರಿಸನ್ ೩೭೯
ಸೇಠ್ ವಾಲ್‌ಚಂದ್ ಹೀರಾಚಂದ್ ೧೩೦
ಸೇವಕ್‌ರಾಂ ಕರಂಚಂದ್ ೩೩೭
ಸೈಡೆನ್ ಹ್ಯಾವ್ ಓಡೆಯರ್ ೭೩
ಸೈಮಿಂಗ್‌ಟನ್ ೪೦
ಸೋಲಂಕಿ ಪಿ.ಜಿ. ಡಾ. ೫೮, ೧೩೮, ೧೪೭, ೧೫೧,

೧೫೪, ೧೫೯
ಸ್ಕಾರ್ಬರೋ ೬೪೦, ೬೪೬
ಸ್ಕೌಟ್ಸ್ ೧೬೮
ಸ್ಟಾಫೋರ್ಡ್ ಕ್ರಿಪ್ಸ್ ೫೪೩, ೫೪೯, ೫೯೫, ೬೩೬
ಸ್ಟಾಲಿನ್ ೩೪೧
ಸ್ಟಾಂಕಿ ೪೩೫
ಸ್ಪೇನ್ ೩೪೨
ಸ್ಪ್ಯಾರೊ ಜೆ.ಜೆ. ೪೧೮
ಸ್ಯಾಂಕಿ ೯೨, ೯೬, ೧೦೮
ಸ್ಯಾಮುಯಲ್ ಹೋರ್ ೧೦೦, ೧೨೪, ೧೨೬, ೧೩೧
ಸ್ಲೇಡ್ ೫೦
ಸ್ವರೂಪಾ ರಾಣಿ ನೆಹರು ೧೬೧
ಸ್ವಾಮಿ ಸತ್ಯಾನಂದ ೧೩೮

### ಹ

ಹರಿದಾಸ್ ಅವೋದೆ ೩೮೬
ಹರಿದಾಸ್ ಅಶರ್‌ವರ್ ೩೮೬
ಹರಿಭಾಯಿ ಕೆ.ಭಟ್ ೧೪೯, ೧೫೫
ಹರೇಗಾಂವ್ ೨೯೫, ೨೯೬
ಹರ್ಬಟ್ ಕಾರ್ ೧೦೫
ಹಾರೇಗಾಂವ್ ೨೭೮, ೨೭೯, ೨೯೪
ಹಿಂಗನ್‌ಘಟ್ ೫೬೦
ಹಿಂದು ೧೦೮, ೧೮೨, ೨೧೩, ೩೧೨, ೪೧೪, ೪೫೪, ೪೫೫, ೪೭೪, ೫೫೩, ೫೫೪
ಹಿಂದೂಧರ್ಮ ೧೩೭, ೧೮೮, ೩೧೨, ೪೮೬, ೪೮೭, ೪೮೮, ೪೮೯
ಹಿಂದೂರಾಜ್ಯ ೫೫೪
ಹಿಂದೂಸ್ಥಾನ ೫೬೩, ೫೬೪
ಹಿಟ್ಲರ ೪೧೬
ಹಿಬ್ಬರ್ಟ್ ೫೦೨
ಹೀಡಲ್‌ಬರ್ಗ್ ೩೧೫
ಹುಬ್ಬಳ್ಳಿ ೧೦೮
ಹೂಡ್ ೨೬
ಹೂಬರ್ಟ್ ಕಾರ್ ೮೯
ಹೃದಯನಾಥ್ ಕುನ್ಜ್ರೂ ೧೫೯
ಹೆಗ್ಡೆ ಟಿ.ಎಸ್. ೩೭೮
ಹೆನ್ರಿ ಗಿಡ್ನಿ ೮೯
ಹೆನ್ರಿ ಬೆರ್ಗ್‌ಸನ್ ೩೩೯, ೩೪೦
ಹೆನ್ರಿ ಶಾರ್ಪ್ ೧೨೦
ಹೇಗರ್ ಕಾಂಬ್ ೩೩೯
ಹೇಲ್ ೪೪೪
ಹೈದರಾಬಾದ್ ೩೧೭, ೩೨೯, ೩೩೦, ೩೮೦, ೩೯೨, ೪೬೭, ೫೧೧
ಹೋಮರ್ ೪೭೧
ಹೋಷಿಯಾರ್‌ಪುರ್ ೫೬೦
ಹ್ಯಾಡ್ಲಿ ೪೭೯
ಹ್ಯಾರೋಲ್ಡ್ ಲಸ್ಕಿ ೧೦೭